ಓಂ

ಶ್ರೀ ಸಮಂತಭದ್ರಾಚಾರ್ಯದೇವ ವಿರಚಿತ

# ರತ್ನಕರಂಡ ಶ್ರಾವಕಾಚಾರ

ಸದೃಷ್ಟಿ ಜ್ಞಾನವೃತ್ತಾನಿ ಧರ್ಮಂ

ಸ್ವಾಮಿ ಸಮಂತಭದ್ರಾಚಾರ್ಯದೇವ

ವಿರಚಿತ

# ರತ್ನಕರಂಡ ಶ್ರಾವಕಾಚಾರ

ವಚನಿಕಾಕಾರರು :

**ಪಂಡಿತ ಸದಾಸುಖದಾಸಜೀ ಕಾಸಲೀವಾಲ**

ಜಯಪುರ.

ಅನುವಾದಕರು :

**ಶ್ರೀ ಎಂ. ಬಿ. ಪಾಟೀಲ, ಸೇಡಬಾಳ**

'ಶುದ್ಧಾತ್ಮಸದನ', ಶಹಾಪುರ - ಬೆಳಗಾವಿ.

ಪ್ರಕಾಶಕರು :

**ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,**

**ಬೆಂಗಳೂರು.**

ಮೊದಲಿನ ಮೂರು ಆವೃತ್ತಿಗಳು : ಮೂರು ಸಾವಿರ ಪ್ರತಿಗಳು
ನಾಲ್ಕನೆಯ ಆವೃತ್ತಿ : ಐದು ನೂರು ಪ್ರತಿಗಳು
ನವ್ಹೆಂಬರ ೩೦ - ೨೦೧೬

ಬೆಲೆ : ನೂರು ರೂಪಾಯಿ ೧೦೦/-
(ಮೂಲ ಬೆಲೆ : ೩೦೦ ರೂ.)

**ದೊರಕುವ ಸ್ಥಳ :**

- ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ
  ೧೪೧, ರಂಗಸ್ವಾಮಿ ಗುಡಿ ಬೀದಿ,
  ಬೆಂಗಳೂರು - ೫೬೦ ೦೫೩.

- ''ಶ್ರುತ ಭಂಡಾರ'',
  ೩೬, ಶುದ್ಧಾತ್ಮ ಸದನ, ಹುಳಬತ್ತಿ ಕಾಲೋನಿ,
  ಶಹಾಪುರ-ಬೆಳಗಾವಿ.
  ಫೋನ : ೨೪೬೬೯೧

- ಮುದ್ರಕರು :
  ಇಮೇಜ ಪ್ರಿಂಟ್ಸ,
  ೨೫೯೩, ಕಚೇರಿ ಗಲ್ಲಿ, ಶಹಾಪೂರ, ಬೆಳಗಾವಿ.
  ಫೋನ : ೨೪೨೬೧೩೭

# ಪ್ರಕಾಶಕೀಯ

ನಮ್ಮ ಸಂಸ್ಥೆಯು ಕಳೆದ ಮೂರು ದಶಕಗಳಿಂದ ಅಖಂಡವಾಗಿ ದ್ರವ್ಯಶ್ರುತದ ಪ್ರಕಾಶನ ಮಾಡುತ್ತ ಬರುತ್ತಲಿದೆ. ಜೀವಕೋಟಿಯ ಕಲ್ಯಾಣದ ಸಲುವಾಗಿ ದ್ರವ್ಯಾನುಯೋಗವು ಪ್ರಮುಖ ಕಾರಣವಿದೆ. ಅದರ ಅಧ್ಯಯನದಿಂದ ಜೀವನು ತನ್ನ ಸ್ವರೂಪ-ವಸ್ತುಸ್ವರೂಪವನ್ನು ಸುಲಭವಾಗಿ ತಿಳಿಯಬಹುದಾಗಿದೆ. ಅಂತೆಯೇ ಸಮಯಸಾರ ಮೊದಲಾಗಿ ಅನೇಕ ಅಧ್ಯಾತ್ಮಗ್ರಂಥಗಳ ಅಧ್ಯಯನದಿಂದ ಎಚ್ಚರಗೊಂಡ ನಮ್ಮ ಸಮಾಜ ಬಂಧುಗಳು ತಮ್ಮ ಅಸ್ತಿತ್ವದ ಸ್ವೀಕಾರ ಮಾಡುವ ಪ್ರಯತ್ನದ ಜತೆ ಜತೆಯಲ್ಲಿ ಯೋಗ್ಯ ಆಚರಣೆಯ ಅಭ್ಯಾಸದಲ್ಲೂ ತೊಡಗಿರುವರೆಂಬುದನ್ನು ಚರಣಾನುಯೋಗದ ಗ್ರಂಥವು ನಾಲ್ಕನೆಯ ಬಾರಿ ಪ್ರಕಟವಾಗುತ್ತಿರುವುದೇ ಸಿದ್ಧಪಡಿಸುತ್ತಿದೆ. ಇದು ನಮಗೆ ಪರಮ ಸಂತೋಷದ ಅನುಭವ ತರುವಂಥದ್ದಿದೆ.

ಅದ್ವಿತೀಯ ತಾರ್ಕಿಕ ಚೂಡಾಮಣಿ ಮಹಾಮೇಧಾವಿ ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ಅನುಪಮ ಗ್ರಂಥರಾಜ 'ರತ್ನಕರಂಡ ಶ್ರಾವಕಾಚಾರ'ವನ್ನು ಪಂ. ಸದಾಸುಖದಾಸರ ಶ್ರೇಷ್ಠ ತತ್ತ್ವಜ್ಞಾನ ಸಮನ್ವಿತ ಶುದ್ಧ ಜೈನಾಚಾರಯುಕ್ತ ವಚನಿಕೆಯೊಡನೆ ಕೊಡುತ್ತಿರುವುದು ಇನ್ನೂ ಸಂತೋಷದ ಸಂಗತಿಯಾಗಿದೆ. ಈ ರತ್ನಕರಂಡ ಶ್ರಾವಕಾಚಾರವಂತೂ ಚರಣಾನುಯೋಗದ ಶಾಸ್ತ್ರಗಳಲ್ಲಿ ಅತ್ಯಧಿಕ ಖ್ಯಾತಿ ಪ್ರಾಪ್ತವೂ ಅತ್ಯಂತ ಪ್ರಾಚೀನವೂ ಮತ್ತು ಅತಿಶಯ ಮಹತ್ವಪೂರ್ಣವೂ ಆದ ಗ್ರಂಥಾಧಿರಾಜವಾಗಿದೆ. ಇದು ಭವಿಷ್ಯದಲ್ಲಿ ಬಂದ ಸಮಸ್ತ ಶ್ರಾವಕಾಚಾರಗಳಿಗೆ ಆಧಾರಭೂತವೂ ಮತ್ತು ಆದರ್ಶವೂ ಆಗಿ ನಿಂತುಕೊಂಡಿದೆ.


ಆಚಾರ್ಯ ಭಗವಂತರು ಪ್ರಾರಂಭದ ಮಂಗಲಾಚರಣ ರೂಪದಿಂದ 'ದೇಶಯಾಮಿ ಸಮೀಚೀನಂ ಧರ್ಮಂ' ಎಂದು ಪ್ರತಿಜ್ಞೆಮಾಡಿ ಅನಾದಿಕಾಲದಿಂದ ಪಂಚಪರಾವರ್ತನರೂಪವಾದ ಸಂಸಾರದ ದುಃಖ ಪರಂಪರೆಯಲ್ಲಿ ಬೆಂದು ಹೋಗುತ್ತಿರುವ ಪ್ರಾಣಿಗಳನ್ನು ಆ ದುಃಖದಿಂದ ಬಿಡಿಸಿ ಉತ್ತಮವಾದ ಸುಖಸ್ಥಾನದಲ್ಲಿ ಕೊಂಡೊಯ್ಯುವಂಥ ಯಥಾರ್ಥ ಧರ್ಮವನ್ನು ಹೇಳ ಹೊರಟಿದ್ದೇನೆ. ಅದರ ವ್ಯಾಖ್ಯೆ ಮಾಡುತ್ತ ಧರ್ಮದ ಅಧೀಶರಾದ ಭಗವಾನ ತೀರ್ಥಂಕರ ಪರಮದೇವರು 'ಸದ್ದೃಷ್ಟಿಜ್ಞಾನವೃತ್ತಾನಿಧರ್ಮಂ' ಎಂದರೆ ಸಮ್ಯಗ್ದರ್ಶನ ಜ್ಞಾನ ಚಾರಿತ್ರದ ಏಕತೆಯು ನಿಜವಾದ ಧರ್ಮವಿದೆಯೆಂದು ಹೇಳಿದ್ದಾರೆ. ಅದೇ ಧರ್ಮವನ್ನು ನನ್ನ ಅನುಭೂತಿಯ ಪ್ರತ್ಯಕ್ಷಿಕೆಯೊಡನೆ ಇಲ್ಲಿ ಪ್ರಸ್ತುತ ಪಡಿಸುತ್ತೇನೆ. ಮೋಕ್ಷಾಭಿಲಾಷೆಯುಳ್ಳವರೆಲ್ಲರು ಈ ವಾಸ್ತವಿಕ ಧರ್ಮದ ಅನುಸರಣೆ-ಆರಾಧನೆ ಮಾಡಬೇಕು.

ಪಂ. ಸದಾಸುಖದಾಸರು ಈ ರತ್ನಕರಂಡ ಶ್ರಾವಕಾಚಾರದ ವಚನಿಕೆಯನ್ನು ಮೂಲ ಢೂಂಡಾರಿ ಭಾಷೆಯಲ್ಲಿ ರಚಿಸಿದ್ದು ಅದನ್ನು ಶ್ರೀ ಎಂ. ಬಿ. ಪಾಟೀಲರು ಕನ್ನಡದಲ್ಲಿ ಅನುವಾದಿಸಿ ಕೊಟ್ಟಿದ್ದಾರೆ. ಆದುದರಿಂದ ನಾವು ಮೊದಲು ಶ್ರೀ ಎಂ. ಬಿ. ಪಾಟೀಲರ ಉಪಕಾರವನ್ನು ತುಂಬು ಹೃದಯದಿಂದ ಸ್ಮರಿಸುತ್ತೇವೆ. ಮತ್ತು ಅವರಿಗೆ ಅನೇಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಅದರಂತೆ ಈ ನಾಲ್ಕನೆಯ ಆವೃತ್ತಿಯ ಪ್ರಕಾಶನದಲ್ಲಿ ಸ್ವ. ಮಾತೋಶ್ರೀ ಶ್ರೀಮತಿ ಕುಸುಮ ಎಂ. ಪಾಟೀಲ ಇವರ ಸ್ಮರಣಾರ್ಥ ೨೫,೦೦೦ ರೂ ಶುದ್ಧಾತ್ಮ ಸದನದಿಂದ ಮತ್ತು ಸೌ. ಶಾಂತಕುಮಾರಿ ವಿದ್ಯಾಧರ, ಚಾಮರಾಜನಗರ ಇವರಿಂದ ೨೫,೦೦೦ ರೂ ಅಲ್ಲದೆ ನಾಮಲೋಭರಹಿತ ಓರ್ವ ಸಾಧರ್ಮಿಗಳಿಂದ ೨೦,೦೦೦ ರೂ ಮತ್ತು ಚಿ. ಅರ್ಚಿತ ರಮೇಶ ಭಂಡಾರಿ, ಬೆಂಗಳೂರು ಇವರಿಂದ ೨೦,೦೦೦ ರೂ ದಾನರಾಶಿಯು ಪ್ರಾಪ್ತವಾಗಿದೆ. ದಾತೃಗಳು ಧನ್ಯವಾದಕ್ಕೆ ಪಾತ್ರರಿದ್ದಾರೆ. ಈ ಪ್ರಕಾರದ ಧರ್ಮ ಭಾವನೆಯಿಂದಲೇ ಗೃಹಸ್ಥ ಜೀವನದ ಶೋಭೆಯಿದೆ.

ಅದೇ ಪ್ರಕಾರ ಶ್ರೀ ಇಮೇಜ ಪ್ರಿಂಟ್ಸ್‌ದ ಒಡೆಯರಾದ ಶ್ರೀ ಅಜಿತ ಪಾಟೀಲರು ತುಂಬಾ ಆತ್ಮೀಯತೆಯಿಂದ ಇದನ್ನು ಸುಂದರವಾಗಿ ಮುದ್ರಿಸಿದ್ದಾರೆ ಅವರಿಗೂ ಹಾಗೂ ಅಲ್ಲಿನ ಕುಶಲ ಕರ್ಮಚಾರಿಗಳಿಗೂ ಅನೇಕ ಧನ್ಯವಾದಗಳು.

ಬೆಂಗಳೂರು.
ದಿನಾಂಕ : 22 ನವ್ಹೆಂಬರ - 2016.

**ಶ್ರೀ ಸಿ. ಬಿ. ಭಂಡಾರಿ**
ಅಧ್ಯಕ್ಷರು, ದಿಗಂಬರ ಜೈನ ಟ್ರಸ್ಟ, ಬೆಂಗಳೂರು.



ವನದಲ್ಲಿ ರತ್ನಕರಂಡ ಶ್ರಾವಕಾಚಾರ ಗ್ರಂಥದ ರಚನೆ ಮಾಡುತ್ತಿರುವ

ಶ್ರೀ ಸಮಂತಭದ್ರ ಆಚಾರ್ಯರು

# ಪ್ರಸ್ತಾವನೆ

## ಗ್ರಂಥದ ಹೆಸರು :

ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ವಿಖ್ಯಾತ ಗ್ರಂಥರಾಜನನ್ನು ಇಂದು ಎಲ್ಲರೂ 'ರತ್ನಕರಂಡ ಶ್ರಾವಕಾಚಾರ'ವೆಂದು ಹೆಸರಿಸುತ್ತಿದ್ದರೂ ಮತ್ತು ಸಂಸ್ಕೃತ ಟೀಕಾಕಾರರು ಈ ಗ್ರಂಥದ ಹೆಸರನ್ನು 'ಇತಿ ಪ್ರಭಾಚಂದ್ರ ವಿರಚಿತಾಯಾಂ ಸಮಂತಭದ್ರಸ್ವಾಮಿ ವಿರಚಿತೋಪಾಸಕಾಧ್ಯಯನ ಟೀಕಾಯಾಂ' ಎಂದರೆ ಈ ಪ್ರಕಾರ ಸಮಂತಭದ್ರಸ್ವಾಮಿ ವಿರಚಿತ **'ಉಪಾಸಕಾಧ್ಯಯನ'**ವೆಂದುಹೇಳಲಾಗಿದ್ದರೂ ಕೂಡ ಮೂಲ ಗ್ರಂಥಕಾರರಾದ ಸ್ವಾಮಿ ಸಮಂತಭದ್ರಾಚಾರ್ಯ ದೇವರು ಮಾತ್ರ **'ದೇಶಯಾಮಿ ಸಮೀಚೀನಂ ಧರ್ಮ'** ಎಂದರೆ ನಾನು ಸಮೀಚೀನ ಧರ್ಮವನ್ನು ಹೇಳುತ್ತೇನೆ ಎಂದರೆ **'ಸಮೀಚೀನ ಧರ್ಮಶಾಸ್ತ್ರ'**ವನ್ನು ರಚಿಸುತ್ತೇನೆಂದು ಸ್ವಯಂ ಪ್ರತಿಜ್ಞೆ ಮಾಡಿದ್ದಾರೆ. ಇದರ ಮೇಲಿಂದ ಇಂದು ನಾವು ಯಾವ ಗ್ರಂಥವನ್ನು **'ರತ್ನಕರಂಡ ಶ್ರಾವಕಾಚಾರ'**ವೆಂದು ಕರೆಯುತ್ತಿದ್ದೇವೆಯೋ ಆ ಗ್ರಂಥವು ನಿಜವಾಗಿ **'ಸಮೀಚೀನ ಧರ್ಮಶಾಸ್ತ್ರ'** ವಿದೆಯೆಂಬುದು ಮೂಲ ಗ್ರಂಥಕರ್ತೃರ ಪ್ರತಿಜ್ಞಾರೂಪದ ಸೂತ್ರದಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ.

ಮೂಲ ಗ್ರಂಥಕಾರರು ತಮ್ಮ ಕೃತಿಯನ್ನು **'ಸಮೀಚೀನ ಧರ್ಮಶಾಸ್ತ್ರ'**ವೆಂದೇ ಕರೆದಿದ್ದಾರೆ ಮತ್ತು ಟೀಕಾಕಾರರಾದ ಪ್ರಭಾಚಂದ್ರರು ಅದನ್ನು 'ಉಪಾಸಕಾಧ್ಯಯನ'ವೆಂದು ಹೇಳಿದ್ದಾರೆ. ಇವೆರಡೂ ಹೆಸರುಗಳನ್ನು ಹೊರತುಪಡಿಸಿ ಈ 'ರತ್ನಕರಂಡ ಶ್ರಾವಾಕಾಚಾರ'ವೆಂಬ ಮೂರನೆಯ ಹೆಸರು ಎಲ್ಲಿಂದ - ಯಾವ ಮೂಲದಿಂದ ಉಗಮವಾಗಿದೆಯೆಂಬುದನ್ನು ಮೊದಲು ತಿಳಿದುಕೊಳ್ಳುವುದು ಅತ್ಯಂತ ಆವಶ್ಯಕವಿದೆ. ಏಕೆಂದರೆ ಗ್ರಂಥದ ಹೆಸರನ್ನು ಆ ಹೆಸರಿನ ಅರ್ಥವನ್ನು ತಿಳಿದುಕೊಳ್ಳದೆ ಗ್ರಂಥದ ಒಳಾಂಗಣದಲ್ಲಿ ಪ್ರವೇಶ ಮಾಡುವುದು ನಿಜಕ್ಕೂ ಉಪಯುಕ್ತವೆನಿಸಲಾರದು. ಈ 'ರತ್ನಕರಂಡ' ವೆಂಬ ಹೆಸರು ಗ್ರಂಥದ ಕೊನೆಗೆ ನೂರ ನಲವತ್ತೊಂಭತ್ತನೆಯ ಸೂತ್ರದಲ್ಲಿ ಬರುತ್ತದೆ. ಅದರಲ್ಲಿ **'ಯೇನ ಸ್ವಯಂ ವೀತ ಕಲಂಕ ವಿದ್ಯಾ ದೃಷ್ಟಿ ಕ್ರಿಯಾ ರತ್ನಕರಂಡ ಭಾವಮ್ ! ನೀತಃ'** ಎಂದರೆ ಯಾವ ಪುರುಷನು ತನ್ನ ಆತ್ಮನನ್ನು ಕಲಂಕ ಹಾಗೂ ಅತಿಚಾರಗಳಿಂದ ರಹಿತ ನಿರ್ದೋಷ ಜ್ಞಾನ-ದರ್ಶನ-ಚಾರಿತ್ರರೂಪ ರತ್ನಗಳ ಕರಂಡಕ ಭಾವಕ್ಕೆ ಎಂದರೆ ಪೆಟ್ಟಿಗೆಯ ಪಾತ್ರತೆಗೆ ಪ್ರಾಪ್ತರಾಗುತ್ತಾರೆ, ಅವರು ನಿಜವಾಗಿ ಶ್ರಾವಕರಿರುತ್ತಾರೆ. ಅಂಥ ಶ್ರಾವಕರ ಆಚಾರ-ವಿಚಾರಗಳನ್ನು ಈ ಗ್ರಂಥವು ತಿಳಿಸಿಕೊಡುತ್ತಿರುವುದರಿಂದ ಇದು 'ರತ್ನಕರಂಡ ಶ್ರಾವಕಾಚಾರ'ವಿದೆಯೆಂಬ ರೂಢನಾಮ ಬಂದಿರಬೇಕು.

## ಗ್ರಂಥದ ಪರಿಚಯ :

'ರತ್ನಕರಂಡ ಶ್ರಾವಕಾಚಾರ'ವು ಕೇವಲ ನೂರೈವತ್ತು ಸೂತ್ರಗಳನ್ನು ಹೊಂದಿ ಗಾತ್ರದಲ್ಲಿ ಅತ್ಯಂತ ಕಿರಿದಾಗಿದ್ದರೂ ಕೂಡ ಪಾತ್ರದಲ್ಲಿ ತುಂಬ ಮಹತ್ವಪೂರ್ಣವಾದ ಗ್ರಂಥವಾಗಿದೆ. **'ಸಮೀಚೀನ ಧರ್ಮಶಾಸ್ತ್ರ'**ವನ್ನು ಹೇಳುತ್ತೇನೆಂದು ಎರಡನೇ ಸೂತ್ರದಲ್ಲಿ ಪ್ರತಿಜ್ಞೆ ಮಾಡಿದ ಆಚಾರ್ಯ ಭಗವಂತರು ಮೂರನೇ ಸೂತ್ರದಲ್ಲಿ ಆ ಸಮೀಚೀನ ಧರ್ಮದ ವ್ಯಾಖ್ಯೆ ಮಾಡುತ್ತ 'ಸದ್ದೃಷ್ಟಿ-ಜ್ಞಾನ-ವೃತ್ತಾನಿ ಧರ್ಮಂ ಧರ್ಮೇಶ್ವರಾ ವಿದುಃ।' ಎಂದರೆ ಧರ್ಮದ ಅಧಿನಾಯಕರಾದ ತೀರ್ಥಂಕರ ಭಗವಂತರು ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರವನ್ನು ಧರ್ಮವೆಂದು ಹೇಳಿದ್ದಾರೆ. ಧರ್ಮದ ಉಪಯುಕ್ತ ಪರಿಭಾಷೆಯಲ್ಲಿ ಕೇವಲ ಆಚರಣೆಯನ್ನೇ ಇಲ್ಲ, ಆದರೆ ಶ್ರದ್ಧೆ, ಜ್ಞಾನ ಮತ್ತು ಚಾರಿತ್ರದ ನಿರ್ಮಲ ಪರಿಣತಿಯನ್ನು ಧರ್ಮವೆಂದು ಹೇಳಲಾಗಿದೆ. ಆದುದರಿಂದ ಶ್ರಾವಕನ ಕೇವಲ ಬಾಹ್ಯಾಚಾರವು ಶ್ರಾವಕ ಧರ್ಮವಿಲ್ಲ, ಆದರೆ ಶ್ರಾವಕೋಚಿತ ರತ್ನತ್ರಯ ರೂಪದ ನಿರ್ಮಲ ಪರಿಣತಿಯೇ ನಿಜವಾಗಿ ಶ್ರಾವಕಧರ್ಮವಿದೆ. ಇದೇ ಕಾರಣದಿಂದ ಇದರಲ್ಲಿ ಎಲ್ಲಕ್ಕೂ ಮೊದಲು ಸಮ್ಯಗ್ದರ್ಶನದ ವಿವೇಚನೆಯನ್ನು ವಿಸ್ತಾರಪೂರ್ವಕವಾಗಿ ಮಾಡಲಾಗಿದೆ.

ಪ್ರಸ್ತುತ ಗ್ರಂಥವನ್ನು ಸಂಸ್ಕೃತ ಟೀಕಾಕಾರರಾದ ಪ್ರಭಾಚಂದ್ರರು ಏಳು ಅಧಿಕಾರಗಳಲ್ಲಿ ವಿಂಗಡಿಸಿದ್ದಾರೆ ಮತ್ತು ಸದಾಸುಖಜಿಯವರು ಎಂಟು ಅಧಿಕಾರಗಳಲ್ಲಿ ವಿಸ್ತರಿಸಿದ್ದಾರೆ. ''ಭಾವನಾ ಅಧಿಕಾರ'ವೆಂಬ ಒಂದು ಸ್ವತಂತ್ರ ಅಧಿಕಾರವನ್ನು ಅವರು ಸೃಷ್ಟಿಸಿದ್ದಾರೆ. ಅದಕ್ಕೆ ಮೂಲ ಗ್ರಂಥದ ಯಾವೊಂದೂ ಸೂತ್ರವನ್ನು ಆಧಾರಭೂತವಾಗಿ ಸ್ವೀಕರಿಸದೆ ಸಂಪೂರ್ಣ ಸ್ವತಂತ್ರ ರಚನೆಯನ್ನೇ ಮಾಡಿದ್ದಾರೆ. ಈ ಪ್ರಕಾರ ಮೂಲ ಗ್ರಂಥದಲ್ಲಿ ಏಳು ಅಥವಾ ಎಂಟು ಅಧಿಕಾರ ಮಾಡಿರುವುದನ್ನು ನೋಡಿದ ನಂತರ ಇದರಲ್ಲಿ ಸಮ್ಯಗ್ದರ್ಶನಾಧಿಕಾರ, ಸಮ್ಯಗ್ಜ್ಞಾನಾಧಿಕಾರ ಮತ್ತು ಸಮ್ಯಕ್ಚಾರಿತ್ರಾಧಿಕಾರವೆಂದು ಮೂರೇ ಅಧಿಕಾರ ಮಾಡುತ್ತಿದ್ದರೆ ಹೆಚ್ಚು ಸೂಕ್ತವಾಗಬಹುದಿತ್ತೆಂದು ನಮಗೆನಿಸುತ್ತದೆ. ಏಕೆಂದರೆ ಅಣುವ್ರತ, ಗುಣವ್ರತ, ಶಿಕ್ಷಾವ್ರತ, ಸಲ್ಲೇಖನ ಮತ್ತು ಪ್ರತಿಮಾ ಮೊದಲಾದವುಗಳೆಲ್ಲವೂ ಒಂದು ಚಾರಿತ್ರಾಧಿಕಾರದಲ್ಲಿ ಸಮಾವೇಶವಾಗಿಹೋಗುತ್ತವೆ. ಆದುದರಿಂದ ಇವನ್ನು ಸಮ್ಯಕ್ಚಾರಿತ್ರಾಧಿಕಾರದ ಅಂತರ್ಭೇದಗಳೆಂದು ಹೇಳಿದ್ದರೆ ಇನ್ನೂ ಚನ್ನಾಗಿರುತ್ತಿತ್ತು.

ಸ್ವಾಮಿ ಸಮಂತಭದ್ರಾಚಾರ್ಯದೇವರು ಗ್ರಂಥದ ಪ್ರಾರಂಭದಲ್ಲಿ ಧರ್ಮದ ನಿರುಕ್ತಾರ್ಥ ಮತ್ತು ವಾಚ್ಯಾರ್ಥವನ್ನು ತಿಳಿಸಿಕೊಟ್ಟು ಸಮ್ಯಗ್ದರ್ಶನದ ಲಕ್ಷಣವನ್ನು ಹೇಳಿದ್ದಾರೆ. ಅನಂತರ ಸಮ್ಯಗ್ದರ್ಶನದ ವಿಷಯಭೂತವಿರುವ ಆಪ್ತ, ಆಗಮ ಮತ್ತು ಗುರುವಿನ ಸ್ವರೂಪ ಹಾಗೂ ಸಮ್ಯಗ್ದರ್ಶನದ ಎಂಟು ಅಂಗಗಳ ಲಕ್ಷಣ, ಎಂಟು ಮದ, ಮೂರು ಮೂಢತೆ ಮೊದಲಾದವುಗಳ ವರ್ಣನೆ ಮಾಡಿದ್ದಾರೆ. ಸಮ್ಯಗ್ದರ್ಶನದ ಮಹಾಮಹಿಮೆಯನ್ನು ಹಾಡಿದ್ದಾರೆ.

**ಸಮ್ಯಗ್ದರ್ಶನ :**

ಈ ಸಮ್ಯಗ್ದರ್ಶನದಲ್ಲಿ ಔಪಶಮಿಕ, ಕ್ಷಾಯೋಪಶಮಿಕ ಮತ್ತು ಕ್ಷಾಯಿಕವೆಂದು ಮೂರು ಪ್ರಕಾರಗಳಿದ್ದು ಇವುಗಳಲ್ಲಿ ಮೊತ್ತ ಮೊದಲು ಅನಾದಿ ಮಿಥ್ಯಾದೃಷ್ಟಿಗೆ ಔಪಶಮಿಕ ಸಮ್ಯಗ್ದರ್ಶನದ ಪ್ರಾಪ್ತಿಯಾಗುತ್ತದೆ. ಇದರಲ್ಲಿಕೂಡ ಪ್ರಥಮೋಪಶಮ ಮತ್ತು ದ್ವಿತೀಯೋಪಶಮವೆಂದು ಎರಡು ಭೇದಗಳಿದ್ದು ಆ ಪ್ರಥಮೋಪಶಮ ಸಮ್ಯಗ್ದರ್ಶನವು ಸಂಜ್ಞೀ ಪಂಚೇಂದ್ರಿಯ, ಪರ್ಯಾಪ್ತಕ, ಮಂದಕಷಾಯಿ. ಭವ್ಯಜೀವಕ್ಕೇನೇ ಆಗುತ್ತದೆ, ಅಭವ್ಯಜೀವಕ್ಕೆ ಆಗುವುದಿಲ್ಲ, ಭವ್ಯಗಳಲ್ಲಿ ಕೂಡ ಆಸನ್ನ ಭವ್ಯಕ್ಕೆ ಆಗುತ್ತದೆ ದೂರ ಭವ್ಯಕ್ಕೆ ಆಗುವುದಿಲ್ಲ, ಆಸನ್ನ ಎಂದರೆ ಸಂಸಾರದ ಪರಿಭ್ರಮಣದ ಕಾಲವು ಅರ್ಧಪುದ್ಗಲ ಪರಾವರ್ತನದ ಕಾಲದಿಂದ ಅಧಿಕ ಬಾಕಿ ಉಳಿದಿರಬಾರದು. ಇಂಥ ಜೀವನು ಸಮ್ಯಗ್ದರ್ಶನ ಧಾರಣ ಮಾಡುವುದರ ಸನ್ಮುಖನಾದಾಗ ಅವನು ಕ್ಷಾಯೋಪಶಮಿಕ, ವಿಶುದ್ಧಿ, ದೇಶನಾ, ಪ್ರಾಯೋಗ್ಯ ಮತ್ತು ಕರಣವೆಂಬ ಈ ಐದು ಲಬ್ಧಿಗಳಿಗೆ ಪ್ರಾಪ್ತನಾಗುತ್ತಾನೆ. ಇವುಗಳಲ್ಲಿ ಒಂದು ಕರಣಲಬ್ಧಿಯನ್ನು ಹೊರತುಪಡಿಸಿ ಉಳಿದ ನಾಲ್ಕು ಲಬ್ಧಿಗಳು ಸಾಮಾನ್ಯವಿದ್ದು ಅವು ಭವ್ಯ ಹಾಗೂ ಅಭವ್ಯಗಳೆರಡಕ್ಕೂ ಪ್ರಾಪ್ತವಾಗುತ್ತವೆ; ಆದರೆ ಕರಣಲಬ್ಧಿಯು ಭವ್ಯ ಜೀವಕ್ಕೇನೇ ಪ್ರಾಪ್ತವಾಗುತ್ತದೆ ಮತ್ತು ಅದರ ಪ್ರಾಪ್ತಿಯಾದ ನಂತರ ನಿಯಮದಿಂದ ಸಮ್ಯಗ್ದರ್ಶನವು ಪ್ರಕಟವಾಗುತ್ತದೆ. ಇದನ್ನೇ ಪ್ರಥಮೋಪಶಮಸಮ್ಯಗ್ದರ್ಶನವೆಂದು ಹೇಳಲಾಗುತ್ತದೆ.

ಭಾವಗಳನ್ನು 'ಕರಣ'ವೆಂದು ಹೇಳುತ್ತಿರುವುದರಿಂದ ಸಮ್ಯಗ್ದರ್ಶನ ಪ್ರಾಪ್ತ ಮಾಡಿಸುವಂಥ ಕರಣಗಳ-ಭಾವಗಳ ಪ್ರಾಪ್ತಿಯನ್ನು 'ಕರಣ ಲಬ್ಧಿ'ಯೆಂದು ಹೇಳುತ್ತಾರೆ. ಇದರಲ್ಲಿ ಅಧಃಕರಣ, ಅಪೂರ್ವಕರಣ ಮತ್ತು ಅನಿವೃತ್ತಿಕರಣವೆಂದು ಮೂರು ಭೇದಗಳಿವೆ. ಯಾವ ಕರಣಗಳು ಎಂದರೆ ಪರಿಣಾಮಗಳು ಈ ಮೊದಲೆಂದೂ ಪ್ರಾಪ್ತವಾಗಿರುವುದಿಲ್ಲ ಅವನ್ನು ಅಧಃಪ್ರವೃತ್ತಿಕರಣವೆಂದು ಹೇಳುತ್ತಾರೆ, ಯಾವುದರಲ್ಲಿ ಪ್ರತಿಯೊಂದು ಸಮಯದೊಳಗೆ ಅಪೂರ್ವ-ಅಪೂರ್ವ, ನವೀನ- ನವೀನ ಪರಿಣಾಮಗಳಾಗುತ್ತವೆ, ಅದನ್ನು ಅಪೂರ್ವಕರಣವೆಂದು ಹೇಳುತ್ತಾರೆ ಮತ್ತು ಎಲ್ಲಿ ಒಂದು ಸಮಯದೊಳಗೆ ಒಂದೇ ಪರಿಣಾಮವಾಗುತ್ತದೆ ಅದನ್ನು ಅನಿವೃತ್ತಿಕರಣವೆಂದು ಹೇಳುತ್ತಾರೆ. ಈ ಪ್ರಕಾರ ಈ ಮೂರು ಕರಣಗಳಲ್ಲಿ ಪರಿಣಾಮಗಳ ವಿಶುದ್ಧತೆಯು ಹೆಚ್ಚುತ್ತ ಹೋಗುತ್ತಿರುತ್ತದೆ.

ಈ ಮೂರು ಕರಣಗಳೊಳಗಿನ ಮೊದಲನೆಯ ಅಧಃಕರಣದಲ್ಲಿ ನಾಲ್ಕು ಆವಶ್ಯಕಗಳಿರುತ್ತವೆ. ಸಮಯ ಸಮಯಕ್ಕೆ ಅನಂತಗುಣಿತ ವಿಶುದ್ಧತೆಯಾಗುವುದು, ಪ್ರತಿಯೊಂದು ಅಂತರ್ಮುಹೂರ್ತದಲ್ಲಿ ನವೀನ ಬಂಧದ ಸ್ಥಿತಿಯು ಕುಂದುತ್ತ ಹೋಗುವುದು, ಪ್ರತಿಯೊಂದು ಸಮಯದಲ್ಲಿ ಪ್ರಶಸ್ತ ಪ್ರಕೃತಿಗಳ ಅನುಭಾಗವು ಅನಂತಗುಣಿತ ಹೆಚ್ಚುತ್ತ ಹೋಗುವುದು, ಮತ್ತು ಪ್ರತಿಯೊಂದು ಸಮಯದಲ್ಲಿ ಅಪ್ರಶಸ್ತ ಪ್ರಕೃತಿಗಳ ಅನುಭಾಗವು ಅನಂತದ ಭಾಗದಷ್ಟು ಕುಂದುತ್ತ ಹೋಗುವುದು. ಇದರ ನಂತರ ಅಪೂರ್ವಕರಣದ ಪರಿಣಾಮವಾಗುತ್ತದೆ. ಆ ಅಪೂರ್ವಕರಣದಲ್ಲಿ ಮತ್ತೆ ಆವಶ್ಯಕಗಳಾಗುತ್ತವೆ. ಸತ್ತಾದಲ್ಲಿ ಇರುವ ಪೂರ್ವಕರ್ಮಗಳ ಸ್ಥಿತಿಯು ಪ್ರತಿಯೊಂದು ಅಂತರ್ಮುಹೂರ್ತದಲ್ಲಿ ಉತ್ತರೋತ್ತರ ಕುಂದುತ್ತ ಹೋಗುತ್ತದೆ, ಅದರಿಂದ ಸ್ಥಿತಿಕಾಂಡಕಘಾತವಾಗುತ್ತದೆ; ಪ್ರತಿಯೊಂದು ಅಂತರ್ಮುಹೂರ್ತದಲ್ಲಿ ಪೂರ್ವಕ್ರಮಗಳ ಅನುಭಾಗವು ಉತ್ತರೋತ್ತರ ಕುಂದುತ್ತ ಹೋಗುತ್ತದೆ, ಅದರಿಂದ ಅನುಭಾಗಕಾಂಡಕಘಾತವಾಗುತ್ತದೆ; ಮತ್ತು ಗುಣಶ್ರೇಣಿಯ ಕಾಲದಲ್ಲಿ ಕ್ರಮದಿಂದ ಅಸಂಖ್ಯಾತ ಗುಣಿತ ಕರ್ಮವು ನಿರ್ಜರೆಗೆ ಯೋಗ್ಯವಾಗುವುದರಿಂದ ಗುಣಶ್ರೇಣಿ ನಿರ್ಜರೆಯಾಗುತ್ತದೆ. ಈ ಅಪೂರ್ವಕರಣದಲ್ಲಿ ಗುಣಸಂಕ್ರಮಣ ನಾಮದ ಆವಶ್ಯಕವಿರುವುದಿಲ್ಲ. ಇದರ ನಂತರ ಅನಿವೃತ್ತಿಕರಣವಾಗುತ್ತದೆ. ಅದರ ಕಾಲವು ಅಪೂರ್ವಕರಣದ ಕಾಲದಿಂದ ಸಂಖ್ಯಾತದ ಭಾಗದಷ್ಟಿರುತ್ತದೆ. ಇದರಲ್ಲಿ ಪೂರ್ವೋಕ್ತ ಆವಶ್ಯಕ ಸಹಿತ ಅದೆಷ್ಟೋ ಕಾಲವು ಕಳೆದು ಹೋದ ಮೇಲೆ ಅಂತರಕರಣವಾಗುತ್ತದೆ ಎಂದರೆ ಅನಿವೃತ್ತಿಕರಣಕಾಲದ ನಂತರ ಉದಯದಲ್ಲಿ ಬರಲು ಯೋಗ್ಯ ಮಿಥ್ಯಾತ್ವಕರ್ಮದ ನಿಷೇಕಗಳ ಅಭಾವವು ಅಂತರ್ಮುಹೂರ್ತದ ಸಲುವಾಗಿ ಆಗುತ್ತದೆ. ಅಂತರಕರಣದ ನಂತರ ಉಪಶಮಕರಣವಾಗುತ್ತದೆ ಎಂದರೆ ಅಂತರಕರಣದ ಮೂಲಕ ಅಭಾವರೂಪ ಮಾಡಲಾದ ನಿಷೇಕಗಳ ನಂತರ ಯಾವ ಮಿಥ್ಯಾತ್ವದ ನಿಷೇಕಗಳು ಉದಯದಲ್ಲಿ ಬರುವಂಥವುಗಳಿದ್ದವು ಅವನ್ನು ಉದಯದ ಅಯೋಗ್ಯವನ್ನಾಗಿ ಮಾಡಲಾಗುತ್ತದೆ. ಜತೆಯಲ್ಲೇ ಅನಂತಾನುಬಂಧಿಯ ಚತುಷ್ಕಗಳನ್ನು ಉದಯದ ಅಯೋಗ್ಯವನ್ನಾಗಿ ಮಾಡಲಾಗುತ್ತದೆ. ಈ ಪ್ರಕಾರ ಉದಯಯೋಗ್ಯ ಪ್ರಕೃತಿಗಳ ಅಭಾವವಾಗುವುದರಿಂದ ಪ್ರಥಮೋಪಶಮಸಮ್ಯಕ್ತ್ವವಾಗುತ್ತದೆ. ಪ್ರಥಮೋಪಶಮ ಸಮ್ಯಕ್ತ್ವದ ಮೊದಲ ಸಮಯದಲ್ಲಿ ಸಮ್ಯಕ್ತ್ವ, ಮಿಥ್ಯಾತ್ವ ಮತ್ತು ಸಮ್ಯಕ್‌ಮಿಥ್ಯಾತ್ವವೆಂದು ಮಿಥ್ಯಾದರ್ಶನದಲ್ಲಿ ಮೂರು ಭಾಗ ಮಾಡುತ್ತದೆ. ಇವು ಮೂರು ಪ್ರಕೃತಿ ಹಾಗೂ ಅನಂತಾನುಬಂಧಿಯ ನಾಲ್ಕು ಪ್ರಕೃತಿ ಹೀಗೆ ಒಟ್ಟು ಏಳು ಪ್ರಕೃತಿಗಳ ಉದಯದ ಅಭಾವವಾದ ಮೇಲೆ ಪ್ರಥಮೋಪಶಮಸಮ್ಯಕ್ತ್ವವಾಗುತ್ತದೆ. ಅನಂತರ ಕ್ಷಾಯೋಪಶಮಿಕ ಸಮ್ಯಗ್ದರ್ಶನವನ್ನು ಧಾರಣ ಮಾಡುವಂಥ ಜೀವನು ಯಾವಾಗ ಅಪ್ರಮತ್ತ ಭೇದದಲ್ಲಿ ಉಪಶಮ ಶ್ರೇಣಿ ಧರಿಸುವುದರ ಸನ್ಮುಖನಾಗುತ್ತಾನೆ, ಆಗ ಅವನಿಗೆ ದ್ವಿತಿಯೋಪಶಮ ಸಮ್ಯಗ್ದರ್ಶನವು ಉತ್ಪನ್ನವಾಗುತ್ತದೆ.

ವರ್ತಮಾನ ಕಾಲದಲ್ಲಿ ಉದಯದೊಳಗೆ ಬರುವಂಥ ಮಿಥ್ಯಾತ್ವ, ಸಮ್ಯಕ್‌ಮಿಥ್ಯಾತ್ವ, ಅನಂತಾನುಬಂಧಿ ಕ್ರೋಧ, ಮಾನ, ಮಾಯೆ, ಲೋಭ ಇವು ಆರು ಸರ್ವಘಾತಿ ಪ್ರಕೃತಿಗಳ ನಿಷೇಕಗಳ ಉದಯಾಭಾವಿ ಕ್ಷಯ ಹಾಗೂ ಭವಿಷ್ಯಕಾಲದಲ್ಲಿ ಉದಯದೊಳಗೆ ಬರುವಂಥ ನಿಷೇಕಗಳ ಸದವಸ್ಥಾರೂಪದ ಉಪಶಮ ಮತ್ತು ಸಮ್ಯಕ್ತ್ವಪ್ರಕೃತಿಯೆಂಬ ಹೆಸರಿನ ದೇಶ ಘಾತಿ ಪ್ರಕೃತಿಯ ಉದಯವಿದ್ದರೂ ಕೂಡ ಯಾವ ಸಮ್ಯಕ್ತ್ವವಾಗುತ್ತದೆ ಅದನ್ನು ಕ್ಷಾಯೋಪಶಮಿಕ ಸಮ್ಯಕ್ತ್ವವೆಂದು ಹೇಳುತ್ತಾರೆ. ಮತ್ತು ಯಾವ ಸಮ್ಯಕ್ತ್ವವು ಮಿಥ್ಯಾತ್ವ, ಸಮ್ಯಕ್‌ಮಿಥ್ಯಾತ್ವ, ಸಮ್ಯಕ್ತ್ವಪ್ರಕೃತಿ ಹಾಗೂ ಅನಂತಾನುಬಂಧಿ ಕ್ರೋಧ, ಮಾನ, ಮಾಯೆ, ಲೋಭ ಇವು ಏಳು ಪ್ರಕೃತಿಗಳ ಕ್ಷಯದಿಂದ ಉತ್ಪನ್ನವಾಗುತ್ತದೆ ಅದು ಕ್ಷಾಯಿಕ ಸಮ್ಯಕ್ತ್ವವೆಂದು ಕರೆಸಿಕೊಳ್ಳುತ್ತದೆ. ಇದು ಕೇವಲಿ ಅಥವಾ ಶ್ರುತಕೇವಲಿಗಳ ಪಾದ ಮೂಲದಲ್ಲಿಯೇ ಆಗುತ್ತದೆ.

## ಸಮ್ಯಗ್ಜ್ಞಾನ :

ಮೋಕ್ಷಮಾರ್ಗದಲ್ಲಿ ಪ್ರಯೋಜನಭೂತವಿರುವ ಜೀವ-ಅಜೀವ ಮೊದಲಾದ ಏಳು ತತ್ತ್ವಗಳನ್ನು ಸಂಶಯ, ವಿಪರ್ಯಯ ಮತ್ತು ಅನಧ್ಯವಸಾಯದಿಂದ ರಹಿತವಾಗಿ ತಿಳಿಯುವುದು ಅದು ಸಮ್ಯಗ್ಜ್ಞಾನವಿದೆ. ಈ ಸಮ್ಯಗ್ಜ್ಞಾನವು

ಸಮ್ಯಗ್ದರ್ಶನದ ಜತೆಯಲ್ಲಿಯೇ ಪ್ರಕಟವಾಗುತ್ತಿದ್ದರೂ ದೀವಿಗೆ ಹಾಗೂ ಪ್ರಕಾಶದ ಸಮಾನ ಎರಡರಲ್ಲಿ ಕಾರಣ-ಕಾರ್ಯಭಾವವಿದೆ. ಎಂದರೆ ಸಮ್ಯಗ್ದರ್ಶನವು ಕಾರಣವಿದ್ದರೆ ಸಮ್ಯಗ್ಜ್ಞಾನವು ಕಾರ್ಯವಿದೆ. ಆದುದರಿಂದ ಸಮ್ಯಗ್ದರ್ಶನವಾಗುವ ಮೊದಲಿನ ಜ್ಞಾನವನ್ನು ಸಮ್ಯಗ್ಜ್ಞಾನವೆಂದು ಹೇಳಲಾಗುವುದಿಲ್ಲ. ಈ ಸಮ್ಯಗ್ಜ್ಞಾನವು ಮತಿ, ಶ್ರುತ, ಅವಧಿ, ಮನಃಪರ್ಯಯ ಮತ್ತು ಕೇವಲದ ಭೇದದಿಂದ ಐದು ಪ್ರಕಾರದ್ದಿದೆ. ಯಾವುದು ಐದು ಇಂದ್ರಿಯಗಳು ಹಾಗೂ ಮನಸ್ಸಿನ ಸಹಾಯದಿಂದ ಪದಾರ್ಥಗಳನ್ನು ತಿಳಿಯುತ್ತದೆ ಅದು ಮತಿಜ್ಞಾನವಿದೆ. ಮತಿಜ್ಞಾನದ ನಂತರ ಅಸ್ಪಷ್ಟ ಅರ್ಥದ ತರ್ಕವನ್ನು ಸ್ವೀಕರಿಸಿ ಯಾವ ಜ್ಞಾನವಾಗುತ್ತದೆ ಅದನ್ನು ಶ್ರುತಜ್ಞಾನವೆಂದು ಹೇಳುತ್ತಾರೆ. ಈ ಶ್ರುತಜ್ಞಾನವು ಪರ್ಯಾಯ, ಪರ್ಯಾಯಸಮಾಸ ಮೊದಲಾದ ಇಪ್ಪತ್ತು ಭೇದಗಳಲ್ಲಿ ಕ್ರಮದಿಂದ ವೃದ್ಧಿಗೆ ಪ್ರಾಪ್ತವಾಗುತ್ತದೆ. ಪರ ಪದಾರ್ಥಗಳ ಸಹಾಯವಿಲ್ಲದೆ ದ್ರವ್ಯ, ಕ್ಷೇತ್ರ, ಕಾಲ, ಭಾವದ ಮರ್ಯಾದೆಗೆ ಒಳಪಟ್ಟು ರೂಪಿ ಪದಾರ್ಥಗಳನ್ನು ಯಾವುದು ಸ್ಪಷ್ಟವಾಗಿ ತಿಳಿಯುತ್ತದೆ ಅದನ್ನು ಅವಧಿಜ್ಞಾನವೆಂದು ಹೇಳುತ್ತಾರೆ. ಇದರಲ್ಲಿ ಭವಪ್ರತ್ಯಯ ಮತ್ತು ಗುಣಪ್ರತ್ಯಯವೆಂದು ಎರಡು ಭೇದಗಳಿರುವವಲ್ಲದೆ ದೇಶಾವಧಿ, ಪರಮಾವಧಿ ಮತ್ತು ಸರ್ವಾವಧಿಯೆಂದು ಮೂರು ಭೇದಗಳು ಕೂಡ ಇರುತ್ತವೆ.

ಈ ಮತಿ, ಶ್ರುತ ಮತ್ತು ಅವಧಿಯೆಂಬ ಮೂರು ಜ್ಞಾನಗಳು ಮಿಥ್ಯಾದರ್ಶನದ ಜತೆಯಲ್ಲಿದ್ದರೆ ಮಿಥ್ಯಾಜ್ಞಾನವೆಂದೂ ಮತ್ತು ಸಮ್ಯಗ್ದರ್ಶನದ ಜತೆಯಲ್ಲಿದ್ದರೆ ಸಮ್ಯಗ್ಜ್ಞಾನವೆಂದೂ ಕರೆಸಿಕೊಳ್ಳುತ್ತವೆ.

ಇಂದ್ರಿಯ ಮೊದಲಾದವುಗಳ ಅವಲಂಬನವಿಲ್ಲದೆ ಇತರರ ಮನಸ್ಸಿನಲ್ಲಿರುವ ಪದಾರ್ಥಗಳನ್ನು ಯಾವುದು ದ್ರವ್ಯ, ಕ್ಷೇತ್ರ, ಕಾಲ, ಭಾವದ ಮರ್ಯಾದೆಗೆ ಒಳಪಟ್ಟು ಸ್ಪಷ್ಟವಾಗಿ ತಿಳಿಯುತ್ತದೆ ಅದನ್ನು ಮನಃಪರ್ಯಯ ಜ್ಞಾನವೆಂದು ಹೇಳುತ್ತಾರೆ. ಇದರಲ್ಲಿ ಋಜುಮತಿ ಮತ್ತು ವಿಪುಲಮತಿಯೆಂದು ಎರಡು ಭೇದಗಳಿದ್ದು ಈ ಜ್ಞಾನವು ಮುನಿಗಳಿಗೇ ಆಗುತ್ತದೆ, ಗೃಹಸ್ಥರಿಗೆ ಆಗುವುದಿಲ್ಲ. ಯಾವುದು ಬಾಹ್ಯ ಪದಾರ್ಥಗಳ ಸಹಾಯವಿಲ್ಲದೆ ಲೋಕಾಲೋಕದ ಸಮಸ್ತ ಪದಾರ್ಥಗಳನ್ನು ಅವುಗಳ ತ್ರಿಕಾಲ ಸಂಬಂಧದ ಅನಂತ ಪರ್ಯಾಯಗಳ ಜತೆಯಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಅದನ್ನು ಕೇವಲಜ್ಞಾನವೆಂದು ಹೇಳುತ್ತಾರೆ. ಇದರ ಉತ್ಪತ್ತಿಯು ಮೋಹನೀಯ ಹಾಗೂ ಉಳಿದ ಮೂರು ಘಾತಿಕರ್ಮಗಳ ಕ್ಷಯವಾದ ಮೇಲೆ ಹದಿಮೂರನೆಯ ಗುಣಸ್ಥಾನದಲ್ಲಿ ಆಗುತ್ತದೆ. ಇದನ್ನು ಸಕಲಪ್ರತ್ಯಕ್ಷವೆಂದೂ ಹೇಳುತ್ತಾರೆ. ಇದು ಜ್ಞಾನಗುಣದ ಸರ್ವೋತ್ಕೃಷ್ಟ ಪರ್ಯಾಯವಿದ್ದು ಸಾದಿ ಅನಂತಕಾಲದವರೆಗೆ ಇರುತ್ತದೆ ಮತ್ತು ಇದು ತದ್ಭವ ಮೋಕ್ಷಗಾಮೀ ಪುರುಷರಿಗೆ ಆಗುತ್ತದೆ. ಈ ಜ್ಞಾನವು ಇಚ್ಛೆಯಿಲ್ಲದೆಯೇ ಎಲ್ಲವನ್ನೂ ತಿಳಿಯುತ್ತದೆ.

### ಸಮ್ಯಕ್ಚಾರಿತ್ರ :

ಚಾರಿತ್ರವು ಪ್ರತ್ಯಕ್ಷ ಮೋಕ್ಷದ ಕಾರಣವಿದೆ. ಚಾರಿತ್ರವೇ ನಿಜವಾಗಿ ಧರ್ಮವಿದೆ. ನಿಶ್ಚಯದಿಂದ ಸ್ವಕೀಯ ಶುದ್ಧ ಸ್ವರೂಪದಲ್ಲಿ ಸ್ಥಿರವಿರುವುದನ್ನು ಚಾರಿತ್ರವೆಂದು ಹೇಳುತ್ತಾರೆ, ಮತ್ತು ವ್ಯವಹಾರದಿಂದ ಹಿಂಸೆ, ಹುಸಿ, ಕಳವು, ಕುಶೀಲ ಮತ್ತು ಪರಿಗ್ರಹ ಈ ಐದು ಪಾಪದ ಪ್ರಣಾಲಿಗಳಿಂದ ನಿವೃತ್ತವಾಗುವುದನ್ನು ಚಾರಿತ್ರವೆಂದು ಹೇಳುತ್ತಾರೆ. ಈ ಚಾರಿತ್ರವು ಸಕಲ ಹಾಗೂ ವಿಕಲದ ಭೇದದಿಂದ ಎರಡು ಪ್ರಕಾರದ್ದಿದೆ. ಐದೂ ಪಾಪಗಳ ಸರ್ವಥಾ ತ್ಯಾಗವನ್ನು ಸಕಲಚಾರಿತ್ರವೆಂದು ಹೇಳುತ್ತಾರೆ, ಇದು ಪರಿಗ್ರಹ ರಹಿತ ಮುನಿರಾಜರಿಗೇ ಆಗುತ್ತದೆ ಮತ್ತು ಐದು ಪಾಪಗಳ ಏಕದೇಶ ತ್ಯಾಗವನ್ನು ವಿಕಲ ಚಾರಿತ್ರವೆಂದು ಹೇಳುತ್ತಾರೆ. ಇದು ಪರಿಗ್ರಹಸಹಿತ ಗೃಹಸ್ಥರಿಗೆ ಆಗುತ್ತದೆ. ಸಮ್ಯಕ್ಚಾರಿತ್ರದ ಉತ್ಪತ್ತಿಯು ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನಪೂರ್ವಕವಾಗಿಯೇ ಆಗುತ್ತದೆ. ಇವುಗಳಿಂದ ರಹಿತವಾದ ಚಾರಿತ್ರವು ಅದು ಮಿಥ್ಯಾಚಾರಿತ್ರವಿದೆ. ಅಪ್ರತ್ಯಾಖ್ಯಾನಾವರಣ ಕ್ರೋಧ, ಮಾನ, ಮಾಯೆ ಮತ್ತು ಲೋಭದ ಉದಯವಿಲ್ಲದಿರುವುದರಿಂದ ಯಾವ ಐದು ಪಾಪಗಳ ಏಕದೇಶ ತ್ಯಾಗವಾಗುತ್ತದೆ ಅದು ವಿಕಲಚಾರಿತ್ರವೆಂದು ಕರೆಸಿಕೊಳ್ಳುತ್ತದೆ. ಮತ್ತು ಪ್ರತ್ಯಾಖ್ಯಾನಾವರಣ ಕ್ರೋಧ, ಮಾನ, ಮಾಯೆ ಹಾಗೂ ಲೋಭದ ಉದಯವಿಲ್ಲದಿರುವುದರಿಂದ ಹಿಂಸೆ ಮೊದಲಾದ ಐದು ಪಾಪಗಳಿಂದ ಸರ್ವಥಾ

ನಿವೃತ್ತಿಯಾಗುವುದನ್ನು ಸಕಲಚಾರಿತ್ರವೆಂದು ಹೇಳಲಾಗುತ್ತದೆ. ಇದರಲ್ಲಿ ಐದು ಭೇದಗಳಿದ್ದು ಅವುಗಳಲ್ಲಿ ಯಥಾಖ್ಯಾತ ಚಾರಿತ್ರವು ಸರ್ವಶ್ರೇಷ್ಠಚಾರಿತ್ರವಿದೆ. ಇದರ ವಿದ್ಯಮಾನತೆಯಲ್ಲಿಯೇ ಆತ್ಮನ ವೀತರಾಗ ಪರಿಣತಿಯು ಪ್ರಕಟವಾಗುತ್ತದೆ.

ಈ ಪ್ರಕಾರ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳ ಏಕತೆಯೇ ಮೋಕ್ಷ ಮಾರ್ಗವಿದ್ದು ಇವುಗಳ ಪರಿಪೂರ್ಣತೆಯೇ ಪ್ರತ್ಯಕ್ಷ ಮೋಕ್ಷವಿದೆ. ಈ ರತ್ನತ್ರಯದಲ್ಲಿ ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರದ ಅಪೇಕ್ಷೆಯಿಂದ ಸಮ್ಯಗ್ದರ್ಶನದ ಉಪಾಸನೆಯನ್ನೇ ಮುಖ್ಯತೆಯಿಂದ ಮಾಡಲಾಗುತ್ತದೆ. ಏಕೆಂದರೆ ಸಮ್ಯಗ್ದರ್ಶನದಿಂದ ರಹಿತವಾದ ಜ್ಞಾನ-ಚಾರಿತ್ರಗಳು ಮೋಕ್ಷಮಾರ್ಗಕ್ಕೆ ಕಾರಣವಾಗದೆ ಅವು ಸಂಸಾರದ ಪರಿಪೋಷಣೆಯನ್ನೇ ಮಾಡುತ್ತವೆ. ಇದೇ ಕಾರಣದಿಂದ ಇಲ್ಲಿ ಆಚಾರ್ಯಭಗವಂತರು ಮೋಹೀ ಎಂದರೆ ಮಿಥ್ಯಾದೃಷ್ಟಿ ಮುನಿಗಿಂತ ನಿರ್ಮೋಹೀ ಎಂದರೆ ಸಮ್ಯಗ್ದೃಷ್ಟಿ ಗೃಹಸ್ಥನು ಶ್ರೇಷ್ಠನಿದ್ದಾನೆಂದು ಹೇಳಿದ್ದಾರೆ. ಮತ್ತು ಅಂಥ ಗೃಹಸ್ಥನ ಎಂದರೆ ಶ್ರಾವಕನ ಆಚಾರ-ವಿಚಾರಗಳನ್ನೇ ಇಲ್ಲಿ ನೂರೈವತ್ತು ಸೂತ್ರಗಳಲ್ಲಿ ನಿಬದ್ಧಗೊಳಿಸಿದ್ದಾರೆ. ಅನಾದಿ ಮಿಥ್ಯಾದೃಷ್ಟಿ ಜೀವನು ತನ್ನ ಸ್ವರೂಪದ ಸ್ವೀಕಾರದೊಡನೆ ಸಮ್ಯಗ್ದರ್ಶನವನ್ನು -ಆತ್ಮಾನುಭೂತಿಯನ್ನು ಪ್ರಾಪ್ತಮಾಡಿಕೊಂಡ ನಂತರ ಅವನ ಜೀವನವು ತೀರ ಸ್ವಾಭಾವಿಕವಾಗಿ ಹೋಗುತ್ತದೆ. ಅವನು ಯಾವುದೇ ಅಣುವ್ರತಗಳನ್ನಾಗಲಿ ಅಥವಾ ಮಹಾವ್ರತಗಳನ್ನಾಗಲಿ ಹಟಪೂರ್ವಕವಾಗಿ ಗ್ರಹಣ ಮಾಡುವುದೇ ಇಲ್ಲ. ಅಂತರಂಗದ ನಿರ್ಮಲತೆಯು ಹೆಚ್ಚುತ್ತಿರುವಂತೆ ಬಾಹ್ಯದಲ್ಲಿ ವ್ರತಗಳ ಸ್ವೀಕಾರವು ತಾನಾಗಿಯೇ ಆಗುತ್ತಿರುತ್ತದೆ. ಮೈಮೇಲಿನ ವಸ್ತ್ರಗಳು ಕೂಡ ತಮ್ಮಷ್ಟಕ್ಕೆ ತಾವೇ ಬಿಟ್ಟು ಹೋಗುತ್ತವೆ.

## ಸಮ್ಯಗ್ದೃಷ್ಟಿಯ ಅಂತರ್ದೃಷ್ಟಿ :

**'ಸಮ್ಯಗ್ದೃಷ್ಟೇರ್ಭವತಿ ನಿಯತಂ ಜ್ಞಾನ-ವೈರಾಗ್ಯಶಕ್ತಿಃ !'** ಎಂದರೆ ಸಮ್ಯಗ್ದೃಷ್ಟಿಗೆ ನಿಯಮದಿಂದ ಜ್ಞಾನ ಮತ್ತು ವೈರಾಗ್ಯದ ಶಕ್ತಿಯು ಪ್ರಕಟವಾಗಿ ಹೋಗುವುದರಿಂದ ಅವನು ಸಂಸಾರದ ಕಾರ್ಯ ಮಾಡುತ್ತಿದ್ದರೂ ಕೂಡ ತನ್ನ ದೃಷ್ಟಿಯನ್ನು ಅಂತರ್ಮುಖ ಮಾಡಿರುತ್ತಾನೆ. 'ನಾನು ಅನಂತಜ್ಞಾನದ ಪುಂಜನೂ, ಶುದ್ಧನೂ, ರಾಗ ಮೊದಲಾದ ವಿಕಾರಗಳಿಂದ ರಹಿತನೂ ಆದ ಚೇತನ ದ್ರವ್ಯನಿದ್ದೇನೆ, ನನ್ನಲ್ಲಿ ಅನ್ಯ ದ್ರವ್ಯವಿಲ್ಲ, ನಾನು ಅನ್ಯ ದ್ರವ್ಯದಲ್ಲಿ ಇಲ್ಲ. ಮತ್ತು ಆತ್ಮನ ಅಸ್ತಿತ್ವದಲ್ಲಿ ಗೋಚರಿಸುವ ರಾಗಾದಿ ಭಾವಗಳು ನನ್ನ ಸ್ವಭಾವವಲ್ಲ. ಹೀಗೆ ಸ್ವಭಾವದ ದೃಷ್ಟಿಯಿರುವುದರಿಂದ ಸಮ್ಯಗ್ದೃಷ್ಟಿ ಜೀವನು ಅನಂತಸಂಸಾರಕ್ಕೆ ಕಾರಣಭೂತವಿರುವ ಬಂಧದಿಂದ ತಪ್ಪಿಸಿಕೊಳ್ಳುತ್ತಾನೆ. ಅವನಿಗೆ ಪ್ರಶಮ-ಸಂವೇಗ ಮೊದಲಾದ ಗುಣಗಳು ಪ್ರಕಟವಾಗಿ ಹೋಗುವುದರಿಂದ ಅವನ ಕಷಾಯದ ಗತಿಯು ಸೌದೆಯಿಲ್ಲದ ಅಗ್ನಿಯಂತೆ ಉತ್ತರೋತ್ತರ ಕುಂದುತ್ತ ಹೋಗುತ್ತದೆ. ಅವನ ಕಷಾಯದ ಸಂಸ್ಕಾರವು ಆರು ತಿಂಗಳುಗಳಿಗಿಂತ ಹೆಚ್ಚು ಕಾಲ ಉಳಿಯುವುದಿಲ್ಲ. ಹೆಚ್ಚುಕಾಲ ಉಳಿದವನು ನಿಯಮದಿಂದ ಮಿಥ್ಯಾದೃಷ್ಟಿಯಿರುವನೆಂದು ತಿಳಿಯುವುದು. ಅವನು ಮಿಥ್ಯಾತ್ವ, ಅನ್ಯಾಯ, ಅಭಕ್ಷ್ಯದ ತ್ಯಾಗಿಯಾಗಿ ಹೋಗಿರುತ್ತಾನೆ. ನಿಜವಾಗಿ ಹೇಳಬೇಕೆಂದರೆ ಸಮ್ಯಗ್ದೃಷ್ಟಿಯ ನಡತೆಯೇ ಬದಲಾಗಿ ಬಿಟ್ಟಿರುತ್ತದೆ.

## ಗ್ರಂಥ ಕರ್ತೃವಿನ ಪರಿಚಯ :

ಜೈನಾಚಾರ್ಯರ ಪರಂಪರೆಯಲ್ಲಿ ಸ್ವಾಮಿ ಸಮಂತಭದ್ರಾಚಾರ್ಯರು ಉನ್ನತ ಸ್ಥಾನದಲ್ಲಿ ಪ್ರತಿಷ್ಠಿತರಿದ್ದಾರೆ. ಅವರು ಜೈನ ಧರ್ಮದ ಸೇವೆಯನ್ನು ವಿಶೇಷವಾಗಿ ಮಾಡಿದ್ದಾರೆ. ಯಾವ ಪ್ರಕಾರ ಅಧ್ಯಾತ್ಮ ಕ್ಷೇತ್ರದಲ್ಲಿ ಭಗವಾನ ಕುಂದ ಕುಂದಾಚಾರ್ಯದೇವರ ಉಲ್ಲೇಖ ಮಾಡಲಾಗುತ್ತದೆ. ಅದೇ ಪ್ರಕಾರ ಜೈನ ನ್ಯಾಯ ಕ್ಷೇತ್ರದಲ್ಲಿ ಸ್ವಾಮಿ ಸಮಂತಭದ್ರಾಚಾರ್ಯದೇವರ ಹೆಸರನ್ನು ಎತ್ತಿ ಹೇಳಲಾಗುತ್ತದೆ. ಇವರು ಜೈನ ನ್ಯಾಯದ ಮೂಲಾಧಾರರಿರುವರಲ್ಲದೆ ಸಿದ್ಧಾಂತ, ಭಕ್ತಿ, ಸ್ತುತಿ ಮತ್ತು ಶ್ರಾವಕಾಚಾರದಂಥ ಗ್ರಂಥಗಳ ರಚನೆಯನ್ನೂ ಮಾಡಿದ್ದಾರೆ. ಇವರು ರಚಿಸಿದ 'ದೇವಾಗಮ ಸ್ತೋತ್ರ' ಮತ್ತು ಅದರ ಮೇಲೆ ರಚನೆಗೊಂಡ ಎರಡು ಟೀಕೆಗಳು ಜೈನ ನ್ಯಾಯಕ್ಕೆ ಹೊಸ ಆಯಾಮವನ್ನೇ ಒದಗಿಸಿಕೊಟ್ಟಿವೆ.

ಸ್ವಾಮಿ ಸಮಂತಭದ್ರಾಚಾರ್ಯದೇವರ ಅದ್ಭುತ ತರ್ಕ ಹಾಗೂ ಯುಕ್ತಿ-ಯುಕ್ತ ವಿವೇಚನೆಯ ವಿಶೇಷತೆಯನ್ನು ನಾವು ದೇವಾಗಮ ಸ್ತೋತ್ರದಲ್ಲಿ ಕಾಣಬಹುದಾಗಿದೆ. ಅವರು ಭಗವಂತರ ಸ್ತುತಿಯನ್ನು ಕೂಡ ಅವರ ಬಾಹ್ಯವೈಭವದ

ಮೇಲೆ ಮುಗ್ಧರಾಗಿ ಮಾಡಿಲ್ಲ, ಆದರೆ ಅವರ ಆಂತರ್ಯದ ವೈಭವದಿಂದ ಪ್ರಭಾವಿತರಾಗಿ ಮಾಡಿದ್ದಾರೆ. ಇಷ್ಟೇ ಇಲ್ಲ, ಆದರೆ ಅಷ್ಟಪ್ರಾತಿಹಾರ್ಯ ಮೊದಲಾದ ಬಾಹ್ಯ ವೈಭವ ಹಾಗೂ ಶರೀರಾಶ್ರಿತ ಸಾತಿಶಯ ವಿಶೇಷತೆಗಳಿಂದ ಭಗವಂತರ ಮಹತ್ವವನ್ನು ಎತ್ತಿ ಹೇಳುವುದರಿಂದ ಸ್ಪಷ್ಟವಾಗಿ ನಿರಾಕರಣೆಯನ್ನೇ ಮಾಡಿದ್ದಾರೆ. ಅವರು ಭಗವಾನ ಮಹಾವೀರರ ತೀರ್ಥಂಕರತೆಯಿಂದಲೂ ಕೂಡ ಪ್ರಭಾವಿತರಾಗಿ ಹೋಗಲಿಲ್ಲ. ಅವರು ಸ್ವಯಂ ಏನು ಹೇಳುತ್ತಾರೆ ನೋಡಿರಿ !

**ದೇವಾಗಮನಭೋಯಾನ ಚಾಮರಾದಿ ವಿಭೂತಯಃ । ಮಾಯಾವಿಷ್ವಪಿ ದೃಶ್ಯಂತೇ ನಾತಸ್ತ್ವಮಸಿ ನೋ ಮಹಾನ್ ॥೧॥**
**ಅಧ್ಯಾತ್ಮಂ ಬಹಿರಪ್ಯೇಷ ವಿಗ್ರಹಾದಿ ಮಹೋದಯಃ । ದಿವ್ಯಃ ಸತ್ಯೋ ದಿವೌಕಸ್ವಪ್ಯಸ್ತಿ ರಾಗಾದಿಮತ್ಸು ಸಃ ॥೨॥**
**ತೀರ್ಥಕೃತ್ಸಮಯಾನಾಂ ಚ ಪರಸ್ಪರ-ವಿರೋಧತಃ । ಸರ್ವೇಷಾಮಾಪ್ತತಾ ನಾಸ್ತಿ ಕಶ್ಚಿದೇವ ಭವೇದ್ಗುರುಃ ॥೩॥**
**ಸ ತ್ವಮೇವಾಽಸಿ ನಿರ್ದೋಷೋ ಯುಕ್ತಿಶಾಸ್ತ್ರಾವಿರೋಧಿವಾಕ್ । ಅವಿರೋಧೋ ಯದಿಷ್ಟಂತೇ ಪ್ರಸಿದ್ಧೇನ ನ ಬಾಧ್ಯತೇ ॥೪॥**

ಓ ಪ್ರಭು ! ತಮ್ಮ ದರ್ಶನದ ಸಲುವಾಗಿ ದೇವ ಸಮೂಹವು ಬರುತ್ತದೆ, ತಮ್ಮ ಗಮನವು ಆಕಾಶದಲ್ಲಿ ಆಗುತ್ತದೆ ಮತ್ತು ತಾವು ಛತ್ರ-ಚಾಮರ ಮೊದಲಾದ ಬಾಹ್ಯವಿಭೂತಿಗಳಿಂದ ವಿಭೂಷಿತರಿರುವ ಮಾತ್ರದಿಂದ ತಾವು ನಮ್ಮ ದೃಷ್ಟಿಯಲ್ಲಿ ಮಹಾನರಾಗುವ ಸಾಧ್ಯತೆಯಿಲ್ಲ; ಏಕೆಂದರೆ ಇವೆಲ್ಲವುಗಳನ್ನಂತೂ ಮಾಯಾವಿಗಳಲ್ಲೂ ಕಾಣಬಹುದಾಗಿದೆ. ಇದೇ ಪ್ರಕಾರ ಶರೀರ ಸಂಬಂಧದ ಅಂತರಂಗ-ಬಹಿರಂಗ ವಿಶೇಷತೆಗಳು ಒಂದು ವೇಳೆ ಮಾಯಾವಿಗಳಲ್ಲಿ ಕಂಡು ಬಾರದಿದ್ದರೂ ರಾಗಾದಿಭಾವಗಳಿಂದ ಯುಕ್ತರಿರುವಂಥ ದೇವಗಳಲ್ಲಿ ಕಂಡು ಬರುತ್ತಿರುವುದರಿಂದ ಈ ಕಾರಣದಿಂದ ಕೂಡ ತಾವು ನಮ್ಮ ದೃಷ್ಟಿಯಲ್ಲಿ ಮಹಾನರಾಗುವ ಸಾಧ್ಯತೆಯಿಲ್ಲ. ಅದರಂತೆ ಆಗಮದ ಆಧಾರ ಹಾಗೂ ಧರ್ಮ ತೀರ್ಥವನ್ನು ನಡೆಸುವಂಥವರಿರುವುದರಿಂದ ಕೂಡ ತಮ್ಮ ಮಹಾನತೆಯು ಸಿದ್ಧವಾಗುವುದಿಲ್ಲ; ಏಕೆಂದರೆ ಶಾಸ್ತ್ರಗಳನ್ನು ರಚಿಸುವಂಥ ಮತ್ತು ಪಂಥರೂಪ ತೀರ್ಥವನ್ನು ನಡೆಸುವಂಥವರು ಅನೇಕರಿದ್ದಾರೆ. ಆದರೆ ಅವರೆಲ್ಲರ ವಚನಗಳು ಪ್ರಾಯಃ ಪರಸ್ಪರ ವಿರೋಧಿಯಿವೆ. ಪರಸ್ಪರ ವಿರೋಧಿ ವಚನವುಳ್ಳವರೆಲ್ಲರು ಆಪ್ತರಾಗುವ ಸಾಧ್ಯತೆಯಿಲ್ಲ. ಆದರೆ ಪ್ರಭು ! ತಮ್ಮ ಮಹಾನತೆಯಂತೂ ವೀತರಾಗತೆ ಮತ್ತು ಸರ್ವಜ್ಞತೆಯ ಕಾರಣದಿಂದಲೇ ಇದೆ. ತಾವು ಮಾತ್ರ ನಿರ್ದೋಷ ಪರಮಾತ್ಮರಿರುವಿರಿ. ಏಕೆಂದರೆ ತಮ್ಮ ವಾಣಿಯು ಯುಕ್ತಿ ಹಾಗೂ ಶಾಸ್ತ್ರಗಳಿಂದ ಅವಿರೋಧವಿದೆ. ತಾವು ಹೇಳಿರುವುದೆಲ್ಲವು ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಂದ ಬಾಧೆಗೊಳಪಡುವುದಿಲ್ಲ. ಹೀಗೆ ಅವರು ಸ್ತುತಿಯ ಮಾಧ್ಯಮದಿಂದ ಕೂಡ ಜೈನ ತತ್ತ್ವಜ್ಞಾನದ ಬೋಧವನ್ನೇ ಮಾಡಿಸಿದ್ದಾರೆ. ಸ್ವಯಂಭೂ ಸ್ತೋತ್ರದಲ್ಲಿ ಕೂಡ ಚೌವ್ವೀಸ ತೀರ್ಥಂಕರರ ಸ್ತುತಿ ಮಾಡುತ್ತ ಉತ್ಪಾದ-ವ್ಯಯ-ಧ್ರೌವ್ಯ ಮೊದಲಾದ ತಾತ್ತ್ವಿಕ ವಿಷಯಗಳನ್ನು ಸಂಗ್ರಹಿಸಿ ಸ್ತುತಿಸಿದ್ದಾರೆ.

ಇದೇ ಪ್ರಕಾರ ಸ್ವಯಂಭೂ ಸ್ತೋತ್ರದಲ್ಲಿ ಒಂದು ಆಶ್ಚರ್ಯಕರವಾದ ತಥ್ಯವನ್ನು ಅವರು ಪ್ರಸ್ತುತಪಡಿಸಿದ್ದಾರೆ. ಅನೇಕಾಂತದಲ್ಲಿ ಕೂಡ ಅನೇಕಾಂತದ ಪ್ರಕ್ರಿಯೆಯನ್ನು ತೊಡಗಿಸಬೇಕಾಗುವುದು. ಏಕೆಂದರೆ ಅನೇಕಾಂತವನ್ನು ಸರ್ವಥಾ ಅನೇಕಾಂತರೂಪವಾಗಿ ಸ್ವೀಕಾರ ಮಾಡಿದರೆ ಅನೇಕಾಂತದಲ್ಲಿ ಏಕಾಂತದ ಪ್ರಸಂಗವು ಬಂದು ಬಿಡುವುದು. ಜೈನಧರ್ಮದಲ್ಲಿ ಪ್ರಮಾಣದ ಜತೆ ನಯವಿವಕ್ಷೆಯನ್ನು ಸ್ವೀಕರಿಸಲಾಗಿದೆ, ಮತ್ತು ಅದು ವಸ್ತುವನ್ನು ಸಮ್ಯಕ್ ಏಕಾಂತ ರೂಪವಾಗಿ ಗ್ರಹಣ ಮಾಡುತ್ತದೆ. ಯಾವಾಗ ಪ್ರಮಾಣ ದೃಷ್ಟಿಯಿಂದ ಸಮಗ್ರವಸ್ತುವಿನ ಗ್ರಹಣ ಮಾಡಲಾಗುತ್ತದೆ. ಆಗ ಸಮ್ಯಕ್ ಅನೇಕಾಂತವೆನಿಸಿಕೊಳ್ಳುತ್ತದೆ. ಮತ್ತು ಯಾವಾಗ ವಸ್ತುವಿನ ಒಂದು ಧರ್ಮದ ವಿಚಾರ ಮಾಡಲಾಗುತ್ತದೆ ಆಗ ಸಮ್ಯಕ್-ಏಕಾಂತವೆನಿಸಿಕೊಳ್ಳುತ್ತದೆ. ಇದನ್ನೇ ಅರನಾಥರ ಸ್ತುತಿಯಲ್ಲಿ **''ಅನೇಕಾಂತೋಽಪ್ಯನೇಕಾಂತಃ ಪ್ರಮಾಣನಯ ಸಾಧನಃ । ಅನೇಕಾಂತಃ ಪ್ರಮಾಣಾತ್ತೇ ತದೇಕಾಂತೋಽರ್ಪಿತಾನಯಾತ್॥''** ಎಂದು ಹೇಳಿದ್ದಾರೆ. ಎಂದರೆ ಅನೇಕಾಂತವು ಪ್ರಮಾಣ ದೃಷ್ಟಿಯಿಂದ ಅನೇಕಾಂತರೂಪವಾಗಿ ಸಿದ್ಧವಾಗುತ್ತದೆ. ಮತ್ತು ಅದುವೇ ನಯದೃಷ್ಟಿಯಿಂದ ಏಕಾಂತರೂಪವಾಗಿ ಸಿದ್ಧವಾಗುತ್ತದೆ.

ಧರ್ಮೋಪದೇಶಕರ ಅಸಮರ್ಥತೆಯನ್ನು ವ್ಯಕ್ತಪಡಿಸುತ್ತ ಆಚಾರ್ಯ ಭಗವಂತರು 'ಯುಕ್ತಿ ಅನುಶಾಸನ'ದಲ್ಲಿ ಹೇಳಿರುವುದೇನೆಂದರೆ ಓ ಭಗವನ್ ! ಈ ವಿಷಯಾಂಧತೆಯ ಪೋಷಕವಾದ ಕಲಿಕಾಲದಲ್ಲಿ ಶ್ರೋತಾರರ ಮನಸ್ಸು

ಮೋಹಾಂಧಕಾರದ ವಶವಾಗಿ, ವಿಶುದ್ಧತೆಯಿಂದ ರಹಿತವಾಗಿ ಕಲುಷತೆಯಿಂದ ಪ್ರಚುರವಾಗುತ್ತಲಿದೆ, ಮತ್ತು ಅನೇಕಾಂತ ಶೈಲಿಯ ಅನುರೂಪ ವೀತರಾಗ ಶಾಸನದ ಧರ್ಮೋಪದೇಶ ಕೊಡುವಲ್ಲಿ ಅಸಮರ್ಥ ವಕ್ತಾರರ ಬಾಹುಳ್ಯತೆಯಿರುವುದ ರಿಂದ ತಮ್ಮ ಶಾಸನದ ಏಕತೆಯರೂಪದ ಲಕ್ಷ್ಮಿಯ ಪ್ರಭುತ್ವದಲ್ಲಿ ಬಾಧೆಯುಂಟಾಗುತ್ತಲಿದೆ. ಈ ಮಾತನ್ನು ಅವರು ರತ್ನತ್ರಯದಿಂದ ರಹಿತರಾಗಿ ಬಾಹ್ಯದಲ್ಲಿ ನಗ್ನವೇಷಧಾರಣ ಮಾಡಿದವರನ್ನು ನೋಡಿ ನೊಂದು ನುಡಿದಿರಬೇಕೆ ? ಅದಕ್ಕಾಗಿಯೇ ಅಂಥವರಿಗೆ ಮೊದಲು ಸಮ್ಯಗ್ದರ್ಶನಯುಕ್ತ ಶ್ರಾವಕಧರ್ಮದ ಪ್ರಕ್ರಿಯೆಯನ್ನು ತಿಳಿಸಿಕೊಡುವಂಥ ಮತ್ತು ಮೊದಲು ಶ್ರಾವಕರಾದ ನಂತರವೇ ಮುನಿ ಧರ್ಮದ ಅಂಗೀಕಾರ ಮಾಡುವುದಿರುತ್ತದೆಯೆಂಬುದನ್ನು ಪರೋಕ್ಷವಾಗಿ ತಿಳಿಸಿಕೊಡುವ ಉದ್ದೇಶದಿಂದಲೇ ಈ 'ರತ್ನಕರಂಡ ಶ್ರಾವಕಾಚಾರದ' ರಚನೆ ಮಾಡಿರಬೇಕೆಂದು ತಿಳಿದು ಬರುತ್ತದೆ. ಇಲ್ಲದಿದ್ದರೆ ಆಚಾರ್ಯರಿದ್ದವರು ಶ್ರಾವಕಧರ್ಮದ ಉಪದೇಶವನ್ನೇಕೆ ಕೊಡುತ್ತಿದ್ದರು ?

ಸತ್ಯಸಂಗತಿ ಏನೇ ಇರಲಿ, ಆದರೆ ಇಂದು 'ನಾನು ಸಮ್ಯಗ್ದೃಷ್ಟಿ, ನಾನು ಶ್ರಾವಕ, ನಾನು ಪ್ರತಿಮಾಧಾರೀ, ನಾನು ಮುನಿ'ಯೆಂದು ಹೇಳಿಕೊಳ್ಳುತ್ತಿರುವವರೆಲ್ಲರಿಗೂ ಈ ರತ್ನಕರಂಡ ಶ್ರಾವಕಾಚಾರದ ಅಧ್ಯಯನವು ಸರಿಯಾದ ಪಾಠ ಕಲಿಸುತ್ತದೆಯೆಂದು ಹೇಳಬಹುದಾಗಿದೆ. ಗ್ರಂಥದ ಪ್ರಾರಂಭವೇ 'ಸಮ್ಯಗ್ದರ್ಶನ ಅಧಿಕಾರ' ದಿಂದ ಆಗುತ್ತದೆ. ಇದರಲ್ಲಿ ನಲವತ್ತೊಂದು ಸೂತ್ರಗಳಿಂದ ಸಮ್ಯಗ್ದರ್ಶನದ ಮಹಾಮಹಿಮೆಯನ್ನು ಎತ್ತಿ ಹೇಳಿದ್ದಾರೆ. **'ನ ಸಮ್ಯಕ್ತ್ವಸಮಂ ಕಿಂಚಿತ್ ತ್ರೈಕಾಲ್ಯೇತ್ರಿಜಗತ್ಯಪಿ । ಶ್ರೇಯೋऽಶ್ರೇಯಶ್ಚ ಮಿಥ್ಯಾತ್ವ ಸಮಂ ನಾನ್ಯತ್ತನೂಭೃತಾಮ್ ।।'** ಎಂದರೆ ಈ ಜೀವಕ್ಕೆ ಸಮ್ಯಗ್ದರ್ಶನದ ಸಮಾನ ಕಲ್ಯಾಣಕರವಾದದ್ದು ಮೂರು ಕಾಲ, ಮೂರು ಲೋಕದಲ್ಲಿ ಬೇರೆ ಯಾವುದೂ ಇಲ್ಲ ಮತ್ತು ಮಿಥ್ಯಾತ್ವದ ಸಮಾನ ಅಕಲ್ಯಾಣಕರವಾದದ್ದು ಮೂರು ಕಾಲ ಮೂರು ಲೋಕದಲ್ಲಿ ಬೇರೆ ಯಾವುದೂ ಇಲ್ಲ. ಇಲ್ಲಿ ಸಮ್ಯಕ್ತ್ವವು ಸಮಸ್ತ ಸುಖದ ಬೀಜವಿದ್ದರೆ ಮಿಥ್ಯಾತ್ವವು ಸಮಸ್ತ ದುಃಖದ ಬೀಜವಿದೆಯೆಂಬುದನ್ನು ಆಚಾರ್ಯದೇವರು ತಮ್ಮ ಅನುಭವ ಪ್ರತ್ಯಕ್ಷದಿಂದ ತಿಳಿಸಿಕೊಟ್ಟು ಜಗತ್ತಿನ ಭವ್ಯ ಕೋಟಿಯ ಮೇಲೆ ಅನಂತ ಉಪಕಾರ ಮಾಡಿದ್ದಾರೆ. ಮತ್ತು ಮಿಥ್ಯಾತ್ವದ ಮೇಲೆ ಅತ್ಯಂತ ನಿಷ್ಠುರತೆಯಿಂದ ಪ್ರಹಾರ ಮಾಡಿ ಸರಳ ಸ್ವಭಾವದ ಲಘು ಕರ್ಮಿಗಳನ್ನು ಸಮ್ಯಕ್ತ್ವದ ಕಡೆಗೆ-ವಾಸ್ತವಿಕ ಧರ್ಮದ ಕಡೆಗೆ ಆಕರ್ಷಿಸಿದ್ದಾರೆ. ಸಮ್ಯಗ್ದರ್ಶನದಿಂದ ರಹಿತವಾದ ಬಾಹ್ಯ ಕ್ರಿಯಾಕಾಂಡಗಳಲ್ಲಿ ಸ್ವಲ್ಪವೂ ಸುಖವಿಲ್ಲ -ಧರ್ಮವಿಲ್ಲವೆಂಬ ಮಾತನ್ನು ಸಮಂತಭದ್ರರಂಥ ದಿಗ್ಗಜ ಆಚಾರ್ಯರು ಹೇಳುತ್ತಿದ್ದರೂ ಅವರ ಮಾತಿನ ಮೇಲೆ ಸಂದೇಹಪಡುವುದು ಈ ಕಲಿಕಾಲದ ಪ್ರಭಾವವಿದೆಯೆಂದು ಹೇಳಬಹುದಾಗಿದೆ. ಮತ್ತು ಆ ಜೀವದ ಭವಿತವ್ಯವೇ ಅಂಥದಿರುತ್ತದೆಯೆಂದು ತಿಳಿಯುವುದು. **ನಿಜವಾಗಿ ಸಮಂತಭದ್ರರ ವಾಣಿಯ ಪ್ರಾಪ್ತಿಯಾಗುವುದು ಈ ಜೀವಕ್ಕೆ ಮನುಷ್ಯ ಪರ್ಯಾಯದ ಪ್ರಾಪ್ತಿಯಷ್ಟು ದುರ್ಲಭವಿದೆ.**

ಈ ಪ್ರಕಾರ ಮೊದಲನೇ ಅಧಿಕಾರದಲ್ಲಿ ವಿಸ್ತಾರಪೂರ್ವಕ ಸಮ್ಯಗ್ದರ್ಶನದ ವರ್ಣನೆ ಮಾಡಿ, ಕೊನೆಯಲ್ಲಿ ದರ್ಶನ ಮೋಹನೀಯ ಕರ್ಮದ ಅಭಾವದಿಂದ ಸಮ್ಯಗ್ದರ್ಶನ-ಸಮ್ಯಗ್ಜ್ಞಾನವು ಪ್ರಕಟವಾದ ನಂತರ ಜೀವನು ಮುನಿತನ-ಕ್ಷುಲ್ಲಕ ತನವನ್ನು ಕೂಡ ಪುದ್ಗಲದ ವೇಷವೆಂದು ತಿಳಿಯುತ್ತಾನೆ. ಅನಂತರ ನಾಲ್ಕೂ ಅನುಯೋಗಗಳನ್ನು ಸಮ್ಯಗ್ಜ್ಞಾನಿಯೇ ತಿಳಿಯುತ್ತಾನೆಂಬ ಆಶಯದ ಎರಡನೇ ಅಧಿಕಾರವನ್ನು ಮುಗಿಸಿ, ಮೂರನೆಯ ಸಮ್ಯಕ್ಚಾರಿತ್ರ ಅಧಿಕಾರವನ್ನು ಆರಂಭ ಮಾಡಿ ಅದರಲ್ಲಿ ದರ್ಶನಮೋಹರೂಪದ ಅಂಧಕಾರವು ದೂರವಾದ ಮೇಲೆ ಸಮ್ಯಗ್ದರ್ಶನ-ಸಮ್ಯಗ್ಜ್ಞಾನದ ಪ್ರಾಪ್ತಿಯಾದ ನಂತರ ಸತ್ಪುರುಷನು-ನಿಕಟಭವ್ಯನು ರಾಗ-ದ್ವೇಷಗಳ ಪೂರ್ಣ ಅಭಾವ ಮಾಡುವ ಸಲುವಾಗಿ ಚಾರಿತ್ರದ ಅಂಗೀಕಾರ ಮಾಡುತ್ತಾನೆಂದು ಪೀಠಿಕೆಮಾಡಿ, ಆ ಚಾರಿತ್ರದ ಅಂತರ್ಗತವಾಗಿ ಕ್ರಮದಿಂದ ಅಣುವ್ರತ-ಗುಣವ್ರತ-ಶಿಕ್ಷಾವ್ರತಗಳ ವರ್ಣನೆಯನ್ನು ನೂರ ಇಪ್ಪತ್ತೊಂದನೆಯ ಸೂತ್ರದವರೆಗೆ ಮಾಡಿ, ಮುಂದೆ ನೂರ ಇಪ್ಪತ್ತೆರಡನೆಯ ಸೂತ್ರದಿಂದ ನೂರನಲವತ್ತೇಳನೆಯ ಸೂತ್ರದವರೆಗೆ ಸಲ್ಲೇಖನ ಮತ್ತು ಹನ್ನೊಂದು ನೆಲೆಗಳ ವರ್ಣನೆ ಮಾಡಿ ಕೊನೆಯಲ್ಲಿ ಜ್ಞಾತಾನ ಸ್ವರೂಪ ಹೇಳಿ ಒಂದು ಸೂತ್ರದಲ್ಲಿ ಶ್ರಾವಕಾಚಾರದ ಫಲ ಪ್ರಾಪ್ತಿಯ ಪ್ರತಿಪಾದನೆ ಮಾಡಿ ಕೊನೆಗೆ ನೂರೈವತ್ತನೆಯ ಸೂತ್ರದಲ್ಲಿ ಅಂತಿಮ ಮಂಗಲ ಮಾಡಿ ಗ್ರಂಥದ ಸಮಾಪ್ತಿ ಮಾಡಿದ್ದಾರೆ.

ಸಂಸಾರದ ಮೋಹ-ಮಮತೆಯಿಂದ ಅತ್ಯಂತ ನಿರ್ಲಿಪ್ತರಿರುವಂಥ ಜೈನಾಚಾರ್ಯರುಗಳಲ್ಲಿ ಬಹಳಷ್ಟು ಆಚಾರ್ಯರುಗಳ ತಂದೆ-ತಾಯಿ-ಜನ್ಮಸ್ಥಾನ ಇವೇ ಮೊದಲಾದವುಗಳ ಕುರಿತು ಯಾವ ಪ್ರಾಮಾಣಿಕ ಇತಿಹಾಸವು ಉಪಲಬ್ಧವಿಲ್ಲ. ಇಷ್ಟೇ ಏಕೆ ಕೆಲವು ಆಚಾರ್ಯರುಗಳಂತೂ ತಮ್ಮ ಗುರುಗಳ ಹೆಸರನ್ನು ಹೇಳುವಷ್ಟು ಕೂಡ ವ್ಯವಹಾರಕ್ಕೆ ಇಳಿದಿರುವಂತೆ ಕಂಡು ಬರುತ್ತಿಲ್ಲ. ಅಂಥವರಲ್ಲಿ ಶ್ರೀ ಸ್ವಾಮಿ ಸಮಂತಭದ್ರಾಚಾರ್ಯದೇವರು ಕೂಡ ಒಬ್ಬರೆಂದು ಸ್ವಲ್ಪ ಅಭಿಮಾನದಿಂದ ಹೇಳಿಕೊಳ್ಳಬಹುದಾಗಿದೆ. ಹೀಗಿದ್ದರೂ ಕೂಡ ಇವರ ಉತ್ತರಾವರ್ತಿ ಮುನಿ ಜೀವನದಲ್ಲಿ ಸಂಭವಿಸಿದ ಭಸ್ಮಕ ರೋಗ, ಅದರಿಂದ ಅವರು ಮುನಿಧರ್ಮದಿಂದ ಚ್ಯುತರಾಗಿ ಹೋದ ವಿಷಯಗಳನ್ನೆಲ್ಲ ಎಲ್ಲಿಂದ ಕ್ರೋಡೀಕರಿಸಿ ಹೇಳಲಾಗಿದೆಯೆಂಬುದರ ಕುರಿತು ಎಲ್ಲರೂ ಗಂಭೀರವಾಗಿ ಆಲೋಚಿಸಿ ನಿರ್ಧಾರಕ್ಕೆ ಬರಬೇಕಾಗಿದೆ. ಏಕೆಂದರೆ ತಮ್ಮ ಶರೀರದ ಮೇಲಿನ ಸಂಪೂರ್ಣ ಮಮತೆಯನ್ನು ತೊರೆದು ಶುದ್ಧೋಪಯೋಗರೂಪ ಮುನಿಧರ್ಮದ ಅಂಗೀಕಾರ ಮಾಡಿರುವಂಥ ಸಾಧು ಪರಮೇಷ್ಠಿಗಳು ಪುನಃ ಆ ಶರೀರದ ಸಲುವಾಗಿ -ಶರೀರದಲ್ಲಿ ಉತ್ಪನ್ನವಾದ ರೋಗದ ಉಪಶಮನದ ಸಲುವಾಗಿ ಅಥವಾ ಧರ್ಮದ ಪ್ರಚಾರ-ಪ್ರಸಾರದ ಸಲುವಾಗಿ ತ್ರಿಲೋಕ ಪೂಜ್ಯವಿರುವ ಮುನಿಧರ್ಮದಿಂದ ಹೇಗೆ ಚ್ಯುತರಾಗುವರು, ತಾವುಗಳು ಸ್ವೀಕರಿಸಿದ ವ್ರತದಿಂದ ಹೇಗೆ ಭ್ರಷ್ಟರಾಗಿ ಹೋಗುವರು ? ಸಾಮಾನ್ಯ ಗೃಹಸ್ಥ ಶ್ರಾವಕರು ಕೂಡ ತಾವು ಕೈಕೊಂಡ ವ್ರತದಿಂದ ಭ್ರಷ್ಟರಾಗುವ ಪ್ರಸಂಗವು ಬಂದಾಗ ದೇಹತ್ಯಾಗ ಮಾಡಿ, ಧರ್ಮದ ಸಂರಕ್ಷಣೆ ಮಾಡಿರುವಂಥ ದೃಷ್ಟಾಂತಗಳು ಆಗಮಗಳಲ್ಲಿ ಸಾಕಷ್ಟು ಬರುತ್ತವೆಂದ ಮೇಲೆ ಭಾವಲಿಂಗೀ ಮುನಿರಾಜರುಗಳು ತಮ್ಮ ವ್ರತದಿಂದ ಹೇಗೆ ಚ್ಯುತವಾಗುವರು ? ಪಾಖಂಡ ವೇಷವನ್ನು ಹೇಗೆ ಧರಿಸುವರು ? ಮತ್ತು ಕಾಶೀನರೇಶನಿಗೆ ತಮ್ಮ ಪರಿಚಯ ತಿಳಿಸಿಕೊಡುವಾಗ ದರ್ಪೋಕ್ತಿಗಳನ್ನು-ಗರ್ವೋಕ್ತಿಗಳನ್ನು ಹೇಗೆ ಆಡುವ ಸಾಧ್ಯತೆಯಿದೆ ? ನೋಡ ಬನ್ನಿ -

**ಆಚಾರ್ಯೋऽಹಂ ಕವಿರಹಮಹಂ ವಾದಿರಾಟ್ ಪಂಡಿತೋऽಹಂ**
**ದೈವಜ್ಞೋऽಹಂ ಭಿಷಗಹಮಹಂ ಮಾಂತ್ರಿಕಸ್ತಾಂತ್ರಿಕೋऽಹಮ್ ।**
**ರಾಜನ್ನಸ್ಯಾಂ ಜಲಧಿವಲಯಾಮೇಖಲಾಯಾಮಿಲಾಯಾ-**
**ಮಾಜ್ಞಾಸಿದ್ಧಃ ಕಿಮಿತಿ ಬಹುನಾ ಸಿದ್ಧಸಾರಸ್ವತೋऽಹಮ್ ॥** ಸ್ವಯಂಭೂಸ್ತೋತ್ರ-ಪ್ರಸ್ತಾವನೆ

ಇವನ್ನು ನಾವು ತಥ್ಯೋಕ್ತಿಯೆಂದು ಹೇಳಬಹುದಾಗಿದೆ. ಆದರೆ ಸಂಚರಿಸುವ ಸಿದ್ಧ ಸಮಾನರಿರುವಂಥ ಮುನಿಭಗವಂತರ ಮುಖದಿಂದ ಇಂಥ ಶಬ್ದಗಳು ಹೊರಡಬಹುದೇನು ? ಶ್ರವಣಬೆಳಗೊಳದ ಶಿಲಾಲೇಖದಲ್ಲಿ **'ವಾದಾರ್ಥೀವಿಚರಾಮ್ಯಹಂ ನರಪತೇ ಶಾರ್ದೂಲ ವಿಕ್ರೀಡಿತಮ್'** । ಎಂದರೆ ಎಲೈ ರಾಜನೇ ! ನಾನು ವಾದ ಮಾಡುವ ಸಲುವಾಗಿ ಸಿಂಹದ ಸಮಾನ ಕ್ರೀಡೆ ಮಾಡುತ್ತಿದ್ದೇನೆಂಬ ಮಾತುಗಳನ್ನೆಲ್ಲ ಆಚಾರ್ಯರ ತಲೆಗೆ ಕಟ್ಟುವುದು ಎಷ್ಟು ಸಯುಕ್ತಿಕವಿದೆಯೆಂಬುದನ್ನು ತತ್ತ್ವಜ್ಞಾನಿಗಳಾದ ಜೈನ ವಿದ್ವಾಂಸರು ಸ್ವಯಂ ಯೋಚಿಸಿ ನಿರ್ಣಯ ಮಾಡಬೇಕು.

ಆಚಾರ್ಯರಿಗೆ ಮುನಿ ಜೀವನದಲ್ಲಿ ಭಸ್ಮಕ ರೋಗವಾದುದರ ಮತ್ತು ಅವರು ಮುನಿ ಜೀವನದಿಂದ ಭ್ರಷ್ಟವಾದುದರ ಪರಿಚಯವು ಬ್ರಹ್ಮನೇಮಿದತ್ತನ ಕಥಾಕೋಶದಲ್ಲಿ ಮತ್ತು ದೇವಚಂದನ ರಾಜಾವಲೀ ಕಥೆಯಲ್ಲಿ ಬರುತ್ತದೆ. ಆದರೆ ಅವೆರಡರಲ್ಲಿನ ವರ್ಣನೆಯು ಏಕರೂಪವಾಗಿಲ್ಲ. ಅವರಲ್ಲಿ ಒಬ್ಬರಂತೂ ಸ್ವಾಮಿ ಸಮಂತಭದ್ರರು ಗುರುಗಳ ಆದೇಶದ ಪ್ರಕಾರ ದಿಗಂಬರ ವೇಷವನ್ನು ತೊರೆದು ಅನ್ಯ ವೇಷಧಾರಣ ಮಾಡಿ ಕಾಂಚೀನಗರಕ್ಕೆ ಬರುತ್ತಾರೆ. ಅಲ್ಲಿನ ದೊರೆಯು ದಿನಾಲು ವಿಶಾಲ ಅನ್ನರಾಶಿಯನ್ನು ತಯಾರಿಸಿ ಶಿವಲಿಂಗಕ್ಕೆ ಅರ್ಪಿಸುತ್ತಿದ್ದನು. ಅದನ್ನು ತಾನು ಶಿವಲಿಂಗಕ್ಕೆ ತಿನ್ನಿಸುವೆನೆಂದು ದೊರೆಗೆ ಹೇಳಿ ಅದನ್ನು ಸಮಂತಭದ್ರರು ತಾವೇ ತಿನ್ನಲಾರಂಭಿಸಿದರು. ಮುಂದೆ ಕೆಲ ದಿವಸಗಳಲ್ಲಿಯೇ ಭಸ್ಮಕ ರೋಗವು ಶಮನಗೊಳ್ಳುತ್ತ ಬರಲು ಆ ಅನ್ನ ಉಳಿಯಲಾರಂಭಿಸಿತು. ಇದರಿಂದ ದೊರೆಗೆ ಸಂಶಯ ಬಂದು ಗುಪ್ತಚಾರರಿಂದ ಪರೀಕ್ಷೆ ಮಾಡಿಸಲು ನಿಜ ಸಂಗತಿಯು ಬಹಿರಂಗವಾಯಿತು. ಅದರಿಂದ ಕುಪಿತನಾದ ದೊರೆಯು

ಶಿವಲಿಂಗಕ್ಕೆ ನಮಸ್ಕಾರ ಮಾಡುವಂತೆ ಸಮಂತಭದ್ರರನ್ನು ಒತ್ತಾಯಿಸಲು ಅವರು ತೀರ್ಥಂಕರರ ಸ್ತುತಿ ಮಾಡಲಾರಂಭಿಸುತ್ತಾರೆ ಅದರಿಂದ ಶಿವಲಿಂಗವು ಹೋಳಾಗಿ ಅದರೊಳಗಿಂದ ಚಂದ್ರಪ್ರಭ ಜಿನಬಿಂಬವು ಮೂಡಿ ಬರುತ್ತದೆ. ಅದರಿಂದ ಪ್ರಭಾವಿತನಾದ ದೊರೆಯು ಜಿನದೀಕ್ಷೆಯನ್ನು ಧರಿಸುತ್ತಾನೆಂದು ಹೇಳುತ್ತಾರೆ.

ಇನ್ನು ರಾಜಾವಳೀ ಕಥೆಯಲ್ಲಿ ಶಿವಲಿಂಗದ ಪ್ರಸ್ತಾಪವೇ ಇಲ್ಲ; ಆದರೆ ಆಚಾರ್ಯರಿಗೆ ಕೇವಲ ಐದು ದಿವಸ ಮಾತ್ರ ಭಸ್ಮಕ ರೋಗವಿತ್ತೆಂದು ಹೇಳಲಾಗಿದೆ. ಇದರಿಂದ ಆಚಾರ್ಯರು ಮುನಿ ಜೀವನದಿಂದ ಭ್ರಷ್ಟವಾಗುವುದರ ಪ್ರಶ್ನೆಯೇ ಉಪಸ್ಥಿತವಾಗುವುದಿಲ್ಲ. ಮತ್ತು ಅವರು ಭ್ರಷ್ಟವಾಗಿರಲಿಲ್ಲವೆಂದೇ ಸಿದ್ಧವಾಗುತ್ತದೆ. ಇದರ ಮೇಲಿಂದ ಯಾವ ಕಥನವನ್ನು ಸತ್ಯವೆಂದು ಸ್ವೀಕರಿಸುವುದು ? ಆಚಾರ್ಯರ ಮಹಿಮೆಯನ್ನು ತಿಳಿಸಿಕೊಡುವ ಸಲುವಾಗಿ ಇಂಥ ಸನ್ನಿವೇಶಗಳನ್ನು ಕಲ್ಪಿಸಿಕೊಂಡಿದ್ದರೂ ಇದರಿಂದ ನಿಜವಾಗಿ ಆಚಾರ್ಯರ ಮಹಿಮೆಯಾಗುವುದಿಲ್ಲ. ಆದರೆ ಅವಮಾನವೇ ಆಗುವುದೆಂಬುದನ್ನು ವೀತರಾಗ ದಿಗಂಬರ ಮುನಿ ಸ್ವರೂಪವನ್ನು ಯಥಾರ್ಥವಾಗಿ ತಿಳಿದುಕೊಂಡಿರುವಂಥ ತತ್ತ್ವಜ್ಞಾನಿಗಳಾದರೂ ತಮ್ಮಲ್ಲಿ ತಾವು ಯೋಚಿಸಿ ಒಂದು ನಿರ್ಧಾರಕ್ಕೆ ಬರಬೇಕು ಮತ್ತು ಇಂಥ ವಿಪರೀತತೆಗೆ ಆಸ್ಪದವೀಯುವುದನ್ನು ನಿಲ್ಲಿಸಬೇಕು.

ಇನ್ನು ಈ ರತ್ನಕರಂಡ ಶ್ರಾವಕಾಚಾರದ ಮೇಲೆ ಒಂದು ಸಂಸ್ಕೃತ ಟೀಕೆಯು ಉಪಲಬ್ಧವಿದ್ದು ಅದನ್ನು ಶ್ರೀ ಪ್ರಭಾಚಂದ್ರಾಚಾರ್ಯರು ಬರೆದಿದ್ದಾರೆ. ಪ್ರಭಾಚಂದ್ರರೆಂಬ ಹೆಸರಿನ ಇಪ್ಪತ್ತು ಜನ ಆಚಾರ್ಯರು ಆಗಿದ್ದು, ಅವರಲ್ಲಿ ಸಮಾಧಿ ತಂತ್ರದ ಮೇಲೆ ಟೀಕೆ ರಚಿಸಿದ ಆಚಾರ್ಯರೇ ಇದನ್ನು ಬರೆದಿದ್ದಾರೆಂದು ಖಚಿತಪಡಿಸಲಾಗಿದೆ. ಇವರು ಸುಮಾರು ಹದಿಮೂರನೆಯ ಶತಮಾನದಲ್ಲಿ ಆಗಿ ಹೋಗಿದ್ದಾರೆಂದೂ ತಿಳಿದು ಬರುತ್ತದೆ. ಈ ಟೀಕೆಯು ಸಾಮಾನ್ಯವಿದ್ದು ಇದರಲ್ಲಿ ಕೇವಲ ಸರಳಾರ್ಥವನ್ನು ಹೇಳಿಕೊಂಡು ಹೋಗಿದ್ದಾರೆ. ಯಾವ ವಿಶೇಷ ಭಾವವನ್ನು ಪ್ರಕಟಪಡಿಸಲಾಗಿಲ್ಲ.

ಪ್ರಸ್ತುತ ಭಾಷಾವಚನಿಕೆಯನ್ನು ಪಂ. ಸದಾಸುಖದಾಸ ಕಾಸಲೀವಾಲ ಅವರು ರಚಿಸಿದ್ದು ಇದು ತುಂಬ ವಿಸ್ತಾರವೂ ಪ್ರಾಮಾಣಿಕವೂ ಆದ ಟೀಕೆಯಾಗಿದ್ದು, ಇದು ವಚನಿಕಾಕಾರರ ಅಗಾಧ ವಿದ್ವತ್ತೆಯನ್ನು, ಆಳವಾದ ಅಧ್ಯಯನಶೀಲತೆಯನ್ನೂ ಎತ್ತಿ ತೋರಿಸುತ್ತದೆ. ಇದರಲ್ಲಿ ಸದಾಸುಖದಾಸರು ಸ್ವಚ್ಛಂದತೆ ಹಾಗೂ ಕಷಾಯಗಳ ನಿಷೇಧ ಮಾಡುವ ಸಲುವಾಗಿ ಯಾವ ಕೊರತೆಯನ್ನು ಬಾಕಿ ಉಳಿಸಿಲ್ಲ. ಅದರಂತೆ ಮಿಥ್ಯಾತ್ವದ ಮೇಲೆ ಪ್ರಹಾರ ಮಾಡುವಲ್ಲಿ ಕೂಡ ಸ್ವಲ್ಪವೂ ಹಿಂದೆ-ಮುಂದೆ ನೋಡಿಲ್ಲ. ದೇವ, ಶಾಸ್ತ್ರ, ಗುರು, ಸಮ್ಯಗ್ದರ್ಶನ, ದರ್ಶನವಿಶುದ್ಧಿ ಭಾವನೆ, ದಶ-ಧರ್ಮ ಮೊದಲಾದ ಪ್ರಕರಣಗಳಲ್ಲಿ ಮಿಥ್ಯಾತ್ವವೇ ಸಂಸಾರದ ಬೀಜವಿದೆ. ಕರ್ಮಬಂಧದ ಮೂಲ ಕಾರಣವಿದೆ, ಪರಿಗ್ರಹವಿದೆ, ಪಾಪವಿದೆ, ಆಸ್ರವವಿದೆ, ಎಲ್ಲಕ್ಕಿಂತ ಹೆಚ್ಚು ಅಹಿತ ಮಾಡುವಂಥದ್ದಿದೆ; ಕಷಾಯಗಳನ್ನು ಮಾಡುವಂಥದ್ದಿದೆ, ಸಂಸಾರ ಪರಿಭ್ರಮಣದಲ್ಲಿ ಹೆಚ್ಚು ಶಕ್ತಿಶಾಲಿಯಾದ ನಿಮಿತ್ತವಿದೆಯೆಂದು ಸ್ಪಷ್ಟಪಡಿಸಿದ್ದಾರೆ.

ಮೂರು ಮೂಢತೆಯ ಸ್ವರೂಪವನ್ನು ತಿಳಿಸಿಕೊಡುತ್ತ ಆಚಾರ್ಯದೇವರು ಮೂಲದಲ್ಲಿ ೨೨-೨೩-೨೪ ಈ ಮೂರು ಸೂತ್ರಗಳನ್ನು ಹೇಳಿದ್ದಾರೆ. ಅವುಗಳ ಮೇಲೆ ಟೀಕೆ ಬರೆಯುತ್ತ ಪಂ. ಸದಾಸುಖದಾಸರು ಹೇಳುವುದೇನೆಂದರೆ 'ವ್ಯಂತರ ಕ್ಷೇತ್ರಪಾಲಾದಿಕನಿಕೂ ಅಪನಾ ಸಹಾಯೀ ಮಾನೆ ಹೈ ಸೋ ಮಿಥ್ಯಾತ್ವಕಾ ಉದಯಕಾ ಪ್ರಭಾವ ಹೈ. ಪ್ರಥಮ ತೋ ಭವನವಾಸೀ, ವ್ಯಂತರ, ಜ್ಯೋತಿಷೀ-ಇನ ತೀನ ಪ್ರಕಾರ ಕೆ ದೇವನಿಮೆ ಮಿಥ್ಯಾದೃಷ್ಟಿಹೀ ಉಪಜೈ ಹೈ. ಸಮ್ಯಗ್ದೃಷ್ಟಿಕಾ ಭವನತ್ರಿಕ ದೇವಮೆ ಉತ್ಪಾದಹೀ ನಹಿ. ಅರ ಸ್ತ್ರೀ ಪನಾ ಪಾವೇಹಿ ನಹೀ-ಸೋ ಪದ್ಮಾವತಿ, ಚಕ್ರೇಶ್ವರೀ ತೋ ಭವನವಾಸಿನಿ ಅರ ಸ್ತ್ರೀ ಪರ್ಯಾಯಮೆ ಅರ ಕ್ಷೇತ್ರಪಾಲಾದಿಕ ಯಕ್ಷ ಯೆ ವ್ಯಂತರ, ಇನಮೆ ಸಮ್ಯಗ್ದೃಷ್ಟಿಕಾ ಉತ್ಪಾದ ಕೈಸೆ ಹೋಯ ? ಇನಮೆ ತೋ ನಿಯಮತೈ ಮಿಥ್ಯಾದೃಷ್ಟಿ ಹೀ ಉಪಜೈ ಹೈ-ಐಸಾ ಪರಮಾಗಮ ಕಹೆ ಹೈ ಅರ ಜೈನ ಶಾಸನಮೆ ಹೂ ಐಸೀ ಕೋಈ ಕಥಾ ಹೈ, ಜೋ ಶೀಲವಾನ ತಥಾ ಧ್ಯಾನಿ ತಪಸ್ವಿನಿ ಕೆ ಧರ್ಮಕೆ ಪ್ರಸಾದತೈ ದೇವನಿಕೆ ಆಸನ ಕಂಪಾಯಮಾನ ಭಯೆ, ಅರ ದೇವ ಜಾಯ ಉಪಸರ್ಗ ಟಾಲೆ. ಅರ ನಾನಾರತ್ನನಿ ಪೂಜಾ ಕರಿ-ಐಸೀ ಕಥಾ ತೋ ಶಾಸನ ಮೆ ಬಹುತ

ಹೈ. ಅರ ಧರ್ಮಾತ್ಮಾ ಪುರುಷ ದೇವನಿಕೂ ಪೂಜ್ಯೆ ಐಸೆ ಕಥಾ ತೊ ಕಹೂ ಭೀ ನಹಿ, ಜೋ ಶೀಲವಂತೀ ವ್ರತವಂತಿನಿಕೀ ದೇವ-ದೇವಿಯೋನೇ ಪೂಜಾ ಕರಿ, ಅರಶೀಲವಂತಿ, ವ್ರತವಂತಿ ತೊ ಕೋಉ ದೇವ-ದೇವೀ ಕೀ ಪೂಜಾ ಕರೀ ನಹೀ'.

'ಬಹುರಿ ಜೋ ಮಂತ್ರಸಾಧನ, ವಿದ್ಯಾ ಆರಾಧನ, ದೇವ ಆರಾಧನ ಹೈ ತೇ ಸಮಸ್ತ ಪುಣ್ಯ-ಪಾಪಕೆ ಅನುಕೂಲ ಫಲ ಹೈ, ತಾತೈ ಜೋ ಸುಖ ಕಾ ಅರ್ಥೀ ಹೈ ತೇ ದಯಾ, ಕ್ಷಮಾ, ಸಂತೋಷ, ನಿರ್ವಾಂಛಕತಾ, ಮಂದಕಷಾಯತಾ, ವೀತರಾಗತಾ ಕರಿ ಏಕ ಧರ್ಮಹೀಕಾ ಆರಾಧನ ಕರೋ, ಅನ್ಯ ಪ್ರಕಾರ ವಾಂಛಾ ಕರೀ ಪಾಪಬಂಧ ಮತ ಕರೋ' - ಇದೇ ಪ್ರಕಾರ ಪಾರ್ಶ್ವ ಪ್ರಭುವಿನ ಮಸ್ತಕದ ಮೇಲಿರುವ ಹೆಡೆಯ ವಿಷಯದಲ್ಲಿ ಹೀಗೆ ಹೇಳುತ್ತಾರೆ - 'ಪಾರ್ಶ್ವ ಜಿನೇಂದ್ರ ಕಿ ಪ್ರತಿಮಾ ಕೆ ಊಪರಿ ಫಣಾ ವಿನಾ ಬನಾವೈ ಹೀ ನಹಿ, ಅರ ಭಗವಾನ ಪಾರ್ಶ್ವ ಅರಹಂತ ಕೆ ಸಮವಸರಣ ಮೆ ಧರಣೇಂದ್ರ ಕಾ ಫಣಾ ಮಸ್ತಕ ಊಪರ ಕೈಸೆ ಸಂಭವೈ ಹೈ ? ಧರಣೇಂದ್ರನೆ ತೋ ಭಗವಾನಕೆ ತಪಕೆ ಅವಸರಮೆ ಫಣಾಮಂಡಪ ಕಿಯಾ ಥಾ, ಸೋ ಫೇರ ಫಣಾಮಂಡಪ ಕಾ ಪ್ರಯೋಜನ ನಾಹಿ. ಪಾರ್ಶ್ವ ಜಿನೇಂದ್ರ ಅರಹಂತ ಭಯೆ, ಅರ ಇಂದ್ರಕಿ ಆಜ್ಞಾತೈ ಕುಬೇರ ಸಮೋಸರಣ ರಚ್ಯೋ, ತಹಾ ಭಗವಾನ ಫಣಾಸಹಿತ ನಹಿ ವಿರಾಜೇ ಹುತೇ. ಯಾತೈ ಸ್ಥಾಪನಾ ವಿಷೈ ಅರಹಂತಕಿ ಪ್ರತಿಬಿಂಬನಿಕೆ ಫಣ ಕೈಸೆ ಸಂಭವೈ ? ವೀತರಾಗ ಮುದ್ರಾ ತೋ ಐಸೆ ಸಂಭವೈ ನಾಹಿ, ಪರಂತು ಕಾಲಕೆ ಪ್ರಭಾವತೈ ಲೋಕ ವಿಪರೀತ ಕಲ್ಪನಾ ಕರನೆ ಲಗಿ ಗಯೆ, ಸೋ ಕೌನ ದೂರ ಕರಿ ಸಕೈ ?

ಇದೇ ಪ್ರಕಾರ ಗುರು ಮೂಢತೆಯ ಸಂದರ್ಭದಲ್ಲಿ ಕೂಡ ಅತ್ಯಂತ ಸ್ಪಷ್ಟ ವಿವರಣೆ ಮಾಡಿದ್ದಾರೆ ಅದನ್ನು ಮೂಲವನ್ನೇ ಓದಿ ತಿಳಿದುಕೊಳ್ಳಬೇಕು ಮತ್ತು ಮೂರು ಮೂಢತೆಯ ತ್ಯಾಗ ಮಾಡಿ ಧರ್ಮದ ಸ್ವೀಕಾರ ಮಾಡಬೇಕು.

ಈ ವಚನಿಕೆಯ ಇನ್ನೊಂದು ವಿಶೇಷತೆಯೇನೆಂದರೆ ಪಂ. ಸದಾಸುಖದಾಸರು 'ಭಾವನಾ ಅಧಿಕಾರ'ವನ್ನು ಸ್ವತಂತ್ರವಾಗಿ ರಚನೆ ಮಾಡಿದ್ದಾರೆ. ಅದರ ಕುರಿತು ವಿವರಣೆ ಕೊಡುತ್ತ 'ಶ್ರೀ ಪರಮಗುರುನಿಕಾ ಪ್ರಸಾದ ಕರಿ ಪರಮಾಗಮನಿ ಆಜ್ಞಾ ಪ್ರಮಾಣ ಭಾವನಾ ನಾಮಾ ಮಹಾಧಿಃಕಾರ ಲಿಖಿತೆ ಹೈ, ಸಮಸ್ತ ಧರ್ಮ ಕಾ ಮೂಲ ಭಾವನಾ ಹೈ ಭಾವನಾ ತೈ ಹೀ ಪರಿಣಾಮನಿ ಕಿ ಉಜ್ವಲತಾ ಹೋಯ ಹೈ ಭಾವನಾತೈ ಮಿಥ್ಯಾದರ್ಶನ ಕಾ ಅಭಾವ ಹೋಯ ಹೈ, ಭಾವನಾತೈವ್ರತನಿಮೆ ದೃಢ ಪರಿಣಾಮ ಹೋಯ ಹೈ. ಭಾವನಾತೈ ವೀತರಾಗತಾ ಕಿ ವೃದ್ಧಿ ಹೋಯ ಹೈ. ಭಾವನಾತೈ ಅಶುಭ ಧ್ಯಾನಕಾ ಅಭಾವ ಹೋಯ, ಶುಭ ಧ್ಯಾನ ಕಿ ವೃದ್ಧಿ ಹೋಯ ಹೈ, ಭಾವನಾತೈ ಆತ್ಮಾ ಕಾ ಅನುಭವ ಹೋಯ ಹೈ, ಇವೇ ಮೊದಲಾದ ಸಾವಿರಾರು ಗುಣಗಳನ್ನುತ್ಪನ್ನ ಮಾಡುವಂಥ ಭಾವನೆಯನ್ನು ಸದಾ ಭಾವಿಸಿರೆಂದು ಹೇಳಿದ್ದಾರೆ.

ಈ ಭಾವನಾ ಅಧಿಕಾರದಲ್ಲಿ ಸೋಳಹ ಕಾರಣ ಭಾವನೆ, ಬಾರಹ ಭಾವನೆ, ಮೈತ್ರೀ ಮೊದಲಾದ ನಾಲ್ಕು ಭಾವನೆ, ದಶಲಕ್ಷಣ ಧರ್ಮ, ನಾಲ್ಕು ಧ್ಯಾನ, ಹನ್ನೆರಡು ತಪ, ಆತ್ಮನ ಮೂರು ಭೇದ ಇವೇ ಮೊದಲಾದವುಗಳ ವರ್ಣನೆಯನ್ನು ವಿಸ್ತಾರಪೂರ್ವಕ ಮಾಡಿರುವುದಲ್ಲದೆ ಇದರಲ್ಲಿ ಇನ್ನೂ **ಅನೇಕಾಂತ ಭಾವನೆ, ಸಮಯಸಾರ ಭಾವನೆಯ** ವರ್ಣನೆ ಮಾಡುವುದಿತ್ತು. ಆದರೆ ಆಯುವು ಸೀಮಾರೇಖೆಯನ್ನು ತಲುಪುತ್ತಿರುವುದನ್ನು ತಿಳಿದು ಅವುಗಳ ಕೈ ಬಿಡಲಾಗಿದೆಯೆಂದೂ ತಿಳಿಸಿದ್ದಾರೆ. ಇದರ ಮೇಲಿಂದ ಅವರ ಮನಸ್ಸಿನಲ್ಲಿ ಸಮಯಸಾರದ ಮಹಿಮೆಯೆಷ್ಟಿರಬೇಕೆಂಬುದು ತಿಳಿದು ಬರುತ್ತದೆಯಲ್ಲವೇ ? ಅಂತಿಮ ಪ್ರಶಸ್ತಿಯಲ್ಲಿ ಅವರೇ ಹೇಳುತ್ತಾರೆ - **''ಸಮಯಸಾರ ಗುನಕಹನಕೂ, ಶಕ್ತ ನ ಸುರಗುರು ಹೋಯ । ತಾಕೋ ಶರಣ ಸದಾ ರಹೋ, ರಾಗಾದಿಕ ಮಲ ಧೋಯ ॥''** ಒಂದು ವೇಳೆ ಅವರು ಸಮಯಸಾರ ಭಾವನೆಯನ್ನು ಬರೆಯುತ್ತಿದ್ದರೆ ನಮಗೆ ಒಂದು ನವೀನ ಪ್ರಮೇಯವೇ ದೊರಕುತ್ತಿತ್ತು. ಆದರೆ ನಮ್ಮಗಳ ದುರ್ಭಾಗ್ಯವಶದಿಂದ ಅವರ ಆ ಭಾವನೆಯು ಅವರಲ್ಲಿಯೇ ಉಳಿದುಕೊಂಡಿತು.

ಇನ್ನು ಇದೇ ಭಾವನಾ ಅಧಿಕಾರದಲ್ಲಿ ಉತ್ತಮ ಸತ್ಯ ಧರ್ಮದ ವಿವರಣೆ ಮಾಡುವಾಗ ಅದರಲ್ಲಿ **'ಅಕಾಲಮೃತ್ಯು'** ವಿನ ಪ್ರಸ್ತಾಪವನ್ನು ಮಾಡಿದ್ದಾರೆ. ಅಲ್ಲಿ ಬಾಹ್ಯ ನಿಮಿತ್ತದ ಮುಖ್ಯತೆಯಿಂದ ಕಥನ ಮಾಡುವಾಗ ಬಾಹ್ಯ


ನಿಮಿತ್ತಗಳಿಂದ ಆಯು ನಾಶವನ್ನು ಒಪ್ಪುತ್ತಾರೆ. ಕೂಡಲೆ 'ಆಯು ಪೂರ್ಣವಾದಲ್ಲದೆ ಮರಣವಾಗುವುದಿಲ್ಲವೆಂದು ಅದೆಷ್ಟೋ ಜನರು ಹೇಳುತ್ತಾರಲ್ಲ ?' ಎಂಬ ಪ್ರಶ್ನವನ್ನು ಉಪಸ್ಥಿತ ಮಾಡಿ, ಅದಕ್ಕೆ ಉತ್ತರ ಹೇಳುತ್ತಾರೆ. **'ಒಂದು ವೇಳೆ ಆಯು ಘಾತವಾಗುವ ಬಹಿರಂಗ ಕಾರಣವು ದೊರಕುತ್ತಿದ್ದರೆ ಯಾರ ಆಯುವಿನ ಘಾತವಾಗುವುದೇ ಇದೆ ಅವರ ಆಯುವಿನ ಘಾತವು ಆಗಿಯೇ ಆಗುತ್ತದೆಯೆಂಬುದು ನಿಶ್ಚಿತವಿದೆ'**ಯೆಂದು ಹೇಳಿರುವಲ್ಲಿಯೇ ಅಕಾಲ ಮರಣವಿದೆಯೆಂಬ ಭ್ರಾಂತಿಯು ಹೊರಟು ಹೋಗುವಂತಿದೆ. ಹೇಗೆಂದರೆ 'ಯಾರ ಆಯುವಿನ ಘಾತವಾಗುವುದೇ ಇದೆ'ಯೆಂಬ ಕಥನದಲ್ಲಿ ನಾವು 'ಸೋಪಕ್ರಮ' ಆಯುವಿನ ಸ್ವೀಕಾರ ಮಾಡಬೇಕಾಗುತ್ತದೆ ಎಂದರೆ ಆಯು ಕರ್ಮದ ರಜಕಣಗಳು ಸೋಪಕ್ರಮ ಮತ್ತು ನಿರುಪಕ್ರಮವೆಂದು ಎರಡು ಪ್ರಕಾರಗಳಿದ್ದು, ಅವುಗಳಲ್ಲಿ ಆಯುವಿನ ಪ್ರಮಾಣದಲ್ಲಿ ಪ್ರತಿ ಸಮಯ ಸಮಾನ ನಿಷೇಕಗಳು ನಿರ್ಜರಿತವಾಗುವುದು ಅದು ನಿರುಪಕ್ರಮ ಆಯುವಿದೆ ಮತ್ತು ಸೋಪಕ್ರಮ ಆಯುವಿನ ಕೊನೆಯಲ್ಲಿ ಬಹಳಷ್ಟು ನಿಷೇಕಗಳು ಏಕಕಾಲದಲ್ಲಿ ನಿರ್ಜರಿತವಾಗಿ ಹೋಗುತ್ತವೆ. ಆಯು ಕರ್ಮದ ಬಂಧದಲ್ಲಿರುವ ವಿಚಿತ್ರತೆಯೇನೆಂದರೆ ಯಾವನಿಗೆ ನಿರುಪಕ್ರಮ ಆಯುವಿನ ಉದಯವಿರುವುದು ಅವನಿಗೆ ಸಮಯ-ಸಮಯಕ್ಕೆ ಸಮಾನ ನಿರ್ಜರೆಯಾಗುವುದರಿಂದ ಅದು ಉದಯವೆಂದು ಕರೆಸಿಕೊಳ್ಳುತ್ತದೆ. ಮತ್ತು ಸೋಪಕ್ರಮ ಆಯುವುಳ್ಳವನಿಗೆ ಮೊದಲು ಇಂತಿಷ್ಟು ಸಮಯವಂತೂ ಮೇಲೆ ಹೇಳಿದಂತೆಯೇ ನಿರ್ಜರೆಯಾಗುತ್ತದೆ. ಆಗ ಅದನ್ನು ಉದಯವೆಂದು ಹೇಳುತ್ತಾರೆ. ಆದರೆ ಕೊನೆಯ ಅಂತರ್ಮುಹೂರ್ತದಲ್ಲಿ ಎಲ್ಲ ನಿಷೇಕಗಳು ಒಟ್ಟಿಗೆ ನಿರ್ಜರಿಸಿ ಹೋಗುತ್ತವೆ, ಅದರಿಂದ ಅದನ್ನು ಉದೀರಣಾವೆಂದು ಹೇಳುತ್ತಾರೆ. ವಾಸ್ತವದಲ್ಲಿ ಯಾರ ಆಯುವು ವೃದ್ಧಿಸುವುದೂ ಇಲ್ಲ, ಮತ್ತು ಕಡಿಮೆಯಾಗುವುದೂ ಇಲ್ಲ. ಆದರೆ ನಿರುಪಕ್ರಮ ಆಯು ಹಾಗೂ ಸೋಪಕ್ರಮ ಆಯುವಿನ ಭೇದ ತಿಳಿಸಿಕೊಡುವ ಸಲುವಾಗಿ ಸೋಪಕ್ರಮ ಆಯುವುಳ್ಳ ಜೀವದ 'ಅಕಾಲಮೃತ್ಯುವಾಯಿತೆ'ಂದು ವ್ಯವಹಾರದಿಂದ ಹೇಳಲಾಗುತ್ತದೆ. ನಿಶ್ಚಯದಿಂದಂತೂ ಯಾವುದೇ ಜೀವದ ಅಕಾಲ ಮರಣವಾಗುವುದೇ ಇಲ್ಲ.

ಈ ಪ್ರಕಾರ 'ಅಕಾಲಮೃತ್ಯು'ವಿನ ಸಂಬಂಧದಲ್ಲಿ ಪಂ. ಸದಾಸುಖದಾಸರ ಅಭಿಪ್ರಾಯವು ಮೂಲ ಸಿದ್ಧಾಂತಕ್ಕೆ ಅನುಕೂಲವಾಗಿಯೇ ಇದ್ದು, ಅವರು 'ಸೋಪಕ್ರಮ'ದ ಸ್ಥಾನದಲ್ಲಿ 'ಯಾರ ಆಯುವಿನ ಘಾತವಾಗುವುದೇ ಇದೆ, ಅವರ ಆಯುವಿನ ಘಾತವಾಗಿಯೇ ಆಗುತ್ತದೆಯೆಂಬುದು ನಿಶ್ಚಯವಿದೆ' - ಎಂದು ಹೇಳಿ ಮೂಲ ಮಾತನ್ನೇ ದೃಢಪಡಿಸಿದ್ದಾರೆಂದು ತಿಳಿದುಕೊಳ್ಳಬೇಕು ಮತ್ತು ಈ ಸಂದರ್ಭದಲ್ಲಿ ಅವರು 'ಬಾಹ್ಯ ನಿಮಿತ್ತದ ಮುಖ್ಯತೆಯಿಂದ ಕಥನ'ವೆಂದು ಹೇಳಿರುವುದರ ಕಡೆಗೆ ವಿಶೇಷ ಗಮನ ಹರಿಸಬೇಕು. ಜಿನಾಗಮದಲ್ಲಿ 'ನಿಮಿತ್ತ'ದ ಅರ್ಥವು 'ಅಕರ್ತಾ'ಯಿದೆಯೆಂಬುದನ್ನು ತಿಳಿದು ಕೊಳ್ಳಬೇಕು. ಕೇವಲ ಶಬ್ದಾರ್ಥದಲ್ಲಿ ಮೋಸ ಹೋಗದೆ ಆ ಶಬ್ದದ ಭಾವವನ್ನು ತಿಳಿದುಕೊಳ್ಳಬೇಕು.

ಆದುದರಿಂದ ಈ ಗ್ರಂಥದಲ್ಲಿನ ಶಬ್ದಗಳ ಅರ್ಥವನ್ನು ದ್ರವ್ಯಾನುಯೋಗ ಹಾಗೂ ಕರುಣಾನುಯೋಗದ ಶಾಸ್ತ್ರಗಳಲ್ಲಿ ಅನೇಕ ಪ್ರಕಾರದ ನಯಗಳ ಮೂಲಕ ಹೇಳಲಾದ ಸೂಕ್ಷ್ಮ ಮಾತುಗಳನ್ನು ತಿಳಿದುಕೊಳ್ಳುವ ಸಂದರ್ಭದಲ್ಲಿ ಗೌಣ ರೂಪದಿಂದ ಹಾಗೂ ಸದಾಚಾರ ಪೋಷಕವಾದ ಚರಣಾನುಯೋಗದ ಅನುಸಾರ ತಿಳಿದುಕೊಳ್ಳುವಲ್ಲಿ ಮುಖ್ಯರೂಪದಿಂದ ಮಾಡಬೇಕಾಗುವುದು. ಈ ರತ್ನಕರಂಡ ಶ್ರಾವಕಾಚಾರವು ಸುಲಭವಾದ ಗ್ರಂಥವಿದೆಯೆಂಬ ಭ್ರಾಂತಿಯನ್ನು ತೊರೆದು ಸೂಕ್ಷ್ಮ ದೃಷ್ಟಿಯಿಂದ ಅಧ್ಯಯನ ಮಾಡಿ ರಹಸ್ಯವನ್ನು ಗ್ರಹಿಸಿ ತಮ್ಮ ಜೀವನವನ್ನು ಕೃತಾರ್ಥಗೊಳಿಸಿಕೊಳ್ಳಬೇಕೆಂದು ಸೂಚ್ಯವಾಗಿ ತಿಳಿಸಿಕೊಡುತ್ತ ಈ ದೀರ್ಘ ವಕ್ತವ್ಯಕ್ಕೆ ವಿರಾಮ ಕೋರುತ್ತೇವೆ.

ಬೆಳಗಾವಿ. **ಎಂ. ಬಿ. ಪಾಟೀಲ, ಸೇಡಬಾಳ**

ದಿ. ಶ್ರಾವಣ-೨೦೦೬ ಶಹಾಪೂರ-ಬೆಳಗಾವಿ.



ಪರಮಪೂಜ್ಯ ಗುರುದೇವ ಶ್ರೀ ಕಾನಡೀ ಸ್ವಾಮಿಗಳು

# ವಿಷಯಾನುಕ್ರಮಣಿಕೆ


| ವಿಷಯ | ಪುಟ |
|---|---|
| ಪ್ರಕಾಶಕೀಯ ............................................. | iii |
| ಪ್ರಸ್ತಾವನೆ ................................................ | iv |
| ಅನುಕ್ರಮಣಿಕೆ ............................................. | xv |
| ಅಮೃತ ಬಿಂದುಗಳು ........................................ | xvi |
| ಸಮ್ಯಗ್ದರ್ಶನ ಅಧಿಕಾರ ..................................... | 1 |
| ಸಮ್ಯಗ್ಜ್ಞಾನ ಅಧಿಕಾರ ....................................... | 82 |
| ಅಣುವ್ರತ ಅಧಿಕಾರ .......................................... | 85 |
| ಗುಣವ್ರತ ಅಧಿಕಾರ .......................................... | 119 |
| ಶಿಕ್ಷಾವ್ರತ ಅಧಿಕಾರ ......................................... | 149 |
| ಭಾವನೆ ಅಧಿಕಾರ............................................. | 210 |
| ಸಲ್ಲೇಖನ ಅಧಿಕಾರ .......................................... | 427 |
| ಪ್ರತಿಮಾ ಅಧಿಕಾರ .......................................... | 466 |
| ವಚನಿಕಾಕಾರನ ಪ್ರಶಸ್ತಿ....................................... | 474 |


## ಶ್ರಾವಕನ ಸತ್ಯ ಸ್ವರೂಪ

**ಯೇನ ಸ್ವಯಂ ವೀತಕಲಂಕವಿದ್ಯಾ ದೃಷ್ಟಿಕ್ರಿಯಾ ರತ್ನಕರಂಡ ಭಾವಮ್ ।**
**ನೀತಸ್ತಮಾಯಾತಿ ಪತೀಚ್ಛಯೇವ ಸರ್ವಾರ್ಥಸಿದ್ಧಿಸ್ತ್ರಿಷು ವಿಷ್ಟಪೇಷು ॥೧೪೯॥**

**ಅರ್ಥ :-** ಯಾವ ಪುರುಷನು ತನ್ನ ಆತ್ಮನನ್ನು ಕಲಂಕ ಹಾಗೂ ಅತಿಚಾರಗಳಿಂದ ರಹಿತ, ನಿರ್ದೋಷ ಜ್ಞಾನ-ದರ್ಶನ-ಚಾರಿತ್ರರೂಪ ರತ್ನಗಳ ಕರಂಡಕ ಎಂದರೆ ಪೆಟ್ಟಿಗೆಯ ಪಾತ್ರತೆಗೆ ಪ್ರಾಪ್ತಮಾಡಿಕೊಳ್ಳುತ್ತಾನೆ ಅವನು ಶ್ರಾವಕನಾಗುತ್ತಾನೆ ಅವನಿಗೆ ಯಾವ ಪ್ರಕಾರ ತನ್ನ ಪತಿಯನ್ನು ಪ್ರಾಪ್ತಮಾಡಿಕೊಂಡ ಸ್ತ್ರೀಗೆ ಸರ್ವ ಅರ್ಥದ ಸಿದ್ಧಿಯಾಗಿ ಹೋಗುತ್ತದೆ ಅದೇ ಪ್ರಕಾರ ಮೂರು ಲೋಕದಲ್ಲಿ ಸರ್ವ ಐಚ್ಛಿಕ ಅರ್ಥದ ಸಿದ್ಧಿಯಾಗಿ ಹೋಗುತ್ತದೆ.

# ಅಮೃತ ಬಿಂದುಗಳು

- ಯಾವುದು ತನ್ನ ಮತ್ತು ಅನ್ಯದ್ರವ್ಯಗಳ ಸತ್ಯಾರ್ಥ ಶ್ರದ್ಧೆ, ಜ್ಞಾನ, ಆಚರಣವಿದೆ ಅದಂತೂ ಸಂಸಾರ ಪರಿಭ್ರಮಣದಿಂದ ಬಿಡಿಸಿ ಉತ್ತಮ ಸುಖದಲ್ಲಿ ಧಾರಣ ಮಾಡುವಂಥ ಧರ್ಮವಿದೆ.
- ಜೀವರುಗಳಿಗೆ ಸಮ್ಯಗ್ದರ್ಶನದ ಸಮಾನ ಕಲ್ಯಾಣ ಮಾಡುವಂಥ ವಸ್ತುವಾಗಲಿ ವ್ಯಕ್ತಿಯಾಗಲಿ ಅಥವಾ ಶಕ್ತಿಯಾಗಲಿ ಮೂರು ಕಾಲ ಮತ್ತು ಮೂರು ಲೋಕಗಳಲ್ಲಿ ಬೇರೆ ಯಾವುದೂ ಇಲ್ಲ.
- ಈ ಮನುಷ್ಯ ಜನ್ಮ, ಜೈನ ಕುಲ, ನಿರೋಗ ಶರೀರ, ಉತ್ತಮ ಧರ್ಮ ಇವೆಲ್ಲವನ್ನು ಅನಂತ ಕಾಲದಲ್ಲಿ ಪಡೆದಿರಲಿಲ್ಲ; ಈಗ ಇವೆಲ್ಲವುಗಳ ಸಂಯೋಗವು ಏಕಕಾಲಕ್ಕೆ ತಮಗೆ ದೊರಕಿಕೊಂಡಿದೆ. ಇದರ ಒಂದೊಂದು ಗಳಿಗೆಯು ಕೋಟ್ಯಂತರ ರೂಪಾಯಿಗಳಿಗಿಂತಲೂ ಮಿಗಿಲಾಗಿದೆ. ಈ ಅವಸರವನ್ನು ಸಿದ್ಧಾಂತಗಳ ಸ್ವಾಧ್ಯಾಯ, ಜೀವಾದಿ ದ್ರವ್ಯಗಳ ಚರ್ಚೆ, ಅನಿತ್ಯ ಮೊದಲಾದ ಹನ್ನೆರಡು ಭಾವನೆಗಳು ಮತ್ತು ಷೋಡಶ ಕಾರಣ ಭಾವನೆಗಳನ್ನು ಭಾವಿಸುವ, ಪಂಚಪರಮೇಷ್ಠಿಗಳ ವಂದನೆ - ಜಪ, ಸ್ಮರಣೆ ಮಾಡುವಲ್ಲಿ ತೊಡಗಿಸಿ ತಮ್ಮ ಜೀವನ ಸಾರ್ಥಕ ಮಾಡಿಕೊಳ್ಳಬೇಕು.
- ಸಮಸ್ತ ಸಂಸಾರ ಪರಿಭ್ರಮಣದ ಮೂಲ ಕಾರಣವು ಪಂಚೇಂದ್ರಿಯ ವಿಷಯಗಳಲ್ಲಿನ ಲಾಲಸೆಯಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಭೋಗಭೂಮಿಯ ಹಾಗೂ ದೇವಲೋಕದ ನಾನಾ ಪ್ರಕಾರದ ಭೋಗಗಳಿಂದಲೂ ತೃಪ್ತವಾಗದ ವಿಷಯೇಚ್ಛೆಯು ಈಗ ಹೇಗೆ ತೃಪ್ತವಾಗುವುದು ? ಅದಕ್ಕಾಗಿ ಪ್ರಬಲವಾದ ರಸನೇಂದ್ರಿಯದ ಲಾಲಸೆಯನ್ನು ಬಿಟ್ಟುಕೊಟ್ಟು ಇಂದ್ರಿಯಗಳನ್ನು ಜಯಿಸಿ ತಮ್ಮ ಕರ್ಮದ ಉದಯವು ಕೂಡಿಸಿ ಕೊಟ್ಟಿರುವಂಥ ಸರಸ-ನೀರಸ ಆಹಾರದಲ್ಲಿಯೇ ಸಂತುಷ್ಟನಾಗಿರುತ್ತ ಅಭಕ್ಷ್ಯದ ತ್ಯಾಗ ಮಾಡಿ ದೇಹದ ಸ್ಥಿರತೆಯ ಸಲುವಾಗಿ ಭೋಜನ ಮಾಡುತ್ತ ಸಾಧ್ಯವಾದಷ್ಟು ಪಾಪಗಳ ಭಾರದಿಂದ ರಹಿತರಾಗಬೇಕು.
- ಜ್ಞಾನದ ಅಭ್ಯಾಸವೇ ಜಿನಧರ್ಮದ ಸ್ತಂಭವಿದೆ. ಜ್ಞಾನದ ಅಭ್ಯಾಸದಿಂದಲೇ ಧರ್ಮಧ್ಯಾನ ಹಾಗೂ ಶುಕ್ಲಧ್ಯಾನದಲ್ಲಿ ಸ್ಥಿರತೆಯಾಗುತ್ತದೆ. ಜ್ಞಾನದ ಅಭ್ಯಾಸದಿಂದಲೇ ವ್ರತ-ಸಂಯಮಗಳಾಗುತ್ತವೆ, ಜಿನೇಂದ್ರರ ಶಾಸನವು ಪ್ರವರ್ತಿಸುತ್ತದೆ, ಅಶುಭ ಕರ್ಮಗಳ ನಾಶವಾಗುತ್ತದೆ, ಜ್ಞಾನದ ಅಭ್ಯಾಸದಿಂದಲೇ ಹೃದಯದಲ್ಲಿ ಮೊದಲಿನಿಂದಲೂ ಸಂಗ್ರಹಿತವಾದ ಪಾಪರೂಪದ ಋಣವು ನಾಶವಾಗುತ್ತದೆ. ಉತ್ತಮ ಕ್ಷಮೆ ಮೊದಲಾದ ಗುಣಗಳು ಪ್ರಕಟವಾಗುತ್ತವೆ. ಯೋಗ್ಯ-ಅಯೋಗ್ಯ , ತ್ಯಾಗ ಯೋಗ್ಯ ಗ್ರಹಣ ಮಾಡಲು ಯೋಗ್ಯದ ವಿಚಾರವಾಗುತ್ತದೆ. ಜ್ಞಾನಾಭ್ಯಾಸದಿಂದಲೇ ಮೋಕ್ಷಮಾರ್ಗ ಮತ್ತು ಪ್ರತ್ಯಕ್ಷ ಮೋಕ್ಷದ ಪ್ರಾಪ್ತಿಯೂ ಆಗುತ್ತದೆ.
- ಪ್ರಾಪ್ತ ದೇಹದಲ್ಲಿ ಮಮತೆ ಮಾಡಿ ಅನಂತಕಾಲ ಜನ್ಮ-ಮರಣ, ಅನೇಕ ವಿಯೋಗ-ರೋಗ ಸಂತಾಪ ಹಾಗೂ ನರಕ ಮೊದಲಾದ ಗತಿಗಳಲ್ಲಿ ಬಹಳಷ್ಟು ದುಃಖ ಭೋಗಿಸಿಯಾಗಿದೆ. ಈಗ ಈ ದೇಹದಲ್ಲಿ ರೋಗವಾಗಿರುವುದು ಉಪಕಾರಕವಿದೆ. ರೋಗಾದಿಗಳು ಉತ್ಪನ್ನವಾಗದಿದ್ದರೆ ದೇಹದ ಕುರಿತಾಗಿರುವ ಮಮತೆಯು ಕಡಿಮೆಯಾಗುವುದಿಲ್ಲ. ಮತ್ತು ಅಭಿಮಾನವೂ ಬಿಟ್ಟು ಹೋಗುವುದಿಲ್ಲ. ಅದರಿಂದ ಈಗ ಸಚೇತರಾಗಿ ದೇಹವನ್ನು ಅನಿತ್ಯ ಹಾಗೂ ಅಶರಣವೆಂದು ತಿಳಿಯುತ್ತ ಜ್ಞಾನ-ದರ್ಶನ-ಚಾರಿತ್ರ-ತಪಗಳನ್ನೇ ನಿಶ್ಚಯ ಶರಣವೆಂದು ಮನ್ನಿಸಿ ಆರಾಧನೆಗಳ ಧಾರಕರಾದ ಪಂಚ ಪರಮೇಷ್ಠಿಗಳನ್ನು ಚಿತ್ತದಲ್ಲಿ ಧಾರಣ ಮಾಡಬೇಕು.
- ಉದಯದಲ್ಲಿ ಬಂದಿರುವ ಕರ್ಮವಂತೂ ಫಲ ಕೊಟ್ಟಲ್ಲದೆ ಹೋಗುವುದಿಲ್ಲ. ಯಾರು ಪೀಡೆ ಕೊಡುತ್ತಾರೆ ಅವರು ನಮ್ಮ ಪ್ರಮಾದವನ್ನು ಬಿಡಿಸಿ ನಮ್ಮ ಮೇಲೆ ಮಹಾ ಉಪಕಾರವನ್ನೇ ಮಾಡುತ್ತಾರೆ.
- ಪಾಪವು ವೈರಿಯಿದೆ, ಧರ್ಮವು ಬಂಧುವಿದೆಯೆಂಬ ದೃಢ ನಿಶ್ಚಯದಿಂದ ತನ್ನ ಆತ್ಮನನ್ನು ರತ್ನತ್ರಯಗಳ ಆಧಾರನನ್ನಾಗಿ ಮಾಡಿಕೊಂಡರೆ ಮೂರು ಲೋಕದ ಸರ್ವೋತ್ಕೃಷ್ಟ ಅರ್ಥದ ಸಿದ್ಧಿಯಾಗುತ್ತದೆ.

ಓಂ

ಪರಮಾತ್ಮನೇ ನಮಃ

# ರತ್ನಕರಂಡ ಶ್ರಾವಕಾಚಾರ

# ೧

## ಸಮ್ಯಗ್ದರ್ಶನ ಅಧಿಕಾರ

ಈಗ ಗ್ರಂಥದ ಪ್ರಾರಂಭದಲ್ಲಿ ಸ್ಯಾದ್ವಾದ ವಿದ್ಯೆಯ ಪರಮೇಶ್ವರರು ಹಾಗೂ ಪರಮ ನಿರ್ಗ್ರಂಥ ವೀತರಾಗರಾದ ಸ್ವಾಮಿ ಸಮಂತಭದ್ರಾಚಾರ್ಯದೇವರು ಜಗತ್ತಿನ ಭವ್ಯಕೋಟಿಯ ಉಪಕಾರದ ಸಲುವಾಗಿ ರತ್ನತ್ರಯದ ರಕ್ಷಣೆಯ ಉಪಾಯರೂಪವಾದ ಶ್ರೀ ರತ್ನಕರಂಡಕವೆಂಬ ಹೆಸರಿನ ಶ್ರಾವಕಾಚಾರವನ್ನು ಹೇಳುವ ಇಚ್ಛೆಯಿಂದ ಹಾಗೂ ಶಾಸ್ತ್ರದ ಪರಿಸಮಾಪ್ತಿಯು ಯಾವುದೇ ಬಾಧೆಯಿಲ್ಲದೆ ಆಗಲೆಂಬ ಇಚ್ಛೆಯಿಂದ ವಿಶಿಷ್ಟರಾದ ಇಷ್ಟ ದೇವರಿಗೆ ನಮಸ್ಕಾರ ಮಾಡುತ್ತಾರೆ, -

### ಮಂಗಲಾಚರಣೆ

**ನಮಃ ಶ್ರೀವರ್ಧಮಾನಾಯ ನಿರ್ಧೂತ ಕಲಿಲಾತ್ಮನೇ ।**
**ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ ॥೧॥**

**ಅರ್ಥ :-** ಶ್ರೀ ವರ್ಧಮಾನ ತೀರ್ಥಂಕರರಿಗೆ ನಮ್ಮ ನಮಸ್ಕಾರವಿರಲಿ ! ಶ್ರೀ ಎಂದರೆ ಅಂತರಂಗ ಸ್ವಾಧೀನವಿರುವ ಆ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ ಮತ್ತು ಅನಂತಸುಖಸ್ವರೂಪವಾದ ಅವಿನಾಶೀ ಲಕ್ಷ್ಮಿಯು ಮತ್ತು ಇಂದ್ರ ಮೊದಲಾದ ದೇವಗಳಿಂದ ವಂದನೀಯವಿರುವ ಆ ಸಮವಸರಣ ಮೊದಲಾದ ಬಹಿರಂಗ ಲಕ್ಷ್ಮಿಯೊಡನೆ ವೃದ್ಧಿಗೆ ಪ್ರಾಪ್ತರಾಗುತ್ತಿರುವಂಥವರು ಅವರು ಶ್ರೀ ವರ್ಧಮಾನರಿದ್ದಾರೆ. ಅಥವಾ ಈಗ ಸಮಂತಾತ್ ಎಂದರೆ ಸಮಸ್ತ ಪ್ರಕಾರದಿಂದ ಶ್ರದ್ಧೆ ಎಂದರೆ ಪರಮ ಅತಿಶಯತೆಗೆ ಪ್ರಾಪ್ತರಾಗಿದ್ದಾರೆ. ಕೇವಲಜ್ಞಾನ ಮೊದಲಾದ ಮಾನ ಎಂದರೆ ಪ್ರಮಾಣವು ಅವರದಿರುವಂಥವರು ಅವರು ಶ್ರೀ ವರ್ಧಮಾನರಿದ್ದಾರೆ.

ಇಲ್ಲಿ **''ಅವಾಪ್ಯೋರಲ್ಲೋಪಃ''** ಎಂಬ ವ್ಯಾಕರಣ ಶಾಸ್ತ್ರಸೂತ್ರದ ಮೂಲಕ 'ಅ' ಕಾಲದ ಲೋಪವಾಗಿ ಹೋಗಿದೆ. ಶ್ರೀ ವರ್ಧಮಾನರ ಆತ್ಮನು ನಿರ್ಧೂತ ಕಲಿಲನಿದ್ದಾನೆ. ಕಲಿಲ ಎಂದರೆ ಜ್ಞಾನಾವರಣ ಮೊದಲಾದ ಕರ್ಮರೂಪದ ಪಾಪ ಮಲವನ್ನು ಅವರ ಆತ್ಮನು ನಿರ್ಧೂತ ಎಂದರೆ ನಷ್ಟ ಮಾಡಿದ್ದಾನೆ ಮತ್ತು ಅವರ ಕೇವಲಜ್ಞಾನವು ಅಲೋಕಾಕಾಶ ಸಹಿತ ಸಂಪೂರ್ಣ ಮೂರು ಲೋಕಗಳನ್ನು ಕನ್ನಡಿಯ ಸಮಾನ ಪ್ರಕಾಶಿತಗೊಳಿಸುತ್ತಲಿದೆ.

**ಭಾವಾರ್ಥ :-** ಅವರ ಕೇವಲಜ್ಞಾನರೂಪದ ಕನ್ನಡಿಯಲ್ಲಿ ಅಲೋಕಾಕಾಶ ಸಹಿತ ಷಡ್ದ್ರವ್ಯಗಳ ಸಮೂಹ ರೂಪವಾದ ಸಂಪೂರ್ಣ ಲೋಕವು ತನ್ನ ಭೂತ, ಭವಿಷ್ಯತ್, ವರ್ತಮಾನದ ಸಮಸ್ತ ಅನಂತಾನಂತ ಪರ್ಯಾಯಗಳು

ಸಹಿತ ಪ್ರತಿಬಿಂಬಿತವಾಗುತ್ತಲಿವೆ. ಮತ್ತು ಅವರ ಆತ್ಮನು ಸಮಸ್ತ ಕರ್ಮಮಲದಿಂದ ರಹಿತನಾಗಿ ಹೋಗಿದ್ದಾನೆ. ಇಂಥ ದೇವಾಧಿದೇವ ಅಂತಿಮ ತೀರ್ಥಂಕರ ಶ್ರೀ ವರ್ಧಮಾನರಿಗೆ ನಾನು ನನ್ನ ಕಷಾಯಾದಿ ಮಲದ ಆವರಣವು ರಹಿತವಾಗಿ ಸಮ್ಯಗ್ಜ್ಞಾನದ ಪ್ರಕಾಶವು ಪ್ರಕಟವಾಗುವ ಸಲುವಾಗಿ ನಮಸ್ಕಾರ ಮಾಡುತ್ತೇನೆ.

ಈಗ ಧರ್ಮದ ಸ್ವರೂಪ ಹೇಳುವ ಪ್ರತಿಜ್ಞಾರೂಪದ ಸೂತ್ರ ಹೇಳುತ್ತಾರೆ, -

**ದೇಶಯಾಮಿ ಸಮೀಚೀನಂ ಧರ್ಮಂ ಕರ್ಮನಿಬರ್ಹಣಮ್ ।**
**ಸಂಸಾರದುಃಖತಃ ಸತ್ವಾನ್ ಯೋ ಧರತ್ಯುತ್ತಮೇ ಸುಖೇ ॥೨॥**

**ಅರ್ಥ :-** ನಾನು (ಸ್ವಾಮಿ ಸಮಂತಭದ್ರಾಚಾರ್ಯದೇವನು) ಈ ಗ್ರಂಥದಲ್ಲಿ ಧರ್ಮದ ಉಪದೇಶ ಕೊಡಲು ಹೊರಟ್ಟಿದ್ದೇನೆ. ಅದು (ಧರ್ಮವು) ಪ್ರಾಣಿಗಳನ್ನು ಪಂಚಪರಾವರ್ತನರೂಪವಾದ ಸಂಸಾರದ ದುಃಖಗಳಿಂದ ಹೊರ ತೆಗೆದು ಸ್ವರ್ಗದ ಮತ್ತು ಮೋಕ್ಷದ ಬಾಧೆಯಿಲ್ಲದ ಉತ್ತಮ ಸುಖಗಳನ್ನು ಪ್ರಾಪ್ತ ಮಾಡಿಕೊಡುತ್ತದೆ. ಮತ್ತು ಅದು ಸಮೀಚೀನ ಎಂದರೆ ಅದರಲ್ಲಿ ವಾದಿ-ಪ್ರತಿವಾದಿಗಳಿಂದ ಹಾಗೂ ಪ್ರತ್ಯಕ್ಷ - ಅನುಮಾನಾದಿಗಳಿಂದ ಬಾಧೆ ಬಾರದಂಥ ಮತ್ತು ಆ ಕರ್ಮಬಂಧನವನ್ನು ನಷ್ಟ ಮಾಡುವಂಥ ಧರ್ಮವನ್ನು ಹೇಳುವೆನು.

**ಭಾವಾರ್ಥ :-** ಈ ಜಗತ್ತಿನಲ್ಲಿ ಧರ್ಮವೆಂಬ ಹೆಸರನ್ನಂತೂ ಎಲ್ಲರೂ ಹೇಳುತ್ತಾರೆ. ಆದರೆ ಧರ್ಮ ಶಬ್ದದ ಅರ್ಥವು ಏನಿದೆಯೆಂದರೆ ಯಾವುದು ನರಕ, ತಿರ್ಯಂಚ ಮೊದಲಾದ ಗತಿಗಳಲ್ಲಿ ಪರಿಭ್ರಮಣರೂಪವಾದ ದುಃಖಗಳಿಂದ ಆತ್ಮನನ್ನು ಬಿಡಿಸಿ, ಉತ್ತಮ, ಅವಿನಾಶಿ, ಅತೀಂದ್ರಿಯವಾದ ಮೋಕ್ಷ ಸುಖದಲ್ಲಿ ಇರಿಸುವುದು ಅದು ಧರ್ಮವಿದೆ. ಇಂಥ ಧರ್ಮವು ಬೆಲೆಕೊಟ್ಟು ಕೊಂಡುಕೊಳ್ಳಲು ಬರುವಂತಿಲ್ಲ, ಹಣ ಖರ್ಚು ಮಾಡಿ ದಾನ-ಸನ್ಮಾನಾದಿಗಳಿಂದ ಗ್ರಹಣ ಮಾಡುವಂತಿಲ್ಲ, ಯಾರಾದರೂ ಕೊಡುವುದರಿಂದ ದೊರಕುವುದಿಲ್ಲ, ಅದನ್ನು ಸೇವೆ, ಉಪಾಸನೆಯ ಮೂಲಕ ಪ್ರಯತ್ನ ಮಾಡಿ ಪಡೆದುಕೊಳ್ಳಬಹುದಾಗಿದೆ, ಅದನ್ನು ಮಂದಿರ, ಪರ್ವತ, ಜಲ, ಅಗ್ನಿ, ದೇವಮೂರ್ತಿ, ತೀರ್ಥಕ್ಷೇತ್ರಾದಿಗಳಲ್ಲಿ ಇಡಲಾಗಿಲ್ಲ, ಅಲ್ಲಿ ಹೋಗಿ ತೆಗೆದುಕೊಂಡು ಬರಬೇಕೆಂದರೆ, ಅದು ಉಪವಾಸ, ವ್ರತ, ಕಾಯಕ್ಲೇಶ ಮೊದಲಾದ ತಪಸ್ಸಿನಿಂದಲೂ ದೊರಕುವುದಿಲ್ಲ ಮತ್ತು ಶರೀರ ಮೊದಲಾದುವನ್ನು ಕೃಶ ಮಾಡುವುದರಿಂದಲೂ ದೊರಕುವುದಿಲ್ಲ. ದೇವಾಧಿದೇವನ ಮಂದಿರದಲ್ಲಿ ಉಪಕರಣಗಳ ದಾನ, ಮಂಡಲಪೂಜೆ ಮೊದಲಾದುವನ್ನು ಮಾಡಿ, ಮನೆ ಬಿಟ್ಟು ವನ, ಸ್ಮಶಾನಾದಿಗಳಲ್ಲಿ ನಿವಾಸ ಮಾಡುವುದರಿಂದ ಹಾಗೂ ಪರಮೇಶ್ವರರ ನಾಮದ ಜಪ ಮಾಡುವುದರಿಂದಲೂ ಧರ್ಮವು ದೊರಕುವುದಿಲ್ಲ.

**ಧರ್ಮವಂತೂ ಆತ್ಮನ ಸ್ವಭಾವವಿದೆ. ಪರ-ದ್ರವ್ಯಗಳಲ್ಲಿನ ಅಹಂಬುದ್ಧಿಯನ್ನು ಬಿಟ್ಟು ಕೊಟ್ಟು ತನ್ನ ಜ್ಞಾತಾದೃಷ್ಟಾರೂಪ ಸ್ವಭಾವದ ಶ್ರದ್ಧೆ, ಅನುಭವ ಹಾಗೂ ಜ್ಞಾಯಕ ಸ್ವಭಾವದಲ್ಲಿಯೇ ಪ್ರವರ್ತನ ರೂಪದ ಯಾವ ಆಚರಣವಿದೆ ಅದು ಧರ್ಮವಿದೆ.** ಯಾವಾಗ ಉತ್ತಮ ಕ್ಷಮೆ ಮೊದಲಾದ ದಶಲಕ್ಷಣರೂಪವಾಗಿ ತನ್ನ ಆತ್ಮನ ಪರಿಣಮನವಾಗುವುದು ಮತ್ತು ರತ್ನತ್ರಯರೂಪ ಹಾಗೂ ಜೀವಗಳ ದಯಾರೂಪವಾಗಿ ತನ್ನ ಆತ್ಮನ ಪರಿಣತಿಯಾಗುವುದು ಆಗ ತನ್ನ ಆತ್ಮನು ತಾನೇ ಧರ್ಮರೂಪನಾಗಿ ಹೋಗುವನು. ಪರದ್ರವ್ಯ, ಕ್ಷೇತ್ರ, ಕಾಲಾದಿಗಳಂತೂ ನಿಮಿತ್ತಮಾತ್ರವಿವೆ. ಯಾವಾಗ ಈ ಆತ್ಮನು ರಾಗಾದಿರೂಪದ ಪರಿಣತಿಯನ್ನು ಬಿಟ್ಟುಕೊಟ್ಟು ವೀತರಾಗರೂಪನಾಗಿ ಕಂಡು ಬರುತ್ತಾನೆ ಆಗಲೇ ಮಂದಿರ, ಬಿಂಬ, ತೀರ್ಥ, ದಾನ, ಜಪ, ತಪ ಮೊದಲಾದುವೆಲ್ಲವು ಧರ್ಮರೂಪವಿವೆ. ಮತ್ತು ಒಂದು ವೇಳೆ ತನ್ನ ಆತ್ಮನು ಉತ್ತಮ ಕ್ಷಮಾದಿರೂಪ, ವೀತರಾಗರೂಪ, ಸಮ್ಯಗ್ಜ್ಞಾನರೂಪನಾಗದಿದ್ದರೆ ಬಾಹ್ಯದಲ್ಲಿ ಎಲ್ಲಿಯೂ ಧರ್ಮವಾಗುವುದಿಲ್ಲ **ಒಂದು ವೇಳೆ ಶುಭರಾಗವಾದರೆ ಪುಣ್ಯ ಬಂಧವಾಗುವುದು; ಮತ್ತು ಒಂದು ವೇಳೆ ಅಶುಭ ರಾಗ, ದ್ವೇಷ, ಮೋಹಗಳಾದರೆ ಪಾಪಬಂಧವಾಗುವುದು.** ಎಲ್ಲಿ ಶುದ್ಧ ಶ್ರದ್ಧೆ - ಜ್ಞಾನ - ಆಚರಣ ಸ್ವರೂಪದ ಧರ್ಮವಿದೆ ಅಲ್ಲಿ ಬಂಧದ ಅಭಾವವಿದೆ. ಬಂಧದ ಅಭಾವವಾದ ನಂತರವೇ ಉತ್ತಮ ಸುಖವಾಗುತ್ತದೆ.

ಇಂಥ ಉತ್ತಮ ಸುಖದ ಕಾರಣವಾದ ಯಾವ ಆತ್ಮನ ಸ್ವಭಾವರೂಪದ ಧರ್ಮವಿದೆ ಅದನ್ನು ಪ್ರಕಟ ಮಾಡುವ ಸಲುವಾಗಿ ಈಗ ಸೂತ್ರ ಹೇಳುತ್ತಾರೆ, -

**ಸದೃಷ್ಟಿಜ್ಞಾನವೃತ್ತಾನಿ ಧರ್ಮಂ ಧರ್ಮೇಶ್ವರಾಃ ವಿದುಃ ।**
**ಯದೀಯಪ್ರತ್ಯನೀಕಾನಿ ಭವಂತಿ ಭವಪದ್ಧತಿಃ ॥೩॥**

**ಅರ್ಥ ः-** ಧರ್ಮದ ಈಶ್ವರರಾದ ಭಗವಾನ ತೀರ್ಥಂಕರ ಪರಮದೇವರು ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ ಈ ಮೂರನ್ನು ಧರ್ಮವೆಂದು ಹೇಳುತ್ತಾರೆ. ಮತ್ತು ಈ ಮೂರರಿಂದ ಪ್ರತಿಕೂಲವಾದ ಯಾವ ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರಗಳಿವೆ ಅವುಗಳಿಂದ ಸಂಸಾರ ಪರಿಭ್ರಮಣದ ಪರಿಪಾಟಿಯಾಗುತ್ತದೆ.

**ಭಾವಾರ್ಥ ः-** ಯಾವುದು ತನ್ನ ಮತ್ತು ಅನ್ಯದ್ರವ್ಯಗಳ ಸತ್ಯಾರ್ಥ ಶ್ರದ್ಧೆ, ಜ್ಞಾನ, ಆಚರಣವಿದೆ ಅದಂತೂ ಸಂಸಾರ ಪರಿಭ್ರಮಣದಿಂದ ಬಿಡಿಸಿ ಉತ್ತಮ ಸುಖದಲ್ಲಿ ಧಾರಣ ಮಾಡುವಂಥ ಧರ್ಮವಿದೆ. ಮತ್ತು ತನ್ನ ಹಾಗೂ ಅನ್ಯದ್ರವ್ಯಗಳ ಅಸತ್ಯಾರ್ಥ ಶ್ರದ್ಧೆ, ಜ್ಞಾನ, ಆಚರಣವಿದೆ ಅದು ಸಂಸಾರದ ಘೋರ ಅನಂತ ದುಃಖದಲ್ಲಿ ಮುಳುಗಿಸುವಂಥದ್ದಿದೆಯೆಂದು ವೀತರಾಗ ಭಗವಂತರು ಹೇಳುತ್ತಾರೆ, ನಾವು ನಮ್ಮ ಅಭಿರುಚಿಯಿಂದ ಕಲ್ಪನೆ ಮಾಡಿ ಹೇಳುತ್ತಿಲ್ಲ.

ಈಗ ಮೊದಲೇ ಸಮ್ಯಗ್ದರ್ಶನದ ಲಕ್ಷಣ ಹೇಳುವ ಸಲುವಾಗಿ ಸೂತ್ರ ಹೇಳುತ್ತಾರೆ, -

**ಶ್ರದ್ಧಾನಂ ಪರಮಾರ್ಥಾನಾಮಾಪ್ತಾಗಮ ತಪೋಭೃತಾಮ್ ।**
**ತ್ರಿಮೂಢಾಪೋಢಮಷ್ಟಾಂಗಂ ಸಮ್ಯಗ್ದರ್ಶನಮಸ್ಮಯಮ್ ॥೪॥**

**ಅರ್ಥ ः-** ಯಾರು ಸತ್ಯಾರ್ಥ ಆಪ್ತ, ಆಗಮ ಮತ್ತು ತಪೋಭೃತರಿದ್ದಾರೆ ಅವರ ಶ್ರದ್ಧೆಯಿಂದ ಸಮ್ಯಗ್ದರ್ಶನವಾಗುತ್ತದೆ. ಆಪ್ತರಂತೂ ಸಮಸ್ತ ಪದಾರ್ಥಗಳನ್ನು ತಿಳಿದುಕೊಂಡು ಅವುಗಳ ಸತ್ಯಾರ್ಥ ಸ್ವರೂಪವನ್ನು ಪ್ರಕಟಮಾಡುವಂಥವರಿದ್ದಾರೆ ; ಆಗಮವು ಆಪ್ತರಿಂದ ರಚಿತವಾದ ರಚನಾರೂಪದ ಶಾಸ್ತ್ರವಿದೆ; ಆಪ್ತರಿಂದ ಪ್ರರೂಪಿತವಾದ ಶಾಸ್ತ್ರದ ಅನುಸಾರ ಆಚರಣೆಯನ್ನು ಆಚರಿಸುವಂಥವರು ತಪೋಭೃತ ಎಂದರೆ ಗುರುಗಳಿದ್ದಾರೆ.

ಇಲ್ಲಿ **ಸತ್ಯ** ಆಪ್ತ, **ಸತ್ಯ** ಶಾಸ್ತ್ರ ಮತ್ತು **ಸತ್ಯ** ಗುರುವಿನ ಶ್ರದ್ಧೆಯನ್ನು ಸಮ್ಯಗ್ದರ್ಶನವೆಂದು ಹೇಳಿದೆ ; ಆದರೆ ಅಸತ್ಯ ಆಪ್ತ, ಅಸತ್ಯ ಆಗಮ ಮತ್ತು ಅಸತ್ಯ ಗುರುವಿನ ಶ್ರದ್ಧೆಯು ಅದು ಸಮ್ಯಗ್ದರ್ಶನವಿಲ್ಲ. ಆ ಸಮ್ಯಗ್ದರ್ಶನವು ಮೂರು ಮೂಢತೆಗಳಿಂದ ರಹಿತ, ತನ್ನ ಎಂಟು ಅಂಗಗಳಿಂದ ಯುಕ್ತ ಮತ್ತು ಎಂಟು ಮದಗಳಿಂದ ರಹಿತವಿರುತ್ತದೆ.

**ಭಾವಾರ್ಥ ः-** ಮೂರು ಮೂಢತೆಯಿಲ್ಲದ, ನಿಃಶಂಕಿತ ಮೊದಲಾದ ಎಂಟು ಅಂಗಗಳಿಂದ ಯುಕ್ತ ಮತ್ತು ಎಂಟು ಮದರಹಿತವಾಗಿ ಸತ್ಯಾರ್ಥ ಆಪ್ತ, ಆಗಮ ಮತ್ತು ಗುರುಗಳ ಶ್ರದ್ಧೆ ಮಾಡುವುದು ಅದು ಸಮ್ಯಗ್ದರ್ಶನವಿದೆ.

**ಪ್ರಶ್ನೆ ः-** ಆಗಮದಲ್ಲಂತೂ ಸಪ್ತ ತತ್ತ್ವ - ನವಪದಾರ್ಥಗಳ ಶ್ರದ್ಧೆಯನ್ನು ಸಮ್ಯಗ್ದರ್ಶನವೆಂದು ಹೇಳಿದೆ ; ಇಲ್ಲಿ ಅದನ್ನೇಕೆ ಹೇಳಲಿಲ್ಲ ?

**ಉತ್ತರ ः-** ನಿರ್ದೋಷ ಬಾಧಾರಹಿತವಾದ ಆಗಮದ ಉಪದೇಶವಿಲ್ಲದೆ ಸಪ್ತ ತತ್ತ್ವಗಳ ಶ್ರದ್ಧೆಯು ಹೇಗಾಗುವುದು ? ನಿರ್ದೋಷ ಆಪ್ತರಿಲ್ಲದೆ ಸತ್ಯಾರ್ಥ ಆಗಮವು ಹೇಗೆ ಪ್ರಕಟವಾಗುವುದು ? ಆದ್ದರಿಂದ ತತ್ತ್ವಗಳ ಶ್ರದ್ಧೆಯ ಮೂಲಕಾರಣರೂ ಸತ್ಯಾರ್ಥ ಆಪ್ತರೇ ಇದ್ದಾರೆ.

ಈಗ ಸತ್ಯಾರ್ಥ ಆಪ್ತರ ಲಕ್ಷಣವನ್ನು ಪ್ರಕಟಪಡಿಸುವಂಥ ಸೂತ್ರ ಹೇಳುತ್ತಾರೆ, -

**ಆಪ್ತೇನೋಚ್ಛಿನ್ನ ದೋಷೇಣ ಸರ್ವಜ್ಞೇನಾಗಮೇಶಿನಾ ।**
**ಭವಿತವ್ಯಂ ನಿಯೋಗೇನ ನಾನ್ಯಥಾ ಹ್ಯಾಪ್ತತಾ ಭವೇತ್ ॥೫॥**

**ಅರ್ಥ :-** ಧರ್ಮದ ಮೂಲರು ಭಗವಾನ ಆಪ್ತರಿದ್ದಾರೆ. ಅವರಿಗೆ ನಿರ್ದೋಷತೆ, ಸರ್ವಜ್ಞತೆ, ಪರಮ ಹಿತೋಪದೇಶಕತೆಯೆಂದು ಮೂರು ಗುಣಗಳಿವೆ. ಅವರ ಕ್ಷುಧೆ, ತೃಷಾದಿಯ ದೋಷಗಳು ನಷ್ಟವಾಗಿ ಹೋಗಿರುವುದರಿಂದ ನಿರ್ದೋಷರಿದ್ದಾರೆ ; ತ್ರಿಕಾಲವರ್ತಿ ಸಮಸ್ತ ಗುಣ-ಪರ್ಯಾಯಗಳೊಡನೆ ಸಮಸ್ತ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲದ ಅನಂತ ಪರ್ಯಾಯಗಳನ್ನು ಯುಗಪತ್ ಪ್ರತ್ಯಕ್ಷ ತಿಳಿಯುತ್ತಿರುವುದರಿಂದ ಸರ್ವಜ್ಞರಿದ್ದಾರೆ ; ಮತ್ತು ಪರಮ ಹಿತೋಪದೇಶಕತೆಯ ಮೂಲಕ ದ್ವಾದಶಾಂಗರೂಪ ಆಗಮದ ಮೂಲಕರ್ತೃಗಳಿರುವುದರಿಂದ ಆಗಮದ ಹಿತೋಪದೇಶಕರಾದ ಸ್ವಾಮಿಯಿದ್ದಾರೆ. ಈ ಪ್ರಕಾರ ಈ ಮೂರು ಗುಣಗಳನ್ನು ಹೇಳಿದ್ದಾರೆ. ಈ ಗುಣಸಹಿತವಿರುವವರು ನಿಶ್ಚಯದಿಂದ ಆಪ್ತರೇ ಇರುತ್ತಾರೆ, ಅವರನ್ನೇ ದೇವರೆಂದು ಹೇಳುತ್ತಾರೆ.

ಅವು ಮೂರು ಗುಣಗಳಿಲ್ಲದೆ ಅನ್ಯ ಪ್ರಕಾರದಿಂದ ಆಪ್ತತನವು ಇರುವುದಿಲ್ಲ.

**ಭಾವಾರ್ಥ :- ಯಾರು ಸ್ವಯಂ ದೋಷಯುಕ್ತರಿದ್ದಾರೆ ಅವರು ಅನ್ಯ ಜೀವಗಳನ್ನು ನಿರಾಕುಲ, ಸುಖಿ, ನಿರ್ದೋಷರನ್ನಾಗಿ ಹೇಗೆ ಮಾಡುವರು ?** ಯಾವನು ಕ್ಷುಧೆಯಬಾಧೆ, ತೃಷೆಯಬಾಧೆ, ಕಾಮ-ಕ್ರೋಧಾದಿಗಳ ದೋಷಗಳಿಂದ ಯುಕ್ತನಿದ್ದಾನೆ ಅವನಂತೂ ಮಹಾದುಃಖಿಯಿದ್ದಾನೆ, ಅವನಿಗೆ ಈಶ್ವರತೆಯು ಹೇಗಿರುವುದು? ಯಾವನು ಭಗವಂತನಿದ್ದೂ ನಿರಂತರ ಶಸ್ತ್ರಾದಿಗಳ ಗ್ರಹಣ ಮಾಡಿರುವನು ಅವನಿಗೆ ಇನ್ನೂ ಶತ್ರುಗಳು ವಿದ್ಯಮಾನರಿದ್ದಾರೆ. ಅವನು ನಿರಾಕುಲ ಹೇಗಿರುವನು ? ಯಾವನಿಗೆ ನಿರಂತರ ದ್ವೇಷ, ಚಿಂತೆ, ಖೇದಾದಿಗಳಿವೆ ಅವನು ಸುಖಿಯಿರುವುದಿಲ್ಲ. ಯಾವನು ಪ್ರೇಮಿ, ಕಾಮುಕನಿದ್ದಾನೆ ಅವನಂತೂ ನಿರಂತರ ಅನ್ಯರ ವಶನಿರುತ್ತಾನೆ, ಅವನಿಗೆ ಸ್ವಾಧೀನತೆಯಿರುವುದಿಲ್ಲ. **ಪರಾಧೀನತೆಯಿಂದ ನಿಜವಾದ ವಕ್ತಾತನವು ಸಂಭವಿಸುವುದಿಲ್ಲ** ಅವನು ಮದದ ವಶೀಭೂತನಿದ್ದಾನೆ ನಿಂದೆಯ ವಶೀಭೂತನಿದ್ದಾನೆ ಅವನಿಗೆ ನಿಜವಾದ ಜ್ಞಾತಾತನವು ಇರುವ ಸಾಧ್ಯತೆಯಿಲ್ಲ. **ಜನ್ಮ-ಮರಣದಿಂದ ಯುಕ್ತನಿರುವವನಿಗೆ ಸಂಸಾರ ಪರಿಭ್ರಮಣದ ಅಭಾವವಾಗಿಲ್ಲ, ಅವನು ಸಂಸಾರಿಯೇ ಇದ್ದಾನೆ ; ಅವನಿಗೂ ನಿಜವಾದ ಆಪ್ತತನವು ಸಂಭವಿಸುವುದಿಲ್ಲ.** ಆದುದರಿಂದ ನಿರ್ದೋಷನಿರುವವನಿಗೇ ಸತ್ಯಾರ್ಥತೆಯ ಮೂಲಕ ಆಪ್ತತನವು ಸಂಭವಿಸುತ್ತದೆ. ರಾಗಿ-ದ್ವೇಷಿಯಂತೂ ತನ್ನ ಹಾಗೂ ಅನ್ಯರ ರಾಗ-ದ್ವೇಷಗಳನ್ನು ಪುಷ್ಟ ಮಾಡುವರೂಪದ ವಚನಗಳನ್ನೇ ಹೇಳುತ್ತಾನೆ. **ಯಥಾರ್ಥ ವಕ್ತಾತನವಂತೂ ವೀತರಾಗಿಗೇ ಸಂಭವಿಸುತ್ತದೆ.**

ಒಂದು ವೇಳೆ ಸರ್ವಜ್ಞರಿಲ್ಲದಿರುತ್ತಿದ್ದರೆ ಇಂದ್ರಿಯಗಳ ಆಧೀನವಾದ ಜ್ಞಾನವುಳ್ಳವನು ಮೊದಲು ಆಗಿ ಹೋದ ಆ ರಾಮ, ರಾವಣ ಮೊದಲಾದವರನ್ನು ಹೇಗೆ ತಿಳಿಯುವನು ? ದೂರವರ್ತಿಯಾದ ಆ ಮೇರುಪರ್ವತ, ಸ್ವರ್ಗ, ನರಕ, ಪರಲೋಕ ಮೊದಲಾದುವನ್ನು ಹೇಗೆ ತಿಳಿಯುವನು ? ಮತ್ತು ಸೂಕ್ಷ್ಮ ಪರಮಾಣು ಇತ್ಯಾದಿಗಳನ್ನು ಹೇಗೆ ತಿಳಿಯುವನು ?

ಇಂದ್ರಿಯ ಜನ್ಯ ಜ್ಞಾನವಂತೂ ಸ್ಥೂಲ, ವಿದ್ಯಮಾನ, ತನ್ನ ಸನ್ಮುಖವಿರುವ ಪದಾರ್ಥಗಳನ್ನು ಸ್ಪಷ್ಟವಾಗಿ ತಿಳಿಯುವುದಿಲ್ಲ. ಈ ಜಗತ್ತಿನಲ್ಲಿ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ ಮೊದಲಾಗಿ ಅನಂತ ಪದಾರ್ಥಗಳಿವೆ ಮತ್ತು ಒಂದೇ ಸಮಯದಲ್ಲಿ ಎಲ್ಲವೂ ತಮ್ಮ ಭಿನ್ನ-ಭಿನ್ನ ಪರಿಣತಿರೂಪವಾಗಿ ಪರಿಣಮಿಸುತ್ತವೆ. ಆದುದರಿಂದ ಏಕ ಸಮಯವರ್ತಿಯಾದ ಅನಂತ ಪದಾರ್ಥಗಳ ಅನಂತ ಪರ್ಯಾಯಗಳು ಭಿನ್ನ-ಭಿನ್ನವೇ ಇರುತ್ತವೆ. **ಇಂದ್ರಿಯಜನ್ಯ ಜ್ಞಾನವಂತೂ ಕ್ರಮವರ್ತಿ ಸ್ಥೂಲ ಪುದ್ಗಲದ ಅನೇಕ ಸಮಯಗಳಲ್ಲಾದ ಒಂದು ಸ್ಥೂಲ ಪರ್ಯಾಯವನ್ನು ತಿಳಿಯುವಂಥದ್ದಿದೆ.** ಅನೇಕ ಪದಾರ್ಥಗಳ ಅನೇಕ ಪರ್ಯಾಯಗಳು ಪ್ರತಿ ಸಮಯ ಆಗುತ್ತಲಿವೆ. ಯಾವುದು ಒಂದು

ಸಮಯವರ್ತಿಯಾದ ಸಮಸ್ತ ಪರ್ಯಾಯಗಳನ್ನೇ ತಿಳಿಯುವಲ್ಲಿ ಸಮರ್ಥವಿಲ್ಲವೆಂದರೆ ಅದು ಕಳೆದುಹೋದ ಅನಂತ ಕಾಲ ಮತ್ತು ಬರಲಿರುವ ಅನಂತಕಾಲದ ಅನಂತಾನಂತ ಪರ್ಯಾಯಗಳನ್ನು ಆ ಇಂದ್ರಿಯಜನ್ಯ ಜ್ಞಾನವು ಹೇಗೆ ತಿಳಿದುಕೊಳ್ಳುವ ಸಾಧ್ಯತೆಯಿದೆ ? ಆದುದರಿಂದ ಸಕಲ ತ್ರಿಕಾಲವರ್ತಿ ಸಮಸ್ತ ದ್ರವ್ಯಗಳ ಸಮಸ್ತ ಪರ್ಯಾಯಗಳನ್ನು ಯುಗಪತ್ ತಿಳಿಯುವಲ್ಲಿ ಸಮರ್ಥರಿರುವಂಥ ಸರ್ವಜ್ಞರಿಗೇನೇ ಆಪ್ತತನವು ಸಂಭವಿಸುತ್ತದೆ. ಮತ್ತು ಪರಮ ಹಿತೋಪದೇಶಕರಿದ್ದವರೇ ಆಪ್ತರಿದ್ದಾರೆ. ಈ ಮೂರು ಗುಣಗಳು ಯಾರಲ್ಲಿವೆ ಅವರೇ ದೇವರಿದ್ದಾರೆ.

ಅರಹಂತದೇವರು ಮನುಷ್ಯ ಪರ್ಯಾಯವನ್ನು ಧಾರಣ ಮಾಡಿದ ಮನುಷ್ಯರಿದ್ದರೂ ಕೂಡ ಜ್ಞಾನಾವರಣ ಮೊದಲಾದ ನಾಲ್ಕು ಘಾತಿಕರ್ಮಗಳ ನಾಶದಿಂದ ಪ್ರಕಟವಾದ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತ ಸುಖರೂಪವಾದ ನಿಜಸ್ವಭಾವದಲ್ಲಿ ರಮಿಸುವುದರಿಂದ, ಕರ್ಮಗಳನ್ನು ಜಯಿಸುವುದರಿಂದ, ಶರೀರದ ಅತುಲ ಕಾಂತಿಯು ಪ್ರಕಟವಾಗುವುದರಿಂದ, ಅನಂತ ಆನಂದ ಮತ್ತು ಸುಖದಲ್ಲಿ ಮಗ್ನವಾಗುವುದರಿಂದ ಮತ್ತು ಇಂದ್ರ ಮೊದಲಾದ ಸಮಸ್ತ ದೇವಗಳಿಂದ ಸ್ತುತಿಯೋಗ್ಯರಿರುವುದರಿಂದ, ಅನಂತಜ್ಞಾನ, ದರ್ಶನಸ್ವಭಾವದ ಮೂಲಕ ಸಮಸ್ತ ಲೋಕಾ ಲೋಕದಲ್ಲಿ ವ್ಯಾಪ್ತರಿರುವುದರಿಂದ, ಅನಂತ ಶಕ್ತಿಯು ಪ್ರಕಟವಾಗುವುದರಿಂದ ಅನ್ಯ ದೇವ ಹಾಗೂ ಮನುಷ್ಯರಿಂದ ಭಿನ್ನ ಅಸಾಧಾರಣ ಆತ್ಮನ ರೂಪದಿಂದ ಶೋಭಾಯಮಾನರಿದ್ದಾರೆ. ಆದ್ದರಿಂದ ಮನುಷ್ಯ ಪರ್ಯಾಯದಲ್ಲಿಯೇ ಅನಂತಜ್ಞಾನ, ದರ್ಶನ, ವೀರ್ಯ, ಸುಖ ಮೊದಲಾದ ಗುಣಗಳು ಪ್ರಕಟವಾಗುವ ಕಾರಣ ಇವರನ್ನು ದೇವಾಧಿದೇವರೆಂದು ಹೇಳುತ್ತಾರೆ.

**ಪ್ರಶ್ನೆ :-** ಆಪ್ತನ ಮೂರು ಗುಣಗಳನ್ನೇಕೆ ಹೇಳಿದಿರಿ ? ಒಂದು ನಿರ್ದೋಷವನ್ನು ಹೇಳುವುದರಿಂದ ಅದರಲ್ಲಿ ಎಲ್ಲ ಗುಣಗಳು ಬಂದು ಬಿಡುತ್ತವೆಯಲ್ಲವೇ ?

**ಉತ್ತರ :-** ನಿರ್ದೋಷತನವಂತೂ ಪುದ್ಗಲ (ಪರಮಾಣು), ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಮೊದಲಾದವುಗಳಲ್ಲಿಯೂ ಇದೆ. ಅವಕ್ಕೆ ಅಚೇತನತೆಯಿರುವುದರಿಂದ ಕ್ಷುಧೆ, ತೃಷೆ, ರಾಗ-ದ್ವೇಷಾದಿಗಳೂ ಇಲ್ಲ. ಆದ್ದರಿಂದ ನಿರ್ದೋಷತೆಯನ್ನು ಹೇಳುವುದರಿಂದ ಅವಕ್ಕೆ ಕೂಡ ಆಪ್ತತನದ ಪ್ರಸಂಗವು ಬಂದು ಬಿಡುವುದು ಆಪ್ತರು ನಿರ್ದೋಷರಂತೂ ಇರುತ್ತಾರೆ. ಸರ್ವಜ್ಞರೂ ಇರುತ್ತಾರೆ. ಒಂದು ವೇಳೆ ನಿರ್ದೋಷ ಮತ್ತು ಸರ್ವಜ್ಞವೆರಡನ್ನೇ ಆಪ್ತನ ಗುಣಗಳೆಂದು ಹೇಳಿದರೆ ಸಿದ್ಧ ಭಗವಂತನಿಗೂ ಆಪ್ತತನದ ಪ್ರಸಂಗವು ಬರುವುದು. ಆಗ ಸತ್ಯಾರ್ಥ ಉಪದೇಶದ ಅಭಾವವು ಬರುವುದು. ಅದರಿಂದ ನಿರ್ದೋಷ, ಸರ್ವಜ್ಞ ಮತ್ತು ಪರಮಹಿತೋಪದೇಶ ಈ ಮೂರು ಗುಣಗಳೊಡನೆ ದೇವಾಧಿದೇವನು ಪರಮ ಔದಾರಿಕ ಶರೀರದಲ್ಲಿ ಸ್ಥಿರವಿರುವ ಸರ್ವಜ್ಞ ವೀತರಾಗ ಅರಹಂತ ಭಗವಂತರಿಗೆ ಆಪ್ತತನವಿದೆಯೆಂದು ನಿಶ್ಚಯ ಮಾಡುವುದು ಯೋಗ್ಯವಿದೆ.

ಈಗ ಅರಹಂತದೇವರು ಯಾವ ಹದಿನೆಂಟು ದೋಷಗಳನ್ನು ನಾಶಮಾಡಿ ಆಪ್ತರಾಗಿದ್ದಾರೆ ಆ ದೋಷಗಳ ಹೆಸರು ಹೇಳುವ ಸಲುವಾಗಿ ಸೂತ್ರ ಹೇಳುತ್ತಾರೆ, -

**ಕ್ಷುತ್ಪಿಪಾಸಾಜರಾತಂಕ ಜನ್ಮಾಂತಕಭಯಸ್ಮಯಾಃ ।**
**ನ ರಾಗದ್ವೇಷಮೋಹಾಶ್ಚ ಯಸ್ಯಾಪ್ತಃ ಸ ಪ್ರಕೀರ್ತ್ಯತೇ ॥೬॥**

**ಅರ್ಥ :-** ೧) ಕ್ಷುತ್ ಎಂದರೆ ಹಸಿವೆ, ೨) ಪಿಪಾಸಾ ಎಂದರೆ ಬಾಯಾರಿಕೆ, ೩) ಜರಾ ಎಂದರೆ ವೃದ್ಧಾವಸ್ಥೆ, ೪) ಆತಂಕ ಎಂದರೆ ಶರೀರಕ್ಕೆ ಸಂಬಂಧಿಸಿದ ವ್ಯಾಧಿ, ೫) ಜನ್ಮ ಎಂದರೆ ಕರ್ಮದ ವಶದಿಂದ ಚತುರ್ಗತಿಗಳಲ್ಲಿ ಉತ್ಪತ್ತಿ, ೬) ಅಂತಕ ಎಂದರೆ ಮರಣ, ೭) ಭಯ ಎಂದರೆ ಇಹಲೋಕದ ಭಯ, ಪರಲೋಕದ ಭಯ, ಮರಣ ಭಯ, ವೇದನಾ ಭಯ, ಅರಕ್ಷಣೆಯ ಭಯ, ಅಗುಪ್ತಿಯ ಭಯ, ಆಕಸ್ಮಿಕ ಭಯವೆಂದು ಏಳು ಪ್ರಕಾರದ ಭಯಗಳಿವೆ, ೮) ಸ್ಮಯ ಎಂದರೆ

ಗರ್ವ, ೯) ರಾಗ, ೧೦) ದ್ವೇಷ, ೧೧) ಮೋಹ, ೧೨) ಚ ಶಬ್ದದಿಂದ ಚಿಂತೆ, ೧೩) ರತಿ, ೧೪) ನಿದ್ರೆ, ೧೫) ವಿಸ್ಮಯ ಎಂದರೆ ಆಶ್ಚರ್ಯ; ೧೬) ವಿಷಾದ ಎಂದರೆ ಶೋಕ ೧೭) ಸ್ವೇದ ಎಂದರೆ ಬೆವರು, ೧೮) ಖೇದ ಎಂದರೆ ಆಕುಲತೆಯೆಂದು ತಿಳಿಯುವುದು. ಇವು ೧೮ ದೋಷಗಳು ಯಾರಿಗೆ ಇರುವುದಿಲ್ಲ ಅವರನ್ನು ಆಪ್ತರೆಂದು ಹೇಳುತ್ತಾರೆ.

## ಶ್ವೇತಾಂಬರ ಮತದ ಸಮಾಲೋಚನೆ

**ಪ್ರಶ್ನೆ :-** ಎಲೈ ದಿಗಂಬರ ಧರ್ಮಧಾರಕರೇ । ಕೇವಲೀ ಭಗವಂತರಿಗೆ ಕ್ಷುಧೆ, ತೃಷೆಗಳ ಅಭಾವವಿದ್ದರೆ ಆಹಾರಾದಿಗಳಲ್ಲಿ ಪ್ರವೃತ್ತಿಯ ಅಭಾವವಾಗುವುದರಿಂದ ಕೇವಲಿಗೆ ದೇಹದ ಅಸ್ತಿತ್ವವು ಇರಬಾರದು, ಆದರೆ ಕೇವಲಿಗೆ ದೇಹದ ಅಸ್ತಿತ್ವವು ನಿಮ್ಮ ಸಲುವಾಗಿ ಸ್ವೀಕಾರವೇ ಇದೆ ; ಆದ್ದರಿಂದ ಕೇವಲಿಗೆ ಆಹಾರ ಮಾಡುವುದರ ಸಿದ್ಧಿಯಾಯಿತು. ಯಾವ ಪ್ರಕಾರ ಆಹಾರ ಮಾಡಿದಲ್ಲದೆ ತಮ್ಮ ದೇಹದ ಅಸ್ತಿತ್ವವುಳಿಯುವುದಿಲ್ಲ, ಅದೇ ಪ್ರಕಾರ ಕೇವಲಿಗೂ ಆಹಾರ ಮಾಡಿದಲ್ಲದೆ ದೇಹದ ಅಸ್ತಿತ್ವವು ಉಳಿಯುವುದಿಲ್ಲ ಮತ್ತು ಕೇವಲಿಗೆ ದೇಹದ ಅಸ್ತಿತ್ವವಿದೆಯೆಂದ ಮೇಲೆ ಅವಶ್ಯವಾಗಿ ಆಹಾರ ಮಾಡುತ್ತಲೇ ಇರಬೇಕು ?

**ಉತ್ತರ :-** ಕೇವಲಿಗೆ ಮಾತ್ರ ಆಹಾರದ ಸಿದ್ಧಿ ಮಾಡುವುದಿದೆಯೋ ಅಥವಾ ಕವಲಾಹಾರದ ಸಿದ್ಧಿ ಮಾಡುವುದಿದೆಯೋ ? ಕೇವಲ ಆಹಾರದ ಸಿದ್ಧಿ ಮಾಡುವ ಅಭಿಪ್ರಾಯವಿದ್ದರೆ ಸಯೋಗಕೇವಲೀ (೧೩ ನೇ ಗುಣಸ್ಥಾನದ) ವರೆಗೆ ಸಮಸ್ತ ಜೀವಗಳು ಆಹಾರಕವೇ ಇವೆಯೆಂದು ಪರಮಾಗಮದ ವಚನವಿದೆ. ಏಕೇಂದ್ರಿಯದಿಂದ ಹಿಡಿದು ಸಯೋಗೀವರೆಗಿನ ಸಮಸ್ತ ಜೀವಗಳು ಸಮಯ ಸಮಯಕ್ಕೆ ಸಿದ್ಧರಾಸಿಯ ಅನಂತದ ಭಾಗ ಮತ್ತು ಅಭವ್ಯರಾಸಿಯಿಂದ ಅನಂತಗುಣಿತ ಕರ್ಮ ಪರಮಾಣು ಮತ್ತು ನೋಕರ್ಮ ಪರಮಾಣುಗಳನ್ನು ನಿರಂತರ ಗ್ರಹಣ ಮಾಡುತ್ತಿರುತ್ತವೆ.

**ಪ್ರಶ್ನೆ :-** ನಾವಂತೂ ಕೇವಲಿಯ ಕವಲಾಹಾರ ಎಂದರೆ ನಾವು ಹೇಗೆ ಅನ್ನ - ಜಲಾದಿಗಳನ್ನು ತುತ್ತು-ತುತ್ತಾಗಿ ಬಾಯಲ್ಲಿಟ್ಟುಕೊಂಡು ಭಕ್ಷಣ ಮಾಡುತ್ತೇವೆ ಹಾಗೆ ಆಹಾರ ಮಾಡುವುದೆಂದು ಹೇಳುತ್ತೇವೆ. ಕವಲಾಹಾರ ಎಂದರೆ ಗ್ರಾಸರೂಪದ ಆಹಾರ, ಹೇಗೆ ನಮ್ಮ ದೇಹವು ಆಹಾರವಿಲ್ಲದೆ ಉಳಿಯುವುದಿಲ್ಲ ಹಾಗೆ ಕೇವಲಿಯ ದೇಹವೂ ಆಹಾರವಿಲ್ಲದೆ ಉಳಿಯುವುದಿಲ್ಲ.

**ಉತ್ತರ :-** ದೇವಗಳ ಶರೀರವು ಕವಲಾಹಾರವಿಲ್ಲದೆ ಸಾಗರಗಳವರೆಗೆ ಹೇಗೆ ಉಳಿಯುತ್ತದೆ ? ಸಮಸ್ತ ದೇವಗಳಿಗೆ ಕವಲಾಹಾರವೆಂದೂ ಇರುವುದಿಲ್ಲ ಮತ್ತು ದೇಹವಂತೂ ಇರುವುದರಿಂದ ನಿಮ್ಮ ತರ್ಕವು ವ್ಯಭಿಚಾರಿಯಾಯಿತು.

ದೇವಗಳ ದೇಹದ ಸ್ಥಿತಿಯಂತೂ ಮಾನಸಿಕ ಆಹಾರದಿಂದ ಇರುತ್ತದೆ. ಮನಸ್ಸಿನಲ್ಲಿ ಆಹಾರದ ಇಚ್ಛೆಯು ಉತ್ಪನ್ನವಾಗುತ್ತಿರುವಂತೆಯೇ ಕಂಠದೊಳಗಿಂದ ಅಮೃತವು ಸ್ರವಿಸುತ್ತದೆ. ಅದರಿಂದ ತೃಪ್ತಿಯಾಗಿ ಬಿಡುತ್ತದೆ. ಇದು ಮಾನಸಿಕ ಆಹಾರವಿದೆ. ಯಾವ ಪ್ರಕಾರ ಭವನವಾಸಿ, ವ್ಯಂತರ, ಜ್ಯೋತಿಷಿ, ಕಲ್ಪವಾಸಿ - ಈ ಚತುರ್ನಿಕಾಯದ ದೇವಗಳಿಗೆ ಕವಲಾಹಾರವಿಲ್ಲದೆ ಮಾನಸಿಕ ಆಹಾರದಿಂದಲೇ ಅವರ ದೇಹದ ಸ್ಥಿತಿಯು ಉಳಿಯುತ್ತದೆ. ಅದೇ ಪ್ರಕಾರ ಕೇವಲಿ ಭಗವಂತರಿಗೂ ಕರ್ಮನೋಕರ್ಮ ವರ್ಗಣಾದ ಆಹಾರದಿಂದಲೇ ದೇಹದ ಸ್ಥಿತಿಯು ಉಳಿಯುತ್ತದೆ.

**ಪ್ರಶ್ನೆ :-** ಕೇವಲಿಗಂತೂ ಮನುಷ್ಯಗತಿಯ ಶರೀರದಲ್ಲಿ ಅಸ್ತಿತ್ವವಿರುವುದರಿಂದ ನಮ್ಮ ದೇಹದ ಸಮಾನ ಕವಲಾಹಾರದಿಂದಲೇ ಅವರ ದೇಹದ ಇರುವಿಕೆಯನ್ನು ಮನ್ನಿಸುತ್ತೇವೆ.

**ಉತ್ತರ :-** ಹಾಗಾದರೆ ನಮ್ಮ ಶರೀರದ ಹಾಗೆಯೇ ಬೆವರು, ಉಪಸರ್ಗ, ಪರೀಷಹ, ಖೇದ ಮೊದಲಾದುವನ್ನು ಕೇವಲಿಗಳಿಗೆ ಮನ್ನಿಸುತ್ತಿರಬೇಕು.

**ಪ್ರಶ್ನೆ :-** ಕೇವಲಿಗೆ ಅತಿಶಯದ ಪ್ರಭಾವದಿಂದ ಬೆವರು, ಉಪಸರ್ಗ, ಪರೀಷಹಾದಿಗಳು ಆಗುವುದಿಲ್ಲ.

**ಉತ್ತರ :–** ಹಾಗಾದರೆ ಕೇವಲಿಗೆ ಭೋಜನದ ಅಭಾವರೂಪವಾದ ಅತಿಶಯವನ್ನೂ ಅದೇಕೆ ಮನ್ನಿಸುವುದಿಲ್ಲ.

**ಪ್ರಶ್ನೆ :–** ಹೇಗೆ ನಮ್ಮ ಶರೀರದಲ್ಲಿ ಬೆವರು ಮೊದಲಾದುವಾಗುತ್ತಿರುವುದು ಕಂಡು ಬರುತ್ತವೆ ಅದೇ ಪ್ರಕಾರ ಕೇವಲಿಗೂ ಮನ್ನಿಸುವುದು.

**ಉತ್ತರ :–** ಹಾಗಾದರೆ ನಮಗೆ ಹೇಗೆ ಇಂದ್ರಿಯಜನ್ಯ ಜ್ಞಾನವಿದೆ ಹಾಗೆಯೇ ಕೇವಲಿಗೂ ಇಂದ್ರಿಯಜನ್ಯ ಜ್ಞಾನವನ್ನು ಮನ್ನಿಸಿರಿ. ನೋಡುವುದು, ಕೇಳುವುದು, ಸ್ವಾದ ತೆಗೆದುಕೊಳ್ಳುವುದು ಮೊದಲಾದುವು ಕೇವಲಿಗೆ ಇಂದ್ರಿಯಗಳ ಮೂಲಕವಾಗುವುದೆಂದೇ ಸಿದ್ಧವಾಗುವುದು. ಆಗ ಕೇವಲಜ್ಞಾನ ಸ್ವರೂಪದ ಅತೀಂದ್ರಿಯ ಜ್ಞಾನಕ್ಕೆ ತಿಲಾಂಜಲಿ ಕೊಟ್ಟಾಯಿತು ಅದರಿಂದ ಸರ್ವಜ್ಞತೆಯ ಅಭಾವದ ಪ್ರಸಂಗವು ಬಂದು ಬಿಡುವುದು.

**ಪ್ರಶ್ನೆ :–** ಜ್ಞಾನದ ಅಪೇಕ್ಷೆಯಿಂದ ಎಲ್ಲ ಮನುಷ್ಯ ಹಾಗೂ ಕೇವಲಿಗಳು ಸಮಾನವಿದ್ದರೂ ಕೇವಲಿಗೆ ಅತೀಂದ್ರಿಯ ಜ್ಞಾನವೇ ಇದೆ.

**ಉತ್ತರ :–** ದೇಹದಲ್ಲಿ ಸ್ಥಿತಿಯು ಸಮಾನವಾಗಿದ್ದರೂ ಕವಲಾಹಾರದ ಅಭಾವವನ್ನೇಕೆ ಮನ್ನಿಸುವುದಿಲ್ಲ.

**ಪ್ರಶ್ನೆ :–** ಕೇವಲಿಗೆ ವೇದನೀಯಕರ್ಮದ ಸದ್ಭಾವವಿರುವುದರಿಂದ ಭೋಜನದ ಇಚ್ಛೆಯು ಉತ್ಪನ್ನವಾಗುತ್ತಿರುತ್ತದೆ, ಆದ್ದರಿಂದ ಕವಲಾಹಾರದಲ್ಲಿ ಪ್ರವೃತ್ತಿಯಾಗುತ್ತದೆ.

**ಉತ್ತರ :–** ಈ ಪ್ರಕಾರ ಹೇಳುವುದು ಉಚಿತವಿಲ್ಲ, ಏಕೆಂದರೆ ಮೋಹನೀಯ ಕರ್ಮದ ಸಹಾಯದೊಡನೆಯೇ ವೇದನೀಯಕರ್ಮವು ಭೋಜನಮಾಡುವ ಇಚ್ಛೆಯನ್ನುತ್ಪನ್ನ ಮಾಡಿಸುವಲ್ಲಿ ಸಮರ್ಥವಿದೆ. ಭೋಜನದ ಇಚ್ಛೆಯು ಅದು ಬುಭುಕ್ಷೆಯಿದೆ. **ಇಚ್ಛೆಯು ಅದು ಮೋಹನೀಯ ಕರ್ಮದ ಕಾರ್ಯವಿದೆ.** ಮೋಹನೀಯ ಕರ್ಮವು ನಷ್ಟವಾಗಿ ಹೋಗಿರುವಂಥ ಕೇವಲೀ ಭಗವಂತರಿಗೆ ಭೋಜನದ ಇಚ್ಛೆಯು ಯಾವ ಕಾರಣದಿಂದ ಉತ್ಪನ್ನವಾಗುವುದು ?

ಮೋಹನೀಯ ಕರ್ಮವಿಲ್ಲದೆಯೂ ಇಚ್ಛೆಯು ಉತ್ಪನ್ನವಾಗುತ್ತಿದ್ದರೆ ಕೇವಲಿಗೆ ಮನೋಹರ ಸ್ತ್ರೀಯನ್ನು ಭೋಗಿಸುವ ಇಚ್ಛೆ ಕೂಡ ಉತ್ಪನ್ನವಾಗುವ ಪ್ರಸಂಗವು ಬಂದು ಬಿಡುವುದು. ಮತ್ತು ಸುಂದರ ಶಯ್ಯೆಯಲ್ಲಿ ಮಲಗುವ, ಆಭರಣ, ವಸ್ತ್ರಾದಿಗಳ ಭೋಗೋಪಭೋಗದ ಇಚ್ಛೆಯ ಪ್ರಸಂಗವು ಬಂದು ಬಿಡುವದು. ಅದರಿಂದ ವೀತರಾಗತೆಯ ಅಭಾವವಾಗಿ ಹೋಗುವುದು. ಏಕೆಂದರೆ ಇಚ್ಛೆಯಿರುವಲ್ಲಿ ನಿಯಮದಿಂದ ವೀತರಾಗತೆಯಿರುವುದಿಲ್ಲ.

ನಿಮ್ಮ ಮತದಲ್ಲಿ ಕೇವಲಿಗಳು ಆಹಾರ ಮಾಡುತ್ತಿದ್ದರೆ ಅವರು ಒಂದು ದಿವಸದಲ್ಲಿ ಒಂದು ಬಾರಿ ಮಾಡುತ್ತಾರೆಯೋ ಅಥವಾ ಅನೇಕ ಬಾರಿ ಮಾಡುತ್ತಾರೆಯೋ, ಅಥವಾ ಒಂದು ದಿವಸದ, ಎಂಟು ದಿವಸದ, ಒಂದು ಪಕ್ಷದ, ಒಂದು ಮಾಸದ ಅಂತರದಿಂದ ಭೋಜನ ಮಾಡುತ್ತಾರೆಯೋ ? ನೀವು ಎಷ್ಟು ಅಂತರ ಹೇಳುವಿರಿ ಅಷ್ಟು ಪ್ರಮಾಣವೇ ಶಕ್ತಿ ಹೇಳಿದಂತಿದೆ, ಶಕ್ತಿಯು ಕಡಿಮೆಯಾದ ಮೇಲೆ ಭೋಜನ ಮಾಡುತ್ತಾರೆ. ಬಲವು ಭೋಜನದ ಆಶ್ರಯದಿಂದ ಉಳಿದರೆ ಕೇವಲೀ ಭಗವಂತರಿಗೆ ಅನಂತವೀರ್ಯವಿದೆಯೆಂದು ಹೇಳುವುದು ಅಸತ್ಯವಾಗುವುದು. ಕೇವಲಿಯ ಬಲವು ಆಹಾರದ ಆಧೀನವೇ ಉಳಿಯಿತು.

**ಪ್ರಶ್ನೆ :–** ಕೇವಲಿಗಳು ಹಸಿವೆಯನ್ನು ಶಾಂತ ಮಾಡುವ ಸಲುವಾಗಿ ಭೋಜನದ ಆಸ್ವಾದನೆ ಮಾಡುತ್ತಾರೆ.

**ಉತ್ತರ :–** ಅವರು ಕೇವಲಜ್ಞಾನದಿಂದ ಭೋಜನದ ಸ್ವಾದ ತೆಗೆದುಕೊಳ್ಳುತ್ತಾರೋ ಅಥವಾ ರಸನೇಂದ್ರಿಯದ ಮೂಲಕ ಸ್ವಾದತೆಗೆದುಕೊಳ್ಳುತ್ತಾರೆಯೋ ? ಕೇವಲಜ್ಞಾನದಿಂದ ಸ್ವಾದತೆಗೆದುಕೊಳ್ಳುತ್ತಿದ್ದರೆ ದೂರ ಕ್ಷೇತ್ರದಲ್ಲಿ ಇರಿಸಿದ ಭೋಜನದ ಸ್ವಾದ ತೆಗೆದುಕೊಳ್ಳಬೇಕು, ಆಗ ಕವಲಾಹಾರ ಮಾಡುವುದರ ಪ್ರಯೋಜನವೇನು ಉಳಿಯಿತು ? ಇಲ್ಲ ರಸನೇಂದ್ರಿಯದಿಂದ ಸ್ವಾದತೆಗೆದುಕೊಳ್ಳುತ್ತಿದ್ದರೆ ಮತಿಜ್ಞಾನವಿರುವ ಪ್ರಸಂಗವು ಬಂದು ಬಿಡುವುದು. ಏಕೆಂದರೆ

ಇಂದ್ರಿಯಗಳಿಂದ ನೋಡುವುದು, ಶ್ರವಣ ಮಾಡುವುದು, ಸ್ಪರ್ಶ ಮಾಡುವುದು, ಚಿಂತನ ಮಾಡುವುದು, ಸ್ವಾದ ಪಡೆಯುವುದೆಲ್ಲವೂ ಮತಿಜ್ಞಾನದ ಕಾರ್ಯಗಳಿವೆ.

**ಪ್ರಶ್ನೆ :-** ಸರ್ವಜ್ಞತನದ ಮತ್ತು ಕವಲಾಹಾರದ ವಿರೋಧವಿಲ್ಲ. ಯಾವ ಪ್ರಕಾರ ಇಲ್ಲಿ ಆಹಾರ ಮಾಡುತ್ತಿರುವ ಮನುಷ್ಯರಲ್ಲಿ ಜ್ಞಾನದ ಹೀನತೆಯು ಕಂಡು ಬರುವುದಿಲ್ಲ ಅದೇ ಪ್ರಕಾರ ಭೋಜನ ಮಾಡುತ್ತಿರುವಾಗಲೂ ಕೂಡ ಕೇವಲಜ್ಞಾನದ ಹೀನತೆಯು ಇರುವುದಿಲ್ಲ.

**ಉತ್ತರ :-** ಅದರಂತೆ ದ್ರವ್ಯ, ಆಭರಣ, ವಸ್ತ್ರ ವಾಹನ, ಕಾಮ, ವಿಷಯ ಮೊದಲಾದುವನ್ನು ಭೋಗಿಸುವಲ್ಲಿ ಕೂಡ ಸರ್ವಜ್ಞತನದ ವಿರೋಧವಿರಲಿಕ್ಕಿಲ್ಲ ?

**ಪ್ರಶ್ನೆ :-** ಸರ್ವಜ್ಞರಿಗೆ ಮೋಹದ ಉದಯದ ಅಭಾವವಿರುವುದರಿಂದ ದ್ರವ್ಯ, ಆಭರಣ, ಕಾಮ, ವಿಷಯ, ಭೋಗಾದಿಗಳನ್ನು ಗ್ರಹಣ ಮಾಡುವ ಇಚ್ಛೆಯಿರುವುದಿಲ್ಲ. ಅಸಾತಾವೇದನೀಯದ ಉದಯವು ವಿದ್ಯಮಾನವಿರುವುದರಿಂದ ಆಹಾರ ಗ್ರಹಣ ಮಾಡುತ್ತಾರೆ, ಏಕೆಂದರೆ ಭಿನ್ನ ಭಿನ್ನ ಕರ್ಮಗಳ ಶಕ್ತಿಯು ಭಿನ್ನ ಭಿನ್ನವಿದೆ.ಕರ್ಮಗಳ ಶಕ್ತಿಯು ಸಮಾನವಿದ್ದರೆ ಕರ್ಮಗಳಲ್ಲಿ ಭಿನ್ನ ಭಿನ್ನವಿರುವ ಭೇದವು ಉಳಿಯುವುದಿಲ್ಲ. ಕೇವಲಿಗೆ ಮೋಹದ ಉದಯದ ಅಭಾವವಾಗಿರುವುದರಿಂದ ಅವರು ದ್ರವ್ಯ ಮೊದಲಾದುವನ್ನು ಗ್ರಹಣ ಮಾಡುವುದಿಲ್ಲ.

**ಉತ್ತರ :-** ಮೋಹದ ಅಭಾವವಾಗಿ ಹೋಗಿದ್ದರೆ ಆಹಾರದ ತುತ್ತು ಎತ್ತಿಕೊಂಡು ಬಾಯಲ್ಲಿ ಇಡುವದು, ಮೆಲ್ಲುವುದು, ನುಂಗುವುದು, ಮೊದಲಾದವುಗಳ ಇಚ್ಛೆಯು ಯಾವ ಕಾರಣದಿಂದ ಆಯಿತು.

**ಪ್ರಶ್ನೆ :-** ಅಂತರಾಯ ಕರ್ಮದ ಅಭಾವವಾಗಿರುವುದರಿಂದ ಇಚ್ಛೆಯಿಲ್ಲದೆಯೇ ಬಾಯಲ್ಲಿ ತುತ್ತನ್ನು ಇಟ್ಟುಕೊಳ್ಳುತ್ತಾರೆ.

**ಉತ್ತರ :-** ಅಂತರಾಯ ಕರ್ಮದ ಅಭಾವವು ಭೋಗೋಪಭೋಗ, ಕಾಮಸೇವನೆ, ವಿಷಯ ಮೊದಲಾದವುಗಳ ಗ್ರಹಣವನ್ನು ಕೂಡ ಅದೇಕೆ ಮಾಡಗೊಡುವುದಿಲ್ಲ.

**ಪ್ರಶ್ನೆ:-** ದ್ರವ್ಯ, ಆಭರಣ, ಕಾಮ, ವಿಷಯಾದಿಗಳ ಗ್ರಹಣ ಮಾಡುವುದರಿಂದ ವ್ರತಭಂಗವಾಗಿ ಹೋಗುವುದು, ದೀಕ್ಷೆಯ ಭಂಗವಾಗಿ ಹೋಗುವುದು, ಸಾಧುತ್ವವು ನಷ್ಟವಾಗಿ ಹೋಗುತ್ತದೆ. ಆದರೆ ಆಹಾರ ಮಾಡುವುದರಿಂದ ವ್ರತ ಹಾಗೂ ದೀಕ್ಷೆಯ ಭಂಗವಾಗುವುದಿಲ್ಲ. ಕವಲಾಹಾರ ಮಾಡುವುದರಿಂದಂತೂ ಸಾಧು ಧರ್ಮದ ಕಾರಣವಾದ ದೇಹದ ಸ್ಥಿತಿ ಇದ್ದು ಬಿಡುತ್ತದೆ.

**ಉತ್ತರ :- ನಿಮ್ಮ ಶ್ವೇತಾಂಬರ ಮತದಲ್ಲಿ ವ್ರತ ಧಾರಣ ಮಾಡುವುದರಿಂದ ಮತ್ತು ದೀಕ್ಷೆ ಗ್ರಹಣ ಮಾಡುವುದರಿಂದಲೇ ಕೇವಲಜ್ಞಾನವು ಉತ್ಪನ್ನವಾಗುತ್ತದೆಯೆಂಬ ನಿಯಮವಿಲ್ಲ.** ನೀವು ಮಲ್ಲಿಕುಮಾರಿಗೆ ಗೃಹಸ್ಥಾವಸ್ಥೆಯಲ್ಲಿಯೇ ಕೇವಲಜ್ಞಾನದ ಉತ್ಪತ್ತಿಯಾಗುವುದನ್ನು ಹೇಳುತ್ತೀರಿ, ಸಮಸ್ತ ಷಟ್ಖಂಡ ರಾಜ್ಯ ಭೋಗಿಸುವಂಥ ಭರತ ಚಕ್ರವರ್ತಿಗೆ ಗಾಜಿನ ಮನೆಯಲ್ಲಿ ಕೇವಲಜ್ಞಾನದ ಉದಯ ಹೇಳುತ್ತೀರಿ, ಆನೆಯ ಮೇಲೆ ಕುಳಿತುಕೊಂಡು ಮಗನ ಸಲುವಾಗಿ ರೋದಿಸುತ್ತಿರುವ ಮರುದೇವಿಗೆ ಕೇವಲಜ್ಞಾನವಾದುದನ್ನು ಹೇಳುತ್ತೀರಿ. ಬಿದಿರ ಮೇಲೆ ಹತ್ತಿದ ನಟನಿಗೆ ಕೇವಲ ಜ್ಞಾನವಾಗುವುದನ್ನು ಹೇಳುತ್ತೀರಿ. ಸಾಧು ನಿವಾಸದಲ್ಲಿ ಕಸಗುಡಿಸುವ ಸೇವಕಿಗೆ ಕೇವಲ ಜ್ಞಾನವಾಗುವುದನ್ನು ಹೇಳುತ್ತೀರಿ.

ಗೃಹಸ್ಥರಿಗೆ, ಸ್ತ್ರೀಯರಿಗೆ, ಅನ್ಯಧರ್ಮೀಯರಿಗೆ, ಯಾವುದೇ ವೇಷಧಾರಿಗೆ, ದಂಡಿ, ತ್ರಿದಂಡಿ, ಸನ್ಯಾಸಿ, ಕಾಪಾಲಿ, ಫಕೀರ, ಜಟಾಧಾರಿ, ಮುಂಡನ ಮಾಡುವಂಥ, ಮೃಗಚರ್ಮ, ಹುಲಿದೊಗಲು ತೊಡುವಂಥ ಸಮಸ್ತ ಕುಲಿಂಗಧಾರಿಗಳಿಗೆ

ಮೋಕ್ಷವಾಗುವುದನ್ನು ಹೇಳುತ್ತೀರಿ. ಸಮಸ್ತ ನಾವಲಿಗ, ಮಡಿವಾಳ, ಕಟುಕ, ಚಂಡಾಲ ಮೊದಲಾದವರಿಗೆ ಮೋಕ್ಷವಾಗುವುದನ್ನು ಹೇಳುತ್ತೀರಿ. ಹೃಷಿಕೇಶ ಚಾಂಡಾಲನಿಗೆ ಕೇವಲಜ್ಞಾನ ಮತ್ತು ಮೋಕ್ಷವಾಗುವುದನ್ನು ಹೇಳುತ್ತೀರಿ.

ನಿಮ್ಮ ಮತದಲ್ಲಂತೂ ವ್ರತಗಳಿಂದ, ದೀಕ್ಷೆಯಿಂದ ಕೂಡ ಪ್ರಯೋಜನವಿಲ್ಲ, ನಿಮ್ಮಲ್ಲಿಯಂತೂ ಕೇವಲಜ್ಞಾನವು ಗೃಹಸ್ಥನಿಗೆ ಮೊದಲೇ ಉತ್ಪನ್ನವಾಗುತ್ತದೆ. ಅನಂತರ ದೀಕ್ಷೆಯಾಗುತ್ತದೆ ಮತ್ತು ಅದರ ನಂತರ ಯತಿತನವು ಆಗುತ್ತದೆಂದು ಹೇಳುತ್ತೀರಿ. ಮೊದಲು ಸರ್ವಜ್ಞತೆಯಾಗುವುದು ಮತ್ತು ಅದರ ನಂತರ ದೀಕ್ಷೆ ತೆಗೆದುಕೊಳ್ಳುವುದು. ಆಗ ದೀಕ್ಷೆ ತೆಗೆದುಕೊಳ್ಳುವುದರಿಂದ ನಿಮ್ಮದು ಯಾವ ಪ್ರಯೋಜನದ ಸಿದ್ಧಿಯಾಗುವುದು? ಗೃಹಸ್ಥರಿಗೂ ಮೋಕ್ಷವಾದರೆ, ಅನ್ಯ ಕುಲಿಂಗಧಾರಿಗಳಿಗೂ ಮೋಕ್ಷವಾಗಿ ಹೋದರೆ ದೀಕ್ಷೆಯ ಗ್ರಹಣ, ಮುಖಪಟ್ಟಿ ಕಟ್ಟುವುದು,ದಂಡಗ್ರಹಣ, ಬೋಧಾಪಾತ್ರಗಳ ಗ್ರಹಣವೆಲ್ಲವು ನಿರರ್ಥಕವಾಗುವವು. ನಿಮ್ಮ ಮತದಲ್ಲಿ ಇಂಥ ಸಾವಿರಾರು ದೋಷಗಳು ಬರುತ್ತವೆ.

**ಪ್ರಶ್ನೆ :-** ಅಸಾತಾವೇದನೀಯಕರ್ಮದ ಉದಯದಿಂದ ಕೇವಲಿಗೆ ಕ್ಷುಧೆ, ತೃಷೆ, ರೋಗ, ಮಲ- ಮೂತ್ರಾದಿಗಳು ಆಗುತ್ತವೆ.

**ಉತ್ತರ :-** ಅದು ಹಾಗೆ ಇಲ್ಲ, ಕ್ಷುಧೆಯಂತೂ ಅಸಾತಾವೇದನೀಯ ಕರ್ಮದ ಉದೀರಣಾದಿಂದ ಆಗುತ್ತದೆ. ಆರನೇ ಗುಣಸ್ಥಾನದಲ್ಲಿ ಅಸಾತಾದ ಉದೀರಣಾದ ವ್ಯುಚ್ಛಿತ್ತಿಯಾಗಿ ಹೋಗುವುದರಿಂದ ಏಳನೆಯ ಮೊದಲಾದ ಗುಣಸ್ಥಾನಗಳಲ್ಲಿ ಕ್ಷುಧಾದಿಗಳ ವೇದನೆಯ ಅಭಾವವಿದೆ.

ಯಾವ ಸಮಯದಲ್ಲಿ ಮುನಿಗಳು ಶ್ರೇಣಿ ಹತ್ತುತ್ತಾರೆ ಆಗ ಸಾತಿಶಯ ಅಪ್ರಮತ್ತ ಗುಣಸ್ಥಾನದಲ್ಲಿ ಅಧಃಕರಣದ ಪ್ರಾರಂಭದಲ್ಲಿ ನಾಲ್ಕು ಅವಶ್ಯಕಗಳಾಗುತ್ತವೆ. ೧)ಪ್ರತಿಯೊಂದು ಸಮಯ ಅನಂತಗುಣಿತ ವಿಶುದ್ಧಿ, ೨) ಸ್ಥಿತಿ ಬಂಧದ ಅಪಸರಣ ಎಂದರೆ ಕಡಿಮೆಯಾಗುವುದು, ೩) ಸಾತಾವೇದನೀಯ ಮೊದಲಾದ ಪುಣ್ಯ ಪ್ರಕೃತಿಗಳಲ್ಲಿ ಅನಂತ ಗುಣಿತ ರಸದ ವೃದ್ಧಿಯಾಗುವುದು, ೪) ಅಸಾತಾವೇದನೀಯ ಮೊದಲಾದ ಅಶುಭ ಪ್ರಕೃತಿಗಳ ರಸವು ಅನಂತದ ಭಾಗ ಕಡಿಮೆಯಾಗಿ ನಿಂಬ, ಕಾಂಜೀರರೂಪವಾಗಿ ಎರಡು ಪ್ರಕಾರ ಉಳಿಯುವುದು, ವಿಷ, ಹಾಲಾಹಲರೂಪ ಶಕ್ತಿಯು ಕಡಿಮೆಯಾಗುತ್ತದೆ. ಇದರ ನಂತರ ಅಪೂರ್ವಕರಣ ಗುಣಸ್ಥಾನದಲ್ಲಿ೧) ಗುಣಶ್ರೇಣೀ ನಿರ್ಜರೆ, ೨) ಗುಣಸಂಕ್ರಮಣ, ೩) ಸ್ಥಿತಿ ಖಂಡನ, ೪) ಅನುಭಾಗ ಖಂಡನವೆಂದು ನಾಲ್ಕು ಆವಶ್ಯಕಗಳಾಗುತ್ತವೆ. ಆದುದರಿಂದ ಆ ಕರಣ ಪರಿಣಾಮಗಳ ಪ್ರಭಾವದಿಂದ ಅಸಾತಾವೇದನೀಯ ಮೊದಲಾದ ಅಪ್ರಶಸ್ತ ಪ್ರಕೃತಿಗಳ ರಸವನ್ನು ಅಸಂಖ್ಯಾತಬಾರಿ ಅನಂತದ ಭಾಗ ಕೊಡುವುದರ ಸಮಾನತೆಯವರೆಗೆ ಕಡಿಮೆಯಾಗುವುದರಿಂದ ಅದರಲ್ಲಿ ಎಷ್ಟು ಮಂದಶಕ್ತಿ ಉಳಿಯುತ್ತದೆಯೆಂದರೆ ಆ ಅಸಾತಾವೇದನೀಯವು ಭಗವಂತರಿಗೆ ಪರೀಷಹವನ್ನುಂಟು ಮಾಡುವಲ್ಲಿ ಸಮರ್ಥವೇ ಇರುವುದಿಲ್ಲ, ಘಾತಿಕರ್ಮಗಳ ಸಹಾಯತೆಯು ಕೂಡ ಉಳಿಯದಿರುವುದರಿಂದ ಪರೀಷಹ ಕೊಡುವಲ್ಲಿ ಸಮರ್ಥವಿರುವುದಿಲ್ಲ.

**ಗೊಮ್ಮಟಸಾರದ ಕರ್ಮಕಾಂಡದಲ್ಲಿ ಕೂಡ ಇದನ್ನೇ ಹೇಳುತ್ತಾರೆ. -**

**ಣಟ್ಠಾ ಯ ರಾಯ ದೋಸಾ ಇಂದಿಯಣಾಣಂ ಚ ಕೇವಲಮ್ಮಿ ಜದೋ ।**
**ತೇಣ ದು ಸಾದಾಸಾದಜ ಸುಹ ದುಕ್ಖಂ ಣತ್ಥಿ ಇಂದಿಯಜಂ ।।೨೭೩।।**

**ಸಮಯಟ್ಠಿದಿಗೋ ಬಂಧೋ ಸಾದಸ್ಸುದಯಪ್ಪಗೋ, ಜದೋ ತಸ್ಸ ।**
**ತೇಣಾ ಸಾದಸ್ಸುದಓ ಸಾದಸರೂವೇಣ ಪರಿಣಮದಿ ।।೨೭೪।।**

**ಏದೇಣ ಕಾರಣೇಣ ಹು ಸಾದಸ್ಸೇವ ದು ಣಿರಂತರೋ ಉದಓ ।**
**ತೇಣಾ ಸಾದ ಣಿಮಿತ್ತಾ ಪರೀಸಹಾ ಜಿಣವರೇ ಣತ್ಥಿ ।।೨೭೫।।**

**ಅರ್ಥ :-** ಮೊದಲು ಯಾವ ಅಸಾತಾವೇದನೀಯ ಕಟ್ಟಿತ್ತು ಅದರ ಅಸಂಖ್ಯಾತ ಬಾರಿ ಅನಂತದ ಭಾಗ ಕೊಡುವುದರ ಬರಾಬರಿವರೆಗೆ ರಸವು ಕಡಿಮೆಯಾಗಿ ಅತ್ಯಂತ ಮಂದ ಉಳಿದಿದೆ, ಮತ್ತು ನವೀನ ಅಸಾತಾದ ಬಂಧವಾಗುವುದಿಲ್ಲ. ಏಕೆಂದರೆ ಏಳನೇ ಗುಣಸ್ಥಾನದಿಂದ ಮುಂದೆ ಕೇವಲ ಒಂದು ಸಾತಾವೇದನೀಯದ್ದೇ ನವೀನ ಬಂಧವಾಗುತ್ತದೆ, ಅಸಾತಾದ ಬಂಧವಾಗುವುದಿಲ್ಲ. ಕೇವಲಿಗೆ ಸಾತಾಕರ್ಮ ಕಟ್ಟುತ್ತದೆ, ಅದು ಕೂಡ ಒಂದು ಸಮಯದ ಸ್ಥಿತಿರೂಪವೇ ಕಟ್ಟುತ್ತದೆ. ಅದು ಉದಯವಾಗುತ್ತಿರುವಂತೆಯೇ ಕಟ್ಟುತ್ತದೆ. ಆದ್ದರಿಂದ ಅವರಿಗೆ ಅಸಾತಾದ ಉದಯವೂ ಸಾತಾರೂಪವಾಗಿಯೇ ಪರಿಣಮಿಸಿ ಬಿಡುತ್ತದೆ.

**ಭಾವಾರ್ಥ :-** ಸರ್ವಜ್ಞರಿಗೆ ಸಾತಾದ ಉದಯವಂತೂ ನವೀನ ನಿರಂತರ ಅನಂತಗುಣಿತ ರಸರೂಪವಾಗಿ ಉದಯದಲ್ಲಿ ಬರುತ್ತದೆ, ಮತ್ತು ಅಸಾತಾವೇದನೀಯದ ರಸವು ಅನಂತದ ಭಾಗ ಕುಂದುತ್ತದೆ. ಯಾವ ಪ್ರಕಾರ ಅಮೃತದಿಂದ ತುಂಬಿದ ಸಮುದ್ರವನ್ನು ಒಂದು ವಿಷದ ಕಣವು ವಿಷರೂಪವಾಗಿ ಮಾಡುವಲ್ಲಿ ಸಮರ್ಥವಾಗುವುದಿಲ್ಲ, ಅದೇ ಪ್ರಕಾರ ಸರ್ವಜ್ಞರ ಅತ್ಯಂತ ತೀವ್ರ ಅನಂತಗುಣಿತ (ವೃದ್ಧಿಸುತ್ತಿರುವ) ಸಾತಾಕರ್ಮದ ರಸದ ಉದಯದಲ್ಲಿ ಅನಂತದ ಭಾಗರೂಪ ಅತ್ಯಂತ ಮಂದ ಅಸಾತಾದ ಉದಯವು ಕ್ಷುಧೆಯ ವೇದನೆಯನ್ನು ಹೇಗೆ ಉತ್ಪನ್ನ ಮಾಡಬಲ್ಲದು ? ಇದೇ ಕಾರಣದಿಂದ ಸರ್ವಜ್ಞ ಭಗವಂತರಿಗೆ ನಿರಂತರ ಸಾತಾಕರ್ಮದ್ದೇ ಉದಯವಿದೆ. ಅದರಲ್ಲಿ ಒಂದಿಷ್ಟು ಅಸಾತಾದ ಉದಯವು ಸಾತಾರೂಪವಾಗಿಯೇ ಪರಿಣಮಿಸುತ್ತದೆ. ಆದುದರಿಂದ ಜಿನೇಂದ್ರರಿಗೆ ಅಸಾತಾದ ಉದಯಜನ್ಯ ಪರೀಷಹವಿಲ್ಲ. ಕೇವಲೀ ಭಗವಂತರಿಗೆ ರಾಗ-ದ್ವೇಷಗಳು ನಷ್ಟವಾಗಿ ಹೋಗಿವೆ ಮತ್ತು ಇಂದ್ರಿಯಜನ್ಯ ಜ್ಞಾನದ ಅಭಾವವಾಗಿ ಹೋಗಿದೆ. ಆದುದರಿಂದ ಸಾತಾ-ಅಸಾತಾಗಳೆರಡರಿಂದ ಉತ್ಪನ್ನವಾಗುವ ಇಂದ್ರಿಯಜನ್ಯ ಸುಖ-ದುಃಖಗಳು ಕೇವಲಿಗೆ ಇರುವುದೇ ಇಲ್ಲ.

ಅತ್ಯಂತ ಮಂದ ಉದಯರೂಪದ ಅಸಾತಾವು ತನ್ನ ಕಾರ್ಯಮಾಡುವಲ್ಲಿ ಸಮರ್ಥವಿರುವುದಿಲ್ಲ. ಹೇಗೆ ಮಂದ ಉದಯರೂಪದ ಸಂಜ್ವಲನ ಕಷಾಯವು ಅಪ್ರಮತ್ತ ಮೊದಲಾದ ಗುಣಸ್ಥಾನಗಳಲ್ಲಿ ಪ್ರಮಾದವನ್ನುತ್ಪನ್ನ ಮಾಡುವ ಸಾಧ್ಯತೆಯಿಲ್ಲ ; ಹಾಗೆ ಅತ್ಯಂತ ತೀವ್ರವೇದದ ಉದಯದಿಂದ ಉತ್ಪನ್ನವಾದ ಮೈಥುನ ಸಂಜ್ಞೆಯು ಮಂದವೇದದ ಉದಯರೂಪವಾದ ಒಂಭತ್ತನೇ ಗುಣಸ್ಥಾನದಲ್ಲಿ ಇಲ್ಲ; ನಿದ್ರಾ-ಪ್ರಚಲಾದ ಉದಯವಂತೂ ಹನ್ನೆರಡನೇ ಗುಣಸ್ಥಾನದಲ್ಲಿ ದ್ವಿಚರಮ ಸಮಯದವರೆಗಿದೆ ; ಆದರೆ ಉದೀರಣಾಯಿಲ್ಲದೆ ನಿದ್ರೆಯನ್ನು ಮಾಡಿಸುವ ಸಾಧ್ಯತೆಯಿಲ್ಲ ; ಹೇಗೆ ಜಾಗೃತ ಅವಸ್ಥೆಯಿಲ್ಲದೆ ಆತ್ಮಾನುಭವರೂಪದ ಧ್ಯಾನವಾಗುವ ಸಾಧ್ಯತೆಯಿಲ್ಲ, ಅದೇ ಪ್ರಕಾರ ಅಸಾತಾದ ಉದೀರಣಾಯಿಲ್ಲದೆ ಅಸಾತಾಕರ್ಮವು ಕ್ಷುಧೆ, ತೃಷೆ ಮೊದಲಾದುವನ್ನು ಉತ್ಪನ್ನ ಮಾಡುವ ಸಾಧ್ಯತೆಯಿಲ್ಲ.

ಅಪ್ರಮತ್ತ ಸಾಧುವು ಕೂಡ ಕೇವಲ ಆಹಾರದ ಇಚ್ಛೆ ಮಾಡುವುದರಿಂದ ಪ್ರಮತ್ತತೆಗೆ ಪ್ರಾಪ್ತನಾಗಿ ಹೋಗುತ್ತಾನೆಂದರೆ ಭೋಜನ ಮಾಡುತ್ತಿರುವಾಗಲೂ ಕೇವಲಿಯು ಪ್ರಮತ್ತನೇಕಾಗುವುದಿಲ್ಲ ? ಇದು ಮಹಾನ್ ಆಶ್ಚರ್ಯವಿದೆ. ಕೇವಲೀ ಭಗವಂತರು ಮೂರು ಲೋಕದ ಮಧ್ಯದಲ್ಲಿ ಮರಣ, ಛೇದನ, ಭೇದನ, ಜ್ವಲನ, ಮದ್ಯ, ಮಾಂಸ ಮೊದಲಾದ ಅಪವಿತ್ರ ಪದಾರ್ಥಗಳನ್ನು ಪ್ರತ್ಯಕ್ಷ ನೋಡುತ್ತ ಹೇಗೆ ಭೋಜನ ಮಾಡುವರು ? ಅಲ್ಪಶಕ್ತಿ ಧಾರಕನಾದ ಗೃಹಸ್ಥನು ಕೂಡ ಅಯೋಗ್ಯ ವಸ್ತು, ನಿಂದ್ಯ ಕರ್ಮಗಳನ್ನು ನೋಡಿದರೆ ಅಂತರಾಯ ಮಾಡಿಕೊಳ್ಳುತ್ತಾನೆ, ಮತ್ತು ಕೇವಲಿಯು ಅಂತರಾಯ ಮಾಡಿಕೊಳ್ಳದಿದ್ದರೆ ಕೇವಲಿಗೆ ಗೃಹಸ್ಥರಿಗಿಂತಲೂ ಹೆಚ್ಚು ಭೋಜನದಲ್ಲಿ ಆಸಕ್ತಿಯುಳಿಯಿತು. ಮತ್ತು ಶಕ್ತಿಯ ಹೀನತೆಯೂ ಉಳಿಯಿತು. ಹಾಗಾದರೆ ಅವನ ಅನಂತ ಶಕ್ತಿಯೆಲ್ಲಿ ಉಳಿಯಿತು ? ಮತ್ತು ಕ್ಷುಧೆಯ ವೇದನೆಯಿರುವವನಿಗೆ ಅನಂತ ಸುಖವೆಲ್ಲಿ ಉಳಿಯಿತು ?

ಕ್ಷುಧೆಗೆ ಸಮಾನವಾದ ವೇದನೆಯು ಜಗತ್ತಿನಲ್ಲಿ ಬೇರೊಂದಿಲ್ಲ. ಆದ್ದರಿಂದ ಸರ್ವಜ್ಞರಿಗೆ ಕ್ಷುಧೆಯ ವೇದನೆಯಿರುವುದರಿಂದ ಅನಂತವೀರ್ಯ, ಅನಂತಸುಖಗಳುಳಿಯಲಿಲ್ಲ. ಸಾಮಾನ್ಯ ಮನುಷ್ಯರಲ್ಲಿ ಕಂಡು ಬಾರದಂಥ ಕಾರ್ಯಮಾಡುವ ಸಾಮರ್ಥ್ಯವು ಋದ್ಧಿಜನ್ಯ ಅತಿಶಯವುಳ್ಳ ಮುನಿಯಲ್ಲಿ ಕೂಡ ಕಂಡು ಬರುತ್ತದೆಯೆಂದರೆ ಅನಂತ

ವೀರ್ಯದ ಧಾರಕರಾದ ಕೇವಲೀ ಭಗವಂತರ ದೇಹದ ಸ್ಥಿತಿಯು ಆಹಾರವಿಲ್ಲದೆ ಇರುವ ಸಂಭವವಿಲ್ಲವೇನು ? ಒಂದು ವೇಳೆ ಸರ್ವಜ್ಞರಿಗೆ ಕೂಡ ಉಳಿದ ಮನುಷ್ಯರ ಹಾಗೆ ಆಹಾರ, ನೀಹಾರ, ನಿದ್ರೆ, ರೋಗ, ಮಲ, ಮೂತ್ರಗಳಾಗುತ್ತಿದ್ದರೆ ಸಾಮಾನ್ಯ ಆತ್ಮನಲ್ಲಿ ಮತ್ತು ಪರಮಾತ್ಮನಲ್ಲಿ ಅಂತರವೇನುಳಿಯಿತು ?

## ಆಹಾರದ ವಿಷಯದಲ್ಲಿ ವಿಚಾರ

ಜೀವನವು ಕವಲಾಹಾರದಿಂದಲೇ ಇರುವುದಿಲ್ಲ, ಆದರೆ ಆಯುಕರ್ಮದಿಂದಿರುತ್ತದೆಯೆಂದು ಹೇಳುತ್ತಾರೆ,-

**ಣೋಕಮ್ಮ ಕಮ್ಮಹಾರೋ ಕವಲಾಹಾರೋ ಯ ಲೇಪಮಾಹಾರೋ ।**
**ಉಜ್ಜಮಣೋವಿಯ ಕಮಸೋ ಆಹಾರೋ ಛವ್ವಿಹೋ ಭಣಿಓ ॥**
**ಣೋ ಕಮ್ಮಂ ತಿತ್ಥಯರೇ ಕಮ್ಮಂ ಣಿರಯೇಯ ಮಾಣಸೋ ಅಮರೇ ।**
**ಕವಲಾಹಾರೋ ಣರಪಸು ಉಜ್ಜೋ ಪಕ್ಖೀ ಯ ಇಗಿ ಲೇಪೋ ॥**

**ಅರ್ಥ :-** ಆಹಾರದಲ್ಲಿ ೧) ಕರ್ಮ ಆಹಾರ, ೨) ನೋಕರ್ಮ ಆಹಾರ, ೩) ಕವಲ ಆಹಾರ, ೪) ಲೇಪ ಆಹಾರ, ೫) ಓಜ ಆಹಾರ, ೬) ಮಾನಸಿಕ ಆಹಾರವೆಂದು ಆರು ಭೇದಗಳಿವೆ.

ಅರಹಂತ ಭಗವಂತರಿಗಂತೂ ಅನ್ಯ ಜೀವಿಗಳಿಗೆ ಅಸಂಭವವಾದಂಥ ಶುಭ ಸೂಕ್ಷ್ಮ ನೋಕರ್ಮ ವರ್ಗಣಾದ ಗ್ರಹಣವಾಗುವುದೇ ಆಹಾರವಿದೆ. ನಾರಕಿಗಳಿಗೆ ಕರ್ಮದ ಭೋಗವೇ ಆಹಾರವಿದೆ. ನಾಲ್ಕು ಪ್ರಕಾರದ ದೇವಗಳಿಗೆ ಮಾನಸಿಕ ಆಹಾರವಿದೆ. ಮನಸ್ಸಿನಲ್ಲಿ ಇಚ್ಛೆಯಾಗುತ್ತಿದ್ದಂತೆಯೇ ಕಂಠದೊಳಗಿಂದ ಅಮೃತವು ಸ್ರವಿಸುತ್ತದೆ. ಅದರಿಂದ ತೃಪ್ತಿಯಾಗುತ್ತದೆ. ಮನುಷ್ಯ ಹಾಗೂ ಪಶುಗಳಿಗೆ ಕವಲಾಹಾರವಿದೆ. ಪಕ್ಷಿಗಳಿಗೆ ಮೊಟ್ಟೆಯಲ್ಲಿರುವಂಥ ಜೀವಗಳ ತಾಯಿಯ ಉದರದ ಊಷ್ಮಾರೂಪದ ಓಜಾಹಾರವಿದೆ. ಮತ್ತು ಏಕೇಂದ್ರಿಯ ಪೃಥ್ವೀ ಮೊದಲಾದ ಜೀವಗಳಿಗೆ ಲೇಪಾಹಾರವಿದೆ. ಎಂದರೆ ಪೃಥ್ವೀ ಮೊದಲಾದವುಗಳ ಸ್ಪರ್ಶವೇ ಆಹಾರವಿದೆ.

ಭೋಗ-ಭೂಮಿಯ ಔದಾರಿಕ ದೇಹಧಾರಿಯಾದ ಮನುಷ್ಯರ ಶರೀರವಂತೂ ಮೂರು ಹರದಾರಿ ಪ್ರಮಾಣ ಮತ್ತು ಭೋಜನವು ನೆಲ್ಲಿಕಾಯಿ ಪ್ರಮಾಣ, ಮೂರು ದಿವಸದ ಅಂತರದಿಂದ ಸ್ವೀಕರಿಸುತ್ತಾರೆ. ಅದಕ್ಕಾಗಿ ಕವಲಾಹಾರವು ದೇಹದ ಸ್ಥಿತಿಯ ಕಾರಣವಿಲ್ಲವೆಂದು ಹೇಳುತ್ತಾರೆ. ಆಹಾರಕತನವಿರುವುದರಿಂದಲೇ ಕೇವಲಿಗೆ ಕವಲಾಹಾರದ ಕಲ್ಪನೆ ಮಾಡುತ್ತಿದ್ದರೆ ಸಯೋಗೀತನ ಮನ್ನಿಸುವುದರಿಂದ ಮನಸ್ಸಿನ, ಪ್ರಾಣ ಮನ್ನಿಸುವುದರಿಂದ ಪಂಚೇಂದ್ರಿಯಗಳ ಮತ್ತು ಶುಕ್ಲಲೇಶ್ಯೆ ಮನ್ನಿಸುವುದರಿಂದ ಕಷಾಯದ ಪ್ರಸಂಗವು ಕೂಡ ಬಂದು ಬಿಡುವುದು.

**ಜಿನೇಂದ್ರರಿಗೆ ಹನ್ನೊಂದು ಪರೀಷಹಗಳಿವೆಯೆಂದು ಹೇಳುವುದಂತೂ ಕೇವಲ ಉಪಚಾರವಿದೆ ;** ಅದನ್ನು ವೇದನೀಯಕರ್ಮವು ವಿದ್ಯಮಾನವಿರುವುದರಿಂದ ಹೇಳಿದೆ. ಹೇಗೆ ಮಂತ್ರ, ಔಷಧಗಳ ಪ್ರಭಾವದಿಂದ ವಿಷ ಶಕ್ತಿಯು ನಷ್ಟವಾಗಿ ಹೋಗಿರುವಂಥ ವಿಷವು ಪ್ರಾಣಹರಣ ಮಾಡುವಲ್ಲಿ ಸಮರ್ಥವಿಲ್ಲ, ಹಾಗೆಯೇ ಶಕ್ತಿಯಿಲ್ಲದ ಅಸಾತಾವೇದನೀಯ ಕರ್ಮವು ಕ್ಷುಧೆಯನ್ನುತ್ಪನ್ನ ಮಾಡುವಲ್ಲಿ ಸಮರ್ಥವಿಲ್ಲ. ಮಣಿ, ಮಂತ್ರ, ಔಷಧ, ವಿದ್ಯೆ, ಋದ್ಧಿಗಳ ಪ್ರಭಾವವು ಅಚಿಂತ್ಯವಿದೆ.

ಶ್ವೇತಾಂಬರರ ಸೂತ್ರ(ಶಾಸ್ತ್ರ)ಗಳು ಕಲ್ಪಿತವಿದ್ದು, ಅವುಗಳಲ್ಲಿ ಅನೇಕ ಕಲ್ಪಿತ ಅಸಂಭವ ರಚನೆ ಮಾಡಲಾಗಿದೆ. ಹೇಗೆಂದರೆ - ಓರ್ವ ಗೋಪಾಲನಾಮದ ಕುರುಬನು ಮಹಾವೀರ ಸ್ವಾಮಿಯಿಂದ ದೀಕ್ಷೆ ಸ್ವೀಕರಿಸಿ, ವಿದ್ಯೆಯ ಅಭಿಮಾನದಿಂದ ಮಹಾವೀರ ಸ್ವಾಮಿಯೊಡನೆ ವಾದ ಮಾಡಲು ಸಮವಸರಣದಲ್ಲಿ ಬಂದು, **ವಾದ ಮಾಡಿ ಅದರಲ್ಲಿ**

**ಸೋತು ಹೋಗುತ್ತಾನೆ.** ಆಗ ಕ್ರೋಧದಿಂದ ಭಗವಂತರ ಮೇಲೆ ಯಾವುದೇ ಋದ್ಧಿಯಿಂದ ಅಗ್ನಿಮಯ ಪ್ರಜ್ವಲಿತ ತೇಜೋಲೇಶ್ಯೆಯನ್ನು ಬಿಡುತ್ತಾನೆ. ಅದರಿಂದ ಸಮವಸರಣದಲ್ಲಿ ಎರಡು ಮುನಿಗಳು ಸಿಂಹಾಸನದ ಕೆಳಗೆ ಸುಟ್ಟು ಹೋದರು. ಮತ್ತು ಆ ತೈಜಸ ಋದ್ಧಿಯಿಂದ ಉತ್ಪನ್ನವಾದ ಅಗ್ನಿಮಯ ಜ್ವಾಲೆಯು ಭಗವಂತರ ಮೇಲೂ ಹೋಗುವುದರಿಂದ ಭಗವಂತರಿಗೆ ಮಹಾ ಉಪಸರ್ಗವಾಯಿತು. ಆ ಅಗ್ನಿಯ ಉಷ್ಣದಿಂದ ಭಗವಂತರಿಗೆ ರಕ್ತಭೇದಿ ರೋಗವಾಗಿ ಅದು ಆರು ತಿಂಗಳವರೆಗೆ ಉಳಿಯಿತು. ಅನಂತರ ಕೇವಲಜ್ಞಾನದಿಂದ ತಿಳಿದುಕೊಂಡು ಶಿಷ್ಯರಿಗೆ ಹೇಳಿ ಶ್ರೇಷ್ಠಿಯ ಮನೆಯಿಂದ ಒಂದು ಪಕ್ಷಿಯ ಬೇಯಿಸಿದ ಮಾಂಸವನ್ನು ಬೇಡಿ ತಂದು ತಿನ್ನುವುದರಿಂದ ರೋಗ ಹೋಯಿತು. ಕೊನೆಗೆ ಇಂಥ ಕುಪಾತ್ರನಿಗೆ ನಾನು ತಿಳಿಯದೆ ದೀಕ್ಷೆ ಕೊಟ್ಟೆನೆಂದರಂತೆ ! ಈ ಪ್ರಕಾರ ಅವರ್ಣವಾದಗಳು ಇವೆ.

**ಮೂರು ಜ್ಞಾನಸಹಿತ ಉತ್ಪನ್ನರಾದ ವೀರಜಿನೇಂದ್ರರು ಪಾಠಶಾಲೆಯಲ್ಲಿ ಓದಿದರೆಂದು ಹೇಳುತ್ತಾರೆ.** ತೀರ್ಥಂಕರರು ಮೊದಲಂತೂ ನಗ್ನರಾಗಿ ದೀಕ್ಷಿತರಾಗುತ್ತಾರೆ, ಅನಂತರ ಇಂದ್ರನು ಸ್ಕಂಧದ ಮೇಲೆ ವಸ್ತ್ರವನ್ನಿಡುತ್ತಾನೆ, ಆಗ ಅವರು ವಸ್ತ್ರವನ್ನು ಗ್ರಹಣ ಮಾಡುತ್ತಾರೆ. ವೀರ ಜಿನೇಂದ್ರರ ವಾಣಿಯು ಗಣಧರರಿಲ್ಲದೆ ನಿಷ್ಫಲವಾಗಿ ಹೊರಟಿತು. ಅದನ್ನು ಯಾರೂ ಮನ್ನಿಸಲಿಲ್ಲ.

ಆದಿನಾಥರನ್ನು ಯುಗಲರೆಂದು ಹೇಳುತ್ತಾರೆ. ಯಾವನೋ ಓರ್ವ ಯುಗಲನು ಸತ್ತುಹೋಗಿ ಅವನ ಪತ್ನಿ ವಿಧವೆಯಾಗಲು ಆ ವಿಧವೆಯನ್ನು ಋಷಭದೇವನು ಅಂಗೀಕಾರ ಮಾಡುವನು. ಎರಡನೇ ಸುನಂದೆ ನಾಮದ ರಾಣಿಯು ಯಾವುದೇ ಸಂಬಂಧಿಕಳೇ ಇದ್ದಳು. ಧೂಂಡಿಯ ಮೊದಲಾದ ಶ್ವೇತಾಂಬರರಿಗೆ ಇಂಥ ಅನರ್ಥ ರೂಪದ ವಚನಗಳನ್ನು ಹೇಳಲು ಭಯವೇ ಇಲ್ಲ.

ವೀರಜಿನರು ಮೊದಲು ದೇವನಂದೆ ನಾಮದ ಬ್ರಾಹ್ಮಣಿಯ ಗರ್ಭದಲ್ಲಿ ಅವತರಿಸಿದರು. ೮೦ ದಿವಸದವರೆಗೆ ಅಲ್ಲಿ ಉಳಿದರು. ಅನಂತರ ಇಂದ್ರನು ಇಂಥ ನೀಚರ ಮನೆಯಲ್ಲಿ ಇವರ ಜನ್ಮವಾಗುವುದು ಯೋಗ್ಯವಿಲ್ಲವೆಂದು ವಿಚಾರ ಮಾಡಿ ಹರಿಣ್ಯಗವೇಷೀ ದೇವನಿಗೆ ಆಜ್ಞೆ ಕೊಡುತ್ತಾನೆ, ಆಗ ಆ ದೇವನು ಹೋಗಿ ದೇವನಂದೆಯೆಂಬ ಬ್ರಾಹ್ಮಣಿಯ ಗರ್ಭದೊಳಗಿಂದ ತೆಗೆದು, ಸಿದ್ಧಾರ್ಥ ದೊರೆಯ ರಾಣಿ ತ್ರಿಶಲೆಯ ಗರ್ಭದಲ್ಲಿ ಇಡುತ್ತಾನೆ ಜೀವರುಗಳು ತಮ್ಮಿಂದ ಕಟ್ಟಲ್ಪಟ್ಟ ಕರ್ಮಗಳಿಗೆ ಅನುಸರಿಸಿ ಕುಲಾದಿಗಳಲ್ಲಿ ಉತ್ಪನ್ನರಾಗುತ್ತಾರೆ, ದೇವಗಳ ಮೂಲಕ ಉತ್ಪತ್ತಿ ಸ್ಥಾನವನ್ನು ಹೇಗೆ ಬದಲಿಸುವ ಸಾಧ್ಯತೆಯಿದೆ ವಿಚಾರ ಮಾಡಿರಿ. ಆದರೆ **ಮಿಥ್ಯಾದರ್ಶನದ ಪ್ರಭಾವದಿಂದ ಇವರ ಹೇಳಿಕೆಯಲ್ಲಿ ಯಾವ ತಥ್ಯವಿಲ್ಲ.**

**ತೀರ್ಥಂಕರ ಕೇವಲಿಗೆ ಸಾಮಾನ್ಯಕೇವಲಿಗಳು ನಮಸ್ಕಾರ ಮಾಡುವುದನ್ನು ಹೇಳುತ್ತಾರೆ. ಬಾಹುಬಲಿ ಮುನಿಯು ಋಷಭದೇವ ತೀರ್ಥಂಕರ ಮುನಿಗೆ ನಮಸ್ಕಾರ ಮಾಡಿದನೆಂದು ಹೇಳುತ್ತಾರೆ.** ಏಳನೇ ಗುಣಸ್ಥಾನದಿಂದಲೇ ವಂದ್ಯ-ವಂದಕ ಭಾವವು ಉಳಿಯುವುದಿಲ್ಲ. **ಆತ್ಮಸ್ವಭಾವದ ಅನುಭವವಿರುವಲ್ಲಿ ವಿಭಾವ ಭಾವವು ಹೇಗೆ ಇರುವುದು ?** ಕೃತಕೃತ್ಯ ಭಗವಂತರಾದ ಸರ್ವಜ್ಞದೇವರ ಮೂಲಕ ಅನ್ಯರಿಗೆ ನಮಸ್ಕಾರ ಮಾಡಿದರೆ ಸಾಧ್ಯವಾಗುವಂಥದು ಏನಿದೆ ? ನಮಸ್ಕರಿಸಲು ಯೋಗ್ಯ ಪರಮೇಷ್ಠಿ ಮತ್ತು ನಾನು ವಂದನೆ ಮಾಡುವಂಥವನೆಂಬ ಭಾವವು ಪ್ರಮತ್ತ ನಾಮದ ಆರನೇ ಗುಣಸ್ಥಾನದವರೆಗೇ ಇದೆ.

ಸ್ಕಂಧ ನಾಮದ ಓರ್ವ ತ್ರಿದಂಡಿ ಕುಲಿಂಗ ವೇಷಧಾರಿಯು ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿ ವೀರ ಜಿನರು ಗೌತಮ ಗಣಧರರಿಗೆ ಹೇಳುವುದೇನೆಂದರೆ ಈ ಸ್ಕಂಧಕ ಸನ್ಯಾಸಿಯು ನನಗಿಂತ ಅಧಿಕ ಬಲವಂತನಿದ್ದು, ನಿಮ್ಮ ಮಿತ್ರನಿರುವುದರಿಂದ ನೀವು ಎದುರಿಗೆ ಹೋಗಿ ಅವನನ್ನು ಕರೆದುಕೊಂಡು ಬನ್ನಿರೆನ್ನಲು ಗೌತಮ ಗಣಧರರು ಅತ್ಯಂತ ಭಕ್ತಿಯಿಂದ ಎದುರಿಗೆ ಹೋಗಿ ಅವನನ್ನು ಕರೆದು ತರುತ್ತಾರೆ. ಇದು ಮಹಾನ್ ಅನರ್ಥವಿದೆ ! **ಅವ್ರತಿ ಸಮ್ಯಗ್ದೃಷ್ಟಿಯು ಕೂಡ ಕುಲಿಂಗಿಗಳ ಸನ್ಮಾನ ಮಾಡುವುದಿಲ್ಲವೆಂದ ಮೇಲೆ ಮಹಾವ್ರತಿಗಳಾದ ಗಣಧರರು ಹೇಗೆ ಭಕ್ತಿಪೂರ್ವಕವಾಗಿ ಸನ್ಮಾನ ಮಾಡುವುರೆಂಬುದನ್ನು ತಾವೇ ಯೋಚಿಸಬೇಕು !**

**ಸ್ತ್ರೀಯರಿಗೆ ಐದನೆಯ ಗುಣಸ್ಥಾನಕ್ಕಿಂತ ಹೆಚ್ಚಿನ ಗುಣಸ್ಥಾನವಾಗುವುದೇ ಇಲ್ಲ, ಮೊದಲಿನ ಮೂರು ಸಂಹನನಗಳಾಗುವುದಿಲ್ಲ, ಅಹಮಿಂದ್ರ ಲೋಕದ ಪ್ರಾಪ್ತಿಯಾಗುವುದಿಲ್ಲ, ಮತ್ತು ಏಳನೆಯ ನರಕದಲ್ಲಿ ಗಮನವಾಗುವ ಸಾಧ್ಯತೆಯಿಲ್ಲವೆಂದ ಮೇಲೆ ಸ್ತ್ರೀಗೆ ಮುಕ್ತಿ ಹೇಗಾಗುವುದು ?** ಮಲ್ಲಿನಾಥ ಜಿನೇಂದ್ರರನ್ನು ಸ್ತ್ರೀಯೆಂದು ಹೇಳುತ್ತಾರೆ, ಅವರ ಬಿಂಬವನ್ನು ಪುರುಷರೂಪದಲ್ಲಿ ಮಾಡಿಸಿ ಪೂಜಿಸುತ್ತಾರೆ. ಹೀಗೆ ಮಹಾಅನರ್ಥ ವಾದಿಗಳಿದ್ದಾರೆ.

**ಹರಿ ಕ್ಷೇತ್ರದ ನಿವಾಸಿಯಾದ ಓರ್ವ ಮನುಷ್ಯನು ಅವನ ಶರೀರವು ಎರಡು ಹರದಾರಿ ಎತ್ತರವಿತ್ತು ಅವನನ್ನು ಪೂರ್ವಜನ್ಮದ ಶತ್ರುವಾದ ದೇವನು ಎತ್ತಿತಂದು, ಅವನ ಎರಡು ಹರದಾರಿ ಶರೀರವನ್ನು ಕಡಿಮೆ ಮಾಡಿ ಭರತಕ್ಷೇತ್ರದಲ್ಲಿ ಮಥುರಾ ನಗರದ ರಾಜ್ಯಕೊಟ್ಟು ಅವನಿಗೆ ಮಾಂಸ ಭಕ್ಷಣ ಮಾಡಿಸಿ ಪಾಪಿಯನ್ನಾಗಿ ಮಾಡಿ ನರಕಕ್ಕೆ ತಲುಪಿಸುವನು.** ಮತ್ತು ಅವನಿಂದ ಹರಿವಂಶದ ಉತ್ಪತ್ತಿಯಾಯಿತೆಂದು ಹೇಳುತ್ತಾರೆ. ಇಂಥ ಮಿಥ್ಯಾ ಕಲ್ಪನೆಗಳಿಗೆ ಯಾವ ಮಿತಿಯೇ ಇಲ್ಲ. ಎರಡು ಹರದಾರಿಯ ಅವನ ಶರೀರವನ್ನು ಹೇಗೆ ಕಡಿಮೆ ಮಾಡಿದರು ? ಮೇಲಿನ ಭಾಗ ಕತ್ತರಿಸಿದರೋ, ಕೆಳಗಿನ ಭಾಗ ಕತ್ತರಿಸಿದರೋ ಅಥವಾ ಮಧ್ಯಭಾಗ ಕತ್ತರಿಸಿದರೋ ? ಇದಕ್ಕೆ ಉತ್ತರವನ್ನೇ ಕೊಡುವುದಿಲ್ಲ. ಹರಿಕ್ಷೇತ್ರದಲ್ಲಂತೂ ಭೋಗಭೂಮಿಯಿದೆ. ಭೋಗಭೂಮಿಯ ಮನುಷ್ಯ-ತಿರ್ಯಂಚರೆಲ್ಲ ದೇವಗತಿಗಾಮಿಯಿದ್ದಾರೆ. ಭೋಗಭೂಮಿಯಲ್ಲಿ ಸ್ತ್ರೀ-ಪುರುಷರ ಸಂಖ್ಯೆ ನಿಶ್ಚಿತವಿದೆ. ತಾಯಿ-ತಂದೆ ಸಾಯುವ ಮೊದಲೇ ಅವರ ಸ್ಥಾನದಲ್ಲಿ ಬರುವವರ ಜನ್ಮವಾಗಿರುತ್ತದೆ. ಅನಂತಕಾಲ ಕಳೆದ ಮೇಲೂ ಒಂದೊಂದಾಗಿ ಕಡಿಮೆಯಾಗತೊಡಗಿದರೆ ಸಂಪೂರ್ಣ ಭೋಗಭೂಮಿಯು ಬರಿದಾಗಿ ಹೋಗುವುದು.

**ಆರುದ್ರವ್ಯಗಳನ್ನು ಹೇಳುತ್ತಾರೆ ಮತ್ತು ಮುಖ್ಯವಾಗಿ ಕಾಲದ್ರವ್ಯದ ಅಭಾವ ಮನ್ನಿಸುತ್ತಾರೆ. ಕಳೆದು ಹೋಗುವ ಸಮಯ ಮೊದಲಾದುವನ್ನು ಕಾಲವೆಂದು ಹೇಳುತ್ತಾರೆ.** ಈ ಪ್ರಕಾರ ಇವರ ಅಸತ್ಯ ಕಥನಗಳಿಗೆ ಕೊನೆಯಿಲ್ಲ.

ಸಾಧುವಿನ ನಿಂದೆ ಮಾಡುವವನನ್ನು ಕೊಂದು ಹಾಕುವಲ್ಲಿ ಪಾಪವಿಲ್ಲವೆಂದು ಹೇಳುತ್ತಾರೆ. ಚಕ್ರವರ್ತಿಯು ಕೂಡ ದೇವ, ಗುರು, ಧರ್ಮದ ದ್ರೋಹಿಯಿದ್ದರೆ ಅವನನ್ನು ಸೇನೆಸಹಿತ ವಿಧ್ವಂಸ ಮಾಡುವಂಥ ಸಾಧುವಿಗೆ ಪಾಪ ತಗಲುವುದಿಲ್ಲ. ಆ ಸಾಧುವು ಋದ್ಧಿಯಿಂದ ಉತ್ಪನ್ನವಾದ ಶಕ್ತಿಯಿದ್ದರೂ ನಿಂದಕನನ್ನು ವಧಿಸದಿದ್ದರೆ ಆ ಸಾಧು ಅನಂತ ಸಂಸಾರಿಯಿದ್ದಾನೆ. ಇಂಥ ಪಾಪೀ ಸಾಧುವಿಗೆ ಸಮತಾಭಾವವೆಲ್ಲಿ ಉಳಿಯಿತು, ವೀತರಾಗತೆಯೆಲ್ಲಿ ಉಳಿಯಿತು, ವಿಚಾರ ಮಾಡಿರಿ !

**ಈ ಪಾಪಿಗಳು ಮಹಾನ್ ಶೀಲವಂತರಿಗೂ ದೋಷ ತಗಲಿಸಿ ಅವರನ್ನು ನಿರ್ದೋಷಿಯೆಂದೂ ಹೇಳುತ್ತಾರೆ.** ಭರತ ಚಕ್ರವರ್ತಿಯು ತನ್ನ ಸೋದರಿಯಾದ ಬ್ರಾಹ್ಮಿಯೊಡನೆ ವಿವಾಹವಾಗಿದ್ದನೆಂದು ಹೇಳುತ್ತಾರೆ. ದ್ರೌಪದಿಗೆ ಪಂಚಪತಿಗಳನ್ನು ಹೇಳುತ್ತಾರೆ. ಮತ್ತು ಅದೇ ಪಂಚ ಭರ್ತಾರಿಯನ್ನು ಸತಿಯೆಂದೂ ಹೇಳುತ್ತಾರೆ. ನೀವು ಸತಿಯೆಂದು ಹೇಳುತ್ತಿದ್ದರೆ ಪಂಚಭರ್ತಾರಿಯೆಂದು ಹೇಳಬೇಡಿರಿ ಮತ್ತು ಪಂಚ ಭರ್ತಾರಿಯೆಂದು ಹೇಳುತ್ತಿದ್ದರೆ ಸತಿಯೆಂದು ಹೇಳಬೇಡಿರೆಂದು ಯಾರೋ ಕೇಳಲು ಅವರಿಗೆ ಹೀಗೆ ಹೇಳುತ್ತಾರೆ. ಯಾವ ಪ್ರಕಾರ ಓರ್ವ ದೊರೆಯು ನೂರು ಸ್ತ್ರೀಯರನ್ನು ಗ್ರಹಣ ಮಾಡುವ ನಿಯಮ ತೆಗೆದುಕೊಂಡಿದ್ದರೆ ಅವನಿಗೆ ಶೀಲವಂತತನವೇ ಇದೆ. ಅದೇ ಪ್ರಕಾರ ಸ್ತ್ರೀಯು ಕೂಡ ಪುರುಷರನ್ನು ಗ್ರಹಣ ಮಾಡುವ ಸಂಖ್ಯೆಯ ನಿಯಮ ತೆಗೆದುಕೊಂಡಿದ್ದರೆ ಆ ನಿಯಮದಿಂದ ಅಧಿಕ ಪುರುಷರನ್ನು ಗ್ರಹಣ ಮಾಡದಿದ್ದರೆ ಅವಳಿಗೆ ಶೀಲವಂತತನವೇ ಇರುವುದು.

**ದೇವಗಳ ಮತ್ತು ಮನುಷ್ಯರ ಮಧ್ಯದಲ್ಲಿ ಕಾಮಭೋಗ ಸೇವನೆ ಮಾಡುವುದನ್ನು ಹೇಳುತ್ತಾರೆ.** ವಿಚಾರ ಮಾಡಿ ನೋಡಿದರೆ ವೈಕ್ರಿಯಿಕ ದೇಹಧಾರಿಯ ಮತ್ತು ಸಪ್ತಧಾತುಮಯ ಮಲಿನ ದೇಹಧಾರಿಯ ಸಂಗಮವೆಂದೂ ಆಗುವ ಸಾಧ್ಯತೆಯಿಲ್ಲ.

ಓರ್ವ ಸಾಧುವಿಗೆ ಉಪವಾಸ ವ್ರತವಿರುವುದು ಮತ್ತು ಇನ್ನೋರ್ವ ಸಾಧುವಿನ ಹತ್ತಿರ ಆಹಾರವು ಅಧಿಕ ಏಕತ್ರವಾಗಿದ್ದರೆ **ಗುರುಗಳ ಆಜ್ಞೆಯಿಂದ ಆ ಉಪವಾಸದ ಸಾಧುವು ಆಹಾರದ ಭಕ್ಷಣ ಮಾಡಿದರೂ ಕೂಡ ವ್ರತ ಭಂಗವಾಗುವುದಿಲ್ಲ. ಉಪವಾಸದಲ್ಲಿ ಔಷಧ ತೆಗೆದುಕೊಂಡರೂ ಕೂಡ ದೋಷವು ತಗಲುವುದಿಲ್ಲ.**

ಸಮವಸರಣದಲ್ಲಿ ಭಗವಂತರು ನಗ್ನ ಕುಳಿತಿರುತ್ತಾರೆ, ಆದರೆ ವಸ್ತ್ರಸಹಿತರಾಗಿ ಕಂಡು ಬರುತ್ತಾರೆ. ಸಾಧುವು ಪಾತ್ರೆ, ವಸ್ತ್ರಮೊದಲಾದ ೧೪ ಉಪಕರಣಗಳನ್ನಿಟ್ಟುಕೊಳ್ಳುವುದೇ ಧರ್ಮವಿದೆಯೆಂದು ಹೇಳುತ್ತಾರೆ. ಅದರಂತೆ ಚಾಂಡಾಲ ಮೊದಲಾದವರಿಗೆ ಕೂಡ ಮುಕ್ತಿಯಾಗುತ್ತದೆಯೆಂದು ಹೇಳುತ್ತಾರೆ.

ಮಹಾವೀರ ಭಗವಂತರ ಸಮವಸರಣದಲ್ಲಿ ಸೂರ್ಯ-ಚಂದ್ರರು ವಿಮಾನಸಹಿತ ಬಂದರೆಂದು ಹೇಳುತ್ತಾರೆ. ಇವರಲ್ಲಂತೂ ಶಾಶ್ವತಗತಿಯ ಮರ್ಯಾದೆಯ ಭಂಗವಾದುದನ್ನು ಹೇಳಿದರು. ಒಂದು ವೇಳೆ ಸಾಧುವಿನ ಮನಸ್ಸು ವಿಚಲಿತವಾದರೆ ಶ್ರಾವಕನು ತನ್ನ ಪತ್ನಿಯನ್ನು ಸಾಧುವಿಗೆ ಕೊಟ್ಟು ಅವನ ಕಾಮವೇದನೆ ನಿವಾರಿಸಿ ಆತನ ಮನಸ್ಸನ್ನು ಸ್ಥಿರಮಾಡಿ ಬಿಡಬೇಕು.

ಗಂಗಾದೇವಿಯನ್ನು ಭರತ ಚಕ್ರವರ್ತಿಯು ಐವತ್ತೈದು ಸಾವಿರ ವರುಷದವರೆಗೆ ಭೋಗಿಸಿದನೆಂದು ಹೇಳುತ್ತಾರೆ. ಮತ್ತು ಭೋಗಭೂಮಿಯ ಯುಗಲರಿಗೆ ಮಲ-ಮೂತ್ರಗಳಿರುತ್ತವೆಂದು ಹೇಳುತ್ತಾರೆ. ಯಾವುದೇ ಯುಗಲವು ಸತ್ತು ಹೋದರೆ ಮೂರು ಹರದಾರಿ ಶರೀರವನ್ನು ದೇವತೆಗಳು ಎತ್ತಿ ಭೇರುಂಡ ಮೊದಲಾದ ಪಕ್ಷಿಗಳಿಗೆ ತಿನ್ನಿಸುತ್ತಾರೆ. ಯಾದವ ಮೊದಲಾದ ಸಮಸ್ತ ಕ್ಷತ್ರಿಯರು ಮಾಂಸಭಕ್ಷಣ ಮಾಡುತ್ತಿದ್ದರೆಂದು ಹೇಳುತ್ತಾರೆ.

ಗೌತಮ ಗಣಧರರು ಆನಂದವೆಂಬ ಹೆಸರಿನ ಶ್ರಾವಕನ ಮನೆಗೆ ಅವನ ಶರೀರ ಸೌಖ್ಯವನ್ನು ಕೇಳಲು ಹೋಗಿ ಅಲ್ಲಿ ಅವರು ಸುಳ್ಳು ಮಾತನಾಡಿದರು. ಗಣಧರರು ಎಂದಾದರೂ ತಪ್ಪಿ ಕೂಡ ಸುಳ್ಳು ಮಾತನಾಡುವರೇನು ?

ವೀರಜಿನರು ಜನ್ಮಸಮಯದಲ್ಲಿ ಮೇರು ಪರ್ವತವನ್ನು ಕಂಪಾಯಮಾನ ಮಾಡಿದರೆಂದು ಹೇಳುತ್ತಾರೆ. ಚರ್ಮದಲ್ಲಿ ಇರಿಸಿದ ನೀರು, ತುಪ್ಪ ಮೊದಲಾದವು ನಿರ್ದೋಷವೆಂದು ಹೇಳುತ್ತಾರೆ. ಇವೇ ಮೊದಲಾದ ಸಾವಿರಾರು ಅನರ್ಥ ರೂಪದ ಕಥನಮಾಡಿ ಕಲ್ಪಿತಸೂತ್ರಗಳ ರಚನೆಮಾಡಿದ್ದಾರೆ. ಅವುಗಳ ವಿಶೇಷ ವರ್ಣನೆಯನ್ನು ಎಷ್ಟೆಂದು ಮಾಡುವುದು ?

## ಮೂರ್ತಿ ಪೂಜೆಯ ವಿಷಯದಲ್ಲಿ ವಿಚಾರ

ಇದೇ ಶ್ವೇತಾಂಬರರಲ್ಲಿ ಮಹಾಭ್ರಷ್ಟವಾದ ಒಂದು ಢೂಂಢಿಯಾಮತದವರೂ ಆಗಿದ್ದಾರೆ. ಅವರು ಬಿಂಬದ ವಂದನೆ ಮಾಡುವುದರ ನಿಷೇಧಮಾಡುತ್ತಾರೆ. ಮತ್ತು ಈ ಬಿಂಬವಂತೂ ಏಕೇಂದ್ರಿಯ ಪಾಷಾಣದ್ದಿದೆ. ನೀವು ಪಂಚೇಂದ್ರಿಯರಿದ್ದು ಅದರ ಮುಂದೇಕೆ ನರ್ತಿಸುತ್ತೀರಿ, ಏಕೆ ವಂದನೆ ಮಾಡುತ್ತೀರಿ ? ಆ ಬಿಂಬವು ತಮಗೆ ಯಾವ ಪ್ರಕಾರದ ಶುಭಗತಿಯನ್ನು ಕೊಡುವುದೇನು ? ಅದಕ್ಕಾಗಿ ಢೂಂಢಿಯಾ ಸಾಧಗಳಿಗೆ ವಂದನೆ ಮಾಡಿರೆಂದು ಸರಳ ಸ್ವಭಾವದ ಜನರಿಗೆ ಹೇಳುತ್ತಾರೆ.

ಅವರಿಗೆ ನಾವು ಕೇಳುವುದೇನೆಂದರೆ ನಿಮ್ಮ ಮಾಂಸಮಯ, ಮಲಿನ ಚರ್ಮದಿಂದ ಆವರಿಸಿದ, ಮಲ-ಮೂತ್ರಾದಿಗಳಿಂದ ತುಂಬಿದ, ಕಫ, ಜೊಲ್ಲುಗಳಿಂದ ಲಿಪ್ತವಾದ ಶರೀರದ ದರ್ಶನ ಮಾಡುವುದರಿಂದ ಯಾವ ಲಾಭವಿದೆ ? ಆತ್ಮಜ್ಞಾನವಿಲ್ಲದ ಸಮಸ್ತ ಜಗತ್ತಿನ ಅಭಕ್ಷ್ಯ ಪದಾರ್ಥಗಳನ್ನು ತಿನ್ನುವಂಥ ನಿಮ್ಮ ಶರೀರವನ್ನು ನೋಡುವುದೆಂದರೆ ಕರ್ಮ ಬಂಧದ ಕಾರಣವಿದೆ. ನಿಮ್ಮ ಕಲ್ಪಿತ ಸೂತ್ರ ಕೇಳಿದರೆ ನಮ್ಮ ಸಮ್ಯಕ್ತ್ವದ ನಾಶವಾಗುತ್ತದೆ ಮತ್ತು ಅದು ನವೀನ ಕರ್ಮಬಂಧದ ಕಾರಣವೇ ಇದೆ. ಜಿನೇಂದ್ರರ ಧಾತು ಪಾಷಾಣದ ಪ್ರತಿಬಿಂಬದ ದರ್ಶನಮಾತ್ರದಿಂದ ಪರಮ ವೀತರಾಗ ಸರ್ವಜ್ಞರ ಧ್ಯಾನವು ಸ್ಪಷ್ಟ ಪ್ರಕಟವಾಗಿ ಬಿಡುತ್ತದೆ, ಪರಮಶಾಂತಿ ಮತ್ತು ಶುಭೋಪಯೋಗವಾಗುತ್ತದೆ. ನಿಮ್ಮ ಪಾಪಮಯ ಶರೀರ ನೋಡುವುದರಿಂದ ಪಾಪದ ಬಂಧವಾಗುತ್ತದೆ.

ಅತ್ಯಂತ ಅಭದ್ರರೂಪ, ವಿಕಾರೀ, ರಾಗ-ದ್ವೇಷ ಕಷಾಯ ಮೊದಲಾದ ಪಾಪ ಮಲ ಸಹಿತ, ಅಯೋಗ್ಯ ಅಭಕ್ಷ್ಯ ಆಹಾರದ ಲಂಪಟ, ಹಿಂಸಾದಿ ಪಾಪಗಳಲ್ಲಿ ಪ್ರವೃತ್ತಿ ಮಾಡುವಂಥ, ಅನ್ಯ ಜೀವರುಗಳನ್ನು ಮಿಥ್ಯಾ ಮಾರ್ಗದ ಮೇಲೆ ನಡೆಸುವಂಥ ನಿಮ್ಮನ್ನು ನೋಡುವುದರಿಂದಲೇ ಘೋರ ಪಾಪದ ಬಂಧವಾಗುತ್ತದೆ. **ನಿಮ್ಮಗಳ ಪ್ರಶಂಸೆ ಮಾಡುವಂಥವರಿಗೆ ಎಪ್ಪತ್ತು ಕೋಟಾಕೋಟಿ ಸಾಗರದ ಸ್ಥಿತಿಯುಳ್ಳ ಮೋಹನೀಯ ಕರ್ಮದ ಬಂಧವಾಗುತ್ತದೆ.**

**ಈ ಕಲಿಕಾಲದಲ್ಲಿ ಜೈನಧರ್ಮದ ನಿಜವಾದ ಮಾರ್ಗವನ್ನು ಶ್ವೇತಾಂಬರರು ಕೆಡಿಸಿಬಿಟ್ಟಿದ್ದಾರೆ.** ಅದಕ್ಕಾಗಿ ಇಲ್ಲಿ ಅವರ ಸ್ವರೂಪ ತಿಳಿಸಿಕೊಡುವ ಸಲುವಾಗಿ ಪ್ರಕರಣವಶದಿಂದ ಆ ಶ್ವೇತಾಂಬರ ಮತದ ಸ್ವರೂಪದ ವರ್ಣನೆ ಮಾಡಿದೆ. ಇವರ ಮತದಲ್ಲಿ ನಿಜವಾದ ಆಪ್ತತನವು ಹೇಗಿರುವುದು ? ಅನ್ಯ ಮತದ ದೇವಗಳು ಹೇಗೆ ಪ್ರತ್ಯಕ್ಷ ಭಯಭೀತ ಹಾಗೂ ಅಸಮರ್ಥವಾಗಿ ಚಕ್ರ, ತ್ರಿಶೂಲ, ಕತ್ತಿ ಮೊದಲಾದುವನ್ನು ಧಾರಣ ಮಾಡಿದ್ದಾರೆ. ಕಾಮುಕರಾಗಿ ಸ್ತ್ರೀಯರ ವಶೀಭೂತರಾಗುತ್ತಿದ್ದಾರೆ. ಹಸಿವು, ಬಾಯಾರಿಕೆ, ರಾಗ-ದ್ವೇಷ, ನಿದ್ರೆ, ವೈರ ಮೊದಲಾದವು ಸ್ಪಷ್ಟವಾಗಿ ಕಂಡುಬರುತ್ತಿವೆ. ಅವರಲ್ಲಿ ನಿರ್ದೋಷತೆಯು ಹೇಗಿರುವ ಸಾಧ್ಯತೆಯಿದೆ ? ಆ ಇಂದ್ರಿಯಜ್ಞಾನ ಸಹಿತರಾದ ಜ್ಞಾನಿಗಳಲ್ಲಿ ಸರ್ವಜ್ಞತೆ, ಆಪ್ತತೆಗಳು ಎಲ್ಲಿಂದ ಬರುವವು ? **ಆಪ್ತತೆಯಂತೂ ಸರ್ವಜ್ಞ, ವೀತರಾಗಿ, ಪರಮಹಿತೋಪದೇಶಗೇನೇ ಸಂಭವಿಸುತ್ತದೆ.**

ಈಗ ಪೂರ್ವಾಪರ ವಿರೋಧ ಮೊದಲಾದ ದೋಷಗಳಿಂದ ರಹಿತ ಪದಾರ್ಥಗಳ ಯಥಾರ್ಥ ಉಪದೇಶ ಕೊಡುವಂಥ ಆ ಶಾಸ್ತಾನ ನಾಮದ ಸಾರ್ಥಕತೆಯನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ಪರಮೇಷ್ಠೀ ಪರಂಜ್ಯೋತಿಃ ವಿರಾಗೋ ವಿಮಲಃ ಕೃತೀ ।**
**ಸರ್ವಜ್ಞೋಽನಾದಿ ಮಧ್ಯಾಂತಃ ಸಾರ್ವಃ ಶಾಸ್ತ್ರೋಪಲಾಲ್ಯತೇ ॥೭॥**

**ಅರ್ಥ :-** ಯಾರು ಅರ್ಥಸಹಿತ ಈ ಎಂಟು ಹೆಸರುಗಳನ್ನು ಸಾರ್ಥಕ ಮಾಡುತ್ತಾರೆ ಅವರನ್ನು ಶಾಸ್ತಾವೆಂದು ಹೇಳುತ್ತಾರೆ. ಪರಮೇಷ್ಠೀ, ಪರಂಜ್ಯೋತಿ, ವಿರಾಗ, ವಿಮಲ, ಕೃತೀ, ಸರ್ವಜ್ಞ, ಅನಾದಿ ಮಧ್ಯಾಂತ ಮತ್ತು ಸಾರ್ವವೆಂಬ ಈ ಎಂಟು ಸಾರ್ಥಕ ನಾಮಗಳು ಯಾವನಿಗೆ ಇವೆ ಅವನು ಶಾಸ್ತಾ ಇದ್ದಾನೆ, ಅವನನ್ನೇ ಆಪ್ತನೆಂದು ಹೇಳುತ್ತಾರೆ.

**ಭಾವಾರ್ಥ :- ಪರಮೇಷ್ಠೀ** ಎಂದರೆ ಪರಮ ಇಷ್ಟ ಇಂದ್ರಾದಿಗಳ ಮೂಲಕ ವಂದನೀಯವಿರುವ ಆ ಪರಮಾತ್ಮ ಸ್ವರೂಪದಲ್ಲಿ ಸ್ಥಿರಗೊಂಡವನು ಪರಮೇಷ್ಠಿಯಿದ್ದಾನೆ. ಅವನು ಅಂತರಂಗದಲ್ಲಂತೂ ಘಾತಿಕರ್ಮಗಳ ನಾಶದಿಂದ ಪ್ರಕಟವಾದ ಅನಂತಜ್ಞಾನ, ದರ್ಶನ, ಸುಖ, ವೀರ್ಯ ಸ್ವರೂಪವಾದ ತನ್ನ ಆ ನಿರ್ವಿಕಾರ, ಅವಿನಾಶೀ ಪರಮಾತ್ಮಸ್ವರೂಪದಲ್ಲಿ ಸ್ಥಿರನಿದ್ದಾನೆ, ಮತ್ತು ಬಾಹ್ಯದಲ್ಲಿ ಇಂದ್ರ ಮೊದಲಾದ ಅಸಂಖ್ಯಾತ ದೇವಗಳಿಂದ ವಂದನೀಯವಿರುವ ಸಮವಸರಣ ಸಭೆಯ ಮಧ್ಯದಲ್ಲಿ ಮೂರು ಪೀಠಿಕೆಗಳ ಮೇಲೆ ದಿವ್ಯಸಿಂಹಾಸನದಲ್ಲಿ ನಾಲ್ಕು ಅಂಗುಲ ಅಂತರಾಳದಲ್ಲಿ ಅರವತ್ತಾ ನ್ಲುಕ್ಕ ಚಾಮರಸಹಿತ ವಿರಾಜಮಾನರಿದ್ದಾರೆ ಮೂರು ಛತ್ರ ಮೊದಲಾದ ದಿವ್ಯಸಂಪತ್ತಿನಿಂದ ವಿಭೂಷಿತರಿದ್ದಾರೆ. ಇಂದ್ರಾದಿಕದೇವ ಮತ್ತು ಮನುಷ್ಯ ಮೊದಲಾದ ನಿಕಟ ಭವ್ಯರಿಗೆ ಧರ್ಮೋಪದೇಶರೂಪದ ಅಮೃತದ ಪಾನ ಮಾಡಿಸುತ್ತ ಜನ್ಮ-ಜರೆ-ಮರಣಗಳ ದುಃಖಗಳನ್ನು ನಿರಾಕರಣ ಮಾಡುತ್ತ ವಿರಾಜಮಾನರಿದ್ದಾರೆ. **ಇಂಥ ಭಗವಾನ ಆಪ್ತರನ್ನು ಪರಮೇಷ್ಠಿಯೆಂದು ಹೇಳುತ್ತಾರೆ.**

ಯಾರು ಕರ್ಮಗಳ ಆಧೀನತೆಯಿಂದ ಇಂದ್ರಿಯಗಳ ಕಾಮಭೋಗ ಮೊದಲಾದ ವಿಷಯಗಳಲ್ಲಿ ಹಾಗೂ ವಿನಾಶಶೀಲ ಸಂಪತ್ತು ರೂಪದ ರಾಜ್ಯ ಐಶ್ವರ್ಯದಲ್ಲಿ ಮಗ್ನರಾಗಿ ಸ್ತ್ರೀಯರ ವಶವರ್ತಿಯಾಗಿ ವಿಷಯಗಳ ದಾಹದೊಡನೆ ಇರುತ್ತಲಿದ್ದಾರೆ ಅವರಿಗೆ ಪರಮೇಷ್ಠಿತನವು ಸಂಭವಿಸುವುದೇ ಇಲ್ಲ.

ಅವರು **ಪರಂಜ್ಯೋತಿ**ಯಿದ್ದಾರೆ. ಪರಂ ಎಂದರೆ ಆವರಣ ರಹಿತ, ಜ್ಯೋತಿ ಎಂದರೆ ಅತೀಂದ್ರಿಯ ಅನಂತ ಜ್ಞಾನದಲ್ಲಿ ಲೋಕಾಲೋಕವರ್ತಿ ಸಮಸ್ತ ಪದಾರ್ಥಗಳು ತಮ್ಮ ತ್ರಿಕಾಲವರ್ತಿ ಅನಂತಗುಣ-ಪರ್ಯಾಯಗಳೊಡನೆ

ಯುಗಪತ್ ಪ್ರತಿಬಿಂಬಿತವಾಗುತ್ತಲಿವೆ. ಹೀಗೆ ಭಗವಂತರು ಪರಮಜ್ಯೋತಿಸ್ವರೂಪರಾದ ಆಪ್ತರಿದ್ದಾರೆ. ಬೇರೆ ಯಾರು ಇಂದ್ರಿಯಜನ್ಯ ಜ್ಞಾನದಿಂದ ಅಲ್ಪಕ್ಷೇತ್ರಾವರ್ತೀ ವರ್ತಮಾನ ಸ್ಥೂಲ ಪದಾರ್ಥಗಳನ್ನು ಕ್ರಮ-ಕ್ರಮದಿಂದ ತಿಳಿಯುತ್ತಾರೆ ಅವರನ್ನು ಪರಂಜ್ಯೋತಿಯೆಂದು ಹೇಗೆ ಹೇಳಲಾಗುವುದು ?

ಅವರಿಗೆ ಮೋಹನೀಯ ಕರ್ಮದ ನಾಶವಾಗುವುದರಿಂದ ಸಮಸ್ತ ಪರದ್ರವ್ಯಗಳಲ್ಲಿ ರಾಗ-ದ್ವೇಷಗಳ ಅಭಾವವಾಗುವುದರಿಂದ ಇಚ್ಛಾರಹಿತ ಪರಮವೀತರಾಗತೆಯು ಪ್ರಕಟವಾಗಿದೆ. ಅವರು ವಸ್ತುವಿನ ಸತ್ಯಸ್ವರೂಪವನ್ನು ತಿಳಿದುಕೊಂಡ ಮೇಲೆ ಯಾವುದರಲ್ಲಿ ರಾಗ ಮತ್ತು ದ್ವೇಷ ಮಾಡುವರು ? ಹೇಗೆ ವಸ್ತುವಿನ ಸ್ವಭಾವವಿದೆ ಹಾಗೆ ರಾಗ-ದ್ವೇಷರಹಿತರಾಗಿ ತಿಳಿಯುತ್ತಾರೆ. ಹೀಗೆ **ವಿರಾಗ** ನಾಮಸಹಿತರಾದ ಅರಹಂತರೇ ಆಪ್ತರಿದ್ದಾರೆ. ಯಾರು ಕಾಮುಕ ವಿಷಯಗಳಲ್ಲಿ ಆಸಕ್ತ, ಗೀತ-ನೃತ್ಯ-ವಾದ್ಯಗಳಲ್ಲಿ ಆಸಕ್ತ ಜಗತ್ತಿನ ಸ್ತ್ರೀಯರನ್ನು ಮರುಳು ಮಾಡುವಲ್ಲಿ, ವೈರಿಗಳನ್ನು ಕೊಂದುಹಾಕಿ ಜನರಲ್ಲಿ ತಮ್ಮ ಶೂರತನವನ್ನು ಪ್ರಕಟಮಾಡುವ ಇಚ್ಛೆಯುಳ್ಳವರಿಗೆ ವಿರಾಗತನವು ಎಂದೂ ಸಂಭವಿಸುವುದಿಲ್ಲ.

ಯಾರ ಕಾಮ,ಕ್ರೋಧ, ಮಾನ, ಮಾಯೆ, ಲೋಭ ಮೊದಲಾದ ಭಾವಮಲವು ನಷ್ಟವಾಗಿ ಹೋಗಿದೆ, ಜ್ಞಾನಾವರಣ ಮೊದಲಾದ ಕರ್ಮಮಲವು ನಷ್ಟವಾಗಿ ಹೋಗಿದೆ, ಮಲ-ಮೂತ್ರ-ವಾತ-ಪಿತ್ತ ಮೊದಲಾದ ಶರೀರ ಮಲವು ನಷ್ಟವಾಗಿ ಹೋಗಿದೆ, ನಿಗೋದ ಜೀವಗಳಿಂದ ರಹಿತ, ಛಾಯಾರಹಿತ, ಕಾಂತಿಯುಕ್ತ, ಕ್ಷುಧೆ, ತೃಷೆ, ರೋಗ, ನಿದ್ರೆ, ಭಯ, ವಿಸ್ಮಯ ಮೊದಲಾದವುಗಳಿಲ್ಲದ ಪರಮಔದಾರಿಕ ಶರೀರದಲ್ಲಿ ವಿರಾಜಮಾನರಾದ ಆ ಭಗವಾನ ಆಪ್ತರಾದ ಅರಹಂತರೇ **ವಿಮಲ**ರಿದ್ದಾರೆ. ಬೇರೆ ಯಾರು ಕಾಮ-ಕ್ರೋಧ ಮೊದಲಾದ ಮಲಗಳಿಂದ ಯುಕ್ತರಿದ್ದಾರೆ ಅವರು ವಿಮಲರಿಲ್ಲ.

ಯಾರಿಗೆ ಏನೂ ಮಾಡುವುದು ಬಾಕಿ ಉಳಿದಿಲ್ಲ, ತಮ್ಮ ಶುದ್ಧ ಅನಂತ ಜ್ಞಾನಮಯ ಸ್ವರೂಪಕ್ಕೆ ಪ್ರಾಪ್ತರಾಗಿ ವ್ಯಾಧಿ - ಉಪಾಧಿ ರಹಿತ ಕೃತಕೃತ್ಯರಾಗಿದ್ದಾರೆ ಆ ಭಗವಾನ ಆಪ್ತರೇ **ಕೃತೀ** ಇದ್ದಾರೆ. ಬೇರೆ ಯಾರು ಜನ್ಮ-ಮರಣಾದಿಗಳಿಂದಯುಕ್ತ ಚಕ್ರ, ಆಯುಧ, ತ್ರಿಶೂಲ, ಗದೆಗಳಿಂದ ಸಹಿತ, ಕನಕ-ಕಾಮಿನಿಯರಲ್ಲಿ ಆಸಕ್ತ, ಭೋಜನ-ಪಾನ, ಕಾಮ-ಭೋಗಾದಿಗಳ ಅಭಿಲಾಷೆಯಿಂದ ಯುಕ್ತ, ಶತ್ರುಗಳನ್ನು ಕೊಲ್ಲುವ ಆಕುಲತೆಯನ್ನು ಹೊಂದಿದವರಿದ್ದಾರೆ ಅವರು ಕೃತೀ ಇಲ್ಲ.

ಯಾರು ಇಂದ್ರಿಯ ಮೊದಲಾದ ಪರದ್ರವ್ಯಗಳ ಸಹಾಯವಿಲ್ಲದೆ ಯುಗಪತ್ ಸಮಸ್ತ ದ್ರವ್ಯ-ಗುಣ-ಪರ್ಯಾಯಗಳನ್ನು ಕ್ರಮರಹಿತ ಪ್ರತ್ಯಕ್ಷ ತಿಳಿಯುತ್ತಾರೆ. ಆ ಭಗವಾನ ಆಪ್ತರೇ ಸರ್ವಜ್ಞರಿದ್ದಾರೆ. ಅನ್ಯ ಆ ಇಂದ್ರಿಯಾಧೀನ ಜ್ಞಾನ ಸಹಿತರಿರುವವರು **ಸರ್ವಜ್ಞ**ರಿಲ್ಲ.

ಅವರು ಜೀವದ್ರವ್ಯದ ಅಪೇಕ್ಷೆಯಿಂದ ಹಾಗೂ ಜ್ಞಾನ-ದರ್ಶನ-ಸುಖ-ವೀರ್ಯ ಗುಣಗಳ ಅಪೇಕ್ಷೆಯಿಂದ ಆದಿ-ಮಧ್ಯ-ಅಂತಗಳಿಲ್ಲದಿರುವುದರಿಂದ ಅನಾದಿ ಮಧ್ಯಾಂತರಿದ್ದಾರೆ. ಎಂದರೆ ಭಗವಾನ ಆಪ್ತರು ಅನಾದಿ ಕಾಲದಿಂದ ಇದ್ದಾರೆ ಮತ್ತು ಎಂದೂ ಕೊನೆಗೆ ಪ್ರಾಪ್ತರಾಗದಿರುವುದರಿಂದ **ಅನಾದಿ ಮಧ್ಯಾಂತ**ರಿದ್ದಾರೆ. ಯಾರ ಮತದಲ್ಲಿ ಆಪ್ತನ ಜನ್ಮ-ಮರಣ, ಜೀವದ ನವೀನ ಉತ್ಪನ್ನವಾಗುವಿಕೆ ಹಾಗೂ ಜೀವದ ಜ್ಞಾನಾದಿ ಗುಣಗಳ ನವೀನ ಉತ್ಪನ್ನವಾಗುವುದನ್ನು ಮನ್ನಿಸುತ್ತಾರೆ ಅವರಲ್ಲಿ **ಅನಾದಿ ಮಧ್ಯಾಂತ**ತನವು ಸಂಭವಿಸುವುದಿಲ್ಲ.

ಯಾರ ವಚನ ಹಾಗೂ ಕಾಯದ ಪ್ರವೃತ್ತಿಯು ಸಮಸ್ತ ಜೀವಗಳ ಹಿತದ ಸಲುವಾಗಿಯೇ ಇರುತ್ತದೆ. ಆ ಭಗವಾನ್ ಆಪ್ತರು **ಸಾರ್ವ**ರೆಂದು ಕರೆಸಿಕೊಳ್ಳುತ್ತಾರೆ, ಬೇರೆ ಯಾರು ಕಾಮ,ಕ್ರೋಧ, ಯುದ್ಧ ಮೊದಲಾದ ಹಿಂಸಾಪ್ರಧಾನವಾದ ಸಮಸ್ತ ಪಾಪಗಳಿಂದ ನಿಜ-ಪರದ ಅಹಿತದಲ್ಲಿ ಪ್ರವರ್ತನೆ ಮಾಡುತ್ತಾರೆ, ಮಾಡಿಸುತ್ತಾರೆ ಅವರಿಗೆ ಸಾರ್ವವೆಂಬ ಹೆಸರೇ ಸಂಭವಿಸುವುದಿಲ್ಲ.

ಈ ಪ್ರಕಾರ ಎಂಟು ವಿಶೇಷಣಗಳೊಡನೆ ಸಾರ್ಥಕ ನಾಮಗಳ ಮೂಲಕ **ಶಾಸ್ತಾ** ಎಂದರೆ ಆ ಆಪ್ತರ ಅಸಾಧಾರಣ ಸ್ವರೂಪ ಹೇಳಿದೆ. 'ಶಾಸ್ತೀತಿ ಶಾಸ್ತಾ' ಈ ನಿರುಕ್ತಿಯ ಅರ್ಥವೆಂದರೆ ಯಾರು ನಿಕಟ ಭವ್ಯರಾದ ಶಿಷ್ಯರಿದ್ದಾರೆ ಅವರಿಗೆ ಹಿತದ ಶಿಕ್ಷಣ ಕೊಡುವಂಥವನು ಅವನು ಶಾಸ್ತಾನೆಂದು ಕರೆಸಿಕೊಳ್ಳುತ್ತಾನೆ.

ಈಗ ಆ ಶಾಸ್ತಾ ಎಂದರೆ ಆಪ್ತನು ಸತ್ಪುರುಷರಿಗೆ ಸ್ವರ್ಗ ಹಾಗೂ ಮೋಕ್ಷವನ್ನು ಪ್ರಾಪ್ತ ಮಾಡಿಸುವಂಥ ಶಿಕ್ಷಣ ಕೊಟ್ಟು ತಮ್ಮ ಪ್ರಶಂಸೆ - ಲಾಭ - ಪೂಜಾದಿ ಫಲವನ್ನು ಬಯಸುವುದಿಲ್ಲವೆಂಬ ಕಥನ ಮಾಡುವಂಥ ಸೂತ್ರ ಹೇಳುತ್ತಾರೆ, -

**ಅನಾತ್ಮಾರ್ಥಂ ಬಿನಾರಾಗೈಃ ಶಾಸ್ತಾ ಶಾಸ್ತಿ ಸತೋ ಹಿತಮ್ ।**
**ಧ್ವನನ್ ಶಿಲ್ಪಿಕರಸ್ಪರ್ಶಾನ್ಮುರಜಃ ಕಿಮಪೇಕ್ಷತೇ ॥೮॥**

**ಅರ್ಥ :-** ಶಾಸ್ತಾ ಆ ಧರ್ಮೋಪದೇಶರೂಪದ ಶಿಕ್ಷಣ ಕೊಡುವಂಥ ಅರಹಂತ ಆಪ್ತರಿದ್ದಾರೆ ಅವರು ಅಸತ್ಯಾರ್ಥ ಎಂದರೆ ತಮ್ಮ ಖ್ಯಾತಿ, ಲಾಭ, ಪೂಜಾದಿಗಳ ಪ್ರಯೋಜನವಿಲ್ಲದೆಯೇ ಮತ್ತು ಶಿಷ್ಯರಲ್ಲಿ ರಾಗಭಾವವಿಲ್ಲದೆಯೇ ಸತ್ಪುರುಷರಾದ ಯಾವ ನಿಕಟ ಭವ್ಯರಿದ್ದಾರೆ ಅವರಿಗೆ ಹಿತರೂಪದ ಶಿಕ್ಷಣ ಕೊಡುತ್ತಾರೆ. ಹೇಗೆ ವಾದ್ಯ ಬಾರಿಸುವಂಥ ಶಿಲ್ಪಿಯ ಕೇವಲ ಕೈಯ ಸ್ಪರ್ಶ ಪಡೆದು ಮೃದಂಗವು ಅನೇಕ ಪ್ರಕಾರದಿಂದ ಧ್ವನಿ ಮಾಡಲಾರಂಭಿಸುತ್ತದೆ ಅದಕ್ಕೆ ಪ್ರತಿಯಾಗಿ ಆ ಮೃದಂಗವು ಏನನ್ನೂ ಬಯಸುವುದೇ ಇಲ್ಲ.

**ಭಾವಾರ್ಥ :- ಸಂಸಾರೀ ಜನರು ಲೋಕದಲ್ಲಿ ಎಷ್ಟೇ ಕಾರ್ಯ ಮಾಡಿದರೂ ಅವೆಲ್ಲವು ತಮ್ಮ ಅಭಿಮಾನ, ಲೋಭ, ಯಶಸ್ಸು, ಪ್ರಶಂಸೆ ಮೊದಲಾದವುಗಳ ಸಲುವಾಗಿ ಮಾಡುತ್ತಾರೆ.** ಆದರೆ ಭಗವಾನ ಅರಹಂತ ಆಪ್ತರು ತಮ್ಮ ಯಾವುದೇ ಪ್ರಯೋಜನವಿಲ್ಲದೆ, ಅಪೇಕ್ಷೆಯಿಲ್ಲದೆ ಜಗತ್ತಿನ ಜೀವರುಗಳಿಗೆ ಹಿತದ ಶಿಕ್ಷಣ ಕೊಡುತ್ತಾರೆ. ಯಾವ ಪ್ರಕಾರ ಮೇಘವು ಪ್ರಯೋಜನವಿಲ್ಲದೆಯೇ ಜನರ ಪುಣ್ಯದ ಉದಯದ ನಿಮಿತ್ತದಿಂದ ಉತ್ತಮ ದೇಶಗಳಲ್ಲಿ ಹೋಗುತ್ತದೆ, ಗರ್ಜನೆ ಮಾಡುತ್ತದೆ ಮತ್ತು ಪ್ರಚುರ ಜಲವೃಷ್ಟಿ ಮಾಡುತ್ತದೆ; ಅದೇ ಪ್ರಕಾರ ಭಗವಾನ ಆಪ್ತರು ಕೂಡ ಜನರ ಪುಣ್ಯದ ಉದಯದ ನಿಮಿತ್ತದಿಂದ ಉತ್ತಮ ದೇಶಗಳಲ್ಲಿ ವಿಹಾರಮಾಡುತ್ತಾರೆ. ಮತ್ತು ಧರ್ಮರೂಪ ಅಮೃತದ ವೃಷ್ಟಿ ಮಾಡುತ್ತ ಉಪದೇಶ ಕೊಡುತ್ತಾರೆ. ಏಕೆಂದರೆ **ಸತ್ಪುರುಷರ ಪ್ರವೃತ್ತಿಯು ಎಂದರೆ ಯಾವ ಆಚರಣವಿರುತ್ತದೆ ಅದು ಇತರರಿಗೆ ಉಪಕಾರ ಮಾಡುವ ಸಲುವಾಗಿಯೇ ಇರುತ್ತದೆ.**

ಯಾವ ಪ್ರಕಾರ ಕಲ್ಪವೃಕ್ಷ, ಆಮ್ರ ಮೊದಲಾದ **ವೃಕ್ಷ**ಗಳು ಧಾನ್ಯಾದಿ **ಕಾಳುಗಳು** ಅನ್ಯಜೀವಗಳಿಗೆ ಉಪಕಾರದ ಸಲುವಾಗಿಯೇ ಫಲಿಸುತ್ತವೆ ; **ಪರ್ವತ**ಗಳು ಚಿನ್ನ-ರನ್ನಾದಿಗಳನ್ನು, ಪ್ರಚುರ ಜಲವನ್ನು, ಅನೇಕ ವೃಕ್ಷಾದಿಗಳನ್ನು ಯಾವುದೇ ಇಚ್ಛೆಯಿಲ್ಲದೆ ಜಗತ್ತಿನ ಉಪಕಾರದ ಸಲುವಾಗಿಯೇ ಧಾರಣ ಮಾಡುತ್ತವೆ. **ಸಮುದ್ರ**ಗಳು ರತ್ನಾದಿಗಳನ್ನು ಹಸುಗಳು ಹಾಲನ್ನು ಅನ್ಯರ ಉಪಕಾರದ ಸಲುವಾಗಿಯೇ ಧಾರಣ ಮಾಡುತ್ತವೆ; **ದಾತೃ**ಗಳು ಇತರರ ಉಪಕಾರದ ಸಲುವಾಗಿಯೇ ಧನದ ಸಂಗ್ರಹ ಮಾಡುತ್ತಾರೆ. ಅದೇ ಪ್ರಕಾರ **ಸತ್ಪುರುಷರು ಉತ್ತಮ ವಚನಗಳನ್ನು ಪರೋಪಕಾರದ ಸಲುವಾಗಿಯೇ ಯಾವುದೇ ಅಪೇಕ್ಷೆಯ ಭಾವವಿಲ್ಲದೆ ಆಡುತ್ತಾರೆ.** ಹೆಚ್ಚೇನು ಹೇಳುವುದು ಎಷ್ಟು ಉಪಕಾರಕವಾದ ಪದಾರ್ಥಗಳಿವೆ ಅವೆಲ್ಲವು ಯಾವುದೇ ಇಚ್ಛೆಯ ಭಾವವಿಲ್ಲದೆ ಜನರ ಪುಣ್ಯದ ಪ್ರಭಾವದಿಂದ ಪ್ರಕಟವಾಗುತ್ತವೆ. ಅದೇ ಪ್ರಕಾರ ಭಗವಾನ ಆಪ್ತರು ಕೂಡ ಯಾವುದೇ ಪ್ರಕಾರದ ಇಚ್ಛೆಯಿಲ್ಲದೆಯೇ ಜನರಿಗೆ ಪರಮ ಉಪಕಾರವಾಗುವ ಸಲುವಾಗಿಯೇ ಧರ್ಮರೂಪದ ಹಿತೋಪದೇಶ ಕೊಡುತ್ತಾರೆ.

ಈ ಪ್ರಕಾರ ಆಪ್ತನ ಸ್ವರೂಪವನ್ನು ನಾಲ್ಕು ಸೂತ್ರಗಳಲ್ಲಿ ಹೇಳಿ, ಈಗ ಸತ್ಯ ಆಗಮದ ಲಕ್ಷಣ ಹೇಳುವಂಥ ಸೂತ್ರ ಹೇಳುತ್ತಾರೆ, -

**ಆಪ್ತೋಪಜ್ಞಮನುಲ್ಲಂಘ್ಯ ಮದೃಷ್ಟೇಷ್ಟವಿರೋಧಕಮ್ ।**
**ತತ್ತ್ವೋಪದೇಶಕೃತ್ಸಾರ್ವಂ ಶಾಸ್ತ್ರಂ ಕಾಪಥಘಟ್ಟನಮ್ ॥೯॥**

**ಅರ್ಥ :-** ಯಾವುದು ಸರ್ವಜ್ಞ ವೀತರಾಗರು ಹೇಳಿದುದಿದೆ, ಯಾವ ವಾದಿ-ಪ್ರತಿವಾದಿಗಳಿಂದ ಉಲ್ಲಂಘನೆ ಮಾಡುವ ಸಾಧ್ಯತೆಯಿಲ್ಲ, ದೃಷ್ಟ ಎಂದರೆ ಪ್ರತ್ಯಕ್ಷ ಮತ್ತು ಇಷ್ಟ ಎಂದರೆ ಅನುಮಾನದ ಮೂಲಕ ಅದರಲ್ಲಿ ವಿರೋಧವು ಬರುವುದಿಲ್ಲ, ತತ್ತ್ವ ಎಂದರೆ ಹೇಗೆ ವಸ್ತುವಿನ ಸ್ವರೂಪವಿದೆ ಹಾಗೆ ಉಪದೇಶ ಮಾಡುವಂಥದ್ದಿದೆ, ಸಮಸ್ತ ಜೀವಗಳಿಗೆ ಹಿತರೂಪವಿದೆ ಮತ್ತು ಕುಮಾರ್ಗ ಎಂದರೆ **ಮಿಥ್ಯಾಮಾರ್ಗದ ವಿರೋಧ ಮಾಡುವಂಥದ್ದಿದೆ** ಅದನ್ನು ಶಾಸ್ತ್ರವೆಂದು ಹೇಳುತ್ತಾರೆ. ಈ ಪ್ರಕಾರ ಆರು ವಿಶೇಷಣಗಳೊಡನೆ ಶಾಸ್ತ್ರದ ಸ್ವರೂಪವನ್ನು ಹೇಳಲಾಗಿದೆ.

ವರ್ತಮಾನದಲ್ಲಿ ಕಾಲದೋಷದ ನಿಮಿತ್ತದಿಂದ ಬಹಳಷ್ಟು ಮಿಥ್ಯಾಮಾರ್ಗಿಗಳು ಉತ್ಪನ್ನರಾಗಿದ್ದಾರೆ, ಅವರು ತಮ್ಮ ಅಭಿಮಾನ ಹಾಗೂ ವಿಷಯ-ಕಷಾಯಗಳ ಪೋಷಣೆ ಮಾಡುವ ಸಲುವಾಗಿ ಅನೇಕ ಅಸತ್ಯ ಉಪದೇಶ ಕೊಡುವಂಥ ಶಾಸ್ತ್ರಗಳನ್ನು ರಚಿಸಿ ಜಗತ್ತನ್ನು ಸತ್ಯಮಾರ್ಗದಿಂದ ಭ್ರಷ್ಟ ಮಾಡಿ ಬಿಟ್ಟಿದ್ದಾರೆ. **ಜಗತ್ತಿನಲ್ಲಿ ಎಷ್ಟು ಮತಗಳು ನಡೆಯುತ್ತಲಿವೆ ಅವೆಲ್ಲವು ಶಾಸ್ತ್ರಗಳ ಮೂಲಕವೇ ನಡೆಯುತ್ತಲಿವೆ.** ಶಾಸ್ತ್ರವಿಲ್ಲದೆ ಯಾವ ಮತವಿಲ್ಲವೆಂಬ ಅಭಿಪ್ರಾಯವನ್ನು ತಿಳಿಯಬೇಕು.

ಬ್ರಾಹ್ಮಣ ಮೊದಲಾದವರಿಗಂತೂ ವೇದ, ಸ್ಮೃತಿ, ಪುರಾಣಗಳೇ ಶಾಸ್ತ್ರಗಳಿವೆ. ಅವುಗಳಲ್ಲಿ ಹಿಂಸೆಯ ಮುಖ್ಯತೆ ಮಾಡಿ ಅಶ್ವಮೇಧ ನರಮೇಧಾದಿ ಯಜ್ಞ ಹಾಗೂ ಜೀವಗಳ ಬೇಟೆ, ಸಮಸ್ತ ಜಲಚರ, ಸ್ಥಲಚರ ಜೀವಗಳ ಹಿಂಸೆ ಮಾಡುವಲ್ಲಿ ಧರ್ಮವೆಂದು ಹೇಳುತ್ತಾರೆ. ದೇವತೆಗಳ ಸಲುವಾಗಿ, ಪಿತೃಗಳ ಹಾಗೂ ವ್ಯಂತರರ ತೃಪ್ತಿಯ ಸಲುವಾಗಿ ಮಾಂಸಪಿಂಡದ ದಾನವನ್ನು ಕೂಡ ಧರ್ಮವೆಂದು ಹೇಳುತ್ತಾರೆ. ಭವಾನಿ, ಭೈರವ ಮೊದಲಾದ ದೇವಗಳು ಮೇಕೆ ಮೊದಲಾದುವನ್ನು ಸಾಯಿಸಿ ಅರ್ಪಿಸುವುದರಿಂದ ಮತ್ತು ಭಕ್ಷಣ ಮಾಡುವುದರಿಂದಲೇ ಪ್ರಸನ್ನರಾಗುತ್ತಾರೆ ; ದೇವತೆಗಳನ್ನು ಮಾಂಸಾಹಾರಿಯೆಂದು ಹೇಳುತ್ತಾರೆ, ದೊರೆಗಳ ಧರ್ಮವು ಬೇಟೆಯೇ ಇದೆ. ಇತ್ಯಾದಿ ಕಾರ್ಯಗಳ ಪ್ರವೃತ್ತಿಯು ಶಾಸ್ತ್ರಗಳ ವಚನಗಳಿಂದಲೇ ನಡೆಯುತ್ತಲಿದೆ.

ಹರಿ, ಹರ, ಬ್ರಹ್ಮ ಮೊದಲಾದವರು ಭಗವಂತರಿದ್ದಾರೆ, ಪರಮೇಶ್ವರರಿದ್ದಾರೆಂದು ಹೇಳಿ ಹರಿಗಂತೂ ನಿರಂತರ ಗೊಲ್ಲರ ಸ್ತ್ರೀಯರಲ್ಲಿ ಆಸಕ್ತನಾಗಿ ಕೊಳಲು ನುಡಿಸುವುದು, ನರ್ತಿಸುವುದು ಹಾಗೂ ಗೋವರ್ಧನ ಗೊಲ್ಲನನ್ನು ಸಾಯಿಸಿ ಅವನ ಸ್ತ್ರೀಯನ್ನು ಹರಣಮಾಡುವುದು, ಅನೇಕ ನ್ಯಾಯ-ಅನ್ಯಾಯದ ಲೀಲೆ ಮಾಡುವಂಥವನೆಂದು ಹೇಳುತ್ತಾರೆ. ಇದೆಲ್ಲವನ್ನು ಶಾಸ್ತ್ರಗಳಲ್ಲಿ ಬರೆದಿರುವುದನ್ನೇ ಜಗತ್ತು ಮನ್ನಿಸುತ್ತ ಬರುತ್ತಲಿದೆ.

ಹರ ಎಂದರೆ ಶಿವ, ಅವನ ಅರ್ಧ ಶರೀರದಲ್ಲಿ ಸ್ತ್ರೀಯ ಆಕಾರದ ಕಲ್ಪನೆ, ಭಸ್ಮ ಬಳಿಯುವುದು, ಅನೇಕ ಹತ್ಯೆಗಳನ್ನು ಮಾಡುವುದು, ಶಾಪಕ್ಕೆ ಪ್ರಾಪ್ತನಾಗುವುದು, ತ್ರಿಶೂಲ ಮೊದಲಾದ ಆಯುಧ ಇಟ್ಟುಕೊಳ್ಳುವುದು, ಲೋಕದ ಸಂಹಾರ ಮಾಡುವುದು. ಇವೆಲ್ಲ ಮಾತುಗಳನ್ನು ಶಾಸ್ತ್ರಗಳಲ್ಲಿ ಬರೆದಿರುವುದರಿಂದಲೇ ಜಗತ್ತಿನ ಜನರು ಮನ್ನಿಸುತ್ತಾರೆ.

ಶಿವನ ಲಿಂಗವನ್ನು ಪಾರ್ವತಿಯ ಯೋನಿಯಲ್ಲಿ ಇಟ್ಟಿರುವುದಕ್ಕೆ ನಿರಂತರ ನೀರಿನಿಂದ ಪ್ರೋಕ್ಷಿಸುವುದು, ಎಕ್ಕೆ-ದತ್ತೂರಿ ಏರಿಸುವುದು ಇವೇ ಮೊದಲಾದ ಸಮಸ್ತ ಮಾತುಗಳನ್ನು ಶಾಸ್ತ್ರಗಳಲ್ಲಿ ಬರೆದಿರುವುದರಿಂದಲೇ ಜಗತ್ತಿನಲ್ಲಿ ಅನೇಕ ಮನುಷ್ಯರು ಇಂಥ ಪ್ರವೃತ್ತಿಗಳಿಗೇನೇ ಧರ್ಮವೆಂದು ತಿಳಿದುಕೊಂಡು ಸೇವನೆ ಮಾಡುತ್ತಾರೆ.

ಬ್ರಹ್ಮನನ್ನು ಸಮಸ್ತ ಸೃಷ್ಟಿಯ ಕರ್ತೃ ಮತ್ತು ಪಿತಾಮಹನೆಂದು ಹೇಳುತ್ತಾರೆ ಇದೇ ಬ್ರಹ್ಮನು ಅತ್ಯಂತ ಕಾಮುಕನಾಗಿ ತನ್ನ ಮಗಳೊಡನೆಯೇ ಭೋಗಿಸಿ ಭ್ರಷ್ಟವಾದುದನ್ನು ಹೇಳುತ್ತಾರೆ. ಅದೇ ಬ್ರಹ್ಮನು ಊರ್ವಶಿಯೆಂಬ ಅಪ್ಸರೆಯ ಮೇಲೆ

ಮೋಹಿತನಾಗಿ ತನ್ನ ನಾಲ್ಕು ಸಾವಿರ ವರುಷ ತಪಸ್ಯೆಯ ಫಲದಿಂದ ನಾಲ್ಕು ಮುಖಗಳನ್ನು ಮಾಡಿಕೊಂಡು ಊರ್ವಶಿಯನ್ನು ನೋಡಿ ತಪದಿಂದ ಭ್ರಷ್ಟನಾದನು ಮತ್ತು ಊರ್ವಶಿಯ ಶಾಪಕ್ಕೆ ಪ್ರಾಪ್ತನಾದನು. ಇವೆಲ್ಲ ಮಾತುಗಳನ್ನು ಅವರ ಶಾಸ್ತ್ರಗಳಲ್ಲಿಯೇ ಬರೆಯಲಾಗಿದೆ.

ಜಗತ್ತಿನ ರಚನೆ ಮಾಡುವಂಥ ಮತ್ತು ಪಾಲನೆ ಮಾಡುವಂಥ ಭಗವಾನ ನಾರಾಯಣನನ್ನು ಆಮೆ, ಮೀನು, ಸೂಕರ, ಸಿಂಹ ಮೊದಲಾದ ಅನೇಕ ಅವತಾರ ಧಾರಣ ಮಾಡುವಂಥವನು, ರಾಕ್ಷಸರ ನಾಶ ಮಾಡುವಂಥವನೆಂದು ಅವರ ಶಾಸ್ತ್ರಗಳಲ್ಲಿಯೇ ಬರೆದಿದೆ. ಹನುಮಂತನನ್ನು ಕೋತಿ, ಗಣೇಶನನ್ನು ಆನೆಯ ಮುಖವುಳ್ಳವ, ಇಲಿಯ ಮೇಲೆ ಆರೋಹಣ ಮಾಡುವುದು ಮತ್ತು ಲಡ್ಡು ತಿನ್ನುವಲ್ಲಿ ಅತ್ಯಂತ ಅನುರಾಗಿಯೆಂದು ಅವರ ಶಾಸ್ತ್ರಗಳಲ್ಲಿಯೇ ಬರೆದಿದೆ. ಜೀವಗಳನ್ನು ಕೊಲ್ಲುವುದು, ಜೀವಗಳನ್ನು ಕೊಂದು ದೇವತೆಗಳನ್ನು ಪ್ರಸನ್ನ ಮಾಡುವುದು. ಕೆರೆ, ಕೊಳ, ಬಾವಿಗಳನ್ನು ಅಗೆಸುವುದರಲ್ಲಿ ದೊಡ್ಡ ಧರ್ಮವಾಗುತ್ತದೆಯೆಂದು ಅವರ ಶಾಸ್ತ್ರಗಳಲ್ಲಿಯೇ ಬರೆಯಲಾಗಿದೆ.

ಶ್ವೇತಾಂಬರರು ಅನೇಕ ಕಾಲ್ಪನಿಕ ಶಾಸ್ತ್ರಗಳನ್ನು ರಚಿಸಿದ್ದಾರೆ, ಅವರ ಸಮಸ್ತ ಧರ್ಮವಿರುದ್ಧವಾದ ಆಚರಣೆಯು ಶಾಸ್ತ್ರಗಳಿಂದಲೇ ಪ್ರವರ್ತಿಸುತ್ತಲಿದೆ.

ಈ ಕಲಿ ಕಾಲದಲ್ಲಿ ವೇಷಧಾರಿಗಳ ಪೂಜೆ, ಕುಲದೇವತೆಗಳ ಪೂಜೆ, ಕ್ಷೇತ್ರಪಾಲ ಮೊದಲಾದ ವ್ಯಂತರಗಳ ಪೂಜೆ, ಪದ್ಮಾವತಿ, ಚಕ್ರೇಶ್ವರಿ ಇತ್ಯಾದಿ ದೇವಿಗಳ ಪೂಜೆ ಹಾಗೂ ಅನೇಕ ಮಿಥ್ಯಾ ಪ್ರರೂಪಣೆಗಳು, ತರ್ಪಣಾದಿಗಳನ್ನು ಶಾಸ್ತ್ರಗಳಲ್ಲಿ ಬರೆದಿರುವುದರಿಂದ ನಡೆಯುತ್ತಲಿವೆ. ಅನ್ಯ ಭಿಲ್ಲ, ಮ್ಲೇಚ್ಛ, ಮುಸಲ್ಮಾನ ಮೊದಲಾಗಿ ಎಲ್ಲರಲ್ಲಿಯೂ ತಮ್ಮ ತಮ್ಮ ಮತದ ಶಾಸ್ತ್ರಗಳಿವೆ. ಶಾಸ್ತ್ರವಿಲ್ಲದೆ ಮಿಥ್ಯಾ ಕಲ್ಪನೆಗಳು ಹೇಗೆ ಪ್ರಚಲಿತವಾಗುವವು ? ಇದೇ ಕಾರಣದಿಂದ ಜಗತ್ತಿನಲ್ಲಿ ಬಹಳಷ್ಟು ಪ್ರಕಾರದ ಶಾಸ್ತ್ರಗಳಿವೆ. ಶಾಸ್ತ್ರಗಳ ಆಧಾರದಿಂದಲೇ ಅನೇಕ ಪಾಖಂಡ, ಕುವೇಷ, ಮಿಥ್ಯಾಧರ್ಮಗಳು ನಡೆಯುತ್ತಲಿವೆ. ಆದ್ದರಿಂದ **ಪರೀಕ್ಷಾ ಪ್ರಧಾನರಾಗಿ ಸರಿಯಾಗಿ ಪರೀಕ್ಷೆ ಮಾಡಿ ಶಾಸ್ತ್ರಗಳನ್ನು ಸ್ವೀಕಾರ ಮಾಡಬೇಕು.** ಮೊದಲು ಹೇಳಿದ ಆರು ವಿಶೇಷಣಗಳುಳ್ಳವುಗಳನ್ನೇ ಆಗಮವೆಂದು ಮನ್ನಿಸುವುದು.

ಮೊದಲಂತೂ ಸರ್ವಜ್ಞ ವೀತರಾಗರು ಹೇಳಿದ್ದು ಇರಬೇಕು. ಸರ್ವಜ್ಞರಲ್ಲದೆ ಬೇರೆ ಯಾರೂ ತಮ್ಮ ಇಂದ್ರಿಯ ಜನ್ಯ ಜ್ಞಾನದಿಂದ ಜೀವ, ಅಜೀವ, ಅತೀಂದ್ರಿಯ, ಅಮೂರ್ತಿಕ ಪದಾರ್ಥಗಳ ಕಥನ ಮಾಡುವ ಸಾಧ್ಯತೆಯಿಲ್ಲ. ಪಾಪ, ಪುಣ್ಯ ಮೊದಲಾದ ಅದೃಷ್ಟ ಪದಾರ್ಥಗಳ ಹಾಗೂ ಪರಮಾಣು ಮೊದಲಾದ ಸೂಕ್ಷ್ಮ ಪದಾರ್ಥಗಳ ಕಥನವೆಲ್ಲಿಂದ ಮಾಡುವರು ? ಸ್ವರ್ಗ-ನರಕದ ಪರ್ಯಾಯಗಳನ್ನು ಮತ್ತು ಸ್ವರ್ಗ-ನರಕದಲ್ಲಿ ಉತ್ಪನ್ನವಾದ ಸುಖ-ದುಃಖದ ಕಾರಣ, ಅನೇಕ ಸಂಬಂಧಗಳನ್ನು ಹೇಗೆ ತಿಳಿಯುವರು ? ಮೇರು ಕುಲಾಚಲ ಮೊದಲಾದವುಗಳ ಕಥನ ಹೇಗೆ ಮಾಡುವರು ? ಜೀವಾದಿ ದ್ರವ್ಯಗಳ ಅನಂತ ಪರ್ಯಾಯಗಳಾಗಿ ಹೋಗಿವೆ, ಮುಂದೆಯೂ ಅನಂತ ಪರ್ಯಾಯಗಳಾಗುವವು, ಅನಂತ ದ್ರವ್ಯಗಳ ಗುಣ ಮತ್ತು ಅವುಗಳ ಅನಂತ ಪರ್ಯಾಯಗಳು ಒಂದು ಸಮಯದಲ್ಲಿ ಒಟ್ಟಿಗೆ ಆಗುವಂಥ ಪರಿಣಮನವನ್ನು ಕ್ರಮವರ್ತಿಯಾದ ಇಂದ್ರಿಯ ಜ್ಞಾನ ಧಾರಿಯು ಹೇಗೆ ಕಥನ ಮಾಡುವ ಸಾಧ್ಯತೆಯಿದೆ ?

ಆದುದರಿಂದ ಸರ್ವಜ್ಞರಲ್ಲದೆ ಇಂದ್ರಿಯಜನ್ಯ ಜ್ಞಾನವುಳ್ಳವರ ಮೂಲಕ ಆಗಮ ಹೇಳುವುದು ಯಥಾರ್ಥವಾಗುವುದಿಲ್ಲ. ಯಥಾರ್ಥ ಆಗಮದ ಕಥನವು ಸರ್ವಜ್ಞರಿಂದಲೇ ಆಗುತ್ತದೆ. ರಾಗ-ದ್ವೇಷವುಳ್ಳವರು, ತಮ್ಮ ಅಭಿಮಾನವನ್ನು ಪುಷ್ಟಿ ಮಾಡುವ ಇಚ್ಛೆಯುಳ್ಳವರು, ತಮ್ಮ ಖ್ಯಾತಿ ಹರಡುವ ಇಚ್ಛೆಯುಳ್ಳವರು ಮತ್ತು ವಿಷಯಗಳ ಲೋಭಿಯಾದ ವಕ್ತಾನಿದ್ದರೆ ಸತ್ಯಸ್ವರೂಪ ಹೇಳುವ ಸಾಧ್ಯತೆಯಿಲ್ಲ. ಆದ್ದರಿಂದ **ವೀತರಾಗ ಸರ್ವಜ್ಞರ ಮೂಲಕ ಹೇಳಲಾದ ಆಗಮವೇ ಪ್ರಾಮಾಣಿಕವಿದೆ.**

ಯಾವ ಆಗಮದಲ್ಲಿ ವಾದೀ-ಪ್ರತಿವಾದಿಗಳಿಂದ ತೋರಿಸಿದ ದೋಷಗಳಿವೆ ಆ ಆಗಮವು ಪ್ರಾಮಾಣಿಕವಿಲ್ಲ, ಆದುದರಿಂದ ವಾದೀ-ಪ್ರತಿವಾದಿಗಳು ಉಲ್ಲಂಘನೆ ಮಾಡಲಾಗದಂಥ, ಬಾಧೆ ತಗಲಿಸದಂಥ ಅನುಲಂಘ್ಯವೇ ಆಗಮವೆಂದು ಕರೆಸಿಕೊಳ್ಳುತ್ತದೆ.

ಯಾವ ಆಗಮದಲ್ಲಿ ಪ್ರತ್ಯಕ್ಷ ಹಾಗೂ ಅನುಮಾನದಿಂದ ಬಾಧೆ ಬರುವುದಿಲ್ಲ ಅದೇ ಆಗಮವು ಪ್ರಾಮಾಣಿಕವಿದೆ. ಯಾವುದರಲ್ಲಿ ಪ್ರತ್ಯಕ್ಷ-ಪ್ರಮಾಣ ಹಾಗೂ ಅನುಮಾನ-ಪ್ರಮಾಣದಿಂದ ಬಾಧೆ ಬರುವುದು ಆ ಆಗಮವು ಪ್ರಾಮಾಣಿಕವಿಲ್ಲ.

ಯಾವ ಆಗಮದಿಂದ ಸ್ವ ಮತ್ತು ಪರದ ನಿರ್ಣಯವಾಗುವುದಿಲ್ಲ, ಯಾವ ಆಗಮದಲ್ಲಿ ಹೇಯ-ಉಪಾದೇಯ, ಕೃತ್ಯ-ಅಕೃತ್ಯ, ದೇವ-ಕುದೇವ, ಧರ್ಮ-ಅಧರ್ಮ, ಹಿತ-ಅಹಿತ, ಗ್ರಾಹ್ಯ-ಅಗ್ರಾಹ್ಯ, ಭಕ್ಷ್ಯ-ಅಭಕ್ಷ್ಯದ ನಿರ್ಣಯ ಮಾಡಿಸುವಂಥ ಯಥಾರ್ಥ ವಸ್ತು ಸ್ವರೂಪವನ್ನು ಹೇಳಲಾಗಿಲ್ಲ ಅದು ಮಿಥ್ಯಾ ಆಗಮವಿದೆ.

ಯಾವುದರಲ್ಲಿ ವ್ಯರ್ಥಶಬ್ದಗಳ ಆಡಂಬರರೂಪದ ಲೋಕರಂಜನ ಅಸತ್ಯಕಥೆಗಳಿವೆ; ದೇಶಕಥೆ, ರಾಜಕಥೆ, ಸ್ತ್ರೀಕಥೆ, ಕಾಮಕಥೆ ಮೊದಲಾದವುಗಳಿಂದ ಅನಂತಸಂಸಾರದಲ್ಲಿಯೇ ಸಿಕ್ಕಿಸುವಂಥ ವಿಕಥೆಗಳ ರೂಪದ ವರ್ಣನೆ ಮಾಡಿದೆ; ಆದರೆ ಸಂಸಾರದಿಂದ ಆತ್ಮನ ಉದ್ಧಾರ ಮಾಡುವ ಉಪಾಯರೂಪದ ಕಥನ ಮಾಡಿರದಿದ್ದರೆ ಅದು ಕೂಡ ಮಿಥ್ಯಾ ಆಗಮವೇ ಇದೆ.

ಯಾವುದರಲ್ಲಿ ತತ್ತ್ವಭೂತವಾಗಿ ಜೀವದ ಹಿತದ ಉಪದೇಶರೂಪ ಕಥನ ಮಾಡಿದೆ ಅಂಥ **ತತ್ತ್ವೋಪದೇಶ ಕೃತವೇ** ಆಗಮವಿದೆ. ಯಾವುದು ಸರ್ವಪ್ರಾಣಿಗಳಿಗೆ ಹಿತರೂಪದ ಉಪದೇಶ ಮಾಡುವಂಥದ್ದಿದೆ ಅದುವೇ **ಸಾರ್ವ** ವಿಶೇಷಣಯುಕ್ತ ಆಗಮವಿದೆ.

ಯಾವುದರಲ್ಲಿ ಪ್ರಾಣಿಗಳ ಹಿಂಸೆ ಮಾಡುವ ಕಥನವಿದೆ, ಮಾಂಸ ಭಕ್ಷಣೆ ಮತ್ತು ಜಲಚರ-ಆಕಾಶಗಾಮಿ ಜೀವಗಳನ್ನು ಕೊಲ್ಲುವ ಉಪಾಯ ತಿಳಿಸಿದೆ, ಅಧಿಕಾರಂಭದ, ಮಾರಣ ಉಚ್ಚಾಟನೆ ಮಾಡುವ, ಇತರರ ಹಣ ಕದಿಯುವ, ಯುದ್ಧ ಮಾಡುವ, ಸೇನೆಯನ್ನು ನಾಶಮಾಡುವ, ನಗರ-ಗ್ರಾಮಗಳನ್ನು ವಿಧ್ವಂಸಗೊಳಿಸುವ, ಪರಿಗ್ರಹದಲ್ಲಿ- ಪರಧನದಲ್ಲಿ ಪರಸ್ತ್ರೀಯರಲ್ಲಿ ಆಸಕ್ತವಾಗುವ ಉಪಾಯಗಳ ವರ್ಣನೆ ಮಾಡಿದೆ ಆ ಆಗಮವು ಸಾರ್ವ ಎಂದರೆ ಎಲ್ಲ ಪ್ರಾಣಿಗಳಿಗೆ ಹಿತರೂಪವಿಲ್ಲ, ಯಾವುದು ಕುಮಾರ್ಗಗಳ ನಿಷೇಧ ಮಾಡಿ ಸ್ವರ್ಗ ಮತ್ತು ಮೋಕ್ಷಮಾರ್ಗದ ಉಪದೇಶ ಮಾಡುವಂಥದ್ದಿದೆ ಅದು **ಕಾಪಥಘಟ್ಟನ** ವಿಶೇಷಣಯುಕ್ತ ಆಗಮವಿದೆ. ಯಾವುದು ಶೃಂಗಾರ, ವೀರರಸದ ವರ್ಣನೆ ಮಾಡಿ ಕುಮಾರ್ಗದಲ್ಲಿ ಪ್ರವೃತ್ತಿ ಮಾಡಿಸುವಂಥದ್ದಿದೆ; ಜೂಜು, ಮಾಂಸ ಭಕ್ಷಣ ಮೊದಲಾದ ದುಷ್ಟ ವ್ಯಸನಗಳರೂಪದ ಮಾರ್ಗದಲ್ಲಿ ನಡೆಸುವಂಥದ್ದಿದೆ; ಸಂಸಾರ ಸಮುದ್ರದಲ್ಲಿ ಮುಳುಗಿಸಲು ನಿಮಿತ್ತವಿರುವ ರಾಗೀ, ದ್ವೇಷಿ, ವಿಷಯ ಕಷಾಯೀ ದೇವಗಳ ಸೇವೆ, ಪಾಖಂಡೀ ವೇಷಧಾರೀ ಗುರುಗಳ ಉಪಾಸನೆಯಲ್ಲಿ ತೊಡಗಿಸುವಂಥದ್ದಿದೆ ಮತ್ತು ಯಾವುದರಲ್ಲಿ ಮಿಥ್ಯಾ ಧರ್ಮರೂಪದ ಕುಮಾರ್ಗದಲ್ಲಿ ಪ್ರವರ್ತನೆ ಮಾಡಿಸುವ ಕಥನವಿರುವಂಥದು ಅದು ಅಯಥಾರ್ಥ ಆಗಮವಿದೆ.

ಯಾರು ಹೆಚ್ಚು ತಿಳಿದುಕೊಳ್ಳುವುದಿಲ್ಲ ಅವರು **ವೀತರಾಗಿಗಳು ಹೇಳಿದ ಆಗಮದಲ್ಲಿ ರಾಗಾದಿ ವಿಷಯ ಕಷಾಯಗಳ ಅಭಾವ ಮಾಡುವ ಮತ್ತು ಸಮಸ್ತ ಜೀವಗಳ ದಯೆ ಪಾಲಿಸುವ - ಈ ಎರಡು ಕಥನವಂತೂ ಮುಖ್ಯವಾಗಿ ಇರುತ್ತದೆ**ಯೆಂಬುದನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕಾಗುವುದು. ಈ ಪ್ರಕಾರ ಒಂದು ಸೂತ್ರದಲ್ಲಿ ಆಗಮದ ಲಕ್ಷಣ ಹೇಳಲಾಯಿತು.

ಈಗ ತಪಸ್ವೀ ಎಂದರೆ ನಿಜವಾದ ಗುರುಗಳ ಸ್ವರೂಪ ಹೇಳುವಂಥ ಸೂತ್ರ ಹೇಳುತ್ತಾರೆ, -

**ವಿಷಯಾಶಾವಶಾತೀತೋ ನಿರಾರಂಭೋಽಪರಿಗ್ರಹಃ ।**
**ಜ್ಞಾನಧ್ಯಾನ ತಪೋರಕ್ತಃ ತಪಸ್ವೀ ಸ ಪ್ರಶಸ್ಯತೇ ।।೧೦।।**

**ಅರ್ಥ :-** ಯಾರು ಐದು ಇಂದ್ರಿಯ ವಿಷಯಗಳ ಆಶೆ ಎಂದರೆ ಇಚ್ಛೆಯಿಂದ ರಹಿತರಿದ್ದಾರೆ, ಷಟ್ಕಾಯ ಜೀವಗಳ ಘಾತವಾಗುವಂಥ ಆರಂಭದಿಂದ ರಹಿತರಿದ್ದಾರೆ, ಅಂತರಂಗ-ಬಹಿರಂಗ ಸಮಸ್ತ ಪರಿಗ್ರಹದಿಂದ ರಹಿತರಿದ್ದಾರೆ ಜ್ಞಾನ-ಧ್ಯಾನ-ತಪದಲ್ಲಿ ಆಸಕ್ತರಿದ್ದಾರೆ. ಈ ನಾಲ್ಕು ವಿಶೇಷಣಯುಕ್ತವಿರುವ ತಪಸ್ವೀ ಎಂದರೆ ಗುರುಗಳಿದ್ದಾರೆ. ಅವರೇ ಪ್ರಶಂಸನೀಯರಿದ್ದಾರೆ.

**ಭಾವಾರ್ಥ :-** ಯಾರು ರಸನೇಂದ್ರಿಯದ ಲಂಪಟಯಿದ್ದಾರೆ, ಅನೇಕ ಪ್ರಕಾರದ ರಸಗಳ ಸ್ವಾದದ **ಇಚ್ಛೆಯ** ವಶೀಭೂತರಾಗುತ್ತಲಿದ್ದಾರೆ, ಕರ್ಣೇಂದ್ರಿಯದ ವಶೀಭೂತರಿದ್ದಾರೆ, ತಮ್ಮ ಯಶ - ಪ್ರಶಂಸೆ ಕೇಳುವ **ಇಚ್ಛುಕರಿದ್ದಾರೆ,** ಅಭಿಮಾನಿಯಿದ್ದಾರೆ. ನೇತ್ರಗಳಿಂದ ಸುಂದರರೂಪ, ಮನೆ, ಮಂದಿರ, ವನ, ಉಪವನ, ಗ್ರಾಮ, **ಆಭೂಷಣ, ವಸ್ತ್ರಾದಿಗಳನ್ನು ನೋಡುವ ಇಚ್ಛುಕರಿದ್ದಾರೆ,** ಕೋಮಲಶಯ್ಯೆ ಕೋಮಲ ಉಚ್ಚಾಸನದ ಮೇಲೆ ಮಲಗುವ - ಕೂಡ್ರುವ ಇಚ್ಛುಕರಿದ್ದಾರೆ, ಸುಗಂಧಾದಿಗಳ ಗ್ರಹಣ ಮಾಡುವ ಇಚ್ಛುಕರಿದ್ದಾರೆ, ವಿಷಯಗಳ ಲಂಪಟಯಿದ್ದಾರೆ ಇಂಥ ಗುರುಗಳು ಇತರರನ್ನು ವಿಷಯಗಳಿಂದ ಬಿಡಿಸಿ ವೀತರಾಗ ಮಾರ್ಗದಲ್ಲಿ ತೊಡಗಿಸುವ ಸಾಧ್ಯತೆಯಿಲ್ಲ. ಅವರಂತೂ ಸರಾಗ ಮಾರ್ಗದಲ್ಲಿಯೇ ತೊಡಗಿಸಿ ಸಂಸಾರ ಸಮುದ್ರದಲ್ಲಿಮುಳುಗಿಸಿ ಬಿಡುವರು.

ಆದುದರಿಂದ ವಿಷಯಗಳ ಆಶೆಯ ವಶೀಭೂತರಿರದಂಥ ಗುರುಗಳೇ ಆರಾಧಿಸಲು, ವಂದಿಸಲು ಯೋಗ್ಯರಿದ್ದಾರೆ. ವಿಷಯಗಳಲ್ಲಿ ಅನುರಾಗವಿರುವವನಂತೂ ಆತ್ಮಜ್ಞಾನವಿಲ್ಲದ ಬಹಿರಾತ್ಮನಿದ್ದಾನೆ; ಗುರು ಹೇಗಾಗುವನು? ಯಾವನಿಗೆ ತ್ರಸ, ಸ್ಥಾವರ ಜೀವಗಳ ಘಾತದ ಆರಂಭವಾಗುತ್ತದೆ ಅವನಿಗೆ ಪಾಪದ ಭಯವಿಲ್ಲ. ಪಾಪಿಗೆ ಗುರುತನವು ಹೇಗೆ ಸಂಭವಿಸುವುದು ?

ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹ ಹಾಗೂ ಹತ್ತು ಪ್ರಕಾರದ ಬಹಿರಂಗ ಪರಿಗ್ರಹದಿಂದ ಯುಕ್ತನಿರುವವನು ಗುರು ಹೇಗಾಗುವನು ? ಪರಿಗ್ರಹಿಯಂತೂ ಸ್ವಯಂ ಸಂಸಾರದಲ್ಲಿ ಮೋಸ ಹೋಗುತ್ತಿದ್ದಾನೆ, ಅವನು ಇತರರ ಉದ್ಧಾರ ಮಾಡುವಂಥ ಗುರು ಹೇಗಾಗುವನು ?

## ಪರಿಗ್ರಹದ ವಿಷಯದಲ್ಲಿ ವಿಚಾರ

ಇಲ್ಲಿ ೧) ಮಿಥ್ಯಾತ್ವ, ೨) ಸ್ತ್ರೀ-ಪುರುಷ-ನಪುಂಸಕ ವೇದ, ೩) ರಾಗ, ೪) ದ್ವೇಷ, ೫) ಹಾಸ್ಯ, ೬) ರತಿ, ೭) ಅರತಿ, ೮) ಶೋಕ, ೯) ಭಯ, ೧೦) ಜುಗುಪ್ಸೆ, ೧೧) ಕ್ರೋಧ, ೧೨) ಮಾನ, ೧೩) ಮಾಯೆ, ೧೪) ಲೋಭವೆಂದು ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹಗಳಿವೆ. ಇವುಗಳ ಸ್ವರೂಪ ಹೇಳುತ್ತಾರೆ.

೧) ಮನುಷ್ಯಾದಿ ಪರ್ಯಾಯ, ಶರೀರ, ಶರೀರದ ಹೆಸರು, ಶರೀರದ ರೂಪು, ಶರೀರದ ಆಧಾರದಿಂದ ಜಾತಿ, ಕುಲ, ಪದವಿ, ರಾಜ್ಯ, ಧನ, ಕುಟುಂಬ, ಯಶ-ಅಪಯಶ, ಉಚ್ಚತೆ-ನೀಚತೆ, ನಿರ್ಧನತೆ-ಧನವಂತತೆ, ಮನ್ನಣೆ-ಅಮನ್ನಣೆ, ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರಾದಿ ವರ್ಣ, ಒಡೆಯ-ಸೇವಕ, ಯತಿ-ಗೃಹಸ್ಥತನ ಇವೇ ಮೊದಲಾಗಿ ಹಲವು ಪ್ರಕಾರಗಳಿದ್ದು ಅವೆಲ್ಲವು ಪುದ್ಗಲದ ರಚನೆಗಳು ಕರ್ಮಗಳಿಂದಾಗಿವೆಯೆಂದು ಪ್ರತ್ಯಕ್ಷವಾಗಿ ಕಂಡು ಬರುತ್ತವೆ. ಮತ್ತು ಇವು ವಿನಾಶಶೀಲವಿವೆ, ಪುದ್ಗಲಮಯವಿವೆ, ನನ್ನ ಸ್ವರೂಪವಲ್ಲವೆಂದು ಕೇಳುತ್ತೇವೆ, ಅನುಭವ ಮಾಡುತ್ತೇವೆ. ಹೀಗೆ ಒಳ್ಳೆಯ ರೀತಿಯಿಂದ ಮತ್ತೆ ಮತ್ತೆ ನಿರ್ಣಯಮಾಡಿಕೊಂಡಿದ್ದರೂ ಕೂಡ ಅನಾದಿಕಾಲದಿಂದ **ಮಿಥ್ಯಾಕರ್ಮದ ಉದಯದಿಂದ ಎಂಥ ದೃಢಸಂಸ್ಕಾರವಾಗಿದೆಯೆಂದರೆ ಇವುಗಳ ನಾಶವಾಗುವುದರಿಂದ ನಮ್ಮ ನಾಶವನ್ನು ಮನ್ನಿಸುತ್ತೇವೆ** - ಇವುಗಳ ಕುಂದುವಿಕೆಯಿಂದ ತಮ್ಮ ಕುಂದುವಿಕೆ, ವೃದ್ಧಿಸುವುದರಿಂದ ತಮ್ಮ ವೃದ್ಧಿಸುವಿಕೆ, ಉಚ್ಚತೆ; ನೀಚತೆಯೆಂದು ಮನ್ನಿಸಿ ಸಮಸ್ತ ಜೀವರುಗಳು ದೇಹಾದಿಮಯರಾಗುತ್ತಿದ್ದಾರೆ. ತಮ್ಮ ವಚನಗಳಿಂದ ಇವೆಲ್ಲವನ್ನು ಪರರೂಪವಿವೆ, ಪರಾಧೀನವಿವೆ, ವಿನಾಶಶೀಲವಿವೆ, ನಮ್ಮವುಗಳಲ್ಲವೆಂದು ಹೇಳುತ್ತಿದ್ದರೂ **ಇವುಗಳ ಸಂಯೋಗ-ವಿಯೋಗದಲ್ಲಿ ಆತ್ಮನು ರಾಗ-ದ್ವೇಷ, ಸುಖ-ದುಃಖರೂಪನಾಗುತ್ತಾನೆ. ಅದೇ ಮಿಥ್ಯಾತ್ವನಾಮದ ಪರಿಗ್ರಹವಿದೆ.**

೨) ಸ್ತ್ರೀ-ಪುರುಷ-ನಪುಂಸಕಗಳಲ್ಲಿ ಕಾಮ ಸೇವನೆಯರೂಪದ ರಾಗವು ಅಂತರಂಗದಲ್ಲಿರುವುದು ಅದು **ವೇದನಾಮದ** ಪರಿಗ್ರಹವಿದೆ. ೩) ಪರದ್ರವ್ಯಗಳಾದ ದೇಹ, ಧನ, ಸ್ತ್ರೀ, ಪುತ್ರಾದಿಕರಲ್ಲಿ ಪ್ರಸನ್ನವಿರುವುದು ಅದು **ರಾಗ**

ಪರಿಗ್ರಹವಿದೆ. ೪) ಪರರ ಐಶ್ವರ್ಯ, ಯೌವನ, ಧನ, ಸಂಪತ್ತು, ಯಶಸ್ಸು, ರಾಜ್ಯ ವೈಭವಾದಿಗಳಿಂದ ವೈರವಿಟ್ಟುಕೊಳ್ಳುವುದು ಅದು **ದ್ವೇಷ** ಪರಿಗ್ರಹವಿದೆ. ೫) ಹಾಸ್ಯ ಪರಿಣಾಮವಿರುವುದು ಅದು **ಹಾಸ್ಯ** ಪರಿಗ್ರಹವಿದೆ. ೬) ತನ್ನ ಮರಣವಾಗುವುದೆಂದು ತಿಳಿದು ವಿಯೋಗ, ವೇದನೆ ಮೊದಲಾದವು ಗಳಾಗುವುದರಿಂದ ಭಯತನವು ಅದು **ಭಯ** ಪರಿಗ್ರಹವಿದೆ. ೭) ತಮಗೆ ಒಳ್ಳೆಯವೆನಿಸುವಂಥ ಪದಾರ್ಥಗಳಲ್ಲಿ ಆಸಕ್ತಿಯಿಂದ ಲೀನವಾಗುವುದು ಅದು **ರತಿ** ಪರಿಗ್ರಹವಿದೆ. ೮) ತಮಗೆ ಅನಿಷ್ಟವೆನಿಸುವಂಥ ಪದಾರ್ಥಗಳಲ್ಲಿ ವಿರಕ್ತತೆಯಾಗುವುದು-ಪರಿಣಾಮ ತೊಡಗದಿರುವುದು ಅದು **ಅರತಿ** ಪರಿಗ್ರಹವಿದೆ. ೯) ಇಷ್ಟ ಸಾಮಗ್ರಿಗಳ ವಿಯೋಗವಾಗುವುದರಿಂದ ಕ್ಲೇಶರೂಪ ಪರಿಣಾಮವಾಗುವುದು ಅದು **ಶೋಕ** ಪರಿಗ್ರಹವಿದೆ. ೧೦) ಜುಗುಪ್ಸೆ ಬರುವ ವಸ್ತುವನ್ನು ನೋಡಿ, ಕೇಳಿ, ಸ್ಪರ್ಶಿಸಿ, ವಿಚಾರಿಸಿ ಪರಿಣಾಮದಲ್ಲಿ ಗ್ಲಾನಿಯುತ್ಪನ್ನವಾಗುವುದು ಅದು **ಜುಗುಪ್ಸೆ** ಪರಿಗ್ರಹವಿದೆ. ಅಥವಾ ಇತರರ ಉತ್ಕರ್ಷ ನೋಡಿ ರುಚಿಸದಿರುವುದು ಅದು **ಜುಗುಪ್ಸೆ** ಪರಿಗ್ರಹವಿದೆ. ೧೧) ರೋಷದ ಪರಿಣಾಮವಿರುವುದು ಅದು **ಕ್ರೋಧ** ಪರಿಗ್ರಹವಿದೆ. ೧೨) ಉಚ್ಚ ಜಾತಿ,ಕುಲ, ತಪ, ರೂಪು, ಜ್ಞಾನ, ವಿಜ್ಞಾನ, ಐಶ್ವರ್ಯ, ಬಲ ಮೊದಲಾದವುಗಳ ಗರ್ವ ಮಾಡಿ ತನ್ನನ್ನು ಉಚ್ಚ ಅಥವಾ ಇತರರನ್ನು ನೀಚರೆಂದು ತಿಳಿದುಕೊಂಡು ಕಠೋರ ಪರಿಣಾಮವಾಗುವುದು ಅದು **ಮಾನ** ಪರಿಗ್ರಹವಿದೆ. ೧೩) ಕಪಟ ಯುಕ್ತ ವಕ್ರ ಪರಿಣಾಮವಿರುವುದು ಅದು **ಮಾಯಾ** ಪರಿಗ್ರಹವಿದೆ. ೧೪) ಪರದ್ರವ್ಯಗಳ ಇಚ್ಛಾರೂಪ ಪರಿಣಾಮವಿರುವುದು ಅದು **ಲೋಭ** ಪರಿಗ್ರಹವಿದೆ.

ಈ ಪ್ರಕಾರ ಸಂಸಾರದ ಮೂಲ, ಆತ್ಮಘಾತಕ, ತೀವ್ರ ಬಂಧದ ಕಾರಣವಾಗಿ ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹ ಮತ್ತು ೧) ಕ್ಷೇತ್ರ, ೨) ವಾಸ್ತು, ೩) ಬೆಳ್ಳಿ, ೪) ಚಿನ್ನ, ೫) ಧನ, ೬) ಧಾನ್ಯ, ೭) ಸೇವಕಿ, ೮) ಸೇವಕ, ೯) ಲೋಹ, ೧೦) ಪಾತ್ರೆ, ಇವು ಹತ್ತು ಪ್ರಕಾರದ ಬಾಹ್ಯ ಪರಿಗ್ರಹಗಳಿವೆ. ಹೀಗೆ ಅಂತರಂಗ ಮತ್ತು ಬಹಿರಂಗವೆಂದು ಒಟ್ಟು ಇಪ್ಪತ್ತಾ ನಾಲ್ಕು ಪ್ರಕಾರದ ಪರಿಗ್ರಹದಿಂದ ರಹಿತರಾದ ನಿರ್ಗ್ರಂಥ ಮುನಿಗಳೇ ನಿಶ್ಚಯದಿಂದ ಗುರುಗಳಿದ್ದಾರೆ.

ಸಂಯಮ ಧಾರಣ ಮಾಡಿ ಕೂಡ ಯಾರ ಮನಸ್ಸು ಅಂತರಂಗ -ಬಹಿರಂಗ ಪರಿಗ್ರಹದಿಂದ ಮಲಿನವಿದೆ ಅವರಿಗೆ ಗುರುತನವು ಸಂಭವಿಸುವುದಿಲ್ಲ. ಯಾರು ನಿರಂತರ ನಿಶಿ-ದಿನ ನಡೆಯುತ್ತ - ಕೂಡುತ್ತ-ಭೋಜನ ಮಾಡುತ್ತಿದ್ದರೂ ಜ್ಞಾನಾಭ್ಯಾಸದಲ್ಲಿ, ಧರ್ಮಧ್ಯಾನದಲ್ಲಿ, ಇಚ್ಛಾನಿರೋಧವೆಂಬ ತಪದಲ್ಲಿ ಆಸಕ್ತರಿದ್ದಾರೆ ಆ ಗುರುಗಳೇ ಪ್ರಶಂಸಾಯೋಗ್ಯರಿದ್ದಾರೆ, ಧನ್ಯರಿದ್ದಾರೆ, ಮಾನ್ಯರಿದ್ದಾರೆ, ವಂದನೀಯರಿದ್ದಾರೆ.

**ಸಮ್ಯಗ್ದೃಷ್ಟಿಯು ಈ ಗುಣಗಳಿಲ್ಲದೆ ಯಾರಿಗೂ ವಂದನಾದಿಗಳನ್ನು ಮಾಡುವುದಿಲ್ಲ.** ಅಥವಾ ''ಜ್ಞಾನಧ್ಯಾನ ತಪೋರತ್ನಃ'' ಎಂಬುದಾಗಿಯೂ ಸೂತ್ರದ ಪಾಠವಿದ್ದು ಅದರ ಅರ್ಥವು ಜ್ಞಾನ ಧ್ಯಾನ ತಪಸ್ಸುಗಳೇ ಯಾರ ರತ್ನಗಳಿವೆ ಅಂಥವರೇ ಗುರುಗಳಿರುತ್ತಾರೆ. ಈ ಪ್ರಕಾರ ಗುರುಗಳ ಸ್ವರೂಪ ಹೇಳಲಾಯಿತು.

ಈಗ ದೇವ, ಶಾಸ್ತ್ರ ಗುರುಗಳ ಶ್ರದ್ಧೆಯೇ ಲಕ್ಷಣವಿರುವಂಥ ಸಮ್ಯಗ್ದರ್ಶನದ ನಿಃಶಂಕಿತನಾಮದ ಅಂಗವನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಇದಮೇವೇ - ದೃಶಮೇವ ತತ್ತ್ವಂ ನಾನ್ಯನ್ನಚಾನ್ಯಥಾ ।**
**ಇತ್ಯಕಂಪಾಯಸಾಂಭೋವತ್ ಸನ್ಮಾರ್ಗೇऽಸಂಶಯಾ ರುಚಿಃ ॥೧೧॥**

**ಅರ್ಥ :-** ಇಲ್ಲಿ ತತ್ತ್ವಭೂತ ಆಪ್ತ, ಆಗಮ ಮತ್ತು ಗುರುಗಳ ಲಕ್ಷಣ ತಿಳಿಸಿದೆ ಅದುವೇ ಸತ್ಯಾರ್ಥ ಸ್ವರೂಪವಿದೆ. ಈದೃಶಂ ಚೈವ ಎಂದರೆ ಇದೇ ಪ್ರಕಾರವಿದೆ, ಅನ್ಯ ಪ್ರಕಾರ ಇಲ್ಲವೆಂದು ಕರವಾಳದ ಧಾರೆಯ ನೀರಿನಂತೆ ಸನ್ಮಾರ್ಗದಲ್ಲಿ ಸಂಶಯವಿಲ್ಲದ ಅಕಂಪ ಅಭಿರುಚಿ ಎಂದರೆ ಶ್ರದ್ಧೆಯಾಗುವುದು ಅದು ನಿಃಶಂಕಿತ ಅಂಗವೆಂಬ ಹೆಸರಿನ ಗುಣವಿದೆ.

**ಭಾವಾರ್ಥ :-** ಜಗತ್ತಿನಲ್ಲಿ ಅನೇಕ ಪ್ರಕಾರದ ಗದೆ, ಚಕ್ರ, ತ್ರಿಶೂಲಾದಿ ಆಯುಧ ಧರಿಸಿದ, ಸ್ತ್ರೀಯರಲ್ಲಿ ಅತ್ಯಂತ ಆಸಕ್ತ ಕ್ರೋಧೀ, ಮಾನೀ, ಮಾಯಾಚಾರೀ, ಲೋಭಿಗಳು ತಮ್ಮ ಶೌರ್ಯ ಮೊದಲಾದ ಕರ್ತವ್ಯತೋರಿಸುವ ಇಚ್ಛೆಯುಳ್ಳವರಿಗೆ **ದೇವ**ರೆಂದು ಹೇಳಲಾಗುತ್ತದೆ. ಹಿಂಸೆ, ಕಾಮ, ಕ್ರೋಧಾದಿಗಳಲ್ಲಿ ಧರ್ಮವಿದೆಯೆಂದು ಹೇಳುವಂಥ ಶಾಸ್ತ್ರವನ್ನು ಆಗಮವೆಂದು ಹೇಳಲಾಗುತ್ತದೆ. ಮತ್ತು ಅನೇಕ ಪಾಖಂಡೀ, ಲೋಭಿ, ಕಾಮೀ, ಅಭಿಮಾನಿಗಳನ್ನು **ಗುರು**ವೆಂದು ಹೇಳಲಾಗುತ್ತದೆ. ಆದರೆ ಅವರಾರೂ ನಿಜವಾಗಿಲ್ಲವೆಂಬ ದೃಢಶ್ರದ್ಧೆಯಿರುವವನಿಗೆ ನಿಃಶಂಕಿತಗುಣವಿದೆ. ಮೂಢರ ಅಸತ್ಯ ಯುಕ್ತಿಗಳಿಂದ ಯಾರ ಚಿತ್ತವು ಚಂಚಲವಾಗುವುದಿಲ್ಲ ಮತ್ತು ಅಸತ್ಯ ದೇವತೆಗಳ ವಿಕಾರಗಳಿಂದ, ಮಂತ್ರ-ತಂತ್ರ ಮೊದಲಾದವುಗಳಿಂದ ವಿಕಾರೀ ಪರಿಣಾಮವಾಗದವರಿಗೆ ನಿಃಶಂಕಿತ ಗುಣವಿದೆ. ಯಾವ ಪ್ರಕಾರ ಕರವಾಳದ ಧಾರೆಯ ನೀರು ಹವೆಯಿಂದ ಚಲಾಯಮಾನವಾಗುವುದಿಲ್ಲ ಅದೇ ಪ್ರಕಾರ ಯಾರಿಗೆ ನಿಜವಾದ ದೇವ-ಗುರು-ಧರ್ಮದ ಸ್ವರೂಪ ಸಂಬಂಧದ ಪರಿಣಾಮವು ಮಿಥ್ಯಾದೃಷ್ಟಿಗಳ ವಚನರೂಪದ ಹವೆಯಿಂದ ಸಂಶಯಕ್ಕೆ ಪ್ರಾಪ್ತವಾಗುವುದಿಲ್ಲ ಅವರಿಗೆ ನಿಃಶಂಕಿತ ಗುಣವಿರುತ್ತದೆ.

ಆತ್ಮತತ್ತ್ವದ ಸ್ವರೂಪವನ್ನು ಹೇಗೆ ನಿರ್ದೋಷವಾಗಿ ಆಗಮದಲ್ಲಿ ಹೇಳಿದೆ ಹಾಗೆಯೇ **ಯಾವನು ಸ್ವಾನುಭವ ಮಾಡಿ ತನ್ನನ್ನು ತನ್ನ ರೂಪವಾಗಿ ತಿಳಿದಿದ್ದಾನೆ ಮತ್ತು ಪರಪುದ್ಗಲಗಳ ಸಂಬಂಧವನ್ನು ಪರರೂಪವಾಗಿ ತಿಳಿದಿದ್ದಾನೆ. ಅಂಥ ಸಮ್ಯಗ್ದೃಷ್ಟಿಯು** ಸಪ್ತ ಭಯಗಳಿಂದ ರಹಿತನಾಗಿ ನಿಃಶಂಕಿತ ಗುಣವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

**ಸಪ್ತಭಯಗಳ ನಾಮ ಹಾಗೂ ಸ್ವರೂಪ ಹೇಳುತ್ತಾರೆ.** ೧) ಇಹಲೋಕದಭಯ, ೨) ಪರಲೋಕದ ಭಯ, ೩)ಮರಣದಭಯ, ೪) ವೇದನೆಯ ಭಯ, ೫) ಅರಕ್ಷೆಯಭಯ, ೬) ಅಗುಪ್ತಿಯಭಯ, ೭) ಅಕಸ್ಮಾತಭಯವೆಂದು ಏಳು ಪ್ರಕಾರವಿವೆ.

೧) ತಮ್ಮ ಪರಿಗ್ರಹ, ಕುಟುಂಬ, ಆಜೀವಿಕೆ ಮೊದಲಾದವು ಕೆಟ್ಟು ಹೋಗುವ ಭಯವು ಅದು **ಇಹ ಲೋಕದ ಭಯ**ವಿದೆ. ಇದು ಸಮಸ್ತ ಸಂಸಾರೀ ಜೀವಗಳಿಗಿರುತ್ತದೆ. ೨) ಇಲ್ಲಿಂದ ಸತ್ತು ಪರಲೋಕದಲ್ಲಿ ಯಾವ ಗತಿ ಹಾಗೂ ಕ್ಷೇತ್ರದಲ್ಲಿ ಹೋಗುತ್ತೇನೆಂಬುದರ ಭಯವು ಅದು **ಪರಲೋಕದ ಭಯ**ವಿದೆ. ೩) ಮರಣವಾಗುವ ಭಯವು ಅಧಿಕವೆನಿಸಿ ನನ್ನ ನಾಶವಾಗುವುದು, ನನ್ನ ಅಭಾವವಾಗುವುದು, ಆಗ ಎಷ್ಟು ದುಃಖವಾಗುವುದೆಂಬ ಭಯವು ಅದು **ಮರಣಭಯ**ವಿದೆ. ೪) ರೋಗಾದಿಗಳ ಕಷ್ಟ ಬರುವ ಭಯವು ಅದು **ವೇದನಾ ಭಯ**ವಿದೆ. ೫) ತನಗೆ ಯಾರೂ ರಕ್ಷಕರಿಲ್ಲವೆಂದು ತಿಳಿದುಕೊಂಡು ಹೆದರುವುದು ಅದು **ಅರಕ್ಷಾ ಭಯ**ವಿದೆ. ೬) ತನ್ನ ವಸ್ತುವು ಕಳವಾಗಿ ಹೋಗುವ ಭಯ, ತನ್ನ ಬಚ್ಚಿಡುವ ಸ್ಥಾನವು ಇತರರಿಗೆ ತಿಳಿಯಬಹುದೆಂಬ ಭಯವು ಅದು **ಅಗುಪ್ತಿ ಭಯ**ವಿದೆ. ೭) ಆಕಸ್ಮಿಕ ದುಃಖವು ಉತ್ಪನ್ನವಾಗದಿರಲೆಂಬ ಭಯವು ಅದು **ಅಕಸ್ಮಾತ್ ಭಯ**ವಿದೆ.

ತನ್ನ ಹಾಗೂ ಪರದ ಸ್ವರೂಪ ಸರಿಯಾಗಿ ತಿಳಿದುಕೊಳ್ಳುವಂಥ ಸಮ್ಯಗ್ದೃಷ್ಟಿಗೆ ಈ ಸಪ್ತ ಭಯಗಳು ಇರುವುದಿಲ್ಲ.

**ಈ ದೇಹದಲ್ಲಿ ಕಾಲಹೆಬ್ಬೆರಳಿನಿಂದ ಹಿಡಿದು ಮಸ್ತಕದವರೆಗೆ ಯಾವ ಜ್ಞಾನವಿದೆ, ಚೈತನ್ಯವಿದೆ ಅದು ನಮ್ಮ ಧನವಿದೆ. ಈ ಜ್ಞಾನ ಭಾವದಿಂದ ಭಿನ್ನವಾದ ಒಂದು ಪರಮಾಣುವು ಕೂಡ ನಮ್ಮದಿಲ್ಲ.** ದೇಹ ಮತ್ತು ದೇಹಕ್ಕೆ ಸಂಬಂಧಿಸಿದ ಆ ಸ್ತ್ರೀ, ಪುತ್ರ, ಧನ, ಧಾನ್ಯ, ರಾಜ್ಯ, ವೈಭವಗಳೆಲ್ಲವೂ ನನ್ನಿಂದ ಭಿನ್ನವಾದ ಪರದ್ರವ್ಯಗಳಿವೆ, ಸಂಯೋಗದಿಂದ ಉತ್ಪನ್ನವಾಗಿವೆ, ಇವುಗಳೊಡನೆ ನನ್ನ ಸಂಬಂಧವೇನು ? ಸಂಸಾರದಲ್ಲಿ ಇಂಥ ಸಂಬಂಧವಂತೂ ಅನಂತಾನಂತ ಬಾರಿ ಬಂದು ಹೊರಟು ಹೋಗಿದೆ. **ಸಂಯೋಗವಾದವುಗಳ ವಿಯೋಗವು ನಿಶ್ಚಯದಿಂದ ಆಗಿಯೇ ಆಗುವುದು.** ಯಾವುದು ಉತ್ಪನ್ನವಾಗಿದೆ ಅದು ಅವಶ್ಯವಾಗಿ ವಿನಾಶ ಹೊಂದುವುದು. ನಾನು ಜ್ಞಾನ ಸ್ವರೂಪನಾದ ಆತ್ಮನು ಉತ್ಪನ್ನನಾಗದಿರುವುದ-ರಿಂದ ವಿನಾಶಕ್ಕೂ ಪ್ರಾಪ್ತನಾಗುವುದಿಲ್ಲವೆಂದು ಯಾವನಿಗೆ ದೃಢ ವಿಶ್ವಾಸವಿದೆ ಅವನಿಗೆ ದೇಹವು ಬಿಟ್ಟು ಹೋಗುವ ಮತ್ತು ಹತ್ತು ಪ್ರಕಾರದ ಬಾಹ್ಯಪರಿಗ್ರಹದ ವಿಯೋಗವಾಗುವುದರ ಭಯವಿರುವುದಿಲ್ಲ. ಆದುದರಿಂದ **ಇಹಲೋಕದ ಭಯ**ದಿಂದ ರಹಿತನಾದ ಸಮ್ಯಗ್ದೃಷ್ಟಿ ಜೀವನು ನಿಃಶಂಕನಿರುತ್ತಾನೆ.

ಸಮ್ಯಗ್ದೃಷ್ಟಿಗೆ ಪರಲೋಕದ ಭಯವೂ ಇರುವುದಿಲ್ಲ. ಯಾವುದರಲ್ಲಿ ಸಮಸ್ತ ವಸ್ತುಗಳು ಕಂಡು ಬರುತ್ತವೆ ಅದು ಲೋಕವಿದೆ. **ನಮ್ಮ ಲೋಕವಂತೂ ನಮ್ಮ ಜ್ಞಾನದರ್ಶನಸ್ವಭಾವವಿದೆ, ಅದರಲ್ಲಿ ಸಮಸ್ತ ಪದಾರ್ಥಗಳು ಪ್ರತಿಬಿಂಬಿತವಾಗುತ್ತಲಿವೆ.** ಹೊಳೆಯುತ್ತಲಿವೆ ಈ ಸಮಸ್ತ ಪದಾರ್ಥಗಳನ್ನು ನಾನು ನನ್ನ ಜ್ಞಾನಸ್ವಭಾವದಲ್ಲಿ ಅವಲೋಕನ ಮಾಡುತ್ತೇನೆ. ನನ್ನ ಜ್ಞಾನದ ಹೊರಗೆ ನಾನು ಯಾವುದೇ ವಸ್ತುವನ್ನು ನೋಡುವುದಿಲ್ಲ, ತಿಳಿದುಕೊಳ್ಳುವುದಿಲ್ಲ. ಯಾವಾಗ ನಮ್ಮ ಜ್ಞಾನವು ನಿದ್ರೆಯಿಂದ ಮುಚ್ಚಿಹೋಗುತ್ತದೆ ಮತ್ತು ರೋಗಾದಿಗಳ ಮೂಲಕ ಮೂರ್ಛೆಯಿಂದ ಅಡಗಿ ಹೋಗುತ್ತದೆ ಆಗ ಸಂಪೂರ್ಣ ಲೋಕವು ವಿದ್ಯಮಾನವಿರುತ್ತಿದ್ದರೂ ಅಭಾವರೂಪವಾಗಿಯೇ ಹೋಗುತ್ತದೆ. ಆದುದರಿಂದ ನಮ್ಮ ಲೋಕವಂತೂ ನಮ್ಮ ಜ್ಞಾನವೇ ಇದೆ. ನಮ್ಮ ಜ್ಞಾನದ ಹೊರಗಿನ ಯಾವುದೇ ವಸ್ತುವು ನೋಡುವಲ್ಲಿ ತಿಳಿದುಕೊಳ್ಳುವಲ್ಲಿ ಬರುವುದಿಲ್ಲ. ನಮ್ಮ ಜ್ಞಾನದಿಂದ ಹೊರಗೆ ಯಾವ ಲೋಕವಿದೆ ಅದರಲ್ಲಿ ಅನೇಕ ನರಕ-ಸ್ವರ್ಗಗಳಿವೆ. ಅವು ಸರ್ವಜ್ಞರಿಗೆ ಪ್ರತ್ಯಕ್ಷ ಕಂಡು ಬರುತ್ತವೆ. ಅವೆಲ್ಲವು ನನ್ನ ಸ್ವಭಾವದಿಂದ ಭಿನ್ನವಾದ ಅನ್ಯ ಪದಾರ್ಥಗಳಿವೆ. ಪುಣ್ಯದ ಉದಯವು ದೇವ ಮೊದಲಾದ ಶುಭಗತಿ ಕೊಡುವಂಥದ್ದಿದೆ, ಮತ್ತು ಪಾಪದ ಉದಯವು ನರಕಾದಿ ಅಶುಭಗತಿ ಕೊಡುವಂಥದ್ದಿದೆ. ಪಾಪ-ಪುಣ್ಯಗಳೆರಡೂ ವಿನಾಶಶೀಲವಿವೆ ಮತ್ತು ಪುಣ್ಯ-ಪಾಪದ ಫಲಗಳಾದ ಸ್ವರ್ಗ ನರಕಾದಿಗಳೂ ವಿನಾಶಶೀಲವಿವೆ.

ಆತ್ಮನಾದ ನಾನು ಜ್ಞಾನ-ದರ್ಶನ-ಸುಖ-ವೀರ್ಯಗಳನ್ನು ಅವಿನಾಶೀ ರೂಪದಿಂದ ಧಾರಣ ಮಾಡುವಂಥ ಅಖಂಡನಿದ್ದೇನೆ, ಮೋಕ್ಷದನಾಯಕನಿದ್ದೇನೆ, ನನ್ನ ಲೋಕವು ನನ್ನಲ್ಲಿಯೇ ಇದೆ; ನಾನು ಅದೇ ನನ್ನ ಲೋಕದಲ್ಲಿ ಸಮಸ್ತ ಪದಾರ್ಥಗಳ ಅವಲೋಕನ ಮಾಡುತ್ತ ಇರುತ್ತೇನೆ. ಈ ಪ್ರಕಾರ **ಪರಲೋಕದ ಭಯ**ವಿಲ್ಲದೆ ಸಮ್ಯಗ್ದೃಷ್ಟಿಯು ನಿಃಶಂಕನಿರುತ್ತಾನೆ.

ಸ್ಪರ್ಶನ, ರಸನ, ಘ್ರಾಣ, ನೇತ್ರ, ಕರ್ಣ ಇವು ಐದು ಇಂದ್ರಿಯಗಳು,ಮನ-ವಚನ-ಕಾಯ ಇವು ಮೂರು, ಬಲ, ಆಯು, ಮತ್ತು ಶ್ವಾಸೋಚ್ಛ್ವಾಸ ಈ ಕರ್ಮಗಳಿಂದ ರಚಿಸಲ್ಪಟ್ಟ **ಬಾಹ್ಯ ದಶಪ್ರಾಣ**ಗಳಿವೆ. ಅವು ಪುದ್ಗಲಮಯವಿವೆ. ಈ ಹತ್ತು ಪ್ರಾಣಗಳು ನಾಶವಾಗುವುದನ್ನು ಜಗತ್ತಿನಲ್ಲಿ ಮರಣವೆಂದು ಹೇಳುತ್ತಾರೆ. ಆತ್ಮನಿಗೆ ಜ್ಞಾನ-ದರ್ಶನ-ಸುಖ-ಸತ್ತಾರೂಪದ **ಭಾವಪ್ರಾಣ**ಗಳಿವೆ ಅವುಗಳ ನಾಶವು ಯಾವ ಸಮಯದಲ್ಲಿಯೂ ಆಗುವುದಿಲ್ಲ. **ಯಾವುದು ಉತ್ಪನ್ನವಾಗುವುದು ಅದು ಸಾಯವುದು.** ಪುದ್ಗಲ ಪರಮಾಣುಗಳು ಏಕತ್ರವಾಗಿ ಇಂದ್ರಿಯಾದಿ ಪ್ರಾಣಸ್ವರೂಪದಿಂದ ಉತ್ಪನ್ನವಾಗುತ್ತವೆ ಅವೇ ನಷ್ಟವಾಗುತ್ತವೆ ಆ ನನ್ನ ಸ್ವಭಾವರೂಪದ ಜ್ಞಾನ-ದರ್ಶನ-ಸುಖ-ಸತ್ತಾ **ರೂಪದ ಭಾವಪ್ರಾಣ**ಗಳಿವೆ ಅವುಗಳ ವಿನಾಶವು ಮೂರು ಕಾಲದಲ್ಲಿ ಎಂದೂ ಆಗುವುದಿಲ್ಲ. ಇಂದ್ರಿಯಾದಿ ಪ್ರಾಣಗಳಂತೂ ಶರೀರದ ಜತೆ ಉತ್ಪನ್ನ ಮತ್ತು ನಷ್ಟವಾಗುತ್ತವೆ. ನಾನಂತೂ ಅವಿನಾಶೀ ಚೈತನ್ಯನಿದ್ದೇನೆಂದು ದೃಢ ನಿಶ್ಚಯ ಮಾಡುವಂಥ ಸಮ್ಯಗ್ದೃಷ್ಟಿಗೆ **ಮರಣದ ಭಯದ** ಶಂಕೆಯೇ ಇರುವುದಿಲ್ಲ.

**ವೇದನಾಭಯವನ್ನು ಜಯಸಿ ನಿಃಶಂಕಿತನಾಗಿ ಹೋಗುತ್ತಾನೆ. ವೇದನಾದ ಅರ್ಥವು ತಿಳಿಯುವುದಿದೆ. ನಾನು ತಿಳಿಯುವಂಥ ಜೀವನಿದ್ದೇನೆ. ಮತ್ತು ನಾನು ಒಂದು ನನ್ನ ಅಚಲ ಜ್ಞಾನದ್ದೇ ಅನುಭವ ಮಾಡುತ್ತೇನೆ. ವೇದನಸ್ವರೂಪನಾದ ನಾನು ಅವಿನಾಶಿಯಿದ್ದೇನೆ.** ಜ್ಞಾನದ ಅನುಭವರೂಪ ವೇದನವು ಶರೀರದಲ್ಲಿ ಆಗುವುದಿಲ್ಲ, ವೇದನೀಯಕರ್ಮಜನ್ಯ ಸುಖ-ದುಃಖರೂಪದ ವೇದನವು ಶರೀರದಲ್ಲಿದೆ, ಆದರೆ ಅದು ನನ್ನ ಸ್ವರೂಪವಿಲ್ಲ. ಮೋಹದ ಮಹಿಮೆಯಿಂದ ನನ್ನ ಸ್ವರೂಪದಲ್ಲಿ ಕಂಡು ಬರುತ್ತದೆ. ನಾನಂತೂ ಇದರಿಂದ ಭಿನ್ನ ಜ್ಞಾತಾನಿದ್ದೇನೆ. ಈ ಪ್ರಕಾರ **ಜ್ಞಾನವೇದನಾದಿಂದ ದೇಹದ ವೇದನೆಯನ್ನು ಭಿನ್ನವಾಗಿ ತಿಳಿಯುತ್ತ ಸಮ್ಯಗ್ದೃಷ್ಟಿಯು ನಿಃಶಂಕನಿದ್ದಾನೆ.**

ಅರಕ್ಷಾ ಭಯವೂ ಸಮ್ಯಗ್ದೃಷಿಗೆ ಇರುವುದಿಲ್ಲ. ಜಗತ್ತಿನಲ್ಲಿ ಸತ್ತಾರೂಪದಿಂದಿರುವ ವಸ್ತುವಿನ ನಾಶವು ತ್ರಿಕಾಲದಲ್ಲೂ ಆಗುವುದಿಲ್ಲವೆಂದು ನನ್ನದು ದೃಢ ನಿಶ್ಚಯವಿದೆ. **ನನ್ನ ಜ್ಞಾನ ಸ್ವರೂಪನಾದ ಆತ್ಮನು ಯಾವುದರದೂ ಸಹಾಯತೆಯಿಲ್ಲದೆಯೇ ಸ್ವಯಂ ಸತ್ ಇದ್ದಾನೆ ; ಇವನ ರಕ್ಷಣೆ ಮಾಡುವಂಥವರು ಯಾರೂ ಇಲ್ಲ ಮತ್ತು ನಾಶ**

**ಮಾಡುವಂಥವರೂ ಯಾರೂ ಇಲ್ಲ.** ಯಾರಾದರೂ ಅವನ ನಾಶ ಮಾಡುವಂಥವರಿದ್ದರೆ ಯಾರಾದರೂ ಅವನ ರಕ್ಷಣೆ ಮಾಡುವಂಥವರೂ ಇರಬೇಕಾಗುವರು. ಆದುದರಿಂದ ಸಮ್ಯಗ್ದೃಷ್ಟಿಯು ತನ್ನ ಅವಿನಾಶೀ ಸ್ವರೂಪದ ಅನುಭವ ಮಾಡುತ್ತ **ಅರಕ್ಷಾ ಭಯ** ರಹಿತನಾಗಿ ನಿಃಶಂಕನಿರುತ್ತಾನೆ.

ಅಗುಪ್ತಿಭಯ ಎಂದರೆ ಬಾಗಿಲಾದಿಗಳ ಸುರಕ್ಷೆ ಮಾಡಿದಲ್ಲದೆ ನಮ್ಮ ಧನವು ನಷ್ಟವಾಗಿ ಹೋಗಬಹುದೆಂದು ಚೋರರ ಭಯವೂ ಇಲ್ಲ. ವಸ್ತುವಿನ ಯಾವ ನಿಜರೂಪವಿದೆ ಅದು ತನ್ನ ಸ್ವರೂಪದ ಒಳಗಡೆಯಲ್ಲಿಯೇ ಇದೆ. ತಮ್ಮ ಸ್ವರೂಪವು ತಮ್ಮಿಂದ ಹೊರಗೆ ಇಲ್ಲ. ಆದುದರಿಂದ ನಾನು ಯಾವ ಚೈತನ್ಯಸ್ವರೂಪ ಆತ್ಮನಿದ್ದೇನೆ ಅವನ ಚೈತನ್ಯಸ್ವರೂಪವು ನಮ್ಮ ಒಳಗೆ ಇದೆ. **ಈ ಆತ್ಮನ ಸ್ವರೂಪದಲ್ಲಿ ಪರದ ಪ್ರವೇಶವೇ ಸಂಭವವಿಲ್ಲ.** ಈ ಅನಂತ ಜ್ಞಾನ-ದರ್ಶನಮಯನಾದ ನಮ್ಮ ರೂಪವೇ ನಮ್ಮ ಅಸೀಮ ಅವಿನಾಶೀ ಧನವಿದೆ ; ಇದರಲ್ಲಿ ಕಳ್ಳರ ಪ್ರವೇಶವಾಗುವ ಸಾಧ್ಯತೆಯಿಲ್ಲ. ಇದನ್ನು ಕಳ್ಳರು ಅಪಹರಿಸುವ ಸಾಧ್ಯತೆಯಿಲ್ಲ. ಆದುದರಿಂದ ಸಮ್ಯಗ್ದೃಷ್ಟಿಯು **ಅಗುಪ್ತಿಯ ಭಯ**ದಿಂದ ರಹಿತನಾಗಿ ನಿಃಶಂಕನಿರುತ್ತಾನೆ.

ಸಮ್ಯಗ್ದೃಷ್ಟಿಗೆ **ಅಕಸ್ಮಾತ್ ಭಯವೂ** ಇರುವುದಿಲ್ಲ. ಅವನು ತಿಳಿದುಕೊಂಡಿರುವುದೇನೆಂದರೆ ನನ್ನ **ಆತ್ಮನಂತೂ ಯಾವಾಗಲೂ ಶುದ್ಧನಿದ್ದಾನೆ. ಜ್ಞಾತಾ ಇದ್ದಾನೆ, ದೃಷ್ಟಾ ಇದ್ದಾನೆ, ಅಚಲನಿದ್ದಾನೆ, ಅನಾದಿಯಿದ್ದಾನೆ, ಅನಂತನಿದ್ದಾನೆ, ಸ್ವಭಾವದಿಂದ ಸಿದ್ಧನಿದ್ದಾನೆ, ಅಲಕ್ಷ-ಅರೂಪಿಯಿದ್ದಾನೆ, ಚೈತನ್ಯ ಪ್ರಕಾಶರೂಪನಿದ್ದಾನೆ, ಸುಖದ ಸ್ಥಾನನಿದ್ದಾನೆ, ಇವನಲ್ಲಿ ಅಕಸ್ಮಾತ್ತಾಗಿ ಏನೂ ಆಗುವುದಿಲ್ಲ.** ಇಂಥ ದೃಢ ಭಾವದೊಡನೆ ಸಮ್ಯಗ್ದೃಷ್ಟಿಯು ನಿಃಶಂಕನಿರುತ್ತಾನೆ.

ಯಾರಿಗೆ ಸಮ್ಯಗ್ದರ್ಶನವಿದೆ ಅವರ ಪರಿಣಾಮದಲ್ಲಿ ಈ ಏಳೂ ಭಯಗಳು ಇರುವುದಿಲ್ಲ. ತಮ್ಮ ನಿಜವಾದ ಸ್ವರೂಪವನ್ನು ತಿಳಿದುಕೊಂಡಲ್ಲದೆ ಈ ಆತ್ಮನು ಸಪ್ತಭಯಗಳಿಂದ ರಹಿತನಾಗುವುದಿಲ್ಲ.

**ಸಮ್ಯಗ್ದೃಷ್ಟಿಯು ಅಹಿಂಸೆಯನ್ನೇ ನಿಶ್ಚಯರೂಪದ ಧರ್ಮವೆಂದು ತಿಳಿಯುತ್ತಾನೆ.** ಅವನಿಗೆ ಯಜ್ಞ-ಹೋಮ ಮೊದಲಾದ ಜೀವಘಾತದ ಆರಂಭದಲ್ಲಿ ಸ್ವಲ್ಪಾದರೂ ಧರ್ಮವಾಗಬಹುದೆಂಬ ಶಂಕೆಯೇ ಉಂಟಾಗುವುದಿಲ್ಲ. ಇಂಥ ಶಂಕೆಯ ಅಭಾವವು ಅದು ನಿಃಶಂಕಿತ ಅಂಗವಿದೆ.

ಈಗ **ನಿಃಕಾಂಕ್ಷಿತಗುಣ**ವನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಕರ್ಮಪರವಶೇ ಸಾಂತೇ ದುಃಖೈರಂತರಿತೋದಯೇ ।**
**ಪಾಪಬೀಜೇ ಸುಖೇಽನಾಸ್ಥಾ ಶ್ರದ್ಧಾನಾಕಾಂಕ್ಷಣಾ ಸ್ಮೃತಾ ॥೧೨॥**

**ಅರ್ಥ :-** ಇಂದ್ರಿಯಜನಿತ ಸುಖದಲ್ಲಿ ಸುಖತನದ ಆಸ್ಥೆಯಿಲ್ಲದ ಯಾವ ಶ್ರದ್ಧೆಯ ಭಾವವಿದೆ ಅದು ನಿಃಕಾಂಕ್ಷೆ ನಾಮದ ಸಮ್ಯಕ್ತ್ವದ ಗುಣವಿದೆಯಂದು ಭಗವಂತರು ಹೇಳಿದ್ದಾರೆ.

**ಭಾವಾರ್ಥ :-** ಇಂದ್ರಿಯ ಜನಿತ ಸುಖವು ಅದು ಕರ್ಮಗಳ ವಶವರ್ತಿಯಿದೆ, ಸ್ವಾಧೀನವಿಲ್ಲ, ಅದು ಪುಣ್ಯಕರ್ಮದ ಉದಯದ ಆಧೀನವಿದೆ. ಪುಣ್ಯಕರ್ಮದ ಉದಯದ ಸಹಾಯತೆಯಿಲ್ಲದೆ ಕೋಟ್ಯಂತರ ಉಪಾಯ ಮಾಡಿದರೂ ಮತ್ತು ಮಹಾನ್ ಪುರುಷಾರ್ಥ ಮಾಡಿದರೂ ಕೂಡ ಆ ಸುಖದ ಪ್ರಾಪ್ತಿಯಾಗುವುದಿಲ್ಲ, ಇಷ್ಟದ ಲಾಭವಾಗುವುದಿಲ್ಲ. ಹಲವು ಪ್ರಕಾರಗಳಿಂದ ಅನಿಷ್ಟವಾದವುಗಳೇ ಪ್ರಾಪ್ತವಾಗುತ್ತವೆ.

ಎಲ್ಲಾದರೂ ಪುಣ್ಯದ ಉದಯದಿಂದ ಆ ಸುಖವು ಪ್ರಾಪ್ತವಾಗಿಬಿಟ್ಟರೂ ಆ ಸುಖವು ಕೊನೆಸಹಿತವಿದೆ, ಪರಾಧೀನವಿದೆ. ಎಷ್ಟು ಸಮಯದವರೆಗೆ ಭೋಗಿಸಲಾಗುವುದು. ! ಏಕೆಂದರೆ ಯಾವ ಇಂದ್ರಿಯಜನಿತ ಸುಖವಿದೆ ಅದು ನನ್ನ ಇಷ್ಟವಿಷಯದ ಆಧೀನವಿದೆ ಮತ್ತು ಇಷ್ಟದ ಸಮಾಗಮವು ವಿನಾಶಶೀಲವಿದೆ. ಇಂದ್ರ ಧನುಷ್ಯದ ಹಾಗೆ ಕೋಲ್ಮಿಂಚಿನ ಹೊಳಪಿನ ಸಮಾನ ಕ್ಷಣಭಂಗುರವಿದೆ, ಪರಾಧೀನವಿದೆ. ಆ ಸುಖವು ಶರೀರದ ನಿರೋಗತೆಯ ಆಧೀನ, ಧನದ ಆಧೀನ,

ಸ್ತ್ರೀಯ ಆಧೀನ, ಪುತ್ರನ ಆಧೀನ, ಆಯುವಿನ ಆಧೀನ, ಜೀವಿಕೆಯ ಆಧೀನ, ಕ್ಷೇತ್ರದ ಆಧೀನ, ಇಂದ್ರಿಯಗಳ ಆಧೀನ, ಇಂದ್ರಿಯ ವಿಷಯಗಳ ಆಧೀನ ಇವೇ ಮೊದಲಾದ ಸಾವಿರಾರು ಪರಾಧೀನತೆ ಸಹಿತವಿವೆ. ಮತ್ತು ವಿನಾಶದ ಸನ್ಮುಖವಿವೆ. ಎಷ್ಟು ಸಮಯದವರೆಗೆ ಭೋಗಿಸಲಾಗುವುದು ? ಆದುದರಿಂದ ಯಾವುದು ಇಂದ್ರಿಯಜನಿತ ಸುಖವಿದೆ ಅದು ಅವಶ್ಯವಾಗಿ ಕೊನೆ ಸಹಿತವಿದೆ.

ಕೊನೆಸಹಿತವಿದ್ದರೂ ಅಖಂಡ ಧಾರಾಪ್ರವಾಹರೂಪವಿಲ್ಲ. ಮಧ್ಯ-ಮಧ್ಯದಲ್ಲಿ ಅನೇಕ ದುಃಖಗಳ ಉದಯಸಹಿತವಿದೆ. ಒಮ್ಮೆ ರೋಗದ ಉದಯ ಬಂದರೆ ಇನ್ನೊಮ್ಮೆ ಸ್ತ್ರೀ-ಪುತ್ರ-ಮಿತ್ರರ ವಿಯೋಗವಾಗಿ ಹೋಗುತ್ತದೆ, ಒಮ್ಮೆ ಅಪಮಾನವಾಗುವುದು ಒಮ್ಮೆ ಧನದ ಹಾನಿಯಾಗುವುದು, ಒಮ್ಮೆ ಅನಿಷ್ಟ ಸಂಯೋಗವಾಗುವುದು. ಈ ಪ್ರಕಾರ ಅಂತರಸಹಿತ ಮತ್ತು ಅನೇಕ ದುಃಖಸಹಿತವಿದೆ.

**ಆ ಸುಖವು ಪಾಪದ ಬೀಜವಿದೆ.** ಇಂದ್ರಿಯ ಜನ್ಯ ಸುಖಗಳಲ್ಲಿ ಲೀನವಾದೊಡನೆ ಈ ಜೀವನು ತನ್ನ ಸ್ವರೂಪವನ್ನೇ ಮರೆಯುತ್ತಾನೆ ಮಹಾ ಘೋರ ಆರಂಭದಲ್ಲಿ ಪ್ರವರ್ತಿಸುತ್ತಾನೆ. ಅನ್ಯಾಯ ಮತ್ತು ವಿಷಯ ಸೇವನೆ ಮಾಡುತ್ತಾನೆ, ಇದರಿಂದ ಪಾಪಬಂಧವೇ ಆಗುತ್ತದೆ. ಆದುದರಿಂದ **ಇಂದ್ರಿಯಜನಿತ ಸುಖವು ನರಕ-ತಿರ್ಯಂಚಾದಿಗತಿಗಳಲ್ಲಿ ಪರಿಭ್ರಮಣ ಮಾಡಿಸುವಂಥ ಪಾಪಬಂಧದ ಬೀಜವೇ ಇದೆ.**

ಹೀಗೆ ಪರಾಧೀನ, ಕೊನೆಸಹಿತ, ದುಃಖಗಳಿಂದ ತುಂಬಿದ ಎಷ್ಟು ಇಂದ್ರಿಯಜನಿತ ಸುಖಗಳಿವೆ ಅವೆಲ್ಲವೂ ಸಮ್ಯಗ್ದೃಷ್ಟಿಗೆ ಸುಖವಾಗಿ ಕಾಣುವುದೇ ಇಲ್ಲವೆಂದ ಮೇಲೆ ಆ ಸುಖದಲ್ಲಿ ಅವನಿಗೆ ಆಸ್ಥಾರೂಪದ ಶ್ರದ್ಧೆ ಹೇಗಾಗುವುದು ? ಶ್ರದ್ಧೆಯೇ ಆಗದಿರುವಾಗ ಅವನು ಇಚ್ಛೆ ಹೇಗೆ ಮಾಡುವನು ? **ಸಮ್ಯಗ್ದೃಷ್ಟಿಗೆ ಆತ್ಮನ ಅನುಭವವಂತೂ ಇದ್ದೇ ಇರುತ್ತದೆಂಬ** ಭಾವವನ್ನು ಇಲ್ಲಿ ತಿಳಿದುಕೊಳ್ಳಬೇಕು. ಆತ್ಮನ ಅನುಭವವಾಗಿದೆಯೆಂದ ಮೇಲೆ ಆತ್ಮನ ಸ್ವಭಾವವಾದ ಆ ಅತೀಂದ್ರಿಯ ಅನಂತಜ್ಞಾನ ಮತ್ತು ನಿರಾಕುಲ ಲಕ್ಷಣರೂಪದ ಅವಿನಾಶೀ ಸುಖವಿದೆ ಅದರ ಅನುಭವವು ಆಗಿಯೇ ಆಗುತ್ತದೆ.

ಸಂಸಾರೀ ಜೀವರುಗಳಿಗೆ ಯಾವ ಇಂದ್ರಿಯಗಳ ಆಧೀನವಾದ ಸುಖವಿದೆ ಅದಂತೂ ಸುಖಾಭಾಸವಿದೆ, ಸುಖವಿಲ್ಲ, ಆದರೆ ವೇದನೆಯ ಉಪಚಾರವಿದೆ. ಕ್ಷುಧೆಯ ತೀವ್ರ ವೇದನೆಯಾದವನು ಭೋಜನ ಮಾಡಿ ಸುಖ ಮನ್ನಿಸುವನು, ಬಾಯಾರಿಕೆಯಾದವನು ತಂಪು ನೀರು ಕುಡಿಯಲಿಚ್ಛಿಸುವನು, ಶೀತದ ವೇದನೆಯಾದರೆ ಉಣ್ಣೆಯ ವಸ್ತ್ರ ತೊಡಲು ಬಯಸುವನು, ಶಕೆಯ ವೇದನೆಯಾದರೆ ತಂಗಾಳಿ ಬಯಸುವನು ಏಕೆಂದರೆ ರೋಗದ ಕಷ್ಟವಾದಲ್ಲದೆ ಉಪಚಾರವನ್ನು ಯಾರು ಬಯಸುವರು ? ನೇತ್ರ ರೋಗವಾದಲ್ಲದೆ ಕಣ್ಣುಗಳಿಗೆ ಅಂಜನವನ್ನಾರು ಇಡುವರು ? ಕರ್ಣದಲ್ಲಿ ರೋಗವಾದಲ್ಲದೆ ಮೇಕೆಯ ಮೂತ್ರ ಮತ್ತು ಎಣ್ಣೆಯನ್ನು ಕಿವಿಯಲ್ಲಿ ಯಾರು ಹಾಕಿಕೊಳ್ಳುವರು ? ಚಳಿ-ಜ್ವರವಿಲ್ಲದೆ ಅಗ್ನಿಯ ಶಾಕ ಹಾಗೂ ಸೂರ್ಯನ ಬಿಸಿಲನ್ನು ಆದರದಿಂದ ಯಾರು ಸೇವನೆ ಮಾಡುತ್ತಾರೆ ? ವಾತರೋಗವಿಲ್ಲದೆ ದುರ್ಗಂಧಯುಕ್ತ ಎಣ್ಣೆಯಿಂದ ಯಾರು ಮಾಲೀಸು ಮಾಡಿಕೊಳ್ಳಬಯಸುವರು ?

ಆದುದರಿಂದ ಸಂಸಾರೀ ಜೀವನಿಗೆ ಈ ಐದು ಇಂದ್ರಿಯಗಳ ವಿಷಯದ ತೀವ್ರಅಪೇಕ್ಷಾರೂಪದ ದುಃಖ ಉತ್ಪನ್ನವಾದ ಮೇಲೆ ಅವನಿಗೆ ಆ ವಿಷಯಗಳನ್ನು ಭೋಗಿಸುವ ಇಚ್ಛೆಯುಂಟಾಗುತ್ತದೆ. ವಿಷಯಗಳ ಭೋಗವಂತೂ ಆ ದುಃಖವನ್ನು ಸ್ವಲ್ಪ ಸಮಯದ ಸಲುವಾಗಿ ಶಾಂತ ಮಾಡುತ್ತದೆ ; ಆದರೆ ನಂತರ ಮತ್ತೆ ಅಧಿಕ ದುಃಖವನ್ನುತ್ಪನ್ನ ಮಾಡುತ್ತದೆ. ಆದುದರಿಂದ ಇಂದ್ರಿಯ ವಿಷಯಗಳನ್ನು ಭೋಗಿಸುವುದರಿಂದ ಉತ್ಪನ್ನವಾಗುವಂಥ ಸುಖವಂತೂ ವಾಸ್ತವದಲ್ಲಿ ದುಃಖವೇ ಇದೆ.

**ಬಾಹ್ಯಶರೀರ ಇಂದ್ರಿಯಾದಿಗಳೇ ಆತ್ಮನೆಂದು ತಿಳಿಯುವಂಥವನು ಬಹಿರಾತ್ಮನಿದ್ದಾನೆ. ಅವನು ವಿಷಯಗಳ ವೇದನೆಯ ಉಪಚಾರಕ್ಕೇನೇ ಸುಖವೆಂದು ಮನ್ನಿಸುತ್ತಾನೆ. ಹೀಗೆ ಮನ್ನಿಸುವುದು ಮೋಹಕರ್ಮಜನ್ಯ ಭ್ರಮೆಯಿದೆ. ದುಃಖ ಉತ್ಪನ್ನವಾಗದಿರುವುದೇ ಸುಖವಿದೆ, ಅದರ ಲಕ್ಷಣವು ನಿರಾಕುಲತೆಯಿದೆ. ವಿಷಯಗಳ ಆಧೀನ ಸುಖ**

**ಮನ್ನಿಸುವುದಂತೂ ಮಿಥ್ಯಾಶ್ರದ್ಧೆಯಿದೆ.** ಸಮ್ಯಗ್ದೃಷ್ಟಿಗೆ ಅಹಮಿಂದ್ರಲೋಕದ ಸುಖವೂ ಪರಾಧೀನ, ಆಕುಲತಾರೂಪ, ವಿನಾಶಶೀಲ, ಕೇವಲ ದುಃಖರೂಪವಾಗಿಯೇ ಕಂಡು ಬರುತ್ತದೆ. ಆದ್ದರಿಂದ ಸಮ್ಯಗ್ದೃಷ್ಟಿಗೆ ಇಂದ್ರಿಯಜನಿತ ಸುಖದಲ್ಲಿ ಎಂದೂ ಇಚ್ಛೆಯಿರುವುದಿಲ್ಲ.

ಸಮ್ಯಗ್ದೃಷ್ಟಿಯು ಈ ಜನ್ಮದಲ್ಲಂತೂ ಧನ, ಸಂಪತ್ತಿ, ವೈಭವ ಮೊದಲಾದುವನ್ನು ಬಯಸುವುದಿಲ್ಲ, ಮತ್ತು ಪರಲೋಕದಲ್ಲಿ ಇಂದ್ರಪದ, ಚಕ್ರವರ್ತಿ ಇತ್ಯಾದಿಗಳನ್ನು ಬಯಸುವುದಿಲ್ಲ. ಈ ಇಂದ್ರಿಯ ವಿಷಯಗಳಂತೂ ಸ್ವಲ್ಪ ಸಮಯದ ಸಲುವಾಗಿ ಇವೆ. ಆದರೆ ಇವುಗಳ ಫಲವನ್ನು ಅಸಂಖ್ಯಾತಕಾಲದವರೆಗೆ ನರಕದ ದುಃಖ ಮತ್ತು ಅನಂತ ಕಾಲದವರೆಗೆ ತಿರ್ಯಂಚ ಮೊದಲಾದ ಗತಿಗಳಲ್ಲಿ ಮಹಾದರಿದ್ರೀ, ಮಹಾರೋಗಿ, ನೀಚಕುಲದ ಮನುಷ್ಯರಲ್ಲಿ ಅನೇಕ ಜನ್ಮಗಳನ್ನು ಧಾರಣ ಮಾಡಿ ಭೋಗಿಸಬೇಕಾಗುತ್ತದೆ.

**ಈ ಜಗತ್ತಿನಲ್ಲಿ ಜೀವರುಗಳಿಗೆ ಮೋಹದ ಉದಯದಿಂದ ಆಸೆ ಮತ್ತು ಸಂದೇಹಗಳು ನಿರಂತರವಿರುತ್ತವೆ.** ಆಸೆ ಮಾಡುವುದರಿಂದ ಯಾವುದರ ಪ್ರಾಪ್ತಿಯಂತೂ ಆಗುವುದಿಲ್ಲ. ಎಲ್ಲ ಜೀವರುಗಳು ತಮ್ಮ ಸಲುವಾಗಿ ನಿತ್ಯ ಧನದ ಪ್ರಾಪ್ತಿ, ನಿರೋಗತೆ, ಕುಟುಂಬದ ವೃದ್ಧಿ, ಇಂದ್ರಿಯಗಳ ಬಲ, ತಮ್ಮ ಉಚ್ಚತೆಯನ್ನಪೇಕ್ಷಿಸುತ್ತಾರೆ, ಆದರೆ ಇಚ್ಛೆ ಮಾಡುವುದರಿಂದ ಏನೂ ಆಗುವುದಿಲ್ಲ. ಎಲ್ಲ ಜೀವಗಳು ಇಚ್ಛೆ ಮಾಡಿ ನಿರಂತರ ಪಾಪಬಂಧ ಮತ್ತು ಅಂತರಾಯ ಕರ್ಮದ ತೀವ್ರ ಬಂಧ ಮಾಡಿಕೊಳ್ಳುತ್ತಿದ್ದಾರೆ.

ಅದೆಷ್ಟೋ ಜೀವರುಗಳು ಭೋಗದ ಅಭಿಲಾಷಿಗಳಾಗಿ ದಾನ, ತಪ, ವ್ರತ, ಶೀಲ, ಸಂಯಮಗಳನ್ನು ಧಾರಣ ಮಾಡುತ್ತಾರೆ, ಆದರೆ **ಇಚ್ಛೆ ಮಾಡುವುದರಿಂದಂತೂ ಪುಣ್ಯದ ಘಾತವೇ ಆಗುತ್ತದೆ,** ಪುಣ್ಯದ ಬಂಧವಂತೂ ಇಚ್ಛಾರಹಿತನಿಗೆ ಆಗುತ್ತದೆ. ಆ ಶುಭ-ಅಶುಭ ಕರ್ಮಗಳಿಂದ ಪ್ರಾಪ್ತವಾದ ವಿಷಯಗಳಲ್ಲಿ ಸಂತೋಷವುಳ್ಳವನಾಗಿ, ನಿರಾಕುಲನಾಗಿ ವಿಷಯಗಳ ಇಚ್ಛೆ ಮಾಡದಿರುವವನಿಗೆ ಪುಣ್ಯದ ಬಂಧವಾಗುತ್ತದೆ.

ಜಗತ್ತಿನ ಸಮಸ್ತ ಜೀವರುಗಳು ನಿತ್ಯ ಮುಂಜಾನೆ ಎದ್ದ ಕೂಡಲೆ ನನಗೆ ವಿಯೋಗ, ಮರಣ, ಹಾನಿ, ಅಪಮಾನ, ಧನದ ನಾಶ, ರೋಗ, ವೇದನೆಗಳಾಗದಿರಲೆಂದು ಬಯಸುತ್ತಾರೆ, ನಿರಂತರ ಅವುಗಳಾಗುವುದರ ಶಂಕೆಯನ್ನೇ ಮಾಡುತ್ತಿರುತ್ತಾರೆ, ಅತ್ಯಂತ ಭಯಭೀತರಿರುತ್ತಾರೆ. ಆದಾಗ್ಯೂ ವಿಯೋಗವಾಗುತ್ತದೆ, ಮರಣವಾಗುತ್ತದೆ, ಧನ ಹಾನಿ, ಬಲಹಾನಿ, ಅಪಮಾನ, ರೋಗ, ವೇದನೆ ಮೊದಲಾದವು ಪೂರ್ವದಲ್ಲಿ ಕಟ್ಟಿದ ಕರ್ಮಗಳ ಉದಯದ ಅನುಸಾರವೇ ಆಗುತ್ತವೆ. ಅವನ್ನು ನಿವಾರಿಸುವಲ್ಲಿ ಇಂದ್ರ, ಜಿನೇಂದ್ರ, ಮಂತ್ರ, ತಂತ್ರಾದಿಗಳಾವವೂ ಸಮರ್ಥವಿಲ್ಲ ; ಏಕೆಂದರೆ ಮರಣವಂತೂ ಆಯುಕರ್ಮದ ನಾಶದಿಂದ ಆಗುತ್ತದೆ, ಅಲಾಭ ಮೊದಲಾದವು ಅಂತರಾಯಕರ್ಮದ ಉದಯದಿಂದ ಆಗುತ್ತವೆ, ರೋಗ-ವೇದನಾದಿಗಳು ಅಸಾತಾವೇದನೀಯ ಕರ್ಮದ ಉದಯದಿಂದ ಆಗುತ್ತವೆ. ಮತ್ತು ಕರ್ಮವನ್ನು ತಳ್ಳಿ ಬಿಡುವಲ್ಲಿ, ತಂದುಕೊಳ್ಳುವಲ್ಲಿ, ಬದಲಿಸುವಲ್ಲಿ ಯಾವ ದೇವ, ದಾನವ, ಇಂದ್ರ, ಜಿನೇಂದ್ರಾದಿಗಳು ಸಮರ್ಥರಿಲ್ಲ. ಜೀವನು ತನ್ನ ಭಾವಗಳ ಮೂಲಕ ಕಟ್ಟಲಾದ ಕರ್ಮಗಳಿಂದ ತನ್ನನ್ನು ಬಿಡಿಸಿಕೊಳ್ಳುವ ಸಲುವಾಗಿ ತನ್ನ ಸಂತೋಷ, ಕ್ಷಮೆ, ತಪಶ್ಚರಣ ಮೊದಲಾದ ಭಾವಗಳ ಮೂಲಕ ತಾನೇ ಸಮರ್ಥನಿದ್ದಾನೆ, ಬೇರೆ ಯಾರೂ ಸಮರ್ಥರಿಲ್ಲ. ಇಂಥ ದೃಢ ನಿಶ್ಚಯ ಶ್ರದ್ಧೆಯ ಧಾರಕನು ನಿಃಶಂಕ ನಿರ್ವಾಂಛಕನು ಸಮ್ಯಗ್ದೃಷ್ಟಿಯೇ ಇರುತ್ತಾನೆ.

## ಸಮ್ಯಕ್ತ್ವದ ವಿಷಯದಲ್ಲಿ ಅವ್ರತಿ ಗೃಹಸ್ಥನ ವಿಚಾರ

**ಪ್ರಶ್ನೆ :-** ಸಮಸ್ತ ಪರಿಗ್ರಹದ ತ್ಯಾಗಿಗಳು ಸಾಧು ಮುನಿಗಳಿದ್ದಾರೆ, ಅವರಿಗೆ ಮತ್ತು ತ್ಯಾಗಿ ಗೃಹಸ್ಥರಿಗಂತೂ ಶಂಕಾ ರಹಿತತೆ ಹಾಗೂ ಇಚ್ಛೆಯ ಅಭಾವವಿರುವ ಸಾಧ್ಯತೆಯಿದೆ. ಆದರೆ ವ್ರತರಹಿತ ಗೃಹಸ್ಥರಿಗೆ ನಿಃಶಂಕತೆ, ನಿಃಕಾಂಕ್ಷತೆಗಳು ಹೇಗೆ ಇರುವ ಸಾಧ್ಯತೆಯಿದೆ ? ಅವ್ರತ-ಸಮ್ಯಗ್ದೃಷ್ಟಿ ಗೃಹಸ್ಥನಿಗಂತೂ ಭೋಗಗಳ ಇಚ್ಛೆಯಾಗುತ್ತಿರುವುದು ಕಂಡು ಬರುತ್ತದೆ,

ವಾಣಿಜ್ಯ ವ್ಯವಹಾರದಲ್ಲಿ ಸೇವೆ ನೌಕರಿ ಮಾಡುವಲ್ಲಿ ಲಾಭವನ್ನಿಚ್ಛಿಸುತ್ತಾನೆ, ತನ್ನ ಕುಟುಂಬದ ವೃದ್ಧಿ ಹಾಗೂ ಧನದ ವೃದ್ಧಿಯನ್ನಪೇಕ್ಷಿಸುತ್ತಾನೆ, ಮತ್ತು ರೋಗದ ಶಂಕೆ, ಕುಟುಂಬದ ವಿಯೋಗದ ಶಂಕೆ ಅಜೀವಿಕೆಯು ಕೆಟ್ಟು ಹೋಗುವ ಶಂಕೆ, ಧನ ನಾಶದ ಶಂಕೆಯು ಅವನಿಗೆ ನಿರಂತರ ಇದ್ದೇ ಇರುತ್ತದೆ. ಎಂದ ಮೇಲೆ ಅವನಿಗೆ ನಿಃಶಂಕತೆ-ನಿಃಕಾಂಕ್ಷತೆಗಳು ಹೇಗಿರುವವು ? ಮತ್ತು ನಿಃಶಂಕಿತ-ನಿಃಕಾಂಕ್ಷಿತ ಭಾವಗಳಾದಲ್ಲದೆ ಸಮ್ಯಕ್ತ್ವವು ಹೇಗಿರುವುದು ? ಆದುದರಿಂದ ಅವ್ರತಿಗೃಹಸ್ಥನಿಗೆ ಸಮ್ಯಕ್ತ್ವವಿರುವುದು ಹೇಗೆ ಸಂಭವವಿದೆ ?

**ಉತ್ತರ :-** ಸಮ್ಯಕ್ತ್ವವು ಅದು ಮಿಥ್ಯಾತ್ವ ಮತ್ತು ಅನಂತಾನುಬಂಧೀ ಕಷಾಯದ ಅಭಾವದಿಂದಲೇ ಆಗುತ್ತದೆ. **ಅವ್ರತ-ಸಮ್ಯಗ್ದೃಷ್ಟಿ ಗೃಹಸ್ಥನಿಗೆ ಮಿಥ್ಯಾತ್ವದ ಅಭಾವವಾಗಿದೆ ಮತ್ತು ಅನಂತಾನುಬಂಧೀ ಕಷಾಯದ್ದೂ ಅಭಾವವಾಗಿದೆ.** ಮಿಥ್ಯಾತ್ವದ ಅಭಾವದಿಂದಂತೂ ಯಥಾರ್ಥ ಆತ್ಮತತ್ತ್ವ ಮತ್ತು ಪರತತ್ತ್ವದ ಶ್ರದ್ಧೆಯು ಪ್ರಕಟವಾಗಿದೆ. ಅನಂತಾನು-ಬಂಧೀ ಕಷಾಯದ ಅಭಾವದಿಂದ ವಿಪರೀತ ರಾಗಭಾವದ ಅಭಾವವಾಗಿದೆ ಮತ್ತು ಜ್ಞಾನ-ಶ್ರದ್ಧೆಯ ವಿಪರೀತತೆಯ ಅಭಾವದಿಂದ ಇಹಲೋಕಭಯ, ಪರಲೋಕಭಯ, ಮರಣಭಯ ಮೊದಲಾದ ಸಪ್ತ ಭಯಗಳು ಅವ್ರತ-ಸಮ್ಯಗ್ದೃಷ್ಟಿಗೆ ಇರುವುದಿಲ್ಲ, ಇದೇ ಕಾರಣದಿಂದ ಅವನು ತನ್ನ ಆತ್ಮನ ಅಖಂಡ, ಅವಿನಾಶೀ ಟಂಕೋತ್ಕೀರ್ಣ ಜ್ಞಾನ-ದರ್ಶನ ಸ್ವಭಾವದ ಶ್ರದ್ಧೆ ಮಾಡುತ್ತಾನೆ. ಪರವಸ್ತುವಿನ ಇಚ್ಛೆಯ ರೂಪದ ವಿಪರೀತತೆಯ ಅಭಾವವಾಗುವುದರಿಂದ ಸಮಸ್ತ ಇಂದ್ರಿಯ ವಿಷಯಗಳಲ್ಲಿ ಇಚ್ಛಾರಹಿತನಿದ್ದಾನೆ. **ಸ್ವರ್ಗಲೋಕದಲ್ಲಿ ಉತ್ಪನ್ನನಾದ ಇಂದ್ರ ಮತ್ತು ಅಹಮಿಂದ್ರರಿಗೆ ಕೂಡ ವಿಷಯಭೋಗಗಳು ವಿಷದಸಮ ದಾಹದುಃಖವನ್ನುತ್ಪನ್ನಮಾಡುವಂಥವುಗಳಿವೆಯೆಂದು ತಿಳಿದುಕೊಂಡು ಎಂದೂ ಸ್ವಪ್ನದಲ್ಲಿ ಕೂಡ ಅವುಗಳ ಇಚ್ಛೆ ಮಾಡುವುದಿಲ್ಲ,** ತನ್ನ ಆತ್ಮಾಧೀನ ನಿರಾಕುಲ ಲಕ್ಷಣ ರೂಪದ ಅವಿನಾಶೀ ಜ್ಞಾನಾನಂದವನ್ನೇ ಸುಖವೆಂದು ಮನ್ನಿಸುತ್ತಾನೆ. ತನ್ನ ಶರೀರವನ್ನು ಹಾಗೂ ಧನಸಂಪದವನ್ನು ಕರ್ಮೋದಯಜನ್ಯ ಪರಾಧೀನ ವಿನಾಶಶೀಲ ದುಃಖರೂಪವೆಂದು ತಿಳಿದುಕೊಂಡು 'ಇವು ನಮ್ಮವು ಇವೆ'ಯೆಂಬ ವಿಪರೀತ ಸಂಕಲ್ಪವನ್ನು ಕೂಡ ಮಾಡುವುದಿಲ್ಲ,

ಅನಂತಾನುಬಂಧೀ ಕಷಾಯದ ಉದಯಜನ್ಯ ವಿಪರೀತ ಸುಳ್ಳು, ಭಯ, ಶಂಕೆ, ಪರವಸ್ತುವಿನಲ್ಲಿ ಇಚ್ಛೆಯು ಅವ್ರತ ಸಮ್ಯಗ್ದೃಷ್ಟಿಗೆ ಎಂದೂ ಇರುವುದಿಲ್ಲ. ಆದರೆ ನಾಲ್ಕು ಅಪ್ರತ್ಯಾಖಾನಾವರಣ ಕಷಾಯ, ನಾಲ್ಕುಪ್ರತ್ಯಾಖ್ಯಾನಾವರಣ ಕಷಾಯ, ನಾಲ್ಕು ಸಂಜ್ವಲನ ಕಷಾಯ ಮತ್ತು ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀವೇದ, ಪುರುಷವೇದ, ನಪುಂಸಕವೇದ - ಈ ಇಪ್ಪತ್ತೊಂದು ಕಷಾಯಗಳ ತೀವ್ರ ಉದಯದಿಂದ ಉತ್ಪನ್ನವಾದ ರಾಗ ಭಾವದ ಪ್ರಭಾವದಿಂದ ಇಂದ್ರಿಯ ದುಃಖಗಳ ಯಾತನೆಯಿಂದ ಪೀಡಿತನಾಗಿರುವುದರಿಂದ ಅವುಗಳ ತ್ಯಾಗ ಮಾಡಲು ಪರಿಣಾಮವು ಕಂಪಿಸುತ್ತದೆ. ವಿಷಯಗಳನ್ನು ದುಃಖರೂಪವಾಗಿ ತಿಳಿಯುತ್ತಿದ್ದರೂ ಕೂಡ ವರ್ತಮಾನ ಕಾಲದ ದುಃಖ ಸಹನೆ ಮಾಡುವಲ್ಲಿ ಸಮರ್ಥವಿಲ್ಲ,

ಯಾವ ಪ್ರಕಾರ ರೋಗಿಯು ಕಹಿ ಔಷಧ ಕುಡಿಯುವುದನ್ನು ಎಂದೂ ಒಳ್ಳೆಯದೆಂದೂ ಮನ್ನಿಸುವುದಿಲ್ಲ, ಆದರೂ ದುಃಖದ ಪೀಡೆಯಿಂದ ಕಹಿ ಔಷಧಿಯನ್ನು ಅತ್ಯಂತ ಪ್ರೀತಿಯಿಂದ ಕುಡಿಯುತ್ತಾನೆ. ಆದರೆ ಅಂತರಂಗದಲ್ಲಿ ಔಷಧ ಕುಡಿಯುವುದನ್ನು ಅತ್ಯಂತ ಕೆಡಕೆಂದು ತಿಳಿಯುತ್ತಾನೆ ಮತ್ತು ನಾನು ಔಷಧದ ಹೆಸರು ಕೂಡ ಎತ್ತದಂಥ ದಿವಸವೆಂದು ಬರುವುದೆಂದು ವಿಚಾರ ಮಾಡುತ್ತಾನೆ. ಅದೇ ಪ್ರಕಾರ ಅವ್ರತ-ಸಮ್ಯಗ್ದೃಷ್ಟಿಯು ಕೂಡ ಭೋಗಗಳನ್ನು ಎಂದೂ ಒಳ್ಳೆಯವೆಂದು ಮನ್ನಿಸುವುದಿಲ್ಲ; ಆದರೆ ಅವುಗಳಿಲ್ಲದೆ ನಿರ್ವಾಹವಾಗುವುದು ಕಂಡು ಬರುವುದಿಲ್ಲ. ಪರಿಣಾಮಗಳ ದೃಢತೆಯು ಗೋಚರಿಸುವುದಿಲ್ಲ. ಕಷಾಯಗಳ ಪ್ರಬಲ ಆಘಾತವಾಗುತ್ತಿದೆ, ಇಂದ್ರಿಯಗಳ ದುಃಖ ಸಹಿಸಲಾಗುವುದಿಲ್ಲ, ಆದುದರಿಂದ ದುಃಖದ ಪೀಡೆಯನ್ನು ಸಹಿಸಲಾಗದೆ ಭೋಗಗಳನ್ನು ಬಯಸುತ್ತಾನೆ.

ಸಂಹನನವು ದುರ್ಬಲವಿದ್ದು ಸಹಾಯ ಮಾಡುವಂಥವರಾರೂ ಕಂಡು ಬರುವುದಿಲ್ಲ, ಕಷಾಯಗಳ ಉದಯದಿಂದ ಶಕ್ತಿಯು ನಷ್ಟವಾಗುತ್ತಿದೆ, ಪರವಶದಲ್ಲಿದೆ. ಹೇಗೆ ಜೈಲಿನಲ್ಲಿ ಬಂಧಿಸಿದ ಪುರುಷನು ಜೈಲಿನಿಂದ ಅತ್ಯಂತ ವಿರಕ್ತನಿರುತ್ತಾನೆ, ಆದರೂ ಪರಾಧೀನನಾಗಿ ಮಹಾದುಃಖ ಕೊಡುವಂಥ ಆ ಕಾರಾಗೃಹವನ್ನೇ ಗುಡಿಸುತ್ತಾನೆ,

ತೊಳೆಯುತ್ತಾನೆ, ಸಾರಿಸುತ್ತಾನೆ ; ಅದೇ ಪ್ರಕಾರ ಅವ್ರತ ಸಮ್ಯಗ್ದೃಷ್ಟಿಯೂ ಶರೀರವನ್ನು ಸೆರೆಮನೆಯ ಸಮಾನ ತಿಳಿಯುತ್ತಾನೆ; ಹಸಿವೆ-ಬಾಯಾರಿಕೆಯ ಕಷ್ಟ ಸಹಿಸುವಲ್ಲಿ ಅಸಮರ್ಥನಾಗಿ ಶರೀರದ ಪೋಷಣೆ ಮಾಡುತ್ತಾನೆ, ಆದರೆ ದೇಹವನ್ನು ತನ್ನದೆಂದು ಮನ್ನಿಸುವುದಿಲ್ಲ, ತಿಳಿಯುವುದಿಲ್ಲ, ಅವನಿಗೆ ವರ್ತಮಾನ ಕಾಲದ ದುಃಖದ ಭಯವಿದೆ ಮತ್ತು ಆ ದುಃಖವನ್ನು ದೂರ ಮಾಡುವುದೇ ಅವ್ರತ-ಸಮ್ಯಗ್ದೃಷ್ಟಿಯ ಇಚ್ಛೆಯಿದೆ. ಕರ್ಮೋದಯದ ಜಾಲದಲ್ಲಿ ಸಿಕ್ಕಿದ್ದಾನೆ, ಹೊರಡಬಯಸುತ್ತಾನೆ, ಆದರೆ ರಾಗ, ದ್ವೇಷ, ಅಭಿಮಾನ, ಅಪ್ರತ್ಯಾಖ್ಯಾನದ ಉದಯದ ಪ್ರಭಾವವೇ ಹೇಗಿದೆಯೆಂದರೆ ಅವನು ತ್ಯಾಗ-ವ್ರತಾದಿಗಳನ್ನು ಬಯಸುತ್ತಿದ್ದರೂ ಅವು ತ್ಯಾಗಿಯಾಗಲು ಬಿಡುವುದಿಲ್ಲ.

**ಉದಯದ ದಶೆಯು ಮಹಾಬಲವಂತವಿದೆ.** ಸಂಸಾರೀ ಜೀವನು ಅನಾದಿಕಾಲದಿಂದ ಕರ್ಮೋದಯದ ಜಾಲದೊಳಗಿಂದ ಹೊರಡುವ ಸಾಧ್ಯತೆಯಾಗಿಲ್ಲ. ಎಲ್ಲಿಯವರೆಗೆ ಶರೀರದ ಸಂಯೋಗವಿದೆ ಅಲ್ಲಿಯವರೆಗೆ ಶರೀರದ ನಿರ್ವಾಹದ ಸಲುವಾಗಿ ಅಜೀವಿಕೆ, ಭೋಜನ, ವಸ್ತ್ರಗಳನ್ನಪೇಕ್ಷಿಸುತ್ತಾನೆ. ಅಪ್ರತ್ಯಾಖ್ಯಾನ ಕಷಾಯದ ಉದಯದಿಂದ ಲೋಕದಲ್ಲಿ ತನ್ನ ಕೀಳು ಪ್ರವೃತ್ತಿಯ ಅಭಾವರೂಪದ ಉಚ್ಚ ಪ್ರವೃತ್ತಿಯನ್ನಪೇಕ್ಷಿಸುತ್ತಾನೆ. ಧನ, ಸಂಪತ್ತು, ಆಜೀವಿಕೆ ಕೆಟ್ಟು ಹೋಗುವ ಭಯವಿರುತ್ತದೆ. ಇಂದ್ರಿಯಗಳ ಕಷ್ಟ ಸಹಿಸುವ ಅಸಮರ್ಥತೆಯಿಂದ ವಿಷಯಗಳನ್ನು ಬಯಸುತ್ತಾನೆ. ಇನ್ನೂ ಕಷಾಯ ಕುಂದಿಲ್ಲ, ರಾಗವು ಕಡಿಮೆಯಾಗದಿರುವುದರಿಂದ ಮುಂದೆ ಅಧಿಕ ದುಃಖವಾಗುವುದು ಕಂಡು ಬರುತ್ತದೆ. ಅದನ್ನು ನಿವಾರಿಸಲೇ ಬಯಸುತ್ತಾನೆ. ಆದಾಗ್ಯೂ ರಾಜ್ಯ ಭೋಗ, ಸಂಪತ್ತು ಮೊದಲಾದುವನ್ನು ದುಃಖರೂಪವೆಂದು ತಿಳಿದುಕೊಂಡು ಅವುಗಳ ಇಚ್ಛೆ ಮಾಡುವುದಿಲ್ಲ. ಈ ಪ್ರಕಾರ ನಿಃಕಾಂಕ್ಷಿತ ಅಂಗದ ಸ್ವರೂಪವನ್ನು ಹೇಳಲಾಯಿತು.

ಈಗ ನಿರ್ವಿಚಿಕಿತ್ಸೆಯೆಂಬ ಹೆಸರಿನ ಮೂರನೇ ಅಂಗದ ಲಕ್ಷಣ ಹೇಳುವಂಥ ಸೂತ್ರ ಹೇಳುತ್ತಾರೆ,-

**ಸ್ವಭಾವತೋಽಶುಚೌ ಕಾಯೇ ರತ್ನತ್ರಯ ಪವಿತ್ರಿತೇ ।**
**ನಿರ್ಜುಗುಪ್ಸಾ ಗುಣಪ್ರೀತಿರ್ಮತಾ ನಿರ್ವಿಚಿಕಿತ್ಸತಾ ॥೧೩॥**

**ಅರ್ಥ :-** ಈ ಮನುಷ್ಯ ಪರ್ಯಾಯದ ಶರೀರವು ಸ್ವಭಾವದಿಂದಲೇ ಅಪವಿತ್ರವಿದೆ. ಇಲ್ಲಿ ಓರ್ವ ಉತ್ತಮ ಮನುಷ್ಯನಿಗೆ ರತ್ನತ್ರಯದ ಪ್ರಕಟತೆಯಾದರೆ ಅವನ ಅಶುಚಿ ದೇಹವೂ ಪವಿತ್ರವಿದೆ. ಆದ್ದರಿಂದ ರೋಗಾದಿಗಳಿಂದ ಮಲಿನವಾದ ವ್ರತಿಗಳ ಶರೀರ ನೋಡಿಯೂ ಕೂಡ ಯಾವನಿಗೆ ಗ್ಲಾನಿಯಾಗುವುದಿಲ್ಲ, ಆದರೆ ಗುಣಗಳಲ್ಲಿ ಪ್ರೀತಿಯಾಗುತ್ತದೆ ಅವನಿಗೆ ನಿರ್ವಿಚಿಕಿತ್ಸೆಯೆಂಬ ಅಂಗವಿದೆ.

**ಭಾವಾರ್ಥ :-** ಈ ಶರೀರವಂತೂ ಸಪ್ತಧಾತುಮಯ ಹಾಗೂ ಮಲ-ಮೂತ್ರಾದಿಮಯವಿದೆ, ಸ್ವಭಾವದಿಂದಲೇ ಅಶುಚಿಯಿದೆ. **ಈ ಶರೀರವು ರತ್ನತ್ರಯದ ಸ್ವರೂಪವು ಪ್ರಕಟವಾಗುವುದರಿಂದ ಪವಿತ್ರವಾಗಿ ಹೋಗುತ್ತದೆ.** ಆದುದರಿಂದ ರೋಗಯುಕ್ತ ವೃದ್ಧಾವಸ್ಥೆ ಹಾಗೂ ತಪಶ್ಚರಣದಿಂದ ಕ್ಷೀಣ, ಮಲಿನವಾಗಿರುವ ಶರೀರವನ್ನು ನೋಡಿ ಯಾವನಿಗೆ ಗ್ಲಾನಿಯಾಗುವುದಿಲ್ಲ, ಆದರೆ ಗುಣಗಳಲ್ಲಿ ಪ್ರೀತಿಯಾಗುತ್ತದೆ ಅವನಿಗೆ ನಿರ್ವಿಚಿಕಿತ್ಸೆಯೆಂಬ ಹೆಸರಿನ ಅಂಗವಿದೆ.

ಸಮ್ಯಗ್ದೃಷ್ಟಿಯಿದ್ದವನು ವಸ್ತುವಿನ ಸತ್ಯಸ್ವರೂಪವನ್ನು ತಿಳಿದೇ ತಿಳಿಯುತ್ತಾನೆ. ಆದ್ದರಿಂದ ಪುದ್ಗಲದ ಅನೇಕ ಸ್ವಭಾವ ತಿಳಿದುಕೊಂಡು ಮಲ, ಮೂತ್ರ, ರಕ್ತ, ಮಾಂಸಯುಕ್ತ ಹಾಗೂ ದರಿದ್ರತೆ, ರೋಗಾದಿಯುಕ್ತವಿರುವ ಮನುಷ್ಯ ಮತ್ತು ತಿರ್ಯಂಚಗಳ ಶರೀರಾದಿಗಳ ಮಲಿನತೆ, ದುರ್ಗಂಧಾದಿಗಳನ್ನು ನೋಡಿ-ಕೇಳಿ ಗ್ಲಾನಿ ಮಾಡುವುದಿಲ್ಲವೆಂದು ತಿಳಿದುಕೊಳ್ಳಬೇಕು.

ಕರ್ಮದ ಉದಯದಿಂದ ಕ್ಷುಧೆ, ತೃಷೆ, ರೋಗ, ದರಿದ್ರಾದಿಗಳಿಂದ ದುಃಖಿಯಾಗುವದು, ಪರಾಧೀನ, ಬಂದೀವಾಸದಲ್ಲಿ ಬೀಳುವುದು, ನೀಚಕುಲದಲ್ಲಿ ಉತ್ಪನ್ನವಾಗುವುದು, ನೀಚಕರ್ಮದಿಂದ ಮಲಿನಭೋಜನ ಮಾಡುವುದು, ಮಲಿನ ವಸ್ತ್ರ ಧರಿಸುವುದರಿಂದ ದುಷ್ಟರೂಪ-ಅಂಗ-ಉಪಾಂಗದ ಪ್ರಾಪ್ತಿಯಾಗುತ್ತದೆ. ಸಮ್ಯಗ್ದೃಷ್ಟಿಯು

ಇವುಗಳಲ್ಲಿ ಗ್ಲಾನಿ ಮಾಡಿ ತನ್ನ ಮನಸ್ಸನ್ನು ಕೆಡಿಸಿಕೊಳ್ಳುವುದಿಲ್ಲ. ಮತ್ತು ಕಷಾಯಗಳ ಆಧೀನರಾಗಿ ನಿಂದ್ಯ ಆಚರಣೆ ಮಾಡುವಂಥವರನ್ನು ನೋಡಿ ತನ್ನ ಪರಿಣಾಮ ಕೆಡಿಸಿಕೊಳ್ಳುವುದಿಲ್ಲ, ಅವನಿಗೆ ನಿರ್ವಿಚಿಕಿತ್ಸೆ ಅಂಗವು ಇರುತ್ತದೆ.

ಮಲಿನ ಕ್ಷೇತ್ರ, ಮಲಿನ ಗ್ರಾಮ, ಮನೆಗಳಲ್ಲಿನ ಮಲಿನತೆ, ದರಿದ್ರತೆಯನ್ನು ನೋಡಿ ಗ್ಲಾನಿ ಮಾಡುವುದಿಲ್ಲ, ತನಗೆ ಬಡತನ ಹಾಗೂ ರೋಗ ಬರುವುದನ್ನು ನೋಡಿ, ಇಷ್ಟದ ವಿಯೋಗವಾಗುವುದು ಮತ್ತು ಅಶುಭ ಕರ್ಮದ ಉದಯ ಬರುವುದನ್ನು ನೋಡಿ ಆ ಸಮಯದಲ್ಲಿ ತನ್ನ ಪರಿಣಾಮ ಮಲಿನ ಮಾಡುವುದಿಲ್ಲ. ನಾನು ಕಟ್ಟಿಕೊಂಡ ಕರ್ಮದ ಫಲವನ್ನು ನಾನೇ ಭೋಗಿಸುವೆನು. ಅಶುಭ ಕರ್ಮದ ಫಲವು ಹೀಗೇ ಇರುತ್ತದೆಯೆಂದು ತಿಳಿದುಕೊಂಡು ತನ್ನ ಪರಿಣಾಮವನ್ನು ಮಲಿನ ಮಾಡಿಕೊಳ್ಳುವುದಿಲ್ಲ, ಇಂಥ ಪುರುಷನಿಗೆ ನಿರ್ವಿಚಿಕಿತ್ಸೆ ಅಂಗವಿರುತ್ತದೆ.

ನಿರ್ವಿಚಿಕಿತ್ಸೆ ಅಂಗವಿರುವವನಿಗೇ ದಯೆಯಿದೆ, ಅವನಿಗೇ ವೈಯಾವೃತ್ಯವಾಗುತ್ತದೆ. ಅವನಿಗೇ ವಾತ್ಸಲ್ಯ, ಸ್ಥಿತಿ ಕರಣಾದಿ ಗುಣಗಳು ಪ್ರಕಟವಾಗುತ್ತವೆ. ಈ ಪ್ರಕಾರ ಸಮ್ಯಕ್ತ್ವದ ಈ ನಿರ್ವಿಚಿಕಿತ್ಸೆ ನಾಮದ ಅಂಗವನ್ನು ಹೇಳಲಾಯಿತು.

ಈಗ ಸಮ್ಯಕ್ತ್ವದ ಅಮೂಢದೃಷ್ಟಿ ನಾಮದ ನಾಲ್ಕನೇ ಅಂಗವನ್ನು ಹೇಳುವಂಥ ಸೂತ್ರಗಳು ಹೇಳುತ್ತಾರೆ,-

**ಕಾಪಥೇ ಪಥಿ ದುಃಖಾನಾಂ ಕಾಪಥಸ್ಥೇऽಪ್ಯಸಂಮತಿಃ ।**
**ಅಸಂಪೃಕ್ತಿ-ರನುತ್ಕೀರ್ತಿ ರಮೂಢಾ - ದೃಷ್ಟಿರುಚ್ಯತೇ ॥೧೪॥**

**ಅರ್ಥ :-** ನರಕ, ತಿರ್ಯಂಚ, ಕುಮನುಷ್ಯಾದಿಗತಿಗಳ ಘೋರ ದುಃಖದ ಮಾರ್ಗವಾದಂಥ ಆ ಮಿಥ್ಯಾಮಾರ್ಗದ ಮತ್ತು ಕುಮಾರ್ಗಿ ಎಂದರೆ ಮಿಥ್ಯಾಮಾರ್ಗದ ಮೇಲೆ ನಡೆಯುವಂಥ ಪುರುಷನ ಪ್ರಶಂಸೆಯನ್ನು ಮನಸ್ಸಿನಿಂದ ಮಾಡುವುದಿಲ್ಲ. ವಚನಗಳಿಂದ ಸ್ತವನ ಮಾಡುವುದಿಲ್ಲ. ಮತ್ತು ಕಾಯದಿಂದ ಕೈಯ ಬೆರಳುಗಳು ನಖಾದಿಗಳನ್ನು ಸೇರಿಸಿ ಹೊಗಳುವುದಿಲ್ಲ, ಅವನು ಅಮೂಢ ದೃಷ್ಟಿಯಿದ್ದಾನೆ.

**ಭಾವಾರ್ಥ :- ಇಲ್ಲಿ ಸಂಸಾರೀ ಜೀವರುಗಳು ಮಿಥ್ಯಾತ್ವದ ಪ್ರಭಾವದಿಂದ ರಾಗೀ -ದ್ವೇಷೀ ದೇವಗಳ ಪೂಜೆ-ಪ್ರಭಾವನೆ ನೋಡಿ ಪ್ರಶಂಸೆ ಮಾಡುತ್ತಾರೆ.** ದೇವಿಗಳ ಹತ್ತಿರ ಜೀವಗಳ ಘಾತ-ವಿರಾಧನೆ ನೋಡಿ ಅದರ ಪ್ರಶಂಸೆ ಮಾಡುತ್ತಾರೆ. ಹತ್ತು ಪ್ರಕಾರದ ಕುದಾನವನ್ನು ಒಳ್ಳೆಯದೆಂದು ತಿಳಿಯುತ್ತಾರೆ. ಯಜ್ಞ-ಯಾಗಾದಿಗಳ ಹಾಗೂ ಸುಳ್ಳು ಮಂತ್ರ-ಮಾರಣ-ಉಚ್ಚಾಟನ ಮೊದಲಾದ ಕಾರ್ಯಗಳ ಪ್ರಶಂಸೆ ಮಾಡುತ್ತಾರೆ. ಕೆರೆ, ಭಾವಿ, ಕೊಳ, ಕಟ್ಟಿಸಿದವರ ಪ್ರಶಂಸೆ ಮಾಡುತ್ತಾರೆ. ಕಂದಮೂಲ, ಶಾಕಪತ್ರ ತಿನ್ನುವಂಥವರನ್ನು ಉಚ್ಚರೆಂದು ತಿಳಿದುಕೊಂಡು ಪ್ರಶಂಸೆ ಮಾಡುತ್ತಾರೆ. ಪಂಚಾಗ್ನಿ ತಪ ಮಾಡುವಂಥ ಹುಲಿ ಚರ್ಮ ತೊಡುವಂಥ, ಭಸ್ಮ ಬಳೆಯುವಂಥ, ಮೇಲೆ ಕೈಮಾಡಿ ಇರುವಂಥವರನ್ನು ಮಹಾನರೆಂದು ತಿಳಿದುಕೊಂಡು ಪ್ರಶಂಸೆ ಮಾಡುತ್ತಾರೆ. ಕಾವಿ ವಸ್ತ್ರ ಕೆಂಪು ವಸ್ತ್ರ ಶ್ವೇತ ವಸ್ತ್ರ ತೊಡುವಂಥ ಕುಲಿಂಗಗಳ ಮಾರ್ಗದ ಪ್ರಶಂಸೆ ಮಾಡುತ್ತಾರೆ. ಸುಳ್ಳು ತೀರ್ಥಗಳನ್ನು ಮತ್ತು ರಾಗೀ, ದ್ವೇಷಿ, ಮೋಹೀ, ವಕ್ರ ಪರಿಣಾಮೀ, ಶಸ್ತ್ರಧಾರೀ ದೇವಗಳನ್ನು ಪೂಜ್ಯರೆಂದು ಮನ್ನಿಸುತ್ತಾರೆ. ಯಕ್ಷಿಣಿ, ಕ್ಷೇತ್ರಪಾಲರನ್ನು ಧನ ಕೊಡುವಂಥ ಮತ್ತು ರೋಗಾದಿಗಳನ್ನು ದೂರ ಮಾಡುವಂಥವರೆಂದು ಮನ್ನಿಸುತ್ತಾರೆ. ಯಕ್ಷ, ಕ್ಷೇತ್ರಪಾಲ, ಪದ್ಮಾವತಿ, ಚಕ್ರೇಶ್ವರಿಯರನ್ನು ಜಿನ ಶಾಸನದ ರಕ್ಷಕರೆಂದು ಮನ್ನಿಸಿ ಪೂಜಿಸುತ್ತಾರೆ.

ದೇವತೆಗಳಿಗೆ ಕವಲಾಹಾರ ಮನ್ನಿಸಿ ತೈಲ, ಹಲ್ವ, ಕಜ್ಜಾಯ ವಡೆ ಮತ್ತು ಪನ್ನೀರು, ಪುಷ್ಪಮಾಲೆ ಇತ್ಯಾದಿಗಳಿಂದ ದೇವತೆಗಳು ಪ್ರಸನ್ನರಾಗುತ್ತಾರೆಂದು ಮನ್ನಿಸುತ್ತಾರೆ. ದೇವತೆಗಳಿಗೆ ಲಂಚ ಕೊಡುವ ವಚನಹೇಳುತ್ತಾರೆ. ನನ್ನ ಇಂಥ ಕಾರ್ಯಸಿದ್ಧವಾದರೆ ನಿಮಗೆ ಕೊಡೆ ಅರ್ಪಿಸುವೆನು, ಮಂದಿರ ಕಟ್ಟಿಸುವೆನು, ಧನ ಸಮರ್ಪಿಸುವೆನು, ಪ್ರಾಣಿಗಳನ್ನು ಬಲಿ ಕೊಡುವೆನು. ಇವೇ ಮೊದಲಾಗಿ ಅನೇಕ ಪ್ರಕಾರದ ವಚನಗಳನ್ನು ಆಡುತ್ತಾರೆ. ಆದರೆ ಇದೆಲ್ಲವೂ ತೀವ್ರ ಮಿಥ್ಯಾತ್ವದ ಉದಯದ ಪ್ರಭಾವವಿದೆ.

**ಎಲ್ಲಿ ಜೀವದ ಹಿಂಸೆಯಿದೆ ಅಲ್ಲಿ ಮಹಾಘೋರ ಪಾಪವಿದೆ.** ದೇವತೆಗಳ ನಿಮಿತ್ತದಿಂದ ಮತ್ತು ಕುಗುರುಗಳ ನಿಮಿತ್ತದಿಂದ ಮಾಡಲಾಗುವ ಹಿಂಸೆಯು ಸಂಸಾರ ಸಮುದ್ರದಲ್ಲಿ ಮುಳುಗಿಸಿ ಬಿಡುವಂಥದ್ದಿದೆ. ಯಾವುದೇ ದೇವತೆಗಳ ಭಯದಿಂದ, ಲೋಭದಿಂದ, ಲಜ್ಜೆಯಿಂದ ಹಿಂಸಯ ಆರಂಭದಲ್ಲೆಂದೂ ಪ್ರವರ್ತಿಸಬಾರದು. ದೇವರು ದಯಾವಂತರ ರಕ್ಷಣೆ ಮಾಡುತ್ತಾರೆ. ಯಾವುದೇ ಅಪರಾಧ ಮಾಡುವುದಿಲ್ಲ, ವಿರೋಧ ಮಾಡುವುದಿಲ್ಲ, ಅವನ ವಿರಾಧನೆಯನ್ನು ದೇವನು ಮಾಡುವ ಸಾಧ್ಯತೆಯಿಲ್ಲ.

ರಾಗೀ, ದ್ವೇಷಿ, ಶಸ್ತ್ರಧಾರೀ ದೇವಗಳಂತೂ ಸ್ವಯಂ ದುಃಖಿಯಿದ್ದಾರೆ, ಭಯಭೀತರಿದ್ದಾರೆ, ಅಸಮರ್ಥರಿದ್ದಾರೆ. ಅವರು ಸ್ವಯಂ ಸಮರ್ಥರಿದ್ದರೆ, ಭಯರಹಿತರಿದ್ದರೆ ಶಸ್ತ್ರಧಾರಣವನ್ನೇಕೆ-ಹೇಗೆ ಮಾಡುತ್ತಾರೆ ? ಹಸಿವೆಯಾಗುತ್ತಿರುವವನೇ ಭೋಜನಾದಿ ಸಾಮಗ್ರಿಗಳಿಂದ ತನ್ನ ಪೂಜೆ ಮಾಡಿಕೊಳ್ಳಲಪೇಕ್ಷಿಸುವನು, ಆದುದರಿಂದ ಸಂಸಾರದಲ್ಲಿ ಕೆಡವಲು ಕಾರಣವಿರುವಂಥ ಮಿಥ್ಯಾದೃಷ್ಟಿಗಳ ತ್ಯಾಗ, ವ್ರತ, ತಪ, ಉಪವಾಸ, ಭಕ್ತಿ, ದಾನಾದಿಗಳ ಮತ್ತು ಅದರ ಧಾರಣ ಮಾಡುವಂಥವರ ಪ್ರಶಂಸೆಯನ್ನು ಮನ-ವಚನ-ಕಾಯಗಳಿಂದ ಎಂದೂ ಮಾಡಬಾರದು. ಅದು ಸಮ್ಯಕ್ತ್ವದ ಅಮೂಢ ದೃಷ್ಟಿಯೆಂಬ ನಾಲ್ಕನೆಯ ಅಂಗವಿದೆ.

ಆದುದರಿಂದ ದೇವ-ಕುದೇವದ, ಧರ್ಮ-ಕುಧರ್ಮದ, ಗುರು-ಕುಗುರುವಿನ, ಪಾಪ-ಪುಣ್ಯದ, ಭಕ್ಷ್ಯ-ಅಭಕ್ಷ್ಯದ, ತ್ಯಾಜ್ಯ-ಅತ್ಯಾಜ್ಯದ, ಆರಾಧ್ಯ-ಅನಾರಾಧ್ಯದ, ಕಾರ್ಯ-ಅಕಾರ್ಯದ, ಶಾಸ್ತ್ರ-ಕುಶಾಸ್ತ್ರದ, ದಾನ-ಕುದಾನದ, ಪಾತ್ರ, ಅಪಾತ್ರದ, ಕೊಡಲು ಯೋಗ್ಯ-ಕೊಡದಿರಲು ಯೋಗ್ಯದ, ಯುಕ್ತಿ-ಕುಯುಕ್ತಿಯ, ಹೇಳಲು ಯೋಗ್ಯ-ಹೇಳದಿರಲು ಯೋಗ್ಯದ, ಗ್ರಾಹ್ಯ-ಅಗ್ರಾಹ್ಯದ ಸಲುವಾಗಿ ಅನೇಕಾಂತರೂಪ ಸರ್ವಜ್ಞ ವೀತರಾಗರ ಪರಮಾಗಮದಿಂದ ಸರಿಯಾಗಿ ತಿಳಿದುಕೊಂಡು ನಿರ್ಣಯ ಮಾಡಿ ಮೂಢತೆಯಿಂದ ರಹಿತರಾಗುವುದು. ಪಕ್ಷಪಾತವನ್ನು ಬಿಟ್ಟುಕೊಟ್ಟು ವ್ಯವಹಾರ-ನಿಶ್ಚಯದಲ್ಲಿ (ಪರಮಾರ್ಥದಲ್ಲಿ) ವಿರೋಧರಹಿತರಾಗಿ ಯಥಾರೀತಿಯಾಗಿ ಶ್ರದ್ಧೆಮಾಡುವುದು ಅದು ಅಮೂಢದೃಷ್ಟಿನಾಮದ ನಾಲ್ಕನೆಯ ಅಂಗವಿದೆ.

ಈಗ ಸಮ್ಯಕ್ತ್ವದ **ಉಪಗೂಹನ** ನಾಮದ ಐದನೆಯ ಅಂಗದ ಪ್ರರೂಪಣೆ ಮಾಡುವಂಥ ಸೂತ್ರ ಹೇಳುತ್ತಾರೆ.

**ಸ್ವಯಂ ಶುದ್ಧಸ್ಯ ಮಾರ್ಗಸ್ಯ ಬಾಲಾಶಕ್ತಜನಾಶ್ರಯಾಮ್ ।**
**ವಾಚ್ಯತಾಂ ಯತ್ಪ್ರಮಾರ್ಜಂತಿ ತದ್ವದಂತ್ಯುಪಗೂಹನಮ್ ॥೧೫॥**

**ಅರ್ಥ :-** ಜಿನೇಂದ್ರ ಭಗವಂತರು ಹೇಳಿರುವ ರತ್ನತ್ರಯರೂಪದ ಮಾರ್ಗವು ಅದು ಸ್ವಯಮೇವ ಶುದ್ಧವಿದೆ. ನಿರ್ದೋಷವಿದೆ. ಯಾವನೋ ಅಜ್ಞಾನಿ ಮತ್ತು ಅಶಕ್ತ ಮನುಷ್ಯನ ಮೂಲಕ ಈ ರತ್ನತ್ರಯ ಮಾರ್ಗದ ಆಶ್ರಯ ಮಾಡುವುದರಿಂದ ಆ ಪ್ರಕಟವಾಗಿರುವ ನಿಂದ್ಯತೆಯನ್ನು ದೂರಮಾಡಿಬಿಡುವುದಕ್ಕೆ- ಶುದ್ಧನಿರ್ದೋಷ ಮಾಡಿ ಬಿಡುವುದಕ್ಕೆ ಉಪಗೂಹನವೆಂದು ಹೇಳುತ್ತಾರೆ.

ಜಿನೇಂದ್ರ ಭಗವಂತರಿಂದ ಉಪದೇಶಿಸಲ್ಪಟ್ಟ ಯಾವ ದಶಲಕ್ಷಣರೂಪದ ಧರ್ಮವಿದೆ ಮತ್ತು ರತ್ನತ್ರಯರೂಪದ ಧರ್ಮವಿದೆ ಅದು ಅನಾದಿ ನಿಧನವಿದೆ, ಜಗತ್ತಿನ ಜೀವರುಗಳಿಗೆ ಉಪಕಾರ ಮಾಡುವಂಥದ್ದಿದೆ, ಎಲ್ಲ ಪ್ರಕಾರದಿಂದ ನಿರ್ದೋಷವಿದೆ, ಇದರಿಂದ ಯಾರದೂ ಅಕಲ್ಯಾಣವಾಗುವುದಿಲ್ಲ ಮತ್ತು ಯಾರಿಂದಲೂ ಬಾಧೆಗೊಳಿಸುವ ಸಾಧ್ಯತೆಯಿಲ್ಲ, ಇಂಥ ಧರ್ಮದಲ್ಲಿ ಯಾವನೋ ಅಜ್ಞಾನಿಯ ಅಪರಾಧದ ಕಾರಣದಿಂದ ಅಥವಾ ಯಾವನೋ ಶಕ್ತಿಹೀನನ ಕಾರಣದಿಂದ ಧರ್ಮದ ನಿಂದೆಯಾಗುತ್ತಿದ್ದರೆ ಅದನ್ನು ದೂರ ಮಾಡಿ ಬಿಡುವುದು, ಆಚ್ಛಾದನ ಮಾಡಿ ಬಿಡುವುದು ಅದು ಉಪಗೂಹನವೆಂಬ ಹೆಸರಿನ ಅಂಗವಿದೆ.

**ಭಾವಾರ್ಥ :-** ಓರ್ವ ಅಜ್ಞಾನಿಯ ಅಪರಾಧವನ್ನು ಅನ್ಯಮಿಥ್ಯಾದೃಷ್ಟಿಗಳು ಕೇಳಿದರೆ ಜಿನಧರ್ಮದ ನಿಂದೆ ಮಾಡುವರು ಮತ್ತು ಸಮಸ್ತ ಧರ್ಮಾತ್ಮರುಗಳಿಗೆ ದೋಷತಗಲಿಸುವರಲ್ಲದೆ ಈ ಜೈನಧರ್ಮದಲ್ಲಿ ಎಷ್ಟು ಜ್ಞಾನೀ, ತಪಸ್ವಿ, ತ್ಯಾಗೀ ವ್ರತಿಗಳಿದ್ದಾರೆ ಅವರೆಲ್ಲರು ಪಾಖಂಡಿಯಿದ್ದಾರೆ, ಮಿಥ್ಯಾಮಾರ್ಗಿಯಿದ್ದಾರೆಂದು ಹೇಳುವರು. ಈ ಪ್ರಕಾರ ಓರ್ವ ಅಜ್ಞಾನಿಯ ದೋಷ ನೋಡುವುದರಿಂದ ಸಂಪೂರ್ಣ ಧರ್ಮ ಮತ್ತು ಸಮಸ್ತ ಧರ್ಮಾತ್ಮರುಗಳಿಗೆ ದೋಷ ತಗಲುವುದು. ಆದುದರಿಂದ ಧರ್ಮಾತ್ಮಪುರುಷರಿದ್ದವರು ಯಾವನೋ ಓರ್ವ ಧರ್ಮಾತ್ಮನಲ್ಲಿ ಯಾವುದಾದರೂ ದೋಷವು ತಗಲಿದ್ದರೆ ಅದನ್ನು ಧರ್ಮದ ಮೇಲಿನ ಪ್ರೀತಿಯ ಕಾರಣದಿಂದ ಧರ್ಮದಲ್ಲಿ ಪರರ ನಿಮಿತ್ತದಿಂದ ಬಂದಿರುವ ದೋಷವನ್ನು ಬಚ್ಚಿಡುತ್ತಾರೆ.

ಯಾವ ಪ್ರಕಾರ ತಾಯಿಯು ತನ್ನ ಮಗನ ಮೇಲಿನ ಪ್ರೀತಿಯಿಂದ ಅವನು ಯಾವುದೇ ಅನ್ಯಾಯ ಅಥವಾ ಅಸತ್ಯ ಕಾರ್ಯ ಮಾಡಿದರೂ ಕೂಡ ಅದನ್ನು ಬಚ್ಚಿಡುತ್ತಾಳೆ, ಮರೆಮಾಜುತ್ತಾಳೆ, ಅದೇ ಪ್ರಕಾರ ಧರ್ಮಾತ್ಮ ಪುರುಷರಿಗೆ ಧರ್ಮದಲ್ಲಿ ಮತ್ತು ಸಾಧರ್ಮಿಗಳಲ್ಲಿ ಪ್ರೀತಿಯಿರುವುದರಿಂದ ಅವರು ಓರ್ವ ಸಾಧರ್ಮಿಗೆ ಕರ್ಮದ ಪ್ರಬಲ ಉದಯದಿಂದ, ಅಜ್ಞಾನದಿಂದ, ಅಶಕ್ತತೆಯಿಂದ ವ್ರತದಲ್ಲಿ, ಸಂಯಮದಲ್ಲಿ, ಶೀಲದಲ್ಲಿ ದೋಷವುಂಟಾದರೆ ಅಥವಾ ಕೆಟ್ಟು ಹೋದರೆ ತನ್ನ ಸಾಮರ್ಥ್ಯದ ಪ್ರಕಾರ ಅದರ ಆಚ್ಛಾದನೆ ಮಾಡುತ್ತಾನೆ.

ಸಮ್ಯಗ್ದೃಷ್ಟಿ ಜೀವದ ಸ್ವಭಾವವು ಹೇಗಿರುತ್ತದೆಯೆಂದರೆ ಅವನು ಯಾವುದೇ ಜೀವದ ದೋಷ ಪ್ರಕಟ ಮಾಡುವುದಿಲ್ಲ, ತನ್ನ ಉಚ್ಚ ಕಾರ್ಯವನ್ನು ಪ್ರಕಾಶಿತಗೊಳಿಸುವುದಿಲ್ಲ. ಸಮ್ಯಗ್ದೃಷ್ಟಿಗೆ ಇತರ ಜೀವರುಗಳ ದೋಷವು ಕಂಡು ಬಂದರೂ ಅವನ ವಿಚಾರ ಮಾಡುವುದೇನೆಂದರೆ ಈ ಜಗತ್ತಿನಲ್ಲಿ ಅನಾದಿ ಕಾಲದಿಂದ ಜೀವರುಗಳು ಕರ್ಮದ ವಶೀಭೂತರಿರುವುದರಿಂದ **ಎಲ್ಲಿಯವರೆಗೆ ಮೋಹನೀಯ ಕರ್ಮ ಹಾಗೂ ಜ್ಞಾನಾವರಣ ಕರ್ಮದ ಉದಯವಿದೆ ಅಲ್ಲಿಯವರೆಗೆ ದೋಷತಗಲುವಲ್ಲಿ ಹಾಗೂ ಅಪರಾಧವಾಗುವಲ್ಲಿ ಆಶ್ಚರ್ಯವೇನಿದೆ ?** ಜೀವಗಳನ್ನು ಕಾಮ,ಕ್ರೋಧ, ಲೋಭಾದಿಗಳು ನಿರಂತರ ಕೊಲ್ಲುತ್ತಿವೆ, ಭ್ರಷ್ಟಮಾಡುತ್ತಿವೆ. ನಾವು ಕೂಡ ರಾಗ-ದ್ವೇಷ-ಮೋಹದ ವಶವರ್ತಿಯಾಗಿ ಸಂಸಾರದಲ್ಲಿ ಯಾವ-ಯಾವ ಅನರ್ಥಗಳನ್ನು ಮಾಡಿಲ್ಲ ?

**ನನಗೆ ಜಿನೇಂದ್ರರ ಪರಮಾಗಮದ ಆಶ್ರಯದ ಕೃಪೆಯಿಂದ ಈಗ ಸ್ವಲ್ಪ ದೋಷ ಮತ್ತು ಗುಣಗಳ ಪರಿಚಯವಾಗಿದೆ.** ಆದಾಗ್ಯೂ ಅನಾದಿಕಾಲದ ಕಷಾಯಗಳ ಸಂಸ್ಕಾರದಿಂದ ಈಗಲೂ ಅನೇಕ ದೋಷಗಳನ್ನು ಮಾಡುತ್ತಿದ್ದೇನೆ. ಆದುದರಿಂದ ಅನ್ಯ ಜೀವರುಗಳಿಗೆ ಕರ್ಮದ ಉದಯದ ಪರಾಧೀನತೆಯಿಂದ ಆದ ದೋಷಗಳನ್ನು ನೋಡಿ ನನಗೆ ನಿಜವಾಗಿ ಕರುಣೆಯೇ ಬರಬೇಕು. ಸಂಸಾರೀ ಜೀವರುಗಳು ವಿಷಯ ಮತ್ತು ಕಷಾಯದ ವಶೀಭೂತರಾಗಿ ಪರಾಧೀನರಿದ್ದಾರೆ. ಈ ಕಷಾಯ ಮತ್ತು ವಿಷಯಗಳು ಜೀವದ ಜ್ಞಾನವನ್ನು ಕೆಡಿಸಿ ಅನೇಕ ಪ್ರಕಾರದ ನರ್ತನ ಮಾಡಿಸುತ್ತಿವೆ ಮತ್ತು ತಮ್ಮ ಸ್ವರೂಪವನ್ನು ಮರೆಸಿಬಿಡುತ್ತವೆ. ಅದಕ್ಕಾಗಿ ಅಜ್ಞಾನೀಜನರಿಂದ ಮಾಡಲಾದ ದೋಷಗಳನ್ನು ನೋಡಿ ತಾವು ಸಂಕ್ಲೇಶ ಪರಿಣಾಮ ಮಾಡುವುದಿಲ್ಲ. **ಕ್ಷೇತ್ರ-ಕಾಲಾದಿಗಳ ನಿಮಿತ್ತದಿಂದ ಭಾವೀ ಭವಿತವ್ಯವನ್ನು ತಪ್ಪಿಸುವಲ್ಲಿ ಯಾರೂ ಸಮರ್ಥರಿಲ್ಲ.** ಈ ಪ್ರಕಾರ ಉಪಗೂಹನವೆಂಬ ಹೆಸರಿನ ಸಮ್ಯಕ್ತ್ವದ ಐದನೆಯ ಅಂಗವನ್ನು ಹೇಳಲಾಯಿತು.

ಈಗ **ಸ್ಥಿತಿಕರಣ** ನಾಮದ ಸಮ್ಯಕ್ತ್ವದ ಆರನೆಯ ಅಂಗವನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ದರ್ಶನಾಚ್ಚರಣಾದ್ವಾಪಿ ಚಲಿತಾಂ ಧರ್ಮವತ್ಸಲೈಃ ।**
**ಪ್ರತ್ಯವಸ್ಥಾಪನಂ ಪ್ರಾಜ್ಞೈಃ ಸ್ಥಿತಿಕರಣ ಮುಚ್ಯತೇ ।।೧೬।।**

**ಅರ್ಥ :-** ಓರ್ವ ಪುರುಷನು ಮೊದಲು ಸಮ್ಯಗ್ದರ್ಶನಯುಕ್ತ ಶ್ರದ್ಧೆ ಮತ್ತು ವ್ರತ ಸಂಯಮ ಸಹಿತ ಚಾರಿತ್ರದ ಧಾರಕನಿದ್ದನು. ನಂತರ ಯಾವುದೇ ಪ್ರಬಲ ಕಷಾಯದ ಉದಯದಿಂದ, ಕೆಟ್ಟ ಸಂಗತಿಯಿಂದ, ರೋಗದ ತೀವ್ರ

ವೇದನೆಯಿಂದ, ದರಿದ್ರತೆಯಿಂದ ಮಿಥ್ಯಾ ಉಪದೇಶದಿಂದ ಹಾಗೂ ಮಿಥ್ಯಾದೃಷ್ಟಿಗಳ ಮಂತ್ರ-ತಂತ್ರಾದಿಗಳ ಚಮತ್ಕಾರವನ್ನು ನೋಡಿ ಸತ್ಯ ಶ್ರದ್ಧೆ ಮತ್ತು ಆಚರಣದಿಂದ ಚಂಚಲನಾಗುತ್ತಿದ್ದರೆ, ಅವನನ್ನು ವಿಚಲಿತನೆಂದು ತಿಳಿದು ಧರ್ಮದಲ್ಲಿ ವಾತ್ಸಲ್ಯವಿರುವಂಥ ಪ್ರವೀಣ ಧರ್ಮಾತ್ಮ ಪುರುಷರು ಅವನಿಗೆ ಉಪದೇಶಾದಿಗಳನ್ನು ಕೊಟ್ಟು ಪುನಃ ಸತ್ಯ, ಶ್ರದ್ಧೆ ಹಾಗೂ ಆಚರಣೆಯಲ್ಲಿ ಸ್ಥಾಪನೆ ಮಾಡಿ ಬಿಡುವುದನ್ನು ಸ್ಥಿತಿಕರಣವೆಂದು ಹೇಳುತ್ತಾರೆ.

ಓರ್ವ ಧರ್ಮಾತ್ಮ ಅವಿರತ-ಸಮ್ಯಗ್ದೃಷ್ಟಿ ಮತ್ತು ವ್ರತೀ ಪುರುಷನ ಪರಿಣಾಮವು ರೋಗದ ವೇದನೆ, ದರಿದ್ರತೆ, ವಿಯೋಗದ ಕಾರಣ ಧರ್ಮದಿಂದ ಚ್ಯುತವಾಗಿ ಹೋದರೆ ಧರ್ಮದಲ್ಲಿ ಪ್ರೀತಿ ಮಾಡುವಂಥ ವಿವೇಕೀ ಪುರುಷರು ಅವನು ಧರ್ಮದಿಂದ ಬಿಟ್ಟುಹೋಗುವುದನ್ನು ತಿಳಿದು ಉಪದೇಶಾದಿಗಳನ್ನು ಕೊಟ್ಟು ಧರ್ಮದಲ್ಲಿ ಸ್ಥಿರ ಮಾಡಿ ಬಿಡುವವನಿಗೆ ಸ್ಥಿತಿಕರಣ ಅಂಗವಿದೆ.

ಧರ್ಮದ ಇಚ್ಛೆಯುಳ್ಳ ಎಲೈ ಧರ್ಮಾಭಿಮಾನಿಗಳೇ ! ಈ ಮನುಷ್ಯಭವ, ಅದರಲ್ಲೂ ಉತ್ತಮಕುಲ, ಇಂದ್ರಿಯಗಳ ಶಕ್ತಿ, ಧರ್ಮದ ಲಾಭ-ಇವೆಲ್ಲ ಅತ್ಯಂತ ದುರ್ಲಭ ವಸ್ತುಗಳು ದೊರಕಿವೆ. ಇವುಗಳ ವಿಯೋಗವಾದ ಮೇಲೆ ಪುನಃ ಇವು ದೊರಕುವುದು ಅನಂತ ಕಾಲದಲ್ಲೂ ಕಠಿಣವಿದೆ. ಆದುದರಿಂದ ಕರ್ಮದ ಉದಯದಿಂದ ಪ್ರಾಪ್ತವಾದ ರೋಗ, ವಿಯೋಗ, ದರಿದ್ರಾದಿಗಳ ದುಃಖದಿಂದ ಭಯಗೊಂಡು ಆರ್ತಪರಿಣಾಮಿಗಳಾಗುವುದು ಯೋಗ್ಯವಿಲ್ಲ. ದುಃಖಿಯಾದರೆ ಕರ್ಮದ ಬಂಧವು ಅಧಿಕವಾಗುವುದು. ಭೀತನಾಗಿ ಭೋಗಿಸಿದರೂ ಕರ್ಮವು ಬಿಡಲಾರದು, ಮತ್ತು ಧೀರವೀರತೆಯಿಂದ ಭೋಗಿಸಿದರೂ ಕೂಡ ಕರ್ಮವು ಬಿಡಲಾರದು. ದುರ್ಗತಿಗೆ ಕಾರಣವಿರುವಂಥ **ಈ ಹೇಡಿತನಕ್ಕೆ - ಭಯಭೀತತೆಗೆ ಧಿಕ್ಕಾರವಿರಲಿ !** ತಾವೆಲ್ಲರೂ ಈಗ ಸಾಹಸವನ್ನು ಧಾರಣ ಮಾಡಬೇಕು.

ಮನುಷ್ಯ ಧರ್ಮದ ಫಲವಂತೂ ಧೀರತೆ ಹಾಗೂ ಸಂತೋಷ ವ್ರತಸಹಿತ ಧರ್ಮದ ಸೇವನೆ ಮಾಡಿ ಆತ್ಮನ ಉದ್ಧಾರ ಮಾಡುವುದಿದೆ. ಈ ಮನುಷ್ಯ ಶರೀರವಂತೂ ರೋಗಗಳ ಆಗರವಿದೆ. ಇದರಲ್ಲಿ ರೋಗವುತ್ಪನ್ನವಾಗುವುದರಲ್ಲಿ ಆಶ್ಚರ್ಯವೇನಿದೆ ? ಇಲ್ಲಿಯಂತೂ ಧರ್ಮವೇ ಶರಣವಿದೆ. ರೋಗಗಳಂತೂ ಉತ್ಪನ್ನವೇ ಆಗುವವು, **ಸಂಯೋಗವು ವಿಯೋಗ ಸಹಿತವೇ ಆಗುತ್ತದೆ,** ಯಾವ ಯಾವ ಪುರುಷರಲ್ಲಿ ದುಃಖವು ಬರುವುದಿಲ್ಲ ? ಆದುದರಿಂದ ತಾವು ಸಾಹಸ ಧಾರಣಮಾಡಿ ಒಂದು ಧರ್ಮದ ಅವಲಂಬನವನ್ನೇ ಗ್ರಹಣ ಮಾಡಿರಿ. ಯಾವ ಯಾವ ವಸ್ತುಗಳು ಉತ್ಪನ್ನವಾಗುತ್ತವೆ ಅವೆಲ್ಲವೂ ವಿನಾಶಸಹಿತವಿವೆ. ಈ ಶರೀರದ್ದೂ ವಿಯೋಗವಾಗುವುದಿದೆಯೆಂದ ಮೇಲೆ ಆ ಉಳಿದವರೆಲ್ಲವೂ ತಮ್ಮ ತಮ್ಮ ಕರ್ಮದ ಆಧೀನರಾಗಿ ಉತ್ಪನ್ನರಾಗುತ್ತಾರೆ ಮತ್ತು ಮರಣಹೊಂದುತ್ತಾರೆ. ಅವರು ಉತ್ಪನ್ನರಾಗುವರು ಮತ್ತು ಮರಣ ಹೊಂದುವರು. ಅವರ ಸಲುವಾಗಿ ತಾವು ಹರ್ಷ-ವಿಷಾದ ಮಾಡುವದು ವ್ಯರ್ಥ ಬಂಧದ ಕಾರಣವಿದೆ.

**ಈ ದುಷಮಾಕಾಲದಲ್ಲಿ ಮನುಷ್ಯರು ಅಲ್ಪಾಯು ಮತ್ತು ಅಲ್ಪಬುದ್ಧೀ ಧಾರಕರಾಗಿಯೇ ಉತ್ಪನ್ನರಾಗುತ್ತಾರೆ.** ಈ ಕಾಲದಲ್ಲಿ ಕಷಾಯಗಳ ಆಧೀನತೆ, ವಿಷಯಗಳ ಗೃದ್ಧತೆ, ಬುದ್ಧಿಯ ಮಂದತೆ, ರೋಗದ ಅಧಿಕತೆ ಈರ್ಷೆಯ ವಿಪುಲತೆ ಮೊದಲಾದುವನ್ನು ತೆಗೆದುಕೊಂಡೇ ಬಹಳಷ್ಟು ಜನರು ಉತ್ಪನ್ನರಾಗುತ್ತಾರೆ. ಆದುದರಿಂದ ಸಮ್ಯಗ್ಜ್ಞಾನ ಪ್ರಾಪ್ತ ಮಾಡಿಕೊಂಡು ಕರ್ಮಗಳನ್ನು ಜಯಿಸುವ ಉದ್ಯಮ ಮಾಡುವುದು ಯೋಗ್ಯವಿದೆ. ಹೇಡಿಗಳಾಗುವುದು ಯೋಗ್ಯವಿಲ್ಲ, ಹೀಗೆ ಉಪದೇಶವಿತ್ತು. ಪರಿಣಾಮವನ್ನು ಸ್ಥಿರ ಮಾಡಬೇಕು. ಹನ್ನೆರಡು ಭಾವನೆಗಳ ಸ್ಮರಣೆ ಮಾಡಬೇಕು. ಶರೀರದ ಸೇವೆ, ಮಲ-ಮೂತ್ರಾದಿಗಳ ವಿಕೃತಿಯನ್ನು ದೂರಮಾಡಿ ಯಾವುದೇ ಪ್ರಕಾರದಿಂದ ಪರಿಣಾಮವನ್ನು ಧರ್ಮದಲ್ಲಿ ದೃಢಪಡಿಸುವುದು ಅದು ಸ್ಥಿತಿಕರಣ ಅಂಗವಿದೆ.

ಯಾವನಾದರೂ ರೋಗದ ಅಧಿಕತೆಯ ಕಾರಣ ಜ್ಞಾನದಿಂದ ಚಂಚಲನಾಗಿ ಹೋದರೆ, ವ್ರತಭಂಗ ಮಾಡತೊಡಗಿದರೆ, ಅಕಾಲದಲ್ಲಿ ಅನ್ನ-ನೀರುಗಳನ್ನು ಬೇಡತೊಡಗಿದರೆ, ತ್ಯಾಗಮಾಡಿದ ವಸ್ತುವನ್ನು ಇಚ್ಛಿಸತೊಡಗಿದರೆ ಅವನ ಅವಜ್ಞೆ ಮಾಡಬೇಡಿರಿ, ಆದರೆ ಅವನ ಮೇಲೆ ದಯೆಮಾಡಿ ಮಧುರ ಉಪದೇಶ ಮಾಡುವುದರಿಂದ ಅವನು ಎಚ್ಚತ್ತುಕೊಂಡು ಸಾವಧಾನನಾಗಿ ಬಿಡುವನು.

**ಕರ್ಮವು ಬಲಶಾಲಿಯಿದೆ.** ವಾತ-ಪಿತ್ತಾದಿಗಳ ಮೂಲಕ ಜ್ಞಾನವು ಕೆಟ್ಟು ಹೋಗುವುದರ ಭರವಸೆಯೇನಿದೆ? ಇಲ್ಲಿ ಬಹಳ ಉಪದೇಶ ಕೊಡುವುದರಿಂದ ಗ್ರಂಥವು ವೃದ್ಧಿಸುವುದರಿಂದ ಅಲ್ಪದರಲ್ಲಿಯೇ ಬಹಳಷ್ಟು ತಿಳಿದುಕೊಳ್ಳಬೇಕು.

ದರಿದ್ರತೆಯಿಂದ ದುಃಖಿಯಾದವರಿಗೆ ತಮ್ಮ ಶಕ್ತಿಯ ಅನುಸಾರ ಉಪದೇಶ, ಆಹಾರ, ನೀರು, ವಸ್ತ್ರ ಆಜೀವಿಕೆ, ವಾಸಿಸಲು ಮನೆ, ಪಾತ್ರೆ ಮತ್ತು ಹೇಗೆ ಸ್ಥಿರತೆಯಾಗುವುದು ಆ ಪ್ರಕಾರದಿಂದ ದಾನ, ಸನ್ಮಾನ ಮೊದಲಾದ ಉಪಾಯಗಳಿಂದ ಸ್ಥಿರಗೊಳಿಸುವುದು ಅದು ಸ್ಥಿತಿಕರಣವೆಂಬ ಹೆಸರಿನ ಸಮ್ಯಕ್ತ್ವದ ಆರನೆಯ ಅಂಗವಿದೆ.

ತನ್ನ ಆತ್ಮನು ಕೂಡ ನೀತಿಮಾರ್ಗ ಬಿಟ್ಟುಕೊಟ್ಟು, ಕಾಮ-ಮದ-ಲೋಭದ ವಶನಾಗಿ, ಅನ್ಯಾಯದ ವಿಷಯ ಹಾಗೂ ಧನದ ಇಚ್ಛೆ ಮಾಡತೊಡಗಿದರೆ, ಅಯೋಗ್ಯ ವಚನಗಳಲ್ಲಿ ಪ್ರವೃತ್ತಿ ಮಾಡತೊಡಗಿದರೆ, ಅಭಕ್ಷ್ಯ ಭಕ್ಷಣದಲ್ಲಿ ಪ್ರವೃತ್ತಿಯಾದರೆ, ಅಭಿಮಾನದ ವಶನಾಗಿ ಹೋದರೆ, ಸಂತೋಷದಿಂದ ಚಲಿತನಾದರೆ, ಅನೇಕ ಪ್ರಕಾರದ ಪರಿಗ್ರಹದಲ್ಲಿ ಲಾಲಸೆಯು ಬೆಳೆದು ಬಿಟ್ಟರೆ, ವಿಯೋಗದಲ್ಲಿ ಶೋಕ ಸಹಿತನಾದರೆ ಕುಟುಂಬದಲ್ಲಿ ಪ್ರೀತಿಯು ಬೆಳೆದುಬಿಟ್ಟರೆ, ರೋಗ ಸಹಿಸುವಲ್ಲಿ ಹೇಡಿಯಾದರೆ, ಆರ್ತಧ್ಯಾನಿಯಾದರೆ, ನಿರ್ಧನತೆಯಿಂದ ದೀನನಾಗಿ ಹೋದರೆ, ಉತ್ಸಾಹರಹಿತನಾಗಿ ಬಿಟ್ಟರೆ, **ಆಕುಲತಾ ರೂಪನಾದರೆ ಅವನಿಗೂ ಆಧ್ಯಾತ್ಮ ಶಾಸ್ತ್ರಗಳ ಸ್ವಾಧ್ಯಾಯ ಮಾಡಿಸಬೇಕು, ಹನ್ನೆರಡು ಭಾವನೆಗಳ ಆಶ್ರಯದ ಗ್ರಹಣ ಮಾಡಿಸಬೇಕು** ಆತ್ಮನ ಅಜರ-ಅಮರ, ಅವಿನಾಶಿ-ಏಕಾಕಿ, ಪರದ್ರವ್ಯದ ಭಾವದಿಂದ ರಹಿತವಾದ ಸ್ವಭಾವದ ಚಿಂತನೆ ಮಾಡಿಸಬೇಕು ಧರ್ಮದಿಂದ ಬಿಡುಗಡೆಯಾಗಗೊಡಬಾರದು ಮತ್ತು ಅಸಾತಾದಿ ಕರ್ಮ, ಅಂತರಾಯಕರ್ಮ ಹಾಗೂ ಇನ್ನುಳಿದ ಕರ್ಮಗಳ ಉದಯವನ್ನು ಆತ್ಮನಿಂದ ಭಿನ್ನವಾಗಿ ಮನ್ನಿಸಿ ಕರ್ಮಗಳ ಉದಯದ ಕಾರಣ ತನ್ನ ಸ್ವಭಾವವನ್ನು ಚಂಚಲವಾಗಗೊಡಬಾರದು. ಅದು ಸ್ಥಿತಿಕರಣನಾಮದ ಆರನೆಯ ಅಂಗವಿದೆ.

ಈಗ ಸಮ್ಯಕ್ತ್ವದ **ವಾತ್ಸಲ್ಯ**ನಾಮದ ಏಳನೆಯ ಅಂಗವನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಸ್ವಯೂಥ್ಯಾನ್ಪ್ರತಿ ಸದ್ಭಾವ ಸನಾಥಾಪೇತ ಕೈತವಾ ।**
**ಪ್ರತಿಪತ್ತಿರ್ಯಥಾಯೋಗ್ಯಂ ವಾತ್ಸಲ್ಯಮಭಿಲಪ್ಯತೇ ॥೧೭॥**

**ಅರ್ಥ :-** ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪದ ಧರ್ಮವನ್ನು ಧಾರಣ ಮಾಡುವಂಥವರ ಯೂಥ ಎಂದರೆ ಸಮೂಹವು ಅದು ಧರ್ಮಾತ್ಮರ ತಮ್ಮ ಸಮೂಹವಿದೆ. ರತ್ನತ್ರಯಧಾರಕರ ಯೂಥದಲ್ಲಿ ವಾಸಿಸುವಂಥ ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ ಮತ್ತು ಅವಿರತ-ಸಮ್ಯಗ್ದೃಷ್ಟಿಗಳ ಕುರಿತು ನಿಜವಾದ ಭಾವದೊಡನೆ ಕಪಟರಹಿತ ಯಥಾ ಯೋಗ್ಯ ಪ್ರತಿಪತ್ತಿ ಎಂದರೆ ಎದ್ದು ನಿಲ್ಲುವುದು, ಎದುರಿಗೆ ಹೋಗುವದು, ವಂದನೆ ಮಾಡುವುದು, ಗುಣಗಳ ಸ್ತವನ ಮಾಡುವುದು, ಕೈ ಮುಗಿಯುವುದು ಆಜ್ಞೆಯನ್ನು ಮನ್ನಿಸುವುದು, ಪೂಜೆ-ಪ್ರಶಂಸೆ ಮಾಡುವುದು, ಉಚ್ಚಾಸನದ ಮೇಲೆ ಕೂಡಿಸಿ ತಾನು ಕೆಳಗೆ ಕುಳಿತುಕೊಳ್ಳುವುದು, ಅವರು ಬರುವುದರಿಂದ ಓರ್ವ ದರಿದ್ರನಿಗೆ ನಿಧಿಯು ದೊರಕುವುದರಿಂದ ಎಷ್ಟು ಹರ್ಷವಾಗುತ್ತದೆ ಅಷ್ಟು ಹರ್ಷ ಮನ್ನಿಸಬೇಕು, ಅತ್ಯಂತ ಪ್ರೀತಿಯಭಾವ ಬರಬೇಕು ಮತ್ತು ಸಮಯದ ಅನುಸಾರ ಆಹಾರ-ಪಾನೀಯ, ನಿವಾಸ, ಸಾಮಗ್ರಿ ಮೊದಲಾದವುಗಳ ಮೂಲಕ ವೈಯಾವೃತ್ಯ ಮಾಡಿ ಆನಂದಮನ್ನಿಸಬೇಕು ಅದನ್ನು ವಾತ್ಸಲ್ಯ ಅಂಗವೆಂದು ಹೇಳುತ್ತಾರೆ.

ಯಾವನಿಗೆ ಅಹಿಂಸಾ ಧರ್ಮದಲ್ಲಿ ಪ್ರೀತಿಯಿದೆ, ಹಿಂಸಾರಹಿತ ಕಾರ್ಯಗಳನ್ನು ಪ್ರೀತಿಯೊಡನೆ ಮಾಡುತ್ತಾನೆ, ಹಿಂಸೆಯ ನಿಮಿತ್ತಗಳನ್ನು ದೂರದಿಂದಲೇ ನಿವಾರಿಸಲಪೇಕ್ಷಿಸುತ್ತಾನೆ; ಸತ್ಯವಚನದಲ್ಲಿ, ಸತ್ಯವಚನ ಧಾರಿಗಳಲ್ಲಿ, ಸತ್ಯದ ಧರ್ಮದ ಪ್ರರೂಪಣೆಯಲ್ಲಿ ಪ್ರೀತಿಯಿದೆ; ಪರಧನ, ಪರಸ್ತ್ರೀಯ ತ್ಯಾಗದಲ್ಲಿ ರುಚಿಯಿದೆ, ಪರಧನ ಹಾಗೂ ಪರಸ್ತ್ರೀಯ ತ್ಯಾಗಿಗಳಲ್ಲಿ ಪ್ರೀತಿಯಿದೆ ಅವನಿಗೆ ವಾತ್ಸಲ್ಯ ಅಂಗವಿರುತ್ತದೆ. ದಶಲಕ್ಷಣಧರ್ಮ ಮತ್ತು ಧರ್ಮದ ಧಾರಕರಲ್ಲಿ -

ಸಾಧರ್ಮಿಗಳಲ್ಲಿ ಯಾವನಿಗೆ ಅನುರಾಗವಿದೆ ಮತ್ತು ಧರ್ಮದಲ್ಲಿ ಅನುರಾಗವಿರುವುದರಿಂದ ತ್ಯಾಗಿ-ಸಂಯಮಿಗಳಲ್ಲಿ ಅತ್ಯಂತ ಆದರಪೂರ್ವಕವಾಗಿ ಪ್ರವಚನಗಳ ಮೂಲಕ ಪ್ರವರ್ತಿಸುತ್ತಿದ್ದರೆ ಅವನಿಗೆ ವಾತ್ಸಲ್ಯ ಅಂಗವು ಅವಶ್ಯವಾಗಿ ಇರುತ್ತದೆ.

ಸಮ್ಯಗ್ದೃಷ್ಟಿಯ ಅಂತರಂಗದಲ್ಲಂತೂ ತನ್ನ ಶುದ್ಧ ಜ್ಞಾನ-ದರ್ಶನದಲ್ಲಿ ಅನುರಾಗವಿದೆ ಮತ್ತು ಬಾಹ್ಯದಲ್ಲಿ ಉತ್ತಮ ಕ್ಷಮಾದಿ ಧರ್ಮದಲ್ಲಿ ಹಾಗೂ ಧರ್ಮದ ಆಯತನದಲ್ಲಿ ಅನುರಾಗವಿದೆ, ಆದಾಗ್ಯೂ ಅನ್ಯಮಿಥ್ಯಾಧರ್ಮಿಗಳೊಡನೆ ದ್ವೇಷ ಮಾಡುವುದಿಲ್ಲ. ಏಕೆಂದರೆ **ರಾಗ, ದ್ವೇಷ, ಮೋಹಗಳು ಬಂಧದ ಕಾರಣವೇ ಇವೆಯೆಂದು ಪ್ರವಚನಸಾರ ಸಿದ್ಧಾಂತ ಗ್ರಂಥದಲ್ಲಿ ಹೇಳಿದೆ. ಇವುಗಳಲ್ಲಿ ಮೋಹ ಎಂದರೆ ಮಿಥ್ಯಾತ್ವ ಮತ್ತು ದ್ವೇಷ ಇವೆರಡಂತೂ ಅಶುಭ ಭಾವಗಳೇ ಇವೆ, ಏಕಾಂತವಾಗಿ ಕೇವಲ ಸಂಸಾರ ಪರಿಭ್ರಮಣದ ಕಾರಣವಾದ ಪಾಪಕರ್ಮದ ಬಂಧವನ್ನೇ ಮಾಡುತ್ತವೆ.**

ರಾಗ ಭಾವದಲ್ಲಿ ಶುಭ ಮತ್ತು ಅಶುಭವೆಂದು ಎರಡು ಪ್ರಕಾರಗಳಿವೆ. ಅವುಗಳಲ್ಲಿ ಅರಹಂತ ಮೊದಲಾದ ಪಂಚ ಪರಮೇಷ್ಠಿಗಳಲ್ಲಿ, ದಶಲಕ್ಷಣ ಧರ್ಮದಲ್ಲಿ, ಸ್ಯಾದ್ವಾದರೂಪ ಜಿನೇಂದ್ರರ ಆಗಮದಲ್ಲಿ, ವೀತರಾಗರ ಪ್ರತಿಬಿಂಬದಲ್ಲಿ, ವೀತರಾಗ ಬಿಂಬದ ಆಯತನದಲ್ಲಿ ಅನುರಾಗರೂಪದ ಶುಭಭಾವವು ಅದು ಸ್ವರ್ಗಾದಿಗಳಿಗೆ ಸಾಧಕವಾದ ಪುಣ್ಯಬಂಧ ಮಾಡವಂಥದ್ದಿದೆ ಮತ್ತು ಪರಂಪರೆಯಿಂದ ಮೋಕ್ಷದ ಕಾರಣವಿದೆ. ವಿಷಯಗಳಲ್ಲಿ ಅನುರಾಗ, ಕಷಾಯಗಳಲ್ಲಿ ಅನುರಾಗ, ಮಿಥ್ಯಾಧರ್ಮದಲ್ಲಿ-ಮಿಥ್ಯಾದೃಷ್ಟಿಗಳಲ್ಲಿ-ಪರಿಗ್ರಹಾದಿ ಪಂಚಪಾಪಗಳಲ್ಲಿ ಅನುರಾಗರೂಪದ ರಾಗಭಾವ, ದ್ವೇಷಭಾವ ಮತ್ತು ಮೋಹಭಾವ ಈ ಎಲ್ಲ ಭಾವಗಳು ನರಕ-ನಿಗೋದ ಮೊದಲಾದವುಗಳಲ್ಲಿ ಅನಂತಕಾಲದವರೆಗೆ ಪರಿಭ್ರಮಣ ಮಾಡಿಸಲು ಕಾರಣಗಳಿವೆ.

**ಸಮ್ಯಗ್ದೃಷ್ಟಿಯು ಅನ್ಯ ಅಜ್ಞಾನೀ ಮಿಥ್ಯಾದೃಷ್ಟಿ ಪಾಪಿಗಳಲ್ಲಿಯೂ ಕೂಡ ದ್ವೇಷ ಭಾವ ಮಾಡುವುದಿಲ್ಲ,** ಏಕೆಂದರೆ ಸಮಸ್ತ ಜೀವಗಳು ಮಿಥ್ಯಾತ್ವ ಕರ್ಮದ ಮತ್ತು ಜ್ಞಾನಾವರಣ ಮೊದಲಾದ ಕರ್ಮಗಳ ವಶೀಭೂತವಾಗಿ ತಮ್ಮ ಸ್ವರೂಪವನ್ನು ಮರೆತಿವೆ, ಅಜ್ಞಾನಿಯಾಗಿವೆ. ಇವರುಗಳಲ್ಲಿ ವೈರ ಮಾಡಿ ಏನನ್ನು ಸಾಧಿಸುವುದಿದೆ ? ಇವರುಗಳನ್ನಂತೂ ಇವರ ವಿಪರೀತ ಬುದ್ಧಿಯೇ ಹೊಡೆದುಹಾಕುತ್ತಲಿದೆ. ಅದರಿಂದಾಗಿ ಸಮ್ಯಗ್ದೃಷ್ಟಿಯು ದಯಾಭಾವವನ್ನೇ ಇಡುತ್ತಾನೆ, ರಾಗ-ದ್ವೇಷಗಳಿಂದ ರಹಿತನಾಗಿ ಮಧ್ಯಸ್ಥನಿರುತ್ತಾನೆ, ಏಕೆಂದರೆ ಸಮ್ಯಗ್ದೃಷ್ಟಿಯಂತೂ ವಸ್ತುವಿನ ಸ್ವಭಾವವನ್ನು ಸರಿಯಾಗಿ ತಿಳಿದುಕೊಂಡು ಏಕೇಂದ್ರಿಯ ಮೊದಲಾದ ಜೀವಗಳಲ್ಲಿ ಕರುಣಾಭಾವರೂಪದ ಪ್ರೀತಿಯನ್ನೇ ಮಾಡುತ್ತಾನೆ. ಎಲ್ಲ ಮನುಷ್ಯರಲ್ಲಿ ವೈರಭಾವದಿಂದ ರಹಿತನಾಗಿ ಯಾವುದೇ ಜೀವದ ವಿರಾಧನೆ, ಅಪಮಾನ ಹಾನಿಯನ್ನಪೇಕ್ಷಿಸುವುದಿಲ್ಲ. **ಮಿಥ್ಯಾದೃಷ್ಟಿಗಳು ನಿರ್ಮಿಸಿದ ದೇವ ಮಂದಿರ, ಸ್ಥಾನ, ಮಠ ಮೊದಲಾದುವಲ್ಲಿ ವೈರ ಮಾಡಿ ಅವನ್ನು ನಷ್ಟಮಾಡಲು ಬಯಸುವುದಿಲ್ಲ.** ಸರಾಗೀ ದೇವಗಳ ಬಿಂಬ, ದೇವತೆಗಳ ಕ್ರೂರರೂಪದ ಮೂರ್ತಿ ಮತ್ತು ಯೋಗಿನಿ, ಯಕ್ಷ, ಭೈರವ ಮೊದಲಾದ ವ್ಯಂತರರ ಸ್ಥಾಪನೆಯ ಸ್ಥಾನಗಳಲ್ಲಿ ಎಂದೂ ವೈರ ಮಾಡುವುದಿಲ್ಲ. ಏಕೆಂದರೆ ಆ ದೇವತೆಗಳ ಮೂರ್ತಿ ಹಾಗೂ ಅವರ ಸ್ಥಾನಗಳಂತೂ ಅನೇಕ ಜೀವರುಗಳ ಅಭಿಪ್ರಾಯದ ಆಧೀನವಿದ್ದು ಪೂಜಿಸುವುದಕ್ಕೆ-ಆರಾಧಿಸುವುದಕ್ಕಾಗಿಯೇ ರಚನೆ ಮಾಡಲಾಗಿವೆ. ಅನ್ಯರ ಅಭಿಪ್ರಾಯವನ್ನು ಅನ್ಯ ಪ್ರಕಾರವಾಗಿ ಮಾಡುವಲ್ಲಿ ಯಾರು ಸಮರ್ಥರಿದ್ದಾರೆ ? ಎಲ್ಲ ಮನುಷ್ಯರುಗಳು ತಮ್ಮ-ತಮ್ಮ ಧರ್ಮವನ್ನು ಮನ್ನಿಸಿ ದೇವತೆಗಳ ಸ್ಥಾಪನೆ ಮಾಡುತ್ತಾರೆ. ಯಾರಿಗೆ ಹೇಗೆ ಸಮ್ಯಕ್ ಅಥವಾ ಮಿಥ್ಯಾ ಉಪದೇಶವು ದೊರಕಿದೆ ಅದೇ ಪ್ರಕಾರ ಅವರು ಪ್ರವರ್ತನೆ ಮಾಡುತ್ತಾರೆ.

ಆದುದರಿಂದ ವಸ್ತುಸ್ವರೂಪವನ್ನು ತಿಳಿದುಕೊಳ್ಳುವಂಥ, ಎಲ್ಲರಲ್ಲಿ ಸಮಭಾವವಿಡುವಂಥ ಸಮ್ಯಗ್ದೃಷ್ಟಿಯು ಎಂದೂ ಯಾವ ಮನುಷ್ಯರನ್ನು 'ಎಲೋ-ತಲೋ' ಎಂದು ಹೇಳಿ ಮಾತನಾಡುವುದಿಲ್ಲವೆಂದ ಮೇಲೆ ಅನ್ಯರ ಧರ್ಮ, ದೇವ, ಮಂದಿರ, ಮೊದಲಾದುವನ್ನು ಬೈಗಳು ಮತ್ತು ಅವಜ್ಞ ವಚನಗಳಿಂದ ಹೇಗೆ ಹೇಳುವನು ? ಹೇಳುವುದೇ ಇಲ್ಲ. ಸಮಸ್ತ ಜೀವರುಗಳಲ್ಲಿ ಮೈತ್ರೀಭಾವವಿಡುವಂಥ ಸಮ್ಯಗ್ದೃಷ್ಟಿಯು ಅಚೇತನ ಸ್ಥಾನ, ಪಾಷಾಣ, ಮನೆ ಮತ್ತು ಅನ್ಯರ ವಿಶ್ರಾಂತಿ ಸ್ಥಾನಗಳಲ್ಲೆಂದೂ ಸ್ವಪ್ನದಲ್ಲಿ ಕೂಡ ವಿರೋಧ ಮಾಡುವುದಿಲ್ಲ.

ಅನ್ಯ ದುಷ್ಟರು ಬಲಶಾಲಿಗಳಾಗಿ ನಮ್ಮ ಧನ-ಮನೆ-ಆಜೀವಿಕೆ ಮತ್ತು ಕುಟುಂಬದ ಘಾತ ಹಾಗೂ ನಮ್ಮನ್ನೂ ಸಾಯಿಸಲಿಚ್ಛಿಸಿದರೆ ಅವರಲ್ಲಿ ಕೂಡ ವೈರ ಮಾಡುವುದಿಲ್ಲ. ಅವರು ವಿಚಾರಮಾಡುವುದೇನೆಂದರೆ ನಮ್ಮ ಪೂರ್ವೋಪಾರ್ಜಿತ ಕರ್ಮದ ಉದಯದಿಂದಲೇ ನಮ್ಮೊಡನೆ ವೈರ ಸಾಧಿಸುವಂಥ ಸಬಲ ಶತ್ರುಗಳು ಹುಟ್ಟಿದ್ದಾರೆ. ಆದುದರಿಂದ ಈಗ ನಾನು ನನ್ನ ಸಾಮರ್ಥ್ಯದ ಅನುಸಾರ **ಸಾಮ** ಎಂದರೆ ಪ್ರೀಯ ವಚನ,**ದಾಮ** ಎಂದರೆ ಧನ ಕೊಡುವುದು, ತಮ್ಮ ಶಕ್ತಿ ಪ್ರಕಾರ **ದಂಡ** ಕೊಡುವುದು ಮತ್ತು ಅವರಲ್ಲಿ ಪರಸ್ಪರ **ಭೇದ** ಮಾಡುವುದು ಇವೇ ಮೊದಲಾದ ಉಪಾಯಗಳಿಂದ ಶತ್ರುವನ್ನು ತಡೆದು ತನ್ನ ರಕ್ಷಣೆ ಮಾಡಿಕೊಳ್ಳಬೇಕು. ಒಂದು ವೇಳೆ ಶತ್ರು ತಡೆಯದಿದ್ದರೆ ಮನಸ್ಸಿನಲ್ಲಿ ಯೋಚಿಸುತ್ತಾನೆ. ನನ್ನ ಪೂರ್ವೋಪಾರ್ಜಿತ ಕರ್ಮದ ಉದಯವು ಬಂದಿರುವುದರಿಂದ ಶತ್ರುವನ್ನು ಬಲಿಷ್ಠ ಮಾಡಿದೆ ಮತ್ತು ನನ್ನನ್ನು ನಿರ್ಬಲಗೊಳಿಸಿ ಕರ್ಮವು ನನ್ನನ್ನು ದಂಡಿಸಿದೆ, ಈಗ ನಾನು ಯಾರೊಡನೆ ವೈರ ಮಾಡಲಿ ? ಕರ್ಮವು ನಿರ್ಜರಿಸಿ ಹೋದಂತೆ ಸಾಮ್ಯಭಾವವನ್ನು ಧಾರಣ ಮಾಡಿ ಆ ನನ್ನ ವೈರಿಯಾದ ಕರ್ಮವನ್ನು ಜಯಿಸುವೆನು ಅನ್ಯರೊಡನೆ ವಿರೋಧ ಮಾಡಿ ವ್ಯರ್ಥ ಕರ್ಮ ಕಟ್ಟಿಕೊಳ್ಳಲಾರೆನು. ಸಮ್ಯಗ್ದೃಷ್ಟಿಗೆ ಎಲ್ಲರಲ್ಲಿ ವಾತ್ಸಲ್ಯವಿದೆ, ಅವನು ಯಾರಲ್ಲಿಯೂ ವೈರವಿಡುವುದಿಲ್ಲ.

ಯಾವನೋ ದುಷ್ಟ ಜೀವನು ಧರ್ಮದಲ್ಲಿ ವಿರೋಧ ಮಾಡಿ ಮಂದಿರ - ಮೂರ್ತಿಗೆ ವಿಘ್ನವೊಡ್ಡಲಪೇಕ್ಷಿಸಿದರೆ ಅವನನ್ನು ತನ್ನ ಸಾಮರ್ಥ್ಯದಿಂದ ತಡೆಯುವಂತಿದ್ದರೆ ತಡೆಯುತ್ತಾನೆ. ತನಗಿಂತಪ್ರಬಲನಿದ್ದರೆ ಹೀಗೆ ಯೋಚಿಸುತ್ತಾನೆ. ಕಾಲದ ನಿಮಿತ್ತದಿಂದ ಧರ್ಮದ ಘಾತಕನಾಗಿ ಸ್ಪಷ್ಟ ನಮ್ಮ ವೈರ ಸಾಧಿಸುತ್ತಿದ್ದಾನೆ, ಪ್ರಬಲನಿದ್ದಾನೆ, ಹೇಗೆ ತಡೆವನು ? ನಮ್ಮ ಉತ್ತಮ ಕ್ಷಮಾದಿ ಹಾಗೂ ಸಮ್ಯಗ್ಜ್ಞಾನ, ಶ್ರದ್ಧಾದಿ ಧರ್ಮವನ್ನು ಘಾತ ಮಾಡುವಲ್ಲಿ ಯಾರೂ ಸಮರ್ಥರಿಲ್ಲ. ದುಷ್ಟರು ಮಂದಿರ ಮೊದಲಾದುವನ್ನು ಕೆಡಿಸುತ್ತಾರೆ ಮತ್ತು ಧರ್ಮಾತ್ಮರು ಪುನಃ ಕಟ್ಟಿಸುತ್ತಾರೆ. ಕಾಲದ ನಿಮಿತ್ತದಿಂದ (ಪಂಚಮ ಕಾಲದ ದೋಷದಿಂದ) ಅನೇಕ ದುಷ್ಟರು ಉತ್ಪನ್ನರಾಗುತ್ತಾರೆ, ಅವರನ್ನು ತಡೆಯುವಲ್ಲಿ ಯಾರು ಸಮರ್ಥರಿದ್ದಾರೆ ? **ಭವಿತವ್ಯವು ಬಲವಂತವಿದೆ.** ಭವಿತವ್ಯವು ಒಳ್ಳೆಯದಿದ್ದರೆ ದುಷ್ಟ ಮಿಥ್ಯಾದೃಷ್ಟಿಗಳು ಪ್ರಬಲ ಬಲದ ಧಾರಕರಾಗಿ ಉತ್ಪನ್ನವಾಗುವುದಿಲ್ಲ, ಆದುದರಿಂದ ವೀತರಾಗತೆಯೇ ನಮ್ಮ ಸಲುವಾಗಿ ಪರಮ ಶರಣವಿದೆ. ಈ ಪ್ರಕಾರ ವಾತ್ಸಲ್ಯವೆಂಬ ಹೆಸರಿನ ಏಳನೆಯ ಅಂಗದ ವರ್ಣನೆಯನ್ನು ಮಾಡಲಾಯಿತು.

ಈಗ **ಪ್ರಭಾವನೆ**ಯೆಂಬ ಹೆಸರಿನ ಸಮ್ಯಕ್ತ್ವದ ಎಂಟನೇ ಅಂಗವನ್ನು ಹೇಳುವಂಥ ಸೂತ್ರ ಹೇಳುತ್ತಾರೆ,-

**ಅಜ್ಞಾನ ತಿಮಿರವ್ಯಾಪ್ತಿ ಮಪಾಕೃತ್ಯ ಯಥಾಯಥಮ್ ।**
**ಜಿನಶಾಸನಮಹಾತ್ಮ್ಯ ಪ್ರಕಾಶಃ ಸ್ಯಾತ್ಪ್ರಭಾವನಾ ॥೧೮॥**

**ಅರ್ಥ :-** ಸಂಸಾರೀ ಜೀವರುಗಳ ಹೃದಯದಲ್ಲಿ ಅಜ್ಞಾನರೂಪದ ಅಂಧಕಾರವು ವ್ಯಾಪ್ತವಾಗುತ್ತಲಿದೆ. ಅದನ್ನು ಸತ್ಯಾರ್ಥಸ್ವರೂಪದ ಪ್ರಕಾಶದಿಂದ ದೂರ ಮಾಡಿ, ಜಿನೇಂದ್ರ ದೇವರ ಶಾಸನದ ಮಾಹಾತ್ಮ್ಯವನ್ನು ತಿಳಿಸಿಕೊಡುವುದೇ - ಪ್ರಕಾಶಪಡಿಸುವುದೇ ಪ್ರಭಾವನೆಯೆಂಬ ಹೆಸರಿನ ಸಮ್ಯಕ್ತ್ವದ ಎಂಟನೆಯ ಅಂಗವಿದೆ.

ಅನಾದಿಕಾಲದ ಸಂಸಾರೀ ಜೀವನು ಸರ್ವಜ್ಞವೀತರಾಗರಿಂದ ಪ್ರಕಟವಾದ ಧರ್ಮವನ್ನು ತಿಳಿದುಕೊಳ್ಳುವುದಿಲ್ಲ ಇದೇ ಕಾರಣದಿಂದ ಅವನಿಗೆ ನಾನು ಯಾರು, ನನ್ನ ಸ್ವರೂಪವೇನು, ಇಲ್ಲಿ ಜನ್ಮವಾಗುವ ಮೊದಲು ನಾನು ಎಲ್ಲಿದ್ದೇನು, ಹೇಗಿದ್ದೆನು, ಇಲ್ಲಿ ನನ್ನನ್ನು ಉತ್ಪನ್ನ ಮಾಡಿಸಿದವರಾರು ? ಆಯು ಹಗಲಿರುಳು ಕಳೆದು ನಷ್ಟವಾಗುತ್ತಲಿದೆ, ನಾನು ಮಾಡಲು ಯೋಗ್ಯವು ಯಾವುದಿದೆ ? ನನ್ನ ಹಿತ ಯಾವುದರಲ್ಲಿದೆ ? ಆರಾಧಿಸಲು ಯೋಗ್ಯರು ಯಾರಿದ್ದಾರೆ ? ಜೀವರುಗಳಿಗೆ ಅನೇಕ ಪ್ರಕಾರದ ಸುಖ-ದುಃಖಗಳು ಏಕೆ ಆಗುತ್ತವೆ ? ದೇವ-ಗುರು-ಧರ್ಮದ ಸ್ವರೂಪವು ಹೇಗಿದೆ ? ಜೀವನ -ಮರಣದ ಸ್ವರೂಪವೇನಿದೆ ? ಭಕ್ಷ್ಯ-ಅಭಕ್ಷ್ಯದ ಸ್ವರೂಪವೇನಿದೆ ? ಈ ಪರ್ಯಾಯದಲ್ಲಿ ನಾನು ಮಾಡಲು ಯೋಗ್ಯವಾದ ಕಾರ್ಯ

ಯಾವುದು ? ನನಗೆ ಯಾರಿದ್ದಾರೆ, ನಾನು ಯಾರವನಿದ್ದೇನೆ ? ಇವೇ ಮೊದಲಾದ ವಿಚಾರದಿಂದ ರಹಿತನಾಗಿ ಮೋಹನೀಯ ಕರ್ಮಕೃತ ಅಂಧಕಾರದಲ್ಲಿ ಆಚ್ಛಾದಿತನಾಗುತ್ತಿದ್ದಾನೆ. ಅವನ **ಅಜ್ಞಾನರೂಪದ ಅಂಧಕಾರವನ್ನು ಸ್ಯಾದ್ವಾದರೂಪ ಪರಮಾಗದ ಪ್ರಕಾಶದಿಂದದೂರ ಮಾಡಿ ಸ್ವ-ರೂಪ ಮತ್ತು ಪರರೂಪದ ಪ್ರಕಾಶ-ಜ್ಞಾನ ಮಾಡುವುದು ಅದು ಪ್ರಭಾವನಾ ನಾಮದ ಅಂಗವಿದೆ.** ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರದ ಮೂಲಕ ಆತ್ಮನ ಪ್ರಭಾವ-ಮಾಹಾತ್ಮ್ಯ ಪ್ರಕಟ ಮಾಡುವುದು ಅದು ಪ್ರಭಾವನೆಯಿದೆ. ದಾನ, ತಪ, ಶೀಲ, ಸಂಯಮ, ನಿರ್ಲೋಭತೆ, ವಿನಯ, ಪ್ರಿಯ ವಚನ, ಜಿನೇಂದ್ರ ಪೂಜೆ, ಗುಣಪ್ರಕಾಶನದಿಂದ ಜಿನಧರ್ಮದ ಮಹಾತ್ಮ್ಯ-ಪ್ರಭಾವ ಪ್ರಕಟ ಮಾಡುವುದು ಅದು ಪ್ರಭಾವನೆಯಿದೆ.

ಅವರ ಉತ್ತಮಪರಿಣಾಮಗಳಿಂದ ಆಗುವಂಥ ಉತ್ತಮದಾನ, ಘೋರತಪ, ನಿರಪೇಕ್ಷತೆ ಮೊದಲಾದುವನ್ನು ನೋಡಿ ಮಿಥ್ಯಾಮತಿಗಳೂ ಪ್ರಶಂಸೆ ಮಾಡುತ್ತಾರೆ. ಓಹೋ ! ನೋಡಿರಿ, ಇದು ಜೈನರ ವಾತ್ಸಲ್ಯಯುಕ್ತ ಮಹಾದಾನವಿದೆ ; ಇಂಥ ನಿರಪೇಕ್ಷ ತಪವು ಜೈನರಿಂದಲೇ ಸಂಭವಿಸುತ್ತದೆ. ಜೈನರದು ಮಹಾವ್ರತವಿದ್ದು ಪ್ರಾಣ ಹೋದರೂ ಅವರ ವ್ರತ ಭಂಗವಾಗುವುದಿಲ್ಲ. ಅಯ್ಯೋ ! ಜೈನರದು ಮಹಾನ ಅಹಿಂಸಾವ್ರತವಿದ್ದು ಅವರು ಪ್ರಾಣ ಹೋಗುವ ಸಮಯ ಬಂದರೂ ಕೂಡ ತಮ್ಮ ಸಂಕಲ್ಪದಿಂದ ಜೀವಹಿಂಸೆ ಮಾಡುವುದಿಲ್ಲ. ಅವರು ಅಸತ್ಯದ ತ್ಯಾಗ, ಚೋರಿಯ ತ್ಯಾಗ, ಪರಸ್ತ್ರೀಯ ತ್ಯಾಗ ಮತ್ತು ಪರಿಗ್ರಹದ ಮರ್ಯಾದೆಯೊಡನೆ ಸಮಸ್ತ ಅನೀತಿಗಳಿಂದ ರಹಿತರಾಗಿರುತ್ತಾರೆ. ಅಭಕ್ಷ್ಯದ ಭಕ್ಷಣ ಮಾಡುವುದಿಲ್ಲ, ಮರ್ಯಾದೆಯೊಡನೆ ದಿವಸದಲ್ಲಿ ನೋಡಿ-ಶೋಧಿಸಿ ಭೋಜನ ಮಾಡುವುದು, ಈ ಪ್ರಕಾರ ಜೈನ ಧರ್ಮದವರ ಧರ್ಮವು ಶ್ರೇಷ್ಠವಿದೆ, ದೊಡ್ಡದಿದೆ.

ಅವರು ಅತ್ಯಂತ ವಿನಯಶಾಲಿಯಿರುತ್ತಾರೆ, ಪ್ರಿಯವೂ-ಹಿತಕರವೂ-ಮಧುರವೂ ಆದ ವಚನಗಳನ್ನಾಡಿ ಎಲ್ಲರನ್ನೂ ಆನಂದಿತ ಮಾಡುತ್ತಾರೆ. ಅವರ ಕ್ಷಮೆಯು ಮಹಾ ವಿಶೇಷವಿದೆ. ತಮ್ಮ ಇಷ್ಟ ದೇವರಲ್ಲಿ ವಿಶೇಷ ಭಕ್ತಿಯಿರಿಸುತ್ತಾರೆ. ಜೈನರು ಆಗಮದ ಆಜ್ಞೆಯಲ್ಲಿ ದೃಢ ಶ್ರದ್ಧೆಯುಳ್ಳವರಿರುತ್ತಾರೆ. ಅವರ ವಿದ್ಯೆಯು ಪ್ರಬಲವಿದ್ದು ಆಚರಣೆಯು ಅತ್ಯಂತ ಉಜ್ವಲವಿರುತ್ತದೆ. ವೈರಭಾವದಿಂದ ರಹಿತರಾಗಿ ಎಲ್ಲ ಜೀವರುಗಳಲ್ಲಿ ಮೈತ್ರೀ ಭಾವವಿಡುತ್ತಾರೆ. ಇಂಥ ಆಶ್ಚರ್ಯಕರ ಧರ್ಮವು ಅವರಿಂದಲೇ ಪೋಷಿಸಲ್ಪಡುವುದು. ಜಿನ ಧರ್ಮದ ಇಂಥ ಪ್ರಶಂಸೆಯು ಅವರ ನಿಮಿತ್ತದಿಂದ ಮಿಥ್ಯಾಧರ್ಮಿಯರಲ್ಲೂ ಪ್ರಕಟವಾಗುತ್ತದೆ, ಅವರಿಂದ ಪ್ರಭಾವನೆಯಾಗುತ್ತದೆ.

ಅವರು ಅನೀತಿಯ ಧನವನ್ನೆಂದೂ ಬಯಸುವುದಿಲ್ಲ, ಅನ್ಯಾಯದ ವಿಷಯ ಭೋಗವನ್ನು ಸ್ವಪ್ನದಲ್ಲೂ ಗ್ರಹಣ ಮಾಡುವುದಿಲ್ಲ. ನಮ್ಮ ನಿಮಿತ್ತದಿಂದ ಜಿನಧರ್ಮದ ನಿಂದೆಯಾದರೆ ನಮ್ಮ ಜನ್ಮವು ಇಹ-ಪರಗಳೆರಡನ್ನೂ ನಷ್ಟ ಮಾಡುವಂತಾಗುವುದು. ಅದರಿಂದ ಸಮ್ಯಗ್ದೃಷ್ಟಿಯು ಹೇಗೆ ತನ್ನ ಕುಲದ, ಧರ್ಮದ, ಸಾಧರ್ಮಿಗಳ ಹಾಗೂ ದಾನ-ಶೀಲ-ತಪ-ವ್ರತದ ಅಪವಾದ-ನಿಂದೆಯಾಗದಂತೆ ಪ್ರವರ್ತನೆ ಮಾಡುತ್ತಾನೆ. ಧರ್ಮಕ್ಕೆ ದೋಷ ತಗಲಬಹುದೆಂದು ಭಯಭೀತರಿರುತ್ತಾರೆ ; ಧರ್ಮದ ಪ್ರಶಂಸೆ, ಉಚ್ಚತೆ, ಉಜ್ವಲತೆಯು ಪ್ರಕಟವಾಗುವಂಥ ಆಚರಣೆ ಮಾಡುತ್ತಾರೆ ; ಅವರಿಗೇ ಪ್ರಭಾವನೆಯೆಂಬ ಹೆಸರಿನ ಎಂಟನೆಯ ಅಂಗವಿದೆ.

ಈ ಪ್ರಕಾರ ಸಮ್ಯಕ್ತ್ವದ ಎಂಟು ಅಂಗಗಳ ಸಮೂಹವೇ ಸಮ್ಯಗ್ದರ್ಶನವಿದೆ. ಹೇಗೆ ಅಂಗಗಳಿಂದ ಅಂಗಿ ಭಿನ್ನನಿರುವುದಿಲ್ಲ **ಅಂಗಗಳ ಸಮೂಹದ ಏಕತೆಯಿಂದಲೇ ಅಂಗಿಯಿದ್ದಾನೆ.** ಹಾಗೆಯೇ ನಿಃಶಂಕಿತ ಮೊದಲಾದ ಗುಣಗಳ ಸಮೂಹವೇ ಸಮ್ಯಗ್ದರ್ಶನವಿದೆ. ಈ ಎಂಟು ಅಂಗಗಳ ಪ್ರತಿಪಕ್ಷಿಯಾದ ಶಂಕೆ, ಕಾಂಕ್ಷೆ, ಗ್ಲಾನಿ, ಮೂಢತೆ, ಅನುಪಗೂಹನ, ಅಸ್ಥಿತಿಕರಣ, ಅವಾತ್ಸಲ್ಯ, ಅಪ್ರಭಾವನೆ ಮೊದಲಾದವುಗಳಿಂದ ಅವನು ಧರ್ಮವನ್ನು ದೂಷಿತವಾಗಗೊಡುವುದಿಲ್ಲ.

ಈಗ ನಿಃಶಂಕಿತಾದಿ ಅಂಗಗಳ ಪಾಲನೆಯಲ್ಲಿ ಆಗಮದೊಳಗೆ ಪ್ರಸಿದ್ಧರಾದವರ ಹೆಸರುಗಳನ್ನು ಎರಡು ಸೂತ್ರಗಳಿಂದ ಹೇಳುತ್ತಾರೆ, -

**ತಾವದಂಜನಚೌರೋऽಂಗೇ ತತೋऽನಂತಮತಿಃ ಸ್ಮೃತಾ ।**
**ಉದ್ದಾಯನ ಸ್ತೃತೀಯೇऽಪಿ ತುರೀಯೇ ರೇವತೀ ಮತಾ ॥೧೯॥**

**ತತೋ ಜಿನೇಂದ್ರ ಭಕ್ತೋऽನ್ಯೋ ವಾರಿಷೇಣಸ್ತತಃ ಪರಃ ।**
**ವಿಷ್ಣುಶ್ಚ ವಜ್ರನಾಮಾ ಚ ಶೇಷಯೋರ್ಲಕ್ಷ್ಯತಾಂ ಗತೌ ॥೨೦॥**

**ಅರ್ಥ :-** ಮೊದಲ ಅಂಗದಲ್ಲಿ ರಾಜಪುತ್ರ ಅಂಜನಚೋರ, ಎರಡನೇ ಅಂಗದಲ್ಲಿ ಅನಂತಮತಿ ನಾಮದ ಶ್ರೇಷ್ಠಿಯ ಮಗಳು, ಮೂರನೇ ಅಂಗದಲ್ಲಿ ಉದ್ದಾಯನ ದೊರೆ, ನಾಲ್ಕನೇ ಅಂಗದಲ್ಲಿ ರೇವತೀ ರಾಣಿ, ಐದನೇ ಅಂಗದಲ್ಲಿ ಜಿನೇಂದ್ರಭಕ್ತ ಶ್ರೇಷ್ಠಿ, ಆರನೇ ಅಂಗದಲ್ಲಿ ರಾಜಪುತ್ರ ವಾರಿಷೇಣ ಮುನಿ, ಏಳನೇ ಅಂಗದಲ್ಲಿ ರಾಜಪುತ್ರ ವಿಷ್ಣುಕುಮಾರ ಮುನಿ ಮತ್ತು ಎಂಟನೇ ಅಂಗದಲ್ಲಿ ರಾಜಪುತ್ರ ವಜ್ರಕುಮಾರ ಮುನಿ. ಈ ಎಂಟು ಹೆಸರುಗಳು ಆಗಮದೊಳಗೆ ಸಮ್ಯಕ್ತ್ವದ ಎಂಟು ಅಂಗಗಳಲ್ಲಿ ಪ್ರಸಿದ್ಧರಿರುವಂಥವರ ಕಥನವು ದೃಷ್ಟಾಂತರೂಪದಲ್ಲಿ ಕ್ರಮದಿಂದ ಬಂದಿದೆ. ಇವರ ವಿಸ್ತೃತ ಕಥೆಗಳು ಪ್ರಥಮಾನುಯೋಗದ ಶಾಸ್ತ್ರಗಳಲ್ಲಿ ಪ್ರಸಿದ್ಧವಿದ್ದು ಅಲ್ಲಿಂದ ತಿಳಿದುಕೊಳ್ಳುವುದು.

ಈಗ ಅಂಗಹೀನ ಸಮ್ಯಕ್ತ್ವದಲ್ಲಿ ಸಂಸಾರದ ಪರಿಪಾಟೀ ಛೇದಿಸುವ ಅಸಮರ್ಥತೆಯನ್ನು ತೋರಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ನಾಂಗಹೀನಮಲಂ ಛೇತ್ತುಂ ದರ್ಶನಂ ಜನ್ಮಸಂತತಿಮ್ ।**
**ನ ಹಿ ಮಂತ್ರೋऽಕ್ಷರನ್ಯೂನೋ ನಿಹಂತಿ ವಿಷವೇದನಾಮ್ ॥೨೧॥**

**ಅರ್ಥ :-** ಹೇಗೆ ಹೀನಾಕ್ಷರದ ಮಂತ್ರವು ವಿಷದ ವೇದನೆಯನ್ನು ನಷ್ಟ ಮಾಡುವುದಿಲ್ಲ ಹಾಗೆ ಅಂಗಗಳಿಂದ ಹೀನವಾದ ಸಮ್ಯಗ್ದರ್ಶನವು ಸಂಸಾರದ ಪರಿಪಾಟಿಯನ್ನು ಜನ್ಮ ಪರಂಪರೆಯನ್ನು ಛೇದಿಸುವಲ್ಲಿ ಸಮರ್ಥವಾಗುವುದಿಲ್ಲ. ಯಾವ ಪ್ರಕಾರ ಅಕ್ಷರ ಹೀನ ಮಂತ್ರವು ಸರ್ಪಾದಿಗಳ ವಿಷವನ್ನು ದೂರ ಮಾಡುವ ಸಾಧ್ಯತೆಯಿಲ್ಲ, ಅದೇ ಪ್ರಕಾರ **ಯಾವನ ಭಾವಗಳಲ್ಲಿ ನಿಃಶಂಕಿತ ಮೊದಲಾದ ಅಂಗಗಳು ಪ್ರಕಟವಾಗುತ್ತವೆ ಅದೇ ಸಮ್ಯಗ್ದೃಷ್ಟಿಯು ಸಂಸಾರ ಪರಿಭ್ರಮಣದ ನಾಶ ಮಾಡುತ್ತಾನೆ.** ಯಾವನಿಗೆ ಎಂಟು ಅಂಗಗಳಲ್ಲಿ ಒಂದು ಅಂಗವು ಕಡಿಮೆಯಿದ್ದರೆ - ಪ್ರಕಟವಾಗಿರದಿದ್ದರೆ ಅವನಿಗೆ ಸಂಸಾರದ ಅಭಾವವು ಆಗುವುದಿಲ್ಲ.

ಮೂಢತೆಗಳಲ್ಲಿ ಮೂರು ಭೇದಗಳಿದ್ದು ಅವು ಮೂರೂ ಸಮ್ಯಕ್ತ್ವದ ಘಾತ ಮಾಡುತ್ತವೆ. ಆದುದರಿಂದ ಮೂರೂ ಪ್ರಕಾರದ ಮೂಢತೆಗಳ ಸ್ವರೂಪವನ್ನು ತಿಳಿದುಕೊಂಡು ಸಮ್ಯಗ್ದರ್ಶನವನ್ನು ಶುದ್ಧಮಾಡಿಕೊಳ್ಳುವುದು ಉಚಿತವಿದೆ.

ಈಗ **ಲೋಕಮೂಢತೆಯ** ಸ್ವರೂಪ ಹೇಳುವಂಥ ಸೂತ್ರ ಹೇಳುತ್ತಾರೆ,-

**ಆಪಗಾಸಾಗರಸ್ನಾನಮುಚ್ಚಯಃ ಸಿಕಲಾಶ್ಮನಾಮ್ ।**
**ಗಿರಿಪಾತೋऽಗ್ನಿಪಾತಶ್ಚ ಲೋಕಮೂಢಂ ನಿಗದ್ಯತೇ ॥೨೨॥**

**ಅರ್ಥ :-** ಲೌಕಿಕ ಜನರ - ಮಿಥ್ಯಾಧರ್ಮಿಗಳ ಆಚರಣೆಯನ್ನು ನೋಡಿ ಯಾರು ನದಿಯಲ್ಲಿ ಸ್ನಾನ ಮಾಡುವುದಕ್ಕೆ ಧರ್ಮವೆಂದು ಮನ್ನಿಸುತ್ತಾರೆ, ಸಮುದ್ರದಲ್ಲಿ ಸ್ನಾನ ಮಾಡುವುದಕ್ಕೆ ಧರ್ಮವೆಂದು ಮನ್ನಿಸುತ್ತಾರೆ, ಮಳಲಿನ ರಾಸಿ, ಪಾಷಾಣದ ರಾಸಿ ಮಾಡುವಲ್ಲಿ ಧರ್ಮವೆಂದು ಮನ್ನಿಸುತ್ತಾರೆ, ಪರ್ವತದಿಂದ ಉರುಳಿ ಬೀಳುವಲ್ಲಿ - ಅಗ್ನಿಯಲ್ಲಿ

ಹಾರುವುದರೊಳಗೆ ಧರ್ಮವೆಂದು ಮನ್ನಿಸುತ್ತಾರೆ ಅದನ್ನು ಲೋಕಮೂಢತೆಯೆಂದು ಹೇಳುತ್ತಾರೆ. ಸಮ್ಯಗ್ದರ್ಶನವು ಲೋಕಮೂಢತೆಯಿಂದ ರಹಿತವಾಗಿರುತ್ತದೆ.

ಇಲ್ಲಿ ಮಿಥ್ಯಾತ್ವದ ಉದಯದಿಂದ, ದೇಶ-ಕಾಲದ ಭೇದದಿಂದ ಲೌಕಿಕ, ಅಜ್ಞಾನೀ, ಪರಮಾರ್ಥ ತಿಳಿಯದ ಜನರು ಅನೇಕ ಪ್ರಕಾರದ ಪ್ರವೃತ್ತಿ ಮಾಡಿ ತಮಗೆ ಧರ್ಮವಾಗುವುದು, ಲಾಭವಾಗುವುದು, ವಿಯೋಗವಾಗದಿರುವುದು, ದೀರ್ಘ ಜೀವನ ದೊರಕುವುದೆಂದು ಮೊದಲಾಗಿ ಮನ್ನಿಸುತ್ತಾರೆ. ಆ ಲೋಕ ಮೂಢತೆಯನ್ನು ಸ್ಪಷ್ಟ ಅಜ್ಞಾನವೆಂದು ತಿಳಿದುಕೊಂಡು ಅದರ ತ್ಯಾಗ ಮಾಡಿ ಸಮ್ಯಕ್ತ್ವ ಭಾವದ ವಿಶುದ್ಧತೆ ಮಾಡಿಕೊಳ್ಳಬೇಕಾಗುವುದು.

ಅದೆಷ್ಟೋ ಏಕಾಂತವಾದಿ ಜನರು ಸ್ನಾನಮಾಡಿ ತಮ್ಮನ್ನು ಪವಿತ್ರರೆಂದು ಮನ್ನಿಸುತ್ತಾರೆ. ಆದುದರಿಂದ **ಜ್ಞಾನಿಗಳು ಆಗಮ ಜ್ಞಾನದೊಡನೆ ವಿಚಾರ ಮಾಡಬೇಕಾಗುವುದು.** ಆತ್ಮನಂತೂ ಅಮೂರ್ತಿಕನಿದ್ದಾನೆ. ಅವನ ವರೆಗಂತೂ ಸ್ನಾನವು ತಲುಪುವುದೇ ಇಲ್ಲ. ಮತ್ತು ಈ ಶರೀರವು ಮಹಾ ಅಪವಿತ್ರವಿದೆ. ಇದರ ಸ್ಪರ್ಶದಿಂದ ಪವಿತ್ರವಿರುವ ಚಂದನ-ಗಂಗಾಜಲ-ಪುಷ್ಪಾದಿಗಳು ಸ್ಪರ್ಶ ಮಾಡಲು ಯೋಗ್ಯವಾಗಿ ಉಳಿಯುವುದಿಲ್ಲ. ಈ ಶರೀರವು ರಕ್ತ, ಮೂಳೆ, ಮಾಂಸ, ಚರ್ಮ ಮೊದಲಾದ ಅಪವಿತ್ರ ಸಾಮಗ್ರಿಗಳಿಂದ ಆಗಿದ್ದು ದುರ್ಗಂಧ, ಮಲ, ಮೂತ್ರ ಮೊದಲಾದ ಅಪವಿತ್ರ ದ್ರವ್ಯಗಳಿಂದ ತುಂಬಿದೆ. ಅದರ ಮುಖದ ಮಾರ್ಗದಿಂದಂತೂ ಮಹಾ ಅಪವಿತ್ರ ಕಫ, ಜೊಲ್ಲು, ಹಲ್ಲುಗಳ ಕೊಳೆ, ನಾಲಿಗೆಯ ಕೊಳೆಗಳು ನಿರಂತರ ಹರಿಯುತ್ತಿರುತ್ತವೆ. ಕಣ್ಣುಗಳಿಂದ ದುರ್ಗಂಧಿತ ಕೊಳೆಯು ಹರಿಯುತ್ತಿರುತ್ತದೆ, ಅಧೋ ದ್ವಾರಗಳಿಂದ ಮಲ-ಮೂತ್ರ ದುರ್ಗಂಧಿತ ಆಮ, ಕ್ರಿಮಿ ಮೊದಲಾದುವನ್ನು ನಿರಂತರ ಉಗುಳುತ್ತಿರುತ್ತದೆ, ಕಿವಿಗಳಿಂದ ಕರ್ಣಮಲ ಹರಿದರೆ ನಾಸಿಕದೊಳಗಿಂದ ನಿರಂತರ ದುರ್ಗಂಧಿತ ಘೃಣಾಯೋಗ್ಯ ಸಿಂಬಳ ಸೋರುತ್ತದೆ ಮತ್ತು ಸಂಪೂರ್ಣ ಶರೀರದ ರೋಮಗಳಿಂದ ಅತ್ಯಂತ ದುರ್ಗಂಧಿತ ಮಲಿನತರದ ಬೆವರು ಹರಿಯುತ್ತಿರುತ್ತದೆ.

**ನವದ್ವಾರಗಳಿಂದ ನಿರಂತರ ಮಲವು ಹರಿಯುತ್ತಿರುವಂಥ ಶರೀರವನ್ನು ನೀರಿನಿಂದ ಸ್ನಾನ ಮಾಡಿಸುವುದರಿಂದ ಶುದ್ಧವೆಂದು ಹೇಗೆ ಮನ್ನಿಸಲಾಗುವುದು ? ಹೇಗೆ ಮಲದಿಂದ ಮಾಡಲಾದ ಕೊಡವು ಮಲದಿಂದಲೇ ತುಂಬಿ ಮತ್ತು ಅದರೊಳಗಿಂದ ಎಲ್ಲ ಕಡೆಯಿಂದ ಮಲವೇ ಹರಿಯುತ್ತಿದ್ದರೆ ಅದು ನೀರಿನಿಂದ ತೊಳೆದರೆ ಹೇಗೆ ಶುದ್ಧವಾಗುವ ಸಾಧ್ಯತೆಯಿದೆ ?**

ಈ ಲೋಕದಲ್ಲಿ ಭೂಮಿ, ಕ್ಷೇತ್ರಾದಿಗಳು ಅಶುಚಿ ಅಥವಾ ಅಪವಿತ್ರವೆಂದು ಕರೆಸಿಕೊಳ್ಳುತ್ತವೆ. ಅವೆಲ್ಲವೂ ಈ ಶರೀರದ ಸ್ಪರ್ಶದಿಂದಲೇ - ಸಂಯೋಗದಿಂದಲೇ ಅಪವಿತ್ರವಾಗಿವೆ. ಕೆಲವು ಚರ್ಮ ಬೀಳುವುದರಿಂದ, ಕೆಲವು ಕೂದಲು ಬೀಳುವುದರಿಂದ, ಕೆಲವು ಎಂಜಲು ಬೀಳುವುದರಿಂದ ಅಪವಿತ್ರ ಕ್ಷೇತ್ರವೆನಿಸಿಕೊಳ್ಳುತ್ತವೆ. ರಕ್ತ, ಮಾಂಸ, ಮೂಳೆ, ಮಲ, ಮೂತ್ರ, ಉಗುಳು, ಜೊಲ್ಲು, ಕಫ, ಮೂಗಿನ ಕೊಳೆ ಮೊದಲಾದವುಗಳ ಸ್ಪರ್ಶವಾಗುವುದರಿಂದಲೇ, ಸ್ನಾನ ಜಲದ ತೊಟ್ಟು ತಗಲುವುದರಿಂದಲೇ ಬಾಯಿ ಮುಕ್ಕುಳಿಸುವ ನೀರಿನ ಸ್ಪರ್ಶದಿಂದಲೇ ಅಪವಿತ್ರವಾಗಿ ಹೋಗುವುದನ್ನು ಕಾಣುತ್ತೇವೆ - ಕೇಳುತ್ತೇವೆ. **ಆದುದರಿಂದ ಸರಿಯಾಗಿ ವಿಚಾರ ಮಾಡಿ ನೋಡಿದರೆ** ಶರೀರದ ಸ್ಪರ್ಶವಿಲ್ಲದೆ ಎಲ್ಲಿಯೂ ಯಾವುದೂ ಅಪವಿತ್ರತೆಯಿಲ್ಲವೆ ಇಲ್ಲ. ಇಂಥ ಅಪವಿತ್ರದ ಸ್ಥಾನವಾದ ಶರೀರವು ಜಲದ ಸ್ನಾನದಿಂದ ಹೇಗೆ ಶುದ್ಧವಾಗುವುದು? ಮತ್ತು ಈ ಶರೀರವು ಜಲದ ಸ್ನಾನ ಮೊದಲಾದವುಗಳಿಂದ ಶುದ್ಧವಾಗಿ ಹೋದರೆ ಪುನಃ ಯಾವನೋ ಓರ್ವನ ಸ್ನಾನದ ನೀರು ತಗಲುವುದರಿಂದ ಪುನಃ ಅಪವಿತ್ರವೆಂದೇ ಮನ್ನಿಸಲಾಗುವುದು.

ಗಂಗಾನದಿ, ಪುಷ್ಕರಿಣಿ ಮೊದಲಾದುವಲ್ಲಿ ಸಾವಿರಾರು ಬಾರಿ ಬಾಯಿ ಮುಕ್ಕಳಿಸಿ ಸ್ನಾನ ಮಾಡಿದರೂ ಪುನಃ ಬೇರೆ ವಸ್ತುವಿನ ಮೇಲೆ ಬಾಯ ನೀರು ಸಿಡಿದರೆ ಆ ವಸ್ತುವನ್ನು ಮಹಾ ಅಪವಿತ್ರವೆಂದೇ ಮನ್ನಿಸಲಾಗುವುದು ಜಲದಿಂದಂತೂ ಶರೀರದ ಮೇಲೆ ತಗಲಿದ ಕೊಳೆಯು ಸ್ವಚ್ಛವಾಗಿ ಹೋಗುವುದು ಮತ್ತು ವಸ್ತ್ರಗಳ ಮಲಿನತೆಯು

ತೊಳೆಯುವುದರಿಂದ ಸ್ವಚ್ಛವಾಗುವುದು; ಆದರೆ ಜಲವು ದೇಹವನ್ನು ಉಜ್ವಲ, ಪವಿತ್ರ ಮಾಡುವ ಸಾಧ್ಯತೆಯಿಲ್ಲ. ಹೇಗೆಂದರೆ ಇದ್ದಲಿಯನ್ನು ಎಷ್ಟೆಷ್ಟು ತೊಳೆಯುತ್ತದೆ ಅಷ್ಟಷ್ಟು ಮಹಾ ಅಪವಿತ್ರತೆಯೇ ಪ್ರಕಟವಾಗುತ್ತದೆ. ಆದ್ದರಿಂದ **ಸ್ನಾನ ಮಾಡುವುದರಿಂದ ಪವಿತ್ರವಾಗುತ್ತದೆಂದು ಮನ್ನಿಸುವುದಂತೂ ತೀವ್ರ ಮಿಥ್ಯಾತ್ವವಿದೆ.**

ಜಗತ್ತಿನಲ್ಲಿ ನೀರಿನಷ್ಟು ಅಪವಿತ್ರವು ಯಾವುದೂ ಇಲ್ಲ. ಅದರಲ್ಲಿ ನಿರಂತರ ಕಪ್ಪೆ, ಆಮೆ, ಮೀನು, ಸರ್ಪ, ಇಲಿ, ನೊಣ, ಸೊಳ್ಳೆ ಮೊದಲಾದ ಅನೇಕ ಜೀವಗಳು ಸಾಯುತ್ತವೆ. ಅದರಲ್ಲಿ ಚರ್ಮ, ಮೂಳೆ ಮೊದಲಾದುವೆಲ್ಲವೂ ಕರಗಿ ಹೋಗುತ್ತವೆ ಮತ್ತು ಅದರಲ್ಲಿ ಅನೇಕ ತ್ರಸ ಜೀವಗಳ ಘಾತವಾಗುತ್ತದೆ. ಇಂಥ ಮಹಾನಿಂದ್ಯ ಅಪವಿತ್ರ ಜಲದಿಂದ ಸ್ನಾನ ಮಾಡಿದರೆ ಪವಿತ್ರತೆಯು ಹೇಗಾಗುವುದು ? ಗಂಗಾ ನದಿಗಳಲ್ಲಿ ಕೋಟ್ಯಾಂತರ ಮನುಷ್ಯರ ಮಲ, ಮೂತ್ರ, ರಕ್ತ, ಮಾಂಸ, ಕೊಳೆ ಹಾಗೂ ಸತ್ತ ಮನುಷ್ಯ-ತಿರ್ಯಂಚಗಳ ಶವಗಳು ದ್ರವಿಸುತ್ತಿರುತ್ತವೆ. ಆ ಗಂಗೆಯ ಜಲವು ಹೇಗೆ ಪವಿತ್ರ ಮಾಡುವುದು ? **ಜಲದ ಸೂತಕವಂತೂ ಎಂದೂ ದೂರವಾಗುವುದೇ ಇಲ್ಲ.**

ಜಲದಿಂದಂತೂ ಶರೀರದ ಹೊರಗೆ ತಗಲಿದ ಕೊಳೆಯನ್ನು ತೊಳೆದು ದೂರ ಮಾಡಲಾಗುತ್ತದೆ, ಆದರೆ ಅದರಿಂದ ಮನಸ್ಸಿನ ಗ್ಲಾನಿಯು ಹೋಗುವುದಿಲ್ಲ. **ಜಲದಿಂದ ಪವಿತ್ರವಾಗುತ್ತದೆಂದು ಮನ್ನಿಸುವುದು ಮತ್ತು ಸ್ನಾನದಲ್ಲಿ ಧರ್ಮವಿದೆಯೆಂದು ಮನ್ನಿಸುವುದಂತೂ ಮಿಥ್ಯಾದರ್ಶನವಿದೆ.** ಗಂಗೆಯ ಜಲದಿಂದಲೇ ಪವಿತ್ರತೆಯಾಗಿ ಹೋದರೆ ಮತ್ತು ಸ್ನಾನ ಮಾಡುವುದರಿಂದಲೇ ಮುಕ್ತಿಯಾಗುವಂತಿದ್ದರೆ ಬೆಸ್ತರು ಪವಿತ್ರರಿದ್ದಾರೆಂದಾಯಿತು ಮತ್ತು ಅವರಿಗೂ ಮುಕ್ತಿಯಾಗಬೇಕು. ಉಳಿದ ದಾನ, ಪೂಜಾದಿಗಳೆಲ್ಲವೂ ನಿಷ್ಫಲವಾಗಿ ಹೋದವು. **ಮಿಥ್ಯಾತ್ವದ ಪ್ರಭಾವದಿಂದ ಎಲ್ಲ ಜನರು ವಿಪರೀತ ಶ್ರದ್ಧೆಯುಳ್ಳವರೇ ಆಗುತ್ತಲಿದ್ದಾರೆ.**

ಎಂಟು ಪ್ರಕಾರದ ಲೌಕಿಕ ಶುಚಿಯನ್ನು ಹೇಳಿದೆ ಅದಂತೂ ವ್ಯವಹಾರ ಆಚಾರ ಕುಲಾಚಾರವನ್ನೇ ಉಜ್ವಲ ಮಾಡುವಲ್ಲಿ ಸಮರ್ಥವಿದೆ. ಆದರೆ ಶರೀರವನ್ನು ಪವಿತ್ರ ಮಾಡುವ ಸಾಧ್ಯತೆಯಿಲ್ಲ. ಶ್ರೀ ರಾಜವಾರ್ತಿಕದ ಅಶುಚಿ ಭಾವನೆಯಲ್ಲಿ ಹೇಳಿರುವುದೇನೆಂದರೆ ಇವರಂತೂ ಮನಸ್ಸಿನಲ್ಲಿ ತಾವು ಸ್ವಯಂ ಗ್ಲಾನಿ ಮನ್ನಿಸಿಕೊಂಡಿದ್ದಾರೆ ಅದನ್ನು ನಾನಂತೂ ಸ್ನಾನ ಮಾಡಿ ಬಿಟ್ಟೆನೆಂಬ ಸಂಕಲ್ಪದಿಂದ ದೂರಮಾಡಿಕೊಳ್ಳುತ್ತಾರೆ.

## ಪವಿತ್ರತೆಯ ವರ್ಣನೆ

ಶುಚಿತನವು ಲೌಕಿಕ ಮತ್ತು ಲೋಕೋತ್ತರ ಅಥವಾ ಅಲೌಕಿಕವೆಂದು ಎರಡು ಪ್ರಕಾರವಿದೆ. ಕರ್ಮ-ಮಲವು ಕರ್ಮಕಲಂಕವು ದೂರವಾಗಿರುವಂಥ ಆತ್ಮನು ತನ್ನ ಸ್ವಭಾವದಲ್ಲಿ ಸ್ಥಿರವಿರುವುದು ಅದು ಲೋಕೋತ್ತರ ಶುಚಿತನವಿದೆ. ಆ ಲೋಕೋತ್ತರ ಶುಚಿತ್ವದ ಪ್ರಾಪ್ತಿಯ ಸಾಧನವು ಸಮ್ಯಗ್ದರ್ಶನಾದಿಗಳಿದ್ದು, ಸಮ್ಯಗ್ದರ್ಶನಾದಿಗಳ ಧಾರಕರು ಸಾಧುಗಳಿದ್ದಾರೆ. ಮತ್ತು ಅವರ ಆಧಾರವು ನಿರ್ವಾಣಭೂಮಿ ಮೊದಲಾದವುಗಳಿದ್ದು ಅವು ಕೂಡ ಸಮ್ಯಗ್ದರ್ಶನಾದಿಗಳ ಉಪಾಯಗಳಿವೆ. ಆದುದರಿಂದ ಅವು ಕೂಡ ಶುಚಿನಾಮದಿಂದ ಕರೆಸಿಕೊಳ್ಳಲು ಯೋಗ್ಯವಿವೆ.

ಲೌಕಿಕ ಶುಚಿತನವು ೧) ಕಾಲಶೌಚ, ೨) ಭಸ್ಮ ಶೌಚ, ೩) ಅಗ್ನಿ ಶೌಚ, ೪) ಮೃತ್ತಿಕಾ ಶೌಚ, ೫) ಗೋಮಯ ಶೌಚ, ೬) ಜಲಶೌಚ, ೭) ಪವನಶೌಚ, ೮) ಜ್ಞಾನಶೌಚವೆಂದು ಎಂಟು ಪ್ರಕಾರದ್ದಿದೆ. ಈ ಎಂಟು ಶೌಚ-ಶುದ್ಧಿಗಳು ಶರೀರವನ್ನು ಪವಿತ್ರ ಮಾಡುವಲ್ಲಿ ಸಮರ್ಥವಿಲ್ಲ. **ಲೌಕಿಕ ಜನರು ಈ ವ್ಯವಹಾರ ಶೌಚವನ್ನು ಬಿಟ್ಟುಕೊಡುವುದರಿಂದ ಮಹಾ ಅನರ್ಥವಾಗಿ ಹೋಗುವುದು.** ಹೀನ ಆಚರಣದ ಗ್ಲಾನಿಯು ಉಳಿಯಲಾರದು ಎಲ್ಲರೂ ಒಂದೇ ತೆರರಾಗಿ ಹೋಗುವರು, ಆಗ ಪರಮಾರ್ಥವೂ ನಷ್ಟವಾಗಿ ಹೋಗುವುದು. ಆದುದರಿಂದ ಜನರು ಅನಾದಿಕಾಲದಿಂದಲೇ ಬಾಹ್ಯ ಶುಚಿತೆಯನ್ನು ಸ್ವೀಕಾರ ಮಾಡಿ ಮನದ ಗ್ಲಾನಿಯನ್ನು ದೂರ ಮಾಡಿ ಬಿಡುತ್ತಾರೆ.

೧) ಜಗತ್ತಿನಲ್ಲಿ ಅದೆಷ್ಟೋ ವಸ್ತುಗಳನ್ನು ಸಮಯ ಕಳೆದುಹೋದ ನಂತರವೇ ಶುದ್ಧವೆಂದು ಮನ್ನಿಸುತ್ತಾರೆ. ಹೇಗೆಂದರೆ ರಜಸ್ವಲೆ ಸ್ತ್ರೀಯನ್ನು ಮೂರು ರಾತ್ರಿ ಕಳೆದ ನಂತರ ಶುದ್ಧಳೆಂದು ಮನ್ನಿಸುತ್ತಾರೆ, ಆದರೆ ಶರೀರವನ್ನಂತೂ ಯಾವ **ಕಾಲ**ದಲ್ಲೂ ಶುದ್ಧವೆಂದು ಮನ್ನಿಸುವುದಿಲ್ಲ. ೨) ಅದೆಷ್ಟೋ ಎಂಜಲ ಪಾತ್ರೆಗಳನ್ನು **ಬೂದಿ**ಯಿಂದ ತಿಕ್ಕುವುದರಿಂದ ಶುದ್ಧವೆಂದು ಮನ್ನಿಸುತ್ತಾರೆ, ಆದರೆ ಶರೀರವಂತೂ ಭಸ್ಮ ಬಳೆಯುವುದರಿಂದ ಶುದ್ಧವಾಗುವುದಿಲ್ಲ. ೩) ಶೂದ್ರರು ಉಪಯೋಗಿಸಿದ ಅದೆಷ್ಟೋ ಧಾತುವಿನ ಪಾತ್ರೆಗಳನ್ನು ಅಗ್ನಿಯಲ್ಲಿ ಹಾಕುವುದರಿಂದ ಶುದ್ಧವೆಂದು ಮನ್ನಿಸುತ್ತಾರೆ, ಆದರೆ ಶರೀರವಂತೂ **ಅಗ್ನಿ**ಯ ಸಂಸರ್ಗದಿಂದ ಕೂಡ ಶುದ್ಧವಾಗುವುದಿಲ್ಲ. ೪) ಮಲ-ಮೂತ್ರಾದಿಗಳ ಸ್ಪರ್ಶವನ್ನು ಮಣ್ಣಿನಿಂದ ತೊಳೆಯುವುದರಿಂದ ಶುದ್ಧವೆಂದು ಮನ್ನಿಸುತ್ತಾರೆ, ಆದರೆ ಶರೀರವಂತೂ **ಮಣ್ಣಿ**ನಿಂದ ತೊಳೆಯುವುದರಿಂದ ಶುದ್ಧವಾಗುವುದಿಲ್ಲ. ೫) ನೆಲವನ್ನು **ಗೋಮಯ**ದಿಂದ ಸಾರಿಸಿದರೆ ಶುದ್ಧವಾಗುತ್ತದೆಂದು ಮನ್ನಿಸುತ್ತಾರೆ, ಆದರೆ ಗೋಬರ ಬಳೆಯುವುದರಿಂದ ಶರೀರವು ಶುದ್ಧವಾಗುವುದಿಲ್ಲ. ೬) ಕೊಳೆ ಮೊದಲಾದವು ತಗಲಿದ ಮೇಲೆ ಮತ್ತು ಶೂದ್ರಾದಿಗಳ ಸ್ಪರ್ಶವಾದ ನಂತರ **ಜಲ**ದಿಂದ ತೊಳೆಯುವುದರಿಂದ ಹಾಗೂ ಸ್ನಾನ ಮಾಡುವುದರಿಂದ ಶುದ್ಧತೆಯನ್ನು ಮನ್ನಿಸುತ್ತಾರೆ, ಆದರೆ ಶರೀರವಂತೂ ಸ್ನಾನ ಮಾಡುವುದರಿಂದ ಶುದ್ಧವಾಗುವುದಿಲ್ಲ. ಸ್ನಾನಮಾಡಿದ ನಂತರವೂ ಚಂದನ, ಪುಷ್ಪ ಮೊದಲಾದ ಪವಿತ್ರ ವಸ್ತುಗಳೂ ಶರೀರದ ಸ್ಪರ್ಶ ಮಾತ್ರದಿಂದ ಮಲಿನವಾಗಿ ಹೋಗುತ್ತವೆ. ೭) ಅದೆಷ್ಟೋ ಭೂಮಿ, ಪಾಷಾಣ, ಬಾಗಿಲು ಮೊದಲಾದವು **ಹವೆ**ಯಿಂದ ಶುದ್ಧವಾಗುತ್ತವೆಂದು ಮನ್ನಿಸುತ್ತಾರೆ, ಆದರೆ ಶರೀರವಂತೂ ಹವೆ ತಗಲುವುದರಿಂದ ಶುದ್ಧವಾಗುವುದಿಲ್ಲ. ೮) ಅದೆಷ್ಟೋ ಪದಾರ್ಥಗಳನ್ನು ತಮ್ಮ ಜ್ಞಾನದಲ್ಲಿ ಅಶುದ್ಧವೆಂದು ಮನ್ನಿಸದಿರುವುದರಿಂದ **ಜ್ಞಾನ**ದಲ್ಲಿ ಶುದ್ಧವೆಂದು ಮನ್ನಿಸುತ್ತಾರೆ, ಆದರೆ ಶರೀರದಲ್ಲಂತೂ ಶುದ್ಧತೆಯ ಯಾವ ಸಂಕಲ್ಪವನ್ನೂ ಜ್ಞಾನದಲ್ಲಿ ಮಾಡುವ ಸಾಧ್ಯತೆಯಿಲ್ಲ.

ಆದುದರಿಂದ ಶರೀರವಂತೂ ಎಂಟೂ ಪ್ರಕಾರದ **ಲೌಕಿಕ ಶುಚಿಗಳಿಂದ ಶುದ್ಧವಾಗುವುದಿಲ್ಲ. ಲೌಕಿಕ ಶೌಚದಿಂದ ಪರಿಣಾಮಗಳ ಗ್ಲಾನಿಯು ಅಳಿಸಿ ಹೋಗುತ್ತದೆ. ವ್ಯವಹಾರದ ಉಜ್ವಲತೆಯನ್ನು ನೋಡಿ ಕುಲದ ಉಚ್ಚತೆಯು ಲಕ್ಷ್ಯದಲ್ಲಿ ಬಂದು ಬಿಡುತ್ತದೆ. ಆದರೆ ಅದು ಶರೀರವನ್ನು ಪವಿತ್ರ ಮಾಡುವ ಸಾಧ್ಯತೆಯಿಲ್ಲ.** ಶರೀರವಂತೂ ಎಲ್ಲ ಪ್ರಕಾರದಿಂದ ಅಪವಿತ್ರವೇ ಇದೆ. ಈ ಶರೀರದಲ್ಲಿದ್ದುಕೊಂಡು ಆತ್ಮನು **ಪರಧನ** ಮತ್ತು **ಪರಸ್ತ್ರೀ**ಯರ ಕುರಿತು ಇಚ್ಛಾ ರಹಿತ ಹಾಗೂ ಜೀವಮಾತ್ರದ ವಿರಾಧನೆಯಿಂದ ರಹಿತನಾದರೆ ಮೂಳೆ ಮಾಂಸದ ಈ ಮಲಿನ ಶರೀರವು ದೇವಗಳಿಂದ ಪೂಜ್ಯ ಮಹಾಪವಿತ್ರವಾಗಿ ಹೋಗುವುದು. ಈ ಶರೀರವನ್ನು ಪವಿತ್ರ ಮಾಡುವ ಬೇರೆ ಯಾವ ಕಾರಣವೇ ಇಲ್ಲ. ಈ ಕಥನವನ್ನು ವೀತರಾಗ ದಿಗಂಬರ ಮುನಿ ಶ್ರೀ ಪದ್ಮನಂದಿಗಳು ಮಾಡಿದ್ದಾರೆಂದು ತಿಳಿಯುವುದು.

ಅದರ ನಿಕಟತೆಯಿಂದ ಸುಗಂಧಿತ ಪುಷ್ಪಗಳ ಮಾಲೆ, ಚಂದನ ಮೊದಲಾದ ಪವಿತ್ರ ಪದಾರ್ಥಗಳೂ ಸ್ಪರ್ಶ ಮಾಡಬಾರದಂತಾಗಿ ಹೋಗುತ್ತವೆ. ಮಲ-ಮೂತ್ರಾದಿಗಳಿಂದ ತುಂಬಿ, ರಕ್ತ, ಮಾಂಸ, ಚರ್ಮ, ಮೂಳೆ ಮೊದಲಾದವುಗಳಿಂದಾದ ಮತ್ತು ಅತ್ಯಂತ ಮಲಿನ, ದುರ್ಗಂಧಯುಕ್ತ ಸಮಸ್ತ ಅಪವಿತ್ರತೆಗಳು ಒಟ್ಟಿಗೆ ಇರುವ ಸ್ಥಾನವಾದಂಥ ಈ ಮನುಷ್ಯನ ಶರೀರವು ನೀರಿನಿಂದ ಸ್ನಾನ ಮಾಡುವುದರಿಂದ ಹೇಗೆ ತಾನೆ ಶುದ್ಧವಾಗುವುದು ?

**ಆತ್ಮನಂತೂ ತನ್ನ ಸ್ವಭಾವದಿಂದಲೇ ಅತ್ಯಂತ ಪವಿತ್ರನಿದ್ದಾನೆ.** ಆತ್ಮನು ಅಮೂರ್ತಿಕನಿದ್ದಾನೆ. ಅವನವರೆಗೆ ಜಲವು ತಲುಪುವುದೇ ಇಲ್ಲ. ಇಂಥ ಪವಿತ್ರ ಆತ್ಮನ ಸ್ನಾನ ಮಾಡಿಸುವುದು ವ್ಯರ್ಥವಿದೆ. ಶರೀರವು ಅಪವಿತ್ರವೇ ಇದ್ದು ಅದು ಸ್ನಾನ ಮಾಡಿಸುವುದರಿಂದ ಎಂದೂ ಪವಿತ್ರವಾಗುವುದಿಲ್ಲ. ಆದುದರಿಂದ ಎರಡೂ ಪ್ರಕಾರದಿಂದ ಸ್ನಾನವು ವ್ಯರ್ಥವೆಂದು ಸಿದ್ಧವಾಯಿತು. ಆದಾಗ್ಯೂ ಯಾರು ಸ್ನಾನ ಮಾಡುತ್ತಾರೆ ಅವರ ಮೂಲಕ ಪೃಥ್ವೀ ಕಾಯ, ಜಲಕಾಯ ಮೊದಲಾದ ಮತ್ತು ಅನೇಕ ಪ್ರಕಾರದ ತ್ರಸಕಾಯ ಜೀವಗಳ ಘಾತವಾಗುವುದರಿಂದ ಈ ಸ್ನಾನವು ಪಾಪ ಬಂಧದ ಕಾರಣ ಮತ್ತು ರಾಗ-ಭಾವದ ವೃದ್ಧಿಯ ಹೇತುವೇ ಆಗುವುದು.

**ಗೃಹಸ್ಥರಿಗೆ ಸ್ನಾನ ಮಾಡಿದಲ್ಲದೆ ನಿರ್ವಾಹವಿಲ್ಲ.** ಆದರೆ ಅಜ್ಞಾನಿ ಗೃಹಸ್ಥರು ಸ್ನಾನ ಮಾಡುವುದರಿಂದ ಧರ್ಮವಾಗುವುದೆಂದು ಮನ್ನಿಸುತ್ತಾರೆ, ಪವಿತ್ರವಾಗುವುದೆಂದು ಮನ್ನಿಸುತ್ತಾರೆ. ಇಂಥ-ಮಿಥ್ಯಾಬುದ್ಧಿಯು ಅನಾದಿ ಕಾಲದಿಂದ ಆಗುತ್ತಲಿದೆ. ಈ ಸ್ನಾನದ ಸ್ವರೂಪವನ್ನು ತಿಳಿದುಕೊಂಡರೆ ಸ್ನಾನವನ್ನು ಧರ್ಮವೆಂದು ಮನ್ನಿಸಲಾರನು ಮತ್ತು ಸ್ನಾನದಿಂದ ಪವಿತ್ರತೆಯೆಂದು ಮನ್ನಿಸಲಾರನು. ಸ್ನಾನವಿಲ್ಲದೆ ಗೃಹಸ್ಥನ ಸಮಸ್ತ ವ್ಯವಹಾರ ಆಚಾರವು ದೂಷಿತವಾಗಿ ಹೋಗುವುದು ಮತ್ತು ವ್ಯವಹಾರವು ದೂಷಿತವಾಗಿ ಹೋಗುವುದು ಮತ್ತು ವ್ಯವಹಾರವು ದೂಷಿತವಾಗುವುದರಿಂದ ಪರಮಾರ್ಥ ಶುದ್ಧಿಯನ್ನು ಪ್ರಕಟ ಮಾಡುವ ಸಾಧ್ಯತೆಯಿರಲಾರದು. ಆದರೆ ಇದು ರಾಗವನ್ನು ವೃದ್ಧಿಸುವಂಥದ್ದಿದೆ. ಇದರಲ್ಲಿ ಹಿಂಸೆಯಾಗುವುದರಿಂದ ಪಾಪರೂಪವಿದೆಯೆಂಬ ಶ್ರದ್ಧೆಯನ್ನು ಮಾಡಬೇಕಾಗುವುದು.

ಕಳೆದ ಕೋಟ್ಯಂತರ ಭವಗಳಲ್ಲಿ ಕಟ್ಟಿರುವ ಕರ್ಮದ ಉದಯದಿಂದ ಮನಸ್ಸಿನಲ್ಲಿ ಉತ್ಪನ್ನವಾದ ಮಿಥ್ಯಾತ್ವಾದಿ ರೂಪದ ಮಲವನ್ನು ನಾಶಮಾಡುವಂಥ ಸ್ವ-ಪರದ ಭೇದ ತಿಳಿಯುವ ರೂಪದ ವಿವೇಕವೇ ಸತ್ಪುರುಷರಿಗೆ ಮುಖ್ಯರೂಪದಿಂದ ಸ್ನಾನವಿದೆ. **ಸತ್ಪುರುಷರಿಗಂತೂ ಮಿಥ್ಯಾತ್ವ ಮಲದ ನಾಶಮಾಡುವಂಥ ಒಂದು ವಿವೇಕವೇ ಸ್ನಾನವಿದೆ.** ಜಲದಿಂದ ಮಾಡುವ ಸ್ನಾನವಂತೂ ಜೀವಗಳ ಸಮೂಹದ ಘಾತ ಮಾಡುವಂಥದ್ದಿರುವುದರಿಂದ ಪಾಪಬಂಧ ಮಾಡಿಸುವಂಥದ್ದೇ ಇದೆ, ಅದರಿಂದ ಧರ್ಮವಾಗುವುದಿಲ್ಲ. ಇದೇ ಕಾರಣ ಸ್ವಭಾವದಿಂದಲೇ ಅಪವಿತ್ರವಿರುವ ಶರೀರದಲ್ಲಿ ಸ್ನಾನದಿಂದ ಪವಿತ್ರತೆಯಾಗುವುದಿಲ್ಲ.

ಅಯ್ಯಾ ತಿಳುವಳಿಕೆಯುಳ್ಳ ಸೋದರರೇ ! ಆತ್ಮನ ಶುದ್ಧತೆಯ ಪ್ರಯೋಜನದಿಂದ ಪರಮಾತ್ಮ ನಾಮದ ತೀರ್ಥದಲ್ಲಿ ನಿರಂತರ ಸ್ನಾನಮಾಡಿರಿ ! ವ್ಯರ್ಥ ಖೇದಮಾಡಿ ದುಃಖಿಯಾಗಿ ಗಂಗಾ ಮೊದಲಾದ ತೀರ್ಥಗಳ ಕಡೆಗೆ ಏಕೆ ಧಾವಿಸುತ್ತಿರುವಿರಿ ? ಪರಮಾತ್ಮನಾಮದ ತೀರ್ಥದಲ್ಲಿ ಸಮ್ಯಗ್ಜ್ಞಾನರೂಪದ ನಿರ್ಮಲ ಜಲವು ತುಂಬಿಕೊಂಡಿದೆ, ಅದರಲ್ಲಿ ಸಮ್ಯಗ್ದರ್ಶನ ರೂಪದ ದೈದೀಪ್ಯಮಾನವಾದ ಅಲೆಗಳಿವೆ, ಅವಿನಾಶೀ ಅನಂತ ಸುಖದಿಂದ ಶೀತಲವಿದೆ, ಮತ್ತು ಅದು ಸಮಸ್ತ ಪಾಪಗಳನ್ನು ತೊಳೆದು ನಷ್ಟಮಾಡಿಬಿಡುವಂಥದ್ದಿದೆ. ಇಂಥ ಪರಮಾತ್ಮಸ್ವರೂಪವಾದ ತೀರ್ಥದಲ್ಲಿ ಮುಳುಗು ಹಾಕಿ ನಿಮಗ್ನರಾಗಿ ಹೋಗಿರಿ !

**ಜಗತ್ತಿನ ಪಾಪೀ ಮಿಥ್ಯಾದೃಷ್ಟೀ ಜನರು ನಿಶ್ಚಯರೂಪದ ನಿರ್ಮಲ ತತ್ತ್ವಗಳ ಸರೋವರವನ್ನು ನೋಡಿಯೇ ಇಲ್ಲ, ಮತ್ತು ಎಂದೂ ಜ್ಞಾನರೂಪ ರತ್ನಾಕರ ಸಮುದ್ರವನ್ನೂ ನೋಡಿಲ್ಲ, ಸಮತೆಯ ನಾಮದ ಅತ್ಯಂತ ಶುದ್ಧ ನದಿಯನ್ನೂ ನೋಡಿಲ್ಲ,** ಇದೇ ಕಾರಣದಿಂದ ಪಾಪವನ್ನು ದೂರಮಾಡುವಂಥ ಸತ್ಯ ತೀರ್ಥಗಳನ್ನು ಬಿಟ್ಟುಕೊಟ್ಟು ಮೂರ್ಖಜನರು ಯಾವುವನ್ನು ತೀರ್ಥವೆಂದು ಹೇಳುತ್ತಾರೆ ಅವು ಸಂಸಾರದಿಂದ ಪಾರು ಮಾಡುವಂಥವುಗಳಿಲ್ಲದಂಥ ಗಂಗಾ ಮೊದಲಾದ ನದಿಗಳಲ್ಲಿ ಮುಳುಗೆದ್ದು ಅವರು ಹರ್ಷಿತರಾಗುತ್ತಾರೆ.

ಯಾವ ಮೂರ್ಖರು ತತ್ತ್ವಗಳ ನಿಶ್ಚಯರೂಪದ ಸರೋವರವನ್ನು ನೋಡಿಲ್ಲ, ಜ್ಞಾನರೂಪದ ಸಮುದ್ರವನ್ನು ನೋಡಿಲ್ಲ ಮತ್ತು ಸಮತೆಯರೂಪದ ನದಿಯನ್ನು ನೋಡಿಲ್ಲ ಅವರು ಗಂಗಾ ಮೊದಲಾದ ತೀರ್ಥಾಭಾಸಗಳಲ್ಲಿ ಸುತ್ತುತ್ತಾರೆ. ಅವರು ತತ್ತ್ವಗಳ ನಿಶ್ಚಯರೂಪದ ಸರೋವರವನ್ನು ನೋಡಿದರೆ, ಜ್ಞಾನರೂಪದ ಸಮುದ್ರವನ್ನು ನೋಡಿದರೆ ಮತ್ತು ಸಮತಾರೂಪದ ನದಿಯನ್ನು ನೋಡಿದರೆ ಅವುಗಳಲ್ಲಿ ಮುಳುಗಿಹಾಕಿ, ಮಿಥ್ಯಾತ್ವ ಹಾಗೂ ಕಷಾಯರೂಪದ ಮಲದಿಂದ ರಹಿತರಾಗಿ ತಮ್ಮನ್ನು ಉಜ್ವಲ-ಪವಿತ್ರ ಮಾಡಿಕೊಳ್ಳುತ್ತಾರೆ.

ಸಂಪೂರ್ಣ ಅಪವಿತ್ರವಾದ ಮನುಷ್ಯನ ಶರೀರವು ಪ್ರತ್ಯಕ್ಷ ಶುದ್ಧವಾಗಿ ಹೋಗುವಂಥ ಯಾವುದೇ ತೀರ್ಥವಾಗಲಿ ಮತ್ತು ಯಾವುದೇ ಪದಾರ್ಥವಾಗಲಿ ಈ ಲೋಕದಲ್ಲಿ ಇಲ್ಲ. ಈ ಶರೀರವು ಆಧಿ, ವ್ಯಾಧಿ, ಜರೆ, ಮರಣಗಳಿಂದ ನಿರಂತರ ವ್ಯಾಪ್ತವಿದೆ ಮತ್ತು ನಿರಂತರ ದುಃಖಿ ಮಾಡುವಂಥದ್ದಿದೆ. ಸತ್ಪುರುಷರು ಇದರ ಹೆಸರನ್ನೆತ್ತಲೂ ಯೋಗ್ಯವಿಲ್ಲ.

ಸಮಸ್ತ ತೀರ್ಥಗಳ ಜಲದಿಂದ ನಿತ್ಯಸ್ನಾನ ಮಾಡಿದರೂ ಮತ್ತು ಚಂದನ, ಕರ್ಪೂರಾದಿಗಳನ್ನು ಬಳೆದರೂ ಈ ಶರೀರವೂ ಶುದ್ಧವಾಗದು, ಸುಗಂಧಿತವಾಗದು. ರಕ್ಷಣೆ ಮಾಡುತ್ತಿದ್ದರೂ ಇದು ವಿನಾಶದ ಮಾರ್ಗದ ಮೇಲೆಯೇ ನಡೆದು

ಹೋಗುತ್ತದೆ. ನದಿಯ ಜಲದಲ್ಲಿ ಸ್ನಾನ ಮಾಡುವುದರಿಂದಲೇ ಶರೀರವು ಶುದ್ಧವಾಗಿ ಬಿಡುತ್ತಿದ್ದರೆ ಕೋಟ್ಯಂತರ ಮೀನು, ಮೊಸಳೆ, ಆಮೆ, ಬೆಸ್ತ ಮೊದಲಾದವರು ಶುದ್ಧರಾಗಿ ಹೋಗಬೇಕು. ಆದುದರಿಂದ ಈ ಲೋಕಮೂಢತೆಯು ತ್ಯಾಗ ಯೋಗ್ಯವೇ ಇದೆ.

## ಸ್ನಾನದ ಅವಶ್ಯಕತೆ

ಸ್ನಾನ ಮಾಡುವುದರಿಂದ ಶರೀರವು ಪವಿತ್ರವಾಗುವುದಿಲ್ಲ ಮತ್ತು ಧರ್ಮವೂ ಆಗುವುದಿಲ್ಲ. ಆದರೆ ಗೃಹಸ್ಥ ಮುನಿರಾಜರ ಹಾಗೆ ಸ್ನಾನದ ತ್ಯಾಗಮಾಡಿ ಬಿಡುವುದು ಉಚಿತವಿಲ್ಲ. ಪಾಪೀ ಮ್ಲೇಚ್ಛ ಮೊದಲಾದ ಜೀವರುಗಳ ಸ್ಪರ್ಶವಾಗಿ ಹೋದರೆ ಮತ್ತು ಸ್ನಾನ ಮಾಡದಿದ್ದರೆ ತಮ್ಮ ಮನಸ್ಸಿನಲ್ಲಿ ಪಾಪದ ಕುರಿತು ಗ್ಲಾನಿ ಉಳಿಯಲಾರದು ಮತ್ತು ಅವರ ಸಂಗತಿ, ಸ್ಪರ್ಶ, ಸಹಭೋಜನ ಬೇಕಾದಂತೆ ಮಾಡತೊಡಗಿದರೆ ವ್ಯವಹಾರ ಧರ್ಮದ ಲೋಪವಾಗಿ ಹೋಗುವುದು. ಆದುದರಿಂದ **ಜೈನರ ಆಚರಣೆಯು ಅದು ವ್ಯವಹಾರದ ವಿರೋಧಿಯಿಲ್ಲ.** ಅತ್ಯಂತ ಪಾಪದಿಂದ ಆಜೀವಿಕೆ ಮಾಡುವಂಥ ಚಾಂಡಾಲ,ಕಟುಕ, ಚರ್ಮಕಾರ, ಬೇಟೆಕಾರ, ಭಿಲ್ಲ, ಧೀವರ ಮೊದಲಾದವರು ಅತ್ಯಂತ ಪಾಪಿಷ್ಟ ಮತ್ತು ಮ್ಲೇಚ್ಛ ಮುಸಲ್ಮಾನರ ಛಾಯೆ ತಮ್ಮ ಶರೀರದ ಮೇಲೆ ಬೀಳುವುದರಿಂದ ಅತ್ಯಂತ ಮಲಿನತೆ ಮನ್ನಿಸುತ್ತಾರೆಂದರೆ ಇವರ ಸ್ಪರ್ಶವಾಗುವುದರಿಂದ ಸ್ನಾನ ಹೇಗೆ ಮಾಡಬಾರದು ? ಸ್ನಾನವನ್ನಂತೂ ಮಾಡಲೇಬೇಕು ಜತೆಗೆ ಪರಮಾತ್ಮನ ಸ್ಮರಣೆಯನ್ನೂ ಮಾಡುತ್ತಾರೆ.

ಅವರ ಹತ್ತಿರ ಕುಳಿತುಕೊಳ್ಳುವುದರಿಂದ ಬುದ್ಧಿಯು ಮಲಿನವಾಗಿ ಹೋಗುತ್ತದೆ. ಮುಸಲ್ಮಾನ ಮೊದಲಾದವರು ವೇಶ್ಯೆಯರಿಗೆ ಕಿವಿಗೊಟ್ಟು ಮುಖದ ಎದುರಿಗೆ ಮೊಗವಿಟ್ಟು ಮಾತನಾಡುತ್ತಾರೆ. ಅವರ ಬುದ್ಧಿಯು ಉತ್ತಮ ಧರ್ಮ ಕಾರ್ಯಗಳಿಂದ ವಿಮುಖವಾಗಿ ವಿರುದ್ಧವಾಗಿಯೇ ನಡೆಯುತ್ತದೆ. **ಜೀವ ಘಾತಕ ನಾಯಿ, ಬೆಕ್ಕು ಮೊದಲಾದ ಪಶು, ಕಾಗೆ ಮೊದಲಾದ ಪಕ್ಷಿ, ದುಷ್ಟ ತಿರ್ಯಂಚಗಳು ಭೋಜನದ ಸ್ಥಾನದಲ್ಲಿ ಬಂದರೆ ಅಥವಾ ಭೋಜನವನ್ನು ಸ್ಪರ್ಶಮಾಡಿದರೆ ಆ ಭೋಜನವನ್ನು ತ್ಯಾಗಮಾಡುವುದೇ ಉಚಿತವಿದೆ. ಅವುಗಳ ಸ್ಪರ್ಶವಾದ ಮೇಲೆ ಸ್ನಾನಮಾಡದೆ ಭೋಜನ, ಸ್ವಾಧ್ಯಾಯಾದಿಗಳನ್ನು ಮಾಡುವಲ್ಲಿ ಹೀನಾಚಾರತೆಯಾಗುತ್ತದೆ. ಪಾಪದಿಂದ ಭಯವಿರುವುದಿಲ್ಲ, ಕುಲದ ಭೇದವುಳಿಯುವುದಿಲ್ಲ.** ಸ್ತ್ರೀಯ ಸಂಗದಲ್ಲಿ ಅನೇಕ ಜೀವಗಳ ಹಿಂಸೆ, ಅಪವಿತ್ರ ಅಂಗಗಳ ಮಿಲನ, ರಕ್ತ-ವೀರ್ಯಾದಿಗಳ ಸ್ಪರ್ಶ ಮತ್ತು ಮಹಾನಿಂದ್ಯ ರಾಗದ ಉತ್ಪತ್ತಿಯಾಗುತ್ತದೆ. ಇದರ ತ್ಯಾಗವು ಸಂಭವಿಸದ್ದಿರೆ ಪಾಪದ ಗ್ಲಾನಿ ಮಾಡಿ ತಮ್ಮನ್ನು ಅಶುದ್ಧವೆಂದು ಮನ್ನಿಸಿ ಸ್ನಾನಮಾಡಬೇಕು. ಏಕೆಂದರೆ ನಿಂದ್ಯ ಕಾರ್ಯ ಮಾಡಿದ ನಂತರ ಬಾಹ್ಯಶುದ್ಧಿಯ ಸಲುವಾಗಿ ಸ್ನಾನವಿದೆ. ಸ್ನಾನಮಾಡಿದಲ್ಲದೆ ಪುಸ್ತಕ, ಜಿನಮಂದಿರದ ಉಪಕರಣ ಮೊದಲಾದ ಉತ್ತಮ ವಸ್ತುಗಳ ಸ್ಪರ್ಶ ಹೇಗೆ ಮಾಡುವುದು ?

ಶರೀರದಲ್ಲಿ ರಕ್ತ, ಮಾಂಸ, ಮೂಳೆ, ಚರ್ಮ, ಮಲ, ಮೂತ್ರಗಳು ತುಂಬಿಕೊಂಡಿದ್ದರೂ ರಕ್ತ, ಕೀವು, ಚರ್ಮ, ಮೂಳೆ, ಮಾಂಸ, ಮಲ, ಮೂತ್ರಾದಿಗಳ ಸ್ಪರ್ಶವು ಬಾಹ್ಯದಲ್ಲಿ ಆದರೆ ಅವಶ್ಯವಾಗಿ ತೊಳೆದು ಹಾಕುವುದೇ ಉಚಿತವಿದೆ. ಏಕೆಂದರೆ ಕೇಶ, ಚರ್ಮ ಮೊದಲಾದವು ಶರೀರದಿಂದ ಬೇರೆಯಾದ ನಂತರ ಸ್ಪರ್ಶಮಾಡಲು ಯೋಗ್ಯವಿಲ್ಲ, ಕೈ ಮೊದಲಾದವುಗಳಿಂದ ಅವುಗಳ ಸ್ಪರ್ಶವಾದ ಮೇಲೆ ಶೀಘ್ರವೇ ಕೈ ತೊಳೆದುಕೊಳ್ಳುವುದು ಉಚಿತವಿದೆ. ಅವುಗಳ ಗ್ಲಾನಿ ಮಾಡದಿದ್ದರೆ ನೀಚ, ಚರ್ಮಕಾರ, ಚಾಂಡಾಲ, ಕಟುಕ ಮೊದಲಾದವರೊಡನೆ ಏಕತೆಯಾಗುವುದರಿಂದ ಆಚರಣದಲ್ಲಿ ಭೇದ ಉಳಿಯಲಾರದು. ಆಗ ಸಮಸ್ತ ಜಾತೀ ಸಂಬಂಧದ ವ್ಯವಹಾರದ ಲೋಪವಾಗುವುದರಿಂದ ಉತ್ತಮ ಕುಲದ ಹಾಗೂ ನೀಚ ಕುಲದ ಆಚಾರವು ಸಮಾನವಾಗಿ ಹೋಗುವುದು ಮತ್ತು ವ್ಯವಹಾರ ಆಚಾರವು ಕೆಟ್ಟು ಹೋಗುವುದರಿಂದ ಮಹಾಪಾಪದ ಬಂಧವಾಗುತ್ತದೆ.

**ಪರಮಾರ್ಥ ಶೌಚವಂತೂ ವ್ಯವಹಾರ ಶೌಚದಿಂದಲೇ ಆಗುತ್ತದೆ,** ಯಾವನ ಭೋಜನದಲ್ಲಿ, ನೀರಿನಲ್ಲಿ, ಸ್ಪರ್ಶದಲ್ಲಿ, ಪ್ರವೃತ್ತಿಯಲ್ಲಿ ಮಲಿನತೆಯಾಗುತ್ತದೆ ಅವನದು ಪರಮಾರ್ಥ ಧರ್ಮದಲ್ಲೂ ಮಲಿನತೆಯಾಗುತ್ತದೆ. ಜಿನ ಧರ್ಮಿಯರಂತೂ ಚಾಂಡಾಲ, ಭಿಲ್ಲ, ಮ್ಲೇಚ್ಛ, ಮುಸಲ್ಮಾನರುಗಳ ಶರೀರದ ಛಾಯೆ ಬೀಳುವುದರಿಂದಲೂ ಮಲಿನತೆ ಮನ್ನಿಸುತ್ತಾರೆ. ಅಗಸ, ಕಲಾಲ, ಕಮ್ಮಾರ, ಅಕ್ಕಸಾಲಿಗ ಮೊದಲಾದವರು ಹಿಂಸೆಯ ಕಾರ್ಯ ಮಾಡುವಂಥವರಿರುವುದರಿಂದ ಅವರ ಸ್ಪರ್ಶವನ್ನು ದೂರದಿಂದಲೇ ಬಿಟ್ಟು ಕೊಡಬೇಕಾಗುವುದು.

ಮುನಿರಾಜರಂತೂ ನೀಚಜಾತಿಯ ಮನುಷ್ಯರ ಸ್ಪರ್ಶವಾದ ಮೇಲೆ ದಂಡ ಸ್ನಾನ ಮಾಡುತ್ತಾರೆ.ಅಂದು ಉಪವಾಸ ಮಾಡುತ್ತಾರೆ. ಅರಿವಿಲ್ಲದೆಯೇ ನೀಚ ಕುಲದವರ ಮನೆಯಲ್ಲಿ ಪ್ರವೇಶವಾಗಿ ಹೋದರೆ ಭೋಜನದ ಅಂತರಾಯ ಮನ್ನಿಸುತ್ತಾರೆ. ಮದ್ಯ, ಮಾಂಸ ಶರೀರದಿಂದ ನಾಲ್ಕು ಅಂಗುಲ ದೂರದಲ್ಲಿ ರಕ್ತ, ಕೀವು, ಪಂಚೇಂದ್ರಿಯ ಜೀವದ ಮೃತಕ ಕಳೇವರವು ಭೋಜನ ಮಾಡುವ ಸಮಯದಲ್ಲಿ ದೃಷ್ಟಿಗೋಚರವಾದರೆ ಅಂತರಾಯ ಮನ್ನಿಸುತ್ತಾರೆ. ಎಂದ ಮೇಲೆ ಜಿನಧರ್ಮಿಯಾದ ಗೃಹಸ್ಥನು ಮೂಳೆ, ಚರ್ಮ, ಕೇಶ, ಉಣ್ಣೆಗಳ ಸ್ಪರ್ಶವಾದ ಮೇಲೆ ಭೋಜನ ಹೇಗೆ ಬಿಡುವುದಿಲ್ಲ ? ಆದುದರಿಂದ ಗೃಹಸ್ಥನಂತೂ ಕೈ-ಕಾಲು ತೊಳೆದುಕೊಂಡು ಶುದ್ಧ ಸ್ಥಾನದಲ್ಲಿ ಶುದ್ಧ ಭೋಜನ ಮಾಡುತ್ತಾನೆ. ನೀಚ, ಅಧಮ ಜಾತಿಯವರು ಮುಟ್ಟಿದ ಭೋಜನ ಮಾಡುವುದಿಲ್ಲ.

**ಜಿನೇಂದ್ರರ ಪೂಜೆ ಮಾಡುವ ಸಲುವಾಗಿ ಸ್ನಾನ ಮಾಡುವುದು ಉಚಿತವೇ ಇದೆ; ಏಕೆಂದರೆ ಸ್ನಾನ ಮಾಡಿ ದೇವರ ಪೂಜೆ-ಸ್ಪರ್ಶ ಮಾಡುವುದು ಮಹಾ ವಿನಯವಿದೆ. ಸ್ನಾನದಿಂದ ಶುದ್ಧತೆಯಾಗದಿದ್ದರೂ ದೇವರ ಉಪಕರಣಗಳನ್ನು ಸ್ನಾನ ಮಾಡಿಯೇ ಸ್ಪರ್ಶ ಮಾಡಬೇಕಾಗುವುದು, ತೊಳೆದ ದ್ರವ್ಯವನ್ನೇ ಏರಿಸಬೇಕಾಗುವುದು. ಅದು ದೇವ ವಿನಯವೇ ಇದೆ.** ವಿನಯವೇ ಆರಾಧನೆಯಿದೆ. ಜಿನೇಂದ್ರರ ಮಂದಿರದ ಉಪಕರಣಗಳದ್ದೂ ವಿನಯ ಮಾಡುತ್ತದೆಯೆಂದರೆ ಜಿನೇಂದ್ರರ ಆಗಮವನ್ನು, ವಾಣಿಯನ್ನು ಪೂಜೆಯ ದ್ರವ್ಯಗಳನ್ನು ಕೂಡ ಸ್ನಾನ ಮಾಡಿ ಮುಟ್ಟುವುದು, ಕೈ ತೊಳೆದುಕೊಂಡು ಸ್ಪರ್ಶ ಮಾಡುವುದು, ಮಂದಿರದಲ್ಲಿ ಕೈ-ಕಾಲು ತೊಳೆದುಕೊಂಡು ಪ್ರವೇಶ ಮಾಡುವುದು ಅದು ಕೂಡ ವಿನಯವೇ ಇದೆ.ಪಾಪ ಮಲದ ಶುದ್ಧತೆ ಮಾಡುವದು ಮುಖ್ಯವಿದ್ದರೂ ಜಿನೇಂದ್ರ ಭಗವಂತರ ಆಗಮದಲ್ಲಿ ಎಂಟು ಪ್ರಕಾರದ ಲೌಕಿಕ ಶುದ್ಧತೆ ಹೇಳಿದೆ. **ಲೌಕಿಕ ಶೌಚವಿಲ್ಲದೆ ಪರಮಾರ್ಥ ಧರ್ಮದಿಂದ ಭ್ರಷ್ಟವಾಗಿ ಹೋಗುತ್ತದೆ.**

ಮುನಿರಾಜರ ಶರೀರವಂತೂ ರತ್ನತ್ರಯದ ಪ್ರಭಾವದಿಂದ ಮಹಾಪವಿತ್ರವಿದ್ದರೂ ಬಾಹ್ಯಶುದ್ಧಿಯ ಸಲುವಾಗಿ ಕಮಂಡಲು ಇಡುತ್ತಾರೆ. ಕೈ-ಕಾಲು ತೊಳೆದುಕೊಂಡು ಸ್ವಾಧ್ಯಾಯ ಮೂಡುತ್ತಾರೆ. ಸ್ವಲ್ಪ ಬಿಸಿನೀರಿನಿಂದ ಕಾಲು ತೊಳೆಸಿಕೊಂಡು ಭೋಜನ ಮಾಡುತ್ತಾರೆ. ವ್ಯವಹಾರ ಆಚರಣೆಯನ್ನು ಬಿಡುವುದಿಲ್ಲ. **ಭಗವಾನ ಜಿನೇಂದ್ರರ ಧರ್ಮವು ಅನೇಕಾಂತ ರೂಪವಿದೆ. ನಿಶ್ಚಯ-ವ್ಯವಹಾರದ ವಿರೋಧದಿಂದ ರಹಿತವಾಗಿಯೇ ಧರ್ಮವಿದೆ. ಜಿನೇಂದ್ರರ ಧರ್ಮವು ಸರ್ವಥಾ ಏಕಾಂತರೂಪವಾಗಿಲ್ಲ.**

ಲೌಕಿಕ ಶುದ್ಧಿಯಿಂದ ರಹಿತನಿದ್ದವನು ಧರ್ಮದ ನಿಂದೆ, ಕುಲದ ನಿಂದೆಯನ್ನೇ ಮಾಡಿಸುವನು, ಆಗ ತನ್ನ ಆತ್ಮನು ಮಲಿನನಾಗಿಯೇ ಉಳಿಯುವನು. ಮೈಥುನ ಸೇವನೆ ಮಾಡಿದ್ದರೆ, ಶವಸಂಸ್ಕಾರ ಮಾಡಿ ಬಂದಿದ್ದರೆ, ಕ್ಷೌರಕರ್ಮ ಮಾಡಿಸಿಕೊಂಡು ಬಂದಿದ್ದರೆ, ಚಾಂಡಾಲ - ಮ್ಲೇಚ್ಛಾದಿಗಳ ಸ್ಪರ್ಶವಾಗಿದ್ದರೆ, ಪಂಚೇಂದ್ರಿಯ ಮೃತಕದ ಸ್ಪರ್ಶವಾಗಿದ್ದರೆ, ರಜಸ್ವಲೆ ಮೊದಲಾದ ಅಶುಚಿಯ ಸ್ಪರ್ಶವಾಗಿದ್ದರೆ ಇತ್ಯಾದಿ ಇನ್ನೂ ಅನೇಕ ಕಾರಣಗಳಿದ್ದರೆ ಆಗ ಅವಶ್ಯವಾಗಿಯೇ ಸ್ನಾನ ಮಾಡಬೇಕಾಗುವುದು. ಅನ್ಯ ಕಾರಣಗಳಲ್ಲಿ ಎಂದರೆ ಮಲ-ಮೂತ್ರ, ಮೂಳೆ, ಚರ್ಮಾದಿಗಳ ಸ್ಪರ್ಶವು ಯಾವ ಅಂಗದಿಂದ ಆಗಿರುವುದು ಅದನ್ನು ಶೀಘ್ರವೇ ತೊಳೆದುಕೊಳ್ಳುವುದು ಉಚಿತವಿದೆ.

ಲೋಕದಲ್ಲಿ ಎಂಟು ಪ್ರಕಾರದ ಶುದ್ಧಿಗಳು ಅನಾದಿಯಿಂದ ನಡೆಯುತ್ತ ಬರುತ್ತಿವೆ. **ಆದುದರಿಂದ ಆಗಮದ ಆಜ್ಞೆಯನ್ನು ಮನ್ನಿಸುವುದರಲ್ಲಿಯೇ ಹಿತವಿದೆ.** ಜಗತ್ತಿನಲ್ಲಿ ಕಿವಿಯ ಕೊಳೆಯಿಂದ ಕಣ್ಣಿನ ಕೊಳೆಯನ್ನು, ಕಣ್ಣಿನ ಕೊಳೆಯಿಂದ ಮೂಗಿನ ಕೊಳೆಯನ್ನು, ಮೂಗಿನ ಕೊಳೆಯಿಂದ ಕಫ ಮೊದಲಾದ ಬಾಯಿಯ ಕೊಳೆಯನ್ನು ಅದಕ್ಕಿಂತ ಮೂತ್ರವನ್ನು ಅದಕ್ಕಿಂತ ಮಲವನ್ನು ಹೆಚ್ಚು-ಹೆಚ್ಚಾಗಿ ಅಪವಿತ್ರವೆಂದು ಮನ್ನಿಸುವುದನ್ನು ಸ್ಪಷ್ಟ ಕಾಣುತ್ತೇವೆ. ಒಂದು ವೇಳೆ ಎಲ್ಲ ಪ್ರಕಾರದ ಕೊಳೆಯನ್ನು ಸಮಾನವಾಗಿ ಮನ್ನಿಸಹೋದರೆ ಸಮಸ್ತ ಆಚಾರವು ಉಪದ್ರವವಾಗುವುದು, ವಿಪರೀತವಾಗಿ ಹೋಗುವುದು. ದ್ರವ್ಯಾರ್ಥಿಕನಯದಿಂದ ಸಮಸ್ತಕೊಳೆಯು ಒಂದು ಪುದ್ಗಲ ಜಾತಿಯದಿದ್ದರೂ ಅವುಗಳಲ್ಲಿ ಪರಸ್ಪರ ಹೆಚ್ಚು ಭೇದವಿದೆ. ಮೂಳೆ, ಮಾಂಸ, ರಕ್ತ, ಮಲ, ಮೂತ್ರಾದಿಗಳೆಲ್ಲವೂ ಮಣ್ಣಿನರೂಪ ಜಲರೂಪವಾಗಿ ಹೋಗುತ್ತವೆ, ಮತ್ತು ಮಣ್ಣು ಜಲಾದಿಗಳೂ ಮಾಂಸ, ರಕ್ತ, ಮಲಾದಿಗಳ ರೂಪವಾಗುತ್ತಿದ್ದರೂ ಪರ್ಯಾಯ-ಪರ್ಯಾಯಗಳಲ್ಲಿ ಬಹಳಷ್ಟು

**ಅಂತರವಿದೆ. ದ್ರವ್ಯ ಮತ್ತು ಪರ್ಯಾಯದ ಸರ್ವಥಾ ಏಕತೆ ಮನ್ನಿಸುವುದರಿಂದ ಸಮಸ್ತ ವ್ಯವಹಾರ ಪರಮಾರ್ಥದ ಲೋಪವಾಗಿ ಹೋಗುವುದು. ಆದುದರಿಂದ ದ್ರವ್ಯ-ಪರ್ಯಾಯದ ಕಥಾಚಿತ್ ಏಕತೆ ಕಥಂಚಿತ್ ಅನೇಕತೆಯನ್ನು ಮನ್ನಿಸುವುದೇ ಶ್ರೇಷ್ಠವಿದೆ.**

ಮಳಲಿನ ಪಿಂಡ ಮಾಡುವಲ್ಲಿ, ಪರ್ವತದಿಂದ ಉರುಳುವಲ್ಲಿ, ಅಗ್ನಿಯೊಳಗೆ ಸುಡುವಲ್ಲಿ, ಶೀತದೊಳಗೆ ಕರಗುವಲ್ಲಿ, ಪಂಚಾಗ್ನಿತಪ ತಪಿಸುವಲ್ಲಿ ಧರ್ಮ ಮನ್ನಿಸುವುದು ಲೋಕಮೂಢತೆಯಿದೆ. ಸೂರ್ಯ-ಚಂದ್ರ ಗ್ರಹಣದಲ್ಲಿ ಸೂತಕ ಮನ್ನಿಸುವುದು, ಸ್ನಾನ ಮಾಡುವುದು, ಚಾಂಡಾಲಾದಿಗಳಿಗೆ ದಾನಕೊಡುವುದು, ಸಂಕ್ರಾಂತಿ ಮನ್ನಿಸಿ ದಾನ ಕೊಡುವುದು, ಬಾವಿಯ ಪೂಜೆ, ವೃಕ್ಷದ ಪೂಜೆ, ಗೋವು ಪೂಜೆ, ನಾಣ್ಯಗಳ ಪೂಜೆ, ಲಕ್ಷ್ಮಿಯ ಪೂಜೆ, ಮಾತೃಪಿತೃಗಳ ಪೂಜೆ, ಮೃತರಿಗೆ ಪೂಜೆ, ಮೃತರಿಗೆ ತೃಪ್ತಿ ಮಾಡುವ ಸಲುವಾಗಿ ತರ್ಪಣ ಮಾಡುವುದು, ಶ್ರಾದ್ಧ ಮಾಡುವುದು, ದೇವತೆಗಳ ಸಲುವಾಗಿ ಜಾಗರಣೆ ಮಾಡುವುದು, ಗಂಗಾಜಲವನ್ನು ಪವಿತ್ರವೆಂದು ಮನ್ನಿಸುವುದು, ತಿರ್ಯಂಚಗಳ ರೂಪವನ್ನು ದೇವವೆಂದು ಮನ್ನಿಸುವುದು, ಕೆರೆ, ಬಾವಿ ಮೊದಲಾದುವನ್ನು ಅಗೆಸುವುದರಲ್ಲಿ ಧರ್ಮಮನ್ನಿಸುವುದು, ಉಪವನ ಮಾಡುವುದರಲ್ಲಿ ಧರ್ಮಮನ್ನಿಸುವುದು, ಮೃತ್ಯುಂಜಯ ಮೊದಲಾದ ಜಪ ಮಾಡಿಸುವುದರಿಂದ ತಮ್ಮ ಮೃತ್ಯುವಿನ ನಿವಾರಣೆ ಮನ್ನಿಸುವುದು, ಮನೆಗಳ ದಾನ ಕೊಡುವುದರಿಂದ ತಮ್ಮ ದುಃಖ ದೂರವಾಗುವುದೆಂದು ಮನ್ನಿಸುವುದೆಲ್ಲವೂ ಲೋಕಮೂಢತೆಯಿದೆ.

ಹೆಚ್ಚೇನು ಹೇಳುವುದು ! ಯೋಗ್ಯ-ಅಯೋಗ್ಯ, ಸತ್ಯ-ಅಸತ್ಯ, ಹಿತ-ಅಹಿತ, ಆರಾಧ್ಯ-ಅನಾರಾಧ್ಯದ ವಿಚಾರದಿಂದ ರಹಿತರಾಗಿ ಲೌಕಿಕ ಜೀವರುಗಳ ಪ್ರವೃತ್ತಿ ನೋಡಿ ಯಾವ ಪ್ರಕಾರ ಅಜ್ಞಾನೀ ಅನಾದಿ ಮಿಥ್ಯಾದೃಷ್ಟಿಗಳು ಪ್ರವರ್ತಿಸುತ್ತಾರೆ ಅದೇ ಪ್ರಕಾರದ ಪ್ರವತ್ತಿಯನ್ನು ಸತ್ಯವೆಂದು ಮನ್ನಿಸಿ ವಿಚಾರದಿಂದ ರಹಿತರಾಗಿ ಪ್ರವರ್ತನೆ ಮಾಡುವುದೇ ಲೋಕ ಮೂಢತೆಯಿದೆ.

ಅದೆಷ್ಟೋ ಜನರು ಜಿನಧರ್ಮಿಗಳೆಂದು ಕರೆಸಿಕೊಳ್ಳುತ್ತಿದ್ದರೂ ಆತ್ಮಜ್ಞಾನದಿಂದ ರಹಿತರಾಗಿ ಪರಮಾಗಮದ ಆಜ್ಞೆಯನ್ನು ತಿಳಿದುಕೊಳ್ಳದೆ ವೇಷಧಾರಿಗಳಿಂದ ಕಲ್ಪಿತ ಅನೇಕ ಕ್ರಿಯಾಕಾಂಡ ಹಾಗೂ ತೀರ್ಥಂಕರಾದಿಗಳ ತರ್ಪಣ ಮಾಡಿಸುವುದು ತಮ್ಮ ತಂದೆ ಮತ್ತು ತಾತರ ತರ್ಪಣ ಮಾಡಿಸುವುದು, ಯಕ್ಷ ಮೊದಲಾದವರ ಸಲುವಾಗಿ ಹೋಮ, ಯಜ್ಞಾದಿಗಳನ್ನು ಮಾಡುವಲ್ಲಿ ತಮ್ಮ ಕಲ್ಯಾಣವಾಗುವುದೆಂದು ಮನ್ನಿಸುತ್ತಾರೆ. ಸಕಲೀಕರಣವಿಧಾನ ಮಾಡಿಸುವುದೆಲ್ಲವೂ ಲೋಕಮೂಢತೆಯೇ ಇದೆ.

ಕೆಲವರು ಸ್ನಾನ ಮಾಡಿ ಅಡಿಗೆ ಮಾಡುವಲ್ಲಿ, ಸ್ನಾನ ಮಾಡಿ ಊಟ ಮಾಡುವಲ್ಲಿ, ಒದ್ದೆ ಬಟ್ಟೆಯುಟ್ಟುಕೊಂಡು ಊಟ ಮಾಡುವಲ್ಲಿ ತಮ್ಮ ಪವಿತ್ರತೆಯಿದೆ, ಶುದ್ಧತೆಯಿದೆ, ಪರಮಧರ್ಮವೆಂದೇ ಮನ್ನಿಸುತ್ತಾರೆ. ಆದರೆ ಅಭಕ್ಷ್ಯ ಭಕ್ಷಣ ಮತ್ತು ಹಿಂಸೆ ಮೊದಲಾದವುಗಳಾಗುವ ವಿಚಾರವನ್ನೇ ಮಾಡುವುದಿಲ್ಲ; **ಇದೆಲ್ಲವೂ ಮಿಥ್ಯಾತ್ವದ ಉದಯದಿಂದ ಲೋಕ ಮೂಢತೆಯೇ ಇದೆ.**

ಈಗ ದೇವ ಮೂಢತೆಯ ಲಕ್ಷಣ ಹೇಳುವಂಥ ಸೂತ್ರ ಹೇಳುತ್ತಾರೆ, -

**ವರೋಪಲಿಪ್ಸಯಾಶಾವಾನ್ ರಾಗದ್ವೇಷಮಲೀಮಸಾ ।**
**ದೇವತಾಯದುಪಾಸೀತ ದೇವತಾಮೂಢಮುಚ್ಯತೇ ॥೨೩॥**

**ಅರ್ಥ :-** ಯಾವುದು ತಮಗೆ ಒಳ್ಳೆಯದೆನಿಸುತ್ತದೆ ಅದನ್ನು ವರವೆಂದು ಹೇಳುತ್ತಾರೆ. ವರದ ಇಚ್ಛೆಮಾಡಿ ಆಸೆಯುಳ್ಳವನಾಗಿ ಯಾವನು ರಾಗ-ದ್ವೇಷಗಳಿಂದ ಮಲಿನವಿರುವ ದೇವತೆಗಳ ಸೇವನೆ ಮಾಡುತ್ತಾನೆ, ಪೂಜೆ ಮಾಡುತ್ತಾನೆ ಅವನನ್ನು ದೇವತಾಮೂಢನೆಂದು ಹೇಳುತ್ತಾರೆ. ಮತ್ತು ಅವನ ಕಾರ್ಯವು ದೇವಮೂಢತೆಯೆನಿಸಿಕೊಳ್ಳುತ್ತದೆ.

ಸಂಸಾರೀ ಜೀವನು ಈ ಲೋಕದಲ್ಲಿ ರಾಜ್ಯ ಸಂಪತ್ತು -ಸ್ತ್ರೀ, ಪುತ್ರ, ಆಭೂಷಣ, ವಸ್ತ್ರವಾಹನ, ಧನ, ಐಶ್ವರ್ಯ ಮೊದಲಾದವುಗಳ ಇಚ್ಛೆಯೊಡನೆ ನಿರಂತರವಿರುತ್ತಾನೆ. ಅವುಗಳ ಪ್ರಾಪ್ತಿಯ ಸಲುವಾಗಿ ರಾಗೀ, ದ್ವೇಷಿ, ಮೋಹೀ ದೇವಗಳ ಸೇವೆ-ಪೂಜೆ ಮಾಡುವುದೇ ದೇವಮೂಢತೆಯಿದೆ. ರಾಜ್ಯ, ಸುಖ ಸಂಪತ್ತಿ ಮೊದಲಾದುವಂತೂ ಸಾತಾವೇದನೀಯ ಕರ್ಮದ ಉದಯದಿಂದಪ್ರಾಪ್ತವಾಗುತ್ತವೆ. ಆ ಸಾತಾವೇದನೀಯ ಕರ್ಮವನ್ನು ನಮಗೆ ಕೊಡುವಲ್ಲಿ ಯಾರೂ ಸಮರ್ಥರಿಲ್ಲ. ಲಾಭವಂತೂ ಲಾಭಾಂತರಾಯ ಕರ್ಮದ ಕ್ಷಯೋಪಶಮದಿಂದ ಆಗುತ್ತದೆ. ಭೋಗೋಪಭೋಗ ಸಾಮಗ್ರಿಯ ಪ್ರಾಪ್ತಿಯು ಭೋಗೋಪಭೋಗ ನಾಮದ ಅಂತರಾಯಕರ್ಮದ ಕ್ಷಯೋಪಶಮದಿಂದ ಆಗುತ್ತದೆ. ತಮ್ಮ ಭಾವಗಳಿಂದ ಕಟ್ಟಿದ ಕರ್ಮಗಳನ್ನು ಕೊಡುವಲ್ಲಿ ಹಾಗೂ ತೆಗೆದುಕೊಳ್ಳುವಲ್ಲಿ ಯಾವ ದೇವ-ದೇವಿಯರು ಸಮರ್ಥರಿಲ್ಲ.

ಕುಲದ ವೃದ್ಧಿಯ ಸಲುವಾಗಿ ಕುಲದೇವಿಯನ್ನು ಪೂಜಿಸುತ್ತಾರೆ; ಆದರೆ ಪೂಜಿಸುತ್ತಿರುವಾಗಲೂ ಯಾರದೋ ಕುಲದ ವಿಧ್ವಂಸವಾಗುವುದು ಕಂಡು ಬರುತ್ತದೆ. ಲಕ್ಷ್ಮಿಯ ಸಲುವಾಗಿ ಲಕ್ಷ್ಮೀ ದೇವಿಯನ್ನು, ಧನದ ಸಲುವಾಗಿ ನಾಣ್ಯಗಳನ್ನು ಪೂಜಿಸುತ್ತಾರೆ, ಆದರೆ ಅವುಗಳನ್ನು ಪೂಜಿಸುತ್ತಿರುವ ಅನೇಕರು ದರಿದ್ರರಾಗುವುದು ಕಂಡು ಬರುತ್ತದೆ. ಶೀತಲಾಳ ಪೂಜೆ ಮಾಡುತ್ತಲೂ ಸಂತಾನದ ಮರಣವಾಗುವುದು ಕಂಡು ಬರುತ್ತದೆ. ಪಿತೃರನ್ನು ಮನ್ನಿಸುತ್ತಿದ್ದರೂ ರೋಗಾದಿಗಳು ವೃದ್ಧಿಸುತ್ತಿರುವುದು ಕಂಡುಬರುತ್ತದೆ. ವ್ಯಂತರ, ಕ್ಷೇತ್ರಪಾಲಾದಿಕರನ್ನು ತಮಗೆ ಸಹಾಯ ಮಾಡುವಂಥವರೆಂದು ಮನ್ನಿಸುತ್ತಾರೆ, ಆದರೆ ಇದು ಮಿಥ್ಯಾತ್ವದ ಉದಯದ ಪ್ರಭಾವವೇ ಇದೆ.

## ಕ್ಷೇತ್ರಪಾಲ, ಪದ್ಮಾವತಿಯ ಪೂಜೆಯ ಸಂಬಂಧದಲ್ಲಿ ವಿಚಾರ

ಶಸ್ತ್ರಧಾರಣ ಮಾಡಿರುವ ಚಕ್ರೇಶ್ವರೀ, ಪದ್ಮಾವತಿಯರು ಜಿನಶಾಸನದ ರಕ್ಷಕರಿದ್ದಾರೆ ಮತ್ತು ಸೇವಕರ ರಕ್ಷಣೆ ಮಾಡುವಂಥವರಿದ್ದಾರೆ. ಪ್ರತಿಯೋರ್ವ ತೀರ್ಥಂಕರರಿಗೆ ಒಬ್ಬೊಬ್ಬ ದೇವಿಯರಿದ್ದು, ಒಬ್ಬೊಬ್ಬ ಯಕ್ಷರಿದ್ದಾರೆ, ಅವರ ಆರಾಧನೆ ಮಾಡುವುದರಿಂದ ಪೂಜೆ ಮಾಡುವುದರಿಂದ ಜಿನಧರ್ಮದ ರಕ್ಷಣೆಯಾಗುತ್ತದೆ. ಅವರು ಧರ್ಮಾತ್ಮರುಗಳ ರಕ್ಷಣೆಯನ್ನೂ ಮಾಡುತ್ತಿರುವುದರಿಂದ ಆ ದೇವಿಯರ ಹಾಗೂ ಯಕ್ಷರ ಪೂಜೆ-ಸ್ತವನ ಮಾಡುವುದು ಉಚಿತವಿದೆಯೆಂದು ಕೆಲವರು ಹೇಳುತ್ತಾರೆ. ದೇವಿಯರು ಸಮಸ್ತ ಕಾರ್ಯವನ್ನು ಸಾಧಿಸುವಂಥವರಿದ್ದಾರೆ, ತೀರ್ಥಂಕರರ ಭಕ್ತರಿದ್ದಾರೆ, ಅವರಿಲ್ಲದೆ ಧರ್ಮದ ರಕ್ಷಣೆ ಯಾರು ಮಾಡುವರು ? ಇದೇ ಕಾರಣದಿಂದ ಮಂದಿರದೊಳಗೆ ನಾಲ್ಕು ಭುಜ, ಮೂವತ್ತೆರಡು ಭುಜ ಮತ್ತು ಅನೇಕ ಶಸ್ತ್ರಸಹಿತ ಪದ್ಮಾವತಿಯ ಆಕೃತಿ ಮಾಡಿಸಿ, ಅವಳ ಮಸ್ತಕದ ಮೇಲೆ ಭಗವಾನ ಪಾರ್ಶ್ವನಾಥ ಸ್ವಾಮಿಯ ಪ್ರತಿಬಿಂಬ ಮತ್ತು ಅದರ ಮೇಲೆ ಅನೇಕ ಹೆಡೆಗಳುಳ್ಳ ಸರ್ಪದ ರೂಪ ಮಾಡಿಸುತ್ತಾರೆ ಮತ್ತು ಅತ್ಯಂತ ಅನುರಾಗದಿಂದಪೂಜಿಸುತ್ತಾರೆ. ಪರಮಾಗಮದಿಂದ ಇದೆಲ್ಲದರ ಕುರಿತು ಸರಿಯಾಗಿ ತಿಳಿದುಕೊಂಡು ನಿರ್ಣಯ ಮಾಡಬೇಕಾಗುವುದು. ಮೂರ್ಖ ಜನರು ಹೇಳುವಲ್ಲಿ ಮೋಸ ಹೋಗಿ ಮನಸ್ಸಿಗೆ ಬಂದಂತೆ ಪ್ರವೃತ್ತಿ ಮಾಡಬಾರದು.

**ಮೊದಲಂತೂ ಭವನವಾಸೀ, ವ್ಯಂತರ, ಜ್ಯೋತಿಷೀ ಈ ಮೂರು ಪ್ರಕಾರದ ದೇವಗಳಲ್ಲಿ ಮಿಥ್ಯಾದೃಷ್ಟಿಗಳೇ ಉತ್ಪನ್ನರಾಗುತ್ತಾರೆ.** ಸಮ್ಯಗ್ದೃಷ್ಟಿಯು ಭವನತ್ರಿಕ ದೇವಗಳಲ್ಲಿ ಉತ್ಪನ್ನವಾಗುವುದೇ ಇಲ್ಲ. ಸ್ತ್ರೀ ಪರ್ಯಾಯದಲ್ಲೂ ಹೋಗುವುದಿಲ್ಲ; ಪದ್ಮಾವತೀ, ಚಕ್ರೇಶ್ವರಿಯರಂತೂ ಭವನವಾಸಿನಿ ಮತ್ತು ಸ್ತ್ರೀ ಪರ್ಯಾಯದಲ್ಲಿದ್ದಾರೆ, ಕ್ಷೇತ್ರಪಾಲಾದಿಕರು ವ್ಯಂತರರಿದ್ದಾರೆ. ಅವರಲ್ಲಿ ಸಮ್ಯಗ್ದೃಷ್ಟಿಯು ಹೇಗೆ ಹುಟ್ಟುವನು ? ಅವರಲ್ಲಂತೂ ನಿಯಮದಿಂದ ಮಿಥ್ಯಾದೃಷ್ಟಿಗಳೇ ಉತ್ಪನ್ನರಾಗುತ್ತಾರೆ. ಹೀಗೆ ಸಹಸ್ರ ಬಾರಿ ಪರಮಾಗಮದಲ್ಲಿ ಹೇಳಿದೆ.

ಒಂದು ವೇಳೆ ಅವರಿಗೆ ಜೈನ ಧರ್ಮದಲ್ಲಿ ಪ್ರೀತಿಯಿದ್ದರೆ ಅವರು ಜಿನಧರ್ಮದ ಧಾರಕರಿಂದ ತಮ್ಮ ಪೂಜೆ, ವಂದನೆ ಬಯಸುವುದಿಲ್ಲ. **ಯಾವನು ಜೈನನಿದ್ದಾನೆ ಮತ್ತು ತನ್ನನ್ನು ಅವ್ರತಿಯೆಂದು ತಿಳಿಯುತ್ತಾನೆ ಅವನು ಸಮ್ಯಗ್ದೃಷ್ಟಿಯಿಂದ ತನ್ನ ವಂದನೆ ಪೂಜೆ ಹೇಗೆ ಮಾಡಿಸಿಕೊಳ್ಳುವನು ?** ಸಾಧರ್ಮಿಗಳ ಉಪಕಾರವನ್ನಂತೂ ಅವನು ಹೇಳದೆಯೇ ಮಾಡುವನು.

ಭಗವಂತರ ಪ್ರತಿಬಿಂಬವನ್ನಂತೂ ತಮ್ಮ ಮಸ್ತಕದ ಮೇಲೆ ಧರಿಸಿದ್ದಾರೆ ಮತ್ತು ಭಗವಂತರ ಭಕ್ತರಿಂದ ತಮ್ಮ ಪೂಜೆ ಮಾಡಿಸಿಕೊಳ್ಳುವಂಥ ಅವಿನಯವನ್ನು ಧರ್ಮಾತ್ಮನಾಗಿ ಯಾವನು ಹೇಗೆ ಮಾಡುವನು ? ಅವನಂತೂ ಅನೇಕ ಶಸ್ತ್ರ ಧಾರಣಮಾಡಿ ತಮ್ಮ ವೀತರಾಗ ಧರ್ಮದಲ್ಲಿನ ಪ್ರವೃತ್ತಿಯನ್ನು ಕೆಡಿಸುತ್ತಾನೆ ಮತ್ತು ತನ್ನ ಬಲಹೀನತೆಯನ್ನು ಸ್ಪಷ್ಟವಾಗಿ ತೋರಿಸುತ್ತಾನೆ.

ಜಿನಶಾಸನದ ರಕ್ಷಕರೆಂದು ಒಬ್ಬೊಬ್ಬ ಯಕ್ಷ-ಯಕ್ಷಿಣಿಯೆಂದೇ ಹೇಗೆ ಹೇಳುವಿರಿ ? ಭಗವಂತರಶಾಸನದಲ್ಲಂತೂ ಸೌಧರ್ಮ ಇಂದ್ರನಿಂದ ಹಿಡಿದು ಅಸಂಖ್ಯಾತ ದೇವ-ದೇವಿಯರೆಲ್ಲರೂ ಸೇವಕರಿದ್ದಾರೆ ಅವರ ಹೃದಯದಲ್ಲಿ ನಿಜವಾದ ಧರ್ಮದ ಪ್ರೀತಿಯಿರುವುದರಿಂದ ಪೂರ್ವಕೃತ ಅಶುಭ ಕರ್ಮವು ನಿರ್ಜರಿಸಿ ಹೋಗಿ ಅವರಸಮಸ್ತ ಅಚೇತನ ಪುದ್ಗಲರಾಶಿ ಕೂಡ ದೇವತಾರೂಪವಾಗಿ ಉಪಕಾರ ಮಾಡುತ್ತಾರೆ. ದೇವತೆಗಳು ಮನುಷ್ಯರಿಗೆ ಉಪಕಾರ ಮಾಡುತ್ತಾರೆಂದು ಹೇಳುವಲ್ಲಿ ಆಶ್ಚರ್ಯವೇನಿದೆ ?

ಜೈನ ಶಾಸ್ತ್ರಗಳಲ್ಲಿ ಕೂಡ ಇಂಥ ಅನೇಕ ಕಥೆಗಳು ಬರುತ್ತವೆ. ಶೀಲವಂತ ಹಾಗೂ ಧ್ಯಾನೀ ತಪಸ್ವಿಗಳ ಧರ್ಮದ ಪ್ರಸಾದದಿಂದ ದೇವಗಳ ಆಸನವು ಕಂಪಿಸುವುದು, ದೇವಗಳು ಹೋಗಿ ಉಪಸರ್ಗ ದೂರಮಾಡಿದುದು ಮತ್ತು ಅನೇಕ ಪ್ರಕಾರದ ರತ್ನಗಳಿಂದ ಧರ್ಮಾತ್ಮರುಗಳ ಪೂಜೆ ಮಾಡಿದಂಥ ಕಥೆಗಳು ಶಾಸ್ತ್ರಗಳಲ್ಲಿ ಬಹಳಷ್ಟು ಇವೆ. **ಆದರೆ ಧರ್ಮಾತ್ಮ ಪುರುಷರು ದೇವತೆಗಳ ಪೂಜೆ ಮಾಡಿದಂಥ ಕಥೆಯು ಯಾವುದೂಇಲ್ಲ,** ಚಕ್ರೇಶ್ವರಿ, ಪದ್ಮಾವತಿಯರ ಕಥೆಗಳೂ ಅನೇಕವಿವೆ. ಅದರಲ್ಲಿ ದೇವಿ-ದೇವಿಯರು ಶೀಲವಂತೀ, ವ್ರತವಂತಿಯರ ಪೂಜೆ ಮಾಡಿದ್ದಾರೆ. ಆದರೆ ಅದರಲ್ಲಿ ಶೀಲವಂತೀ ವ್ರತವಂತಿಯರು ಹೋಗಿ ಯಾವುದೇ ದೇವ-ದೇವಿಯರ ಪೂಜೆ ಮಾಡದರೆಂದು ಎಲ್ಲಿಯೂ ಹೇಳಲಾಗಿಲ್ಲ.

ಸ್ವಾಮಿ ಕಾರ್ತಿಕೇಯ ಮುನಿಗಳು ಕಾರ್ತಿಕೇಯಾನುಪ್ರೇಕ್ಷೆಯಲ್ಲಿ ಹೇಳುತ್ತಾರೆ,-

**ಣ ಯೋ ಕೋ ವಿ ದೇದಿ ಲಚ್ಛೀಣ ಕೋ ವಿ ಜೀವಸ್ಸ ಕುಣದಿ ಉವಯಾರಂ ।**
**ಉವಯಾರಂ ಅವಯಾರಂ ಕಮ್ಮಂಪಿ ಸುಹಾಸುಹಂ ಕುಣದಿ ॥೩೧೯॥**
**ಭತ್ತೀ ಏ ಪುಜ್ಜಮಾಣೋ ವಿಂತರ ದೇವೋ ವಿ ದೇದಿ ಜದಿ ಲಚ್ಛೀ ।**
**ತೋ ಕಿಂ ಧಮ್ಮಂ ಕೀರದಿ ಏವಂ ಚಿಂತೇ ಇ ಸದ್ದಿಟ್ಠೀ ॥೩೨೦॥**

**ಅರ್ಥ :-** ಈ ಜೀವಕ್ಕೆ ಯಾರೂ ಲಕ್ಷ್ಮಿಯನ್ನು ಕೊಡುವುದಿಲ್ಲ ಮತ್ತು ಜೀವಕ್ಕೆ ಯಾರೂ ಉಪಕಾರ-ಅಪಕಾರವನ್ನೂ ಮಾಡುವುದಿಲ್ಲ. ಜಗತ್ತಿನಲ್ಲಿ ಯಾವ ಉಪಕಾರ-ಅಪಕಾರ ಮಾಡುತ್ತಿರುವುದು ಕಂಡು ಬರುತ್ತದೆ ಅದು ತಾನು ಮಾಡಿದ ಶುಭ-ಅಶುಭ ಕರ್ಮಗಳಿಂದಲೇ ಆಗುತ್ತದೆ. ಭಕ್ತಿಪೂರ್ವಕ ಪೂಜೆ ಮಾಡುವುದರಿಂದ ವ್ಯಂತರದೇವಗಳೇ ಲಕ್ಷ್ಮಿಯನ್ನು ಕೊಡುತ್ತಿದ್ದರೆ ದಾನ, ಪೂಜೆ, ಶೀಲ, ಸಂಯಮ, ಧ್ಯಾನ, ಅಧ್ಯಯನ ತಪರೂಪದ ಸಮಸ್ತ ಧರ್ಮ (ಶುಭ ಭಾವರೂಪದ ಪುಣ್ಯ)ವನ್ನೇಕೆ ಮಾಡುವುದು ? **ಭಕ್ತಿಪೂರ್ವಕ ಪೂಜೆ, ವಂದನೆ ಮಾಡುವುದರಿಂದ ಕುದೇವಗಳೇ ಸಂಸಾರದ ಕಾರ್ಯ ಸಿದ್ಧಮಾಡತೊಡಗಿದರೆ ಕರ್ಮವು ಯಾವ ವಸ್ತುವೇ ಉಳಿಯಲಿಕ್ಕಿಲ್ಲ ? ವ್ಯಂತರರೇ ಸಮಸ್ತ ಸುಖವನ್ನು ಕೊಡುವಂಥವರಾದರು, ಧರ್ಮದ ಆಚರಣೆಯು ನಿಷ್ಫಲವಾಯಿತು.**

**ಭಾವಾರ್ಥ :-** ಜಗತ್ತಿನಲ್ಲಿ ಈ ಜೀವನಿಗೆ ದೇವ, ದಾನವ, ದೇವಿ, ಮನುಷ್ಯ, ಸ್ವಾಮಿ, ತಂದೆ, ತಾಯಿ, ಸೋದರ, ಮಿತ್ರ, ಸ್ತ್ರೀ, ಪುತ್ರ, ತಿರ್ಯಂಚ, ಔಷಧ ಮೊದಲಾದವು ಯಾವ ಉಪಕಾರ ಅಥವಾ ಅಪಕಾರ ಮಾಡುತ್ತವೆ ಅದೆಲ್ಲವೂ ತಮ್ಮಿಂದ ಮಾಡಲಾದ ಪುಣ್ಯಕರ್ಮ-ಪಾಪಕರ್ಮಗಳಿವೆ, ಅವುಗಳ ಉದಯದ ಆಧೀನವಾಗಿ ಮಾಡುತ್ತವೆ. ಇವೆಲ್ಲವೂ ಬಾಹ್ಯನಿಮಿತ್ತ ಮಾತ್ರವಿವೆ. ಒಬ್ಬನು ಹಿತಮಾಡಲಪೇಕ್ಷಿಸುತ್ತಾನೆ, ಉಪಕಾರ ಮಾಡಲಪೇಕ್ಷಿಸುತ್ತಾನೆ, ಆದರೆ

ಅಪಕಾರವಾಗುತ್ತದೆ - ಕೆಡಕಾಗುತ್ತದೆ; ಒಬ್ಬನು ಕೆಡಕು ಮಾಡಲಪೇಕ್ಷಿಸುತ್ತಾನೆ, ಆದರೆ ಉಪಕಾರವಾಗುತ್ತದೆ- ಹಿತವಾಗುತ್ತದೆ. ಆದುದರಿಂದ ಪ್ರಮುಖ ಕಾರಣವು ಪುಣ್ಯ-ಪಾಪ ಕರ್ಮವಿದೆ.

ಚಾಂಡಾಲನ ಅಹಿಂಸಾವ್ರತದ ಪ್ರಭಾವದಿಂದ ದೇವತೆಗಳು ಸಿಂಹಾಸನ ನಿರ್ಮಿಸಿಕೊಟ್ಟರು. ಲೀಲಾವತಿಯ ಶೀಲದ ಪ್ರಭಾವದಿಂದ ದೇವತೆಗಳು ಸಹಾಯಕರಾದರು; ಸೀತೆಯ ಶೀಲದ ಪ್ರಭಾವದಿಂದ ಅಗ್ನಿಕುಂಡವು ಜಲರೂಪವಾಯಿತು. ಸುದರ್ಶನ ಶ್ರೇಷ್ಠಿಯ ಉಪಸರ್ಗವನ್ನು ದೇವನು ನಿವಾರಿಸಿದನು; ಹೀಗೆಯೇ ಕೆಲವರಿಗೆ ದೇವತೆಗಳು ಸಹಾಯ ಮಾಡಿದ್ದಾರೆ. ಉಪಸರ್ಗ ದೂರಮಾಡಿದ್ದಾರೆ. ದೇವಗಳ ಆಸನವು ಕಂಪಾಯಮಾನವಾಗಿ ದೇವಗಳು ಬಂದು ಸಹಾಯ ಮಾಡಿದಂಥ ಸಾವಿರಾರು ಕಥೆಗಳು ಪ್ರಸಿದ್ಧವಿವೆ.

**ಭಗವಾನ ಋಷಭದೇವರಿಗೆ ಆರುತಿಂಗಳು ಆಹಾರದ ಅಂತರಾಯವಿದ್ದಾಗ ಯಾವ ದೇವನು ಬಂದು ಯಾರಿಗೆ ಆಹಾರಕೊಡುವ ವಿಧಿಯನ್ನೇಕೆ ತಿಳಿಸಲಿಲ್ಲ ?** ಮೊದಲಂತೂ ಗರ್ಭದಲ್ಲಿ ಬರುವ ಆರುತಿಂಗಳು ಮೊದಲೇ ಇಂದ್ರ ಮೊದಲಾದ ಅನೇಕ ದೇವಗಳು ಭಗವಂತರ ಸೇವೆಯಲ್ಲಿರುತ್ತಿದ್ದರು. ಮತ್ತು **ಸ್ವರ್ಗಲೋಕದಿಂದ ಆಹಾರ, ವಸ್ತ್ರ ವಾಹನಾದಿಗಳನ್ನು ತರಲು ಸಾವಧಾನತೆಯಿಂದ ಉಪಸ್ಥಿತರಿರುತ್ತಿದ್ದರು.** ಅವರೆಲ್ಲರು ಹೇಗೆ ಮರೆತು ಹೋದರು ? ಭರತ ಮೊದಲಾದ ನೂರು ಮಕ್ಕಳಿಗೆ ಹಾಗೂ ಬ್ರಾಹ್ಮಿ-ಸುಂದರಿ ಪುತ್ರಿಯರಿಗೆ ಮುನಿ ಮತ್ತು ಶ್ರಾವಕನ ಧರ್ಮವನ್ನೆಲ್ಲ ಓದಿಸಿದ್ದರು. ಅವರು ಕೂಡ ಭಗವಂತರು ಈಗ ಮುನಿಯಾಗಿ ಆಹಾರದ ಸಲುವಾಗಿ ವಿಹರಿಸುತ್ತಿದ್ದಾರೆಂಬ ವಿಚಾರ ಮಾಡಲಿಲ್ಲ ವಾಸ್ತವದಲ್ಲಿ ಅಂತರಾಯಕರ್ಮದ ಉದಯವು ಮಂದವಾದಲ್ಲದೆ ಯಾರು ಸಹಾಯ ಮಾಡುತ್ತಾರೆ ?

ಧರ್ಮ, ಭೀಮ, ಅರ್ಜುನ, ನಕುಲ, ಸಹದೇವರುಗಳು ಮಹಾವೀತರಾಗಿ ಮುನಿಗಳಾಗಿ ವನದಲ್ಲಿ ಧ್ಯಾನ ಮಾಡುತ್ತಿದ್ದರು. ದುಷ್ಟ ವೈರಿಗಳು ಬಂದು ಅಗ್ನಿಯಲ್ಲಿ ಕೆಂಪಾಗಿ ಕಾಯಿಸಿದ ಲೋಹದ ಒಡವೆಗಳನ್ನು ಅವರಿಗೆ ತೊಡಿಸುತ್ತಾರೆ ಮತ್ತು ಅವರ ಚರ್ಮ, ಮಾಂಸಾದಿಗಳು ಸುಟ್ಟು ಭಸ್ಮವಾದರೂ ಯಾವ ದೇವನೂ ಬಂದು ಸಹಾಯ ಮಾಡಲಿಲ್ಲ.

ಸುಕುಮಾರ ಮಹಾಮುನಿಯನ್ನು ಮೂರು ದಿವಸಗಳವರೆಗೆ ಒಂದು ನರಿಯು ತನ್ನ ಎರಡು ಮರಿಗಳೊಡನೆ ಭಕ್ಷಣ ಮಾಡುತ್ತಲಿತ್ತು. ಅಲ್ಲಿ ಯಾವ ದೇವನೂ ಸಹಾಯ ಮಾಡುವುದಕ್ಕೆ ಬರಲಿಲ್ಲ. ಅವರ ತಾಯಿಗೆ ಮಗನ ಸಲುವಾಗಿ ಹೆಚ್ಚು ಪ್ರೀತಿಯಿತ್ತು. ಅವಳು ಶೋಕಮಾಡುವುದರಲ್ಲಿಯೇ ತೊಡಗಿದಳು. ಆದರೆ ತನ್ನ ಪುತ್ರನು ಎಲ್ಲಿಗೆ ಹೊರಟು ಹೋದನೆಂಬುದರ ಕುರಿತು ಯಾವ ಶೋಧವನ್ನೇ ಮಾಡಲಿಲ್ಲ.

ಐನೂರು ಮುನಿಗಳನ್ನು ಗಾಣದಲ್ಲಿ ಹಾಕಿ ಹಿಂಡುತ್ತಿರುವಾಗ ಅಲ್ಲಿ ಯಾವ ದೇವನು ಬಂದು ಸಹಾಯ ಮಾಡಲಿಲ್ಲ. ಕೃಷ್ಣ ಮತ್ತು ಬಲರಾಮರ ಸೇವೆಯನ್ನು ಮೊದಲು ಸಾವಿರಾರು ದೇವಗಳು ಮಾಡುತ್ತಿದ್ದರು; ಆದರೆ ಯಾವಾಗ ಹೀನ ಕರ್ಮದ ಉದಯವಾಯಿತು ಮತ್ತು ಪುಣ್ಯವು ಕ್ಷೀಣವಾದಾಗ ಅವರಿಗೆ ನೀರು ಕುಡಿಸಲು ಒಬ್ಬ ಮನುಷ್ಯ ಅಥವಾ ದೇವನು ಹತ್ತಿರದಲ್ಲಿ ಇರಲಿಲ್ಲ, ಅವನು ಸುದರ್ಶನ ಚಕ್ರದಿಂದ ಸಾಯಲಿಲ್ಲ. ಆದರೆ ಒಬ್ಬ ಬಿಲ್ಲನ ಬಾಣದಿಂದ ಪ್ರಾಣ ಕಳೆದುಕೊಂಡನು ಹೀಗೆ ಅನೇಕ ಧ್ಯಾನೀ, ತಪಸ್ವೀ, ವ್ರತೀ, ಸಂಯಮೀ ಮೊದಲಾದವರು ಘೋರ ಉಪಸರ್ಗದ ಸಹನೆ ಮಾಡಿದರು. ಅವರಲ್ಲಿಕೆಲವರಿಗೆ ದೇವಗಳು ಸಹಾಯ ಮಾಡಿದರು ಮತ್ತು ಕೆಲವರಿಗೆ ದೇವಗಳು ಸಹಾಯ ಮಾಡಲಿಲ್ಲ.

ಆದುದರಿಂದ **ಅಶುಭಕರ್ಮದ ಉಪಶಮವಾದಲ್ಲದೆ ಮತ್ತು ಶುಭಕರ್ಮದ ಉದಯ ಬಂದಲ್ಲದೆ ಯಾವ ದೇವಾದಿಕರು ಸಾಹಾಯಕರಾಗುವುದಿಲ್ಲವೆಂಬುದು ನಿಶ್ಚಿತವಿದೆ.** ತಮ್ಮ ಶರೀರವೇ ಶತ್ರುವಾಗಿ ಬಿಡುತ್ತದೆ. ಖರದೂಷಣನ ಪುತ್ರನಾದ ಶಂಬುಕುಮಾರನು ಹನ್ನೆರಡು ವರ್ಷಗಳವರೆಗೆ ಬಿದಿರ ಮೆಳೆಯಲ್ಲಿ ಕುಳಿತು ಕಠಿಣ ತಪಸ್ಸುಮಾಡಿ ಸೂರ್ಯಹಾಸ ಖಡ್ಗದ ಪ್ರಾಪ್ತಿ ಮಾಡಿದ್ದನು. ಅದು ಸಹಜವಾಗಿ ಲಕ್ಷ್ಮಣನ ಕೈಗೆ ಬಂದು ಬಿಡುತ್ತದೆ ಮತ್ತು ಅದೇ ಖಡ್ಗದಿಂದ ಶಂಬು

ಕುಮಾರನ ಮಸ್ತಕವು ಕತ್ತರಿಸಿ ಹೋಗುತ್ತದೆ. ಲಕ್ಷ್ಮಣನಂತೂ ಅರಿಯದೆಯೇ ಖಡ್ಗದ ಧಾರೆಯಪ್ರಯೋಗವನ್ನು ಅಭ್ಯಾಸರೂಪದಲ್ಲಿ ಮಾಡಿದ್ದನು. ಆದರೆ ಒಳಗೆ ಕುಳಿತುಕೊಂಡ ಶಂಬುಕುಮಾರನ ಶಿರವು ಕತ್ತರಿಸಿ ಹೋಯಿತು. ತನ್ನ ಹಿತದ ಸಲುವಾಗಿ ಸಿದ್ಧಿಮಾಡಿಕೊಂಡ ವಿದ್ಯೆಯು ತನ್ನದೇ ಘಾತಮಾಡಿಬಿಟ್ಟಿತು. **ಪೂರ್ವಕರ್ಮದ ಉದಯದ ನಿಮಿತ್ತದಿಂದಲೇ ಅನೇಕ ಉಪಕಾರ-ಅಪಕಾರಗಳಾಗುತ್ತವೆ. ಯಾವುದೇ ದೇವ ಮೊದಲಾದವರ ಪೂಜೆ ಮಾಡುವುದರಿಂದ ಯಾರೂ ಧನ, ಸಂಪತ್ತು, ಸ್ತ್ರೀ, ಪುತ್ರಾದಿಕರನ್ನು ಕೊಡುವಲ್ಲಿ ಸಮರ್ಥರಿಲ್ಲ.**

ನಗರದ ದೊರೆಯು ಎಲ್ಲ ದೇವ-ದೇವಿ, ಪೀರ-ಪೈಗಂಬರ, ಸ್ವಾಮಿ, ಫಕೀರ, ಎಲ್ಲ ಮತಗಳ ಸಾಧು, ಎಲ್ಲ ವೇದಪುರಾಣಗಳ ಪಾಠ ಮಾಡುವಂಥ, ನಿತ್ಯವೂ ಹೋಮ-ಯಜ್ಞದ ಪಾಠ ಮಾಡುವಂಥ ಬ್ರಾಹ್ಮಣರಿಗೆ ಬಹಳಷ್ಟು ಅಜೀವಿಕೆ ಕೊಡುತ್ತಾನೆ, ಸತ್ಕಾರ ಮಾಡುತ್ತಾನೆ, ಲಕ್ಷ್ಯಾಂತರ ರೂಪಾಯಿಗಳ ದಾನ ಕೊಡುತ್ತಾನೆ, ಅದರ ಮಹಾಫಲವು ಎಲ್ಲರವರೆಗೆ ತಲುಪುತ್ತಿದ್ದರೂ ಸಂಯೋಗ, ವಿಯೋಗ, ಹಾನಿ-ವೃದ್ಧಿ, ಜಯ-ಪರಾಜಯಗಳನ್ನು ನಿವಾರಿಸುವಲ್ಲಿ ಯಾರೂ ಸಮರ್ಥರಿಲ್ಲ. ಆದುದರಿಂದ ಶ್ರದ್ಧೆ ಮಾಡದೆಯೇ ಅನೇಕ ದೇವ-ದೇವಿಯರ ಪೂಜೆ-ಆರಾಧನೆಯು ಅದು ದೇವಮೂಢತೆಯೇ ಇದೆಯೆಂದು ನಿಶ್ಚಯದಿಂದ ತಿಳಿಯಿರಿ !

ಮಂತ್ರ-ಸಾಧನೆ, ವಿದ್ಯೆಯ-ಆರಾಧನೆ, ದೇವ-ಆರಾಧನೆ ಮೊದಲಾದವುಗಳೆಲ್ಲವೂ ಪುಣ್ಯ-ಪಾಪದ ಅನುಸಾರವಾಗಿಯೇ ಫಲಕೊಡುತ್ತವೆ. ಆದುದರಿಂದ ಸುಖದ ಇಚ್ಛೆಯುಳ್ಳವರು ದಯೆ, ಕ್ಷಮೆ, ಸಂತೋಷ, ನಿರಪೇಕ್ಷತೆ, ಮಂದ ಕಷಾಯತೆ, ವೀತರಾಗತೆಯ ಮೂಲಕ ಒಂದು ಧರ್ಮದ ಆರಾಧನೆಯನ್ನೇ ಮಾಡಿರಿ, ಅನ್ಯ ಪ್ರಕಾರದಿಂದ ಇಚ್ಛೆ ಮಾಡಿ ಪಾಪದ ಬಂಧ ಮಾಡಿಕೊಳ್ಳಬೇಡಿರಿ.

ದೇವಗಳ ಸಂಗತಿಯನ್ನೇ ಮಾಡುವ ಇಚ್ಛೆಯಿದ್ದರೆ ಉತ್ತಮ ಸಮ್ಯಗ್ದೃಷ್ಟಿ ಸೌಧರ್ಮೇಂದ್ರ, ಶಚಿ ಇಂದ್ರಾಣೀ, ಲೌಕಾಂತಿಕ ದೇವಗಳ ಸಂಗತಿಮಾಡುವ ಭಾವನೆ ಮಾಡಿರಿ ! ಅನ್ಯ ಅಧಮ ದೇವಗಳ ಸೇವೆ ಮಾಡುವುದರಿಂದ ಯಾವುದರ ಸಿದ್ಧಿಯಾಗುವುದು ?

**ಬಹಳಷ್ಟು ಜನರು ಮಿಥ್ಯಾಬುದ್ಧಿಯ ಕಾರಣದಿಂದ ಮಂದಿರಗಳಲ್ಲಿ ಕ್ಷೇತ್ರಪಾಲರ ಸ್ಥಾಪನೆ ಮಾಡುತ್ತಾರೆ ಮತ್ತು ಪ್ರತಿದಿವಸ ಅವರ ಪೂಜೆ ಮಾಡುತ್ತಾರೆ.** ಆ ಜನರು ಮೊದಲಂತೂ ಕ್ಷೇತ್ರಪಾಲರ ಪೂಜೆ ಮಾಡುತ್ತಾರೆ ಮತ್ತು ಕ್ಷೇತ್ರಪಾಲರ ಪೂಜೆ ಮಾಡಿದ ನಂತರ ಜಿನೇಂದ್ರ ದೇವರ ಪೂಜೆ ಮಾಡುತ್ತಾರೆ. ಅವರು ಹೇಳುವುದೇನೆಂದರೆ ಮೊದಲು ದ್ವಾರಪಾಲನ ಸನ್ಮಾನ ಮಾಡಿದ ನಂತರ ದೊರೆಯ ಸನ್ಮಾನ ಮಾಡಬೇಕಾಗುವುದು. ದ್ವಾರಪಾಲನಿಲ್ಲದೆ ದೊರೆಯ ಭೆಟ್ಟಿಯನ್ನು ಯಾರು ಮಾಡಿಸುವರು ? ಅದೇ ಪ್ರಕಾರ ಕ್ಷೇತ್ರಪಾಲರಿಲ್ಲದೆ ಭಗವಂತರ ಭೆಟ್ಟಿಯನ್ನು-ಮಿಲನವನ್ನು ಯಾರು ಮಾಡಿಸುವರು ।

**ಭಗವಂತರಂತೂ ಮೋಕ್ಷದಲ್ಲಿದ್ದಾರೆಂಬ ವಿವೇಕವೇ ಆ ಮೂರ್ಖರಿಗೆ ಇಲ್ಲ. ಈ ಮಿಥ್ಯಾದೃಷ್ಟೀ ಅಜ್ಞಾನಿಯಾದ ಕ್ಷೇತ್ರಪಾಲನು ಆ ಭಗವಾನ ಪರಮಾತ್ಮನ ಸ್ವರೂಪವನ್ನು ತಿಳಿಯುವುದೇ ಇಲ್ಲವೆಂದ ಮೇಲೆ ಅವರೊಡನೆ ಹೇಗೆ ಮಿಲನ ಮಾಡಿಸುವರು ಮತ್ತು ಹೇಗೆ ವಿಘ್ನಗಳ ನಾಶ ಮಾಡುವನು ?** ಅವನಂತೂ ತನ್ನ ವಿಘ್ನಗಳನ್ನು ಕೂಡ ನಾಶಮಾಡಿಕೊಳ್ಳಲು ಸಮರ್ಥನಿಲ್ಲ. ಈ ಪ್ರಕಾರ ವಿವೇಕವಿಲ್ಲದ ಮಿಥ್ಯಾದೃಷ್ಟಿ ಜನರು ಕ್ಷೇತ್ರಪಾಲರ ಆಕೃತಿಯನ್ನು ಅತ್ಯಂತ ವಿಪರೀತವಾಗಿ ಮಾಡಿಸಿ, ವೀತರಾಗರ ಮಂದಿರದಲ್ಲಿ ಪ್ರಥಮ ಸ್ಥಾನದಲ್ಲಿಯೇ ಸ್ಥಾಪನೆ ಮಾಡುತ್ತಾರೆ. ಅವನ ಕೈಯಲ್ಲಿ ಮನುಷ್ಯನ ಕತ್ತರಿಸಿದ ತಲೆ ಮತ್ತು ಗದೆ, ಕರವಾಳವಿದ್ದು ನಾಯಿಯ ಮೇಲೆ ಕುಳಿತುಕೊಂಡಿದ್ದಾನೆ. ಎಣ್ಣೆ-ಬೆಲ್ಲ ತಿನ್ನುವುದರಿಂದ ಕ್ಷೇತ್ರಪಾಲನು ಪ್ರಸನ್ನನಾಗುತ್ತಾನೆಂದು ಜನರನ್ನು ಮೋಸಗೊಳಿಸಿ ಕ್ಷೇತ್ರಪಾಲನನ್ನು ಪೂಜಿಸಹಚ್ಚುತ್ತಾರೆ ಮತ್ತು ಅವನ ದರ್ಶನ-ಪೂಜೆಯನ್ನು ಮೊದಲು ಮಾಡುತ್ತಾರೆ. ಆದರೆ ಅದೆಲ್ಲವೂ ಮಿಥ್ಯಾದರ್ಶನ ಮತ್ತು ಕುಜ್ಞಾನದ ಪ್ರಭಾವವೆಂದೇ ತಿಳಿಯುವುದು.

ಭಗವಾನ ಪಾರ್ಶ್ವಜಿನೇಂದ್ರರ ಬಿಂಬವನ್ನು ಮಸ್ತಕದ ಮೇಲೆ ಹೆಡೆಯಿಲ್ಲದೆ ಮಾಡಿಸುವುದೇ ಇಲ್ಲ. ಸಮವಸರಣದಲ್ಲಿ ಭಗವಾನ ಪಾರ್ಶ್ವ ಅರಹಂತರ ಮಸ್ತಕದ ಮೇಲೆ ಧರಣೇಂದ್ರನಿಂದ ಹೆಡೆ ಮಾಡಿಸುವುದು ಹೇಗೆ ಸಂಭವವಿದೇ ? ಧರಣೇಂದ್ರನಂತೂ ಭಗವಂತರು ತಪಸ್ಸು ಮಾಡುವ ಸಮಯದಲ್ಲಿ ಮುನಿ ಅವಸ್ಥೆಯೊಳಗೆ ಹೆಡೆಯ ಮಂಟಪ ಮಾಡಿಸಿದ್ದನು; ಅದರ ನಂತರ ಅರಹಂತ ಅವಸ್ಥೆಯಲ್ಲಿ ಹೆಡೆಮಾಡಿಸುವುದರ ಯಾವ ಪ್ರಯೋಜನವೇ ಇಲ್ಲ. ಭಗವಾನ ಪಾರ್ಶ್ವ ಜಿನೇಂದ್ರರು ಯಾವಾಗ ಅರಹಂತರಾದರು, ಮತ್ತು ಇಂದ್ರನ ಆಜ್ಞೆಯಿಂದ ಕುಬೇರನು ಸಮವಸರಣದ ರಚನೆ ಮಾಡಿದ್ದನು. ಅಲ್ಲಿ ಭಗವಾನ ಪಾರ್ಶ್ವಪ್ರಭುಗಳು ಹೆಡೆಸಹಿತವಾಗಿ ವಿರಾಜಮಾನರಿರಲಿಲ್ಲ. ಅಲ್ಲಿ ಚತುರ್ನಿಕಾಯದ ದೇವ, ಮನುಷ್ಯ ಮತ್ತು ತಿರ್ಯಂಚಗಳು ಧರ್ಮಶ್ರವಣ ಸ್ತವನ ವಂದನೆ ಮಾಡುತ್ತಲೇ ಕುಳಿತುಕೊಳ್ಳುತ್ತಾರೆ. ಆದುದರಿಂದ ಸ್ಥಾಪಿಸಿದ ಪ್ರತಿಮೆಯಲ್ಲಿ ಅರಹಂತರ ಪ್ರತಿಬಿಂಬಗಳಿಗೆ ಹೆಡೆಯು ಹೇಗೆ ಸಂಭವವಿರುವುದು ? ವೀತರಾಗ ಮುದ್ರೆಯಂತೂ ಈ ಪ್ರಕಾರವಾಗಿ ಇರುವುದೇ ಇಲ್ಲ.

**ಕಾಲದ ಪ್ರಭಾವದಿಂದ ಧರಣೇಂದ್ರನ ಪೂಜೆ ಪ್ರಭಾವನೆಯನ್ನು ತೋರಿಸುವುದಕ್ಕಾಗಿ ಜನರು ವಿಪರೀತ ಕಲ್ಪನೆ ಮಾಡತೊಡಗಿದ್ದಾರೆ. ಅದನ್ನು ಯಾರು ದೂರ ಮಾಡುವ ಸಾಧ್ಯತೆಯಿದೆ ?** ಹೇಗೆ ಭಗವಂತರ ಪಾಷಾಣದ ಪ್ರತಿಮೆಯಲ್ಲಿ ಅಂಗಗಳ ಸುಂದರತೆ ಮತ್ತು ಮಸ್ತಕದ ರಕ್ಷಣೆಯ ಸಲುವಾಗಿ ಕರ್ಣಗಳನ್ನು ದೀರ್ಘಮಾಡಿ ಸ್ಕಂಧಗಳೊಡನೆ ಜೋಡಿಸಿ ಬಿಡುತ್ತಾರೆ ; ಅವನ್ನು ನೋಡಿ ಎಲ್ಲ ಧಾತುಗಳ ಪ್ರತಿಮೆಗಳಿಗೂ ಕರ್ಣಗಳನ್ನು ಸ್ಕಂಧಗಳೊಡನೆ ಜೋಡಿಸ ತೊಡಗಿದರು. ಇದಂತೂ ಅನುಕರಣದಿಂದ ನಡೆದುಹೋಯಿತು. ಅದೇ ಪ್ರಕಾರ ಅರಹಂತರ ಬಿಂಬದ ಮೇಲೆ ಹೆಡೆಯ ಆಕಾರವನ್ನು ನಿರ್ಮಿಸುತ್ತಿರುವುದನ್ನು ನೋಡಿ ಜನರು ತತ್ತ್ವನ್ನು ತಿಳಿದುಕೊಳ್ಳಲಾರದೆ ಹೆಡೆ ನಿರ್ಮಿಸುವ ಪ್ರವೃತ್ತಿಯನ್ನು ನಡೆಸಿಕೊಂಡು ಬಂದರು. ಹೆಡೆ ಮಾಡಿ ಬಿಡುವುದರಿಂದ ಪ್ರತಿಮೆಯಂತೂ ಅಪೂಜ್ಯವಾಗಿ ಹೋಗುವುದಿಲ್ಲ; ಏಕೆಂದರೆ ನಾಲ್ಕು ಪ್ರಕಾರದ ಸಮಸ್ತ ದೇವಗಳು ನಾಲ್ಕೂ ನಿಟ್ಟಿನಿಂದ ಯಾವಾಗಲೂ ಭಗವಂತರ ಸೇವೆ ಮಾಡುತ್ತಿರುತ್ತಾರೆ. ಫಣಾಮಂಟಪ ಮಾಡುವುದರಿಂದಲೇ ಧರಣೇಂದ್ರನನ್ನು ಪೂಜ್ಯರೆಂದು ಮನ್ನಿಸುವುದು ಅದಂತೂ ಲೋಕಮೂಢತೆಯಿದೆ.

ಈ ಪ್ರಕಾರ ದೇವಮೂಢತೆಯ ಅನೇಕ ಭೇದಗಳಿವೆ. ಗಣೇಶ, ಹನುಮಂತ, ಲಿಂಗ, ಯೋನಿ, ಚತುರ್ಮುಖ ಷಣ್ಮುಖದರೂಪ, ದೇವತ್ವರಹಿತ, ಸ್ಪಷ್ಟ ಅಸಂಭವವಾದ ತಿರ್ಯಂಚರೂಪವನ್ನು ದೇವನೆಂದು ಮನ್ನಿಸುವುದು, ವಟ ಮೊದಲಾದ ವೃಕ್ಷ್ಯಗಳನ್ನು, ನದಿಯನ್ನು, ಜಲವನ್ನು, ವಾಯುವನ್ನು, ಧಾನ್ಯವನ್ನು ದೇವರೆಂದು ಮನ್ನಿಸುವುದೆಲ್ಲವೂ ಲೋಕಮೂಢತೆಯಿದೆ.

ಈಗ ಮುಂದೆ **ಗುರುಮೂಢತೆ**ಯ ವರ್ಣನೆ ಮಾಡುವಂಥ ಸೂತ್ರ ಹೇಳುತ್ತಾರೆ,-

**ಸಗ್ರಂಥಾರಂಭಹಿಂಸಾನಾಂ ಸಂಸಾರಾವರ್ತವರ್ತಿನಾಮ್ ।**

**ಪಾಖಂಡಿನಾಂ ಪುರಸ್ಕಾರೋ ಜ್ಞೇಯಂ ಪಾಖಂಡಿಮೋಹನಮ್ ॥೨೪॥**

**ಅರ್ಥ :-** ಪರಿಗ್ರಹ, ಆರಂಭ ಮತ್ತು ಹಿಂಸೆಯೊಡನೆ ಸಂಸಾರರೂಪದ ಚಕ್ರದಲ್ಲಿ ಪ್ರವರ್ತನೆ ಮಾಡುವಂಥ ಪಾಖಂಡಿಗಳನ್ನು ಮುಖ್ಯರೆಂದು ಮನ್ನಿಸಿ ಅವರ ವಚನಗಳಲ್ಲಿ ಆದರಪೂರ್ವಕವಾಗಿ ಪ್ರವರ್ತನೆ ಮಾಡುವುದು ಅದು ಪಾಖಂಡ ಮೂಢತೆಯಿದೆ.

**ಭಾವಾರ್ಥ :-** ಜಿನೇಂದ್ರರ ಧರ್ಮದ ಶ್ರದ್ಧೆ-ಜ್ಞಾನದಿಂದ ರಹಿತರಾಗಿ, ಅನೇಕ ಪ್ರಕಾರದ ವೇಷ ಧಾರಣ ಮಾಡಿ, ತಮ್ಮನ್ನು ಉಚ್ಚರೆಂದು ಮನ್ನಿಸಿಕೊಂಡು, ಜಗತ್ತಿನ ಜೀವರುಗಳಿಂದ ಪೂಜೆ-ವಂದನೆ-ಸತ್ಕಾರಗಳನ್ನಪೇಕ್ಷಿಸುತ್ತ ಪರಿಗ್ರಹವಿಡುತ್ತಾರೆ. ಅನೇಕ ಪ್ರಕಾರದ ಆರಂಭ ಮಾಡುತ್ತಾರೆ, ಹಿಂಸೆಯ ಕಾರ್ಯಗಳಲ್ಲಿ ಪ್ರವರ್ತಿಸುತ್ತಾರೆ, ಇಂದ್ರಿಯ ವಿಷಯಗಳನ್ನು ರಾಗೀ-ಸಂಸಾರೀ-ಅಸಂಯಮೀ ಅಜ್ಞಾನಿಗಳೊಡನೆ ಮಾತುಕತೆಮಾಡಿ ಅಭಿಮಾನಿಯಾಗಿ ತಮ್ಮನ್ನು ಆಚಾರ್ಯ, ಪೂಜ್ಯ, ಧರ್ಮಾತ್ಮರೆಂದು ಕರೆಸಿಕೊಳ್ಳುತ್ತ ರಾಗೀ-ದ್ವೇಷಿಗಳಾಗಿ ಪ್ರವರ್ತಿಸುತ್ತಾರೆ; ಯುದ್ಧಶಾಸ್ತ್ರ ಶೃಂಗಾರದ ಶಾಸ್ತ್ರ ಹಿಂಸೆಯ ಕಾರಣವಾದ ಆರಂಭದ ಶಾಸ್ತ್ರ, ರಾಗವೃದ್ಧಿಸುವಂಥ ಶಾಸ್ತ್ರಗಳ ಮಹಂತರಾಗಿ ತಾವು ಉಪದೇಶ ಕೊಡುತ್ತಾರೆ. ಇವರೆಲ್ಲರು ಪಾಖಂಡಿಗಳಿದ್ದಾರೆ.

ಅನೇಕ ಪ್ರಕಾರದ ರಸಗಳಿಂದ ಯುಕ್ತವಾದ ಭೋಜನದಲ್ಲಿ ಆಸಕ್ತಿಯಿದೆ; ಇದೇ ಕಾರಣದಿಂದ ಕಾಮ-ಭೋಗ-ಬಂಧದ ಕಥೆಗಳಲ್ಲಿ ಲೀನರಾಗುತ್ತಿದ್ದಾರೆ; ಪರಿಗ್ರಹವನ್ನು ಹೆಚ್ಚಿಸುವ ಸಲುವಾಗಿ ದುರ್ಧ್ಯಾನಿಯಾಗುತ್ತಿದ್ದಾರೆ; ಅವರು ಮುನಿ, ಸಾಧು, ಆಚಾರ್ಯ, ಮಹಂತ, ಪೂಜ್ಯ ನಾಮದಿಂದ ಕರೆಸಿಕೊಳ್ಳುತ್ತಾರೆ. ಜನರಿಂದ ನಮಸ್ಕಾರ ಮಾಡಿಸಿಕೊಳ್ಳಲು ಬಯಸುತ್ತಾರೆ; ವಿಕಥೆ ಮಾಡುತ್ತಾರೆ; ವಿಷಯಗಳಲ್ಲಿ ಲೀನರಿದ್ದಾರೆ; ಮಂತ್ರ-ತಂತ್ರ-ಯಂತ್ರ-ಜಪ-ಮಾರಣ-ಉಚ್ಚಾಟನ-ವಶೀಕರಣ ಮೊದಲಾದ ನಿಂದ್ಯ ಆಚರಣೆ ಮಾಡುತ್ತಾರೆ. ಅವರೆಲ್ಲರು ಪಾಖಂಡಿಗಳಿದ್ದಾರೆ. **ಆ ಪಾಖಂಡಿಗಳ ವಚನಗಳನ್ನು ಪ್ರಮಾಣವೆಂದು ಮನ್ನಿಸುವುದು, ಅವರ ಸತ್ಕಾರ ಮಾಡುವದು, ಅವರನ್ನು ಧರ್ಮ ಕಾರ್ಯದಲ್ಲಿ ಮುಖ್ಯರೆಂದು ಮನ್ನಿಸುವುದು ಅದು ಪಾಖಂಡಿ ಮೂಢತೆಯಿದೆ.**

ಈಗ ಸಮ್ಯಕ್ತ್ವವನ್ನು ನಷ್ಟ ಮಾಡುವಂಥ ಎಂಟು ಮದಗಳ ಹೆಸರು ಹೇಳುವಂಥ ಸೂತ್ರ ಹೇಳುತ್ತಾರೆ,-

**ಜ್ಞಾನಂ ಪೂಜಾಂ ಕುಲಂ ಜಾತಿಂ ಬಲವೃದ್ಧಿಂ ತಪೋ ವಪುಃ ।**
**ಅಷ್ಟಾವಾಶ್ರಿತ್ಯ ಮಾನಿತ್ವಂ ಸ್ವಯಮಾಹುರ್ಗತಸ್ಮಯಾಃ ॥೨೫॥**

**ಅರ್ಥ :-** ಮದವು ನಷ್ಟವಾಗಿ ಹೋಗಿರುವಂಥ ಗಣಧರದೇವರು ೧) ಜ್ಞಾನ, ೨) ಪೂಜೆ, ೩) ಕುಲ, ೪) ಜಾತಿ, ೫) ಬಲ, ೬) ಋದ್ಧಿ, ೭) ತಪ, ೮) ಶರೀರವೆಂದು ಎಂಟು ಪ್ರಕಾರದ ಮದಗಳನ್ನು ಹೇಳಿದ್ದಾರೆ. ಈ ಎಂಟರ ಆಶ್ರಯದಿಂದ ಯಾವ ಅಭಿಮಾನವು ಬರುತ್ತದೆ ಅದನ್ನು ಸ್ಮಯ ಎಂದರೆ ಮದವೆಂದು ಹೇಳುತ್ತಾರೆ.

**ಭಾವಾರ್ಥ :-** ೧) ಜ್ಞಾನದ ಮದ, ೨) ಪೂಜೆಯ ಮದ, ೩) ಕುಲದ ಮದ, ೪) ಜಾತಿಯ ಮದ, ೫) ಬಲದ ಮದ, ೬) ಋದ್ಧಿಯ ಮದ, ೭) ತಪದ ಮದ, ೮) ಶರೀರದ ಮದ, ಈ ಎಂಟು ಮದಗಳು ಸಮ್ಯಗ್ದೃಷ್ಟಿಗೆ ಇರುವುದಿಲ್ಲ.

**೧) ಜ್ಞಾನಮದ - ಒಂದಾದರೂ ಮದವಿದ್ದವನು ಸಮ್ಯಗ್ದೃಷ್ಟಿ ಹೇಗಾಗುವ ಸಾಧ್ಯತೆಯಿದೆ ?** ಸಮ್ಯಗ್ದೃಷಿಯ ಚಿಂತನವು ಯಥಾರ್ಥವಿದೆ. ಅವನು ವಿಚಾರ ಮಾಡುವುದೇನೆಂದರೆ ಎಲೈ ಆತ್ಮನೇ ! ನೀನಂತೂ ಇಂದ್ರಿಯಗಳಿಂದ ಉತ್ಪನ್ನವಾದ ಜ್ಞಾನ ಪಡೆದಿರುವೆ, ಅದರ ಗರ್ವವನ್ನೇಕೆ ಮಾಡುವುದು ? ಆ ಜ್ಞಾನವಂತೂ ಜ್ಞಾನಾವರಣಕರ್ಮದ ಕ್ಷಯೋಪಶಮದ ಆಧೀನವಿದೆ, ವಿನಾಶಶೀಲವಿದೆ, ಇಂದ್ರಿಯಗಳ ಆಧೀನವಿದೆ, ವಾತ ಪಿತ್ತ ಕಫಾದಿಗಳ ಆಧೀನವಿದೆ, ಅದು ನಷ್ಟವಾಗುವಲ್ಲಿ ಅಧಿಕ ಸಮಯ ತಗಲುವುದಿಲ್ಲ. ಏಕೆ ಅದರ ಗರ್ವ ಮಾಡುತ್ತಿರುವೆ ? ಇಂದ್ರಿಯಗಳು ನಷ್ಟವಾಗುತ್ತಿರುವಂತಯೇ ಜ್ಞಾನವೂ ನಷ್ಟವಾಗಿ ಹೋಗುತ್ತದೆ, ವಾತ-ಪಿತ್ತ- ಕಫಾದಿಗಳ ಹಾನಿ-ವೃದ್ಧಿಯಾದ ಮೇಲೆ ಕ್ಷಣ ಮಾತ್ರದಲ್ಲಿ ಜ್ಞಾನವು ವಿಪರೀತವಾಗಿಹೋಗುತ್ತದೆ, ಮೂರ್ಖವಾಗಿ ಬಿಡುತ್ತದೆ.

**ಇಂದ್ರಿಯಜನ್ಯ ಜ್ಞಾನವಂತೂ ಶರೀರದ ಜತೆಯಲ್ಲೇ ವಿನಾಶವಾಗಿ ಹೋಗುವುದು.** ಎಷ್ಟೋ ಬಾರಿ ಏಕೇಂದ್ರಿಯವಾಗಿದೆ, ಶೇಷ ನಾಲ್ಕು ಇಂದ್ರಿಯಗಳು ಪ್ರಾಪ್ತವಾಗಲೇ ಇಲ್ಲ. ಏಕೇಂದ್ರಿಯಗಳಲ್ಲಿ ಜಡರೂಪ ಪಾಷಾಣ, ಧೂಳು, ಪೃಥ್ವೀರೂಪವಾಗಿ ಅಸಂಖ್ಯಾತ ಕಾಲದವರೆಗೆ ಅಜ್ಞಾನಿಯಾಗಿ ಉಳಿದನು. ಎಷ್ಟೋ ಬಾರಿ ವಿಕಲತ್ರಯದಲ್ಲಿ ಹಿತಾಹಿತದ ಬೋಧರಹಿತನಾದನು. ಎಷ್ಟೋ ಬಾರಿ ಹುಲಿ, ಸಿಂಹ, ಸರ್ಪಾದಿಗಳಲ್ಲಿ ವಿಪರೀತ ಜ್ಞಾನಿಯಾಗಿ ಭ್ರಮಣ ಮಾಡಿದನು. ನಿಗೋದದಲ್ಲಿ ಅಕ್ಷರದ ಅನಂತದ ಭಾಗ ಮಾತ್ರ ಜ್ಞಾನ ಸಹಿತನಾದನು. ವ್ಯಂತರ ಮೊದಲಾದ ಅಧಮ ದೇವಗಳಲ್ಲಿಯೂ **ಮಿಥ್ಯಾತ್ವದ ಪ್ರಭಾವದಿಂದ ಸ್ವ-ಪರಗಳನ್ನು ತಿಳಿದುಕೊಳ್ಳಲಾರದೆ ಮರಣ ಹೊಂದಿ ಏಕೇಂದ್ರಿಯದಲ್ಲಿ ಉತ್ಪನ್ನನಾಗಿ ಅನಂತಕಾಲದವರೆಗೆ ಪರಿಭ್ರಮಣ ಮಾಡಿದ್ದಾನೆ.**

ಮನುಷ್ಯರಲ್ಲೂ ವಿರಳ ಮನುಷ್ಯರಿಗೆ ಜ್ಞಾನಾವರಣದ ಕ್ಷಯೋಪಶಮದ ಅಧಿಕತೆಯಿಂದ ತೀಕ್ಷ್ಣ ಜ್ಞಾನಿಯಾಗಿ ಹೋಗುತಿದ್ದರೂ ಅವರಲ್ಲೂ ಅದೆಷ್ಟೋ ಮನುಷ್ಯರಂತೂ ನೀಚ ಕಾರ್ಯಗಳಲ್ಲಿ ಪ್ರವೀಣರಾಗಿ ಅನೇಕ ಜಲಚರ ಜೀವ,

ಸ್ಥಲ ಚರ ಜೀವ, ಆಕಾಶದಲ್ಲಿ ವಿಹಾರಮಾಡುವಂಥ ಜೀವಗಳನ್ನು ಹೊಡೆಯುವಲ್ಲಿ, ಹಿಡಿಯುವಲ್ಲಿ, ಬಂಧಿಸುವಲ್ಲಿ ಅನೇಕ ಯಂತ್ರ-ಪಂಜರ-ಬಲೆ-ಶೂಲಗಳನ್ನು ನಿರ್ಮಿಸುವಲ್ಲಿ ಚತುರತೆಯ ಉಪಯೋಗ ಮಾಡುತ್ತಾರೆ. ಅದೆಷ್ಟೋ ಮನುಷ್ಯರು ಅನೇಕ ಪ್ರಕಾರದ ಕರವಾಳ-ಬಂದೂಕು-ತುಬಾಕಿ-ಬಾಣ, ವಿಷ ಮೊದಲಾದುವನ್ನು ನಿರ್ಮಿಸುವ ವಿದ್ಯೆಯಲ್ಲಿ ಪ್ರವೀಣರಾಗಿ ತಮ್ಮ ಚತುರತೆಯ ಮದದಲ್ಲಿ ಉನ್ಮತ್ತರಾಗಿ ನಗರ-ದೇಶಗಳ ವಿಧ್ವಂಸ ಮಾಡುವಲ್ಲಿ ನಿಪುಣರಾಗಿ ಹೋಗುತ್ತಾರೆ. ಅದೆಷ್ಟೋ ಮನುಷ್ಯರು ಸಿಂಹ, ಹುಲಿ, ಚಿರತೆ ಮೊದಲಾದ ಜೀವಗಳ ಬೇಟೆ ಮಾಡುವಲ್ಲಿ ಚತುರರಾಗಿ ಬಿಡುತ್ತಾರೆ.

ಅದೆಷ್ಟೋ ಮನುಷ್ಯರು ಜ್ಞಾನದ ಅಧಿಕ ಕ್ಷಯೋಪಶಮ ಪಡೆದು, ಇತರ ಅನೇಕ ಮನುಷ್ಯರ ಧನಕಸಿದುಕೊಳ್ಳುವಲ್ಲಿ ಸುಲಿಗೆ ಮಾಡುವಲ್ಲಿ, ದಾರಿಯಿಂದ ಹೋಗುವ ಜನರ ಧನಕೊಳ್ಳೆ ಹೊಡೆಯುವಲ್ಲಿ, ಕೊಲೆ ಮಾಡುವಲ್ಲಿ ಪ್ರವೀಣರಾಗಿ ಹೋಗುತ್ತಾರೆ. ಅದೆಷ್ಟೋ ಮನುಷ್ಯರು ಜ್ಞಾನದ ತೀಕ್ಷ್ಣತೆ ಪಡೆದು ಸಾತ್ವಿಕ ಜೀವಗಳ ತಿರಸ್ಕಾರ ಮಾಡುವಲ್ಲಿ, ಅಸತ್ಯರನ್ನು ಸತ್ಯರೆಂದು ಸಿದ್ಧಮಾಡಿ ಬಿಡುವಲ್ಲಿ, ಸತ್ಯರನ್ನು ಅಸತ್ಯರೆಂದು ಸಿದ್ಧಮಾಡುವಲ್ಲಿ, ಧನ ಮತ್ತು ಪ್ರಾಣಗಳೆರಡನ್ನೂ ಹರಣ ಮಾಡುವಲ್ಲಿ ಪ್ರವೀಣರಾಗಿ ಹೋಗುತ್ತಾರೆ. ಅದೆಷ್ಟೋ ಮನುಷ್ಯರು ತಮ್ಮ ಜ್ಞಾನದ ತೀಕ್ಷಣತೆಯ ಮೂಲಕ ಮನುಷ್ಯರ ನಿಂದೆ ಮಾಡುವಲ್ಲಿ, ಲೂಟಿ ಮಾಡಿಸುವಲ್ಲಿ, ಧನ-ಭೂಮಿ-ಆಜೀವಿಕೆ ಮೊದಲಾದವುಗಳನ್ನು ನಷ್ಟ ಮಾಡಿಬಿಡುವಲ್ಲಿ ದೊರೆ ಮೊದಲಾದವರಿಂದ ಶಿಕ್ಷೆ ಮಾಡಿಸಿ ಬಿಡುವಲ್ಲಿ, ಮರಣ ಮಾಡಿಸಿ ಬಿಡುವಲ್ಲಿ ಪ್ರವೀಣರಾಗುತ್ತಾರೆ.

ಅದೆಷ್ಟೋ ಮನುಷ್ಯರು ಕಟ್ಟಿಗೆ, ಪಾಷಾಣ, ಧಾತು, ರತ್ನ ಮೊದಲಾದ ಅನೇಕ ವಸ್ತುಗಳನ್ನು ಮಾಡುವಲ್ಲಿ; ಚಿತ್ರ, ಆಭರಣ, ವಸ್ತ್ರ ಮನೆ ಮೊದಲಾದ ಅನೇಕ ಪ್ರಕಾರದ ರಚನೆ ಮಾಡಿಕೊಡುವಲ್ಲಿ ಪ್ರವೀಣತೆ ಪಡೆದು ಅಭೀಮಾನದ ವಶವರ್ತಿಯಾಗಿ ನಷ್ಟರಾಗಿ ಹೋಗುತ್ತಾರೆ. ಅದೆಷ್ಟೋ ಮನುಷ್ಯರು ಜ್ಞಾನದ ಪ್ರಬಲತೆ ಪಡೆದು ಅನೇಕ ಶೃಂಗಾರ ಶಾಸ್ತ್ರ ಯುದ್ಧಶಾಸ್ತ್ರ, ವೈದ್ಯಕೀಯಶಾಸ್ತ್ರ ಮೊದಲಾದವುಗಳನ್ನು ರಚಿಸಿ ದೊರೆಗಳನ್ನು ಪ್ರಸನ್ನ ಮಾಡುತ್ತಾರೆ. ಅವರು ಅನೇಕ ಛಂದಸ್ಸು, ಅಲಂಕಾರ, ವ್ಯಾಕರಣ ವಿದ್ಯೆ, ಏಕಾಂತರೂಪದ ನ್ಯಾಯ ವಿದ್ಯೆ, ವೇದ-ಪುರಾಣ, ಕ್ರಿಯಾಕಾಂಡ ಮೊದಲಾದ ಪ್ರರೂಪಣೆ ಮಾಡಿ ಗರ್ವಿಷ್ಟರಾಗಿ, ಆತ್ಮಜ್ಞಾನದಿಂದ ರಹಿತರಾಗಿ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾರೆ.

ಅದೆಷ್ಟೋ ಜನರು ವೀತರಾಗ ಧರ್ಮವನ್ನು ಪ್ರಾಪ್ತಮಾಡಿಕೊಂಡು ಕೂಡ ಮಿಥ್ಯಾತ್ವದ ತೀವ್ರ ಉದಯದಿಂದ ಸತ್ಯಜ್ಞಾನ-ಶ್ರದ್ಧೆಯನ್ನು ಪಡೆಯದೆ ತಮ್ಮ ಅಭಿಮಾನ, ವಚನ, ಪಕ್ಷಗಳನ್ನು ಪುಷ್ಟಿಮಾಡುವ ಸಲುವಾಗಿ ಶಾಸ್ತ್ರವಿರುದ್ಧವಾದ ಮಾರ್ಗದಲ್ಲಿ ಪ್ರವರ್ತನೆ ಮಾಡಿಸಿ ತಮ್ಮನ್ನು ಧನ್ಯರೆಂದು ಮನ್ನಿಸುತ್ತಾರೆ. **ಈ ಪ್ರಕಾರ ಜ್ಞಾನದ ಅಧಿಕತೆಯನ್ನು ಪ್ರಾಪ್ತ ಮಾಡಿಕೊಂಡೂ ಮಿಥ್ಯಾತ್ವದ ಪ್ರಭಾವದಿಂದ ಇನ್ನೂ ಹೆಚ್ಚು ಹೆಚ್ಚಾಗಿ ಬಂಧ ಮಾಡಿಕೊಂಡು ಸಂಸಾರದಲ್ಲಿಯೇ ನಷ್ಟರಾಗುತ್ತಾರೆ.** ಆದುದರಿಂದ ಈಗ ವೀತರಾಗ ಸಮ್ಯಗ್ಜ್ಞಾನೀ ಗುರುಗಳ ಉಪದೇಶ ಪಡೆದು ಜ್ಞಾನದ ಗರ್ವ ಮಾಡಬೇಡಿರಿ!

**ಎಲೈ ಆತ್ಮನೇ ! ನಿನ್ನ ಸ್ವಭಾವವಂತೂ ಸಮಸ್ತ ಲೋಕಾಲೋಕಗಳನ್ನು ತಿಳಿಯುವಂಥ ಕೇವಲಜ್ಞಾನ ರೂಪವಿದೆ.** ಈಗ ಕರ್ಮದ ಕ್ಷಯೋಪಶಮದಿಂದ ಇಂದ್ರಿಯಗಳ ಆಧೀನವಿರುವ ಶಾಸ್ತ್ರಗಳ ಜ್ಞಾನವು ಸ್ವಲ್ಪ ಪ್ರಕಟವಾಗಿದೆ ಅದರ ಗರ್ವವನ್ನೇಕೆ ಮಾಡುತ್ತಿರುವೆ ? ಯಾವ ಪ್ರಕಾರ ಒಬ್ಬನು ತನ್ನ ಪ್ರಬಲ ಶತ್ರುವಾದ ಮಂಡಲೇಶ್ವರ ದೊರೆಯನ್ನು ಕಟ್ಟಿತಂದು ಜೈಲಿನಲ್ಲಿಟ್ಟು ಒಂದಿಷ್ಟು ಕೀಳು ಭೋಜನವಿತ್ತು ಅನೇಕ ಪ್ರಕಾರದಿಂದ ಕಷ್ಟ ಕೊಡುತ್ತಾನೆ;ಎಂದಾದರೊಮ್ಮೆ ಒಂದಿಷ್ಟು ಸಿಹಿ ಭೋಜನವನ್ನೂ ಕೊಟ್ಟನೆಂದರೆ ಆ ಮಂಡಲೇಶ್ವರ ದೊರೆಯು ಜೈಲಿನಲ್ಲಿ ಬಿದ್ದುಕೊಂಡು ಆ ಅಲ್ಪವಾದ ಮಿಷ್ಟ ಭೋಜನವನ್ನು ಪಡೆದು ಗರ್ವಮಾಡುವನೇನು? ಅದೇ ಪ್ರಕಾರ ನಿಮ್ಮ ಅನಂತ ಜ್ಞಾನಸ್ವರೂಪವಾದ ಕೇವಲ ಜ್ಞಾನವನ್ನು ಕರ್ಮಗಳು ಕೊಳ್ಳೆ ಹೊಡೆದು ಶರೀರರೂಪದ ಬಂದೀಗೃಹದಲ್ಲಿ ಪರಾಧೀನ ಮಾಡಿ ಇಟ್ಟಿವೆ. ಈಗ ಇಂದ್ರಿಯಗಳ ಮೂಲಕ ಸ್ವಲ್ಪ ಜ್ಞಾನವಿತ್ತರೆ ಅದನ್ನು ಪಡೆದು ಗರ್ವವನ್ನೇಕೆ ಮಾಡುವಿರಿ ?

ಈ ಇಂದ್ರಿಯ ಜ್ಞಾನವಂತೂ ವಿನಾಶಶೀಲ ಪರಾಧೀನವಿದೆ, ಶರೀರದ ಜತೆಯಲ್ಲೇ ಅವಶ್ಯವಾಗಿ ನಷ್ಟವಾಗಿ ಹೋಗುವುದು. ಈ ಶರೀರದಲ್ಲಿ ಕೂಡ ರೋಗದಿಂದ, ವೃದ್ಧಾವಸ್ಥೆಯಿಂದ, ಇಂದ್ರಿಯಗಳ ವಿಕಲತೆಯಿಂದ, ದುಷ್ಟರ

ಸಂಗತಿಯಿಂದ, ವಿಷಯ-ಕಷಾಯಗಳ ಅಧಿಕತೆಯಿಂದ ಕ್ಷಣಮಾತ್ರದಲ್ಲಿಯೇ **ಈ ಇಂದ್ರಿಯಜ್ಞಾನದ ವಿನಾಶವಾಗುವಲ್ಲಿ ಸಂದೇಹವಿಲ್ಲ. ಈ ವಿನಾಶಶೀಲವಾದ ಜ್ಞಾನವನ್ನು ಪಡೆದು ಒಂದು ವೇಳೆ ಗರ್ವ ಮಾಡಿದಿರೆಂದರೆ ನಿಮ್ಮ ಸಮಸ್ತ ಗುಣಗಳು ನಷ್ಟವಾಗಿ ಹೋಗುವವು ಮತ್ತು ನಿಮ್ಮ ಜ್ಞಾನವು ಹೊರಟು ಹೋಗಿ ನೀವು ಏಕೇಂದ್ರಿಯ ಮೊದಲಾದವುಗಳಲ್ಲಿ ಹೋಗಿ ಜನ್ಮವೆತ್ತಬೇಕಾಗುವುದು.**

ಈ ಕಾಲದಲ್ಲಿ ನೀವು ಒಂದಿಷ್ಟು ಕವಿತೆ, ಛಂದಸ್ಸು, ಚರ್ಚೆ ತಿಳಿದುಕೊಂಡು, ಹೊಸಕಾವ್ಯ, ಶ್ಲೋಕ, ಶಾಸ್ತ್ರ ಛಂದಸ್ಸು, ಯುಕ್ತಿಮಾಡಿ ಮತ್ತು ಸ್ವಲ್ಪ ಜಿನಮತದ ಸಿದ್ಧಾಂತಗಳ ಜ್ಞಾನ ಪಡೆದು ಗರ್ವದ ಪುಷ್ಟಿ ಮಾಡಿಕೊಳ್ಳುತ್ತಿರುವಿರಿ, ಆದರೆ ಗರ್ವ ಮಾಡುವುದು ಉಚಿತವಿಲ್ಲ.

**ಪೂರ್ವಕಾಲದಲ್ಲಿ ಆದ ಜ್ಞಾನೀ ವೀತರಾಗಿಗಳು ಬರೆದ ಗ್ರಂಥಗಳ ವಾಕ್ಯಗಳನ್ನು ನೋಡಿರಿ !** ಆಚಾರ್ಯ ಅಕಲಂಕದೇವರಿಂದ ರಚನೆಗೊಂಡ **ಲಘುತ್ರಯೀ, ಬೃಹತ್ತ್ರಯೀ, ಚೂಲಿಕೆ**ಯೆಂದು ಏಳು ಗ್ರಂಥಗಳಿವೆ. ಅವನ್ನು ತಿಳಿದುಕೊಳ್ಳುವ ಸಲುವಾಗಿ ಮಾಣಿಕ್ಯನಂದಿ ಮುನಿರಾಜರು **'ಪರೀಕ್ಷಾಮುಖ'** ರಚಿಸಿದರು. ಅದರ ಮೇಲೆ **'ಪ್ರಮೇಯ ಕಮಲಮಾರ್ತಂಡ'**ವೆಂಬ ಹನ್ನೆರಡು ಸಾವಿರ ಶ್ಲೋಕಪ್ರಮಾಣದ ಬೃಹದ್ ಟೀಕೆಯನ್ನು ಆಚಾರ್ಯ ಪ್ರಭಾಚಂದ್ರರು ರಚಿಸಿದರು. ಲಘುತ್ರಯೀದ ಮೇಲೆ ಆಚಾರ್ಯ ಪ್ರಭಾಚಂದ್ರರು **'ನ್ಯಾಯಕುಮುದ ಚಂದ್ರೋದಯ'**ವೆಂಬ ಹೆಸರಿನಿಂದ ಹದಿನಾರುಸಾವಿರ ಶ್ಲೋಕಗಳನ್ನು ಬರೆದಿದ್ದಾರೆ. ತತ್ತ್ವಾರ್ಥಸೂತ್ರದ ಮೇಲೆ **'ಗಂಧಹಸ್ತಿಮಹಾಭಾಷ್ಯ'**ವೆಂಬ ಎಂಭತ್ತಾ ನಾಲ್ಕು ಸಾವಿರ ಶ್ಲೋಕಗಳ ಟೀಕೆಯಿದ್ದು ಅದು ಈಗ ಲಭ್ಯವಿಲ್ಲ. ಅದರ ಮಂಗಲಾಚರಣೆಯ ಮೇಲೆ ಆಚಾರ್ಯ ಸಮಂತಭದ್ರರು **'ಆಪ್ತಮೀಮಾಂಸೆ'** ಬರೆದಿದ್ದು ಅದು **'ದೇವಾಗಮಸ್ತೋತ್ರ'** ದ ಹೆಸರಿನಿಂದಲೂ ಪ್ರಸಿದ್ಧವಿದೆ. ಅದರಮೇಲೆ **'ಅಷ್ಟಶತೀ'** ಮತ್ತು ಆಚಾರ್ಯ ವಿದ್ಯಾನಂದರು **'ಅಷ್ಟಸಹಸ್ರೀ'** ಬರೆದಿದ್ದಾರೆ ಅಕಲಂಕದೇವರು **'ರಾಜವಾರ್ತಿಕ'** ರಚಿಸಿದ್ದಾರೆ. ಆಚಾರ್ಯ ವಿದ್ಯಾನಂದರು ಹದಿನೆಂಟುಸಾವಿರ ಶ್ಲೋಕದಲ್ಲಿ **'ಶ್ಲೋಕವಾರ್ತಿಕ'** ಬರೆದಿದ್ದಾರೆ ಮತ್ತು **'ಆಪ್ತ ಪರೀಕ್ಷೆ'**ಯನ್ನು ಕೂಡ ಬರೆದಿದ್ದಾರೆ.

ಅವರ ನಿರ್ಬಾಧ ವಚನಗಳ ಪ್ರಭಾವವನ್ನು ನೋಡಿ ದೊಡ್ಡ-ದೊಡ್ಡ ವಾದಿಗಳ - ತಾರ್ಕಿಕರ ಗರ್ವವು ಸೋರಿ ಹೋಗುತ್ತದೆ. ನಾಟಕತ್ರಯ, ಸಾರತ್ರಯ ಇತ್ಯಾದಿ ಅನೇಕಾಂತರೂಪ ನಿರ್ಬಾಧ ಯುಕ್ತಿ-ಯುಕ್ತ ವಚನಗಳನ್ನು ತಿಳಿದುಕೊಂಡು ಹೇಗೆ ಜ್ಞಾನದ ಗರ್ವ ಮಾಡುವಿರಿ ? ಯಾವುದೇ ಪ್ರಕಾರ ಶ್ರುತಜ್ಞಾನಾವರಣ ಕರ್ಮದ ಕ್ಷಯೋಪಶಮದಿಂದ ಸ್ವಲ್ಪ ಜ್ಞಾನ ಪಡೆದುಕೊಂಡಿದ್ದರೆ ಅದನ್ನು ಮಹಾದುರ್ಲಭ ವಸ್ತುವೆಂದು ತಿಳಿದುಕೊಂಡು ಆತ್ಮನನ್ನು ವಿಷಯಗಳಿಂದ ಹಾಗೂ ಅಭಿಮಾನ ಮೊದಲಾದ ಕಷಾಯಗಳಿಂದ ಬಿಡಿಸಿ ಪರಮ ಸಮತೆಯನ್ನು ಧಾರಣ ಮಾಡಿ ಸಂಸಾರ ಪರಿಭ್ರಮಣದ ಅಭಾವ ಮಾಡುವ ಪ್ರಯತ್ನ ಮಾಡಿರಿ. **ಜ್ಞಾನದ ಗರ್ವಮಾಡಿ ಆತ್ಮನನ್ನು ಅನಂತ ಸಂಸಾರಿಯನ್ನಾಗಿ ಮಾಡಬೇಡಿರಿ.** ಈ ಪ್ರಕಾರ ಜ್ಞಾನಮದದ ಅಭಾವ ಮಾಡುವ ಉಪದೇಶ ಕೊಡಲಾಗಿದೆ.

**೨) ಪೂಜಾಮದ** - ಈ ಎರಡನೆಯ ಪೂಜ್ಯತೆಯ ಮದ-ಐಶ್ವರ್ಯದ ಮದವನ್ನು ಸಮ್ಯಗ್ದೃಷ್ಟಿಯು ಮಾಡುವುದಿಲ್ಲ. ಈ ರಾಜ್ಯ ಐಶ್ವರ್ಯವು ಆತ್ಮನ ಸ್ವಭಾವವಿಲ್ಲ, ಕರ್ಮಗಳ ಕ್ರಿಯೆಯಿದೆ, ವಿನಾಶಶೀಲವಿದೆ, ಪರಾಧೀನವಿದೆ, ದುರ್ಗತಿಯ ಕಾರಣವಿದೆ. ನನ್ನ ಐಶ್ವರ್ಯವಂತೂ ಅನಂತಚತುಷ್ಟಯಮಯ ಅಕ್ಷಯ-ಅವಿನಾಶೀ-ಅಖಂಡ ಸುಖಮಯವಿದೆ, ಅನಂತ ಜ್ಞಾನ-ದರ್ಶನಮಯವಿದೆ, ಅನಂತ ಶಕ್ತಿರೂಪವಿದೆ. ಈ ಐಶ್ವರ್ಯವು ಕರ್ಮಕೃತ, ಮಹಾಉಪಾಧಿರೂಪ, ಆತ್ಮನಿಗೆ ಕ್ಲೇಶವನ್ನುಂಟುಮಾಡಿ ದುರ್ಗತಿಯಲ್ಲಿ ತಲುಪಿಸುವಂಥ, ಸ್ವರೂಪವನ್ನು ಮರೆಸುವಂಥದ್ದಿದ್ದು ಆತ್ಮನ ಸ್ವರೂಪವಿಲ್ಲ, ಇದು ಕಲಹದ ಮೂಲವಿದೆ, ವೈರದ ಕಾರಣವಿದೆ, ಕ್ಷಣಭಂಗುರವಿದೆ, ಪರಮಾತ್ಮ ಸ್ವರೂಪವನ್ನು ಮರೆಸುವಂಥದ್ದಿದೆ, ಮಹಾದಾಹವನ್ನುಂಟು ಮಾಡುವಂಥದ್ದಿದೆ, ದುಃಖಸ್ವರೂಪವಿದೆ, ಅನೇಕ ಜೀವಗಳ ಘಾತಕವಿದೆ. **ಮಹಾರಂಭ ಮಹಾಪರಿಗ್ರಹದಲ್ಲಿ ಕುರುಡಮಾಡಿ ನರಕದಲ್ಲಿ ತಳ್ಳುವಂಥದ್ದಿದೆ.** ಈ ಐಶ್ವರ್ಯದಿಂದ ನಾನು ಅದೆಷ್ಟು ದಿವಸ ಪೂಜ್ಯನಾಗಿ ಉಳಿಯುವೆನು ? ಅದು ಕ್ಷಣ ಮಾತ್ರದಲ್ಲಿ ನಷ್ಟವಾಗುವುದರಿಂದ ನಾನು ದರಿದ್ರನಾಗಿ ಹೋಗುವೆನು.

ಜಗತ್ತಿನಲ್ಲಿ ಧನದ ಲೋಭಿಗಳು ಹಾಗೂ ಅಜ್ಞಾನೀ ಜನರು ನನ್ನನ್ನು ಶ್ರೇಷ್ಠನೆಂದು ಮನ್ನಿಸುತ್ತಾರೆ, ಸತ್ಕಾರ ಮಾಡುತ್ತಾರೆ, ಆದರೆ ಆ ರಾಜ್ಯ, ಸಂಪತ್ತು ಮೊದಲಾದವುಗಳ ಮೇಲೆ ನನ್ನ ಸ್ವಾಮಿತ್ವವು ಎಷ್ಟು ದಿವಸದ್ದಿದೆ ? ಮರಣದ ದಿವಸವೂ ಹತ್ತಿರ ಬರುತ್ತಲಿದೆ. ನನ್ನಂಥ ಅನಂತಾನಂತ ಜೀವರುಗಳು ಸಂಪತ್ತನ್ನು ತಮ್ಮದೆಂದು ಮನ್ನಿಸುವಂಥವರು ನಷ್ಟರಾಗಿ ಹೋಗಿದ್ದಾರೆ. ಪರಮಾಣು ಮಾತ್ರದಷ್ಟು ಪರದ್ರವ್ಯವು ನನ್ನದಿಲ್ಲ ಒಂದು ದ್ರವ್ಯವು ಇನ್ನೊಂದು ದ್ರವ್ಯದ್ದು ಹೇಗಾಗುವ ಸಾಧ್ಯತೆಯಿದೆ ?

ಈ ಪರ್ಯಾಯದಲ್ಲಿ ಕರ್ಮಕೃತ ಪರದಸಂಯೋಗರೂಪದ ಐಶ್ವರ್ಯವಿದೆ ಅದು ದಾನ, ಸನ್ಮಾನ, ಶೀಲ, ಸಂಯಮ ಇತರ ಜೀವಗಳ ಉಪಕಾರದಲ್ಲಿ ತೊಡಗಿಸುವುದರಿಂದಲೇ ಪ್ರಶಂಸಾಯೋಗ್ಯವಿದೆ. ಐಶ್ವರ್ಯ ಪಡೆದು ಗರ್ವರಹಿತ, ಇಚ್ಛಾರಹಿತ, ಸಮತಾಸಹಿತ, ವಿನಯವಂತವಿರುವುದು ಶುಭಗತಿಯ ಕಾರಣವಿದೆ. ಮಿಥ್ಯಾದರ್ಶನಜನ್ಯ ಮಿಥ್ಯಾಭಾವವು ಜೀವನಿಗೆ ತನ್ನ ಸ್ವರೂಪವನ್ನು ಮರೆಸಿ ಐಶ್ವರ್ಯದಲ್ಲಿ ಸಿಲುಕಿಸಿ ನರಕಕ್ಕೆ ತಲುಪಿಸಿ ಬಿಡುತ್ತದೆ. ಹೀಗೆ ದೃಢಶ್ರದ್ಧೆ ಮಾಡುತ್ತ ಸಮ್ಯಗ್ದೃಷ್ಟಿಯು ಪೂಜ್ಯತನದ - ಐಶ್ವರ್ಯದ ಗರ್ವಮಾಡುವುದಿಲ್ಲ. ಅನ್ಯ ಜೀವಗಳು ಅಶುಭ ಕರ್ಮದ ಉದಯದವಶವಾಗಿ ನಿರ್ಧನತೆಯಿಂದ ದುಃಖಿಯಾದುದನ್ನು ನೋಡಿ ಅಶುಭಸಾಮಗ್ರಿ ಸಹಿತವಿರುವುದನ್ನು ನೋಡಿ ಅವಜ್ಞೆ-ತಿರಸ್ಕಾರ ಮಾಡುವುದಿಲ್ಲ, ಆದರೆ ಕರುಣೆಯನ್ನೇ ಮಾಡುತ್ತಾನೆ.

**೩) ಕುಲಮದ :** ಈಗ ಸಮ್ಯಗ್ದೃಷ್ಟಿಗೆ ಕುಲಮದವಿರುವುದಿಲ್ಲವೆಂದು ಸಿದ್ಧ ಮಾಡುತ್ತಾರೆ. ಜಗತ್ತಿನಲ್ಲಿ ತಂದೆಯ ವಂಶವನ್ನು ಕುಲವೆಂದು ಹೇಳುತ್ತಾರೆ. ಸಮ್ಯಗ್ದೃಷ್ಟಿಯು ವಿಚಾರ ಮಾಡುವುದೇನೆಂದರೆ ನನ್ನ ಆತ್ಮನನ್ನು ಯಾರ ಮೂಲಕವೂ ಉತ್ಪನ್ನ ಮಾಡಲಾಗಿಲ್ಲ. **ನಾನಂತೂ ಜ್ಞಾನಸ್ವರೂಪನಾದ ಆತ್ಮನಿದ್ದೇನೆ,** ಅವನಿಗೆ ಕುಲವಿರುವುದೇ ಇಲ್ಲ, ಜ್ಞಾತಾ ದೃಷ್ಟಾಸ್ವಭಾವವೇ ನನ್ನ ಕುಲವಿದೆ. ನಾನು ಅನಾದಿಕಾಲದ ಕರ್ಮಗಳಿಂದ ಪರಾಧೀನನಿದ್ದೇನೆ. ಈ ಮನುಷ್ಯ ಪರ್ಯಾಯದಲ್ಲಿ ಉತ್ತಮ ಕುಲವು ದೊರಕಿದೆಯೆಂದ ಮೇಲೆ ಅದರ ಗರ್ವ ಮಾಡುವುದು ಮಹಾ ಅನರ್ಥಕಾರಿಯಿದೆ.

ಪೂರ್ವಭವಗಳಲ್ಲಿ ಅನಂತಬಾರಿ ನಾರಕಿಯಾಗಿದೆ, ಅನಂತಬಾರಿ ಸಿಂಹ-ಹುಲಿ-ಸರ್ಪಗಳ ಕುಲಗಳಲ್ಲಿ ಜನ್ಮವಾಗಿದೆ, ಅನಂತಬಾರಿ ಹಂದಿ, ನಾಯಿ, ಕುರಿ, ಕತ್ತೆ, ಒಂಟೆ, ಎತ್ತು, ಎಮ್ಮೆ, ನರಿ ಇತ್ಯಾದಿ ಕುಲಗಳಲ್ಲಿ ಜನ್ಮವಾಗಿದೆ; ಅನಂತಬಾರಿ ಮ್ಲೇಚ್ಛರ, ಭಿಲ್ಲರ, ಚಾಂಡಾಲರ, ಚರ್ಮಕಾರರ, ಧೀವರರ, ಕಟುಕರ ಕುಲಗಳಲ್ಲಿ ಜನ್ಮವಾಗಿದೆ; ಅನಂತಬಾರಿ ನಾವಲಿಗ, ಅಗಸ, ಗಾಣಿಗ, ಜಾಡ, ಕಮ್ಮಾರ, ಕುಂಭಕಾರರ ಕುಲಗಳಲ್ಲಿ ಜನ್ಮವಾಗಿದೆ, ಅನೇಕಬಾರಿ ನಿರ್ಧನರ ಕುಲದಲ್ಲಿ ಹುಟ್ಟಿದ್ದೇನೆ ಎಂದಾದರೊಮ್ಮೆ ಶುಭಕರ್ಮದ ಉದಯದಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಕುಲಗಳಲ್ಲಿ ಬಂದು ಜನ್ಮವಾಗಿದ್ದರೆ ಈಗ ಕರ್ಮವು ಮಾಡಿದ ಕುಲದಲ್ಲಿ ಬಂದು ಗರ್ವಮಾಡುವುದು ಮಹಾ ಅಜ್ಞಾನವಿದೆ. ಈ ಕುಲದಲ್ಲಿ ನಾನು ಅದೆಷ್ಟು ದಿನಗಳವರೆಗೆ ಇರುವುದಿದೆ ? ಅನಾದಿಯಿಂದ ಈ ಕುಲದಲ್ಲಿ ನನ್ನ ನಿವಾಸವಂತೂ ಇರಲಿಲ್ಲ, ನವೀನವಾಗಿ ಹುಟ್ಟಿದ್ದೇನೆ, ಮರಣಹೊಂದಿ ಮತ್ತೆ ಪುಣ್ಯ ಪಾಪದ ಅನುಸಾರ ಯಾವುದೋ ಬೇರೆ ಕುಲದಲ್ಲಿ ಹುಟ್ಟಬೇಕಾಗುವುದು.

**ಉತ್ತಮಕುಲ ಪ್ರಾಪ್ತ ಮಾಡಿಕೊಳ್ಳುವುದರ ಫಲವಂತೂ ಮೋಕ್ಷಮಾರ್ಗದ ಸಾಧಕವಾದ ರತ್ನತ್ರಯದಲ್ಲಿ ಪ್ರವರ್ತನೆ ಮಾಡುವುದು ಮತ್ತು ಅಧಮ ಆಚರಣೆಯ ತ್ಯಾಗ ಮಾಡುವುದಿದೆ.** ಹೀಗೆ ವಿಚಾರ ಮಾಡುವುದು ಕೂಡ ನನಗೆ ಪುಣ್ಯದ ಪ್ರಭಾವದಿಂದ ಉತ್ತಮ ಕುಲವು ದೊರಕಿರುವುದರಿಂದ ನೀಚ ಕುಲದ ಮನುಷ್ಯರ ಹಾಗೆ ಅಭಕ್ಷ್ಯ ಭಕ್ಷಣ ಮಾಡಬಾರದು; ಕಲಹ, ವಿಸಂವಾದ, ಹೊಡೆದಾಟ, ಬೈಗಳ, ಅಶ್ಲೀಲ ವಚನಗಳನ್ನಾಡಬಾರದು; ಜೂಜು ಆಡುವುದು ವೇಶ್ಯಾಗಮನ, ಕಳವು ಮಾಡುವುದು ಮೊದಲಾದವು ಉಚಿತವಿಲ್ಲ; ನಿಂದ್ಯಕರ್ಮ **ಶಾರೀರಕ ಪರಿಶ್ರಮವುಳ್ಳ ಆಜೀವಿಕೆ ಮಾಡುವುದು ಅಯೋಗ್ಯವಿದೆ.** ಹಾಸ್ಯ ಅಸತ್ಯವಚನ, ಛಲ-ಕಪಟ ಮಾಡುವುದು ಉಚಿತವಿಲ್ಲ, ನಾನು ಈಗ ಉತ್ತಮಕುಲ ಪಡೆದು ಕೂಡ ನಿಂದ್ಯಕರ್ಮ ಮಾಡಿದರೆ ಇಹಲೋಕದಲ್ಲಿ ನಿಂದಾಯೋಗ್ಯನಾಗಿ ಮುಂದೆ ದುರ್ಗತಿಗೆ ಪಾತ್ರನಾಗುವೆನೆಂದು ಸಮ್ಯಗ್ದೃಷ್ಟಿಯು ಕುಲದ ಗರ್ವ ಮಾಡುವುದಿಲ್ಲ.

**೪) ಜಾತಿಮದ :** ತಾಯಿಯ ವಂಶವನ್ನು ಜಾತಿಯೆಂದು ಹೇಳುತ್ತಾರೆ. ಸಮ್ಯಗ್ದೃಷ್ಟಿ ಜೀವನು ಜಾತಿಯ ಗರ್ವ ಮಾಡುವುದಿಲ್ಲ. ಸಮ್ಯಗ್ದೃಷ್ಟಿಯು ವಿಚಾರಮಾಡುವುದೇನೆಂದರೆ ನಾನು ಪೂರ್ವಭವಗಳಲ್ಲಿ ಅನಂತಬಾರಿ ನೀಚ ಜಾತಿಯಲ್ಲಿ ಹುಟ್ಟಿದ್ದೇನೆ. ಈಗ ಒಂದು ಬಾರಿ ಉಚ್ಚ ಜಾತಿಯಲ್ಲಿ ಹುಟ್ಟಿದ್ದೇನೆ. ಈ ಪ್ರಕಾರ ಅನಂತಬಾರಿ ನೀಚಜಾತಿ ಪಡೆದೆ ಮತ್ತು

ಅನಂತಬಾರಿ ಉಚ್ಚಜಾತಿ ಪಡೆದನು. ಈಗ ಉಚ್ಚಜಾತಿ ಪಡೆದಿರುವ ಗರ್ವವನ್ನೇನು ಮಾಡುವುದು ? ಅನೇಕ ಬಾರಿ ನಿಗೋದದಲ್ಲಿ ಹುಟ್ಟಿರುವೆ, ಹಂದಿ, ನಾಯಿ, ಭಿಲ್ಲಿನಿ, ಚಾಂಡಾಲಿನಿ, ದಾಸೀ, ಚರ್ಮಕಾರಿನಿ, ವೇಶ್ಯೆಯರ ಗರ್ಭದಲ್ಲಿಯೂ ಅನೇಕಬಾರಿ ಜನ್ಮ ಧಾರಣ ಮಾಡಿರುವೆನು.

ಈ ಜಾತಿಯಂತೂ ಪುಣ್ಯ-ಪಾಪಕರ್ಮದ ಫಲವಿದೆ ಅದು ರಸವಿತ್ತು ಉದುರಿ ಹೋಗುವುದು. ಜಾತಿ-ಕುಲದಲ್ಲಿ ನಿಂತುಕೊಳ್ಳುವುದು ಎಷ್ಟು ದಿವಸದ್ದಿದೆ ? ಆದುದರಿಂದ ಜಾತಿ-ಕುಲವನ್ನು ನಾಶಶೀಲವಾದ ಕರ್ಮದ ಆಧೀನವೆಂದು ತಿಳಿದುಕೊಂಡು ಉತ್ತಮ ಶೀಲಪಾಲನೆಯಲ್ಲಿ, ಕ್ಷಮೆಧಾರಣಮಾಡುವಲ್ಲಿ, ಸ್ವಾಧ್ಯಾಯದಲ್ಲಿ, ಪರೋಪಕಾರದಲ್ಲಿ, ದಾನದಲ್ಲಿ, ವಿನಯದಲ್ಲಿ ಪ್ರವರ್ತನೆ ಮಾಡಿ ಜಾತಿಯ ಉಚ್ಚತೆಯನ್ನು ಸಾರ್ಥಕ ಮಾಡಿಕೊಳ್ಳಬೇಕು. ಜಾತಿಯ ಗರ್ವ ಮಾಡಿ ಸಂಸಾರದಲ್ಲಿ ನಷ್ಟರಾಗಿ ಹೋಗಬಾರದು.

**೫) ಬಲಮದ –** ಸಮ್ಯಗ್ದೃಷ್ಟಿಗೆ ಬಲದ ಮದವೂ ಇರುವುದಿಲ್ಲ. **ಸಮ್ಯಗ್ದೃಷ್ಟಿಯು ವಿಚಾರ ಮಾಡುವುದೇನೆಂದರೆ** ನಾನು ಆತ್ಮನು ಅನಂತಬಲದ ಧಾರಕನಿದ್ದೇನೆ. ಆದರೆ ಕರ್ಮರೂಪದ ನನ್ನ ಪ್ರಬಲ ವೈರಿಯು ನನ್ನ ಬಲವನ್ನು ನಷ್ಟಮಾಡಿ ಬಲವಿಲ್ಲದ ಏಕೇಂದ್ರಿಯ, ವಿಕಲತ್ರಯಾದಿಗಳಲ್ಲಿ ನನ್ನ ಸಂಪೂರ್ಣ ಬಲವನ್ನು ಆಚ್ಛಾದಿತಗೊಳಿಸಿ ನನ್ನ ದಶೆಯನ್ನು ಹೀಗೆ ಬಲರಹಿತ ಮಾಡಿದೆ, ನಾನು ಜಗತ್ತಿನ ಏಟುಗಳಿಂದ ದಬ್ಬಿ ಹೋಗಿರುವೆ, ತುಳಿದು ಹೋಗಿರುವೆ, ಈಗ ಒಂದಿಷ್ಟು ವೀರ್ಯಾಂತರಾಯಕರ್ಮದ ಕ್ಷಯೋಪಶಮಪಡೆದು ಈ ಮನುಷ್ಯ ಶರೀರದಲ್ಲಿ ತರುಣಾವಸ್ಥೆಯಲ್ಲಿ ಆಹಾರದ ಆಶ್ರಯದಿಂದ ಸ್ವಲ್ಪ ಬಲವು ಪ್ರಕಟವಾಗಿದೆ.

ಈಗ ಈ ದೇಹದ ಆಧಾರದಿಂದ ಪರಾಧೀನ ಬಲದಿಂದ ನಾನು ತಪಶ್ಚರ್ಯ ಮಾಡಿ ಕರ್ಮಗಳನ್ನು ನಾಶ ಮಾಡಿದೆನೆಂದರೆ ಬಲಪಡೆದುದರ ಸಾರ್ಥಕತೆಯಿದೆ. ಈ ಬಲವು ಪ್ರಾಪ್ತವಾಗುವುದರಿಂದ ನಾನು ವ್ರತ, ಉಪವಾಸ, ಶೀಲ, ಸಂಯಮ, ಸ್ವಾಧ್ಯಾಯ, ಕಾಯೋತ್ಸರ್ಗ ಮಾಡುವೆನು ಮತ್ತು ಕರ್ಮದ ಪ್ರಬಲ ಉದಯವಿದ್ದರೂ ಬಂದಿರುವ ಉಪಸರ್ಗ ಪರೀಷಹ ಮೊದಲಾದವುಗಳಿಂದ ವಿಚಲಿತನಾಗಲಾರೆನು. ರೋಗ-ದಾರಿದ್ರ್ಯ ಮೊದಲಾದ ಕರ್ಮಗಳ ಪ್ರಹಾರದಿಂದ ಭಯಭೀತನಾಗಲಾರೆನು, ನಾನು ದೈನ್ಯತೆಗೆ ಪ್ರಾಪ್ತನಾಗದಿದ್ದರೆ ಈ ಬಲ ಪಡೆದುದರ ಸಾರ್ಥಕತೆಯಿದೆ.

ನಾನು ದೀನ, ದರಿದ್ರೀ, ಅಸಮರ್ಪಕ ದುರ್ವಚನಗಳನ್ನು ಕೇಳಿ ಕೂಡ ಕ್ಷಮೆಯ ಧಾರಣ ಮಾಡಿದೆನೆಂದರೆ ನನ್ನ ಆತ್ಮನ ವಿಶುದ್ಧತೆಯ ಪ್ರಭಾವದಿಂದ ದುರ್ಜಯ ಕರ್ಮಗಳನ್ನು ಜಯಿಸಿ ಕ್ರಮ-ಕ್ರಮದಿಂದ ಅನಂತ ವೀರ್ಯವನ್ನು ಪ್ರಾಪ್ತ ಮಾಡಿಕೊಂಡು ಅವಿನಾಶೀ ಪದವನ್ನು ಪಡೆದುಕೊಳ್ಳುವೆನು ಮತ್ತು ನಾನು ಬಲವಂತನಾಗಿ ನಿರ್ಬಲರ ಘಾತ ಮಾಡಿದರೆ, ಅಸಮರ್ಥರ ಧನ, ಭೂಮಿ, ಸ್ತ್ರೀಯರ ಹರಣ ಮಾಡಿದರೆ, ಅಪಮಾನ-ತಿರಸ್ಕಾರ ಮಾಡಿದೆನೆಂದರೆ ಸಿಂಹ-ಹುಲಿ-ಸರ್ಪ ಮೊದಲಾದ ದುಷ್ಟ ತಿರ್ಯಂಚಗಳ ಸಮಾನ ಇತರ ಜೀವರುಗಳ ಹಿಂಸೆಮಾಡುವ ಸಲುವಾಗಿಯೇ ನಾನು ಬಲ ಪಡೆದಂತಾಯಿತು ; ಅದರ ಫಲವು ದೀರ್ಘಕಾಲದವರೆಗೆ ನರಕಗಳ ದುಃಖ, ತಿರ್ಯಂಚಗಳ ದುಃಖವನ್ನು ಭೋಗಿಸಿ ಅನಂತ ಕಾಲದವರೆಗೆ ನಿಗೋದದಲ್ಲಿ ಪರಿಭ್ರಮಣ ಮಾಡಬೇಕಾಗುವುದು ಈ ಪ್ರಕಾರ ಬಲದ ಮದದ ಸಮಾನ ನನ್ನ ಆತ್ಮನ ಘಾತ ಮಾಡುವಂಥದ್ದು ಬೇರೆ ಯಾವುದೂ ಇಲ್ಲ.

**೬) ಋದ್ಧಿಮದ :–** ಜ್ಞಾನಿಗೆ ಋದ್ಧಿ ಎಂದರೆ ಧನ ಸಂಪತ್ತು ಪಡೆದುದರ ಗರ್ವವಿರುವುದಿಲ್ಲ. ಸಮ್ಯಗ್ದೃಷ್ಟಿಯಂತೂ ಧನ ಮೊದಲಾದ ಪರಿಗ್ರಹವನ್ನು ಮಹಾ ಭಾರವೆಂದು ಮನ್ನಿಸುತ್ತಾನೆ. ನಾನು ಸಮಸ್ತ ಪರಿಗ್ರಹದ ಭಾರವನ್ನು ಬಿಟ್ಟುಕೊಟ್ಟು ನನ್ನ ಆತ್ಮ ಧನದ ಸಂರಕ್ಷಣೆ ಮಾಡುವಂಥ ದಿವಸವು ಯಾವಾಗಬರುವುದೆಂದು ವಿಚಾರಮಾಡುತ್ತಾನೆ. ಈ ಧನ ಪರಿಗ್ರಹದ ಭಾರವು ಮಹಾಬಂಧನವಿದ್ದು, ಅದು ರಾಗ-ದ್ವೇಷ, ಭಯ, ಸಂತಾಪ, ಶೋಕ, ವೈರ, ಹಾನಿ, ಮಹಾರಂಭದ ಕಾರಣವಿದೆ; ಮದವನ್ನು ಉತ್ಪನ್ನ ಮಾಡುವಂಥದ್ದಿದೆ, ದುಃಖರೂಪ ದುರ್ಗತಿಯ ಬೀಜವಿದೆ.

ಯಾವ ಪ್ರಕಾರ ಕಫದಲ್ಲಿ ಸಿಕ್ಕಿಕೊಂಡ ಮಕ್ಷಿಕವು ಅದರೊಳಗಿಂದ ಹೊರಬರಲು ಸಮರ್ಥವಿಲ್ಲ, ಕೆಸರಿನಲ್ಲಿ ಮೋಸಹೋದ ವೃದ್ಧಗೂಳಿ ಹೊರಗೆಬರುವಲ್ಲಿ ಸಮರ್ಥವಿಲ್ಲ, ಹೊಂಡದಲ್ಲಿ ಹೊರಳಿಬಿದ್ದ ಆನೆಯು ಹೊರ ಬರುವಲ್ಲಿ ಸಮರ್ಥವಿಲ್ಲ; ಅದೇ ಪ್ರಕಾರ ನಾನು ಕೂಡ ಈ ಧನ, ಕುಟುಂಬ ಮೊದಲಾದವುಗಳ ಜಾಲದೊಳಗಿಂದ ಹೊರಬರಲು ಅಪೇಕ್ಷಿಸುತ್ತೇನೆ; ಆದರೆ ಆಸಕ್ತಿ, ರಾಗಾದಿಗಳ ಪ್ರಬಲ ಉದಯವು ಪೂರೈಸುವುದರ ಕಠಿಣತೆಯು ಕಂಡು ಬರುವುದರಿಂದ ಹೃದಯವು ಕಂಪಿಸುತ್ತದೆ. ಹೀಗೆ ಅಪಮಾನ, ಭಯಾದಿಗಳನ್ನು ಮಾಡಿಸುವಂಥ ಪರಿಗ್ರಹದ ಬಂಧನದಿಂದ ಹೊರಗೆ ಬರುವುದರ ಇಚ್ಛೆಯುಳ್ಳ ಸಮ್ಯಗ್ದೃಷ್ಟಿಯು ಪರಾಧೀನ, ವಿನಾಶಶೀಲ, ದುಃಖರೂಪ ಸಂಪತ್ತಿಯ ಗರ್ವವನ್ನೆಂದೂ ಮಾಡುವುದಿಲ್ಲ. ಇದರ ಸಂಯೋಗವಾಗುವುದರಿಂದ ಅಧಿಕ ಲಜ್ಜೆಯೆನಿಸುತ್ತದೆ. ನಾನು ನನ್ನ ಸ್ವಾಧೀನ, ಅವಿನಾಶೀ, ಆತ್ಮಿಕ ಲಕ್ಷ್ಮಿಯನ್ನು ಬಿಟ್ಟುಕೊಟ್ಟು ಜ್ಞಾನಿಯಾಗಿಯೂ ಕೂಡ ಈ ಧೂಳಿನ ಸಮಾನವಾದ ಲಕ್ಷ್ಮಿಯನ್ನು ಬಿಟ್ಟು ಕೊಡುತ್ತಿಲ್ಲ, ಇದರ ಸಮಾನವಾದ ನಿರ್ಲಜ್ಜತೆಯು ಬೇರೆ ಯಾವುದಿದೆ, ಮತ್ತು ಹೀನತೆಯು ಬೇರೆ ಯಾವುದಿದೆ ?

**೭) ತಪಮದ ಃ-** ಸಮ್ಯಗ್ದೃಷ್ಟಿಗೆ ತಪದ ಮದವಿರುವುದಿಲ್ಲ, ಮದವಂತೂ ತಪದ ನಾಶ ಮಾಡುವಂಥದ್ದಿದೆ. ತಪದ ಪ್ರಭಾವದಿಂದ ಎಂಟು ಕರ್ಮಗಳ ರೂಪದ ಶತ್ರುಗಳನ್ನು ಜಯಿಸಿ ಪರಮಾತ್ಮ ಪದವನ್ನು ಪ್ರಾಪ್ತ ಮಾಡಿಕೊಂಡವರು ಧನ್ಯರಿದ್ದಾರೆ. ಈಗ ನಾನು ಸಂಸಾರದಲ್ಲಿ ಆಸಕ್ತನಾಗಿ ಇಂದ್ರಿಯ ವಿಷಯಗಳಲ್ಲಿ ತೊಡಗುವುದನ್ನು ತಡೆಯುವಲ್ಲಿ ಅಸಮರ್ಥನಿದ್ದೇನೆ, ಕಾಮಭಾವವನ್ನು ಜಯಿಸಿಲ್ಲ, ನಿದ್ರೆ, ಆಲಸ್ಯ, ಪ್ರಮಾದವನ್ನೂ ಜಯಿಸಿಲ್ಲ; ಇಚ್ಛೆಗಳನ್ನು ತಡೆಯುವಲ್ಲಿ ಸಮರ್ಥನಿಲ್ಲ, ಶರೀರದಲ್ಲಿನ ಲಾಲಸೆಯು ಕಡಿಮೆಯಾಗಿಲ್ಲ, ಜೀವಂತವಿರುವ ಇಚ್ಛೆಯು ಅಳಿಸಿ ಹೋಗಿಲ್ಲ, ಸಾಯುವ ಭಯವು ದೂರವಾಗಿಲ್ಲ; ಸ್ತುತಿ-ನಿಂದೆಯಲ್ಲಿ, ಲಾಭ-ಅಲಾಭದಲ್ಲಿ ಸಮತೆಯ ಭಾವವಾಗದವರೆಗೆ ನಮ್ಮ ತಪವೆಂಥದು, ಯಾವ ಕೆಲಸದ್ದು ? ಯಾವುದರಿಂದ ಕರ್ಮಶತ್ರುಗಳ ಉದಯವನ್ನು ಜಯಿಸಿ, ಶುದ್ಧಾತ್ಮ ದಶೆಯಲ್ಲಿ ಲೀನವಾಗಿ ಹೋಗುವುದು ಅದು ತಪವಿದೆ. ಯಾರಿಗೆ ವೀತರಾಗತೆಯು ಪ್ರಕಟವಾಗಿದೆ ಅವರು ಧನ್ಯರಿದ್ದಾರೆ. ಇಂಥ ವಿಚಾರಗಳಿಂದ ಯುಕ್ತನಿರುವ ಸಮ್ಯಗ್ದೃಷ್ಟಿಗೆ ತಪದಮದವು ಹೇಗಿರುವುದು ?

**೮)ರೂಪದ ಮದ -** ಸಮ್ಯಗ್ದೃಷ್ಟಿಗೆ ಶರೀರಸೌಂದರ್ಯದ ಗರ್ವವಿರುವುದಿಲ್ಲ. ಏಕೆಂದರೆ ಅವನು ತನ್ನ ರೂಪವಂತೂ ಜ್ಞಾನಮಯ ಜ್ಞಾತಾದೃಷ್ಟಾ ಇದೆ ಅದರಲ್ಲಿ ಸಮಸ್ತ ಪದಾರ್ಥಗಳ ಯಥಾರ್ಥ ಸ್ವರೂಪವು ಕಂಡುಬರುತ್ತದೆ. ಈ ಚರ್ಮಮಯ ಶರೀರದ ರೂಪು ನನ್ನ ರೂಪವಲ್ಲ. ಈ ದೇಹದ ರೂಪವು ಕ್ಷಣಕ್ಷಣದಲ್ಲಿ ವಿನಾಶಶೀಲವಿದೆ. ಒಂದು ದಿವಸ ಅನ್ನ-ನೀರು ಸ್ವೀಕರಿಸದಿದ್ದರೆ ಮಹಾವಿರೂಪವಾಗಿ ಕಾಣಲಾರಂಭಿಸುತ್ತದೆ. ಈ ಶರೀರದ ರೂಪು ಸಮಯ ಸಮಯಕ್ಕೆ ನಷ್ಟವಾಗುತ್ತಿರುತ್ತದೆ. ಮುಪ್ಪು ಬಂದುಬಿಟ್ಟರೆ ಅಭದ್ರ ಭಯಾನಕವಾಗಿ ಕಾಣತೊಡಗುವುದು. ರೋಗ-ದರಿದ್ರತೆ ಬಂದು ಬಿಟ್ಟರೆ ಯಾರಿಗೂ ನೋಡಲು-ಸ್ಪರ್ಶಮಾಡಲು ಯೋಗ್ಯವಾಗಿ ಉಳಿಯುವುದಿಲ್ಲ. ಯಾವ ಜ್ಞಾನಿಯು ಈ ರೂಪದ ಗರ್ವ ಮಾಡುವನು ? ಇದಂತೂ ಒಂದೇ ಕ್ಷಣದಲ್ಲಿ ಕುರುಡಾಗಿ ಹೋಗುವುದು. ಕಿವುಡಾಗಿ ಹೋಗುವುದು, ಡೂಗ, ಹೆಳವ ವಕ್ರಮುಖ, ವಕ್ರಗ್ರೀವ, ಲಂಬೋದರ, ವಿದ್ರೂಪವಾಗಿ ಹೋಗುವುದು. ಇದರ ನಿಯಮವೇನಿದೆ? ಇಲ್ಲಿ ರೂಪದ ಗರ್ವ ಮಾಡುವುದು ಮಹಾ ಅನರ್ಥವಿದೆ.

ಸುಂದರ ರೂಪು ಪಡೆದು ಶೀಲವನ್ನು ಮಲಿನ ಮಾಡಬೇಡಿರಿ. ದುಃಖೀ, ದರಿದ್ರೀ, ಅಂಗಹೀನ, ಕುರೂಪ, ಮಲಿನರನ್ನು ನೋಡಿ ಅವರ ತಿರಸ್ಕಾರ ಮಾಡಬೇಡಿರಿ. ದಯೆಯನ್ನು ಮಾಡಿರಿ. ಸಂಸಾರದಲ್ಲಿ ಮಹಾಕುರೂಪ ಮನುಷ್ಯ, ತಿರ್ಯಂಚಗಳ ಮಹಾ ಅಭದ್ರ, ಭಯಂಕರ ರೂಪವನ್ನು ಅನೇಕ ಬಾರಿ ಪಡೆದಿದೆ. ಆದುದರಿಂದ ರೂಪದ ಗರ್ವ ಮಾಡಬಾರದು.

ಈ ಎಂಟೂ ಮದಗಳು ಸಮ್ಯಗ್ದರ್ಶನವನ್ನು ನಾಶಮಾಡುವಂಥವುಗಳಿದ್ದು, ಇವುಗಳ ಸಂಸರ್ಗವು ಸ್ವಪ್ನದಲ್ಲಿ ಕೂಡ ಆಗದ ಹಾಗೆ ನಿರಂತರ ಪ್ರವರ್ತನೆ ಮಾಡುವುದು ಯೋಗ್ಯವಿದೆ.

ಈಗ ಯಾವ ಪುರುಷರು ಮದೋನ್ಮತ್ತರಾಗಿ ಅನ್ಯ ಧರ್ಮಾತ್ಮ ಜನರ ತಿರಸ್ಕಾರ ಮಾಡುತ್ತಾರೆ ಅವರ ದೋಷಗಳ ಉತ್ಪತ್ತಿಯನ್ನು ತೋರಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಸ್ಮಯೇನ ಯೋಽನ್ಯಾನತ್ಯೇತಿ ಧರ್ಮಸ್ಥಾನ ಗರ್ವಿತಾಶಯಃ ।**
**ಸೋಽತ್ಯೇತಿ ಧರ್ಮಮಾತ್ಮೀಯಂ ನ ಧರ್ಮೋ ಧಾರ್ಮಿಕೈರ್ಬಿನಾ ॥೨೬॥**

**ಅರ್ಥ :-** ಯಾವನೋ ಓರ್ವ ಪುರುಷನು ಗರ್ವ ಮಾಡಿ ಧರ್ಮಧಾರಕರಾದ ಅನ್ಯಧರ್ಮಾತ್ಮ ಪುರುಷರ ತಿರಸ್ಕಾರ ಮಾಡುತ್ತಾನೆ ಅವನು ತನ್ನ ಧರ್ಮದ ತಿರಸ್ಕಾರವನ್ನೇ ಮಾಡುತ್ತಾನೆ. ಏಕೆಂದರೆ ಧರ್ಮಾತ್ಮ ಪುರುಷರಿಲ್ಲದೆ ಧರ್ಮವು ಕಂಡುಬರುವುದಿಲ್ಲ, ಆದುದರಿಂದ ಯಾವನು ಜ್ಞಾನ, ಪೂಜೆ, ಧನ, ತಪ, ಐಶ್ವರ್ಯ, ರೂಪು ಮೊದಲಾದವುಗಳ ಗರ್ವಮಾಡಿ ಧರ್ಮಾತ್ಮರುಗಳ ತಿರಸ್ಕಾರ ಮಾಡುತ್ತಾನೆ. ಅವನು ತನ್ನ ಧರ್ಮದ ತಿರಸ್ಕಾರವನ್ನೇ ಮಾಡುತ್ತಾನೆ. ಏಕೆಂದರೆ ಧರ್ಮವಂತೂ ಓರ್ವ ಪುರುಷನ ಆಧಾರದಿಂದಲೇ ಇರುತ್ತದೆ. ಪುರುಷರಿಲ್ಲದೆ ಧರ್ಮವಂತೂ ಇರುವುದಿಲ್ಲ.

**ಭಾವಾರ್ಥ :-** ಜಗತ್ತಿನಲ್ಲಿ ಧನ, ಐಶ್ವರ್ಯ, ಆಜ್ಞೆ-ಆದೇಶದ ಮಹಾಮದವಿರುತ್ತದೆ. ಯಾವನು ಮದದಿಂದ ಗರ್ವಿತನಾಗಿ ಹೋಗುತ್ತಾನೆ ಅವನು ದೇವ - ಗುರು - ಧರ್ಮದ ವಿನಯವನ್ನೂ ಮರೆತು ಹೋಗುತ್ತಾನೆ. ಗರ್ವಿಷ್ಠ ವ್ಯಕ್ತಿಯು ವಿಚಾರ ಮಾಡುವುದೇನೆಂದರೆ ಈ ಮಂದಿರವೆಂಥದೇನಿದೆ ? ನಾನು ಬೇರೆ ನವೀನ ಕಟ್ಟಿಸಿಕೊಡುವೆನು. ಇದು ಕೂಡ ನಮ್ಮಿಂದಲೇ ಕಟ್ಟಿಸಲಾಗಿದೆ. ಈ ಯಾವ ತಪಸ್ವಿ ತ್ಯಾಗಿಳಿದ್ದಾರೆ ಅವರೂ ಕೂಡ ನಮ್ಮ ಆಧೀನದಲ್ಲಿಯೇ ಭೋಜನ, ವಸ್ತ್ರ ಪಡೆದು ಜೀವಂತವಾಗಿದ್ದಾರೆ. ಧರ್ಮವೂ ಕೂಡ ಧನ ಖರ್ಚು ಮಾಡುವುದರಿಂದಲೇ ಆಗುತ್ತದೆ. ಧನ ಖರ್ಚು ಮಾಡುವುದರಿಂದಲೇ ಭಗವಂತರ ಪೂಜೆ-ಪ್ರಭಾವನೆಯಾಗುತ್ತದೆ. ಈ ಪ್ರಕಾರ ಅವಜ್ಞೆ ಮಾಡುತ್ತಾನೆ. ಅನೇಕ ಪಾಪಾಚರಣೆ ಮಾಡುತ್ತಿದ್ದರೂ ಯಾವುದೇ ಅಭಿಮಾನದ ವಶವರ್ತಿಯಾಗಿ ದಾನ-ಪೂಜೆ-ಪ್ರಭಾವನೆಯಲ್ಲಿ ಹತ್ತು ರೂಪಾಯಿ ತೊಡಗಿಸಿ ತನ್ನನ್ನು ಧನ್ಯನೆಂದು ಮತ್ತು ಧರ್ಮಾತ್ಮನೆಂದು ಮನ್ನಿಸುತ್ತಾನೆ.

ಧನ, ಆಜ್ಞೆ, ಐಶ್ವರ್ಯದ ಮದದಲ್ಲಿ ಕುರುಡನಾಗಿ ಈ ಜಗತ್ತಿನಲ್ಲಿ ಧನವೇ ಎಲ್ಲಕ್ಕಿಂತ ದೊಡ್ಡದಿದೆಯೆಂದು ಮನ್ನಿಸುತ್ತಾನೆ. ಧನವಂತರ ಮನೆಗೆ ದೊಡ್ಡ ದೊಡ್ಡ ಜ್ಞಾನೀ, ಶಾಸ್ತ್ರ ಪಾರಂಗತ, ಕವಿತೆ ಕಾವ್ಯ ರಚಿಸುವಂಥವರು ನಿತ್ಯವೂ ಬರುತ್ತಾರೆ. ದೊಡ್ಡ ದೊಡ್ಡ ಜ್ಞಾನಿಗಳು ಧನವಂತರ ಮನೆಗೆ ತಾವಾಗಿಯೇ ಬಂದು ಶಾಸ್ತ್ರಗಳನ್ನು ಹೇಳುತ್ತಿರುತ್ತಾರೆ. ಅನೇಕ ಚತುರ ಕಲಾವಿದರು ದಿನಾಲು ಧನವಂತರ ಮನೆಗೆ ಬರುತ್ತಾರೆ. ಪೂಜೆ ಮಾಡುವಂಥವರು, ಪ್ರಭಾವನೆ ಮಾಡುವಂಥವರು, ಭಜನೆ ಮಾಡುವಂಥವರು ಹೀಗೆ ಅನೇಕರು ಧನವಂತರ ಆಶ್ರಯ ಪಡೆಯುತ್ತಾರೆ. ಉಪವಾಸ, ವ್ರತ ಮೊದಲಾದುವನ್ನು ಮಾಡುವಂಥ ತ್ಯಾಗೀ ತಪಸ್ವಿಗಳು ಧನವಂತರ ಮನೆಯಲ್ಲಿಯೇ ಭೋಜನ ಮಾಡಲು ಬರುತ್ತಾರೆ. ಮಂತ್ರ, ತಂತ್ರ, ಜಪ ಮೊದಲಾದುವನ್ನು ಧನವಂತ ಪುರುಷರಿಗೆ ಒಳ್ಳೆಯದಾಗುವುದಕ್ಕಾಗಿಯೇ ಮಾಡುತ್ತಿರುತ್ತಾನೆ. ಸಮಸ್ತ ಧರ್ಮ ಮತ್ತು ಸಮಸ್ತ ಗುಣಗಳು ನಮ್ಮ ಧನದ ಆಧೀನದಲ್ಲಿಯೇ ಇವೆ. ಈ ಪ್ರಕಾರ ಧನದಿಂದ ಐಶ್ವರ್ಯದಿಂದ ತಮ್ಮ ಆತ್ಮನನ್ನು ಉಚ್ಚನೆಂದು ಮನ್ನಿಸಿ ಕೃತಕೃತ್ಯನೆಂದು ತಿಳಿದುಕೊಂಡು ಧರ್ಮಾತ್ಮರುಗಳ ಅವಜ್ಞೆ ಮಾಡುತ್ತಾರೆ.

ಆತ್ಮಜ್ಞಾನಿಗಳು, ಪರಮಾರ್ಥಿಗಳು, ಪರಮ ಸಂತೋಷಿಗಳು ಆದ ಜನರನ್ನಂತೂ ಆ ಗರ್ವಿಷ್ಟ ಪುರುಷರು ನೋಡುವುದೇ ಇಲ್ಲ. ಯಾರಿಗೆ ಚಕ್ರವರ್ತಿಯ ಸಂಪತ್ತು ಮತ್ತು ಇಂದ್ರಲೋಕದ ಸಂಪತ್ತು ಕೂಡ ದುಃಖರೂಪವಾಗಿ ಕಂಡು ಬರುತ್ತದೆ. ಆ ಪುರುಷರು ಧನವಂತರ ಸಂಗತಿಯನ್ನು ಸ್ವಪ್ನದಲ್ಲಿ ಕೂಡ ಬಯಸುವುದಿಲ್ಲ.

ಅಲ್ಪ ಪುಣ್ಯವುಳ್ಳವರು ನಿರ್ಧನಜನರು ಗೃಹ - ಕುಟುಂಬದ ಪೋಷಣೆಯ ಚಿಂತೆಯಿಂದ ದುಃಖಿಗಳಾಗಿ ತಮ್ಮ ಗೌರವವನ್ನು ಬಿಟ್ಟುಕೊಟ್ಟು ಧನವಂತರ ಮನೆಗೆ ಬರುತ್ತಾರೆ. ದಯೆಯುಳ್ಳವರು ಉಪಕಾರಿಗಳೆಂದು ತಿಳಿದು ಮತ್ತು ಧರ್ಮದಲ್ಲಿ ಪ್ರೀತಿ ಹಾಗೂ ಧನ ಪ್ರಾಪ್ತಿ ಮಾಡುವ ಫಲ ಸ್ವೀಕರಿಸುವಂಥವನೆಂದು ತಿಳಿದು ಧನವಂತನ ಮನೆ ಬಾಗಿಲಿಗೆ ಬರುತ್ತಾನೆ; ಆದರೆ ಆ ಧನವಂತನು ಧನದ ಮದದಲ್ಲಿ ಕುರುಡನಾಗಿ ಹೋಗುತ್ತಾನೆ, ಆ ಕಾರಣ ಅವನಿಂದ ದಾನವಂತೂ ಆಗುವುದಿಲ್ಲ, ಉಪಕಾರ ಮಾಡುವುದಿಲ್ಲ, ನಿರ್ದಯಿಯಾಗಿ ಬಿಡುತ್ತಾನೆ. ನಮ್ಮ ಧನವನ್ನು ಮುಟ್ಟಬೇಡಿರಿ, ಧನವನ್ನು

ಹಾಳು ಮಾಡಬೇಡಿರೆಂದು ಮನ್ನಿಸುತ್ತ ಮರಣ ಹೊಂದಿ ಅತಿಶಯ ಮಮತೆ ಕೃಪಣತೆಯ ಪ್ರಭಾವದಿಂದ ನರಕ-ತಿರ್ಯಂಚ ಗತಿಯಲ್ಲಿ ಹೆಚ್ಚು ಕಾಲದವರೆಗೆ ಪರಿಭ್ರಮಣ ಮಾಡುತ್ತಾನೆ.

ಈ ಧನ ಸಂಪತ್ತಿಯು ನಮ್ಮ ರೂಪವಿಲ್ಲ, ನಮ್ಮದಿಲ್ಲ, ಯಾವುದೋ ಪೂರ್ವಕೃತ ಪುಣ್ಯದ ಫಲವಿದೆ, ಆದರೆ ಇದು ವಿನಾಶಶೀಲವಿದೆಯೆಂದು ತಿಳಿದು ಯಾರು ಧನಸಂಪತ್ತಿಯನ್ನು ಪಡೆದು ಮದರಹಿತರಿದ್ದಾರೆ ಅವರು ಹೀಗೆ ವಿಚಾರ ಮಾಡುತ್ತಾರೆ. ಈಗ ಈ ಸಂಪತ್ತಿಯಿಂದ ಯಾರಿಗಾದರೂ ಉಪಕಾರ ಮಾಡುವೆನು, ದರಿದ್ರ ಜನರ ದುಃಖವನ್ನು ದೂರ ಮಾಡುವೆನು, ದಯೆ ಮಾಡಿ ದುಃಖೀ ಜೀವಗಳಿಗೆ ಉಪಕಾರ ಮಾಡುವೆನು, ಜಿನಧರ್ಮದ ಶ್ರದ್ಧೆಯುಳ್ಳವರ - ಜ್ಞಾನಿಗಳ ನಿರ್ಧನತೆಯ ದುಃಖವನ್ನು ನಿವಾರಿಸಿ ಅವರನ್ನು ನಿರಾಕುಲ ಮಾಡುವೆನು. ಎಲ್ಲ ಜನರು ಧನವಂತರಲ್ಲಿ ಆಶೆಯಿಟ್ಟಿರುತ್ತಾರೆ, ಒಂದು ವೇಳೆ ನಾನು ನಿರ್ಧನನಿರುತ್ತಿದ್ದರೆ ನನ್ನಿಂದ ಯಾರು ಉಪಕಾರ ಬಯಸುತ್ತಿದ್ದರು ?

ಆದುದರಿಂದ ಈಗ ನನ್ನ ಶುಭ ಕರ್ಮವು ಫಲಿಸಿದೆ. ನನಗೆ ನನ್ನ ಆಶ್ರಿತರ ಪಾಲನೆ-ಪೋಷಣೆ ಮಾಡಬೇಕಾಗಿದೆ, ಬಾಲಕ-ವೃದ್ಧ-ರೋಗಿ-ಅನಾಥ-ವಿಧವೆ-ಅಶಕ್ತರಿಗೆ ಉಪಕಾರ ಮಾಡುವುದರಿಂದಲೇ ನಾನು ಧನ ಪ್ರಾಪ್ತ ಮಾಡಿದ್ದು ಸಫಲವಿದೆ. ಜಿನಧರ್ಮದ ಪರಿಪಾಟಿಯು ಅಧಿಕ ಕಾಲದವರೆಗೆ ನಡೆಯುತ್ತಿರುವಂಥ, ಜ್ಞಾನಾಭ್ಯಾಸದ ಪರಂಪರೆಯು ನಡೆಯುತ್ತಿರುವಂಥ ಕಾರ್ಯದಲ್ಲಿ ನಾನು ಧನತೊಡಗಿಸುವೆನು. ನಿತ್ಯಪೂಜೆ, ಧ್ಯಾನ, ಅಧ್ಯಯನ, ತಪ, ಶೀಲದಿಂದ ಜಗತ್ತಿನ ಉದ್ಧಾರ ಮಾಡುವಂಥ ಕಾರ್ಯದ ಪ್ರವರ್ತನೆಯಾಗುತ್ತಿರಲಿ ! ಇದು ಧನ ಪಡೆದುದರ ಫಲವಿದೆ, ಲಾಭವಿದೆ ಈ ಧನವನ್ನು ಪರೋಪಕಾರದಲ್ಲಿ ತೊಡಗಿಸದಿದ್ದರೆ ಅವಶ್ಯವಾಗಿ ನಷ್ಟವಾಗಿ ಹೋಗುವುದು. ಈ ಸಂಪತ್ತು ಯಾರ ಜತೆಯಲ್ಲೂ ಎಂದೂ ಪರಲೋಕಕ್ಕೆ ಹೋಗಿಲ್ಲ. ದಾನ ಮಾಡದೆ ಈ ಸಂಪತ್ತನ್ನು ಕೇವಲ ಪಾಪ ಕಾರ್ಯಗಳಲ್ಲಿಯೇ ತೊಡಗಿಸಿದರೆ ದುರ್ಧ್ಯಾನ ಮಾಡಿಸಿ ನಮ್ಮನ್ನು ಸಂಸಾರ ಸಮುದ್ರದಲ್ಲಿ ಮುಳುಗಿಸಿಬಿಡುವುದು.

ಈ ಸಂಪತ್ತು ಪಡೆದುದರ ಫಲವಂತೂ ದಾನಮಾಡುವುದೇ ಇದೆ. ಕೋಟ್ಯಂತರ ಮನುಷ್ಯರು ಪೂರ್ವಭವಗಳಲ್ಲಿ ದಾನಕೊಡದಿರುವುದರಿಂದ ಇಂದು ಅವರು ಅನ್ನ ಬೇಡುತ್ತ ಮನೆ-ಮನೆ ಬಾಗಿಲು ಅಲೆಯುತ್ತಿದ್ದಾರೆ. ಆದರೂ ಹೊಟ್ಟೆತುಂಬ ಅನ್ನ ಸಿಗುತ್ತಿಲ್ಲ, ಶರೀರ ಮುಚ್ಚಿಕೊಳ್ಳಲು ಬಟ್ಟೆದೊರಕುತ್ತಿಲ್ಲ, ದೀನ- ದರಿದ್ರರಾಗಿ ಇತರರ ಎಂಜಲಾನ್ನದ ಆಸೆ ಮಾಡುತ್ತ ತಿರುಗುತ್ತಲಿದ್ದಾರೆ. ಇದೆಲ್ಲವು ದಾನಕೊಡದಿರುವ ಹಾಗೂ ಕೃಪಣತೆಯ ಫಲವಿದೆ. ಮನುಷ್ಯರ ಹಾಗೂ ಪಶುಗಳ ಸೇವೆ ಮಾಡಿದರೂ ಸೇವಕ ವೃತ್ತಿ ಸ್ವೀಕರಿಸಿದರೂ ಕೂಡ ಹೊಟ್ಟೆ ತುಂಬುವುದಿಲ್ಲ. ದಾನ ಮಾಡಿದಲ್ಲದೆ ನನಗೆ ಭವಿಷ್ಯದಲ್ಲಿ ಸಂಪತ್ತಿಯ ಪ್ರಾಪ್ತಿಯಾಗಲಾರದು. ದಾನದಲ್ಲಿ, ಧರ್ಮದ ಸ್ಥಾನಗಳಲ್ಲಿ ಧನ ತೊಡಗಿಸಿದರೇನೆ ಧನ ಪಡೆದುದಕ್ಕೆ ಸಾರ್ಥಕತೆಯಿದೆ. ಸಂಪತ್ತು ಸತ್ತನಂತರ ಪರಲೋಕದಲ್ಲಿ ಜತೆಗೆ ಬರುವುದಿಲ್ಲ, ಎಲ್ಲಿ ಇಟ್ಟಿದೆ ಅಲ್ಲಿಯೇ ಬಿದ್ದು ಬಿಡುವುದು. ಆದ್ದರಿಂದ ಯಾರಿಗಾದರೂ ಉಪಕಾರದಲ್ಲಿ ಖರ್ಚಾದರೆ ಸಾರ್ಥಕತೆಯಿದೆ, ಅಷ್ಟೇ ಮತ್ತು ಅದು ಸಂಪತ್ತಿಯು ನಮ್ಮದಿದೆ.

ಇಂಥ ವಿಚಾರಗಳೊಡನೆ ಸಮ್ಯಗ್ದೃಷ್ಟಿಯು ಯಾವಾಗಲೂ ಪರೋಪಕಾರದ ಕಾರ್ಯಗಳಲ್ಲಿ ಧನ ತೊಡಗಿಸಲು ತತ್ಪರನಿರುತ್ತಾನೆ; ಉದ್ಯಮಶೀಲನಿರುತ್ತಾನೆ. **ಧರ್ಮಾತ್ಮಪುರುಷರಿಗಂತೂ ಈ ಸಂಪತ್ತು ಗ್ರಹಣ ಮಾಡಲು ಯೋಗ್ಯವೇ ಇಲ್ಲ, ಮೋಹದಿಂದ ಕುರುಡು ಮಾಡಿಬಿಡುವಂಥದ್ದಿದೆ, ಆತ್ಮನನ್ನು ಮರೆಸಿಬಿಡುವಂಥದ್ದಿದೆ. ಸಮ್ಯಗ್ದೃಷ್ಟಿಯು ಇದರಲ್ಲಿ ತನ್ಮತನ ಮಾಡುವುದೇ ಇಲ್ಲ,** ಆದರೆ ಇನ್ನೂ ಚಾರಿತ್ರಮೋಹದ ಉದಯವಿರುವುದರಿಂದ ರಾಗವಂತೂ ದೂರವಾಗಿಲ್ಲ, ಅದರಿಂದ ಅನ್ಯ ಜೀವಗಳ ಉಪಕಾರದಲ್ಲಿ ಅವಶ್ಯವಾಗಿ ತೊಡಗಿಸುವುದು, ಅತ್ಯಂತ ಕಷ್ಟದಿಂದ ಸಂಪಾದಿಸಿರುವುದನ್ನು ಉತ್ತಮ ಕಾರ್ಯದಲ್ಲಿ ತೊಡಗಿಸುವುದನ್ನು ಬಿಟ್ಟರೆ ಸತ್ತು ಹೋಗುವಲ್ಲಿ ನಮ್ಮದೇನು ಒಳ್ಳೆಯದಾಗುವುದೆಂದು ವಿಚಾರಮಾಡಿ, ಪಾಪರಹಿತರಿದ್ದ ಜನರು ನಿರ್ಧನ, ರೋಗೀ, ದುಃಖೀ ಜನರನ್ನು ನೋಡಿ ಅವಜ್ಞೆಮಾಡುವುದಿಲ್ಲ, ಧನವಿತ್ತು ಅವರ ದುಃಖ ದೂರ ಮಾಡುತ್ತಾರೆ. **ಧರ್ಮದಲ್ಲಿ ಪ್ರವರ್ತಿಸುವಂಥ ಶುಭಕಾರ್ಯಗಳಲ್ಲಿ ಖರ್ಚು ಮಾಡುವಂಥ ಜನರನ್ನು ನೋಡಿ ಅತ್ಯಂತ ಆನಂದ ಮನ್ನಿಸುತ್ತಾರೆ; ಧರ್ಮಸಾಧನೆ ಮಾಡುವಂಥವರ ಜತೆ ಸಮ್ಮಿಲಿತರಾಗಿ ಧನದ ಭೋಗ**

**ಭೋಗಿಸುವಲ್ಲಿ ಆನಂದಮನ್ನಿಸುತ್ತಾರೆ.** ಅವರು ಸಂಪತ್ತು ಪ್ರಾಪ್ತವಾದುದರ ಫಲ ತೆಗೆದುಕೊಳ್ಳುವರು. ಮುಂದೆ ಪರಲೋಕದಲ್ಲಿ ದೇವಗಳ ಸಂಪತ್ತು, ಚಕ್ರವರ್ತಿಯ ಸಂಪತ್ತು ಕೂಡ ದಾನಿಗಳಿಗೇನೇ ಪ್ರಾಪ್ತವಾಗುತ್ತದೆ.

ಈಗ ಸಂಪತ್ತಿನಲ್ಲಿ ಪ್ರೀತಿ ಮಾಡುವವರಿಗೆ ಸಂಪತ್ತಿಯ ಸ್ವರೂಪ ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ಯದಿ ಪಾಪನಿರೋಧೋಽನ್ಯ ಸಂಪದಾ ಕಿಂ ಪ್ರಯೋಜನಮ್ ।**

**ಅಥ ಪಾಪಾಸ್ರವೋಽಸ್ತ್ಯನ್ಯ ಸಂಪದಾ ಕಿಂ ಪ್ರಯೋಜನಮ್ ॥೨೭॥**

**ಅರ್ಥ :-** ನನಗೆ ಜ್ಞಾನಾವರಣ ಮೊದಲಾದ ಅಶುಭ ಪಾಪ ಪ್ರಕೃತಿಗಳ ಆಸ್ರವವಾಗುವುದು ನಿಂತು ಹೋಗಿದ್ದರೆ ಈಗ ನನ್ನ ಹತ್ತಿರ ಎಷ್ಟು ಸಂಪತ್ತಿಯಿದೆ ಅದಕ್ಕಿಂತ ಅಧಿಕ ಸಂಪತ್ತಿಯು ಪ್ರಾಪ್ತವಾಗುವುದರಿಂದ ನನಗೇನು ಪ್ರಯೋಜನವಿದೆ ? ಮತ್ತು ನನಗೆ ಆ ಅಶುಭ ಪಾಪಪ್ರಕೃತಿಗಳ ಆಸ್ರವವಾಗುವುದು ಜಾರೀ ಇದೆ ಮತ್ತು ಸಂಪತ್ತಿಯೂ ಬರುತ್ತಿದೆಯೆಂದರೆ ಈ ನವೀನ ಬರುವಂಥ ಸಂಪತ್ತಿಯಿಂದ ನನಗೇನು ಪ್ರಯೋಜನವಿದೆ, ಎಷ್ಟು ಲಾಭವಿದೆಯೆಂದು ಸಮ್ಯಗ್ದೃಷ್ಟಿಯು ವಿಚಾರ ಮಾಡುತ್ತಾನೆ.

**ಭಾವಾರ್ಥ :-** ಈ ಜೀವದ ತ್ಯಾಗರೂಪ, ಸಂಯಮರೂಪ ಪ್ರವೃತ್ತಿಯ ಮೂಲಕ ಪಾಪದ ಆಸ್ರವವಾಗುವುದು ನಿಂತುಹೋಗಿದ್ದರೆ ಉಳಿದ ಆ ಇಂದ್ರಿಯ ವಿಷಯಗಳ ಸಂಪತ್ತು-ರಾಜ್ಯ ಐಶ್ವರ್ಯರೂಪದ ಸಂಪತ್ತು ಬಂದು ಬಿಟ್ಟರೆ ಆ ಸಂಪತ್ತಿನಿಂದ ಯಾವ ಪ್ರಯೋಜನದ ಸಿದ್ಧಿಯಾಗುವುದು ? **ಆಸ್ರವವು ನಿಂತುಕೊಳ್ಳುವುದರಿಂದಂತೂ ನಿರ್ವಾಣ ಸಂಪತ್ತು ಅಹಮಿಂದ್ರ ಲೋಕದ ಸಂಪತ್ತು ಪ್ರಾಪ್ತವಾಗುತ್ತದೆ.** ಈ ತುಚ್ಛ ಧೂಳಿನ ಸಮಾನ ಕ್ಲೇಶದಿಂದ ತುಂಬಿದ ಕ್ಷಣಭಂಗುರವಾದ ಸಂಪತ್ತಿನಿಂದ ಯಾವ ಪ್ರಯೋಜನವಿದೆ ? ಒಂದು ವೇಳೆ ಈ ಜೀವದ ತ್ಯಾಗರೂಪ, ಸಂಯಮ ರೂಪದ ಪ್ರವೃತ್ತಿಯಿಂದ ಪಾಪದ ಆಸ್ರವವಿಲ್ಲದಿದ್ದರೆ ನಿರ್ಬಂಧ ನಾಮದ ಸಂಪತ್ತು ದೊಡ್ಡ ವಿಭೂತಿಯಿದೆ ಮಹಾಲಕ್ಷ್ಮಿಯಿದೆ.

ಅನ್ಯಾಯ, ಅನೀತಿ, ಕಪಟ, ಮೋಸ, ಕಳವು ಮೊದಲಾದುವನ್ನು ಮಾಡಿ ನನಗೆ ಪಾಪದ ಆಸ್ರವವು ನಿರಂತರ ಆಗುತ್ತಲಿದೆ ಮತ್ತು ಒಂದಿಷ್ಟು ಅಧಿಕ ಸಂಪತ್ತು ಪ್ರಾಪ್ತವಾದರೆ ಅದರಿಂದ ಯಾವ ಪ್ರಯೋಜನದ ಸಿದ್ಧಿಯಾಗುವುದು ? ಕೂಡಲೆ ಸತ್ತು ಅಂತರ್ಮುಹೂರ್ತದಲ್ಲಿ ನರಕದ ನಾರಕಿಯಾಗಿ ಜನ್ಮ ತಾಳುವೆನು. **ಸಮ್ಯಗ್ದೃಷ್ಟಿಗಂತೂ ಪಾಪಕರ್ಮದ ಆಸ್ರವವಾಗುವುದರ ಭಯವಿದೆ.** ಅವನಂತೂ ಪಾಪದ ಆಸ್ರವವು ನಿಂತು ಹೋಗುವುದಕ್ಕೇನೇ ಮಹಾಸಂಪತ್ತಿನ ಲಾಭವೆಂದು ಮನ್ನಿಸುತ್ತಾನೆ. ಈ ಸಂಸಾರದ ಸಂಪತ್ತಂತೂ ಪರಾಧೀನ ದುಃಖದಾಯಕವೆಂದು ತಿಳಿದುಕೊಂಡು ಅದರಲ್ಲಿ ಇಚ್ಛೆ ಮಾಡುವುದಿಲ್ಲ. ಎಂದಾದರೂ ಲಾಭಾಂತರಾಯ, ಭೋಗಾಂತರಾಯ ಕರ್ಮದ ಕ್ಷಯೋಪಶಮದಿಂದ ಸಂಪತ್ತು ಪ್ರಾಪ್ತವಾಗುತ್ತಿರುವಾಗ ಅದನ್ನು ಪರಾಧೀನ, ವಿನಾಶಶೀಲ, ಬಂಧ ಮಾಡಿಸುವಂಥದ್ದೆಂದು ತಿಳಿದುಕೊಂಡು ಆ ಸಂಪತ್ತಿಯಲ್ಲಿ ಲಿಪ್ತನಾಗಿ ಹೋಗುವುದಿಲ್ಲ. ವರ್ತಮಾನದ ಒಂದಿಷ್ಟು ವೇದನೆಯನ್ನು ಶಾಂತ ಮಾಡುವಂಥದ್ದೆಂದು ಮನ್ನಿಸಿ ಉದಾಸೀನ ಭಾವದಿಂದ ಕಹಿ ಔಷಧದ ಸಮಾನವಾಗಿ ಗ್ರಹಣ ಮಾಡುತ್ತಾನೆ; ಆದರೆ ಸಂಪತ್ತನ್ನು ತನ್ನ ಹಿತರೂಪವೆಂದು ತಿಳಿದುಕೊಂಡು ಅದರ ಇಚ್ಛೆ ಮಾಡುವುದಿಲ್ಲ.

**ಆರು ಅನಾಯತನದ ಸ್ವರೂಪ :** ಕುದೇವ, ಕುಗುರು, ಕುಶಾಸ್ತ್ರದ ಶ್ರದ್ಧೆ ಮತ್ತು ಕುದೇವದ ಸೇವೆ ಮಾಡುವಂಥ, ಕುಗುರುವಿನ ಸೇವೆಮಾಡುವಂಥ ಮತ್ತು ಕುಶಾಸ್ತ್ರವನ್ನೋದುವಂಥವನೆಂದು ಇವು ಆರು ಧರ್ಮದ ಆಯತನ ಎಂದರೆ ಸ್ಥಾನಗಳಿಲ್ಲ. ಇವುಗಳಿಂದ ತಮ್ಮದು ಸ್ವಲ್ಪವೂ ಒಳ್ಳೆಯದಾಗದಿರುವುದರಿಂದ ಇವು ಆರೂ ಅನಾಯತನಗಳಿವೆ.

**ಸಂಕ್ಷೇಪದಲ್ಲಿ ಇವುಗಳ ಸ್ವರೂಪ :** ಯಾರಲ್ಲಿ ಸರ್ವಜ್ಞತೆಯಿಲ್ಲ, ವೀತರಾಗತೆಯಿಲ್ಲ, ಯಾರು ಕಾಮೀ, ಕ್ರೋಧೀ, ಚೋರರ ಹಾಗೂ ಜಾರರ ಪ್ರಮುಖರಿದ್ದಾರೆ, ಯಾರು ಭೋಜನದ ಇಚ್ಛುಕರಿದ್ದಾರೆ, ಮಾಂಸದ ಭಕ್ಷಕರಿದ್ದಾರೆ, ಲೋಭಿಯಿದ್ದಾರೆ, ತಮ್ಮ ಪೂಜೆ ಮಾಡಿಸಿಕೊಳ್ಳುವ ಇಚ್ಛುಕರಿದ್ದಾರೆ, ಜೀವಗಳ ಸಂಹಾರ ಮಾಡುವಂಥವರಿದ್ದಾರೆ, ತಮ್ಮ ಭಕ್ತರ ಉಪಕಾರಕ ಹಾಗೂ ಅಭಕ್ತರ ವಿನಾಶಕರಿದ್ದಾರೆ, ಯಾರನ್ನು ಬಹಳಷ್ಟು ಮೂರ್ಖಜನರು ದೇವರೆಂದು ಮನ್ನಿಸಿ

ಪೂಜಿಸುತ್ತಾರೆ, ಆದರೆ ಅವರಲ್ಲಿ ದೇವತನವಿಲ್ಲ, ಅವರಲ್ಲಿ ದೇವತನದ ಬುದ್ಧಿ ಮಾಡುವುದು-ದೇವರೆಂದು ಮನ್ನಿಸುವುದು ಮಿಥ್ಯೆಯಿದೆ. ಅವರು ದೇವತ್ವದ ಆಯತನರಿಲ್ಲ.

ಯಾರು ವ್ರತ-ಸಂಯಮದಿಂದರಹಿತ, ಅನೇಕ ಪಾಖಂಡ ವೇಷದ ಧಾರಕರಿದ್ದಾರೆ ಅವರಲ್ಲಿ ವ್ರತ-ತ್ಯಾಗ-ವಿದ್ಯೆ-ಅಧ್ಯಯನ-ಪರಿಗ್ರಹತ್ಯಾಗ ಮೊದಲಾದುವನ್ನು ನೋಡಿ, ಮಂತ್ರ-ಜಂತ್ರ-ತಂತ್ರ ವಿದ್ಯೆ, ಜೋತಿಷ, ವೈದ್ಯಕ, ಶಕುನವಿದ್ಯೆ ಮತ್ತು ಜಿನಾಜ್ಞೆಯ ಬಾಹ್ಯರಾದ ವೇಷಧಾರಿಗಳಲ್ಲಿ ಪೂಜ್ಯತನ - ಗುರುತನವನ್ನು ತಿಳಿಯಬಾರದು.

ದುಷ್ಟ ಮಿಥ್ಯಾಶಾಸ್ತ್ರ ಹಿಂಸೆಯ ಪೋಷಕ ಅವುಗಳಲ್ಲಿ ಆತ್ಮಹಿತವಿಲ್ಲದಂಥ ಶಾಸ್ತ್ರಗಳು ಸಮ್ಯಗ್ದರ್ಶನದ ಆಯತನಗಳಿಲ್ಲ. ಕುದೇವ-ಕುಗುರು-ಕುಶಾಸ್ತ್ರಗಳ ಸೇವನೆ ಮಾಡುವಂಥ, ಅವರ ಸೇವೆ-ಉಪಾಸನೆ ಮಾಡುವುದರಿಂದ ತಮ್ಮ ಕಲ್ಯಾಣವಾಗುವುದೆಂದು ಮನ್ನಿಸುವಂಥವರ ಪ್ರಶಂಸೆಯನ್ನು ಸಮ್ಯಗ್ದೃಷ್ಟಿಯು ಮಾಡುವುದಿಲ್ಲ.

ಈ ಪ್ರಕಾರ ಸಮ್ಯಗ್ದರ್ಶನದ ಘಾತ ಮಾಡುವಂಥ ಮೂರು ಮೂಢತೆ, ಎಂಟು ಮದ, ಎಂಟು ಶಂಕಾದಿ ದೋಷಗಳು, ಆರು ಅನಾಯತನಗಳೆಂದು ಈ ಇಪ್ಪತ್ತೈದು ದೋಷಗಳ ತ್ಯಾಗ ಮಾಡಿ ವ್ಯವಹಾರ ಸಮ್ಯಗ್ದರ್ಶನ ಧಾರಣ ಮಾಡಿದ ಮೇಲೆ ನಿಶ್ಚಯ ಸಮ್ಯಗ್ದರ್ಶನವನ್ನು ಪ್ರಾಪ್ತ ಮಾಡಿಕೊಳ್ಳಿರಿ. **ಯಾವನಿಗೆ ಇಪ್ಪತ್ತೈದು ದೋಷರಹಿತ ಆತ್ಮನ ಶ್ರದ್ಧೆಯ ಭಾವವಿದೆ. ಅವನಿಗೇ ನಿಶ್ಚಯ ಸಮ್ಯಗ್ದರ್ಶನವಾಗುವ ನಿಯಮವಿದೆ. ಯಾವನಿಗೆ ಬಾಹ್ಯ ದೋಷಗಳೇ ದೂರವಾಗಿಲ್ಲ, ಅವನಿಗೆ ಅಂತರಂಗದಲ್ಲಿ ಶುದ್ಧ ಸಮ್ಯಗ್ದರ್ಶನವೂ ಆಗುವುದಿಲ್ಲ.**

ಈಗ ಸಮ್ಯಕ್ತ್ವದ ಭೇದ ಮತ್ತು ಅದರ ಉತ್ಪತ್ತಿಯು ಹೇಗಾಗುತ್ತದೆಂಬುದನ್ನು ಹೇಳುತ್ತಾರೆ.

**ಸಮ್ಯಕ್ತ್ವದ ಭೇದ -** ಸಮ್ಯಕ್ತ್ವದಲ್ಲಿ ಉಪಶಮಸಮ್ಯಕ್ತ್ವ, ಕ್ಷಯೋಪಶಮಸಮ್ಯಕ್ತ್ವ ಮತ್ತು ಕ್ಷಾಯಿಕ ಸಮ್ಯಕ್ತ್ವವೆಂದು ಮೂರು ಪ್ರಕಾರವಿವೆ. ಸಂಸಾರೀ ಜೀವನಿಗೆ ಅನಾದೀ ಕಾಲದಿಂದ ಎಂಟು ಕರ್ಮಗಳ ಬಂಧನವಿದೆ. ಅವುಗಳಲ್ಲಿ ದರ್ಶನ ಮೋಹನೀಯ ಮತ್ತು ಚಾರಿತ್ರ ಮೋಹನೀಯವೆಂದು, ಮೋಹನೀಯ ಕರ್ಮದಲ್ಲಿ ಎರಡು ಭೇದಗಳಿವೆ. ಮಿಥ್ಯಾತ್ವ ಸಮ್ಯಗ್ಮಿಥ್ಯಾತ್ವ ಮತ್ತು ಸಮ್ಯಕ್ತ್ವವೆಂದು, ದರ್ಶನಮೋಹನೀಯದಲ್ಲಿ ಮೂರು ಪ್ರಕೃತಿಗಳಿದ್ದರೆ ಅನಂತಾನುಬಂಧೀ ಕ್ರೋಧ, ಅನಂತಾನುಬಂಧೀ ಮಾನ, ಅನಂತಾನುಬಂಧೀಮಾಯೆ, ಅನಂತಾನುಬಂಧೀ ಲೋಭವೆಂದು, ಚಾರಿತ್ರ ಮೋಹನೀಯ ದಲ್ಲಿ ನಾಲ್ಕು ಭೇದಗಳಿವೆ. ಹೀಗೆ ಇವು ಏಳು ಪ್ರಕೃತಿಗಳು ಸಮ್ಯಕ್ತ್ವದ ಘಾತಮಾಡುವಂಥವುಗಳಿವೆ. ಈ ಏಳು ಪ್ರಕೃತಿಗಳ ಉಪಶಮವಾಗುವುದರಿಂದ ಉಪಶಮಸಮ್ಯಕ್ತ್ವವಾಗುತ್ತದೆ. ಇವೇ ಏಳು ಪ್ರಕೃತಿಗಳ ಕ್ಷಯವಾಗುವುದರಿಂದ ಕ್ಷಾಯಿಕ ಸಮ್ಯಕ್ತ್ವ ಮತ್ತು ಈ ಏಳೂ ಪ್ರಕೃತಿಗಳ ಕ್ಷಯೋಪಶಮವಾಗುವುದರಿಂದ ಕ್ಷಾಯೋಪಶಮಿಕ ಸಮ್ಯಕ್ತ್ವವಾಗುತ್ತದೆ, ಇದರ ಇನ್ನೊಂದು ಹೆಸರು ವೇದಕ ಸಮ್ಯಕ್ತ್ವವೂ ಇದೆ.

**ಅನಾದಿ ಮಿಥ್ಯಾದೃಷ್ಟಿ ಜೀವನಿಗೆ ಮೊದಲು ಉಪಶಮ ಸಮ್ಯಕ್ತ್ವವೇ ಆಗುತ್ತದೆ.** ಮಿಥ್ಯಾದೃಷ್ಟಿಗೆ ಮಿಥ್ಯಾತ್ವವು ಹೊರಟು ಹೋಗಿ ಯಾವ ಸಮ್ಯಕ್ತ್ವವಾಗುತ್ತದೆ ಅದನ್ನು ಪ್ರಥಮೋಪಶಮಸಮ್ಯಕ್ತ್ವವೆಂದು ಹೇಳುತ್ತಾರೆ. ಉಪಶಮ ಶ್ರೇಣಿಯ ಪ್ರಾರಂಭದಲ್ಲಿ ಕ್ಷಯೋಪಶಮಸಮ್ಯಕ್ತ್ವದ ನಂತರ ಯಾವ ಉಪಶಮಸಮ್ಯಕ್ತ್ವವಾಗುತ್ತದೆ ಅದನ್ನು ದ್ವಿತಿಯೋಪಶಮ ಸಮ್ಯಕ್ತ್ವವೆಂದು ಹೇಳುತ್ತಾರೆ.

ಈಗ ಮಿಥ್ಯಾದೃಷ್ಟಿಗೆ ಮಿಥ್ಯಾತ್ವ ಗುಣಸ್ಥಾನದಿಂದ ಉಪಶಮಸಮ್ಯಕ್ತ್ವವು ಹೇಗೆ ಆಗುತ್ತದೆಯೆಂಬುದನ್ನು ಶ್ರೀ ಲಬ್ಧಿಸಾರ ಶಾಸ್ತ್ರದ ಅನುಸಾರ ಸ್ವಲ್ಪ ಹೇಳಲಾಗುತ್ತದೆ.

**ಸಮ್ಯಕ್ತ್ವದ ಉತ್ಪತ್ತಿ -** ಸಮ್ಯಗ್ದರ್ಶನವು ನಾಲ್ಕೂ ಗತಿಗಳಲ್ಲಿ ಅನಾದಿ ಮಿಥ್ಯಾದೃಷ್ಟಿ ಹಾಗೂ ಸಾದಿ ಮಿಥ್ಯಾದೃಷ್ಟಿಗೆ ಉತ್ಪನ್ನವಾಗುತ್ತದೆ; ಆದರೆ ಸಂಜ್ಞೀಗೇನೇ ಉತ್ಪನ್ನವಾಗುತ್ತದೆ, ಆದರೆ ಅಸಂಜ್ಞಿಗೆ ಆಗುವುದಿಲ್ಲ; ಪರ್ಯಾಪ್ತಕ್ಕೇನೇ

ಉತ್ಪನ್ನವಾಗುತ್ತದೆ, ಅಪರ್ಯಾಪ್ತಕ್ಕೆ ಇಲ್ಲ; ಮಂದಕಷಾಯಿಗೇನೇ ಉತ್ಪನ್ನವಾಗುತ್ತದೆ, ತೀವ್ರಕಷಾಯಿಗೆ ಇಲ್ಲ; ಭವ್ಯಕ್ಕೇನೇ ಉತ್ಪನ್ನವಾಗುತ್ತದೆ, ಅಭವ್ಯಕ್ಕೆ ಇಲ್ಲ; ಗುಣ-ದೋಷಗಳ ವಿಚಾರ ಸಹಿತ **ಸಾಕಾರೋಪಯೋಗ** ಆ ಜ್ಞಾನೋಪಯೋಗ ಯುಕ್ತರಿಗೇ ಉತ್ಪನ್ನವಾಗುತ್ತದೆ ದರ್ಶನೋಪಯೋಗಿಗೆ ಇಲ್ಲ; ಜಾಗೃತ ಅವಸ್ಥೆಯಲ್ಲಿಯೇ ಉತ್ಪನ್ನವಾಗುತ್ತದೆ, ನಿದ್ರೆಯಲ್ಲಿ ಅಚೇತರಿರುವವರಿಗೆ ಆಗುವುದಿಲ್ಲ. ಐದನೆಯ ಕರಣಲಬ್ಧಿಯ ಉತ್ಕೃಷ್ಟವಾದ ಆ ಅನಿವೃತ್ತಿಕರಣ ಪರಿಣಾಮದ ಅಂತಿಮ ಸಮಯದಲ್ಲಿ ಪ್ರಥಮೋಪಶಮಸಮ್ಯಕ್ತ್ವವಾಗುತ್ತದೆ.

**ಐದು ಲಬ್ಧಿಗಳು –** ಕ್ಷಯೋಪಶಮಲಬ್ಧಿ, ವಿಶುದ್ಧಿಲಬ್ಧಿ, ದೇಶನಾಲಬ್ಧಿ, ಪ್ರಾಯೋಗ್ಯಲಬ್ಧಿ ಮತ್ತು ಕರಣಲಬ್ಧಿಯೆಂದು ಐದು ಪ್ರಕಾರದ ಲಬ್ಧಿಗಳಿವೆ. ಇವು ಐದೂ ಲಬ್ಧಿಗಳಾದಲ್ಲದೆ ಸಮ್ಯಕ್ತ್ವವು ಉತ್ಪನ್ನವಾಗುವುದಿಲ್ಲ. ಇವುಗಳಲ್ಲಿ ಮೊದಲಿನ ನಾಲ್ಕು ಲಬ್ಧಿಗಳಂತೂ ಯಾವುದೇ ಸಂಸಾರೀ ಭವ್ಯ ಹಾಗೂ ಅಭವ್ಯಕ್ಕೂ ಆಗಿ ಹೋಗುತ್ತವೆ; ಆದರೆ ಕರಣಲಬ್ಧಿಯಂತೂ ಯಾರಿಗೆ ಸಮ್ಯಕ್ತ್ವ ಹಾಗೂ ಚಾರಿತ್ರವೂ ಅವಶ್ಯವಾಗಿ ಪ್ರಾಪ್ತವಾಗುವುದಿದೆ ಅವರಿಗೇ ಆಗುತ್ತದೆ.

**ಕ್ಷಯೋಪಶಮಲಬ್ಧಿ –** ಕ್ಷಯೋಪಶಮಲಬ್ಧಿಯ ವಿಷಯದಲ್ಲಿ ಆಗಮದೊಳಗೆ ಹೇಳಿರುವುದೇನೆಂದರೆ ಯಾವ ಕಾಲದಲ್ಲಿ ಎಂಟೂ ಕರ್ಮಗಳೊಳಗಿಂದ ಜ್ಞಾನಾವರಣ ಮೊದಲಾದಕರ್ಮಗಳ ಸಮಸ್ತ ಅಪ್ರಶಸ್ತ ಪ್ರಕೃತಿಗಳ ಅನುಭಾಗ ಶಕ್ತಿಯು ಸಮಯ ಸಮಯಕ್ಕೆ ಅನಂತಗುಣಿತ ಕುಂದುತ್ತ ಮುಂದೆ ಕ್ರಮದಿಂದ ಉದಯದಲ್ಲಿ ಬರತೊಡಗುವುದು ಆ ಕಾಲದಲ್ಲಿ ಕ್ಷಯೋಪಶಮಲಬ್ಧಿಯಾಯಿತೆಂದು ಹೇಳಲಾಗುತ್ತದೆ. ಉತ್ಕೃಷ್ಟ ಅನುಭಾಗದ ಅನಂತದ ಒಂದು ಭಾಗದಷ್ಟು ಆ ದೇಶಘಾತಿ ಸ್ಪರ್ಧಕಗಳ ಉದಯವಾಗುತ್ತಿದ್ದರೂ ಉತ್ಕೃಷ್ಟ ಅನುಭಾಗದ (ಆ ಉಳಿದ) ಅನಂತ ಬಹು ಭಾಗದಷ್ಟು ಆ ಸರ್ವಘಾತಿ ಸ್ಪರ್ಧಕಗಳ ಉದಯದ ಅಭಾವವನ್ನೇ ಕ್ಷಯವೆಂದು ಹೇಳಿದೆ ಮತ್ತು ಆ ಸರ್ವಘಾತಿ ಸ್ಪರ್ಧಕಗಳು ಉದಯದ ಅವಸ್ಥೆಗೆ ಪ್ರಾಪ್ತವಾಗಿರದಿದ್ದರೂ ಅವುಗಳ ಸತ್ತಾ ವಿದ್ಯಮಾನವಿದೆ ಅದನ್ನು ಉಪಶಮವೆಂದು ಹೇಳಿದೆ. ಇಂಥ ಸಂಯೋಗದ ಪ್ರಾಪ್ತಿಯು ಯಾವ ಸಮಯದಲ್ಲಿ ಆಗುತ್ತದೆ ಅದನ್ನು ಕ್ಷಯೋಪಶಮಲಬ್ಧಿಯೆಂದು ತಿಳಿಯುವುದು.

**ವಿಶುದ್ಧಿಲಬ್ಧಿ –** ಮೊದಲು ಯಾವ ಕ್ಷಯೋಪಶಮಲಬ್ಧಿಯಾಗಿದೆ ಅದರ ಪ್ರಭಾವದಿಂದ ಉತ್ಪನ್ನವಾಗುವಂಥ ಜೀವಕ್ಕೆ ಸಾತಾವೇದನೀಯ ಮೊದಲಾದ ಶುಭ ಪ್ರಕೃತಿಗಳ ಬಂಧಕ್ಕೆ ಕಾರಣವು **ಧರ್ಮಾನುರಾಗರೂಪ ಶುಭ ಭಾವಗಳ ಪ್ರಾಪ್ತಿಯಾಗುವುದು ಅದು ವಿಶುದ್ಧಿಲಬ್ಧಿಯಿದೆ.** ಏಕೆಂದರೆ ಯಾವಾಗ ಅಶುಭ ಕರ್ಮಗಳ ಸ್ವಾದ ಕೊಡುವುದು ಕಡಿಮೆಯಾಗುತ್ತದೆ, ಆಗ ಜೀವದ ಸಂಕ್ಲೇಶ ಪರಿಣಾಮಗಳೂ ಕಡಿಮೆಯಾಗಿ ಸ್ವಲ್ಪ ಉಳಿಯುತ್ತವೆ, ಆ ಅವಸ್ಥೆಯಲ್ಲಿ ವಿಶುದ್ಧ ಪರಿಣಾಮಗಳ ವೃದ್ಧಿಯಾಗುವುದು ಉಚಿತವೇ ಇದೆ. ಈ ಪ್ರಕಾರ ಎರಡನೆಯ ವಿಶುದ್ಧಿಲಬ್ಧಿ ಹೇಳಲಾಯಿತು.

**ದೇಶನಾಲಬ್ಧಿ –** ಆರು ದ್ರವ್ಯಗಳ ಹಾಗೂ ಒಂಭತ್ತು ಪದಾರ್ಥಗಳ ಉಪದೇಶ ಕೊಡುವಂಥ ಆಚಾರ್ಯ ಮೊದಲಾದವರು ದೊರಕುವುದು, ಅವರಿಂದ ಉಪದೇಶದ ಪ್ರಾಪ್ತಿಯಾಗುವುದು ಮತ್ತು ಆ ಉಪದೇಶಿತ ಪದಾರ್ಥಗಳ ಸ್ವರೂಪವನ್ನು ಬುದ್ಧಿಯಲ್ಲಿ **ಧಾರಣ** ಮಾಡುವುದು ಅದು ದೇಶನಾಲಬ್ಧಿಯಿದೆ. ನರಕಾದಿಗಳಲ್ಲಿ ಉಪದೇಶ ಕೊಡುವಂಥವರು ಇರುವುದಿಲ್ಲ, ಅಲ್ಲಿ ಪೂರ್ವ ಜನ್ಮದಲ್ಲಿ ಯಾವ ತತ್ತ್ವಗಳ ಅರ್ಥವನ್ನು ಬುದ್ಧಿಯಲ್ಲಿ ಧಾರಣ ಮಾಡಿತ್ತು ಅದರ ಸಂಸ್ಕಾರದ ಬಲದಿಂದ ಸಮ್ಯಗ್ದರ್ಶನವು ಆಗಿ ಹೋಗುತ್ತದೆ.

**ಪ್ರಾಯೋಗ್ಯಲಬ್ಧಿ –** ಮೇಲೆ ಹೇಳಿದ ಮೂರು ಲಬ್ಧಿಗಳೊಡನೆ ಜೀವನು ಯಾವಾಗ ಸಮಯ ಸಮಯಕ್ಕೆ **ವಿಶುದ್ಧತೆಯನ್ನು ವೃದ್ಧಿಸಿಕೊಳ್ಳುತ್ತ,** ಆಯುಕರ್ಮದ ಹೊರತಾಗಿ ಏಳೂ ಕರ್ಮಗಳ ಸ್ಥಿತಿಯು ಅಂತಃಕೋಟಾಕೋಟಿ ಸಾಗರಶೇಷ ಉಳಿಯುತ್ತದೆ. ಆಗ ಪೂರ್ವದಲ್ಲಿ ಯಾವ ಕರ್ಮಗಳ ಸ್ಥಿತಿಯು ಉಳಿದಿತ್ತು,. ಅದನ್ನು ಒಂದು **ಕಾಂಡಕ** ಘಾತದಿಂದ ಛೇದಿಸುವುದು; ಪುನಃ ಕಾಂಡಕದಿಂದಪ್ರಾಪ್ತ ದ್ರವ್ಯ (ಕರ್ಮಗಳ)ವನ್ನು ಬಾಕಿ ಉಳಿದ ಸ್ಥಿತಿಯ ಬರಾಬರಿ ಮಾಡುತ್ತಾನೆ. ಈ ಅವಸ್ಥೆಯಲ್ಲಿ ಘಾತಿಕರ್ಮಗಳ ಅನುಭಾಗ ಎಂದರೆ ರಸವು ದೇವದಾರು ಮತ್ತು ಲತಾ ರೂಪದಿಂದ

ಶೇಷ ಉಳಿಯುತ್ತದೆ, ಶೈಲ-ಅಸ್ಥಿರೂಪದಿಂದ ಉಳಿಯುವುದಿಲ್ಲ; ಮತ್ತು ಅಘಾತಿಕರ್ಮಗಳ ಅನುಭಾಗವು ನಿಂಬ-ಕಾಂಜೀರರೂಪದಲ್ಲಿ ಶೇಷ ಉಳಿಯುತ್ತದೆ, ವಿಷ-ಹಾಲಾಹಲರೂಪದಲ್ಲಿ ಉಳಿಯುವುದಿಲ್ಲ. ಮೊದಲು ಯಾವ ಅನುಭಾಗವಿತ್ತು ಅದರಲ್ಲಿ ಅನಂತದ ಭಾಗಕೊಟ್ಟ ಮೇಲೆ ಬಹುಭಾಗ ಪ್ರಮಾಣ ಅನುಭಾಗವನ್ನು ನಷ್ಟ ಮಾಡಿ ಬಾಕಿ ಉಳಿದ ಅನುಭಾಗವು (ಅನಂತದ ಒಂದು ಭಾಗವು) ಉಳಿಯುತ್ತದೆ. **ಹೀಗೆ ಕಾರ್ಯ ಮಾಡುವ ಯೋಗ್ಯತೆಯ ಪ್ರಾಪ್ತಿಯು ಅದು ಪ್ರಾಯೋಗ್ಯಲಬ್ಧಿಯಿದೆ. ಇದು ಭವ್ಯ ಮತ್ತು ಅಭವ್ಯಗಳೀರ್ವರಿಗೂ ಆಗುವ ಸಾಧ್ಯತೆಯಿದೆ.**

ಸಂಕ್ಲೇಶ ಪರಿಣಾಮೀ ಸಂಜ್ಞೀ ಪಂಚೇಂದ್ರಿಯ ಪರ್ಯಾಪ್ತಕ್ಕೆ ಹೇಗೆ ಸಂಭವಿಸುವುದು ಹಾಗೆ ಉತ್ಕೃಷ್ಟ ಸ್ಥಿತಿ ಬಂಧವುಳ್ಳ ಮತ್ತು ಉತ್ಕೃಷ್ಟ ಪ್ರದೇಶ-ಸ್ಥಿತಿ-ಅನುಭಾಗದ ಸತ್ತಾವುಳ್ಳ ಜೀವನು ಪ್ರಥಮೋಪಶಮ ಸಮ್ಯಕ್ತ್ವನ್ನು ಗ್ರಹಣ ಮಾಡುವ ಸಾಧ್ಯತೆಯಿಲ್ಲ, ಮತ್ತು ಕ್ಷಪಕ ಶ್ರೇಣಿಯಲ್ಲಿ ಯಾವ ಬಂಧವು ಸಂಭವವಿದೆ ಅಷ್ಟು ಪರಿಣಾಮಗಳ ವಿಶುದ್ಧಿ ಮತ್ತು ಜಘನ್ಯ ಪ್ರದೇಶ-ಸ್ಥಿತಿ-ಅನುಭಾಗದ ಸತ್ತಾ ಉಳಿದ ಮೇಲೂ ಪ್ರಥಮೋಪಶಮ ಸಮ್ಯಕ್ತ್ವದ ಪ್ರಾಪ್ತಿಯಾಗುವುದಿಲ್ಲ.

ಪ್ರಥಮೋಪಶಮಸಮ್ಯಕ್ತ್ವದ ಸನ್ಮುಖನಾದ ಮಿಥ್ಯಾದೃಷ್ಟಿ ಜೀವನು ವಿಶುದ್ಧತೆಯ ವೃದ್ಧಿಮಾಡಿ ಮುಂದುವರೆಯುತ್ತ ಪ್ರಾಯೋಗ್ಯಲಬ್ಧಿಯ ಪ್ರಥಮ ಸಮಯದಿಂದ ಹಿಡಿದು ಪೂರ್ವಸ್ಥಿತಿಯ ಸಂಖ್ಯಾತದ ಭಾಗ ಮಾತ್ರ (ಬರಾಬರಿ) ಅಂತಃಕೋಟಾಕೋಟಿ ಸಾಗರ ಪ್ರಮಾಣ (ಬರಾಬರಿ) ಆಯುಕರ್ಮದ ಹೊರತಾಗಿ ಏಳು ಕರ್ಮಗಳ ಸ್ಥಿತಿಬಂಧ ಮಾಡುತ್ತಾನೆ. ಆ ಅಂತಃಕೋಟಾಕೋಟಿಸಾಗರ (ಬರಾಬರಿ) ಸ್ಥಿತಿಬಂಧದಿಂದ ಪಲ್ಯದ ಸಂಖ್ಯಾತದ ಭಾಗ ಮಾತ್ರಕಡಿಮೆಯಾಗುತ್ತ (ಬರಾಬರಿ ಕಡಿಮೆ) ಸ್ಥಿತಿ ಬಂಧವು ಅಂತರ್ಮುಹೂರ್ತದವರೆಗೆ ಸಮಾನತೆಯ ಸಲುವಾಗಿ (ಒಂದೇ ಗತಿಯಿಂದ) ಮಾಡುತ್ತದೆ.

ಪುನಃ ಅಂತರ್ಮುಹೂರ್ತದವರೆಗೆ ಪಲ್ಯದ ಸಂಖ್ಯಾತದ ಭಾಗ ಮಾತ್ರ ಕಡಿಮೆ ಮಾಡುತ್ತ ಸ್ಥಿತಿಬಂಧ ಸಮಾನತೆಯ ಸಲುವಾಗಿ ಮಾಡುತ್ತದೆ. ಇದೇ ಪ್ರಕಾರ ಕ್ರಮ ಕ್ರಮದಿಂದ ಸಂಖ್ಯಾತ ಸ್ಥಿತಿಬಂಧದ ಅಪಸರಣ ಮಾಡಿ ಪೃಥಕ್ತ್ವ(೭-೮) ನೂರುಸಾಗರ ಕಡಿಮೆಯಾಗಿ ಹೋದ ಮೇಲೆ ಪ್ರಥಮ ಪ್ರಕೃತಿಬಂಧ ಅಪಸರಣ ಸ್ಥಾನವಾಗುತ್ತದೆ. ಇದೇ ಕ್ರಮದಿಂದ ಹಿಂದಿನ ಕರ್ಮದಿಂದಲೂ ಭಿನ್ನವಾದ ನೂರು ಸಾಗರ ಕಳೆದು ಹೋದ ಮೇಲೆ ಎರಡನೇ ಪ್ರಕೃತಿಬಂಧ ಅಪಸರಣ ಸ್ಥಾನವಾಗುತ್ತದೆ. ಈ ರೀತಿ ಇದೇ ಕ್ರಮದಿಂದ ಇಷ್ಟೇ ಸ್ಥಿತಿಬಂಧವು ಕಡಿಮೆಯಾಗುತ್ತ ಹೋದ ಮೇಲೆ ಒಂದೊಂದು ಪ್ರಕೃತಿಬಂಧ ಅಪಸರಣ ಸ್ಥಾನವಾಗುತ್ತ ಹೋಗುತ್ತದೆ. **ಈ ಪ್ರಕಾರ ಪ್ರಕೃತಿಬಂಧ ಅಪಸರಣದ ಮೂವತ್ತಾನ್ಲುಕ್ಕು ಸ್ಥಾನಗಳಾಗುತ್ತವೆ.** ಇಲ್ಲಿ ಪ್ರಥಕ್ತ್ವದ ಅರ್ಥ ೭-೮ ಇದೆ, ಆದ್ದರಿಂದ ಇಲ್ಲಿ ಪ್ರಥಕ್ತ್ವನೂರು ಸಾಗರವೆಂದು ಹೇಳಿದರೆ ಏಳು ನೂರು ಮತ್ತು ಎಂಟು ನೂರು ಸಾಗರವೆಂದು ತಿಳಿಯುವುದು.

ಈಗ ಇಲ್ಲಿ ಯಾವ ಯಾವ ಪ್ರಕೃತಿಗಳ ಬಂಧವು (ವ್ಯುಚ್ಛೇದ) ನಿಂತು ಹೋಗುತ್ತದೆ, ಇಲ್ಲಿಂದ ಹಿಡಿದು ಪ್ರಥಮೋಪಶಮಸಮ್ಯಕ್ತ್ವವಾಗುವವರೆಗೆ ಬಂಧವಾಗದಂಥ ಮೂವತ್ತಾನ್ಲುಕ್ಕು ಬಂಧಾಪಸರಣಗಳಿವೆ. ಆ ಮೂವತ್ತಾನ್ಲುಕ್ಕು ಬಂಧಾಪಸರಣಗಳ ವರ್ಣನೆ ಮಾಡುವುದರಿಂದ ಕಥನವು ಅಧಿಕವಾಗುತ್ತದೆ. ಯಾರಿಗೆ ವಿಶೇಷ ತಿಳಿದುಕೊಳ್ಳುವ ಇಚ್ಛೆಯಿದೆ ಅವರು ಲಬ್ಧಿಸಾರ ಗ್ರಂಥದಿಂದ ತಿಳಿದುಕೊಳ್ಳಬೇಕು. ಪ್ರಾಯೋಗ್ಯಲಬ್ಧಿಯ ಕುರಿತೂ ವಿಶೇಷವನ್ನು ಅದೇ ಗ್ರಂಥದಿಂದ ತಿಳಿದುಕೊಳ್ಳಬೇಕು.

**ಕರಣಲಬ್ಧಿ -** ಈ ಕರಣಲಬ್ಧಿಯು ಭವ್ಯರಿಗೆ ಮಾತ್ರ ಆಗುತ್ತದೆ ಅಭವ್ಯರಿಗೆ ಆಗುವುದಿಲ್ಲ. ಅಧಃಕರಣ, ಅಪೂರ್ವಕರಣ, ಅನಿವೃತ್ತಿಕರಣವೆಂದು ಮೂರು ಕರಣಗಳಿವೆ. **ಕಷಾಯಗಳ ಮಂದತೆಯಿಂದ ಆಗುವಂಥ ಆತ್ಮನ ವಿಶುದ್ಧಿರೂಪದ ಪರಿಣಾಮಗಳಿಗೆ ಕರಣವೆಂದು ಹೇಳುತ್ತಾರೆ.** ಅವುಗಳಲ್ಲಿ ಲಘು ಅಂತರ್ಮುಹೂರ್ತ ಪ್ರಮಾಣ ಕಾಲವಂತೂ ಅನಿವೃತ್ತಿಕರಣದ್ದಿದೆ. ಅದರಿಂದ ಸಂಖ್ಯಾತಗುಣಿತ ಕಾಲವು ಅಪೂರ್ವಕರಣದ್ದಿದೆ, ಮತ್ತು ಅದರಿಂದ ಸಂಖ್ಯಾತಗುಣಿತ ಕಾಲವು ಅಧಃಕರಣದ್ದಿದೆ. ಈ ಎಲ್ಲ ಕಾಲವು ಅಂತರ್ಮುಹೂರ್ತ ಪ್ರಮಾಣವೇ ಇದೆ, ಏಕೆಂದರೆ ಅಂತರ್ಮುಹೂರ್ತದಲ್ಲೂ ಅಸಂಖ್ಯಾತ ಭೇದಗಳಿವೆ.

ಈ ಅಧಃಪ್ರವೃತ್ತಿಕರಣದ ಕಾಲದಲ್ಲಿ ಭೂತ-ಭವಿಷ್ಯ-ವರ್ತಮಾನ ತ್ರಿಕಾಲವರ್ತಿ ಅನೇಕ ಜೀವಗಳಿಗೆ ಸಂಬಂಧವುಳ್ಳ ಇದೇ ಕರಣದ ವಿಶುದ್ಧರೂಪದ ಪರಿಣಾಮಗಳು ಅಸಂಖ್ಯಾತ ಲೋಕಪ್ರಮಾಣವಿವೆ. ಆ ಪರಿಣಾಮಗಳು ಅಧಃಪ್ರವೃತ್ತಿಕರಣದ ಎಷ್ಟು ಸಮಯವಿವೆ ಅಷ್ಟರಲ್ಲಿ ಸಮಾನ ವೃದ್ಧಿಯ ಅಪೇಕ್ಷೆಯಿಂದ ಪ್ರತಿ ಸಮಯ ಹೆಚ್ಚುತ್ತಿರುತ್ತದೆ. ಈ ಕರಣದ ಕೆಳಗಿನ ಸಮಯದ ಪರಿಣಾಮಗಳ ಸಂಖ್ಯೆ ಮತ್ತು ವಿಶುದ್ಧತೆಯ ಮೇಲಿನ ಸಮಯವರ್ತಿ ಯಾವುದೇ ಅನ್ಯ ಜೀವದ ಪರಿಣಾಮಗಳ ಸಮಾನವಾಗಿರುತ್ತವೆ (ಹೊಂದಿಕೆಯಾಗುತ್ತವೆ) ಆದ್ದರಿಂದ ಇದರ ಹೆಸರು ಅಂಧಃಪ್ರವೃತ್ತಿಕರಣವಿದೆ. ಇದರ ಪರಿಣಾಮಗಳ ಸಂಖ್ಯೆ ಮತ್ತು ವಿಶುದ್ಧತೆಯ ಕುರಿತು ಲೌಕಿಕ ದೃಷ್ಟಾಂತ ಅಲೌಕಿಕ ಸಂದೃಷ್ಟಿಗಳು ಗೊಮ್ಮಟಸಾರ ಹಾಗೂ ಲಬ್ಧಿಸಾಗರದಲ್ಲಿವೆ. ಅಲ್ಲಿಂದ ವಿಶೇಷ ತಿಳಿಯುವುದು. ಇಲ್ಲಿ ಅಷ್ಟು ವಿಸ್ತಾರವನ್ನು ಹೇಗೆ ಬರೆಯುವುದು. ಬರೆದರೆ ಗ್ರಂಥವು ಹೆಚ್ಚು ವಿಸ್ತಾರವಾಗುವುದು.

ಅಧಃಪ್ರವೃತ್ತಿಕರಣದ ಪರಿಣಾಮಗಳ ಪ್ರಭಾವದಿಂದ ನಾಲ್ಕು ಅವಶ್ಯಕಗಳಾಗುತ್ತವೆ. ೧) ಪ್ರತಿಸಮಯದಲ್ಲಿ ಅನಂತಗುಣಿತ ವಿಶುದ್ಧತೆಯ ವೃದ್ಧಿಯಾಗುತ್ತದೆ. ೨) ಸ್ಥಿತಿಬಂಧದ ಅಪಸರಣವಾಗುತ್ತದೆ; ಮೊದಲು ಎಷ್ಟು ಸ್ಥಿತಿಯ ಕುರಿತು ಕರ್ಮಗಳ ಸ್ಥಿತಿಬಂಧವಾಗುತ್ತಿತ್ತು ಅದರಿಂದ ಕುಂದುತ್ತ - ಕುಂದುತ್ತ ಸ್ಥಿತಿಬಂಧ ಮಾಡುತ್ತದೆ; ೩) ಸಾತಾ ವೇದನೀಯದಿಂದ ಹಿಡಿದು ಪ್ರತಿಸಮಯ ಪ್ರಶಸ್ತ ಕರ್ಮಪ್ರಕೃತಿಗಳ ಅನಂತಗುಣಿತ ವೃದ್ಧಿಸುತ್ತ ಬೆಲ್ಲ, ಕಾಕಂಬಿ, ಸಕ್ಕರೆ, ಅಮೃತದ ಸಮಾನ ನಾಲ್ಕುಪ್ರಕಾರದ ಅನುಭಾಗ ಬಂಧವಾಗುತ್ತದೆ; ಮತ್ತು ೪) ಅಸಾತಾವೇದನೀಯ ಮೊದಲಾದ ಕರ್ಮ ಪ್ರಕೃತಿಗಳು ಪ್ರತಿ ಸಮಯದಲ್ಲಿ ಅನಂತಗುಣಿತ ಕಡಿಮೆಯಾಗುತ್ತ ನಿಂಬ, ಕಾಂಜೀರದ ಸಮಾನ ಎರಡು ಪ್ರಕಾರದ ಅನುಭಾಗ ಬಂಧವಾಗುತ್ತದೆ; ವಿಷ, ಹಾಲಾಹಲ ರೂಪವಾಗುವುದಿಲ್ಲ.

ಈ ಪ್ರಕಾರ ಅಧಃಪ್ರವೃತ್ತಿಕರಣದ ಪರಿಣಾಮಗಳಿಂದ ನಾಲ್ಕು ಆವಶ್ಯಕಗಳಾಗುತ್ತವೆ. ಅಧಃಪ್ರವೃತ್ತಿಕರಣದ ಅಂತರ್ಮುಹೂರ್ತಕಾಲವು ಕಳೆದ ಮೇಲೆ ಅಪೂರ್ವಕರಣವಾಗುತ್ತದೆ. ಅಧಃಪ್ರವೃತ್ತಿಕರಣದ ಪರಿಣಾಮಗಳಿಂದ ಅಪೂರ್ವಕರಣದ ಪರಿಣಾಮಗಳು ಸಂಖ್ಯಾತಲೋಕಗುಣಿತವಿವೆ, ಆದರೆ ಅವನ್ನು ಅನೇಕ ಜೀವಗಳ ಅಪೇಕ್ಷೆಯಿಂದ ಹೇಳಿದ್ದಾರೆ. ಒಂದು ಜೀವದ ಅಪೇಕ್ಷೆಯಿಂದ ಒಂದು ಸಮಯದಲ್ಲಿ ಒಂದೇ ಪರಿಣಾಮವಾಗುತ್ತದೆ. ಒಂದು ಜೀವದ ಅಪೇಕ್ಷೆಯಿಂದ ಎಷ್ಟು ಸಮಯ ಅಪೂರ್ವಕರಣದ ಅಂತರ್ಮುಹೂರ್ತದ ಕಾಲಗಳಿವೆ ಅಷ್ಟು ಪರಿಣಾಮಗಳಿವೆ. ಇದೇ ಪ್ರಕಾರ ಅಧಃಪ್ರವೃತ್ತಿಕರಣದ್ದು ಕೂಡ ಒಂದು ಜೀವಕ್ಕೆ ಒಂದು ಸಮಯದಲ್ಲಿ ಒಂದು ಪರಿಣಾಮವಾಗುತ್ತದೆ. ಅನೇಕ ಜೀವಗಳ ಅಪೇಕ್ಷೆಯಿಂದ ಒಂದು ಸಮಯಕ್ಕೆ ಯೋಗ್ಯವಾದ ಅಸಂಖ್ಯಾತ ಪರಿಣಾಮಗಳಿವೆ.

ಆ ಅಪೂರ್ವಕರಣದ ಪರಿಣಾಮಗಳು ಕೂಡ ಪ್ರತಿ ಸಮಯ ಸಮಾನವೃದ್ಧಿಯೊಡನೆ ಹೆಚ್ಚುತ್ತಿರುತ್ತವೆ. ಈ ಅಪೂರ್ವಕರಣದ ಪರಿಣಾಮಗಳು ಕೆಳಗಿನ ಸಮಯವರ್ತಿ ಪರಿಣಾಮಗಳ ಸಮಾನವಾಗುವುದಿಲ್ಲ ಮೊದಲ ಸಮಯದ ಉತ್ಕೃಷ್ಟವಿಶುದ್ಧತೆಯಿಂದ ಎರಡನೇ ಸಮಯದ ಜಘನ್ಯ ವಿಶುದ್ಧತೆಯೂ ಅನಂತಗುಣಿತವಾಗುತ್ತದೆ. ಇದು ಈ ಪ್ರಕಾರದ ಪರಿಣಾಮಗಳ ಅಪೂರ್ವತೆಯಿದೆ. ಆದುದರಿಂದ ಈ ಎರಡನೆಯ ಕರಣದ ಹೆಸರು ಅಪೂರ್ವಕರಣವಿದೆ.

ಅಪೂರ್ವಕರಣದ ಪ್ರಥಮ ಸಮಯದಿಂದ ಹಿಡಿದು ಅಂತಿಮ ಸಮಯದವರೆಗೆ ತಮ್ಮ ಜಘನ್ಯದಿಂದ ತಮ್ಮ ಉತ್ಕೃಷ್ಟ ಹಾಗೂ ಹಿಂದಿನ ಸಮಯದ ಉತ್ಕೃಷ್ಟದಿಂದ ಮುಂದಿನ ಸಮಯದ ಜಘನ್ಯ ಪರಿಣಾಮಗಳು ಕ್ರಮ ಕ್ರಮದಿಂದ ಅನಂತಗುಣಿತ ವಿಶುದ್ಧತೆಯ ಕುರಿತು ಸರ್ಪದ ಗತಿಯ ಸಮಾನ ತಿಳಿಯುವುದು. ಇಲ್ಲಿ ಅನುಕೃಷ್ಟಿಯಾಗುವುದಿಲ್ಲ. ಅಪೂರ್ವಕರಣದ ಮೊದಲ ಸಮಯದಿಂದ ಹಿಡಿದು ಎಲ್ಲಿಯವರೆಗೆ ಸಮ್ಯಕ್ತ್ವ ಮೋಹನೀಯ-ಮಿಶ್ರ ಮೋಹನೀಯದ ಪೂರ್ಣಕಾಲವು ಅದರಲ್ಲಿ ಗುಣಸಂಕ್ರಮಣ ಮಾಡಿ ಮಿಥ್ಯಾತ್ವವನ್ನು ಸಮ್ಯಕ್ತ್ವ ಮೋಹನೀಯ-ಮಿಶ್ರ ಮೋಹನೀಯ ರೂಪವಾಗಿ ಪರಿಣಮಿಸುವುದಿಲ್ಲ. ಆ ಕಾಲದ ಅಂತಿಮ ಸಮಯದವರೆಗೂ ಗುಣಶ್ರೇಣಿ, ೨) ಗುಣಸಂಕ್ರಮಣ, ೩) ಸ್ಥಿತಿಖಂಡನ, ೪) ಅನುಭಾಗಖಂಡನವೆಂದು ಇವು ನಾಲ್ಕು ಆವಶ್ಯಕಗಳಾಗುತ್ತವೆ.

ಅಧಃಕರಣದ ಮೊದಲ ಸಮಯದಿಂದ ಹಿಡಿದು ಆ ಗುಣಸಂಕ್ರಮಣವು ಪೂರ್ಣವಾಗುವ ಕಾಲದವರೆಗೆ ಸ್ಥಿತಿ-ಬಂಧ-ಅಪಸರಣವಾಗುತ್ತದೆ. ಪ್ರಾಯೋಗ್ಯಲಬ್ಧಿಯಿಂದಲೇ ಸ್ಥಿತಿಬಂಧ-ಅಪಸರಣದ ಪ್ರಾರಂಭವಾಗಿ ಹೋಗುತ್ತಿದ್ದರೂ ಪ್ರಾಯೋಗ್ಯಲಬ್ಧಿಯುಳ್ಳ ಜೀವಕ್ಕೆ ಸಮ್ಯಕ್ತ್ವವಾಗುವ ಅನವಸ್ಥಿತತೆಯಿದೆ, ನಿಯಮವಿಲ್ಲ, ಆದುದರಿಂದ ಆ ಸ್ಥಿತಿಬಂಧ-ಅಪಸರಣವನ್ನು ಗಣನೆಯಲ್ಲಿ ತೆಗೆದುಕೊಂಡಿಲ್ಲ (ಅದಕ್ಕೆ ಮಹತ್ವ ಕೊಟ್ಟಿಲ್ಲ). ಸ್ಥಿತಿಬಂಧ-ಅಪಸರಣದ ಕಾಲ ಮತ್ತು ಸ್ಥಿತಿಕಾಂಡಕೋತ್ಕರಣದ ಕಾಲ ಇವೆರಡೂ ಸಮಾನವೇ ಅಂತರ್ಮುಹೂರ್ತ ಮಾತ್ರದ್ದು ಇವೆ.

೧) ಮೊದಲು ಕಟ್ಟಿದ ಸತ್ತಾದಲ್ಲಿ ಕರ್ಮ ಪರಮಾಣುಗಳ ರೂಪದ ದ್ರವ್ಯದೊಳಗಿಂದ ಬೇರ್ಪಟ್ಟು ಆ ದ್ರವ್ಯವು ಗುಣಶ್ರೇಣಿಯಲ್ಲಿ ಒಪ್ಪಿಸುವುದರಿಂದ ಗುಣಶ್ರೇಣಿಯ ಕಾಲದಲ್ಲಿ ಪ್ರತಿ ಸಮಯದಲ್ಲಿ ಅಸಂಖ್ಯಾತ ಗುಣಿತ ಕ್ರಮದಿಂದ ಯಾವ ಪಂಕ್ತಿಬದ್ಧ ನಿರ್ಜರೆಯಾಗುತ್ತದೆ. ಅದನ್ನು ಗುಣಶ್ರೇಣಿ ನಿರ್ಜರೆಯೆಂದು ಹೇಳುತ್ತಾರೆ.

೨) ಪ್ರತಿ ಸಮಯದಲ್ಲಿ ಗುಣಾಕಾರದ ಅನುಕ್ರಮದಿಂದ ವಿವಕ್ಷಿತ ಪ್ರಕೃತಿಯ ಪರಮಾಣುಗಳು ಬದಲಾಗಿ ಬೇರೆ ಪ್ರಕೃತಿರೂಪವಾಗಿ ಹೋಗುವುದು ಅದು ಗುಣಸಂಕ್ರಮಣವಿದೆ.

೩) ಮೊದಲು ಕಟ್ಟಿದ ಸತ್ತಾದಲ್ಲಿ ಇರುವಂಥ ಕರ್ಮಪ್ರಕೃತಿಗಳ ಸ್ಥಿತಿಯು ಕಡಿಮೆಯಾಗುವುದು ಅದು ಸ್ಥಿತಿ ಖಂಡನವಿದೆ.

೪) ಮೊದಲು ಕಟ್ಟಿದ ಸತ್ತಾದಲ್ಲಿ ಇರುವಂಥ ಅಶುಭಕರ್ಮ ಪ್ರಕೃತಿಗಳ ಅನುಭಾಗದ ಕುಂದುವಿಕೆಯು ಅದು ಅನುಭಾಗ ಖಂಡನವಿದೆ.

ಈ ಪ್ರಕಾರ ಈ ನಾಲ್ಕು ಕಾರ್ಯಗಳು ಅಪೂರ್ವಕರಣದಲ್ಲಿ ಅವಶ್ಯವಾಗಿ ಆಗುತ್ತವೆ. ಅಪೂರ್ವಕರಣದ ಪ್ರಥಮ ಸಮಯಕ್ಕೆ ಸಂಬಂಧಿಸಿದ ಪ್ರಶಸ್ತ-ಅಪ್ರಶಸ್ತ ಪ್ರಕೃತಿಗಳ ಯಾವ ಅನುಭಾಗಸತ್ವವಿದೆ ಅದರಿಂದ ಅಪೂರ್ವಕರಣದ ಅಂತಿಮ ಸಮಯದಲ್ಲಿ ಅದರ ಪ್ರಶಸ್ತ ಪ್ರಕೃತಿಗಳದ್ದು ಅನಂತಗುಣಿತ ಹೆಚ್ಚು ಮತ್ತು ಅಪ್ರಶಸ್ತ ಪ್ರಕೃತಿಗಳದ್ದು ಅನಂತ ಗುಣಿತ ಕುಂದುತ್ತ ಅನುಭಾಗ ಸತ್ವವಾಗುತ್ತದೆ. ಇಲ್ಲಿ ಪ್ರತಿಸಮಯ ಅನಂತಗುಣಿತ ವಿಶುದ್ಧತೆಯಾಗುವುದರಿಂದ ಪ್ರಶಸ್ತ ಪ್ರಕೃತಿಗಳದ್ದು ಅನಂತಗುಣಿತ ಹಾಗೂ ಅನುಭಾಗ ಕಾಂಡಕದ ಮಾಹಾತ್ಮ್ಯದ ಕಾರಣ ಅಪ್ರಶಸ್ತ ಪ್ರಕೃತಿಗಳದ್ದು ಅನಂತದ ಭಾಗ ಅನುಭಾಗವು ಅಂತಿಮ ಸಮಯದಲ್ಲಾಗುವ ಸಂಭವವಿದೆ.

ಈ ಸ್ಥಿತಿಖಂಡನ ಮೊದಲಾದವುಗಳಾಗುವ ವಿಧಾನದ ಕಥನವನ್ನು ವಿಸ್ತಾರಪೂರ್ವಕ ಲಬ್ಧಿಸಾರ ಗ್ರಂಥದಿಂದ ತಿಳಿಯುವುದು. ಇಲ್ಲಿಯಂತೂ ಪ್ರಕರಣವಶದಿಂದ ಸಂಕ್ಷೇಪದಲ್ಲಿ ಹೇಳಿದೆ. ಅಪೂರ್ವಕರಣದಲ್ಲಿ ಹೇಳಲಾದ ಸ್ಥಿತಿಖಂಡನ ಮೊದಲಾದ ವಿಶೇಷ ಕಾರ್ಯಗಳು ಇಲ್ಲಿ ಅನಿವೃತ್ತಿಕರಣದಲ್ಲಿ ಕೂಡ ಆಗುತ್ತವೆ.

ಇಲ್ಲಿ ಸಮಾನ ಸಮಯವರ್ತಿಯಾದ ಅನೇಕ ಜೀವಗಳ ಪರಿಣಾಮಗಳು ಸಮಾನವೇ ಆಗುತ್ತವೆಂದು ತಿಳಿಯುವುದು ಏಕೆಂದರೆ ಎಷ್ಟು ಅನಿವೃತ್ತಿಕರಣದ ಅಂತರ್ಮುಹೂರ್ತದ ಸಮಯಗಳಿವೆ ಅಷ್ಟೇ ಅನಿವೃತ್ತಿಕರಣದ ಪರಿಣಾಮಗಳಿವೆ. ಆದ್ದರಿಂದ ಪ್ರತಿಯೊಂದು ಸಮಯದಲ್ಲಿ ಒಂದೇ ಪರಿಣಾಮವಾಗುತ್ತದೆ. ಇಲ್ಲಿ ಯಾವ ಸ್ಥಿತಿಖಂಡನ ಮತ್ತು ಅನುಭಾಗಖಂಡನ ಮೊದಲಾದವುಗಳ ಪ್ರಾರಂಭವಿದೆ ಅದು ಬೇರೆಯಾವುದೇ ಅನುಪಾತದ ಅನುಸಾರವೇ ಆಗುತ್ತದೆ. ಅಪೂರ್ವಕರಣದ ಸಂಬಂಧಿಯಾದ ಸ್ಥಿತಿಖಂಡನ ಮೊದಲಾದುವಂತೂ ಅಪೂರ್ವಕರಣದ ಅಂತಿಮ ಸಮಯದಲ್ಲಿಯೇ ಸಮಾಪ್ತವಾಗಿ ಹೋಗಿರುತ್ತವೆ. ಇಲ್ಲಿ ಅಂತರಕರಣದ ವಿಧಿಯನ್ನೂ ಹೇಳಿದೆ ಅದನ್ನು ಲಬ್ಧಿಸಾರ ಗ್ರಂಥದಿಂದ ತಿಳಿದುಕೊಳ್ಳುವುದು.

**ಉಪಶಮ ಸಮ್ಯಕ್ತ್ವ** - ಅನಿವೃತ್ತಿಕರಣದ ಅಂತಿಮ ಸಮಯದಲ್ಲಿ ದರ್ಶನಮೋಹನೀಯ ಹಾಗೂ ಅನಂತಾನುಬಂಧೀ ನಾಲ್ಕುಪ್ರಕೃತಿಗಳ ಪ್ರಕೃತಿ, ಪ್ರದೇಶ, ಸ್ಥಿತಿ, ಅನುಭಾಗದ ಎಲ್ಲ ಪ್ರಕಾರದಿಂದ ಉದಯವಾಗುವ ಯೋಗ್ಯತೆಯಿಲ್ಲದ ರೂಪದ ಉಪಶಮವಾಗುವುದರಿಂದ ತತ್ತ್ವಾರ್ಥಗಳ ಶ್ರದ್ಧೆಯರೂಪದ (ನಿಶ್ಚಯ) ಸಮ್ಯಗ್ದರ್ಶನ

ಪಡೆದು ಔಪಶಮಿಕ ಸಮ್ಯಗ್ದೃಷ್ಟಿಯಾಗುತ್ತಾನೆ. ಅಲ್ಲಿ ಮೊದಲ ಸಮಯದಲ್ಲಿಯೇ ಎರಡನೆಯ ಅವಸ್ಥೆಯಲ್ಲಿರುತ್ತ ಮಿಥ್ಯಾತ್ವದ ದ್ರವ್ಯವನ್ನು ಸ್ಥಿತಿಕಾಂಡಕ ಅನುಭಾಗಕಾಂಡಕದ ಘಾತವಿಲ್ಲದೆಯೇ ಗುಣಸಂಕ್ರಮಣದ ಭಾಗ ಸೇರಿ ಮಿಥ್ಯಾತ್ವದ ದ್ರವ್ಯದಲ್ಲಿ ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ, ಸಮ್ಯಕ್ತ್ವ ಮೋಹನೀಯವೆಂದು ಮೂರು ಭಾಗ ಮಾಡಿಬಿಡುತ್ತದೆ.

**ಭಾವಾರ್ಥ :-** ಅನಾದಿಕಾಲದ ದರ್ಶನಮೋಹನೀಯಕರ್ಮವು ಏಕರೂಪವಿತ್ತು ಅದರ ದ್ರವ್ಯಕರಣಗಳ ಪ್ರಭಾವದಿಂದ ಶಕ್ತಿರೂಪವು ಮೂರು ಪ್ರಕಾರದಿಂದ ಬೇರೆ - ಬೇರೆಯಾಗಿ ಹೋಗುತ್ತದೆ. ಈ ಪ್ರಕಾರ ಮಿಥ್ಯಾದೃಷ್ಟಿಗೆ ಸಮ್ಯಕ್ತ್ವವಾಗುವ ಕಾರಣ ಐದು ಲಬ್ಧಿಗಳ ಸ್ವರೂಪವನ್ನು ಸಂಕ್ಷೇಪದಲ್ಲಿ ಹೇಳಲಾಗಿದೆ.

**ಕ್ಷಯೋಪಶಮ (ವೇದಕ) ಸಮ್ಯಕ್ತ್ವ -** ಈ ಉಪಶಮ ಸಮ್ಯಕ್ತ್ವವಿರುವ ಜಘನ್ಯ (ಕಡಿಮೆಯಿಂದ ಕಡಿಮೆ) ಕಾಲ ಮತ್ತು ಉತ್ಕೃಷ್ಟ (ಅಧಿಕದಿಂದ ಅಧಿಕ) ಕಾಲವು ಅಂತರ್ಮುಹೂರ್ತವರೆಗೇ ಇದೆ. ಅಂತರ್ಮುಹೂರ್ತವು ಪೂರ್ಣವಾದ ನಂತರ ನಿಯಮದಿಂದ ದರ್ಶನಮೋಹನೀಯದ ಮೂರು ಪ್ರಕೃತಿಗಳೊಳಗಿಂದ ಯಾವುದಾದರೂ ಒಂದರ ಉದಯವಾಗಿ ಹೋಗುತ್ತದೆ.

ಒಂದು ವೇಳೆ ಸಮ್ಯಕ್ತ್ವಮೋಹನೀಯ ಪ್ರಕೃತಿಯ ಉದಯವು ಬಂದು ಬಿಟ್ಟರೆ ಉಪಶಮ ಸಮ್ಯಕ್ತ್ವದಿಂದ ದೂರವಾಗಿ (ಬದಲಾಗಿ) ವೇದಕಸಮ್ಯಕ್ತ್ವವಾಗಿ ಹೋಗುತ್ತದೆ. ಆಗ ಸಮ್ಯಕ್ತ್ವಮೋಹನೀಯದ ಉದಯದಿಂದ ವೇದಕಸಮ್ಯಗ್ದೃಷ್ಟಿ ಜೀವನು ತತ್ತ್ವಗಳ ಶ್ರದ್ಧೆಯನ್ನು ಚಲ-ಮಲ-ಅಗಾಢ ದೋಷಗಳೊಡನೆ ಮಾಡುತ್ತಾನೆ. ಇಲ್ಲಿ ಶ್ರದ್ಧೆಯಲ್ಲಿ ಚಲತನದ ಅರ್ಥವೆಂದರೆ ಶ್ರದ್ಧೆಯಲ್ಲಿ ಶಿಥಿಲತೆ ಬಂದುಬಿಡುವುದು, ಮತ್ತು ಮಲದೋಷದ ಅರ್ಥವೆಂದರೆ ಅತಿಚಾರ ಸಹಿತವಿರುವುದು. ಈ ವೇದಕ ಸಮ್ಯಕ್ತ್ವವನ್ನೇ ಕ್ಷಯೋಪಶಮ ಸಮ್ಯಕ್ತ್ವವೆಂದು ಹೇಳುತ್ತಾರೆ.

ದರ್ಶನಮೋಹನೀಯದ ಸರ್ವಘಾತಿ ಸ್ಪರ್ಧಕಗಳಿಗೆ ನಿಷೇಕಗಳ ಉದಯದ ಅಭಾವವು ಅದು ಕ್ಷಯವಿದೆ ಮತ್ತು ದೇಶಘಾತಿಸ್ಪರ್ಧಕರೂಪ ಸಮ್ಯಕ್ತ್ವ ಪ್ರಕೃತಿಯ ಉದಯವಾದ ಮೇಲೂ ಅದೇ ಸಮ್ಯಕ್ತ್ವ ಮೋಹನೀಯದ್ದೇ ವರ್ತಮಾನ ಸಮಯ ಸಂಬಂಧದ ನಿಷೇಕಗಳ ಹೊರತಾಗಿ ಬೇರೆ ಆ ಮೇಲಿನ ನಿಷೇಕಗಳು ಇನ್ನೂ ಉದಯಕ್ಕೆ ಪ್ರಾಪ್ತವಾಗಿಲ್ಲ, ಕೇವಲ ಸತ್ತಾದಲ್ಲಿ ಅವಸ್ಥಿತವಿರುವವನ್ನು ಉಪಶಮವೆಂದು ಹೇಳಿದೆ. ಹೀಗೆ ಕರ್ಮಗಳ ಕ್ಷಯ ಮತ್ತು ಉಪಶಮರೂಪದ ಅವಸ್ಥೆಯಾಗುವುದರಿಂದ ಕ್ಷಯೋಪಶಮಸಮ್ಯಕ್ತ್ವವಾಗುತ್ತದೆ. ಇದಕ್ಕೇನೇ ಸಮ್ಯಕ್ತ್ವ ಪ್ರಕೃತಿಯ ಉದಯದ ವೇದನ-ಅನುಭವವಾಗುವುದರಿಂದ **ವೇದಕ ಸಮ್ಯಕ್ತ್ವ**ವೆಂದು ಹೇಳುತ್ತಾರೆ.

ಒಂದು ವೇಳೆ ಉಪಶಮಸಮ್ಯಕ್ತ್ವದ ಅಂತರ್ಮುಹೂರ್ತ ಸಮಯವು ಪೂರ್ಣವಾದನಂತರ ಸಮ್ಯಗ್ಮಿಥ್ಯಾತ್ವ ಪ್ರಕೃತಿಯ ಉದಯವು ಬಂದು ಬಿಟ್ಟರೆ ಮಿಶ್ರ ಗುಣಸ್ಥಾನದಲ್ಲಿ ಬಂದು ಬಿಡುತ್ತದೆ. ಆ ಜೀವಕ್ಕೆ ತತ್ತ್ವ-ಅತತ್ತ್ವಗಳೆರಡರ ಸೇರಿಕೆಯಾದ-ಮಿಶ್ರಣವಾದ ಶ್ರದ್ಧೆಯಾಗುತ್ತದೆ.

ಒಂದು ವೇಳೆ ಮಿಥ್ಯಾತ್ವ ಪ್ರಕೃತಿಯ ಉದಯವು ಬಂದು ಬಿಟ್ಟರೆ ಮಿಥ್ಯಾದೃಷ್ಟಿಯಾಗುತ್ತಾನೆ - ವಿಪರೀತ ಶ್ರದ್ಧೆಯುಳ್ಳವನಾಗಿಹೋಗುತ್ತಾನೆ. ಯಾವ ಪ್ರಕಾರ ಜ್ವರದಿಂದಪೀಡಿತನಾದ ಪುರುಷನಿಗೆ ಮಿಷ್ಟಾನ್ನ ಭೋಜನವು ರುಚಿಸುವುದಿಲ್ಲ, ಅದೇ ಪ್ರಕಾರ ಇವನಿಗೆ ಅನೇಕಾಂತರೂಪ ವಸ್ತುವಿನ ಸತ್ಯಸ್ವರೂಪವು, ತತ್ತ್ವಗಳ ಸತ್ಯ ಸ್ವರೂಪವು, ರತ್ನತ್ರಯರೂಪ ಮೋಕ್ಷದ ಮಾರ್ಗವು ರುಚಿಸುವುದಿಲ್ಲ, ದಶಲಕ್ಷಣರೂಪದ ಧರ್ಮವು ಸ್ವ-ಪರದ ದಯಾರೂಪದ ಧರ್ಮವು ರುಚಿಸುವುದಿಲ್ಲ.

ಒಂದು ವೇಳೆ ಉಪಶಮಸಮ್ಯಕ್ತ್ವದ ಅಂತರ್ಮುಹೂರ್ತ ಕಾಲದೊಳಗಿಂದ ಕಡಿಮೆಯಿಂದ ಕಡಿಮೆ ಒಂದು ಸಮಯ ಮತ್ತು ಅಧಿಕದಿಂದ ಅಧಿಕ ಆರು ಆವಲಿಶೇಷ ಉಳಿದ ಮೇಲೆ ಅನಂತಾನುಬಂಧೀ ಕ್ರೋಧ, ಮಾನ, ಮಾಯೆ, ಲೋಭದೊಳಗಿಂದ ಯಾವುದೇ ಒಂದರ ಉದಯವಾಗಿ ಹೋದರೆ ಆ ಜೀವನು ಸಮ್ಯಕ್ತ್ವದಿಂದ ಚ್ಯುತನಾಗಿ ಸಾಸಾದನ ಗುಣಸ್ಥಾನದಲ್ಲಿ ಬಂದು ಬಿಡುತ್ತಾನೆ; ಇಲ್ಲಿ ಅವನ ಒಂದು ಸಮಯದಿಂದ ಹಿಡಿದು ಆರು ಆವಲಿಗಳವರೆಗೆ ಇದ್ದು ನಿಯಮದಿಂದ ಮಿಥ್ಯಾದೃಷ್ಟಿಯಾಗಿ ಹೋಗುತ್ತಾನೆ.

**ಈ ಪ್ರಕಾರ ಉಶಮುಸಮ್ಯಕ್ತ್ವದ ಅಂತರ್ಮುಹೂರ್ತಕಾಲವು ಪೂರ್ಣವಾದನಂತರ ನಾಲ್ಕು ಮಾರ್ಗಗಳಿವೆ.** ಒಂದು ವೇಳೆ ಸಮ್ಯಕ್ತ್ವ ಮೋಹನೀಯದ ಉದಯವಾಗಿ ಹೋದರೆ ಕ್ಷಯೋಪಶಮ ಸಮ್ಯಕ್ತ್ವಿಯಾಗಿ ಬಿಡುತ್ತಾನೆ; ಒಂದು ವೇಳೆ ಮಿಶ್ರ ಪ್ರಕೃತಿಯ ಉದಯವಾಗಿ ಹೋದರೆ ಮಿಶ್ರಗುಣಸ್ಥಾನಿಯಾಗಿ ಬಿಡುತ್ತಾನೆ; ಒಂದು ವೇಳೆ ಮಿಥ್ಯಾತ್ವದ ಉದಯವಾಗಿ ಹೋದರೆ ನಿಯಮದಿಂದ ಮಿಥ್ಯಾದೃಷ್ಟಿಯಾಗಿ ಬಿಡುತ್ತಾನೆ; ಮತ್ತು ಒಂದು ವೇಳೆ ನಾಲ್ಕು ಅನಂತಾನುಬಂಧೀ ಕಷಾಯಗಳೊಳಗಿಂದ ಯಾವುದೇ ಒಂದರ ಉದಯವಾಗಿ ಹೋದರೆ ಸಾಸಾದನ ಗುಣಸ್ಥಾನದಲ್ಲಿ ಬಂದು ಪುನಃ ಮಿಥ್ಯಾದೃಷ್ಟಿಯಾಗಿ ಬಿಡುತ್ತಾನೆ.

**ಕ್ಷಾಯಿಕ ಸಮ್ಯಕ್ತ್ವ** - ಈಗ ಕ್ಷಾಯಿಕ ಸಮ್ಯಕ್ತ್ವವಾಗುವ ಕಥನವನ್ನು ಸಂಕ್ಷೇಪದಲ್ಲಿ ಮಾಡುತ್ತಾರೆ. ದರ್ಶನ ಮೋಹದ ಕ್ಷಯದಿಂದ ಕ್ಷಾಯಿಕ ಸಮ್ಯಕ್ತ್ವವಾಗುತ್ತದೆ. ದರ್ಶನಮೋಹನೀಯದ ಕ್ಷಯ ಮಾಡಿಸುವ ಪ್ರಾರಂಭವನ್ನು ಕರ್ಮಭೂಮಿಯ ಮನುಷ್ಯನೇ ಮಾಡುತ್ತಾನೆ. ಭೋಗಭೂಮಿಯ ಮನುಷ್ಯನು ಮಾಡುವ ಸಾಧ್ಯತೆಯಿಲ್ಲ; ಸಮಸ್ತ ದೇವ, ನಾರಕಿ, ತಿರ್ಯಂಚಗಳಿಗೂ ಕ್ಷಾಯಿಕ ಸಮ್ಯಕ್ತ್ವದ ಆರಂಭವಾಗುವುದಿಲ್ಲ - ಕರ್ಮಭೂಮಿಯ ಮನುಷ್ಯನೇ ದರ್ಶನ ಮೋಹದ ನಾಶಮಾಡುವ ಪ್ರಾರಂಭ ಮಾಡುತ್ತಾನೆ. ಅದು ಕೂಡ ಕೇವಲಿ, ಶ್ರುತಕೇವಲಿ ಮತ್ತು ತೀರ್ಥಂಕರ ಕೇವಲಿಗಳ ಪಾದ ಮೂಲದ ಹತ್ತಿರ ಕುಳಿತುಕೊಂಡೇ ಮಾಡುತ್ತಾನೆ. ದರ್ಶನ ಮೋಹದ ಕ್ಷಯ ಮಾಡಲು ಯೋಗ್ಯವಾದ ವಿಶುದ್ಧತೆಯು ಕೇವಲಿಗಳ ಹತ್ತಿರ ಕುಳಿತುಕೊಂಡಲ್ಲದೆ ಆಗುವುದಿಲ್ಲ.

ಇಲ್ಲಿ ಅಧಃಕರಣದ ಪ್ರಥಮ ಸಮಯದಿಂದ ಹಿಡಿದು ಎಲ್ಲಿಯವರೆಗೆ ಮಿಥ್ಯಾತ್ವ ಮತ್ತು ಮಿಶ್ರಮೋಹನೀಯದ ದ್ರವ್ಯವನ್ನು ಸಮ್ಯಕ್ತ್ವ ಪ್ರಕೃತಿರೂಪವಾಗಿ ಪರಿಣಮಿತ ಮಾಡಿಸುವುದಿಲ್ಲ, ಅಲ್ಲಿಯವರೆಗೆ ಅಂತರ್ಮುಹೂರ್ತ ಕಾಲದವರೆಗೆ ದರ್ಶನಮೋಹನೀಯದ ನಾಶದ ಆರಂಭ ಕಾಲವೆಂದು ಹೇಳಿದೆ. ಆ ಆರಂಭಕಾಲದ ಅನಂತರವರ್ತಿ ಸಮಯದಿಂದ ಹಿಡಿದು ಕ್ಷಾಯಿಕ ಸಮ್ಯಕ್ತ್ವದ ಗ್ರಹಣದ ಪ್ರಥಮ ಸಮಯದಲ್ಲಿ ಮೊದಲ ನಿಷ್ಠಾಪಕವಾಗುತ್ತದೆ. ಕ್ಷಪಣಾದ ಪ್ರಾರಂಭ ಮಾಡಿರುವಲ್ಲಿಯೇ ಕರ್ಮಭೂಮಿಯ ಮನುಷ್ಯನು ನಿಷ್ಠಾಪಕನಾಗುತ್ತಾನೆ, ಮತ್ತು ಸೌಧರ್ಮ ಮೊದಲಾದ ಸ್ವರ್ಗಗಳಲ್ಲಿ, ಕಲ್ಪಾತೀತ ಅಹಮಿಂದ್ರರುಗಳಲ್ಲಿ, ಭೋಗಭೂಮಿಯ ಮನುಷ್ಯ-ತಿರ್ಯಂಚಗಳಲ್ಲಿ, ಧಮ್ಮಾನಾಮದ ಮೊದಲ ನರಕದಲ್ಲಿ ಕೂಡ ನಿಷ್ಠಾಪಕನಾಗಿ ಹೋಗುತ್ತಾನೆ. ಏಕೆಂದರೆ ಮೊದಲು ಆಯುಬಂಧವಾಗಿ ಹೋಗಿರುವಂಥ ಕೃತಕೃತ್ಯವೇದಕ ಸಮ್ಯಗ್ದೃಷ್ಟಿಯು ಸತ್ತು ನಾಲ್ಕೂ ಗತಿಗಳಲ್ಲಿ ಉತ್ಪನ್ನನಾಗಿ ಎಲ್ಲಿಯೂ ಕ್ಷಪಣಾವನ್ನು ಪೂರ್ಣ ಮಾಡಿಕೊಳ್ಳುತ್ತಾನೆ.

ಈಗ ಅನಂತಾನುಬಂಧೀ ಕ್ರೋಧ, ಮಾನ, ಮಾಯೆ, ಲೋಭ, ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ ಮತ್ತು ಸಮ್ಯಕ್ತ್ವ ಇವು ಏಳರ **ಕ್ಷಪಣಾ ಹೇಗೆ ಮಾಡತ್ತಾನೆಂಬುದನ್ನು ಹೇಳುತ್ತಾರೆ.** ಓರ್ವ ಮನುಷ್ಯನು ವೇದಕಸಮ್ಯಗ್ದೃಷ್ಟಿಯಾಗಿ ಅಸಂಯತ, ದೇಶಸಂಯತ, ಪ್ರಮತ್ತ, ಅಪ್ರಮತ್ತ ಈ ನಾಲ್ಕು ಗುಣಸ್ಥಾನಗಳಲ್ಲಿ ಯಾವುದರಲ್ಲೂ ಇರುತ್ತ ಮೊದಲು ಹೇಳಿದ ಮೂರು ಕರಣಗಳ ವಿಧಿ ಮಾಡಿ, ಅನಂತಾನುಬಂಧೀ ಕ್ರೋಧ, ಮಾನ, ಮಾಯೆ, ಲೋಭದ ಉದಯಾವಲಿಯಲ್ಲಿ ಇರುವಂಥ ನಿಷೇಕಗಳನ್ನು ಬಿಟ್ಟುಕೊಟ್ಟು ಮತ್ತು ಉದಯಾವಲಿಯ ಹೊರಗೆ ಇರುವಂಥ ಸಮಸ್ತ ನಿಷೇಕಗಳ ವಿಸಂಯೋಜನೆ ಮಾಡಿ ಅನಿವೃತ್ತಿಕರಣದ ಅಂತಿಮ ಸಮಯದಲ್ಲಿ ಅನಂತಾನುಬಂಧಿಯ ಸಮಸ್ತ ದ್ರವ್ಯಗಳನ್ನು ಹನ್ನೆರಡು ಕಷಾಯ ಮತ್ತು ಒಂಭತ್ತು ನೋಕಷಾಯ ರೂಪವಾಗಿ ಪರಿಣಮಿತ ಮಾಡಿಸುತ್ತಾನೆ. **ಇದು ಅನಂತಾನು ಬಂಧಿಯ ವಿಸಂಯೋಜನೆಯಿದೆ.**

ಈ ವಿಸಂಯೋಜನೆಯಲ್ಲಿ ಕೂಡ ಗುಣಶ್ರೇಣಿ ನಿರ್ಜರೆ ಮತ್ತು ಸ್ಥಿತಿಕಾಂಡಕಘಾತ ಮೊದಲಾಗಿ ಅನೇಕ ವಿಧಿಗಳಿವೆ. ಅನಂತಾನುಬಂಧಿಯ ವಿಸಂಯೋಜನೆ ಮಾಡಿದ ನಂತರ ಅಂತರ್ಮುಹೂರ್ತಕಾಲದವರೆಗೆ ವಿಶ್ರಾಂತಿ ಮಾಡಿ, ಯಾವುದೇ ಕ್ರಿಯೆಮಾಡದೆ ಇದ್ದು, ಅದರನಂತರ ಪುನಃ ಮೂರುಕರಣ ಮಾಡಿ ಅನಿವೃತ್ತಿಕರಣದ ಕಾಲದಲ್ಲಿ ಮಿಥ್ಯಾತ್ವ ಮಿಶ್ರ, ಸಮ್ಯಕ್ತ್ವಮೋಹನೀಯವನ್ನು ಕ್ರಮದಿಂದ ನಷ್ಟ ಮಾಡುತ್ತಾನೆ. ಈ ಕರಣಗಳ ಸಾಮರ್ಥ್ಯದಿಂದ ಯಾವ ಯಾವ ಕರ್ಮದ ಸ್ಥಿತಿ-ಅನುಭಾಗದ ಘಾತವಾಗುವ ವಿಧಾನವಿದೆ ಅದನ್ನು ಶ್ರೀ ಲಬ್ಧಿಸಾರದಿಂದ ತಿಳಿದುಕೊಳ್ಳಬೇಕು. ಈ ಪ್ರಕಾರ ಏಳು ಪ್ರಕೃತಿಗಳ ನಾಶಮಾಡಿ ಕ್ಷಾಯಿಕ ಸಮ್ಯಕ್ತ್ವಿಯಾಗುತ್ತಾನೆ. ಇಲ್ಲಿ ಮೂರು ಪ್ರಕಾರದ ಸಮ್ಯಕ್ತ್ವವಾಗುವ ವರ್ಣನೆಯನ್ನು ಸಂಕ್ಷೇಪದಲ್ಲಿ ಮಾಡಲಾಗಿದೆ.

**ಸಮ್ಯಕ್ತ್ವದ ಎಂಟು ಗುಣಗಳು - ಸಮ್ಯಗ್ದೃಷ್ಟಿಗೆ ಬೇರೆ ಎಂಟು ಗುಣಗಳೂ ಪ್ರಕಟವಾಗುತ್ತವೆ. ಅವುಗಳಿಂದ ಅವನು ತನ್ನ ಹಾಗೂ ಇತರರ ಸಮ್ಯಕ್ತ್ವವನ್ನು ತಿಳಿದುಕೊಳ್ಳಲಾಗುತ್ತದೆ.** ೧) ಸಂವೇಗ, ೨) ನಿರ್ವೇದ, ೩) ಆತ್ಮನಿಂದೆ, ೪) ಗರ್ಹಾ, ೫) ಉಪಶಮ, ೬) ಭಕ್ತಿ, ೭) ವಾತ್ಸಲ್ಯ, ೮) ಅನುಕಂಪೆಯೆಂದು ಈ ಎಂಟು ಗುಣಗಳು ಯಾವನಲ್ಲಿ ಇರುತ್ತವೆ ಅವನಿಗೆ ಸಮ್ಯಗ್ದರ್ಶನವಿದೆಯೆಂದು ತಿಳಿದುಕೊಳ್ಳುವುದು.

೧)ಸಮ್ಯಗ್ದೃಷ್ಟಿಗೆ **ಸಂವೇಗ** ಎಂದರೆ ಧರ್ಮದಲ್ಲಿ ಅನುರಾಗವಿರುತ್ತದೆ. ಸಂಸಾರೀ ಮಿಥ್ಯಾದೃಷ್ಟಿಯ ಅನುರಾಗವಂತೂ ಶರೀರದಲ್ಲಿಯೇ ಆಗುತ್ತಿರುತ್ತದೆ, ಏಕೆಂದರೆ ಅವನು ಶರೀರವು ಉಜ್ವಲವಿರಲಿ, ಬಲಶಾಲಿಯಿರಲಿ, ಪುಷ್ಟವಿರಲೆಂದೇ ಬಯಸುತ್ತಾನೆ. ಶರೀರದಲ್ಲಿ ಮಮತೆಯಿರುವ ಕಾರಣದಿಂದಲೇ ಅವನು ಅಭಕ್ಷ್ಯ ಭಕ್ಷಣ ಮಾಡಿ ಸುಖ ಮನ್ನಿಸುತ್ತಾನೆ, ಅನ್ಯಾಯದೊಡನೆ ಶೃಂಗಾರಾದಿಗಳ ಮೂಲಕ ಶರೀರವನ್ನು ಅಲಂಕರಿಸಿ ಪ್ರಸನ್ನನಾಗುತ್ತಾನೆ. ಪಾಪಿಗಳೊಡನೆ ಸಂಬಂಧವಿಡುವಲ್ಲಿ ಆನಂದ ಮನ್ನಿಸುತ್ತಾನೆ, ವಿಕಥೆಗಳಲ್ಲಿ ಮನಸ್ಸು ತೊಡಗಿಸುತ್ತಾನೆ. ಸ್ತ್ರೀ, ಪುತ್ರ, ಧನ, ಸಂಪತ್ತಿನಲ್ಲಿ, ನಗರ, ದೇಶ, ರಾಜ್ಯ ಐಶ್ವರ್ಯದಲ್ಲಿ ಅನುರಾಗ ಮಾಡುತ್ತಾನೆ. ಶರೀರ ಮೊದಲಾದುವಲ್ಲಿ ಸಮ್ಯಗ್ದೃಷ್ಟಿಗೆ ಆತ್ಮಬುದ್ಧಿಯಿಲ್ಲದಿರುವುದರಿಂದ ದಶಲಕ್ಷಣ ಧರ್ಮದಲ್ಲಿಯೇ ಅನುರಾಗ ಮಾಡುತ್ತಾನೆ. ಸಮ್ಯಗ್ದೃಷ್ಟಿಯ ಅನುರಾಗವಂತೂ ಧರ್ಮಾತ್ಮ ಪುರುಷರಲ್ಲಿ, ಧರ್ಮಕಥೆಯಲ್ಲಿ, ಧರ್ಮದ ಆಯತನದಲ್ಲಿರುತ್ತದೆ. ಇಂಥ ಸಂವೇಗಗುಣವು ಸಮ್ಯಗ್ದೃಷ್ಟಿಯಲ್ಲಿ ಇದ್ದೇ ಇರುತ್ತದೆ.

೨) ಸಮ್ಯಗ್ದೃಷ್ಟಿಗೆ ಪಂಚಪರಾವರ್ತನರೂಪ ಸಂಸಾರದಲ್ಲಿ, ಕೃತಘ್ನ ಶರೀರದಲ್ಲಿ, ದುರ್ಗತಿಗಳಲ್ಲಿ ಕೊಂಡೊಯ್ಯುವಂಥ ಭೋಗಗಳಲ್ಲಿ ನಿಯಮದಿಂದ ವಿರಕ್ತತೆಯಿರುತ್ತದೆ. ಈ ಎರಡನೇ **ನಿರ್ವೇದ** ಗುಣವು ಸಮ್ಯಗ್ದೃಷ್ಟಿಗೆ ಪ್ರಕಟವಾಗೇ ಆಗುತ್ತದೆ.

೩) ತಮ್ಮ ಪ್ರಮಾದದಿಂದ, ಅಸಂಯಮ ಭಾವದಿಂದ, ಸಾಂಸಾರಿಕ ಪಾಪಮಯ ಪ್ರವೃತ್ತಿಯಿಂದ ಪರಿಣಾಮಗಳಲ್ಲಿ ನಿರಂತರ ತಮ್ಮ ನಿಂದೆ ವಿಹರಿಸುತ್ತಿರುತ್ತದೆ. ಇಂಥ ದುರ್ಲಭ ಮನುಷ್ಯ ಭವದ ಒಂದು ಕ್ಷಣವು ಕೂಡ ಧರ್ಮದ ಆಶ್ರಯವಿಲ್ಲದೆ ಹೋಗುತ್ತಿರುವುದು ಮಹಾ ಅನರ್ಥವಿದೆ. ಈ ಪ್ರಕಾರ ತಮ್ಮ ಪರಿಣಾಮಗಳಲ್ಲಿ ತಮ್ಮ ದೋಷಸಹಿತ ಪ್ರವರ್ತಿಸುವುದರ ವಿಚಾರ ಮಾಡಿ ತಮ್ಮ ಮನಸ್ಸಿನಲ್ಲಿ ತಮ್ಮ ನಿಂದೆ ಮಾಡಿಕೊಳ್ಳುವುದು ಅದು **ಆತ್ಮನಿಂದೆ** ನಾಮದ ಮೂರನೆಯ ಗುಣವಿದೆ.

೪) ತಮ್ಮ ಗುರು ಇರಲಿ, ವಿಶೇಷ ಜ್ಞಾನಿಯಿರಲಿ, ಸಾಧರ್ಮಿಯಿರಲಿ ಅವರ ಹತ್ತಿರ ಹೋಗಿ ವಿನಯಪೂರ್ವಕ ತಮ್ಮ ನಿಂದೆ, ದೋಷ ಮೊದಲಾದುವನ್ನು ಪ್ರಕಟ ಮಾಡುವುದು ಅದು ಸಮ್ಯಗ್ದೃಷ್ಟಿಯ **ಗರ್ಹಾ**ನಾಮದ ನಾಲ್ಕನೆಯ ಗುಣವಿದೆ.

೫) ಸಮ್ಯಗ್ದೃಷ್ಟಿಗೆ ಕ್ರೋಧ, ಮಾನ, ಮಾಯೆ, ಲೋಭ ಮೊದಲಾದವುಗಳ ಮಂದತೆಯೇ ಇರುತ್ತದೆ. ಸಮ್ಯಗ್ದೃಷ್ಟಿಯು ರಾಗ, ದ್ವೇಷ, ಕಾಮ, ಉನ್ಮಾದ, ವೈರ ಮೊದಲಾದುವನ್ನು ತನ್ನ ಘಾತ ಮಾಡುವಂಥವೆಂದು ತಿಳಿಯುತ್ತಿರುವುದರಿಂದ ಅವೆಲ್ಲವನ್ನು ಮಂದವಾಗಿಯೇ ಮಾಡುತ್ತಾನೆ, ಇದುವೇ ಐದನೆಯ **ಉಪಶಮ** ಗುಣವಿದೆ.

೬) ಸಮ್ಯಗ್ದೃಷ್ಟಿಯು ಪಂಚ ಪರಮೇಷ್ಠಿಗಳಲ್ಲಿ, ಜಿನವಾಣಿಯಲ್ಲಿ, ಜಿನೇಂದ್ರರ ಪ್ರತಿಬಿಂಬದಲ್ಲಿ, ದಶಲಕ್ಷಣ ಧರ್ಮದಲ್ಲಿ, ಧರ್ಮಧಾರಿಯಾದ ಧರ್ಮಾತ್ಮರುಗಳಲ್ಲಿ, ತಪಸ್ವಿಗಳಲ್ಲಿ ಅವರ ಅನೇಕ ಗುಣಗಳ ಸ್ಮರಣೆ ಮಾಡಿ ಗುಣಗಳಲ್ಲಿ ಅನುರಾಗ ಮಾಡುವುದು ಅದು ಸಮ್ಯಗ್ದೃಷ್ಟಿಯ **ಭಕ್ತಿ** ನಾಮದ ಆರನೆಯ ಗುಣವಿದೆ.

೭) ಸಮ್ಯಗ್ದೃಷ್ಟಿಗೆ ಧರ್ಮಾತ್ಮರುಗಳಲ್ಲಿ ಪ್ರೀತಿಯಿರುತ್ತದೆ. ಹೇಗೆ ದರಿದ್ರನಿಗೆ ಧನದ ನಿಧಿ ನೋಡಿ ಆನಂದವಾಗುತ್ತದೆ, ಅದೇ ಪ್ರಕಾರ ಧರ್ಮಾತ್ಮ ಸಮ್ಯಗ್ದೃಷ್ಟಿ ಸಮ್ಯಗ್ಜ್ಞಾನಿಗಳನ್ನು ನೋಡಿ, ಧರ್ಮದ ವ್ಯಾಖ್ಯಾನವನ್ನು ಕೇಳಿ ಸಮ್ಯಗ್ದೃಷ್ಟಿಗೆ ಅತ್ಯಂತ ಆನಂದ ಪ್ರಕಟವಾಗುವುದು ಅದು **ವಾತ್ಸಲ್ಯ** ನಾಮದ ಏಳನೆಯ ಗುಣವಿದೆ.

೮) ಸಮ್ಯಗ್ದೃಷ್ಟಿಗೆ ಷಟ್ಕಾಯ ಜೀವಗಳ ಕುರಿತು ದಯೆಯು ಪ್ರಕಟವಾಗುತ್ತದೆ. ಇತರ ಜೀವಗಳ ದುಃಖ ನೋಡಿ ತಮ್ಮ ಪರಿಣಾಮವು ಕಂಪನ ಮಾಡುವುದರಿಂದ ತಾವೇ ದುಃಖಿಯಾಗಿ ಹೋಗುವುದು, ಮತ್ತು ಇತರ ಜೀವಗಳ ದುಃಖ ದೂರಮಾಡುವ ಪರಿಣಾಮವಾಗುವುದು ಅದು ಸಮ್ಯಗ್ದೃಷ್ಟಿಯ ಎಂಟನೆಯ **ಅನುಕಂಪೆ** ನಾಮದ ಗುಣವಿದೆ.

ಇದೇ ಪ್ರಕಾರ ಇನ್ನೂ ಅನೇಕ ಗುಣಗಳು ಸಮ್ಯಗ್ದೃಷ್ಟಿಗೆ ತಾವಾಗಿಯೇ ಪ್ರಕಟವಾಗುತ್ತವೆ. ಏಕೆಂದರೆ ನಿಜವಾದ ಶ್ರದ್ಧೆ-ಜ್ಞಾನಗಳು ಪ್ರಕಟವಾಗಿರುವವನ ಸಂಪೂರ್ಣ ಬಾಹ್ಯಭ್ಯಂತರಗಳು ಗುಣರೂಪವಾಗಿಯೇ ಪರಿಣಮಿಸುತ್ತವೆ.

ಈಗ ಸಮ್ಯಗ್ದರ್ಶನಯುಕ್ತವಿರುವಂಥ ಜೀವರುಗಳಿಗೆ ಮಹಾನತೆಯಿದೆಯೆಂದು ಹೇಳುವಂಥ ಸೂತ್ರ ಹೇಳುತ್ತಾರೆ,-

**ಸಮ್ಯಗ್ದರ್ಶನ ಸಂಪನ್ನಮಪಿ ಮಾತಂಗ ದೇಹಜಮ್ ।**
**ದೇವಾದೇವಂ ವಿದುರ್ಭಸ್ಮ ಗೂಢಾಗಾರಾಂತರೌಜಸಮ್ ॥೨೮॥**

**ಅರ್ಥ :-** ಸಮ್ಯಗ್ದರ್ಶನಯುಕ್ತ, ಚಾಂಡಾಲಳ ಶರೀರದಿಂದ ಉತ್ಪನ್ನನಾಗಿರುವ ಚಾಂಡಾಲನನ್ನು ಕೂಡ ಗಣಧರ ದೇವರು ದೇವನೆಂದು ಹೇಳುತ್ತಾರೆ. ಹೇಗೆಂದರೆ ಬೂದಿಯಿಂದ ಮುಚ್ಚಿ ಹೋದ ಅಗ್ನಿಯನ್ನು ಅಗ್ನಿಯೆಂದೇ ಹೇಳುತ್ತಾರೆ.

**ಭಾವಾರ್ಥ :-** ಸಮ್ಯಗ್ದರ್ಶನಯುಕ್ತನಿರುವ ಚಾಂಡಾಲನನ್ನು ಕೂಡ ಭಗವಾನ ಗಣಧರದೇವರು ದೇವನೆಂದು ಹೇಳಿದ್ದಾರೆ. ಈ **ಮೂಳೆ-ಮಾಂಸ**ಮಯ ಶರೀರವು **ಚಾಂಡಾಲ**ದಿಂದ ಉತ್ಪನ್ನವಾಗಿರುವುದರಿಂದ ಶರೀರವು ಚಾಂಡಾಲವಿದೆ; ಆದರೆ ಸಮ್ಯಗ್ದರ್ಶನವಾಗಿರುವಂಥ ಆತ್ಮನಂತೂ ದಿವ್ಯ ಗುಣಗಳಿಂದ ಶೋಭಿಸುತ್ತಾನೆ ಮತ್ತು ಅವನ ಶರೀರವನ್ನು ಕೂಡ ಉತ್ತಮ ಗುಣಗಳ ಪ್ರಭಾವದಿಂದ ದೇವನೆಂದೂ ಹೇಳಿದೆ. ಯಾವ ಪ್ರಕಾರ ಬೂದಿಯಿಂದ ಮುಚ್ಚಿದ ಬೆಂಕಿಯ ಒಳಗೆ ಉಷ್ಣತೆಯನ್ನು ಧರಿಸಿದ ಅಗ್ನಿಯೇ ಇರುತ್ತದೆ; ಅದೇ ಪ್ರಕಾರ ಸಮ್ಯಗ್ದೃಷ್ಟಿಯೂ ಮಲಿನ ದೇಹದ ಒಳಗೆ ಆತ್ಮಿಕ ಗುಣಗಳಿಂದ ಶೋಭಿಸುತ್ತಿರುತ್ತಾನೆ. ಅದರಿಂದಲೇ ಸ್ವಾಮಿ ಸಮಂತಭದ್ರಾಚಾರ್ಯರು ಹೇಳುವುದೇನೆಂದರೆ ಸಮ್ಯಗ್ದೃಷ್ಟಿಯ ಮಹಿಮೆಯನ್ನು ನಾವು ನಮ್ಮ ಪರವಾಗಿ ಮಾಡುತ್ತಿಲ್ಲ, ಜಿನೇಂದ್ರ ಭಗವಂತರ ದ್ವಾದಶಾಂಗರೂಪದ ಆಗಮದಲ್ಲಿ ಗಣಧರದೇವರು ಸಮ್ಯಗ್ದೃಷ್ಟಿ ಚಾಂಡಾಲನನ್ನು ಕೂಡ ದೇವನೆಂದು ಹೇಳಿದ್ದಾರೆ.

ಈ ಶರೀರವಂತೂ ಮಹಾಮಲಿನ ಮಲ-ಮೂತ್ರಗಳಿಂದ ತುಂಬಿ, ಮೂಳೆ-ಮಾಂಸ- ಚರ್ಮಮಯವಿದ್ದು, ಅದರ ನವದ್ವಾರಗಳಿಂದ ನಿರಂತರ ದುರ್ಗಂಧಯುಕ್ತ ಮಲವು ಸೋರುತ್ತದೆ. ಇಂಥ ಅಪವಿತ್ರ ಮಲಿನವಾದ ಸಾಧುಗಳ ಶರೀರವು ರತ್ನತ್ರಯದ ಪ್ರಭಾವದಿಂದ ಇಂದ್ರಾದಿ ದೇವಗಳಿಗೆ ದರ್ಶನ ಮಾಡಲು ಯೋಗ್ಯ, ಸ್ತವನ ಮಾಡಲು ಯೋಗ್ಯ, ನಮಸ್ಕಾರ ಮಾಡಲು ಯೋಗ್ಯವಾಗಿ ಹೋಗುತ್ತದೆ. ಗುಣಗಳ ಹೊರತಾಗಿ ಚರ್ಮದ, ಕಫ-ಮಲ-ಮೂತ್ರದಿಂದ ತುಂಬಿದ ಮಲಿನ ಶರೀರದ ವಂದನೆ, ಪೂಜೆ, ಅವಲೋಕನೆಯನ್ನು ಯಾರು ಮಾಡುವರು ? ಈ ಶರೀರವಂತೂ ಸಮ್ಯಗ್ದರ್ಶನದಿಂದಲೇ ವಂದನಾ ಯೋಗ್ಯ. ಪೂಜಾಯೋಗ್ಯವಾಗುತ್ತದೆ.

ಈಗ ಧರ್ಮ-ಅಧರ್ಮದ (ಪುಣ್ಯ ಮತ್ತು ಪಾಪದ) ಫಲವನ್ನು ಪ್ರಕಟಪಡಿಸುವಂಥ ಸೂತ್ರ ಹೇಳುತ್ತಾರೆ, -

**ಶ್ವಾಪಿ ದೇವೋऽಪಿ ದೇವಃ ಶ್ವಾ ಜಾಯತೇ ಧರ್ಮಕಿಲ್ಬಿಷಾತ್ ।**
**ಕಾಪಿ ನಾಮ ಭವೇದನ್ಯಾ ಸಂಪದ್ಧರ್ಮಾಚ್ಛರೀರಿಣಾಮ್ ॥೨೯॥**

**ಅರ್ಥ :-** ಧರ್ಮದ (ಪುಣ್ಯದ) ಪ್ರಭಾವದಿಂದ ಶ್ವಾನವು ಕೂಡ ಸ್ವರ್ಗದಲ್ಲಿ ಹೋಗಿ ದೇವಗಳಲ್ಲಿ ಉತ್ಪನ್ನವಾಗುತ್ತದೆ, ಮತ್ತು ಪಾಪದ ಪ್ರಭಾವದಿಂದ ಸ್ವರ್ಗಲೋಕದ ಮಹಾನ ಋದ್ಧಿಧಾರಿದೇವನು ಕೂಡ ಇಲ್ಲಿ ಬಂದು

ಶ್ವಾನದ ರೂಪದಲ್ಲಿ ಉತ್ಪನ್ನನಾಗುತ್ತಾನೆ. ಪ್ರಾಣಿಗಳಿಗೆ ವಚನಗಳಿಂದ ವರ್ಣನೆ ಮಾಡಲು ಸಾಧ್ಯವಿಲ್ಲದಂಥ ಅಹಮಿಂದ್ರರುಗಳ ಸಂಪತ್ತು ಹಾಗೂ ಅವಿನಾಶಿಯಾದ ಮುಕ್ತಿಯ ಸಂಪತ್ತು ಧರ್ಮದ ಪ್ರಭಾವದಿಂದ ಪ್ರಾಪ್ತವಾಗಿ ಹೋಗುತ್ತದೆ.

**ಭಾವಾರ್ಥ :-** ಮಿಥ್ಯಾತ್ವದ ಪ್ರಭಾವದಿಂದ ಎರಡನೇ ಸ್ವರ್ಗದವರೆಗಿನ ದೇವನು ಏಕೇಂದ್ರಿಯಗಳಲ್ಲಿ ಬಂದು ಉತ್ಪನ್ನನಾಗುತ್ತಾನೆ, ಮತ್ತು ಅನಂತಾನಂತಕಾಲದವರೆಗೆ ತ್ರಸ-ಸ್ಥಾವರಗಳಲ್ಲಿಯೇ ಪರಿಭ್ರಮಣ ಮಾಡುತ್ತ ತಿರುಗುತ್ತಾನೆ. ಹನ್ನೆರಡನೇ ಸ್ವರ್ಗದವರೆಗಿನ ದೇವನು ಮಿಥ್ಯಾತ್ವದ ಪ್ರಭಾವದಿಂದ ಪಂಚೇಂದ್ರಿಯ ತಿರ್ಯಂಚದಲ್ಲಿ ಬಂದು ಉತ್ಪನ್ನನಾಗುತ್ತಾನೆ. ಆದುದರಿಂದ ಮಿಥ್ಯಾತ್ವಭಾವವು ಮಹಾ ಅನರ್ಥಕಾರಿಯೆಂದು ತಿಳಿದುಕೊಂಡು ಸಮ್ಯಕ್ತ್ವದ ಪ್ರಯತ್ನವನ್ನೇ ಮಾಡುವುದು ಯೋಗ್ಯವಿದೆ.

ಈಗ ಕುದೇವಾದಿಗಳು ಸಮ್ಯಗ್ದೃಷ್ಟಿಗೆ ವಂದನೆಯೋಗ್ಯವಿಲ್ಲವೆಂದು ಸೂತ್ರದ ಮೂಲಕ ಹೇಳುತ್ತಾರೆ,-

**ಭಯಾಶಾ ಸ್ನೇಹಲೋಭಾಚ್ಚ ಕುದೇವಾಗಮಲಿಂಗಿನಾಮ್ ।**
**ಪ್ರಣಾಮಂ ವಿನಯಂ ಚೈವ ನ ಕುರ್ಯುಃ ಶುದ್ಧದೃಷ್ಟಯಃ ॥೩೦॥**

**ಅರ್ಥ :-** ಶುದ್ಧ ದೃಷ್ಟಿಯುಳ್ಳವರು ಭಯದಿಂದ, ಆಶೆಯಿಂದ, ಸ್ನೇಹದಿಂದ, ಲೋಭದಿಂದ ಕುದೇವ-ಕುಆಗಮ-ಕುಲಿಂಗಧಾರಿಗಳಿಗೆ ನಮಸ್ಕಾರ ಮಾಡುವುದಿಲ್ಲ, ವಿನಯ ಮಾಡುವುದಿಲ್ಲ. ಯಾರು ಕಾಮ,ಕ್ರೋಧ, ಭಯ, ಇಚ್ಛೆ, ಕ್ಷುಧೆ, ತೃಷೆ, ರಾಗ, ದ್ವೇಷ, ಮದ, ಮೋಹ, ನಿದ್ರೆ, ಹರ್ಷ, ವಿಷಾದ, ಜನ್ಮ, ಮರಣ ಮೊದಲಾದ ದೋಷಗಳಿಂದ ಯುಕ್ತರಿದ್ದಾರೆ. ಅವರೆಲ್ಲರು ಕುದೇವರಿದ್ದಾರೆ. ಅವರ ವಿಸ್ತಾರವು ಈ ಜಗತ್ತಿನಲ್ಲಿ ಪಂಚಮ ಕಾಲದ ಪ್ರಭಾವದಿಂದ ಬಹಳಷ್ಟು ಇದೆ. ಕೇವಲ ಓರ್ವ ವೀತರಾಗ ಸರ್ವಜ್ಞ ಭಗವಂತರ ಹೊರತಾಗಿ ಉಳಿದವರೆಲ್ಲರೂ ಕುದೇವರಿದ್ದಾರೆ.

ಹಿಂಸೆಯ ಪೋಷಕ, ರಾಗೀ-ದ್ವೇಷೀ-ಮೋಹೀ ಜೀವಗಳಿಂದಪ್ರಕಾಶಿತ ಪೂರ್ವಾಪರದೋಷಯುಕ್ತ, ವಿಷಯ-ಕಷಾಯ-ಆರಂಭದ ಪುಷ್ಟಿ ಮಾಡುವಂಥ, ಪ್ರತ್ಯಕ್ಷ ಮತ್ತು ಅನುಮಾನಪ್ರಮಾಣದಿಂದ ದೂಷಿತವಾದ ಶಾಸ್ತ್ರಗಳು ಕುಆಗಮವಿವೆ.

ಹಿಂಸೆ ಮೊದಲಾದ ಪಂಚ ಪಾಪಗಳ ತ್ಯಾಗಿ, ಆರಂಭ ಪರಿಗ್ರಹವಿಲ್ಲದ, ದೇಹದ ಸಂಬಂಧದಲ್ಲಿ ನಿರ್ಮಮ, ಉತ್ತಮ ಕ್ಷಮಾದಿ ದಶಧರ್ಮದ ಧಾರಕ, ದೋಷ ದೂರ ಮಾಡಿ ಅಯಾಚಕ ವೃತ್ತಿಯೊಡನೆ ದೀನತೆಯಿಲ್ಲದೆ ನಿರ್ಜನ ಸ್ಥಾನದಲ್ಲಿ ವಾಸಿಸುವಂಥ, ಧ್ಯಾನಾಧ್ಯಯನದಲ್ಲಿ ನಿರಂತರ ಪ್ರವರ್ತಿಸುವಂಥ, ಪಂಚೇಂದ್ರಿಯ ವಿಷಯಗಳ ತ್ಯಾಗಿ, ಷಟ್ಕಾಯ ಜೀವಗಳ ವಿರಾಧನದ ತ್ಯಾಗಿ, ಒಂದು ಬಾರಿ ಮೌನದಿಂದ ಇತರರು ಕೊಟ್ಟ ರಸ-ನಿರಸ ತಮ್ಮ ಸಲುವಾಗಿ ಮಾಡದ ಭೋಜನವನ್ನು ರತ್ನತ್ರಯದ ಸಹಾಯಕ ಹಾಗೂ ಶರೀರ ರಕ್ಷಣೆಯ ನಿಮಿತ್ತದಿಂದ ಗ್ರಹಣ ಮಾಡುವಂಥ ನಗ್ನ ಮುನಿರಾಜರ ವೇಷ, ಒಂದು ವಸ್ತ್ರ ಹಾಗೂ ಕೌಪೀನಧಾರಕ ಕ್ಷುಲ್ಲಕನ ವೇಷ ಮತ್ತು ಒಂದು ವಸ್ತ್ರದ ಧಾರಕಳಾದ ಆರ್ಜಿಕೆಯ ವೇಷ - ಈ ಮೂರರ ಹೊರತಾಗಿ ಯಾರು ಅನ್ಯ ಅನೇಕ ವೇಷಗಳ ಧಾರಣ ಮಾಡುತ್ತಾರೆ ಅವರೆಲ್ಲರೂ ಕುಲಿಂಗಿಗಳಾಗಿದ್ದಾರೆ.

ಒಂದು ಮುನಿಯ ಲಿಂಗ ಹಾಗೂ ಕೌಪೀನ ಧಾರಕ ಕ್ಷುಲ್ಲಕ ಮತ್ತು ಒಂದು ವಸ್ತ್ರ ಧರಿಸುವಂಥ ಅರ್ಜಿಕೆ. ಈ ಮೂರು ವೇಷಗಳ ಹೊರತಾಗಿ ಉಳಿದ ಸಮಸ್ತ ವೇಷಧಾರಿಗಳಿಗೆ ಸಮ್ಯಗ್ದೃಷ್ಟಿಯು ವಿನಯ ನಮಸ್ಕಾರ ಮಾಡುವುದಿಲ್ಲ. ಈ ಪ್ರಕಾರ ಕುದೇವ, ಕುಶಾಸ್ತ್ರ ಮತ್ತು ಕುಲಿಂಗಧಾರಿಗಳಿಗೆ ಭಯ, ಆಸೆ, ಸ್ನೇಹ, ಲೋಭದಿಂದ ಸಮ್ಯಗ್ದೃಷ್ಟಿಯು ನಮಸ್ಕಾರ ಮಾಡುವುದಿಲ್ಲ, ವಿನಯ ಮಾಡುವುದಿಲ್ಲ.

**ಭಾವಾರ್ಥ :-** ಸಮ್ಯಗ್ದೃಷ್ಟಿಯು ಕುದೇವಗಳಿಗೆ ಭಯದಿಂದ ನಮಸ್ಕಾರ ಮಾಡುವುದಿಲ್ಲ. ಇವರು ದೇವರಿದ್ದು ಇವರನ್ನು ದೊರೆ ಮೊದಲಾಗಿ ಸಾವಿರಾರು ಮನುಷ್ಯರು ಪೂಜಿಸುತ್ತಾರೆ, ನಾನು ಇವರಿಗೆ ನಮಸ್ಕಾರ ಮಾಡದಿದ್ದರೆ ಈ ದೇವನು ಕ್ರೋಧಿತನಾಗಿ ನನ್ನದು ಕೆಡಕು ಮಾಡಬಹುದು, ಸಂಪತ್ತಿ ದೋಚಿಕೊಳ್ಳಬಹುದು, ಸ್ತ್ರೀ-ಪುತ್ರಾದಿಕರ ನಾಶ

ಮಾಡಬಹುದು, ಇವನ ದ್ವೇಷದ ಕಾರಣ ನಮಗೆ ರೋಗವಾಗಿದೆ, ದುಃಖೀ ಮಾಡಿದ್ದಾನೆ, ಈಗ ದ್ವೇಷ ಮಾಡಿದರೆ ಇನ್ನೂ ನನ್ನ ಹಾನಿ ಮಾಡಬಹುದು, ರೋಗಿ ಮಾಡಬಹುದು. ಈ ಕ್ಷೇತ್ರದಲ್ಲಿ ಎಲ್ಲರೂ ಇವನನ್ನು ಪೂಜಿಸುತ್ತಾರೆ, ನಮ್ಮ ವಂಶದಲ್ಲಿ ತಂದೆ, ತಂದೆಯ ತಂದೆ, ತಾಯಿ, ಅಣ್ಣ ಮೊದಲಾದವರೆಲ್ಲರು ಪೂಜಿಸುತ್ತ ಬಂದಿದ್ದಾರೆ. ಈಗ ನಾನು ಇವನ ಪೂಜೆ, ವಂದನೆ ಮಾಡುವುದನ್ನು ಬಿಟ್ಟುಕೊಟ್ಟರೆ ನನ್ನ ಕುಟುಂಬವಂತೂ ಪುತ್ರ-ಪೌತ್ರಾದಿಕರಿಂದ ತುಂಬಿಕೊಂಡಿದೆ, ಯಾರದಾದರೂ ಮರಣ, ಧನಹಾನಿ, ರೋಗಾದಿಗಳಾದರೆ ನನ್ನ ಮೇಲೆ ಆರೋಪ ಬರುವುದು ಮತ್ತು ನನ್ನ ಮೇಲೆ ಮಹಾ ಪ್ರಬಲ ದುಃಖವು ಬಂದು ಬೀಳುವುದು ಅದರಿಂದ ದೊಡ್ಡ ಅನರ್ಥವಾಗಬಹುದು ಮತ್ತು ಜನರು ಕೂಡ ಹೇಳುವುದೇನೆಂದರೆ ಮೊದಲು ಈ ದೇವನನ್ನು ಮನ್ನಿಸದವರನ್ನು ಈ ದೇವನು ಕುರುಡರನ್ನಾಗಿ ಮಾಡಿದ್ದಾನೆ, ಇವನ ಪೂಜೆ ಮಾಡುವಂಥ, ಸ್ತುತಿ-ಸ್ತೋತ್ರ ಮಾಡುವಂಥ, ಸತ್ಕಾರ ಮಾಡುವಂಥ ಅನೇಕ ಜನರ ರೋಗವನ್ನು ಈ ದೇವನು ದೂರ ಮಾಡಿ ಬಿಟ್ಟಿದ್ದಾನೆ. ಈಗ ಜಗನ್ನಾಥ ಸ್ವಾಮಿಯಿದ್ದಾನೆ, ಇವನ ನಗರವಾದ ಪುರಿಯಲ್ಲಿ ಅಗಸ, ನಾವಲಿಗ, ಕಟುಕ, ಚರ್ಮಕಾರ ಮೊದಲಾದವರೆಲ್ಲರು ಪರಸ್ಪರ ಒಟ್ಟಿಗೆ ಸೇರಿಕೊಂಡು ಎಂಜಲ ಭೋಜನ ಮಾಡುತ್ತಾರೆ. ಯಾರು ಇವನ ಅವಜ್ಞೆ ಮಾಡುತ್ತಾರೆ ಅವರಿಗೆ ಕುಷ್ಟರೋಗ ತಗಲಿಸಿ ಬಿಡುತ್ತಾನೆಂದು ಭಯಪಡಿಸುತ್ತಾರೆ.

ಇವನು ತನ್ನನ್ನು ಪೂಜಿಸುವಂಥ ಅಂಧರಿಗೆ ಕಣ್ಣು ಕೊಟ್ಟಿದ್ದಾನೆ, ಸಂಪತ್ತು ಕೊಟ್ಟಿದ್ದಾನೆ. ಇವನ ನಿಂದೆ ಮಾಡುವವರ ಸಂಪತ್ತನ್ನು ನಾಶ ಮಾಡಿದ್ದಾನೆ. ಮೊದಲು ಈ ಶನೀಶ್ವರ ದೇವನು ಕ್ರೋಧ ಮಾಡಿ ದೊರೆ ವಿಕ್ರಮಾದಿತ್ಯನನ್ನು ಚೋರ ಮಾಡಿ ಬಿಟ್ಟಿದ್ದನು. ಇದೇ ಪ್ರಕಾರ ಅನೇಕ ವೇಷಧಾರಿ ದೇವ, ದೇವಿ, ಭೈರವ, ಕ್ಷೇತ್ರಪಾಲ, ದುರ್ಗಿ, ಚಂಡಿ, ಚಾಮುಂಡಿ, ಗಣೇಶ, ಸೂರ್ಯ, ಯೋಗಿನಿ, ಯಕ್ಷ ಮೊದಲಾದವರ ಭಯದಿಂದ ಸಮ್ಯಗ್ದೃಷ್ಟಿಯು ಅವರಿಗೆ ನಮಸ್ಕಾರ, ವಿನಯ ಮೊದಲಾದುವನ್ನು ಮಾಡುವುದಿಲ್ಲ.

ಈ ದೇವಿಯು ಒಂದಿಷ್ಟು ಸಂಪತ್ತು, ಪುತ್ರ, ಆಜೀವಿಕೆ, ಧನ, ರಾಜ್ಯ ಮೊದಲಾದುವನ್ನು ಕೊಡಬಹುದೆಂಬ ಆಶೆಯಿಂದ ಕೂಡ ವಂದನೆ ಮಾಡುವುದಿಲ್ಲ. ನಮ್ಮ ಜತೆ ಈ ದೇವಿಯ ಸ್ನೇಹವಿದೆ, ನಮಗೆ ದುಃಖವಾದರೆ ಈ ದೇವಿಯು ನಮ್ಮ ರಕ್ಷಣೆ ಮಾಡುವಳೆಂಬ ಸ್ನೇಹದಿಂದಲೂ ವಂದನೆ ಮಾಡುವುದಿಲ್ಲ ; ಲೋಭದಿಂದಲೂ ಸತ್ಕಾರ ವಂದನೆ ಮಾಡುವುದಿಲ್ಲ. ನಾನು ಯಾವ ದಿವಸದಿಂದ ಈ ದೇವಿಯ ಆರಾಧನೆಯನ್ನು ಆರಂಭಿಸಿದ್ದೇನೆ ಅದೇ ದಿನದಿಂದ ಲಾಭವಾಗುತ್ತಲಿದೆ, ಉಚ್ಚತೆಯಿದೆಯೆಂದು ಲಾಭದ ಕಾರಣ ಮನ್ನಿಸಿ ಕುದೇವಗಳ ಆರಾಧನೆ ಮಾಡುವುದಿಲ್ಲ. ದೊರೆಯ ಭಯದಿಂದ, ತಾಯಿ-ತಂದೆಗಳ ಭಯದಿಂದ ಕುಟುಂಬದ ಭಯದಿಂದ ಮತ್ತು ಲೋಕ ಲಜ್ಜೆಯ ಭಯದಿಂದ ಕುದೇವಗಳಿಗೆ ವಂದನೆ ಮಾಡುವುದಿಲ್ಲ.

ಇದೇ ಪ್ರಕಾರ ಯಾವ ಶಾಸ್ತ್ರಗಳು ರಾಗ, ದ್ವೇಷ, ಹಿಂಸೆಯ ಪೋಷಣೆ ಮಾಡುವಂಥವಿವೆ, ಶೃಂಗಾರ ಕಥೆ,ಯುದ್ಧ ಕಥೆ, ಸ್ತ್ರೀಕಥೆ ಮೊದಲಾದ ವಿಕಥೆ ಮಾಡುವಂಥ, ವಸ್ತುವಿನ ಏಕಾಂತರೂಪ ಕಥನ ಮಾಡುವಂಥ, ಯಜ್ಞ, ಹೋಮ, ಮಂತ್ರ, ತಂತ್ರ, ಯಂತ್ರ, ವಶೀಕರಣ, ಮಾರಣ, ಉಚ್ಚಾಟನ ಮೊದಲಾದ ಮಹಾ ಹಿಂಸೆಯ ಆರಂಭ ಹೇಳುವಂಥ,ಕುದೇವ ಕುಧರ್ಮದ ಆರಾಧನೆ ಮಾಡುವಂಥ, ಮಾಡಿಸುವಂಥ,ಸಂಸಾರದಲ್ಲಿ ಸಿಕ್ಕಿಸುವಂಥ ಶಾಸ್ತ್ರಗಳಿಗೆ ಸಮ್ಯಗ್ದೃಷ್ಟಿಯು ವಂದನೆ ಸತ್ಕಾರ ಮಾಡುವುದಿಲ್ಲ. ಅವುಗಳ ಕಥನದ ರಚನೆಯ ಪ್ರಶಂಸೆ ಮಾಡುವುದಿಲ್ಲ; ಸಂಸಾರದಲ್ಲಿ ಸಿಕ್ಕಿಸುವಂಥ ಶಾಸ್ತ್ರಗಳ ವ್ಯಾಖ್ಯಾನಾದಿಗಳನ್ನು ಮಾಡಿ ವಿಖ್ಯಾತಿ ಮಾಡುವುದಿಲ್ಲ; ಭಯ, ಆಶೆ, ಸ್ನೇಹ, ಲೋಭದಿಂದ ದೂಷಿತ ಆಗಮಗಳ ಪ್ರಸಿದ್ಧಿ ಮಾಡುವುದಿಲ್ಲ.

ನಾನು, ನನ್ನ ತಂದೆ, ತಾತ ಮೊದಲಾದವರು ಈ ಶಾಸ್ತ್ರಗಳಿಂದ ಬಹಳಷ್ಟು ಹಣವನ್ನು ಸಂಪಾದಿಸಿದ್ದೇವೆ ಮುಂದೆಯೂ ನಾನು ಈ ಶಾಸ್ತ್ರಗಳಿಂದ ಹಣ ಸಂಪಾದಿಸಬಹುದಾಗಿದೆ, ನಾನು ನನ್ನ ಪ್ರತಿಷ್ಠೆ ಹೆಚ್ಚಿಸಿಕೊಳ್ಳಬಹುದು, ಜಗತ್ತಿಗೆ ಮಾನ್ಯನಾಗುವೆನು, ರಾಜಾದಿಕರನ್ನು ನನ್ನ ಸೇವಕರನ್ನಾಗಿ ಮಾಡಿಕೊಳ್ಳುವೆನೆಂಬ ಲೋಭದಿಂದ ಸಮ್ಯಗ್ದೃಷ್ಟಿಯು ಕುಶಾಸ್ತ್ರಗಳ ಸೇವನೆ ಮಾಡುವುದಿಲ್ಲ.

ನಾನು ಈ ಶಾಸ್ತ್ರಗಳ ಸೇವನೆ ಮಾಡದಿದ್ದರೆ ನನ್ನ ಆಜೀವಿಕೆಯು ನಷ್ಟವಾಗಿ ಹೋಗುವುದು, ಲೋಕದಲ್ಲಿ ನನ್ನ ಮನ್ನಣೆ ಕಮ್ಮಿಯಾಗುವುದು, ಪೂಜ್ಯತೆಯು ಕಮ್ಮಿಯಾಗಬಹುದೆಂಬ ಭಯದಿಂದ ಕುಶಾಸ್ತ್ರಗಳ ಸೇವನೆ ಮಾಡುವುದಿಲ್ಲ.

ಈ ಶಾಸ್ತ್ರ ಓದುವಲ್ಲಿ ತುಂಬ ರಸವಿದೆ, ಮನಸ್ಸು ಪ್ರಸನ್ನವಾಗುತ್ತದೆ, ಅತ್ಯಂತ ರಸಭರಿತ ಕಥೆಯಿದೆ ಮತ್ತು ಜನರನ್ನು ಪ್ರಸನ್ನ ಮಾಡುವಂಥದ್ದಿದೆಯೆಂದು ಸ್ನೇಹದಿಂದ ಕೂಡ ಸಮ್ಯಗ್ದೃಷ್ಟಿಯು ಕುಶಾಸ್ತ್ರಗಳ ಆರಾಧನೆ ಮಾಡುವುದಿಲ್ಲ.

ಯಾವ ಪ್ರಕಾರದ ಆಶೆಯಿಂದ ಕೂಡ ಸಮ್ಯಗ್ದೃಷ್ಟಿಯು ಕುಶಾಸ್ತ್ರಗಳ ಸೇವನೆ ಮಾಡುವುದಿಲ್ಲ. ಈ ಶಾಸ್ತ್ರವನ್ನು ಓದುವುದರಿಂದ ದೇವತೆ ವಶವಾಗುವಳು, ವಿದ್ಯೆಯ ಸಿದ್ಧಿಯಾಗುವುದು. ಇವೇ ಮೊದಲಾದ ಇಹಲೋಕ ಸಂಬಂಧದ ಆಶೆಯಿಂದ ಕೂಡ ಕುಶಾಸ್ತ್ರಗಳ ಪ್ರಶಂಸೆ ಮಾಡುವುದಿಲ್ಲ, ವಂದನೆ ಮಾಡುವುದಿಲ್ಲ.

ಸಮ್ಯಗ್ದೃಷ್ಟಿಯು ಭಯ, ಆಶೆ, ಸ್ನೇಹ, ಲೋಭದಿಂದ ಕುಲಿಂಗಿ ಸಾಧುಗಳಿಗೂ ವಂದನೆ,ಪ್ರಣಾಮ, ಪ್ರಶಂಸೆ ಮಾಡುವುದಿಲ್ಲ. ಈತ ಶ್ರೇಷ್ಠ ತಪಸ್ವಿಯಿದ್ದಾನೆ, ಮಹಾಜ್ಞಾನಿಯಿದ್ದಾನೆ, ಇವನಿಗೆ ರಾಜ್ಯ ಮನ್ನಣೆಯಿದೆ, ಲೋಕದಲ್ಲಿ ಆದರವಿದೆ, ಇವನಲ್ಲಿ ದೃಷ್ಟಿ-ಮುಷ್ಟಿ-ಮಾರಣ-ಉಚ್ಚಾಟನ ಮೊದಲಾದ ಅನೇಕ ಶಕ್ತಿಗಳಿವೆ, ನನ್ನದು ಏನಾದರೂ ಕೆಡಕು ಮಾಡಿಬಿಡಬಹುದೆಂಬ ಭಯದಿಂದ ಪ್ರಣಾಮ ಮೊದಲಾದುವನ್ನು ಮಾಡುವುದಿಲ್ಲ.

ಇವನು ಹೆಚ್ಚು ಕುಶಲನಿದ್ದಾನೆ, ವಿದ್ಯಾವಂತನಿದ್ದಾನೆ, ಈತನಿಂದ ಕೆಲವು ವಿದ್ಯೆ ಕಲಿಯುವುದಿದೆ, ಈತ ರಾಜಮಾನ್ಯನಿದ್ದಾನೆ, ಇವನಿಂದ ಇನ್ನೂ ನಮ್ಮ ಕೆಲಸ ಮಾಡಿಸಿಕೊಳ್ಳುವುದಿದೆಯೆಂಬ ಲೋಭದಿಂದಲೂ ಸಮ್ಯಗ್ದೃಷ್ಟಿಯು ಪಾಖಂಡೀ ಸಾಧುಗಳಿಗೆ ವಂದನೆ, ನಮಸ್ಕಾರ ಮಾಡುವುದಿಲ್ಲ. ಈ ವೇಷಧಾರಿಯು ನನಗೆ ರಸಾಯನ ಕೊಡುವೆನೆಂದಿದ್ದಾನೆ, ಇವನಿಂದ ನನಗೆ ಇನ್ನೂ ಒಂದು ಔಷಧ ಮಾಡುವುದನ್ನು ಕಲಿತುಕೊಳ್ಳುವುದಿದೆ, ಇನ್ನೂ ಇವನಿಂದ ವ್ಯಾಕರಣ-ನ್ಯಾಯ-ಜ್ಯೋತಿಷ ವಿದ್ಯೆಗಳನ್ನು ಕಲಿಯುವುದಿರುವುದರಿಂದ ಇನ್ನೂ ಇವನ ಸೇವೆ ಮಾಡಬೇಕಾಗುವುದು; ಇವೇ ಮೊದಲಾದ ಆಶೆ-ಲೋಭದಿಂದ ಪಾಖಂಡೀ, ವಿಷಯ ಲಂಪಟೀ, ಆರಂಭೀ, ಪರಿಗ್ರಹಧಾರಕನಿಗೆ ಸಮ್ಯಗ್ದೃಷ್ಟಿಯು ನಮಸ್ಕಾರ ಮಾಡುವುದಿಲ್ಲ, ಅವನ ಪ್ರಶಂಸೆ ಮಾಡುವುದಿಲ್ಲ ಮತ್ತು ಅವನನ್ನು ಸತ್ಯವಾದಿಯೆಂದು ಹೇಳುವುದಿಲ್ಲ, ಅವನನ್ನು ಧರ್ಮರೂಪವಾಗಿ ಮನ್ನಿಸುವುದಿಲ್ಲ.

**ಪ್ರಶ್ನೆ :-** ಓರ್ವ ಬಲಿಷ್ಠ ವ್ಯಕ್ತಿಯು ಬಲಾತ್ಕಾರದಿಂದ ನಮಸ್ಕಾರ ಮಾಡಿಸುವನು, ಮತ್ತು ಒಂದು ವೇಳೆ ಮಾಡದಿದ್ದರೆ ಅಧಿಕ ತೊಂದರೆಯಾಗಿ ಹೋಗುವುದು, ಆಗ ಏನು ಮಾಡಲಾಗುವುದು ?

**ಉತ್ತರ :-** ಇತರರ ಮೂಲಕ ಬಲವಂತದಿಂದ ಒತ್ತಾಯದಿಂದ ನಮಸ್ಕಾರ ಮಾಡಿಸಿಕೊಳ್ಳುವುದರಿಂದ ಶ್ರದ್ಧೆಯು ಕೆಟ್ಟು ಹೋಗುವುದಿಲ್ಲ. ಏಕೆಂದರೆ ದೇವತಾದಿಗಳ ಭಯದಿಂದ, ಆಶೆಯಿಂದ ಸ್ನೇಹದಿಂದ ಲೋಭದಿಂದ ನಮಸ್ಕಾರ ಮಾಡುತ್ತಿದ್ದರೆ ಶ್ರದ್ಧೆಯು ಕೆಟ್ಟು ಹೋಗುವುದು. ಬಲವಂತದಿಂದ ದುಷ್ಟ ಮ್ಲೇಚ್ಛ ಮೊದಲಾದವರು ವ್ರತಿಯ ಬಾಯೊಳಗೆ **ಅಭಕ್ಷ್ಯ** ವಸ್ತುವನ್ನು ಹಾಕಿದರೂ ಕೂಡ ವ್ರತ ಭಂಗವಾಗುವುದಿಲ್ಲ. ಅನ್ಯ ಮತದವರ ಗ್ರಂಥಗಳಲ್ಲಿ, ಶಬ್ದಗಳಲ್ಲಿ, ವಾಕ್ಯಗಳಲ್ಲಿ, ಕುದೇವಗಳಿಗೆ ನಮಸ್ಕಾರ ಹೇಳಿದೆ, ಕುದೇವಗಳ ಸ್ತುತಿ ಮಾಡಿದೆ, ಆ ಗ್ರಂಥಗಳನ್ನು ಓದುವ ಮಾತ್ರದಿಂದ ಕುದೇವಗಳಿಗೆ ನಮಸ್ಕಾರವಾಗುವುದಿಲ್ಲ, ಸ್ತುತಿಯಾಗುವುದಿಲ್ಲ.

**ಸಮ್ಯಗ್ದರ್ಶನವಂತೂ ಆತ್ಮನ ಭಾವವಿದೆ.** ತಮ್ಮ ಭಾವಗಳಲ್ಲಿ ಆ ಕುದೇವಾದಿಗಳನ್ನು ವಂದಿಸಲು ಯೋಗ್ಯರೆಂದು ಮನ್ನಿಸಿ ಮತ್ತು ತಮ್ಮನ್ನು ಅವರ ವಂದನೆ ಮಾಡುವಂಥವರೆಂದು ಮನ್ನಿಸಿ ನಮಸ್ಕಾರ - ಸ್ತುತಿ-ವಂದನೆ ಮಾಡುತ್ತಿದ್ದರೆ ಮತ್ತು ಅವರಿಂದ ತಮ್ಮದು ಒಳ್ಳೆಯದಾಗುವುದೆಂದು ತಿಳಿಯುತ್ತಿದ್ದರೆ ಅವನ ಸಮ್ಯಕ್ತ್ವದ ಅಭಾವವಾಗುವುದು.

ಈ ಕಾಲದಲ್ಲಿ ಮ್ಲೇಚ್ಛ ಮುಸಲ್ಮಾನರೇ ರಾಜರಿದ್ದಾರೆ; ಅವರು ಏನನ್ನೋ ಕೇಳುತ್ತಾರೆ ಮತ್ತು ತಾವು ಅವರಿಗೆ ಏನನ್ನೋ ಹೇಳಬಯಸುತ್ತಿದ್ದರೆ ಕೈ ಮುಗಿದೇ ಹೇಳಲಾಗುತ್ತದೆ. ಇದರಲ್ಲಿ ತಮ್ಮ ಶ್ರದ್ಧೆ-ಜ್ಞಾನ ನಷ್ಟವಾಗುವುದಿಲ್ಲ. ಚಾರಿತ್ರ ಧಾರಕರಾದ ತ್ಯಾಗಿ ಸಾಧು ಜನರೆಂದೂ ಕೈಗಳನ್ನೂ ಮುಗಿಯುವುದಿಲ್ಲ ಮತ್ತು ಅವರ ಶರೀರವನ್ನು ತುಂಡು-ತುಂಡು

ಮಾಡಿಬಿಟ್ಟರೂ ಕೂಡ ಧರ್ಮವಲ್ಲದೆ ಬೇರೆನನ್ನೂ ಆಡುವುದಿಲ್ಲ. ದುಷ್ಟ ಮನುಷ್ಯರು ಮ್ಲೇಚ್ಛ ರಾಜಾದಿಗಳು ಮಹಾಪಾಪಿಗಳು ಕೂಡ ತ್ಯಾಗಿಗಳಿಂದ ನಮಸ್ಕಾರ ಮಾಡಿಸಿಕೊಳ್ಳಲು ಇಚ್ಛಿಸುವುದಿಲ್ಲ. ಆದುದರಿಂದ ಸಂಯಮಿಯಂತೂ ದೊರೆಗೆ, ಚಕ್ರವರ್ತಿಗೆ, ತಾಯಿಗೆ-ತಂದೆಗೆ, ವಿದ್ಯಾ ಗುರುಗಳಿಗೂ ಕೂಡ ಎಂದೂ ನಮಸ್ಕಾರ ಮಾಡುವುದಿಲ್ಲ. ಸಂಯಮಿಯು ದ್ವಿಜಾತನಿದ್ದಾನೆ.

ಅವಿರತ-ಸಮ್ಯಗ್ದೃಷ್ಟಿಯು ಕೂಡ ತನ್ನ ಇಚ್ಛೆಯಿಂದ ಕುದೇವ, ಕುಗುರು, ಕುಧರ್ಮಕ್ಕೆ ನಮಸ್ಕಾರ ಮಾಡುವುದಿಲ್ಲ. ಉಳಿದ ವ್ಯವಹಾರೀ ಜನರಿಗೆ ಯಥಾಯೋಗ್ಯ ವಿನಯ-ಸತ್ಕಾರ ಮೊದಲಾದುವನ್ನು ಮಾಡುತ್ತಾನೆ. ಇತರರು ಬಲವಂತ ಮಾಡಿದ ಮೇಲೆ ದೇಶ ಬಿಟ್ಟು ಕೊಡುತ್ತಾನೆ, ಆಜೀವಿಕೆ ಬಿಟ್ಟು ಕೊಡುತ್ತಾನೆ, ಧನದ ತ್ಯಾಗ ಮಾಡಿ ಬಿಡುತ್ತಾನೆ; ಆದರೆ ಕುಧರ್ಮದ ಸೇವನೆ, ಕುದೇವ ಮೊದಲಾದವರ ಆರಾಧನೆ ಮಾಡುವುದಿಲ್ಲ.

ಈಗ ರತ್ನತ್ರಯದಲ್ಲಿ ಕೂಡ **ಸಮ್ಯಗ್ದರ್ಶನದ** ಶ್ರೇಷ್ಠತೆಯನ್ನು ತೋರಿಸಿ ಕೊಡುವಂಥ ಸೂತ್ರ ಹೇಳುತ್ತಾರೆ,-

**ದರ್ಶನಂ ಜ್ಞಾನ ಚಾರಿತ್ರಾತ್ ಸಾಧಿಮಾನಮುಪಾಶ್ನುತೇ ।**
**ದರ್ಶನಂ ಕರ್ಣಧಾರಂ ತನ್ಮೋಕ್ಷಮಾರ್ಗೇ ಪ್ರಚಕ್ಷ್ಯತೇ ॥೩೧॥**

**ಅರ್ಥ :-** ಜ್ಞಾನ ಮತ್ತು ಚಾರಿತ್ರಕ್ಕಿಂತ ಸಮ್ಯಗ್ದರ್ಶನವು ಹೆಚ್ಚು ಶ್ರೇಷ್ಠ ಎಂದರೆ ಸಾಧಿಮಾನ-ಸರ್ವೋತ್ಕೃಷ್ಟವಿದೆಯೆಂದು ತಿಳಿದುಕೊಂಡು ಅದನ್ನು ಪ್ರಾಪ್ತಮಾಡಿಕೊಳ್ಳುವ ಪುರುಷಾರ್ಥ ಮಾಡಬೇಕಾಗುವುದು. ಇದೇ ಕಾರಣದಿಂದ ಮೋಕ್ಷ ಮಾರ್ಗದಲ್ಲಿ ಸಮ್ಯಗ್ದರ್ಶನವನ್ನು ಕರ್ಣಧಾರವೆಂದು ಹೇಳಿದೆ. ಯಾವ ಪ್ರಕಾರ ಸಮುದ್ರದಲ್ಲಿ ಜಹಜನ್ನು ನಾವಿಕನು ಪಾರು ಮಾಡುತ್ತಾನೆ, ಅದೇ ಪ್ರಕಾರ ಅಪಾರ ಸಂಸಾರ ಸಮುದ್ರದಲ್ಲಿ ರತ್ನತ್ರಯರೂಪದ ಜಹಜನ್ನು ಪಾರು ಮಾಡುವಲ್ಲಿ ಸಮ್ಯಗ್ದರ್ಶನವು ನಾವಿಕನಂತಿದೆ.

**ಭಾವಾರ್ಥ :-** ರತ್ನತ್ರಯದಲ್ಲಿ ಸಮ್ಯಗ್ದರ್ಶನವೇ ಅತ್ಯಂತ ಉತ್ಕೃಷ್ಟವಿದೆ.

ಈಗ ಸಮ್ಯಗ್ದರ್ಶನದ ಉತ್ಕೃಷ್ಟತೆಯನ್ನು ಸೂಚಿಸುವಂಥ ಸೂತ್ರ ಹೇಳುತ್ತಾರೆ, -

**ವಿದ್ಯಾವೃತ್ತಸ್ಯ ಸಂಭೂತಿ ಸ್ಥಿತಿವೃದ್ಧಿಫಲೋದಯಾಃ ।**
**ನ ಸಂತ್ಯಸತಿ ಸಮ್ಯಕ್ತ್ವೇ ಬೀಜಾಭಾವೇ ತರೋರಿವ ॥೩೨॥**

**ಅರ್ಥ :-** ಹೇಗೆ ಬೀಜದ ಅಭಾವದಲ್ಲಿ ವೃಕ್ಷದ ಉತ್ಪತ್ತಿ, ಸ್ಥಿತಿ, ವೃದ್ಧಿ, ಮತ್ತು ಫಲೋದಯವಾಗುವುದಿಲ್ಲ, ಹಾಗೆ ಸಮ್ಯಕ್ತ್ವದ ಅಭಾವದಲ್ಲಿ ಜ್ಞಾನ ಹಾಗೂ ಚಾರಿತ್ರದ ಉತ್ಪತ್ತಿ, ಸ್ಥಿತಿ, ವೃದ್ಧಿ ಮತ್ತು ಫಲೋದಯವಾಗುವುದಿಲ್ಲ.

**ಭಾವಾರ್ಥ :-** ಬೀಜವೇ ಇಲ್ಲದಿದ್ದರೆ ವೃಕ್ಷದ ಉತ್ಪತ್ತಿ ಹೇಗಾಗುವುದು ? ಮತ್ತು ವೃಕ್ಷವೇ ಅಂಕುರಿಸದಿದ್ದರೆ ಯಾವುದರ ಸ್ಥಿತಿಯಿರುವುದು ? ಯಾವುದರ ವೃದ್ಧಿಯಾಗುವುದು ? ಫಲವೆಲ್ಲಿ ಹತ್ತುವವು? ಒಂದು ವೇಳೆ ಸಮ್ಯಕ್ತ್ವವಿಲ್ಲದಿದ್ದರೆ ಜ್ಞಾನ-ಚಾರಿತ್ರಗಳೂ ಇರಲಾರವು. **ಸಮ್ಯಕ್ತ್ವವಿಲ್ಲದ ಜ್ಞಾನವು ಕುಜ್ಞಾನವಿದೆ ಮತ್ತು ಚಾರಿತ್ರವು ಕುಚಾರಿತ್ರವಿದೆ.** ಸಮ್ಯಕ್ತ್ವವಿಲ್ಲದೆ ಜ್ಞಾನ-ಚಾರಿತ್ರಗಳ ಉತ್ಪತ್ತಿಯೇ ಆಗುವುದಿಲ್ಲವೆಂದ ಮೇಲೆ ಸ್ಥಿತಿಯೆಲ್ಲಿಂದ ಆಗುವುದು ? ಮತ್ತು ಜ್ಞಾನ-ಚಾರಿತ್ರಗಳ ವೃದ್ಧಿಯು ಹೇಗಾಗುವುದು, ಹಾಗೂ ಜ್ಞಾನ-ಚಾರಿತ್ರಗಳ ಫಲರೂಪವಾಗಿ ಆ ಸರ್ವಜ್ಞ ಪರಮಾತ್ಮರಾಗಿ ಹೇಗಾಗುವ ಸಾಧ್ಯತೆಯಿದೆ ? ಆದುದರಿಂದ ಸಮ್ಯಕ್ತ್ವವಿಲ್ಲದೆ ನಿಜವಾದ ಶ್ರದ್ಧೆ-ಜ್ಞಾನ-ಚಾರಿತ್ರಗಳೆಂದೂ ಆಗುವ ಸಾಧ್ಯತೆಯಿಲ್ಲ. ಇದೇ ಕಥನವನ್ನು ಗುಣಭದ್ರಾಚಾರ್ಯ ದೇವರು ಆತ್ಮಾನುಶಾನದಲ್ಲಿ ಮಾಡಿದ್ದಾರೆ.

**ಶಮಬೋಧವೃತ್ತತಪಸಾಂ ಪಾಷಾಣಸ್ಯೇವ ಗೌರವಂ ಪುಂಸಃ ।**
**ಪೂಜ್ಯಂ ಮಹಾಮಣೇರಿವ ತದೇವ ಸಮ್ಯಕ್ತ್ವ ಸಂಯುಕ್ತಮ್ ॥೧೫॥**

**ಅರ್ಥ ៖-** ಶಮ ಎಂದರೆ ಕಷಾಯಗಳ ಮಂದತೆಯಾಗುವುದು, ಬೋಧ ಎಂದರೆ ಅನೇಕ ಶಾಸ್ತ್ರಗಳ ಪ್ರಬಲ ಜ್ಞಾನವಾಗುವುದು, ವ್ರತ ಎಂದರೆ ಹದಿಮೂರು ಪ್ರಕಾರದ ದುರ್ಧರ ಚಾರಿತ್ರ ಪಾಲಿಸುವುದು, ಹೇಡಿಗಳಿಂದ ಸಂಭವಿಸದಂಥ ಹನ್ನೆರಡು ಪ್ರಕಾರದ ಘೋರ ತಪಸ್ಸು, ಇವು ನಾಲ್ಕೂ ಪುರುಷನಿಗೆ ಅತ್ಯಂತ ಪ್ರಬಲವಿವೆ. ಪುರುಷನಿಗೆ ಇವುಗಳ ಮಹಾ ಗುರುತ್ವ ಪಾಷಾಣದ ಗುರುತರದ ಸಮಾನವಿವೆ. ಇವು ನಾಲ್ಕೂ ಶಮಭಾವ-ಜ್ಞಾನ-ಚಾರಿತ್ರ-ತಪಗಳು ಸಮ್ಯಕ್ತ್ವ ಸಹಿತವಾಗಿದ್ದರೆ ಮಹಾನ ಮಣಿಯಾದ ಚಿಂತಾಮಣಿಯಿದೆ ಅದರಸಮಾನ ಪೂಜ್ಯವಾಗಿ ಹೋಗುತ್ತವೆ.

**ಭಾವಾರ್ಥ ៖-** ಜಗತ್ತಿನಲ್ಲಿ ಅನೇಕ ಪ್ರಕಾರದ ಪಾಷಾಣವೂ ಇದೆ, ಮತ್ತು ಮಣಿಯೂ ಇದೆ, ಮಣಿಯೂ ಪಾಷಾಣವೇ ಇದೆ, ಮತ್ತು ಸಾಮಾನ್ಯ ಮಳಲಿನ ಚಿಕ್ಕ ಪಾಷಾಣವೂ ಪಾಷಾಣವೇ ಇದೆ. ಆದರೆ ಕಾಂತಿ ಹೊಳಪಿನಿಂದ ಅವುಗಳಲ್ಲಿ ದೊಡ್ಡ ಭೇದವಿದೆ, ಎರಡೂ ಪಾಷಾಣವಾಗಿದ್ದರೂ ಅವೆರಡರಲ್ಲಿ ಸಮಾನತೆಯಿಲ್ಲ. ಮಳಲಿನ ಪಾಷಾಣವನ್ನು ಮೂರು ಮಣ ಮಾರಿದರೂ ಒಂದು ಚಿಕ್ಕಕಾಸು ಬರುವುದಿಲ್ಲ, ಮತ್ತು ಒಂದು ವೇಳೆ ಪಚ್ಚರತ್ನ, ಮಾಣಿಕರತ್ನಗಳನ್ನು ಒಂದು ಗುಲಗುಂಜಿ ತೂಕದಷ್ಟು ಮಾರಿದರೆ ಲಕ್ಷಾಂತರ ರೂಪಾಯಿ ಬರುವವು. ತಮ್ಮ ಮಕ್ಕಳು-ಮೊಮ್ಮಕ್ಕಳವರೆಗೂ ದರಿದ್ರತೆಯು ದೂರವಾಗಿ ಹೋಗುವುದು. ಅದೇ ಪ್ರಕಾರ **ಸಮ್ಯಕ್ತ್ವ ಸಹಿತವಿರುವ ಅಲ್ಪವೇ ಶಮಭಾವ, ಅಲ್ಪವೇ ಜ್ಞಾನ, ಅಲ್ಪವೇ ಚಾರಿತ್ರ ಮತ್ತು ಅಲ್ಪವೇ ತಪದ ಭಾವವು ಈ ಜೀವವನ್ನು ಕಲ್ಪವಾಸೀ ಇಂದ್ರ ಮೊದಲಾದವುಗಳಲ್ಲಿ ಉತ್ಪನ್ನ ಮಾಡಿಸಿ ಪುನಃ ಜನ್ಮ-ಮರಣಗಳ ದುಃಖಗಳಿಂದ ರಹಿತ ಮಾಡಿಸಿ ಪರಮಾತ್ಮನನ್ನಾಗಿ ಮಾಡಿ ಬಿಡುತ್ತದೆ.**

ಸಮ್ಯಕ್ತ್ವವಿಲ್ಲದ ಎಷ್ಟೇ ಅಧಿಕ ಶಮಭಾವವು, ಹನ್ನೊಂದು ಅಂಗಗಳವರೆಗಿನ ಬಹಳಷ್ಟು ಜ್ಞಾನಾಭ್ಯಾಸವೂ, ಹೆಚ್ಚು ಉಜ್ವಲವಿರುವ ಚಾರಿತ್ರವೂ, ಘೋರರೂಪದ ಕ್ರಿಯಾಯುಕ್ತ ತಪಸ್ಸು ಕೂಡ ಒಂದು ವೇಳೆ ಕಷಾಯಗಳ ಮಂದತೆಯೊಡನಿದ್ದರೆ ಭವನವಾಸೀ, ವ್ಯಂತರ, ಜ್ಯೋತಿಷೀ ದೇವಗಳಲ್ಲಿ ಹಾಗೂ ಅಲ್ಪಋದ್ಧಿಧಾರೀ ಕಲ್ಪವಾಸೀ ದೇವಗಳಲ್ಲಿ ಉತ್ಪನ್ನಮಾಡಿಸಿ ಪುನಃ ಚತುರ್ಗತಿರೂಪದ ಸಂಸಾರದಲ್ಲಿಯೇ ಭ್ರಮಣ ಮಾಡಿಸುತ್ತವೆ. ಆದುದರಿಂದ ಸಮ್ಯಕ್ತ್ವ ಸಹಿತವಾಗಿಯೇ ಶಮ, ಬೋಧ, ಚಾರಿತ್ರ ಮತ್ತು ತಪವನ್ನು ಧಾರಣ ಮಾಡುವುದರಿಂದ ಜೀವದ ಕಲ್ಯಾಣವಾಗುತ್ತದೆ.

**ಮೋಹೀ ಮುನಿಗಿಂತ ನಿರ್ಮೋಹಿ ಶ್ರಾವಕನ ಶ್ರೇಷ್ಠತೆ ៖** ಯಾರಿಗೆ ಸಮ್ಯಕ್ತ್ವವಿಲ್ಲ, ಆದರೆ ಚಾರಿತ್ರ, ತಪ ಮೊದಲಾದುವನ್ನು ಗ್ರಹಣ ಮಾಡಿರುವಂಥ ಮುನಿಗಿಂತ ಆರಂಭ ಮೊದಲಾದುವಲ್ಲಿ ಲೀನನಿರುವಂಥ ಗೃಹಸ್ಥನು ಉತ್ತಮ ಹೇಗಾಗುವನೆಂಬ ಪ್ರಶ್ನೆಯ ಉತ್ತರರೂಪವಾಗಿ ಈ ಸೂತ್ರ ಹೇಳುತ್ತಾರೆ, -

**ಗೃಹಸ್ಥೋ ಮೋಕ್ಷಮಾರ್ಗಸ್ಥೋ ನಿರ್ಮೋಹೋ ನೈವ ಮೋಹವಾನ್ ।**
**ಅನಗಾರೋ ಗೃಹೀ ಶ್ರೇಯಾನ್ ನಿರ್ಮೋಹೋ ಮೋಹಿನೋ ಮುನೇಃ ॥೩೩॥**

**ಅರ್ಥ ៖-** ದರ್ಶನಮೋಹವಿಲ್ಲದಂಥ ಗೃಹಸ್ಥನು ಮೋಕ್ಷಮಾರ್ಗದಲ್ಲಿ ಸ್ಥಿರನಿದ್ದಾನೆ. ಮತ್ತು ಮೋಹೀ ಅನಗಾರ ಎಂದರೆ ಮೋಹ ಸಹಿತ ಗೃಹರಹಿತ ಮುನಿಯು ಮೋಕ್ಷಮಾರ್ಗಿಯಿಲ್ಲ, ಇದೇ ಕಾರಣದಿಂದ ಮೋಹವುಳ್ಳ ಮುನಿಗಿಂತ ನಿರ್ಮೋಹೀ-ದರ್ಶನಮೋಹರಹಿತನಾದ ಗೃಹಸ್ಥನು ಶ್ರೇಯಾನ್ ಎಂದರೆ ಉತ್ಕೃಷ್ಟನಿದ್ದಾನೆ.

**ಭಾವಾರ್ಥ ៖- ಮೋಹ ಎಂದರೆ ಮಿಥ್ಯಾತ್ವವಿಲ್ಲದಂಥ ಅವಿರತ-ಸಮ್ಯಗ್ದೃಷ್ಟಿಯು ಕೂಡ ಮೋಕ್ಷ ಮಾರ್ಗಿಯಿದ್ದಾನೆ; ಅವನು ದೇವ-ಮನುಷ್ಯರ ಏಳೆಂಟು ಭವಗಳನ್ನು ಗ್ರಹಣ ಮಾಡಿ ನಿಯಮದಿಂದ ಮೋಕ್ಷಕ್ಕೆ ಹೋಗುವನು.** ಮಿಥ್ಯಾತ್ವವಿರುವಂಥ ಮುನಿಯು ವ್ರತಧಾರಣಮಾಡಿ ಸಾಧುವಾಗಿ ಹೋಗಿದ್ದರೂ ಕೂಡ ಮರಣ ಹೊಂದಿ ಭವನತ್ರಿಕ ಮೊದಲಾದವುಗಳಲ್ಲಿ ಉತ್ಪನ್ನನಾಗಿ ಸಂಸಾರದಲ್ಲಿಯೇ ಪರಿಭ್ರಮಣ ಮಾಡುವನು.

**ದರ್ಶನ ಪಾಹುಡದಲ್ಲಿ ಭ.ಕುಂದಕುಂದಾಚಾಯದೇವರು ಕೂಡ ಇದನ್ನೇ ಹೇಳಿದ್ದಾರೆ,-**

**ದಂಸಣ ಭಟ್ಟಾ ಭಟ್ಟಾ ದಂಸಣ ಭಟ್ಟಸ್ಸ ಣತ್ಥಿ ಣಿವ್ವಾಣಂ ।**
**ಸಿಜ್ಝಂತಿ ಚರಿಯ ಭಟ್ಟಾ ದಂಸಣ ಭಟ್ಟಾ ಣ ಸಿಜ್ಝಂತಿ ।।೩।।**
**ಸಮ್ಮತ್ತ ರಯಣ ಭಟ್ಟಾ ಜಾಣಂತಾ ಬಹು ವಿಹಾಇಂ ಸತ್ಥಾಇಂ ।**
**ಆರಾಹಣಾ ವಿರಹಿಯಾ ಭಮಂತಿ ತತ್ಥೇವ ತತ್ಥೇವ ।।೪।।**
**ಸಮ್ಮತ್ತ ವಿರಹಿಯಾಣಂ ಸುಟ್ಠು ವಿ ಉಗ್ಗಂ ತಪಂ ಚರಂತಾ ಣಂ ।**
**ಣ ಲಹಂತಿ ಬೋಹಿಲಾಹಂ ಅವಿ ವಾಸ ಸಹಸ್ಸ ಕೋಡೀಹಿಂ ।।೫।।**
**ಜೇ ದಂಸಣೇಸು ಭಟ್ಟಾ ಣಾಣೇ ಭಟ್ಟಾ ಚರಿತ್ತ ಭಟ್ಟಾ ಯ ।**
**ಏದೇ ಭಟ್ಟ ವಿ ಭಟ್ಟಾ ಸೇಸಂಪಿ ಜಣಂ ವಿಣಾಸಂತಿ ।।೮।।**
**ಜಹ ಮೂಲಮ್ಮಿ ವಿಣಟ್ಠೇ ದುಮಸ್ಸ ಪರಿವಾರ ಣತ್ಥಿ ಪರಿವಡ್ಢೀ ।**
**ತಹ ಜಿಣ ದಂಸಣ ಭಟ್ಟಾ ಮೂಲ ವಿಣಟ್ಠಾ ಣ ಸಿಜ್ಝಂತಿ ।।೧೦।।**
**ಜೇ ದಂಸಣೇಸು ಭಟ್ಟಾ ಪಾಏ ಪಾಡಂತಿ ದಂಸಣ ಧರಾಣಂ ।**
**ತೇ ಹೋಂತಿ ಲಲ್ಲ ಮೂಆ ಬೋಹೀ ಪುಣ ದುಲ್ಲಹಾ ತೇಸಿಂ ।।೧೨।।**
**ಜೇ ವಿ ಪಡಂತಿ ಯ ತೇಸಿಂ ಜಾಣಂತಾ ಲಜ್ಜಾ ಗಾರವ ಭಯೇಣ ।**
**ತೇಸಿಂ ಪಿ, ಣತ್ಥಿ ಬೋಹೀ ಪಾವಂ ಅಣು ಮೋಯಮಾಣಾಣಂ ।।೧೩।।**
**ಜಿಣ ವಯಣ ಮೋಸಹಮಿಣಂ ವಿಸಯ ಸುಹ ವಿರೇಯಣಂ ಅಮಿದಭೂದಂ ।**
**ಜರ ಮರಣ ವಾಹಿ ಹರಣಂ ಖಯ ಕರಣಂ ಸವ್ವ ದುಕ್ಖಾಣಂ ।।೧೭।।**
**ಏಗಂ ಜಿಣಸ್ಸ ರೂಪಂ ವಿದಿಯಂ ಉಕ್ಕಿಟ್ಟ ಸಾವಯಾಣಂ ತು ।**
**ಅವರಟ್ಠಿಯಾಣ ತಇಯಂ ಚಉತ್ಥಪುಣ ಲಿಂಗ ದಂಸಣಂ ಣತ್ಥಿ ।।೧೮।।**
**ಜಂ ಸಕ್ಕಇ ತಂ ಕೀರಇ ಜಂ ಚ ಣ ಸಕ್ಕೇಇ ತಂ ಚ ಸದ್ದಹಣಂ ।**
**ಕೇವಲಿ ಜಿಣೇಹಿಂ ಭಣಿಯಂ ಸದ್ದಹಮಾಣಸ್ಸ ಸಮ್ಮತ್ತಂ ।।೨೨।।**
**ಣ ವಿ ದೇಹೋ ವಂದಿಜ್ಜಇ ಣ ವಿ ಯ ಕುಲೋ ಣ ವಿ ಯ ಜಾಇ ಸಂಜುತ್ತೋ ।**
**ಕೋ ವಂದಮಿ ಗುಣಹೀಣೋ ಣ ಹು ಸವಣೋ ಣೇಯ ಸಾವಣೋ ಹೋಇ ।।೨೭।।**

**ಅರ್ಥ :-** ಯಾರು ಸಮ್ಯಗ್ದರ್ಶನದಿಂದ ಭ್ರಷ್ಟರಿದ್ದಾರೆ ಅವರು ಭ್ರಷ್ಟರಿದ್ದಾರೆ, ಅವರಿಗೆ ಅನಂತ ಕಾಲದಲ್ಲಿಯೂ ನಿರ್ವಾಣವಾಗಲಾರದು. ಯಾರ ಸಮ್ಯಗ್ದರ್ಶನವು ಬಿಟ್ಟು ಹೋಗಿಲ್ಲ, ಆದರೆ ಚಾರಿತ್ರದಿಂದ ಭ್ರಷ್ಟರಾಗಿ ಹೋಗಿದ್ದಾರೆ ಅವರು ಮೂರನೇ ಭವದಲ್ಲಿ ನಿರ್ವಾಣಕ್ಕೆ, ಪ್ರಾಪ್ತರಾಗುವರು. ಸಮ್ಯಕ್ತ್ವವು ಬಿಟ್ಟುಹೋದ ಮೇಲೆ ಅನಂತ ಭವಗಳಲ್ಲೂ ಸಂಸಾರ ಭ್ರಮಣದಿಂದ ಬಿಡುಗಡೆಯಾಗಲಾರದು.

ಯಾರು ಸಮ್ಯಕ್ತ್ವರತ್ನದಿಂದ ಭ್ರಷ್ಟರಿದ್ದಾರೆ ಅವರು ಹಲವು ಪ್ರಕಾರದ ಶಾಸ್ತ್ರಗಳನ್ನು ತಿಳಿಯುತ್ತಿದ್ದರೂ, ನಾಲ್ಕು ಆರಾಧನೆಗಳಿಂದ ರಹಿತರಾಗಿರುವ ಕಾರಣ ಸಂಸಾರದಲ್ಲಿಯೇ ಭ್ರಮಣ ಮಾಡುತ್ತಾರೆ. ।।೪।।

ಯಾರು ಸಮ್ಯಕ್ತ್ವದಿಂದರಹಿತರಿದ್ದಾರೆ ಅವರು ಸಾವಿರ ಕೋಟಿ ವರ್ಷದವರೆಗೆ ಒಳ್ಳೆಯ ರೀತಿಯಿಂದ ಉಗ್ರ ತಪಸ್ಸಿನ ಆಚರಣೆ ಮಾಡುತ್ತಿದ್ದರೂ ಅವರು ರತ್ನತ್ರಯದ ಲಾಭವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ. ॥೫॥

ಯಾರು ಸಮ್ಯಗ್ದರ್ಶನದಿಂದ ಭ್ರಷ್ಟರಿದ್ದಾರೆ ಅವರು ಜ್ಞಾನದ ಸಂಬಂಧದಲ್ಲಿಯೂ ವಿಪರೀತ ಜ್ಞಾನಿಗಳಾಗಿ ಭ್ರಷ್ಟರೇ ಇದ್ದಾರೆ. ಯಾರ ಆಚರಣೆಯೂ ಭ್ರಷ್ಟವಿದೆ ಅವರಂತೂ ಭ್ರಷ್ಟರಿದ್ದಾರೆ, ಯಾರು ಇವರ ಸಂಗತಿ ಮಾಡುತ್ತಾರೆ ಅವರನ್ನು ಇವರು ಧರ್ಮರಹಿತರನ್ನಾಗಿ ಮಾಡಿ ನಷ್ಟ ಮಾಡಿಬಿಡುತ್ತಾರೆ ॥೮॥

ಯಾವ ಪ್ರಕಾರ ವೃಕ್ಷದ ಮೂಲ ಎಂದರೆ ಮೂಲಿಕೆಯ ನಾಶವಾದ ಮೇಲೆ ಅದರ ರೆಂಬೆ, ಪರ್ಣ, ಪುಷ್ಪ, ಫಲ ಮೊದಲಾದ ಪರಿವಾರದ ವೃದ್ಧಿಯಾಗುವುದಿಲ್ಲ; ಅದೇ ಪ್ರಕಾರ ಯಾರು ಸಮ್ಯಗ್ದರ್ಶನದಿಂದ ಭ್ರಷ್ಟರಿದ್ದಾರೆ ಅವರು ಮೂಲದಿಂದಲೇ ಭ್ರಷ್ಟರಿದ್ದಾರೆ; ಅವರಿಗೆ ಜ್ಞಾನ, ಚಾರಿತ್ರ, ನಿರ್ವಾಣದ ಸಿದ್ಧಿಯು ಹೇಗೆ ಆಗುವುದು ? ॥೧೦॥

ಯಾರು ಸಮ್ಯಗ್ದರ್ಶನದಿಂದ ಭ್ರಷ್ಟರಿದ್ದಾರೆ ಮತ್ತು ಸಮ್ಯಗ್ದರ್ಶನದ ಧಾರಕರನ್ನು ತಮ್ಮ ಕಾಲಿಗೆ ಬೀಳಿಸಿಕೊಳ್ಳಲು ಅಪೇಕ್ಷಿಸುತ್ತಾರೆ ಅವರು ಮುಂದಿನ ಭವದಲ್ಲಿ ಕಾಲುಗಳಿಲ್ಲದ ಹೇಳವ ಮತ್ತು ವಚನಗಳಿಲ್ಲದ ಮೂಗರಾಗುತ್ತಾರೆ. ಅವರು ತಾವಂತೂ ಸಮ್ಯಗ್ದರ್ಶನದಿಂದ ರಹಿತರಿದ್ದಾರೆ, ಆದರೆ ಅನ್ಯ ಸಮ್ಯಗ್ದೃಷ್ಟಿಗಳಿಂದ ತಮಗೆ ವಂದನೆ ನಮಸ್ಕಾರ ಮಾಡಿಸಿಕೊಳ್ಳುತ್ತಾರೆ ಮತ್ತು ಮಾಡಿಸಿಕೊಳ್ಳಲಪೇಕ್ಷಿಸುತ್ತಾರೆ ಅವರು ಬಹಳಷ್ಟು ಕಾಲದವರೆಗೆ ಏಕೇಂದ್ರಿಯರಾಗುತ್ತಾರೆ. ॥೧೨॥

ಮಿಥ್ಯಾದೃಷ್ಟಿಗಳಿದ್ದಾರೆಂಬುದನ್ನು ತಿಳಿದುಕೊಂಡು ಕೂಡ ಯಾರು ಅವರ ಚರಣಗಳಲ್ಲಿ ಲಜ್ಜೆಯಿಂದ ಗಾರವ ಎಂದರೆ ಅಭಿಮಾನದಿಂದ-ದೊಡ್ಡಸ್ತಿಕೆಯಿಂದ, ಭಯದಿಂದ ವಂದನೆ ಮಾಡುತ್ತಾರೆ. **ಅವರಿಗೂ ಮಿಥ್ಯಾತ್ವ ಪಾಪದ ಅನುಮೋದನೆ ಮಾಡುವುದರಿಂದ ರತ್ನತ್ರಯದ ಪ್ರಾಪ್ತಿಯು ದುರ್ಲಭವಿದೆ.** ॥೧೩॥

ಸಮ್ಯಗ್ದೃಷ್ಟಿಗೆ ಜಿನೇಂದ್ರರ ವಚನವೇ ಅಮೃತರೂಪದ ಔಷಧವಿದೆ, ಅದು ವಿಷಯ ಸುಖರೂಪ ಆಮಾಶಯದ ವಿರೇಚನ ಮಾಡಿಸುವಂಥದ್ದಿದೆ, ಜರೆ-ಮರಣರೂಪದ ವ್ಯಾಧಿಯನ್ನು ದೂರ ಮಾಡುವುದರ ಕಾರಣವಿದೆ, ಮತ್ತು ಸಂಸಾರದ ಸಮಸ್ತ ದುಃಖಗಳ ಕ್ಷಯದ ಕಾರಣವಿದೆ. ಜನ್ಮ-ಜರೆ-ಮರಣ ಮೊದಲಾದ ಸಮಸ್ತ ದುಃಖರೂಪ ರೋಗಗಳನ್ನು ದೂರ ಮಾಡುವಂಥ ಅಮೃತರೂಪದ ಔಷಧವಂತೂ ಜಿನೇಂದ್ರರ ವಚನಗಳೇ ಇವೆಯೆಂದು ಸಮ್ಯಗ್ದೃಷ್ಟಿಗೆ ನಿಶ್ಚಯವಿದೆ. ಈ ಔಷಧವಿಲ್ಲದೆ ಅನಾದಿಕಾಲದ ವಿಷಯಗಳ ಇಚ್ಛೆಯರೂಪದ ದಾಹವನ್ನು ನಾಶಮಾಡುವಂಥ, ಆಮಾಶಯವನ್ನು ತೊಳೆದು ಜ್ಞಾನ, ಸುಖ ಮೊದಲಾದ ಅಂಗಗಳನ್ನು ಪುಷ್ಟ ಮಾಡುವಂಥ ಅಮೃತದ ಸಮಾನವಾದ ಬೇರೆ ಯಾವ ಉಪಯವೇ ಇಲ್ಲ. ॥೧೭॥

ಒಂದಂತೂ ಜಿನೇಂದ್ರರು ಧಾರಣಮಾಡಿದ ಸಮಸ್ತ ವಸ್ತ್ರ-ಶಸ್ತ್ರಾದಿಗಳಿಂದ ರಹಿತವಾದ ನಗ್ನರೂಪವಿದೆ, ಎರಡನೆಯದು ಒಂದು ಲಂಗೋಟಿ ಹಾಗೂ ತುಂಡು ವಸ್ತ್ರಯುಕ್ತ ಉತ್ಕೃಷ್ಟ ಶ್ರಾವಕನದಿದೆ; ಮೂರನೆಯದು ಆಯಿಕೆಯ ವೇಷವಿದೆ, ನಾಲ್ಕನೇ ಲಿಂಗವು-ವೇಷವು ಜಿನಮತದಲ್ಲಿಲ್ಲ. ಅನ್ಯ ವೇಷಗಳೆಲ್ಲವು ಜಿನಧರ್ಮದಿಂದಬಾಹ್ಯವಿವೆ, ವಂದಿಸಲು ಯೋಗ್ಯವಿಲ್ಲ. ॥೧೮॥

ಜಿನೇಂದ್ರರ ಆಜ್ಞೆಯನ್ನು ಪಾಲಿಸುವ ಸಾಮರ್ಥ್ಯವಿದ್ದರೆ ತಾವು ಅದರ ಆಚರಣೆ ಮಾಡಿರಿ-ಪಾಲಿಸಿರಿ ಮತ್ತು ಆ ಆಜ್ಞೆಯನ್ನು ಪಾಲಿಸುವ ಸಾಮರ್ಥ್ಯವಿಲ್ಲದಿದ್ದರೆ, ಅದರ ಸತ್ಯ ಶ್ರದ್ಧೆಯನ್ನೇ ಮಾಡಿರಿ. ಕೇವಲೀ ಭಗವಂತರು ಆ ಶ್ರದ್ಧೆ ಮಾಡುವಂಥವರಿಗೆ ಸಮ್ಯಕ್ತ್ವವಿದೆಯೆಂದು ಹೇಳಿದ್ದಾರೆ. ॥೨೨॥

ರತ್ನತ್ರಯವಿಲ್ಲದ ದೇಹ-ಜಾತಿ-ಕುಲಗಳೂ ಸಮ್ಯಗ್ದೃಷ್ಟಿಯ ಮೂಲಕ ವಂದಿಸಲು ಯೋಗ್ಯವಿಲ್ಲ. ಸಮ್ಯಗ್ದರ್ಶನ ಮೊದಲಾದ ಗುಣಗಳಿಲ್ಲದ ಶ್ರಾವಕ ಮತ್ತು ಮುನಿಯೂ ವಂದಿಸಲು ಯೋಗ್ಯರಿಲ್ಲ. ರತ್ನತ್ರಯದ ಪ್ರಭಾವದಿಂದ ದೇಹ-ಕುಲ-ಜಾತಿಗಳು ಕೂಡ ವಂದನೀಯವಾಗಿ ಹೋಗುತ್ತವೆ. ॥೨೭॥

ಈಗ ಈ ಜೀವನಿಗೆ ಸರ್ವೋತ್ಕೃಷ್ಟ ಉಪಕಾರ ಮಾಡುವಂಥದು ಮತ್ತು ಅಪಕಾರ ಮಾಡುವಂಥದು ಯಾವುದಿದೆಯೆಂಬುದನ್ನು ಹೇಳುವ ಸಲುವಾಗಿ ಸೂತ್ರ ಹೇಳುತ್ತಾರೆ, -

**ನ ಸಮ್ಯಕ್ತ್ವ ಸಮಂ ಕಿಂಚಿತ್ ತ್ರೈಕಾಲ್ಯೇ ತ್ರಿಜಗತ್ಯ ಪಿ ।**
**ಶ್ರೆಯೋಽಶ್ರೇಯಶ್ಚ ಮಿಥ್ಯಾತ್ವ ಸಮಂ ನಾನ್ಯತ್ತನೂಭೃತಾಮ್ ॥೩೪॥**

**ಅರ್ಥ ಃ-** ಜೀವರುಗಳಿಗೆ ಸಮ್ಯಗ್ದರ್ಶನದ ಸಮಾನ ಕಲ್ಯಾಣ ಮಾಡುವಂಥದು ಮೂರು ಕಾಲ ಮತ್ತು ಮೂರು ಲೋಕಗಳಲ್ಲಿ ಬೇರೆ ಯಾವುದೂ ಇಲ್ಲ; ಮತ್ತು ಮಿಥ್ಯಾತ್ವದ ಸಮಾನವಾಗಿ ಅಕಲ್ಯಾಣ ಮಾಡುವಂಥದು ಮೂರು ಕಾಲ ಮತ್ತು ಮೂರು ಲೋಕಗಳಲ್ಲಿ ಯಾವುದೂ ಇಲ್ಲ.

**ಭಾವಾರ್ಥ ಃ-** ಅನಂತಕಾಲವಂತೂ ಕಳೆದುಹೋಗಿದೆ, ವರ್ತಮಾನ ಕಾಲವು ಒಂದು ಸಮಯ ಮತ್ತು ಅನಂತಕಾಲವು ಮುಂದೆ ಬರುವಂಥದು ಹೀಗೆ ಮೂರು ಕಾಲದಲ್ಲಿ; ಅಧೋಭವನಲೋಕ, ಅಸಂಖ್ಯಾತ ದ್ವೀಪಸಾಗರವರೆಗೆ ಮಧ್ಯಲೋಕ ಮತ್ತು ಸ್ವರ್ಗಾದಿ ಊರ್ಧ್ವಲೋಕ ಹೀಗೆ ಮೂರು ಲೋಕದಲ್ಲಿ; ಜೀವಗಳಿಗೆ ಸಮ್ಯಕ್ತ್ವದ ಸಮಾನ ಸರ್ವೋತ್ಕೃಷ್ಟ ಉಪಕಾರ ಮಾಡುವಂಥದು ಬೇರೆ ಯಾವುದೂ ಇಲ್ಲ, ಆಗಿಲ್ಲ ಮತ್ತು ಆಗುವುದಿಲ್ಲ. ಸಮ್ಯಕ್ತ್ವವು ಈ ಜೀವನಿಗೆ ಯಾವ ಉಪಕಾರ ಮಾಡುತ್ತದೆ ಅಂಥ ಉಪಕಾರವನ್ನು ಮೂರು ಲೋಕದಲ್ಲಿ ಆದ ಇಂದ್ರ, ಅಹಮಿಂದ್ರ, ಭುವನೇಂದ್ರ, ಚಕ್ರವರ್ತಿ, ನಾರಾಯಣ, ಬಲಭದ್ರ, ತೀರ್ಥಂಕರ ಮೊದಲಾದ ಸಮಸ್ತ ಚೇತನ ಮತ್ತು ಮಣಿ, ಮಂತ್ರ, ಔಷಧ ಮೊದಲಾದ ಸಮಸ್ತ ಅಚೇತನ ದ್ರವ್ಯಗಳಾವವೂ ಮಾಡುವುದಿಲ್ಲ. **ಈ ಜೀವಕ್ಕೆ ನಿಕೃಷ್ಟವಾದ ಅಪಕಾರವನ್ನು ಹೇಗೆ ಮಿಥ್ಯಾತ್ವ ಮಾಡುತ್ತದೆ ಹಾಗೆ ಅಪಕಾರ ಮಾಡುವಂಥದು ಮೂರು ಲೋಕದಲ್ಲಿ ಮೂರು ಕಾಲದಲ್ಲಿ ಯಾವುದೇ ಚೇತನ ದ್ರವ್ಯ ಮತ್ತು ಅಚೇತನ ದ್ರವ್ಯವಿಲ್ಲ, ಆಗಿಲ್ಲ, ಆಗುವುದಿಲ್ಲ.** ಆದುದರಿಂದ ಮಿಥ್ಯಾತ್ವದ ತ್ಯಾಗದಲ್ಲಿಯೇ ಪರಮ ಪ್ರಯತ್ನ ಮಾಡಿರಿ. ಸಮಸ್ತ ಸಂಸಾರದ ದುಃಖವನ್ನು ದೂರ ಮಾಡುವಂಥ, ಆತ್ಮ ಕಲ್ಯಾಣದ ಪರಮ ಸೀಮೆಯು ಒಂದು ಸಮ್ಯಕ್ತ್ವವೇ ಇದೆ, ಆದುದರಿಂದ ಅದನ್ನೇ ಪ್ರಾಪ್ತ ಮಾಡಿಕೊಳ್ಳುವಲ್ಲಿ ಪುರುಷಾರ್ಥ ಮಾಡಿರಿ.

ಈಗ ಸಮ್ಯಗ್ದರ್ಶನದ ಪ್ರಭಾವದ ವರ್ಣನೆ ಮಾಡುವಂಥ ಸೂತ್ರ ಹೇಳುತ್ತಾರೆ, -

**ಸಮ್ಯಗ್ದರ್ಶನಶುದ್ಧಾ ನಾರಕತಿರ್ಯಙ್ ನಪುಂಸಕ ಸ್ತ್ರೀತ್ವಾನಿ ।**
**ದುಷ್ಕುಲವಿಕೃತಾಲ್ಪಾಯುರ್ದರಿದ್ರತಾಂ ಚ ವ್ರಜಂತಿ ನಾಪ್ಯವ್ರತಿಕಾಃ ॥೩೫॥**

**ಅರ್ಥ ಃ-** ಸಮ್ಯಗ್ದರ್ಶನದಿಂದ ಶುದ್ಧರಿರುವಂಥ ಜೀವರುಗಳು ವ್ರತರಹಿತರಾಗಿದ್ದರೂ ನಾರಕೀ, ತಿರ್ಯಂಚ, ನಪುಸಂಕ ಮತ್ತು ಸ್ತ್ರೀತನಕ್ಕೆ ಪ್ರಾಪ್ತರಾಗುವುದಿಲ್ಲ; ನೀಚ ಕುಲದಲ್ಲಿ ಜನ್ಮ, ವಿಕೃತ ಎಂದರೆ ಕುರುಡ, ಕಿವುಡ, ಕುಂಟ, ಹೆಳವ, ಡೂಗ, ಮೂಗ, ಹೀನಾಂಗ, ಅಧಿಕಾಂಗ, ಕುರೂಪ, ಅಭದ್ರ, ದರಿದ್ರ, ಅಲ್ಪಾಯುವಿಗೆ ಪ್ರಾಪ್ತರಾಗುವುದಿಲ್ಲ.

ವ್ರತರಹಿತ ಅವ್ರತ - ಸಮ್ಯಗ್ದೃಷ್ಟಿಗೆ ಈ ಕೆಳಗೆ ಹೇಳಿದ ನಲವತ್ತೊಂದು ಕರ್ಮ ಪ್ರಕೃತಿಗಳ ಬಂಧವೇ ಆಗುವುದಿಲ್ಲವೆಂಬ ನಿಯಮವಿದೆ. ೧) ಮಿಥ್ಯಾತ್ವ, ೨)ಹುಂಡಕಸಂಸ್ಥಾನ, ೩) ನಪುಂಸಕವೇದ, ೪) ಅಸಂಪ್ರಾಪ್ತಾಸೃಪಾಟಿಕಾ ಸಂಹನನ, ೫) ಏಕೇಂದ್ರಿಯ, ೬) ಸ್ಥಾವರ, ೭) ಆತಾಪ, ೮) ಸೂಕ್ಷ್ಮತನ, ೯) ಅಪರ್ಯಾಪ್ತಕ, ೧೦) ದ್ವೀಂದ್ರಿಯ, ೧೧) ತ್ರೀಂದ್ರಿಯ, ೧೨) ಚತುರೇಂದ್ರಿಯ, ೧೩) ಸಾಧಾರಣ, ೧೪) ನರಕಗತಿ, ೧೫) ನರಕಗತ್ಯಾನುಪೂರ್ವಿ, ೧೬) ನರಕಾಯು. ಈ ಹದಿನಾರು ಪ್ರಕೃತಿಗಳಂತೂ ಮಿಥ್ಯಾತ್ವ ಭಾವದಿಂದಲೇ ಬಂಧಿಸುತ್ತವೆ.

೧) ಅನತಾನುಬಂಧೀ ಕ್ರೋಧ, ೨) ಮಾನ, ೩) ಮಾಯೆ, ೪) ಲೋಭ, ೫) ಸ್ತ್ಯಾನಗೃದ್ಧಿ, ೬) ನಿದ್ರಾನಿದ್ರಾ, ೭)ಪಚಲಾಪ್ರಚಲಾ, ೮) ದುರ್ಭಗ, ೯)ದುಸ್ವರ, ೧೦) ಅನಾದೇಯ, ೧೧) ನ್ಯಗ್ರೋಧಪರಿಮಂಡಲಸಂಸ್ಥಾನ,೧೨) ಸ್ವಾತಿ ಸಂಸ್ಥಾನ,೧೩)ಕುಬ್ಜಕ ಸಂಸ್ಥಾನ, ೧೪) ವಾಮನ ಸಂಸ್ಥಾನ, ೧೫) ವಜ್ರವೃಷಭನಾರಾಚ ಸಂಹನನ, ೧೬) ನಾರಾಚ ಸಂಹನನ, ೧೭) ಅಧನಾರಾಚಸಂಹನನ, ೧೮) ಕೀಲಕಸಂಹನನ, ೧೯) ಅಪ್ರಶಸ್ತ ವಿಹಾಯೋಗತಿ, ೨೦) ಸ್ತ್ರೀತ್ವ, ೨೧) ನೀಚಗೋತ್ರ, ೨೨) ತಿರ್ಯಂಚಗತಿ, ೨೩) ತಿರ್ಯಂಚಗತ್ಯಾನುಪೂರ್ವಿ, ೨೪) ತಿರ್ಯಂಚ ಆಯು, ೨೫) ಉದ್ಯೋತವೆಂದು ಈ ಇಪ್ಪತ್ತೈದು ಪ್ರಕೃತಿಗಳು ಅನಂತಾನುಬಂಧಿಯ ಪ್ರಭಾವದಿಂದ ಕಟ್ಟುತ್ತವೆ.

ಮಿಥ್ಯಾದೃಷ್ಟಿಯೇ ಈ ನಲವತ್ತೊಂದು ಕರ್ಮ ಪ್ರಕೃತಿಗಳ ಬಂಧಮಾಡಿಕೊಳ್ಳುತ್ತಾನೆ. ಸಮ್ಯಗ್ದೃಷ್ಟಿಗೆ ಮಿಥ್ಯಾತ್ವ ಮತ್ತು ಅನಂತಾನುಬಂಧಿಯ ಅಭಾವವಾಗಿರುವುದರಿಂದ ಅವ್ರತ-ಸಮ್ಯಗ್ದೃಷ್ಟಿಗೆ ಈ ನಲವತ್ತೊಂದು ಕರ್ಮ ಪ್ರಕೃತಿಗಳ ನವೀನ ಬಂಧವಾಗುವುದಿಲ್ಲ.

ಸಮ್ಯಕ್ತ್ವವಾಗುವ ಮೊದಲಿನ ಮಿಥ್ಯಾತ್ವ ಅವಸ್ಥೆಯಲ್ಲಿ ಈ ನಲವತ್ತೊಂದು ಪ್ರಕೃತಿಗಳ ಯಾವ ಬಂಧವಾಗಿತ್ತು ಆ ಬಂಧವು ಸಮ್ಯಕ್ತ್ವದ ಪ್ರಭಾವದಿಂದ ನಷ್ಟವಾಗಿ ಹೋಗುತ್ತದೆ. ಆದರೆ ಆಯುವಿಗೆ ಸಂಬಂಧಿಸಿದ ಬಂಧವು ನಷ್ಟವಾಗುವುದಿಲ್ಲ, ಬಿಟ್ಟು ಹೋಗುವುದಿಲ್ಲ; ಆದಾಗ್ಯೂ ಸಮ್ಯಕ್ತ್ವದ ಪ್ರಭಾವವು ಹೀಗಿದೆ.

೧) ಮೊದಲು ಏಳನೆಯ ನರಕದ ಆಯುವಿನ ಬಂಧವಾಗಿದ್ದು, ಅನಂತರ ಸಮ್ಯಗ್ದರ್ಶನವಾಗಿ ಹೋದರೆ ಮೊದಲನೆಯ ನರಕಕ್ಕೇ ಹೋಗುತ್ತದೆ, ಎರಡನೆಯ ಅಥವಾ ಅನ್ಯ ನರಕಗಳಲ್ಲಿ ಹೋಗುವುದಿಲ್ಲ.

೨) ಮೊದಲು ತಿರ್ಯಂಚದಲ್ಲಿ ನಿಗೋದದ ಏಕೇಂದ್ರಿಯದ ಆಯುವಿನ ಬಂಧವಾಗಿದ್ದು, ಅನಂತರ ಸಮ್ಯಗ್ದರ್ಶನವಾಗಿ ಹೊದರೆ ಆ ಸಮ್ಯಕ್ತ್ವದ ಪ್ರಭಾವದಿಂದ ಉತ್ತಮ ಭೋಗಭೂಮಿಯ ಪಂಚೇಂದ್ರಿಯ ತಿರ್ಯಂಚವೇ ಆಗುತ್ತದೆ; ಏಕೇಂದ್ರಿಯ ಮೊದಲಾದ ಕರ್ಮಭೂಮಿಯ ತಿರ್ಯಂಚವಾಗುವುದಿಲ್ಲ.

೩) ಮೊದಲು ಲಬ್ಧಿ ಅಪರ್ಯಾಪ್ತ ಮನುಷ್ಯ ಆಯುವಿನ ಬಂಧವಾಗಿದ್ದು, ಅನಂತರ ಸಮ್ಯಗ್ದರ್ಶನವಾಗಿ ಹೋದರೆ ಆ ಸಮ್ಯಕ್ತ್ವದ ಪ್ರಭಾವದಿಂದ ಉತ್ತಮ ಭೋಗ ಭೂಮಿಯ ಮನುಷ್ಯವೇ ಆಗುತ್ತದೆ.

೪) ಮೊದಲು ವ್ಯಂತರ ಮೊದಲಾದುವಲ್ಲಿ ನೀಚ ದೇವಾಯುವಿನ ಬಂಧವಾಗಿದ್ದು, ಅನಂತರ ಸಮ್ಯಗ್ದರ್ಶನವಾಗಿ ಹೋದರೆ ಮಹಾನ್ ಋದ್ಧಿಯುಳ್ಳ ಕಲ್ಪವಾಸೀ ದೇವನೇ ಆಗುತ್ತಾನೆ. ಅನ್ಯ ಭವನತ್ರಿಕದೇವಗಳಲ್ಲಿ, ನಾಲ್ಕೂ ಪ್ರಕಾರದ ದೇವಗಳ ಸ್ತ್ರೀಯರಲ್ಲಿ ಸಮಸ್ತ ಮನುಷ್ಯ ಸ್ತ್ರೀಯರಲ್ಲಿ ಮತ್ತು ಹೆಣ್ಣು ತಿರ್ಯಂಚದಲ್ಲಿ ಉತ್ಪನ್ನವಾಗುವುದಿಲ್ಲ.

೫) ಸಮ್ಯಕ್ತ್ವದ ಪ್ರಭಾವದಿಂದ ನೀಚ ಕುಲದಲ್ಲಿ,ದರಿದ್ರರುಗಳಲ್ಲಿ, ಅಲ್ಪಾಯುವಿನ ಧಾರಕವಾಗಿ ಉತ್ಪನ್ನವಾಗುವುದಿಲ್ಲ.

ಈಗ ಸಮ್ಯಗ್ದರ್ಶನದ ಪ್ರಭಾವದಿಂದ ಎಂಥ ಮನುಷ್ಯನಾಗುತ್ತಾನೆಂಬುದನ್ನು ಹೇಳುವಂಥ ಸೂತ್ರ ಹೇಳುತ್ತಾರೆ,-

**ಓಜಸ್ತೇಜೋವಿದ್ಯಾವೀರ್ಯಯಶೋವೃದ್ಧಿ ವಿಜಯವಿಭವಸನಾಥಾಃ ।**
**ಮಹಾಕುಲಾ ಮಹಾರ್ಥಾ ಮಾನವತಿಲಕಾ ಭವಂತಿ ದರ್ಶನಪೂತಾಃ ॥೩೬॥**

**ಅರ್ಥ :-** ಸಮ್ಯಗ್ದರ್ಶನದಿಂದ ಪವಿತ್ರರಿರುವಂಥ ಪುರುಷರು ಮನುಷ್ಯರ ತಿಲಕ ಎಂದರೆ ಸಮಸ್ತ ಮನುಷ್ಯರನ್ನು ಶೋಭಿತ ಮಾಡುವಂಥ, ಸಮಸ್ತ ಮನುಷ್ಯರ ಮಸ್ತಕದ ಮೇಲೆ ಧಾರಣ ಮಾಡಲು ಯೋಗ್ಯರಾದಂಥ ಮನುಷ್ಯರ ತಿಲಕರಾಗುತ್ತಾರೆ, ಓಜ ಎಂದರೆ ಪರಾಕ್ರಮ, ತೇಜ ಎಂದರೆ ಪ್ರತಾಪ, ವಿದ್ಯೆ ಎಂದರೆ ಸಮಸ್ತಲೋಕದಲ್ಲಿ ಅತಿಶಯರೂಪದ ಜ್ಞಾನ, ವೀರ್ಯ ಎಂದರೆ ಅತಿಶಯರೂಪದ ಶಕ್ತಿ, ಉಜ್ವಲ ಯಶ, ವೃದ್ಧಿ ಎಂದರೆ ದಿನೇ ದಿನೇ

ಗುಣಗಳ ಮತ್ತು ಸುಖದ ವೃದ್ಧಿ, ವಿಜಯ ಎಂದರೆ ಎಲ್ಲ ಪ್ರಕಾರದ ಗೆಲುವು, ಅತಿಶಯರೂಪದ ವೈಭವ. ಈ ಪ್ರಕಾರ ಓಜ, ತೇಜ, ವಿದ್ಯೆ, ವೀರ್ಯ, ಯಶ, ವೃದ್ಧಿ, ವಿಜಯ, ವೈಭವ ಈ ಎಲ್ಲ ಗುಣಗಳ ಅಧಿಪತ್ಯರಾಗುತ್ತಾರೆ. ಮಹಾನ್ ಕುಲದ ಸ್ವಾಮಿಯಾಗುತ್ತಾರೆ. ಮಹಾನ ಧರ್ಮ; ಮಹಾ ಅರ್ಥ, ಮಹಾಕಾಮ, ಮಹಾಮೋಕ್ಷರೂಪದ ನಾಲ್ಕು ಪುರುಷಾರ್ಥಗಳ ಸ್ವಾಮಿಯಾಗುತ್ತಾರೆ. ಸಮ್ಯಗ್ದರ್ಶನ ಗ್ರಹಣ ಮಾಡುವುದರಿಂದ ಮನುಷ್ಯರು ಅಸೀಮ ಅಪ್ರಮಾಣ ಪ್ರಭಾವದ ಧಾರಕರಾಗುತ್ತಾರೆ.

ಈಗ ಸಮ್ಯಕ್ತ್ವದ ಪ್ರಭಾವದಿಂದ ದೇವಗಳ ವೈಭವ ಪ್ರಾಪ್ತವಾಗುತ್ತದೆಂದು ಹೇಳುವಂಥ ಸೂತ್ರ ಹೇಳುತ್ತಾರೆ,-

**ಅಷ್ಟ ಗುಣಪುಷ್ಟಿತುಷ್ಟಾ ದೃಷ್ಟಿ ವಿಶಿಷ್ಟಾಃ ಪ್ರಕೃಷ್ಟಶೋಭಾಜುಷ್ಟಾಃ ।**
**ಅಮರಾಪ್ಸರಸಾಂ ಪರಿಷದಿ ಚಿರಂ ರಮಂತೇ ಜಿನೇಂದ್ರ ಭಕ್ತಾಃ ಸ್ವರ್ಗೇ ॥೩೭॥**

**ಅರ್ಥ** :- ಜಿನೇಂದ್ರ ಭಕ್ತರಾದ ಸಮ್ಯಗ್ದೃಷ್ಟಿಗಳು ದೇವಗಳಲ್ಲಿ ಜನ್ಮ ಪಡೆದು ಅಪ್ಸರೆಯರ ಸಮೂಹದ ಮಧ್ಯದಲ್ಲಿ ಚಿರಕಾಲದವರೆಗೆ ರಮಿಸುತ್ತಾರೆ-ಸುಖ ಭೋಗಿಸುತ್ತಾರೆ, ಅವರು ಅಣಿಮಾ, ಮಹಿಮಾ ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ ಈಶಿತ್ವ, ವಶಿತ್ವವೆಂದು ಈ ಎಂಟು ಗುಣಗಳ ಪುಷ್ಟತೆ ಎಂದರೆ ಅನ್ಯ ಅಸಂಖ್ಯಾತ ದೇವಗಳಲ್ಲಿ ಕಂಡು ಬಾರದಂಥ ಅಧಿಕತೆಯಿಂದ ಸಂತುಷ್ಟರಾಗಿ ರಮಿಸುತ್ತಾರೆ ಮತ್ತು ಸಮಸ್ತ ದೇವಗಳಿಂದ ಉತ್ಕೃಷ್ಟವಾದಂಥ ಕಾಂತಿ, ತೇಜ, ಯಶದಿಂದ ಶೋಭಾಯಮಾನರಾಗಿ ಸ್ವರ್ಗಲೋಕದಲ್ಲಿ ಆನಂದಪೂರ್ವಕವಾಗಿ ನಿವಾಸ ಮಾಡುತ್ತಾರೆ.

**ಭಾವಾರ್ಥ** :- ಅವ್ರತ ಸಮ್ಯಗ್ದೃಷ್ಟಿಯು ಸ್ವರ್ಗದಲ್ಲಿ ದೇವನಾಗುತ್ತಾನೆ, ಆದರೆ ಹೀನ ಪುಣ್ಯವುಳ್ಳವ ನಾಗುವುದಿಲ್ಲ, ಇಂದ್ರನ ಸಮಾನ ವೈಭವ, ಕಾಂತಿ, ಜ್ಞಾನ, ಸುಖ, ಐಶ್ವರ್ಯದ ಧಾರಕನಾದ ಮಹರ್ದಿಕ ದೇವ ನಾಗುತ್ತಾನೆ. ಇಂದ್ರ, ಸಾಮಾನಿಕ, ತ್ರಾಯಸ್ತ್ರಿಂಸ, ಲೋಕಪಾಲಾದಿ ದೇವಗಳಲ್ಲಿ ಉತ್ಪನ್ನನಾಗುತ್ತಾನೆ. ಅನ್ಯ ಅಸಂಖ್ಯಾತ ದೇವಗಳಿಗೆ ಇಂಥ ಅಣಿಮಾ ಮೊದಲಾದ ಋದ್ಧಿ, ದೇಹದಕಾಂತಿ, ಆಭರಣ, ವಿಮಾನ, ವಿಕ್ರಿಯೆಗಳಿರದಂಥ ಉತ್ಕೃಷ್ಟ ವೈಭವ ಪಡೆದು ಅಸಂಖ್ಯಾತಕಾಲದ ವರ್ಷಗಳವರೆಗೆ ಕೋಟ್ಯಂತರ ಅಪ್ಸರೆಯರ ಸಭೆಯಲ್ಲಿ ಕ್ರೀಡೆ ಮಾಡುತ್ತಾನೆ.

ಈಗ ಸಮ್ಯಗ್ದೃಷ್ಟಿಯು ಸಾಗರಗಳವರೆಗೆ ಸ್ವರ್ಗದ ಇಂದ್ರಿಯಜನ್ಯ ಸುಖವನ್ನು ಭೋಗಿಸಿ, ಮನುಷ್ಯ ಲೋಕದಲ್ಲಿ ಬಂದು ಹೇಗಿರುತ್ತಾನೆಂಬುದನ್ನು ಹೇಳುವಂಥ ಸೂತ್ರವನ್ನು ಹೇಳುತ್ತಾರೆ, -

**ನವನಿಧಿಸಪ್ತದ್ವಯರತ್ನಾಧೀಶಃ ಸರ್ವಭೂಮಿಪತಯಶ್ಚಕ್ರಮ್ ।**
**ವರ್ತಯಿತುಂ ಪ್ರಭವಂತಿ ಸ್ಪಷ್ಟದೃಶಃ ಕ್ಷತ್ರಮೌಲಿಶೇಖರ ಚರಣಾಃ ॥೩೮॥**

**ಅರ್ಥ** :- ಉಜ್ವಲ ಸಮ್ಯಗ್ದರ್ಶನವಿರುವಂಥ ಜೀವನು ಸ್ವರ್ಗಲೋಕದಲ್ಲಿನ ಆಯುಷ್ಯವನ್ನು ಪೂರ್ಣ ಮಾಡಿ ಈ ಮನುಷ್ಯಲೋಕದಲ್ಲಿ ಬಂದು ನವನಿಧಿ ಹದಿನಾಲ್ಕು ರತ್ನಗಳ ಅಧಿಪತಿ, ಸಮಸ್ತ ಭರತ ಕ್ಷೇತ್ರದ ಮೂವತ್ತೆರಡು ಸಾವಿರ ದೇಶಗಳ ದೊರೆ, ಮೂವತ್ತೆರಡು ಸಾವಿರ ಮುಕುಟಬದ್ಧ ರಾಜರುಗಳ ಮಸ್ತಕದ ಮೇಲೆ ಯಾರ ಚರಣಗಳು ಮಕುಟ ರೂಪವಿವೆ ಅಂಥ ಚಕ್ರವನ್ನು ಪ್ರವರ್ತನೆ ಮಾಡುವ ಸಾಮರ್ಥ್ಯವುಳ್ಳ ಚಕ್ರವರ್ತಿಯಾಗುತ್ತಾನೆ.

**ಭಾವಾರ್ಥ** :- ಸಮ್ಯಗ್ದೃಷ್ಟಿಯು ಸ್ವರ್ಗದಿಂದ ಮನುಷ್ಯ ಭವದಲ್ಲಿಬಂದು ನವನಿಧಿ ಹದಿನಾಲ್ಕುರತ್ನಗಳ ಅಧಿ ಪತಿ, ಆರು ಖಂಡಗಳ ಪತಿ ಮತ್ತು ಸಮಸ್ತ ರಾಜರುಗಳ ಮೇಲೆ ತನ್ನ ಆಜ್ಞೆ ನಡೆಸುವಂಥಚಕ್ರವರ್ತಿಯಾಗುತ್ತಾನೆ.

ಈಗ ಸಮ್ಯಕ್ತ್ವದ ಪ್ರಭಾವದಿಂದ ತೀರ್ಥಂಕರರಾಗುತ್ತಾರೆಂಬುದನ್ನು ಸೂತ್ರದ ಮೂಲಕ ಹೇಳುತ್ತಾರೆ,-

**ಅಮರಾಸುರನರಪತಿಭಿರ್ಯಮಧರಪತಿಭಿಶ್ಚ ನೂತಪಾದಾಂಭೋಜಾಃ ।**
**ದೃಷ್ಟ್ವಾ ಸುನಿಶ್ಚಿತಾರ್ಥಾ ವೃಷಚಕ್ರಧರಾ ಭವಂತಿ ಲೋಕಶರಣ್ಯಾಃ ॥೩೯॥**

**ಅರ್ಥ ಃ-** ಸಮ್ಯಗ್ದರ್ಶನದೊಡನೆ ಪದಾರ್ಥಗಳ ನಿಜವಾದ ನಿರ್ಣಯ ಮಾಡಿದಂಥ ಪುರುಷರು ಅಮರಪತಿ, ಅಸುರಪತಿ, ನರಪತಿ, ಸಂಯಮಿಗಳ ಪತಿಯಾದ ಗಣಧರ ಮೊದಲಾದವರಿಂದ ಅವರ ಚರಣಕಮಲಗಳು ವಂದನೀಯವಿವೆ ಮತ್ತು ಜನರಿಗೆ ಉತ್ಕೃಷ್ಟ ಶರಣಭೂತವಿರುವಂಥ ಧರ್ಮಚಕ್ರದ ಧಾರಕರಾಗಿ ತೀರ್ಥಂಕರರೂಪದಿಂದ ಉತ್ಪನ್ನರಾಗುತ್ತಾರೆ.

**ಭಾವಾರ್ಥ ಃ-** ಸಮ್ಯಗ್ದೃಷ್ಟಿ ಜೀವರುಗಳು ತೀರ್ಥಂಕರರಾಗಿ ಅನೇಕ ಜೀವರುಗಳಸಂಸಾರದ ದುಃಖವನ್ನು ಛೇದ ಮಾಡುವಂಥ ಧರ್ಮಚಕ್ರದ ಪ್ರವರ್ತನೆ ಮಾಡಿಸುತ್ತಾರೆ. ಅವರ ಚರಣಗಳಿಗೆ ಇಂದ್ರ, ಅಸುರೇಂದ್ರ, ನರೇಂದ್ರ, ಗಣಧರ ಮೊದಲಾದವರು ನಿತ್ಯವಂದನೆ ಮಾಡುತ್ತಾರೆ, ಅವರು ಜೀವರುಗಳಿಗೆ ಪರಮ ಶರಣರಿದ್ದಾರೆ.

ಈಗ ಸಮ್ಯಗ್ದೃಷಿಗಳಿಗೇನೇ ನಿರ್ವಾಣವು ಪ್ರಾಪ್ತವಾಗುತ್ತದೆಂದು ಸೂತ್ರದ ಮೂಲಕ ಹೇಳುತ್ತಾರೆ,-

**ಶಿವಮಜರಮರುಜಮಕ್ಷಯಮವ್ಯಾಬಾಧಂ ವಿಶೋಕಭಯಶಂಕಮ್ ।**
**ಕಾಷ್ಠಾಗತಸುಖವಿದ್ಯಾವಿಭವಂ ವಿಮಲಂ ಭಜಂತಿ ದರ್ಶನಶರಣಾಃ ॥೪೦॥**

**ಅರ್ಥ ಃ-** ಯಾರಿಗೆ ಸಮ್ಯಗ್ದರ್ಶನವೇ ಶರಣವಿದೆ ಆ ಪುರುಷರು ಶಿವ ಎಂದರೆ ನಿರಾಕುಲ ಲಕ್ಷಣರೂಪದ ಯಾವ ಮೋಕ್ಷವಿದೆ ಅದರ ಅನುಭವ ಮಾಡುತ್ತಾರೆ. ಎಲ್ಲಿ ಜರೆ ಎಂದರೆ ಮುಪ್ಪು ಇಲ್ಲ, ಎಲ್ಲಿ ಅನಂತಕಾಲ ಕಳೆದರೂ ಆತ್ಮನು ದುರ್ಬಲನಾಗುವುದಿಲ್ಲ, ಜೀರ್ಣನಾಗುವುದಿಲ್ಲ; ಎಲ್ಲಿ ಅರುಜ ಎಂದರೆ ಯಾವುದೇ ರೋಗ, ಪೀಡೆ, ವ್ಯಾಧಿಗಳಿಲ್ಲ; ಎಲ್ಲಿ ಅಕ್ಷಯ ಎಂದರೆ ಅನಂತಚತುಷ್ಟಯರೂಪ ಸ್ವರೂಪದ ಅಭಾವ-ನಾಶವಾಗುವುದಿಲ್ಲ; ಎಲ್ಲಿ ಯಾವುದೇ ಪ್ರಕಾರದ ಯಾವುದೇ ಬಾಧೆಯಿಲ್ಲ; ಎಲ್ಲಿ ಶಂಕೆ, ಭಯ, ಶೋಕ ಮೊದಲಾದವು ದೂರವಾಗಿವೆ ಎಂದರೆ ಶೋಕ,ಭಯ, ಶಂಕೆಗಳಿಲ್ಲ; ಎಲ್ಲಿ ಸುಖ ಮತ್ತು ಜ್ಞಾನ ವೈಭವದ ಪರಾಕಾಷ್ಠೆ-ಪರಮಸೀಮೆಯನ್ನು ಪ್ರಾಪ್ತ ಮಾಡಿಕೊಳ್ಳಲಾಗಿದೆ; ದ್ರವ್ಯಕರ್ಮ-ಭಾವಕರ್ಮ-ನೋಕರ್ಮದಂಥ ಜ್ಞಾನಾವರಣಾದಿ-ರಾಗದ್ವೇಷಾದಿ-ಶರೀರಾದಿ ಕರ್ಮಮಲದ ಭಾವದಿಂದ ವಿಮಲವಿರುವಂಥ ಅದ್ವಿತೀಯ ಸ್ವರೂಪದ ಮೋಕ್ಷವನ್ನು ಸಮ್ಯಗ್ದೃಷ್ಟಿಗಳೇ ಅನುಭವಿಸುತ್ತಾರೆ-ಭೋಗಿಸುತ್ತಾರೆ-ಪ್ರಾಪ್ತ ಮಾಡಿಕೊಳ್ಳುತ್ತಾರೆ. ಈ ಪ್ರಕಾರ ಸಮ್ಯಕ್ತ್ವದ ಮಹಿಮೆಯ ವರ್ಣನೆ ಮಾಡಲಾಯಿತು.

ಈಗ ಸಮ್ಯಗ್ದರ್ಶನ ಅಧಿಕಾರವನ್ನು ಪೂರ್ಣ ಮಾಡುತ್ತ ಸಮ್ಯಗ್ದರ್ಶನದ ಮಹಿಮೆಯನ್ನು ಸೂತ್ರದ ಮೂಲಕ ಉಪಸಂಹಾರ ಮಾಡುತ್ತಾರೆ,-

**ದೇವೇಂದ್ರ ಚಕ್ರಮಹಿಮಾನಮಮೇಯಮಾನಂ ರಾಜೇಂದ್ರ ಚಕ್ರಮವನೀಂದ್ರ ಶಿರೋಽರ್ಚನೀಯಮ್ ।**
**ಧರ್ಮೇಂದ್ರ ಚಕ್ರಮಧರೀಕೃತಸರ್ವಲೋಕಂ ಲಬ್ಧ್ವಾ ಶಿವಂ ಚ ಜಿನಭಕ್ತಿರುಪೈತಿ ಭವ್ಯಃ ॥೪೧॥**

**ಅರ್ಥ ಃ-** ಯಾವನಿಗೆ ಜಿನೇಂದ್ರ ಪರಮಾತ್ಮರ ಸ್ವರೂಪದಲ್ಲಿ ಭಕ್ತಿರೂಪದ ಅನುರಾಗವಿರುತ್ತದೆ. ಆ ಭವ್ಯನು ಸಮ್ಯಗ್ದೃಷ್ಟಿಯಿದ್ದಾನೆ. ಆ ಸಮ್ಯಗ್ದೃಷ್ಟಿಯು ಈ ಮನುಷ್ಯಭವದಿಂದ ಸ್ವರ್ಗಲೋಕದಲ್ಲಿ ಹೋಗಿ, ಅಳತೆಯಿಲ್ಲದ ಋದ್ಧಿ ಶಕ್ತಿ ಸುಖ ವೈಭವದ ಪ್ರಭಾವವುಳ್ಳ ದೇವೇಂದ್ರರ ಸಮೂಹದ ಮಹಿಮೆಯನ್ನು ಪಡೆದು, ನಂತರ ಇದೇ ಪೃಥ್ವಿಗೆ ಬಂದು ಮೂವತ್ತೆರಡು ಸಾವಿರ ರಾಜರುಗಳ ಮಸ್ತಕದಿಂದ ಪೂಜ್ಯವಾದ ರಾಜೇಂದ್ರ ಚಕ್ರವರ್ತಿಯ ಚಕ್ರವನ್ನು ಪ್ರಾಪ್ತಮಾಡಿಕೊಂಡು, ಪುನಃ ಅಹಮಿಂದ್ರಲೋಕದ ಮಹಿಮೆಯನ್ನು ಪಡೆದು ಸಮಸ್ತ ಲೋಕವನ್ನು ತಮ್ಮ ಆಧೀನ

ಮಾಡಿಕೊಂಡಂಥ ಭಗವಾನ ತೀರ್ಥಂಕರರ ಧರ್ಮ ಚಕ್ರವನ್ನು ಪ್ರಾಪ್ತ ಮಾಡಿಕೊಂಡು ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ. ಸಮ್ಯಗ್ದರ್ಶನ ಧಾರಣ ಮಾಡಿದ ಜೀವನು ಇದೇ ಕ್ರಮದಿಂದ ನಿರ್ವಾಣ ಪಡೆಯುತ್ತಾನೆ.

**ಸಮ್ಯಗ್ದೃಷ್ಟಿಯ ವಿಚಾರ ಧಾರೆ :-** ಈ ಪ್ರಕಾರ ದರ್ಶನಮೋಹನೀಯಕರ್ಮದ ಅಭಾವದಿಂದ ಸತ್ಯ ಶ್ರದ್ಧೆ ಮತ್ತು ಸತ್ಯಜ್ಞಾನವು ಪ್ರಕಟವಾಗುತ್ತದೆ, ಮತ್ತು ಅನಂತಾನುಬಂಧೀಕರ್ಮದ ಅಭಾವದಿಂದ ಸಮ್ಯಗ್ದೃಷ್ಟಿಗೆ ಸ್ವರೂಪಾಚರಣ ಚಾರಿತ್ರವು ಪ್ರಕಟವಾಗುತ್ತದೆ. ಅಪ್ರತ್ಯಾಖ್ಯಾನಾವರಣದ ಉದಯದಿಂದ ದೇಶಚಾರಿತ್ರ ವಾಗದಿದ್ದರೂ ಪ್ರತ್ಯಾಖ್ಯಾನಾವರಣದ ಉದಯದಿಂದ ಸಕಲಚಾರಿತ್ರವು ಪ್ರಕಟವಾಗಿರದಿದ್ದರೂ ಈ ಶರೀರಾದಿಗಳು ಪರದ್ರವ್ಯಗಳಿವೆ ಮತ್ತು ರಾಗ-ದ್ವೇಷಾದಿಗಳು ಕರ್ಮಜನಿತ ಪರಭಾವಗಳಿವೆಯೆಂಬ ದೃಢವಾದ ಭೇದವಿಜ್ಞಾನವು ಸಮ್ಯಗ್ದೃಷ್ಟಿಗೆ ಆಗಿರುತ್ತದೆ. ಅವನು ತನ್ನ ಜ್ಞಾನದರ್ಶನ ರೂಪದ ಜ್ಞಾನಸ್ವಭಾವದಲ್ಲಿಯೇ ಆತ್ಮಬುದ್ಧಿ ಮಾಡುತ್ತಾನೆ, ಅವನು ಸ್ವಪ್ನದಲ್ಲಿ ಕೂಡ ಪರ್ಯಾಯದೊಳಗೆ ಆತ್ಮ ಬುದ್ಧಿಯನ್ನೆಂದೂ ಮಾಡುವುದಿಲ್ಲ.

ಎಲೈ ಆತ್ಮನೇ ! ನೀನು ಭಗವಂತರ ಪರಮಾಗಮದ ಆಶ್ರಯ ಗ್ರಹಣ ಮಾಡಿ ಜ್ಞಾನ ದೃಷ್ಟಿಯಿಂದ ಅವಲೋಕನ ಮಾಡು. ಎಂಟು ಪ್ರಕಾರದ ಸ್ಪರ್ಶ, ಐದು ಪ್ರಕಾರದ ರಸ, ಎರಡು ಪ್ರಕಾರದ ಗಂಧ, ಐದು ಪ್ರಕಾರದ ವರ್ಣ - ಇವು ನಿನ್ನ ರೂಪವಲ್ಲ, ಇವು ಪುದ್ಗಲದ ರೂಪವಿವೆ. ಕ್ರೋಧ, ಮಾನ, ಮಾಯೆ, ಲೋಭಗಳು ನಿನ್ನ ರೂಪವಲ್ಲ, ಜ್ಞಾನದೃಷ್ಟಿಯಿಂದ ನೋಡಿದ ಮೇಲೆ ಇವು ಕರ್ಮದ ಉದಯಜನ್ಯ ವಿಕಾರಗಳಾಗಿ ಕಂಡು ಬರುತ್ತವೆ. ಹರ್ಷ, ವಿಷಾದ, ಮದ, ಮೋಹ, ಶೋಕ, ಭಯ, ಗ್ಲಾನಿ, ಕಾಮ ಮೊದಲಾದವು ಕರ್ಮಜನ್ಯ ವಿಕಾರಗಳಿವೆ, ಅವು ನಿನ್ನ ಸ್ವರೂಪದಿಂದ ಭಿನ್ನವಿವೆ. ನರಕ, ತಿರ್ಯಂಚ, ಮನುಷ್ಯ, ದೇವ ಈ ನಾಲ್ಕು ಗತಿಗಳು ಆತ್ಮನ ರೂಪಗಳಲ್ಲ, ಕರ್ಮದ ಉದಯಜನಿತವಿವೆ, ವಿನಾಶಶೀಲವಿವೆ. ದೇವ, ಮನುಷ್ಯ ಮೊದಲಾದವು ನಿನ್ನ ರೂಪಗಳಲ್ಲ.

ನಾನು ಗೌರನಿದ್ದೇನೆ, ನಾನು ಶ್ಯಾಮನಿದ್ದೇನೆ, ನಾನು ದೊರೆಯಿದ್ದೇನೆ, ನಾನು ದರಿದ್ರನಿದ್ದೇನೆ, ನಾನು ಬಲಶಾಲಿಯಿದ್ದೇನೆ, ನಾನು ನಿರ್ಬಲನಿದ್ದೇನೆ, ನಾನು ಸ್ವಾಮಿಯಿದ್ದೇನೆ, ನಾನು ಸೇವಕನಿದ್ದೇನೆ, ನಾನು ರೂಪವಂತನಿದ್ದೇನೆ, ನಾನು ಕುರೂಪನಿದ್ದೇನೆ, ನಾನು ಪುಣ್ಯವಂತನಿದ್ದೇನೆ, ನಾನು ಪಾಪಿಯಿದ್ದೇನೆ, ನಾನು ಧನವಂತನಿದ್ದೇನೆ, ನಾನು ನಿರ್ಧನನಿದ್ದೇನೆ, ನಾನು ಬ್ರಾಹ್ಮಣನಿದ್ದೇನೆ, ನಾನು ಕ್ಷತ್ರಿಯನಿದ್ದೇನೆ, ನಾನು ವೈಶ್ಯನಿದ್ದೇನೆ, ನಾನು ಶೂದ್ರನಿದ್ದೇನೆ, ನಾನು ಸ್ತ್ರೀಯಿದ್ದೇನೆ, ನಾನು ಪುರುಷನಿದ್ದೇನೆ, ನಾನು ನಪುಂಸಕನಿದ್ದೇನೆ, ನಾನು ದಪ್ಪನಿದ್ದೇನೆ, ನಾನು ಬಡಕಲು ಇದ್ದೇನೆ, ನಾನು ನೀಚ ಜಾತಿಯವನಿದ್ದೇನೆ, ನಾನು ಉಚ್ಚಜಾತಿಯವನಿದ್ದೇನೆ, ನಾನು ಕುಲವಂತನಿದ್ದೇನೆ, ನಾನು ಕುಲಹೀನನಿದ್ದೇನೆ, ನಾನು ಪಂಡಿತನಿದ್ದೇನೆ, ನಾನು ಮೂರ್ಖನಿದ್ದೇನೆ, ನಾನು ದಾನಿಯಿದ್ದೇನೆ, ನಾನು ಯಾಚಕನಿದ್ದೇನೆ ನಾನು ಗುರು ಇದ್ದೇನೆ, ನಾನು ಶಿಷ್ಯನಿದ್ದೇನೆ, ನಾನು ಇಂದ್ರಿಯನಿಲ್ಲ, ನಾನು ದೇಹನಿಲ್ಲ, ನಾನು ಮನಸ್ಸಿಲ್ಲ, ಇವೆಲ್ಲವು ಕರ್ಮದ ಉದಯದಿಂದ ಪುದ್ಗಲದ ವಿಕಾರಗಳಿವೆ. ನನ್ನ ಸ್ವರೂಪವಂತೂ **ಜ್ಞಾತಾ-ದೃಷ್ಟಾ** ಇದೆ. ಈ ರೂಪು ಆತ್ಮನದಿಲ್ಲ, ಪುದ್ಗಲದ್ದಿದೆ. **ಮುನಿತನ, ಕ್ಷುಲ್ಲಕತನಗಳು ಪುದ್ಗಲದ ವೇಷಗಳಿವೆ.** ಈ ಲೋಕ ನಮ್ಮದಿಲ್ಲ, ಈ ದೇಶ, ಈ ಗ್ರಾಮ, ಈ ನಗರಗಳೆಲ್ಲವು ಪರದ್ರವ್ಯವಿವೆ. ಕರ್ಮವು ಇಲ್ಲಿ ನನ್ನನ್ನು ಉತ್ಪನ್ನ ಮಾಡಿಸಿದೆ. ನಾನು ಯಾವ ಕ್ಷೇತ್ರವನ್ನು ನನ್ನದೆಂದು ಮನ್ನಿಸಲಿ, ನನ್ನತನದ ಸಂಕಲ್ಪ ಮಾಡಲಿ ? ಸಮ್ಯಗ್ದೃಷ್ಟಿಗೆ ಹೀಗೆ ಗಾಢತರವಾದ ವಿಚಾರವಿರುತ್ತದೆ.

**ಮಿಥ್ಯಾದೃಷ್ಟಿಯ ವಿಚಾರಧಾರೆ :** ಮಿಥ್ಯಾದೃಷ್ಟಿಯು ಪರಕೃತ ಪರ್ಯಾಯ (ಶರೀರ) ದಲ್ಲಿ ತನ್ನತನವನ್ನು ಮನ್ನಿಸುತ್ತಾನೆ. ಮಿಥ್ಯಾದೃಷ್ಟಿಯ ತನ್ನತನವು ಜಾತಿಯಲ್ಲಿ, ಕುಲದಲ್ಲಿ, ದೇಹದಲ್ಲಿ, ಧನದಲ್ಲಿ, ರಾಜ್ಯದಲ್ಲಿ, ಐಶ್ವರ್ಯದಲ್ಲಿ, ಮಹಲದಲ್ಲಿ, ಮನೆಯಲ್ಲಿ, ಕುಟುಂಬದಲ್ಲಿ ಇದೆ. ಇವುಗಳ ಜತೆಯಲ್ಲೇ ನಮ್ಮದು ಕಮ್ಮಿಯಾಯಿತು. ನಮ್ಮದು ವೃದ್ಧಿಸಿತು, ನಮ್ಮ ಸರ್ವಸ್ವವು ಸಮಾಪ್ತವಾಯಿತು, ನಾನು ನೀಚನಾದೆನು, ನಾನು ಉಚ್ಚನಾದೆನು, ನಾನು ಸತ್ತೆನು, ನಾನು ಬದುಕಿದೆನು, ನನ್ನ ತಿರಸ್ಕಾರವಾಯಿತು, ನನದೆಲ್ಲವೂ ಹೊರಟು ಹೋಯಿತು ಇತ್ಯಾದಿ ಪರವಸ್ತುವಿನಲ್ಲಿ ತನ್ನತನದ ಸಂಕಲ್ಪ ಮಾಡಿ, ಮಹಾ ಆರ್ತಧ್ಯಾನ ರೌದ್ರಧ್ಯಾನ ಮಾಡಿ ದುರ್ಗತಿಗೆ ಪ್ರಾಪ್ತನಾಗಿ ಸಂಸಾರ ಪರಿಭ್ರಮಣವನ್ನೇ ಮಾಡುತ್ತಾನೆ.

ಮಿಥ್ಯಾದೃಷ್ಟಿ ಜೀವನು ಜಿನಧರ್ಮದ ಸ್ವಲ್ಪ ಅಧಿಕಾರ ಪಡೆದು, ಸ್ವಲ್ಪ ಜ್ಞಾನ ಪ್ರಾಪ್ತಿ ಮಾಡಿಕೊಂಡು ತನ್ನ ಹೊಸ ಹೊಸ ಪರಿಣಾಮಗಳಿಂದ ಕಾಲ್ಪನಿಕ ಯುಕ್ತಿಗಳನ್ನು ರಚಿಸಿ, ಜನರಲ್ಲಿ ಭ್ರಾಂತಿಯನ್ನುತ್ಪನ್ನ ಮಾಡಿ, ನಾಲ್ಕು ಜನರಲ್ಲಿ ತನ್ನನ್ನು ಮಹಾಜ್ಞಾನಿಯೆಂದು ತೋರಿಸಿಕೊಂಡು ಮಿಥ್ಯಾಭಿಮಾನ ಮಾಡಿ ಆಗಮವಿರುದ್ಧವಾಗಿ ಅನೇಕ ಕಥನ ಮಾಡುತ್ತಾನೆ. ಕೃತಘ್ನನಾಗಿ ಜೈನ ಶಾಸ್ತ್ರಗಳ ನಿಂದೆ ಮಾಡುತ್ತಾನೆ, ವಿಶಿಷ್ಟ ಜ್ಞಾನಿಗಳದ್ದೂ-ಅಧಿಕ ಜ್ಞಾನಿಗಳದ್ದೂ ನಿಂದೆ ಮಾಡುತ್ತಾನೆ. ಅಸತ್ಯ ಅಭಿಪ್ರಾಯದೊಡನೆ ನಾಲ್ಕಾರು ಜನರಲ್ಲಿ ಮನ್ನಣೆ ಪಡೆಯುವ ಸಲುವಾಗಿ ಪಕ್ಷಪಾತವನ್ನು ಗ್ರಹಣ ಮಾಡಿ. ಯಥಾರ್ಥ ನಿರ್ಣಯ ಮಾಡಿದಲ್ಲದೆ ಹಟಗ್ರಾಹಿಯಾಗಿ ತನ್ನ ಕಲ್ಪನೆಯಿಂದ ನಿರ್ಮಿಸಿದ ಏಕಾಂತ, ಭಗವಂತರ ಸ್ಯಾದ್ವಾದರೂಪ ವಾಣಿಗೆ ವಿರುದ್ಧವಾಗಿ ಕಲಹ-ಪರನಿಂದೆ- ವಿಸಂವಾದವನ್ನೇ ಧರ್ಮವೆಂದು ಮನ್ನಿಸುತ್ತಿರುತ್ತಾನೆ.

ಅದೆಷ್ಟೋ ಮಿಥ್ಯಾದೃಷ್ಟಿಗಳು ಸ್ವಲ್ಪ ಬಾಹ್ಯತ್ಯಾಗ ಮಾತ್ರ ಮಾಡಿ, ಸ್ನಾನ ಮಾಡಿ ಭೋಜನ ಮಾಡಿ, ಅನ್ಯದೇವ ಮೊದಲಾದವರ ವಂದನೆಯ ತ್ಯಾಗ ಮಾಡಿ, ತಮ್ಮನ್ನು ಕೃತಕೃತ್ಯರೆಂದು ಮನ್ನಿಸಿಕೊಳ್ಳುತ್ತ ಸಂಸಾರೀ ಜೀವರುಗಳ ನಿಂದೆ ಮಾಡಿ ತಮ್ಮನ್ನು ಪ್ರಶಂಸಾಯೋಗ್ಯರೆಂದು ಮನ್ನಿಸುತ್ತಾರೆ. ಅನ್ಯಾಯದಿಂದ ಅಜೀವಿಕೆ ಮಾಡುತ್ತ ಹಿಂಸೆ ಮೊದಲಾದವುಗಳ ಆರಂಭದಲ್ಲಿ ನಿಪುಣರಾಗುತ್ತ ಇತರ ಧರ್ಮಾತ್ಮರುಗಳ ದೋಷ ಹುಡುಕುತ್ತ ತಿರುಗುತ್ತಾರೆ. ನಿರ್ದೋಷ ಜನರ ದೋಷ ಪ್ರಸಿದ್ಧ ಮಾಡಿ ಮದದಲ್ಲಿ ತಪ್ತರಾಗಿ ತಿರುಗುತ್ತಾರೆ. ತಮ್ಮನ್ನು ಉಚ್ಚರೆಂದು ಮನ್ನಿಸುತ್ತಾರೆ, ಇತರರನ್ನು ಅಜ್ಞಾನಿ ಹಾಗೂ ಭ್ರಷ್ಟರೆಂದು ಮನ್ನಿಸುತ್ತಾರೆ. **ಪಾಪಿಗಳು ತಮ್ಮ ಪ್ರಶಂಸೆ ಮಾಡಿಸಿಕೊಂಡು ಉಬ್ಬಿ ತಿರುಗುತ್ತಾರೆ.** ತಮ್ಮ ಸ್ವರೂಪದ ಶುದ್ಧತೆಯನ್ನು ನೋಡಿಕೊಳ್ಳದೆ ಅನೇಕರ ನಿಂದೆ ಚೇಷ್ಟೆಗಳನ್ನು ಮಾಡುತ್ತಾರೆ, **ಸರಳ ಸ್ವಭಾವದ ಜನರಿಗೆ ಮಿಥ್ಯಾ ಉಪದೇಶವಿತ್ತು ಏಕಾಂತದ ದುರಾಗ್ರಹವನ್ನು ಗ್ರಹಣ ಮಾಡಿಸುತ್ತಾರೆ.**

ಕುದೇವ - ಕುಗುರುಗಳಿಗೆ ನಮಸ್ಕಾರ ಮಾಡುವುದರ, ಅನ್ಯದೇವಗಳ ನಿಂದೆ ಮಾಡಿ ಸಭೆಯಲ್ಲಿ ಕುಳಿತುಕೊಂಡು ಮಿಥ್ಯಾ ವೇಷಧಾರಿಗಳ ನಿಂದೆ ಮಾಡಿ, ತಮ್ಮನ್ನೇ ಸಮ್ಯಗ್ದೃಷ್ಟಿಯೆಂದು ಮನ್ನಿಸುತ್ತಾರೆ. ಜನರು ತಮ್ಮನ್ನು ದೃಢ ಶ್ರದ್ಧೆಯುಳ್ಳ ಧರ್ಮಾತ್ಮರೆಂದು ಮನ್ನಿಸುವರು, ಹೀಗೆ ಅನಂತಾನುಬಂಧೀ ಮಾನದ ಉದಯದಿಂದ ಇತರರ ನಿಂದೆ ಮಾಡುವುದರಿಂದಲೇ ತಮ್ಮನ್ನು ಉಚ್ಚರೆಂದು ತಿಳಿಯುತ್ತಾರೆ ಮತ್ತು ಜಗತ್ತನ್ನು ಅಧರ್ಮಿಯೆಂದು ಮನ್ನಿಸುತ್ತಾರೆ.

**ಹಿತೋಪದೇಶ :** ಕುದೇವ-ಕುಗುರುಗಳಿಗೆ ನಮಸ್ಕಾರವನ್ನಂತೂ ಸಮಸ್ತ ತಿರ್ಯಂಚಗಳೂ ಮಾಡುವುದಿಲ್ಲ, ನಾರಕಿಗಳೂ ಮಾಡುವುದಿಲ್ಲ, ಭೋಗಭೂಮಿ ಮತ್ತು ಕುಭೋಗಭೂಮಿಯ ಜೀವರುಗಳೂ ಮಾಡುವುದಿಲ್ಲ, ಹಾಗೂ ಸಮಸ್ತ ದೇವತೆಗಳೂ ಮಾಡುವುದಿಲ್ಲ, ಒಂದು ವೇಳೆ ಅವರಿಗೆ ನಮಸ್ಕಾರ ಪೂಜೆ ಮಾಡದಿರುವುದರಿಂದಲೇ ಸಮ್ಯಗ್ದೃಷ್ಟಿಗಳಾಗಿ ಹೋಗುತ್ತಿದ್ದರೆ ಸಮಸ್ತ ನಾರಕೀ, ಮನುಷ್ಯ, ತಿರ್ಯಂಚ ಮೊದಲಾಗಿ ಎಲ್ಲರೂ ಸಮ್ಯಗ್ದೃಷ್ಟಿಯಾಗಿ ಹೋಗಬೇಕು, ಆದರೆ ಹಾಗೆ ಇಲ್ಲ, ಜಗತ್ತಿನ ಸಮಸ್ತ ಮಿಥ್ಯಾದೃಷ್ಟಿ ಮನುಷ್ಯ, ದೇವ ಮೊದಲಾದವರ ನಿಂದೆ ಮಾಡುವುದರಿಂದಲೇ ಸಮ್ಯಕ್ತ್ವವಾಗುವುದಿಲ್ಲ, **ಜಗತ್ತಿನ ನಿಂದೆ ಮಾಡುವಂಥ ಮತ್ತು ಪಾಪಿಗಳೊಡನೆ ವೈರ ಮಾಡುವಂಥವನಂತೂ ಕುಗತಿಗೇನೆ ಪಾತ್ರನಾಗುವನು.** ಮಿಥ್ಯಾತ್ವವಂತೂ ಜೀವಗಳಿಗೆ ಅನಾದಿಯಿಂದ ಇದೆ. ಸಮ್ಯಗ್ದೃಷ್ಟಿಗಳಂತೂ ಇವರ ಮೇಲೆ ಕೂಡ ದಯೆಯನ್ನೇ ಮಾಡುತ್ತಾರೆ, ಮತ್ತು ಸಮಸ್ತ ಜೀವರುಗಳ ಕುರಿತು ಸಾಮ್ಯಭಾವವನ್ನೇ ಇಡುತ್ತಾರೆ.

**ಸಮ್ಯಗ್ದರ್ಶನವಂತೂ ಸ್ವ-ಪರಗಳ ಸತ್ಯಶ್ರದ್ಧೆ ಮಾಡುವುದರಿಂದಲೇ ಆಗುವುದು** ಮತ್ತು ಆ ಸತ್ಯಶ್ರದ್ಧೆ-ಜ್ಞಾನಗಳಂತೂ ವಿನಯದೊಡನೆ ಸ್ಯಾದ್ವಾದರೂಪ ಪರಮಾಗಮದ ಸೇವನೆಯಿಂದಲೇ ಆಗುವುದು.

ಈ ಪ್ರಕಾರ ಸ್ವಾಮಿ ಸಮಂತಭದ್ರಾಚಾರ್ಯದೇವವಿರಚಿತ ರತ್ನಕರಂಡ ಶ್ರಾವಕಾಚಾರದ
ಪಂ. ಸದಾಸುಖಜಿಯವರು ಬರೆದ ಢೂಂಢಾರೀಭಾಷಾ ಟೀಕೆಯಲ್ಲಿ
ಮೊದಲನೆಯ ಸಮ್ಯಗ್ದರ್ಶನ ಅಧಿಕಾರವು ಸಮಾಪ್ತವಾಯಿತು.

೨

# ಸಮ್ಯಗ್ಜ್ಞಾನ ಅಧಿಕಾರ

ಈಗ ಸಮ್ಯಗ್ಜ್ಞಾನರೂಪದ ಧರ್ಮವನ್ನು ಪ್ರಕಟಪಡಿಸುವಂಥ ಸೂತ್ರ ಹೇಳುತ್ತಾರೆ, -

**ಅನ್ಯೂನಮನತಿರಿಕ್ತಂ ಯಥಾತಥ್ಯಂ ವಿನಾ ಚ ವಿಪರೀತಾತ್ ।**
**ನಿಸ್ಸಂದೇಹಂ ವೇದ ಯದಾಹುಸ್ತಜ್ ಜ್ಞಾನಮಾಗಮಿನಃ ॥೪೨॥**

**ಅರ್ಥ :-** ಯಾವ ಜ್ಞಾನವು ವಸ್ತುವಿನ ಸ್ವರೂಪವನ್ನು **ಪರಿಪೂರ್ಣ**ವಾಗಿ ತಿಳಿಯುತ್ತದೆ. **ಕಡಿಮೆ**ಯಾಗಿ ತಿಳಿಯುವುದಿಲ್ಲ, **ಅಧಿಕ**ವಾಗಿ ತಿಳಿಯುವುದಿಲ್ಲ, ವಸ್ತುವಿನ **ಯಥಾರ್ಥ** ಸತ್ಯ ಸ್ವರೂಪವು ಹೇಗಿದೆಯೋ ಹಾಗೆಯೇ ತಿಳಿಯುತ್ತದೆ, **ವಿಪರೀತತೆಯಿಂದ ರಹಿತ**ವಾಗಿ ತಿಳಿಯುತ್ತದೆ. ಸಂಶಯದಿಂದ ರಹಿತವಾಗಿ ತಿಳಿಯುತ್ತದೆ ಆ ಜ್ಞಾನವನ್ನು ಆಗಮಗಳ ತಿಳಿವಳಿಕೆಯಿರುವಂಥ ಶ್ರೀ ಗಣಧರದೇವ ಹಾಗೂ ಶ್ರುತಕೇವಲಿಗಳು ಜ್ಞಾನವೆಂದು ಹೇಳುತ್ತಾರೆ.

**ಭಾವಾರ್ಥ :-** ಇಲ್ಲಿ ಭಗವಾನ ಗಣಧರದೇವರು ಸಮ್ಯಗ್ಜ್ಞಾನದ ಸ್ವರೂಪವನ್ನು ತಿಳಿಸಿದ್ದಾರೆ. ಯಾವ ಜ್ಞಾನವು ವಸ್ತುವಿನ ಸ್ವರೂಪವನ್ನು ಕಡಿಮೆಯಾಗಿ ತಿಳಿಯುತ್ತದೆ. ಅದು ಮಿಥ್ಯಾಜ್ಞಾನವಿದೆ. ಹೇಗೆಂದರೆ ಆತ್ಮನ ಸ್ವಭಾವವಂತೂ ಅನಂತ ಜ್ಞಾನಸ್ವರೂಪ-ಕ್ಷಾಯಿಕ ಜ್ಞಾನಸ್ವರೂಪವಿದ್ದರೂ ಕೂಡ ಯಾವ ಜ್ಞಾನವು ಆತ್ಮನನ್ನು ಇಂದ್ರಿಯ ಜನಿತವಾದ ಮತಿಜ್ಞಾನ ಮಾತ್ರವೆಂದೇ ತಿಳಿಯುತ್ತಿದ್ದರೆ ಆ ಜ್ಞಾನವು ನ್ಯೂನಸ್ವರೂಪವಾಗಿ ತಿಳಿಯುವುದರಿಂದ ಅದು ಮಿಥ್ಯಾಜ್ಞಾನವೆಂದು ಕರೆಸಿಕೊಳ್ಳುತ್ತದೆ.

ಯಾವ ಜ್ಞಾನವು ವಸ್ತುವಿನ ಸ್ವರೂಪವನ್ನು ಅಧಿಕವಾಗಿ ತಿಳಿಯುತ್ತದೆ ಆ ಜ್ಞಾನವು ಕೂಡ ಮಿಥ್ಯಾಜ್ಞಾನವಿದೆ. ಹೇಗೆಂದರೆ ಆತ್ಮನ ಸ್ವಭಾವವಂತೂ ಜ್ಞಾನ, ದರ್ಶನ, ಸುಖ, ಸತ್ತಾ, ಅಮೂರ್ತಿಕವಿದೆ, ಅದನ್ನು ಜ್ಞಾನ, ದರ್ಶನ, ಸುಖ, ಸತ್ತಾ, ಅಮೂರ್ತಿಕವಾಗಿಯೂ ತಿಳಿಯುವುದು ಮತ್ತು ಪುದ್ಗಲದ ಗುಣಗಳಾದ ರೂಪ, ರಸ, ಗಂಧ, ಸ್ಪರ್ಶ, ಶಬ್ದ, ಮೂರ್ತಿಕವಾಗಿಯೂ ತಿಳಿಯುವುದು. ಈ ಜ್ಞಾನವು ಅಧಿಕವಾಗಿ ತಿಳಿಯುವುದರಿಂದ ಅದು ಮಿಥ್ಯಾಜ್ಞಾನವೆಂದು ಕರೆಸಿಕೊಳ್ಳುತ್ತದೆ.

ಬಿಳುಪು ಮತ್ತು ಹೊಳೆಯುತ್ತಿರುವ ಸಿಂಪನ್ನು ನೋಡಿ ಅದನ್ನು ಬೆಳ್ಳಿಯೆಂದು ತಿಳಿಯುವುದು ಅದು **ವಿಪರೀತ ಜ್ಞಾನ**ವಿರುವುದರಿಂದ ಮಿಥ್ಯಾಜ್ಞಾನವಿದೆ.

ಇದು ಸಿಂಪು ಇದೆಯೋ ಅಥವಾ ಬೆಳ್ಳಿಯಿದೆಯೋ ?- ಎಂದು ಎರಡರಲ್ಲಿ **ಸಂಶಯರೂಪ**ದಿಂದ ಒಂದರ ನಿಶ್ಚಯದಿಂದ ರಹಿತವಾಗಿ ತಿಳಿಯುವುದು ಅದು ಸಂಶಯಜ್ಞಾನವಿರುವುದರಿಂದ ಮಿಥ್ಯಾಜ್ಞಾನವಿದೆ.

**ಯಾವ ವಸ್ತುವಿನ ಸ್ವರೂಪವು ಹೇಗಿದೆ ಅದನ್ನು ಹಾಗೇ ತಿಳಿಯುವುದು ಅದು ಸಮ್ಯಗ್ಜ್ಞಾನವಿದೆ.** ಹೇಗೆಂದರೆ ಹದಿನಾರನ್ನು ಐದರಿಂದ ಗುಣಿಸಿದರೆ ಎಂಭತ್ತು ಆಗುತ್ತದೆ. ಅದನ್ನು ಎಪ್ಪತ್ತೆಂಟೆಂದು ತಿಳಿದರೆ ಅದು ಕಡಿಮೆ ತಿಳಿಯುವುದಾಯಿತು. ಎಂಭತ್ತೆರಡೆಂದು ತಿಳಿದರೆ ಹೆಚ್ಚು ತಿಳಿಯುವುದಾಯಿತು, ಹದಿನಾರು ಅಥವಾ ಐದೆಂದು ತಿಳಿದರೆ ಅದು ವಿಪರೀತ ತಿಳಿಯುವುದಾಯಿತು, ಮತ್ತು ಹದಿನಾರನ್ನು ಐದರಿಂದ ಗುಣಿಸಿದ ಮೇಲೆ ಎಂಭತ್ತು ಆಗುತ್ತದೆಯೋ ಅಥವಾ ಎಪ್ಪತ್ತೆಂಟು ಆಗುತ್ತದೆಯೆಂದು ಸಂದೇಹರೂಪವಾಗಿ ತಿಳಿಯುವುದು ಸಂಶಯಜ್ಞಾನವಿದೆ.

**ಈ ಪ್ರಕಾರ ಕಡಿಮೆ ತಿಳಿಯುವುದು, ಹೆಚ್ಚು ತಿಳಿಯುವುದು, ವಿಪರೀತ ತಿಳಿಯುವುದು, ಸಂಶಯರೂಪ ತಿಳಿಯುವುದು ಈ ನಾಲ್ಕೂ ಪ್ರಕಾರ ತಿಳಿಯುವುದು ಅದು ಮಿಥ್ಯಾಜ್ಞಾನವಿದೆ.** ಯಾವ ಜ್ಞಾನವು ವಸ್ತುವಿನ ಸ್ವರೂಪವನ್ನು ಕಡಿಮೆ ತಿಳಿಯದು, ಹೆಚ್ಚುತಿಳಿಯದು, ವಿಪರೀತ ತಿಳಿಯದು, ಸಂಶಯರೂಪವಾಗಿ ತಿಳಿಯದು, ಹೇಗೆ ವಸ್ತುವಿನ ಸ್ವರೂಪವಿದೆ ಹಾಗೆ ಸಂಶಯರಹಿತವಾಗಿ ತಿಳಿಯುವುದು ಅದನ್ನು ಸಮ್ಯಗ್ಜ್ಞಾನವೆಂದು ಹೇಳುತ್ತಾರೆ.

ಈಗ ಸಮ್ಯಗ್ಜ್ಞಾನವು ಪ್ರಥಮಾನುಯೋಗವನ್ನು ತಿಳಿಯುತ್ತದೆಂದು ಸೂತ್ರದ ಮೂಲಕ ಹೇಳುತ್ತಾರೆ,-

**ಪ್ರಥಮಾನುಯೋಗಮರ್ಥಾಖ್ಯಾನಂ ಚರಿತಂ ಪುರಾಣಮಪಿ ಪುಣ್ಯಮ್ ।**
**ಬೋಧಿಸಮಾಧಿವಿಧಾನಂ ಬೋಧತಿ ಬೋಧಃ ಸಮೀಚೀನಃ ॥೪೩॥**

**ಅರ್ಥ :-** ಸಮ್ಯಗ್ಜ್ಞಾನವು ಪ್ರಥಮಾನುಯೋಗವನ್ನು ತಿಳಿಯುತ್ತದೆ. ಪ್ರಥಮಾನುಯೋಗದಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷರೂಪವಾದ ನಾಲ್ಕೂ ಪುರುಷಾರ್ಥಗಳ ಕಥನವಿದೆ ಒಬ್ಬ ಪುರುಷನ ಮುಖ್ಯತೆಯಿಂದ ಯಾವ ವರ್ಣನೆಯಿರುತ್ತದೆ ಅದನ್ನು ಚರಿತ್ರವೆಂದು ಹೇಳಲಾಗುತ್ತದೆ. ಮತ್ತು ಯಾವುದರಲ್ಲಿ ಅರವತ್ತು ಮೂರು ಶಲಾಕಾ ಪುರುಷರ ಸಂಬಂಧದಲ್ಲಿ ವರ್ಣನೆಯಿರುತ್ತದೆ ಅದನ್ನು **ಪುರಾಣ**ವೆಂದು ಹೇಳುತ್ತಾರೆ. ಅದನ್ನು ಕೂಡ ಪ್ರಥಮಾನುಯೋಗವೆಂದು ಹೇಳಲಾಗುತ್ತದೆ. ಯಾರಿಗೆ ಸಮ್ಯಗ್ದರ್ಶನಾದಿಗಳಿರಲಿಲ್ಲ ಅವರಿಗೆ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಗಳ ಪ್ರಾಪ್ತಿಯಾಗುವುದು **ಬೋಧಿ**ಯೆನಿಸಿಕೊಳ್ಳುತ್ತದೆ; ಯಾರಿಗೆ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರಗಳಿದ್ದು, ಅವುಗಳ ಪರಿಪೂರ್ಣತೆಯು **ಸಮಾಧಿ**ಯೆನಿಸಿಕೊಳ್ಳುತ್ತದೆ. ಪ್ರಥಮಾನುಯೋಗವು ರತ್ನತ್ರಯದ ಪ್ರಾಪ್ತಿ ಪರಿಪೂರ್ಣತೆಯ ನಿಧಾನವಿದೆ, ಉತ್ಪತ್ತಿಯ ಸ್ಥಾನವಿದೆ, ಪುಣ್ಯವಾಗುವ ಕಾರಣವಿದೆ. ಅದರಿಂದ **ಪುಣ್ಯ**ವಿದೆ. ಇಂಥ ಪ್ರಥಮಾನುಯೋಗವನ್ನು ಸಮ್ಯಗ್ಜ್ಞಾನವೇ ತಿಳಿಯುತ್ತದೆ.

**ಭಾವಾರ್ಥ :-** ಪ್ರಥಮಾನುಯೋಗದಲ್ಲಿ **ಧರ್ಮ** (ಪುಣ್ಯ)ದ ಕಥನ, ಆ ಧರ್ಮದ ಫಲರೂಪವೆಂದು ಹೇಳಿದ ಆ ಧನ-ಸಂಪತ್ತಿರೂಪ **ಅರ್ಥದ** ಕಥನ, ಪಂಚೇಂದ್ರಿಯಗಳ ವಿಷಯರೂಪವಾದ ಆ **ಕಾಮ**ದ ಕಥನ ಮತ್ತು ಸಂಸಾರದಿಂದ ಬಿಡುಗಡೆರೂಪವಾದ ಆ **ಮೋಕ್ಷ**ದ ಕಥನವಿರುತ್ತದೆ. ಆ ಪ್ರಥಮಾನುಯೋಗವನ್ನು ಓರ್ವ ಪುರುಷನ ಆಚರಣೆಯ ಕಥೆ ಹೇಳುವುದರಿಂದ **ಚರಿತ್ರ,** ಅರವತ್ತು ಮೂರು ಶಲಾಕಾಪುರುಷರ ವರ್ಣನೆಯಿರುವುದರಿಂದ **ಪುರಾಣ**, ವಕ್ತಾ-ಶ್ರೋತಾಗಳಿಗೆ **ಪುಣ್ಯದ** ಉತ್ಪತ್ತಿಯ ಕಾರಣವಿರುವುದರಿಂದ ಪುಣ್ಯ, ಹಾಗೂ ನಾಲ್ಕು ಆರಾಧನೆಗಳ ಪ್ರಾಪ್ತಿ ಮತ್ತು ಪೂರ್ಣತೆಯ ವರ್ಣನೆಯಿರುವುದರಿಂದ **ನಿಧಾನ**ವೆಂದು ಹೇಳಲಾಗುತ್ತದೆ. ಇಂಥ ಪ್ರಥಮಾನುಯೋಗವನ್ನು ಸಮ್ಯಗ್ಜ್ಞಾನವೇ ತಿಳಿಯುತ್ತದೆ.

ಈಗ ಕರಣಾನುಯೋಗವನ್ನು ತಿಳಿಯುವಂಥದ್ದೂ ಸಮ್ಯಗ್ಜ್ಞಾನವಿದೆಯೆಂದು ಸೂತ್ರದ ಮೂಲಕ ಹೇಳುತ್ತಾರೆ,-

**ಲೋಕಾಲೋಕವಿಭಕ್ತೇರ್ಯುಗಪರಿವೃತ್ತೇಶ್ಚತುರ್ಗತೀನಾಂ ಚ ।**
**ಆದರ್ಶಮಿವ ತಥಾಮತಿರವೈತಿ ಕರಣಾನುಯೋಗಂ ಚ ॥೪೪॥**

**ಅರ್ಥ :-** ಸಮ್ಯಗ್ಜ್ಞಾನವು ಕರಣಾನುಯೋಗವನ್ನು ತಿಳಿಯುತ್ತದೆ. ಕರಣಾನುಯೋಗವು ಲೋಕ ಹಾಗೂ ಅಲೋಕದ ವಿಭಾಗವನ್ನು, ಉತ್ಸರ್ಪಿಣಿಯ ಆರು ಕಾಲ ಹಾಗೂ ಅವಸರ್ಪಿಣಿಯ ಆರುಕಾಲಗಳ ಪರಿವರ್ತನವನ್ನು ಮತ್ತು ನಾಲ್ಕು ಗತಿಗಳ ಪರಿಭ್ರಮಣವನ್ನು ಕನ್ನಡಿಯ ಸಮಾನ ತೋರಿಸಿಕೊಡುವಂಥದ್ದಿದೆ.

**ಭಾವಾರ್ಥ :-** ಯಾವುದರಲ್ಲಿ ಆರುದ್ರವ್ಯಗಳ ಸಮೂಹರೂಪದ ಲೋಕ ಮತ್ತು ಕೇವಲ ಆಕಾಶದ್ರವ್ಯರೂಪದ ಅಲೋಕವು ತಮ್ಮ ಗುಣಪರ್ಯಾಯ ಸಹಿತ ಪ್ರತಿಬಿಂಬಿತವಾಗುತ್ತಲಿವೆ, ಆರೂ ಕಾಲಗಳ ನಿಮಿತ್ತದಿಂದ ಹೇಗೆ ಜೀವ

ಪುದ್ಗಲಗಳ ಪರ್ಯಾಯಗಳಿವೆ ಅವೆಲ್ಲವು ಪ್ರತಿಬಿಂಬಿತವಾಗಿ ಹೊಳೆಯುತ್ತಿವೆ; ಮತ್ತು ಯಾವುದರಲ್ಲಿ ನಾಲ್ಕೂ ಗತಿಗಳ ಸ್ವರೂಪವು ಪ್ರಕಟ ಹೊಳೆಯುತ್ತಿದೆ ಅದು ಕನ್ನಡಿಯ ಸಮಾನ ಕರಣಾನುಯೋಗವಿದೆ. ಅದನ್ನು ಸಮ್ಯಗ್ಜ್ಞಾನವೇ ಯಥಾವತ್ ತಿಳಿಯುತ್ತದೆ.

ಈಗ **ಚರಣಾನುಯೋಗ**ದ ಸ್ವರೂಪವನ್ನು ಸಮ್ಯಗ್ಜ್ಞಾನವು ತಿಳಿಯುತ್ತದೆಂದು ಸೂತ್ರದ ಮೂಲಕ ಹೇಳುತ್ತಾರೆ, -

**ಗೃಹಮೇಧ್ಯನಗಾರಾಣಾಂ ಚಾರಿತ್ರೋತ್ಪತ್ತಿವೃದ್ಧಿರಕ್ಷಾಂಗಮ್ ।**
**ಚರಣಾನುಯೋಗಸಮಯಂ ಸಮ್ಯಗ್ಜ್ಞಾನಂ ವಿಜಾನಾತಿ ॥೪೫॥**

**ಅರ್ಥ :-** ಮನೆಯಲ್ಲಿ ಆಸಕ್ತಿಯ ಬುದ್ಧಿಯಿರುವಂಥ ಗೃಹಸ್ಥನು ಮನೆಯಿಂದ ವಿರಕ್ತನಾಗಿ ಗೃಹತ್ಯಾಗಿಯಾದಂಥ ಅನಗಾರ ಎಂದರೆ ಯತಿಗಳ ಚಾರಿತ್ರರೂಪದ ಯಾವ ಸಮ್ಯಕ್ ಆಚರಣವಿದೆ ಅದರ ಉತ್ಪತ್ತಿ, ವೃದ್ಧಿ ಮತ್ತು ರಕ್ಷಣೆಯ ಅಂಗವಾದ ಎಂದರೆ ಕಾರಣವಾದಂಥ ಚರಣಾನುಯೋಗದ ಸಿದ್ಧಾಂತವನ್ನು ಸಮ್ಯಗ್ಜ್ಞಾನವೇ ತಿಳಿಯುತ್ತದೆ.

**ಭಾವಾರ್ಥ :-** ಮುನಿಯ ಮತ್ತು ಗೃಹಸ್ಥನ ಯಾವ ನಿರ್ದೋಷ ಆಚರಣವಿದೆ ಅದರ ಉತ್ಪತ್ತಿಯ, ಪ್ರತಿದಿನದ ವೃದ್ಧಿಯ, ಧಾರಣ ಮಾಡಿದ ಆಚರಣೆಯ ರಕ್ಷಣೆಯ ಕಾರಣವು ಚರಣಾನುಯೋಗರೂಪದ ಸಮ್ಯಗ್ಜ್ಞಾನವೇ ಇದೆ.

ಈಗ **ದ್ರವ್ಯಾನುಯೋಗ**ವನ್ನು ತಿಳಿಯುವಂಥದ್ದು ಸಮ್ಯಗ್ಜ್ಞಾನವೇ ಇದೆಯೆಂದು ಸೂತ್ರದ ಮೂಲಕ ಹೇಳುತ್ತಾರೆ, -

**ಜೀವಾಜೀವಸುತತ್ತ್ವೇ, ಪುಣ್ಯಾಪುಣ್ಯೇ ಚ ಬಂಧಮೋಕ್ಷೌಚ ।**
**ದ್ರವ್ಯಾನುಯೋಗದೀಪಃ ಶ್ರುತವಿದ್ಯಾಲೋಕಮಾತನುತೇ ॥೪೬॥**

**ಅರ್ಥ :-** ದ್ರವ್ಯಾನುಯೋಗರೂಪದ ದೀವಿಗೆಯು ಅದು ಜೀವ ಮತ್ತು ಅಜೀವ ಇವೆರಡೂ ನಿರ್ಬಾಧ ತತ್ತ್ವಗಳನ್ನು, ಪುಣ್ಯ-ಪಾಪಗಳನ್ನು ಹಾಗೂ ಬಂಧ-ಮೋಕ್ಷಗಳನ್ನು ಭಾವಶ್ರುತಜ್ಞಾನರೂಪ ಸಮ್ಯಗ್ಜ್ಞಾನ ಪ್ರಕಾಶದ ಮೂಲಕ ಇವುಗಳಸ್ವರೂಪವು ಹೇಗೆ ಇದೆ ಹಾಗೆ ಪ್ರಕಾಶಿತಗೊಳಿಸುತ್ತದೆ.

**ಭಾವಾರ್ಥ :-** ದ್ರವ್ಯಾನುಯೋಗ ದೀವಿಗೆಯು ಬಾಧೆಯಿಲ್ಲದೆ ಜೀವ ಅಜೀವದ ಸ್ವರೂಪವನ್ನು, ಪುಣ್ಯ-ಪಾಪದ ಸ್ವರೂಪವನ್ನು ಕರ್ಮಬಂಧದ ಸ್ವರೂಪವನ್ನು ಹಾಗೂ ಕರ್ಮದಿಂದ ಬಿಡುಗಡೆ ಹೊಂದುವರೂಪದ ಮೋಕ್ಷದ ಸ್ವರೂಪವನ್ನು ಯಾವ ಪ್ರಕಾರದಿಂದ ಆತ್ಮನಲ್ಲಿ ಉದ್ಯೋತವಾಗಿಹೋಗುವುದು ಆ ಪ್ರಕಾರದಿಂದ ವಿಸ್ತಾರವಾಗಿ ತೋರಿಸಿಕೊಡುತ್ತದೆ.

ಈ ಪ್ರಕಾರ ನಾಲ್ಕು ಅನುಯೋಗರೂಪ ಸಮ್ಯಕ್ ಶ್ರುತಜ್ಞಾನ ಸ್ವರೂಪದ ವರ್ಣನೆ ಮಾಡಲಾಯಿತು. ಜ್ಞಾನದ ಇಪ್ಪತ್ತು ಭೇದ, ಅಂಗಗಳ, ಪೂರ್ವಗಳ ವರ್ಣನೆ ಮಾಡುವುದರಿಂದ ಗ್ರಂಥವು ಅಧಿಕ ವಿಸ್ತಾರವಾಗುವುದರಿಂದ ಇಲ್ಲಿ ಅವುಗಳ ವರ್ಣನೆ ಮಾಡಲಿಲ್ಲ.

ಈ ಪ್ರಕಾರ ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡ ಶ್ರಾವಕಾಚಾರದ
ಪಂ. ಸದಾಸುಖಜೀಯವರ ಢೂಂಡಾರಿಭಾಷಾ ಟೀಕೆಯಲ್ಲಿ ಎರಡನೆಯ
ಸಮ್ಯಗ್ಜ್ಞಾನ ಅಧಿಕಾರವು ಸಮಾಪ್ತವಾಯಿತು.

೨

# ಅಣುವ್ರತ ಅಧಿಕಾರ

ಈಗ ಸಮ್ಯಕ್ಚಾರಿತ್ರ ನಾಮದ ಮೂರನೆಯ ಅಧಿಕಾರದ ವರ್ಣನೆ ಮಾಡುತ್ತ ಚಾರಿತ್ರಸ್ವರೂಪದ ಯಾವ ಧರ್ಮವಿದೆ ಅದನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಮೋಹತಿಮಿರಾಪಹರಣೇ ದರ್ಶನಲಾಭಾದವಾಪ್ತಸಂಜ್ಞಾನಃ।**
**ರಾಗದ್ವೇಷನಿವೃತ್ತ್ಯೈ ಚರಣಂ ಪ್ರತಿಪದ್ಯತೇ ಸಾಧುಃ ॥೪೭॥**

**ಅರ್ಥ :-** ದರ್ಶನಮೋಹರೂಪದ ಅಂಧಕಾರವು ದೂರವಾದ ಮೇಲೆ, ಸಮ್ಯಗ್ದರ್ಶನವು ಪ್ರಕಟವಾದ ಮೇಲೆ ಸಮ್ಯಗ್ಜ್ಞಾನದ ಪ್ರಾಪ್ತಿಯು ಕೂಡ ಆಗಿ ಹೋಗಿರುವಂಥ ನಿಕಟ ಭವ್ಯ ಸಾಧು-ಸತ್ಪುರುಷನು ಅವನು ರಾಗ-ದ್ವೇಷಗಳ ಪೂರ್ಣ ಅಭಾವ ಮಾಡುವ ಸಲುವಾಗಿ ಚಾರಿತ್ರದ ಅಂಗೀಕಾರ ಮಾಡುತ್ತಾನೆ.

**ಭಾವಾರ್ಥ :-** ಅನಾದಿಕಾಲದಿಂದ ದರ್ಶನಮೋಹನೀಯಕರ್ಮದ ಉದಯರೂಪ ಅಂಧಕಾರದಿಂದ ಈ ಸಂಸಾರೀ ಜೀವದ ಜ್ಞಾನನೇತ್ರಗಳು ಮುಚ್ಚಿ ಹೋಗಿರುವುದರಿಂದ ಅವನು ಸ್ವ-ಪರದ ಭೇದಜ್ಞಾನದಿಂದ ರಹಿತನಾಗಿ ನಾಲ್ಕೂ ಗತಿಗಳಲ್ಲಿ ಪರ್ಯಾಯ (ಶರೀರ)ವನ್ನೇ ಆತ್ಮನೆಂದು ತಿಳಿದುಕೊಳ್ಳುತ್ತ ಅನಂತ ಕಾಲದಿಂದ ಪರಿಭ್ರಮಣ ಮಾಡುತ್ತಲಿದ್ದಾನೆ. ಯಾವನೋ **ಓರ್ವ ಜೀವನಿಗೆ ಕರಣಲಬ್ಧ್ಯಾದಿಗಳ ಕಾರಣವು ದೊರೆತ ಮೇಲೆ ದರ್ಶನಮೋಹದ ಉಪಶಮ-ಕ್ಷಯೋಪಶಮ-ಕ್ಷಯವಾದ ಮೇಲೆ ಸಮ್ಯಗ್ದರ್ಶನವಾಗುತ್ತದೆ, ಆಗ ಮಿಥ್ಯಾತ್ವದ ಅಭಾವವಾಗುವುದರಿಂದ ಜ್ಞಾನವು ಕೂಡ ಸಮ್ಯಗ್ಜ್ಞಾನವಾಗಿ ಹೋಗುತ್ತದೆ. ಆಗ ಯಾವನೋ ಸಮ್ಯಗ್ಜ್ಞಾನಿಯಾದ ಸಜ್ಜನ ಪುರುಷನು ರಾಗ-ದ್ವೇಷಗಳ ಪೂರ್ಣ ಅಭಾವ ಮಾಡುವ ಸಲುವಾಗಿ ಚಾರಿತ್ರದ ಅಂಗೀಕಾರ ಮಾಡುತ್ತಾನೆ.**

ಈಗ ರಾಗ-ದ್ವೇಷಗಳ ಅಭಾವವಾದ ಮೇಲೆಯೇ ಹಿಂಸಾದಿಗಳ ಅಭಾವವಾಗುವ ನಿಯಮವಿದೆಯೆಂದು ಸೂತ್ರದ ಮೂಲಕ ಹೇಳುತ್ತಾರೆ, -

**ರಾಗದ್ವೇಷನಿವೃತ್ತೇರ್ಹಿಂಸಾದಿನಿವರ್ತನಾ ಕೃತಾ ಭವತಿ ।**
**ಅನಪೇಕ್ಷಿತಾರ್ಥವೃತ್ತಿಃ ಕಃ ಪುರುಷಃ ಸೇವತೇ ನೃಪತೀನ್ ॥೪೮॥**

**ಅರ್ಥ :-** ರಾಗ-ದ್ವೇಷಗಳ ಅಭಾವವಾದ ಮೇಲೆ ಹಿಂಸೆ ಮೊದಲಾದ ಐದೂ ಪಾಪಗಳ ಪೂರ್ಣನಿವೃತ್ತಿ ಎಂದರೆ ಅಭಾವವಾಗಿ ಹೋಗುತ್ತದೆ. **ಐದೂ ಪಾಪಗಳ ಅಭಾವವಾಗುವುದೇ ಚಾರಿತ್ರವಿದೆ.** ತನ್ನ ಯಾವುದಾದರೊಂದು ಪ್ರಯೋಜನದ ಸಲುವಾಗಿ ಯಾವುದೇ ಪದಾರ್ಥದ ಅಭಿಲಾಷೆಯಿರದಂಥ ಪುರುಷನು ಯಾವನೋ ದೊರೆ ಮೊದಲಾದವರ ಸೇವೆಯನ್ನೇಕೆ ಮಾಡುವನು ? ಮಾಡುವುದೇ ಇಲ್ಲ. ದೊರೆ ಮೊದಲಾದವರ ಅತ್ಯಂತ ಕಷ್ಟರೂಪದ ಸೇವೆಯನ್ನಂತೂ ಯಾವನಿಗೆ ಭೋಗಗಳ ಅಭಿಲಾಷೆಯಿದೆ, ಧನ ಹಾಗೂ ಅಭಿಮಾನ ಮೊದಲಾದವುಗಳ ಅಪೇಕ್ಷೆಯಿರುವವನೇ ಮಾಡುತ್ತಾನೆ. ಯಾವನಿಗೆ ಸ್ವಲ್ಪವೂ ಅಪೇಕ್ಷೆಯಿಲ್ಲ-ಇಚ್ಛೆಯಿಲ್ಲ ಅವನು ದೊರೆಯ ಸೇವೆಯನ್ನು ಮಾಡುವುದಿಲ್ಲ, ಅದೇ ಪ್ರಕಾರ ರಾಗ-ದ್ವೇಷಗಳ ಅಭಾವವಾಗಿ ಹೋಗಿರುವಂಥ ಪುರುಷನು ಹಿಂಸೆ ಮೊದಲಾದ ಪಂಚ ಪಾಪಗಳಲ್ಲಿ ಪ್ರವೃತ್ತಿ ಮಾಡುವುದಿಲ್ಲ.

ಚಾರಿತ್ರದ ಲಕ್ಷಣವು ರಾಗ-ದ್ವೇಷಗಳ ಅಭಾವವೆಂದು ಹೇಳಿದ್ದು ಈಗ ಅದನ್ನೇ ಸೂತ್ರದ ಮೂಲಕ ಹೇಳುತ್ತಾರೆ,-

**ಹಿಂಸಾನೃತಚೌರ್ಯೇಭ್ಯೋ ಮೈಥುನಸೇವಾಪರಿಗ್ರಹಾಭ್ಯಾಂ ಚ ।**
**ಪಾಪಪ್ರಣಾಲಿಕಾಭ್ಯೋ ವಿರತಿಃ ಸಂಜ್ಞಸ್ಯ ಚಾರಿತ್ರಮ್ ॥೪೯॥**

**ಅರ್ಥ :-** ಹಿಂಸೆ, ಅಸತ್ಯ, ಕಳವು, ಮೈಥುನಸೇವನೆ, ಪರಿಗ್ರಹ-ಇವು ಐದು ಪಾಪ ಬರುವ ಮಹಾ ಮಾರ್ಗಗಳಿವೆ ಚರಂಡಿಗಳಿವೆ, ಇವುಗಳಿಂದ ವಿರಕ್ತನಾಗಿ ಹೋಗುವುದೇ ಸಮ್ಯಗ್ಜ್ಞಾನಿಯ ಚಾರಿತ್ರವಿದೆ.

**ಭಾವಾರ್ಥ :-** ನಿಶ್ಚಯಚಾರಿತ್ರವಂತೂ ಬಾಹ್ಯ ಸಮಸ್ತ ಪ್ರವೃತ್ತಿಗಳಿಂದ ಬಿಡುಗಡೆಹೊಂದಿ ಪರಮವೀತರಾಗತೆಯ ಪ್ರಭಾವದಿಂದ ಪರಮಸಾಮ್ಯ ಭಾವಕ್ಕೆ ಪ್ರಾಪ್ತವಾಗಿ, ಯಾವ **ತಮ್ಮ ಜ್ಞಾಯಕ ಭಾವರೂಪದ ಸ್ವಭಾವದಲ್ಲಿ ಚರ್ಯೆಯಿದೆ, ಅದರ ಹೆಸರೇ ಸ್ವರೂಪಾಚರಣಚಾರಿತ್ರವಿದೆ.** ಆದಾಗ್ಯೂ ಪಂಚ-ಪಾಪಗಳಿಂದ ವಿರಕ್ತವಾಗಿ ಅಂತರ-ಬಾಹ್ಯ ಪ್ರವೃತ್ತಿಯ ಉಜ್ವಲತೆಯರೂಪದ ವ್ಯವಹಾರಚಾರಿತ್ರವಿಲ್ಲದೆ ನಿಶ್ಚಯಚಾರಿತ್ರದ ಪ್ರಾಪ್ತಿಯಾಗುವುದಿಲ್ಲ, ಆದುದರಿಂದ ಹಿಂಸೆ ಮೊದಲಾದ ಪಂಚ ಪಾಪಗಳ ತ್ಯಾಗ ಮಾಡುವುದೇ ಶ್ರೇಷ್ಠವಿದೆ. **ಪಂಚಪಾಪಗಳ ತ್ಯಾಗ ಮಾಡುವುದೇ ಚಾರಿತ್ರವಿದೆ.**

ಈಗ ಚಾರಿತ್ರದಲ್ಲಿ ಎರಡು ಭೇದಗಳಿವೆಯೆಂದು ಹೇಳುವಂಥ ಸೂತ್ರ ಹೇಳುತ್ತಾರೆ,-

**ಸಕಲಂ ವಿಕಲಂ ಚರಣಂ ತತ್ಸಕಲಂ ಸರ್ವಸಂಗವಿರತಾನಾಮ್ ।**
**ಅನಗಾರಾಣಾಂ ವಿಕಲಂ ಸಾಗಾರಾಣಾಂ ಸಸಂಗಾನಾಮ್ ॥೫೦॥**

**ಅರ್ಥ :-** ಸಮಸ್ತ ಅಂತರ-ಬಾಹ್ಯ ಪರಿಗ್ರಹದಿಂದ ವಿರಕ್ತರಾದ ಆ ಅನಗಾರ ಎಂದರೆ ಮನೆ, ಮಠ ಮೊದಲಾದ ನಿಶ್ಚಿತಸ್ಥಾನವಿಲ್ಲದೆ ವನಖಂಡಾದಿಗಳಲ್ಲಿ ಪರಮ ದಯಾಳುಗಳಾಗಿ ನಿರಾಲಂಬ ವಿಹಾರ ಮಾಡುವಂಥ **ಜ್ಞಾನೀ ಮುನೀಶ್ವರರುಗಳಿಗೆ ಯಾವ ಚಾರಿತ್ರವಾಗುತ್ತದೆ ಅದು ಸಕಲಚಾರಿತ್ರವಿದೆ.** ಯಾರು ಸ್ತ್ರೀ-ಕುಟುಂಬ-ಧನ-ಧಾನ್ಯ ಮೊದಲಾದ ಪರಿಗ್ರಹಸಹಿತ ಮನೆಯಲ್ಲಿಯೇ ನಿವಾಸಮಾಡುತ್ತಾರೆ, ಜಿನವಚನಗಳಲ್ಲಿ ಶ್ರದ್ಧೆಯುಳ್ಳವರಿದ್ದಾರೆ, ನ್ಯಾಯ ಮಾರ್ಗದ ಉಲ್ಲಂಘನೆ ಮಾಡುವುದಿಲ್ಲ, ಪಾಪಗಳಿಂದ ಭಯಭೀತರಿದ್ದಾರೆ ಅಂಥ **ಜ್ಞಾನೀ ಗೃಹಸ್ಥರುಗಳಿಗೆ ವಿಕಲ ಚಾರಿತ್ರವಿದೆ.**

**ಭಾವಾರ್ಥ :-** ಗೃಹ-ಕುಟುಂಬ ಮೊದಲಾದವುಗಳ ತ್ಯಾಗಿ, ತಮ್ಮ ಶರೀರದಲ್ಲಿ ನಿರ್ಮಮತ್ವರಿರುವಂಥ ಸಾಧುಗಳಿಗೆ ಸಕಲಚಾರಿತ್ರವಾಗುತ್ತದೆ, ಮನೆ-ಕುಟುಂಬ-ಧನಾದಿಗಳಿಂದ ಯುಕ್ತರಿರುವಂಥ ಗೃಹಸ್ಥರಿಗೆ ವಿಕಲಚಾರಿತ್ರವಾಗುತ್ತದೆ.

ಈಗ ಗೃಹಸ್ಥರ ವಿಕಲಚಾರಿತ್ರ ಹೇಳುವಂಥ ಸೂತ್ರ ಹೇಳುತ್ತಾರೆ, -

**ಗೃಹೀಣಾಂ ತ್ರೇಧಾ ತಿಷ್ಠತ್ಯಣುಗುಣಶಿಕ್ಷಾವ್ರತಾತ್ಮಕಂ ಚರಣಮ್ ।**
**ಪಂಚ ತ್ರಿ ಚತುರ್ಭೇದಂ ತ್ರಯಂ ಯಥಾಸಂಖ್ಯಮಾಖ್ಯಾತಮ್ ॥೫೧॥**

**ಅರ್ಥ :-** ಗೃಹಸ್ಥರಿಗೆ, ಅಣುವ್ರತ, ಗುಣವ್ರತ, ಶಿಕ್ಷಾವ್ರತರೂಪವಾಗಿ ಮೂರು ಮೂರು ಪ್ರಕಾರದ ಚಾರಿತ್ರವಾಗುತ್ತದೆ ಆ ಪ್ರಕಾರದ ಚಾರಿತ್ರದಲ್ಲಿ ಕ್ರಮದಿಂದ ಐದು, ಮೂರು ಮತ್ತು ನಾಲ್ಕು ಭೇದಗಳನ್ನು ಪರಮಾಗಮದಲ್ಲಿ ಹೇಳಿದ್ದಾರೆ.

**ಭಾವಾರ್ಥ :-** ಗೃಹವಾಸವನ್ನು ಬಿಟ್ಟುಕೊಡುವಲ್ಲಿ ಸಮರ್ಥರಿಲ್ಲದಂಥ ಸಮ್ಯಗ್ದೃಷ್ಟಿಗಳು ಮನೆಯಲ್ಲಿರುತ್ತಿದ್ದರೂ ಕೂಡ ಐದು ಪ್ರಕಾರದ ಅಣುವ್ರತ, ಮೂರು ಪ್ರಕಾರದ ಗುಣವ್ರತ ಮತ್ತು ನಾಲ್ಕು ಪ್ರಕಾರದ ಶಿಕ್ಷಾವ್ರತಗಳನ್ನು ಧಾರಣ ಮಾಡಿ ಚಾರಿತ್ರದ ಪಾಲನೆ ಮಾಡುತ್ತಾರೆ.

ಈಗ ಐದು ಪ್ರಕಾರದ ಅಣುವ್ರತಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಪ್ರಾಣಾತಿಪಾತವಿತಥ ವ್ಯಾಹಾರಸ್ತೇಯಕಾಮಮೂರ್ಛೇಭ್ಯಃ ।**
**ಸ್ಥೂಲೇಭ್ಯಃ ಪಾಪೇಭ್ಯೋ ವ್ಯುಪರಮಣಮಣುವ್ರತಂ ಭವತಿ ।।೫೨।।**

**ಅರ್ಥ :-** ಪ್ರಾಣಗಳ ಅತಿಪಾತ ಎಂದರೆ ವಿಯೋಗ ಮಾಡುವುದನ್ನು ಪ್ರಾಣಾತಿಪಾತ ಎಂದರೆ ಹಿಂಸೆಯೆಂದು ಹೇಳುತ್ತಾರೆ; ವಿತಥ ಎಂದರೆ **ಅಸತ್ಯ,** ವ್ಯವಹಾರ ಎಂದರೆ ವಚನ ಆಡುವುದನ್ನು ವಿತಥ ವ್ಯವಹಾರ ಎಂದರೆ ಅಸತ್ಯವಚನವೆಂದು ಹೇಳುತ್ತಾರೆ; ಸ್ತೇಯ ಎಂದರೆ **ಕಳವು,** ಕಾಮ ಎಂದರೆ **ಮೈಥುನ,** ಮೂರ್ಛೆ ಎಂದರೆ **ಪರಿಗ್ರಹ,** ಇವು ಐದು ಸ್ಥೂಲ ಪಾಪಗಳಿವೆ. ಈ ಸ್ಥೂಲ ಪಾಪಗಳಿಂದ ವಿರಕ್ತವಾಗುವುದು ಅದು ಅಣುವ್ರತವಿದೆ.

**ಭಾವಾರ್ಥ :-** ಕೊಲ್ಲುವ ಸಂಕಲ್ಪದಿಂದ ಯಾವ ತ್ರಸ ಜೀವಗಳ ಹಿಂಸೆಯ ತ್ಯಾಗವಿದೆ ಅದು ಸ್ಥೂಲ ಹಿಂಸೆಯ ತ್ಯಾಗವಿದೆ, ಯಾವ ವಚನಗಳಿಂದ ಅನ್ಯಪ್ರಾಣಿಗಳ ಘಾತವಾಗಿ ಹೋಗುವುದು, ಧರ್ಮವು ಕೆಟ್ಟು ಹೋಗುವುದು, ಅಪವಾದ-ನಿಂದೆಯಾಗಿ ಹೋಗುವುದು, ಕಲಹ, ಸಂಕ್ಲೇಶ, ಭಯ ಮೊದಲಾದವು ಪ್ರಕಟವಾಗುವಂಥ ವಚನಗಳನ್ನು ಕ್ರೋಧ, ಅಭಿಮಾನ, ಲೋಭದ ವಶವಾಗಿ ಆಡುವುದರ ತ್ಯಾಗ ಮಾಡುವುದು ಅದು ಸ್ಥೂಲ **ಅಸತ್ಯ**ದ ತ್ಯಾಗವಿದೆ. ಕೊಡದಿರುವ ಅನ್ಯರ ಧನವನ್ನು ಲೋಭದ ವಶವಾಗಿ ಮತ್ತು ಮೋಸ ಮಾಡಿ ಗ್ರಹಣ ಮಾಡುವುದರ ತ್ಯಾಗಮಾಡುವುದು ಅದು ಸ್ಥೂಲ **ಕಳವಿ**ನ ತ್ಯಾಗವಿದೆ. ತನ್ನ ವಿವಾಹಿತ ಸ್ತ್ರೀಯ ಹೊರತಾಗಿ ಉಳಿದ ಸಮಸ್ತ ಸ್ತ್ರೀಯರುಗಳಲ್ಲಿ ಕಾಮಭಾವದ ಅಭಿಲಾಷೆಯ ತ್ಯಾಗಮಾಡುವುದು ಅದು ಸ್ಥೂಲ **ಕಾಮ**ದ ತ್ಯಾಗವಿದೆ. ಹತ್ತು ಪ್ರಕಾರದ ಪರಿಗ್ರಹಗಳ ಪ್ರಮಾಣ ಮಾಡಿ ಅಧಿಕ ಪರಿಗ್ರಹದ ಗ್ರಹಣ ಮಾಡುವುದರ ತ್ಯಾಗ ಮಾಡುವುದು ಅದು ಸ್ಥೂಲ **ಪರಿಗ್ರಹ** ತ್ಯಾಗವಿದೆ. ಈ ಪ್ರಕಾರ ಪಾಪಬರುವ ದ್ವಾರಗಳು ಇವು ಐದು ಹಿಂಸೆ ಮೊದಲಾದ ಪಾಪಗಳಿವೆ ; ಅವುಗಳ ತ್ಯಾಗವೇ ಐದು ಅಣುವ್ರತಗಳಿವೆ.

ಈಗ ಅಹಿಂಸಾ ಅಣುವ್ರತದ ಸ್ವರೂಪ ಹೇಳುವಂಥ ಸೂತ್ರ ಹೇಳುತ್ತಾರೆ, -

**ಸಂಕಲ್ಪಾತ್ಕೃತಕಾರಿತ ಮನನಾದ್ಯೋಗತ್ರಯಸ್ಯ ಚರಸತ್ವಾನ್ ।**
**ನ ಹಿನಸ್ತಿ ಯತ್ತದಾಹುಃ ಸ್ಥೂಲವಧಾದ್ವಿರಮಣಂ ನಿಪುಣಾಃ ।।೫೩।।**

**ಅರ್ಥ :-** ಯಾವ ಗೃಹಸ್ಥನು ಮನ-ವಚನ-ಕಾಯದೊಡನೆ ಕೃತ-ಕಾರಿತ-ಅನುಮೋದನರೂಪದ ಸಂಕಲ್ಪದಿಂದ ಚರಪ್ರಾಣಿ-ದ್ವೀಂದ್ರಿಯ ಮೊದಲಾದ ತ್ರಸ ಜೀವಗಳ ಘಾತ ಮಾಡುವುದಿಲ್ಲ, ಅವನನ್ನು ನಿಪುಣ ಪುರುಷರು ಎಂದರೆ ಗಣಧರ ದೇವರು ಸ್ಥೂಲ ಹಿಂಸೆಯಿಂದ ವಿರಕ್ತನೆಂದು ಹೇಳುತ್ತಾರೆ.

ಯಾವ ಗೃಹಸ್ಥನು ಸಮ್ಯಗ್ದರ್ಶನ ಸಹಿತನಿದ್ದಾನೆ, ದಯಾವಂತನಿದ್ದಾನೆ, ಹಿಂಸೆಯಿಂದ ಭಯಭೀತನಿದ್ದಾನೆ, ತ್ಯಾಗ ಮಾಡುವ ಭಾವನೆಯಿದೆ-ತ್ಯಾಗದ ಸನ್ಮುಖನಿದ್ದಾನೆ, ಆದಾಗ್ಯೂ ಅವನಿಂದ ಏಕೇಂದ್ರಿಯ ಎಂದರೆ ಪೃಥ್ವೀಕಾಯ ಮೊದಲಾದ ಸ್ಥಾವರ ಜೀವಗಳ ಹಿಂಸೆಯ ತ್ಯಾಗಮಾಡುವ ಸಾಧ್ಯತೆಯಿಲ್ಲ. ತ್ರಸ ಮತ್ತು ಸ್ಥಾವರಗಳೆರಡರ ಹಿಂಸೆಯ ತ್ಯಾಗವಂತೂ ಗೃಹತ್ಯಾಗ ಮಾಡಿದ ಮುನೀಶ್ವರರಿಂದಲೇ ಆಗುವ ಸಾಧ್ಯತೆಯಿದೆ. ಗೃಹಸ್ಥನಿಗೆ ಪ್ರತ್ಯಾಖ್ಯಾನಾವರಣ ಮೊದಲಾದ ಕಷಾಯಗಳ ಉದಯದಿಂದ ಮನೆಯ ಮಮತೆಯು ಬಿಟ್ಟು ಹೋಗಿಲ್ಲ. ಆದರೂ ತ್ರಸ ಜೀವಗಳ ಸಂಕಲ್ಪೀ ಹಿಂಸೆಯ ತ್ಯಾಗದಿಂದ ಭಗವಂತರು ಅದಕ್ಕೆ ಅಹಿಂಸಾಣುವ್ರತವೆಂದು ಹೇಳಿದ್ದಾರೆ.

**ಸಂಕಲ್ಪೀ ಹಿಂಸೆಯ ತ್ಯಾಗ :-** ದಯಾವಂತ ಗೃಹಸ್ಥನು ತನ್ನ ಪರಿಣಾಮಗಳಿಂದ ಕೊಲ್ಲುವ ಭಾವರೂಪದ ಸಂಕಲ್ಪದಿಂದಂತೂ ತ್ರಸ ಜೀವಗಳ ಘಾತವನ್ನೆಂದೂ ಮಾಡುವುದಿಲ್ಲ, ಮಾಡಿಸುವುದಿಲ್ಲ, ಮನ-ವಚನ-ಕಾಯದಿಂದ ಘಾತ ಮಾಡುವುದರ ಪ್ರಶಂಸೆಯನ್ನೆಂದೂ ಮಾಡದಂಥ ಪರಿಣಾಮವಿಡುತ್ತಾನೆ. ಯಾವನೋ ದುಷ್ಟ ಜೀವನು ವೈರ

ಅಥವಾ ಈರ್ಷೆ ಮೊದಲಾದುವಿಂದ ಕೊಲ್ಲಲಪೇಕ್ಷಿಸಿದರೆ, ಆಜೀವಿಕೆ, ಧನ ಮೊದಲಾದುವನ್ನು ಕಸಿದುಕೊಳ್ಳಲಿಚ್ಛಿಸಿದರೆ ಅವನು ಅವನದೂ ಘಾತಮಾಡಲಪೇಕ್ಷಿಸುವುದಿಲ್ಲ. ಅವನಿಗೆ ಬಹಳಷ್ಟು ಧನವಿತ್ತು ಯಾವನೋ ಓರ್ವನ ಘಾತ ಮಾಡಿಸಲಪೇಕ್ಷಿಸಿದರೆ ಅವನು ಸಂಕಲ್ಪಪೂರ್ವಕ ಒಂದು ಇರುವೆಯನ್ನು ಕೂಡ ಎಂದೂ ಕೊಲ್ಲುವುದಿಲ್ಲ. **ಒಂದು ಜೀವವನ್ನು ಕೊಲ್ಲುವುದರಿಂದ ಅವನ ರೋಗ ಆಪತ್ತು ಮೊದಲಾದವು ದೂರವಾಗಿ ಹೋಗುವಂತಿದ್ದರೂ ಕೂಡ ಬದುಕುವ ಲೋಭದಿಂದ ಅವನು ತ್ರಸಜೀವಗಳ ಘಾತ ಮಾಡುವುದಿಲ್ಲ.** ಹಿಂಸೆಯಿಂದ ಅತ್ಯಂತ ಭಯ ಭೀತನಿರುತ್ತಿದ್ದರೂ ಗೃಹಕೃತ್ಯದ ಆರಂಭದಲ್ಲಿ ತ್ರಸ ಜೀವಗಳ ಘಾತವಾದಲ್ಲದೆ ಇರುವುದಿಲ್ಲ. ಇದೇ ಕಾರಣದಿಂದ ಗೃಹಸ್ಥನು ಕೊಲ್ಲುವ ಸಂಕಲ್ಪದಿಂದ ಮಾಡಲಾಗುವಂಥ ತ್ರಸ ಹಿಂಸೆಯ ತ್ಯಾಗ ಮಾಡುತ್ತಾನೆ.

**ಆರಂಭೀ ಹಿಂಸೆಯ ತ್ಯಾಗ :-** ಆರಂಭೀ ಹಿಂಸೆಯ ತ್ಯಾಗ ಮಾಡುವಲ್ಲಿ ಗೃಹಸ್ಥನು ಸಮರ್ಥನಿಲ್ಲ. ಅವನಂತೂ ಆರಂಭದಲ್ಲಿ ಯತ್ನಾಚಾರಪೂರ್ವಕ ಪ್ರವರ್ತಿಸುತ್ತ ಕೇವಲ ದಯಾಧರ್ಮವನ್ನು ಮರೆತು ಹೋಗುವುದಿಲ್ಲ. ಆರಂಭ ಮಾಡಿದಲ್ಲದೆ ಗೃಹಸ್ಥನಿಗೆ ನಿರ್ವಾಹವಾಗುವ ಸಾಧ್ಯತೆಯಿಲ್ಲ. ಅದೆಷ್ಟೋ ಪ್ರಕಾರದ ಆರಂಭವನ್ನಂತೂ ದಿನನಿತ್ಯವೂ ಮಾಡಬೇಕಾಗುತ್ತದೆ. ೧) ಒಲೆ ಉರಿಸುವುದು, ೨) ಧಾನ್ಯ ಬೀಸುವುದು, ೩) ಒರಳಲ್ಲಿ ಕುಟ್ಟುವುದು, ೪)ಪೊರಕೆಯಿಂದ ಕಸಗುಡಿಸುವುದು, ೫) ನೀರು ತುಂಬುವುದು, ೬) ಧನ ಸಂಪಾದಿಸುವುದು. ಇವು ಆರು ಪಾಪದ ಕಾರ್ಯಗಳಂತೂ ನಿತ್ಯವೂ ಆಗುತ್ತವೆ.

ಅದೆಷ್ಟೋ ಅನೇಕ ಪ್ರಕಾರದ ಅನ್ಯ ಆರಂಭಗಳನ್ನು ಇತರ ಕಾರಣಗಳಿಂದಲೂ ದಿನಾಲು ಮಾಡಬೇಕಾಗುತ್ತದೆ. ಹೇಗೆಂದರೆ ತಮ್ಮ ಮಕ್ಕಳ ಮದುವೆ ಮಾಡುವುದು, ಮನೆ ಕಟ್ಟಿಸುವುದು, ಸಾರಿಸುವುದು, ತೊಳೆಯುವುದು, ಝಾಡಿಸುವುದು, ರಾತ್ರಿಯಲ್ಲಿ ಗಮನ ಮಾಡುವುದು, ಧಾತು-ಪಾಷಾಣ-ಕಾಷ್ಠ ಮೊದಲಾದವುಗಳ ಉಪಕರಣ ಮಾಡಿಸುವುದು, ಶಯ್ಯೆ-ಆಸನ ಹಾಕುವುದು-ತೆಗೆಯುವುದು, ಕಾಲು ಹರಡುವುದು-ಮುದುಡುವದು, ಸಮಾಜದವರಿಗೆ ಊಟ ಹಾಕುವುದು, ದೀವಿಗೆ ಉರಿಸುವುದು, ಗಾಡಿ, ರಥ, ಆನೆ, ಕುದುರೆ, ಒಂಟೆ, ಎತ್ತು ಇತ್ಯಾದಿಗಳ ಮೇಲೆ ಕುಳಿತುಕೊಂಡು ಹೋಗುವುದು, **ಹಸು-ಎಮ್ಮೆಗಳನ್ನು ಸಾಕುವುದು ಇವೆಲ್ಲವು ಪಾಪದ ಕಾರ್ಯಗಳೇ ಇವೆ. ಇವುಗಳಲ್ಲಿ ತ್ರಸ ಜೀವಗಳ ಘಾತವಾಗೇ ಆಗುತ್ತದೆ.** ಜಿನಮಂದಿರ ಕಟ್ಟಿಸುವುದು, ಅದರ ಸಲುವಾಗಿ ದಾನ ಕೊಡುವುದು, ಪೂಜೆ ಮಾಡುವುದು ಇವುಗಳಲ್ಲಿ ಕೂಡ ಆರಂಭವಾಗುತ್ತದೆ.

**ತ್ರಸ ಹಿಂಸೆಯ ತ್ಯಾಗದ ರೀತಿ ತಿಳಿಸುತ್ತಾರೆ :-** ತಮ್ಮ ಪರಿಣಾಮವಂತೂ ಜೀವ ಕೊಲ್ಲುವುದಿಲ್ಲ. ಜೀವಕೊಲ್ಲುವ ಸಲುವಾಗಿ ಆರಂಭ ಮಾಡುವುದಿಲ್ಲ, ಈ ಕಾರ್ಯ ಮಾಡುವುದರಿಂದ ಕೆಲವು ಜೀವಗಳು ಸತ್ತು ಹೋದರೆ ಒಳ್ಳೆಯದೆಂಬ ರಾಗ ಭಾವವು ಇಲ್ಲ, ಅವನಂತೂ ಜೀವ ವಿರಾಧನೆಯಿಂದ ಭಯಭೀತನಾಗಿ ಗೃಹಕೃತ್ಯ ನಡೆಸುವ ಸಲುವಾಗಿ ಆರಂಭ ಮಾಡುತ್ತಾನೆ, ಜೀವ ಕೊಲ್ಲುವ ಸಲುವಾಗಿ ಇಲ್ಲ. ತನ್ನ ಪರಿಣಾಮದಲ್ಲಂತೂ ಎತ್ತುವಾಗ-ಇಡುವಾಗ, ಏಳುವಾಗ-ಕೂಡ್ರುವಾಗ, ಕೊಡುವಾಗ-ಕೊಳ್ಳುವಾಗ ಜೀವಗಳರಕ್ಷಣೆ ಮಾಡುವುದರ ಸಂಕಲ್ಪವನ್ನೇ ಮಾಡುತ್ತಿರುತ್ತಾನೆ, ಕೊಲ್ಲುವ ಸಂಕಲ್ಪವನ್ನಂತೂ ಮಾಡುವುದಿಲ್ಲ. ಅವನಿಗೆ ಪಾಪದ ಬಂಧ ಹೇಗಾಗುವುದು ? ಜೀವಗಳು ತಮ್ಮ ತಮ್ಮ ಆಯುಕರ್ಮದ ಆಧೀನವಾಗಿ ತಾವೇ ಉತ್ಪನ್ನವಾಗುತ್ತವೆ ಮತ್ತು ಸಾಯುತ್ತವೆ, ಈತನ ಕೈಯಲ್ಲಿ ಏನೂ ಇಲ್ಲ, ಇವನಂತೂ ಎಷ್ಟು ಆರಂಭ ಮಾಡುತ್ತಾನೆ ಅದೆಲ್ಲವನ್ನು ಯತ್ನಾಚಾರ ಪೂರ್ವಕ ದಯಾಭಾವರೂಪನಾಗಿ ಮಾಡುತ್ತಾನೆ. **ಭಗವಂತರ ಪರಮಾಗಮದಲ್ಲಿ ಹಿಂಸೆಯಾಗುತ್ತಿದ್ದರೂ ಕೂಡ ಯತ್ನಾಚಾರಪೂರ್ವಕನಿಗೆ ಬಂಧವಾಗುವುದಿಲ್ಲವೆಂದು ಹೇಳಿದೆ.**

ಸಂಪೂರ್ಣ ಜಗತ್ತು ಜೀವಗಳಿಂದ ತುಂಬಿದೆ. ಹಿಂಸೆ-ಅಹಿಂಸೆಯನ್ನು ತಮ್ಮ ಉಪಯೋಗವಲ್ಲದೆ ಕೇವಲ ಜೀವಗಳು ಸಾಯುವ-ಬದುಕುವ ಆಧಾರದ ಮೇಲೆ ಹೇಳಲಾಗುವುದಿಲ್ಲ. ಹಿಂಸೆ ಮತ್ತು ಅಹಿಂಸೆಯು ತಮ್ಮ ಪರಿಣಾಮಗಳ ಆಧೀನವಿದೆ. ಓರ್ವ ಮುನಿರಾಜರು ನಾಲ್ಕು ಮೊಳ ಪ್ರಮಾಣ ಮುಂದಿನ ನೆಲವನ್ನು ನೋಡುತ್ತ ಶೋಧಿಸುತ್ತ ಗಮನ ಮಾಡುತ್ತಿದ್ದು ಅವರು ಯಾವಾಗ ತಮ್ಮ ಕಾಲನ್ನು ಎತ್ತಿ ಇಡುತ್ತಿದ್ದಾರೆ ಅದೇ ಸಮಯದಲ್ಲಿ ಒಂದು ಜೀವವು ಹಾರಿ ಬಂದು

ಅವರ ಕಾಲ ಕೆಳಗೆ ಬೀಳುತ್ತದೆ ಮತ್ತು ಸತ್ತು ಹೋಗುತ್ತದೆ. ಇದರಿಂದ ಮುನಿರಾಜರಿಗೆ ಸ್ವಲ್ಪವೂ ಪಾಪಬಂಧವಿಲ್ಲವೆಂದೇ ಸಿದ್ಧಾಂತ ಗ್ರಂಥದಲ್ಲಿ ಹೇಳಿದೆ. ಏಕೆಂದರೆ ಮುನಿರಾಜರ ಚಿತ್ತದಲ್ಲಿ ಈರ್ಯಾಸಮಿತಿಯನ್ನು ಪಾಲಿಸುವ ಭಾವವಿರುವುದರಿಂದ ಅವರಿಗೆ ಪಾಪಬಂಧವಾಗುವುದಿಲ್ಲ.

ಆ ಮುನಿರಾಜರಂತೂ ಪ್ರಾಸುಕ ಆಹಾರವನ್ನು ತಿಳಿದುಕೊಂಡು ನೋಡಿ ಶೋಧಿಸಿ ಸ್ವೀಕರಿಸುತ್ತಾರೆ, ಯಾವುದೇ ಅತ್ಯಂತ ಸೂಕ್ಷ್ಮ ಜೀವವು ಹಾರಿ ಬಂದು ಹೊರಳಿ ಬಿದ್ದರೆ ಅದನ್ನು ಯಾರು ತಿಳಿಯುತ್ತಾರೆ ? ಅದನ್ನಂತೂ ಕೇವಲಜ್ಞಾನೀ ಭಗವಂತರೇ ತಿಳಿಯುತ್ತಾರೆ. ತಾವು ಸ್ವಯಂ ಪ್ರಮಾದಿಯಾಗಿ ಯತ್ನಪೂರ್ವಕ ಸರಿಯಾಗಿ ನೋಡದೆಯೇ ಭೋಜನ ಮಾಡುತ್ತಿದ್ದರೆ ದೋಷಗಳಿಂದ ಲಿಪ್ತವಾಗುತ್ತದೆ. ಇದೇ ಪ್ರಕಾರ ಶ್ರಾವಕನು ಕೂಡ ಪ್ರಮಾದಬಿಟ್ಟು ಅತ್ಯಂತ ಸಾವಧಾನತೆಯಿಂದ ಪ್ರವರ್ತನೆ ಮಾಡುತ್ತಿದ್ದರೆ ದೋಷವು ಹೇಗೆ ತಗಲುವುದು ? ಅವನಂತೂ ಒಲೆಯನ್ನು ಹಗಲಿನಲ್ಲಿ ಶೋಧಿಸಿ, ಝಾಡಿಸಿ, ಸೌದೆಯನ್ನು ಕೂಡ ಚನ್ನಾಗಿ ಅಲ್ಲಾಡಿಸಿ, ಯತ್ನಪೂರ್ವಕ ಬೆಂಕಿ ಉರಿಸುತ್ತಾನೆ. ಇದೇ ಪ್ರಕಾರ ಬೀಸುವ ಕಲ್ಲು, ಒರಳನ್ನು ಕೂಡ ಶೋಧಿಸಿ ಝಾಡಿಸಿ, ಧಾನ್ಯವನ್ನು ಶೋಧಿಸಿ ಬೀಸುವ - ಕುಟ್ಟುವ ಆರಂಭ ಮಾಡುತ್ತಾನೆ; ಹುಳುಹತ್ತಿದ ಧಾನ್ಯವನ್ನು ಉಪಯೋಗದಲ್ಲಿ ತಂದುಕೊಳ್ಳುವುದಿಲ್ಲ ಹಗಲಿನಲ್ಲಿ ನೋಡಿ ಕೋಮಲವಾದ ಹುಲ್ಲಿನ ಪೊರಕೆ ಮೊದಲಾದವುಗಳಿಂದ ಜೀವಗಳ ವಿರಾಧನೆಯ ಭಯಸಹಿತ ಕಸಗುಡಿಸುತ್ತಾನೆ, ನೀರು ಇಡುವ ಸ್ಥಾನವನ್ನು ಝಾಡಿಸುತ್ತಾನೆ, ಮತ್ತು ನೀರನ್ನು ಎರಡು ಪದರಿನ ದಪ್ಪವಾದ ಬಟ್ಟೆಯಿಂದ ಶೋಧಿಸಿ ಯತ್ನಾಚಾರಪೂರ್ವಕವಾಗಿ ವರ್ತಿಸುತ್ತಾನೆ.

**ಉದ್ಯೋಗೀ ಹಿಂಸೆಯ ತ್ಯಾಗ :-** ಶ್ರಾವಕನು ದ್ರವ್ಯದ ಸಂಪಾದನೆಯನ್ನು ಕೂಡ ತಮ್ಮ ಕುಲದ ಯೋಗ್ಯ ಸಾಮರ್ಥ್ಯ ಸಹಾಯತೆಗೆ ಅನುಸರಿಸಿ, ತಮ್ಮ ಯಶಸ್ಸು ಮತ್ತು ಧರ್ಮದ ನೀತಿಯು ಕೆಟ್ಟುಹೋಗದಂತೆ ಯತ್ನಾಚಾರ ಪೂರ್ವಕವಾಗಿ ಅಸಿ, ಮಸಿ, ಕೃಷೀ, ವಿದ್ಯೆ, ವಾಣಿಜ್ಯ, ಶಿಲ್ಪ ಈ ಆರು ಕಾರ್ಯಗಳ ಮೂಲಕ ಮಾಡುತ್ತಾನೆ, ಶ್ರಾವಕನ ವ್ರತಗಳಂತೂ ನಾಲ್ಕೂ ವರ್ಣಗಳಲ್ಲಿ ಆಗುತ್ತವೆ. **ಒಂದು ವೇಳೆ ಉಜ್ವಲ ಹಿಂಸೆಯಿಲ್ಲದ ಕಾರ್ಯದಿಂದ ತಮ್ಮ ಆಜೀವಿಕೆಯಾಗುತ್ತಿದ್ದರೆ ನಿಂದ್ಯ ಕಾರ್ಯದ ಮೂಲಕ, ಸಂಕ್ಲೇಶಭಾವದ ಮೂಲಕ, ಲೋಭಾದಿಗಳ ವಶೀಭೂತರಾಗಿ ಪಾಪರೂಪದ ಆಜೀವಿಕೆಯನ್ನು ಮಾಡಬಾರದು.** ಒಂದು ವೇಳೆ ತಮ್ಮ ಸಲುವಾಗಿ ಬೇರೆ ಉತ್ತಮ ಆಜೀವಿಕೆಯ ಉಪಾಯವು ಕಂಡು ಬಾರದೆ ಇರುತ್ತಿದ್ದರೆ ಕಡಿಮೆಮಾಡಿ ಪಾಪದಿಂದ ಭಯಭೀತರಾಗಿರುತ್ತ ನ್ಯಾಯ ಪೂರ್ವಕವಾಗಿಯೇ ಮಾಡಬೇಕು.

**ವಿರೋಧೀ ಹಿಂಸೆಯ ತ್ಯಾಗ :-** ಕ್ಷತ್ರಿಯ ಕುಲದ ಶಸ್ತ್ರಧಾರಿ ಶ್ರಾವಕನಿದ್ದರೆ ದೀನ - ಅನಾಥರ ರಕ್ಷಣೆ ಮಾಡುತ್ತ ದೀನ-ದುಃಖೀ-ನಿರ್ಬಲರ ಘಾತ ಮಾಡಬಾರದು, ಶಸ್ತ್ರರಹಿತರನ್ನು ಹೊಡೆಯಬಾರದು, ಕಾಲಿಗೆ ಬಿದ್ದವರ ಘಾತ ಮಾಡಬಾರದು, ಬೆನ್ನುತೋರಿಸಿ ಓಡಿ ಹೋಗುವಂಥವರ-ದೀನತೆಯ ವಚನಗಳನ್ನಾಡುವಂಥವರ ಘಾತವನ್ನಂತೂ ಮಾಡಲೇಬಾರದು. ಧನವನ್ನು ಲೂಟಿ ಮಾಡುವ ಸಲುವಾಗಿ ಘಾತಮಾಡಬಾರದು; ಅಭಿಮಾನದಿಂದ, ವೈರದಿಂದ ಘಾತ ಮಾಡಬಾರದು. ಯಾವನು ತಮ್ಮ ಮೇಲೆ ಘಾತ-ಆಕ್ರಮಣ ಮಾಡುತ್ತ ಬರುತ್ತಿದ್ದರೆ ಅವನನ್ನು ದೀನರನ್ನು ಹಾಗೂ ಕೊಲ್ಲಲು ಬರುತ್ತಿದ್ದರೆ ಅವರನ್ನು ಶಸ್ತ್ರದಿಂದ ತಡೆಯಬೇಕು. ಒಂದು ವೇಳೆ ಶಸ್ತ್ರದಿಂದ ಆಜೀವಿಕೆ ಮಾಡುತ್ತಿದ್ದರೆ ಕೇವಲ ಸ್ವಾಮಿ ಧರ್ಮದಿಂದ ಮತ್ತು ಅನಾಥರ ರಕ್ಷಣೆಯ ಭಾರವು ತಮ್ಮ ಮೇಲೆ ಇದ್ದರೆ ಶಸ್ತ್ರಧಾರಣ ಮಾಡಬೇಕು. ಶಸ್ತ್ರಸಂಬಂಧದ ನೌಕರಿ ಮಾಡದಿರುತ್ತಿದ್ದರೆ, ಮತ್ತು ತಮ್ಮ ಮೇಲೆ ಪ್ರಜೆಗಳ ರಕ್ಷಣೆಯ ಭಾರವೂ ಇಲ್ಲದಿದ್ದರೆ ಅಂಥವರು ವ್ಯರ್ಥವಾಗಿ ಶಸ್ತ್ರ ಧಾರಣ ಮಾಡಬಾರದು.

ಮಸಿಯಿಂದ ನ್ಯಾಯಪೂರ್ವಕವಾಗಿಯೇ ಆಜೀವಿಕೆ ಮಾಡಬೇಕಾಗುವುದು. ಜಮಾ-ಖರ್ಚು ಬರೆಯುವ ಆಜೀವಿಕೆಯಿದ್ದರೆ ಮಾಯಾಚಾರ ಮೊದಲಾದ ದೋಷಗಳಿಂದ ರಹಿತರಾಗಿ ಒಡೆಯನ ಕಾರ್ಯವನ್ನು ಯಥಾವತ್ತಾಗಿ ಸರಿಯಾದ ರೀತಿಯಿಂದ ಬರೆದು ಜೀವನ ಮಾಡಬೇಕಾಗುವುದು.

**ಕೃಷಿಯ ತ್ಯಾಗ :-** ಮಾಲೀ, ಜಾಟ ಮೊದಲಾದ ಕುಲದಲ್ಲಿ ಒಂದು ವೇಳೆ ಜೀವನೋಪಾಯವಿಲ್ಲದಿದ್ದರೆ ಕೃಷಿಯ ಮೂಲಕ ಆಜೀವಿಕೆ ಮಾಡುತ್ತಿದ್ದರೂ ದಯಾಧರ್ಮವನ್ನು ಎಂದೂ ಬಿಟ್ಟುಕೊಡಬಾರದು. ಯಾವ ಗದ್ದೆಯನ್ನು ಮೊದಲು

ಸಾಗುವಳಿ ಮಾಡುತ್ತ ಬಂದಿದೆ ಅದರದೇ ಪ್ರಮಾಣ ಮಾಡಿ ಅಧಿಕದ ತ್ಯಾಗಿಯಾಗಿ ಕೃಷಿ ಮಾಡಬೇಕು. ಅಧಿಕ ತೃಷ್ಣೆ ಮಾಡಬಾರದು. ಅದರೊಳಗಿಂದ ಕೂಡ ಬಹಳಷ್ಟು ಕಡಿಮೆ ಮಾಡುತ್ತ ತಮ್ಮ ನಿಂದೆ ಮಾಡಿಕೊಳ್ಳುತ್ತ ಒಕ್ಕಲುತನ ಮಾಡಬೇಕು. ಬಹಳಷ್ಟು ನೀರುಣಿಸುತ್ತಿದ್ದರೂ ಕೂಡ ತಾನಂತೂ ಒಂದು ಬೊಗಸೆ ನೀರನ್ನು ಕೂಡ ಶೋಧಿಸದೆ ಕುಡಿಯುವುದಿಲ್ಲ.

**ಒಬ್ಬನು ಬಂದು ಬಹಳಷ್ಟು ಧನವನ್ನು ಕೊಡುತ್ತಾನೆ ಮತ್ತು ಇಲ್ಲಿ ನೀನು ಬಹಳಷ್ಟು ಪೈರನ್ನು ಕೊಯ್ಯುತ್ತಿರುವೆ, ಆದರೆ ನಮ್ಮಲ್ಲಿ ಒಂದು ವೃಕ್ಷ ವನ್ನು ಕತ್ತರಿಸಿ ಬಂದರೆ ನಿನಗೆ ಒಂದು ಸ್ವರ್ಣಮುದ್ರೆಯನ್ನು ಕೊಡುತ್ತೇನೆಂದು ಹೇಳಿದರೂ ಅವನು ಲೋಭದ ವಶನಾಗಿ ವೃಕ್ಷವನ್ನು ಎಂದೂ ಕತ್ತರಿಸುವುದಿಲ್ಲ.** ಒಕ್ಕಲುತನದಲ್ಲಿ ಬಹಳಷ್ಟು ಜೀವಗಳು ಸಾಯುತ್ತಿದ್ದರೂ ಇಲ್ಲಿ ಇವನಿಗೆ ಜೀವಗಳನ್ನು ಕೊಲ್ಲುವ ಅಭಿಪ್ರಾಯವಿಲ್ಲ, ಕೇವಲ ಆಜೀವಿಕೆಯ ಅಭಿಪ್ರಾಯವಿದೆ. ಯಾವನೋ ಓರ್ವನು ಒಂದು ಸಹಸ್ರ ಸ್ವರ್ಣಮುದ್ರೆಕೊಟ್ಟರೂ ಕೂಡ ಲೋಭದ ವಶನಾಗಿ ತನ್ನ ಸಂಕಲ್ಪದಿಂದ ಒಂದು ಇರುವೆಯನ್ನೂ ಕೊಲ್ಲುವುದಿಲ್ಲ. **ಈ ಪ್ರಕಾರ ವ್ರತದಲ್ಲಿ ದೃಢತೆಯಿರುತ್ತದೆ. ಉತ್ತಮ ಕುಲವಂತನಂತೂ ಒಕ್ಕಲುತನವನ್ನು ಮಾಡುವುದೇ ಇಲ್ಲ.**

ವಿದ್ಯೆಯ ಮೂಲಕ ಆಜೀವಿಕೆ ಮಾಡುವಂಥ ಬ್ರಾಹ್ಮಣ ಮೊದಲಾದ ಶ್ರಾವಕರು ಮಿಥ್ಯಾತ್ವ ಭಾವದ ಪುಷ್ಟಿ ಮಾಡುವಂಥ ಮತ್ತು ಹಿಂಸೆಯ ಮುಖ್ಯತೆಯಿರುವ ರಾಗ-ದ್ವೇಷಗಳನ್ನು ವೃದ್ಧಿ ಮಾಡುವಂಥ ಶಾಸ್ತ್ರಗಳನ್ನು ಬಿಟ್ಟುಕೊಟ್ಟು (ತ್ಯಾಗ ಮಾಡಿ) ಉಜ್ವಲವಾದ ವಿದ್ಯೆಯನ್ನು ಓದಿಸುತ್ತಾರೆ. ಅದುವೇ ದಯೆಯಿದೆ.

ಶ್ರಾವಕನಂತೂ ಅಧಿಕ ಹಿಂಸೆಯ ದೂಷಿತ ವಾಣಿಜ್ಯ-ವ್ಯಾಪಾರವನ್ನು ತ್ಯಾಗಮಾಡಿ, ನ್ಯಾಯಪೂರ್ವಕ, ತೀವ್ರ ಲೋಭವನ್ನು ಬಿಟ್ಟುಕೊಟ್ಟು, ತನ್ನ ಅಂತರಂಗದಲ್ಲಿ ನಿಂದೆ ಮಾಡಿಕೊಳ್ಳುತ್ತ, ಸಂತೋಷ ಸಹಿತ, ಪ್ರಾಮಾಣಿಕ, ಸತ್ಯತೆಯೊಡನೆ ವ್ಯವಹಾರ ಮಾಡುತ್ತಾನೆ; ದಯಾಧರ್ಮವನ್ನು ಮರೆಯುವುದಿಲ್ಲ. ಸಮಸ್ತ ಜೀವಗಳನ್ನು ತನ್ನ ಸಮಾನ ತಿಳಿಯುತ್ತ ವ್ಯಾಪಾರ ಮಾಡುತ್ತಾನೆ.

ಶಿಲ್ಪಕರ್ಮ ಮಾಡುವಂಥ ಶೂದ್ರನು ಕೂಡ ಶ್ರಾವಕ ವ್ರತವನ್ನು ಗ್ರಹಣ ಮಾಡುತ್ತಾನೆ. ಅವನು ಅಧಿಕ ನಿಂದ್ಯ ಕರ್ಮಗಳನ್ನಂತೂ ಬಿಟ್ಟೇ ಕೊಡುತ್ತಾನೆ. ಬಿಟ್ಟು ಕೊಡುವಲ್ಲಿ ಸಮರ್ಥನಿಲ್ಲದಿದ್ದರೆ ಅದರಲ್ಲಿ ಅಧಿಕ ಹಿಂಸೆಯನ್ನು ದೂರ ಮಾಡಿ ದಯಾರೂಪನಾಗಿ ಪ್ರವರ್ತಿಸುತ್ತಾನೆ. ಸಂಕಲ್ಪಪೂರ್ವಕ ಯಾರನ್ನೋ ಕೊಲ್ಲುವುದೇ ಇದೆಯೆಂದು ತಿಳಿದೂ ತಿಳಿದೂ ಘಾತ ಮಾಡುವುದಿಲ್ಲ.

ಮಂದಿರ ಕಟ್ಟಿಸುವುದು, ಪೂಜೆಮಾಡುವುದು, ದಾನಕೊಡುವುದು ಮೊದಲಾದ ಕಾರ್ಯಗಳಲ್ಲಿ ನಿರಂತರ ತುಂಬ ಯತ್ನಾಚಾರದಿಂದ ಕೇವಲ ದಯಾಧರ್ಮದ ನಿಮಿತ್ತವಾಗಿಯೇ ಪ್ರವರ್ತನ ಮಾಡುತ್ತಾನೆ.

**ಹಿಂಸೆಯ ಭಾವವು ಏಕೆ ಆಗುತ್ತದೆಂ**ಬುದರ ವಿಷಯದಲ್ಲಿ ಪುರುಷಾರ್ಥಸಿದ್ಧ್ಯುಪಾಯವೆಂಬ ಹೆಸರಿನ ಗ್ರಂಥದಲ್ಲಿ ಆಚಾರ್ಯ ಅಮೃತಚಂದ್ರದೇವರು ಈ ಪ್ರಕಾರ ಹೇಳಿದ್ದಾರೆ,-

**ಯತ್ಖಲು ಕಷಾಯಯೋಗಾತ್ಪ್ರಾಣಾನಾಂ ದ್ರವ್ಯಭಾವರೂಪಾಣಾಮ್ ।**
**ವ್ಯಪರೋಪಣಸ್ಯ ಕರಣಂ ಸುನಿಶ್ಚಿತಾ ಭವತಿ ಸಾ ಹಿಂಸಾ ॥೪೩॥ ಪು.ಸಿ.**

**ಅರ್ಥ :-** ಕಷಾಯಪೂರ್ವಕ ಇಂದ್ರಿಯ, ಕಾಯ ಮೊದಲಾದ ದ್ರವ್ಯ ಪ್ರಾಣಗಳ ಹಾಗೂ ಜ್ಞಾನ-ದರ್ಶನ ಮೊದಲಾದ ಭಾವ ಪ್ರಾಣಗಳ ವಿಯೋಗ ಮಾಡುವುದರಿಂದ ನಿಶ್ಚಿತವಾಗಿಯೇ ಹಿಂಸೆಯಾಗುತ್ತದೆ.

**ಭಾವಾರ್ಥ :-** ಕಷಾಯದ ವಶವಾಗಿ ಪರರ ದ್ರವ್ಯಪ್ರಾಣಗಳ ಮತ್ತು ಭಾವಪ್ರಾಣಗಳ ವಿಯೋಗ ಮಾಡುವುದರಿಂದ ನಿಶ್ಚಿತವಾಗಿಯೇ ಹಿಂಸೆಯಾಗುತ್ತದೆ. ಕಷಾಯ ರಹಿತದ ಮೂಲಕ ಕೇವಲ ಪ್ರಾಣಿಯ

ಮರಣವಾಗುವುದರಿಂದ ಹಿಂಸೆಯಾಗುವುದಿಲ್ಲ, ಸ್ವಯಂ ಕಷಾಯವಶನಾಗಿ ಅನ್ಯ ಜೀವವನ್ನು ಕೊಲ್ಲುವ ಭಾವ ಮಾಡುವನಿಗೆ ಹಿಂಸೆಯಾಗುತ್ತದೆ. ಅವನು ಹಿಂಸಕನಿದ್ದಾನೆ.

**ಜೈನ ಧರ್ಮದ ಸಾರ** ಹಿಂಸೆ-ಅಹಿಂಸೆಯ ಸ್ವರೂಪ -

**ಅಪ್ರಾದುರ್ಭಾವಃ ಖಲು ರಾಗಾದೀನಾಂ ಭವತ್ಯಹಿಂಸೇ ತಿ ।**
**ತೇಷಾಮೇವೋತ್ಪತ್ತಿಃ ಹಿಂಸೇತಿ ಜಿನಾಗಮಸ್ಯ ಸಂಕ್ಷೇಪಃ ।।೪೪।। ಪು.ಸಿ.**

**ಅರ್ಥ ಃ-** ಆತ್ಮನ ಪರಿಣಾಮಗಳಲ್ಲಿ ರಾಗ-ದ್ವೇಷ ಮೊದಲಾದವುಗಳ ಉತ್ಪತ್ತಿಯಾಗದಿರುವುದೇ ಅಹಿಂಸೆಯಿದೆ, ಮತ್ತು ಆತ್ಮನ ಪರಿಣಾಮಗಳಲ್ಲಿ ರಾಗ-ದ್ವೇಷ ಮೊದಲಾದವುಗಳ ಉತ್ಪತ್ತಿಯಾಗಿ ಹೋಗುವುದೇ ಹಿಂಸೆಯಿದೆ. ಜಿನೇಂದ್ರ ಭಗವಂತರ ಆಗಮದ ಸಂಕ್ಷೇಪವಂತೂ ಈ ಪ್ರಕಾರವಿದೆ.

ಬಾಹ್ಯದಲ್ಲಿ ಪ್ರಾಣಿಗಳ ಹಿಂಸೆಯಾಗಲಿ ಅಥವಾ ಆಗದಿರಲಿ, ಪರಿಣಾಮವು ರಾಗ-ದ್ವೇಷಾದಿಗಳ ಕಷಾಯ ಸಹಿತವಾದರೆ ತನ್ನ ಜ್ಞಾನದರ್ಶನ ಮೊದಲಾದ ಭಾವಪ್ರಾಣಗಳ ಘಾತವಾಗಿ ಹೋಗುವುದು, ಅದೇ ಆತ್ಮಹಿಂಸೆಯಿದೆ. ಆತ್ಮಹಿಂಸೆ ಮಾಡುವವನು ಇತರರ ಹಿಂಸೆಯನ್ನು ಮಾಡೇಮಾಡುತ್ತಾನೆ. ಯಾವನಿಗೆ ಆತ್ಮಹಿಂಸೆಯಿದೆ ಅವನಿಗೆ ಪರದ ಹಿಂಸೆಯೂ ಇದ್ದೇ ಇರುತ್ತದೆ.

**ಯುಕ್ತಾಚರಣಸ್ಯ ಸತೋ ರಾಗಾದ್ಯಾವೇಶಮಂತರೇಣಾಪಿ ।**
**ನ ಹಿ ಭವತಿ ಜಾತು ಹಿಂಸಾ ಪ್ರಾಣವ್ಯಪರೋಪಣಾದೇವ ।।೪೫।। ಪು.ಸಿ.**

**ಅರ್ಥ ಃ-** ಯೋಗ್ಯ ಆಚರಣೆ ಮಾಡುವಂಥ ಸತ್ಪುರುಷರಿಗೆ ರಾಗ-ದ್ವೇಷ ಮೊದಲಾದ ಕಷಾಯಗಳಿಲ್ಲದೆ ಕೇವಲ ಪ್ರಾಣಗಳ ಘಾತದಿಂದಲೇ ಎಂದೂ ಹಿಂಸೆಯಾಗುವುದಿಲ್ಲ.

**ಭಾವಾರ್ಥ ಃ-** ಯತ್ನಾಚಾರಪೂರ್ವಕ ದಯಾಸಹಿತವಾಗಿ ಪ್ರವರ್ತನೆ ಮಾಡುವಂಥ ಪುರುಷರ ಮೂಲಕ ಜೀವಘಾತವಾದರೂ ಕೂಡ ಹಿಂಸಾಕೃತವಾದ ಬಂಧವಾಗುವುದಿಲ್ಲ.

**ವ್ಯುತ್ಥಾನಾವಸ್ಥಾಯಾಂ ರಾಗಾದೀನಾಂ ವಶಪ್ರವೃತ್ತಾಯಾಮ್ ।।**
**ಮ್ರಿಯತಾಂ ಜೀವೋ ಮಾ ವಾ ಧಾವತ್ಯಗ್ರೇ ಧ್ರುವಂ ಹಿಂಸಾ ।।೪೬।। ಪು.ಸಿ.**

**ಅರ್ಥ ಃ-** ರಾಗ-ದ್ವೇಷ ಮೊದಲಾದವುಗಳೊಡನೆ ಯಾವ ಪ್ರವೃತ್ತಿ, ಗಮನ, ಆಗಮನ, ಏಳುವುದು, ಕೂಡ್ರುವುದು, ಇಡುವುದು, ಎತ್ತಿಕೊಳ್ಳುವಂಥ ಆರಂಭಗಳಲ್ಲಿ ಜೀವಗಳ ಮರಣವಾಗಲಿ ಅಥವಾ ಆಗದಿರಲಿ, ಹಿಂಸೆಯಂತೂ ನಿಶ್ಚಯದಿಂದ ಮುಂದೆ ಓಡುತ್ತದೆ ಎಂದರೆ ಅವಶ್ಯವಾಗಿ ಆಗುತ್ತದೆ. ಯಾವನು ಯತ್ನಾಚಾರದಿಂದ ರಹಿತನಾಗಿ ಆರಂಭ ಮಾಡುತ್ತಾನೆ. ಅವನ ಮೂಲಕ ಜೀವವು ತನ್ನ ಆಯುವಿನ ಆಧೀನವಾಗಿ ಸಾಯಲಿ ಅಥವಾ ಸಾಯದಿರಲಿ, ಅವನಂತೂ ತನ್ನ ಪರಿಣಾಮಗಳಲ್ಲಿ ನಿರ್ದಯಿಯಾಗಿ ಹೋಗಿದ್ದಾನೆ, ಅವನಿಗಂತೂ ಹಿಂಸಾಕೃತ ಬಂಧವು ಮುಂದೆ-ಮುಂದೆಯೇ ಧಾವಿಸುತ್ತದೆ.

**ಯಸ್ಮಾತ್ಸಕಷಾಯಃ ಸನ್ ಹಂತ್ಯಾತ್ಮಾ ಪ್ರಥಮಮಾತ್ಮನಾತ್ಮಾನಮ್**
**ಪಶ್ಚಾಜ್ಜಾಯೇತ ನ ವಾ ಹಿಂಸಾ ಪ್ರಾಣ್ಯಂತರಾಣಾಂ ತು ।।೪೭।। ಪು. ಸಿ.**

**ಅರ್ಥ ಃ-** ಕಷಾಯ ಸಹಿತನಾಗುತ್ತ ಆತ್ಮನು ಮೊದಲಂತೂ ತನ್ನ ಮೂಲಕವಾಗಿಯೇ ತನ್ನದೇ ಘಾತ ಮಾಡುತ್ತಾನೆ, ಅನಂತರ ಅನ್ಯ ಪ್ರಾಣಿಗಳ ಹಿಂಸೆಯಾಗುವುದು ಅಥವಾ ಆಗದಿರುವುದು. **ಯಾವ ಸಮಯದಲ್ಲಿ ಆತ್ಮನು ಕಷಾಯ ಸಹಿತನಾಗುವನು ಅದೇ ಸಮಯದಲ್ಲಿ ತನ್ನ ಜ್ಞಾನಾನಂದ ವೀತರಾಗ ಸ್ವರೂಪದ ಘಾತವನ್ನಂತೂ ಅವಶ್ಯವಾಗಿ ಮಾಡಿಯೇ ಬಿಡುತ್ತಾನೆ.**

**ಹಿಂಸಾಯಾಮವಿರಮಣಂ ಹಿಂಸಾಪರಿಣಮನಮಪಿ ಭವತಿ ಹಿಂಸಾ ।**
**ತಸ್ಮಾತ್ಪ್ರಮತ್ತಯೋಗೇ ಪ್ರಾಣವ್ಯಪರೋಪಣಂ ನಿತ್ಯಮ್ ॥೪೮॥ ಪು. ಸಿ.**

**ಅರ್ಥ ః-** ಹಿಂಸೆಯ ವಿಷಯದಲ್ಲಿ ವಿರಕ್ತವಾಗಿ ಅದರ ತ್ಯಾಗ ಮಾಡದಿರುವುದು ಅದುಕೂಡ ಹಿಂಸೆಯಿದೆ. ಮತ್ತು ಹಿಂಸೆಯ ಪ್ರವೃತ್ತಿ ಮಾಡುವುದಂತೂ ಹಿಂಸೆಯೇ ಇದೆ. ಪ್ರಮತ್ತಯೋಗವಿರುವುದರಿಂದ ಪ್ರಾಣಗಳ ಘಾತವು ನಿತ್ಯ ಎಡೆಬಿಡದೆ ಆಗುತ್ತಿರುತ್ತದೆ.

**ಭಾವಾರ್ಥ ః-** ತನ್ನ ಮತ್ತು ಇತರರ ಘಾತವಾಗಿ ಹೋಗುವ ಎಚ್ಚರಿಕೆಯಿಂದ ರಹಿತವಾಗಿ ಯಾವ ಮನ-ವಚನ-ಕಾಯರೂಪ ಯೋಗಗಳ ಪ್ರವರ್ತನವಿದೆ ಅದರ ಹೆಸರು ಪ್ರಮತ್ತಯೋಗವಿದೆ. ಎಲ್ಲಿ ಪ್ರಮತ್ತಯೋಗವಿದೆ ಅಲ್ಲಿ ಶಾಶ್ವತ-ಎಡೆಬಿಡದೆ ಆಗುವಂಥ ಹಿಂಸೆಯಿದೆ. ಯಾವನು ಹಿಂಸೆಯನ್ನಂತೂ ಮಾಡುವುದಿಲ್ಲ, ಆದರೆ ಹಿಂಸೆಯಿಂದ ವಿರಕ್ತನಾಗಿ ಹಿಂಸೆಯ ತ್ಯಾಗ ಮಾಡದಿದ್ದರೆ ಮಲಗಿಕೊಂಡ ಮಾರ್ಜಾಲದ ಸಮಾನ ಯಾವಾಗಲೂ ಹಿಂಸಕನೇ ಇದ್ದಾನೆ. ಹಿಂಸೆಯಲ್ಲಿ ಪ್ರವರ್ತನೆ ಮಾಡುವವನಂತೂ ಹಿಂಸಕನೇ ಇದ್ದಾನೆ. ಬಾಹ್ಯ ಹಿಂಸೆಯ ನಿಮಿತ್ತ ದೊರಕಲಿ ಅಥವಾ ದೊರಕದಿರಲಿ ಭಾವಗಳಿಂದಂತೂ ಎರಡರ ಹಿಂಸಕನೇ ಇದ್ದಾನೆ.

**ಸೂಕ್ಷ್ಮಾಪಿ ನ ಖಲು ಹಿಂಸಾ ಪರವಸ್ತುನಿಬಂಧನಾ ಭವತಿ ಪುಂಸಃ ।**
**ಹಿಂಸಾಯತನನಿವೃತ್ತಿಃ ಪರಿಣಾಮವಿಶುದ್ಧಯೇ ತದಪಿ ಕಾರ್ಯಾ ॥೪೯॥ ಪು.ಸಿ.**

**ಅರ್ಥ ః-** ಪುರುಷನಿಗೆ ಯಾವ ಹಿಂಸೆಯಾಗುತ್ತದೆ ಅದಂತೂ ತಮ್ಮ ಪರಿಣಾಮಗಳಲ್ಲಿ ಹಿಂಸೆ ಮಾಡುವುದರ ಭಾವವಾಗುವುದರಿಂದಲೇ ಆಗುತ್ತದೆ. ಅನ್ಯ ವಸ್ತುಗಳಂತೂ ಸೂಕ್ಷ್ಮ ಹಿಂಸೆಯ ಸಲುವಾಗಿಯೂ ಕಾರಣವಾಗುವುದಿಲ್ಲ.

**ಪ್ರಶ್ನೆ ః-** ಒಂದು ವೇಳೆ ಪರದ್ರವ್ಯದ ನಿಮಿತ್ತದಿಂದ ಸೂಕ್ಷ್ಮ ಹಿಂಸೆಯೂ ಕೂಡ ಆಗುವುದಿಲ್ಲವೆಂದ ಮೇಲೆ ಬಾಹ್ಯ ವಸ್ತುವಿನ ತ್ಯಾಗ, ವ್ರತ, ಸಂಯಮಗಳನ್ನು ಏತಕ್ಕಾಗಿ ಮಾಡುತ್ತಾರೆ ?

**ಉತ್ತರ ః-** ಹಿಂಸೆಯಂತೂ ಜೀವಕ್ಕೆ ಘಾತಕ ಪರಿಣಾಮವಾದ ನಂತರವೇ ಆಗುತ್ತದೆ. ಆದರೆ ಯಾವನು ಹಿಂಸೆಯ ಸ್ಥಾನಗಳಲ್ಲಿ ಪ್ರವರ್ತನೆ ಮಾಡುವನು ಅವನಿಗೆ ಹಿಂಸೆಯ ಪರಿಣಾಮಗಳು ಹೇಗೆ ಆಗುವುದಿಲ್ಲ ? ಆಗಿಯೇ ಆಗುತ್ತವೆ. ಆದುದರಿಂದ ತಮ್ಮ ಪರಿಣಾಮಗಳ ವಿಶುದ್ಧತೆಯ ಸಲುವಾಗಿ ಹಿಂಸೆಯಾಗುವಂಥ ಅನ್ನ-ನೀರುಗಳ ಗ್ರಹಣ, ಆಸನ, ವಚನ, ಚಿಂತನೆ ಮೊದಲಾದವುಗಳ ತ್ಯಾಗ ಮಾಡುವುದು ಉಚಿತವೇ ಇದೆ.

**ನಿಶ್ಚಯಮಬುಧ್ಯಮಾನೋ ಯೋ ನಿಶ್ಚಯತಸ್ತಮೇವ ಸಂಶ್ರಯತೇ ।**
**ನಾಶಯತಿ ಕರಣಚರಣಂ ಸ ಬಹಿಃಕರಣಾಲಸೋ ಬಾಲಃ ॥೫೦॥ ಪು. ಸಿ.**

**ಅರ್ಥ ః-** ಯಾವ ಜೀವನು ನಿಶ್ಚಯನಯದ ವಿಷಯವನ್ನು ರಾಗ ಮೊದಲಾದ ಕಷಾಯಗಳಿಂದ ರಹಿತವಾದ ಶುದ್ಧ ಆತ್ಮನ ಸ್ವರೂಪವನ್ನಂತೂ ತಿಳಿದುಕೊಂಡಿಲ್ಲ ; ಮತ್ತು ನನ್ನ ಭಾವಗಳಂತೂ ಕಷಾಯರಹಿತವಿವೆ, ನನ್ನ ಸಮಸ್ತ ಪ್ರವೃತ್ತಿಯಲ್ಲಿ ಹಿಂಸೆಯು ಆಗುವುದೇ ಇಲ್ಲವೆಂದು ಮನ್ನಿಸಿ, ಹಾಗೆ ವ್ಯರ್ಥ ಕಲ್ಪನೆ ಮಾಡಿ ನಿರರ್ಗಲ ಯಥೇಚ್ಛವಾಗಿ ಪ್ರವರ್ತಿಸುತ್ತಾನೆ. ಆ ಅಜ್ಞಾನಿಯು ಬಾಹ್ಯ ಆಚರಣೆಯ ಅಹಿಂಸಕ ಪ್ರವೃತ್ತಿಯನ್ನು ಬಿಟ್ಟುಕೊಟ್ಟು ಪ್ರಮಾದಿಯಾಗಿ ಕರಣ-ಚರಣರೂಪದ (ಭಾವರೂಪ ಹಾಗೂ ಕ್ರಿಯಾರೂಪ) ಸಂಪೂರ್ಣ ಚಾರಿತ್ರದ ನಾಶ ಮಾಡುವಂಥವನಿದ್ದಾನೆ.

**ಭಾವಾರ್ಥ ః-** ಯಾವನ ಪರಿಣಾಮವು ರಾಗ-ದ್ವೇಷಗಳಿಂದ ರಹಿತವಾಗಿದೆ ಅವನು ಅಯೋಗ್ಯ ಭೋಜನ, ಪಾನ, ಧನ, ಪರಿಗ್ರಹ, ಆರಂಭ ಮೊದಲಾದವುಗಳಲ್ಲಿ ಹೇಗೆ ಪ್ರವರ್ತನೆ ಮಾಡುವನು ? ಯಾವನು ಹಿಂಸೆಯಿಂದ ವಿರಕ್ತನಿದ್ದಾನೆ ಅವನು ಹಿಂಸೆಯ ಕಾರಣಗಳನ್ನು ದೂರದಿಂದಲೇ ಬಿಟ್ಟುಕೊಡುವನು.

**ಪುರುಷಾರ್ಥಸಿದ್ಧ್ಯುಪಾಯದಲ್ಲಿ ಹಿಂಸೆಯ ವಿಷಯವಾಗಿ ಹೀಗೆ ಹೇಳುತ್ತಾರೆ,-**

೧) ಕೆಲವರಂತೂ ಹಿಂಸೆ ಮಾಡದಯೇ ಹಿಂಸೆಯ ಫಲವನ್ನು ಭೋಗಿಸುವಂಥವರಾಗುತ್ತಾರೆ, ಹೇಗೆಂದರೆ ಶಸ್ತ್ರಗಳನ್ನು ತಯಾರಿಸುವಂಥ ಕಮ್ಮಾರ, ಸಾಣೆಗಾರರು ಹಿಂಸೆ ಮಾಡದೆಯೇ ತಂದುಲಮಚ್ಛದ ಸಮಾನವಾಗಿ ಹಿಂಸೆಯ ಫಲಕ್ಕೆ (ತೀವ್ರ ಅಶುಭ ಬಂಧಕ್ಕೆ) ಪ್ರಾಪ್ತರಾಗಿ ಹೋಗುತ್ತಾರೆ.

೨) ಒಬ್ಬನು ದಯಾವಂತನಾಗಿ ಪ್ರಯತ್ನ ಪೂರ್ವಕವಾಗಿ ಜಿನಮಂದಿರವನ್ನು ಕಟ್ಟಿಸುವಂಥವನು ಬಾಹ್ಯದಲ್ಲಿ ಹಿಂಸೆಯಾಗುತ್ತಿದ್ದರೂ ಕೂಡ ಹಿಂಸೆಯ ಫಲವನ್ನು ಪ್ರಾಪ್ತ ಮಾಡಿಕೊಳ್ಳುವುದಿಲ್ಲ.

೩) ಓರ್ವ ಪುರುಷನು ಹಿಂಸೆಯನ್ನಂತೂ ಸ್ವಲ್ಪವೇ ಮಾಡಿದ್ದರೂ ತೀವ್ರ ರಾಗ-ದ್ವೇಷರೂಪದ ಭಾವಗಳಿಂದ ಮಾಡಿರುವುದರಿಂದ ಉದಯಕಾಲದಲ್ಲಿ ಅತ್ಯಂತ ಅಧಿಕ ಕೆಡಕು ಫಲವನ್ನು ಪ್ರಾಪ್ತ ಮಾಡಿ ಕೊಳ್ಳುತ್ತಾನೆ.

೪) ಎಲ್ಲಿ ಅನೇಕ ಪುರುಷರು ಸೇರಿ ಒಂದು ಜೀವದ ಹಿಂಸೆ ಮಾಡುತ್ತಾರೆ ಅಲ್ಲಿ ಆ ಹಿಂಸೆಯನ್ನು ಮಾಡುವಲ್ಲಿ ತೀವ್ರ ಕಷಾಯವುಳ್ಳವನಿಗೆ ತೀವ್ರ ಫಲವು ಪ್ರಾಪ್ತವಾಗುತ್ತದೆ ಮತ್ತು ಮಧ್ಯಮ ಕಷಾಯವುಳ್ಳವನಿಗೆ ಮಧ್ಯಮ ಫಲವು ಪ್ರಾಪ್ತವಾಗುತ್ತದೆ.

೫) ಓರ್ವ ಪುರುಷನಿಂದ ಹಿಂಸೆಯಂತೂ ನಂತರ ಸಮಯ ಸಾಧಿಸಿ ಆಗುವುದು ; ಆದರೆ ಹಿಂಸೆ ಮಾಡುವ ಪರಿಣಾಮ ಮೊದಲು ಮಾಡುವುದರಿಂದ ಹಿಂಸೆಯ ಫಲವು ಹಿಂಸೆ ಮಾಡುವ ಮೊದಲೇ ಉದಯದಲ್ಲಿ ಬಂದು ರಸ ಕೊಡಲಾರಂಭಿಸುತ್ತದೆ.

೬) ಒಬ್ಬನಿಗೆ ಹಿಂಸೆ ಮಾಡುವ ಸಮಯದಲ್ಲಿಯೇ ಹಿಂಸೆಯ ಫಲವು ದೊರಕಲಾರಂಭಿಸುತ್ತದೆ. ಹೇಗೆಂದರೆ ಒಬ್ಬನು ಇನ್ನೊಬ್ಬನಿಗೆ ಹೊಡೆಯತೊಡಗುವನು, ಅದೇ ಸಮಯದಲ್ಲಿಯೇ ಅದೇ ಪುರುಷನು ಇನ್ನೊಬ್ಬ ಪುರುಷನ ಮೂಲಕ ಮಾಡಲಾದ ಪ್ರಹಾರದಿಂದ ಸ್ವಯಂ ಏಟು ತಿಂದು ಬಿಡುತ್ತಾನೆ.

೭) ಒಬ್ಬನಿಗೆ ಮೊದಲು ಮಾಡಿದ ಹಿಂಸೆಯ ಫಲವು ಬಹಳ ಸಮಯದ ನಂತರ ದೊರಕುತ್ತದೆ. ಹೇಗೆಂದರೆ - ಒಬ್ಬನು ಇನ್ನೊಬ್ಬ ಜೀವನನ್ನು ಕೊಲ್ಲುವ ಉಪಾಯ ಮಾಡಿದರೂ ಆ ಉಪಾಯವು ಸಂಭವಿಸಲಿಲ್ಲ. ಅದರ ಕೆಲ ಸಮಯದ ನಂತರ ಇನ್ನೊಬ್ಬನನ್ನು ಇವನ ಮೂಲಕ ಕೊಲ್ಲಿಸಲು ಮಾಡಿರುವ ಉಪಾಯದ ಸುಳಿವು ಸಿಕ್ಕು ಬಿಡುವುದರಿಂದ ಆ ಮನುಷ್ಯನೇ ಇವನ ಕೊಲೆ ಮಾಡಿ ಬಿಡುತ್ತಾನೆ.

೮) ಹಿಂಸೆಯನ್ನಂತೂ ಒಬ್ಬನು ಮಾಡುತ್ತಾನೆ, ಆದರೆ ಆ ಹಿಂಸೆಯ ಫಲವನ್ನು ಅನೇಕರು ಭೋಗಿಸುತ್ತಾರೆ. ಹೇಗೆಂದರೆ ಕಳ್ಳ ಮತ್ತು ಕೊಲೆಗಾರರನ್ನು ಗಲ್ಲಿಗೇರಿಸಿ ಕೊಲ್ಲುವ ಕಾರ್ಯವನ್ನು ಓರ್ವ ಚಾಂಡಾಲನೇ ಮಾಡುತ್ತಾನೆ; ಆದರೆ ನೋಡುವಂಥ ಅನೇಕ ಮೋಜುಗಾರರು ಅದರ ಅನುಮೋದನೆ ಮಾಡಿ ಪಾಪಬಂಧ ಮಾಡಿಕೊಂಡು ಫಲ ಭೋಗಿಸುತ್ತಾರೆ.

೯) ಹಿಂಸೆ ಮಾಡುವವರಂತೂ ಅನೇಕರಿರುತ್ತಾರೆ, ಆದರೆ ಆ ಹಿಂಸೆಯ ಫಲವನ್ನು ಒಬ್ಬನೇ ಭೋಗಿಸುತ್ತಾನೆ. ಹೇಗೆಂದರೆ ಯುದ್ಧದಲ್ಲಿ ಹಿಂಸೆ ಮಾಡುವಂಥವರಂತೂ ಅನೇಕ ಯೋಧರಿರುತ್ತಾರೆ; ಆದರೆ ಯುದ್ಧದಲ್ಲಿ ಸಂಭವಿಸಿದ ಹಿಂಸೆಯ ಫಲವನ್ನು ಕೇವಲ ಒಬ್ಬ ರಾಜನೇ ಭೋಗಿಸುತ್ತಾನೆ.

೧೦) ಒಬ್ಬನಿಗೆ ಅವನ ಮೂಲಕ ಮಾಡಲಾದ ಹಿಂಸೆಯಂತೂ ಹಿಂಸೆಯ ಫಲವನ್ನೇ ಕೊಡುತ್ತದೆ, ಮತ್ತು ಒಬ್ಬನಿಗೆ ಅವನ ಮೂಲಕ ಮಾಡಲಾದ ಹಿಂಸೆಯು ಅವನಿಗೇ ಅಹಿಂಸೆಯ ಫಲ ಕೊಡುತ್ತದೆ. ಹೇಗೆಂದರೆ ಒಬ್ಬ ಪುರುಷನು ಓರ್ವ ಜೀವದ ರಕ್ಷಣೆ ಮಾಡುವ ಪ್ರಯತ್ನ ಮಾಡುತ್ತಿದ್ದನು, ಆದರೆ ಯತ್ನಮಾಡುತ್ತ ಮಾಡುತ್ತಲೇ ಆ ಜೀವನು ಸತ್ತು ಹೋದರೆ ಇವನಿಗೆ ರಕ್ಷಣೆ ಮಾಡುವ ಅಭಿಪ್ರಾಯದಿಂದ ಅಹಿಂಸೆಯ ಫಲವೇ ದೊರುಕುವುದು.

೧೧) ಒಂದು ಜೀವದ ಪರಿಣಾಮವಂತೂ ಇನ್ನೊಂದು ಜೀವವನ್ನು ಕೊಲ್ಲುವುದಿತ್ತು ಅಥವಾ ವಿಪತ್ತಿನಲ್ಲಿ ಸಿಕ್ಕಿಸುವುದಿತ್ತು, ಆದರೆ ಆ ಜೀವದ ಪುಣ್ಯದ ಉದಯವಿರುವುದರಿಂದ ಅವನ ಮೇಲಂತೂ ಯಾವ ಆಪತ್ತಿಯೂ ಬರಲಿಲ್ಲ ಮತ್ತು ಅವನ ಮರಣವೂ ಆಗಲಿಲ್ಲ; ಆದರೆ ಅನೇಕ ಪ್ರಕಾರದ ಲಾಭವೇ ಆಯಿತು. ಇನ್ನು ಕೊಲ್ಲುವ ಅಭಿಪ್ರಾಯವನ್ನು ಹೊಂದಿರುವ ಜೀವನಿಗಂತೂ ಕೇವಲ ಪಾಪದ ಬಂಧವೇ ಆಗುವುದು.

೧೨) ಓರ್ವ ಜೀವದ ಪರಿಣಾಮವು ಇನ್ನೋರ್ವ ಜೀವನಿಗೆ ದುಃಖಕೊಡುವ ಅಥವಾ ಕೊಲ್ಲುವುದಿರುವುದಿಲ್ಲ, ಆದರೆ ಸುಖ ಕೊಡುವ ಮತ್ತು ರಕ್ಷಣೆ ಮಾಡುವುದೇ ಇತ್ತು; ಆದರೆ ಆ ಇನ್ನೋರ್ವ ಜೀವನಿಗೆ ದುಃಖವಾದರೆ ಅಥವಾ ಅವನು ಸತ್ತು ಹೋದರೆ ಈ ಜೀವನಿಗೆ ಸುಖ ಕೊಡುವ ಪರಿಣಾಮವಿರುವುದರಿಂದ ಇವನಿಗೆ ಪುಣ್ಯದ ಬಂಧವೇ ಆಗುವುದು.

**ಈ ಪ್ರಕಾರ ಜಿನೇಂದ್ರರ ಮಾರ್ಗವು ಅನೇಕ ಗೂಢ-ಗಹನ ಭೇದಗಳುಳ್ಳದ್ದಿದ್ದು, ಇದರಲ್ಲಿ ಅತ್ಯಂತ ಕಷ್ಟ ಸಹಿಸಿಯೂ ಏಕಾಂತವಾದಿ ಮಿಥ್ಯಾದೃಷ್ಟಿಗಳು ಪಾರುಗಾಣುವ ಸಂಭವವಿಲ್ಲ, ಅನೇಕಾಂತದ ಪ್ರಭಾವದಿಂದ ನಯಸಮೂಹವನ್ನು ತಿಳಿಯುವಂಥ ಗುರುಗಳೇ ಶರಣರಿದ್ದಾರೆ.** ಈ ಜಿನೇಂದ್ರ ಭಗವಂತರ ನಯಚಕ್ರವು ಅತ್ಯಂತ ನಿಶಿತಧಾರೆಯುಳ್ಳದ್ದಿರುವುದರಿಂದ ಏಕಾಂತ ದೃಷ್ಟಿಯ ಆಗ್ರಹವುಳ್ಳ ಮಿಥ್ಯಾದೃಷ್ಟಿಗಳ ಮಿಥ್ಯಾಯುಕ್ತಿಗಳನ್ನು ಸಹಸ್ರಾರು ತುಂಡು ಮಾಡಿ ಬಿಡುವಂಥದ್ದಿದೆ.

ಆದುದರಿಂದ ಎಲೈ ಜ್ಞಾನಿ ಜನಗಳೇ ! ವೀತರಾಗ ಭಗವಂತರ ಆಜ್ಞೆಯಿಂದ ಎಲ್ಲಕ್ಕೂ ಮೊದಲು ಹಿಂಸೆಯಾಗಲು ಯೋಗ್ಯವಿರುವ ಆ ಜೀವಸ್ಥಾನಗಳು, ಇಂದ್ರಿಯ, ಕಾಯ, ಜೀವಗಳ ಕುಲ ಮೊದಲಾದವುಗಳಿದ್ದು ಅವನ್ನು ತಿಳಿದುಕೊಳ್ಳಿರಿ, ಅನಂತರ ಹಿಂಸೆ ಮಾಡುವಂಥ ಭಾವವನ್ನು ತಿಳಿದುಕೊಳ್ಳಿರಿ, ಅದಾದ ನಂತರ ಹಿಂಸೆಯ ಯಾವ ಸ್ವರೂಪ ಹೇಳಿದೆ ಅದನ್ನು ತಿಳಿದುಕೊಳ್ಳಿರಿ ! ಅನಂತರ ಮತ್ತೆ ಆ ಹಿಂಸೆಯ ಫಲವನ್ನು ತಿಳಿದುಕೊಳ್ಳಿರಿ.

ಈ ಪ್ರಕಾರ ಹಿಂಸ್ಯ, ಹಿಂಸಕ, ಹಿಂಸೆ, ಹಿಂಸೆಯ ಫಲ – ಈ ನಾಲ್ಕನ್ನು ಸರಿಯಾಗಿ ಪ್ರಯತ್ನಪೂರ್ವಕ ತಿಳಿದುಕೊಂಡ ನಂತರ ದೇಶ, ಕಾಲ, ಸಹಾಯಕ, ತಮ್ಮ ಪರಿಣಾಮ ಮತ್ತು ಪಾಲನೆಯಾಗುವುದನ್ನು ತಿಳಿದುಕೊಂಡು, ತಮ್ಮ ಶಕ್ತಿಯನ್ನು ಬಚ್ಚಿಡದೆ ಗೃಹಸ್ಥ ಅವಸ್ಥೆಯಲ್ಲಿ ಕೂಡ ತಮ್ಮ ಯೋಗ್ಯತೆಗೆ ಅನುಸರಿಸಿ ಹಿಂಸೆಯ ತ್ಯಾಗವನ್ನೇ ಮಾಡಿರಿ, ತ್ರಸ ಜೀವಗಳ ಸಂಕಲ್ಪೀ ಹಿಂಸೆಯದಂತೂ ತ್ಯಾಗವನ್ನೇ ಮಾಡಿರಿ, ಮತ್ತು ಸಮಸ್ತ ಆರಂಭದಲ್ಲಿ ದಯಾವಂತರಾಗಿ ಯತ್ನಾಚಾರ ಪೂರ್ವಕ ಪ್ರವರ್ತನೆ ಮಾಡಿರಿ. ಐದು ಸ್ಥಾವರಗಳ ಆರಂಭದಲ್ಲಿ ಕ್ರಮದಿಂದ ಕಡಿಮೆ ಮಾಡುತ್ತ ದಯಾವಂತರಾಗಿ ಪ್ರವರ್ತಿಸಿರಿ. ಈ ಪ್ರಕಾರ ಅಹಿಂಸಾಣುವ್ರತದ ಸ್ವರೂಪ ಹೇಳಿದೆ.

ಈಗ ಅಹಿಂಸಾಣುವ್ರತದ ಐದು ಅತಿಚಾರಗಳನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ಛೇದನಬಂಧನಪೀಡನಮತಿಭಾರಾರೋಪಣಂ ವ್ಯತೀಚಾರಾಃ ।**
**ಆಹಾರವಾರಣಾಪಿ ಚ ಸ್ಥೂಲವಧಾದ್ ವ್ಯುಪರತೇಃ ಪಂಚ ।।೫೪।।**

**ಅರ್ಥ :-** ಈ ಸ್ಥೂಲ ಹಿಂಸೆಯ ತ್ಯಾಗವೆಂಬ ಹೆಸರಿನ ಅಹಿಂಸಾಣುವ್ರತದಲ್ಲಿ ಐದು ಅತಿಚಾರಗಳಿದ್ದು, ಅವನ್ನು ಗೃಹಸ್ಥರು ತ್ಯಾಗ ಮಾಡುವುದು ಯೋಗ್ಯವಿದೆ.

ಛೇದನ ಎಂದರೆ ಅನ್ಯ ಮನುಷ್ಯ-ತಿರ್ಯಂಚಗಳ ಕಿವಿ, ಮೂಗು, ತುಟಿ ಮೊದಲಾದ ಅಂಗಗಳನ್ನು ಛೇದಿಸುವುದು ಅದು **ಛೇದನ** ನಾಮದ ಅತಿಚಾರವಿದೆ. ಮನುಷ್ಯರನ್ನು ಬಂಧನ ಮೊದಲಾದವುಗಳಿಂದ ಬಂಧಿಸುವುದು, ಬಂಧೀಗೃಹದಲ್ಲಿ ಹಾಕುವುದು; ತಿರ್ಯಂಚಗಳನ್ನು ಗಟ್ಟಿಮುಟ್ಟಾದ ಬಂಧನದಿಂದ ಬಂಧಿಸುವುದು, ಪಕ್ಷಿಗಳನ್ನು ಪಂಜರದಲ್ಲಿ ಹಾಕುವುದು ಇತ್ಯಾದಿಗಳು **ಬಂಧನ** ನಾಮದ ಅತಿಚಾರಗಳಿವೆ. ಮನುಷ್ಯ-ತಿರ್ಯಂಚಗಳನ್ನು ಒದೆಯುವದು, ಗುದ್ದುವುದು, ಕೋಲು,

ಬಾರಕೋಲು ಮೊದಲಾದವುಗಳ ಪ್ರಹಾರದಿಂದ ಕಷ್ಟ ಕೊಡುವುದು, ಅದು **ಪೀಡನ** ನಾಮದ ಅತಿಚಾರವಿದೆ. ಮನುಷ್ಯ-ತಿರ್ಯಂಚ ಮತ್ತು ಅವುಗಳ ಗಾಡಿಯ ಮೇಲೆ ಹೆಚ್ಚು ಭಾರ ಹಾಕುವುದು ಅದು ಪೀಡನ ನಾಮದ ಅತಿಚಾರವಿದೆ. ಮನುಷ್ಯ-ತಿರ್ಯಂಚಗಳನ್ನು ತಿನ್ನುಣ್ಣುವುದರಿಂದ ತಡೆಯುವುದು ಅದು **ಅನ್ನಪಾನ ನಿರೋಧ** ನಾಮದ ಅತಿಚಾರವಿದೆ. ಇವು ಐದು ಅತಿಚಾರಗಳು ಸ್ಥೂಲ ಹಿಂಸೆಯ ತ್ಯಾಗಿಗಳಿಗೆ ತ್ಯಾಗ ಮಾಡಲು ಯೋಗ್ಯವೇ ಇವೆ.

ಈಗ ಸತ್ಯಾಣುವ್ರತದ ಸ್ವರೂಪವನ್ನು ನಿರೂಪಿಸುವಂಥ ಸೂತ್ರ ಹೇಳುತ್ತಾರೆ,-

**ಸ್ಥೂಲಮಲೀಕಂ ನ ವದತಿ ನ ಪರಾನ್ ವಾದಯತಿ ಸತ್ಯಮಪಿ ವಿಪದೇ ।**
**ಯತ್ತದ್ವದಂತಿ ಸಂತಃ ಸ್ಥೂಲ ಮೃಷಾವಾದವೈರಮಣಂ ॥೫೫॥**

**ಅರ್ಥ :-** ಯಾವ ಸ್ಥೂಲ ಅಸತ್ಯವನ್ನು ಸ್ವಯಂ ಆಡುವುದಿಲ್ಲ, ಇತರರಿಂದ ಆಡಿಸುವುದಿಲ್ಲ, ಮತ್ತು ಯಾವ ವಚನದಿಂದ ತನ್ನ ಮೇಲೆ ಅಥವಾ ಇತರರ ಮೇಲೆ ಆಪತ್ತಿಯು ಬಂದು ಬಿಡುತ್ತದೆ ಅಂಥ ಸತ್ಯವನ್ನು ಕೂಡ ಆಡುವುದಿಲ್ಲ ಅದನ್ನು ಸಂತ ಪುರುಷರು ಸ್ಥೂಲ ಅಸತ್ಯದ ತ್ಯಾಗವೆಂದು ಹೇಳುತ್ತಾರೆ.

**ಭಾವಾರ್ಥ :-** ಸತ್ಯಾಣುವ್ರತದ ಧಾರಕನು ಕ್ರೋಧ-ಮಾನ-ಮಾಯೆ-ಲೋಭದ ವಶೀಭೂತನಾಗಿ ಅನ್ಯರ ಘಾತವಾಗುವಂಥ, ಅಪವಾದ ಬರುವಂಥ, ಕಲಂಕ ತಗಲುವಂಥ ವಚನಗಳನ್ನು ಆಡುವುದಿಲ್ಲ. ಏಕೆಂದರೆ ಅವಂತೂ ನಿಂದ್ಯ ವಚನಗಳಿವೆ.

ಯಾವ ವಚನದಿಂದ ಮಿಥ್ಯಾಶ್ರದ್ಧೆಯಾಗುವುದು, ಧರ್ಮದಿಂದ ಬಿಟ್ಟು ಹೋಗುವುದು,ವ್ರತ-ಸಂಯಮ-ತ್ಯಾಗದಲ್ಲಿ ಶಿಥಿಲತೆ ಬರುವುದು, ಶ್ರದ್ಧೆಯು ಕೆಟ್ಟು ಹೋಗುವುದು ಅಂಥ ವಚನಗಳನ್ನು ಹೇಳುವುದಿಲ್ಲ. ಯಾವ ವಚನದಿಂದ ಕಲಹ-ವಿಸಂವಾದವುತ್ಪನ್ನವಾಗುವುದು, ವಿಷಯಗಳಲ್ಲಿ ಅನುರಾಗವು ಹೆಚ್ಚುವುದು, ಅಧಿಕ ಆರಂಭದಲ್ಲಿ ಪ್ರವೃತ್ತಿಯಾಗಿ ಹೋಗುವುದು, ಅನ್ಯರಿಗೆ ಆರ್ತಧ್ಯಾನವಾಗುವುದು, ಕಾಮ ವೇದನೆಯು ಪ್ರಕಟವಾಗುವುದು, ಇನ್ನೊಬ್ಬರ ಲಾಭದಲ್ಲಿ ಅಂತರಾಯವಾಗುವುದು, ಇನ್ನೊಬ್ಬರ ಆಜೀವಿಕೆಯು ಕೆಟ್ಟು ಹೋಗುವುದು, ತನ್ನ ಮತ್ತು ಇತರರ ಅಪಯಶವಾಗಿ ಹೋಗುವುದು - ಅಂಥ ನಿಂದ್ಯ ವಚನಗಳನ್ನು ಸತ್ಯಾಣುವ್ರತಿಗಳು ಹೇಳುವುದು ಯೋಗ್ಯವಿಲ್ಲ.

**ಯಾವುದರಿಂದ ತಮ್ಮದು ಹಾಗೂ ಇತರರದು ಕೆಡಕಾಗಿ ಹೋಗುವುದು, ಆಪತ್ತಿಯು ಬಂದು ಬಿಡುವುದು, ಅನರ್ಥವು ಉತ್ಪನ್ನವಾಗುವುದು, ದುಃಖವು ಉಂಟಾಗುವುದು, ಗುಟ್ಟು ರಟ್ಟಾಗುವುದು, ದೊರೆಯಿಂದ ದಂಡನೆಯಾಗುವುದು, ಧನದ ಹಾನಿಯಾಗುವುದು ಅಂಥ ಸತ್ಯವಚನವನ್ನೂ ಹೇಳಬಾರದು. ಅಂಥ ಸತ್ಯವಚನವೂ ಅಸತ್ಯವೇ ಇದೆ.** ತೆಗಳಿಕೆಯ ವಚನ, ಅಶ್ಲೀಲ ವಚನ, ನೀಚ ಕುಲದವರು ಆಡುವಂಥ ವಚನ, ಮರ್ಮಚ್ಛೇದ ವಚನ, ಇತರರ ಅವಮಾನದ ವಚನ, ತಿರಸ್ಕಾರದ ವಚನ, ಅಹಂಕಾರದ ವಚನಗಳನ್ನು ಎಂದೂ ಹೇಳಬಾರದು, ಆಡಬಾರದು.

ಜಿನ ಸೂತ್ರಕ್ಕೆ ಅನುಕೂಲ, ತಮ್ಮ ಪದವಿಗೆ ಹಿತರೂಪ, ಅಧಿಕ ಪ್ರಲಾಪವಿಲ್ಲದ, ಪ್ರಾಮಾಣಿಕ, ಸಂತೋಷವನ್ನುತ್ಪನ್ನ ಮಾಡುವಂಥ, ಧರ್ಮದ ಪ್ರಕಾಶವನ್ನು ಹರಡುವಂಥ ವಚನಗಳನ್ನು ಹೇಳಬೇಕಾಗುವುದು. ಯಾವ ವಚನಗಳಿಂದ ಆಜೀವಿಕೆಯು ಸಾಧಿಸುವುದು, ಅನೀತಿಯು ರಹಿತವಾಗುವುದು, ಅಂಥ ವಚನಗಳನ್ನು ಹೇಳುವಂಥ ಗೃಹಸ್ಥನಿಗೆ ಸ್ಥೂಲ ಅಸತ್ಯದ ತ್ಯಾಗರೂಪವಾದ ಎರಡನೆಯ ಅಣುವ್ರತವಿರುತ್ತದೆ.

ಈಗ ಸತ್ಯಾಣುವ್ರತದ ಐದು ಅತಿಚಾರಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಪರಿವಾದರಹೋಭ್ಯಾಖ್ಯಾ ಪೈಶೂನ್ಯಂ ಕೂಟಲೇಖಕರಣಂ ಚ ।**
**ನ್ಯಾಸಾಪಹಾರಿತಾಪಿ ಚ ವ್ಯತಿಕ್ರಮಾಃ ಪಂಚ ಸತ್ಯಸ್ಯ ॥೫೬॥**

**ಅರ್ಥ :-** ೧) ಇಲ್ಲಿ ಪರಿವಾದದ ಅರ್ಥವು ಮಿಥ್ಯಾ ಉಪದೇಶವಿದೆ. ಯಾವ ಚಾರಿತ್ರವು ಸ್ವರ್ಗ ಮತ್ತು ಮೋಕ್ಷದ ಕಾರಣವಿದೆ, ಆ ಚಾರಿತ್ರದ ಸಂಬಂಧದಲ್ಲಿ ಅನ್ಯಥಾ ಉಪದೇಶ ಕೊಡುವುದು ಅದು **ಪರಿವಾದ** ನಾಮದ ಅತಿಚಾರವಿದೆ.

೨) ಒಬ್ಬನು ತನ್ನ ಯಾವುದೇ ಗುಪ್ತ ಮಾತನ್ನು ತಿಳಿಸಿದ್ದರೆ ಆ ಮಾತನ್ನು ಬೇರೆ ಮೂರನೇಯವನಿಗೆ ಹೇಳುವುದು - ಪ್ರಕಟ ಮಾಡುವುದು, ಮತ್ತು ಓರ್ವ ಸ್ತ್ರೀ ಅಥವಾ ಪುರುಷನ ಏಕಾಂತದ ಗುಪ್ತ ಚೇಷ್ಟೆಯನ್ನು ನೋಡಿ ಅಥವಾ ಗುಪ್ತ ವಚನ ಕೇಳಿ ಬೇರೊಬ್ಬನಿಗೆ ಹೇಳುವುದು ಪ್ರಕಟ ಮಾಡುವುದು ಅದು **ರಹೋಭ್ಯಾಖ್ಯಾನ** ನಾಮದ ಅತಿಚಾರವಿದೆ.

೩) ಓರ್ವನ ಯಾವುದೇ ಅಶಕ್ತತೆ ತಿಳಿದು ಅವನನ್ನು ಕೆಡಿಸುವ ಅಭಿಪ್ರಾಯದಿಂದ ಯಾವನೋ ಒಬ್ಬನಿಗೆ ಗುಪ್ತವಾಗಿ ಹೇಳಿ ಬಿಡುವುದು, ಚಾಡಿ ಹೇಳುವುದು ಅದು **ಪೈಶೂನ್ಯ** ನಾಮದ ಅತಿಚಾರವಿದೆ.

೪) ಯಾರಿಗೂ ಸ್ಪಷ್ಟ ಹೇಳದೆ ಮತ್ತು ಆಚರಣೆ ಮಾಡದೆ, ತಿಳಿಸಿಕೊಡದೆ ಇವನು ಹೀಗೆ ಹೇಳಿದ್ದಾನೆ, ಹೀಗೆ ಆಚರಣೆ ಮಾಡಿದ್ದಾನೆಂದು ಅಸತ್ಯವಾಗಿ ಬರೆದು ಬಿಡುವದು ಅದು **ಕೂಟ ಲೇಖಕರಣ** ನಾಮದ ಅತಿಚಾರವಿದೆ.

೫) ಒಬ್ಬರು ತಮಗೆ ಹಣವನ್ನೊಪ್ಪಿಸಿದ್ದರೆ, ವಸ್ತ್ರ-ಆಭರಣಗಳನ್ನು ಇಟ್ಟಿದ್ದರೆ, ಅವರು ಯಾವಾಗ ಮರಳಿ ಪಡೆಯಲು ಬರುತ್ತಾರೆ ಆಗ ಅವರು ಸರಿಯಾದ ಸಂಖ್ಯೆಯನ್ನು ಮರೆತು ಕಡಿಮೆ ಬೇಡತೊಡಗಿದರೆ ಅವರಿಗೆ ನೀವು ಇಷ್ಟು ಇಟ್ಟಿರುವಿರಿ. ಅದೆಲ್ಲವನ್ನೂ ತೆಗೆದುಕೊಂಡು ಹೋಗಿರೆಂದು ಹೇಳುವುದು ಅದು **ನ್ಯಾಸಾಪಹಾರಿತಾ** ನಾಮದ ಅತಿಚಾರವಿದೆ.

ಈ ಪ್ರಕಾರ ಇಲ್ಲಿ ಹೇಳಲಾದ ಸ್ಥೂಲ ಅಸತ್ಯದ ತ್ಯಾಗವೆಂಬ ಹೆಸರಿನ ಅಣುವ್ರತದಲ್ಲಿನ ಐದು ಅತಿಚಾರಗಳು ತ್ಯಾಗ ಮಾಡಲು ಯೋಗ್ಯವೇ ಇವೆ.

ಅನಾದಿಕಾಲದಿಂದ ಬಹಳಷ್ಟು ಕಾಲವನ್ನಂತೂ - ಅನಂತ ಕಾಲವನ್ನಂತೂ ಈ ಜೀವನು ನಿಗೋದ ವಾಸದಲ್ಲಿಯೇ ಕಳೆದಿದ್ದಾನೆ. ಪುನಃ ಎಂದಾದರೊಮ್ಮೆ ನಿಗೋದದಿಂದ ಹೊರ ಹೊರಟು ಐದು ಸ್ಥಾವರಗಳಲ್ಲಿ ಅಸಂಖ್ಯಾತಕಾಲದವರೆಗೆ ಪರಿಭ್ರಮಣ ಮಾಡಿ ಮತ್ತೆ ನಿಗೋದದಲ್ಲಿ ಹೊರಟು ಹೋಗುವನು. ಅಲ್ಲಿ ಅನಂತಕಾಲದಲ್ಲಿ ಪುನಃ ಪುನಃ ಅನಂತಾನಂತಪರಿವರ್ತನವನ್ನು ಏಕೇಂದ್ರಿಯದಲ್ಲಿಯೇ ಮಾಡಿದನು. ಅಲ್ಲಿಯಂತೂ ವಾಣಿಯೂ ದೊರಕಲಿಲ್ಲ, ಜಿಹ್ವೇಂದ್ರಿಯವೂ ದೊರಕಲಿಲ್ಲ. ಅಲ್ಲಿಂದ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಅಸಂಜ್ಞೀ ಪಂಚೇಂದ್ರಿಯ, ಸಂಜ್ಞೀ ತಿರ್ಯಂಚ ಪಂಚೇಂದ್ರಿಯದಲ್ಲಿ ಉತ್ಪನ್ನನಾಗುವನು. ಅಲ್ಲಿ ಜಿಹ್ವೆಯಂತೂ ದೊರಕಿತು, ಆದರೆ ಅಕ್ಷರಾತ್ಮಕವಾಗಿ ಹೇಳುವ - ಕೇಳುವ ರೂಪದ ವಾಣಿ ದೊರಕಲಿಲ್ಲ. ಅತ್ಯಂತ ಕಠಿಣತೆಯಿಂದ ಅನಂತಾನಂತ ಕಾಲದಲ್ಲಿ ಈ ಮನುಷ್ಯ ಜನ್ಮ ದೊರಕಿತು; ಇಲ್ಲಿ ಮಾತನಾಡುವ ಶಕ್ತಿ ದೊರಕಿದರೆ ನೀಚಕುಲದವರ ಅಯೋಗ್ಯ ವಚನ, ಹಿಂಸೆಯ ವಚನ, ತಮ್ಮನ್ನು ಮತ್ತು ಇತರರನ್ನು ದುಃಖಿಯನ್ನಾಗಿ ಮಾಡುವಂಥ ವಚನಗಳನ್ನು ಆಡಿ ಮಹಾಪಾಪದ ಬಂಧ ಮಾಡಿಕೊಂಡು ದುರ್ಗತಿಗೆ ಪಾತ್ರನಾಗುವನು. ತನ್ನ ವಚನಗಳಿಂದಲೇ ತನ್ನ ಘಾತಕನು ತಾನಾದನು. **ಕಠಿಣತೆಯಿಂದ ಯಾವುದೋ ಪೂರ್ವ ಪುಣ್ಯದ ಉದಯದಿಂದ ಮನುಷ್ಯ ಜನ್ಮ ಪಡೆದಿದೆಯೆಂದ ಮೇಲೆ ಇದರಲ್ಲಿ ಮಾತುಗಳನ್ನು ಆಡುವಲ್ಲಿ ಅತ್ಯಂತ ಸಾವಧಾನರಾಗಿರಬೇಕು.**

ಭೋಜನ-ಪಾನ ಮಾಡುವುದು, ಕಾಮಸೇವನೆ ಮಾಡುವುದು, ನೇತ್ರಗಳಿಂದ ನೋಡುವುದು, ಕಿವಿಗಳಿಂದ ಕೇಳುವುದು, ಘ್ರಾಣದಿಂದ ಆಘ್ರಾಣಿಸುವುದನ್ನಂತೂ ನಾಯಿ, ಹಂದಿ, ಕತ್ತೆಗಳೂ ಮಾಡುತ್ತವೆ; ಏಕೆಂದರೆ ಕಣ್ಣು, ಮೂಗು, ಕಿವಿ, ನಾಲಿಗೆ, ಸ್ಪರ್ಶನ ಮತ್ತು ಕಾಮೇಂದ್ರಿಯಗಳಂತೂ ಸಮಸ್ತ ಪಶುಗಳಿಗೂ ಇರುತ್ತವೆ. ಈ ಮನುಷ್ಯ ಜನ್ಮದಲ್ಲಂತೂ ಒಂದು ವಚನ ಆಡುವುದೇ ಸಾರವಿದೆ, ಆಶ್ಚರ್ಯಕಾರಿಯಿದೆ. ಯಾವನು ಈ ವಾಣಿಯನ್ನು ಕೆಡಿಸುವನು ಅವನು ತನ್ನ ಸಮಸ್ತ ಜನ್ಮವನ್ನು ಕೆಡಿಸಿಕೊಳ್ಳುವನು.

**ವಾಣಿಯಿಂದಲೇ ಇವನು ಪಂಡಿತನಿದ್ದಾನೆ, ಇವನು ಮೂರ್ಖನಿದ್ದಾನೆ.** ಇವನು ಧರ್ಮಾತ್ಮನಿದ್ದಾನೆ; ಇವನು ಪಾಪಿಯಿದ್ದಾನೆ, ಇವನು ದೊರೆಯಿದ್ದಾನೆ, ಇವನು ಮಂತ್ರಿಯಿದ್ದಾನೆ, ಇವನು ಕೋತವಾಲನಿದ್ದಾನೆ, ಇವನು ರಂಕನಿದ್ದಾನೆ,

ಇವನು ಕುಲೀನನಿದ್ದಾನೆ, ಇವನು ಕುಲಹೀನನಿದ್ದಾನೆ, ಇವನು ಹೀನಾಚಾರಿಯಿದ್ದಾನೆ, ಇವನು ಉತ್ತಮ ಆಚಾರವುಳ್ಳವ ನಿದ್ದಾನೆ, ಇವನು ಸಂತೋಷಿಯಿದ್ದಾನೆ, ಇವನು ತೀವ್ರ ಲೋಭಿಯಿದ್ದಾನೆ, ಇವನು ಧರ್ಮವಾಸನೆಯುಳ್ಳವನಿದ್ದಾನೆ, ಇವನು ಧರ್ಮವಾಸನೆಯಿಂದ ರಹಿತನಿದ್ದಾನೆ, ಇವನು ಮಿಥ್ಯಾದೃಷ್ಟಿಯಿದ್ದಾನೆ, ಇವನು ಸಮ್ಯಗ್ದೃಷ್ಟಿಯಿದ್ದಾನೆಂಬುದು ತಿಳಿದುಬರುತ್ತದೆ.

ಈತ ಸಂಸ್ಕಾರಯುಕ್ತನಿದ್ದಾನೆ, ಈತ ಸಂಸ್ಕಾರರಹಿತನಿದ್ದಾನೆ, ಈತ ಉತ್ತಮಸಂಗತಿಯುಳ್ಳ ರಾಜ್ಯಸಭೆಯಲ್ಲಿ ದ್ದವನಿದ್ದಾನೆ, ಈತ ಗ್ರಾಮ್ಯಜನರಲ್ಲಿದ್ದವನಿದ್ದಾನೆ, ಈತ ಲೌಕಿಕ ಚತುರನಿದ್ದಾನೆ, ಈತ ಲೌಕಿಕ ಮೂರ್ಖನಿದ್ದಾನೆ, ಈತ ಹಸ್ತಕಲೆ ಬಲ್ಲವನಿದ್ದಾನೆ, ಈತ ಕಲಾವಿಜ್ಞಾನ ರಹಿತನಿದ್ದಾನೆ, ಈತ ಉದ್ಯಮಿ- ಪುರುಷಾರ್ಥಿಯಿದ್ದಾನೆ, ಈತ ಆಲಸೀ, ಪ್ರಮಾದಿಯಿದ್ದಾನೆ, ಈತ ಶೂರನಿದ್ದಾನೆ, ಈತ ಹೇಡಿಯಿದ್ದಾನೆ; ಈತ ದಾನಿಯಿದ್ದಾನೆ, ಈತ ಜಿಪುಣನಿದ್ದಾನೆ; ಈತ ದಯಾವಂತನಿದ್ದಾನೆ, ಈತ ನಿರ್ದಯಿದ್ದಾನೆ, ಈತ ದೀನ ಯಾಚಕನಿದ್ದಾನೆ, ಈತ ಮಹಂತನಿದ್ದಾನೆ; ಈತ ಕ್ರೋಧಿಯಿದ್ದಾನೆ, ಈತ ಕ್ಷಮಾಶೀಲನಿದ್ದಾನೆ; ಈತ ಅಭಿಮಾನಿಯಿದ್ದಾನೆ, ಈತ ವಿನಯವಂತನಿದ್ದಾನೆ; ಈತ ಕಪಟಿಯಿದ್ದಾನೆ, ಈತ ನಿಷ್ಕಪಟನಿದ್ದಾನೆ; ಈತ ಸರಳನಿದ್ದಾನೆ, ಈತ ವಕ್ರನಿದ್ದಾನೆ; ಇವೇ ಮೊದಲಾದ ಆತ್ಮನ ಸಮಸ್ತ ಗುಣ-ದೋಷಗಳು ವಚನಗಳಿಂದಲೇ ಪ್ರಕಟವಾಗುತ್ತವೆ. ಆದುದರಿಂದ ಮನುಷ್ಯ ಜನ್ಮದ ಸಾರ್ಥಕತೆ ಮಾಡಿಕೊಳ್ಳಪೇಕ್ಷಿಸುತ್ತಿದ್ದರೆ ಒಂದು ವಚನದ ಉಜ್ವಲತೆಯನ್ನೇ ಮಾಡಿಕೊಳ್ಳುವುದು.

ಈ ವಾಣಿಯಿಂದಲೇ ನಿಜವಾದ ಉಪದೇಶವಿತ್ತು ಅರಹಂತ ಭಗವಂತರು ಮೂರು ಲೋಕಗಳಲ್ಲಿ ವಂದನೀಯರಾಗಿ ಜಗತ್ತನ್ನು ಮೋಕ್ಷಮಾರ್ಗದಲ್ಲಿ ಪ್ರವರ್ತನೆ ಮಾಡಿಸಿದ್ದಾರೆ. ವಚನದಿಂದಲೇ ಅನೇಕ ಜೀವರುಗಳ ಮಿಥ್ಯಾತ್ವ ಮತ್ತು ರಾಗಾದಿಗಳ ಮಲವನ್ನು ದೂರ ಮಾಡಿ, ಅವರಿಗೆ ಅಜರ, ಅಮರ, ಅವಿನಾಶೀ ಪದದ ಪ್ರಾಪ್ತಿ ಮಾಡಿಸಿದ್ದಾರೆ. **ಪಂಚ ಪರಮೇಷ್ಠಿಗಳಲ್ಲಿ ಕೂಡ ವಚನಕೃತ ಉಪಕಾರದ ಪ್ರಭಾವದಿಂದ ಮೊದಲು ಅರಹಂತರಿಗೇ ನಮಸ್ಕಾರ ಮಾಡಲಾಗಿದೆ.** ಜ್ಞಾನೀ-ವೀತರಾಗಿಗಳ ವಚನಗಳಿಂದಲೇ ಸ್ವರ್ಗ, ನರಕ ಮೊದಲಾದ ಮೂರು ಲೋಕಗಳು ಪ್ರತ್ಯಕ್ಷದ ಸಮಾನ ಕಂಡು ಬರುತ್ತವೆ. ವಚನಗಳ ಸತ್ಯತೆಯ ಪ್ರಭಾವದಿಂದಲೇ ಪಂಚಮಕಾಲದಲ್ಲಿ ಧರ್ಮವು ನಡೆಯುತ್ತಲಿದೆ.

ಉಜ್ವಲ ವಚನ, ವಿನಯದ ವಚನ, ಪ್ರಿಯವಚನರೂಪದ ಪುದ್ಗಲಗಳಿಂದ ಸಮಸ್ತ ಲೋಕವು ತುಂಬಿಕೊಂಡಿದೆ; ಯಾರೂ ಬೆಲೆ ಕೊಡಬೇಕಾಗುವುದಿಲ್ಲ. ಯಾರಿಗೆ ರಾಯರೆಂದು ಹೇಳುವಲ್ಲಿ ತಮ್ಮ ಯಾವುದೇ ಅಂಗದಲ್ಲಿ ಯಾವ ಕಷ್ಟವಾಗುವುದಿಲ್ಲ; ನಾಲಿಗೆ, ತುಟಿ, ಕಂಠದಲ್ಲಿ ಛಿದ್ರವಾಗಿ ಹೋಗುವುದಿಲ್ಲ. ಆದುದರಿಂದ ಯಾವ ವಚನಗಳಿಂದ ಎಲ್ಲ ಪ್ರಾಣಿಗಳಿಗೆ ಸುಖವು ಉತ್ಪನ್ನವಾಗುವುದು ಅಂಥ ಪ್ರಿಯ ವಚನಗಳನ್ನೇ ಮಾತನಾಡಬೇಕಾಗುವುದು.

**ಅಸತ್ಯ ವಚನದ ಪ್ರಭಾವದಿಂದಲೇ ಮಿಥ್ಯಾದೇವರುಗಳ ಆರಾಧನೆಯ ಪ್ರವೃತ್ತಿಯು ನಡೆಯುತ್ತಿದೆ.** ಯಜ್ಞ ಮೊದಲಾದ ಹಿಂಸೆಯ ಪ್ರರೂಪಣೆ ಮಾಡುವ ವೇದಾದಿ ಗ್ರಂಥಗಳಲ್ಲಿ ಮಾಂಸಭಕ್ಷಣ ಮೊದಲಾದ ಕುಕರ್ಮಗಳಲ್ಲಿ ಪ್ರವೃತ್ತಿಯೂ ಅಸತ್ಯ ವಚನಗಳಿಂದಲೇ ನಡೆಯುತ್ತಿದೆ. ಕುಶಾಸ್ತ್ರಗಳ ರಚನೆ, ಅನೇಕ ಪ್ರಕಾರದ ಮಿಥ್ಯಾತ್ವರೂಪದ ಮತ, ನರಕ-ತಿರ್ಯಂಚ ಗತಿಗಳಲ್ಲಿ ಪರಿಭ್ರಮಣ ಮಾಡುವಂಥ ಸಮಸ್ತ ದುಷ್ಟ ಆಚರಣೆಯು ಈ ಅಸತ್ಯ ವಚನಗಳ ಪ್ರಭಾವದಿಂದಲೇ ನಡೆಯುತ್ತಿದೆ.

ಅಯೋಗ್ಯ ವಚನಗಳಿಂದಲೇ ಮನೆ-ಮನೆಯಲ್ಲಿ ಕಲಹ, ವಿಸಂವಾದ, ಪರಸ್ಪರರಲ್ಲಿ ವೈರ, ಹೊಡೆಯುವುದು, ಬಡೆಯುವದು, ಪ್ರಾಣ ತೆಗೆದುಕೊಳ್ಳುವುದು, ಕ್ರೋಧ, ಮಾಯೆ, ಸಂತಾಪಮಯ, ಅಪಮಾನ ಮೊದಲಾದವು ಕಂಡು ಬರುತ್ತವೆ. **ಅಪ್ರತೀತಿ, ಅವಿಶ್ವಾಸ, ಖೇದದ ಕಾರಣಗಳು ಒಂದು ಅಸತ್ಯ ವಚನವೆಂದೇ ತಿಳಿಯುವುದು.** ಅಸತ್ಯ ವಚನದ ಪ್ರಭಾವದಿಂದ ಪರಲೋಕದಲ್ಲಿ ನರಕ, ತಿರ್ಯಂಚಗತಿಗಳು ದೊರಕುತ್ತವೆ. ಕುಮನುಷ್ಯರಲ್ಲಿ, ನೀಚ, ಚಾಂಡಾಲ, ಚರ್ಮಕಾರ, ಭಿಲ್ಲ, ಕಟುಕ ಇತ್ಯಾದಿ ಕುಲಗಳಲ್ಲಿಯೂ ಅಸತ್ಯ ವಚನವೇ ಉತ್ಪನ್ನ ಮಾಡಿಸುತ್ತದೆ. ಅನೇಕ ಭವಗಳಲ್ಲಿ

ದರಿದ್ರೀ, ರೋಗಿ, ಮೂಗ, ಕಿವುಡ, ಹೀನ, ದೀನ ಮೊದಲಾದವು ಅಸತ್ಯ ವಚನದ ಪ್ರಭಾವದಿಂದಲೇ ಆಗುತ್ತವೆ.

ಸಮಸ್ತ ದುಃಖದ ಮೂಲವು ಒಂದು ಅಸತ್ಯ ವಚನವೇ ಇದೆ. ಆದುದರಿಂದ ಬೇಗನೆ ಅಸತ್ಯ ವಚನದ ತ್ಯಾಗ ಮಾಡಿ ಒಂದು ಸತ್ಯವಚನ ಪ್ರಿಯವಚನದಲ್ಲಿಯೇ ಪ್ರವೃತ್ತಿ ಮಾಡಬೇಕಾಗುವುದು. ನಿಮ್ಮ ವಚನಗಳು ಎಲ್ಲರಿಗೂ ಆದರಿಸಲು ಯೋಗ್ಯ. ಅನೇಕ ದೇವ ಮನುಷ್ಯರಿಗೆ ಮಾನ್ಯ ಮಾಡಲು ಯೋಗ್ಯವಾಗಿರಬೇಕಾಗುವುದು. ಸಮಸ್ತ ಶ್ರುತದ ಪಾರಂಗತವಿರುವ ಶ್ರುತಕೇವಲೀತನ, ಗಣಧರತನಗಳು ಸತ್ಯವಚನದ ಪ್ರಭಾವದಿಂದಲೇ ಪ್ರಾಪ್ತವಾಗುತ್ತವೆ. ಆದುದರಿಂದ ಅಸತ್ಯದ ತ್ಯಾಗದಿಂದಲೇ ಜೀವದ ಕಲ್ಯಾಣವಿದೆ. ಅದನ್ನೇ ಪುರುಷಾರ್ಥ- ಸಿದ್ಧ್ಯುಪಾಯದಲ್ಲಿ ಆಚಾರ್ಯ ಅಮೃತಚಂದ್ರರು ಹೇಳುತ್ತಾರೆ.

**ಹೇತು ಪ್ರಮತ್ತಯೋಗೇ ನಿರ್ದಿಷ್ಟೇ ಸಕಲವಿತಥವಚನಾನಾಮ್ ।**
**ಹೇಯಾನುಷ್ಠಾನಾದೇರನುವದನಂ ಭವತಿ ನಾಸತ್ಯಮ್ ॥೧೦೦॥ ಪು.ಸಿ.**

**ಭೋಗೋಪಭೋಗಸಾಧನಮಾತ್ರಂ ಸಾವದ್ಯಮಕ್ಷಮಾ ಮೋಕ್ತುಮ್ ।**
**ಯೇ ತೇऽಪಿ ಶೇಷಮನೃತಂ ಸಮಸ್ತಮಪಿ ನಿತ್ಯಮೇವ ಮುಂಚಂತು ॥೧೦೧॥ಪು.ಸಿ.**

**ಅರ್ಥ :-** ಭಗವಂತರು ಪ್ರಮತ್ತಯೋಗವನ್ನು ಸಮಸ್ತ ಅಸತ್ಯ ವಚನದ ಮೂಲ ಕಾರಣವೆಂದು ಹೇಳಿದ್ದಾರೆ. **ಕಷಾಯದ ಆಧೀನವಾಗಿ ಯಾವ ವಚನ ಹೇಳಲಾಗುತ್ತದೆ ಅದು ಅಸತ್ಯ ವಚನವಿದೆ.** ಕಷಾಯವಿಲ್ಲದೆ ಕೊಡುವುದು, ಕೊಳ್ಳುವುದು, ಧರಿಸುವುದು, ತ್ಯಾಗ ಮಾಡುವುದು, ಗ್ರಹಣ ಮಾಡುವುದು ಇತ್ಯಾದಿಗಳನ್ನು ಹೇಳುವುದು ಅದು ಅಸತ್ಯವಚನವಿಲ್ಲ. ಗೃಹಸ್ಥನು ತನ್ನ ಭೋಗೋಪಭೋಗ ಸಾಧನ ಮಾತ್ರದ ಸಂಬಂಧದಲ್ಲಿ ಸದೋಷ ವಚನ ತ್ಯಾಗ ಮಾಡುವಲ್ಲಿ ಸಮರ್ಥನಿಲ್ಲದಿದ್ದರೆ ಅನ್ಯ ನಿರರ್ಥಕ ಪಾಪಬಂಧ ಮಾಡುವಂಥ ಸಮಸ್ತ ಅಸತ್ಯ ವಚನಗಳ ತ್ಯಾಗವನ್ನು ಅವಶ್ಯವಾಗಿ ಮಾಡಿಬಿಡಬೇಕಾಗುವುದು.

**ಭಾವಾರ್ಥ :-** ಕೇವಲ ತಮ್ಮ ಭೋಗೋಪಭೋಗದ ಸಾಧನದ ಸಂಬಂಧದಲ್ಲಿ ಸದೋಷ ವಚನದ ತ್ಯಾಗವಾಗುವ ಸಾಧ್ಯತೆಯಿಲ್ಲದಿದ್ದರೆ ಅಸತ್ಯ ವಚನದ ತ್ಯಾಗ ಮಾಡುವಲ್ಲಿ ಅತ್ಯಂತ ಜಾಗರೂಕತೆಯಿರುವುದರ ಅವಶ್ಯಕತೆಯಿದೆ. ವ್ಯರ್ಥ ಅಧಿಕ ಆರಂಭ, ಅಧಿಕ ಪರಿಗ್ರಹದ ಕಾರಣ, ದುರ್ಧ್ಯಾನದ ಕಾರಣ, ತಮಗೆ ಹಾಗೂ ಅನ್ಯರಿಗೆ ಸಂತಾಪದ ಕಾರಣವಾದಂಥ ನಿಂದ್ಯ ವಚನದ - ಸದೋಷ ವಚನದ್ದಂತೂ ಅವಶ್ಯವಾಗಿ ತ್ಯಾಗ ಮಾಡುವುದು ಶ್ರೇಷ್ಠವಿದೆ. ಈ ಪ್ರಕಾರ ಸ್ಥೂಲ ಅಸತ್ಯದ ತ್ಯಾಗವೆಂಬ ಹೆಸರಿನ ಎರಡನೆಯ ಅಣುವ್ರತವನ್ನು ಹೇಳಲಾಯಿತು.

ಈಗ ಸ್ಥೂಲ ಕಳವಿನ ತ್ಯಾಗ ನಾಮದ ಮೂರನೆಯ ಅಣುವ್ರತ ಹೇಳುವಂಥ ಸೂತ್ರ ಹೇಳುತ್ತಾರೆ, -

**ನಿಹಿತಂ ವಾ ಪತಿತಂ ವಾ ಸುವಿಸ್ಮೃತಂ ವಾ ಪರಸ್ವಮವಿಸೃಷ್ಟಂ ।**
**ನ ಹರತಿ ಯನ್ನ ಚ ದತ್ತೇ ತದಕೃಶಚೌರ್ಯಾದುಪಾರಮಣಮ್ ॥೫೭॥**

**ಅರ್ಥ :-** ಯಾವನೋ ಪುರುಷನ ಭೂಮಿಯಲ್ಲಿ ಹೂಳಿಟ್ಟ ಧನವಿರಲಿ, ಯಾವುದೇ ಸ್ಥಾನದಲ್ಲಿ, ಮಹಲಿನಲ್ಲಿ, ಮಂದಿರದಲ್ಲಿ, ಮನೆ ಮೊದಲಾದವುಗಳಲ್ಲಿ ಅಡಗಿಸಿಟ್ಟ ಧನವಿರಲಿ, ತಮಗೆ ನ್ಯಾಸವಾಗಿ ಒಪ್ಪಿಸಿರಲಿ, ತಮ್ಮ ಮನೆಯಲ್ಲಿ ಅಥವಾ ಇನ್ನೊಬ್ಬರ ಮನೆಯಲ್ಲಿ ತಮಗೆ ತಿಳಿಸದೆ - ಸೂಚಿಸದೆ ಇಟ್ಟು ಬಿಟ್ಟರಲಿ, ಊರಲ್ಲಿ ನಗರದಲ್ಲಿ ದಾರಿಯಲ್ಲಿ ವನದಲ್ಲಿ ಉದ್ಯಾನದಲ್ಲಿ ಎಸೆದಿರಲಿ, ತಮಗೆ ಒಪ್ಪಿಸಿ ಮರೆತು ಹೋಗಿರಲಿ; ಲೆಕ್ಕದಲ್ಲಿ, ಎಣಿಕೆಯಲ್ಲಿ ತಪ್ಪಾಗಿ ಹೋಗಿರಲಿ; ತಮ್ಮ ಸ್ಥಾನದಲ್ಲಿ ಮರೆತು ಇಟ್ಟರಲಿ, ಬಿದ್ದಿರಲಿ, ಅಥವಾ ಕೊಡ-ಕೊಳ್ಳುವಲ್ಲಿ ಎಣಿಕೆ ಮಾಡುವಲ್ಲಿ ಮರೆತು ಹೋಗಿರುವ ದುಡ್ಡು ರೂಪಾಯಿ, ಸ್ವರ್ಣಮುದ್ರೆ, ಆಭರಣ ವಸ್ತು ಮೊದಲಾದವು ಅಧಿಕ ಬೆಲೆಯವಿರಲಿ ಅಥವಾ ಕಮ್ಮಿ ಬೆಲೆಯವಿರಲಿ ಕೊಡದಿರುವುವನ್ನು ಗ್ರಹಣ ಮಾಡಬಾರದು. ಇತರರ ವಸ್ತುವನ್ನು ಎತ್ತಿಕೊಂಡು ಬೇರೆ ಯಾರಿಗೂ ಕೊಡಬಾರದು. ಇದು ಸ್ಥೂಲ ಕಳವಿನ ತ್ಯಾಗರೂಪ ಅಣುವ್ರತವಿದೆ. ಈ ವಿಷಯದಲ್ಲಿ ಸ್ವಾಮಿ ಕಾರ್ತಿಕೇಯ ಮುನಿಗಳಂತೂಹೀಗೆ ಹೇಳುತ್ತಾರೆ,-

**ಜೋ ಬಹುಮುಲ್ಲಂ ವತ್ಥುಂ ಅಪ್ಪಮುಲ್ಲೇಣ ಣೇಯ ಗಿಣ್ಹೇದಿ ।**
**ವೀಸರಿಯಂಪಿ ಣ ಗಿಣ್ಹದಿ ಲಾಹೇ ಥೋಯೇವಿ ತೂಸೇದಿ ॥೩೩೫॥ ಕಾ. ಅನು.**

**ಅರ್ಥ :-** ಯಾವನಿಗೆ ಸ್ಥೂಲ ಕಳುವಿನ ತ್ಯಾಗವಿರುತ್ತದೆ ಅವನು ಅಧಿಕ ಬೆಲೆಯ ವಸ್ತುವನ್ನು ಅಲ್ಪ ಬೆಲೆಯಲ್ಲಿ ಗ್ರಹಣ ಮಾಡುವುದಿಲ್ಲ. ಹೇಗೆಂದರೆ ಯಾವನೋ ಓರ್ವ ಪುರುಷನು ತನ್ನ ವಸ್ತುವನ್ನು ಸರಿಯಾಗಿ ಲೆಕ್ಕ ಹಾಕಿ ತಮಗೆ ಮಾರಿದರೆ ಒಂದೂಕಾಲು ರೂಪಾಯಿಯಲ್ಲಿ ಮಾರಿಬಿಡಬಹುದು. ಆದರೆ ಅವನು ಆ ವಸ್ತುವನ್ನು ನೇರವಾಗಿಯೇ ಬಂದು ತಮಗೆ ಒಪ್ಪಿಸುವನು ಮತ್ತು ಇದರ ಯಾವ ಸರಿಯಾದ ಬೆಲೆಯಾಗುತ್ತದೆ ಅದನ್ನು ತಾವು ನನಗೆ ಕೊಟ್ಟು ಬಿಡಿರೆಂದು ಹೇಳುತ್ತಾನೆ. ಅಲ್ಲಿ ಅವನು ಇದು ಒಂದೂ ಕಾಲು ರೂಪಾಯಿಯ ವಸ್ತುವಿದೆಯೆಂಬುದನ್ನು ಸ್ಪಷ್ಟವಾಗಿ ತಿಳಿದೂ ಕೂಡ ಲೋಭದ ವಶನಾಗಿ ಒಂದು ರೂಪಾಯಿಗೆ ಕೊಂಡುಕೊಳ್ಳುವುದಿಲ್ಲ, ಅದಕ್ಕೆ ಸರಿಯಾದ ಬೆಲೆಯನ್ನೇ ಕೊಡುತ್ತಾನೆ. ಇತರರು ಮರೆತು ಹೋದ ವಸ್ತುವನ್ನು ಗ್ರಹಣಮಾಡುವುದಿಲ್ಲ. ಯಾವನೋ ನಿರ್ಧನ ಅಥವಾ ಅಜ್ಞಾನಿಯ ವಸ್ತುವು ನಮಗೆ ಅಲ್ಪ ಬೆಲೆಯಲ್ಲಿ ದೊರೆತರೆ ಒಳ್ಳೆಯದಿದೆಯೆಂಬ ಪರಿಣಾಮವನ್ನೂ ಮಾಡುವುದಿಲ್ಲ. ಅವನಂತೂ ಅಲ್ಪಲಾಭದಲ್ಲಿಯೇ ಅತ್ಯಂತ ಸಂತುಷ್ಟನಾಗಿರುತ್ತಾನೆ.

**ಭಾವಾರ್ಥ :-** ಯಾವನು ವಣಿಜ ವ್ಯವಹಾರದಲ್ಲಿ ಮತ್ತು ನೌಕರಿಯಲ್ಲಿ ಅಲ್ಪ ಲಾಭವಾದರೂ ಕೂಡ ಸಂತುಷ್ಟನಾಗಿಯೇ ಇರುತ್ತಾನೆ, ಅಧಿಕದ ಅಪೇಕ್ಷೆ ಮಾಡುವುದಿಲ್ಲ ಅವನಿಗೆ ಸ್ಥೂಲ ಕಳವಿನ ತ್ಯಾಗವಿದೆಯೆಂದು ತಿಳಿಯುವುದು.

ಈ ಅಚೌರ್ಯಾಣುವ್ರತದ ಐದು ಅತಿಚಾರಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಚೌರಪ್ರಯೋಗ ಚೌರಾರ್ಥದಾನ ವಿಲೋಪಸದೃಶಸನ್ಮಿಶ್ರಾಃ ।**
**ಹೀನಾಧಿಕವಿನಿಮಾನಂ ಪಂಚಾಸ್ತೇಯೇ ವ್ಯತೀಪಾತಾಃ ॥೫೮॥**

**ಅರ್ಥ :-** ಅಚೌರ್ಯವೆಂಬ ಹೆಸರಿನ ಅಣುವ್ರತದಲ್ಲಿ ಐದು ಅತಿಚಾರಗಳಿವೆ.

೧) ಸ್ವಯಂ ತಾವಂತೂ ಕಳವು ಮಾಡುವುದಿಲ್ಲ, ಆದರೆ ಇತರರಿಗೆ ಕಳವು ಮಾಡುವ ಪ್ರೇರಣೆ ಕೊಡಲಾಗುತ್ತದೆ ಮತ್ತು ಕಳವು ಮಾಡುವ ಉಪಾಯ ತಿಳಿಸಿಕೊಡಲಾಗುತ್ತದೆ. ಅದು **ಚೋರಪ್ರಯೋಗ** ನಾಮದ ಅತಿಚಾರವಿದೆ.

೨) ಕಳ್ಳನಿಂದ ಕಳವು ಮಾಡಿ ತಂದ ಧನವನ್ನು ತೆಗೆದುಕೊಳ್ಳುವುದು ಅದು **ಚೋರಾರ್ಥದಾನ** ನಾಮದ ಅತಿಚಾರವಿದೆ.

೩) ಉಚಿತನ್ಯಾಯದ ರೀತಿ ಬಿಟ್ಟು ಅನ್ಯರೀತಿಯಿಂದ ಧನಗ್ರಹಣ ಮಾಡುವುದು, ಮತ್ತು ದೊರೆಯ ಆಜ್ಞೆಯ ಪ್ರಕಾರ ಯಾವ ಕಾರ್ಯ ಮಾಡುವುದರ ನಿಷೇಧವಿದೆ, ಆ ಕಾರ್ಯವನ್ನು ಮಾಡಿ ಧನಗ್ರಹಣ ಮಾಡುವುದು ಅದು **ವಿಲೋಪ**ವೆಂಬ ಹೆಸರಿನ ಅತಿಚಾರವಿದೆ.

೪) ಅಧಿಕಬೆಲೆಯುಳ್ಳ ವಸ್ತುವಿನಲ್ಲಿ ಅಲ್ಪಬೆಲೆಯ ವಸ್ತುವನ್ನು ಸೇರಿಸಿ ನಡೆಸುವುದು ಅದು ಸಾದೃಶಸನ್ಮಿಶ್ರನಾಮದ ಅತಿಚಾರವಿದೆ. ಹೇಗೆಂದರೆ ತುಪ್ಪದಲ್ಲಿ ಎಣ್ಣೆ ಸೇರಿಸುವುದು, ಶುದ್ಧ ಚಿನ್ನದಲ್ಲಿ ಕೃತ್ರಿಮ ಚಿನ್ನ ಸೇರಿಸುವುದು ಅದು **ಸದೃಶಸನ್ಮಿಶ್ರ**ವಿದೆ.

೫) ಕೊಡುವ ತಕ್ಕಡಿ ಮೊದಲಾದುವನ್ನು ಕಡಿಮೆ ಪ್ರಮಾಣದಲ್ಲಿಡುವುದು ಮತ್ತು ತೆಗೆದುಕೊಳ್ಳುವುದನ್ನು ಅಧಿಕ ಪ್ರಮಾಣದಲ್ಲಿಡುವುದು ಅದು **ಹೀನಾಧಿಕ ಮಾನೋನ್ಮಾನ**ವೆಂಬ ಹೆಸರಿನ ಅತಿಚಾರವಿದೆ.

ಈ ಪ್ರಕಾರ ಸ್ಥೂಲ ಕಳವಿನ ತ್ಯಾಗ ನಾಮದ ಅಣುವ್ರತದಲ್ಲಿ ಈ ಐದು ಅತಿಚಾರಗಳು ತ್ಯಾಗಯೋಗ್ಯವಿವೆ.

**ಈ ಕಳವಿಗೆ ಸಮಾನವಾಗಿ ಜಗತ್ತಿನಲ್ಲಿ ಇನ್ನೊಂದು ಅಪರಾಧವಿಲ್ಲ,** ಸಮಸ್ತ ಉಚ್ಚತೆ, ಕುಲ, ಧರ್ಮ, ಕರ್ಮಗಳನ್ನು ವಿನಾಶ ಮಾಡುವಂಥ ಮತ್ತು ಸಮಸ್ತ ಪ್ರತೀತಿ, ದೊಡ್ಡಸ್ತಿಕೆಯ ವಿಧ್ವಂಸ ಮಾಡುವಂಥದ್ದು ಈ ಕಳವು ಇದೆ. ಕಳವಿನ ಧನವು ಕೂಡ ವೇಶ್ಯಾಸೇವನೆಯಲ್ಲಿ, ಪರಸ್ತ್ರೀಯಲ್ಲಿ, ವ್ಯಸನಗಳಲ್ಲಿ, ಅಭಕ್ಷ್ಯ ಭಕ್ಷಣದಲ್ಲಿ ಖರ್ಚು ಆಗುತ್ತದೆ, ಮತ್ತು ಬೇರೆ ಯಾರ ಹತ್ತಿರದಲ್ಲಿಯೇ ಇಟ್ಟು ಬಿಡಲಾಗುತ್ತದೆ, ಸಂತೋಷವಿರುವುದಿಲ್ಲ, ಅಖಂಡ ಕ್ಲೇಶವೇ ಉಳಿದುಬಿಡುತ್ತದೆ. ಒಂದು ವೇಳೆ ಕಳವಿನ ಧನದ ಸುಳಿವು ಸಿಕ್ಕಿದರೆ ಕಳ್ಳನಿಗೆ ದೊರೆಗಳು ತೀವ್ರ ದಂಡನೆ ಕೊಡುತ್ತಾರೆ. ಸಮಸ್ತ ಜನರು ಹೊಡೆಯುತ್ತಾರೆ. ಕೈ-ಕಾಲುಗಳನ್ನು ಕತ್ತರಿಸಿ ಹಾಕುವುದು, ಸರ್ವಸ್ವ ಹರಣ ಮೊದಲಾದ ದಂಡನೆಗಳು ಇಲ್ಲಿಯೇ ಪ್ರಾಪ್ತವಾಗುತ್ತವೆ; ಪರಲೋಕದಲ್ಲಿ ನರಕ ಮೊದಲಾದ ಕುಯೋನಿಗಳಲ್ಲಿ ಪರಿಭ್ರಮಣ ಮಾಡಬೇಕಾಗುತ್ತದೆ.

ಈಗ ಸ್ಥೂಲ ಬ್ರಹ್ಮಚರ್ಯ ನಾಮದ ಅಣುವ್ರತದ ಸ್ವರೂಪ ನಿರೂಪಿಸುವಂಥ ಸೂತ್ರ ಹೇಳುತ್ತಾರೆ, -

**ನ ಚ ಪರದಾರಾನ್ ಗಚ್ಛತಿ ನ ಪರಾನ್ ಗಮಯತಿ ಚ ಪಾಪಭೀತೇರ್ಯತ್ ।**
**ಸಾ ಪರದಾರನಿವೃತ್ತಿಃ ಸ್ವದಾರಸಂತೋಷನಾಮಾಪಿ ॥೫೯॥**

**ಅರ್ಥ :-** ಯಾರು ಪಾಪದ ಭಯದಿಂದ ಪರಸ್ತ್ರೀಯ ಕಡೆಗೆ ತಾವು ಹೋಗುವುದಿಲ್ಲ, ಮತ್ತು ಪರಸ್ತ್ರೀಯ ಕಡೆಗೆ ಇತರರನ್ನು ಕಳಿಸುವುದಿಲ್ಲ, ಅದು ಸ್ವದಾರ ಸಂತೋಷನಾಮದ ಅಥವಾ ಪರಸ್ತ್ರೀಯ ತ್ಯಾಗನಾಮದ ಅಣುವ್ರತವಿದೆ.

**ಭಾವಾರ್ಥ :-** ಯಾರು ತಮ್ಮ ಜಾತಿಯ, ಕುಲೀನ ಮನೆತನದ, ಸಾಕ್ಷೀಪೂರ್ವಕವಾಗಿ ಮದುವೆ ಮಾಡಿಕೊಂಡ ಸ್ತ್ರೀಯಲ್ಲಿಯೇ ಸಂತೋಷ ಧಾರಣ ಮಾಡಿ ; ಅವಳಿಂದ ಭಿನ್ನವಾದ ಅನ್ಯ ಸಮಸ್ತ ಸ್ತ್ರೀಯರಲ್ಲಿ ರಾಗಭಾವದ ತ್ಯಾಗ ಮಾಡಿ; ಪರಸ್ತ್ರೀ, ವೇಶ್ಯೆ, ದಾಸೀ, ಕುಲಟೆ, ಅವಿವಾಹಿತೆ ಮೊದಲಾದ ಸ್ತ್ರೀಯರಲ್ಲಿ ವಿರಾಗತೆಗೆ ಪ್ರಾಪ್ತರಾಗಿ, ಸ್ತ್ರೀಯರನ್ನು ರಾಗ ಭಾವದೊಡನೆ ಭೆಟ್ಟಿಯಾಗುವುದು, ಮಾತುಕತೆ ಮಾಡುವುದು, ಅವಲೋಕನ ಮಾಡುವುದು, ಸ್ಪರ್ಶ ಮಾಡುವುದು ಮೊದಲಾದವುಗಳ ತ್ಯಾಗ ಮಾಡುತ್ತಾರೆ, ಅವರು ಪರಸ್ತ್ರೀಯ ತ್ಯಾಗಿ ಮತ್ತು ಸ್ವದಾರ-ಸಂತೋಷಿಯೆಂದೂ ಕರೆಸಿಕೊಳ್ಳುತ್ತಾರೆ.

ಈಗ ಸ್ವದಾರ ಸಂತೋಷ ವ್ರತದ ಐದು ಅತಿಚಾರಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಅನ್ಯ ವಿವಾಹಾಕರಣಾನಂಗಕ್ರೀಡಾವಿಟತ್ವವಿಪುಲತೃಷಃ ।**
**ಇತ್ವರಿಕಾಗಮನಂ ಚಾಸ್ಮರಣಸ್ಯ ಪಂಚ ವ್ಯತೀಚಾರಾಃ ॥೬೦॥**

**ಅರ್ಥ :-** ಅಸ್ಮರ ಎಂದರೆ ಸ್ಥೂಲ ಬ್ರಹ್ಮಚರ್ಯವ್ರತದ ಯಾವ ಐದು ಅತಿಚಾರಗಳಿವೆ ಅವು ತ್ಯಾಗ ಯೋಗ್ಯವಿವೆ.

೧) ತಮ್ಮ ಪುತ್ರ-ಪುತ್ರಯ ಹೊರತಾಗಿ ಇತರರ ಪುತ್ರ-ಪುತ್ರಿಯರ ಮದುವೆಯನ್ನು ಸಮಂತಾತ್ ಎಂದರೆ ತಾವು ರಾಗಿಯಾಗಿ ಮಾಡಿಸುವುದು ಅದು **ಅನ್ಯವಿವಾಹಕರಣ** ನಾಮದ ಅತಿಚಾರವಿದೆ.

೨) ಕಾಮದ ನಿಶ್ಚಿತ ಅಂಗವನ್ನು ಬಿಟ್ಟುಕೊಟ್ಟು ಅನ್ಯ ಅಂಗಗಳಿಂದ ಕ್ರೀಡೆ ಮಾಡುವುದು ಅದು **ಅನಂಗಕ್ರೀಡೆ ನಾಮದ ಅತಿಚಾರವಿದೆ.**

೩) ನಪುಂಸಕ ಪುರುಷನನ್ನು ಸ್ತ್ರೀಯ ವೇಷದಿಂದ ಅಲಂಕರಿಸಿ ಮನ-ವಚನ-ಕಾಯದಿಂದ ಕುಶೀಲದ ಪ್ರವೃತ್ತಿ ಮಾಡುವುದು ಮತ್ತು ಇತರರಿಂದ ಮಾಡಿಸುವುದು ಅದು **ವಿಟತ್ವ** ನಾಮದ ಅತಿಚಾರವಿದೆ.

೪) ಕಾಮ ಸೇವನೆಯ ತೃಷ್ಣೆ, ತೀವ್ರತೆ ಲಾಲಸೆಯನ್ನಿಡುವುದು ಅದು **ವಿಪುಲತೃಷೆ** ನಾಮದ ಅತಿಚಾರವಿದೆ.

೫) ಪತಿಯಿಲ್ಲದ ವೇಶ್ಯೆ ಮೊದಲಾದ ಮತ್ತು ವ್ಯಭಿಚಾರಿಣಿ, ಸ್ತ್ರೀಯರನ್ನು ಇತ್ವಾರಿಕೆಯೆಂದು ಹೇಳುತ್ತಾರೆ. ಆ

ವ್ಯಭಿಚಾರಿಣೀ ಸ್ತ್ರೀಯರ ಮನೆಗೆ ಬರಹೋಗುವುದು, ಅವರನ್ನು ತಮ್ಮ ಮನೆಗೆ ಕರೆಸುವುದು, ಅವರೊಡನೆ ಕೊಡ-ಕೊಳ್ಳುವಿಕೆ ಮಾಡುವುದು ಮಾತುಕತೆ ಮಾಡುವುದು, ಅವರ ರೂಪ-ಶೃಂಗಾರಗಳನ್ನು ನೋಡುವುದು ಅದು **ಇತ್ವರಿಕಾಗಮನ** ನಾಮದ ಅತಿಚಾರವಿದೆ.

ಈ ಐದು ಸ್ಥೂಲ ಬ್ರಹ್ಮಚರ್ಯವ್ರತದ ಅತಿಚಾರಗಳನ್ನು ದೂರದಿಂದಲೇ ಬಿಟ್ಟು ಕೊಡುವುದು ಯೋಗ್ಯವಿದೆ. ದೇವಗಳಿಂದ ಪೂಜ್ಯವಿರುವಂಥ ಆ ಬ್ರಹ್ಮಚರ್ಯವ್ರತದ ರಕ್ಷಣೆ ಮಾಡಬೇಕೆನ್ನುವವರು **ತಮ್ಮ ವಿವಾಹಿತ ಸ್ತ್ರೀಯನ್ನು ಹೊರತು ಪಡಿಸಿ ಉಳಿದ ತಾಯಿ, ಮಗಳು, ಸೋದರಿ, ಸೊಸೆ ಮೊದಲಾದವರ ಹತ್ತಿರ ಮತ್ತು ಏಕಾಂತ ಸ್ಥಾನದಲ್ಲಿ ಕೂಡ ವಾಸ ಮಾಡಬಾರದು.** ಅನ್ಯ ಸ್ತ್ರೀಯರ ಮುಖ ಕಣ್ಣುಗಳಿಗೆ ತಮ್ಮ ಕಣ್ಣುಗಳನ್ನು ಸೇರಿಸಿ -ಇರಿಸಿ ನೆಟ್ಟ ದೃಷ್ಟಿಯಿಂದ ನೋಡಬಾರದು. **ಶೀಲವಂತ ಪುರುಷರ ಕಣ್ಣುಗಳಂತೂ ಅನ್ಯ ಸ್ತ್ರೀಯರನ್ನು ನೋಡುತ್ತಿದ್ದಂತೆ ಕೂಡಲೆ ಮುಚ್ಚಿ ಬಿಡುತ್ತವೆ.**

ಈಗ ಪರಿಗ್ರಹ ಪರಿಮಾಣ ಅಣುವ್ರತವನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಧನಧಾನ್ಯಾದಿಗ್ರಂಥಂ ಪರಿಮಾಯ ತತೋಽಧಿಕೇಷು ನಿಃಸ್ಪೃಹತಾ ।**
**ಪರಿಮಿತಪರಿಗ್ರಹಃ ಸ್ಯಾದಿಚ್ಛಾಪರಿಮಾಣನಾಮಾಪಿ ॥೬೧॥**

**ಅರ್ಥ :-** ತಮ್ಮ ಪರಿಣಾಮದಲ್ಲಿ ಪರಿಗ್ರಹದಿಂದ ಸಂತೋಷವಾಗುವಷ್ಟು ಧನ, ಧಾನ್ಯ, ದ್ವಿಪದ, ಚತುಷ್ಪದ, ಕ್ಷೇತ್ರ, ವಾಸ್ತು, ಆಭರಣ (ವಾಹನ, ಆಸನ, ವಸ್ತ್ರ ಪಾತ್ರೆ) ಮೊದಲಾದ ಪರಿಗ್ರಹದ ಪರಿಮಾಣಮಾಡಿ ಅಧಿಕಪರಿಗ್ರಹದಲ್ಲಿ ನಿರಿಚ್ಛೆಯ ಭಾವವಿಡುವುದು ಅದು ಪರಿಮಿತ ಪರಿಗ್ರಹನಾಮದ ಅಣುವ್ರತವಿದೆ. ಇದನ್ನು ಇಚ್ಛಾಪರಿಮಾಣ ನಾಮದಿಂದಲೂ ಕರೆಯುತ್ತಾರೆ.

ಯಾವನ ಹತ್ತಿರ ವರ್ತಮಾನದಲ್ಲಂತೂ ಸ್ವಲ್ಪ ಪರಿಗ್ರಹವಿದೆ, ಆದರೆ ಇಚ್ಛೆಯು ಅಧಿಕವಿರುವುದರಿಂದ ಅಧಿಕ ಧನದಲ್ಲಿ ಪರಿಮಾಣ ಮಾಡಿ ಮರ್ಯಾದೆ ಹಾಕಿಕೊಳ್ಳುತ್ತಿದ್ದಾರೆ ಅವನು ಕೂಡ ಧರ್ಮಬುದ್ಧಿಯುಳ್ಳವನೇ ಇದ್ದಾನೆ. ವ್ರತಿಯಿದ್ದಾನೆ, ಆದರೆ **ಅನ್ಯಾಯದಿಂದ ತೆಗೆದುಕೊಳ್ಳುವುದರ ತ್ಯಾಗವನ್ನು ದೃಢತೆಯಿಂದ ಮಾಡುತ್ತಾನೆ.** ಹೇಗೆಂದರೆ ಒಬ್ಬರ ಹತ್ತಿರ ವರ್ತಮಾನದಲ್ಲಿ ನೂರು ರೂಪಾಯಿ ಪರಿಗ್ರಹವಿದೆ, ಆದರೆ ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಗ್ರಹಣ ಮಾಡಲಾರೆನೆಂದು ಒಂದು ಸಾವಿರ ರೂಪಾಯಿಯ ಪರಿಗ್ರಹ ಮಾಡುತ್ತಾನೆ, ಅದೂ ಕೂಡ ವ್ರತವಿದೆ; ಆದರೆ ಸಾವಿರ ರೂಪಾಯಿಗಳನ್ನು ಅನ್ಯಾಯದಿಂದ ಗ್ರಹಣ ಮಾಡಲಾರೆನೆಂದು ದೃಢ ನಿಯಮ ಮಾಡುತ್ತಾನೆ. ಪರಿಗ್ರಹದ ಪರಿಮಾಣ ಮಾಡಿದಲ್ಲದೆ ಪರಿಣಾಮವು ನಿರಂತರ ಅನೇಕ ವಸ್ತುಗಳನ್ನು ಪ್ರಾಪ್ತ ಮಾಡಿಕೊಳ್ಳುವುದರಲ್ಲಿ ಪರಿಭ್ರಮಣ ಮಾಡುತ್ತಿರುತ್ತದೆ.

**ಸಮಸ್ತ ಪಾಪಗಳ ಮೂಲಕಾರಣವು ಪರಿಗ್ರಹವಿದೆ, ಸಮಸ್ತದುಷ್ಟಧ್ಯಾನವು ಪರಿಗ್ರಹದಿಂದಲೇ ಆಗುತ್ತದೆ, ಆದುದರಿಂದ ಭಗವಂತರು ಮೂರ್ಛೆಯನ್ನು ಪರಿಗ್ರಹವೆಂದು ಹೇಳಿದ್ದಾರೆ.** ಬಾಹ್ಯ ಪರಿಗ್ರಹವಂತೂ ಅನ್ನ-ವಸ್ತ್ರ ಮತ್ತು ವಾಸಿಸಲು ಕುಟೀರ ಮಾತ್ರವಿದ್ದರೂ ಒಂದು ವೇಳೆ ಪರವಸ್ತುವಿನಲ್ಲಿ ಮಮತೆ (ಇಚ್ಛೆ) ಸಹಿತನಿದ್ದರೆ ಅವನು ಪರಿಗ್ರಹಿಯೇ ಇದ್ದಾನೆ.

ಪರಮಾಗಮದಲ್ಲಿ೧) ಮಿಥ್ಯಾತ್ವ, ೨) ವೇದ, ೩) ರಾಗ, ೪) ದ್ವೇಷ, ೫) ಕ್ರೋಧ, ೬) ಮಾನ, ೭) ಮಾಯೆ, ೮) ಲೋಭ, ೯) ಹಾಸ್ಯ, ೧೦) ರತಿ, ೧೧) ಅರತಿ, ೧೨) ಶೋಕ, ೧೩) ಭಯ ಮತ್ತು ೧೪) ಜುಗುಪ್ಸೆಯೆಂದು ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹಗಳನ್ನು ಹೇಳಿದೆ.

ಮಿಥ್ಯಾತ್ವ ಎಂದರೆ ಅನಾದಿಕಾಲದಿಂದ ದೇಹ ಮೊದಲಾದ ಪರದ್ರವ್ಯಗಳಲ್ಲಿ ಮಮತ್ವಬುದ್ಧಿ, ಏಕತ್ವಬುದ್ಧಿ ರೂಪದ ಪರಿಣಾಮವಿದೆ. ಈ ದೇಹವೇ ನಾನಿದ್ದೇನೆ, ಜಾತಿ ನಾನಿದ್ದೇನೆ, ಕುಲನಾನಿದ್ದೇನೆ ಇತ್ಯಾದಿ **ಪರಪುದ್ಗಲಗಳಲ್ಲಿ ಆತ್ಮ ಬುದ್ಧಿಯು ಅನಾದಿಯಿಂದಲೇ ಅಂಟಿಕೊಂಡಿದೆ, ಅದೇ ಬುದ್ಧಿಯು ಮಿಥ್ಯಾಬುದ್ಧಿಯಿದೆ.** ರಾಗ-ದ್ವೇಷ ಭಾವಗಳು,

ಕ್ರೋಧಾದಿಭಾವಗಳು ಮೋಹಕರ್ಮದಿಂದ ಮಾಡಲಾದ ಭಾವಗಳಿವೆ. **ಆ ಭಾವಗಳಲ್ಲಿ ಆತ್ಮತನದ ಸಂಕಲ್ಪವೇ ಮಿಥ್ಯಾತ್ವ ಪರಿಗ್ರಹವಿದೆ.** ಕಾಮದಿಂದ ಉತ್ಪನ್ನವಾದ ವಿಕಾರದಲ್ಲಿ ಲೀನವಾಗಿ ಹೋಗುವುದು, ರಾಗ, ದ್ವೇಷ, ಕ್ರೋಧ, ಮಾನ, ಮಾಯೆ, ಲೋಭ, ಹಾಸ್ಯ ಮೊದಲಾದ ಆರು ನೋಕಷಾಯಗಳಲ್ಲಿ ಆತ್ಮತನದ ಭಾವವಿಡುವುದು ಅದು ಅಂತರಂಗ ಪರಿಗ್ರಹವಿದೆ. **ಯಾವನಿಗೆ ಅಂತರಂಗ ಪರಿಗ್ರಹದ ಅಭಾವವಾಗಿದೆ, ಅವನಿಗೆ ಬಾಹ್ಯ ಪರಿಗ್ರಹದಲ್ಲಿ ಮಮತೆಯಿರುವುದಿಲ್ಲ.**

**ಪರಿಗ್ರಹದಲ್ಲಿ ಮಮತೆಯಿರುವುದರ ಕಾರಣದಿಂದಲೇ ಸಮಸ್ತ ಪ್ರಕಾರದ ಅನೀತಿಗಳನ್ನು ಮಾಡುತ್ತಾನೆ.** ಪರಿಗ್ರಹದ ಇಚ್ಛೆಯಿಂದ ಹಿಂಸೆ ಮಾಡುತ್ತಾನೆ, ಅಸತ್ಯ ನುಡಿಯುತ್ತಾನೆ, ಕಳವು ಮಾಡುತ್ತಾನೆ, ಕುಶೀಲದ ಸೇವನೆಯನ್ನೂ ಮಾಡುತ್ತಾನೆ. ಪರಿಗ್ರಹದ ಸಲುವಾಗಿ ಸತ್ತು ಹೋಗುತ್ತಾನೆ, ಅನ್ಯರನ್ನು ಕೊಂದು ಹಾಕುತ್ತಾನೆ, ಅತ್ಯಂತ ಕ್ರೋಧ ಮಾಡುತ್ತಾನೆ, ಪರಿಗ್ರಹದ ಪ್ರಭಾವದಿಂದ ತೀರ ಅಭಿಮಾನ ಮಾಡುತ್ತಾನೆ. ಪರಿಗ್ರಹದ ಸಲುವಾಗಿ ಅನೇಕ ಮಾಯಾಚಾರಗಳನ್ನು ಮಾಡುತ್ತಾನೆ. ಪರಿಗ್ರಹದ ಮಮತೆಯಿಂದ ಅತ್ಯಂತ ಲೋಭ ಮಾಡುತ್ತಾನೆ. ಅಧಿಕ ಆರಂಭ ಹಾಗೂ ಅಧಿಕ ಕಷಾಯದ ಮೂಲವು ಪರಿಗ್ರಹವೇ ಇದೆ. **ಯಾರು ಸಮಸ್ತ ಪಾಪಗಳಿಂದ ಬಿಡುಗಡೆ ಹೊಂದಲಪೇಕ್ಷಿಸುತ್ತಾರೆ ಅವರು ಪರಿಗ್ರಹದಿಂದ ವಿರಕ್ತರಾಗುತ್ತಾರೆ.**

ಇದನ್ನೇ ಕಾರ್ತಿಕೇಯ ಅನುಪ್ರೇಕ್ಷೆಯಲ್ಲಿ ಕಾರ್ತಿಕೇಯ ಸ್ವಾಮಿಗಳು ಹೇಳುತ್ತಾರೆ, -

**ಕೋ ಣ ವಸೋ ಇತ್ಥಿಜಣೇ ಕಸ್ಸ ಣ ಮಯಣೇಣ ಖಂಡಿಯಂ ಮಾಣಂ ।**
**ಕೋ ಇಂದಿಏಹಿಂ ಣ ಜಿಯೋ ಕೋ ಣ ಕಸಾಏಹಿಂ ಸಂತತ್ತೋ ।।೨೮೧।।**
**ಸೋ ಣ ವಸೋ ಇತ್ಥಿಜಣೇ ಸೋ ಣ ಜಿಯೋ ಇಂದಿಏಹಿಂ ಮೋಹೇಣ ।**
**ಜೋ ಣ ಯ ಗಿಣ್ಹದಿ ಗಂಥಂ ಅಬ್ಭಂತರ ಬಾಹಿರಂ ಸವ್ವಂ ।।೨೮೨।।**
**ಜೋ ಲೋಹಂ ಣಿಹಣಿತ್ತಾ ಸಂತೋಸ-ರಸಾಯಣೇಣ ಸಂತುಟ್ಠೋ ।**
**ಣಿಹಣದಿ ತಿಣ್ಹಾ ದುಟ್ಠಾ ಮಣ್ಣಂತೋ ವಿಣಸ್ಸರಂ ಸವ್ವಂ ।।೩೩೯।।**
**ಜೋ ಪರಿಮಾಣಂ ಕುವ್ವದಿ ಧಣಧಾಣ ಸುವಣ್ಣ ಖಿತ್ತಮಾಈಣಂ ।**
**ಉವಓಗಂ ಜಾಣಿತ್ತಾ ಅಣುವ್ವದಂ ಪಂಚಮಂ ತಸ್ಸ ।।೩೪೦।। ಕಾ.ಅ.**

**ಅರ್ಥ :-** ಈ ಜಗತ್ತಿನಲ್ಲಿ ಯಾರು ಸ್ತ್ರೀಯರ ವಶದಲ್ಲಿ ಇಲ್ಲ ? ಕಾಮ ವಿಕಾರವು ಯಾರ ಮಾನದ ಖಂಡನೆ ಮಾಡಿಲ್ಲ ? ಇಂದ್ರಿಯಗಳಿಂದ ಯಾರು ತಾನೆ ಪರಾಜಿತರಾಗಿಲ್ಲ ? ಕಷಾಯಗಳಿಂದ ಯಾರು ತಾನೆ ಸಂತಪ್ತರಿಲ್ಲ?

ಸಮಸ್ತ ಸಂಸಾರೀ ಜೀವರುಗಳು ಸ್ತ್ರೀಯರ ವಶೀಭೂತರಾಗುತ್ತಿದ್ದಾರೆ. ಕಾಮ ವಿಕಾರವು ಸಮಸ್ತ ಸಂಸಾರೀ ಜೀವಗಳ ಮಾನಹರಣ ಮಾಡಿಬಿಟ್ಟಿದೆ. ಸಮಸ್ತ ಸಂಸಾರೀ ಜೀವರುಗಳು ಇಂದ್ರಿಯಗಳ ವಶೀಭೂತರಾಗಿ ಪರಾಧೀನರಾಗುತ್ತಲಿದ್ದಾರೆ. ಸಮಸ್ತ ಪ್ರಾಣಿಗಳು ನಾಲ್ಕೂ ಕಷಾಯಗಳಿಂದ ಸುಟ್ಟು ಹೋಗುತ್ತಲಿವೆ.

ಯಾವ ಪುರುಷನು ಸಮಸ್ತ ಅಂತರಂಗ ಮತ್ತು ಬಾಹ್ಯ ಪರಿಗ್ರಹಗಳನ್ನು ಗ್ರಹಣ ಮಾಡುವುದಿಲ್ಲ ಅವನೇ ಸ್ತ್ರೀಯರ ವಶವರ್ತಿಯಿಲ್ಲ, ಅವನೇ ಇಂದ್ರಿಯಗಳ ಆಧೀನನಿಲ್ಲ, ಅವನನ್ನೇ ಮೋಹವು ಜಯಿಸಲಸಮರ್ಥವಿದೆ, ಅವನದೇ ಕಾಮ ವಿಕಾರದ ಮೂಲಕ ಮೌನವು ಖಂಡಿತವಾಗಿ ಹೋಗಿಲ್ಲ, ಅವನೇ ಕಷಾಯಗಳಲ್ಲಿ ಬೆಂದು ಹೋಗುತ್ತಿಲ್ಲ.

ಯಾವ ಪುರುಷನು ಲೋಭವನ್ನು ನಷ್ಟಮಾಡಿ, ಸಂತೋಷ ರೂಪರಸಾಯನ (ಔಷಧ) ದ ಮೂಲಕ ಆನಂದಿತನಾಗಿ, ಸಮಸ್ತ ಧನಸಂಪತ್ತಿಯನ್ನು ವಿನಾಶಶೀಲವೆಂದು ಮನ್ನಿಸಿ ದುಷ್ಟ ತೃಷ್ಣೆಯನ್ನು-ಭಾವೀ ಇಚ್ಛೆಯನ್ನು ಬಿಟ್ಟುಕೊಟ್ಟು ಧನ, ಧಾನ್ಯ, ಸ್ವರ್ಣ, ಕ್ಷೇತ್ರ, ಸ್ಥಾನ ಮೊದಲಾದುವನ್ನು ತನ್ನ ಸಾಮರ್ಥ್ಯ ತಿಳಿದುಕೊಂಡು ಪರಿಮಾಣ ಮಾಡುತ್ತಾನೆ, ಎಂದರೆ ನನಗೆ ಇಷ್ಟು ಪರಿಗ್ರಹದಿಂದ ನಿರ್ವಾಹ ಮಾಡುವುದಿದೆ, ನನಗೆ ಅಧಿಕ ಪರಿಗ್ರಹದಲ್ಲಿ ಪ್ರವೃತ್ತಿ

ಮಾಡುವುದರ ತ್ಯಾಗವಿದೆ. ಈ ಪ್ರಕಾರ ಪರಿಗ್ರಹವನ್ನು ಪಾಪರೂಪವೆಂದು ತಿಳಿದುಕೊಂಡು ಅದರ ವಾಂಛೆಯನ್ನು ಬಿಟ್ಟು ಕೊಡುತ್ತಾನೆ, ಅವನಿಗೆ ಪರಿಗ್ರಹ ಪರಿಮಾಣವೆಂಬ ಹೆಸರಿನ ಐದನೆಯ ಅಣುವ್ರತವಿರುತ್ತದೆ.

**ಪರಮಾಗಮದಲ್ಲಿ ಮೂರ್ಛೆಯನ್ನು ಪರಿಗ್ರಹದ ಲಕ್ಷಣವೆಂದು ಹೇಳಿದೆ.** ಜೀವನಿಗೆ ಪರಪದಾರ್ಥಗಳಲ್ಲಿರುವ ಮಮತೆಯ ಬುದ್ಧಿಯೇ ಮೂರ್ಛೆಯಿದೆ. ಪರವಸ್ತುವನ್ನು ತನ್ನದೆಂದು ಮನ್ನಿಸುವರೂಪದ ಯಾವ ರಾಗ (ಮಿಥ್ಯಾತ್ವ)ವಿದೆ, ಅದರ ಕಾರಣದಿಂದ ಆತ್ಮನು ಜೀವನ-ಮರಣ, ಹಿತ-ಅಹಿತ, ಯೋಗ್ಯ-ಅಯೋಗ್ಯದ ವಿಚಾರದಲ್ಲಿ ಅಚೇತನನಾಗುತ್ತಿದ್ದಾನೆ. **ಮೋಹದ ಉದೀರಣಾದಿಂದ ಪರದ್ರವ್ಯಗಳಲ್ಲಿ ಇದು ನನ್ನದು-ನನ್ನದೆಂಬ ಯಾವ ಪರಿಣಾಮವಿದೆ ಅದೇ ಮೂರ್ಛೆಯಿದೆ.** ಭಗವಂತರು ಮೂರ್ಛೆಯನ್ನೇ ಪರಿಗ್ರಹವೆಂದು ಹೇಳಿದ್ದಾರೆ. ಆದುದರಿಂದ ಯಾವನು ಮೂರ್ಛೆಯುಳ್ಳವನಿದ್ದಾನೆ ಅವನು ಪರಿಗ್ರಹಿಯಿದ್ದಾನೆ. ಬೇಕಾದರೆ ಅವನ ಹತ್ತಿರ ಬಾಹ್ಯ ಪರಿಗ್ರಹವು ಅಲ್ಪವಿರಲಿ ಅಥವಾ ಸಮಸ್ತ ಪರಿಗ್ರಹದಿಂದ ರಹಿತನಿದ್ದರೂ ಅವನು ಪರಿಗ್ರಹಿಯಿದ್ದಾನೆ. ಅದನ್ನೇ ಹೇಳುತ್ತಾರೆ, -

**ಬಾಹಿರ ಗಂಥ ವಿಹೀಣಾ ದಲಿದ್ದ ಮಣುಅ ಸಹಾವದೋ ಹುಂತಿ ।**
**ಅಬ್ಭಂತರಗಂಥ ಪುಣ ಣ ಸಕ್ಕದೇ ಕೋವಿ ಛಂಡೇದುಂ ॥೩೮೭॥ ಕಾ.ಅ.**

**ಅರ್ಥ ಃ-** ದರಿದ್ರ ಮನುಷ್ಯನು ಸ್ವಭಾವದಿಂದಲೇ ಬಾಹ್ಯ ಪರಿಗ್ರಹದಿಂದ ರಹಿತನಿರುತ್ತಾನೆ, ಆದರೆ ಅಂತರಂಗದ ಮಮತೆಯನ್ನು ಬಿಟ್ಟು ಕೊಡುವಲ್ಲಿ ಯಾರೂ ಸಮರ್ಥರಿಲ್ಲ, ಆದುದರಿಂದ ಮೂರ್ಛೆಯೇ ಪರಗ್ರಹವಿದೆಯೆಂದೇ ನೋಡುತ್ತೇವೆ. ಸಹಸ್ರಾರು ಲಕ್ಷಾಂತರ ಮನುಷ್ಯರಿಗೆ ಜನ್ಮಪಡೆದ ನಂತರ ತಾಮ್ರ, ಹಿತ್ತಾಳೆ, ಕಂಚಿನ ಪಾತ್ರೆಗಳು ದೊರಕಿಯೇ ಇಲ್ಲ; ಅವರು ಜನ್ಮದಿಂದ ಹಿಡಿದು ಇಂದಿನವರೆಗೆ ತುಪ್ಪವನ್ನು ತಿಂದೇ ಇಲ್ಲ; ಲಡ್ಡು ಮೊದಲಾದುವನ್ನು ತಿಂದೇ ಇಲ್ಲ ; ಪಂಚೆ, ನಿಲುವಂಗಿ, ರುಮಾಲುಗಳನ್ನೆಂದೂ ಧರಿಸಿಯೇ ಇಲ್ಲ, ಸ್ತ್ರೀಯೊಡನೆ ಮದುವೆಯು ಆಗಿಯೇ ಇಲ್ಲ; ಎಂದೂ ಉದರ ಪೂರ್ತಿಯಾಗಿ ಭೋಜನವು ದೊರಕಿಯೇ ಇಲ್ಲ; ಚಿನ್ನ ಮೊದಲಾದುವನ್ನು ನೋಡಿಯೇ ಇಲ್ಲ; ಇಡೀ ಜೀವನದಲ್ಲಿ ನಾಲ್ಕಾರು ದಿವಸ ತಿನ್ನಲು ಯೋಗ್ಯವಾದ ಧಾನ್ಯದ ಸಂಗ್ರಹವು ಆಗಿಯೇ ಇಲ್ಲ; ಚಿನ್ನ-ಬೆಳ್ಳಿಗಳ ದರ್ಶನವೇ ಆಗಿಲ್ಲ, ಅವರಿಗೆ ಒಂದು ರೂಪಾಯಿಯ ಪ್ರಾಪ್ತಿ ಕೂಡ ಎಂದೂ ಆಗಲಿಲ್ಲ; ಅವರಿಗೆ ವಾಸಿಸಲು ತಮ್ಮದೇ ಆದ ಒಂದು ಹುಲ್ಲಿನ ಗುಡಿಸಿಲವೂ ಇಲ್ಲ, ಇಂಥವರು ಅನೇಕ ಮನುಷ್ಯರಿದ್ದಾರೆ. ಆದುದರಿಂದ ಮೂರ್ಛೆಯೇ ವಾಸ್ತವದಲ್ಲಿ ಪರಿಗ್ರಹವಿದೆ.

**ಪ್ರಶ್ನೆ ಃ-** ಒಂದು ವೇಳೆ ಮೂರ್ಛೆಯೇ ಪರಿಗ್ರಹವಿದ್ದರೆ ಬಾಹ್ಯಧನ, ಧಾನ್ಯ, ವಸ್ತ್ರ ಒಡವೆ ಮೊದಲಾದ ಬಾಹ್ಯ ವಸ್ತುಗಳ ಸಂಯೋಗವನ್ನು - ಸಂಗ್ರಹವನ್ನು ಪರಿಗ್ರಹವೆಂದು ಹೇಳಲಾಗುವುದಿಲ್ಲವಲ್ಲವೇ ?

**ಉತ್ತರ ಃ-** ಈ ಬಾಹ್ಯ ಪರಿಗ್ರಹಗಳು ಅಂತರಂಗ ಪರಿಗ್ರಹದ ನಿಮಿತ್ತವಿವೆ. ಈ ಬಾಹ್ಯ ಪರಿಗ್ರಹಗಳನ್ನು ನೋಡುವುದರಿಂದ, ಕೇಳುವುದರಿಂದ, ವಿಚಾರ ಮಾಡುವುದರಿಂದ ಶೀಘ್ರವಾಗಿಯೇ ಪರಿಗ್ರಹದಲ್ಲಿ ಲಾಲಸೆಯನ್ನು ಉತ್ಪನ್ನ ಮಾಡಿಸಿಬಿಡುತ್ತದೆ, ಮಮತೆಯನ್ನು ಉತ್ಪನ್ನ ಮಾಡಿಸಿ ಬಿಡುತ್ತದೆ, ಅಚೇತನ ಮಾಡಿ ಬಿಡುತ್ತದೆ. ಆದುದರಿಂದ ಬಹಿರಂಗ ಪರಿಗ್ರಹವು ಕೂಡ ಮೂರ್ಛೆಯ ಕಾರಣವಾಗಿರುವುದರಿಂದ ತ್ಯಾಗ ಯೋಗ್ಯವೇ ಇದೆ.

ಅಂತರಂಗ ಮತ್ತು ಬಹಿರಂಗ ಇವೆರಡೂ ಪ್ರಕಾರದ ಪರಿಗ್ರಹವನ್ನು ಗ್ರಹಣ ಮಾಡುವಲ್ಲಿ ಹಿಂಸೆಯಿದೆಯೆಂದು ಭಗವಂತರು ಹೇಳಿದ್ದಾರೆ. ಎರಡೂ ಪ್ರಕಾರದ ಪರಿಗ್ರಹದ ತ್ಯಾಗವೇ ಅಹಿಂಸೆಯಿದೆಯೆಂದು ಪರಮಾಗಮವನ್ನು ಬಲ್ಲವರು ಹೇಳುತ್ತಾರೆ. **ಮಿಥ್ಯಾತ್ವ , ಕಷಾಯ ಮೊದಲಾದ ಅಂತರಂಗ ಪರಿಗ್ರಹವಂತೂ ಹಿಂಸೆಯದೇ ಇನ್ನೊಂದು ಪರ್ಯಾಯ ವಾಚೀ ಹೆಸರು ಇದೆ.** ಬಾಹ್ಯ ಪರಿಗ್ರಹದಲ್ಲಿ ಮೂರ್ಛೆಯಾಗುವುದು ಅದು ಕೂಡ ಹಿಂಸೆಯೇ ಇದೆ. ಕೃಷ್ಣ ಮೊದಲಾದ ಲೇಶ್ಯೆಯ ಅಶುಭ ಪರಿಣಾಮಗಳು ಕೂಡ ಪರಿಗ್ರಹದಲ್ಲಿ ರಾಗ ಮಾಡುವುದರಿಂದಲೇ ಆಗುತ್ತವೆ ; ಏಕೆಂದರೆ ಪರಿಣಾಮಗಳಲ್ಲಿ ಶುದ್ಧತೆಯು ಮಂದ ಕಷಾಯದ ಮೂಲಕ ಆಗುತ್ತದೆ, ಮತ್ತು ಆ ಕಷಾಯದ ಮಂದತೆಯು ಪರಿಗ್ರಹದ ಅಭಾವದಿಂದ ಆಗುತ್ತದೆ.

ಬಹಳ ದೊಡ್ಡ ಆರಂಭವು ಕೂಡ ಪರಿಗ್ರಹದ ಅಧಿಕತೆಯಿಂದಲೇ ಆಗುತ್ತದೆಯೆಂದು ತಿಳಿದುಕೊಂಡು ಒಂದು ವೇಳೆ ಸಮಸ್ತ ಪರಿಗ್ರಹವನ್ನು ಬಿಟ್ಟುಕೊಡುವುದರ ರಾಗವು ಕಡಿಮೆಯಾಗಿರದಿದ್ದರೆ ತಮ್ಮ ಅವಶ್ಯಕತೆಗೆ ಅನುಸರಿಸಿ ಪರಿಗ್ರಹದಲ್ಲಿ ಪರಿಮಾಣ ಮಾಡಿಯಾದರೂ ಅವಶ್ಯವಾಗಿ ಇರಬೇಕಾಗುವುದು.

ಇಂದು ತಮ್ಮ ಹತ್ತಿರ ಪರಿಗ್ರಹವಂತೂ ಕಡಿಮೆಯಿದೆ ಮತ್ತು ಅಧಿಕ ಪರಿಗ್ರಹದ ಇಚ್ಛೆಯಾಗುತ್ತಿದ್ದರೆ ಆ ಇಚ್ಛೆ ಮಾಡುವುದರಿಂದ ಪರಿಗ್ರಹದ ಪ್ರಾಪ್ತಿಯಾಗಿ ಬಿಡುವುದಿಲ್ಲ. **ಇಚ್ಛೆ ಮಾಡುವುದರಿಂದಂತೂ ಇನ್ನೂ ಹೆಚ್ಚು ಪಾಪ ಕರ್ಮದ ಬಂಧವೇ ಆಗುವುದು.** ಅಂತರಾಯ ಕರ್ಮದ ಕ್ಷಯೋಪಶಮವಾದ ಮೇಲೆ ಪರಿಗ್ರಹದ ಲಾಭವಾಗುವುದು. ಆದುದರಿಂದ ಪಾಪಬಂಧದ ಕಾರಣವಾದ ಪರಿಗ್ರಹದ ಮಮತೆಯನ್ನು ಬಿಟ್ಟುಕೊಟ್ಟು, ಎಷ್ಟು ಪ್ರಾಪ್ತವಾಗಿದೆ ಅಷ್ಟರಲ್ಲಿಯೇ ಸಂತೋಷ ಪಟ್ಟುಕೊಂಡು ಇರಬೇಕಾಗುವುದು.

## ನ್ಯಾಯ-ನೀತಿಪೂರ್ವಕವಾಗಿಯೇ ಆಜೀವಿಕೆ ಮಾಡಬೇಕು.

ಸಮಸ್ತ ಪರಿಗ್ರಹವಂತೂ ತ್ಯಾಗಯೋಗ್ಯವಿದ್ದರೂ ಯಾರು ಗೃಹಸ್ಥಾವಸ್ಥೆಯಲ್ಲಿದ್ದುಕೊಂಡು ಧರ್ಮ ಸೇವನೆಮಾಡಲಪೇಕ್ಷಿಸುತ್ತಾರೆ ಅವರಿಗಂತೂ ತಮ್ಮ ಪುಣ್ಯೋದಯದ ಅನುಕೂಲವಾಗಿ ಪರಗ್ರಹವನ್ನಿಟ್ಟುಕೊಳ್ಳಲೇ ಬೇಕಾಗುವುದು ಗೃಹಸ್ಥರಿಗೆ ಆವಶ್ಯಕವಾದ ಪರಿಗ್ರಹವಿಲ್ಲದಿದ್ದರೆ ಕಾಲ-ದುಃಕಾಲದಲ್ಲಿ, ರೋಗ-ವಿಯೋಗದಲ್ಲಿ, ಮದುವೆಯಲ್ಲಿ -ಮರಣದಲ್ಲಿ ಪರಿಣಾಮವು ಸ್ಥಿರವಾಗಿ ಉಳಿಯಲಾರದು, ಪರಿಣಾಮವು ಕೆಟ್ಟು ಹೋಗುವುದು, ಆದುದರಿಂದ ಧರ್ಮ ಮತ್ತು ಪರಿಣಾಮಗಳ ರಕ್ಷಣೆಯ ಸಲುವಾಗಿ ಗೃಹಸ್ಥರು ಪರಿಗ್ರಹದ ಸಂಕಲನ ಮಾಡಿಯೇ ಮಾಡುತ್ತಾರೆ.

ಆಜೀವಿಕೆಯ ಉಪಾಯವನ್ನು ನ್ಯಾಯ ಮಾರ್ಗದಿಂದಲೇ ಮಾಡಬೇಕಾಗುವುದು. **ಸಾಧುವಂತೂ ಸ್ವಲ್ಪ ಪರಿಗ್ರಹವಿಟ್ಟುಕೊಂಡರೂ ಉಭಯ ಲೋಕಗಳಿಂದ ಭ್ರಷ್ಟನಾಗಿ ಹೋಗುತ್ತಾನೆ,** ಗೃಹಸ್ಥನು ಪರಿಗ್ರಹವಿಟ್ಟು ಕೊಳ್ಳದಿದ್ದರೆ ಭ್ರಷ್ಟನಾಗಿ ಹೋಗುತ್ತಾನೆ. ಗೃಹಸ್ಥಾಚಾರದಲ್ಲಿ ಇರುತ್ತಿರುವಾಗಂತೂ ಹೆಚ್ಚು-ಕಡಿಮೆ ತಮ್ಮ ಆವಶ್ಯಕತೆಗೆ ಅನುಸರಿಸಿ ಪರಿಗ್ರಹವಿಲ್ಲದಿದ್ದರೆ ಪರಿಣಾಮಗಳಲ್ಲಿ ಸಮತೆಯು ಉಳಿಯುವುದಿಲ್ಲ, ಆಜೀವಿಕೆಯ ಆಧಾರವಿಲ್ಲದಿದ್ದರೆ ನಿರಾಧಾರವಾಗಿ ಪರಿಣಾಮವು ಧರ್ಮ ಸೇವನೆಯಲ್ಲಿ ಸ್ಥಿರವಿರಲಾರದು, ಪರಿಣಾಮಗಳ ಆರ್ತತೆ-ಸಂಕ್ಲೇಶತೆಯು ದೂರವಾಗಲಾರದು.

ಭೋಜನ-ಪಾನಗಳು ದೊರಕುವಂತೆ ಆಜೀವಿಕೆಯ ಸ್ಥಿರತೆಯಿಲ್ಲದಿದ್ದರೆ ಸ್ವಾಧ್ಯಾಯದಲ್ಲಿ, ಪೂಜೆಯಲ್ಲಿ, ಶುಭಕಾರ್ಯಗಳಲ್ಲಿ ಪರಿಣಾಮವು ಸ್ಥಿರವಾಗುವ ಸಾಧ್ಯತೆಯಿಲ್ಲ, ಆಕುಲತೆಯಿರುವುದರಿಂದ ಸಂಕ್ಲೇಶವು ಹೆಚ್ಚುತ್ತ ಹೋಗುವುದು, ಸಂತೋಷವು ದೊರಕಲಾರದು.ರೋಗವು ಬಂದ ಮೇಲೆ, ವೃದ್ಧಾವಸ್ಥೆಯು ಬಂದ ಮೇಲೆ, ಇಷ್ಟದ ವಿಯೋಗವಾದ ಮೇಲೆ, ಅನ್ನ-ವಸ್ತ್ರದ ಆಧಾರವಿಲ್ಲದೆ ತಮ್ಮ ಪರಿಣಾಮವು ಯಾವುದೇ ದೇಶದಲ್ಲಿ, ಯಾವುದೇ ಕಾಲದಲ್ಲಿ ಸ್ಥಿರವುಳಿಯಲಾರದು. ದೇಹದ ರಕ್ಷಣೆಯು ಕೂಡ ಆಜೀವಿಕೆಯಿಲ್ಲದೆ ಆಗುವುದಿಲ್ಲ, ದೇಹವಿಲ್ಲದೆ ಅಣುವ್ರತ, ಶೀಲ, ಸಂಯಮಗಳು ಯಾವುದರಿಂದ ಆಗುವವು ? ಆದುದರಿಂದ ತಮ್ಮ ಪುಣ್ಯದ ಅನುಕೂಲತೆ, ಉದ್ಯೋಗ, ಸಾಮರ್ಥ್ಯ, ಸಹಾಯಕ, ಸಾಧನ ಮೊದಲಾಗಿ ದೇಶಕಾಲದ ಯೋಗ್ಯ ವಿಚಾರ ಮಾಡಿ ನ್ಯಾಯ ಮಾರ್ಗದಿಂದ ಜೀವನೋಪಾಯ ಮಾಡುತ್ತ ಧರ್ಮ ಸೇವನೆ ಮಾಡಬೇಕಾಗುವುದು. ಅಹಿಂಸೆಯೊಡನೆ ಸತ್ಯ ಮಾರ್ಗದ ಮೇಲೆ ನಡೆಯುತ್ತ, ಇತರರು ಕೊಡದಿರುವ ಧನವನ್ನು ತೆಗೆದುಕೊಳ್ಳುವುದರ ತ್ಯಾಗ ಮಾಡಿ, ತಮ್ಮನ್ನು ಜಗತ್ತಿನ ಜನರಿಗೆ ವಿಶ್ವಾಸ ಮೂಡಿ ಬರುವಂತೆ ಯೋಗ್ಯ ಪಾತ್ರರನ್ನಾಗಿ ಮಾಡಬೇಕಾಗುವುದು.

**ವಿದ್ಯೆ, ಕಲೆ, ಚಾತುರ್ಯದ ಮೂಲಕ ತಮ್ಮಿಂದ ಸಂಭವಿಸಲು ಯೋಗ್ಯವಾದ ಜೀವನೋಪಾಯ ಮಾಡಬೇಕಾಗುವುದು.** ಅನಂತರ ಲಾಭಾಂತರಾಯದ ಕ್ಷಯೋಪಶಮಕ್ಕೆ ಅನುಸರಿಸಿ ಲಾಭ-ಅಲಾಭ-ಅಲ್ಪಲಾಭ ಎಷ್ಟು ಆಗುವುದು ಅಷ್ಟರಲ್ಲಿಯೇ ಸಂತೋಷ ಪಡಬೇಕಾಗುವುದು. ಕುಟುಂಬದ ಪೋಷಣೆ, ದೇಹದ ಪೋಷಣೆಯನ್ನು ಪುಣ್ಯದ ಉದಯದಿಂದ ಯಾವುದರ ಪ್ರಾಪ್ತಿಯಾಗಿದೆ ಅದರ ಅನುಸಾರವೇ ಮಾಡಬೇಕು. ಸಾಲಗಾರನಾಗಬಾರದು, ಏಕೆಂದರೆ

ಸಾಲ ತೆಗೆದುಕೊಂಡ ನಂತರ ಸಮಸ್ತ ಧೈರ್ಯ, ಪ್ರತೀತಿಯ ಅಭಾವವಾಗಿ ಹೋಗುತ್ತದೆ, ಹೀನತೆಯು ಪ್ರಕಟವಾಗಲಾರಂಭಿಸುವುದು ; ಮತ್ತು ಒಂದು ಬಾರಿ ತಮ್ಮ ಪ್ರತೀತಿಯು ಕೆಟ್ಟುಹೋದ ನಂತರ ಪುನಃ ಉತ್ತಮ ಜೀವನೋಪಾಯ ಸಂಭವಿಸುವುದು ಕಠಿಣವಾಗುತ್ತದೆ.

**ಆಜೀವಿಕೆಗೆ ಅನುಕೂಲವಾಗಿ ಖರ್ಚುಮಾಡಬೇಕಾಗುವುದು.** ಪುಣ್ಯವಂತರನ್ನು ನೋಡಿ ಅಧಿಕ ಖರ್ಚು ಮಾಡಿದರೆ ಯಶಸ್ಸು, ಧರ್ಮ, ನೀತಿ - ಇವು ಮೂರು ನಷ್ಟವಾಗಿ ಹೋಗುವವು. ಇತರ ಪುಣ್ಯವಂತರ ಖರ್ಚು ನೋಡಿ ಅವರ ಬರಾಬರಿ ಮಾಡಿದರೆ ದರಿದ್ರನಾಗಿ ಉಭಯ ಲೋಕಗಳಿಂದ ಭ್ರಷ್ಟನಾಗಿ ಹೋಗುವೆ. ಒಂದು ವೇಳೆ ನಮ್ಮ ಗೌರವವು ಅಧಿಕವಿದೆ, ನಮ್ಮ ಪೂರ್ವಜರು ದೊಡ್ಡ ದೊಡ್ಡ ಕಾರ್ಯ ಮಾಡಿದ್ದಾರೆ, ಈಗ ಖರ್ಚು ಕಡಿಮೆ ಹೇಗೆ ಮಾಡುವುದೆಂದು ತಿಳಿಯುತ್ತಿದ್ದರೆ ಮತ್ತು ನಾವು ಖರ್ಚು ಕಡಿಮೆ ಮಾಡಿದರೆ ನಮ್ಮ ಸಮಸ್ತ ದೊಡ್ಡಸ್ತಿಕೆಯು ಕೆಟ್ಟು ಹೋಗುವುದೆಂದು ಬುದ್ಧಿ ಮಾಡಬೇಡ ! ಪುಣ್ಯವು ಅಸ್ತವಾಗಿ ಹೋದಾಗ ದೊಡ್ಡಸ್ತಿಕೆಯು ಎಲ್ಲಿ ಉಳಿಯುವುದು ? ದೊಡ್ಡಸ್ತನವಂತೂ ಸತ್ಯದಿಂದ, ಸಂತೋಷದಿಂದ, ಶೀಲದಿಂದ, ವಿನಯದಿಂದ, ದೀನತೆ ರಹಿತನಾಗುವುದರಿಂದ, ಇಂದ್ರಿಯ ವಿಷಯಗಳ ಅಭಿಲಾಷೆಯನ್ನು ಕಡಿಮೆ ಮಾಡುವುದರಿಂದ - ಇವೇ ಮೊದಲಾದವುಗಳಿಂದಲೇ ಉಭಯ ಲೋಕಗಳಲ್ಲಿ ಉಜ್ವಲತೆಯಾಗುತ್ತದೆ.

ಪುಣ್ಯದ ಉದಯವು ಬಂದು ಬಿಟ್ಟರೆ ಜೀವವನ್ನು ಸ್ವರ್ಗದ ಮಹರ್ದಿಕ ದೇವನನ್ನಾಗಿ ಮಾಡಿ ಬಿಡುವುದು. ಚಕ್ರವರ್ತಿಯನ್ನಾಗಿ ಮಾಡುವುದು. ಪಾಪದ ಉದಯವು ಬಂದು ಬಿಟ್ಟರೆ ನರಕದ ನಾರಕಿಯನ್ನಾಗಿ ಮಾಡುವುದು, ಏಕೇಂದ್ರಿಯ ಮಾಡುವುದು, ಭಾರ ಹೊರುವವನನ್ನಾಗಿ ಮಾಡುವುದು, ರೋಗೀ ಮಾಡುವುದು, ದರಿದ್ರ ಮನುಷ್ಯನನ್ನಾಗಿ ಮಾಡುವುದು, ತಿರ್ಯಂಚ ಮಾಡುವುದು, ಇದೇ ಭವದಲ್ಲಿ ದೊರೆಯಿಂದ ದರಿದ್ರನಾಗಿ ಹೋಗುತ್ತಾನೆ. ಯಾವ ದೊಡ್ಡಸ್ತಿಕೆ ನೋಡುವೆ ? ತನ್ನ ಹತ್ತಿರ ಸ್ವಲ್ಪ ಧನವಿದೆ, ಆದರೆ ಅಭಿಮಾನಿಯಾಗಿ ಅಧಿಕ ಧನ ಖರ್ಚು ಮಾಡಿದರೆ ದರಿದ್ರ, ಸಾಲಗಾರ ಮತ್ತು ದೀನನಾಗಿ ಎಲ್ಲ ಜನರಿಗಿಂತ ಕೀಳಾಗಿ ಹೋಗುವೆ, ನಿಂದೆಗೆ ಪ್ರಾಪ್ತನಾಗಿ ಆರ್ತಧ್ಯಾನ ಮಾಡಿ ದುರ್ಗತಿಗೆ ಪಾತ್ರನಾಗಿ ಹೋಗುವೆ.

ಆದುದರಿಂದ ಜೀವನೋಪಾಯದಿಂದ ಎಷ್ಟು ಸಂಪಾದನೆಯಾಗುವುದು ಅದಕ್ಕಿಂತ ಕಡಿಮೆಯೇ ಖರ್ಚು ಮಾಡಬೇಕಾಗುವುದು. ಇದುವೇ ಚತುರತೆಯಿದೆ, ಇದುವೇ ಬುದ್ಧಿವಂತಿಕೆಯಿದೆ. ಸಂಪಾದನೆಗಿಂತ ಕಡಿಮೆ ಖರ್ಚು ಮಾಡುವುದೇ ಕುಲವಂತಿಕೆಯಿದೆ, ಅದುವೇ ಉತ್ತಮ ಧರ್ಮವಿದೆ. ಸಂಪಾದನೆಗಿಂತ ಹೆಚ್ಚು ಖರ್ಚು ಮಾಡಿದರೆ ತನ್ನ ಬುದ್ಧಿಯಿಂದಲೇ ದರಿದ್ರನಾಗಿ ಮೂರ್ಖತೆಯನ್ನು ಪ್ರದರ್ಶಿಸುವೆ, ಅಲ್ಲದೆ ಸಾಲಗಾರನಾಗಿ ಹೋಗುವೆ, ಆಗ ಉತ್ತಮ ಕುಲ, ಯೋಗ್ಯ ಆದರ, ಸತ್ಕಾರ, ಆಚರಣೆಗಳೆಲ್ಲವೂ ನಷ್ಟವಾಗಿ ಹೋಗುವವು ಮತ್ತು ಮಲಿನತೆಯು ಪ್ರಕಟವಾಗಿ ಹೋಗುವುದು. ನಿರ್ಧನ ಮತ್ತು ಸಾಲಗಾರನಾದ ನಂತರ ಪೂಜೆ, ಸ್ವಾಧ್ಯಾಯ, ಧ್ಯಾನ, ಶುಭ ಭಾವನೆಗಳಲ್ಲಿ ಬುದ್ಧಿಯು ತೊಡಗಲಾರದು.

ಆದುದರಿಂದ ಜೀವನೋಪಾಯಕ್ಕಿಂತ ಕಡಿಮೆ ಖರ್ಚು ಮಾಡುವುದೇ ಗೃಹಸ್ಥನ ಪರಮ ಯೋಗ್ಯ ನೀತಿಯಿದೆ. ಯಾವನು ಅಭಿಮಾನಿಯಾಗಿ ಅಧಿಕ ಖರ್ಚು ಮಾಡುತ್ತಾನೆ ಅವನ ಚಿತ್ತವು ಇತರರು ಕೊಡದಿರುವ ಧನದ ಮೇಲೆ ಹೋಗುತ್ತದೆ. ಕಳವು ಮಾಡಲಾರಂಭಿಸುತ್ತಾನೆ, ಆಗ ಅನೇಕ ಅಸತ್ಯ-ಕಪಟ ಮೊದಲಾದ ಪಾಪಗಳಲ್ಲಿ ಪ್ರವೃತ್ತಿಯಾಗಿ ಹೋಗುತ್ತದೆ, ಸಂತೋಷ ಧರ್ಮವು ನಷ್ಟವಾಗಿ ಹೋಗುತ್ತದೆ.

**ಪ್ರಶ್ನೆ :-** ಈ ಜೀವನೋಪಾಯವಂತೂ ಪೂರ್ವಪುಣ್ಯದ ಆಧೀನವಿದೆ, ಧರ್ಮ ಸೇವನೆ ಮಾಡುವುದು ತಮ್ಮ ಆಧೀನವಿದೆಯಲ್ಲವೆ ?

**ಉತ್ತರ :- ಇಲ್ಲಿ ಆಜೀವಿಕೆಯು ಪೂರ್ವಪುಣ್ಯಕರ್ಮದ ಆಧೀನವೇ ಇದೆ, ಆದರೆ ಧರ್ಮಗ್ರಹಣವಾಗಿ ಹೋಗುವುದು ಕೂಡ ಪುಣ್ಯಕರ್ಮದ ಸಹಾಯತೆಯಿಲ್ಲದೆ ಆಗುವ ಸಾಧ್ಯತೆಯಿಲ್ಲ.** ಧರ್ಮಗ್ರಹಣ ಮಾಡುವ ಯೋಗ್ಯತೆಯ ಸಲುವಾಗಿ ಕೂಡ ಕೆಲವೊಂದು ಸಾಮಗ್ರಿಗಳು ದೊರಕೇ ದೊರಕುತ್ತವೆ. ಉತ್ತಮ ಕುಲದಲ್ಲಿ ಜನ್ಮವು ಪ್ರಾಪ್ತವಾಗುವುದು, ಏಕೆಂದರೆ ಚಾಂಡಾಲ, ಭಿಲ್ಲ, ಶೂದ್ರ ಮೊದಲಾದ ಕುಲದಲ್ಲಿ ಧರ್ಮದ ಲಾಭವು ಹೇಗಾಗುವುದು?

ಮತ್ತು ಉತ್ತಮ ದೇಶದಲ್ಲಿ ಉತ್ಪನ್ನವಾಗುವುದು ಇಂದ್ರಿಯಗಳ ಪೂರ್ಣತೆ ಪಡೆಯುವುದು, ನಿರೋಗ ಶರೀರ ದೊರಕುವುದು, ಶುಭ ಸಂಗತಿ ದೊರಕುವುದು, ಜೀವನೋಪಾಯದ ಸ್ಥಿರತೆ ಪಡೆಯುವುದು, ಸಮ್ಯಕ್ ಧರ್ಮದ ಉಪದೇಶ ದೊರಕುವುದು, ಇವೇ ಮೊದಲಾದ **ಪುಣ್ಯಕರ್ಮದ ಉದಯಜನ್ಯ ಬಾಹ್ಯಸಾಮಗ್ರಿಗಳನ್ನು ಪಡೆದಲ್ಲದೆ ಧರ್ಮಗ್ರಹಣ ಹಾಗೂ ಧರ್ಮ ಸೇವನೆಯಾಗುವ ಸಾಧ್ಯತೆಯಿಲ್ಲ. ಆದುದರಿಂದ ಯಾವನಿಗೆ ಪೂರ್ವ ಪುಣ್ಯದ ಉದಯದಿಂದ ಜೀವನೋಪಾಯದ ಸ್ಥಿರತೆಯಾಗುತ್ತದೆ ಅವನಿಗೇ ಧರ್ಮ ಸೇವನೆಯ ಯೋಗ್ಯತೆಯಿರುತ್ತದೆ.**

ಯಾವನಿಗೆ ಇಂದ್ರಿಯಗಳ ಪೂರ್ಣತೆಯಿದೆ, ನಿರೋಗತೆಯಿದೆ, ನ್ಯಾಯ-ಅನ್ಯಾಯದ ವಿವೇಕವಿದೆ, ಧರ್ಮ-ಅಧರ್ಮದ ತಿಳಿವಳಿಕೆಯಿದೆ, ಯೋಗ್ಯ - ಅಯೋಗ್ಯದ ವಿವೇಕವಿದೆ. ಪ್ರಿಯ ವಚನಗಳನ್ನಾಡುವವನು, ವಿನಯವಿದೆ, ಎರಡನೆಯವರ ಧನ ಮತ್ತು ಎರಡನೆಯವರ ಸ್ತ್ರೀಯರುಗಳಿಂದ ಪರಾಙ್ಮುಖತೆಯಿದೆ, ಆಲಸ್ಯ-ಪ್ರಮಾದಗಳಿಂದ ರಹಿತನಿರುವನು, ದೇಶ ಕಾಲಕ್ಕೆ ಅನುಸರಿಸಿ ಯೋಗ್ಯ ವಚನಗಳನ್ನಾಡುವನು ಅವನಿಗೆ ಜೀವನೋಪಾಯದ ಲಾಭ ಮತ್ತು ಧರ್ಮದ ಲಾಭವು ಆಗಿಯೇ ಹೋಗುತ್ತದೆ.

**ಗುಣವಂತನಿಗೆ, ನಿರ್ಲೋಭಿಗೆ, ಆಲಸ್ಯವಿಲ್ಲದ ಉದ್ಯಮಿಗೆ, ವಿನಯವಂತನಿಗೆ ಜೀವನೋಪಾಯದ ಪ್ರಾಪ್ತಿಯು ದುರ್ಲಭವಿಲ್ಲ, ಸ್ವಯಂ ಜೀವನೋಪಾಯದ ಯೋಗ್ಯ ಪಾತ್ರನಾಗಿ ಹೋದರೆ ಜೀವನೋಪಾಯವೆಂದೂ ದೂರ ಉಳಿಯುವ ಸಾಧ್ಯತೆಯಿಲ್ಲ,** ಲಾಭಾಂತರಾಯ ಕರ್ಮದ ಕ್ಷಯೋಪಶಮಕ್ಕೆ ಅನುಸರಿಸಿ ಅಲ್ಪ ಅಥವಾ ಅಧಿಕ ಜೀವನೋಪಾಯವು ನಿಯಮದಿಂದ ಸಂಭವಿಸಿಯೇ ಬಿಡುತ್ತದೆ. ಅದರಲ್ಲಿ ಸಂತೋಷ ಧಾರಣ ಮಾಡಿ ಅಧಿಕೇಚ್ಛೆಯ ತ್ಯಾಗ ಮಾಡಿ ಪರಿಗ್ರಹ ಪರಿಮಾಣಾನುವ್ರತವನ್ನು ಧಾರಣ ಮಾಡಬೇಕಾಗುವುದು.

**ಪುಣ್ಯೋದಯದ ಆಧೀನವಾಗಿ ಜೀವನೋಪಾಯವು ಪ್ರಾಪ್ತವಾಗಿ ಬಿಡುತ್ತಿದ್ದರೆ ಅನೀತಿಯಿಂದ ಪ್ರವತ್ತಿ ಮಾಡಿ ಜೀವನೋಪಾಯವನ್ನು ನಷ್ಟಮಾಡಿಕೊಳ್ಳಬಾರದು. ಒಂದು ವೇಳೆ ಜೀವನೋಪಾಯವು ನಷ್ಟವಾಗಿ ಹೋದರೆ ಧರ್ಮ ಮತ್ತು ಯಶಸ್ಸು ನಷ್ಟವಾಗಿ ಹೋಗುವುದು.** ತಮ್ಮ ಭಾವಗಳೊಳಗಿಂದ ಒಂದು ವೇಳೆ ನೀತಿ - ಧರ್ಮವನ್ನು ಬಿಡದಿದ್ದರೆ, ನ್ಯಾಯಮಾರ್ಗದ ಮೇಲೆ ನಡೆದರೆ, ಆದಾಗ್ಯೂ ಅಸಾತಾಕರ್ಮದ ಉದಯದಿಂದ, ಅಗ್ನಿಯಿಂದ, ಜಲದಿಂದ, ಕಳ್ಳರಿಂದ, ದೊರೆಯ ಉಪದ್ರವದಿಂದ ಆಜೀವಿಕೆಯು ಕೆಟ್ಟು ಹೋದರೆ, ಮತ್ತು ಧನವು ನಾಶವಾದರೆ ಧರ್ಮವು ಕೆಡಲಾರದು, ಯಶಸ್ಸು ಕೆಡಲಾರದು, ಜಗತ್ತಿನಲ್ಲಿ ಅಪ್ರೀತಿಗೆ ಪಾತ್ರನಾಗಿ ಹೋಗಲಾರೆ. ಪ್ರಬಲ ಲಾಭಾಂತರಾಯ ಕರ್ಮದ ಉದಯದಿಂದ ನ್ಯಾಯರೂಪವಾಗಿ ಉದ್ಯಮ ಮಾಡಿದರೂ ಕೂಡ ಲಾಭವಾಗದಿದ್ದರೆ ಸಮತೆಯನ್ನೇ ಗ್ರಹಣ ಮಾಡಬೇಕಾಗುವುದು. **ಆಯುಕರ್ಮವು ಬಾಕಿ ಇದ್ದರೆ ಭೋಜನಾದಿಗಳ ವಿಧಿಯನ್ನು ಕರ್ಮವು ಕೂಡಿಸಿ ಕೊಡುವುದು, ಕರ್ಮವು ಬಲವಂತವಿದೆ. ವನದಲ್ಲಿ, ಕಾಡಿನಲ್ಲಿ, ಜಲದಲ್ಲಿ, ನಗರದಲ್ಲಿ ತಮ್ಮ ಅಂತರಾಯ ಕರ್ಮದ ಕ್ಷಯೋಪಶಮಕ್ಕೆ ಅನುಸರಿಸಿ ಭೋಜನವು ಎಲ್ಲರಿಗೆ ದೊರಕುತ್ತದೆ.**

ಒಬ್ಬನಿಗೆ ಬಹಳಷ್ಟು ಜನರಿಗೆ ಭೋಜನಾದಿಗಳನ್ನಿತ್ತು ಸ್ವಯಂ ಭೋಜನ ಮಾಡುವಂಥ ಪುಣ್ಯದ ಉದಯವಿರುತ್ತದೆ; ಒಬ್ಬನಿಗೆ ತನ್ನ ಹೊಟ್ಟೆಯೂ ತುಂಬಲಾರದಂಥ ಅಂತರಾಯದ ಉದಯವಿರುತ್ತದೆ. ಒಬ್ಬನಿಗೆ ಅರ್ಧ ಹೊಟ್ಟೆ ತುಂಬುವ ಯೋಗ್ಯತೆ ದೊರಕುತ್ತದೆ; ಒಬ್ಬನಿಗೆ ಒಂದು ದಿವಸ ದೊರಕುತ್ತದೆ, ಒಂದು ದಿವಸ ದೊರಕುವುದಿಲ್ಲ; ಒಬ್ಬನಿಗೆ ಎರಡು ದಿವಸದ ಅಂತರದಿಂದ, ಒಬ್ಬನಿಗೆ ಮೂರುದಿವಸದ ಅಂತರದಿಂದ ನೀರಸ ಆಹಾರವು ದೊರಕುತ್ತದೆ; ಆದಾಗ್ಯೂ ಧರ್ಮಾತ್ಮರು ಸಮತೆಯನ್ನು ಬಿಟ್ಟುಕೊಡುವುದಿಲ್ಲ. ಪೂರ್ವದಲ್ಲಿ ತಿರ್ಯಂಚಗಳ ಭವದಲ್ಲೆಂದೂ ಹೊಟ್ಟೆತುಂಬ ಆಹಾರವು ದೊರಕೇ ಇಲ್ಲ, ಮತ್ತು ಕ್ಷುಧೆ-ತೃಷೆಯ ಕಾರಣದಿಂದ ಅನೇಕ ಬಾರಿ ಮರಣ ಹೊಂದಿದೆ. ಆದುದರಿಂದ ಈಗ ಧೈರ್ಯಧಾರಣ ಮಾಡಿ ನಮ್ಮ ಧರ್ಮವು ಯಾವುದೇ ಪ್ರಕಾರದಿಂದ ಬಿಟ್ಟುಹೋಗದಂತೆ ಪ್ರಯತ್ನ ಮಾಡಬೇಕಾಗುವುದು. ಯಾರ ಪರಿಣಾಮಗಳಲ್ಲಿ ಇಷ್ಟು ದೃಢತೆಯು ಪ್ರಕಟವಾಗುತ್ತದೆ ಅವರು ಸ್ವರ್ಗಲೋಕದಲ್ಲಿ ಮಹಾನ ಋದ್ಧಿಧಾರೀ ದೇವರಾಗುತ್ತಾರೆ.

**ಪ್ರಶ್ನೆ :-** ಒಂದು ವೇಳೆ ತಾವು ಒಬ್ಬರೇ ಇದ್ದರೆ ಇಂಥ ದೃಢತೆಯನ್ನು ಹಿಡಿದುಕೊಂಡು ಸಮತೆ ಕಾಯ್ದುಕೊಳ್ಳಬಹುದು, ಆದರೆ ಯಾವನ ತಲೆಯ ಮೇಲೆ ಕುಟುಂಬದ ಭಾರವಿದೆ ಅವನೇನು ಮಾಡುವುದು ?

**ಉತ್ತರ :-** ಅಯ್ಯಾಕುಟುಂಬದ ಜನರೇ ! ತಾವು ಪೂರ್ವಜನ್ಮದಲ್ಲಿ ದಾನ ಕೊಡಲಿಲ್ಲ, ವ್ರತಗಳ ಪಾಲನೆ ಮಾಡಲಿಲ್ಲ, ಅಭಕ್ಷ ಭಕ್ಷಣ ಮಾಡಿದಿರಿ, ಅನ್ಯಾಯದಿಂದ ಇತರರ ಧನ ಹರಣ ಮಾಡಿದಿರಿ, ಆ ಪಾಪದ ಉದಯದಿಂದ ಇಂಥ ದರಿದ್ರರಾಗಿ ಇಂದು ಹೊಟ್ಟೆ ತುಂಬ ಅನ್ನ ಮತ್ತು ಮೈಮೇಲೆ ಬಟ್ಟೆಯು ದೊರಕದಿರುವುದೆಲ್ಲವು ತಮ್ಮ -ತಮ್ಮ ಮಾಡಿದ ಪಾಪದ ಫಲವಿದೆ. ಒಂದು ವೇಳೆ ಈಗ ಕೂಡ ಅನ್ಯಪುಣ್ಯವಂತರ ಆಭರಣ, ವಸ್ತ್ರ ಭೋಜನ ಮೊದಲಾದುವನ್ನು ನೋಡಿ ದುಃಖಿಗಳಾದರೆ ಮುಂದೆ ಕೂಡ ಕೇವಲ ತಿರ್ಯಂಚಗತಿಯ ಘೋರ ದುಃಖಕ್ಕೆ ಕಾರಣವಾಗುವಂಥ ಪಾಪಕರ್ಮದ ಬಂಧ ಮಾಡಿಕೊಳ್ಳುವಿರಿ ಮತ್ತು ಕೋಟ್ಯಂತರ ಭವಗಳವರೆಗೆ ದರಿದ್ರತೆಯ ದುಃಖಕ್ಕೆ ಕಾರಣವಾದ ಪಾಪಬಂಧ ಮಾಡಿಕೊಳ್ಳುವಿರಿ. ಇತರರ ಸಂಪತ್ತು ತಮ್ಮ ಹತ್ತಿರ ಬರಲಾರದು, ವ್ಯರ್ಥವಾಗಿ ಕ್ಲೇಶ, ದುರ್ಧ್ಯಾನ, ತೃಷ್ಣೆ ಮೊದಲಾದವುಗಳನ್ನು ಮಾಡುವುದರಿಂದ ದುಃಖವು ದೂರವಾಗಲಾರದು, ಆದರೆ ದುಃಖವು ಅಧಿಕವಾಗುವುದು.

ಒಂದು ವೇಳೆ ಪ್ರಾಪ್ತವಾದ ಸ್ವಲ್ಪ ಧನದಲ್ಲಿಯೇ ಸಂತೋಷ ಪಟ್ಟು ಇಚ್ಛಾರಹಿತರಾದರೆ ವರ್ತಮಾನದಲ್ಲಂತೂ ದುಃಖವೇ ವ್ಯಾಪಿಸಲಾರದು ಮತ್ತು ಘೋರ ತಪಶ್ಚರಣದಿಂದಲೂ ಆಗಲಾರದಂಥ ಸಮಸ್ತ ಪಾಪಕರ್ಮದ ನಿರ್ಜರೆ ಯಾವುದು. ಸ್ವಲ್ಪ ಭೋಜನ-ವಸ್ತ್ರಾದಿಗಳು ದೊರೆತ ಮೇಲೆ ಪರಿಣಾಮದಲ್ಲಿ ಆಕುಲತೆಯಿಲ್ಲದೆ ಸಮತೆಯಿಂದಿರುವಲ್ಲಿ ಮಹಾನ ತಪವಿದೆ. ಕರ್ಮವು ನನ್ನನ್ನು ತಮ್ಮ ಜತೆಯಲ್ಲಿ ಸಮ್ಮಿಲಿತ ಮಾಡಿ ಕುಟುಂಬದಲ್ಲಿ ಉತ್ಪನ್ನ ಮಾಡಿದೆ. ಆದುದರಿಂದ ಈಗ ನಾನು ದೈವ (ಭಾಗ್ಯ) ಮತ್ತುಪುರುಷಾರ್ಥಗಳೆರಡರ ಅನುಕೂಲತೆಯಂತೆ ದ್ರವ್ಯದ ಉಪಾರ್ಜನೆ ಮಾಡುವಲ್ಲಿ ತತ್ಪರನಿದ್ದೇನೆ; ಲಾಭಾಂತರಾಯದ ಕ್ಷಯೋಪಶಮಕ್ಕೆ ಅನುಸರಿಸಿ ನ್ಯಾಯ ಮಾರ್ಗದಿಂದ ಪ್ರಾಪ್ತವಾಗುವುದನ್ನು ತಮ್ಮ ಹತ್ತಿರ ತರುತ್ತೇನೆ. ಇದರಲ್ಲಿ .ಯಾವುದು ನಮ್ಮ ಹಕ್ಕಿನ ಭಾಗವಿದೆ ಅದನ್ನು ನಮಗೆ ಕೊಟ್ಟುಬಿಡಿರಿ ಮತ್ತು ತಮ್ಮದು ಯಾವುದಿದೆ ಅದನ್ನು ತಾವು ಹಂಚಿಕೊಂಡು ಭೋಜನ ಮೊದಲಾದುವನ್ನು ಮಾಡಿರಿ.

**ನಾನಂತೂ ಈಗ ಭಗವಂತರು ಹೇಳಿರುವ ದುರ್ಲಭವಾದ ಧರ್ಮವನ್ನು ಗ್ರಹಣ ಮಾಡಿದ್ದೇನೆ, ಆದುದರಿಂದ ನಿಮ್ಮ ಸಲುವಾಗಿ ಈಗ ಅನೀತಿ, ಕಪಟ ಮೊದಲಾದ ಘೋರ ಪಾಪ ಮಾಡಿ ಧನ ಗ್ರಹಣ ಮಾಡಲಾರೆನು; ನ್ಯಾಯ ನೀತಿಯಿಂದ ಧರ್ಮವು ಕೆಟ್ಟು ಹೋಗದ ರೀತಿಯಲ್ಲಿ ಉದ್ಯೋಗ ಮಾಡಿ ಸಂಪಾದನೆ ಮಾಡುವೆನು,** ತಾವು ಕೂಡ ನನ್ನ ಧರ್ಮವು ಕೆಟ್ಟು ಹೋಗದ ಹಾಗೆ ಪ್ರವರ್ತನೆ ಮಾಡಿರಿ. ನಿಮ್ಮ ನಿಮ್ಮ - ಪುಣ್ಯ-ಪಾಪದ ಫಲವನ್ನು ಭೋಗಿಸಿರಿ. ಆಕುಲತೆಯನ್ನು ಬಿಟ್ಟುಕೊಟ್ಟು ಎಷ್ಟು ದೊರಕಿದೆ ಅಷ್ಟರಲ್ಲಿ ಸಂತುಷ್ಟರಾಗಿ ಸುಖದಿಂದ ಬಾಳಿರಿ. ಈ ಪ್ರಕಾರ ನಿಶ್ಚಯವಿರುವವನಿಗೆ ಪರಿಗ್ರಹ ಪರಿಮಾಣನಾಮದ ಸ್ಥೂಲ ವ್ರತವಾಗುತ್ತದೆ.

ಯಾವನು ಕುಟುಂಬ ಪೋಷಣೆಯ ಸಲುವಾಗಿ ಪಾಪ ಕ್ರಿಯೆಗಳಲ್ಲಿ ಪ್ರವರ್ತಿಸುತ್ತಾನೆ; ಹಿಂಸೆ, ಅಸತ್ಯ, ಚೋರಿ, ಕಪಟ ಮೊದಲಾದ ಪಾಪಗಳಲ್ಲಿ ಪ್ರವರ್ತಿಸುತ್ತಾನೆ ಅವನಿಗೆ ಘೋರ ಪಾಪದ ಬಂಧವಾಗುತ್ತದೆ; ಪಾಪದಿಂದ ದುರ್ಗತಿಗೆ ಪಾತ್ರನಾಗುತ್ತಾನೆ. ಆದುದರಿಂದ ಈ ಅಲ್ಪ ಜೀವನದಲ್ಲಿ ವ್ರತ, ಶೀಲ, ಸಂಯಮಗಳಲ್ಲಿಯೇ ದೃಢತೆಯಿಡಬೇಕಾಗುವುದು.

**ಪ್ರಶ್ನೆ :- ಧನವಂತೂ ಪಾಪದಿಂದಲೇ ಬರುತ್ತದೆ, ಪಾಪ ಮಾಡದ ಹೊರತಾಗಿ ಧನವು ಬರುವುದೇ ಇಲ್ಲ; ತ್ಯಾಗೀ-ವ್ರತೀ ಆಗಿ ಬಿಡುವುದರಿಂದ ಧನವು ಹೇಗೆ ಬರುವುದು ?**

**ಉತ್ತರ :-** ಇದಂತೂ ತಮ್ಮದು ಭ್ರಮೆಯಿದೆ. ಪಾಪ ಮಾಡಿದಲ್ಲದೆ ಧನವು ಬರುವುದಿಲ್ಲವೆಂದು ಹೇಳುವುದು ಉಚಿತವಿಲ್ಲ, ಪಾಪ ಮಾಡುವುದರಿಂದಲೇ ಧನವು ಬರುತ್ತಿದ್ದರೆ ಈ ಜಗತ್ತಿನಲ್ಲಿ ಲಕ್ಷಾಂತರ ಭಿಲ್ಲ, ಚಾಂಡಾಲ, ಚೋರ, ಪಿಸುಣ, ಮನುಷ್ಯರನ್ನು ಕೊಲೆ ಮಾಡುವಂಥ, ಊರು ಸುಡುವಂಥ, ಮಾರ್ಗದಲ್ಲಿ ಸುಲಿಗೆ ಮಾಡುವಂಥ, ಸಮಸ್ತ

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಕುಲಗಳೆಲ್ಲವೂ ಪಾಪಿಗಳಿಂದ ತುಂಬಿಕೊಂಡಿವೆ, ಸಮಸ್ತ ಸ್ತ್ರೀ-ಪುರುಷ-ಬಾಲಕ ಮೊದಲಾದವರು ಹಿಂಸೆ ಮಾಡುವುದಕ್ಕೆ ಸಿದ್ಧರಿದ್ದಾರೆ, ಅಸತ್ಯ ಮಾತನಾಡುವುದಕ್ಕೆ ಕಳವು ಮಾಡುವುದಕ್ಕೆ ಸಿದ್ಧರಿದ್ದಾರೆ. ಅವರೆಲ್ಲರು ನಿರ್ಧನರೇಕಾಗಿದ್ದಾರೆ ?

**ಯಾರು ಪೂರ್ವಜನ್ಮದಲ್ಲಿ ಕುಪಾತ್ರಕ್ಕೆ ದಾನ ಕೊಟ್ಟಿದ್ದಾರೆ. ಕುತಪಸ್ಸು ಮಾಡಿ ಕೆಟ್ಟು ಪುಣ್ಯ ಕಟ್ಟಿಕೊಂಡಿದ್ದಾರೆ, ಅವರ ಹತ್ತಿರ ಕುಮಾರ್ಗದಿಂದ ಧನವು ಬರುತ್ತದೆ.** ಪುಣ್ಯ ಹೀನನಂತೂ ಸತ್ತು ಹೋಗುತ್ತಾನೆ. **ಪೂರ್ವ ಪುಣ್ಯವಿಲ್ಲದೆ ಕೇವಲಪಾಪದಿಂದಲೇ ಧನವು ಬರುವುದಿಲ್ಲ.** ಯಾರು ಮೊದಲು ಪುಣ್ಯ ಕಟ್ಟಿಕೊಂಡಿದ್ದಾರೆ ಅವರು ಇಲ್ಲಿ ಕಳವು ಮೋಸ ಮಾಡದೆಯೇ ಸಂಪತ್ತಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ, ದೊರೆಗಳ ಮನೆಯಲ್ಲಿ ಜನ್ಮವೆತ್ತುತ್ತಾರೆ. ಕೋಟ್ಯಂತರ ಧನವಿರುವಂಥ ಧನಾಢ್ಯರ ಮನೆಯಲ್ಲಿ ಜನ್ಮವೆತ್ತುತ್ತಾರೆ. ಆದುದರಿಂದ ಹೆಚ್ಚಿಗೇನು ಹೇಳುವುದು, ಎಲ್ಲವೂ ಪುಣ್ಯದ ಫಲವೇ ಇದೆ. ದುಷ್ಟ ಪುಣ್ಯದ ಸಂಪತ್ತನ್ನು ಭೋಗಿಸಿಯಂತೂ ಜೀವನು ನರಕ-ತಿರ್ಯಂಚಗತಿಗಳಲ್ಲಿ ಹೋಗಿ ಮುಳುಗಿ ಬಿಡುತ್ತಾನೆ.

ಈಗ ಪರಿಗ್ರಹ ಪರಿಮಾಣವ್ರತದ ಐದು ಅತಿಚಾರಗಳ ವರ್ಣನೆ ಮಾಡುವಂಥ ಸೂತ್ರ ಹೇಳುತ್ತಾರೆ,-

**ಅತಿವಾಹನಾತಿಸಂಗ್ರಹ ವಿಸ್ಮಯಲೋಭಾತಿಭಾರವಹನಾನಿ ।**
**ಪರಿಮಿತಪರಿಗ್ರಹಸ್ಯ ಚ ವಿಕ್ಷೇಪಾಃ ಪಂಚ ಲಕ್ಷ್ಯಂತೇ ॥೬೨॥**

**ಅರ್ಥ :-** ಪರಿಗ್ರಹ ಪರಿಮಾಣ ವ್ರತದ ಐದು ಅತಿಚಾರಗಳು ಈ ಕೆಳಗಿನಂತಿವೆ. ಕುದುರೆ, ಒಂಟೆ, ಎತ್ತು ಇತ್ಯಾದಿ ತಿರ್ಯಂಚಗಳನ್ನು ಮತ್ತು ದಾಸ-ದಾಸಿ-ಸೇವಕ ಮೊದಲಾದವರನ್ನು ಅತಿ ಲೋಭದ ವಶದಿಂದ ಮರ್ಯಾದೆಯಿಲ್ಲದೆ ಅತ್ಯಂತ ದೂರ ಸ್ಥಳದವರೆಗೆ ತೆಗೆದುಕೊಂಡು ಹೋಗುವುದು, ಹೆಚ್ಚು ನಡೆಸುವುದು ಅದು **ಅತಿವಾಹನ** ನಾಮದ ಅತಿಚಾರವಿದೆ. ॥೧॥

ತಮ್ಮ ಮನೆಯಲ್ಲಿ ಪ್ರಯೋಜನವಿಲ್ಲದೆಯೇ ಅಧಿಕ ಪದಾರ್ಥಗಳನ್ನು ಸಂಗ್ರಹ ಮಾಡುವುದು; ಭೋಜನ, ಪಾತ್ರೆ ಬಟ್ಟೆ ಇತ್ಯಾದಿಗಳ ಅವಶ್ಯಕತೆ ಕಡಿಮೆಯಿದ್ದರೂ ಹೆಚ್ಚು ಸಂಗ್ರಹ ಮಾಡುವುದು; ಧಾನ್ಯ, ಬಟ್ಟೆ, ಔಷಧ, ಕಾಷ್ಠ, ಪಾಷಾಣ, ಧಾತು ಇತ್ಯಾದಿಗಳ ಸಂಗ್ರಹ ಹೆಚ್ಚು ಮಾಡುವಲ್ಲಿಯೇ ಪರಿಣಾಮ ತೊಡಗಿಸುವುದು ಅದು **ಅತಿಸಂಗ್ರಹ**ನಾಮದ ಅತಿಚಾರವಿದೆ. ॥೨॥

ಇತರರಲ್ಲಿ ಅಧಿಕ ಸಂಪತ್ತಿ, ಅಧಿಕ ಪರಿಗ್ರಹ, ಅನೇಕ ದೇಶಗಳ ವಸ್ತುಗಳು ಮತ್ತು ಎಂದೂ ನೋಡಿರದಂಥ ವಸ್ತುಗಳನ್ನು ನೋಡಿ ಕೇಳಿ ಆಶ್ಚರ್ಯಚಕಿತನಾಗುವುದು ಅದು **ವಿಸ್ಮಯ**ನಾಮದ ಅತಿಚಾರವಿದೆ. ॥೩॥

ಯಾವುದೇ ವ್ಯಾಪಾರದಲ್ಲಿ, ಸೇವೆಯಲ್ಲಿ, ಕಲೆಯಿಂದ, ಚಾತುರ್ಯದಿಂದ ತಮಗೆ ಅಂತರಾಯ ಕರ್ಮದ ಕ್ಷಯೋಪಶಮಕ್ಕೆ ಅನುಸರಿಸಿ ಬಹಳಷ್ಟು ಲಾಭವಾಗಿ ಹೋದರೂ ಕೂಡ ತೃಪ್ತರಾಗದಿರುವದು. ಸಂತೋಷಬಾರದಿರುವುದು ಅದು **ಅತಿಲೋಭ** ನಾಮದ ಅತಿಚಾರವಿದೆ. ॥೪॥

ಲೋಭದ ವಶದಿಂದ ತಿರ್ಯಂಚಗಳ ಮೇಲೆ ಮರ್ಯಾದೆಗಿಂತ ಅಧಿಕ ಭಾರವನ್ನು ಹೊರೆಸಿ ನಡೆಯಿಸುವುದು ಅದು **ಅತಿಭಾರವಹನ** ನಾಮದ ಅತಿಚಾರವಿದೆ. ॥೫॥

ಯಾವ ಗೃಹಸ್ಥನು ಪರಿಗ್ರಹದ ಪರಿಮಾಣ ಮಾಡುತ್ತಾನೆ ಅವನು ಈ ಐದು ಅತಿಚಾರಗಳ ಪರಿತ್ಯಾಗವನ್ನು ಕೂಡ ಮಾಡುತ್ತಾನೆ. ಈ ಪ್ರಕಾರ ಗೃಹಸ್ಥರಿಗೆ ಧಾರಣ ಮಾಡಲು ಯೋಗ್ಯವಾದ ಐದು ಅಣುವ್ರತಗಳನ್ನು ಹೇಳಿ ಈಗ ಐದು **ಅಣುವ್ರತಗಳ ಫಲ**ವನ್ನು ಹೇಳುವಂಥ ಸೂತ್ರ ಹೇಳುತ್ತಾರೆ,-

**ಪಂಚಾಣುವ್ರತನಿಧಯೋ ನಿರತಿಕ್ರಮಣಾಃ ಫಲಂತಿ ಸುರಲೋಕಮ್ ।**
**ಯತ್ರಾವಧಿರಷ್ಟಗುಣಾ ದಿವ್ಯಶರೀರಂ ಚ ಲಭ್ಯಂತೇ ॥೬೩॥**

**ಅರ್ಥ :-** ಅತಿಚಾರರಹಿತ ಈ ಮೇಲೆ ಹೇಳಿದ ಐದು ಅಣುವ್ರತಗಳೆಂಬ ನಿಧಿರೂಪ ವೃಕ್ಷದಲ್ಲಿ ದೇವ ಲೋಕರೂಪದ ಫಲಗಳು ತಗಲುತ್ತವೆ. ಆ ದೇವಲೋಕದಲ್ಲಿ ಅವಧಿಜ್ಞಾನ ಮತ್ತು ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವವೆಂಬ ಎಂಟು ಮಹಾಗುಣ ಹಾಗೂ ಧಾತು-ಉಪಧಾತುವಿಲ್ಲದ ದಿವ್ಯ ಶರೀರವು ಪ್ರಾಪ್ತವಾಗುತ್ತದೆ.

**ಭಾವಾರ್ಥ :-** ಅಣುವ್ರತಗಳನ್ನು ನಿರತಿಚಾರವಾಗಿ ಧಾರಣ ಮಾಡುವಂಥವನು ಸತ್ತು ಸ್ವರ್ಗಲೋಕದಲ್ಲಿ ಮಹಾನ ಅಣಿಮಾ ಮೊದಲಾದ ಋದ್ಧಿಗಳ ಧಾರಕನಾದ ದೇವನೇ ಆಗುತ್ತಾನೆ; ಅನ್ಯ ಪರ್ಯಾಯ ಪಡೆಯುವುದಿಲ್ಲವೆಂಬ ನಿಯಮವಿದೆ. ಸ್ವರ್ಗದಲ್ಲಿ ಧಾತು-ಉಪಧಾತುಗಳಿಲ್ಲದ, ರೋಗ-ವೃದ್ಧತ್ವಗಳಿಲ್ಲದ ದಿವ್ಯ ಶರೀರವನ್ನು ಪ್ರಾಪ್ತ ಮಾಡಿಕೊಂಡು ಅಸಂಖ್ಯಾತ ವರ್ಷಗಳವರೆಗೆ ಸುಖ-ಸಂಪತ್ತುಗಳಲ್ಲಿ ಲೀನನಾಗಿರುತ್ತಾನೆ.

ಈಗ ಯಾರು ಈ ಐದು ಅಣುವ್ರತಗಳನ್ನು ಧಾರಣ ಮಾಡಿ ಈ ಲೋಕದಲ್ಲಿ ಪ್ರಸಿದ್ಧರಾಗಿದ್ದಾರೆ ಅವರ ಹೆಸರುಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಮಾತಂಗೋ ಧನದೇವಶ್ಚ ವಾರಿಷೇಣಸ್ತತಃ ಪರಃ ।**
**ನೀಲೀ ಜಯಶ್ಚ ಸಂಪ್ರಾಪ್ತಾಃ ಪೂಜಾತಿಶಯಮುತ್ತಮಮ್ ॥೬೪॥**

**ಅರ್ಥ :-** ಅಹಿಂಸಾ ಅಣುವ್ರತದಲ್ಲಿ ಮಾತಂಗ ಚಾಂಡಾಲ, ಸತ್ಯ ಅಣುವ್ರತದಲ್ಲಿ ಧನದೇವ, ಅಚೌರ್ಯ ಅಣುವ್ರತದಲ್ಲಿ ವಾರಿಷೇಣ, ಬ್ರಹ್ಮಚರ್ಯ ಅಣುವ್ರತದಲ್ಲಿ ನೀಲಿ ಮತ್ತು ಪರಿಗ್ರಹ ಪರಿಮಾಣ ವ್ರತದಲ್ಲಿ ಜಯ ಕುಮಾರನು ವ್ರತಗಳ ಮಹಾತ್ಮ್ಯದಿಂದ ಉತ್ತಮ ಕೀರ್ತಿರೂಪದ ಅತಿಶಯಕ್ಕೆ ಪ್ರಾಪ್ತರಾಗಿ ಅದೇ ಭವದಲ್ಲಿ ದೇವರುಗಳಿಂದ ಪೂಜ್ಯರಾಗಿದ್ದಾರೆ. ಈ ವ್ರತಗಳ ಪ್ರಭಾವದಿಂದ ಅನೇಕ ಭವ್ಯ ಜೀವರುಗಳು ಈ ಲೋಕದಲ್ಲಿ ಮಹಿಮೆಯನ್ನು ಪಡೆದು ದೇವಲೋಕಕ್ಕೆ ಹೊರಟು ಹೋಗಿದ್ದಾರೆ. ಆದರೆ ಆಗಮದಲ್ಲಿ ಇವರ ಕಥೆಗಳೇ ಪ್ರಸಿದ್ಧವಿವೆ.

ಈಗ ಯಾರು ಐದು ಪಾಪಗಳ ಪ್ರಭಾವದಿಂದ ಈ ಲೋಕದಲ್ಲಿ ಘೋರ ಕ್ಲೇಶಕ್ಕೆ ಪ್ರಾಪ್ತರಾಗಿ ದುರ್ಗತಿಗೆ ಇಳಿದಿದ್ದಾರೆ, ಅವರ ಹೆಸರುಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಧನಶ್ರೀ ಸತ್ಯಘೋಷೌ ಚ ತಾಪಸೀರಕ್ಷಕಾವಪಿ ।**
**ಉಪಾಖ್ಯೇಯಾಸ್ತಥಾ ಸ್ಮಶ್ರುನವನೀತೋ ಯಥಾಕ್ರಮಮ್ ॥೬೫॥**

**ಅರ್ಥ :-** ಹಿಂಸೆಯಿಂದ ಧನಶ್ರೀ, ಅಸತ್ಯದಿಂದ ಸತ್ಯಘೋಷ, ಕಳವಿನಿಂದ ತಾಪಸೀ, ಕುಶೀಲದಿಂದ ಕೋತವಾಲ, ಪರಿಗ್ರಹದಿಂದ ಶ್ಮಶ್ರುನವನೀತರೆಂಬವರು ಈ ಲೋಕದಲ್ಲಿ ದೊರೆಗಳ ಮೂಲಕ ತೀವ್ರ ದಂಡನೆಗೆ ಪಾತ್ರರಾಗಿ ದುರ್ಗತಿಗೆ ಹೊರಟು ಹೋಗಿದ್ದಾರೆ. ಸೂತ್ರದಲ್ಲಿ ಈ ಐದು ಹೆಸರುಗಳನ್ನು ಕ್ರಮದಿಂದ ತಿಳಿದುಕೊಂಡು ಅರಿತುಕೊಳ್ಳುವುದು.

ಈಗ ಎಂಟು ಮೂಲ ಗುಣಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಮದ್ಯಮಾಂಸಮಧುತ್ಯಾಗೈಃ ಸಹಾಣುವ್ರತಪಂಚಕಮ್ ।**
**ಅಷ್ಟೌ ಮೂಲಗುಣಾನಾಹುರ್ಗೃಹಿಣಾಂ ಶ್ರಮಣೋತ್ತಮಾಃ ॥೬೬॥**

**ಅರ್ಥ ಃ-** ಶ್ರಮಣೋತ್ತಮ ಎಂದರೆ ಯಾವ ಗಣಧರದೇವ ಹಾಗೂ ಶ್ರುತಕೇವಲಿಗಳಿದ್ದಾರೆ ಅವರು ಗೃಹಸ್ಥರಿಗೆ ಮದ್ಯ, ಮಾಂಸ, ಮಧುಗಳ ತ್ಯಾಗ ಸಹಿತ ಐದು ಅಣುವ್ರತಗಳನ್ನು ಅಷ್ಟ ಮೂಲಗುಣಗಳೆಂದು ಹೇಳುತ್ತಾರೆ.

**ಭಾವಾರ್ಥ ಃ-** ೧) ಜೀವನು ಕೊಲ್ಲುವ ಸಂಕಲ್ಪದಿಂದ ತ್ರಸ ಜೀವಗಳನ್ನು ಕೊಲ್ಲುವುದರ ತ್ಯಾಗ ೨) ಅನ್ಯರಿಗೆ ಹಾಗೂ ತನಗೆ ಕ್ಲೇಶವನ್ನುತ್ಪನ್ನ ಮಾಡುವಂಥ ಮತ್ತು ಸತ್ಯ ಶ್ರದ್ಧೆ-ಜ್ಞಾನ-ಆಚರಣೆಯ ಘಾತ ಮಾಡುವಂಥ ವಚನದ ತ್ಯಾಗ; ೩) ಕೊಡಲಾರದೆ ಇಟ್ಟ, ಬಿದ್ದ, ಮರೆತ, ಹೂಳಿದ ಅನ್ಯರ ಧನವನ್ನು ಗ್ರಹಣ ಮಾಡುವುದರ ತ್ಯಾಗ; ೪) ತಮ್ಮ ಕುಲಯೋಗ್ಯ ವಿವಾಹಿತ ಸ್ತ್ರೀಯ ಹೊರತಾಗಿ ಅನ್ಯ ಸಮಸ್ತ ಸ್ತ್ರೀಯರಲ್ಲಿ ರಾಗದ ತ್ಯಾಗ; ೫) ನ್ಯಾಯದಿಂದ ಗಳಿಸಿದ ಪರಿಗ್ರಹದಲ್ಲಿ ಪರಿಮಾಣ ಮಾಡಿ ಅಧಿಕ ಪರಿಗ್ರಹದ ತ್ಯಾಗ; ಇವು ಐದಂತೂ ಅಣುವ್ರತಗಳು ಮತ್ತು ೬) ಯಾವುದರಿಂದ ತಮ್ಮ ಪರಿಣಾಮವು ಮೋಹಿತವಾಗಿ ತಮ್ಮ ಹಿತ-ಅಹಿತದ ಎಚ್ಚರಿಕೆ ವಿವೇಕವುಳಿಯುವುದಿಲ್ಲ. ಅಂಥ ಮದ್ಯಪಾನದ ತ್ಯಾಗ; ೭) ದ್ವೀಂದ್ರಿಯ ಮೊದಲಾದ ಜೀವಗಳ ಶರೀರದಿಂದ ಉತ್ಪನ್ನವಾದ ಮಾಂಸದ ತ್ಯಾಗ; ಮತ್ತು ೮) ಜೇನ್ನೊಣಗಳಿಂದ ಗೂಡಿನಲ್ಲಿ ಏಕತ್ರ ಮಾಡಿದ ಮಧುವಿನ ತ್ಯಾಗ; ಈ ಎಂಟರ ತ್ಯಾಗ ಮಾಡುವುದು ಅವು ಅಷ್ಟ ಮೂಲಗುಣಗಳಿವೆ.

**ಒಂದು ವೇಳೆ ಗೃಹಸ್ಥನಿಗೆ ಐದು ಪಾಪ ಮತ್ತು ಮೂರು ಮಕಾರದ ತ್ಯಾಗದಲ್ಲಿ ದೃಢತೆಯು ಬಂದು ಬಿಟ್ಟರೆ ಸಮಸ್ತ ಗುಣರೂಪ ಮಹಲಿಗೆ ಅಡಿಪಾಯ ಹಾಕಿದಂತಿದೆ. ಅನಾದಿಕಾಲದಿಂದ ಸಂಸಾರದಲ್ಲಿ ಪರಿಭ್ರಮಣ ಮಾಡುವುದರ ಕಾರಣವು ಮಿಥ್ಯಾತ್ವ, ಅನ್ಯಾಯ, ಅಭಕ್ಷಗಳಿದ್ದು, ಅವುಗಳ ಅಭಾವವಾಗಿ ಹೋದಾಗ ಈ ಜೀವನು ಅನೇಕ ಗುಣಗಳ ಗ್ರಹಣಕ್ಕೆ ಪಾತ್ರನಾಗುತ್ತಾನೆ. ಆದುದರಿಂದ ಇವು ಎಂಟು ತ್ಯಾಗಯೋಗ್ಯವಿವೆ. ಅವೇ ಮೂಲ ಗುಣಗಳಿವೆ.**

ಅನ್ಯ ಗ್ರಂಥಗಳಲ್ಲಿ ಐದು ಉದುಂಬರ ಫಲ ಮತ್ತು ಮೂರು ಮಕಾರದ ತ್ಯಾಗವನ್ನು ಎಂಟು ಮೂಲಗುಣಗಳೆಂದು ಹೇಳಿದ್ದಾರೆ. ಅಲ್ಲಿ೧) ಅತ್ತಿ, ೨)ಆಲ, ೩) ಬಸರಿ, ೪)ಗೋರಿ, ೫)ಅರಳೆ (ಹಿಪ್ಪಲಿ) ಇವು ಐದು ಉದುಂಬರ ಫಲವೆಂದು ಹೇಳಿದ್ದಾರೆ. ಇವುಗಳಲ್ಲಿ ಅತ್ಯಂತ ಅಧಿಕ ತ್ರಸ ಜೀವಗಳು ಸ್ಪಷ್ಟವಾಗಿ ಕಂಡು ಬರುತ್ತವೆ; ಆದುದರಿಂದ ಈ ಫಲಗಳನ್ನು ತಿನ್ನುವುದು ಮಾಂಸ ಭಕ್ಷಣದ ಸಮಾನವಿದೆ. ಅಲ್ಲದೆ ಇನ್ನೂ ಅದೆಷ್ಟೋ ಫಲ, ಪುಷ್ಪ, ಪತ್ರ, ತಂತು, ರೋಮಗಳಿವೆ ಅವನ್ನು ಒಣಗಿಸಿ ಕೊಳ್ಳುವುದರಿಂದ ಸ್ವಲ್ಪ ಸಮಯದಲ್ಲಿ ಅವುಗಳಲ್ಲಿರುವ ತ್ರಸ ಜೀವಗಳೆಲ್ಲವೂ ಸತ್ತು ಹೋಗುತ್ತವೆ. ಆ ಒಣಗಿದ ಒಣಗಿಸಿದ ವಸ್ತುಗಳನ್ನು ತಿನ್ನುವುದರಲ್ಲಿ ಕೂಡ ರಾಗಭಾವದ ಅಧಿಕತೆಯಿಂದ ಭಾವಹಿಂಸೆಯೇ ಆಗುತ್ತದೆ. ನಾನು ಇವನ್ನು ಒಣಗಿಸಿ ತಿನ್ನುತ್ತೇನೆಂಬ ಪರಿಣಾಮವಿರುವವನಿಗೆ ಅಭಕ್ಷ್ಯದಲ್ಲಿ ತೀವ್ರ ಅನುರಾಗವಿರುವುದರಿಂದ ಅವನಿಗೆ ತೀರ ಅಧಿಕ ಪಾಪದ ಬಂಧವೇ ಆಗುತ್ತದೆ.

**ಮದ್ಯತ್ಯಾಗ ಃ-** ಮದ್ಯವು ಮನಸ್ಸನ್ನು ಮೋಹಿತಗೊಳಿಸುತ್ತದೆ, ಅಚೇತ ಮಾಡಿ ಬಿಡುತ್ತದೆ. ಮನಸ್ಸು ಮೋಹಿತವಾಗಿ ಹೋದ ನಂತರ ಧರ್ಮವನ್ನು ಮರೆತು ಹೋಗುತ್ತಾನೆ. **ಧರ್ಮವು ಮರೆತು ಹೋದ ಮೇಲೆ ಪುರುಷನು ನಿಃಶಂಕನಾಗಿ ಹಿಂಸಾಪೂರ್ವಕವಾಗಿ ಆಚರಣೆ ಮಾಡತೊಡಗುತ್ತಾನೆ.**

ಯಾವ ವಸ್ತುವು ಮನಸ್ಸನ್ನು ಉನ್ಮತ್ತ ಮಾಡುವುದು, ಸ್ವರೂಪದ ಸಾವಧಾನತೆಯನ್ನು ಮರೆಸುವುದು, ವಿಷಯಗಳಲ್ಲಿ ಆಸಕ್ತಿಹೆಚ್ಚಿಸುವುದು, ರಸನೇಂದ್ರಿಯ ಮತ್ತು ಉಪಸ್ಥ (ಕಾಮ) ಇಂದ್ರಿಯದ ವಿಷಯದಲ್ಲಿ ತೀವ್ರರಾಗ ವೃದ್ಧಿಸುವುದು ಅದು ಮದ್ಯವಿದೆ. ಆದುದರಿಂದ ಭಂಗಿ ಸೇದುವುದು, ಅಫೀಮು, ಮದ್ದುಗುಣಿಕೆ ಮೊದಲಾದ ಅಮಲೇರಿಸುವಂಥ ವಸ್ತುಗಳು ಮತ್ತು ಅವುಗಳ ಸಂಯೋಗದಿಂದ ನಿರ್ಮಿಸಿದ ಸಮಸ್ತ ಅಮಲೇರಿಸುವಂಥ ವಸ್ತುಗಳ ಭಕ್ಷಣ ಮಾಡುವುದರಿಂದ ಧರ್ಮಬುದ್ಧಿಯ ನಾಶವಾಗಿ ಹೋಗುತ್ತದೆ, ಪರಮಾರ್ಥದ ವಿಚಾರವು ನಷ್ಟವಾಗಿ ಹೋಗುತ್ತದೆ.

**ಭಂಗಿ ತ್ಯಾಗ ಃ-** ಆದುದರಿಂದ ಯಾವನು ಜಿನೇಂದ್ರರ ಆಜ್ಞೆಯನ್ನು ಮನ್ನಿಸಲಪೇಕ್ಷಿಸುತ್ತಾನೆ ಅವನು ಅವಶ್ಯವಾಗಿ ಅಮಲೇರಿಸುವಂಥ ವಸ್ತುಗಳ ಸೇವನೆಯ ತ್ಯಾಗ ಮಾಡಿ ಬಿಡುತ್ತಾನೆ. ಗಾಂಜದಲ್ಲಿ ಬಹಳಷ್ಟು ತ್ರಸ ಜೀವಗಳು ಉತ್ಪನ್ನವಾಗುತ್ತವೆ. ಗಾಂಜ ಸೇದುವಂಥವನಿಗೆ ನೋಡುವ ಶೋಧಿಸುವ ಪ್ರವೃತ್ತಿಯಿರುವುದಿಲ್ಲ, ಅನ್ಯಪದಾರ್ಥದಲ್ಲಿ ಜೀವ

ಬಿದ್ದು ಬಿಟ್ಟರೆ ಅದನ್ನು ತಿನ್ನುವುದಿಲ್ಲ, ಆದರೆ ಗಾಂಜ ಸೇದುವಂಥವನು ಗಾಂಜ ಶೋಧಿಸಿ ಸೇದುವುದಿಲ್ಲ, ಅದರಲ್ಲಿ ಅಸಂಖ್ಯಾತ ತ್ರಸ ಜೀವಗಳು ಉತ್ಪನ್ನವಾಗುತ್ತವೆ ಅವನ್ನು ತಡೆಯುವ ಸಾಧ್ಯತೆಯಿಲ್ಲ. ಆದುದರಿಂದ ಧರ್ಮದ ಇಚ್ಛುಕನು ಗಾಂಜವನ್ನು ಅವಶ್ಯವಾಗಿ ತ್ಯಾಗ ಮಾಡುತ್ತಾನೆ. ಏಕೆಂದರೆ ಗಾಂಜವು ಅಂತರಂಗವನ್ನು ಕೆಡಿಸುತ್ತದೆ ಮತ್ತು ಬಾಹ್ಯದಲ್ಲೂ ಅದೆಷ್ಟೋ ಜೀವಗಳ ವಿರಾಧನೆಯಾಗುತ್ತದೆ.

**ಹೆಂಡತ್ಯಾಗ :-** ಹೆಂಡದಲ್ಲಂತೂ ಅಪರಿಮಿತ ತ್ರಸ ಜೀವಗಳ ಉತ್ಪತ್ತಿಯಾಗುತ್ತದೆ. ಅತ್ಯಂತ ದುರ್ಗಂಧಿತವಿದೆ. ಉತ್ತಮ ಕುಲದ ಪುರುಷನು ಊಟ ಮಾಡುತ್ತಿರುವಾಗ ಒಂದು ವೇಳೆ ಹೆಂಡದ ಧಾರೆಯನ್ನು ನೋಡಿದರೆ ಅದೇ ಸಮಯದಲ್ಲಿ ಭೋಜನದ ತ್ಯಾಗ ಮಾಡಿ ಬಿಡುತ್ತಾನೆ ಮತ್ತು ಹೆಂಡವನ್ನು ಸ್ಪರ್ಶ ಮಾಡಿದನೆಂದರೆ ವಸ್ತ್ರಸಹಿತ ಸ್ನಾನ ಮಾಡುತ್ತಾನೆ. ಹೆಂಡದಿಂದ ಉನ್ಮತ್ತನಾಗುವಂಥವನು ತಾಯಿಯನ್ನು, ಮಗಳನ್ನು ಸ್ತ್ರೀಯರೂಪದಲ್ಲಿ ನೋಡುತ್ತಾನೆ. ಆಚರಣೆ ಮಾಡುತ್ತಾನೆ. ಭಯ, ಗ್ಲಾನಿ, ಕ್ರೋಧ, ಕಾಮ, ಲೋಭ, ಹಾಸ್ಯ, ರತಿ, ಅರತಿ, ಶೋಕ - ಈ ಎಲ್ಲ ದೋಷಗಳು ಹಿಂಸೆಯ ಕಾರಣವಾಗಿ ಆಗುವುದರಿಂದ ಹಿಂಸೆಯೇ ಇವೆ, ಇವೆಲ್ಲವು ಹೆಂಡ ಕುಡಿಯುವವನಿಗೆ ಆಗುತ್ತವೆ. ಆದುದರಿಂದ ಧರ್ಮದ ಅಪೇಕ್ಷೆಯುಳ್ಳವನು ದೂರದಿಂದಲೇ ಮದ್ಯಪಾನದ ತ್ಯಾಗ ಮಾಡುತ್ತಾನೆ.

**ಮಾಂಸತ್ಯಾಗ :-** ದ್ವೀಂದ್ರಿಯ ಮೊದಲಾದ ಜೀವಗಳ ಘಾತಮಾಡುವುದರಿಂದ ಮಾಂಸವು ಉತ್ಪನ್ನವಾಗುತ್ತದೆ, ಅದರ ಆಕಾರವನ್ನು ನೋಡುವುದರಿಂದಲೇ ಅತ್ಯಂತ ಜುಗುಪ್ಸೆಯುಂಟಾಗುತ್ತದೆ. ಮಾಂಸದ ಸ್ಪರ್ಶ, ದುರ್ಗಂಧ, ಮತ್ತು ಅದರ ಹೆಸರೇ ಪರಿಣಾಮದಲ್ಲಿ ಮಹಾನ ತಿರಸ್ಕಾರವನ್ನುತ್ಪನ್ನಮಾಡುತ್ತದೆ. ಯಾರು ಧರ್ಮದಿಂದ ರಹಿತರಿದ್ದಾರೆ, ನರಕಾದಿಗಳಲ್ಲಿ ಹೋಗುವಂಥವರಿದ್ದಾರೆ, ಅತಿಶಯನಿರ್ದಯ ಪರಿಣಾಮವುಳ್ಳವರಿದ್ದಾರೆ ಅವರೇ ಮಾಂಸ ಭಕ್ಷಣ ಮಾಡುತ್ತಾರೆ.

ತಾನಾಗಿಯೇ ಸತ್ತು ಹೋದ ಎತ್ತು, ಎಮ್ಮೆ, ಮೇಕೆ, ಹುಲ್ಲೆ ಮೊದಲಾದವುಗಳ ಮಾಂಸದಲ್ಲಿ ಅನಂತ ಬಾದರ ನಿಗೋದದ ಜೀವ ಮತ್ತು ಅಸಂಖ್ಯಾತ ತ್ರಸ ಜೀವಗಳ ಘಾತವಾಗುತ್ತದೆ. ಅಪಕ್ವ ಮಾಂಸದಲ್ಲಿ, ಅಗ್ನಿಯಿಂದ ಬೇಯಿಸಿದ ಮಾಂಸದಲ್ಲಿ, ಅಗ್ನಿಯ ಮೇಲೆ ಇರಿಸಿದ ಪಾತ್ರೆಯಲ್ಲಿ ಬೇಯುತ್ತಿರುವ ಮಾಂಸದಲ್ಲಿ ಕೂಡ ಅನಂತ ಜೀವಗಳು ನಿರಂತರ ಉತ್ಪನ್ನವಾಗುತ್ತಿರುತ್ತವೆ. ಅದೇ ಜಾತಿಯ ಜೀವಗಳು ಪ್ರತಿಸಮಯ ಉತ್ಪನ್ನವಾಗುತ್ತಿರುತ್ತವೆ. ಆದುದರಿಂದ ಅಪಕ್ವ ಮಾಂಸ, ಬೇಯಿಸಿದ ಮಾಂಸ, ಬೇಯುತ್ತಿರುವ ಮಾಂಸ, ಒಣಗಿದ ಮಾಂಸವನ್ನು ಯಾರು ತಿನ್ನುತ್ತಾರೆ, ಅವರು ಮತ್ತು ಮಾಂಸದ ತುಂಡನ್ನು ಯಾರು ಸ್ಪರ್ಶಿಸುತ್ತಾರೆ. ಆ ಮನುಷ್ಯರು ನಿರಂತರ ಏಕತ್ರವಾಗುತ್ತಿರುವ ಬಹಳಷ್ಟು ಜೀವಗಳ ಘಾತ ಮಾಡುತ್ತಾರೆ.

ಚಾಂಡಾಲರ, ಕಟುಕರ, ಮ್ಲೇಚ್ಛರ ಮತ್ತು ನಾಯಿಗಳ ಆಹಾರವಂತೂ ಮಾಂಸವೇ ಇರುತ್ತದೆ. **ಮಾಂಸ ತಿನ್ನುವವರಿಗೆ ದಯೆ, ಆಚಾರ ಮೊದಲಾದವುಗಳಿರುವುದಿಲ್ಲ; ಜಾತಿ, ಕುಲ, ಧರ್ಮ, ದಯೆ, ಕ್ಷಮೆ ಮೊದಲಾದ ಸಮಸ್ತ ಗುಣಗಳಿಂದ ಭ್ರಷ್ಟ-ರಹಿತರಿರುತ್ತಾರೆ.** ದುರ್ಗತಿಗಿಳಿಯುವ, ಮಹಾಪಾಪಿ, ಮಹಾನಿರ್ದಯಿಯಾದ ಜನರು ತಾವೇ ರಚಿಸಿದ ಶಾಸ್ತ್ರಗಳಲ್ಲಿ ಮಾಂಸಭಕ್ಷಣಕ್ಕೆ ಧರ್ಮವೆಂದು ಹೇಳಿದ್ದಾರೆ. ಮಾಂಸದಿಂದ ದೇವತೆ ಮತ್ತು ಪಿತೃಗಳು ತೃಪ್ತರಾಗುತ್ತಾರೆಂದು ಹೇಳುತ್ತಾರೆ. ದೇವತೆಗಳನ್ನು ಮಾಂಸಭಕ್ಷಕರೆಂದು ಹೇಳುತ್ತಾರೆ. ಶ್ರಾದ್ಧಗಳಲ್ಲಿ ಬ್ರಾಹ್ಮಣರಿಗೆ ಮಾಂಸಪಿಂಡದ ಭಕ್ಷಣ ಮಾಡಿಸಿದರೆ ದೇವಗಳು-ಪಿತೃಗಳು ತೃಪ್ತರಾಗುವರೆಂದು ಹೇಳುತ್ತಾರೆ. ಇದೆಲ್ಲವು ಮಿಥ್ಯಾದರ್ಶನದ ಫಲವಿದೆ.

**ಮಧುತ್ಯಾಗ :-** ಮಧುವಿನಂಥ ಅಧಮವಸ್ತುವು ಯಾವುದೂ ಇಲ್ಲ. ಜೇನ್ನೊಣಗಳ ವಮನ, ಭಿಲ್ಲ, ಚಾಂಡಾಲರ ಆಹಾರ, ಅನಂತ ಜೀವಗಳ ಉತ್ಪತ್ತಿಯ ಸ್ಥಾನವು ಮಧು ಇದೆ. ಅಸಂಖ್ಯ ಅಗಣಿತ ಜೇನ್ನೊಣಗಳನ್ನು ಸಾಯಿಸಿ ಭಿಲ್ಲ, ಚಾಂಡಾಲ ಮೊದಲಾದವರು ಮಧು ತೆಗೆದು ತರುತ್ತಾರೆ.ತಮ್ಮಷ್ಟಕ್ಕೆ ತಾವೇ ಸಾಯುವಂಥ ಅಸಂಖ್ಯಾತ ತ್ರಸ ಜೀವಗಳ ಉತ್ಪತ್ತಿಯು ಮಧುವಿನಲ್ಲಿ ಆಗುತ್ತದೆ. **ಮಧುವನ್ನು ಪವಿತ್ರವೆಂದು ಮನ್ನಿಸುವುದು, ಪಂಚಾಮೃತಗಳಲ್ಲಿ ಸೇರಿಸುವುದು, ಶುದ್ಧವೆಂದು ಹೇಳುವುದು ಇದರಷ್ಟು ವಿಪರೀತವು - ಅಸತ್ಯವು ಬೇರೆ ಯಾವುದೂ ಇಲ್ಲ.** ಜೇನುತುಪ್ಪದ ಒಂದು

ಕಣವನ್ನಾದರೂ ಯಾರು ಔಷಧದ ರೂಪದಲ್ಲಿ ತೆಗೆದುಕೊಳ್ಳುತ್ತಾರೆ, ರೋಗದೂರ ಮಾಡುವ ಸಲುವಾಗಿ ತಿನ್ನುತ್ತಾರೆ ಅವರು ಘೋರತರವಾದ ನರಕಗಳಲ್ಲಿ ದುಃಖಭೋಗಿಸಿ ಅಸಂಖ್ಯಾತ ಹಾಗೂ ಅನಂತ ಜನ್ಮಗಳವರೆಗೆ ಅನೇಕಾನೇಕ ರೋಗಗಳಿಗೆ ಪಾತ್ರರಾಗುತ್ತಾರೆ.

**ಮಧು, ಮದ್ಯ, ಮಾಂಸ, ನವನೀತ (ಬೆಣ್ಣೆ) ಇವು ನಾಲ್ಕು ಅತ್ಯಂತ ವಿಕೃತ-ಕೆಡಕು ವಸ್ತುಗಳನ್ನು ಭಗವಂತರು ಪರಮಾಗಮದಲ್ಲಿ ಹೇಳಿದ್ದಾರೆ.** ಜಿನಧರ್ಮ ಗ್ರಹಣ ಮಾಡುವವರು ಎಲ್ಲಕ್ಕೂ ಮೊದಲು ಮದ್ಯ, ಮಾಂಸ, ಮಧು, ಬೆಣ್ಣೆ ಈ ನಾಲ್ಕು ವಿಕೃತಿಗಳ ಪರಿತ್ಯಾಗ ಮಾಡುತ್ತಾರೆ. ಇವು ನಾಲ್ಕನ್ನು ಭಗವಂತರು ಮಹಾ ವಿಕೃತವೆಂದು ಹೇಳಿದ್ದಾರೆ. ಇವು ನಾಲ್ಕನ್ನು ತ್ಯಾಗ ಮಾಡದ ಹೊರತಾಗಿ ಜೀವನು ಧರ್ಮದ ಉಪದೇಶ ಗ್ರಹಣ ಮಾಡಲು ಪಾತ್ರನೇ ಆಗುವುದಿಲ್ಲ.

**ಹಿಂಸೆಯ ತ್ಯಾಗ :-** ಧರ್ಮವು ಅದು ಅಹಿಂಸಾರೂಪವಿದೆಯೆಂದು ಹೇಳಿದ ಜಿನೇಂದ್ರರ ಆಜ್ಞೆಯನ್ನು ಮತ್ತೆ ಮತ್ತೆ ಆಲಿಸಿದ ನಂತರವೂ ಯಾರು ಹಿಂಸೆಯನ್ನು ಬಿಟ್ಟು ಕೊಡುವಲ್ಲಿ ಅಸಮರ್ಥರಿದ್ದಾರೆ ಅವರು ತ್ರಸ ಜೀವಗಳ ಹಿಂಸೆಯನ್ನಂತೂ ಶೀಘ್ರವಾಗಿ ಬಿಟ್ಟು ಕೊಡಬೇಕು. **ಒಂಭತ್ತು ಪ್ರಕಾರದಿಂದ ಹಿಂಸೆಯ ತ್ಯಾಗ ಮಾಡಲಾಗುತ್ತದೆ.**

೧) ಸ್ವಯಂ ಮನಸ್ಸಿನಿಂದ ಹಿಂಸೆ ಮಾಡುವುದಿಲ್ಲ, ೨) ಮನಸ್ಸಿನಿಂದ ಇತರರ ಮೂಲಕ ಹಿಂಸೆ ಮಾಡಿಸುವುದಿಲ್ಲ, ೩) ಮನಸ್ಸಿನಿಂದ ಅನ್ಯ ಹಿಂಸೆ ಮಾಡುವಂಥವರ ಪ್ರಶಂಸೆ ಮಾಡುವುದಿಲ್ಲ, ೪) ವಚನದಿಂದ ಸ್ವಯಂ ಹಿಂಸೆ ಮಾಡುವುದಿಲ್ಲ, ೫) ವಚನದಿಂದ ಇತರರ ಮೂಲಕ ಹಿಂಸೆ ಮಾಡಿಸುವುದಿಲ್ಲ, ೬) ವಚನದಿಂದ ಅನ್ಯಹಿಂಸೆ ಮಾಡುವಂಥವರ ಪ್ರಶಂಸೆ ಮಾಡುವುದಿಲ್ಲ, ೭) ಕಾಯದಿಂದ ಸ್ವಯಂ ಹಿಂಸೆ ಮಾಡುವುದಿಲ್ಲ, ೮) ಕಾಯದಿಂದ ಇತರರ ಮೂಲಕ ಹಿಂಸೆ ಮಾಡಿಸುವುದಿಲ್ಲ, ೯) ಕಾಯದಿಂದ ಅನ್ಯ ಹಿಂಸೆ ಮಾಡುವಂಥವರಿಗೆ ಅನುಮೋದನೆ ಕೊಡುವುದಿಲ್ಲ.

ಈ ಪ್ರಕಾರ ಮನ-ವಚನ-ಕಾಯದ ಮೂಲಕ ಕೃತ-ಕಾರಿತ-ಅನುಮೋದನದಿಂದ ಹಿಂಸೆಯನ್ನು ಬಿಟ್ಟು ಕೊಡುವಂಥವನಿಗೆ ಔತ್ಸರ್ಗಿಕ ತ್ಯಾಗ ಎಂದರೆ ಉತ್ಕೃಷ್ಟತ್ಯಾಗವಾಗುತ್ತದೆ. ಈ ಒಂಭತ್ತು ಪ್ರಕಾರದಿಂದಲ್ಲದೆ ಯಾವ ಹಿಂಸೆಯ ತ್ಯಾಗವಾಗುತ್ತದೆ ಅದನ್ನು ಅಪವಾದ ತ್ಯಾಗವೆಂದು ಹೇಳುತ್ತಾರೆ. ಅದರಲ್ಲಿ ಅನೇಕ ಭೇದಗಳಿವೆ.

**ಈ ಅಹಿಂಸಾ ಧರ್ಮವು ಮೋಕ್ಷದ ಕಾರಣ ಮತ್ತು ಸಂಸಾರದ ಸಮಸ್ತ ದುಃಖರೂಪ ಪರಿಭ್ರಮಣದ ರೋಗವನ್ನು ನಿವಾರಿಸುವ ಸಲುವಾಗಿ ಅಮೃತದ ಸಮಾನವಿದೆ.** ಇದನ್ನು ಪ್ರಾಪ್ತ ಮಾಡಿಕೊಂಡು ಅಜ್ಞಾನೀ ಮಿಥ್ಯಾದೃಷ್ಟಿಗಳ ಅಯೋಗ್ಯ ಆಚರಣೆ-ವ್ಯವಹಾರ ನೋಡಿ ತಮ್ಮ ಪರಿಣಾಮದಲ್ಲಿ ಆಕುಲತೆಯಾಗಬಾರದು. ಏಕೆಂದರೆ ಸಂಸಾರದಲ್ಲಿ ಕರ್ಮದ ಪ್ರೇರಣೆಯಿಂದ ದುಃಖಿಯಾದ ಜೀವಗಳು ಅನೇಕ ಇವೆ. ಕೆಲವರು ಹಿಂಸಕರಿದ್ದರೆ ಕೆಲವರು ಅಭಕ್ಷ್ಯ ಭಕ್ಷಣೆ ಮಾಡುವಂಥವರಿದ್ದಾರೆ, ಕೆಲವರು ಕ್ರೋಧಿ, ಲೋಭೀ, ಮಾನೀ, ಮಾಯಾವೀ, ಮಹಾ ಆರಂಭಿ, ಮಹಾಪರಿಗ್ರಹಿ, ಅನ್ಯಾಯ ಮಾರ್ಗಿಗಳಿದ್ದಾರೆ. ಅವರ ಅನೀತಿಯನ್ನು ನೋಡಿ ತಮ್ಮ ಪರಿಣಾಮ ಕೆಡಿಸಕೊಳ್ಳಬಾರದು. ಕರ್ಮದಿಂದಪೀಡಿತರಾದ ಜೀವರುಗಳು ತಮ್ಮ ಸ್ವರೂಪವನ್ನು ಮರೆತು ಹೋಗುತ್ತಿದ್ದಾರೆ, ನಾವಂತೂ ಅವರುಗಳ ಮೇಲೆ ಸಮತಾ ಭಾವವನ್ನೇ ಇಡಬೇಕಾಗುವುದು.

**ಪ್ರಶ್ನೆ :-** ಭಗವಂತರು ಹೇಳಿದ ಧರ್ಮವಂತೂ ಸೂಕ್ಷ್ಮವಿದೆ, ಧರ್ಮದ ಸಲುವಾಗಿ ಹಿಂಸೆಯಾದರೆ ದೋಷವಿಲ್ಲವಲ್ಲವೇ ?

**ಉತ್ತರ :-** ಈ ಪ್ರಕಾರ **ಧರ್ಮಮೂಢ**ರಾಗಿ ಪ್ರಾಣಿಗಳ ಹಿಂಸೆ ಮಾಡಬಾರದು ದೇವರ ನಿಮಿತ್ತ, ಗುರುವಿನ ಕಾರ್ಯದ ನಿಮಿತ್ತ ಮಾಡಲಾದ ಹಿಂಸೆಯೂ ಶುಭವಲ್ಲ; **ಹಿಂಸೆಯಂತೂ ಪ್ರತಿಯೊಂದು ಅವಸ್ಥೆಯಲ್ಲಿ ಪಾಪವೇ ಇದೆ.** ಧರ್ಮವಂತೂ ದಯಾರೂಪವಿದೆ. ದೇವ-ಗುರುಗಳ ಕಾರ್ಯ ಮಾಡುವುದರ ನಿಮಿತ್ತವಾಗಿ ಹಿಂಸೆಯ ಆರಂಭವೇ ಧರ್ಮವಾದರೆ ಧರ್ಮವು ಹಿಂಸಾರಹಿತವಿದೆಯೆಂದು ಹೇಳಿದ ಜಿನೇಂದ್ರರ ವಾಣಿಯು ಅಸತ್ಯವಾಗಿ ಹೋಗುವುದು. ಆದುದರಿಂದ ಹಿಂಸೆಯನ್ನು ಧರ್ಮವೆಂದು ಎಂದೂ ಶ್ರದ್ಧೆ ಮಾಡಬಾರದು ಮತ್ತು ಮನ್ನಿಸಬಾರದು.

ಧರ್ಮವಂತೂ ದೇವತೆಗಳನ್ನು ಮನ್ನಿಸುವುದರಿಂದ ಆಗುತ್ತದೆ, ದೇವತೆಗಳಿಗೆ ಏನೆಲ್ಲವನ್ನು ಕೊಡುವುದು ಉಚಿತವಿದೆಯೆಂದು ಕೆಲವರು ಹೇಳುತ್ತಾರೆ; ಆದರೆ ಇಂಥ ವಿಪರೀತ ಮನ್ನಣೆ ಮಾಡಿ ಪ್ರಾಣಿಗಳ ಹಿಂಸೆ ಮಾಡುವುದು ಉಚಿತವಿಲ್ಲ.

ದೇವಿ ಎಂದರೆ ಕಾತ್ಯಾಯಿನಿ, ಚಂಡಿ, ಚಾಮುಂಡಿ, ದುರ್ಗಿ, ಭವಾನೀ, ಕಾಳೀ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧರಿದ್ದಾರೆ ; ಅವರಿಗೆ ಮೇಕೆ ಅಥವಾ ಕೋಣವನ್ನು ಕೊಂದು ಅರ್ಪಿಸುವುದರಿಂದ ದೇವಿಯರು ಪ್ರಸನ್ನರಾಗುತ್ತಾರೆಂದು ಅದೆಷ್ಟೋ ಜನರು ಹೇಳುತ್ತಾರೆ; ಆದರೆ ಇಂಥ **ಮಿಥ್ಯಾದೃಷ್ಟಿಗಳ ವಾಕ್ಯಗಳಿಂದ ಯಾರೂ ವಿಚಲಿತರಾಗಬಾರದು.**

ಆ ದೇವಿಯು ತಾನೇ ಅನೇಕ ಭುಜಗಳಲ್ಲಿ ಶಸ್ತ್ರಗಳನ್ನು ಧಾರಣ ಮಾಡಿ ಕ್ರೂರ ದೃಷ್ಟಿ ಮಾಡಿ ನಿಂತುಕೊಂಡಿದ್ದಾಳೆ; ಆ ದೇವಿಗೆ ಜೀವಗಳ ಮಾಂಸ ತಿನ್ನುವ ಅಪೇಕ್ಷೆಯಿದ್ದರೆ ತಾನೇ ಜೀವಗಳನ್ನು ಭಯಭೀತಗೊಳಿಸಿ ಕೊಂದು ಹಾಕಿ ಏಕೆ ತಿನ್ನುವುದಿಲ್ಲ ? ತನ್ನ ಭಕ್ತರುಗಳಿಂದ ದೀನ, ಅನಾಥಪ್ರಾಣಿಗಳನ್ನೇಕೆ ಸಾಯಿಸುತ್ತಾಳೆ ? ತಾನೇ ಸಿಂಹ, ವ್ಯಾಘ್ರ ಮೊದಲಾದವುಗಳ ಸಮಾನವಿದ್ದ ಮೇಲೆ ಸಿಂಹ, ವ್ಯಾಘ್ರ ಮೊದಲಾದುವನ್ನು ಕೊಂದು ಹಾಕಿ ಏಕೆ ತಿನ್ನುವುದಿಲ್ಲ ? ತಾನು ಸ್ವಯಂ ದೇವಿಯಾಗಿದ್ದೂ ಕಾಗೆ, ನಾಯಿ, ಭಿಲ್ಲ, ಚಾಂಡಾಲರಂತೆ ಮಾಂಸ ತಿನ್ನುವುದರಲ್ಲೇಕೆ ನಿಮಗ್ನಳಿದ್ದಾಳೆ, ಹಸಿವೆಯಿಂದ ದುಃಖಿಯಿದ್ದಾಳೆ, ಅವಳ ದೇವೀತನವೆಂಥದು ? ತಾನೇ ದುಃಖಿಯಿದ್ದವಳು, ಏನಾದರೂ ಬಯಸುತ್ತಿದ್ದವಳು, ಆಸಕ್ತಳಿದ್ದವಳು ಭಕ್ತರನ್ನು ಹೇಗೆ ಸುಖಿ ಮಾಡುವಳು ? ಅತ್ಯಂತ ದುರ್ಗಂಧಿತ ತಿರ್ಯಂಚಗಳ ದುರ್ಗಂಧಮಯ ಜಿಗುಪ್ಸೆಯನ್ನುಂಟು ಮಾಡುವಂಥ ಮಾಂಸದ ಇಚ್ಛುಕ **ಮಹಾಪಾಪಿಗಳಿಗೆ ದೇವತ್ವವಿರುವುದಿಲ್ಲ.**

**ಪಾಪೀ ಪುರುಷರು ಸುಳ್ಳು ಶಾಸ್ತ್ರಗಳ ರಚನೆ ಮಾಡಿ ತಮ್ಮ ಮಾಂಸ ಭಕ್ಷಣೆ**ಯ ಸಲುವಾಗಿ ಮತ್ತು ಮೂಢ ಜನರನ್ನು **ದೇವಿಯ ಪ್ರಸಾದ**ದ ಸಂಕಲ್ಪದಿಂದ ಮಾಂಸ ತಿನ್ನುವುದರಲ್ಲಿ ಪ್ರವೃತ್ತಿ ಮಾಡಿಸಿ ತಮ್ಮ ಇಂದ್ರಿಯಗಳನ್ನು ಪುಷ್ಟ ಮಾಡುವ ಸಲುವಾಗಿ ಜಗತ್ತಿನ ಜನರನ್ನು - ಜೀವಗಳನ್ನು ನರಕದಲ್ಲಿ ಮುಳುಗಿಸಿ ಬಿಟ್ಟಿದ್ದಾರೆ.

**ಜಿನೇಂದ್ರರ ಪರಮಾಗಮದಲ್ಲಂತೂ ಭವನವಾಸಿ, ವ್ಯಂತರ, ಜ್ಯೋತಿಷಿ, ಕಲ್ಪವಾಸೀ-ಈ ನಾಲ್ಕೂ ಪ್ರಕಾರದ ದೇವಗಳಿಗೆ ಕವಲಾಹಾರವನ್ನು ಹೇಳಿಲ್ಲ,** ಮಾನಸಿಕ ಆಹಾರವನ್ನೇ ಹೇಳಿದ್ದಾರೆ. ಯಾವುದೇ ಸಮಯದಲ್ಲಿ ಹಸಿವೆಯಾದ ಮೇಲೆ ಅದೇ ಸಮಯದಲ್ಲಿ ಅವರ ಕಂಠದಲ್ಲೇ ಅಮೃತವು ಸ್ರವಿಸುತ್ತದೆ, ಅದರಿಂದ ಅವರ ಹಸಿವೆ ಹಿಂಗಿ ಬಿಡುತ್ತದೆ. ಅವರ ದಿವ್ಯ ವೈಕ್ರಿಯಿಕ ಶರೀರವು ಸಪ್ತಧಾತು-ಉಪಧಾತುಗಳಿಂದ ರಹಿತ ಮಹಾ ದಿವ್ಯರೂಪವು ಸುಗಂಧಮಯವಿರುತ್ತದೆ. **ದೇವಗಳನ್ನು ಮಾಂಸ ಭಕ್ಷಣೆ ಮಾಡುವವರೆಂದು ಹೇಳುವುದು ಮಹಾವಿಪರೀತ ಬುದ್ಧಿಯಿದೆ.** ದೇವತೆಗಳು ಮಾಂಸ ಭಕ್ಷಿಗಳಿದ್ದರೆ ಅವರು ಕಾಗೆ, ನಾಯಿ, ನರಿಗಳಿಗಿಂತಲೂ ನೀಚರಾದರು. ಆದುದರಿಂದ ದೇವತೆಗಳ ಸಲುವಾಗಿ ಹಿಂಸೆ ಮಾಡುವುದು ಉಚಿತವಿಲ್ಲ.

ಮಾಂಸ ಭಕ್ಷಣ ಮಾಡುವ ಗುರುಗಳ ಸಲುವಾಗಿ ಯಾರೂ ಮಾಂಸದ ದಾನ ಕೊಡಬಾರದು. ಯಾವ ಪಾಪಿಯು ಮಾಂಸ ಮೊದಲಾದ ಅಭಕ್ಷ್ಯ ಭಕ್ಷಣ ಮಾಡುತ್ತಾನೆ, ಮದ್ಯ ಕುಡಿಯುತ್ತಾನೆ. **ಆ ಪಾಪಿಯು ಗುರು ಹೇಗೆ ?** ಅವನಂತೂ ಮಾಂಸಾದಿಗಳ ಭಕ್ಷಣ ಮಾಡಿಸಿ ನರಕಕ್ಕೆ ತಲುಪಿಸುವಂಥ ಗುರು ಇದ್ದಾನೆ. ಅವನನ್ನು ಸ್ಪರ್ಶಿಸುವುದರಿಂದ ನೋಡುವುದರಿಂದ ಘೋರ ಪಾಪದ ಬಂಧವಾಗುತ್ತದೆ.

**ಪ್ರಶ್ನೆ :-** ಅನ್ನಾದಿಗಳನ್ನು ತಿನ್ನುವಲ್ಲಿ ಅಧಿಕ ಜೀವಗಳ ಘಾತವಾಗುತ್ತದೆ, ಅದಕ್ಕಾಗಿ ಒಂದೇ ಜೀವವನ್ನು ಕೊಂದು ತಿನ್ನುವುದು ಒಳ್ಳೆಯದಿದೆಯಲ್ಲವೇನು ?

**ಉತ್ತರ :-** ಹೀಗೆ ವಿಚಾರ ಮಾಡಿ ದೊಡ್ಡ ಪ್ರಾಣಿಯನ್ನು ಕೊಂದು ತಿನ್ನುವುದು ಉಚಿತವಿಲ್ಲ. ಏಕೇಂದ್ರಿಯ ಪ್ರತ್ಯೇಕ ವನಸ್ಪತಿ, ಪೃಥ್ವಿ, ಜಲ, ಅಗ್ನಿ, ವಾಯುಗಳು ಸಂಪೂರ್ಣ ಮೂರು ಲೋಕದಲ್ಲಿ ತುಂಬಿವೆ, ಸಮಸ್ತ ವಿಕಲತ್ರಯ, ಸಮಸ್ತ ದೇವ, ಮನುಷ್ಯ, ತಿರ್ಯಂಚ, ನಾರಕಿ ಈ ಎಲ್ಲವನ್ನು ಒಟ್ಟುಗೂಡಿಸಿ ಎಣಿಸಿದರೆ ಎಲ್ಲವೂ ಅಸಂಖ್ಯಾತವಾಗುತ್ತವೆ.

ಇವೆಲ್ಲವುಗಳಿಂದ ಅನಂತ ಗುಣಿತ ಜೀವಗಳನ್ನು ಸರ್ವಜ್ಞ ಭಗವಂತರು ಮನುಷ್ಯ ಮತ್ತು ತಿರ್ಯಂಚದ ಮಾಂಸದ ಒಂದು ಕಣದಲ್ಲಿ ಬಾದರ ನಿಗೋದಿ ಜೀವಗಳನ್ನು ನೋಡಿದ್ದಾರೆ ಮತ್ತು ಪರಮಾಗಮದಲ್ಲಿ ಹೇಳಿದ್ದಾರೆ. ಆದುದರಿಂದ **ಅನ್ನ-ಜಲ ಮೊದಲಾದುವನ್ನು ಅಸಂಖ್ಯಾತ ವರ್ಷಗಳವರಗೆ ಭಕ್ಷಣ ಮಾಡಿದ ಮೇಲೆ ಅದರಲ್ಲಿ ಯಾವ ಏಕೇಂದ್ರಿಯ ಜೀವಗಳ ಹಿಂಸೆಯಾಗುತ್ತದೆ ಅದರಿಂದ ಅನಂತ ಗುಣಿತ ಜೀವಗಳ ಹಿಂಸೆಯು ಒಂದುಸೂಜಿಯ ತುದಿಯ ಮೇಲೆ ನಿಲ್ಲುವಷ್ಟು ಮಾತ್ರ ಮಾಂಸ ತಿನ್ನುವುದರಿಂದ ಆಗುತ್ತದೆ.**

ಏಕೇಂದ್ರಿಯ ಜೀವದ ಹಿಂಸೆ ಮತ್ತು ತ್ರಸ ಜೀವದ ಹಿಂಸೆಯು ಸರಿ ಸಮಾನದ್ದಿಲ್ಲ, ದುಃಖದಲ್ಲೂ ದೊಡ್ಡ ಅಂತರವಿದೆ. ಜ್ಞಾನದಲ್ಲೂ ದೊಡ್ಡ ಅಂತರವಿದೆ. ಒಂದು ಇಂದ್ರಿಯದ ಶರೀರವು ರಸ, ರಕ್ತ, ಮಾಂಸ, ಮೂಳೆ, ಚರ್ಮ ಮೊದಲಾದವು ಧಾತು-ಉಪಧಾತುಗಳಿಂದ ರಹಿತವಿರುತ್ತವೆ. ಮಾಂಸ ಭಕ್ಷಣದಲ್ಲಿ ಯಾವ ಪ್ರಕಾರ ತೀವ್ರ ಪರಿಣಾಮ, ತೀವ್ರ ನಿರ್ದಯತೆಯಿದೆ ಆ ಪ್ರಕಾರ ಅನ್ನದ ಭಕ್ಷಣದಲ್ಲಿ ಇಲ್ಲ. ಹೇಗೆ ತನ್ನ ಸ್ತ್ರೀಯ ಸ್ಪರ್ಶ ಮಾಡುವಲ್ಲಿ ಮತ್ತು ತನ್ನ ಮಗಳು ಹಾಗೂ ತಾಯಿಯ ಸ್ಪರ್ಶಮಾಡುವಲ್ಲಿ ಪರಿಣಾಮವು ಸಮಾನವಿರುವುದಿಲ್ಲ, ದೊಡ್ಡ ಅಂತರವಿರುತ್ತದೆ. ಆದುದರಿಂದ ಹೆಚ್ಚು ಹೇಳುವುದರಿಂದೇನು ಪ್ರಯೋಜನವಿದೆ, ಆದರೆ ತ್ರಸ ಜೀವಗಳ ಘಾತ ಮಾಡುವಲ್ಲಿ ಘೋರ ಪಾಪವಿದೆಯೆಂದು ತಿಳಿಯಬೇಕು.

ಈ ಸಿಂಹ, ವ್ಯಾಘ್ರ, ಸರ್ಪ ಮೊದಲಾದವು ಹೆಚ್ಚು ಪ್ರಾಣಿಗಳ ಘಾತ ಮಾಡುತ್ತವೆ, ಇವನ್ನು ಕೊಂದು ಹಾಕುವುದರಿಂದ ಅಧಿಕ ಜೀವಗಳ ರಕ್ಷಣೆಯಾಗಬಹುದೆಂಬ ಆಶಂಕೆಯನ್ನೂ ಮಾಡಬಾರದು. ಇಂಥ ಮಿಥ್ಯಾ ಬುದ್ಧಿಯಿಂದ ಹಿಂಸ್ರ ಜೀವಗಳ ಹಿಂಸೆಯನ್ನು ಕೂಡ ಮಾಡಬಾರದು, ತಾವು ಯಾವ ಯಾವ ಹಿಂಸ್ರ ಪ್ರಾಣಿಗಳನ್ನು ಸಾಯಿಸುವಿರಿ ? ಗುಬ್ಬಿ, ಕಾಗೆ, ಗೊರವಂಕಿ, ಕೌಜಲಹಕ್ಕಿ, ರಣಹದ್ದು ಮೊದಲಾದ ಪಕ್ಷಿಗಳೆಲ್ಲವೂ ಹಿಂಸಕವಿವೆ, ಮತ್ತು ಕ್ರಿಮಿ, ಕೀಟ, ಜೇಡಹುಳ, ನೊಣ, ಚೇಳು, ಸರ್ಪ, ಇಲಿ, ಬೆಕ್ಕು, ಸಿಂಹ, ಹುಲಿ ಮೊದಲಾದ ಅನೇಕ ತಿರ್ಯಂಚ, ಮನುಷ್ಯ ಮೊದಲಾದ ಸಮಸ್ತ ಜೀವಗಳು ಹಿಂಸಾರೂಪದ ಪಾಪಕರ್ಮ ಮಾಡುವ ಕಾರಣದಿಂದ ಹಿಂಸಕಗಳೇ ಇವೆ. ನೀವು ಯಾವ-ಯಾವುದರ ಹಿಂಸೆ ಮಾಡುವಿರಿ ? ನಿಮ್ಮ ಮನಸ್ಸಿನಲ್ಲಿ ಇತರ ಸಮಸ್ತ ಹಿಂಸಕ ಜೀವಗಳನ್ನು ಕೊಲ್ಲುವ ವಿಚಾರವಾದಾಗಲೇ ನೀವಂತೂ ಸಮಸ್ತ ಹಿಂಸಕಗಳನ್ನು ಕೊಲ್ಲುವಂಥ ಮಹಾಹಿಂಸಕರಾದಿರಿ! ನಿಮ್ಮ ಸಮಾನ ಪಾಪಿಗಳು ಯಾರಿದ್ದಾರೆ ? ಆದುದರಿಂದ ಹಿಂಸ್ರ ಜೀವಗಳ ಹಿಂಸೆ ಮಾಡುವ ಪರಿಣಾಮವನ್ನೆಂದೂ ಮಾಡಬಾರದು.

ಸಮಸ್ತ ಜೀವಗಳು ತಾವು ಪೂರ್ವದಲ್ಲಿ ಕಟ್ಟಿಕೊಂಡ ಕರ್ಮಗಳ ಉದಯವು ಬಂದ ಮೇಲೆ ಉತ್ಪನ್ನವಾಗುತ್ತವೆ. ಪಾಪದ ಹಿಂಸೆಯ ಸಂತಾನಕ್ರಮವು ಅನಂತಕಾಲದಿಂದ ನಡೆಯುತ್ತ ಬರುತ್ತಲಿದೆ. ಅದನ್ನು ಯಾರು ನಿವಾರಿಸುವ ಸಾಧ್ಯತಯಿದೆ. ಪಾಪೀ ಜೀವವನ್ನು ಯಾರು ಮಾಡಿದರು ? ಪುಣ್ಯವಂತ ಜೀವವನ್ನು ಯಾರು ಮಾಡಿದರು ? ಎಲ್ಲವೂ ಕರ್ಮದ ವಿಚಿತ್ರತೆಯಿದೆ. ಕಾಲದ ಪ್ರಭಾವದಿಂದ ಪಾಪೀ ಜೀವಗಳಿಗೆ ಪಾಪದ ಫಲವನ್ನು ಕೊಡುವ ಸಲುವಾಗಿ ಅನೇಕ ಪಾಪೀ ಜೀವಗಳು ಉತ್ಪನ್ನವಾಗುತ್ತವೆ. ಅವನ್ನು ನಿವಾರಿಸುವಲ್ಲಿ ಯಾರು ಸಮರ್ಥರಿದ್ದಾರೆ. ಆದುದರಿಂದ ದಯಾವಂತರಾಗಿ ಎಲ್ಲ ಜೀವಗಳ ಮೇಲೆ ದಯೆಯನ್ನೇ ಮಾಡಬೇಕು.

ಈ ಹಿಂಸಕ ಜೀವವು ಹೆಚ್ಚು ಕಾಲ ಬದುಕಿದರೆ ಹೆಚ್ಚು ಪಾಪದ ಬಂಧ ಮಾಡಿಕೊಳ್ಳುವುದು, ಈ ಪಾಪರೂಪ ಪರ್ಯಾಯದಿಂದ ಬಿಡುಗಡೆಯಾದರೆ ಹೆಚ್ಚು ಪಾಪದ ಬಂಧವಾಗಲಾರದೆಂದು ವಿಚಾರ ಮಾಡಬಾರದು ಮತ್ತು ಇಂಥ ಕರುಣೆಮಾಡಿ ಕೂಡ ಪಾಪೀಜೀವಗಳನ್ನು ಕೊಲ್ಲಬಾರದು. ಎಲ್ಲ ಜೀವಗಳ ಮೇಲೆ ತಾವಂತೂ ಕರುಣೆಯನ್ನೇ ಮಾಡಬೇಕು.

ಈ ಜೀವವು ದುಃಖದಿಂದ ಅತ್ಯಂತ ದುಃಖಿಯಿದೆ, ಸತ್ತು ಹೋದರೆ ಕೂಡಲೆ ದುಃಖದಿಂದ ಮುಕ್ತವಾಗಬಹುದೆಂಬ ಮಿಥ್ಯಾ ವಿಚಾರವನ್ನು ಮಾಡಬಾರದು. ಏಕೆಂದರೆ ಸತ್ತು ಹೋದರೆ ಈ ಶರೀರ ಎಂದರೆ ವರ್ತಮಾನ ಪರ್ಯಾಯವೇ ಹೋಗಬಹುದು, ಆದರೆ ಆ ಜೀವಕ್ಕೆ ಕಟ್ಟಿದ ಅಸಾತಾಕರ್ಮವಂತೂ ಹೋಗಲಾರದು. ಒಂದು ವೇಳೆ ಇಲ್ಲಿಂದ ಬಿಟ್ಟು

ಹೋದರೆ ನರಕ, ತಿರ್ಯಂಚ, ಮನುಷ್ಯ ಮೊದಲಾದ ಅನ್ಯ ಪರ್ಯಾಯಗಳನ್ನು ಪಡೆಯುವುದು, ಅಲ್ಲಿ ಅದೆಷ್ಟೋ ಗುಣಿತ ಅಧಿಕ ರೋಗ, ದಾರಿದ್ರ್ಯ, ಮೊದಲಾದುವು ಪ್ರಾಪ್ತವಾಗುವವು. ಮತ್ತು ಹೆಚ್ಚು ಕಾಲದವರೆಗೆ ದುಃಖ ಭೋಗಿಸುವುದು. ನೀವು ಎಲ್ಲೆಲ್ಲಿ ದುಃಖದಿಂದ ಬಿಡುಗಡೆ ಮಾಡಲು ಹೋಗುವಿರಿ ?

**ಹೆಚ್ಚು ಹೇಳುವುದರಿಂದ ಲಾಭವಿಲ್ಲ,** ಒಂದು ವೇಳೆ ಸೂರ್ಯನ ಉದಯವು ಪಶ್ಚಿಮ ದಿಕ್ಕಿನಲ್ಲಿ ಆಗಬಹುದು, ಅಗ್ನಿಯು ಶೀತಲವಾಗಬಹುದು, ಚಂದ್ರನ ಕಿರಣಗಳಲ್ಲಿ ಉಷ್ಣತೆಯು ಹೊರಡಬಹುದು, ಸೂರ್ಯನ ಬಿಸಿಲು ಶೀತಲವಾಗಬಹುದು, ಸಂಪೂರ್ಣ ಪೃಥ್ವಿಯು ಮೂರು ಲೋಕದ ಮೇಲೆ ಹೋಗಬಹುದು, ಬಂಡೆಗಲ್ಲು ನೀರಿನಲ್ಲಿ ತೇಲಬಹುದು, ಸರ್ಪದ ಮುಖದಿಂದ ಅಮೃತವು ಉತ್ಪನ್ನವಾಗಬಹುದು, ಕಲಹ ಮಾಡುವುದರಿಂದ ಯಶಸ್ಸು ದೊರಕಬಹುದು, ಅಜೀರ್ಣದಿಂದ ರೋಗ ಹೋಗಬಹುದು, ಕಾಲಕೂಟ ವಿಷ ತಿನ್ನುವುದರಿಂದ ಹೆಚ್ಚು ದಿವಸ ಬಾಳಬಹುದು, ಅಗ್ನಿಯಲ್ಲಿ ಕಮಲ ಉತ್ಪನ್ನವಾಗಬಹುದು, ಸೂರ್ಯನ ಅಸ್ತವಾದ ಮೇಲೆ ಪ್ರಾತಃಕಾಲವಾಗಬಹುದು, ವಾದ-ವಿವಾದ ಮಾಡುವುದರಿಂದ ಪ್ರೀತಿ ಹೆಚ್ಚಬಹುದು, ಆದರೆ ಹಿಂಸೆಯಿಂದ ಧರ್ಮವಾಗಲಾರದು. ಜಗತ್ತಿನಲ್ಲಿ ಸಂಭವಿಸದಂಥ ಕಾರ್ಯಗಳೂ ಸಂಭವಿಸಬಹುದು; **ಆದರೆ ಹಿಂಸೆಯ ಪರಿಣಾಮದಿಂದಂತೂ ಯಾವ ದೇಶದಲ್ಲಿ ಯಾವ ಕಾಲದಲ್ಲಿ ಯಾರಿಗೂ ಧರ್ಮವಾಗಿಲ್ಲ, ವರ್ತಮಾನಕಾಲದಲ್ಲಿ ಆಗುತ್ತಿಲ್ಲ ಮತ್ತು ಭವಿಷ್ಯದಲ್ಲಿ ಆಗಲಾರದು.**

**ಪ್ರಶ್ನೆ :-** ಗೃಹಸ್ಥನು ಜಿನಮಂದಿರ ಕಟ್ಟಿಸುತ್ತಾನೆ, ಉಪಕರಣ ಮಾಡಿಸುತ್ತಾನೆ, ಜಿನೇಂದ್ರರ ಪೂಜೆ ಮಾಡುತ್ತಾನೆಂದರೆ ಅವುಗಳಲ್ಲಿ ಕೂಡ ಆರಂಭವೇ ಆಗುತ್ತದೆ. ಎಲ್ಲಿ ಆರಂಭವಿದೆ ಅಲ್ಲಿ ಹಿಂಸೆಯು ಆಗಿಯೇ ಆಗುತ್ತದೆ. ಆದುದರಿಂದ ಜಿನಮಂದಿರಗಳನ್ನು ಕಟ್ಟಿಸುವುದರಲ್ಲಿ ಧರ್ಮವು ಹೇಗಾಗುವ ಸಂಭವವಿದೆ ?

**ಉತ್ತರ :-** ಒಂದು ವೇಳೆ ಗೃಹಸ್ಥನು ಆರಂಭ ಮಾಡುವುದರ ತ್ಯಾಗಮಾಡಿ ಬಿಟ್ಟಿದ್ದರೆ ಮತ್ತು ಅವನ ಪರಿಣಾಮವು ವೀತರಾಗರೂಪವಾಗಿ ಧನಸಂಪಾದನೆ ಮೊದಲಾದುವನ್ನು ಮಾಡುವುದರಿಂದ ವಿರಕ್ತನಾಗಿ ಹೋಗಿದ್ದರೆ ಅವನಿಗೆ ಮಂದಿರಗಳನ್ನು ಕಟ್ಟಿಸುವುದು ಯೋಗ್ಯವಿಲ್ಲ. ಆದರೆ ಯಾರ ರಾಗವು ಧನದಿಂದ, ಪರಿಗ್ರಹದಿಂದ, ಆರಂಭದಿಂದ ಕಡಿಮೆಯಾಗಿಲ್ಲ, ಅಭಿಮಾನವು ಕಡಿಮೆಯಾಗಿಲ್ಲ, ತಮ್ಮ ಜಾತಿ, ಕುಲ ಮೊದಲಾದವು ಉಚ್ಚವಾಗುವ ಸಲುವಾಗಿ ಅಭಿಮಾನಪೂರ್ವಕ ಪ್ರಶಂಸೆ ಪಡೆಯುವ ಸಲುವಾಗಿ ತಮ್ಮ ಭೋಗಗಳ ನಿಮಿತ್ತವಾಗಿ ಸೌಧ, ಪ್ರಾಸಾದ, ಚಿತ್ರಶಾಲೆ ಮೊದಲಾದುವನ್ನು ಕಟ್ಟಿಸುತ್ತಾನೆ, ಉಪವನ ನಿರ್ಮಿಸುತ್ತಾನೆ, ತಾನು ವಿಹಾರ ಮಾಡುವ ಸಲುವಾಗಿ ಅನೇಕ ಸ್ಥಾನಗಳನ್ನು ನಿರ್ಮಿಸುತ್ತಾನೆ, ಮಕ್ಕಳ ಮದುವೆಗಳಲ್ಲಿ ಬಹಳಷ್ಟು ಧನ ಖರ್ಚು ಮಾಡುತ್ತಾನೆ, ಜಾತಿ, ಕುಲ, ನಗರ ನಿವಾಸಿ ಮೊದಲಾದವರಿಗೆ ಭೂರಿ ಭೋಜನ ಮಾಡಿಸುತ್ತಾನೆ ; **ಅಂಥವರಿಗೆ ಧರ್ಮಾತ್ಮರು ಹೇಳುವುದೇನೆಂದರೆ** ಆರಂಭ ಮೊದಲಾದವುಗಳಿಂದ ನಿಮ್ಮ ರಾಗವು ಕಡಿಮೆಯಾಗಿರದಿದ್ದರೆ ಈ ಕೇವಲ ಪಾಪಬಂಧಕ್ಕೆ ಕಾರಣವಾದ ಅಭಿಮಾನ ಮೊದಲಾದುವನ್ನು ಪುಷ್ಟ ಮಾಡುವಂಥ ಪಾಪದ ಆರಂಭಗಳನ್ನು ಬಿಟ್ಟು ಕೊಟ್ಟು ಜಿನಮಂದಿರ ಕಟ್ಟಿಸುವ ಆರಂಭ ಮಾಡಿರಿ, ಅದರ ಪ್ರಭಾವದಿಂದ ನಿಮ್ಮ ಅಶುಭ ರಾಗವು ಕಡಿಮೆಯಾಗುವುದು, ಭವಿಷ್ಯದಲ್ಲಿ ನಿಮ್ಮ ಪರಿಣಾಮವು ವೀತರಾಗತೆಯ ಸನ್ಮುಖವಾಗುವುದು ; ಅಹಿಂಸಾ ಧರ್ಮದ ಪ್ರವರ್ತನೆಯು ವೃದ್ಧಿಸುವುದು ; ಅನೇಕ ಜೀವರುಗಳು ಸ್ವಾಧ್ಯಾಯ ಮಾಡಿ, ಶಾಸ್ತ್ರ ಶ್ರವಣ ಮಾಡಿ, ವೀತರಾಗ ಭಗವಂತರ ದರ್ಶನ ಮಾಡಿ, ಭಾವನೆ ಹೆಚ್ಚಿಸಿಕೊಂಡು, ಪಾಪಾಚಾರವನ್ನು ತಡೆಯಲಾರಂಭಿಸುವರು. ಶೀಲ, ಸಂಯಮ ಧ್ಯಾನದ ವೃದ್ಧಿ ಇವೇ ಮೊದಲಾದ ಉತ್ತಮ ಕಾರ್ಯಗಳನ್ನು ಮಾಡಿ ಧರ್ಮದ ವೃದ್ಧಿ ಮಾಡಬಹುದಾಗಿದೆ.

**ಜಿನಮಂದಿರವು ಅಹಿಂಸಾ ಧರ್ಮದ ಆಯತನವಿದೆ.** ಜಿನಮಂದಿರದ ನಿಮಿತ್ತದಿಂದ ಅನೇಕ ಜೀವರುಗಳು ಪಾಪಾಚಾರವನ್ನು ಬಿಟ್ಟುಕೊಟ್ಟು ಜಿನಮಂದಿರದಲ್ಲಿ ಬರುತ್ತಾರೆ, ಅಲ್ಲಿ ಜಿನಧರ್ಮದ ಶಾಸ್ತ್ರ ಕೇಳುತ್ತಾರೆ, ಅದರಿಂದ ತಮ್ಮ ಹಾಗೂ ಪರದ್ರವ್ಯಗಳ ಭೇದಜ್ಞಾನವು ಉತ್ಪನ್ನವಾಗುತ್ತದೆ; ಮಿಥ್ಯಾದೇವ, ಮಿಥ್ಯಾಗುರು, ಮಿಥ್ಯಾಧರ್ಮದ ಉಪಾಸನೆ

ಬಿಟ್ಟುಕೊಟ್ಟು ಸರ್ವಜ್ಞ ವೀತರಾಗರು ತಿಳಿಸಿದ ಧರ್ಮದಲ್ಲಿ ಪ್ರವರ್ತನೆ ಮಾಡುತ್ತಾರೆ ; ಆಗ ಹಿಂಸಾದಿ ಪಾಪಗಳಿಂದ, ಸಪ್ತವ್ಯಸನಗಳಿಂದ ಅನ್ಯಾಯದಿಂದ, ಅಭಕ್ಷ್ಯದಿಂದ ವಿರಕ್ತರಾಗಿ, ವೀತರಾಗ ಜಿನೇಂದ್ರದೇವರ ಧ್ಯಾನದಲ್ಲಿ, ಪೂಜೆಯಲ್ಲಿ, ಕಾಯೋತ್ಸರ್ಗದಲ್ಲಿ ಸಾಮಾಯಿಕದಲ್ಲಿ, ಉಪವಾಸ, ಶೀಲ, ಸಂಯಮ, ದಾನ, ವ್ರತ, ಪ್ರಭಾವನೆಗಳಲ್ಲಿ ಲೀನರಾಗಿ ಮೋಕ್ಷದ ಮಾರ್ಗದಲ್ಲಿ ಪ್ರವರ್ತನೆ ಮಾಡಲಾರಂಭಿಸುತ್ತಾರೆ.

ಆದುದರಿಂದ ಜಿನಮಂದಿರದ ನಿಮಿತ್ತವಿಲ್ಲದೆ ಮೋಕ್ಷಮಾರ್ಗವೇ ನಡೆಯುವುದಿಲ್ಲವೆಂದು ನಿಶ್ಚಿತವಾಗಿ ತಿಳಿಯುವುದು ಯಾವ ಪುರುಷನು ಜಿನಮಂದಿರ ಕಟ್ಟಿಸಿದ್ದಾನೆ ಅವನು ಬಹಳಷ್ಟು ಜೀವರುಗಳಿಗೆ ಉಪಕಾರ ಮಾಡಿದ್ದಾನೆ ಮತ್ತು ತನ್ನ ಮೇಲೂ ಹೆಚ್ಚು ಉಪಕಾರವಾಗುತ್ತದೆ. ಜಿನಮಂದಿರ ಕಟ್ಟಿಸುವಂಥವನ ಪರಿಣಾಮವು ಕೂಡ ಸರಳ ಸರಿಯಾದ ಮಾರ್ಗದಲ್ಲಿ ತೊಡಗುತ್ತದೆ. ನಾನು ವೀತರಾಗ ಜಿನೇಂದ್ರರ ಮಂದಿರ ಕಟ್ಟಿಸಿದ್ದೇನೆ ಮತ್ತು ನಾನೇ ಅನ್ಯಾಯ ಮಾರ್ಗದಿಂದ ನಡೆದರೆ ಜಗತ್ತಿನಲ್ಲಿ ನನ್ನ ನಿಂದೆಯಾಗಬಹುದೆಂದು ಅವನು ವಿಚಾರ ಮಾಡುತ್ತಾನೆ. ನಾನು ಅಭಕ್ಷ್ಯ ಭಕ್ಷಣ ಹೇಗೆ ಮಾಡಲಿ ? ಅಸತ್ಯ ಹೇಗೆ ನುಡಿಯಲಿ ? ವ್ಯಸನಗಳಲ್ಲಿ ಪ್ರವೃತ್ತಿ ಹೇಗೆ ಮಾಡಲಿ ? ಕಲಹ ಮಾಡುವುದು, ಬಯ್ಯುವುದು, ಲೋಕನಿಂದ್ಯ ಕಾರ್ಯ ಮಾಡುವುದು. ಈ ಅಯೋಗ್ಯ ದುರಾಚಾರಗಳಿಂದಂತೂ ಲೋಕ ಲಜ್ಜೆಯ ಕಾರಣ ಅತ್ಯಂತ ದೂರ ಹೊರಟು ಹೋಗುತ್ತಾನೆ. ನಾನು ಮಂದಿರ ಕಟ್ಟಿಸುವಂಥವನೇ ನ್ಯಾಯ ಹಾಗೂ ಸದಾಚಾರರೂಪದಿಂದ ಪ್ರವರ್ತನೆ ಮಾಡದಿದ್ದರೆ ಇನ್ನು ಯಾರು ಪ್ರವರ್ತನೆ ಮಾಡುವರು ? ಈ ಪ್ರಕಾರ ವಿಚಾರ ಮಾಡಿ ಅವನು ಅಭಿಷೇಕದಲ್ಲಿ, ಜಿನಪೂಜೆಯಲ್ಲಿ, ಶಾಸ್ತ್ರಶ್ರವಣದಲ್ಲಿ, ಜಪದಲ್ಲಿ, ವ್ರತದಲ್ಲಿ, ಜಾಗರಣೆಯಲ್ಲಿ, ಭಜನದಲ್ಲಿ ಪ್ರವರ್ತನೆ ಮಾಡಲಾರಂಭಿಸುತ್ತಾನೆ. ಅವನಿಗೆ ಧರ್ಮದಲ್ಲಿ ಅಧಿಕ ಪ್ರೀತಿಯು ಬೆಳೆದು ಬಿಡುತ್ತದೆ. ಶಾಸ್ತ್ರಗಳನ್ನು ಓದುವಂಥವರಲ್ಲಿ ಶಾಸ್ತ್ರ ಕೇಳುವಂಥವರಲ್ಲಿ, ಧರ್ಮದಲ್ಲಿ ಪ್ರೀತಿ ಮಾಡುವಂಥ ಸಾಧರ್ಮಿಗಳಲ್ಲಿ, ಸಿದ್ಧಾಂತದ ಚರ್ಚೆ ಮಾಡುವಂಥವರಲ್ಲಿ ಅನುರಾಗವು ಬೆಳೆಯುತ್ತ ಹೋಗುತ್ತದೆ. ಓದುವಂಥವರನ್ನು ನೋಡಿ ಅತ್ಯಂತ ಹರುಷವಾಗುತ್ತದೆ.

ಇಂದು ಮಂದಿರದಲ್ಲಿ ಯಾರು ಯಾರು ಪೂಜೆ ಮಾಡಿದರು. ದರ್ಶನ ಮಾಡಲು ಯಾರು ಯಾರು ಬಂದಿದ್ದರು, ಪ್ರವಚನ ಕೇಳಲು ಯಾರು ಯಾರು ಕೂಡ್ರುತ್ತಾರೆ, ಇಂದು ಉಪವಾಸ ಮಾಡುವಂಥವರು ಎಷ್ಟಿದ್ದಾರೆ, ಈ ಸಲ ಬೇಲಾತೇಲಾವ್ರತ ಯಾರು ಯಾರು ಮಾಡಿದರು. ಪ್ರೋಷಧೋಪವಾಸ ಮಾಡಿದವರು ಎಷ್ಟಿದ್ದಾರೆ, ಜಾಗರಣೆಯಲ್ಲಿ ಎಷ್ಟು ಸ್ತ್ರೀ-ಪುರುಷರು ಬರುತ್ತಾರೆ, ಭಜನೆಯು ತುಂಬ ಸುಂದರವಾಯಿತು. ಇತ್ಯಾದಿ ಧರ್ಮದ ಪ್ರವೃತ್ತಿ ನೋಡಿ ಅವನಿಗೆ ಅತಿಶಯ ಆನಂದವಾಗುತ್ತದೆ. ಸಮಸ್ತ ಸಾಧರ್ಮಿಗಳಲ್ಲಿ ವಾತ್ಸಲ್ಯವು ದಿನ ದಿನಕ್ಕೆ ಬೆಳೆಯುತ್ತ ಹೋಗುತ್ತದೆ. ಸಹಸ್ರಾರು ಸ್ತ್ರೀ-ಪುರುಷರಲ್ಲಿ ಧರ್ಮದ ಪ್ರಭಾವವು ಹೇಗೆ ಹೇಗೆ ಸ್ಪಷ್ಟ ಬೆಳೆಯುತ್ತ ಹೋಗುತ್ತದೆ ಹಾಗೆ ಹಾಗೆ ಅವನ ಧರ್ಮಾನುರಾಗವು ಕೂಡ ಬೆಳೆಯುತ್ತಲೇ ಹೋಗುತ್ತದೆ.

ಗೃಹಾಚಾರದ ನಾಮಕರಣ, ವರ್ಷವರ್ಧಂತಿ, ಮದುವೆ ಮಾಡುವುದು, ವಸ್ತ್ರ ಮಾಡಿಸುವುದು, ಆಭರಣ ಮಾಡಿಸುವುದು, ತಾವು ವಾಸಿಸುವ ಸ್ಥಾನದಲ್ಲಿ ಮನೆ ಕಟ್ಟಿಸುವುದು, ಚಿತ್ರ ಬಿಡಿಸುವುದು, ಚಿನ್ನ ಹಾಕಿಸುವುದು ಇವೇ ಮೊದಲಾದ ರಾಗ ಹೆಚ್ಚಿಸುವಂಥ ಪಾಪ ಕಾರ್ಯಗಳಲ್ಲಂತೂ ಪ್ರೀತಿಯು ಕಡಿಮೆಯಾಗುತ್ತ ಹೋಗುತ್ತದೆ. ಇವನ್ನು ಮಾಡುವುದರಿಂದೇನು ಪ್ರಯೋಜನವಿದೆ, ಯಾರಿಗೆ ತೋರಿಸುವುದಿದೆ ? ಇವೆಲ್ಲ ಕಾರ್ಯಗಳು ಪಾಪದ ಕಾರಣವಿವೆ, ನಿಂದ್ಯವಿವೆಯೆಂದು ವೈರಾಗ್ಯವು ಬಂದು ಬಿಡುತ್ತದೆ. ಈ ಪಾಪದ ಕಾರ್ಯಗಳನ್ನು ಎಲ್ಲಿ-ಯಾರಿಗೆ- ಹೇಗೆ ತೋರಿಸುವುದೆಂದು ಲಜ್ಜೆಯು ಬಂದು ಬಿಡುತ್ತದೆ. ಒಂದು ವೇಳೆ ಇಷ್ಟು ಧನವನ್ನು ಮಂದಿರದಲ್ಲಿ ತೊಡಗಿಸಿದೆನೆಂದರೆ ಬಹಳಷ್ಟು ಜೀವರುಗಳಿಗೆ ಬಹಳಷ್ಟು ಸಮಯದವರೆಗೆ ಧರ್ಮದಲ್ಲಿ ಅನುರಾಗವು ಹೆಚ್ಚಿಸಬಹುದೆಂದು ವಿಚಾರಮಾಡಿ ಯಾವ ಧನ ಖರ್ಚು ಮಾಡುತ್ತಾನೆ ಅದನ್ನು ಮಂದಿರದ ಉಪಕರಣಗಳಲ್ಲಿ, ಸಿಂಹಾಸನ, ಮುಕ್ಕೊಡೆ, ಚಾಮರ, ಭಾಮಂಡಲ, ಘಂಟೆ, ಗಿಂಡಿ, ಕಲಶ, ಹರಿವಾಣ, ತಟ್ಟೆ, ಸಮವಸರಣ ಮೊದಲಾದ ಅನೇಕ ಉಪಕರಣಗಳನ್ನು ಚಿನ್ನ, ಬೆಳ್ಳಿ,

ಕಂಚು, ಹಿತ್ತಾಳೆ, ತಾಮ್ರ ಮೊದಲಾದ ಧಾತುಗಳಲ್ಲಿ ಹಣ ತೊಡಗಿಸಿ ತನ್ನ ಹಾಗೂ ಇತರ ಧರ್ಮಾತ್ಮ ಜನರ ಅನುರಾಗವನ್ನು ಧರ್ಮದಲ್ಲಿ ಹೆಚ್ಚಿಸುತ್ತಾನೆ. ಗಾದಿ, ಒರಗುದಿಂಬು, ಪರದೆ, ಹಾಸಿಗೆ, ಮಂಟಪ ಇವೇ ಮೊದಲಾದವುಗಳಿಂದ ಧರ್ಮ ಸೇವನೆ ಮಾಡುವಂಥ ಸಾಧರ್ಮಿಗಳಿಗೆ ಅತ್ಯಂತ ವೈಯಾವೃತ್ಯವಾಗುತ್ತದೆ.

ಯಾವ ಪ್ರಕಾರ ಮಂದಿರ ಕಟ್ಟಿಸುವಂಥವನ ಯಶಸ್ಸು ಹೆಚ್ಚು ಕಾಲದವರೆಗೆ ಪ್ರಕಟವಾಗಿರುತ್ತದೆ ಹಾಗೆ ಮದುವೆ ಮೊದಲಾದವುಗಳಲ್ಲಿ ಖರ್ಚು ಮಾಡಲಾದ ಧನದಿಂದ ಇಂಥ ಕೀರ್ತಿ ಶ್ರೇಷ್ಠತೆಗಳು ಪ್ರಕಟವಾಗುವುದಿಲ್ಲ. ಮಂದಿರದಲ್ಲಿ ತಮ್ಮ ದೇಶ ಮತ್ತು ಅನ್ಯ ದೇಶಗಳ ಬಹಳಷ್ಟು ಜನರು ಭಗವಂತರ ಪೂಜೆ, ಪ್ರಭಾವನೆ, ದರ್ಶನ ಮತ್ತು ಧರ್ಮ ಶ್ರವಣಮಾಡಿ ಮಹಾನ ಪುಣ್ಯದ ಉಪಾರ್ಜನೆ ಮಾಡುತ್ತಾರೆ.

**ಪ್ರಶ್ನೆ :-** ಮಂದಿರ ಕಟ್ಟಿಸುವುದು, ಉಪಕರಣಗಳನ್ನು ಮಾಡಿಸಿ ಮಂದಿರದಲ್ಲಿ ಇಟ್ಟು ಬಿಡುವುದು - ಇಂಥ ಕಾರ್ಯಗಳಿಂದ ತಮಗೆ ಹಾಗೂ ಅನ್ಯರಿಗೆ ಉಪಕಾರವಂತೂ ಆಗುತ್ತದೆ. ಆದರೆ ಮಂದಿರ ಕಟ್ಟಿಸುವಲ್ಲಿ ಷಟ್ಕಾಯ ಜೀವಗಳ ಹಿಂಸೆಯಾಗುತ್ತದೆ ಅದು ಧರ್ಮದ ಘಾತ ಮಾಡುವಂಥಹುದೇ ಇರುತ್ತದೆಯೆಲ್ಲವೇನು ?

**ಉತ್ತರ :-** ಇದರಲ್ಲಿ ಹಿಂಸೆಯಾಗುವುದಿಲ್ಲ. ಹಿಂಸೆಯಂತೂ ಯಾವಾಗ ತಮಗೆ ಜೀವಘಾತ ಮಾಡುವ ಪರಿಣಾಮವಾಗುತ್ತದೆ ಆಗ ಆಗುವುದು. ಮಂದಿರ ಕಟ್ಟಿಸುವಂಥವರಿಗೆ ಹಿಂಸೆ ಮಾಡುವ ಪರಿಣಾಮವಿರುವುದಿಲ್ಲ, ಅಹಿಂಸಾ ಧರ್ಮದಲ್ಲಿಯೇ ಪ್ರವೃತ್ತಿ ಮಾಡುವ ಪರಿಣಾಮವಿರುತ್ತದೆ. ಹೇಗೆ ಮುನಿರಾಜರುಗಳಿಗೆ ಯತ್ನಾಚಾರಪೂರ್ವಕ ಆಹಾರ ಕೊಡುತ್ತಿರುವಾಗ ಗೃಹಸ್ಥನಿಗೆ ಹಿಂಸೆಯಾಗುವುದಿಲ್ಲ, ಹೇಗೆ ಸಾಧುಗಳಿಗೆ ವಂದನೆ ಮಾಡುವ ಸಲುವಾಗಿ ಮತ್ತು ಧರ್ಮ ಶ್ರವಣ ಮಾಡುವ ಸಲುವಾಗಿ ಗಮನ ಮಾಡುತ್ತಿರುವ ಗೃಹಸ್ಥನಿಗೆ ಹಿಂಸೆಯಾಗುವುದಿಲ್ಲ. ಮುನೀಶ್ವರರು ನಿತ್ಯ ಉಪದೇಶ ಮಾಡುತ್ತಾರೆ, ಗಮನ ಮಾಡುತ್ತಾರೆ, ಶಯನ ಮಾಡುತ್ತಾರೆ, ಏಳುತ್ತಾರೆ, ಕೂಡುತ್ತಾರೆ, ಆಹಾರ ಮಾಡುತ್ತಾರೆ, ನೀಹಾರ ಮಾಡುತ್ತಾರೆ, ವಂದನೆ ಮಾಡುತ್ತಾರೆ, ಕಾಯೋತ್ಸರ್ಗ ಮಾಡುತ್ತಾರೆ, ತೀರ್ಥಗಳ ವಂದನೆ-ಗುರುಗಳ ವಂದನೆಗೆ ಹೋಗುತ್ತಾರೆ. ಆ ಎಲ್ಲ ಕಾರ್ಯಗಳಲ್ಲಿ ಹಿಂಸೆಯ ಪರಿಣಾಮವಿಲ್ಲದೆ ಜೀವದ ವಿರಾಧನೆಯಾದರೂ ಕೂಡ ಹಿಂಸೆಯಾಗುವುದಿಲ್ಲ-ಹಿಂಸಾಕೃತ ಬಂಧವಾಗುವುದಿಲ್ಲ.

ಜೀವಗಳಿಂದಂತೂ ಭೂಮಿ, ಆಕಾಶ, ಸಮಸ್ತ ಪದಾರ್ಥಗಳು ತುಂಬಿವೆ. ಆದರೆ ಯಾವನು ಕಷಾಯದ ವಶೀಭೂತನಾಗಿ ಸಂಪೂರ್ಣ ದಯಾಭಾವದಿಂದ ರಹಿತನಾಗಿ ಪ್ರವರ್ತನೆ ಮಾಡುವನು ಅವನ ಪರಿಣಾಮಗಳಲ್ಲಿ ದಯೆಯಿಲ್ಲ, **ಹಿಂಸಾಭಾವ ಮತ್ತು ಅಹಿಂಸಾಭಾವವಂತೂ ಜೀವದ ಪರಿಣಾಮದಲ್ಲಿದೆ, ಆ ಪರಿಣಾಮಗಳು ಬಾಹ್ಯದಲ್ಲಿ ಜೀವದಘಾತ ಅಥವಾ ಅಘಾತದ ಆಧೀನವಿಲ್ಲ,** ಇದರ ವರ್ಣನೆಯನ್ನು ಮೊದಲು ಬಹಳಷ್ಟು ಮಾಡಲಾಗಿದೆ.

ಈಗ ಇಲ್ಲಿ ಮಂದಿರ ಕಟ್ಟಿಸುವಂಥವರ ಪರಿಣಾಮದ ಸಂಬಂಧದಲ್ಲಿ ವಿಚಾರ ಮಾಡುವುದು. ಯಾವನಿಗೆ ಮನೆ ಕಟ್ಟಿಸುವಲ್ಲಿ ಉಪವನ ನಿರ್ಮಿಸುವಲ್ಲಿ, ಬಾವಿ ಅಗೆಸುವಲ್ಲಿ ಮಹಾಹಿಂಸೆಯು ಕಂಡು ಬರುತ್ತದೆ, ಮತ್ತು ಯಾವನ ಲೋಭವು ಕಡಿಮೆಯಾಗಿದೆ, ಧನದ ಮಮತೆ ನಿಂತುಹೋಗಿದೆ, ಯಾವನು ಪಾಪದಿಂದ ಭಯಭೀತನಿದ್ದಾನೆ ಅವನು ಮಂದಿರ ಕಟ್ಟಿಸುತ್ತಾನೆ. ಮೊದಲು ಅವನು ಗೃಹಸ್ಥನ ವ್ಯಾಪಾರಗಳಲ್ಲಿ ಪ್ರವರ್ತನೆ ಮಾಡುತ್ತಿರುವಾಗ ದಯಾ ಧರ್ಮದ ಸ್ಮರಣೆಯನ್ನೂ ಮಾಡುತ್ತಿರಲಿಲ್ಲ.

**ಈಗ ಎಲ್ಲ ಕಾರ್ಯಗಳಲ್ಲಿ ಧರ್ಮ ಪೂರ್ವಕವಾಗಿಯೇ ಪರಿಣಾಮ ಮಾಡುತ್ತಾನೆ.** ಹಾಗೆಯೇ ಎಲ್ಲ ಕಾರ್ಯಗಳಲ್ಲಿ ಯತ್ನಾಚಾರಪೂರ್ವಕ ವರ್ತಿಸುತ್ತಾನೆ. ಇದು ಮಂದಿರದ ಕಾರ್ಯವಿದ್ದು ನೀರನ್ನು ಎರಡು ಪದರಿನ ದಪ್ಪ ಬಟ್ಟೆಯಿಂದ ಶೋಧಿಸಿ ಶೋಧಿಸಿ ಉಪಯೋಗಿಸುತ್ತಾನೆ. ಸುಣ್ಣ ಗಚ್ಚನ್ನು ಎರಡು ದಿವಸಕ್ಕಿಂತ ಹೆಚ್ಚಿಗೆ ಇಡುವುದಿಲ್ಲ ಎರಡು ದಿವಸಗಳಲ್ಲಿಯೇ ಉಪಯೋಗಿಸಿ ಮುಗಿಸಿ ಬಿಡುವ ಪ್ರಯತ್ನ ಮಾಡಲಾಗುತ್ತದೆ ಪ್ರತಿಯೊಂದು ವಸ್ತುವನ್ನು ಎತ್ತುವಾಗ

ಇಡುವಾಗ ಅತ್ಯಂತ ಪ್ರಯತ್ನ ಪೂರ್ವಕವಾಗಿ ಜೀವಗಳ ವಿರಾಧನೆಯಾಗದಂತೆ ತಮ್ಮ ಪರಿಣಾಮವನ್ನಿಡುತ್ತಾನೆ. ಯಾವುದೇ ಕಾರ್ಯದಲ್ಲಿ ಹಿಂಸೆಯ ಪರಿಣಾಮವನ್ನಂತೂ ಮಾಡುವುದಿಲ್ಲ. ಅವನ ಪರಿಣಾಮವಂತೂ ಧರ್ಮದ ಆಯತನ ಮಾಡಿಸುವುದಿದೆ. ಒಂದು ವೇಳೆ ಇದು ಧರ್ಮದ ಸ್ಥಾನವಾದ ಮಂದಿರವು ನಿರ್ಮಾಣಗೊಂಡರೆ ಇದರಲ್ಲಿ ಅಖಂಡವಾಗಿ ಅಹಿಂಸಾಧರ್ಮವು ಪ್ರವರ್ತಿಸುವುದು.

**ಈ ಮಂದಿರವಂತೂ ಮಹಾನ ಧರ್ಮದ ಆಯತನವಿದೆ.** ತಮ್ಮ ಮನೆಗೆ ಸಂಬಂಧಿಸಿದ ಬಹಳಷ್ಟು ಹಿಂಸೆಯ ಆರಂಭವನ್ನು ಕಡಿಮೆ ಮಾಡಿ ಪರಿಣಾಮದಲ್ಲಿ ದಯಾರೂಪವಾಗಿ ಪ್ರವರ್ತನೆ ಮಾಡುವ ಪ್ರಯತ್ನ ಮಾಡಿದಂಥವನು ಮಂದಿರದಲ್ಲಿ ಪಾದ ಇರಿಸುತ್ತಿರುವಂತೆಯೇ ಈರ್ಯಾಪಥ ಶೋಧಿಸಿ ನಡೆಯುತ್ತಾನೆ. ಇದು ಮಂದಿರವಿದ್ದು ಇಲ್ಲಿ ಯಾರದೂ ವಿರಾಧನೆಯಾಗಬಾರದು. ಮಂದಿರದಲ್ಲಿ ಪ್ರವೇಶ ಮಾಡಿದ ನಂತರ ಜೈನರಿಗಂತೂ ಕೆಲವೊಂದು ಮಾತುಗಳ ತ್ಯಾಗವು ಸ್ವಾಭಾವಿಕವಾಗಿ ಆಗಿ ಹೋಗುತ್ತವೆ. ಭೋಜನದ ತ್ಯಾಗ, ನೀರು ಕುಡಿಯುವುದರ ತ್ಯಾಗ, ವಿಕಥೆಯ ತ್ಯಾಗ, ಬೈಗಳ ತ್ಯಾಗ, ಬೀಸಣಿಕೆಯಿಂದ ಹವೆ ಪಡೆಯುವದರ ತ್ಯಾಗ, ವ್ಯಾಪಾರದ ಮಾತುಕತೆಯ ತ್ಯಾಗ, ಇವೇ ಮೊದಲಾದ ಪಾಪ ಬಂಧದ ಕಾರಣವಾದ ಸಮಸ್ತ ದುರಾಚಾರಗಳು ತ್ಯಾಗವಾಗಿ ಹೋಗುತ್ತವೆ. ಎಂಭತ್ತಾ ನ್ನಲ್ಕು ಆಸಾದನ ದೋಷಗಳ ತ್ಯಾಗವಾಗಿ ಹೋಗುತ್ತದೆ.

ಆದುದರಿಂದ ಜಿನಮಂದಿರವಂತೂ ಎಲ್ಲ ಪ್ರಕಾರದಿಂದ ಅಹಿಂಸಾ ಧರ್ಮದ ಪ್ರವರ್ತಕವೆಂದೇ ತಿಳಿಯುವದು. ಅದರಲ್ಲಿ ಆರಂಭ, ವಿಷಯ ಕಷಾಯಗಳ ತ್ಯಾಗ ಮಾಡುವುದರದೇ ಮಹಿಮೆಯಿದೆ.

ಈ ಪ್ರಕಾರ ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡ ಶ್ರಾವಕಾಚಾರದ
ಪಂ. ಸದಾಸುಖಜೀಯವರು ಬರೆದ ಢೂಂಡಾರಿ ಭಾಷಾ ಟೀಕೆಯಲ್ಲಿ
ಮೂರನೆಯ ಅಣುವ್ರತ ಅಧಿಕಾರವು ಸಮಾಪ್ತವಾಯಿತು.

೪

# ಗುಣವ್ರತ ಅಧಿಕಾರ

ಈ ಪ್ರಕಾರ ಮಾಂಸ ಮೊದಲಾದವುಗಳ ತ್ಯಾಗರೂಪವಿರುವ ಮೂಲಗುಣಗಳನ್ನು ಹೇಳಿ ಈಗ ಮೂರು ಪ್ರಕಾರದ ಗುಣವ್ರತವನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ದಿಗ್ವ್ರತಮನರ್ಥದಂಡವ್ರತಂ ಚ ಭೋಗೋಪಭೋಗಪರಿಮಾಣಮ್ ।**
**ಅನುಬೃಂಹಣಾದ್ ಗುಣಾನಾಮಾಖ್ಯಾಂತಿ ಗುಣವ್ರತಾನ್ಯಾರ್ಯಾಃ ॥೬೭॥**

**ಅರ್ಥ :-** ಆರ್ಯ ಎಂದರೆ ಭಗವಾನ ಗಣಧರದೇವರು ದಿಗ್ವ್ರತ, ಅನರ್ಥದಂಡವ್ರತ, ಭೋಗೋಪಭೋಗ ಪರಿಮಾಣವ್ರತವೆಂದು ಮೂರು ವ್ರತಗಳಿದ್ದು ಅವು ಅಣುವ್ರತಗಳನ್ನು ಗುಣಾಕಾರರೂಪವಾಗಿ ಹೆಚ್ಚಿಸುವಂಥವುಗಳಿರುವುದರಿಂದ ಅವನ್ನು ಗುಣವ್ರತವೆಂದು ಹೇಳುತ್ತಾರೆ.

೧) ದಶ ದಿಶೆಗಳಲ್ಲಿ ಗಮನ ಮಾಡುವುದರ ಮರ್ಯಾದೆ ಮಾಡುವುದು ಅದು ದಿಗ್ವ್ರತವಿದೆ.

೨) ಯಾವುದರಿಂದ ಸ್ವಲ್ಪವೂ ಕಾರ್ಯ ಸಾಧಿಸುವುದಿಲ್ಲ, ಆದರೆ ಸದಾಪಾಪವೇ ಆಗುತ್ತದೆ, ಪ್ರಯೋಜನವಿಲ್ಲದೆಯೇ ಶಿಕ್ಷೆ ಭೋಗಿಸಬೇಕಾಗುತ್ತದೆ ಅದು ಅನರ್ಥದಂಡವಿದೆ. ಇಂಥ ಅನರ್ಥದಂಡಗಳ ತ್ಯಾಗ ಮಾಡುವುದು ಅದು ಅನರ್ಥದಂಡವ್ರತವಿದೆ.

೩) ಒಂದುಬಾರಿ ಭೋಗದಲ್ಲಿ ಬರುವುದು ಅದು ಭೋಗ ಮತ್ತು ಪುನಃ ಪುನಃ ಭೋಗಿಸುವಲ್ಲಿ ಬರುವುದು ಅದು ಉಪಭೋಗವೆನಿಸಿಕೊಳ್ಳುತ್ತದೆ. ಇಂಥ ಭೋಗ ಮತ್ತು ಉಪಭೋಗಗಳ ಪರಿಮಾಣ ಮಾಡುವುದು ಅದು **ಭೋಗೋಪಭೋಗಪರಿಮಾಣವ್ರತ**ವಿದೆ.

ಈಗ ದಿಗ್ವ್ರತದ ಸ್ವರೂಪ ನಿರೂಪಣೆ ಮಾಡುವ ಸೂತ್ರ ಹೇಳುತ್ತಾರೆ, -

**ದಿಗ್ವಲಯಂ ಪರಿಗಣಿತಂ ಕೃತ್ವಾತೋಽಹಂ ಬಹಿರ್ನ ಯಾಸ್ಯಾಮಿ ।**
**ಇತಿ ಸಂಕಲ್ಪೋ ದಿಗ್ವ್ರತಮಾಮೃತ್ಯಣುಪಾಪವಿನಿವೃತ್ತ್ಯೈ ॥೬೮॥**

**ಅರ್ಥ :-** ಹತ್ತು ದಿಕ್ಕುಗಳ ಸಮೂಹದಲ್ಲಿ ಅಳತೆ ಮಾಡಿ, ಮಾಡಿದ ಅಳತೆಯ ಸೀಮೆಯಿಂದ ಹೊರಗೆ ಗಮನ ಮಾಡಲಾರೆನು, ಅಣುಮಾತ್ರ ಪಾಪದ ನಿವೃತ್ತಿಯ ಸಲುವಾಗಿ ಕೂಡ ಮರಣದವರೆಗೆ ಸಂಕಲ್ಪ ಮಾಡುವುದು ಅದು ದಿಗ್ವ್ರತನಾಮದ ಗುಣವ್ರತವಿದೆ.

**ಭಾವಾರ್ಥ :-** ಗೃಹಸ್ಥನು ತನ್ನ ಪ್ರಯೋಜನ ತಿಳಿದುಕೊಂಡು ಇಂಥ ದಿಶೆಯಲ್ಲಿ ಇಷ್ಟು ಕ್ಷೇತ್ರದ ಹೊರಗೆ ನನ್ನ ವ್ಯಾಪಾರ ವ್ಯವಹಾರದ ಪ್ರಯೋಜನವಿಲ್ಲ ಮತ್ತು ಇಂಥ ದಿಶೆಯಲ್ಲಿ ಅಷ್ಟು ಕ್ಷೇತ್ರದ ಹೊರಗೆ ನನಗೆ ವ್ಯವಹಾರ ಮಾಡುವುದಿಲ್ಲವೆಂದು ಲೋಭವನ್ನು ಕಡಿಮೆ ಮಾಡುವ ಸಲುವಾಗಿ ಮತ್ತು ಅಹಿಂಸಾ ಧರ್ಮದ ವೃದ್ಧಿಯ ಸಲುವಾಗಿ ವಿಚಾರ ಮಾಡಿ ಮರಣ ಪರ್ಯಂತದ ಸಲುವಾಗಿ ಹತ್ತೂ ದಿಕ್ಕುಗಳಲ್ಲಿ ಮರ್ಯಾದೆ ಮಾಡಿ ಹೊರಗೆ ಹೋಗುವ, ಯಾರನ್ನಾದರು ಕರೆಯಿಸುವ, ಕಳಿಸುವ, ವಸ್ತುವನ್ನು ಬೇಡಿಸುವುದರ ತ್ಯಾಗ ಮಾಡಿ ಲೋಭವನ್ನು ಜಯಿಸುವುದು ಅದು ದಿಗ್ವ್ರತವೆಂಬ ಹೆಸರಿನ ಗುಣವ್ರತವಿದೆ.

ಈಗ ಹತ್ತು ದಿಕ್ಕುಗಳ ಮರ್ಯಾದೆ ಹೇಗೆ ಮಾಡುವುದೆಂಬುದನ್ನು ತಿಳಿಸುವಂಥ ಸೂತ್ರ ಹೇಳುತ್ತಾರೆ,-

**ಮಕರಾಕರಸರಿದಟವೀ ಗಿರಿಜನಪದಯೋಜನಾನಿ ಮರ್ಯಾದಾಃ।**

**ಪ್ರಾಹುರ್ದಿಶಾಂ ದಶಾನಾಂ ಪ್ರತಿಸಂಹಾರೇ ಪ್ರಸಿದ್ಧಾನಿ ॥೬೯॥**

**ಅರ್ಥ :-** ಆಗಮದಲ್ಲಿ ಹತ್ತು ದಿಕ್ಕುಗಳ ಮರ್ಯಾದೆಯರೂಪದ ಸೀಮೆಯನ್ನು ಕಟ್ಟುವ ಸಲುವಾಗಿ ಪ್ರಸಿದ್ಧ ಹಾಗೂ ವಿಖ್ಯಾತವಾದ ಸಮುದ್ರ, ನದೀ, ಪರ್ವತ, ವನ, ದೇಶ, ಯೋಜನಗಳನ್ನು ಹೇಳಿದ್ದಾರೆ. ಲೋಕದಲ್ಲಿ ವಿಖ್ಯಾತವಿರುವ ಸಮುದ್ರ ಮೊದಲಾದ ಚಿಹ್ನೆಗಳಿಂದ ದಿಶೆಯ ಮರ್ಯಾದೆ ಮಾಡಲಾಗುತ್ತದೆ. ಮರ್ಯಾದೆ ಮಾಡಿಕೊಳ್ಳುವಂಥವನು ಮರಣದ ಪರ್ಯಂತ ಮಾಡಿಕೊಂಡ ಮರ್ಯಾದೆಯ ಹೊರಗಿನ ಕ್ಷೇತ್ರದಲ್ಲಿ ಗಮನಾಗಮನವನ್ನು ಮಾಡುವುದಿಲ್ಲ.

ಈಗ ದಶದಿಶೆಗಳ ಮರ್ಯಾದೆಯನ್ನು ಧಾರಣ ಮಾಡುವಂಥವನಿಗೆ ಏನಾಗುತ್ತದೆಂಬುದನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಅವಧೇರ್ಬಹಿರಣುಪಾಪಪ್ರತಿವಿರತೇ ಧಾರಯತಾಂ ।**

**ಪಂಚಮಹಾವ್ರತಪರಿಣತಿಮಣುವ್ರತಾನಿ ಪ್ರಪದ್ಯಂತೇ ॥೭೦॥**

**ಅರ್ಥ :-** ದಿಗ್ವ್ರತಗಳನ್ನು ಧಾರಣ ಮಾಡುವಂಥ ಪುರುಷರಿಗೆ ಮರ್ಯಾದೆಯ ಹೊರಗೆ ಅಣು ಮಾತ್ರ ಕೂಡ ಪಾಪ ಪ್ರವೃತ್ತಿಯಿಂದ ವಿರಕ್ತತೆಯಾಗುವುದರಿಂದ ಆ ಅಣುವ್ರತಗಳೇ ಮಹಾವ್ರತಗಳ ಅವಸ್ಥೆಗೆ ಪ್ರಾಪ್ತವಾಗಿ ಹೋಗುತ್ತವೆ.

**ಭಾವಾರ್ಥ :-** ಯಾವ ಅಣುವ್ರತಿ ಗೃಹಸ್ಥರು ದಶದಿಶೆಗಳ ಮರ್ಯಾದೆ ಮಾಡಿಕೊಂಡಿರುತ್ತಾರೆ, ಅವರಿಗೆ ಮರ್ಯಾದೆಯ ಒಳಗಂತೂ ಅಣುವ್ರತವೇ ಇರುವುದು, ಆದರೆ ಮರ್ಯಾದೆಯ ಹೊರಗೆ ಸಮಸ್ತ ತ್ರಸ-ಸ್ಥಾವರ ಜೀವಗಳ ಹಿಂಸೆ ಮೊದಲಾದ ಐದೂ ಭಾವಗಳ ತ್ಯಾಗವಾಗುವುದರಿಂದ ಅಣುವ್ರತಗಳೇ ಮಹಾವ್ರತಗಳ ಪರಿಣತಿಗೆ ಪ್ರಾಪ್ತವಾಗಿ ಹೋಗುತ್ತವೆ.

ಈಗ ಕ್ಷೇತ್ರದ ಮರ್ಯಾದೆ ಮಾಡಿಕೊಂಡಂಥವನ ಅಣುವ್ರತಗಳನ್ನು ಸೀಮೆಯ ಹೊರಗಿನ ಕ್ಷೇತ್ರದಲ್ಲಿ ಮಹಾವ್ರತಗಳ ಪರಿಣತಿಗೆ ಪ್ರಾಪ್ತವಾಗುವುದನ್ನೇಕೆ ಹೇಳುವಿರಿ ? ಮರ್ಯಾದೆಯ ಹೊರಗೆ ಪ್ರತ್ಯಕ್ಷ ಮಹಾವ್ರತವೆಂದೇ ಹೇಳಿರಲ್ಲ ! ಎಂಬ ಪ್ರಶ್ನೆಗೆ ಉತ್ತರ ಕೊಡುವಂಥ ಸೂತ್ರವನ್ನು ಹೇಳುತ್ತಾರೆ.

**ಪ್ರತ್ಯಾಖ್ಯಾನತನುತ್ವಾನ್ ಮಂದತರಾಶ್ಚರಣಮೋಹಪರಿಣಾಮಾಃ ।**

**ಸತ್ವೇನದುರವಧಾರಾ ಮಹಾವ್ರತಾಯ ಪ್ರಕಲ್ಪ್ಯಂತೇ ॥೭೧॥**

**ಅರ್ಥ :-** ಅಣುವ್ರತಿ ಗೃಹಸ್ಥನ ಸಕಲ ಸಂಯಮದ ವಿರೋಧಿಯಾದ ಪ್ರತ್ಯಾಖ್ಯಾನಾವರಣ ಕಷಾಯದ ಮಂದ ಉದಯದ ಕಾರಣ, ಚಾರಿತ್ರಮೋಹದ ಮಂದತರ (ಸಂಜ್ವಲನ ಕಷಾಯದ) ಉದಯದಲ್ಲಿ ಆಗುವಂಥ ಮಹಾವ್ರತದ ಪರಿಣಾಮಗಳು ಜೀವದ ಮೂಲಕ ಮಹಾಕಷ್ಟ ಮಾಡಿಯು ಕೂಡ ಧಾರಣ ಮಾಡಲಾಗುವುದಿಲ್ಲ. ಆದುದರಿಂದ ಮಹಾವ್ರತಗಳ ಕಲ್ಪನೆ ಮಾಡುತ್ತಾರೆ.

**ಭಾವಾರ್ಥ :- ಯಾರಿಗೆ ಚಾರಿತ್ರಮೋಹಕರ್ಮದ ಮಂದತರ ಉದಯದ ಪರಿಣಾಮಗಳು ಸಂಜ್ವಲನ ಕಷಾಯರೂಪವಾಗುತ್ತವೆ ಅವರಿಗೆ ಆ ಕಾಲದಲ್ಲಿ ಮಹಾವ್ರತಗಳಿರುತ್ತವೆ.** ದೇಶವ್ರತೀ ಗೃಹಸ್ಥನಿಗೆ ಪ್ರತ್ಯಾಖ್ಯಾನಾವರಣದ

ಉದಯವು ವಿದ್ಯಮಾನವಿರುವುದರಿಂದ ಸಂಜ್ವಲನ ಕಷಾಯದ ಮಂದ ಉದಯರೂಪ ಪರಿಣಾಮಗಳು ಅತ್ಯಂತ ಕಷ್ಟದಿಂದ ಕೂಡ ಆಗವುದು ದುರ್ಲಭವಿದೆ; ಮತ್ತು ಇದೇ ಕಾರಣದಿಂದ ಸಮಸ್ತ ಪಾಪಗಳ ತ್ಯಾಗವಾದ ಮೇಲೆ ಮಹಾವ್ರತಗಳಾಗುವುದಿಲ್ಲ, ಕೇವಲ ಮಹಾವ್ರತಗಳ ಕಲ್ಪನೆಯನ್ನೇ ಮಾಡುತ್ತಾರೆ. ಮಹಾ ವ್ರತಗಳಂತೂ ಪ್ರತ್ಯಾಖ್ಯಾನಾವರಣ ಕಷಾಯದ ಉದಯದ ಅಭಾವವಾದ ಮೇಲೆ ಆಗುತ್ತವೆ.

ಈಗ ಮಹಾವ್ರತಗಳು ಹೇಗಾಗುತ್ತವೆಂಬುದನ್ನು ಸೂತ್ರದ ಮೂಲಕ ಹೇಳುತ್ತಾರೆ,-

**ಪಂಚಾನಾಂ ಪಾಪಾನಾಂ ಹಿಂಸಾದೀನಾಂ ಮನೋವಚಃ ಕಾಯೈಃ ।**
**ಕೃತಕಾರಿತಾನುಮೋದೈಃ ತ್ಯಾಗಸ್ತು ಮಹಾವ್ರತಂ ಮಹತಾಮ್ ॥೭೨॥**

**ಅರ್ಥ :-** ಯಾರು ಹಿಂಸೆ ಮೊದಲಾದ ಐದು ಪಾಪಗಳನ್ನು ಮನ-ವಚನ-ಕಾಯಪೂರ್ವಕ ಕೃತ-ಕಾರಿತ-ಅನುಮೋದನದೊಡನೆ ತ್ಯಾಗ ಮಾಡುತ್ತಾರೆ ಆ ಮಹಾಪುರುಷರಿಗೆ ಮಹಾವ್ರತಗಳಾಗುತ್ತವೆ.

ಈಗ ದಿಗ್ವ್ರತದ ಐದು ಅತಿಚಾರಗಳನ್ನು ತಿಳಿಸುವಂಥ ಸೂತ್ರ ಹೇಳುತ್ತಾರೆ,-

**ಊರ್ಧ್ವಾಧಸ್ತಾತ್ತಿರ್ಯಗ್ವ್ಯತಿಪಾತಾಃ ಕ್ಷೇತ್ರವೃದ್ಧಿರವಧೀನಾಮ್ ।**
**ವಿಸ್ಮರಣಂ ದಿಗ್ವಿರತೇ ರತ್ಯಾಶಾಃ ಪಂಚ ಮನ್ಯಂತೇ ॥೭೩॥**

**ಅರ್ಥ :-** ಮಾಡಲಾಗಿರುವ ದಿಶೆಗಳ ಮರ್ಯಾದೆಯನ್ನು ಅಜ್ಞಾನದಿಂದ ಅಥವಾ ಪ್ರಮಾದದಿಂದ ಉಲ್ಲಂಘನೆ ಮಾಡಿ ಬಿಡುವುದು ಅದು ಅತಿಚಾರವಿದೆ. ಹೇಗೆಂದರೆ ಊರ್ಧ್ವದ ಮರ್ಯಾದೆಯನ್ನು ಪರ್ವತದ ಮೇಲೆ ಹತ್ತಿ ಭಂಗ ಮಾಡಿ ಬಿಡುವುದು ಅದು **ಊರ್ಧ್ವಾತಿಪಾತ** ಅತಿಚಾರವಿದೆ. ಕೆರೆ, ಬಾವಿ, ಸರೋವರ ಮೊದಲಾದವುಗಳಲ್ಲಿ ಕೆಳಗೆ ಇಳಿದು ಸ್ವೀಕರಿಸಿದ ಮರ್ಯಾದೆಯ ಭಂಗ ಮಾಡಿ ಬಿಡುವುದು ಅದು **ಅಧಃಸ್ತಾತಿಕ್ರಮ** ಅತಿಚಾರವಿದೆ. ಉಪದಿಕ್ಕುಗಳಾದ ಗುಹೆ ಮೊದಲಾದವುಗಳಲ್ಲಿ ಪ್ರವೇಶ ಮಾಡಿ ಮರ್ಯಾದೆಯನ್ನು ಭಂಗ ಮಾಡಿ ಬಿಡುವುದು ಅದು **ತಿರ್ಯಗ್ವ್ಯತಿಕ್ರಮ**ನಾಮದ ಅತಿಚಾರವಿದೆ. ಮರ್ಯಾದೆಯ ಕ್ಷೇತ್ರವನ್ನು ಯಾವುದೇ ವಿಶೇಷ ಪ್ರಯೋಜನದ ಉದ್ದೇಶದಿಂದ ಬೆಳೆಸಿ ಬಿಡುವುದು ಅದು **ಕ್ಷೇತ್ರವೃದ್ಧಿ** ಅತಿಚಾರವಿದೆ. ಸ್ವೀಕರಿಸಿದ ಮರ್ಯಾದೆಯ **ವಿಸ್ಮರಣ**ವಾಗಿ ಹೋಗುವುದು ಅದು **ವಿಸ್ಮರಣ**ನಾಮದ ಅತಿಚಾರವಿದೆ. ಇವು ದಿಗ್ವ್ರತದ ಐದು ಅತಿಚಾರಗಳಿವೆ.

ಈಗ ಅನರ್ಥದಂಡತ್ಯಾಗವ್ರತದ ವರ್ಣನೆ ಮಾಡುವಂಥ ಎಂಟು ಸೂತ್ರಗಳನ್ನು ಹೇಳುತ್ತಾರೆ,-

**ಅಭ್ಯಂತರಂ ದಿಗವಧೇರಪಾರ್ಥಿಕೇಭ್ಯಃ ಸಪಾಪಯೋಗೇಭ್ಯಃ ।**
**ವಿರಮಣಮನರ್ಥದಂಡವ್ರತಂ ವಿದುರ್ವ್ರತಧರಾಗ್ರಣ್ಯಃ ॥೭೪॥**

**ಅರ್ಥ :-** ದಿಶೆಗಳ ಮರ್ಯಾದೆ ಮಾಡಿಕೊಂಡಿರುವಲ್ಲಿ ಮನ-ವಚನ-ಕಾಯದ ಯೋಗಗಳ ವ್ಯರ್ಥ ಪ್ರವೃತ್ತಿಯಿಂದ ವಿರಕ್ತವಾಗುವುದನ್ನು ವ್ರತಧಾರಿಗಳಲ್ಲಿ ಅಗ್ರಗಣ್ಯರಿರುವಂಥ ಭಗವಂತರು ಅನರ್ಥ ದಂಡವ್ರತವೆಂದು ಹೇಳುತ್ತಾರೆ.

**ಭಾವಾರ್ಥ :-** ಮರ್ಯಾದೆಯ ಒಳಗಿನ ಕ್ಷೇತ್ರದಲ್ಲಿ ಕೂಡ ಇಂಥ ಕಾರ್ಯ ಮಾಡುವುದರಿಂದ ತಮ್ಮ ಯಾವ ಪ್ರಯೋಜನವೂ ಸಾಧಿಸುವುದಿಲ್ಲ ಮತ್ತು ವ್ಯರ್ಥವಾಗಿಯೇ ಪಾಪದ ಬಂಧ ಮಾಡಿಕೊಂಡು ಶಿಕ್ಷೆ ಭೋಗಿಸಬೇಕಾಗುವುದು ಅದು ಅನರ್ಥದಂಡವಿದೆ. ಆ ಎಲ್ಲ ಅನರ್ಥದಂಡಗಳು ತ್ಯಾಗ ಮಾಡಲು ಯೋಗ್ಯವಿವೆ.

ಅವನ್ನು ಮಾಡುವುದರಿಂದ ತಮ್ಮ ವಿಷಯಭೋಗವೂ ಸಾಧಿಸುವುದಿಲ್ಲ, ಯಾವ ಲಾಭವೂ ಆಗುವುದಿಲ್ಲ, ಯಶಸ್ಸೂ ದೊರಕುವುದಿಲ್ಲ, ಧರ್ಮವೂ ಆಗುವುದಿಲ್ಲ; ಆದರೆ ನಿರಂತರ ಪಾಪದ ಬಂಧವೇ ಆಗುತ್ತದೆ. ಯಾವುದರ ಫಲವನ್ನು ದುಷ್ಟ ದುರ್ಗತಿಗಳಲ್ಲಿ ಭೋಗಿಸಬೇಕಾಗುವುದು ಅಂಥ ಸಮಸ್ತ ಅನರ್ಥದಂಡಗಳು ತ್ಯಾಗ ಯೋಗ್ಯವೇ ಇವೆ.

ಈಗ ಅನರ್ಥದಂಡದ ಐದು ಭೇದಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಪಾಪೋಪದೇಶಹಿಂಸಾದಾನಾಪಧ್ಯಾನ ದುಃಶ್ರುತೀಃ ಪಂಚ ।**
**ಪ್ರಾಹುಃ ಪ್ರಮಾದಚರ್ಯಾ ಅನರ್ಥದಂಡಾನದಂಡಧರಾಃ ।।೭೫।।**

**ಅರ್ಥ :-** ಪಾಪದ ಉಪದೇಶ, ಹಿಂಸಾದಾನ, ಅಪಧ್ಯಾನ, ದುಃಶ್ರುತಿ, ಪ್ರಮಾದಚರ್ಯೆಯೆಂದು ಇವು ಐದು ಅನರ್ಥದಂಡಗಳಿವೆ. ಅವನ್ನು ಆ ಅದಂಡಧರರಾದ ಗಣಧರ ದೇವರು ಹೇಳಿದ್ದಾರೆ.

**ಭಾವಾರ್ಥ :-** ಮನ-ವಚನ-ಕಾಯದ ಅಶುಭಯೋಗಗಳನ್ನು ದಂಡವೆಂದು ಹೇಳುತ್ತಾರೆ. ಸಮಸ್ತ ಜೀವರುಗಳಿಗೆ ತಮ್ಮ ತಮ್ಮ ಮನ-ವಚನ-ಕಾಯದ ಅಶುಭಯೋಗವೇ ದುರ್ಗತಿಗಳಲ್ಲಿ ಅನೇಕ ಪ್ರಕಾರದ ದಂಡನೆ ಕೊಡುತ್ತದೆ. ಮನ-ವಚನ-ಕಾಯದ ಅಶುಭಯೋಗರೂಪ ದಂಡವನ್ನು ಧಾರಣ ಮಾಡದಂಥ ಯಾವ ಅದಂಡಧರರಾದ ಗಣಧರ ದೇವರಿದ್ದಾರೆ ಅವರು ಐದು ಪ್ರಕಾರದ ಅನರ್ಥ ದಂಡವನ್ನು ಹೇಳಿದ್ದಾರೆ. ೧)ಪಾಪದ ಉಪದೇಶ ಕೊಡುವುದು ಅದು ಪಾಪೋಪದೇಶವಿದೆ, ೨)ಹಿಂಸೆಯ ಉಪಕರಣಗಳನ್ನು ಕೊಡುವುದು ಅದು ಹಿಂಸಾದಾನವಿದೆ, ೩) ಅಸತ್ಯ ವಿಚಾರ ಮಾಡುವುದು ಅದು ಅಪಧ್ಯಾನವಿದೆ, ೪) ಅಸತ್ಯ ಕೇಳುವುದು ಅದು ದುಃಶ್ರುತಿಯಿದೆ, ೫) ಪ್ರಮಾದರೂಪ ಆಚರಣೆ ಮಾಡುವುದು ಅದು ಪ್ರಮಾದಚರ್ಯೆಯಿದೆ, ಈ ಪ್ರಕಾರ ಅನರ್ಥ ದಂಡದಲ್ಲಿ ಐದು ಪ್ರಕಾರಗಳಿವೆ.

ಈಗ ಪಾಪೋಪದೇಶನಾಮದ ಅನರ್ಥದಂಡವನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ತಿರ್ಯಕ್‌ಕ್ಲೇಶವಣಿಜ್ಯಾ ಹಿಂಸಾರಂಭಪ್ರಲಂಭನಾದೀನಾಮ್ ।**
**ಪ್ರಸವಃ ಕಥಾಪ್ರಸಂಗಃ ಸ್ಮರ್ತವ್ಯಃ ಪಾಪಉಪದೇಶಃ ।।೭೬।।**

**ಅರ್ಥ :-** ತಿರ್ಯಂಚಗಳಿಗೆ ಕ್ಲೇಶವನ್ನುತ್ಪನ್ನ ಮಾಡಿಸುವ, ಅವನ್ನು ಕೊಳ್ಳುವ - ಮಾರುವ, ಅವುಗಳ ಹಿಂಸೆಯ, ಆರಂಭದ, ವಂಚಿಸುವ ಇತ್ಯಾದಿಗಳ ಪಾಪವನ್ನುತ್ಪನ್ನ ಮಾಡಿಸುವಂಥ ಪ್ರವೃತ್ತಿರೂಪದ ಕಥೆಯನ್ನು ಮತ್ತೆ ಮತ್ತೆ ಹೇಳುವುದು- ಉಪದೇಶ ಕೊಡುವುದು ಅದು ಪಾಪೋಪದೇಶ ನಾಮದ ಅನರ್ಥದಂಡವಿದೆ.

**ಭಾವಾರ್ಥ :-** ತಿರ್ಯಂಚಗಳನ್ನು ಹೊಡೆಯುವ, ಸುಡುವ ಎಂದರೆ ಬರೆ ಕೊಡುವ ಗಟ್ಟಿಯಾಗಿ ಕಟ್ಟಿ ಹಾಕುವ, ಮರ್ಮಸ್ಥಾನದಲ್ಲಿ ವೇದನೆಯನ್ನುಂಟು ಮಾಡುವ, ಹೆಚ್ಚು ಭಾರವನ್ನು ಹೇರುವ, ನಪುಂಸಕ ಮಾಡುವ, ಮೂಗು ಚುಚ್ಚುವ, ಕಿವಿ ಕತ್ತರಿಸುವ, ಹಿಡಿಯುವ, ಪಂಜರದಲ್ಲಿ ಬಂಧಿಸಿಡುವುದರ ಉಪದೇಶ ಕೊಡುವುದು ಅದು **ತಿರ್ಯಕ್‌ಕ್ಲೇಶ** ನಾಮದ **ಪಾಪೋಪದೇಶ**ವಿದೆ. ಅನೇಕ ವಸ್ತುಗಳಲ್ಲಿ ಪಾಪವನ್ನುತ್ಪನ್ನ ಮಾಡುವಂಥ **ಉದ್ಯಮ**ದ ಉಪದೇಶ ಕೊಡುವುದು ಮತ್ತು ಯಾವುದರಲ್ಲಿ ಷಟ್ಕಾಯ ಜೀವಗಳ ಹಿಂಸೆಯಾಗುತ್ತದೆ ಅದು **ಹಿಂಸೋಪದೇಶ**ವಿದೆ. ಹೂದೋಟ - ಉಪವನಗಳನ್ನು ಹಚ್ಚಿಸುವ, ಮನೆಗಳನ್ನು ಕಟ್ಟಿಸುವ, ಮದುವೆ ಮಾಡುವ ಇವೇ ಮೊದಲಾದ ಪಾಪಾರಂಭದ ಉಪದೇಶವು ಅದು **ಆರಂಭೋಪದೇಶ**ವಿದೆ.ಕಪಟ-ವಂಚನೆಯ ರೂಪದ ಪ್ರವೃತ್ತಿ ಮಾಡಿಸುವ ಉಪದೇಶವು ಅದು **ಪ್ರಲಂಭನೋಪದೇಶ**ವಿದೆ. ಇದೇ ರೀತಿ ಅನೇಕ ಪ್ರಕಾರದ ಪಾಪಗಳಲ್ಲಿ ಪ್ರವೃತ್ತಿ ಮಾಡಿಸುವರೂಪದ ಉಪದೇಶದ ಕಥನ ಮಾಡುವುದು, ಪಾಪಗಳಲ್ಲಿ ಪ್ರೇರಿತ ಮಾಡುವುದೆಲ್ಲವು ಪಾಪೋಪದೇಶನಾಮದ ಅನರ್ಥದಂಡವಿದೆ.

ಈಗ ಹಿಂಸಾದಾನವೆಂಬ ಹೆಸರಿನ ಅನರ್ಥದಂಡ ಹೇಳುವಂಥ ಸೂತ್ರ ಹೇಳುತ್ತಾರೆ,-

**ಪರಶುಕೃಪಾಣಖನಿತ್ರ-ಜ್ವಲನಾಯುಧಶ್ರಂಗಿಶೃಂಖಲಾದೀನಾಮ್ ।**
**ವಧಹೇತೂನಾಂ ದಾನಂ ಹಿಂಸಾದಾನಂ ಬ್ರುವಂತಿ ಬುಧಃ ॥೭೭॥**

**ಅರ್ಥ :-** ಹಿಂಸೆಯ ಕಾರಣವಿರುವ ಪರಶು, ಕರವಾಳ, ಪಿಕಾಸಿ, ಕುರುಪೆ, ಅಗ್ನಿ, ಆಯುಧ, ಆಗ್ನೇಯಾಸ್ತ್ರ ವಿಷ, ಬೇಡಿ, ಶೃಂಖಲೆ ಇವೇ ಮೊದಲಾದವುಗಳ ದಾನವನ್ನು ಸಮಸ್ತ ಜ್ಞಾನಿಗಳು ಹಿಂಸಾದಾನ ಅನರ್ಥದಂಡವೆಂದು ಹೇಳುತ್ತಾರೆ. ಹಿಂಸೆಯೇ ಉತ್ಪನ್ನವಾಗುವಂಥ ವಸ್ತುಗಳನ್ನು ಅನ್ಯರಿಗೆ ಕೊಡುವುದು, ಪಿಕಾಸಿ, ಸಲಿಕೆ, ಕುರುಪೆ, ಸುತ್ತಿಗೆ, ಕೊಡಲಿ, ತಲವಾರ, ಛೂರಿ, ಕಿರುಗತ್ತಿ, ಪಿಸ್ತೂಲು, ಭಲ್ಲೆ, ಬಾಣ, ಧನುಷ, ಬಂದೂಕು, ತೋಫು, ಈಟಿ, ಗುಂಡು, ಬಾರಕೋಲ, ಮುಗ್ದರ, ಬೇಡಿ, ಶೃಂಖಲೆ, ವಿಷ, ಅಗ್ನೀ ಇವೆ ಮೊದಲಾದ ವಸ್ತುಗಳ ದಾನ ಮಾಡುವುದು, ಬೇಡಿದ ಮೇಲೆ ಉದ್ದರಿ ಕೊಡುವುದು, ಮಾರುವುದು, ಬಾಡಿಗೆಯಿಂದ ಕೊಡುವುದು ಇದೆಲ್ಲವು ಹಿಂಸಾದಾನ ನಾಮದ ಅನರ್ಥದಂಡವಿದೆ.

ಈಗ **ಅಪಧ್ಯಾನ**ವೆಂಬ ಹೆಸರಿನ ಅನರ್ಥದಂಡವನ್ನು ಹೇಳುವಂಥ ಸೂತ್ರ ಹೇಳುತ್ತಾರೆ,-

**ಬಧಬಂಧಚ್ಛೇದಾದೇರ್ದ್ವೇಷಾದ್ರಾಗಾಚ್ಚ ಪರಕಲತ್ರಾದೇಃ ।**
**ಆಧ್ಯಾನಮಪಧ್ಯಾನಂ ಶಾಸತಿ ಜಿನಶಾಸನೇ ವಿಶದಾಃ ॥೭೮॥**

**ಅರ್ಥ :-** ದ್ವೇಷದಿಂದ, ವಿರೋಧದಿಂದ, ತಮ್ಮ ಸ್ವಾರ್ಥಸಿದ್ಧಮಾಡಿಕೊಳ್ಳುವ ರಾಗರೂಪದ ಅಭಿಪ್ರಾಯದಿಂದ ಇತರರ ಪತ್ನೀ-ಪುತ್ರ ಮೊದಲಾದವರ ವಧೆ, ಬಂಧನ, ಮಾರಣ, ಪೀಡನ ಮೊದಲಾದವುಗಳ ಚಿಂತನೆ ಮಾಡುತ್ತದೆ ಅದನ್ನು ಜಿನಶಾಸನದಲ್ಲಿ ಪ್ರವೀಣರಿರುವಂಥವರು ಅಪಧ್ಯಾನ ನಾಮದ ಅನರ್ಥದಂಡವೆಂದು ಹೇಳುತ್ತಾರೆ.

**ಭಾವಾರ್ಥ :-** ರಾಗ-ದ್ವೇಷಪೂರ್ವಕವಾದ ಪರಿಣಾಮಗಳಲ್ಲಿ ವಿಚಾರ ಮಾಡುವುದೇನೆಂದರೆ ಇಂಥವನ ಮಗನು ಸುತ್ತಹೋಗಲಿ, ಪತ್ನಿಯು ಸತ್ತುಹೋಗಲಿ, ದಂಡನೆಯಾಗಲಿ, ಕೈ-ಕಾಲು-ಕಿವಿ-ಮೂಗು ಕತ್ತರಿಸಿ ಹೋಗಲಿ, ಧನವು ಲೂಟಿಯಾಗಿ ಹೋಗಲಿ, ಜೀವನೋಪಾಯವು ನಷ್ಟವಾಗಿ ಹೋಗಲಿ, ಇಂದ್ರಿಯಗಳು ನಷ್ಟವಾಗಿ ಹೋಗಲಿ, ಲೋಕದಲ್ಲಿ ಅಪಕೀರ್ತಿಯಾಗಿ ಹೋಗಲಿ, ಸ್ಥಾನದಿಂದ ಹೊರಗೆ ಹಾಕಲಿ, ಬುದ್ಧಿಯು ಭ್ರಷ್ಟವಾಗಿ ಹೋಗಲೆಂದು ಪುನಃ ಪುನಃ ಚಿಂತನೆ ಮಾಡುವುದೆಲ್ಲವು **ಅಪಧ್ಯಾನ**ವಿದೆ. ಈ ಪ್ರಕಾರ ಇನ್ನೊಬ್ಬರ ಮೇಲೆ ದುಃಖ-ಆಪತ್ತಿಯನ್ನು ಬಯಸುವುದರಿಂದ ತಮಗೇನೂ ಲಾಭವಾಗುವುದಿಲ್ಲ, ತಾವು ವಿಚಾರ ಮಾಡುವುದರಿಂದ ಇನ್ನೊಬ್ಬರದೇನೂ ಕೆಡಕಾಗುವದಿಲ್ಲ, ಆದರೆ ಇವನು ವ್ಯರ್ಥವಾಗಿಯೇ ತನಗೆ ಮಹಾಪಾಪದ ಬಂಧಮಾಡಿಕೊಳ್ಳುತ್ತಾನೆ. ಇನ್ನೋರ್ವನ ಒಳಿತು-ಕೆಡಕಂತೂ ಸ್ವಯಂ ಅವನ ಪಾಪ-ಪುಣ್ಯದ ಉದಯದ ಅನುಸಾರ ಆಗುತ್ತದೆ. ಆ ವ್ಯರ್ಥ ದುರ್ಧ್ಯಾನ ಮಾಡುತ್ತದೆ ಅದಕ್ಕೆ ಅಪಧ್ಯಾನ ನಾಮದ ಅನರ್ಥದಂಡವೆಂದು ಹೇಳಿದೆ.

ಈಗ **ದುಃಶ್ರುತಿ** ನಾಮದ ಅನರ್ಥದಂಡವನ್ನು ಹೇಳುವಂಥ ಸೂತ್ರ ಹೇಳುತ್ತಾರೆ,-

**ಆರಂಭಸಂಗಸಾಹಸ ಮಿಥ್ಯಾತ್ವದ್ವೇಷರಾಗಮದಮದನೈಃ ।**
**ಚೇತಃ ಕಲುಷಯತಾಂ ಶ್ರುತಿರವಧೀನಾಂ ದುಃಶ್ರುತಿರ್ಭವತಿ ॥೭೯॥**

**ಅರ್ಥ :- ಆರಂಭ** ಎಂದರೆ ಅಸಿ, ಮಸಿ, ಕೃಷಿ, ವಿದ್ಯೆ, ವಾಣಿಜ್ಯ, ಶಿಲ್ಪ; **ಸಂಗ** ಎಂದರೆ ಧನ, ಧಾನ್ಯ ಮೊದಲಾದ ಪರಿಗ್ರಹ; **ಸಾಹಸ** ಎಂದರೆ ಆಶ್ಚರ್ಯಕರ ಪರಾಕ್ರಮ ಮೊದಲಾದವು; **ಮಿಥ್ಯಾತ್ವ** ಎಂದರೆ ಬ್ರಹ್ಮ ಅದ್ವೈತ, ಜ್ಞಾನ ಅದ್ವೈತ, ಕ್ಷಣಿಕ, ಯಾಜ್ಞಕಾದಿ ವಿರುದ್ಧ ಅರ್ಥದ ಪ್ರತಿಪಾದಕ ಶಾಸ್ತ್ರಗಳು; **ರಾಗ** ಎಂದರೆ ಆಸಕ್ತಿ; **ದ್ವೇಷ** ಎಂದರೆ

ವೈರ; **ಮದ** ಎಂದರೆ ಅಭಿಮಾನರೂಪದ ಎಂಟು ಮದಗಳು; **ಮದನ** ಎಂದರೆ ಕಾಮವೇದನೆಯಿಂದಾದ ವಿಕಾರಗಳಿಂದ ಚಿತ್ತವನ್ನು ಕಲುಷಿತ ಗೊಳಿಸುವಂಥ **ಅವಧಿ** ಎಂದರೆ ಶಾಸ್ತ್ರಗಳು, ಅವುಗಳ ಶ್ರವಣ ಮಾಡುವುದು ಅದು ದುಃಶ್ರುತಿನಾಮದ ಅನರ್ಥದಂಡವಿದೆ.

**ಭಾವಾರ್ಥ :-** ಮಿಥ್ಯಾತ್ವ ಹಾಗೂ ರಾಗ-ದ್ವೇಷಗಳನ್ನುತ್ಪನ್ನಮಾಡುವಂಥ ಪದಾರ್ಥಗಳ ವಿಪರೀತ ಸ್ವರೂಪವನ್ನು ಗ್ರಹಣಮಾಡಿಸುವಂಥ ಶಾಸ್ತ್ರಗಳನ್ನು ಕೇಳುವುದು; ವಿಕಥೆ, ಶೃಂಗಾರ, ವೀರ, ಹಾಸ್ಯರಸ ಪ್ರರೂಪಕ ಹಾಗೂ ಮಾರಣ, ಉಚ್ಚಾಟನ, ವಶೀಕರಣ, ಕಾಮೋತ್ಪಾದಕ ಶಾಸ್ತ್ರಗಳನ್ನು ಕೇಳುವುದು; ಕಾಡು ಸರ್ಪಗಳ, ಭೂತಗಳ, ರಸಕರ್ಮ, ಇಂದ್ರಜಾಲ, ರಸಾಯನ, ಮಾಯಾಚಾರ ಮೊದಲಾದವುಗಳ ಪ್ರರೂಪಕಶಾಸ್ತ್ರ ಮತ್ತು ದುಷ್ಟಶಾಸ್ತ್ರ, ದುಷ್ಟಕಥೆ, ದುಷ್ಟರಾಗ, ದುಷ್ಟಚೇಷ್ಟೆ, ದುಷ್ಟಕ್ರಿಯೆ, ದುಷ್ಟಕರ್ಮಗಳ ವರ್ಣನೆ ಮಾಡುವಂಥ ಶಾಸ್ತ್ರಗಳನ್ನು ಕೇಳುವುದು ಅದು ದುಃಶ್ರುತಿನಾಮದ ಅನರ್ಥದಂಡವಿದೆ.

ಈಗ **ಪ್ರಮಾದಚರ್ಯೆ** ನಾಮದ ಅನರ್ಥದಂಡವನ್ನು ಹೇಳುವಂಥ ಸೂತ್ರ ಹೇಳುತ್ತಾರೆ,-

**ಕ್ಷಿತಿಸಲಿಲದಹನಪವನಾರಂಭಂ ವಿಫಲಂ ವನಸ್ಪತಿಚ್ಛೇದಮ್ ।**
**ಸರಣಂ ಸಾರಣಮಪಿ ಚ ಪ್ರಮಾದಚರ್ಯಾ ಪ್ರಭಾಷಂತೇ ॥೮೦॥**

**ಅರ್ಥ :-** ಪ್ರಯೋಜನವಿಲ್ಲದೆ ನೆಲ ಅಗೆಯುವ, ಪಾಷಾಣ ಒಡೆಯುವ ಆರಂಭ; ನೀರು ಚೆಲ್ಲುವ, ನೀರು ಸಿಂಪಡಿಸುವ, ಪ್ರೋಕ್ಷಿಸುವ, ಅವಗಾಹನಮಾಡುವ ಆರಂಭ; ಪ್ರಯೋಜನವಿಲ್ಲದೆ ಅಗ್ನಿ ಪ್ರಜ್ವಲಿಸುವ, ಉರಿಸುವ, ಆರಿಸುವ, ನಿಗ್ರಹಿಸುವ ಆರಂಭ; ಗಾಳಿಹಾಕುವ, ಊದುವ, ಗಾಳಿಯಂತ್ರವನ್ನು ತಡೆಯುವ, ಅಗ್ನಿಯಲ್ಲಿ ಬೀಳಿಸುವ ವ್ಯರ್ಥ ಆರಂಭ, ಪ್ರಯೋಜನವಿಲ್ಲದೆ ವನಸ್ಪತಿಯನ್ನು ಕತ್ತರಿಸುವುದು, ಯಾವ ಪ್ರಯೋಜನವಿಲ್ಲದೆ ಗಮನ ಮಾಡುವುದು, ಗಮನ ಮಾಡಿಸುವುದು ಇವೆಲ್ಲ ಕಾರ್ಯಮಾಡುವುದಕ್ಕೆ ಪ್ರಮಾದಚರ್ಯೆ ನಾಮದ ಅನರ್ಥದಂಡವೆಂದು ಹೇಳುತ್ತಾರೆ.

**ಅಸತ್ಯ ಉಪದೇಶ ಕೊಡುವುದರ ತ್ಯಾಗ :** ಗೃಹಸ್ಥನ ಗೃಹಾಚಾರದಲ್ಲಿ ಪಾಪದ ಆಚರಣೆಗಳೇ ಅಧಿಕವಾಗಿರುತ್ತವೆ, ಒಂದು ವೇಳೆ ಗೃಹಸ್ಥನು ಪಾಪಗಳ ತ್ಯಾಗ ಮಾಡದಿರುತ್ತಿದ್ದರೆ ತಮ್ಮ ಯಾವ ಪ್ರಯೋಜನವೂ ಸಿದ್ಧವಾಗದಂಥ ಪ್ರಯೋಜನವಿಲ್ಲದೆಯೇ ಕೇವಲ ಪಾಪಬಂಧದ ಕಾರಣವಿರುವ, ಅವುಗಳ ಫಲದಿಂದ ದುರ್ಗತಿಗಳಲ್ಲಿ ಅಸಂಖ್ಯಾತಕಾಲ-ಅನಂತಕಾಲದವರೆಗೆ ದುಃಖವನ್ನೇ ಭೋಗಿಸಬೇಕಾಗುವಂಥ ನಿಂದ್ಯ ಕರ್ಮಗಳನ್ನಾದರೂ ಬಿಟ್ಟು ಕೊಡಬೇಕಾಗುವುದು.

ಇಲ್ಲಿ ಉತ್ತಮ ಕುಲದಲ್ಲಿ ಜನಿಸಿ ಜಿನೇಂದ್ರ ಭಗವಂತರ ಉಪದೇಶ, ಅತ್ಯಂತ ದುರ್ಲಭವಿರುವ ಜಿನಧರ್ಮದ ಪ್ರಾಪ್ತಿಯಾಗಿ ಹೋಗಿದೆಯೆಂದರೆ ಈಗ ಪ್ರಯೋಜನವಿಲ್ಲದ ಪಾಪ ಬಂಧದಿಂದ ಭಯಭೀತರಾಗಿ ದೂರದಲ್ಲಿರುವುದೇ ಉಚಿತವಿದೆ. ಪಶುಗಳ ಹಾಗೆ ವ್ಯರ್ಥವಾಗಿ ಜೀವನ ಕಳೆಯಬಾರದು.

**ಒಂದು ವೇಳೆ ತಾವು ಸ್ವಯಂ ಪಾಪದಿಂದ ಬಿಡುಗಡೆಯಾಗುವ ಸಾಧ್ಯತೆಯಿಲ್ಲದಿದ್ದರೆ ಇಂಥ ಪಾಪದ ಉಪದೇಶವನ್ನು ಇತರರಿಗಾದರೂ ಕೊಡಬೇಡಿರಿ.** ಗೃಹ ಸಂಪತ್ತಿಯನ್ನು ಮಾಡಿಸುವಲ್ಲಿ ಮಹಾಹಿಂಸೆಯಾಗುತ್ತದೆ. ಆದುದರಿಂದ ಮನೆ ಕಟ್ಟಿಸುವ, ಮನೆಯ ಜೀರ್ಣೋದ್ಧಾರ ಮಾಡುವ, ಮನೆಗೆ ಬಣ್ಣ ಬಳೆಯುವ, ಉಪವನ ಬೆಳೆಸುವ, ಚರಂಡಿ ಅಗೆಯಿಸುವ, ಬೀದಿಯ ದುರಸ್ತಿ ಮಾಡಿಸುವ, ಕೆರೆ-ಬಾವಿಗಳನ್ನು ಅಗೆಯಿಸುವ ಮತ್ತು ಕಟ್ಟಿಸುವ, ನೀರಿನ ಕಾಲುವೆ ತೋಡುವ, ನದೀ-ಕೆರೆಗಳಿಗೆ ಕಟ್ಟೆ ಕಟ್ಟಿಸುವ, ಕೆರೆಯ ಒಡ್ಡು ಎತ್ತರಿಸುವ ಹಾಗೂ ಒಡ್ಡು ಒಡೆದು ಹಾಕುವ, ನದಿಗೆ ಪೂಲು ಕಟ್ಟಿಸುವ, ಕಟ್ಟಿದ ಮನೆಯನ್ನು ಒಡೆದು ಹಾಕುವ, ಉಪವನವನ್ನು ತೆಗೆದು ಹಾಕುವ, ವೃಕ್ಷಗಳನ್ನು ಕತ್ತರಿಸುವ, ವನವನ್ನೆಲ್ಲ ಕತ್ತರಿಸಿ ಹಾಕುವ, ಇದ್ದಿಲು ತಯಾರಿಸುವ, ಹುಲ್ಲು ಬೆಳೆಯಿಸುವ ಮತ್ತು ಅದನ್ನು ಕತ್ತರಿಸುವ, ಬೆಂಕಿ ಹೊತ್ತಿಸುವ, ಮಿಥ್ಯಾದೇವ-ದೇವಿಗಳ ಗುಡಿಕಟ್ಟಿಸುವ, ಮಿಥ್ಯಾದೇವ ಮಂದಿರ ಹಾಗೂ ಮೂರ್ತಿಗಳನ್ನು ಕೆಡಿಸುವ, ಒಕ್ಕಲುತನ ಮಾಡುವ, ಸುಂದರವಿರುವ ಮನೆಯನ್ನು ಮಲಿನ ಮಾಡುವ ಉಪದೇಶವನ್ನೆಂದೂ ಕೊಡಬಾರದು.

ತಿರ್ಯಂಚಗಳಿಗೆ ದುಃಖವಾಗುವ, ಹೊಡೆಯುವ, ದೃಢವಾಗಿ ಬಂಧಿಸುವ, ನಪುಂಸಕ ಮಾಡುವ, ಬರೆ ಕೊಡುವ, ಮೂಗಿಗೆ ಛಿದ್ರ ಮಾಡಿಸುವ ಉಪದೇಶ ಕೊಡಬೇಡಿರಿ. ಮನುಷ್ಯ-ತಿರ್ಯಂಚಗಳಿಗೆ ಆಹಾರ-ಪಾನೀಯ ಕೊಡದಿರುವ, ಬಂದೀಖಾನೆಯಲ್ಲಿ ಹಿಡಿದಿಡುವ, ಸಂತಾನಗಳಿಂದ ಅಗಲಿಸುವ, ಪಕ್ಷಿಗಳನ್ನು ಪಂಜರದಲ್ಲಿ ಬಂಧಿಸಿಡುವ, ಹಾವು, ಚೇಳು, ಸಿಂಹ, ಹುಲಿ, ಬೆಕ್ಕು, ಇಲಿ, ನಾಯಿ ಮೊದಲಾದ ಹಿಂಸ್ರ ಪ್ರಾಣಿಗಳನ್ನು ಸಾಯಿಸುವ, ಸೊಳ್ಳೆ-ತಿಗಣೆಗಳನ್ನು ಕೊಲ್ಲುವ, ಮಂಚವನ್ನು ಬಿಸಿಲಿನಲ್ಲಿ ಇಡುವ, ಔಷಧ ಸೇಚನೆ ಮಾಡುವ, ಜೀವಗಳನ್ನು ಹಿಡಿಯುವ-ಕೊಲ್ಲುವ, ಯಂತ್ರ-ಬಲೆ ಮೊದಲಾದವುಗಳನ್ನು ಮಾಡುವಂಥ ಉಪದೇಶಗಳನ್ನು ಕೊಡಕೂಡದು.

ದುಷ್ಟ ಪಾಪರೂಪದ ಶಾಸ್ತ್ರಗಳನ್ನು ಓದುವ, ಶೃಂಗಾರ, ಮಾಯಾಚಾರ ಮೊದಲಾದವುಗಳ ಅಧಿಕತೆಯಿರುವಂಥ ಶಾಸ್ತ್ರಗಳ, ಮಿಥ್ಯಾ ಶ್ರದ್ಧೆ ಮಾಡಿಸುವಂಥ ಶಾಸ್ತ್ರಗಳ, ಯಾವ ಗ್ರಂಥಗಳಲ್ಲಿ ಮಾರಣ ಕ್ರಿಯೆ, ವಿಷ ತಯಾರಿಸುವ ಕ್ರಿಯೆ, ಮಾರಣ-ಉಚ್ಚಾಟಣೆ, ವಶೀಕರಣ, ಮಂತ್ರ-ತಂತ್ರ ಮೊದಲಾದ ಹಾಗೂ ಇಂದ್ರಜಾಲ ಮೊದಲಾದ ಅನೇಕ ಕಪಟಾಚಾರ ಮಾಡುವ ಉಪದೇಶ ಕೊಡಲಾಗಿದೆ, ಮತ್ತು ರಸಗಳನ್ನು ಉಷ್ಣಮಾಡುವ, ಸುಡುವ, ರಸಾಯನ ತಯಾರಿಸುವ ಇತ್ಯಾದಿ ಪಾಪದ ಶಾಸ್ತ್ರ ವೀರರಸದ ಶಾಸ್ತ್ರ ಹಿಂಸಾಪ್ರಧಾನ ಕ್ರಿಯೆಯ ಶಾಸ್ತ್ರಗಳನ್ನು ಓದಬಾರದು, ಮತ್ತು ಓದಬೇಕೆಂದು ಇತರರಿಗೆ ಉಪದೇಶವನ್ನೂ ಕೊಡಬಾರದು.

ಅಭಕ್ಷ್ಯ ಭಕ್ಷಣ ಮಾಡುವ, ರಾತ್ರಿಯಲ್ಲಿ ಭೋಜನ ಮಾಡುವ, ಅಸತ್ಯ ಮಾತನಾಡುವ, ನಿಂದೆ ಮಾಡುವ, ಚಾಡಿ ಹೇಳುವ, ಕಳವು ಮಾಡುವ, ಸುಳ್ಳು ಹೇಳುವ, ವ್ಯಭಿಚಾರ ಮಾಡಿಸುವ, ಒಕ್ಕಲುತನ ಮೊದಲಾದ ದೊಡ್ಡ ದೊಡ್ಡ ಆರಂಭ ಮಾಡುವ, ಪ್ರಕಾಶ ಪ್ರಜ್ವಲಿತ ಮಾಡುವ, ಸಿಡಿಮದ್ದು ಹಾರಿಸುವ ಮತ್ತು ತೋಟ-ಉಪವನಗಳನ್ನು ನೋಡುವ ಪ್ರೇರಣೆ ಮಾಡುವ ಉಪದೇಶವನ್ನು ಕೊಡಕೂಡದು.

**ಹಿಂಸೆಯ ಉಪದೇಶದ ತ್ಯಾಗ :** ಈ ದೇಶಕ್ಕಿಂತ ಇತರ ದೇಶದಲ್ಲಿ ವ್ಯಾಪಾರವು ಅಧಿಕವಿದೆ. ಅಲ್ಲಿಗೆ ಹೋಗಿ ವ್ಯಾಪಾರ ಮಾಡಿರೆಂದು ಉಪದೇಶ ಕೊಡಬಾರದು. ಪರಿಣಾಮದಲ್ಲಿ ದುರ್ಧ್ಯಾನವನ್ನು ವೃದ್ಧಿಸುವ ಕಾರಣಗಳಾದ ಆ ವಸ್ತು ಪ್ರದರ್ಶನ, ಕುತೂಹಲ, ವ್ಯಭಿಚಾರ ಮೊದಲಾದ ಕಾರ್ಯ (ಚಲನಚಿತ್ರ, ಟಿ.ವಿ) ಮನುಷ್ಯ ತಿರ್ಯಂಚಗಳ ಹೋರಾಟ, ಕಲಹ ಮೊದಲಾದವುಗಳನ್ನು ನೋಡುವ ಉಪದೇಶವನ್ನು ಕೊಡಬೇಡಿರಿ. ಯುದ್ಧ ಮೊದಲಾದುವನ್ನು ಮಾಡುವ, ಬಯ್ಯುವ, ಇತರರ ಆಜೀವಿಕೆಯನ್ನು ಕೆಡಿಸಿ ಬಿಡುವ ಉಪದೇಶವನ್ನು ಕೊಡಬೇಡಿರಿ. ದುಷ್ಟ ಗೀತೆ, ಗಾಯನ, ನೃತ್ಯ, ವಾದ್ಯ, ಕಲಹ, ವಿಸಂವಾದಗಳನ್ನು ಆಲಿಸುವ ಉಪದೇಶ ಕೊಡಬೇಡಿರಿ.

ಈ ದೇಶದಲ್ಲಿ ಸೇವಕ, ಸೇವಕಿಯರು ಸುಲಭ ಬೆಲೆಯಲ್ಲಿ ದೊರಕುತ್ತಾರೆ. ಇವರನ್ನು ಇಂಥ ದೇಶದಲ್ಲಿ ತೆಗೆದುಕೊಂಡು ಹೋಗಿ ಮಾರಿದರೆ ಅಧಿಕ ಲಾಭವಾಗುವುದೆಂದು ಉಪದೇಶ ಕೊಡಬೇಡಿರಿ. ಇಂಥ ಉಪದೇಶವು **ಕ್ಲೇಶವಣಿಜ್ಯಾ**ಯೆಂಬ ಉಪದೇಶವಿದೆ. ಎಮ್ಮೆ, ಕುದುರೆ, ಗೋವು ಮೊದಲಾದುವನ್ನು ಇಂಥ ದೇಶದಿಂದ ತಂದು ಬೇರೆ ದೇಶದಲ್ಲಿ ಮಾರುವುದರಿಂದ ಬಹಳಷ್ಟು ಧನದ ಲಾಭವಾಗುವುದೆಂದು ಉಪದೇಶ ಕೊಡಬೇಡಿರಿ. ಇಂಥ ಉಪದೇಶವು **ತಿರ್ಯಕ್ವಾಣಿಜ್ಯ**ವೆಂಬ ಉಪದೇಶವಿದೆ. ಇಂಥ ದೇಶದಲ್ಲಿ ಜಿಂಕೆ, ಹಂದಿ, ಪಕ್ಷಿ ಮೊದಲಾದ ಪ್ರಾಣಿಗಳು ಅಧಿಕವಿವೆಯೆಂಬ ಉಪದೇಶವನ್ನು ವ್ಯಾಧ, ಬೇಟೆಗಾರ ಮೊದಲಾದವರಿಗೆ ಕೊಡಬೇಡಿರಿ. ಹೀಗೆ ಹೇಳುವುದು ಅದು **ವಧಕೋಪದೇಶ**ವಿದೆ. ಒಕ್ಕಲುತನ ಮಾಡುವಂಥವರಿಗೆ ಪೃಥ್ವಿಯ ಆರಂಭ, ಜಲ, ಅಗ್ನಿ, ವಾಯು, ವನಸ್ಪತಿಯ ಛೇದನ ಮೊದಲಾದವುಗಳ ಉಪದೇಶ ಕೊಡುವುದು ಅದು **ಆರಂಭೋಪದೇಶ**ವಿದೆ. ಅಂಥ ಉಪದೇಶ ಕೊಡಬೇಡಿರಿ. ಈ ಎಲ್ಲ ಪಾಪೋದೇಶಗಳು ತ್ಯಾಗ ಮಾಡಲು ಯೋಗ್ಯವೇ ಇವೆ.

ಗುಡಗುಡಿ; ಜರ್ದಾತಂಬಾಕು, ತಂಬಾಕು, ಗಾಂಜ, ನಸ್ಯ ಮೊದಲಾದ ಅಮಲು ತರುವಂಥವುಗಳನ್ನು ಸೇದುವ, ತಿನ್ನುವ ಅಘ್ರಾಣಿಸುವ ಉಪದೇಶವು ಮಹಾಪಾಪದ ಕಾರಣವಿದೆ, ಅಂಥ ಉಪದೇಶ ಕೊಡಬಾರದು. ಗುಡಗುಡಿ, ತಂಬಾಕುಗಳಂತೂ ಉತ್ತಮ ಕುಲದ ಮನುಷ್ಯರಿಗೆ ಯೋಗ್ಯವೇ ಇಲ್ಲ, ಅವುಗಳಿಂದ ಜಾತಿ ಹಾಗೂ ಕುಲದ ಆಚಾರವು

ಭ್ರಷ್ಟವಾಗಿ ಹೋಗುತ್ತದೆ. ಗುಡಗುಡಿಯ ನೀರಿನಲ್ಲಿ ಹೊಗೆ ಮತ್ತು ನೀರಿನ ಸಂಯೋಗದಿಂದ ಬಹಳಷ್ಟು ಜೀವಗಳು ಉತ್ಪನ್ನವಾಗುತ್ತವೆ ಮತ್ತು ನೀರು ಅತ್ಯಂತ ದುರ್ಗಂಧಯುಕ್ತವಾಗಿ ಹೋಗುತ್ತದೆ. ಆ ನೀರು ಎಲ್ಲಿ ಬೀಳುತ್ತವೆ ಅಲ್ಲಿ ಷಟ್‌ಕಾಯ ಜೀವಗಳ ವಿರಾಧನೆಯೇ ಆಗುತ್ತದೆ. ಸುಣ್ಣ, ಇಟ್ಟಿಗೆ ತಯಾರಿಸುವ ಉಪದೇಶ ಕೊಡಬಾರದು.

ಈ ಪ್ರಕಾರ **ಹೆಚ್ಚು ಪಾಪದ ವ್ಯಾಪಾರ ಮಾಡುವುದರ ಉಪದೇಶ ಕೊಡಬಾರದು.** ಎಮ್ಮೆ, ಎತ್ತು, ಗೋವು, ಒಂಟೆ, ಬಂಡಿ-ಚಕ್ಕಡಿಗಳನ್ನು ಇಡುವ ಉಪದೇಶ ಕೊಡಬಾರದು. ಓರ್ವದಾನೀ ಮನುಷ್ಯನು ತಿರ್ಯಂಚ ಪ್ರಾಣಿಗಳಿಗೆ ಮತ್ತು ದರಿದ್ರ ಜನರಿಗೆ ಅನ್ನ, ಬಟ್ಟೆ ಮೊದಲಾದುವನ್ನು ಕೊಡುತ್ತಿದ್ದರೆ ಅವನನ್ನು ತಡೆಯಬೇಡಿರಿ. ಕುಪಾತ್ರ ದಾನದ ಉಪದೇಶ ಕೊಡಬೇಡಿರಿ, ಕೊಡುತ್ತಿದ್ದರೆ ವಿಘ್ನವನ್ನೊಡ್ಡಬೇಡಿರಿ. ವ್ರತಭಂಗ ಮಾಡುವ ಉಪದೇಶ ಕೊಡಬೇಡಿರಿ.

**ಹೆಚ್ಚೇನು ಹೇಳುವುದು ?** ಯಾವುದರಿಂದ ಸ್ವಲ್ಪ ಕೂಡ ತಮ್ಮ ಧರ್ಮ, ಅರ್ಥ, ಕಾಮದ ಸಿದ್ಧಿಯಾಗುವುದಿಲ್ಲ, ಕೇವಲ ಪಾಪದ ಬಂಧವೇ ಆಗುತ್ತದೆ, ಅಂಥ ಪಾಪರೂಪದ ಉಪದೇಶವನ್ನು ಕೊಡುವುದು ಉಚಿತವಿಲ್ಲ,

**ಅಧಿಕ ಹಿಂಸೆಯಾಗುವಂಥ ಉಪಕರಣಗಳನ್ನು ಯಾರಿಗೂ ಕೊಡಬಾರದು.** ಬೇಡಿದರೂ ಕೊಡಬಾರದು, ಬಾಡಿಗೆಯಿಂದಲೂ ಕೊಡಬಾರದು, ಪ್ರೀತಿಯ ಕಾರಣ ಉಚಿತವಾಗಿಯೂ ಕೊಡಬಾರದು, ಬೆಲೆ ತೆಗೆದುಕೊಂಡೂ ಕೊಡಬಾರದು. ಅವನ್ನು ಕೊಡುವುದರಿಂದ ಸ್ವಲ್ಪ ಲಾಭವಾಗುವುದು ಕಂಡು ಬಂದರೂ ಕೂಡ ಕೊಡಬಾರದು, ಮಹಾಪಾಪದ ಕಾರಣವಿದೆಯೆಂದು ತಿಳಿದುಕೊಂಡು ಕೊಡುವದು ಯೋಗ್ಯವಿಲ್ಲ. ಅವನ್ನು ಕೈಯಲ್ಲಿ ತೆಗೆದುಕೊಳ್ಳುತ್ತಿರುವಂತಯೇ ಪರಿಣಾಮವು ದುಷ್ಟವಾಗಿ ಬಿಡುತ್ತದೆ, ಯಾರದಾದರೂ ಘಾತ ಮಾಡುವ ವಿಚಾರವೇ ಬರುವಂಥ ಖಡ್ಗ, ಛೂರಿ, ಧನುಷ, ಬಾಣ, ಪಿಸ್ತೂಲು, ಕಿರುಗತ್ತಿ, ಭಲ್ಲೆ ಮೊದಲಾದ ಆಯುಧಗಳನ್ನು ಕೊಡುವುದು ಯೋಗ್ಯವಿಲ್ಲ,

ನೆಲ ಅಗೆಯುವ ಸಾಧನಗಳಿಂದ ಓಣಿಗಳಲ್ಲಿ, ರಾಜಮಾರ್ಗದಲ್ಲಿ, ಗದ್ದೆಗಳಲ್ಲಿ ದೊಡ್ಡ-ದೊಡ್ಡ ತ್ರಸ ಜೀವಗಳೂ ಹಾವು, ಚೇಳು, ಕಪ್ಪೆ, ಕೂರ್ಮ, ಕ್ರಿಮಿ, ಕೀಟಕ ಮೊದಲಾದ ಜೀವಗಳು ಕತ್ತರಿಸಿ ಹೋಗುತ್ತವೆ, ದಬ್ಬಿ ಹೋಗುತ್ತವೆ; ಕೋಟ್ಯಂತರ ಜೀವಗಳ ಹಿಂಸೆಯಾಗಿ ಹೋಗುವಂಥ ಗುದ್ದಲಿ, ಸಲಿಕೆ, ಪಿಕಾಸಿ, ಕುರುಪೆ, ನೇಗಿಲು, ಕುಳ, ಕೊಡತೆ, ಸುತ್ತಿಗೆಗಳನ್ನು ಯಾರಿಗೂ ಕೊಡಬಾರದು. ಅನೇಕ ತ್ರಸ ಜೀವಗಳನ್ನು ಸ್ಥಾವರ ಜೀವಗಳನ್ನು ಸೀಳುವಂಥ ಪರಶು, ಕೊಡಲಿ, ಗರಗಸ, ಕುಡಗೋಲು ಮೊದಲಾದವುಗಳನ್ನು ಯಾರಿಗೂ ಕೊಡಬಾರದು. ಅಗ್ನಿ, ವಿಷ, ಬೇಡಿ, ಶೃಂಖಲೆ, ಪಂಜರ, ಬಲೆ ಮೊದಲಾದ ಜೀವಗಳನ್ನು ಹಿಡಿಯುವ ಯಂತ್ರಗಳನ್ನು ಯಾರಿಗೂ ಕೊಡಬಾರದು. ತಿರ್ಯಂಚಗಳಿಗೆ ಮತ್ತು ಮನುಷ್ಯರಿಗೆ ಹೊಡೆಯುವ ಸಾಧನಗಳಾದ ಕೋಲು, ಒನಿಕೆ, ಬಾರಕೋಲು, ಚಾವಟಿ, ಕೋರಡಾ ಮೊದಲಾದವುಗಳನ್ನು ಯಾರಿಗೂ ಕೊಡಬಾರದು. ಕೊಡುವಂತೆ ಅನ್ಯರಿಗೆ ಹೇಳಬಾರದು.

ಬೆಕ್ಕು, ನಾಯಿ ಮೊದಲಾದ ಹಿಂಸ್ರ ಪ್ರಾಣಿಗಳನ್ನು ತಮ್ಮವುಗಳನ್ನಾಗಿ ಮಾಡಿಕೊಂಡು ಸಾಕಬಾರದು. ಕೌಜಿಗ, ಕೊಟ್ಟಿಗ, ಹುಂಜ, ಗಿಳಿ, ಪಾರಿವಾಳ, ಗಿಡಗ ಮೊದಲಾದ ಪಕ್ಷಿಗಳನ್ನು ಪಂಜರದಲ್ಲಿಟ್ಟು ಪಾಲನೆ ಮಾಡಬಾರದು. ಅದೆಷ್ಟೋ ಅಧಿಕ ಪಾಪದ ಉಪಕರಣಗಳನ್ನು ಮನೆಯಲ್ಲಿ ಕೂಡ ಇಡಬಾರದು. **ಹಿಂಸೆಯ ಉಪಕರಣಗಳನ್ನು ಮನೆಯಲ್ಲಿ ಇಟ್ಟರೆ ಕೇವಲ ಅವನ್ನು ನೋಡುತ್ತಿದ್ದಂತೆ ಪರಿಣಾಮವು ಕೆಟ್ಟು ಹೋಗುತ್ತದೆ.**

**ನಿಂದ್ಯ ವ್ಯಾಪಾರವು ಕೂಡ ಮಹಾಪಾಪದ ಕಾರಣವಿದೆ.** ಅದರಲ್ಲಿ ಎಷ್ಟೇ ಲಾಭವಾಗುತ್ತಿದ್ದರೂ ಕೂಡ ಪಾಪದಿಂದ ಭಯಗೊಂಡು ಅದರ ತ್ಯಾಗ ಮಾಡಿ ಬಿಡಬೇಕು. ಲೋಹ, ಮೇಣ, ಲವಣ, ಕ್ಷೌರ, ಕಟ್ಟಿಗೆ, ಸಬಕಾರ, ಅರಗು, ಚರ್ಮ, ಉಣ್ಣೆ, ಕುಸುಬೆ, ಬೆಲ್ಲ, ಕಾಕಂಬಿ, ಅನ್ನ, ಅಕ್ಕಿ, ಶಸ್ತ್ರ ಮದ್ಯ, ಮದ್ದು, ಗುಂಡು, ಗಾಜು, ಆಯುಧ, ಈರುಳ್ಳಿ, ಬೆಳ್ಳುಳ್ಳಿ, ಗಜ್ಜರಿ, ಗೆಣಸು, ಆಲೂಗಡ್ಡೆ ಮತ್ತು ತುಪ್ಪ, ಎಣ್ಣೆ, ಮಾವಿನಹಣ್ಣು, ನಿಂಬೇಹಣ್ಣು ಇವೇ ಮೊದಲಾದ ವನಸ್ಪತಿಕಾಯ, ಗಾಂಜ, ತಂಬಾಕು, ಜರ್ದಾ, ನಸ್ಯ, ಬೀಡಿ, ಎಳ್ಳು, ಹಿಂಡಿ, ಪಂಜರ, ಶೂಲ, ಮೊಟ್ಟೆ, ದಾಸ, ದಾಸೀ, ಕುದುರೆ, ಒಂಟೆ, ಎತ್ತು, ಎಮ್ಮೆ, ಕೋಣ, ಚಕ್ಕಡಿ, ಬಂಡಿ (ಬಸ್, ಮೋಟಾರ,ಟ್ರಕ್) ಇವೇ ಮೊದಲಾದುವನ್ನು

ಕೊಳ್ಳುವಲ್ಲಿ, ಕೊಡುವಲ್ಲಿ, ಸಂಗ್ರಹ ಮಾಡುವಲ್ಲಿ ಮಹಾಹಿಂಸೆಯಾಗುತ್ತಿರುವುದರಿಂದ ಇವುಗಳ ವ್ಯಾಪಾರವನ್ನು ಬಿಟ್ಟು ಕೊಡಬೇಕಾಗುವುದು. ಎಲ್ಲವುಗಳ ತ್ಯಾಗವಾಗುವ ಸಾಧ್ಯತೆಯಿಲ್ಲದಿದ್ದರೆ ಇವುಗಳಲ್ಲಿ ಮಹಾ ಪಾಪವಿದೆಯೆಂದು ತಿಳಿದುಕೊಂಡು ಧಾನ್ಯ ಮೊದಲಾದವುಗಳಲ್ಲಿ ಯಾವವನ್ನು ಸ್ವಲ್ಪ ಸಂಗ್ರಹ ಮಾಡಬೇಕೆಂಬುದನ್ನು ಯೋಚಿಸಿ, ಉಳಿದೆಲ್ಲವುಗಳ ತ್ಯಾಗವನ್ನೇ ಮಾಡಿಬಿಡಬೇಕಾಗುವುದು.

**ಅದೆಷ್ಟೋ ದೋಷಯುಕ್ತ ಜೀವನೋಪಾಯಗಳು ಮಹಾಪಾಪದ ಬಂಧ ಮಾಡಿಸಿ ದುರ್ಗತಿಗಳಲ್ಲಿ ತೆಗೆದುಕೊಂಡು ಹೋಗುವಂಥವುಗಳಿವೆ.** ಅವುಗಳನ್ನಂತೂ ಬಿಟ್ಟೇ ಬಿಡಬೇಕಾಗುವುದು. ಹೇಗೆಂದರೆ ನಗರ ರಕ್ಷಕನಾಗುವುದು, ನಗರ-ರಕ್ಷಕನ ಸಹಾಯಕನಾಗುವುದು, ವನವನ್ನು ಕತ್ತರಿಸಿ ಹಾಕಿಸುವುದು, ಗಾಡಿ-ಚಕ್ಕಡಿ (ಟ್ರಕ್, ಮೋಟಾರು, ಬಸ್ಸು, ಟ್ರ್ಯಾಕ್ಟರ) ಮೊದಲಾದುವನ್ನು ಬಾಡಿಗೆಗೆ ಕೊಡುವುದು, ಸ್ವಯಂ ನಡೆಸುವದು; ಒಂಟೆ, ಎತ್ತು, ಕುದುರೆಗಳನ್ನು ಬಾಡಿಗೆಯಿಂದ ಕೊಡುವುದು, ಒಂಟೆ, ಎತ್ತು, ಗಾಡಿಗಳನ್ನು ಬಾಡಿಗೆಯ ಮೇಲೆ ಕೊಡುವುದರ ದಲಾಲಿ ಮಾಡುವದು. ದಾಲಾಲನು ಯಾವುದರ ಹೆಗಲು ನೋವಾಗಿದೆ, ಮೂಗು ಹರಿದು ಹೋಗಿದೆ, ಬೆನ್ನು ಕೆತ್ತಿ ಹೋಗಿದೆ, ಕಾಲುಗಳು ನೋಯುತ್ತಿವೆ, ಯಾವುದರ ಮೈಯಲ್ಲಿ ಹುಳುಬಿದ್ದಿವೆ, ವೃದ್ಧವಾಗಿದೆ, ರೋಗಿಯಾಗಿದೆಯೆಂಬುದರ ವಿಚಾರವನ್ನೇ ಆ ದಲಾಲನು ಮಾಡುವುದಿಲ್ಲ, ಮಳೆಗಾಲದಲ್ಲಿ ಕೂಡ ಬಹಳಷ್ಟು ಭಾರ ಹೇರಲು ಕೊಡುತ್ತಾನೆ. ಈತನ ಬಾಡಿಗೆಯ ಆಜೀವಿಕೆ ಮತ್ತು ಬಾಡಿಗೆಯ ದಲಾಲಿ ಇವೆರಡೂ ಕಾರ್ಯಗಳು ಮಹಾಪಾಪರೂಪಗಳಿವೆ.

ಲೋಭದ ವಶವರ್ತಿಯಾಗಿ ವೃದ್ಧನ ಮದುವೆಯ ನಿಶ್ಚಿತಾರ್ಥ ಮಾಡಬಾರದು. ದೊರೆಯ ತೆರಿಗೆಯನ್ನು ಕದಿಯಬಾರದು. ಅನ್ಯ ಅಪರಾಧಿಯ ಚಾಡಿಹೇಳುವ, ಸುಳ್ಳು ಸಾಕ್ಷ್ಯ ಹೇಳುವ ಸಾಕ್ಷೀದಾರನಾಗುವ, **ವೈದ್ಯಕೀಯದ ಆಜೀವಿಕೆ ಮಾಡಬೇಡಿರಿ.** ಮಂತ್ರ-ತಂತ್ರ, ಭೂತ, ಪಿಶಾಚಿ, ಡಾಕಿನಿಯ ಉಪಾಯ ಮಾಡುವ, ರಸಾಯನಾದಿಗಳ ಧೂರ್ತತೆಯನ್ನು ತೋರಿಸಿ ಮೋಸಮಾಡುವ ಆಜೀವಿಕೆ ಮಾಡಬೇಡಿರಿ. ಇವೆಲ್ಲವು ದುರ್ಗತಿಗೆ ತೆಗೆದುಕೊಂಡು ಹೋಗುವಂಥವುಗಳಿವೆ.

ಕಟ್ಟಿಗೆ ಮಾರುವಂಥ, ಮದ್ಯ ಮಾರುವಂಥ, ದಲಾಲ, ಕಟುಕ, ಮಡಿವಾಳ, ಚರ್ಮಕಾರ, ಇಟ್ಟಿಗೆ-ಸುಣ್ಣ ತಯಾರಿಸುವಂಥ, ಜೂಜುಗಾರ, ಹುಲ್ಲುಮಾರುವವ, ಹುಲ್ಲುಕೊಯ್ಯುವಂಥವರಿಗೆ ಬಡ್ಡಿಯಿಂದ ಹಣ ಕೊಡಬಾರದು. **ಮಾಂಸ ಭಕ್ಷಕರಿಗೆ, ವೇಶ್ಯೆಯರಿಗೆ, ನಿಂದ್ಯಪಾಪದ ಆಜೀವಿಕೆ ಮಾಡುವವರಿಗೆ ಬಡ್ಡಿಯಿಂದ ರೂಪಾಯಿ ಕೊಡಬಾರದು. ಇಂಥವರಿಗೆ ತಮ್ಮ ಮನೆಯನ್ನು ಬಾಡಿಗೆಯಿಂದ ಕೊಡಬಾರದು.**

**ಅಪಧ್ಯಾನ ತ್ಯಾಗ :** ಅಶುಭ ಪರಿಣಾಮದ ಧಾರಕನಾದ ಕುಮಾರ್ಗಿ, ಮಾಂಸಭಕ್ಷಕ, ಮದ್ಯಕುಡುಕ, ವೇಶ್ಯೆಯರಲ್ಲಿ ಆಸಕ್ತ, ಪರಸ್ತ್ರೀ ಲಂಬಟ, ಅಧರ್ಮೀ ಜೀವರುಗಳ ಜತೆ ಮಿತ್ರತೆ, ಪ್ರೀತಿ ಮಾಡುವುದರದೂ ತ್ಯಾಗ ಮಾಡಬೇಕು. **ಇತರರ ಧನ-ಸಂಪದಗಳ ಇಚ್ಛೆ ಮಾಡಬಾರದು. ಇತರರ ಸಂಪತ್ತು ಕಂಡು ಆಶ್ಚರ್ಯಪಡಬಾರದು.** ತಮ್ಮ ದೀನತೆಯ ಚಿಂತನೆ ಮಾಡಬಾರದು. ಅನ್ಯರ ಸ್ತ್ರೀಯರನ್ನು ನೋಡುವ ಅಭಿಲಾಷೆ ಮಾಡಬಾರದು. ಅನ್ಯ ಮನುಷ್ಯ ತಿರ್ಯಂಚಗಳ ಕಲಹವನ್ನು ನೋಡಬಾರದು. ಅನ್ಯರ ಸ್ತ್ರೀಯ, ಪುತ್ರನ ವಿಯೋಗವಾಗುವ ಭಾವನೆ ಭಾವಿಸಬಾರದು. **ಪರರ ಅವಮಾನ, ಅಪಯಶ, ಅಪವಾದ ಕೇಳಿ ಹರ್ಷಿತರಾಗಬಾರದು.** ಅನ್ಯರ ಲಾಭಕಂಡು ವಿಷಾದಪಡಬಾರದು. ಅನ್ಯರ ಸ್ವಾದಿಷ್ಟ ಭೋಜನ, ಆಭರಣಗಳನ್ನು ನೋಡಿ ತಮ್ಮ ಪರಿಣಾಮದಲ್ಲಿ ದುಃಖಿಪಡಬಾರದು. ತಮಗೆ ದಾರಿದ್ರ್ಯ, ವಿಯೋಗ, ರೋಗ ಮೊದಲಾದವುಗಳಾದ ಮೇಲೆ ಆರ್ತ ಪರಿಣಾಮ ಮಾಡಿ ದುಃಖಿಗಳಾಗಬಾರದು. **ಶ್ರೀಮಂತರುಗಳೊಡನೆ ಈರ್ಷೆ ಮಾಡಬಾರದು.**

ಸಿಂಹ, ಹುಲಿ, ಸರ್ಪ ಮೊದಲಾದವುಗಳ ಬೇಟೆಯ ಸಂಬಂಧದಲ್ಲಿ ಚಿಂತನೆ ಮಾಡಬಾರದು. ಸಂಗ್ರಾಮದಲ್ಲಿ ಯಾವ ಜಯ-ಪರಾಜಯಗಳ ಇಚ್ಛೆ ಮಾಡಬಾರದು. ಇತರರ ಸ್ತ್ರೀಯ ಜತೆಯಲ್ಲಿ ಮಾತುಕತೆ ಮಾಡುವ ಇಚ್ಛೆ ಮಾಡಬಾರದು. ವೇಶ್ಯೆಯರ ಹಾವ-ಭಾವ, ವಿಲಾಸ-ವಿಭ್ರಮಗಳನ್ನು ನೋಡುವ ಅಭಿಲಾಷೆ ಮಾಡಬಾರದು.

**ಬೈಗುಳ, ಅಶ್ಲೀಲ ವಚನವಿರುವ ಗೀತೆಯನ್ನು ಕೇಳಬಾರದು.** ಹುಸಿ ಮುನಿಸು, ಸೋಗು, ಕುತೂಹಲಗಳು ಪರಿಣಾಮವನ್ನು ಮಲಿನಮಾಡುವ ಕಾರಣಗಳಿರುವುದರಿಂದ ಅವನ್ನು ಕೇಳುವುದರಿಂದ ನೋಡುವುದರಿಂದ ದೂರವಿರಬೇಕು. **ದರಿದ್ರತೆಯು ಬಂದಮೇಲೆ ಕೂಡ ನೀಚ ಪ್ರವೃತ್ತಿಯಿಂದ ಆಜೀವಿಕೆ ಮಾಡಬಾರದು.** ಯಾರ ಹತ್ತಿರ ಯಾಚನೆ ಮಾಡಬಾರದು. ದೀನತೆಯ ವಚನ ಆಡಬಾರದು, ನಿರ್ಧನತೆಯಾದ ಮೇಲೆ ಕೂಡ ಪ್ರವೃತ್ತಿಯನ್ನು ವಿಕಾರರೂಪ ಮಾಡಬಾರದು. ನೀಚಕುಲದವರು ಮಾಡಲು ಯೋಗ್ಯವಾದ ಬಟ್ಟೆಗೆ ಬಣ್ಣ ಹಾಕುವ, ತೊಳೆಯುವ ಇತ್ಯಾದಿ ನಿಂದ್ಯ ಕಾರ್ಯಗಳ ತ್ಯಾಗವನ್ನಂತೂ ಅವಶ್ಯವಾಗಿ ಮಾಡಲೇಬೇಕು.

ಜಿನಾಲಯ ಮೊದಲಾದ ಧರ್ಮಸ್ಥಾನಗಳಲ್ಲಿ ಸ್ತ್ರೀಯರ ಕಥೆ, ರಾಜಕಥೆ, ಚೋರಕಥೆ, ದೇಶಕಥೆ, ಭೋಜನ ಕಥೆ ಮೊದಲಾದ ಮಹಾಪಾಪ ಬಂಧ ಮಾಡುವಂಥ ಕಥೆಯನ್ನೆಂದೂ ಆಡಬಾರದು. **ಕೊಡ-ಕೊಳ್ಳುವ, ಮದುವೆ ನಿಶ್ಚಿತಾರ್ಥದ ಜಗಳ, ನ್ಯಾಯ ಪಂಚಾಯತಿ, ಜಾತಿ-ಕುಲದ ವಿಸಂವಾದಗಳನ್ನು ಜಿನಮಂದಿರದಲ್ಲಿ ಕುಳಿತುಕೊಂಡು ಎಂದೂ ಮಾಡಬಾರದು. ಮಂದಿರದಲ್ಲಿ ಕುಳಿತುಕೊಂಡು ವಿಕಥೆಯನ್ನಾಡಿದರೆ ಧರ್ಮಸ್ಥಾನದ ಮರ್ಯಾದೆ ಮುರಿದ ಕಾರಣ ನರಕ-ನಿಗೋದಗಳಿಗೆ ಕಾರಣವಾಗುವಂಥ ಘೋರ ಪಾಪಕರ್ಮದ ಬಂಧವಾಗುವುದು.** ಆದುದರಿಂದ ಮಂದಿರ ಹಾಗೂ ದೇವಸ್ಥಾನಗಳಲ್ಲಿ ಪಾಪದ ಬಂಧ ಮಾಡಿಸುವಂಥ ಕಾರ್ಯಗಳನ್ನು ದೂರದಿಂದಲೇ ತ್ಯಾಗ ಮಾಡಿಬಿಡಬೇಕಾಗುವುದು. ಜಿನಮಂದಿರದಲ್ಲಿ ಊಟ, ತಿಂಡಿ, ತಾಂಬೂಲ, ಗಂಧ, ಪುಷ್ಪ, ವಿಷಯ ಮೊದಲಾದ, ಮಲಗುವ, ಉಚ್ಚಾಸನದ ಮೇಲೆ ಕೂಡ್ರುವ, ವ್ಯಾಪಾರ, ಮದುವೆಯ-ನಿಶ್ಚಿತಾರ್ಥ, ಕಲಹ, ಬೈಗಳ ಮಾತು, ಹಾಸ್ಯದ ವಚನ, ಅವಿನಯ, ಆರಂಭದ ವಚನಗಳಲ್ಲಿ ಎಂದೂ ಪ್ರವರ್ತನೆ ಮಾಡಬಾರದು.

**ದುಃಶ್ರುತಿ ತ್ಯಾಗ :** ಮಿಥ್ಯಾಶ್ರುತದ ಶ್ರವಣ ಮಾಡಬಾರದು. ಯಾವವನ್ನು ಕೇಳುವುದರಿಂದ ವಿಷಯಗಳಲ್ಲಿ ರಾಗವು ಹೆಚ್ಚುವುದು, ಹಾಸ್ಯ, ಕೌತುಕಗಳು ಉತ್ಪನ್ನವಾಗುವವು, ಕಾಮವು ಜಾಗ್ರತವಾಗುವುದು, ಭೋಜನದ ಅನೇಕ ಸ್ವಾದಗಳಲ್ಲಿ ಚಿತ್ತವು ಹೊರಟು ಹೋಗುವಂಥ ಕಥನ ಕೇಳಬಾರದು. ಸ್ತ್ರೀ-ಪುರುಷರ ಪಾಪರೂಪ ಚರಿತ್ರದ ಕಥೆ, ಭೂತ-ಪ್ರೇತಗಳ ಅಸತ್ಯ ಕಥೆ, ಹಿಂಸೆಯ ಮುಖ್ಯತೆಯಿರುವ ವೇದ-ಸ್ಮೃತಿ ಮೊದಲಾದ ಅನ್ಯ ಗ್ರಂಥಗಳ ಕಥೆ, ಕಪೋಲ ಕಲ್ಪಿತ ಅನೇಕ ಕಥೆಗಳು, ಫಾರಸೀ ಪುಸ್ತಕಗಳಲ್ಲಿ ಬರೆದ ಅನೇಕ ಕಥೆಗಳು ಮಹಾಪಾಪ, ದುರ್ಧ್ಯಾನ ಮಾಡಿಸುವಂಥವುಗಳಿರುವುದರಿಂದ ಅವನ್ನು ಕೇಳಲೇಬಾರದು. ಮಹಾಭಾರತ, ರಾಮಾಯಣ ಮೊದಲಾದ ಹಿಂಸೆ ಹೆಚ್ಚಿಸುವಂಥ ಗ್ರಂಥಗಳ ಕಲ್ಪಿತ ಕಥೆಗಳನ್ನೆಂದೂ ಆಲಿಸಬಾರದು.

ಇದೇ ಪ್ರಕಾರ ಕಷಾಯಗಳನ್ನುತ್ಪನ್ನಮಾಡುವಂಥ ಕ್ರೋಧಿಗಳ ವಚನ, ಅಭಿಮಾನಿಗಳ ಅಭಿಮಾನ ತುಂಬಿದ ವಚನ, ಮಾಯಾಚಾರಿಗಳ ಕುಟಿಲವಚನ, ಲೋಭಿಗಳ ಲಾಲಸೆಯನ್ನುತ್ಪನ್ನಮಾಡುವಂಥ ವಚನ, ಮದ್ಯ-ಮಾಂಸ, ಅಭಕ್ಷ್ಯ ಸ್ವಾದದ ಪ್ರಶಂಸೆ ಮಾಡುವಂಥವರ ವಚನ, ಅಮಲೇರಿಸುವಂಥ ಮದ್ಯ-ಗಾಂಜ-ತಂಬಾಕು-ಗುಡಗುಡಿಯ ಪ್ರಶಂಸೆ ಮಾಡುವಂಥವರ ವಚನಗಳನ್ನೆಂದೂ ಕೇಳಲೇಬಾರದು. ಧರ್ಮದ ಅಭಾವ ಮಾಡುವಂಥ, ಪರಲೋಕ ಮೊದಲಾದವುಗಳ ಅಭಾವವನ್ನು ಹೇಳುವಂಥ ನಾಸ್ತಿಕರ ವಚನಗಳು ಪಾಪಬಂಧದ ಕಾರಣಗಳಿರುವುದರಿಂದ ಅವನ್ನು ಕೇಳಲೇಕೂಡದು.

**ಅನರ್ಗಲ ಪ್ರವೃತ್ತಿಯ ತ್ಯಾಗ :** ವ್ಯರ್ಥವಾದ ಆರಂಭ ವಿಸಂವಾದಗಳನ್ನು ಬಿಟ್ಟು ಕೊಡಬೇಕಾಗುವುದು. ಮಣ್ಣು, ಕಸಕಡ್ಡಿ, ಕೆಸರು, ಮುಳ್ಳು, ಮಡಿಕೆಯ ಚೂರು, ಮಲ, ಮೂತ್ರ, ಕಫ, ಉಚ್ಛಿಷ್ಟ, ನೀರು, ಬೆಂಕಿ, ದೀವಿಗೆ ಇವೇ ಮೊದಲಾದುವನ್ನು ನೆಲವನ್ನು ನೋಡದೇ ಎಸೆಯಬಾರದು. ಅವಸರದಿಂದ ಪಾಷಾಣ, ಕಟ್ಟಿಗೆ, ಆಸನ, ಶಯ್ಯೆ, ಮಂಚ, ಧಾತುವಿನ ಪಾತ್ರೆಗಳು, ತಟ್ಟೆ, ಪರಾತ, ಲೋಟ, ಮಣೆ, ಬಟ್ಟೆ ಮೊದಲಾದುವನ್ನು ನೆಲದ ಮೇಲಿಂದ ಸರಿಸುವಾಗ ಪ್ರಮಾದದಿಂದ ಅವುಗಳ ಮೇಲೆ ಭಾರ ಹಾಕಿ ಸರಿಸಬಾರದು. ಇದರಲ್ಲಿ ಯತ್ನಾಚಾರದ ಅಭಾವವಿದ್ದು ಇದರಿಂದ ಬಹಳಷ್ಟು ಜೀವಗಳ ಹಿಂಸೆಯಾಗುತ್ತದೆ. ಆದುದರಿಂದ ನೋಡಿ ಪ್ರಯತ್ನಪೂರ್ವಕ ಎತ್ತಿ ಇಡಬೇಕು ಯಾವುದೇ ಪ್ರಯೋಜನವಿಲ್ಲದೆ ನೆಲ ತಿಕ್ಕುವುದು, ವೃಕ್ಷದ ಚಿಕ್ಕ ರೆಂಬೆ ಮುರಿಯುವದು. ಎಳೆ ಹುಲ್ಲವನ್ನು ಕೀಳುವುದು, ಹುಲ್ಲಿನ

ಮೇಲೆ ಓಡಾಡುವುದು, ಮಲಗುವದು, ವೃಕ್ಷದ ಚಿಗುರೆಲೆ ಹೂವುಗಳನ್ನು ಸೀಳುವುದು, ಮುರಿಯುವುದು, ವ್ಯರ್ಥವಾಗಿ ನೀರು ಸೇಚನೆ ಮಾಡುವುದು ಇವೇ ಮೊದಲಾದ ಕಾರ್ಯಗಳನ್ನು ಪಾಪದ ಭಯದಿಂದ ಮಾಡಬಾರದು.

**ಹೆಚ್ಚಿಗೇನು ಹೇಳುವುದು** ಗೃಹಾಚರಣೆಯಲ್ಲಿ ಎಷ್ಟು ವಸ್ತುಗಳಿವೆ ಅವೆಲ್ಲವನ್ನು ನೋಡಿ ತೆಗೆದುಕೊಳ್ಳಬೇಕು ಮತ್ತು ಇಡಬೇಕು. ಅದರಿಂದ ಧರ್ಮವು ಕೆಡಬಾರದು ಮತ್ತು ಯಾವ ಜೀವಕ್ಕೂ ಹಾನಿಯಾಗದಂತೆ ನೋಡಿ ಕೊಳ್ಳಬೇಕು. ಪ್ರಮಾದವನ್ನು ಬಿಟ್ಟುಕೊಟ್ಟು ಭೋಜನ, ನೀರು, ಔಷಧ, ಮಿಷ್ಟಾನ್ನ ಮೊದಲಾದುವನ್ನು ಸ್ವಯಂ ತಮ್ಮ ಕಣ್ಣುಗಳಿಂದ ನೋಡಿ ಶೋಧಿಸಿ ತಿನ್ನಬೇಕು. ಅವಸರದಿಂದ, ಪ್ರಮಾದಿಯಾಗಿ ಶೋಧಿಸದೇ ಭೋಜನ ಮಾಡಬಾರದು. ಗಮನದಲ್ಲಿ, ಆಗಮದಲ್ಲಿ, ಏಳುವಲ್ಲಿ, ಕೂಡ್ರುವಲ್ಲಿ ನೋಡದೆ ಶೋಧಿಸದೆ ಪ್ರವರ್ತನೆ ಮಾಡಬಾರದು, ಅದರಿಂದ ದಯೆಯ ಪಾಲನೆಯಾಗಬೇಕು ಮತ್ತು ತನ್ನ ಶರೀರಕ್ಕೆ ಬಾಧೆಯಾಗಬಾರದು, ಹಾನಿಯಾಗಬಾರದು, ಯಾರದೂ ಅನಾದರವಾಗಬಾರದು.

**ಪ್ರಮಾದಿಯಾಗಿ ಹಿತಾಹಿತದ ವಿಚಾರ ಮಾಡದೆ, ಸುಪಾತ್ರ-ಕುಪಾತ್ರದ ವಿಚಾರ ಮಾಡದೆ ಯಾರಿಗೂ ಯಾವ ಮಾತನ್ನು ಹೇಳಬಾರದು. ಹೇಳುವಾಗ ಗುಣ-ದೋಷದ ವಿಚಾರ ಮಾಡಿ ಹೇಳಬೇಕು.** ಯಾರಾದರೂ ತಮ್ಮನ್ನು ಕೇಳಿದರೆ ಅವಸರದಿಂದ ಉತ್ತರ ಕೊಡಬಾರದು, ನಾನು ತಿಳಿದುಕೊಂಡು ವಿಚಾರ ಮಾಡಿ ತಮಗೆ ಹೇಳುತ್ತೇನೆಂದು ತಿಳಿಸಬೇಕು. ಅನಂತರ ಸಮಯ ನೋಡಿ ಧರ್ಮ-ಅರ್ಥ-ಕಾಮದಿಂದ ಅವಿರುದ್ಧವಾಗಿ ವಿಚಾರಮಾಡಿ ವಿನಯದೊಡನೆ ಉತ್ತರಿಸಬೇಕು. ಅವಸರದಿಂದ ಉತ್ತರಿಸುವ ಸಮಯದಲ್ಲಿ ಕ್ರೋಧ, ಮಾನ, ಮಾಯೆ, ಲೋಭದ ವಶದಿಂದ ಏನು ಹೇಳಬೇಕೆಂಬುದರ ವಿಚಾರ ಉಳಿಯುವುದಿಲ್ಲ. ಕಷಾಯದ ಆವೇಶದಲ್ಲಿ ಯೋಗ್ಯ-ಅಯೋಗ್ಯ ಹೇಳುವುದರ ವಿಚಾರ ಉಳಿಯುವುದಿಲ್ಲ; ಇತರರ ಮಾತನ್ನು ಪೂರ್ಣವಾಗಿ ಕೇಳಿ ಮತ್ತು ಹೇಳುವವರ ಸಂಪೂರ್ಣ ಅಭಿಪ್ರಾಯವನ್ನು ತಿಳಿದುಕೊಂಡೇ ಉತ್ತರ ಕೊಡುವುದು ಉಚಿತವಿದೆ.

ಅದಕ್ಕಾಗಿ ಪ್ರಮಾದದಿಂದ ಅಸಾವಧಾನದಿಂದ ವಚನಗಳನ್ನಾಡಬಾರದು. ಏಕಾಂತರೂಪ, ಹಟಾಗ್ರಹಿ, ಪಕ್ಷಪಾತಿಯಾಗಬಾರದು. ಇದರಿಂದ ಧರ್ಮವು ಕೆಟ್ಟು ಹೋಗುವುದು. ಆದುದರಿಂದ ಉಭಯ ಜನರುಗಳ ಹಿತದ ಸಲುವಾಗಿ ಪ್ರಮಾದಚರ್ಯೆ ಅನರ್ಥದಂಡಗಳನ್ನು ಬಿಡಬೇಕು. ಈ ರೀತಿಯಾಗಿ ಐದು ಪ್ರಕಾರ ಅನರ್ಥ ದಂಡಗಳನ್ನು ತಿಳಿದುಕೊಂಡು ಅವುಗಳ ತ್ಯಾಗ ಮಾಡುವವನಿಗೆ ಅನರ್ಥದಂಡ ತ್ಯಾಗವೆಂಬ ಹೆಸರಿನ ವ್ರತವಾಗುತ್ತದೆ.

**ಜೂಜು ತ್ಯಾಗ : ಅನರ್ಥದಂಡಗಳಲ್ಲಿ ಮಹಾ ಅನರ್ಥ ಮಾಡುವಂಥದು ಜೂಜು ಇದೆ.** ಜೂಜು ಸಮಸ್ತ ವ್ಯಸನಗಳಲ್ಲಿ ಮುಖ್ಯವಿದೆ, ಸಮಸ್ತ ಪಾಪಗಳ ಸಂಕೇತ ಸ್ಥಾನವಿದೆ, ಮಹಾನ ವಿಪತ್ತದ ಕಾರಣವಿದೆ, ಸಮಸ್ತ ಅನೀತಿಗಳಲ್ಲಿ ಮಹಾ ಅನೀತಿಯಿದೆ. ಜೂಜುಗಾರನ ಪರಿಣಾಮವೇ ಮಹಾ ದುಷ್ಟವಿರುತ್ತದೆ. ಅವನು ತನ್ನ ಸಮಸ್ತ ಮನೆ, ಸಂಪತ್ತುಗಳನ್ನು ಜೂಜಿನಲ್ಲಿ ಸೋತು ಕೂಡ ಇತರರ ಧನ ಪಡೆಯಲಪೇಕ್ಷಿಸುತ್ತಾನೆ. ಜೂಜುಗಾರನಿಗೆ ಎಷ್ಟು ಅಧಿಕ ಲೋಭವಿರುತ್ತದೆಯೆಂದರೆ ಅವನು ''ಇತರರ ಧನವು ನನ್ನ ಹತ್ತಿರ ಬರಲೇ ಬೇಕು!'' ಅದರ ಸಲುವಾಗಿ ಏನು ಬೇಕಾದರೂ ಆಗಲಿ, ನನ್ನ ಧನವು ಹೋಗುತ್ತಿದ್ದರೆ ಹೋಗಲಿ, ಅಪಯಶವು ಬರುತ್ತಿದ್ದರೆ ಬರಲಿ, ದರಿದ್ರತೆ ಬರುತ್ತಿದ್ದರೆ ಬರಲಿ, ಯಾವುದೇ ಪ್ರಕಾರದಿಂದ ನಾನು ಇತರರ ಧನವನ್ನು ಗೆದ್ದುಕೊಂಡಾಗಲೇ ನಾನು ಜೀವಂತವಾಗಿರುವಿಕೆಗೆ ಸಾರ್ಥಕತೆಯಿದೆಯೆಂಬ ವಿಚಾರವನ್ನು ಯಾವಾಗಲೂ ಮಾಡುತ್ತಿರುತ್ತಾನೆ.

**ಲೋಭಕಷಾಯದ ತೀವ್ರತೆಯು ಮಹಾಹಿಂಸೆಯಿದೆ.** ಜೂಜುಗಾರನ ಪರಿಣಾಮವು ಅತ್ಯಂತ ನಿರ್ದಯವಿರುತ್ತದೆ. ಅವನು ಯಾವಾಗಲೂ ಇತರರ ಘಾತ ಮಾಡುವುದನ್ನೇ ಯೋಚಿಸುತ್ತಾನೆ. ಜೂಜಿನಲ್ಲಿ ಧನ ಕಳೆದುಕೊಂಡರೆ ಕಳವು ಮಾಡುತ್ತಾನೆ, ಧನದ ಸಲುವಾಗಿ ಜನರನ್ನು ಕೊಂದುಹಾಕುತ್ತಾನೆ. ಜೂಜುಗಾರರಲ್ಲಿ ತಮ್ಮ-ತಮ್ಮೊಳಗೆ ಬಹಳಷ್ಟು ಜಗಳವಾಗುತ್ತದೆ, ಹೊಡೆದಾಟವಾಗುತ್ತದೆ, ಮಾಯಾಚಾರವಂತೂ ಇದ್ದೇ ಇರುತ್ತದೆ. ಯಾರೊಡನೆ ಅಧಿಕ ಪ್ರೀತಿಯಿರುತ್ತದೆ. ಅವರೊಡನೆ ಕೂಡ ಹೆಚ್ಚು ಕಪಟ ಮಾಡಿ, ಅನೇಕ ಪ್ರಕಾರದಿಂದ ಮೋಸ ಮಾಡಿ ಧನ ಪಡೆಯಲಪೇಕ್ಷಿಸುತ್ತಾನೆ. **ಜೂಜಂತೂ ಕಪಟದ ಸ್ಥಾನವೇ ಇದೆ.** ಸಾವಿರಾರು ಸೋಗು ರಚಿಸಲಾಗುತ್ತದೆ. ಜೂಜುಗಾರನು

ತನ್ನ ಸ್ತ್ರೀಯನ್ನು ಕೂಡ ಜೂಜಿನಲ್ಲಿ ಪಂದ್ಯಕ್ಕೆ ಹಚ್ಚುತ್ತಾನೆ, ಮಗ-ಮಗಳನ್ನು ಕೂಡ ಪಂದ್ಯಕ್ಕೆ ಹಚ್ಚುತ್ತಾನೆ. ಪತ್ನಿಯನ್ನು ಸೋತು ಹೋದರೆ, ಮಗಳನ್ನು ಸೋತು ಹೋದರೆ ಅವರನ್ನು ಗೆದ್ದುಕೊಂಡ ಜೂಜುಗಾರರಿಗೆ ಕೊಟ್ಟು ಬಿಡುತ್ತಾನೆ.

**ಜೂಜುಗಾರನು ದರಿದ್ರ-ವ್ಯಸನಿಗೂ ಕೂಡ ತನ್ನ ಮಗಳನ್ನು ಮದುವೆ ಮಾಡಿ ಕೊಡುತ್ತಾನೆ.** ಜೂಜಿನಲ್ಲಿ ತನ್ನ ವಾಸದ ಮನೆಯನ್ನು ಮಾರಿಬಿಡುತ್ತಾನೆ. ಪಂದ್ಯಕ್ಕೆ ಹಚ್ಚಿ ಬಿಡುತ್ತಾನೆ, ಮಗನನ್ನು ಕೂಡ ಮಾರಿ ಬಿಡುತ್ತಾನೆ. ಲಕ್ಷಾಂತರ ಧನದ ಅಧಿಪತಿಯು ಒಂದು ಕ್ಷಣಮಾತ್ರದಲ್ಲಿ ತನ್ನ ಸಮಸ್ತ ಧನವನ್ನು ಸೋತು ಬಿಟ್ಟು ದರಿದ್ರನಾಗಿ ಹೋಗುತ್ತಾನೆ, ಮತ್ತು ಮಹಾ ಆರ್ತಧ್ಯಾನ ರೌದ್ರಧ್ಯಾನದಿಂದ ಸತ್ತು ದುರ್ಗತಿಗಳಲ್ಲಿ ಭ್ರಮಣಮಾಡುತ್ತಾನೆ. ಒಂದು ವೇಳೆ ಜೂಜಿನಲ್ಲಿ ಧನ ಗೆದ್ದುಕೊಂಡು ತಂದನೆಂದರೆ ಅಭಿಮಾನವು ಜಾಗೃತವಾಗಿ ಬಿಡುತ್ತದೆ, ಅವನ ಧನವು ಕುಮಾರ್ಗದಲ್ಲಿಯೇ ಖರ್ಚಾಗಿ ಹೋಗುತ್ತದೆ. ಮಹಾರೌದ್ರ ಧ್ಯಾನದ ಪ್ರಭಾವದಿಂದ ಸತ್ತು ಮಹಾ ಕುಯೋನಿಗಳಲ್ಲಿ ಜನಿಸಿ, ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಿರುತ್ತಾನೆ.

ಜೂಜುಗಾರನು ಮದ್ಯಪಾನ-ಗಾಂಜ ಸೇದುವುದು ಮೊದಲಾದುವನ್ನೂ ಮಾಡುತ್ತಾನೆ, ವೇಶ್ಯೆಯರಲ್ಲಿ ಆಸಕ್ತನಾಗಿ ಹೋಗುತ್ತಾನೆ. ಅವನ ಧನವು ಸುಮಾರ್ಗದಲ್ಲಿ ಖರ್ಚಾಗುವುದಿಲ್ಲ. ಅವನಿಂದ ನ್ಯಾಯರೂಪವಾಗಿ ಯಾವುದೇ ಆಜೀವಿಕೆಯಾಗುವ ಸಾಧ್ಯತೆಯಿಲ್ಲ. ಜೂಜುಗಾರನ ಮೇಲೆ ಯಾರೂ ವಿಶ್ವಾಸವಿಡುವುದಿಲ್ಲ, ಅವನಿಗೆ ಯಾರೂ ಕೈಗಡ ಹಣ ಕೊಡುವುದಿಲ್ಲ. ಜೂಜುಗಾರನು ಎಂದೂ ಸತ್ಯವಚನಗಳನ್ನಾಡುವುದಿಲ್ಲ; ಜೂಜುಗಾರನಿಗೆ ಶುಭ ಭಾವಗಳಾಗುವುದಿಲ್ಲ. ತನ್ನ ಪೂರ್ವೋಪಾರ್ಜಿತ ಕರ್ಮದ ಮುಖಾಂತರ ಕೊಡಲ್ಪಟ್ಟ ನ್ಯಾಯದ ಧನದಲ್ಲಿ ಅವನೆಂದೂ ಸಂತೋಷಪಡುವುದಿಲ್ಲ. ಏಕಾಂತದಲ್ಲಿ ಯಾರಾದರೂ ಏಕಾಕಿಯಾಗಿರುವುದನ್ನು ನೋಡಿದರೆ ಅವನನ್ನು ಕೊಂದು ಧನವನ್ನು ಕಿತ್ತುಕೊಂಡು ಹೋಗುತ್ತಾನೆ. ತನಗೆ ಅತ್ಯಂತ ಸಮೀಪದ ಆತ್ಮೀಯ ಬಂಧುವಾಗಿರಲಿ, ಅವನನ್ನು ಕೂಡ ಏಕಾಂತದಲ್ಲಿ ಕೊಂದು ಹಾಕಿ ವಸ್ತು ಒಡವೆ ಮೊದಲಾದುವನ್ನು ತೆಗೆದುಕೊಂಡು ಹೋಗುತ್ತಾನೆ.

**ಜೂಜುಗಾರನ ಮೇಲೆ ಯಾವ ಮೂರ್ಖನು ಕೂಡ ವಿಶ್ವಾಸ ಮಾಡುವುದಿಲ್ಲ,** ಅವನು ಇತರರ ಧನದ ಅತ್ಯಂತ ತೀವ್ರ ತೃಷ್ಣೆಯ ವಶನಾಗಿ ಕುದೇವಗಳ ಹರಾಜನ್ನೂ ಮಾಡುತ್ತಾನೆ, ಮಿಥ್ಯಾಧರ್ಮದ ಸೇವನೆಯನ್ನೂ ಮಾಡುತ್ತಾನೆ; ಸಂತೋಷ, ಶೀಲ, ನಿರಾಕುಲತೆಗೆ ತಿಲಾಂಜಲಿ ಕೊಡುತ್ತಾನೆ. ಅತಿ ಲೋಭದ ಪರಿಣಾಮದಿಂದ ಬುದ್ಧಿಯು ವಿಪರೀತವಾಗಿ ಹೋಗುತ್ತದೆ. ಅವನಲ್ಲಿ ಪರಮಾರ್ಥದ ಜ್ಞಾನವಿರುವುದಿಲ್ಲ. ಅವನಿಗೆ ಸ್ವಪ್ನದಲ್ಲಿ ಕೂಡ ಧರ್ಮದ ಮೇಲೆ ವಿಶ್ವಾಸವಾಗುವುದಿಲ್ಲ.

**''ಸಮಸ್ತ ಪಾಪಗಳ ಮೂಲ ಕಾರಣವು ಜೂಜುವಿದೆ''**ಯೆಂದು ತಿಳಿದುಕೊಂಡು ದೂರದಿಂದಲೇ ಅದರ ತ್ಯಾಗ ಮಾಡಬೇಕು. ಜೂಜುಗಾರನ ಬುದ್ಧಿಯು ಕೋಟ್ಯಂತರ ಉಪಾಯ ಮಾಡಿದರೂ ಕೂಡ ವಿಪರೀತತೆಯನ್ನು ಬಿಡುವುದಿಲ್ಲ. ಅವನು ಪರಲೋಕದಲ್ಲಿ ದುರ್ಗತಿಯನ್ನೇ ಪಡೆಯುತ್ತಾನೆ. ಜೂಜುಗಾರನಂತೂ ತೀವ್ರ ಲೋಭದಿಂದ ತನ್ನ ಆತ್ಮನ ಘಾತವನ್ನೇ ಮಾಡುತ್ತಾನೆ.

ಅದೆಷ್ಟೋ ಅಜ್ಞಾನಿಗಳು ಜೂಜಿನಲ್ಲಿ ಧನದ ಸೋಲು-ಗೆಲವು ಮಾಡುವುದಿಲ್ಲ, ಆದರೆ ಮನುಷ್ಯ ಜನ್ಮವನ್ನೇ ವ್ಯರ್ಥವಾಗಿ ವ್ಯತೀತ ಮಾಡುವ ಇಚ್ಛೆಯಿಂದ ಧನದಿಂದಂತೂ ಜೂಜು ಆಡುವುದಿಲ್ಲ, ಆಡುವ ಸಲುವಾಗಿ ಪಗಡೆ, ಚದುರಂಗ, ಗಂಜೀಫು ಮೊದಲಾದ ಅನೇಕ ಮೂರ್ಖತೆಯ ಕಾರ್ಯಮಾಡುತ್ತಾರೆ. ಈ ಆಟಗಳಲ್ಲಿ ಸೋಲು-ಗೆಲುವಿನಲ್ಲಿ ಕೂಡ ರಾಗ-ದ್ವೇಷದ ಅಧಿಕ ತೀವ್ರತೆಯಿದೆ, ಹರ್ಷ-ವಿಷಾದಗಳು ಹೆಚ್ಚು ಆಗುತ್ತವೆ. ಅಧಿಕ ಕಪಟ ಮಾಡುತ್ತಾರೆ. **ತಂದೆ-ಮಗನು ಕೂಡ ಪರಸ್ಪರದಲ್ಲಿ ವಿಸಂವಾದ, ಕಲಹ ಮಾಡತೊಡಗುತ್ತಾರೆ.** ಸೋಲು-ಗೆಲವುಗಳಿಂದ ಪರಿಣಾಮದಲ್ಲಿ ಮಹಾನ ತೀವ್ರತೆಯು ಬಂದು ಬಿಡುತ್ತದೆ.

ಈ ಆಟದಲ್ಲಿ ಆಸಕ್ತರಾಗಿ ಹೋಗುವವರಿಗೆ ಈ ಲೋಕದ ಸಂಬಂಧದಲ್ಲಿ ನೌಕರಿ, ವ್ಯಾಪಾರ, ಓದು-ಬರಹ ಇವೇ ಮೊದಲಾದ ಸಮಸ್ತ ಕಾರ್ಯಗಳು ಕೆಟ್ಟು ಹೋದರೂ ಕೂಡ ಅವರು ಇದನ್ನು ಬಿಟ್ಟು ಕೊಡುವುದಿಲ್ಲ. ಜೂಜು ಆಡುವವನು ಯಾವುದೇ ವ್ಯಾಪಾರ-ಉದ್ಯೋಗವನ್ನು ಮಾಡುವ ಸಾಧ್ಯತೆಯಿಲ್ಲ, ಅದರಿಂದ ದರಿದ್ರತೆಯು ಹತ್ತಿರದಲ್ಲಿ ಬರುತ್ತ ಹೋಗುತ್ತದೆ.

ಹೀನ, ನೀಚ, ಮಲಿನಜಾತಿಯ ಜನರ ಹತ್ತಿರದಲ್ಲಿ ಕುಳಿತುಕೊಂಡು ಜೂಜು ಆಡುತ್ತಾನೆ. ಜೂಜು ಆಡುವವನು ಇವನು ಮ್ಲೇಚ್ಛನಿದ್ದಾನೆ, ಕಟುಕನಿದ್ದಾನೆ, ನಾಪಿತನಿದ್ದಾನೆಂಬುದನ್ನು ನೋಡುವುದಿಲ್ಲ, ಎಲ್ಲರೂ ಜತೆಯಲ್ಲಿ ಕುಳಿತುಕೊಂಡೇ ಜೂಜು ಆಡುತ್ತಿರುವುದು ಪ್ರತ್ಯಕ್ಷ ಕಂಡು ಬರುತ್ತದೆ. ಯಾರ ಶರೀರದಿಂದ ದುರ್ಗಂಧ ಬರುತ್ತಿದೆ, ಬಟ್ಟೆ ಮೊದಲಾದುವಲ್ಲಿ ಹೇನಿನಂಥ ಕ್ರಿಮಿಗಳು ಹೊರಬರುತ್ತಲಿವೆ ಅಂಥವರ ಜತೆಯಲ್ಲಿ ಕುಳಿತುಕೊಂಡು ಜೂಜು ಆಡುತ್ತಾನೆ.

ಜೂಜು ಆಡಲು ಅನ್ಯ ಅಧರ್ಮದ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾನೆ, ಇತರರು ಆಡುತ್ತಿರುವುದನ್ನು ನೋಡಿ ತಾನು ಮಾರ್ಗದ ಮೇಲೆ ನಿಂತು ಬಿಡುತ್ತಾನೆ. ಅಲ್ಲಿ ಕುಳಿತುಕೊಳ್ಳಲು ಸ್ಥಾನವಿಲ್ಲದಿದ್ದರೂ ಕೂಡ ಹಾಗೇ ನಿಂತುಕೊಂಡೇ ನೋಡುತ್ತಿರುತ್ತಾನೆ. ಊಟ, ತಿಂಡಿ, ಕೊಡ-ಕೊಳ್ಳುವುದೆಲ್ಲವನ್ನು ಬಿಟ್ಟುಕೊಟ್ಟು ನಿಂತುಕೊಂಡೇ ನೋಡುತ್ತಿರುತ್ತಾನೆ. ಮಣಿಗಾರ, ಬಣ್ಣಗಾರ ಮೊದಲಾದ ಮಾಂಸಭಕ್ಷಕ ಮತ್ತು ನೀಚ ಜಾತಿಯ ಜನರ ಜತೆಯಲ್ಲಿ ಕುಳಿತುಕೊಂಡು ಜೂಜು ಮೊದಲಾದ ಆಟಗಳನ್ನು ಆಡುತ್ತಾನೆ, ನೋಡುತ್ತ ನಿಂತುಕೊಳ್ಳುತ್ತಾನೆ.

**ಹೆಚ್ಚಿಗೇನು ಹೇಳುವುದು,** ತನ್ನ ಎಲ್ಲ ಕಾರ್ಯಗಳು ಕೆಟ್ಟು ಹೋಗಲಿ, ಮತ್ತು ತಂದೆ-ತಾಯಿ ಮೊದಲಾದವರ ಮರಣವಾಗಿ ಹೋದರೂ ಕೂಡ ಆಡುವುದರಿಂದ ಬಿಟ್ಟು ಎದ್ದು ಹೋಗುವುದಿಲ್ಲ. ಇಂಥ ತೀವ್ರ ಪರಿಣಾಮದಿಂದ ನರಕ, ತಿರ್ಯಂಚಗಳ ಬಂಧವಾಗಿ ಹೋಗುತ್ತದೆ. ಯಾವುದರಿಂದ ಸ್ವಲ್ಪವೂ ಧನ ಸಿಗುವುದಿಲ್ಲ, ಆದರೆ ವಿಸಂವಾದವೇ ಆಗುತ್ತದೆ. ಅಂಥ ಜೂಜು ಮೊದಲಾದವುಗಳಲ್ಲಿ ಆಸಕ್ತರಾಗುವುದರಿಂದ ಧನದ ಸೋಲು-ಗೆಲವಾಗುವಂಥ ಜೂಜಿಗಿಂತಲೂ ಅಧಿಕ ಪಾಪದ ಬಂಧವಾಗುತ್ತದೆ. ಯಾವುದರಲ್ಲಿ ಧನದ ಸೋಲು-ಗೆಲವಾಗುತ್ತದೆ ಅದರಲ್ಲಂತೂ ಸ್ವಲ್ಪ ಸಮಯವೇ ಆಡುತ್ತಾನೆ, ಆದರೆ ಅವಿಲ್ಲದೆ ಧನದ ಸೋಲು-ಗೆಲುವುಳ್ಳ ಆಟಗಳಲ್ಲಂತೂ ಅವನ ಪರಿಣಾಮವು ಯಾವಾಗಲೂ ಮೋಸ ಹೋಗಿರುತ್ತದೆ. ಯಾರು ಆ ಆಟದಲ್ಲಿ -ವ್ಯಸನದಲ್ಲಿ ತೊಡಗಿ ಹೋಗುತ್ತಾರೆ ಅವರಿಗೆ ಧರ್ಮದ ಹೆಸರು ಕೂಡ ಒಳ್ಳೆಯದೆನಿಸುವುದಿಲ್ಲ. ಅವರ ಬುದ್ಧಿಯು ವಿಪರೀತವಾಗಿ ಪಾಪಕ್ರಿಯೆಯಲ್ಲಿ, ಅನ್ಯಾಯದಲ್ಲಿ, ಅಸತ್ಯದಲ್ಲಿ, ವಿಕಥೆಯಲ್ಲಿಯೇ ತೊಡಗುತ್ತದೆ.

ನೋಡಿರಿ ! ಈ ಮನುಷ್ಯ ಜನ್ಮ ಉತ್ತಮ ಕುಲ, ನಿರೋಗ ಶರೀರ, ಉತ್ತಮ ಧರ್ಮ ಇವೆಲ್ಲವನ್ನು ಅನಂತ ಕಾಲದಲ್ಲಿ ಪಡೆದಿರಲಿಲ್ಲ; ಈಗ ಇವೆಲ್ಲವುಗಳ ಸಂಯೋಗವು ಏಕಕಾಲಕ್ಕೆ ಇಲ್ಲಿ ತಮಗೆ ದೊರಕೊಂಡಿವೆ. **ಇದರ ಒಂದು ಗಳಿಗೆಯು ಕೋಟ್ಯಾಂತರ ರೂಪಾಯಿಗಳಿಗಿಂತಲೂ ಮಿಗಿಲಾಗಿದೆ.** ಇಂಥ ಅವಸರವು ಸಿದ್ಧಾಂತಗಳ ಸ್ವಾಧ್ಯಾಯ, ಜೀವಾದಿ ದ್ರವ್ಯಗಳ ಚರ್ಚೆ, ಅನಿತ್ಯ ಮೊದಲಾದ ಹನ್ನೆರಡು ಭಾವನೆಗಳು, ಸೋಳಹ ಕಾರಣ ಭಾವನೆಗಳು, ಪಂಚಪರಮೇಷ್ಠಿಗಳ ವಂದನೆ, ಜಪ, ಸ್ಮರಣೆ ಮೊದಲಾದುವನ್ನು ಮಾಡಿ ಜೀವನ ಸಾರ್ಥಕ ಮಾಡಿಕೊಳ್ಳಲು ದೊರಕಿತ್ತು, ಆದರೆ ನೀನು ಪಗಡೆ, ಚದುರಂಗ, ಗಂಜಾಪು ಮೊದಲಾದ ಮಹಾ ಅವಿದ್ಯೆಯಲ್ಲಿ ಮೋಸ ಹೋಗಿ ಸಮಸ್ತ ಧರ್ಮದಿಂದ ಧರ್ಮದ ಮಾರ್ಗದಿಂದ ಪೂರ್ಣ ಪರಾಙ್ಮುಖನಾಗಿ ಮಹಾಪಾಪದ ಸಂಪಾದನೆ ಮಾಡಿ ಸತ್ತು ಹೋಗುವುದರಲ್ಲಿಯೇ ವ್ಯತೀತ ಮಾಡಿದೆ. ಇದರ ಫಲದಲ್ಲಿ ನರಕ, ತಿರ್ಯಂಚ ಮೊದಲಾದವುಗಳಲ್ಲಿ ಹೋಗಿ ಉತ್ಪನ್ನನಾಗುವೆ.

**ಸಪ್ತ ವ್ಯಸನ ತ್ಯಾಗ :** ಯಾರಿಗೆ ಸಪ್ತ ವ್ಯಸನದ ತ್ಯಾಗವಾಗುವುದು ಅವರೇ ಜಿನಧರ್ಮವನ್ನು ಗ್ರಹಣ ಮಾಡಲು ಪಾತ್ರರಾಗುವರೆಂದು ಭಗವಂತರ ಪರಮಾಗಮದಲ್ಲಿ ಹೇಳಲಾಗಿದೆ. ಯಾರಿಗೆ ಈ ಸಪ್ತವ್ಯಸನಗಳ ಗ್ರಹಣವಾಗಿ ಹೋಗಿರುತ್ತದೆ ಅವರ ಬುದ್ಧಿಯೇ ವಿಪರೀತವಾಗಿ ಹೋಗುತ್ತದೆ. ಪಾಪ ಕಾರ್ಯದಲ್ಲಿ ಪ್ರವೀಣವಾಗಿ ಹೋಗುತ್ತದೆ, ಅನೀತಿಯಲ್ಲಿ ತತ್ಪರವಾಗಿರುತ್ತದೆ.

ಇಹಲೋಕದ ಕಾರ್ಯವಂತೂ ನ್ಯಾಯಮಾರ್ಗದಿಂದ ತಮ್ಮ ಕುಲಕ್ಕೆ ಯೋಗ್ಯ ಷಟ್‌ಕರ್ಮಗಳ ಮೂಲಕ ಆಜೀವಿಕೆ ಮಾಡುವುದು ಹಾಗೂ ಆಹಾರ-ಪಾನೀಯ ಮತ್ತು ಶರೀರ ಸಂಸ್ಕರಣ ಮಾಡುವುದು-ಬಟ್ಟೆ, ಆಭರಣ ಮೊದಲಾದುವನ್ನು ತೊಡುವುದು; ನ್ಯಾಯದಿಂದ ಕೊಡ-ಕೊಳ್ಳುವುದು, ಬರ-ಹೋಗುವುದು, ಪ್ರಯೋಜನ ರೂಪದಿಂದ ಮಾಡುವುದು, ಅದರಂತೆ ಪರಲೋಕದ ಸಲುವಾಗಿ ಧರ್ಮ ಕಾರ್ಯಗಳಲ್ಲಿ ಪ್ರವರ್ತನೆ

ಮಾಡುವುದು-ಇವು ಎರಡೇ ಗೃಹಸ್ಥನು ಮಾಡಲು ಯೋಗ್ಯವಾದ ಕಾರ್ಯಗಳಿವೆ. **ನ್ಯಾಯರೂಪದ ಆಜೀವಿಕೆ ಮತ್ತು ಧರ್ಮರೂಪದ ಪ್ರವರ್ತನೆ-ಇವೆರಡು ಕಾರ್ಯಗಳ ಹೊರತಾಗಿ ಉಳಿದ ಯಾವ ಪ್ರವೃತ್ತಿಯಿದೆ. ಅದು ವ್ಯಸನವಿದೆ.** ಆ ವ್ಯಸನಗಳು ೧) ಜೂಜು ಆಡುವುದು, ೨) ಮಾಂಸ ಭಕ್ಷಣೆ, ೩) ಮದ್ಯಪಾನ, ೪) ವೇಶ್ಯಾಗಮನ, ೫) ಬೇಟೆ ಆಡುವುದು, ೬) ಕಳವು ಮಾಡುವುದು, ೭)ಪರಸ್ತ್ರೀ ಸೇವನೆ ಮಾಡುವುದು-ಎಂದು ಏಳು ಇವೆ. ಇವು ಏಳೂ ವ್ಯಸನಗಳು ಮಹಾಭಯಂಕರ ಪಾಪದ ಬಂಧ ಮಾಡಿಸಲು ಕಾರಣವಿವೆ.

**ಈ ವ್ಯಸನಗಳಲ್ಲಿ ಸಿಕ್ಕಿಕೊಳ್ಳುವುದು ಸಹಜವಿದೆ, ಆದರೆ ಅವುಗಳಿಂದ ಬಿಡುಗಡೆಯಾಗುವುದು ಅತ್ಯಂತ ಕಠಿಣವಿದೆ.** ಈ ವ್ಯಸನಗಳಿಂದ ಬುದ್ಧಿಯು ವಿರುದ್ಧ ಕಾರ್ಯಗಳಲ್ಲಿಯೇ ತೊಡಗುವಂಥ ಪಾಪದ ಬಂಧವಾಗುತ್ತದೆ, ಅವುಗಳಿಂದ ಹೊರಬರುವುದಾಗುವುದಿಲ್ಲ, ಇಲ್ಲಿ ಜೂಜಿನ ವರ್ಣನೆ ಮಾಡಿದೆ, ಪಂದ್ಯ ಕಟ್ಟುವುದನ್ನೂ ಜೂಜಿನಲ್ಲಿಯೇ ತಿಳಿಯುವುದು. ಈಗ ಕೆಲವು ವರ್ಷಗಳಿಂದ ಅಫೀಮು ಮೊದಲಾದವುಗಳ ಸಟ್ಟಾ ವ್ಯಾಪಾರವು ನಡೆಯುತ್ತಲಿದೆ. ಈ ವ್ಯಾಪಾರವು ತೀವ್ರತೃಷ್ಣೆಯಿಂದ ಯುಕ್ತರಾದ ಪುರುಷರ ಸಂತೋಷವನ್ನು ಕೆಡಿಸುವುದಕ್ಕಾಗಿಯೇ ನಡೆಯುತ್ತಿದೆ. ಅದನ್ನು ಕೂಡ ಜೂಜಿನಲ್ಲಿಯೇ ಸಮಾವೇಶ ಮಾಡಲಾಗಿದೆ.

**ಮಾಂಸ, ಮದ್ಯ, ಬೇಟೆ-ಇವು ಜೈನರ ಕುಲದಲ್ಲಿ ಇರುವುದೇ ಇಲ್ಲ, ಇವು ಮಹಾವ್ಯಸನಗಳಿದ್ದು ಒಮ್ಮೆ ಅಂಟಿಕೊಂಡರೆ ನಂತರ ಬಿಡುಗಡೆಯಾಗುವುದು ಮಹಾಕಠಿಣವಿದೆ.** ಇದರ ವಿಶೇಷ ವರ್ಣನೆಯನ್ನು ಅಭಕ್ಷ್ಯದ ವರ್ಣನೆಯಲ್ಲಿ ಮಾಡಲಾಗುವುದು. ಹುಳು ತಿಂದ ಧಾನ್ಯದಿಂದ ಮಾಡಿದ ಸಮಸ್ತ ಭೋಜನ, ಚರ್ಮದಲ್ಲಿ ಇಟ್ಟ ಸಮಸ್ತ ಜಲ, ತುಪ್ಪ, ಎಣ್ಣೆ, ರಸ ಮೊದಲಾದವು; ರಾತ್ರಿ ಭೋಜನ ಮೊದಲಾದುವೆಲ್ಲ ಅಭಕ್ಷ್ಯಗಳನ್ನು ಮಾಂಸ ದೋಷದ ಸಮಾನ ತಿಳಿದುಕೊಂಡು ಬಿಟ್ಟುಕೊಡಲೇಬೇಕಾಗುವುದು.

ಗಾಂಜ, ತಂಬಾಕು, ಬೀಡಿ, ಅಫೀಮು, ಗುಡಗುಡಿಗಳೆಲ್ಲವೂ ಪರಾಧೀನ ಮಾಡಿಬಿಡುವಂಥ ಹಾಗೂ ಜ್ಞಾನವನ್ನು ನಷ್ಟ ಮಾಡುವಂಥವುಗಳಾಗಿರುವುದರಿಂದ ಮತ್ತು ಪರಮಾರ್ಥರೂಪದ ಬುದ್ಧಿಯನ್ನೂ ನಷ್ಟ ಮಾಡುವಂಥವುಗಳಾಗಿರುವುದರಿಂದ ಮದ್ಯದ ಸಮಾನವೇ ಇವೆ; ಆದುದರಿಂದ ಇವುಗಳ ತ್ಯಾಗವನ್ನೇ ಮಾಡಬೇಕಾಗುವುದು.

ಅನ್ಯ ಜೀವರುಗಳ ಮೇಲೆ ದಯೆ ಮಾಡದೆ ಅವರುಗಳ ಆಜೀವಿಕೆಯನ್ನು ಕೆಡಿಸಿ ಬಿಡುವುದು, ಧನ ಕೊಳ್ಳೆ ಹೊಡೆಯುವದು, ಅಧಿಕ ದಂಡನೆ ಮಾಡುವುದೆಲ್ಲವೂ ಬೇಟೆಯೇ ಇದೆ. ಇತರರ ಅವಮಾನ ಮಾಡುವುದು, ನಿವಾಸ ಸ್ಥಾನವನ್ನು ಬಿಡಿಸುವುದು ಅದೆಲ್ಲವೂ ಬೇಟೆಯಾಡುವುದಕ್ಕಿಂತಲೂ ಅತ್ಯಧಿಕ ಪಾಪವಿದೆ; ಆದುದರಿಂದ ಅದರ ತ್ಯಾಗವನ್ನೇ ಮಾಡಿ ಬಿಡಬೇಕಾಗುವುದು.

**ವೇಶ್ಯೆಯ ಸೇವನೆ ಮಾಡಿದವನ ಸಮಸ್ತ ಆಚಾರ, ಭೋಜನ, ನೀರುಗಳೆಲ್ಲವೂ ಭ್ರಷ್ಟವಾಗಿ ಹೋದವು.** ವೇಶ್ಯೆಯನ್ನು ಚಾಂಡಾಲ, ಭಿಲ್ಲ, ಮ್ಲೇಚ್ಛ, ಮುಸಲ್ಮಾನ ಮೊದಲಾದವರೆಲ್ಲರೂ ಸೇವನೆ ಮಾಡುತ್ತಾರೆ. ಆ ವೇಶ್ಯೆಯು ಮಾಂಸಭಕ್ಷಣ, ಮದ್ಯಪಾನವನ್ನು ನಿತ್ಯವೂ ಮಾಡುತ್ತಾಳೆ, ಧನದಿಂದಲೇ ಪ್ರೀತಿ ಮಾಡುವಂಥ ವೇಶ್ಯೆಯ ಬಾಯತಂಬುಲವನ್ನು ತಿನ್ನುವಂಥವನ ಜಾತಿ, ಕುಲ, ಆಚಾರಗಳೆಲ್ಲವೂ ಭ್ರಷ್ಟವಾಗಿ ಹೋಗುತ್ತವೆ. ಆದುದರಿಂದ ವೇಶ್ಯೆಯ ಸೇವನೆಯನ್ನು ತ್ಯಾಗಮಾಡಿ ಬಿಡುವುದೇ ಉತ್ತಮವಿದೆ. **ವೇಶ್ಯೆಯ ಸಂಯೋಗ ಮಾಡಿದವನಿಗೆ ಕಳವು, ಜೂಜು, ಮದ್ಯಪಾನ ಮೊದಲಾದ ಸಮಸ್ತ ವ್ಯಸನಗಳಿರುತ್ತವೆ.** ಅವನ ಧನದ ಹಾನಿಯಾಗುತ್ತದೆ, ಧರ್ಮದಿಂದ ಪರಾಙ್ಮುಖನಾಗಿ ಹೋಗುತ್ತಾನೆ, ಬುದ್ಧಿಯು ವಿಪರೀತವಾಗುತ್ತದೆ, ಮಾಯಾಚಾರದಲ್ಲಿ, ಅಸತ್ಯದಲ್ಲಿ, ಕಪಟದಲ್ಲಿ ತತ್ಪರತೆಯಾಗಿ ಹೋಗುತ್ತದೆ, ನಿಂದ್ಯ ಕಾರ್ಯ ಮಾಡುವಲ್ಲಿ ಗ್ಲಾನಿಯೆನಿಸುವುದಿಲ್ಲ, ಲಜ್ಜೆಯು ನಷ್ಟವಾಗಿ ಹೋಗುತ್ತದೆ. ವೇಶ್ಯೆಯ ಹಾವ, ಭಾವ, ವಿಲಾಸ, ವಿಭ್ರಮ ಮೊದಲಾದುವನ್ನು ನೋಡುವುದರಿಂದ ಸ್ಮರಣೆ ಮಾಡುವುದರಿಂದ, ಅತ್ಯಂತ ರಾಗಿಯಾಗುವುದರಿಂದ ಸಮಸ್ತ ಕುಲಮರ್ಯಾದೆಯನ್ನು ಭಂಗ ಮಾಡಿಬಿಡುತ್ತಾನೆ. **ವೇಶ್ಯೆಯಲ್ಲಿ ಆಸಕ್ತನಾದ ಪುರುಷನು ಕಫದಲ್ಲಿ ಬಿದ್ದುಕೊಂಡ ಮಕ್ಷಿಕದ ಹಾಗೆ ತನ್ನನ್ನು ಬಿಡಿಸಿಕೊಳ್ಳಲಾಗುವುದಿಲ್ಲ, ವೇಶ್ಯೆಯ ಸೇವನೆಯು ಮಹಾ ಅನೀತಿಯ ಕಾರ್ಯವಿದೆ.**

ಕಳ್ಳತನವೂ ಮಹಾವ್ಯಸನವಿದೆ. ಕಳ್ಳನು ಸ್ವಯಂ ಕೂಡ ನಿರಂತರ ಭಯಭೀತನಿರುತ್ತಾನೆ. ಮತ್ತು ಕಳ್ಳನಿಂದ ಇತರ ಜೀವರುಗಳಿಗೂ ಅಧಿಕ ಭಯವಿರುತ್ತದೆ. ತಾಯಿಗೆ ಕೂಡ ತನ್ನ ಕಳ್ಳ ಪುತ್ರನಿಂದ ಭಯವಿರುತ್ತದೆ. ಕಳ್ಳನು ಈ ಲೋಕದಲ್ಲಿ ತನ್ನ ಸಂಪೂರ್ಣ ಪ್ರತಿಷ್ಠೆಯನ್ನು ಕೆಡಿಸಿಕೊಂಡು ಮಹಾಕಲಂಕಿತನಾಗಿ ಹೋಗುತ್ತಾನೆ. ಅವನು ದೊರೆಯಿಂದ ಬಹಳಷ್ಟು ದಂಡನೆಗೆ ಪ್ರಾಪ್ತನಾಗುತ್ತಾನೆ, ಕೈ ಕತ್ತರಿಸುವುದು, ಮೂಗು ಕೊಯ್ಯುವುದು ಮೊದಲಾದ ಶಿಕ್ಷೆ ಪ್ರಾಪ್ತವಾಗುತ್ತದೆ. ಕಳ್ಳನ ಭಾವವು ಎಂದೂ ಸಂತೋಷರೂಪವಿರುವುದಿಲ್ಲ, ಕಳ್ಳನಿಗೆ ಯೋಗ್ಯ-ಅಯೋಗ್ಯ ಕಾರ್ಯ ಮಾಡುವುದರ ವಿಚಾರವೇ ಇರುವುದಿಲ್ಲ, ಇದೇ ಕಾರಣದಿಂದ ಅವನು ಧರ್ಮಧ್ಯಾನ, ಸ್ವಾಧ್ಯಾಯ, ಧರ್ಮಕಥೆಯಿಂದ ಪರಾಙ್ಮುಖನಾಗಿಯೇ ಇರುತ್ತಾನೆ.

**ಜೈನ ಶಾಸ್ತ್ರಗಳನ್ನು ಓದುತ್ತ-ಕೇಳುತ್ತಲಿದ್ದರೂ ಯಾವನು ಇತರರ ಧನದ ಮೇಲೆ ತನ್ನ ಅಧಿಕಾರ ನಡೆಸುತ್ತಾನೆ ಅವನು ಠಕ್ಕನಿದ್ದಾನೆ.** ಯಾವನು ಜಗತ್ತನ್ನು ವಂಚಿಸಲು ಶಾಸ್ತ್ರರೂಪದ ಶಸ್ತ್ರಗ್ರಹಣ ಮಾಡಿದ್ದಾನೆ ಅವನಿಗೆ ಸ್ವಲ್ಪ ಕೂಡ ಧರ್ಮದ ಶ್ರದ್ಧೆಯಿಲ್ಲವೆಂದು ತಿಳಿಯುವುದು. ಯಾರಿಗೆ ಜಿನಧರ್ಮದ ಮಹಿಮೆಯ ಶ್ರದ್ಧೆಯಿರುತ್ತದೆ ಅವರಿಗೆ ಚಾರಿತ್ರಮೋಹದ ಉದಯದಿಂದ ತ್ಯಾಗ, ವ್ರತ, ಸಂಯಮಾದಿಗಳಿಲ್ಲದಿದ್ದರೂ ಕೂಡ ಅನ್ಯಾಯಪೂರ್ವಕವಾಗಿ ಧನ ಪ್ರಾಪ್ತ ಮಾಡಿಕೊಳ್ಳುವ ಇಚ್ಛೆಯು ಅವರಿಗೆ ಇರುವುದಿಲ್ಲ. ಕಳವಿನಿಂದ ಉಭಯ ಲೋಕಗಳು ಭ್ರಷ್ಟವಾಗುತ್ತವೆಂದು ತಿಳಿದುಕೊಂಡು ಕೊಡದಿರುವ ಯಾರ ಧನದಲ್ಲಿ ಇಚ್ಛೆ ಮಾಡಬಾರದು.

**ಪರಸ್ತ್ರೀಯ ಇಚ್ಛೆನಾಮದ ವ್ಯಸನವು ಸಮಸ್ತ ಅನರ್ಥಗಳಲ್ಲಿ ಮುಖ್ಯವಿದೆ.** ಪರಸ್ತ್ರೀ ಲಂಪಟರಿಗೆ ಇಹಲೋಕದಲ್ಲಿ, ಪರಲೋಕದಲ್ಲಿ ಯಾವ ಘೋರ ಪಾಪದ ಬಂಧ, ವಿಪತ್ತು, ಕಲಂಕ, ಅವಮಾನ, ಮರಣ, ರೋಗ, ಅಪವಾದ, ಧನಹಾನಿ, ರಾಜದಂಡನೆ, ಜಗತ್ತಿನಲ್ಲಿ ವೈರ, ದುರ್ಗತಿಗಮನ, ಮಾರಣ, ತಾಡನ, ಬಂದೀಗೃಹದಲ್ಲಿ ಬಂಧನ ಮೊದಲಾದವುಗಳಾಗುತ್ತವೆ ಅವನ್ನು ವಚನಗಳ ಮೂಲಕ ಹೇಳುವಲ್ಲಿ ಯಾರೂ ಸಮರ್ಥರಿಲ್ಲ. ಈ ಪ್ರಕಾರ ಏಳೂ ವ್ಯಸನಗಳನ್ನು ದೂರದಿಂದಲೇ ಬಿಟ್ಟು ಕೊಡುವಲ್ಲಿ ಸ್ವಲ್ಪಕೂಡ ಹಾನಿಯಿಲ್ಲ. **ಯಾವನು ವ್ಯಸನಗಳ ತ್ಯಾಗ ಮಾಡಿ ಬಿಟ್ಟಿದ್ದಾನೆ ಅವನು ತನ್ನ ಸಮಸ್ತ ದುಃಖ ಅಪಕೀರ್ತಿ, ನರಕ ಮೊದಲಾದ ದುರ್ಗತಿಗಮನ ರೂಪದ ಸಮಸ್ತ ವಿಪತ್ತುಗಳನ್ನು ದೂರ ಮಾಡಿಕೊಂಡಿದ್ದಾನೆ.**

ಈಗ ಅನರ್ಥದಂಡ ತ್ಯಾಗ ವ್ರತದ ಐದು ಅತಿಚಾರಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ, -

**ಕಂದರ್ಪಂ ಕೌತ್ಕುಚ್ಯಂ ಮೌಖರ್ಯಮತಿಪ್ರಸಾಧನಂ ಪಂಚ ।**

**ಅಸಮೀಕ್ಷ್ಯಾಧಿಕರಣಂ ವ್ಯತೀತಯೋಽನರ್ಥದಂಡಕೃದ್ವಿರತೇ ॥೮೧॥**

**ಅರ್ಥ :-** ೧) ಚಾರಿತ್ರಮೋಹನೀಯ ಕರ್ಮದ ಉದಯದಿಂದ ರಾಗಭಾವದ ಅಧಿಕತೆಯ ಕಾರಣ ಹಾಸ್ಯದಿಂದ ಮಿಶ್ರಿತವಾದ ಅಶ್ಲೀಲ ವಚನಗಳಾನ್ನಾಡುವುದು ಅದು **ಕಂದರ್ಪ** ನಾಮದ ಅತಿಚಾರವಿದೆ. ೨) ತೀವ್ರರಾಗದ ಉದಯದಿಂದ ಹಾಸ್ಯರೂಪದ ಅಶ್ಲೀಲ ವಚನಗಳೊಡನೆ ಕಾಯದಚೇಷ್ಟೆ, ನಿಂದ್ಯಕ್ರಿಯೆ ಮಾಡುವುದು ಅದು **ಕೌತ್ಕುಚ್ಯ** ನಾಮದ ಅತಿಚಾರವಿದೆ. ೩) ಯಾವ ಪ್ರಯೋಜನವಿಲ್ಲದೆ ಸಾರರಹಿತ ಪೊಳ್ಳು ಹರಟೆ ಮಾಡುವುದು ಅದು **ಮೌಖರ್ಯ** ನಾಮದ ಅತಿಚಾರವಿದೆ. ೪) ಪ್ರಯೋಜನವಿಲ್ಲದೆ ಅತ್ಯಧಿಕ ಮನ-ವಚನ-ಕಾಯದ ಪ್ರವೃತ್ತಿ ಮಾಡುವುದು ಅದು **ಅಸಮೀಕ್ಷ್ಯಾಧಿಕರಣ**ವೆನಿಸಿಕೊಳ್ಳುತ್ತದೆ. ರಾಗ-ದ್ವೇಷಗಳನ್ನು ಹೆಚ್ಚಿಸುವಂಥ ಕಾವ್ಯ, ಶ್ಲೋಕ, ಛಂದ, ಗೀತೆಗಳ ಸ್ಮರಣೆ ಮಾಡುವುದು, ಅದು **ಮನಅಸಮೀಕ್ಷ್ಯಾಧಿಕರಣ**ವೆನಿಸಿಕೊಳ್ಳುತ್ತದೆ. ಪಾಪದ ಕಥೆಯ ಮೂಲಕ ಇತರರ ಮನ-ವಚನ-ಕಾಯಗಳನ್ನು ಕೆಡಿಸುವಂಥ ಅಸತ್ಯ ಕಥನ ಮಾಡುವುದು ಅದು **ವಚನ ಅಸಮೀಕ್ಷ್ಯಾಧಿಕರಣ**ವಿದೆ. ಪ್ರಯೋಜನವಿಲ್ಲದೆ ಗಮನ ಮಾಡುವುದು, ಏಳುವುದು, ಕೂಡ್ರುವುದು, ಓಡುವುದು, ಎಸೆಯುವುದು, ಅಪ್ಪಳಿಸುವುದು, ಪತ್ರ-ಫಲ-ಪುಷ್ಪ ಮೊದಲಾದವುಗಳ ಛೇದನ-ಭೇದನ-ವಿದಾರನ ಮಾಡುವುದು ಮತ್ತು ಅಗ್ನಿ, ವಿಷ, ಕ್ಷೌರ ಮೊದಲಾದುವನ್ನು ಕೊಡುವುದು ಅದು **ಕಾಯಅಸಮೀಕ್ಷ್ಯಾಧಿಕರಣ** ನಾಮದ ಅತಿಚಾರವಿದೆ. ೫) ಎಷ್ಟು ಭೋಗೋಪಭೋಗದಿಂದ ಪ್ರಯೋಜನ ಸಾಧಿಸುವುದು ಅದಕ್ಕಿಂತ ಹೆಚ್ಚು ಪ್ರಯೋಜನವಿಲ್ಲದೆ ಅತಿಸಂಗ್ರಹ ಮಾಡುವುದು. ಅದು **ಅತಿಪ್ರಸಾಧನ** ನಾಮದ ಅತಿಚಾರವಿದೆ.

ಈ ಪ್ರಕಾರ ಅನರ್ಥದಂಡ ವ್ರತದ ಐದು ಅತಿಚಾರಗಳನ್ನು ಹೇಳಿದೆ ಅವು ತ್ಯಾಗ ಮಾಡಲು ಯೋಗ್ಯವಿವೆ. ಈಗ **ಭೋಗೋಪಭೋಗ ಪರಿಮಾಣವ್ರತವನ್ನು** ಹೇಳುವಂಥ ಎಂಟು ಸೂತ್ರಗಳನ್ನು ಹೇಳುತ್ತಾರೆ,-

**ಅಕ್ಷಾರ್ಥಾನಾಂ ಪರಿಸಂಖ್ಯಾನಂ ಭೋಗೋಪಭೋಗಪರಿಮಾಣಮ್ ।**
**ಅರ್ಥವತಾಮಪ್ಯವಧೌ ರಾಗರತೀನಾಂ ತನೂಕೃತಯೇ ॥೮೨॥**

**ಅರ್ಥ :-** ಐದು ಇಂದ್ರಿಯಗಳಿಗೆ ಪ್ರಯೋಜನವುಳ್ಳ ವಿಷಯಗಳಲ್ಲಿ ಯಾವರಾಗರೂಪದ ಆಸಕ್ತಿಯ ಭಾವವಿದೆ ಅದನ್ನು ಕುಗ್ಗಿಸುವ ಸಲುವಾಗಿ ಮರ್ಯಾದೆ ಹಾಕುವುದು, ಸೀಮಿತಗೊಳಿಸುವುದು ಅದು ಭೋಗೋಪಭೋಗ ಪರಿಮಾಣ ನಾಮದ ವ್ರತವಿದೆ.

**ಭಾವಾರ್ಥ :-** ಸಂಸಾರೀ ಜೀವರುಗಳಿಗೆ ಇಂದ್ರಿಯಗಳ ವಿಷಯಗಳಲ್ಲಿ ಅಧಿಕ ರಾಗವಿರುತ್ತದೆ. ಆ ರಾಗದ ಕಾರಣದಿಂದ ವ್ರತ, ಸಂಯಮ, ದಯೆ, ಕ್ಷಮೆ ಮೊದಲಾದ ಸಮಸ್ತ ಗುಣಗಳಿಂದ ಪರಾಙ್ಮುಖರಾಗುತ್ತಿದ್ದಾರೆ. ಆದುದರಿಂದ ಅಣುವ್ರತಗಳನ್ನು ಧರಿಸಿದ ಗೃಹಸ್ಥರು ಹಿಂಸೆ, ಅಸತ್ಯ, ಕಳವು, ಪರಸ್ತ್ರೀ ಸೇವನೆ, ಅಪರಿಮಿತ ಪರಿಗ್ರಹದಿಂದ ಉತ್ಪನ್ನವಾದ ಆ ಅನ್ಯಾಯದ ವಿಷಯಗಳಲ್ಲಿರುವ ಪ್ರೀತಿಯ ತ್ಯಾಗ ಮಾಡಿ ಬಿಡುವುದರಿಂದ ವ್ರತಿಗಳಾಗುತ್ತಾರೆ; ಈಗ ನ್ಯಾಯದ ವಿಷಯಗಳನ್ನು ಕೂಡ ತೀವ್ರ ರಾಗದ ಕಾರಣವೆಂದು ತಿಳಿದುಕೊಂಡು ಅವುಗಳಿಂದ ಅಶುಚಿಯಾಗಿ ಹೋಗುವುದರಿಂದ ರಾಗದ ಆಸಕ್ತಿಯನ್ನು ಕುಗ್ಗಿಸುವ ಸಲುವಾಗಿ ತಮ್ಮ ಪ್ರಯೋಜನವುಳ್ಳ ಇಂದ್ರಿಯ ವಿಷಯಗಳಲ್ಲಿ ಕೂಡ ಪರಿಮಾಣ ಮಾಡುವುದು ಅದು ಭೋಗೋಪಭೋಗ ಪರಿಮಾಣನಾಮದ ಗುಣವ್ರತವಿದೆ. ವ್ರತೀ ಜೀವರುಗಳು ಇಂದ್ರಿಯ ವಿಷಯಗಳಲ್ಲಿ ನಿರರ್ಗಲ ಪ್ರವೃತ್ತಿಯನ್ನು ತಡೆದು ಭೋಗೋಪಭೋಗ ಪರಿಮಾಣ ಮಾಡುವುದು ಅದು ಮಹಾನ ಸಂವರದ ಕಾರಣವಿದೆ.

ಈಗ **ಭೋಗವೆಂದರೇನು, ಉಪಭೋಗವೆಂದರೇನು ?** ಇವುಗಳ ಲಕ್ಷಣವನ್ನು ಸೂತ್ರದ ಮೂಲಕ ಹೇಳುತ್ತಾರೆ, -

**ಭುಕ್ತ್ವಾ ಪರಿಹಾತವ್ಯೋ ಭೋಗೋ ಭುಕ್ತ್ವಾ ಪುನಶ್ಚ ಭೋಕ್ತವ್ಯಃ ।**
**ಉಪಭೋಗೋಽಶನವಸನಪ್ರಭೃತ್ತಿಃ ಪಂಚೇಂದ್ರಿಯೋ ವಿಷಯಃ ॥೮೩॥**

**ಅರ್ಥ :-** ಯಾವುದು ಒಂದು ಸಲ ಭೋಗ ಮಾಡಿದ ನಂತರ ಪುನಃ ತ್ಯಾಗ ಮಾಡಲು ಯೋಗ್ಯವಾಗಿ ಹೋಗುತ್ತದೆ ಅದು ಭೋಗವಿದೆ. ಯಾವುದು ಭೋಗಿಸಿದ ನಂತರ ಪುನಃ ಭೋಗಿಸಲು ಯೋಗ್ಯವಿರುತ್ತದೆ ಅದು ಉಪಭೋಗವಿದೆ. ಭೋಜನ ಮೊದಲಾದ ಪಂಚೇಂದ್ರಿಯದ ವಿಷಯಗಳು ಭೋಗವಿವೆ ಮತ್ತು ಬಟ್ಟೆ ಮೊದಲಾದ ಪಂಚೇಂದ್ರಿಯದ ವಿಷಯಗಳು ಉಪಭೋಗವಿವೆ.

**ಭಾವಾರ್ಥ :-** ಯಾವ ಪದಾರ್ಥಗಳು ಒಂದೇ ಬಾರಿ ಭೋಗಿಸಲು ಬರುತ್ತವೆ, ಮತ್ತೆ ಪುನಃ ಭೋಗಿಸಲು ಬರುವುದಿಲ್ಲ ಅವು ಭೋಗವಿವೆ; ಇನ್ನು ಯಾವ ಪದಾರ್ಥಗಳು ಪುನ- ಪುನಃ ಭೋಗಿಸಲು ಬರುತ್ತವೆ ಅವು ಉಪಭೋಗವಿವೆ. ಹೇಗೆ ಅನೇಕ ಪ್ರಕಾರದ ಭೋಜನವು ಒಂದೇ ಬಾರಿ ಭೋಗಿಸಲು ಬರುತ್ತದೆ, ಕರ್ಪೂರ, ಚಂದನ ಮೊದಲಾದ ವಿಲೇಪನ, ಪುಷ್ಪಮಾಲೆ, ಸುಗಂಧದೆಣ್ಣೆ, ಪನ್ನೀರು, ಇಂದ್ರಜಾಲ, ಸ್ತವನದ ಗೀತೆ, ಶಬ್ದಾದಿಗಳು ಒಂದೇ ಬಾರಿ ಭೋಗಿಸಲು ಬರುತ್ತವೆ ಅವನ್ನು ಪಂಚೇಂದ್ರಿಯದ ವಿಷಯಭೋಗವೆಂದು ಹೇಳುತ್ತಾರೆ. ಹೇಗೆ ವಸ್ತ್ರ, ಆಭರಣ, ಸ್ತ್ರೀ, ಸಿಂಹಾಸನ, ಮಂಚ, ಮನೆ, ಉಪವನ ಮೊದಲಾದವು ಪುನಃ ಪುನಃ ಭೋಗಿಸಲು ಬರುತ್ತವೆ ಅವು ಉಪಭೋಗವಿವೆ. ಯಾರು ಭೋಗ ಮತ್ತು ಉಪಭೋಗಗಳೆರಡರ ಪರಿಮಾಣ ಮಾಡುತ್ತಾರೆ ಅವರಿಗೆ ಭೋಗೋಪಭೋಗ ಪರಿಮಾಣ ವ್ರತವಿರುತ್ತದೆ.

ಈಗ ಯಾವವು ಪರಿಮಾಣ ಮಾಡಲು ಯೋಗ್ಯವಿವೆ, ಆದರೆ **ಆಜೀವನದ ಸಲುವಾಗಿ ತ್ಯಾಗ ಮಾಡಲು ಯೋಗ್ಯವಿವೆ** ಅವನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ತ್ರಸಹತಿಪರಿಹರಣಾರ್ಥಂ ಕ್ಷೌದ್ರಂ ಪಿಶಿತಂ ಪ್ರಮಾದಪರಿಹೃತಯೇ ।**
**ಮದ್ಯಂ ಚ ವರ್ಜನೀಯಂ ಜಿನಚರಣೌ ಶರಣಮುಪಯಾತೈಃ ॥೮೪॥**

**ಅರ್ಥ :-** ಜಿನೇಂದ್ರ ಭಗವಂತರ ಚರಣಗಳ ಆಶ್ರಯವು ಪ್ರಾಪ್ತವಾಗಿ ಹೋಗಿರುವಂಥ ಸಮ್ಯಗ್ದೃಷ್ಟಿ ಜನರಿಗೆ ತ್ರಸ ಜೀವಗಳ ಹಿಂಸೆಯ ಪರಿತ್ಯಾಗದ ಸಲುವಾಗಿ ಕ್ಷೌದ್ರ ಎಂದರೆ ಮಧು ಮತ್ತು ಮಾಂಸಗಳು ತ್ಯಾಗ ಯೋಗ್ಯವೇ ಇವೆ. ಪ್ರಮಾದ ಎಂದರೆ ಹಿತ-ಅಹಿತದಲ್ಲಿರುವ ಅಸಾವಧಾನಿಯನ್ನು ಬಿಡುವ ಸಲುವಾಗಿ ಮದ್ಯದ ತ್ಯಾಗವನ್ನು ಅವಶ್ಯವಾಗಿ ಮಾಡಬೇಕಾಗುವುದು.

**ಭಾವಾರ್ಥ :-** ಯಾವ ಪುರುಷರು ಜಿನೇಂದ್ರ ಭಗವಂತರ ಚರಣಗಳ-ಆಜ್ಞೆಯ-ವಚನಗಳ ಶ್ರದ್ಧೆಯುಳ್ಳವರಿದ್ದಾರೆ. ಅವರು ತ್ರಸಜೀವಗಳ ಹಿಂಸೆಯ ತ್ಯಾಗದ ಸಲುವಾಗಿ ಮಧು ಹಾಗೂ ಮಾಂಸದ ತ್ಯಾಗ ಮಾಡಿಯೇ ಮಾಡುತ್ತಾರೆ. ಪ್ರಮಾದ ಅಚೇತವಿರುವ ಪ್ರಮಾದವನ್ನು ತ್ಯಾಗಮಾಡುವ ಸಲುವಾಗಿ ಮದ್ಯದ ತ್ಯಾಗವನ್ನು ಮಾಡಿಯೇ ಮಾಡುತ್ತಾರೆ. **ಯಾರಿಗೆ, ಮಧು, ಮದ್ಯ, ಮಾಂಸದ ತ್ಯಾಗವಿಲ್ಲ ಅವರು ಜಿನಾಜ್ಞೆಯಿಂದ ಪರಾಙ್ಮುಖರಿದ್ದಾರೆ, ಅವರು ಜೈನರಿಲ್ಲ.**

ಯಾವವು ತ್ಯಾಗ ಯೋಗ್ಯವಿವೆ ಅವನ್ನು ತಿಳಿಸುವಂಥ ಸೂತ್ರಗಳನ್ನು ಈಗ ಹೇಳುತ್ತಾರೆ, -

**ಅಲ್ಪಫಲ ಬಹುವಿಘಾತಾನ್ಮೂಲಕಮಾರ್ದ್ರಾಣಿ ಶೃಂಗವೇರಾಣಿ ।**
**ನವನೀತನಿಂಬಕುಸುಮಂ ಕೈತಕಮಿತ್ಯೇವಮವಹೇಯಮ್ ॥೮೫॥**

**ಯದನಿಷ್ಟಂ ತದ್ವ್ರತಯೇದ್ಯಚ್ಚಾನುಪಸೇವ್ಯಮೇತದಪಿ ಜಹ್ಯಾತ್ ।**
**ಅಭಿಸಂಧಿಕೃತಾ ವಿರತಿರ್ವಿಷಯಾದ್ಯೋಗ್ಯಾದ್ವ್ರತಂ ಭವತಿ ॥೮೬॥**

**ಅರ್ಥ :-** ಯಾವವುಗಳ ಸೇವನೆಯಿಂದ ತಮ್ಮ ಪ್ರಯೋಜನರೂಪದ ಫಲವಂತೂ ಅಲ್ಪ ಸಿದ್ಧವಾಗುತ್ತದೆ, ಆದರೆ ತಿನ್ನುವುದರಿಂದ ಅನಂತ ಜೀವಗಳ ಘಾತವಾಗುತ್ತದೆ ಅಂಥ ಕಂದ, ಮೂಲ, ಹಸಿ ಶುಂಠಿ, ಮುಳ್ಳಿನ ಚಿಕ್ಕ ಕಂಟಿ ಎಂದರೆ ಬೋರೆ ಹಣ್ಣು, ಕಂದಮೂಲ, ಬೆಣ್ಣೆ, ಬೇವಿನ ಹೂವು, ತಾಳೆಯ ಹೂವು, ಯಾವವುಗಳಲ್ಲಿ ಅನಂತ ಜೀವಗಳ ಘಾತವಾಗುತ್ತದೆ ಅಂಥ ಅನಂತಕಾಯಗಳು ತ್ಯಾಗ ಯೋಗ್ಯವೇ ಇವೆ. ಯಾವವುಗಳ ಒಂದು ಶರೀರದಲ್ಲಿ ಅನಂತ ಜೀವಗಳಿವೆ ಅವು ಅನಂತ ಕಾಯವಿವೆ. ಅವು ತಮ್ಮ ಸಲುವಾಗಿ ಅನಿಷ್ಟವಿವೆ ಅವುಗಳ ತ್ಯಾಗ ಮಾಡಿ ಬಿಡುವುದು, ಸೇವಿಸಲು ಯೋಗ್ಯವಿಲ್ಲದಂಥ ಅನುಪಸೇವ್ಯಗಳ ತ್ಯಾಗ ಮಾಡುವುದೇ ಉಚಿತವಿದೆ. ಅನಿಷ್ಟ ಅನುಪಸೇವ್ಯಗಳ ಸೇವನೆಯ ಯಾವ ಪ್ರಯೋಜನವಿಲ್ಲದಿದ್ದರೂ ಕೂಡ ತಮ್ಮ ಅಭಿಪ್ರಾಯದಿಂದ ಯೋಗ್ಯ ವಿಷಯಗಳ ತ್ಯಾಗ ಮಾಡುವುದೇ ವ್ರತವೆಂದು ಕರೆಸಿಕೊಳ್ಳುತ್ತದೆ.

ಅದರ ಸುಖವಂತೂ ನಾಲಿಗೆಗೆ ಸ್ವಲ್ಪ ಸಮಯದ ಸಲುವಾಗಿ ಸ್ವಾದಮಾತ್ರವಿದ್ದರೂ ಅದರ ಒಂದು ಕೂದಲೆಳೆಯಷ್ಟು ಕಣದಲ್ಲಿ ಕೂಡ ಅನಂತಾನಂತ ಬಾದರ ನಿಗೋದ ಜೀವಗಳ ಘಾತವಾಗುವಂಥ ಕಂದ, ಮೂಲ, ಮೊದಲಾದ ಹಾಗೂ ಬೇವಿನ ಹೂವು, ತಾಳೆಯ ಹೂವು, ಕೇದಗೆಯ ಹೂವುಗಳು ತ್ಯಾಗ ಯೋಗ್ಯವೇ ಇವೆ. ಇನ್ನೂ ಬಹಳಷ್ಟು ಹೂವುಗಳು ಅವುಗಳಲ್ಲಿ ಪ್ರತ್ಯಕ್ಷ ತ್ರಸ ಜೀವಗಳು ತುಂಬಿಕೊಂಡಿರುವುದು ಕಂಡು ಬರುತ್ತದೆ, ಜಿನ ಧರ್ಮಿಗಳ ಸಲುವಾಗಿ ಅವೆಲ್ಲವು ತ್ಯಾಗ ಯೋಗ್ಯವೇ ಇವೆ.

ವಸ್ತುವಂತೂ ಶುದ್ಧವೇ ಇದೆ, ಆದರೆ ಅದನ್ನು ತಿನ್ನುವುದರಿಂದ ತಮ್ಮ ಶರೀರದಲ್ಲಿ ವೇದನೆಯು ಉತ್ಪನ್ನವಾಗಿ ಹೋಗುತ್ತದೆ. ಹೊಟ್ಟೆಯಲ್ಲಿ ನೋವಾಗುತ್ತದೆ, ವಾತ-ಪಿತ್ತ-ಕಫ ಮೊದಲಾದ ದೋಷಗಳಾಗುತ್ತವೆ, ರಕ್ತದಲ್ಲಿ ವಿಕಾರ, ಹೊಟ್ಟೆಯಲ್ಲಿ ವಿಕಾರವನ್ನುಂಟುಮಾಡುವಂಥ ಭೋಜನ ಮೊದಲಾದ ಮತ್ತು ದುಃಖ ಕೊಡುವಂಥ ಇಂದ್ರಿಯ ವಿಷಯಗಳ ಸೇವನೆಯನ್ನೂ ಮಾಡಬಾರದು. ಅತ್ಯಂತ ತೀವ್ರ ರಾಗಿ, ಇಂದ್ರಿಯಗಳ ಲಂಪಟನಿರುವವನೇ ಅನಿಷ್ಟ ಪದಾರ್ಥಗಳ ಸೇವನೆ ಮಾಡುವನು. ತನ್ನ ಮರಣ ಹಾಗೂ ತೀವ್ರ ವೇದನೆ ಭೋಗಿಸುವ ದುಃಖವನ್ನು ಗಣನೆಗೆ ತಂದುಕೊಳ್ಳದೆ ಯಾವನು ಅನಿಷ್ಟ ವಸ್ತುವಿನ ಭಕ್ಷಣೆ ಮಾಡುತ್ತಾನೆ ಅವನಿಗೆ ನಾಲಿಗೆಯ ತೀವ್ರ ವಿಕಲತೆಯಿಂದ ಮಹಾಪಾಪದ ಬಂಧವಾಗುತ್ತದೆ. ಅನೇಕ ಮನುಷ್ಯರು ಭೋಜನದ ಸ್ವಾದದಲ್ಲಿ ಪ್ರೀತಿ ಮಾಡಿ ಅನಿಷ್ಟ ಆಹಾರ ತಿಂದು ರೋಗ ಹೆಚ್ಚಿಸಿಕೊಂಡು ಆರ್ತಧ್ಯಾನ ಮಾಡಿ ದುರ್ಗತಿಗೆ ಹೋಗುತ್ತಾರೆ. ಆದುದರಿಂದ ಅನಿಷ್ಟದ ತ್ಯಾಗ ಮಾಡುವುದೇ ಉತ್ತಮ ಕಾರ್ಯವಿದೆ.

ಅದೆಷ್ಟೋ ವಸ್ತುಗಳು ತಮ್ಮ ಕುಲವನ್ನು, ವ್ಯವಹಾರವನ್ನು, ಧರ್ಮವನ್ನು ಮಲಿನ ಮಾಡುವಂಥವುಗಳಿವೆ ಅವು ಸೇವಿಸಲು ಯೋಗ್ಯವಿಲ್ಲ, ಅವು ಅನುಪಸೇವ್ಯವಿವೆ. ಶಂಕ, ಆನೆಯ ದಂತ, ಕೇಶ, ಮೃಗಮದ, ಕಸ್ತೂರಿ, ಗೋರೋಚನ, ಇತ್ಯಾದಿಗಳಿಂದ ಸ್ಪರ್ಶಿಸಲ್ಪಟ್ಟ ಭೋಜನ, ಜಲಗಳು ಸೇವಿಸಲು ಯೋಗ್ಯವಿಲ್ಲ, ಮ್ಲೇಚ್ಛ, ಭಿಲ್ಲ, ಅಸ್ಪೃಶ್ಯ ಶೂದ್ರರುಗಳು ಸ್ಪರ್ಶ ಮಾಡಿರುವ ಭೋಜನವು ಅನುಪಸೇವ್ಯವಿದೆ. ಅಶುದ್ಧವಿರುವ ಭೂಮಿಯ ಮೇಲೆ ಪತಿತವಾದ, ಚರ್ಮದಿಂದ ಸ್ಪರ್ಶವಾಗಿರುವ, ಬೆಕ್ಕು-ನಾಯಿ ಮೊದಲಾದುವಿಂದ, ಮಾಂಸಭಕ್ಷಕ, ಮದ್ಯಕುಡುಕನಿಂದ ಸ್ಪರ್ಶಮಾಡಿದ, ಸಿದ್ಧಪಡಿಸಿದ ಸಮಸ್ತ ಭೋಜನ, ಹಾಗೂ ಲೋಕನಿಂದ್ಯ ಭೋಜನಗಳು ಅನುಪಸೇವ್ಯವಿವೆ. ಜಿನಧರ್ಮಿಗಳು ಭಕ್ಷಣ ಮಾಡಲು ಯೋಗ್ಯವಾಗಿಲ್ಲ, ಅವು ಬುದ್ಧಿಯನ್ನು ವಿಪರೀತ ಮಾಡುವಂಥವುಗಳಿವೆ, ಮಾರ್ಗದಿಂದ ಭ್ರಷ್ಟ ಮಾಡುವಂಥವುಗಳಿವೆ, ಧರ್ಮದಿಂದ ಭ್ರಷ್ಟ ಮಾಡುವಂಥವುಗಳಿವೆ.

ಶ್ರೀ ರಾಜವಾರ್ತಿಕದಲ್ಲಿ ಕೂಡ ಐದು ಪ್ರಕಾರದ ಭೋಗ್ಯ ಪದಾರ್ಥಗಳ್ನು ಹೇಳಿದ್ದಾರೆ. ೧) ಯಾವುದರಲ್ಲಿ ತ್ರಸ ಜೀವಗಳ ಘಾತವಾಗುತ್ತದೆ, ೨) ಯಾವುದು ಪ್ರಮಾದ ಉತ್ಪನ್ನ ಮಾಡುವಂಥದ್ದಿದೆ, ೩) ಯಾವುದರಲ್ಲಿ ಅನಂತ ಜೀವಗಳ ಘಾತವಾಗುತ್ತದೆ, ೪) ಯಾವುದು ಅನಿಷ್ಟವಿದೆ, ೫) ಯಾವುದು ಅನುಪಸೇವ್ಯವಿದೆ. ಈ ಐದು ಪ್ರಕಾರದ ಪದಾರ್ಥಗಳು ಸಂಪೂರ್ಣ ಜೀವನದ ಸಲುವಾಗಿ ತ್ಯಾಗಯೋಗ್ಯವಾಗಿವೆ. ಅವುಗಳ ತ್ಯಾಗವನ್ನು ಸಂಪೂರ್ಣ ಆಜೀವನದ ಸಲುವಾಗಿ ಮಾಡುವ ಸಾಧ್ಯತೆಯಿಲ್ಲದಿದ್ದರೆ ಕಾಲದ ಮರ್ಯಾದೆ ಮಾಡಿಯಾದರೂ ಅವುಗಳ ತ್ಯಾಗ ಮಾಡಬೇಕಾಗುವುದೆಂಬುದೇ ಇಲ್ಲಿ ತಿಳಿದುಕೊಳ್ಳುವ ವಿಶೇಷತೆಯಿದೆ.

**ಖಾದ್ಯ ಪದಾರ್ಥಗಳ ಅವಧಿ :-** ಇಲ್ಲಿ ಅದೆಷ್ಟೋ ವಸ್ತುಗಳಲ್ಲಂತೂ ಸ್ಪಷ್ಟ ತ್ರಸ ಜೀವಗಳ ಘಾತವಾಗುತ್ತದೆ ಮತ್ತು ಅದೆಷ್ಟೋ ವಸ್ತುವಿನಲ್ಲಿ ಏಕಕಾಲದಲ್ಲಿ ಅನಂತ ಜೀವಗಳ ಸಮೂಹದ ಘಾತವಾಗುತ್ತದೆ. ಹುಳುಕು ಧಾನ್ಯದಲ್ಲಿ ಸಾವಿರಾರು ನುಸಿ, ದೂಮೆಗಳು ಹರಿದಾಡುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಕುಟ್ಟೆ ಹಿಡಿದ ಧಾನ್ಯ ತಿನ್ನುವದರಿಂದ ಅಪರಿಮಿತ ತ್ರಸ ಜೀವಗಳ ಘಾತವಾಗುತ್ತದೆ. ಯಾವ ಗೃಹಸ್ಥನು ಧಾನ್ಯದ ಸಂಗ್ರಹ ಮಾಡಿ ಇಡುತ್ತಾನೆ ಅವನಿಗೆ ನಿತ್ಯವೂ ಹುಳು ಹತ್ತಿದ ಧಾನ್ಯ ತಿನ್ನುವುದರಿಂದ ಮಹಾಪಾಪದ ಬಂಧವಾಗುತ್ತದೆ. ಆದುದರಿಂದ ಪಾಪದಿಂದ ಭಯಭೀತರಿರುವಂಥ ಜೈನರು ಕುಟ್ಟೆ ಹಿಡಿಯದ ಧಾನ್ಯವನ್ನು ಕೊಂಡುಕೊಳ್ಳಬೇಕಾಗುವುದು ಮತ್ತು ಎರಡು ತಿಂಗಳುಗಳವರೆಗಿನ ಖರ್ಚದ ಸಲುವಾಗಿ ಸಂಗ್ರಹ ಮಾಡಬೇಕಾಗುವುದು. ಎರಡು ತಿಂಗಳಲ್ಲಿ ತಿಂದು ತೀರಿಸಿದ ನಂತರ ಪುನಃ ಕುಟ್ಟೆ ಹಿಡಿಯದ ಧಾನ್ಯವನ್ನು ನೋಡಿ ಕೊಂಡುಕೊಳ್ಳಬೇಕಾಗುವುದು.

ಸ್ವಲ್ಪ ಸಂಗ್ರಹವಿದ್ದರೆ ಸರಿಯಾಗಿ ಶೋಧಿಸಿ ತೆಗೆದುಕೊಳ್ಳಲಾಗುತ್ತದೆ, ಯತ್ನಾಚಾರದಿಂದ ಅದರ ಸುರಕ್ಷೆಯಾಗಿ ಹೋಗುತ್ತದೆ. ಒಂದು ವೇಳೆ ಹುಳು ಹತ್ತುವಂತೆ ಕಂಡು ಬಂದರೆ ಬದಲಿಸಿ ಬೇರೆ ತರಿಸಿಕೊಳ್ಳಬೇಕು. ಹುಳು ಹಿಡಿಯದಂಥವನ್ನು ನಾಲ್ಕು ಕಡೆ ನೋಡಿ ತರಬೇಕು. ಹೆಚ್ಚು ಧಾನ್ಯ ಸಂಗ್ರಹ ಮಾಡಿದ್ದರೆ ಯಾರಿಗಾದರೂ ಕೊಡುವ ಸಾಧ್ಯತೆಯಿಲ್ಲ, ಸ್ವಚ್ಛ ಮಾಡುವ ಸಾಧ್ಯತೆಯಿಲ್ಲ, ಬದಲಿಸುವ ಸಾಧ್ಯತೆಯಿಲ್ಲ, ಹೆಚ್ಚು ಹುಳು ಹಿಡಿದಿದ್ದರೆ ಮತ್ತು ಅವನ್ನು

ತಿನ್ನಲೇಬೇಕಾಗಿದ್ದಾಗ ದಿನಾಲೂ ಕೇರಿ-ಕೇರಿ ಕ್ರಿಮಿಗಳನ್ನು ಪಾತ್ರೆಯಲ್ಲಿ ತುಂಬಿಕೊಂಡು ಮಾರ್ಗದ ಮೇಲೆ ಒಯ್ದು ಎಸೆದರೆ ಅಲ್ಲಿ ಮನುಷ್ಯರು ಹಾಗೂ ದನ-ಕರುಗಳ ಕಾಲ ಕೆಳಗೆ ಸಿಕ್ಕು ಸತ್ತು ಹೋಗುತ್ತವೆ ಮತ್ತು ಕಾಗೆ-ಗುಬ್ಬಿಗಳಂಥ ಪಕ್ಷಿಗಳು ಆಯ್ದುಕೊಂಡು ತಿಂದು ಹಾಕುತ್ತವೆ.

ಧಾನ್ಯದಲ್ಲಿ ಒಮ್ಮೆ ಜೀವಗಳ ಉತ್ಪತ್ತಿಯಾಗತೊಡಗಿದರೆ ದಿನ-ಪ್ರತಿದಿನವೂ ಎರಡು, ನಾಲ್ಕು, ನೂರು, ಸಾವಿರ ಗುಣಿತದಿಂದ ಹೆಚ್ಚುತ್ತಲೇ ಹೋಗುತ್ತವೆ. ಮನೆಯಲ್ಲಿ ಎಲ್ಲ ಕಡೆಗೆ ಎಂದರೆ ಪಡಸಾಲೆಯಲ್ಲಿ ನಡು ಮನೆಯಲ್ಲಿ, ಕೋಣೆಯಲ್ಲಿ, ಅಡಿಗೆ ಮನೆಯಲ್ಲಿ, ಗೋಡೆಯ ಮೇಲೆ, ತಿನ್ನುವ ವಸ್ತುಗಳ ಮೇಲೆ, ನೆಲದ ಮೇಲೆ ಲಕ್ಷಾಂತರ-ಕೋಟ್ಯಂತರ ಜೀವಗಳು ಹರಡಿ ಅಲೆದಾಡತೊಡಗುತ್ತವೆ. ಆದುದರಿಂದ ಲೋಭದ ವಶವಾಗಿ, ಪ್ರಮಾದದ ವಶವಾಗಿ, ಅಭಿಮಾನದ ವಶವಾಗಿ ಅಧಿಕ ಸಂಗ್ರಹವನ್ನು ಮಾಡಬಾರದು. ಹೆಸರು, ಉದ್ದು, ಕಾಡ ಹೆಸರು ಮತ್ತು ಉಳಿದ ಫಲ ಮೊದಲಾದವುಗಳ ಮೇಲೆ ಬೆಳ್ಳಗಿರುವ ವರ್ಣವು ಸ್ಪಷ್ಟವಾಗಿ ಕಂಡು ಬರತೊಡಗಿದರೆ ಅವುಗಳಲ್ಲಿ ತ್ರಸ ಜೀವಗಳ ಉತ್ಪತ್ತಿಯಾಗಿ ಹೋಗಿದೆಯೆಂದುಕೊಂಡು ಅವನ್ನು ತಿನ್ನಬಾರದು.

ಮಳೆಗಾಲದ ಸಮಯದ ನಾಲ್ಕು ತಿಂಗಳುಗಳಲ್ಲಿ ಅದೆಷ್ಟೋ ವಸ್ತುಗಳದಂತೂ ಸಂಗ್ರಹವನ್ನೇ ಇಡಬಾರದು. **ನಗರ-ಶಹರಗಳಲ್ಲಿ ವಾಸಮಾಡುವುದರ ಲಾಭವೇನೆಂದರೆ** ಯಾವ ಸಮಯ ಬೇಕು ಅದೇ ಸಮಯದಲ್ಲಿ ನಾಲ್ಕಾರು-ಐದು-ಹತ್ತು ದಿವಸಗಳ ಖರ್ಚಿನ ಸಲುವಾಗಿ ಎಷ್ಟು ಅವಶ್ಯಕತೆಯಿದೆ ಅಷ್ಟೇ ಹತ್ತಾರು ಕಡೆಗೆ ಹುಡುಕಿ ಸ್ವಚ್ಛ ನಿರ್ದೋಷವಿರುವ ಸಾಮಾನುಗಳನ್ನು ನೋಡಿ ಕೊಂಡುಕೊಳ್ಳಬಹುದಾಗಿದೆ. ವರ್ಷಾಋತುವಿನಲ್ಲಿ ಬೆಲ್ಲ, ಸಕ್ಕರೆ, ಕಾಕಂಬಿ ಮೊದಲಾದವುಗಳಲ್ಲಿ ಬಹಳಷ್ಟು ಇರುವೆ, ದೊಡ್ಡ ಇರುವೆ, ದೋಮೆಗಳಾಗುತ್ತವೆ. ಶುಂಠೀ, ಅಜವಾನ, ಏಲಕ್ಕಿ, ಗೋಡಂಬೆ, ಅಡಿಕೆಗಳು ಹುಳುಕಾಗುತ್ತವೆ; ದ್ರಾಕ್ಷ, ಪಿಸ್ತಾ, ಉತ್ತತ್ತಿ, ಕೊಬ್ಬರಿ ಇವೇ ಮೊದಲಾದವುಗಳಲ್ಲಿ ಎಣಿಕೆಯಿಲ್ಲದಷ್ಟು ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಕ್ರಿಮಿಗಳು ಉತ್ಪನ್ನವಾಗುತ್ತವೆ.

**ಮೂಡಣ ಗಾಳಿಯ ಸಂಯೋಗದಿಂದಲೇ ಬೆಲ್ಲ ಮೊದಲಾದವುಗಳಲ್ಲಿ ಪ್ರಮಾಣ ರಹಿತ ಜೀವಗಳ ಉತ್ಪತ್ತಿಯಾಗುತ್ತದೆ.** ಮರ್ಯಾದೆ ಮೀರಿದ ಲಾಡು,ಪೇಡೆ, ಬರ್ಫೀ ಇತ್ಯಾದಿಗಳಲ್ಲಿ ದೂಮೆ ಮೊದಲಾದ ಬಹಳಷ್ಟು ಜೀವಗಳು ಉತ್ಪನ್ನವಾದದ್ದು ಸ್ಪಷ್ಟವಾಗಿ ಕಂಡುಬರುತ್ತವೆ. ವರ್ಷಾಋತುವಿನಲ್ಲಿ ಅರಿಶಿಣ, ಹವೀಜ, ಜೀರಿಗೆಗಳಲ್ಲಿ ಬಹಳಷ್ಟು ತ್ರಸ ಜೀವಗಳು ಉತ್ಪನ್ನವಾಗಿ ಹೋಗುತ್ತವೆ. ಆದುದರಿಂದ ಈ ಪದಾರ್ಥಗಳ ಸಂಗ್ರಹ ಕಡಿಮೆ ಮಾಡಬೇಕು. ದಿನಾಲು ನೋಡಿ ಶೋಧಿಸಿ ಅವುಗಳ ಉಪಯೋಗ ಮಾಡಬೇಕು. ಧರ್ಮವು ಯತ್ನಾಚಾರವೇ ಇರುತ್ತದೆ. ಯಾವುದೇ ಹಿಟ್ಟನ್ನು ಶೀತ ಋತುವಿನಲ್ಲಿ ಏಳು ದಿವಸ, ಗ್ರೀಷ್ಮ ಋತುವಿನಲ್ಲಿ ಐದು ದಿವಸ ವರ್ಷಾಋತುವಿನಲ್ಲಿ ಮೂರು ದಿವಸಕ್ಕಿಂತ ಹೆಚ್ಚಿಗೆ ತಿನ್ನಬಾರದು. ಹಿಟ್ಟಿನ ಸಂಗ್ರಹ ಮಾಡಬಾರದು. ಹಿಟ್ಟಿನಲ್ಲಿ ಬಹಳಷ್ಟು ದೋಮೆಗಳು ಉತ್ಪನ್ನವಾಗುತ್ತವೆ. ಬೇಳೆ, ಅಕ್ಕಿ ಇತ್ಯಾದಿಗಳನ್ನು ಕುದಿಸುವಾಗಂತೂ ಎರಡು-ಮೂರು ಬಾರಿ ಚನ್ನಾಗಿ ಶೋಧಿಸಿಯೇ ಕುದಿಸಬೇಕು.

**ಪ್ರಶ್ನೋತ್ತರ ಶ್ರಾವಕಾಚಾರದಲ್ಲಿ 'ಸರ್ವಾಶನಂ ಚ ನ ಗ್ರಾಹ್ಯಂ ದಿನದ್ವಯಯುತಂ ನರೈಃ!'** ಎಂದು ಹೇಳಿದ್ದಾರೆ. ಎಂದರೆ ಎರಡು ದಿವಸಕ್ಕಿಂತ ಹೆಚ್ಚು ಹಳೆಯದಾದ ಸಮಸ್ತ ಭೋಜವನ್ನು ತಿನ್ನಬಾರದು. ಆದುದರಿಂದ ಒಂದು ರಾತ್ರಿಯು ಕಳೆದು ಹೋದ ನಂತರ ಎರಡನೆಯ ರಾತ್ರಿಯು ಕಳೆದುಹೋದರೆ ಆ ಆಹಾರವು ಮನುಷ್ಯರಿಗೆ ತಿನ್ನಲು ಯೋಗ್ಯ ಉಳಿಯುವುದಿಲ್ಲ, ಇದರಲ್ಲಿ ನೀರಿನ ಸಂಸರ್ಗದೊಡನಿರುವ ಸಮಸ್ತ ಮಿಷ್ಟಾನ್ನ ಮೊದಲಾದುವೆಲ್ಲವೂ ಬಂದು ಬಿಡುವವು. ಕಜ್ಜಾಯ, ಹೋಳಿಗೆ, ಹಲ್ವ ಮೊದಲಾದವು ಹಾಗೂ ಉದ್ದಿನವಡೆ, ಉದ್ದಿನ ಪುರಿ ಹಳಸಿ ಹೋದ ಮೇಲೆ ಚಲಿತ ರಸವಾಗಿ ಹೋಗುತ್ತವೆ. ಸ್ವಾದವು ಕೆಟ್ಟು ಹೋಗುತ್ತವೆ. ಏಕೆಂದರೆ ಅವುಗಳಲ್ಲಿ ನೀರಿನ ಪ್ರಯೋಗವು ಅಧಿಕವಿರುತ್ತದೆ. ರೊಟ್ಟಿ, ಖಿಚಡಿ, ತರಕಾರಿ, ತಂಗುಳವನ್ನಂತೂ ಎಂದೂ ತಿನ್ನಬಾರದು. ಸ್ವಾದವು ಕೆಟ್ಟು ಹೋಗಿದ್ದರೆ ಅದೇ ದಿವಸ ಕೂಡ ತಿನ್ನಬಾರದು.

**ರಾತ್ರಿಯಲ್ಲಿ ತಯಾರಿಸಿದ ಯಾವ ಆಹಾರವನ್ನೂ ಭಕ್ಷಣೆ ಮಾಡಬಾರದು.** ಮೊದಲನೆಯ ದಿವಸ ಹೆಪ್ಪು ಇಟ್ಟ ಮೊಸರನ್ನು ಮರುದಿವಸದವರೆಗೆ ತಿನ್ನಬೇಕು, ಹೆಚ್ಚು ದಿವಸ ತಿನ್ನಬಾರದು. **ದ್ವಿದಳ ಧಾನ್ಯವನ್ನು-ಯಾವುದೇ**

**ಬೇಳೆಯನ್ನು ಮೊಸರು - ಮಜ್ಜಿಗೆಯ ಜತೆ ಸೇರಿಸಿ ತಿನ್ನಬಾರದು.** ಅವನ್ನು ಸೇರಿಸಿ ತಿನ್ನುವುದರಲ್ಲಿ ದ್ವಿದಳದ ದೋಷ ತಗಲುವುದು. ನಾಲಿಗೆಯ ಕೆಳಗೆ ಕಂಠದಲ್ಲಿ ತಲುಪುತ್ತಿರುವಂತೆಯೇ ಅದರಲ್ಲಿ ಸಮ್ಮೂರ್ಚ್ಛನ ಜೀವದ ಉತ್ಪತ್ತಿಯಾಗುವುದನ್ನು ದ್ವಿದಳವೆಂದು ಹೇಳುತ್ತಾರೆ. ಹಾಲನ್ನು ಹಿಂಡಿ ತಂದ ನಂತರ ಶೋಧಿಸಿ ಎರಡು ಗಳಿಗೆಯ ಮೊದಲೇ ಕಾಯಿಸಿ ಇಟ್ಟುಕೊಳ್ಳಬೇಕು. ಅನಂತರ ಸಮ್ಮೂರ್ಚ್ಛನ ತ್ರಸ ಜೀವಗಳ ಉತ್ಪತ್ತಿಯಾಗಲಾರಂಭಿಸುತ್ತದೆ. ಬೆಣ್ಣೆಯನ್ನು ಕೂಡ ಮಜ್ಜಿಗೆಯೊಳಗಿಂದ ತೆಗೆದನಂತರ ಕೂಡಲೇ ಕಾಯಿಸಿ ಶೋಧಿಸಿದರೆ ತಿನ್ನಲು ಯೋಗ್ಯವಾಗುತ್ತದೆ. ಕಾಯಿಸದೆ ಶೋಧಿಸದೆ ತಿನ್ನಬಾರದು.

**ಚರ್ಮದ ಪಾತ್ರೆಯಲ್ಲಿರಿಸಿದ ತುಪ್ಪ, ಎಣ್ಣೆ, ನೀರು ಮೊದಲಾದವು ತಿನ್ನಲು-ಕುಡಿಯಲು ಯೋಗ್ಯವಿಲ್ಲ ಅದರಲ್ಲಿ ಅಸಂಖ್ಯಾತ ತ್ರಸ ಜೀವಗಳು ಉತ್ಪನ್ನವಾಗುತ್ತವೆ.** ಚರ್ಮದ ಬುಡ್ಡಿ, ಪಾತ್ರೆಗಳಾಗುತ್ತವೆ ಅವನ್ನು ಭೂಮಿಯಲ್ಲಿ ಮಾಂಸವನ್ನು ಹೂಳಿ ಅನಂತರ ಕುಟ್ಟು ಮಣ್ಣಿನ ಪಡಿಯಚ್ಚುಗಳ ಮೇಲೆ ನಿರ್ಮಿಸುತ್ತಾರೆ. ಅವನ್ನು ಸ್ಪರ್ಶ ಮಾಡಿದ ತುಪ್ಪ, ಎಣ್ಣೆ, ನೀರು ಮೊದಲಾದವು ಮಾಂಸದ ಸಮಾನವೇ ಇವೆ. ಮುಸಲ್ಮಾನರ ರಾಜ್ಯವು ಆರಂಭವಾದಂದಿನಿಂದ ಇವುಗಳ ಪ್ರವೃತ್ತಿಯನ್ನು ಮುಸಲ್ಮಾನರೇ ಆರಂಭಿಸಿದ್ದಾರೆ. ಒಂದು ವೇಳೆ ಚರ್ಮದಿಂದ ಸ್ಪರ್ಶವಾಗದ ತುಪ್ಪ ಮೊದಲಾದವು ದೊರಕದಿದ್ದರೆ ಹಾಗೆಯೇ ಭೋಜನ ಮಾಡಬೇಕು. ಫಾಲ್ಗುಣ ಮಾಸದ ನಂತರ ಎಳ್ಳು ಮತ್ತು ಸಿಂಘಾಡದಲ್ಲಿ ತ್ರಸ ಜೀವಗಳ ಉತ್ಪತ್ತಿಯು ಅಧಿಕವಾಗುತ್ತಿರುವುದರಿಂದ ಫಾಲ್ಗುಣದ ನಂತರ ಎಳ್ಳು ಅಥವಾ ಸಿಂಘಾಡಾವನ್ನೆಂದೂ ತಿನ್ನಬಾರದು.

**ನೀರನ್ನು ದಪ್ಪವಾದ ಎರಡು ಪದರಿನ ಬಟ್ಟೆಯಿಂದ ಶೋಧಿಸಿ ಕುಡಿಯಬೇಕು, ಇತರರಿಗೆ ಕೂಡ ಶೋಧಿಸಿಯೇ ಕುಡಿಯಲು ಕೊಡಬೇಕು.** ಶೋಧಿಸಿಯೇ ಪಶುಗಳಿಗೆ ಕುಡಿಸಬೇಕು. ಶೋಧಿಸದ ನೀರಿನಿಂದ ಸ್ನಾನ, ಭೋಜನ, ಬಟ್ಟೆ ತೊಳೆಯುವುದು ಇತ್ಯಾದಿ ಯಾವುದೇ ಕ್ರಿಯೆಯನ್ನು ಮಾಡಬಾರದು. ನೀರಿನಲ್ಲಿ ಯತ್ನಾಚಾರದ ಕ್ರಿಯೆ ಮಾಡುವುದರಿಂದ ದಯಾಳುತನದ ಪ್ರವೃತ್ತಿಯಿರುತ್ತದೆ. ಪಾತ್ರೆಯ ಮುಖದ ಮೂರರಷ್ಟು ಉದ್ದ-ಅಗಲವಿರುವ ಎರಡು ಪದರಿನ ಹೊಸ ಬಟ್ಟೆಯಿಂದ ನೀರು ಶೋಧಿಸಿ, ಜೀವಾಳವನ್ನು ಬೇರೆ ಪಾತ್ರೆಯಲ್ಲಿ ತೆಗೆದುಕೊಂಡು ನೀರು ತಂದ ಸ್ಥಾನದಲ್ಲಿ ತಲುಪಿಸ ಬೇಕಾಗುವುದು. ನೀರಿನಲ್ಲಿ ಇದುವೇ ಯತ್ನಾಚಾರದ ಮರ್ಯಾದೆಯಿದೆ. ಶೋಧಿಸಿದ ನಂತರ ಎರಡು ಗಳಿಗೆ ಮರ್ಯಾದೆಯಿದೆ, ಅನಂತರ ಕಾರ್ಯದಲ್ಲಿ ತೆಗೆದುಕೊಳ್ಳುವುದಿದ್ದರೆ ಪುನಃ ಶೋಧಿಸಿಯೇ ಬಳಸಬೇಕು. ಕಾಯಿಸಿದ ನೀರನ್ನು ಎರಡು ಪ್ರಹರದವರೆಗೆ ಉಪಯೋಗಿಸಬಹುದು. ಕುದಿ ಬರುವವರೆಗೆ ಕಾಯಿಸಿದ್ದರೆ ಎಂಟು ಪ್ರಹರದವರೆಗೆ ಬಳಸಬಹುದಾಗಿದೆ. ಅದರ ನಂತರ ಶೋಧಿಸದೆ ಕೆಲಸಕ್ಕೆ ಬರುವುದಿಲ್ಲ, ಉಪಯೋಗಿಸುವಂತಿರುವುದಿಲ್ಲ.

**ಕಂದಮೂಲ ತ್ಯಾಗ :-** ಅದೆಷ್ಟೋ ವಸ್ತುಗಳನ್ನು ತಿನ್ನುವುದರಲ್ಲಿ ತ್ರಸ ಜೀವಗಳ ಘಾತವಾಗುವುದನ್ನು ತಿಳಿದುಕೊಂಡು ಅವನ್ನು ಸರ್ವಥಾ ತಿನ್ನಬಾರದು. ಹೇಗೆಂದರೆ ಬೋರೆಯ ಹಣ್ಣಂತೂ ಪ್ರತ್ಯಕ್ಷ, ಕ್ರಿಮಿಗಳ ಸ್ಥಾನವಿದೆ, ಬೆಂಡೆಕಾಯಿಯಲ್ಲಿ ಬಹಳಷ್ಟು ಕ್ರಿಮಿಗಳು ಉತ್ಪನ್ನವಾಗುತ್ತವೆ, ಬದನೇಕಾಯಿ, ಕಲ್ಲಂಗಡಿ, ಬೂದುಕುಂಬಳಕಾಯಿ, ನೇರಲೆ ಹಣ್ಣು, ಅಂಜೀರಹಣ್ಣು, ಅತ್ತಿಹಣ್ಣು, ಆಲೂಗಡ್ಡೆ, ಕವಳೀಹಣ್ಣು, ಅಜ್ಞಾತಫಲ, ಸೂಕ್ಷ್ಮಫಲ, ಬೀಜಫಲ, ಚಲಿತರಸಫಲ, ಸಾರಫಲ, ಪತ್ರಶಾಕ, ಕಂದಮೂಲ, ಹಸಿಶುಂಠಿ, ಮೂಲಂಗಿ, ಉಳ್ಳಾಗಡ್ಡೆ, ಬೆಳ್ಳುಳ್ಳಿ, ಗಜ್ಜರೆ, ಗೆಣಸು, ಕಂಚಿವಾಳ, ಮಧೂಕ, ಇಪ್ಪೆ, ಕ್ಷೀರ ವೃಕ್ಷದಫಲ, ಬೇವಿನಹಣ್ಣು ಇತ್ಯಾದಿ ಅನೇಕ ಫಲ, ತಾಳೇಹೂವು ಮೊದಲಾದ ಹೂವುಗಳಲ್ಲಂತೂ ಸ್ಪಷ್ಟ ಪ್ರತ್ಯಕ್ಷ ದೋಷಗಳಿವೆ ಆಗಮದಲ್ಲಿ ಕೂಡ ಹೇಳಿದ್ದಾರೆ. ಈ ಪ್ರಕಾರವಾಗಿ ವನಸ್ಪತಿಯ ಸ್ವರೂಪವನ್ನು ಪರಮಾಗಮದಿಂದ ತಿಳಿದುಕೊಳ್ಳಬೇಕು.

**ವನಸ್ಪತಿ ತ್ಯಾಗ :-** ಒಂದು ಪ್ರತ್ಯೇಕ ಮತ್ತು ಇನ್ನೊಂದು ಸಾಧಾರಣವೆಂದು ವನಸ್ಪತಿಯಲ್ಲಿ ಎರಡು ಭೇದಗಳಿವೆ. ಪ್ರತ್ಯೇಕದಲ್ಲಂತೂ ಒಂದು ಶರೀರದಲ್ಲಿ ಒಂದು ಜೀವವಿರುತ್ತದೆ ಮತ್ತು ಸಾಧಾರಣವಾದ ಒಂದು ಶರೀರದಲ್ಲಿ ಅನಂತಾನಂತ ಜೀವಗಳಿರುತ್ತವೆ. ಸಾಧಾರಣ ವನಸ್ಪತಿಯನ್ನು ತಿನ್ನುವುದರಿಂದ ಅನಂತಾನಂತ ಜೀವಗಳ ಘಾತವಾಗುತ್ತದೆಯೆಂದು ತಿಳಿದುಕೊಂಡು ಅದರ ತ್ಯಾಗ ಮಾಡುವುದೇ ಉಚಿತವಿದೆ.

**ಸಾಧಾರಣ ಮತ್ತು ಪ್ರತ್ಯೇಕವನ್ನು ಗುರುತಿಸುವ ಲಕ್ಷಣವು ಹೀಗಿದೆ -** ಯಾವ ವನಸ್ಪತಿಯ ಗೀರು ಪ್ರಕಟವಾಗಿರುವುದಿಲ್ಲ, ರೇಖೆಯು ಕೂಡ ಕಂಡು ಬರುವುದಿಲ್ಲ, ಮೊಗ್ಗೆಯು ಪ್ರಕಟವಾಗಿರುವುದಿಲ್ಲ, ಹೊರಮೈ ಪ್ರಕಟವಾಗಿಲ್ಲ, ಅದನ್ನು ಮುರಿಯುವುದರಿಂದ ಸಮಭಾಗವಾಗಿ ಹೋಗುವುದು, ಕಾಂಡ ಮುರಿಯುವುದಿಲ್ಲ, ಯಾವುದರಲ್ಲಿ ಸ್ನಿಗ್ಧ ತಂತುವು ಪ್ರಕಟವಾಗಿಲ್ಲ ಅದು **ಸಾಧಾರಣ ವನಸ್ಪತಿಯಿದೆ.** ಇದರ ಒಂದು ಅಣುಮಾತ್ರದಲ್ಲಿ ಅನಂತಾನಂತ ಜೀವಗಳಿರುತ್ತವೆ. ಯಾವ ವನಸ್ಪತಿಯಲ್ಲಿ ತಂತು, ಎಳೆ, ರೇಷೆಗಳು ಸ್ಪಷ್ಟವಾಗಿ ಕಂಡು ಬರುತ್ತವೆ ಅದು ಸಾಧಾರಣವಿಲ್ಲ, ಆದರೆ ಪ್ರತ್ಯೇಕ ವನಸ್ಪತಿಯಿದೆ. ಅದನ್ನು ಮುರಿಯುವುದರಿಂದ ಅಂಕುಡೊಂಕಾಗಿ ಮುರಿಯುವುದು, ಚೂರಿಯಿಂದ ಕತ್ತರಿಸಿದಂತೆ ಸರಿಯಾಗಿ ತುಂಡಾಗುವುದಿಲ್ಲ, ಯಾವುದರಲ್ಲಿ ತಂತು, ರೇಷೆಗಳು ಪ್ರಕಟವಾಗಿವೆ ಅದು **ಪ್ರತ್ಯೇಕ ವನಸ್ಪತಿಯಿದೆ.**

ಒಂದು ವನಸ್ಪತಿಯು ಮೊದಲು ಸಾಧಾರಣವಿದ್ದು ಅದು ಒಂದು ಅಂತರ್ಮುಹೂರ್ತದಲ್ಲಿ ಪ್ರತ್ಯೇಕವಾಗಿ ಹೋಗುತ್ತದೆ. ಒಂದು ಸಾಧಾರಣವಾಗಿಯೇ ಉಳಿದುಕೊಳ್ಳುತ್ತದೆ. ಫಲ, ಪತ್ರ, ಪುಷ್ಪ, ಬೀಜ, ಅಂಕುರ, ಚಿಗುರೆಲೆ ಇತ್ಯಾದಿಗಳೆಲ್ಲವು ಸಾಧಾರಣ-ಪ್ರತ್ಯೇಕದ ಗುರುತು ಇವೆಯೆಂದು ತಿಳಿಯುವುದು. ಎಲೆಯಲ್ಲಿ ಸಮಭಾಗವಾದರೆ ಸಾಧಾರಣ ಎಲೆಯಿದೆ. ಉಳಿದ ವೃಕ್ಷವೆಲ್ಲವೂ ಸಾಧಾರಣವಿಲ್ಲ, ಬೀಜ, ಚಿಗುರೆಲೆ ಸಮಭಂಗವುಳ್ಳದ್ದಿದ್ದು ರೇಷೆ ಮೊದಲಾದವು ಪ್ರಕಟವಾಗಿರದಿದ್ದರೆ ಆ ಎಲ್ಲ ಬೀಜ-ಚಿಗುರೆಲೆಗಳು ಸಾಧಾರಣವಿವೆ, ಅನ್ಯ ಸಾಧಾರಣವಿಲ್ಲ.

ಈ ಪ್ರಕಾರ ಈ ವನಸ್ಪತಿಯಲ್ಲಿ ಒಂದು ಸಾಧಾರಣ ಸಿಗುತ್ತದೆ ಒಂದು ಪ್ರತ್ಯೇಕವಾಗಿ ಹೋಗುತ್ತದೆ ಇತ್ಯಾದಿ ದೋಷರೂಪವಿವೆ. ವನಸ್ಪತಿಯಲ್ಲಿ ಸಂಸರ್ಗದಿಂದ ಅನೇಕ ತ್ರಸ ಜೀವಗಳ ಉತ್ಪತ್ತಿಯಾಗುತ್ತದೆಯೆಂದು ತಿಳಿದುಕೊಂಡು **ಶ್ರೀ ಜಿನೇಂದ್ರದೇವರ ಧರ್ಮವನ್ನು ಧಾರಣ ಮಾಡಿ ಪಾಪದಿಂದ ಭಯಭೀತವಿರುವವರೆಲ್ಲರು ಹರಿತ ಕಾಯದ ತ್ಯಾಗ ಮಾಡಬೇಕು, ರಸನೇಂದ್ರಿಯವನ್ನು ವಶದಲ್ಲಿಟ್ಟುಕೊಳ್ಳಬೇಕು.** ಸಮಸ್ತ ಹರಿತಕಾಯವನ್ನು ತ್ಯಾಗ ಮಾಡುವ ಸಾಮರ್ಥ್ಯವಿಲ್ಲದವರು ಕಂದಮೂಲ ಮೊದಲಾದ ಅನಂತಕಾಯಗಳನ್ನಂತೂ ಆಜೀವನದ ಸಲುವಾಗಿ ತ್ಯಾಗ ಮಾಡಬೇಕು. ತ್ರಸಜೀವಗಳಿಂದ ತುಂಬಿಕೊಂಡಿರುವಂಥ ಉದುಂಬರ ಫಲ,ಪುಷ್ಪ, ಪತ್ರ ಮೊದಲಾದುವನ್ನು ತಿನ್ನುವುದರ ತ್ಯಾಗ ಮಾಡಿ, ತ್ರಸಘಾತರಹಿತವಾಗಿ ಕಂಡು ಬರುವಂಥ ತರಕಾರೀ, ಫಲ ಮೊದಲಾದ ಹತ್ತಿಪ್ಪತ್ತನ್ನು ತಮ್ಮ ಪರಿಣಾಮಕ್ಕೆ ಯೋಗ್ಯವೆಂದು ತಿಳಿದುಕೊಂಡು ನಿಯಮ ತೆಗೆದುಕೊಳ್ಳಬೇಕು. ಇವುಗಳಲ್ಲದೆ ಒಟ್ಟು ಇಪ್ಪತ್ತೆಂಟು ಲಕ್ಷ ಕೋಟಿ ವನಸ್ಪತಿ ಕಾಯಗಳಿವೆ. ಅವುಗಳ ತ್ಯಾಗ ಮಾಡಿ ತಮ್ಮ ಭಾರವನ್ನು ಇಳಿಸಿ ಇಡಬೇಕಾಗುವುದು.

ಪ್ರಾಮಾಣಿಕವಾಗಿ ಹರಿತಕಾಯದ ನಿಯಮ ಮಾಡುವವನಿಗೆ ಕೋಟ್ಯಂತರ ಅಭಕ್ಷ್ಯಗಳು ಬಿಟ್ಟು ಹೋಗುತ್ತವೆ. ಅದರಲ್ಲಿ ತೊಪ್ಪಲು ಜಾತಿಯಂತೂ ತಿನ್ನಲು ಯೋಗ್ಯವೇ ಇಲ್ಲ. ತ್ರಸದ ಉತ್ಪತ್ತಿಯುಳ್ಳವುಗಳನ್ನು ಬಿಟ್ಟುಕೊಟ್ಟು ಉಳಿದವುಗಳನ್ನೂ ಬಹಳಷ್ಟು ಕಡಿಮೆಮಾಡಿ ನಿಯಮ ತೆಗೆದುಕೊಳ್ಳಬೇಕು. ಕಡಿಮೆಮಾಡದೆ ನಿರರ್ಗಲವಾಗಿರುವುದರಿಂದ ಅಸಂಯಮತನದ ಆಸ್ರವವಾಗುತ್ತದೆ. ಆದುದರಿಂದ ಹರಿತಕಾಯ ತಿನ್ನುವುದರಲ್ಲಿ ವ್ರತ-ನಿಯಮ ಮಾಡುವುದು ಯೋಗ್ಯವಿದೆ.

ಯಾವ ಆಹಾರದ ಮೇಲೆ ಉಬ್ಬರವು ಬರುವುದು, ಮೇಲೆ ನೊರೆಯಂತೆ ನೀಲಿ, ಹಸಿರು, ಕೆಂಪು ಬಂದು ಬಿಟ್ಟರೆ ಆ ಆಹಾರವನ್ನು ತಿನ್ನಬಾರದು, ಅದರಲ್ಲಿ ಅನಂತ ಜೀವಗಳ ಘಾತವಾಗುತ್ತದೆ. ಯಾವುದರ ಮೇಲೆ ಭುರುಸು ಬಂದು ಬಿಡುವುದು ಅದನ್ನು ದೂರದಿಂದಲೇ ತ್ಯಾಗ ಮಾಡಿ ಬಿಡಬೇಕಾಗುವುದು.

ಮೋಹದ ಕಾರಣದಿಂದ ಪ್ರಮಾದವನ್ನುತ್ಪನ್ನ ಮಾಡುವಂಥ, ಜ್ಞಾನವನ್ನು ಕೆಡಿಸುವಂಥ ಹಾಗೂ ಉಪಸ್ಥ ಎಂದರೆ ಕಾಮೇಂದ್ರಿಯವನ್ನು ವಿಕಲ ಮಾಡುವಂಥ ಗಾಂಜ, ತಂಬಾಕು, ಅಫೀಮು, ಗುಡಗುಡಿ, ಜರ್ದಾ ಇವೇ ಮೊದಲಾದ ಅಭಕ್ಷ್ಯಗಳನ್ನು ತಿನ್ನುವುದು-ಸೇದುವುದನ್ನು ಜಿನಧರ್ಮಿಗಳು ತ್ಯಾಗಮಾಡುವುದು ಯೋಗ್ಯವಿದೆ. ಈ ಮಾದಕಗಳು ಪರಾಧೀನ ಮಾಡಿ ಬಿಡುತ್ತವೆ.

**ಅಫೀಮದ ತ್ಯಾಗ :-** ಅಫೀಮು ತಿನ್ನುವಂಥವನಿಗೆ ಒಂದು ವೇಳೆ ಒಂದೆರಡು ಗಂಟೆ ಅಫೀಮು ದೊರಕದಿದ್ದರೆ ಅವನು ಭೂಮಿಯ ಮೇಲೆ ಪ್ರಜ್ಞಾಹೀನನಾಗಿ ಹೊರಳಿ ಬೀಳುತ್ತಾನೆ. ವೇದನೆಯ ಆರ್ತ ಪರಿಣಾಮದಿಂದ ಪಶುವಿನಂತೆ

ನೆಲದ ಮೇಲೆ ಬಿದ್ದು ಕೈ-ಕಾಲುಗಳನ್ನು ಬಡಿಯುತ್ತಾನೆ, ನಿರ್ಲಜ್ಜನಾಗಿ ಯಾಚನೆ ಮಾಡುತ್ತಾನೆ, ಕಣ್ಣುಗಳಿಂದ ನೀರು ಸುರಿಯಲಾರಂಭಿಸುತ್ತದೆ, ರಸನೇಂದ್ರಿಯದ ಲೋಲುಪತೆಯು ವೃದ್ಧಿಸಿ ಹೋಗುತ್ತದೆ. ಸ್ವಾಧ್ಯಾಯ, ಧರ್ಮಶ್ರವಣ, ವ್ರತ, ಸಂಯಮ, ಉಪವಾಸ ಮೊದಲಾದವುಗಳನ್ನು ದೂರದಿಂದಲೇ ಬಿಟ್ಟು ಕೊಡುತ್ತಾನೆ, ಅವನ ಬುದ್ಧಿಯು ಧರ್ಮದಿಂದ ತೀರವಿಪರೀತವಾಗಿ ಹೋಗುತ್ತದೆ, ಉತ್ತಮ ಆಚರಣೆಗಳು ನಷ್ಟವಾಗಿ ಹೋಗುತ್ತವೆ.

**ಗುಡಗುಡಿಯ ತ್ಯಾಗಃ-** ಗುಡಗುಡಿಯ ಮಹಾಮಲಿನತೆ, ದುರ್ಗಂಧ, ತಂಬಾಕು ಮತ್ತು ಧೂಮ್ರದ ಯೋಗದಿಂದ ನೀರಿನಲ್ಲಿ ಜೀವಗಳ ಉತ್ಪತ್ತಿಯಾಗಿ ಹೋಗುತ್ತದೆ. ಗುಡಗುಡಿಯ ನೀರು ಎಲ್ಲಿ ಬೀಳುತ್ತದೆ ಅಲ್ಲಿ ಷಟ್‌ಕಾಯ ಜೀವಗಳ ಘಾತವಾಗುತ್ತದೆ. ಅದರ ದುರ್ಗಂಧದಿಂದ ಉತ್ತಮ ಆಚರಣೆ ಮಾಡುವಂಥವನು ಹತ್ತಿರದಲ್ಲಿ ಕುಳಿತುಕೊಳ್ಳುವ ಸಾಧ್ಯತೆಯಿಲ್ಲ ಗುಡಗುಡಿ ಸೇದುವಂಥವನು ಪುನಃ ಪುನಃ ಮನೆ-ಮನೆಯಲ್ಲಿ ಬೆಂಕಿಯನ್ನು ಹುಡುಕುತ್ತ ತಿರುಗುತ್ತಾನೆ. ಮನೆಯಲ್ಲಿ ಬೂದಿಯ ಪಾತ್ರೆಯನ್ನು ಇಟ್ಟೇ ಇರುತ್ತದೆ. ಗುಡಗುಡಿಯಂತೂ ನೀಚ ಕುಲವುಳ್ಳ ನೀಚ ಜನರುಗಳೇ ಸೇದಲು ಯೋಗ್ಯವಿದೆ. ಈ ಗುಡಗುಡಿ ಸೇದುವಂಥವನಿಗೆ ಚಕ್ಕಡಿಕಾರ, ಗವಳಿಗ, ಕುದುರೆ ಗಾಡಿ ನಡೆಸುವವ. ಮುಸಲ್ಮಾನ ಇಂಥವರ ಗೆಳತನವೇ ಒಳ್ಳೆಯದೆನಿಸುತ್ತದೆ. ಅವನು ಉತ್ತಮ ಕುಲವುಳ್ಳವರಿಗೆ ಯೋಗ್ಯನಿಲ್ಲ. ಒಂದು ವೇಳೆ ಗುಡಗುಡಿಯು ದೊರಕದಿದ್ದರೆ ನಾಪಿತ, ಮಡಿವಾಳ, ಗಾಣಿಗ, ಕಂಚಗಾರ, ಎಲೆಗಾರ, ಜಾಲಗಾರ, ಮುಸಲ್ಮಾನ ಮೊದಲಾದವರಿಂದ ಗುಡಗುಡಿ ಬೇಡಿ ಸೇದುತ್ತಾನೆ. ಒಂದು ವೇಳೆ ಕುಡಿಯದಿದ್ದರೆ ದೊಡ್ಡ ರೋಗವು ಉತ್ಪನ್ನವಾಗಿ ಬಿಡುತ್ತದೆ. ಅಜೀರ್ಣವಾಗಿ ಹೊಟ್ಟೆಯುಬ್ಬುತ್ತದೆ ಶೌಚವು ನಿಂತು ಹೋಗುತ್ತದೆ. ಗುಡಗುಡಿ ಸೇದುವವನಂತೂ ದೊಡ್ಡ ಸಂಕಟವನ್ನೇ ಕೊರಳಿಗೆ ಕಟ್ಟಿಕೊಂಡಿದ್ದಾನೆ. ಅದರಿಂದಾಗಿ ಅವನು ವ್ರತ, ಸಂಯಮ, ಉಪವಾಸ, ಸ್ವಾಧ್ಯಾಯಗಳಂಥ ಸಮಸ್ತ ಉತ್ತಮ ಕಾರ್ಯಗಳಿಗೆ ತಿಲಾಂಜಲಿ ಕೊಟ್ಟು ಬಿಡುತ್ತಾನೆ.

**ಜರ್ದಾತ್ಯಾಗ ಃ-** ಜರ್ದಾ ಮಹಾ ಅಪವಿತ್ರವಾದ ವಸ್ತುವಿದೆ. ಅದನ್ನು ತಿನ್ನುವಂಥವನು ಬಾಯಲ್ಲಿ ಇಟ್ಟುಕೊಂಡು ಮಲಮೂತ್ರ ಮಾಡಬಹುದಾಗಿದೆ. ಮಾರ್ಗದಿಂದ ಹೋಗುತ್ತಿರುವಾಗ ಮಲ-ಮೂತ್ರಾದಿಗಳ ಮೇಲೆ ಕಾಲೊಳಗೆ ಚಪ್ಪಲಿ ಹಾಕಿಕೊಂಡೇ ಜರ್ದಾ ತಿನ್ನುತ್ತಾನೆ. ಮಾಂಸ ಭಕ್ಷಕರ, ಮದ್ಯ ಕುಡಿಯುವವರ ನೀಚ ಜಾತಿಯ ಮನೆಯ ನೀರು ಬೆರೆಸಿದ ಸುಣ್ಣವನ್ನು ತಿಂದು ಬಿಡುತ್ತಾನೆ. ನೀಚ ಜಾತಿಯ ಜನರು ತಮ್ಮ ಕೈಗಳನ್ನು ತೊಳೆದುಕೊಳ್ಳದೆಯೇ ಅಧಮ ಅಂಗಗಳನ್ನು ಕೆರೆದುಕೊಂಡು ಅದೇ ಕೈಗಳಿಂದ ಜರ್ದಾಮಾಡಿ ಕೊಟ್ಟರೂ ಕೂಡ ತಿಂದು ಬಿಡುತ್ತಾನೆ. ಎಂಜಲದ ಜುಗುಪ್ಸೆಯನ್ನೂ ಮಾಡುವುದಿಲ್ಲ, ಮಲಗುವ ಸ್ಥಾನ, ಕುಳಿತುಕೊಳ್ಳುವ ಸ್ಥಾನ, ಮೂಲೆ, ಸಂದಿ, ಕಿಟಕಿ ಮೊದಲಾದ ಕಡೆಗಳಲ್ಲೆಲ್ಲ ಉಗುಳಿ-ಉಗುಳಿ ಹೊಲಸಿನಿಂದ ಲಿಪ್ತ ಮಾಡಿ ಬಿಡುತ್ತಾನೆ ಪಶುವು ಕೂಡ ದಾರಿಯಲ್ಲಿ ಹೋಗುತ್ತಿರುವಾಗ, ಮಲಗಿರುವಾಗ ಬಾಯಾಡಿಸುವುದಿಲ್ಲ, ಆದರೆ ಜರ್ದಾ ತಿನ್ನುವವನಿಗೆ ಪಶುವಿಗಿಂತಲೂ ಅಧಿಕ ವಿಕಲತೆಯಿದೆ. ಅವನ ಮುಖದಲ್ಲಿ ಯಾವಾಗಲೂ ಮಹಾದುರ್ಗಂಧವಿರುತ್ತದೆ. ಜರ್ದಾದ ಉಗುಳು ಎಲ್ಲಿ ಬೀಳುತ್ತದೆ ಅಲ್ಲಿ ನೊಣ, ಸೊಳ್ಳೆ, ಜೇಡಹುಳ, ಕ್ರಿಮಿ, ಕೀಟ ಮೊದಲಾದ ದೊಡ್ಡ ದೊಡ್ಡ ತ್ರಸಜೀವಗಳು ಕೂಡ ಸತ್ತು ಹೋಗುತ್ತವೆ. ಪಂಚಸ್ಥಾವರಗಳ ಘಾತವಂತೂ ಅಲ್ಲಿ ಆಗಿಯೇ ಆಗುತ್ತದೆ. ಇವನ ವ್ರತ, ಸಂಯಮ, ಉಪವಾಸ, ಸ್ವಾಧ್ಯಾಯ, ಜಪ, ಶುಭಭಾವನೆಗಳೆಲ್ಲವೂ ನಾಶವಾಗಿ ಹೋಗುತ್ತವೆ.

**ಜರ್ದಾ ತಿನ್ನುವವನ ಬುದ್ಧಿಯು ಆತ್ಮನ ಹಿತದಲ್ಲಿ ಪ್ರವರ್ತಿಸುವುದಿಲ್ಲ, ಸಂಯಮಯೋಗ್ಯವಾಗಿಯೂ ಇರುವುದಿಲ್ಲ,** ಅವನಲ್ಲಿ ದಯೆ, ಕ್ಷಮೆ, ಶೀಲ, ಇಂದ್ರಿಯ ವಿಜಯದ ಪರಿಣಾಮಗಳೆಂದೂ ಆಗುವುದಿಲ್ಲ, ಅವನ ಬುದ್ಧಿಯು ಅನೇಕ ಛಲ, ಕಪಟ, ವಂಚನೆಯಲ್ಲಿ ಪ್ರವೀಣವಾಗಿ ಹೋಗುತ್ತದೆ. ಅನೇಕ ವ್ಯಸನಗಳಲ್ಲಿ ತೊಡಗುತ್ತಾನೆ. ಜರ್ದಾ ತಿನ್ನುವವನಿಗೆ ಬೇಡುವಲ್ಲಿ ನಾಚಿಕೆಯೆನಿಸುವುದಿಲ್ಲ, ಸಮಸ್ತ ನೀಚ ಜಾತಿಯ ಜನರಿಂದಲೂ ಬೇಡಿ ತಿನ್ನುತ್ತಾನೆ. ಮದ್ಯ-ಮಾಂಸ ತಿನ್ನುವಂಥವನು ಯಾವಾಗ ಮದ್ಯ ಕುಡಿಯುತ್ತಾನೆ ಗುಡಗುಡಿ ಸೇದುತ್ತಾನೆ ಆಗ ಅಂಥ ಕೈಗಳಿಂದಲೇ ಜರ್ದಾ-ಬೀಡಿ ಬೇಡಿ-ಬೇಡಿ ಇವನು ತಿನ್ನುತ್ತಾನೆ.

**ಜರ್ದಾ ತಿನ್ನುವಂಥ ಬಹಳಷ್ಟು ಜನರನ್ನು ಒಳ್ಳೆಯ ರೀತಿಯಿಂದ ಹತ್ತಿರದಿಂದ ನೋಡಲಾಗಿದೆ- ಒಬ್ಬನಲ್ಲೂ ಕೂಡ ಪರಮಾರ್ಥದಬುದ್ಧಿ, ಪರಲೋಕ ಸುಧಾರಿಸುವ ಬುದ್ಧಿಯೇ ಇರುವುದಿಲ್ಲ,** ಈ ಜರ್ದಾದ ಪ್ರಭಾವದಿಂದ

ಹೀನ ಆಚರಣೆಯು ವೃದ್ಧಿಸಿ ಹೋಗುತ್ತದೆ ಮತ್ತು ಅವನ ಬುದ್ಧಿಯು ಪರಮಾರ್ಥದಿಂದ ಭ್ರಷ್ಟವಾಗಿ ಉಳಿದ ಜನರಂತೆ ಕಪಟದಲ್ಲಿ, ವ್ಯಭಿಚಾರದಲ್ಲಿ, ಲೋಭದಲ್ಲಿ ಪ್ರಬಲವಾಗಿ ಹೋಗುತ್ತದೆ. **ಜರ್ದಾ ತಿನ್ನುವವನಿಗೆ ನಿಜವಾದ ಧರ್ಮವಿರುವ ಸಾಧ್ಯತೆಯಿಲ್ಲ.** ಈ ಪ್ರಕಾರ ತನ್ನ ಪರಿಣಾಮವನ್ನು ತಾನು ಸ್ವಯಂ ನೋಡಬಹುದಾಗಿದೆ, ಅನುಭವ ಮಾಡಬಹುದಾಗಿದೆ. ಇತರ ಜರ್ದಾ ತಿನ್ನುವವರ ಸ್ವರೂಪವನ್ನೂ ತಾವು ಪ್ರತ್ಯಕ್ಷ ನೋಡಿ, ಜರ್ದಾ ತಿನ್ನುವುದನ್ನು ಅವಶ್ಯವಾಗಿ ಬಿಟ್ಟು ಕೊಡಬೇಕು. ಜರ್ದಾ ತಿನ್ನುವಂಥವನು ಒಂದು ದಿವಸವಾದರೂ ಜರ್ದಾ ತಿನ್ನದಿದ್ದರೆ ಪರಿಣಾಮದಲ್ಲಿ ಉಪಾಧಿ, ಹೊಟ್ಟೆಯಲ್ಲಿ ಸಂಕಟ ಮತ್ತು ಅನೇಕ ರೋಗಗಳು ಉತ್ಪನ್ನವಾಗಿ ಹೋಗುತ್ತವೆ. ಆದುದರಿಂದ ಜರ್ದಾ ತಿನ್ನುವುದು ಅದು ಮಹಾ ರೋಗಕ್ಕೆ-ಮಹಾವ್ಯಾಧಿಗೆ, ಅನಂತ ದುಃಖಕ್ಕೆ ಆಮಂತ್ರಣ ನೀಡಿದಂತೆ ಇದೆ.

**ಗಾಂಜ ತ್ಯಾಗ :-** ಗಾಂಜ ಸೇದುವುದರಿಂದ ತಮ್ಮ ದೊಡ್ಡಸ್ತನ, ಶೋಭೆಗಳೆಲ್ಲವೂ ನಷ್ಟವಾಗಿ ಹೋಗುತ್ತವೆ. ಗಾಂಜ ಸೇದುವವನ ಗೌರವವು ಹೊರಟುಹೋಗುತ್ತದೆ. ರಸನೇಂದ್ರಿಯದ ಲಂಪಟತೆಯು ವೃದ್ಧಿಸಿಬಿಡುತ್ತದೆ, ವಿಕಲತೆಯು ದುಃಖ ಕೊಡುತ್ತದೆ. ಅವನಂತೂ ಪ್ರಮಾದಿಯಾಗಿ ಸುಖಿಯಾಗಲು, ಅಧಿಕ ನಿದ್ರೆ ಮಾಡಲು, ಮಿಷ್ಟಾನ್ನ ಭೋಜನ ಮಾಡಲು ಬಯಸುತ್ತಾನೆ. ಐದೂ ಇಂದ್ರಿಯ ವಿಷಯಗಳ ಲಂಪಟತೆಗೆ ಪ್ರಾಪ್ತನಾಗಿ ಬಿಡುತ್ತಾನೆ, ಜ್ಞಾನವು ದುರ್ಬಲವಾಗಿ ಹೋಗುತ್ತದೆ, ಭ್ರಮಿಷ್ಟನಾಗಿ ಹೋಗುತ್ತಾನೆ. ಗಾಂಜ ಸೇದುವವನು ಸಿಹಿ ಭೋಜನದಲ್ಲಿ ಎಷ್ಟು ಲಂಪಟನಿರುತ್ತಾನೆಂದರೆ ಸಿಹಿಯು ಸಿಕ್ಕ ಕೂಡಲೇ ಕೃತಕೃತ್ಯನಾಗಿ ಹೋಗುತ್ತಾನೆ. ಅವನಿಗೆ ಆತ್ಮಜ್ಞಾನ, ಧರ್ಮಜ್ಞಾನವೆಂದೂ ಆಗುವುದಿಲ್ಲ; ಬಾಹ್ಯ ಆಚರಣೆಯಿಂದ ಭ್ರಷ್ಟನಾಗಿಯೇ ಇರುತ್ತಾನೆ.

ಗಾಂಜದಲ್ಲಿ ಸಹಸ್ರಾರು ತ್ರಸಜೀವಗಳು ನಡೆದಾಡುತ್ತಿರುವುದು ಕಂಡು ಬರುತ್ತದೆ, ಉತ್ಪನ್ನವಾಗುತ್ತಿರುತ್ತವೆ. ವರ್ಷಾ ಋತುವಿನಲ್ಲಿ ಗಾಂಜದೊಳಗೆ ಅಪರಿಮಿತ ತ್ರಸ ಜೀವಗಳ ಉತ್ಪತ್ತಿಯಾಗುತ್ತದೆ. ಗಾಂಜ ಸೇದುವವನು ಗಾಂಜವನ್ನು ಶೋಧಿಸುವುದಿಲ್ಲ, ತಿಕ್ಕಿ ಹಾಕಿ ಸೇದಿ ಬಿಡುತ್ತಾನೆ.

ಈ ಪ್ರಕಾರ ಅಫೀಮು ತಿನ್ನುವುದು, ಜರ್ದಾ ತಿನ್ನುವುದು, ಗುಡಗುಡಿ ಸೇದುವುದು, ಗಾಂಜ ಸೇದುವುದು, ತಂಬಾಕು ಸೇದುವುದು, ನಸ್ಯ ಸೇದುವುದು ಇವು ಶರೀರಕ್ಕಂತೂ ಮಹಾ ರೋಗಗಳೇ ಇವೆ. ಇವುಗಳ ಸೇವನೆ ಮಾಡುವಂಥವನ ಮುಖದ ಆಕೃತಿಯು ಕೆಟ್ಟು ಹೋಗುತ್ತದೆ, ಧರ್ಮ ಹಾಗೂ ಆಚರಣೆಯೂ ಕೆಟ್ಟು ಹೋಗುತ್ತದೆಂಬ ನಿಯಮವಿದೆ. ಈ ಮಾದಕಗಳು ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರಕ್ಕೆ ಕೂಡ ಮಹಾಘಾತಕಗಳೇ ಇವೆ. ಈ ಮಾದಕ ಪದಾರ್ಥಗಳು ಅನರ್ಥದಂಡಗಳಲ್ಲಿ ಕೂಡ ಇವೆ, ವ್ಯಸನಗಳಲ್ಲಿ ಕೂಡ ಇವೆ, ಮತ್ತು ಅಭಕ್ಷ್ಯಗಳಲ್ಲಿ ಕೂಡ ಇವೆ. ಆದುದರಿಂದ ತಾವು ಯಾವ ಮನುಷ್ಯ ಜನ್ಮ ಉತ್ತಮ ಕುಲ, ಜಿನಧರ್ಮ ಮೊದಲಾದುವನ್ನು ಪ್ರಾಪ್ತ ಮಾಡಿಕೊಂಡಿದ್ದೀರಿ ಅವನ್ನು ಸಾರ್ಥಕಗೊಳಿಸಲಪೇಕ್ಷಿಸುತ್ತಿದ್ದರೆ ಈ ಅಮಲೇರಿಸುವಂಥವುಗಳ ತ್ಯಾಗ ಮಾಡಬೇಕು.

**ರಾತ್ರಿ ಭೋಜನ ತ್ಯಾಗ :-** ರಾತ್ರಿಯಲ್ಲಿ ಭೋಜನ ಮಾಡುವುದು ತ್ಯಾಗಯೋಗ್ಯವೇ ಇದೆ. ರಾತ್ರಿಯಲ್ಲಿ ಭೋಜನ ಮಾಡುವವನ ಯತ್ನಾಚಾರವಂತೂ ಉಳಿಯುವುದೇ ಇಲ್ಲ, ಜೀವಗಳ ಹಿಂಸೆಯೇ ಆಗುತ್ತದೆ. ರಾತ್ರಿಯಲ್ಲಿ ಸೊಳ್ಳೆ, ನೊಣ, ಇರುವೆ, ಜೇಡಹುಳ, ಕ್ರಿಮಿ, ಕೀಟ ಮೊದಲಾದ ಅನೇಕ ಜೀವಗಳು ಆಹಾರದಲ್ಲಿ ಬೀಳುತ್ತವೆ. ಒಂದು ವೇಳೆ ದೀವಿಗೆ, ವಿದ್ಯುದ್ದೀಪ ಮೊದಲಾದುವನ್ನು ಉರಿಸಿ ಭೋಜನ ಮಾಡುತ್ತಿದ್ದರೂ ಬೆಳಕಿನ ಸಂಯೋಗದಿಂದ ದೂರ-ದೂರದ ಜೀವಗಳು ದೀವಿಗೆಯ ಹತ್ತಿರ ವೇಗದಿಂದ ಬಂದು ಆಹಾರದಲ್ಲಿ ಹೊರಳಿ ಬಂದು ಬೀಳುತ್ತವೆ. **ಜೈನ ಧರ್ಮದವನಾಗಿದ್ದುಕೊಂಡು ರಾತ್ರಿಯಲ್ಲಿ ಭೋಜನ ಮಾಡುತ್ತಿದ್ದರೆ ಮುಂದೆ ಮಾರ್ಗದಿಂದ ಭ್ರಷ್ಟನಾಗಿ ಹೋಗುವೆ.** ರಾತ್ರಿಯಲ್ಲಿ ಒಲೆ, ಗಿರಣಿ, ನೀರು, ಪಾತ್ರೆಯ ಆರಂಭ ಮಾಡುವುದು, ಇಡುವುದು, ಎತ್ತಿಕೊಳ್ಳುವುದು, ತಿಕ್ಕುವುದು, ತೊಳೆಯುವುದು ಈ ಘೋರ ಪಾಪ ಕರ್ಮಗಳಿಂದಂತೂ ಮಹಾನ ಹಿಂಸೆಯಾಗಿ ದುಃಖವು ಪ್ರಕಟವಾಗಿ ಹೋಗುತ್ತದೆ. ಆಗ ಇಂಥ ಘೋರ ಆರಂಭ ಮಾಡುವವನು ಜಿನಧರ್ಮದವನಾಗಿ ಉಳಿಯುವುದೇ ಇಲ್ಲ.

**ಪ್ರಶ್ನೆ :-** ಆರಂಭವನ್ನಂತೂ ರಾತ್ರಿಯಲ್ಲಿ ಮಾಡುವುದಿಲ್ಲ, ಆದರೆ ತಯಾರಿಸಿಟ್ಟಿರುವಂಥ ಭೋಜನ, ಲಾಡು, ಪೇಡೆ, ಬರ್ಫಿ, ಹಾಲು ಮೊದಲಾದುವನ್ನು ನೇರವಾಗಿ ತಿಂದು-ಕುಡಿದು ಬಿಟ್ಟರೆ ರಾತ್ರಿಯ ಯಾವುದೇ ಆರಂಭವಾಗುವುದಿಲ್ಲವಲ್ಲವೇನು ?

**ಉತ್ತರ :-** ಯಾರು ಹಗಲಿನಲ್ಲಿ ಮಾಡದೆ ರಾತ್ರಿಯಲ್ಲಿ ಭೋಜನ ಮಾಡುತ್ತಾರೆ, ಅವರಿಗೆ ತೀವ್ರ ರಾಗರೂಪದ ಮಹಾನ ಹಿಂಸೆಯಾಗುತ್ತದೆ. ಯಾವ ಪ್ರಕಾರ ಅನ್ನದ ತುತ್ತಿನ ಅನುರಾಗ ಹಾಗೂ ಮಾಂಸದ ತುತ್ತಿನ ಅನುರಾಗವು ಸಮಾನವಿರುವುದಿಲ್ಲ ಅದೇ ಪ್ರಕಾರ ರಾತ್ರಿ ಭೋಜನದ ಅನುರಾಗ ಹಾಗೂ ದಿನದ ಭೋಜನದ ಅನುರಾಗವು ಸಮಾನವಾಗಿಲ್ಲ, ಹಗಲಿನಲ್ಲಿಯೇ ಭೋಜನವು ಹೆಚ್ಚು ಉಪಯುಕ್ತವಿದೆ. **ರಾತ್ರಿ -ಹಗಲುಗಳೆರಡರಲ್ಲಿಯೂ ಭೋಜನ ಮಾಡುವವರಿಗೆ ಪಶುಗಳ ಸಮಾನ ಧರ್ಮರಹಿತವಾದ ಪ್ರವೃತ್ತಿಯೇ ಇರುವುದು.** ರಾತ್ರಿಯಲ್ಲಿ ಬೋಜನ ಮಾಡುವಂಥವರಿಗೆ ವ್ರತ, ತಪಸ್ಸುಗಳು ಆಗುವುದಿಲ್ಲ.

ಅನಾದಿಕಾಲದಿಂದ ವಿದೇಹ ಕ್ಷೇತ್ರದಲ್ಲಿ ಹಾಗೂ ಭರತ ಕ್ಷೇತ್ರದ ಜಿನ ಧರ್ಮಿಗಳಂತೂ ದಿವಸದಲ್ಲಿ ಒಂದು ಬಾರಿ ಅಥವಾ ಎರಡು ಬಾರಿಯೇ ಭೋಜನವಾಗುತ್ತದೆ, ರಾತ್ರಿಯಂತೂ ಎಂದೂ ಭೋಜನವಾಗುವುದಿಲ್ಲ. ರಾತ್ರಿಯಲ್ಲಿ ಭೋಜನ ಮಾಡುತ್ತಿದ್ದರೆ ಒಲೆ ಉರಿಸುವುದು, ಕಸಗುಡಿಸುವುದು, ನೀರು ತುಂಬುವುದು ಮೊದಲಾದ ಸಮಸ್ತ ಆರಂಭವು ರಾತ್ರಿಯಲ್ಲಿಯೇ ಆಗುವುದು ಮತ್ತು ಅಡಿಗೆ ಮಾಡುವಲ್ಲಿ ತರಕಾರಿ ಮಾಡುವಲ್ಲಿ ಪುರುಷರು ಭೋಜನ ಮಾಡುವಲ್ಲಿ, ಸ್ತ್ರೀ-ಕುಟುಂಬ-ಸೇವಕ ಮೊದಲಾದವರು ಭೋಜನ ಮಾಡುವಲ್ಲಿ, ಪಾತ್ರೆ ತಿಕ್ಕುವಲ್ಲಿ, ತೊಳೆಯುವಲ್ಲಿ, ಕಸ ಗುಡಿಸುವಲ್ಲಿ ಎರಡು ಪ್ರಹರ ರಾತ್ರಿಯು ಕಳೆದು ಹೋಗುತ್ತದೆ. ಅನೇಕ ಜೀವಗಳ ಸಂಹಾರವಾಗುತ್ತದೆ, ಸಮಸ್ತ ಯತ್ನಾಚಾರದ ಅಭಾವವಾಗಿ ಹೋಗುತ್ತದೆ. ಕ್ರಿಮಿ, ಕೀಟ, ಹಲ್ಲಿ, ಇರುವೆ ಮೊದಲಾದ ದೊಡ್ಡ ದೊಡ್ಡ ಜೀವಗಳು ಆಹಾರದಲ್ಲಿ ಬೀಳುತ್ತವೆ, ಮತ್ತು ಸೌದೆಯಲ್ಲಿ, ಒಲೆಯಲ್ಲಿ, ತರಕಾರಿಯಲ್ಲಿ, ನೀರಿನಲ್ಲಿ, ಪಾತ್ರೆಗಳಲ್ಲಿಯಂತೂ ಬಿದ್ದೇ ಬೀಳುತ್ತವೆ. ದೀವಿಗೆ ಹಾಗೂ ಒಲೆ ಮೊದಲಾದವುಗಳ ನಿಮಿತ್ತದಿಂದ ಸೊಳ್ಳೆ, ನೊಣ, ಪತಂಗದ ಹುಳ ಮೊದಲಾದ ಅನೇಕ ಜೀವಗಳ ಹೋಮವು ದಿನನಿತ್ಯವೂ ಆಗುತ್ತಿರುವುದು. ದಿವಸದಲ್ಲಿಯೂ ಆರಂಭ ಮತ್ತು ರಾತ್ರಿಯಲ್ಲಿಯೂ ಘೋರ ಆರಂಭದಿಂದ ಸಮಸ್ತ ಪರಿವಾರದ ಜನರಿಗೆ ಬಹಳಷ್ಟು ದುಃಖವು ಉತ್ಪನ್ನವಾಗುತ್ತದೆಯೆಂದು ತಿಳಿದುಕೊಳ್ಳಬೇಕು.

ರಾತ್ರಿಯಲ್ಲಿ ಘೋರ ಆರಂಭ ಮಾಡುವುದರಿಂದ ಪರಿಣಾಮದಲ್ಲಿ ಸಮತೆಯು ಬರುವ ಸಾಧ್ಯತೆಯಿಲ್ಲ, ರಾತ್ರಿಯಲ್ಲಿ ಭೋಜನ ಮಾಡುವವರಿಗೆ ಧರ್ಮ-ಸೇವನೆ, ಶಾಸ್ತ್ರದ ಪಠಣ, ಶ್ರವಣ, ತತ್ತ್ವಾರ್ಥದ ಚರ್ಚೆ, ಸಾಮಾಯಿಕ, ಜಪ, ಶುಭ ಧ್ಯಾನಕ್ಕಂತೂ ಅವಸರವೇ ಉಳಿಯುವುದಿಲ್ಲ. **ಜಿನಧರ್ಮದ ಧಾರಕನು ರಾತ್ರಿ ಭೋಜನವನ್ನೆಂದೂ ಮಾಡುವುದಿಲ್ಲವೆಂಬ ಸನಾತನ ರೀತಿಯು ಇಂದಿನವರೆಗೆ ನಡೆದುಕೊಂಡು ಬರುತ್ತಿದೆ.** ಜಿನಧರ್ಮಿಗಳು ರಾತ್ರಿಯಲ್ಲಿ ಭೋಜನ ಮಾಡುವುದಿಲ್ಲವೆಂಬ ಮಾತು ಕೋಟ್ಯಂತರ ಜನರಲ್ಲಿ ಪ್ರಸಿದ್ಧವಿದೆ. ಇಂಥ ಯಶಸ್ಸಿನ ಉಜ್ವಲತೆ, ಪ್ರಭಾವನೆ, ಉಚ್ಚತೆ, ಭೋಜನದ ಶುದ್ಧತೆಯನ್ನು ಕೆಡಿಸಿ, ಒಂದು ವೇಳೆ ಯಾವನೋ ಪ್ರಮಾದಿಯು ವಿಷಯಗಳಲ್ಲಿ ಕುರುಡನಾಗಿ ರಾತ್ರಿಯಲ್ಲಿ ಹಾಲು, ಬರ್ಫಿ, ಪೇಡೆ ತಿನ್ನುತ್ತಾನೆ ಮತ್ತು ಔಷಧ-ನೀರು ಮೊದಲಾದುವನ್ನು ಕುಡಿಯುತ್ತಾನೆ ಅವನು ತನ್ನ ಉತ್ತಮ ಆಚರಣೆಯನ್ನು ಧರ್ಮವನ್ನು, ಕುಲದ ಮರ್ಯಾದೆಯನ್ನು, ಜೈನತನವನ್ನು ನೀರಿನಲ್ಲಿ ಮುಳುಗಿಸಿ ಸನ್ಮಾರ್ಗದಿಂದ ಭ್ರಷ್ಟನಾದ ಉನ್ಮಾರ್ಗಿಯಿದ್ದಾನೆ. ಅವನ ಬಾಹ್ಯಾಭ್ಯಂತರ ಮಾರ್ಗಗಳೇ ಭ್ರಷ್ಟವಿವೆ ಮತ್ತು ಅವನು ಮುಂದೆ ಅಧರ್ಮದ ಪರಿಪಾಟಿಯನ್ನು ನಡೆಸುವಂಥವನಿದ್ದಾನೆ. ಈ ಪ್ರಕಾರ ರಾತ್ರಿಯಲ್ಲಿ ಮಾಡಿದ ಭೋಜನವು ಕೂಡ ಹಗಲು ಹೊತ್ತಿನಲ್ಲಿ ತಿನ್ನಲು ಯೋಗ್ಯವಿಲ್ಲ.

**ನೀಚ ಸಂಗತಿಯ ತ್ಯಾಗ :-** ಮಿಥ್ಯಾ ಧರ್ಮಧಾರಕರ ಜತೆಯಲ್ಲಿ, ಮಾಂಸ ಭಕ್ಷಕರ ಜತೆ ಕುಳಿತುಕೊಂಡು ಭೋಜನ ಮಾಡಬಾರದು. ನೀಚ ಜಾತಿಯ ಪುರುಷರೊಡನೆ ಮೈತ್ರಿ ಮಾಡಬಾರದು. ದೇವಗಳಿಗೆ ಏರಿಸಿದ ವಸ್ತುವನ್ನು ತಿನ್ನಬಾರದು. ಆನೆಯ ಹಲ್ಲಿನ ಬಳೆ, ಉಣ್ಣೆಯ ಬಟ್ಟೆ, ಕಂಬಳಿ, ರಗ್ಗು ಹೊದ್ದುಕೊಂಡು ಆಹಾರ ತಯಾರಿಸಿದ್ದರೆ ಆ ಆಹಾರವು ಕೂಡ ತಿನ್ನಲು ಯೋಗ್ಯವಿಲ್ಲ. ಮಾಂಸ ಭಕ್ಷಣ ಮಾಡುವವರ ಮನೆಯಲ್ಲಿ, ನೀಚ ಜಾತಿಯವರ ಮನೆಯಲ್ಲಿ ಭೋಜನ ಮಾಡಬಾರದು.

**ಅತ್ತರದ ತ್ಯಾಗ :-** ಸುಗಂಧ ದ್ರವ್ಯದ ಅರ್ಕ, ಸುಗಂಧಯುಕ್ತ ಬರ್ಫಿ, ಸುಗಂಧಯುಕ್ತ ಪಾನಕ ಹಾಗೂ ಅನ್ಯ ಸಮಸ್ತ ವಸ್ತುಗಳನ್ನು ತಿನ್ನುವುದು ಯೋಗ್ಯವಿಲ್ಲ, ಸುಗಂಧ ದ್ರವ್ಯಗಳು ವಿದೇಶಗಳಲ್ಲಿ ತಯಾರಾದ, ಮ್ಲೇಚ್ಛರ ಜಲದಿಂದ

ತಯಾರಾದ, ಎಂಜಲು ಅರ್ಕದ ಸೀಸೆಗಳಲ್ಲಿ ತುಂಬಿ ಬರುತ್ತವೆ ಮತ್ತು ಅದು ಯಾವ-ಯಾವ ವಸ್ತುವಿನಿಂದ ಮಾಡಲಾಗಿರುತ್ತದೆಂಬುದೆಲ್ಲವು ಅಜ್ಞಾತವಿದೆ. ಅರ್ಕದಲ್ಲಿ ಅನೇಕವು ಜಲಚರ, ಸ್ಥಲಚರ, ನಭಚರ ಪಂಚೇಂದ್ರಿಯ ಮೊದಲಾದ ಜೀವಗಳ ಮಾಂಸದಿಂದ ಆದ ಅರ್ಕಗಳಿವೆ. **ಅನೇಕ ಪ್ರಕಾರದ ಮದ್ಯತಯಾರಿಸಿ ಅದಕ್ಕೆ ಅರ್ಕವೆಂದು ಹೆಸರು ಕೊಡುತ್ತಾರೆ.** ಬಹಳಷ್ಟು ಜೀವಗಳ ಅಂಡಕೋಶದ ರಸದಿಂದ ಸೀಸೆ ತುಂಬಿ ಇಡುತ್ತಾರೆ. ಸಮಸ್ತ ಪಾನಕ, ಗುಳಂಬ,ರಸಾಯನ ಮೊದಲಾದವುಗಳಲ್ಲಿ ಜೇನು ತುಪ್ಪವಿರುತ್ತದೆ. ಅನೇಕ ಜೀವಗಳ ಅನೇಕ ಇಂದ್ರಿಯಗಳು, ನಾಲಿಗೆ, ರಕ್ತಾಶಯ, ಒಣಗಿದ ಮಾಂಸ ಮೊದಲಾದವುಗಳನ್ನು ಮಾರುತ್ತಾರೆ. ಭಾರತದ ಸಮಸ್ತ ಉತ್ತಮ ಕುಲದವರ ಬುದ್ಧಿಯನ್ನು ಭ್ರಷ್ಟ ಮಾಡುವ ಸಲುವಾಗಿ ಮುಸಲ್ಮಾನರು ತಮ್ಮ ಉಚ್ಚಿಷ್ಟವನ್ನು ಭಕ್ಷಣ ಮಾಡಿಸುವ ಸಲುವಾಗಿ ಸಂಪೂರ್ಣ ಹಿಂದುಸ್ತಾನದ ಜನರನ್ನು ಭ್ರಷ್ಟ ಮಾಡುವ ಸಲುವಾಗಿ ನಿಷಿದ್ಧ ವಸ್ತುಗಳ ಅಂಗಡಿಗಳನ್ನು ತೆರೆದರು.

ಒಂದು ಕೋಟಿ ಕಟುಕರ ಹಿಂಸೆಯ ಸರಿದೊರೆಯಾಗಿ ಒಂದು ಅತ್ತಾರನ ಅಂಗಡಿಯ ಔಷಧಗಳಲ್ಲಿ ಹಿಂಸೆಯಿದೆ. ಇಲ್ಲಿ ನಮ್ಮ ಭಾರತ ದೇಶದಲ್ಲಿ ರಾಜರುಗಳು ಹಿಂದೂಧರ್ಮ ಹಾಗೂ ಭಾರತೀಯ ಸಂಸ್ಕೃತಿಯ ರಕ್ಷಣೆಯ ಸಲುವಾಗಿ ವಿಕ್ರಮ ಸಂವತ ೧೮೨೨ ರವರೆಗಂತೂ ಅತ್ತಾರರಿಗೆ ವಾಸಿಸಲು ಹಾಗೂ ಅಂಗಡಿ ನಡೆಸಲು ಅನುಮತಿಸಿರಲಿಲ್ಲ. ಅನಂತರ ಕಾಲದ ನಿಮಿತ್ತದಿಂದ ಪಾಪದ ಪ್ರವೃತ್ತಿಯು ಹರಡಿಕೊಂಡಿತು. ಈಗ ಉತ್ತಮ ಕುಲದವರು ಕೂಡ ಆ ಅರ್ಕ ಮೊದಲಾದವುಗಳ ಸೇವನೆ ಮಾಡತೊಡಗಿದ್ದಾರೆ. ಮಾಂಸ ಭಕ್ಷಕ ಮುಸಲ್ಮಾನರ ಎಂಜಲು ಹಾಗೂ ಮದ್ಯ ಮೊದಲಾದವುಗಳ ಸೇವನೆ ಮಾಡಿದ ಮೇಲೆ ಈಗ ಬ್ರಾಹ್ಮಣತನ, ಮಹಾಜನತನ, ವೈಶ್ಯತನಗಳು ಎಲ್ಲಿ ಉಳಿದುಕೊಂಡಿವೆ ? ಸಮಸ್ತ ಕುಲ-ಆಚರಣೆಗಳು ಭ್ರಷ್ಟವಾಗಿ ಹೋಗಿವೆ.

ಆಚರಣೆಯು ಭ್ರಷ್ಟವಾಗಿ ಹೋಗುವುದರಿಂದ, ಅಭಕ್ಷ್ಯ ಭಕ್ಷಣ ಮಾಡುವುದರಿಂದಲೇ ಜನರ ಬುದ್ಧಿಯು ಸತ್ಯಾರ್ಥ ಧರ್ಮದಿಂದ ರಹಿತವಾಗಿ ಹೋಗಿದೆ. ಅತ್ತಾರರ ಔಷಧದಿಂದಲೇ ರೋಗಗಳು ಹೋಗುತ್ತವೆಂಬ ನಿಯಮವಿಲ್ಲ. ಅತ್ತಾರರ ಅರ್ಕ ಕುಡಿದು ಧರ್ಮ ಭ್ರಷ್ಟರಾಗಿ ಬಹಳಷ್ಟು ಜನರು ಸತ್ತು ಹೋಗುತ್ತಿರುವುದು ಕಂಡು ಬರುತ್ತದೆ. **ದುರ್ಗತಿಯ ಬಂಧವಾಗಿ ಹೋಗಿರುವವರಿಗೇ ಇವರ ಭ್ರಷ್ಟ ಔಷಧದಿಂದ ಆರಾಮವಾಗುತ್ತದೆ.** ಹೇಗೆಂದರೆ ಅರವಿಂದನೆಂಬ ದೊರೆಗೆ ದಾಹಜ್ವರ ಹಿಡಿದುಕೊಂಡಿತ್ತು ಅವನು ಅನೇಕ ಉಪಚಾರ ಮಾಡಿದರೂ ಕೂಡ ರೋಗವು ಶಾಂತವಾಗಲಿಲ್ಲ.

ಒಂದು ದಿವಸ ಮನೆಯ ಚಾವಣಿಯ ಮೇಲೆ ಎರಡು ಹಲ್ಲಿಗಳು ಹೋರಾಡುವುದರಿಂದ ಅವುಗಳ ಶರೀರದಿಂದ ಹೊರಟ ರಕ್ತದ ಒಂದು ಬಿಂದು ದೊರೆಯ ಶರೀರದ ಮೇಲೆ ಬಂದು ಬೀಳುತ್ತದೆ. ಅದರಿಂದ ದೊರೆಗೆ ತುಂಬ ಶೀತಲತೆಯ ಅನುಭವವಾಯಿತು. ಆಗ ಆ ಪಾಪೀ ದೊರೆಯು ತನ್ನ ಪುತ್ರನನ್ನು ಕರೆದು, ನನಗೆ ರಕ್ತದಿಂದ ಒಂದು ಬಾವಿಯನ್ನು ತುಂಬಿಸಿಕೊಡು, ನಾನು ಅದರಲ್ಲಿ ಮನಸೋಕ್ತವಾಗಿ ಮುಳುಗೆದ್ದು ದಾಹದ ಆತಪದಿಂದರಹಿತನಾಗಿ ಹೋಗುವೆನೆಂದು ಹೇಳುತ್ತಾನೆ. ಆಗ ಮಗನು ಪಾಪದಿಂದ ಭಯಭೀತನಾಗಿ ಲಾಕ್ಷಾರಸದಿಂದ ಬಾವಿಯನ್ನು ತುಂಬಿಸಿಕೊಡುವನು. ದೊರೆಯು ಆ ಬಾವಿಯನ್ನು ನೋಡಿ ಅತ್ಯಂತ ಆನಂದಿತನಾಗಿ ಬಾವಿಯಲ್ಲಿ ಸ್ನಾನ ಮಾಡಲು ಇಳಿಯುತ್ತಾನೆ, ಆದರೆ ಆ ಬಾವಿಯನ್ನು ಕೃತ್ರಿಮ ರಕ್ತದ ಬಾವಿಯಿದೆಯೆಂದು ತಿಳಿದುಕೊಂಡು ಮಗನ ಮೇಲೆ ತುಂಬ ಕ್ರೋಧಿತನಾಗುತ್ತಾನೆ. ಮಗನನ್ನು ಕೊಂದು ಹಾಕುವ ಸಲುವಾಗಿ ಕಿರುಗತ್ತಿಯನ್ನು ಹಿಡಿದು ಧಾವಿಸುತ್ತಾನೆ, ಆದರೆ ದಾರಿಯಲ್ಲಿಯೇ ತೂಕ ತಪ್ಪಿ ಹೊರಳಿ ಬೀಳುತ್ತಾನೆ ಮತ್ತು ತನ್ನ ಕೈಯಲ್ಲಿನ ಕಿರುಗತ್ತಿಯಿಂದ ಸ್ವಯಂ ಸತ್ತು ಹೋಗುತ್ತಾನೆ, ಸತ್ತು ನರಕಕ್ಕೆ ಇಳಿಯುತ್ತಾನೆ. ಇದೇ ಪ್ರಕಾರ ಯಾರ ದುರ್ಗತಿಯು ಸುನಿಶ್ಚಿತವಿದೆ ಅವರಿಗೆ ಅತ್ತಾರರ ಔಷಧದಿಂದ ಆರಾಮ ದೊರಕುತ್ತದೆ, ಆಗ ಅತ್ತಾರನ ಪಾಪರೂಪದ ಅನ್ಯವಸ್ತುಗಳಲ್ಲಿ ಅವನ ಪ್ರವೃತ್ತಿಯಾಗಿ ಹೋಗುತ್ತದೆ. ಆದುದರಿಂದ ಪ್ರಾಣ ನಾಶದ ಸಮಯ ಬಂದರೂ ಕೂಡ ಆರು ತಿಂಗಳ ಮಗುವಿಗೆ ಸಹ ಅತ್ತಾರರ ಔಷಧ ಕೊಡುವುದು ಉಚಿತವಿಲ್ಲ.

**ಧರ್ಮವು ಕೆಟ್ಟುಹೋದ ನಂತರ ಈ ಜಿನ ಧರ್ಮವು ಅನಂತ ಕಾಲದಲ್ಲಿಯೂ ದೊರಕಲಾರದು.** ಆದುದರಿಂದ ಜೈನ ಧರ್ಮದ ಧಾರಕರು ತಮ್ಮ ಶರೀರದ ಸಹಸ್ರಾರು ತುಂಡುಗಳಾಗಿ ಹೋದರೂ ಕೂಡ ಅಭಕ್ಷ್ಯ ಭಕ್ಷಣವನ್ನೆಂದೂ ಮಾಡಬಾರದು.

**ಪೇಟೆಯ ಭೋಜನದ ತ್ಯಾಗ ః-** ಪೇಟೆಯ ಅಂಗಡಿಗಳ ಹಿಟ್ಟನ್ನೆಂದೂ ತಿನ್ನಬಾರದು. ಮಾರುವವರಲ್ಲಿ ಎಲ್ಲರೂ ಚರ್ಮಕಾರ, ಕಟುಕ, ಮುಸಲ್ಮಾನ, ಜಾಲಗಾರ ಇತ್ಯಾದಿಯವರೇ ಬೀಸುತ್ತಾರೆ. ಮುಸಲ್ಮಾನ, ಮಡಿವಾಳ ಮೊದಲಾದವರಿಗೆ ದೊರೆಯ ಕುದುರೆಯಲಾಯ, ಆಯುಧಶಾಲೆಯಿಂದ ಹಿಟ್ಟು ಸಿಗುತ್ತದೆ ಅವರ ಕಡೆಯಿಂದ ಪೇಟೆಯ ಅಂಗಡಿಕಾರರು ಕೊಂಡುಕೊಳ್ಳುತ್ತಾರೆ. ಆ ಹಿಟ್ಟು ನಾಲ್ಕಾರು ತಿಂಗಳುಗಳಮೊದಲು ಬೀಸಿರುತ್ತದೆ, ಯಾವ ಮರ್ಯಾದೆಯಿರುವುದಿಲ್ಲ, ಅದರಲ್ಲಿ ಸಹಸ್ರಾರು ಹುಳು ಹುಟ್ಟಿಕೊಂಡಿರುತ್ತವೆ. ಅದೆಷ್ಟೋ ಜನರಂತೂ ಹುಳು ಹತ್ತಿದ ಧಾನ್ಯವನ್ನೇ ಕೊಂಡು ಬೀಸಿ ಮಾರಿರುತ್ತಾರೆ, ಮತ್ತು ಕೊಂಡುಕೊಳ್ಳುವಂಥ ಮುಸಲ್ಮಾನ, ಮ್ಲೇಚ್ಛ ಮೊದಲಾದವರೆಲ್ಲರೂ ಅದೇ ಹಿಟ್ಟಿನಲ್ಲಿ ಕೈಗಳನ್ನು ಹಾಕಿ ತೂಗಿ ತೆಗೆದುಕೊಂಡು ಹೋಗುತ್ತಾರೆ. ಮುಸಲ್ಮಾನರ ಮೃತ್ಯು ಭೋಜನದಲ್ಲಿ, ಮದುವೆಯ ಔತಣದಲ್ಲಿ ಒಂದು ವೇಳೆ ತಾವು ಕೊಂಡು ಒಯ್ದ ಹಿಟ್ಟೆಲ್ಲ ಖರ್ಚಾಗದಿದ್ದರೆ ಆ ಉಳಿದ ಹಿಟ್ಟನ್ನು ಅಂಗಡಿಕಾರನಿಗೇ ಮರಳಿ ಕೊಟ್ಟು ಬಿಡುತ್ತಾರೆ.

ಧರ್ಮಶಾಲೆ, ಖಾನಾವಳಿ, ಬಾಡಿಗೆದಾರರ ತಾಮ್ರ, ಹಿತ್ತಾಳೆ, ಲೋಹದ ಪಾತ್ರೆಗಳನ್ನು ಅಡಿಗೆ ಸಿದ್ಧಪಡಿಸುವ ಸಲುವಾಗಿ ತರುವುದು ಯೋಗ್ಯವಿಲ್ಲ. ಅವರಂತೂ ಸಮಸ್ತ ಮಾಂಸ ಭಕ್ಷಕ ದುರಾಚರಣೆಯುಳ್ಳವರಿಗೂ ಕೂಡ ಅವೇ ಪಾತ್ರೆಗಳನ್ನು ಕೊಡುತ್ತಿರುತ್ತಾರೆ. ಆದುದರಿಂದ ತಮ್ಮ ಆಚರಣೆಯ ಉಜ್ವಲತೆಯನ್ನು ಕಾಯ್ದುಕೊಂಡು ಬರಲು ಇಚ್ಛಿಸುತ್ತಿದ್ದರೆ ಮೂರು-ನಾಲ್ಕು ಪಾತ್ರೆಗಳನ್ನು ತಮ್ಮ ಹತ್ತಿರ ಇಟ್ಟುಕೊಂಡು ಹೊರಗೆ ವಿದೇಶಗಳಲ್ಲಿ ಗಮನ ಮಾಡುವ ಸಲುವಾಗಿ ಹೊರಡಬೇಕು. ಅಲ್ಲಿ ಕಾಲು ಭಾಗ ಹಣ ಹೆಚ್ಚು ಕೊಟ್ಟು ಹಿಟ್ಟು ತಯಾರಿಸಿಕೊಂಡು ಬೇಯಿಸಿ ತಿನ್ನಬೇಕು. ಒಂದು ವೇಳೆ ವಿಧಿಗೆ ಅನುಸರಿಸಿ ಹಿಟ್ಟು ಸಿದ್ಧವಾಗಿ ಪ್ರಾಪ್ತವಾಗುವ ಸಾಧ್ಯತೆಯಿಲ್ಲದಿದ್ದರೆ ಅನ್ನ-ಉಸಳಿ ಮಾಡಿಕೊಂಡು ಊಟ ಮಾಡಬೇಕು.

**ಅಭಕ್ಷ್ಯ ತ್ಯಾಗ ః-** ಪೇಟೆಯಲ್ಲಿನ ಮಿಠಾಯಿ, ಲಾಡು, ಬರ್ಫಿ ಮೊದಲಾದುವನ್ನು ತಿನ್ನಬಾರದು. ಅವುಗಳ ಹಿಟ್ಟು, ತುಪ್ಪ, ನೀರುಗಳದೇನೂ ಪ್ರಾಮಾಣಿಕತೆಯಿಲ್ಲ, ಪ್ರಮಾಣವಿಲ್ಲ, ಮರ್ಯಾದೆಯಿಲ್ಲ, ಲೋಭೀ ಹಾಗೂ ನಿಂದ್ಯ ಕರ್ಮಿಗಳಿಗೆ ಯಾವ ಆಚಾರ-ವಿಚಾರಗಳ ವಿವೇಕವಿರುವುದಿಲ್ಲ. ಮೈದಾ ಹಿಟ್ಟಿಗೆ ಹುಳಿ ಹಾಕಿ ಕೊಳೆಸುತ್ತಾರೆ ಅದು ಹುಳಿಯಾಗುತ್ತಿರುವಂತೆಯೇ ಅದರಲ್ಲಿ ಅನಂತಾನಂತ ಜೀವಗಳ ಉತ್ಪನ್ನವಾಗತೊಡಗುತ್ತವೆ. ಪುನಃ ಕಡಾಯಿಯಲ್ಲಿ ಎಣ್ಣೆ ಅಥವಾ ತುಪ್ಪ ಹಾಕಿ ತಾಳಿಸುತ್ತಾರೆ, ಬೇಯಿಸುತ್ತಾರೆ, ಜಿಲೇಬಿ ಮಾಡುತ್ತಾರೆ, ಮಜ್ಜಿಗೆಯಲ್ಲಿ ಬೇಳೆ ಹಿಟ್ಟು ಬೆರೆಸಿ ಮಟ್ಠಾ ಮಾಡುತ್ತಾರೆ ಅದು ತಿನ್ನಲು ಯೋಗ್ಯವೇ ಇಲ್ಲ. ಮೊಸರಿನಲ್ಲಿ ಸಕ್ಕರೆ ಬೆರೆಸಿ ಹೆಚ್ಚು ವೇಳೆ ಇಡಬಾರದು, ಎರಡು ಮುಹೂರ್ತದಲ್ಲಿಯೇ ತಿನ್ನಲು ಯೋಗ್ಯವಿದೆ. ತಮ್ಮ ಮಿತ್ರ, ಬಂಧು, ಪುತ್ರ ಮೊದಲಾದವರು ಸೇರಿ ಒಂದೇ ತಟ್ಟೆಯಲ್ಲಿ ಭೋಜನ ಮಾಡುವುದು ಉಚಿತವಿಲ್ಲ.

ಮನುಷ್ಯರ, ಬೆಕ್ಕು-ನಾಯಿಗಳ ಎಂಜಲ ಅನ್ನವು ತಿನ್ನಲು ಯೋಗ್ಯವಿಲ್ಲ. ಕತ್ತೆ, ಗೋವು, ಎಮ್ಮೆ ಮೊದಲಾದ ತಿರ್ಯಂಚಗಳ ಎಂಜಲ ನೀರಿನಲ್ಲಿ ಸ್ನಾನ ಮಾಡಬಾರದು, ಕುಡಿಯುವುದನ್ನಂತೂ ಎಂದೂ ಮಾಡಬಾರದು. ಸಕ್ಕರೆ ಮೊದಲಾದವುಗಳಿಂದ ಮಾಡಿದ ಮನುಷ್ಯ, ತಿರ್ಯಂಚಗಳ ಆಕಾರಗಳನ್ನು ತಿನ್ನಬಾರದು. ದೇವಿ, ವ್ಯಂತರಾದಿಗಳ ಪೂಜೆಯ ಸಲುವಾಗಿ ಸಂಕಲ್ಪಪೂರ್ವಕ ಮಾಡಿದ, ಅರ್ಪಿಸಿದ ಆಹಾರವು ತ್ಯಾಗ ಯೋಗ್ಯವಿದೆ. ಮಾಂಸ ಭಕ್ಷಣ ಮಾಡುವವರ ಪಾತ್ರೆಯಲ್ಲಿ ಭೋಜನ ಭಕ್ಷಣ ಮಾಡಬಾರದು. ತಮ್ಮ ಪಾತ್ರೆಗಳನ್ನು ಬೇಡಿದರೂ ಕೂಡ ಮಾಂಸ ಭಕ್ಷಕರಿಗೆ ಕೊಡಬಾರದು. ನಾಪಿತನ ಪಾತ್ರೆಯ ನೀರಿನಿಂದ ಸೇವ ಮಾಡಿಸಿಕೊಳ್ಳಬಾರದು. ರಜಸ್ವಲೆಯು ಮುಟ್ಟಿದ ಪಾತ್ರೆಯು ಭೋಜನ ಯೋಗ್ಯವಿಲ್ಲ.

**ಅನುಪಸೇವ್ಯ ತ್ಯಾಗ ః-** ಅನುಪಸೇವ್ಯ ತಿಳಿದುಕೊಂಡು ವಿಕಾರರೂಪದ ಬಟ್ಟೆ, ಆಭರಣ ಮೊದಲಾದುವನ್ನು ಧರಿಸಬಾರದು. ಉತ್ತಮ ಕುಲದವರಿಗೆ ಯೋಗ್ಯವಿಲ್ಲದಂಥ ನೀಚಕುಲದವರು ಧರಿಸುವ, ವೇಶ್ಯೆ ಹಾಗೂ ವಿಟ ಪುರುಷರು ಧರಿಸುವ, ಸೈನಿಕರು ಹಾಗೂ ಮ್ಲೇಚ್ಛ-ಮುಸಲ್ಮಾನರು ಧರಿಸುವ, ಸನ್ಯಾಸಿ, ಯೋಗಿ, ಫಕೀರ, ನಪುಂಸಕ-ವಿದೂಷಕರು ಧರಿಸುವ ವಸ್ತ್ರಾಭರಣಗಳು ಪರಿಣಾಮ ಕೆಡಿಸುವುದರಿಂದ ಅವನ್ನು ಧರಿಸಬಾರದು. ತಮಗೆ ತಮ್ಮಲ್ಲಿ ಹಾಗೂ ಇತರರಲ್ಲಿ ವಿಕಾರವನ್ನುತ್ಪನ್ನ ಮಾಡದಂಥ, ತಮ್ಮ ಪದವಿಗೆ ಯೋಗ್ಯ, ಅವಸ್ಥೆಗೆ ಯೋಗ್ಯ, ಜಗತ್ತಿನಿಂದ ಅವಿರುದ್ಧವಾಗಿರುವಂಥ ಆಭರಣ, ವಸ್ತ್ರ ವೇಷಗಳ ಧಾರಣ ಮಾಡುವುದೇ ಉಚಿತವಿದೆ.

**ಹೆಚ್ಚಿಗೇನು ಹೇಳುವುದು ?** ಸಮಸ್ತ ಸಂಸಾರ ಪರಿಭ್ರಮಣದ ಮೂಲ ಕಾರಣವು ಪಂಚೇಂದ್ರಿಯ ವಿಷಯಗಳಲ್ಲಿನ ಲಾಲಸೆಯಿದೆಯೆಂದು ತಿಳಿದುಕೊಳ್ಳಬೇಕು. **ಪಂಚೇಂದ್ರಿಯಗಳಲ್ಲಿಯೂ ರಸನೇಂದ್ರಿಯ ಹಾಗೂ ಉಪಸ್ಥ ಇಂದ್ರಿಯ ಇವೆರಡು ಇಂದ್ರಿಯಗಳ ಲಾಲಸೆಯು ಇಹಲೋಕ ಹಾಗೂ ಪರಲೋಕಗಳೆರಡನ್ನೂ ಕೆಡಿಸುವಂಥವುಗಳಿವೆ.** ಇವೆರಡು ಇಂದ್ರಿಯಗಳ ವಿಷಯಗಳ ಲೋಲುಪತೆಯು ಯಾರಿಗೆ ಅಧಿಕವಿದೆ ಅವರು ಮನುಷ್ಯ ಜನ್ಮದಲ್ಲಿ ಕೂಡ ಪಶುಗಳ ಸಮಾನರಿದ್ದಾರೆ. ಪಶುಯೋನಿಯಲ್ಲಿ ಕೂಡ ಇವೆರಡು ಇಂದ್ರಿಯ ವಿಷಯಗಳ ಇಚ್ಛೆಯಿಂದ ಪರಸ್ಪರದಲ್ಲಿ ಹೊಡೆದಾಡಿ ಸತ್ತು ಹೋಗುತ್ತವೆ, ಕೊಂದುಹಾಕುತ್ತವೆ, ಸಾಯಿಸಿ ತಿಂದು ಬಿಡುತ್ತವೆ, ಮನುಷ್ಯ ಜನ್ಮದಲ್ಲಿ ಕೂಡ ಕಲಹ ಮಾಡುವುದು, ಸಾಯುವುದು, ಸಾಯಿಸುವುದು, ನಿರ್ಲಜ್ಜವಾಗುವುದು, ಎಂಜಲು ತಿನ್ನುವುದು, ದೀನತೆ ದೋರುವುದು, ಪುಣ್ಯದಾನ ಪಡೆವುದು, ಅಭಕ್ಷ್ಯ ಭಕ್ಷಣ ಮಾಡುವುದು ಇತ್ಯಾದಿ ಸಮಸ್ತ ನೀಚ ಕಾರ್ಯಗಳಲ್ಲಿ ಪ್ರವೃತ್ತಿ ಮಾಡುವುದೆಲ್ಲವು ಇಂದ್ರಿಯ ವಿಷಯಗಳ ಲಾಲಸೆಯಿಂದಲೇ ಆಗುತ್ತದೆ.

**ವಿಚಾರ ಮಾಡಿ ನೋಡುವುದು !** ಭೋಗಭೂಮಿಯ ಹಾಗೂ ದೇವಲೋಕದ ನಾನಾ ಪ್ರಕಾರದ ಭೋಗಗಳಿಂದ ಕೂಡ ತೃಪ್ತಿಯಾಗಲಿಲ್ಲವೆಂದ ಮೇಲೆ ಈ ಸ್ವಲ್ಪ ಮಾತ್ರ ಜಿಹ್ವೆಯ ಸ್ಪರ್ಶ ಮಾತ್ರದ ಸ್ವಾದವಂತೂ ತೀರ ಕಡಿಮೆ ಸಮಯದ್ದಿದೆ; ಆಹಾರವನ್ನು ನುಂಗಿದ ನಂತರ ಇಲ್ಲ, ಮತ್ತು ಅದರ ಮೊದಲೂ ಇಲ್ಲವೆಂದ ಬಳಿಕ ಅದರಿಂದ ತೃಪ್ತಿ ಹೇಗಾಗುವುದು ? ಈ ಪ್ರಕಾರ ತೃಷ್ಣೆಯನ್ನು ವೃದ್ಧಿಸುವಂಥ ಆಹಾರದಲ್ಲಿ ಲುಬ್ಧತೆಯನ್ನು ಬಿಟ್ಟುಕೊಟ್ಟು ಸಮಸ್ತ ಇಂದ್ರಿಯಗಳನ್ನು ಜಯಿಸಿ, ತಮ್ಮ ಕರ್ಮದ ಉದಯವು ಕೂಡಿಸಿಕೊಟ್ಟಿರುವಂಥ ಸರಸ-ನೀರಸ ಆಹಾರದಲ್ಲಿಯೇ ಸಂತೋಷ ಪಟ್ಟುಕೊಂಡು, ಅಭಕ್ಷ್ಯದ ತ್ಯಾಗ ಮಾಡಿ, ದೇಹಧಾರಣದ ಸಲುವಾಗಿ ಭೋಜನ ಮಾಡುವವನು ಸಮಸ್ತ ಪಾಪಗಳಿಂದ ರಹಿತನಾಗಿ ದೇವಲೋಕಕ್ಕೆ ಪಾತ್ರನಾಗುತ್ತಾನೆ.

**ಪರಿಣಾಮದ ಸಾಮರ್ಥ್ಯಕ್ಕೆ ಅನುಸರಿಸಿ ವ್ರತ ಸ್ವೀಕರಿಸಬೇಕು.** ಯಾವ ಮನುಷ್ಯನು ಭೋಗೋಪಭೋಗ ಪರಿಮಾಣವ್ರತ ತೆಗೆದುಕೊಳ್ಳುತ್ತಾನೆ ಅವನು ತನ್ನ ಪರಿಣಾಮದ ದೃಢತೆಯನ್ನು ನೋಡಿ, ತನ್ನ ರಾಗವು ಎಷ್ಟು ಕಡಿಮೆಯಾಗಿದೆ, ಎಷ್ಟು ಉಳಿದುಕೊಂಡಿದೆಯೆಂಬುದನ್ನು ನೋಡಿ ತೆಗೆದುಕೊಳ್ಳಬೇಕು. ಈಗ ನಾನು ಎಷ್ಟು ತ್ಯಾಗ ಮಾಡುತ್ತಿದ್ದೇನೆ ಅದಕ್ಕೆ ಅನುಸರಿಸಿ ನನ್ನ ಶರೀರದಲ್ಲಿ ಹಾಗೂ ನನ್ನ ಪರಿಣಾಮದಲ್ಲಿ ಅದರ ನಿರ್ವಹಣೆ ಮಾಡುವ ಸಾಮರ್ಥ್ಯವಿದೆಯೋ ಅಥವಾ ಇಲ್ಲವೋ ?-ಎಂಬುದನ್ನು ಕೂಡ ವಿಚಾರ ಮಾಡಿ, ತನ್ನ ಸಾಮರ್ಥ್ಯವನ್ನು ನೋಡಿ ವ್ರತದ ಸ್ವೀಕಾರ ಮಾಡಬೇಕಾಗುವುದು.

ದೇಶದ ರೀತಿಯು ನಿರ್ವಾಹಯೋಗ್ಯವಿರುವುದನ್ನು ನೋಡಬೇಕು. ತನಗೆ ಯಾರಾದರೂ ಸಹಾಯಕರಿದ್ದಾರೆ ಅಥವಾ ವ್ರತವನ್ನು ಕೆಡಿಸುವಂಥವರಿದ್ದಾರೆಂಬುದನ್ನೂ ವಿಚಾರಮಾಡಿ ತೆಗೆದುಕೊಳ್ಳಬೇಕು. ತಮ್ಮ ಶರೀರದ ನಿರೋಗತೆಯನ್ನು ನೋಡಬೇಕಾಗುವುದು, ಆಹಾರಾದಿಗಳು ದೊರಕುವ ಅಥವಾ ದೊರಕದಿರುವುದರ ಸಂಯೋಗ ನೋಡಬೇಕು, ಆಹಾರವು ನನ್ನ ಆಧೀನವಿದೆ ಅಥವಾ ಪರಾಧೀನವಿದೆಯೆಂಬುದನ್ನು ನೋಡಬೇಕು. ನಾನು ಈ ವ್ರತಗಳನ್ನು ತೆಗೆದುಕೊಂಡ ಮೇಲೆ ನನ್ನ ಮತ್ತು ಸ್ತ್ರೀ-ಪುರುಷ- ತಾಯಿ-ತಂದೆ-ಒಡೆಯ ಇತ್ಯಾದಿಯವರ ಪರಿಣಾಮದಲ್ಲಿ ಸಂಕ್ಲೇಶವಾಗುವುದೋ ಅಥವಾ ಆಗುವುದಿಲ್ಲವೋ? ತನ್ನ ಸ್ವಾಧೀನತೆ-ಪರಾಧೀನತೆಯನ್ನು ತಿಳಿದುಕೊಂಡು ಯಾವ ಪ್ರಕಾರ ಪರಿಣಾಮದಲ್ಲಿ ಉಜ್ವಲತೆಯೊಡನೆ ವ್ರತದ ನಿರ್ವಾಹವಾಗುವುದು ಆ ಪ್ರಕಾರ ನಿಯಮರೂಪವಾಗಿ ತ್ಯಾಗ ಮಾಡಬೇಕಾಗುವುದು.

**ಯಾವಜ್ಜೀವನ ತ್ಯಾಗಯೋಗ್ಯ :-** ಯಮ ಎಂದರೆ ಎಲ್ಲಿಯವರೆಗೆ ಜೀವನವು ಶೇಷವಿದೆ ಅಲ್ಲಿಯವರೆಗಿನ ಸಲುವಾಗಿ ತ್ಯಾಗ ಮಾಡುವುದು. ಅದೆಷ್ಟೋ ಪದಾರ್ಥಗಳಂತೂ ಯಾವಜ್ಜೀವನವೇ ತ್ಯಾಗ ಯೋಗ್ಯವಿವೆ. ಯಾವವುಗಳಲ್ಲಿ ಸ್ಪಷ್ಟ ತ್ರಸ ಜೀವಗಳ ಘಾತವಾಗುತ್ತದೆ, ಅನಂತ ಜೀವಗಳ ಘಾತವಾಗುತ್ತದೆ, ತಮ್ಮ ಕುಲದಲ್ಲಿ ಸೇವಿಸಲು ಯೋಗ್ಯವಿಲ್ಲ. ಅಮಲೇರಿಸುವಂಥವಿವೆ; ಮತ್ತು ಮದ್ಯ, ಮಾಂಸ, ಮಧು, ಬೆಣ್ಣೆ, ಉಪ್ಪಿನಕಾಯಿ, ಮಹಾವಿಕೃತಿ, ರಾತ್ರಿಯಲ್ಲಿ ಭೋಜನ ಮಾಡುವುದು, ಜೂಜು ಮೊದಲಾದ ಸಪ್ತ ವ್ಯಸನಗಳು, ಕೊಡದಿರುವ ಪರಧನದ ಗ್ರಹಣ, ತ್ರಸ ಹಿಂಸೆ, ಸ್ಥೂಲ ಅಸತ್ಯ, ಅನ್ಯಾಯದ ಪರಿಗ್ರಹ, ಶೋಧಿಸದ ನೀರು, ಅನರ್ಥದಂಡ ಇವಂತೂ ಯಾವಜ್ಜೀವನವೇ ತ್ಯಾಗ ಮಾಡಲು ಯೋಗ್ಯವಿವೆ;

ಇವುಗಳಲ್ಲಿ ನಿಯಮವೇನು ಮಾಡುವುದು ? ಇವಂತೂ ಮಹಾ ಅನೀತಿಯಿವೆ. ಇವುಗಳ ತ್ಯಾಗ ಮಾಡುವುದರಿಂದ ಶರೀರದ ಮೇಲೆ ಯಾವ ಭಾರ, ಕ್ಲೇಶ, ದುಃಖ ಬರುವುದಿಲ್ಲ. ಅಪಯಶವೂ ಬರುವುದಿಲ್ಲ. ಇವುಗಳ ತ್ಯಾಗ ಮಾಡುವಲ್ಲಿ ಹಣ ಖರ್ಚಾಗುವುದಿಲ್ಲ, ಸಾಮರ್ಥ್ಯವೂ ಬೇಕಿಲ್ಲ, ಒಡೆಯ, ಸ್ತ್ರೀ-ಪುತ್ರ-ಮಿತ್ರ-ತಾಯಿ-ತಂದೆ-ಕುಟುಂಬ ಮೊದಲಾದವರ ಸಹಾಯ ಬೇಕಿಲ್ಲ, ಯಾರನ್ನು ಕೇಳುವ ಅಥವಾ ಯಾರಿಗೆ ತಿಳಿಸುವ ಯಾವ ಕಾರ್ಯವೂ ಇಲ್ಲ. ತನ್ನ ಪರಿಣಾಮದ ಆಧೀನವೇ ಇದೆ. ಇವುಗಳ ತ್ಯಾಗ ಮಾಡುವಲ್ಲಿ ಯಾವುದೇ ಪ್ರಕಾರದಿಂದ ಶೀತ-ಉಷ್ಣ, ಕ್ಷುಧೆ-ತೃಷೆ ಮೊದಲಾದವುಗಳ ಬಾಧೆಯನ್ನು ಭೋಗಿಸಬೇಕಾಗುವುದಿಲ್ಲ, ಸ್ವಾಧೀನವಿವೆ, ಪರಿಣಾಮದಲ್ಲಿ ಹಾಗೂ ದೇಹದಲ್ಲಿ ಸುಖ ಮಾಡುವಂಥವಿವೆ. ಆದುದರಿಂದ ದುರ್ಲಭ ಸಾಮಗ್ರಿಯಾದ ಮನುಷ್ಯ ಜನ್ಮ, ಜೈನಕುಲ, ಜಿನಧರ್ಮ ಪಡೆದು ಭೋಗೋಪಭೋಗದ ಪರಿಮಾಣ ಮಾಡುವುದು ಶ್ರೇಷ್ಠವಿದೆ.

**ವಿಪತ್ತಿನಲ್ಲಿ ದೃಢತೆಯನ್ನು ಧಾರಣ ಮಾಡಬೇಕು.** ಎಂದಾದರೂ ಪ್ರಬಲ ಕರ್ಮದ ಉದಯದಿಂದ ವ್ರತ ಸ್ವೀಕರಿಸಿದ ಮನುಷ್ಯನು ಯಾವುದೇ ಕುದೇಶದಲ್ಲಿ ಪರಾಧೀನತೆಯಲ್ಲಿ ಸಿಲುಕಿದರೆ, ಪ್ರಬಲ ವೃದ್ಧಾಪ್ಯ ಬರುವುದರಿಂದ ಕೂಡ್ರಲು-ಏಳಲು-ನಡೆಯಲು ಶಕ್ತಿಯಿಲ್ಲದಾಗ; ಸ್ತ್ರೀ-ಪುತ್ರ ಮೊದಲಾಗಿ ಯಾರೂ ಸಹಾಯಕರಿಲ್ಲದಾಗ, ಕಣ್ಣುಗಳು ಕಾಣಿಸದಿರುವಾಗ, ಕಿವುಡಾದಾಗ, ದೀರ್ಘ ರೋಗ ಬಂದು ಬಿಟ್ಟರೆ, ಜೇಲಿನಲ್ಲಿ ಮ್ಲೇಚ್ಛ ಮೊದಲಾದವರ ಆಧೀನವಾಗಿ ಹೋದರೆ, ದುಷ್ಟ ಮ್ಲೇಚ್ಛಾದಿಗಳು ತಮ್ಮ ಅನ್ನ-ನೀರು ಮೊದಲಾದುವನ್ನು ಕೆಡಿಸಿದರೆ, ಬಲವಂತದಿಂದ ಎಲ್ಲರ ಜತೆ ಸೇರಿಸಿ ಆಹಾರ-ಪಾನೀಯ ಮಾಡಿಸಿದರೆ, ಇಂಥ ಉಪದ್ರವವು ಬಂದು ಬಿಟ್ಟರೆ ಆಗ ತಮ್ಮ ಅಂತರಂಗದಲ್ಲಂತೂ ವ್ರತ-ಸಂಯಮಗಳನ್ನು ಬಿಡದಿರುವುದು ಮತ್ತು ಬಾಹ್ಯದಲ್ಲಿ ಪಂಚ ಣಮೋಕಾರ ಮಂತ್ರದ ಧ್ಯಾನ ಮಾಡುತ್ತಿದ್ದರೇನೇ ಅವನು ಶುದ್ಧನಿದ್ದಾನೆ. ಏಕೆಂದರೆ ಬಾಹ್ಯ ದೇಹ ಮೊದಲಾದವು ಪವಿತ್ರವಿರಲಿ ಅಥವಾ ಅಪವಿತ್ರವಾಗಿ ಹೋಗಲಿ, ಮಲ-ಮೂತ್ರಾದಿಗಳಿಂದ ಲಿಪ್ತವಾಗಿ ಹೋಗಲಿ, ಸಮಸ್ತ ಕುತ್ಸಿತ ಗ್ಲಾನಿಯೋಗ್ಯ. ಅವಸ್ಥೆಗೆ ಪ್ರಾಪ್ತವಾಗುವಂಥ ಪುರುಷನು ಕೂಡ ಪರಮಾತ್ಮನನ್ನು ಸ್ಮರಣೆ ಮಾಡುತ್ತಿದ್ದರೆ ಅವನು ಬಾಹ್ಯದಿಂದ ಕೂಡ ಪವಿತ್ರನಿದ್ದಾನೆ ಮತ್ತು ಆಂತರ್ಯದಿಂದಲೂ ಪವಿತ್ರನಿದ್ದಾನೆ.

ದೇಹವಂತೂ ಸಪ್ತಧಾತುಮಯ ಮಲ-ಮೂತ್ರಾದಿಗಳಿಂದ ತುಂಬಿಕೊಂಡಿದೆ ಮತ್ತು ರೋಗಗಳ ಸ್ಥಾನವಿದೆ. ಒಂದು ಕ್ಷಣದಲ್ಲಿ ಸಂಪೂರ್ಣ ಶರೀರದೊಳಗೆ ಕುಷ್ಟರೋಗವು ಆವರಿಸುತ್ತದೆ; ಸಹಸ್ರಾರು ಕುರು-ಹುಣ್ಣುಗಳಿಂದ ರಕ್ತ-ಕೀವು ಸುರಿಯಲಾರಂಭಿಸುತ್ತದೆ, ಮಲ-ಮೂತ್ರಗಳು ತಮ್ಮಿಂದ ತಾವೇ ಪ್ರವಹಿಸ ತೊಡಗುತ್ತವೆ, ಇಂಥ ಅವಸ್ಥೆಯಲ್ಲಿ ಬಾಹ್ಯ ವ್ಯವಹಾರ ಶುದ್ಧತೆಯು ಹೇಗೆ ಇರುವುದು, ಮತ್ತು ನಿರ್ಧನ, ಏಕಾಕಿಯಾಗಿರುವವನಿಗೆ ಯಾರು ಸಹಾಯಕರಾಗುತ್ತಾರೆ.

**ಧರ್ಮಾತ್ಮಪುರುಷರಂತೂ ಅಶುಭಕರ್ಮದ ಉದಯದಲ್ಲಿ ಗ್ಲಾನಿಯ ತ್ಯಾಗ ಮಾಡಿ ಧೈರ್ಯಧಾರಣ ಮಾಡಿ ಆರ್ತಪರಿಣಾಮದ ಮೂಲಕ ಸಂಕ್ಲೇಷ ಪಡುವುದಿಲ್ಲ,** ಅವರಂತೂ ಅಶುಭ ಕರ್ಮದ ಉದಯವನ್ನು ನಿರ್ಜರೆಯೆಂದು ಮನ್ನಿಸಿ, ಅಂತರಂಗದಲ್ಲಿ ವೀತರಾಗತೆಯ ಮೂಲಕ ಸಂಸಾರ, ಶರೀರ, ಭೋಗಗಳ ಸ್ವರೂಪದ ಚಿಂತನೆ ಮಾಡುತ್ತ, ಹನ್ನೆರಡು ಭಾವನೆಗಳನ್ನು ಭಾವಿಸುತ್ತ, ಕರ್ಮದ ಉದಯದಿಂದ ತಮ್ಮ ಆತ್ಮಸ್ವರೂಪವನ್ನು ಭಿನ್ನ, ಜ್ಞಾತಾ-ದೃಷ್ಟಾ-ಶುದ್ಧ ಚಿಂತನೆ ಮಾಡುತ್ತ, ವೀತರಾಗತೆಯಿಂದಲೇ ರಾಗ, ದ್ವೇಷ, ಹರ್ಷ, ವಿಷಾದ, ಗ್ಲಾನಿ, ಭಯ, ಲೋಭ, ಮಮತೆಯ ರೂಪದ ಆತ್ಮನ ಮಾಲಿನ್ಯವನ್ನು ತೊಳೆದು ತಮ್ಮನ್ನು ಶುದ್ಧವೆಂದು ಮನ್ನಿಸುತ್ತಾರೆ, ಇಂಥವರಿಗೇನೇ ಸಂಪೂರ್ಣ ರೂಪದಿಂದ ಶುದ್ಧತೆಯಾಗುತ್ತದೆ.

ಈಗ **ಭೋಗೋಪಭೋಗ ಪರಿಮಾಣವ್ರತ**ದ ಎರಡು ಭೇದಗಳನ್ನು ಹೇಳುವಂಥ ಸೂತ್ರ ಹೇಳುತ್ತಾರೆ,-

**ನಿಯಮೋ ಯಮಶ್ಚ ವಿಹಿತೌ ದ್ವೇಧಾ ಭೋಗೋಪಭೋಗಸಂಹಾರೇ ।**
**ನಿಯಮಃ ಪರಿಮಿತಕಾಲೋ ಯಾವಜ್ಜೀವಂ ಯಮೋ ಧ್ರಿಯತೇ ॥೮೭॥**

**ಅರ್ಥ :-** ಭಗವಂತರು ಭೋಗವು ಕುಗ್ಗುವುದರಿಂದ ಯಮ ಮತ್ತು ನಿಯಮವೆಂದು ಎರಡು ಪ್ರಕಾರದ ಭೋಗೋಪಭೋಗ ಪರಿಮಾಣವ್ರತ ಹೇಳಿದ್ದಾರೆ. ಕಾಲದಮರ್ಯಾದೆ ಮಾಡಿ ತ್ಯಾಗ ಮಾಡುವುದನ್ನು ನಿಯಮವೆಂದು

ಹೇಳುತ್ತಾರೆ. ಮತ್ತು ದೇಹದಲ್ಲಿ ಜೀವವಿರುವವರೆಗೆ (ಆಜೀವನ ಪರ್ಯಂತದ ಸಲುವಾಗಿ) ತ್ಯಾಗ ಮಾಡುವುದನ್ನು ಯಮವೆಂದು ಹೇಳುತ್ತಾರೆ.

**ಭಾವಾರ್ಥ :-** ಒಂದುಬಾರಿ ಭೋಗಿಸುವಲ್ಲಿ ಬರುವಂಥ ಆಹಾರ ಮೊದಲಾದುವಂತೂ ಭೋಗಗಳಿವೆ ಮತ್ತು ಪುನಃ ಪುನಃ ಭೋಗಿಸುವಲ್ಲಿ ಬರುವಂಥ ವಸ್ತ್ರ-ಆಭರಣ ಮೊದಲಾದವು ಉಪಭೋಗವಿವೆ. ಈ ಭೋಗೋಪಭೋಗಗಳ ತ್ಯಾಗವು ಯಮ ಹಾಗೂ ನಿಯಮವೆಂದು ಎರಡು ಪ್ರಕಾರವಿದೆ. ಇವುಗಳಲ್ಲಿ ಆ ಭೋಗ-ಉಪಭೋಗವನ್ನು ಒಂದು ಮುಹೂರ್ತ, ಎರಡು ಮುಹೂರ್ತ, ಒಂದು ಪ್ರಹರ, ಎರಡು ಪ್ರಹರ, ಒಂದು ದಿವಸ, ಎರಡು ದಿವಸ, ಐದು ದಿವಸ, ಹದಿನೈದು ದಿವಸ, ಒಂದು ತಿಂಗಳು, ಎರಡು ತಿಂಗಳು, ನಾಲ್ಕು ತಿಂಗಳು, ಆರು ತಿಂಗಳು, ಒಂದು ವರ್ಷ, ಎರಡು ವರ್ಷ, ಇತ್ಯಾದಿ ಸಮಯದ ಮರ್ಯಾದೆಯೊಡನೆ ತ್ಯಾಗ ಮಾಡುವುದು ಅದು **ನಿಯಮ** ನಾಮದ ಪರಿಮಾಣವಿದೆ. ಯಾವ ಪದಾರ್ಥವು ತನ್ನ ಸಲುವಾಗಿ ಉಪಯೋಗಿಯಿದೆ, ಶುದ್ಧವಿದೆ ಅದರ ತ್ಯಾಗವನ್ನಂತೂ ಕಾಲದ ಮರ್ಯಾದೆಯೊಡನೆಯೇ **ನಿಯಮ**ರೂಪದ ತ್ಯಾಗ ಮಾಡಬೇಕಾಗುವುದು. ಯಾವ ಪದಾರ್ಥವು ತನ್ನ ಸಲುವಾಗಿ ಪ್ರಯೋಜನದ್ದಿಲ್ಲ ಮತ್ತು ಪರಿಣಾಮವನ್ನು ಕೆಡಿಸುವಂಥದ್ದಿದೆ, ದೋಷಯುಕ್ತವಿದೆ ಅದರ ತ್ಯಾಗವನ್ನಂತೂ ಯಾವಜ್ಜೀವನ **ಯಮ** ನಾಮದ ಪರಿಣಾಮದೊಡನೆಯೇ ಮಾಡಬೇಕಾಗುವುದು.

ಈ ಭೋಗೋಪಭೋಗ ಪರಿಮಾಣದ ಮೂಲಕ ಅನೇಕ ಪಾಪಗಳ ಆಸ್ರವವು ನಿಂತುಹೋಗುತ್ತದೆ, ಇಂದ್ರಿಯಗಳು ವಶದಲ್ಲಿ ಬಂದು ಬಿಡುತ್ತವೆ, ರಾಗವು ಅಧಿಕ ಮಂದವಾಗುತ್ತದೆ, ವ್ಯವಹಾರವು ಶುದ್ಧವಾಗುತ್ತದೆ, ಮನಸ್ಸು ವಶದಲ್ಲಿ ಬಂದು ಬಿಡುತ್ತದೆ, ವ್ಯವಹಾರ-ಪರಮಾರ್ಥಗಳೆರಡೂ ಉಜ್ವಲವಾಗಿ ಹೋಗುತ್ತವೆ,. ಆದುದರಿಂದ **ಭೋಗೋಪಭೋಗ ಪರಿಮಾಣವ್ರತವೇ ಆತ್ಮನಿಗೆ ಹಿತವಿದೆ.** ವಿರುದ್ಧ ಭೋಗವನ್ನಂತೂ ತ್ಯಾಗ ಮಾಡಲೇಬೇಕು. ಅವಿರುದ್ಧ ಭೋಗವನ್ನು ಕೂಡ ತಮ್ಮ ಶಕ್ತಿಗನುಸರಿಸಿ ದೇಶ-ಕಾಲ ನೋಡಿ ದಿವಸ-ರಾತ್ರಿಯ, ಕಾಲದ ಮರ್ಯಾದೆಯೊಡನೆ ತ್ಯಾಗ ಮಾಡಬೇಕಾಗುವುದು. ಅದರಲ್ಲಿ ಕೂಡ ಪುನಃ ಎರಡುಗಳಿಗೆ, ನಾಲ್ಕು ಗಳಿಗೆಯ ಮರ್ಯಾದೆಮಾಡಿ ತ್ಯಾಗ ಮಾಡಬೇಕಾಗುವುದು. ಇದರಿಂದ ಅಧಿಕ ಕರ್ಮಗಳ ನಿರ್ಜರೆಯಾಗುತ್ತದೆ.

ಈಗ ಮತ್ತೆ ಭೋಗೋಪಭೋಗದ ಪರಿಮಾಣ ಹೇಳುವಂಥ ಸೂತ್ರ ಹೇಳುತ್ತಾರೆ, -

**ಭೋಜನ-ವಾಹನ-ಶಯನ-ಸ್ನಾನ-ಪವಿತ್ರಾಂಗ ರಾಗಕುಸುಮೇಷು ।**
**ತಾಂಬೂಲವಸನಭೂಷಣ ಮನ್ಮಥ ಸಂಗೀತ-ಗೀತೇಷು ॥೮೮॥**

**ಅರ್ಥ :-** ಭೋಗೋಪಭೋಗ ಪರಿಮಾಣ ವ್ರತದಲ್ಲಿ ನಿತ್ಯವೂ ಈ ಪ್ರಕಾರ ನಿಯಮ ಮಾಡ ಬೇಕಾಗುವುದು.ಈ ಹೊತ್ತು ಒಂದೇ ಬಾರಿ ಭೋಜನ ಮಾಡುವೆನು ಅಥವಾ ಎರಡು ಬಾರಿ ಭೋಜನ ಮಾಡುವೆನು ಅಥವಾ ಮೂರು ಬಾರಿ ಹೀಗೆ ಭೋಜನ ಮಾಡುವ ಪರಿಮಾಣ ಮಾಡುವುದು; ಅಥವಾ ಈ ಹೊತ್ತು ನಾನು ಇಷ್ಟು ಜಾತಿಯ ಅನ್ನ ಹಾಗೂ ಇಷ್ಟು ರಸ, ಇಷ್ಟು ಪ್ರಕಾರದ ಕಜ್ಜಾಯ ತಿನ್ನುವೆನು, ಹೆಚ್ಚು ಪ್ರಕಾರದ್ದು ತಿನ್ನುವುದಿಲ್ಲವೆಂದು ಭೋಜನದ ಕುರಿತು ನಿಯಮ ಮಾಡಬೇಕಾಗುವುದು.

ಆನೆ, ಕುದುರೆ, ರಥ, ಪಲ್ಲಕ್ಕಿ, ಒಂಟೆ, ಎತ್ತು, ಟ್ರೇನು, ಮೋಟಾರು, ನೌಕೆ, ಜಹಜ, ವಿಮಾನ ಇವೇ ಮೊದಲಾದ ವಾಹನ ಗಳಲ್ಲಿ ಹತ್ತುವ-ಕೂಡ್ರುವ ನಿಯಮ ಮಾಡಬೇಕು. ಮಂಚ, ಚಾಪೆ, ಗಾದಿ ಇವೇ ಮೊದಲಾದವುಗಳ ಮೇಲೆ ಶಯನ ಮಾಡುವ ನಿಯಮ ಮಾಡಬೇಕು. ನಾನು ಈ ಹೊತ್ತು ಮಂಚದ ಮೇಲೆ ಮಲಗುವುದಿಲ್ಲ, ಆದರೆ ನೆಲದ ಮೇಲೆಯೇ ಮಲಗುವೆನು.

ಈ ಹೊತ್ತು ಒಮ್ಮೆ ಸ್ನಾನ ಮಾಡುವೆನು ಅಥವಾ ಎರಡು ಸಲ ಸ್ನಾನ ಮಾಡುವೆನು ಅಥವಾ ಸ್ನಾನ ಮಾಡುವುದೇ ಇಲ್ಲ ಎಂಬಿತ್ಯಾಗಿ ನಿಯಮ ಮಾಡಬೇಕು. ಪವಿತ್ರ ಅಂಗರಾಗ ಎಂದರೆ ಚಂದನ, ಕೇಶರ, ಕರ್ಪೂರ ಇತ್ಯಾದಿಗಳ ವಿಲೇಪನ ಮಾಡುವುದು ಅಥವಾ ಮಾಡದಿರುವುದರದೂ ನಿಯಮ ಮಾಡಬೇಕು. ಫಲ-ಪುಷ್ಪಗಳ ಮಾಲೆ, ಆಭರಣಾದಿಗಳ ಧಾರಣ ಮಾಡುವುದರದೂ ನಿಯಮ ಮಾಡಬೇಕಾಗುವುದು. ತಾಂಬೂಲ, ಏಲಕ್ಕಿ, ಲವಂಗ ಮೊದಲಾದವುಗಳನ್ನು ತಿನ್ನುವುದರದೂ ಕೂಡ ನಿಯಮ ಮಾಡಬೇಕಾಗುವುದು.

ಈ ಹೊತ್ತು ಇಷ್ಟೇ ಬಟ್ಟೆ ಧರಿಸುವೆನು, ಅಧಿಕ ಧರಿಸಲಾರೆನೆಂದು ಬಟ್ಟೆಯದೂ ನಿಯಮ ಮಾಡಬೇಕು. ಇಂದು ಇಷ್ಟೇ ಆಭರಣ ಧರಿಸುವೆನು, ಅಧಿಕ ಧರಿಸಲಾರೆನೆಂದು ಆಭರಣ ಧರಿಸುವುದರದೂ ನಿಯಮ ಮಾಡಬೇಕಾಗುವುದು.

ಕಾಮ ಸೇವನೆಯದೂ ನಿಯಮ ಮಾಡಬೇಕು; ನೃತ್ಯ ನೋಡುವುದರದೂ ನಿಯಮ ಮಾಡಬೇಕು. ಗೀತ-ಗಾಯನಗಳ ಹಾಗೂ ಕಲಾಕಾರರಿಂದ ಗೀತ ಕೇಳುವುದರದೂ ಕೂಡ ನಿಯಮ ಮಾಡಬೇಕಾಗುವುದು.

ಹರಿತಕಾಯ ತಿನ್ನುವುದರದೂ ನಿಯಮ ಮಾಡಬೇಕು. ಷಡ್ರಸಗಳನ್ನು ತಿನ್ನುವ-ಕುಡಿಯುವುದರ ನಿಯಮ ಮಾಡಬೇಕು, ನೀರು ಕುಡಿಯುವುದರದೂ ನಿಯಮ ಮಾಡಬೇಕು. ಸಿಂಹಾಸನ, ಖುರ್ಚಿ ಇತ್ಯಾದಿಗಳ ಮೇಲೆ ಕೂಡ್ರುವುದರದೂ ನಿಯಮ ಮಾಡಬೇಕು ಈ ಪ್ರಕಾರ ತಮಗೆ ಯೋಗ್ಯವಾದ ಭೋಗೋಪಭೋಗದ್ದೂ ನಿತ್ಯ ನಿಯಮ ಮಾಡುವಂಥವರಿಗೆ ಆಹಾರ-ಪಾನೀಯಗಳನ್ನು ಮಾಡುತ್ತಿದ್ದರೂ ಕೂಡ ನಿರಂತರ ಸಂವರ ವಾಗುತ್ತದೆ.

ಈಗ ನಿಯಮದ ಸಲುವಾಗಿ ಕಾಲದ ಮರ್ಯಾದೆ ತಿಳಿಸುವಂಥ ಸೂತ್ರ ಹೇಳುತ್ತಾರೆ,-

**ಅದ್ಯ ದಿವಾ ರಜನೀ ವಾ ಪಕ್ಷೋ ಮಾಸಸ್ತಥರ್ತುರಯನಂ ವಾ ।**
**ಇತಿ ಕಾಲ ಪರಿಚ್ಛಿತ್ತ್ಯಾ ಪ್ರತ್ಯಾಖ್ಯಾನಂ ಭವೇನ್ನಿಯಮಃ ॥೮೯॥**

**ಅರ್ಥ :-** ಅದ್ಯ ಎಂದರೆ ಒಂದು ಗಳಿಗೆ, ಮುಹೂರ್ತ, ಪ್ರಹರ, ದಿವಸ, ರಾತ್ರಿ, ಪಕ್ಷ, ಒಂದು ತಿಂಗಳು, ಋತು ಎಂದರೆ ಎರಡು ತಿಂಗಳು, ಅಯನ ಎಂದರೆ ಆರು ತಿಂಗಳು ಇತ್ಯಾದಿ ಕಾಲದ ಪರಿಮಾಣ ಮಾಡಿ ತ್ಯಾಗ ಮಾಡುವುದು ಅದು ನಿಯಮವೆಂದು ಕರೆಸಿಕೊಳ್ಳುತ್ತದೆ. ಈ ಪ್ರಕಾರ ಭೋಗೋಪಭೋಗ ಪರಿಮಾಣವ್ರತದ ವರ್ಣನೆ ಮಾಡಲಾಯಿತು.

ಈಗ **ಭೋಗೋಪಭೋಗ ಪರಿಮಾಣವ್ರತದ ಐದು ಅತಿಚಾರ**ಗಳನ್ನು ತಿಳಿಸುವಂಥ ಸೂತ್ರ ಹೇಳುತ್ತಾರೆ,-

**ವಿಷಯವಿಷತೋಽನುಪೇಕ್ಷಾ-ನುಸ್ಮೃತಿರತಿಲೌಲ್ಯಮತಿತೃಷಾನುಭವೋ**
**ಭೋಗೋಪಭೋಗಪರಿಮಾ-ವ್ಯತಿಕ್ರಮಾಃ ಪಂಚ ಕಥ್ಯಂತೇ ॥೯೦॥**

**ಅರ್ಥ :-** ಈ ಭೋಗೋಪಭೋಗ ಪರಿಮಾಣವ್ರತದ ಐದು ಅತಿಚಾರಗಳು ತ್ಯಾಗಮಾಡಲು ಯೋಗ್ಯವಿವೆ.

೧) ವಿಷಯ ಸಂತಾಪವು ಹೆಚ್ಚುತ್ತದೆ ಮತ್ತು ವಿಷಯಗಳ ನಿಮಿತ್ತದಿಂದ ಮರಣವೂ ಸಂಭವಿಸುತ್ತದೆ. ಈ ಐದು ಇಂದ್ರಿಯಗಳ ವಿಷಯಗಳು ವಿಷವಿವೆ. ಇವುಗಳಲ್ಲಿ ಪರಿಮಾಣದ ರಾಗವು ಕಡಿಮೆಯಾಗದಿರುವುದು ಅದು **ಅನುಪೇಕ್ಷಾ**ನಾಮದ ಅತಿಚಾರವಿದೆ. ೨) ಪೂರ್ವಕಾಲದಲ್ಲಿ ಭೋಗಿಸಿದ ವಿಷಯಗಳನ್ನು ಪುನಃ ಪುನಃಸ್ಮರಣೆ ಮಾಡುತ್ತಿರುವುದು ಅದು **ಅನುಸ್ಮೃತಿ**ನಾಮದ ಅತಿಚಾರವಿದೆ. ೩) ವರ್ತಮಾನದೊಳಗೆ ಭೋಗಿಸುತ್ತಿರುವ ವಿಷಯಗಳಲ್ಲಿ ಅತ್ಯಂತ ಗೃದ್ಧತೆಯಿಂದ ಹಾಗೂ ಅತಿಶಯ ಆಸಕ್ತವಾಗಿ ಭೋಗಿಸುವುದು ಅದು **ಅತಿಲೌಲ್ಯ**ನಾಮದ ಅತಿಚಾರವಿದೆ. ೪) ಭವಿಷ್ಯದಲ್ಲಿ ವಿಷಯಗಳನ್ನು ಭೋಗಿಸುವ ಕುರಿತು ಅತ್ಯಂತ ತೃಷ್ಣೆಯಿರುವುದು ಅದು **ಅತಿತೃಷ್ಣಾ**ನಾಮದ ಅತಿಚಾರವಿದೆ. ೫) ಯಾವ ಕಾಲದಲ್ಲಿ ವಿಷಯಗಳನ್ನು ಭೋಗಿಸುತ್ತಿಲ್ಲ ಆಗಲೂ ಕೂಡ ನಾನು ವಿಷಯಗಳನ್ನು ಭೋಗಿಸುತ್ತಿದ್ದೇನೆಂದು ತಿಳಿದುಕೊಳ್ಳುವಂಥ ಪರಿಣಾಮವು ಅದು **ಅನುಭವ**ನಾಮದ ಅತಿಚಾರವಿದೆ.

ಈ ಪ್ರಕಾರ ಭೋಗೋಪಭೋಗ ಪರಿಮಾಣವ್ರತದ ಐದು ಅತಿಚಾರಗಳನ್ನು ತ್ಯಜಿಸಿ ವ್ರತವನ್ನು ಶುದ್ಧವಾಗಿ ಪಾಲಿಸಬೇಕು.

ಈ ಪ್ರಕಾರ ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡ ಶ್ರಾವಕಾಚಾರದ
ಪಂ. ಸದಾಸುಖಜೀಯವರು ಬರೆದ ಢೂಂಡಾರೀ ಭಾಷಾ ಟೀಕೆಯಲ್ಲಿ
ನಾಲ್ಕನೆಯ ಗುಣವ್ರತ ಅಧಿಕಾರವು ಸಮಾಪ್ತವಾಯಿತು.

ॐ

# ಶಿಕ್ಷಾವ್ರತ ಅಧಿಕಾರ

ಈಗ ನಾಲ್ಕು ಶಿಕ್ಷಾವ್ರತಗಳ ನಾಮ ನಿರೂಪಣೆ ಮಾಡುವಂಥ ಸೂತ್ರ ಹೇಳುತ್ತಾರೆ,-

**ದೇಶಾವಕಾಶಿಕಂ ವಾ ಸಾಮಾಯಿಕಂ ಪ್ರೋಷಧೋಪವಾಸೋ ವಾ ।**
**ವೈಯ್ಯಾವೃತ್ಯಂ ಶಿಕ್ಷಾ-ವ್ರತಾನಿ ಚತ್ವಾರಿ ಶಿಷ್ಟಾನಿ ॥೯೧॥**

**ಅರ್ಥ :-** ೧) ದೇಶಾವಕಾಶಿಕ, ೨) ಸಾಮಾಯಿಕ, ೩.)ಪ್ರೋಷಧೋಪವಾಸ, ೪) ವೈಯ್ಯಾವೃತ್ಯವೆಂದು ಇವು ನಾಲ್ಕು ಶಿಕ್ಷಾವ್ರತಗಳನ್ನು ಹೇಳಿದ್ದಾರೆ.

**ಭಾವಾರ್ಥ :-** ಈ ನಾಲ್ಕು ಶಿಕ್ಷಾವ್ರತಗಳಿಂದ ಗೃಹಸ್ಥಾವಸ್ಥೆಯಲ್ಲಿ ಮುನಿತನದ ಶಿಕ್ಷಣದ ಅಭ್ಯಾಸ ಮಾಡುತ್ತಾರೆ.

ಈಗ **ದೇಶಾವಕಾಶಿಕ ಶಿಕ್ಷಾವ್ರತ**ವನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ದೇಶಾವಕಾಶಿಕಂ ಸ್ಯಾತ್ ಕಾಲಾಪರಿಚ್ಛೇದನೇನ ದೇಶಸ್ಯ ।**
**ಪ್ರತ್ಯಹಮಣುವ್ರತಾನಾಂ ಪ್ರತಿಸಂಹಾರೋ ವಿಶಾಲಸ್ಯ ॥೯೨॥**

**ಅರ್ಥ :-** ಅಣುವ್ರತಗಳನ್ನು ಧರಿಸಿದ ಪುರುಷರ ಮೂಲಕ ಪ್ರತಿ ದಿವಸವೂ ಕಾಲದ ಮರ್ಯಾದೆ ಮಾಡಿ ವಿಶಾಲ ಸೀಮೆಯನ್ನು ಸ್ವಲ್ಪ-ಸ್ವಲ್ಪ ಕಡಿಮೆ ಮಾಡುತ್ತ ಹೋಗುವುದರ ಹೆಸರು ದೇಶಾವಕಾಶಿಕ ಶಿಕ್ಷಾವ್ರತವಿದೆ.

**ಭಾವಾರ್ಥ :-** ಮೊದಲು ದಿಗ್ವ್ರತದಲ್ಲಿ ದಶ ದಿಸೆಗಳಲ್ಲಿ ಹೋಗುವ, ಬೇಡಿಸುವ, ಕಳಿಸುವ, ಕರೆಯಿಸುವ ಇತ್ಯಾದಿಗಳ ಯಾವಜ್ಜೀವನದ ಯಾವ ಮರ್ಯಾದೆ ಮಾಡಿತ್ತು ಅದು ಅಧಿಕವಿತ್ತು, ಅದರಲ್ಲಿ ಈಗ ಪ್ರತಿ ದಿವಸ ಕ್ಷೇತ್ರದ ಸೀಮೆ, ಕಾಲದ ಮರ್ಯಾದೆ ಮಾಡಿ ಕಡಿಮೆ ಮಾಡುವ ವ್ರತ ತೆಗೆದುಕೊಳ್ಳುವುದು ಅದು ದೇಶಾವಕಾಶಿಕ ವ್ರತವಿದೆ. ಹೇಗೆಂದರೆ ಪೂರ್ವದಿಸೆಯಲ್ಲಿ ಇನ್ನೂರು ಮೈಲುವರೆಗಿನ ಮುಂದೆ ಹೋಗದಿರುವ ಯಾವಜ್ಜೀವನ ತ್ಯಾಗ ಮಾಡಿತ್ತು ಅದಂತೂ ದಿಗ್ವ್ರತವಿದೆ. ಈಗ ಅದರಲ್ಲಿಯೇ ಪ್ರತಿ ದಿವಸ ಮರ್ಯಾದೆ ಮಾಡಿ ಇಂದು ನಾನು ನಾಲ್ಕು ಮೈಲಿಗಿಂತ ಹೆಚ್ಚು ಹೋಗಲಾರೆನು ಅಥವಾ ಈ ನಗರದ ಹೊರಗೆ ಹೋಗಲಾರೆನು ಅಥವಾ ಮನೆಯ ಹೊರಗೆ ಹೋಗಲಾರೆನೆಂದು ನಿಯಮ ಮಾಡಿಕೊಳ್ಳುವುದು ಅದು **ದೇಶಾವಕಾಶಿಕ** ವ್ರತವಿದೆ.

ಈಗ ದೇಶಾವಕಾಶಿಕ ವ್ರತದಲ್ಲಿ **ಕ್ಷೇತ್ರದ ಮರ್ಯಾದೆ** ತಿಳಿಸುವಂಥ ಸೂತ್ರ ಹೇಳುತ್ತಾರೆ,-

**ಗೃಹಹಾರಿಗ್ರಾಮಾಣಾಂ ಕ್ಷೇತ್ರನದೀದಾವಯೋಜನಾನಾಂ ಚ ।**
**ದೇಶಾವಕಾಶಿಕಸ್ಯ ಸ್ಮರಂತಿ ಸೀಮ್ನಾಂ ತಪೋವೃದ್ಧಾಃ ॥೯೩॥**

**ಅರ್ಥ :-** ತಪೋವೃದ್ಧರಾದ ಗಣಧರದೇವರು ದೇಶಾವಕಾಶಿಕ ವ್ರತ ಮಾಡುವ ಸೀಮೆ- ಮರ್ಯಾದೆಯನ್ನು ತಿಳಿಸಿಕೊಡುತ್ತಾರೆ. ಮನೆ, ಕೇರಿ, ಗ್ರಾಮ, ಕ್ಷೇತ್ರ, ನದೀ, ವನ, ಯೋಜನಗಳನ್ನು ದೇಶಾವಕಾಶಿಕ ವ್ರತದಲ್ಲಿ ಸೀಮೆಯೆಂದು ಹೇಳುತ್ತಾರೆ. ನಾನು ಇವುಗಳ ಹೊರಗೆ ಇಂತಿಷ್ಟು ಸಮಯದವರೆಗೆ ಹೋಗಲಾರೆನೆಂದು ನಿಯಮ ಮಾಡಿಕೊಳ್ಳುವುದು.

ಈಗ ದೇಶಾವಕಾಶಿತ ವ್ರತದಲ್ಲಿ **ಕಾಲದ ಮರ್ಯಾದೆ** ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ಸಂವತ್ಸರ ಮೃತುರಯನಂ ಮಾಸಚತುರ್ಮಾಸ ಪಕ್ಷಮೃಕ್ಷಂ ಚ ।**
**ದೇಶಾವಕಾಶಿಕಸ್ಯ ಪ್ರಾಹುಃ ಕಾಲಾವಧಿಂ ಪ್ರಾಜ್ಞಾಃ ॥೯೪॥**

**ಅರ್ಥ :-** ಪ್ರವೀಣರಿರುವಂಥ ಪುರುಷರು ಒಂದು ವರ್ಷ, ಆರು ತಿಂಗಳು, ನಾಲ್ಕು ತಿಂಗಳು, ಎರಡು ತಿಂಗಳು, ಒಂದು ಪಕ್ಷ ಒಂದು ನಕ್ಷತ್ರ ಈ ಪ್ರಕಾರ ದೇಶಾವಕಾಶಿಕ ವ್ರತದಲ್ಲಿ ಕಾಲದ ಮರ್ಯಾದೆ ಮಾಡುತ್ತಾರೆ.

ಈಗ **ದೇಶಾವಕಾಶಿಕ ವ್ರತದಲ್ಲಿ ಮಹಾವ್ರತತನ** ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಸೀಮಾಂತಾನಾಂ ಪರತಃ ಸ್ಥೂಲೇತರ ಪಂಚಪಾಪ ಸಂತ್ಯಾಗಾತ್ ।**
**ದೇಶಾವಕಾಶಿಕೇನ ಚ ಮಹಾವ್ರತಾನಿ ಪ್ರಸಾಧ್ಯಂತೇ ॥೯೫॥**

**ಅರ್ಥ :-** ಪ್ರತಿ ದಿವಸ ಎಷ್ಟು ಕ್ಷೇತ್ರದ ಪರಿಮಾಣ ಮಾಡಿದೆ ಅದರ ಹೊರಗೆ ಸ್ಥೂಲ ಹಾಗೂ ಸೂಕ್ಷ್ಮವಾದ ಪಂಚಪಾಪಗಳ ತ್ಯಾಗ ಮಾಡುವುದರಿಂದ ದೇಶಾವಕಾಶಿಕ ವ್ರತ ಮಾಡುವುದರಿಂದಲೇ ಮಹಾವ್ರತಗಳ ಸಿದ್ಧಿಯು ಪ್ರಾಪ್ತವಾಗಿ ಬಿಡುತ್ತದೆ.

**ಭಾವಾರ್ಥ :-** ಕ್ಷೇತ್ರದ ಮರ್ಯಾದೆಯ ಹೊರಗೆ ಸಮಸ್ತ ಐದೂ ಪಾಪಗಳ ಪೂರ್ಣತ್ಯಾಗ ಮಾಡಿ ಬಿಡುವುದರಿಂದ ಅಣುವ್ರತವೇ ಮಹಾವ್ರತದ ಸಮಾನವಾಗಿ ಹೋಗುತ್ತದೆ.

ಈಗ **ದೇಶಾವಕಾಶಿಕ ವ್ರತದ ಐದು ಅತಿಚಾರ**ಗಳನ್ನು ತಿಳಿಸುವಂಥ ಸೂತ್ರ ಹೇಳುತ್ತಾರೆ,-

**ಪ್ರೇಷಣಶಬ್ದಾನಯನೇ ರೂಪಾಭಿವ್ಯಕ್ತಿ ಪುದ್ಗಲಕ್ಷೇಪೋ ।**
**ದೇಶಾವಕಾಶಿಕಸ್ಯ ವ್ಯಪದಿಶ್ಯಂತೇऽತ್ಯಯಾಃ ಪಂಚ ॥೯೬॥**

**ಅರ್ಥ :-** ಮರ್ಯಾದೆ ಮಾಡಿದ ಕ್ಷೇತ್ರದ ಹೊರಗೆ ಯಾವುದೇ ಪ್ರಯೋಜನದ ಸಲುವಾಗಿ ತಮ್ಮ ಸೇವಕನನ್ನು, ಮಿತ್ರನನ್ನು, ಮಗನನ್ನು ಅಥವಾ ಬೇರೆ ಯಾರನ್ನಾದರೂ ಕಳಿಸಿ, ನೀನು ಈ ಕಾರ್ಯ ಮಾಡಿಕೊಂಡು ಬಾಯೆಂದು ಹೇಳುವುದು ಅದು ಪ್ರೇಷಣ ನಾಮದ ಅತಿಚಾರವಿದೆ.

ಮರ್ಯಾದೆಯ ಹೊರಗಿನ ಕ್ಷೇತ್ರದಲ್ಲಿ ವಾಸಿಸುವಂಥವನಿಗೆ ನೀನು ಇಂಥ ಕೆಲಸ ಮಾಡಿಕೊಡೆಂದು ಹೇಳುವುದು, ಮತ್ತು ಶಬ್ದಗಳ ಮೂಲಕ ಸಂಕೇತದಿಂದ ತಿಳಿಸಿಕೊಡುವುದು ಅದು **ಶಬ್ದ**ನಾಮದ ಅತಿಚಾರವಿದೆ.

ಮರ್ಯಾದೆಯ ಹೊರಗಿನ ಕ್ಷೇತ್ರದಿಂದ ಯಾರನ್ನಾದರೂ ಕರೆಸಿಕೊಳ್ಳುವುದು ಅಥವಾ ಬಟ್ಟೆ ಮೊದಲಾದ ಆವಶ್ಯಕ ಐಚ್ಛಿಕ ಪದಾರ್ಥಗಳನ್ನು ಶಬ್ದಗಳಿಂದ ಹೇಳಿ ಬೇಡಿಸಿಕೊಳ್ಳುವುದು ಅದು **ಆನಯನ** ನಾಮದ ಅತಿಚಾರವಿದೆ.

ಮರ್ಯಾದೆಯ ಹೊರಗಿನ ಕ್ಷೇತ್ರದಲ್ಲಿ ವಾಸಿಸುವಂಥವರಿಗೆ ಸಂಕೇತದಿಂದ ತಿಳಿಸಿಕೊಡುವ ಸಲುವಾಗಿ ತಮ್ಮ ರೂಪು ತೋರಿಸುವುದು ಅದು **ರೂಪಾಭಿವ್ಯಕ್ತಿ**ನಾಮದ ಅತಿಚಾರವಿದೆ.

ಮರ್ಯಾದೆಯ ಹೊರಗಿನ ಕ್ಷೇತ್ರದಲ್ಲಿ ವಸ್ತ್ರಾದಿಗಳ ಮೂಲಕ ಹರಳು, ಕಲ್ಲು, ಕಟ್ಟಿಗೆ ಮೊದಲಾದವುಗಳನ್ನು ಎಸೆದು ತಮ್ಮ ಉಪಸ್ಥಿತಿಯನ್ನು ಸೂಚಿಸುವುದು ಅದು **ಪುದ್ಗಲಕ್ಷೇಪ**ನಾಮದ ಅತಿಚಾರವಿದೆ.

ಈ ಪ್ರಕಾರ ದೇಶಾವಕಾಶಿಕ ವ್ರತದ ಈ ಐದು ಅತಿಚಾರಗಳು ತ್ಯಾಗ ಯೋಗ್ಯವಾಗಿವೆ.

ಈಗ ಸಾಮಾಯಿಕ **ಶಿಕ್ಷಾವ್ರತದ** ಸ್ವರೂಪ ಹೇಳುತ್ತಾರೆ, -

**ಆಸಮಯಮುಕ್ತಿ ಮುಕ್ತಂ ಪಂಚಾದ್ಯಾನಾಮಶೇಷ ಭಾವೇನ ।**
**ಸರ್ವತ್ರ ಚ ಸಾಮಯಿಕಾಃ ಸಾಮಯಿಕಂ ನಾಮ ಶಂಸಂತಿ ॥೯೭॥**

**ಅರ್ಥ :-** ಪರಮ ಸಾಮ್ಯಭಾವಕ್ಕೆ ಪ್ರಾಪ್ತರಾದಂಥ ಗಣಧರದೇವರು ಸಾಮಾಯಿಕದ ಪ್ರಕಟ ಪ್ರಶಂಸೆ ಮಾಡುತ್ತಾರೆ. ಮರ್ಯಾದೆಯ ಹೊರಗಿನ ಕ್ಷೇತ್ರದಲ್ಲಿ ಹಾಗೂ ಮರ್ಯಾದೆಯ ಒಳಗಿನ ಕ್ಷೇತ್ರದಲ್ಲಿ ಎಲ್ಲೆಡೆಗೂ ಸಮಸ್ತ ಮನ-ವಚನ-ಕಾಯ, ಹಾಗೂ ಕೃತ, ಕಾರಿತ, ಅನುಮೋದನದಿಂದ ಕಾರ್ಯದ ಮರ್ಯಾದೆ ಮಾಡಿ, ಸಮಸ್ತ ಪಂಚ ಪಾಪಗಳ ಪೂರ್ಣ ತ್ಯಾಗ ಮಾಡುವುದು ಅದು **ಸಾಮಾಯಿಕ**ವೆಂದು ಕರೆಸಿಕೊಳ್ಳುತ್ತದೆ.

**ಭಾವಾರ್ಥ :-** ಕಾಲದ ಮರ್ಯಾದೆ ಮಾಡಿ ಸಂಪೂರ್ಣ ರೂಪದಿಂದ ಸಮಸ್ತ ಪಂಚಪಾಪಗಳ ತ್ಯಾಗ ಮಾಡುವುದು ಅದು ಸಾಮಾಯಿಕವಿದೆ.

ಈಗ ಸಾಮಾಯಿಕದಲ್ಲಿ ಪಂಚಪಾಪಗಳ ತ್ಯಾಗಮಾಡಿ **ಹೇಗಿರುವುದೆಂ**ಬುದನ್ನು ಸೂತ್ರದ ಮೂಲಕ ಹೇಳುತ್ತಾರೆ, -

**ಮೂರ್ಧರುಹಮುಷ್ಟಿವಾಸೋ ಬಂಧಂ ಪರ್ಯಂಕಬಂಧನಂ ಚಾಪಿ ।**
**ಸ್ಥಾನಮುಪವೇಶನಂ ವಾ ಸಮಯಂ ಜಾನಂತಿ ಸಮಯಜ್ಞಾಃ ॥೯೮॥**

**ಅರ್ಥ :-** ತಲೆಗೂದಲನ್ನು ಸರಿಯಾಗಿ ಕಟ್ಟಿ, ಮುಷ್ಟಿ, ಬಂಧನ, ವಸ್ತ್ರಬಂಧನ ಮಾಡಿ ಯಾವುದೇ ಏಕಾಂತ ಸ್ಥಾನದಲ್ಲಿ ಎದ್ದು ನಿಂತು ಅಥವಾ ಕುಳಿತುಕೊಂಡು ರಾಗ-ದ್ವೇಷಗಳಿಲ್ಲದ ಶುದ್ಧ ಆತ್ಮನನ್ನು ಕಾಲದ ಮರ್ಯಾದೆ ಮಾಡಿ ಕೇವಲ ತಿಳಿಯುತ್ತಲೇ ಇರುವುದೆಂದು ಸಮಯಜ್ಞ ಎಂದರೆ ಪರಮಾಗಮಗಳನ್ನು ತಿಳಿದುಕೊಂಡಂಥವರು ಹೇಳುತ್ತಾರೆ.

**ಭಾವಾರ್ಥ :-** ಸಾಮಾಯಿಕ ಮಾಡುವಂಥವನು ಕಾಲದ ಮರ್ಯಾದೆ ಮಾಡಿ, ಸಮಸ್ತ ಪಾಪಗಳನ್ನು ತ್ಯಾಗ ಮಾಡಿ ಎದ್ದು ನಿಂತು ಅಥವಾ **ಪರ್ಯಂಕಾ**ಸನದಲ್ಲಿ ಕೂಡ್ರಬೇಕು. ಪರ್ಯಂಕಾಸನದಲ್ಲಿ ಕುಳಿತುಕೊಂಡು ತಮ್ಮ ಎಡಗೈಯ ಹಸ್ತದ ಮೇಲೆ ಬಲಗೈಯ ಹಸ್ತವನ್ನು ಪಸರಿಸಿಡಬೇಕು ತಮ್ಮ ತಲೆಗೂದಲು, ಉಟ್ಟು-ತೊಟ್ಟುಕೊಂಡ ವಸ್ತ್ರವು ಸಡಿಲಾಗಿ ಹಾರಾಡುತ್ತಿದ್ದರೆ ಅವನ್ನೆಲ್ಲ ಒಂದುಗೂಡಿಸಿ ಅವುಗಳಲ್ಲಿ ಗಂಟುಹಾಕಿ ಕಟ್ಟಿಕೊಳ್ಳಬೇಕು. ಕುಳಿತುಕೊಂಡು ಅಥವಾ ನಿಂತುಕೊಂಡು ಸಾಮಾಯಿಕ ಮಾಡಬೇಕಾಗುವುದು.

ಈಗ **ಸಾಮಾಯಿಕ ಮಾಡಲು ಯೋಗ್ಯಸ್ಥಾನ**ವನ್ನು ಸೂತ್ರದ ಮೂಲಕ ಹೇಳುತ್ತಾರೆ,-

**ಏಕಾಂತೇ ಸಾಮಯಿಕಂ ನಿರ್ವ್ಯಾಕ್ಷೇಪೇ ವನೇಷು ವಾಸ್ತುಷು ಚ ।**
**ಚೈತ್ಯಾಲಯೇಷು ವಾಪಿ ಚ ಪರಿಚೇತವ್ಯಂ ಪ್ರಸನ್ನಧಿಯಾಃ ॥೯೯॥**

**ಅರ್ಥ :-** ನಿಕ್ಷೇಪ ರಹಿತ ಏಕಾಂತ ಸ್ಥಾನವಿರಲಿ, ವನವಿರಲಿ, ಉಪವನವಿರಲಿ, ಮನೆಯಿರಲಿ, ಚೈತ್ಯಾಲಯವಿರಲಿ ಅಲ್ಲಿ ಪ್ರಸನ್ನ ಚಿತ್ತದಿಂದ **ಶುದ್ಧಾತ್ಮನ ಪರಿಚಯ** ಮಾಡಿಕೊಳ್ಳುತ್ತಿರಬೇಕು.

**ಭಾವಾರ್ಥ :-** ಯಾವ ಸ್ಥಾನದಲ್ಲಿ ಚಿತ್ತವನ್ನು ವಿಕ್ಷೇಪಗೊಳಿಸುವ ಕಾರಣಗಳಿಲ್ಲ, ಬಹಳಷ್ಟು ಅಸಂಯಮೀ, ಜನರ ಬರ ಹೋಗುವಿಕೆಯಿಲ್ಲ, ಅನೇಕ ಜನರಿಂದ ವಾದ-ವಿವಾದ ಮಾಡಿ ಕೋಲಾಹಲವನ್ನುಂಟು ಮಾಡುತ್ತಿರುವುದಿಲ್ಲ, ಸ್ತ್ರೀಯರುಗಳ ಹಾಗೂ ನಪುಂಸಕರ ಆಗಮನವಿಲ್ಲ-ಪ್ರಚಾರವಿಲ್ಲ; ಹತ್ತಿರದಲ್ಲಿಯೇ ಗೀತ, ನೃತ್ಯ, ವಾದ್ಯ ಮೊದಲಾದವುಗಳ

ಪ್ರಚಾರವಾಗುತ್ತಿರುವುದಿಲ್ಲ, ತಿರ್ಯಂಚಗಳ-ಪಕ್ಷಿಗಳ ಸಂಚಾರವಿಲ್ಲ, ಅಧಿಕ ಶೀತ, ಅಧಿಕ ಉಷ್ಣ, ಪ್ರಚಂಡ ಪವನ, ಮಳೆ ಮೊದಲಾದವುಗಳ ಬಾಧೆಯಿಲ್ಲ, ಸೊಳ್ಳೆ, ನೊಣ, ಕಾಡುನೊಣ, ಇರುವೆ, ಕಟ್ಟಿರುವೆ, ಜೇನುನೊಣ, ಕಡಜ, ಕ್ರಿಮಿ, ಕೀಟ, ಸರ್ಪ, ಚೇಳು ಇತ್ಯಾದಿ ಜೀವಗಳಿಂದ ಬಾಧೆ ಕೊಡಲಾರದಂಥ ವಿಕ್ಷೇಪದಿಂದ ರಹಿತವಾದ ಸ್ಥಾನದಲ್ಲಿ, ಅದು ಬೇಕಾದರೆ ವನವಿರಲಿ, ಜೀರ್ಣವಾದ ಉಪವನದ ಮನೆಯಿರಲಿ, ಶೂನ್ಯಗೃಹವಿರಲಿ, ಚೈತ್ಯಾಲಯವಿರಲಿ, ಧರ್ಮಾತ್ಮ ಜನರುಗಳು ಪ್ರೋಷಧೋಪವಾಸ ಮಾಡುವ ಸ್ಥಾನವಿರಲಿ ಅಂತ ಏಕಾಂತ ಸ್ಥಾನದಲ್ಲಿ ಪ್ರಸನ್ನಚಿತ್ತರಾಗಿ ತಮ್ಮ ಶುದ್ಧ ಆತ್ಮನ ಪರಿಚಯ ಮಾಡಿಕೊಳ್ಳಬೇಕಾಗುವುದು.

ಈಗ ಸಾಮಾಯಿಕದ ಉಳಿದ ಸಾಮಗ್ರಿಗಳನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ವ್ಯಾಪಾರವೈಮನಸ್ಯಾದ್ವಿನಿವೃತ್ತ್ಯಾಮಂತರಾತ್ಮವಿನಿವೃತ್ತ್ಯಾ ।**
**ಸಾಮಯಿಕಂ ಬಧ್ನೀಯಾದುಪವಾಸೇ ಚೈಕ ಭುಕ್ತೇ ವಾ ॥೧೦೦॥**

**ಸಾಮಯಿಕಂ ಪ್ರತಿದಿವಸಂ ಯಥಾವದಪ್ಯನಲಸೇನ ಚೇತವ್ಯಮ್ ।**
**ವ್ರತಪಂಚಕಪರಿಪೂರಣ ಕಾರಣಮವಧಾನಯುಕ್ತೇನ ॥೧೦೧॥**

**ಅರ್ಥ :-** ಕಾಯಚೇಷ್ಟೆಯ ರೂಪದ ಕಾರ್ಯಗಳಿಂದ ವಿರಕ್ತರಾಗಿ, ಬಾಹ್ಯ ಆರಂಭದಿಂದ ಬಿಡುಗಡೆ ಹೊಂದಿ ಮತ್ತು ಅಂತರಾತ್ಮರೂಪ ಮನಸ್ಸನ್ನು ಕೂಡ ವಿಕಲ್ಪದಿಂದ ರಹಿತಮಾಡಿ, ಉಪವಾಸದ ದಿವಸ ಅಥವಾ ಏಕಾಶನದ ದಿವಸ ಸಾಮಾಯಿಕದಲ್ಲಿ ಕುಳಿತುಕೊಳ್ಳಬೇಕು. ಆಲಸ್ಯ ರಹಿತ ಪುರುಷನು ದಿನಾಲು ನಿಯಮದಿಂದ ಏಕಾಗ್ರ ಚಿತ್ತನಾಗಿ ಸಾಮಾಯಿಕ ಮಾಡುತ್ತ ತನ್ನ ಆತ್ಮನೊಡನೆ ಪರಿಚಯ ವೃದ್ಧಿಸಿಕೊಳ್ಳುತ್ತ ಹೋಗುತ್ತಾನೆ. ಸಾಮಾಯಿಕವು ಅಹಿಂಸೆ ಮೊದಲಾದ ಐದು ವ್ರತಗಳ ಪರಿಪೂರ್ಣತೆಯ ಕಾರಣವಿದೆ.

**ಭಾವಾರ್ಥ :-** ಸಾಮಾಯಿಕ ಮಾಡುವಲ್ಲಿ ಉದ್ಯಮಶೀಲನಾದ ಶ್ರಾವಕನು ಸಮಸ್ತ ಆರಂಭ ಮೊದಲಾದ ಶರೀರದ ಕ್ರಿಯೆಗಳ ತ್ಯಾಗಮಾಡಿ ಮನಸ್ಸಿನ ವಿಕಲ್ಪಗಳನ್ನು ಬಿಟ್ಟುಕೊಟ್ಟು ಸಾಮಾಯಿಕ ಮಾಡುತ್ತಾನೆ. ಕೆಲವರಂತೂ ಪರ್ವದ ನಿಮಿತ್ತ ಪಡೆದು ಯಾವ ದಿವಸ ಉಪವಾಸ ಮಾಡುತ್ತಾರೆ ಅದೇ ದಿವಸ ಸಾಮಾಯಿಕ ಮಾಡುತ್ತಾರೆ, ಕೆಲವರು ಏಕಾಶನದ ದಿವಸ ಸಾಮಾಯಿಕ ಮಾಡುತ್ತಾರೆ, ಕೆಲವರು ದಿನಾಲು ಒಂದು ಬಾರಿ ಸಾಮಾಯಿಕ ಮಾಡುತ್ತಾರೆ. ಕೆಲವರು ದಿನಾಲು ಬೆಳಿಗ್ಗೆ-ಸಾಯಂಕಾಲ ಎರಡು ಬಾರಿ ಸಾಮಾಯಿಕ ಮಾಡುತ್ತಾರೆ. ಕೆಲವರು ದಿನ ನಿತ್ಯ ಪೂರ್ವಾಹ್ನ, ಮಧ್ಯಾಹ್ನ, ಅಪರಾಹ್ನ ಮೂರು ಕಾಲ ಎರಡೆರಡು ಗಳಿಗೆಯ ನಿಮಯ ಮಾಡಿಕೊಂಡು ಸಾಮ್ಯಭಾವದ ಆರಾಧನೆ ಮಾಡುತ್ತಾರೆ. ಅವರು ಒಂದು ಸ್ಥಾನದಲ್ಲಿ ನಿಶ್ಚಲ ಪರ್ಯಂಕಾಸನದಲ್ಲಿ ಅಥವಾ ಕಾಯೋತ್ಸರ್ಗರೂಪದ ನಿಶ್ಚಲ ಆಸನ ಹಾಕಿ ಅಂಗ-ಉಪಾಂಗಗಳ ಚಪಲತೆಯನ್ನು ತ್ಯಜಿಸಿ ಕಾಷ್ಠ-ಪಾಷಾಣದಿಂದ ನಿರ್ಮಿಸಿದ ಪ್ರತಿಬಿಂಬದ ಸಮಾನ ಅಚಲರಾಗಿ, ದಶ ದಿಸೆಗಳನ್ನು ನೋಡುತ್ತಿರದೆ, ತಮ್ಮ ಅಂಗ-ಉಪಾಂಗಗಳನ್ನು ಕೂಡ ನೋಡುತ್ತಿರದೆ, ಯಾರೊಡನೆ ಮಾತುಗಳನ್ನೂ ಮಾಡುತ್ತಿರದೆ, ಸಮಸ್ತ ಐದೂ ಇಂದ್ರಿಯಗಳ ವಿಷಯಗಳಿಂದ ಮನಸ್ಸನ್ನು ತಡೆದು, ಸಮಸ್ತ ಚೇತನ-ಅಚೇತನ ದ್ರವ್ಯಗಳಲ್ಲಿ ರಾಗ-ದ್ವೇಷ, ಹರ್ಷ-ವಿಷಾದ, ವೈರ-ಸ್ನೇಹ ಮೊದಲಾದವುಗಳನ್ನು ಬಿಟ್ಟುಕೊಟ್ಟು ಸಾಮಾಯಿಕದಲ್ಲಿ ಕುಳಿತುಕೊಂಡು ಸಮಸ್ತ ಪ್ರಾಣಿ ಕೋಟಿಯ ಕುರಿತು ಮೈತ್ರಿ ಭಾವವನ್ನು ಧಾರಣ ಮಾಡುತ್ತ ಪರಮ ಆರಾಧನೆಯನ್ನು ಮಾಡುತ್ತಾರೆ.

**ವೈರತ್ಯಾಗ :** ಸಾಮಾಯಿಕದಲ್ಲಿ ಕುಳಿತುಕೊಂಡ ಮನುಷ್ಯನು ವಿಚಾರಮಾಡುವುದೇನೆಂದರೆ ನಾನು ಸಮಸ್ತ ಜೀವಗಳ ಕುರಿತು ಕ್ಷಮೆ ಧಾರಣಮಾಡಿದ್ದೇನೆ. **ಯಾವ ಜೀವವು ನನ್ನ ವೈರಿಯಲ್ಲ, ನಾನು ಉಪಾರ್ಜನೆ ಮಾಡಿದ ನನ್ನ ಕರ್ಮವೇ ವೈರಿಯಿದೆ. ನಾನು ಅಜ್ಞಾನ** ಭಾವದಿಂದ ಕ್ರೋಧೀ, ಅಭಿಮಾನಿ, ಲೋಭಿಯಾಗಿ ವಿಪರೀತ

ಪರಿಣಾಮಿಯಾಗಿರುವೆನು. ಯಾವನ ಪ್ರವೃತ್ತಿಯಿಂದ ನನ್ನ ಅಭಿಮಾನ ಮೊದಲಾದವು ಪುಷ್ಟವಾಗದಿದ್ದರೆ ಅವನನ್ನೇ ವೈರಿಯೆಂದು ಮನ್ನಿಸಿದೆನು, ಯಾವನು ನನ್ನ ಪ್ರಶಂಸೆ ಮಾಡಲಿಲ್ಲ, ನನ್ನ ಕಾರ್ಯದ ಪ್ರಶಂಸೆ ಮಾಡಲಿಲ್ಲ ಅವನನ್ನೇ ವೈರಿಯೆಂದು ತಿಳಿದುಕೊಂಡೆನು; ಯಾವನು ನನ್ನ ಆದರ-ಸತ್ಕಾರ, ಎದ್ದು ಸ್ಥಾನ ಕೊಡುವುದು ಇತ್ಯಾದಿಗಳಲ್ಲಿ ಶಿಥಿಲತೆಯನ್ನು ತೋರಿದನು ಅವನನ್ನೇ ವೈರಿಯೆಂದು ತಿಳಿದೆನು; ಯಾವನು ನನ್ನ ದೋಷ ಎತ್ತಿ ತೋರಿಸಿದನು. ಅವನನ್ನೇ ವೈರಿಯೆಂದು ತಿಳಿದೆನು. ಯಾರು ನನ್ನ ಆಧೀನವಾಗಿ ನಡೆಯುವುದಿಲ್ಲ, ನನಗೆ ಊಟ, ಬಟ್ಟೆ, ಧನ ಮೊದಲಾದುವವನ್ನು ಕೊಡುವುದಿಲ್ಲ ಅವರನ್ನೇ ವೈರಿಯೆಂದು ಮನ್ನಿಸಿದೆನು. ಇದೆಲ್ಲವೂ ನನ್ನ ಕಷಾಯದಿಂದ ಉತ್ಪನ್ನವಾದ ದುರ್ಬುದ್ಧಿಯಿಂದ ಅನ್ಯ ಜೀವರುಗಳ ಕುರಿತು ವೈರ ಬುದ್ಧಿಯಾಗಿದೆ. ಅದನ್ನು ಬಿಟ್ಟುಕೊಟ್ಟು ಕ್ಷಮೆಯ ಅಂಗೀಕಾರ ಮಾಡುತ್ತೇನೆ. ಉಳಿದ ಸಮಸ್ತ ಜೀವರುಗಳು ನನ್ನ ಅಜ್ಞಾನ ಭಾವವನ್ನು ವಿಷಯ ಕಷಾಯಗಳ ಆಧೀನವಾಗಿದೆ ಯೆಂಬುದನ್ನು ತಿಳಿದುಕೊಂಡು ನನ್ನ ಮೇಲೆ ಕ್ಷಮೆ ಮಾಡುವುದು, ನನ್ನನ್ನು ಕ್ಷಮಿಸಿ ಬಿಡುವುದು.

ಈ ಪ್ರಕಾರ ನಾನು ವೈರ-ವಿರೋಧದ ಭಾವನೆಯನ್ನು ಬಿಟ್ಟುಕೊಟ್ಟು ಸಮಸ್ತ ಜೀವಗಳ ಕುರಿತು ಸಮತೆಯ ಭಾವ ಧಾರಣ ಮಾಡಿ ಸಾಮಾಯಿಕದ ಅಂಗೀಕಾರ ಮಾಡುತ್ತೇನೆ. ಈ ಪ್ರಕಾರ ಎರಡು ಗಳಿಗೆಯವರೆಗೆ ಮನಸ್ಸಿನಿಂದ, ವಚನದಿಂದ, ಕಾಯದಿಂದ ಸಮಸ್ತ ಐದೂ ಇಂದ್ರಿಯಗಳ ವಿಷಯಗಳನ್ನು, ಸಮಸ್ತ ಆರಂಭ-ಪರಿಗ್ರಹವನ್ನು ಬಿಟ್ಟುಕೊಟ್ಟು, ಭಗವಾನ ಪಂಚ ಪರಮೇಷ್ಠಿಗಳ ಸ್ಮರಣೆ ಮಾಡುತ್ತ ಕುಳಿತುಕೊಳ್ಳುತ್ತಾನೆ. ಈ ಪ್ರಕಾರ ಸಾಮಾಯಿಕದ ಕಾಲದಲ್ಲಿ ಪ್ರತಿಜ್ಞೆ ಮಾಡಿ, ಪಂಚಣಮೋಕಾರ ಮಂತ್ರದ ಅಕ್ಷರಗಳ ಧ್ಯಾನ ಮಾಡುತ್ತ ಸಾಮಾಯಿಕದಲ್ಲಿ ಕೂಡ್ರುತ್ತಾನೆ. **ತನ್ನ ಆತ್ಮನ ಜ್ಞಾತಾ-ದೃಷ್ಟಾ ಸ್ವಭಾವವನ್ನು ರಾಗ-ದ್ವೇಷಗಳಿಂದ ಭಿನ್ನವಾಗಿ ಅನುಭವ ಮಾಡುತ್ತಾನೆ.** ನಾಲ್ಕು ಮಂಗಲ ಪದ, ನಾಲ್ಕು ಉತ್ತಮ ಪದ, ನಾಲ್ಕು ಶರಣ ಪದಗಳ ಚಿಂತನೆ ಮಾಡುತ್ತಾನೆ. ಬಾರಹ ಭಾವನೆ, ಸೋಳಹ ಕಾರಣ ಭಾವನೆಗಳ ವಿಚಾರ ಮಾಡುತ್ತಾನೆ. ಇಪ್ಪತ್ತು ನಾಲ್ವರು ತೀರ್ಥಂಕರರ ಸ್ತುತಿಯಲ್ಲಿ ಯಾರೋ ಓರ್ವ ತೀರ್ಥಂಕರರ ಸ್ತುತಿಯಲ್ಲಿ, ಪಂಚ ಪರಮಗುರುಗಳ ಸ್ತುತಿಯಲ್ಲಿ, ಅದರ ಅರ್ಥವನ್ನು ಏಕಾಗ್ರಚಿತ್ತನಾಗಿ ಸಾಮಾಯಿಕದಲ್ಲಿ ವಿಚಾರ ಮಾಡುತ್ತ ಕುಳಿತುಕೊಳ್ಳುತ್ತಾನೆ.

**ಪ್ರತಿಕ್ರಮಣ :** ಪ್ರತಿಕ್ರಮಣ ಮಾಡುವ ಸಲುವಾಗಿ ಇಡೀ ದಿವಸ ಮಾಡಲಾದ ಸಮಸ್ತ ದೋಷಗಳನ್ನು ದಿವಸದ ಕೊನೆಯಲ್ಲಿ ವಿಚಾರ ಮಾಡುತ್ತಾನೆ, ರಾತ್ರಿಯಲ್ಲಿ ಮಾಡಲಾದ ಸಮಸ್ತ ದೋಷಗಳನ್ನು ಬೆಳಿಗ್ಗೆ ವಿಚಾರ ಮಾಡುತ್ತಾನೆ. ಈ ಮನುಷ್ಯ ಜನ್ಮ ಮತ್ತು ಅದರಲ್ಲಿ ಸರ್ವಜ್ಞ ವೀತರಾಗ ಭಗವಂತರ ಮೂಲಕ ಉಪದೇಶಿಸಲ್ಪಟ್ಟ ಜೈನ ಧರ್ಮವು ಅನಂತಕಾಲದಲ್ಲಿ ಅತ್ಯಂತ ಕಠಿಣತೆಯಿಂದ ಪ್ರಾಪ್ತವಾಗಿದೆ. ಆದುದರಿಂದ ಈ ಜನ್ಮದ ಒಂದು ಗಳಿಗೆಯು ಕೂಡ ಧರ್ಮವಿಲ್ಲದೆ ಕಳೆದು ಹೋಗದಿರಲಿ !

ನಾನು ಈ ಹೊತ್ತು ದಿವಸದಲ್ಲಿ ಮತ್ತು ರಾತ್ರಿಯಲ್ಲಿ ಜಿನದರ್ಶನ-ಪೂಜನ-ಸ್ತವನದಲ್ಲಿ ಅದೆಷ್ಟು ಸಮಯ ವ್ಯತೀತ ಮಾಡಿದೆನು ? ಸ್ವಾಧ್ಯಾಯ, ಸಾಧರ್ಮಿ ಸಂಗತಿ, ತತ್ತ್ವಚರ್ಚೆ, ಪಂಚಪರಮೇಷ್ಠಿಗಳ ಜಪ-ಧ್ಯಾನದಲ್ಲಿ, ಪಾತ್ರದಾನದಲ್ಲಿ ಎಷ್ಟು ಸಮಯ ಕಳೆದೆನು ? ಬಹಳಷ್ಟು ಆರಂಭದಲ್ಲಿ, ಇಂದ್ರಿಯ ವಿಷಯಗಳಲ್ಲಿ, ವ್ಯಾಪಾರದ ವಿಕಥೆಯಲ್ಲಿ, ಪ್ರಮಾದದಲ್ಲಿ, ನಿದ್ರೆಯಲ್ಲಿ, ಕಾಮಸೇವನದಲ್ಲಿ, ಊಟ-ತಿಂಡಿಯಲ್ಲಿ ಆಜೀವಿಕೆಯ ಆರಂಭ ಮೊದಲಾದವುಗಳಲ್ಲಿ ಅದೆಷ್ಟು ಸಮಯ ವ್ಯತೀತ ಮಾಡಿದೆನು ? ನನ್ನ ಮನ, ವಚನ, ಕಾಯದ ಪ್ರವೃತ್ತಿಯು, ರಾಗಾದಿ ಭಾವವು ಸಂಸಾರದ ಕಾರ್ಯದಲ್ಲಿ ಅಧಿಕವಾಗಿದೆ ಅಥವಾ ಪರಮಾರ್ಥದ ಕಾರ್ಯದಲ್ಲಿ ಅಧಿಕವಾಗಿದೆಯೆಂಬುದರ ವಿಚಾರ ಮಾಡುತ್ತಾನೆ.

**ಈ ಪ್ರಕಾರ ದಿನದಲ್ಲಿ ಮಾಡಿದ ಕಾರ್ಯಗಳ ಚಿಂತನೆ ದಿನದ ಕೊನೆಯಲ್ಲಿ ಹಾಗೂ ರಾತ್ರಿಯಲ್ಲಿ ಮಾಡಿದ ಕಾರ್ಯಗಳ ಚಿಂತನೆ ಬೆಳಿಗ್ಗೆ ಮಾಡಬೇಕಾಗುವುದು.** ನೂರು ರೂಪಾಯಿ ಮೂಲ ಧನ ಹಾಕಿ ವ್ಯಾಪಾರ ಮಾಡುವವನು ದಿನಾಲು ತನ್ನ ಲಾಭ-ಹಾನಿಗಳ ವಿಚಾರ ಮಾಡುತ್ತಾನೆಂದ ಮೇಲೆ ಪೂರ್ವ ಪುಣ್ಯದ ಪ್ರಭಾವದಿಂದ ಪ್ರಾಪ್ತವಾದ ಈ ಜನ್ಮದಲ್ಲಿ ಉತ್ತಮ ಮನುಷ್ಯ ಪರ್ಯಾಯ, ವೀತರಾಗ ಧರ್ಮ, ಸತ್ಸಂಗತಿ, ಇಂದ್ರಿಯಗಳ

ಪರಿಪೂರ್ಣತೆ ಮೊದಲಾದ ಮೂಲ ಧನದಿಂದ ವ್ಯಾಪಾರ ಮಾಡುತ್ತಿರುವ ಜ್ಞಾನಿಯು ತನ್ನ ಆತ್ಮನ ಹಾನಿ-ವೃದ್ಧಿಯ ಸಂರಕ್ಷಣೆ ಮಾಡಿಕೊಳ್ಳುವುದಿಲ್ಲವೇನು ? ಲಾಭ-ಹಾನಿಯ ಸಂರಕ್ಷಣೆ ಮಾಡಿಕೊಳ್ಳದಿದ್ದರೆ ಪರಲೋಕದಿಂದ ತಂದ ಧರ್ಮ-ಧನವನ್ನು ನಷ್ಟಗೊಳಿಸಿ ಘೋರ ತಿರ್ಯಂಚ ಗತಿಯಲ್ಲಿ ಮತ್ತು ನರಕ-ನಿಗೋದದಲ್ಲಿ ಹೋಗಿ ದುಃಖಿಯಾಗುವನು. ಆದುದರಿಂದ ಧರ್ಮರೂಪದ ಧನವನ್ನು ಸಂಪಾದಿಸಿ ವೃದ್ಧಿ ಮಾಡಬಯಸುವವನು ಒಂದು ದಿನದಲ್ಲಿ ಕಡಿಮೆಯೆಂದರೆ ಎರಡು ಬಾರಿಯಾದರೂ ಅವಶ್ಯವಾಗಿ ಎಚ್ಚರ ವಹಿಸಲೇಬೇಕು.

**ಕಷಾಯ ತ್ಯಾಗ :** ಕಷಾಯಗಳ ವಶವಾಗಿ ಮತ್ತು ವಿಷಯಗಳ ವಶವಾಗಿ ಯಾವ ಅಜ್ಞಾನದಿಂದ ಯಾವ ತನ್ನ ಮನ-ವಚನ-ಕಾಯದ ದುಷ್ಟ ಪ್ರವೃತ್ತಿಯಾಗಿದೆ ಅದರ ಕುರಿತು ಪುನಃ ಪುನಃ ವಿಚಾರ ಮಾಡಿ ನಿಂದೆ, ಗರ್ಹ್ಯ ಮಾಡುತ್ತಾನೆ. ಅಯ್ಯೋ! ನಾನು ದುಷ್ಟ ಚಿಂತನೆ ಮಾಡಿದೆನು. ಕಾಯದಿಂದ ದುಷ್ಕ್ರಿಯೆ ಮಾಡಿದೆನು ವಚನದಿಂದ ಬಹಳಷ್ಟು ನಿಂದ್ಯ ಪ್ರವೃತ್ತಿ ಮಾಡಿದೆನು, ಇದರಿಂದ ಮಹಾ ಅಶುಭ ಕರ್ಮ ಕಟ್ಟಿಕೊಂಡೆನು, ಧರ್ಮವನ್ನು ದೂಷಿತಗೊಳಿಸಿದೆನು, ಅಪಯಶ ಪ್ರಕಟ ಮಾಡಿಕೊಂಡೆನು.

ಈಗ ಈ ನಿಂದ್ಯ ಕರ್ಮದ ವಿಚಾರ ಮಾಡಿ ನನ್ನ ಪರಿಣಾಮವು ಪಶ್ಚಾತ್ತಾಪದ ಅಗ್ನಿಯಲ್ಲಿ ಸುಡುತ್ತಲಿದೆ. ಅಯ್ಯೋ! ಮೋಹ ಕರ್ಮವು ಅತ್ಯಂತ ಪ್ರಬಲವಿದೆ. ನಾನು ನನ್ನ ದುಷ್ಟ ಪರಿಣಾಮಗಳನ್ನು, ಪಾಪ ಮಾಡುವಂಥ, ದುರ್ಗತಿಗೆ ಕೊಂಡೊಯ್ಯುವಂಥ ನನ್ನ ನಿಂದ್ಯ ಪರಿಣಾಮಗಳನ್ನು ನಾನು ಒಳ್ಳೆಯ ರೀತಿಯಿಂದ ತಿಳಿಯುತ್ತೇನೆ. ಇವು ನನ್ನ ಘಾತವನ್ನೇ ಮಾಡುವಂಥವುಗಳಿವೆ; ಈ ಪರಿಣಾಮಗಳು ನನಗೆ ಪ್ರಯೋಜನ ರಹಿತವಿವೆಯೆಂದು ತಿಳಿಯುತ್ತೇನೆ. ಜೀವನವು ಅಲ್ಪವಿದ್ದು ಪರಲೋಕದಲ್ಲಿ ತಾನು ಮಾಡಿರುವ ಕರ್ಮಗಳ ಫಲವನ್ನು ನಾನೊಬ್ಬನೇ ಭೋಗಿಸಬೇಕಾಗುವುದೆಂಬುದನ್ನು ನಾನು ನನ್ನ ಪರಿಣಾಮಗಳಲ್ಲಿ ಚನ್ನಾಗಿ ನಿಶ್ಚಯ ಮಾಡಿಕೊಂಡಿದ್ದೇನೆ. ಈ ಪ್ರಕಾರ ವಿಚಾರ ಮಾಡುತ್ತಿದ್ದರೂ ಕೂಡ ನನ್ನ ಪರಿಣಾಮದಲ್ಲಿ ಅನ್ಯ ಜೀವಗಳ ವೈರ ಹಾಗೂ ವಿಷಯಗಳಿಂದ ರಾಗವು ಕಡಿಮೆಯಾಗುತ್ತಿಲ್ಲ, ಇದು ಕೂಡ ಪ್ರಬಲಮೋಹದ ಮಹಿಮೆಯೇ ಇದೆ. ಅದಕ್ಕಾಗಿಯೇ ನಾನು ಯಾರು ಮೋಹಕರ್ಮದ ನಾಶ ಮಾಡಿ ಅದರ ಮೇಲೆ ವಿಜಯ ಪ್ರಾಪ್ತ ಮಾಡಿಕೊಂಡಿದ್ದಾರೆ ಅಂಥ ಪಂಚ ಪರಮೇಷ್ಠಿಗಳ ಸ್ಮರಣ ಮಾಡುತ್ತೇನೆ.

ಮೋಹಕರ್ಮವನ್ನು ಜಯಿಸಿದಂಥ ಜಿನೇಂದ್ರರ ಪ್ರಭಾವದಿಂದ ನನ್ನ ಮೋಹಕರ್ಮದಿಂದ ಉತ್ಪನ್ನವಾದ ರಾಗಭಾವ, ದ್ವೇಷಭಾವ, ಕಾಮಾದೀ ವಿಕಾರೀಭಾವ, ಕ್ರೋಧಭಾವ, ಅಭಿಮಾನಭಾವ, ಮಾಯಾಚಾರಭಾವ, ಲೋಭಭಾವಗಳು ನಷ್ಟವಾಗಿ ಹೋಗಲಿ. **ಎಂಥ ವೀತರಾಗತೆಯನ್ನು ಜಿನೇಂದ್ರ ಭಗವಂತರು ಪಡೆದಿದ್ದಾರೆ ಅಂಥದೇ ನನಗೂ ಪ್ರಕಟವಾಗಲಿ.** ಇದೇ ಅಭಿಪ್ರಾಯದಿಂದ ನಾನು ಶರೀರದ ಮಮತೆಯನ್ನು ಬಿಟ್ಟುಕೊಟ್ಟು ಪಂಚಪರಮೇಷ್ಠಿಗಳ ಧ್ಯಾನ ಸಹಿತ ಕಾಯೋತ್ಸರ್ಗ ಮಾಡುತ್ತೇನೆ.

**ಹಿಂಸೆಯ ತ್ಯಾಗ :** ಅಜ್ಞಾನ ಭಾವದಿಂದ ನಾನು ಪೂರ್ವಕಾಲದಲ್ಲಿ ಪೃಥ್ವೀಕಾಯಕವನ್ನು ಅಗೆಯುವುದು, ತುಳಿಯುವುದು, ಮೆಟ್ಟುವುದು ಇತ್ಯಾದಿಗಳನ್ನು ಮಾಡಿರುವೆನು; ಮುಳುಗಿ, ಚಿಮುಕಿಸಿ, ಪ್ರೋಕ್ಷಿಸಿ ಸ್ನಾನಾದಿಗಳನ್ನು ಮಾಡಿ ಜಲಕಾಯಕ ಜೀವಗಳ ವಿರಾಧನೆ ಮಾಡಿರುವೆನು; ಹೊತ್ತಿಸುವುದು, ಉರಿಸುವುದು, ಕುಟ್ಟುವುದು ಇತ್ಯಾದಿಗಳ ಮೂಲಕ ಅಗ್ನಿಕಾಯಕ ಜೀವಗಳ ವಿರಾಧನೆ ಮಾಡಿರುವೆನು; ವ್ಯಜನ ಮೊದಲಾದವುಗಳಿಂದ ಪವನಕಾಯಕ ಜೀವಗಳ ವಿರಾಧನೆ ಮಾಡಿರುವೆನು; ಮತ್ತು ಬೇರು, ಮೂಲ, ಶಾಖೆ, ಫಲ, ಪತ್ರ, ಪುಷ್ಪ, ತೊಗಟೆ, ಕಾಂಡ, ಗುಲ್ಮ, ತೃಣ, ಹುಲ್ಲು, ವೃಕ್ಷ ಮೊದಲಾದುವನ್ನು ಕತ್ತರಿಸುವುದು, ಕೊಯ್ಯುವುದು, ಕೀಳುವುದು, ಭಾಗ ಮಾಡುವುದು, ತುಳಿಯುವುದು, ಕುದಿಸುವುದು ಇತ್ಯಾದಿಗಳ ಮೂಲಕ ವನಸ್ಪತಿಕಾಯದ ವಿರಾಧನೆ ಮಾಡಿದ್ದರೆ ಅವುಗಳಿಂದ ಉತ್ಪನ್ನವಾದ ಪಾಪ ಕರ್ಮಗಳ ನಾಶವು ಪಂಚಪರಮೇಷ್ಠಿಗಳ ಜಪ ಮಾಡುವುದರ ಪ್ರಭಾವದಿಂದ ಆಗಿ ಹೋಗುವುದು. ಈಗ ನನ್ನ ಪರಿಣಾಮವು ಷಟ್ಕಾಯ ಜೀವಗಳ ಘಾತದಿಂದ ಪೂರ್ಣ ಪರಾಙ್ಮುಖವಾಗಲಿ; ನನಗೆ ಸಂಯಮ ಭಾವದ ಪ್ರಾಪ್ತವಾಗಲಿ !

**ಪ್ರಮಾದ ತ್ಯಾಗ :** ನನ್ನ ಚಲನೆಯಲ್ಲಿ, ಬರುವಲ್ಲಿ, ಹೋಗುವಲ್ಲಿ, ಏಳುವಲ್ಲಿ, ಕೂಡ್ರುವಲ್ಲಿ, ವಿಸ್ತರಿಸುವಲ್ಲಿ, ಸಂಕೋಚಿಸುವಲ್ಲಿ, ಭೋಜನದಲ್ಲಿ, ನೀರಿನಲ್ಲಿ, ಆರಂಭ ಮಾಡುವಲ್ಲಿ, ಎತ್ತಿಕೊಳ್ಳುವಲ್ಲಿ, ಇಡುವಲ್ಲಿ ಮತ್ತು ಒಲೆ, ಒರಳು, ಪೊರಕೆ, ನೀರಿನಲ್ಲಿ ಹಾಗೂ ಸೇವೆ, ಕೃಷೀ, ವಿದ್ಯೆ, ವಾಣಿಜ್ಯ, ಶಿಲ್ಪಕಾರ್ಯ, ಬರೆಯುವುದು ಮೊದಲಾದ ಜೀವನೋಪಾಯದಲ್ಲಿ ಮತ್ತು ಗಾಡೀ-ಕುದುರೆ ಇತ್ಯಾದಿ ವಾಹನಗಳಲ್ಲಿ ಪ್ರವರ್ತನದ ಮೂಲಕ ಯತ್ನಾಚಾರದಿಂದ ರಹಿತವಾದ ಯಾವ ನನ್ನ ಪ್ರವೃತ್ತಿಯಾಗಿದೆ, ಅದರಿಂದ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ ಜೀವಗಳ ವಿರಾಧನೆಯಾಗಿದ್ದರೆ ಅದು ಮಿಥ್ಯೆಯಾಗಲಿ, ನಾನು ಬಹಳಷ್ಟು ಕೆಡಕು ಮಾಡಿದ್ದೇನೆ. **ಈ ಆರಂಭ ಮೊದಲಾದವು ಒಳ್ಳೆಯವಿಲ್ಲ, ಸಂಸಾರದಲ್ಲಿ ಮುಳುಗಿಸುವಂಥವಿವೆ, ನರಕ ಕೊಡುವಂಥವಿವೆ.** ಈ ಆರಂಭ ವಿಷಯ-ಕಷಾಯಗಳ ಮೂಲಕವೇ ಈ ಜೀವವು ಏಕೇಂದ್ರಿಯ ಮೊದಲಾದ ತಿರ್ಯಂಚಗಳಲ್ಲಿ ಅನಂತಾನಂತ ಕಾಲದವರೆಗೆ ಕ್ಷುಧೆ, ತೃಷೆ, ಹೊಡೆಯುವುದು, ಬಡೆಯುವುದು, ಕೊಲ್ಲುವುದು, ಭಾರಹೊರುವುದು, ಕಚ್ಚುವುದು, ಸೀಳುವುದು, ಸುಡುವುದು ಇತ್ಯಾದಿ ಘೋರ ದುಃಖಸಹಿಸುತ್ತ ಭೋಗಿಸುತ್ತದೆ. ಆ ಹಿಂಸೆಯಿಂದ ಉತ್ಪನ್ನವಾದ ಕರ್ಮಗಳ ನಾಶದ ಸಲುವಾಗಿ ಹಾಗೂ ಮುಂಬರುವ ಹಿಂಸಾರೂಪ ಪರಿಣಾಮಗಳ ಅಭಾವದ ಸಲುವಾಗಿ ನಾನು ಪಂಚ ಪರಮೇಷ್ಠಿಗಳ-ಣಮೋಕಾರ ಮಂತ್ರದ ಆಶ್ರಯವನ್ನು ಗ್ರಹಣ ಮಾಡುತ್ತೇನೆ.

**ಅಸತ್ಯ ತ್ಯಾಗ :** ನಾನು ಅಜ್ಞಾನಭಾವದಿಂದ ಹಾಗೂ ಪ್ರಮಾದದಿಂದ ಯಾವುದಾದರೂ ಅಸತ್ಯ ವಚನ ಹೇಳಿದ್ದರೆ, ಬೈದು ಬಿಟ್ಟಿದ್ದರೆ, ಅಶ್ಲೀಲ ವಚನ ಆಡಿದ್ದರೆ, ಮರ್ಮಭೇದಕ ಕರ್ಕಶ ಕಠೋರ ವಚನ ಆಡಿದ್ದರೆ, ಯಾರಿಗಾದರೂ ಕಳವಿನ ಕಲಂಕ ತಗಲಿಸಿದ್ದರೆ, ಯಾರಿಗಾದರೂ ಕುಶೀಲದ ಕಲಂಕ ತಗಲಿಸಿದ್ದರೆ, ಮತ್ತು ಧರ್ಮಾತ್ಮ, ಜ್ಞಾನೀ, ತಪಸ್ವೀ, ಶೀಲವಂತರಿಗೆ ದೋಷ ತಗಲಿಸಿದ್ದರೆ, ಧರ್ಮಾತ್ಮರ ನಿಂದೆ ಮಾಡಿದ್ದರೆ, ನಿಜವಾದ ದೇವ-ಗುರು-ಧರ್ಮಗಳ ನಿಂದೆ ಮಾಡಿದ್ದರೆ, ಹಿಂಸೆಯ ಪ್ರವೃತ್ತಿಯ ಉಪದೇಶ ಕೊಟ್ಟಿದ್ದರೆ, ಮಿಥ್ಯಾ ಧರ್ಮದ ಪ್ರರೂಪಣೆ ಮಾಡಿದ್ದರೆ, ಸ್ತ್ರೀ ಕಥೆ, ರಾಜಕಥೆ, ಭೋಜನಕಥೆ, ದೇಶಕಥೆ ಇವೇ ಮೊದಲಾದ ಘೋರ ಪಾಪಗಳಲ್ಲಿ ನನ್ನ ವಚನದ ಪ್ರವೃತ್ತಿಯಾಗಿದ್ದರೆ ಅದೆಲ್ಲದರ ಕುರಿತು ಈಗ ನಾನು ಪಶ್ಚಾತ್ತಾಪ ಮಾಡುತ್ತೇನೆ.

ನಾನು ಯಾವ ಘೋರ ಪಾಪ ಕಟ್ಟಿಕೊಂಡಿದ್ದೇನೆ ಅದರ ಫಲವಾಗಿ ನರಕದ ದುಃಖ ಹಾಗೂ ತಿರ್ಯಂಚ ಗತಿಯ ಘೋರ ದುಃಖವನ್ನು ಅನಂತಕಾಲ ಭೋಗಿಸುವುದಿದೆ ಮತ್ತು ಅನಂತ ಬಾರಿ ಮೂಗ, ಕಿವುಡ, ಕುರುಡ, ನೀಚಗತಿಯಲ್ಲಿ, ನೀಚಕುಲದಲ್ಲಿ ಮಹಾದರಿದ್ರಿಯಾಗಿ ಹುಟ್ಟುವುದಿದೆ. ಅದಕ್ಕಾಗಿ ಈಗ ದುಷ್ಟವಚನಗಳನ್ನಾಡಿ ಕಟ್ಟಿಕೊಂಡ ಪಾಪ ಕರ್ಮದ ನಾಶ ಮಾಡುವ ಸಲುವಾಗಿ ಮತ್ತು ಮುಂದೆ ದುಷ್ಟ ವಚನಗಳಲ್ಲಿ ನನ್ನ ಪ್ರವೃತ್ತಿಯೆಂದೂ ಆಗದಿರಲೆಂದು ಈಗ ನಾನು ಪಂಚ ಣಮೋಕಾರ ಮಂತ್ರದ ಆಶ್ರಯವನ್ನು ಗ್ರಹಣ ಮಾಡುತ್ತೇನೆ.

**ಕಳವು ತ್ಯಾಗ :** ನಾನು ಅಜ್ಞಾನಭಾವದಿಂದ ಹಾಗೂ ಪ್ರಮಾದದಿಂದ ಪೂರ್ವಕಾಲದಲ್ಲಿ ಇತರರು ಕೊಡದಿರುವ ಧನ, ಬಿದ್ದುಹೋದ, ಮರೆತು ಹೋದ ಧನವನ್ನು ಗ್ರಹಣ ಮಾಡುವ ಪರಿಣಾಮ ಮಾಡಿರುವೆ, ಕಪಟದಿಂದ ವಂಚಿಸಿದೆ, ಮತ್ತು ಬಲಿಷ್ಠನಾಗಿ ಇತರರ ಧನವನ್ನಿಟ್ಟುಕೊಂಡು ಮರಳಿ ಕೊಡಲಿಲ್ಲ, ಅದರ ಸಲುವಾಗಿ ಸ್ವಯಂ ಅತ್ಯಂತ ಸಂಕ್ಲೇಶಪಟ್ಟುಕೊಂಡೆ ಹಾಗೂ ಇತರರಿಗೆ ಸಂಕ್ಲೇಶವನ್ನುತ್ಪನ್ನ ಮಾಡಿಸಿದೆ ಈ ಪ್ರಕಾರ ಘೋರ ಪಾಪ ಮಾಡಿರುವೆ. ಆ ಪಾಪದ ಫಲವಾಗಿ ನರಕ-ತಿರ್ಯಂಚ ಮೊದಲಾದ ಗತಿಗಳಲ್ಲಿ ಭ್ರಮಣ ಹಾಗೂ ಅನಂತಕಾಲದವರೆಗೆ ದರಿದ್ರ ಮೊದಲಾದ ಘೋರ ದುಃಖವಾಗುವುದಿದೆ. ಆದ್ದರಿಂದ ಕಳವು ಮಾಡಿ ಕಟ್ಟಿಕೊಂಡ ಪಾಪ ಕರ್ಮಗಳ ನಾಶದ ಸಲುವಾಗಿ ಹಾಗೂ ಮುಂದೆಯೂ ನನಗೆ ಕೊಡದಿರುವಂಥ ಇತರರ ಧನವನ್ನು ಗ್ರಹಣ ಮಾಡುವ ಪರಿಣಾಮಗಳಾಗದಿರಲೆಂದು ನಾನು ಈಗ ಪಂಚಣಮೋಕಾರ ಮಂತ್ರದ ಆಶ್ರಯವನ್ನು ಗ್ರಹಣ ಮಾಡುತ್ತೇನೆ.

**ಕುಶೀಲ ತ್ಯಾಗ :** ಇತರರ ಸ್ತ್ರೀಯನ್ನು ಅವಳ ರೂಪು, ಆಭರಣ, ವಸ್ತ್ರ,ಹಾವಭಾವ, ವಿಲಾಸ ವಿಭ್ರಮಗಳನ್ನು ರಾಗದಿಂದ ನೋಡುವ ಇಚ್ಛೆಯಿಂದ, ಹಾಗೂ ರಾಗಭಾವದಿಂದ ನೋಡಿ ಮತ್ತು ಸಂಗಮಾದಿಗಳಿಂದ ಉತ್ಪನ್ನವಾದ ಘೋರ ಪಾಪಕರ್ಮದ ಫಲದಿಂದ ಅನಂತಕಾಲದವರೆಗೆ ನರಕ-ತಿರ್ಯಂಚ ಗತಿಗಳಲ್ಲಿ ಪರಿಭ್ರಮಣ ಮಾಡಿ ಅನೇಕ

ಭವಗಳಲ್ಲಿ ಸಾವಿರಾರು ರೋಗ ಹಾಗೂ ದರಿದ್ರತೆಯ ದುಃಖ ಭೋಗಿಸುವುದು, ಮತ್ತು ಅಧಿಕ ಕಾಲದವರೆಗೆ ಕಾಮರೂಪದ ಅಗ್ನಿಯಲ್ಲಿ ಸುಡುತ್ತ ಅಸಂಖ್ಯಾತ ಭವಗಳಲ್ಲಿ ಕಾಮವೇದನೆಯಿಂದಪೀಡಿತನಾಗಿ ಹೊರಳಾಡಿ ಸತ್ತು ಹೋಗುವುದಿದೆ. ಆದುದರಿಂದ ಪರಸ್ತ್ರೀಯ ಇಚ್ಛೆಯಿಂದ ಉತ್ಪನ್ನವಾದ ಪಾಪ ಕರ್ಮಗಳ ನಾಶದ ಸಲುವಾಗಿ ಹಾಗೂ ಭವಿಷ್ಯದಲ್ಲಿ ನನಗೆ ಅನ್ಯರ ಸ್ತ್ರೀಯಲ್ಲಿ ಎಂದೂ ಅನುರಾಗವಾಗದಿರಲೆಂಬುದರ ಸಲುವಾಗಿ ಈಗ ನಾನು ಪಂಚ ಪರಮ ಗುರುಗಳ  ಪಂಚ ಣಮೋಕಾರ ಮಂತ್ರದ ಧ್ಯಾನ ಮಾಡುತ್ತೇನೆ.

**ಪರಿಗ್ರಹ ತ್ಯಾಗ :** ಅಜ್ಞಾನಿಯಾದ ನಾನು ಪರಿಗ್ರಹದಲ್ಲಿ ಅತ್ಯಂತ ಮಮತೆ ಮಾಡಿ, ಶರೀರ ಮೊದಲಾದ ಪುದ್ಗಲಗಳನ್ನು ನನ್ನವುಗಳೆಂದು ಮನ್ನಿಸಿ ಅವುಗಳಲ್ಲಿ ನನ್ನತನ ಮಾಡುತ್ತ ಬಂದೆನು **ಮೋಹಕರ್ಮದ ಉದಯದಿಂದ ಉಂಟಾದ ರಾಗಾದಿ ಭಾವಗಳನ್ನು ನನ್ನ ಭಾವಗಳೆಂದು ಮನ್ನಿಸಿ ಪರದ್ರವ್ಯಗಳಲ್ಲಿ ಅತ್ಯಂತ ಆಸಕ್ತಿ ಮಾಡಿದೆನು.** ಧನ-ಧಾನ್ಯ, ಕುಟುಂಬ ಮೊದಲಾದವುಗಳ ವೃದ್ಧಿಯನ್ನು ನನ್ನ ವೃದ್ಧಿಯೆಂದೇ ಮನ್ನಿಸಿ, ಅವುಗಳ ಹಾನಿಯನ್ನು ನನ್ನ ಹಾನಿಯೆಂದು ಮನ್ನಿಸಿದೆನು. ಈಗ ಕೂಡ ಭೂಮಿ, ಮನೆ, ಆಜೀವಿಕೆ, ಸ್ತ್ರೀ, ಪುತ್ರ, ಧನ, ಧಾನ್ಯ, ಆಭರಣ, ವಸ್ತ್ರ ಮೊದಲಾದ ಸಾವಿರಾರು ವಸ್ತುರೂಪ ಪರಿಗ್ರಹದಲ್ಲಿ ನನ್ನದು-ನನ್ನದೆನ್ನುತ್ತಿರುವೆನು. ಬುದ್ಧಿಯು ಎಷ್ಟು ವಿಪರೀತವಾಗುತ್ತಿದೆಯೆಂದರೆ ನನ್ನ ಜ್ಞಾನ, ಪರದ ಜ್ಞಾನ, ಪಾಪ-ಪುಣ್ಯದ ಜ್ಞಾನ, ಪರಲೋಕದ ಜ್ಞಾನಗಳು ನಷ್ಟವಾಗಿ ಹೋಗಿವೆ. ಪ್ರಾಣವು ಕಂಠದವರೆಗೆ ಬಂದಿದ್ದರೂ ಕೂಡ ಮಮತೆಯು ಕಡಿಮೆಯಾಗುತ್ತಿಲ್ಲ. ಜಗತ್ತಿನಲ್ಲಿ ಪರಿಗ್ರಹವು ಯಾರ ಜತೆಯಲ್ಲೂ ಹೋಗಿಲ್ಲವೆಂಬುದನ್ನು ಪ್ರತ್ಯಕ್ಷ ಕಾಣುತ್ತೇವೆ. ಹಾಗೆ ನನ್ನ ಜತೆಯಲ್ಲೂ ಬರಲಾರದು, ಆದಾಗ್ಯೂ ಪ್ರತಿ ದಿವಸವೂ ಅದರ ವೃದ್ಧಿಯನ್ನೇ ಅಪೇಕ್ಷಿಸುತ್ತೇನೆ. ಎಲ್ಲಿಯವರೆಗೆ ನನ್ನ ಮರಣವಾಗುವುದಿಲ್ಲ ಅಲ್ಲಿಯವರೆಗೆ ಈ ಪರಿಗ್ರಹದೊಳಗಿಂದ ಸ್ವಲ್ಪವೂ ಕಡಿಮೆಯಾಗದಿರಲೆಂಬ ಚಿಂತನೆಯೇ ನಿರಂತರ ನಡೆದಿರುತ್ತದೆ. ಆ ಪರಿಗ್ರಹರೂಪದ ದಾವಾಗ್ನಿಯನ್ನು ಸಂತೋಷರೂಪದ ಜಲದಿಂದ ನಂದಿಸಲು ಅಪೇಕ್ಷಿಸುವುದಿಲ್ಲ.

**ಪರಿಗ್ರಹದಲ್ಲಿನ ಮೂರ್ಚ್ಛೆಯೇ ಸಮಸ್ತಪಾಪಗಳ ಮೂಲವಿದೆ.** ಅಜ್ಞಾನಿಯಾದ ನಾನು ಇದರದೇ ಆರಂಭದಲ್ಲಿ, ಇದರಲ್ಲಿಯೇ ಮಮತೆ ಮಾಡಿ ಅನಂತ ಕಾಲದಲ್ಲಿ ದುರ್ಲಭವಾದಂಥ ಮನುಷ್ಯ ಜನ್ಮ ಹಾಗೂ ಜಿನಧರ್ಮಪಡೆದು ಅದನ್ನು ಕೆಡಿಸಿ, ಅನಂತ ಭವಗಳವರೆಗಿನ ಸಲುವಾಗಿ ನರಕ-ತಿರ್ಯಂಚ ಗತಿಗಳ ದುಃಖವನ್ನು ಸ್ವೀಕಾರ ಮಾಡಿರುವೆನು, ಅದರ ಕುರಿತು ನನಗೆ ಅತಿಶಯ ಪಶ್ಚಾತ್ತಾಪವಿದೆ. ಈಗ ಇಂಥ ಘೋರ ಪಾಪ ಕರ್ಮದ ನಾಶ ಮಾಡುವ ಉಪಾಯವು ಭಗವಾನ ಪಂಚ-ಪರಮೇಷ್ಠಿಗಳ-ಆಶ್ರಯವೊಂದೇ ಇದೆ, ಬೇರಾವುದೂ ಇಲ್ಲ, ಭವಿಷ್ಯದಲ್ಲಿ ಕೂಡ ಪರಿಗ್ರಹದಿಂದ ವಿರಕ್ತಿ ಮಾಡಿಸುವಂಥವರು ಭಗವಾನ ಪಂಚ ಪರಮೇಷ್ಠಿಗಳಲ್ಲದೆ ಬೇರಾರೂ ಇಲ್ಲ, ಆದುದರಿಂದ ಮೂರ್ಚ್ಛೆಯ ನಾಶ ಮಾಡುವ ಸಲುವಾಗಿ, ಪರಮ ಸಂತೋಷವನ್ನುತ್ಪನ್ನ ಮಾಡುವ ಸಲುವಾಗಿ, ಪರಿಗ್ರಹದ ತ್ಯಾಗ ಮಾಡುವ ಸಲುವಾಗಿ ಪಂಚಣಮೋಕಾರ ಮಂತ್ರದ ಧ್ಯಾನದೊಡನೆ ಕಾಯೋತ್ಸರ್ಗ ಮಾಡುತ್ತೇನೆ.

ಈಗ 'ಸಾಮಾಯಿಕದಲ್ಲಿ ಸ್ಥಿರವಿರುವ ಗೃಹಸ್ಥನು ಮುನಿಯ ಸಮಾನನಿದ್ದಾನೆ'ಂದು ತಿಳಿಸುವ ಸೂತ್ರ ಹೇಳುತ್ತಾರೆ,-

**ಸಾಮಯಿಕೇ ಸಾರಂಭಾಃ ಪರಿಗ್ರಹಾ ನೈವ ಸಂತಿ ಸರ್ವೇಽಪಿ ।**
**ಚೇಲೋಪಸೃಷ್ಟಮುನಿರಿವ ಗೃಹೀ ತದಾ ಯಾತಿ ಯತಿಭಾವಮ್ ॥೧೦೨॥**

**ಅರ್ಥ :-** ಸಾಮಾಯಿಕದ ಕಾಲದಲ್ಲಿ ಗೃಹಸ್ಥನು ಸಮಸ್ತ ಆರಂಭ ಮತ್ತು ಪರಿಗ್ರಹದಿಂದ ರಹಿತನಿರುವುದರಿಂದ ಸಾಮಾಯಿಕ ಮಾಡುತ್ತಿರುವ ಗೃಹಸ್ಥನು ವಸ್ತ್ರದ ಉಪಸರ್ಗಸಹಿತ ಮುನಿಯ ಸಮಾನ ಯತಿತನದ ಭಾವಕ್ಕೆ ಪ್ರಾಪ್ತನಾಗಿ ಹೋಗುತ್ತಾನೆ.

**ಭಾವಾರ್ಥ :-** ಸಾಮಾಯಿಕದ ಸಮಯದಲ್ಲಿ ಗೃಹಸ್ಥನಿಗೆ ಸಮಸ್ತ ಆರಂಭ ಮತ್ತು ಸಮಸ್ತ ಪರಿಗ್ರಹಗಳಿಲ್ಲದಿದ್ದರೂ ಗೃಹಸ್ಥನಿರುವುದರಿಂದ ಬಟ್ಟೆ ತೊಟ್ಟಿದ್ದಾನೆ. **ಬಟ್ಟೆಯ ಹೊರತಾಗಿ ಉಳಿದ ಎಲ್ಲ ಪ್ರಕಾರದಿಂದ ಮುನಿಯ ತುಲ್ಯನೇ ಇದ್ದಾನೆ.** ಮುನಿಗಳಿಗೆ ನಗ್ನತೆಯು ಇರುತ್ತದೆ, ಆದರೆ ಇವನು ಬಟ್ಟೆ ಧರಿಸಿದ್ದಾನೆ. ಇಷ್ಟೇ ಅಂತರವಿರುವುದರಿಂದ ಇವನನ್ನು ಮುನಿಯೆಂದು ಹೇಳಲಾಗುವುದಿಲ್ಲ.

ಈಗ ಸಾಮಾಯಿಕದ ಸಮಯದಲ್ಲಿ ಉಪಸರ್ಗ ಅಥವಾ ಪರೀಷಹಗಳುಂಟಾದರೂ ಇವನು ಮುನೀಶ್ವರರ ಸಮಾನವೇ ಧೈರ್ಯ ಧಾರಣ ಮಾಡಿ ಸಹಿಸಿಕೊಳ್ಳುತ್ತಾನೆ. ಹೇಡಿಯಾಗುವುದಿಲ್ಲವೆಂದು ತಿಳಿಸುವ ಸೂತ್ರ ಹೇಳುತ್ತಾರೆ,-

**ಶಿತೋಷ್ಣದಂಶಮಶಕ ಪರೀಷಹಮುಪಸರ್ಗಮಪಿ ಚ ಮೌನಧರಾಃ ।**
**ಸಾಮಯಿಕಂ ಪ್ರತಿಪನ್ನಾ ಅಧಿಕುರ್ವೀರನ್ನಚಲಯೋಗಾಃ ॥೧೦೩॥**

**ಅರ್ಥ :-** ಸಾಮಾಯಿಕದಲ್ಲಿ ಸ್ಥಿರವಿರುವಂಥ ಗೃಹಸ್ಥನು ಮೌನಧಾರಣ ಮಾಡುತ್ತಾನೆ, ಮನ-ವಚನ-ಕಾಯಗಳನ್ನು ಚಂಚಲಗೊಳಿಸುವುದಿಲ್ಲ, ಶೀತ, ಉಷ್ಣ, ದಂಶಮಶಕ ಮೊದಲಾದ ಪರೀಷಹ ಮತ್ತು ಚೇತನ- ಅಚೇತನ ಕೃತವಾದ ಉಪಸರ್ಗಗಳನ್ನು ಸಹನೆ ಮಾಡುತ್ತಾನೆ.

**ಭಾವಾರ್ಥ :-** ಸಾಮಾಯಿಕ ಮಾಡುವ ಸಮಯದಲ್ಲಿ ಶೀತದ, ಉಷ್ಣದ, ಮಳೆಯ, ಗಾಳಿಯ, ನೊಣ-ಸೊಳ್ಳೆಗಳ, ದುಷ್ಟರ ದುರ್ವಚನಗಳ, ರೋಗಗಳ ಪೀಡೆಯ ಪರೀಷಹಗಳುಂಟಾದರೆ, ದುಷ್ಟ ವೈರಿಗಳ ಮೂಲಕ ಮಾಡಲಾಗುವ ಮತ್ತು ಸಿಂಹ, ಹುಲಿ, ಸರ್ಪ ಮೊದಲಾದ ಹಾಗೂ ಅಗ್ನಿ-ನೀರುಗಳಿಂದ ಜನಿತವಾದ ಉಪಸರ್ಗಗಳು ಬಂದು ಬಿಟ್ಟರೆ ತುಂಬ ಧೈರ್ಯ ಧಾರಣ ಮಾಡಿ, ಮನ-ವಚನ-ಕಾಯಗಳನ್ನು ಸಾಮ್ಯಭಾವದಿಂದ ಚಂಚಲವಾಗಗೊಡದೆ ಮೌನದೊಡನೆ ಸಹನೆ ಮಾಡುತ್ತಾನೆ.

ಈಗ ಸಾಮಾಯಿಕದಲ್ಲಿ ಸಂಸಾರ ಹಾಗೂ ಮೋಕ್ಷ ಸ್ವರೂಪದ ಚಿಂತನೆ ಮಾಡುವಂಥ ಸೂತ್ರ ಹೇಳುತ್ತಾರೆ,-

**ಅಶರಣಮಶುಭಮನಿತ್ಯಂ ದುಃಖಮನಾತ್ಮಾನಮಾವಸಾಮಿ ಭವಮ್ ।**
**ಮೋಕ್ಷಸ್ತದ್ವಿಪರೀತಾತ್ಮೇತಿ ಧ್ಯಾಯಂತು ಸಾಮಯಿಕೇ ॥೧೦೪॥**

**ಅರ್ಥ :-** ಸಾಮಾಯಿಕ ಮಾಡುವಂಥ ಗೃಹಸ್ಥನು ಸಂಸಾರದ ಸ್ವರೂಪವನ್ನು ಹೇಗೆ ವಿಚಾರಿಸುತ್ತಾನೆಂದರೆ ಈ ಚತುರ್ಗತಿಯಲ್ಲಿ ಪರಿಭ್ರಮಣರೂಪದ ಸಂಸಾರವು ಅಶರಣವಿದೆ. ಇದರಲ್ಲಿ ಅನಂತಾನಂತ ಜನ್ಮ-ಮರಣ ಮಾಡುತ್ತ ಅನಂತ ಕಾಲವು ಕಳೆದು ಹೋಗಿದೆ. ಸಮಸ್ತ ಪರ್ಯಾಯಗಳಲ್ಲಿ ಕ್ಷುಧೆ, ತೃಷೆ, ರೋಗ, ವಿಯೋಗ, ಹೊಡೆತ, ಇರಿತಗಳನ್ನು ಭೋಗಿಸುತ್ತ ಯಾರೂ ಶರಣರಿಲ್ಲ, ಯಾವುದೇ ಕಾಲದಲ್ಲಿ, ಯಾವುದೇ ಕ್ಷೇತ್ರದಲ್ಲಿ, ಯಾರೂ ರಕ್ಷಣೆ ಮಾಡುವಂಥವರಿಲ್ಲ, ಆದುದರಿಂದ ಸಂಸಾರವು ಅಶರಣವಿದೆ.

ಅಶುಭ ಕರ್ಮಗಳ ಬಂಧನದಿಂದ ಬಂಧಿಸಲ್ಪಟ್ಟು, ದುಃಖ ಕೊಡುವಂಥ ಅಶುಭ ದೇಹರೂಪದ ಪಂಜರದಲ್ಲಿ ಮೋಸ ಹೋಗಿ, ಅಶುಭ ಕಷಾಯಗಳ ರೂಪದ ಅಶುಭ ಭಾವಗಳಲ್ಲಿ ಲೀನವಾಗಿ ನಿರಂತರ ಅಶುಭದ ಬಂಧನವನ್ನೇ ಮಾಡುತ್ತದೆ. ಅಶುಭವನ್ನೇ ಭೋಗಿಸುತ್ತಿರುವುದರಿಂದ ಈ ಸಂಸಾರವು ಅಶುಭವಿದೆ.

ಈ ಸಂಸಾರದಲ್ಲಿ ಜೀವನು ಅನಂತಾನಂತ ಕಾಲದಿಂದ ಪರಿಭ್ರಮಣ ಮಾಡುತ್ತ-ಮಾಡುತ್ತ ಸಮಸ್ತ ಉತ್ತಮ ಕ್ಷೇತ್ರದಲ್ಲಿ ನಿವಾಸ, ಉತ್ತಮ ಕುಲ, ಇಂದ್ರಿಯಗಳ ಪೂರ್ಣತೆ, ಸುಂದರ ರೂಪು, ಪ್ರಬಲ ಬುದ್ಧಿ, ಜಗತ್ತಿನಲ್ಲಿ ಪೂಜ್ಯತೆ, ಮನ್ನಣೆ ಹಾಗೂ ರಾಜ್ಯಸಂಪತ್ತು, ಧನಸಂಪತ್ತು, ಸುಂದರ ಮಿತ್ರರ ಕೂಟ, ಆಜ್ಞಾಪಾಲಕ ಮಹಾಪ್ರವೀಣ ಸುಪುತ್ರ, ಮನೋಹರ ಮಡದಿಯ ಪ್ರಾಪ್ತಿ ಮತ್ತು ಪಾಂಡಿತ್ಯ, ಶೂರತ್ವ, ಪ್ರಬಲತೆ, ಆಜ್ಞೆ, ಐಶ್ವರ್ಯ, ಮನೋವಾಂಛಿತ ಭೋಗ, ನಿರೋಗ ಶರೀರ ಮೊದಲಾದುವೆಲ್ಲವು ಕರ್ಮದ ಉದಯದಿಂದ ಪ್ರಾಪ್ತವಾಗಿ ಹೋಗಿದ್ದರೂ ಕ್ಷಣ ಮಾತ್ರದಲ್ಲಿ ಮಿಂಚಿನ ಸಮಾನ, ಇಂದ್ರ ಧನುಷ್ಯದ ಸಮಾನ, ಇಂದ್ರಜಾಲಿಗನ ನಗರದ ಸಮಾನ ನಿಯಮದಿಂದ ವಿಲಯವಾಗಿ ಹೋಗುತ್ತವೆ. ಪುನಃ ಅನಂತಾನಂತ ಕಾಲದಲ್ಲಿಯೂ ಪ್ರಾಪ್ತವಾಗುವುದಿಲ್ಲ, ಆದುದರಿಂದ ಸಂಸಾರವು ಅನಿತ್ಯವಿದೆ.

ಅನಂತಕಾಲದಲ್ಲಿಯೂ ಕರ್ಮಬಂಧದೊಡನೆ ದೇಹಪಂಜರದಲ್ಲಿ ಮೋಸಹೋಗಿ ಅನಂತಾನಂತ ಜನ್ಮ-ಮರಣಗಳ ಸಹಿತವಿದೆ. ಅನಂತ ಕಾಲದಲ್ಲಿ ಕೂಡ ದುಃಖದ ಅಭಾವವಾಗದಿರುವುದರಿಂದ ಸಂಸಾರವು ದುಃಖವೇ ಇದೆ. ನನ್ನ ಆತ್ಮನು ಸಂಸಾರ ಪರಿಭ್ರಮಣರೂಪನಿಲ್ಲದಿರುವುದರಿಂದ ಈ ಸಂಸಾರವು ಅನಾತ್ಮವಿದೆ.

ಈ ಪ್ರಕಾರ ಸಾಮಾಯಿಕದಲ್ಲಿ ಸ್ಥಿರವಿರುವ ಗೃಹಸ್ಥನು ವಿಚಾರ ಮಾಡುತ್ತಾನೆ. ಅಯ್ಯಾ ! ಈ ಪರಿಭ್ರಮಣರೂಪದ ಸಂಸಾರವು ಅಶುಭವಿದೆ, ಅಶರಣವಿದೆ, ಅನಿತ್ಯವಿದೆ, ದುಃಖರೂಪವಿದೆ, ನನ್ನ ಸ್ವರೂಪವಿಲ್ಲ, ಈ ಸಂಸಾರದಲ್ಲಿ ಮಿಥ್ಯಾಜ್ಞಾನದ ಪ್ರಭಾವದಿಂದ ನಾನು ಅನಂತ ಕಾಲದಿಂದ ಇದರಲ್ಲಿ ನಿವಾಸ ಮಾಡುತ್ತಲಿದ್ದೇನೆ.

**ಮೋಕ್ಷದ ಸ್ವರೂಪ :** ಮೋಕ್ಷ ಎಂದರೆ ಸಂಸಾರದಿಂದ ಬಿಡುಗಡೆ ಹೊಂದುವುದು, ಅದು ನನ್ನ ಆತ್ಮನಿಗೆ ಆಶ್ರಯವಿದೆ ಅದು ಅನಂತಾನಂತಕಾಲದಲ್ಲಿ ಕೂಡ ಮರಳಿ ಸಂಸಾರದಲ್ಲಿ ಬರುವುದರಿಂದ ರಹಿತವಿದೆ. ಶುಭವಿದೆ, ಅನಂತ ಕಲ್ಯಾಣರೂಪವಿದೆ, ನಿತ್ಯವಿದೆ. ಅವಿನಾಶಿಯಿದೆ, ಅನಂತಾನಂತಸ್ವರೂಪವಿದೆ, ಅದರಲ್ಲಿ ಅನಂತಜ್ಞಾನ ಮೊದಲಾದ ಹಾಗೂ ಅನಾಕುಲತೆಯ ರೂಪದ ಸುಖವಿದೆ, ಅದು ನನ್ನ ಆತ್ಮನ ಸ್ವರೂಪವಿದೆ, ಪರದ ರೂಪವಿಲ್ಲ,

ಈ ಪ್ರಕಾರ ಸಾಮಾಯಿಕದಲ್ಲಿ ಸ್ಥಿರವಿರುವ ಗೃಹಸ್ಥನು ಸಂಸಾರ ಮತ್ತು ಮೋಕ್ಷದ ಸ್ವರೂಪದ ವಿಚಾರ ಮಾಡುತ್ತಾನೆ, **ಸಾಮ್ಯಭಾವ ಸಹಿತವಿರುವ ಸಾಮಾಯಿಕವು ಎರಡುಗಳಿಗೆ ಮಾತ್ರವಾಗಿದ್ದರೂ ಕೂಡ ಅದರಿಂದ ಮಹಾನಕರ್ಮದ ನಿರ್ಜರೆಯಾಗಿ ಹೋಗುತ್ತದೆ.** ಸಾಮಾಯಿಕದ ಮಹಿಮೆಯನ್ನು ಹೇಳುವುದಕ್ಕೆ ಇಂದ್ರನು ಕೂಡ ಸಮರ್ಥನಿಲ್ಲ, ಸಾಮಾಯಿಕದ ಪ್ರಭಾವದಿಂದ ಅಭವ್ಯರು ಕೂಡ ಗ್ರೈವೇಯಕದವರೆಗೆ ಉತ್ಪನ್ನರಾಗುತ್ತಾರೆ. ಸಾಮಾಯಿಕದ ಸಮಾನ ಯಾವ ಧರ್ಮ ಆಗಿಲ್ಲ, ಆಗುವುದಿಲ್ಲ, ಆದುದರಿಂದ ಸಾಮಾಯಿಕವನ್ನು ಅಂಗೀಕಾರ ಮಾಡುವುದರಲ್ಲಿಯೇ ಆತ್ಮನ ಹಿತವಿದೆ. ಸಾಮಾಯಿಕ ಪಾಠದ ಜ್ಞಾನ-ಸ್ಮರಣೆಯಿಲ್ಲದವರು ಏಕಾಗ್ರತೆಯಿಂದ ಮನ-ವಚನ-ಕಾಯಗಳನ್ನು ನಿಶ್ಚಲ ಮಾಡಿ, ಸಮಸ್ತ ಆರಂಭ, ಕಷಾಯ, ವಿಷಯಗಳ ತ್ಯಾಗ ಮಾಡಿ ಪಂಚಣಮೋಕಾರ ಮಂತ್ರದ ಧ್ಯಾನ ಮಾಡುತ್ತ ಎರಡು ಗಳಿಗೆಗಳನ್ನು ಪೂರ್ಣ ಮಾಡಬೇಕು.

ಈಗ ಸಾಮಾಯಿಕದ ಐದು ಅತಿಚಾರಗಳನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ವಾಕ್ಕಾಯಮಾನಸಾನಾಂ ದುಃಪ್ರಣಿಧಾನಾನ್ಯನಾದರಾಸ್ಮರಣೇ ।**

**ಸಾಮಯಿಕಸ್ಯಾತಿಗಮಾ ವ್ಯಜ್ಯಂತೇ ಪಂಚ ಭಾವೇನ ॥೧೦೫॥**

**ಅರ್ಥ :-** ಸಾಮಾಯಿಕದ ಐದು ಅತಿಚಾರಗಳು ೧) ಸಾಮಾಯಿಕ ಮಾಡುವ ಸಮಯದಲ್ಲಿ ವಚನಗಳ ಮೂಲಕ ಸಂಸಾರ ಸಂಬಂಧದ ಪ್ರವೃತ್ತಿ ಮಾಡುವುದು ಅದು **ವಚನ ದುಃಪ್ರಣಿಧಾನ** ನಾಮದ ಅತಿಚಾರವಿದೆ. ೨) ಶರೀರದ ಸಂಯಮ ರಹಿತ ಚಂಚಲತೆಯ ಚೇಷ್ಟೆ ಮಾಡುವುದು ಅದು **ಕಾಯದುಃಪ್ರಣಿಧಾನ** ನಾಮದ ಅತಿಚಾರವಿದೆ. ೩) ಮನಸ್ಸಿನಲ್ಲಿ ಆರ್ತರೌದ್ರ ಮೊದಲಾದ ಚಿಂತನೆ ಮಾಡುವುದು ಅದು **ಮನೋದುಃಪ್ರಣಿಧಾನ** ನಾಮದ ಅತಿಚಾರವಿದೆ. ೪) ಸಾಮಾಯಿಕವನ್ನು ಉತ್ಸಾಹರಹಿತ ನಿರಾದರದಿಂದ ಮಾಡುವುದು ಅದು **ಅನಾದರ**ನಾಮದ ಅತಿಚಾರವಿದೆ. ೫) ಸಾಮಾಯಿಕ ಮಾಡುವ ಸಮಯದಲ್ಲಿ ದೇವ ವಂದನೆ ಮೊದಲಾದವುಗಳ ಪಾಠ ಮರೆತು ಹೋಗುವುದು ಮತ್ತು ಕಾಯೋತ್ಸರ್ಗ ಮೊದಲಾದುವನ್ನು ಮರೆತು ಹೋಗುವುದು ಅದು **ಅಸ್ಮರಣ** ನಾಮದ ಅತಿಚಾರವಿದೆ. ಈ ಪ್ರಕಾರ ಅತಿಚಾರ ಸಹಿತವಾಗಿ ಸಾಮಾಯಿಕದ ವರ್ಣನೆ ಮಾಡಲಾಯಿತು.

ಈಗ **ಪ್ರೋಷಧೋಪವಾಸ ಶಿಕ್ಷಾವ್ರತದ** ಸ್ವರೂಪ ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಪರ್ವಣ್ಯಷ್ಟಮ್ಯಾಂ ಚ ಜ್ಞಾತವ್ಯಃ ಪ್ರೋಷಧೋಪವಾಸಸ್ತು ।**

**ಚತುರಭ್ಯವಹಾರ್ಯಾಣಾಂ ಪ್ರತ್ಯಾಖ್ಯಾನಂ ಸದೇಚ್ಛಾಭಿಃ ॥೧೦೬॥**

**ಅರ್ಥ :-** ಅಷ್ಟಮಿ ಮತ್ತು ಚತುರ್ದಶಿ ಪರ್ವಗಳಲ್ಲಿ ದಿವಸ ಹಾಗೂ ರಾತ್ರಿಯಲ್ಲಿ ಸಮ್ಯಕ್ ಇಚ್ಛಾಪೂರ್ವಕವಾಗಿ ನಾಲ್ಕು ಪ್ರಕಾರದ ಆಹಾರದ ತ್ಯಾಗ ಮಾಡುವುದನ್ನು ಪ್ರೋಷಧೋಪವಾಸವೆಂದು ತಿಳಿಯುವುದು. ಒಂದು ತಿಂಗಳಲ್ಲಿ ಎರಡು ಅಷ್ಟಮಿ ಮತ್ತು ಎರಡು ಚತುರ್ದಶಿ ಇವು ನಾಲ್ಕು ಅನಾದಿಯಿಂದಲೇ ಪರ್ವವೆನಿಸಿಕೊಳ್ಳುತ್ತವೆ. ಈ ಪರ್ವಗಳಲ್ಲಿ ಗೃಹಸ್ಥನು ವ್ರತ, ಸಂಯಮ ಸಹಿತವೇ ಇರುತ್ತಾನೆ. ಸಂಯಮೀಧರ್ಮಾತ್ಮರಂತೂ ಯಾವಾಗಲೂ ಎಲ್ಲ ದಿವಸಗಳಲ್ಲಿ ವ್ರತ ಸಹಿತರಾಗಿಯೇ ಇರುತ್ತಾರೆ. ಧರ್ಮದಲ್ಲಿ ಅನುರಾಗವಿರುವಂಥ ಗೃಹಸ್ಥನು ಒಂದು ತಿಂಗಳಲ್ಲಿ ನಾಲ್ಕು ದಿವಸವಂತೂ ಸಮಸ್ತ ಪಾಪಾರಂಭ ಮತ್ತು ಇಂದ್ರಿಯ ವಿಷಯಗಳನ್ನು ತ್ಯಾಗ ಮಾಡಿ, ಕಷಾಯವನ್ನು ನಾಶ ಮಾಡಿ, ವ್ರತ-ಶೀಲ-ಸಂಯಮ ಸಹಿತ ಉಪವಾಸ ಧಾರಣ ಮಾಡಿ, ನಾಲ್ಕು ಪ್ರಕಾರದ ಆಹಾರಗಳ ತ್ಯಾಗ ಮಾಡಿ ಸಂಯಮ ಸಹಿತನಿರುತ್ತಾನೆ ಅವನಿಗೆ ಪ್ರೋಷಧೋಪವಾಸವಿದೆಯೆಂದು ತಿಳಿಯುವುದು.

**ಈಗ ಪ್ರೋಷಧೋಪವಾಸದ ವಿಶೇಷ, ವರ್ಣನೆ ಮಾಡುತ್ತಾರೆ.** ಸಪ್ತಮಿಯ ಹಾಗೂ ತ್ರಯೋದಶಿಯ ದಿವಸ ಮಧ್ಯಾಹ್ನದಲ್ಲಿ ಮೊದಲಂತೂ ಒಂದು ಬಾರಿ ಆಹಾರ-ಪಾನೀಯ ಮುಗಿಸಿ, ಸಮಸ್ತ ಆರಂಭ, ವ್ಯಾಪಾರ, ಸೇವೆ, ಕೊಡ-ಕೊಳ್ಳುವುದರ ತ್ಯಾಗ ಮಾಡಿ, ದೇವ ಮೊದಲಾದವುಗಳಲ್ಲಿನ ಮಮತೆಯ ತ್ಯಾಗ ಮಾಡಿ, ಏಕಾಂತ ಮನೆಯಲ್ಲಿ, ಜಿನಮಂದಿರದಲ್ಲಿ, ಏಕಾಂತ ಸ್ಥಾನದಲ್ಲಿ, ಚೈತ್ಯಾಲಯ, ಶೂನ್ಯಗೃಹ, ಮಠ ಮೊದಲಾದ, ಪ್ರೋಷಧೋಪವಾಸ ಮಾಡುವ ಸ್ಥಾನದಲ್ಲಿ ಹೋಗಿ, ಸಮಸ್ತ ವಿಷಯ ಕಷಾಯಗಳ ತ್ಯಾಗ ಮಾಡಿ, ಮನ-ವಚನ-ಕಾಯದ ಪ್ರವೃತ್ತಿಯನ್ನು ತಡೆದು ಧರ್ಮಧ್ಯಾನ ಮಾಡಿ ಮತ್ತು ಸ್ವಾಧ್ಯಾಯ ಮಾಡಿ, ಸಪ್ತಮಿ ಹಾಗೂ ತ್ರಯೋದಶಿಯ ಉಳಿದ ಅರ್ಧ ದಿನವನ್ನು ಕಳೆಯಬೇಕು. ಅನಂತರ ಸಾಯಂಕಾಲದ ದೇವ ದರ್ಶನ ಮೊದಲಾದುವನ್ನು ಮಾಡಿ, ರಾತ್ರಿಯಲ್ಲಿ ಧರ್ಮಕಥೆ, ಜಿನೇಂದ್ರ ಭಕ್ತಿ, ಸ್ತವನ ಮೊದಲಾದುವನ್ನು ಮಾಡಿ ರಾತ್ರಿ ಕಳೆಯಬೇಕು, ಮತ್ತು ಧರ್ಮಧ್ಯಾನ ಮಾಡುತ್ತ ಶುದ್ಧ ಸಮಾಧಿ ಪೂರ್ವಕ ಸ್ವಲ್ಪ ಸಮಯ ಪ್ರಮಾದ ದೂರ ಮಾಡಿ ರಾತ್ರಿ ವ್ಯತೀತ ಮಾಡಬೇಕು. ಅಷ್ಟಮಿ-ಚತುರ್ದಶಿಯ ಪ್ರಾತಃ ಕಾಲದಲ್ಲಿ ಸಾಮಾಯಿಕ, ವಂದನೆ ಮೊದಲಾದುವನ್ನು ಮಾಡಿ ಪ್ರಾಸುಕ ದ್ರವ್ಯಗಳಿಂದ ಪೂಜೆ ಮಾಡಿ, ಶಾಸ್ತ್ರಗಳ ಅಧ್ಯಯನ ಮಾಡಿ, ಭಾವನೆಗಳ ಚಿಂತನೆ ಮಾಡಿ, ಧರ್ಮಧ್ಯಾನದೊಡನೆ ಅಷ್ಟಮಿ-ಚತುರ್ದಶಿಯ ದಿವಸ ಮತ್ತು ಪೂರ್ಣರಾತ್ರಿಯನ್ನು ವ್ಯತೀತ ಮಾಡಿ, ನವಮಿ ಹಾಗೂ ಪೌರ್ಣಿಮೆಯ ಪ್ರಾತಃಕಾಲಕ್ಕೆ ಸಂಬಂಧಿಸಿದ ಕರ್ಮ-ಕ್ರಿಯೆಗಳನ್ನು ಮಾಡಿ, ವಂದನೆ-ಪೂಜೆ ಮೊದಲಾದುವನ್ನು ಮಾಡಿ, ಉತ್ತಮ-ಮಧ್ಯಮ-ಜಘನ್ಯಪಾತ್ರ ದೊಳಗಿಂದ ಯಾವುದಾದರೂ ಪಾತ್ರದ ಲಾಭವಾದರೆ ಅವರಿಗೆ ಆಹಾರ ಮಾಡಿಸಿ ಸ್ವಯಂ ಪಾರಣೆ (ಆಹಾರ) ಮಾಡಬೇಕು. ಈ ಪ್ರಕಾರ ಹದಿನಾರು ಪ್ರಹರದ ಸಮಯವನ್ನು ಧರ್ಮಸಹಿತ ವ್ಯತೀತ ಮಾಡುವವನಿಗೆ ಉತ್ಕೃಷ್ಟ ಪ್ರೋಷಧೋಪವಾಸವಾಗುತ್ತದೆ.

ಅಷ್ಟಮಿ-ಚತುರ್ದಶಿಯ ದಿವಸ ಸ್ನಾನ, ವಿಲೇಪನ, ಆಭೂಷಣ, ಸ್ತ್ರೀಸಂಸರ್ಗ, ಪುಷ್ಪ, ಪನ್ನೀರು, ಸುಗಂಧದೆಣ್ಣೆ, ಧೂಪ ಮೊದಲಾದವುಗಳ ತ್ಯಾಗ ಮಾಡಿ, ಜ್ಞಾನಿಯು ವೀತರಾಗತೆಯ ರೂಪದ ಆಭರಣದಿಂದ ಭೂಷಿತನಾಗಿ, ಎರಡೂ ಪರ್ವಗಳಲ್ಲಿ ಸದಾಕಾಲ ಉಪವಾಸ ಮಾಡುತ್ತಾನೆ. ಅಥವಾ ಒಂದು ಬಾರಿ ಭೋಜನ ಮಾಡುತ್ತಾನೆ ಅಥವಾ ನೀರಸ ಆಹಾರ ಮಾಡುತ್ತಾನೆ ಅವನಿಗೆ ಪ್ರೋಷಧೋಪವಾಸವಾಗುತ್ತದೆಯೆಂದು ಸ್ವಾಮಿ ಕಾರ್ತಿಕೇಯ ಮುನಿಗಳು ಹೇಳಿದ್ದಾರೆ.

ಪರ್ವದ ದಿನದಲ್ಲಿ ಉಪವಾಸ, ಅನುಪವಾಸ, ಏಕಭುಕ್ತಿಯೆಂದು ಮೂರು ಪ್ರಕಾರ ಹೇಳಿದೆ. ಅವುಗಳಲ್ಲಿ ನಾಲ್ಕು ಪ್ರಕಾರದ ಆಹಾರದ ತ್ಯಾಗವನ್ನು ಉಪವಾಸವೆಂದು ಹೇಳಿದೆ, ಒಂದು ಬಾರಿ ಜಲಮಾತ್ರದ ಗ್ರಹಣ ಮಾಡುವುದನ್ನು ಅನುಪವಾಸವೆಂದು ಹೇಳಿದೆ, ಹಾಗೂ ಒಂದು ಬಾರಿ ಅನ್ನ-ನೀರುಗಳ ಗ್ರಹಣ ಮಾಡುವುದಕ್ಕೆ ಏಕಭುಕ್ತಿಯೆಂಬ ಸಂಜ್ಞೆಯಿದೆಯೆಂದು ಆ ಅಮಿತಗತಿಗಳು ಹೇಳಿದ್ದಾರೆ.

ತಮ್ಮ ಶಕ್ತಿಯನ್ನು ಬಚ್ಚಿಡದೆ ಧರ್ಮದಲ್ಲಿ ಯಥಾಶಕ್ತಿ ಉಪವಾಸ ಮಾಡಬೇಕೆಂಬುದು ಇಲ್ಲಿನ ತಾತ್ಪರ್ಯವಿದೆ. ಮುಂದೆ ನಾಲ್ಕನೆಯ ಪ್ರೋಷಧ ಪ್ರತಿಮೆ ಹೇಳಲಾಗುವುದು, ಅದರಲ್ಲಿ ಹದಿನಾರು ಪ್ರಹರದ ನಿಯಮ ತಿಳಿಯುವುದು ಮತ್ತು ಎರಡನೆಯ ವ್ರತ ಪ್ರತಿಮೆಯಲ್ಲಿ ಯಥಾಶಕ್ತಿ ವ್ರತ, ತಪ, ಸಂಯಮ ಧಾರಣ ಮಾಡಿ ಪರ್ವದ ದಿವಸಗಳಲ್ಲಿ ಧರ್ಮಧ್ಯಾನ ಸಹಿತವಿರಬೇಕು.

ಈಗ ಉಪವಾಸದಲ್ಲಿ ಮಾಡಲು ಯೋಗ್ಯವಿಲ್ಲದಂಥ ಕಾರ್ಯದ ಸೂಚಕವಾಗಿ ಸೂತ್ರ ಹೇಳುತ್ತಾರೆ,-

**ಪಂಚಾನಾಂ ಪಾಪಾನಾಮಲಂಕ್ರಿಯಾರಂಭಗಂಧಪುಷ್ಪಾಣಾಮ್ ।**
**ಸ್ನಾನಾಂಜನನಸ್ಯಾನಾಮುಪವಾಸೇ ಪರಿಹೃತಿಂ ಕುರ್ಯ್ಯಾತ್ ।।೧೦೭।।**

**ಅರ್ಥ :-** ಉಪವಾಸದ ದಿವಸ ಹಿಂಸೆ ಮೊದಲಾದ ಐದೂ ಪಾಪಗಳ ತ್ಯಾಗ ಮಾಡಬೇಕಾಗುವುದು ಅಲಂಕ್ರಿಯೆ ಎಂದರೆ ಆಭರಣ ಮೊದಲಾದುವಿಂದ ಶೃಂಗರಿಸುವುದರ ತ್ಯಾಗ ಮಾಡುವುದು, ಹಾಗೂ ಗೃಹಕಾರ್ಯದ ಆರಂಭ, ಆಜೀವಿಕೆಯ ಆರಂಭ ಬಿಟ್ಟುಕೊಡಬೇಕಾಗುವುದು. ಸುಗಂಧ, ಕೇಶರ, ಕರ್ಪೂರ, ಪನ್ನೀರು, ಸುಗಂಧದೆಣ್ಣೆ ಮೊದಲಾದುವನ್ನು ಗ್ರಹಣ ಮಾಡುವುದರ ತ್ಯಾಗ ಮಾಡಬೇಕಾಗುವುದು. ಸ್ನಾನ ಮಾಡುವ, ಕಣ್ಣುಗಳಲ್ಲಿ ಅಂಜನ ಹಾಕುವುದರ, ನಶ್ಯ ಸೇದುವುದರ ತ್ಯಾಗ ಮಾಡಬೇಕಾಗುವುದು. ನೃತ್ಯ-ಗೀತ ಮೊದಲಾದುವನ್ನು ನೋಡುವುದರ, ಕೇಳುವುದರ, ಬಾರಿಸುವುದರ ತ್ಯಾಗ ಮಾಡಬೇಕು. ಐದೂ ಇಂದ್ರಿಯಗಳ ಭೋಗಗಳನ್ನು ತ್ಯಾಗ ಮಾಡಬೇಕಾಗುವುದು.

**ಉಪವಾಸದ ಪ್ರಯೋಜನ :-** ಇಂದ್ರಿಯಗಳ ಮದವನ್ನು ಹೊಡೆಯುವುದಕ್ಕೆ, ಇಂದ್ರಿಯ ವಿಷಯಗಳಲ್ಲಿನ ಗಮನವನ್ನು ತಡೆಯುವುದಕ್ಕೆ, ಕಾಮಭಾವವನ್ನು ಜಯಿಸುವುದಕ್ಕೆ, ಪ್ರಮಾದ, ಆಲಸ್ಯ ಮೊದಲಾದುವನ್ನು ತಡೆಯುವುದಕ್ಕೆ ನಿದ್ರೆಯನ್ನು ನಷ್ಟ ಮಾಡಲಿಕ್ಕೆ, ಆರಂಭಾದಿಗಳಿಂದ ವಿರಕ್ತವಾಗುವುದಕ್ಕೆ, ಪರೀಷಹ ಸಹಿಸುವ ಸಾಮರ್ಥ್ಯ ಹೆಚ್ಚಿಸುವುದಕ್ಕೆ, ಧರ್ಮದ ಮಾರ್ಗದಿಂದ ಚ್ಯುತವಾಗದಿರುವುದಕ್ಕೆ-ದೃಢತೆ ಹೆಚ್ಚಿಸುವುದಕ್ಕೆ, ರಸನೇಂದ್ರಿಯ ಹಾಗೂ ಉಪಸ್ಥ ಇಂದ್ರಿಯವನ್ನು ದಂಡಿಸುವುದಕ್ಕೆ ಉಪವಾಸ ಮಾಡಲಾಗುತ್ತದೆ. ಕೇವಲ ತಮ್ಮ ಪ್ರಶಂಸೆ, ಲಾಭ, ಪರಲೋಕದಲ್ಲಿ ರಾಜ್ಯ ಸಂಪತ್ತು ಮೊದಲಾದವುಗಳ ಪ್ರಾಪ್ತಿಯ ಸಲುವಾಗಿ ಉಪವಾಸವನ್ನು ಮಾಡಲಾಗುವುದಿಲ್ಲ. **ತಮ್ಮ ವಿಷಯಾನುರಾಗವನ್ನು ಕುಗ್ಗಿಸುವ ಸಲುವಾಗಿ, ಶಕ್ತಿವೃದ್ಧಿಸುವ ಸಲುವಾಗಿ ಉಪವಾಸ ಮಾಡಲಾಗುತ್ತದೆ.** ಇಂದ್ರಿಯಗಳಂತೂ ಯಾವಾಗಲೂ ತಿನ್ನುಣ್ಣುವುದರ ಅನೇಕ ಸ್ವಾದ ತೆಗೆದುಕೊಳ್ಳುವುದರಲ್ಲಿಯೇ ತೊಡಗಿರುತ್ತವೆ. ಉಪವಾಸ ಮಾಡುವುದರಿಂದ ಆಹಾರದಲ್ಲಿನ ರಸ-ಲಾಲಸೆ ಮೊದಲಾದವು ನಷ್ಟವಾಗಿ ಹೋಗುತ್ತವೆ. ನಿದ್ರೆಯ ಮೇಲೆ ವಿಜಯ ಸಾಧಿಸಲಾಗುತ್ತದೆ, ಕಾಮವನ್ನು ಕೊಂದು ಹಾಕಲಾಗುತ್ತದೆ. ಈ ಪ್ರಕಾರ ಉಪವಾಸದ ಪ್ರಭಾವವು ಅಧಿಕವಿದೆಯೆಂದು ತಿಳಿದುಕೊಂಡು ಉಪವಾಸ ಮಾಡಬೇಕಾಗುವುದು.

ಈಗ ಉಪವಾಸದ ದಿನವನ್ನು ಹೇಗೆ ಕಳೆಯಬೇಕೆಂಬುದರ ಸೂಚಕವಾಗಿ ಸೂತ್ರ ಹೇಳುತ್ತಾರೆ,-

**ಧರ್ಮಾಮೃತಂ ಸತೃಷ್ಣಃ ಶ್ರವಣಾಭ್ಯಾಂ ಪಿಬತು ಪಾಯಯೇದ್ವಾನ್ಯಾನ್ ।**
**ಜ್ಞಾನಧ್ಯಾನಪರೋ ವಾ ಭವತೂಪವಸನ್ನತಂದ್ರಾಲುಃ ।।೧೦೮।।**

**ಅರ್ಥ :-** ಉಪವಾಸ ಮಾಡುವಂಥ ಗೃಹಸ್ಥನು ಆಲಸ್ಯ ರಹಿತನಾಗುತ್ತ ಜ್ಞಾನದ ಅಭ್ಯಾಸದಲ್ಲಿ ಹಾಗೂ ಧರ್ಮ ಧ್ಯಾನದಲ್ಲಿ ತತ್ಪರನಿರುತ್ತಾನೆ. ಅತ್ಯಂತ ತೃಷ್ಣಾವಂತನಾಗಿ ಕರ್ಣೇಂದ್ರಿಯದ ಮೂಲಕ ಧರ್ಮರೂಪದ ಅಮೃತವನ್ನು ಸ್ವಯಂ ಪಾನ ಮಾಡುತ್ತಾನೆ ಮತ್ತು ಉಳಿದ ಭವ್ಯ ಜೀವರುಗಳಿಗೆ ಧರ್ಮರೂಪ ಅಮೃತದ ಪಾನ ಮಾಡಿಸುತ್ತಾನೆ.

**ಭಾವಾರ್ಥ :-** ಉಪವಾಸದ ದಿವಸ ಸ್ವಯಂ ಧರ್ಮ ಕಥೆ ಹೇಳಬೇಕು ಮತ್ತು ಅನ್ಯ ಧರ್ಮಾತ್ಮರುಗಳಿಗೆ ಧರ್ಮ-ಶ್ರವಣ ಮಾಡಿಸಬೇಕು. **ಜ್ಞಾನದ ಅಭ್ಯಾಸದಲ್ಲಿ ಹಾಗೂ ಧರ್ಮಧ್ಯಾನದಲ್ಲಿ ಲೀನವಾಗಿದ್ದುಕೊಂಡೇ ಉಪವಾಸದ ಸಮಯವನ್ನು ವ್ಯತೀತ ಮಾಡಬೇಕಾಗುವುದು.** ಆಲಸ್ಯ, ನಿದ್ರೆ, ಆರಂಭ ಹಾಗೂ ವಿಕಥೆಯ ಮೂಲಕ ಉಪವಾಸದ ಕಾಲವನ್ನು ವ್ಯತೀತ ಮಾಡಬಾರದು.

ಈಗ ಉಪವಾಸ ಹಾಗೂ ಪ್ರೋಷಧೋಪವಾಸದ ಸ್ವರೂಪವನ್ನು ಸೂತ್ರದ ಮೂಲಕ ಹೇಳುತ್ತಾರೆ,-

**ಚತುರಾಹಾರವಿಸರ್ಜನಮುಪವಾಸಃ ಪ್ರೋಷಧಃ ಸಕೃದ್ಭುಕ್ತಿಃ ।**
**ಸ ಪ್ರೋಷಧೋಪವಾಸೋ ಯದುಪೋಷ್ಯಾರಂಭಮಾಚರತಿ ॥೧೦೯॥**

**ಅರ್ಥ** :- ಅಶನ, ಪಾನ, ಖಾದ್ಯ, ಸ್ವಾದ್ಯ ಇವು ನಾಲ್ಕು ಪ್ರಕಾರದ ಆಹಾರ (ಕವಲಾಹಾರ)ವಿದೆ. ಇವುಗಳ ತ್ಯಾಗ ಮಾಡುವುದು ಅದು ಉಪವಾಸವಿದೆ. ಪಾರಣಾದ ದಿವಸ (ಉಪವಾಸದ ಪೂರ್ವ)ದಲ್ಲಿ ಮತ್ತು ಪಾರಣಾದ ದಿವಸ (ಉಪವಾಸದ ನಂತರ)ದಲ್ಲಿ ಒಂದು ಬಾರಿ ಭೋಜನ ಮಾಡುವುದನ್ನು ಪ್ರೋಷಧವೆಂದು ಹೇಳುತ್ತಾರೆ. ಈ ಪ್ರಕಾರ ಹದಿನಾರು ಪ್ರಹರದವರೆಗೆ ಭೋಜನ ಮೊದಲಾದವುಗಳ ಆರಂಭ ತೊರೆದು ನಂತರ ಭೋಜನ ಮೊದಲಾದ ಆರಂಭದ ಕಾರ್ಯ ಮಾಡುವುದನ್ನು ಪ್ರೋಷಧೋಪವಾಸವೆಂದು ಹೇಳುತ್ತಾರೆ.

ಈಗ ಉಪವಾಸದ ಐದು ಅತಿಚಾರಗಳನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಗ್ರಹಣವಿಸರ್ಗಾಸ್ತರಣಾನ್ಯದೃಷ್ಟಮೃಷ್ಟಾನ್ಯನಾದರಾಸ್ಮರಣೇ ।**
**ಯತ್ಪ್ರೋಷಧೋಪವಾಸೇ ವ್ಯತಿಲಂಘನಪಂಚಕಂ ತದಿದಮ್ ॥೧೧೦॥**

**ಅರ್ಥ** :- ಐದು ಪ್ರೋಷಧೋಪವಾಸದ ಅತಿಚಾರಗಳಿವೆ. ೧) ಕಣ್ಣುಗಳಿಂದ ನೋಡದೆ ಹಾಗೂ ಕೋಮಲ ವಸ್ತ್ರ ಮೊದಲಾದ ಉಪಕರಣಗಳಿಂದ ಶುದ್ಧಮಾಡದೆ ಪೂಜೆ ಮತ್ತು ಸ್ವಾಧ್ಯಾಯದ ಉಪಕರಣ ಗ್ರಹಣ ಮಾಡುವುದು. ೨) ನೋಡದೆ ಶೋಧಿಸದೆ ಪೂಜೆ ಹಾಗೂ ಸ್ವಾಧ್ಯಾಯದ ಉಪಕರಣ ಇಡುವುದು ಮತ್ತು ಶರೀರದ ಅಂಗ ಕೈ-ಕಾಲುಗಳನ್ನು ಹರಡುವುದು. ೩) ನೋಡದೆ-ಶೋಧಿಸದೆಯೇ ಮಲಗುವ ಹಾಸಿಗೆ ಮೊದಲಾದುವನ್ನು ಹಾಸುವುದು. ೪) ಸ್ವಾಧ್ಯಾಯದಲ್ಲಿ ಅನಾದರ ತೋರುವುದು, ಉತ್ಸಾಹ ರಹಿತವಿರುವುದು. ೫) ಉಪವಾಸದ ದಿವಸ ಕ್ರಿಯೆ, ಪಾಠ ಮೊದಲಾದುವನ್ನು ಮಾಡುವುದು ಮರೆತು ಹೋಗುವುದು. ಈ ಪ್ರಕಾರ ಉಪವಾಸದ ಈ ಐದು ಅತಿಚಾರಗಳು ತ್ಯಾಗ ಯೋಗ್ಯವಿವೆ.

ಈಗ ವೈಯ್ಯಾವೃತ್ಯನಾಮದ ಶಿಕ್ಷಾವ್ರತವನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ದಾನಂ ವೈಯಾವೃತ್ಯಂ ಧರ್ಮಾಯ ತಪೋಧನಾಯ ಗುಣನಿಧಯೇ ।**
**ಅನಪೇಕ್ಷಿತೋಪಚಾರೋಪಕ್ರಿಯಮಗೃಹಾಯ ವಿಭವೇನ ॥೧೧೧॥**

**ಅರ್ಥ** :- ಪರಮಾಗಮದಲ್ಲಿ ಆಹಾರ ದಾನವನ್ನೇ ವೈಯಾವೃತ್ಯವೆಂದು ಹೇಳುತ್ತಾರೆ. ಯಾರಿಗೆ ತಪಸ್ಸೇ ಧನವಿದೆ. ಎಂದರೆ ಯಾರು ಇಚ್ಛೆಯ ನಿರೋಧ ಮೊದಲಾದ ತಪಗಳನ್ನೇ ತಮ್ಮ ಅವಿನಾಶಿ ಧನವೆಂದು ಮನ್ನಿಸುತ್ತಾರೆ. ಅವರೇ ತಪೋಧನರಿದ್ದಾರೆ. ತಪವಿಲ್ಲದೆ ಸಮಸ್ತ ಕರ್ಮ ಕಲಂಕ ಮಲರಹಿತ ಆತ್ಮನ ಶುದ್ಧ ಸ್ವಭಾವರೂಪದ ಅವಿನಾಶಿ ಧನವು ಪ್ರಾಪ್ತವಾಗುವುದಿಲ್ಲ, ಯಾರು ರಾಗಾದಿ ಕಷಾಯಮಲವನ್ನು ಸುಟ್ಟು ಬಿಡುವಂಥ ತಪರೂಪದ ಧನವನ್ನು ಪ್ರಾಪ್ತ ಮಾಡಿಕೊಂಡಿದ್ದಾರೆ, ಮತ್ತು ಸಂಸಾರದಲ್ಲಿ ನಷ್ಟ ಮಾಡುವಂಥ ಜಡ, ಅಚೇತನ, ವಿನಾಶಶೀಲವಿರುವ ಚಿನ್ನ ಮೊದಲಾದ ಧನದ ತ್ಯಾಗ ಮಾಡಿದ್ದಾರೆ. ಅಂಥ ತಪಸ್ಸಿನ ನಿಧಿ, ರತ್ನತ್ರಯರೂಪ ಗುಣಗಳ ನಿಧಾನ, **ಪರಮ ವೀತರಾಗ ದಿಗಂಬರ ಯತಿಗಳಿಗೆ ದಾತಾರ ಮತ್ತು ಪಾತ್ರದ ಧರ್ಮಪ್ರವೃತ್ತಿಯನ್ನು ನಡೆಯಿಸುವ ಸಲುವಾಗಿ ಆಹಾರ ದಾನ ಕೊಡುವುದು ಅದು ವೀತರಾಗೀ ಮುನಿಗಳ ವೈಯಾವೃತ್ಯವಿದೆ.**

**ಮುನಿಗಳು ದಾನಕ್ಕೆ ಪಾತ್ರರಿದ್ದಾರೆ.** ದಿಗಂಬರ ಯತಿಗಳು ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ ಗುಣಗಳ ನಿಧಾನರಿದ್ದಾರೆ ಮತ್ತು ಅವರಿಗೆ ಅಂತರಂಗ-ಬಹಿರಂಗ ಪರಿಗ್ರಹಗಳಿಲ್ಲ, ಅವರು ಮಠ, ಮನೆ, ಉಪವನ,

ಆಶ್ರಮ ಮೊದಲಾದವುಗಳಲ್ಲಿ ವಾಸಿಸುವುದಿಲ್ಲ, ಆದರೆ ಏಕಾಕೀ ಅಥವಾ ಗುರುಜನರ ಚರಣಗಳ ಜತೆಯಲ್ಲಿ ಒಮ್ಮೆ ವನದಲ್ಲಿ, ಒಮ್ಮೆ ಪರ್ವತದ ನಿರ್ಜನ ಗುಹೆಯಲ್ಲಿ, ಒಮ್ಮೆ ಘೋರ ಕಾಂತಾರದಲ್ಲಿ, ಒಮ್ಮೆ ನದಿಯ ದಡದಲ್ಲಿ ಅವರದು ನಿಯಮರಹಿತ (ನಿಶ್ಚಿತವಿಲ್ಲದ) ನಿತ್ಯವಿಹಾರವಿರುತ್ತದೆ. **ಅಸಂಯಮೀ ಗೃಹಸ್ಥರೊಡನೆ ಅವರ ಮೇಳವಾಗುವುದಿಲ್ಲ.** ಆತ್ಮನ ವಿಶುದ್ಧತೆಯ ರೂಪದ ಪರಮ ವೀತರಾಗತೆಯನ್ನು ಸಾಧಿಸುವಂಥ, ಲೌಕಿಕ ಜನರ ಮೂಲಕ ಮಾಡಲಾದ ತಮ್ಮ ಪೂಜೆ, ಪ್ರಶಂಸೆ, ಸ್ತವನಗಳನ್ನು ಬಯಸದಂಥ, ಪರಲೋಕದಲ್ಲಿ ದೇವಗತಿಯ ಭೋಗಗಳನ್ನು ಹಾಗೂ ಇಂದ್ರಪದ, ಅಹಮಿಂದ್ರ ಪದದ ಐಶ್ವರ್ಯವನ್ನು ರಾಗರೂಪ ಕೆಂಡಗಳ ಸಮಾನ ತಪ್ತ ಮಹಾನ ದಾಹವನ್ನುತ್ಪನ್ನ ಮಾಡುವಂಥ ಮತ್ತು ತೃಷ್ಣೆಯನ್ನು ಹೆಚ್ಚಿಸುವಂಥದ್ದೆಂದು ತಿಳಿದುಕೊಂಡು, ಪರಮ ಅತೀಂದ್ರಿಯ ಆಕುಲತೆಯಿಲ್ಲದ ಆತ್ಮಿಕ ಸುಖವನ್ನು ಸುಖವೆಂದು ತಿಳಿದುಕೊಳ್ಳುತ್ತ ದೇಹ ಮೊದಲಾದುವಲ್ಲಿ ಮಮತೆಯಿಲ್ಲದವರಾಗಿ ಆತ್ಮನ ಕಾರ್ಯವನ್ನು ಸಿದ್ಧಮಾಡುತ್ತಾರೆ. **ಇಂಥ ಸಾಧು ಜನರ ವೈಯಾವೃತ್ಯದ ಪ್ರಾಪ್ತಿಯು ಅನಂತ ಕಾಲದಲ್ಲಿ ದುರ್ಲಭವಿದೆ.**

ದಿಗಂಬರ ಸಾಧುಗಳು ಈ ಶರೀರದಿಂದ ಅತ್ಯಂತ ನಿರ್ಮಮತ್ವರಾಗಿದ್ದರೂ ಕೂಡ ಈ ಶರೀರವನ್ನು ರತ್ನತ್ರಯದ ಸಹಕಾರೀ ಕಾರಣವಿದೆಯೆಂದು ತಿಳಿದುಕೊಂಡು ಸರಸ - ನಿರಸ, ಮೃದು - ಕಠೋರ ಆಹಾರ ಸ್ವೀಕರಿಸಿ, ರತ್ನತ್ರಯದ ಸಾಧನೆ ಮಾಡುತ್ತ, ಧರ್ಮದ ಸಲುವಾಗಿ, ಕರ್ಮಗಳ ನಾಶದ ಸಲುವಾಗಿ ಈ ಕೃತಘ್ನ ದೇಹದ ರಕ್ಷಣೆ ಮಾಡುತ್ತಾರೆ.

ಅವರು ವಿಚಾರ ಮಾಡುವುದೇನೆಂದರೆ ಈ ಶರೀರವು ಅಸಮಯದಲ್ಲಿ ನಷ್ಟವಾಗಿ ಹೋದರೆ ಮರಣ ಹೊಂದಿ ದೇವ ಮೊದಲಾದ ಪರ್ಯಾಯದಲ್ಲಿ ಅಸಂಯಮಿಯಾಗಿ ಉತ್ಪನ್ನನಾಗುವೆನು. ಅಲ್ಲಿ ಅಸಂಖ್ಯಾತ ಕಾಲದವರೆಗೆ ಅಸಂಯಮಿಯಾಗಿರುತ್ತ ಕರ್ಮದ ಬಂಧ ಮಾಡಿಕೊಳ್ಳುವೆನು. ಆದುದರಿಂದ ಆಹಾರ ಮೊದಲಾದವುಗಳ ತ್ಯಾಗ ಮಾಡಿ ಈ ಮನುಷ್ಯ ಪರ್ಯಾಯದ ಶರೀರವನ್ನು ಸಾಯಿಸಿ ಬಿಟ್ಟರೂ ಕರ್ಮಮಯವಾದ ಕಾರ್ಮಾಣ ಶರೀರವಂತೂ ಸಾಯಲಾರದು. ಈ ಶರೀರವನ್ನು ಸಾಯಿಸಿಬಿಟ್ಟರೆ ಬೇರೆ ನವೀನ ಶರೀರ ಧಾರಣ ಮಾಡಿ ಬಿಡುವೆನು. ಆದುದರಿಂದ ಆ ಸಮಸ್ತ ಶರೀರಗಳನ್ನು ಉತ್ಪನ್ನ ಮಾಡುವ ಬೀಜವೆಂದರೆ ಕಾರ್ಮಾಣ ಶರೀರವಿದೆ ಅದನ್ನು ಸಾಯಿಸಿ ಬಿಡುವ ನಷ್ಟ ಮಾಡುವ ಯತ್ನ ಮಾಡುತ್ತೇನೆ.

ಕಷಾಯಗಳನ್ನು ಜಯಿಸಿ, ವಿಷಯಗಳ ನಿಗ್ರಹ ಮಾಡಿ, ನಲವತ್ತಾರು ದೋಷಗಳನ್ನು ನಿವಾರಿಸುತ್ತ, ಮೂವತ್ತೆರಡು ಅಂತರಾಯಗಳಿಂದರಹಿತ, ಹದಿನಾಲ್ಕು ಮಲಗಳ ತ್ಯಾಗ ಮಾಡಿ, ಅವರ ನಿಮಿತ್ತದಿಂದ ಮಾಡಲಾಗಿರದಂಥ ಶುದ್ಧ ಭೋಜನದ ಯೋಗ್ಯತೆಯು ದೊರಕಿದರೆ ಅರ್ಧ ಹೊಟ್ಟೆಯನ್ನಂತೂ ಆಹಾರದಿಂದ ತುಂಬುತ್ತಾರೆ, ಕಾಲು ಹೊಟ್ಟೆಯನ್ನು ನೀರಿನಿಂದ ತುಂಬುತ್ತಾರೆ. ಕಾಲು ಭಾಗವನ್ನು ಧ್ಯಾನ-ಅಧ್ಯಯನ-ಕಾಯೋತ್ಸರ್ಗ ಮೊದಲಾದವುಗಳಲ್ಲಿ ಸುಖಪೂರ್ವಕ ಪ್ರವರ್ತನೆ ಮಾಡುವ ಸಲುವಾಗಿ ಬರಿದಾಗಿಡುತ್ತಾರೆ. ಆಹ್ವಾನಪೂರ್ವಕ ಕರೆದ ಮೇಲೆ ಹೋಗುವುದಿಲ್ಲ, ಯಾಚನೆ ಮಾಡುವುದಿಲ್ಲ, ಕೈ ಮೊದಲಾದವುಗಳಿಂದ ಸಂಕೇತ ಮಾಡುವುದಿಲ್ಲ, ಇಂಥ ಸಾಧುಗಳಿಗೆ ಆಹಾರ ಮೊದಲಾದವುಗಳ ದಾನ ಕೊಡುವುದು ಅದುವೇ ವೈಯಾವೃತ್ಯವಿದೆ.

ದಾನವು ಅನಪೇಕ್ಷಿತ ಎಂದರೆ ಪ್ರತಿಫಲದಲ್ಲಿ ಇವರೂ ನಮಗೆ ಏನಾದರೂ ಉಪಕಾರ ಮಾಡಬಹುದೆಂಬ ಪ್ರತ್ಯುಪಕಾರದ ಭಾವನೆಯಿಂದ ರಹಿತ, ಉಪಕ್ರಿಯ ಎಂದರೆ ಇವರು ಪ್ರಸನ್ನರಾಗಿ ನಮಗೆ ಯಾವುದಾದರೂ ವಿದ್ಯೆ, ಮಂತ್ರ, ಔಷಧ ಮೊದಲಾದುವನ್ನು ಕೊಡಬಹುದು, ಮುನೀಶ್ವರರಿಗೆ ಆಹಾರ ಕೊಡುವುದರಿಂದ ದಾತೃವಿನ ರೂಪದಿಂದ ನಗರದಲ್ಲಿ ನನ್ನ ಪ್ರಸಿದ್ಧಿಯಾಗಿ ಹೋಗುವುದು, ರಾಜ್ಯ ಮನ್ನಣೆ ದೊರಕುವುದು, ನನ್ನ ಮನೆಯು ಧನ-ವೈಭವದಿಂದ ತುಂಬಿ ಹೋಗುವುದು; ಏಕೆಂದರೆ ಮೊದಲು ಪಂಚಾಶ್ಚರ್ಯವಾಗಿದೆಯೆಂದ ಮೇಲೆ ನನಗೂ ಲಾಭವಾಗುವುದೆಂಬ ವಿಕಲ್ಪ ಅಥವಾ ಇಚ್ಛೆಯಿಂದ ರಹಿತನಾಗಿ, ಕೇವಲ ರತ್ನತ್ರಯದ ಧಾರಕರ ಭಕ್ತಿಯಿಂದ ತಮ್ಮನ್ನು ಕೃತಾರ್ಥರೆಂದು ಮನ್ನಿಸಿ, ತಮ್ಮ ಮನ-ವಚನ-ಕಾಯಗಳನ್ನು ಹಾಗೂ ಗೃಹಸ್ಥ ಅವಸ್ಥೆಯ ಪ್ರಾಪ್ತಿಯನ್ನು ಕೃತಾರ್ಥವೆಂದು ಮನ್ನಿಸಿಕೊಂಡು ಆಹಾರ ದಾನ ಕೊಡುತ್ತಾನೆ, ಆನಂದದೊಡನೆ ತನ್ನನ್ನು ಕೃತಕೃತ್ಯನೆಂದು ಮನ್ನಿಸಿಕೊಳ್ಳುತ್ತಾನೆ, ಇದುವೇ ವೈಯಾವೃತ್ಯವಿದೆ.

ಈಗ ಸಂಯಮೀಜನರ ವೈಯಾವೃತ್ಯದ ಕಾರ್ಯಗಳು ಇನ್ನೂ ಇದ್ದು ಅವನ್ನು ತಿಳಿಸಿಕೊಡುವ ಸೂತ್ರ ಹೇಳುತ್ತಾರೆ,-

**ವ್ಯಾಪತ್ತಿವ್ಯಪನೋದಃ ಪದಯೋಃ ಸಂಬಾಹನಂ ಚ ಗುಣರಾಗಾತ್ ।**
**ವೈಯಾವೃತ್ಯಂ ಯಾವಾನುಪಗ್ರಹೋಽನ್ಯೋಽಪಿ ಸಂಯಮಿನಾಮ್ ॥೧೧೨॥**

**ಅರ್ಥ :-** ಸಂಯಮಿ ಜನರ ಮೇಲೆ ಬಂದಿರುವ ಅನೇಕ ಪ್ರಕಾರದ ಆಪತ್ತಿಗಳನ್ನು ದೂರ ಮಾಡಿ ಬಿಡುವುದು. ಅವರ ಚರಣ ಮರ್ದನ ಮಾಡುವುದು ಹಾಗೂ ಅವರ ಗುಣಗಳಲ್ಲಿ ಅನುರಾಗ ಮಾಡಿ ಅವಶ್ಯಕತೆಗನುಸರಿಸಿ ಕಾರ್ಯ ಮಾಡಿಕೊಡುವುದು ಅದು ವೈಯಾವೃತ್ಯವಿದೆ.

**ಭಾವಾರ್ಥ :-** ಸಾಧುಗಳ ಮೇಲೆ ಯಾವನೋ ದೇವ, ಮನುಷ್ಯ, ತಿರ್ಯಂಚ ಅಥವಾ ಅಚೇತನದ ಮೂಲಕ ಉಪಸರ್ಗವಾಗಿದ್ದರೆ ಅದನ್ನು ತಮ್ಮ ಶಕ್ತಿಗನುಸರಿಸಿ ದೂರ ಮಾಡಿ ಬಿಡಬೇಕಾಗುವುದು. ಚೋರ, ಭಿಲ್ಲ, ದುಷ್ಟ ಮೊದಲಾದವರಿಂದ ಮಾರ್ಗದಲ್ಲಿ ಎಲ್ಲಾದರೂ ತೊಂದರೆಯಾಗಿದ್ದರೆ ಅದರಿಂದ ಆ ಮುನಿರಾಜರ ಪರಿಣಾಮವು ವ್ಯಥಿತವಾಗಿದ್ದರೆ ಅವರಿಗೆ ಧೈರ್ಯಧಾರಣ ಮಾಡಿಸುವುದು, ದಾರಿಯಲ್ಲಿ ನಡೆಯುವುದರಿಂದ ಬಳಲಿ ಹೋಗಿದ್ದರೆ ಅವರ ಕಾಲುಗಳನ್ನೊತ್ತುವುದು, ರೋಗಿಯಾಗಿದ್ದರೆ ಅವರ ಸಂಯಮವು ಮಲಿನವಾಗದಂತೆ ಯತ್ನಾಚಾರದಿಂದ ಆಸನ, ಶಯ್ಯೆ, ವಸತಿಕೆ-ನಿವಾಸ ಸರಿಪಡಿಸುವುದು, ಯತ್ನಾಚಾರಪೂರ್ವಕವೇ ಏಳಿಸುವುದು, ಕೂಡ್ರಿಸುವುದು, ಮಲಗಿಸುವುದು, ನೀಹಾರ ಮಾಡಿಸುವುದು, ಒಂದು ವೇಳೆ ಅಬುದ್ಧಿಪೂರ್ವಕ ಮಲ-ಮೂತ್ರಾದಿಗಳು ಅಯೋಗ್ಯ ಸ್ಥಾನದಲ್ಲಿ ಅಥವಾ ವಸತಿಕೆಯಲ್ಲಿ ಆಗಿ ಹೋಗಿದ್ದರೆ ಯತ್ನಪೂರ್ವಕವಾಗಿಯೇ ಎತ್ತಿ ಉಚಿತ ಸ್ಥಾನದಲ್ಲಿ ಎಸೆದು ಬಿಡುವುದು, ಕಫ, ಮೂಗಿನ ಮಲ ಮೊದಲಾದುವನ್ನು ಒರೆಸುವುದು, ಎತ್ತಿ ಅವಿರುದ್ಧವಾದ ಸ್ಥಾನದಲ್ಲಿ ಎಸೆಯುವುದು, ಆಹಾರ, ಔಷಧ ಮೊದಲಾದವು ಸಂಯಮಿಗಳಿಗೆ ಕೊಡಲು ಯೋಗ್ಯವಾದಂಥವು ಒಂದು ವೇಳೆ ತಮ್ಮ ಹತ್ತಿರವಿದ್ದರೆ ಅವನ್ನು ಉಚಿತ ಸಮಯದಲ್ಲಿ ಕೊಟ್ಟು ಅವರ ವೇದನೆಯನ್ನು ದೂರ ಮಾಡಿ ಬಿಡುವುದು.

ಕಾಲಕ್ಕೆ ಯೋಗ್ಯ ಬಾಧೆಯಿಲ್ಲದ ವಸ್ತುವನ್ನು ಕೊಡುವುದು, ಒಂದು ವೇಳೆ ವೇದನೆಯಿಂದ ಚಿತ್ತವು ಚಂಚಲವಾಗಿ ಹೋಗಿದ್ದರೆ ಉಪದೇಶ ಕೊಟ್ಟು ಚಿತ್ತವನ್ನು ತಡೆಯುವುದು, ಧರ್ಮ ಚರ್ಚೆ ಮಾಡುವುದು, ಅನುಕೂಲವಾಗಿ ಪ್ರವರ್ತಿಸುವುದು, ಗುಣಗಳ ಸ್ತುತಿ ಮಾಡುವುದು, ಹೀಗೆ ಸಂಯಮಿಗಳ ಗುಣಗಳಲ್ಲಿ ಅನುರಾಗ ಮಾಡಿ ಎಷ್ಟು ಉಪಕಾರ ಮಾಡುವುದಿದೆ ಅದೆಲ್ಲವೂ ವೈಯಾವೃತ್ಯವಿದೆ.

ಈಗ ವೈಯಾವೃತ್ಯದಲ್ಲಿ ಆಹಾರದಾನವು ಮುಖ್ಯವಿದ್ದು ಅದನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ನವಪುಣ್ಯೈಃ ಪ್ರತಿಪತ್ತಿಃ ಸಪ್ತಗುಣಸಮಾಹಿತೇನ ಶುದ್ಧೇನ ।**
**ಅಪಸೂನಾರಂಭಾಣಾ-ಮಾರ್ಯಾಣಾಮಿಷ್ಯತೇ ದಾನಮ್ ॥೧೧೩॥**

**ಅರ್ಥ :-** ದಾತಾರನು ಸಪ್ತಗುಣ ಸಹಿತ, ನವಧಾ ಭಕ್ತಿಯುಕ್ತನಾಗಿ, ಏಕಾಂತವಿಲ್ಲದ, ಆರಂಭವಿಲ್ಲದ, ಸಮ್ಯಗ್ದರ್ಶನಧಾರಕ ಮುನಿಗಳಿಗೆ ನವಪುಣ್ಯ ಪರಿಣಾಮಗಳೊಡನೆ ಎಂದರೆ ಆದರಪೂರ್ವಕ ಗೌರವ ಸಹಿತ ಅಂಗೀಕಾರ ಮಾಡುತ್ತಾರೆ ಅದನ್ನು ದಾನವೆಂದು ಹೇಳುತ್ತಾರೆ.

**ಭಾವಾರ್ಥ :-** ಮೂರು ಪ್ರಕಾರದ ಪಾತ್ರಗಳಿಗೆ ದಾನ ಕೊಡಬೇಕಾಗುವದು. ಅವರಲ್ಲಿ ದಿಗಂಬರ ಸಾಧುಗಳು ಉತ್ತಮಪಾತ್ರರಿದ್ದಾರೆ, ಅವರು ಪಂಚಸೂನಗಳಿಂದ ಎಂದರೆ ಬೀಸುವ, ಕುಟ್ಟುವ, ಒಲೆ ಉರಿಸುವ, ಕಸ ಗುಡಿಸುವ, ನೀರು ತುಂಬವ ಕ್ರಿಯೆಗಳಿಂದ ರಹಿತರಿರುತ್ತಾರೆ; ಮನೆ, ಮನೆಗೆಲಸ, ಆಜೀವಿಕೆ ಮೊದಲಾದುವಿಂದ ಹಿಡಿದು ಸಮಸ್ತ ಆರಂಭದಿಂದ ರಹಿತರಿದ್ದಾರೆ; ಮತ್ತು ಸಮ್ಯಗ್ದರ್ಶನದಿಂದ ಸಹಿತರೇ ಇರುತ್ತಾರೆ. ಮಧ್ಯಮಪಾತ್ರನು ಸಮ್ಯಗ್ದರ್ಶನ ಸಹಿತ ವ್ರತ ಧಾರಕನಾದ ಶ್ರಾವಕನಿದ್ದಾನೆ. ಜಘನ್ಯ ಪಾತ್ರನು ವ್ರತರಹಿತ, ಆದರೆ ಸಮ್ಯಗ್ದರ್ಶನದಿಂದ ಯುಕ್ತನಾದ ಗೃಹಸ್ಥನಿದ್ದಾನೆ.

**ದಾತಾರನ ಏಳು ಗುಣಗಳು :-** ಉತ್ತಮ ಪಾತ್ರಾದಿಕರಿಗೆ ದಾನ ಕೊಡುವಂಥ ದಾತಾರನಲ್ಲಿ ಈ ಏಳು ಗುಣಗಳು ಇರಬೇಕಾಗುವವು.

೧) ದಾನ ಕೊಟ್ಟು ಇಹಲೋಕ ಸಂಬಂಧದ ವಿಖ್ಯಾತತೆ, ಲೋಕ ಮನ್ನಣೆ, ರಾಜ ಮನ್ನಣೆ, ಧನ-ಧಾನ್ಯಾದಿಗಳ ಅಭಿವೃದ್ಧಿ, ಯಶೋವಂತತೆ ಮೊದಲಾದ ಇಹಲೋಕಕ್ಕೆ ಸಂಬಂಧಿಸಿದ ಫಲಗಳನ್ನು ಬಯಸದಿರುವುದು.

೨) ದಾತಾರನಿಗೆ ಕ್ರೋಧವು ಬರಕೂಡದು. ತೆಗೆದುಕೊಳ್ಳುವವರಂತೂ ಸಾಕಷ್ಟು ಇದ್ದಾರೆ. ನಾನು ಯಾರು-ಯಾರಿಗೆ ಕೊಡಲಿ ಎಂದು ಕ್ರೋಧ ಮಾಡದೆ ಮುನಿ-ಶ್ರಾವಕ ಮೊದಲಾದವರಿಗೆ ದಾನ ಕೊಡುವುದು.

೩) ಕಪಟ ಸಹಿತವಾಗಿ ದಾನ ಕೊಡಕೂಡದು. ಹೇಳುವುದು ಒಂದು, ತೋರಿಸುವುದು ಒಂದು, ಮಾಡುವುದು ಒಂದು. ಜನರಿಗೆ ಭಕ್ತಿ ತೋರಿಸುವಲ್ಲಿ ಸಂಕ್ಲೇಶಿತನಾಗುವುದು, ಇಂಥ ಕಪಟದಿಂದ ರಹಿತರಾಗಿ ದಾನ ಕೊಡುವುದು.

೪) ಅನ್ಯ ದಾತಾರನಲ್ಲಿ ಈರ್ಷಾರಹಿತರಾಗಿ ದಾನ ಕೊಡಬೇಕಾಗುವುದು, ಅವನೇನು ಕೊಟ್ಟಿದ್ದಾನೆ? ಅವನ ಯಶಸ್ಸು ಕಡಿಮೆಯಾಗುವಂತೆ ನಾನು ಇಂಥ ದಾನ ಕೊಡುತ್ತಿದ್ದೇನೆಂದು ಈರ್ಷೆಯ ಭಾವದಿಂದ ದಾನವನ್ನು ಮಾಡಬಾರದು.

೫) ದಾನವಿತ್ತು ವಿಷಾದಪಟ್ಟುಕೊಳ್ಳಬಾರದು. ನಾನೇನು ಮಾಡಲಿ ? ಎಲ್ಲರಿಗಿಂತ ದೊಡ್ಡವನೆನಿಸಿಕೊಳ್ಳುತ್ತಿದ್ದೇನೆ, ನಾನು ದಾನ ಕೊಡದಿದ್ದರೆ ನನ್ನ ಶ್ರೇಷ್ಠತೆಯು ಹೊರಟು ಹೋಗುವುದೆಂದು ವಿಷಾದಮನಸ್ಕರಾಗಿ ದಾನವನ್ನು ಕೊಡಬಾರದು.

೬) ಪಾತ್ರರುಗಳ ಜತೆ ಒಂದಾಗಿ ಹೋದರೆ ಅಥವಾ ನಿರ್ವಿಘ್ನವಾಗಿ ದಾನವಾದರೆ ತಮಗೆ ಅಪೂರ್ವನಿಧಿ ಯು ಪ್ರಾಪ್ತವಾಗಿ ಹೋದಂತೆ ಆನಂದ ಮನ್ನಿಸುವುದು ಅದು ಮುದಿತಭಾವಪೂರ್ವಕ ದಾನಕೊಡುವುದಿದೆ.

೭) ದಾನ ಕೊಡುವುದರ ಮದ ಅಥವಾ ಅಹಂಕಾರ ಮಾಡದಿರುವುದು ಅದು ನಿರಹಂಕಾರ ನಾಮದ ಗುಣವಿದೆ.

ಈ ಪ್ರಕಾರ ಪಾತ್ರದಾನ ಕೊಡುವಂಥ ದಾತಾರರು ಈ ಏಳು ಗುಣಗಳಿಂದ ಯುಕ್ತರಿರಬೇಕಾಗುವುದು.

**ನವಧಾಭಕ್ತಿ :-** ಪಾತ್ರರಿಗೆ ದಾನ ಕೊಡುವಂಥವರು ಮುನಿ ಹಾಗೂ ಶ್ರಾವಕರ ಪದವು ಹೇಗೆ ಇದೆ ಅದಕ್ಕೆ ಅನುಸರಿಸಿ ನವಧಾಭಕ್ತಿಯಿಂದ ದಾನಕೊಡಬೇಕಾಗುವುದು.

೧) ಸಂಗ್ರಹ, ೨) ಉಚ್ಚಾಸನ, ೩) ಪಾದೋದಕ, ೪) ಅರ್ಚನೆ, ೫) ಪ್ರಣಾಮ, ೬) ಮನಶುದ್ಧಿ, ೭) ವಚನಶುದ್ಧಿ, ೮) ಕಾಯಶುದ್ಧಿ, ೯) ಭೋಜನಶುದ್ಧಿಯೆಂದು ಇವು ಒಂಭತ್ತು ಪ್ರಕಾರದ ಭಕ್ತಿಯ ಹೆಸರುಗಳು.

**೧) ಮುನಿರಾಜರಿಗೆ ಹಾಗೂ ಕ್ಷುಲ್ಲಕರಿಗೆ** ''ಓ ಸ್ವಾಮಿ ! ತಿಷ್ಠ, ತಿಷ್ಠ, ತಿಷ್ಠ'' ಎಂದರೆ ಓ ಸ್ವಾಮಿ! ದಯಮಾಡಿ ನಿಂತುಕೊಳ್ಳಿರಿ, ನಿಂತುಕೊಳ್ಳಿರೆಂದು ಮೂರು ಬಾರಿ ಹೇಳಬೇಕಾಗುವುದು. ಅವರುಗಳ ಅತ್ಯಂತ ಪೂಜ್ಯತೆಯನ್ನು ನೋಡಿ ಯಾವನ ಚಿತ್ತದಲ್ಲಿ ಅವರುಗಳ ಕುರಿತು ಅತಿಶಯ ಅನುರಾಗವಿರುವುದು ಅವನು ಮೂರು ಬಾರಿ ಆದರಪೂರ್ವಖವಾಗಿ ಹೇಳಬಹುದಾಗಿದೆ. ಅನ್ಯ ಶ್ರಾವಕ ಮೊದಲಾದ ಯೋಗ್ಯ ಪಾತ್ರರುಗಳೂ ಮನೆಗೆ ಬಂದರೆ ಬನ್ನಿರಿ, ಆಗಮಿಸಿರಿ, ವಿರಾಜಮಾನರಾಗಿರಿ ಇವೇ ಮೊದಲಾದ ಆದರದ ವಚನಗಳನ್ನು ಹೇಳುವುದು ಅದುಸಂಗ್ರಹ ಅಥವಾ ಪ್ರತಿಗ್ರಹವಿದೆ. ೨) ಕರೆದು ಉಚ್ಚಸ್ಥಾನದ ಮೇಲೆ ಆಸನ ಕೊಡುವುದು. ೩) ಪ್ರಾಸುಕ ಪ್ರಾಮಾಣಿಕ ಜಲದಿಂದ ಕಾಲ ತೊಳೆಯುವುದು, ತೊಳೆಸುವುದು. ೪) ಎಂಥ ಸಮಯ ಅಂಥ ಪಾತ್ರವಿದ್ದು ಅವನಿಗೆ ಯೋಗ್ಯ ಸ್ತವನ ಪೂಜ್ಯತೆಯ ವಚನ ಹೇಳುವುದು. ೫) ಮುನಿ-ಶ್ರಾವಕರ ಯೋಗ್ಯತೆಗೆ ಅನುಸರಿಸಿ ನಮಸ್ಕಾರ ಮೊದಲಾದುವನ್ನು ಮಾಡುವುದು. ೬) ಮನದ ಶುದ್ಧತೆ ಮಾಡುವುದು ಹಾಗೂ ಹೇಳುವುದು. ೭) ವಚನದ ಶುದ್ಧತೆ ಮಾಡುವುದು,

ಹೇಳುವುದು, ಅಯೋಗ್ಯ ವಚನ ಆಡಬಾರದು. ೮) ಕಾಯದ ಶುದ್ಧಿ ಮಾಡುವುದು ಹಾಗೂ ಹೇಳುವುದು, ಯತ್ನಾಚಾರದೊಡನೆ ನಡೆವುದು, ಏಳುವುದು ಇತ್ಯಾದಿ, ೯) ಭೋಜನ ಶುದ್ಧಿ ಮಾಡುವುದು ಮತ್ತು ಹೇಳುವುದು, ಪಾತ್ರ ಯೋಗ್ಯ ಶುದ್ಧ ಭೋಜನ ಕೊಡುವುದು. ಈ ಪ್ರಕಾರ ಜಿನಸೂತ್ರದ ಅನುಸಾರ ಪಾತ್ರರಿಗೆ ದೇಶ ಕಾಲ ನೋಡಿ ಯೋಗ್ಯ ಆಹಾರ ಕೊಡಬೇಕಾಗುವುದು ಮತ್ತು ಮನಸ್ಸಿನಲ್ಲಿ ಹರ್ಷವಿರಬೇಕಾಗುವುದು. ಪಾತ್ರರ ಗುಣಗಳಲ್ಲಿ ಹರ್ಷ-ಅನುರಾಗವಿಲ್ಲದೆ ದಾನ ಕೊಡುವುದು ನಿಷ್ಫಲವಿದೆ. ಧರ್ಮವು ಪ್ರಿಯವಿರುವವನಿಗೆ ಧರ್ಮಾತ್ಮರಲ್ಲಿ ಹಾಗೂ ಅವರ ಗುಣಗಳಲ್ಲಿ ಅನುರಾಗವು ಇದ್ದೇ ಇರುತ್ತದೆಂಬುದು ನಿಯಮವಿದೆ.

**ಮುನಿರಾಜರಂತೂ ನವಧಾಭಕ್ತಿ ನೋಡಿಯೇ ಜಿನಧರ್ಮಿಯ ಪರೀಕ್ಷೆ ಮಾಡುತ್ತಾರೆ.** ಯಾರ ಹೃದಯದಲ್ಲಿ ನವಧಾ ಭಕ್ತಿಯಿಲ್ಲ ಅವರ ಹೃದಯದಲ್ಲಿ ಧರ್ಮವು ಕೂಡ ಇಲ್ಲ. ಧರ್ಮರಹಿತರಲ್ಲಿ ಮುನಿರಾಜರುಗಳು ಆಹಾರವನ್ನು ಕೂಡ ಸ್ವೀಕರಿಸುವುದಿಲ್ಲ. ಪಾತ್ರ ಗೃಹಸ್ಥ ಮೊದಲಾದ ಅನ್ಯ ಧರ್ಮಾತ್ಮರು ಕೂಡ ಆದರವಿಲ್ಲದೆ, ಲೋಭಿಯಾಗಿ, ಧರ್ಮದ ನಿರಾದರ ಮಾಡಿಸಿ, ದಾನ ಗ್ರಹಣ ಮಾಡುವ ವೃತ್ತಿಯಿಂದ ಭೋಜನಾದಿಗಳನ್ನೆಂದೂ ಮಾಡುವುದಿಲ್ಲ. ದೀನತೆಯಿಲ್ಲದೆ ಪರಮ ಸಂತೋಷಧಾರಣ ಮಾಡುವುದರಲ್ಲಿಯೇ ಜೈನತ್ವವಿದೆ.

ದಾತಾರನು ತನಗೆ ರಾಗ-ದ್ವೇಷ ಹಾಗೂ ಮದವು ವೃದ್ಧಿಸದಂಥ ಆಹಾರ, ಔಷಧ, ಶಾಸ್ತ್ರ ವಸತಿಕೆ ಮೊದಲಾದ ವಸ್ತುಗಳ ದಾನ ಕೊಡಬೇಕಾಗುವುದು. ಮೋಹ, ಕಾಮ, ಆಲಸ್ಯ, ಚಿಂತೆ, ಅಸಂಯಮ, ಭಯ, ದುಃಖ, ಅಭಿಮಾನವುಂಟಾಗುವಂಥ ವಸ್ತುಗಳನ್ನು ದಾನ ಕೊಡುವುದು ಯೋಗ್ಯವಿಲ್ಲ. ಯಾವ ವಸ್ತುವಿನ ದಾನ ಕೊಡುವುದರಿಂದ ಸ್ವಾಧ್ಯಾಯ, ಧ್ಯಾನ, ತಪಸ್ಸು, ಸಂತೋಷಗಳ ವೃದ್ಧಿಯಾಗಿ ಹೋಗುವುದು ಅಂಥ ವಸ್ತುವನ್ನು ದಾನ ಕೊಡುವುದು ಯೋಗ್ಯವಿದೆ. ಯಾವುದರಿಂದ ಪಾತ್ರನ ದುಃಖವು ಹೊರಟು ಹೋಗುವುದು, ರೋಗವು ನಷ್ಟವಾಗಿ ಹೋಗುವುದು, ಪರಿಣಾಮದ ಸಂಕ್ಲೇಶವು ಇಲ್ಲದಾಗುವುದು ಅಂಥ ವಸ್ತುವಿನ ದಾನ ಕೊಡುವುದು ಯೋಗ್ಯವಿದೆ.

ದಾನದಲ್ಲಿ ದಾತೃ, ದೇಯ, ಪಾತ್ರ, ವಿಧಿ ಮತ್ತು ಫಲವೆಂಬ ಐದು ಮಾತುಗಳನ್ನು ಇಲ್ಲಿ ವಿಶೇಷವಾಗಿ ತಿಳಿದುಕೊಳ್ಳಬೇಕು.

೧) ದಾತಾರನ **ವಿಶೇಷತೆ**ಯೇನೆಂದರೆ ಅವನು ಏಳು ಗುಣಗಳ ಧಾರಕನಾಗಿರಬೇಕಾಗುವುದು. ಧರ್ಮದಲ್ಲಿ ತತ್ಪರರಿರುವ ಪಾತ್ರಗಳ ಗುಣಗಳ ಸೇವನೆಯಲ್ಲಿ ಲೀನನಾಗಿ ಪಾತ್ರರನ್ನು ಸ್ವೀಕಾರ ಮಾಡಬೇಕು, ಪ್ರಮಾದರಹಿತ, ಜ್ಞಾನ ಸಹಿತ, ಶಾಂತ ಪರಿಣಾಮಿಯಾಗಿ ಪಾತ್ರನ ಭಕ್ತಿಯಲ್ಲಿ ಪ್ರವರ್ತಿಸುವುದು ಅದು ದಾತಾರನ **ಭಕ್ತಿ** ಗುಣವಿದೆ.

೨) ದಾನ ಕೊಡುವಲ್ಲಿ ಅತ್ಯಂತ ಆಸಕ್ತನಾಗಿ ಪಾತ್ರದ ಪ್ರಾಪ್ತಿಯನ್ನು ಒಂದು ಶ್ರೇಷ್ಠ ನಿಧಿಯ ಲಾಭದ ಸಮಾನವಾಗಿ ಮನ್ನಿಸುವುದು ಅದು ದಾತಾರನ **ತುಷ್ಟಿ** ಗುಣವಿದೆ.

೩) ಸಾಧುಗಳಿಗೆ ತಮ್ಮ ಮೂಲಕ ದಾನ ಕೊಡಲಾಗುವುದು ಅದು ಇಹಲೋಕದಲ್ಲಿ ಹಾಗೂ ಪರಲೋಕದಲ್ಲಿ ಪರಮ ಕಲ್ಯಾಣಕಾರಕವಿದೆಯೆಂದು ಪರಿಣಾಮದಲ್ಲಿ ಗಾಢ ಪ್ರೀತಿಯಾಗುವುದು ಅದು ದಾತಾರನ **ಶ್ರದ್ಧಾ** ಗುಣವಿದೆ.

೪) ದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಕುರಿತು ಒಳ್ಳೆಯ ರೀತಿಯಿಂದ ವಿಚಾರ ಮಾಡಿ ಯೋಗ್ಯ ಭಕ್ಷ್ಯ ಪದಾರ್ಥದ ದಾನ ಕೊಡುವುದು ಅದು ದಾತಾರನ **ವಿಜ್ಞಾನ** ಗುಣವಿದೆ.

೫) ದಾನ ಕೊಟ್ಟು ದಾನದ ಪ್ರಭಾವದಿಂದ ಸಂಸಾರಕ್ಕೆ ಸಂಬಂಧಿಸಿದ ಧನ, ರಾಜ್ಯ, ಐಶ್ವರ್ಯ, ವಿದ್ಯೆ, ಮಂತ್ರ, ಯಶಸ್ಸು, ಕೀರ್ತಿ ಮೊದಲಾದ ಫಲಗಳನ್ನು ಬಯಸದಿರುವುದು ಅದು ದಾತಾರನ **ಅಲೋಲುಪ** ಗುಣವಿದೆ.

೬) ತಮ್ಮ ಹತ್ತಿರ ಸ್ವಲ್ಪ ಧನವಿದ್ದರೂ ಕೂಡ ದಾನದಲ್ಲಿ ಅತ್ಯಂತ ಉತ್ಸಾಹಿತನಾಗಿರುವವನ ದಾನವನ್ನು ನೋಡಿ ದೊಡ್ಡ-ದೊಡ್ಡ ಧನಾಢ್ಯ ಪುರುಷರು ಕೂಡ ಆಶ್ಚರ್ಯಚಕಿತರಾಗಿ ಹೋಗುವುದು ಅದು ದಾತಾರನ **ಸಾತ್ವಿಕ** ಗುಣವಿದೆ.

೭) ಮನಸ್ಸು ಕಲುಷಿತವಾಗುವಂಥ ದೊಡ್ಡ-ದೊಡ್ಡ ಕಾರಣಗಳು ಉಪಸ್ಥಿತವಾದರೂ ಕೂಡ ಯಾರ ಮೇಲೆಯೂ ರೋಷ ಮಾಡದಿರುವುದು ಅದು ದಾತಾರನ **ಕ್ಷಮಾ** ಗುಣವಿದೆ.

ಮುನಿ, ಶ್ರಾವಕ ಹಾಗೂ ಅವಿರತ ಸಮ್ಯಗ್ದೃಷ್ಟಿಯೆಂದು ಮೂರು ಪ್ರಕಾರದ ಪಾತ್ರರಿದ್ದಾರೆ. ಅವರಿಗೆ ದಾನ ಕೊಡುವಂಥ ಉತ್ತಮ ದಾತಾರರಲ್ಲಿ ಇನ್ನೂ ಅನೇಕ ಗುಣಗಳಿರಬೇಕಾಗುವುದು. ದಾತಾರನು **ವಿನಯವುಳ್ಳವ**ನಿರಬೇಕು. ವಿನಯ ರಹಿತನಿರುವವನು ಕೊಡುವ ದಾನವು ನಿಷ್ಫಲವಿದೆ.ದಾನ ಕೊಡಲು ತಮ್ಮ ಹತ್ತಿರ ಏನೂ ಇಲ್ಲದವರು ಕೇವಲ ವಿನಯ ಮಾಡುವುದೇ ಮಹಾದಾನವಿದೆ. ಸತ್ಕಾರ ಮಾಡುವುದು, ಪ್ರಿಯವಚನ ಆಡುವುದು, ಸ್ಥಾನ ಕೊಡುವುದು, ಗುಣಗಳ ಸ್ತುತಿ ಮಾಡುವುದು ಇವು ಕೂಡ ದೊಡ್ಡ ದಾನಗಳಿವೆ.

ಧರ್ಮದಲ್ಲಿ ಪ್ರೀತಿಯಿರುವ, ದಾನದ ಅನುಕ್ರಮದ ಜ್ಞಾತಾನಿರುವ, ದಾನದ ಫಲದ ಜ್ಞಾತಾನಿರುವ, ಜಿನಸೂತ್ರದ ಜ್ಞಾತಾನಿರುವ ಭೋಗದ ಇಚ್ಛೆಯಿಂದ ರಹಿತನಿರುವ, ಸಮಸ್ತ ಜೀವಗಳ ಮೇಲೆ ದಯೆಯಿರುವ, ರಾಗ-ದ್ವೇಷದ ಮಂದತೆಯಿರುವ ಸಾರ-ಅಸಾರಗಳ ಜ್ಞಾತಾನಿರುವ, ಸಮದರ್ಶಿಯಿರುವ, ಇಂದ್ರಿಯಗಳನ್ನು ಜಯಿಸಿದವನಿರುವ, ಪರೀಷಹಗಳು ಬಂದ ಮೇಲೆ ಹೆದರದಿರುವ, ನೋಡದಿರುವ ಭಾವದಿಂದ ರಹಿತನಿರುವ, ಸ್ವಮತ-ಪರಮತದ ಜ್ಞಾತಾನಿರುವ, ಪ್ರಿಯವಚನ ಸಹಿತನಿರುವ, ವ್ರತಿಗಳ ಪವಿತ್ರ ಗುಣಗಳಲ್ಲಿ ವ್ಯಾಪ್ತ ಚಿತ್ತನಿರುವ, ಲೋಕ ವ್ಯವಹಾರ ಮತ್ತು ಪರಮಾರ್ಥ ಇವೆರಡನ್ನು ತಿಳಿಯುವಂಥವನಿರುವ, ಸಮ್ಯಕ್ತ್ವ ಮೊದಲಾದ ಗುಣಸಹಿತನಿರುವ, ಅಹಂಕಾರ ಮೊದಲಾದ ಮದ ರಹಿತನಿರುವ, ವೈಯಾವೃತ್ಯದಲ್ಲಿ ಉದ್ಯಮಶೀಲನಿರುವಂಥ ಉತ್ತಮ ದಾತಾರನು ಪ್ರಶಂಸೆಗೆ ಯೋಗ್ಯನಿದ್ದಾನೆ.

**ಧನದ ಅಸಾರತೆ :-** ಯಾವ ಧನವು ವ್ರತಿಗಳ ಸೇವೆಯಲ್ಲಿ ಖರ್ಚಾಗುವುದು, ಸಾಧರ್ಮೀ ಜನರ ಉಪಕಾರದಲ್ಲಿ ಶ್ರಾವಕರ ವಿಪತ್ತು ದುಃಖ ನಿವಾರಣೆಯಲ್ಲಿ, ಧರ್ಮದ ವೃದ್ಧಿಯಲ್ಲಿ, ಧರ್ಮಮಾರ್ಗವನ್ನು ಮುಂದುವರೆಸುವಲ್ಲಿ ತೊಡಗುವಂಥ ಧನವು ಅದು ನನ್ನ ಧನವಿದೆ. ಸಂಸಾರದ ಅನ್ಯ ಕಾರ್ಯಗಳಲ್ಲಿ, ವಿಷಯ ಭೋಗಗಳಲ್ಲಿ, ಕುಟುಂಬದ ವಿಷಯ ಕಷಾಯ ಸಾಧಿಸುವಲ್ಲಿ ಖರ್ಚಾಗುವ ಧನವು ಅದು ಕೇವಲ ಬಂಧ ಮಾಡುವಂಥ, ಸಂಸಾರ ಸಮುದ್ರದಲ್ಲಿ ಮುಳುಗಿಸುವಂಥದ್ದಿದೆಯೆಂದು ನಿರಂತರ ವಿಚಾರ ಮಾಡುತ್ತಾನೆ.

ಈ ಕುಟುಂಬದ ಜನರು ಧನದ ಉಪಯೋಗ ಮಾಡಿಕೊಳ್ಳುತ್ತಿರುವವರಂತೂ ಪಾಲುಗಾರರಿದ್ದಾರೆ. ಧನ ಹಂಚಿಕೊಳ್ಳುವವರಿದ್ದಾರೆ, ಬಲವಂತದಿಂದ ಧನ ದೋಚಿಕೊಳ್ಳುವವರಿದ್ದಾರೆ. ರಾಗ-ದ್ವೇಷ-ಕ್ರೋಧ ಮೊದಲಾದ ಕಷಾಯಗಳನ್ನುಂಟು ಮಾಡಿ ವ್ರತ-ಸಂಯಮಗಳ ಘಾತ ಮಾಡುವಂಥವರಿದ್ದಾರೆ, ನನ್ನನ್ನು ಪಾಪದಲ್ಲಿ ಪ್ರೇರಿತಗೊಳಿಸುವಂಥವರಿದ್ದಾರೆ. ನನಗೂ ಇವರ ಸಂಯೋಗದಿಂದ ಅಜ್ಞಾನ ಅಂಧಕಾರವು ಆವರಿಸಿದೆ, ಅವರ ಕಾರಣದಿಂದ ಧರ್ಮ-ಅಧರ್ಮ, ನ್ಯಾಯ-ಅನ್ಯಾಯ, ಯಶ-ಅಪಯಶಗಳಾವವೂ ಕಂಡು ಬರುವುದಿಲ್ಲ. ನನ್ನ ಸ್ತ್ರೀ-ಪುತ್ರಾದಿಕರ ವಿಷಯಸಾಧಿಸಲು ಅನ್ಯ ನಿರ್ಬಲ ಹಾಗೂ ಅನನುಭವಿ ಅಜ್ಞಾನೀ ಜೀವರುಗಳ ಧನ ವಂಚಿಸುವಲ್ಲಿ, ದೋಚಿಕೊಳ್ಳುವಲ್ಲಿ ಪರಿಣಾಮವು ಕೂಡಲೇ ಸಿದ್ಧವಾಗುತ್ತದೆ. ಈ ಕುಟುಂಬದವರನ್ನು ಧನ, ವಸ್ತ್ರ, ಆಭರಣ, ಆಹಾರ ಮೊದಲಾದವುಗಳಿಂದ ತೃಪ್ತ ಮಾಡುವ ಸಲುವಾಗಿ ಪರಿಣಾಮವು ನಿರಂತರ ಕಳವು, ವಂಚನೆಗಳಲ್ಲಿ ತೊಡಗಿರುತ್ತದೆ. ಆದುದರಿಂದ ಈಗ ಭಗವಂತರ ವೀತರಾಗ ಧರ್ಮವನ್ನು ಪಡೆದು ಈಗ ಕುಟುಂಬದ ಸಲುವಾಗಿ ಹಣ ಸಂಪಾದಿಸುವ ಸಲುವಾಗಿ ಅನ್ಯಾಯ-ಅನೀತಿಯ ಮಾರ್ಗದಲ್ಲಿ ಪ್ರವರ್ತನೆ ಮಾಡಲಾರೆನು. ನ್ಯಾಯ ಮಾರ್ಗದಿಂದ ಯಾವ ಧನದ ಸಂಪಾದನೆಯಾಗುತ್ತದೆ ಅದರೊಳಗಿಂದ ತನ್ನ ಕುಟುಂಬದ ಹಾಗೂ ಧರ್ಮದ ಸಲುವಾಗಿ ದಾನದ ವಿಭಾಗ ಮಾಡಿ ಜೀವನದ ಉಳಿದ ದಿವಸಗಳನ್ನು ವ್ಯತೀತ ಮಾಡುವೆನು.

**ದಾನದ ಪ್ರೇರಣೆ :-** ಈ ಧನ, ಯೌವನ, ಜೀವನಗಳು ಕ್ಷಣಭಂಗುರವಿದ್ದು ಅವಶ್ಯವಾಗಿ ನಾಶವಾಗುವವು. ಮರಣವು ಆಕಸ್ಮಿಕವಾಗಿ ಬರುವುದು, ಧನ ಸಂಪತ್ತು, ಕುಟುಂಬ ಮೊದಲಾಗಿ ಯಾವುದೂ ಜತೆಯಲ್ಲಿ ಬರುವುದಿಲ್ಲ,

ನಾನು ದಾನ, ತಪ, ಶೀಲ ಮೊದಲಾದ ಭಾವಗಳಿಂದ ಗಳಿಸಿದ ಪುಣ್ಯವೊಂದೇ ಪರಲೋಕದಲ್ಲಿ ನನಗೆ ಸಹಾಯಕವಾಗಿ ಜತೆಯಲ್ಲಿ ಬರುವುದು. ಇಲ್ಲಿ ದೊರಕಿದ ಸಮಸ್ತ ಪ್ರಕಾರದ ಸಾಮಗ್ರಿಯಂತೂ ಪೂರ್ವಜನ್ಮದಲ್ಲಿ ಹೇಗೆ ದಾನ ಮಾಡಿದ್ದೆನು ಹಾಗೆ ಫಲಿಸಿದೆ. ಈಗ ಅದನ್ನು ದಾನ ಕೊಡುವಲ್ಲಿ, ಧರ್ಮಾತ್ಮರ ಸೇವೆ ಮಾಡುವಲ್ಲಿ, ದೀನ-ದುಃಖೀ ಜನರಿಗೆ ಉಪಕಾರ ಮಾಡುವಲ್ಲಿ ತೊಡಗಿಸಿದೆನೆಂದರೆ ಪರಲೋಕದಲ್ಲಿ ಎಲ್ಲ ಪ್ರಕಾರದ ಸುಖವನ್ನು ಪಡೆಯಬಹುದಾಗಿದೆ, ಮೋಕ್ಷಮಾರ್ಗದ ಸಮ್ಯಗ್ಜ್ಞಾನ ಮೊದಲಾದ ಸಾಮಗ್ರಿಯನ್ನು ಪ್ರಾಪ್ತ ಮಾಡಿಕೊಳ್ಳುವೆನು.

**ದಾನಪೂರ್ವಕ ಭೋಜನ ಮಾಡುವವನ ಭೋಜನ ಮಾಡುವಿಕೆಯೇ ಸಾರ್ಥಕವಿದೆ. ತಮ್ಮ ಹೊಟ್ಟೆಯನ್ನಂತೂ ಪಶುಗಳು ಕೂಡ ತುಂಬಿಕೊಳ್ಳುತ್ತವೆ. ಯಾರ ಮನೆಯಲ್ಲಿ ಪಾತ್ರದಾನವಾಗುತ್ತದೆ ಅವರ ಗೃಹಸ್ಥಾವಸ್ಥೆಯೇ ಸಫಲವಿದೆ.** ದಾನವಿಲ್ಲದೆ ಪಶುಗಳಿಗೆ ಕೂಡ ವಾಸಯೋಗ್ಯ ಗುಹೆಗಳಿರುತ್ತವೆ, ಪಕ್ಷಿಗಳಿಗೆ ಗೂಡುಗಳಿರುತ್ತವೆ. ಯಾವ ಪ್ರಕಾರ ಸಮುದ್ರದಲ್ಲಿ ನೀರೂ ಬಹಳಷ್ಟಿವೆ ಮತ್ತು ರತ್ನಗಳೂ ಬಹಳಷ್ಟಿವೆ; ಆದರೆ ನೀರಂತೂ ಅತ್ಯಂತ ಉಪ್ಪು ಇವೆ ಮತ್ತು ಮಹಾಮತ್ಸ್ಯಗಳಿಂದ ತುಂಬಿಕೊಂಡಿರುವುದರಿಂದ ರತ್ನಗಳನ್ನು ತೆಗೆಯುವ ಸಾಧ್ಯತೆಯಿಲ್ಲ, ಆದುದರಿಂದ ರತ್ನ ಮತ್ತು ನೀರು ಉಪಕಾರ ಮಾಡುವ ಸಾಧ್ಯತೆಯಿಲ್ಲದಿರುವುದರಿಂದ ನಿಷ್ಫಲವಿವೆ, ಅದೇ ಪ್ರಕಾರ ಜಿಪುಣ ಶ್ರೀಮಂತನ ಧನವು ಇತರರಿಗೆ ಉಪಕಾರರಹಿತವಿರುವುದರಿಂದ ನಿಷ್ಫಲವೇ ಇದೆ.

ಯಾವ ಗೃಹಸ್ಥನು ಧನ ಸಂಪಾದಿಸಿ ಸಾಧರ್ಮಿಗಳ ಉಪಕಾರದಲ್ಲಿ, ದೀನ-ಅನಾಥರ ಉಪಚಾರದಲ್ಲಿ ಖರ್ಚು ಮಾಡದಿದ್ದರೆ ಆ ಧನವು ಅವನದಿಲ್ಲ, ಆ ಧನವಂತೂ ಬೇರೆ ಯಾವನೋ ಪುಣ್ಯವಂತನದಿದೆ. ಇವನಂತೂ ಆ ಧನದ ಆ ಪುಣ್ಯವಂತನ ವತಿಯಿಂದ ಕಾವಲುಗಾರನಿದ್ದಾನೆ, ಜಾಗರೂಕತೆ ವಹಿಸುತ್ತಾನೆ. ಧನದ ನಿಜವಾದ ಯಜಮಾನನಂತೂ ಬೇರೆ ಯಾವನೋ ಪುಣ್ಯವಂತನಿದ್ದಾನೆ, ಅವನು ದಾನ-ಭೋಗದಲ್ಲಿ ತೊಡಗಿಸುವನು. ಯಾವನ ಮನೆಯಲ್ಲಿ ಪಾತ್ರ ಬರುವುದು ಮತ್ತು ಕೊಡುವುದಕ್ಕೆ ಸಾಮಗ್ರಿಯಿದ್ದರೂ ಕೊಡದೆ ಹೋದರೆ ಅವನ ಜತೆಯಲ್ಲಿ ಬಂದಿರುವಂಥ ಚಿಂತಾಮಣಿ ರತ್ನವು ನಷ್ಟವಾಯಿತೆಂದೇ ತಿಳಿಯುವುದು.

**ಯಾವನು ಧನಗಳಿಸಿ ಅದನ್ನು ದಾನದಲ್ಲಿ ತೊಡಗಿಸುವುದಿಲ್ಲ ಆ ಮೂಢನು ತನ್ನ ಆತ್ಮನನ್ನು ವಂಚಿಸುತ್ತಾನೆ. ಯಾವನು ಧನವನ್ನು ದಾನದಲ್ಲಿ ತೊಡಗಿಸುತ್ತಾನೆ ಅವನು ಆ ಧನದ ಒಡೆಯನಿದ್ದಾನೆ.** ಯಾರ ಪರಿಣಾಮವು ದಾನ ಕೊಡುವಲ್ಲಿ, ಪಾತ್ರರನ್ನು ಹುಡುಕುವುದರಲ್ಲಿ ನಿರಂತರತೊಡಗಿರುತ್ತದೆ ಅವರಿಂದ ದಾನವಾಗದಿರುತ್ತಿದ್ದರೂ ಕೂಡ ಅವರಿಂದ ನಿರಂತರ ದಾನವಾಗುತ್ತಿದೆಯೆಂದು ತಿಳಿಯಬೇಕು. ಧನವು ಬೇಕಾದರೆ ಅಲ್ಪವಿರಲಿ ಅಥವಾ ಅಧಿಕವಿರಲಿ, ಪಾತ್ರರನ್ನು ಪಡೆದು ಯಾವನು ಅತ್ಯಂತ ಭಕ್ತಿಪೂರ್ವಕವಾಗಿ ದಾನ ಕೊಡುತ್ತಾನೆ ಅವನೇ ನಿಜವಾದ ದಾತಾರನಿದ್ದಾನೆ. ಭಕ್ತಿರಹಿತನಿಗೆ ದಾತೃತ್ವವು ಇರುವುದಿಲ್ಲ.

**ನಿರ್ದೋಷ ದಾನ :** ಯಾವನು ಅವಸರ ಬಿಟ್ಟುಕೊಟ್ಟು ಅಕಾಲದಲ್ಲಿ ದಾನಕೊಡುತ್ತಾನೆ ಅವನ ದಾನವು ಅಕಾಲದಲ್ಲಿ ಬಿತ್ತಿದ ಬೀಜದಂತೆ ನಿಷ್ಫಲವಾಗಿ ಹೋಗುವುದು. ಯಾರು ಅಪಾತ್ರರಿಗೆ ದಾನ ಕೊಡುತ್ತಾರೆ ಅವರ ದಾನವು ಬಂಜರು ಭೂಮಿಯಲ್ಲಿ ಬಿತ್ತಿದ ಬೀಜದಂತೆ ನಿರರ್ಥಕವಾಗಿ ಹೋಗುತ್ತದೆ. ದುಷ್ಟರಿಗೆ ಕೊಟ್ಟ ದಾನವು ಹಾವಿಗೆ ಸಕ್ಕರೆ ಬೆರೆಸಿದ ಹಾಲು ಕುಡಿಸಿದ ಸಮಾನ ದಾತಾರನಿಗೆ ಸಂಸಾರದ ಘೋರ ದುಃಖ, ಮರಣ, ಜ್ವಾಲೆಯನ್ನುತ್ಪನ್ನ ಮಾಡುವಲ್ಲಿ ವಿಷದ ಸಮಾನವಾಗಿ ಫಲ ಕೊಡುತ್ತದೆ.

ತಮ್ಮ ಭಾಗ್ಯದ ಪ್ರಕಾರ ಪ್ರಾಪ್ತವಾದಷ್ಟು ಧನದಲ್ಲಿ ದಾನದ ಭಾಗವನ್ನು ತೆಗೆದಿರಿಸುವ ಭಾವ ಮಾಡಬೇಕಾಗುವುದು. ಆದರೆ ತನ್ನ ಹತ್ತಿರ ಅಧಿಕ ಧನವಿರುತ್ತಿದ್ದರೆ ಅಧಿಕ ದಾನ ಮಾಡುತ್ತಿದ್ದೆನೆಂದು ವಿಚಾರ ಮಾಡಬಾರದು. ಈ ಪ್ರಕಾರ ದಾನ ಕೊಡುವ ಸಲುವಾಗಿ ಅಭಿಮಾನಿಯಾಗಿ ಧನದ ಇಚ್ಛೆ ಮಾಡಬಾರದು. ತಮ್ಮ ಲಾಭಾಂತರಾಯ ಕರ್ಮದ ಕ್ಷಯೋಪಶಮದಿಂದ ಎಷ್ಟು ಧನದ ಲಾಭವಾಗಿರುವುದು ಅಷ್ಟರಲ್ಲಿಯೇ ಸಂತೋಷಪಟ್ಟುಕೊಂಡು ಅಧಿಕ ಧನದ ಅಪೇಕ್ಷೆ ಮಾಡದಿರುವುದು ಅದುವೇ ಮಹಾನ ದಾನವಿದೆಯೆಂದು ತಿಳಿದುಕೊಳ್ಳಬೇಕು.

ತಮಗೆ ನ್ಯಾಯಪೂರ್ವಕವಾಗಿ ಪ್ರಾಪ್ತವಾಗಿರುವಂಥ ಧನದಲ್ಲಿ ಅವರು ಈ ನನ್ನ ಧನದೊಳಗಿಂದ ಯಾರ ಸಲುವಾಗಿಯಾದರೂ ಒಂದಿಷ್ಟು ಉಪಯೋಗವಾದರೆ ನನ್ನ ಧನ ಸಂಪಾದನೆಗೆ ಸಾರ್ಥಕತೆಯಿದೆಯೆಂಬ ಪರಿಣಾಮವು ನಿರಂತರವಿರುತ್ತದೆ. ತಮ್ಮ ಮನೆಯ ಖರ್ಚಿನಲ್ಲಿ, ಕೊಡ-ಕೊಳ್ಳುವಲ್ಲಿ ಯಾರಾದರೂ ನನ್ನಿಂದ ಒಂದಿಷ್ಟು ಸಂಪಾದನೆ ಮಾಡಿಕೊಂಡರೆ ಅದುವೇ ನನಗೆ ದೊಡ್ಡ ಲಾಭವಿದೆ. ಈ ಪ್ರಕಾರದ ಪರಿಣಾಮವುಳ್ಳ ದಾತಾರನಿರಬೇಕಾಗುವುದು.

ಯಾವುದಾದರೂ ದಾನ ಕೊಟ್ಟರೆ ಅದನ್ನು ಹರ್ಷಚಿತ್ತದಿಂದ ಕೊಡಬೇಕು. ದಾನವಂತೂ ಕೊಡುವುದು, ಆದರೆ ಅದನ್ನು ಕ್ರೋಧ ಮಾಡಿ, ಅವಮಾನ ಮಾಡಿ, ತಿರಸ್ಕಾರದ ವಚನಗಳನ್ನು ಆಡಿ, ರೋಷಮಾಡಿ, ದೋಷ ತಗಲಿಸಿ, ಸ್ವಯಂ ದುಃಖಿಯಾಗಿ ಕೊಟ್ಟರೆ ಆ ದಾತಾರನದು ಈ ಲೋಕದಲ್ಲಿ ಕಲಹ ಮತ್ತು ಅಪಯಶವಾಗುತ್ತದೆ, ಪರಲೋಕದಲ್ಲಿ ಅಶುಭ ಕರ್ಮದ ಫಲದಿಂದ ದರಿದ್ರತೆ, ಅವಮಾನ ಮೊದಲಾದವು ಅನೇಕ ಭವಗಳವರೆಗೆ ಪ್ರಾಪ್ತವಾಗುತ್ತವೆ.

**ದಾನ ಕೊಡಲು ಅಯೋಗ್ಯ ಃ-** ಈಗ ಕೊಡಲು ಯೋಗ್ಯವಿಲ್ಲದಂಥ ಅನಿಷ್ಟ ಪದಾರ್ಥಗಳ ದಾನವು ಅದು ಕುದಾನವೇ ಇದೆ.ಕುದಾನವನ್ನು ಎಂದೂ ಕೊಡಕೂಡದು. ಭೂಮಿದಾನವು ಯೋಗ್ಯವಿಲ್ಲ, ಅದರಲ್ಲಿ ನೇಗಿಲು, ಪಿಕಾಸು, ಸಲಿಕೆ ಮೊದಲಾದವುಗಳ ಮೂಲಕ ಭೂಮಿಯನ್ನು ಅಗೆಯಲಾಗುವುದರಿಂದ ಬಹಳಷ್ಟು ಹಿಂಸೆಯಾಗುತ್ತದೆ, ಅಧಿಕ ಆರಂಭ, ಪಂಚೇಂದ್ರಿಯ ಮೊದಲಾದ ಇಲಿ, ಜಿಂಕೆ, ಹಂದಿ ಮೊದಲಾದ ದೊಡ್ಡ ದೊಡ್ಡ ಜೀವಗಳನ್ನು ಧಾನ್ಯದ ಹಾನಿ ಮಾಡುವಂಥವುಗಳಿವೆಯೆಂದು ತಿಳಿದುಕೊಂಡು ಅವನ್ನು ಕೊಂದು ಹಾಕುತ್ತಾರೆ. ಭೂಮಿಯ ಮಮತೆಯಿಂದ ಅಣ್ಣ-ತಮ್ಮಂದಿರು ತಮ್ಮ-ತಮ್ಮಲ್ಲಿ ಹೊಡೆದಾಡಿ ಸತ್ತು ಹೋಗುತ್ತಾರೆ. ತೀವ್ರ ರಾಗದ ಕಾರಣವಿರುವಂಥ ಭೂಮಿಯ ದಾನದಿಂದ ಮಹಾ ಘೋರ ಪಾಪದ ಬಂಧವಾಗುತ್ತದೆ.

ಮಹಾ ಹಿಂಸೆಯ ಕಾರಣವಿರುವಂಥ ಎಂದರೆ ಯಾವುದರಿಂದ ಅನೇಕ ಪ್ರಕಾರದ ಹಿಂಸೆಯಾಗುತ್ತದೆ ಅಂಥ ಲೋಹದ ದಾನವು ಅದು ಮಹಾ ಕುದಾನವಿದೆಯೆಂದು ತಿಳಿದುಕೊಂಡು ಅದನ್ನು ಬಿಟ್ಟುಕೊಡಬೇಕು.

ಸ್ವರ್ಣದಾನವನ್ನು ಕೊಡಬಾರದು. ಅದನ್ನು ಪ್ರಾಪ್ತಮಾಡಿಕೊಳ್ಳುವಂಥವನು ಸ್ವಯಂ ನಾಶಕ್ಕೆ ಪ್ರಾಪ್ತನಾಗುತ್ತಾನೆ. ಕೊಲ್ಲಲ್ಪಡುತ್ತಾನೆ, ಯಾವಾಗಲೂ ಭಯಭೀತನಿರುತ್ತಾನೆ, ಸಂಯಮದ ನಾಶ ಮಾಡಿ ಬಿಡುವುದು. ಆ ಧನದಿಂದ ರಾಗ, ದ್ವೇಷ, ಕಾಮ, ಕ್ರೋಧ, ಲೋಭ, ಮದ, ಭಯ, ಆರಂಭ ಮೊದಲಾದವುಗಳ ಪ್ರಚುರ ಉತ್ಪತ್ತಿಯಾಗುತ್ತದೆ, ಆತ್ಮನ ಸ್ವರೂಪದ ವಿಸ್ಮರಣೆಯಾಗಿ ಹೋಗುತ್ತದೆ. ಆದ್ದರಿಂದ ವೀತರಾಗ ಧರ್ಮದ ಇಚ್ಛೆಯುಳ್ಳವರು ಸ್ವರ್ಣದಾನ ಮಾಡುವುದು ಪಾಪವೆಂದು ತಿಳಿದುಕೊಂಡು ತ್ಯಾಗ ಮಾಡಿ ಬಿಡಬೇಕು.

ಕೋಟ್ಯಂತರ ತ್ರಸ ಜೀವಗಳ ಉತ್ಪತ್ತಿಯ ಕಾರಣವಾದಂಥ ತಿಲದಾನವು ಕೂಡ ತ್ಯಾಗಯೋಗ್ಯವಿದೆ.

ಬೀಸುವ ಕಲ್ಲು, ಒಲೆ, ಒನಿಕೆ, ಪೊರಕೆ, ಈಳಿಗೆ, ತುರಿಮಣೆ, ಗುದ್ದಲಿ, ಸಲಿಕೆ, ಧಾನ್ಯ, ಎಳ್ಳು, ಬೆಲ್ಲ, ರಸ, ದೀವಿಗೆ ಮೊದಲಾದ ಮಹಾಪಾಪದ ಸಾಮಗ್ರಿಗಳಿಂದ ತುಂಬಿಕೊಂಡು ಮಹಾ ಆರಂಭ ಮೋಹವನ್ನು ಉತ್ಪನ್ನ ಮಾಡಿಸುವಂಥ ಮನೆಯ ದಾನವನ್ನು ಧರ್ಮವೆಂದು ಮನ್ನಿಸಿ ಮಿಥ್ಯಾ ಧರ್ಮಿಗಳು ಕೊಡುತ್ತಾರೆ. ಆದರೆ ಅವೆಲ್ಲವು ಕುದಾನಗಳಿವೆ.

ಗೋವನ್ನು ಕಟ್ಟುವಲ್ಲಿ, ಎಳೆ ಹುಲ್ಲು ಮೇಯುವಲ್ಲಿ, ಅದರ ಶರೀರದಲ್ಲಿ ಚಿಕ್ಕ ಚಿಕ್ಕ ಅನೇಕ ಪ್ರಕಾರದ ಕ್ರಿಮಿ-ಕೀಟಕಗಳು, ಹೇನು, ನೊರಜು ಮೊದಲಾದವು ಉತ್ಪನ್ನವಾಗುವಲ್ಲಿ, ಮಲ-ಮೂತ್ರಗಳಲ್ಲಿ ಅಸಂಖ್ಯಾತ ಜೀವಗಳು ಉತ್ಪನ್ನವಾಗುತ್ತವೆ, ಸಾಯುತ್ತವೆ. ಕೊಂಬು, ಗೊರಸು, ಬಾಲ ಮೊದಲಾದವುಗಳಿಂದ ಅನೇಕ ಜೀವಗಳ ಘಾತ ಮಾಡುವಂಥ ಹಸುವಿನ ದಾನವು ಅದು ಕುದಾನವಿದೆ.

**ಕುದಾನ ತ್ಯಾಗ ಃ-** ಸಂಸಾರವನ್ನು ವೃದ್ಧಿಸುವಂಥ ಮಹಾಬಂಧನ ಮಾಡುವಂಥ ಯಾವ ಕನ್ಯಾದಾನವಿದೆ ಅದು ಕುದಾನವಿದೆ.

**ಪ್ರಶ್ನೆ ಃ-** ಕನ್ಯಾದಾನ ಮಾಡಿದಲ್ಲದೆ ಗೃಹಸ್ಥಾವಸ್ಥೆಯು ಹೇಗೆ ಉಳಿಯುವ ಸಾಧ್ಯತೆಯಿದೆ ?

**ಉತ್ತರ :-** ಅದಂತೂ ಸರಿಯಿದೆ. ಆದರೆ ಗೃಹಸ್ಥನು ತನ್ನ ಕನ್ಯೆಯನ್ನು ವಿವಾಹ ಯೋಗ್ಯ ಕುಲದಲ್ಲಿ ಉತ್ಪನ್ನನಾದ ಜಿನಧರ್ಮದ ವರನಿಗೆ ಅವನ ವ್ಯವಹಾರ ಚತುರತೆ ಮೊದಲಾದ ಗುಣಗಳನ್ನು ನೋಡಿ ಕನ್ಯೆಯನ್ನು ಕೊಡುತ್ತಾನೆ, ಆದರೆ ಕನ್ಯಾದಾನವನ್ನಂತೂ ಧರ್ಮವೆಂದು ಶ್ರದ್ಧೆ ಮಾಡುವುದಿಲ್ಲ; ಜಿನ ಧರ್ಮಿಯಂತೂ ಕನ್ಯಾದಾನವನ್ನು ಪಾಪವೆಂದೇ ಮನ್ನಿಸುತ್ತಾನೆ, ಶ್ರದ್ಧೆ ಮಾಡುತ್ತಾನೆ. ಯಾವ ಪ್ರಕಾರ ಗೃಹಸ್ಥನಿಗೆ ಅನೇಕ ಆರಂಭ ಮೊದಲಾದ ಪಾಪ ಬಂಧದ ಕಾರಣಗಳಿವೆ, ಅದೇ ಪ್ರಕಾರ ಕನ್ಯಾದಾನವು ಕೂಡ ಪಾಪಬಂಧದ ಕಾರಣವಿದೆ, ಆದರೆ ಇದಂತೂ ವಿಷಯಗಳ ಶಿಕ್ಷೆಯಿದೆ ಅದು ಅಂಗೀಕಾರ ಮಾಡುವುದರಿಂದಲೇ ಪೂರೈಸುವುದು.

ಅನ್ಯ ಮತದವರಂತೂ ಕನ್ಯಾದಾನ ಕೊಡುವುದರ ಫಲವು ಮಹಾನವೆಂದು ಹೇಳುತ್ತಾರೆ. ಒಂದು ಲಕ್ಷ ಯಜ್ಞ ಮಾಡುವುದರ ಸಮವೆಂದು ಹೇಳುತ್ತಾರೆ. ಕೋಟ್ಯಂತರ ಬ್ರಾಹ್ಮಣರಿಗೆ ಭೋಜನ ಮಾಡಿಸುವುದಕ್ಕಿಂತ ಅಧಿಕ, ಕೋಟ್ಯಂತರ ಗೋವು ದಾನ ಕೊಡುವುದಕ್ಕಿಂತ ಅಧಿಕ ಫಲವೆಂದು ಹೇಳುತ್ತಾರೆ. ಇತರರ ಕನ್ಯೆಯ ವಿವಾಹ ಮಾಡಿಕೊಡುವುದರಲ್ಲೂ ದೊಡ್ಡ ಧರ್ಮವೆಂದು ಹೇಳುತ್ತಾರೆ. ಜಿನ ಧರ್ಮದಲ್ಲಂತೂ ಅದನ್ನು ಸಂಸಾರ ಪರಿಭ್ರಮಣದ ಕಾರಣವೆಂದು ತಿಳಿದು ಕುದಾನವೆಂದು ಹೇಳಲಾಗಿದೆ.

ಸಂಸಾರ ಸಮುದ್ರದಲ್ಲಿ ಮುಳುಗಿಸುವಂಥ ಮಿಥ್ಯಾದೃಷ್ಟಿ, ಲೋಭಿ, ವಿಷಯಲಂಪಟ ಜನರ ಮೂಲಕ ಹೇಳಿದ ಅನ್ಯ ಕುದಾನಗಳೆಲ್ಲವು ತ್ಯಾಗ ಯೋಗ್ಯವಿವೆ. ಚಿನ್ನದ ಹಸು, ಬೆಳ್ಳಿಯ ಹಸು ಮೊದಲಾದುವನ್ನು ಮಾಡಿಸಿ ದಾನ ಕೊಡುತ್ತಾರೆ ಮತ್ತು ಸ್ವೀಕರಿಸುವಂಥವರು ಕೂಡ ತುಪ್ಪದ ಹಸುವನ್ನು, ತಿಲದ ಹಸುವನ್ನು, ಸಕ್ಕರೆ ಹಸುವನ್ನು, ಬರ್ಫಿಯ ಹಸುವನ್ನು ತಿಂದು ಬಿಡುತ್ತಾರೆ. ಚಿನ್ನದ ಹಸುವನ್ನು, ಬೆಳ್ಳಿಯ ಹಸುವನ್ನು ಕತ್ತರಿಸುತ್ತಾರೆ, ಬೆಂಕಿಯಲ್ಲಿ ಹಾಕಿ ಕರಗಿಸುತ್ತಾರೆ (ಇದರಿಂದ ಬಹಳಷ್ಟು ಭಾವಹಿಂಸೆಯಾಗುತ್ತದೆ). ಹಸುವಿನ ಬಾಲದಲ್ಲಿ ಮೂವತ್ತು ಮೂರು ಕೋಟಿ ದೇವತೆ ಮತ್ತು ಅರವತ್ತೆಂಟು ತೀರ್ಥಗಳಿವೆಯೆಂದು ಹೇಳುತ್ತಾರೆ. ದಾಸ-ದಾಸಿಯರ ದಾನ ಕೊಡುತ್ತಾರೆ, ರಥದ ದಾನ ಕೊಡುತ್ತಾರೆ, ಸಂಕ್ರಾಂತಿ-ಗ್ರಹಣ-ವ್ಯತಿಪಾತ ಮೊದಲಾದುವನ್ನು ಮನ್ನಿಸಿ ದಾನ ಕೊಡುತ್ತಾರೆ; ಆದರೆ **ಇದೆಲ್ಲವೂ ಮಿಥ್ಯಾತ್ವದ ಪ್ರಭಾವವಿದೆ.**

ಸತ್ತವರನ್ನು ತೃಪ್ತ ಮಾಡುವ ಸಲುವಾಗಿ ಬ್ರಾಹ್ಮಣ ಮೊದಲಾದವರಿಗೆ ಭೋಜನ ಮಾಡಿಸಬೇಕೆಂದು ಹೇಳುತ್ತಾರೆ. ಬ್ರಾಹ್ಮಣರು ಉಣ್ಣುವುದರಿಂದ ಭೋಜನವು ಸತ್ತವರವರೆಗೆ ಹೇಗೆ ತಲುಪುವುದೆಂಬುದರ ವಿಚಾರ ಮಾಡಬೇಕು ! ಪುತ್ರನು ದಾನ ಕೊಡುವುದು, ತಂದೆಯು ಪಾಪದಿಂದ ಬಿಡುಗಡೆಯಾಗುವುದು ? ಎರಡು ದಿವಸ ಮೊದಲು ಸತ್ತು ಹೋದ ಮನುಷ್ಯನ ಮೂಳೆಯನ್ನು ಗಂಗೆಯಲ್ಲಿ ಹಾಕುವುದರಿಂದ ಸತ್ತವನಿಗೆ ಮೋಕ್ಷವು ಹೇಗಾಗುತ್ತದೆ ? **ಗಯಾದಲ್ಲಿ ಹೋಗಿ ಶ್ರಾದ್ಧ ಮಾಡುವುದರಿಂದ ಇಪ್ಪತ್ತೊಂದು ಪೀಡಿಯ ಉದ್ಧಾರವಾಗುತ್ತದೆಂದು ಹೇಳುತ್ತಾರೆ.** ಗಯಾದಲ್ಲಿ ಪಿಂಡದಾನ ಮಾಡುವುದರಿಂದ ಹಿಂದಿನ ಹತ್ತು ಪೀಳಿಗೆ, ಮುಂದಿನ ಹತ್ತು ಪೀಳಿಗೆ ಹಾಗೂ ಸ್ವಯಂ ಒಂದು ಹೀಗೆ ಇಪ್ಪತ್ತೊಂದು ಪೀಳಿಗೆಯ ಸಂಸಾರದಲ್ಲಿ ಯಾರಾದರೂ ಕುಗತಿಯಲ್ಲಿ ಬಿದ್ದಿದ್ದರೆ ಅಲ್ಲಿಂದ ಹೊರಟು ಬಂದು ವೈಕುಂಠದಲ್ಲಿ ಇರಲಾರಂಭಿಸುತ್ತಾರೆ. ಭವಿಷ್ಯದಲ್ಲಿ ಮಗ, ಮೊಮ್ಮಗ ಹಾಗೂ ಅವರ ಸಂತಾನದವರು ಬೇಕಾದಷ್ಟು ಪಾಪ ಮಾಡಲಿ, ಆದರೆ ಇಪ್ಪತ್ತೊಂದು ಪೀಳಿಗೆಯೊಳಗಿಂದ ಯಾವನಾದರೂ ಒಬ್ಬನು ಗಯಾದಲ್ಲಿ ಶ್ರಾದ್ಧ ಅಥವಾ ಪಿಂಡದಾನ ಮಾಡಿದನೆಂದರೆ ಎಲ್ಲರ ಮುಕ್ತಿಯಾಗಿ ಹೋಗುವುದು. ಆದುದರಿಂದ ಯಾವುದೇ ಪಾಪದ ಭಯವನ್ನು ಇಟ್ಟುಕೊಳ್ಳಬೇಡಿರಿ!

ಶ್ರಾದ್ಧದಲ್ಲಿ ಬ್ರಾಹ್ಮಣರಿಗೆ ಮಾಂಸಭಕ್ಷಣ ಮಾಡಿಸುತ್ತಾರೆ, ಮಾಂಸದಿಂದ ದೇವತೆಗಳನ್ನು ತೃಪ್ತ ಮಾಡುತ್ತಾರೆ. ದೇವತೆ, ದುರ್ಗಿ, ಭವಾನಿಯವರಿಗೆ ಜೀವಗಳ, ರಾಕ್ಷಸರ, ತಿರ್ಯಂಚಗಳ ರಕ್ತಕುಡಿಸುವುದರಿಂದ ಅತ್ಯಂತ ತೃಪ್ತರಾಗುತ್ತಾರೆಂದು ಮನ್ನಿಸುತ್ತಾರೆ. ದೇವತೆಗಳಿಗೆ ಮೇಕೆ, ಕೋಣಗಳನ್ನು ಕತ್ತರಿಸಿ ಬಲಿದಾನ ಮಾಡುತ್ತಾರೆ. ಪಾಪೀ ಮನುಷ್ಯರು ದುಷ್ಟ ಶಾಸ್ತ್ರಗಳ ರಚನೆ ಮಾಡಿ ತಮ್ಮ ಮಾಂಸ ಭಕ್ಷಣದ ಸಲುವಾಗಿ ಬಹಳಷ್ಟು ಪಾಪಕರ್ಮ ಮಾಡಿ ಸ್ವಯಂ ನರಕದ ಮಾರ್ಗದಲ್ಲಿ ಗಮನ ಮಾಡುತ್ತಿದ್ದಾರೆ ಮತ್ತು ಇತರರನ್ನು ಕೂಡ ನರಕಕ್ಕೆ ತಲುಪಿಸುತ್ತಿದ್ದಾರೆ. **ರಸನೇಂದ್ರಿಯದ ಲೋಲುಪಿಗಳು ಯಾವ ಘೋರ ಪಾಪಕರ್ಮವನ್ನು ಮಾಡುವುದಿಲ್ಲ?** ಆ ಪಾಪಿಗಳು ಮನುಷ್ಯತನದಲ್ಲಿ ನರಿ, ನಾಯಿ, ಕಾಗೆ, ಹಂದಿಗಳಂತೆ ಮಾಂಸ

ಭಕ್ಷಣರೂಪದ ಆಚರಣೆಯನ್ನು ಮಾಡುತ್ತಾರೆ. ಅವರ ಇಂಥ ಘೋರ ಪಾಪ ಪ್ರವೃತ್ತಿಯ ಶಾಸ್ತ್ರ ಅವರ ಧರ್ಮದಲ್ಲಿ ಮತ್ತು ಮ್ಲೇಚ್ಛರ ಧರ್ಮದಲ್ಲಿ ಯಾವ ಅಂತರವಿಲ್ಲ. ಈ ವಾಕ್ಯವು ಮ್ಲೇಚ್ಛರದಿದೆ. ಹೀಗೆ ವೇದ ವಾಕ್ಯಗಳ ಅರ್ಥ ತಿಳಿಸಿಕೊಟ್ಟು ಜನರಲ್ಲಿ ಅಜ್ಞಾನವನ್ನುಂಟು ಮಾಡಿ ಬೇಟೆಯಲ್ಲಿ ಧರ್ಮವಿದೆಯೆಂದು ತಿಳಿಸಿಕೊಟ್ಟರು.

ಯಾರು ಜಲಚರ, ಸ್ಥಲಚರ, ನಭಚರ ಜೀವಗಳನ್ನು ಕೊಲ್ಲುವಲ್ಲಿ ಧರ್ಮವಿದೆಯೆಂದು ತಿಳಿಸುತ್ತಾರೆ, ಅವರು ಸಂಪೂರ್ಣ ಜಗತ್ತನ್ನು ಭ್ರಷ್ಟ ಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ. ಅವರ ದೇವತೆಗಳು ರುಂಡಮಾಲೆಯನ್ನು ಧರಿಸುತ್ತವೆ. ಮಾಂಸ ತಿನ್ನುವಲ್ಲಿ ಮತ್ತು ರಕ್ತ ಕುಡಿಯುವುದರಲ್ಲಿ ಲೀನವಿವೆ. ಅವುಗಳ ಸೇವಕರ ಪಾಪದ ಕಥೆಯನ್ನೇನು ಹೇಳುವುದು ? ಅಂಥ ಕುಪಾತ್ರರಿಗೆ ದಾನ ಕೊಡುವುದೆಂದರೆ ಮಹಾದುಃಖ ಕೊಡುವಂಥ ಕುದಾನವಿದೆ. ಈ ಪ್ರಕಾರ ಕುದಾನದಲ್ಲಿ ಬಹಳಷ್ಟು ಭೇದಗಳಿವೆ.ಕುದಾನ ಕೊಡುವುದರಿಂದ ಹಾಗೂ ಕುದಾನ ತೆಗೆದುಕೊಳ್ಳುವುದರಿಂದ ನರಕ-ತಿರ್ಯಂಚಗಳಲ್ಲಿ ಅದೆಷ್ಟೋ ಜನ್ಮ-ಮರಣಗಳನ್ನು ಮಾಡಿ, ನಿಗೋದದಲ್ಲಿ ಏಕೇಂದ್ರಿಯ ಮತ್ತು ವಿಕಲತ್ರಯದಲ್ಲಿ ಅನಂತಕಾಲದವರೆಗೆ ಅಸಂಖ್ಯಾತ ಪರಿವರ್ತನ ಮಾಡುತ್ತಾನೆಂದು ತಿಳಿದುಕೊಂಡು ಕುದಾನ ಮಾಡಬಾರದು, ಕುಪಾತ್ರ ದಾನ ಮಾಡಬಾರದು.

ಈಗ ಇಲ್ಲಿ ಸುಪಾತ್ರ ದಾನದ ಫಲವನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ಗೃಹಕರ್ಮಣಾಪಿ ನಿಚಿತಂ ಕರ್ಮವಿಮಾರ್ಷ್ಟಿ ಖಲು ಗೃಹವಿಮುಕ್ತಾನಾಮ್ ।**
**ಅತಿಥಿನಾಂ ಪ್ರತಿಪೂಜಾ ರುಧಿರಮಲಂ ಧಾವತೇ ವಾರಿ ॥೧೧೪॥**

**ಅರ್ಥ :-** ಶರೀರದ ಮೇಲೆ ತಗಲಿದ ರುಧಿರರೂಪದ ಮಲವನ್ನು ನೀರು ತೊಳೆದು ಬಿಡುವಂತೆ ಗೃಹರಹಿತ ಅತಿಥಿಯಾದ ಮುನಿಗಳ ಪ್ರತಿಪೂಜೆ ಎಂದರೆ ದಾನ ಸನ್ಮಾನ ರೂಪದ ಯಾವ ಉಪಾಸನೆಯಿದೆ ಅದು ಗೃಹಸ್ಥರು ಷಟ್‌ಕರ್ಮಗಳ ಮೂಲಕ ಉಪಾರ್ಜಿಸಿದ ಆ ಪಾಪ ಕರ್ಮರೂಪದ ಮಲವನ್ನು ದೂರ ಮಾಡುತ್ತದೆ ಅದರಂತೆ ಶುದ್ಧ ಮಾಡಿ ಬಿಡುತ್ತದೆ.

**ಭಾವಾರ್ಥ :-** ಗೃಹಸ್ಥರಿಗೆ ನಿತ್ಯವೂ ಆರಂಭ ಮೊದಲಾದವುಗಳಿಂದ ನಿರಂತರ ಪಾಪದ ಉಪಾರ್ಜನೆಯಾಗುತ್ತಿರುತ್ತದೆ. ಆ ಪಾಪವನ್ನು ತೊಳೆದು ಹಾಕುವಲ್ಲಿ ಮುನೀಶ್ವರರಿಗೆ ಕೊಡಲಾಗುವ ದಾನವೇ ಸಮರ್ಥವಿದೆ. ಯಾವ ಪ್ರಕಾರ ರುಧಿರವು ತಗಲಿದ್ದರೆ ಅದು ರುಧಿರದಿಂದ ತೊಳೆಯಲ್ಪಡುವುದಿಲ್ಲ, ಆದರೆ ನೀರಿನಿಂದ ತೊಳೆಯುತ್ತದೆ; ಅದೇ ಪ್ರಕಾರ ಗೃಹಸ್ಥರ ಆರಂಭದಿಂದ ಉತ್ಪನ್ನವಾದ ಪಾಪಮಲವು ಗೃಹತ್ಯಾಗ ಮಾಡಿದ ಸಾಧುಗಳಿಗೆ ಕೊಡಲಾಗುವ ದಾನದಿಂದ ತೊಳೆಯಲ್ಪಡುತ್ತದೆ.

ಈಗ ದಾನದ ವಿಶೇಷ ಫಲವನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಉಚ್ಚೈರ್ಗೋತ್ರಂ ಪ್ರಣತೇರ್ಭೋಗೋ ದಾನಾದುಪಾಸನಾತ್ಪೂಜಾ ।**
**ಭಕ್ತೇಃ ಸುಂದರರೂಪಂ ಸ್ತವನಾತ್ಕೀರ್ತಿಸ್ತಪೋನಿಧಿಷು ॥೧೧೫॥**

**ಅರ್ಥ :-** ತಪಸ್ಸಿನ ನಿಧಾನ, ಸಾಮ್ಯಭಾವದ ಧಾರಕ, ಇಪ್ಪತ್ತೆರಡು ಪರೀಷಹಗಳನ್ನು ಸಹಿಸುವಂಥ ತಮ್ಮ ದೇಹದಿಂದ ನಿರ್ಮಮತ್ವ, ಪಂಚೇಂದ್ರಿಯ ವಿಷಯಗಳಿಂದ ಅತ್ಯಂತ ವಿರಕ್ತ, ಅಭಿಮಾನ, ಕಷಾಯ ಮೊದಲಾದವುಗಳಿಂದ ರಹಿತ, ಆತ್ಮವಿಶುದ್ಧತೆಯ ಇಚ್ಛುಕರಿರುವಂಥ ಯಾವ ಉತ್ತಮ ಪಾತ್ರದ ಮುನಿರಾಜರಿದ್ದಾರೆ. ಅವರಿಗೆ ಪ್ರಣತಿ ಎಂದರೆ ನಮಸ್ಕಾರ ಮಾಡುವುದರಿಂದ ಸ್ವರ್ಗಲೋಕದಲ್ಲಿ ಜನ್ಮ, ಸ್ವರ್ಗದಿಂದ ಇಳಿದು ಬಂದು ತೀರ್ಥಂಕರ ರೂಪದಲ್ಲಿ ಜನ್ಮ, ಚಕ್ರವರ್ತಿತನದಲ್ಲಿ ಜನ್ಮರೂಪದ ಉಚ್ಚಗೋತ್ರವನ್ನು ಪಡೆದು ಕೊನೆಗೆ ಸಿದ್ಧರ ಸರ್ವೋತ್ಕೃಷ್ಟ ಉಚ್ಚತೆಗೆ ಪ್ರಾಪ್ತರಾಗುತ್ತಾರೆ.

ಉತ್ತಮ ಪಾತ್ರಕ್ಕೆ ದಾನ ಕೊಡುವುದರಿಂದ ಭೋಗ ಭೂಮಿಯ ಭೋಗ, ದೇವಲೋಕದ ಭೋಗ, ಮತ್ತೆ ದೊರೆ ಮೊದಲಾದ ಭೋಗ, ಪುನಃ ಅಹಮಿಂದ್ರಲೋಕದ ಭೋಗ ಪಡೆದು, ತೀರ್ಥಂಕರ ಚಕ್ರವರ್ತಿಯಾಗಿ, ನಿರ್ವಾಣದ ಅನಂತ ಸುಖದ ಭೋಗವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಉತ್ತಮ ಪಾತ್ರರಿರುವಂಥ ಸಾಧುಗಳ ಉಪಾಸನೆ ಮಾಡುವುದರಿಂದ ಮೂರು ಲೋಕದಲ್ಲಿ ಪೂಜ್ಯರಾದ ಕೇವಲಿಗಳಾಗುತ್ತಾರೆ. ಉತ್ತಮ ಪಾತ್ರರಾದ ಸಾಧುಗಳ ಭಕ್ತಿ ಮಾಡುವುದರಿಂದ ಸುಂದರ ರೂಪವು ಎಂದರೆ ಕೇವಲಜ್ಞಾನದ ರೂಪವು ಪ್ರಾಪ್ತವಾಗಿ ಹೋಗುತ್ತದೆ. ಉತ್ತಮ ಪಾತ್ರರಾದ ಸಾಧುಗಳ ಸ್ತುತಿ ಮಾಡುವುದರಿಂದ ಮೂರುಲೋಕದಲ್ಲಿ ಹರಡಿಹೋಗುವಂಥ ಕೀರ್ತಿ, ಇಂದ್ರ ಮೊದಲಾದವರಿಂದ ಸ್ತುತಿ, ಕೀರ್ತನೆಗೆ ಪ್ರಾಪ್ತರಾಗಿ ಬಿಡುತ್ತಾರೆ.

ಈಗ ದಾನದ ವಿಶೇಷ ಪ್ರಭಾವವನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಕ್ಷಿತಿಗತಮಿವ ವಟಬೀಜಂ ಪಾತ್ರಗತಂ ದಾನಮಲ್ಪಮಪಿ ಕಾಲೇ ।**
**ಫಲತಿಚ್ಛಾಯಾವಿಭವಂ ಬಹುಫಲಮಿಷ್ಟಂ ಶರೀರಭೃತಾಮ್ ॥೧೧೬॥**

**ಅರ್ಥ :-** ಸಕಾಲದಲ್ಲಿ ಸತ್ಪಾತ್ರರಿಗೆ ಕೊಡಲ್ಪಟ್ಟ ದಾನವು ಅಲ್ಪವಾಗಿದ್ದರೂ ಕೂಡ ಸಮೃದ್ಧವಾದ ಭೂಮಿಯಲ್ಲಿ ಬಿತ್ತಿದ ವಟದ ಬೀಜದಂತೆ ಪ್ರಾಣಿಗಳಿಗೆ ಛಾಯೆ ಎಂದರೆ ಮಾಹಾತ್ಮ್ಯ, ಐಶ್ವರ್ಯ ಮತ್ತು ವಿಭವ ಎಂದರೆ ಭೋಗೋಪಭೋಗದ ಸಂಪತ್ತುರೂಪದ ಅಧಿಕ ಐಚ್ಚಿಕ ಫಲವನ್ನು ಕೊಡುತ್ತದೆ. ಆದುದರಿಂದ ಪಾತ್ರದಾನದ ಫಲವು ಅಚಿಂತ್ಯವಿದೆ. ಪಾತ್ರದಾನದ ಪ್ರಭಾವದಿಂದ ಸಮ್ಯಕ್ತ್ವದ ಗ್ರಹಣವಾಗಿ ಬಿಡುತ್ತದೆ. ಸಮ್ಯಕ್ತ್ವದಿಂದ ರಹಿತನಾದ ಮಿಥ್ಯಾದೃಷ್ಟಿಯು ಕೂಡ ಪಾತ್ರದಾನದ ಪ್ರಭಾವದಿಂದ ಉತ್ತಮ ಭೋಗಭೂಮಿಯಲ್ಲಿ ಹೋಗಿ ಉತ್ಪನ್ನನಾಗುತ್ತಾನೆ.

ಭೋಗಭೂಮಿಯಲ್ಲಿ ಮೂರು ಪಲ್ಯದ ಆಯು, ಮೂರು ಹರದಾರಿ ಎತ್ತರ ಶರೀರ, ಅದ್ಭುತಸುಂದರ ರೂಪು, ಸಮಚತುರಸ್ರ ಸಂಸ್ಥಾನ, ಮಹಾಬಲ ಪರಾಕ್ರಮಯುಕ್ತ ಮನುಷ್ಯರಾಗುತ್ತಾರೆ. ಸ್ತ್ರೀ-ಪುರುಷರ ಯುಗಲವು ಉತ್ಪನ್ನವಾಗುತ್ತದೆ. ಮೂರು ದಿವಸ ಕಳೆದ ನಂತರ ಯಾವಾಗ ಒಂದಿಷ್ಟು ಆಹಾರದ ಇಚ್ಛೆಯಾಗುತ್ತದೆ ಆಗ ಒಂದು ಬೋರೆ ಹಣ್ಣಿನಷ್ಟು ಆಹಾರ ಮಾಡಿ ಕ್ಷುಧೆಯ ವೇದನೆಯಿಂದ ರಹಿತರಾಗಿ ಬಿಡುತ್ತಾರೆ. ಹತ್ತು ಪ್ರಕಾರದ ಕಲ್ಪವೃಕ್ಷಗಳಿಂದ ಪ್ರಾಪ್ತವಾಗುವ ಐಚ್ಚಿಕ ಭೋಗಗಳನ್ನು ಭೋಗಿಸುತ್ತಾರೆ. ಅಲ್ಲಿ ಶೀತ-ಉಷ್ಣಗಳ ಕಷ್ಟವಿಲ್ಲ, ಮಳೆಯ ಕಷ್ಟವಿಲ್ಲ, ಹಗಲು-ರಾತ್ರಿಗಳ ಭೇದವಿಲ್ಲ ಯಾವಾಗಲೂ ಅಂಧಕಾರ ರಹಿತ ಪ್ರಕಾಶಮಯವಾದ ಸಮಯವಿರುತ್ತದೆ. ಶೀತಲ, ಮಂದ, ಸುಗಂಧಮಯವಾದ ವಾಯುವು ನಿರಂತರ ಚಲಿಸುತ್ತಿರುತ್ತದೆ. ಭೂಮಿಯಲ್ಲಿ ಧೂಳು, ಕಲ್ಲು, ಮುಳ್ಳು, ಹುಲ್ಲು, ಕೆಸರು ಮೊದಲಾದವುಗಳಿರುವುದಿಲ್ಲ, ಸ್ಫಟಿಕ ಮಣಿಯ ಸಮಾನವಾದ ಭೂಮಿಯಿರುತ್ತದೆ. ಅಲ್ಲಿ ಜೀವನದ ತುಂಬೆಲ್ಲ ರೋಗವಿಲ್ಲ, ಕ್ಲೇಶವಿಲ್ಲ, ದೋಷವಿಲ್ಲ, ವೃದ್ಧಾಪ್ಯವಿಲ್ಲ, ಅಲ್ಲಿ ಒಡೆಯನಿಲ್ಲ, ಸೇವಕನಿಲ್ಲ, ಸ್ವ-ಪರ ಚಕ್ರದ ಭಯವಿಲ್ಲ, ಷಟ್ಕರ್ಮರೂಪದ ಆಜೀವಿಕೆ ಮಾಡಬೇಕಾಗುವುದಿಲ್ಲ.

**ಕಲ್ಪವೃಕ್ಷ :** ೧) ತೂರ್ಯಾಂಗ, ೨) ಪಾತ್ರಾಂಗ, ೩) ಭೂಷಣಾಂಗ, ೪)ಪಾನಾಂಗ, ೫) ಆಹಾರಾಂಗ, ೬) ಪುಷ್ಪಾಂಗ, ೭) ಜ್ಯೋತಿರಾಂಗ, ೮) ಗೃಹಾಂಗ, ೯) ವಸ್ತ್ರಾಂಗ, ೧೦) ದೀಪಾಂಗವೆಂದು ಹತ್ತು ಪ್ರಕಾರದ ಕಲ್ಪವೃಕ್ಷಗಳಿವೆ.

**ತೂರ್ಯಾಂಗ** ಜಾತಿಯ ಕಲ್ಪವೃಕ್ಷವಂತೂ ಮುರಲಿ, ಮೃದಂಗ ಇತ್ಯಾದಿ ಕರ್ಣೇಂದ್ರಿಯವನ್ನು ತೃಪ್ತಪಡಿಸುವಂಥ ವಾದ್ಯ ಕೊಡುತ್ತದೆ.

**ಪಾತ್ರಾಂಗ** ಜಾತಿಯ ಕಲ್ಪವೃಕ್ಷವು ಕಣ್ಣುಗಳಿಗೆ ಆನಂದವನ್ನುಂಟು ಮಾಡುವಂಥ ರನ್ನ-ಚಿನ್ನಮಯವಾದ ಅನೇಕ ಪ್ರಕಾರದ ಕಲಶ, ಕನ್ನಡಿ, ಗಿಂಡಿ, ಆಸನ, ಮಂಚ ಮೊದಲಾದ ಸಮಸ್ತ ಪ್ರಕಾರದ ವಸ್ತುಗಳನ್ನು ಕೊಡುತ್ತದೆ.

**ಭೂಷಣಾಂಗ** ಜಾತಿಯ ಕಲ್ಪವೃಕ್ಷವು ಅನೇಕ ಪ್ರಕಾರದ ಆಭೂಷಣ ಕ್ಷಣ-ಕ್ಷಣಕ್ಕೆ ಧರಿಸಲು ಯೋಗ್ಯವಿರುವ ಕೊರಳ ಹಾರ, ಮಕುಟ, ಕುಂಡಲ, ಉಂಗುರ ಮೊದಲಾದ ಸರ್ವಾಂಗಗಳನ್ನು ಅಲಂಕರಿಸುವಂಥ ಅಥವಾ ಮನೆ, ದ್ವಾರ, ಶಯ್ಯೆ, ಆಸನ ಹಾಗೂ ನೆಲವನ್ನಲಂಕರಿಸುವಂಥ ಅನೇಕ ಆಭೂಷಣಗಳನ್ನು ಕೊಡುತ್ತದೆ.

**ಪಾನಾಂಗ** ಜಾತಿಯ ಕಲ್ಪವೃಕ್ಷವು ಕುಡಿಯಲು ಯೋಗ್ಯವಿರುವ ನಾನಾ ಪ್ರಕಾರದ ಶೀತಲ,

ಸುಗಂಧಿತ ಜಲವನ್ನು ಕೊಡುತ್ತದೆ.

**ಆಹಾರಾಂಗ** ಜಾತಿಯ ಕಲ್ಪವೃಕ್ಷವು ಅನೇಕ ಪ್ರಕಾರದ ಸ್ವಾದಿಷ್ಟ ಆಹಾರವನ್ನು ಕೊಡುತ್ತದೆ. ಆದರೆ ಅಲ್ಲಿ ಹಸಿವೆಯ ಕಷ್ಟವೇ ಇಲ್ಲದಿರುವುದರಿಂದ ರೋಗವಿಲ್ಲದೆ ಔಷಧವನ್ನು ಯಾರು ಸ್ವೀಕರಿಸುವರು ? ಭೋಗಭೂಮಿಯ ಜೀವರುಗಳಿಗೆ ದಿನಾಲು ಹಸಿವೆಯಾಗುವುದಿಲ್ಲ. ಮೂರು ದಿವಸ ಕಳೆದ ನಂತರ ಬೋರೆಯ ಹಣ್ಣಿನಷ್ಟು ಆಹಾರ ಸ್ವೀಕರಿಸುತ್ತಾರೆ.

**ಪುಷ್ಪಾಂಗ** ಜಾತಿಯ ಕಲ್ಪವೃಕ್ಷವು ಅನೇಕ ಪ್ರಕಾರದ ಅತ್ಯಂತ ಕೋಮಲ ಸುಗಂಧಿತವಾದ ಪುಷ್ಪಗಳ ಮಾಲೆ, ಆಭೂಷಣ ಮೊದಲಾದವುಗಳನ್ನು ಕೊಡುತ್ತದೆ.

**ಜ್ಯೋತಿರಾಂಗ** ಜಾತಿಯ ಕಲ್ಪವೃಕ್ಷಗಳ ಪ್ರಕಾಶದಿಂದ ಸೂರ್ಯ-ಚಂದ್ರರುಗಳೇ ಕಂಡು ಬರುವುದಿಲ್ಲ. ಸೂರ್ಯನಿಗಿಂತ ಅದೆಷ್ಟೋ ಗುಣಿತ ಅಧಿಕ ಪ್ರಕಾಶವು ಅವುಗಳದಿರುತ್ತದೆ. ಅದೇ ಕಾರಣದಿಂದ ಅಲ್ಲಿ ರಾತ್ರಿ-ಹಗಲುಗಳು ಭೇದವಿರುವುದಿಲ್ಲ.

**ಗೃಹಾಂಗ** ಜಾತಿಯ ಕಲ್ಪವೃಕ್ಷವು ಎಂಭತ್ತಾನ್ನಲ್ಕು ಭಾಗಗಳವರೆಗೆ ಸುಂದರ ಚಿತ್ರ-ವಿಚಿತ್ರ ರತ್ನಗಳಿಂದ ಶೋಭಾಯಮಾನವಾದ ಅನೇಕ ಪ್ರಕಾರದ ಮನೆಗಳನ್ನು ಕೊಡುತ್ತದೆ.

**ವಸ್ತ್ರಾಂಗ** ಜಾತಿಯ ಕಲ್ಪವೃಕ್ಷವು ಇಚ್ಛಾನುಸಾರ ಧರಿಸಲು ಯೋಗ್ಯವಿರುವ ವಸ್ತ್ರ, ಶಯ್ಯೆ, ಆಸನ, ಹಾಸುವ-ಹೊದೆಯುವ ಮೊದಲಾದವುಗಳನ್ನು ಕೊಡುತ್ತದೆ.

**ದೀಪಾಂಗ** ಜಾತಿಯ ಕಲ್ಪವೃಕ್ಷವು ಅಂಧಕಾರವಿಲ್ಲದಿದ್ದರೂ ದೀಪ ಮಾಲಿಕೆಯ ಶೋಭೆಯನ್ನು ಹರಡುತ್ತದೆ.

ಭೋಗಭೂಮಿಯಲ್ಲಿ ಸ್ತ್ರೀ-ಪುರುಷರ ಯುಗಲದ ಮರಣ ಸಮಯದಲ್ಲಿ ಪುರುಷನಿಗೆ ಸೀನು ಮತ್ತು ಸ್ತ್ರೀಗೆ ಆಕಳಿಕೆ ಬರುತ್ತದೆ, ಅದೇ ಸಮಯದಲ್ಲಿ ಯುಗಲ ಸಂತಾನದ ಉತ್ಪತ್ತಿಯಾಗುತ್ತದೆ. ಸಂತಾನಕ್ಕೆ ತಾಯಿ-ತಂದೆಗಳು ಕಾಣುವುದಿಲ್ಲ ಮತ್ತು ತಾಯಿ ತಂದೆಯರು ಸಂತಾನವನ್ನು ನೋಡುವುದಿಲ್ಲ; ಆದುದರಿಂದ ಅವರಿಗೆ ವಿಯೋಗದ ದುಃಖವಿಲ್ಲ, ಮರಣವಾದ ನಂತರ ಶರೀರವು ಶರದ ಋತುವಿನ ಮೋಡಗಳ ಹಾಗೆ ಕರಗಿ ಹೋಗುತ್ತದೆ.

ನವೀನ ಯುಗಲವು ಉತ್ಪನ್ನವಾದ ನಂತರ ಮೊದಲು ಏಳು ದಿನವಂತೂ ತಮ್ಮ ಬೆರಳು ಚೀಪುತ್ತವೆ. ಅದರ ನಂತರ ಎರಡನೇ ಏಳು ದಿನಗಳವರೆಗೆ ಅಂಗಾತು-ಬೋರಲು ಆಗುತ್ತಿರುತ್ತವೆ. ಮೂರನೇ ಏಳು ದಿನಗಳವರೆಗೆ ಅಸ್ಥಿರ ಗಮನ ಮಾಡತೊಡಗುತ್ತವೆ. ನಾಲ್ಕನೇ ಏಳು ದಿನಗಳವರೆಗೆ ಸ್ಥಿರ ಗಮನ ಮಾಡತೊಡಗುತ್ತವೆ. ಐದನೇ ವಾರದಲ್ಲಿ ಬೆಳೆದು ಪರಿಪೂರ್ಣ ತರುಣರಾಗಿ ಹೋಗುತ್ತಾರೆ. ಆರನೇ ವಾರದಲ್ಲಿ ಸಮಸ್ತ ದರ್ಶನ ಹಾಗೂ ವಿಜ್ಞಾನ ತಿಳಿಯತೊಡಗುತ್ತಾರೆ. ಏಳನೇ ವಾರದಲ್ಲಿ ಎಲ್ಲ ಪ್ರಕಾರದ ಚತುರತೆ ಹಾಗೂ ಕಲೆಗಳನ್ನು ಕಲಿತುಕೊಳ್ಳುತ್ತಾರೆ. ಈ ಪ್ರಕಾರ ನಲವತ್ತೊಂಭತ್ತು ದಿವಸಗಳಲ್ಲಿ ಪರಿಪೂರ್ಣರಾಗಿ ಅನೇಕ ಪೃಥಕ್-ವಿಕ್ರಿಯೆ ಅಪೃಥಕ್-ವಿಕ್ರಿಯೆ ಸಹಿತ ಹಲವು ಪ್ರಕಾರದ ಮನೆ, ಮಹಡಿ, ವನಗಳಲ್ಲಿ ವಿಹಾರ ಮಾಡುತ್ತ ಕ್ಷಣ-ಕ್ಷಣದಲ್ಲಿ ಅನೇಕ ಪ್ರಕಾರದ ಹೊಸ-ಹೊಸ ವಿಷಯ ಸಾಮಗ್ರಿಗಳನ್ನು ಭೋಗಿಸುತ್ತ ವಿವಿಧ ಸುಖರೂಪದ ಕ್ರೀಡೆ ಹಾವ-ಭಾವ ಮೊದಲಾದ ಚೇಷ್ಟೆಗಳನ್ನು ಮಾಡುತ್ತ ಮೂರು ಪಲ್ಯ ಆಯುಷ್ಯವನ್ನು ಪೂರ್ಣ ಮಾಡಿ ಮರಣ ಸಮಯದಲ್ಲಿ ಸೀನು-ಆಕಳಿಕೆ ಮಾತ್ರದಿಂದ ಪ್ರಾಣತ್ಯಾಗ ಮಾಡುತ್ತಾರೆ. ಸಮ್ಯಗ್ದೃಷ್ಟಿಗಳಾಗಿದ್ದರೆ ಸೌಧರ್ಮ-ಈಶಾನ ಸ್ವರ್ಗದಲ್ಲಿ ಹೋಗುತ್ತಾರೆ. ಮಿಥ್ಯಾದೃಷ್ಟಿಗಳಾಗಿದ್ದರೆ ಮರಣಹೊಂದಿ ಭವನವಾಸೀ, ವ್ಯಂತರ, ಜ್ಯೋತಿಷೀ ದೇವಗಳಲ್ಲಿ ಉತ್ಪನ್ನರಾಗುತ್ತಾರೆ. ಮಂದಕಷಾಯದ ಪ್ರಭಾವದಿಂದ ದೇವಲೋಕವನ್ನು ಹೊರತುಪಡಿಸಿ ಅನ್ಯ ಗತಿಗಳಲ್ಲಿ ಹೋಗುವುದಿಲ್ಲ.

ಸಮ್ಯಗ್ದೃಷ್ಟಿಯಿದ್ದರೆ, ಶ್ರಾವಕ ವ್ರತಗಳನ್ನು ಪಾಲಿಸುತ್ತಿದ್ದರೆ ಮತ್ತು ಪಾತ್ರಗಳಿಗೆ ದಾನ ಕೊಡುತ್ತಿದ್ದರೆ ಹದಿನಾರನೆಯ ಸ್ವರ್ಗದವರೆಗೆ ಮಹಾನ ಋದ್ಧಿಧಾರೀ ದೇವಗಳಲ್ಲಿ ಉತ್ಪನ್ನನಾಗುತ್ತಾನೆ.

**ಪಾತ್ರದ ಭೇದ :-** ಆಗಮದಲ್ಲಿ ಉತ್ತಮ, ಮಧ್ಯಮ ಮತ್ತು ಜಘನ್ಯವೆಂದು ಮೂರು ಪ್ರಕಾರದ

ಪಾತ್ರಗಳನ್ನು ಹೇಳಿದ್ದಾರೆ. ಮಹಾವ್ರತಗಳ ಧಾರಕ, ಇಪ್ಪತ್ತೆಂಟು ಮೂಲಗುಣ ಹಾಗೂ ಎಂಭತ್ತಾನ್ಲ್ಕು ಲಕ್ಷ ಉತ್ತರ ಗುಣಗಳ ಧಾರಕ, ದೇಹದಿಂದ ನಿರ್ಮಮತ್ವರಾದ ವೀತರಾಗೀ ಸಾಧುಗಳು **ಉತ್ತಮಪಾತ್ರ**ರಿದ್ದಾರೆ. ಸಮ್ಯಗ್ದೃಷ್ಟಿ ವ್ರತಸಹಿತ ಹತ್ತು-ಹನ್ನೊಂದನೆಯ ಪ್ರತಿಮೆಗಳ ಧಾರಕ ಶ್ರಾವಕರು **ಮಧ್ಯಮಪಾತ್ರ**ರಿದ್ದಾರೆ. ಸ್ತ್ರಿ ಪರ್ಯಾಯದಲ್ಲಿ ಸೀಮೆಯವರೆಗೆ ವ್ರತಗಳನ್ನು ಧಾರಣ ಮಾಡುವಂಥ, ಒಂದು ಬಟ್ಟೆಯಲ್ಲದೆ ಅನ್ಯ ಸಮಸ್ತ ಪರಿಗ್ರಹರಹಿತ. ಇತರರ ಮನೆಯಲ್ಲಿ ಒಂದು ಬಾರಿ ಯಾಚನೆ ಮಾಡದೆ ಮೌನಪೂರ್ವಕ ಭಿಕ್ಷಾ ಭೋಜನ ಮಾಡುವಂಥ, ಆರ್ಯಿಕೆಯರ ಸಂಘದಲ್ಲಿ ಧರ್ಮಧ್ಯಾನದೊಡನೆ ಮಹಾತಪಶ್ಚರಣ ಮಾಡುವಂಥ ಆರ್ಯಿಕೆಯರು **ಮಧ್ಯಮಪಾತ್ರ**ರಿದ್ದಾರೆ. ಅಣುವ್ರತ ಮತ್ತು ಸಮ್ಯಗ್ದರ್ಶನ ಸಹಿತ ಶ್ರಾವಿಕೆಯೂ ಮಧ್ಯಮಪಾತ್ರಳಿದ್ದಾಳೆ. ವ್ರತರಹಿತ ಜಿನೇಂದ್ರ ವಚನಗಳ ಶ್ರದ್ಧೆಯುಳ್ಳ ಸಮ್ಯಗ್ದರ್ಶನ ಸಹಿತ ಪುರುಷ ಮತ್ತು ಸ್ತ್ರೀಯರು **ಜಘನ್ಯಪಾತ್ರ**ರಿದ್ದಾರೆ.

ಈ ಮೂರು ಪ್ರಕಾರದ ಪಾತ್ರಗಳಿಗೆ ನಾಲ್ಕು ಪ್ರಕಾರದ ದಾನ ಕೊಡುವುದು, ಸತ್ಕಾರ ಮಾಡುವುದು, ಸ್ಥಾನ ಕೊಡುವುದು ಆದರ ಮಾಡುವುದು, ಯಥಾಯೋಗ್ಯ ಸ್ತುತಿ, ಪೂಜೆ, ಪ್ರಶಂಸೆ ಮೊದಲಾದ ವಚನಗಳನ್ನಾಡುವುದು, ಎದ್ದು ನಿಂತುಕೊಳ್ಳುವುದು, ಉಚ್ಚರೆಂದು ಮನ್ನಿಸುವುದು ಅದೆಲ್ಲವು ದಾನವಿದೆ.

ಈಗ ನಾಲ್ಕು ಪ್ರಕಾರದ ದಾನಗಳನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಆಹಾರೌಷಧಯೋರಪ್ಯುಪಕರಣಾವಾಸಯೋಶ್ಚ ದಾನೇನ ।**
**ವೈಯಾವೃತ್ಯಂ ಬ್ರುವತೇ ಚತುರಾತ್ಮತ್ವೇನ ಚತುರಸ್ರಾಃ ॥೧೧೭॥**

**ಅರ್ಥ :-** ಚತುರಸ್ರ ಎಂದರೆ ಪ್ರವೀಣರಾದ ಜ್ಞಾನಿಗಳು ಆಹಾರದಾನ, ಔಷಧದಾನ, ಉಪಕರಣದಾನ ಮತ್ತು ಆವಾಸದಾನವೆಂದು ನಾಲ್ಕು ಪ್ರಕಾರದ ದಾನ ಮಾಡಿ ನಾಲ್ಕು ಪ್ರಕಾರದ ವೈಯಾವೃತ್ಯವನ್ನು ಹೇಳುತ್ತಾರೆ.

ಈ ಪ್ರಕಾರ ಗೃಹಸ್ಥರಿಗೆ ನಾಲ್ಕು ಪ್ರಕಾರದ ದಾನ ಮಾಡುಲು ಹೇಳಿದೆ. ಅಭಯದಾನದ ಮುಖ್ಯತೆಯಂತೂ ಷಟ್‌ಕಾಯ ಜೀವಗಳ ವಿರಾಧನೆಯನ್ನು ಕೃತಕಾರಿತ-ಅನುಮೋದನದಿಂದ ತ್ಯಾಗ ಮಾಡಿದ ದಿಗಂಬರ ಮುನಿರಾಜರಿಗೆ ಆಗುತ್ತದೆ. ಶ್ರಾವಕರಿಗೆ ಕೂಡ ತ್ರಸ ಜೀವಗಳ ಸಂಕಲ್ಪೀ ಹಿಂಸೆಯ ತ್ಯಾಗದಿಂದ ಅಭಯದಾನವೇ ಇದೆ. ಆದರೆ ಅಭಯದಾನದ ಮುಖ್ಯತೆಯಂತೂ ಆರಂಭದ ತ್ಯಾಗದಿಂದ ಹಾಗೂ ವಿಷಯಗಳ ಅತ್ಯಂತ ಪರಾಙ್ಮುಖತೆಯಿಂದ ಇರುತ್ತದೆ. ಎಲ್ಲಿಯವರೆಗೆ ಗೃಹಕಾರ್ಯಗಳಿಂದ, ಸಂಪತ್ತಿನಿಂದ, ನ್ಯಾಯರೂಪ ವಿಷಯಗಳಿಂದ ಪರಿಣಾಮವು ವಿರಕ್ತವಾಗುವುದಿಲ್ಲ ಅಲ್ಲಿಯವರೆಗೆ ಆಹಾರ ಮೊದಲಾದ ನಾಲ್ಕು ಪ್ರಕಾರದ ದಾನ ಮಾಡಿ ಪಾಪಗಳ ನಾಶ ಮಾಡಬೇಕು.

**ಸಂಪತ್ತಿಯ ಅಸ್ಥಿರತೆ :-** ಸಂಪತ್ತು, ಆಯು, ಕಾಯಗಳು ಅತ್ಯಂತ ಅಸ್ಥಿರವಿವೆ. ಗೃಹಸ್ಥಾವಸ್ಥೆಯಂತೂ ದಾನದಿಂದಲೇ ಪೂಜ್ಯವಿದೆ. ಆಹಾರ ಮೊದಲಾದ ದಾನಗಳಿಲ್ಲದೆ ಗೃಹಸ್ಥಾವಸ್ಥೆಯಂತೂ ಆರಂಭದ ಭಾರದಿಂದಪಾಷಾಣದ ನೌಕೆಯ ಸಮಾನ ಕೇವಲ ಸಂಸಾರ ಸಮುದ್ರದಲ್ಲಿ ಮುಳುಗಿಸಿಬಿಡುವಂಥದ್ದಿದೆ.

ನಾನು ಸಂಪಾದಿಸಿದ ಈ ಧನವಿದೆ, ತಂದೆ ಮೊದಲಾದವರು ಇಟ್ಟಿರುವುದು, ನನಗೆ ಯಾವುದೇ ಕಷ್ಟವಿಲ್ಲದೆ ಪ್ರಾಪ್ತವಾಗಿಬಿಟ್ಟಿದೆ ಮತ್ತು ರಾಜ್ಯ, ಐಶ್ವರ್ಯ, ದೇಶ, ನಗರ, ವಸ್ತ್ರ ಆಭರಣ, ಸ್ತ್ರೀ, ಸೇವಕರ ಸಮೂಹಗಳೆಲ್ಲವು ಯಾವುದೇ ಖೇದವಿಲ್ಲದೆ ನನಗೆ ಪ್ರಾಪ್ತವಾಗಿವೆ, ಇವೆಲ್ಲವು ಪೂರ್ವಜನ್ಮದಲ್ಲಿ ದಾನ ಕೊಟ್ಟ ದುಃಖೀ ಜೀವಗಳ ಪಾಲನೆ-ಪೋಷಣೆ ಮಾಡಿರುವುದರ ಫಲವಿದೆ. ಪರಧನವನ್ನು ಸ್ವಪ್ನದಲ್ಲಿ ಕೂಡ ಬಯಸಲಿಲ್ಲ, ಪರಮ ಸಂತೋಷ ಧಾರಣ ಮಾಡಿ ವಿಷಯಗಳಿಂದ ವಿರಕ್ತವಾಗಿ ನಿರಿಚ್ಛೆಯ ಭಾವವನ್ನು ಧಾರಣ ಮಾಡಿರುವುದರ ಫಲವಿದೆ. ದೀನ, ದುಃಖೀ, ರೋಗೀ, ಅಸಮರ್ಥ, ಬಾಲಕ, ವೃದ್ಧರುಗಳ ಮೇಲೆ ದಯೆ ಮಾಡಿ ಉಪಕಾರ ಮಾಡಿದುದರ ಫಲವಾಗಿ ಈ ಸಂಪತ್ತು ದೊರಕಿದೆಯೆಂದು ಜ್ಞಾನೀ ಗೃಹಸ್ಥರು ವಿಚಾರ ಮಾಡುತ್ತಾರೆ.

ಈ ಸಂಪತ್ತಿಯ ಸಂಯೋಗವು ಎರಡು ದಿವಸದ್ದೇ ಇದೆ. ಅದು ಪರಲೋಕದಲ್ಲಿ ನಮ್ಮ ಜತೆ ಬರುವುದಿಲ್ಲ,

ಭೂಮಿಯಲ್ಲಿ ಹೂಳಿಟ್ಟಿದ್ದು ಅಲ್ಲೇ ಇರುವುದು, ಪರದೇಶದಲ್ಲಿಟ್ಟಿದ್ದು ಅಲ್ಲೇ ಉಳಿಯುವುದು, ಇತರರಿಗೆ ಕೊಟ್ಟಿದ್ದು ಅವರಲ್ಲೇ ಉಳಿಯುವುದು, ಸ್ತ್ರೀ-ಪುತ್ರ-ಕುಟುಂಬದವರು ಪಾಲುಗಾರರಾಗುವರು, ದೊರೆಗಳು ದೋಚಿಕೊಳ್ಳುವರು ಮತ್ತು ನಾನು ಆಕಸ್ಮಿಕವಾಗಿ ಸತ್ತು ದುರ್ಗತಿಯಲ್ಲಿ ಹೊರಟು ಹೋಗುವೆನು. ನಾನು ಧನದ ಕುರಿತು ಅದೆಷ್ಟೋ ದುರ್ಧ್ಯಾನ ಮಾಡಿ, ಮಹಾಪಾಪದ ಆರಂಭ ಮಾಡಿ, ನಾನಾ ದೇಶಗಳಲ್ಲಿ ಕ್ಷೇತ್ರಗಳಲ್ಲಿ ಭ್ರಮಣ ಮಾಡಿ ಅತ್ಯಂತ ಕಷ್ಟ ಹಾಗೂ ಕಪಟದಿಂದ ಸಂಪಾದಿಸಿದ್ದೆನು, ಪ್ರಾಣಕ್ಕಿಂತಲೂ ಅಧಿಕವಾಗಿ ರಕ್ಷಣೆ ಮಾಡಿದ್ದೆನು. ಈಗ ಈ ಧನವನ್ನು ಬಿಟ್ಟು ಹೇಗೆ ಸತ್ತು ಹೋಗುವುದೆಂದು ವಿಚಾರ ಮಾಡುವುದು ಉಚಿತವಾಗಿಲ್ಲ.

ಜಗತ್ತಿನಲ್ಲಿ ನೋಡಿದರೆ ಕೋಟ್ಯಂತರ ಧನವಿರುತ್ತಿದ್ದರೂ ಎಲ್ಲವೂ ಭೋಗದಲ್ಲಿ ಬರುವುದಿಲ್ಲ. ಭೋಗದಲ್ಲಂತೂ ಅರ್ಧ ಕೆ.ಜಿ. ಧಾನ್ಯ ಬರುತ್ತದೆ. ಆದರೆ ಇನ್ನೂ ಧನವನ್ನು ಹೇಗೆ ಹೆಚ್ಚಿಸಲೆಂಬ ತೃಷ್ಣೆಯು ಅಖಂಡವಾಗಿ ಇರುತ್ತದೆ. ಅಯ್ಯೋ ! ಇತರರ ಹತ್ತಿರವಂತೂ ಐವತ್ತುಲಕ್ಷ ಧನವಿದೆ, ನನ್ನ ಹತ್ತಿರ ಇನ್ನೂ ಐದು ಲಕ್ಷವೇ ಇದೆ. ಈಗ ಇನ್ನೂ ಧನವನ್ನು ಹೇಗೆ ಹೆಚ್ಚಿಸಲಿ ? ಯಾವ ಆರಂಭ ಮಾಡಲಿ, ಯಾವ ಉಪಾಯ ಮಾಡಲಿ, ಯಾರು-ಯಾರನ್ನು ಪ್ರಸನ್ನ ಮಾಡಲಿ, ಯಾವ ವ್ಯಾಪಾರ ಮಾಡಲಿ, ಯಾರೊಡನೆ ಮಿತ್ರತೆ ಮಾಡಲಿ, ಯಾರ ಸಲಹೆಯಿಂದ ನನಗೆ ಧನದ ಸಂಪಾದನೆಯಾಗುವುದು ಸ್ವಲ್ಪ ಸಂಬಳ ಪಡೆದು ಅಧಿಕ ಧನ ಸಂಪಾದನೆ ಮಾಡಿಕೊಡುವಂಥ ಸೇವಕರು ಯಾರಿದ್ದಾರೆ, ಯಾರನ್ನು ಕೆಲಸಕ್ಕೆ ಸೇರಿಸಿಕೊಳ್ಳಲಿ ?

ಇಂಥ ಸಾವಿರಾರು ದುರ್ಧ್ಯಾನ ಮಾಡುತ್ತ ಸಂಸಾರೀ ಜೀವನು ಸಮಸ್ತ ಸಂಪತ್ತು, ರಾಜ್ಯ, ಐಶ್ವರ್ಯಗಳನ್ನು ಬಿಟ್ಟುಕೊಟ್ಟು ಮಹಾಮೂರ್ಚ್ಛೆಯಿಂದ ಆರ್ತ-ರೌದ್ರ ಪರಿಣಾಮದಿಂದ ಸತ್ತು ನರಕದ ಘೋರ ದುಃಖ ಭೋಗಿಸುತ್ತಾನೆ. ಸಂಸಾರದಲ್ಲಿ ಅನಂತ ದುಃಖರೂಪ ಪರಿಭ್ರಮಣ ಮಾಡುತ್ತ ಕ್ಷುಧೆ, ತೃಷೆ, ರೋಗ ದರಿದ್ರತೆಯನ್ನು ಭೋಗಿಸುತ್ತ ಅನಂತಕಾಲ ವ್ಯತೀತ ಮಾಡುತ್ತಾನೆ.

ಈಗ ಇಂಥ ಘೋರ ನಿಕೃಷ್ಟ ಕಾಲದಲ್ಲಿ ಯಾರಾದರೂ ಒಂದಿಷ್ಟು ಮೋಹನಿದ್ರೆಯ ಉಪಶಮವಾಗುವುದರಿಂದ ಜಿನೇಂದ್ರ ಭಗವಂತರ ವಚನಗಳಿಂದ ಎಚ್ಚತ್ತುಕೊಂಡು ಯಾರೋ ಅತ್ಯಂತ ವಿರಳರಾದ ಪುರುಷರೇ ತಮ್ಮ ಹಿತದ ವಿಚಾರ ಮಾಡುತ್ತ ನಾಲ್ಕು ಪ್ರಕಾರದ ದಾನಗಳಲ್ಲಿ ಪ್ರವರ್ತನೆ ಮಾಡುತ್ತಾರೆ.

**ಆಹಾರದಾನ :-** ದಾನಗಳಲ್ಲಿ ಆಹಾರ ದಾನವು ಮುಖ್ಯವಿದೆ. ಈ ಜೀವದ ಜೀವನವು ಆಹಾರದಿಂದ ಇದೆ. ಕೋಟ್ಯಂತರ ಸ್ವರ್ಣ ಮುದ್ರೆಗಳ ದಾನವು ಆಹಾರ ದಾನದ ಸಮಾನವಿಲ್ಲ, ಆಹಾರದಿಂದಲೇ ದೇಹವು ಉಳಿಯುತ್ತದೆ. ದೇಹದಿಂದ ರತ್ನತ್ರಯ ಧರ್ಮವು ಪೋಷಿಸಲ್ಪಡುತ್ತದೆ. ರತ್ನತ್ರಯ ಧರ್ಮದಿಂದ ನಿರ್ವಾಣವಾಗುತ್ತದೆ. ನಿರ್ವಾಣದಲ್ಲಿ ಅನಂತ ಸುಖವಿದೆ. ತ್ಯಾಗೀ ನಿರಿಚ್ಛಕ ಸಾಧುಗಳ ಉಪಕಾರವಂತೂ ಒಂದು ಆಹಾರದಾನದಿಂದಲೇ ಇದೆ. ಅವರಂತೂ ಆಹಾರದ ಹೊರತಾಗಿ ಬೇರೇನನ್ನೂ ಸ್ವಲ್ಪ ಮಾತ್ರವೂ ಅಂಗೀಕಾರ ಮಾಡುವುದಿಲ್ಲ, ಆಹಾರವಿಲ್ಲದೆ ಶರೀರವು ಉಳಿಯುವುದಿಲ್ಲ, ಅನೇಕ ರೋಗಗಳಾಗಿ ಬಿಡುತ್ತವೆ. ಆಹಾರವಿಲ್ಲದೆ ಜ್ಞಾನಾಭ್ಯಾಸವಾಗುವುದಿಲ್ಲ; ವ್ರತ, ಸಂಯಮ, ತಪಗಳೊಂದೂ ಫಲಿಸುವುದಿಲ್ಲ, ಆಹಾರವಿಲ್ಲದೆ ಸಾಮಾಯಿಕ ಪ್ರತಿಕ್ರಮಣ ಕಾಯೋತ್ಸರ್ಗ, ಧ್ಯಾನ ಮೊದಲಾದವಾವವೂ ಆಗುವುದಿಲ್ಲ, ಆಹಾರವಿಲ್ಲದೆ ಪರಮಾಗಮದ ಉಪದೇಶವಾಗುವುದಿಲ್ಲ, ಆಹಾರವಿಲ್ಲದೆ ಉಪದೇಶ ಗ್ರಹಣ ಮಾಡುವಲ್ಲಿ ಸಮರ್ಥವಾಗುವ ಸಾಧ್ಯತೆಯಿಲ್ಲ.

ಆಹಾರವಿಲ್ಲದಿದ್ದರೆ ಕಾಂತಿಯು ನಷ್ಟವಾಗಿ ಹೋಗುತ್ತದೆ. ಬುದ್ಧಿಯು ನಷ್ಟವಾಗಿ ಹೋಗುತ್ತದೆ, ಕೀರ್ತಿ, ಕ್ಷಾಂತಿ, ಶಾಂತಿ, ನೀತಿ, ಪ್ರೀತಿ, ಪ್ರತೀತಿ, ಗತಿ, ರತಿ, ಉಕ್ತಿ, ಶಕ್ತಿ, ದ್ಯುತಿ ಮೊದಲಾದ ಸಮಸ್ತ ಗುಣಗಳು ನಷ್ಟವಾಗಿ ಹೋಗುತ್ತವೆ. ಆಹಾರವಿಲ್ಲದೆ ಸಮಭಾವ, ಇಂದ್ರಿಯದಮನ, ಜೀವದಯೆ, ಮುನಿ-ಶ್ರಾವಕರ ಧರ್ಮ, ವಿನಯದಲ್ಲಿ ಪ್ರವೃತ್ತಿ, ನ್ಯಾಯದಲ್ಲಿ ಪ್ರವೃತ್ತಿ, ತಪದಲ್ಲಿ ಪ್ರವೃತ್ತಿ, ಯಶದಲ್ಲಿ ಪ್ರವೃತ್ತಿಗಳೆಲ್ಲವೂ ನಷ್ಟವಾಗಿ ಹೋಗುತ್ತವೆ.

ಆಹಾರವಿಲ್ಲದಿದ್ದರೆ ವಚನದ ಪ್ರವೀಣತೆಯು ನಷ್ಟವಾಗಿ ಹೋಗುತ್ತದೆ, ಶರೀರದ ವರ್ಣವು ಕೆಟ್ಟು ಹೋಗುತ್ತದೆ,

ಶರೀರದಲ್ಲಿ-ಮುಖದಲ್ಲಿ ದುರ್ಗಂಧತೆಯು ಬಂದು ಬಿಡುತ್ತದೆ, ಶರೀರವು ಜೀರ್ಣವಾಗಿ ಬಿಡುತ್ತದೆ, ಸಮಸ್ತಕ್ರಿಯೆಗಳು ನಷ್ಟವಾಗಿ ಹೋಗುತ್ತವೆ. ಆಹಾರವು ದೊರಕದಿದ್ದರೆ ತಮ್ಮ ಪ್ರೀತಿಯ ಪತ್ನಿ-ಪುತ್ರ-ಪುತ್ರಿಯರನ್ನು ಮಾರಿ ಬಿಡುತ್ತಾನೆ. ಆಹಾರವಿಲ್ಲದಿದ್ದರೆ ಕಣ್ಣುಗಳಿಂದ ನೋಡುವುದಕ್ಕೆ ಕೂಡ ಸಮರ್ಥರಾಗುವುದಿಲ್ಲ. ಕಿವಿಗಳಿಂದ ಕೇಳುವುದಕ್ಕೆ, ನಾಸಿಕದಿಂದ ಗಂಧಗ್ರಹಣ ಮಾಡುವುದಕ್ಕೆ, ಸ್ಪರ್ಶನೇಂದ್ರಿಯದಿಂದ ಸ್ಪರ್ಶ ಮಾಡುವುದಕ್ಕೆ ಶಕ್ತಿ ಸಾಮರ್ಥ್ಯವು ಇಲ್ಲದಾಗಿ ಬಿಡುತ್ತದೆ.

ಆಹಾರವಿಲ್ಲದಿದ್ದರೆ ಸಮಸ್ತ ಚೇಷ್ಟೆಗಳಿಂದ ರಹಿತ ಮೃತರ ಸಮಾನವಾಗಿ ಹೋಗುತ್ತದೆ. ಆಹಾರವಿಲ್ಲದಿದ್ದರೆ ಮರಣವಾಗಿ ಹೋಗುತ್ತದೆ. ಆಹಾರವಿಲ್ಲದೆ ಚಿಂತೆ,ಶೋಕ,ಭಯ, ಕ್ಲೇಶ ಮೊದಲಾದ ಸಮಸ್ತ ಸಂತಾಪಗಳು ಪ್ರಕಟವಾಗುತ್ತವೆ. ಆಹಾರವಿಲ್ಲದಿದ್ದರೆ ದೈನ್ಯತೆಯು ಬಂದು ಬಿಡುತ್ತದೆ, ಸಂಸಾರೀ ಜನರು ಅವಮಾನ ಮಾಡುತ್ತಾರೆ. ಇಂಥ ಘೋರ ದುಃಖ, ದುರ್ಧ್ಯಾನಗಳನ್ನು ದೂರ ಮಾಡುವಂಥ ಆಹಾರದಾನವನ್ನು ಯಾವನು ಕೊಡುತ್ತಾನೆ. ಅವನು ಸಮಸ್ತ ವ್ರತ ಸಂಯಮದಲ್ಲಿ ಪ್ರವೃತ್ತಿ ಮಾಡಿಸಿದನು. ಸಮಸ್ತ ರೋಗಾದಿಗಳನ್ನು ದೂರ ಮಾಡಿದನು. ಆದುದರಿಂದ ಆಹಾರದಾನಕ್ಕೆ ಸಮಾನವಾದ ಉಪಕಾರವು ಬೇರೆ ಯಾವದೂ ಇಲ್ಲ.

**ಔಷಧ ದಾನ ಃ-** ರೋಗದ ನಾಶ ಮಾಡುವಂಥ ಪ್ರಾಸುಕ ಔಷಧದ ದಾನವು ಶ್ರೇಷ್ಠವಿದೆ. ರೋಗದಿಂದ ವ್ರತ ಸಂಯಮಗಳು ಕೆಟ್ಟು ಹೋಗುತ್ತವೆ. ಸ್ವಾಧ್ಯಾಯ, ಧ್ಯಾನ, ಮೊದಲಾದ ಸಮಸ್ತ ಧರ್ಮಕಾರ್ಯಗಳ ಲೋಪವಾಗಿ ಹೋಗುತ್ತದೆ. ರೋಗಿಗಳಿಂದ ಸಾಮಾಯಿಕ ಮೊದಲಾದ ಆವಶ್ಯಕಗಳು ಸಂಭವಿಸುವುದಿಲ್ಲ. ರೋಗದಿಂದ ನಿರಂತರ ಆರ್ತ ಧ್ಯಾನವಾಗುತ್ತದೆ. ಮರಣವು ಕೆಟ್ಟು ಹೋಗುತ್ತದೆ. ರೋಗಿಗೆ ದಿನ-ದಿನವೂ ಸಂಕ್ಲೇಶವು ಹೆಚ್ಚುತ್ತದೆ. ರೋಗಿಯು ಅಪಘಾತ ಮಾಡಿಕೊಳ್ಳಲು ಬಯಸುತ್ತಾನೆ. ಪರಾಧೀನನಾಗಿ ಹೋಗುತ್ತಾನೆ. ಮನ-ಇಂದ್ರಿಯಗಳು ಚಂಚಲವಾಗುತ್ತವೆ. ಏಳಲು-ಕೂಡ್ರಲು, ಮಲಗಲು-ನಡೆಯಲು ಕಠಿಣವಾಗಿ ಹೋಗುತ್ತದೆ. ಶ್ವಾಸದ ಜತೆ ಕಷ್ಟವು ಹೆಚ್ಚುತ್ತ ಹೋಗುತ್ತದೆ, ಕ್ಷಣವು ಕೂಡ ನೆಮ್ಮದಿಯೆನಿಸುವುದಿಲ್ಲ. ಹೆಚ್ಚೇನು ಹೇಳುವುದು ? ರೋಗಿಗೆ ತಿನ್ನುವುದು, ಕುಡಿಯುವುದು, ಮಾತನಾಡುವುದು, ನಡೆಯುವುದು, ಕೊಡುವುದು, ಕೊಳ್ಳುವುದು, ಏಳುವುದು, ಮಲಗುವುದು ಮೊದಲಾದ ಕಾರ್ಯಗಳೆಲ್ಲವು ವಿಷ ಕುಡಿದ ಹಾಗೆ ಕಷ್ಟ ಕೊಡುವಂಥವುಗಳಾಗುತ್ತವೆ. ಆದ್ದರಿಂದ ಪ್ರಾಸುಕ ಔಷಧದಾನವಿತ್ತು ರೋಗ ದೂರ ಮಾಡುವುದಕ್ಕೆ ಸಮಾನವಾದ ಉಪಕಾರವು ಬೇರೆ ಯಾವುದೂ ಇಲ್ಲ. ರೋಗವು ಇಲ್ಲದಂತಾದ ಮೇಲೆಯೇ ಆಹಾರ ಮೊದಲಾದುವನ್ನು ಮಾಡುವ ಸಾಧ್ಯತೆಯಿದೆ. ರೋಗ ರಹಿತವಾದ ನಂತರವೇ ವ್ರತ, ತಪ, ಸಂಯಮ, ಧ್ಯಾನ, ಸ್ವಾಧ್ಯಾಯ, ಕಾಯೋತ್ಸರ್ಗ ಮೊದಲಾದುವೆಲ್ಲವನ್ನು ಮಾಡುವ ಸಾಧ್ಯತೆಯಿದೆ.

**ಜ್ಞಾನದಾನ ಃ-** ಜ್ಞಾನ ದಾನಕ್ಕೆ ಸಮಾನವಾದ ಉಪಕಾರವು ಜಗತ್ತಿನಲ್ಲಿ ಬೇರೊಂದಿಲ್ಲ. ಜ್ಞಾನವಿಲ್ಲದೆ ಮನುಷ್ಯ ಜನ್ಮದಲ್ಲಿ ಕೂಡ ಪಶುವಿನ ಸಮಾನವಿದೆ. ಜ್ಞಾನಾಭ್ಯಾಸವಿಲ್ಲದೆ ತನ್ನ ಹಾಗೂ ಪರದ ಜ್ಞಾನವಾಗುವುದಿಲ್ಲ. ಜ್ಞಾನವಿಲ್ಲದೆ ಇಹಲೋಕ-ಪರಲೋಕಗಳನ್ನು ಹೇಗೆ ತಿಳಿಯುವುದು ? ಜ್ಞಾನವಿಲ್ಲದೆ ಧರ್ಮದ ಸ್ವರೂಪ, ಪಾಪದ ಸ್ವರೂಪ, ಮಾಡಲು ಯೋಗ್ಯ ಮಾಡದಿರಲು ಯೋಗ್ಯದ ವಿಚಾರವಾಗುವುದಿಲ್ಲ. ಜ್ಞಾನವಿಲ್ಲದೆ ದೇವ-ಕುದೇವ, ಗುರು-ಕುಗುರು, ಧರ್ಮ-ಕುಧರ್ಮಗಳನ್ನು ತಿಳಿದುಕೊಳ್ಳುವುದಾಗುವುದಿಲ್ಲ.

**ಜ್ಞಾನವಿಲ್ಲದೆ ಮೋಕ್ಷಮಾರ್ಗವಿಲ್ಲ, ಜ್ಞಾನವಿಲ್ಲದೆ ಮೋಕ್ಷವಿಲ್ಲ.** ಜ್ಞಾನವಿಲ್ಲದೆ ಮನುಷ್ಯನಲ್ಲಿ ಮತ್ತು ಪಶುವಿನಲ್ಲಿ ಭೇದ ಉಳಿಯುವುದಿಲ್ಲ. ಇಂದ್ರಿಯಗಳನ್ನು ಪೋಷಿಸುವ, ಕಾಮವಾಸನೆ ಮಾಡುವುದಂತೂ ತಿರ್ಯಂಚಗಳಿಂದಲೂ ಆಗುತ್ತದೆ. ಮನುಷ್ಯ ಜನ್ಮವಂತೂ ಜ್ಞಾನದಿಂದಲೇ ಪೂಜ್ಯವಿದೆ. ಜ್ಞಾನದಾನ ಮಾಡಿದ ಪುರುಷನು ಏನೆಲ್ಲವನ್ನು ದಾನ-ಮಾಡಿದಂತೆ ಇದೆ. ಜ್ಞಾನದಾನವೇ ನಿಜವಾಗಿ ಪರಮೋಪಕಾರವಿದೆ.

**ವಸತಿಕೆದಾನ ಃ-** ವಸತಿಕೆದಾನ ಎಂದರೆ ಸ್ಥಾನ ದಾನವಿದೆ. ಶೀತ, ಉಷ್ಣ, ಮಳೆ,ಗಾಳಿ ಮೊದಲಾದವುಗಳ ಬಾಧೆಯಿಂದ ರಹಿತ, ಧ್ಯಾನ, ಸ್ವಾಧ್ಯಾಯದ ಸಿದ್ಧಿಗೆ ಕಾರಣವಾದಂಥ ಸ್ಥಾನದ ದಾನವು ಶ್ರೇಷ್ಠವಿದೆ.

ಉತ್ತಮ ಪಾತ್ರರಾದ ಪರಮ ದಿಗಂಬರ ಮಹಾಮುನಿಗಳ ಸಮಾಗಮವಂತೂ ಯಾವನೋ ಮಹಾ

ಭಾಗ್ಯಶಾಲಿಯಾದ ಪುರುಷನಿಗೆ ಎಂದಾದರೊಮ್ಮೆ ಆಗುತ್ತದೆ. ಯಾವ ಪ್ರಕಾರ ಜಗತ್ತು ಬಹಳಷ್ಟು ಪಾಷಾಣಗಳಿಂದ ತುಂಬಿಕೊಂಡಿದೆ. ಆದರೆ ಚಿಂತಾಮಣಿರತ್ನದ ಪ್ರಾಪ್ತಿಯಾಗುವುದು ಅತ್ಯಂತ ದುರ್ಲಭವಿದೆ; ಅದೇ ಪ್ರಕಾರ ವೀತರಾಗೀ ಸಾಧುಗಳು ದೊರಕುವುದು ದುರ್ಲಭವಿದೆ. ಅನಂತರ ಆಹಾರದಾನವಾಗುವುದಂತೂ ತೀರ ದುರ್ಲಭವಿದೆ; **ಆಹಾರವು ಕೂಡ ಸಾಧುಗಳ ನಿಮಿತ್ತವಾಗಿ ಸಿದ್ಧಪಡಿಸಿದ್ದು ಇರಕೂಡದು; ಸಾಧುಗಳು ಹದಿನಾರು ಉದ್ಗಮ ದೋಷ, ಹದಿನಾರು ಉತ್ಪಾದನ ದೋಷ, ಹತ್ತು ಏಷಣಾ ದೋಷ ಈ ಪ್ರಕಾರ ನಲವತ್ತೆರಡು ದೋಷ ಹಾಗೂ ೧)ಪ್ರಮಾಣ, ೨)ಸಂಯೋಜನ, ೩) ಧೂಮ್ರ, ೪) ಬೆಂಕಿ ಹೀಗೆ ಒಟ್ಟು ನಲವತ್ತಾರು ದೋಷ, ಮೂವತ್ತೆರಡು ಅಂತರಾಯ, ಹದಿನಾಲ್ಕು ಮಲದೋಷಗಳನ್ನು ನಿವಾರಿಸಿ ಒಂದು ಬಾರಿ ಆಹಾರ ಮಾಡುತ್ತಾರೆ.**

ಅಯಾಚಕವೃತ್ತಿಯನ್ನು ಧಾರಣ ಮಾಡಿ ಮೌನವಿರುವ ಮುನೀಶ್ವರರಿಗೆ ಔಷಧ ದಾನ ಕೊಡುವುದೂ ದುರ್ಲಭವಿದೆ. ಯಾವನೋ ಗೃಹಸ್ಥನು ತನ್ನ ನಿಮಿತ್ತ ಪ್ರಾಸುಕ ಔಷಧ ಸಿದ್ಧಪಡಿಸಿದ್ದರೆ ಮತ್ತು ಆಕಸ್ಮಿಕ ಮುನಿರಾಜರ ಆಗಮನವಾದರೆ, ಹಾಗೂ ಶರೀರದ ಸನ್ನೆಯಿಲ್ಲದೆ ಹೇಳದೆಯೇ ರೋಗವನ್ನು ತಿಳಿದುಕೊಂಡು ಯೋಗ್ಯ ಔಷಧವಿದ್ದರೆ ಕೊಟ್ಟು ಬಿಡುವನು ಆದುದರಿಂದ ಸಾಧುಗಳಿಗೆ ಔಷಧದ ದಾನ ಕೊಡುವುದು ಕೂಡ ದುರ್ಲಭವಿದೆ.

ಶಾಸ್ತ್ರದಾನವು ಕೂಡ ಯೋಗ್ಯಗ್ರಂಥ, ಇಚ್ಛೆಯಿದ್ದರೆ, ಎಲ್ಲಿಯವರೆಗೆ ಓದುವುದಿದೆ ಅಷ್ಟರವರೆಗಿನ ಸಲುವಾಗಿ ಸ್ವೀಕರಿಸುತ್ತಾರೆ. ಅನಂತರ ಓದಿ ವನದಲ್ಲಿ ಅಥವಾ ವನದ ಚೈತ್ಯಾಲಯದಲ್ಲಿ ಇಟ್ಟು ಹೊರಟು ಹೋಗುತ್ತಾರೆ. ಮುನೀಶ್ವರರಿಗೆ ವಸತಿಕೆಯ ದಾನ ಕೊಡುವುದು ಕೂಡ ದುರ್ಲಭವಿದೆ. ದಿಗಂಬರ ಮುನಿಗಳು ಒಂದೇ ಸ್ಥಾನದಲ್ಲಿ ಇರುವುದಿಲ್ಲ. ಒಮ್ಮೆಯಂತೂ ಅವರು ಪರ್ವತದ ಗುಹೆಯಲ್ಲಿ, ಒಮ್ಮೆ ಭಯಂಕರ ವನದಲ್ಲಿ, ಒಮ್ಮೆ ನದಿಯ ತೀರದಲ್ಲಿ ಧ್ಯಾನ-ಅಧ್ಯಯನ  ಮಾಡುತ್ತಿರುತ್ತಾರೆ.

ಎಂದಾದರೊಮ್ಮೆ ಊರ ಹೊರಗಿನ ವಸತಿಕೆಯಲ್ಲಿ ಒಂದು ದಿವಸ, ನಗರದ ಹೊರಗಿನ ವಸತಿಕೆಯಲ್ಲಿ ಐದು ದಿವಸ ವರ್ಷಾ ಋತುವಿನಲ್ಲಿ ನಾಲ್ಕು ತಿಂಗಳು ಒಂದೇ ಸ್ಥಾನದಲ್ಲಿ ಇರುತ್ತಾರೆ. ಎಂದಾದರೊಮ್ಮೆ ಓರ್ವ ಸಾಧುವಿನ ಸಮಾಧಿ ಮರಣದ ಪ್ರಸಂಗವು ಬಂದು ಬಿಟ್ಟರೆ ಒಂದೆರಡು ತಿಂಗಳು ಒಂದೇ ಸ್ಥಾನದಲ್ಲಿರುತ್ತಾರೆ. **ಬೇರೆ ಯಾವ ಕಾರಣದಿಂದಲೂ ದಿಗಂಬರ ಜೈನ ಸಾಧುಗಳು ಒಂದು ಸ್ಥಾನದಲ್ಲಿ ಇರುವುದಿಲ್ಲ,** ಅವರು ಕೆಲವೊಮ್ಮೆ ಒಂದು ರಾತ್ರಿ-ಎರಡು ರಾತ್ರಿಯೇ ನಿರ್ದೋಷ ಪ್ರಾಸುಕ ವಸತಿಕೆಯಲ್ಲಿ ಉಳಿಯುತ್ತಾರೆ.

ಆ ವಸತಿಕೆಯು ಸಾಧುಗಳ ನಿಮಿತ್ತದಿಂದ ಮಾಡಿದುದಿರಕೂಡದು, ಅವರ ನಿಮಿತ್ತದಿಂದ ಸ್ವಚ್ಛ ಮಾಡಿರಬಾರದು. ಮುನಿರಾಜರು ಬಂದ ನಂತರ ತೊಳೆಯಬಾರದು. ಬೆಳಕಿಂಡಿಯನ್ನು ತೆಗೆಯಬಾರದು.ಕಿಟಕಿಯು ಮುಚ್ಚಿಕೊಂಡಿದ್ದರೆ ತೆಗೆಯಬಾರದು. ಬಾಡಿಗೆಯಿಂದ ತೆಗೆದುಕೊಳ್ಳಬಾರದು. ಪ್ರತಿಯಾಗಿ ತಮ್ಮ ವಸತಿಕೆ ಕೊಟ್ಟು ಇತರರಿಂದ ಪಡೆಯಬಾರದು, ಬೇಡಿ ಪಡೆಯಬಾರದು, ದೊರೆಗಳ ಭಯ ತೋರಿಸಿ ತೆಗೆದುಕೊಳ್ಳಬಾರದು. ಇವೇ ಮೊದಲಾದ ನಲವತ್ತಾರು ದೋಷಗಳಿಂದ ರಹಿತವಾಗಿ ವಸತಿಕೆ ಇರಬೇಕಾಗುವುದು. ಜೀರ್ಣ ವನದಲ್ಲಿರಲಿ, ಉಧ್ವಸ್ಥ ಗ್ರಾಮದ ಮನೆಯಿರಲಿ ಅಲ್ಲಿ ಅಸಂಯಮಿ ಜನರ ಬರ-ಹೋಗುವಿಕೆಯಿಲ್ಲದ, ಸ್ತ್ರೀ-ನಪುಂಸಕ-ತಿರ್ಯಂಚಗಳ ಬರುವಿಕೆಯಿಲ್ಲದ, ಜೀವ ವಿರಾಧನೆಯಿಲ್ಲದ, ಅಂಧಕಾರವಿಲ್ಲದ ಕಡೆ ಸಾಧು ಜನರು ಒಂದು ರಾತ್ರಿ, ಎರಡು ರಾತ್ರಿಗಳವರೆಗೆ ಉಳಿಯುತ್ತಾರೆ. ಅವರು ಅನೇಕ ದೇಶಗಳಲ್ಲಿ ವಿಹಾರ ಮಾಡುತ್ತಾರೆ. ಅವರಿಗೆ ವಸತಿಕೆಯ ದಾನ ಕೊಡುವುದು ತುಂಬ ದುರ್ಲಭವಿದೆ. ಆದುದರಿಂದ ಉತ್ತಮ ಪಾತ್ರರಿಗೆ ದಾನವಾಗುವುದು ಅತ್ಯಂತ ದುರ್ಲಭವಿದೆ.

**ಉತ್ತಮ ಪಾತ್ರದ ದುರ್ಲಭತೆ :-** ಈ ಪಂಚಮಕಾಲದಲ್ಲಿ ವೀತರಾಗಿ ಭಾವಲಿಂಗೀ ಸಾಧುಗಳು ಯಾರೋ ವಿರಳರಾಗಿಯೇ ದೇಶಾಂತರದಲ್ಲಿರುತ್ತಾರೆ ; ಅವರ ಪ್ರಾಪ್ತಿಯಾಗುವುದಿಲ್ಲ, ಚತುರ್ಥ ಕಾಲದಲ್ಲಿ ಕೂಡ ಮಹಾ ಭಾಗ್ಯದಿಂದಲೇ ಪಾತ್ರರು ದೊರಕುತ್ತಿದ್ದರು, ಆದರೆ ಆ ಸಮಯದೊಳಗೆ ಈ ಕ್ಷೇತ್ರದಲ್ಲಿ ಪಾತ್ರರಂತೂ ಬಹಳಷ್ಟಿದ್ದರು. ಈಗ ಈ ದುಷಮ ಕಾಲದಲ್ಲಿ ಯಥಾವತ್ ಧರ್ಮಧಾರಕ ಉತ್ತಮ ಪಾತ್ರರು ಎಲ್ಲಿಯೂ ಕಂಡು ಬರುವುದಿಲ್ಲ,

ಧರ್ಮರಹಿತ, ಅಜ್ಞಾನೀ ಲೋಭಿಗಳು ಬಹಳಷ್ಟು ವಿಹರಿಸುತ್ತಾರೆ. ಅವರು ಅಪಾತ್ರರಿದ್ದಾರೆ. **ಈ ಕಾಲದಲ್ಲಿ ಧರ್ಮ ಪ್ರಾಪ್ತ ಮಾಡಿಕೊಳ್ಳುವಂಥ ಗೃಹಸ್ಥ, ಜಿನಧರ್ಮದ ಧಾರಕ ಶ್ರದ್ಧೆಯುಳ್ಳವರೂ ಎಲ್ಲಿಯೋ ಕೆಲವೊಬ್ಬರು ದೊರಕುತ್ತಾರೆ.**

ವೀತರಾಗ ಧರ್ಮವನ್ನು ಆಲಿಸಿ, ಕುಧರ್ಮದ ಆರಾಧನೆಯನ್ನು ದೂರದಿಂದಲೇ ಬಿಟ್ಟುಕೊಟ್ಟು, ಯಾವಾಗಲೂ ಅಹಿಂಸಾ ಧರ್ಮವನ್ನು ಧರಿಸುವಂಥ, ಜಿನ ವಚನಾಮೃತದ ಆಕಂಠಪಾನ ಮಾಡುವಂಥ, ಶೀಲ ಸಂಪನ್ನ, ಸಂತೋಷ ವೃತ್ತಿಯ ತಪಸ್ವಿಗಳೇ ಪಾತ್ರರಿದ್ದಾರೆ. ಉಳಿದ ವೇಷಧಾರಿಗಳಂತೂ ಬಹಳಷ್ಟು ವಿಹರಿಸುತ್ತಿದ್ದಾರೆ.

ಯಾರಿಗೆ ಮುನಿ-ಶ್ರಾವಕರ ಧರ್ಮದ, ನಿಜವಾದ ಸಮ್ಯಗ್ದರ್ಶನ ಮೊದಲಾದವುಗಳ ಜ್ಞಾನವೇ ಇಲ್ಲ ಅವರು ಪಾತ್ರ ತನವನ್ನು ಹೇಗೆ ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿದೆ ? ಮಿಥ್ಯಾದರ್ಶನದ ಭಾವ ಸಹಿತ, ಆತ್ಮಜ್ಞಾನ ರಹಿತ, ಲೋಭಿಗಳಾಗಿ ಜಗತ್ತಿನಲ್ಲಿ ಧನ ಮೊದಲಾದವುಗಳ ಹಾಗೂ ಸ್ವಾದಿಷ್ಟ ಆಹಾರದ ಇಚ್ಚೆಯುಳ್ಳವರಾಗಿ ಬಹಳಷ್ಟು ಜನರು ಸುತ್ತುತ್ತಲಿದ್ದಾರೆ. ಅವರೆಲ್ಲರು ಅಪಾತ್ರರಿದ್ದಾರೆ. ಆದುದರಿಂದ ಪಾತ್ರ ದಾನವಾಗುವುದು ಅತ್ಯಂತ ದುರ್ಲಭವೇ ಇದೆ.

**ಮೊದಲಂತೂ ಈ ಕಲಿಕಾಲದಲ್ಲಿ ಭಾವಲಿಂಗೀ ಮುನೀಶ್ವರ ಹಾಗೂ ಆರ್ಯಿಕೆ ಮತ್ತು ಕ್ಷುಲ್ಲಕರ ಸಮಾಗಮವು ಇಲ್ಲಿ ಇಲ್ಲವೇ ಇಲ್ಲವೆಂದು ತಿಳಿಯುವುದು.** ಎಂದಾದರೊಮ್ಮೆ ಚಿಂತಾಮಣಿ ರತ್ನದ ಸಮಾನ ಯಾವನೋ ಮಹಾಭಾಗ್ಯವಂತ ಪುರುಷನಿಗೆ ಅವರಿಗೆ ದಾನ ಕೊಡುವ ಅವಸರವು ದೊರಕಿದರೆ ಅವರ ಸಲುವಾಗಿ ಅರ್ಧ ಕೆ.ಜಿ. ಅನ್ನದ ಆಹಾರ ಕೊಡಬೇಕಾಗುವುದು. ಕ್ಷುಲ್ಲಕ ಅಥವಾ ಆರ್ಯಿಕೆಯರ ವಸ್ತ್ರವು ಜೀರ್ಣವಾಗಿ ಹೋಗಿದ್ದರೆ ಆರ್ಯಿಕೆಯಂತೂ ಒಂದು ಧವಲ ವಸ್ತ್ರವನ್ನು ಗ್ರಹಣ ಮಾಡಿ ಹಳೆಯ ವಸ್ತ್ರವನ್ನು ಅಲ್ಲಿಯೇ ಬಿಟ್ಟು ಹೋಗಬೇಕು ಮತ್ತು ಕ್ಷುಲ್ಲಕನು ಒಂದು ಕೌಪೀನ ಒಂದು ತುಂಡು ಬಿಳಿಯ ವಸ್ತ್ರ ಅದರಿಂದ ಸಂಪೂರ್ಣ ಶರೀರವು ಮುಚ್ಚಿ ಹೋಗದಂಥದ್ದು,ಅಲ್ಪ ಬೆಲೆಯದ್ದು ತೆಗೆದುಕೊಂಡು ಹಳೆಯದನ್ನು ಅಲ್ಲಿಯೇ ಬಿಟ್ಟು ಹೋಗಬೇಕು. ಬೇರೆ ಏನನ್ನೂ ಸ್ವಲ್ಪ ಮಾತ್ರವು ಗ್ರಹಣ ಮಾಡುವುದಿಲ್ಲ.

**ಧನದ ಸದುಪಯೋಗ ಮಾಡಬೇಕು :-** ಇಂಥ ಸುಪಾತ್ರರಿಗೆ ದಾನ ಕೊಡುವಲ್ಲಿ ಸ್ವಲ್ಪವೂ ಧನದ ಖರ್ಚು ಆಗುವುದಿಲ್ಲ. ಆಹ್ವಾನವಿಲ್ಲದೆ ಕರೆದಲ್ಲದೆ ಆಕಸ್ಮಿಕವಾಗಿ ಬಂದು ಬಿಟ್ಟರೆ ಗೃಹಸ್ಥನು ಸ್ವಯಂ ತನ್ನ ಸಲುವಾಗಿ ಮಾಡಿದ ನೀರಸ ಅಥವಾ ಸ್ನಿಗ್ಧ ಭೋಜನದೊಳಗಿಂದ ದಾನದ ಭಾಗವನ್ನು ತೆಗೆದು ಕೊಟ್ಟು ಬಿಡುತ್ತಾನೆ.

ಶ್ರೀಮಂತ ಜನರು ತಮ್ಮ ಧನವನ್ನು ಒಂದು ವೇಳೆ ಭೋಗಗಳಲ್ಲಿ ತೊಡಗಿಸಿದರೆ ಆ ಭೋಗಗಳಂತೂ ತೃಷ್ಣೆಯನ್ನು ಹೆಚ್ಚಿಸುವಂಥವಿವೆ. ಇಂದ್ರಿಯಗಳನ್ನು ವಿಕಲಗೊಳಿಸುವಂಥವಿವೆ, ಮಹಾಪಾಪದಲ್ಲಿ ಪ್ರವರ್ತನೆ ಮಾಡಿಸಿ ನರಕ ಮೊದಲಾದ ಕುಗತಿಗಳನ್ನು ಪ್ರಾಪ್ತ ಮಾಡಿಸುತ್ತವೆ, ಜೀವದ ಹಿತ-ಅಹಿತ ತಿಳಿಯುವ ಜ್ಞಾನವನ್ನು ಲುಪ್ತ ಮಾಡಿ ಬಿಡುತ್ತದೆ. ಒಂದು ವೇಳೆ ಮೋಹದ ವಶದಿಂದ ಪುತ್ರ ಮೊದಲಾದವರಿಗೆ ಕೊಟ್ಟು ಬಿಡುತ್ತಿದ್ದರೆ ಪುತ್ರ ಮೊದಲಾದವರಂತೂ ಮಮತೆಯನ್ನು ವೃದ್ಧಿಸುವಂಥವರಿದ್ದಾರೆ. ಕೊಡದೆಯೇ ಸರ್ವಸ್ವವನ್ನು ತೆಗೆದುಕೊಳ್ಳುವರು. ಬಹಳಷ್ಟು ಪಾಪಾಚಾರ ಮಾಡಿ, ದುರ್ಧ್ಯಾನದಿಂದ, ಸಂಪತ್ತಿನಲ್ಲಿ ಮಮತೆ ಮಾಡಿ, ಧರ್ಮದ ವಿಧ್ವಂಸ ಮಾಡಿ ಸಂಪತ್ತನ್ನು ಹೆಚ್ಚಿಸಲಾಗಿದೆ-ಹಾಗೆ ಸಂಪಾದಿಸಿದ್ದರೆ ಅದರ ಅರ್ಧ ಭಾಗವನ್ನಂತೂ ಧರ್ಮದ ಸಲುವಾಗಿ, ದಯೆಗೆ ಪಾತ್ರರಿರುವವರಿಗೆ ಕೊಟ್ಟು ತಮ್ಮ ಹಿತ ಮಾಡಿಕೊಳ್ಳಬೇಕು. ಸಂಪತ್ತನ್ನು ಬಿಟ್ಟು ಕೊಟ್ಟು ಪರಲೋಕಕ್ಕೆ ಹೋಗಬೇಕಾಗುವುದು, ಅಲ್ಲಿಂದ ಮಕ್ಕಳು ಮೊಮ್ಮಕ್ಕಳನ್ನು ನೋಡುವುದಕ್ಕೆ ಹೇಗೆ ಬರುವುದು ?

ಕುಟುಂಬದ ಸಂಬಂಧವಂತೂ ಈ ನಿಮ್ಮ ಚರ್ಮಮಯವಾದ ಮುಖ, ಮೂಗು, ಕಣ್ಣು ಮೊದಲಾದ ರೂಪದ ಶರೀರದೊಡನೆ ಇದೆ. ಶರೀರವಂತೂ ಸುಟ್ಟು ಬೂದಿಯಾಗಿ ಹೋಗುವುದು ಮತ್ತು ಮಣ್ಣಿನಲ್ಲಿ ಒಂದಾಗಿ ಹೋಗುವುದು. ಕುಟುಂಬದವರು ನಿಮ್ಮನ್ನು ಅನ್ಯ ಪರ್ಯಾಯದಲ್ಲಿ ನೋಡಲು ಬರುವುದಿಲ್ಲ, ನೀವು ಕುಟುಂಬದವರನ್ನು ನೋಡಲು ಹೋಗುವುದಿಲ್ಲ, ಏಕೆಂದರೆ ಯಾವ ಕಣ್ಣು, ಮೂಗು ಮೊದಲಾದವುಗಳ ಮೂಲಕ ನೀವು ಕುಟುಂಬದವರನ್ನು ತಿಳಿಯುತ್ತೀರಿ ಆ ಕಣ್ಣು ಮೊದಲಾದುವಂತೂ ಭಸ್ಮವಾಗಿ ಹಾರಿ ಹೋಗುವವು. ಆಗ ನೀವು ಕುಟುಂಬದವರನ್ನು ಹೇಗೆ

ತಿಳಿಯುವಿರಿ ? ಮಕ್ಕಳು ಮೊದಲಾದ ಕುಟುಂಬದವರ ಸಂಬಂಧವು ನಿಮ್ಮ ಶರೀರದ ಚರ್ಮದೊಡನೆ ಇದೆ, ನಿಮ್ಮ ಆತ್ಮನೊಡನೆ ಇಲ್ಲ, ನಿಮ್ಮ ಆತ್ಮನನ್ನಂತೂ ಅವರು ತಿಳಿಯುವುದೇ ಇಲ್ಲ. ನಿಮ್ಮ ಶರೀರದ ಚರ್ಮವು ಬೂದಿಯಾಗಿ ಹಾರಿ ಹೋದಾಗ ಕುಟುಂಬದ ಜನರು ನಿಮ್ಮೊಡನೆ ಹೇಗೆ ಸಂಬಂಧ ಮಾಡುವರು. ಎಲ್ಲಿ ಸಂಬಂಧ ಮಾಡುವರು ?

**ಆದುದರಿಂದ ಎಲೈ ಜ್ಞಾನಿ ಜನರುಗಳೇ !** ಜೀವನವು ಅಲ್ಪವಿದೆ, ಪುತ್ರ ಮೊದಲಾದವರ ಸಂಬಂಧವು ಸ್ವಲ್ಪ ಸಮಯದ್ದಿದೆ, ಸಂಸಾರದಲ್ಲಿ ಯಾರೂ ಆಶ್ರಯಕೊಡುವಂಥವರಿಲ್ಲ....ಏಕಾಕಿ ಒಂದು ಧರ್ಮವೇ ಶರಣವಿದೆ. ಈ ಧನವು ಕೂಡ ನಿಮ್ಮದಿಲ್ಲ, ಯಾವುದೇ ಪುಣ್ಯದ ಪ್ರಭಾವದಿಂದ ಎರಡು ದಿವಸದ ಮಟ್ಟಿಗೆ ಇದರ ಸ್ವಾಮಿತ್ವವನ್ನು ಸ್ವೀಕಾರ ಮಾಡಿ ಕೊನೆಗೆ ಬಿಟ್ಟು ಸತ್ತು ಹೋಗುವೆ. ಈ ಧನವು ಜತೆಯಲ್ಲಿ ಬರುವುದಿಲ್ಲ, ಮಗನ ಮೇಲಿನ ಮಮತೆಯಿಂದ ಮಹಾದುರಾಚಾರ ಮಾಡಿ ಈ ಧನವನ್ನು ಸಂಗ್ರಹಿಸುತ್ತಿರುವೆ; ಆದರೆ ಆ ಧನದ ಮಮತೆ ಹಾಗೂ ಮಕ್ಕಳ ಮಮತೆಯಿಂದ ಸಂಸಾರದಲ್ಲಿ ತಮ್ಮನ್ನೇ ತಾವು ಮರೆತು ನರಕಕ್ಕೆ ತಲುಪಬೇಕಾಗುವುದು ; ಮತ್ತು ಅನೇಕ ಪರ್ಯಾಯಗಳಲ್ಲಿ ದೀನ ದರಿದ್ರನಾಗಿ ಪರಿಭ್ರಮಣ ಮಾಡಬೇಕಾಗುವುದು.

ಸಾವಿರಾರು ಜನರು ಅನ್ನ-ನೀರು ಬೇಡುತ್ತ ಸತ್ತು ಹೋಗುತ್ತಾರೆ, ದೀನ-ದರಿದ್ರರಾಗಿ ಮನೆ-ಮನೆಯ ಬಾಗಿಲು ಅಲೆಯುತ್ತಾರೆ. ತೀರ ದೈನ್ಯತೆಯನ್ನು ತೋರುತ್ತಾರೆ; ಆದಾಗ್ಯೂ ಅವರ ಕಡೆಗೆ ಯಾರೂ ನೋಡುವುದೇ ಇಲ್ಲ, ಯಾರೂ ಅವರ ಆರ್ತತೆಯನ್ನು ಆಲಿಸುವುದೇ ಇಲ್ಲವೆಂಬುದನ್ನು ನಾವು ಪ್ರತ್ಯಕ್ಷ ಕಾಣುತ್ತೇವೆ. ಇದೆಲ್ಲದರ ಕಾರಣವೇನೆಂದರೆ ಪೂರ್ವ ಜನ್ಮದಲ್ಲಿ ಧನದ ಮೇಲೆ ತೀವ್ರ ಮಮತೆ ಮಾಡಿ, ಅತ್ಯಂತ ಕೃಪಣರಾಗಿ ಹಣ ಸಂಗ್ರಹ ಮಾಡಿದುದರ ಫಲವಿದೆ.

ನಿಮ್ಮ ಹತ್ತಿರ ಸಂಪತ್ತು, ವೈಭವ, ರತ್ನ, ಚಿನ್ನ, ಬೆಳ್ಳಿ ಮೊದಲಾದುವಿವೆ; ಮತ್ತು ಅತ್ಯಂತ ಸಾರವತ್ತಾದ ಭೋಜನ ರೂಪವತಿ, ಶೀಲವತಿ, ರಾಗರಸಯುಕ್ತ ಸ್ತ್ರೀಯರ ಮಿಲನವಿದೆ, ಆಜ್ಞಾಧಾರಕ ಪ್ರವೀಣ ಸುಪುತ್ರ,ಕಾರ್ಯಸಾಧಕ ಹಿತಸಾಧಕರಾದ ಚತುರ ಸೇವಕರು, ಅತ್ಯಂತ ವಿಶಾಲವಾದ ಮಹಡಿ ಮನೆಗಳಲ್ಲಿ ನಿವಾಸ ಇವೇ ಮೊದಲಾದವುಗಳನ್ನು ಪಡೆದಿರುವದು ಅದು ಪೂರ್ವಜನ್ಮದಲ್ಲಿ ಉದಾರ ಭಾವದಿಂದ ಮಾಡಿದ ದಾನದ ಫಲವಿದೆ. ದಾನದ ಪ್ರಭಾವದಿಂದ ಭೋಗಭೂಮಿಯಲ್ಲಿ ಜನ್ಮ ಮತ್ತು ಸ್ವರ್ಗದ ವಿಮಾನಗಳ ಅಧಿಪತಿಯಾಗುತ್ತದೆ. ಅಲ್ಲಿ ಅಸಂಖ್ಯಾತ ಕಾಲದವರೆಗೆ ಸುಖ ಭೋಗಿಸಲು ದೊರಕುತ್ತದೆ. ಇಲ್ಲಿಯ ತುಚ್ಛವಾದ ಸಂಪತ್ತು, ಕಾಯಕ್ಲೇಶ ಸಹಿತವಿರುವ ಮಹಾಮಲಿನ ಶರೀರ ಮೊದಲಾದವು ಅದರ ಎದುರು ಏನು ಬೆಲೆಯಿದೆ ? ಮತ್ತು ಇಂಥ ಸಂಪತ್ತು ಕೂಡ ನಿಮ್ಮ ಹತ್ತಿರ ಸ್ಥಿರವಾಗಿ ಉಳಿಯಲಾರದು.

ಇದು ನಮ್ಮ ಐಶ್ವರ್ಯವಿದೆ, ನಮ್ಮ ಕುಲದಲ್ಲಿ ಮೊದಲಿನಿಂದ ನಡೆಯುತ್ತ ಬರುತ್ತಿದೆ. ಈ ನಮ್ಮ ಐಶ್ವರ್ಯವು ನಷ್ಟವಾಗಿ ಹೋಗಲು ನಾವೇನು ಬುದ್ಧಿಹೀನರಿಲ್ಲ, ಯಾವ ಮೂರ್ಖರು ಬುದ್ಧಿಹೀನರಾಗಿ ಅಪರಾಧಗಳನ್ನು ಮಾಡುತ್ತಾರೆ ಅವರ ಸಂಪತ್ತು ನಷ್ಟವಾಗಿ ಹೋಗುತ್ತದೆಯೆಂದು **ನಿಮ್ಮದು ಭ್ರಮೆಯಿದೆ. ಅದು ಮಿಥ್ಯಾದರ್ಶನದ ಉದಯದ ಬಲದಿಂದಾದ ಮಹಾಭ್ರಾಂತಿಯಿದೆ ಮತ್ತು ಅನಂತಾನುಬಂಧೀ ಕಷಾಯದ ಉದಯದಿಂದ ಅಭಿಮಾನವಿದೆ. ಅದು ಸ್ವಲ್ಪ ದಿವಸಗಳಲ್ಲಿಯೇ ತಮ್ಮನ್ನು ನರಕದ ನಾರಕಿಯನ್ನಾಗಿ ಮಾಡಿಬಿಡುವುದು.**

**ಆದುದರಿಂದ ಎಲೈ ಆತ್ಮನೇ !** ನಿನಗೆ ಜಿನೇಂದ್ರ ದೇವರ ವಚನಗಳ ಮೇಲೆ ಶ್ರದ್ಧೆಯಿದ್ದರೆ ಮತ್ತು ದುಃಖೀ ಜೀವಗಳನ್ನು ನೋಡಿ ದಯೆಯು ಬರುತ್ತಿದ್ದರೆ ಹೃದಯದಲ್ಲಿ ಹೀಗೆ ವಿಚಾರ ಮಾಡಬೇಕು ಮೂಢ ಆತ್ಮನಾದ ನಾನು ಧನದಲ್ಲಿ ಪ್ರೀತಿ ಮಾಡಿ ಮೊದಲಿನ ಪಿತ್ರಾರ್ಜಿತ ಧನವನ್ನಂತೂ ಅತ್ಯಂತ ಪ್ರಯತ್ನಪೂರ್ವಕ ರಕ್ಷಣೆ ಮಾಡಿದ್ದೇನೆ, ಮತ್ತು ಹೊಸದಾಗಿ ಬಹಳಷ್ಟು ಧನವನ್ನು ಸಂಪಾದಿಸಿದ್ದೇನೆ. ಧನ ಸಂಪಾದನೆಯ ಸಲುವಾಗಿ ನಾನು ಅಧಿಕ ಕ್ಷುಧೆ, ತೃಷೆ, ಶೀತ, ಉಷ್ಣ ಮೊದಲಾದ ದುಃಖವನ್ನು ಭೋಗಿಸಿದ್ದೇನೆ,ಮತ್ತು ಅನೇಕ ಆರಂಭ, ವ್ಯಾಪಾರ, ದೊರೆಗಳ ಸೇವೆ, ವಿದೇಶಗಮನ, ಸಮುದ್ರ ಪ್ರವೇಶ ಮೊದಲಾದುವನ್ನು ಮಾಡಿದ್ದೇನೆ, ಅಧರ್ಮಿ, ಮ್ಲೇಚ್ಛ ಮೊದಲಾದವರನ್ನು

ಅನುಕೂಲ ಮಾಡಿಕೊಳ್ಳುವಲ್ಲಿ ಪ್ರಸನ್ನಪಡಿಸುವಲ್ಲಿ ಬಹಳಷ್ಟು ನಿಂದನೀಯ ಕಾರ್ಯ ಮಾಡಬೇಕಾಯಿತು. ಹೀಗೆ ಹಲವಾರು ವಿಧದಿಂದ ಧನ ಸಂಪಾದಿಸಿದ್ದೇನೆ. ಈಗ ಮರಣವಂತೂ ಆಕಸ್ಮಿಕವಾಗಿ ಬಂದು ಬಿಡುವುದು, ಧನ ರಕ್ಷಿಸುವ ಸಾಧ್ಯತೆಯಿಲ್ಲ, ಆದುದರಿಂದ ಈಗ ನನಗೆ ಅನ್ಯಾಯದಿಂದ ಅನೀತಿಯಿಂದ ಹಾಗೂ ಪಾಪದ ಉದ್ಯೋಗದಿಂದ, ಪಾಪಿಗಳ ಸೇವೆ ಮಾಡುವುದರಿಂದ, ಅನೇಕ ರೀತಿಯ ಕಪಟದಿಂದ ಧನ ಸಂಪಾದಿಸುವುದನ್ನು ಕೂಡಲೆ ಬಿಟ್ಟು ಕೊಡಬೇಕಾಗುವುದು. ನ್ಯಾಯದಿಂದ ಸಂಪಾದಿಸಿದ ಧನದಲ್ಲಿ ಮರ್ಯಾದೆ ಮಾಡಿಕೊಂಡು ಇರುವುದಿದೆ ಮತ್ತು ಯಾರ ಮೇಲೆ ದೋಷಾರೋಪಣೆ ಮಾಡಿ ಅನ್ಯಾಯದಿಂದ ಅವರ ಧನವನ್ನು ನನ್ನ ಹತ್ತಿರ ಇಟ್ಟುಕೊಂಡಿದ್ದೇನೆ. ಆ ಧನವನ್ನು ಅವರಿಗೆ ಮರಳಿಕೊಟ್ಟು ಅವರಲ್ಲಿ ಕ್ಷಮೆ ಕೇಳಿಕೊಳ್ಳುವುದಿದೆ.

ಅನಂತರ ನನ್ನ ಹತ್ತಿರ ಉಳಿದುಕೊಳ್ಳುವ ಧನದೊಳಗಿಂದ ಮಕ್ಕಳ ಪಾಲಿನ ಧನವನ್ನಂತೂ ಮಕ್ಕಳಿಗೆಕೊಟ್ಟು ಬೇರೆ ಮಾಡುವುದು, ಮತ್ತು ದಾನದ ಸಲುವಾಗಿ ಧನವನ್ನು ಬೇರೆ ಮಾಡಿ ಅದನ್ನು ಇತರರ ಉಪಕಾರದಲ್ಲಿ, ಧರ್ಮದ ಪ್ರವೃತ್ತಿಯ ಸಲುವಾಗಿ, ದಾನ ಕೊಡುವಲ್ಲಿ ಖರ್ಚು ಮಾಡಬೇಕಾಗುವುದು. ಹೊಸದಾಗಿ ಸಂಪಾದಿಸಲ್ಪಡುವ ಧನದೊಳಗಿಂದಲೂ ಕಾಲು ಭಾಗ, ಆರನೇ ಭಾಗ, ಎಂಟನೇ ಭಾಗ, ಅದಕ್ಕೂ ಕಡಿಮೆಯೆಂದರೆ ಹತ್ತನೆಯ ಭಾಗವನ್ನಂತೂ ಪುಣ್ಯ-ದಾನ-ಧರ್ಮದ ಕಾರ್ಯಗಳಲ್ಲಿ ಧನವಂತರು ಹಾಗೂ ನಿರ್ಧನರು ಮೊದಲಾಗಿ ಎಲ್ಲರೂ ದಾನದ ಭಾಗವನ್ನು ಬೇರೆ ತೆಗೆದಿಟ್ಟುಕೊಂಡು ಖರ್ಚು ಮಾಡಬೇಕಾಗುವುದು.ಯಾರ ಹೊಟ್ಟೆಯು ಕೂಡ ಪೂರ್ಣ ತುಂಬುವುದಿಲ್ಲ, ಅರ್ಧ-ಕಾಲು ಭಾಗ ಹೊಟ್ಟೆ ತುಂಬುವಷ್ಟೇ ಆಹಾರಾದಿಗಳು ದೊರಕುತ್ತವೆ ಅಂಥವರು ಕೂಡ ದಾನ-ಪುಣ್ಯ-ಧರ್ಮದ ಪಾಲನ್ನು ಉತ್ಕೃಷ್ಟಕಾಲು ಭಾಗ, ಮಧ್ಯಮ ಆರನೆಯ ಅಥವಾ ಎಂಟನೆಯ ಭಾಗ, ಜಘನ್ಯ ಹತ್ತನೆಯ ಭಾಗವನ್ನು ಬೇರೆಯಾಗಿಟ್ಟು ದೀನ, ದುಃಖೀ ಜನರಿಗೆ  ಮತ್ತು ಜಿನಪೂಜನ ಮೊದಲಾದ ಕಾರ್ಯಗಳಿಗೆ ಕೊಟ್ಟು ಖರ್ಚು ಮಾಡುವುದು ಶ್ರೇಷ್ಠವಿದೆ.ದಾನವಿಲ್ಲದ ಮನೆಯು ಸ್ಮಶಾನವಿದೆ. ಪುರುಷನು ಮೃತಕನಿದ್ದಾನೆ. ಕುಟುಂಬದವರು ಗೃದ್ಧಪಕ್ಷಿಯ ಸಮಾನರಿದ್ದಾರೆ. ಅವರು ಇವನ ಧನರೂಪದ ಮಾಂಸವನ್ನು ತೆಗೆದು-ತೆಗೆದು ತಿನ್ನುತ್ತಾರೆ.

ಶ್ರೀಮಂತ ಗೃಹಸ್ಥರಿದ್ದರೆ ಅವರು ಅನೇಕ ಪ್ರಕಾರದಿಂದ ಜೈನರ ಸುರಕ್ಷೆ-ಪಾಲನೆ ಮಾಡುತ್ತಾರೆ. ಯಾರಾದರೂ ಧರ್ಮದಲ್ಲಿ ಶಿಥಿಲರಾಗುತ್ತಿದ್ದರೆ ಅವರನ್ನು ಧನಿಕ ಪುರುಷರು ಆದರ ಮಾಡಿ, ಪ್ರಿಯ ವಚನಗಳನ್ನಾಡಿ ಧರ್ಮದಲ್ಲಿ ದೃಢಮಾಡಿ  ಬಿಡುತ್ತಾರೆ.

ತಮ್ಮ ಸಮಾಜದ ಅದೆಷ್ಟೋ ಜನರು ಕೆಲಸ ಮಾಡಲು ಯೋಗ್ಯರಿದ್ದರೆ ಅವರಿಗೆ ಕೆಲಸ ಕೊಡುವುದು, ಅವರಿಂದ ಕೆಲಸ ಮಾಡಿಸಿಕೊಳ್ಳುವುದು ಮತ್ತು ಅವರ ಉದರ ಪೋಷಣೆಯ ವ್ಯವಸ್ಥೆಯನ್ನೂ ಮಾಡಿ ಕೊಡಬೇಕು. ಕೆಲವರು ಸ್ವಯಂ ಉದ್ಯೋಗ ಮಾಡಿ ಹಣ ಸಂಪಾದಿಸಲು ಯೋಗ್ಯರಿದ್ದರೆ ಅವರಿಗೆ ಮೂಲ ಧನದ ಸಹಾಯ ಮಾಡಿ ಉದ್ಯೋಗದಲ್ಲಿ ತೊಡಗಿಸುವುದು ಮತ್ತು ಅವರಿಗೆ ನೂರಾರು ರೂಪಾಯಿಯ ವರಮಾನ ಬರುವ ಹಾಗೆ ಮಾಡುವುದು. ಕೆಲವರನ್ನು ತಮ್ಮ ವ್ಯಾಪಾರದಲ್ಲಿ ಸೇರಿಸಿಕೊಂಡು ಅವರ ನಿರ್ವಾಹ ಯೋಗ್ಯ ಆಜೀವಿಕೆ ಮಾಡಿಕೊಡುವುದು. ಕೆಲವರಿಗೆ ಧೈರ್ಯ ಹೇಳಿ ತಿಳಿವಳಿಕೆ ಮೂಡಿಸಿ ಹಣ ಗಳಿಸಲು  ಯೋಗ್ಯರನ್ನಾಗಿ ಮಾಡುವುದು ಕೆಲವರಿಗೆ ತಿಳಿಸಿ ಹೇಳಿ ದಿನಗೂಲಿಯ ಕೆಲಸದಲ್ಲಿ ತೊಡಗಿಸುವುದು ಕೆಲವರನ್ನು ದಲಾಲಿ ಮೊದಲಾದವುಗಳಲ್ಲಿ ತೊಡಗಿಸಿ ಉದ್ಯೋಗ ಒದಗಿಸಿಕೊಡುವುದು.

ಪುಣ್ಯವುಳ್ಳ ಧನಿಕರ ಸಹಾಯವಿಲ್ಲದೆ ಆಶ್ರಯವಿಲ್ಲದ ನಿರ್ಧನ ಮನುಷ್ಯರು ವ್ಯಾಪಾರ ಮೊದಲಾದವುಗಳಲ್ಲಿ ತಮ್ಮ ಕಾಲ ಮೇಲೆ ನಿಂತುಕೊಳ್ಳುವುದು ತುಂಬ ಕಠಿಣವಿದೆ. ತಾವು ಸ್ವಯಂ ಧರ್ಮಾತ್ಮರಿದ್ದರೆ ತಮ್ಮ ಧನವು ಕೆಟ್ಟು ಹೋಗುವುದೆಂದು ಭಯಪಡಬಾರದು. ಸಾಧರ್ಮಿಗಳ ಉಪಕಾರ ಮೊದಲಾದ ಕಾರ್ಯಗಳಲ್ಲಿ ಯಾವ ಧನವು ಕೆಲಸಕ್ಕೆ ಬರುವುದೋ ಅದುವೇ ನನ್ನ ಧನವಿದೆ.ಯಾವ ಧನವು ಸಾಧರ್ಮಿಗಳ ಕೆಲಸದಲ್ಲಿ ಉಪಯೋಗಕ್ಕೆ ಬರುವುದಿಲ್ಲ, ಆ ಧನವು ನಿಜವಾಗಿ ನನ್ನದಿಲ್ಲ.

ಅದೆಷ್ಟೋ ಪುರುಷರು ಮೊದಲು ದೊಡ್ಡ ಧನಿಕರಿದ್ದು, ತುಂಬ ಪ್ರತಿಷ್ಠೆಯುಳ್ಳವರಿದ್ದರೂ ಅವರ ಕರ್ಮದ ಉದಯದಿಂದ ಧನವು ನಷ್ಟವಾಗಿ ಹೋಗುವುದು, ಆಜೀವಿಕೆಯು ನಷ್ಟವಾಗುವುದು ಮತ್ತು ತಿನ್ನುಣ್ಣುವುದಕ್ಕೂ ಗತಿಯಿರುವುದಿಲ್ಲ, ಮನೆಯಲ್ಲಿ ಪತ್ನೀ-ಪುತ್ರರಿಗೂ ಮಹಾಕಷ್ಟವಿದೆ. ಇಂಥ ಪುರುಷರಿಂದ ಕಾಯ ಕಷ್ಟವಾಗುವುದಿಲ್ಲ, ಕೀಳು ಅಯೋಗ್ಯ ಕೆಲಸ ಮಾಡುವ

ಸಾಧ್ಯತೆಯಿಲ್ಲ; ತಿಳಿವಳಿಕೆಯುಳ್ಳ ದೊಡ್ಡ ಮನುಷ್ಯರಾರೂ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ; ಧನ, ಆಭರಣ ಬೆಲೆಯುಳ್ಳ ವಸ್ತ್ರ ಪಾತ್ರೆಗಳೆಲ್ಲವನ್ನೂ ಮಾರಿ ತಿಂದು ಹಾಕಲಾಗಿದೆ. ಈಗ ಯಾರಿಗೆ ಹೇಳುವುದು ಯಾವ ಉಪಾಯ ಮಾಡುವುದು ?

ಇಂಥ ಗೌರವಸ್ಥ ಪುರುಷನನ್ನು ಆಜೀವಿಕೆಯಲ್ಲಿ ತೊಡಗಿಸುವುದು, ಮುಳುಗುತ್ತಿರುವವರಿಗೆ ಕೈಯ ಆಸರೆ ನೀಡಿ ದುಃಖದ ಸಮುದ್ರದೊಳಗಿಂದ ಮೇಲಕ್ಕೆತ್ತುವುದು. ಅವರನ್ನು ಧರ್ಮದಲ್ಲಿ-ನ್ಯಾಯದಲ್ಲಿ ತೊಡಗಿಸಿ ಒಂದಿಷ್ಟು ಆಶ್ರಯ ನೀಡಿ ಎದ್ದು ನಿಲ್ಲಿಸುವುದು, ಎಷ್ಟು ಯೋಗ್ಯತೆಯಿದೆ ಅದಕ್ಕೆ ಅನುಸರಿಸಿ ಧೈರ್ಯ ನೀಡುವುದು, ಬೇರೆ ಯಾರಲ್ಲಿಯಾದರೂ ಕೆಲಸದ ಮೇಲೆ ನಿಯಮಿಸುವುದು, ಹೇಗಾದರೂ ಆಗಲಿ ಊಟದ ವ್ಯವಸ್ಥೆಯಾಗುವಂತೆ ಮಾಡುವುದು, ಧರ್ಮದಲ್ಲಿ ಸೇರಿಸುವುದೇ ದೊಡ್ಡ ಉಪಕಾರವಿದೆ.

ಕೆಲವರು ಹೆಂಡಿರು-ಮಕ್ಕಳಿಂದ ರಹಿತರಿದ್ದರೆ ಅವರನ್ನು ಧರ್ಮದ ಕಾರ್ಯದಲ್ಲಿ ತೊಡಗಿಸುವುದು ತಿನ್ನುಣ್ಣುವುದರ ಸಮಸ್ಯೆನ್ನು ನಿವಾರಿಸುವುದು. ಕೆಲವರು ವೃದ್ಧರಾಗಿ ಹೋಗಿ, ಉದ್ಯೋಗ ಮಾಡುವ ಸಾಮರ್ಥ್ಯವೇ ಉಳಿಯುವುದಿಲ್ಲ, ಜಿನಧರ್ಮಿಯಾದ ಕೆಲವರು ಧರ್ಮದಲ್ಲಿ ಸಾವಧಾನರಾಗಿದ್ದರೂ ಕೂಡ ಇಂದ್ರಿಯಗಳು ಸೋತು ಹೋಗಿರುತ್ತವೆ, ಶರೀರವು ರೋಗಗ್ರಸ್ತವಿರುವುದು ಸಹಾಯವಿಲ್ಲದೆ ಸಮತೆ ಉಳಿಯುವುದಿಲ್ಲ, ಅವರ ಸ್ಥಿತಿಕರಣವು ಶ್ರೀಮಂತರಿಂದಲೇ ಸಂಭವಿಸುವ ಸಾಧ್ಯತೆಯಿದೆ.

ಕೆಲವರು ಮಕ್ಕಳಿಲ್ಲದವರಿದ್ದು ಅವರಿಗೆ ಧರ್ಮದ ಆಶ್ರಯ ಗ್ರಹಣ ಮಾಡಿಸುವುದು. ಕೆಲವು ಶ್ರಾವಿಕೆಯರು ವಿಧವೆಯರಾಗಿರುತ್ತಾರೆ. ಅವರಿಗೆ ಅನ್ನ-ವಸ್ತ್ರದ ಗತಿಯಿರುವುದಿಲ್ಲ; ಅವರ ಮೇಲೆ ಕರುಣೆ ತೋರಿ ಊಟ-ಬಟ್ಟೆಯ ಸಾಧನದ ವ್ಯವಸ್ಥೆ ಮಾಡಿಸಿ ಅವರನ್ನು ಧರ್ಮದಲ್ಲಿ ತೊಡಗಿಸಬೇಕು. ಶ್ರೀಮಂತ ಪುರುಷರ ಸಹಾಯ ಪಡೆದು ಅದೆಷ್ಟೋ ಸ್ತ್ರೀ-ಪುರುಷರು ಕುಧರ್ಮದ ತ್ಯಾಗ ಮಾಡಿ ದೃಢ ಶ್ರದ್ಧೆಯುಳ್ಳವರಾಗುತ್ತಾರೆ. ಕೆಲವರು ಅಣುವ್ರತಾದಿಗಳನ್ನು ಗ್ರಹಣ ಮಾಡುತ್ತಾರೆ.

ಕೆಲವರು ಶ್ರದ್ಧೆಯೊಡನೆ ಸಚಿತ್ತದ ತ್ಯಾಗ ಮಾಡುತ್ತಾರೆ. ಕೆಲವರು ಪರ್ವದಿನಗಳಲ್ಲಿ ಉಪವಾಸ, ಬ್ರಹ್ಮಚರ್ಯ ಮೊದಲಾದವುಗಳ ಗ್ರಹಣ ಮಾಡುತ್ತಾರೆ. ಕೆಲವರು ಸ್ವ-ಸ್ತ್ರೀಯ ತ್ಯಾಗ, ಆರಂಭದ ತ್ಯಾಗ, ಪರಿಗ್ರಹದ ತ್ಯಾಗ, ಪಾಪಕ್ಕೆ ಅನುಮೋದನೆ ಕೊಡುವುದರ ತ್ಯಾಗ, ಉದ್ದಿಷ್ಟ ಆಹಾರದ ತ್ಯಾಗ ಮಾಡಿ ಶ್ರಾವಕರ ಹನ್ನೊಂದು ನೆಲೆಗಳನ್ನು (ಪ್ರತಿಮೆಗಳನ್ನು) ಧಾರಣ ಮಾಡಿ ದಾನಕ್ಕೆ ಪಾತ್ರರಾಗಿ ಬಿಡುತ್ತಾರೆ. **ಧರ್ಮಾತ್ಮ ಪುರುಷರ ಸಹಾಯದಿಂದ ಅವರು ಧರ್ಮಾಚರಣೆ ಮಾಡುತ್ತಿರುವುದನ್ನು ನೋಡಿ ಉಳಿದ ಅನೇಕ ಜನರು ಕೂಡ ಧರ್ಮಮಾರ್ಗದ ಪ್ರವೃತ್ತಿಯಲ್ಲಿ ತೊಡಗುತ್ತಾರೆ.**

ಧನಿಕ ಪುರುಷರು ವಿದ್ಯಾಸಂಸ್ಥೆಗಳನ್ನು ತೆರೆಯಬೇಕು. ಅಲ್ಲಿ ಓದುವಂಥವರಿಗೆ ಆಹಾರ-ವಸ್ತ್ರಗಳನ್ನು ಒದಗಿಸಿ, ವ್ಯಾಕರಣ ವಿದ್ಯೆ, ಕಾವ್ಯವಿದ್ಯೆ, ಗಣಿತ ವಿದ್ಯೆ, ತರ್ಕವಿದ್ಯೆ ಮೊದಲಾದ ಅನೇಕ ವಿದ್ಯೆಗಳನ್ನು ಓದಿಸುವ ಪಾಠ ಶಾಲೆಗಳ ಸ್ಥಾಪನೆ ಮಾಡಿದರೆ ಜೈನರ ನೂರಾರು ಬಾಲಕರು ವಿದ್ಯೆಯ ಅಧ್ಯಯನ ಮಾಡುವಲ್ಲಿ ತೊಡಗಬಹುದಾಗಿದೆ. ಪ್ರತಿ ವರುಷ ಹತ್ತಿಪ್ಪತ್ತು ವಿದ್ವಾಂಸರು ಓದಿ ಬರತೊಡಗಿದರೆ ಧರ್ಮದ ಪರಂಪರೆಯು ಮುಂದುವರಿಯುವುದು. ಅದೆಷ್ಟೋ ವಿಶೇಷ ವಿದ್ವಾಂಸರಿಗೆ ಆಜೀವಿಕೆಯಿತ್ತು ನಿರಾಕುಲ ಮಾಡಿದರೆ ಅವರು ಧರ್ಮದ ಪ್ರಸಾರ-ಪ್ರಚಾರದಲ್ಲಿ ತೊಡಗುವರು.

ಅನೇಕ ಗ್ರಂಥಗಳನ್ನು ಬರೆಸುವುದು, ಓದುವವರಿಗೆ ಗ್ರಂಥ ಕೊಡುವುದು, ಗ್ರಂಥಗಳನ್ನು ಶುದ್ಧ ಮಾಡುವಲ್ಲಿ ಶುದ್ಧ ಮಾಡುವವರನ್ನು ನಿರಾಕುಲ ಮಾಡುವುದು, ಜ್ಞಾನದ ಅಭ್ಯಾಸ ಮಾಡುವವರಲ್ಲಿ ಪ್ರೀತಿ ಮಾಡುವುದು, ತಮ್ಮ ಆತ್ಮನನ್ನು ಜ್ಞಾನದ ಅಭ್ಯಾಸದಲ್ಲಿ ತೊಡಗಿಸುವುದು, ತಮ್ಮ ಮಕ್ಕಳನ್ನು ಹಾಗೂ ಕುಟುಂಬದವರನ್ನು ಜ್ಞಾನದ ಅಭ್ಯಾಸದಲ್ಲಿ ತೊಡಗಿಸುವುದು, ಸಾಧ್ಯವಿದ್ದಂತೆ ಶಾಸ್ತ್ರದ ಅಭ್ಯಾಸದಲ್ಲಿ ಜನರ ಅಭಿರುಚಿ ಹುಟ್ಟಿಸಬೇಕಾಗುವುದು. ಶಾಸ್ತ್ರಗಳು ಧರ್ಮದ ಬೀಜವಿವೆ. ಜನರಿಗೆ ಶಾಸ್ತ್ರಗಳ ಜ್ಞಾನವಾಗಿ ಹೋದರೆ ನೂರಾರು ದುರಾಚಾರಗಳು ದೂರವಾಗುವವು. **ವ್ಯವಹಾರ ಮತ್ತು ಪರಮಾರ್ಥಗಳೆರಡನ್ನು ಸಮ್ಯಗ್ಜ್ಞಾನವೇ ಉಜ್ವಲ ಮಾಡಿ ಬಿಡುತ್ತದೆ.**

**ಆದುದರಿಂದ ಶಾಸ್ತ್ರ ಓದಿಸುವುದರ ಸಮಾನವಾದ ದಾನವು ಬೇರೆ ಯಾವುದೂ ಇಲ್ಲ.**

ರೋಗ ನಾಶ ಮಾಡುವಂಥ ಅದೆಷ್ಟೋ ಪ್ರಾಸುಕ ಔಷಧಗಳನ್ನು ರೋಗಿಗಳಿಗೆ ಕೊಡಬೇಕು. ನಿರ್ಧನ ಮನುಷ್ಯರಿಗೆ ತಯಾರಿಸಿದ ಔಷಧಗಳು ದೊರೆತರೆ ಅದುವೇ ದೊಡ್ಡ ಉಪಕಾರವಾಗುತ್ತದೆ. ನಿರ್ಧನರಿಲ್ಲದವರಿಗೆ ಕೂಡ ಔಷಧದಿಂದ ದೊಡ್ಡ ಉಪಕಾರವಾಗುತ್ತದೆ. ನಿರ್ಧನ ಹಾಗೂ ದುಃಖೀ ಜನರಿಗೆ ಔಷಧದಾನ ಕೊಡುವುದರ ಸಮಾನ ಬೇರೊಂದು ಉಪಕಾರವಿಲ್ಲ. ಅದೆಷ್ಟೋ ನಿರ್ಧನರಿಗೆ ಔಷಧವು ದೊರಕುವುದೇ ಇಲ್ಲ. ಮಾಡುವಂಥವರು ದೊರಕುವುದಿಲ್ಲ. ಸಹಾಯವಿಲ್ಲದೆ ಔಷಧವನ್ನು ಸಿದ್ಧಪಡಿಸಲಾಗುವುದಿಲ್ಲ. ಸಿದ್ಧಪಡಿಸಿದ ಔಷಧವು ದೊರೆತರೆ ಅವರಿಗೆ ಕೋಟ್ಯಂತರ ರೂಪಾಯಿಗಳ ಪ್ರಾಪ್ತಿಯಾದುದರ ಸಮಾನವಿದೆ. ರೋಗ ನಿವಾರಿಸುವುದರ ಸರಿದೊರೆಯಾದ ಬೇರೊಂದು ದಾನವಿಲ್ಲ. ಇದು ಮಹಾನ ಅಭಯದಾನವಿದೆ.

ಧರ್ಮಾತ್ಮ ಜನರಿಗೆ ವಾಸುವ ಸಲುವಾಗಿ, ಧರ್ಮಸಾಧನೆ ಮಾಡುವ ಸಲುವಾಗಿ ಧರ್ಮಶಾಲೆ, ವಸತಿಕೆ ಮೊದಲಾದುವನ್ನು ತಮ್ಮ ಶಕ್ತಿಗೆ ಅನುಸರಿಸಿಕೊಂಡು ಕೊಡಿಸುವುದು, ತಮ್ಮದೇ ಸ್ಥಳವಿದ್ದರೆ ಅಲ್ಲಿ ನಿರ್ಮಿಸಿ ಕೊಡುವುದು, ವಾಸಿಸಲು ಸಾಧನವಿಲ್ಲದಿದ್ದರೆ ಧರ್ಮ ಸೇವನೆ ಮೊದಲಾದುವಲ್ಲಿ ಪರಿಣಾಮವು ಸ್ಥಿರವಾಗಿ ಉಳಿಯುವುದಿಲ್ಲ.

ಯಾವನೋ ದುಃಖೀ ಜಿನಧರ್ಮಿಯು ಹೊರ ನಾಡಿನಿಂದ ಬಂದರೆ ಅವನಿಗೆ ಒಂದೆರಡು ತಿಂಗಳು ಆಹಾರಾದಿಗಳ ಸಹಾಯ ಮಾಡಬೇಕು. ಯಾವನೋ ವಿದೇಶಿಯ ಹತ್ತಿರ ಮರಳಿ ತಮ್ಮ ಮನೆಯವರೆಗೆ ಹೋಗುವ ಮಾರ್ಗವ್ಯಯವಿಲ್ಲದೆ ಹೋಗಿದ್ದರೆ, ದಾರಿಯಲ್ಲಿ ಕಳೆದುಕೊಂಡಿದ್ದರೆ, ಜೇಬುಗಳ್ಳರು ಅಪಹರಿಸಿದ್ದರೆ, ತಮ್ಮನ್ನು ಜೈನರೆಂದು ತಿಳಿದುಕೊಂಡು ತಮ್ಮ ಹತ್ತಿರ ಬಂದಿದ್ದರೆ ಅವನು ತನ್ನ ಮನೆಯವರೆಗೆ ತಲುಪುವ ಸಲುವಾಗಿ ಎಷ್ಟು ಬೇಕೋ ಅಷ್ಟನ್ನು ದಾನವಾಗಿ ಕೊಟ್ಟು ಕಳಿಸಿ ಕೊಡಬೇಕು.

ಯಾವನೋ ವಿದೇಶಿಯು ರೋಗಿಯಾಗಿ ಬಂದಿದ್ದರೆ ಅವನಿಗೆ ವಾಸಿಸುವ ಸ್ಥಳ ತೋರಿಸಬೇಕು. ಔಷಧವಿತ್ತು ರೋಗರಹಿತ ಮಾಡಬೇಕು. ಪುನಃ ಪುನಃ ಧರ್ಮೋಪದೇಶವಿತ್ತು ಸಮತೆ ಕಾಯ್ದುಕೊಳ್ಳುವಂತೆ ಮಾಡಬೇಕು. ವೈಯಾವೃತ್ಯ ಮಾಡಬೇಕು. ನಿರ್ಧನ ಮನುಷ್ಯರಿಂದ ಮಾಡಲಾಗದಂಥ ಔಷಧದ ದಾನವನ್ನು ನಿರಂತರ ಮಾಡಬೇಕು. ಪರಿಣಾಮವು ಚಂಚಲವಾಗಿ ಹೋಗಿದ್ದರೆ, ರೋಗದಿಂದ, ವಿಯೋಗದಿಂದ, ದುಃಖದಿಂದ, ದಾರಿದ್ರ್ಯತೆಯಿಂದ ಧೈರ್ಯವು ಹೊರಟು ಹೋಗಿದ್ದರೆ ಅಂಥವರಿಗೆ ಮತ್ತೆ ಮತ್ತೆ ಧರ್ಮೋಪದೇಶವಿತ್ತು ಧೈರ್ಯ ತಂದುಕೊಳ್ಳುವಂತೆ ಮಾಡಬೇಕು.

ತಮ್ಮ ಆತ್ಮನಿಗೆ ನಿರಂತರ ಜ್ಞಾನದಾನ ಮಾಡಬೇಕು. ತಾವು ಸ್ವಯಂ ಜ್ಞಾನಿಯಾಗಿದ್ದರೆ ದಿನಾಲು ಅನೇಕ ಜನರಿಗೆ ಧರ್ಮೋಪದೇಶ ಮಾಡಬೇಕು. ಶಾಸ್ತ್ರಗಳ ಮರ್ಮ ತಿಳಿದಿರುವಂಥ ವಿದ್ವಾಂಸರುಗಳ ಪ್ರಾಪ್ತಿಯಾಗಿ ಹೋದರೆ ಅದನ್ನು ಕಲ್ಪವೃಕ್ಷದ ಲಾಭದ ಸಮಾನವೆಂದು ತಿಳಿದು ಅವರಿಗೆ ಅತ್ಯಂತ ಗೌರವ-ಆದರಗಳೊಡನೆ ಆಜೀವಿಕೆ ಮೊದಲಾದವುಗಳ ವ್ಯವಸ್ಥೆ ಮಾಡಿಕೊಡುವುದು, ಅವರನ್ನು ಅತ್ಯಂತ ವಿನಯದಿಂದ ತಮ್ಮಲ್ಲಿ ಇಟ್ಟುಕೊಂಡು ತಾವು ಧರ್ಮ ಶ್ರವಣ ಮಾಡಬೇಕು.

ಧರ್ಮವೃದ್ಧಿಯ ಸಲುವಾಗಿ ಜ್ಞಾನಿಗಳ ಸನ್ಮಾನಾದಿಗಳನ್ನು ಮಾಡಿ ಧರ್ಮದ ಉಪದೇಶ, ತತ್ತ್ವಗಳ ಸ್ವರೂಪದ ಚರ್ಚೆ, ಗುಣಸ್ಥಾನ-ಮಾರ್ಗಣಾಸ್ಥಾನಾದಿಗಳ ಚರ್ಚೆಯ ಪ್ರವೃತ್ತಿ ಮಾಡಿಸಿ ಧರ್ಮದ ಪ್ರಭಾವನೆ, ಸಮ್ಯಗ್ಜ್ಞಾನದ ಚರ್ಚೆಯ ಪ್ರವೃತ್ತಿ ಮಾಡಿಸುವುದು. ಧರ್ಮದ ಪ್ರವೃತ್ತಿಯು ಮಂದವಾಗಿರುವಂಥ ಗ್ರಾಮಗಳಲ್ಲಿ ಶಾಸ್ತ್ರ ಬರೆಯಿಸಿ, ಭಾಷಾವಚನಿಕೆ ಬರೆಯಿಸಿ ಕಳಸಿಕೊಡಬೇಕು. ಮಂದ ಕಷಾಯದ ಭದ್ರ ಪರಿಣಾಮವುಳ್ಳ ಪುರುಷರೆಲ್ಲರೂ ಜ್ಞಾನ ದಾನವನ್ನಂತೂ ಅವಶ್ಯವಾಗಿ ಮಾಡಲೇಬೇಕಾಗುವುದು.

**ಪರೋಪಕಾರದ ಪ್ರೇರಣೆ :** ಸಿರಿವಂತಿಕೆಯನ್ನು ಪಡೆದು ದಾನ-ಸನ್ಮಾನದಿಂದ, ಪ್ರಿಯ ವಚನಗಳಿಂದ ತಮ್ಮ ಮಿತ್ರರನ್ನು ಕುಟುಂಬದವರನ್ನು ವೈರಿಗಳನ್ನು ಕೂಡ ಪ್ರಸನ್ನ ಮಾಡಬೇಕು. ಸಂಪತ್ತಿಯ ಸಮಾಗಮ ಹಾಗೂ ಜೀವನವು ಕ್ಷಣಭಂಗುರವಿದೆ. ಈ ಧನದಿಂದ, ಶರೀರದಿಂದ, ವಾಣಿಯಿಂದ ಅನ್ಯರಿಗೆ ಉಪಕಾರ ಮಾಡುವುದೇ ಶ್ರೇಷ್ಠವಿದೆ. ಪ್ರಿಯ

ವಚನಗಳನ್ನಾಡುವುದು ದೊಡ್ಡ ದಾನವಿದೆ. ವೈರಿಗಳಲ್ಲಿನ ವೈರವನ್ನು ಬಿಟ್ಟು ಬಿಡಬೇಕು. ಪ್ರಿಯ ವಚನಗಳಿಂದ ತಮ್ಮ ಅಪರಾಧದ ಕ್ಷಮೆ ಮಾಡಿಸುವದು ಕೂಡ ದೊಡ್ಡ ದಾನವಿದೆ. ತಮ್ಮ ಧನ, ಭೂಮಿ ಕೊಟ್ಟಾದರೂ ಸಂತುಷ್ಟ ಮಾಡಬೇಕು. ವೈರವನ್ನು ತೊಳೆದು ಹಾಕಬೇಕು. ಅಭಿಮಾನ ತ್ಯಾಗ ಮಾಡಬೇಕು. ತಮ್ಮ ಕುಟುಂಬದವರು ನಿರ್ಧನರಿದ್ದರೆ ಅವರಿಗೆ ತಮ್ಮ ಶಕ್ತಿಗೆ ಅನುಸರಿಸಿ ದಾನ ಸನ್ಮಾನ ಮಾಡಬೇಕು. ತಮ್ಮ ತಂಗಿ-ಮಗಳು ನಿರ್ಧನರಾದರೆ ಪುನಃ ಪುನಃ ಆಹಾರ-ಪಾನೀಯ, ವಸ್ತ್ರಾಭರಣ ಮೊದಲಾದುವನ್ನು ಕೊಟ್ಟು ಸಮ್ಮಾನ ಮಾಡಬೇಕು.

ದಯಾವಂತರಿದ್ದವರು ಅನ್ಯ ದುಃಖಿಗಳಿಗೆ ದಾನ ಸನ್ಮಾನಾದಿಗಳನ್ನು ಮಾಡಿ ಅವರ ದುಃಖ ದೂರ ಮಾಡುತ್ತಾರೆ. ಯಾರ ಪ್ರಾರ್ಥನೆ ತಮ್ಮವರೆಗೆ ತಲುಪುವಂಥ ತಮ್ಮ ಶರೀರ ಸಂಬಂಧಿಗಳೇ ಆದ ತಂಗಿ, ಮಗಳು, ಅಳಿಯ ಅವರು ದುಃಖಿಯಾಗುವುದನ್ನು ಹೇಗೆ ನೋಡುವ ಸಾಧ್ಯತೆಯಿದೆ ? ಯಾರಿಂದಾದರೂ ತಮಗೆ ಹಾನಿಯಾಗಿದ್ದರೆ ಅವರಿಗೆ ಕಠೋರ ವಚನ ಆಡಬಾರದು. ಅವರಿಗೆ ಸೋದರರೇ ! ತಾವು ತಮ್ಮ ಪರಿಣಾಮದಲ್ಲಿ ದುಃಖಿಯಾಗಬೇಡಿರೆಂದು ತಿಳಿಸಿ ಹೇಳಬೇಕು. ಗೃಹ ಕೃತ್ಯದಲ್ಲಿ ಹಾನಿ-ವೃದ್ಧಿ, ಲಾಭ-ಅಲಾಭಗಳಂತೂ ಕರ್ಮೋದಯದ ಅನುಕೂಲವಾಗಿರುತ್ತವೆ. ಸಮಸ್ತ ಸಾಮಗ್ರಿಗಳು ವಿನಾಶಶೀಲವಿವೆ. ನೀವಂತೂ ನಮ್ಮ ಅನೇಕ ಕಾರ್ಯಗಳನ್ನು ಸರಿಪಡಿಸಿದ್ದೀರಿ, ನಮ್ಮ ಒಳಿತನ್ನೇ ಮಾಡುತ್ತಿರುವಿರಿ. ನಮ್ಮ ಕರ್ಮೋದಯಕ್ಕೆ ಅನುಸರಿಸಿ ಕೆಲವು ಕಾರ್ಯಗಳು ಕೆಟ್ಟು ಕೂಡ ಹೋಗುತ್ತವೆ. ಅದರಲ್ಲಿ ಪಾಪ ತಾವೇನು ಮಾಡಬಹುದಾಗಿದೆಯೆಂದು ಸಂತುಷ್ಟಗೊಳಿಸಬೇಕು.

ನಮ್ಮ ಧನದಿಂದ ಯಾರಿಗಾದರೂ ಉಪಕಾರವಾದರೆ ಒಳ್ಳೆಯದಿದೆ. ಇತರರು ನಮ್ಮದು ಹಿತ ಮಾಡಲಿ ಅಥವಾ ಅಹಿತ ಮಾಡಲಿ, ನಮಗಂತೂ ಇತರರಿಗೆ ಉಪಕಾರವನ್ನೇ ಮಾಡಬೇಕಾಗುವುದು. ಯಾರಾದರೂ ಕಾರಾಗೃಹದಲ್ಲಿ ಸಿಲುಕಿದ್ದರೆ, ಯಾವುದೇ ಕಲಹದಲ್ಲಿ ಮೋಸಹೋಗಿದ್ದರೆ ತಮ್ಮ ಕೈಯಿಂದ ಸ್ವಲ್ಪ ಹಣ ಖರ್ಚು ಮಾಡಿಯಾದರೂ ಅವರನ್ನು ಬಿಡಿಸಿ ತರಬೇಕು. ಯಾರಾದರೂ ತಪ್ಪಿ ತಮ್ಮ ಧನವನ್ನು ಕದ್ದುಕೊಂಡಿದ್ದರೆ ಪ್ರಿಯ ವಚನಗಳನ್ನಾಡಿ ಸಮತೆಯ ಭಾವದಿಂದ ಮುಗಿಸಿ ಬಿಡಬೇಕು. ಅವನು ನಿರ್ಧನನಿದ್ದರೆ ಅವನಿಂದ ಮರಳಿ ಪಡೆಯುವ ಅಪೇಕ್ಷೆ ಮಾಡಬಾರದು ಮತ್ತು ಕಲಹ ಮಾಡಬಾರದು.

ಯಾವುದೇ ಕಳವಿನಲ್ಲಿ ಶಿಕ್ಷೆಯಾಗಿದ್ದರೆ ಅಂಥವರ ಅಪಮಾನ ಮಾಡಬಾರದು. ಅವನು ತಮ್ಮ ಆಶ್ರಿತನಿದ್ದರೆ ಅವನ ಪಾಲನೆ-ಪೋಷಣೆ ಮಾಡುವುದು. ವಿಧವೆಯಿದ್ದರೆ, ಅನಾಥರಿದ್ದರೆ, ರೋಗ-ವಿಯೋಗ ಮೊದಲಾದ ದುಃಖಗಳಿಂದ ದುಃಖಿಯಾಗಿದ್ದರೆ ಅಂಥವರ ದುಃಖ ದೂರ ಮಾಡುವಲ್ಲಿ ಸದಾ ಸಾವಧಾನರಾಗಿರಬೇಕು.

ಬಾಲಕನಿದ್ದರೆ, ಬಾಲವಿಧವೆಯಿದ್ದರೆ ಒಳ್ಳೆಯ ರೀತಿಯಿಂದ ಅವರ ಪರಿಪಾಲನೆ ಮಾಡಬೇಕು. ಯಾರು ತಮ್ಮೊಡನೆ ವೈರವಿಟ್ಟುಕೊಂಡಿದ್ದಾರೆ, ಉಪಕಾರ ಮಾಡಿದರೂ ಉಪಕಾರ ಮನ್ನಿಸುವುದಿಲ್ಲ, ಅಂಥವರಿಂದಲೂ ಗುಣ ಗ್ರಹಣ ಮಾಡಬೇಕು. ದಾನ ಸನ್ಮಾನ ಮಾಡಬೇಕು. ಸಂದರ್ಭ ನೋಡಿಯೂ ಕೂಡ ತಮ್ಮ ಮಿತ್ರ, ಬಂಧು ಮೊದಲಾದವರ ಸನ್ಮಾನ ಮಾಡದಿದ್ದರೆ ಧನ ಐಶ್ವರ್ಯ ಪಡೆದು ಕೇವಲ ಅಪಕೀರ್ತಿಯ ಕಲಂಕವನ್ನೇ ಗ್ರಹಣ ಮಾಡಿದಂತಿದೆ.

ತಮ್ಮ ಮಕ್ಕಳು-ಮರಿಗಳ ಪಾಲನೆಯನ್ನಂತೂ ನಾಯಿ-ಹಂದಿಗಳೂ ಮಾಡುತ್ತವೆ. ಆದರೆ ಸಂದರ್ಭ ನೋಡಿ ತಮ್ಮದು ಕೆಡಕು ಮಾಡುವಂಥ, ಧನ, ಆಜೀವಿಕೆಯ ಹರಣ ಮಾಡುವಂಥ ವೈರಿಗಳಿಗೂ ದಾನ ಸನ್ಮಾನ ಉಪಕಾರ ಮಾಡಿ ವಿರೋಧದ ಅಭಾವ ಮಾಡುವುದು ಕಠಿಣವಿದೆ. ಮನುಷ್ಯ ಜನ್ಮ ಧನ, ಸಂಪತ್ತು, ಯೌವ್ವನ, ಐಶ್ವರ್ಯಗಳು ಕ್ಷಣಭಂಗುರವಿವೆ. ಅನೇಕರ ಧನ, ಜೀವನಗಳು ನಷ್ಟವಾಗಿ ಹೋಗಿವೆ, ಅವರ ಹೆಸರು ಮತ್ತು ಸ್ಥಾನಗಳು ಕೂಡ ಉಳಿದಿಲ್ಲ.

**ಇದನ್ನೇ ಕಾರ್ತಿಕೇಯಸ್ವಾಮಿಗಳು ಹೇಳುತ್ತಾರೆ.** ಅಧಿಕ ಆಭರಣ, ವಸ್ತ್ರ, ಸ್ನಾನ, ಸುಗಂಧ ವಿಲೇಪನ, ಅನೇಕ ಪ್ರಕಾರದ ಭೋಜನ-ಪಾನ ಮೊದಲಾದವುಗಳಿಂದ ಅತ್ಯಂತ ಸಾವಧಾನತೆಯಿಂದ ಪಾಲನೆ-ಪೋಷಣೆ ಮಾಡಿದ ಶರೀರವೂ ಒಂದು ಕ್ಷಣಾರ್ಧದಲ್ಲಿ ನೀರಿನಿಂದ ತುಂಬಿದ ಹಸಿ ಮಡಿಕೆಯಂತೆ ನಷ್ಟವಾಗಿ ಹೋಗುತ್ತದೆ.**ಚಕ್ರವರ್ತಿಗಳಿಂದ ಹಿಡಿದು ಮಹಾನ್ ಪುಣ್ಯವಂತರಲ್ಲೂ ರಮಿಸದ ಲಕ್ಷ್ಮಿಯು ಅನ್ಯ ಪುಣ್ಯಹೀನರಾದ ಜನರಲ್ಲಿ ಪ್ರೀತಿ ಮಾಡಿ**

**ಹೇಗೆ ಇರುವಳು ? ಆ ಲಕ್ಷ್ಮಿಯು ಕುಲವಂತರಲ್ಲಿಯೂ ರಮಿಸುವುದಿಲ್ಲ.**

ನನ್ನ ಕುಲವು ಉಚ್ಚವಿದೆ, ನನ್ನಲ್ಲಿಯಂತೂ ಲಕ್ಷ್ಮಿಯು ವಾಸಿಸುತ್ತಾಳೆಂದು ಕೆಲವರು ತಿಳಿದುಕೊಳ್ಳುವರು, ಆದರೆ ಅದು ಸತ್ಯವಿಲ್ಲ. ಲಕ್ಷ್ಮಿಯಂತೂ ಕುಲವಂತರ ಹತ್ತಿರದಲ್ಲೂ ಇರುತ್ತಾಳೆ ಮತ್ತು ಇರುವುದೂ ಇಲ್ಲ; ನೀಚ ಕುಲವಂತರ ಹತ್ತಿರ ಹೋಗಿಯೂ ಇರುತ್ತಾಳೆ, ಧೀರರ ಹತ್ತಿರದಲ್ಲೂ ಇರುತ್ತಾಳೆ ಅಥವಾ ಇರುವುದೂ ಇಲ್ಲ, ಪಂಡಿತ ಪ್ರವೀಣರ ಹತ್ತಿರದಲ್ಲೂ ಇರುತ್ತಾಳೆ ಮತ್ತು ಇರುವುದೂ ಇಲ್ಲ, ಮೂರ್ಖರ ಹತ್ತಿರದಲ್ಲೂ ಇರುತ್ತಾಳೆ. ಶೂರ ವೀರರುಗಳ ಮತ್ತು ಹೇಡಿಗಳ ಹತ್ತಿರದಲ್ಲಿಯೂ ಇರುತ್ತಾಳೆ ಮತ್ತು ಇರುವುದೂ ಇಲ್ಲ, ಪುಣ್ಯ ಪುರುಷರ ಹತ್ತಿರ, ಸುಂದರ ರೂಪವಂತರ ಮತ್ತು ಸಜ್ಜನರ ಹತ್ತಿರ, ಮಹಾಪರಾಕ್ರಮಿಗಳ ಮತ್ತು ಧರ್ಮಾತ್ಮರುಗಳ ಹತ್ತಿರ ಈ ಲಕ್ಷ್ಮಿಯು ಇದ್ದೇ ಇರುತ್ತಾಳೆಂಬ ಯಾವ ನಿಯಮವಿಲ್ಲ.

**ಧನದ ಸಂಬಂಧದಲ್ಲಿ ಅಜ್ಞಾನಿಯ ವಿಪರೀತ ಮನ್ನಣೆ :-** ಸಂಸಾರೀ ಅಜ್ಞಾನಿಯು ಭ್ರಾಂತಿಯಿಂದ ತಿಳಿಯುವುದೇನೆಂದರೆ ನಾನಂತೂ ಕುಲವಂತನಿದ್ದೇನೆ. ನನ್ನನ್ನು ಬಿಟ್ಟು ಲಕ್ಷ್ಮಿಯು ಹೇಗೆ ಹೋಗುವಳು ? ನಾನು ಧೀರನಿದ್ದೇನೆ, ಧೈರ್ಯವಂತರಲ್ಲಂತೂ ಲಕ್ಷ್ಮಿಯು ಸ್ಥಿರವಿರುತ್ತಾಳೆ, ಚಂಚಲ ಚಿತ್ತವುಳ್ಳವರಲ್ಲಿ ನಷ್ಟವಾಗಿ ಹೋಗುತ್ತಾಳೆ. **ನಾನು ಮಹಾಪಂಡಿತ ಪ್ರ**ವೀಣನಿದ್ದೇನೆ, ನಾನು ತುಂಬ ಚಾತುರ್ಯದಿಂದ ಇದನ್ನು ವೃದ್ಧಿಸಿದ್ದೇನೆ; ಮೂರ್ಖ ಅಜ್ಞಾನಿಗಳು ತಪ್ಪುಮಾಡಿ ನಡೆಯುತ್ತಾರೆ ಅವರ ಲಕ್ಷ್ಮಿಯು ನಷ್ಟವಾಗಿ ಹೋಗುತ್ತದೆ. ನಾನು **ಶೂರವೀರ**ನಿದ್ದೇನೆ, ಅನ್ಯರ ಲಕ್ಷ್ಮಿಯದೂ ರಕ್ಷಣೆ ಮಾಡುತ್ತೇನೆ, ನನ್ನ ಲಕ್ಷ್ಮಿ ಹೇಗೆ ನಷ್ಟವಾಗುವುದು? ಹೇಡಿಗಳ ಲಕ್ಷ್ಮಿಯು ನಷ್ಟವಾಗಿ ಹೋಗುತ್ತದೆ. ನಾನು **ಪೂಜ್ಯ**ನಿದ್ದೇನೆ, ಎಲ್ಲರ ಲಕ್ಷ್ಮಿಯು ಪೂಜ್ಯರ ಹತ್ತಿರ ಇರಬೇಕಾಗುವುದು, ಯಾವನೋ ನೀಚನದು ನಷ್ಟವಾಗಿ ಹೋಗುತ್ತದೆ. ನಾನು **ಧರ್ಮಾತ್ಮ**ನಿದ್ದೇನೆ, ನಿತ್ಯವೂ ದಾನ, ಪೂಜೆ, ಶೀಲ ವ್ರತಾದಿಗಳನ್ನು ಮಾಡುತ್ತೇನೆ, ನನ್ನ ಲಕ್ಷ್ಮಿಯು ಹೇಗೆ ನಷ್ಟವಾಗುವುದು ? ಯಾವನೋ ಪಾಪಿಯ ಲಕ್ಷ್ಮಿಯು ನಷ್ಟವಾಗುತ್ತದೆ. ನಾನು **ಸುಂದರ ರೂಪವಂತ**ನಿದ್ದೇನೆ, ನಮ್ಮ ಸೌಂದರ್ಯದ ಮೇಲೆಯೇ ಲಕ್ಷ್ಮಿಯ ವಾಸವು ತೋರುತ್ತದೆ, ಯಾವನೋ ಕುರೂಪಿಯದು ನಷ್ಟವಾಗುತ್ತದೆ. ನಾನು **ಸುಜನ**ನಿದ್ದೇನೆ, ಎಲ್ಲರಿಗೆ ಪ್ರಿಯನಿದ್ದೇನೆ. ನನ್ನ ಲಕ್ಷ್ಮಿಯು ಹೇಗೆ ನಷ್ಟವಾಗುವುದು ? ದುಷ್ಟನಿದ್ದವನ, ಎಲ್ಲರಿಗೆ ಅಪ್ರಿಯನಿದ್ದವನ ಲಕ್ಷ್ಮಿಯು ನಷ್ಟವಾಗುತ್ತದೆ. ನಾನು **ಪರಾಕ್ರಮಿ**ಯಿದ್ದೇನೆ. ಉದ್ಯಮಿಯಿದ್ದೇನೆ. ದಿನನಿತ್ಯವೂ ನವೀನ ಸಂಪಾದಿಸುತ್ತೇನೆ, ನನ್ನ ಲಕ್ಷ್ಮಿಯು ಹೇಗೆ ನಷ್ಟವಾಗುವುದು ? ಆಲಸ್ಯವುಳ್ಳವನ-ಉದ್ಯಮ ಹೀನನ ಲಕ್ಷ್ಮಿಯು ನಷ್ಟವಾಗಿ ಹೋಗುತ್ತದೆಯೆಂದು ತಿಳಿದುಕೊಳ್ಳುವುದು ಅದು ಮಿಥ್ಯಾಭ್ರಾಂತಿಯಿದೆ.

**ಧನದ ಸಂಬಂಧದಲ್ಲಿ ಜ್ಞಾನಿಯ ಮನ್ನಣೆ :** ಈ ಲಕ್ಷ್ಮಿಯಂತೂ ಪೂರ್ವಭವದಲ್ಲಿ ಮಾಡಿದ ಪುಣ್ಯದ ದಾಸಿಯಿದ್ದಾಳೆ. ಪುಣ್ಯ ಪರಮಾಣುಗಳ ಉದಯವು ಸಮಾಪ್ತವಾಗುತ್ತಿರುವಂತೆಯೇ ಅದು ನಷ್ಟವಾಗಿ ಹೋಗುತ್ತದೆ. ಯಾವ ಪ್ರಕಾರ ನೂರು ಅಡಿ ಉದ್ದವಿರುವ ಮನೆಯಲ್ಲಿ ದೀವಿಗೆಯು ಆರುತ್ತಿದ್ದಂತೆಯೇ ಅಂಧಕಾರವು ಕವಿಯುತ್ತದೆ. ಅದನ್ನು ಯಾರು ತಡೆಯುವ ಸಾಧ್ಯತೆಯಿದೆ ? ಹೇಗೆ ಜೀವವು ಹೊರಟುಹೋದ ಮೇಲೆ ಶರೀರದ ಸಮಸ್ತ ಇಂದ್ರಿಯಗಳು ನಿಷ್ಕ್ರಿಯವಾಗಿ ಹೋಗುತ್ತವೆ, ಎಣ್ಣೆ ತೀರಿದ ನಂತರ ದೀವಿಗೆಯು ನಂದಿ ಹೋಗುತ್ತದೆ, ಅದೇ ಪ್ರಕಾರ ಪುಣ್ಯವು ಸಮಾಪ್ತವಾಗಿ ಹೋದ ಮೇಲೆ ಸಮಸ್ತ ಲಕ್ಷ್ಮೀ, ಕಾಂತಿ, ಬುದ್ಧಿ, ಪ್ರೀತಿ, ಪ್ರತೀತಿಗಳು ಒಂದು ಕ್ಷಣಮಾತ್ರದಲ್ಲಿ ನಷ್ಟವಾಗಿ ಹೋಗುತ್ತವೆ.

ಮೊದಲಂತೂ ಈ ಲಕ್ಷ್ಮಿಯನ್ನು ನ್ಯಾಯದ ಭೋಗದಲ್ಲಿ ತೊಡಗಿಸಬೇಕು, ಮತ್ತು ಪರಿಣಾಮದಲ್ಲಿ ದಯೆಯ ಭಾವತಂದುಕೊಂಡು ದುಃಖಿತರಿಗೆ, ಹಸಿದವರಿಗೆ ದಾನ ಮಾಡಬೇಕು. ಈ ಲಕ್ಷ್ಮಿಯಂತೂ ನೀರಿನಲ್ಲಿನ ಅಲೆಯಂತೆ ಕ್ಷಣಾರ್ಧದಲ್ಲಿ ಮಾಯವಾಗುತ್ತದೆ, ಅದೇ ಪ್ರಕಾರ ಈ ಲಕ್ಷ್ಮಿಯ ಸಂಯೋಗವು ಒಂದೆರಡು ದಿವಸದ್ದಿದೆ, ಅನಂತರ ನಿಯಮದಿಂದ ಇದರ ವಿಯೋಗವಾಗುತ್ತದೆ. ಯಾವ ಪುರುಷರು ನಿರಂತರ ಈ ಲಕ್ಷ್ಮಿಯ ಸಂಚಯವನ್ನೇ ಮಾಡುತ್ತಾರೆ, ತಾವಂತೂ ಸ್ವಯಂ ಭೋಗಿಸುವುದಿಲ್ಲ, ಪಾತ್ರರಿಗೆ ದಾನವನ್ನೂ ಕೊಡುವುದಿಲ್ಲ ಅವರು ತಮ್ಮ ಆತ್ಮನನ್ನೇ ವಂಚಿಸುತ್ತಾರೆ, ಅವರು ಆಕಸ್ಮಿಕವಾಗಿ ಸತ್ತು ಅಂತರ್ಮುಹೂರ್ತದಲ್ಲಿ ಹೋಗಿ ನರಕದ ನಾರಕಿಯ ರೂಪದಲ್ಲಿ ಜನ್ಮ ತಾಳುತ್ತಾರೆ. ಅವರ

ಮನುಷ್ಯ ಭವವು ನಿಷ್ಫಲವಾಯಿತೆಂದೇ ತಿಳಿಯುವುದು.

ಯಾರು ಧನವನ್ನು ಏಕತ್ರ ಮಾಡಿ ದೂರದಲ್ಲಿ ಹೂಳಿಡುತ್ತಾರೆ, ನಷ್ಟವಾದೀತೆಂಬ ಭಯದಿಂದ ಭೂಮಿಯಲ್ಲಿ ತೀರ ಆಳದಲ್ಲಿ ಹೂಳಿಡುತ್ತಾರೆ, ಅವರು ಆ ಧನವನ್ನು ಪಾಷಾಣದ ಸಮಾನ ಮಾಡಿ ಬಿಡುತ್ತಾರೆ. ಯಾವ ಪ್ರಕಾರ ಭೂಮಿಯಲ್ಲಿ ಅನೇಕ ಪಾಷಾಣಗಳನ್ನಿಟ್ಟಿರುತ್ತದೆ, ಅದೇ ಪ್ರಕಾರ ಧನವನ್ನೂ ಇಡತೊಡಗಬಹುದು. ಧನವನ್ನು ತಾನು ದಾನ-ಭೋಗದ ಸಲುವಾಗಿ ಉಪಯೋಗಿಸಿಕೊಳ್ಳದಿದ್ದರೆ ದರಿದ್ರನಂತೆಯೇ ಉಳಿಯುವನು. ಯಾರು ನಿರಂತರ ಧನದ ಸಂಗ್ರಹವನ್ನೇ ಮಾಡುತ್ತಿರುತ್ತಾರೆ, ದಾನವನ್ನೂ ಕೊಡುವುದಿಲ್ಲ, ಭೋಗಭೋಗಿಸುವಲ್ಲೂ ಖರ್ಚು ಮಾಡುವುದಿಲ್ಲ, ಅವರಿಗೆ ತಮ್ಮ ಧನವು ಕೂಡ ಇತರರ ಧನದ ಸಮಾನವಿದೆ. ಹೇಗೆಂದರೆ ನೆರೆಮನೆಯವರ ಧನ ಮತ್ತು ನಗರದ ಅನ್ಯ ನಿವಾಸಿಗಳ ಧನವು ನೋಡುವುದರಲ್ಲಂತೂ ಬರುತ್ತದೆ. ಆದರೆ ಅದು ಭೋಗಿಸುವಲ್ಲಿ ಬರುವುದಿಲ್ಲ ಮತ್ತು ದಾನ ಕೊಡಲು ಕೂಡ ಬರುವುದಿಲ್ಲ.

ಯಾವ ಪುರುಷರು ಧನದಲ್ಲಿ ಅತ್ಯಂತ ಆಸಕ್ತ ಹಾಗೂ ಪ್ರೀತಿವಂತರಿರುತ್ತಾರೆ ಅವರು ತಮ್ಮ ತಿನ್ನುಣ್ಣುವಲ್ಲಿ, ಔಷಧ ಮೊದಲಾದುವಲ್ಲಿ, ಬಟ್ಟೆ ಧರಿಸುವಲ್ಲಿ, ತಮ್ಮ ವಾಸಿಸುವ ಮನೆಯಲ್ಲಿ, ಉಳಿದ ಅನೇಕ ಭೋಗೋಪಭೋಗದ ಸಾಧನೆಗಳ ಅಭಾವದಲ್ಲಿ ನಿತ್ಯವೂ ಕ್ಲೇಶವನ್ನನುಭವಿಸುತ್ತಾರೆ, ಆದರೆ ಧನ ಖರ್ಚು ಮಾಡಲು ಮಹಾನ ದುಃಖವೆನಿಸುತ್ತದೆ, ಅದರಿಂದ ಕಷ್ಟಗಳಲ್ಲಿಯೇ ದಿವಸ ಕಳೆಯುತ್ತಾರೆ. ಇಂಥ ಮೂರ್ಖರು ದೊರೆಯ, ತಮ್ಮ ಹಕ್ಕುದಾರರ, ಹೆಂಡಿರು-ಮಕ್ಕಳ ಮೊದಲಾದವರ ಕಾರ್ಯವನ್ನೇ ಸಿದ್ಧ ಮಾಡುತ್ತಾರೆ. ತಾವಂತೂ ಧನದ ಮಮತೆಯಿಂದಲೇ ಸತ್ತು ದುರ್ಗತಿಯಲ್ಲಿ ಹೋಗಿ ಉತ್ಪನ್ನರಾಗುತ್ತಾರೆ ಮತ್ತು ಧನವನ್ನು ದೊರೆಯು ಕಿತ್ತುಕೊಳ್ಳಬಹುದು ಅಥವಾ ಕುಟುಂಬದವರ ವಶವಾಗಿ ಹೋಗುವುದು. ತಾವಂತೂ ಸ್ವಯಂ ಧನ ಸಂಪಾದಿಸಿ ಇಹಲೋಕ ಹಾಗೂ ಪರಲೋಕದಲ್ಲಿ ಕೇವಲ ದುಃಖ ಭೋಗಿಸುವವರಾಗಿಯೇ ಉಳಿದರು.

ಯಾವ ಮೂರ್ಖರು ಅನೇಕ ಪ್ರಕಾರದಿಂದ ತಮ್ಮ ಬುದ್ಧಿಯ ಮೂಲಕ ಧನವನ್ನು ಹೆಚ್ಚಿಸುತ್ತಿರುತ್ತಾರೆ ಮತ್ತು ಎಷ್ಟು ಹೆಚ್ಚಿಸಿದರೂ ತೃಪ್ತರಾಗುವುದಿಲ್ಲ, ಧನವನ್ನು ಹೆಚ್ಚಿಸುವಲ್ಲಿ ಅನೇಕ ಪ್ರಕಾರದ ಆರಂಭ ಮಾಡುತ್ತಾರೆ, ಪಾಪ ಮಾಡಲು ಹೆದರುವುದಿಲ್ಲ, ಹಗಲಿರುಳೂ ಧನ ಸಂಪಾದಿಸುವ ವಿಕಲ್ಪ ಮಾಡುತ್ತ ಬಹಳಷ್ಟು ರಾತ್ರಿ ಕಳೆದ ಮೇಲೆ ಮಲಗುತ್ತಾರೆ. ಹಗಲಿನಲ್ಲಿ ಪ್ರಾತಃಕಾಲದಿಂದಲೇ ಧನ ಸಂಪಾದಿಸುವ ವಿಕಲ್ಪ ಮಾಡತೊಡಗುತ್ತಾರೆ, ಸಮಯಕ್ಕೆ ಸರಿಯಾಗಿ ಊಟವನ್ನೂ ಮಾಡುವುದಿಲ್ಲ. ಅನೇಕ ಪ್ರಕಾರದ ಕೊಡ- ಕೊಳ್ಳುವ, ವ್ಯಾಪಾರೋದ್ಯೋಗದ ಮಾತುಕತೆ ಮಾಡುತ್ತ ತೀವ್ರ ಹಸಿವೆಯಾದ ಮೇಲೆ ಊಟ ಮಾಡುತ್ತಾರೆ. ರಾತ್ರಿಯೆಲ್ಲ ಲೆಕ್ಕ ಪತ್ರ ಬರೆಯುವುದು, ಶಿಲ್ಕು ತೆಗೆಯುವುದು, ಹಣ ಎಣಿಸುವುದರಲ್ಲಿಯೇ ಮಗ್ನರಾಗಿ ಮುಕ್ಕಾಲು ಪಾಲು ರಾತ್ರಿ ಕಳೆದ ನಂತರವೇ ಮಲಗಿಕೊಳ್ಳುತ್ತಾರೆ. ಇಂಥ ಮೂರ್ಖರು ಲಕ್ಷ್ಮಿರೂಪ ತರುಣಿಯ ಸೇವಕತ್ವವನ್ನು ಸ್ವೀಕರಿಸಿ ಅನಂತ ದುಃಖ ಭೋಗಿಸಿ ದುರ್ಗತಿಯಲ್ಲಿ ಗಮನ ಮಾಡುತ್ತಾರೆ.

**ಧನಪ್ರಾಪ್ತಿಯ ಸಫಲತೆ :** ಯಾರು ಆ ಹೆಚ್ಚುತ್ತಿರುವ ಧನವನ್ನು ನಿರಂತರ ಧರ್ಮಕಾರ್ಯದ ಸಲುವಾಗಿ ಕೊಡುತ್ತಾರೆ. ಅವರು ಪಂಡಿತ ಪ್ರವೀಣ ಪುರುಷರಿಂದ ಸ್ತುತಿ ಯೋಗ್ಯರಿದ್ದಾರೆ ಮತ್ತು ಅವರ ಧನ ಸಂಪಾದನೆಯೇ ಸಾರ್ಥಕವಿದೆಯೆಂದು ತಿಳಿದುಕೊಂಡು ಯಾರು ದಾರಿದ್ರ್ಯದಿಂದ ದುಃಖಿಯಾದ ಧರ್ಮಯುಕ್ತ ಪುರುಷರಿಗೆ ಹಾಗೂ ಸ್ತ್ರೀಯರಿಗೆ ಖ್ಯಾತಿ, ಪೂಜೆ, ಲಾಭದ ಅಪೇಕ್ಷೆಯಿಲ್ಲದೆ ಮತ್ತು ಅವರಿಂದ ಯಾವುದೇ ಪ್ರತ್ಯುಪಕಾರದ ಅಪೇಕ್ಷೆಯಿಲ್ಲದೆ ನಿರಂತರ ಆದರ, ಪ್ರೀತಿ, ಹರುಷದೊಡನೆ ದಾನ ಕೊಡುತ್ತಾರೆ, ಅವರ ಜೀವನವು ಸಾರ್ಥಕವಿದೆ. ಧನ, ಯೌವ್ವನ, ಜೀವನಗಳಂತೂ ಪ್ರತ್ಯಕ್ಷ ನೀರ ಬೊಬ್ಬುಳಿಕೆಯಂತೆ ಅಸ್ಥಿರವಾಗಿ ತೋರುತ್ತವೆ. ದಾನದ ಫಲವು ಸ್ವರ್ಗದ ಸಂಪತ್ತಿಯ, ಭೋಗಭೂಮಿಯ ಸಂಪತ್ತಿಯ ಭೋಗವನ್ನು ಅಸಂಖ್ಯಾತ ಕಾಲದವರೆಗೆ ಕೊಡುವಂಥದ್ದಿದೆಯೆಂದು ತಿಳಿದುಕೊಂಡು ನಿರಂತರ ದಾನದಲ್ಲಿಯೇ ಪ್ರವರ್ತನೆ ಮಾಡುವುದು ಶ್ರೇಯಸ್ಕರವಿದೆ.

ಯಾರು ಪೂರ್ವಜನ್ಮದಲ್ಲಿ ಸುಪಾತ್ರರಿಗೆ ದಾನ ಕೊಟ್ಟಿದ್ದಾರೆ. ಸಮ್ಯಕ್ ತಪಸ್ಸು ಮಾಡಿದ್ದಾರೆ ಆ ಪುರುಷರಂತೂ ಈ ದುಷ್ಟ ಕಾಲದೊಳಗೆ ಭರತಕ್ಷೇತ್ರದಲ್ಲಿ ಉತ್ಪನ್ನರಾಗುವುದಿಲ್ಲ. ಏಕೆಂದರೆ **ಈ ದುಷಮ ಕಾಲದಲ್ಲಿ ಸಮ್ಯಗ್ದೃಷ್ಟಿಗಳು ಇಲ್ಲಿ ಉತ್ಪನ್ನರಾಗುವುದೇ ಇಲ್ಲ.** ಯಾವ ಸಮ್ಯಗ್ದೃಷ್ಟಿಗಳು ದೇವಗತಿ, ನರಕಗತಿಯಲ್ಲಿನ ಆಯುಪೂರ್ಣ ಮಾಡಿ ಬರುತ್ತಾರೆ. ಅವರು ವಿದೇಹ ಕ್ಷೇತ್ರದಲ್ಲಿಯೇ ಪುಣ್ಯವಂತ ಮನುಷ್ಯರಾಗುತ್ತಾರೆ. ಮನುಷ್ಯ, ತಿರ್ಯಂಚಗತಿಯ ಸಮ್ಯಗ್ದೃಷ್ಟಿಗಳು ಸತ್ತು ಸ್ವರ್ಗಲೋಕದಲ್ಲಿ ಉತ್ಪನ್ನರಾಗುತ್ತಾರೆ. ಆದುದರಿಂದ ಈ ಭರತ ಕ್ಷೇತ್ರದಲ್ಲಿ ಸಮ್ಯಗ್ದೃಷ್ಟಿಗಳು ಬಂದು ಉತ್ಪನ್ನರಾಗುವುದಿಲ್ಲ.

ಇಲ್ಲಿ ಯಾವನೋ ಪುಣ್ಯಾಧಿಕಾರಿಗೆ ಕಾಲಲಬ್ಧಿ ಮೊದಲಾದ ಸಾಮಗ್ರಿಗಳು ಪ್ರಾಪ್ತವಾಗಿ ಹೋದ ಮೇಲೆ ನವೀನ ಸಮ್ಯಕ್ತ್ವವು ಉತ್ಪನ್ನವಾಗುವ ಸಾಧ್ಯತೆಯಿದೆ ಯಾರು ಪೂರ್ವ ಜನ್ಮದಲ್ಲಿ ಜಿನಧರ್ಮದ ಪಾಲನೆ ಮಾಡಿ ಪುಣ್ಯ ಸಂಪಾದನೆ ಮಾಡಿದ್ದಾರೆ ಅವರು ಕೂಡ ಇಲ್ಲಿ ಉತ್ಪನ್ನರಾಗುವುದಿಲ್ಲ. ಆದುದರಿಂದ ಜಿನಧರ್ಮದಲ್ಲಿ ದೊರೆಯು ಉತ್ಪನ್ನವಾಗುವುದಿಲ್ಲ ಮತ್ತು ಅಧಿಕ ಧನಾಢ್ಯ ಪುರುಷರೂ ಜೈನರ ಕುಲದಲ್ಲಿ ಉತ್ಪನ್ನರಾಗುವುದಿಲ್ಲ. **ಒಂದು ವೇಳೆ ಜೈನರ ಕುಲದಲ್ಲಿ ಅಧಿಕ ಧನಾಢ್ಯರು ಉತ್ಪನ್ನರಾಗುತ್ತಿದ್ದರೆ ಅವರು ಜೈನ ಧರ್ಮದಿಂದ ರಹಿತರಾಗಿಯೇ ಇರುತ್ತಾರೆ.**

ಯಾವನೋ ಪುಣ್ಯವಂತನಿಗೆ ಇಲ್ಲಿ ಒಂದು ವೇಳೆ ಸತ್ಸಂಗತಿಯು ದೊರಕಿದರೆ ಮತ್ತು ಜೈನ ಸಿದ್ಧಾಂತವು ಕೇಳಲು ದೊರಕಿದರೆ ನವೀನ ಬೀಜದಿಂದ ಜಿನಧರ್ಮದ ಗ್ರಹಣವಾಗುತ್ತದೆ. ಈ ಕಾಲದಲ್ಲಿ ಜೈನರು ಧನವಂತರಿದ್ದರೂ, ಧರ್ಮವನ್ನು ತಿಳಿದುಕೊಳ್ಳುತ್ತಿದ್ದರೂ, ತ್ಯಾಗ-ಉಪವಾಸವನ್ನು ಗ್ರಹಣ ಮಾಡುತ್ತಿದ್ದರೂ ಕೂಡ ಅವರು ದಾನದಲ್ಲಿ ಧನ ಖರ್ಚು ಮಾಡುವ ಸಾಧ್ಯತೆಯಿಲ್ಲ. ಕೋಟ್ಯಂತರ ಧನ ಬಿಟ್ಟು ಸತ್ತು ಹೋಗುತ್ತಾರೆ, ಆದರೆ ಅದರ ಅರ್ಧ, ಕಾಲು ಭಾಗ ಧನವನ್ನೂ ದಾನ-ಧರ್ಮದಲ್ಲಿ ತೊಡಗಿಸುವ ಸಾಧ್ಯತೆಯಿಲ್ಲ. (ದಾನ ಕೊಡಬೇಕೆಂಬ ಭಾವವೇ ಬರುವುದಿಲ್ಲ.)

**ಈ ಪಂಚಮ ಕಾಲದ ಶ್ರೀಮಂತ ಜನರ ಭಾವ :-** ಈ ಕಲಿಕಾಲದಲ್ಲಿ ಶ್ರೀಮಂತ ಪುರುಷರ ರೀತಿ ಹಾಗೂ ಪರಿಣಾಮಗಳು ಹೇಗಿರುತ್ತವೆಂಬುದನ್ನು ತಿಳಿಸುತ್ತಾರೆ. ಪರಿಣಾಮದಲ್ಲಿ ಕ್ರೋಧವು ಹೆಚ್ಚುತ್ತದೆ, ತಮ್ಮ ಪುರುಷಾರ್ಥದ ಅಭಿಮಾನವು ಹೆಚ್ಚುತ್ತದೆ, ವಾತ್ಸಲ್ಯವಂತೂ ಮೂಲದಿಂದಲೇ ಇರುವುದಿಲ್ಲ. ಇತರರು ಮಾಡಿರುವ ಕಾರ್ಯದ ಪ್ರಶಂಸೆಯನ್ನು ಮಾಡುವುದಿಲ್ಲ. ಎಲ್ಲರ ಬುದ್ಧಿಮತ್ತೆಯು ಕಮ್ಮಿಯಾಗಿಯೇ ಕಾಣುತ್ತದೆ, ದಯೆಯು ಇರುವುದೇ ಇಲ್ಲ. ಬೇರೆ ಯಾವುದೇ ಪುರುಷರ ಅವಮಾನ ತಿರಸ್ಕಾರವನ್ನು ವಚನಾದಿಗಳಿಂದ ಮಾಡುತ್ತಿರುವಾಗ ಭಯವೆನಿಸುವುದಿಲ್ಲ. ಇತರ ಪುರುಷರು ಧರ್ಮದ ನೀತಿಯುಳ್ಳ ವಚನಗಳನ್ನಾಡುತ್ತಿದ್ದರೆ ಅಸತ್ಯ ಯುಕ್ತಿಗಳಿಂದ ಅವುಗಳ ಖಂಡನೆ ಮಾಡುತ್ತಾರೆ.

ಧರ್ಮಾತ್ಮ ಪುರುಷರು ವಿನಯದೊಡನೆಯೇ ಭಾಷಣ ಮಾಡುತ್ತಿದ್ದರು ಕೂಡ ನನ್ನಿಂದ ಏನಾದರೂ ಬೇಡಬಹುದೆಂದು ಇವನ ಮನಸ್ಸಿನಲ್ಲಿ ಭಯವುಂಟಾಗುತ್ತದೆ. ಈಗ ನನಗೆ ಧನಖರ್ಚು ಮಾಡುವ ಉಪದೇಶ ಕೊಡಬಹುದೆಂದು ನಿರ್ವಾಂಛಕ ಸಾಧರ್ಮಿಯಿಂದಲೂ ಭಯಭೀತನಿರುತ್ತಾನೆ. ದಿನ-ದಿನವೂ ಅಭಿಮಾನವು ಹೆಚ್ಚುತ್ತ ಹೋಗುತ್ತದೆ, ಸ್ವಭಾವದಲ್ಲಿ ತೀವ್ರತೆ ಹೆಚ್ಚುತ್ತ ಹೋಗುತ್ತದೆ. ತನ್ನ ಕಾರ್ಯವಿದ್ದರೆ ಅದನ್ನು ಅತೀ ಶೀಘ್ರದಿಂದ ಮಾಡಬಯಸುತ್ತಾನೆ. ಸೇವಕ ಮೊದಲಾದವರ ದುಃಖ-ಕಷ್ಟವನ್ನು ನೋಡುವುದಿಲ್ಲ. ತನ್ನ ಪ್ರಯೋಜನ ಸಾಧಿಸಲಿಚ್ಛಿಸುತ್ತಾನೆ, ಇತರರ ಪ್ರಯೋಜನ ಹಾಗೂ ದುಃಖ-ಕ್ಲೇಶಗಳನ್ನು ತುಚ್ಛವಾಗಿ ತಿಳಿಯುತ್ತಾನೆ. ಸಂಪತ್ತು ಹೆಚ್ಚುತ್ತದೆ ಅದರ ಜತೆ-ಜತೆಯಲ್ಲಿ ಖರ್ಚು ಹೆಚ್ಚುತ್ತದೆ, ಖರ್ಚಿನ ಜತೆ ದುಃಖ ಹೆಚ್ಚುತ್ತದೆ, ದಿನ ದಿನವೂ ಖರ್ಚು ಕಡಿಮೆ ಮಾಡುವ ಪರಿಣಾಮವೇ ಇರುತ್ತಿರುತ್ತದೆ.

ತಮ್ಮ ಭೋಗೋಪಭೋಗದ ವಸ್ತುವನ್ನು ಕೊಂಡುಕೊಳ್ಳುವಾಗ ಹೇಗೆ ಪರಿಣಾಮವಿರುತ್ತದೆಯೆಂದರೆ ಅದು ಅರ್ಧ ಬೆಲೆಯಲ್ಲಿ ಸಿಗಬೇಕು. ಸ್ವಲ್ಪ ಕಡಿಮೆ ತೆಗೆದುಕೊಳ್ಳಬೇಕು, ನನ್ನನ್ನು ದೊಡ್ಡ ಮನುಷ್ಯನೆಂದು ತಿಳಿದುಕೊಂಡು ಬೆಲೆಯುಳ್ಳ ವಸ್ತುವನ್ನು ಅಲ್ಪ ಬೆಲೆಯಲ್ಲಿ ಕೊಟ್ಟು ಬಿಡಬೇಕು; ಯಾವನೋ ನಿರ್ಧನನ ಮತ್ತು ಕಳವಿನ ವಸ್ತುವು ತೀರ ಕಡಿಮೆ ಬೆಲೆಯಲ್ಲಿ ಸಿಕ್ಕು ಬಿಡಬೇಕು. ಅದರಿಂದ ತುಂಬ ಹರ್ಷ ಮನ್ನಿಸುತ್ತಾನೆ. ಹೀಗೆ ಧನ ಸಂಗ್ರಹ ಮಾಡುತ್ತ ಮಾಡುತ್ತ ತೃಪ್ತಿಯೇ ಆಗುವುದಿಲ್ಲ.

ಶ್ರೀಮಂತನು ಪಾಪಿಯಾಗಿದ್ದರೂ ಅವನಲ್ಲಿ ಪ್ರೀತಿ ಮಾಡುತ್ತಾನೆ, ಶ್ರೀಮಂತನು ಅಧರ್ಮಿಯಾಗಿದ್ದರೂ ಅವನ ಬುದ್ಧಿಯನ್ನು ಹೊಗಳುತ್ತಾನೆ, ಶ್ರೀಮಂತನ ಎದುರಿಗೆ ತನ್ನ ಉದಾರತೆಯನ್ನು ತೋರಿಸುತ್ತಾನೆ, ನಿರ್ಧನನ ಹತ್ತಿರ ತನ್ನ ಅನೇಕ ದುಃಖವನ್ನು ತೋರ್ಪಡಿಸುತ್ತಾನೆ, ದುಃಖಿಯನ್ನು ನೋಡಿ ಅವನಿಗೆ ತನ್ನ ಅಧಿಕ ದುಃಖವನ್ನು ಹೇಳುತ್ತಾನೆ. ಅನ್ಯರ ಮತ್ತು ನಿರ್ಧನನ ಮರ್ಯಾದೆಯನ್ನು ಚಿಕ್ಕದೆಂದು ತಿಳಿಯುತ್ತಾನೆ, ಧನವಿಲ್ಲದವರಿಗೆ ತಮ್ಮ ವಸ್ತುವನ್ನು ಉದ್ದರಿಕೊಡುವ ಸಮಯದಲ್ಲಿ ಅಧಿಕ ಅವಿಶ್ವಾಸ ತೋರುತ್ತಾನೆ, ಧನವಿಲ್ಲದವರನ್ನು ಚೋರ-ಮೋಸಗಾರರೆಂದು ತಿಳಿಯುತ್ತಾನೆ. ತಾನು ಇತರರ ಸರ್ವಸ್ವವನ್ನು ಹರಣ ಮಾಡಿ ತಿಂದು ಹಾಕಿದರೂ ಕೂಡ ತನ್ನನ್ನು ಒಳ್ಳೆಯವನೆಂದು ತಿಳಿಯುತ್ತಾನೆ, ತನ್ನ ಹೆಗ್ಗಳಿಕೆಯನ್ನು ಹೇಳಿಕೊಳ್ಳುತ್ತಾನೆ.

ತನ್ನ ಕರ್ತವ್ಯದ-ಪ್ರಶಂಸೆ ಮಾಡಿಕೊಳ್ಳುತ್ತಾನೆ, ಇತರರ ಉತ್ತಮ ಕಾರ್ಯಗಳಲ್ಲಿಯೂ ದೋಷ ತೆಗೆಯುತ್ತಾನೆ. ತನ್ನನ್ನು ನಿಸ್ಪೃಹ ನಿರ್ವಾಂಛಕನೆಂದು ತಿಳಿಯುತ್ತಾನೆ, ಜಗತ್ತಿನ ಅನ್ಯ ಜೀವರುಗಳನ್ನು ಲೋಭಿಗಳೆಂದು ತಿಳಿಯುತ್ತಾನೆ. ತನ್ನನ್ನು ಅಜರ-ಅಮರನೆಂದು ತಿಳಿಯುತ್ತಾನೆ, ಅನ್ಯರನ್ನು ಅನಿತ್ಯರೆಂದು ತಿಳಿಯುತ್ತಾನೆ, ತನ್ನನ್ನು ನ್ಯಾಯಮಾರ್ಗಿಯೆಂದು ತಿಳಿಯುತ್ತಾನೆ, ಅನ್ಯ ಜೀವರುಗಳನ್ನು ಅತ್ಯಂತ ಲೋಭಿಗಳೆಂದು ತಿಳಿಯುತ್ತಾನೆ. ತನ್ನನ್ನು ಪ್ರಭುವೆಂದು ತಿಳಿಯುತ್ತಾನೆ, ಧನರಹಿತರನ್ನು ದರಿದ್ರರೆಂದು ತಿಳಿಯುತ್ತಾನೆ. ಆರಂಭ ಪರಿಗ್ರಹಗಳನ್ನು ಹೆಚ್ಚಿಸುತ್ತಿರುವಾಗ ಹೆದರುವುದಿಲ್ಲ, ನಿಂತುಕೊಳ್ಳುವುದಿಲ್ಲ, ತೃಷ್ಣೆಯು ತುಂಬ ಹೆಚ್ಚುತ್ತ ಹೋಗುತ್ತದೆ, ಮರಣ ಸಮಯದವರೆಗೆ ಕೂಡ ಸಂತೋಷ ಧಾರಣ ಮಾಡುವುದಿಲ್ಲ.

**ಅಪಯಶದ ಕಾರ್ಯ ಮಾಡುತ್ತಿರುವಾಗ ಕೂಡ ತನ್ನನ್ನು ಯಶಸ್ವಿಯೆಂದು ತಿಳಿಯುತ್ತಾನೆ.** ಛಲ, ಕಪಟ ಮಾಡುವುದರಿಂದ ವಂಚಿಸಲ್ಪಡುತ್ತಾನೆ. ಅತ್ಯಂತ ಧೂರ್ತ, ಕಪಟೀ, ವಂಚಕನನ್ನು ತನ್ನ ಕಾರ್ಯಸಾಧಿಸುವಂಥ, ಪುರುಷಾರ್ಥಿ, ಪ್ರವೀಣನೆಂದು ತಿಳಿಯುತ್ತಾನೆ. ಸತ್ಯವಾದೀ, ಮರ್ಯಾದೆಯುಕ್ತ ಪ್ರವೃತ್ತಿಯುಳ್ಳ ನಿರಪೇಕ್ಷಕನನ್ನು ಮೂರ್ಖನೆಂದು ತಿಳಿಯುತ್ತಾನೆ.

ಎಲ್ಲಿ ತನ್ನ ಅಭಿಮಾನವು ಹೆಚ್ಚುತ್ತದೆ, ಕಷಾಯಗಳ ಪುಷ್ಟಿಯಾಗುತ್ತದೆ, ತನ್ನ ಹೆಸರಾಗುತ್ತದೆಯೆಂದು ತಿಳಿಯುತ್ತಾನೆ. ಅಲ್ಲಿ ಭೂಮಿಯಲ್ಲಿ, ಮಂದಿರದಲ್ಲಿ, ಉಪವನದಲ್ಲಿ, ವಿವಾಹದಲ್ಲಿ, ಯಾತ್ರೆಯಲ್ಲಿ, ಮಹಸೂಲದಲ್ಲಿ ಬಹಳಷ್ಟು ಧನ ಖರ್ಚು ಮಾಡುತ್ತಾನೆ, ಮಂದಿರ ಮೊದಲಾದುವಲ್ಲಿಯೂ ತನ್ನ ಉಚ್ಚತೆಯನ್ನು ತೋರಿಸುವ ಸಲುವಾಗಿ ಅಭಿಮಾನ ವೃದ್ಧಿಸುವಂಥ ಪಂಚರಲ್ಲಿ ಧನ ಖರ್ಚು ಮಾಡುತ್ತಾನೆ, ಜೀರ್ಣಮಂದಿರ ಮೊದಲಾದವುಗಳಲ್ಲಿ ಕೊಡುವುದಿಲ್ಲ.

ನಿರ್ಧನ, ಹಸಿದವರ ಪೋಷಣೆ ಮಾಡುವ ಸಲುವಾಗಿ ಒಂದು ಕಾಸು ಕೊಡುವುದಿಲ್ಲ, ದುರ್ಬಲ, ದೀನ, ಅನಾಥ, ರೋಗಿ, ವೃದ್ಧ, ವಿಧವೆಯರ ಪಾಲನೆ ಮಾಡುವ ಸಲುವಾಗಿ ಎಂದೂ ಧನ ಖರ್ಚು ಮಾಡುವುದಿಲ್ಲ, ದುಃಖೀ ನಿರ್ಧನರಿಗೆ ಕೊಟ್ಟ ಧನವನ್ನು ನಷ್ಟವಾಯಿತೆಂದು ತಿಳಿಯುತ್ತಾನೆ, ತಾನು ಕೂಡ ಒಳ್ಳೆಯ ಭೋಜನ ಮಾಡುವುದಿಲ್ಲ, ಏಕೆಂದರೆ ಮನೆಯಲ್ಲಿ ಕುಟುಂಬದವರೆಲ್ಲರಿಗೂ ಉಣ್ಣಿಸಬೇಕಾಗುವುದು.

ನೋಡಿರಿ ! ನಮ್ಮ ಮನೆಗೆ ಬಹಳಷ್ಟು ಧರ್ಮಾತ್ಮರು, ತಪಸ್ವಿಗಳು, ಪಂಡಿತರು ಬರುತ್ತಾರೆ. ಮತ್ತೆ ಅನೇಕರು ಬರುವರು. ಏಕೆಂದರೆ ಸಮಸ್ತ ದೇಶ-ವಿದೇಶದ ಗುಣವಂತ ಜೈನರಿಗೆ ದೊಡ್ಡ ಸ್ಥಳವೆಂದರೆ ನಮ್ಮ ಮನೆಯೊಂದೇ ಇದೆ. ನಾವೇ ದಾತಾರರಿದ್ದೇವೆ. ಮತ್ತೆ ಬೇರೆ ಸ್ಥಳವೆಲ್ಲಿಯಿದೆಯೆಂದು **ಅಭಿಮಾನಪಡುತ್ತಾನೆ.** ಉಳಿದ ಅದೆಷ್ಟೋ ಜನರು ತಮ್ಮ ಮನೆಯಲ್ಲಿ ಕೆಲಸ ಮಾಡುವಂಥವರು ಹಾಗೂ ಧರ್ಮಕಾರ್ಯದಲ್ಲಿ ನಿಯುಕ್ತ ಮಾಡಿದಂಥವರದೂ ಕೂಡ ಧನದ ಮದದಿಂದ ಅತ್ಯಂತ ಅವಜ್ಞೆ ಮಾಡುತ್ತಾನೆ, ನಾವು ಇವರೆಲ್ಲರ ಪಾಲನೆ-ಪೋಷಣೆ ಮಾಡುತ್ತೇವೆ. ನಮ್ಮಿಂದ ಬಿಟ್ಟು ಹೋದರೆ ಇವರಿಗೆ ಬೇರೆಲ್ಲಿ ಸ್ಥಾನ ದೊರಕುವುದು ?

**ಹೀಗೆ ಪಂಚಮಕಾಲದ ಶ್ರೀಮಂತರುಗಳ ಜ್ಞಾನದ ಮೇಲೆ ಮೋಹದ ಮಹಾ ಅಂಧಕಾರವು ಆವರಿಸಿದೆ.** ಪೂರ್ವಜನ್ಮದಲ್ಲಿ ಜಿನಧರ್ಮದಿಂದ ರಹಿತವಾದ ಕುತಪಸ್ಸು ಹಾಗೂ ಕುಪಾತ್ರರಿಗೆ ದಾನ ಕೊಟ್ಟುದರ ಕಾರಣದಿಂದ ಈಗ ಧನ-ಸಂಪತ್ತು ದೊರಕಿದೆ.

ಈಗ ಧನ ಸಂಪತ್ತನ್ನು ಬಿಟ್ಟು ಧನದ ಮೂರ್ಛೆಯಿಂದ ಸತ್ತು, ಕಷಾಯದ ಮಂದತೆ-ತೀವ್ರತೆಗೆ ಅನುಸರಿಸಿ ಸರ್ಪ, ತಿರ್ಯಂಚ, ವೃಕ್ಷ, ಜೇನುನೊಣ ಮೊದಲಾದ ಯೋನಿಗಳಲ್ಲಿ ಉತ್ಪನ್ನವಾಗಿ ನರಕ ಮೊದಲಾದವುಗಳಲ್ಲಿ ಅಧಿಕ ಸಮಯದವರೆಗೆ ಭ್ರಮಣ ಮಾಡುವರು. ಧನದ ಮೂರ್ಛೆಯು ಈ ಲೋಕದಲ್ಲಿ ಕೂಡ ವೈರ ಹಾಗೂ ಅಪಯಶದ ಕಾರಣವಿದೆ. ಎಲ್ಲರು ಕೃಪಣರ ನಿಂದೆ-ಅವಮಾನ ಮಾಡುತ್ತಾರೆ. ಕೃಪಣರ ಪರಿಣಾಮವು ನಿರಂತರ ದುಃಖೀ ಹಾಗೂ ದುರ್ಧ್ಯಾನ ರೂಪವಿರುತ್ತದೆ.

**ದಾನಪಾತ್ರ ಮತ್ತು ದಾನದ ಫಲ :** ದಾನದ ಮಾರ್ಗದಲ್ಲಿ ತೊಡಗಿಸಿದ ಧನವು ತಮ್ಮದೆಂದು ತಿಳಿಯುವುದು. ದಾನದಲ್ಲಿ ಕೊಟ್ಟ ಧನವು ಮರಣ ಸಮಯದಲ್ಲಿ ಪರಿಣಾಮದೊಳಗೆ ಉಜ್ವಲತೆಯನ್ನುಂಟು ಮಾಡಿ ಅಂತರ್ಮುಹೂರ್ತದಲ್ಲಿ ಸ್ವರ್ಗದ ಸಂಪತ್ತನ್ನು ಪ್ರಾಪ್ತ ಮಾಡಿಸುತ್ತದೆ. ಇಲ್ಲಿ **ಉತ್ತಮ ಪಾತ್ರ**ರಂತೂ ನಿರ್ಗ್ರಂಥ ವೀತರಾಗೀ ಸಮಸ್ತಮೂಲಗುಣ-ಉತ್ತರ ಗುಣಗಳ ಧಾರಕ, ದಶಲಕ್ಷಣ ಧರ್ಮದ ಧಾರಕ, ಇಪ್ಪತ್ತೆರಡು ಪರೀಷಹ ಸಹಿಸುವಂಥ ಸಾಧುಗಳಿದ್ದಾರೆ. ದರ್ಶನ ಪ್ರತಿಮೆಯಿಂದ ಹಿಡಿದು ಉದ್ದಿಷ್ಟ ಆಹಾರ ತ್ಯಾಗದವರೆಗಿನ ಹನ್ನೊಂದು ನೆಲೆಗಳು ಶ್ರಾವಕರವಿವೆ. ಆ ಪ್ರತಿಮಾಧಾರಕರಾದ ಶ್ರಾವಕರು ಅವರು **ಮಧ್ಯಮಪಾತ್ರ**ರಿದ್ದಾರೆ.

ಅವರಿಗೆ ವ್ರತ (ಪ್ರತಿಮೆ)ಗಳಂತೂ ಇಲ್ಲ, ಆದರೆ ಜಿನೇಂದ್ರ ಕಥಿತ ತತ್ತ್ವಗಳ ಶ್ರದ್ಧೆಯುಳ್ಳವರಿದ್ದಾರೆ, ಜನ್ಮ-ಮರಣಾದಿಗಳರೂಪದ ಸಂಸಾರ ಪರಿಭ್ರಮಣದಿಂದ ಭಯಭೀತರಿದ್ದಾರೆ. ನಾಲ್ಕು ಪ್ರಕಾರದ ಸಂಘದಲ್ಲಿದ್ದುಕೊಂಡು ಹಿತ ಮಾಡಿಕೊಳ್ಳುವ ಇಚ್ಛೆಯಿಂದ ಯುಕ್ತರಿದ್ದಾರೆ, ಸಂಸಾರ-ಶರೀರ-ಭೋಗಗಳಲ್ಲಿ ವಿರಕ್ತಿಯ ಭಾವವು ಬಂದಿದೆ, ಜಿನಶಾಸನದ ಪ್ರಸಾರ ಮಾಡುವಂಥ, ತಮ್ಮ ನಿಂದೆ-ಗರ್ಹೆ ಮಾಡಿಕೊಳ್ಳುತ್ತ ಸ್ವ-ಪರ ತತ್ತ್ವಗಳ ಸ್ವರೂಪವನ್ನು ತಿಳಿದುಕೊಳ್ಳುವಲ್ಲಿ ಪ್ರವೀಣರಿದ್ದಾರೆ, ಜಿನದೇವರ ಮೂಲಕ ಹೇಳಲಾದ ತತ್ತ್ವಗಳಲ್ಲಿ-ಧರ್ಮದಲ್ಲಿ ದೃಢತೆಯನ್ನು ಧಾರಣ ಮಾಡುತ್ತಾರೆ, ಧರ್ಮ ಹಾಗೂ ಧರ್ಮದ ಫಲದಲ್ಲಿ ಅನುರಾಗವುಳ್ಳವರಿದ್ದಾರೆ, ಸಮಸ್ತ ಜೀವರುಗಳ ದಯೆಯಿಂದ ಚಿತ್ತವು ತುಂಬಿಕೊಂಡಿದೆ, ಮಂದಕಷಾಯಿ, ಪಂಚಪರಮೇಷ್ಠಿಗಳ ಭಕ್ತ ಇತ್ಯಾದಿ ಸಮಸ್ತ ಸಮ್ಯಕ್ತ್ವದ ಗುಣಗಳ ಧಾರಕರಾದ ಗೃಹಸ್ಥರು ಅವರು **ಜಘನ್ಯಪಾತ್ರ**ರಿದ್ದಾರೆ.

ಈ ಪ್ರಕಾರ ಮೂರು ತೆರದ ಪಾತ್ರಗಳಿಗೆ ಯಥಾಯೋಗ್ಯ ಆಹಾರ, ಔಷಧ, ಶಾಸ್ತ್ರ, ವಸತಿಕೆ, ಸ್ಥಾನ, ವಸ್ತ್ರ ಆಜೀವಿಕೆ, ಜೀವಿಸಲು ಸ್ಥಿರತೆಯ ಕಾರಣ, ಭಕ್ತಿ ಹಾಗೂ ವಿನಯ ಸಹಿತವಾಗಿ ಕೊಡಲಾಗುವ ದಾನವು ಅವರವರ ಭಾವಕ್ಕೆ ಅನುಸರಿಸಿ ಉತ್ತಮ, ಮಧ್ಯಮ, ಜಘನ್ಯ ಭೋಗಭೂಮಿಯಲ್ಲಿ ದಾತಾರರನ್ನು ಉತ್ಪನ್ನ ಮಾಡುತ್ತದೆ. ಸಮ್ಯಗ್ದೃಷ್ಟಿಯಿರುವ ದಾತಾರರನ್ನು ಸೌಧರ್ಮ ಮೊದಲಾದ ಸ್ವರ್ಗದಲ್ಲಿ ಮಹಾನ ಋದ್ಧಿಧಾರಕ ದೇವಗಳಲ್ಲಿ ಉತ್ಪನ್ನ ಮಾಡುತ್ತದೆ.

**ಕುಪಾತ್ರ :-** ಕುಪಾತ್ರದ ಲಕ್ಷಣವು ಹೇಗಿದೆಯೆಂದರೆ ಅವರು ಹೃದಯದಲ್ಲಿ ಮಿಥ್ಯಾಧರ್ಮದ ದೃಢ ವಾಸನೆಯನ್ನು ತುಂಬಿಕೊಂಡು ಘೋರ ತಪಸ್ಸು ಮಾಡುವಂಥ, ಸಮಸ್ತ ಜೀವಗಳ ಮೇಲೆ ದಯೆ ಮಾಡುವಲ್ಲಿ ತತ್ಪರ, ಅಸತ್ಯ ಹಾಗೂ ಕಠೋರ ವಚನದಿಂದ ಪರಾಙ್ಮುಖ, ಎಲ್ಲರೊಡನೆ ಪ್ರಿಯ ವಚನಗಳನ್ನಾಡುವಂಥ, ಧನ-ಸ್ತ್ರೀ-ಕುಟುಂಬದಿಂದ ನಿಸ್ಪೃಹೀ, ನಿರಂತರ ಮಿಥ್ಯಾಧರ್ಮದ ಸೇವನೆ ಮಾಡುವಂಥ, ಜಪ-ತಪ-ಶೀಲ-ಸಂಯಮ-ನಿಯಮದಲ್ಲಿ ದೃಢ ಪ್ರೀತಿಯಿರುವಂಥ, ಮಂದಕಷಾಯ, ಪರಿಗ್ರಹ ರಹಿತ, ವಿಷಯ-ಕಷಾಯಗಳ ತ್ಯಾಗಿ, ಏಕಾಂತ ವನದಲ್ಲಿ ವಾಸಿಸುವಂಥ, ಆರಂಭ ರಹಿತ, ಪರೀಷಹಗಳನ್ನು ಸಹಿಸುವಂಥ, ಸಂಕ್ಲೇಶ ರಹಿತ, ಸಂತೋಷ ಸಹಿತ, ಸರಸ-ನೀರಸ ಭೋಜನವನ್ನು ಸಮಭಾವದಿಂದ ಗ್ರಹಣ ಮಾಡುವಂಥ, ಕ್ಷಮೆಯ ಧಾರಕ, ಆತ್ಮಜ್ಞಾನದಿಂದ ರಹಿತ ಬಾಹ್ಯ ಕ್ರಿಯಾಕಾಂಡದಿಂದ ಮೋಕ್ಷ ಮನ್ನಿಸುವಂಥವರೆಲ್ಲರೂ ಕುಪಾತ್ರರಿದ್ದಾರೆ.

ಕೆಲವರು ಜಿನಧರ್ಮದ ಪಕ್ಷಗ್ರಹಣ ಮಾಡುವಂಥವರು ಕೂಡ ಏಕಾಂತೀ, ಹಠಗ್ರಾಹೀ, ತಮ್ಮ ಬುದ್ಧಿಯಿಂದ ತಮ್ಮನ್ನು ತಾವೇ ಧರ್ಮಾತ್ಮರೆಂದು ಮನ್ನಿಸುತ್ತಾರೆ. ಅವರಲ್ಲಿಯೂ ಕೆಲವರಂತೂ ಜಿನೇಂದ್ರರ ಪೂಜೆ, ಆರಾಧನೆ, ಭಜನೆ, ಕೀರ್ತನದಿಂದಲೂ ತಮ್ಮನ್ನು ಕೃತಕೃತ್ಯರೆಂದು ಮನ್ನಿಸಿಕೊಂಡು ಬಾಹ್ಯಪೂಜೆ, ಸ್ತವನಾದಿಗಳಲ್ಲಿ ತತ್ಪರರಿದ್ದಾರೆ ಮತ್ತು ಉಳಿದ ಜ್ಞಾನಾಭ್ಯಾಸ, ವ್ರತ ಮೊದಲಾದುವಲ್ಲಿ ಶಿಥಿಲರಾಗಿರುತ್ತಾರೆ. ಕೆಲವರು ನೀರಿನಿಂದ ತೊಳೆಯುವುದು, ಶುದ್ಧ ಮಾಡುವುದು, ಧಾನ್ಯವನ್ನು ತೊಳೆಯುವುದು, ಸ್ನಾನ ಮಾಡಿ ಭೋಜನ ಮಾಡುವುದು, ತಮ್ಮ ಕೈಯಿಂದ ತಯಾರಿಸಿದ ಭೋಜನ ಮಾಡುವುದು, ಬಟ್ಟೆ ತೊಳೆಯುವುದು, ತೊಳೆದ ಸ್ಥಾನದಲ್ಲಿ ಉಣ್ಣುವುದು ಇತ್ಯಾದಿ ಕ್ರಿಯೆಗಳನ್ನು ಮಾಡಿಯೇ ತಮಗೆ ಧರ್ಮವಾಗಿ ಹೋಯಿತೆಂದು ಮನ್ನಿಸುತ್ತಾರೆ.

ಕೆಲವರು ನೋಡಿ ನಡೆಯುವುದು, ಶೋಧಿಸಿ ನಡೆಯುವುದು, ಮಲಗುವುದು ಕುಳಿತುಕೊಳ್ಳುವುದು, ನೀರನ್ನು ತುಂಬ ಯತ್ನಾಚಾರಪೂರ್ವಕ ಕೆಲಸದಲ್ಲಿ ತಂದುಕೊಳ್ಳುವುದರಿಂದಲೇ ತಮ್ಮನ್ನು ಕೃತಕೃತ್ಯರೆಂದು ಮನ್ನಿಸುತ್ತಾರೆ, ಅನ್ಯಕ್ರಿಯಾ ರಹಿತರನ್ನು ನಿಂದ್ಯವಾಗಿ ತಿಳಿಯುತ್ತಾರೆ. ಕೆಲವರು ಉಪವಾಸ, ವ್ರತ,ತಪ, ರಸಪರಿತ್ಯಾಗ ಮೊದಲಾದುವನ್ನು ಮಾಡಿ ತಮ್ಮನ್ನು ಉಚ್ಚರೆಂದು ಮನ್ನಿಸುತ್ತಾರೆ. ಕೆಲವರು ಹಸಿದವರಿಗೆ ಆಹಾರ ಕೊಡುವುದನ್ನೇ ಧರ್ಮವೆಂದು ಮನ್ನಿಸುತ್ತಾರೆ. ಕೆಲವರು ಭದ್ರಪರಿಣಾಮವುಳ್ಳವರು ಸಮಸ್ತ ಧರ್ಮಗಳನ್ನು ಸಮಾನವೆಂದು ತಿಳಿದುಕೊಳ್ಳುತ್ತ ವಿಚಾರ ರಹಿತತೆಯಲ್ಲಿಯೇ ಲೀನರಿದ್ದಾರೆ. ಕೆಲವರು ಪರಮೇಶ್ವರರ ನಾಮ ಮಾತ್ರವನ್ನೇ ಧರ್ಮವೆಂದು ತಿಳಿದುಕೊಂಡು ವಿಕಥೆಗಳಿಂದ ರಹಿತ, ನಿಂದೆಯಿಂದ ರಹಿತರಾಗಿರುತ್ತಾರೆ.

ಕೆಲವರು ಅನ್ಯ ಜೀವಗಳ ಮೇಲೆ ಉಪಕಾರ ಮಾಡಿ ಎಲ್ಲರಿಗೆ ವಿನಯ ಮಾಡುವುದನ್ನೇ ಧರ್ಮವೆಂದು ಮನ್ನಿಸುತ್ತಾರೆ. ಕೆಲವರು ತಮ್ಮ ಇಂದ್ರಿಯಗಳನ್ನು ದಂಡಿಸುತ್ತ ಒಂದು ಬಾರಿ ನೀರಸ ಭೋಜನ ಮಾಡಿ ಮೌನಾವಲಂಬಿಯಾಗಿದ್ದು ತಮ್ಮ ಆಯುವನ್ನು ವ್ಯತೀತ ಮಾಡುತ್ತಾರೆ. ಕೆಲವರು ಅನೇಕ ವೇಷಗಳ ಧಾರಕ, ಮಂದಕಷಾಯಿ, ಪರಿಗ್ರಹರಹಿತ, ವಿಷಯ ರಹಿತರಾಗಿರುತ್ತಾರೆ. ಕೆಲವರು ಒಂದು ಬಾರಿ ಯಾರಾದರೂ ಕೈಯ್ಯಲ್ಲಿ ಆಹಾರವಿತ್ತರೆ ಅದನ್ನು ತಿಂದು-ಯಾಚನಾರಹಿತರಾಗಿ ವಿಹರಿಸುತ್ತಾರೆ.

**ಈ ಪ್ರಕಾರ ಅನೇಕರು ಏಕಾಂತ ಪರಮಾಗಮದ ಆಶ್ರಯರಹಿತ ಆತ್ಮಜ್ಞಾನರಹಿತ ಮಿಥ್ಯಾದೃಷ್ಟಿಗಳು ಕುಪಾತ್ರರಿದ್ದಾರೆ.**

**ಕುಪಾತ್ರ ದಾನದ ಫಲ :-** ಕುಪಾತ್ರರಿಗೆ ದಾನ ಕೊಟ್ಟರೆ ಅನೇಕ ಪ್ರಕಾರದಿಂದ ಫಲ ಕೊಡುತ್ತದೆ. ಎಂಥ ಪಾತ್ರ, ಎಂಥ ದಾತಾರ, ಎಂಥ ಭಾವ, ಎಂಥ ದ್ರವ್ಯ, ಎಂಥ ವಿಧಿಯಿಂದ ಕೊಡಲಾಗುವುದು ಅಂಥ ಫಲವು ಪ್ರಾಪ್ತವಾಗುತ್ತದೆ.

ಕೆಲವರಂತೂ ಕುಪಾತ್ರ ದಾನದ ಪ್ರಭಾವದಿಂದ ಅಸಂಖ್ಯಾತ ದ್ವೀಪಗಳಲ್ಲಿ ಪಂಚೇಂದ್ರಿಯ ತಿರ್ಯಂಚಗಳ ಯುಗಲದಲ್ಲಿ ಉತ್ಪನ್ನರಾಗುತ್ತಾರೆ. ಅಲ್ಲಿ ನಾಲ್ಕು-ನಾಲ್ಕು ಅಂಗುಲ ಎತ್ತರವಾಗಿ ಬೆಳೆದಿರುವ ತುಂಬ ಸಿಹಿ ಸುಗಂಧಿತವಿರುವ ಎಳೆ ಹುಲ್ಲನ್ನು ತಿನ್ನುತ್ತಾರೆ, ಅಮೃತ ಸಮಾನವಿರುವ ಸ್ವಾದಿಷ್ಟ ನೀರನ್ನು ಕುಡಿಯುತ್ತಾರೆ, ಪರಸ್ಪರದಲ್ಲಿ ವೈರ-ವಿರೋಧದಿಂದ ರಹಿತರಿರುತ್ತಾರೆ. ಅಲ್ಲಿ ಶೀತದ ಬಾಧೆಯಿಲ್ಲ, ಬಿಸಿಲಿನ ತಾಪವಿಲ್ಲ, ಗಾಳಿ-ಮಳೆ ಮೊದಲಾದವುಗಳ ಕಷ್ಟದಿಂದ ರಹಿತ, ಒಂದು ಪಲ್ಯದ ಆಯುವನ್ನು ಭೋಗಿಸುತ್ತಾರೆ. ಅಲ್ಲಿ ವಿಕಲತ್ರಯದ ಕಷ್ಟಗಳಿಂದ ರಹಿತ, ಅನೇಕ ಪ್ರಕಾರದ ಸ್ಥಲಚರ, ಜಲಚರ, ನಭಚರ ತಿರ್ಯಂಚಗಳಾಗಿ ತಮ್ಮ ಇಚ್ಛೆಗೆ ಅನುಸರಿಸಿ ವಿಹಾರ ಮಾಡುತ್ತ ಸುಖದಿಂದ ಭೋಗಭೋಗಿಸುತ್ತ ಯುಗಲವೇ ಜತೆಯಲ್ಲಿ ಉತ್ಪನ್ನವಾಗುತ್ತವೆ ಮತ್ತು ಜತೆಯಲ್ಲಿಯೇ ಸತ್ತು ವ್ಯಂತರ, ಭವನವಾಸೀ, ಜ್ಯೋತಿಷಿ ದೇವಗಳಲ್ಲಿ ಉತ್ಪನ್ನರಾಗುತ್ತಾರೆ.

ಕೆಲವರು ಕುಪಾತ್ರದಾನದ ಪ್ರಭಾವದಿಂದ ಉತ್ತರಕುರು-ದೇವಕುರು ಭೋಗಭೂಮಿಯಲ್ಲಿ ತಿರ್ಯಂಚಗಳಾಗಿ ಜನ್ಮವೆತ್ತುತ್ತಾರೆ, ಮೂರು ಪಲ್ಯದವರೆಗೆ ಸುಖ ಭೋಗಿಸಿ ಸತ್ತು ದೇವಗಳಲ್ಲಿ ಉತ್ಪನ್ನರಾಗುತ್ತಾರೆ. ಕೆಲವರು ಕುಪಾತ್ರದಾನದ ಪ್ರಭಾವದಿಂದ ಹರಿಕ್ಷೇತ್ರ, ರಮ್ಯಕ ಕ್ಷೇತ್ರಗಳಲ್ಲಿ ಎರಡು ಪಲ್ಯ ಆಯು ಧಾರಕರಾಗಿ; ಕೆಲವರು ಹಿಮವತ ಕ್ಷೇತ್ರ,

ಹೈರಣ್ಯವತ ಕ್ಷೇತ್ರಗಳಲ್ಲಿ ಒಂದು ಪಲ್ಯ ಆಯುಧಾರಕರಾಗಿ ತಿರ್ಯಂಚ ಯುಗಲದಲ್ಲಿ ಉತ್ಪನ್ನರಾಗಿ ಆಯುಪೂರ್ಣ ಮಾಡಿ, ಸತ್ತು ದೇವಲೋಕದಲ್ಲಿ ಹೊರಟು ಹೋಗುತ್ತಾರೆ.

ಕೆಲವರು ಕುಪಾತ್ರದಾನದ ಪ್ರಭಾವದಿಂದ ತೊಂಭತ್ತಾರು ಅಂತರದ್ವೀಪಗಳಲ್ಲಿ ಮನುಷ್ಯಯುಗಲವಾಗಿ ಜನ್ಮ ಪಡೆಯುತ್ತಾರೆ. ಈ ಅಂತರದ್ವೀಪಗಳಲ್ಲಿ ಯಾವ ಮನುಷ್ಯರು ಉತ್ಪನ್ನರಾಗುತ್ತಾರೆ. ಅವರ ಸ್ವರೂಪವು ಹೇಗಿದೆಯೆಂದರೆ-ಸಮುದ್ರದ ಪೂರ್ವಾದಿ ದಿಶೆಗಳಲ್ಲಿ ನಾಲ್ಕು ದ್ವೀಪಗಳಿವೆ, ಅವುಗಳೊಳಗೆ ಪೂರ್ವದಿಶೆಯ ದ್ವೀಪದಲ್ಲಿ ಒಂದು ಕಾಲುಳ್ಳ ಮನುಷ್ಯರು ಉತ್ಪನ್ನರಾಗುತ್ತಾರೆ, ದಕ್ಷಿಣ ದಿಶೆಯ ದ್ವೀಪದಲ್ಲಿ ಬಾಲುಳ್ಳ ಮನುಷ್ಯರು ಉತ್ಪನ್ನರಾಗುತ್ತಾರೆ, ಪಶ್ಚಿಮ ದಿಶೆಯ ದ್ವೀಪದಲ್ಲಿ ಕೊಂಬುಳ್ಳ ಮನುಷ್ಯರು ಉತ್ಪನ್ನರಾಗುತ್ತಾರೆ, ಉತ್ತರ ದಿಶೆಯ ದ್ವೀಪದಲ್ಲಿ ವಚನ ರಹಿತ ಎಂದರೆ ಮೂಗ ಮನುಷ್ಯರು ಉತ್ಪನ್ನರಾಗುತ್ತಾರೆ.

ಸಮುದ್ರದ ನಾಲ್ಕು ದಿಶೆಗಳ ನಾಲ್ಕು ದ್ವೀಪಗಳಲ್ಲಿ ಕ್ರಮದಿಂದ ಮೊರದಂತೆ ಕಿವಿಯುಳ್ಳ ಮನುಷ್ಯರು, ಚಪ್ಪಟೆಯಾದ ಕಿವಿಯುಳ್ಳ ಮನುಷ್ಯರು, ದೀರ್ಘಕಿವಿಯುಳ್ಳ ಎಂದರೆ ಒಂದು ಕಿವಿಯನ್ನು ಹಾಸಿಕೊಂಡು - ಒಂದು ಕಿವಿಯನ್ನು ಹೊದ್ದುಕೊಳ್ಳುವಂಥ ಮನುಷ್ಯರು ಮತ್ತು ಮೊಲದಂತೆ ಕಿವಿಯುಳ್ಳ ಮನುಷ್ಯರು ಉತ್ಪನ್ನರಾಗುತ್ತಾರೆ. ಹದಿನಾರು ದಿಶೆಗಳ ಹಾಗೂ ವಿದಿಶೆಗಳ ಮಧ್ಯದಲ್ಲಿ ಮತ್ತು ಪರ್ವತಗಳ ಕೊನೆಯ ಸ್ಥಳದಲ್ಲಿ ಯಾವ ದ್ವೀಪಗಳಿವೆ. ಆ ದ್ವೀಪಗಳಲ್ಲಿ ೧) ಸಿಂಹದಂಥ ಮುಖ, ೨) ಕುದುರೆಯಂಥ ಮುಖ, ೩) ನಾಯಿಯಂಥ ಮುಖ, ೪)ಹಂದಿಯಂಥ ಮುಖ, ೫) ಕೋಣದಂಥ ಮುಖ, ೬)ಹುಲಿಯಂಥ ಮುಖ, ೭) ಗೂಬೆಯಂಥ ಮುಖ, ೮) ಕೋತಿಯಂಥ ಮುಖ, ೯) ಮತ್ಸ್ಯದಂಥ ಮುಖ, ೧೦) ಸರ್ಪದಂಥ ಮುಖ, ೧೧) ಮೇಕೆಯಂಥ ಮುಖ, ೧೨) ಹಸುವಿನಂಥ ಮುಖ, ೧೩) ಮೇಘದಂಥ ಮುಖ, ೧೪) ವಿದ್ಯುಲ್ಲತೆಯಂಥ ಮುಖ, ೧೫) ಕನ್ನಡಿಯಂಥ ಮುಖ, ೧೬) ಆನೆಯಂಥ ಮುಖವುಳ್ಳ ಮನುಷ್ಯರುಗಳಾಗಿ ಉತ್ಪನ್ನರಾಗುತ್ತಾರೆ. ಲವಣಸಮುದ್ರದ ಒಂದು ತೀರದ ಮೇಲೆ ಇಪ್ಪತ್ತಾಲ್ಕು ಅಂತರ ದ್ವೀಪಗಳಿವೆ. ಎರಡೂ ತೀರದವು ನಲವತ್ತೆಂಟು ಮತ್ತು ಕಾಲೋಲಧಿ ಸಮುದ್ರದ ಎರಡೂ ತೀರದಲ್ಲಿ ನಲವತ್ತೆಂಟು ಇವೆ. ಈ ಪ್ರಕಾರ ತೊಂಭತ್ತಾರು ಅಂತರ ದ್ವೀಪಗಳಲ್ಲಿ ಕುಭೋಗಭೂಮಿಗಳಿದ್ದು, ಅವುಗಳಲ್ಲಿ ಕುಪಾತ್ರ ದಾನದಿಂದ ಮನುಷ್ಯ ಯುಗಲಗಳು ಉತ್ಪನ್ನವಾಗುತ್ತವೆ. ಅವುಗಳಲ್ಲಿ ಒಂದು ಕಾಲುಳ್ಳ ಮನುಷ್ಯರು ಗುಹೆಗಳಲ್ಲಿ ವಾಸಿಸುತ್ತಾರೆ ಮತ್ತು ಅತ್ಯಂತ ಸಿಹಿ ಮಣ್ಣನ್ನು ತಿನ್ನುತ್ತಾರೆ. ಬೇರೆ ಅನ್ಯ ಮನುಷ್ಯರು ವೃಕ್ಷಗಳ ಕೆಳಗೆ ಇರುತ್ತಾರೆ ಮತ್ತು ಕಲ್ಪವೃಕ್ಷಗಳು ಕೊಡುವ ಅನೇಕ ಪ್ರಕಾರದ ಫಲಗಳನ್ನು ತಿನ್ನುತ್ತಾರೆ.

ಈಗ ಕುಭೋಗಭೂಮಿಯ ಮನುಷ್ಯರಲ್ಲಿ ಉತ್ಪನ್ನವಾಗುವ ಕಾರಣರೂಪದ ಪರಿಣಾಮಗಳನ್ನು ತ್ರಿಲೋಕಸಾರದಲ್ಲಿ ಹೇಳಿದ ಮೂರು ಗಾಥೆಗಳ ಮೂಲಕ ಹೇಳುತ್ತಾರೆ, -

**ಜಿಣಲಿಂಗೇ ಮಾಯಾವೀ ಜೋಇಸಮಂತೋವ ಜೀವಿಧಣಕಂಖಾ ।**
**ಅಇಗಉರಂ ಸಣ್ಣ ಜುದಾ ಕರೇಂತಿ ಜೇ ಪರವಿವಾಹಂಪಿ ॥೯೨೨॥**

**ದಂಸಣ ವಿರಾಹಿಯಾ ಜೇ ದೋಸಂ ಣಾಲೋಚಯಂತಿ ದು ಸಣಗಾ ।**
**ಪಂಚಗ್ಗಿತವಾ ಮಿಚ್ಛಾ ಮೋಣಂ ಪರಿಹರಿಯ ಭುಂಜಂತಿ ॥೯೨೩॥**

**ದುಬ್ಭಾವ ಅಸುಇಸೂದಗ ಪುಪ್ಪ ವಇಜಾಇ ಸಂಕರಾದೀಹಿಂ ।**
**ಕಯದಾಣಾವಿ ಕುಪತ್ತೇ ಜೀವಾ ಕುಣರೇಸು ಜಾಯಂತೇ ॥೯೨೪॥**

**ಅರ್ಥ :- ಯಾರು ಜಿನದೇವರ ನಿರ್ಗ್ರಂಥ ಲಿಂಗವನ್ನು ಧಾರಣ ಮಾಡಿ,** ಅನೇಕ ಪರೀಷಹಗಳನ್ನು ಸಹಿಸುತ್ತಲೂ ಮಾಯಾಚಾರದ ಪರಿಣಾಮ ಮಾಡುತ್ತಾರೆ, ಜ್ಯೋತಿಷ್ಯವಿದ್ಯೆ, ಮಂತ್ರವಿದ್ಯೆ, ವೈದ್ಯವಿದ್ಯೆಯ ಮೂಲಕ ಜನರನ್ನು ಪ್ರಸನ್ನಮಾಡಿ ಆಹಾರ ಪ್ರಾಪ್ತಮಾಡಿಕೊಂಡು ಜೀವಿಸುತ್ತಾರೆ; ಜ್ಯೋತಿಷ್ಯ, ವೈದ್ಯಕೀಯ ಮಂತ್ರಶಾಸ್ತ್ರ

ಮೊದಲಾದವುಗಳಿಂದ ಜನರನ್ನು ತಮ್ಮ ಭಕ್ತರನ್ನಾಗಿ ಮಾಡಿಕೊಳ್ಳುತ್ತಾರೆ; ತಪಶ್ಚರ್ಯ ಮಾಡಿ ಧನದ ಇಚ್ಛೆ ಮಾಡುತ್ತಾರೆ; ಋದ್ಧಿಯ ಗರ್ವದಿಂದ ಯುಕ್ತರಿದ್ದಾರೆ; ನಾವು ಜಗತ್ತಿನಲ್ಲಿ ಪೂಜ್ಯರಿದ್ದೇವೆ ಮತ್ತು ತಮ್ಮ ಯಶವು ಜಗತ್ತಿನಲ್ಲಿ ವಿಖ್ಯಾತವಿರುವ ಗರ್ವದಿಂದ ಯುಕ್ತರಿದ್ದಾರೆ; ತಮ್ಮ ಸಾತಾಕರ್ಮದ ಉದಯಜನ್ಯ ಸುಖದ ಗರ್ವದಿಂದ ಯುಕ್ತರಿದ್ದಾರೆ; ಆಹಾರದ ಇಚ್ಛೆ ಮಾಡುತ್ತಾರೆ; ಅಶುಭೋದಯದ ಭಯ ಸಹಿತರಿದ್ದಾರೆ; ಮೈಥುನದ ಇಚ್ಛೆ ಮಾಡುತ್ತಾರೆ; ಪರಿಗ್ರಹ ಮತ್ತು ಶಿಷ್ಯರ ಇಚ್ಛೆ ಮಾಡುತ್ತಾರೆ; ಇತರರ ಮದುವೆ ಮಾಡುವಲ್ಲಿ ಪ್ರವೃತ್ತಿ ಮಾಡುತ್ತಾರೆ. ಅವರೆಲ್ಲರು ಜಿನಲಿಂಗದ ಧಾರಣ ಮಾಡಿದ್ದರೂ ಕೂಡ ಕುತಪದ ಪ್ರಭಾವದಿಂದ ಕುಮನುಷ್ಯರಲ್ಲಿ ಉತ್ಪನ್ನರಾಗುತ್ತಾರೆ.

**ಯಾರು ಜಿನಲಿಂಗ ಧಾರಣ ಮಾಡಿ ಕೂಡ ಸಮ್ಯಗ್ದರ್ಶನದ ವಿರಾಧನೆ ಮಾಡುತ್ತಾರೆ :** ತಮ್ಮ ದೋಷಗಳ ಆಲೋಚನೆ ಗುರುಗಳ ಮುಂದೆ ಮಾಡುವುದಿಲ್ಲ ; ಅನ್ಯರ ದೋಷ ಹೇಳುತ್ತಾರೆ. ಅವರು ಕುಮನುಷ್ಯರಲ್ಲಿ ಉತ್ಪನ್ನರಾಗುತ್ತಾರೆ. ಯಾವ ಮಿಥ್ಯಾದೃಷ್ಟಿಗಳು ಪಂಚಾಗ್ನಿ ತಪದ ಮೂಲಕ ಕಾಯಕ್ಲೇಶ ಮಾಡುತ್ತಾರೆ; ಮೌನ ಮುರಿದು ಭೋಜನ ಮಾಡುತ್ತಾರೆ ; ಯಾರು ದುಷ್ಟಭಾವಗಳಿಂದ ದಾನ ಕೊಡುತ್ತಾರೆ; ಯಾರು ಅಪವಿತ್ರರಾಗಿ ದಾನ ಕೊಡುತ್ತಾರೆ; ಯಾರು ಸೂತಕ ಸಹಿತರಾಗಿ ದಾನ ಕೊಡುತ್ತಾರೆ; ಯಾರು ರಜಸ್ವಲೆಯಾದ ಸ್ತ್ರೀಯೊಡನೆ ಸಂಸರ್ಗ ಮಾಡಿ ದಾನ ಕೊಡುತ್ತಾರೆ; ಯಾರು ಜಾತಿ ಸಂಕರರಾಗಿ ದಾನ ಕೊಡುತ್ತಾರೆ; ಯಾರು ಕುಪಾತ್ರರಿಗೆ ದಾನ ಕೊಡುತ್ತಾರೆ ಅವರೆಲ್ಲರು ಕುಮನುಷ್ಯರಲ್ಲಿ ಉತ್ಪನ್ನರಾಗುತ್ತಾರೆ.

ಆ ಕುಮನುಷ್ಯರು ಕೂಡ ಯಾವುದೇ ಕಷ್ಟವಿಲ್ಲದೆ ಒಂದು ಪಲ್ಯದವರೆಗೆ ಸ್ತ್ರೀ-ಪುರುಷ ಯುಗಲವಾಗಿ ಜತೆಯಲ್ಲೇ ಜನಿಸುತ್ತಾರೆ, ಜತೆಯಲ್ಲೇ ಸಾಯುತ್ತಾರೆ, ಕುದಾನದ ಮತ್ತು ಕುತಪದ ಪ್ರಭಾವದಿಂದ ಆಯುವಿನವರೆಗೆ ಸುಖದಲ್ಲಿ ಮಗ್ನರಾಗಿದ್ದುಕೊಂಡು ಕಾಲಪೂರ್ಣ ಮಾಡಿ ಮಂದ ಕಷಾಯದ ಪ್ರಭಾವದಿಂದ ಭವನತ್ರಿಕದಲ್ಲಿ ಉತ್ಪನ್ನರಾಗಿ ಬಿಡುತ್ತಾರೆ.

ಕೆಲವರು ಕುಪಾತ್ರರಿಗೆ ದಾನವಿತ್ತು ಅಧಿಕ ಭೋಗಸಹಿತವಿರುವಂಥ ಮ್ಲೇಚ್ಛರಲ್ಲಿ ಉತ್ಪನ್ನರಾಗುತ್ತಾರೆ. ಅದೆಷ್ಟೋ ಜನರು ಕುಪಾತ್ರ ದಾನದ ಪ್ರಭಾವದಿಂದ ನೀಚಕುಲದಲ್ಲಿ ಅಧಿಕ ಧನದ ಅಧಿಪತಿ, ಮಾಂಸ ಭಕ್ಷಕ, ಮದ್ಯಪಾನ ಮಾಡುವಂಥ ವೇಶ್ಯಾಗಮನ ಮಾಡುವಂಥ, ನಿರೋಗ ಶರೀರವುಳ್ಳವರಾಗುತ್ತಾರೆ.

ಕೆಲವರು ಕುಪಾತ್ರದಾನದ ಪ್ರಭಾವದಿಂದ ದೊರೆಗಳ ಸೇವಕ, ಸೇವಕಿ, ಆನೆ, ಕುದುರೆ, ಕೋತಿ, ನಾಯಿ ಇತ್ಯಾದಿಗಳಾಗಿ ಒಳ್ಳೆಯ ಭೋಜನ, ವಸ್ತ್ರ ಆಭರಣ ಮೊದಲಾದ ಪ್ರಚುರ ಭೋಗ-ಉಪಭೋಗದ ಸಾಮಗ್ರಿಗಳನ್ನು ಭೋಗಿಸಿ ಸತ್ತು ದುರ್ಗತಿಯಲ್ಲಿ ಹೊರಟು ಹೋಗುತ್ತಾರೆ, ಕುಪಾತ್ರರೂ ಅನೇಕ ಪ್ರಕಾರದವರಿದ್ದಾರೆ, ದಾತಾರರ ಭಾವಗಳೂ ಅನೇಕ ಪ್ರಕಾರದ್ದಿವೆ, ದಾನದ ಸಾಮಗ್ರಿಯೂ ಅನೇಕ ಪ್ರಕಾರದ್ದಿದೆ, ಆದುದರಿಂದ ದಾನದ ಫಲವು ಕೂಡ ಅನೇಕ ಪ್ರಕಾರದ್ದಿದೆ.

ಯಾವನೋ ಹಸಿದವನಿರಲಿ, ದರಿದ್ರನಿರಲಿ, ಕುರುಡನಿರಲಿ, ಕುಂಟನಿರಲಿ, ಹೇಳವನಿರಲಿ, ರೋಗಿಯಿರಲಿ, ಅಶಕ್ತನಿರಲಿ, ವೃದ್ಧನಿರಲಿ, ಬಾಲಕನಿರಲಿ, ವಿಧವೆಯಿರಲಿ, ಹುಚ್ಚನಿರಲಿ, ಅನಾಥನಿರಲಿ, ವಿದೇಶಿಯಿರಲಿ, ತನ್ನ ಸಂಘದ ಸಂಗಡಿಗರಿಂದ ಅಗಲಿದವನಿರಲಿ, ಜೈಲಿನಿಂದ ಬಿಡುಗಡೆಯಾಗಿ ಬಂದವನಿರಲಿ, ಬಂಧನದಲ್ಲಿರಲಿ, ದುಷ್ಟರ ಭಯದಿಂದ ಓಡಿ ಬಂದಿರಲಿ, ಲೂಟಿ ಮಾಡಿ ಬಂದಿರಲಿ, ಅವರ ಕುಟುಂಬದವರೆಲ್ಲರು ಸತ್ತು ಹೋಗಿರಲಿ, ಭಯಭೀತನಿರಲಿ ಇಂಥ ಬೇಕಾದ ಪುರುಷನಿರಲಿ, ಸ್ತ್ರೀಯಿರಲಿ, ಬಾಲಕನಿರಲಿ, ಬಾಲಕಿಯಿರಲಿ ಮತ್ತು ತಿರ್ಯಂಚವಿರಲಿ ಅವರನ್ನು ಹಸಿವು, ಬಾಯಾರಿಕೆ, ಶೀತ, ಉಷ್ಣ, ರೋಗ, ವಿಯೋಗ ಮೊದಲಾದುವಿಂದ ದುಃಖಿಯಾಗಿರುವುದನ್ನು ತಿಳಿದುಕೊಂಡು ಕರುಣೆಯ ಭಾವದಿಂದ ಊಟ, ಬಟ್ಟೆ ಮೊದಲಾದುವನ್ನು ಕೊಡುವುದು ಅದು ಕರುಣಾದಾನವಿದೆ. ಆದರೆ ಅವರ ಜಾತಿ, ಕುಲ, ಆಚರಣೆ ಮೊದಲಾದುವನ್ನು ತಿಳಿದುಕೊಂಡು ಯಥಾಯೋಗ್ಯ ದಾನ ಮಾಡಬೇಕಾಗುವುದು.

ಅಭಕ್ಷ್ಯ ಭಕ್ಷಣ ಮಾಡುವಂಥವರಿಗಂತೂ ಆಹಾರ, ಔಷಧ ಮಾತ್ರ ಕೊಡಬೇಕು. ನಿಂದ್ಯ ಆಚರಣೆ ಮಾಡದಂಥವರ ದುಃಖ ದೂರಮಾಡಲು ಯೋಗ್ಯವಿರುವ ರೂಪಾಯಿಯನ್ನೂ ಕೊಡಬೇಕು ಮತ್ತು ಭೋಜನ, ವಸ್ತ್ರ ಔಷಧ, ಸ್ಥಾನ ಮತ್ತು ಉಪದೇಶವನ್ನೂ ಕೊಡಬೇಕು. ಸ್ಥಾನ ಕೊಡಲು ಯೋಗ್ಯವಿಲ್ಲದವರ ದುಃಖ ನೋಡಿ

ಆಹಾರ ಮಾತ್ರ ಕೊಟ್ಟು ಕಳಿಸಿಬಿಡಬೇಕು. ವೈಯಾವೃತ್ಯ ಮಾಡಲು ಯೋಗ್ಯವಿರುವವರ ವೈಯಾವೃತ್ಯವನ್ನೂ ಮಾಡಬೇಕು, ಜ್ಞಾನ ದಾನವನ್ನು ಕೊಡಬೇಕು.

ಪಾತ್ರ, ಕುಪಾತ್ರ, ಅಪಾತ್ರದ ವಿಚಾರ ಮಾಡದೆ ಕೇವಲ ದಯೆಯನ್ನು ತೋರುವುದು ಕರುಣಾದಾನವಿದೆ. ಆದಾಗ್ಯೂ ದೇಶ, ಕಾಲ, ಪರಿಣಾಮ, ಜಾತಿ, ಕುಲ ಮೊದಲಾದವುಗಳ ವಿಚಾರದೊಡನೆ ಯತ್ನಸಹಿತ ದಾನ ಕೊಡಬೇಕು. ಮಾಂಸಭಕ್ಷಕ, ಮದ್ಯಪಾನ ಮಾಡುವಂಥವರಿಗೆ ಹಣ ಕೊಡಬಾರದು. ದುಃಖಿಗಳ ಮೇಲೆ ಕರುಣೆ ಬಂದರೆ ಆಹಾರ ಮಾತ್ರ ದಾನ ಕೊಡಬೇಕು. ಅದರ ಫಲದಲ್ಲಿ ಯಶಸ್ಸು ಕೀರ್ತಿ ಮೊದಲಾದವುಗಳ ಇಚ್ಛೆ ಮಾಡಬಾರದು. ದಾನ ಕೊಡಲು ಯೋಗ್ಯವಿಲ್ಲದವರು ಅವರು ಅಪಾತ್ರರಿದ್ದಾರೆ.

**ಅಪಾತ್ರದ ಲಕ್ಷಣ ಃ-** ಈಗ ಅಪಾತ್ರದ ಲಕ್ಷಣ ಹೇಳುತ್ತಾರೆ. ದಯಾರಹಿತನಿರುವ, ಹಿಂಸೆಯ ಆರಂಭದಲ್ಲಿ ಆಸಕ್ತನಿರುವ, ಮಹಾಲೋಭಿ ಹಾಗೂ ಪರಿಗ್ರಹ ಹೆಚ್ಚಿಸಬಯಸುವ, ಧನಿಕನಿದ್ದು ಕೂಡ ಯಾಚನೆ ಮಾಡುವ, ಯಜ್ಞಾದಿಗಳನ್ನು ಮಾಡುವಂಥವ, ವೇದಗಳಲ್ಲಿ ಹೇಳಿದ ಹಿಂಸಾಧರ್ಮದಲ್ಲಿ ಲೀನನಿರುವ, ಚಂಡಿ-ಭವಾನಿಯ ಸೇವಕನಾಗಿ ಮೇಕೆ, ಕೋಣಗಳ ಘಾತ ಮಾಡುವಂಥವ, ಕುದಾನ ತೆಗೆದುಕೊಳ್ಳುವಂಥವ, ಮದ್ಯ ಕುಡುಕ, ಗಾಂಜ ಸೇದುವವ, ವೇಶ್ಯಾಗಮನ ಮಾಡುವವ, ಜಿನಧರ್ಮದ ದ್ರೋಹ ಮಾಡುವವ, ಬೇಟೆ ಮೊದಲಾದುವಲ್ಲಿ ಧರ್ಮ ಹೇಳುವಂಥವ, ಪರಧನ-ಪರಸ್ತ್ರೀಯನ್ನು ಬಯಸುವವ, ತನ್ನ ಪ್ರಶಂಸೆ ಮಾಡಿಕೊಳ್ಳುವಂಥವ, ವ್ರತ ಸ್ವೀಕರಿಸಿ ವ್ರತಭಂಗ ಮಾಡಿ ಪಂಚಪಾಪಗಳಲ್ಲಿ ಆಸಕ್ತನಿರುವ, ಅಧಿಕ ಆರಂಭಿಯಿರುವ, ಅಧಿಕ ಪರಿಗ್ರಹಿಯಿರುವ, ತೀವ್ರ ಕಷಾಯಿಯಿರುವ, ಅಸತ್ಯ ಭಾಷಣದಲ್ಲಿ ಲೀನನಿರುವ, ಸುಳ್ಳು ಶಾಸ್ತ್ರಗಳ ಉಪದೇಶ ಕೊಡುವಂಥವ ಮತ್ತು ಜಿನಶಾಸ್ತ್ರದಲ್ಲಿ ಸುಳ್ಳು ಶಾಸ್ತ್ರ ಸೇರಿಸಿ ಮಿಥ್ಯಾಪ್ರರೂಪಣೆ ಮಾಡುವಂಥವ, ವ್ಯಸನೀ, ಪಾಖಂಡೀ, ಅಭಕ್ಷ್ಯಭಕ್ಷಕ, ವ್ರತ-ಶೀಲ-ಸಂಯಮ-ತಪದಿಂದ ಪರಾಙ್ಮುಖ, ವಿಷಯಗಳ ಲೋಲುಪಿ, ಜಿಹ್ವೇಂದ್ರಿಯದ ವಶೀಭೂತ, ಮಿಷ್ಟಭೋಜನದ ಲಂಪಟಿಯಾಗಿರುವವರೆಲ್ಲರೂ ಅಪಾತ್ರರಿದ್ದಾರೆ.

**ಅವರಲ್ಲಿ ರತ್ನತ್ರಯ ಧರ್ಮದ ಅಭಾವವಿರುವುದರಿಂದ ಪಾತ್ರತನವಿಲ್ಲ.** ಪರೋಪಕಾರದ ಭಾವನೆ, ದಯಾಳುತನ, ಕ್ಷಮೆ, ಸಂತೋಷ, ಶೀಲ, ಸತ್ಯ, ತ್ಯಾಗ ಮೊದಲಾದ ಪೂಜೆ, ಜಪ, ನಾಮಸ್ಮರಣೆ ಮೊದಲಾದ ಕುಧರ್ಮರೂಪದ ಆ ಮಿಥ್ಯಾಧರ್ಮವು ಕೂಡ ಅವರಲ್ಲಿ ಕಂಡು ಬಾರದಿರುವುದರಿಂದ ಅವರು ಕುಪಾತ್ರರು ಕೂಡ ಇಲ್ಲ, ಬಡವ, ದೀನ, ದರಿದ್ರ, ದುಃಖೀ, ಕ್ಷುಧಾತುರರೂ ಇಲ್ಲದಿರುವುದರಿಂದ ಅವರು ದಯಾದಾನಕ್ಕೆ ಕೂಡ ಪಾತ್ರರಿಲ್ಲ, ಅವರಂತೂ ಕೇವಲ ಲೋಭೀ, ಮದೋನ್ಮತ್ತ, ವಿಷಯ ಲಂಪಟರಿದ್ದಾರೆ, ಧರ್ಮದ ಇಚ್ಛುಕರು ಕೂಡ ಇಲ್ಲ, ಕೆಲವರು ನಾಮಧಾರೀ ಜೈನಿಗಳಾಗಿ ಜೈನ ಧರ್ಮದ ವೇಷವನ್ನು ಕೇವಲ ಜಿಹ್ವೇಂದ್ರಿಯದ ವಿಷಯರೂಪವಾದ ಅನೇಕ ಪ್ರಕಾರದ ಭೋಜನ ಮಾಡುವ ಸಲುವಾಗಿ ಧಾರಣ ಮಾಡಿದ್ದಾರೆ; ಧನ ಸಂಪಾದನೆಯ ಸಲುವಾಗಿ ವೇಷಧಾರಣ ಮಾಡಿದ್ದಾರೆ ; ಅಭಿಮಾನಿಯಾಗಿ ತಮ್ಮ ಪೂಜೆ, ಉಚ್ಚತೆ, ಧನ ಲಾಭದ ಇಚ್ಛೆಯುಳ್ಳವರಾಗಿ ತಪ, ವ್ರತ, ಪಠಣ, ಪಾಠನ ಮೊದಲಾದವುಗಳ ಅಂಗೀಕಾರ ಮಾಡುತ್ತಾರೆ, ಅವರೆಲ್ಲರೂ ಅಪಾತ್ರರಿದ್ದಾರೆ, ದಾನಕ್ಕೆ ಯೋಗ್ಯರಾಗಿಲ್ಲ.

**ಅಪಾತ್ರರಿಗೆ ದಾನಕೊಡುವುದೆಂದರೆ ಪಾಷಾಣದ ಮೇಲೆ ಬೀಜ ಬಿತ್ತಿದ ಹಾಗೆ ಇದೆ.** ಕಹಿಯಾದ ಸೋರೆ ಬುರುಡೆಯಲ್ಲಿ ಹಾಲು ಹಾಕಿ ಇಟ್ಟುದರ ಸಮಾನವಿದೆ. ಘೋರ ಕಾನನದಲ್ಲಿ ಕಳ್ಳನ ಕೈಯೊಳಗೆ ತಮ್ಮ ಧನವನ್ನು ಸಮರ್ಪಿಸಿ ಬಿಟ್ಟ ಹಾಗೆ ಇದೆ, ತಮ್ಮ ಜೀವನ ವೃದ್ಧಿಯ ಸಲುವಾಗಿ ವಿಷಭಕ್ಷಣ ಮಾಡಿದುದರ ಸಮಾನವಿದೆ, ರೋಗ ದೂರ ಮಾಡುವ ಸಲುವಾಗಿ ಕುಪಥ್ಯದ ಸೇವನೆ ಮಾಡಿದಂತೆ ಇದೆ. ಹಾವಿಗೆ ಹಾಲು ಕುಡಿಸುವುದರ ಸಮಾನ ದುಃಖದ ಉತ್ಪತ್ತಿಯ ಬೀಜವಿದೆ.

**ತಮ್ಮ ಧನವನ್ನು ಹಾಳು ಬಾವಿಯಲ್ಲಿ ಹಾಕಿಬಿಡಬೇಕು, ಆದರೆ ಅಪಾತ್ರರಿಗೆ ದಾನ ಕೊಡಬಾರದು. ಅಪಾತ್ರರಿಗೆ ಕೊಡುವ ದಾನವಂತೂ ತಮ್ಮ ಮನೆಯಲ್ಲಿ ವಿಷವೃಕ್ಷವನ್ನು ಬೆಳೆಸುವುದರ ಸಮಾನವಿದೆ.** ಅಪಾತ್ರರ

ಸಂಗತಿಯನ್ನು ದಾವಾಗ್ನಿಯ ಸಮಾನ ದೂರದಿಂದಲೇ ತ್ಯಾಗ ಮಾಡಿ ಬಿಡಬೇಕಾಗುವುದು. ಯಾವ ಪ್ರಕಾರ ವಿಷವೃಕ್ಷದ ವಾಸನೆಯು ಮೂರ್ಚ್ಛಿತ ಮಾಡಿಬಿಡುತ್ತದೆ, ಅದೇ ಪ್ರಕಾರ ಅಪಾತ್ರರ ಸಂಗತಿಯು ಕೂಡ ತಮ್ಮನ್ನು ಆತ್ಮಜ್ಞಾನದಿಂದ ಭ್ರಷ್ಟಮಾಡಿಬಿಡುತ್ತದೆ.

ಈ ಪ್ರಕಾರ ದಾನದ ವರ್ಣನೆಯಲ್ಲಿ ಪಾತ್ರ, ಕುಪಾತ್ರ, ಅಪಾತ್ರದ ವರ್ಣನೆ ಮಾಡಲಾಯಿತು.

ಈಗ ನಾಲ್ಕು ಪ್ರಕಾರದ ಸುಪಾತ್ರ ದಾನಕೊಟ್ಟು ಯಾರು ಪ್ರಸಿದ್ಧರಾಗಿದ್ದಾರೆ. ಅವರ ಹೆಸರುಗಳನ್ನು ಆಗಮದ ಆಧಾರದಿಂದ ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಶ್ರೀಷೇಣ ವೃಷಭಸೇನೇ ಕೌಂಡೇಶಃ ಶೂಕರಶ್ಚ ದೃಷ್ಟಾಂತಾಃ ।**
**ವೈಯಾವೃತ್ಯಸ್ಯೈತೇ ಚತುರ್ವಿಕಲ್ಪಸ್ಯ ಮಂತವ್ಯಾಃ ॥೧೧೮॥**

**ಅರ್ಥ :-** ನಾಲ್ಕು ಪ್ರಕಾರದ ವೈಯಾವೃತ್ಯದ ನಾಲ್ಕು ಉದಾಹರಣೆಗಳು ತಿಳಿದುಕೊಳ್ಳಲು ಯೋಗ್ಯವಿವೆ. ಆಹಾರ ದಾನದ ಫಲದಲ್ಲಿ ಶ್ರೀಷೇಣ ದೊರೆಯು ಪ್ರಸಿದ್ಧರಾಗಿದ್ದಾರೆ. ಔಷಧ ದಾನದ ಫಲದಲ್ಲಿ ಶ್ರೇಷ್ಠಿ ಪುತ್ರಿ ವೃಷಭಸೇನೆಯು ಪ್ರಸಿದ್ಧಳಾಗಿದ್ದಾಳೆ. ಶಾಸ್ತ್ರದಾನದ ಫಲದಲ್ಲಿ ಕೌಂಡೇಶನಾಮದ ಗೊಲ್ಲನು ಪ್ರಸಿದ್ಧನಾಗಿದ್ದಾನೆ. ಅವನು ಮುಂದೆ ಕೇವಲಿಯಾಗಿದ್ದಾನೆ. ವಸತಿಕೆದಾನದ (ಅಭಯದಾನದ) ಫಲದಲ್ಲಿ ಹಂದಿಯು ಸತ್ತು ಸ್ವರ್ಗ ಲೋಕದಲ್ಲಿ ಮಹರ್ದಿಕ ದೇವನಾಗಿ ಪ್ರಸಿದ್ಧವಾಗಿದೆ. ಈ ಪ್ರಕಾರ ದಾನದ ಅಚಿಂತ್ಯ ಪ್ರಭಾವವಿದೆ. ಈ ಲೋಕದಲ್ಲಿ ಕೂಡ ದಾನಿಯು ಎಲ್ಲರಿಗಿಂತ ಉಚ್ಚನಾಗಿ ಹೋಗುತ್ತಾನೆ.

ದಾನದ ಪ್ರಭಾವವು ಅಚಿಂತ್ಯವಿದೆ. ಆದರೆ ದಾನಕೊಟ್ಟು ದಾನದ ಫಲದಲ್ಲಿ ನನಗೆ ವಿಷಯ ಸಾಮಗ್ರಿಗಳು ಅಧಿಕವಾಗಿ ಹೋಗಬಹುದೆಂದು ವಿಷಯಗಳ ಅಪೇಕ್ಷೆಯನ್ನೆಂದೂ ಮಾಡಬಾರದು. ದಾನದ ಫಲದಲ್ಲಿ ಇಂದ್ರಿಯ ಭೋಗಗಳನ್ನು ಬಯಸುವವರು ಚಿಂತಾಮಣಿ ರತ್ನವನ್ನು ಕೊಟ್ಟು ಗಾಜಿನ ತುಂಡನ್ನು ಅಪೇಕ್ಷಿಸುತ್ತಾರೆ. ಅಮೃತವನ್ನು ಬಿಟ್ಟು ವಿಷ ಕುಡಿಯಲಪೇಕ್ಷಿಸುತ್ತಾರೆ, ದಾರದ ಸಲುವಾಗಿ ಮುತ್ತಿನ ಹಾರ ಕತ್ತರಿಸಬಯಸುತ್ತಾರೆ, ಮತ್ತು ತಮ್ಮ ಕೊರಳಲ್ಲಿ ಬಂಡೆಗಲ್ಲು ಕಟ್ಟಿಕೊಂಡು ಅಗಾಧ ಆಳವಾದ ನೀರಿನಲ್ಲಿ ಪ್ರವೇಶ ಮಾಡಲು ಬಯಸುತ್ತಾರೆ.

ಇಂದ್ರಿಯ ವಿಷಯಗಳು ಅಗ್ನಿಯ ಸಮಾನ ದಾಹವನ್ನುತ್ಪನ್ನ ಮಾಡುವಂಥವುಗಳಿವೆ, ಕಾಲಕೂಟ ವಿಷದ ಸಮಾನ ಮೂರ್ಚ್ಛಿತ ಮಾಡುವಂಥವಿವೆ - ಸಾಯಿಸಿ ಬಿಡುವಂಥವಿವೆ, ಪಂಚಪಾಪಗಳಲ್ಲಿ ಪ್ರವರ್ತನೆ ಮಾಡಿಸುವಂಥವಿವೆ, ತೃಷ್ಣೆಯನ್ನುತ್ಪನ್ನ ಮಾಡಿಸುವಂಥವಿವೆ, ನರಕ ಪ್ರಾಪ್ತ ಮಾಡಿಸುವಂಥವಿವೆ, ಮಹಾವೈರದ ಕಾರಣವಿವೆ, ಜ್ವರ ರೋಗದ ಸಮಾನ ಸಂತಾಪ, ಮೂರ್ಚ್ಛೆ, ಪ್ರಲಾಪ, ದುಃಖ, ಭಯ, ಶೋಕ, ಭ್ರಮೆಯನ್ನುತ್ಪನ್ನ ಮಾಡಿಸುವಂಥವುಗಳಿವೆ. ವಿಷಯಗಳ ಚಿಂತನೆಯೇ ಜೀವವನ್ನು ಅಚೇತ ಮಾಡಿ ಬಿಡುತ್ತದೆ. ಸೇವನೆ ಮಾಡುವುದರಿಂದಂತೂ ಅನೇಕ ಭವಗಳಲ್ಲಿ ದುಃಖವನ್ನು ಭೋಗಿಸಬೇಕಾಗುವುದು. ದುರ್ಗತಿಗಳಲ್ಲಿ ಸುತ್ತಬೇಕಾಗುವುದು.

ಆದುದರಿಂದ ಇಚ್ಛಾರಹಿತರಾಗಿ ದಾನ-ಧರ್ಮ ಮಾಡಬೇಕಾಗುವುದು. ತಮಗೆ ಲಾಭಾಂತರಾಯಕರ್ಮದ ಕ್ಷಯೋಪಶಮದಿಂದ ಯಾವ ಧನದ ಪ್ರಾಪ್ತಿಯಾಗಿದೆ ಅದರಲ್ಲಿಯೇ ಸಂತೋಷಪಟ್ಟುಕೊಂಡು ಭವಿಷ್ಯದ ವಿಷಯಗಳ ಇಚ್ಛೆ ಮಾಡಬಾರದು. ಅಲ್ಪ ಧನ ದೊರೆತರೂ ಅದರಲ್ಲಿಯೇ ದಾನದ ಭಾಗವನ್ನು ತೆಗೆದಿರಿಸಬೇಕಾಗುವುದು. ದಾನದ ನಿಮಿತ್ತವಾಗಿ ಧನದ ಇಚ್ಛೆ ಮಾಡಬಾರದು. **ಇಚ್ಛೆಯು ಅಭಾವವಾಗಿ ಹೋಗುವುದೇ ನಿಜವಾಗಿ ಪರಮದಾನವಿದೆ, ಅದುವೇ ಪರಮ ತಪವಿದೆ.**

ಇದೇ ವೈಯಾವೃತ್ಯವನ್ನೇ ಅತಿಥಿಸಂವಿಭಾಗವ್ರತವೆಂದು ಹೇಳುತ್ತಾರೆ. ಈ ಪ್ರಕಾರ ದಾನದ ವರ್ಣನೆ ಮಾಡಲಾಯಿತು. ಈಗ ವೈಯಾವೃತ್ಯದಲ್ಲಿಯೇ ಜಿನೇಂದ್ರ ಪೂಜೆಯ ಉಪದೇಶ ಮಾಡುವಂಥ ಸೂತ್ರ ಹೇಳುತ್ತಾರೆ,-

**ದೇವಾಧಿದೇವಚರಣೇ ಪರಿಚರಣಂ ಸರ್ವದುಃಖನಿರ್ಹರಣಮ್ ।**
**ಕಾಮದುಹಿ ಕಾಮದಾಹಿನಿ ಪರಿಚಿನುಯಾದಾದೃತೋ ನಿತ್ಯಮ್ ॥೧೧೯॥**

**ಅರ್ಥ :-** ದೇವ ಆ ಇಂದ್ರ ಮೊದಲಾದವರ ಅಧಿದೇವ ಎಂದರೆ ಸ್ವಾಮಿಯಾದ ಅರಹಂತದೇವರ ಚರಣಗಳ ಸಮೀಪದಲ್ಲಿ ಯಾವ ಪರಿಚರಣ ಎಂದರೆ ಪೂಜೆಯನ್ನು ನಿತ್ಯವೂ ಮಾಡಬೇಕಾಗುವುದು, ಆ ಪೂಜೆಯು ಸಮಸ್ತ ದುಃಖಗಳನ್ನು ನಾಶಮಾಡುವಂಥ, ಮನೋವಾಂಛಿತವನ್ನು ಪೂರ್ಣಮಾಡುವಂಥ ಮತ್ತು ಕಾಮಭಾವವನ್ನು ನಾಶಮಾಡುವಂಥದ್ದಿವೆ.

**ಭಾವಾರ್ಥ :-** ಗೃಹಸ್ಥರು ನಿತ್ಯವೂ ಮೊದಲು ಜಿನೇಂದ್ರರ ಪೂಜೆ ಮಾಡಬೇಕಾಗುವುದು. ಜಿನೇಂದ್ರರ ಪೂಜೆಗೆ ಸಮಾನವಾದ ಸರ್ವೋತ್ತಮ ಕಾರ್ಯವು ಬೇರೆ ಯಾವುದೂ ಇಲ್ಲ.

ಯಾರಿಗೆ ಸ್ವಲ್ಪ ಮಾತ್ರವೂ ಅಶುಭಕರ್ಮದ ಕ್ಷಯೋಪಶಮದಿಂದ ಮನುಷ್ಯ-ತಿರ್ಯಂಚಗಳ ಸಮಾನ ಸಪ್ತಧಾತುಮಯ ಶರೀರದ ಪ್ರಾಪ್ತಿಯಾಗಿಲ್ಲ, ಮತ್ತು ಆಹಾರ ಮೊದಲಾದವುಗಳ ಆಧೀನವಿರುವ ಕ್ಷುಧೆ, ತೃಷೆ ಮೊದಲಾದವುಗಳ ವೇದನೆಯನ್ನು ನಾಶ ಮಾಡಬೇಕಾಗಿಲ್ಲ, ತಾನಾಗಿಯೇ ಕಂಠದೊಳಗಿಂದ ಅಮೃತವು ಸ್ರವಿಸುತ್ತದೆ ಆದರಿಂದ ಕ್ಷುಧೆ, ತೃಷೆಗಳ ಮೂಲಕ ಆಗುವಂಥ ವೇದನೆಯ ಕಷ್ಟವು ಅವರಿಗೆ ಇರುವುದಿಲ್ಲ, ಅವರಿಗೆ ವಾರ್ಧಕ್ಯವು ಬರುವುದಿಲ್ಲ, ರೋಗಗಳಾಗುವುದಿಲ್ಲ, ಇತ್ಯಾದಿ ಕರ್ಮಕೃತ ಯಾವ ಬಾಧೆಯು ಇಲ್ಲದಿರುವುದರಿಂದ ನಾಲ್ಕೂ ಗತಿಗಳ ದೇವಗಳನ್ನು ಉತ್ತಮರೆಂದು ಹೇಳುತ್ತಾರೆ.

ಜ್ಞಾನಾವರಣ, ವೀರ್ಯಾಂತರಾಯ ಮೊದಲಾದ ಕರ್ಮದ ಅಧಿಕ ಕ್ಷಯೋಪಶಮವಾಗುವುದರಿಂದ ಇತರ ದೇವಗಳ ಅಪೇಕ್ಷೆಯಿಂದ ಅವರ ಜ್ಞಾನ-ವೀರ್ಯ ಮೊದಲಾದ ಶಕ್ತಿಯ ಅಧಿಕತೆಯಿರುವುದರಿಂದ ದೇವಗಳ ಸ್ವಾಮಿಯಾದ ಇಂದ್ರನು ಸಮಸ್ತ ಅಸಂಖ್ಯಾತ ದೇವಗಳಿಂದ ವಂದನೀಯನಿದ್ದಾನೆ. ಯಾರು ಆತ್ಮನ ಶಕ್ತಿಯ ಘಾತ ಮಾಡುವಂಥ ಜ್ಞಾನಾವರಣ, ದರ್ಶನಾವರಣ, ಮೋಹನೀಯ ಮತ್ತು ಅಂತರಾಯ ಮೊದಲಾದ ಸಮಸ್ತ ಕರ್ಮಗಳ ನಾಶಮಾಡಿ ಜಿನೇಂದ್ರರಾಗಿದ್ದಾರೆ ಅವರು ಸಮಸ್ತ ಇಂದ್ರಾದಿಗಳಿಂದ ವಂದನೀಯರಿದ್ದಾರೆ. ಆದುದರಿಂದ ಆ ಜಿನೇಂದ್ರರು ದೇವಾಧಿದೇವರಿದ್ದಾರೆ.

**ದೇವಾಧಿದೇವರ ಚರಣಗಳ ಪೂಜೆಯು ಸಮಸ್ತ ದುಃಖಗಳನ್ನು ನಾಶ ಮಾಡುವಂಥದ್ದಿದೆ.** ಇಂದ್ರಿಯ ವಿಷಯಗಳ ಇಚ್ಛೆಯನ್ನು ನಾಶಮಾಡಿ ಮೋಕ್ಷರೂಪ ಸುಖದ ಇಚ್ಛೆಯನ್ನು ಪೂರ್ಣ ಮಾಡುವಂಥದ್ದಿದೆ. ಆದುದರಿಂದ ಉಳಿದೆಲ್ಲರ ಆರಾಧನೆಯನ್ನು ಬಿಟ್ಟುಕೊಟ್ಟು ಜಿನೇಂದ್ರರ ಆರಾಧನೆ ಮಾಡಬೇಕು. ಅಧಿಕ ಸಮಯದವರೆಗೆ ಸಂಸಾರೀ, ರಾಗೀ, ದ್ವೇಷೀ, ಮೋಹೀ ಜೀವರುಗಳ ಆರಾಧನೆ ಮಾಡಿ ಘೋರ ಪಾಪಕರ್ಮದ ಬಂಧ ಮಾಡಿಕೊಂಡು ಸಂಸಾರದಲ್ಲಿ ಪರಿಭ್ರಮಣವನ್ನೇ ಮಾಡಿದೆ. ಒಂದು ವೇಳೆ ವೀತರಾಗ ಸರ್ವಜ್ಞದೇವರ ಆರಾಧನೆ ಮಾಡುತ್ತಿದ್ದರೆ ಕರ್ಮ ಬಂಧದ ನಾಶ ಮಾಡಿ ಸ್ವಾಧೀನವಿರುವ ಮೋಕ್ಷರೂಪದ ಆತ್ಮನನ್ನು ಪ್ರಾಪ್ತಮಾಡಿಕೊಳ್ಳಬಹುದಾಗಿತ್ತು. ಆದುದರಿಂದ ಸಂಸಾರದ ಸಮಸ್ತ ದುಃಖಗಳ ನಾಶ ಮಾಡುವಂಥ ಜಿನೇಂದ್ರರ ಪೂಜೆಯನ್ನೇ ಮಾಡಬೇಕು.

**ಪ್ರಶ್ನೆ :-** ಅರಹಂತ ಭಗವಂತರಂತೂ ಆಯುಪೂರ್ಣ ಮಾಡಿ ಲೋಕದ ಅಗ್ರಭಾಗದಲ್ಲಿ ಮೋಕ್ಷಸ್ಥಾನದಲ್ಲಿದ್ದಾರೆ. ಧಾತು-ಪಾಷಾಣಗಳ ಸ್ಥಾಪನಾರೂಪದ ಪ್ರತಿಬಿಂಬಗಳಲ್ಲಂತೂ ಅವರು ಬರುವುದಿಲ್ಲ, ತಮ್ಮ ಪೂಜೆ-ಸ್ತುತಿಯನ್ನೂ ಬಯಸುವುದಿಲ್ಲ, ಮತ್ತು ತಮ್ಮ ಅನಂತಜ್ಞಾನ-ಅನಂತಸುಖದಲ್ಲಿ ಲೀನರಿರುತ್ತಾರೆ. ತಮ್ಮ ಪೂಜೆ-ಸ್ತುತಿಯನ್ನಂತೂ ಯಾರು ಅಭಿಮಾನ ಕಷಾಯದಿಂದ ದುಃಖಿಯಿದ್ದಾರೆ, ತಮ್ಮ ದೊಡ್ಡಸ್ತಿಕೆ ಬಯಸುತ್ತಾರೆ, ಸಂಸಾರಿಯಿದ್ದಾರೆ-ರಾಗ-ದ್ವೇಷ ಸಹಿತರಿದ್ದಾರೆ ಅವರು ಅಪೇಕ್ಷಿಸುತ್ತಾರೆ. ಅವರೇ ಸ್ತುತಿ ಮಾಡುವುದರಿಂದ ಸಂತುಷ್ಟರಾಗುತ್ತಾರೆ. ಪರಮೇಷ್ಠಿ ವೀತರಾಗ ಭಗವಂತರು ಅನಂತಚತುಷ್ಟಯ ಸ್ವರೂಪದಲ್ಲಿ ಲೀನರಿದ್ದಾರೆ, ಅವರಿಗೆ ಪೂಜೆಯ ಇಚ್ಛೆಯಿಲ್ಲ, ಅವರು ಧಾತುಪಾಷಾಣದ ಪ್ರತಿಬಿಂಬದಲ್ಲಿ ಬರುವುದಿಲ್ಲ, ಯಾರಿಗೂ ಉಪಕಾರ ಮಾಡುವುದಿಲ್ಲ, ಯಾರಿಗೂ ಅಪಕಾರ ಮಾಡುವುದಿಲ್ಲ, ಪೂಜೆ-ಸ್ತುತಿ ಮಾಡುವಂಥವರಿಗೆ ಪ್ರಸನ್ನರಾಗುವುದಿಲ್ಲ, ನಿಂದೆ ಮಾಡುವಂಥವರ ಮೇಲೆ ದ್ವೇಷ ಮಾಡುವುದಿಲ್ಲ, ಆದಾಗ್ಯೂ ಯಾವ ಪ್ರಯೋಜನದಿಂದ ಅರಹಂತ ಜಿನೇಂದ್ರ ದೇವರ ಪೂಜೆ-ಸ್ತುತಿ ಮಾಡಬೇಕಾಗುವುದು ?

**ಉತ್ತರ :-** ವೀತರಾಗ ಭಗವಂತರಂತೂ ಪೂಜೆ, ಸ್ತುತಿಯ ಅಪೇಕ್ಷೆ ಮಾಡುವುದಿಲ್ಲ, ಆದರೆ ಗೃಹಸ್ಥರ ಪರಿಣಾಮವು ಶುದ್ಧ ಆತ್ಮಸ್ವರೂಪದ ಭಾವನೆಯಲ್ಲಿ ನಿಂತುಕೊಳ್ಳುವುದಿಲ್ಲ, ಸಾಮ್ಯಭಾವರೂಪವಾಗಿ ಉಳಿಯುವುದಿಲ್ಲ, ಮನಸ್ಸು ಯಾವ ಅವಲಂಬನವಿಲ್ಲದೆ ಇರುವುದಿಲ್ಲ; ಆದುದರಿಂದ ಪರಮಾತ್ಮನ ಭಾವನೆಯ ಅವಲಂಬನೆ ಪಡೆದು, ವೀತರಾಗ ಸ್ವರೂಪದ ಧ್ಯಾನದ ಸಲುವಾಗಿ, ಶುದ್ಧಾತ್ಮನ ಅವಲಂಬನೆಯ ಸಲುವಾಗಿ, ವಿಷಯ-ಕಷಾಯಗಳ ಆರಂಭದ ಅವಲಂಬನೆ ತೊರೆದು, ಪ್ರತ್ಯಕ್ಷ ಪರಮಾತ್ಮಸ್ವರೂಪದ ಧಾತು-ಪಾಷಾಣ ಮತ್ತು ಪ್ರತಿಬಿಂಬಗಳಲ್ಲಿ ಪರಮಾತ್ಮನ ಸಂಕಲ್ಪ ಮಾಡಿ ಧ್ಯಾನ, ಪೂಜೆ, ಸ್ತುತಿಗಳನ್ನು ಮಾಡುತ್ತಾರೆ.

ಪೂಜೆಯ ಸಮಯದಲ್ಲಿ ವಿಷಯ-ಕಷಾಯಗಳ ಸಂಕಲ್ಪದ ಅಭಾವವಾಗುವುದರಿಂದ, ದುರ್ಧ್ಯಾನವು ಬಿಟ್ಟು ಹೋಗುವುದರಿಂದ ತಮ್ಮ ಪರಿಣಾಮದ ವಿಶುದ್ಧತೆಯ ಪ್ರಭಾವದಿಂದ ಅಶುಭಕರ್ಮಗಳ ರಸವು ಬತ್ತಿ ಹೋಗುತ್ತದೆ, ಅಶುಭಕರ್ಮಗಳ ಸ್ಥಿತಿಯು ಕುಂದುತ್ತದೆ, ಅನುಭಾಗವು ಕಡಿಮೆಯಾಗುತ್ತದೆ, ಅದುವೇ ಪಾಪ ಕರ್ಮಗಳ ಅಭಾವವಿದೆ. ಪರಿಣಾಮಗಳ ವಿಶುದ್ಧತೆಯ ಪ್ರಭಾವದಿಂದ ಶುಭಪ್ರಕೃತಿಗಳಲ್ಲಿ ರಸವು ಹೆಚ್ಚುತ್ತದೆ, ಶುಭ ಆಯುವಿನ ಹೊರತಾಗಿ ಸಮಸ್ತ ಕರ್ಮಪ್ರಕೃತಿಗಳ ಸ್ಥಿತಿಯು ಕಡಿಮೆಯಾಗಿ ಹೋಗುತ್ತದೆ. ಇದೇ ಕಾರಣದಿಂದ ವೀತರಾಗರ ಸ್ತವನ, ಪೂಜೆ, ಧ್ಯಾನ ಮಾಡುವುದರ ಪ್ರಭಾವದಿಂದ ಪಾಪಕರ್ಮಗಳ ನಾಶವಾಗುತ್ತದೆ, ಸಾತಿಶಯ ಪುಣ್ಯಕರ್ಮದ ಉಪಾರ್ಜನೆಯಾಗುತ್ತದೆ.

**ಪುಣ್ಯ-ಪಾಪ ಬಂಧದ ಕಾರಣವಂತೂ ತಮ್ಮ ಭಾವವೇ ಇದೆಯೆಂಬುದನ್ನು ನಿಶ್ಚಿತ ಮಾಡಬೇಕು.** ತಮಗೆ ಬಾಹ್ಯದಲ್ಲಿ ಎಂಥ ಅವಲಂಬನ ದೊರಕುತ್ತದೆ ಅಂಥ ಭಾವವಾಗುತ್ತದೆ. ಅರಹಂತ ಭಗವಂತರು ಧಾತು-ಪಾಷಾಣದ ಪ್ರತಿಬಿಂಬಗಳಲ್ಲಿ ಬರುವುದಿಲ್ಲ, ಮತ್ತು ವೀತರಾಗ ಭಗವಂತರು ಯಾರಿಗೂ ಉಪಕಾರ-ಅಪಕಾರ ಮಾಡುವುದಿಲ್ಲ, ಆದಾಗ್ಯೂ ತಮ್ಮಲ್ಲಿ ಶುಭ ಪರಿಣಾಮಗಳುಂಟಾಗಲು, ರಾಗ-ದ್ವೇಷಗಳನ್ನು ನಾಶ ಮಾಡಲು ವೀತರಾಗ ಭಗವಂತರ ಧ್ಯಾನ, ಪೂಜೆ, ಸ್ತುತಿ ಮೊದಲಾದವು ಬಾಹ್ಯಕಾರಣಗಳಿವೆ. ಆ ಪರಿಣಾಮಗಳಿಂದ ಜೀವದ ಪರಮ ಉಪಕಾರವಾಗುತ್ತದೆ.

ಯಾವ ಪ್ರಕಾರ ಕಾಷ್ಠ, ಪಾಷಾಣ, ಲೆಪ್ಪದ ಸ್ತ್ರೀಯ ರೂಪುಗಳು ಜೀವರುಗಳಿಗೆ ರಾಗದ ಕಾರಣಗಳಿವೆ, ಅಚೇತನ ಚಿನ್ನ, ಮಣಿ ಮತ್ತು ಮಾಣಿಕ, ಬೆಳ್ಳಿ, ಮಹಡಿ ಮನೆ, ವನ, ಉಪವನ, ಗ್ರಾಮ, ನಗರ, ಪಾಷಾಣ, ಕೊಳಚೆ, ಸ್ಮಶಾನ ಮೊದಲಾದುವನ್ನು ನೋಡುವುದರಿಂದ-ಕೇಳುವುದರಿಂದ ರಾಗ-ದ್ವೇಷಗಳನ್ನು ಉತ್ಪನ್ನ ಮಾಡಿಸುತ್ತವೆ; ಶುಭ-ಅಶುಭ ವಚನ, ರಾಗ, ರೋದನ, ಸುಗಂಧ, ದುರ್ಗಂಧಗಳೆಲ್ಲವು ಅಚೇತನ ಪುದ್ಗಲ ದ್ರವ್ಯಗಳಿವೆ, ಇವುಗಳ ಶ್ರವಣ, ಅವಲೋಕನ, ಚಿಂತನ, ಅನುಭವನ ಮಾಡುವುದರಿಂದ ರಾಗ-ದ್ವೇಷಗಳಾಗುತ್ತವೆ; ಅದೇ ಪ್ರಕಾರ ಜಿನೇಂದ್ರ ಭಗವಂತರ ಪರಮ ಶಾಂತ ಮುದ್ರೆಯು ಜ್ಞಾನಿಗಳಿಗೆ ವೀತರಾಗತೆಯಾಗುವ ಸಲುವಾಗಿ ಸಹಕಾರೀ ಕಾರಣವಿದೆ, ಆದರೆ ಪ್ರೇರಕ ಕಾರಣವಿಲ್ಲ. ಭವ್ಯ ಜೀವರುಗಳಿಗೆ ವೀತರಾಗತೆಯ ಹೊರತಾಗಿ ಯಾವ ಅಭಿಲಾಷೆಯಿರುವುದಿಲ್ಲ.

**ಪೂಜೆಯ ಸಮಯದೊಳಗೆ ಜಿನೇಂದ್ರರ ಚರಣಗಳಲ್ಲಿ ಯಾವ ಜಲ, ಚಂದನ ಮೊದಲಾದ ಅಷ್ಟದ್ರವ್ಯಗಳನ್ನು ಅರ್ಪಿಸುತ್ತಾರೆ ಅದು ಭಗವಂತರಿಗೆ ತಿನ್ನುವ ಸಲುವಾಗಿ ಇಲ್ಲ ;** ಅವರು ಪೂಜೆ ಮಾಡದಿರುವುದರಿಂದ ಅಪೂಜ್ಯರಾಗಿ ಉಳಿಯುವರು ಅಥವಾ ಅವರು ಆ ಸಾಮಗ್ರಿಯ ಇಚ್ಛೆ ಮಾಡುವರೆಂಬ ಅಭಿಪ್ರಾಯದಿಂದ ಸಾಮಗ್ರಿ ಅರ್ಪಿಸುವುದಿಲ್ಲ, **ಅವರಂತೂ ಭಗವಂತರ ದರ್ಶನದ ಅತ್ಯಧಿಕ ಆನಂದದಿಂದ ಜಲ, ಚಂದನಾದಿಗಳ ರೂಪದ ಅರ್ಘ್ಯ ಕೊಡುವುದಿದೆ.** ಯಾವ ಪ್ರಕಾರ ದೊರೆಗಳಿಗೆ ಕಾಣಿಕೆ ಕೊಡುವುದು, ಉಪಹಾರ ಕೊಡುವುದು, ಆರತಿ ಬೆಳಗುವುದು, ನಿವಾಳಿ ಎತ್ತುವುದು, ಅಕ್ಷತೆ-ಪುಷ್ಪ ಮೊದಲಾದವುಗಳ ಕ್ಷೇಪಣ ಮಾಡುವುದಿದೆ; ಮುತ್ತುಗಳಿಂದ ತಟ್ಟೆ ತುಂಬಿ ಬೆಳಗುತ್ತಾರೆ; ಸ್ವರ್ಣಮುದ್ರೆ, ಬೆಳ್ಳಿಯ ನಾಣ್ಯಗಳಿಂದ ತಟ್ಟೆ ತುಂಬಿ ಬೆಳಗಿ ಕ್ಷೇಪಿಸುತ್ತಾರೆ ; ಅಕ್ಷತೆ-ಪುಷ್ಪ ಮೊದಲಾದವುಗಳಿಂದ ಬೆಳಗುತ್ತಾರೆ. ಹೀಗೆ ಅವರೆಲ್ಲರು ದೊರೆಯಲ್ಲಿ ಭಕ್ತಿ ಹಾಗೂ ಆನಂದ ಪ್ರಕಟ ಮಾಡುತ್ತಾರೆ. ದೊರೆಗಳಿಗೆ ದಾನ ಕೊಡಲಾಗುವುದಿಲ್ಲ, ಹೇಗೆ ದೊರೆಗಳ ಹತ್ತಿರದಲ್ಲಿ ಮಾಡಲಾದ ನಿವಾಳಿಯ ವಸ್ತುವನ್ನು ಯಾಚಕ ಜನರು-ಭಿಕ್ಷುಕ ಜನರು ಗ್ರಹಣ ಮಾಡುತ್ತಾರೆ, ಅದೇ ಪ್ರಕಾರ ಅರಹಂತ ಭಗವಂತರ ಮುಂದಿನ ಸ್ಥಾನದಲ್ಲಿ ಅಷ್ಟದ್ರವ್ಯಗಳ ಅರ್ಘ್ಯವನ್ನು ಅರ್ಪಿಸುವುದಿದೆಯೆಂದು ತಿಳಿಯಬೇಕು.

**ನವದೇವಗಳು ಪೂಜಾಯೋಗ್ಯರಿದ್ದು** ಅವರ ವರ್ಣನೆಯು ಶಾಸ್ತ್ರಗಳಲ್ಲಿ ಬರುತ್ತದೆ, -

**ಅರಹಂತ ಸಿದ್ಧ ಸಾಹೂ ತಿದಯಂ ಜಿಣಧಮ್ಮ ವಯಣ ಪಡಿಮಾಹೂ ।**
**ಜಿಣಣಿಲಯಾ ಇದಿರಾಏ ಣವ ದೇವಾ ದಿಂತು ಮೇ ಬೋಹಿ ॥**

**ಅರ್ಥ :-** ಅರಹಂತ ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು, ಜಿನಧರ್ಮ, ಜಿನವಚನ, ಜಿನಪ್ರತಿಮೆ, ಜಿನಮಂದಿರ ಈ ಪ್ರಕಾರ ಈ ಒಂಭತ್ತು ದೇವರಿದ್ದಾರೆ, ಅವರು ನನಗೆ ರತ್ನತ್ರಯದ ಪೂರ್ಣತೆ ಕೊಡಲಿ,

ಅರಹಂತರ ಪ್ರತಿಬಿಂಬವಿರುವಲ್ಲಿ ನವರೂಪ ದೇವರು ಗರ್ಭಿತರಿದ್ದಾರೆಂದು ತಿಳಿದುಕೊಳ್ಳಬೇಕು. ಆಚಾರ್ಯ, ಉಪಾಧ್ಯಾಯ, ಸಾಧುಗಳಂತೂ ಅರಹಂತರ ಪೂರ್ವ ಅವಸ್ಥೆಯಿವೆ. ಸಿದ್ಧರಿದ್ದವರು ಮೊದಲು ಅರಹಂತರಾಗಿಯೇ ಸಿದ್ಧರಾಗಿದ್ದಾರೆ. ಅರಹಂತರ ವಾಣಿಯು ಅದು ಜಿನವಚನವಿದೆ. ವಾಣಿಯ ಮೂಲಕ ಯಾವ ಅರ್ಥ ಪ್ರಕಟಪಡಿಸಿದೆ ಅದು ಜಿನಧರ್ಮವಿದೆ. ಅರಹಂತರ ಸ್ವರೂಪವು ಎಲ್ಲಿ ವಿರಾಜಮಾನವಿರುತ್ತದೆ ಅದು ಜಿನಾಲಯವಿದೆ. ಈ ಪ್ರಕಾರ ನವದೇವತಾರೂಪವಿರುವ ಅರಹಂತ ಭಗವಂತರ ಪ್ರತಿಬಿಂಬದ ಪೂಜೆಯನ್ನು ನಿತ್ಯವೂ ಮಾಡುವುದು ಯೋಗ್ಯವಿದೆ.

**ಅಧೋಲೋಕ**ದಲ್ಲಿ ಅರಹಂತರ ಅಕೃತ್ರಿಮ ಪ್ರತಿಬಿಂಬಗಳು ಭವನವಾಸಿಗಳ ಚಮರ ವೈರೋಚನ ಮೊದಲಾದ ಇಂದ್ರರುಗಳಿಂದ ಹಾಗೂ ಅಸಂಖ್ಯಾತ ಭವನವಾಸೀ ದೇವಗಳಿಂದ ಪೂಜಿಸಲ್ಪಡುತ್ತವೆ. **ಮಧ್ಯಲೋಕ**ದಲ್ಲಿ ಚಕ್ರವರ್ತಿ ನಾರಾಯಣ, ಬಲಭದ್ರ ಮೊದಲಾದ ಅನೇಕ ಧರ್ಮಾತ್ಮರುಗಳಿಂದ ಪೂಜಿಸಲ್ಪಡುತ್ತವೆ. **ವ್ಯಂತರ ಲೋಕ**ದಲ್ಲಿ ವ್ಯಂತರೇಂದ್ರರುಗಳು ಹಾಗೂ ದೇವಗಳಿಂದ ಪೂಜಿಸಲ್ಪಡುತ್ತವೆ. **ಜ್ಯೋತಿರ್ಲೋಕ**ದಲ್ಲಿ ಸೂರ್ಯ, ಚಂದ್ರ ಮೊದಲಾದ ಅಸಂಖ್ಯಾತ ಜ್ಯೋತಿಷಿ ದೇವಗಳಿಂದ ಪೂಜಿಸಲ್ಪಡುತ್ತವೆ, **ಸ್ವರ್ಗಲೋಕ**ದಲ್ಲಿ ಸೌಧರ್ಮ ಮೊದಲಾದ ಇಂದ್ರರುಗಳಿಂದ ಹಾಗೂ ಅಸಂಖ್ಯಾತ ಕಲ್ಪವಾಸಿ ದೇವಗಳಿಂದ ಪೂಜಿಸಲ್ಪಡುತ್ತವೆ.

ಈ ಪ್ರಕಾರ ಮೂರು ಲೋಕಗಳ ಭವ್ಯ ಜೀವರುಗಳಿಂದ ವಂದನೀಯ ಪೂಜನೀಯವಿರುವ ಅರಹಂತರ ತದಾಕಾರದ ಪ್ರತಿಬಿಂಬವಿದ್ದು ಅದು ಯಾವಾಗಲೂ ಭವ್ಯ ಜೀವರುಗಳಿಗೆ ಪೂಜಾಯೋಗ್ಯವಿದೆ.

**ಪೂಜೆಯ ಭೇದ, ವಿಧಿ ಮತ್ತು ಪ್ರಯೋಜನ :-** ಒಂದು ದ್ರವ್ಯ ಪೂಜೆ ಇನ್ನೊಂದು ಭಾವಪೂಜೆಯೆಂದು ಪೂಜೆಯು ಎರಡು ಪ್ರಕಾರದ್ದಿದೆ. ವಚನಗಳಿಂದ ಅರಹಂತರ ಪ್ರತಿಬಿಂಬದ ಸ್ತುತಿ ಮಾಡುವುದು, ನಮಸ್ಕಾರ ಮಾಡುವುದು, ಮೂರು ಪ್ರದಕ್ಷಿಣೆ ಹಾಕುವುದು, ಎರಡೂ ಕೈಗಳನ್ನು ಕೂಡಿಸಿ ಅಂಜಲಿಯನ್ನು ಮಸ್ತಕದವರೆಗೆ ಒಯ್ಯುವುದು, ಜಲ-ಚಂದನ ಮೊದಲಾದ ಅಷ್ಟ ದ್ರವ್ಯಗಳನ್ನು ಅರ್ಪಿಸುವುದು ಅದು **ದ್ರವ್ಯಪೂಜೆ**ಯಿದೆ. ಅರಹಂತರ ಗುಣಗಳಲ್ಲಿ ಏಕಾಗ್ರಚಿತ್ತರಾಗಿ, ಉಳಿದ ಸಮಸ್ತ ವಿಕಲ್ಪಜಾಲವನ್ನು ಬಿಟ್ಟುಕೊಟ್ಟು ಅವರ ಗುಣಗಳಲ್ಲಿ ಅನುರಾಗಿಯಾಗುವುದು, ಹಾಗೂ ಅರಹಂತರ ಪ್ರತಿಬಿಂಬದ ಧ್ಯಾನ ಮಾಡುವುದು ಅದು **ಭಾವಪೂಜೆ**ಯಿದೆ. ಅಥವಾ ಅರಹಂತರ ಪ್ರತಿಬಿಂಬದ ಪೂಜೆಯ ಸಲುವಾಗಿ ಶುದ್ಧ ಭೂಮಿಯಲ್ಲಿ ಪ್ರಾಸುಕ ಜಲದಿಂದ ಸ್ನಾನ ಮಾಡಿ, ಉಜ್ವಲ ವಸ್ತ್ರವನ್ನುಟ್ಟುಕೊಂಡು, ಅತ್ಯಂತ ವಿನಯ ಸಹಿತ, ಎರಡೂ ಕೈಗಳಿಂದ ಅಂಜಲಿ ಮುಗಿದು, ಭಕ್ತಿಭಾವದೊಡನೆ ಉಜ್ವಲ ನಿರ್ದೋಷ ಜಲದಿಂದ ಅರಹಂತರ ಪ್ರತಿಬಿಂಬದ ಅಭಿಷೇಕ ಮಾಡುವುದು ಅದು ಕೂಡ ಪೂಜೆಯಿದೆ.

ಭಗವಂತರಿಗೆ ಅಭಿಷೇಕದ ಪ್ರಯೋಜನವಿಲ್ಲದಿದ್ದರೂ ಪೂಜಕನಿಗೆ ನಾನು ಪ್ರತ್ಯಕ್ಷ ಅರಹಂತರ ಸ್ಪರ್ಶವನ್ನೇ ಮಾಡುತ್ತಿದ್ದೇನೆ, ಅಭಿಷೇಕವನ್ನೇ ಮಾಡುತ್ತಿದ್ದೇನೆಂದು ಭಕ್ತಿರೂಪ ಉತ್ಸಾಹದ ಭಾವವು ಬರುತ್ತದೆ. ಅದು ಕೂಡ ಭಕ್ತಿಯ ಮಹಿಮೆಯಿದೆ.

ಉತ್ತಮ ಜಲವನ್ನು ಚಿಕ್ಕದಿರುವ ಚೆಂಬು, ಲೋಟ ಮೊದಲಾದವುಗಳಲ್ಲಿ ತೆಗೆದುಕೊಂಡು ಅರಹಂತರ ಪ್ರತಿಬಿಂಬದ ಮುಂದೆ ಹೀಗೆ ಧ್ಯಾನ ಮಾಡುತ್ತಾನೆ, - ಜನ್ಮ-ಜರೆ-ಮರಣಗಳನ್ನು ಜಯಿಸಿರುವಂಥ ಓ ಜಿನೇಂದ್ರ ದೇವರೇ !

ನಾನು ನನ್ನ ಜನ್ಮ-ಜರೆ-ಮರಣದ ನಾಶದ ಸಲುವಾಗಿ ಜಲದ ಮೂರು ಧಾರೆಗಳನ್ನು ತಮ್ಮ ಚರಣಾರವಿಂದದ ಮುಂದೆ ಬಿಡುತ್ತೇನೆ. ಜನ್ಮ-ಜರೆ-ಮರಣಗಳಿಂದ ರಹಿತರಾದ ಓ ಜಿನೇಂದ್ರದೇವರೇ! ತಮ್ಮ ಚರಣಗಳ ಶರಣವೇ ನನಗೆ ಜನ್ಮ-ಜರೆ-ಮರಣಗಳಿಂದ ರಹಿತನಾಗುವುದರ ಕಾರಣವಿದೆ.

ಸಂಸಾರ ಪರಿಭ್ರಮಣದ ಆತಪದಿಂದ ರಹಿತರಾದ ಓ ಜಿನೇಂದ್ರದೇವರೇ ! ನಾನು ನನ್ನ ಸಂಸಾರ ಪರಿಭ್ರಮಣ ರೂಪ ಆತಪದ ನಾಶ ಮಾಡುವ ಸಲುವಾಗಿ ಚಂದನ, ಕರ್ಪೂರ ಮೊದಲಾದ ದ್ರವ್ಯಗಳನ್ನು ತಮ್ಮ ಚರಣಗಳ ಮುಂದೆ ಇಡುತ್ತೇನೆ.

ಅವಿನಾಶೀ ಪದದ ಧಾರಕರಾದ ಓ ಜಿನೇಂದ್ರದೇವರೇ ! ನಾನು ಕೂಡ ಅಕ್ಷಯ ಪದದ ಪ್ರಾಪ್ತಿಯ ಸಲುವಾಗಿ ಅಕ್ಷತೆಗಳನ್ನು ತಮ್ಮ ಚರಣಗಳ ಮುಂದೆ ಇಡುತ್ತೇನೆ.

ಕಾಮಬಾಣದ ವಿಧ್ವಂಸಕರಾದ ಓ ಜಿನೇಂದ್ರದೇವರೇ ! ನಾನು ಕೂಡ ನನ್ನ ಕಾಮಭಾವದ ವಿಧ್ವಂಸದ ಸಲುವಾಗಿ ಪುಷ್ಪಗಳನ್ನು ತಮ್ಮ ಚರಣಗಳ ಮುಂದೆ ಕ್ಷೇಪಣ ಮಾಡುತ್ತೇನೆ.

ಕ್ಷುಧಾ ರೋಗರಹಿತರಾದ ಓ ಜಿನೇಂದ್ರದೇವರೇ ! ನಾನು ಕೂಡ ನನ್ನ ಕ್ಷುಧಾ ರೋಗದ ನಾಶ ಮಾಡುವ ಸಲುವಾಗಿ ನೈವೇದ್ಯವನ್ನು ತಮ್ಮ ಚರಣಗಳ ಮುಂದೆ ಇಡುತ್ತೇನೆ.

ಮೋಹಾಂಧಕಾರದಿಂದ ರಹಿತರಾದ ಓ ಜಿನೇಂದ್ರದೇವರೇ ! ನಾನು ಕೂಡ ನನ್ನ ಮೋಹದ ಅಂಧಕಾರವನ್ನು ದೂರಮಾಡುವ ಸಲುವಾಗಿ ದೀವಿಗೆಯನ್ನು ತಮ್ಮ ಚರಣಗಳ ಮುಂದೆ ಇಡುತ್ತೇನೆ.

ಅಷ್ಟ ಕರ್ಮಗಳ ದಾಹಕರಾದ ಓ ಜಿನೇಂದ್ರದೇವರೇ ! ನಾನು ಕೂಡ ನನ್ನ ಅಷ್ಟಕರ್ಮಗಳ ನಾಶದ ಸಲುವಾಗಿ ಧೂಪವನ್ನು ತಮ್ಮ ಚರಣಗಳ ಮುಂದೆ ಇಡುತ್ತೇನೆ.

ಮೋಕ್ಷಸ್ವರೂಪರಾದ ಓ ಜಿನೇಂದ್ರದೇವರೇ ! ನಾನು ಕೂಡ ಮೋಕ್ಷರೂಪದ ಫಲವನ್ನು ಪಡೆಯುವ ಸಲುವಾಗಿ ಫಲಗಳನ್ನು ತಮ್ಮ ಚರಣಗಳ ಮುಂದೆ ಇಡುತ್ತೇನೆ.

ಈ ಪ್ರಕಾರ ಯಾರು ತಮ್ಮ ದೇಶ-ಕಾಲದ ಯೋಗ್ಯತೆಯ ಪ್ರಮಾಣ ಒಂದು ದ್ರವ್ಯದಿಂದ ಕೂಡ ಪೂಜೆ, ಎರಡು ದ್ರವ್ಯಗಳಿಂದ, ಮೂರು ದ್ರವ್ಯಗಳಿಂದ, ನಾಲ್ಕು ದ್ರವ್ಯಗಳಿಂದ, ಐದು ದ್ರವ್ಯಗಳಿಂದ, ಆರು ದ್ರವ್ಯಗಳಿಂದ, ಏಳು ದ್ರವ್ಯಗಳಿಂದ, ಎಂಟು ದ್ರವ್ಯಗಳಿಂದ ಕೂಡ ಪೂಜೆ ಮಾಡಿ, ತಮ್ಮ ಭಾವವನ್ನು ಪರಮೇಷ್ಠಿಗಳ ಧ್ಯಾನದಲ್ಲಿ ತೊಡಗಿಸುತ್ತಾರೆ. ಸ್ತವನ ಮಾಡುತ್ತಾರೆ. ಅವರು ಮಹಾನ ಪುಣ್ಯದ ಉಪಾರ್ಜನೆ ಮಾಡುತ್ತಾರೆ ಮತ್ತು ಪಾಪದ ನಿರ್ಜರೆ ಮಾಡುತ್ತಾರೆ.

**ಇಲ್ಲಿನ ವಿಶೇಷತೆಯೆಂದರೆ** ಜಿನೇಂದ್ರರ ಪೂಜೆ ಮಾಡುವಂಥ ನಾಲ್ಕು ಪ್ರಕಾರದ ದೇವಗಳೆಲ್ಲರಂತೂ ಕಲ್ಪವೃಕ್ಷಗಳಿಂದ ಪ್ರಾಪ್ತವಾದ ಗಂಧ, ಪುಷ್ಪ, ಫಲ ಮೊದಲಾದ ಸಾಮಗ್ರಿಗಳಿಂದ ಪೂಜೆ ಮಾಡುತ್ತಾರೆ, ಮತ್ತು ಸಮ್ಯಗ್ದೃಷ್ಟಿಯಾದ ಸೌಧರ್ಮ ಇಂದ್ರ ಮೊದಲಾದ ದೇವಗಳಂತೂ ಜಿನೇಂದ್ರರ ಭಕ್ತಿ, ಪೂಜೆ, ಸ್ತುತಿ ಮಾಡಿಯೇ ತಮ್ಮ ದೇವ ಪರ್ಯಾಯವನ್ನು ಸಫಲವೆಂದು ಮನ್ನಿಸುತ್ತಾರೆ.

ಮನುಷ್ಯರುಗಳಲ್ಲಿ ಚಕ್ರವರ್ತಿ, ನಾರಾಯಣ, ಬಲಭದ್ರ ಮೊದಲಾದ ರಾಜೇಂದ್ರರುಗಳು ಮುತ್ತಿನ ಅಕ್ಷತೆ,ರತ್ನಗಳ ಪುಷ್ಪ, ಫಲ, ದೀಪ ಮೊದಲಾದ ಹಾಗೂ ಅಮೃತಪಿಂಡ ಮೊದಲಾದವುಗಳಿಂದ ಜಿನೇಂದ್ರರ ಪೂಜೆ, ಸ್ತವನ, ನೃತ್ಯ ಗಾನ ಮೊದಲಾದುವನ್ನು ಮಾಡಿ ಮಹಾಪುಣ್ಯದ ಉಪಾರ್ಜನೆ ಮಾಡುತ್ತಾರೆ.

ಅನ್ಯ ಮನುಷ್ಯರಲ್ಲಿ ಕೂಡ ಪುಣ್ಯದ ಉದಯದಿಂದ ಸಮ್ಯಕ್ ಉಪದೇಶ ಪ್ರಾಪ್ತ ಮಾಡಿಕೊಳ್ಳುವುದರಿಂದ ಜಿನೇಂದ್ರರ ಆರಾಧನೆಯಲ್ಲಿ ಭಕ್ತಿ ಉತ್ಪನ್ನವಾಗಿರುವಂಥವರೆಲ್ಲರೂ ಯಥಾಯೋಗ್ಯ ಪೂಜೆ ಮಾಡುತ್ತಾರೆ. ಸಮಸ್ತ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ತಮ್ಮ ತಮ್ಮ ಸಾಮರ್ಥ್ಯ, ತಮ್ಮ ತಮ್ಮ ಜ್ಞಾನ, ಕುಲ, ಬುದ್ಧಿ, ಸಂಪತ್ತು, ಸಂಗತಿ, ದೇಶ ಕಾಲಕ್ಕೆ ಯೋಗ್ಯವಾಗಿ ಅನೇಕ ಸ್ತ್ರೀ, ಪುರುಷ, ನಪುಂಸಕ, ಧನಿಕ, ನಿರ್ಧನ, ರೋಗೀ, ನಿರೋಗಿಗಳೆಲ್ಲರೂ ಜಿನೇಂದ್ರದೇವರ ಆರಾಧನೆ ಮಾಡುತ್ತಾರೆ.

ಕೆಲವರು ಗ್ರಾಮವಾಸಿಗಳಿದ್ದಾರೆ, ಕೆಲವರು ನಗರವಾಸಿಗಳಿದ್ದಾರೆ, ಕೆಲವರು ವನವಾಸಿಗಳಿದ್ದಾರೆ, ಕೆಲವರು ತೀರ ಚಿಕ್ಕ ಗ್ರಾಮದಲ್ಲಿರುವಂಥವರಿದ್ದಾರೆ; ಅವರುಗಳಲ್ಲಿ ಕೆಲವರಂತೂ ಅತ್ಯಂತ ಉಜ್ವಲ ಅಷ್ಟ ಪ್ರಕಾರದ ಸಾಮಗ್ರಿಯನ್ನು ತಯಾರಿಸಿ ಪೂಜೆಯ ಪಾಠ ಓದುತ್ತ ಪೂಜೆ ಮಾಡುತ್ತಾರೆ; ಕೆಲವರಂತೂ ಪೂರ್ಣ ಶುಷ್ಕ ಗೋದಿ, ಜವೆಗೋದಿ, ಕಡಲೆ, ಜೋಳ, ಸಜ್ಜೆ, ಉದ್ದು, ಹೆಸರು, ಕಾಡುಹೆಸರು ಇವೇ ಮೊದಲಾದ ಧಾನ್ಯಗಳನ್ನು ಮುಷ್ಟಿಯಲ್ಲಿ ತೆಗೆದುಕೊಂಡು ಜಿನೇಂದ್ರರಿಗೆ ಅರ್ಪಣ ಮಾಡುತ್ತಾರೆ.

ಕೆಲವರು ರೊಟ್ಟಿ ಅರ್ಪಿಸುತ್ತಾರೆ, ಕೆಲವರು ಬಾಸುಂದಿ ಅರ್ಪಿಸುತ್ತಾರೆ, ಕೆಲವರು ತಮ್ಮಲ್ಲಿ ಬೆಳೆಸಿದ ಪುಷ್ಪ ತಂದು ಅರ್ಪಿಸುತ್ತಾರೆ. ಕೆಲವರು  ಅನ್ನ-ಸಾರು ಮತ್ತು ಅನೇಕರು ಪಕ್ವಾನ್ನ ಅರ್ಪಿಸುತ್ತಾರೆ. ಕೆಲವರು ಅನೇಕ ಪ್ರಕಾರದ ಹಣ್ಣುಗಳನ್ನರ್ಪಿಸುತ್ತಾರೆ., ಕೆಲವರು ಮುತ್ತಿನ ಅಕ್ಷತೆ, ಕೆಲವರು ಮಾಣಿಕದ ದೀಪ, ಕೆಲವರು ಚಿನ್ನ-ಬೆಳ್ಳಿ ಮತ್ತು ಐದೂ ಪ್ರಕಾರದ ರತ್ನಗಳಿಂದ ಕೆತ್ತಿದ ಫಲ-ಪುಷ್ಪ ಮೊದಲಾದುವನ್ನು ಅರ್ಪಿಸುತ್ತಾರೆ. ಕೆಲವರು ಹಾಲು, ಕೆಲವರು ಮೊಸರು, ಕೆಲವರು ತುಪ್ಪ ಅರ್ಪಿಸುತ್ತಾರೆ. ಕೆಲವರು ಅನೇಕ ಪ್ರಕಾರದ ಲಡ್ಡು, ಪೇಡ, ಬರ್ಫಿ, ಪೂರಿ, ಕಜ್ಜಾಯ ಇತ್ಯಾದಿಗಳನ್ನು ಅರ್ಪಿಸುತ್ತಾರೆ.

ಕೆಲವರು ಕೇವಲ ನಮಸ್ಕಾರವನ್ನೇ ಮಾಡುತ್ತಾರೆ, ಕೆಲವರು ಸ್ತವನ, ಕೆಲವರು ಗೀತ, ನೃತ್ಯ ವಾದ್ಯಗಳನ್ನು ಬಾರಿಸುತ್ತಾರೆ.ಕೆಲವರು ಅಸ್ಪರ್ಶ, ಶೂದ್ರ ಮೊದಲಾದವರಂತೂ ಮಂದಿರದ ಹೊರಗೆ ನಿಂತುಕೊಂಡೇ ಮಂದಿರದ ಶಿಖರದ ಮತ್ತು ಮಾನಸ್ತಂಭದಲ್ಲಿರುವ ಜಿನೇಂದ್ರರ ಪ್ರತಿಬಿಂಬದ ದರ್ಶನ - ವಂದನೆಯನ್ನೇ ಮಾಡುತ್ತಾರೆ.

ಈ ಪ್ರಕಾರ ಎಂಥ ಜ್ಞಾನ, ಎಂಥ ಸಂಗತಿ, ಎಂಥ ಸಾಮರ್ಥ್ಯ, ಎಂಥ ಧನ ಸಂಪತ್ತು, ಎಂಥ ಶಕ್ತಿಯಿದೆ ಅದಕ್ಕೆ ಅನುಸರಿಸಿಯೇ ದೇಶ-ಕಾಲಕ್ಕೆ ಯೋಗ್ಯರಾದ ಮನುಷ್ಯರು ಜಿನೇಂದ್ರರ ಆರಾಧಕರಿದ್ದಾರೆ, ಅವರು ವೀತರಾಗದ ದರ್ಶನ, ಸ್ತವನ, ಪೂಜೆ, ವಂದನೆ ಮಾಡಿ ತಮ್ಮ ಭಾವಕ್ಕೆ ಅನುಸರಿಸಿ ಉತ್ತಮ, ಮಧ್ಯಮ, ಜಘನ್ಯ ಪುಣ್ಯದ ಉಪಾರ್ಜನೆ ಮಾಡುತ್ತಾರೆ.

ಈ ಜಿನೇಂದ್ರರ ಧರ್ಮವು ಜಾತಿ, ಕುಲದ ಆಧೀನವಿಲ್ಲ, ಧನ-ಸಂಪತ್ತಿಯ ಆಧೀನವಿಲ್ಲ, ಬಾಹ್ಯಕ್ರಿಯೆಯ ಆಧೀನವಾಗಿಲ್ಲ. ಜೀವರುಗಳಿಗೆ ತಮ್ಮ ಪರಿಣಾಮದ ವಿಶುದ್ಧತೆಗೆ ಅನುಸರಿಸಿ ಫಲ ಕೊಡುತ್ತದೆ. ಓರ್ವ ಧನಿಕನು ಅಭಿಮಾನದಿಂದ ಯಶಸ್ಸಿನ ಇಚ್ಛುಕನಾಗಿ ಮುತ್ತುಗಳ ಅಕ್ಷತೆ, ಮಾಣಿಕದ ದೀಪ, ಚಿನ್ನ-ರನ್ನಗಳ ಪುಷ್ಪಗಳಿಂದ ಪೂಜೆ ಮಾಡುತ್ತಾನೆ, ಅನೇಕ ವಾದ್ಯ-ನೃತ್ಯ-ಗಾನ ಮಾಡಿ ಬಹಳಷ್ಟು ಪ್ರಭಾವನೆ ಮಾಡುತ್ತಾನೆ, ಆದಾಗ್ಯೂ ಸ್ವಲ್ಪ ಮಾತ್ರ ಪುಣ್ಯದ ಉಪಾರ್ಜನೆ ಮಾಡುತ್ತಾನೆ, ಅಥವಾ ಸ್ವಲ್ಪ ಪುಣ್ಯವನ್ನೂ ಉಪಾರ್ಜನೆ ಮಾಡುವುದಿಲ್ಲ, ಕೇವಲ ಪಾಪಕರ್ಮದ ಬಂಧ ಮಾಡಿಕೊಳ್ಳುತ್ತಾನೆ. ಕಷಾಯಗಳ ಅನುಸಾರವಾಗಿ ಬಂಧವಾಗುತ್ತದೆ.

ಕೆಲವರು ತಮ್ಮ ಭಾವದ ವಿಶುದ್ಧತೆಯಿಂದ ಅತ್ಯಂತ ಭಕ್ತಿ ಪರವಶರಾಗಿ ಯಾವುದೇ ಒಂದು ಜಲ-ಫಲಾದಿಗಳ ಮೂಲಕ ಮತ್ತು ಒಂದು ಮುಷ್ಟಿ ಧಾನ್ಯ ಮಾತ್ರದಿಂದ ಮತ್ತು ಸ್ತವನ ಮಾತ್ರದಿಂದ ಮಹಾನ ಪುಣ್ಯದ ಉಪಾರ್ಜನೆ ಮಾಡುತ್ತಾರೆ ಮತ್ತು ಅನೇಕ ಭವಗಳಿಂದ ಸಂಚಯ ಮಾಡಿರುವ ಪಾಪಕರ್ಮದ ನಿರ್ಜರೆ ಮಾಡುತ್ತಾರೆ.

**ಧನದಿಂದ ಪುಣ್ಯವನ್ನು ಕೊಂಡುಕೊಳ್ಳಲಾಗುವುದಿಲ್ಲ.** ಯಾರು ನಿರ್ವಾಂಛಕರಿದ್ದಾರೆ, ಮಂದ ಕಷಾಯಿಗಳಿದ್ದಾರೆ, ಖ್ಯಾತಿ-ಪೂಜೆ-ಲಾಭ ಮೊದಲಾದುವನ್ನು ಅಪೇಕ್ಷಿಸುವುದಿಲ್ಲ, ಕೇವಲ ಪರಮೇಷ್ಠಿಯ ಗುಣಗಳಲ್ಲಿ ಅನುರಾಗವುಳ್ಳವರಿದ್ದಾರೆ ಅವರಿಗೆ ಜಿನಪೂಜೆಯು ತುಂಬ ಅಧಿಕ ಫಲ ಕೊಡುವ ರೂಪದಲ್ಲಿ ಫಲಿಸುತ್ತದೆ.

ಆಗಮದಲ್ಲಿ ಜಿನಪೂಜೆಯನ್ನು ಸಚಿತ್ತ ದ್ರವ್ಯಗಳಿಂದಲೂ ಮತ್ತು ಅಚಿತ್ತ ದ್ರವ್ಯಗಳಿಂದಲೂ ಮಾಡಲು ಹೇಳಿದೆ. ಯಾರು ಸಚಿತ್ತದ ದೋಷದಿಂದ ಭಯಭೀತರಿದ್ದಾರೆ, ಯತ್ನಾಚಾರರಿದ್ದಾರೆ ಅವರಂತೂ ಪ್ರಾಸುಕ ಜಲ, ಗಂಧ, ಅಕ್ಷತೆಯನ್ನು

ಚಂದನ, ಕೇಶರ ಮೊದಲಾದವುಗಳಿಂದ ಬಣ್ಣ ಹಾಕಿ ಸುಗಂಧಿತ ಬಣ್ಣದ ಅಕ್ಷತೆಗಳಲ್ಲಿ ಪುಷ್ಪಗಳ ಕಲ್ಪನೆ ಮಾಡಿ ಪುಷ್ಪಗಳಿಂದ ಪೂಜಿಸುತ್ತಾರೆ. ಆಗಮದಲ್ಲಿ ಹೇಳಿದ ಚಿನ್ನದ ಪುಷ್ಪ, ಬೆಳ್ಳಿಯ ಪುಷ್ಪ ಹಾಗೂ ರತ್ನಜಡಿತ ಚಿನ್ನದ ಪುಷ್ಪ ಮತ್ತು ಲವಂಗ ಮೊದಲಾದ ಅನೇಕ ಮನೋಹರ ಪುಷ್ಪಗಳಿಂದ ಪೂಜೆ ಮಾಡುತ್ತಾರೆ. ಅಧಿಕ ಆರಂಭದಿಂದ ರಹಿತ, ಪ್ರಾಸುಕ, ಪ್ರಾಮಾಣಿಕ ನೈವೇದ್ಯದಿಂದ ಪೂಜೆ ಮಾಡುತ್ತಾರೆ.

ರತ್ನಗಳ ದೀಪ ಮತ್ತು ಚಿನ್ನ-ಬೆಳ್ಳಿಯ ದೀಪಗಳಿಂದ ಪೂಜೆ ಮಾಡುತ್ತಾರೆ. ಕೊಬ್ಬರಿಯ ಚಿಕ್ಕ ಚಿಕ್ಕ ತುಂಡುಗಳನ್ನು ಕೇಶರದ ಬಣ್ಣದಿಂದ ಬಣ್ಣ ಹಾಕಿ ಅದರಲ್ಲಿ ದೀಪದ ಕಲ್ಪನೆ ಮಾಡಿ ಪೂಜೆ ಮಾಡುತ್ತಾರೆ. ಚಂದನ, ಅಗರು ಮೊದಲಾದವುಗಳನ್ನು ಅರ್ಪಿಸುತ್ತಾರೆ. ಬಾದಾಮು, ಉತ್ತತ್ತಿ, ಅಡಿಕೆ ಮೊದಲಾದ ಶುದ್ಧ ಪ್ರಾಸುಕ ಫಲಗಳಿಂದ ಪೂಜೆ ಮಾಡುತ್ತಾರೆ. ಅಚಿತ್ತವಾದ ದ್ರವ್ಯಗಳಿಂದಂತೂ ಈ ಪ್ರಕಾರ ಪೂಜೆ ಮಾಡುತ್ತಾರೆ.

ಯಾರು ಸಚಿತ್ತ ದ್ರವ್ಯಗಳಿಂದ ಪೂಜೆ ಮಾಡುತ್ತಾರೆ ಅವರು ಜಲ, ಗಂಧ, ಅಕ್ಷತೆ ಮೊದಲಾದ ಉಜ್ವಲ ದ್ರವ್ಯಗಳಿಂದ ಪೂಜೆ ಮಾಡುತ್ತಾರೆ. ಮಲ್ಲಿಗೆ, ಸಂಪಿಗೆ, ಕಮಲ, ಜಾಜೀ ಇತ್ಯಾದಿ ಸಚಿತ್ತ ಪುಷ್ಪಗಳಿಂದ ಪೂಜೆ ಮಾಡುತ್ತಾರೆ. ತುಪ್ಪದ ದೀಪ ಮತ್ತು ಕರ್ಪೂರ ಮೊದಲಾದ ದೀಪಗಳಿಂದ ಆರತಿ ಬೆಳಗುತ್ತಾರೆ. ಸಚಿತ್ತ ಮಾವಿನ ಹಣ್ಣು, ಬಾಳೇಹಣ್ಣು, ದಾಳಿಂಬ ಮೊದಲಾದ ಫಲಗಳಿಂದ ಪೂಜೆ ಮಾಡುತ್ತಾರೆ. ಧೂಪಾರತಿಯಲ್ಲಿ ಧೂಪ ಸುಡುತ್ತಾರೆ. ಈ ಪ್ರಕಾರ ಸಚಿತ್ತ ದ್ರವ್ಯಗಳಿಂದಲೂ ಕೂಡ ಪೂಜೆ ಮಾಡುತ್ತಾರೆ. ಆಗಮದ ಆಜ್ಞೆಗೆ ಅನುಸರಿಸಿ ಎರಡೂ ಪ್ರಕಾರಗಳಿಂದ ಪೂಜೆ ಮಾಡುವುದು ಸನಾತನ ಮಾರ್ಗವಿದೆ. ತಮ್ಮ ಭಾವಗಳ ಅನುಸಾರ ಪುಣ್ಯ ಬಂಧದ ಕಾರಣವಿದೆ.

**ಸಚಿತ್ತಪೂಜೆಯ ನಿಷೇಧ :-** ಇಲ್ಲಿ ತಿಳಿಯಬೇಕಾದ ವಿಶೇಷತೆಯೆಂದರೆ ಈ ದುಷಮಕಾಲದಲ್ಲಿ ವಿಕಲತ್ರಯ ಜೀವಗಳ ಉತ್ಪತ್ತಿಯು ಬಹಳಷ್ಟಿದೆ. ಪುಷ್ಪಗಳಲ್ಲಿ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯ ತ್ರಸ ಜೀವಗಳು ಸ್ಪಷ್ಟ ಕಣ್ಣುಗಳಿಗೆ ಕಾಣುವಂಥವು ಓಡಾಡುತ್ತಿರುವುದು ಕಂಡು ಬರುತ್ತವೆ. ಪುಷ್ಪದ ಪತ್ರಗಳನ್ನು ಕೊಡಹಿ ನೋಡಿದರೆ ಸಾವಿರಾರು ಜೀವಗಳು ಸಂಚರಿಸುತ್ತಿರುವುದು ಕಂಡು ಬರುತ್ತದೆ. ಪುಷ್ಪಗಳಲ್ಲಿಯಂತೂ ತ್ರಸ ಜೀವಗಳು ಅಧಿಕವಾಗಿರುತ್ತವೆ ಮತ್ತು ಬಾದರನಿಗೋದಿಯ ಜೀವಗಳು ಅನಂತವಿರುತ್ತವೆ. ಚೈತ್ರ ಮಾಸದಲ್ಲಿ ಮತ್ತು ವರ್ಷಾಋತುವಿನಲ್ಲಿ ಜೀವಗಳು ಅಧಿಕವಾಗಿ ಉತ್ಪನ್ನವಾಗುತ್ತವೆ.

ಆದುದರಿಂದ ಜ್ಞಾನಿಯಿದ್ದವರು, ಧರ್ಮಬುದ್ಧಿಯುಳ್ಳವರಂತೂ ಧರ್ಮದ ಸಮಸ್ತ ಕಾರ್ಯಗಳನ್ನು ಯತ್ನಪೂರ್ವಕವಾಗಿ ಮಾಡುತ್ತಾರೆ, ಮಾಡಬೇಕಾಗುವುದು. ಜೀವಗಳ ವಿರಾಧನೆಯಾಗದ ರೀತಿಯಲ್ಲಿ ಮಾಡಬೇಕಾಗುವುದು. ಪುಷ್ಪಗಳನ್ನು ತೊಳೆಯುವಲ್ಲಿ ಸಂಚರಿಸುತ್ತಿರುವ ತ್ರಸ ಜೀವಗಳ ಹಿಂಸೆಯು ಬಹಳಷ್ಟು ಆಗುತ್ತದೆ. ಇದರಲ್ಲಿ ಹಿಂಸೆಯಂತೂ ಬಹಳಷ್ಟಿದೆ ಮತ್ತು ಪರಿಣಾಮದ ವಿಶುದ್ಧತೆಯು ಅಲ್ಪವಿದೆ. ಆದುದರಿಂದ ಪಕ್ಷಪಾತವನ್ನು ಬಿಟ್ಟುಕೊಟ್ಟು ಜಿನೇಂದ್ರರು ಹೇಳಿದ ಅಹಿಂಸಾ ಧರ್ಮವನ್ನು ಗ್ರಹಣ ಮಾಡಿ ಎಷ್ಟು ಕಾರ್ಯ ಮಾಡುತ್ತದೆ ಅಷ್ಟನ್ನು ಪ್ರಯತ್ನಪೂರ್ವಕವಾಗಿ ಜೀವಗಳ ವಿರಾಧನೆಯನ್ನು ನಿವಾರಿಸಿ ಮಾಡಬೇಕು.

**ಈ ಕಲಿಕಾಲದಲ್ಲಿ ಜನರು ಭಗವಂತರು ಹೇಳಿದ ನಯ-ವಿಭಾಗವನ್ನಂತೂ ತಿಳಿದುಕೊಳ್ಳುವುದಿಲ್ಲ, ಮತ್ತು ಶಾಸ್ತ್ರಗಳಲ್ಲಿ ಬರೆದಿರುವ ಆ ಕಥನವನ್ನು ನಯ-ವಿಭಾಗದಿಂದ ತಿಳಿದುಕೊಳ್ಳುವುದಿಲ್ಲ ಮತ್ತು ತಮ್ಮ ಕಲ್ಪನೆಯಿಂದಲೇ ಪಕ್ಷದ ಗ್ರಹಣ ಮಾಡಿ ಮನಸ್ಸಿಗೆ ಬಂದ ಹಾಗೆ ಪ್ರವರ್ತಿಸುತ್ತಾರೆ.**

**ರಾತ್ರಿ ಪೂಜೆಯ ನಿಷೇಧ :-** ಅದೆಷ್ಟೋ ಜನರು ಪಕ್ಷಪಾತದಿಂದ ಭಾದ್ರಪದ ತಿಂಗಳದಲ್ಲಿ ಹಗಲು ಹೊತ್ತಿನಲ್ಲಂತೂ ಪೂಜೆ ಮಾಡುವುದಿಲ್ಲ, ಆದರೆ ರಾತ್ರಿಯಲ್ಲಿ ಪೂಜೆ ಮಾಡುತ್ತಾರೆ. ಬಹಳಷ್ಟು ದೀಪಗಳನ್ನು ಉರಿಸುತ್ತಾರೆ. ನೈವೇದ್ಯ ಅರ್ಪಿಸುತ್ತಾರೆ, ಹೂವುಗಳ ರಾಶಿಯನ್ನೇ ಅರ್ಪಿಸುತ್ತಾರೆ. ಅವುಗಳಲ್ಲಿ ಲಕ್ಷಾಂತರ ಸೊಳ್ಳೆ, ನೊರಜು, ನೊಣ ಹಾಗೂ ಹಸಿರು, ಹಳದಿ, ಕೆಂಪು, ಕಪ್ಪು ವರ್ಣದ ಕೋಟ್ಯಂತರ ತ್ರಸ ಜೀವಗಳು, ಅನೇಕ ವರ್ಣದ ಚಿಕ್ಕ ಗಾತ್ರದ ಜೀವಗಳು ಸಾಮಗ್ರಿಗಳನ್ನು ಮಾಡುವಲ್ಲಿ, ಅರ್ಪಿಸುವ ತಟ್ಟೆಯಲ್ಲಿ, ವಸ್ತ್ರಗಳಲ್ಲಿ ದೀವಿಗೆಯ ನಿಮಿತ್ತವಾಗಿ ದೂರದಿಂದ ಬಂದು ಹೊರಳಿ

ಬೀಳುತ್ತವೆ, ಸತ್ತು ಹೋಗುತ್ತಿರುವುದನ್ನು ಪ್ರತ್ಯಕ್ಷವಾಗಿ ಕಾಣುತ್ತೇವೆ ಮತ್ತು ನಮ್ಮ ಬಾಯಿಯಲ್ಲಿ, ಮೂಗಿನಲ್ಲಿ, ಕಿವಿಯಲ್ಲಿ, ಕಣ್ಣುಗಳಲ್ಲಿ ಪ್ರವೇಶಿಸುತ್ತವೆ, ಸಾಯುತ್ತವೆ. ಆದಾಗ್ಯೂ ತಮ್ಮ ಪಕ್ಷ ಬಿಡುವುದಿಲ್ಲ, ಪೂಜೆಯನ್ನು ಹಗಲು ಹೊತ್ತಿನಲ್ಲಿ ಮಾಡದೆ ರಾತ್ರಿಯಲ್ಲಿಯೇ ಮಾಡುತ್ತಾರೆ. ರಾತ್ರಿಯಲ್ಲಂತೂ ಸಮಸ್ತ ಆರಂಭ ತೊರೆದು ಅತ್ಯಂತ ಯತ್ನಾಚಾರದೊಡನೆ ಇರುವುದರ ಆಜ್ಞೆಯಿದೆ.

**ಧರ್ಮದ ಸ್ವರೂಪವಂತೂ ಬಾಹ್ಯದಲ್ಲಿ ಜೀವದಯೆ ಮತ್ತು ಅಂತರಂಗದಲ್ಲಿ ರಾಗ, ದ್ವೇಷ, ಮೋಹದ ವಿಜಯರೂಪವಿದೆ.** ಎಲ್ಲಿ ಜೀವಹಿಂಸೆಯಿದೆ ಅಲ್ಲಿ ಧರ್ಮವಿಲ್ಲ, ಎಲ್ಲಿ ಅಭಿಮಾನದ ವಶೀಭೂತವಾಗಿ ಏಕಾಂತದ ಪಕ್ಷವನ್ನು ಸ್ವೀಕರಿಸಿ, ತಮ್ಮ ಪಕ್ಷದ ಪೋಷಣೆ ಮಾಡುವ ಸಲುವಾಗಿ ಹಿಂಸೆಯಿಂದ ನಿರ್ಭಯರಿರುತ್ತಾರೆ. ಅಲ್ಲಿ ಧರ್ಮವಿರುವುದಿಲ್ಲ.

ಅದೆಷ್ಟೋ ಏಕಾಂತವಾದಿಗಳು ಮಂಡಲ ರಚಿಸಿ ಎಂಟು ದಿವಸ, ಹತ್ತು ದಿವಸಗಳವರೆಗೆ ಇಡುತ್ತಾರೆ. ಆ ಸಾಮಗ್ರಿಯಲ್ಲಿ ಪ್ರತ್ಯಕ್ಷ ಕಣ್ಣುಗಳಿಗೆ ಕಂಡು ಬರುವಂಥ ಕ್ರಿಮಿ-ಕೀಟಗಳು ಸಂಚರಿಸುತ್ತವೆ; ಫಲ ಮೊದಲಾದವು ಕೊಳೆತು ಸೋರಲಾರಂಭಿಸುತ್ತವೆ; ಮತ್ತು ನೈವೇದ್ಯ ಮೊದಲಾದವುಗಳ ವಾಸನೆಯಿಂದ ಕ್ರಿಮಿಗಳ ಸಾಲು ಹತ್ತುತ್ತದೆ. ಪ್ರಭಾವನೆಯ ಸಲುವಾಗಿ ಅಲ್ಲಿ ಅನೇಕ ಜನರು ಬರುತ್ತಾರೆ, ಅವರ ಕಾಲ ಕೆಳಕ್ಕೆ ಸಿಕ್ಕು ಆ ಕ್ರಿಮಿಗಳು ಸತ್ತು ಹೋಗುತ್ತವೆ. ಇದೆಲ್ಲವನ್ನು ಪ್ರತ್ಯಕ್ಷವಾಗಿ ಕಾಣುತ್ತಿದ್ದರೂ ಕೂಡ ತಮ್ಮ ಪಕ್ಷದ ಅಭಿಮಾನದ ಅಂಧಕಾರದಲ್ಲಿ ಕಣ್ಣುಕುರುಡರಾಗಿ ಅದನ್ನು ಕಾಣುವುದಿಲ್ಲ. **ರಾತ್ರಿಯಲ್ಲಿ ಇರುವಂತೆ ಸಾಮಗ್ರಿಗಳನ್ನು ಇಡುವುದು ಮಹಾ ಹಿಂಸೆಗೆ ಕಾರಣವಿದೆ.**

ಅನೇಕ ಪುರಾಣಗಳಲ್ಲಿ ಮತ್ತು ಅನೇಕ ಶ್ರಾವಕಾಚಾರಗಳಲ್ಲಿ ಅರಹಂತರ ಪ್ರತಿಮೆಯ ಪೂಜೆಯನ್ನು ಅಷ್ಟದ್ರವ್ಯಗಳಿಂದಲೇ ಮಾಡುವ ಉಪದೇಶವಿದೆ. ಕೆಲವೆಡೆ ಅರಹಂತರ ಪ್ರತಿಬಿಂಬದ ಸ್ತವನ, ವಂದನೆಯ ಹಾಗೂ ಕೆಲವೆಡೆ ಅಭಿಷೇಕದ ವರ್ಣನೆಯಿದೆ, ಆದರೆ ಪ್ರತಿಬಿಂಬವು ತದಾಕಾರವಿರುವುದರಿಂದ ಯಾವುದೇ ಗ್ರಂಥದಲ್ಲಿ ಸ್ಥಾಪನೆಯ ವರ್ಣನೆಯಿಲ್ಲ ಮತ್ತು ಈಗ ಈ ಕಲಿಕಾಲದಲ್ಲಿ ಪ್ರತಿಮೆಯು ವಿರಾಜಮಾನವಿದ್ದರೂ ಕೂಡ ಸ್ಥಾಪನೆಯನ್ನೇ ಮುಖ್ಯವಾಗಿ ಹೇಳುತ್ತಾರೆ.

**ಈ ಜಯಪುರದಲ್ಲಿ ಸಂವತ ಸಾವಿರದೆಂಟುನೂರಾಐವತ್ತನೇ ವರ್ಷದಲ್ಲಿ ಕೆಲ-ಕೆಲವರು ತಮ್ಮ ಮನಸ್ಸಿನ ಕಲ್ಪನೆಯಿಂದ ನವೀನ ಸ್ಥಾಪನೆ ಮಾಡುವ ಪ್ರವೃತ್ತಿಯನ್ನು ಆರಂಭಿಸಿದ್ದಾರೆ.** ಅವುಗಳಲ್ಲಿ ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು, ಜಿನವಾಣಿ, ದಶಲಕ್ಷಣಧರ್ಮ, ಸೋಳಹಕಾರಣ, ರತ್ನತ್ರಯವೆಂದು ಇವು ಒಂಭತ್ತರ ಸ್ಥಾಪನೆ ಮಾಡುತ್ತಾರೆ ಮತ್ತು ಯಾರಿಗೆ ಸಪ್ತವ್ಯಸನದ ತ್ಯಾಗ, ಅನ್ಯಾಯದ ತ್ಯಾಗ, ಅಭಕ್ಷ್ಯದ ತ್ಯಾಗವಿದೆ ಅವರು ಸ್ಥಾಪನೆ ಸಹಿತ ಪೂಜೆ ಮಾಡಬೇಕು, ಯಾರಿಗೆ ಸಪ್ತವ್ಯಸನದ, ಅನ್ಯಾಯದ, ಅಭಕ್ಷ್ಯದ ತ್ಯಾಗವಿಲ್ಲ ಅವರು ಸ್ಥಾಪನೆಸಹಿತ ಪೂಜೆ ಮಾಡಬಾರದೆಂದು ಹೇಳುತ್ತಾರೆ. ಸ್ಥಾಪನೆ ಸಹಿತ ಪೂಜೆಯನ್ನಂತೂ ಸಪ್ತವ್ಯಸನದ, ಅನ್ಯಾಯದ ಅಭಕ್ಷ್ಯದ ತ್ಯಾಗ ಮಾಡುವಂಥವರೇ ಮಾಡಬೇಕು. ಯಾರಿಗೆ ಅವುಗಳ ತ್ಯಾಗವಿಲ್ಲ ಅವರು ಸ್ಥಾಪನೆ ಮಾಡದೆಯೇ ಪೂಜೆ ಮಾಡಬೇಕು, ಸ್ಥಾಪನೆಯನ್ನಂತೂ ಮಾಡಲೇಬಾರದು. ಸ್ತ್ರೀಯರು ಒಂದು ವೇಳೆ ವರ್ಣರಂಜಿತ ವಸ್ತ್ರ ಧರಿಸಿದ್ದರೆ ಸ್ಥಾಪನೆ ಮಾಡದೆಯೇ ಪೂಜೆ ಮಾಡಲು ಹೇಳುತ್ತಾರೆ.

ಹೀಗೆ ಹೇಳುವವರಿಗೆ ಪ್ರತ್ಯಕ್ಷ ಜಿನೇಂದ್ರರ ಪ್ರತಿಬಿಂಬದ ಗೌರವವೇ ಉಳಿಯಲಿಲ್ಲ; ತದಾಕಾರವಿಲ್ಲದ ಅಕ್ಷತೆಗಳ ಸ್ಥಾಪನೆಯದೇ ವಿನಯಮಾಡುವುದಾಯಿತು. ಪ್ರತಿಬಿಂಬದ ವಿನಯ ಮಾಡುವುದು ಮುಖ್ಯ ಉಳಿಯಲಿಲ್ಲ. ಪ್ರತಿಮೆಯ ಪೂಜೆ, ವಂದನೆ, ಸ್ತವನವನ್ನಂತೂ ಯಾರು ಬೇಕಾದರೂ ಮಾಡಬಹುದು, ಆದರೆ ಹಳದಿ ಅಕ್ಷತೆಯಲ್ಲಿ ಸ್ಥಾಪನೆಯನ್ನಂತೂ ಮಾಡುವ ಸಾಧ್ಯತೆಯಿಲ್ಲ. ಯಾರು ಅನ್ಯಾಯ, ವ್ಯಸನ, ಅಭಕ್ಷ್ಯ ಮೊದಲಾದ ಪಾಪಗಳಿಂದ ರಹಿತರಿದ್ದಾರೆ, ಉತ್ತಮರಿದ್ದಾರೆ ಅವರು ಸ್ಥಾಪನೆ ಮಾಡಬಹುದಾಗಿದೆ, ಆದರೆ ಈ ಪ್ರಕಾರ ಹಳದೀ ಅಕ್ಷತೆಯಲ್ಲಿ ಸ್ಥಾಪನೆ ಮಾಡುವುದು ಮುಖ್ಯವಾಗಿ ವಿನಯ ಯೋಗ್ಯವಾಯಿತು ಮತ್ತು ಪ್ರತಿಮೆಯಲ್ಲಿ ಪೂಜೆ ಮೊದಲಾದ ವಿನಯ ಮಾಡುವುದು ಗೌಣವಾಗಿ ಹೋಯಿತು.

ಯಾವ ತೀರ್ಥಂಕರರ ಪ್ರತಿಮೆಯಿರುತ್ತದೆ ಅವರ ಮುಂದೆ ಅವರದೇ ಪೂಜೆ, ಸ್ತುತಿ, ಭಕ್ತಿ ಮಾಡಬೇಕು; ಅನ್ಯ ತೀರ್ಥಂಕರರ ಸ್ತುತಿ-ಭಕ್ತಿ ಮಾಡಬಾರದೆಂದು ಪಕ್ಷಪಾತಿಗಳು ಹೇಳುತ್ತಾರೆ. ಒಂದು ವೇಳೆ ಅನ್ಯ ತಿರ್ಥಂಕರರ ಪೂಜೆ ಮಾಡುವುದಿದ್ದರೆ ಅಕ್ಷತೆಗಳಲ್ಲಿ ಅನ್ಯ ತೀರ್ಥಂಕರರ ಸ್ಥಾಪನೆ ಮಾಡಿ ಪೂಜೆ-ಸ್ತವನ ಮಾಡಬೇಕೆಂದು ಪಕ್ಷಪಾತ ಮಾಡುತ್ತಾರೆ.

ಸ್ವಾಮಿ ಸಮಂತಭದ್ರಾಚಾರ್ಯರು ಎದುರಿಗೆ ಪ್ರತ್ಯಕ್ಷ ಶಿವಕೋಟಿ ದೊರೆಯನ್ನು ನೋಡುತ್ತಿರುವಂತೆ ಸ್ವಯಂಭೂ ಸ್ತೋತ್ರದಿಂದ ಸ್ತುತಿ ಮಾಡಿದ್ದರು. ಆಗ ಚಂದ್ರಪ್ರಭು ಸ್ವಾಮಿಯ ಪ್ರತಿಮೆಯು ಪ್ರಕಟವಾಗಿತ್ತೆಂದ ಮೇಲೆ ಆ ಸಮಯದಲ್ಲಿ ಅವರು ಚಂದ್ರಪ್ರಭು ಸ್ವಾಮಿಯ ಎದುರಿಗೆ ಉಳಿದ ಹದಿನಾರು ತೀರ್ಥಂಕರರ ಸ್ತುತಿ ಹೇಗೆ ಮಾಡಿದರೆಂಬುದರ ಕುರಿತು ಅವರು ವಿಚಾರ ಮಾಡಬೇಕಾಗುವುದು. ಒಂದು ವೇಳೆ ಒಂದು ಪ್ರತಿಮೆಯ ಹತ್ತಿರ ಒಂದೇ ಸ್ತುತಿ ಮಾಡುವುದು ಉಚಿತವಿದ್ದರೆ ಮಂದಿರದಲ್ಲಿ **ಸ್ವಯಂಭೂ ಸ್ತೋತ್ರ** ಹೇಳುವ ಸಂಭವವೇ ಉಳಿಯಲಾರದು.; ಋಷಭದೇವರ ಪ್ರತಿಮೆಯಿಲ್ಲದೆ ಭಕ್ತಾಮರ ಸ್ತೋತ್ರ ಹೇಳುವ ಸಂಭವವೇ ಉಳಿಯಲಾರದು; ಪಾರ್ಶ್ವನಾಥ ಜಿನೇಂದ್ರರ ಪ್ರತಿಮೆಯಿಲ್ಲದೆ **ಕಲ್ಯಾಣಮಂದಿರ ಸ್ತೋತ್ರ** ಹೇಳುವ ಸಂಭವವೇ ಉಳಿಯಲಾರದು; ಪಂಚ ಪರಮೇಷ್ಠಿಗಳ ಪ್ರತಿಮೆಯ ಸ್ಥಾಪನೆ ಮಾಡಿದಲ್ಲದೆ **ಪಂಚ ಣಮೋಕಾರ ಮಂತ್ರ**ವನ್ನು ಹೇಗೆ ಹೇಳಲಾಗುವುದು ? ಕಾಯೋತ್ಸರ್ಗ, ಜಪ ಮಾಡುವುದು ಮೊದಲಾದುವೆಲ್ಲವೂ ಸಂಭವಿಸಲಾರವು.

ಪಂಚ ಪರಮೇಷ್ಠಿ ಪ್ರತಿಮೆಯಿಲ್ಲದೆ ಅವರ ಹೆಸರು ಹೇಳುವುದು, ಜಪ ಮಾಡುವುದು, ಸಾಮಾಯಿಕ ಮಾಡುವುದು ಸಂಭವಿಸಲಾರದು. ಅನ್ಯ ದೇಶದಲ್ಲಿ ಅಪರಿಚಿತ ಮಂದಿರದಲ್ಲಿ ಮೊದಲು ಯಾವ ಪ್ರತಿಮೆಯಿದೆಯೆಂಬುದರ ನಿಶ್ಚಯ ಮಾಡದೆ ಸ್ತುತಿ ಮಾಡುವುದು ಸಾಧ್ಯವಾಗಲಿಕ್ಕಿಲ್ಲ. ಒಂದು ವೇಳೆ ರಾತ್ರಿಯ ಸಮಯವಿದ್ದರೆ ಮತ್ತು ಚಿಕ್ಕ ಆಕಾರದ ಪ್ರತಿಮೆಯಿದ್ದರೆ ಅಲ್ಲಿ ಮೊದಲು ಲಾಂಛನದ ನಿಶ್ಚಯ ಮಾಡಿ ಅನಂತರ ಸ್ತುತಿ ಮಾಡಲು ಪ್ರಾರಂಭಿಸಬೇಕಾಗುವುದು.

ಅನೇಕ ಪ್ರತಿಮೆಗಳಿರುವಂಥ ಮಂದಿರದಲ್ಲಿ ಯಾರ ಸ್ತುತಿ ಮಾಡುತ್ತದೆ ಅವರ ಎದುರಿಗೆ ಕೈಗಳನ್ನು ಮುಗಿದು, ದೃಷ್ಟಿ ಏಕಾಗ್ರಮಾಡಿ ವಿನಂತಿಮಾಡಬೇಕಾಗುವುದು, ಅನ್ಯಪ್ರತಿಮೆಯ ಎದುರಿಗೆ ಆಗುವ ಸಾಧ್ಯತೆಯಿಲ್ಲ. ಯಾವ ಮಂದಿರದಲ್ಲಿ ಅನೇಕ ಪ್ರತಿಮೆಗಳಿರುತ್ತವೆ ಅಲ್ಲಿ ಒಂದು ಪ್ರತಿಮೆಯ ಸ್ತವನ, ವಂದನೆ ಮಾಡಿದರೆ ಇನ್ನೊಂದು ಪ್ರತಿಮೆಯ ಅನಾದರವಾಗಿ ಹೋಗುವುದು, ಎರಡನೆಯದರ ವಂದನೆ ಮಾಡಿದರೆ ಮೂರನೆಯದರ ನಾಲ್ಕನೆಯದರ ಐದನೆಯದರ ಮೊದಲಾದವರ ಅನಾದರವು ಭಾವದಲ್ಲಿ ಆಗಿ ಹೋಗುವುದು. ಆಗ ಭಕ್ತಿಯೇ ನಷ್ಟವಾಗಿ ಹೋಯಿತೆಂದು ತಿಳಿಯುವುದು.

ಎಲ್ಲಿ ಹೆಚ್ಚು ಪ್ರತಿಮೆಗಳಿರುತ್ತವೆ ಅಲ್ಲಿ ಚೌವ್ವಿಸರ ಸ್ತುತಿ ಮಾಡಬೇಕೆಂದು ತಾವು ಹೇಳಬಹುದು. ಆದರೆ ಅಲ್ಲಿ ಇಪ್ಪತ್ತೇ ಪ್ರತಿಮೆಗಳಿದ್ದರೆ ಅಥವಾ ಇಪ್ಪತ್ತೆರಡು-ಇಪ್ಪತ್ತ್ಮೂರು ಇದ್ದರೆ ಮೊದಲು ಒಂದರ ಲಾಂಛನದ ಸರಿಯಾದ ನಿರ್ಣಯ ಮಾಡಿ ಅದರದೇ ಸ್ತುತಿ ಮಾಡಲಾಗುವುದು ಅನ್ಯ ತೀರ್ಥಂಕರರ ಸ್ತವನವು ಉಳಿದು ಹೋಗುವುದು. ಎಲ್ಲಿ ಪ್ರತಿಮೆಯು ಚಿಕ್ಕದಿರುತ್ತದೆ, ದೂರದಲ್ಲಿ ವಿರಾಜಮಾನವಾಗಿರುತ್ತದೆ, ಮತ್ತು ದರ್ಶನ ಮಾಡುವಂಥವನ ದೃಷ್ಟಿಯು ಮಂದವಾಗಿ ಹೋಗಿರುತ್ತದೆ ಅಲ್ಲಿ ನಾಲ್ಕಾರು ಜನರನ್ನು ಕೇಳಿ ಅನಂತರ ಸ್ತುತಿ ವಂದನೆ ಮಾಡಬೇಕಾಗುವುದು. ಈ ಪ್ರಕಾರ ಏಕಾಂತ ವಾದಿಗಳು ಮನಸ್ಸಿಗೆ ಬಂದ ಹಾಗೆ ಕಲ್ಪನೆ ಮಾಡುವುದರಿಂದ ಅನೇಕ ದೋಷಗಳು ಬರುತ್ತವೆ.

ಸ್ಥಾಪನೆಯ ಪಕ್ಷಪಾತವುಳ್ಳವರು ಸ್ಥಾಪನೆ ಮಾಡಿದಲ್ಲದೆ ಪ್ರತಿಮೆಯ ಪೂಜೆ ಮಾಡುವುದಿಲ್ಲವೆಂದರೆ ಅವರ ಮನ್ನಣೆಗೆ ಅನುಸರಿಸಿ ಪ್ರತಿಮೆಯಲ್ಲಿ ಸ್ತವನ, ವಂದನೆ ಮಾಡಿಸಿಕೊಳ್ಳುವುದರದೂ ಯೋಗ್ಯತೆಯು ಉಳಿಯುವುದಿಲ್ಲ. ಒಂದು ವೇಳೆ ಹಳದೀ ಅಕ್ಷತೆಗಳ ತದಾಕಾರವಿಲ್ಲದ ಸ್ಥಾಪನೆಯೇ ಪೂಜ್ಯವಿದ್ದರೆ ಆ ಪಕ್ಷಪಾತವುಳ್ಳವರಿಗೆ ಧಾತು ಪಾಷಾಣದ ತದಾಕಾರ ಪ್ರತಿಬಿಂಬದ ಸ್ಥಾಪನೆ ಮಾಡುವುದು ನಿರರ್ಥಕವಿದೆ ಮತ್ತು ಅಕೃತ್ರಿಮ ಚೈತ್ಯಾಲಯಗಳ ಪ್ರತಿಬಿಂಬಗಳು ಯಾವವು ಅನಾದಿ ನಿಧನ ಸ್ಥಾಪಿಸಲ್ಪಟ್ಟಿವೆ ಅವುಗಳಲ್ಲಿ ಕೂಡ ಪೂಜ್ಯತೆಯು ಉಳಿಯಲಿಲ್ಲವಲ್ಲ !

ಒಂದು ಪ್ರತಿಮೆಯ ಎದುರಿಗೆ ಒಂದೇ ಪೂಜೆ ಮಾಡುವುದು, ಉಳಿದ ಇಪ್ಪತ್ತ್ಮೂರರ ಪೂಜೆ ಮಾಡುವುದಿದ್ದರೆ ಹಳದಿ ಅಕ್ಷತೆಗಳಲ್ಲಿ, ಸ್ಥಾಪನೆ ಮಾಡಿ ಮಾಡುವುದು. ಹಾಗಾದರೆ ಇಪ್ಪತ್ತ್ಮೂರು ಪ್ರತಿಮೆಗಳ ಸಂಕಲ್ಪವು ಹಳದಿ

ಅಕ್ಷತೆಗಳಲ್ಲಿಯೇ ಆಯಿತು ಮತ್ತು ಜಯಮಾಲೆ, ಸ್ತುತಿ, ಪೂಜೆ ಮೊದಲಾದುವನ್ನು ಮಾಡುವಾಗ ತಮ್ಮ ದೃಷ್ಟಿಯನ್ನು ಹಳದಿ ಅಕ್ಷತೆಗಳಲ್ಲಿಯೇ ಇಡಬೇಕಾಗುವುದು. ಒಂದು ಪ್ರತಿಮೆಯಲ್ಲಿ ಚೌವ್ವೀಸರ ಭಾವವು ಅಯೋಗ್ಯವೆನಿಸುವುದು. ಇಪ್ಪತ್ತ್ನಾಲ್ಕರ ಪ್ರತಿಮೆಗಳಂತೂ ಸ್ಥಾಪನೆಯ ಅಕ್ಷತೆಯಲ್ಲಿಯೇ ಉಳಿದು ಬಿಡುವವು.

ಸ್ಥಾಪನೆಯಿಲ್ಲದೆ ಪೂಜೆ ಮಾಡಬಾರದೆಂದರೆ ಮನೆಯಲ್ಲಿ, ವನದಲ್ಲಿ, ವಿದೇಶದಲ್ಲಿ ಅರಹಂತರುಗಳ ಸ್ತುತಿ ವಂದನೆಗಳ ಸಂಭವವೇ ಉಳಿಯಲಿಲ್ಲ. **ಆಗಮ ಜ್ಞಾನವಿಲ್ಲದೆ ಏಕಾಂತದ ಪಕ್ಷಪಾತವುಳ್ಳವರಿಗೆ ಏನು ಹೇಳಬೇಕೆಂಬುದರ ಮರ್ಯಾದೆಯೇ ಇಲ್ಲ, ಅವರಿಗೆ ಪಾಪದ ಭಯವೇ ಇರುವುದಿಲ್ಲ.** ಅವರು ಚೌವ್ವೀಸರ ಪೂಜೆಯನ್ನೇನೋ ಮಾಡುತ್ತಾರೆ ಮತ್ತು ಶಾಂತಿಪಾಠದಲ್ಲಿ ಹದಿನಾರನೆಯ ತೀರ್ಥಂಕರರ ಸ್ತುತಿ ಮಾಡುತ್ತಾರೆ. ಆದುದರಿಂದ ಅನೇಕಾಂತದ ಆಶ್ರಯ ಪಡೆದು ಆಗಮದ ಆಜ್ಞೆಯಿಲ್ಲದೆ ಏಕಾಂತ ಪಕ್ಷದ ಆಗ್ರಹ ಮಾಡುವುದು ಒಳ್ಳೆಯದಲ್ಲ.

ವ್ಯಾಕರಣದ ನಿರುಕ್ತಿಯ ಮೂಲಕ ಅರ್ಥ ಮಾಡಿದ ಮೇಲೆ ಓರ್ವ ತೀರ್ಥಂಕರರ ನಾಮದ ಶಬ್ದದಲ್ಲಿಯೇ ಚೌವ್ವೀಸ ತೀರ್ಥಂಕರರ ನಾಮದ ಅರ್ಥ ಮಾಡುವ ಸಂಭವವಿದೆ. ಸೌಧರ್ಮ ಇಂದ್ರನು ಒಂದು ಸಾವಿರದೆಂಟು ಹೆಸರುಗಳಿಂದ ಓರ್ವ ತೀರ್ಥಂಕರರ ಸ್ತುತಿ ಮಾಡಿದ್ದಾನೆ. ಓರ್ವ ತೀರ್ಥಂಕರರ ಗುಣಗಳ ಮೂಲಕ ಅಸಂಖ್ಯಾತ ಹೆಸರುಗಳುಳ್ಳ ಅನಂತ ತೀರ್ಥಂಕರರುಗಳ ಸ್ತುತಿ ಮಾಡುವ ಸಾಧ್ಯತೆಯಿದೆ. ಅನಂತ ಕಾಲದಲ್ಲಿ ಅಸಂಖ್ಯಾತ ಹೆಸರುಗಳುಳ್ಳ ಅನಂತ ತೀರ್ಥಂಕರರು ಆಗಿ ಹೋಗಿದ್ದಾರೆ. ಆದುದರಿಂದ ಓರ್ವ ತೀರ್ಥಂಕರರ ಸ್ತುತಿಯ ಮೂಲಕ ಅವರೆಲ್ಲರ ಮತ್ತು ಚೌವ್ವೀಸರ ಸ್ತವನ ಮಾಡುವ ಸಾಧ್ಯತೆಯಿದೆ. ಅವರ ತಂದೆ-ತಾಯಿಗಳಿಗೂ ಇಂಥವೇ ಹೆಸರು, ಶರೀರದ ಅವಗಾಹನ, ವರ್ಣ ಮೊದಲಾದವು ಕೂಡ; ಇಂಥವರೇ ಅನಂತ ಕಾಲದಲ್ಲಿ ಅನಂತರಾಗಿ ಹೋಗಿದ್ದಾರೆ. ಆದುದರಿಂದ ಒಬ್ಬರೇ ತೀರ್ಥಂಕರರಲ್ಲಿ ಒಬ್ಬರ ಸಂಕಲ್ಪ ಮತ್ತು ಚೌವ್ವೀಸರದು ಕೂಡ ಸಂಕಲ್ಪ ಮಾಡಿಕೊಳ್ಳುವ ಸಂಭವವಿದೆ.

ಈ ಕಾಲದಲ್ಲಿ ಅನ್ಯ ಮತದವರದು ಕೂಡ ಅನೇಕ ಪ್ರಕಾರದ ಸ್ಥಾಪನೆಯಾಗಲಾರಂಭಿಸಿದೆ. ಆದುದರಿಂದ ಈ ಕಾಲದಲ್ಲಿತದಾಕಾರ ಸ್ಥಾಪನೆಯದೇ ಮುಖ್ಯತೆಯಿದೆ. ತದಾಕಾರ ಸ್ಥಾಪನೆಯದೇ ಮುಖ್ಯತೆಯಾಗಿ ಹೋದರೆ ಬೇಕಾದವರು ಬೇಕಾದಲ್ಲಿ ಮತ್ತು ಅನ್ಯ ಮತದವರ ಪ್ರತಿಮೆಯಲ್ಲಿ ಕೂಡ ಅರಹಂತರ ಸ್ಥಾಪನೆಯ ಸಂಕಲ್ಪ ಮಾಡತೊಡಗಿದರೆ ಮಾರ್ಗದಿಂದ ಭ್ರಷ್ಟರಾಗಿ ಹೋಗಬಹುದಾಗಿದೆ.

**ಪ್ರತಿಮೆಯ ಚಿಹ್ನ :-** ಪ್ರತಿಮೆಯ ಯಾವ ಚಿಹ್ನಗಳಿರುತ್ತವೆ ಅವು ಇಂದ್ರನು ಯಾವಾಗ ಬಾಲಕ ತೀರ್ಥಂಕರರನ್ನು ಜನ್ಮಾಭಿಷೇಕ ಮಾಡಿಸಿ ಮೇರು ಪರ್ವತದಿಂದ ಮರಳಿ ತರುತ್ತಾನೆ, ಆಗ ಧ್ವಜದಲ್ಲಿ ಯಾವ ಚಿಹ್ನವನ್ನು ಮಾಡಲಾಗಿತ್ತು, ಅದೇ ಚಿಹ್ನವು ಪ್ರತಿಮೆಯ ಕೂಡ್ರುವ ಮಣೆಯಲ್ಲಿ ನಾಮ ಮೊದಲಾದವುಗಳ ವ್ಯವಹಾರ ನಡೆಸುವ ಸಲುವಾಗಿ ಮಾಡಲಾಗಿತ್ತು. ಓರ್ವ ಅರಹಂತ ಪರಮಾತ್ಮರು ಸ್ವರೂಪದಿಂದ ಏಕರೂಪರಿದ್ದಾರೆ, ನಾಮ ಮೊದಲಾದವುಗಳಿಂದ ಅನೇಕ ರೂಪರಿದ್ದಾರೆ. **ಸತ್ಯಾರ್ಥ ಜ್ಞಾನಸ್ವಭಾವದಿಂದ ಹಾಗೂ ರತ್ನತ್ರಯರೂಪ ವೀತರಾಗ ಭಾವದಿಂದ ಪಂಚಪರಮೇಷ್ಠಿರೂಪದ ಸಮಸ್ತ ಪ್ರತಿಮೆಗಳನ್ನು ಏಕಸಮಾನವಾಗಿಯೇ ತಿಳಿದುಕೊಳ್ಳಬೇಕಾಗುವುದು.** ಆದುದರಿಂದ ಪರಮಾಗಮದ ಆಜ್ಞೆಯಿಲ್ಲದೆ ವ್ಯರ್ಥ ವಿಕಲ್ಪ ಮಾಡಬಾರದು, ಸಂಶಯವನ್ನುತ್ಪನ್ನ ಮಾಡುವುದು ಒಳ್ಳೆಯದಿಲ್ಲ. ಜಿನಸೂತ್ರದ ಆಜ್ಞೆಯೇ ಪ್ರಮಾಣವಿದೆ.

**ಪೂಜೆಯ ಐದು ಅಂಗ :-** ವ್ಯವಹಾರದಲ್ಲಿ ಆಹ್ವಾನನ, ಸ್ಥಾಪನೆ, ಸನ್ನಿಧೀಕರಣ, ಪೂಜನ, ವಿಸರ್ಜನವೆಂದು ಪೂಜೆಯ ಐದು ಅಂಗಗಳ ಪ್ರವೃತ್ತಿಯು ಕಂಡುಬರುತ್ತದೆ. ಭಾವಗಳನ್ನು ಜೋಡಿಸುವ ಸಲುವಾಗಿ ಆಹ್ವಾನನದಲ್ಲಿ ಪುಷ್ಪಕ್ಷೇಪಣ ಮಾಡುತ್ತಾರೆ. ಪುಷ್ಪಗಳನ್ನು ಪ್ರತಿಮೆಯೆಂದು ತಿಳಿಯುವುದಿಲ್ಲ. ಇದಂತೂ ಆಹ್ವಾನನ ಮೊದಲಾದವುಗಳ ಸಂಕಲ್ಪದಿಂದ ಪುಷ್ಪಾಂಜಲಿ ಕ್ಷೇಪಣವಿದೆ. ಪೂಜೆಯಲ್ಲಿ ಪಾಠ ಬರೆದಿದ್ದರೆ ಸ್ಥಾಪನೆ ಮಾಡಿಕೊಳ್ಳಬೇಕಾಗುವುದು. ಬರೆಯದೆ ಹೋಗಿದ್ದರೆ ಮಾಡಬಾರದು. **ಅನೇಕಾಂತಿಗಳಿಗೆ ಸರ್ವಥಾ ಪಕ್ಷವಿರುವುದಿಲ್ಲ.**

ಭಗವಾನ ಪರಮಾತ್ಮರಂತೂ ಸಿದ್ಧಲೋಕದಲ್ಲಿದ್ದಾರೆ, ತಮ್ಮ ಸ್ಥಾನದಿಂದ ಒಂದು ಪ್ರದೇಶವೂ ಚಲಿಸುವುದಿಲ್ಲ, ಆದರೆ ತದಾಕಾರ ಪ್ರತಿಬಿಂಬದಲ್ಲಿ ಧ್ಯಾನ ಜೋಡಿಸುವ ಸಲುವಾಗಿ ಪ್ರತ್ಯಕ್ಷ ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧುಗಳ ರೂಪದ ಪ್ರತಿಮೆಯಲ್ಲಿ ನಿಶ್ಚಯ ಮಾಡಿ ಪ್ರತಿಬಿಂಬದ ಧ್ಯಾನ, ಪೂಜೆ, ಸ್ತುತಿ ಮಾಡಬೇಕಾಗುವುದು.

ಭಗವಂತರ ಪ್ರತಿಬಿಂಬವಿಲ್ಲದೆ ಸಭೆಯ ಶ್ರೋತೃಗಳ ಮಧ್ಯದಲ್ಲಿ ಉಪಸ್ಥಿತಿಪದ ವಿನಯಪದ ಸ್ತೋತ್ರ ಪಾಠಗಳನ್ನು ಹೇಳಬಾರದೆಂದು ಅದೆಷ್ಟೋ ಪಕ್ಷಪಾತಿಗಳು ಹೇಳುತ್ತಾರೆ. ಆದರೆ ಪಂಚಪರಮೇಷ್ಠಿ ಭಗವಂತರ ಧ್ಯಾನ-ಸ್ತವನಗಳನ್ನಂತೂ ಯಾವಾಗಲೂ ಪಂಚಪರಮೇಷ್ಠಿಗಳನ್ನು ತಮ್ಮ ಧ್ಯಾನಗೋಚರ ಮಾಡಿಕೊಂಡು ಸ್ತುತಿ-ಸ್ತೋತ್ರ ಮಾಡುವುದು ಯೋಗ್ಯವಿದೆ. ಪ್ರತಿಮೆಯು ಸನ್ಮುಖವಿಲ್ಲದೆ ಸ್ತುತಿ ಮಾಡುವುದರ, ವಿನಯಪದ ಹೇಳುವುದರ ನಿಷೇಧ ಮಾಡಿದರೆ ಅವರ ಪಂಚಣಮೋಕಾರ ಮಂತ್ರ ಹೇಳುವುದು, ಸ್ತುತಿ ಮಾಡುವುದು, ಸಾಮಾಯಿಕ ಒಂದನೆಯನ್ನೋದುವುದು ಇವು ಪ್ರತಿಮೆಯ ಸನ್ಮುಖವಾದಲ್ಲದೆ ಸಂಭವಿಸಲಾರವು. ಶಾಸ್ತ್ರ ಪ್ರವಚನದಲ್ಲಿ ವ್ಯಾಖ್ಯಾನದಲ್ಲಿ ಕೂಡ ಣಮೋಕಾರದ ಶ್ಲೋಕ ಹೇಳುವುದರದೂ ನಿಷೇಧವಾಗಿ ಹೋಗುವುದು ಆದುದರಿಂದ ಅಜ್ಞಾನಿಗಳ ಹೇಳಿಕೆಯನ್ನು ಕೇಳಿ ಅಧ್ಯಾತ್ಮದಿಂದ ಪರಾಙ್ಮುಖವಾಗುವುದು ಎಂದೂ ಯೋಗ್ಯವಿಲ್ಲ.

## ಅಕೃತ್ರಿಮ ಜಿನಚೈತ್ಯಾಲಯ ವರ್ಣನೆ

ಇಲ್ಲಿ ಪ್ರಕರಣವಶದಿಂದ ಧ್ಯಾನದ ಶುದ್ಧಿಯ ಸಲುವಾಗಿ ಅಕೃತ್ರಿಮ ಜಿನಚೈತ್ಯಾಲಯಗಳ ಸ್ವರೂಪವನ್ನು ತ್ರಿಲೋಕಸಾರ ಗ್ರಂಥದ ಅನುಸಾರವಾಗಿ ಒಂದಿಷ್ಟು ಹೇಳಲಾಗುತ್ತದೆ.

ಅಧೋಲೋಕದಲ್ಲಿ ಏಳುಕೋಟಿ ಎಪ್ಪತ್ತೆರಡು ಲಕ್ಷ ಭವನವಾಸೀ ದೇವಗಳ ಭವನಗಳಿವೆ. ಅವುಗಳಲ್ಲಿ ಅದೆಷ್ಟೋ ಭವನಗಳಂತೂ ಅಸಂಖ್ಯಾತ ಯೋಜನ ವಿಸ್ತಾರವುಳ್ಳವುಗಳಿವೆ, ಅದೆಷ್ಟೋ ಸಂಖ್ಯಾತ ಯೋಜನ ವಿಸ್ತಾರವುಳ್ಳವುಗಳಿವೆ. ಅವುಗಳಲ್ಲಿ ಪ್ರತಿಯೊಂದು ಭವನದೊಳಗೆ ಒಂದೊಂದು ಜಿನಮಂದಿರವಿದೆ, ಅಸಂಖ್ಯಾತ ಭವನವಾಸೀ ದೇವಗಳು ಅದರ ವಂದನೆ ಮಾಡುತ್ತಾರೆ. ಈ ಪ್ರಕಾರ **ಏಳು ಕೋಟಿ ಎಪ್ಪತ್ತೆರಡು ಲಕ್ಷ** ಜಿನಮಂದಿರಗಳೇ ಇವೆ.

ಮಧ್ಯಲೋಕದಲ್ಲಿ ಪಂಚ ಮೇರುಗಳ ಮೇಲೆ **ಎಂಭತ್ತು** ಜಿನಮಂದಿರಗಳಿವೆ. ಗಜದಂತಗಳ ಮೇಲೆ **ಇಪ್ಪತ್ತು** ಜಿನಮಂದಿರಗಳಿವೆ, ಕುಲಾಚಲಗಳ ಮೇಲೆ **ಮೂವತ್ತು** ವಿಜಯಾರ್ಧಗಳ ಮೇಲೆ **ಒಂದು ನೂರೆಪ್ಪತ್ತು,** ದೇವಕುರು ಉತ್ತರ ಕುರುಗಳಲ್ಲಿ **ಹತ್ತು,** ವಕ್ಷಾರಗಿರಿಯಲ್ಲಿ **ಎಂಭತ್ತು,** ಮಾನುಷೋತ್ತರದ ಮೇಲೆ **ನಾಲ್ಕು,** ಇಷ್ವಾಕಾರದ ಮೇಲೆ **ನಾಲ್ಕು,** ಕುಂಡಲಗಿರಿಯ ಮೇಲೆ **ನಾಲ್ಕು,** ರುಚಕಗಿರಿಯ ಮೇಲೆ **ನಾಲ್ಕು,** ನಂದೀಶ್ವರ ದ್ವೀಪದಲ್ಲಿ **ಐವತ್ತೆರಡು.** ಈ ಪ್ರಕಾರ ಮಧ್ಯಲೋಕದಲ್ಲಿ **ನಾಲ್ಕುನೂರಾ ಐವತ್ತೆಂಟು** ಅಕೃತ್ರಿಮ ಜಿನಮಂದಿರಗಳಿವೆ.

ಊರ್ಧ್ವಲೋಕದೊಳಗೆ ಸ್ವರ್ಗದಲ್ಲಿ - ಅಹಮಿಂದ್ರ ಲೋಕದಲ್ಲಿ ಎಂಭತ್ತುನಾಲ್ಕು ಲಕ್ಷ ತೊಂಭತ್ತೇಳು ಸಾವಿರ ಮೂವತ್ತು ಮೂರು ಜಿನಮಂದಿರಗಳಿವೆ.

ವ್ಯಂತರರುಗಳವು ಅಸಂಖ್ಯಾತ ಜಿನಮಂದಿರಗಳಿವೆ, ಜ್ಯೋತಿರ್ಲೋಕದಲ್ಲಿ ಕೂಡ ಜ್ಯೋತಿಷೀ ದೇವಗಳವು ಅಸಂಖ್ಯಾತ ಜಿನಮಂದಿರಗಳಿವೆ. ಈ ಪ್ರಕಾರ ಸಂಖ್ಯಾತ ಜಿನಮಂದಿರಗಳಂತೂ ಎಂಟು ಕೋಟಿ ಐವತ್ತಾರು ಲಕ್ಷ ತೊಂಭತ್ತೇಳು ಸಾವಿರ ನಾನೂರಾ ಎಂಭತ್ತೊಂದು ಇವೆ. ವ್ಯಂತರ ಮತ್ತು ಜ್ಯೋತಿಷಿಯರ ಜಿನಮಂದಿರಗಳು ಅಸಂಖ್ಯಾತವಿವೆ.

## ಜಿನಾಲಯಗಳ ಸ್ವರೂಪ

ಉತ್ಕೃಷ್ಟ ಮಧ್ಯಮ ಮತ್ತು ಜಘನ್ಯವೆಂದು ಮೂರು ಪ್ರಕಾರದ ಜಿನಾಲಯಗಳಿವೆ. ಅವುಗಳಲ್ಲಿ ಉತ್ಕೃಷ್ಟ, ಮಧ್ಯಮ, ಜಘನ್ಯ ಜಿನಮಂದಿರಗಳ ವಿಸ್ತಾರವು ಈ ಕೆಳಗಿನಂತೆ ಇದೆ.

| ಮಂದಿರ | ಉತ್ಕೃಷ್ಟ | ಮಧ್ಯಮ | ಜಘನ್ಯ |
|---|---|---|---|
| ಉದ್ದ ಯೋಜನದಲ್ಲಿ | ೧೦೦ ಯೋ. | ೫೦ ಯೋ. | ೨೫ ಯೋ. |
| ಅಗಲ ಯೋಜನದಲ್ಲಿ | ೫೦ ಯೋ. | ೨೫ ಯೋ. | ೧೨, ೧/೨ ಯೋ. |
| ಎತ್ತರ ಯೋಜನದಲ್ಲಿ | ೭೫ ಯೋ. | ೩೭, ೧/೨ ಯೋ. | ೧೮, ೩/೪ ಯೋ. |

ಈ ಜಿನಮಂದಿರಗಳಿಗೆ ಮೂರು-ಮೂರು ಬಾಗಿಲುಗಳಿವೆ. ಅವುಗಳಲ್ಲಿ ಎದುರಿಗಿನ ಕಡೆಯಿಂದ ಒಂದೊಂದು ಬಾಗಿಲುಗಳಿವೆ. ಮಗ್ಗಲುಗಳಿಂದ ಎರಡೆರಡು ಬಾಗಿಲುಗಳಿವೆ. ಒಟ್ಟಿಗೆ ಮೂರು ಮೂರು ಬಾಗಿಲುಗಳಿವೆ.

ಜಿನಂದಿರದ ಬಾಗಿಲುಗಳ ಪ್ರಮಾಣವು (ಅಳತೆಯು) ಈ ಪ್ರಕಾರವಿದೆಯೆಂದು ತಿಳಿಯುವುದು.

| ಎದುರಿಗಿನ ಬಾಗಿಲು | ಉತ್ಕೃಷ್ಟ ಜಿನಮಂದಿರ | ಮಧ್ಯಮ ಜಿನಮಂದಿರ | ಜಘನ್ಯ ಜಿನಮಂದಿರ |
|---|---|---|---|
| ಉದ್ದ | ೧೬ ಯೋಜನ | ೮ ಯೋಜನ | ೪ ಯೋಜನ |
| ಅಗಲ | ೮ ಯೋಜನ | ೪ ಯೋಜನ | ೨ ಯೋಜನ |
| ಮಗ್ಗಲದ ಬಾಗಿಲು | | | |
| ಉದ್ದ | ೮ ಯೋಜನ | ೪ ಯೋಜನ | ೨ ಯೋಜನ |
| ಅಗಲ | ೪ ಯೋಜನ | ೨ ಯೋಜನ | ೧ ಯೋಜನ |

ಇಲ್ಲಿ ಭದ್ರಶಾಲವನದಲ್ಲಿ, ನಂದನವನದಲ್ಲಿ, ನಂದೀಶ್ವರ ದ್ವೀಪದಲ್ಲಿ ಹಾಗೂ ಸ್ವರ್ಗದ ವಿಮಾನಗಳಲ್ಲಿ ಉತ್ಕೃಷ್ಟ ಪ್ರಮಾಣವುಳ್ಳ ಜಿನಾಲಯಗಳಿವೆ. ಸೌಮನಸವನದಲ್ಲಿ, ರುಚಕ ಪರ್ವತದ ಮೇಲೆ, ಕುಂಡಲ ಗಿರಿ ಮೇಲೆ, ವಕ್ಷಾರಗಿರಿ ಮೇಲೆ, ಇಷ್ವಾಕಾರ ಮೇಲೆ, ಮಾನುಷೋತ್ತರ ಮೇಲೆ, ಕುಲಾಚಲಗಳ ಮೇಲೆ ಮಧ್ಯಮ ಪ್ರಮಾಣವುಳ್ಳ ಜಿನಮಂದಿರಗಳಿವೆ. ಪಾಂಡುಕವನದ ಜಿನಾಲಯವು ಜಘನ್ಯ ಪ್ರಮಾಣವುಳ್ಳವಿವೆ. ವಿಜಯಾರ್ಧಪರ್ವತದ ಮೇಲೆ, ಜಂಬೂ-ಶಾಲ್ಮಲಿ ವೃಕ್ಷಗಳಲ್ಲಿ ಜಿನಮಂದಿರಗಳ ಉದ್ದವು ಒಂದು ಹರದಾರಿಯದಿದೆ. ಉಳಿದ ಆ ಭವನವಾಸೀ ದೇವಗಳ ಭವನಗಳಲ್ಲಿ ವ್ಯಂತರರ ಮತ್ತು ಜ್ಯೋತಿಷೀ ದೇವಗಳ ಜಿನಾಲಯಗಳಿವೆ. ಅವು ಯಥಾಯೋಗ್ಯ ಉದ್ದದ ಪ್ರಮಾಣವಿವೆ. ಜಿನೇಂದ್ರ ಭಗವಂತರು ಎಷ್ಟು ನೋಡಿದ್ದಾರೆ ಅಷ್ಟು ಇವೆ.

ಈಗ ಜಿನಮಂದಿರಗಳ ಬಾಹ್ಯಪರಿಕರ ಹೇಳುತ್ತಾರೆ. ಎಲ್ಲ ಜಿನ-ಭವನಗಳ ನಾಲ್ಕೂ ನಿಟ್ಟಿಗೆ ನಾಲ್ಕು-ನಾಲ್ಕು ದ್ವಾರಗಳೊಡನೆ ಮಣಿಮಯವಾದ ಮೂರು ಕೋಟೆಗಳಿವೆ. ಬಾಗಿಲುಗಳೊಳಗಿಂದ ಹಾಯ್ದು ಹೋಗುವ ಸಲುವಾಗಿ ಪ್ರತಿಯೊಂದು ಮಾರ್ಗದಲ್ಲಿ ಒಂದೊಂದು ಮಾನಸ್ತಂಭಗಳಿವೆ ಮತ್ತು ಒಂಭತ್ತು ಸ್ತೂಪಗಳಿವೆ. ಮೂರು ಕೋಟೆಗಳ ಒಳಗೆ ಮೊದಲನೆ-ಎರಡನೆ ಕೋಟೆಯ ಮಧ್ಯದ ಸ್ಥಾನದಲ್ಲಿ ವನಗಳಿವೆ. ಎರಡನೆ-ಮೂರನೆಯ ಕೋಟೆಯ ಮಧ್ಯದಲ್ಲಿ ಧ್ವಜಗಳಿವೆ, ಮೂರನೆಯ ಕೋಟೆ ಹಾಗೂ ಚೈತ್ಯಾಲಯದ ಮಧ್ಯದಲ್ಲಿ ಚೈತ್ಯಭೂಮಿಯಿದೆ. ಆ ಜಿನಭವನಗಳಲ್ಲಿ ನೂರೆಂಟು ಗರ್ಭಗೃಹಗಳಿವೆ. ಆ ಜಿನಭವನಗಳ ಮಧ್ಯೆ ರತ್ನಗಳ ಸ್ತಂಭಗಳೊಡನೆ ಸ್ವರ್ಣಮಯ ಎರಡು ಯೋಜನ ಅಗಲ ನಾಲ್ಕು ಯೋಜನ ಎತ್ತರ, ಎಂಟು ಯೋಜನ ಉದ್ದವಿರುವ ದೇವಚ್ಛಂದ ಎಂದರೆ ಗೋಲಾಕಾರದ ಮಾಳಿಗೆಯೊಡನೆ ಮಂಟಪವಿದೆ. ಅದರಲ್ಲಿ ಕೂಡ ನೂರೆಂಟು ಗರ್ಭಗೃಹಗಳಿವೆ. ಆ ಗರ್ಭಗೃಹಗಳಲ್ಲಿ ಆದಿನಾಥ ಭಗವಂತರ ಶರೀರದಷ್ಟು ಎತ್ತರವುಳ್ಳ ರತ್ನಗಳ ಒಂದು ನೂರೆಂಟು ಜಿನಪ್ರತಿಮೆಗಳಿವೆ.

ಆ ಜಿನಪ್ರತಿಮೆಗಳು ಬೇರೆ ಬೇರೆ ಸಿಂಹಾಸನ, ಮೂರು ಛತ್ರ, ಅಷ್ಟ ಪ್ರಾತಿಹಾರ್ಯ ಸಹಿತವಿವೆ. ಅವುಗಳ ಮಸ್ತಕದ ಮೇಲೆ ನೀಲಕುಂತಳಗಳಿವೆ. ಆ ಕೂದಲು ಪುದ್ಗಲ ರತ್ನಗಳಿಂದಲೇ ಮಾಡಿವೆ, ಕೂದಲುಗಳಿಲ್ಲ, ಪುದ್ಗಲಗಳೇ ಇವೆ. ವಜ್ರ ಎಂದರೆ ರತ್ನಮಯ ದಂತಗಳ ಆಕಾರಸಹಿತವಿವೆ, ವಿದ್ರುಮ ಎಂದರೆ ಹವಳದ ಸಮಾನ ಕೆಂಪು ತುಟಿಗಳಿವೆ,

ಹೊಸ ಚಿಗುರೆಲೆಯ ಸಮಾನ ಶೋಭಾಯಮಾನವಾದ ಕೆಂಪು ಹಸ್ತ ಹಾಗೂ ಪಾದತಲಗಳಿವೆ.ಪ್ರತಿಮೆಯ ನಯನಗಳು ಲೋಹಿತಾಕ್ಷ ಮಣಿಯಿಂದ ವ್ಯಾಪ್ತ ಅಂಕ ಸ್ಪಟಿಕ ಮಣಿಮಯವಿವೆಯೆಂದು ರಾಜವಾರ್ತಿಕದಲ್ಲಿ ಬರುತ್ತದೆ. ನೇತ್ರಗಳ ಕಪ್ಪು ಗೊಂಬೆಗಳು ಅರಿಷ್ಟ ಮಣಿಮಯವಿವೆ. ರೆಪ್ಪೆಗಳು ಅಂಜನಮೂಲ ಮಣಿಮಯವಿವೆ. ಭೃಕುಟಿ ಲತೆಗಳು ನೀಲ ಮಣಿಮಯ ಕೇಶಸಹಿತವಿವೆ. ಹೀಗೆ ಜೈನ ಪ್ರತಿಮೆಗಳಿವೆ. ದಶ ತಾಲ ಪ್ರಮಾಣ ಲಕ್ಷಣಗಳಿಂದ ತುಂಬಿಕೊಂಡಿವೆ. ಇಲ್ಲಿ ತಾಲದ ಪ್ರಮಾಣವು ಹನ್ನೆರಡು ಅಂಗುಲವಿದೆ. ಮೊದಲು ನೋಡುತ್ತಿರುವಂತೆಯೇ ಅದೇನು ಜಿನೇಂದ್ರದೇವರು ನೋಡುತ್ತಿದ್ದಾರೆಯೋ, ಮಾತನಾಡುತ್ತಿದ್ದಾರೆಯೋ ಏನೋ ಎನಿಸುತ್ತದೆ, ಪ್ರತಿಯೊಂದು ಗರ್ಭಗೃಹದಲ್ಲಿ ಸರಿಯಾದ ಪಂಕ್ತಿಯಲ್ಲಿ ನಾಗಕುಮಾರರ ಹಾಗೂ ಯಕ್ಷರ ಮೂವತ್ತೆರಡು ಯುಗಲಗಳು ಕೈಯಲ್ಲಿ ಚಾಮರ ಹಿಡಿದು ನಿಂತುಕೊಂಡಿದ್ದಾರೆ.

ಒಂದೊಂದು ಗರ್ಭಗೃಹದಲ್ಲಿ ಒಂದೊಂದು ಜಿನಪ್ರತಿಮೆಯ ಎರಡೂ ನಿಟ್ಟಿಗೆ ಸಮಸ್ತ ಆಭರಣಗಳಿಂದ ಶೃಂಗರಿಸಿ ನಿಂತುಕೊಂಡು ಹಾಗೂ ಶ್ವೇತ ನಿರ್ಮಲ ರತ್ನಮಯ ಚಾಮರಗಳನ್ನು ಕೈಯಲ್ಲಿ ಹಿಡಿದುಕೊಂಡ ನಾಗಕುಮಾರ ಮತ್ತು ಯಕ್ಷರು ಅರವತ್ತಾ ಲ್ಕು ಚಾಮರಗಳನ್ನು ಜಾಳಿಸುತ್ತಿದ್ದಾರೆ. ಈ ಪ್ರಕಾರ ನೂರೆಂಟು ಪ್ರತಿಮೆಗಳಿಗೆ ಬೇರೆ ಬೇರೆ ಪ್ರತಿಹಾರಿಗಳು ಒಂದೊಂದು ಜಿನಾಲಯದಲ್ಲಿದ್ದಾರೆ. ಆ ಜಿನಪ್ರತಿಮೆಗಳ ಎರಡೂ ನಿಟ್ಟಿನಲ್ಲಿ ಶ್ರೀದೇವಿ ಮತ್ತು ಸರಸ್ವತಿದೇವಿ, ಸರ್ವಾಹ್ನ-ಯಕ್ಷ ಸನತ್ಕುಮಾರಯಕ್ಷ ಹಾಗೂ ಅವರುಗಳ ರೂಪ ಆಕಾರಗಳನ್ನು ಮಾಡಲಾಗಿದೆ.

ಪ್ರತಿಯೊಂದು ಜಿನಪ್ರತಿಮೆಯ ಹತ್ತಿರ ಎಂಟು ಪ್ರಕಾರದ ಮಂಗಲ ದ್ರವ್ಯಗಳು ಶೋಭಿಸುತ್ತವೆ. ೧) ಗಿಂಡಿ, ೨) ಕಲಶ, ೩) ಕನ್ನಡಿ, ೪) ಬೀಸಣಿಕೆ,, ೫) ಧ್ವಜ, ೬) ಚಾಮರ, ೭) ಛತ್ರ, ೮) ದೀಪಸ್ತಂಭ ಇವು ಎಂಟು ಮಂಗಲ ದ್ರವ್ಯಗಳಿವೆ ಪ್ರತಿಯೊಂದು ಪ್ರತಿಮೆಯ ಹತ್ತಿರ ಪ್ರತ್ಯೇಕ ಮಂಗಲ ದ್ರವ್ಯಗಳು ನೂರೆಂಟು ಸಂಖ್ಯೆಯಲ್ಲಿ ಶೋಭಿಸುತ್ತವೆ.

ಗರ್ಭಗೃಹದ ಹೊರಗೆ ರತ್ನಖಚಿತ ಸುವರ್ಣಮಯ ಪುಷ್ಪಗಳಿಂದ ಶೋಭಾಯಮಾನವಾದ ಮುಖಮಂಟಪವಿದೆ, ಅದರಮುಂದೆ ಮಧ್ಯದ ಭಾಗದಲ್ಲಿ ಚಿನ್ನ-ಬೆಳ್ಳಿಯಿಂದ ಮಾಡಿದ ಮೂವತ್ತೆರಡು ಸಾವಿರ ಕಲಶಗಳಿವೆ. ಮಹಾದ್ವಾರದ ಎರಡೂ ಮಗ್ಗಲಲ್ಲಿ ಇಪ್ಪತ್ತು ನಾಲ್ಕು ಸಾವಿರ ಧೂಪಘಟಗಳಿವೆ. ಅದೇ ಮಹಾದ್ವಾರದ ಹೊರಗೆ ಎರಡೂ ಕಡೆಗೆ ಎಂಟುಸಾವಿರ ಮಣಿಮಯ ಮಾಲೆಗಳಿವೆ. ಆ ಮಣಿಮಯ ಮಾಲೆಗಳ ಮಧ್ಯದಲ್ಲಿ ಇಪ್ಪತ್ತು ನಾಲ್ಕು ಸಾವಿರ ಸ್ವರ್ಣಮಯ ಮಾಲೆಗಳಿವೆ. ಆ ಮಹಾದ್ವಾರದ ಎದುರಿಗೆ ಮುಂದೆ ಮುಖಮಂಟಪವಿದೆ. ಹದಿನಾರು ಸಾವಿರ ಧೂಪ ಘಟಗಳಿವೆ. ಆ ಮುಖಮಂಟಪದ ಮಧ್ಯದಲ್ಲಿ ಅತ್ಯಂತ ಮಧುರ ಝುನ-ಝುನ ಶಬ್ದ ಮಾಡುವ ಮುತ್ತು ಹಾಗೂ ಮಣಿಗಳಿಂದ ಮಾಡಿದ ಕಿಂಕಿಣಿ ಎಂದರೆ ಚಿಕ್ಕ-ಚಿಕ್ಕ ಗಂಟೆಗಳಿವೆ ಮತ್ತು ಅವುಗಳೊಡನೆ ಅನೇಕ ಪ್ರಕಾರದ ಗಂಟೆಗಳ ಸಮೂಹವು ಅನೇಕ ಪ್ರಕಾರದ ರಚನೆ ಸಹಿತ ಶೋಭಾಯಮಾನವಾಗುತ್ತಲಿವೆ.

ಈಗ ಜಿನಮಂದಿರದ ಚಿಕ್ಕ ದ್ವಾರಗಳ ಸ್ವರೂಪ ಹೇಳುತ್ತಾರೆ. ಜಿನಮಂದಿರದ ದಕ್ಷಿಣ-ಉತ್ತರದ ಕಡೆಯ-ಮಧ್ಯದಲ್ಲಿ ಯಾವ ಚಿಕ್ಕ-ಚಿಕ್ಕ ಬಾಗಿಲುಗಳಿವೆ. ಅವುಗಳ ರಚನೆಯು ಮೇಲೆ ಹೇಳಿದ ದೊಡ್ಡ ಬಾಗಿಲುಗಳ ಅರ್ಧದಷ್ಟೆಂದು ತಿಳಿಯಬೇಕು. ಮಣಿಮಾಲೆಗಳು ನಾಲ್ಕು ಸಾವಿರ ಇವೆ.ಧೂಪ ಘಟಗಳು ಹನ್ನೆರಡು ಸಾವಿರ ಇವೆ, ಸ್ವರ್ಣಮಾಲೆಗಳು ಹನ್ನೆರಡು ಸಾವಿರ ಇವೆ. ಆ ಚಿಕ್ಕ ದ್ವಾರಗಳ ಮುಂದೆ ಮುಖ ಮಂಟಪಗಳಿವೆ. ಅವುಗಳಲ್ಲಿ ಸುವರ್ಣಘಟಗಳು ಎಂಟು ಸಾವಿರ ಇವೆ. ಸ್ವರ್ಣಮಾಲೆಗಳು ಎಂಟು ಸಾವಿರ ಇವೆ. ಧೂಪ ಘಟಗಳು ಎಂಟು ಸಾವಿರ ಇವೆ, ಮತ್ತು ಮುಖ ಮಂಟಪದಲ್ಲಿ ಅನೇಕ ಪ್ರಕಾರದ ಚಿಕ್ಕ ಗಂಟೆಗಳಿವೆ. ಆ ಮಂದಿರದ ಪೃಷ್ಠ ಭಾಗದಲ್ಲಿ ಎಂಟು ಸಾವಿರ ಮಣಿಮಾಲೆಗಳಿವೆ, ಇಪ್ಪತ್ತುನಾಲ್ಕು ಸಾವಿರ ಸ್ವರ್ಣಮಾಲೆಗಳಿವೆ. ಮಾಲೆಗಳು ಗೋಡೆಯ ನಾಲ್ಕೂ ಕಡೆಗೆ ನೇತಾಡುತ್ತ-ತೂಗುತ್ತಿರುತ್ತವೆಂದು ತಿಳಿಯುವುದು. ಕಲಶಗಳು ನೆಲದ ಮೇಲೆ ಇಟ್ಟಿರುತ್ತವೆ. ಗಂಟೆ ಮೊದಲಾದವು ಮಂಟಪದಲ್ಲಿ ತೂಗುತ್ತ ನೇತಾಡುತ್ತಿರುತ್ತವೆಂದು ತಿಳಿಯುವುದು.

ಅಕೃತ್ರಿಮ ಜಿನ ಚೈತ್ಯಾಲಯಗಳ ಬಾಹ್ಯ ರಚನೆಯ ವರ್ಣನೆಯು ಸಂಕ್ಷೇಪದಲ್ಲಿ ಈ ಪ್ರಕಾರವಿದೆ.

| ಸ್ಥಾನ | ಮಣಿಮಾಲೆ | ಸುವರ್ಣಕಲಶ | ಸುವರ್ಣಮಾಲೆ | ಧೂಪ ಘಟ |
|---|---|---|---|---|
| ಮುಖ ಮಂಟಪದ ಅಗ್ರಭಾಗದಲ್ಲಿ | | ೩೨೦೦೦ | | |
| ಮಹಾದ್ವಾರದ ಎರಡೂ ಮಗ್ಗಲಲ್ಲಿ | ೮೦೦೦ | | ೨೪೦೦೦ | ೨೪೦೦೦ |
| ಮಹಾದ್ವಾರದ ಮುಂದೆ ಮುಖ ಮಂಟಪದಲ್ಲಿ | | ೧೬೦೦೦ | ೧೬೦೦೦ | ೧೬೦೦೦ |
| ಉತ್ತರ-ದಕ್ಷಿಣದ ಚಿಕ್ಕ ದ್ವಾರಗಳಲ್ಲಿ | ೪೦೦೦ | | ೧೨೦೦೦ | ೧೨೦೦೦ |
| ಉತ್ತರ-ದಕ್ಷಿಣದ ಚಿಕ್ಕ ದ್ವಾರಗಳ ಮುಖ ಮಂಟಪದಲ್ಲಿ | | ೮೦೦೦ | ೮೦೦೦ | ೮೦೦೦ |

**ಈಗ ಮುಖಮಂಟಪದ ವಿಸ್ತಾರ ಹೇಳುತ್ತಾರೆ :-** ಈ ಮಂದಿರದ ಮುಂದೆ ಮುಖ್ಯ ಮಂಟಪವಿದೆ. ಅದು ಜಿನಮಂದಿರದ ಸಮಾನವೇ ನೂರು ಯೋಜನ ಉದ್ದ, ಐವತ್ತು ಯೋಜನ ಅಗಲ ಮತ್ತು ಹದಿನಾರು ಯೋಜನ ಎತ್ತರವಿದೆ. ಆ ಮುಖಮಂಟಪದ ಮುಂದೆ ಚತುಷ್ಕೋಣ ಪ್ರೇಕ್ಷಣ ಮಂಟಪವಿದೆ. ಆ ಪ್ರೇಕ್ಷಣಮಂಟಪವು ನೂರು ಯೋಜನ ಉದ್ದ, ನೂರು ಯೋಜನ ಅಗಲ, ಹದಿನಾರು ಯೋಜನಕ್ಕಿಂತ ಹೆಚ್ಚು ಎತ್ತರವಿದೆ. ಆ ಪ್ರೇಕ್ಷಣ ಮಂಟಪದ ಮುಂದೆ ಎಂಭತ್ತು ಯೋಜನ ಉದ್ದ, ಎಂಭತ್ತು ಯೋಜನ ಅಗಲ, ಎರಡು ಯೋಜನ ಎತ್ತರ ಸ್ವರ್ಣಮಯಪೀಠವಿದೆ. ಪೀಠದ ಅರ್ಥವು ವೇದಿಕೆಯಿದೆ. ಆ ಪೀಠದ ಮಧ್ಯದಲ್ಲಿ ಚತುಷ್ಕೋಣ ಅರವತ್ತು ನಾಲ್ಕು ಯೋಜನ ಉದ್ದ, ಅರವತ್ತಾ ನ್ಲುಕ್ಕ ಯೋಜನ ಅಗಲ, ಹದಿನಾರು ಯೋಜನ ಎತ್ತರವಾದ ಸ್ಥಾನಮಂಟಪ ನಾಮದ ಸಭಾಮಂಟಪವಿದೆ.

ಈ ಸ್ಥಾನ ಮಂಟಪದ ಮುಂದೆ ನಾಲ್ವತ್ತು ಯೋಜನ ಎತ್ತರ ಸ್ತೂಪಗಳ ಮಣಿಮಯ ಪೀಠವಿದೆ. ಆ ಪೀಠವು ನಾಲ್ಕು ದ್ವಾರಗಳೊಡನೆ ಹನ್ನೆರಡು ಕಮಲದ ವೇದಿಕೆ ಸಹಿತವಿದೆ. ಆ ಪೀಠದ ಮಧ್ಯದಲ್ಲಿ ಮೂರು ಕಚ್ಚು ಸಹಿತ ಅರವತ್ತು ನಾಲ್ಕು ಯೋಜನ ಉದ್ದ, ಅರವತ್ತು ನಾಲ್ಕು ಯೋಜನ ಅಗಲ, ಹದಿನಾರು ಯೋಜನ ಎತ್ತರ ರತ್ನಮಯ ಜಿನಬಿಂಬಗಳುಳ್ಳ ಸ್ತೂಪವಿದೆ. ಮೂರು ಕಚ್ಚು ಪಡೆದ ಯಾವ ರತ್ನರಾಶಿಯಿದೆ ಅದರ ಹೆಸರು ಸ್ತೂಪವಿದೆ.

ಅದರ ಮೇಲೆ ಜಿನಬಿಂಬಗಳು ವಿರಾಜಮಾನವಿವೆ. ಈ ಪ್ರಕಾರದ ಸ್ತೂಪಗಳು ಒಂಭತ್ತು ಇವೆ. ಕ್ರಮದಿಂದ ಅವುಗಳ ಸ್ವರೂಪ ತಿಳಿಸುತ್ತಾರೆ. ಸ್ತೂಪದ ಮುಂದೆ ಒಂದು ಸಾವಿರ ಯೋಜನ ಉದ್ದ-ಅಗಲ, ನಾಲ್ಕೂ ನಿಟ್ಟಿಗೆ ಹನ್ನೆರಡು ವೇದಿಕೆಸಹಿತ ಸ್ವರ್ಣಮಯ ಪೀಠವಿದೆ. ಆ ಪೀಠದ ಮೇಲೆ ನಾಲ್ಕು ಯೋಜನ ಉದ್ದ, ಒಂದು ಯೋಜನ ಅಗಲ ವೃಕ್ಷವಿದೆ. ಆ ವೃಕ್ಷದ ನಾಲ್ಕೂ ಕಡೆಗೆ ಮಣಿಮಯ ಮೂರು ಕೋಟೆಗಳೊಡನೆ ಹನ್ನೆರಡು ಯೋಜನ ಉದ್ದವಿರುವ ನಾಲ್ಕು ಮಹಾಶಾಖೆಗಳಿವೆ, ಚಿಕ್ಕ ಶಾಖೆಗಳು ಅನೇಕವಿವೆ ಮತ್ತು ಆ ವೃಕ್ಷವು ಮೇಲೆ ತುದಿಗೆ ಹನ್ನೆರಡು ಯೋಜನ ವಿಸ್ತಾರವಿದೆ. ಅನೇಕ ಪ್ರಕಾರದ ಪತ್ರ-ಫಲ-ಪುಷ್ಪಗಳಿಂದ ಯುಕ್ತವಿದೆ.

ಈ ಪ್ರಕಾರ ಒಂದು ಲಕ್ಷ ನಲವತ್ತು ಸಾವಿರ ಒಂದುನೂರ ಇಪ್ಪತ್ತು ವೃಕ್ಷಗಳ ಪರಿವಾರ ಸಹಿತ ಸಿದ್ಧಾರ್ಥ ಮತ್ತು ಚೈತ್ಯನಾಮದ ಎರಡು ವೃಕ್ಷಗಳಿವೆ, ಆ ವೃಕ್ಷಗಳ ಮೂಲದಲ್ಲಿ ಪೀಠಗಳಿವೆ. ಸಿದ್ಧಾರ್ಥವೃಕ್ಷದ ಕೆಳಭಾಗದಲ್ಲಿರುವ ಪೀಠದಲ್ಲಿ ಅದರ ಮೇಲೆ ನಾಲ್ಕು ದಿಶೆಗಳಲ್ಲಿ ನಾಲ್ಕು ಸಿದ್ಧರ ಪ್ರತಿಮೆಗಳು ವಿರಾಜಮಾನವಿವೆ. ಚೈತ್ಯವೃಕ್ಷದ ಕೆಳಭಾಗದಲ್ಲಿರುವ ಪೀಠದಲ್ಲಿ ಅದರ ಮೇಲೆ ನಾಲ್ಕು ದಿಶೆಗಳಲ್ಲಿ ನಾಲ್ಕು ಅರಹಂತರುಗಳ ಪ್ರತಿಮೆಗಳು ವಿರಾಜಮಾನವಿವೆ.

ಈ ವೃಕ್ಷಗಳ ಪೀಠದ ಮುಂದೆ ಪೀಠವಿದ್ದು ಅದರಲ್ಲಿ ಅನೇಕ ಪ್ರಕಾರದ ವರ್ಣಸಹಿತ ಬಣ್ಣಬಣ್ಣದ ಮಹಾಧ್ವಜಗಳು ನಿಂತುಕೊಡಿವೆ. ಆ ಧ್ವಜಗಳ ಚಿನ್ನಮಯವಾದ ಸ್ತಂಭಗಳು ಹದಿನಾರು ಯೋಜನ ಎತ್ತರ ಒಂದು ಕೋಸು ವಿಸ್ತಾರವಿವೆ. ಆ ಸ್ತಂಭಗಳ ಮುಂದಿನ ಭಾಗದಲ್ಲಿ ಮನುಷ್ಯರ ಕಣ್ಣು-ಮನಸ್ಸುಗಳನ್ನು ಆಕರ್ಷಿಸುವಂಥ ಅನೇಕ ಪ್ರಕಾರದ ಧ್ವಜಗಳು ವಸ್ತ್ರ ರೂಪದ ರತ್ನಗಳಿಂದ ಶೋಭಾಯಮಾನವಾಗುತ್ತಲಿವೆ, ಮೂರು ಕೊಡೆಗಳು ಕೂಡ ಶೋಭಾಯಮಾನವಾಗುತ್ತಲಿವೆ. ಆ ಧ್ವಜಗಳಲ್ಲಿ ವಸ್ತ್ರಗಳಿಲ್ಲ, ವಸ್ತ್ರದಂತೆ ಆಕಾರವಿರುವ ಕೋಮಲತೆ ಹಾಗೂ ಅನೇಕ ವರ್ಣದ ಚಲುವನ್ನೊಳಗೊಂಡ ರತ್ನರೂಪದ ಪುದ್ಗಲಗಳೇ ಆ ಪ್ರಕಾರದಿಂದ ಪರಿಣಮಿಸಲ್ಪಟ್ಟಿವೆ. ಆ ವಸ್ತ್ರಗಳನ್ನು ರತ್ನಮಯವೆಂದೇ ತಿಳಿಯುವುದು.

ಆ ಧ್ವಜದ ಕಟ್ಟೆಯ ಮುಂದೆ ಜಿನಮಂದಿರವಿದೆ. ಅದರ ನಾಲ್ಕೂ ದಿಶೆಗಳಲ್ಲಿ ಅನೇಕ ಪ್ರಕಾರದ ಪುಷ್ಪಪೂರಿತ ನೂರು ಯೋಜನ ಉದ್ದ, ಐವತ್ತು ಯೋಜನ ಅಗಲ, ಹತ್ತು ಯೋಜನ ಎತ್ತರವಾದ ಸ್ವರ್ಣ-ರತ್ನಮಯ ವೇದಿಕೆ ಸಹಿತ ನಾಲ್ಕು ಸರೋವರಗಳಿವೆ. ಅದರ ಮುಂದೆ ಹೋಗುವ ಸಲುವಾಗಿ ದಾರಿಯಿದೆ. ಆ ದಾರಿಯ ಎರಡೂ ಕಡೆಗಳಲ್ಲಿ ಐವತ್ತು ಯೋಜನ ಎತ್ತರ ಐವತ್ತು ಯೋಜನ ವಿಸ್ತಾರವಾದ ಎರಡು ರತ್ನಮಯ ಭವನಗಳು ದೇವಗಳಿಗೆ ಮನೋರಂಜನೆಯ ಕುರಿತು ಇವೆ. ಅದರ ಮುಂದೆ ತೋರಣಗಳಿವೆ. ಅವು ಮಣಿಮಯಸ್ತಂಭಗಳ ಅಗ್ರಭಾಗದಲ್ಲಿ ಸ್ಥಿರವಿವೆ. ಎರಡು ಸ್ತಂಭಗಳ ಮಧ್ಯದಲ್ಲಿ ಗೋಡೆಯಲ್ಲದೆ ಮೇಲಿನ ಭಾಗದಲ್ಲಿ ವೃತ್ತಾಕಾರದ ಯಾವ ರಚನೆಯಿರುತ್ತದೆ ಅದನ್ನು ತೋರಣವೆಂದು ಹೇಳುತ್ತಾರೆ. ಆ ತೋರಣಗಳು ಮುತ್ತಿನ ಝುಲ್ಲರಿ ಹಾಗೂ ಗಂಟೆಗಳ ಸಮೂಹ ಸಹಿತವಿವೆ. ಮುತ್ತಿನ ಝುಲ್ಲರಿ ಮತ್ತು ಗಂಟೆಗಳ ಸಮೂಹವು ತೋರಣಗಳಲ್ಲಿ ತೂಗುತ್ತಿರುತ್ತವೆ.

**ಪ್ರತಿಯೊಂದು ತೋರಣವು ಐವತ್ತು ಯೋಜನ ಎತ್ತರ ಐವತ್ತು ಯೋಜನ ವಿಸ್ತಾರವಿವೆ.** ಆ ತೋರಣಗಳು ಜಿನಬಿಂಬಗಳ ಸಮೂಹದಿಂದ ಶೋಭಿಸುತ್ತವೆ. ತೋರಣಗಳಲ್ಲಿಯೇ ಜಿನಬಿಂಬಗಳ ಆಕಾರ ಮಾಡಲಾಗಿದೆ. ತೋರಣದ ಮುಂದೆ ಸ್ಫಟಿಕ ಮಣಿಮಯವಾದ ಪ್ರಥಮ ಪ್ರಾಕಾರವಿದೆ. ಅದರ ಒಳಗೆ ಕೋಟೆಯ ದ್ವಾರದ ಎರಡೂ ಕಡೆಗೆ ನೂರು ಯೋಜನ ಎತ್ತರ, ಐವತ್ತು ಯೋಜನ ವಿಸ್ತಾರವಿರುವ ರತ್ನಗಳಿಂದ ನಿರ್ಮಿಸಿದ ಎರಡು ಭವನಗಳಿವೆ. ಈ ಪ್ರಕಾರ ಇದು ಮೊದಲನೆಯ ಕೋಟೆಯವರೆಗಿನ ವರ್ಣನೆ ಮಾಡಲಾಯಿತು. ಪೂರ್ವ ದ್ವಾರದಲ್ಲಿ ಮಂಟಪ ಮೊದಲಾದವುಗಳ ಯಾವ ಪ್ರಮಾಣ ಹೇಳಿದೆ ಅದರಿಂದ ಅರ್ಧ-ಅರ್ಧ ದಕ್ಷಿಣ ದ್ವಾರ ಮತ್ತು ಉತ್ತರ ದ್ವಾರದಲ್ಲಿ ಪ್ರಮಾಣ ತಿಳಿಯುವುದು. ಉಳಿದ ವರ್ಣನೆಯು ಮೂರೂ ಕಡೆಗೆ ಸಮಾನವಿದೆಯೆಂದು ತಿಳಿಯುವದು.

ಆ ಚೈತ್ಯಾಲಯಗಳು ಸಾಮಾಯಿಕಾದಿ ಕ್ರಿಯೆ ಮಾಡುವ ಸ್ಥಾನ ವಂದನಾ-ಮಂಟಪ, ಸ್ನಾನ ಮಾಡುವ ಸ್ಥಾನ ಅಭಿಷೇಕ-ಮಂಟಪ, ನೃತ್ಯ ಮಾಡುವ ಸ್ಥಾನ ನರ್ತನ-ಮಂಟಪ, ಸಂಗೀತಸಾಧನೆ ಮಾಡುವ ಸ್ಥಾನ ಸಂಗೀತ-ಮಂಟಪ, ಅವಲೋಕನೆ ಮಾಡುವ ಸ್ಥಾನ, ಅವಲೋಕನ-ಮಂಟಪ, ಕ್ರೀಡೆ ಮಾಡುವ ಸ್ಥಾನ ಕ್ರೀಡೆಯ-ಗೃಹ, ಶಾಸ್ತ್ರಗಳ ಅಭ್ಯಾಸ ಮಾಡುವ ಸ್ಥಾನ ಗುಣದ ಗೃಹ ಮತ್ತು ವಿಸ್ತೀರ್ಣ ಉತ್ಕೃಷ್ಟ ಚಿತ್ರಪಟ ಮೊದಲಾದುವನ್ನು ತೋರಿಸುವ ಸ್ಥಾನ ಪಟಶಾಲೆ ಮೊದಲಾದವುಗಳೊಡನಿವೆ.

ಈಗ ಮೊದಲನೇಕೋಟೆ ಮತ್ತು ಎರಡನೇಕೋಟೆಯ ಮಧ್ಯದ ಅಂತರಾಳದ ಸ್ವರೂಪ ಹೇಳುತ್ತಾರೆ. ಅಲ್ಲಿ ಸಿಂಹ, ಆನೆ, ಎತ್ತು, ಗರುಡ, ನವಿಲು, ಚಂದ್ರ, ಸೂರ್ಯ, ಹಂಸ, ಕಮಲ ಮತ್ತು ಚಕ್ರ-ಈ ಹತ್ತು ಆಕಾರಗಳ ಧ್ವಜಗಳಿವೆ. ಅವು ಬೇರೆ ಬೇರೆ ಪ್ರತಿಯೊಂದು ಒಂದು ನೂರಾ ಎಂಟು, ಒಟ್ಟಿಗೆ ಒಂದು ದಿಶೆಯಲ್ಲಿ ಒಂದು ಸಾವಿರದ ಎಂಭತ್ತು ಇವೆ. ಈ ಪ್ರಕಾರ ನಾಲ್ಕೂ ದಿಶೆಗಳಲ್ಲಿ ಒಟ್ಟಿಗೆ ನಾಲ್ಕು ಸಾವಿರದಾ ಮುನ್ನೂರು ಇಪ್ಪತ್ತು ಮುಖ್ಯ ಧ್ವಜಗಳಿವೆ. ಒಂದೊಂದು ಮುಖ್ಯ ಧ್ವಜಕ್ಕೆ ಒಂದುನೂರಾ ಎಂಟು ಚಿಕ್ಕ ಧ್ವಜಗಳಿವೆ. (ಸಮಸ್ತ ಚಿಕ್ಕ, ಧ್ವಜಗಳ ಸಂಖ್ಯೆಯು ನಾಲ್ಕು ಲಕ್ಷ ಅರವತ್ತಾರು ಸಾವಿರ ಐದು ನೂರಾ ಅರವತ್ತು ಇವೆ.)

ಮುಂದೆ ಎರಡನೇ ಕೋಟೆ ಹಾಗೂ ಮೂರನೇ ಕೋಟೆಯ ಮಧ್ಯದ ಅಂತರಾಳದಲ್ಲಿ ಅಶೋಕವನ, ಸಪ್ತಚ್ಛದವನ, ಚಂಪಕವನ ಹಾಗೂ ಆಮ್ರವನವೆಂದು ನಾಲ್ಕು ವನಗಳಿವೆ. ಇಲ್ಲಿ ಸ್ವರ್ಣಮಯ ಪುಷ್ಪಗಳಿಂದ ಶೋಭಾಯಮಾನ, ಮರಕತ ಮಣಿಮಯ ಅನೇಕ ಪ್ರಕಾರದ ಪತ್ರಗಳಿಂದ ಪರಿಪೂರ್ಣವಾದ ಕಲ್ಪವೃಕ್ಷಗಳಿವೆ. ಅವಕ್ಕೆ ವೈಢೂರ್ಯ ಮಣಿಮಯ ಫಲಗಳಿವೆ ಮತ್ತು ಹವಳಮಯವಾದ ರೆಂಬೆಗಳಿಂದ ಯುಕ್ತವಿವೆ. ಅಲ್ಲಿ ಭೋಜನಾಂಗ ಮೊದಲಾದ ಹತ್ತು ಪ್ರಕಾರದ ಕಲ್ಪವೃಕ್ಷಗಳಿವೆ.

ಆ ನಾಲ್ಕೂ ವನಗಳಲ್ಲಿ ನಾಲ್ಕು ಚೈತ್ಯವೃಕ್ಷಗಳಿವೆ. ಆ ವೃಕ್ಷಗಳು ಮೂರು ಪೀಠಗಳ ಮೇಲೆ ಇವೆ ಮತ್ತು ಮೂರು ಕೋಟೆ ಸಹಿತವಿವೆ. ಆ ವೃಕ್ಷಗಳ ರೆಂಬೆ, ಎಲೆ, ಪುಷ್ಪ, ಫಲಗಳು ರತ್ನಮಯವಿವೆ ಮತ್ತು ಅವು ನಾಲ್ಕೂ ವನಗಳ ಮಧ್ಯದಲ್ಲಿ ನಿಂತುಕೊಂಡಿವೆ. ಆ ನಾಲ್ಕು ಚೈತ್ಯ ವೃಕ್ಷಗಳ ಕೆಳಗೆ ನಾಲ್ಕೂ ದಿಶೆಗಳಲ್ಲಿ ಪಲ್ಯಂಕಾಸನದಲ್ಲಿ ಸಿಂಹಾನದ ಮೇಲೆ ಛತ್ರ-ಪ್ರತಿಹಾರ್ಯಗಳಿಂದ ಯುಕ್ತ ಜಿನೇಂದ್ರರ ನಾಲ್ಕು ಪ್ರತಿಮೆಗಳಿವೆ. ನಂದ ಮೊದಲಾದ ಹದಿನಾರು ಕೊಳಗಳು ಮೂರು ಕಡಿತಸಹಿತ ಶೋಭಿಸುತ್ತವೆ. ವನದ ಭೂಮಿಯಲ್ಲಿ ದ್ವಾರಗಳಿಂದ ಬರುವ ಮಾರ್ಗರೂಪದ ವೀಥಿಯಿದೆ. ಅದರ ಮಧ್ಯದಲ್ಲಿ

ಮೂರು ಪ್ರಾಕಾರ ಸಹಿತ ಮೂರು ಪೀಠಗಳ ಮೇಲೆ ಧರ್ಮದ ವೈಭವದೊಡನೆ ಮಸ್ತಕದ ಮೇಲೆ ನಾಲ್ಕೂ ದಿಶೆಗಳಲ್ಲಿ ನಾಲ್ಕು ಜಿನಪ್ರತಿಮೆಗಳನ್ನು ಧಾರಣ ಮಾಡಿರುವ ಮಾನಸ್ತಂಭಗಳಿವೆ.

ಅಕೃತ್ರಿಮ ಜಿನಾಲಯಗಳ ಮಹಿಮೆಯ ವರ್ಣನೆ ಮಾಡುವುದಕ್ಕೆ ಸಾವಿರ ನಾಲಗೆಗಳಿಂದ ಕೂಡ ಯಾರೂ ಸಮರ್ಥರಿಲ್ಲ. ಸಹಸ್ರಾಕ್ಷದ ಇಂದ್ರನು ಒಂದು ಸಾವಿರ ಕಣ್ಣುಗಳನ್ನು ತೆರೆದು ನಿರಂತರ ನೋಡಿದರೂ ಕೂಡ ತೃಪ್ತನಾಗುವುದಿಲ್ಲವೆಂದು ರಾಜವಾರ್ತಿಕದಲ್ಲಿ ಹೇಳಿದೆ. ಇಂಥ ಅಪರಿಮಿತ ಮಹಿಮೆಯುಳ್ಳ ಅಕೃತ್ರಿಮ ಜಿನಾಲಯದ ವರ್ಣನೆಯನ್ನು ಇಲ್ಲಿ ತ್ರಿಲೋಕಸಾರ ನಾಮದ ಗ್ರಂಥದಿಂದ ಎಲ್ಲರ ಶುಭಧ್ಯಾನದ ಸಿದ್ಧಿಯ ಸಲುವಾಗಿ ಮಾಡಲಾಗಿದೆ. ಈ ಪ್ರಕಾರ ಜಿನಪೂಜೆಯ ಕಥನವನ್ನು ಮಾಡಲಾಯಿತು.

ಜಿನಪೂಜೆಯ ಫಲದಲ್ಲಂತೂ ಅನೇಕರು ಪ್ರಸಿದ್ಧರಾಗಿದ್ದಾರೆ, ಆದಾಗ್ಯೂ ಪೂರ್ವಾಚಾರ್ಯರುಗಳ ಮೂಲಕ ಪ್ರಸಿದ್ಧರಾದವರನ್ನು ತಿಳಿಸಿಕೊಂಡುವಂಥ ಸೂತ್ರವನ್ನು ಇಲ್ಲಿ ಈಗ ಹೇಳುತ್ತಾರೆ,-

**ಅರ್ಹಚ್ಚರಣ ಸಪರ್ಯಾ ಮಹಾನುಭಾವಂ ಮಹಾತ್ಮನಾಮವದತ್ ।**
**ಭೇಕಃ ಪ್ರಮೋದಮತ್ತಃ ಕುಸುಮೇನೈಕೇನ ರಾಜಗೃಹೇ ॥೧೨೦॥**

**ಅರ್ಥ :-** ರಾಜಗೃಹನಾಮದ ನಗರದಲ್ಲಿ ಜಿನೇಂದ್ರರನ್ನು ಪೂಜಿಸುವ ಹರುಷದಲ್ಲಿ ಮೈಮರೆತು ತನ್ನ ಸಾಮರ್ಥ್ಯವನ್ನು ತಿಳಿದುಕೊಳ್ಳಲಾರದಂಥ ಒಂದು ಕಪ್ಪೆಯು ಆಗಿ ಹೋಗಿದೆ, ಅದು ಮಹಾಪುರುಷರಾದ ಭವ್ಯ ಜೀವರುಗಳಿಗೆ ಅರಹಂತರ ಚರಣಗಳ ಪೂಜೆ ಮಾಡುವ ಮಹಾನ ಪ್ರಭಾವನೆಯನ್ನು ಪ್ರಕಟಪಡಿಸಿ ತೋರಿಸಿಕೊಟ್ಟಿದೆ.

**ಅದರ ಕಥೆಯು ಹೀಗಿದೆ :-** ಮಗಧ ದೇಶದ ರಾಜಗೃಹ ನಗರದಲ್ಲಿ ಶ್ರೇಣಿಕರಾಜನು ರಾಜ್ಯ ಮಾಡುತ್ತಿದ್ದನು. ಅದೇ ನಗರದಲ್ಲಿ ನಾಗದತ್ತನಾಮದ ಓರ್ವ ಶ್ರೇಷ್ಠಿ ಮತ್ತು ಅವನಿಗೆ ಭವದತ್ತಾ ನಾಮದ ಓರ್ವ ಪತ್ನಿಯಿದ್ದಳು. ಆ ಶ್ರೇಷ್ಠಿಯು ಆರ್ತ ಪರಿಣಾಮದಿಂದ ಸತ್ತು ತನ್ನದೇ ಮನೆಯ ಬಾವಿಯಲ್ಲಿ ಕಪ್ಪೆಯ ರೂಪದಿಂದ ಉತ್ಪನ್ನನಾದನು. ಒಂದು ದಿವಸ ಆ ಶ್ರೇಷ್ಠಿ ಪತ್ನಿಯಾದ ಭವದತ್ತಾಳು ತಮ್ಮ ಬಾವಿಯ ಹತ್ತಿರ ಹೋಗುತ್ತಾಳೆ. ಅವಳನ್ನು ನೋಡುತ್ತಿದ್ದಂತೆ ಕಪ್ಪೆಗೆ ತನ್ನ ಪೂರ್ವಭವದ ಸ್ಮರಣೆಯಾಯಿತು. ಅದು ಪೂರ್ವಭವದ ಸ್ನೇಹವನ್ನು ಸ್ಮರಿಸಿ ಬಲವಾಗಿ ಸದ್ದು ಮಾಡುತ್ತ ಜಿಗಿಯುತ್ತ-ಜಿಗಿಯುತ್ತ ಆ ಭವದತ್ತಾಳ ಬಟ್ಟೆಯ ಮೇಲೆ ಹತ್ತತೊಡಗಿತು. ಆಗ ಅವಳು ಅದನ್ನು ಪುನಃ ಪುನಃ ದೂರ ಎಸೆದರೂ ಕೂಡ ಆ ಕಪ್ಪೆಯು ಮತ್ತೆ ಮತ್ತೆ ಆ ಭವದತ್ತಾಳ ಬಟ್ಟೆಯ ಮೇಲೆ ಹತ್ತುವ ಪ್ರಯತ್ನ ಮಾಡತೊಡಗಿತು. ಆಗ ಅವಳು ಆ ಕಪ್ಪೆಯನ್ನು ದೂರ ಎಸೆದು ಮನೆಯಲ್ಲಿ ಬಂದು ಬಿಡುತ್ತಾಳೆ.

'ಓ ಸ್ವಾಮಿ ! ನಾನು ನಮ್ಮ ಮನೆಯಲ್ಲಿನ ಬಾವಿಯ ಹತ್ತಿರ ಹೋದೊಡನೆ ಒಂದು ಕಪ್ಪೆಯು ಬಲವಾಗಿ ಸದ್ದು ಮಾಡುತ್ತ ಮತ್ತೆ ಮತ್ತೆ ನನ್ನ ಮೈಮೇಲೆ ಬರುತ್ತದೆ ಇದರ ಕಾರಣವೇನು ?

- ಎಂದು ಒಂದು ದಿವಸ ಆ ಭವದತ್ತಾಳು ಸುವ್ರತನಾಮದ ಅವಧಿಜ್ಞಾನಿ ಮುನಿರಾಜರಿಗೆ ಕೇಳುತ್ತಾರೆ, ಅದಕ್ಕೆ ಮುನಿರಾಜರು -

'ಭದ್ರೇ ! ತಮ್ಮ ಪತಿ ನಾಗದತ್ತನು ಆರ್ತ ಪರಿಣಾಮದಿಂದ ಮರಣ ಹೊಂದಿ ಕಪ್ಪೆಯಾಗಿ ಹುಟ್ಟಿದ್ದಾನೆ. ಅವನಿಗೆ ಜಾತಿಸ್ಮರಣ ಜ್ಞಾನವಾಗಿದೆ. ಅದರಿಂದ ಅವನು ಪೂರ್ವಜನ್ಮದ ಸ್ನೇಹವನ್ನು ಸ್ಮರಿಸಿ ನಿಮ್ಮ ಹತ್ತಿರ ಬರುತ್ತಾನೆ'ಂದು ಹೇಳುತ್ತಾರೆ.

ಅನಂತರ ಆ ಭವದತ್ತಳು ಕಪ್ಪೆಯನ್ನು ತನ್ನ ಪತಿಯ ಜೀವವೆಂದು ಮುನಿರಾಜರುಗಳಿಂದ ಕೇಳಿ ತಿಳಿದುಕೊಂಡು ಕಪ್ಪೆಯನ್ನು ಅತ್ಯಂತ ಸನ್ಮಾನಪೂರ್ವಕ ತೆಗೆದುಕೊಂಡು ಹೋಗಿ ತನ್ನ ಮನೆಯಲ್ಲಿ ಇಟ್ಟುಕೊಳ್ಳುತ್ತಾಳೆ.

ಒಂದು ದಿವಸ ಭಗವಾನ ಮಹಾವೀರ ಪ್ರಭುಗಳ ಸಮವಸರಣವು ವೈಭಾರ ಪರ್ವತದ ಮೇಲೆ ಬಂದಿರುವುದನ್ನು ತಿಳಿದು ಶ್ರೇಣಿಕರಾಜನು ಎಲ್ಲರೂ ವಂದನೆಗೆ ಹೋಗುವ ಸಲುವಾಗಿ ನಗರದಲ್ಲಿ ಆನಂದಭೇರಿ ಹೊಡಿಸುತ್ತಾನೆ. ಆಗ ನಗರದ ಸಮಸ್ತ ಭವ್ಯ ಜೀವರುಗಳು ಭಗವಂತರ ದರ್ಶನಕ್ಕೆ ಹೋಗುವ ಸಲುವಾಗಿ ಅನೇಕ ಪ್ರಕಾರದ ವಸ್ತ್ರಾಭರಣಗಳಿಂದ ಅಲಂಕರಿಸಿಕೊಂಡು ಪೂಜೆಯ ಸಾಮಗ್ರಿಯನ್ನು ಕೈಯಲ್ಲಿ ತೆಗೆದುಕೊಂಡು, ಜಯ-ಜಯಕಾರ ಮಾಡುತ್ತ ತುಂಬ

ಹರುಷದಿಂದ ಊದುತ್ತ-ಬಾರಿಸುತ್ತ, ನೃತ್ಯ-ಗಾನ ಮಾಡುತ್ತ ಹೊರಡುತ್ತಾರೆ. ಇಡೀ ನಗರದಲ್ಲಿ ಆನಂದವೇ ಆನಂದವು ವ್ಯಾಪ್ತವಾಗುತ್ತದೆ. ಜನರ ಪೂಜಾಜನ್ಯ ಆನಂದದ ಶಬ್ದಗಳನ್ನು ಆಲಿಸಿ, ಕಪ್ಪೆಗೂ ಕೂಡ ಪೂಜೆ ಮಾಡುವ ಉತ್ಸಾಹವು ಉಕ್ಕಿ ಬರುತ್ತದೆ. ಆಗ ಆ ಕಪ್ಪೆಯು ಕೂಡ ಒಂದು ಅರಳಿದ ಪುಷ್ಪವನ್ನು ತನ್ನ ಬಾಯಲ್ಲಿ ಕಚ್ಚಿಕೊಂಡು ಆನಂದದಿಂದ ಉತ್ಸಾಹಿತವಾಗುತ್ತ ವೀರಭಗವಂತರನ್ನು ಪೂಜಿಸುವ ಸಲುವಾಗಿ ಹೊರಡುತ್ತದೆ.

ಭಕ್ತಿಯ ಭಾವದಿಂದ ತುಂಬಿ ಹೋದ ಆ ಕಪ್ಪೆಯು ವೈಭಾರಪರ್ವತದ ಮೇಲೆ ಇಪ್ಪತ್ತುಸಾವಿರ ಮೆಟ್ಟಿಲುಗಳುಳ್ಳ ಆ ಸಮವಸರಣವೆಲ್ಲಿ ಮತ್ತು ಶರೀರದಿಂದ ಅತ್ಯಂತ ಅಸಮರ್ಥನಾದ ನಾನೆಲ್ಲಿ? ಅಲ್ಲಿ ನಾನು ಹೇಗೆ ತಲುಪಬಹುದೆಂಬ ವಿಚಾರವು ಆ ಕಪ್ಪೆಯ ಮನಸ್ಸಿನಲ್ಲಿ ಬರಲಿಲ್ಲ, ನಾನಂತೂ ಈಗ ಪ್ರತ್ಯಕ್ಷ ಜಿನೇಂದ್ರ ಭಗವಂತರ ಪೂಜೆ ಮಾಡುತ್ತೇನೆಂಬ ಉತ್ಸಾಹದಿಂದ ಮಾರ್ಗದಲ್ಲಿ ಗಮನ ಮಾಡುತ್ತಿತ್ತು. ಅಷ್ಟರಲ್ಲಿ ದೊರೆಯ ಆನೆಯ ಕಾಲ ಕೆಳಕ್ಕೆ ಸಿಕ್ಕುಸತ್ತು ಹೋಗುತ್ತದೆ. ಕೂಡಲೆ ಸೌಧರ್ಮ ಸ್ವರ್ಗದಲ್ಲಿ ಋದ್ಧಿಸಂಪನ್ನ ದೇವನಾಗಿ ಹುಟ್ಟುತ್ತದೆ. ಅಲ್ಲಿ ಅವಧಿಜ್ಞಾನದಿಂದ ನಾನು ಪೂಜೆಯ ಭಾವ ಮಾಡುವುದರಿಂದ ಈ ದೇವಪದವನ್ನು ಪಡೆದೆನೆಂದು ತಿಳಿಯುತ್ತಾನೆ. ಕೂಡಲೆ ತನ್ನ ಕಿರೀಟದಲ್ಲಿ ಕಪ್ಪೆಯ ಚಿಹ್ನವನ್ನು ಧಾರಣ ಮಾಡಿ, ಪೂಜೆಯ ನಿಮಿತ್ತದಿಂದ ಭಗವಂತರ ಸಮವಸರಣದಲ್ಲಿ ಬರುತ್ತಾನೆ. ಬಂದು ಪೂಜೆ ಮಾಡುವ ಭಾವದ ಫಲವನ್ನು ಸಮಸ್ತ ಜೀವರುಗಳಿಗೆ ಸ್ಪಷ್ಟವಾಗಿ ತೋರಿಸಿಕೊಡುತ್ತಾನೆ. ಕಪ್ಪೆಯಂಥ ಒಂದು ತಿರ್ಯಂಚ ಪ್ರಾಣಿಯು ಅದು ಪೂಜೆಯ ಸ್ಥಾನದವರೆಗೆ ತಲುಪಲೇ ಇಲ್ಲ; ಕೇವಲ ಪೂಜೆಯ ಭಾವ ಮಾಡಿಯೇ ಸ್ವರ್ಗ ಲೋಕದಲ್ಲಿ ಮಹರ್ದ್ಧಿಕ ದೇವವಾಗಿ ಹೋಯಿತು.

**ಜಿನೇಂದ್ರರ ಪೂಜೆಯ ಪ್ರಭಾವವು ಅಚಿಂತ್ಯವಿದೆ.** ಗೃಹಾಚಾರದಲ್ಲಿ ಸಮಸ್ತ ಪರಿಣಾಮಗಳ ವಿಶುದ್ಧತೆ ಮಾಡುವಂಥ ಶರಣವೆಂದರೆ ಒಂದು ನಿತ್ಯ ಜಿನಪೂಜೆ ಮಾಡುವುದೇ ಇದೆ. ಜಿನಪೂಜೆಯನ್ನು ನಿರ್ಧನರೂ ಮಾಡಬಹುದಾಗಿದೆ. ಧನವಂತರೂ ಮಾಡಬಹುದಾಗಿದೆ. ಯಾವ ಪ್ರಕಾರ ತಮ್ಮ ಸಾಮರ್ಥ್ಯವಿದೆ. ಅದೇ ಪ್ರಕಾರ ಪೂಜೆಯ ಸಾಮಗ್ರಿಗಳನ್ನು ತೆಗೆದುಕೊಳ್ಳಬಹುದು. ಪೂಜೆ ಮಾಡುವುದು, ಮಾಡಿಸುವುದು, ಮಾಡುವಂಥವರನ್ನು ಒಳ್ಳೆಯವರೆಂದು ತಿಳಿಯುವುದೆಲ್ಲವೂ ಪೂಜೆಯೇ ಇದೆ. ಒಂದು ದ್ರವ್ಯದಿಂದ ಕೂಡ ಪೂಜೆಯಾಗುತ್ತದೆ. ಅರಹಂತ ದೇವರ ಗುಣಗಳಲ್ಲಿ ತಮ್ಮ ಭಕ್ತಿಯ ಉಜ್ವಲತೆಯು ಎಷ್ಟು ಇರುವುದು, ಎಂಥದು ಇರುವುದು ಅಷ್ಟೇ, ಅಂಥದೇ ಫಲವು ನಮಗೆ ದೊರಕುತ್ತದೆ.

ಜಿನಮಂದಿರದಲ್ಲಿ ಛತ್ರ, ಚಾಮರ, ಸಿಂಹಾಸನ, ಕಲಶ, ಗಂಟೆ ಇತ್ಯಾದಿಗಳನ್ನು ಚಿನ್ನದ, ಬೆಳ್ಳಿಯ, ತಾಮ್ರದ, ಹಿತ್ತಾಳೆಯ, ಕಂಚಿನ ಉಪಕರಣಗಳಿಂದ ಎಷ್ಟು ತಮ್ಮ ಸಾಮರ್ಥ್ಯವಿದೆ ಅಷ್ಟು ಜಿನಮಂದಿರವನ್ನು ಅಲಂಕರಿಸಿ ವೈಯಾವೃತ್ಯ ಮಾಡಬೇಕು. ಜೀರ್ಣ ಮಂದಿರಗಳ ರಿಪೇರಿ-ಜೀರ್ಣೋದ್ಧಾರ ಮಾಡುವುದು ಮತ್ತು ಶ್ರೀಮಂತರು ಜಿನಮಂದಿರಗಳ ಪ್ರತಿಷ್ಠೆ ಮಾಡಿಸುವುದು, ಹೊಸ ಮಂದಿರ ಕಟ್ಟಿಸುವುದು, ಕಳಸ ಏರಿಸುವುದು ಇದೆಲ್ಲವೂ ಅರಹಂತರ ವೈಯಾವೃತ್ಯವಿದೆ.

**ಜಿನಮಂದಿರದ ಸಂರಕ್ಷಣೆ –** ಜಿನಮಂದಿರದ ಸೇವೆ ಮಾಡಬೇಕು. ಕೋಮಲವಾದ ಪೊರಕೆಯಿಂದ ಯತ್ನಾಚಾರದೊಡನೆ ಗುಡಿಸುವುದು, ಅಭಿಷೇಕ, ಪೂಜೆ ಮೊದಲಾದವುಗಳ ಸಲುವಾಗಿ ನೀರು ತರುವುದು, ಸಾಮಗ್ರಿಗಳನ್ನು ತೊಳೆದು ಸಿದ್ಧಪಡಿಸುವುದು, ಪೂಜೆ-ಪ್ರಕ್ಷಾಲನದ ಪಾತ್ರೆ ಉಪಕರಣಗಳನ್ನು ಉಜ್ಜುವುದು, ಹಾಸಿಗೆ ಹಾಸುವುದು, ಗಾನ-ನೃತ್ಯ-ವಾದ್ಯ ಮೊದಲಾದವುಗಳಿಂದ ಅರಹಂತರ ಗುಣಗಳನ್ನು ಹಾಡುವುದು ಇವೆಲ್ಲವು ಅರ್ಹದ್ ವೈಯಾವೃತ್ಯವಿದೆ. ಮನಸ್ಸಿನಿಂದ, ವಚನದಿಂದ, ಕಾಯದಿಂದ, ಧನದಿಂದ, ವಿದ್ಯೆಯಿಂದ, ಕಲೆಯಿಂದ ಅರಹಂತರ ಗುಣಗಳಲ್ಲಿ ಅನುರಾಗವು ವೃದ್ಧಿಸುವಂತೆ ಮಾಡುವುದು. ಧನಪ್ರಾಪ್ತ ಮಾಡುವ, ಶರೀರಪ್ರಾಪ್ತಮಾಡುವ, ಇಂದ್ರಿಯಗಳನ್ನು ಪಡೆಯುವ, ಬಲಪಡೆಯುವ, ಜ್ಞಾನ ಪಡೆಯುವ ಸಫಲತೆಯು ಜಿನ ಮಂದಿರದ ವೈಯಾವೃತ್ಯ ಮಾಡುವುದರಲ್ಲಿಯೇ ಇದೆ.

**ಜಿನಮಂದಿರದ ವೈಯಾವೃತ್ಯದಿಂದ ಸಮ್ಯಕ್ತ್ವದ ಪ್ರಾಪ್ತಿಯಾಗುತ್ತದೆ, ಸಮ್ಯಗ್ಜ್ಞಾನದ ಪ್ರಾಪ್ತಿಯಾಗುತ್ತದೆ ಮತ್ತು ಮಿಥ್ಯಾಜ್ಞಾನ ಹಾಗೂ ಮಿಥ್ಯಾಶ್ರದ್ಧೆಯ ಅಭಾವವಾಗಿ ಹೋಗುತ್ತದೆ.** ಜಿನಮಂದಿರದ ಸೇವೆ ಮಾಡುವುದರಿಂದಲೇ ಸ್ವಾಧ್ಯಾಯ, ಸಂಯಮ, ವ್ರತ, ಜಪ, ತಪ, ಶೀಲ ಮೊದಲಾದ ಗುಣಗಳ ಪ್ರಾಪ್ತಿಯಾಗುತ್ತದೆ. ನರಕ, ತಿರ್ಯಂಚ ಮೊದಲಾದ ಗತಿಗಳಲ್ಲಿ ಪರಿಭ್ರಮಣ ಮಾಡುವುದರ ಅಭಾವವಾಗುತ್ತದೆ. ಜಿನಮಂದಿರದ ಸಮಾನ ಉಪಕಾರ ಮಾಡುವಂಥದು ಈ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ.

ಜಿನಮಂದಿರದ ನಿಮಿತ್ತದಿಂದ ಶಾಸ್ತ್ರಶ್ರವಣ-ಪಠಣಗಳ ಮೂಲಕ ಅನೇಕ ಶ್ರೋತೃಗಳಿಗೆ ಉಪಕಾರವಾಗುತ್ತದೆ, ವಕ್ತಾನ ಉಪಕಾರವಾಗುತ್ತದೆ. ಜಿನಮಂದಿರದ ನಿಮಿತ್ತದಿಂದ ಅದೆಷ್ಟೋ ಜನರು ಕಾಯೋತ್ಸರ್ಗ ಮಾಡುತ್ತಾರೆ, ಕೆಲವರು ಜಪ ಮಾಡುತ್ತಾರೆ. ಕೆಲವರು ರಾತ್ರಿಯಲ್ಲಿ ಜಾಗರಣ ಮಾಡುತ್ತಾರೆ, ಕೆಲವರು ಅನೇಕ ಪ್ರಕಾರದ ಪೂಜೆ ಮೊದಲಾದುವನ್ನು ಮಾಡಿ ಪ್ರಭಾವನೆ ಮಾಡುತ್ತಾರೆ. ಮತ್ತೆ ಕೆಲವರು ಸ್ತವನ ಮಾಡುತ್ತಾರೆ, ಕೆಲವರು ತತ್ತ್ವಗಳ ಚರ್ಚೆ ಮಾಡುತ್ತಾರೆ. ಕೆಲವರು ಪ್ರೋಷಧೋಪವಾಸ ಹಾಗೂ ಮರ್ಯಾದೆಯ ಪ್ರಕಾರ ಪಂಚ ಉಪವಾಸಾದಿಗಳನ್ನು ಮಾಡಿ ಬಹಳಷ್ಟು ನಿರ್ಜರೆ ಮಾಡುತ್ತಾರೆ. ಕೆಲವರು ಭಜನೆ, ಕೆಲವರು ನೃತ್ಯ, ಕೆಲವರು ಗಾಯನ ಮಾಡಿ ಪುಣ್ಯೋಪಾರ್ಜನೆ ಮಾಡಿಕೊಳ್ಳುತ್ತಾರೆ. ಕೆಲವರು ಸ್ವಾಧ್ಯಾಯ ಮಾಡುತ್ತಾರೆ, ಕೆಲವರು ಧರ್ಮಧ್ಯಾನ ಮಾಡುತ್ತಾರೆ. ಕೆಲವರು ವೀತರಾಗ ಭಾವನೆ ಭಾವಿಸುತ್ತಾರೆ, ಕೆಲವರು ಅನೇಕ ಪ್ರಕಾರದ ಉಪಕರಣಗಳ ಮೂಲಕ ಪ್ರಭಾವನೆ ಮಾಡುತ್ತಾರೆ.

ಜಿನಮಂದಿರದ ನಿಮಿತ್ತದಿಂದ ಪುಣ್ಯ-ಪಾಪ, ದೇವ-ಕುದೇವ, ಧರ್ಮ-ಅಧರ್ಮ, ಗುರು-ಕುಗುರುಗಳನ್ನು ತಿಳಿದುಕೊಳ್ಳುವುದಾಗುತ್ತದೆ. ಭಕ್ಷ್ಯ-ಅಭಕ್ಷ್ಯ, ಕಾರ್ಯ-ಅಕಾರ್ಯ, ಹೇಯ- ಉಪಾದೇಯಗಳ ಜ್ಞಾನವು ಕೂಡ ಜಿನಮಂದಿರದಲ್ಲಿ ಹೋಗುವುದರಿಂದಲೇ ಆಗುತ್ತದೆ. ತ್ಯಾಗ, ವ್ರತ, ಶೀಲ, ಸಂಯಮ, ಭಾವನೆಯ ಸ್ವರೂಪ ತಿಳಿದುಕೊಳ್ಳುವುದು, ಉತ್ತಮ ಆಚರಣೆ ಮಾಡುವುದು ಮೊದಲಾದ ಸಮಸ್ತ ಕಾರ್ಯಗಳು ಜಿನಮಂದಿರದ ಪ್ರಭಾವದಿಂದ ಆಗುತ್ತವೆ. ಜಿನಮಂದಿರದ ಸಮಾನ ಬೇರೆ ಯಾವವೂ ಉಪಕಾರಿಯಿಲ್ಲ. ಜಿನಮಂದಿರವು ಅಶರಣರಿಗೆ ಶರಣವಿದೆ. ಹೀಗೆ ಪರೋಪಕಾರ ಮಾಡುವಂಥ ಜಿನಮಂದಿರವನ್ನು ತಿಳಿದುಕೊಂಡು ಅದರ ವೈಯಾವೃತ್ಯ ಮಾಡಬೇಕಾಗುವುದು, ಈ ಪ್ರಕಾರ ವೈಯಾವೃತ್ಯದಲ್ಲಿ ಜಿನಪೂಜೆ, ಜಿನಮಂದಿರದ ವೈಯಾವೃತ್ಯ ಮಾಡಲು ಹೇಳಲಾಗಿದೆ.

ಈಗ ವೈಯಾವೃತ್ಯದ ಐದು ಅತಿಚಾರಗಳನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ,-

**ಹರಿತಪಿಧಾನನಿಧಾನೇ ಹ್ಯಾನಾದರಾಸ್ಮರಣಮತ್ಸರತ್ವಾನಿ ।**
**ವೈಯಾವೃತ್ಯಸ್ಯೈತೇ ವ್ಯತಿಕ್ರಮಾಃ ಪಂಚಕಥ್ಯಂತೇ ॥೧೨೧॥**

**ಅರ್ಥ :-** ವೈಯಾವೃತ್ಯ ಎಂದರೆ ಹರಿತಪಿಧಾನ, ಹರಿತ ನಿಧಾನ, ಅನಾದರ, ಅಸ್ಮರಣ ಮತ್ತು ಮತ್ಸರತ್ವವೆಂದು ದಾನದ ಐದು ಅತಿಚಾರಗಳು ತ್ಯಾಗಯೋಗ್ಯವಾಗಿವೆ.

೧) ವ್ರತಿಗಳಿಗೆ ಕೊಡಲು ಯೋಗ್ಯವಾದ ಯಾವ ಅನ್ನ, ನೀರು, ಔಷಧ ಮೊದಲಾದವುಗಳಿವೆ ಅವನ್ನು ಹಸಿರು ಎಲೆ, ಊಟದ ಎಲೆ, ತಾಂಬೂಲದೆಲೆ, ಕಮಲಪತ್ರ ಇತ್ಯಾದಿ ಸಚಿತ್ತದಿಂದ ಮುಚ್ಚಿ ಕೊಡುವುದು ಅದು ಹರಿತಪಿಧಾನ ನಾಮದ ಅತಿಚಾರವಿದೆ. ೨)ಹರಿತ ಎಂದರೆ ವನಸ್ಪತಿಯ ಎಲೆ ಮೊದಲಾದವುಗಳ ಮೇಲೆ ಇಟ್ಟಿರುವ ಭೋಜನ ಮೊದಲಾದುವನ್ನು ಕೊಡುವುದು ಅದು ಹರಿತನಿಧಾನ ನಾಮದ ಅತಿಚಾರವಿದೆ. ೩) ದಾನವನ್ನು ಅವಿನಯದಿಂದ, ಅನಾದರದಿಂದ,ಪ್ರಿಯ ವಚನಗಳಿಂದ ರಹಿತವಾಗಿ ಕೊಡುವುದು ಅದು ಅನಾದರ ನಾಮದ ಅತಿಚಾರವಿದೆ. ೪)ಪಾತ್ರರಿಗೆ ಭೋಜನ ಮೊದಲಾದುವನ್ನು ಕೊಡುವ ಸಲುವಾಗಿ ನಿರ್ಣಯ ಮಾಡಿ, ಅದನ್ನು ಅನ್ಯ ಕಾರ್ಯಗಳಲ್ಲಿ ತೊಡಗಿ ಮರೆತು ಹೋಗುವುದು, ಕೊಡಲು ಯೋಗ್ಯವಾದ ದ್ರವ್ಯವನ್ನು ಹಾಗೂ ವಿಧಿಯನ್ನು ಮರೆತು ಹೋಗುವುದು ಅದು ಅವಿಸ್ಮರಣ ನಾಮದ ಅತಿಚಾರವಿದೆ. ೫) ಅನ್ಯ ದಾನಿಗಳೊಡನೆ ಈರ್ಷೆ ಮಾಡಿ ದಾನ ಕೊಡುವುದು ಅದು ಮತ್ಸರ ನಾಮದ ಅತಿಚಾರವಿದೆ.

ಈ ಪ್ರಕಾರ ಯಾವ ದಾನ ವೈಯಾವೃತ್ಯವಿದೆ ಅದರ ಐದು ಅತಿಚಾರಗಳನ್ನು ನಿವಾರಿಸಿ ಅತ್ಯಂತ ವಿನಯಪೂರ್ವಕವಾಗಿ ಶುದ್ಧ ದಾನ ಕೊಡಬೇಕಾಗುವುದು.

**ಈ ಪ್ರಕಾರ ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡ ಶ್ರಾವಕಾಚಾರದ ಪಂ. ಸದಾಸುಖಜೀಯವರು ಬರೆದ ಢೂಂಡಾರಿ ಭಾಷಾ ಟೀಕೆಯಲ್ಲಿ ಐದನೆಯ ಶಿಕ್ಷಾವ್ರತ ಅಧಿಕಾರವು ಸಮಾಪ್ತವಾಯಿತು.**

೬

# ಭಾವನೆ ಅಧಿಕಾರ

ಈಗ ಶ್ರೀ ಪರಮಗುರುಗಳ ಕೃಪೆಯಿಂದ ಪರಮಾಗಮದ ಆಜ್ಞೆಯಂತೆ ಭಾವನೆಯೆಂಬ ಹೆಸರಿನ ಮಹಾಧಿಕಾರ ಬರೆಯುತ್ತೇವೆ. ಸಮಸ್ತ ಧರ್ಮದ ಮೂಲವು ಭಾವನೆಯಿದೆ. ಭಾವನೆಯಿಂದಲೇ ಪರಿಣಾಮದ ಉಜ್ವಲತೆಯಾಗುತ್ತದೆ. ಭಾವನೆಯಿಂದಲೇ ಮಿಥ್ಯಾದರ್ಶನದ ಅಭಾವವಾಗುತ್ತದೆ, ಭಾವನೆಯಿಂದ ವ್ರತಗಳಲ್ಲಿ ಪರಿಣಾಮವು ದೃಢವಾಗುತ್ತದೆ, ಭಾವನೆಯಿಂದ ವೀತರಾಗತೆಯ ವೃದ್ಧಿಯಾಗುತ್ತದೆ. ಭಾವನೆಯಿಂದ ಅಶುಭಧ್ಯಾನದ ಅಭಾವವಾಗಿ ಶುಭಧ್ಯಾನದ ವೃದ್ಧಿಯಾಗುತ್ತದೆ. ಭಾವನೆಯಿಂದ ಆತ್ಮನ ಅನುಭವವಾಗುತ್ತದೆ. ಇವೇ ಮೊದಲಾದ ಸಾವಿರಾರು ಗುಣಗಳನ್ನು ಉತ್ಪನ್ನ ಮಾಡುವಂಥದು ಭಾವನೆಯೇ ಇದೆಯೆಂದು ತಿಳಿದುಕೊಂಡು ಭಾವನೆಯನ್ನು ಒಂದು ಕ್ಷಣವು ಕೂಡ ಬಿಟ್ಟು ಕೊಡಬಾರದು.

ಈಗ ಪ್ರಾರಂಭದಲ್ಲಿ ಐದು ವ್ರತಗಳ ಇಪ್ಪತ್ತೈದು ಭಾವನೆಗಳನ್ನು ತಿಳಿದುಕೊಳ್ಳಬೇಕಾಗುವುದು.

**ಅಹಿಂಸಾಣುವ್ರತದ ಐದು ಭಾವನೆಗಳು :** ಅಹಿಂಸಾಣುವ್ರತದ ಧಾರಣ ಮಾಡುವಂಥ ಗೃಹಸ್ಥರಿಗೆ ಐದು ಭಾವನೆಗಳ ವಿಸ್ಮರಣೆಯಾಗುವುದಿಲ್ಲ.

೧) ಮನಸ್ಸಿನಲ್ಲಿ ಅನ್ಯಾಯದ ವಿಷಯಗಳನ್ನು ಭೋಗಿಸುವ ಇಚ್ಛೆಯ ಅಭಾವ ಮಾಡಿ, ಮಿಥ್ಯಾ ಸಂಕಲ್ಪಗಳನ್ನು ಬಿಟ್ಟುಕೊಟ್ಟು ತಮ್ಮ ಉಚ್ಚತೆಯನ್ನು ಇಚ್ಛಿಸದಿರುವುದು ; ಅನ್ಯ ಜೀವರುಗಳಿಗೆ ವಿಘ್ನ, ಇಷ್ಟವಿಯೋಗ, ಮಾನಹಾನಿ, ತಿರಸ್ಕಾರ, ಧನದ ಹಾನಿ ಮತ್ತು ರೋಗಾದಿಗಳನ್ನು ಬಯಸದಿರುವುದು ಅದು **ಮನೋಗುಪ್ತಿ** ಭಾವನೆಯಿದೆ.

೨) ಹಾಸ್ಯದವಚನ, ವಿವಾದದ ವಚನ, ಅಭಿಮಾನದ ವಚನಗಳನ್ನಾಡದಿರುವುದು ; ಹಿಂಸೆಯ, ಕಲಹದ, ಅಪಯಶದ ಕಾರಣರೂಪವಾದ ವಚನಗಳನ್ನು ಆಡದಿರುವುದು ಅದು **ವಚನಗುಪ್ತಿ** ಭಾವನೆಯಿದೆ.

೩) ತ್ರಸಜೀವಗಳ ವಿರಾಧನೆಯನ್ನು ನಿವಾರಿಸಿ, ಹಸಿರು ಹುಲ್ಲು, ಕೊಳಚೆ ಮೊದಲಾದುವನ್ನು ತ್ಯಜಿಸಿ, ನೋಡಿ ಶೋಧಿಸಿ ಗಮನ ಮಾಡುವುದು, ಹತ್ತುವುದು, ಇಳಿಯುವುದು, ಲಂಘಿಸುವುದು; ತುಂಬ ಯತ್ನಪೂರ್ವಕ ತಮ್ಮ ಸಾಮರ್ಥ್ಯದ ಅನುಸಾರ ತಮ್ಮ ಕೈ-ಕಾಲು ಹಾಗೂ ಅಂಗ-ಉಪಾಂಗಗಳಲ್ಲಿ ನೋವು ಉತ್ಪನ್ನವಾಗದಂತೆ ಮಾಡುವುದು ಮತ್ತು ಅನ್ಯ ಜೀವಗಳಿಗೆ ಕೂಡ ಬಾಧೆಯಾಗದ ಹಾಗೆ ತುಂಬ ತಾಳ್ಮೆಯಿಂದ ಚಲನ-ವಲನ ಮಾಡುವುದು ಅದು **ಈರ್ಯಾಸಮಿತಿ** ಭಾವನೆಯಿದೆ.

೪) ಅನ್ನ, ನೀರು, ಬಟ್ಟೆ, ಆಸನ, ಶಯ್ಯೆ, ಕಲ್ಲು, ಕಟ್ಟಿಗೆ, ಮಣ್ಣು ಮೊದಲಾದ ವಸ್ತುಗಳು ಹಾಗೂ ತಾಮ್ರ, ಹಿತ್ತಾಳೆ, ಕಂಚು, ಲೋಹ, ಚಿನ್ನ, ಬೆಳ್ಳಿ ಇತ್ಯಾದಿಯ ಪಾತ್ರೆಗಳು, ಎಣ್ಣೆ-ತುಪ್ಪ ಮೊದಲಾದ ರಸಗಳು ಹೀಗೆ ಗೃಹಸ್ಥನಿಗೆ ಎಷ್ಟು ಪರಿಗ್ರಹಗಳಿವೆ ಅವೆಲ್ಲವನ್ನು ಇತರ ಜೀವಗಳ ಘಾತವಾಗದಂತೆ ಯತ್ನಪೂರ್ವಕ ಇಡಬೇಕು-ತೆಗೆದುಕೊಳ್ಳಬೇಕು. ತಮ್ಮ ಶರೀರದ ಮೇಲೆ ಬೀಳುವುದರಿಂದ ಕಷ್ಟವಾಗಬಾರದು, ಯಾರದಾದರೂ ಕೆಡಕಾಗುವುದರಿಂದ-ಹಾನಿಯಾಗುವುದರಿಂದ ತಮಗೆ ಹಾಗೂ ಇತರರಿಗೆ ಕಷ್ಟವಾಗಬಾರದು. ಇತರ ಜೀವಗಳ ಹಿಂಸೆಯಾಗುವ ರೀತಿಯಲ್ಲಿ ವಸ್ತುವನ್ನು ಇಡುವುದು, ತೆಗೆದುಕೊಳ್ಳುವುದು, ಎಳೆದುಕೊಳ್ಳುವುದು ಮೊದಲಾದುವನ್ನು ಮಾಡದಿರುವುದು ಅದು **ಆದಾನನಿಕ್ಷೇಪಣ ಸಮಿತಿ** ಭಾವನೆಯಿದೆ.

೫) ಗೃಹಸ್ಥನು ಉಣ್ಣುವಾಗ-ಕುಡಿಯುವಾಗ ಅಂತರಂಗದಲ್ಲಂತೂ ದ್ರವ್ಯ-ಕ್ಷೇತ್ರ-ಕಾಲ-ಭಾವದ ಯೋಗ್ಯತೆ-ಅಯೋಗ್ಯತೆಯ ವಿಚಾರ ಮಾಡಿ ಸರಿಯಾಗಿ ನೋಡಿ ಸ್ವೀಕರಿಸಬೇಕು. ಹೊರಗೆ ಬೆಳಕಿನಲ್ಲಿ ಹಗಲು ಹೊತ್ತಿನಲ್ಲಿ ಕಣ್ಣುಗಳಿಂದ ನೋಡಿ ಪುನಃ ಪುನಃ ಶೋಧಿಸಿ, ತುಂಬ ತಾಳ್ಮೆಯಿಂದ ತುತ್ತನ್ನು ಬಾಯಿಯಲ್ಲಿಟ್ಟು ತಿನ್ನಬೇಕು. ಆತುರದಿಂದ ವಿಚಾರ ಮಾಡದೆ, ನೋಡದೆ-ಶೋಧಿಸದೆ ಭೋಜನ ಮಾಡದಿರುವುದು ಅದು **ಆಲೋಕಿತಪಾನ ಭೋಜನ ಭಾವನೆ**ಯಿದೆ.

ಈ ಪ್ರಕಾರ ಅಹಿಂಸಾಣುವ್ರತದ ಐದು ಭಾವನೆಗಳನ್ನು ನಿರಂತರ ಭಾವಿಸಬೇಕಾಗುವುದು, ಮರೆತು ಹೋಗಬಾರದು.

**ಸತ್ಯ ಅಣುವ್ರತದ ಐದು ಭಾವನೆಗಳು :** ಈಗ ಸತ್ಯ ಅಣುವ್ರತದ ಕ್ರೋಧತ್ಯಾಗ, ಲೋಭತ್ಯಾಗ, ಭೀರುತ್ವತ್ಯಾಗ, ಹಾಸ್ಯತ್ಯಾಗ ಮತ್ತು ಅನುವೀಚಿ ಭಾಷಣ ತ್ಯಾಗವೆಂದು ಐದು ಭಾವನೆಗಳನ್ನು ಹೇಳುತ್ತಾರೆ.

೧) ಸತ್ಯ ಅಣುವ್ರತವನ್ನು ಧಾರಣ ಮಾಡುವ ಗೃಹಸ್ಥನು ಕ್ರೋಧ ಮಾಡುವುದರ ತ್ಯಾಗ ಮಾಡುತ್ತಾನೆ. ಒಂದುವೇಳೆ ಕ್ರೋಧ ವಶನಾಗಿ ಮಾತನಾಡುತ್ತಿದ್ದರೆ ಅವನು ಸತ್ಯ ಹೇಳುವ ಸಾಧ್ಯತೆಯೇ ಇಲ್ಲದಿರುವುದರಿಂದ ಕ್ರೋಧದ ತ್ಯಾಗವಾದ ನಂತರವೇ ಸತ್ಯವಿರುತ್ತದೆಂದು ತಿಳಿದುಕೊಳ್ಳಬೇಕು. ಗೃಹಸ್ಥನಿಗೆ ಕರ್ಮದ ಉದಯದಿಂದ ಬಾಹ್ಯದಲ್ಲಿ ಯಾವುದಾದರೂ ವಿಪರೀತ ನಿಮಿತ್ತವು ದೊರಕುವುದರಿಂದ ಕ್ರೋಧವು ಉತ್ಪನ್ನವಾಗುತ್ತಿದ್ದರೆ ಈಗ ನನ್ನ ಪರಿಣಾಮದಲ್ಲಿ ಕ್ರೋಧಜನಿತ ತೀವ್ರತೆಯಿರುವುದರಿಂದ ಈ ಸಮಯದಲ್ಲಿ ನಾನು ಮಾತನಾಡದೇ ಮೌನವಾಗಿರುವುದೇ ಚೆನ್ನಾಗಿದೆಯೆಂದು ವಿಚಾರ ಮಾಡಬೇಕಾಗುವುದು. ಒಂದು ವೇಳೆ ಮಾತನಾಡುವುದನ್ನು ನಿಲ್ಲಿಸಿದೆನೆಂದರೆ ಕಷಾಯ ವಿಸಂವಾದವು ವೃದ್ಧಿಸಲಾರದು, ಮತ್ತು ನನ್ನ ಕ್ಷಮಾಗುಣವೂ ಕೆಡಲಾರದು. ಆದುದರಿಂದ ಎಲ್ಲಿಯವರೆಗೆ ನನ್ನ ಹೃದಯದಲ್ಲಿ ಉತ್ಪನ್ನವಾದ ಕ್ರೋಧಜನ್ಯ ಅಗ್ನಿಯ ಉಪಶಮವಾಗುವುದಿಲ್ಲ, ಅಲ್ಲಿಯವರೆಗೆ ವಚನಗಳ ಪ್ರವೃತ್ತಿಯನ್ನು ಮಾಡಬಾರದೆಂದು ದೃಢಸಂಕಲ್ಪ ಮಾಡುವುದು ಅದು **ಕ್ರೋಧ ತ್ಯಾಗ** (ಮೌನಗ್ರಹಣ) ಭಾವನೆಯಿದೆ.

೨) ಲೋಭದ ಕಾರಣ ಸತ್ಯ ವಚನಗಳನ್ನು ಆಡುವ ಸಾಧ್ಯತೆಯಿಲ್ಲ. ಆದುದರಿಂದ ಅನ್ಯಾಯಪೂರ್ವಕವಾದ ಲೋಭವನ್ನು ಬಿಟ್ಟುಕೊಡುವುದು ಅದು **ಲೋಭತ್ಯಾಗ** ಭಾವನೆಯಿದೆ.

೩) ಭಯದ ವಶೀಭೂತನಾದವನು ಸತ್ಯವಚನ ಆಡುವ ಸಾಧ್ಯತೆಯಿಲ್ಲ. ಭಯದ ತ್ಯಾಗ ಮಾಡಿದ ನಂತರವೇ ಸತ್ಯವಚನ ಹೇಳಬಹುದಾಗಿದೆ. ಆದುದರಿಂದ ಭಯದ ತ್ಯಾಗ ಮಾಡುವುದು ಅದು **ಭೀರುತ್ವತ್ಯಾಗ** ಭಾವನೆಯಿದೆ.

೪) ಹಾಸ್ಯದಲ್ಲಿ ಸತ್ಯವಚನಗಳನ್ನು ಆಡುವ ಸಾಧ್ಯತೆಯಿಲ್ಲ. ಆದುದರಿಂದ ಅಣುವ್ರತ ಧಾರಿಯು ಹಾಸ್ಯ ಮಾಡುವುದನ್ನು ದೂರದಿಂದಲೇ ತ್ಯಾಗಮಾಡಿ ಬಿಡುತ್ತಾನೆ, ಅದು **ಹಾಸ್ಯತ್ಯಾಗ** ಭಾವನೆಯಿದೆ.

೫) ಜಿನಸೂತ್ರಗಳಿಗೆ ವಿರುದ್ಧವಾದ ವಚನಗಳನ್ನು ಹೇಳಬಾರದು. ಜಿನಸೂತ್ರಗಳಿಗೆ ಅನುಕೂಲವಾದ ವಚನಗಳನ್ನು ಆಡುವುದು ಅದು **ಅನುವೀಚಿಭಾಷಣತ್ಯಾಗ** ಭಾವನೆಯಿದೆ.

ಯಾರು ತಮ್ಮ ಸತ್ಯ ಅಣುವ್ರತದ ಪಾಲನೆ ಮಾಡಬಯಸುತ್ತಾರೆ ಅವರು ಕ್ರೋಧದ ಕಾರಣಗಳನ್ನು ತಡೆಯುತ್ತಾರೆ. ಅನೇಕ ಅಸತ್ಯಗಳನ್ನು ಮಾತನಾಡಬೇಕಾಗುವಂಥ ಲೋಭವನ್ನು ಬಿಟ್ಟು ಕೊಡುತ್ತಾರೆ. ಯಾವುದರಿಂದ ಲೋಕ ವಿರುದ್ಧ, ಧರ್ಮವಿರುದ್ಧವಾದ ವಚನಗಳಲ್ಲಿ ಪ್ರವೃತ್ತಿಯಾಗುತ್ತದೆ ಅಂಥ ಧನವು ಹೊರಟು ಹೋಗುವುದರ ಭಯ, ಶರೀರವು ಕೆಟ್ಟು ಹೋಗುವುದರ ಕುರಿತು ಭಯಪಡುವುದಿಲ್ಲ. ತಮ್ಮ ಸತ್ಯವ್ರತದ ರಕ್ಷಣೆ ಮಾಡಬಯಸುವವರು ಇತರರ ಹಾಸ್ಯವನ್ನೆಂದೂ ಮಾಡುವುದಿಲ್ಲ ಮತ್ತು ಜಿನಸೂತ್ರದ ವಿರುದ್ಧವಾದ ವಚನಗಳನ್ನೆಂದೂ ಹೇಳುವುದಿಲ್ಲ.

**ಅಚೌರ್ಯ ಅಣುವ್ರತದ ಐದು ಭಾವನೆಗಳು :** ಅಚೌರ್ಯ ಅಣುವ್ರತದಲ್ಲಿ ಶೂನ್ಯಾಗಾರ, ವಿಮೋಚಿತಾವಾಸ, ಪರೋಪರೋಧಾಕರಣ, ಭೈಕ್ಷ್ಯಶುದ್ಧಿ ಮತ್ತು ಸಧರ್ಮಾವಿಸಂವಾದವೆಂದು ಐದು ಭಾವನೆಗಳಿವೆ. ಅಚೌರ್ಯ ಅಣುವ್ರತವನ್ನು ಧರಿಸಿದ ಗೃಹಸ್ಥನು ಈ ಐದು ಭಾವನೆಗಳನ್ನು ನಿರಂತರವಾಗಿ ಭಾವಿಸುತ್ತಾನೆ.

೧) ವ್ಯಸನೀ, ದುಷ್ಟ, ತೀವ್ರಕಷಾಯೀ ಹಾಗೂ ಜಗಳಕಾಯುವಂಥ ಮನುಷ್ಯರಿಂದ ರಹಿತವಾದ ಮನೆಯಲ್ಲಿ ವಾಸಮಾಡುವ ಭಾವವಿಡಬೇಕಾಗುವುದು. ತೀವ್ರ ಕಷಾಯಿಯಾದ ದುಷ್ಟರ ನಿಕಟದಲ್ಲಿರುವುದರಿಂದ ಪರಿಣಾಮದ ಶುದ್ಧತೆಯು ನಷ್ಟವಾಗಿ ಹೋಗುತ್ತದೆ, ದುರ್ಧ್ಯಾನವು ಪ್ರಕಟವಾಗಿಬಿಡುತ್ತದೆ. ಆದುದರಿಂದ ಪಾಪಿಗಳಿಂದ ಶೂನ್ಯವಿರುವ

ಮನೆಯಲ್ಲಿ ವಾಸಮಾಡುವುದೇ **ಶೂನ್ಯಾಗಾರ** ಭಾವನೆಯಿದೆ. ೨) ಯಾವ ಮನೆಯಲ್ಲಿ ಕಲಹವಿರುವುದಿಲ್ಲ ಅಲ್ಲಿ ನಿರಾಕುಲವಾಗಿರುವುದು ಅದು **ವಿಮೋಚಿತಾವಾಸ** ಭಾವನೆಯಿದೆ. ೩) ಯಾರ ಮನೆಯಲ್ಲಿ ಬಲವಂತದಿಂದ ನುಗ್ಗಿ ಕುಳಿತುಕೊಳ್ಳದಿರುವುದು ಅದು **ಪರೋಪರೋಧಾಕರಣ** ಭಾವನೆಯಿದೆ. ೪) ಅನ್ಯಾಯ-ಅಭಕ್ಷ್ಯಗಳನ್ನು ಬಿಟ್ಟುಕೊಟ್ಟು ಭೋಗಾಂತರಾಯ ಕ್ಷಯೋಪಶಮದ ಅನುಸಾರ ಯಾವ ಸರಸ-ನೀರಸ ಭೋಜನವು ದೊರಕುತ್ತದೆ ಅದರಲ್ಲಿಯೇ ಸಮತೆಯನ್ನಿಟ್ಟುಕೊಂಡು ಆಸಕ್ತಿಯಿಂದ ರಹಿತರಾಗಿ ಭೋಜನ ಮಾಡುವುದು ಅದು **ಭೈಕ್ಷ್ಯಶುದ್ಧಿ** ಭಾವನೆಯಿದೆ. ೫) ಸಾಧರ್ಮಿ ಪುರುಷರುಗಳ ಜತೆಯಲ್ಲಿ ವಿಸಂವಾದ ಮಾಡದಿರುವುದು ಅದು **ಸಧರ್ಮಾವಿಸಂವಾದ** ಭಾವನೆಯಿದೆ.

ಈ ಪ್ರಕಾರ ಅಚೌರ್ಯ ಅಣುವ್ರತವನ್ನು ಧರಿಸಿದವರು ಈ ಭಾವನೆಗಳನ್ನು ಭಾವಿಸುವುದು ಯೋಗ್ಯವಿದೆ.

**ಬ್ರಹ್ಮಚರ್ಯಅಣುವ್ರತದ ಐದು ಭಾವನೆಗಳು :** ಬ್ರಹ್ಮಚರ್ಯ ಅಣುವ್ರತದಲ್ಲಿ ಸ್ತ್ರೀರಾಗ ಕಥಾಶ್ರವಣದ ತ್ಯಾಗ ಸ್ತ್ರೀಯರುಗಳ ಮನೋಹರವಾದ ಅಂಗಗಳನ್ನು ನೋಡುವುದರ ತ್ಯಾಗ, ಪೂರ್ವಕಾಲದಲ್ಲಿ ಭೋಗಿಸಿದ ಭೋಗಗಳನ್ನು ಸ್ಮರಣೆ ಮಾಡುವುದರ ತ್ಯಾಗ, ಪೌಷ್ಟಿಕ ರಸದ ಭೋಜನ ಮತ್ತು ಇಂದ್ರಿಯಗಳಲ್ಲಿ ದರ್ಪವನ್ನುಂಟು ಮಾಡುವಂಥ ಭೋಜನದತ್ಯಾಗ ಹಾಗೂ ತಮ್ಮ ಶರೀರವನ್ನು ಅಲಂಕರಿಸಿಕೊಳ್ಳುವುದರ ತ್ಯಾಗವೆಂದು ಇವು ಐದು ಭಾವನೆಗಳಿವೆ.

೧) ಇತರ ಸ್ತ್ರೀಯರೊಡನೆ ರಾಗವನ್ನುತ್ಪನ್ನ ಮಾಡುವಂಥ **ಕಥೆ-ವಾರ್ತೆಗಳ ಶ್ರವಣದ ತ್ಯಾಗ** ಮಾಡುವ ಭಾವನೆಯನ್ನು ಭಾವಿಸಬೇಕಾಗುವುದು. ೧) ಇತರರ ಸ್ತ್ರೀಯರುಗಳ ಮನೋಹರವಾದ ಅಂಗ, ಎದೆ, ತೊಡೆ, ಮುಖ, ಕಣ್ಣು ಮೊದಲಾದವುಗಳ **ಸೌಂದರ್ಯವನ್ನು ರಾಗಭಾವದಿಂದ ನೋಡುವುದರ ತ್ಯಾಗ** ಮಾಡಬೇಕಾಗುವುದು. ೩) ಅಣುವ್ರತ ಗ್ರಹಣ ಮಾಡುವ ಮೊದಲಿನ ಅವಸ್ಥೆಯಲ್ಲಿ **ಭೋಗಿಸಿದ ಭೋಗಗಳನ್ನು ಸ್ಮರಣೆಗೆ ತಂದುಕೊಳ್ಳಬಾರದು.** ೪) ಇಷ್ಟವೂ-ಪುಷ್ಟವೂ **ಕಾಮೋದ್ದೀಪಕವೂ ಆದ ಭೋಜನದ ತ್ಯಾಗ** ಮಾಡಬೇಕಾಗುವುದು. ೫) ತಮ್ಮ ಶರೀರವನ್ನು ಅಂಜನ, ಮಜ್ಜನ, ಪನ್ನೀರು, ಎಣ್ಣೆ, ಸುಗಂಧದೆಣ್ಣೆ ಮೊದಲಾದ ಕಾಮವಿಕಾರವನ್ನುತ್ಪನ್ನ ಮಾಡುವಂಥ ವಸ್ತ್ರ ಆಭರಣ ಮೊದಲಾದವುಗಳ ತ್ಯಾಗ ಮಾಡುವ ಭಾವನೆ ಭಾವಿಸುವುದು ಅದು **ಸ್ವಶರೀರ ಸಂಸ್ಕಾರತ್ಯಾಗ** ಭಾವನೆಯಿದೆ.

ಈ ಪ್ರಕಾರ ಬ್ರಹ್ಮಚರ್ಯ ಅಣುವ್ರತವನ್ನು ಧರಿಸಿದ ಗೃಹಸ್ಥರು ಈ ಐದು ಭಾವನೆ ಭಾವಿಸುವುದು ಯೋಗ್ಯವಿದೆ.

**ಪರಿಗ್ರಹಪರಿಮಾಣ ಅಣುವ್ರತದ ಐದು ಭಾವನೆಗಳು :** ಈಗ ಪರಿಗ್ರಹ ಪರಿಮಾಣಾಣುವ್ರತದ ಐದು ಭಾವನೆಗಳನ್ನು ಹೇಳುತ್ತಾರೆ. ೧) ಪರಿಗ್ರಹಪರಿಮಾಣಾಣುವ್ರತವನ್ನು ಧಾರಣ ಮಾಡುವಂಥ ಗೃಹಸ್ಥನು ಅಧಿಕ ಪಾಪ-ಬಂಧದ ಕಾರಣವಾದ ಅನ್ಯಾಯರೂಪದ **ಅಭಕ್ಷ್ಯ** ಪದಾರ್ಥಗಳ ತ್ಯಾಗವನ್ನಂತೂ ಯಾವಜ್ಜೀವನ ಮಾಡಬೇಕಾಗುತ್ತದೆ. ೨) ಅಂತರಾಯ ಕರ್ಮದ ಕ್ಷಯೋಪಶಮದ ಪ್ರಕಾರ ಪ್ರಾಪ್ತವಾದ ಪಂಚೇಂದ್ರಿಯ ವಿಷಯಗಳಲ್ಲಿ ಸಂತೋಷಧಾರಣ ಮಾಡಿ ಮನೋಜ್ಞ **ವಿಷಯಗಳಲ್ಲಿ ಅಧಿಕರಾಗ** ಮಾಡಬಾರದು. ೩) ಉಕ್ತ ಮನೋಜ್ಞ ವಿಷಯಗಳಲ್ಲಿ ಅತ್ಯಂತ **ಆಸಕ್ತರಾಗಬಾರದು.** ಮನೋಜ್ಞವಿಲ್ಲದ ಸುಂದರವಿಲ್ಲದ ಪ್ರಾಪ್ತ ವಿಷಯಗಳಲ್ಲಿ ದ್ವೇಷ ಮಾಡಬಾರದು. ೫) ಇತರ ಜೀವರುಗಳ ಸುಂದರ ವಿಷಯಭೋಗಗಳನ್ನು ನೋಡಿ ಅವರ ಭೋಗವನ್ನಪೇಕ್ಷಿಸುವ **ಲಾಲಸೆ** ಮಾಡಬಾರದು.

ಇವು ಪರಿಗ್ರಹಪರಿಮಾಣ ವ್ರತದ ಐದು ಭಾವನೆಗಳಿವೆ. ಐದು ಪಾಪಗಳು ಮಹಾನಿಂದ್ಯರೂಪವಿವೆ. ಅವುಗಳ ತ್ಯಾಗದ ಭಾವನೆಯನ್ನೂ ಭಾವಿಸಬೇಕಾಗುವುದು.

**ಹಿಂಸೆಯ ತ್ಯಾಗದ ಪ್ರೇರಣೆ :** ಈ ಹಿಂಸೆ ಮೊದಲಾದ ಐದು ಪಾಪಗಳಿದ್ದು ಅವುಗಳಿಂದ ಮಹಾ ದುಃಖವಾಗುವುದರಿಂದ ಈ ಲೋಕದಲ್ಲಿ ತಮ್ಮದು ಕೆಡಕಾಗುತ್ತದೆ ಮತ್ತು ಪರಲೋಕದಲ್ಲಿ ಅನೇಕ ಭವಗಳೊಳಗೆ ಮಹಾದುಃಖವನ್ನು ಭೋಗಿಸಬೇಕಾಗುತ್ತದೆಯೆಂದು ತಿಳಿದುಕೊಂಡು ಪಾಪಗಳಿಂದ ಭಯಭೀತರಾಗಿ ಅವನ್ನು ದೂರದಿಂದಲೇ ತ್ಯಾಗ ಮಾಡಿ ಬಿಡಬೇಕಾಗುವುದು.

ಹಿಂಸೆ ಮಾಡುವಂಥವನು ನಿರಂತರ ಭಯಭೀತನಾಗಿಯೇ ಇರುತ್ತಾನೆ. ಅವನು ಯಾವನನ್ನು ಹೊಡೆಯುತ್ತಾನೆ. ಅವನೊಡನೆ ಅನೇಕ ಭವಗಳವರೆಗೆ ವೈರದ ಸಂಸ್ಕಾರವನ್ನು ಕಟ್ಟಿಕೊಂಡು ಹೋಗುತ್ತಾನೆ. ಯಾವನನ್ನು ಹೊಡೆಯುತ್ತಾನೆ ಅವನ ಸ್ತ್ರೀ, ಪುತ್ರ, ಪೌತ್ರ, ಮಿತ್ರ, ಕುಟುಂಬದವರು ವೈರಿಗಳಾಗಿ ಹೋಗುತ್ತಾರೆ. ಮತ್ತು ಸೇಡು ತೀರಿಸಿಕೊಳ್ಳುತ್ತಾರೆ. ತಿರ್ಯಂಚಗಳ ಮೇಲೆ ಕೂಡ ಯಾರು ಕೋಲು, ಕಲ್ಲು, ಶಸ್ತ್ರ ಬಾರಕೋಲ ಮೊದಲಾದುವನ್ನು ಬೀಸುತ್ತಾರೆ ಅವರ ವೈರದ ಸೇಡನ್ನು ತೀರಿಸಿಕೊಳ್ಳದೆ ತಿರ್ಯಂಚಗಳು ಕೂಡ ಬಿಡುವುದಿಲ್ಲ. ಆನೆ,ಕುದುರೆ, ಸರ್ಪ, ಒಂಟೆಗಳು ಅಧಿಕ ದಿವಸದವರೆಗೆ ವೈರಧಾರಣ ಮಾಡಿ ಸೇಡು ತೀರಿಸಿಕೊಳ್ಳುತ್ತವೆ, ಕೊಂದು ಹಾಕುತ್ತವೆ. ಇತರರನ್ನು ಹೊಡೆಯುವಂಥವನು ಜಗತ್ತಿನಲ್ಲಿ ನಿಂದ್ಯನಾಗುತ್ತಾನೆ ಪಾಪಿಯೆಂದು ಕರೆಸಿಕೊಳ್ಳುತ್ತಾನೆ. ಎಲ್ಲರೊಡನೆ ಪ್ರೀತಿಯು ಸಮಾಪ್ತವಾಗಿ ಹೋಗುತ್ತದೆ.

ಇವನು ಯಾರನ್ನು ಹೊಡೆಯುತ್ತಾನೆ ಅವರೂ ಇವನನ್ನು ಹೊಡೆಯುತ್ತಾರೆ. ದೊರೆಯಿಂದ ತೀವ್ರ ದಂಡನೆಯಾಗುತ್ತದೆ; ಕೈ-ಕಾಲು, ಮೂಗುಗಳನ್ನು ಕತ್ತರಿಸಿ ಹಾಕುತ್ತಾರೆ, ದೊರೆಗಳು ಸರ್ವಸ್ವವನ್ನು ದೋಚಿಕೊಳ್ಳುತ್ತಾರೆ. ಅತಿಶಯ ಅವಮಾನ, ಕತ್ತೆಯ ಆರೋಹಣ ಮೊದಲಾದ ತೀವ್ರ ದಂಡನೆಯನ್ನಿಲ್ಲಿ ಭೋಗಿಸಿ, ಹೆಚ್ಚು ಕಾಲದವರೆಗೆ ನರಕಾದಿ ದುರ್ಗತಿಗಳಲ್ಲಿ ಅನೇಕ ಪ್ರಕಾರದ ತಾಡನ, ಮಾರನ, ಛೇದನ, ಭೇದನ, ವೈತರಣೀನದಿಯ ಸ್ನಾನ ಮೊದಲಾದ ಅಸಂಖ್ಯಾತ ದುಃಖಗಳನ್ನು ಭೋಗಿಸಿ, ತಿರ್ಯಂಚದಲ್ಲಿ ಮನುಷ್ಯದಲ್ಲಿ ತೀವ್ರರೋಗ, ದಾರಿದ್ರ್ಯ ಅವಮಾನ ಮೊದಲಾದುವನ್ನು ಭೋಗಿಸುತ್ತ ಅಸಂಖ್ಯಾತ ಅನಂತ ಭವಗಳಲ್ಲಿ ಅನಂತ ದುಃಖಗಳಿಗೆ ಪಾತ್ರನಾಗುತ್ತಾನೆ.

ಯಾರು ಅನ್ಯ ಜೀವಗಳ ಘಾತವನ್ನಂತೂ ಮಾಡುವುದಿಲ್ಲ, ಪ್ರಾಣವನ್ನಂತೂ ತೆಗೆದುಕೊಳ್ಳುವುದಿಲ್ಲ, ಆದರೆ ಅಭಿಮಾನದಿಂದ ಕ್ರೋಧಪೂರ್ವಕ ತನ್ನ ಶರೀರದ ಸಾಮರ್ಥ್ಯದಿಂದ ಅನ್ಯ ಮನುಷ್ಯ, ತಿರ್ಯಂಚ, ಬಾಲಕ, ಸ್ತ್ರೀಯರನ್ನು ಒದೆಯುತ್ತಾರೆ, ಗುದ್ದುತ್ತಾರೆ, ಚಾಟಿಯಿಂದ ಹೊಡೆಯುತ್ತಾರೆ ಮತ್ತು ಕೋಲು, ಬಾರಕೋಲುಗಳಿಂದ ಹೊಡೆಯುತ್ತಾರೆ, ತೊಂದರೆ ಕೊಡುತ್ತಾರೆ ಅವರು ಕೂಡ ಈ ಲೋಕದಲ್ಲಿ ರಾಕ್ಷಸರ ಹಾಗೆ ಭಯಂಕರ ಕಷ್ಟ ಪಡೆಯುವಂಥ ಮಹಾ ಅಪಯಶದ ಭಾಗಿಗಳಾಗಿ ದುರ್ಗತಿಗೆ ಪಾತ್ರರಾಗುತ್ತಾರೆ.

ಯಾರು ನಿರ್ದಯ ಪರಿಣಾಮವುಳ್ಳವರಾಗಿ ಕಷಾಯದ ವಶೀಭೂತರಾಗಿ ವಿಕಲತ್ರಯ ಜೀವಗಳ ಘೋರ ಆರಂಭ ಮೊದಲಾದುವನ್ನು ಮಾಡಿ ಘಾತ ಮಾಡುತ್ತಾರೆ, ಯಾವುದೇ ಪ್ರಯೋಜನವಿಲ್ಲದೆ ವನಸ್ಪತಿಯ ಛೇದನ, ಪೃಥ್ವೀ-ಜಲ-ಅಗ್ನಿ-ವಾಯುಕಾಯ ಜೀವಗಳನ್ನು ಅಜ್ಞಾನಭಾವದಿಂದ ಹಾಗೂ ಪ್ರಮಾದದಿಂದ ವಿರಾಧನೆ ಮಾಡುತ್ತಾರೆ. ಅವರು ಈ ಲೋಕದಲ್ಲಿಯೇ ಜ್ವರ, ಸನ್ನಿಪಾತ, ಆಮವಾತ, ಪಕ್ಷಘಾತ, ಸಂಗ್ರಹಣೀ, ಅತಿಸಾರ, ವಾತ, ಪಿತ್ತ, ಕಫ, ಹುರುಕು, ಕಜ್ಜಿ, ಕೆಮ್ಮು, ಕುಷ್ಟರೋಗ, ಭಗಂದರ, ಮಹಾಮಾರಿ ಮೊದಲಾದ ರೋಗಗಳ ಘೋರ ದುಃಖವನ್ನು ಭೋಗಿಸಿ, ಅನೇಕ ದುರ್ಗತಿಗಳಲ್ಲಿ ರೋಗ, ದರಿದ್ರತೆ, ಇಷ್ಟವಿಯೋಗ ಮೊದಲಾದ ಘೋರ ದುಃಖಗಳಿಗೆ ಪಾತ್ರರಾಗುತ್ತಾರೆ. ಅದಕ್ಕಾಗಿ ಹಿಂಸೆಯಿಂದ ಈ ಲೋಕ ಹಾಗೂ ಪರಲೋಕದಲ್ಲಿ ಘೋರ ದುಃಖರೂಪದ ಫಲವು ದೊರಕುತ್ತದೆಂದು ತಿಳಿದುಕೊಂಡು ಎಲ್ಲ ಪ್ರಕಾರದ ಹಿಂಸೆಯ ತ್ಯಾಗ ಮಾಡುವುದೇ ಶ್ರೇಷ್ಠವಿದೆ.

ಯಾರು ಜೀವಗಳ ಮೇಲೆ ದಯೆಮಾಡಿ ಸಮಸ್ತ ಜೀವಗಳಿಗೆ ಅಭಯದಾನ ಕೊಡುತ್ತಾರೆ, ತಮ್ಮ ಪರಿಣಾಮದಲ್ಲಿ ಜೀವಗಳ ವಿರಾಧನೆಯನ್ನು ಬಯಸುವುದಿಲ್ಲ, ಯತ್ನಾಚಾರದಿಂದ ಪ್ರವರ್ತಿಸುತ್ತಾರೆ, ಪ್ರಮಾದ ತೊರೆದು ಅಹಿಂಸಾ ಧರ್ಮವನ್ನು ಮರೆತುಬಿಡುವುದಿಲ್ಲ ಅವರ ಮಹಿಮೆಯನ್ನು ಇಲ್ಲಿಯೇ ದೇವಗಳು ಮಾಡುತ್ತಾರೆ, ಮನುಷ್ಯರು ಮಾಡುತ್ತಾರೆ, ಪೂಜ್ಯರಾಗಿ ಹೋಗುತ್ತಾರೆ. ಸಮಸ್ತ ಪಾಪಗಳಿಂದ ರಹಿತರಾಗಿ ಸ್ವರ್ಗಲೋಕದಲ್ಲಿ ಮಹರ್ದಿಕ ದೇವತ್ವ ಪಡೆದು, ಮನುಷ್ಯ ಲೋಕದಲ್ಲಿ ವಿದೇಹ ಮೊದಲಾದ ಉತ್ತಮಕ್ಷೇತ್ರಗಳಲ್ಲಿ ಮಹಾನಪ್ರಭಾವನೆಯ ಧಾರಕರಾಗಿ ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ.

**ಅಸತ್ಯವಚನ ತ್ಯಾಗದ ಪ್ರೇರಣೆ :** ಅಸತ್ಯ ವಚನದ ಸ್ವರೂಪವು ಕೇವಲ ದೋಷರೂಪವೇ ಇದೆ, ಅದನ್ನು ಸ್ಪಷ್ಟ ವಿಚಾರ ಮಾಡಿ ನೋಡುವುದು. ಅಸತ್ಯವಾದಿಯ ಪ್ರತೀತಿಯನ್ನು ಯಾರೂ ಮಾಡುವುದಿಲ್ಲ, ತಾಯಿ, ತಂದೆ,

ಪುತ್ರ, ಮಿತ್ರ, ಸ್ತ್ರೀಗೆ ಕೂಡ ಅವನ ಪ್ರತೀತಿಯಿರುವುದಿಲ್ಲ, ಅವನ ಮೇಲೆ ವಿಶ್ವಾಸ ಬರುವುದಿಲ್ಲ, ಎಂದ ಮೇಲೆ ಅನ್ಯರು ಹೇಗೆ ಅವನ ಮೇಲೆ ವಿಶ್ವಾಸವಿಡುವರು ? ಜಗತ್ತಿನಲ್ಲಿ ಎಷ್ಟು ವ್ಯವಹಾರವಿದೆ ಅದೆಲ್ಲವೂ ವಚನದ ಮೂಲಕವೇ ಇದೆ. ಯಾವನು ತನ್ನ ವಚನ ಕೆಡಿಸಿಕೊಂಡಿದ್ದಾನೆ ಅವನು ತನ್ನ ಎಲ್ಲ ವ್ಯವಹಾರವನ್ನು ಕೆಡಿಸಿಕೊಂಡಿದ್ದಾನೆ. ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕೂ ಪುರುಷಾರ್ಥಗಳು ವಚನದ ಮೂಲಕವೇ ನಡೆಯುತ್ತವೆ. ಯಾರ ವಚನವೇ ನಿಂದ್ಯವಾಗಿದೆ ಅವರ ನಾಲ್ಕೂ ಪುರುಷಾರ್ಥಗಳು ನಿಂದ್ಯವಾಗಿ ಹೋಗುತ್ತವೆ.

**ಅಸತ್ಯವಾದಿಯು ಎಲ್ಲರಿಗೂ ಅಪ್ರಿಯನಾಗುತ್ತಾನೆ,** ಅವನು ಮಾಯಾಚಾರಿಯೇ ಇರುತ್ತಾನೆ. ಅಸತ್ಯ ಮತ್ತು ಕಪಟದಲ್ಲಿ ಅವಿನಾಭಾವೀತನವಿದೆ. **ಕುವಚನ ಆಡುವುದು, ನಿಂದೆ ಮಾಡುವುದು, ವಿಕಥೆ, ಆತ್ಮಪ್ರಶಂಸೆ, ಇತರರ ಚಾಡಿ ಹೇಳುವುದು ಇವು ಅಸತ್ಯದ ಪರಿವಾರವಿವೆ.** ಅಸತ್ಯವಾದಿಯು ಇದೇ ಲೋಕದಲ್ಲಿ ಜಿಹ್ವಾಛೇದ, ಸರ್ವಸ್ವಹರಣ, ನಾಲಿಗೆಯ ರೋಗದಿಂದ ದುಃಖಿಯಾಗುವುದು ಇತ್ಯಾದಿ ಘೋರ ದುಃಖ ಪ್ರಾಪ್ತ ಮಾಡಿಕೊಳ್ಳುತ್ತಾನೆ, ಅವನ ಅಪಕೀರ್ತಿಯಾಗುತ್ತದೆ. ಪರಲೋಕದಲ್ಲಿ ನರಕಾದಿಗಳೊಳಗೆ ಪರಿಭ್ರಮಣ, ತಿರ್ಯಂಚಗತಿಯಲ್ಲಿ ವಚನ ರಹಿತತೆ ಮತ್ತು ಮೂಗ, ಕಿವುಡ, ಕುರುಡ, ದರಿದ್ರತೆ, ರೋಗಿತನಗಳು ದೊರಕುತ್ತವೆ. ಮೂರ್ಖತನ, ವಚನರಹಿತತನವಾಗುತ್ತದೆ. ಜಗತ್ತಿನಲ್ಲಿ ದೀನತೆಯ ಆಕ್ರೋಶ ಮಾಡುತ್ತ ತಿರುಗುತ್ತಿದ್ದರೂ ಕೂಡ ಅವನದನ್ನು ಯಾರೂ ಕೇಳುವುದೇ ಇಲ್ಲ, ಆದುದರಿಂದ ಅಸತ್ಯ ವಚನದ ತ್ಯಾಗ ಮಾಡುವುದೇ ಶ್ರೇಷ್ಠವಿದೆ.

ಸತ್ಯದ ಪ್ರಭಾವದಿಂದ ದೇವಲೋಕದಲ್ಲಿ ಗಮನ, ಸ್ವರ್ಗದಲ್ಲಿ ಮಹರ್ದಿಕ ದೇವತನವು ದೊರಕುತ್ತದೆ. ಇಡೀ ಜಗತ್ತು ಅವನ ವಚನಗಳ ಆದರ ಮಾಡುತ್ತದೆ, ಅವನು ಸಮಸ್ತ ಉತ್ತಮ ಶಾಸ್ತ್ರಗಳ ಪಾರಂಗತನಾಗುತ್ತಾನೆ. ಕವಿತ್ವ, ವಾಗ್ಮಿತ್ವ, ಅನೇಕ ಜೀವರುಗಳ ಮೇಲೆ ಉಪಕಾರ ಮಾಡುವಂಥವನಾಗುತ್ತಾನೆ, ಅವನ ಆಜ್ಞೆಯನ್ನು ಲಕ್ಷಾಂತರ ಮನುಷ್ಯರು ಅಂಗೀಕಾರ ಮಾಡುತ್ತಾರೆ. ಹೀಗೆ ಸತ್ಯವಚನದ ಫಲವಿದೆ. ಯಾರು ಪೂರ್ವಜನ್ಮದಲ್ಲಿ ವಚನದ ಉಜ್ವಲತೆಯನ್ನು ಧಾರಣ ಮಾಡಿದ್ದಾರೆ. ಅವರ ವಚನಗಳನ್ನು ಆಲಿಸಲು ಲಕ್ಷಾಂತರ ಮನುಷ್ಯರು ಅಭಿಲಾಷೆ ಪಡುತ್ತಾರೆ. ಇವರು ನಮ್ಮೊಡನೆ ಮಾತನಾಡಿದರೆಂದರೆ ನಾವು ಕೃತಾರ್ಥರಾಗಿ ಹೋಗುತ್ತೇವೆಂದು ಭಾವಿಸುತ್ತಾರೆ. ಅದೆಲ್ಲವು ಸತ್ಯ ವಚನದ ಪ್ರಭಾವವಿದೆ.

**ಚೋರಿ ತ್ಯಾಗದ ಪ್ರೇರಣೆ :** ಈಗ ಚೋರಿಯ ದೋಷಗಳ ಭಾವನೆ ಹೇಳುತ್ತಾರೆ. ಚೋರ ಮನುಷ್ಯನು ಎಲ್ಲರಿಗೆ ಭಯವನ್ನುತ್ಪನ್ನ ಮಾಡುವಂಥವನಿರುತ್ತಾನೆ. ತಾಯಿಯು ಕೂಡ ಕಳವು ಮಾಡುವಂಥ ಪುತ್ರನ ಕುರಿತು ಅತ್ಯಂತ ಭಯಭೀತಳಿರುತ್ತಾಳೆ. ಬಂಧು ಮೊದಲಾದವರಾರೂ ಕಳ್ಳನ ಜತೆ ಬಯಸುವುದಿಲ್ಲ, ಕಳ್ಳನ ಸಂಸರ್ಗದಿಂದ ಕಲಂಕ ತಗಲುತ್ತದೆ. ದೊರೆಯ ಮೂಲಕ ಯಾವುದಾದರೂ ವಿಪತ್ತು ಬರುವ ಸಾಧ್ಯತೆಯಿದೆ, ನಮ್ಮದನ್ನು ಏನಾದರೂ ಕಿತ್ತುಕೊಂಡು ಹೋಗಬಹುದೆಂಬ ಭಯವು ಇದ್ದೇ ಇರುತ್ತದೆ, ಅದು ಬಿಟ್ಟು ಹೋಗುವುದಿಲ್ಲ, ಕಳ್ಳನು ಎಲ್ಲರಿಗಿಂತ ಕೀಳಾಗಿ ಹೋಗುತ್ತಾನೆ. ಕಳ್ಳನನ್ನು ದಂಡಿಸುವಲ್ಲಿ ಯಾರಿಗೂ ದಯೆಯು ಬರುವುದಿಲ್ಲ. ಕಳ್ಳನಲ್ಲಿ ಅಸತ್ಯ, ಕಪಟ, ಮೋಸ ಮೊದಲಾದವು ಅವಶ್ಯವಾಗಿ ಇದ್ದೇ ಇರುತ್ತವೆ.

**ಕಳ್ಳನು ಪಾಪಿಗಳಲ್ಲಿ ಮಹಾಪಾಪಿಯಿದ್ದಾನೆ.** ಕಳ್ಳನ ಸಹಾಯಕರಾರೂ ಇರುವುದಿಲ್ಲ, ತಾಯಿ, ತಂದೆ, ಸ್ತ್ರೀ, ಪುತ್ರ, ಮೊದಲಾದ ಕುಟುಂಬದವರೆಲ್ಲರು ಕಳ್ಳನನ್ನು ತಮ್ಮ ಜತೆಯಲ್ಲಿಟ್ಟುಕೊಳ್ಳುವುದಿಲ್ಲ, ಅವನ ಧೈರ್ಯ ಪ್ರತೀತಿಗಳೆಲ್ಲವು ಹೊರಟು ಹೋಗುತ್ತವೆ. ಯಾರೂ ಅವನಿಗೆ ವಾಸಿಸಲು ಸ್ಥಳ ಕೊಡುವುದಿಲ್ಲ, ಕಳ್ಳನೆಂದು ತಿಳಿದುಕೊಂಡು ಎಲ್ಲರೂ ಅವನನ್ನು ಹೊಡೆಯಲಾರಂಭಿಸುತ್ತಾರೆ. ದೊರೆಯ ಮೂಲಕ ಮಾರನ, ತಾಡನ, ಛೇದನ, ಮರಣದಂಡನೆ ಮೊದಲಾದುವನ್ನು ಕೊಡಲಾಗುತ್ತದೆ. ಹೆಚ್ಚು ಸಮಯ ಕಾರಾಗೃಹದಲ್ಲಿದ್ದು ಕಲಂಕಿತನಾಗಿ ಸತ್ತು ಘೋರ ನರಕದ ಕಷ್ಟವನ್ನು ಅನುಭವಿಸುತ್ತ ಅನಂತ ಕಾಲದವರೆಗೆ ತಿರ್ಯಂಚದಲ್ಲಿ ಹಸಿವೆ, ಬಾಯಾರಿಕೆ, ಭಾರಹೊರುವುದು, ಮಾರನ, ತಾಡನ ಮೊದಲಾದವುಗಳ ದುಃಖವನ್ನು ಅಸಂಖ್ಯಾತ ಭವಗಳವರೆಗೆ ಪಡೆಯುತ್ತಾನೆ. ಮುಂದೆ ಮನುಷ್ಯನಾದರೆ ಅತ್ಯಂತ ನೀಚ,

ದರಿದ್ರ, ರೋಗಿ, ಘೋರಕ್ಷುಧೆ, ತೃಷೆ, ಬಂಧನ, ಕಳವಿನ ಕಲಂಕ ಮೊದಲಾದವುಗಳೊಡನೆ ನಿರಾದರದ ದುಃಖ ಭೋಗಿಸುತ್ತ ಹೆಜ್ಜೆ ಹೆಜ್ಜೆಗೂ ಯಾಚನೆ ಮಾಡುವಂಥ ಘೋರ ದುಃಖಗಳನ್ನು ಭೋಗಿಸುವ ಕ್ರಮ ಪರಂಪರೆಯು ನಡೆಯುತ್ತದೆ. ಆದುದರಿಂದ ಕಳವನ್ನು ದೂರದಿಂದಲೇ ತ್ಯಾಗ ಮಾಡಬೇಕು.

ತಮ್ಮ ಪುಣ್ಯ-ಪಾಪದ ಅನುಸಾರ ದೊರೆತ ವಿಷಯಸಾಮಗ್ರಿಗಳಲ್ಲಿ ಸಂತೋಷಧಾರಣಮಾಡಿ, ಇತರರ ಧನದ ಇಚ್ಚೆಯನ್ನು ಸ್ವಪ್ನದಲ್ಲಿ ಕೂಡ ಮಾಡಬಾರದು. ಇತರರ ಧನವು ಪುಣ್ಯವಿಲ್ಲದೆ ಬರುವುದಿಲ್ಲ. ಪೂರ್ವಜನ್ಮದಲ್ಲಿ ಕುಪಾತ್ರದಾನ ಮಾಡಿದ, ಕುತಪ ಮಾಡಿದುದರ ಫಲದಲ್ಲಿ ಇತರರ ಧನವು ಕೈಗೆ ಬಂದು ಬಿಟ್ಟರೂ ಕೂಡ ಅದನ್ನು ಅದೆಷ್ಟು ದಿವಸಗಳವರೆಗೆ ಭೋಗಿಸುವೆ ? ಮಹಾನ ಸಂಕ್ಲೇಶ ಭಾವದಿಂದ ಅಲ್ಪಾಯುವಿನವರೆಗೆ ಭೋಗಿಸಿ ದುರ್ಗತಿಯಲ್ಲಿ ಹೊರಟು ಹೋಗಬೇಕಾಗುವುದು. ಆದುದರಿಂದ ದೂರದಿಂದಲೇ ಕಳವಿನ ತ್ಯಾಗ ಮಾಡುವುದು ಶ್ರೇಷ್ಠವಿದೆ.

ಯಾರಿಗೆ ಇತರರ ಧನದ ಇಚ್ಚೆಯಿಲ್ಲ, ತಮ್ಮ ಪುಣ್ಯ-ಪಾಪದ ಅನುಸಾರ ದೊರೆತ ಧನದಲ್ಲಿಯೇ ಸಂತೋಷ ಧಾರಣ ಮಾಡಿ ಅನ್ಯಾಯದ ಧನದಲ್ಲಿ ಎಂದೂ ತಮ್ಮ ಚಿತ್ತವನ್ನು ತೊಡಗಿಸುವುದಿಲ್ಲ, ಅವರಿಗೆ ಈ ಲೋಕದಲ್ಲಿ ಕೂಡ ಯಶಸ್ಸು ದೊರಕುತ್ತದೆ, ಪ್ರತೀತಿಯಾಗುತ್ತದೆ, ಎಲ್ಲರಲ್ಲಿ ಆದರವಾಗುತ್ತದೆ. ಯಾರ ಪರಿಣಾಮವು ಇತರರ ಧನದ ಕಡೆಗೆ ಹೋಗುವುದಿಲ್ಲ ತಾವು ಸಂಪಾದಿಸಿದ ಧನದಲ್ಲಿಯೇ ಮಂದರಾಗರೂಪದಿಂದಿರುತ್ತಾರೆ ಅವರಿಗೆ ಒಂದು ಕೂಡ ಕಷ್ಟವು ಬರುವುದಿಲ್ಲ, ಅಶುಭ ಕರ್ಮದ ಬಂಧವಾಗುವುದಿಲ್ಲ, ಎಲ್ಲ ಜನರು ಧನ ಸಂಗ್ರಹಿಸಲು ಬಯಸುತ್ತಾರೆ. ಪರಲೋಕದಲ್ಲಿ ದೇವಲೋಕದ ಅಪರಿಮಿತವಾದ ವಿಭೂತಿಯನ್ನು ಅಸಂಖ್ಯಾತ ಕಾಲದವರೆಗೆ ಭೋಗಿಸಿ, ಮನುಷ್ಯರಲ್ಲಿ ರಾಜಾಧಿರಾಜ, ಮಹಾಮಂಡಲೇಶ್ವರ, ಚಕ್ರವರ್ತಿಯ ವೈಭವವನ್ನು ಭೋಗಿಸಿ ಕ್ರಮದಿಂದ ನಿರ್ವಾಣಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಆದುದರಿಂದ ವೀತರಾಗ ಭಗವಂತರ ವೀತರಾಗ ಧರ್ಮವನ್ನು ಧಾರಣ ಮಾಡಿ, ಅನ್ಯಾಯದ ಧನದ ತ್ಯಾಗ ಮಾಡಿ ಬಿಡುವುದೇ ಶ್ರೇಷ್ಠವಿದೆ.

**ಕುಶೀಲ ತ್ಯಾಗದ ಪ್ರೇರಣೆ :** ಈಗ ಕುಶೀಲದ ದೋಷಗಳ ಭಾವನೆಯನ್ನು ಭಾವಿಸಿ ಕುಶೀಲದಿಂದ ವಿರಕ್ತವಾಗಿ ಹೋಗುವುದೇ ಯೋಗ್ಯವಿದೆ. ಕುಶೀಲ ಪುರುಷನು ಕಾಮದ ಮದದಿಂದ ಉನ್ಮತ್ತನಾಗಿ ಮದೋನ್ಮತ್ತ ಆನೆಯ ಹಾಗೆ ತಿರುಗುತ್ತಾನೆ. ಅವನು ಸ್ತ್ರೀಯರ ರಾಗದಿಂದ ಮೋಸ ಹೋಗಿ ಉಭಯ ಲೋಕಗಳ ವಿಚಾರದಿಂದ ರಹಿತನಾಗಿ ಕಾರ್ಯ-ಅಕಾರ್ಯಗಳನ್ನು ತಿಳಿದುಕೊಳ್ಳುವುದಿಲ್ಲ, ಭಕ್ಷ್ಯ-ಅಭಕ್ಷ್ಯ, ಯೋಗ್ಯ-ಅಯೋಗ್ಯದ ವಿಚಾರದಿಂದ ರಹಿತನಾಗಿರುತ್ತಾನೆ, ಪಾಪ-ಪುಣ್ಯವನ್ನು ತಿಳಿದುಕೊಳ್ಳುವುದಿಲ್ಲ, ನೋಡುವುದಿಲ್ಲ. ಪ್ರತ್ಯಕ್ಷ ವಿಪತ್ತು - ಅಪಕೀರ್ತಿಗಳು ಬರುತ್ತಿರುವುದು ಕಂಡು ಬರುತ್ತಿದ್ದರೂ ಕೂಡ ಕಾಮದ ಕತ್ತಲೆಯಲ್ಲಿ ಅವನು ಕಾಣುವುದಿಲ್ಲ. ಕಾಮದಂಥ ಗಾಡಾಂಧಕಾರವು ಮೂರು ಲೋಕದಲ್ಲಿ ಬೇರೆ ಯಾವುದೂ ಇಲ್ಲ.

**ಕಾಮದಿಂದ ಪೀಡಿತನಾದವನು ಮನುಷ್ಯ ಪರ್ಯಾಯದಲ್ಲಿ ಕೂಡ ಪಶುವಿನ ಸಮಾನನೇ ಇದ್ದಾನೆ. ಪಶುವಿನಲ್ಲಿ ಕಾಮಾಂಧನಲ್ಲಿ ಭೇದವಿಲ್ಲ.** ಕಾಮದಿಂದ ಕುರುಡಾದ ತಿರ್ಯಂಚಗಳು ವನದಲ್ಲಿ ತುಂಡು-ತುಂಡಾಗಿ ಸತ್ತು ಹೋಗುತ್ತವೆ; ಮನುಷ್ಯಜನ್ಮದಲ್ಲೂ ಸತ್ತು ಹೋಗುತ್ತವೆ, ಮತ್ತು ಅನ್ಯವನ್ನು ಸಾಯಿಸಿ ಬಿಡುತ್ತವೆ. ಕಾಮಾಂಧರಿಗೆ ಧರ್ಮ-ಅಧರ್ಮದ ವಿಚಾರವಿರುವುದಿಲ್ಲ. ಲೋಕಲಜ್ಜೆಯು ಮೂಲದಿಂದಲೇ ನಷ್ಟವಾಗಿ ಹೋಗುತ್ತದೆ. ಪರಸ್ತ್ರೀ ಲಂಪಟರನ್ನು ಅನೇಕ ತುಚ್ಛ ಜನರು ಕೂಡ ಹೊಡೆಯುತ್ತಾರೆ, ದೊರೆಗಳ ಮೂಲಕ ಲಿಂಗ ಛೇದನೆ, ಸರ್ವಸ್ವಹರಣ ಮೊದಲಾದ ದಂಡನೆಗಳಿಗೆ ಪ್ರಾಪ್ತರಾಗುತ್ತಾರೆ. ಸತ್ತು ನರಕ ಮೊದಲಾದ ದುರ್ಗತಿಗಳಲ್ಲಿ ಪರಿಭ್ರಮಣ ಮಾಡಿ, ತಿರ್ಯಂಚ-ಮನುಷ್ಯ ಗತಿಗಳಲ್ಲಿ ಘೋರ ದುಃಖವನ್ನು ಭೋಗಿಸುತ್ತ ನೀಚ, ಚಾಂಡಾಲ, ಚರ್ಮಕಾರ, ಧೀವರ, ಮಹಾದರಿದ್ರಿ, ಮಹಾಕುರೂಪಿ ಅಂಗಹೀನ, ಕುರುಡ, ಕುಂಟ, ಮೂಗ, ಕುಬ್ಜ ಇತ್ಯಾದಿ ನೀಚ ಮನುಷ್ಯರಲ್ಲಿ ಉತ್ಪನ್ನವಾಗಿ ಪುನಃ ನರಕ, ಪುನಃ ತಿರ್ಯಂಚ, ಪುನಃ ಕುಮನುಷ್ಯ, ನಪುಂಸಕ ಮೊದಲಾದ ಭವಗಳಲ್ಲಿ ದುಃಖ ಭೋಗಿಸುತ್ತಾರೆ. ಆದ್ದರಿಂದ ಕುಶೀಲದ ತ್ಯಾಗ ಮಾಡುವುದೇ ಶ್ರೇಷ್ಠವಿದೆ.

ಶೀಲವಂತ ಪುರುಷನು ಸ್ವರ್ಗ ಲೋಕದಲ್ಲಿ ಕೋಟ್ಯಂತರ ಅಪ್ಸರೆಯರನ್ನು ಭೋಗಿಸಿ, ಅಸಂಖ್ಯಾತ ಕಾಲದವರೆಗೆ ಭೋಗ ಭೋಗಿಸುತ್ತ ಮನುಷ್ಯರಲ್ಲಿ ಮುಖ್ಯನಾಗಿ ಅನುಕ್ರಮದಿಂದ ಮೋಕ್ಷಕ್ಕೆ ಪಾತ್ರನಾಗಿ ಹೋಗುತ್ತಾನೆ.

**ಪರಿಗ್ರಹ ತ್ಯಾಗದ ಪ್ರೇರಣೆ :** ಈಗ ಪರಿಗ್ರಹದ ಮಮತೆಯ ದೋಷದ ವಿಚಾರ ಮಾಡಿ ಪರಿಗ್ರಹದಿಂದ ವಿರಕ್ತವಾಗುವುದು ಶ್ರೇಷ್ಠವಿದೆ. ಪರಿಗ್ರಹದ ಮಮತೆಯು ಎಲ್ಲ ಐದೂ ಪಾಪಗಳಲ್ಲಿ ಪ್ರವೃತ್ತಿ ಮಾಡಿಸುತ್ತ **ಯಾವ ಪ್ರಕಾರ ಸೌದೆಯಿಂದ ಅಗ್ನಿಯು ಹೆಚ್ಚುತ್ತದೆ ಅದೇ ಪ್ರಕಾರ ತೃಷ್ಣಾರೂಪದ ಅಗ್ನಿಯಿಂದ ಪರಿಗ್ರಹದ ಮಮತೆಯು ನಿರಂತರ ವೃದ್ಧಿಸುತ್ತದೆ-ತೃಪ್ತಿಯಾಗುವುದಿಲ್ಲ,** ಪರಿಗ್ರಹದ ಸಂಪಾದನೆಯಲ್ಲಿ, ರಕ್ಷಣೆಯಲ್ಲಿ, ನಾಶದಲ್ಲಿ ಅಧಿಕ ದುಃಖವಾಗುತ್ತದೆ. ಪರಿಗ್ರಹದ ಮಮತೆಯುಳ್ಳವನು ಧರ್ಮ-ಅಧರ್ಮ, ಜೀವನ-ಮರಣಗಳ ವಿಚಾರದಿಂದ ರಹಿತನಿರುತ್ತಾನೆ. ಪರಿಗ್ರಹದ ಮಮತೆಯು ಹಿಂಸೆ, ಅಸತ್ಯ, ಕಳವು, ಕುಶೀಲ, ಅಭಕ್ಷ್ಯ, ಅಧಿಕ ಆರಂಭ, ಕಲಹ, ವಿರೋಧ, ಈರ್ಷೆ, ಭಯ, ಶೋಕ, ಸಂತಾಪ ಮೊದಲಾದ ಸಾವಿರಾರು ದೋಷಗಳಲ್ಲಿ ಪ್ರವೃತ್ತಿ ಮಾಡಿಸಿ ಬಿಡುತ್ತದೆ.

ಸಂಸಾರದಲ್ಲಿ ಎಷ್ಟು ಬಂಧನ, ಪರಾಧೀನತೆ, ಕಷಾಯ ಮತ್ತು ದುಃಖಗಳಿವೆ. ಅವೆಲ್ಲವೂ ಪರಿಗ್ರಹದ ಕಾರಣದಿಂದ ಇವೆ. ಪರಿಗ್ರಹದ ತ್ಯಾಗ ಮಾಡಿ ಬಿಡುವುದೆಂದರೆ ತಲೆಯ ಮೇಲಿನ ಬಹಳಷ್ಟು ಭಾರವನ್ನು ಇಳಿಸಿ ಇಟ್ಟಂತಿದೆ. ಪರಿಗ್ರಹದ ತ್ಯಾಗಿಯು ನಿರ್ಬಂಧನಿದ್ದಾನೆ. ಪರಿಗ್ರಹ ತ್ಯಾಗದ ಫಲವು ಸ್ವರ್ಗ ಮತ್ತು ಮೋಕ್ಷವಿದೆ. ಪರಿಗ್ರಹದ ತ್ಯಾಗವೇ ಸಮಸ್ತ ಕಲ್ಯಾಣದ ಮೂಲವಿದೆ. ಈ ಪ್ರಕಾರ ಹಿಂಸೆ, ಅಸತ್ಯ, ಕಳವು, ಕುಶೀಲ ಮತ್ತು ಪರಿಗ್ರಹದಲ್ಲಿ ಯಾವ ದೋಷಗಳಿವೆ ಅವುಗಳ ಭಾವನೆಯನ್ನು ಭಾವಿಸಿ ಆ ಪಾಪಗಳ ತ್ಯಾಗ ಮಾಡಿ ಬಿಡುವುದೇ ಶ್ರೇಷ್ಠವಿದೆ.

**ಐದು ಪಾಪಗಳ ತ್ಯಾಗದ ಭಾವನೆ :** ಈ ಐದೂ ಪಾಪಗಳು ದುಃಖವೇ ಇವೆಯೆಂದು ವಿಚಾರ ಮಾಡಬೇಕು. ಹಿಂಸೆ ಮೊದಲಾದವು ದುಃಖದ ಕಾರಣಗಳಿರುವುದರಿಂದ ಆ ಹಿಂಸೆ ಮೊದಲಾದ ಐದು ಪಾಪಗಳು ದುಃಖವೇ ಇವೆ. ಹಿಂಸೆ ಮೊದಲಾದ ದುಃಖದ ಕಾರಣಗಳಲ್ಲಿ ಕಾರ್ಯದ ಉಪಚಾರ ಮಾಡಿ ಐದೂ ಪಾಪಗಳನ್ನು ದುಃಖವೆಂದೇ ಹೇಳಲಾಗಿದೆ. ಹೇಗೆ ವಧೆ, ಬಂಧನ, ಪೀಡೆಗಳು ನನಗೆ ಅಪ್ರಿಯವಿವೆ, ಹಾಗೆಯೇ ಸಮಸ್ತ ಅನ್ಯಪ್ರಾಣಿಗಳಿಗೂ ಅಪ್ರಿಯವಿವೆ. ಹೇಗೆ ಅಸತ್ಯ ಅಪ್ರಿಯ, ಕಠೋರ ವಚನಗಳನ್ನು ನನಗೆ ಯಾರಾದರೂ ಆಡಿದರೆ ಅವನ್ನು ಕೇಳುವುದರಿಂದ ನನಗೆ ಅತಿಶಯ ದುಃಖವು ಉತ್ಪನ್ನವಾಗುತ್ತದೆ, ಹಾಗೆಯೇ ಇತರ ಜೀವರುಗಳಿಗೆ ಕೂಡ ಅಪ್ರಿಯ ವಚನ-ಅಸತ್ಯ ವಚನಗಳು ದುಃಖವನ್ನು ಉತ್ಪನ್ನಮಾಡುತ್ತವೆ. ಹೇಗೆ ನನ್ನ ಇಷ್ಟ ದ್ರವ್ಯವನ್ನು ಯಾವನಾದರೂ ಕಳ್ಳನು ಕದ್ದುಕೊಂಡು ಹೋದರೆ ನನಗೆ ಬಹಳಷ್ಟು ದುಃಖವಾಗುತ್ತದೆ ಅದೇ ಪ್ರಕಾರ ಇತರ ಜೀವರುಗಳಿಗೂ ಧನವು ಕಳವಾಗಿ ಹೋಗುವುದರಿಂದ ದುಃಖವಾಗುತ್ತದೆ. ಹೇಗೆ ಯಾರಾದರೂ ನಮ್ಮ ಸ್ತ್ರೀಯ ತಿರಸ್ಕಾರ ಮಾಡಿದರೆ ಅದರಿಂದ ನಮಗೆ ಅತಿಶಯ ಮಾನಸಿಕ ದುಃಖವಾಗುತ್ತದೆ, ಅದೇ ಪ್ರಕಾರ ಅನ್ಯ ಜೀವರುಗಳಿಗೂ ತಮ್ಮ ತಾಯಿ, ತಂಗಿ, ಮಗಳು, ಪತ್ನಿಯ ವ್ಯಭಿಚಾರವನ್ನು ನೋಡಿ ಕೇಳಿ ಬಹಳಷ್ಟು ದುಃಖವಾಗುತ್ತದೆ. ಯಾವ ಪ್ರಕಾರ ಧನ, ಧಾನ್ಯ, ವಸ್ತ್ರ ಮೊದಲಾದವು ದೊರಕದಿರುವದರಿಂದ ಮತ್ತು ದೊರಕಿದವು ನಷ್ಟವಾಗಿ ಹೋಗುವುದರಿಂದ ಅವುಗಳ ಕುರಿತು ಇಚ್ಛೆ, ಶೋಕ, ಭಯವಾಗುವುದರಿಂದ ತಮಗೆ ದುಃಖವಾಗುತ್ತದೆ. ಅದೇ ಪ್ರಕಾರ ಪರಿಗ್ರಹದ ಇಚ್ಛೆಯಿಂದ ಹಾಗೂ ಪ್ರಾಪ್ತವಾದ ಪರಿಗ್ರಹವು ನಷ್ಟವಾಗಿ ಹೋಗುವುದರಿಂದ ಎಲ್ಲ ಜೀವರುಗಳಿಗೆ ದುಃಖವಾಗುತ್ತದೆ. ಆದುದರಿಂದ ಹಿಂಸೆ ಮೊದಲಾದ ಪಾಪಗಳಿಂದ ವಿರಕ್ತವಾಗಿ ಹೋಗುವುದರಲ್ಲಿಯೇ ಜೀವದ ಕಲ್ಯಾಣವಿದೆ.

**ಇಂದ್ರಿಯ ಸುಖವು ದುಃಖರೂಪವಿದೆ :** ಕೋಮಲ ಅಂಗಧಾರಿಯಿರುವ ಸ್ತ್ರೀಯರುಗಳ ಅಂಗ ಸ್ಪರ್ಶದಿಂದ ರತಿಸುಖವು ಉತ್ಪನ್ನವಾಗುತ್ತಿರುವುದು ಪ್ರತ್ಯಕ್ಷ ಕಂಡು ಬರುತ್ತದೆ, ಅದನ್ನು ದುಃಖರೂಪವೆಂದು ಏಕೆ ಹೇಳುತ್ತಾರೆಂದು ಕೆಲವರು ಕೇಳುತ್ತಾರೆ.

**ಉತ್ತರ :-** ಇಂದ್ರಿಯ ವಿಷಯಗಳ ಭೋಗದಿಂದ ಉತ್ಪನ್ನವಾದ ಸುಖವು ಸುಖವಿಲ್ಲ. ಭ್ರಾಂತಿಯಿಂದ ಸುಖರೂಪವಾಗಿ ತೋರುತ್ತದೆ. ಮೊದಲಂತೂ ವಿಷಯಗಳ ಇಚ್ಛಾರೂಪವು ಅತ್ಯಂತ ವೇದನೆಯನ್ನುಂಟು ಮಾಡುತ್ತದೆ.

ಯಾವಾಗ ವೇದನೆಯು ಉತ್ಪನ್ನವಾಗುತ್ತದೆ ಆಗ ಅದನ್ನು ದೂರ ಮಾಡುವ ಉಪಾಯ ಬಯಸುತ್ತಾನೆ. ಯಾವಾಗ ಶರೀರದಲ್ಲಿ ಚರ್ಮ, ಮಾಂಸ, ರಕ್ತಗಳು ವಿಕಾರರೂಪವಾಗುತ್ತವೆ ಆಗ ಅತಿಶಯ ತುರಿಕೆಯಾಗುತ್ತದೆ, ಮತ್ತು ತನ್ನ ಶರೀರವನ್ನು ಉಗುರಿನಿಂದ, ಚಿಪ್ಪಿನಿಂದ ಪಾಷಾಣದಿಂದ ಕೆರೆಯುತ್ತಾನೆ; ಶರೀರವನ್ನು ಉಜ್ಜುವುದರಿಂದ ರಕ್ತವು ಹೊರಡಲಾರಂಭಿಸುತ್ತದೆ. ಆಗ ಇನ್ನೂ ಅಧಿಕ ಕೆರೆದುಕೊಂಡು ದುಃಖಿಯೇ ಆಗುತ್ತಾನೆ, ಮತ್ತು ಆ ದುಃಖವನ್ನೇ ಸುಖವೆಂದು ಮನ್ನಿಸುತ್ತಾನೆ. ಅದೇ ಪ್ರಕಾರ ಮೈಥುನ ಸೇವನೆ ಮಾಡುವಂಥವನು ಕೂಡ ಮೋಹದಿಂದ ದುಃಖವನ್ನೇ ಸುಖವೆಂದು ಮನ್ನಿಸುತ್ತಾನೆ.

ಮನುಷ್ಯ, ತಿರ್ಯಂಚ, ಅಸುರ, ಸುರೇಂದ್ರ ಮೊದಲಾದವರೆಲ್ಲರೂ ತಮ್ಮ ಶರೀರದ ಜತೆಯಲ್ಲಿಯೇ ಉತ್ಪನ್ನವಾದ ಇಂದ್ರಿಯಗಳ ಮೂಲಕ ಉತ್ಪನ್ನವಾದ ವಿಷಯಗಳ ಇಚ್ಛಾರೂಪದ ದಾಹದ ದುಃಖವನ್ನು ಸಹನೆ ಮಾಡುವಲ್ಲಿ ಅಸಮರ್ಥರಾಗುವುದರಿಂದ ಮಹಾ ನಿಂದ್ಯಕರವಾದ ವಿಷಯಗಳಲ್ಲಿ ಅತ್ಯಂತ ಆಸಕ್ತರಾಗಿ ಮೇಲ್ವಾಯ್ದು ಭೋಗಿಸಲಪೇಕ್ಷಿಸುತ್ತಾರೆ. ಅಗ್ನಿಯಿಂದ ಕಾಯಿಸಿದ ಲೋಹದ ಗುಂಡಿನಂತೆ ಇಂದ್ರಿಯಗಳ ಬೇಗೆಯಿಂದ ತಪ್ತಾಯಮಾನನಾದ ಆತ್ಮನು ವಿಷಯಗಳಲ್ಲಿ ಅತ್ಯಂತ ತೃಷ್ಣೆಯಿಂದ ಉತ್ಪನ್ನವಾದ ತೀವ್ರ ದುಃಖರೂಪದ ವೇಗವನ್ನು ಸಹಿಸುವುದರಲ್ಲಿ ಅಸಮರ್ಥನಾಗುವುದರಿಂದ ವಿಷಯಗಳಲ್ಲಿ ವೇಗದಿಂದ ಹಾರಿ ಬಿಡುತ್ತಾನೆ.

ಯಾವ ಪ್ರಕಾರ ಓರ್ವ ಪುರುಷನು ನಾಲ್ಕೂ ಕಡೆಯಿಂದ ಅಗ್ನಿಯ ಜ್ವಾಲೆಯಿಂದ ಸುಡುತ್ತ ಅಗ್ನಿಯ ದಾಹವನ್ನು ಸಹನೆ ಮಾಡಲಾರದ ಕಾರಣ ಹತ್ತಿರದಲ್ಲಿಯೇ ಮಲದಿಂದ ತುಂಬಿದ ಮಹಾದುರ್ಗಂಧಯುಕ್ತ ತುಂಬ ಆಳವಾದ ಹೊಂಡದಲ್ಲಿ ಹೋಗಿ ಹೊರಳಿ ಬೀಳುತ್ತಾನೆ ಮತ್ತು ಆ ಮಲದಲ್ಲಿತಲೆಯವರೆಗೆ ಮುಳುಗಿ ಹೋಗಿ ಅದನ್ನೇ ದಾಹರಹಿತ ಸುಖವೆಂದು ಮನ್ನಿಸಿ ಸತ್ತು ಹೋಗುತ್ತಾನೆ. ಅದೇ ಪ್ರಕಾರ ಈ ಸಂಸಾರೀ ಜೀವನು ಸ್ಪರ್ಶನೇಂದ್ರಿಯದ ವಿಷಯದ ಇಚ್ಛಾರೂಪದ ದುಃಖವನ್ನು ಸಹನೆ ಮಾಡುವಲ್ಲಿ ಅಸಮರ್ಥನಾಗುವುದರಿಂದ ಸ್ತ್ರೀಯರ ದುರ್ಗಂಧಯುಕ್ತ ಮಲಿನ ಶರೀರದಲ್ಲಿ ಮುಳುಗಿ ಹೋಗಿ ಕಾಮದ ಬಾಧೆಯಿಂದ ರಹಿತನಾಗಿ ಸುಖವನ್ನು ಮನ್ನಿಸುತ್ತ ಅತ್ಯಂತ ತೃಷ್ಣೆಯಿಂದ ಉತ್ಪನ್ನವಾದ ತೀವ್ರ ದುಃಖವನ್ನು ಭೋಗಿಸುತ್ತ ಸತ್ತು ಸಂಸಾರದಲ್ಲಿ ದುಃಖಿಯಾಗುತ್ತಲಿರುತ್ತಾನೆ.

**ಇಂದ್ರಿಯಗಳು ಸುಖದಲ್ಲಿ ನಿಮಿತ್ತವಿವೆ :** ಈ ಜೀವನಿಗೆ ಇಂದ್ರಿಯಗಳಂತೂ ದಾಹದ ದುಃಖವನ್ನುತ್ಪನ್ನ ಮಾಡುವಂಥ ಮಹಾವ್ಯಾಧಿಗಳಿವೆ, ಮತ್ತು ಯಾವ ಇಂದ್ರಿಯ ವಿಷಯಗಳಿವೆ ಅವು ಸ್ವಲ್ಪ ಕಾಲದ ಸಲುವಾಗಿ ದಾಹ ದುಃಖದ ಉಪಶಮನದ ಕಾರಣವಾಗಿ ವಿಪರೀತ ಅಪಥ್ಯ ಔಷಧಿಯಿವೆ. ಅವುಗಳಿಂದ ವಿಷಯಗಳ ಇಚ್ಛಾರೂಪದ ದಾಹ ದುಃಖವು ವೃದ್ಧಿಸುತ್ತ ಹೋಗುತ್ತದೆ, ಕಡಿಮೆಯಾಗುವುದಿಲ್ಲ, ಆದರೆ ಭ್ರಾಂತಿಯಿಂದ ಉಪಾಯವೆಂದು ಮನ್ನಿಸುತ್ತಾನೆ.ಯಾರ ಇಂದ್ರಿಯಗಳು ಜೀವಂತವಿವೆ ಅವರಿಗೆ ಸ್ವಾಭಾವಿಕವಾಗಿಯೇ ದುಃಖವಿದೆ. ದುಃಖವಿಲ್ಲದಿದ್ದರೆ ವಿಷಯಗಳಲ್ಲೇಕೆ ಹಾರಿ ಬೀಳುತ್ತಾರೆ ? ಅದನ್ನೇ ಪ್ರತ್ಯಕ್ಷ ಕಾಣುತ್ತೇವೆ. ಕುಂಟಣಿ ಹೆಣ್ಣಾನೆಯ ಶರೀರದ ಸ್ಪರ್ಶದ ಲೋಭದ ಸಲುವಾಗಿ ಅರಣ್ಯದ **ಆನೆಯು** ಸ್ಪರ್ಶನೇಂದ್ರಿಯದ ದುಃಖದ ಬಾಧೆಯಿಂದ ಹೊಂಡದಲ್ಲಿ ಹೊರಳಿ ಬಿದ್ದು ಘೋರ ಬಂಧನದ ದುಃಖವನ್ನು ಭೋಗಿಸುತ್ತದೆ. ನೀರಿನಲ್ಲಿರುವ ಚಂಚಲವಾದ **ಮೀನು** ರಸನೇಂದ್ರಿಯದ ದುಃಖದ ವಶೀಭೂತವಾಗಿ ಧೀವರನ ಮೂಲಕ ಹರಡಿದ ಮುಳ್ಳಿನ ಮಾಂಸಕ್ಕೆ ಮೋಸ ಹೋಗಿ ಪ್ರಾಣ ಕಳೆದುಕೊಳ್ಳುತ್ತದೆ. ಘ್ರಾಣೇಂದ್ರಿಯದ ದುಃಖದ ಕಾರಣದಿಂದ **ದುಂಬಿಯು** ಕಮಲದ ಗಂಧದ ಲೋಭದಲ್ಲಿ ಕಮಲವು ಮುದುಡುತ್ತಿರುವುದನ್ನು ನೋಡಿಯೂ ಕೂಡ ಕಮಲದಲ್ಲೇ ಇದ್ದುಕೊಂಡು ಪ್ರಾಣ ಕಳೆದುಕೊಳ್ಳುತ್ತದೆ ನೇತ್ರೇಂದ್ರಿಯ ಜನ್ಯ ಕಷ್ಟವನ್ನು ಸಹಿಸಲಾಗದಂಥ **ಪತಂಗದ ಹುಳುವು** ರೂಪದ ಲೋಭದಿಂದ ದೀವಿಗೆಯ ಜ್ವಾಲೆಯಲ್ಲಿ ಸುಟ್ಟು ಭಸ್ಮವಾಗಿ ಹೋಗುತ್ತದೆ. ಕರ್ಣೇಂದ್ರಿಯ ಜನಿತ ಸಂಗೀತ ಆಲಿಸುವ ತೃಷ್ಣೆಯ ದುಃಖವನ್ನು ಸಹನೆ ಮಾಡುವ ಸಾಧ್ಯತೆಯಿಲ್ಲದಿರುವುದರಿಂದ **ಜಿಂಕೆಯು** ಬೇಟೆಗಾರನಿಂದ ಹಾಡಲಾಗುವಂಥ ಮಧುರ ರಾಗದಲ್ಲಿ ಮುಗ್ಧವಾಗಿ ಹೋಗಿ ಸತ್ತು ಹೋಗುತ್ತದೆ.

ಇಂಥ ದುರ್ನಿವಾರವಾದ ಇಂದ್ರಿಯಗಳ ವೇದನೆಯ ವಶದಲ್ಲಿ ಬಿದ್ದುಕೊಂಡು ಜೀವಗಳು ತಮ್ಮ ಮರಣವು ನಿಕಟದಲ್ಲಿಯೇ ಇರುವಂಥ ವಿಷಯಗಳಲ್ಲಿ ಪ್ರಯತ್ನಪೂರ್ವಕವಾಗಿ ತೊಡಗುತ್ತವೆ. ಇಂದ್ರಿಯಗಳ ತಾಪಕ್ಕೆ ಸಮಾನವಾದ ತಾಪವು ಮೂರು ಲೋಕದಲ್ಲಿ ಬೇರೆ ಯಾವುದೂ ಇಲ್ಲ. **ಇಂಥ ತಾಪವು ಇಂದ್ರಿಯ ವಿಷಯಗಳ ಇಚ್ಛೆಯದಿದೆ, ಅಂಥ ತಾಪವು ಅಗ್ನಿಯಲ್ಲಿ ಇಲ್ಲ.** ಶಸ್ತ್ರಗಳ ಆಘಾತದಲ್ಲಿ ಇಲ್ಲ, ವಿಷದಲ್ಲಿ ಇಲ್ಲ. ಇಂದ್ರಿಯಗಳ ಬೇಗೆಯನ್ನು ಸಹನೆ ಮಾಡುವಲ್ಲಿ ಅಸಮರ್ಥವಾಗಿ ವಿಷಯಗಳ ಪ್ರಾಪ್ತಿಯ ಸಲುವಾಗಿ ಜೀವಗಳು ಅಗ್ನಿಯಲ್ಲಿ ಸುಟ್ಟು ಹೋಗುತ್ತವೆ, ಶಸ್ತ್ರಗಳ ಎದುರಾಗಿ ಸತ್ತು ಹೋಗುತ್ತವೆ. ವಿಷಭಕ್ಷಣ ಮಾಡುತ್ತವೆ, ಧರ್ಮದ ಲೋಪ ಮಾಡಿ ಬಿಡುತ್ತವೆ. ತಾಯಿ-ತಂದೆ-ಗುರು-ಹಿರಿಯರನ್ನು ವಿಷಯಗಳನ್ನು ತಡೆಯುವಂಥವರೆಂದು ತಿಳಿದುಕೊಂಡು ಅವರನ್ನು ಸಾಯಿಸಿ ಬಿಡುತ್ತಾರೆ.

**ಈ ಸಂಸಾರದಲ್ಲಿ ಇಂದ್ರಿಯಗಳಿಂದ ಕೇವಲ ದುಃಖವೇ ಇದೆ.** ಯಾರ ಹತ್ತಿರ ಇಂದ್ರಿಯ ರಹಿತ ಅತೀಂದ್ರಿಯ ಕೇವಲಜ್ಞಾನವಿದೆ ಅವರ ಹತ್ತಿರವೇ ನಿರಾಕುಲ ಸ್ವರೂಪದ ಜ್ಞಾನಾನಂದ ಸುಖವಿದೆ. **ಯಾರು ಇಂದ್ರಿಯಗಳ ಆಧೀನರಿದ್ದಾರೆ ಅವರಿಗೆ ಸ್ವಾಭಾವಿಕವಾಗಿ ದುಃಖವೇ ಇದೆ.** ಒಂದು ವೇಳೆ ಸ್ವಾಭಾವಿಕ ದುಃಖವಿಲ್ಲದಿದ್ದರೆ ವಿಷಯಗಳಲ್ಲಿ ಪ್ರವೃತ್ತಿಯನ್ನೇಕೆ ಮಾಡುತ್ತಾರೆ ? ಶೀತ ಜ್ವರವು ಹೊರಟು ಹೋದವನು ಅಗ್ನಿಯಿಂದ ಕಾಯಿಸಿಕೊಳ್ಳಲು ಬಯಸುವುದಿಲ್ಲ. ದಾಹಜ್ವರವು ಇಳಿದು ಹೋದವನು ತಣ್ಣೀರಿನ ಪಟ್ಟಿಯನ್ನು ಇಟ್ಟುಕೊಳ್ಳಲು ಬಯಸುವುದಿಲ್ಲ. ನೇತ್ರ ರೋಗವು ಹೊರಟು ಹೋದವನು ಕಣ್ಣುಗಳಲ್ಲಿ ಔಷಧ ಹಾಕಿಕೊಳ್ಳಲು ಬಯಸುವುದಿಲ್ಲ. ಕಿವಿಯ ನೋವು ಹೊರಟು ಹೋದವನು ಕಿವಿಯಲ್ಲಿ ಮೇಕೆಯ ಮೂತ್ರ ಹಾಕಿಕೊಳ್ಳಲು ಬಯಸುವುದಿಲ್ಲ. ಶರೀರದಲ್ಲಾದ ಹುಣ್ಣಿನ ಗಾಯವು ತುಂಬಿ ಬಂದವನು ಮುಲಾಮು ಪಟ್ಟಿ ಕಟ್ಟುವುದಿಲ್ಲ. ಅದೇ ಪ್ರಕಾರ **ಯಾರಿಗೆ ಇಂದ್ರಿಯಜನಿತ ವೇದನೆಯಾಗುವುದಿಲ್ಲ ಅವನ ಪ್ರವೃತ್ತಿಯು ವಿಷಯಗಳಲ್ಲಿ ಎಂದೂ ಆಗುವುದಿಲ್ಲ.** ಕ್ಷುಧೆಯ ವೇದನೆಯಾದಲ್ಲದೆ ಭೋಜನವನ್ನು ಯಾರು ಮಾಡುತ್ತಾರೆ ? ಬಿಸಿಲಿನ ಬೇಗೆಯ ಕಷ್ಟವಾದಲ್ಲದೆ ಶೀತಲವಾದ ವಾಯುವನ್ನು ಯಾರು ಬಯಸುತ್ತಾರೆ ? ಚಳಿಯ ತೊಂದರೆಯಾಗದ ಹೊರತು ಬೆಚ್ಚಗಿರುವ ಉಣ್ಣೆಯ ಬಟ್ಟೆಯನ್ನು ತೊಟ್ಟುಕೊಳ್ಳಲು ಮತ್ತು ಉಣ್ಣೆಯ ಬಟ್ಟೆಯನ್ನು ಹೊದೆದುಕೊಳ್ಳಲು ಯಾರು ತಾನೇ ಬಯಸುತ್ತಾರೆ ?

ಈ ಎಲ್ಲ ವಿಷಯಗಳು ವೇದನೆಯನ್ನು ನಿವಾರಿಸುವ ಉಪಾಯಗಳಿವೆ. ಹಂಚಿಕೆಗಳಿವೆ. ಈ ವಿಷಯಗಳಿಂದ ಸ್ವಲ್ಪ ಕಾಲದ ಸಲುವಾಗಿ ವೇದನೆಯು ಕಮ್ಮಿಯಾಗುತ್ತದೆ. ಅಜ್ಞಾನಿಯು ಅದನ್ನು ಸುಖವೆಂದು ಮನ್ನಿಸಿಕೊಳ್ಳುತ್ತಾನೆ. ಆ ಸುಖವು ನಿಜವಾಗಿ ಸುಖವಿಲ್ಲ. ಎಲ್ಲಿ ವೇದನೆಯೇ ಉತ್ಪನ್ನವಾಗುವುದಿಲ್ಲ ಅಲ್ಲಿ ಸುಖವಿದೆ. **ಅನಾಕುಲತೆಯು ಯಾವುದರ ಲಕ್ಷಣವಿದೆ ಅಂಥ ಸ್ವಾಧೀನ ಅನಂತ ಜ್ಞಾನವೇ ನಿಜವಾದ ಸುಖವಿದೆ. ಬೇರೆಯಿಲ್ಲ**ವೆಂದು ನಿರ್ಣಯ ಮಾಡಿ ತಿಳಿದುಕೊಳ್ಳಬೇಕು. ಈ ಪ್ರಕಾರ ಹಿಂಸೆ ಮೊದಲಾದುವನ್ನು ದುಃಖರೂಪವೆಂದೇ ತಿಳಿದುಕೊಳ್ಳುವ ಭಾವನೆ ಭಾವಿಸುವುದು ಯೋಗ್ಯವಿದೆ.

**ಮೈತ್ರಿ ಮೊದಲಾದ ನಾಲ್ಕು ಭಾವನೆಗಳು :** ಈಗ ಶ್ರಾವಕರಿಗೆ ಮೈತ್ರಿ, ಪ್ರಮೋದ, ಕಾರುಣ್ಯ ಮತ್ತು ಮಾಧ್ಯಸ್ಥವೆಂದು ನಾಲ್ಕು ಭಾವನೆಗಳನ್ನು ಭಾವಿಸುವುದು ಯೋಗ್ಯವಿದೆ. ಅವನ್ನು ಹೇಳುತ್ತಾರೆ.

೧) ಏಕೇಂದ್ರಿಯ ಮೊದಲಾದ ಸಮಸ್ತ ಪ್ರಾಣಿಗಳಲ್ಲಿ ಮೈತ್ರಿಯ ಭಾವನೆಯನ್ನು ಭಾವಿಸಬೇಕಾಗುವುದು. ಯಾವ ಪ್ರಾಣಿಗೂ ದುಃಖವು ಉತ್ಪನ್ನವಾಗದಿರಲೆಂದು ಅಭಿಲಾಷೆಯನ್ನಿಡುವುದು ಅದು **ಮೈತ್ರೀ ಭಾವನೆ**ಯಿದೆ.

೨) ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ-ತಪಸ್ಸು ಮೊದಲಾದವುಗಳಲ್ಲಿ ಅಧಿಕತೆ ಸಾಧಿಸಿದ್ದರೆ ಅವುಗಳಲ್ಲಿ ಪ್ರಮೋದ ಭಾವನೆ ಮಾಡಬೇಕಾಗುವುದು. ಪ್ರಮೋದ ಎಂದರೆ ಹರುಷ, ಆನಂದವಿದೆ. ಆದುದರಿಂದ ಗುಣಗಳಲ್ಲಿ ಅಧಿಕತೆ ಸಾಧಿಸಿದವರನ್ನು ನೋಡಿ ಯಾವ ಪ್ರಕಾರ ಹುಟ್ಟ ದರಿದ್ರನಿಗೆ ನಿಧಿಯು ದೊರಕಿದರೆ ಹೇಗೆ ಸಂತೋಷವಾಗುತ್ತದೆ ಹಾಗೆ ತಮ್ಮ ಪರಿಣಾಮುಗಳಲ್ಲಿ ಹರ್ಷವು ಉತ್ಪನ್ನವಾಗಬೇಕಾಗುವುದು. ಗುಣವಂತರನ್ನು ನೋಡುತ್ತಿರುವಂತೆ ಹರ್ಷದಿಂದ ರೋಮಾಂಚಿತರಾಗಬೇಕು. ಮುಖದ ಪ್ರಸನ್ನತೆಯಿಂದ ಕಣ್ಣುಗಳು ಪ್ರಫುಲ್ಲಿತವಾಗಬೇಕು, ಹೃದಯವು ಆಹ್ಲಾದದಿಂದ

ಸ್ತುತಿರೂಪದ ವಚನ ನಾಮ ಕೀರ್ತನೆ ಮೊದಲಾದವುಗಳ ಮೂಲಕ ಅಂತರಂಗದಲ್ಲಿ ಭಕ್ತಿಯ ಪ್ರಕಟತೆ ಮಾಡುವುದು ಅದು **ಪ್ರಮೋದ ಭಾವನೆಯಿದೆ.**

೩) ಅಸಾತಾವೇದನೀಯ ಕರ್ಮದ ಉದಯದಿಂದ ರೋಗ-ದಾರಿದ್ರಾದಿಗಳಿಂದ ಬಾಧೆಗೊಳಗಾದ ಯಾವ ದುಃಖೀ ಪ್ರಾಣಿಗಳಿವೆ, ಹಾಗೂ ಇಂದ್ರಿಯಗಳಿಂದ ವಿಕಲ ಎಂದರೆ ಕುರುಡು, ಕಿವುಡ, ಕುಂಟ ಹಾಗೂ ಅನಾಥ, ವಿದೇಶಿ, ಅತ್ಯಂತ ವೃದ್ಧ, ಬಾಲಕ, ವಿಧವೆ ಇತ್ಯಾದಿ ದುಃಖೀ ಪ್ರಾಣಿಗಳ ದುಃಖ ದೂರ ಮಾಡುವ ಉಪಾಯದ ಅಭಿಪ್ರಾಯವು ಅದು **ಕಾರಣ್ಯಭಾವನೆಯಿದೆ.**

೪) ಧರ್ಮರಹಿತ, ತೀವ್ರಕಷಾಯೀ, ದುರಾಗ್ರಹೀ, ಉಪದೇಶ ಕೊಡಲು ಅಯೋಗ್ಯ, ವಿಪರೀತ ಜ್ಞಾನೀ, ಧರ್ಮದ್ರೋಹಿ, ದುಷ್ಟ ಅಭಿಪ್ರಾಯ, ನಿರ್ದಯಿಯಿರುವಲ್ಲಿ ರಾಗ-ದ್ವೇಷಗಳಿಂದ ರಹಿತವಾಗಿರುವುದು ಅದು **ಮಾಧ್ಯಸ್ಥ ಭಾವನೆಯಿದೆ.**

ಸಮಸ್ತ ಪ್ರಾಣಿಗಳ ದುಃಖದ ಅಭಾವ ಬಯಸುವುದು ಅದು ಮೈತ್ರೀಭಾವನೆಯಿದೆ. ಗುಣಗಳಲ್ಲಿ ಅಧಿಕವಿರುವ ಪುರುಷರನ್ನು ನೋಡಿ-ಕೇಳಿ ಹರ್ಷವಾಗುವುದು ಅದು ಪ್ರಮೋದಭಾವನೆಯಿದೆ. ದುಃಖೀ ಜೀವಗಳನ್ನು ನೋಡಿ ಉಪಕಾರ ಮಾಡುವ ಬುದ್ಧಿಯಾಗುವುದು ಅದು ಕಾರುಣ್ಯಭಾವನೆಯಿದೆ. ದುರಾಗ್ರಹೀ, ನಿರ್ದಯೀ, ಅಭಿಮಾನಿಗಳಲ್ಲಿ ರಾಗ-ದ್ವೇಷಗಳಿಂದ ರಹಿತವಾಗಿರುವುದು ಅದು ಮಾಧ್ಯಸ್ಥಭಾವನೆಯಿದೆ. ಈ ಪ್ರಕಾರ ಧರ್ಮಧಾರಕ ಶ್ರಾವಕರು ಮೈತ್ರಿ ಮೊದಲಾದ ನಾಲ್ಕು ಭಾವನೆಗಳನ್ನು ಭಾವಿಸುವುದು ಯೋಗ್ಯವಿದೆ.

**ಜಗತ್ತು ಮತ್ತು ಕಾಯದ ಸ್ವರೂಪ :** ಗೃಹಸ್ಥರಿಗೆ ಜಗತ್ತಿನ ಸ್ವಭಾವ ಮತ್ತು ಕಾಯದ ಸ್ವಭಾವವನ್ನೂ ಚಿಂತನೆ ಮಾಡುವುದು ಯೋಗ್ಯವಿದೆ. **ಜಗತ್ತಿನ ಸ್ವಭಾವವನ್ನು ಚಿಂತನೆ ಮಾಡುವುದರಿಂದ ಸಂಸಾರ ಪರಿಭ್ರಮಣದ ಭಯವು ಆಗಲಾರಂಭಿಸುತ್ತದೆ ಮತ್ತು ಶರೀರದ ಸ್ವಭಾವದ ಚಿಂತನೆ ಮಾಡುವುದರಿಂದ ಶರೀರದ ಮೇಲಿನ ರಾಗ-ಭಾವವು ಹೊರಟು ಹೋಗುತ್ತದೆ.**

**ಸಂಸಾರದ ಸ್ವರೂಪ :-** ಲೋಕವೆಂದು ಕರೆಸಿಕೊಳ್ಳುವ ಈ ಜಗತ್ತು ಅನಾದಿನಿಧನವಿದೆ. ಅರ್ಧಮೃದಂಗದ ಮೇಲೆ ಒಂದು ಮೃದಂಗವನ್ನು ಇಡುವುದರಿಂದ ಒಂದೂವರೆ ಮೃದಂಗದಂಥ ಆಕಾರವುಳ್ಳದ್ದು ಈ ಲೋಕವಿದೆ. ಹದಿನಾಲ್ಕು ರಜ್ಜು ಎತ್ತರವಿದೆ. ದಕ್ಷಿಣೋತ್ತರ ಎಲ್ಲೆಡೆಗೆ ಏಳು ರಜ್ಜು ಅಗಲವಿದೆ. ಪೂರ್ವ-ಪಶ್ಚಿಮದಲ್ಲಿ ಎಲ್ಲಕ್ಕಿಂತ ಕೆಳಗೆ ಏಳು ರಜ್ಜು ಅಗಲವಿದೆ. ಪುನಃ ಮೇಲ್ಭಾಗದಲ್ಲಿ ಕ್ರಮದಿಂದ ಕಡಿಮೆಯಾಗುತ್ತ ಏಳು ರಜ್ಜು ಎತ್ತರದವರೆಗೆ ಹೋಗಿ ಒಂದು ರಜ್ಜು ಅಗಲ ಉಳಿಯುತ್ತದೆ. ಪುನಃ ಮೇಲಿನ ಭಾಗದಲ್ಲಿ ಕ್ರಮದಿಂದ ವೃದ್ಧಿಸುತ್ತ ಮೂರುವರೆ ರಜ್ಜು ಎತ್ತರದವರೆಗೆ ಹೋಗಿ ಅಲ್ಲಿ ಐದು ರಜ್ಜು ಅಗಲವಾಗಿ ಹೋಗಿದೆ. ಪುನಃ ಮುಂದೆ ಕ್ರಮದಿಂದ ಕಡಿಮೆಯಾಗುತ್ತ ಮೂರುವರೆ ರಜ್ಜುವಿನ ಎತ್ತರದವರೆಗೆ ಹೋಗುವುದು, ಎಲ್ಲಿ ಲೋಕದ ಕೊನೆಯಿದೆ ಅಲ್ಲಿಯಂತೂ ಒಂದು ರಜ್ಜು ಅಗಲವಿದೆ. ಈ ಪ್ರಕಾರ ಪೂರ್ವ-ಪಶ್ಚಿಮ ಕ್ರಮದಿಂದ ಕಡಿಮೆಯಾಗುತ್ತ-ಹೆಚ್ಚುತ್ತ-ಕಡಿಮೆಯಾಗುತ್ತಿರುವ ಅಗಲವನ್ನು ತಿಳಿಯುವುದು. ಇಂಥ ಆಕಾರವುಳ್ಳ ಲೋಕದ ಒಂದು ರಜ್ಜು ಅಗಲ, ಒಂದು ರಜ್ಜು ಉದ್ದ, ಒಂದು ರಜ್ಜು ಎತ್ತರ ಖಂಡಗಳ ಕಲ್ಪನೆ ಮಾಡಿದರೆ ಒಟ್ಟು ಮುನ್ನೂರಾ ಮೂವತ್ತು ಮೂರು ಘನ ರಜ್ಜುಗಳಾಗುತ್ತವೆ.

ಈ ಲೋಕರೂಪದ ಕ್ಷೇತ್ರದಲ್ಲಿ ಅನಂತಾನಂತ ಕಾಲವು ಪರಿಭ್ರಮಣ ಮಾಡುತ್ತ ಕಳೆದು ಹೋಗಿದೆ. ಅದರಲ್ಲಿ ಶರೀರರೂಪದಿಂದ ಧಾರಣ ಮಾಡದಂಥ ಯಾವೊಂದು **ಪುದ್ಗಲವೂ** ಬಾಕಿ ಉಳಿದಿಲ್ಲ. ಮುನ್ನೂರಾ ಮೂವತ್ತಮೂರು ರಜ್ಜು ಪ್ರಮಾಣ ಕ್ಷೇತ್ರದಲ್ಲಿ ಈ ಜೀವನು ಅನಂತಾನಂತ ಬಾರಿ ಜನ್ಮ-ಮರಣ ಮಾಡಿರದಂಥ ಯಾವೊಂದು **ಪ್ರದೇಶವೂ** ಬಾಕಿ ಉಳಿದಿಲ್ಲ. ಉತ್ಸರ್ಪಿಣೀ-ಅವಸರ್ಪಿಣೀ ಕಾಲದ ಇಪ್ಪತ್ತು ಕೋಟಾಕೋಟಿ ಸಾಗರದಲ್ಲಿ ಈ ಜೀವನು ಜನ್ಮ-ಮರಣ ಮಾಡಿರದಂಥ ಯಾವೊಂದು **ಕಾಲದ** ಸಮಯವೂ ಬಾಕಿ ಉಳಿದಿಲ್ಲ. ನರಕ, ತಿರ್ಯಂಚ, ಮನುಷ್ಯ, ದೇವವೆಂಬ ಈ

ನಾಲ್ಕು ಗತಿಗಳಲ್ಲಿ ಜಘನ್ಯ ಆಯುವಿನಿಂದ ಹಿಡಿದು ಉತ್ಕೃಷ್ಟ ಆಯುವಿನವರೆಗೆ ಸಮಯೋತ್ತರವಿರುವಂಥದನ್ನು ಅನಂತ ಬಾರಿ ಪಡೆದಿರದಂಥ ಯಾವೊಂದು **ಪರ್ಯಾಯ**ವೂ ಬಾಕಿ ಉಳಿದಿಲ್ಲ.

ಮಿಥ್ಯಾದೃಷ್ಟಿಗೆ ಬಂಧವಾಗಲು ಯೋಗ್ಯವಿರುವ ಜ್ಞಾನಾವರಣ ಮೊದಲಾದ ಕರ್ಮಗಳ ಜಘನ್ಯಸ್ಥಿತಿಯು ಅಂತಃಕೋಟಾಕೋಟಿ ಸಾಗರ ಪ್ರಮಾಣವಿದೆ; ಜ್ಞಾನಾವರಣ, ದರ್ಶನಾವರಣ, ವೇದನೀಯ, ಅಂತರಾಯ - ಈ ನಾಲ್ಕು ಕರ್ಮಗಳ ಉತ್ಕೃಷ್ಟ ಸ್ಥಿತಿಯು ಮೂವತ್ತು ಕೋಟಾಕೋಟಿಸಾಗರ ಪ್ರಮಾಣದ್ದಿದೆ; ಮೋಹನೀಯ ಕರ್ಮದ ಉತ್ಕೃಷ್ಟ ಸ್ಥಿತಿಯು ಎಪ್ಪತ್ತು ಕೋಟಾಕೋಟಿ ಸಾಗರ ಪ್ರಮಾಣವಿದೆ; ನಾಮಕರ್ಮ, ಗೋತ್ರಕರ್ಮಗಳ ಉತ್ಕೃಷ್ಟ ಸ್ಥಿತಿಯು ಇಪ್ಪತ್ತು ಕೋಟಾಕೋಟಿಸಾಗರ ಪ್ರಮಾಣವಿವೆ; ಆಯುಕರ್ಮದ ಉತ್ಕೃಷ್ಟ ಸ್ಥಿತಿಯು ಮೂವತ್ತು ಮೂರು ಸಾಗರದ್ದಿದೆ.

ಜಘನ್ಯಸ್ಥಿತಿಯಿಂದ ಪ್ರಾರಂಭ ಮಾಡಿ ಒಂದೊಂದು ಸಮಯವನ್ನು ಹೆಚ್ಚಿಸುತ್ತ ಉತ್ಕೃಷ್ಟ ಸ್ಥಿತಿಯವರೆಗೆ ಎಷ್ಟು ಕರ್ಮಗಳ ಸ್ಥಿತಿಯಾಗುತ್ತದೆ ಆ ಸಮಸ್ತ ಸ್ಥಿತಿಯ ಒಂದೊಂದು ಸ್ಥಾನಕ್ಕೆ ಅಸಂಖ್ಯಾತ ಲೋಕ ಪ್ರಮಾಣ ಕಷಾಯಗಳ ಸ್ಥಾನಗಳು ಕಾರಣವಿವೆ; ಈ ಕಷಾಯಗಳ ಒಂದೊಂದು ಸ್ಥಾನವು ಅನಂತಬಾರಿ ಈ ಸಂಸಾರಿಜೀವಕ್ಕೆ ಆಗಿವೆ. ಆದುದರಿಂದ ಈ ಪ್ರಕಾರದ ಪರಿಭ್ರಮಣರೂಪ ಸಂಸಾರದಲ್ಲಿ ಎಷ್ಟು ಜೀವಗಳಿವೆ ಅವು ಅನೇಕ ಭೇದರೂಪದ ನಾಲ್ಕೂ ಗತಿಗಳಲ್ಲಿ ಪರಿಭ್ರಮಣ ಮಾಡುತ್ತ ನಿರಂತರ ದುಃಖ ಭೋಗಿಸುತ್ತವೆ. ಯಾವ ಜೀವವೂ ನಿಶ್ಚಲವಾಗಿಲ್ಲ ; ನೀರ ಬೊಬ್ಬುಳಿಕೆಯಂತೆ ಜೀವನವು ಅಸ್ಥಿರವಿದೆ, ಭೋಗ ಸಂಪತ್ತು ಮೇಘ ಮಾಲೆಯಂತೆ ವಿನಾಶಶೀಲವಿದೆ, ರಾಜ್ಯ-ಧನ-ಸಂಪತ್ತು ಇಂದ್ರ ಧನುಷ್ಯದ ಹಾಗೆ ಕ್ಷಣಭಂಗುರವಿದೆ. ಈ ಸಂಸಾರದಲ್ಲಿ ಜೀವನು ಅನಂತಾನಂತ ಪರಿವರ್ತನ ಮಾಡುತ್ತಾನೆ. ಈ ಪ್ರಕಾರ ಸಂಸಾರಸ್ವರೂಪದ ಸತ್ಯಾರ್ಥಚಿಂತನೆ ಮಾಡುವುದರಿಂದ ಸಂಸಾರದಲ್ಲಿ ಪರಿಭ್ರಮಣ ಮಾಡುವುದರ ಭಯವು ಎನಿಸಲಾರಂಭಿಸುತ್ತದೆ.

**ಶರೀರದ ಸ್ವರೂಪ :-** ಈಗ ಕಾಯದ ಸ್ವರೂಪದ ವಿಚಾರ ಮಾಡುತ್ತಾರೆ. ಈ ಮನುಷ್ಯನ ಶರೀರವು ರೋಗರೂಪ ಸರ್ಪಗಳ ಹುತ್ತು ಇದೆ. ಅನಿತ್ಯವಿದೆ, ದುಃಖದ ಕಾರಣವಿದೆ, ಅಪವಿತ್ರವಿದೆ, ನಿಃಸಾರವಿದೆ, ಕೋಟ್ಯಂತರ ಉಪಾಯ ಮಾಡಿದ ನಂತರವೂ ವಿನಷ್ಟವಾಗಿ ಹೋಗುತ್ತದೆ. ಈ ಶರೀರವನ್ನು ಎಷ್ಟು ತೊಳೆದರೂ ಅದು ಮಲವನ್ನೇ ಉಗುಳುತ್ತದೆ. ಸುಗಂಧದೆಣ್ಣೆ ಪನ್ನೀರು ಮೊದಲಾದುವನ್ನು ಬಳೆಯುತ್ತಿದ್ದರೂ ಕೂಡ ದುರ್ಗಂಧವನ್ನೇ ವಮನ ಮಾಡುತ್ತದೆ, ಎಷ್ಟು ಪೋಷಣೆ ಮಾಡಿದರೂ ಬಲವಂತವಾಗುವುದಿಲ್ಲ, ಎಷ್ಟು ಸಂರಕ್ಷಿಸಿದರೂ ಅಲಂಕರಿಸಿದರೂ ದಿನ-ದಿನವೂ ಕುರೂಪವಾಗುತ್ತ ಹೋಗುತ್ತದೆ, ಎಷ್ಟು ಸುಧಾರಿಸಿದರೂ ಸರಿಪಡಿಸಿದರೂ ದಿನ-ದಿನವೂ ಅಂದಗೆಡುತ್ತ ಹೋಗುತ್ತದೆ; ಸುಖ ಕೊಡುತ್ತಿದ್ದರೂ ದುಃಖಿಯಾಗಿ ಹೋಗುತ್ತದೆ; ಮಂತ್ರ ಜಪಿಸುತ್ತಿದ್ದರೂ ನಿರಂತರ ಭಯಭೀತವಿರುತ್ತದೆ; ದೀಕ್ಷಾರೂಪದಿಂದಿರುತ್ತಿದ್ದರೂ ಸಾಧುಗಳ ಮಾರ್ಗವನ್ನು ಕಲಂಕಿತ ಮಾಡುತ್ತದೆ. ಶಿಕ್ಷಣ ಕೊಡುತ್ತಿದ್ದರೂ ಗುಣಗಳಲ್ಲಿ ಅನುರಾಗ ಮಾಡುವುದಿಲ್ಲ; ದುಃಖವನ್ನು ಭೋಗಿಸುತ್ತಿದ್ದರೂ ಕೂಡ ಕಷಾಯಗಳ ಉಪಶಾಂತತೆಗೆ ಪ್ರಾಪ್ತವಾಗುವುದಿಲ್ಲ; ಎಷ್ಟು ತಡೆಯುತ್ತಿದ್ದರೂ ಕೂಡ ಪಾಪಗಳಲ್ಲಿಯೇ ಪ್ರವರ್ತನೆ ಮಾಡುತ್ತದೆ; ಎಷ್ಟು ಪ್ರೇರಣೆ ಮಾಡಿದರೂ ಕೂಡ ಧರ್ಮವನ್ನು ಧಾರಣ ಮಾಡುವುದಿಲ್ಲ.

ಮಾಲೀಸು ಮಾಡುತ್ತಿದ್ದರೂ ಕೂಡ ದಿನ-ದಿನವೂ ಕಠೋರ-ಕರ್ಕಶವಾಗುತ್ತ ಹೋಗುತ್ತದೆ, ಒರೆಸಿದರೂ-ಉಜ್ಜಿದರೂ ಕೂಡ ಮಲಿನವಾಗಿರುತ್ತದೆ, ಸುಗಂಧದ ಎಣ್ಣೆ ಮೊದಲಾದುವನ್ನು ಲೇಪಿಸಿದರೂ ಕೂಡ ದುರ್ಗಂಧವನ್ನೇ ಕೊಡುತ್ತಿರುತ್ತದೆ, ಚಂದನಾದಿಗಳನ್ನು ಲೇಪಿಸಿದರೂ ಕೂಡ ಪಿತ್ತದಿಂದ ಜ್ವಲಿಸುತ್ತಿರುತ್ತದೆ. ಎಷ್ಟು ಒಣಗಿಸಿದರೂ ಕೂಡ ಕಫದಿಂದ ಸೋರುತ್ತಿರುತ್ತದೆ, ಸ್ವಚ್ಛ ಮಾಡುತ್ತಿದ್ದರೂ ಕೂಡ ಕುಷ್ಟ ಮೊದಲಾದ ರೋಗಗಳಿಂದ ಮಲಿನವಾಗಿ ಹೋಗುತ್ತದೆ, ಚರ್ಮದಿಂದ ಬಂಧಿಸಲ್ಪಟ್ಟಿದ್ದರೂ ಕೂಡ ಕ್ಷೀಣವಾಗುತ್ತ ಹೋಗುತ್ತದೆ, ರಕ್ಷಣೆ ಮಾಡುತ್ತಿದ್ದರೂ ಕೂಡ ಮರಣದ ಮುಖದಲ್ಲಿ ಪ್ರವಿಷ್ಟವಾಗಿ ಹೋಗುತ್ತದೆ.

ಶರೀರದ ಇಂಥ ನಿಂದ್ಯತರವಾದ ಸ್ವಭಾವದ ವಿಚಾರ ಮಾಡುವುದರಿಂದ ಶರೀರದಲ್ಲಿನ ರಾಗಭಾವವು ನಷ್ಟವಾಗಿ ಹೋಗುತ್ತದೆ. ಆದುದರಿಂದ ಜಗತ್ತಿನ ಸ್ವಭಾವವು ನಿರ್ವೇಗ-ಭಯರೂಪ ಮತ್ತು ಕಾಯದ ಸ್ವಭಾವವು ಸಂವೇಗ-ವೈರಾಗ್ಯದ ಸಲುವಾಗಿ ಚಿಂತನೆ ಮಾಡುವುದು ಶ್ರೇಷ್ಠವಿದೆ.

**ಸೋಳಹ ಕಾರಣ ಭಾವನೆ :-** ಸೋಳಹ ಕಾರಣ ಭಾವನೆಗಳು ಕೂಡ ಶ್ರಾವಕರು ಭಾವಿಸಲು ಯೋಗ್ಯವಿವೆ. ಸೋಳಹಕಾರಣ ಭಾವನೆಗಳನ್ನು ಭಾವಿಸುವುದರ ಫಲವು ತೀರ್ಥಂಕರ ಪದವಿದೆ. ಇವುಗಳ ಮೂಲಕವೇ ತೀರ್ಥಂಕರರ ಪ್ರಕೃತಿಯ ಬಂಧವು ಅವ್ರತಸಮ್ಯಗ್ದೃಷ್ಟಿಗೂ ಆಗುತ್ತದೆ. ದೇಶವ್ರತ ಶ್ರಾವಕರಿಗೆ ಕೂಡ ಆಗುತ್ತದೆ, ಮತ್ತು ಪ್ರಮತ್ತ ಅಪ್ರಮತ್ತಸಂಯತ ಮುನಿಗಳಿಗೂ ಆಗುತ್ತದೆ. ತೀರ್ಥಂಕರ ಪ್ರಕೃತಿಯು ಸರ್ವೋತ್ಕೃಷ್ಟ ಪುಣ್ಯ ಪ್ರಕೃತಿಯಿದೆ. ಇದಕ್ಕಿಂತ ಉಚ್ಚಕೋಟಿಯ ಪುಣ್ಯಪ್ರಕೃತಿಯು ಮೂರು ಲೋಕದಲ್ಲಿ ಮತ್ತೊಂದಿಲ್ಲ. ಗೊಮ್ಮಟಸಾರ ಕರ್ಮಕಾಂಡದಲ್ಲಿ ಹೇಳುತ್ತಾರೆ,-

**ಪಢಮುವಸಮಿಯೇ ಸಮ್ಮೇ ಸೇಸತಿಯೇ ಅವಿರದಾದಿ ಚತ್ತಾರಿ ।**
**ತಿತ್ಥಯರ ಬಂಧ ಪಾರಂಭಯಾ ಣರಾ ಕೇವಲಿದುಗಂತೇ ॥೯೩॥**

**ಅರ್ಥ :-** ತೀರ್ಥಂಕರ ಪ್ರಕೃತಿಯ ಬಂಧದ ಪ್ರಾರಂಭವು ಕರ್ಮಭೂಮಿಯ ಪುರುಷಲಿಂಗ ಧರಿಸಿದ ಮನುಷ್ಯರಿಗೇ ಆಗುತ್ತದೆ, ಉಳಿದ ಮೂರುಗತಿಗಳಲ್ಲಿ ಆರಂಭವಾಗುವುದಿಲ್ಲ. ಕೇವಲೀ-ಶ್ರುತಕೇವಲಿಗಳ ಚರಣಾರವಿಂದದ ಸಮೀಪದಲ್ಲಿಯೇ ಆಗುತ್ತದೆ. **ಕೇವಲೀ-ಶ್ರುತಕೇವಲಿಗಳ ನಿಕಟತೆಯಿಲ್ಲದೆ ತೀರ್ಥಂಕರ ಪ್ರಕೃತಿಯ ಬಂಧಕ್ಕೆ ಯೋಗ್ಯವಾದ ಪರಿಣಾಮಗಳ ವಿಶುದ್ಧಿಯಾಗುವುದಿಲ್ಲ.** ತೀರ್ಥಂಕರ ಪ್ರಕೃತಿಯ ಬಂಧವು ಪ್ರಥಮೋಪಶಮ ಸಮ್ಯಕ್ತ್ವದಲ್ಲಿ ಆಗುತ್ತದೆ ಮತ್ತು ಉಳಿದ ಮೂರು ದ್ವಿತೀಯೋಪಶಮ, ಕ್ಷಯೋಪಶಮ, ಕ್ಷಾಯಿಕ ಇವು ನಾಲ್ಕೂ ಸಮ್ಯಕ್ತ್ವವುಳ್ಳವರಿಗೆ ಆಗುತ್ತದೆ. ಅವಿರತ, ದೇಶವಿರತ, ಪ್ರಮತ್ತ ಹಾಗೂ ಅಪ್ರಮತ್ತ ಈ ನಾಲ್ಕೂ ಗುಣಸ್ಥಾನಗಳಲ್ಲಿ ಆಗುತ್ತದೆ.

ಈ ತೀರ್ಥಂಕರ ಪ್ರಕೃತಿ ಬಂಧದ ಕಾರಣವು ಸೋಳಹಕಾರಣ ಭಾವನೆಗಳಿವೆ. ಈ ಭಾವನೆಗಳು ಸಮಸ್ತ ಪಾಪದ ಕ್ಷಯಮಾಡುವಂಥವು, ಭಾವಗಳ ಅಶುದ್ಧಿರೂಪದ ಮಲವನ್ನು ವಿಧ್ವಂಸ ಮಾಡುವಂಥವು ಶ್ರವಣ-ಪಠಣ ಮಾಡುತ್ತ-ಮಾಡುತ್ತ ಸಂಸಾರದ ಬಂಧವನ್ನು ಭೇದಿಸುವಂಥವುಗಳಿವೆ, ಅವು ನಿರಂತರವಾಗಿ ಭಾವಿಸಲು ಯೋಗ್ಯವಿವೆ.

**ಸೋಳಹ ಕಾರಣ ಪೂಜೆಯ ಜಯಮಾಲೆಯ ಅರ್ಥ :-** ಈಗ ಇಲ್ಲಿ ಸೋಳಹ ಕಾರಣ ಪೂಜೆಯ ಜಯಮಾಲೆಯ ಅರ್ಥವನ್ನು ಓದುವುದರಿಂದ ಮಹಾನಪುಣ್ಯದ ಉಪಾರ್ಜನೆಯಾಗುತ್ತದೆ. ಆದುದರಿಂದ ಆ ಜಯಮಾಲೆಯ ಅರ್ಥವನ್ನು ಭಾವಗಳ ವಿಶುದ್ಧಿ ಹಾಗೂ ಅಶುಭಭಾವಗಳ ನಾಶದ ಸಲುವಾಗಿ ಬರೆಯುತ್ತೇವೆ. ಮೊದಲು ಸಮುಚ್ಚಯ ಜಯಮಾಲೆಯ ಅರ್ಥ ಹೇಳುತ್ತೇವೆ.

**ಅರ್ಥ :-** ಓ ! ಸಂಸಾರ ಸಮುದ್ರದಿಂದ ದಾಟಿಸುವಂಥ, ಕುಗತಿಯ ನಿವಾರಣೆ ಮಾಡುವಂಥ, ಓ ತೀರ್ಥಂಕರ ಲಬ್ಧಿಯನ್ನು ಧಾರಣ ಮಾಡುವಂಥ, ಓ ! ಶಿವ-ನಿರ್ವಾಣದ ಕಾರಣವಾದ ಓ ! ಸೋಲಹಕಾರಣವೇ ! ನಾನು ನಿಮ್ಮ ಸಲುವಾಗಿ ನಮಸ್ಕಾರ ಮಾಡಿ ನಿಮ್ಮ ಸ್ತವನ ಮಾಡುತ್ತೇನೆ ಮತ್ತು ನನ್ನ ಶಕ್ತಿಯನ್ನು ಪ್ರಕಟ ಮಾಡುತ್ತೇನೆ.

**ಭಾವಾರ್ಥ :-** ಯಾರಿಗೆ ಸೋಳಹ ಕಾರಣ ಭಾವನೆಗಳಾಗುತ್ತವೆ ಅವರು ನಿಯಮದಿಂದ ತೀರ್ಥಂಕರರಾಗಿ ಸಂಸಾರ ಸಮುದ್ರದಿಂದ ಪಾರಾಗಿ ಹೋಗುತ್ತಾರೆಂಬುದು ನಿಯಮವಿದೆ. ಯಾರಿಗೆ ಸೋಳಹಕಾರಣ ಭಾವನೆಗಳಾಗುತ್ತವೆ ಅವರಿಗೆ ಕುಗತಿಗಳಲ್ಲಿ ಗಮನವಾಗುವುದಿಲ್ಲ. ಕೆಲವರಂತೂ ವಿದೇಹ ಕ್ಷೇತ್ರದೊಳಗೆ ಗೃಹಸ್ಥಾವಸ್ಥೆಯಲ್ಲಿ ಸೋಳಹಕಾರಣ ಭಾವನೆಯನ್ನು ಕೇವಲಿ-ಶ್ರುತಕೇವಲಿಯ ಹತ್ತಿರ ಭಾವಿಸಿ ಅದೇ ಭವದಿಂದ ದೇವಗಳ ಮೂಲಕ ತಪಕಲ್ಯಾಣ, ಜ್ಞಾನಕಲ್ಯಾಣ, ನಿರ್ವಾಣ ಕಲ್ಯಾಣಗಳು ಆಚರಿಸಲ್ಪಟ್ಟು ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ. ಕೆಲವರು ಪೂರ್ವ ಭವದಲ್ಲಿ ಕೇವಲಿ-ಶ್ರುತಕೇವಲಿಗಳ ಹತ್ತಿರ ಸೋಳಹ ಕಾರಣ ಭಾವನೆಯನ್ನು ಭಾವಿಸಿ ಸೌಧರ್ಮ ಸ್ವರ್ಗದಿಂದ ಹಿಡಿದು ಸರ್ವಾರ್ಥಸಿದ್ಧಿಯವರೆಗಿನ ಅಹಮಿಂದ್ರರುಗಳಲ್ಲಿ ಉತ್ಪನ್ನರಾಗಿ, ಅಲ್ಲಿಂದ ಪುನಃ ಮನುಷ್ಯರಾಗಿ ತೀರ್ಥಂಕರರಾಗಿ ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ. ಕೆಲವರು

ಪೂರ್ವಭವದೊಳಗೆ ಮಿಥ್ಯಾತ್ವ ಅವಸ್ಥೆಯಲ್ಲಿ ನರಕಾಯುವಿನ ಬಂಧ ಮಾಡಿಕೊಂಡು ಪುನಃ ಕೇವಲಿ-ಶ್ರುತಕೇವಲಿಯ ಆಶ್ರಯ ಪಡೆದು ಸಮ್ಯಕ್ತ್ವ ಗ್ರಹಣ ಮಾಡಿ ಸೋಳಹ ಕಾರಣ ಭಾವನೆಗಳನ್ನು ಭಾವಿಸುತ್ತ ನರಕಕ್ಕೆ ಹೋಗಿ ಅಲ್ಲಿಂದ ಹೊರ ಬಂದು ತೀರ್ಥಂಕರರಾಗಿ ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ.

ಯಾರು ಪೂರ್ವಭವದಲ್ಲಿ ಸೋಳಹಕಾರಣ ಭಾವನೆ ಭಾವಿಸಿ ತೀರ್ಥಂಕರ ಪ್ರಕೃತಿ ಕಟ್ಟಿಕೊಳ್ಳುತ್ತಾರೆ ಅವರಿಗೆ ಪಂಚ ಕಲ್ಯಾಣಕಗಳ ಮಹಿಮೆಯಾಗುತ್ತದೆ. ಯಾರು ವಿದೇಹ ಕ್ಷೇತ್ರದೊಳಗೆ ಗೃಹಸ್ಥಾವಸ್ಥೆಯಲ್ಲಿ ತೀರ್ಥಂಕರ ಪ್ರಕೃತಿ ಕಟ್ಟಿಕೊಳ್ಳುತ್ತಾರೆ ಅವರು ಅದೇ ಭವದಲ್ಲಿ ತಪ, ಜ್ಞಾನ, ನಿರ್ವಾಣ ಈ ಮೂರು ಕಲ್ಯಾಣಕಗಳ ಪೂಜೆಯನ್ನು ಇಂದ್ರಾದಿಗಳಿಂದ ಪಡೆದು ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ.

ಕೆಲವರು ವಿದೇಹ ಕ್ಷೇತ್ರಗಳಲ್ಲಿ ಮುನಿವ್ರತದ ಧಾರಣ ಮಾಡಿ ನಂತರ ಕೇವಲಿ-ಶ್ರುತಕೇವಲಿಗಳ ಹತ್ತಿರ ಸೋಳಹಕಾರಣ ಭಾವನೆಭಾವಿಸಿ ಅದೇ ಭವದಲ್ಲಿ ತೀರ್ಥಂಕರರಾಗಿ ಜ್ಞಾನ, ನಿರ್ವಾಣವೆಂಬ ಎರಡು ಕಲ್ಯಾಣಕಗಳ ಪೂಜೆಗೆ ಪ್ರಾಪ್ತರಾಗಿ ನಿರ್ವಾಣ ಪಡೆಯುತ್ತಾರೆ. ಅವರು ಮೊದಲೇ ದೀಕ್ಷೆ ತೆಗೆದುಕೊಂಡಿರುತ್ತಾರೆ. ಸೋಳಹಕಾರಣ ಭಾವನೆಯನ್ನು ನಂತರ ಭಾವಿಸಿ ತೀರ್ಥಂಕರ ಪ್ರಕೃತಿ ಕಟ್ಟಿಕೊಳ್ಳುತ್ತಾರೆ. ಆದುದರಿಂದ ಅವರಿಗೆ ತಪ ಕಲ್ಯಾಣಕವಾಗುವುದಿಲ್ಲ.

ಯಾರಿಗೆ ತೀರ್ಥಂಕರ ಪ್ರಕೃತಿಯ ಬಂಧವಾಗಿ ಹೋಗುತ್ತದೆ ಅವರು ಭವನತ್ರಿಕ ದೇವಗಳಲ್ಲಿ, ಕುಮನುಷ್ಯರಲ್ಲಿ, ನೀಚಕುಲವುಳ್ಳ, ವಿಕೃತ ಅಂಗವುಳ್ಳ, ಅಲ್ಪಾಯು, ದರಿದ್ರಿ, ತಿರ್ಯಂಚಗಳಲ್ಲಿ ಭೋಗಭೂಮಿಯಲ್ಲಿ, ಸ್ತ್ರೀದಲ್ಲಿ, ನಪುಂಸಕದಲ್ಲಿ, ಏಕೇಂದ್ರಿಯದಿಂದ ಹಿಡಿದು ವಿಕಚತುಷ್ಕಾದಿ ಪರ್ಯಾಯಗಲ್ಲಿ ಉತ್ಪನ್ನರಾಗುವುದಿಲ್ಲ, ಮೂರನೇ ನರಕದಿಂದ ಕೆಳಗೆ ಹೋಗುವುದಿಲ್ಲ. ಈ ಪ್ರಕಾರ ಸೋಳಹಕಾರಣ ಭಾವನೆಯು ಕುಗತಿಯ ನಿವಾರಣೆ ಮಾಡುವಂಥದ್ದಿದೆ. ಸೋಳಹಕಾರಣ ಭಾವನೆಯನ್ನು ಭಾವಿಸಿದ ನಂತರ ಮೂರನೆಯ ಭವದಲ್ಲಿ ನಿರ್ವಾಣವಾಗುತ್ತದೆ. ಆದುದರಿಂದ ಅದು ಶಿವದ ಕಾರಣವಿದೆ. ತೀರ್ಥಂಕರತ್ವದ ಋದ್ಧಿಯು ಸೋಳಹಕಾರಣ ಭಾವನೆಯನ್ನು ಭಾವಿಸುವುದರಿಂದಲೇ ಉತ್ಪನ್ನವಾಗುತ್ತದೆ. ಆದುದರಿಂದ ಎಲೈ ಸೋಳಹಕಾರಣ ಭಾವನೆಯೇ ! ನಾನು ನಿಮಗೆ ನಮಸ್ಕಾರ ಮಾಡಿ ಅನಂತರ ಸ್ತವನ ಮಾಡುತ್ತೇನೆ.

೧) **ಎಲೈ ಭವ್ಯ ಜನರುಗಳೇ ! ಈ ದುರ್ಲಭವಾದ ಮನುಷ್ಯ ಭವದಲ್ಲಿ ಇಪ್ಪತ್ತೈದು ದೋಷಗಳಿಂದ ರಹಿತವಾದ ದರ್ಶನವಿಶುದ್ಧಿ ನಾಮದ ಭಾವನೆಯನ್ನು ಭಾವಿಸಿರಿ.** ಸಮ್ಯಗ್ದರ್ಶನದ ನಾಶ ಮಾಡವಂಥ ದೋಷಗಳ ತ್ಯಾಗ ಮಾಡುವುದರಲ್ಲಿಯೇ ಸಮ್ಯಗ್ದರ್ಶನದ ಉಜ್ವಲತೆಯಿದೆ. ಮೂರು ಮೂಢತೆ, ಎಂಟು ಮದ, ಆರು ಅನಾಯತನ, ಶಂಕೆ ಮೊದಲಾದ ಎಂಟು ದೋಷಗಳು ಇವು ನಿಜವಾದ ಶ್ರದ್ಧೆಯನ್ನು ಮಲಿನ ಮಾಡುವಂಥ ಇಪ್ಪತ್ತೈದು ದೋಷಗಳಿದ್ದು ಇದನ್ನು ದೂರದಿಂದಲೇ ತ್ಯಾಗ ಮಾಡುವುದು ಯೋಗ್ಯವಿದೆ.

೨) ಐದು ಪ್ರಕಾರದ ವಿನಯವನ್ನು ಯಾವ ಪ್ರಕಾರ ಭಗವಂತರ ಪರಮಾಗಮದಲ್ಲಿ ಹೇಳಿದೆ ಆ ಪ್ರಕಾರ ಮಾಡಬೇಕಾಗುವುದು. ದರ್ಶನ ವಿನಯ, ಜ್ಞಾನ ವಿನಯ, ಚಾರಿತ್ರ ವಿನಯ, ತಪವಿನಯ, ಉಪಚಾರವಿನಯ, - ಈ ಐದು ಪ್ರಕಾರದ ವಿನಯಗಳನ್ನು ಜಿನೇಂದ್ರ ಭಗವಂತರು ಜಿನಶಾಸನದ ಮೂಲವೆಂದು ಹೇಳಿದ್ದಾರೆ. ಐದು ಪ್ರಕಾರದ ವಿನಯವಿಲ್ಲದಿರುವಲ್ಲಿ ಜಿನಧರ್ಮದ ಪ್ರವೃತ್ತಿಯೇ ಇರುವುದಿಲ್ಲ. ಆದುದರಿಂದ ಜಿನಶಾಸನದ ಮೂಲವು ವಿನಯರೂಪವಾಗಿರುವುದೇ ಯೋಗ್ಯವಿದೆ.

೩) ಅತಿಚಾರವಿಲ್ಲದ ಶೀಲವನ್ನು ಪಾಲಿಸಿಬೇಕಾಗುವುದು. ಶೀಲವನ್ನು ಮಲಿನ ಮಾಡಬಾರದು **ಉಜ್ವಲವಾದ ಶೀಲವೇ ಮೋಕ್ಷಮಾರ್ಗದಲ್ಲಿ ಅಧಿಕ ಸಹಾಯಕವಿದೆ.** ಯಾವನಿಗೆ ಉಜ್ವಲವಾದ ಶೀಲವಿದೆ ಅವನಿಗೆ ಮೋಕ್ಷದ ಮಾರ್ಗದಲ್ಲಿ ಇಂದ್ರಿಯಗಳು, ವಿಷಯ, ಕಷಾಯ, ಪರಿಗ್ರಹ ಮೊದಲಾದವು ವಿಘ್ನವನ್ನೊಡ್ಡುವ ಸಾಧ್ಯತೆಯಿಲ್ಲ.

೪) ಈ ಮನುಷ್ಯ ಭವದಲ್ಲಿ ಪ್ರತಿಯೊಂದು ಕ್ಷಣವೂ ಜ್ಞಾನೋಪಯೋಗರೂಪವಾಗಿಯೇ ಇರಬೇಕಾಗುವುದು. ಸಮ್ಯಗ್ಜ್ಞಾನವಿಲ್ಲದೆ ಒಂದು ಕ್ಷಣವನ್ನೂ ಕಳೆಯಬಾರದು. ಆ ಅನ್ಯ ಸಂಕಲ್ಪ-ವಿಕಲ್ಪಗಳು ಸಂಸಾರದಲ್ಲಿ ಮುಳುಗಿಸುವಂಥವುಗಳಿವೆ. ಅವುಗಳ ಪರಿತ್ಯಾಗವನ್ನು ದೂರದಿಂದಲೇ ಮಾಡಬೇಕಾಗುವುದು.

೫) ಧರ್ಮಾನುರಾಗದೊಡನೆ ಸಂಸಾರ, ಶರೀರ, ಭೋಗಳಿಂದ ವೈರಾಗ್ಯರೂಪವಾದ ಸಂವೇಗ ಭಾವನೆಯನ್ನು ನಿರಂತರ ಮನಸ್ಸಿನಲ್ಲಿ ಚಿಂತಿಸಬೇಕಾಗುವುದು. ಅದರಿಂದ ಸಮಸ್ತ ವಿಷಯಗಳಲ್ಲಿ ಅನುರಾಗದ ಅಭಾವವಾಗುತ್ತದೆ ಮತ್ತು ಧರ್ಮದಲ್ಲಿ ಹಾಗೂ ಧರ್ಮದ ಫಲದಲ್ಲಿ ಅನುರಾಗರೂಪದ ದೃಢ ಪ್ರವರ್ತನೆಯಾಗುತ್ತದೆ.

೬) ಅಂತರಂಗದಲ್ಲಿ ಆತ್ಮಘಾತಕವಾದ ಲೋಭ ಮೊದಲಾದ ನಾಲ್ಕು ಕಷಾಯಗಳ ಅಭಾವ ಮಾಡಿ ತಮ್ಮ ಶಕ್ತಿಯ ಅನುಸಾರ ಸುಪಾತ್ರರುಗಳ ರತ್ನತ್ರಯ ಮೊದಲಾದ ಗುಣಗಳಲ್ಲಿ ಅನುರಾಗ ಮಾಡಿ, ನಾಲ್ಕು ಪ್ರಕಾರದ ದಾನದಲ್ಲಿ ಪ್ರವೃತ್ತಿ ಮಾಡಬೇಕಾಗುವುದು.

೭) ಅಂತರಂಗ-ಬಹಿರಂಗ ಎರಡೂ ಪ್ರಕಾರದ ಪರಿಗ್ರಹಗಳಲ್ಲಿನ ಆಸಕ್ತಿಯನ್ನು ಬಿಟ್ಟುಕೊಟ್ಟು ಸಮಸ್ತ ವಿಷಯಗಳ ಇಚ್ಛೆಯ ಅಭಾವ ಮಾಡಿ ಅತ್ಯಂತ ಕಠಿಣ ತಪಸ್ಸನ್ನು ತಮ್ಮ ಶಕ್ತಿಯ ಅನುಸಾರ ಮಾಡಬೇಕಾಗುವುದು.

೮) ಚಿತ್ತದಲ್ಲಿ ರಾಗ ಮೊದಲಾದ ದೋಷಗಳ ನಿರಾಕರಣೆ ಮಾಡಿ ಪರಮ ವೀತರಾಗತೆಯರೂಪ ಸಾಧುವಿನ ಸಮಾನ ಸಮಾಧಿಯನ್ನು ಧಾರಣ ಮಾಡಬೇಕಾಗುವುದು.

೯) ಸಂಸಾರದ ದುಃಖ ವಿಪತ್ತುಗಳ ನಿರಾಕರಣ ಮಾಡುವಂಥ ಹತ್ತು ಪ್ರಕಾರದ ವೈಯಾವೃತ್ತ ಮಾಡಬೇಕಾಗುವುದು.

೧೦) ಅರಹಂತರ ಗುಣಗಳಲ್ಲಿ ಅನುರಾಗರೂಪದ ಭಕ್ತಿಯನ್ನು ಧಾರಣ ಮಾಡುತ್ತ ಅರಹಂತರ ನಾಮ ಮೊದಲಾದವುಗಳ ಧ್ಯಾನ ಮಾಡಿ ಅರಹಂತ ಭಕ್ತಿಯನ್ನು ಮಾಡಬೇಕಾಗುವುದು.

೧೧) ಐದು ಪ್ರಕಾರದ ಆಚಾರವನ್ನು ಯಾರು ಸ್ವಯಂ ಆಚರಣೆ ಮಾಡುತ್ತಾರೆ, ಅನ್ಯ ಶಿಷ್ಯ ಮುನಿಗಳಿಗೆ ಮಾಡಿಸುತ್ತಾರೆ, ದೀಕ್ಷೆ-ಶಿಕ್ಷೆ ಕೊಡುವಲ್ಲಿ ನಿಪುಣರಿದ್ದಾರೆ, ಧರ್ಮದ ಸ್ತಂಭರಿದ್ದಾರೆ, ಅಂಥ ಆಚಾರ್ಯ ಪರಮೇಷ್ಠಿಗಳ ಗುಣಗಳಲ್ಲಿ ಅನುರಾಗ ಮಾಡುವುದು ಅದು ಆಚಾರ್ಯ ಭಕ್ತಿಯಿದೆ.

೧೨) ನಿರಂತರ ಜ್ಞಾನದಲ್ಲಿ ಪ್ರವರ್ತನೆ ಮಾಡುವಂಥ, ಮಾಡಿಸುವಂಥ ಸ್ವಯಂ ಸಮ್ಯಗ್ಜ್ಞಾನದ ಪಠಣ ಮಾಡುತ್ತಾರೆ, ಅನ್ಯ ಶಿಷ್ಯರಿಗೆ ಬೋಧಿಸುತ್ತಾರೆ, ನಾಲ್ಕೂ ಅನುಯೋಗಗಳ ಜ್ಞಾನದ ಪಾರಂಗತ, ಅಂಗ-ಪೂರ್ವ-ಶ್ರುತದ ಧಾರಕರಾದ ಉಪಾಧ್ಯಾಯ ಪರಮೇಷ್ಠಿಗಳ ಭಕ್ತಿ ಮಾಡುವುದು ಅದು ಬಹುಶ್ರುತ ಭಕ್ತಿಯಿದೆ.

೧೩) ಜಿನಶಾಸನವನ್ನು ಪುಷ್ಟ ಮಾಡುವಂಥ, ಸಂಶಯ ಮೊದಲಾದ ಅಂಧಕಾರವನ್ನು ದೂರ ಮಾಡುವಲ್ಲಿ ಸೂರ್ಯಸಮಾನವಾಗಿ ಭಗವಂತರ ಅನೇಕಾಂತರೂಪದ ಆಗಮವಿದೆ ಅದರ ಪಠಣ, ಶ್ರವಣ, ಪ್ರವರ್ತನ, ಚಿಂತನದಲ್ಲಿ ಭಕ್ತಿಪೂರ್ವಕ ಪ್ರವರ್ತನೆ ಮಾಡುವುದು ಅದು ಪ್ರವಚನ ಭಕ್ತಿ ಭಾವನೆಯಿದೆ.

೧೪) ಅವಶ್ಯವಾಗಿ ಮಾಡಲು ಯೋಗ್ಯವಾದ ಯಾವ ಷಡಾವಶ್ಯಕಗಳಿವೆ ಅವು ಅಶುಭಕರ್ಮಗಳ ಆಸ್ರವವನ್ನು ತಡೆದು ಮಹಾನ ನಿರ್ಜರೆ ಮಾಡುವಂಥವುಗಳಿವೆ, ಅಶರಣರಿಗೆ ಶರಣರುವಂಥ ಅವಶ್ಯಕಗಳನ್ನು ಏಕಾಗ್ರ ಚಿತ್ತದಿಂದ ಧಾರಣೆ ಮಾಡಿ ನಿರಂತರ ಅವುಗಳ ಭಾವನೆ ಭಾವಿಸಬೇಕಾಗುವುದು.

೧೫) ಜಿನಮಾರ್ಗದ ಪ್ರಭಾವನೆಯಲ್ಲಿ ನಿತ್ಯ ಪ್ರವರ್ತನೆ ಮಾಡಬೇಕಾಗುವುದು. ಜಿನ ಮಾರ್ಗದ ಪ್ರಭಾವನೆಯು ಧನ್ಯ ಪುರುಷರುಗಳಿಂದ ಆಗುತ್ತದೆ. ವೀತರಾಗ ಮಾರ್ಗದಲ್ಲಿ ಅನೇಕ ಜನರುಗಳ ಪ್ರವೃತ್ತಿ ಮತ್ತು ಕುಮಾರ್ಗದ ಅಭಾವವು ಪ್ರಭಾವನೆಯ ಮೂಲಕವೇ ಆಗುತ್ತದೆ.

೧೬) ಧರ್ಮದಲ್ಲಿ, ಧರ್ಮಾತ್ಮಪುರುಷರಲ್ಲಿ, ಧರ್ಮದ ಆಯತನಗಳಲ್ಲಿ, ಪರಮಾಗಮದಲ್ಲಿ, ಅನೇಕಾಂತ ರೂಪದ ವಾಕ್ಯಗಳಲ್ಲಿ ಪರಮ ಪ್ರೀತಿ ಮಾಡುವುದು ಅದು ವಾತ್ಸಲ್ಯ ಭಾವನೆಯಿದೆ. ಈ ವಾತ್ಸಲ್ಯ ಭಾವನೆಯು ಸಮಸ್ತ ಭಾವನೆಗಳಲ್ಲಿ ಮುಖ್ಯವಿದೆ. ವಾತ್ಸಲ್ಯ ಅಂಗವು ಸಮಸ್ತ ಅಂಗಗಳಲ್ಲಿ ಮುಖ್ಯವಿದೆ. ಮಹಾಮೋಹ ಹಾಗೂ ಮಾನದ ನಾಶ ಮಾಡುವಂಥದ್ದಿದೆ.

ಈ ಪ್ರಕಾರ ನಿರ್ವಾಣ ಸುಖವನ್ನು ಕೊಡುವಂಥ ಈ ಸೋಳಹ ಕಾರಣ ಭಾವನೆಗಳನ್ನು ಯಾವ ಭವ್ಯರು ಸ್ಥಿರಚಿತ್ತದಿಂದ ಭಾವಿಸುತ್ತಾರೆ. ಚಿಂತನೆ ಮಾಡುತ್ತಾರೆ, ಅಧಿಕ ಸನ್ಮಾನ ಮಾಡುತ್ತಾರೆ, ಅವುಗಳಲ್ಲಿ ಮುಳುಗಿ ಹೋಗುತ್ತಾರೆ. ಆ ಎಲ್ಲ ಭವ್ಯಜೀವರುಗಳು ಹಿತರೂಪದ ತೀರ್ಥಂಕರ ಪದ ಪಡೆದು ಪಂಚಮಗತಿ ಯಾವ ನಿರ್ವಾಣವಿದೆ ಅದನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಈ ಪ್ರಕಾರ ಷೋಡಶಕಾರಣದ ಈ ಸಮುಚ್ಚಯ ಕಥನರೂಪ ಭಾವನೆಯು ಸಮಾಪ್ತವಾಯಿತು.

## ದರ್ಶನ ವಿಶುದ್ಧಿ ಭಾವನೆ

ಈಗ ದರ್ಶನವಿಶುದ್ಧಿ ನಾಮದ ಮೊದಲ ಭಾವನೆಯ ವರ್ಣನೆ ಮಾಡುತ್ತಾರೆ. ಎಲೈ ಭವ್ಯ-ಜೀವರುಗಳೇ ! ತಾವು ಈ ಮನುಷ್ಯ ಜನ್ಮವನ್ನು ಪಡೆದು ಅದರ ಸಾರ್ಥಕತೆ ಮಾಡಿಕೊಳ್ಳಲು ಬಯಸುತ್ತಿದ್ದರೆ ಸಮ್ಯಗ್ದರ್ಶನ ವಿಶುದ್ಧತೆಯ ಧಾರಣ ಮಾಡಬೇಕು. ಈ ಸಮ್ಯಗ್ದರ್ಶನವು ಧರ್ಮದ ಮೂಲವಿದೆ. ಸಮ್ಯಗ್ದರ್ಶನವಿಲ್ಲದೆ ಶ್ರಾವಕ ಧರ್ಮವು ಕೂಡ ಆಗುವುದಿಲ್ಲ, ಮುನಿಧರ್ಮವೂ ಆಗುವುದಿಲ್ಲ, ಸಮ್ಯಗ್ದರ್ಶನವಿಲ್ಲದ ಜ್ಞಾನವು ಅದು ಕುಜ್ಞಾನವಿದೆ, ಸಮ್ಯಗ್ದರ್ಶನವಿಲ್ಲದ ಚಾರಿತ್ರವು ಅದು ಕುಚಾರಿತ್ರವಿದೆ ಮತ್ತು ಸಮ್ಯಗ್ದರ್ಶನವಿಲ್ಲದ ತಪವು ಅದು ಕುತಪವಿದೆ.

ಸಮ್ಯಗ್ದರ್ಶನವಿಲ್ಲದೆ ಈ ಜೀವನು ಸಂಸಾರದಲ್ಲಿ ಅನಂತಾನಂತಕಾಲ ಪರಿಭ್ರಮಣ ಮಾಡಿದ್ದಾನೆ, ಈಗ ಚತುರ್ಗತಿರೂಪದ ಸಂಸಾರ ಪರಿಭ್ರಮಣದಿಂದ ಭಯಭೀತನಾಗಿ ಜನ್ಮ-ಜರೆ-ಮರಣದ ದುಃಖಗಳಿಂದ - ರೋಗಗಳಿಂದ ಬಿಡುಗಡೆ ಹೊಂದಲು ಬಯಸುತ್ತಿದ್ದರೆ ಮತ್ತು ಅನಂತ ಅವಿನಾಶೀ ಸುಖಮಯನಾದ ಆತ್ಮನನ್ನು ಬಯಸುತ್ತಿದ್ದರೆ ಅನ್ಯ ಸಮಸ್ತ ಪರದ್ರವ್ಯಗಳ ಅಭಿಲಾಷೆಯನ್ನು ಬಿಟ್ಟುಕೊಟ್ಟು ಒಂದು ಸಮ್ಯಗ್ದರ್ಶನದ ಉಜ್ವಲತೆಯನ್ನೇ ಮಾಡುವುದು.

ದರ್ಶನ ವಿಶುದ್ಧತೆಯು ನಿರ್ವಾಣ ಸುಖದ ಕಾರಣವಿದೆ, ದುರ್ಗತಿಯ ನಿರಾಕರಣೆ ಮಾಡುವಂಥದ್ದಿದೆ, ವಿನಯ ಸಂಪನ್ನತೆ ಮೊದಲಾದ ಹದಿನೈದು ಕಾರಣ ಭಾವನೆಗಳಿಗೂ ಮೂಲಕಾರಣವಿದೆ. ಒಂದು ವೇಳೆ ದರ್ಶನ ವಿಶುದ್ಧತೆಯು ಇಲ್ಲದಿದ್ದರೆ ಉಳಿದ ಹದಿನೈದು ಭಾವನೆಗಳೂ ಆಗುವುದಿಲ್ಲ, ಈ ಸಂಸಾರದ ದುಃಖರೂಪ ಮೋಹಾಂಧಕಾರದ ನಾಶ ಮಾಡುವ ಸಲುವಾಗಿ ಸೂರ್ಯ ಸಮಾನವಿದೆ, ಭವ್ಯರಿಗೆ ಪರಮಶರಣವಿದೆ, ಇಂಥ ದರ್ಶನವಿಶುದ್ಧಿನಾಮದ ಭಾವನೆಯನ್ನು ಭಾವಿಸಬೇಕು. ಯಾವ ಪ್ರಕಾರದಿಂದ ಸ್ವ-ಪರದ್ರವ್ಯಗಳ ಭೇದಜ್ಞಾನವು ಉತ್ಪನ್ನವಾಗುವುದು, ಉಜ್ವಲವಾಗುವುದು ಹಾಗೆ ಪ್ರಯತ್ನ ಮಾಡಬೇಕು.

**ಈ ಜೀವನು ಅನಾದಿಕಾಲದಿಂದ ಮಿಥ್ಯಾತ್ವನಾಮದ ಕರ್ಮದ ವಶವರ್ತಿಯಾಗಿ ತನ್ನ ಸ್ವರೂಪದ ಮತ್ತು ಪರದ್ರವ್ಯಗಳ ಸ್ವರೂಪದ ಪರಿಚಯ ಮಾಡಿಕೊಳ್ಳಲಿಲ್ಲ, ಕರ್ಮದ ಉದಯದಿಂದ ಯಾವ ಪರ್ಯಾಯವನ್ನು ಪ್ರಾಪ್ತ ಮಾಡಿಕೊಂಡಿದ್ದಾನೆ. ಅದೇ ಪರ್ಯಾಯವನ್ನು ತನ್ನ ಸ್ವರೂಪವೆಂದು ತಿಳಿದುಕೊಂಡಿದ್ದಾನೆ.** ತನ್ನ ಸತ್ಯ ಸ್ವರೂಪದ ಜ್ಞಾನಮಾಡಿಕೊಳ್ಳುವಲ್ಲಿ ಕುರುಡನಾಗಿ ತನ್ನ ಸ್ವರೂಪದಿಂದ ಭ್ರಷ್ಟನಾಗಿದ್ದುಕೊಂಡು ಚತುರ್ಗತಿಗಳಲ್ಲಿ ಭ್ರಮಣ ಮಾಡುತ್ತ ಬರುತ್ತಿದ್ದಾನೆ. ಈ ಜೀವನು ದೇವ-ಕುದೇವರನ್ನು, ಧರ್ಮ-ಅಧರ್ಮವನ್ನು ಸುಗುರು-ಕುಗುರುವನ್ನು ತಿಳಿಯುವುದಿಲ್ಲ, ಪುಣ್ಯ-ಪಾಪದ , ಇಹಲೋಕ-ಪರಲೋಕದ, ತ್ಯಾಗಯೋಗ್ಯದ-ಗ್ರಹಣ ಮಾಡಲು ಯೋಗ್ಯದ, ಭಕ್ಷ್ಯ-ಅಭಕ್ಷ್ಯದ, ಸತ್ಸಂಗ-ಕುಸಂಗದ, ಶಾಸ್ತ್ರ-ಕುಶಾಸ್ತ್ರದ ವಿಚಾರವನ್ನೇ ಮಾಡುವುದಿಲ್ಲ, ಕರ್ಮದ ಉದಯದ ರಸದಲ್ಲಿ ತನ್ಮಯನಾಗಿ, ನಿರಂತರವಾಗಿಯೇ ಕಷ್ಟದ ಸಹನೆ ಮಾಡುತ್ತಲಿದ್ದಾನೆ.

ಯಾವುದೇ ಆಕಸ್ಮಿಕ ಕಾಲಲಬ್ಧಿಯ ಯೋಗದಿಂದ ಉತ್ತಮ ಕುಲದಲ್ಲಿ ಜೈನ ಧರ್ಮವು ಪ್ರಾಪ್ತವಾಗಿದೆ. ಅದರಿಂದ ವೀತರಾಗ ಸರ್ವಜ್ಞರ ಅನೇಕಾಂತರೂಪ ಪರಮಾಗಮದ ಪ್ರಸಾದದಿಂದ ಪ್ರಮಾಣ, ನಯ, ನಿಕ್ಷೇಪಗಳ ಮುಖಾಂತರ ನಿರ್ಣಯಮಾಡಿ, ಪರೀಕ್ಷಾಪ್ರಧಾನಿಯಾಗಿ, ವೀತರಾಗ ಸಮ್ಯಗ್ಜ್ಞಾನೀ ಗುರುಗಳ ಕೃಪೆಯಿಂದ ನಿಶ್ಚಯ

ಮಾಡಿಕೊಳ್ಳುವುದೇನೆಂದರೆ **ನಾನು ಏಕ, ತಿಳಿದುಕೊಳ್ಳುವಂಥ, ಜ್ಞಾಯಕರೂಪ, ಅವಿನಾಶೀ, ಅಖಂಡ, ಚೇತನಾ ಲಕ್ಷಣ, ದೇಹ ಮೊದಲಾದ ಸಮಸ್ತ ಪರದ್ರವ್ಯಗಳಿಂದ ಭಿನ್ನನಾದ ಆತ್ಮನಿದ್ದೇನೆ. ದೇಹ, ಜಾತಿ, ಕುಲ, ರೂಪ, ನಾಮ ಇತ್ಯಾದಿಗಳು ನನ್ನಿಂದ ಅತ್ಯಂತ ಭಿನ್ನವಿವೆ. ರಾಗ, ದ್ವೇಷ, ಕಾಮ, ಕ್ರೋಧ, ಮದ, ಲೋಭ ಮೊದಲಾದವು ಕರ್ಮದ ಉದಯದಿಂದ ನನ್ನ ಜ್ಞಾಯಕ ಸ್ವಭಾವದಲ್ಲಿ ಉತ್ಪನ್ನವಾದ ವಿಕಾರಗಳಿವೆ.** ಯಾವ ಪ್ರಕಾರ ಸ್ವಯಂ ಸ್ಫಟಿಕ ಮಣಿಯಂತೂ ಸ್ವಚ್ಛ, ಶ್ವೇತ ಸ್ವಭಾವಿಯಿದ್ದು ಅದರಲ್ಲಿ ಇನ್ನೊಂದರ ಸಂಸರ್ಗದಿಂದ ಕಪ್ಪು, ಕೆಂಪು, ಹಸಿರು, ಹಳದಿ ಅನೇಕ ವರ್ಣದ್ದಾಗಿ ಕಾಣುತ್ತದೆ; ಅದೇ ಪ್ರಕಾರ ಸ್ವಯಂ ಆತ್ಮನಂತೂ ಸ್ವಚ್ಛ, ಜ್ಞಾಯಕಭಾವ, ನಿರ್ವಿಕಾರ, ಟಂಕೋತ್ಕೀರ್ಣನಿದ್ದಾನೆ, ಮೋಹಕರ್ಮದ ಉದಯದಿಂದ ಉತ್ಪನ್ನವಾದ ರಾಗ-ದ್ವೇಷ ಮೊದಲಾದವು ಅವನಲ್ಲಿ ಕಾಣುತ್ತವೆ, ಅವು ನನ್ನ ರೂಪಗಳಲ್ಲ, ಪರವಿವೆ. ಈ ಪ್ರಕಾರ ತನ್ನ ಸ್ವರೂಪದ ನಿಶ್ಚಯವಾಗುವುದು.

**ನಿಃಶಂಕಿತಗುಣ ಃ-** ಸರ್ವಜ್ಞ, ವೀತರಾಗ, ಪರಮ ಹಿತೋಪದೇಶಕ ಹಾಗೂ ಕ್ಷುಧೆ, ತೃಷೆ, ಜನ್ಮ, ಜರೆ, ಮರಣ, ರೋಗ, ಶೋಕ, ಭಯ, ವಿಸ್ಮಯ, ರಾಗ-ದ್ವೇಷ, ನಿಂದೆ, ಚಿಂತೆ,ಸ್ವೇದ, ಮದ, ಮೋಹ, ಖೇದ, ಅರತಿಯೆಂದು ಹದಿನೆಂಟು ದೋಷಗಳು ಯಾರಿಗೆ ಅತ್ಯಂತ ಅಭಾವವಾಗಿವೆ, ಮತ್ತು ಯಾರಿಗೆ ಅನಂತಜ್ಞಾನ, ಅನಂತದರ್ಶನ, ಅನಂತಸುಖ, ಅನಂತವೀರ್ಯ ಇತ್ಯಾದಿ ಅನಂತ ಆತ್ಮಿಕ ಅವಿನಾಶೀ ಗುಣಗಳು ಪ್ರಕಟವಾಗಿವೆ. ಅಂಥ **ಆಪ್ತರೇ** ನಮಗೆ ವಂದನೆ, ಸ್ತವನ, ಪೂಜೆ ಮಾಡಲು ಯೋಗ್ಯರಿದ್ದಾರೆ. ಉಳಿದ ಕಾಮೀ, ಕ್ರೋಧೀ, ಮೋಹೀ, ಲೋಭೀ, ಸ್ತ್ರೀಯರಲ್ಲಿ ಆಸಕ್ತ, ಶಸ್ತ್ರಾದಿಗಳನ್ನು ಧಾರಣ ಮಾಡಿರುವ, ಕರ್ಮದ ಆಧೀನ, ಇಂದ್ರಿಯ ಜ್ಞಾನದ ಧಾರಕ, ಸರ್ವಜ್ಞತೆಯಿಂದ ರಹಿತರಿದ್ದಾರೆ ಅವರು ನನಗೆ ವಂದನೆ, ಸ್ತವನ, ಪೂಜೆಗೆ ಯೋಗ್ಯರಿಲ್ಲ. ಯಾರು ಚೋರರಲ್ಲಿ ಶಿರೋಮಣಿಯಿದ್ದಾರೆ. ಜಾರರಲ್ಲಿ ಶಿರೋಮಣಿಯಿದ್ದಾರೆ ಅವರು ಹೇಗೆ ಆರಾಧನೆ ಯೋಗ್ಯರಾಗುವರು ?

ಸರ್ವಜ್ಞ ವೀತರಾಗರು ಉಪದೇಶಿಸಿದ, ಪ್ರತ್ಯಕ್ಷ ಹಾಗೂ ಅನುಮಾನಗಳಿಂದ ಯಾವುದರಲ್ಲಿ ಬಾಧೆ ಬರುವುದಿಲ್ಲ, ಸಮಸ್ತ ಷಟ್ಕಾಯಜೀವಗಳ ಹಿಂಸಾರಹಿತ ಧರ್ಮದ ಉಪದೇಶಕ, ಆತ್ಮನ ಉದ್ಧಾರಕ, ಅನೇಕಾಂತರೂಪ ವಸ್ತುವನ್ನು ಪ್ರತ್ಯಕ್ಷ ಪ್ರಕಟ ಮಾಡುವಂಥದೇ **ಆಗಮ**ವಿದೆ. ಅದುವೇ ಓದಲು, ಓದಿಸಲು, ಕೇಳಲು, ಶ್ರದ್ಧೆ ಮಾಡಲು, ವಂದಿಸಲು ಯೋಗ್ಯವಿದೆ. ರಾಗೀ-ದ್ವೇಷಿಗಳು ಹೇಳಿದ, ವಿಷಯಾನುರಾಗ ಮತ್ತು ಕಷಾಯ ವೃದ್ಧಿಸುವಂಥ, ಹಿಂಸೆ ಮಾಡುವ ಉಪದೇಶವಿರುವಂಥ, ಪ್ರತ್ಯಕ್ಷ ಹಾಗೂ ಅನುಮಾನದಿಂದ ಬಾಧಾಯುಕ್ತ ಏಕಾಂತರೂಪದ ಶಾಸ್ತ್ರವು ಕೇಳಲು, ಓದಲು, ಓದಿಸಲು, ವಂದಿಸಲು ಯೋಗ್ಯವಿಲ್ಲ.

ಯಾರಿಗೆ ವಿಷಯಗಳ ಇಚ್ಛೆಯ, ಕಷಾಯದ, ಪರಿಗ್ರಹದ, ಆರಂಭದ ಅತ್ಯಂತ ಅಭಾವವಾಗಿ ಹೋಗಿದೆ; ಕೇವಲ ಆತ್ಮನ ಉಜ್ವಲತೆ ಮಾಡುವಲ್ಲಿ ಉದ್ಯಮಶೀಲ,ಧ್ಯಾನ-ಸ್ವಾಧ್ಯಾಯದಲ್ಲಿ ಅತ್ಯಂತ ಲೀನ, ಸ್ವಾಧೀನ, ಕರ್ಮಬಂಧ ಜನಿತ ಸುಖ-ದುಃಖದಲ್ಲಿ ಸಾಮ್ಯಭಾವದಧಾರಕ, ಜೀವನ-ಮರಣ, ಲಾಭ-ಅಲಾಭ, ಸ್ತುತಿ-ನಿಂದೆಗಳಲ್ಲಿ ರಾಗ-ದ್ವೇಷ ರಹಿತ, ಉಪಸರ್ಗ-ಪರೀಷಹಗಳನ್ನು ಸಹಿಸುವಲ್ಲಿ ನಿಷ್ಕಂಪ ಧೈರ್ಯದ ಧಾರಕರಾದ ಪರಮನಿರ್ಗ್ರಂಥ **ಗುರು**ಗಳೇ ವಂದನೆ, ಸ್ತುತಿ ಮಾಡಲು ಯೋಗ್ಯರಿದ್ದಾರೆ. ಉಳಿದ ಆರಂಭೀ, ಕಷಾಯೀ ವಿಷಯಾನುರಾಗೀ, ಕುಗುರುಗಳೆಂದೂ ವಂದನೆ, ಸ್ತುತಿ ಮಾಡಲು ಯೋಗ್ಯರಾಗಿಲ್ಲ.

ಜೀವದಯೆಯೇ ಧರ್ಮವಿದೆ, ಹಿಂಸೆಯೆಂದೂ ಧರ್ಮವಿಲ್ಲ. ಸೂರ್ಯೋದಯವೆಂದಾದರೂ ಪಶ್ಚಿಮ ದಿಕ್ಕಿನಲ್ಲಿ ಆಗಬಹುದು. ಅಗ್ನಿಯು ಶೀತಲವಾಗಬಹುದು, ಸರ್ಪದ ಮುಖದಲ್ಲಿ ಅಮೃತ ಬರಬಹುದು, ಮೇರು ಪರ್ವತವು ತನ್ನ ಸ್ಥಾನದಿಂದ ಕದಲಬಹುದು, ಪೃಥ್ವಿಯು ತಲೆ ಕೆಳಗಾಗಬಹುದು, ಆದರೆ ಹಿಂಸೆಯಲ್ಲೆಂದೂ ಧರ್ಮವಾಗಲಾರದು ಎಂಬ ದೃಢ ಶ್ರದ್ಧೆಯು ಸಮ್ಯಗ್ದೃಷ್ಟಿಗೆ ಇರುತ್ತದೆ.

ತನ್ನ ಆತ್ಮನ ಅನುಭವದಲ್ಲಿ ಸರ್ವಜ್ಞವೀತರಾಗರೂಪ ಆಪ್ತರ ಸ್ವರೂಪದಲ್ಲಿ, ನಿರ್ಗ್ರಂಥ ವಿಷಯ-ಕಷಾಯರಹಿತ

ಗುರುಗಳಲ್ಲಿ, ಅನೇಕಾಂತಸ್ವರೂಪ ಆಗಮದಲ್ಲಿ, ದಯಾರೂಪದ ಧರ್ಮದಲ್ಲಿ ಶಂಕೆಯ ಅಭಾವವಾಗುವುದು ಅದು ನಿಃಶಂಕಿತ ಅಂಗವಿದೆ. ಸಮ್ಯಗ್ದೃಷ್ಟಿಗೆ ಇವುಗಳಲ್ಲಿ ಎಂದೂ ಶಂಕೆಯಾಗುವುದಿಲ್ಲ; ಆದುದರಿಂದ ಅವನಿಗೆ ನಿಃಶಂಕಿತ ಅಂಗವು ಇದ್ದೇ ಇರುತ್ತದೆ.

**ನಿಃಕಾಂಕ್ಷಿತಗುಣ :-** ಸಮ್ಯಗ್ದೃಷ್ಟಿಯು ಧರ್ಮದ ಸೇವನೆ ಮಾಡಿ ವಿಷಯಗಳ ಇಚ್ಛೆ ಮಾಡುವುದಿಲ್ಲ. ಸಮ್ಯಗ್ದೃಷ್ಟಿಗೆ ಇಂದ್ರ ಅಹಮಿಂದ್ರ ಲೋಕದ ವಿಷಯವೂ ಅತ್ಯಂತ ವೇದನಾರೂಪ, ವಿನಾಶಶೀಲ, ಪಾಪದ ಬೀಜರೂಪವಾಗಿಯೇ ಕಂಡುಬರುತ್ತದೆ; ಮತ್ತು ಧರ್ಮದ ಫಲವು ಅನಂತ, ಅವಿನಾಶೀ, ಸ್ವಾಧೀನ ಸುಖಸಹಿತ ಮೋಕ್ಷವು ಕಂಡು ಬರುತ್ತದೆ. ಯಾವ ಪ್ರಕಾರ ರತ್ನಪರೀಕ್ಷಕನು ಬೆಲೆಯುಳ್ಳ ರತ್ನವನ್ನು ಬಿಟ್ಟುಕೊಟ್ಟು ಗಾಜಿನ ತುಂಡನ್ನು ಗ್ರಹಣ ಮಾಡುವುದಿಲ್ಲ; ಅದೇ ಪ್ರಕಾರ ಯಾರಿಗೆ ಸತ್ಯ, ಆತ್ಮಿಕ, ಅವಿನಾಶೀ ಬಾಧೆಯಿಲ್ಲದ ಸುಖವು ಕಂಡು ಬಂದಿದೆ. (ಅನುಭವದಲ್ಲಿ ಬಂದು ಬಿಟ್ಟಿದೆ) ಅವರು ಅಸತ್ಯ, ಬಾಧೆಯಿಂದಕೂಡಿದ ವಿಷಯಸುಖಗಳ ಇಚ್ಛೆಯನ್ನು ಹೇಗೆ ಮಾಡುವರು ? ಆದುದರಿಂದ ಸಮ್ಯಗ್ದೃಷ್ಟಿಗಳು ಇಚ್ಛಾರಹಿತರಾಗಿಯೇ ಇರುತ್ತಾರೆ.

ಅವಿರತ ಸಮ್ಯಗ್ದೃಷ್ಟಿಗೆ ವರ್ತಮಾನ ಕಾಲದೊಳಗೆ ಆಜೀವಿಕೆಯಲ್ಲಿ, ಸ್ಥಾನ ಮೊದಲಾದ ಪರಿಗ್ರಹದಲ್ಲಿ, ವೇದನೆಯ ಅಭಾವದ ಯಾವ ಇಚ್ಛೆಯಾಗುತ್ತದೆ ಅದು ವರ್ತಮಾನಕಾಲದ ವೇದನೆಯನ್ನು ಸಹನೆ ಮಾಡುವ ಅಸಮರ್ಥತೆಯಿಂದ ವೇದನೆಯ ಉಪಾಯ ಮಾತ್ರದ ಇಚ್ಛೆಯಿದೆ. ಯಾವ ಪ್ರಕಾರ ರೋಗಿಯು ಕಹಿ ಔಷಧದಿಂದ ತುಂಬ ವಿರಕ್ತನಾಗುತ್ತಾನೆ, ಆದಾಗ್ಯೂ ವೇದನೆಯ ದುಃಖವನ್ನು, ಸಹಿಸಲಾಗದಾಗ ಅವನು ವಮನ-ವಿರೇಚಕ ಮೊದಲಾದವುಗಳಕಾರಣವಾಗಿ ಕಹಿ ಔಷಧವನ್ನೂ ಗ್ರಹಣ ಮಾಡುತ್ತಾನೆ, ದುರ್ಗಂಧಯುಕ್ತ ತೈಲಾದಿಗಳನ್ನೂ ಲೇಪಿಸಿಕೊಳ್ಳುತ್ತಾನೆ, ಆದರೆ ಅಂತರಂಗದಲ್ಲಿ ಔಷಧದ ಕುರಿತು ಸ್ವಲ್ಪವೂ ಅನುರಾಗ ವಿಟ್ಟುಕೊಳ್ಳುವುದಿಲ್ಲ; ಅದೇ ಪ್ರಕಾರ ಸಮ್ಯಗ್ದೃಷ್ಟಿಯು ನಿರ್ವಾಂಛಕನಿದ್ದರೂ ಕೂಡ ವರ್ತಮಾನದ ದುಃಖ ದೂರ ಮಾಡುವ ಸಲುವಾಗಿ ಯೋಗ್ಯ ಹಾಗೂ ನ್ಯಾಯದ ವಿಷಯಗಳ ಇಚ್ಛೆ ಮಾಡುತ್ತಾನೆ. ಯಾರಿಗೆ ಪ್ರತ್ಯಾಖಾನಾವರಣ, ಅಪ್ರತ್ಯಾಖ್ಯಾನಾವರಣ ಕಷಾಯಗಳ ಅಭಾವವಾಗಿ ಹೋಗಿದೆ. ಅಂಥ ಮುನಿರಾಜರು ತಮ್ಮ ಶರೀರವು ನೂರು ತುಂಡುಗಳಾಗಿ ಹೋದರೂ ಕೂಡ ವಿಷಯಗಳ ಇಚ್ಛೆಯನ್ನೆಂದೂ ಮಾಡುವುದಿಲ್ಲ. ಆದುದರಿಂದ ಸಮ್ಯಗ್ದೃಷ್ಟಿಗಳಿಗೆ ನಿಃಕಾಂಕ್ಷಿತ ಗುಣವು ಇದ್ದೇ ಇರುತ್ತದೆ.

**ನಿರ್ವಿಚಿಕಿತ್ಸೆಗುಣ :-** ಸಮ್ಯಗ್ದೃಷ್ಟಿಯು ಅಶುಭ ಕರ್ಮದ ಉದಯದಿಂದ ಪ್ರಾಪ್ತವಾದ ಅಶುಭಸಾಮಗ್ರಿಯಲ್ಲಿ ಗ್ಲಾನಿ ಮಾಡುವುದಿಲ್ಲ, ಪರಿಣಾಮ ಕೆಡಿಸಿಕೊಳ್ಳುವುದಿಲ್ಲ. ಅವನು ವಿಚಾರಿಸುವುದೇನೆಂದರೆ ನಾನು ಪೂರ್ವದಲ್ಲಿ ಎಂಥ ಕರ್ಮ ಕಟ್ಟಿಕೊಂಡಿದ್ದೇನೆ ಅದರ ಉದಯದ ಅನುಸಾರವಾಗಿಯೇ ಭೋಜನ, ಪಾನೀಯ, ಸ್ತ್ರೀ, ಪುತ್ರ, ದಾರಿದ್ರ, ಸಂಪತ್ತು ವಿಪತ್ತುಗಳು ಪ್ರಾಪ್ತವಾಗಿವೆ. ಬೇರೆ ಯಾವ ರೋಗೀ, ದರಿದ್ರೀ, ಹೀನ, ನೀಚ, ಮಲಿನರನ್ನು ನೋಡಿ ತನ್ನ ಪರಿಣಾಮ ಕೆಡಿಸಿಕೊಳ್ಳುವುದಿಲ್ಲ, ಪಾಪದ ಸಾಮಗ್ರಿಯೆಂದು ತಿಳಿದುಕೊಂಡು ಕಲುಷತೆ ಮಾಡುವುದಿಲ್ಲ, ಮಲ-ಮೂತ್ರ-ಕೊಳಚೆ ಮೊದಲಾದ ದ್ರವ್ಯಗಳನ್ನು ನೋಡಿ ಭಯಂಕರ ಸ್ಮಶಾನ, ವನ ಮೊದಲಾದ ಕ್ಷೇತ್ರಗಳನ್ನು ನೋಡಿ, ಭಯರೂಪ ದುಃಖದಾಯಕ ಕಾಲವನ್ನು ನೋಡಿ, ದುಷ್ಟತನ, ಕಹಿತನ ಇತ್ಯಾದಿ ವಸ್ತುವಿನ ಸ್ವಭಾವವನ್ನು ನೋಡಿ ತಮ್ಮ ಪರಿಣಾಮಗಳಲ್ಲಿ ಕ್ಲೇಶಪಡದಿರುವುದು ಅದು ನಿರ್ವಿಚಿಕಿತ್ಸೆಯೆಂಬ ಅಂಗವು ಸಮ್ಯಗ್ದೃಷ್ಟಿಗಳಿಗೆ ಇದ್ದೇ ಇರುತ್ತದೆ.

**ಅಮೂಢದೃಷ್ಟಿ ಗುಣ :-** ಸುಳ್ಳು ಶಾಸ್ತ್ರಗಳಿಂದ, ವ್ಯಂತರ ಮೊದಲಾದ ದೇವಕೃತ ವಿಕ್ರಿಯೆಗಳಿಂದ, ಮಣಿ-ಮಂತ್ರ-ಔಷಧ ಮೊದಲಾದವುಗಳ ಪ್ರಭಾವದಿಂದ, ಅನೇಕ ವಸ್ತುಗಳ ವಿಪರೀತ ಸ್ವಭಾವವನ್ನು ನೋಡಿ ಸತ್ಯ ಧರ್ಮದಿಂದ ಚಲಾಯಮಾನರಾಗದಿರುವುದು ಅದು ಸಮ್ಯಗ್ದರ್ಶನದ ಅಮೂಢದೃಷ್ಟಿ ಗುಣವಿದೆ ಅದು ಸಮ್ಯಗ್ದೃಷ್ಟಿಗಳಿಗೆ ಇದ್ದೇ ಇರುತ್ತದೆ.

**ಉಪಗೂಹನ ಅಂಗ ಃ-** ಸಮ್ಯಗ್ದೃಷ್ಟಿಯು ಅನ್ಯ ಜೀವರುಗಳ ಅಜ್ಞಾನದಿಂದ, ಅಶಕ್ತತೆಯಿಂದ ತಗಲಿದ ದೋಷಗಳನ್ನು ನೋಡಿ ಅವನ್ನು ಮರೆಮಾಡುತ್ತಾರೆ. **ಈ ಸಂಸಾರೀ ಜೀವರುಗಳು ಜ್ಞಾನಾವರಣ, ದರ್ಶನಾವರಣ ಮೋಹನೀಯ ಕರ್ಮಗಳ ವಶವಾಗಿ ತಮ್ಮ ಸ್ವಭಾವವನ್ನು ಮರೆಯುತ್ತಿದ್ದಾರೆ.** ಕರ್ಮದ ಆಧೀನರಾಗಿ ಅಸತ್ಯ ವಚನ, ಪರಧನ ಹರಣ, ಕುಶೀಲ ಮೊದಲಾದ ಪಾಪಗಳಲ್ಲಿ ಪ್ರವೃತ್ತಿ ಮಾಡುತ್ತಾರೆ. ಪಾಪಗಳಿಂದ ದೂರವಿರುವಂಥವರು ಧನ್ಯರಿದ್ದಾರೆ. ಯಾರೋ ಪ್ರಸಿದ್ಧ ಧರ್ಮಾತ್ಮ ಪುರುಷರಿಂದ ಪಾಪದ ಉದಯದಲ್ಲಿ ಯಾವುದಾದರೂ ಅಪರಾಧವಾಗಿ ಹೋದರೆ ಅದನ್ನು ತಿಳಿದುಕೊಂಡು ಹೀಗೆ ವಿಚಾರ ಮಾಡುತ್ತಾರೆ - ಒಂದು ವೇಳೆ ಈ ದೋಷವು ಪ್ರಕಟವಾಗಿ ಬಿಟ್ಟರೆ ಅನ್ಯ ಧರ್ಮಾತ್ಮರುಗಳ ಹಾಗೂ ಜೈನಧರ್ಮದ ಮಹಾನ ನಿಂದೆಯಾಗುವುದೆಂದು ತಿಳಿದುಕೊಂಡು ಅವರ ದೋಷವನ್ನು ಮರೆಮಾಡಿಬಿಡುತ್ತಾರೆ. ತಮ್ಮ ಗುಣಗಳ ಪ್ರಶಂಸೆಯ ಇಚ್ಛೆಯುಳ್ಳವರಾಗಿರುವುದಿಲ್ಲ. ಇಂಥ ಉಪಗೂಹನ ಗುಣವು ಸಮ್ಯಗ್ದೃಷ್ಟಿಗಳಿಗೆ ಇದ್ದೇ ಇರುತ್ತದೆ.

**ಸ್ಥಿತಿಕರಣ ಗುಣ ಃ-** ಯಾರಾದರೂ ಧರ್ಮಾತ್ಮ ಪುರುಷರ ಪರಿಣಾಮವು ಎಂದಾದರೂ ರೋಗದ ವೇದನೆಯಿಂದ ಧರ್ಮದಿಂದ ವಿಚಲಿತವಾಗಿ ಹೋದರೆ, ದಾರಿದ್ರದಿಂದ, ಉಪಸರ್ಗ ಬರುವುದರಿಂದ, ಪರೀಷಹಗಳನ್ನು ಸಹಿಸಲಾಗದಿರುವುದರಿಂದ ಅಸಹಾಯತೆಯಿಂದ, ಅನ್ನ-ನೀರು ನಿಂತುಹೋಗುವುದರಿಂದ ಪರಿಣಾಮವು ಧರ್ಮದಿಂದ ಶಿಥಿಲವಾಗತೊಡಗಿದರೆ ಅವರಿಗೆ ಉಪದೇಶಾದಿಗಳನ್ನು ಮಾಡಿ ಪರಿಣಾಮವು ಧರ್ಮದಲ್ಲಿ ಸ್ಥಿರವಾಗುವ ಸಲುವಾಗಿ ಹೀಗೆ ಹೇಳಬೇಕು. **ಓ ಜ್ಞಾನಿಗಳೇ ! ಓ ! ಧರ್ಮದ ಧಾರಕರೇ !** ತಾವು ಜಾಗೃತರಾಗಿರಿ ! ಹೇಡಿತನ ಧಾರಣ ಮಾಡಿ ಧರ್ಮದಲ್ಲೇಕೆ ಶಿಥಿಲರಾಗುತ್ತಿರುವಿರಿ ? ರೋಗದ ಕಷ್ಟದಿಂದ ಧರ್ಮದಿಂದೇಕೆ ವಿಚಲಿತರಾಗುವಿರಿ ? ಜ್ಞಾನಿಯಾದ ತಾವು ಇಂಥ ಅಪರಾಧವನ್ನೇಕೆ ಮಾಡುವಿರಿ? ಈ ಅಸಾತಾ ವೇದನೀಯ ಕರ್ಮವು ತನ್ನ ಸಮಯ ಪಡೆದು ಉದಯದಲ್ಲಿ ಬಂದಿದೆ. ಈಗ ತಾವು ಪುಕ್ಕರಾಗಿ, ದೀನರಾಗಿ ರೋದನ, ವಿಲಾಪ ಮಾಡುತ್ತ ಭೋಗಿಸಿದರೆ ಕರ್ಮವು ಬಿಡಲಾರದು. ಕರ್ಮಕ್ಕೆ ದಯೆಯಿರುವುದಿಲ್ಲ. ಅದು ನಿಮ್ಮ ರೋದನ, ವಿಲಾಪಮಾಡುತ್ತಿರುವುದನ್ನು ನೋಡಿ ತನ್ನ ರಸ ಕೊಡುವಲ್ಲಿ ಹಿಂಜರಿಯಲಾರದು. ಒಂದು ವೇಳೆ ಧೈರ್ಯ ಧಾರಣ ಮಾಡಿ ಭೋಗಿಸಿದರೂ ಕೂಡ ಕರ್ಮವು ಬಿಡಲಾರದು.

ಯಾವ ದೇವ, ದಾನವ, ಮಂತ್ರ, ತಂತ್ರ, ಔಷಧ, ವೈದ್ಯ ಮೊದಲಾದ ಹಾಗೂ ಸ್ತ್ರೀ, ಪುತ್ರ, ಮಿತ್ರ, ಬಂಧು, ಸೇವಕ, ಸುಭಟ ಮೊದಲಾದವರು ಉದಯದಲ್ಲಿ ಬಂದಿರುವ ಕರ್ಮದ ಹರಣ ಮಾಡುವಲ್ಲಿ ಸಮರ್ಥರಿಲ್ಲವೆಂಬುದನ್ನು ನೀವು ಕೂಡ ಚನ್ನಾಗಿ ತಿಳಿಯುವಿರಿ, ಈಗ ಈ ವೇದನೆಯ ಸಮಯದಲ್ಲಿ ಹೇಡಿಗಳಾಗಿ ತಮ್ಮ ಧರ್ಮ, ಯಶಸ್ಸು, ಪರಲೋಕ ಮೊದಲಾದುವನ್ನೇಕೆ ಕೆಡಿಸಿಕೊಳ್ಳುವಿರಿ ? ಇವನ್ನು ಕೆಡಿಸಿಕೊಂಡು ಸ್ವಚ್ಛಂದ ಚೇಷ್ಟೆ ವಿಲಾಪ ಮೊದಲಾದುವನ್ನು ಮಾಡುವುದರಿಂದ ವೇದನೆಯು ಕಡಿಮೆಯಾಗುವುದಿಲ್ಲ. ಎಷ್ಟೆಷ್ಟು ಅಧೀರರಾದಷ್ಟು ವೇದನೆಯ ದುಃಖವು ಹೆಚ್ಚುವುದು. ಆದುದರಿಂದ ಈಗ ಧೈರ್ಯಧಾರಣ ಮಾಡಿ ಧರ್ಮದ ಆಶ್ರಯ ತೆಗೆದುಕೊಳ್ಳಬೇಕು.

ಸಂಸಾರದಲ್ಲಿ ನರಕದ ಹಾಗೂ ತಿರ್ಯಂಚಗಳ ಕ್ಷುಧೆ, ತೃಷೆ, ರೋಗ, ಸಂತಾಪ, ಛೇದನ, ಭೇದನ, ಮಾರಣ, ಶೀತ, ಉಷ್ಣ ಮೊದಲಾದವುಗಳ ಘೋರ ದುಃಖವನ್ನು ಅಸಂಖ್ಯಾತ ಕಾಲದವರೆಗ ಅನೇಕ ಬಾರಿ ಅನಂತ ಭವಗಳನ್ನು ಧಾರಣ ಮಾಡಿ ಭೋಗಿಸಿದೆ. ಈಗ ತಮಗೆ ಇದೆಷ್ಟು ದುಃಖವಿದೆ ? ಇದಂತೂ ಅಲ್ಪ ಸಮಯದಲ್ಲಿಯೇ ನಿರ್ಜರಿಸಿ ಹೋಗುವುದು. ಈ ರೋಗದ ವೇದನೆಯು ದೇಹವನ್ನು ಹೊಡೆಯುವುದು, ನಿಮ್ಮ ಚೇತನ ಸ್ವರೂಪನಾದ ಆತ್ಮನನ್ನು ಹೊಡೆಯಲಾರದು. ದೇಹದ ಮರಣವಂತೂ ಅವಶ್ಯವಾಗಿ ಆಗೇ ಆಗುವುದು. ದೇಹಧಾರಣ ಮಾಡಿದವರೆಲ್ಲರ ಮರಣವು ಅವಶ್ಯವಾಗಿ ಆಗುವುದು. ಆದುದರಿಂದ ಈಗ ತಾವುಗಳು ಸಚೇತರಾಗಬೇಕು, ಇದು ಕರ್ಮವನ್ನು ಜಯಿಸುವ ಅವಸರವಿದೆ.

**ಈಗ ಪಂಚಪರಮೇಷ್ಠೀ ಭಗವಂತರುಗಳ ಆಶ್ರಯ ತೆಗೆದುಕೊಂಡು ತಮ್ಮ ಅಜರ, ಅಮರ, ಅಖಂಡ, ಜ್ಞಾತಾ-ದೃಷ್ಟಾಸ್ವಭಾವವನ್ನು ಗ್ರಹಣ ಮಾಡಬೇಕು, ಇಂಥ ಅವಸರವು ಪುನಃ ಪ್ರಾಪ್ತವಾಗುವುದು ತೀರ ದುರ್ಲಭವಿದೆ.**

ಈ ಪ್ರಕಾರ ಧರ್ಮದ ಉಪದೇಶವಿತ್ತು ದೃಢ ಮಾಡಬೇಕು. ಶೀಘ್ರವಾಗಿ ಅನಿತ್ಯ, ಅಶರಣ ಮೊದಲಾದ ಭಾವನೆಗಳ ಚಿಂತನೆ ಮಾಡಿಸಬೇಕು-ಗ್ರಹಣ ಮಾಡಿಸಬೇಕು. ತ್ಯಾಗ, ವ್ರತ ಮೊದಲಾದುವನ್ನು ಬಿಟ್ಟುಕೊಟ್ಟಿದ್ದರೆ ಪುನಃಗ್ರಹಣ ಮಾಡಿಸಬೇಕು. ಶರೀರದ ಶುಶ್ರೂಷೆ ಮಾಡಿ ದುಃಖ ದೂರ ಮಾಡಬೇಕು, ಸೇವೆ-ಪರಿಚರ್ಯೆ ಮಾಡುವಂಥವರಾರೂ ಇಲ್ಲದಿದ್ದರೆ ತಾವು ಸ್ವಯಂ ಮಾಡಬೇಕು, ಅನ್ಯಸಾಧರ್ಮಿಗಳ ಜತೆ ದೊರಕಿಸಿಕೊಡಬೇಕು. ಅನ್ನ, ನೀರು, ಔಷಧ ಮೊದಲಾದುವನ್ನು ಕೊಟ್ಟು ಸ್ಥಿತಿಕರಣ ಮಾಡುವುದು. ಮಲ, ಮೂತ್ರ, ಕಫ ಮೊದಲಾದವು ಬಂದಿದ್ದರೆ ತೆಗೆದು ಸ್ವಚ್ಛಮಾಡಬೇಕು, ಇತ್ಯಾದಿ ಮಾಡಿ ಸ್ಥಿರ ಮಾಡುವುದು. ದಾರಿದ್ರ ಮೊದಲಾದುವಿಂದ ಚಂಚಲವಾಗಿದ್ದರೆ ಭೋಜನ ಪಾನಾದಿಗಳಿಂದ ಆಜೀವಿಕೆಯ ವ್ಯವಸ್ಥೆ ಮಾಡುವುದು, ಉಪಸರ್ಗ ಪರೀಷಹಾದಿಗಳನ್ನು ದೂರ ಮಾಡಿ ನಿಜವಾದ ಧರ್ಮದಲ್ಲಿ ಸ್ಥಾಪನೆ ಮಾಡುವುದು, ಇಂಥ ಸ್ಥಿತಿಕರಣ ಅಂಗವು ಸಮ್ಯಗ್ದೃಷ್ಟಿಗಳಿಗೆ ಇದ್ದೇ ಇರುತ್ತದೆ.

**ವಾತ್ಸಲ್ಯಗುಣ :-** ವಾತ್ಸಲ್ಯ ನಾಮದ ಗುಣವು ಸಮ್ಯಗ್ದೃಷ್ಟಿಗಳಿಗೆ ಇದ್ದೇ ಇರುತ್ತದೆ. ಸಂಸಾರೀ ಜೀವರುಗಳಿಗೆ ತಮ್ಮ ಸ್ತ್ರೀ-ಪುತ್ರಾದಿಕರಲ್ಲಿ, ಇಂದ್ರಿಯಗಳ ವಿಷಯ ಭೋಗಗಳಲ್ಲಿ, ಧನ ಸಂಪಾದನೆಯಲ್ಲಿ ಅಧಿಕ ಪ್ರೀತಿಯು ಇದ್ದೇ ಇರುತ್ತದೆ. ಸ್ತ್ರೀ, ಪುತ್ರ, ಧನ,ಪರಿಗ್ರಹ, ವಿಷಯ ಮೊದಲಾದುವನ್ನು ಸಂಸಾರ ಪರಿಭ್ರಮಣದ ಕಾರಣವೆಂದು ತಿಳಿದುಕೊಂಡು ಅಂತರಂಗದಲ್ಲಿ ವೀತರಾಗತೆ ಧಾರಣ ಮಾಡಿದ ಧರ್ಮಾತ್ಮರಲ್ಲಿ, ರತ್ನತ್ರಯಧಾರಕರಾದ ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆಯಲ್ಲಿ ಮತ್ತು ಧರ್ಮದ ಆಯತನಗಳಲ್ಲಿ ಯಾರಿಗೆ ಅತ್ಯಂತ ಪ್ರೀತಿಯಿರುತ್ತದೆ ಅವರಿಗೆ ಸಮ್ಯಗ್ದರ್ಶನದ ವಾತ್ಸಲ್ಯ ಅಂಗವು ಇದ್ದೇ ಇರುತ್ತದೆ.

**ಪ್ರಭಾವನೆ ಗುಣ :-** ತಮ್ಮ ಮನಸ್ಸಿನಿಂದ, ವಚನದಿಂದ, ಕಾಯದಿಂದ, ಧನದಿಂದ, ದಾನದಿಂದ, ತಪಸ್ಸಿನಿಂದ, ಭಕ್ತಿಯಿಂದ, ರತ್ನತ್ರಯದ ಪ್ರಭಾವನೆಯನ್ನು ಪ್ರಕಟ ಮಾಡುವುದು ಅದು ಮಾರ್ಗಪ್ರಭಾವನೆ ಅಂಗವಿದೆ. ಇದರ ವಿಶೇಷ ವರ್ಣನೆಯನ್ನು ಪ್ರಭಾವನೆ ಅಂಗದ ಭಾವನೆಯಲ್ಲಿ ಮಾಡಲಾಗುವುದು.

ಈ ಪ್ರಕಾರ ಸಮ್ಯಗ್ದರ್ಶನದ ಎಂಟು ಅಂಗಗಳನ್ನು ಧಾರಣ ಮಾಡುವುದರಿಂದ ಈ ಗುಣಗಳ ಪ್ರತಿಪಕ್ಷಿಯಾದ ಶಂಕೆ ಮೊದಲಾದ ಎಂಟು ದೋಷಗಳ ಅಭಾವವಾಗುವುದರಿಂದ ದರ್ಶನ ವಿಶುದ್ಧತೆಯಾಗುತ್ತದೆ. ಈ ಗುಣಗಳನ್ನು ಧಾರಣ ಮಾಡುವುದರಿಂದ ಪವಿತ್ರ ಉಜ್ವಲ ದರ್ಶನ ವಿಶುದ್ಧತೆ ನಾಮದ ಭಾವನೆಯಾಗುತ್ತದೆ.

ಲೋಕಮೂಢತೆ, ದೇವಮೂಢತೆ, ಗುರುಮೂಢತೆಯ ಪರಿಣಾಮಗಳನ್ನು ಬಿಟ್ಟುಕೊಟ್ಟು ಶ್ರದ್ಧೆಯನ್ನು ಉಜ್ವಲ ಮಾಡುವುದು.

**ಲೋಕ ಮೂಢತೆಯ ತ್ಯಾಗ :-** ಲೋಕಮೂಢತೆಯ ಸ್ವರೂಪವು ಹೀಗಿದೆ.ಸತ್ತವರ ಮೂಳೆ, ಉಗುರುಗಳನ್ನು ಗಂಗೆಯಲ್ಲಿ ಬಿಡುವುದರಿಂದ ಸತ್ತವನಿಗೆ ಮುಕ್ತಿಯಾಗುತ್ತದೆಂದು ಮನ್ನಿಸುವುದು; ಗಂಗಾಜಲವನ್ನು ಉತ್ತಮವೆಂದು ಮನ್ನಿಸುವುದು; ಗಂಗಾಸ್ನಾನದಲ್ಲಿ, ನದೀಸ್ನಾನದಲ್ಲಿ, ಸಮುದ್ರಸ್ನಾನದಲ್ಲಿ ಧರ್ಮ ಮನ್ನಿಸುವುದು; ಸತ್ತಪತಿಯ ಜತೆ ಜೀವಂತ ಸ್ತ್ರೀ ಹಾಗೂ ದಾಸಿಯನ್ನು ಅಗ್ನಿಯಲ್ಲಿ ಸುಟ್ಟು ಸತ್ತು ಹೋಗುವಂಥವರನ್ನು ಸತಿಯೆಂದು ಮನ್ನಿಸಿ ಪೂಜಿಸುವುದು; ಸತ್ತು ಹೋದ ಪೂರ್ವಜರನ್ನು ಪಿತೃರೆಂದು ಪೂಜಿಸುವದು; ಪಿತೃರನ್ನು ಪತ್ರಗಳಲ್ಲಿ ಸ್ಥಾಪನೆ ಮಾಡಿ ಗುರುತಿಸುವದು; ಸೂರ್ಯ, ಚಂದ್ರ ಮಂಗಳ ಮೊದಲಾದ ಗ್ರಹಗಳನ್ನು ಚಿನ್ನ-ಬೆಳ್ಳಿಗಳಿಂದ ಮಾಡಿಸಿ ಕತ್ತಿನಲ್ಲಿ ಧರಿಸುವುದು; ಗ್ರಹಗಳ ದೋಷ ದೂರ ಮಾಡುವ ಸಲುವಾಗಿ ದಾನ ಕೊಡುವುದು; ಸಂಕ್ರಾಂತಿ, ವ್ಯತಿಪಾತ, ಅಮವಾಸ್ಯೆಯೆಂದು ಮನ್ನಿಸಿ ದಾನ ಕೊಡುವುದು; ಸೂರ್ಯ, ಚಂದ್ರರಿಗೆ ಗ್ರಹಣ ಹಿಡಿದ ಮೇಲೆ ಸ್ನಾನ ಮಾಡುವುದು. ದರ್ಭವನ್ನು ಶುದ್ಧ ಮನ್ನಿಸುವುದು, ಆನೆಯ ದಂತಗಳನ್ನು ಶುದ್ಧ ಮನ್ನಿಸುವುದು, ಬಾವಿ ಪೂಜಿಸುವುದು, ಗಣೇಶ ಪೂಜಿಸುವುದು, ದೀಪದ ಜ್ಯೋತಿ ಪೂಜಿಸುವುದು, ಚೆಂಡಿಕೆ ಇಡುವುದು, ದೇವತೆಯ ಹರಿಕೆ ಹೊರುವುದು, ದೇವತೆಗೆ ಕಾಣಿಕೆ ಕೊಡುವುದನ್ನು ಪೂರ್ಣ ಮಾಡುತ್ತಿರುವುದರಿಂದ ತಮ್ಮ ಸಂತಾನವನ್ನು ಜೀವಿತವೆಂದು ಮನ್ನಿಸುವುದು, ಸಂತಾನವನ್ನು ದೇವತೆಯಿಂದ ಕೊಡಲ್ಪಟ್ಟಿದ್ದೆಂದೂ ಮನ್ನಿಸುವುದು.

ತಮ್ಮ ಲಾಭದ ಸಲುವಾಗಿ, ಕಾರ್ಯಸಿದ್ಧಿಯ ಸಲುವಾಗಿ ಹೀಗೆ ಪ್ರಾರ್ಥನೆ ಮಾಡುವುದು-ನನಗೆ ಇಂತಿಷ್ಟು ಲಾಭವಾದರೆ, ಸಂತಾನದ ರೋಗವು ಹೊರಟು ಹೋದರೆ, ಸಂತಾನವು ಉತ್ಪನ್ನವಾದರೆ, ವಿರೋಧಿಯ ನಾಶವಾಗಿ ಹೋದರೆ ನಾನು ತಮಗೆ ಕೊಡೆ ಅರ್ಪಿಸುವೆನು, ಇಂತಿಷ್ಟು ಧನ ಕಾಣಿಕೆ ಕೊಡುವೆನೆಂದು, ದೇವತೆಗೆ ಲಂಚ ಕೊಟ್ಟು ತಮ್ಮ ಕಾರ್ಯದ ಸಿದ್ಧಿ ಮಾಡಿಕೊಳ್ಳಲು ಬಯಸುವುದು.

ಜಾಗರಣೆ ಮಾಡುವುದು; ಕುಲ ದೇವತೆಯನ್ನು ಪೂಜಿಸುವುದು; ಶೀತಲಾ ಮಾತೆಯನ್ನು ಪೂಜಿಸುವುದು; ಲಕ್ಷ್ಮೀ, ಚಿನ್ನ-ಬೆಳ್ಳಿಗಳನ್ನು ಪೂಜಿಸುವುದು; ಮಸಿಕುಡಿಕೆಯನ್ನು ಪೂಜಿಸುವುದು; ಪಶುಗಳನ್ನು ಪೂಜಿಸುವುದು; ಅನ್ನ-ಜಲವನ್ನು ಪೂಜಿಸುವುದು; ಶಸ್ತ್ರವನ್ನು, ವೃಕ್ಷವನ್ನು, ಅಗ್ನಿಯನ್ನು ದೇವತೆಯೆಂದು ಮನ್ನಿಸಿ ಪೂಜಿಸುವುದೆಲ್ಲವೂ ಲೋಕಮೂಢತೆಯಿದೆ. ಮಿಥ್ಯಾದರ್ಶನದ ಪ್ರಭಾವದಿಂದ ಶ್ರದ್ಧೆಯ ವಿಪರೀತತೆಯಿದ್ದು ಅದೆಲ್ಲವನ್ನೂ ತ್ಯಾಗ ಮಾಡುವುದೇ ಯೋಗ್ಯವಿದೆ.

**ದೇವಮೂಢತೆಯ ತ್ಯಾಗ :-** ದೇವ-ಕುದೇವದ ವಿಚಾರವಿಲ್ಲದೆ ಕಾಮೀ, ಕ್ರೋಧೀ,ಶಸ್ತ್ರಧಾರಿ, ಪರಿಗ್ರಹಿಯಲ್ಲೂ ಈಶ್ವರತನದ ಬುದ್ಧಿ ಮಾಡಿ ಇವರು ಭಗವಾನ ಪರಮೇಶ್ವರರಿದ್ದಾರೆ, ವಿಶ್ವದ ಸಮಸ್ತ ರಚನೆಯು ಇವರಿಂದಲೇ ರಚಿತವಾಗಿದೆ, ಇವರೇ ಕರ್ತಾ-ಧರ್ತಾ ಇದ್ದಾರೆ; ಜಗತ್ತಿನಲ್ಲಿ ಆಗುತ್ತಿರುವುದೆಲ್ಲವೂ ಈ ಈಶ್ವರನು ಮಾಡುವುದರಿಂದಲೇ ಆಗುತ್ತದೆ. ಒಳಿತು ಅಥವಾ ಕೆಡಕೆಲ್ಲವೂ ಜನರುಗಳ ಮೂಲಕ ಈಶ್ವರನು ಮಾಡಿಸಿದಲ್ಲದೆ ಯಾವುದೂ ಆಗುವುದಿಲ್ಲ, ಏನೆಲ್ಲವೂ ಈಶ್ವರನ ಇಚ್ಛೆಯ ಆಧೀನವಾಗಿಯೇ ಆಗುತ್ತದೆ, ಶುಭಕರ್ಮವಿರಲಿ ಅಥವಾ ಅಶುಭಕರ್ಮವಿರಲಿ ಈಶ್ವರನ ಪ್ರೇರಣೆಯಿಲ್ಲದೆ ಆಗುವುದಿಲ್ಲ, ಇತ್ಯಾದಿ ಅನೇಕ ಪ್ರಕಾರದ **ಪರಿಣಾಮಗಳೆಲ್ಲವು ಮಿಥ್ಯಾದರ್ಶನದ ಉದಯದಿಂದ ಆಗುತ್ತವೆ, ಇವು ದೇವಮೂಢತೆಯಿವೆ.**

**ಗುರುಮೂಢತೆಯ ತ್ಯಾಗ :-** ಪಾಖಂಡೀ, ಹೀನ ಆಚಾರದ ಧಾರಕ, ಪರಿಗ್ರಹೀ, ಲೋಭೀ, ವಿಷಯ ಲೋಲುಪಿಯನ್ನು ಚಮತ್ಕಾರ ಮಾಡುವವನೆಂದು ಮನ್ನಿಸುವುದು, ಅವನ ವಚನಗಳನ್ನು ಸತ್ಯ ಸಿದ್ಧವೆಂದು ಮನ್ನಿಸುವುದು, ಇವರು ಪ್ರಸನ್ನರಾಗಿ ಬಿಟ್ಟರೆ ನಮ್ಮ ಇಚ್ಛಿತ ಕಾರ್ಯಗಳೆಲ್ಲವೂ ಪೂರ್ಣವಾಗುವವು; ಇವರು ತಪಸ್ವಿಯಿದ್ದಾರೆ, ಪೂಜ್ಯರಿದ್ದಾರೆ, ಮಹಾಪುರುಷರಿದ್ದಾರೆ, ಪ್ರಸಿದ್ಧರಿದ್ದಾರೆ ಇತ್ಯಾದಿ ವಿಪರೀತ ಶ್ರದ್ಧೆ ಮಾಡುವುದು ಅದು ಗುರು ಮೂಢತೆಯಿದೆ. ಯಾರ ಪರಿಣಾಮಗಳಲ್ಲಿ ಈ ಮೂರು ಮೂಢತೆಗಳು ಅಂಶ ಮಾತ್ರವೂ ಇರುವುದಿಲ್ಲ ಅವರಿಗೆ ದರ್ಶನವಿಶುದ್ಧತೆಯು ಇರುತ್ತದೆ.

**ಆರು ಅನಾಯತನಗಳ ತ್ಯಾಗ :-** ಆರು ಅನಾಯತನಗಳ ತ್ಯಾಗ ಮಾಡುವುದರಿಂದ ದರ್ಶನವಿಶುದ್ಧಿಯಾಗುತ್ತದೆ. ಕುದೇವ, ಕುಗುರು, ಕುಶಾಸ್ತ್ರ ಮತ್ತು ಇವರ ಸೇವನೆ ಮಾಡುವಂಥವರು, ಇವು ಆರು ಧರ್ಮದ ಸ್ಥಾನಗಳಿಲ್ಲದಿರುವುದರಿಂದ ಇವು ಅನಾಯತನಗಳಿವೆ.

ರಾಗೀ, ದ್ವೇಷಿ, ಕಾಮೀ,ಕ್ರೋಧೀ, ಲೋಭೀ, ಶಸ್ತ್ರಾದಿಗಳಿಂದ ಯುಕ್ತ, ಪರಿಗ್ರಹೀ ಮತ್ತು ಮಿಥ್ಯಾತ್ವ ಸಹಿತರಾಗಿರುವವರಲ್ಲಿ ನಿಜವಾದ ಧರ್ಮವು ಕಂಡು ಬರುವುದಿಲ್ಲ, ಆದುದರಿಂದ ಅವರು ಕುದೇವರಿದ್ದಾರೆ, ಅನಾಯತನರಿದ್ದಾರೆ.

ಪಂಚೇಂದ್ರಿಯ ವಿಷಯಗಳ ಲೋಲುಪಿ, ಪರಿಗ್ರಹಧಾರೀ, ಆರಂಭಮಾಡುವಂಥ-ಮಾಡಿಸುವಂಥ, ವೇಷಧಾರಿಗಳಾದ ಧರ್ಮಹೀನರಿದ್ದಾರೆ, ಅವರು ಗುರುಗಳಿಲ್ಲ, ಆದುದರಿಂದ ಅವರು ಅನಾಯತನಗಳಿದ್ದಾರೆ.

ಹಿಂಸೆಯ ಆರಂಭದ ಪ್ರೇರಣೆ ಕೊಡುವಂಥ, ರಾಗ-ದ್ವೇಷ, ಕಾಮಾದಿ ದೋಷಗಳನ್ನು ವೃದ್ಧಿಸುವಂಥ, ಸರ್ವಥಾ ಏಕಾಂತದ ಪ್ರರೂಪಕ ಶಾಸ್ತ್ರಗಳಿವೆ ಅವು ಕುಶಾಸ್ತ್ರಗಳಿವೆ, ಧರ್ಮರಹಿತವಿವೆ, ಆದುದರಿಂದ ಅವು ಅನಾಯತನಗಳಿವೆ.

ದೇವಿ, ದಿಹಾಡೀ, ಕ್ಷೇತ್ರಪಾಲ ಮೊದಲಾದ ದೇವಗಳಿಗೆ ವಂದಿಸುವಂಥವರು ಧರ್ಮರಹಿತರಿದ್ದಾರೆ, ಆದುದರಿಂದ ಅವರು ಅನಾಯತನರಿದ್ದಾರೆ.

ಭಕ್ತಿಯಿಂದ ಕುದೇವರ ಸೇವೆ ಮಾಡುವಂಥವರು ಧರ್ಮರಹಿತರಿದ್ದಾರೆ, ಆದುದರಿಂದ ಅವರು ಅನಾಯತನರಿದ್ದಾರೆ.

ಮಿಥ್ಯಾಶಾಸ್ತ್ರಗಳನ್ನು ಓದುವಂಥವರು, ಅವುಗಳ ಸೇವೆ-ಭಕ್ತಿ ಮಾಡುವಂಥವರು ಏಕಾಂತಿಗಳಿದ್ದಾರೆ, ಅವರು ಧರ್ಮದ ಸ್ಥಾನರಿಲ್ಲ, ಆದುದರಿಂದ ಅವರು ಅನಾಯತನರಿದ್ದಾರೆ.

ಈ ಪ್ರಕಾರ ಕುದೇವ, ಕುಗುರು, ಕುಶಾಸ್ತ್ರಹಾಗೂ ಇವರ ಸೇವೆ ಭಕ್ತಿ ಮಾಡುವಂಥವರು. ಈ ಆರರಲ್ಲಿ ಸಮ್ಯಕ್ ಧರ್ಮವಿರುವುದಿಲ್ಲವೆಂದು ದೃಢ ಶ್ರದ್ಧೆ ಮಾಡುವುದರಿಂದ ದರ್ಶನವಿಶುದ್ಧತೆಯಾಗುತ್ತದೆ.

**ಅಷ್ಟಮದ ತ್ಯಾಗ :-** ಜಾತಿಮದ,ಕುಲಮದ, ಐಶ್ವರ್ಯಮದ, ರೂಪಮದ, ಶಾಸ್ತ್ರಮದ, ತಪಮದ, ಬಲಮದ, ವಿಜ್ಞಾನಮದವೆಂದು ಎಂಟು ಮದಗಳ ಅತ್ಯಂತ ಅಭಾವವು ಯಾರಿಗೆ ಆಗುತ್ತವೆ ಅವರಿಗೆ ದರ್ಶನ ವಿಶುದ್ಧತೆಯಾಗುತ್ತದೆ.

**ಜಾತಿಮದ ತ್ಯಾಗ :-** ಸಮ್ಯಗ್ದೃಷ್ಟಿಯ ವಿಚಾರವು ಹೇಗಿರುತ್ತದೆಂದರೆ-ಎಲೈ ಆತ್ಮನೇ ! ಯಾವ ಈ ಉಚ್ಚ ಜಾತಿಯಿದೆ ಅದು ನಿನ್ನ ಸ್ವಭಾವವಿಲ್ಲ, ಅದಂತೂ ಕರ್ಮದ ಪರಿಣಮನವಿದೆ, ಪರಕೃತವಿದೆ, ವಿನಾಶಶೀಲವಿದೆ, ಕರ್ಮಗಳ ಆಧೀನವಿದೆ, ಮಾತೆಯ ವಂಶವನ್ನು ಜಾತಿಯೆಂದು ಹೇಳುತ್ತಾರೆ. ಸಂಸಾರದಲ್ಲಿ ಅನೇಕ ಬಾರಿ ಅನಂತ ಜಾತಿಗಳನ್ನು ಪಡೆದಿದೆ. ಈ ಜೀವನು ಅನೇಕ ಬಾರಿ, ಚಾಂಡಾಲಿನಿಯ, ಭಿಲ್ಲಿನಿಯ, ಮ್ಲೇಚ್ಛಿನಿಯ, ಚರ್ಮಕಾರಿಣಿಯ, ಮಡಿವಾಳಿನಿಯ, ಕ್ಷೌರಿನಿಯ, ಭಂಗಿನಿಯ, ನರ್ತಿನಿಯ, ವೇಶ್ಯೆಯ, ದಾಸಿಯ, ಜಾರಿಣಿಯ, ಜಾಲಗಾರಿಣಿಯ ಮೊದಲಾದ ಮನುಷ್ಯನಿಯರ ಗರ್ಭದಲ್ಲಿ ಉತ್ಪನ್ನನಾಗಿರುವೆ. ನಾಯಿ, ಹಂದೀ, ಕತ್ತೆ, ನರಿ ಮೊದಲಾದ ತಿರ್ಯಂಚಿನಿಯರ ಗರ್ಭದಲ್ಲಿ ಅನಂತ ಬಾರಿ ಉತ್ಪನ್ನನಾಗಿ ಸತ್ತಿರುವೆ. **ಅನಂತಬಾರಿ ನೀಚ ಜಾತಿಯಲ್ಲಿ ಉತ್ಪನ್ನವಾದ ನಂತರ ಒಂದು ಬಾರಿ ಉಚ್ಚ ಜಾತಿ ಪಡೆಯುತ್ತಾನೆ.** ಇದೇ ಪ್ರಕಾರದಿಂದ ಅನಂತಬಾರಿ ಉಚ್ಚ ಜಾತಿಯನ್ನೂ ಪಡೆಯಲಾಗಿದೆ, ಆದಾಗ್ಯೂ ಸಂಸಾರ ಪರಿಭ್ರಮಣವನ್ನೇ ಮಾಡುತ್ತಲಿದೆ. ಆದುದರಿಂದ ಜಾತಿ ಮದವನ್ನು ಎಂದೂ ಮಾಡಬಾರದು.

**ಕುಲಮದ ತ್ಯಾಗ :-** ತಂದೆಯ ವಂಶವನ್ನು ಕುಲವೆಂದು ಹೇಳುತ್ತಾರೆ. ಉಚ್ಚ-ನೀಚ ಕುಲಗಳೂ ಅನಂತಬಾರಿ ಪ್ರಾಪ್ತವಾಗಿವೆ. ಸಂಸಾರದಲ್ಲಿ ಜಾತಿಯ, ಕುಲದ ಮದವನ್ನು ಹೇಗೆ ಮಾಡಲಾಗುತ್ತದೆ ? ಸ್ವರ್ಗದ ಮಹಾನ ಋದ್ಧಿಧಾರೀ ದೇವನು ಸತ್ತು ಏಕೇಂದ್ರಿಯದಲ್ಲಿ ಬಂದು ಉತ್ಪನ್ನನಾಗುತ್ತಾನೆ, ನಾಯಿ ಮೊದಲಾದ ನಿಂದ್ಯ ತಿರ್ಯಂಚಗಳಲ್ಲಿ ಉತ್ಪನ್ನನಾಗುತ್ತಾನೆ, ಮತ್ತು ಉತ್ತಮ ಕುಲಧಾರಕನಿದ್ದರೂ ಕೂಡ ಚಾಂಡಾಲ ಮೊದಲಾದುವಲ್ಲಿ ಉತ್ಪನ್ನನಾಗುತ್ತಾನೆ. ಆದುದರಿಂದ **ಜಾತಿ-ಕುಲದಲ್ಲಿ ಅಹಂಕಾರ ಮಾಡುವುದು ಮಿಥ್ಯಾದರ್ಶನವಿದೆ.** ಎಲೈ ಆತ್ಮನೇ ! ನಿನ್ನ ಜಾತಿ-ಕುಲಗಳಂತೂ ಸಿದ್ಧರ ಸಮಾನವಿವೆ. ನೀನು ನಿನ್ನ ಸ್ವರೂಪವನ್ನು ಮರೆತು ತಾಯಿಯ ರಜಸ್ಸು ತಂದೆಯ ವೀರ್ಯದಿಂದ ಉತ್ಪನ್ನವಾದ ಜಾತಿ-ಕುಲದಲ್ಲಿ ಮಿಥ್ಯಾ ಏಕತ್ವ ಮಾಡಿ ಪುನಃ ಸಂಸಾರದಲ್ಲಿ ಅನಂತಕಾಲದವರೆಗಿನ ಸಲುವಾಗಿ ನಿಗೋದ ನಿವಾಸದ ಸಿದ್ಧತೆ ಮಾಡಿಕೊಳ್ಳಬೇಡ. ವೀತರಾಗರ ಉಪದೇಶವನ್ನು ಗ್ರಹಣ ಮಾಡಿದ್ದರೆ ಈ ದೇಹದ ಜಾತಿಯನ್ನು ಸಂಯಮ, ಶೀಲ, ದಯೆ, ಸತ್ಯವಚನ ಮೊದಲಾದವುಗಳಿಂದ ಸಾರ್ಥಕ ಮಾಡಿಕೊಳ್ಳು ! ನಾನು ಉತ್ತಮ ಜಾತಿ-ಕುಲಪಡೆದು ಕೂಡ ನೀಚ ಜಾತಿಯವರ ಹಾಗೆ ಹಿಂಸೆ, ಅಸತ್ಯ, ಪರಧನ ಹರಣ, ಕುಶೀಲ ಸೇವನೆ, ಅಭಕ್ಷ ಭಕ್ಷಣೆ ಮೊದಲಾದ ಅಯೋಗ್ಯ ಆಚರಣೆ ಹೇಗೆ ಮಾಡುವುದು ? ಮಾಡಬಾರದು, ಮಾಡಲಾರೆನು. ಈ ಪ್ರಕಾರ ಅಹಂಕಾರ ಮಾಡುವುದು ಯೋಗ್ಯವಿಲ್ಲ. **ಸಮ್ಯಗ್ದೃಷ್ಟಿಗೆ ಕರ್ಮಕೃತವಾದ ಪುದ್ಗಲ ಪರ್ಯಾಯದಲ್ಲಿ ಎಂದೂ ಅಹಂಬುದ್ಧಿಯಾಗುವುದಿಲ್ಲ.**

**ಐಶ್ವರ್ಯಮದ ತ್ಯಾಗ :-** ಐಶ್ವರ್ಯ ಪಡೆದು ಅದರ ಮದ ಹೇಗೆ ಮಾಡುವ ಸಾಧ್ಯತೆಯಿದೆ ? ಈ ಐಶ್ವರ್ಯವಂತೂ ತಮ್ಮ ಆತ್ಮನ ಸ್ವರೂಪವನ್ನು ಮರೆತು ಅಧಿಕ ಆರಂಭ, ರಾಗ, ದ್ವೇಷ ಮೊದಲಾದವುಗಳಲ್ಲಿ ಪ್ರವೃತ್ತಿ ಮಾಡಿಸುವುದು, ಚತುರ್ಗತಿಗಳಲ್ಲಿ ಪರಿಭ್ರಮಣದ ಕಾರಣವಿದೆ. **ನಿರ್ಗ್ರಂಥತೆಯು ಮೂರು ಲೋಕದಲ್ಲಿ ಧ್ಯಾನಯೋಗ್ಯವಿದೆ, ಪೂಜ್ಯವಿದೆ.** ಈ ಐಶ್ವರ್ಯವು ಕ್ಷಣ ಭಂಗುರವಿದೆ ದೊಡ್ಡ ದೊಡ್ಡ ಇಂದ್ರ-ಅಹಮಿಂದ್ರರುಗಳ

ಐಶ್ವರ್ಯವೂ ಪತನ ಸಹಿತವಿದೆ. ಬಲಭದ್ರ, ನಾರಾಯಣರ ಐಶ್ವರ್ಯವೂ ಕ್ಷಣ ಮಾತ್ರದಲ್ಲಿ ನಷ್ಟವಾಗಿ ಹೋಗಿದೆ. ಇತರ ಜೀವರುಗಳ ಐಶ್ವರ್ಯವಾದರೂ ಎಷ್ಟಿದೆ ?- ಎಂದು ತಿಳಿದುಕೊಂಡು ಒಂದೆರಡು ದಿವಸದ ಸಲುವಾಗಿ ಐಶ್ವರ್ಯ ಪಡೆದಿದ್ದರೆ ಅದನ್ನು ದುಃಖೀ ಜೀವರುಗಳ ಉಪಕಾರದಲ್ಲಿ ತೊಡಗಿಸು, ವಿನಯವುಳ್ಳವನಾಗಿ ದಾನ ಮಾಡು, ಪರಮಾತ್ಮ ಸ್ವರೂಪವಾದ ತನ್ನ ಐಶ್ವರ್ಯವನ್ನು ತಿಳಿದುಕೊಂಡು, ಈ ಕರ್ಮಕೃತ ಐಶ್ವರ್ಯದಿಂದ ವಿರಕ್ತವಾಗುವುದೇ ಯೋಗ್ಯವಿದೆ.

**ರೂಪಮದ ತ್ಯಾಗ :** ರೂಪದ ಮದ ಮಾಡಬಾರದು. ಈ ವಿನಾಶಶೀಲವಾದ ಪುದ್ಗಲದ ರೂಪವು ಆತ್ಮನ ಸ್ವರೂಪವಿಲ್ಲ, ವಿನಾಶಶೀಲವಿದೆ, ಕ್ಷಣ-ಕ್ಷಣದಲ್ಲಿ ನಷ್ಟವಾಗುತ್ತ ಹೋಗುತ್ತದೆ. ಈ ರೂಪವನ್ನು ರೋಗ, ವಿಯೋಗ, ದಾರಿದ್ರ, ವೃದ್ಧಾವಸ್ಥೆಗಳು ಮಹಾಕುರೂಪ ಮಾಡಿ ಬಿಡುವವು. ಇಂಥ ಮೂಳೆ, ಚರ್ಮದ ರೂಪದಲ್ಲಿ ರಾಗಿಯಾಗಿ ಮದ ಮಾಡುವುದು ಮಹಾ ಅನರ್ಥವಿದೆ. ಈ ಆತ್ಮನ ರೂಪವಂತೂ ಕೇವಲಜ್ಞಾನವಿದೆ, ಅದರಲ್ಲಿ ಲೋಕ-ಅಲೋಕದ ಸಮಸ್ತ ಪದಾರ್ಥಗಳು ಪ್ರತಿಬಿಂಬಿತವಾಗುತ್ತವೆ. ಆದುದರಿಂದ ಈ ಚರ್ಮದಲ್ಲಿ ತನ್ನತನವನ್ನು ಬಿಟ್ಟುಕೊಟ್ಟು **ತಮ್ಮ ತ್ರಿಕಾಲೀ ಅವಿನಾಶೀ ಜ್ಞಾನಸ್ವರೂಪದಲ್ಲಿ ತಮ್ಮ ತನವನ್ನು ಮಾಡಬೇಕು.**

**ಶಾಸ್ತ್ರಮದ ತ್ಯಾಗ :** ಶಾಸ್ತ್ರಜ್ಞಾನದ-ಶ್ರುತ ಜ್ಞಾನದ ಗರ್ವವನ್ನು ಮಾಡಬಾರದು. ಆತ್ಮಜ್ಞಾನವಿಲ್ಲದ ಶ್ರುತಜ್ಞಾನವು ನಿಷ್ಫಲವಿದೆ. ಏಕೆಂದರೆ ಹನ್ನೊಂದು ಅಂಗಗಳ ಜ್ಞಾನಧಾರಿಯಾಗಿಯೂ ಕೂಡ ಅಭವ್ಯನು ಸಂಸಾರದಲ್ಲಿಯೇ ಪರಿಭ್ರಮಣ ಮಾಡುತ್ತಾನೆ. ಸಮ್ಯಗ್ದರ್ಶನವಿಲ್ಲದೆ ಅನೇಕ ವ್ಯಾಕರಣ, ಛಂದಸ್ಸು, ಅಲಂಕಾರ, ಕಾವ್ಯ, ನಾಟಕ ಮೊದಲಾದುವನ್ನು ಓದುವುದು ವಿಪರೀತ ಧರ್ಮದಲ್ಲಿ, ಅಭಿಮಾನ ಮತ್ತು ಲೋಭದಲ್ಲಿ ಪ್ರವರ್ತನ ಮಾಡಿಸಿ ಸಂಸಾರರೂಪದ ಅಂಧಕೂಪದಲ್ಲಿ ಮುಳುಗಿಸುವಂಥದೇ ಇದೆಯೆಂದು ತಿಳಿಯುವುದು. **ಈ ಇಂದ್ರಿಯ ಜನ್ಯವಿರುವ ಜ್ಞಾನದ ಗರ್ವವನ್ನೇನು ಮಾಡುವುದಿದೆ ?** ಒಂದು ಕ್ಷಣದಲ್ಲಿ ವಾತ, ಪಿತ್ತ, ಕಫ ಮೊದಲಾದವು ಹೆಚ್ಚುವುದರಿಂದ-ಕಡಿಮೆಯಾಗುವುದರಿಂದ ಚಲಾಯಮಾನವಾಗಿ ಹೋಗುತ್ತದೆ.

ಇಂದ್ರಿಯ ಜನ್ಯ ಜ್ಞಾನವಂತೂ ಇಂದ್ರಿಯಗಳ ವಿನಾಶದ ಜತೆಯಲ್ಲಿಯೇ ನಷ್ಟವಾಗಿ ಹೋಗುತ್ತದೆ, ಹೇಗೆ-ಹೇಗೆ ಮಿಥ್ಯಾಜ್ಞಾನವು ಹೆಚ್ಚುತ್ತದೆ ಹಾಗೆ-ಹಾಗೆ ಕೆಡಕು ಕಾವ್ಯ, ದುಷ್ಟ ಟೀಕೆ ಮೊದಲಾದವುಗಳರಚನೆಯಲ್ಲಿ ಪ್ರವರ್ತನೆ ಮಾಡಿದರೆ, ಅನೇಕ ಜೀವರುಗಳನ್ನು ದುರಾಚಾರದಲ್ಲಿ ಪ್ರವರ್ತನೆ ಮಾಡಿಸಿದರೆ ಸಂಸಾರದ ಸಮುದ್ರದಲ್ಲಿ ಮುಳುಗಿಸಿ ಬಿಡುವುದು. ಆದುದರಿಂದ ಶ್ರುತಜ್ಞಾನದ ಗರ್ವಬಿಟ್ಟು ಕೊಡಬೇಕು. ಜ್ಞಾನ ಪಡೆದು ಆತ್ಮನ ವಿಶುದ್ಧತೆ ಮಾಡಿಕೊಳ್ಳಬೇಕು. ಜ್ಞಾನ ಪಡೆದು ಅಜ್ಞಾನಿಗಳ ಹಾಗೆ ಆಚರಣೆ ಮಾಡಿ ಸಂಸಾರದಲ್ಲಿ ಭ್ರಮಣ ಮಾಡುತ್ತಿರುವುದು ಯೋಗ್ಯವಿಲ್ಲ.

**ತಪಮದ ತ್ಯಾಗ :-** ಸಮ್ಯಕ್ತ್ವವಿಲ್ಲದೆ ಮಿಥ್ಯಾದೃಷ್ಟಿಯ ತಪಸ್ಸು ನಿಷ್ಫಲವಿದೆ. ನಾನು ದೊಡ್ಡ ತಪಸ್ವಿಯಿದ್ದೇನೆಂದು ಯಾವನು ತಪದ ಗರ್ವ ಮಾಡುತ್ತಾನೆ, ಅವನು ತಪದ ಮದದ ಪ್ರಭಾವದಿಂದ ಬುದ್ಧಿಯನ್ನು ನಷ್ಟ ಮಾಡಿಕೊಂಡು ದುರ್ಗತಿಯಲ್ಲಿ ಪರಿಭ್ರಮಣ ಮಾಡುವನು. ಆದ್ದರಿಂದ ತಪದ ಗರ್ವವನ್ನು ಮಹಾ ಅನರ್ಥದ ಕಾರಣವೆಂದು ತಿಳಿದುಕೊಂಡು ಭವ್ಯ ಜೀವರುಗಳು ತಪದ ಗರ್ವ ಮಾಡುವುದು ಉಚಿತವಿಲ್ಲ.

**ಬಲಮದ ತ್ಯಾಗ :-** ಯಾವ ಬಲದಿಂದ ಕರ್ಮರೂಪದ ವೈರಿಯನ್ನು ಜಯಿಸಲಾಗುತ್ತದೆ; ಕಾಮ, ಕ್ರೋಧ, ಲೋಭಗಳನ್ನು ಜಯಿಸಲಾಗುತ್ತದೆ, ಆ ಬಲವಂತೂ ಪ್ರಶಂಸನೀಯವಿದೆ. ದೇಹದ ಬಲ, ಯೌವನದ ಬಲ, ಐಶ್ವರ್ಯದ ಬಲ ಪಡೆದು ಅನ್ಯ, ನಿರ್ಬಲ-ಅನಾಥ ಜೀವಗಳನ್ನು ಕೊಂದು ಹಾಕುವುದು, ವಂಚಿಸುವುದು, ಧನ ಕಿತ್ತುಕೊಳ್ಳುವುದು, ಭೂಮಿ-ಆಜೀವಿಕೆ ಕಸಿದುಕೊಳ್ಳುವುದು ಕುಶೀಲ ಸೇವನೆ ಮಾಡುವುದು, ದುರಾಚಾರದಲ್ಲಿ ಪ್ರವರ್ತನೆ ಮಾಡುವುದು ಆ ಬಲವು ಪ್ರಶಂಸನೀಯವಿಲ್ಲ, ಆ ಬಲದ ಮದವಂತೂ ನರಕದ ಘೋರ ದುಃಖವನ್ನು ಅಸಂಖ್ಯಾತಕಾಲದವರೆಗೆ ಭೋಗಿಸಹಚ್ಚಿ ತಿರ್ಯಂಚಗತಿಯಲ್ಲಿ ಹೊಡೆ-ಬಡೆ ಮೊದಲಾದುವಿಂದ ಮತ್ತು ದುರ್ವಚನ, ಕ್ಷುಧೆ,ತೃಷೆ ಮೊದಲಾದವುಗಳ ಅನೇಕ ದುಃಖಗಳನ್ನು ಅನೇಕ ಪರ್ಯಾಯಗಳಲ್ಲಿ ಭೋಗಿಸಹಚ್ಚಿ ಏಕೇಂದ್ರಿಯದಲ್ಲಿ ಸಮಸ್ತ ಬಲ ರಹಿತ ಅಸಮರ್ಥವನ್ನಾಗಿ ಮಾಡಿ ಬಿಡುವುದು ಆದುದರಿಂದ ಬಲದ ಮದವನ್ನು ಬಿಟ್ಟುಕೊಟ್ಟು ಕ್ಷಮಾಧಾರಣ ಮಾಡಿ ಉತ್ತಮ ತಪಸ್ಸು ಮಾಡುವದು ಯೋಗ್ಯವಿದೆ.

**ವಿಜ್ಞಾನದ ಮದ :-** ವಿಜ್ಞಾನ ಎಂದರೆ ಅನೇಕ ಹಸ್ತಕಲೆ, ಅನೇಕ ವಚನಕಲೆ, ಮನಸ್ಸಿನ ಅನೇಕ ವಿಕಲ್ಪಗಳಿಂದ ಈ ಆತ್ಮನು ಚತುರ್ಗತಿರೂಪದ ಸಂಸಾರದಲ್ಲಿ ಪರಿಭ್ರಮಣ ಮಾಡಿ ದುಃಖ ಭೋಗಿಸುತ್ತಾನೆ. ಅವೆಲ್ಲವು ಕುಜ್ಞಾನಗಳಿವೆ. ಈ ಜಗತ್ತಿನಲ್ಲಿ ಕೆಡಕು ಕಲೆಯ, ಚತುರತೆಯ ದೊಡ್ಡ ಗರ್ವವಿದೆ. ನನ್ನ ಸಾಮರ್ಥ್ಯ ಹೇಗಿದೆಯೆಂದರೆ ಸತ್ಯವನ್ನು ಸುಳ್ಳು ಮಾಡುವೆನು, ಸುಳ್ಳನ್ನು ಸತ್ಯ ಮಾಡುವೆನು, ಕಲಂಕ ರಹಿತನನ್ನು ಕಲಂಕ ಸಹಿತ ಮಾಡುವೆನು, ಶೀಲವಂತನನ್ನು ದೂಷಿತ ಮಾಡುವೆನು, ನಿರ್ದೋಷಿಯನ್ನು ದೋಷೀ ಮಾಡುವೆನು, ತಡೆದಿಟ್ಟ ಧನವನ್ನು ತೆಗೆಸುವೆನು, ಧರ್ಮ ಬಿಡಿಸಿ ವಿರುದ್ಧ ಶ್ರದ್ಧೆ ಮಾಡಿಸುವೆನು. ಪ್ರಾಣಿಗಳ ವಶೀಕರಣ, ಅನೇಕ ಜೀವಗಳ ಮಾರಣ, ಅನೇಕ ಪ್ರಕಾರದ ಜಲದಲ್ಲಿ ಗಮನ ಮಾಡುವ, ನೆಲದ ಮೇಲೆ ಗಮನ ಮಾಡುವ, ಆಕಾಶದಲ್ಲಿ ಗಮನ ಮಾಡುವ, ಯಂತ್ರಾದಿಗಳನ್ನು ನಿರ್ಮಿಸುವ ಇತ್ಯಾದಿ ಅನೇಕ ಪ್ರಕಾರದ ಕಲಾಚಾತುರ್ಯಗಳಿವೆ. ಅವೆಲ್ಲವು ಕುಜ್ಞಾನಗಳಿವೆ. ಇವುಗಳ ಗರ್ವ ಮಾಡುವುದು ಅದು ನರಕದ ಘೋರ ದುಃಖಗಳಿಗೆ ಕಾರಣವಿದೆ.

ಕಲಾ ಚಾತುರ್ಯವು ಸಮ್ಯಕ್ ಇದ್ದರೆ ಅದು ಶೋಭನೀಯವಿದೆ. **ತಮ್ಮ ಆತ್ಮನನ್ನು ವಿಷಯ ಕಷಾಯಗಳ ಚಿಂತೆಯಿಂದ ಬಿಡಿಸುವುದು ಮತ್ತು ಜನರನ್ನು ಹಿಂಸಾರಹಿತ ಸತ್ಯ ಮಾರ್ಗದಲ್ಲಿ ಪ್ರವರ್ತನೆ ಮಾಡಿಸುವುದೇ ಉತ್ತಮ ಕಲೆಯಿದೆ.**

ಈ ಪ್ರಕಾರ ಸತ್ಯ ವಸ್ತು ಸ್ವರೂಪವನ್ನು ತಿಳಿದುಕೊಂಡು ಜಾತಿ, ಕುಲ, ಐಶ್ವರ್ಯ, ರೂಪ, ಶ್ರುತ, ತಪ, ಬಲ, ವಿಜ್ಞಾನ ಮೊದಲಾದುವನ್ನು ಕರ್ಮದ ಆಧೀನವೆಂದು ತಿಳಿದುಕೊಂಡು ಅವುಗಳ ಗರ್ವವನ್ನು ಬಿಟ್ಟುಕೊಟ್ಟು ದರ್ಶನ ವಿಶುದ್ಧತೆ ಮಾಡಿಕೊಳ್ಳಬೇಕು. ಮೂರು ಮೂಢತೆ, ಶಂಕೆ ಮೊದಲಾದ ಎಂಟು ದೋಷಗಳು, ಆರು ಅನಾಯತನಗಳು, ಎಂಟು ಮದಗಳು ಇವು ಇಪ್ಪತ್ತೈದು ದೋಷಗಳ ಪರಿತ್ಯಾಗ ಮಾಡುವುದರಿಂದ ಸಮ್ಯಗ್ದರ್ಶನದ ಉಜ್ವಲತೆಯಾಗಿ ಬಿಡುತ್ತದೆಯೆಂದು ತಿಳಿದುಕೊಂಡು ನಿರಂತರ ದರ್ಶನ ವಿಶುದ್ಧಿ ಭಾವನೆಯದೇ ಚಿಂತನೆ ಮಾಡಬೇಕು, ಅದನ್ನೇ ಧ್ಯಾನಗೋಚರ ಮಾಡಿಕೊಂಡು ಸ್ತುತಿಸಹಿತ ಉಜ್ವಲ ಅರ್ಘ್ಯ ಎತ್ತುವುದೆಂದರೇನೇ ಮುಕ್ತಿ ರಮಣಿಯೊಡನೆ ಸಂಬಂಧ ಮಾಡುವುದಿದೆ. ಈ ಪ್ರಕಾರ ದರ್ಶನವಿಶುದ್ಧತೆಯೆಂಬ ಹೆಸರಿನ ಮೊದಲ ಭಾವನೆಯ ವರ್ಣನೆ ಮಾಡಲಾಯಿತು.

## ವಿನಯ ಸಂಪನ್ನತೆಯ ಭಾವನೆ

ಇನ್ನು ಮುಂದೆ ವಿನಯ ಸಂಪನ್ನತೆ ನಾಮದ ಎರಡನೇ ಭಾವನೆ ಹೇಳುತ್ತಾರೆ. ವಿನಯವು ದರ್ಶನವಿನಯ, ಜ್ಞಾನವಿನಯ, ಚಾರಿತ್ರವಿನಯ, ತಪವಿನಯ ಮತ್ತು ಉಪಚಾರ ವಿನಯವೆಂದು ಐದು ಪ್ರಕಾರವಾಗಿದೆ.

**ದರ್ಶನ ವಿನಯ :-** ತಮ್ಮ ಶ್ರದ್ಧೆಯಲ್ಲಿ ಶಂಕಾದಿಗಳ ದೋಷ ತಗಲಗೊಡದಿರುವುದು ಮತ್ತು ಸಮ್ಯಗ್ದರ್ಶನದ ವಿಶುದ್ಧತೆಯಿಂದಲೇ ತಮ್ಮ ಜನ್ಮ ಸಫಲವೆಂದು ಮನ್ನಿಸುವುದು, ಸಮ್ಯಗ್ದರ್ಶನ ಧರಿಸಿದವರಲ್ಲಿ ಪ್ರೀತಿ ಮಾಡುವುದು ಆತ್ಮ ಹಾಗೂ ಪರದ ಭೇದ ವಿಜ್ಞಾನ ಮಾಡಿ ಆತ್ಮನ ಅನುಭವ ಮಾಡುವುದು ಅದು ದರ್ಶನ ವಿನಯವಿದೆ.

**ಜ್ಞಾನವಿನಯ :-** ಸಮ್ಯಗ್ಜ್ಞಾನದ ಆರಾಧನೆಯಲ್ಲಿ ಉದ್ಯಮಶೀಲನಿರುವುದು, ಸಮ್ಯಗ್ಜ್ಞಾನದ ಕಥನಗಳ ಆದರ ಮಾಡುವುದು, ಸಮ್ಯಗ್ಜ್ಞಾನದ ಕಾರಣವಾದ ಯಾವ ಅನೇಕಾಂತರೂಪದ ಜಿನ ಶಾಸ್ತ್ರಗಳಿವೆ ಅವುಗಳ ಶ್ರವಣ, ಪಠಣದಲ್ಲಿ ಅತ್ಯಂತ ಉತ್ಸಾಹರೂಪವಿರುವುದು ಮತ್ತು ವಂದನೆ ಸ್ತುತಿಯೊಡನೆ ತುಂಬ ಆದರಪೂರ್ವಕವಾಗಿ ಓದುವುದು ಅದು ಜ್ಞಾನವಿನಯವಿದೆ. ಜ್ಞಾನದ ಆರಾಧಕರಾದ ಜ್ಞಾನೀ ಜನರುಗಳ ಹಾಗೂ ಜಿನಾಗಮದ ಗ್ರಂಥಗಳ ಪ್ರಾಪ್ತಿರೂಪದ ಸಂಯೋಗವನ್ನು ಮಹಾನ ಲಾಭವೆಂದು ಮನ್ನಿಸುವುದು, ಸತ್ಕಾರ, ಆದರ ಮೊದಲಾದುವನ್ನು ಮಾಡುವುದು ಅದೆಲ್ಲವು ಜ್ಞಾನ ವಿನಯವಿದೆ.

**ಚಾರಿತ್ರ ವಿನಯ :-** ತಮ್ಮ ಶಕ್ತಿಗೆ ಅನುಸರಿಸಿ ಚಾರಿತ್ರ ಧಾರಣ ಮಾಡುವಲ್ಲಿ ಹರ್ಷ ಮನ್ನಿಸುವುದು,ಪ್ರತಿದಿನವೂ ಚಾರಿತ್ರದ ಉಜ್ವಲತೆಯ ಸಲುವಾಗಿ ವಿಷಯ-ಕಷಾಯಗಳನ್ನು ಕ್ಷೀಣಿಸುವುದು ಮತ್ತು ಚಾರಿತ್ರ ಧರಿಸಿದವರ ಗುಣಗಳಲ್ಲಿ ಅನುರಾಗ, ಸ್ತವನ, ಆದರ ಮಾಡುವುದು ಅದು ಚಾರಿತ್ರ ವಿನಯವಿದೆ.

**ತಪ ವಿನಯ ಃ-** ಇಚ್ಛೆಗಳನ್ನು ತಡೆದು, ಪ್ರಾಪ್ತವಿರುವ ವಿಷಯಗಳಲ್ಲಿ ಸಂತೋಷಪಟ್ಟು, ಧ್ಯಾನ-ಸ್ವಾಧ್ಯಾಯದಲ್ಲಿ ಉದ್ಯಮ ಶೀಲರಾಗಿ, ಕಾಮವನ್ನು ಜಯಿಸುವ ಸಲುವಾಗಿ ಹಾಗೂ ಇಂದ್ರಿಯ ವಿಷಯಗಳಲ್ಲಿನ ಪ್ರವೃತ್ತಿಯನ್ನು ತಡೆಯುವ ಸಲುವಾಗಿ ಅನಶನ ಮೊದಲಾದ ತಪಗಳಲ್ಲಿ ಉದ್ಯಮ ಮಾಡುವುದು ಅದು ತಪ ವಿನಯವಿದೆ.

**ಉಪಚಾರ ವಿನಯ ಃ-** ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ, ಸಮ್ಯಕ್ತಪ - ಈ ನಾಲ್ಕು ಆರಾಧನೆಗಳ ಉಪದೇಶವಿತ್ತು ಮೋಕ್ಷಮಾರ್ಗದಲ್ಲಿ ಪ್ರವೃತ್ತಿ ಮಾಡಿಸುವಂಥ, ಮತ್ತು ಯಾರಸ್ಮರಣೆ ಮಾಡುವುದರಿಂದ ಪರಿಣಾಮದಲ್ಲಿನ ಮಲಿನತೆಯು ದೂರವಾಗಿ ವಿಶುದ್ಧತೆಯು ಪ್ರಕಟವಾಗಿ ಹೋಗುತ್ತದೆ ಅಂಥಪಂಚ ಪರಮೇಷ್ಠಿಗಳ ನಾಮದ-ಸ್ಥಾಪನೆಯ ವಿನಯ, ವಂದನೆ, ಸ್ತವನ ಮಾಡುವುದು ಅದು ಉಪಚಾರ ವಿನಯವಿದೆ. ಉಪಚಾರ ವಿನಯದಲ್ಲಿ ಬೇರೆಯೂ ಹಲವು ಭೇದಗಳಿವೆ.

**ಲೋಕ ವಿನಯ ಃ-** ಅಭಿಮಾನ ಬಿಟ್ಟುಕೊಟ್ಟು, ಯಾರಿಗೆ ಎಂಟು ಮದಗಳ ಅತ್ಯಂತ ಅಭಾವವಾಗಿ ಹೋಗಿದೆ, ಕಠೋರತೆಯನ್ನು ಬಿಟ್ಟು ಯಾರಿಗೆ ಕೋಮಲತೆಯು ಪ್ರಕಟವಾಗಿದೆ ಅವರಿಗೆ ನಮ್ರತೆಯು ಪ್ರಕಟವಾಗುತ್ತದೆ. ಅವರಿಗೆ ಸತ್ಯಾರ್ಥ ವಿಚಾರವಾಗುತ್ತದೆ. ಈ ಧನ, ಯೌವ್ವನ, ಜೀವನಗಳು ಕ್ಷಣಭಂಗುರವಿವೆ, ಕರ್ಮದ ಆಧೀನವಿವೆ, ಯಾರೂ ನಮ್ಮಿಂದ ದುಃಖಿಯಾಗಬಾರದು, ಸಮಸ್ತ ಸಂಬಂಧಗಳು ವಿಯೋಗಸಹಿತವಿವೆ, ಇಲ್ಲಿ ಅದೆಷ್ಟು ಸಮಯ ಇರುವುದಿದೆ, ಪ್ರತಿಸಮಯವೂ ಮರಣದ ಕಡೆಗೆ ಅಖಂಡ ಧಾರಾಪ್ರವಾಹ ರೂಪದಿಂದ ಹೋಗುತ್ತಲಿದ್ದೇನೆ, ಯಾವ ಪದಾರ್ಥದ ಸಂಬಂಧವು ಸ್ಥಿರವಾಗಿಲ್ಲ. ಇಲ್ಲಿ ಭಗವಂತರು ಮನುಷ್ಯ ಜನ್ಮದ ಸಾರರೂಪವಾಗಿ ವಿನಯ ಧರ್ಮವನ್ನೇ ಹೇಳಿದ್ದಾರೆ. **ಈ ವಿನಯವು ಸಂಸಾರರೂಪದ ವೃಕ್ಷವನ್ನು ಸುಟ್ಟು ಹಾಕುವ ಸಲುವಾಗಿ ಅಗ್ನಿಯ ಸಮಾನವಿದೆ.** ಈ ವಿನಯವು ಮೂರು ಲೋಕಗಳಲ್ಲಿ ಮುಖ್ಯವಿದೆ.

ಈ ವಿನಯವು ಮೂರು ಲೋಕದ ಜೀವರುಗಳ ಮನಸ್ಸನ್ನು ಉಜ್ವಲಗೊಳಿಸುವಂಥದ್ದಿದೆ ವಿನಯವೇ ಸಮಸ್ತ ಜಿನ ಶಾಸನದ ಮೂಲವಿದೆ. ವಿನಯ ರಹಿತರಿಗೆ ಜಿನೇಂದ್ರರ ಉಪದೇಶವು ಗ್ರಹಣವಾಗುವುದಿಲ್ಲ. ವಿನಯ ರಹಿತ ಜೀವರುಗಳು ಸಮಸ್ತ ದೋಷಗಳಿಗೆ ಪಾತ್ರರಿದ್ದಾರೆ. ಮಿಥ್ಯಾಶ್ರದ್ಧೆಯನ್ನು ಕತ್ತರಿಸಲು ವಿನಯವು ಕುಠಾರವಿದೆ. **ವಿನಯವಿಲ್ಲದ ಮನುಷ್ಯ ರೂಪದ ಚರ್ಮದ ವೃಕ್ಷವು ಮಾನ ರೂಪದ ಅಗ್ನಿಯಿಂದ ಭಸ್ಮವಾಗಿ ಹೋಗುತ್ತದೆ.** ಮಾನ ಕಷಾಯದಿಂದ ಇಲ್ಲಿಯೇ ಘೋರದುಃಖ ಸಹಿಸುತ್ತಾನೆ ಮತ್ತುಪರಲೋಕದಲ್ಲಿ ನಿಂದ್ಯಜಾತಿ, ನಿಂದ್ಯಕುಲದಲ್ಲಿ ಬುದ್ಧಿಹೀನನಾಗಿ-ಬಲಹೀನನಾಗಿ ಉತ್ಪನ್ನನಾಗುತ್ತಾನೆ.

ಇಲ್ಲಿ ಸ್ವಲ್ಪ ಮಾತ್ರವೂ ವಚನಗಳನ್ನು ಸಹಿಸದಂಥ ಅಭಿಮಾನಿಗಳು ತಿರ್ಯಂಚಗತಿಯಲ್ಲಿ ಮೂಗುದಾರಕ್ಕೆ ಹಗ್ಗದಿಂದ ಬಂಧಿಸುವುದು, ಭಾರ ಹೊರಿಸುವುದು, ಹೊಡೆಯುವುದು, ಒದೆಯುವುದು, ಮರ್ಮದ ಸ್ಥಾನದಲ್ಲಿ ಚರ್ಮದ ಚಾಟಿಯಿಂದ ಹೊಡೆಯುವುದು ಮೊದಲಾದುವನ್ನು ಪರಾಧೀನರಾಗಿ ಭೋಗಿಸುತ್ತಾರೆ ಮತ್ತು ಚಾಂಡಾಲ ಮೊದಲಾದವರ ಮಲಿನವಿರುವ ಮನೆಗಳಲ್ಲಿ ಬಂಧನಗಳಿಂದ ಬಂಧಿಸಿರಬೇಕಾಗುತ್ತದೆ, ಅವುಗಳ ಮೇಲೆ ಹೊಲಸು ಮೊದಲಾದ ನಿಂದ್ಯ ವಸ್ತುಗಳನ್ನು ತೂರುತ್ತಾರೆ, ನಿಂದ್ಯ ವಸ್ತುಗಳನ್ನು ಹೇರುತ್ತಾರೆ.

ಈ ಲೋಕದಲ್ಲಿ ಕೂಡ ಎಲ್ಲರೂ ಅಭಿಮಾನಿಗಳಿಗೆ ವೈರಿಯಾಗಿ ಹೋಗುತ್ತಾರೆ. ಎಲ್ಲರೂ ಅಭಿಮಾನಿಗಳ ನಿಂದೆ ಮಾಡುತ್ತಾರೆ, ಮಹಾ ಅಪಯಶಸ್ಸು ಪ್ರಕಟವಾಗುತ್ತದೆ. **ಎಲ್ಲರೂ ಅಭಿಮಾನಿಗಳ ಪತನವನ್ನೇ ಬಯಸುತ್ತಾರೆ.**

ಮಾನ ಕಷಾಯದಿಂದ ಕ್ರೋಧವು ಪ್ರಕಟವಾಗಿ, ಕಪಟವು ಹರಡುತ್ತದೆ, ಲೋಭವು ಹೆಚ್ಚುತ್ತದೆ, ಅಸತ್ಯ ವಚನರೂಪದ ಪ್ರವೃತ್ತಿಯಾಗುತ್ತದೆ. ಲೋಕದಲ್ಲಿ ಎಷ್ಟು ಅನೀತಿಗಳಿವೆ ಅವೆಲ್ಲವೂ ಮಾನ ಕಷಾಯದಿಂದ ಆಗುತ್ತವೆ. ಪರಧನ ಹರಣ ಮೊದಲಾದುವನ್ನೂ ತಮ್ಮ ಅಭಿಮಾನದ ಪುಷ್ಟಿಗಾಗಿ ಮಾಡಲಾಗುತ್ತದೆ. **ಈ ಜೀವದ ಮಹಾನ ವೈರಿಯು ಮಾನ ಕಷಾಯವಿದೆ.** ಆದುದರಿಂದ ವಿನಯಗುಣದ ಆದರ ಮಾಡಿ ತಮ್ಮ ಇಹ-ಪರಗಳನ್ನು ಉಜ್ವಲ ಮಾಡಿಕೊಳ್ಳಬೇಕು. ದೇವ, ಶಾಸ್ತ್ರ ಗುರುಗಳ ವಿನಯವನ್ನು ಮನ-ವಚನ-ಕಾಯದಿಂದ ಪ್ರತ್ಯಕ್ಷ ರೂಪದಿಂದ ಮತ್ತು ಪರೋಕ್ಷರೂಪದಿಂದ ಕೂಡ ಮಾಡಬೇಕು.

**ದೇವ ವಿನಯ ಃ-** ದೇವ ಎಂದರೆ ಅರಹಂತ ಭಗವಂತರು ಸಮವಸರಣದ ವಿಭೂತಿಸಹಿತ, ಗಂಧಕುಟಿಯ ಮಧ್ಯದಲ್ಲಿ ಸಿಂಹಾಸನದ ಮೇಲೆ ನಾಲ್ಕು ಅಂಗುಲ ಅಂತರಾಳದಲ್ಲಿ ವಿರಾಜಮಾನ, ಅರವತ್ತಾ ನ್ಲು ಚಾಮರ ಚಲಿತ, ಮುಕ್ಕೊಡೆ ಮತ್ತು ಎಂಟು ಪ್ರಾತಿಹಾರ್ಯದಿಂದ ವಿಭೂಷಿತ, ಕೋಟಿ ಸೂರ್ಯಸಮಾನ ಪ್ರಭೆಯ ಧಾರಕ, ಪರಮ ಔದಾರಿಕ ಶರೀರದಲ್ಲಿರುವಂಥ, ಹನ್ನೆರಡು ಸಭೆಗಳಿಂದ ಸೇವಿಸಲ್ಪಡುವ, ದಿವ್ಯ ಧ್ವನಿಯಿಂದ ಅನೇಕ ಭವ್ಯಜೀವರುಗಳಿಗೆ ಒಳ್ಳೆಯದು ಮಾಡುವಂಥ ಅರಹಂತರುಗಳ ಚಿಂತನೆ ಮಾಡಿ ಧ್ಯಾನ ಮಾಡುವುದು ಅದು ಮನಸ್ಸಿನಿಂದ ಅವರ ಪರೋಕ್ಷ ವಿನಯವಿದೆ. ವಿನಯಪೂರ್ವಕ ವಚನಗಳಿಂದ ಅವರ ಸ್ತುತಿ ಮಾಡುವುದು ಅದು ವಚನದಿಂದ ಪರೋಕ್ಷ ವಿನಯವಿದೆ. ಎರಡೂ ಕೈಗಳನ್ನು ಮುಗಿದು ಮಸ್ತಕ ಬಾಗಿಸಿ ನಮಸ್ಕಾರ ಮಾಡುವುದು ಅದು ಕಾಯದಿಂದ ಪರೋಕ್ಷ ವಿನಯವಿದೆ.

ಜಿನೇಂದ್ರರ ಪ್ರತಿಬಿಂಬದ ಪರಮಶಾಂತ ಮುದ್ರೆಯನ್ನು ಪ್ರತ್ಯಕ್ಷ ಕಣ್ಣುಗಳಿಂದ ಅವಲೋಕನ ಮಾಡಿ ಮಹಾ ಆನಂದದಿಂದ ಮನಸ್ಸಿನಲ್ಲಿ ಧ್ಯಾನ ಮಾಡಿ ತಮ್ಮನ್ನು ಕೃತಕೃತ್ಯರೆಂದು ಮನ್ನಿಸುವುದು ಅದು ಮನಸ್ಸಿನಿಂದ ಪ್ರತ್ಯಕ್ಷ ವಿನಯವಿದೆ. ಜಿನೇಂದ್ರರ ಪ್ರತಿಬಿಂಬದ ಎದುರಿಗೆ ನಿಂತುಕೊಂಡು ಸ್ತುತಿ ಮಾಡುವುದು. ಅದು ವಚನದಿಂದ ಪ್ರತ್ಯಕ್ಷ ವಿನಯವಿದೆ. ಉಭಯ ಹಸ್ತಗಳನ್ನು ಮುಗಿದು ತಲೆ ಬಾಗಿ ನಮಸ್ಕಾರ ಮಾಡುವುದು ಮತ್ತು ಮುಗಿದ ಹಸ್ತಗಳನ್ನು, ಕಾಲುಗಳನ್ನು ಹಾಗೂ ಮಸ್ತಕವನ್ನು ನೆಲ ಮುಟ್ಟುವಂತೆ ಬಾಗಿ ನಮಸ್ಕಾರ ಮಾಡುವುದು ಅದು ಕಾಯದಿಂದ ಪ್ರತ್ಯಕ್ಷ ವಿನಯವಿದೆ.

ಸರ್ವಜ್ಞ, ವೀತರಾಗ ಜಿನೇಂದ್ರ ಪರಮಾತ್ಮರ ನಾಮದ ಸ್ಮರಣೆ, ಧ್ಯಾನ, ವಂದನ, ಸ್ತವನ ಮಾಡುವುದೆಲ್ಲವೂ ಪರೋಕ್ಷ ವಿನಯವಿದೆ. ಈ ಪ್ರಕಾರದ ದೇವರ ವಿನಯವು ಅದು ಸಮಸ್ತ ಅಶುಭ ಕರ್ಮಗಳ ನಾಶ ಮಾಡುವಂಥದ್ದಿದೆ ಯೆಂದು ಹೇಳಲಾಗಿದೆ.

**ಗುರು ವಿನಯ ಃ-** ಪ್ರತ್ಯಕ್ಷ ವೀತರಾಗ ನಿರ್ಗ್ರಂಥ ಮುನಿಗಳನ್ನು ನೋಡಿ ಎದ್ದು ನಿಂತುಕೊಳ್ಳುವುದು, ಆನಂದದೊಡನೆ ಎದುರಾಗುವುದು, ಸ್ತುತಿ ಮಾಡುವುದು, ವಂದನೆ ಮಾಡುವುದು, ಗುರುಗಳನ್ನು ಮುಂದೆ ಮಾಡಿ ತಾವು ಹಿಂದೆ ನಡೆಯುವುದು, ಅವರ ಬರಾಬರಿ ನಡೆಯಬೇಕಾಗಿದ್ದರೆ ತಾವು ಗುರುಗಳ ಎಡ ಭಾಗದಿಂದ ನಡೆಯುವುದು, ಗುರುಗಳನ್ನು ತಮ್ಮ ಎಡಭಾಗಕ್ಕೆ ಹಾಕಿ ನಡೆಯಬಾರದು, ಕೂಡ್ರಬಾರದು; ಗುರುಗಳ ಜತೆಯಲ್ಲಿದ್ದು ತಾವು ಉಪದೇಶ ಕೊಡಬಾರದು, ಯಾರಾದರೂ ಪ್ರಶ್ನೆ ಕೇಳಿದರೆ ಗುರುಗಳಿರುವಾಗ ತಾವು ಉತ್ತರ ಕೊಡಬಾರದು, ಮತ್ತು ಗುರುಗಳ ಆಜ್ಞೆಯಾದರೆ ಅನುಕೂಲ ಉತ್ತರಕೊಡುವದು, ಗುರುಗಳಿರುವಾಗ ತಾವು ಉಚ್ಚಾಸನದ ಮೇಲೆ ಕೂಡ್ರಬಾರದು, ಗುರುಗಳು ಉಪದೇಶ ಮಾಡಿದರೆ ಅದನ್ನು ಕೈ ಮುಗಿದು ಕೇಳಿ ಆದರದಿಂದ ಗ್ರಹಣ ಮಾಡುವುದು; ಗುರುಗಳ ಗುಣಗಳಲ್ಲಿ ಪ್ರೀತಿ ಮಾಡಿ ಆಜ್ಞೆಗೆ ಅನುಸರಿಸಿ ನಡೆಯುವುದು, ಗುರುಗಳು ದೂರ ಕ್ಷೇತ್ರದಲ್ಲಿದ್ದರೂ ಅವರ ಆಜ್ಞೆಗೆ ಅನುಸರಿಸಿ ಪ್ರವರ್ತನೆ ಮಾಡುವುದು, ದೂರದಿಂದಲೇ ಗುರುಗಳ ಧ್ಯಾನ, ಸ್ತುತಿ, ನಮಸ್ಕಾರ ಮೊದಲಾದುವನ್ನು ಮಾಡುವುದು ಅದು ಗುರು ವಿನಯವಿದೆ.

**ಶಾಸ್ತ್ರ ವಿನಯ ಃ-** ಶಾಸ್ತ್ರದ ವಿನಯ ಮಾಡುವುದು - ಅತ್ಯಂತ ಆದರದಿಂದ ಓದುವುದು, ಕೇಳುವುದು, ದ್ರವ್ಯ-ಕ್ಷೇತ್ರ-ಕಾಲ- ಭಾವಗಳನ್ನು ನೋಡಿ ಪ್ರವಚನಾದಿಗಳನ್ನು ಮಾಡುವುದು, ಶಾಸ್ತ್ರದಲ್ಲಿ ಹೇಳಿದ ವ್ರತ-ಸಂಯಮ ಮೊದಲಾದುವನ್ನು ತಮ್ಮಿಂದ ಧಾರಣ ಮಾಡುವ ಸಾಧ್ಯತೆಯಿಲ್ಲದಿದ್ದರೂ ಆಜ್ಞೆಯ ಉಲ್ಲಂಘನೆ ಮಾಡಬಾರದು, ಶಾಸ್ತ್ರದ ಆಜ್ಞೆಯ ಅನುಸಾರವಾಗಿಯೇ ಹೇಳಬೇಕು. ಶಾಸ್ತ್ರದ ಆಜ್ಞೆಯನ್ನು ಏಕಾಗ್ರ ಚಿತ್ತದಿಂದ ಶ್ರವಣ ಮಾಡಬೇಕು, ಅನ್ಯಥಾ ಕಥನ ಮಾಡಬಾರದು, ಆದರಪೂರ್ವಕ ಮೌನದಿಂದ ಶ್ರವಣ ಮಾಡಬೇಕು. ಒಂದು ವೇಳೆ ಸಂದೇಹವಿದ್ದರೆ ಅದನ್ನು ದೂರ ಮಾಡುವ ಸಲುವಾಗಿ ವಿನಯಪೂರ್ವಕ ಸ್ವಲ್ಪ ಶಬ್ದಗಳಲ್ಲಿ ಯಾವ ಪ್ರಕಾರ ಸಭೆಯ ಅನ್ಯ ಜನರಿಗೆ ಹಾಗೂ ವಕ್ತಾರನಿಗೆ ಕ್ಷೋಭೆಯು ಉತ್ಪನ್ನವಾಗದ ರೀತಿಯಲ್ಲಿ ವಿನಯಪೂರ್ವಕ ಪ್ರಶ್ನೆ ಮಾಡಬೇಕು, ಉತ್ತರವನ್ನು ಆದರದಿಂದ ಗ್ರಹಣ ಮಾಡುವುದು ಅದು ಶಾಸ್ತ್ರದ ವಿನಯವಿದೆ. ಶಾಸ್ತ್ರವನ್ನು ಉಚ್ಚ ಆಸನದ ಮೇಲೆ ಇಟ್ಟು ಸ್ವಯಂ ಕೆಳಗೆ ಕೂಡ್ರಬೇಕು, ಪ್ರಶಂಸೆ, ಸ್ತುತಿ ಇತ್ಯಾದಿಗಳನ್ನು ಮಾಡುವುದು ಅದು ಶಾಸ್ತ್ರದ ವಿನಯವಿದೆ. ಈ ಪ್ರಕಾರ ದೇವ-ಗುರು- ಶಾಸ್ತ್ರದ ವಿನಯವಿದೆ ಅದು ಧರ್ಮದ ಮೂಲವಿದೆ.

**ನಿಶ್ಚಯ ವಿನಯ ಃ-** ರಾಗ-ದ್ವೇಷದ ಮೂಲಕ ಯಾವ ಪ್ರಕಾರದಿಂದ ಆತ್ಮನ ಘಾತವಾಗುವುದಿಲ್ಲ ಆ ಪ್ರಕಾರ ಪ್ರವರ್ತನೆ ಮಾಡುವುದು ಅದು ಆತ್ಮನ ವಿನಯವಿದೆ, ಅದನ್ನು ನಿಶ್ಚಯ ವಿನಯವೆಂದು ಹೇಳುತ್ತಾರೆ. ಆ ವಿನಯವಂತನು

ವಿಚಾರ ಮಾಡುವುದೇನೆಂದರೆ - ಈಗ ಈ ನನ್ನ ಜೀವವು ಚತುರ್ಗತಿಗಳಲ್ಲಿ ಭ್ರಮಣ ಮಾಡದಿರಲಿ, ಈಗ ನನ್ನ ಆತ್ಮನು ಮಿಥ್ಯಾತ್ವ, ಕಷಾಯ, ಅವಿನಯ ಮೊದಲಾದವುಗಳಿಂದ ಸಂಸಾರ ಪರಿಭ್ರಮಣದ ದುಃಖಗಳಿಗೆ ಪ್ರಾಪ್ತವಾಗದಿರಲೆಂದು ಚಿಂತನೆ ಮಾಡುತ್ತ ಮಿಥ್ಯಾತ್ವ, ಕಷಾಯ, ಅವಿನಯ ಮೊದಲಾದವುಗಳಿಗೆ ಆತ್ಮನ ಜ್ಞಾನ ಮೊದಲಾದ ಗುಣಗಳ ಘಾತಮಾಡದಿರುವುದು ಅದು ಆತ್ಮನ ವಿನಯವಿದೆ. ಇದನ್ನೇ ನಿಶ್ಚಯ ವಿನಯವೆಂದು ಹೇಳುತ್ತಾರೆ, ಇದನ್ನೇ ಪರಮಾರ್ಥ ವಿನಯವೆಂದು ಹೇಳಲಾಗಿದೆ.

**ವ್ಯವಹಾರ ವಿನಯ :- ಯಾವನ ಮಾನ ಕಷಾಯವು ಕಡಿಮೆಯಾಗಿ ಹೋಗುತ್ತದೆ ಅವನಿಗೇ ವ್ಯವಹಾರ ವಿನಯವಿರುತ್ತದೆ**ಯೆಂದು ಇಲ್ಲಿ ವಿಶೇಷವಾಗಿ ತಿಳಿದುಕೊಳ್ಳಬೇಕು. ನನ್ನಿಂದ ಯಾವುದೇ ಜೀವದ ಅಪಮಾನವಾಗದಿರಲಿ. ಯಾವನು ಇತರರ ಸನ್ಮಾನ ಮಾಡುವನು ಅವನು ತಾನೇ ಸನ್ಮಾನಕ್ಕೆ ಪ್ರಾಪ್ತನಾಗಿ ಹೋಗುವನು. ಎಲ್ಲರೊಡನೆ ಸವಿನುಡಿಯಿಂದ ಆಡುವುದು ಅದು ವಿನಯವಿದೆ. ಯಾವ ಜೀವದ್ದೂ ತಿರಸ್ಕಾರ ಮಾಡದಿರುವುದು ಅದು ಕೂಡ ವಿನಯವೇ ಇದೆ.

ತಮ್ಮ ಮನೆಗೆ ಯಾರಾದರೂ ಬಂದರೆ ಯಥಾಯೋಗ್ಯ ಅವರ ಸತ್ಕಾರ ಮಾಡುವುದು, ಯಾರನ್ನೂ ಎದುರು ಹೋಗಿ ಕರೆ ತರಬೇಕು, ಒಬ್ಬರಿಗೆ ಎದ್ದು ನಿಂತುಕೊಂಡು ಒಂದು ಕೈಯಿಂದ ತಲೆ ನೇವರಿಸಿ ವಿನಯ ಮಾಡುವುದು, ಇನ್ನೊಬ್ಬರಿಗೆ ಬನ್ನಿರಿ ಬನ್ನಿರಿ ಬನ್ನಿರಿ ಎಂದು ಮೂರು ಬಾರಿ ಹೇಳಿ ಕರೆಯುವುದು, ಮತ್ತೊಬ್ಬರನ್ನು ಆದರ ಪೂರ್ವಕ ಹತ್ತಿರ ಕುಳ್ಳಿರಿಸಿಕೊಳ್ಳುವುದು, ಒಬ್ಬರಿಗೆ ಕಳಿತುಕೊಳ್ಳಲು ಸ್ಥಾನ ಕೊಡುವುದು, ಒಬ್ಬರಿಗೆ ಬನ್ನಿ ಕುಳಿತುಕೊಳ್ಳಿಯೆಂದು ಹೇಳುವುದು, ಒಬ್ಬರ ಶರೀರದ ಸೌಖ್ಯ ಕೇಳುವುದು, ನಾವು ತಮ್ಮವರಿದ್ದೇವೆ, ನಮಗೆ ಆಜ್ಞೆ ಕೊಡಿರಿ, ಇದು ತಮ್ಮ ಮನೆಯೇ ಇದೆ, ಈ ಮನೆಯು ತಾವು ಬರುವುದರಿಂದ ಪವಿತ್ರವಾಯಿತು, ಉಚ್ಚವಾಯಿತು. ನಮ್ಮ ಮೇಲಂತೂ ಮೊದಲಿನಿಂದಲೂ ತಮ್ಮ ಕೃಪೆಯಿದೆ-ಈ ಪ್ರಕಾರ ವ್ಯವಹಾರ ವಿನಯವಿದೆ. ಒಬ್ಬರ ಕೈಗಳನ್ನೆತ್ತಿಕೊಂಡು ತಲೆಯವರೆಗೆ ಹಚ್ಚಿಕೊಳ್ಳುವಷ್ಟೂ ವಿನಯವಿದೆ. ಉಳಿದ ದಾನ ಸನ್ಮಾನ ಕುಶಲತೆ ವಿಚಾರಿಸುವುದು, ರೋಗಿ-ದುಃಖಿಗಳ ವೈಯಾವೃತ್ಯ ಮಾಡುವುದೂ ವಿನಯವಂತರಿಗೇ ಆಗುತ್ತದೆ. ದುಃಖಿ ಮನುಷ್ಯ-ತಿರ್ಯಂಚಗಳಿಗೆ ಧೈರ್ಯ, ವಿಶ್ವಾಸ ಕೊಡುವುದು, ದುಃಖ ಕೇಳುವುದು, ತಮ್ಮ ಸಾಮರ್ಥ್ಯದ ಅನುಸಾರ ಉಪಕಾರ ಮಾಡುವುದು, ತಮ್ಮಿಂದ ಸಂಭವಿಸುವಂತಿದ್ದರೆ ಧೈರ್ಯ ಸಂತೋಷ ಮೊದಲಾದವುಗಳ ಉಪದೇಶ ಕೊಡುವುದು ಇದು ವ್ಯವಹಾರ ವಿನಯವಿದೆ. ಈ ವ್ಯವಹಾರ ವಿನಯವು ಪರಮಾರ್ಥ ವಿನಯದ ಕಾರಣವಿದೆ, ಯಶಸ್ಸು ಉತ್ಪನ್ನ ಮಾಡಿಸುತ್ತದೆ, ಧರ್ಮದ ಪ್ರಭಾವನೆ ಮಾಡುತ್ತದೆ.

**ವಚನ ವಿನಯ :-** ಮಿಥ್ಯಾದೃಷ್ಟಿಯದೂ ಅಪಮಾನ ಮಾಡಬಾರದು, ಸವಿನುಡಿ ಆಡುವುದು, ಯಥಾಯೋಗ್ಯ ಆದರ ಸತ್ಕಾರ ಮಾಡುವುದು ಕೂಡ ವಿನಯವಿದೆ. ಮಹಾಪಾಪೀ, ದ್ರೋಹೀ, ದುರಾಚಾರಿಗೂ ಕುವಚನ ಆಡಬಾರದು;ಏಕೇಂದ್ರಿಯ, ವಿಕಲೇಂದ್ರಿಯ ಮತ್ತು ಸರ್ಪ ಮೊದಲಾದ ದುಷ್ಟ ಜೀವಗಳ ವಿರಾಧನೆ ಮಾಡಬಾರದು; ಅವುಗಳ ರಕ್ಷಣೆ ಮಾಡುತ್ತಿರುವುದೇ ಅವುಗಳ ವಿನಯವಿದೆ. ಅನ್ಯ ಧರ್ಮದವರ ಮಂದಿರ, ಮೂರ್ತಿಗಳೊಡನೆ ವೈರ ಮಾಡಿ ನಿಂದೆ ಮಾಡಬಾರದು. ಈ ಪ್ರಕಾರ ಪರಮಾರ್ಥ ಮತ್ತು ವ್ಯವಹಾರ ಇವೆರಡೂ ಪ್ರಕಾರದ ವಿನಯಗಳನ್ನು ಧಾರಣ ಮಾಡಿ ಗೃಹಸ್ಥರು ಪ್ರವರ್ತನೆ ಮಾಡುವುದು ಯೋಗ್ಯವಿದೆ.

ನೋಡಿರಿ ! ಸಂಪೂರ್ಣ ಪರಿಗ್ರಹದ ತ್ಯಾಗಿಯಾದ ವೀತರಾಗ ಮುನಿರಾಜರಿಗೂ ಯಾವನಾದರೂ ಮಿಥ್ಯಾದೃಷ್ಟಿಯು ವಂದನೆ ಮಾಡುತ್ತಿದ್ದರೆ ಅವರು ಅವನಿಗೂ ಉಪದೇಶ ಕೊಡುತ್ತಾರೆ; ಯಾರಾದರೂ ಚಾಂಡಾಲ, ಭಿಲ್ಲ, ಧೀವರ ಮೊದಲಾದ ನೀಚ ಜಾತಿಯವರೂ ವಂದನೆ ಮಾಡುತ್ತಿದ್ದರೆ ಅವರು ಅವರಿಗೆ **ಪಾಪಕ್ಷಯೋಸ್ತು** ಪಾಪಗಳ ನಾಶವಾಗಲೆಂದು ಆಶೀರ್ವಾದ ಕೊಡುತ್ತಾರೆ. ಆದುದರಿಂದ ವಿನಯ ಅಂಗದ ಧಾರಣ ಮಾಡುತ್ತಿದ್ದರೆ ಬಾಲಕ, ಅಜ್ಞಾನೀ, ಧರ್ಮರಹಿತ, ನೀಚ, ಅಧಮ ಜಾತಿಯವರಾರೂ ಇರಲಿ ಅವರಿಗೆ ವಿನಯ ಮಾಡಬೇಕಾಗುವುದು. ವಿನಯ ಮಾಡುವ ಸಾಧ್ಯತೆಯಿಲ್ಲದಿದ್ದರೆ ಅವರ ತಿರಸ್ಕಾರ, ನಿಂದೆ ಮಾಡುವುದು ಎಂದೂ ಉಚಿತವಿಲ್ಲ. ಈ ಮನುಷ್ಯ ಜನ್ಮದ ಶೋಭೆಯೆಂದರೆ ವಿನಯವೇ ಇದೆ. ವಿನಯವಿಲ್ಲದೆ ನಮ್ಮ ಮನುಷ್ಯ ಜನ್ಮದ ಒಂದು ಸಮಯವು ಕೂಡ ಕಳೆದು ಹೋಗದಿರಲೆಂದು ಭಗವಾನ ಗಣಧರದೇವರು ಹೇಳುತ್ತಾರೆ.

ಈ ಪ್ರಕಾರ ವಿನಯ ಗುಣದ ಮಹಿಮೆಯನ್ನು ತಿಳಿದುಕೊಂಡು ಅದರ ಗೌರವ ಮಾಡಬೇಕು. ಓ ವಿನಯ ಸಂಪನ್ನತೆಯ ಅಂಗವೇ ! ನೀನು ನಮ್ಮ ಹೃದಯದಲ್ಲಿ ನಿರಂತರ ವಾಸವಾಗಿರು ! ನಿನ್ನ ಪ್ರಸಾದದಿಂದ ಈಗ ನನ್ನ ಆತ್ಮನು ಎಂದೂ ಎಂಟು ಮದಗಳ ರೂಪವಾದ ಅಭಿಮಾನಕ್ಕೆ ಪ್ರಾಪ್ತವಾಗದಿರಲಿ. ಈ ಪ್ರಕಾರ ವಿನಯ ಸಂಪನ್ನತೆಯೆಂಬ ಹೆಸರಿನ ಎರಡನೇ ಭಾವನೆಯ ವರ್ಣನೆ ಮಾಡಲಾಯಿತು.

## ಶೀಲವ್ರತೇಷ್ವನತೀಚಾರ ಭಾವನೆ

ಈಗ ಮೂರನೆಯ ಶೀಲವ್ರತೇಷ್ವನತೀಚಾರಭಾವನೆ ಹೇಳುತ್ತಾರೆ. ಶೀಲವ್ರತೇಷ್ವನತೀಚಾರದ ಅರ್ಥವನ್ನು ರಾಜವಾರ್ತಿಕದಲ್ಲಿ ಹೀಗೆ ಹೇಳುತ್ತಾರೆ. ಅಹಿಂಸೆ ಮೊದಲಾದ ಐದು ವ್ರತ ಹಾಗೂ ಈ ಐದು ವ್ರತಗಳನ್ನು ಪಾಲಿಸುವ ಸಲುವಾಗಿ ಕ್ರೋಧಾದಿ ಕಷಾಯಗಳ ತ್ಯಾಗರೂಪ ಶೀಲದಲ್ಲಿ ಮನ-ವಚನ-ಕಾಯದ ಯಾವ ನಿರ್ದೋಷ ಪ್ರವೃತ್ತಿಯಿದೆ ಅದು ಶೀಲವ್ರತೇಷ್ವನತೀಚಾರಭಾವನೆಯಿದೆ. **ಆತ್ಮನ ಸ್ವಭಾವದ** ಹೆಸರು **ಶೀಲವಿದೆ.** ಹಿಂಸೆ ಮೊದಲಾದ ಐದು ಪಾಪಗಳು ಆತ್ಮಸ್ವಭಾವದ ಘಾತ ಮಾಡುವಂಥವುಗಳಿವೆ. ಅವುಗಳಲ್ಲಿ ಕಾಮಸೇವನೆಯೆಂಬ ಹೆಸರಿನ ಒಂದೇ ಪಾಪವು ಹಿಂಸೆ ಮೊದಲಾದ ಸಮಸ್ತ ಪಾಪಗಳನ್ನು ಪುಷ್ಟಗೊಳಿಸುತ್ತದೆ, ಮತ್ತು ಕ್ರೋಧ ಮೊದಲಾದ ಸಮಸ್ತ ಕಷಾಯಗಳನ್ನು ತೀವ್ರ ಮಾಡುತ್ತದೆ. ಆದುದರಿಂದ ಇಲ್ಲಿ ಜಯಮಾಲದ ಅರ್ಥದಲ್ಲಿ ಬ್ರಹ್ಮಚರ್ಯದ ಮುಖ್ಯತೆಯಿಂದಲೇ ವರ್ಣನೆ ಮಾಡಿದೆ.

ಈ ಶೀಲವು ದುರ್ಗತಿಯ ದುಃಖವನ್ನು ನಾಶಮಾಡುವಂಥದ್ದಿದೆ, ಸ್ವರ್ಗಾದಿ ಶುಭಗತಿಯ ಕಾರಣವಿದೆ, ವ್ರತ-ತಪ- ಸಂಯಮದ ಜೀವನವಿದೆ. **ಶೀಲವಿಲ್ಲದೆ ತಪಸ್ಸು ಮಾಡುವುದು, ವ್ರತ ಧಾರಣ ಮಾಡುವುದು, ಸಂಯಮ ಪಾಲಿಸುವುದು ಮೃತಕ ಶರೀರದ ಸಮಾನ ನೋಡುವುದಕ್ಕೆ** ಮಾತ್ರವಿದೆ, ಕಾರ್ಯಕಾರಿಯಿಲ್ಲ, ಶೀಲರಹಿತನ ತಪ-ವ್ರತ-ಸಂಯಮಗಳು ಧರ್ಮದ ನಿಂದೆ ಮಾಡಿಸುವಂಥವುಗಳಿವೆಯೆಂದು ತಿಳಿದುಕೊಂಡು ಶೀಲವೆಂಬ ಹೆಸರಿನ ಧರ್ಮದ ಅಂಗದ ಪಾಲನೆ ಮಾಡಬೇಕು, ಚಂಚಲ ಮನಸ್ಸು ರೂಪದ ಪಕ್ಷಿಯ ನಿಗ್ರಹ ಮಾಡಬೇಕು, ಅತಿಚಾರರಹಿತ ಶುದ್ಧ ಶೀಲವನ್ನು ಪುಷ್ಟ ಮಾಡಬೇಕು.

**ಮನಸ್ಸು-ಆನೆಯ ಸಮಾನವಿದೆ :** ಧರ್ಮರೂಪದ ವನವನ್ನು ವಿಧ್ವಂಸ ಮಾಡುವಂಥ ಮನಸ್ಸುರೂಪದ ಮದೋನ್ಮತ್ತ ಆನೆಯನ್ನು ತಡೆಯಬೇಕಾಗುವುದು, ಮನಸ್ಸು ರೂಪದ ಆನೆಯು ಚಂಚಲವಾಗಿ ಮಹಾನ ಅನರ್ಥ ಮಾಡುತ್ತದೆ. ಹೇಗೆ ಮದವೇರಿದ ಆನೆಯು ತನ್ನ ಸ್ಥಾನದಿಂದ ಓಡಿ ಹೋಗುತ್ತದೆ, ಅದೇ ಪ್ರಕಾರ ಕಾಮದಿಂದ ಉನ್ಮತ್ತವಾದ ಮನರೂಪದ ಆನೆಯು ತನ್ನ ಸಮಭಾವ ರೂಪದ ಸ್ಥಾನದಿಂದ ಹೊರಟು ಹೋಗುತ್ತದೆ, ಕುಲದ ಮರ್ಯಾದೆ, ಸಂತೋಷ ಮೊದಲಾದುವನ್ನು ಬಿಟ್ಟು ಕೊಡುತ್ತದೆ. ಮದೋನ್ಮತ್ತ ಆನೆಯಂತೂ ಸಂಕಲೆ ಕಿತ್ತು ಹೋಗುತ್ತದೆ, ಆ ಮನಸ್ಸು ರೂಪದ ಆನೆಯು ಸುಬುದ್ಧಿರೂಪದ ಸಂಕಲೆಯನ್ನು ಮುರಿದು ಸುತ್ತುತ್ತದೆ. ಆನೆಯಂತೂ ಮಾರ್ಗದಲ್ಲಿ ನಡೆಯುವಂಥ ಮಾವುತನನ್ನು ಕೆಡವುತ್ತದೆ, ಕಾಮುಕನ ಮನಸ್ಸು ಸಮ್ಯಗ್ಧರ್ಮದ ಮಾರ್ಗದಲ್ಲಿ ಪ್ರವರ್ತಿಸುವಂಥ ಜ್ಞಾನವನ್ನು ದೂರ ಮಾಡಿ ಬಿಡುತ್ತದೆ. ಆನೆಯಂತೂ ಅಂಕುಶವನ್ನು ಮನ್ನಿಸುವುದಿಲ್ಲ, ಮನರೂಪದ ಆನೆಯು ಗುರುಗಳ ಹಿತಕರ ವಚನಗಳನ್ನು ಮನ್ನಿಸುವುದಿಲ್ಲ, ಆನೆಯಂತೂ ಫಲ ಹಾಗೂ ಛಾಯೆ ಕೊಡುವಂಥ ದೊಡ್ಡ ವೃಕ್ಷಗಳನ್ನು ಕಿತ್ತು ಎಸೆಯುತ್ತದೆ, ಕಾಮದಿಂದ ಉದ್ದಿಪ್ತಗೊಂಡ ಮನಸ್ಸು ಸ್ವರ್ಗ-ಮೋಕ್ಷ ರೂಪದ ಫಲವನ್ನು ಕೊಡುವಂಥ ಹಾಗೂ ಯಶಸ್ಸು ರೂಪದ ಸುಗಂಧವನ್ನು ಹರಡುವಂಥ, ಸಮಸ್ತ ವಿಷಯಗಳ ಆ ತಪವನ್ನು ನಿವಾರಿಸುವಂಥ ಬ್ರಹ್ಮಚರ್ಯ ರೂಪದ ವೃಕ್ಷವನ್ನು ಕಿತ್ತು ಎಸೆಯುತ್ತದೆ.

ಆನೆಯಂತೂ ಕೊಳೆಯನ್ನು ದೂರ ಮಾಡುವಂಥ ಸರೋವರದಲ್ಲಿ ಸ್ನಾನ ಮಾಡಿ ತಲೆಯ ಮೇಲೆ ಧೂಳು ಹಾಕಿಕೊಳ್ಳುತ್ತ ಧೂಳದೊಡನೆ ಆಡುತ್ತದೆ, ಕಾಮದಿಂದ ವ್ಯಾಪ್ತವಾದ ಮನಸ್ಸು ಸಿದ್ಧಾಂತರೂಪದ ಸರೋವರದಲ್ಲಿ ಸ್ನಾನ ಮಾಡಿ ಅನೇಕ ಪ್ರಕಾರದ ಅಜ್ಞಾನರೂಪದ ಮಲವನ್ನು ತೊಳೆದುಕೊಂಡೂ ಪಾಪರೂಪದ ಧೂಳದೊಡನೆ ಆಡುತ್ತದೆ. ಆನೆಯಂತೂ ಕಿವಿಗಳ ಚಂಚಲತೆಯನ್ನು ತೋರಿಸುತ್ತದೆ, ಕಾಮಸಂಯುಕ್ತ ಮನಸ್ಸು ಪಂಚೇಂದ್ರಿಯಗಳ ವಿಷಯಗಳಲ್ಲಿ ಚಂಚಲತೆಯನ್ನು ತೋರಿಸುತ್ತದೆ. ಆನೆಯಂತೂ ಹೆಣ್ಣಾನೆಯಲ್ಲಿ ಪ್ರೀತಿ ಮಾಡುತ್ತದೆ, ಕಾಮಸಂಯುಕ್ತ ಮನಸ್ಸು ಕುಬುದ್ಧಿ

ರೂಪದ ಹೆಣ್ಣಾನೆಯಲ್ಲಿ ರಮಿಸುತ್ತದೆ. ಆನೆಯು ಸ್ವಚ್ಛಂದತೆಯಿಂದ ತೂಗಾಡುತ್ತದೆ, ಮನಸ್ಸೂ ಸ್ವಚ್ಛಂದವಾಗಿ ತೂಗುತ್ತದೆ. ಆನೆಯಂತೂ ಮದದಿಂದ ಮತ್ತವಿರುತ್ತದೆ, ಕಾಮುಕನ ಮನಸ್ಸು ರೂಪು ಮೊದಲಾದ ಎಂಟು ಮದಗಳಿಂದ ಮತ್ತವಿರುತ್ತದೆ. ಆನೆಯ ಹತ್ತಿರ ಯಾವ ಪಥಿಕನೂ ಬರುವುದಿಲ್ಲ ದೂರದಿಂದಲೇ ಓಡಿ ಹೋಗುತ್ತಾರೆ, ಕಾಮದಿಂದ ಉನ್ಮತ್ತವಾದ ಮನಸ್ಸಿನ ಹತ್ತಿರವೂ ಯಾವೊಂದು ಗುಣವೂ ಉಳಿಯುವುದಿಲ್ಲ.

ಆದುದರಿಂದ ಈ ಕಾಮದಿಂದ ಉನ್ಮತ್ತವಾದ ಮನರೂಪದ ಆನೆಯನ್ನು ವೈರಾಗ್ಯರೂಪದ ಕಂಭಕ್ಕೆ ಕಟ್ಟಬೇಕು. ಇದು ಹಾಗೇ ಉಳಿದರೆ ಮಹಾ ಅನರ್ಥ ಮಾಡುವುದು. ಈ ಕಾಮವು **ಅನಂಗ**ವಿದೆ. ಇದರ ಹತ್ತಿರ ಅಂಗವೇ ಇಲ್ಲ, ಇದಂತೂ **ಮನಿಸಿಜ**ವಿದೆ ಮನಸ್ಸಿನಲ್ಲಿಯೇ ಇದರ ಜನ್ಮವಾಗುತ್ತದೆ. ಮನಸ್ಸಿನ ಮಥನ ಮಾಡುವಂಥದ್ದಿರುವುದರಿಂದ ಇದನ್ನು **ಮನ್ಮಥ**ವೆಂದು ಹೇಳುತ್ತಾರೆ. ಸಂವರದ ಅರಿ ಎಂದರೆ ವೈರಿಯಿರುವುದರಿಂದ ಇದನ್ನು **ಸಂವರಾರಿ**ಯೆಂದು ಹೇಳುತ್ತಾರೆ. ಕಾಮದಿಂದ ದುಷ್ಟ ದರ್ಪ ಎಂದರೆ ಗರ್ವವು ಉತ್ಪನ್ನವಾಗುವುದರಿಂದ ಇದನ್ನು ಕಂದರ್ಪವೆಂದು ಹೇಳುತ್ತಾರೆ. ಇದರ ಮೂಲಕ ಅನೇಕ ಮನುಷ್ಯ-ತಿರ್ಯಂಚಗಳು ಪರಸ್ಪರ ಹೋರಾಡಿ ಸತ್ತು ಹೋಗುತ್ತಿರುವುದರಿಂದ ಇದನ್ನು ಮಾರವೆಂದು ಹೇಳುತ್ತಾರೆ. ಇದೇ ಕಾರಣ ಮನುಷ್ಯರಲ್ಲಿ ಅನ್ಯ ಇಂದ್ರಿಯಗಳ ಅಂಗಗಳಂತೂ ಪ್ರಕಟವಿವೆ. ಕಾಮದ ಅಂಗಗಳು ಮುಚ್ಚಿಕೊಂಡಿವೆ. ಉತ್ತಮ ಪುರುಷರಂತೂ ಕಾಮದ ಅಂಗದ ಹೆಸರಿನ ಉಚ್ಚಾರವನ್ನೂ ಮಾಡುವುದಿಲ್ಲ. ಇದರ ಸಮಾನ ಬೇರೆ ಪಾಪವಿಲ್ಲ. ಧರ್ಮದಿಂದ ಭ್ರಷ್ಟ ಮಾಡುವಂಥದು ಕಾಮವೇ ಇದೆ. ಈ ಕಾಮವು ಋಷಿ, ಮುನಿ, ದೇವತೆ,ಹರಿ, ಹರ, ಬ್ರಹ್ಮ ಮೊದಲಾದವರನ್ನು ಭ್ರಷ್ಟ ಮಾಡಿ ತನ್ನ ಆಧೀನ ಮಾಡಿಕೊಂಡಿದೆ. ಆದುದರಿಂದ ಸಂಪೂರ್ಣ ಜಗತ್ತನ್ನು ಜಯಿಸುವಂಥದ್ದೆಂದರೆ ಒಂದು ಕಾಮವನ್ನೇ ಹೇಳಲಾಗುತ್ತದೆ. ಇದನ್ನು ಜಯಿಸುವಂಥವನು ಮೋಹವನ್ನು ಸಹಜದಲ್ಲಿಯೇ ಜಯಿಸುತ್ತಾನೆ. ಆದುದರಿಂದ ಕಾಮದ ತ್ಯಾಗ ಮಾಡುವ ಸಲುವಾಗಿ ಮನುಷ್ಯನೀ, ದೇವಾಂಗನೀ ತಿರ್ಯಂಚಿನಿಯ ಸಂಸರ್ಗ ಸಂಗತಿಯು ಕಾಮವಿಕಾರವನ್ನು ಉತ್ಪನ್ನ ಮಾಡುವಂಥದ್ದೆಂದು ತಿಳಿದುಕೊಂಡು ದೂರದಿಂದಲೇ ಅದರ ತ್ಯಾಗ ಮಾಡಿ ಬಿಡಬೇಕು.

ಮನ, ವಚನ, ಕಾಯದಿಂದ ಸ್ತ್ರೀಯರಲ್ಲಿ ರಾಗದ ತ್ಯಾಗ ಮಾಡಬೇಕು. ತಾವು ಸ್ವಯಂ ಕುಶೀಲದ ಮಾರ್ಗದಲ್ಲಿ ನಡೆಯಬಾರದು. ಉಳಿದ ಇತರರಿಗೂ ಕುಶೀಲದ ಮಾರ್ಗದ ಉಪದೇಶ ಕೊಡಬಾರದು. ಬೇರೆ ಯಾರಾದರೂ ಕುಶೀಲದ ಮಾರ್ಗದ ಮೇಲೆ ಹೋಗುತ್ತಿದ್ದರೆ ಭವ್ಯ ಜನರು ಅದರ ಅನುಮೋದನೆ ಮಾಡುವುದಿಲ್ಲ. ಸ್ತ್ರೀ ಬಾಲಿಕೆಯನ್ನು ನೋಡಿ ಅವಳ ಮೇಲೆ ಮಗಳಂತೆ ನಿರ್ವಿಕಾರ ಬುದ್ಧಿಮಾಡಬೇಕು. ಯೌವ್ವನರೂಪದ ಆನೆಯ ಮೇಲೆ ಕುಳಿತು, ಸೌಂದರ್ಯರೂಪದ ಜಲದಲ್ಲಿ ಯಾರ ಸರ್ವಾಂಗವು ಮುಳುಗೇಳುತ್ತಿದೆ ಅಂಥ ರೂಪವತಿ ಸ್ತ್ರೀಯಲ್ಲಿ ಸೋದರಿಯ ಸಮಾನ ನಿರ್ವಿಕಾರ ಬುದ್ಧಿ ಮಾಡಬೇಕು. ಅವಳಿಗೆ ಸನ್ಮಾನ ಕೊಡಬೇಡಿರಿ ! ಮಾತುಕತೆ ಮಾಡಬೇಡಿರಿ !!

ಶೀಲವಂತರ ದೃಷ್ಟಿಯು ಸ್ತ್ರೀಯರ ಮೇಲೆ ಹೋಗುತ್ತಿರುವಂತೆಯೇ ಅವರ ಕಣ್ಣುಗಳು ಮುಚ್ಚಿಕೊಳ್ಳುತ್ತವೆ. ಯಾರು ಸ್ತ್ರೀಯರೊಡನೆ ಮಾತುಕತೆ ಮಾಡುವರು, ಸ್ತ್ರೀಯರ ಅಂಗಗಳನ್ನು ನೋಡುವರು ಅವರ ಶೀಲವು ಅವಶ್ಯವಾಗಿ ಭಂಗವಾಗುವುಗದು. ಆದುದರಿಂದ ವಿವೇಕವುಳ್ಳ ಗೃಹಸ್ಥರುಗಳಂತೂ ತಮ್ಮ ಓರ್ವ ಸ್ತ್ರೀಯ ಹೊರತಾಗಿ ಅನ್ಯ ಸ್ತ್ರೀಯರುಗಳ ಸಂಗತಿ, ಅವಲೋಕನ, ವಾರ್ತಾಲಾಪದ ತ್ಯಾಗ ಮಾಡಿರುತ್ತಾರೆ ಮತ್ತು ಅನ್ಯ ಸ್ತ್ರೀಯರುಗಳ ಕಥೆಯ ವಿಚಾರವನ್ನು ಸ್ವಪ್ನದಲ್ಲಿ ಕೂಡ ತರುವುದಿಲ್ಲ. ಅವರು ಏಕಾಂತದೊಳಗೆ ತಮ್ಮ ತಾಯಿ, ಸಹೋದರಿ, ಮಗಳ ಜತೆಯಲ್ಲಿ ಕೂಡ ಇರುವುದಿಲ್ಲ.

**ಮುನಿರಾಜರಂತೂ ಸಮಸ್ತ ಸ್ತ್ರೀ ಮಾತ್ರರ ಸಂಗತಿಯನ್ನೇ ಮಾಡುವುದಿಲ್ಲ, ಸ್ತ್ರೀಯರಲ್ಲಿ ಉಪದೇಶ ಮಾಡುವುದಿಲ್ಲ.** ಸ್ತ್ರೀಯ ಹೆಸರೇ ತನ್ನ ಪ್ರಕಟ ದೋಷಗಳನ್ನು ಹೇಳುವಂಥದ್ದಿದೆ. ಈ ಜೀವನಿಗೆ ಸ್ತ್ರೀಯ ಸಮಾನ ಕೆಡಕು ಮಾಡುವಂಥ ಬೇರೆ ಯಾವ ವೈರಿಯಿಲ್ಲದಿರುವುದರಿಂದ ಸಜ್ಜನ ಜನರು ಇವಳನ್ನು **ನಾರಿ**ಯೆಂದು ಹೇಳುತ್ತಾರೆ. ದೋಷಗಳನ್ನು ಪ್ರತ್ಯಕ್ಷ ನೋಡ-ನೋಡುತ್ತಿರುವಂತೆಯೇ ಮುಚ್ಚಿಕೊಳ್ಳುತ್ತಿರುವುದರಿಂದ ಇವಳನ್ನು **ಸ್ತ್ರೀ**ಯೆಂದು ಹೇಳುತ್ತಾರೆ. ಇವಳನ್ನು ನೋಡುವುದರಿಂದ ಪುರುಷನ ಪತನವಾಗಿ ಹೋಗುವುದರಿಂದ ಇವಳ ಹೆಸರು **ಪತ್ನಿ**ಯಿದೆ. ಕುಮರಣವಾಗುವ

ಕಾರಣಗಳಿರುವುದರಿಂದ ಇವಳ ಹೆಸರು **ಕುಮಾರಿ**ಯಿದೆ. ಇವಳ ಸಂಗತಿಯಿಂದ ಪೌರುಷ, ಬುದ್ಧಿ, ಬಲಗಳು ನಷ್ಟವಾಗಿ ಹೋಗುವುದರಿಂದ ಇವಳ ಹೆಸರು **ಅಬಲೆ**ಯಿದೆ. ಸಂಸಾರ ಬಂಧದ ಕಾರಣಗಳಿರುವುದರಿಂದ ಇವಳ ಹೆಸರು **ವಧು** ಇದೆ. ಕುಟಿಲತೆ-ಮಾಯಾಚಾರದ ಸ್ವಭಾವವಿರುವುದರಿಂದ ಇವಳ ಹೆಸರು **ವಾಮಾ** ಇದೆ. ಇವಳ ನೇತ್ರಗಳಲ್ಲಿ ಕುಟಿಲತೆಯು ವಾಸಿಸುತ್ತಿರುವುದರಿಂದ ಇವಳ ಹೆಸರು **ವಾಮಲೋಚನೆ**ಯಿದೆ.

**ಶೀಲವಂತರಿಗೆ ಇಂದ್ರನೂ ನಮಸ್ಕಾರ ಮಾಡುತ್ತಾನೆ.** ಶೀಲವಂತ ಪುರುಷರು ರತ್ನತ್ರಯರೂಪದ ಧನವನ್ನು ತೆಗೆದುಕೊಂಡು ಕಾಮ ಮೊದಲಾದ ಸುಲಿಗೆಗಾರರ ಭಯದಿಂದ ರಹಿತನಾಗಿ ನಿರ್ವಾಣ ನಗರದತ್ತ ಗಮನ ಮಾಡುತ್ತಾನೆ. ಶೀಲದಿಂದ ಭೂಷಿತನಿರುವವನು ರೂಪರಹಿತನಾಗಿರಲಿ, ಮಲಿನನಾಗಿರಲಿ, ರೋಗಾದಿಗಳಿಂದ ಸಹಿತನಾಗಿದ್ದರೂ ಅವನು ತನ್ನ ಸಂಗತಿಯಿಂದ ಸಮಸ್ತ ಸಭಾ ಜನರನ್ನೂ ಮೋಹಿತ ಮಾಡುತ್ತಾನೆ. ಶೀಲರಹಿತನಾದ ವ್ಯಭಿಚಾರೀ ಪುರುಷನಲ್ಲಿ ಕಾಮ ದೇವನ ಸಮಾನ ರೂಪು ಇದ್ದರೂ ಕೂಡ ಜನರು ಅವನ ಮೇಲೆ ಛೀ-ಥೂಕಾರವನ್ನೇ ಮಾಡುತ್ತಾರೆ. ಇದರ ಹೆಸರೇ ಕುಶೀಲವಿದೆ.

**ಸ್ವಭಾವದ ಹೆಸರು ಶೀಲವಿದೆ.** ಕಾಮುಕ ಪುರುಷನ ಶೀಲವು ಯಾವ ಆತ್ಮನ ಸ್ವಭಾವವಿದೆ ಅದು ದೂಷಿತವಾಗಿ ಹೋಗುವುದರಿಂದ ಅವನನ್ನು **ಕುಶೀಲ**ನೆಂದು ಕರೆಯುತ್ತಾರೆ. ಕಾಮುಕ ಪುರುಷನು ಧರ್ಮದಿಂದ, ಆತ್ಮನ ಸ್ವಭಾವದಿಂದ, ವ್ಯವಹಾರದ ಶುದ್ಧತೆಯಿಂದ ರಹಿತನಾಗಿ ಹೋಗುವುದರಿಂದ ಅವನನ್ನು **ವ್ಯಭಿಚಾರಿ**ಯೆಂದು ಹೇಳುತ್ತಾರೆ. ಜಗತ್ತಿನಲ್ಲಿ ಬೇರೆ ದುಷ್ಟ ಕರ್ಮವಿಲ್ಲದುದರಿಂದ ಕಾಮುವನ್ನು **ಕುಕರ್ಮ**ವೆಂದು ಹೇಳುತ್ತಾರೆ. ಕಾಮಸೇವನೆಯ ಸಮಯದಲ್ಲಿಮನುಷ್ಯನು ಪಶುವಿನ ಸಮಾನನಾಗಿ ಹೋಗುವುದರಿಂದ ಅದನ್ನು **ಪಶುಕರ್ಮ**ವೆಂದು ಹೇಳುತ್ತಾರೆ. ಬ್ರಹ್ಮ ಎಂದರೆ ಇದರಿಂದ ಆತ್ಮನ ಜ್ಞಾನ-ದರ್ಶನ ಮೊದಲಾದ ಸ್ವಭಾವದ ಘಾತವಾಗುವುದಿಂದ ಅದನ್ನು **ಅಬ್ರಹ್ಮ**ವೆಂದು ಹೇಳುತ್ತಾರೆ. ಕುಶೀಲದ ಸಂಗತಿಯಿಂದ ಕುಶೀಲರಾಗಿ ಹೋಗುತ್ತಾರೆ. ಯಾರು ಶೀಲದ ರಕ್ಷಣೆ ಮಾಡಿದ್ದಾರೆ ಅವರು ಶಾಂತಿ, ದೀಕ್ಷೆ, ತಪ, ವ್ರತ, ಸಂಯಮಗಳೆಲ್ಲವನ್ನು ಪಾಲಿಸಿದ್ದಾರೆ.

**ತಮ್ಮ ಸ್ವಭಾವದಿಂದ ಚಂಚಲವಾಗದಿರುವುದನ್ನು ಮುನೀಶ್ವರರು ಶೀಲವೆಂದು ಹೇಳುತ್ತಾರೆ.** ಶೀಲಗುಣವು ಎಲ್ಲ ಗುಣಗಳಲ್ಲಿ ದೊಡ್ಡದಿದೆ. ಶೀಲಯುಕ್ತನಾದ ಪುರುಷನ ಅಲ್ಪವ್ರತ, ತಪಗಳೂ ಪ್ರಚುರ ಫಲ ಕೊಡುತ್ತವೆ ಮತ್ತು ಶೀಲವಿಲ್ಲದ ಅಧಿಕ ವ್ರತ-ತಪಗಳೂ ನಿಷ್ಫಲವಿವೆ. ಈ ಪ್ರಕಾರ ತಿಳಿದುಕೊಂಡು ತಮ್ಮ ಆತ್ಮನಲ್ಲಿ ಶೀಲದ ಶುದ್ಧತೆಯ ಸಲುವಾಗಿ ನಿತ್ಯಶೀಲವನ್ನೇ ಪೂಜಿಸಬೇಕು. ಈ ಶೀಲವ್ರತವು ಮನುಷ್ಯ ಜನ್ಮದಲ್ಲಿಯೇ ಇದೆ, ಅನ್ಯಗತಿಯಲ್ಲಿ ಇಲ್ಲ. ಆದುದರಿಂದ ತಮ್ಮ ಜನ್ಮಸಾರ್ಥಕ ಮಾಡಿಕೊಳ್ಳುವುದಿದ್ದರೆ ಶೀಲದ ಉಜ್ವಲತೆಯನ್ನೇ ಮಾಡಿಕೊಳ್ಳಬೇಕು. ಈ ಪ್ರಕಾರ ಶೀಲವ್ರತೇಷ್ವನತೀಚಾರ ನಾಮದ ಮೂರನೇ ಭಾವನೆಯ ವರ್ಣನೆ ಮಾಡಲಾಯಿತು.

## ಅಭೀಕ್ಷಣ ಜ್ಞಾನೋಪಯೋಗ ಭಾವನೆ

**ಅಭೀಕ್ಷಣ ಜ್ಞಾನೋಪಯೋಗ ನಾಮದ ನಾಲ್ಕನೇ ಭಾವನೆಯ ವರ್ಣನೆ ಮಾಡುತ್ತಾರೆ.** ಎಲೈ ಆತ್ಮನೇ ! ಈ ಮನುಷ್ಯ ಜನ್ಮ ಪಡೆದು ನಿರಂತರ ಜ್ಞಾನಾಭ್ಯಾಸವನ್ನೇ ಮಾಡಬೇಕು, ಜ್ಞಾನದ ಅಭ್ಯಾಸ ಮಾಡಿದಲ್ಲದೆ ಒಂದು ಕ್ಷಣವನ್ನೂ ವ್ಯತೀತ ಮಾಡಬಾರದು. ಜ್ಞಾನದ ಅಭ್ಯಾಸವಿಲ್ಲದ ಮನುಷ್ಯನು ಪಶು ಸಮಾನನಿದ್ದಾನೆ. ಆದುದರಿಂದ ಯೋಗ್ಯ ಕಾಲದಲ್ಲಿ ಜಿನಾಗಮದ ಪಾಠ ಮಾಡಬೇಕು, ಸಮಭಾವವಿದ್ದಾಗ ಧ್ಯಾನ ಮಾಡಬೇಕು. ಶಾಸ್ತ್ರಗಳ ಅರ್ಥದ ಚಿಂತನೆ ಮಾಡಬೇಕು, ಅಧಿಕ ಜ್ಞಾನೀಗುರುಜನರಲ್ಲಿ ನಮ್ರತೆ, ವಂದನೆ, ವಿನಯಾದಿಗಳನ್ನು ಮಾಡಬೇಕು, ಧರ್ಮಕೇಳುವ ಇಚ್ಛೆಯುಳ್ಳವರಿಗೆ ಧರ್ಮೋಪದೇಶ ಮಾಡಬೇಕು. ಇದನ್ನೇ ಅಭೀಕ್ಷಣ ಜ್ಞಾನೋಪಯೋಗವೆಂದು ಹೇಳುತ್ತಾರೆ. ಈ ಅಭೀಕ್ಷಣ ಜ್ಞಾನೋಪಯೋಗ ನಾಮದ ಗುಣದ ಪೂಜೆಯನ್ನು ಅಷ್ಟದ್ರವ್ಯಗಳಿಂದ ಮಾಡಿ ಅರ್ಘ್ಯ ಕೊಡಬೇಕು. ಮತ್ತು ಪುಷ್ಪಗಳನ್ನು ಎರಡೂ ಕೈಗಳ ಅಂಜಲಿಯಿಂದ ಇದರ ಮುಂದೆ ಕ್ಷೇಪಣ ಮಾಡಬೇಕು.

**ಜ್ಞಾನೋಪಯೋಗವು ಚೈತನ್ಯದ ಪರಿಣತಿಯಿದೆ.** ಆದುದರಿಂದ ಪ್ರತಿಕ್ಷಣ ನಿರಂತರ ಚೈತನ್ಯದ ಭಾವನೆಯನ್ನೇ ಭಾವಿಸಬೇಕು. ಅನಾದಿಕಾಲದಿಂದ ಕಾಮ,ಕ್ರೋಧ, ಅಭಿಮಾನ, ಲೋಭಾದಿಗಳು ನನ್ನ ಜತೆ ಸೇರಿಕೊಂಡಿವೆ, ಅನಾದಿಯಿಂದಲೇ ಇವುಗಳ ಸಂಸ್ಕಾರವು ನನ್ನ ಚೈತನ್ಯರೂಪದಲ್ಲಿ ಕೂಡಿಕೊಂಡಿದೆ. ಈಗ **ಭಗವಂತರ ಪರಮಾಗಮದ ಸೇವನೆಯ ಪ್ರಭಾವದಿಂದ ನನ್ನ ಆತ್ಮನು ರಾಗ-ದ್ವೇಷ ಮೊದಲಾದವುಗಳಿಂದ ಭಿನ್ನವಾದ ತನ್ನ ಜ್ಞಾಯಕ ಸ್ವಭಾವದಲ್ಲಿಯೇ ಸ್ಥಿರವಾಗಿ ಹೋಗಲಿ, ರಾಗಾದಿಗಳ ವಶವರ್ತಿಯಾಗದಿರಲಿ, ಆದುವೇ ನನ್ನ ಆತ್ಮನ ಹಿತವಿದೆಯೆಂಬ ಭಾವನೆಯು ಸತತ ಇರಲಿ.**

**ಸಮಸ್ತ ದ್ರವ್ಯಗಳಲ್ಲಿ ಮಿಳಿತವಾಗಿದ್ದರೂ ಕೂಡ ಓರ್ವ ಆತ್ಮನ ಭಿನ್ನ ಅನುಭವವಾಗುವುದೇ ಜ್ಞಾನೋಪಯೋಗವಿದೆ,** ಜ್ಞಾನೋಪಯೋಗದ ಮೂಲಕ ಜ್ಞಾನದ ಅಭ್ಯಾಸ ಮಾಡುವುದರಿಂದ ವಿಷಯಗಳ ಇಚ್ಛೆಯು ನಷ್ಟವಾಗಿ ಹೋಗುತ್ತದೆ, ಕಷಾಯಗಳ ಅಭಾವವಾಗಿ ಹೋಗುತ್ತದೆ. ಮಾಯೆ, ಮಿಥ್ಯಾತ್ವ, ನಿದಾನ. ಈ ಮೂರು ಶಲ್ಯಗಳು ಜ್ಞಾನಾಭ್ಯಾಸದಿಂದ ನಾಶವಾಗಿ ಹೋಗುತ್ತವೆ. ಜ್ಞಾನದ ಅಭ್ಯಾಸದಿಂದಲೇ ಮನಸ್ಸು ಸ್ಥಿರವಾಗುತ್ತದೆ, ಅನೇಕ ಪ್ರಕಾರದ ವಿಕಲ್ಪಗಳು ನಷ್ಟವಾಗಿ ಹೋಗುತ್ತವೆ.

ಜ್ಞಾನಾಭ್ಯಾಸದಿಂದಲೇ ಧರ್ಮಧ್ಯಾನದಲ್ಲಿ, ಶುಕ್ಲಧ್ಯಾನದಲ್ಲಿ ಅಚಲವಾಗಿ ಕುಳಿತುಕೊಳ್ಳಲಾಗುತ್ತದೆ. ಜ್ಞಾನಾಭ್ಯಾಸದಿಂದಲೇ ವ್ರತ, ಸಂಯಮಗಳಿಂದ ಚಂಚಲರಾಗುವುದಿಲ್ಲ, ಜಿನೇಂದ್ರರ ಶಾಸನವು ಪ್ರವರ್ತಿಸುತ್ತದೆ, ಅಶುಭ ಕರ್ಮಗಳ ನಾಶವಾಗುತ್ತದೆ, ಜಿನಧರ್ಮದ ಪ್ರಭಾವನೆಯಾಗುತ್ತದೆ. ಜ್ಞಾನದ ಅಭ್ಯಾಸದಿಂದಲೇ ಜನರ ಹೃದಯದಲ್ಲಿ ಮೊದಲಿನಿಂದ ಸಂಗ್ರಹಿಸಿಟ್ಟಿರುವ ಪಾಪರೂಪದ ಋಣವು ನಷ್ಟವಾಗಿ ಹೋಗುತ್ತದೆ, ಅಜ್ಞಾನಿಗಳು ಯಾವ ಕರ್ಮವನ್ನು ಘೋರ ತಪಸ್ಸು ಮಾಡಿ ಕೋಟಿ ಪೂರ್ವ ವರ್ಷಗಳಲ್ಲಿ ಕಳೆಯುತ್ತಾರೆ. ಆ ಕರ್ಮವನ್ನು ಜ್ಞಾನಿಗಳು ಅಂತರ್ಮುಹೂರ್ತ-ದಲ್ಲಿಯೇ ನಾಶ ಮಾಡಿ ಬಿಡುತ್ತಾರೆ.

**ಜ್ಞಾನದ ಅಭ್ಯಾಸವೇ ಜಿನಧರ್ಮದ ಸ್ತಂಭವಿದೆ.** ಜ್ಞಾನದ ಅಭ್ಯಾಸದಿಂದಲೇ ಸಮಸ್ತ ಜೀವರುಗಳು ವಿಷಯಗಳ ವಾಂಛೆಯಿಂದ ರಹಿತರಾಗಿ ಸಂತೋಷ ಧಾರಣ ಮಾಡುತ್ತಾರೆ. ಜ್ಞಾನದ ಅಭ್ಯಾಸದಿಂದಲೇ ಉತ್ತಮ ಕ್ಷಮೆ ಮೊದಲಾದ ಗುಣಗಳು ಪ್ರಕಟವಾಗುತ್ತವೆ. ಭಕ್ಷ್ಯ-ಅಭಕ್ಷ್ಯದ, ಯೋಗ್ಯ-ಅಯೋಗ್ಯದ, ತ್ಯಾಗಯೋಗ್ಯ-ಗ್ರಹಣ ಮಾಡಲು ಯೋಗ್ಯದ ವಿಚಾರವಾಗುತ್ತದೆ. ಜ್ಞಾನವಿಲ್ಲದೆ ಪರಮಾರ್ಥ ಮತ್ತು ವ್ಯವಹಾರಗಳೆರಡೂ ನಷ್ಟವಾಗಿ ಹೋಗುತ್ತವೆ.

ಜ್ಞಾನವಿಲ್ಲದೆ ರಾಜಪುತ್ರನದೂ ಅನಾದರವಾಗುತ್ತದೆ. ಜ್ಞಾನದ ಸಮಾನವಾದ ಯಾವ ಧನವಿಲ್ಲ, ಜ್ಞಾನದಾನದ ಸಮಾನವಾಗಿ ಯಾವ ದಾನವಿಲ್ಲ. ದುಃಖೀ ಜೀವರುಗಳಿಗೆ ಯಾವಾಗಲೂ ಜ್ಞಾನವೇ ಶರಣವಿದೆ. ಜ್ಞಾನವೇ ಸ್ವದೇಶದಲ್ಲಿ, ಪರದೇಶದಲ್ಲಿ ಆದರ ಮೂಡಿಸುವಂಥ ಪರಮ ಧನವಿದೆ. ಜ್ಞಾನಧನವನ್ನು ಯಾವ ಕಳ್ಳನೂ ಕದ್ದುಕೊಂಡು ಹೋಗುವ ಸಾಧ್ಯತೆಯಿಲ್ಲ. ಲೂಟಿಮಾಡುವಂಥವನು ಲೂಟಿಮಾಡುವ ಸಾಧ್ಯತೆಯಿಲ್ಲ, ಕಿತ್ತುಕೊಳ್ಳುವಂಥವನು ಕಿತ್ತುಕೊಳ್ಳುವ ಸಾಧ್ಯತೆಯಿಲ್ಲ, ಯಾರಿಗಾದರೂ ಕೊಡುವುದರಿಂದ ಕಡಿಮೆಯಾಗುವುದಿಲ್ಲ, ಯಾವನು ಕೊಡುತ್ತಾನೆ ಅವನ ಜ್ಞಾನವು ಹೆಚ್ಚುತ್ತ ಹೋಗುತ್ತದೆ.

ಜ್ಞಾನದಿಂದಲೇ ಸಮ್ಯಗ್ದರ್ಶನವು ಉತ್ಪನ್ನವಾಗುತ್ತದೆ, ಜ್ಞಾನದಿಂದಲೇ ಮೋಕ್ಷವು ಪ್ರಕಟವಾಗುತ್ತದೆ. ಸಮ್ಯಗ್ಜ್ಞಾನವು ಆತ್ಮನ ಅವಿನಾಶಿಯಾದ ಸ್ವಾಧೀನ ಧನವಿದೆ. ಜ್ಞಾನವಿಲ್ಲದೆ ಸಂಸಾರ ಸಮುದ್ರದಲ್ಲಿ ಮುಳುಗಿರುವಂಥವರಿಗೆ ಹಸ್ತಾವಲಂಬನವಿತ್ತು ಯಾರು ರಕ್ಷಣೆ ಮಾಡುವ ಸಾಧ್ಯತೆಯಿದೆ ? ವಿದ್ಯೆಯ ಸಮಾನವಾಗಿ ಬೇರೊಂದು ಆಭೂಷಣವಿಲ್ಲ. ವಿದ್ಯೆಯಿಲ್ಲದೆ ಕೇವಲ ಆಭೂಷಣಗಳಿಂದಲೇ ಯಾವನು ಸತ್ಪುರುಷರುಗಳ ಮೂಲಕ ಆದರಿಸಲು ಯೋಗ್ಯನಾಗಿ ಹೋಗುವುದಿಲ್ಲ. ನಿರ್ಧನರಿಗೆ ಕೂಡ ಪರಮ ನಿಧಾನವನ್ನು ಪ್ರಾಪ್ತ ಮಾಡಿಸುವಂಥದು ಒಂದು ಸಮ್ಯಗ್ಜ್ಞಾನವೇ ಇದೆ.

ಎಲೈ ಭವ್ಯ ಜೀವರುಗಳೇ ! ಕರುಣಾನಿಧಾನ ಭಗವಾನ ವೀತರಾಗಿ ಗುರುಗಳು ನಿಮ್ಮ ಹಿತದ ಸಲುವಾಗಿ ತಿಳಿಸಿಕೊಡುವುದೇನೆಂದರೆ ನಿಮ್ಮ ಆತ್ಮನನ್ನು ಸಮ್ಯಗ್ಜ್ಞಾನದ ಅಭ್ಯಾಸದಲ್ಲಿಯೇ ತೊಡಗಿಸಿರಿ, ಮತ್ತು ಮಿಥ್ಯಾ ಜ್ಞಾನಿಗಳ ಮೂಲಕ ಹೇಳಲಾದ ಮಿಥ್ಯಾಜ್ಞಾನದ ತ್ಯಾಗವನ್ನು ದೂರದಿಂದಲೇ ಮಾಡಿರಿ. ಸಮ್ಯಗ್ಜ್ಞಾನ ಮತ್ತು ಮಿಥ್ಯಾಜ್ಞಾನವನ್ನು ಪರೀಕ್ಷೆ ಮಾಡಿ ಗ್ರಹಣ ಮಾಡಿರಿ, ತಮ್ಮ ಮಕ್ಕಳನ್ನು ಓದಿಸಿರಿ, ಇತರ ಜನರಿಗೂ ವಿದ್ಯೆಯ ಅಭ್ಯಾಸ ಮಾಡಿಸಿರಿ.

ಶ್ರೀಮಂತರು ತಮ್ಮ ಧನದ ಸಾರ್ಥಕತೆ ಮಾಡಿಕೊಳ್ಳಲಿಚ್ಛಿಸುತ್ತಿದ್ದರೆ ಓದುವಂಥವರಿಗೆ-ಓದಿಸುವಂಥವರಿಗೆ ಆಜೀವಿಕೆಯಿತ್ತು ಸ್ಥಿರಗೊಳಿಸಿರಿ; ಪುಸ್ತಕ ಬರೆಯಿಸಿ ಓದುವಂಥವರಿಗೆ ಕೊಡಿರಿ, ಪುಸ್ತಕವನ್ನು ಶುದ್ಧ ಮಾಡಿರಿ-ಮಾಡಿಸಿರಿ. ಓದುವ-ಓದಿಸುವ ಸಲುವಾಗಿ ಸ್ಥಾನ ಕೊಡಿರಿ, ನಿರಂತರ ಓದುವಲ್ಲಿ - ಕೇಳುವಲ್ಲಿಯೇ ಮನುಷ್ಯ ಜನ್ಮದ ಸಮಯ ವ್ಯತೀತ ಮಾಡಿರಿ. ಈ ಅವಸರವು ಕಳೆದು ಹೋಗುತ್ತಲಿದೆ. ಎಲ್ಲಿಯವರೆಗೆ ಆಯು, ಕಾಯ, ಬುದ್ಧಿ, ಇಂದ್ರಿಯಗಳು ಸುರಕ್ಷಿತವಿವೆ ಅಲ್ಲಿಯವರೆಗೆ ಮನುಷ್ಯಜನ್ಮದ ಒಂದು ಗಳಿಗೆಯನ್ನೂ ಸಮ್ಯಗ್ಜ್ಞಾನವಿಲ್ಲದೆ ಕಳೆಯದಿರಿ. **ಜ್ಞಾನರೂಪದ ಧನವು ಪರಲೋಕದಲ್ಲೂ ಜತೆಗೆ ಬರುವುದು.**

ಈ ಅಭೀಕ್ಷಣ ಜ್ಞಾನೋಪಯೋಗದ ಮಹಿಮೆಯನ್ನು ಕೋಟಿ ನಾಲಗೆಗಳಿಂದ ವರ್ಣನೆ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ಜ್ಞಾನೋಪಯೋಗದ ಪರಮ ಶರಣದ ಸಲುವಾಗಿ ಧನಿಕನಿರುವ ಗೃಹಸ್ಥನು ಕೂಡ ಭಾವನೆ ಭಾವಿಸಬೇಕು, ಆರತಿ ಬೆಳಗಬೇಕು, ಮತ್ತು ಗೃಹದ ತ್ಯಾಗ ಮಾಡಿದವರೂ ಕೂಡ ನಿರಂತರ ಭಾವನೆ ಭಾವಿಸಬೇಕು. ಈ ಪ್ರಕಾರ ಇದು ಅಭೀಕ್ಷಣ ಜ್ಞಾನೋಪಯೋಗವೆಂಬ ಹೆಸರಿನ ನಾಲ್ಕನೇ ಭಾವನೆಯ ವರ್ಣನೆ ಮಾಡಲಾಯಿತು.

## ಸಂವೇಗ ಭಾವನೆ

ಈಗ ಐದನೆಯ ಸಂವೇಗ ಭಾವನೆಯ ವರ್ಣನೆ ಮಾಡುತ್ತಾರೆ. ಸಂಸಾರ, ಶರೀರ, ಭೋಗಗಳಿಂದ ವಿರಕ್ತವಾಗಿ ಧರ್ಮದಲ್ಲಿ ಅನುರಾಗ ಮಾಡುವುದು ಅದು ಸಂವೇಗವಿದೆ, ಮತ್ತು ಧರ್ಮ ಹಾಗೂ ಧರ್ಮದ ಫಲದಲ್ಲಿ ಅನುರಾಗ ಮಾಡುವುದು ಅದು ಸಂವೇಗವಿದೆ.

**ಪುತ್ರನ ಸ್ವರೂಪ ಃ-** ಈ ಸಂಸಾರದಲ್ಲಿ ಯಾವ ಪುತ್ರನ ಮೇಲೆ ಪ್ರೀತಿ ಮಾಡುತ್ತದೆ ಅವನು ಜನ್ಮವೆತ್ತುತ್ತಿರುವಂತೆಯೇ ಸ್ತ್ರೀಯ ಯೌವ್ವನ, ಸೌಂದರ್ಯ ಮೊದಲಾದುವನ್ನು ಕೆಡಿಸುತ್ತಾನೆ. ಜನ್ಮಪಡೆದ ನಂತರ ಮಹಾನ ಆಕುಲತೆ ಮಾಡುತ್ತ, ಮಹಾಕಷ್ಟ ಮೊದಲಾದುವನ್ನು ಸಹಿಸುತ್ತ ಧನ ಖರ್ಚು ಮಾಡಿ ಮಗನನ್ನು ದೊಡ್ಡವನನ್ನಾಗಿ ಮಾಡುತ್ತಾರೆ, ಮತ್ತು ರೋಗಾದಿಗಳಿಂದ ರಕ್ಷಿಸುತ್ತ ಕ್ಷಣ-ಕ್ಷಣಕ್ಕೂ ಅತ್ಯಂತ ಸಾವಧಾನತೆಯೊಡನೆ ಮಹಾಮೋಹಿ-ಮಹಾರಾಗಿಯಾಗಿ, ಗ್ಲಾನಿ ರಹಿತರಾಗಿ, ಅತ್ಯಂತ ಕಷ್ಟಸಹಿಸಿ ದೊಡ್ಡವನನ್ನಾಗಿ ಮಾಡುತ್ತಾರೆ. ಆ ಮಗನು ದೊಡ್ಡವನಾಗಿ ಒಳ್ಳೆಯ ಭೋಜನ, ಒಳ್ಳೆಯ ವಸ್ತ್ರ ಒಳ್ಳೆಯ ಆಭರಣ, ಒಳ್ಳೆಯ ಸ್ಥಾನವನ್ನು ಹಟದಿಂದ ಗ್ರಹಣ ಮಾಡಿಕೊಳ್ಳುತ್ತಾನೆ. ಒಂದು ವೇಳೆ ಅವನು ಮೂರ್ಖನಾದರೆ, ವ್ಯಸನೀಯಾದರೆ, ತೀವ್ರ ಕಷಾಯಿಯಾದರೆ ಹಗಲಿರುಳು ಪರಿಣಾಮದಲ್ಲಿ ಯಾವ ಕ್ಲೇಶವಾಗುತ್ತದೆ ಅದನ್ನು ಹೇಳಲಾಗುವುದಿಲ್ಲ.

ಪುತ್ರನ ಮೋಹದಿಂದ ಪರಿಗ್ರಹದಲ್ಲಿ ಹೆಚ್ಚು ಆಸಕ್ತಿಯಾಗುತ್ತದೆ. ಒಂದು ವೇಳೆ ಅವನು ಸಮರ್ಥನಾದರೂ ಅವನು ತನ್ನ ಆಜ್ಞೆಯಲ್ಲಿ ಉಳಿಯದಿದ್ದರೆ ಪರಿಣಾಮವು ಹೆಚ್ಚು ಆರ್ತರೂಪವಾಗುತ್ತದೆ. ಒಂದು ವೇಳೆ ತಾನು ಜೀವಂತನಿರುವಾಗ ತರುಣ ಪುತ್ರನ ಮರಣವಾಗಿ ಹೋದರೆ ತನ್ನ ಮರಣದವರೆಗೆ ಮಹಾದುಃಖಿಯಾಗಿರುತ್ತಾನೆ, ಕಷ್ಟದ ನಿವಾರಣೆಯಾಗುವುದಿಲ್ಲ. ಎಲ್ಲಿಯವರೆಗೆ ತಂದೆಯನ್ನು ತನ್ನ ಕೆಲಸ ಮಾಡುವವನೆಂದು ತಿಳಿಯುತ್ತಾನೆ ಅಲ್ಲಿಯವರೆಗೆ ತಂದೆಯೊಡನೆ ಪ್ರೀತಿ ಮಾಡುತ್ತಾನೆ. ಮುಂದೆ ತಂದೆಯು ಕೆಲಸ ಮಾಡುವಲ್ಲಿ ಅಸಮರ್ಥನಾದರೆ ಅವನೊಡನೆ ಪ್ರೀತಿ ಮಾಡುವುದಿಲ್ಲ. ಒಂದು ವೇಳೆ ತಂದೆಯು ಧನರಹಿತನಾದರೆ ಅವನ ಅನಾದರ ಮಾಡುತ್ತಾನೆ. ಆದುದರಿಂದ ಪುತ್ರನ ಸ್ವರೂಪ ತಿಳಿದುಕೊಂಡು ಮಗನ ಮೇಲಿನ ರಾಗವನ್ನು ಬಿಟ್ಟುಕೊಟ್ಟು ಪರಮ ಧರ್ಮದ ಮೇಲೆ ರಾಗ ಮಾಡಬೇಕು. ಮಗನ ಸಲುವಾಗಿ ಅನ್ಯಾಯದಿಂದ ಧನ,ಪರಿಗ್ರಹ ಮೊದಲಾದುವನ್ನು ಗ್ರಹಣ ಮಾಡುವುದರ ಪರಿತ್ಯಾಗ ಮಾಡಬೇಕು.

**ಸ್ತ್ರೀಯ ಸ್ವರೂಪ ಃ-** ಸ್ತ್ರೀಯು ಕೂಡ ಮೋಹ ನಾಮದ ವಂಚಕನ ಶೂಲಳಿದ್ದಾಳೆ. ಮಮತೆಯನ್ನುಂಟು ಮಾಡುವವಳಿದ್ದಾಳೆ, ತೃಷ್ಣೆಯನ್ನು ವೃದ್ಧಿಸುವಂಥವಳಿದ್ದಾಳೆ. ಸ್ತ್ರೀಯಲ್ಲಿ ತೀವ್ರರಾಗವಿರುವುದರಿಂದ ಅವಳು ಧರ್ಮದಲ್ಲಿನ ಪ್ರವೃತ್ತಿಯ ನಾಶ ಮಾಡುವಂಥವಳಿದ್ದಾಳೆ. ಲೋಭವನ್ನು ಹೆಚ್ಚಿಸುವಂಥವಳಿದ್ದಾಳೆ, ಪರಿಗ್ರಹದಲ್ಲಿ ಆಸಕ್ತಿ ಹೆಚ್ಚಿಸುವಂಥವಳಿದ್ದಾಳೆ, ಧ್ಯಾನ ಸ್ವಾಧ್ಯಾಯದಲ್ಲಿ ವಿಘ್ನವೊಡ್ಡುವವಳಿದ್ದಾಳೆ, ವಿಷಯಗಳಲ್ಲಿ ಕುರುಡ ಮಾಡುವಂಥವಳಿದ್ದಾಳೆ,

ಕ್ರೋಧ ಮೊದಲಾದ ನಾಲ್ಕೂ ಕಷಾಯಗಳಲ್ಲಿ ತೀವ್ರತೆ ಮಾಡಿಸುವಂಥವಳಿದ್ದಾಳೆ, ಸಂಯಮದ ಘಾತಮಾಡುವಂಥ-ವಳಿದ್ದಾಳೆ, ಜಗಳದ ಮೂಲಳಿದ್ದಾಳೆ, ದುರ್ಧ್ಯಾನದ ಸ್ಥಾನಳಿದ್ದಾಳೆ. ಮರಣ ಕೆಡಿಸುವಂಥವಳಿದ್ದಾಳೆ. ಅವಳು ಇತ್ಯಾದಿ ದೋಷಗಳ ಮೂಲ ಕಾರಣಳಿದ್ದಾಳೆಂದು ತಿಳಿದುಕೊಂಡು ಸ್ತ್ರೀಯ ಕುರಿತಾಗಿರುವ ರಾಗಭಾವವನ್ನು ಬಿಟ್ಟುಕೊಟ್ಟು ವೀತರಾಗ ಧರ್ಮದಿಂದ ತಮ್ಮ ರಾಗವನ್ನು ಹೆಚ್ಚಿಸಿಕೊಳ್ಳಬೇಕು.

**ಮಿತ್ರನ ಸ್ವರೂಪ :-** ಈ ಕಲಿಕಾಲದ ಮಿತ್ರರೂ ವಿಷಯಗಳಲ್ಲಿಯೇ ಸಿಕ್ಕಿಸುವಂಥವರಿದ್ದಾರೆ, ಎಲ್ಲ ವ್ಯಸನಗಳಲ್ಲಿ ಸಿಕ್ಕಿಸಲು ಸಹಾಯಕರಿದ್ದಾರೆ. ಧನವಂತರನ್ನು ನೋಡಿ ಅವರೊಡನೆ ಅನೇಕ ಜನರು ಮಿತ್ರತೆ ಮಾಡುತ್ತಾರೆ, ನಿರ್ಧನರೊಡನೆ ಯಾರೂ ಮಾತನ್ನು ಕೂಡ ಆಡುವುದಿಲ್ಲ, ಹೆಚ್ಚಿಗೇನು ಹೇಳುವುದು. ಮಿತ್ರತೆಯಂತೂ ವ್ಯಸನಗಳಲ್ಲಿ ಮುಳುಗಿಸುವ ಸಲುವಾಗಿಯೇ ಇರುತ್ತದೆ.

ಆದುದರಿಂದ ಎಲೈ ಜ್ಞಾನಿಜನಗಳೇ ! ನಿಮಗೆ ಸಂಸಾರದಲ್ಲಿ ಮುಳುಗಿ ಹೋಗುವ ಭಯವೆನಿಸುತ್ತಿದ್ದರೆ ಉಳಿದೆಲ್ಲರಿಂದ ಮಿತ್ರತೆಯನ್ನು ತೊರೆದು ಪರಮಧರ್ಮದಲ್ಲಿ ಅನುರಾಗ ಮಾಡಿರಿ. ಈ ಸಂಸಾರವಂತೂ ನಿರಂತರಜನ್ಮ-ಮರಣರೂಪವೇ ಇದೆ. ಪ್ರತಿಯೊಂದು ಜೀವವು ಜನ್ಮದಿನದಿಂದಲೇ ಮೃತ್ಯುವಿನ ಕಡೆಗೆ ನಿರಂತರ ಪ್ರಯಾಣ ಮಾಡುತ್ತದೆ. ಜನ್ಮ-ಮರಣ ಮಾಡುತ್ತ ಅನಂತಾನಂತಕಾಲವು ಕಳೆದು ಹೋಗಿದೆ. ಆದುದರಿಂದ ಪಂಚಪರಾವರ್ತನರೂಪ ಸಂಸಾರದಿಂದ ವಿರಕ್ತತೆಯನ್ನು ಭಾವಿಸಬೇಕು.

**ಇಂದ್ರಿಯ ವಿಷಯಗಳ ಸ್ವರೂಪ :-** ಈ ಯಾವ ಪಂಚೇಂದ್ರಿಯ ವಿಷಯಗಳಿವೆ ಅವು ಆತ್ಮನ ಸ್ವರೂಪವನ್ನು ಮರೆಸುವಂಥವುಗಳಿವೆ, ತೃಷ್ಣೆಯನ್ನು ವೃದ್ಧಿಸುವಂಥವಿವೆ, ಅಸಂತೋಷವನ್ನು ಹೆಚ್ಚಿಸುವಂಥವಿವೆ. ವಿಷಯಗಳ ಸಮಾನವಾದ ಪೀಡೆಯು ಮೂರು ಲೋಕದಲ್ಲಿ ಬೇರೊಂದಿಲ್ಲ. ವಿಷಯಗಳಂತೂ ನರಕಾದಿ ಕುಗತಿಗಳ ಕಾರಣವಿವೆ, ಧರ್ಮದಿಂದ ಪರಾಙ್ಮುಖ ಮಾಡುವಂಥವಿವೆ, ಕಷಾಯಗಳನ್ನು ಹೆಚ್ಚಿಸುವಂಥವಿವೆ, ಜ್ಞಾನವನ್ನು ವಿಪರೀತ ಮಾಡುವಂಥವಿವೆ; ವಿಷದ ಸಮಾನ ಸಾಯಿಸುವಂಥವಿವೆ; ವಿಷ ಮತ್ತು ಅಗ್ನಿಯ ಸಮಾನ ದಾಹವನ್ನುಂಟು ಮಾಡುವಂಥವಿವೆ. ಆದುದರಿಂದ ವಿಷಯಗಳಲ್ಲಿನ ರಾಗವನ್ನು ಬಿಡುವುದರಲ್ಲಿಯೇ ಪರಮ ಕಲ್ಯಾಣವಿದೆ. ತಮ್ಮ ಕಲ್ಯಾಣ ಬಯಸುವಂಥವರು ವಿಷಯಗಳನ್ನು ದೂರದಿಂದಲೇ ಬಿಟ್ಟುಕೊಡಬೇಕಾಗುವುದು.

**ಶರೀರದ ಸ್ವರೂಪ :-** ಶರೀರವು ರೋಗಗಳ ಸ್ಥಾನವಿದೆ, ಮಹಾಮಲಿನ ದುರ್ಗಂಧಿತ ಸಪ್ತಧಾತುಮಯವಿದೆ, ಮಲ-ಮೂತ್ರಾದಿಗಳಿಂದ ತುಂಬಿಕೊಂಡಿದೆ, ವಾತ-ಪಿತ್ತ-ಕಫಮಯವಿದೆ, ಎಲ್ಲ ಪ್ರಕಾರದ ಅಶುಚಿಯ ಪುಂಜವಿದೆ, ದಿನ-ದಿನವೂ ಜೀರ್ಣವಾಗುತ್ತ ಹೋಗುತ್ತದೆ, ಕೋಟ್ಯಂತರ ಉಪಾಯಗಳಿಂದ ರಕ್ಷಣೆ ಮಾಡುತ್ತಿದ್ದರೂ ಕೂಡ ಮರಣಕ್ಕೆ ಪ್ರಾಪ್ತವಾಗಿ ಹೋಗುತ್ತದೆ. ಇಂಥ ಶರೀರದಿಂದ ವಿರಕ್ತವಾಗಿ ಹೋಗುವುದೇ ಶ್ರೇಷ್ಠವಿದೆ.

ಈ ಪ್ರಕಾರ ಪುತ್ರ, ಮಿತ್ರ, ಕಲತ್ರ, ಸಂಸಾರ, ಶರೀರ ಭೋಗಗಳ ಸ್ವರೂಪವು ದುಃಖಕರವಿದೆಯೆಂದು ತಿಳಿದುಕೊಂಡು ವಿರಕ್ತ ಭಾವಕ್ಕೆ ಪ್ರಾಪ್ತವಾಗುವುದೇ ಸಂವೇಗವಿದೆ. ನಿರಂತರ ಸಂವೇಗ ಭಾವನೆಯ ಚಿಂತನೆ ಮಾಡುವುದೇ ಶ್ರೇಷ್ಠವಿದೆ. ಆದುದರಿಂದ ನನ್ನ ಹೃದಯದಲ್ಲಿ ನಿರಂತರ ಸಂವೇಗ ಭಾವನೆಯಿರಲೆಂದು ಚಿಂತನೆ ಮಾಡುತ್ತ ಸಂಸಾರ ಶರೀರ ಭೋಗಗಳಿಂದ ವಿರಕ್ತವಾದ ನಂತರವೇ ಪರಮಧರ್ಮದಲ್ಲಿ ಅನುರಾಗವಾಗುತ್ತದೆ.

**ಧರ್ಮದ ಸ್ವರೂಪ :-** ಯಾವುದು ವಸ್ತುವಿನ ಸ್ವಭಾವವಿದೆ ಅದು ಧರ್ಮವಿದೆ, ಉತ್ತಮ ಕ್ಷಮಾದಿ ದಶಲಕ್ಷಣರೂಪ ಧರ್ಮವಿದೆ, ರತ್ನತ್ರಯರೂಪ ಧರ್ಮವಿದೆ, ಜೀವಗಳ ದಯಾರೂಪ ಧರ್ಮವಿದೆಯೆಂದು ಧರ್ಮಶಬ್ದದ ಅರ್ಥ ತಿಳಿಯುವುದು. ಪರ್ಯಾಯ ಬುದ್ಧಿಯುಳ್ಳ ಶಿಷ್ಯರಿಗೆ ತಿಳಿಸಿಕೊಡುವ ಸಲುವಾಗಿ ನಾಲ್ಕು ಪ್ರಕಾರದಿಂದ ಧರ್ಮ ಶಬ್ದದ ವರ್ಣನೆ ಮಾಡಿದೆ. ವಸ್ತು ಆ ಆತ್ಮನ ಸ್ವಭಾವವೇ ದಶಲಕ್ಷಣರೂಪವಿದೆ. ಕ್ಷಮೆ ಮೊದಲಾದ ಹತ್ತು ಭೇದರೂಪವು ಆತ್ಮನದೇ ಸ್ವಭಾವವಿದೆ. ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರಗಳೂ ಆತ್ಮನಿಂದ ಭಿನ್ನವಿಲ್ಲ ಮತ್ತು ದಯೆಯು ಕೂಡ ಆತ್ಮನದೇ ಸ್ವಭಾವವಿದೆ.

ಜಿನೇಂದ್ರದೇವರಿಂದ ಹೇಳಲಾದ ಆತ್ಮನ ಸ್ವಭಾವರೂಪ ದಶಲಕ್ಷಣ ಧರ್ಮದಲ್ಲಿ ಅನುರಾಗವಿರುವುದು ಸಂವೇಗವಿದೆ. ರತ್ನತ್ರಯ ಧರ್ಮದಲ್ಲಿ ಕಪಟರಹಿತ ಅನುರಾಗವಿರುವುದು ಸಂವೇಗವಿದೆ. ಮುನೀಶ್ವರರುಗಳ ಹಾಗೂ ಶ್ರಾವಕರ ಧರ್ಮದಲ್ಲಿ ಅನುರಾಗವಿರುವುದು ಸಂವೇಗವಿದೆ. ಜೀವಗಳ ರಕ್ಷಣೆ ಮಾಡುವ ರೂಪ ಜೀವದಯೆಯ ಪರಿಣಾಮವಿರುವುದನ್ನು ಭಗವಂತರು ಸಂವೇಗವೆಂದು ಹೇಳಿದ್ದಾರೆ. ವಸ್ತು ಎಂದರೆ ಆತ್ಮನ ಸ್ವಭಾವವು ಕೇವಲಜ್ಞಾನ, ಕೇವಲದರ್ಶನವಿದ್ದು ಆ ಸ್ವಭಾವದಲ್ಲಿ ಲೀನವಾಗುವುದು ಅದು ಪ್ರಶಂಸಾಯೋಗ್ಯವಾದ ಸಂವೇಗವಿದೆ. ಧರ್ಮದಲ್ಲಿ ಅನುರಾಗರೂಪದ ಪರಿಣಾಮವಿರುವುದು ಸಂವೇಗವಿದೆ. ಧರ್ಮದ ಫಲವನ್ನು ಅತ್ಯಂತ ಮಿಷ್ಟವೆಂದು ತಿಳಿಯುವುದು ಅದು ಸಂವೇಗವಿದೆ.

**ಧರ್ಮದ ಫಲ :-** ಈ ತೀರ್ಥಂಕರ ಪದ, ಚಕ್ರವರ್ತಿ ಪದ, ನಾರಾಯಣ, ಪ್ರತಿನಾರಾಯಣ, ಬಲಭದ್ರ ಮೊದಲಾಗಿ ಉತ್ಪನ್ನವಾಗುವುದು ಅದು ಧರ್ಮದ ಫಲವೇ ಇದೆ. ಬಾಧೆಯಿಲ್ಲದೆ ಕೇವಲಿಯಾಗುವುದು, ಸ್ವರ್ಗದಲ್ಲಿ ಮಹಾನ ಋದ್ಧಿಧಾರಿ ದೇವನಾಗುವುದು, ಇಂದ್ರನಾಗುವುದು, ಅನುತ್ತರ ವಿಮಾನಗಳಲ್ಲಿ ಅಹಮಿಂದ್ರನಾಗುವುದೆಲ್ಲವು ಪೂರ್ವ ಜನ್ಮದಲ್ಲಿ ಆರಾಧನೆ ಮಾಡಿದ ಧರ್ಮದ ಫಲವೇ ಇದೆ.

ಭೋಗಭೂಮಿಯಲ್ಲಿ ಉತ್ಪನ್ನವಾಗುವುದು, ರಾಜ್ಯಸಂಪದ ಪಡೆವುದು, ಅಖಂಡ ಐಶ್ವರ್ಯ ಪಡೆಯುವುದು, ಅನೇಕ ದೇಶಗಳಲ್ಲಿ ಆಜ್ಞೆ ನಡೆಯುವುದು, ಪ್ರಚುರಧನಸಂಪತ್ತು ಪಡೆಯುವುದು, ರೂಪದ ಅಧಿಕತೆ ಪಡೆಯುವುದು, ಬಲದ ಅಧಿಕತೆ, ಚತುರತೆ, ಮಹಾನ ಪಾಂಡಿತ್ಯ ಸಮಸ್ತ ಲೋಕದಲ್ಲಿ ಮನ್ನಣೆ, ನಿರ್ಮಲ ಯಶಸ್ಸಿನ ವಿಖ್ಯಾತತೆ, ಬುದ್ಧಿಯ ಉಜ್ವಲತೆ, ಆಜ್ಞಾಧಾರಿ ಧರ್ಮಾತ್ಮ ಕುಟುಂಬದ ಸಂಯೋಗ ದೊರಕುವುದು, ಸತ್ಪುರುಷರ ಸಹವಾಸ ದೊರಕುವುದು, ರೋಗ ರಹಿತವಿರುವುದು, ದೀರ್ಘಾಯು, ಇಂದ್ರಿಯಗಳ ಉಜ್ವಲತೆ, ನ್ಯಾಯಮಾರ್ಗದಲ್ಲಿ ಪ್ರವರ್ತನೆ, ವಚನದ ಮಿಷ್ಟತೆ ಇತ್ಯಾದಿ ಉತ್ತಮ ಸಾಮಗ್ರಿ ಪಡೆಯುವುದು ಅದು ಎಂದಾದರೂ ಧರ್ಮದಲ್ಲಿ ಪ್ರೀತಿ ಮಾಡಿರುವುದರ,ಧರ್ಮಾತ್ಮರುಗಳ ಸೇವೆ ಮಾಡಿರುವುದರ, ಧರ್ಮ ಹಾಗೂ ಧರ್ಮಾತ್ಮರುಗಳ ಪ್ರಶಂಸೆ ಮಾಡಿರುವುದರ ಫಲವಿದೆ.

**ಕಲ್ಪವೃಕ್ಷ ಚಿಂತಾಮಣಿರತ್ನಗಳೆಲ್ಲವು ಧರ್ಮಾತ್ಮರ ಬಾಗಿಲಲ್ಲಿ ನಿಂತುಕೊಂಡಿರುತ್ತವೆಂದು ತಿಳಿಯುವುದು.** ಧರ್ಮದ ಫಲದ ಮಹಿಮೆಯನ್ನು ಅದೆಷ್ಟೋ ಕೋಟಿ ನಾಲಿಗೆಗಳಿಂದಲೂ ಹೇಳುವಲ್ಲಿ ಯಾರೂ ಸಮರ್ಥರಾಗುವ ಸಾಧ್ಯತೆಯಿಲ್ಲ.

ಇಂಥ ಧರ್ಮದ ಫಲವನ್ನು ಮೂರು ಲೋಕದಲ್ಲಿ ಉತ್ಕೃಷ್ಟವೆಂದು ತಿಳಿಯುವವನಿಗೆ ಸಂವೇಗ ಭಾವನೆಯಿರುತ್ತದೆ. ಧರ್ಮಸಹಿತವಿರುವ ಸಾಧರ್ಮಿ ಜನರನ್ನು ನೋಡಿ ಆನಂದ ಉತ್ಪನ್ನವಾಗುವುದು, ಧರ್ಮದ ಕಥನದಲ್ಲಿ ಆನಂದಮಯನಿರುವುದು ಮತ್ತು ಭೋಗಗಳಿಂದ ವಿರಕ್ತವಾಗಿ ಹೋಗುವುದು ಅದು ಸಂವೇಗನಾಮದ ಐದನೇ ಭಾವನೆಯಿದೆ. ಇದನ್ನು ಆತ್ಮನ ಹಿತ ರೂಪವೆಂದು ತಿಳಿದುಕೊಂಡು ನಿರಂತರ ಇದರ ಭಾವನೆ ಭಾವಿಸುವುದು ಮತ್ತು ಭಾವನೆಯ ಆನಂದಸಹಿತರಾಗಿ ಇದರ ಪ್ರಾಪ್ತಿಯ ಸಲುವಾಗಿ ಇದರ ಆರತಿ ಬೆಳಗುವುದು. ಈ ಪ್ರಕಾರ ಸಂವೇಗವೆಂಬ ಹೆಸರಿನ ಐದನೇ ಭಾವನೆಯ ವರ್ಣನೆ ಮಾಡಲಾಯಿತು.

## ಶಕ್ತಿ ಪ್ರಮಾಣ ತ್ಯಾಗ ಭಾವನೆ

ಈಗ ಶಕ್ತಿ ಪ್ರಮಾಣ ತ್ಯಾಗ ಭಾವನೆಯ ವರ್ಣನೆ ಮಾಡುತ್ತಾರೆ. ಈ ತ್ಯಾಗ ಭಾವನೆಯು ಪ್ರಶಂಸಾಯೋಗ್ಯವಿದೆ, ಮನುಷ್ಯ ಜನ್ಮದ ಭೂಷಣವಿದೆ. ತಮ್ಮ ಹೃದಯದಲ್ಲಿ ತ್ಯಾಗ ಭಾವನೆಯನ್ನು ತಂದುಕೊಳ್ಳುವ ಸಲುವಾಗಿ ಉತ್ಸವರೂಪದಿಂದ ಅನೇಕ ವಾದ್ಯಗಳನ್ನು ಬಾರಿಸಿ ಮಹಾನ ಆರತಿ ಬೆಳಗಬೇಕಾಗುವುದು.

**ಪರಿಗ್ರಹ ತ್ಯಾಗ :-** ಬಾಹ್ಯಾಭ್ಯಂತರ ಎರಡೂ ಪ್ರಕಾರದ ಪರಿಗ್ರಹದಲ್ಲಿನ ಮಮತೆಯನ್ನು ಬಿಡುವುದರಿಂದ ತ್ಯಾಗ ಧರ್ಮವಾಗುತ್ತದೆ. ಅಂತರಂಗ ಪರಿಗ್ರಹವು ಮಿಥ್ಯಾತ್ವ, ಸ್ತ್ರೀ-ಪುರುಷ-ನಪುಂಸಕ ವೇದರೂಪ ಪರಿಣಾಮ, ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ರಾಗ, ದ್ವೇಷ, ಕ್ರೋಧ, ಮಾನ, ಮಾಯೆ, ಲೋಭರೂಪ ಪರಿಣಾಮವೆಂದು ಹದಿನಾಲ್ಕು ಪ್ರಕಾರದ್ದಿದೆ. ತಿಳಿದುಕೊಂಡಲ್ಲದೆ ಯಾವುದರ ಗ್ರಹಣ - ತ್ಯಾಗವು ವ್ಯರ್ಥವಿದೆಯೆಂದು ತಿಳಿಯಬೇಕು.

**ಶರೀರ ಮೊದಲಾದ ಪರದ್ರವ್ಯಗಳಲ್ಲಿ ಆತ್ಮಬುದ್ಧಿ ಮಾಡುವುದು ಅದು ಮಿಥ್ಯಾತ್ವ ಪರಿಗ್ರಹವಿದೆ.** ಯಾವುದೇ ವಸ್ತುವಿರಲಿ ಅದು ತನ್ನ ದ್ರವ್ಯ, ತನ್ನ ಗುಣ, ತನ್ನ ಪರ್ಯಾಯರೂಪವಿದೆ. ಅದುವೇ ವಸ್ತುವಿನ ತನ್ನ ಸ್ವರೂಪವಿದೆ.ಹೇಗೆಂದರೆ ಚಿನ್ನನಾಮದ ದ್ರವ್ಯವಿದೆ, ಹಳದೀತನ ಮೊದಲಾದವು ಅದರ ಗುಣಗಳಿವೆ, ಕುಂಡಲ ಮೊದಲಾದವು ಅದರ ಪರ್ಯಾಯವಿದೆ, ಇದೆಲ್ಲವೂ ಚಿನ್ನವಿದೆ. ಆದುದರಿಂದ ಚಿನ್ನವು ಅನ್ಯವಸ್ತುವಿನದಿಲ್ಲ, ಅನ್ಯವಸ್ತುವು ಚಿನ್ನದ್ದಿಲ್ಲ, ಚಿನ್ನವಿದೆ ಅದು ಚಿನ್ನದ್ದೇ ಇದೆ. ಅನ್ಯ ವಸ್ತುವಿನದು ಅನ್ಯವೇನೂ ಆಗಿಲ್ಲ, ಇಲ್ಲ, ಆಗುವುದಿಲ್ಲ, ತನ್ನ ಸ್ವರೂಪವಿದೆ ಅದು ತನ್ನದೇ ಇದೆ. ಅದೇ ಪ್ರಕಾರ ಆತ್ಮನಿದ್ದಾನೆ ಅವನು ಆತ್ಮನವನೇ ಇದ್ದಾನೆ, ಆತ್ಮನದು ಬೇರೆ ಯಾವುದೂ ದ್ರವ್ಯವಿಲ್ಲ. ಈಗ ಯಾರು ದೇಹವನ್ನು ತನ್ನ ಆತ್ಮನೆಂದು ಮನ್ನಿಸುತ್ತಾರೆ, ನಾನು ಗೌರವರ್ಣನಿದ್ದೇನೆ, ನಾನು ಕಪ್ಪು ಇದ್ದೇನೆ, ನಾನು ದೊರೆ, ನಾನು ದರಿದ್ರ, ನಾನು ಒಡೆಯ, ನಾನು ಸೇವಕ, ನಾನು ಬ್ರಾಹ್ಮಣ, ನಾನು ಕ್ಷತ್ರಿಯ, ನಾನು ವೈಶ್ಯ, ನಾನು ಶೂದ್ರ, ನಾನು ವೃದ್ಧ, ನಾನು ಬಾಲಕ, ನಾನು ಬಲಿಷ್ಠ, ನಾನು ದುರ್ಬಲ, **ನಾನು ಮನುಷ್ಯ ಇತ್ಯಾದಿ ಕರ್ಮಕೃತ, ವಿನಾಶಶೀಲ, ಪರದ್ರವ್ಯ ಜನಿತ ಪರ್ಯಾಯದಲ್ಲಿ ಆತ್ಮಬುದ್ಧಿ ಮಾಡುವುದು ಅದು ಮಿಥ್ಯಾತ್ವವೆಂಬ ಪರಿಗ್ರಹವಿದೆ.**

ಮಿಥ್ಯಾದರ್ಶನದಿಂದಲೇ ನನ್ನ ಮನೆ, ನನ್ನ ಪುತ್ರ, ನನ್ನ ರಾಜ್ಯ, ನಾನು ನೀಚ, ನಾನು ಉಚ್ಚ ಇತ್ಯಾದಿ ಮನ್ನಿಸಿ ಸಮಸ್ತಪರಪದಾರ್ಥಗಳಲ್ಲಿ ಆತ್ಮಬುದ್ಧಿ ಮಾಡುತ್ತಾನೆ. ಪುದ್ಗಲದ ನಾಶವನ್ನು ತನ್ನ ನಾಶವೆಂದು ಮನ್ನಿಸುತ್ತಾನೆ, ಅದರ ವೃದ್ಧಿಯಿಂದ ತನ್ನ ವೃದ್ಧಿ, ಅದರ ಕುಂದುವಿಕೆಯಿಂದ ತನ್ನ ಕುಂದುವಿಕೆಯೆಂದು ಮನ್ನಿಸಿ ಪರ್ಯಾಯದಲ್ಲಿ ಆತ್ಮಬುದ್ಧಿ ಮಾಡಿ ಅನಾದಿ ಕಾಲದಿಂದ ತನ್ನ ಸ್ವರೂಪವನ್ನು ಮರೆತು ಹೋಗುತ್ತಿದ್ದಾನೆ. **ಸಮಸ್ತ ಪರಿಗ್ರಹದಲ್ಲಿ ಆತ್ಮಬುದ್ಧಿಯ ಮೂಲವೆಂದರೆ ಮಿಥ್ಯಾತ್ವ ನಾಮದ ಪರಿಗ್ರಹವೇ ಇದೆ.** ಯಾವನಿಗೆ ಮಿಥ್ಯಾಜ್ಞಾನವಿಲ್ಲ ಅವನು ಪರದ್ರವ್ಯಗಳಲ್ಲಿ ಇವು 'ನನ್ನವಿವೆ'ಯೆಂದು ಹೇಳುತ್ತಿದ್ದರೂ ಕೂಡ ಪರದ್ರವ್ಯಗಳಲ್ಲಿ ಎಂದೂ ತನ್ನ ತನವನ್ನು ಮನ್ನಿಸುವುದಿಲ್ಲ.

ವೇದದ ಉದಯದಿಂದ ಸ್ತ್ರೀ-ಪುರುಷರಲ್ಲಿ ಯಾವ ಕಾಮಸೇವನೆಯ ಭಾವಗಳಾಗುತ್ತವೆ ಆ ಕಾಲದಲ್ಲಿ ತನ್ಮಯವಾಗಿ ಕಾಮದ ಭಾವವನ್ನು ಆತ್ಮಭಾವವೆಂದು ಮನ್ನಿಸುವುದು ಅದು ವೇದ ಪರಿಗ್ರಹವಿದೆ. ಕಾಮವಂತೂ ವೀರ್ಯ ಮೊದಲಾದುವಿಂದ ಪ್ರೇರಿತವಾದ ದೇಹದ ವಿಕಾರವಿದೆ. ಅದನ್ನು ತನ್ನ ಸ್ವರೂಪವೆಂದು ತಿಳಿಯುವುದು ಅದು ವೇದಪರಿಗ್ರಹವಿದೆ.

ಧನ, ಐಶ್ವರ್ಯ, ಸ್ತ್ರೀ, ಆಭರಣ ಮೊದಲಾದ ಪರದ್ರವ್ಯಗಳಲ್ಲಿ ಆಸಕ್ತಿಯ ಭಾವವಾಗುವುದು **ರಾಗ** ಪರಿಗ್ರಹವಿದೆ. ಇತರರ ವೈಭವ, ಪರಿವಾರ, ಐಶ್ವರ್ಯ, ಪಾಂಡಿತ್ಯ ಮೊದಲಾದುವನ್ನು ನೋಡಿ ವೈರ ಭಾವ ಮಾಡುವುದು ಅದು **ದ್ವೇಷ** ಪರಿಗ್ರಹವಿದೆ. ಹಾಸ್ಯದಲ್ಲಿ ಆಸಕ್ತಿಯ ಭಾವವಾಗುವುದು ಅದು **ಹಾಸ್ಯ** ಪರಿಗ್ರಹವಿದೆ. ತಮ್ಮ ಮರಣವಾಗುವುದರಿಂದ, ಮಿತ್ರರ ಹಾಗೂ ಪರಿಗ್ರಹ ಮೊದಲಾದವುಗಳ ವಿಯೋಗವಾಗುವುದರಿಂದ ನಿರಂತರ ಭಯಭೀತವಿರುವುದು ಅದು **ಭಯ** ಪರಿಗ್ರಹವಿದೆ.

ಪಂಚೇಂದ್ರಿಯಗಳಿಂದ ಐಚ್ಛಿಕ ಭೋಗ-ಉಪಭೋಗ ಸಾಮಗ್ರಿಯನ್ನು ಭೋಗಿಸುವಲ್ಲಿ ಲೀನವಿರುವುದು ಅದು **ರತಿ** ಪರಿಗ್ರಹವಿದೆ. ಅನಿಷ್ಟ ವಸ್ತುವಿನ ಸಂಯೋಗವಾಗುವುದರಿಂದ ಪರಿಣಾಮದಲ್ಲಿ ಸಂಕ್ಲೇಶಭಾವವಾಗುವುದು ಅದು **ಅರತಿ** ಪರಿಗ್ರಹವಿದೆ. ಇಷ್ಟ ಸ್ತ್ರೀ, ಪುತ್ರ, ಮಿತ್ರ,ಧನ, ಆಜೀವಿಕೆ ಮೊದಲಾದವುಗಳ ವಿಯೋಗವಾಗುವುದರಿಂದ ಅವುಗಳ ಸಂಯೋಗದ ಇಚ್ಛೆ ಮಾಡಿ ಸಂಕ್ಲೇಶಭಾವವಾಗುವುದು ಅದು **ಶೋಕ** ಪರಿಗ್ರಹವಿದೆ. ಘೃಣಾಯುಕ್ತ ಪುದ್ಗಲಗಳನ್ನು ನೋಡುವುದರಿಂದ, ಕೇಳುವುದರಿಂದ, ಚಿಂತನೆ ಮಾಡುವುದರಿಂದ, ಸ್ಪರ್ಶ ಮಾಡುವುದರಿಂದ ಪರಿಣಾಮದಲ್ಲಿ ಗ್ಲಾನಿಯುಂಟಾಗುವುದು ಅದು ಜುಗುಪ್ಸೆ ಪರಿಗ್ರಹವಿದೆ. ಅಥವಾ ಇತರರ ಪುಣ್ಯದ ಉದಯ ನೋಡಿ ತಮ್ಮ ಭಾವವು ಸಂಕ್ಲೇಶ ರೂಪವಾಗುವುದು ಸಹನೆಯಾಗದಿರುವದು ಅದು **ಜುಗುಪ್ಸೆ** ಪರಿಗ್ರಹವಿದೆ.

ಪರಿಣಾಮದಲ್ಲಿ ರೋಷಮಾಡಿ ತಪ್ತಾಯಮಾನವಾಗುವುದು ಅದು **ಕ್ರೋಧ**ಪರಿಗ್ರಹವಿದೆ. ಉಚ್ಚಕುಲ, ಜಾತಿ, ಧನ-ಐಶ್ವರ್ಯ, ರೂಪು,ಬಲ, ತಪ, ಜ್ಞಾನ, ಋದ್ಧಿ-ಬುದ್ಧಿ ಇವುಗಳಿಂದ ತನ್ನನ್ನು ದೊಡ್ಡವನೆಂದು ತಿಳಿದುಕೊಂಡು ಗರ್ವ

ಮಾಡುವುದು, ಮತ್ತು ಇತರರನ್ನು ಚಿಕ್ಕವರೆಂದು ತಿಳಿದುಕೊಂಡು ಅನಾದರ ಮಾಡುವುದು, ಕಠೋರ ಪರಿಣಾಮವಿಡುವುದು ಅದು **ಮಾನ** ಪರಿಗ್ರಹವಿದೆ. ಅನೇಕ ಕಪಟ ಮೋಸ ಮೊದಲಾದವುಗಳ ಮೂಲಕ ವಕ್ರಪರಿಣಾಮವಿಡುವುದು ಅದು **ಮಾಯಾ** ಪರಿಗ್ರಹವಿದೆ. ಪರದ್ರವ್ಯಗಳನ್ನು ಗ್ರಹಣ ಮಾಡುವಲ್ಲಿ, ಸಂಗ್ರಹ ಮಾಡುವಲ್ಲಿ ತೃಷ್ಣೆಯಾಗುವುದು ಅದು **ಲೋಭ** ಪರಿಗ್ರಹವಿದೆ.

ಈ ಪ್ರಕಾರ ಸಂಸಾರದಲ್ಲಿ ಪರಿಭ್ರಮಣದ ಕಾರಣವು ಆತ್ಮನ ಜ್ಞಾನಾದಿಗುಣಗಳ ಘಾತ ಮಾಡುವಂಥ ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹಗಳಿವೆ, ಇವುಗಳಲ್ಲಿಯೇ ಮೂರ್ಛೆಯ ಕಾರಣವಿರುವ ಧನ, ಧಾನ್ಯ, ಕ್ಷೇತ್ರ, ಸುವರ್ಣ, ಸ್ತ್ರೀ, ಪುತ್ರ ಮೊದಲಾದ ಚೇತನ-ಅಚೇತನ ಬಾಹ್ಯಪರಿಗ್ರಹವಿವೆ. **ಅಂತರಂಗ-ಬಹಿರಂಗ ಇವೆರಡೂ ಪ್ರಕಾರದ ಪರಿಗ್ರಹಗಳ ತ್ಯಾಗಮಾಡುವುದರಿಂದ ಧರ್ಮವಾಗುತ್ತದೆ.** ದರಿದ್ರಮನುಷ್ಯನು ಸ್ವಭಾವದಿಂದಲೇ ಬಾಹ್ಯಪರಿಗ್ರಹದಿಂದ ರಹಿತನಿರುತ್ತಾನೆ, ಆದರೆ ಅಂತರಂಗ ಪರಿಗ್ರಹದ ತ್ಯಾಗ ಮಾಡುವುದು ಅತ್ಯಂತ ಕಠಿಣವಿದೆ. ಎರಡೂ ಪ್ರಕಾರದ ಪರಿಗ್ರಹದ ಏಕದೇಶ ತ್ಯಾಗವು ವ್ರತಿಕನಾದ ಶ್ರಾವಕನಿಗೆ ಆಗುತ್ತದೆ. ಮತ್ತು ಪೂರ್ಣ ತ್ಯಾಗವು ಮಹಾವ್ರತಗಳನ್ನು ಧರಿಸಿದ ಮುನಿರಾಜರಿಗೆ ಆಗುತ್ತದೆ.

**ವಿಷಯಕಷಾಯಗಳ ತ್ಯಾಗ :-** ಕಷಾಯಗಳ ತ್ಯಾಗದಿಂದ ತ್ಯಾಗ ಧರ್ಮವಾಗುತ್ತದೆ. ವಿಷಯಗಳಲ್ಲಿ ಹೋಗುವಂಥ ಇಂದ್ರಿಯಗಳನ್ನು ತಡೆಯುವುದರಿಂದ ತ್ಯಾಗ ಧರ್ಮವಾಗುತ್ತದೆ. ರಸಗಳ ತ್ಯಾಗ ಮಾಡುವುದರಿಂದ ತ್ಯಾಗ ಧರ್ಮವಾಗುತ್ತದೆ. **ರಸನೇಂದ್ರಿಯದ ಲೋಲುಪತೆಯ ಮೇಲೆ ವಿಜಯಪ್ರಾಪ್ತವಾಗುವುದರಿಂದ ಸಮಸ್ತ ಪಾಪಗಳ ತ್ಯಾಗವು ಸ್ವಾಭಾವಿಕವಾಗಿಯೇ ಆಗಿ ಹೋಗುತ್ತದೆ.**

ಜಿನೇಂದ್ರರ ಪರಮಾಗಮದ ಅಧ್ಯಯನಮಾಡುವುದು, ಇತರರಿಗೆ ಅಧ್ಯಯನ ಮಾಡಿಸುವುದು, ಶಾಸ್ತ್ರಗಳನ್ನು ಬರೆಯುವುದು, ಮುದ್ರಿಸುವುದು, ಶುದ್ಧಮಾಡುವುದು, ಮಾಡಿಸುವುದು ಅದು ಕೂಡ ಪರಮೋಪಕಾರ ಮಾಡುವಂಥ ತ್ಯಾಗ ಧರ್ಮವಿದೆ. ಮನಸ್ಸಿನ ದುಷ್ಟ ವಿಕಲ್ಪಗಳ ಅಭಾವ ಮಾಡುವುದು, ದುಷ್ಟ ವಿಕಲ್ಪಗಳ ಕಾರಣಗಳನ್ನು ಬಿಟ್ಟುಕೊಟ್ಟು ನಾಲ್ಕೂ ಅನುಯೋಗಗಳ ಚರ್ಚೆಯಲ್ಲಿ ಚಿತ್ತವನ್ನು ತೊಡಗಿಸುವುದು ಅದುಕೂಡ ತ್ಯಾಗಧರ್ಮವಿದೆ. ಮೋಹದ ನಾಶ ಮಾಡುವಂಥ ಧರ್ಮದ ಉಪದೇಶವನ್ನು ಶ್ರಾವಕರಿಗೆ ಕೊಡುವುದು ಅದು ಕೂಡ ಮಹಾಪುಣ್ಯವನ್ನುತ್ಪನ್ನ ಮಾಡಿಸುವುದರಿಂದ ತ್ಯಾಗ ಧರ್ಮವಿದೆ. ವೀತರಾಗ ಧರ್ಮದ ಉಪದೇಶದಿಂದ ಅನೇಕ ಜೀವರುಗಳು ಪಾಪ ಭಾವದಿಂದ ಭಯಭೀತರಾಗುತ್ತಾರೆ ಮತ್ತು ಅವರು ಧರ್ಮದ ಸ್ವರೂಪ ತಿಳಿದುಕೊಂಡು ಅದನ್ನು ಗ್ರಹಣ ಮಾಡಿಕೊಳ್ಳುತ್ತಾರೆ.

ಉತ್ತಮ, ಮಧ್ಯಮ, ಜಘನ್ಯ ಹೀಗೆ ಮೂರು ಪ್ರಕಾರದ ಪಾತ್ರರುಗಳಿಗೆ ಭಕ್ತಿಯುಕ್ತರಾಗಿ ಆಹಾರದಾನ ಕೊಡುವುದು, ಪ್ರಾಸುಕ ಔಷಧ ಕೊಡುವುದು, ಜ್ಞಾನದ ಉಪಕರಣ ಸಿದ್ಧಾಂತಗಳನ್ನೋದಲು ಯೋಗ್ಯ ಗ್ರಂಥಗಳ ದಾನ ಕೊಡುವುದು. ಮುನಿಯೋಗ್ಯ ಹಾಗೂ ಶ್ರಾವಕಯೋಗ್ಯವಾದ ವಸತಿಕೆಯ ದಾನಕೊಡಬೇಕು. ಗುಣಗಳ ಧಾರಕರಿಗೆ ತಪದ ವೃದ್ಧಿಯ ಸಲುವಾಗಿ ಆಹಾರ ಮೊದಲಾದ ನಾಲ್ಕು ಪ್ರಕಾರದ ದಾನವನ್ನು ಪರಮಭಕ್ತಿಯಿಂದ, ಪ್ರಫುಲ್ಲಚಿತ್ತದಿಂದ, ತಮ್ಮ ಜನ್ಮವನ್ನು ಕೃತಾರ್ಥವೆಂದು ಮನ್ನಿಸುತ್ತ, ಅತ್ಯಂತ ಆದರದೊಡನೆ ಪಾತ್ರರಿಗೆ ದಾನ ಕೊಡಬೇಕಾಗುವುದು.

**ಯಾರದು ಒಳ್ಳೆಯದಾಗುವುದಿದೆ ಅವರಿಂದಲೇ ಪಾತ್ರದಾನವಾಗುತ್ತದೆ.** ಪಾತ್ರದ ಲಾಭವಾಗುವುದೂ ದುರ್ಲಭವಿದೆ. ಭಕ್ತಿಸಹಿತಪಾತ್ರದಾನವಾದರೆ ಅದರ ಮಹಿಮೆಯನ್ನು ಹೇಳಲು ಯಾರು ಸಮರ್ಥರಿದ್ದಾರೆ ?

ಕ್ಷುಧೆ-ತೃಷೆಯಿಂದ ದುಃಖಿಯಾದವರಿಗೆ, ರೋಗಿಗಳಿಗೆ, ದರಿದ್ರರಿಗೆ, ವೃದ್ಧರಿಗೆ, ದೀನರಿಗೆ ದಯಾಪೂರ್ವಕವಾಗಿ ದಾನ ಕೊಡುವುದು ಅದೆಲ್ಲವು ತ್ಯಾಗಧರ್ಮವಿದೆ. ತ್ಯಾಗದಿಂದಲೇ ಮನುಷ್ಯಜನ್ಮದ ಸಾರ್ಥಕತೆಯಿದೆ. ತ್ಯಾಗದಿಂದಲೇ ಧನ-ಧಾನ್ಯಾದಿಗಳನ್ನು ಪಡೆಯುವುದು ಸಾರ್ಥಕತೆಯಿದೆ. ತ್ಯಾಗವಿಲ್ಲದೆ ಗೃಹಸ್ಥನ ಮನೆಯು ಸ್ಮಶಾನ ಸಮಾನವಿದೆ, ಮನೆಯೊಡೆಯನಾದ ಪುರುಷನು ಮೃತಕಸಮಾನನಿದ್ದಾನೆ. ಸ್ತ್ರೀ-ಪುತ್ರಾದಿಗಳು **'ಗೃದ್ಧಪಕ್ಷಿ'**ಯ ಸಮಾನರಿದ್ದಾರೆ, ಅವರು ಇವನ ಧನರೂಪದ ಮಾಂಸವನ್ನು ಕಿತ್ತು-ಕಿತ್ತು ತಿನ್ನುತ್ತಾರೆ. ಈ ಪ್ರಕಾರ ಆರನೆಯ ತ್ಯಾಗಭಾವನೆಯ ವರ್ಣನೆ ಮಾಡಲಾಯಿತು.

# ಶಕ್ತಿ ಪ್ರಮಾಣ ತಪ ಭಾವನೆ

ಈಗ ಶಕ್ತಿ ಪ್ರಮಾಣ ತಪಭಾವನೆ ಅಂಗೀಕಾರ ಮಾಡುವುದರ ವರ್ಣನೆ ಮಾಡುತ್ತಾರೆ. ಈ ಶರೀರವು ದುಃಖದ ಕಾರಣವಿದೆ, ಅನೇಕ ದುಃಖಗಳನ್ನು ಉತ್ಪನ್ನ ಮಾಡುತ್ತದೆ, ಅನಿತ್ಯವಿದೆ, ಅಸ್ಥಿರವಿದೆ, ಅಶುಚಿಯಿದೆ, ಕೃತಘ್ನದ ಸಮಾನವಿದೆ. ಕೋಟ್ಯಂತರ ಉಪಕಾರ ಮಾಡಿದರೂ ಕೂಡ ಹೇಗೆ ಕೃತಘ್ನನು ತಮ್ಮವನಾಗುವುದಿಲ್ಲ, ಅದೇ ಪ್ರಕಾರ ಶರೀರವು ಕೂಡ ಅನೇಕ ಪ್ರಕಾರದಿಂದ ಸೇವೆ-ಉಪಚಾರ ಮಾಡಿದರೂ ಕೂಡ ಇದು ತಮ್ಮದಾಗುವುದಿಲ್ಲ. ಆದುದರಿಂದ ಬೇಕಾದಂಥ ಉಪಾಯಗಳಿಂದ ಇದನ್ನು ಪುಷ್ಟ ಮಾಡುವುದು ಉಚಿತವಿಲ್ಲ. ಕೃಶ ಮಾಡುವುದೇ ಯೋಗ್ಯವಿದೆ. ಆದಾಗ್ಯೂ ಗುಣರೂಪ ರತ್ನಗಳ ಸಂಗ್ರಹ ಮಾಡುವುದರ ಕಾರಣವಿದೆ.

ಶರೀರವಿಲ್ಲದೆ ರತ್ನತ್ರಯರೂಪದ ಧರ್ಮವಾಗುವುದಿಲ್ಲ, ರತ್ನತ್ರಯ ಧರ್ಮವಿಲ್ಲದೆ ಕರ್ಮಗಳ ನಾಶವಾಗುವುದಿಲ್ಲ. ಆದುದರಿಂದ ತಮ್ಮ ಪ್ರಯೋಜನದ ಸಲುವಾಗಿ ವಿಷಯಗಳಲ್ಲಿ ಆಸಕ್ತಿ ರಹಿತರಾಗಿ, ಸೇವಕನ ಸಮಾನ ಯೋಗ್ಯ ಭೋಜನವಿತ್ತು ಯಥಾಶಕ್ತಿ ಜಿನೇಂದ್ರರ ಮಾರ್ಗದಿಂದ ವಿರೋಧರಹಿತರಾಗಿ ಕಾಯಕ್ಲೇಶ ಮೊದಲಾದ ತಪ ಮಾಡುವುದು ಯೋಗ್ಯವಿದೆ. ತಪ ಮಾಡಿದಲ್ಲದೆ ಇಂದ್ರಿಯ ವಿಷಯಗಳಲ್ಲಿನ ಲೋಲುಪತೆಯು ಕಡಿಮೆಯಾಗುವುದಿಲ್ಲ, ತಪ ಮಾಡಿದಲ್ಲದೆ ಮೂರು ಲೋಕವನ್ನು ಜಯಿಸುವಂಥ ಕಾಮವನ್ನು ನಷ್ಟ ಮಾಡುವ ಸಾಮರ್ಥ್ಯವಾಗುವುದಿಲ್ಲ. ತಪ ಮಾಡಿದಲ್ಲದೆ ಆತ್ಮನನ್ನು ಅಚೇತನಗೊಳಿಸುವಂಥ ನಿದ್ರೆಯನ್ನು ಜಯಿಸಲಾಗುವುದಿಲ್ಲ. **ತಪ ಮಾಡಿದಲ್ಲದೆ ಶರೀರದ ಸುಖೀ ಸ್ವಭಾವವು ಹೊರಟು ಹೋಗುವುದಿಲ್ಲ.** ತಪದ ಪ್ರಭಾವದ ಮೂಲಕ ಶರೀರವನ್ನು ವಶದಲ್ಲಿಟ್ಟುಕೊಂಡಿದ್ದರೆ ಕ್ಷುಧೆ, ತೃಷೆ, ಶೀತ, ಉಷ್ಣ ಮೊದಲಾದ ಪರೀಷಹಗಳು ಬಂದ ಮೇಲೆ ಅಧೈರ್ಯವು ಉತ್ಪನ್ನವಾಗುವುದಿಲ್ಲ, ಸಂಯಮಧರ್ಮದಿಂದ ಚಲಿತವಾಗುವುದಿಲ್ಲ. ತಪಸ್ಸು ಕರ್ಮಗಳ ನಿರ್ಜರೆಗೆ ಕಾರಣವಿರುವುದರಿಂದ ತಪಸ್ಸು ಮಾಡುವುದೇ ಪರಮಶ್ರೇಷ್ಠವಿದೆ.

ತಮ್ಮ ಶಕ್ತಿಯನ್ನು ಬಚ್ಚಿಡದೆ ಯಾವ ಪ್ರಕಾರ ಜಿನೇಂದ್ರರ ಮಾರ್ಗದಿಂದ ವಿರೋಧರಹಿತವಿರುವಂತೆ ತಪಸ್ಸು ಮಾಡುವುದು. ತಪಸ್ಸು ನಾಮದ ಸುಭಟನ ಸಹಾಯತೆಯಿಲ್ಲದೆ ತಮ್ಮ ಶ್ರದ್ಧೆ, ಜ್ಞಾನ ಆಚರಣರೂಪದ ಧನವನ್ನು ಕ್ರೋಧ, ಪ್ರಮಾದ ಮೊದಲಾದ ಕಳ್ಳರು ಒಂದು ಕ್ಷಣದಲ್ಲಿ ಲೂಟಿ ಮಾಡುವರು. ಆಗ ರತ್ನತ್ರಯ ರೂಪದ ಸಂಪತ್ತಿಯಿಂದ ರಹಿತರಾಗಿ ಚತುರ್ಗತಿ ರೂಪದ ಸಂಸಾರದಲ್ಲಿ ದೀರ್ಘಕಾಲದವರೆಗೆ ಭ್ರಮಿಸಬೇಕಾಗುವುದು. ಆದುದರಿಂದ ಯಾವ ಪ್ರಕಾರದಿಂದ ವಾತ-ಪಿತ್ತ-ಕಫ ಈ ಮೂರು ದೋಷಗಳು ವಿಪರೀತವಾಗಿ ರೋಗಾದಿಗಳನ್ನು ಉತ್ಪನ್ನ ಮಾಡದ ಹಾಗೆ ತಪಸ್ಸು ಮಾಡುವುದು ಉಚಿತವಿದೆ.

**ಸಮಸ್ತ ತಪಗಳಲ್ಲಿ ಮುಖ್ಯ ತಪವಂತೂ ದಿಗಂಬರತ್ವವಿದೆ.** ಆ ದಿಗಂಬರತನವು ಮನೆಯ ಮಮತೆಯರೂಪದ ರೆಂಬೆಯನ್ನು ಕತ್ತರಿಸಿ, ದೇಹದ ಸಮಸ್ತ ಸುಖಗಳನ್ನು ಬಿಟ್ಟುಕೊಟ್ಟು, ತಮ್ಮ ಶರೀರದಲ್ಲಿ ಶೀತ, ಉಷ್ಣ, ಮಳೆ, ಗಾಳಿ, ನೊಣ, ಸೊಳ್ಳೆ ಮೊದಲಾದವುಗಳ ಬಾಧೆಯನ್ನು ಜಯಿಸುವುದರ ಸನ್ಮುಖರಾಗಿ, ಕೌಪೀನ ಮೊದಲಾದ ಸಮಸ್ತ ವಸ್ತ್ರಗಳ ತ್ಯಾಗ ಮಾಡಿ, ದಶ ದಿಶೆಗಳ ರೂಪವೇ ತಮ್ಮ ವಸ್ತ್ರವಿರುವಂಥ ದಿಗಂಬರತೆಯನ್ನು ಧಾರಣ ಮಾಡುವುದು ಅದು ಅತ್ಯಂತ ಹಿರಿದಾದ ಅತಿಶಯರೂಪದ ತಪವಿದೆಯೆಂದು ತಿಳಿಯುವುದು. ಅವರ ಸ್ವರೂಪವನ್ನು ನೋಡಿದ-ಕೇಳಿದ ಮೇಲೆ ದೊಡ್ಡ ದೊಡ್ಡ ಶೂರವೀರರು ಕಂಪಿಸಲಾರಂಭಿಸುವರು.

ಓ ಶಕ್ತಿಯನ್ನು ಪ್ರಕಟ ಮಾಡುವಂಥವರೇ! ತಾವು ಸಂಸಾರದ ಬಂಧನದಿಂದ ಬಿಡುಗಡೆ ಹೊಂದಲಪೇಕ್ಷಿಸುತ್ತಿದ್ದರೆ ಜಿನೇಶ್ವರದೇವರಂಥ ದೀಕ್ಷೆ ಧಾರಣಮಾಡಿರಿ. ಆ ತಪದಿಂದ ಶರೀರದ ಸುಖೀತನವು ನಷ್ಟವಾಗಿ ಹೋಗುತ್ತದೆ. ಉಪಸರ್ಗ-ಪರೀಷಹ ಸಹಿಸುವಲ್ಲಿ ಅಧೈರ್ಯದ ಅಭಾವವಾಗಿ ಹೋಗುತ್ತದೆ; ಅದರಿಂದ ಸ್ವರ್ಗದ ರಂಭೆ, ತಿಲೋತ್ತಮೆಯರೂ ತಮ್ಮ ಹಾವ-ಭಾವ, ವಿಲಾಸ-ವಿಭ್ರಮ ಮೊದಲಾದವುಗಳಿಂದ ಮನಸ್ಸನ್ನು ಕಾಮವಿಕಾರ ಸಹಿತ ಮಾಡುವ ಸಾಧ್ಯತೆಯಿಲ್ಲ, ಅಂಥ ಕಾಮವನ್ನು ನಷ್ಟ ಮಾಡುವುದು ಅದು ತಪವಿದೆ. ಇಂದ್ರಿಯ ವಿಷಯಗಳಲ್ಲಿ ಪ್ರವರ್ತಿಸುವುದರ ಅಭಾವವಾಗಿ ಹೋಗುವುದು ಅದು ತಪವಿದೆ.

**ಎರಡೂ ಪ್ರಕಾರದ ಪರಿಗ್ರಹದಲ್ಲಿ ಇಚ್ಛೆಯ ಅಭಾವವಾಗಿ ಹೋಗುವುದು ಅದು ತಪವಿದೆ.** ತಪವಂತೂ ಯಾವುದು ನಿರ್ಜನ ವನದಲ್ಲಿ ಪರ್ವತಗಳ ಭಯಂಕರ ಗುಹೆಯಲ್ಲಿ ಅಲ್ಲಿ ಭೂತ-ರಾಕ್ಷಸ ಮೊದಲಾದವು ಅನೇಕ ಪ್ರಕಾರದಿಂದ ವಿಕಾರವಾಗಿ ವರ್ತಿಸುತ್ತಿವೆ, ಸಿಂಹ-ಹುಲಿ ಮೊದಲಾದವುಗಳ ಭಯಂಕರ ಶಬ್ದವಾಗುತ್ತಿದೆ, ಕೋಟ್ಯಂತರ ವೃಕ್ಷಗಳಿಂದ ಅಂಧಕಾರ ಕವಿಯುತ್ತಿದೆ, ಸರ್ಪ,' ಅಜಗರ, ಕರಡಿ ಇತ್ಯಾದಿ ಭಯಂಕರ ದುಷ್ಟ-ತಿರ್ಯಂಚಗಳ ಬರ-ಹೋಗುವಿಕೆಯಾಗುತ್ತಲಿದೆ ಅಂಥ ಮಹಾ ವಿಷಮ ಸ್ಥಾನಗಳಲ್ಲಿ ಭಯರಹಿತರಾಗಿ ಧ್ಯಾನ, ಸ್ವಾಧ್ಯಾಯಗಳಲ್ಲಿ ಅತ್ಯಂತ ನಿರಾಕುಲರಾಗಿರುವುದು ಅದು ತಪವಿದೆ.

ಆಹಾರದ ಲಾಭ-ಅಲಾಭದಲ್ಲಿ ಸಮಭಾವವಿಡುವುದು, ಸಿಹಿ, ಕಹಿ, ಹುಳಿ, ಕಾರ, ಬಿಸಿಯಾದ, ತಂಪಾದ, ಸರಸ, ನೀರಸ, ಭೋಜನ-ಜಲಾದಿಗಳಲ್ಲಿ ಲಾಲಸೆಯಿಲ್ಲದೆ, ಸಂತೋಷರೂಪ, ಅಮೃತದ ಪಾನಮಾಡುತ್ತ ಆನಂದದಲ್ಲಿರುವುದು ಅದು ತಪವಿದೆ. ದುಷ್ಟ ದೇವ, ದುಷ್ಟ ಮನುಷ್ಯ, ದುಷ್ಟ ತಿರ್ಯಂಚಗಳ ಮೂಲಕ ಮಾಡಲಾದ ಘೋರ ಉಪಸರ್ಗಗಳು ಬಂದರೂ ಅಧೈರ್ಯವನ್ನು ಬಿಟ್ಟುಕೊಟ್ಟು ಕಂಪಾಯಮಾನವಾಗದಿರುವುದು ಅದು ತಪವಿದೆ. ಯಾವುದರಿಂದ ಚಿರಕಾಲದಿಂದ ಸಂಗ್ರಹಿಸಿರುವ ಕರ್ಮದ ನಿರ್ಜರೆಯಾಗಿ ಹೋಗುವುದು ಅದು ತಪವಿದೆ. ಕುವಚನ ಆಡುವವರಲ್ಲಿ, ನಿಂದ್ಯ ದೋಷ ತಗಲಿಸುವಂಥವರಲ್ಲಿ, ತಾಡನ, ಮಾರಣ, ಅಗ್ನಿಯಲ್ಲಿ ಸುಟ್ಟು ಬಿಡುವ ಮೊದಲಾದ ಉಪದ್ರವ ಮಾಡುವಂಥವರಲ್ಲಿ ದ್ವೇಷ ಬುದ್ಧಿಯಿಂದ ಕಲುಷಿತ ಪರಿಣಾಮ ಮಾಡಬಾರದು ಮತ್ತು ಸ್ತುತಿ, ಪೂಜೆ ಮಾಡುವಂಥವರಲ್ಲಿ ರಾಗ ಭಾವವು ಉತ್ಪನ್ನವಾಗದಿರುವುದು ಅದು ತಪವಿದೆ.

ಪಂಚ ಮಹಾವ್ರತಗಳ ಧಾರಣ ಮಾಡುವುದು, ಪಂಚ ಸಮಿತಿಗಳ ಪಾಲನ ಮಾಡುವುದು, ಪಂಚೇಂದ್ರಿಯಗಳ ನಿರೋಧ ಮಾಡುವುದು, ಷಡಾವಶ್ಯಕಗಳನ್ನು ಯಥಾಸಮಯ ಮಾಡುವುದು, ತಮ್ಮ ತಲೆ ಹಾಗೂ ಮೀಸೆ-ದಾಡಿಯ ಕೂದಲನ್ನು ತಮ್ಮ ಕೈಯಿಂದ ಉಪವಾಸದ ದಿವಸ ಕೀಳುವುದು ಅದು ಲೋಚನಾತಪವಿದೆ. ಎರಡು ತಿಂಗಳು ಪೂರ್ಣವಾದನಂತರ ಉತ್ಕೃಷ್ಟ ಕೇಶಲೋಚನವಾಗುತ್ತದೆ, ಮೂರು ತಿಂಗಳು ಪೂರ್ಣವಾದ ಮೇಲೆ ಮಧ್ಯಮ, ನಾಲ್ಕು ತಿಂಗಳು ಪೂರ್ಣವಾದ ಮೇಲೆ ಜಘನ್ಯ ಕೇಶಲೋಚವೆಂದು ಹೇಳುತ್ತಾರೆ. ಅದು ಕೂಡ ತಪವಿದೆ. ಅನ್ಯವೇಷಧಾರಿಗಳ ಹಾಗೆ ದಿನಂಪ್ರತಿ ಕೇಶಲೋಚ ಮಾಡುವುದಿಲ್ಲ.

ಶೀತಕಾಲ, ಗ್ರೀಷ್ಮಕಾಲ, ವರ್ಷಾಕಾಲದಲ್ಲಿ ನಗ್ನವಿರುವುದು, ಯಾವಜ್ಜೀವನ ಸ್ನಾನ ಮಾಡದಿರುವುದು, ನೆಲದ ಮೇಲೆ ಶಯನ ಮಾಡುವುದು, ಅಲ್ಪ ನಿದ್ರೆ ಮಾಡುವುದು, ಹಲ್ಲುಗಳನ್ನು ಬೆರಳಿನಿಂದಲೂ ಉಜ್ಜದಿರುವುದು, ಒಂದು ಬಾರಿ ಎದ್ದು ನಿಂತುಕೊಂಡೇ ರಸ-ನೀರಸ ಸ್ವಾದ ಬಿಟ್ಟು ಅಲ್ಪ ಭೋಜನ ಮಾಡುವುದು. ಈ ಪ್ರಕಾರ ಇಪ್ಪತ್ತೆಂಟು ಮೂಲ ಗುಣಗಳನ್ನು ಅಖಂಡವಾಗಿ ಪರಿಪಾಲನೆ ಮಾಡುವುದು ಅದು ಕೂಡ ದೊಡ್ಡ ತಪವಿದೆ. ಈ ಮೂಲ ಗುಣಗಳ ಪ್ರಭಾವದಿಂದ ಘಾತಿ ಕರ್ಮಗಳನ್ನು ನಾಶ ಮಾಡಿ ಕೇವಲಜ್ಞಾನ ಪ್ರಾಪ್ತ ಮಾಡಿಕೊಂಡು ಮುಕ್ತರಾಗಿ ಹೋಗುತ್ತಾರೆ.

ಎಲೈ ಜ್ಞಾನಿ ಜನಗಳೇ ! ಈ ತಪವು ಧರ್ಮದ ಅಂಗವಿದೆ. ತಪದ ನಿರ್ವಿಘ್ನ ಪ್ರಾಪ್ತಿಯ ಸಲುವಾಗಿ ಇದರ ಸ್ತವನ ಪೂಜೆ ಮಾಡಿ ಮಹಾರತಿಯನ್ನು ಬೆಳಗಬೇಕಾಗುವುದು. ದೂರವಿರುವಂಥ ಮತ್ತು ಅತ್ಯಂತ ಪರೋಕ್ಷ ಕಂಡು ಬರುವಂಥ ಮೋಕ್ಷವು ಕೂಡ ತಪಸ್ಸಿನ ಮೂಲಕ ತಮ್ಮ ಹತ್ತಿರದಲ್ಲಿಯೇ ಬಂದು ಬಿಡುತ್ತದೆ. ಈ ಪ್ರಕಾರ ಶಕ್ತಿ ಪ್ರಮಾಣ ತಪವೆಂಬ ಹೆಸರಿನ ಏಳನೇ ಭಾವನೆಯ ವರ್ಣನೆ ಮಾಡಲಾಯಿತು.

## ಸಾಧು ಸಮಾಧಿ ಭಾವನೆ

ಈಗ ಸಾಧು ಸಮಾಧಿ ನಾಮದ ಎಂಟನೇ ಭಾವನೆ ಹೇಳುತ್ತಾರೆ. ಯಾವ ಪ್ರಕಾರ ಬೊಕ್ಕಸಕ್ಕೆ ತಗುಲಿದ ಬೆಂಕಿಯನ್ನು ಗೃಹಸ್ಥನು ತನ್ನ ಉಪಕಾರೀ ವಸ್ತುಗಳು ನಾಶವಾಗುತ್ತವೆಂದು ತಿಳಿದುಕೊಂಡು ಬೆಂಕಿಯನ್ನು ನಂದಿಸುತ್ತಾನೆ. ಏಕೆಂದರೆ ತನ್ನ ಉಪಕಾರೀ ವಸ್ತುಗಳ ರಕ್ಷಣೆ ಮಾಡುವುದು ಅತ್ಯಂತ ಆವಶ್ಯಕವಿದೆ, ಅದೇ ಪ್ರಕಾರ ವ್ರತ-ಶೀಲ ಮೊದಲಾದ ಅನೇಕ ಗುಣಯುಕ್ತನಾದ ವ್ರತೀ ಸಂಯಮಿಗೆ ಯಾವುದೇ ಕಾರಣದಿಂದ ವಿಘ್ನವು ಬಂದು ಬಿಟ್ಟರೆ ಆ ವಿಘ್ನಗಳನ್ನು ದೂರ ಮಾಡಿ ವ್ರತ-ಶೀಲಗಳ ರಕ್ಷಣೆ ಮಾಡುವುದು ಅದು ಸಾಧು ಸಮಾಧಿಯಿದೆ. ಅಥವಾ ಗೃಹಸ್ಥನಿಗೆ ತನ್ನ ಪರಿಣಾಮವನ್ನು ಕೆಡಿಸುವಂಥ

ಮರಣ ಕಾಲವು ಬಂದುಬಿಟ್ಟರೆ, ಉಪಸರ್ಗವು ಬಂದು ಬಿಟ್ಟರೆ, ರೋಗವು ಬಂದುಬಿಟ್ಟರೆ, ಇಷ್ಟವಿಯೋಗವಾದರೆ, ಅನಿಷ್ಟ ಸಂಯೋಗವು ಬಂದು ಬಿಟ್ಟರೆ ಆ ಸಮಯದಲ್ಲಿ ಭಯಭೀತನಾಗದಿರುವುದು ಅದು ಸಾಧು ಸಮಾಧಿಯಿದೆ.

ಸಮ್ಯಗ್ಜ್ಞಾನಿಯು ವಿಚಾರ ಮಾಡುತ್ತಾನೆ - ಎಲೈ ಆತ್ಮನೇ ! ನೀನು ಅಖಂಡ ಅವಿನಾಶೀ ಜ್ಞಾನದರ್ಶನ ಸ್ವಭಾವಿಯಿರುವೆ, ನಿನ್ನ ಮರಣವಾಗುವ ಸಾಧ್ಯತೆಯಿಲ್ಲ. ಯಾವುದು ಉತ್ಪನ್ನವಾಗಿದೆ ಅದು ನಷ್ಟವಾಗುತ್ತದೆ. ಪರ್ಯಾಯದ ವಿನಾಶವಾಗುತ್ತದೆ, ಚೈತನ್ಯ ದ್ರವ್ಯದ ವಿನಾಶವಾಗುವುದಿಲ್ಲ. ಪಂಚೇಂದ್ರಿಯಗಳು, ಮನಬಲ, ವಚನಬಲ, ಕಾಯಬಲ, ಆಯುಬಲ, ಉಚ್ಛ್ವಾಸ-ಇವು ಹತ್ತು ಪ್ರಾಣಗಳಿವೆ. ಇವುಗಳ ನಾಶವನ್ನು ಮರಣವೆಂದು ಹೇಳುತ್ತಾರೆ. ಜ್ಞಾನ, ದರ್ಶನ, ಸುಖ, ಸತ್ತಾ ಇತ್ಯಾದಿಗಳು ನಿನ್ನ ಭಾವ ಪ್ರಾಣಗಳಿದ್ದು, ಅವುಗಳ ನಾಶವೆಂದೂ ಆಗುವುದಿಲ್ಲ, ಆದುದರಿಂದ ದೇಹದ ನಾಶವನ್ನು ತನ್ನ ನಾಶವೆಂದು ಮನ್ನಿಸುವುದು ಅದು ಮಿಥ್ಯಾದರ್ಶನವಿದೆ, ಮಿಥ್ಯಾಜ್ಞಾನವಿದೆ.

ಎಲೈ ಜ್ಞಾನಿಯೇ ! ಸಾವಿರಾರು ಕ್ರಿಮಿಗಳಿಂದ ತುಂಬಿದ, ಮೂಳೆ-ಮಾಂಸಮಯ, ದುರ್ಗಂಧಿತ, ವಿನಾಶಶೀಲವಾದ ದೇಹದ ನಾಶವಾಗುವುದರಿಂದ ನಿನಗೇನಾಗುತ್ತದೆ ? ನೀನಂತೂ ಅವಿನಾಶೀ ಜ್ಞಾನಮಯನಿರುವೆ. ಈ ಮರಣವಂತೂ ಮಹಾ ಉಪಕಾರಿಯಾದ ಮಿತ್ರವಿದೆ ಅದು ನಿನ್ನನ್ನು ಕೊಳಕ ಶರೀರದೊಳಗಿಂದ ತೆಗೆದು ದೇವ ಮೊದಲಾದ ಉತ್ತಮ ದೇಹಧಾರಣ ಮಾಡಿಸುತ್ತದೆ. ಮರಣರೂಪದ ಮಿತ್ರನು ಬಾರದಿದ್ದರೆ ಈ ದೇಹದಲ್ಲಿ ಇನ್ನೂ ಅದೆಷ್ಟು ಸಮಯ ಬಿದ್ದಿರಬೇಕಾಗುವುದು ? ರೋಗ ಹಾಗೂ ದುಃಖದಿಂದ ತುಂಬಿದ ಶರೀರದೊಳಗಿಂದ ಯಾರು ಬಿಡಿಸುವರು ? ಸಮಾಧಿ ಮರಣ ಮಾಡಿ ಆತ್ಮನ ಉದ್ಧಾರ ಹೇಗಾಗುತ್ತದೆ ? ವ್ರತ-ತಪ-ಸಂಯಮದ ಉತ್ತಮ ಫಲವು ಮರಣನಾಮದ ಮಿತ್ರನ ಉಪಕಾರವಿಲ್ಲದೆ ಹೇಗೆ ಪಡೆಯುವುದು ? ಪಾಪದಿಂದ ಯಾರು ಭಯಭೀತರಾಗುವರು ? ಮರಣರೂಪದ ಕಲ್ಪವೃಕ್ಷವಿಲ್ಲದೆ ನಾಲ್ಕು ಆರಾಧನೆಗಳ ಆಶ್ರಯದ ಗ್ರಹಣ ಮಾಡಿಸಿ, ಸಂಸಾರರೂಪದ ಕೊಳಚೆಯೊಳಗಿಂದ ಯಾರು ಹೊರಗೆ ತೆಗೆಯುವರು ?

ಯಾರ ಚಿತ್ತವು ಸಂಸಾರದಲ್ಲಿ ಆಸಕ್ತವಿದೆ ಮತ್ತು ದೇಹವನ್ನು ತಮ್ಮ ರೂಪವೆಂದು ತಿಳಿಯುತ್ತಾರೆ. ಅವರಿಗೆ ಮರಣಭಯವಿರುತ್ತದೆ. ಸಮ್ಯಗ್ದೃಷ್ಟಿ ತಮ್ಮ ಸ್ವರೂಪವನ್ನು ದೇಹದಿಂದ ಭಿನ್ನವಾಗಿ ತಿಳಿದುಕೊಂಡು ಭಯ ಭೀತರಾಗುವುದಿಲ್ಲ, ಅವರಿಗೆ ಸಾಧು ಸಮಾಧಿಯಾಗುತ್ತದೆ. ಮರಣ ಸಮಯದಲ್ಲಿ ಯಾವ ರೋಗ, ದುಃಖ ಮೊದಲಾದವು ಬರುತ್ತವೆ ಅವು ಕೂಡ ಸಮ್ಯಗ್ದೃಷ್ಟಿಗೆ ದೇಹದಲ್ಲಿನ ಮಮತೆಯನ್ನು ಬಿಡಿಸುವ ಸಲುವಾಗಿ ಬರುತ್ತವೆ, ತ್ಯಾಗ-ಸಂಯಮ ಮೊದಲಾದವುಗಳ ಸನ್ಮುಖ ಮಾಡಿಸುವ ಸಲುವಾಗಿ ಬರುತ್ತವೆ, ಪ್ರಮಾದವನ್ನು ಬಿಡಿಸಿ ಸಮ್ಯಗ್ದರ್ಶನ ಮೊದಲಾದ ನಾಲ್ಕು ಆರಾಧನೆಗಳಲ್ಲಿ ದೃಢತೆ ಮಾಡಿಸುವ ಸಲುವಾಗಿ ಬರುತ್ತವೆ.

ಜ್ಞಾನಿಯು ವಿಚಾರ ಮಾಡುತ್ತಾನೆ-ಜನ್ಮಧಾರಣ ಮಾಡಿದವನು ಅವಶ್ಯವಾಗಿ ಸಾಯುವನು, ಒಂದು ವೇಳೆ ಅಧೀರನಾಗಿ ಹೊದರೆ ಮರಣವು ಬಿಡಲಾರದು, ಮತ್ತು ಧೈರ್ಯಧಾರಣ ಮಾಡಿಕೊಂಡಿದ್ದರೂ ಮರಣವು ಬಿಡಲಾರದು. ಆದುದರಿಂದ ದುರ್ಗತಿಗೆ ಕಾರಣವಾದ ಯಾವ ಅಧೀರತೆಯ ರೂಪದ ಮರಣವಿದೆ, ಅದಕ್ಕೆ ಧಿಕ್ಕಾರವಿರಲಿ ! ಈಗ ದೇಹವು ಸತ್ತು ಹೋಗುವುದು, ಆದರೆ ನನ್ನ ಜ್ಞಾನದರ್ಶನ ಸ್ವರೂಪದ ಮರಣವಾಗಲಾರದೆಂಬ ಸಾಹಸದೊಡನೆ ಸಾಯುವೆನು. ಈಗ ಇಂಥ ಮರಣ ಮಾಡುವುದು ಉಚಿತವಿದೆ. ಆದುದರಿಂದ ಸಮ್ಯಗ್ದೃಷ್ಟಿಗೆ ಉತ್ಸಾಹ ಸಹಿತ ಮರಣದ ಭಯವಾಗದಿರುವುದು ಅದು ಸಾಧುಸಮಾಧಿಯಿದೆ.

ದೇವಕೃತ, ಮನುಷ್ಯಕೃತ, ತಿರ್ಯಂಚಕೃತ ಉಪಸರ್ಗವಾದ ಮೇಲೆ ಯಾರಿಗೆ ಭಯವಾಗುವುದಿಲ್ಲ, ಪೂರ್ವದಲ್ಲಿ ಕಟ್ಟಿದ ಕರ್ಮದ ನಿರ್ಜರೆಯೆಂದೇ ಮನ್ನಿಸುತ್ತಾರೆ, ಅವರಿಗೆ ಸಾಧು ಸಮಾಧಿಯಿದೆ. ಜ್ಞಾನಿಗಳು ರೋಗಕ್ಕೆ ಹೆದರುವುದಿಲ್ಲ, ಅವರಂತೂ ತಮ್ಮ ಶರೀರವನ್ನೇ ಮಹಾರೋಗವೆಂದು ತಿಳಿಯುತ್ತಾರೆ, ಏಕೆಂದರೆ ಶರೀರವಂತೂ ಕ್ಷುಧೆ, ತೃಷೆ ಮೊದಲಾದ ಮಹಾರೋಗಗಳನ್ನು ಉತ್ಪನ್ನ ಮಾಡಿಸುವಂಥದ್ದಿದೆ. ಈ ಮನುಷ್ಯಶರೀರವು ವಾತ, ಪಿತ್ತ, ಕಫ ಮೊದಲಾದ ತ್ರಿದೋಷಮಯವಿದೆ. ಅಸಾತಾವೇದನೀಯ ಕರ್ಮದ ಉದಯದಿಂದ ತ್ರಿದೋಷಗಳು ಕುಂದುವುದರಿಂದ-ಹೆಚ್ಚುವುದರಿಂದ ಜ್ವರ, ಕೆಮ್ಮು, ಶ್ವಾಸ, ಹೊಟ್ಟೆ ನೋವು,ತಲೆನೋವು, ನೇತ್ರವಿಕಾರ ವಾತಾದಿಗಳ ಪೀಡೆಯಾದ ಮೇಲೆ ಜ್ಞಾನಿಯು ವಿಚಾರ

ಮಾಡುವುದೇನೆಂದರೆ ನನಗೆ ಈ ರೋಗವು ಉತ್ಪನ್ನವಾಗಿದೆ. ಅದರ ಅಂತರಂಗ ಕಾರಣವಂತೂ ಅಸಾತಾವೇದನೀಯ ಕರ್ಮದ ಉದಯವಿದೆ, ಬಹಿರಂಗ ಕಾರಣಗಳು ದ್ರವ್ಯ, ಕ್ಷೇತ್ರ, ಕಾಲ ಮೊದಲಾದವುಗಳಿವೆ. ಕರ್ಮದ ಉದಯದ ಉಪಶಮವಾದ ನಂತರ ರೋಗದ ನಾಶವಾಗಿ ಹೋಗುವುದು.

ಅಸಾತಾವೇದನೀಯದ ಪ್ರಬಲ ಉದಯವಾದ ಮೇಲೆ ಬಾಹ್ಯದ ಔಷಧ ಮೊದಲಾದವುಗಳಾವವೂ ರೋಗವನ್ನು ನಿವಾರಿಸುವಲ್ಲಿ ಸಮರ್ಥವಿಲ್ಲ. ಅಸಾತಾ ಕರ್ಮವನ್ನು ಹರಣ ಮಾಡುವಲ್ಲಿ ಯಾವ ದೇವ, ದಾನವ, ಮಂತ್ರ, ತಂತ್ರ, ಔಷಧ ಮೊದಲಾದವು ಸಮರ್ಥವಿಲ್ಲ. ಆದುದರಿಂದ ಈಗ ಸಂಕ್ಲೇಶ ಬಿಟ್ಟು ಸಮತೆ ಧಾರಣ ಮಾಡಬೇಕು. ಬಾಹ್ಯದಲ್ಲಿನ ಔಷಧ ಮೊದಲಾದವು ಅಸಾತಾವೇದನೀಯಕರ್ಮದ ಉದಯವು ಮಂದವಾಗಿಹೋದಮೇಲೆ ಸಹಕಾರೀ ಕಾರಣವಿವೆ. ಅಸಾತಾವೇದನೀಯ ಕರ್ಮದ ತೀವ್ರ ಉದಯವಾದ ಮೇಲೆ ಔಷಧ ಮೊದಲಾದ ಬಾಹ್ಯಕಾರಣಗಳಾವವೂ ರೋಗವನ್ನು ದೂರ ಮಾಡುವಲ್ಲಿ ಸಮರ್ಥವಿಲ್ಲವೆಂದು ವಿಚಾರಮಾಡಿ ಅಸಾತಾವೇದನೀಯ ಕರ್ಮದ ನಾಶದ ಕಾರಣವೆಂದರೆ ಪರಮ ಸಮತಾ ಭಾವನೆಯನ್ನು ಧಾರಣ ಮಾಡಿ, ಸಂಕ್ಲೇಶ ರಹಿತರಾಗಿ ಸಹನೆ ಮಾಡುವುದು ಅಧಿ ೀರರಾಗದಿರುವುದು ಅದುವೇ ಸಾಧು ಸಮಾಧಿಯಿದೆ.

ಇಷ್ಟದ ವಿಯೋಗವಾದ ಮೇಲೆ, ಅನಿಷ್ಟದ ಸಂಯೋಗವಾದಮೇಲೆ ಜ್ಞಾನದ ದೃಢತೆಯಿಂದ ಭೀತಿಗೆ ಪ್ರಾಪ್ತವಾಗದಿರುವುದು ಅದು ಸಾಧು ಸಮಾಧಿಯಿದೆ. ಯಾವ ಜೀವನು ಜನ್ಮ-ಜರೆ-ಮರಣದ ಭಯ ಸಹಿತನಿದ್ದಾನೆ. ಆದರೆ ಸಮ್ಯಗ್ದರ್ಶನ ಮೊದಲಾದ ಗುಣ ಸಹಿತನಿದ್ದಾನೆ. ಅವನು ಈ ಮನುಷ್ಯ ಪರ್ಯಾಯದ ಕೊನೆಯಲ್ಲಿ ಆರಾಧನೆಗಳ ಆಶ್ರಯದೊಡನೆ ಭಯರಹಿತನಾಗಿ ದೇಹಾದಿ ಸಮಸ್ತ ಪರದ್ರವ್ಯಗಳಲ್ಲಿ ಮಮತಾರಹಿತನಾಗಿ, ವ್ರತ-ಸಂಯಮಸಹಿತನಾಗಿ ಸಮಾಧಿ ಮರಣದ ಇಚ್ಛೆ ಮಾಡುತ್ತಾನೆ.

ಈ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತ ನನ್ನದು ಅನಂತಾನಂತಕಾಲವು ಕಳೆದು ಹೋಗಿದೆ. ಅನಂತ ಬಾರಿ ಸಮಸ್ತ ಸಮಾಗಮ ಪಡೆದಿರುವೆನು. ಆದರೆ ಸಮಾಧಿ ಮರಣವು ಪ್ರಾಪ್ತವಾಗಲಿಲ್ಲ. ಸಮಾಧಿ ಮರಣವು ಒಂದು ಸಲವಾದರೂ ದೊರಕಿಬಿಡುತ್ತಿದ್ದರೆ ಪುನಃ ಜನ್ಮ-ಮರಣಕ್ಕೆ ಪಾತ್ರನಾಗುತ್ತಿರಲಿಲ್ಲ. ನಾನು ಸಂಸಾರದಲ್ಲಿ ಪರಿಭ್ರಮಣ ಮಾಡುತ್ತ ಭವ-ಭವದಲ್ಲಿ ಅನೇಕ ಹೊಸ-ಹೊಸ ದೇಹಧಾರಣ ಮಾಡಿರುವೆನು. **ನಾನು ಧಾರಣ ಮಾಡಿರದಂಥ ದೇಹವು ಯಾವುದಿಲ್ಲ.** ಈಗ ಈ ವರ್ತಮಾನ ದೇಹದಲ್ಲಿ ಮಮತೆಯನ್ನೇಕೆ ಮಾಡುವುದು ? ನನಗೆ ಭವ-ಭವದಲ್ಲಿ ಅನೇಕ ಸ್ವಜನ-ಕುಟುಂಬದವರ ಸಂಬಂಧವಾಗಿದೆ. ಇಂದು ಮೊದಲು ಬಾರಿಯೇನು ಸ್ವಜನರು ದೊರಕಿಲ್ಲ. ಆದುದರಿಂದ ಯಾವ-ಯಾವ ಸ್ವಜನರಲ್ಲಿ ಪ್ರೀತಿ ಮಾಡುವುದು ? ನನಗೆ ಭವ-ಭವದಲ್ಲಿ ಅನೇಕ ಬಾರಿ ರಾಜಋದ್ಧಿಯೂ ಪ್ರಾಪ್ತವಾಗಿದೆ. ಈಗ ನಾನು ಈ ತುಚ್ಛವಾದ ವರ್ತಮಾನ ಸಂಪತ್ತಿನಲ್ಲಿ ಏನು ಮಮತೆ ಮಾಡುವುದು ? ಭವ-ಭವದಲ್ಲಿ ನನ್ನನ್ನು ಪಾಲನೆ ಮಾಡುವಂಥ ಅನೇಕ ತಾಯಿ-ತಂದೆಯರೂ ಆಗಿ ಹೋಗಿದ್ದಾರೆ. ಇವರು ಇದೇ ಮೊದಲು ಬಾರಿಯೇನು ಆಗಿಲ್ಲವಲ್ಲ !

ನನಗೆ ಭವ-ಭವದಲ್ಲಿ ಅನೇಕ ಬಾರಿ ನಾರೀತನವೂ ಪ್ರಾಪ್ತವಾಗಿದೆ.ಕಾಮದ ತೀವ್ರ ಆಸಕ್ತಿಯೊಡನೆ ನನಗೆ ಭವ-ಭವದಲ್ಲಿ ಅನೇಕ ಬಾರಿ ನಪುಂಸಕತನವೂ ಪ್ರಾಪ್ತವಾಗಿದೆ ಮತ್ತು ನನಗೆ ಭವ-ಭವದಲ್ಲಿ ಅನೇಕ ಬಾರಿ ಪುರುಷತನವೂ ಪ್ರಾಪ್ತವಾಗಿದೆ. ಆದಾಗ್ಯೂ ವೇದದ ಅಭಿಮಾನದಿಂದ ನಷ್ಟವಾಗುತ್ತ ತಿರುಗುತ್ತಲೇ ಉಳಿದೆನು. ನಾನು ಭವ-ಭವದಲ್ಲಿ ಅನೇಕ ಜಾತಿಯ ದುಃಖಗಳಿಗೆ ಪ್ರಾಪ್ತನಾಗಿದ್ದೇನೆ. **ನಾನು ಸಂಸಾರದಲ್ಲಿ ಅನೇಕ ಬಾರಿ ಪಡೆಯದಂಥ ಯಾವೊಂದು ದುಃಖವೂ ಉಳಿದಿಲ್ಲ** ಮತ್ತು ನಾನು ಅನೇಕ ಬಾರಿ ಪಡೆಯದಂಥ ಯಾವೊಂದು ಇಂದ್ರಿಯಜನಿತ ಸುಖವೂ ಇಲ್ಲ. ನಾನು ಅನೇಕ ಬಾರಿ ನರಕದಲ್ಲಿ ನಾರಕಿಯಾಗಿ ಅಸಂಖ್ಯಾತ ಕಾಲದವರೆಗೆ ಪ್ರಮಾಣವಿಲ್ಲದ ಅನೇಕ ಪ್ರಕಾರದ ದುಃಖ ಭೋಗಿಸಿದ್ದೇನೆ. ಅನೇಕ ಬಾರಿ ತಿರ್ಯಂಚ ಭವ ಪ್ರಾಪ್ತ ಮಾಡಿಕೊಂಡು ಅನಂತ ಬಾರಿ ಜನ್ಮ-ಮರಣ ಮಾಡುತ್ತ ಅನೇಕ ಪ್ರಕಾರದ ದುಃಖ ಭೋಗಿಸುತ್ತ ಪುನಃ ಪುನಃ ಪರಿಭ್ರಮಣ ಮಾಡಿದ್ದೇನೆ.

ನಾನು ಅನೇಕ ಬಾರಿ ಧರ್ಮವಾಸನೆಯಿಲ್ಲದೆ ಮಿಥ್ಯಾದೃಷ್ಟಿ ಮನುಷ್ಯನೂ ಆಗಿದ್ದೇನೆ. ಅನೇಕ ಬಾರಿ ದೇವಲೋಕದಲ್ಲಿ ಕೂಡ ಜನ್ಮ ಪಡೆದಿರುವೆನು, ಅನೇಕ ಭವಗಳಲ್ಲಿ ಜಿನೇಂದ್ರದೇವರ ಪೂಜೆ ಮಾಡಿದ್ದೇನೆ, ಅನೇಕ ಭವಗಳಲ್ಲಿ ಗುರುಗಳಿಗೆ ವಂದನೆಯನ್ನೂ ಮಾಡಿದ್ದೇನೆ, ಅನೇಕ ಭವಗಳಲ್ಲಿ ಮಿಥ್ಯಾದೃಷ್ಟಿಯಾಗಿ ಕಪಟಪೂರ್ವಕ ಆತ್ಮನಿಂದೆಯನ್ನೂ ಮಾಡಿದ್ದೇನೆ, ಅನೇಕ ಭವಗಳಲ್ಲಿ ದುರ್ಧರ ತಪಸ್ಸನ್ನೂ ಧಾರಣ ಮಾಡಿದ್ದೇನೆ, ಅನೇಕ ಭವಗಳಲ್ಲಿ ಭಗವಂತರ ಸಮವಸರಣದಲ್ಲಿ ಕೂಡ ಹೋಗಿ ಬಂದಿದ್ದೇನೆ, ಮತ್ತು ಅನೇಕ ಭವಗಳಲ್ಲಿ ಶ್ರುತಜ್ಞಾನದ ಅಂಗಗಳದ್ದು ಕೂಡ ಪಠಣ-ಪಾಠಣ ಮೊದಲಾದವುಗಳ ಅಭ್ಯಾಸ ಮಾಡಿದ್ದೇನೆ, ಆದಾಗ್ಯೂ ಅನಂತಕಾಲದಿಂದ ಭವನವಾಸಿಯಾಗಿಯೇ ಉಳಿದಿದ್ದೇನೆ.

ಜಿನೇಂದ್ರದೇವರ ಪೂಜೆ ಮಾಡುವುದು, ಗುರುಗಳಿಗೆ ವಂದನೆ ಮಾಡುವುದು, ಆತ್ಮನಿಂದೆ ಮಾಡಿಕೊಳ್ಳುವುದು, ದುರ್ಧರ ತಪಶ್ಚರಣ ಮಾಡುವುದು, ಸಮವಸರಣದಲ್ಲಿ ಹೋಗುವುದು, ಜಿನಶ್ರುತ ಅಂಗಗಳ ಅಭ್ಯಾಸ ಮಾಡುವುದು ಇತ್ಯಾದಿ ಕಾರ್ಯಗಳು ಪ್ರಶಂಸನೀಯವಿವೆ, ಪಾಪದ ನಾಶ ಮಾಡುವಂಥವುಗಳಿವೆ, ಪುಣ್ಯಬಂಧದ ಕಾರಣಗಳಿವೆ; ಆದಾಗ್ಯೂ **ಸಮ್ಯಗ್ದರ್ಶನವಿಲ್ಲದೆ ಅಕೃತಾರ್ಥಗಳಿವೆ (ಅಕಾರ್ಯಕಾರಿಗಳಿವೆ), ಅವು ಸಂಸಾರದ ಪರಿಭ್ರಮಣವನ್ನು ತಡೆಯುವ ಸಾಧ್ಯತೆಯಿಲ್ಲ**, ಸಮ್ಯಗ್ದರ್ಶನವಿಲ್ಲದೆ ಸಮಸ್ತ ಕ್ರಿಯೆಗಳು ಪುಣ್ಯದ ಬಂಧ ಮಾಡುವಂಥವುಗಳಿವೆ, ಅವು ಸಮ್ಯಗ್ದರ್ಶನ ಸಹಿತವಾದಾಗಲೇ ಸಂಸಾರದ ನಾಶ ಮಾಡುವ ಸಾಧ್ಯತೆಯಿದೆ. ಅದನ್ನೇ ಆತ್ಮಾನುಶಾಸನದಲ್ಲಿ ಹೇಳಿದ್ದಾರೆ -

**ಶಮ ಬೋಧವೃತ್ತ ತಪಸಾಂ ಪಾಷಾಣಸ್ಯೇವ ಗೌರವಂ ಪುಂಸಃ ।**
**ಪೂಜ್ಯಂ ಮಹಾಮಣೇರಿವ ತದೇವ ಸಮ್ಯಕ್ತ್ವಸಂಯುಕ್ತಮ್ ॥೧೫॥**

**ಅರ್ಥ :-** ಪುರುಷನ ಶಮಭಾವ, ಜ್ಞಾನ, ಚಾರಿತ್ರ, ಮತ್ತು ತಪ ಇವುಗಳ ಮಹಾನತೆಯು ಪಾಷಾಣದ ಮಹಾನತೆಯ ಸಮಾನವಿದೆ; ಅವೇ ಶಮ, ಬೋಧ, ಚಾರಿತ್ರ ಮತ್ತು ತಪಗಳು ಸಮ್ಯಕ್ತ್ವಸಹಿತವಿದ್ದರೆ ಮಹಾಮಣಿಯ ಸಮಾನ ಪೂಜ್ಯವಿವೆ.

**ಭಾವಾರ್ಥ :-** ಜಗತ್ತಿನಲ್ಲಿ ಮಣಿಯೂ ಪಾಷಾಣವಿದೆ ಮತ್ತು ಮಳಲಿನ ಕಲ್ಲೂ ಪಾಷಾಣವಿದೆ. ಯಾವ ಪ್ರಕಾರ ಓರ್ವ ಮನುಷ್ಯನು ಸಾಧಾರಣ ಪಾಷಾಣವನ್ನಂತೂ ನೂರು ಕೆ.ಜಿ.ಯಷ್ಟು ಹೊತ್ತುಕೊಂಡು ಹೋಗಿ ಮಾರಿದರೆ ಹತ್ತು ಪೈಸೆ ಬರುವುದು, ಅದರಿಂದ ಒಂದು ಊಟಕ್ಕೂ ಸಾಲದು. ಮಣಿಯನ್ನು ಒಂದು ಗುಂಜಿಯಷ್ಟು ಕೊಂಡೊಯ್ದು ಮಾರಿದರೆ ಸಾವಿರಾರು ರೂಪಾಯಿ ದೊರಕುವವು, ಜನ್ಮದ ದರಿದ್ರತೆಯೇ ದೂರವಾಗುವುದು. ಅದೇ ಪ್ರಕಾರ ಶಮಭಾವ, ಶಾಸ್ತ್ರಗಳ ಜ್ಞಾನ, ಚಾರಿತ್ರಧಾರಣ, ಘೋರ ತಪಶ್ಚರಣಗಳೆಲ್ಲವು ಸಮ್ಯಕ್ತ್ವವಿಲ್ಲದೆ ಅಧಿಕ ಕಾಲ ಧಾರಣ ಮಾಡಿದರೆ ರಾಜ್ಯ ಸಂಪತ್ತು ದೊರಕುವುದು, ಮಂದಕಷಾಯದ ಪ್ರಭಾವದಿಂದ ದೇವಲೋಕದಲ್ಲಿ ಹುಟ್ಟಬಹುದು, ಪುನಃ ಅಲ್ಲಿಂದ ಮರಣ ಹೊಂದಿ ಏಕೇಂದ್ರಿಯ ಮೊದಲಾದ ಪರ್ಯಾಯಗಳಲ್ಲಿ ಪರಿಭ್ರಮಣವಾಗುವುದು, ಆದರೆ ಅವು ಸಮ್ಯಕ್ತ್ವಸಹಿತವಿದ್ದರೆ ಸಂಸಾರ ಪರಿಭ್ರಮಣದ ನಾಶವಾಗಿ ಮುಕ್ತಿಯಾಗಿ ಹೋಗುವುದು.

**ಸಮ್ಯಕ್ತ್ವವಿಲ್ಲದ ಮಿಥ್ಯಾದೃಷ್ಟಿಯು ಜಿನರಾಜರ ಪೂಜೆ ಮಾಡಲಿ, ನಿರ್ಗ್ರಂಥಗುರುಗಳಿಗೆ ವಂದನೆ ಮಾಡಲಿ, ಸಮವಸರಣದಲ್ಲಿ ಹೋಗಲಿ, ಜಿನಾಗಮದ ಅಭ್ಯಾಸ ಮಾಡಲಿ, ಉತ್ಕೃಷ್ಟ ತಪಸ್ಸು ಮಾಡಲಿ, ಆದರೂ ಅನಂತಕಾಲದವರೆಗೆ ಸಂಸಾರದಲ್ಲಿಯೇ ಪರಿಭ್ರಮಣ ಮಾಡುತ್ತ ಸಂಸಾರದಲ್ಲಿಯೇ ಉಳಿಯುವನು.**

ಈ ಜೀವನು ಮೂರು ಲೋಕದಲ್ಲಿನ ಸುಖ-ದುಃಖದ ಸಮಸ್ತ ಸಾಮಗ್ರಿಯನ್ನು ಅನಂತ ಬಾರಿ ಪಡೆದಿದ್ದಾನೆ, ಯಾವುದೂ ದುರ್ಲಭವಿಲ್ಲ, ಒಂದು ಸಾಧುಸಮಾಧಿರೂಪ ಯಾವ ರತ್ನತ್ರಯದ ಲಬ್ಧಿಯಿದೆ ಅದನ್ನು ನಿರ್ವಿಘ್ನವಾಗಿ ಪರಲೋಕದವರೆಗೆ ಕೊಂಡೊಯ್ಯುವುದು ದುರ್ಲಭವಿದೆ. ಯಾರು ರತ್ನತ್ರಯ ಸಹಿತರಾಗಿ ದೇಹ ಬಿಡುತ್ತಾರೆ, ಅವರಿಗೆ ಯಾವ ಸಾಧು ಸಮಾಧಿಯಾಗುತ್ತದೆ ಅದರ ಪ್ರಾಪ್ತಿಯು ದುರ್ಲಭವಿದೆ.

ಸಾಧುಸಮಾಧಿಯು ಚತುರ್ಗತಿಯಲ್ಲಿನ ಪರಿಭ್ರಮಣದ ದುಃಖದ ಅಭಾವ ಮಾಡಿ ನಿಶ್ಚಿಲ, ಸ್ವಾಧೀನವಿರುವ ಅನಂತ ಸುಖವನ್ನು ಪ್ರಾಪ್ತ ಮಾಡಿಸುತ್ತದೆ. ಯಾವ ಪುರುಷನು ಸಾಧುಸಮಾಧಿಯ ಭಾವನೆಯನ್ನು ನಿರ್ವಿಘ್ನರೂಪದಿಂದ ಪ್ರಾಪ್ತಮಾಡುವ ಸಲುವಾಗಿ ಈ ಭಾವನೆಯನ್ನು ಭಾವಿಸುತ್ತ ಇದರ ಮಹಾನ ಆರತಿಯನ್ನು ಬೆಳಗುತ್ತಾನೆ ಅವನು ಶೀಘ್ರವಾಗಿ ಸಂಸಾರ ಸಮುದ್ರವನ್ನು ದಾಟಿ ಅಷ್ಟಗುಣಗಳ ಧಾರಕನಾದ ಸಿದ್ಧನಾಗಿ ಹೋಗುತ್ತಾನೆ. ಈ ಪ್ರಕಾರ ಸಾಧುಸಮಾಧಿ ನಾಮದ ಎಂಟನೇ ಭಾವನೆಯ ವರ್ಣನೆ ಮಾಡಲಾಯಿತು.

## ವೈಯಾವೃತ್ಯ ಭಾವನೆ

ಈಗ ವೈಯಾವೃತ್ಯ ನಾಮದ ಒಂಭತ್ತನೇ ಭಾವನೆಯ ವರ್ಣನೆ ಮಾಡುತ್ತಾರೆ.ಕುಷ್ಟರೋಗ, ಉದರರೋಗ, ಆಮಶಂಕೆ, ಸಂಗ್ರಹಣಿ, ಕಠೋದರ, ನೇತ್ರಶೂಲ, ಕರ್ಣಶೂಲ, ಶಿರಶೂಲ, ದಂತಶೂಲ ಮತ್ತು ಜ್ವರ, ಕೆಮ್ಮು, ದಮ್ಮು, ಜರೆ ಇತ್ಯಾದಿ ರೋಗಗಳಿಂದ ಪೀಡಿತರಾದ ಯಾವ ಮುನಿ ಹಾಗೂ ಶ್ರಾವಕರಿದ್ದಾರೆ ಅವರಿಗೆ ನಿರ್ದೋಷ ಆಹಾರ, ಔಷಧ, ವಸತಿಕೆ ಮೊದಲಾದುವನ್ನು ಕೊಟ್ಟು ಸೇವೆ-ಶುಶ್ರೂಷೆ ಮಾಡುವುದು, ವಿನಯ ಮಾಡುವುದು, ಆದರ ಮಾಡುವುದು, ದುಃಖದೂರ ಮಾಡುವ ಪ್ರಯತ್ನ ಮಾಡುವುದು ಅದೆಲ್ಲವು ವೈಯಾವೃತ್ಯವಿದೆ. ತಪಸ್ಸಿನಿಂದ ತಪಿಸಿದ್ದರೂ ಶರೀರವು ರೋಗ ಸಹಿತವಿದ್ದರೆ ಅವರ ದುಃಖ ನೋಡಿ ಅವರ ಸಲುವಾಗಿ ಪ್ರಾಸುಕ ಔಷಧ, ಪಥ್ಯ ಮೊದಲಾದುವಿಂದ ರೋಗದ ಉಪಶಮನ ಮಾಡುವುದು ಅದು ವೈಯಾವೃತ್ಯ ಭಾವನೆಯಿದೆ.

ಮುನಿಗಳಲ್ಲಿ ಹತ್ತು ಭೇದಗಳಿರುವುದರಿಂದ ವೈಯಾವೃತ್ಯದಲ್ಲೂ ಹತ್ತು ಭೇದಗಳಿವೆ. ಆಚಾರ್ಯ, ಉಪಾಧ್ಯಾಯ, ತಪಸ್ವೀ, ಶೈಕ್ಷ್ಯ, ಗ್ಲಾನ, ಗಣ, ಕುಲ, ಸಂಘ, ಸಾಧು, ಮನೋಜ್ಞವೆಂದು ಈ ಹತ್ತು ಪ್ರಕಾರದ ಮುನಿಗಳಲ್ಲಿ ಪರಸ್ಪರ ವೈಯಾವೃತ್ಯವಾಗುತ್ತದೆ. ಕಾಯಚೇಷ್ಟೆಯ ಮೂಲಕ ಅನ್ಯದ್ರವ್ಯಗಳಿಂದ ದುಃಖ ವೇದನೆ ಮೊದಲಾದುವನ್ನು ದೂರ ಮಾಡುವ ಕಾರ್ಯ ಮಾಡುವುದು - ವ್ಯಾಪಾರ ಮಾಡುವುದು - ಪ್ರವರ್ತನ ಮಾಡುವುದು ಅದು ವೈಯಾವೃತ್ಯವಿದೆ.

**ಹತ್ತು ಪ್ರಕಾರದ ಮುನಿಗಳ ಸ್ವರೂಪವನ್ನು ಹೀಗೆ ತಿಳಿಯುವುದು -** ಸ್ವರ್ಗ-ಮೋಕ್ಷ ಸುಖದ ಬೀಜಸ್ವರೂಪವಿರುವ ಯಾವ ವ್ರತಗಳಿವೆ ಅವನ್ನು ಆದರ ಸಹಿತ ಗ್ರಹಣ ಮಾಡಿ ಭವ್ಯ ಜನರು ತಮ್ಮ ಹಿತದ ಸಲುವಾಗಿ ಪಾಲಿಸುತ್ತಾರೆ - ಆಚರಣೆ ಮಾಡುತ್ತಾರೆ. ಅಂಥ ಸಮ್ಯಗ್ಜ್ಞಾನ ಮೊದಲಾದ ಗುಣಗಳ ಧಾರಕರು **ಆಚಾರ್ಯ**ರಿದ್ದಾರೆ. ಅವರ ಸಾಮೀಪ್ಯ ಪಡೆದು ಆಗಮದ ಅಧ್ಯಯನ ಮಾಡುತ್ತಾರೆ. ಅಂಥ ವ್ರತ, ಶೀಲ, ಶ್ರುತದ ಆಧಾರರು **ಉಪಾಧ್ಯಾಯ**ರಿದ್ದಾರೆ. ಮಹಾನ ಅನಶನಾದಿ ತಪಸ್ಸು ಮಾಡುವಂಥವರು **ತಪಸ್ವಿ**ಗಳಿದ್ದಾರೆ. ನಿರಂತರ ಶ್ರುತದ ಶಿಕ್ಷಣದಲ್ಲಿ ತತ್ಪರ ಹಾಗೂ ವ್ರತಗಳ ಭಾವನೆಯಲ್ಲಿ ತತ್ಪರರಿರುವಂಥವರು **ಶೈಕ್ಷ್ಯ**ರಿದ್ದಾರೆ. ರೋಗಾದಿಗಳಿಂದ ಯಾವ ಶರೀರವು ದುಃಖಿಯಿದೆ ಅವರು **ಗ್ಲಾನ**ರಿದ್ದಾರೆ. ವೃದ್ಧ ಮುನಿಗಳ ಪರಿಪಾಟಿಯಲ್ಲಿರುವವರು **ಗಣ**ರಿದ್ದಾರೆ. ತಮಗೆ ದೀಕ್ಷೆ ಕೊಡುವಂಥ ಆಚಾರ್ಯರ ಶಿಷ್ಯರು ಅವರು **ಕುಲ**ರಿದ್ದಾರೆ. ಋಷಿ, ಯತಿ, ಮುನಿ, ಅನಗಾರ ಈ ನಾಲ್ಕುಪ್ರಕಾರದ ಮುನಿಗಳ ಸಮೂಹವಿದೆ ಅದು **ಸಂಘ**ವಿದೆ. ಅಧಿಕ ಸಮಯದಿಂದ ದೀಕ್ಷಿತರಿದ್ದವರು ಅವರು **ಸಾಧು** ಇದ್ದಾರೆ.

ಯಾರು ಪಾಂಡಿತ್ಯದಿಂದ, ವಕ್ತಾತನದಿಂದ, ಉಚ್ಚಕುಲದಿಂದ (ಪ್ರಸಿದ್ಧ ಗುರುಗಳ ಶಿಷ್ಯರಿರುವುದರಿಂದ) ಜನರಲ್ಲಿ ಮಾನ್ಯರಾಗಿ ಧರ್ಮದ, ಗುರುಕುಲದ ಗೌರವತೆಯನ್ನು ಉತ್ಪನ್ನ ಮಾಡುವಂಥವರು ಹೆಚ್ಚಿಸುವಂಥವರಿದ್ದಾರೆ ಅವರು **ಮನೋಜ್ಞ**ರಿದ್ದಾರೆ, ಅಥವಾ ಅಸಂಯತ ಸಮ್ಯಗ್ದೃಷ್ಟಿಯು ಕೂಡ ಸಂಸಾರದ ಅಭಾವರೂಪತೆಯ ಕಾರಣ ಮನೋಜ್ಞನಿದ್ದಾನೆ.

ಈ ಹತ್ತು ಪ್ರಕಾರದ ಮುನಿಗಳಿಗೆ ರೋಗ ಬಂದರೆ, ಪರೀಷಹಗಳಿಂದ ದುಃಖಿಯಾದರೆ ಮತ್ತು ಶ್ರದ್ಧಾದಿಗಳು ಕೆಟ್ಟು ಹೋಗುವುದರಿಂದ ಮಿಥ್ಯಾತ್ವ ಮೊದಲಾದುವಕ್ಕೆಪ್ರಾಪ್ತವಾದರೆ ಪ್ರಾಸುಕ ಔಷಧ, ಆಹಾರ-ನೀರು, ಯೋಗ್ಯಸ್ಥಾನ, ಆಸನ, ದೊಡ್ಡಮಣೆ, ಹುಲ್ಲಿನ ಹಾಸಿಗೆಮಾಡಿ, ಪುಸ್ತಕ-ಪಿಂಛಿ ಮೊದಲಾದ ಧರ್ಮೋಪಕರಣದಿಂದ ಪ್ರತಿಕಾರ-ಉಪಕಾರ ಮಾಡುವುದು, ಮತ್ತು ಪುನಃ ಸಮ್ಯಕ್ತ್ವದಲ್ಲಿ ಸ್ಥಾಪನೆ ಮಾಡುವುದು ಇತ್ಯಾದಿ ಉಪಕಾರ ಮಾಡುವುದು ಅದು ವೈಯ್ಯಾವೃತ್ಯವಿದೆ. ಬಾಹ್ಯದಲ್ಲಿ ಆಹಾರ- ನೀರು-ಔಷಧ ಕೊಡುವ ಸಂಭವವಿಲ್ಲದಿದ್ದರೆ ತಮ್ಮ ಶರೀರದಿಂದಲೇ ಅವರ

ಕಫ, ಮೂಗಿನಲ್ಲಿನ ಹೊಲಸು ಮೂತ್ರಾದಿಗಳನ್ನು ದೂರ ಮಾಡಿ ಬಿಡುವುದರಿಂದ ಹಾಗೂ ಅವರಿಗೆ ಅನುಕೂಲ ಆಚರಣ ಮಾಡುವುದರಿಂದ ವೈಯ್ಯಾವೃತ್ಯವಾಗುತ್ತದೆ.

ಈ ವೈಯ್ಯಾವೃತ್ಯದಲ್ಲಿ ಸಂಯಮದ ಸ್ಥಾಪನೆ, ಗ್ಲಾನಿಯ ಅಭಾವ, ಪ್ರವಚನದಲ್ಲಿ ವಾತ್ಸಲ್ಯತೆ, ಸನಾಥತೆ ಇತ್ಯಾದಿ ಅನೇಕ ಗುಣಗಳು ಪ್ರಕಟವಾಗುತ್ತವೆ. ವೈಯ್ಯಾವೃತ್ಯವೇ ಪರಮಧರ್ಮವಿದೆ. ವೈಯ್ಯಾವೃತ್ಯವು ಇಲ್ಲದಿದ್ದರೆ ಮೋಕ್ಷಮಾರ್ಗವು ಕೆಟ್ಟು ಹೋಗುವುದು. ಆಚಾರ್ಯ ಮೊದಲಾದವರು ತಮ್ಮ ಶಿಷ್ಯ, ಮುನಿ, ರೋಗಿ ಇತ್ಯಾದಿಯವರ ವೈಯ್ಯಾವೃತ್ಯ ಮಾಡುವುದರಿಂದ ಹೆಚ್ಚು ವಿಶುದ್ಧತೆ ಮತ್ತು ಉಚ್ಚತೆಗೆ ಪ್ರಾಪ್ತರಾಗಿ ಹೋಗುತ್ತಾರೆ. ಇದೇ ಪ್ರಕಾರ ಶ್ರಾವಕರೂ ಮುನಿಗಳ ವೈಯ್ಯಾವೃತ್ಯ ಮಾಡಬೇಕು ಮತ್ತು ಶ್ರಾವಿಕೆಯರು ಆರ್ಯಿಕೆಯ ವೈಯ್ಯಾವೃತ್ಯ ಮಾಡಬೇಕು.

ಔಷಧ ದಾನದಿಂದಲೇ ವೈಯ್ಯಾವೃತ್ಯ ಮಾಡಬೇಕು. ಭಕ್ತಿಪೂರ್ವಕ ಯುಕ್ತಿಯಿಂದ ದೇಹದ ಆಧಾರರೂಪ ಆಹಾರ ದಾನವಿತ್ತು ವೈಯ್ಯಾವೃತ್ಯ ಮಾಡಬೇಕು. ಕರ್ಮದ ಉದಯದಿಂದ ಯಾವುದಾದರೂ ದೋಷವು ತಗಲಿದ್ದರೆ ಅದನ್ನು ಮರೆಮಾಡುವುದು, ಶ್ರದ್ಧೆಯಿಂದ ಚಂಚಲವಾಗಿದ್ದರೆ ಅವರಿಗೆ ಸಮ್ಯಗ್ದರ್ಶನ ಗ್ರಹಣ ಮಾಡಿಸುವುದು, ಜಿನೇಂದ್ರರ ಮಾರ್ಗದಿಂದ ಅಗಲಿ ಹೋಗಿದ್ದರೆ ಅವರನ್ನು ಮಾರ್ಗದಲ್ಲಿ ಸ್ಥಾಪನೆ ಮಾಡುವುದು. ಇತ್ಯಾದಿ ಉಪಕಾರಗಳ ಮೂಲಕವೂ ವೈಯ್ಯಾವೃತ್ಯವಾಗುತ್ತದೆ.

ಆಚಾರ್ಯ ಮೊದಲಾದ ಗುರುಗಳು ಶಿಷ್ಯರಿಗೆ ಶ್ರುತದ ಅಂಗ ಓದಿಸುತ್ತಾರೆ, ಮತ್ತು ವ್ರತ, ಸಂಯಮ ಮೊದಲಾದವುಗಳ ಶುದ್ಧಿಯ ಉಪದೇಶ ಕೊಡುತ್ತಾರೆ. ಅದು ಶಿಷ್ಯನ ವೈಯ್ಯಾವೃತ್ಯವಿದೆ. ಶಿಷ್ಯರು ಕೂಡ ಗುರುಗಳ ಆಜ್ಞೆಗೆ ಅನುಸರಿಸಿ ಪ್ರವರ್ತಿಸುತ್ತ ಗುರುಗಳ ಚರಣಗಳ ಸೇವೆ ಮಾಡುವುದು ಅದು ಆಚಾರ್ಯರ ವೈಯಾವೃತ್ಯವಿದೆ.

**ತಮ್ಮ ಚೈತನ್ಯ ಸ್ವರೂಪನಾದ ಆತ್ಮನನ್ನು ರಾಗ-ದ್ವೇಷ ಮೊದಲಾದ ದೋಷಗಳಿಂದ ಲಿಪ್ತವಾಗಗೊಡದಿರುವುದು ಅದು ತಮ್ಮ ಆತ್ಮನ ವೈಯ್ಯಾವೃತ್ಯವಿದೆ.** ತಮ್ಮ ಆತ್ಮನನ್ನು ಭಗವಂತರ ಪರಮಾಗಮದಲ್ಲಿ ತೊಡಗಿಸುವುದು. ದಶಲಕ್ಷಣರೂಪ ಧರ್ಮದಲ್ಲಿ ಲೀನವಾಗಿ ಹೋಗುವುದು ಅದು ತಮ್ಮ ಆತ್ಮನ ವೈಯ್ಯಾವೃತ್ಯವಿದೆ. ಕಾಮ, ಕ್ರೋಧ, ಲೋಭ ಮೊದಲಾದವುಗಳ ಹಾಗೂ ಇಂದ್ರಿಯ ವಿಷಯಗಳ ಆಧೀನವಾಗದಿರುವುದು ಅದು ತಮ್ಮ ಆತ್ಮನ ವೈಯ್ಯಾವೃತ್ಯವಿದೆ.

ಪ್ರಾತಃಕಾಲ ಹಾಗೂ ಸಾಯಂಕಾಲದಲ್ಲಿ ರೋಗಿ ಮುನಿಗಳ ಹಾಗೂ ಗುರುಗಳ ಶಯನ, ಆಸನ, ಕಮಂಡಲ, ಪಿಂಛಿ, ಪುಸ್ತಕಗಳನ್ನು ಚನ್ನಾಗಿ ಕಣ್ಣುಗಳಿಂದ ನೋಡಿ, ಮಯೂರ ಪಿಂಛದಿಂದ ಶೋಧಿಸುವುದು ; ಅಶಕ್ತ ರೋಗೀ ಮುನಿಗಳಿಗೆ ಆಹಾರ, ಔಷಧ ಮೊದಲಾದವುಗಳಿಂದ ಸಂಯಮಯೋಗ್ಯ ಉಪಚಾರ ಮಾಡುವುದು; ಶುದ್ಧ ಗ್ರಂಥಗಳನ್ನು ಓದಿ, ಧರ್ಮದ ಉಪದೇಶವಿತ್ತು ಪರಿಣಾಮವನ್ನು ಧರ್ಮದಲ್ಲಿ ಲೀನ ಮಾಡುವುದು ; ಮತ್ತು ಏಳಿಸುವುದು, ಕೂಡ್ರಿಸುವುದು, ಮಲ-ಮೂತ್ರ ಮಾಡಿಸುವುದು, ಮಗ್ಗಲು ಬದಲಿಸುವುದು ಇತ್ಯಾದಿಗಳೆಲ್ಲವು ವೈಯಾವೃತ್ಯವಿವೆಯೆಂದು ತಿಳಿಯುವುದು.

ಯಾರೋ ಓರ್ವ ಸಾಧು ದಾರಿಯಲ್ಲಿ ದುಃಖಿಯಾಗಿದ್ದರೆ; ಭಿಲ್ಲ, ಮ್ಲೇಚ್ಛ, ದುಷ್ಟದೊರೆ, ದುಷ್ಟ ತಿರ್ಯಂಚಗಳಿಂದ ದುಃಖಿಯಾಗಿದ್ದರೆ, ಉಪದ್ರವರೂಪವಾಗಿದ್ದರೆ; ದುರ್ಭಿಕ್ಷ್ಯ, ವ್ಯಾಧೀ ಇತ್ಯಾದಿ ಉಪದ್ರವಗಳಿಂದ ಪೀಡೆಯಾಗುವುದರಿಂದ ಪರಿಣಾಮವು ಅಧೀರವಾಗಿದ್ದರೆ ಅವರಿಗೆ ಸ್ಥಾನವಿತ್ತು ಕುಶಲತೆಯನ್ನು ವಿಚಾರಿಸಿ ಅದರಿಂದ ಸಿದ್ಧಾಂತದ ಶಿಕ್ಷಣವಿತ್ತು ಸ್ಥಿತಿಕರಣ ಮಾಡುವುದು ಅದು ವೈಯ್ಯಾವೃತ್ಯವಿದೆ.

ಸ್ವಯಂ ಸಮರ್ಥವಿದ್ದು ಕೂಡ ತಮ್ಮ ಬಲ-ವೀರ್ಯವನ್ನು ಬಚ್ಚಿಟ್ಟು ವೈಯ್ಯಾವೃತ್ಯ ಮಾಡುವುದಿಲ್ಲ ಅವನು ಧರ್ಮರಹಿತನಿದ್ದಾನೆ. ಅವನು ತೀರ್ಥಂಕರರ ಆಜ್ಞೆಯನ್ನು ಭಂಗ ಮಾಡಿದನು, ಶ್ರುತದಿಂದ ಉಪದೇಶಿಸಿದ ಧರ್ಮದ ವಿರಾಧನೆ ಮಾಡಿದನು. ತನ್ನ ಆಚಾರ ಕೆಡಿಸಿಕೊಂಡನು, ಪ್ರಭಾವನೆ ನಷ್ಟ ಮಾಡಿದನು, ಧರ್ಮಾತ್ಮನ ಆಪತ್ತಿಯಲ್ಲೂ ಉಪಕಾರ ಮಾಡಲಿಲ್ಲ, ಆಗ ಧರ್ಮದಿಂದ ವಿಮುಖನಾದನು, ಶ್ರುತದ ಆಜ್ಞೆಯನ್ನು ಲೋಪ ಮಾಡುವುದರಿಂದ ಪರಮಾಗಮದಿಂದ ಪರಾಙ್ಮುಖನಾದನು.

ವೈಯ್ಯಾವೃತ್ಯದಿಂದ ಎಂಥ ಪರಿಣಾಮವಾಗುತ್ತದೆಯೆಂದರೆ - **ಅಯ್ಯಾ ! ಮೋಹದ ಅಗ್ನಿಯಿಂದ ಸುಡುತ್ತಿರುವ ಈ ಜಗತ್ತಿನಲ್ಲಿ ಓರ್ವದಿಗಂಬರ ಮುನಿಗಳೇ ಜ್ಞಾನರೂಪದ ಜಲದಿಂದ ಮೋಹರೂಪದ ಅಗ್ನಿಯನ್ನು ಆರಿಸಿ ಆತ್ಮಕಲ್ಯಾಣ ಮಾಡಿಕೊಳ್ಳುತ್ತಾರೆ.** ಅವರು ಧನ್ಯರಿದ್ದಾರೆ ಅವರು ಕಾಮವನ್ನು ಸಾಯಿಸಿ, ರಾಗ-ದ್ವೇಷಗಳ ತ್ಯಾಗ ಮಾಡಿ, ಇಂದ್ರಿಯಗಳನ್ನು ಜಯಿಸಿ ಆತ್ಮನ ಹಿತದಲ್ಲಿ ಉದ್ಯಮಶೀಲರಾಗಿದ್ದಾರೆ. ಅವರು ಲೋಕೋತ್ತರ ಗುಣಗಳ ಧಾರಕರಿದ್ದಾರೆ. ನನಗೆ ಇಂಥ ಗುಣವಂತರ ಚರಣಗಳ ಆಶ್ರಯವು ಪ್ರಾಪ್ತವಾಗಲಿ. ಈ ಪ್ರಕಾರದ ಗುಣಗಳಲ್ಲಿ ಪರಿಣಾಮವು ವೈಯ್ಯಾವೃತ್ಯದಿಂದಲೇ ಆಗುತ್ತದೆ. ಹೇಗೆ ಹೇಗೆ ಗುಣಗಳಲ್ಲಿ ಪರಿಣಾಮವು ಮಗ್ನವಾಗುತ್ತದೆ ಹಾಗೆ-ಹಾಗೆ ಶ್ರದ್ಧೆಯು ಹೆಚ್ಚುತ್ತದೆ. ಯಾವಾಗ ಶ್ರದ್ಧೆಯು ಹೆಚ್ಚುತ್ತದೆ ಆಗ ಧರ್ಮದಲ್ಲಿ ಪ್ರೀತಿಯು ಹೆಚ್ಚುತ್ತದೆ. ಆಗ ಧರ್ಮದ ನಾಯಕರಾದ ಅರಹಂತ ಮೊದಲಾದ ಪಂಚಪರಮೇಷ್ಠಿಗಳ ಗುಣಗಳಲ್ಲಿ ಅನುರಾಗ ರೂಪದ ಭಕ್ತಿಯು ಹೆಚ್ಚುತ್ತದೆ. ಆ ಭಕ್ತಿಯು ಮಾಯಾಚಾರ ರಹಿತ, ಮಿಥ್ಯಾಜ್ಞಾನರಹಿತ, ಭೋಗಗಳ ವಾಂಛಾರಹಿತ, ಮೇರುವಿನ ಸಮಾನ ನಿಷ್ಕಂಪ, ಅಚಲವಿರುವ ಜಿನಭಕ್ತಿಯು ಯಾರಿಗೆ ಆಗುತ್ತದೆ ಅವರಿಗೆ ಸಂಸಾರ ಪರಿಭ್ರಮಣದ ಭಯವಿರುವುದಿಲ್ಲ, ಇಂಥ ಭಕ್ತಿಯು ಧರ್ಮಾತ್ಮನ ವೈಯ್ಯಾವೃತ್ಯದಿಂದ ಆಗುತ್ತದೆ.

ಐದು ಮಹಾವ್ರತ ಸಹಿತ, ಕಷಾಯಗಳಿಂದ ರಹಿತ, ರಾಗ-ದ್ವೇಷಗಳನ್ನು ಜಯಿಸುವಂಥ, ಶ್ರುತಜ್ಞಾನರೂಪ ರತ್ನದ ನಿಧಾನರಾದಂಥ ಪಾತ್ರದ ಲಾಭವು ವೈಯ್ಯಾವೃತ್ಯ ಮಾಡುವಂಥವರಿಗೆ ಆಗುತ್ತದೆ. ಯಾರು ರತ್ನತ್ರಯಧಾರಿಯ ವೈಯ್ಯಾವೃತ್ಯ ಮಾಡಿದ್ದಾರೆ ಅವರು ರತ್ನತ್ರಯದಿಂದ ತಮ್ಮ ಸಂಬಂಧ ಕಟ್ಟಿಕೊಂಡು ತಮ್ಮನ್ನು ಹಾಗೂ ಇತರರನ್ನು ಮೋಕ್ಷ ಮಾರ್ಗದಲ್ಲಿ ಸ್ಥಾಪಿಸಿಕೊಂಡಿದ್ದಾರೆ, ಯಾರು ಆಚಾರ್ಯರ ವೈಯ್ಯಾವೃತ್ಯ ಮಾಡಿದ್ದಾರೆ ಅವರು ಸಂಪೂರ್ಣ ಸಂಘದ-ಸಮಸ್ತ ಧರ್ಮದ ವೈಯ್ಯಾವೃತ್ಯ ಮಾಡಿದ್ದಾರೆ, ಭಗವಂತರ ಆಜ್ಞೆ ಪಾಲಿಸಿದ್ದಾರೆ, ತಮ್ಮ ಹಾಗೂ ಇತರರ ಸಂಯಮದ ರಕ್ಷಣೆ ಮಾಡಿದ್ದಾರೆ, ಶುಕ್ಲಧ್ಯಾನದ ವೃದ್ಧಿ ಹಾಗೂ ಇಂದ್ರಿಯಗಳ ನಿಗ್ರಹ ಮಾಡಿದ್ದಾರೆ, ರತ್ನತ್ರಯದ ರಕ್ಷಣೆ ಮಾಡಿದ್ದಾರೆ, ಅತ್ಯಧಿಕ ದಾನ ಮಾಡಿದ್ದಾರೆ, ನಿರ್ವಿಚಿಕಿತ್ಸೆಯ ಗುಣವನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ, ಜಿನೇಂದ್ರರ ಧರ್ಮದ ಪ್ರಭಾವನೆ ಮಾಡಿದ್ದಾರೆ.

ಧನ ಖರ್ಚು ಮಾಡುವುದು ಸುಲಭವಿದೆ, ಆದರೆ ರೋಗಿಯ ಸೇವೆ ಮಾಡುವುದು ದುರ್ಲಭವಿದೆ. ಇತರರ ದುರ್ಗುಣಗಳ ಮರೆ ಮಾಡುವುದು, ಗುಣಗಳ ಪ್ರಕಟತೆ ಮಾಡುವುದು ಇತ್ಯಾದಿ ಗುಣಗಳ ಪ್ರಭಾವದಿಂದ ತೀರ್ಥಂಕರ ನಾಮ ಪ್ರಕೃತಿಯ ಬಂಧವಾಗುತ್ತದೆ, ಈ ವೈಯ್ಯಾವೃತ್ಯವು ಜಗತ್ತಿನಲ್ಲಿ ಉತ್ತಮವಿದೆಯೆಂದು ಜಿನೇಂದ್ರರ ಉಪದೇಶವಿದೆ. ಯಾವ ಶ್ರಾವಕ ಅಥವಾ ಸಾಧುವು ವೈಯ್ಯಾವೃತ್ಯ ಮಾಡುತ್ತಾನೆ ಅವನು ಉತ್ಕೃಷ್ಟ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ. ಯಾರು ತಮ್ಮ ಸಾಮರ್ಥ್ಯದ ಅನುಸಾರ ಷಟ್ಕಾಯ ಜೀವಗಳ ರಕ್ಷಣೆ ಮಾಡುವಲ್ಲಿ ಸಾವಧಾನರಿದ್ದಾರೆ, ಅವರಿಗೆ ಸಮಸ್ತ ಪ್ರಾಣಿಗಳ ವೈಯ್ಯಾವೃತ್ಯವಾಗುತ್ತದೆ. ಈ ಪ್ರಕಾರ ವೈಯ್ಯಾವೃತ್ಯ ನಾಮದ ಒಂಭತ್ತನೇ ಭಾವನೆಯ ವರ್ಣನೆ ಮಾಡಲಾಯಿತು.

## ಅರ್ಹಂತ ಭಕ್ತಿ ಭಾವನೆ

ಈಗ ಅರ್ಹಂತ ಭಕ್ತಿ ನಾಮದ ಹತ್ತನೇ ಭಾವನೆಯ ವರ್ಣನೆ ಮಾಡುತ್ತಾರೆ. ಮನ-ವಚನ-ಕಾಯದಿಂದ 'ಜಿನ'ವೆಂಬ ಎರಡು ಅಕ್ಷರಗಳ ಸ್ಮರಣೆಯನ್ನು ಸದಾಕಾಲ ಮಾಡುವುದು ಅದು ಅರ್ಹಂತ ಭಕ್ತಿಯಿದೆ.

**ಅರಹಂತರ ಗುಣಗಳಲ್ಲಿ ಅನುರಾಗವು ಅದು ಅರಹಂತ ಭಕ್ತಿಯಿದೆ.** ಯಾರು ಪೂರ್ವಜನ್ಮದಲ್ಲಿ ಸೋಳಹ ಕಾರಣ ಭಾವನೆ ಭಾವಿಸಿದ್ದಾರೆ. ಅವರು ತೀರ್ಥಂಕರರಾಗಿ ಅರ್ಹಂತರಾಗುತ್ತಾರೆ. ಅವರ ಸೋಳಹ ಕಾರಣ ಭಾವನೆಯಿಂದ ಉತ್ಪನ್ನವಾದ ಅದ್ಭುತ ಪುಣ್ಯದ ಪ್ರಭಾವದಿಂದ ಗರ್ಭದಲ್ಲಿ ಬರುವ ಆರು ತಿಂಗಳು ಮೊದಲಿನಿಂದ ಇಂದ್ರನ ಆಜ್ಞೆಯಂತೆ ಕುಬೇರನು ಹನ್ನೆರಡು ಯೋಜನ ಉದ್ದ, ಒಂಭತ್ತು ಯೋಜನ ಅಗಲವಿರುವ ರತ್ನತ್ರಯ ನಗರದ ರಚನೆ ಮಾಡುತ್ತಾನೆ. ಅದರ ಮಧ್ಯದಲ್ಲಿ ದೊರೆ ವಾಸಿಸುವ ಪ್ರಾಸಾದದ ವರ್ಣನೆ ಹಾಗೂ ನಗರದ ರಚನೆ, ಮಹಾದ್ವಾರ, ಕೋಟೆ, ಕಂದಕ, ಕೊತ್ತಳ ಇತ್ಯಾದಿ ರತ್ನಮಯವಿರುವ ಯಾವ ಕುಬೇರನ ರಚನೆಯಿದೆ ಅದರ ಮಹಿಮೆಯನ್ನಂತೂ ಯಾರೂ ಸಹಸ್ರಾರು ನಾಲಗೆಗಳಿಂದ ಕೂಡ ವರ್ಣನೆ ಮಾಡುವಲ್ಲಿ ಸಮರ್ಥರಿಲ್ಲ.

ಅಲ್ಲಿ ತೀರ್ಥಂಕರ ಮಾತೆಯ ಗರ್ಭದ ಶೋಧನೆಯನ್ನು ರುಚಕ ದ್ವೀಪಗಳಲ್ಲಿ ವಾಸಿಸುವಂಥ ಐವತ್ತಾರು ಕುಮಾರೀ ದೇವಿಯರು ಮಾಡುತ್ತಾರೆ, ಮತ್ತು ಆ ದೇವಿಯರು ಮಾತೆಯ ಸೇವೆಯನ್ನು ಅನೇಕ ಪ್ರಕಾರದಿಂದ ಮಾಡುವಲ್ಲಿ ಸಾವಧಾನರಿರುತ್ತಾರೆ. ಗರ್ಭದಲ್ಲಿ ಬರುವ ಆರು ತಿಂಗಳು ಮೊದಲಿನಿಂದ ಕುಬೇರನು ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ, ಒಂದೊಂದು ಕಾಲದಲ್ಲಿ ಆಕಾಶದಿಂದ ಮೂರುವರೆ ಕೋಟಿ ರತ್ನಗಳವೃಷ್ಟಿ ಮಾಡುತ್ತಾನೆ. ಅದರ ನಂತರ ಗರ್ಭದಲ್ಲಿ ಬರುತ್ತಿರುವಂತೆಯೇ ಇಂದ್ರ ಮೊದಲಾಗಿ ಚತುರ್ನಿಕಾಯ ದೇವಗಳ ಆಸನವು ಕಂಪಾಯಮಾನವಾಗುವುದರಿಂದ ನಾಲ್ಕು ಪ್ರಕಾರದ ದೇವಗಳು ಬಂದು ನಗರದ ಪ್ರದಕ್ಷಿಣೆ ಹಾಕಿ ಮಾತಾ-ಪಿತರ ಪೂಜೆ ಸತ್ಕಾರ ಮಾಡಿ ತಮ್ಮ-ತಮ್ಮ ಸ್ಥಾನಕ್ಕೆ ಹೊರಟು ಹೋಗುತ್ತಾರೆ.

**ತೀರ್ಥಂಕರ ಭಗವಂತರು ಸ್ಫಟಿಕಮಣಿಯ ಪಾತ್ರೆಯಂತೆ ಮಲಾದಿಗಳಿಂದ ರಹಿತವಿರುವ ಮಾತೆಯ ಗರ್ಭದಲ್ಲಿ ವಿರಾಜಮಾನರಿರುತ್ತಾರೆ.** ಕಮಲವಾಸಿನಿ ಆರು ದೇವಿಯರು ಹಾಗೂ ರುಚಿಕ ದ್ವೀಪದಲ್ಲಿ ವಾಸಿಸುವಂಥ ಐವತ್ತಾರು ಕುಮಾರಿಕೆ ದೇವಿಯರು ಮತ್ತು ಇನ್ನೂ ಅನೇಕ ದೇವಿಯರು ಮಾತೆಯ ಸೇವೆ ಮಾಡುತ್ತಾರೆ. ಒಂಭತ್ತು ತಿಂಗಳು ಪೂರ್ಣವಾದ ಮೇಲೆ ಉಚಿತ ಸಮಯದಲ್ಲಿ ಜನ್ಮವಾಗುತ್ತಿದ್ದಂತೆ ಚತುರ್ನಿಕಾಯ ದೇವಗಳ ಆಸನವು ಕಂಪಾಯಮಾನವಾಗುವುದು ಮತ್ತು **ಕರಸ್ಪರ್ಶವಿಲ್ಲದೆ ವಾದ್ಯಗಳು ಬಾರಿಸುವುದರಿಂದ ಜಿನೇಂದ್ರರ ಜನ್ಮವಾಯಿತೆಂದು ತಿಳಿದು, ತುಂಬ ಹರ್ಷದಿಂದ ಸೌಧರ್ಮೇಂದ್ರನು** ಒಂದು ಲಕ್ಷ ಯೋಜನ ಪ್ರಮಾಣದ ಐರಾವತ ಆನೆಯ ಮೇಲೆ ಹತ್ತಿ ತಮ್ಮ ಸೌಧರ್ಮ ಸ್ವರ್ಗದ ಇಪ್ಪತ್ತೊಂದನೆಯ ಪಟಲದ ಹದಿನೆಂಟನೆಯ ಶ್ರೇಣಿಬದ್ಧ ವಿಮಾನದಿಂದ ತನ್ನ ಅಸಂಖ್ಯಾತ ದೇವಗಳ ಪರಿವಾರ ಸಹಿತ ಬರುತ್ತಾನೆ. ಜತೆಯಲ್ಲಿ ಹನ್ನೆರಡೂವರೆ ಕೋಟಿ ಜಾತಿಯ ವಾದ್ಯಗಳ ಮಧುರ ಧ್ವನಿ, ಅಸಂಖ್ಯಾತ ದೇವಗಳ ಮೂಲಕ ಮಾಡಲಾಗುವಂಥ ಜಯ-ಜಯಕಾರ ಶಬ್ದ, ಅನೇಕ ಧ್ವಜ-ಪತಾಕೆಗಳು, ಉತ್ಸವ ಸಾಮಗ್ರಿಗಳು ಮತ್ತು ಕೋಟ್ಯಂತರ ಅಪ್ಸರೆಯರು ನರ್ತಿಸುತ್ತಿರುವ ಉತ್ಸವ, ಕೋಟ್ಯಂತರ ದೇವಿಯರ ಗಾಯನೋತ್ಸವದೊಡನೆ ಬರುತ್ತಾನೆ.

ಇಂದ್ರನು ವಾಸಿಸುವ ಪಟಲವು ಇಲ್ಲಿಂದ ಅಸಂಖ್ಯಾತ ಯೋಜನ ಮೇಲೆ ಹಾಗೂ ಅಸಂಖ್ಯಾತ ಯೋಜನವೇ ತಿರ್ಯಂಕ ದಕ್ಷಿಣದಿಶೆಯಲ್ಲಿದೆ. ಅಲ್ಲಿಂದ ಜಂಬೂದ್ವೀಪದವರೆಗೆ ಅಸಂಖ್ಯಾತ ಯೋಜನ ಉತ್ಸವ ಮಾಡುತ್ತ ಬಂದು, ನಗರದ ಪ್ರದಕ್ಷಿಣೆ ಹಾಕಿ, ಇಂದ್ರಾಣಿಯು ಪ್ರಸೂತಿ ಗೃಹದಲ್ಲಿ ಹೋಗಿ ಅಲ್ಲಿ ಮಾತೆಯನ್ನು ಮಾಯೆಯಿಂದ ನಿದ್ರೆಯಲ್ಲಿ ಮಲಗಿಸಿ, ವಿಯೋಗದ ದುಃಖದ ಭಯದಿಂದ ತನ್ನ ದೇವತ್ವ ಶಕ್ತಿಯ ಮೂಲಕ ಬೇರೊಬ್ಬ ಬಾಲಕನನ್ನು ಮಾಡಿ ಅಲ್ಲಿ ಇಟ್ಟು ತೀರ್ಥಂಕರ ಬಾಲಕನನ್ನು ಅತ್ಯಂತ ಭಕ್ತಿಯಿಂದ ತಂದು ಇಂದ್ರನಿಗೆ ಒಪ್ಪಿಸುತ್ತಾಳೆ. ಆ ಸಮಯದಲ್ಲಿ ಬಾಲ ತೀರ್ಥಂಕರನನ್ನು ನೋಡಿ ಇಂದ್ರನಿಗೆ ತೃಪ್ತಿಯಾಗಲಿಲ್ಲ, ಆಗ ಅವನು ಒಂದು ಸಾವಿರ ಕಣ್ಣುಗಳನ್ನು ಮಾಡಿಕೊಂಡು ನೋಡುತ್ತಾನೆ. ಅಲ್ಲಿ ಮತ್ತೆ ಈಶಾನ ಮೊದಲಾದ ಸ್ವರ್ಗಗಳ ಇಂದ್ರ, ಭವನವಾಸೀ, ವ್ಯಂತರ, ಜ್ಯೋತಿಷೀದೇವಗಳ ಇಂದ್ರ ಮೊದಲಾದ ಅಸಂಖ್ಯಾತ ದೇವಗಳು ತಮ್ಮ-ತಮ್ಮ ಸೇನೆ, ವಾಹನ, ಪರಿವಾರ ಸಹಿತ ಬರುತ್ತಾರೆ.

ಸೌಧರ್ಮೇಂದ್ರನು ಐರಾವತ ಆನೆಯಮೇಲೆ ಕುಳಿತುಕೊಂಡು ಬಾಲ ತೀರ್ಥಂಕರನನ್ನು ತೊಡೆಯ ಮೇಲೆ ತೆಗೆದುಕೊಂಡು ಸುಮೇರುಗಿರಿಯ ಕಡೆಗೆ ನಡೆಯುತ್ತಾನೆ. ಇಲ್ಲಿ ಈಶಾನೇಂದ್ರನು ಕೊಡೆ ಹಿಡಿದಿರುತ್ತಾನೆ, ಸನತಕುಮಾರ-ಮಹೇಂದ್ರಕುಮಾರರು ಚಾಮರ ಬೀಸುತ್ತಾರೆ. ಅನ್ಯ ಅಸಂಖ್ಯಾತ ದೇವಗಳು ತಮ್ಮ-ತಮ್ಮ ನಿಯೋಗದ ಅನುಸಾರ ಸಾವಧಾನರಿದ್ದು ಮಹೋತ್ಸವ ಪೂರ್ವಕ ಮೇರುಗಿರಿಯ ಪಾಂಡುಕವನದಲ್ಲಿ ಬಂದು ತಲುಪುತ್ತಾರೆ. ಅಲ್ಲಿ ಪಾಂಡುಕ ಶಿಲೆಯ ಮೇಲೆ ಅಕೃತ್ರಿಮ ಸಿಂಹಾಸನವಿದ್ದು ಅದರ ಮೇಲೆ ಬಾಲತೀರ್ಥಂಕರನನ್ನು ವಿರಾಜಮಾನ ಮಾಡುತ್ತಾರೆ. ಅನಂತರ ಪಾಂಡುಕ ವನದಿಂದ ಮೊದಲುಗೊಂಡು ಕ್ಷೀರ ಸಮುದ್ರದವರೆಗೆ ಎರಡೂ ಮಗ್ಗುಲು ದೇವಗಳು ಪಂಕ್ತೀಬದ್ಧರಾಗಿ ನಿಂತುಕೊಳ್ಳುತ್ತಾರೆ.

ಕ್ಷೀರ ಸಮುದ್ರವು ಮೇರು ಪರ್ವತದ ಭೂಮಿಯಿಂದ ಐದು ಕೋಟಿ, ಹತ್ತು ಲಕ್ಷ, ನಲವತ್ತೊಂಭತ್ತೂವರೆ ಸಾವಿರ ಯೋಜನ ದೂರದಲ್ಲಿದೆ. ಆ ಸಮಯದಲ್ಲಿ ಮೇರುವಿನ ಚೂಳಿಕೆಯ ಎರಡೂಕಡೆಗೆ ಮಕುಟ, ಕುಂಡಲ, ಹಾರ, ಕಂಕಣ ಮೊದಲಾದ ಅದ್ಭುತ ರತ್ನಗಳ ಒಡವೆ ಧರಿಸಿದ ದೇವಗಳಪಂಕ್ತಿಯು ಕ್ಷೀರ ಸಮುದ್ರದವರೆಗೆ ಸಾಲುಗಟ್ಟಿ ಕೈಯಿಂದ

ಕೈಗೆ ಕಲಶಗಳನ್ನು ಕೊಡುತ್ತಿರುತ್ತಾರೆ. ಅಲ್ಲಿ ಎರಡೂ ಕಡೆಗೆ ಇಂದ್ರರು ನಿಂತುಕೊಳ್ಳುವ ಸಲುವಾಗಿ ರಚಿಸಿದ ಎರಡು ಚಿಕ್ಕ ಸಿಂಹಾಸನಗಳ ಮೇಲೆ ಸೌಧರ್ಮ ಮತ್ತು ಈಶಾನ ಇಂದ್ರರು ನಿಂತುಕೊಂಡು ಕೈಗಳಲ್ಲಿ ಕಲಶ ತೆಗೆದುಕೊಂಡು ಒಂದು ಸಾವಿರದೆಂಟು ಕಲಶಗಳಿಂದ ಬಾಲ ತೀರ್ಥಂಕರನ ಅಭಿಷೇಕ ಮಾಡುತ್ತಾರೆ.

ಆ ಕಲಶಗಳ ಮುಖವು ಒಂದು ಯೋಜನ, ಮಧ್ಯದ ಹೊಟ್ಟೆಯ ಸ್ಥಾನವು ನಾಲ್ಕು ಯೋಜನ ಅಗಲ, ಎಂಟು ಯೋಜನ ಎತ್ತರವಿರುತ್ತದೆ. ಆ ಕಲಶಗಳಿಂದ ಹೊರಟ ಧಾರೆಯು ಬಾಲ ತೀರ್ಥಂಕರನ ವಜ್ರವೃಷಭನಾರಾಚ ಸಂಹನನವುಳ್ಳ ಶರೀರದ ಮೇಲೆ ಪುಷ್ಪಗಳ ವೃಷ್ಟಿಯ ಸಮಾನ ಬಾಧಾರಹಿತವಾಗಿರುತ್ತದೆ. ಅದರ ನಂತರ ಇಂದ್ರಾಣಿಯು ಕೋಮಲ ವಸ್ತ್ರದಿಂದ ಮೃದುವಾಗಿ ಒರೆಸಿ ತಮ್ಮ ಜನ್ಮವನ್ನು ಕೃತಾರ್ಥವೆಂದು ಮನ್ನಿಸುತ್ತ ಸ್ವರ್ಗದಿಂದ ತಂದಿರುವ ಸಮಸ್ತ ರತ್ನಮಯ ವಸ್ತ್ರಾಭರಣಗಳನ್ನು ತೊಡಿಸುತ್ತಾಳೆ. ಅಲ್ಲಿ ಅನೇಕ ದೇವಗಳ ಅನೇಕ ಪ್ರಕಾರದ ಉತ್ಸವ ರಚಿಸುತ್ತಾರೆ, ಅದೆಲ್ಲವನ್ನು ಬರೆಯುವಲ್ಲಿ ಯಾರೂ ಸಮರ್ಥರಿಲ್ಲ.

ಮೇರು ಪರ್ವತದಿಂದ ಪುನಃ ಅದೇ ಪ್ರಕಾರ ಉತ್ಸವ ಮಾಡುತ್ತ ಮರಳಿ ಬಂದು ಬಾಲಕ ಭಗವಂತನನ್ನು ತಂದು ಮಾತೆಗೆ ಒಪ್ಪಿಸಿ, ಇಂದ್ರನು ಅಲ್ಲಿ ತಾಂಡವನೃತ್ಯ ಮೊದಲಾದ ಯಾವ ಉತ್ಸವ ಮಾಡುತ್ತಾನೆ. ಆ ಎಲ್ಲ ಉತ್ಸವಗಳ ವರ್ಣನೆಯನ್ನು ಯಾರಾದರೂ ಅಸಂಖ್ಯಾತಕಾಲದವರೆಗೆ ಕೋಟ್ಯಂತರ ನಾಲಗೆಗಳಿಂದಲೂ ಮಾಡುವಲ್ಲಿ ಸಮರ್ಥರಿಲ್ಲ.

ಜಿನೇಂದ್ರರಂತೂ ಜನ್ಮದಿಂದಲೇ ತೀರ್ಥಂಕರ ಪ್ರಕೃತಿಯ ಉದಯದ ಪ್ರಭಾವದಿಂದ ಹತ್ತು ಅತಿಶಯ ಸಹಿತ ಉತ್ಪನ್ನರಾಗುತ್ತಾರೆ. ಸ್ವೇದರಹಿತ ಶರೀರ, ನೀಹಾರ (ಮಲ-ಮೂತ್ರ-ಕಫ ಮೊದಲಾದವುಗಳ)ರಹಿತತೆ, ಶರೀರದಲ್ಲಿ ದುಗ್ಧವರ್ಣದ ಶ್ವೇತ ರುಧಿರ, ಸಮಚತುರಸ್ರ ಸಂಸ್ಥಾನ, ವಜ್ರವೃಷಭನಾರಾಚ ಸಂಹನನ, ಅದ್ಭುತ ಅಪ್ರಮಾಣ ಶರೀರದ ರೂಪು ಸೌಂದರ್ಯ, ಮಹಾಸುಗಂಧಯುಕ್ತ ಶರೀರ, ಅಪ್ರಮಾಣಬಲ, ಒಂದು ಸಾವಿರದೆಂಟು ಲಕ್ಷಣ, ಪ್ರಿಯ ಹಿತ ಮಧುರ ವಚನ-ಇವೆಲ್ಲವೂ ಪೂರ್ವಜನ್ಮದಲ್ಲಿ ಸೋಳಹ ಕಾರಣ ಭಾವನೆಯನ್ನು ಭಾವಿಸಿರುವುದರ ಪ್ರಭಾವವಿದೆ. ಅವರು ಇಂದ್ರನ ಮೂಲಕ ತಮ್ಮ ಬೆರಳಿನಲ್ಲಿ ಇರಿಸಿದ ಅಮೃತ ಪಾನ-ಮಾಡುತ್ತಾರೆ, ತಾಯಿಯ ಮೊಲೆಯಿಂದ ಹೊರಟ ದುಗ್ಧಪಾನ ಮಾಡುವುದಿಲ್ಲ. ಪುನಃ ಅವರು ತಮ್ಮ ಅವಸ್ಥೆಯ ಬರಾಬರಿಯಾಗಿ ನಿರ್ಮಿಸಿದ ದೇವಕುಮಾರರ ಜತೆ ಆಡುತ್ತ ವೃದ್ಧಿಗೆ ಪ್ರಾಪ್ತರಾಗುತ್ತಾರೆ. ಸ್ವರ್ಗಲೋಕದಿಂದ ಬಂದ ಆಭರಣ, ವಸ್ತ್ರ ಭೋಜನ ಮೊದಲಾದ ಮನೋವಾಂಛಿತ ಸಾಮಗ್ರಿಗಳನ್ನು ತೆಗೆದುಕೊಂಡು ದೇವಗಳು ಹಗಲು-ರಾತ್ರಿ ನಿಂತುಕೊಂಡಿರುತ್ತಾರೆ. **ಅವರು ಪೃಥ್ವಿಯ ಭೋಜನ, ಆಭರಣ, ವಸ್ತ್ರ ಮೊದಲಾದುವನ್ನು ಅಂಗೀಕಾರ ಮಾಡುವುದಿಲ್ಲ, ಸ್ವರ್ಗದಿಂದ ಬಂದವುಗಳನ್ನೇ ಭೋಗಿಸುತ್ತಾರೆ.**

ಕುಮಾರಕಾಲವು ವ್ಯತೀತವಾಗಿ ಹೋದ ನಂತರ ಇಂದ್ರಾದಿಗಳಿಂದ ಅದ್ಭುತ ಉತ್ಸಾಹದೊಡನೆ ಮಾಡಲಾದ ಉತ್ಸವದಲ್ಲಿ ತಂದೆಯ ಮೂಲಕ ಭಕ್ತಿಪೂರ್ವಕವಾಗಿ ಒಪ್ಪಿಸಿದ ರಾಜ್ಯವನ್ನು ಗ್ರಹಣ ಮಾಡಿ ಭೋಗಿಸುತ್ತಾರೆ. ಅವಸರವು ಬಂದ ನಂತರ ಸಂಸಾರ, ಶರೀರ, ಭೋಗಗಳಿಂದ ವಿರಕ್ತಿಯು ಉತ್ಪನ್ನವಾಗುತ್ತದೆ. ಆಗ ಅನಿತ್ಯ ಮೊದಲಾದ ಹನ್ನೆರಡು ಭಾವನೆಗಳನ್ನು ಭಾವಿಸತೊಡಗುತ್ತಾರೆ. ಬಾರಹ ಭಾವನೆ ಭಾವಿಸುತ್ತಿದ್ದಂತೆ ಲೋಕಾಂತಿಕ ದೇವಗಳು ಬಂದು ವಂದನೆ, ಸ್ತುತಿ ಸಂಬೋಧನೆ ಹಾಗೂ ವೈರಾಗ್ಯದ ಅನುಮೋದನೆ ಮಾಡುತ್ತಾರೆ.

ಜಿನೇಂದ್ರರಿಗೆ ವೈರಾಗ್ಯಭಾವವಾಗುತ್ತಿದ್ದಂತೆ ಚತುರ್ನಿಕಾಯದ ಇಂದ್ರಾದಿ ದೇವಗಳ ಆಸನಗಳು ಕಂಪಾಯಮಾನವಾಗುತ್ತವೆ. ಅವರು ತಮ್ಮ ಅವಧಿಜ್ಞಾನದಿಂದ ಜಿನೇಂದ್ರರ ತಪದ ಅವಸರ ತಿಳಿದುಕೊಂಡು ಅತ್ಯಂತ ಉತ್ಸಾಹಪೂರ್ವಕ ಬಂದು ಅಭಿಷೇಕ ಮಾಡಿ ದೇವಲೋಕದ ವಸ್ತ್ರಾಭರಣಗಳಿಂದ ಅಲಂಕರಿಸುತ್ತಾರೆ. ಅನಂತರ ರತ್ನಮಯ ಪಲ್ಲಕ್ಕಿಯನ್ನು ನಿರ್ಮಿಸಿ ಅದರಲ್ಲಿ ಜಿನೇಂದ್ರರನ್ನು ಕೂಡ್ರಿಸಿ ಅಪ್ರಮಾಣ ಉತ್ಸವ ಹಾಗೂ ಜಯ ಜಯಕಾರ ಶಬ್ದೋಚ್ಚಾರ ಸಹಿತ ತಪಸ್ಸಿಗೆ ಯೋಗ್ಯವಾದ ವನದಲ್ಲಿ ತೆಗೆದುಕೊಂಡು ಹೋಗಿ ಇಳಿಸುತ್ತಾರೆ. ಅಲ್ಲಿ ಅವರು ಸಮಸ್ತ ವಸ್ತ್ರಾಭರಣಗಳನ್ನು ತ್ಯಜಿಸುತ್ತಾರೆ, ದೇವಗಳು ಅವರನ್ನು ಅಂತರಾಳದಲ್ಲಿ ಎತ್ತಿ ಹಿಡಿದು ತಮ್ಮ ಮಸ್ತಕದ ಮೇಲೆ ಇಟ್ಟುಕೊಳ್ಳುತ್ತಾರೆ. ಪುನಃ ಆ

ಜಿನೇಂದ್ರರು ಸಿದ್ಧರಿಗೆ ನಮಸ್ಕಾರ ಮಾಡಿ ಪಂಚ ಮುಷ್ಟಿಕೇಶಲೋಚ ಮಾಡಿಕೊಳ್ಳುತ್ತಾರೆ. ಅಲ್ಲಿ ಕೇಶಗಳನ್ನು ಉತ್ತಮವೆಂದು ತಿಳಿದು ಇಂದ್ರನು ರತ್ನಮಯ ಡಬ್ಬದಲ್ಲಿಟ್ಟು ಅತ್ಯಂತ ಭಕ್ತಿಯಿಂದ ಕ್ಷೀರ ಸಮುದ್ರದಲ್ಲಿ ಬಿಡುತ್ತಾನೆ.

## ಸಮವಸರಣದ ಮಹಿಮೆ

ಕೆಲಕಾಲದ ನಂತರ ತಪದ ಪ್ರಭಾವದಿಂದ ಹಾಗೂ ಶುಕ್ಲಧ್ಯಾನದ ಪ್ರಭಾವದಿಂದ ಕ್ಷಪಕ ಶ್ರೇಣಿಯಲ್ಲಿ ನಾಲ್ಕು ಘಾತಿ ಕರ್ಮಗಳ ನಾಶ ಮಾಡಿ ಜಿನೇಂದ್ರರು ಕೇವಲಜ್ಞಾನ ಪ್ರಾಪ್ತ ಮಾಡಿಕೊಳ್ಳುತ್ತಾರೆ, ಆಗ ಅರಹಂತ ಪದವು ಪ್ರಕಟವಾಗುತ್ತದೆ.

ಕೇವಲಜ್ಞಾನರೂಪದ ಕಣ್ಣುಗಳಿಂದ ಭೂತ, ಭವಿಷ್ಯ, ವರ್ತಮಾನ ತ್ರಿಕಾಲವರ್ತಿಯಾದ ಸಮಸ್ತ ದ್ರವ್ಯಗಳ ಅನಂತಾನಂತ ಪರ್ಯಾಯ ಸಹಿತ ಅನುಕ್ರಮದಿಂದ (ಕ್ರಮಬದ್ಧ) ಒಂದು ಸಮಯದಲ್ಲಿ ಯುಗಪದ್ ಎಲ್ಲವನ್ನು ತಿಳಿಯುತ್ತಾರೆ-ನೋಡುತ್ತಾರೆ. ಆಗ ಚತುರ್ನಿಕಾಯದ ದೇವಗಳು ಜ್ಞಾನಕಲ್ಯಾಣಕದ ಪೂಜೆ, ಸ್ತವನ ಮಾಡಿ ಭಗವಂತರ ಉಪದೇಶವಾಗುವ ಸಲುವಾಗಿ ಅನೇಕ ರತ್ನಮಯವಾದ ಸಮವಸರಣದ ರಚನೆ ಮಾಡುತ್ತಾರೆ.

**ಸಮವಸರಣದ ವಿಭೂತಿಯ ವರ್ಣನೆಯನ್ನು ಯಾರು ಮಾಡುವ ಸಾಧ್ಯತೆಯಿದೆ ?** ಅದು ಪೃಥ್ವಿಯಿಂದ ಐದು ಸಾವಿರ ಧನುಷ ಎತ್ತರ, ಅದಕ್ಕೆ ಇಪ್ಪತ್ತು ಸಾವಿರ ಮೆಟ್ಟಲುಗಳಿರುತ್ತವೆ. ಅದರ ಮೇಲೆ ಹನ್ನೆರಡು ಯೋಜನ ಪ್ರಮಾಣ ಇಂದ್ರನೀಲ ಮಣಿಮಯ ವೃತ್ತಾಕಾರದ ಭೂಮಿ, ಅದರ ಮೇಲೆ ಅಪ್ರಮಾಣ ಮಹಿಮೆಸಹಿತ ಸಮವಸರಣದ ರಚನೆಯಾಗುತ್ತದೆ. ಎಲ್ಲಿ ಸಮವಸರಣದ ರಚನೆಯಾಗುತ್ತದೆ ಮತ್ತು ಭಗವಂತರ ವಿಹಾರವಾಗುತ್ತದೆ ಅಲ್ಲಿಕುರುಡರಿಗೆ ಕಾಣಿಸಲಾರಂಭಿಸುತ್ತದೆ, ಕಿವುಡರಿಗೆ ಕೇಳಿಸಲಾರಂಭಿಸುತ್ತದೆ, ಕುಂಟರು ನಡೆಯಲಾರಂಭಿಸುತ್ತಾರೆ, ಮೂಗರು ಮಾತನಾಡಲಾರಂಭಿಸುತ್ತಾರೆ. ಇದು ವೀತರಾಗತೆಯ ಅದ್ಭುತ ಮಹಿಮೆಯಿದೆ.

ಅದರ ಧೂಲಿಶಾಲ ಮೊದಲಾದ ರತ್ನಮಯ ಕೋಟೆ, ಮಾನಸ್ತಂಭ, ಕೊಳ, ನೀರು ತುಂಬಿದ ಕಂದಕ, ಪುಷ್ಪವಾಟಿ ಮತ್ತೆ ರತ್ನಮಯ ಪ್ರಾಕಾರ, ಮಹಾದ್ವಾರ, ನಾಟ್ಯಶಾಲೆ, ಉಪವನ, ವೇದಿ, ಧ್ವಜಭೂಮಿ, ಮತ್ತೆ ರತ್ನಮಯ ಕೋಟೆ, ಕಲ್ಪವೃಕ್ಷಗಳ ವನ, ರತ್ನಮಯ ಸ್ತೂಪ, ಮಹಲುಗಳ ಭೂಮಿ, ಸ್ಫಟಿಕಮಣಿಯ ಕೋಟೆ, ದೇವಚ್ಛಂದ ನಾಮದ ಒಂದು ಯೋಜನದ ಶ್ರೀಮಂಟಪ, ಎಲ್ಲೆಡೆಗೆ ದ್ವಾದಶಸಭೆ, ಅವರಿಂದ ಸೇವಿಸಲ್ಪಡುವ ರತ್ನಮಯ ಮೂರು ಕಡಿತದಿಂದ ಕೂಡಿದ ಗಂಧಕುಟಿಯಲ್ಲಿ ಸಿಂಹಾಸನದ ಮೇಲೆ ನಾಲ್ಕು ಅಂಗುಲ ಅಂತರಿಕ್ಷದಲ್ಲಿ ಅರಹಂತ ಭಗವಂತರು ವಿರಾಜಮಾನರಾಗಿರುತ್ತಾರೆ. ಅವರಿಗೆ ಅನಂತ ಜ್ಞಾನ, ಅನಂತದರ್ಶನ, ಅನಂತಸುಖ, ಅನಂತ ವೀರ್ಯಮಯವಾದ ಅಂತರಂಗ ವಿಭೂತಿಯ ಮಹಿಮೆಯನ್ನು ಹೇಳುವುದಕ್ಕೆ ನಾಲ್ಕು ಜ್ಞಾನಗಳ ಧಾರಕರಾದ ಗಣಧರ ಭಗವಂತರೂ ಸಮರ್ಥರಿಲ್ಲವೆಂದ ಮೇಲೆ ಇತರರು ಯಾರು ಹೇಳುವ ಸಾಧ್ಯತೆಯಿದೆ ?

ಸಮವಸರಣದ ವಿಭೂತಿಯೇ ವಚನ ಅಗೋಚರವಿದೆ. ಗಂಧಕುಟಿಯು ಮೂರು ಕಡಿತದ ಮೇಲೆ ಇದೆ. ಅಲ್ಲಿ ದೇವಗಳ ಮೂವತ್ತೆರಡು ಯುಗಳ, ಮಕುಟ, ಕುಂಡಲ, ಹಾರ, ಕಂಕಣ, ಬಾಹುಬಂಧ ಮೊದಲಾದ ಸಮಸ್ತ ಆಭರಣ ಧರಿಸಿರುವವರು ಅರವತ್ತಾ ನಾಲ್ಕು ಚಾಮರ ಬೀಸುತ್ತಿರುತ್ತಾರೆ, ಕಾಂತಿಯಿಂದ ಬೆಳಗುವ ಮುಕ್ಕೊಡೆಯ ಪ್ರಭೆಯಿಂದ ಸೂರ್ಯ-ಚಂದ್ರರೂ ಮಂದಜ್ಯೋತಿಯವರಾಗಿ ಕಂಡು ಬರುತ್ತಾರೆ, ಅವರ ಪ್ರಭಾಮಂಡಲದ ಚಕ್ರವು ವೃದ್ಧಿಂಗತವಾಗುತ್ತಲಿದೆ, ಅದರಿಂದ ಸಮವಸರಣದಲ್ಲಿ ಹಗಲು-ರಾತ್ರಿಗಳ ಭೇದವೇ ಉಳಿಯುವುದಿಲ್ಲ, ಯಾವಾಗಲೂ ಹಗಲು ಹೊತ್ತಿನಂತೆಯೇ ಇರುತ್ತದೆ.

ಮೂರು ಲೋಕದಲ್ಲಿ ಅಂಥ ಸುಗಂಧವು ಬೇರೆಲ್ಲಿಯೂ ಇಲ್ಲದಂಥ ಮಹಾಸುಗಂಧ ಸಹಿತ ಗಂಧಕುಟಿಯ ಮೇಲೆ, ದೇವಗಳ ಮೂಲಕ ಮಾಡಲಾಗಿರುವ ಅಶೋಕವೃಕ್ಷವನ್ನು ನೋಡುತ್ತಿರುವಂತೆಯೇ ಸಮಸ್ತ ಶೋಕವು ನಷ್ಟವಾಗಿ ಹೋಗುತ್ತದೆ, ಆಕಾಶದಿಂದ ಕಲ್ಪವೃಕ್ಷಗಳ ಪುಷ್ಪಗಳ ವೃಷ್ಟಿಯಾಗುತ್ತದೆ. ಆಕಾಶದಲ್ಲಿ ಹನ್ನೆರಡೂವರೆಕೋಟಿ ಜಾತಿಯ ವಾದ್ಯಗಳು ಮಧುರ ಧ್ವನಿಯಿಂದ ಮೊಳಗುತ್ತವೆ. ಅವನ್ನು ಕೇಳುತ್ತಿರುವಂತೆಯೇ ಕ್ಷುಧೆ, ತೃಷೆ ಮೊದಲಾದ ಸಮಸ್ತ ರೋಗಗಳ ವೇದನೆಯು ನಷ್ಟವಾಗಿ ಹೋಗುತ್ತದೆ. ರತ್ನಜಡಿತವಾದ ಸಿಂಹಾಸನವು ಸೂರ್ಯನ ಕಾಂತಿಯನ್ನು ಪರಾಭವಗೊಳಿಸುತ್ತಿರುವಂತೆ ಎನಿಸುತ್ತದೆ.

**ಜಿನೇಂದ್ರರ ದಿವ್ಯಧ್ವನಿಯ ಮಹಿಮೆಯು ಅದ್ಭುತವಿದೆ.** ತ್ರಿಲೋಕವರ್ತಿ ಜೀವರುಗಳಿಗೆ ಪರೋಪಕಾರ ಮಾಡುವಂಥದ್ದಿದೆ, ಮೋಹಾಂಧಕಾರದ ನಾಶಮಾಡುತ್ತದೆ, ಸಮಸ್ತ ಜೀವಗಳು ತಮ್ಮ-ತಮ್ಮ ಭಾಷೆಯಲ್ಲಿ ಶಬ್ದಾರ್ಥ ತಿಳಿದುಕೊಳ್ಳುತ್ತವೆ, ಸಮಸ್ತ ಜೀವಗಳಿಗೆ ಸಂಶಯ ಉಳಿಯುವುದಿಲ್ಲ, ಸ್ವರ್ಗ-ಮೋಕ್ಷದ ಮಾರ್ಗವನ್ನು ಪ್ರಕಟಮಾಡುತ್ತದೆ. ದಿವ್ಯಧ್ವನಿಯ ಮಹಿಮೆಯನ್ನು ವಚನದಿಂದ ಗಣಧರ, ಇಂದ್ರ ಮೊದಲಾದವರಾರೂ ಹೇಳಲು ಸಮರ್ಥರಿಲ್ಲ. ಜಿನರ ಸಮವಸರಣದಲ್ಲಿ ಆನೆ-ಸಿಂಹ, ಹುಲಿ-ಗೋವು, ಇಲಿ-ಬೆಕ್ಕು ಇತ್ಯಾದಿ ಜಾತಿ ವಿರೋಧಿ ಜೀವಗಳು ತಮ್ಮ ವೈರ ಬುದ್ಧಿಯನ್ನು ಬಿಟ್ಟುಕೊಟ್ಟು ಪರಸ್ಪರ ಮಿತ್ರವಾಗಿ ಹೋಗುತ್ತವೆ.

**ವೀತರಾಗತೆಯ ಮಹಿಮೆಯು ಅದ್ಭುತವಿದೆ.** ಅಸಂಖ್ಯಾತ ದೇವಗಳು ಜಿನೇಂದ್ರದೇವರ ಜಯಜಯಕಾರ ಮಾಡುತ್ತಾರೆ. ಅವರ ನಿಕಟತೆಯನ್ನು ಪಡೆದು ದೇವಗಳಿಂದ ರಚಿಸಲಾದ ಕಲಶ, ಕನ್ನಡಿ, ಗಿಂಡಿ, ಧ್ವಜ, ಛತ್ರ, ಚಾಮರ, ಮಣೆ, ಬೀಸಣಿಕೆ ಇವು ಎಂಟು ಅಚೇತನ ದ್ರವ್ಯಗಳು ಕೂಡ ಲೋಕದಲ್ಲಿ ಮಂಗಲತೆಗೆ ಪ್ರಾಪ್ತವಾಗಿ ಹೋಗುತ್ತವೆ.

ಕೇವಲಜ್ಞಾನವಾದನಂತರ **ಹತ್ತು ಅತಿಶಯಗಳು** ಪ್ರಕಟವಾಗುತ್ತವೆ. ನಾಲ್ಕೂ ನಿಟ್ಟಿಗೆ ನೂರು-ನೂರು ಯೋಜನ ಸುಭಿಕ್ಷತೆ, ಆಕಾಶದಲ್ಲಿ ಗಮನ, ಭೂಮಿಯ ಸ್ಪರ್ಶವಾಗದಿರುವುದು, ಅವರಿಂದ ಯಾವುದೇ ಪ್ರಾಣಿಯ ಘಾತವಾಗದಿರುವುದು, ಉಪಸರ್ಗದ ಅಭಾವ, ನಾಲ್ಕು ಮುಖಗಳು ತೋರುವುದು, ಸಮಸ್ತ ದಿಶೆಗಳ ಈಶ್ವರತೆ, ಛಾಯಾರಹಿತತೆ, ನೇತ್ರಗಳ ರೆಪ್ಪೆ ಹೊಡೆಯದಿರುವುದು, ನಖ-ಕೇಶಗಳು ಬೆಳಯದಿರುವುದು. ಇವು ಹತ್ತು ಅತಿಶಯಗಳು ಘಾತಿಕರ್ಮಗಳ ನಾಶದಿಂದ ಸ್ವಯಂ ಪ್ರಕಟವಾಗುತ್ತವೆ.

ತೀರ್ಥಂಕರ ಪ್ರಕೃತಿಯ ಪ್ರಭಾವದಿಂದ ದೇವಗಳ ಮೂಲಕ ಮಾಡಿದ **ಹದಿನಾಲ್ಕು ಅತಿಶಯ**ಗಳಾಗುತ್ತವೆ. ಅರ್ಧಮಾಗಧೀಭಾಷೆ, ಸಮಸ್ತ ಜನಸಮೂಹದಲ್ಲಿ ಮೈತ್ರೀಭಾವ, ವೃಕ್ಷಗಳು ಎಲ್ಲ ಋತುಗಳ ಫಲ-ಪುಷ್ಪಗಳಿಂದ ಯುಕ್ತವಾಗುವುದು, ಪೃಥ್ವಿಯು ಹುಲ್ಲು-ಮುಳ್ಳು-ಧೂಳು ರಹಿತ ಕನ್ನಡಿಯ ಸಮಾನ ರತ್ನಮಯವಾಗಿ ಹೋಗುವುದು, ಶೀತಲ ಮಂದ ಸುಗಂಧವಾಯು ಸಂಚರಿಸುವುದು, ಎಲ್ಲ ಜೀವಗಳಿಗೆ ಆನಂದ ಪ್ರಕಟವಾಗುವುದು, ಅನುಕೂಲ ಗಾಳಿ ಬೀಸುವುದು, ಸುಗಂಧಿತ ಜಲವೃಷ್ಟಿಯಿಂದ ಭೂಮಿಯು ಧೂಳುರಹಿತವಾಗುವುದು, ಎಲ್ಲೆಲ್ಲಿ ಪಾದವಿರಿಸುತ್ತಾರೆ ಅಲ್ಲಲ್ಲಿ ಏಳು ಮುಂದೆ, ಏಳು ಹಿಂದೆ, ಏಳು ಎಡಕ್ಕೆ, ಏಳು ಬಲಕ್ಕೆ ಮತ್ತು ಒಂದು ಮಧ್ಯದಲ್ಲಿ ಹೀಗೆ ಹದಿನೈದು-ಹದಿನೈದು ಕಮಲಗಳ ಹದಿನೈದು ಪಂಕ್ತಿಗಳಲ್ಲಿ ಒಟ್ಟು ಇನ್ನೂರಾ ಇಪ್ಪತ್ತೈದು ಕಮಲಗಳ ರಚನೆಯನ್ನು ದೇವಗಳು ಮಾಡುತ್ತಾರೆ, ಆಕಾಶವು ಮೇಲೆ ನಿರ್ಮಲವಾಗಿ ಹೋಗುತ್ತದೆ, ದಿಶೆಗಳು ನಾಲ್ಕೂ ಕಡೆಗೆ ನಿರ್ಮಲವಾಗಿ ಹೋಗುತ್ತವೆ, ಚತುರ್ನಿಕಾಯ ದೇವಗಳು ಜಯಜಯಕಾರ ಶಬ್ದ ಹೇಳುತ್ತಾರೆ, ಧರ್ಮ ಚಕ್ರವು ಒಂದು ಸಾವಿರ ಕಿರಣಗಳ ಅಚ್ಚು ಸಹಿತ ತಮ್ಮ ಪ್ರಕಾಶದಿಂದ ಸೂರ್ಯಮಂಡಲವನ್ನೂ ತಿರಸ್ಕಾರ ಮಾಡುತ್ತ ಮುಂದೆ-ಮುಂದೆ ಚಲಿಸುತ್ತ ಹೋಗುತ್ತದೆ ಮತ್ತು ಅಷ್ಟಮಂಗಲ ದ್ರವ್ಯಗಳು ಇವು ಹದಿನಾಲ್ಕು ದೇವಕೃತ ಅತಿಶಯಗಳು ಪ್ರಕಟವಾಗುತ್ತವೆ.

ಕ್ಷುಧೆ, ತೃಷೆ, ಜನ್ಮ, ಜರೆ, ಮರಣ, ರೋಗ, ಶೋಕ, ಭಯ, ವಿಸ್ಮಯ, ರಾಗ, ದ್ವೇಷ, ಮೋಹ, ಅರತಿ, ಚಿಂತೆ ಸ್ವೇದ, ಖೇದ, ಮದ, ನಿದ್ರೆ-ಇವು ಹದಿನೆಂಟು ದೋಷರಹಿತ ಅರಹಂತರ ವಂದನೆ, ಸ್ತವನ, ಧ್ಯಾನ ಮಾಡಬೇಕು. ಸುಖವನ್ನು ಪ್ರಾಪ್ತ ಮಾಡಿಸುವಂಥವರು ಅರಹಂತರಿದ್ದಾರೆ, ಅವರ ಸ್ತುತಿ ಮಾಡಬೇಕಾಗುವುದು. ಈ ಅರಹಂತ ಭಕ್ತಿಯು ಸಂಸಾರ ಸಮುದ್ರದಿಂದ ದಾಟಿಸುವಂಥದ್ದಿದೆ, ನಿರಂತರ ಅದರ ಚಿಂತನೆ ಮಾಡಬೇಕು. ಗುಣಗಳ ಅಪೇಕ್ಷೆಯಿಂದಂತೂ ಅರಹಂತರಿಗೆ ಅನಂತ ನಾಮಗಳಿವೆ, ಭಕ್ತಿಭರಿತನಾದ ಇಂದ್ರನು ಒಂದು ಸಾವಿರದೆಂಟು ಹೆಸರುಗಳಿಂದ ಭಗವಂತರ ಸ್ತವನ ಮಾಡಿದ್ದಾನೆ. ಯಾರು ಅಲ್ಪ ಸಾಮರ್ಥ್ಯದ ಧಾರಕರಿದ್ದಾರೆ, ಅವರು ಕೂಡ ತಮ್ಮ ಶಕ್ತಿಗೆ ಅನುಸರಿಸಿ ಪೂಜೆ, ವಂದನೆ, ಸ್ತವನ, ನಮಸ್ಕಾರ, ಧ್ಯಾನ ಮಾಡಬೇಕು.

ಅರಹಂತಭಕ್ತಿಯು ಸಂಸಾರಸಮುದ್ರದಿಂದ ದಾಟಿಸುವಂಥದ್ದೇ ಇದೆ. **ಸಮ್ಯಗ್ದರ್ಶನದಲ್ಲಿ ಮತ್ತು ಅರಹಂತ ಭಕ್ತಿಯಲ್ಲಿ ನಾಮಭೇದವಿದೆ, ಅರ್ಥಭೇದವಿಲ್ಲ,** ಅರಹಂತ ಭಕ್ತಿಯು ನರಕಾದಿಗತಿಗಳನ್ನು ದೂರ ಮಾಡುವಂಥದ್ದಿದೆ. ಯಾರು ಈ ಭಕ್ತಿಯ ಪೂಜೆ, ಸ್ತವನ ಮಾಡಿ ಅರ್ಘ್ಯವೆತ್ತುತ್ತಾರೆ ಅವರು ದೇವಗಳ ಸುಖವನ್ನು ಭೋಗಿಸಿ, ಪುನಃ ಮನುಷ್ಯರ

ಸುಖವನ್ನು ಭೋಗಿಸಿ ಅವಿನಾಶೀ ಸುಖದ ಧಾರಕರಾದ ಅಕ್ಷಯ ಅವಿನಾಶೀ ಸಿದ್ಧರುಗಳಂಥ ಸುಖಕ್ಕೆ ಪ್ರಾಪ್ತರಾಗಿ ಹೋಗುತ್ತಾರೆ. ಈ ಪ್ರಕಾರ ಅರಹಂತ ಭಕ್ತಿಯೆಂಬ ಹೆಸರಿನ ಹತ್ತನೇ ಭಾವನೆಯ ವರ್ಣನೆ ಮಾಡಲಾಯಿತು.

## ಆಚಾರ್ಯ ಭಕ್ತಿ ಭಾವನೆ

ಈಗ ಆಚಾರ್ಯಭಕ್ತಿ ನಾಮದ ಹನ್ನೊಂದನೆಯ ಭಾವನೆಯ ವರ್ಣನೆ ಮಾಡುತ್ತಾರೆ. ಅದುವೇ ಗುರುಭಕ್ತಿಯಿದೆ. ಯಾರಿಗೆ ವೀತರಾಗ ಗುರುಗಳ ಗುಣಗಳಲ್ಲಿ ಅನುರಾಗವಾಗುತ್ತದೆ ಅವರು ಧನ್ಯಭಾಗ್ಯರಿದ್ದಾರೆ, ಧನ್ಯ ಪುರುಷರ ಮಸ್ತಕದ ಮೇಲೆ ಗುರುಗಳ ಆಜ್ಞೆಯು ಪ್ರವರ್ತಿಸುತ್ತದೆ. ಆಚಾರ್ಯರಂತೂ ಅನೇಕ ಗುಣಗಳ ಗಣಿಯಿದ್ದಾರೆ, ಶ್ರೇಷ್ಠತಪದ ಧಾರಕರಿದ್ದಾರೆ. ಆದ್ದರಿಂದ ತಮ್ಮ ಮನಸ್ಸಿನಲ್ಲಿ ಇವರ ಗುಣಗಳ ಸ್ಮರಣೆ ಮಾಡಿ ಪೂಜಿಸಬೇಕು, ಆರತಿ ಬೆಳಗಬೇಕು. ಅವರ ಮುಂದೆ ಪುಷ್ಪಾಂಜಲಿಯನ್ನು ಕ್ಷೇಪಿಸಬೇಕು, ಅದರಿಂದ ನಮಗೆ ಇಂಥ ಗುರುಗಳ ಚರಣಗಳ ಆಶ್ರಯವೇ ಪ್ರಾಪ್ತವಾಗಲೆಂದು ಭಾವಿಸಬೇಕು.

**ಆಚಾರ್ಯರ ಸ್ವರೂಪ :-** ಆಚಾರ್ಯರು ನಿರಂತರ ಅನಶನ ಮೊದಲಾದ ಹನ್ನೆರಡು ಪ್ರಕಾರದ ಉಜ್ವಲ ತಪಗಳಲ್ಲಿ ಉದ್ಯಮಶೀಲರಿರುತ್ತಾರೆ, ಆರು ಅವಶ್ಯಕ ಕ್ರಿಯೆಗಳಲ್ಲಿ ಸಾವಧಾನರಿರುತ್ತಾರೆ, ಪಂಚಾಚಾರದ ಧಾರಕರಿರುತ್ತಾರೆ, ಅವರ ಪರಿಣತಿಯು ದಶಲಕ್ಷಣಧರ್ಮರೂಪವಿರುತ್ತದೆ, ಮನ-ವಚನ-ಕಾಯದ ಗುಪ್ತಿ ಸಹಿತರಿರುತ್ತಾರೆ, ಹೀಗೆ ಆಚಾರ್ಯರು ಮೂವತ್ತಾರು ಗುಣಗಳ ಧಾರಕರಿರುತ್ತಾರೆ. ಸಮ್ಯಗ್ದರ್ಶನಾಚಾರವನ್ನು ನಿರ್ದೋಷ ಧಾರಣ ಮಾಡುತ್ತಾರೆ. ಸಮ್ಯಗ್ಜ್ಞಾನದ ಶುದ್ಧತೆಯಿಂದ ಯುಕ್ತರಿರುತ್ತಾರೆ. ಹದಿಮೂರು ಪ್ರಕಾರದ ಚಾರಿತ್ರ ಶುದ್ಧತೆಯ ಧಾರಕರಿರುತ್ತಾರೆ.ತಪಶ್ಚರಣದಲ್ಲಿ ಉತ್ಸಾಹಯುಕ್ತರಿರುತ್ತಾರೆ, ಮತ್ತು ತಮ್ಮ ಶಕ್ತಿಯನ್ನು ಬಚ್ಚಿಡದೆ ಇಪ್ಪತ್ತೆರಡು ಪರೀಷಹವನ್ನು ಜಯಿಸುವಲ್ಲಿ ಸಮರ್ಥರಿರುತ್ತಾರೆ. ಹೀಗೆ ನಿರಂತರ ಪಂಚಾಚಾರಗಳ ಧಾರಕರಾಗಿರುತ್ತಾರೆ.

ಅಂತರಂಗ-ಬಹಿರಂಗ ಪರಿಗ್ರಹದಿಂದ ರಹಿತರಿರುತ್ತಾರೆ, ನಿರ್ಗ್ರಂಥ ಮಾರ್ಗದಲ್ಲಿ ಗಮನ ಮಾಡುವಲ್ಲಿ ತತ್ಪರರಿರುತ್ತಾರೆ, ಉಪವಾಸ, ಪಂಚೋಪವಾಸ, ಪಕ್ಷೋಪವಾಸ, ಮಾಸೋಪವಾಸ ಮಾಡುವಲ್ಲಿ ತತ್ಪರಿರುತ್ತಾರೆ, ಮತ್ತು ನಿರ್ಜನ ವನದಲ್ಲಿ ಗಿರಿ ಕಂದರಗಳಲ್ಲಿ, ಪರ್ವತದ ಗುಹೆಗಳಲ್ಲಿ ನಿಶ್ಚಲವಾದ ಶುಭ ಧ್ಯಾನದಲ್ಲಿ ಮನಸ್ಸನ್ನು ಹಿಡಿದಿಡುತ್ತಾರೆ.

**ಶಿಷ್ಯರ ಯೋಗ್ಯತೆಯನ್ನು ಸರಿಯಾಗಿ ತಿಳಿದುಕೊಂಡು ದೀಕ್ಷೆ ಕೊಡುವಲ್ಲಿ, ಶಿಕ್ಷೆ ಮಾಡುವಲ್ಲಿ ನಿಪುಣರಿರುತ್ತಾರೆ.** ಯುಕ್ತಿಯಿಂದ ಎಲ್ಲ ಪ್ರಕಾರದ ನಯಗಳನ್ನು ತಿಳಿಯುವಂಥವರಿದ್ದಾರೆ, ತಮ್ಮ ಶರೀರದ ಮಮತೆ ಬಿಟ್ಟುಕೊಟ್ಟಿರುತ್ತಾರೆ, ಹಗಲಿರುಳು ಸಂಸಾರ ಕೂಪದಲ್ಲಿ ಪತನವಾವುವುದರಿಂದ ಭಯಭೀತರಿರುತ್ತಾರೆ. ಅವರು ಮನ-ವಚನ-ಕಾಯದ ಶುದ್ಧತೆಯೊಡನೆ ನಾಸಿಕದ ಅಗ್ರಭಾಗದಲ್ಲಿ ನೇತ್ರಯುಗಲವನ್ನು ಸ್ಥಾಪಿಸಿರುತ್ತಾರೆ. ಇಂಥ ಆಚಾರ್ಯರಿಗೆ ಮಸ್ತಕದೊಡನೆ ತಮ್ಮ ಸಮಸ್ತ ಅಂಗಗಳನ್ನು ನೆಲಕ್ಕೆ ಸ್ಪರ್ಶಿಸಿ ನಮಸ್ಕಾರ ಮಾಡಬೇಕಾಗುವುದು. ಆ ಆಚಾರ್ಯರುಗಳ ಚರಣಸ್ಪರ್ಶದಿಂದ ಪವಿತ್ರವಾದಂಥ ಧೂಳನ್ನು ಅಷ್ಟದ್ರವ್ಯಗಳಿಂದ ಪೂಜಿಸುವುದು ಈ ಪ್ರಕಾರ ಸಂಸಾರ ಪರಿಭ್ರಮಣದ ಕ್ಲೇಶವನ್ನು ನಷ್ಟಮಾಡುವಂಥದು ಆಚಾರ್ಯ ಭಕ್ತಿಯಿದೆ.

**ಆಚಾರ್ಯರ ವಿಶೇಷ ಗುಣ :-** ಯಾರು ಆಚಾರ್ಯರಿದ್ದಾರೆ ಅವರು ಸಮಸ್ತ ಧರ್ಮದ ನಾಯಕರಿದ್ದಾರೆ, ಆಚಾರ್ಯರುಗಳ ಆಧಾರದಿಂದ ಸಮಸ್ತ ಧರ್ಮವಿದೆಯೆಂದು ತಿಳಿಯಬೇಕು. ಆದುದರಿಂದ ಈ ಗುಣಗಳ ಧಾರಕರಿದ್ದವರೇ ಆಚಾರ್ಯರಾಗಬೇಕಾಗುವುದು.

ದೊಡ್ಡರಾಜರುಗಳ, ರಾಜನ ಮಂತ್ರಿಗಳ, ಮಹಾನ ಶ್ರೇಷ್ಠಿಗಳ ಕುಲದಲ್ಲಿ ಉತ್ಪನ್ನರಾದವರಿರಬೇಕು; ಅವರ ಸ್ವರೂಪವನ್ನು ನೋಡಿದೊಡನೆ ಪರಿಣಾಮವು ಶಾಂತವಾಗಿ ಹೋಗುವಂಥ ಮನೋಹರ ರೂಪವುಳ್ಳವರಿರಬೇಕು; ಅವರ ಉಚ್ಚ ಆಚಾರವು ಜಗತ್ತಿನಲ್ಲಿ ಪ್ರಸಿದ್ಧವಿರಬೇಕು; **ಮೊದಲು ಗ್ರಹಸ್ಥಾವಸ್ಥೆಯಲ್ಲೂ ಎಂದೂ ಹೀನ ಆಚಾರ, ನಿಂದ್ಯ ವ್ಯವಹಾರ ಮಾಡದವರಿರಬೇಕು;** ವರ್ತಮಾನದ ಭೋಗ ಸಂಪತ್ತನ್ನು ತೊರೆದು ವಿರಕ್ತತೆಗೆ ಪಾತ್ರರಾದವರಿರಬೇಕು; ಲೌಕಿಕ ವ್ಯವಹಾರ ಹಾಗೂ ಪರಮಾರ್ಥದ ಜ್ಞಾತಾರಾಗಿರಬೇಕು; ಬುದ್ಧಿಯ ಪ್ರಬಲತೆ ಮತ್ತು ತಪಸ್ಸಿನ ಪ್ರಬಲತೆಯ ಧಾರಕರಿರಬೇಕು.

ಸಂಘದ ಅನ್ಯ ಮುನಿಗಳಿಂದ ಸಂಭವಿಸಲಾರದಂಥ ತಪಸ್ಸಿನ ಧಾರಕರಿರಬೇಕು; ಅಧಿಕಕಾಲದಿಂದ ದೀಕ್ಷಿತರಿರಬೇಕು; ಹೆಚ್ಚು ಕಾಲದವರೆಗೆ ಗುರುಗಳ ಚರಣಸೇವೆ ಮಾಡಿದವರಿರಬೇಕು; ವಚನದಲ್ಲಿ ಅತಿಶಯ ಸಹಿತರಿರಬೇಕು; ಅವರ ವಚನ ಕೇಳಿದೊಡನೆ ಧರ್ಮದಲ್ಲಿ ದೃಢತೆಯಾಗಬೇಕು, ಸಂಶಯದ ಅಭಾವವಾಗಬೇಕು; ಅವರು ಸಂಸಾರ-ಶರೀರ-ಭೋಗಗಳಿಂದ ದೃಢ ನಿಶ್ಚಲ ವಿರಕ್ತತೆಯುಳ್ಳವರಿರಬೇಕು; ಸಿದ್ಧಾಂತ ಸೂತ್ರಗಳ ಅರ್ಥದ ಪಾರಂಗತರಿರಬೇಕು; ಇಂದ್ರಿಯಗಳ ನಿಗ್ರಹ ಮಾಡಿ ಇಹಲೋಕ ಪರಲೋಕ ಸಂಬಂಧದ ಭೋಗವಿಲಾಸದಿಂದ ರಹಿತರಿರಬೇಕು; ದೇಹಾದಿಗಳಲ್ಲಿ ನಿರ್ಮಮತ್ವರಿದ್ದು ಮಹಾಧೀರರಿರಬೇಕು; ಉಪಸರ್ಗ ಪರೀಷಹಗಳಿಂದ ಅವರ ಚಿತ್ತವೆಂದೂ ಚಂಚಲವಾಗಿರಬಾರದು. ಒಂದು ವೇಳೆ ಆಚಾರ್ಯರೇ ವಿಚಲಿತರಾಗಿ ಹೋದರೆ ಸಮಸ್ತ ಸಂಘವು ಭ್ರಷ್ಟವಾಗಿ ಹೋಗುವುದು, ಧರ್ಮದ ಲೋಪವಾಗಿ ಹೋಗುವುದು.

**ಸ್ವಮತ - ಪರಮತದ ಜ್ಞಾತಾರಿರಬೇಕು, ಅನೇಕಾಂತ ವಿದ್ಯೆಯಲ್ಲಿ ಕ್ರೀಡೆ ಮಾಡುವಂಥವರಿರಬೇಕು;** ಅನ್ಯರ ಪ್ರಶ್ನೆಗಳಿಗೆ ಹೆದರಿಕೆಯಿಲ್ಲದೆ ಕೂಡಲೆ ಉತ್ತರ ಕೊಡುವಂಥವರಿರಬೇಕು; ಅವರಲ್ಲಿ ಏಕಾಂತ ಪಕ್ಷದ ಖಂಡನೆ ಮಾಡಿ, ಸತ್ಯಾರ್ಥ ಧರ್ಮದ ಸ್ಥಾಪನೆ ಮಾಡುವ ಸಾಮರ್ಥ್ಯವಿರಬೇಕು; ಧರ್ಮದ ಪ್ರಭಾವನೆ ಮಾಡುವಲ್ಲಿ ಉದ್ಯಮಶೀಲರಿರ-ಬೇಕು; ಗುರುಗಳ ಹತ್ತಿರ ಪ್ರಾಯಶ್ಚಿತ್ತ ಮೊದಲಾದ ಶಾಸ್ತ್ರಗಳನ್ನೋದಿ ಮೂವತ್ತಾರು ಗುಣಗಳ ಧಾರಕರಿರಬೇಕು; ಅವರಿಗೆ ಸಮಸ್ತ ಸಂಘದ ಸಮಕ್ಷಮ ಗುರುಗಳಿಂದ ಆಚಾರ್ಯಪದವು ಪ್ರಾಪ್ತವಾಗುತ್ತದೆ. ಇಷ್ಟು ಗುಣಗಳ ಧಾರಕರಿದ್ದವರಿಗೇ ಆಚಾರ್ಯತನವಿರುತ್ತದೆ. ಈ ಗುಣಗಳಿಲ್ಲದೆ ಒಂದು ವೇಳೆ ಆಚಾರ್ಯರಾದರೆ ಧರ್ಮತೀರ್ಥದ ಲೋಪವಾಗಿ ಹೋಗುವುದು, ಉನ್ಮಾರ್ಗದ - ವಿಪರೀತ ಮಾರ್ಗದ ಪ್ರವೃತ್ತಿಯಾಗಿ ಹೋಗುವುದು. ಸಮಸ್ತ ಸಂಘವು ಸ್ವೇಚ್ಛಾಚಾರಿಯಾಗಿ ಹೋಗುವುದು, ಶಾಸ್ತ್ರದ ಪರಂಪರೆ ಹಾಗೂ ಆಚಾರದ ಪರಂಪರೆಯು ಮುರಿದು ಹೋಗುವುದು.

**ಆಚಾರ್ಯರ ಎಂಟು ಗುಣಗಳು :-** ಆಚಾರ್ಯರಿಗೆ ಆಚಾರವಂತ, ಆಧಾರವಂತ, ವ್ಯವಹಾರವಂತ, ಪ್ರಕರ್ತಾ, ಅಪಾಯೋಪಾಯವಿದರ್ಶಿ, ಅವಪೀಡಕ, ಅಪರಿಸ್ರಾವಿ, ನಿರ್ಯಾಪಕವೆಂದು ಬೇರೆ ಎಂಟು ಗುಣಗಳಿದ್ದು ಅವುಗಳ ಧಾರಣ ಮಾಡುವಂಥವರೇ ಆಚಾರ್ಯರಾಗಬೇಕಾಗುವುದು.

**ಆಚಾರವಂತ :-** ಐದು ಪ್ರಕಾರದ ಆಚಾರಗಳನ್ನು ಧಾರಣಮಾಡುವವರಿಗೆ ಆಚಾರವಂತರೆಂದು ಹೇಳುತ್ತಾರೆ. ವೀತರಾಗ ಸರ್ವಜ್ಞ ಭಗವಂತರು ತಮ್ಮ ದಿವ್ಯ ನಿರಾವರಣ ಜ್ಞಾನದಿಂದ ಜೀವ ಮೊದಲಾದ ತತ್ತ್ವಗಳನ್ನು ಪ್ರತ್ಯಕ್ಷ ನೋಡಿ ಹೇಳಿದ್ದಾರೆ, ಅವುಗಳಲ್ಲಿ ಸಮ್ಯಕ್‌ಶ್ರದ್ಧಾರೂಪದ ಪರಿಣತಿಯಾಗುವುದು ಅದು ದರ್ಶನಾಚಾರವಿದೆ. ಸ್ವ-ಪರ ತತ್ತ್ವಗಳ ನಿರ್ಬಾಧ ಆಗಮ ಮತ್ತು ಆತ್ಮಾನುಭವದಿಂದ ತಿಳಿದುಕೊಳ್ಳುವರೂಪದ ಪ್ರವೃತ್ತಿಯು ಅದು ಜ್ಞಾನಾಚಾರವಿದೆ. ಹಿಂಸೆ ಮೊದಲಾದ ಪಂಚ ಪಾಪಗಳ ಅಭಾವರೂಪ ಪ್ರವೃತ್ತಿಯು ಅದು ಚಾರಿತ್ರಾಚಾರವಿದೆ. ಅಂತರಂಗ-ಬಹಿರಂಗ ತಪದಲ್ಲಿ ಪ್ರವೃತ್ತಿಯು ಅದು ತಪಾಚಾರವಿದೆ. ಪರೀಷಹ ಮೊದಲಾದವು ಬಂದ ಮೇಲೆ ತಮ್ಮ ಶಕ್ತಿಯನ್ನು ಬಚ್ಚಿಡದೆ ಧೈರ್ಯ ರೂಪದ ಪ್ರವೃತ್ತಿಯು ಅದು ವೀರ್ಯಾಚಾರವಿದೆ. ಅದೂ ಅಲ್ಲದೇ ಹತ್ತುಪ್ರಕಾರದ ಸ್ಥಿತಕಲ್ಪ ಮೊದಲಾದ ಆಚಾರದಲ್ಲಿ ತತ್ಪರಿರುವುದು.

ಸಮಿತಿ-ಗುಪ್ತಿ ಮೊದಲಾದವುಗಳ ಕಥನ ಮಾಡಿದರೆ ಹೆಚ್ಚು ವಿಸ್ತಾರವಾಗುವುದು. ಐದು ಪ್ರಕಾರದ ಆಚಾರಗಳನ್ನು ತಾವು ಸ್ವಯಂ ನಿರ್ದೋಷ ಪಾಲಿಸಬೇಕು, ಹಾಗೂ ಅನ್ಯ ಶಿಷ್ಯರಿಗೂ ನಿರ್ದೋಷ ಆಚರಣೆ ಮಾಡಿಸುವಲ್ಲಿ ಉದ್ಯಮಶೀಲರಿದ್ದವರೇ ಆಚಾರ್ಯರಿದ್ದಾರೆ-**ಆಚಾರ್ಯರು ತಾವೇ ಹೀನಾಚಾರಿಯಿದ್ದರೆ ಅವರು ಶಿಷ್ಯರಿಂದ ಶುದ್ಧ ಆಚರಣೆ ಮಾಡಿಸಲಾರರು.** ತಾನೇ ಆಚಾರಹೀನನಾದರೆ ಅವನು ಆಹಾರ, ವಿಹಾರ, ಉಪಕರಣ, ವಸತಿಕೆ ಮೊದಲಾದುವನ್ನು ಅಶುದ್ಧ ಗ್ರಹಣ ಮಾಡಿಸುವನು. ತಾನೇ ಆಚಾರಹೀನನಿದ್ದರೆ ಅವನು ಶುದ್ಧ ಉಪದೇಶ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ಆಚಾರ್ಯರು ಆಚಾರವಂತರಾಗಿಯೇ ಇರಬೇಕಾಗುವುದು.

**ಆಧಾರವಂತ :-** ಯಾರಿಗೆ ಜಿನೇಂದ್ರರು ಹೇಳಿದ ನಾಲ್ಕೂ ಅನುಯೋಗಗಳ ಆಧಾರವಿದೆ, ಸ್ಯಾದ್ವಾದ ವಿದ್ಯೆಯ ಪಾರಂಗತರಿರುವರು, ಶಬ್ದವಿದ್ಯೆ, ನ್ಯಾಯವಿದ್ದೆ, ಸಿದ್ಧಾಂತವಿದ್ಯೆಯ ಪಾರಂಗತರಿರುವರು, **ಪ್ರಮಾಣ, ನಯ, ನಿಕ್ಷೇಪದ**

**ಮೂಲಕ ಮತ್ತು ಸ್ವಾನುಭವದ ಮೂಲಕ ಯಾರು ಒಳ್ಳೆಯ ಪ್ರಕಾರದಿಂದ ತತ್ತ್ವಗಳ ನಿರ್ಣಯ ಮಾಡಿರುವರು ಅವರು ಆಧಾರವಂತರಿದ್ದಾರೆ,** ಶ್ರುತದ ಆಧಾರವಿಲ್ಲದವನು ಅನ್ಯ ಶಿಷ್ಯರ ಸಂಶಯ, ಏಕಾಂತ ರೂಪದ ಹಟ ಹಾಗೂ ಮಿಥ್ಯಾಚರಣೆಯ ನಿರಾಕರಣೆಯನ್ನು ಮಾಡಲಾರನು.

ಅನಂತಾನಂತ ಕಾಲದಿಂದ ಪರಿಭ್ರಮಣ ಮಾಡುತ್ತ ಬಂದಿರುವ ಜೀವನಿಗೆ ಅತ್ಯಂತ ದುರ್ಲಭವಾದ ಮನುಷ್ಯ ಜನ್ಮದ ಪ್ರಾಪ್ತಿ, ಅದರಲ್ಲೂ ಉತ್ತಮದೇಶ, ಜಾತಿ, ಕುಲ, ಇಂದ್ರಿಯಗಳ ಪೂರ್ಣತೆ, ದೀರ್ಘಾಯು, ಸತ್ಸಂಗತಿ, ಶ್ರದ್ಧೆ, ಜ್ಞಾನ, ಆಚರಣೆ, ಇವೆಲ್ಲ ಉತ್ತರೋತ್ತರ ಸುಲಭ ಸಂಯೋಗ ಪಡೆದು ಕೂಡ ಅಲ್ಪಜ್ಞಾನೀ ಗುರುಗಳ ಹತ್ತಿರ ವಾಸಿಸುವಂಥ ಶಿಷ್ಯನಾದರೆ ಅವನು ಸತ್ಯಾರ್ಥ ಉಪದೇಶವನ್ನು ಪ್ರಾಪ್ತಮಾಡಿಕೊಳ್ಳಲಾರದ ಕಾರಣ ತನ್ನ ಯಥಾರ್ಥಸ್ವರೂಪ ತಿಳಿದುಕೊಳ್ಳದೆ ಸಂಶಯರೂಪನಾಗಿ ಹೋಗುವನು ಮತ್ತು ಮೋಕ್ಷ ಮಾರ್ಗವನ್ನು ಅತ್ಯಂತದೂರ ಅತ್ಯಂತ ಕಠಿಣವೆಂದು ತಿಳಿದುಕೊಂಡು ರತ್ನತ್ರಯ ಮಾರ್ಗದಿಂದ ವಿಚಲಿತನಾಗಿ ಹೋಗುವನು.

ಸತ್ಯಾರ್ಥ ಉಪದೇಶವಿಲ್ಲದೆ ವಿಷಯಕಷಾಯಗಳಲ್ಲಿ ಮುಳುಗಿದ ಮನಸ್ಸನ್ನು ಹೊರತೆಗೆಯುವಲ್ಲಿ ಸಮರ್ಥನಾಗಲಾರನು, ಮತ್ತು ರೋಗಕೃತ ವೇದನೆಯಲ್ಲಿ ಹಾಗೂ ಉಪಸರ್ಗ ಪರೀಷಹಗಳಿಂದ ವಿಚಲಿತವಾದ ಭಾವಗಳನ್ನು ಶಾಸ್ತ್ರದ ಅತಿಶಯರೂಪ ಉಪದೇಶವಿಲ್ಲದೆ ತಡೆಯಲು ಸಮರ್ಥನಾಗಲಾರನು ; ಒಂದು ವೇಳೆ ಮರಣವು ಬಂದು ಬಿಟ್ಟಾಗ ಸನ್ಯಾಸದ ಅವಸರದಲ್ಲಿ ಆಹಾರ-ಪಾನೀಯದ ತ್ಯಾಗ ಯೋಗ್ಯ ಅವಸರ ದೇಶ-ಕಾಲ ಸಹಾಯಕ ಸಾಮರ್ಥ್ಯದ ಕ್ರಮವನ್ನು ತಿಳಿದುಕೊಂಡಲ್ಲದೆ ಶಿಷ್ಯನ ಭಾವವು ವಿಚಲಿತವಾಗಿ ಹೋಗುವುದು ಅಥವಾ ಆರ್ತಧ್ಯಾನವಾಗಿ ಹೋದರೆ ಸುಗತಿಯು ಕೆಟ್ಟು ಹೋಗುವುದು. ಧರ್ಮದ ಅಪವಾದವಾಗುವುದು, ಅನ್ಯ ಮುನಿಗಳು ಕೂಡ ಧರ್ಮದಲ್ಲಿ ಶಿಥಿಲವಾಗಿ ಹೋಗುವರು ; ಇದಂತೂ ಮಹಾನ ಅನರ್ಥವಿದೆ.

ಈ ಮನುಷ್ಯನು ಆಹಾರಮಯನಿದ್ದಾನೆ, ಆಹಾರದಿಂದಲೇ ಜೀವಿಸುತ್ತಿದ್ದಾನೆ, ನಿರಂತರ ಆಹಾರದ ಇಚ್ಛೆಯನ್ನೇ ಮಾಡುತ್ತಾನೆ, ಯಾವಾಗ ರೋಗದ ಕಾರಣ ಮತ್ತು ತ್ಯಾಗ ಮಾಡಿ ಬಿಡುವುದರಿಂದ ಆಹಾರವು ಬಿಟ್ಟು ಹೋಗುತ್ತದೆ ಮತ್ತು ದುಃಖದಿಂದ ಜ್ಞಾನ-ಚಾರಿತ್ರದಲ್ಲಿ ಶಿಥಿಲವಾಗಿ ಹೋಗುತ್ತದೆ, ಧರ್ಮಧ್ಯಾನ ರಹಿತವಾಗಿ ಹೋಗುತ್ತದೆ ಆಗ ಬಹುಶ್ರುತ ಗುರುಗಳು ಉಪದೇಶ ಕೊಡುತ್ತಾರೆ. ಅದರಿಂದ ಕ್ಷುಧೆ, ತೃಷೆಯ ವೇದನೆಯಿಂದ ರಹಿತವಾಗಿ ಉಪದೇಶರೂಪದ ಅಮೃತದಿಂದ ಸೇಚಿಸಲ್ಪಟ್ಟು ಸಮಸ್ತ ಕ್ಲೇಶರಹಿತವಾದ ಧರ್ಮಧ್ಯಾನದಲ್ಲಿ ಲೀನರಾಗಿ ಹೋಗುತ್ತಾರೆ. ಕ್ಷುಧೆ, ತೃಷೆ, ರೋಗಾದಿಗಳ ವೇದನಾಯುಕ್ತರಾದ ಶಿಷ್ಯರಿಗೆ ಧರ್ಮದ ಉಪದೇಶರೂಪದ ಅಮೃತದ ನೀರು ಹಾಗೂ ಉತ್ತಮ ಶಿಕ್ಷಾರೂಪ ಭೋಜನದಿಂದ ಜ್ಞಾನಸಹಿತರಾದ ಗುರುಗಳೇ ವೇದನೆಯಿಂದ ರಹಿತರಾಗಿ ಮಾಡುತ್ತಾರೆ. ಬಹುಶ್ರುತರ ಆಧಾರವಿಲ್ಲದೆ ಧರ್ಮವು ಉಳಿಯುವುದಿಲ್ಲ, ಆದುದರಿಂದ ಆಧಾರವಂತ ಆಚಾರ್ಯರುಗಳ ಆಶ್ರಯವನ್ನೇ ಗ್ರಹಣ ಮಾಡುವುದು ಯೋಗ್ಯವಿದೆ.

ಶಿಷ್ಯನು ವೇದನೆಯಿಂದ ದುಃಖಿಯಾಗುತ್ತಿದ್ದರೆ ಅವನ ಮೈ ತಡಹುದು, ಕೈ-ಕಾಲು-ತಲೆ ಒತ್ತುವುದು, ಸವಿ ಮಾತು ಆಡುವುದು. ಇತ್ಯಾದಿಗಳ ಮೂಲಕ ದುಃಖ ದೂರ ಮಾಡುವುದು. ಪೂರ್ವದಲ್ಲಿ ಅನೇಕ ಸಾಧುಗಳು ಘೋರ ಪರೀಷಹ ಸಹನೆ ಮಾಡಿ ಆತ್ಮಕಲ್ಯಾಣ ಮಾಡಿಕೊಂಡವರ ಕಥೆ ಹೇಳಿ ದೇಹದಿಂದ ಭಿನ್ನ ಆತ್ಮನ ಅನುಭವ ಮಾಡಿಸಿ ವೇದನಾರಹಿತ ಮಾಡಬೇಕು - ಎಲೈ ಮುನಿ ! ಈಗ ದುಃಖದಲ್ಲಿ ಧೈರ್ಯ ಧಾರಣ ಮಾಡಿರಿ, ಸಂಸಾರದಲ್ಲಿ ಎಂಥೆಂಥ ದುಃಖ ಭೋಗಿಸಿಲ್ಲ ? ಒಂದು ವೇಳೆ ವೀತರಾಗರ ಆಶ್ರಯ ಗ್ರಹಣ ಮಾಡಿದರೆ ದುಃಖಗಳ ನಾಶ ಮಾಡಿ ಕಲ್ಯಾಣಕ್ಕೆ ಪ್ರಾಪ್ತನಾಗಿ ಹೋಗಬಹುದಾಗಿದೆ. ಇತ್ಯಾದಿಯಾಗಿ ಹಲವು ಪ್ರಕಾರದಿಂದ ಹೇಳಿ ಮಾರ್ಗದಿಂದ ವಿಚಲಿತರಾಗಗೊಡಬಾರದು. ಇಂಥ ಆಧಾರವಂತ ಗುರುಗಳೇ ಆಶ್ರಯ ಪಡೆಯಲು ಯೋಗ್ಯರಿದ್ದಾರೆ.

**ವ್ಯವಹಾರವಂತ :** ಆಚಾರ್ಯರು ವ್ಯವಹಾರ ಪ್ರಾಯಶ್ಚಿತ್ತ ಶಾಸ್ತ್ರದ ಜ್ಞಾತಾರಿರಬೇಕಾಗುವುದು. ಏಕೆಂದರೆ ಪ್ರಾಯಶ್ಚಿತ್ತ ಶಾಸ್ತ್ರವನ್ನು ಆಚಾರ್ಯರಾಗಲು ಯೋಗ್ಯರಿರುವವರಿಗೇ ಓದಿಸಲಾಗುತ್ತದೆ, ಇತರರು ಓದಲು ಯೋಗ್ಯವಿಲ್ಲ. ಯಾರು ಜಿನಾಗಮದ

ಜ್ಞಾತಾರಿದ್ದಾರೆ, ಮಹಾಧೈರ್ಯವಂತರಿದ್ದಾರೆ. ಪ್ರಬಲಬುದ್ಧಿಯ ಧಾರಕರಿದ್ದಾರೆ ಅವರೇ ಪ್ರಾಯಶ್ಚಿತ್ತಕೊಡುವ ಸಾಧ್ಯತೆಯಿದೆ. ದ್ರವ್ಯ, ಕ್ಷೇತ್ರ, ಕಾಲ, ಭಾವ, ಕ್ರಿಯೆ, ಪರಿಣಾಮ, ಉತ್ಸಾಹ, ಸಂಹನನ, ಪರ್ಯಾಯ, ದೀಕ್ಷೆಯ ಕಾಲ, ಶಾಸ್ತ್ರಜ್ಞಾನ, ಪುರುಷಾರ್ಥ ಮೊದಲಾದುವನ್ನು ಚನ್ನಾಗಿ ತಿಳಿದುಕೊಂಡು ಯಾರು ರಾಗ-ದ್ವೇಷ ರಹಿತರಾಗುತ್ತಾರೆ. ಅವರೇ ಪ್ರಾಯಶ್ಚಿತ್ತ ಕೊಡುತ್ತಾರೆ.

ಅವರಲ್ಲಿ ಎಂಥ ಪ್ರವೀಣತೆಯಿರಬೇಕೆಂದರೆ ಪ್ರಾಯಶ್ಚಿತ್ತ ತೆಗೆದುಕೊಳ್ಳುವಂಥವನಿಗೆ ಯಾವ ಪ್ರಾಯಶ್ಚಿತ್ತ ಕೊಟ್ಟನಂತರ ಅವನ ಪರಿಣಾಮವು ಉಜ್ವಲವಾಗಿ ಹೋಗುವುದು, ದೋಷದ ಅಭಾವವಾಗಿ ಹೋಗುವುದು, ವ್ರತಗಳಲ್ಲಿ ದೃಢತೆಯಾಗುವುದೆಂದು ತಿಳಿದು ಬರಬೇಕು. ಅವರಿಗೆ ಆಹಾರದ ಯೋಗ್ಯತೆ-ಅಯೋಗ್ಯತೆಯ ಜ್ಞಾನವಿರಬೇಕು, ಈ ಕ್ಷೇತ್ರದಲ್ಲಿ ಇಂಥ ಪ್ರಾಯಶ್ಚಿತ್ತದ ಪಾಲನೆಯಾಗುವುದು ಅಥವಾ ಇಲ್ಲ, ಈ ಕ್ಷೇತ್ರದಲ್ಲಿ ವಾತ-ಪಿತ್ತ-ಕಫ-ಶೀತ-ಉಷ್ಣತೆಯ ಅಧಿಕತೆಯಿದೆ ಅಥವಾ ಸಮಾನತೆಯಿದೆ, ಅಥವಾ ಈ ಕ್ಷೇತ್ರದಲ್ಲಿ ಮಿಥ್ಯಾದೃಷ್ಟಿಗಳ ಅಧಿಕತೆಯಿದೆ ಅಥವಾ ಮಂದತೆಯಿದೆ, ಧರ್ಮಾತ್ಮರುಗಳ ಅಧಿಕತೆಯಿದೆ ಅಥವಾ ಮಂದತೆಯಿದೆಯೆಂಬುದನ್ನು ನೋಡಿ ಪ್ರಾಯಶ್ಚಿತ್ತದ ಪಾಲನೆಯಾಗುತ್ತದೆಯೆಂದು ಕಂಡು ಬಂದರೆ ಪ್ರಾಯಶ್ಚಿತ್ತ ಕೊಡಬೇಕಾಗುವುದು.

ಶೀತ-ಉಷ್ಣ-ವರ್ಷಾಕಾಲವನ್ನು, ಅವಸರ್ಪಿಣಿ-ಉತ್ಸರ್ಪಿಣಿಯ ತೃತೀಯ, ಚತುರ್ಥ, ಪಂಚಮಕಾಲವನ್ನು ನೋಡಿ ಕಾಲದ ಆಧೀನ ಪ್ರಾಯಶ್ಚಿತ್ತದ ಪಾಲನೆಯಾಗುತ್ತದೆಯೆಂದು ಕಂಡು ಬಂದರೆ ಪ್ರಾಯಶ್ಚಿತ್ತ ಕೊಡಬೇಕು.

ಪರಿಣಾಮ ನೋಡಬೇಕಾಗುವುದು, ಜತೆಗೆ ತಪಶ್ಚರಣದಲ್ಲಿ ಇವನ ಉತ್ಸಾಹ-ತೀವ್ರವಿದೆ ಅಥವಾ ಮಂದವಿದೆ ಯೆಂಬುದನ್ನೂ ನೋಡಬೇಕು. ಸಂಹನನದ ಹೀನಾಧಿಕತೆ, ಬಲದ ಮಂದತೆ-ತೀವ್ರತೆಯನ್ನೂ ನೋಡಬೇಕಾಗುವುದು. ಇವನು ಅಧಿಕ ಕಾಲದಿಂದ ದೀಕ್ಷಿತನಿದ್ದಾನೆ ಅಥವಾ ನವೀನ ದೀಕ್ಷಿತನಿದ್ದಾನೆ, ಸಹನಶೀಲನಿದ್ದಾನೆ ಅಥವಾ ಅಧೀರನಿದ್ದಾನೆ, ಬಾಲ-ತರುಣ-ವೃದ್ಧ ಅವಸ್ಥೆಯನ್ನು ಕೂಡ ನೋಡಬೇಕಾಗುವುದು- ಆಗಮದ ಜ್ಞಾತಾನಿದ್ದಾನೆ ಅಥವಾ ಮಂದಜ್ಞಾನಿಯಿದ್ದಾನೆ, ಪುರುಷಾರ್ಥಿಯಿದ್ದಾನೆ ಅಥವಾ ಮಂದ ಉದ್ಯಮಿಯಿದ್ದಾನೆ. ಇವೇ ಮೊದಲಾದವುಗಳ ಜ್ಞಾತಾನಾಗಿದ್ದುಕೊಂಡು ಪ್ರಾಯಶ್ಚಿತ್ತ ಕೊಡಬೇಕಾಗುವುದು.

**ಯಾವ ಪ್ರಕಾರ ದೋಷರೂಪದ ಆಚರಣೆಯನ್ನು ಪುನಃ ಮಾಡುವುದಿಲ್ಲ ಮತ್ತು ಪೂರ್ವದಲ್ಲಿ ಮಾಡಿದ ದೋಷವು ದೂರವಾಗಿ ಹೋಗುವುದು ಆ ಪ್ರಕಾರ ಶಾಸ್ತ್ರದ ಅನುಕೂಲ ಪ್ರಾಯಶ್ಚಿತ್ತ ಕೊಡಬೇಕಾಗುವುದು.** ಯಾರು ಗುರುಗಳ ಹತ್ತಿರ ಪ್ರಾಯಶ್ಚಿತ್ತ ಶಾಸ್ತ್ರವನ್ನು ಶಬ್ದದಿಂದ ಮತ್ತು ಅರ್ಥದಿಂದ ಓದಿಲ್ಲ ಅವನು ಇತರರಿಗೆ ಪ್ರಾಯಶ್ಚಿತ್ತ ಕೊಟ್ಟರೆ ಸಂಸಾರರೂಪದ ಕೊಳಚೆಯಲ್ಲಿ ಮುಳುಗುತ್ತಾನೆ, ಅಪಯಶ ಪಡೆಯುತ್ತಾನೆ ಮತ್ತು ಉನ್ಮಾರ್ಗದ ಉಪದೇಶ ಕೊಟ್ಟು ಸಮ್ಯಕ್ ಮಾರ್ಗದ ನಾಶ ಮಾಡಿ ಮಿಥ್ಯಾದೃಷ್ಟಿಯಾಗುತ್ತಾನೆ. ಇಷ್ಟು ಗುಣಗಳ ಧಾರಕರಿದ್ದವರಿಗೆ ಪ್ರಾಯಶ್ಚಿತ್ತ ಶಾಸ್ತ್ರ ಓದಿಸಿ ಗುರುಗಳು ತಮ್ಮ ಆಚಾರ್ಯ ಪದವನ್ನು ಕೊಟ್ಟು ಬಿಡುತ್ತಾರೆ.

ಯಾರು ಮಹಾನ ಕುಲದಲ್ಲಿ ಉತ್ಪನ್ನರಾಗಿದ್ದಾರೆ, ವ್ಯವಹಾರ -ಪರಮಾರ್ಥದ ಜ್ಞಾತಾ ಇದ್ದಾರೆ, **ಯಾವುದೇ ಕಾಲದಲ್ಲಿ ತಮ್ಮ ಮೂಲ ಗುಣಗಳಿಗೆ ಅತಿಚಾರ ತಗಲಿಸುವುದಿಲ್ಲ,** ನಾಲ್ಕೂ ಅನುಯೋಗರೂಪ ಶಾಸ್ತ್ರಸಮುದ್ರದ ಪಾರಂಗತರಿದ್ದಾರೆ, ಧೈರ್ಯವಂತರಿದ್ದಾರೆ, ಕುಲವಂತರಿದ್ದಾರೆ, ಪರೀಷಹ ಜಯಿಸುವಲ್ಲಿ ಸಮರ್ಥರಿದ್ದಾರೆ, ದೇವಗಳಮೂಲಕ ಮಾಡಲಾದ ಉಪಸರ್ಗದಿಂದಲೂ ಚಂಚಲರಾಗುವುದಿಲ್ಲ, ವಕ್ತೃತ್ವದ ಶಕ್ತಿಯ ಧಾರಕರಿದ್ದಾರೆ, ವಾದಿ-ಪ್ರತಿವಾದಿಯನ್ನು ಜಯಿಸುವಲ್ಲಿ ಸಮರ್ಥರಿದ್ದಾರೆ, ವಿಷಯಗಳಿಂದ ಅತ್ಯಂತ ವಿರಕ್ತರಿದ್ದಾರೆ, ಅಧಿಕ ಸಮಯದವರೆಗೆ ಗುರುಗಳ ಸಂಘದಲ್ಲಿದ್ದಾರೆ, ಸಮಸ್ತ ಸಂಘಕ್ಕೆ ಮಾನ್ಯರಿದ್ದಾರೆ, ಸಮಸ್ತ ಸಂಘವು ಅವರಲ್ಲಿ ಮೊದಲೇ ಆಚಾರ್ಯತೆಯ ಯೋಗ್ಯತೆಯನ್ನು ತಿಳಿದುಕೊಂಡಿದೆ, ಯಾರು ಗುರುಗಳು ಬೋಧಿಸಿದ ಪ್ರಾಯಶ್ಚಿತ್ತ ಶಾಸ್ತ್ರದ ಜ್ಞಾತಾರಾಗಿ ಆಚಾರ್ಯತೆಗೆ ಪ್ರಾಪ್ತರಾಗಿದ್ದಾರೆ ಅವರು **ಪ್ರಾಯಶ್ಚಿತ್ತ ಕೊಡುತ್ತಾರೆ.** ಇಷ್ಟು ಗುಣಗಳಿಲ್ಲದೆ, ಯಾವ ಪ್ರಕಾರ ಮೂಢ ವೈದ್ಯನು ದೇಶ, ಕಾಲ, ಪ್ರಕೃತಿ ಮೊದಲಾದುವನ್ನು ತಿಳಿದುಕೊಳ್ಳದೆ ರೋಗಿಯನ್ನು ಕೊಂದು ಹಾಕುತ್ತಾನೆ, ಅದೇ ಪ್ರಕಾರ ವ್ಯವಹಾರ ಜ್ಞಾನವಿಲ್ಲದ ಮೂಢ ಗುರುವೂ ಶಿಷ್ಯನನ್ನು ಸಂಸಾರದಲ್ಲಿ ಮುಳುಗಿಸುವಂಥವನೇ ಇದ್ದಾನೆ. ಆದುದರಿಂದ ಆಚಾರ್ಯರು ವ್ಯವಹಾರವಂತರಿರಲೇಬೇಕಾಗುವುದು.

**ಪ್ರಕರ್ತಾ :** ಆಚಾರ್ಯರು ಪ್ರಕರ್ತಾಗುಣಸಹಿತರಿರಬೇಕಾಗುವುದು. ಸಂಘದಲ್ಲಿ ಯಾರೋ ರೋಗಿಯಿದ್ದರೆ, ವೃದ್ಧರಿದ್ದರೆ, ಅಶಕ್ತರಿದ್ದರೆ ಬಾಲಕನಿದ್ದು ಅವನು ಸನ್ಯಾಸಧಾರಣ ಮಾಡಿದ್ದರೆ, ಅವರ ವೈಯಾವೃತ್ಯದಲ್ಲಿ ನಿಯುಕ್ತ ಮಾಡಿದ ಮುನಿಗಳಂತೂ ಸೇವೆ ಮಾಡುತ್ತಿದ್ದರೂ ಸ್ವಯಂ ಆಚಾರ್ಯರು ಕೂಡ ಸಂಘದ ಮುನಿಗಳಲ್ಲಿ ಯಾರಾದರೂ ಅಶಕ್ತರಾಗಿ ಹೋಗಿದ್ದರೆ ಅವರನ್ನು ಏಳಿಸುವುದು, ಕೂಡ್ರಿಸುವುದು, ಶಯನ ಮಾಡಿಸುವುದು, ಮಲ-ಮೂತ್ರ-ಕಫ ಹಾಗೂ ರಕ್ತ-ಕೀವು ಮೊದಲಾದುವನ್ನು ಶರೀರದಿಂದ ದೂರ ಮಾಡುವುದು, ತೊಳೆಯುವುದು ಎತ್ತಿ ಪ್ರಾಸುಕ ಸ್ಥಾನದಲ್ಲಿ ಎಸೆಯುವುದು, ಧರ್ಮೋಪದೇಶ ಕೊಡುವುದು, ಧರ್ಮಗ್ರಹಣ ಮಾಡಿಸುವುದು ಇತ್ಯಾದಿ ವೈಯಾವೃತ್ಯವನ್ನು ಆದರಪೂರ್ವಕ ಭಕ್ತಿ ಭಾವದೊಡನೆ ಮಾಡಬೇಕು. ಅವರನ್ನು ನೋಡಿ ಸಂಘದಲ್ಲಿರುವ ಮುನಿಗಳೆಲ್ಲರು ವೈಯಾವೃತ್ಯ ಮಾಡುವಲ್ಲಿ ಸಾವಧಾನರಾಗಿ ಹೋಗುತ್ತಾರೆ ಮತ್ತು ಹೀಗೆ ವಿಚಾರ ಮಾಡುತ್ತಾರೆ-

ಓಹೋ ! ಧನ್ಯರಿದ್ದಾರೆ ಕರುಣಾನಿಧಾನರಾದ ಈ ನಮ್ಮ ಗುರು ಭಗವಾನ ಪರಮೇಷ್ಠಿಗಳು ! ಧರ್ಮಾತ್ಮರಲ್ಲಿ ಅವರದು ಇಷ್ಟು ವಾತ್ಸಲ್ಯವಿದೆ. ನಾವೋ ಮಹಾನಿಂದ್ಯರಿದ್ದೇವೆ, ಸೋಮಾರಿಯಾಗುತ್ತಿದ್ದೇವೆ, ನಾವುಗಳು ಇರುತ್ತಿರುವಾಗಲೂ ಗುರುಗಳು ಸೇವೆ ಮಾಡುವುದು. ಈ ನಮ್ಮ ಪ್ರಮಾದತನವು ನಿಜವಾಗಿಯೂ ಧಿಕ್ಕಾರಯೋಗ್ಯವಿದೆ, ಬಂಧದ ಕಾರಣವಿದೆಯೆಂದು ವಿಚಾರ ಮಾಡಿ ಸಮಸ್ತ ಸಂಘವು ವೈಯ್ಯಾವೃತ್ಯದಲ್ಲಿ ಉದ್ಯಮಶೀಲವಾಗಿ ಹೋಗುತ್ತದೆ.

**ಒಂದು ವೇಳೆ ಆಚಾರ್ಯರು ಸ್ವಯಂ ಪ್ರಮಾದಿಯಾಗಿ ಹೋದರೆ ಸಕಲ ಸಂಘವು ವಾತ್ಸಲ್ಯರಹಿತವಾಗಿ ಹೋಗುತ್ತದೆ.** ಆದ್ದರಿಂದ ಆಚಾರ್ಯರ ಕರ್ತೃತ್ವಗುಣವು ಮುಖ್ಯವಿದೆ. ಯಾರಲ್ಲಿ ಸಮಸ್ತ ಸಂಘದ ವೈಯಾವೃತ್ಯ ಮಾಡುವ ಕ್ಷಮತೆಯಿದೆ. ಅವರು ಆಚಾರ್ಯರಾಗುತ್ತಾರೆ. ಹೀನ ಆಚಾರವುಳ್ಳವರಿಗೆ ಶುದ್ಧ ಆಚಾರ ಗ್ರಹಣ ಮಾಡಿಸುತ್ತಾರೆ, ಮಂದ ಜ್ಞಾನಿಯಾಗಿದ್ದವರಿಗೆ ತಿಳಿಸಿ ಹೇಳಿ ಚಾರಿತ್ರದಲ್ಲಿ ತೊಡಗಿಸುತ್ತಾರೆ. ಕೆಲವರನ್ನು ಪ್ರಾಯಶ್ಚಿತ್ತ ಕೊಟ್ಟು ಶುದ್ಧ ಮಾಡುತ್ತಾರೆ, ಕೆಲವರಿಗೆ ಧರ್ಮೋಪದೇಶ ಕೊಟ್ಟು ಧರ್ಮದಲ್ಲಿ ದೃಢತೆ ಮಾಡಿಸುತ್ತಾರೆ. ಧನ್ಯರಿದ್ದಾರೆ ಆಚಾರ್ಯ ಭಗವಂತರು । ಯಾರಿಗೆ ಅವರ ಆಶ್ರಯವು ಪ್ರಾಪ್ತವಾಗಿ ಹೋಗಿದೆ ಅವರನ್ನು ಮೋಕ್ಷ ಮಾರ್ಗದಲ್ಲಿ ತೊಡಗಿಸಿ ಉದ್ಧಾರ ಮಾಡಿಬಿಡುತ್ತಾರೆ. ಆದುದರಿಂದ ಆಚಾರ್ಯರ ಪ್ರಕರ್ತಾ ಗುಣವು ಮುಖ್ಯವಿದೆ.

**ಅಪಾಯೋಪಾಯವಿದರ್ಶಿ :** ಅಪಯೋಪಾಯವಿದರ್ಶಿಯೆಂಬುದು ಆಚಾರ್ಯರ ಐದನೇ ಗುಣವಿದೆ. ಓರ್ವ ಸಾಧುವು ಕ್ಷುಧೆ, ತೃಷೆ, ರೋಗದ ವೇದನೆಯಿಂದ ಕ್ಲೇಶಿತ ಪರಿಣಾಮರೂಪನಾಗಿ ಹೋದರೆ, ತೀವ್ರರಾಗ-ದ್ವೇಷರೂಪನಾಗಿ ಹೋದರೆ, ಲಜ್ಜೆಯಿಂದ-ಭಯದಿಂದ ಯಥಾವತ್ ಆಲೋಚನೆ ಮಾಡದಿದ್ದರೆ, ರತ್ನತ್ರಯದಲ್ಲಿ ಉತ್ಸಾಹರಹಿತನಾಗಿ ಹೋದರೆ, ಧರ್ಮದಲ್ಲಿ ಶಿಥಿಲನಾಗಿ ಹೋದರೆ, ಅವನಿಗೆ ಅಪಾಯ ಎಂದರೆ ರತ್ನತ್ರಯದ ನಾಶ ಉಪಾಯ ಎಂದರೆ ರತ್ನತ್ರಯದ ರಕ್ಷಣೆಯ ಸ್ಪಷ್ಟವಾದಂಥ ಗುಣ-ದೋಷಗಳನ್ನು ತಿಳಿಸಬೇಕು. ಅವನು ರತ್ನತ್ರಯದ ನಾಶವಾಗುವುದರಿಂದ ಕಂಪಿಸತೊಡಗುವನು ಮತ್ತು ರತ್ನತ್ರಯದ ನಾಶದಿಂದ ತನ್ನ ನಾಶ ಹಾಗೂ ನರಕಾದಿ ದುರ್ಗತಿಗಳಲ್ಲಿ ಪತನವು ಪ್ರತ್ಯಕ್ಷ ಕಾಣತೊಡಗುವುದು. ರತ್ನತ್ರಯದ ರಕ್ಷಣೆಯಿಂದ ಸಂಸಾರದಿಂದ ಉದ್ಧಾರವಾಗಿ ಅನಂತ ಸುಖದ ಪ್ರಾಪ್ತಿಯನ್ನು ಉಪದೇಶದಿಂದ ಪ್ರತ್ಯಕ್ಷ ತೋರಿಸಿ ಕೊಡಬೇಕು. ಇಂಥ ಉಪದೇಶ ಕೊಡುವ ಸಾಮರ್ಥ್ಯವು ಯಾರಲ್ಲಿದೆ ಅವರು ಅಪಾಯೋಪಾಯವಿದರ್ಶಿ ಗುಣದ ಧಾರಕರಾದ ಆಚಾರ್ಯರಾಗುತ್ತಾರೆ. ಇಲ್ಲಿ ಉಪದೇಶ ಬರೆಯುವುದರಿಂದ ಕಥನವು ವಿಸ್ತಾರವಾಗುವುದೆಂದು ಅದನ್ನು ಬರೆಯಲಿಲ್ಲ.

**ಅವಪೀಡಕ :** ಈಗ ಅವಪೀಡಕ ನಾಮದ ಆರನೆಯ ಗುಣವನ್ನು ಹೇಳುತ್ತಾರೆ. ಓರ್ವ ಮುನಿಯು ರತ್ನತ್ರಯ ಧಾರಣ ಮಾಡಿ ಕೂಡ ಲಜ್ಜೆಯಿಂದ, ಭಯದಿಂದ, ಅಭಿಮಾನ, ಗೌರವ ಮೊದಲಾದವುಗಳಿಂದ ತನ್ನ ಶುದ್ಧ ಯಥಾವತ್ ಆಲೋಚನೆ (ದೋಷ ಸ್ವೀಕಾರ) ಮಾಡದಿದ್ದರೆ ಆಚಾರ್ಯರು ಅವರಿಗೆ ಸ್ನೇಹದಿಂದ ತುಂಬಿದ, ಕಿವಿಗಳಿಗೆ ಮಧುರ ಹಾಗೂ ಹೃದಯದಲ್ಲಿ ಪ್ರವೇಶ ಮಾಡುವಂಥ ಶಿಕ್ಷಣ ಕೊಡುತ್ತಾರೆ. ಎಲೈ ಮುನಿ ! ಅತ್ಯಂತ ದುರ್ಲಭವಿರುವ ರತ್ನತ್ರಯದ ಲಾಭವನ್ನು ನೀವು ಮಾಯಾಚಾರದಿಂದ ನಷ್ಟಮಾಡಬೇಡಿರಿ. **ಮಾತಾ ಪಿತರ ಸಮಾನರಿರುವ ತಮ್ಮ ಗುರುಗಳ ಹತ್ತಿರ ತಮ್ಮ ದೋಷ ಪ್ರಕಟ ಮಾಡುವಲ್ಲಿ ಲಜ್ಜೆಯೇಕೆ ?** ವಾತ್ಸಲ್ಯಯುಕ್ತ ಗುರುಗಳೂ ತಮ್ಮ ಶಿಷ್ಯನ ದೋಷವನ್ನು ಪ್ರಕಟಮಾಡಿ ಶಿಷ್ಯನ ಹಾಗೂ ಧರ್ಮದ

ಅವಮಾನಪಡಿಸುವುದಿಲ್ಲ, ಆದುದರಿಂದ ಶಲ್ಯದೂರ ಮಾಡಿ ಆಲೋಚನೆ ಮಾಡಬೇಕು. ಯಾವ ಪ್ರಕಾರ ರತ್ನತ್ರಯದಶುದ್ಧತೆ ಮತ್ತು ತಪಶ್ಚರಣದ ಪಾಲನೆಯಾಗುವುದು ಅದೇ ಪ್ರಕಾರ ದ್ರವ್ಯ, ಕ್ಷೇತ್ರ, ಕಾಲ, ಭಾವದ ಅನುಸಾರ ತಮಗೆ ಪ್ರಾಯಶ್ಚಿತ್ತ ಕೊಡಲಾಗುವದು. ಆದುದರಿಂದ ಭಯವನ್ನು ಬಿಟ್ಟುಕೊಟ್ಟು ನಿರ್ದೋಷ ಆಲೋಚನೆ ಮಾಡಬೇಕು.

ಇಂಥ ಸ್ನೇಹರೂಪದ ವಚನಗಳಿಂದಲೂ ಯಾರು ಮಾಯಾಶಲ್ಯವನ್ನು ಬಿಟ್ಟುಕೊಡದಿದ್ದರೆ ವೀರ್ಯವಂತರಾದ ಆಚಾರ್ಯರು ಬಲವಂತದಿಂದ ಶಿಷ್ಯನ ಶಲ್ಯವನ್ನು ತೆಗೆಯುತ್ತಾರೆ. ಎಲೈ ಮುನಿ ! ಈ ದೋಷವು ಹೀಗೆಯೇ ಇದೆಯೇನು, ಸತ್ಯ ಹೇಳಿರಿ ? ಎಂದು ಯಾವಾಗ ಆಚಾರ್ಯರು ಶಿಷ್ಯನನ್ನು ಕೇಳುತ್ತಾರೆ ಆಗ ಅವರ ತೇಜಸ್ಸು ಹಾಗೂ ತಪಸ್ಸಿನ ಪ್ರಭಾವದಿಂದ **ಹೇಗೆ ಸಿಂಹವನ್ನು ನೋಡುತ್ತಿದ್ದಂತೆ ನರಿಯು ತಿನ್ನುತ್ತಿರುವ ಮಾಂಸವನ್ನು ಕೂಡಲೇ ಉಗುಳಿ ಬಿಡುತ್ತದೆ, ಮತ್ತು ಹೇಗೆ ಮಹಾನ ಪ್ರಚಂಡ ತೇಜಸ್ವಿಯಾದ ದೊರೆಯು ಅಪರಾಧಿಯನ್ನು ಕೇಳುತ್ತಾನೆ ಆಗ ಅವನಿಂದ ಕೂಡಲೆ ಸತ್ಯವೇ ಹೊರ ಬರುತ್ತದೆ, ಅದೇ ಪ್ರಕಾರ ಶಿಷ್ಯನು ಕೂಡ ಮಾಯಾ ಶಲ್ಯವನ್ನು ತೆಗೆದು ಹಾಕುತ್ತಾನೆ.**

ಒಂದು ವೇಳೆ ಶಿಷ್ಯನು ಸತ್ಯಮಾತನಾಡಿ ತನ್ನ ಮಾಯಾಚಾರವನ್ನು ಬಿಟ್ಟುಕೊಡದಿದ್ದರೆ ಗುರುಗಳು ತಿರಸ್ಕಾರದ ವಚನಗಳನ್ನೂ ಆಡುತ್ತಾರೆ. ಎಲೈ ಮುನಿ ! ನಮ್ಮ ಸಂಘದಿಂದ ಹೊರಟು ಹೋಗಿರಿ, ನಮ್ಮಿಂದ ತಮಗೆ ಯಾವ ಪ್ರಯೋಜನವಿದೆ? ಯಾರು ತಮ್ಮ ಶರೀರದ ಮಲವನ್ನು ತೊಳೆಯಬಯಸುವರು ಅವರು ನಿರ್ಮಲ ಜಲದಿಂದ ತುಂಬಿದ ಸರೋವರದ ಪ್ರಾಪ್ತಿ ಮಾಡಿಕೊಳ್ಳುವರು, ಯಾರು ತಮ್ಮ ಮಹಾನ ರೋಗವನ್ನು ದೂರ ಮಾಡಬಯಸುವರು, ಅವರು ಕುಶಲ ವೈದ್ಯನನ್ನು ಪ್ರಾಪ್ತ ಮಾಡಿಕೊಳ್ಳುವರು. ಅದೇ ಪ್ರಕಾರ ಯಾರು ರತ್ನತ್ರಯರೂಪ ಪರಮಧರ್ಮದ ಅತಿಚಾರ ದೂರ ಮಾಡಿ ಉಜ್ವಲ ಮಾಡಬಯಸುವರು. ಅವರು ಗುರುಗಳ ಆಶ್ರಯ ಪಡೆಯುವರು. **ನಿಮಗೆ ರತ್ನತ್ರಯದ ಶುದ್ಧತೆ ಮಾಡಿಕೊಳ್ಳುವಲ್ಲಿ ಆದರವಿಲ್ಲದಿರುವುದರಿಂದ ಈ ಮುನಿತನ ವ್ರತಧಾರಣ ಮಾಡುವುದು, ನಗ್ನವಾಗಿ ಕ್ಷುಧಾದಿಗಳ ಪರೀಷಹಗಳನ್ನು ಸಹನೆ ಮಾಡುವ ವಿಡಂಬನೆಯಿಂದ ಏನು ಸಾಧ್ಯವಿದೆ ?** ಸಂವರ-ನಿರ್ಜರೆಗಳಂತೂ ಕಷಾಯಗಳನ್ನು ಜಯಿಸುವುದರಿಂದ ಆಗುತ್ತವೆ. ಮೊದಲು ಮಾಯಾ ಕಷಾಯದ ತ್ಯಾಗವನ್ನೇ ಮಾಡದಿದ್ದರೆ ವ್ರತ, ಸಂಯಮ, ಮೌನಧಾರಣ ಮಾಡುವುದು ವ್ಯರ್ಥವಿದೆ. ಮಾಯಾಚಾರಿಯು ನಗ್ನವಿರುವುದು ಮತ್ತು ಪರೀಷಹ ಸಹಿಸುವುದು ವ್ಯರ್ಥವಿದೆ. ತಿರ್ಯಂಚ ಕೂಡ ಪರಿಗ್ರಹವಿಲ್ಲದೆ ನಗ್ನವಿರುತ್ತದೆ. ಆದುದರಿಂದ ನೀವು ದೂರ ಭವ್ಯರಿರುವಿರಿ, ನಮಗೆ ವಂದಿಸಲು ಯೋಗ್ಯರಿಲ್ಲ. ನಮ್ಮ ದೋಷವು ಪ್ರಕಟವಾಗಿ ಹೋದರೆ ನಾವು ನಿಂದ್ಯರಾಗುವೆವು, ನಮ್ಮ ಉಚ್ಚತೆಯು ಕಡಿಮೆಯಾಗಿ ಹೋಗುವುದೆಂದು ನಿಮ್ಮ ಭಾವನೆಯಿದೆ, ಆದರೆ ನೀವು ಹೀಗೆ ಮನ್ನಿಸುವುದು ಅದು ಬಂಧದ ಕಾರಣವಿದೆ. **ಶ್ರಮಣರಂತೂ ಸ್ತುತಿ-ನಿಂದೆಗಳಲ್ಲಿ ಸಮಾನ ಪರಿಣಾಮವಿಡುವಂಥವರಿರುತ್ತಾರೆ.** ಈ ಪ್ರಕಾರ ಗುರುಗಳು ಕಠೋರ ವಚನಗಳನ್ನು ಆಡಿಯು ಕೂಡ ಮಾಯಾಚಾರ ಮೊದಲಾದವುಗಳ ಅಭಾವ ಮಾಡಿಸುತ್ತಾರೆ.

ಅವಪೀಡಕ ಆಚಾರ್ಯರು ಬಲವಂತರಿರುವರು, ಉಪಸರ್ಗ-ಪರೀಷಹಗಳು ಬಂದ ಮೇಲೆ ಅಧೀರರಾಗರು, ಪ್ರತಾಪವಂತರಿರುವರು, ಅವರ ವಚನ ಉಲ್ಲಂಘನೆ ಮಾಡುವಲ್ಲಿ ಯಾರೂ ಸಮರ್ಥರಿರುವುದಿಲ್ಲ, ಪ್ರಭಾವಶಾಲಿಯಿದ್ದು ಅವರನ್ನು ನೋಡುತ್ತಿದ್ದಂತೆ ದೋಷಧಾರಕ ಸಾಧುಗಳು ಕಂಪಿಸತೊಡಗುವರು, ಅವರಿಗೆ ದೊಡ್ಡ-ದೊಡ್ಡ ವಿದ್ವಾಂಸರು ಮಣಿದು ವಂದನೆ ಮಾಡುತ್ತಾರೆ, ಅವರ ಉಜ್ವಲ ಕೀರ್ತಿಯು ವಿಖ್ಯಾತವಿರುತ್ತದೆ, ಅವರ ಪ್ರಶಂಸೆ ಕೇಳುತ್ತಿರುವಂತೆಯೇ ಅವರ ಗುಣಗಳಲ್ಲಿ ದೃಢ ಶ್ರದ್ಧೆಯಾಗಿ ಬಿಡುತ್ತದೆ, ಅವರನ್ನು ನೋಡದೆಯೇ ಜಗತ್ತಿನಲ್ಲಿ ಅವರ ವಚನಗಳನ್ನು ಪ್ರಮಾಣವೆಂದು ಮನ್ನಿಸಲಾಗುತ್ತದೆ, ಸಿಂಹದ ಸಮಾನ ನಿರ್ಭಯರಿರುವರು. ಇಂಥ ಅವಪೀಡಕಗುಣಧರಿಸಿದ ಗುರುಗಳು ಯಾವ ಪ್ರಕಾರ ಶಿಷ್ಯನ ಹಿತವಾಗುವುದು ಆ ಪ್ರಕಾರದಿಂದ ಉಪಕಾರ ಮಾಡುತ್ತಾರೆ. ಯಾವ ಪ್ರಕಾರ ಬಾಲಕನ ಹಿತ ಯೋಚಿಸುವಂಥ ತಾಯಿಯು ಅಳುತ್ತಿರುವ ಬಾಲಕನನ್ನೂ ಒತ್ತಿ ಹಿಡಿದು ಬಾಯಿ ತೆರೆದು ಬಲವಂತದಿಂದ ಹಾಲು, ಔಷಧ ಮೊದಲಾದುವನ್ನು ಕುಡಿಸುತ್ತಾಳೆ. ಅದೇ ಪ್ರಕಾರ ಶಿಷ್ಯನ ಹಿತ ಯೋಚಿಸುವಂಥ ಆಚಾರ್ಯರು ಕೂಡ ಮಯಾಶಲ್ಯಯುಕ್ತ ಶಿಷ್ಯಮುನಿಯ ದೋಷವನ್ನು ಬಲವಂತದಿಂದ ದೂರ ಮಾಡುತ್ತಾರೆ, ಅಥವಾ ಕಹಿ ಔಷಧದ ಸಮಾನ ನಂತರ ಹಿತ ಮಾಡುತ್ತಾರೆ. **ಯಾರು ಜಿಹ್ವೆಯಿಂದ ಸಿಹಿ ಆಡುತ್ತಾರೆ, ಆದರೆ ಶಿಷ್ಯನನ್ನು ದೋಷಗಳಿಂದ ಬಿಡಿಸುವುದಿಲ್ಲ, ಅವರು ಒಳ್ಳೆಯ ಗುರುಗಳಲ್ಲ,**

ಯಾರು ವಚನದಿಂದ ಏಟು ಬಾರಿಸಿಯೂ ಕೂಡ ದೋಷಗಳಿಂದ ಬಿಡಿಸುತ್ತಾರೆ, ಅಂಥ ಗುರುಗಳು ಪೂಜೆ ಮಾಡಲು ಯೋಗ್ಯರಿದ್ದಾರೆ. ಆದುದರಿಂದ ಅವಪೀಡಕಗುಣದ ಧಾರಕರೇ ಆಚಾರ್ಯರಿರುತ್ತಾರೆ.

**ಅಪರಿಸ್ರಾವಿ :** ಈಗ ಅಪರಿಸ್ರಾವಿಗುಣ ಹೇಳುತ್ತಾರೆ. ಶಿಷ್ಯನು ಗುರುಗಳೊಡನೆ ಯಾವ ದೋಷದ ಆಲೋಚನೆ ಮಾಡುತ್ತಾನೆ, ಆ ದೋಷವನ್ನು ಗುರುಗಳು ಬೇರೆ ಯಾರಿಗೂ ತಿಳಿಸುವುದಿಲ್ಲ, ಯಾವ ಪ್ರಕಾರ ಕಾಯ್ದಲೋಹದ ಮೂಲಕ ಕುಡಿದ ನೀರು ಹೊರಗೆ ಬರುವುದಿಲ್ಲ, ಅದೇ ಪ್ರಕಾರ ಶಿಷ್ಯನಿಂದ ಕೇಳಿದ ದೋಷವನ್ನು ಆಚಾರ್ಯರು ಬೇರೆ ಯಾರಿಗೂ ತಿಳಿಸುವುದಿಲ್ಲ, ಅದು ಅಪರಿಸ್ರಾವೀ ಗುಣವಿದೆ. **ಶಿಷ್ಯನಂತೂ ಗುರುಗಳ ಮೇಲೆ ವಿಶ್ವಾಸವಿಟ್ಟು ಹೇಳುತ್ತಾನೆ, ಆದರೆ ಗುರುಗಳು ಒಂದು ವೇಳೆ ಶಿಷ್ಯನ ದೋಷವನ್ನು ಪ್ರಕಟಮಾಡಿ ಬಿಡುತ್ತಿದ್ದರೆ ಇತರರಿಗೆ ತಿಳಿಸಿಕೊಡುತ್ತಿದ್ದರೆ ಅವರು ಗುರುಗಳಿಲ್ಲ, ಅಧಮರಿದ್ದಾರೆ, ವಿಶ್ವಾಸಘಾತಕರಿದ್ದಾರೆ.**

ಓರ್ವ ಶಿಷ್ಯನು ತನ್ನ ದೋಷವು ಗುರುಗಳ ಮೂಲಕ ಪ್ರಕಟವಾಗಿ ಹೋಗಿದೆಯೆಂದು ತಿಳಿದುಕೊಂಡು ದುಃಖಿಯಾಗಿ ಆತ್ಮಘಾತ ಮಾಡಿಕೊಳ್ಳುತ್ತಾನೆ, ಓರ್ವನು ಕ್ರೋಧವಶನಾಗಿ ರತ್ನತ್ರಯದ ತ್ಯಾಗ ಮಾಡಿಬಿಡುತ್ತಾನೆ, ಓರ್ವನು ಗುರುಗಳ ದುಷ್ಟತೆಯನ್ನು ತಿಳಿದು ಅನ್ಯ ಸಂಘದಲ್ಲಿ ಹೊರಟು ಹೋಗುತ್ತಾನೆ. 'ಹೇಗೆ ನನ್ನ ಅವಜ್ಞೆ ಮಾಡಿದ್ದೀರಿ, ಹಾಗೆಯೇ ನಿಮ್ಮದೂ ಅವಜ್ಞೆ ಮಾಡುವೆನೆ'ಂದು ಸಮಸ್ತ ಸಂಘದಲ್ಲಿ ಸ್ಪಷ್ಟ ಘೋಷಣೆ ಮಾಡಿ ಬಿಡುತ್ತಾನೆ. ಅದರಿಂದ ಸಮಸ್ತ ಸಂಘದ ವಿಶ್ವಾಸವು ಆಚಾರ್ಯರ ಮೇಲಿಂದ ಹೊರಟು ಹೋಗುತ್ತದೆ. ಆಚಾರ್ಯರು ಎಲ್ಲರಿಂದಲೂ ತ್ಯಾಜ್ಯರಾಗಿ ಹೋಗುತ್ತಾರೆ. ಇತ್ಯಾದಿ ಬಹಳಷ್ಟು ದೋಷಗಳು ಬರುತ್ತವೆ. ಹೆಚ್ಚು ಹೇಳುವುದರಿಂದ ಕಥನವು ವೃದ್ಧಿಸುವುದು. ಆದುದರಿಂದ ಅಪರಿಸ್ರಾವೀಗುಣದ ಧಾರಕರೇ ಆಚಾರ್ಯರಾಗಬೇಕಾಗುವುದು.

**ನಿರ್ಯಾಪಕ :** ಆಚಾರ್ಯರು ನಿರ್ಯಾಪಕ ಗುಣಧಾರಿಯಿರಬೇಕಾಗುವುದು. **ಯಾವ ಪ್ರಕಾರ ನಾವಿಕನು ಸಮಸ್ತ ಬಾಧೆಗಳನ್ನು ನಿವಾರಿಸಿ ನೌಕೆಯನ್ನು ದಡ ತಲುಪಿಸುತ್ತಾನೆ, ಅದೇ ಪ್ರಕಾರ ಆಚಾರ್ಯರು ಕೂಡ ಶಿಷ್ಯರುಗಳನ್ನು ಅನೇಕ ವಿಘ್ನಗಳಿಂದ ರಕ್ಷಿಸಿ ಸಂಸಾರ ಸಮುದ್ರದೊಳಗಿಂದ ಪಾರು ಮಾಡಿಸಿ ಬಿಡುತ್ತಾರೆ.**

ಈ ಪ್ರಕಾರ ಆಚಾರವಂತ, ಆಧಾರವಂತ, ವ್ಯವಹಾರವಂತ, ಪ್ರಕರ್ತಾ, ಅಪಾಯೋಪಾಯವಿದರ್ಶಿ, ಅವಪೀಡಕ, ಅಪರಿಸ್ರಾವಿ, ನಿರ್ಯಾಪಕವೆಂಬ ಈ ಎಂಟು ಆಚಾರ್ಯರ ಗುಣಗಳನ್ನು ಧಾರಣ ಮಾಡುವಂಥವರ ಗುಣಗಳಲ್ಲಿ ಅನುರಾಗ ಮಾಡುವುದು ಅದು ಆಚಾರ್ಯ ಭಕ್ತಿಯಿದೆ. ಇಂಥ ಆಚಾರ್ಯರುಗಳ ಗುಣಗಳನ್ನು ಸ್ಮರಣೆಮಾಡಿ, ಆಚಾರ್ಯರುಗಳ ಸ್ತವನ ವಂದನೆ ಮಾಡಿ ಯಾವ ಪುರುಷರು ಆರತಿ ಬೆಳಗುತ್ತಾರೆ ಅವರು ಪಾಪರೂಪ ಸಂಸಾರದ ಪರಂಪರೆಯನ್ನು ನಷ್ಟ ಮಾಡಿ ಅಕ್ಷಯ ಸುಖದ ಪ್ರಾಪ್ತಿಮಾಡಿಕೊಳ್ಳುತ್ತಾರೆಂದು ವೀತರಾಗೀ ಗುರುಗಳು ಹೇಳುತ್ತಾರೆ. ಈ ಪ್ರಕಾರ ಆಚಾರ್ಯ ಭಕ್ತಿ ಭಾವನೆಯ ವರ್ಣನೆ ಮಾಡಲಾಯಿತು.

## ಬಹುಶ್ರುತ ಭಕ್ತಿ ಭಾವನೆ

ಈಗ ಬಹುಶ್ರುತಭಕ್ತಿಯೆಂಬ ಹೆಸರಿನ ಹನ್ನೆರಡನೇ ಭಾವನೆಯ ವರ್ಣನೆ ಮಾಡುತ್ತಾರೆ. ಯಾರು ಅಂಗ-ಪೂರ್ವ ಮೊದಲಾದವುಗಳ ಜ್ಞಾತಾರಿದ್ದಾರೆ, ನಾಲ್ಕೂ ಅನುಯೋಗಗಳ ಪಾರಂಗತರಾಗಿ ನಿರಂತರ ಸ್ವಯಂ ಪರಮಾಗಮವನ್ನು ಓದುತ್ತಾರೆ, ಅನ್ಯ ಶಿಷ್ಯರಿಗೆ ಓದಿಸುತ್ತಾರೆ. ಅವರು ಬಹುಶ್ರುತಿಯಿದ್ದಾರೆ. ಶ್ರುತಜ್ಞಾನವೇ ಅವರ ದಿವ್ಯ ನೇತ್ರಗಳಿವೆ, ತಮ್ಮ ಹಾಗೂ ಇತರರ ಹಿತ ಮಾಡುವುದರಲ್ಲಿಯೇ ಪ್ರವರ್ತಿಸುತ್ತಾರೆ, ತಮ್ಮ ಜಿನಸಿದ್ಧಾಂತಗಳನ್ನು ಹಾಗೂ ಅನ್ಯ ಏಕಾಂತಿಗಳ ಸಿದ್ಧಾಂತಗಳನ್ನು ವಿಸ್ತಾರದಿಂದ ತಿಳಿದುಕೊಳ್ಳುವಂಥ ಸ್ಯಾದ್ವಾದ ರೂಪ ಪರಮ ವಿದ್ಯೆಯ ಧಾರಕರಿದ್ದಾರೆ ಅವರ ಭಕ್ತಿ ಮಾಡುವುದು ಅದು ಬಹುಶ್ರುತ ಭಕ್ತಿಯಿದೆ. ಬಹುಶ್ರುತಿಯ ಮಹಿಮೆ ಮಾಡಲು ಯಾರು ಸಮರ್ಥರಿದ್ದಾರೆ ? ಯಾರು ನಿರಂತರ ಶ್ರುತ ಜ್ಞಾನದ ದಾನ ಮಾಡುತ್ತಿರುವಂಥ ಉಪಾಧ್ಯಾಯರಿಗೆ ವಿನಯ ಸಹಿತ ಭಕ್ತಿ ಮಾಡುತ್ತಾರೆ, ಅವರು ಶಾಸ್ತ್ರರೂಪ ಸಮುದ್ರದ ಪಾರಂಗತರಾಗಿ ಹೋಗುತ್ತಾರೆ. **ಜಿನೇಂದ್ರದೇವರು ಎಷ್ಟು ಅಂಗ, ಪೂರ್ವ, ಪ್ರಕೀರ್ಣಕಗಳನ್ನು ಹೇಳಿದ್ದಾರೆ ಆ ಎಲ್ಲ**

**ಜಿನಾಗಮಗಳನ್ನು ಯಾರು ಸ್ವಯಂ ನಿರಂತರ ಓದುತ್ತಾರೆ ಮತ್ತು ಅನ್ಯರಿಗೆ ಓದಿಸುತ್ತಾರೆ ಅವರು ಬಹುಶ್ರುತಿಗಳಿದ್ದಾರೆ.**

**ದ್ವಾದಶಾಂಗ :** ಪ್ರಥಮ ಆಚಾರಾಂಗದಲ್ಲಿಹದಿನೆಂಟುಸಾವಿರ ೧೮೦೦೦ ಪದಗಳಲ್ಲಿ ಮುನಿಧರ್ಮದ ವರ್ಣನೆಯಿದೆ.

**ಸೂತ್ರ ಕೃತಾಂಗ**ದಲ್ಲಿ ಮೂವತ್ತಾರು ಸಾವಿರ ೩೬೦೦೦ ಪದಗಳಲ್ಲಿ ಜಿನೇಂದ್ರರ ಶ್ರುತದ ಆರಾಧನೆ ಮಾಡುವ ವಿನಯ ಕ್ರಿಯೆಯ ವರ್ಣನೆಯಿದೆ.

**ಸ್ಥಾನಾಂಗ**ದಲ್ಲಿ ನಲವತ್ತೆರಡು ಸಾವಿರ ೪೨೦೦೦ ಪದಗಳಲ್ಲಿ ಆರೂ ದ್ರವ್ಯಗಳ ಏಕ ಅನೇಕ ಸ್ಥಾನಗಳ ವರ್ಣನೆಯಿದೆ.

**ಸಮವಾಯಾಂಗ**ದಲ್ಲಿ ಒಂದು ಲಕ್ಷ ಅರವತ್ತಾ ಲ್ಕು ಸಾವಿರ ೧೬೪೦೦೦ ಪದಗಳಲ್ಲಿ ಜೀವಾದಿ ಪದಾರ್ಥಗಳ ದ್ರವ್ಯ, ಕ್ಷೇತ್ರ, ಕಾಲ, ಭಾವದ ಸಮಾನತೆಯ ಅಪೇಕ್ಷೆಯಿಂದ ವರ್ಣನೆಯಿದೆ.

**ವ್ಯಾಖ್ಯಾಪ್ರಜ್ಞಪ್ತಿ ಅಂಗದಲ್ಲಿ** ಎರಡು ಲಕ್ಷ ಇಪ್ಪತ್ತೆಂಟು ಸಾವಿರ ೨೨೮೦೦೦ ಪದಗಳಲ್ಲಿ ಜೀವವು ಆಸ್ತಿ ಇದೆ ಅಥವಾ ನಾಸ್ತಿ ಇದೆ, ಏಕವಿದೆ ಅಥವಾ ಅನೇಕವಿದೆ, ಇತ್ಯಾದಿ ಗಣಧರರಿಂದ ತೀರ್ಥಂಕರರ ಹತ್ತಿರ ಮಾಡಲಾದ ಅರವತ್ತು ಸಾವಿರ ಪ್ರಶ್ನೆಗಳ ವರ್ಣನೆಯಿದೆ.

**ಜ್ಞಾತೃಧರ್ಮಕಥಾ** ಅಂಗದಲ್ಲಿ ಐದುಲಕ್ಷ ಐವತ್ತಾರುಸಾವಿರ ೫೫೬೦೦೦ ಪದಗಳಲ್ಲಿ ಗಣಧರರಿಂದ ಕೇಳಲಾದ ಪ್ರಶ್ನೆಗಳ ಉತ್ತರರೂಪವಾಗಿ ಜೀವ ಮೊದಲಾದ ದ್ರವ್ಯಗಳ ಸ್ವಭಾವದ ವರ್ಣನೆಯಿದೆ.

**ಉಪಾಸಕಾಧ್ಯಯನ** ಅಂಗದಲ್ಲಿ ಹನ್ನೊಂದು ಲಕ್ಷ ಎಪ್ಪತ್ತು ಸಾವಿರ ೧೧೭೦೦೦೦ ಪದಗಳಲ್ಲಿ, ಶ್ರಾವಕನ (ಹನ್ನೊಂದು ನೆಲೆಗಳ) ವ್ರತ, ಶೀಲ, ಆಚಾರ, ಕ್ರಿಯೆ, ಮಂತ್ರ ಮೊದಲಾದವುಗಳ ವರ್ಣನೆಯಿದೆ.

**ಅಂತಕೃತದಶಾಂಗ**ದಲ್ಲಿ ಇಪ್ಪತ್ತುಮೂರುಲಕ್ಷ ಇಪ್ಪತ್ತೆಂಟುಸಾವಿರ ೨೩೨೮೦೦೦ ಪದಗಳಲ್ಲಿ ಒಬ್ಬೊಬ್ಬ ತೀರ್ಥಂಕರರ ತೀರ್ಥಕಾಲದಲ್ಲಿ ಹತ್ತು-ಹತ್ತು ಮುನಿಗಳು ಉಪಸರ್ಗ ಸಹಿತರಾಗಿ ಸಂಸಾರದ ಕೊನೆ ಮಾಡಿ ನಿರ್ವಾಣ ಪ್ರಾಪ್ತ ಮಾಡಿಕೊಂಡರು ಅವರ ವರ್ಣನೆಯಿದೆ.

**ಅನುತ್ತರೋಪಪಾದದಶಾಂಗ**ದಲ್ಲಿ ತೊಂಭತ್ತೆರಡುಲಕ್ಷ ನಲವತ್ತಾ ಲ್ಕು ಸಾವಿರ ೯೨೪೪೦೦೦ ಪದಗಳಲ್ಲಿ ಒಬ್ಬೊಬ್ಬ ತೀರ್ಥಂಕರರ ತೀರ್ಥಕಾಲದಲ್ಲಿ ಹತ್ತು-ಹತ್ತು ಮುನಿಗಳು ಭಯಂಕರ ಘೋರ ಉಪಸರ್ಗ ಸಹಿಸಿ ದೇವಗಳಿಂದ ಪೂಜಿತರಾಗಿ (ಸಮಾಧಿ ಮರಣಮಾಡಿ) ವಿಜಯ ಮೊದಲಾದ ಅನುತ್ತರ ವಿಮಾನಗಳಲ್ಲಿ ಉತ್ಪನ್ನರಾಗಿದ್ದಾರೆ ಅವರ ವರ್ಣನೆಯಿದೆ.

**ಪ್ರಶ್ನವ್ಯಾಕರಣಾಂಗ**ದಲ್ಲಿ ತೊಂಭತ್ತುಮೂರುಲಕ್ಷ ಹದಿನಾರುಸಾವಿರ ೯೩೧೬೦೦೦ ಪದಗಳಲ್ಲಿ ನಷ್ಟವಾಗಿ ಹೋದ ಮುಷ್ಟಿಯಲ್ಲಿಟ್ಟುಕೊಂಡ ಲಾಭ-ಹಾನಿ, ಸುಖ-ದುಃಖ, ಜೀವನ-ಮರಣ (ಸೋಲು, ಗೆಲುವು, ಚಿಂತೆ)ಗಳ ಸಂಬಂಧದಲ್ಲಿ ಮಾಡಲಾದ ಪ್ರಶ್ನೆಗಳ (ಭೂತ, ಭವಿಷ್ಯ, ವರ್ತಮಾನದ ಅಪೇಕ್ಷೆಯಿಂದ ಕೊಡಲಾದ ಉತ್ತರಗಳ) ವರ್ಣನೆಯಿದೆ.

**ವಿಪಾಕಸೂತ್ರಾಂಗ**ದಲ್ಲಿ ಒಂದು ಕೋಟಿ ಎಂಭತ್ತಾ ಲ್ಕು ಲಕ್ಷ ೧೮೪೦೦೦೦೦ ಪದಗಳಲ್ಲಿ ಕರ್ಮಗಳ ಉದಯ, ಉದೀರಣಾ, ಸತ್ತಾದ ವರ್ಣನೆಯಿದೆ. (ಈ ಪ್ರಕಾರ ಹನ್ನೊಂದು ಅಂಗಗಳ ವರ್ಣನೆಯನ್ನು ನಾಲ್ಕುಕೋಟಿ ಹದಿನೈದು ಲಕ್ಷ ಎರಡು ಸಾವಿರ ೪೧೫೦೨೦೦೦ ಪದಗಳಲ್ಲಿ ಮಾಡಲಾಗಿದೆ.)

**ದೃಷ್ಟಿವಾದ** ನಾಮದ ಹನ್ನೆರಡನೆಯ ಅಂಗದಲ್ಲಿ (ಒಂದುನೂರಾ ಎಂಟು ಕೋಟಿ ಅರವತ್ತೆಂಟು ಲಕ್ಷ ಐವತ್ತಾರು ಸಾವಿರದಾ ಐದು ೧೦೮೬೮೫೬೦೦೫ ಪದಗಳಲ್ಲಿ **ಮಿಥ್ಯಾದರ್ಶನವನ್ನು ದೂರಮಾಡುವುದರ ವರ್ಣನೆಯಿದೆ.** ದೃಷ್ಟಿವಾದ ಅಂಗದಲ್ಲಿ) ಪರಿಕರ್ಮ, ಸೂತ್ರ, ಪ್ರಥಮಾನುಯೋಗ, ಪೂರ್ವ ಮತ್ತು ಚೂಲಕೆಯೆಂದು ಐದು ಭೇದಗಳಿವೆ **(ಹನ್ನೆರಡು ಅಂಗಗಳಲ್ಲಿ ಒಟ್ಟು ಒಂದು ನೂರಾ ಹನ್ನೆರಡು ಕೋಟಿ ಎಂಭತ್ತ್ಮೂರು ಲಕ್ಷ ಐವತ್ತೆಂಟುಸಾವಿರದಾ ಐದು** ೧೧೨೮೩೫೮೦೦೫ ಪದಗಳಿವೆ.)

**ಪರಿಕರ್ಮ :** ದೃಷ್ಟಿವಾದ ಅಂಗದ ಮೊದಲ ಭೇದವಾದ ಪರಿಕರ್ಮದಲ್ಲಿ ಕೂಡ ಚಂದ್ರಪ್ರಜ್ಞಪ್ತಿ, ಸೂರ್ಯಪ್ರಜ್ಞಪ್ತಿ, ಜಂಬೂದ್ವೀಪ ಪ್ರಜ್ಞಪ್ತಿ, ದ್ವೀಪಸಾಗರ ಪ್ರಜ್ಞಪ್ತಿ ಮತ್ತು ವ್ಯಾಖ್ಯಾಪ್ರಜ್ಞಪ್ತಿಯೆಂದು ಐದು ಭೇದಗಳಿವೆ.

**ಚಂದ್ರಪ್ರಜ್ಞಪ್ತಿ**ಯಲ್ಲಿ ಮೂವತ್ತಾರು ಲಕ್ಷ ಐದು ಸಾವಿರ ೩೬೦೫೦೦೦ ಪದಗಳಲ್ಲಿ ಚಂದ್ರನ ಆಯು, ಗತಿ, ಕಲೆಯ ಹಾನಿ ವೃದ್ಧಿ, ದೇವಿ, ವೈಭವ, ಪರಿವಾರ ಮೊದಲಾದವುಗಳ ವರ್ಣನೆಯಿದೆ.

**ಸೂರ್ಯಪ್ರಜ್ಞಪ್ತಿ**ಯಲ್ಲಿ ಐದು ಲಕ್ಷ ಮೂರು ಸಾವಿರ ೫೦೩೦೦೦ ಪದಗಳಲ್ಲಿ ಸೂರ್ಯನ ಆಯು, ಗತಿ, ವೈಭವ ಮೊದಲಾದವುಗಳ ವರ್ಣನೆಯಿದೆ.

**ಜಂಬೂದ್ವೀಪಪ್ರಜ್ಞಪ್ತಿ**ಯಲ್ಲಿ ಮೂರು ಲಕ್ಷ ಇಪ್ಪತ್ತೈದು ಸಾವಿರ ೩೨೫೦೦೦ ಪದಗಳಲ್ಲಿ ಜಂಬೂದ್ವೀಪ ಸಂಬಂಧದ ಕ್ಷೇತ್ರ, ಪರ್ವತ, ಸರೋವರ, ನದೀ ಮೊದಲಾದವುಗಳ ವರ್ಣನೆಯಿದೆ.

**ದ್ವೀಪಸಾಗರ ಪ್ರಜ್ಞಪ್ತಿ**ಯಲ್ಲಿ ಐವತ್ತೆರಡು ಲಕ್ಷ ಮೂವತ್ತಾರುಸಾವಿರ ೫೨೩೬೦೦೦ ಪದಗಳಲ್ಲಿ ಅಸಂಖ್ಯಾತ ದ್ವೀಪ ಸಮುದ್ರಗಳ, ಮಧ್ಯಲೋಕದ ಅಕೃತ್ರಿಮಜಿನಮಂದಿರಗಳ, ಭವನ-ವ್ಯಂತರ-ಜ್ಯೋತಿಷೀ ದೇವಗಳ ಆವಾಸದ ವರ್ಣನೆಯಿದೆ.

**ವ್ಯಾಖ್ಯಾಪ್ರಜ್ಞಪ್ತಿ**ಯಲ್ಲಿ ಎಂಭತ್ತಾ ್ಲುಕ್ಕು ಲಕ್ಷ ಮೂವತ್ತಾರು ಸಾವಿರ ೮೪೩೬೦೦೦ ಪದಗಳಲ್ಲಿ ಜೀವ-ಪುದ್ಗಲ ಮೊದಲಾದ ದ್ರವ್ಯಗಳ ವರ್ಣನೆಯಿದೆ.

ಈ ಪ್ರಕಾರ ಐದು ಪ್ರಕಾರದ ಪರಿಕರ್ಮದ (ಒಂದು ಕೋಟಿ ಎಂಭತ್ತೊಂದು ಲಕ್ಷ ಐದು ಸಾವಿರ ೧೮೧೦೫೦೦೦ ಪದಗಳಲ್ಲಿ ) ವರ್ಣನೆ ಮಾಡಲಾಗಿದೆ.

**ಸೂತ್ರ :** ದೃಷ್ಟಿವಾದ ಅಂಗದ **ಎರಡನೇ ಭೇದವಾದ ಸೂತ್ರ**ದಲ್ಲಿ ಎಂಭತ್ತೆಂಟುಲಕ್ಷ ೮೮೦೦೦೦೦ ಪದಗಳಲ್ಲಿ ಜೀವವು ಅಸ್ತಿರೂಪವೇ ಇದೆ, ನಾಸ್ತಿರೂಪವೇ ಇದೆ, ಕರ್ತೃವೇ ಇದೆ, ಭೋಕ್ತೃವೇ ಇದೆ ಇತ್ಯಾದಿ ಕ್ರಿಯಾವಾದಿ, ಅಕ್ರಿಯಾವಾದಿ, ಅಜ್ಞಾನವಾದಿ, ವಿನಯವಾದಿ, **ಏಕಾಂತವಾದಿಗಳ ಮೂಲಕ ಕಲ್ಪಿತ ಜೀವದ ಸ್ವರೂಪದ ಏಕಪಕ್ಷದ ಅಪೇಕ್ಷೆ ಮಾತ್ರದಿಂದಲೇ ವರ್ಣನೆಯು ಹೇಗಾಗುತ್ತದೆಯೆಂಬುದನ್ನು ತಿಳಿಸಿಕೊಡಲಾಗಿದೆ.**

**ಪ್ರಥಮಾನುಯೋಗ :** ದೃಷ್ಟಿವಾದ ಅಂಗದ **ಮೂರನೇ ಭೇದವಾದ ಪ್ರಥಮಾನುಯೋಗ**ದಲ್ಲಿ ಐದು ಸಾವಿರ ೫೦೦೦ ಪದಗಳಲ್ಲಿ ವಿಶೇಷ ಜ್ಞಾನವಿಲ್ಲದ ಮಿಥ್ಯಾದೃಷ್ಟಿ ಅವ್ರತಿಗೆ ತಿಳಿಸಿಕೊಡುವ ಸಲುವಾಗಿ ಅರವತ್ತು ಮೂರು ಶಲಾಕಾ ಮಹಾಪುರುಷರ ಚರಿತ್ರದ ವರ್ಣನೆಯಿದೆ.

**ಪೂರ್ವ :** ದೃಷ್ಟಿವಾದ ಅಂಗದ ನಾಲ್ಕನೇ ಭೇದದಲ್ಲಿ ಹದಿನಾಲ್ಕು ಪೂರ್ವಗಳಿವೆ.

**ಉತ್ಪಾದಪೂರ್ವ**ದಲ್ಲಿ ಒಂದು ಕೋಟಿ ೧೦೦೦೦೦೦೦ ಪದಗಳಲ್ಲಿ **ಜೀವ ಮೊದಲಾದ ದ್ರವ್ಯಗಳ** (ಅನೇಕ ಪ್ರಕಾರದ ನಯ ವಿವಕ್ಷೆಯಿಂದ ಕ್ರಮವರ್ತಿ-ಯುಗಪತ್ ಅನೇಕ ಧರ್ಮಗಳಿಂದ ಉತ್ಪಾದ-ವ್ಯಯ-ಧ್ರೌವ್ಯ) ಸ್ವಭಾವದ (ಭೂತ-ವರ್ತಮಾನ- ಭವಿಷ್ಯ ಕಾಲಗಳ ಅಪೇಕ್ಷೆಯಿಂದ ೮೧-೮೧ ಭೇದ ಮಾಡಿ) ವರ್ಣನೆ ಮಾಡಲಾಗಿದೆ.

**ಅಗ್ರಾಯಣೀಪೂರ್ವ**ದಲ್ಲಿ ತೊಂಭತ್ತಾರುಲಕ್ಷ ೯೬೦೦೦೦೦ ಪದಗಳಲ್ಲಿ ದ್ವಾದಶಾಂಗದ ಸಾರಭೂತ ಜ್ಞಾನ ಏಳು ತತ್ತ್ವ, ಒಂಭತ್ತು ಪದಾರ್ಥ, ಆರು ದ್ರವ್ಯ, ಏಳು ನೂರು ನಯ, ದುರ್ನಯ ಮೊದಲಾದವುಗಳ (ಪ್ರಯೋಜನಭೂತ ಮಾತುಗಳ) ವರ್ಣನೆಯಿದೆ.

**ವೀರ್ಯಾನುವಾದಪೂರ್ವ**ದಲ್ಲಿ ಎಪ್ಪತ್ತು ಲಕ್ಷ ೭೦೦೦೦೦೦ ಪದಗಳಲ್ಲಿ ಆತ್ಮನ ಸ್ವ-ವೀರ್ಯ, ಪರ-ವೀರ್ಯ, ಕ್ಷೇತ್ರವೀರ್ಯ, ಕಾಲವೀರ್ಯ, ಭಾವವೀರ್ಯ, ತಪೋವೀರ್ಯ, ದ್ರವ್ಯ-ಗುಣ-ಪರ್ಯಾಯಗಳ ಶಕ್ತಿರೂಪ ವೀರ್ಯದ ವರ್ಣನೆಯಿದೆ.

**ಅಸ್ತಿನಾಸ್ತಿಪ್ರವಾದಪೂರ್ವ**ದಲ್ಲಿ ಅರವತ್ತು ಲಕ್ಷ ೬೦೦೦೦೦೦ ಪದಗಳಲ್ಲಿ ಜೀವ ಮೊದಲಾದ ದ್ರವ್ಯಗಳಸ್ವ-ದ್ರವ್ಯ ಕ್ಷೇತ್ರ ಕಾಲ ಭಾವರೂಪ ಚತುಷ್ಟಯದ ಅಪೇಕ್ಷೆಯಿಂದ ಅಸ್ತಿ ಮತ್ತು ಪರ-ದ್ರವ್ಯ ಕ್ಷೇತ್ರ ಕಾಲ ಭಾವರೂಪ ಚತುಷ್ಟಯದ ಅಪೇಕ್ಷೆಯಿಂದ ನಾಸ್ತಿ ಇತ್ಯಾದಿ ಏಳು ಭೇದ (ಸಪ್ತ ಭಂಗ) ಮತ್ತು ನಿತ್ಯ-ಅನಿತ್ಯ, ಏಕ-ಅನೇಕ ಮೊದಲಾದವುಗಳ ವಿರೋಧವಿಲ್ಲದ ವರ್ಣನೆಯಿದೆ.

**ಜ್ಞಾನಪ್ರವಾದಪೂರ್ವ**ದಲ್ಲಿ ಒಂದು ಕಡಿಮೆ ಒಂದು ಕೋಟಿ ೯೯೯೯೯೯೯ ಪದಗಳಲ್ಲಿ ಮತಿ, ಶ್ರುತ, ಅವಧಿ , ಮನಃಪರ್ಯಯ, ಕೇವಲ-ಇವು ಐದು ಸಮ್ಯಗ್ಜ್ಞಾನ, ಹಾಗೂ ಕುಮತಿ, ಕುಶ್ರುತ, ವಿಭಂಗ-ಇವು ಮೂರು ಅಜ್ಞಾನ ಇವುಗಳ ಸ್ವರೂಪ, ಸಂಖ್ಯೆ, ವಿಷಯ, ಫಲದ ಅಪೇಕ್ಷೆಯಿಂದ ಪ್ರಮಾಣ-ಅಪ್ರಮಾಣ ರೂಪ ಭೇದಸಹಿತವಾದ ವರ್ಣನೆಯಿದೆ.

**ಸತ್ಯಪ್ರವಾದಪೂರ್ವ**ದಲ್ಲಿ ಒಂದು ಕೋಟಿ ಆರು ೧೦೦೦೦೦೦೬ ಪದಗಳಲ್ಲಿ ವಚನಗುಪ್ತಿ, ವಚನದ ಸಂಸ್ಕಾರದ ಕಾರಣ, ಮೌನ ಭೇದ, ಹನ್ನೆರಡು ಭಾಷೆ, ಹತ್ತು ಪ್ರಕಾರದ ಸತ್ಯ ಮತ್ತು ಹಲವು ಪ್ರಕಾರದ ಅಸತ್ಯ ವಚನಗಳ ವರ್ಣನೆಯಿದೆ.

**ಆತ್ಮಪ್ರವಾದಪೂರ್ವ**ದಲ್ಲಿ ಇಪ್ಪತ್ತಾರು ಕೋಟಿ ೨೬೦೦೦೦೦೦೦ ಪದಗಳಲ್ಲಿ ಆತ್ಮನು ಜೀವನಿದ್ದಾನೆ, ಕರ್ತೃಇದ್ದಾನೆ, ಭೋಕ್ತೃಇದ್ದಾನೆ, ವಕ್ತಾ ಇದ್ದಾನೆ, ಪುದ್ಗಲನಿದ್ದಾನೆ, ವೇದಕನಿದ್ದಾನೆ, ವ್ಯಾಪಕ (ವಿಷ್ಣು)ನಿದ್ದಾನೆ, ಸ್ವಯಂಭೂ ಇದ್ದಾನೆ, ಶರೀರಸಹಿತನಿದ್ದಾನೆ, ಶಕ್ತಿವಂತನಿದ್ದಾನೆ, ಜಂತು ಇದ್ದಾನೆ, ಮಾನವನಿದ್ದಾನೆ, ಮಾನಿಯಿದ್ದಾನೆ, ಮಾಯಾವಿಯಿದ್ದಾನೆ, ಯೋಗಿಯಿದ್ದಾನೆ, ಸಂಕೋಚವಿಸ್ತಾರವುಳ್ಳವನಿದ್ದಾನೆ, ಕ್ಷೇತ್ರಜ್ಞನಿದ್ದಾನೆ, ಮೂರ್ತಿಕನಿದ್ದಾನೆ ಇತ್ಯಾದಿ ಸ್ವರೂಪದ ವರ್ಣನೆಯಿದೆ.

**ಕರ್ಮಪ್ರವಾದಪೂರ್ವ**ದಲ್ಲಿ ಒಂದು ಕೋಟಿ ಎಂಭತ್ತು ಲಕ್ಷ ೧೮೦೦೦೦೦೦ ಪದಗಳಲ್ಲಿ ಕರ್ಮಗಳಬಂಧ, ಉದಯ, ಉದೀರಣಾ, ಸತ್ತಾ, ಉತ್ಕರ್ಷಣ, ಅಪಕರ್ಷಣ, ಉಪಶಮನ ಸಂಕ್ರಮಣ, ನಿಧತ್ತಿ, ನಿಕಾಚಿತ ಮೊದಲಾದ ಅವಸ್ಥೆಗಳ ರೂಪದ ಮೂಲ ಪ್ರಕೃತಿ, ಉತ್ತರ ಪ್ರಕೃತಿ ಮೊದಲಾದ ಭೇದಗಳ ಮತ್ತು ಈರ್ಯಾಪಥ ತಪಸ್ಯೆ ಅಧಃಕರ್ಮ ಮೊದಲಾದವುಗಳ ವರ್ಣನೆಯಿದೆ.

**ಪ್ರತ್ಯಾಖ್ಯಾನಪೂರ್ವ**ದಲ್ಲಿ ಎಂಭತ್ತುನಾಲ್ಕು ಲಕ್ಷ ೮೪೦೦೦೦೦ ಪದಗಳಲ್ಲಿ ನಾಮ, ಸ್ಥಾಪನೆ, ದ್ರವ್ಯ, ಕ್ಷೇತ್ರ, ಕಾಲ, ಭಾವದ ಅಪೇಕ್ಷೆಯಿಂದ ಜೀವಗಳ ಸಂಹನನ, ಬಲ ಮೊದಲಾದವುಗಳ ಅನುಸಾರ ಕಾಲದ ಮರ್ಯಾದೆಯೊಡನೆ ತ್ಯಾಗ, ಪಾಪಸಹಿತ ಪದಾರ್ಥಗಳ ತ್ಯಾಗ, ಉಪವಾಸದ ವಿಧಿ ಮತ್ತು ಭಾವನೆ, ಐದು ಸಮಿತಿ, ಮೂರು ಗುಪ್ತಿ ಇತ್ಯಾದಿಗಳ ವರ್ಣನೆಯಿದೆ.

**ವಿದ್ಯಾನುವಾದಪೂರ್ವ**ದಲ್ಲಿ ಒಂದು ಕೋಟಿ ಹತ್ತುಲಕ್ಷ ೧೧೦೦೦೦೦೦ ಪದಗಳಲ್ಲಿ ಅಂಗುಷ್ಠ, ಪ್ರೇತ್ಸಸೇನ ಮೊದಲಾದ ಏಳು ನೂರು ಅಲ್ಪ ವಿದ್ಯೆಗಳ, ಮತ್ತು ರೋಹಿಣಿ ಮೊದಲಾದ ಐದುನೂರು ಮಹಾವಿದ್ಯೆಗಳ ಸ್ವರೂಪ, ಸಾಮರ್ಥ್ಯ, ಸಾಧನ ಭೂತ ಮಂತ್ರ, ಯಂತ್ರ, ಪೂಜೆ, ವಿಧಾನ, ಸಿದ್ಧವಾಗಿ ಹೋದನಂತರ ಅವುಗಳ ಫಲ, ಮತ್ತು ಅಂತರಿಕ್ಷ, ಭೌಮ, ಅಂಗ, ಸ್ವರ, ಸ್ವಪ್ನ, ಲಕ್ಷಣ, ವ್ಯಂಜನ ಮತ್ತು ಛನ್ನವೆಂದು ಇವು ಎಂಟು ಪ್ರಕಾರದ ನಿಮಿತ್ತ ಜ್ಞಾನದ ವರ್ಣನೆಯಿದೆ.

**ಕಲ್ಯಾಣಾನುವಾದ ಪೂರ್ವ**ದಲ್ಲಿ ಇಪ್ಪತ್ತಾರುಕೋಟಿ ೨೬೦೦೦೦೦೦೦ ಪದಗಳಲ್ಲಿ ತೀರ್ಥಂಕರ, ಚಕ್ರವರ್ತಿ, ಬಲಭದ್ರ, ನಾರಾಯಣ (ವಾಸುದೇವ), ಪ್ರತಿನಾರಾಯಣರ ಗರ್ಭಕಲ್ಯಾಣಕ ಮೊದಲಾದ ಮಹಾಉತ್ಸವಗಳ ಹಾಗೂ ಈ ಪದಗಳ ಕಾರಣವಿರುವ ಸೋಳಹ ಭಾವನೆ, ತಪಶ್ಚರಣ ಮೊದಲಾದ ಕ್ರಿಯೆಗಳ ಮತ್ತು ಚಂದ್ರ, ಸೂರ್ಯ, ಗ್ರಹ, ನಕ್ಷತ್ರ ಮೊದಲಾದವುಗಳ ಗತಿ, ಗ್ರಹಣ, ಶಕುನ, ಫಲ ಮೊದಲಾದವುಗಳ ವರ್ಣನೆಯಿದೆ.

**ಪ್ರಾಣವಾದಪೂರ್ವ**ದಲ್ಲಿ ಹದಿಮೂರುಕೋಟಿ ೧೩೦೦೦೦೦೦೦ ಪದಗಳಲ್ಲಿ ಶರೀರದ ಚಿಕಿತ್ಸೆಯ ಅಷ್ಟಾಂಗ ಆಯುರ್ವೇದ ವೈದ್ಯವಿದ್ಯೆಯಿದೆ ಅದರ, ಮತ್ತು ಭೂತ, ಪ್ರೇತ ಮೊದಲಾದ ವ್ಯಾಧಿದೂರ ಮಾಡುವುದರ ಕಾರಣಭೂತ ಮಂತ್ರಾದಿಗಳ, ವಿಷ ಮೊದಲಾದುವನ್ನು ದೂರ ಮಾಡುವಂಥ ವನಸ್ಪತಿಯ, ಮತ್ತು ಇಡಾ,ಪಿಂಗಳಾ, ಸುಷುಮ್ನ ಮೊದಲಾದ ಶ್ವಾಸೋಚ್ಛ್ವಾಸದ, ಹಾಗೂ ಗತಿಯ ಅನುಸಾರ ದಶಪ್ರಾಣಗಳಿಗೆ ಉಪಕಾರಕ-ಅನುಪಕಾರಕ ದ್ರವ್ಯಗಳ ವರ್ಣನೆಯಿದೆ.

**ಕ್ರಿಯಾವಿಶಾಲಪೂರ್ವ**ದಲ್ಲಿ ಒಂಭತ್ತು ಕೋಟಿ ೯೦೦೦೦೦೦೦ ಪದಗಳಲ್ಲಿ ಸಂಗೀತಶಾಸ್ತ್ರ, ಛಂದಸ್ಸು, ಅಲಂಕಾರ ಶಾಸ್ತ್ರ ಎಪ್ಪತ್ತೆರಡು ಕಲೆಗಳು, ಸ್ತ್ರೀಯ ಅರವತ್ತಾ ನ್ಲುಕ್ಕು ಗುಣಗಳು, ಶಿಲ್ಪವಿಜ್ಞಾನ, ಗರ್ಭಾದಾನ ಮೊದಲಾದ ಎಂಭತ್ತು ನಾಲ್ಕು ಕ್ರಿಯೆಗಳು, ಸಮ್ಯಗ್ದರ್ಶನ ಮೊದಲಾದವುಗಳ ಒಂದು ನೂರಾ ಎಂಟು ಕ್ರಿಯೆಗಳು, ಇಪ್ಪತ್ತೈದು ದೇವ ವಂದನೆ ಮೊದಲಾದ ಕ್ರಿಯೆಗಳು ಹಾಗೂ ನಿತ್ಯ ನೈಮಿತ್ತಿಕ ಕ್ರಿಯೆಗಳ ವರ್ಣನೆಯಿದೆ.

**ತ್ರಿಲೋಕ ಬಿಂದುಸಾರ ಪೂರ್ವ**ದಲ್ಲಿ ಹನ್ನೆರಡು ಕೋಟಿ ಐವತ್ತು ಲಕ್ಷ ೧೨೫೦೦೦೦೦೦ ಪದಗಳಲ್ಲಿ ಮೂರು ಲೋಕದ ಸ್ವರೂಪ, ಇಪ್ಪತ್ತಾರು ಪರಿಕರ್ಮ, ಎಂಟು ವ್ಯವಹಾರ, ಬೀಜ ಮೊದಲಾದ ನಾಲ್ಕು ಗಣಿತ, ಮೋಕ್ಷದ ಸ್ವರೂಪ ಮೋಕ್ಷ ಗಮನದ ಕಾರಣಭೂತ ಕ್ರಿಯೆ ಮತ್ತು ಮೋಕ್ಷ ಸುಖದ ವರ್ಣನೆಯಿದೆ. **ಈ ಪ್ರಕಾರ ತೊಂಭತ್ತೈದು ಕೋಟಿ ಐವತ್ತು ಲಕ್ಷ ಐದು ೯೫೫೦೦೦೦೦೫ ಪದಗಳಲ್ಲಿ ಹದಿನಾಲ್ಕು ಪೂರ್ವಗಳ ವರ್ಣನೆಯಿದೆ.**

ದೃಷ್ಟಿವಾದ ಅಂಗದ ಐದನೆಯ ಭೇದವಾದ ಚೂಲಿಕೆಯಲ್ಲಿ ಜಲಗತ, ಸ್ಥಲಗತ, ಮಾಯಾಗತ, ಆಕಾಶಗತ, ರೂಪಗತವೆಂದು ಐದು ಭೇದಗಳಿವೆ. ಪ್ರತಿಯೊಂದು ಚೂಲಿಕೆಯಲ್ಲಿ ಎರಡು ಕೋಟಿ ಒಂಭತ್ತು ಲಕ್ಷ ಎಂಭತ್ತೊಂಭತ್ತು ಸಾವಿರದಾ ಎರಡುನೂರು ೨೦೯೮೯೨೦೦ ಪದಗಳಿವೆ. ಐದೂ ಚೂಲಿಕೆಗಳಲ್ಲಿ ಒಟ್ಟು ಹತ್ತುಕೋಟಿ ನಲವತ್ತೊಂಭತ್ತು ಲಕ್ಷ ನಲವತ್ತಾರು ಸಾವಿರ ೧೦೪೯೪೬೦೦೦ ಪದಗಳಿವೆ.

**ಜಲಗತಚೂಲಿಕೆ**ಯಲ್ಲಿ ಜಲವನ್ನು ತಡೆಯುವುದು, ಜಲದಲ್ಲಿ ಗಮನಮಾಡುವುದು, ಅಗ್ನಿಯನ್ನು ತಡೆಯುವುದು, ಅಗ್ನಿಯನ್ನು ತಿನ್ನುವುದು, ಅಗ್ನಿಯ ಮೇಲೆ ಕೂಡ್ರುವುದು-ನಡೆಯುವುದು, ಅಗ್ನಿಯಲ್ಲಿ ಪ್ರವೇಶ ಮಾಡುವುದು ಇತ್ಯಾದಿ ಕ್ರಿಯೆಗಳ ಕಾರಣಭೂತವಾದ ಮಂತ್ರ,ತಂತ್ರ, ತಪಶ್ಚರಣ ಮೊದಲಾದವುಗಳ ವರ್ಣನೆಯಿದೆ.

**ಸ್ಥಲಗತಚೂಲಿಕೆ**ಯಲ್ಲಿ ಮೇರು ಮೊದಲಾದ ಪರ್ವತಗಳಲ್ಲಿ, ಭೂಮಿಯಲ್ಲಿ ಪ್ರವೇಶ ಮತ್ತು ಶೀಘ್ರಗಮನ ಇತ್ಯಾದಿ ಕ್ರಿಯೆಗಳಿಗೆ ಕಾರಣಭೂತವಿರುವ ಮಂತ್ರ, ತಂತ್ರ, ತಪಶ್ಚರಣ ಮೊದಲಾದವುಗಳ ವರ್ಣನೆಯಿದೆ.

**ಮಾಯಾಗತ ಚೂಲಿಕೆ**ಯಲ್ಲಿ ಮಾಯಾರೂಪ ಇಂದ್ರಜಾಲ ಮೊದಲಾದ ಕ್ರಿಯೆಗಳಿಗೆ ಕಾರಣಭೂತವಿರುವ ಮಂತ್ರ, ತಂತ್ರ, ತಪಶ್ಚರಣ ಮೊದಲಾದವುಗಳ ವರ್ಣನೆಯಿದೆ.

**ಆಕಾಶಗತಚೂಲಿಕೆ**ಯಲ್ಲಿ ಆಕಾಶದಲ್ಲಿ ಗಮನ ಮಾಡುವುದಕ್ಕೆ ಕಾರಣಭೂತವಿರುವ ಮಂತ್ರ, ತಂತ್ರ, ತಪಶ್ಚರಣ ಮೊದಲಾದವುಗಳ ವರ್ಣನೆಯಿದೆ.

**ರೂಪಗತಚೂಲಿಕೆ**ಯಲ್ಲಿ ಸಿಂಹ, ಆನೆ, ಕುದುರೆ, ಎತ್ತು,ಜಿಂಕೆ, ಹುಲಿ, ಮೊಲ, ಮನುಷ್ಯ, ವೃಕ್ಷ ಮೊದಲಾದುವನ್ನು ಅನೇಕ ರೂಪವಾಗಿ ಬದಲಿಸಲು ಕಾರಣಭೂತವಿರುವ ಮಂತ್ರ, ತಂತ್ರ, ತಪಶ್ಚರಣ ಮೊದಲಾದವುಗಳ, ಹಾಗೂ ಚಿತ್ರ, ಮಣ್ಣು, ಪಾಷಾಣ, ಕಟ್ಟಿಗೆ, ಲೆಪ್ಪ ಮೊದಲಾದವುಗಳ ಕಲೆಯ ಹಾಗೂ ಧಾತುವಾದ, ರಸವಾದ, ಖನಿಜ ಮೊದಲಾದವುಗಳನ್ನು ಚತುರತೆಯಿಂದ ರಚನೆ ಮಾಡುವುದರ ವರ್ಣನೆಯಿದೆ.

ಇಲ್ಲಿ ವಿಶೇಷ ತಿಳಿಯುವುದೇನೆಂದರೆ ಸಮಸ್ತ ದ್ವಾದಶಾಂಗದಲ್ಲಿ ಒಂದು ಕಡಿಮೆ ಏಕಟ್ಠೀಯ ಬರಾಬರಿ ಅಕ್ಷರಗಳಿವೆ -೧೮೪೪೬೭೪೪೦೭೩೭೦೯೫೫೧೬೧೫ ಇಷ್ಟು ಅಪುನರುಕ್ತ ಅಕ್ಷರಗಳಿವೆ. (೬೫೫೩೬X೬೫೫೩೬X೬೫೫೩೬X೬೫೫೩೬=ಏಕಟ್ಠೀ ಮತ್ತು ೨X೮X೮X೮X೮X೮ = ಪಣ್ಣಟ್ಠೀ ೬೫೫೩೬) - ಯಾವುದು ಒಂದು ಬಾರಿ ಬಂದ ನಂತರ ಎರಡನೆಯ ಬಾರಿ ಬರುವುದಿಲ್ಲ ಅದನ್ನು ಅಪುನರುಕ್ತ ಅಕ್ಷರವೆಂದು ಹೇಳುತ್ತಾರೆ. ಇವುಗಳಲ್ಲಿ ಅರವತ್ತಾ ನ್ಲುಕ್ಕು ಸಂಯೋಗದವರೆಗಿನ ಅಕ್ಷರಗಳಿವೆ. ಆಗಮದೊಳಗೆ ಹೇಳಿದ ಮಧ್ಯಮಪದದಲ್ಲಿ ಸಾವಿರದಾರನೂರಾ ಮೂವತ್ತುನಾಲ್ಕು ಕೋಟಿ ಎಂಭತ್ತು ಮೂರು ಲಕ್ಷ ಏಳು ಸಾವಿರದಾ ಎಂಟುನೂರಾ ಎಂಭತ್ತೆಂಟು ೧೬೩೪೮೩೦೭೮೮೮ ಅಪುನರುಕ್ತ ಅಕ್ಷರಗಳಿವೆ. ಈ ಅಕ್ಷರಗಳಲ್ಲಿ ಪ್ರಮಾಣದ ಭಾಗ ಕೊಟ್ಟ ಮೇಲೆ ಒಂದು ನೂರಾ ಹನ್ನೆರಡು ಕೋಟಿ ಎಂಭತ್ತು ಮೂರು ಲಕ್ಷ ಐವತ್ತೆಂಟು ಸಾವಿರದಾ ಐದು ೧೧೨೮೩೫೮೦೦೫ ಪದಗಳು ಬರುವವು ಅವುಗಳಲ್ಲಿ ಸಮಸ್ತ ದ್ವಾದಶಾಂಗವಿದೆ. ಉಳಿದ ಅಕ್ಷರಗಳು ಎಂಟು ಕೋಟಿ

ಒಂದು ಲಕ್ಷ ಎಂಟು ಸಾವಿರದಾ ಒಂದು ನೂರಾ ಎಪ್ಪತ್ತೈದು ೮೦೧೧೦೮೧೭೫ ಅಂಕ ಉಳಿದವು. ಈ ಅಕ್ಷರಗಳ ಪೂರ್ಣ ಒಂದು ಪದವಾಗದಿರುವುದರಿಂದ ಅವನ್ನು ಅಂಗಬಾಹ್ಯವೆಂದು ಹೇಳಿದೆ. ಆ ಅಕ್ಷರಗಳಲ್ಲಿ ಸಾಮಾಯಿಕ ಮೊದಲಾದ ಹದಿನಾಲ್ಕು ಪ್ರಕೀರ್ಣಕಗಳಿವೆ.

**ಪ್ರಕೀರ್ಣಕ : ಸಾಮಾಯಿಕ ಪ್ರಕೀರ್ಣಕ**ದಲ್ಲಿ ಮಿಥ್ಯಾತ್ವ, ಕಷಾಯ ಮೊದಲಾದವುಗಳ ಕ್ಲೇಶದ ಅಭಾವರೂಪನಾಮ, ಸ್ಥಾಪನೆ, ದ್ರವ್ಯ, ಕ್ಷೇತ್ರ, ಕಾಲ, ಭಾವದ ಭೇದದಿಂದ ಆರು ಭೇದರೂಪ ಸಾಮಾಯಿಕದ ವರ್ಣನೆಯಿದೆ.

**ಸ್ತವನಪ್ರಕೀರ್ಣಕ**ದಲ್ಲಿ ಮೂವತ್ತು ನಾಲ್ಕು ಅತಿಶಯ, ಎಂಟು ಪ್ರಾತಿಹಾರ್ಯ, ಪರಮ ಔದಾರಿಕ ದಿವ್ಯದೇಹ, ಸಮವಸರಣ ಸಭೆ, ಧರ್ಮೋಪದೇಶ ಮೊದಲಾದ ತೀರ್ಥಂಕರರ ಮಹಾತ್ಮ್ಯದ ಪ್ರಕಾಶರೂಪ ವರ್ಣನೆಯಿದೆ.

**ವಂದನಾಪ್ರಕೀರ್ಣಕ**ದಲ್ಲಿ ಓರ್ವ ತೀರ್ಥಂಕರರ ಆಲಂಬನರೂಪ ಚೈತ್ಯಾಲಯ ಪ್ರತಿಮೆಯ ಸ್ತವನರೂಪ ವರ್ಣನೆಯಿದೆ.

**ಪ್ರತಿಕ್ರಮಣ ಪ್ರಕೀರ್ಣಕ**ದಲ್ಲಿ ಪ್ರಮಾದಜನಿತ ಪೂರ್ವಕೃತ ದೋಷಗಳ ನಿರಾಕರಣೆ ಮಾಡುವುದರ ವರ್ಣನೆಯಿದೆ. ಅದರಲ್ಲಿ ದೈನಿಕ, ರಾತ್ರಿಕ, ಪಾಕ್ಷಿಕ, ಚಾತುರ್ಮಾಸಿಕ, ಸಾಂವತ್ಸರಿಕ (ವಾರ್ಷಿಕ), ಐರ್ಯಾಪಥಿಕ, ಉತ್ತಮಾರ್ಥ (ಮರಣದ ಸಮಯ) ವೆಂದು ಏಳು ಭೇದಗಳಿವೆ.

**ವಿನಯಪ್ರಕೀರ್ಣ**ದಲ್ಲಿ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ, ತಪ ಮತ್ತು ಉಪಚಾರ ಸ್ವರೂಪವೆಂದು ಐದು ಪ್ರಕಾರದ ವಿನಯದ ವರ್ಣನೆಯಿದೆ.

**ಕೃತಿಕರ್ಮಪ್ರಕೀರ್ಣಕ**ದಲ್ಲಿ ನವದೇವತೆಗಳಾದ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸಾಧು, ಜಿನಪ್ರತಿಮೆ, ಜಿನಮಂದಿರ, ಜಿನಾಗಮ, ಜಿನಧರ್ಮದ ವಂದನೆಯ ಸಲುವಾಗಿ ಮೂರು ಪ್ರದಕ್ಷಿಣೆ, ನಾಲ್ಕು ಶಿರೋನತಿ, ಮೂರು ಶುದ್ಧಿ, ಎರಡು ನಮಸ್ಕಾರ, ಹನ್ನೆರಡು ಆವರ್ತ ಇತ್ಯಾದಿ ನಿತ್ಯ - ನೈಮಿತ್ತಿಕ ಕ್ರಿಯೆಯ ವರ್ಣನೆಯಿದೆ.

**ದಶವೈಕಾಲಕಪ್ರಕೀರ್ಣಕ**ದಲ್ಲಿ ಸಾಧುಗಳ ಆಚಾರ ಮತ್ತು ಆಹಾರದ ಶುದ್ಧಿಯ ಕುರಿತು ಹತ್ತು ವಿಶೇಷ ಕಾಲಗಳಿಗೆ ಸಂಬಂಧಿಸಿದ ವರ್ಣನೆಯಿದೆ.

**ಉತ್ತರಾಧ್ಯಯನ ಪ್ರಕೀರ್ಣಕ**ದಲ್ಲಿ ನಾಲ್ಕು ಪ್ರಕಾರದ ಉಪಸರ್ಗ ಮತ್ತು ಇಪ್ಪತ್ತೆರಡು ಪರೀಷಹಗಳನ್ನು ಸಹಿಸುವುದರ ವಿಧಾನ, ಅವುಗಳ ಫಲ ಹಾಗೂ ಅವುಗಳಿಗೆ ಸಂಬಂಧಿಸಿದ ಪ್ರಶ್ನೆಗಳ ಉತ್ತರದ ವರ್ಣನೆಯಿದೆ.

**ಕಲ್ಪವ್ಯವಹಾರ ಪ್ರಕೀರ್ಣಕ**ದಲ್ಲಿ ಸಾಧು ಯೋಗ್ಯವಾದ ಆಚರಣೆಯ ವಿಧಾನ, ಅಯೋಗ್ಯದ ಸೇವನೆಯ ಪ್ರಾಯಶ್ಚಿತ್ತದ ವರ್ಣನೆಯಿದೆ.

**ಕಲ್ಪ್ಯಾಕಲ್ಪ್ಯಪ್ರಕೀರ್ಣಕ**ದಲ್ಲಿ ಸಾಧುಗಳಿಗೆ ದ್ರವ್ಯ, ಕ್ಷೇತ್ರ, ಕಾಲ, ಭಾವದ ಅಪೇಕ್ಷೆಯಿಂದ ಯಾವುದು ಯೋಗ್ಯವಿದೆ, ಯಾವುದು ಅಯೋಗ್ಯವಿದೆಯೆಂಬ ಭೇದರೂಪ ವರ್ಣನೆಯಿದೆ.

ಮಹಾಕಲ್ಪ ಪ್ರಕೀರ್ಣಕದಲ್ಲಿ ಜಿನಕಲ್ಪಿ ಉತ್ಕೃಷ್ಟ ಸಂಹನನಸಹಿತ ಮಹಾಮುನಿಗಳಿಗೆ ಯೋಗ್ಯ ದ್ರವ್ಯ, ಕ್ಷೇತ್ರ, ಕಾಲ, ಭಾವದ ಪ್ರಭಾವದಿಂದ ಉತ್ಕೃಷ್ಟ ಚರ್ಯೆಯಿಂದ ವರ್ತಿಸುವ ಪ್ರತಿಮಾಯೋಗ, ಆತಾಪನಯೋಗ, ತ್ರಿಕಾಲಯೋಗ (ವೃಕ್ಷತಲ) ಮೊದಲಾದವುಗಳ ಆಚರಣೆ, ಮತ್ತು ಸ್ಥವಿರಕಲ್ಪಿ ಸಾಧುಗಳ ದೀಕ್ಷೆ, ಶಿಕ್ಷೆ, ಸಂಘದ ಪೋಷಣೆ, ಯಥಾಯೋಗ್ಯಶರೀರದ ಸಮಾಧಾನ, ಆತ್ಮಸಂಸ್ಕಾರ, ಸಲ್ಲೇಖನ ಹಾಗೂ ಉತ್ತಮಾರ್ಥಕ್ಕೆ ಪ್ರಾಪ್ತ ಉತ್ತಮ ಆರಾಧನೆಯ ವರ್ಣನೆಯಿದೆ.

**ಪುಂಡರೀಕ ಪ್ರರ್ಕಿರ್ಣಕ**ದಲ್ಲಿ ಭವನವಾಸೀ, ವ್ಯಂತರ, ಜ್ಯೋತಿಷೀ, ಕಲ್ಪವಾಸೀ ದೇವಗಳಲ್ಲಿ ಉತ್ಪತ್ತಿಯ ಕಾರಣ, ದಾನ, ಪೂಜೆ, ತಪಶ್ಚರಣ, ಅಕಾಮನಿರ್ಜರೆ, ಸಮ್ಯಕ್ತ್ವ, ಸಂಯಮ ಮೊದಲಾದವುಗಳ ವರ್ಣನೆ ಮತ್ತು ಅವರುಗಳ ಉತ್ಪತ್ತಿಯ ಸ್ಥಾನದ ವೈಭವ ಮೊದಲಾದವುಗಳ ವರ್ಣನೆಯಿದೆ.

**ಮಹಾಪುಂಡರೀಕ ಪ್ರಕೀರ್ಣಕ**ದಲ್ಲಿ ಮಹರ್ದಿಕ ದೇವಗಳಲ್ಲಿ ಯಾವ ಇಂದ್ರ, ಪ್ರತೀಂದ್ರ, ಅಹಮಿಂದ್ರ ಮೊದಲಾದವುಗಳಲ್ಲಿ ಉತ್ಪತ್ತಿಯ ಕಾರಣ ತಪವಿಶೇಷ ಮೊದಲಾದವುಗಳ ವರ್ಣನೆಯಿದೆ.

**ನಿಷಿದ್ಧಿಕಾಪ್ರಕೀರ್ಣ**ದಲ್ಲಿ ಪ್ರಮಾದದಿಂದ ಉತ್ಪನ್ನವಾದ ದೋಷಗಳ ತ್ಯಾಗಮಾಡಿ, ವಿಶುದ್ಧತೆಯ ಸಲುವಾಗಿ ಅನೇಕ ಪ್ರಕಾರದ ಪ್ರಾಯಶ್ಚಿತ್ತದ ವರ್ಣನೆಯಿದೆ ಹೀಗೆ ಪ್ರಾಯಶ್ಚಿತ್ತ ಶಾಸ್ತ್ರವಿದೆ.

ಈ ಪ್ರಕಾರ ದ್ವಾದಶಾಂಗ ಶಾಸ್ತ್ರದ ಜ್ಞಾನವು ತಪಸ್ವಿನ ಪ್ರಭಾವದಿಂದ ಆಗುತ್ತದೆ. ಯಾರು ತಾವು ಸ್ವಯಂ ಓದುತ್ತಾರೆ ಮತ್ತು ಅನ್ಯ ಬುದ್ಧಿವಂತ ಶಿಷ್ಯರಿಗೆ ಓದಿಸುತ್ತಾರೆ, ಆ ಬಹುಶ್ರುತಗಳ ಭಕ್ತಿಯು ಸಂಸಾರ ಪರಿಭ್ರಮಣದ ನಾಶ ಮಾಡುವಂಥದ್ದಿದೆ. ಶಾಸ್ತ್ರಗಳ ಭಕ್ತಿಯು ಕೂಡ ಬಹುಶ್ರುತ ಭಕ್ತಿಯಿದೆ. **ಗುಣಗಳಲ್ಲಿ ಅನುರಾಗ ಮಾಡುವುದು ಅದು ಭಕ್ತಿಯಿದೆ.** ಯಾರು ಶಾಸ್ತ್ರಗಳಲ್ಲಿ ಅನುರಾಗ ಮಾಡಿ ಓದುತ್ತಾರೆ, ಶಾಸ್ತ್ರಗಳ ಅರ್ಥವನ್ನು ಅನ್ಯರಿಗೆ ತಿಳಿಸುತ್ತಾರೆ, ಧನ ಖರ್ಚು ಮಾಡಿ ಶಾಸ್ತ್ರಗಳನ್ನು ಬರೆಸುತ್ತಾರೆ (ಮುದ್ರಿಸುತ್ತಾರೆ), ತಮ್ಮ ಕೈಯಿಂದ ಶಾಸ್ತ್ರ ಬರೆಯುತ್ತಾರೆ, ಅಕ್ಷರಗಳ ಹೀನತೆ-ಅಧಿಕತೆ, ಮಾತ್ರೆ ಮೊದಲಾದವುಗಳ ಶೋಧನೆ ಮಾಡುತ್ತಾರೆ, ಓದುವಂಥವರಿಗೆ ಶಾಸ್ತ್ರಗಳನ್ನು ಉಪಲಬ್ಧ ಮಾಡಿ ಕೊಡುತ್ತಾರೆ, ವ್ಯಾಖ್ಯಾನ ಮಾಡುತ್ತಾರೆ, ವ್ಯಾಖ್ಯಾನ ಮಾಡಿಸುತ್ತಾರೆ, ಕಲಿಸುವಂಥವರ-ಓದುವಂಥವರ ಆಜೀವಿಕೆಯ ಸ್ಥಿರತೆ ಮಾಡಿ ಶಾಸ್ತ್ರಗಳ ಜ್ಞಾನಾಭ್ಯಾಸದ ಪ್ರವರ್ತನೆ ಮಾಡಿಸುತ್ತಾರೆ, ಸ್ವಾಧ್ಯಾಯ ಮಾಡುವ ಸಲುವಾಗಿ ನಿರಾಕುಲ ಸ್ಥಾನ ಕೊಡುತ್ತಾರೆ ಅದು ಜ್ಞಾನಾವರಣ ಕರ್ಮದ ನಾಶ ಮಾಡುವಂಥ ಬಹುಶ್ರುತ ಭಕ್ತಿಯಿದೆ.

ಶಾಸ್ತ್ರಗಳನ್ನು ಬೆಲೆಯುಳ್ಳ ವಸ್ತ್ರದಲ್ಲಿ ಮೇಲೆ ರಟ್ಟಿನ ಹೊದಿಕೆ ಹಾಕಿ ಸರಿಯಾಗಿ ಕಟ್ಟಿ ಇಡಬೇಕು ಅದರಿಂದ ನೋಡುವಂಥವರ ಓದುವಂಥವರ-ಕೇಳುವಂಥವರ ಮನಸ್ಸು ಪ್ರಸನ್ನವಾಗಬೇಕು, ಇದೆಲ್ಲವು ಬಹುಶ್ರುತ ಭಕ್ತಿಯಿದೆ. ಚಿನ್ನದಿಂದ ಮನೋಹರವಾಗಿ ನಿರ್ಮಿಸಿದ ಹಾಗೂ ಐದೂ ಪ್ರಕಾರದ ರತ್ನಗಳಿಂದ ಕೆತ್ತಿದ, ನೂರಾರು ಹೂವುಗಳಿಂದ ಸಾರಭೂತವಾಗಿ ಶಾಸ್ತ್ರದ ಪೂಜೆ ಮಾಡಬೇಕು. ಇಂಥ ಶ್ರುತಭಕ್ತಿಯು ಸಂಶಯಾದಿಗಳಿಂದ ರಹಿತ ಸಮ್ಯಗ್ಜ್ಞಾನವನ್ನುತ್ಪನ್ನ ಮಾಡಿಸಿ ಕ್ರಮದಿಂದ ಕೇವಲಜ್ಞಾನ ಪ್ರಕಟಮಾಡಿ ಬಿಡುತ್ತದೆ. ಯಾವ ಪುರುಷರು ತಮ್ಮ ಮನಸ್ಸನ್ನು ಇಂದ್ರಿಯ ವಿಷಯಗಳಿಂದ ತಡೆದು ಪುನಃ ಪುನಃ ಶ್ರುತದೇವತೆ (ಜಿನವಾಣಿ)ಯ ಗುಣಗಳ ಸ್ಮರಣೆ ಮಾಡಿ ಒಳ್ಳೆಯ ಪ್ರಕಾರದಿಂದ ಮಾಡಿದ ಪವಿತ್ರ ಅರ್ಘ್ಯದಿಂದ ಶ್ರುತದೇವತೆಯ ಪೂಜೆ ಮಾಡುತ್ತಾರೆ ಅವರು ಸಮಸ್ತ ಶ್ರುತದ ಪಾರಂಗತರಾಗಿ ಕೇವಲಜ್ಞಾನ ಪ್ರಾಪ್ತ ಮಾಡಿಕೊಂಡು ನಿರ್ವಾಣ ಹೊಂದುತ್ತಾರೆ. ಈ ಪ್ರಕಾರ ಬಹುಶ್ರುತಭಕ್ತಿ ನಾಮದ ಹನ್ನೆರಡನೇ ಭಾವನೆಯ ವರ್ಣನೆ ಮಾಡಿದೆ ಅದನ್ನು ನಿರಂತರ ಭಾವಿಸಬೇಕು.

## ಪ್ರವಚನ ಭಕ್ತಿ ಭಾವನೆ

ಈಗ ಪ್ರವಚನಭಕ್ತಿ ನಾಮದ ಹದಿಮೂರನೆಯ ಭಾವನೆಯ ವರ್ಣನೆ ಮಾಡುತ್ತಾರೆ. ಪ್ರಚವನದ ಅರ್ಥವು ವೀತರಾಗ ಸರ್ವಜ್ಞ ಭಗವಂತರ ಮೂಲಕ ಪ್ರಣೀತ ಆಗಮವಿದೆ. ಅದರಲ್ಲಿ ಆರು ದ್ರವ್ಯಗಳ, ಐದು ಅಸ್ತಿಕಾಯಗಳ, ಏಳು ತತ್ತ್ವಗಳ, ಒಂಭತ್ತು ಪದಾರ್ಥಗಳ ವರ್ಣನೆಯಿದೆ, ಮತ್ತು ಕರ್ಮಪ್ರಕೃತಿಗಳನ್ನು ನಾಶ ಮಾಡುವ ವರ್ಣನೆಯಿದೆ ಅದು ಆಗಮವಿದೆ.

ಅಧಿಕ ಪ್ರದೇಶವಿರುವವುಗಳನ್ನು ಅಸ್ತಿಕಾಯವೆಂದು ಹೇಳುತ್ತಾರೆ. ನಿರಂತರ ತನ್ನ ಗುಣ-ಪರ್ಯಾಯಗಳಿಗೆ ಪ್ರಾಪ್ತವಾಗುವುದರ ಹೆಸರು ದ್ರವ್ಯವಿದೆ. ವಸ್ತುತ್ವದಿಂದ ಯಾವುದು ನಿಶ್ಚಯ ಮಾಡುತ್ತದೆ ಅದರ ಹೆಸರು ಪದಾರ್ಥವಿದೆ, ಯಾವುದರಲ್ಲಿ ಸ್ವಭಾವರೂಪತೆಯಿದೆ ಅದರ ಹೆಸರು ತತ್ತ್ವವಿದೆ. ಇವುಗಳ ವಿಶೇಷ ಕಥನವನ್ನು ಮುಂದೆ ಪ್ರಸಂಗ ನೋಡಿ ಮಾಡುವೆವು. ಯಾವ ಪ್ರಕಾರ ಕತ್ತಲೆ ಕವಿದ ಮನೆಯಲ್ಲಿ ಕೈಯೊಳಗೆ ದೀವಿಗೆ ತೆಗೆದುಕೊಂಡು ನೋಡಿದ ಮೇಲೆ ಎಲ್ಲ

ಪದಾರ್ಥಗಳು ಕಂಡು ಬರುತ್ತವೆ ಅದೇ ಪ್ರಕಾರ ಮೂರುಲೋಕರೂಪದ ಮನೆಯಲ್ಲಿ ಪ್ರವಚನರೂಪದ ದೀವಿಗೆಯಿಂದ ಸೂಕ್ಷ್ಮ, ಸ್ಥೂಲ, ಮೂರ್ತಿಕ, ಅಮೂರ್ತಿಕ ಈ ಎಲ್ಲ ಪದಾರ್ಥಗಳು ಕಂಡು ಬರುತ್ತವೆ, ಪ್ರವಚನರೂಪದ ನೇತ್ರಗಳಿಂದಲೇ ಮುನೀಶ್ವರರು ಚೇತನ ಮೊದಲಾದ ಗುಣಗಳಧಾರಕ ಸಮಸ್ತ ದ್ರವ್ಯಗಳ ಅವಲೋಕನ ಮಾಡುತ್ತಾರೆ. ಜಿನೇಂದ್ರರ ಪರಮಾಗವನ್ನು ಯೋಗ್ಯ ಕಾಲದಲ್ಲಿ ಅಧಿಕ ವಿನಯದಿಂದ ಓದುವುದು ಅದು ಪ್ರವಚನಭಕ್ತಿಯಿದೆ.

ಪ್ರವಚನದಲ್ಲಿ ಆರು ದ್ರವ್ಯ, ಏಳುತತ್ತ್ವ, ಒಂಭತ್ತು ಪದಾರ್ಥಗಳ ಭೇದರೂಪ ಸಮಸ್ತ ಗುಣ-ಪರ್ಯಾಯಗಳ ವರ್ಣನೆಯಿದೆ. ಅನಂತ ಭೂತಕಾಲವಾಗಿ ಹೋಗಿದೆ, ಅನಂತ ಭವಿಷ್ಯಕಾಲವಾಗುವುದು ಮತ್ತು ವರ್ತಮಾನಕಾಲ ಅವೆಲ್ಲವುಗಳ ಸ್ವರೂಪದ ವರ್ಣನೆಯಿದೆ.

ಅದರಲ್ಲಿ **ಅಧೋಲೋಕ**ದ ಏಳು ಪೃಥ್ವೀ, ಮತ್ತು ನಾರಕಿಗಳು ವಾಸಿಸುವ, ಉತ್ಪತ್ತಿಯ ಸ್ಥಾನಗಳ, ಆಯು, ಕಾಯ, ವೇದನೆ, ಗತಿ ಮೊದಲಾದವುಗಳ ವರ್ಣನೆಯಿದೆ ಮತ್ತು ಭವನವಾಸೀ ದೇವಗಳ ಏಳುಕೋಟಿ ಎಪ್ಪತ್ತೆರಡು ಲಕ್ಷ ಭವನಗಳ, ಅವರ ಆಯು, ಕಾಯ, ವೈಭವ, ವಿಕ್ರಯೆ, ಭೋಗ ಮೊದಲಾದವುಗಳ ವರ್ಣನೆಯನ್ನು ಅಧೋಲೋಕದಲ್ಲಿ ಮಾಡಿದೆ.

ಅದರಲ್ಲಿ **ಮಧ್ಯಲೋಕಕ್ಕೆ** ಸಂಬಂಧಿಸಿದ ಅಸಂಖ್ಯಾತ ದ್ವೀಪ-ಸಮುದ್ರಗಳ, ಅವುಗಳಲ್ಲಿ ಮೇರು, ಪರ್ವತ, ನದೀ, ಸರೋವರ ಮೊದಲಾದವುಗಳ ಮತ್ತು ಕರ್ಮಭೂಮಿಯ ವಿದೇಹ ಕ್ಷೇತ್ರಗಳ, ಭೋಗಭೂಮಿಯ, ತೊಂಭತ್ತಾರು ಅಂತರ್ದ್ವೀಪ ಸಂಬಂಧದ ಮನುಷ್ಯರ, ಕರ್ಮಭೂಮಿಯ ಭೋಗಭೂಮಿಯ ಮನುಷ್ಯರ ಕರ್ತವ್ಯ, ಆಯು, ಕಾಯ, ಸುಖ-ದುಃಖದ; ಹಾಗೂ ತಿರ್ಯಂಚಗಳ, ವ್ಯಂತರರ ನಿವಾಸ, ವೈಭವ, ಪರಿವಾರ, ಆಯು, ಕಾಯ, ಸಾಮರ್ಥ್ಯ, ವಿಕ್ರಿಯೆಗಳ ವರ್ಣನೆಯಿದೆ. ಮಧ್ಯಲೋಕದಲ್ಲಿ ಜ್ಯೋತಿಷೀದೇವಗಳಿದ್ದಾರೆ. ಅವರ ನಿವಾಸ, ವೈಭವ, ಪರಿವಾರ, ಆಯು, ಕಾಯ ಮೊದಲಾದವುಗಳ, ಸೂರ್ಯ, ಚಂದ್ರ, ಗ್ರಹ, ನಕ್ಷತ್ರಗಳ ನಾಲ್ಕು ಕ್ಷೇತ್ರ ಸಂಬಂಧದ ಸಂಯೋಗ ಮೊದಲಾದವುಗಳ ವರ್ಣನೆಯಿದೆ.

**ಊರ್ಧ್ವಲೋಕ**ದ ಆರವತ್ತುಮೂರು ಪಟಗಳ, ಸ್ವರ್ಗದ ಅಹಮಿಂದ್ರರ ಪಟಲುಗಳ, ಇಂದ್ರ ಮೊದಲಾದ ದೇವಗಳ ವೈಭವ, ಪರಿವಾರ, ಆಯು, ಕಾಯ, ಶಕ್ತಿ, ಗತಿ, ಸುಖ ಮೊದಲಾದವುಗಳ ವರ್ಣನೆಯಿದೆ. ಈ ಪ್ರಕಾರ ಸರ್ವಜ್ಞರಿಂದ ಪ್ರತ್ಯಕ್ಷ ನೋಡಿದ ಮೂರುಲೋಕದಲ್ಲಿನ ಸಮಸ್ತ ದ್ರವ್ಯಗಳ ಉತ್ಪಾದ, ವ್ಯಯ, ಧ್ರೌವ್ಯತೆ ಮೊದಲಾದ ಸಮಸ್ತ ವರ್ಣನೆ ಪ್ರವಚನದಲ್ಲಿ ಮಾಡಿದೆ. ಕರ್ಮಪ್ರಕೃತಿಗಳ ಬಂಧದ, ಉದಯದ, ಸತ್ವದ, ಸಂಕ್ರಮಣ ಮೊದಲಾದವುಗಳ ಸಮಸ್ತ ವರ್ಣನೆ ಆಗಮದಲ್ಲಿ ಇದೆ.

ಸಂಸಾರದಿಂದ ಉದ್ಧಾರ ಮಾಡುವಂಥ ರತ್ನತ್ರಯದ ಸ್ವರೂಪ ಮತ್ತು ರತ್ನತ್ರಯ ಪ್ರಾಪ್ತವಾಗುವ ಉಪಾಯದ ವರ್ಣನೆ ಪರಮಾಗಮದಲ್ಲಿಯೇ ಇದೆ. ಗೃಹಸ್ಥಾವಸ್ಥೆಯಲ್ಲಿ ಶ್ರಾವಕ ಧರ್ಮದ ಜಘನ್ಯ-ಮಧ್ಯಮ, ಉತ್ಕೃಷ್ಟ ಚರ್ಯೆಯ ಮತ್ತು ಶ್ರಾವಕರ ವ್ರತ-ಸಂಯಮ ಮೊದಲಾದ ವ್ಯವಹಾರ-ಪರಮಾರ್ಥರೂಪ ಪ್ರವೃತ್ತಿಯ ವರ್ಣನೆಯನ್ನು ಪ್ರವಚನದಿಂದಲೇ ತಿಳಿಯುತ್ತಾರೆ. ಗೃಹತ್ಯಾಗಿ ಮುನಿರಾಜರುಗಳ ಮಹಾವ್ರತ, ಇಪ್ಪತ್ತೆಂಟು ಮೂಲಗುಣ, ಎಂಭತ್ತಾನ್ಲುಕ್ಕ ಲಕ್ಷ ಉತ್ತರಗುಣ, ಸ್ವಾಧ್ಯಾಯ, ಧ್ಯಾನ,ಆಹಾರ-ವಿಹಾರ,ಸಾಮಾಯಿಕ ಮೊದಲಾದ ಚಾರಿತ್ರ,ಚರ್ಯೆಯ, ಧರ್ಮಧ್ಯಾನ -ಶುಕ್ಲಧ್ಯಾನ ಮೊದಲಾದವುಗಳ, ಸಲ್ಲೇಖನಾಮರಣದ ಸಮಸ್ತ ಚರ್ಯೆಯ ವರ್ಣನೆಯು ಪ್ರವಚನದಲ್ಲಿ ಇದೆ.

ಹದಿನಾಲ್ಕು ಗುಣಸ್ಥಾನಗಳ ಸ್ವರೂಪ, ಹದಿನಾಲ್ಕು ಜೀವಸಮಾಸ, ಹದಿನಾಲ್ಕು ಮಾರ್ಗಾಣಗಳ ವರ್ಣನೆಯು ಪ್ರವಚದಿಂದಲೇ ತಿಳಿದುಬರುತ್ತದೆ. ಜೀವಗಳ ಒಂದುನೂರಾತೊಂಭತ್ತೊಂಭತ್ತುವರೆ ಲಕ್ಷ ಕೋಟಿ ಕುಲ, ಎಂಭತ್ತಾನ್ಲುಕ್ಕ ಲಕ್ಷ ಜಾತಿಯ ಯೋನಿ ಸ್ಥಾನಗಳು ಪ್ರವಚನದಿಂದಲೇ ತಿಳಿದು ಬರುತ್ತವೆ. ನಾಲ್ಕು ಅನುಯೋಗ, ನಾಲ್ಕು ಶಿಕ್ಷಾವ್ರತ, ಮೂರು ಗುಣವ್ರತ ಮತ್ತು ನಾಲ್ಕು ಗತಿಗಳ ಭೇದ,ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರದ ಸ್ವರೂಪವನ್ನು ಭಗವಂತರು ಹೇಳಿದ ಆಗಮದಿಂದಲೇ ತಿಳಿಯುತ್ತಾರೆ.

ಹನ್ನೆರಡು ಭಾವನೆ, ಹನ್ನೆರಡು ತಪ, ಹನ್ನೆರಡು ಅಂಗ, ಹದಿನಾಲ್ಕುಪೂರ್ವ, ಹದಿನಾಲ್ಕು ಪ್ರಕೀರ್ಣಕಗಳ ಸ್ವರೂಪವು ಆಗಮದಿಂದಲೇ ತಿಳಿದುಬರುತ್ತದೆ. ಉತ್ಸರ್ಪಿಣಿ-ಅವಸರ್ಪಿಣಿ ಕಾಲದ ಚಕ್ರ, ಅದರೊಳಗೆ ಆರು ಆರು ಕಾಲದ ಭೇದಗಳಲ್ಲಿ ಪದಾರ್ಥದ ಪರಿಣತಿಯ ಭೇದಗಳ ಸ್ವರೂಪವು ಆಗಮದಿಂದಲೇ ತಿಳಿದುಬರುತ್ತದೆ. ಕುಲಂಕರ, ತೀರ್ಥಂಕರ, ಚಕ್ರವರ್ತಿ, ಬಲದೇವ, ವಾಸುದೇವ ಪ್ರತಿವಾಸುದೇವ ಇತ್ಯಾದಿಗಳ ಉತ್ಪತ್ತಿ, ಪ್ರವೃತ್ತಿ, ಧರ್ಮತೀರ್ಥದ ಪ್ರವರ್ತನೆ, ಚಕ್ರವರ್ತಿಯ ಸಾಮ್ರಾಜ್ಯ, ವಾಸುದೇವ ಮೊದಲಾದವರ ವೈಭವ, ಪರಿವಾರ, ಐಶ್ವರ್ಯ ಮೊದಲಾದುವನ್ನು ಆಗಮದಿಂದಲೇ ತಿಳಿಯುತ್ತಾರೆ. ಜೀವ ಮೊದಲಾದ ದ್ರವ್ಯಗಳ ಪ್ರಭಾವವನ್ನು ಆಗಮದಿಂದಲೇ ತಿಳಿಯುತ್ತಾರೆ.

**ಭಕ್ತಿಪೂರ್ವಕ ಆಗಮದ ಸೇವನೆಯಿಲ್ಲದೆ ಮನುಷ್ಯ ಜನ್ಮವೂ ಪಶುವಿನ ಸಮಾನವಿದೆ.** ಭಗವಾನ ವೀತರಾಗ ಸರ್ವಜ್ಞ ದೇವರು ಸಮಸ್ತ ಲೋಕಾಲೋಕದ ಅನಂತಾನಂತ ಪದಾರ್ಥಗಳನ್ನು ಭೂತ, ಭವಿಷ್ಯ, ವರ್ತಮಾನ ಕಾಲವರ್ತಿ ಪರ್ಯಾಯಗಳೊಡನೆ ಒಂದು ಸಮಯದಲ್ಲಿ ಯುಗಪತ್ ಕ್ರಮರಹಿತ ಹಸ್ತರೇಖೆಯಸಮಾನ ಪ್ರತ್ಯಕ್ಷ ನೋಡಿದ್ದಾರೆ ತಿಳಿದಿದ್ದಾರೆ, ಅದೇ ಪ್ರಕಾರ ಕಥಿತ ಸಮಸ್ತ ವಸ್ತುವಿನ ಸ್ವರೂಪವನ್ನು ಸಪ್ತ ಋದ್ಧಿ ಮತ್ತು ನಾಲ್ಕು ಜ್ಞಾನಧಾರಿಯಾದ ಗಣಧರ ದೇವರು ದ್ವಾದಶಾಂಗರೂಪದಲ್ಲಿ ರಚಿಸಿದ್ದಾರೆ.

ದೇವಾಧಿದೇವ, ಪರಮಪೂಜ್ಯ, ಧರ್ಮತೀರ್ಥದ ಪ್ರವರ್ತನೆ ಮಾಡುವಂಥ, ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖರೂಪ ಅಂತರಂಗ ಲಕ್ಷ್ಮೀ;ಸಮವಸರಣ ಮೊದಲಾದ ಬಹಿರಂಗ ಲಕ್ಷ್ಮಿಯಿಂದ ಮಂಡಿತ, ಇಂದ್ರ ಮೊದಲಾದ ಅಸಂಖ್ಯಾತ ದೇವಗಳ ಸಮೂಹದಿಂದ ವಂದಿತ; ಮೂವತ್ತಾನ್ಲು ಅತಿಶಯ, ಎಂಟು ಪ್ರಾತಿಹಾರ್ಯ ಮೊದಲಾದ ಅನುಪಮ ಋದ್ಧಿಸಹಿತ; ಕ್ಷುಧೆ-ತೃಷೆ ಮೊದಲಾದ ಹದಿನೆಂಟು ದೋಷರಹಿತ; ಸಮಸ್ತ ಜೀವಗಳಿಗೆ ಪರಮ ಉಪಕಾರಕ; ಲೋಕಾಲೋಕದ ಅನಂತಾನಂತ ದ್ರವ್ಯಗಳ ಗುಣ-ಪರ್ಯಾಯಗಳ ಕ್ರಮರಹಿತ ಯುಗಪದ್ ಜ್ಞಾನದ ಧಾರಕ; ಅನಂತ ಶಕ್ತಿಯಧಾರಕ; ಸಂಸಾರದಲ್ಲಿ ಮುಳುಗುತ್ತಿರುವ ಪ್ರಾಣಿಗಳಿಗೆ ಹಸ್ತಾವಲಂಬನ ಕೊಡುವಂಥ; ಸಮಸ್ತ ಜೀವರುಗಳಿಗೆ ದಯಾಳು, ಪರಮಾತ್ಮ, ಪರಮೇಶ್ವರ, ಪರಮಬ್ರಹ್ಮ, ಪರಮೇಷ್ಠೀ, ಸ್ವಯಂಭೂ, ಅಜರ, ಅಮರ, ಅರಹಂತ ಮೊದಲಾದ ನಾಮಗಳಿಂದ ಪ್ರಸಿದ್ಧ; ಅಶರಣ ಪ್ರಾಣಿಗಳಿಗೆ ಪರಮಶರಣ, ಅಂತಿಮ ಪರಮ ಔದಾರಿಕ ಶರೀರದಲ್ಲಿ ವಿರಾಜಮಾನ; ಗಣಧರ ಮೊದಲಾದ ಮುನಿಗಳಿಂದ ಅವರ ಚರಣಗಳು ವಂದನೀಯವಿವೆ; ಕಂಠ, ತೌಲು, ತುಟಿ, ನಾಲಿಗೆ ಮೊದಲಾದವುಗಳ ಚಲನೆಯಿಲ್ಲದೆ, ಇಚ್ಛೆಯಿಲ್ಲದೆ ಅನೇಕ ಪ್ರಾಣಿಗಳ ಪುಣ್ಯದ ಪ್ರಭಾವದಿಂದ ಉತ್ಪನ್ನವಾದ, ಆರ್ಯ-ಅನಾರ್ಯಸಮಸ್ತ ದೇಶಗಳ ಪ್ರಾಣಿಗಳ ತಿಳಿವಳಿಕೆಯಲ್ಲಿ ಬರುವಂಥ, ಸಮಸ್ತ ಪಾಪದ ನಾಶಕವಾದ ದಿವ್ಯಧ್ವನಿಯ ಮೂಲಕ ಭವ್ಯಜೀವರುಗಳ ಮೋಹಾಂಧಕಾರವನ್ನು ನಾಶ ಮಾಡುವಂಥ, ಅರವತ್ತು ನಾಲ್ಕು ಚಾಮರುಗಳು ಬೀಸುತ್ತಿರುವಂಥ, ಮುಕ್ಕೊಡೆ-ಎಂಟು ಪ್ರಾತಿಹಾರ್ಯಗಳ ಧಾರಕ, ರತ್ನಮಯ ಸಿಂಹಾಸನದ ಮೇಲೆ ನಾಲ್ಕು ಅಂಗುಲ ಅಂತರಾಳದಲ್ಲಿ ವಿರಾಜಮಾನ; ಭಗವಾನ ಸಕಲಪೂಜ್ಯ ಪರಮ ಭಟ್ಟಾರಕ ಶ್ರೀ ವರ್ಧಮಾನ ದೇವಾಧಿದೇವರು ಮೋಕ್ಷ ಮಾರ್ಗವನ್ನು ಪ್ರಕಾಶಿತಪಡಿಸುವ ಸಲುವಾಗಿ ಸಮಸ್ತ ಪದಾರ್ಥಗಳ ಸ್ವರೂಪ ಸಾತಿಶಯವನ್ನು ದಿವ್ಯಧ್ವನಿಯ ಮೂಲಕ ಪ್ರಕಟ ಮಾಡಿದ್ದಾರೆ.

ಅದೇ ಸಮಯದಲ್ಲಿ ನಿಕಟವರ್ತಿ ನಿರ್ಗ್ರಂಥ ಋಷೀಶ್ವರರುಗಳಿಂದ ವಂದನೀಯ, ಸಪ್ತಋದ್ಧಿಗಳಿಂದ ಸಮೃದ್ಧ, ನಾಲ್ಕು ಜ್ಞಾನದ ಧಾರಕ ಶ್ರೀ ಗೌತಮಗಣಧರದೇವರು ಕೋಷ್ಠಬುದ್ಧಿ ಮೊದಲಾದ ಋದ್ಧಿಗಳ ಪ್ರಭಾವದಿಂದ ಭಗವಂತರಿಂದ ಹೇಳಲಾದ ಅರ್ಥವನ್ನು ವಿಸ್ಮರಣೆ ಮಾಡದೆ, ಭಗವಂತರ ಮೂಲಕ ಹೇಳಲಾದ ಅರ್ಥವನ್ನು ಧಾರಣ ಮಾಡಿ ದ್ವಾದಶಾಂಗ ರೂಪದ ರಚನೆ ಮಾಡಿದ್ದಾರೆ.

**ಯಾವಾಗ ಚತುರ್ಥಕಾಲವು ಮೂರು ವರುಷ ಎಂಟು ತಿಂಗಳು ಹದಿನೈದು ದಿವಸ ಬಾಕಿ ಉಳಿದಿತ್ತು ಆಗ ಶ್ರೀ ವರ್ಧಮಾನ ಸ್ವಾಮಿಗಳು ನಿರ್ವಾಣಕ್ಕೆ ಪ್ರಾಪ್ತರಾದರು.** ಅನಂತರ ಅರವತ್ತೆರಡು ವರುಷಗಳವರೆಗೆ ಗೌತಮಸ್ವಾಮಿ, ಸುಧರ್ಮಾಚಾರ್ಯ,ಜಂಬೂಸ್ವಾಮಿ-ಈ ಮೂವರು ಕೇವಲಿಗಳುಕೇವಲಜ್ಞಾನದಮೂಲಕಸಮಸ್ತ ಪ್ರರೂಪಣೆ ಮಾಡಿದರು.

ಅದರ ನಂತರ ಕೇವಲಜ್ಞಾನವಾಗುವುದರ ಅಭಾವವಾಗಿ ಹೋಯಿತು. ಅದರನಂತರ ಕ್ರಮದಿಂದ ವಿಷ್ಣು, ನಂದಿಮಿತ್ರ, ಅಪರಾಜಿತ, ಗೋವರ್ಧನ, ಭದ್ರಬಾಹು-ಈ ಐವರು ಮುನಿಗಳು ದ್ವಾದಶಾಂಗದ ಧಾರಕರಾದ ಶ್ರುತಕೇವಲಿಗಳಾದರು. ಅವರ ಸಮಯವು ಕ್ರಮದಿಂದ ಒಟ್ಟಿಗೆ ಒಂದು ನೂರು ವರುಷಗಳದಾಗಿತ್ತು. ಅವರ ಸಮಯದಲ್ಲಿ ಕೇವಲೀ ಭಗವಂತರ ಸಮಾನವಾಗಿಯೇ ಪದಾರ್ಥಗಳ ಜ್ಞಾನ ಮತ್ತು ಪ್ರರೂಪಣೆಯು ಉಳಿಯಿತು.

ಅದರ ನಂತರ ವಿಶಾಖಾಚಾರ್ಯ, ಪ್ರೋಷ್ಠಿಲಾಚಾರ್ಯ, ಕ್ಷತ್ರಿಯ, ಜಯಸೇನ, ನಾಗಸೇನ, ಸಿದ್ಧಾರ್ಥ, ಧೃತಿಷೇಣ, ವಿಜಯ, ಬುದ್ಧಿಮಾನ, ಗಂಗದೇವ, ಧರ್ಮಸೇನ, ಈ ಹನ್ನೊಂದು ಪರಮ ನಿರ್ಗ್ರಂಥ ಮುನೀಶ್ವರರು ದಶಪೂರ್ವಗಳ ಧಾರಕರಾಗಿ ಕ್ರಮದಿಂದ ಒಟ್ಟಿಗೆ ಒಂದು ನೂರಾ ಎಂಭತ್ತು ಮೂರು ವರ್ಷದಲ್ಲಿ ಆದರು. ಅವರು ಕೂಡ ಯಥಾವತ್ ಪ್ರರೂಪಣೆ ಮಾಡಿದರು.

ಅದರ ನಂತರ ನಕ್ಷತ್ರ, ಜಯಪಾಲ, ಪಾಂಡುನಾಮು, ಧ್ರುವಸೇನ, ಕಂಸಾಚಾರ್ಯ-ಈ ಐವರು ಮಹಾಮುನಿಗಳು ಹನ್ನೊಂದು ಅಂಗದ ಜ್ಞಾನದ ಪಾರಂಗತರು ಅನುಕ್ರಮದಿಂದ ಇನ್ನೂರಾ ಇಪ್ಪತ್ತು ವರ್ಷದಲ್ಲಿ ಆದರು, ಅವರು ಕೂಡ ಯಥಾವತ್ ಪ್ರರೂಪಣೆ ಮಾಡಿದರು. ಅದರ ನಂತರ ಸುಭದ್ರ, ಯಶೋಭದ್ರ, ಭದ್ರಬಾಹು, ಮಹಾಯಶ, ಲೋಹಾಚಾರ್ಯ - ಈ ಐವರು ಮಹಾಮುನಿಗಳು ಒಂದು ಅಂಗ ಜ್ಞಾನದ ಪಾರಂಗತರಾಗಿ ಅನುಕ್ರಮದಿಂದ ಒಂದು ನೂರಾ ಹದಿನೆಂಟು ವರುಷದಲ್ಲಿ ಆದರು.

ಈ ಪ್ರಕಾರ ಭಗವಾನ ಮಹಾವೀರ ಜಿನೇಂದ್ರರು ನಿರ್ವಾಣ ಹೊಂದಿದ ನಂತರ ಆರುನೂರಾ ಎಂಭತ್ತು ಮೂರು ವರ್ಷಗಳವರೆಗೆ ಅಂಗಗಳ ಜ್ಞಾನವು ಉಳಿಯಿತು. ಅದರ ನಂತರ ಈ ಕಾಲದ ನಿಮಿತ್ತದಿಂದ ಬುದ್ಧಿ, ವೀರ್ಯ ಮೊದಲಾದವುಗಳ ಮಂದತೆಯಾಗುತ್ತ ಹೋದ ಮೇಲೆ ಶ್ರೀ ಕುಂದಕುಂದದೇವ ಮೊದಲಾದ ಅನೇಕ ನಿರ್ಗ್ರಂಥ ವೀತರಾಗೀ ಮುನಿಗಳು ಅಂಗದ ವಸ್ತುಗಳ ಜ್ಞಾನಿಯಾದರು. ಅವರದೇ ಪರಂಪರೆಯಲ್ಲಿ ಶ್ರೀ ಉಮಾಸ್ವಾಮಿಯಾದರು. ಹೀಗೆ ಪಾಪದಿಂದ ಭಯಭೀತ, ಜ್ಞಾನ-ವಿಜ್ಞಾನ ಸಂಪನ್ನ, ಪರಮಸಂಯಮಗುಣ ಮಂಡಿತ, ಗುರುಗಳ ಪರಂಪರೆಯಿಂದ ಶ್ರುತದ ಅವ್ಯುಚ್ಛಿನ್ನ ಅರ್ಥದ ಧಾರಕರಾದ ವೀತರಾಗಿಗಳ ಪರಂಪರೆಯು ನಡೆದುಕೊಂಡು ಬಂದಿತು.

ಅವರುಗಳಲ್ಲಿ **ಭಗವಾನ ಕುಂದಕುಂದ ದೇವರು** ಸಮಯಸಾರ, ಪ್ರವಚನಸಾರ, ನಿಯಮಸಾರ, ಪಂಚಾಸ್ತಿಕಾಯ, ಅಷ್ಟಪಾಹುಡ ಮೊದಲಾದವುಗಳಿಂದ ಹಿಡಿದು ಅನೇಕ ಗ್ರಂಥಗಳ ರಚನೆ ಮಾಡಿದ್ದಾರೆ ಇಂದು ಪ್ರತ್ಯಕ್ಷ ಅವುಗಳ ಅಭ್ಯಾಸ ನಡೆಯುತ್ತಿದೆ. ವಿನಯಪೂರ್ವಕವಾಗಿ ಈ ಗ್ರಂಥಗಳ ಆರಾಧನೆ ಮಾಡುವುದು ಅದು ಪ್ರವಚನ ಭಕ್ತಿಯಿದೆ.

ಶ್ರೀ ಉಮಾಸ್ವಾಮಿಯು ಹತ್ತು ಅಧ್ಯಾಯಗಳಲ್ಲಿ ತತ್ತ್ವಾರ್ಥಸೂತ್ರದ ರಚನೆ ಮಾಡಿದ್ದಾರೆ. ಆ ತತ್ತ್ವಾರ್ಥಸೂತ್ರದ ಮೇಲೆ **ಶ್ರೀ ಪೂಜ್ಯಪಾದ ಸ್ವಾಮಿ**ಯು ಸರ್ವಾರ್ಥಸಿದ್ಧಿನಾಮದ ಟೀಕೆ ರಚಿಸಿದ್ದಾರೆ. ಆ ತತ್ತ್ವಾರ್ಥಸೂತ್ರದ ಮೇಲೆಯೇ **ಶ್ರೀ ಅಕಲಂಕ**ದೇವರು ಹದಿನಾರು ಸಾವಿರ ಶ್ಲೋಕಗಳಲ್ಲಿ ರಾಜವಾರ್ತಿಕ ಟೀಕೆ ರಚಿಸಿದ್ದಾರೆ; ಮತ್ತು **ಶ್ರೀ ವಿದ್ಯಾನಂದಿ ಸ್ವಾಮಿ**ಯು ಇಪ್ಪತ್ತು ಸಾವಿರ ಶ್ಲೋಕಗಳಲ್ಲಿ ಶ್ಲೋಕವಾರ್ತಿಕ ಟೀಕೆ ರಚಿಸಿದ್ದಾರೆ; ಹಾಗೂ **ಶ್ರೀ ಸಮಂತಭದ್ರ ಸ್ವಾಮಿ**ಯು ಎಂಭತ್ತು ನಾಲ್ಕು ಸಾವಿರ ಶ್ಲೋಕಗಳಲ್ಲಿ ಗಂಧಹಸ್ತೀ-ಮಹಾಭಾಷ್ಯನಾಮದ ಮಹಾನ ಟೀಕೆ ರಚಿಸಿದ್ದಾರೆ, ಆದರೆ ಅದು ಇಂದು ಈ ಸಮಯದಲ್ಲಿ ಉಪಲಬ್ಧವಿಲ್ಲ.

ಗಂಧಹಸ್ತೀ ಮಹಾಭಾಷ್ಯದ ಪ್ರಾರಂಭದ ಮಂಗಲಾಚರಣೆಯ ಮೇಲೆ **ಶ್ರೀ ಸಮಂತಭದ್ರ ಸ್ವಾಮಿ**ಯು ಒಂದು ನೂರಾ ಹದಿನೈದು ಶ್ಲೋಕಗಳಲ್ಲಿ ದೇವಾಗಮಸ್ತೋತ್ರದ ರಚನೆ ಮಾಡಿದ್ದಾರೆ, ಅದನ್ನು ಆಪ್ತಮೀಮಾಂಸೆಯೆಂದೂ ಹೇಳುತ್ತಾರೆ. **ಶ್ರೀ ಅಕಲಂಕ ದೇವರು** ದೇವಾಗಮಸ್ತೋತ್ರದ ಮೇಲೆ ಎಂಟುನೂರು ಶ್ಲೋಕಗಳಲ್ಲಿ ಅಷ್ಟಶತೀನಾಮದ ಟೀಕೆ ರಚಿಸಿದ್ದಾರೆ; ಅದೇ ದೇವಾಗಮ ಅಷ್ಟಶತೀಯ ಮೇಲೆ **ಶ್ರೀ ವಿದ್ಯಾನಂದೀ ಸ್ವಾಮಿ**ಯು ಎಂಟು ಸಾವಿರ ಶ್ಲೋಕಗಳಲ್ಲಿ ಅಷ್ಟಸಹಸ್ರೀನಾಮದ ಟೀಕೆ ರಚಿಸಿದ್ದಾರೆ; ಅದರಲ್ಲಿ ಹದಿನಾರು ಸಾವಿರ ಟಿಪ್ಪಣಿಗಳಿವೆ.

**ಶ್ರೀ ವಿದ್ಯಾನಂದಿ ಸ್ವಾಮಿ**ಯು ಆಪ್ತರ ಪರೀಕ್ಷೆಯ ರೂಪದ ಮೂರು ಸಾವಿರ ಶ್ಲೋಕಗಳಲ್ಲಿ ಆಪ್ತ ಪರೀಕ್ಷೆ ನಾಮದ ಗ್ರಂಥ ರಚಿಸಿದ್ದಾರೆ. **ಶ್ರೀ ಮಾಣಿಕ್ಯನಂದೀ ಆಚಾರ್ಯ**ರು ಪರೀಕ್ಷಾಮುಖ ಗ್ರಂಥ ಬರೆದಿದ್ದಾರೆ. ಪರೀಕ್ಷಾಮುಖದ ದೊಡ್ಡ ಟೀಕೆಯನ್ನೂ **ಶ್ರೀ ಪಭಾಚಂದ್ರ ಆಚಾರ್ಯ**ರು ಹನ್ನೆರಡು ಸಾವಿರ ಶ್ಲೋಕಗಳಲ್ಲಿ ಪ್ರಮೇಯಕಮಲಮಾರ್ತಂಡ ನಾಮ ದಿಂದ ರಚಿಸಿದ್ದಾರೆ. ಅದರದೇ ಚಿಕ್ಕ ಟೀಕೆ **ಶ್ರೀ ಅನಂತವೀರ್ಯ ಆಚಾರ್ಯ**ರು ಪ್ರಮೇಯಚಂದ್ರಿಕಾ ನಾಮದಿಂದ ರಚಿಸಿದ್ದಾರೆ. **ಶ್ರೀ ಅಕಲಂಕ ದೇವರು** ಲಘುತ್ರಯೀ ನಾಮದ ಗ್ರಂಥ ಬರೆದಿದ್ದಾರೆ. ಅದರ ಮೇಲೆ **ಶ್ರೀ ಪ್ರಭಾಚಂದ್ರ ಆಚಾರ್ಯ**ರು ಹದಿನಾರು ಸಾವಿರ ಶ್ಲೋಕಗಳಲ್ಲಿ ನ್ಯಾಯಕುಮುದಚಂದ್ರೋದಯ ನಾಮದ ಗ್ರಂಥ ರಚಿಸಿದ್ದಾರೆ ಮತ್ತು ಇನ್ನೂ ಕೆಲವು ನ್ಯಾಯದ ಗ್ರಂಥಗಳಿವೆ; ಪ್ರಮಾಣಪರೀಕ್ಷೆ, ಪ್ರಮಾಣನಿರ್ಣಯ, ಪ್ರಮಾಣಮೀಮಾಂಸೆ, ಬಾಲಾವಬೋಧ, ನ್ಯಾಯದೀಪಿಕೆ ಇತ್ಯಾದಿ ಜಿನಧರ್ಮದ ಸ್ತಂಭಗಳು, ಪ್ರಮಾಣದಿಂದ ದ್ರವ್ಯಗಳ ನಿರ್ಣಯ ಮಾಡಿಸುವಂಥ ಅನೇಕಾಂತದಿಂದ ತುಂಬಿಕೊಂಡ ದ್ರವ್ಯಾನುಯೋಗದ ಗ್ರಂಥಗಳು ಜಯವಂತವಾಗಿ ಪ್ರವರ್ತಿಸುತ್ತಿವೆ.

ಕರಣಾನುಯೋಗದ ಗೊಮ್ಮಟಸಾರ, ಲಬ್ಧಿಸಾರ, ಕ್ಷಪಣಾಸಾರ, ತ್ರಿಲೋಕಸಾರ ಮೊದಲಾದ ಅನೇಕ ಗ್ರಂಥಗಳಿವೆ. ಚರಣಾನುಯೋಗದ ಮೂಲಾಚಾರ, ಆಚಾರಸಾರ, ರತ್ನಕರಂಡ ಶ್ರಾವಕಾಚಾರ, ಭಗವತೀ ಆರಾಧನೆ, ಸ್ವಾಮಿಕಾರ್ತಿಕೇಯಾನುಪ್ರೇಕ್ಷೆ, ಆತ್ಮಾನುಶಾಸನ, ಪದ್ಮನಂದೀ ಪಂಚವಿಂಶತಿಕೆ, ಪುರುಷಾರ್ಥ ಸಿದ್ಧ್ಯುಪಾಯ, ಜ್ಞಾನಾರ್ಣವ ಇತ್ಯಾದಿ ಅನೇಕ ಗ್ರಂಥಗಳಿವೆ. ಜಿನೇಂದ್ರ ವ್ಯಾಕರಣವು ಅನೇಕಾಂತದಿಂದ ತುಂಬಿಕೊಂಡಿದೆ. ಪ್ರಥಮಾನುಯೋಗದ **ಶ್ರೀ ಜಿನಸೇನಾಚಾರ್ಯ** ಕೃತ ಆದಿಪುರಾಣ, **ಶ್ರೀ ಗುಣಭದ್ರಾಚಾರ್ಯ**ಕೃತ ಉತ್ತರ ಪುರಾಣ ಇತ್ಯಾದಿ ಜಿನೇಂದ್ರರ ಪರಮಾಗಮದ ಅನುಸಾರ ಉಪದೇಶೀ ಗ್ರಂಥ ಹಾಗೂ ಪುರಾಣ,ಚರಿತ್ರ, ಆಚಾರ ನಿರೂಪಣೆಯ ಅನೇಕ ಗ್ರಂಥಗಳಿವೆ; ಅವುಗಳನ್ನು ಅತ್ಯಂತ ಭಕ್ತಿಯಿಂದ ಪಠಿಸುವುದು, ಶ್ರವಣ ಮಾಡುವುದು, ವ್ಯಾಖ್ಯಾನ ಮಾಡುವುದು, ವಂದನೆ ಮಾಡುವುದು, ಬರೆಯುವುದು, ಬರೆಸುವುದು ಅದೆಲ್ಲವು ಪ್ರಚವನ ಭಕ್ತಿಯಿದೆ.

**ನನ್ನದು ಶಾಸ್ತ್ರದ ಅಭ್ಯಾಸದಲ್ಲಿ ಯಾವ ದಿವಸವು ಹೋಗುತ್ತದೆ ಅದು ಧನ್ಯವಿದೆ.** ಪರಮಾಗಮದ ಅಭ್ಯಾಸವಿಲ್ಲದೆ ನಮ್ಮದು ಯಾವ ಸಮಯ ಹೋಗುತ್ತದೆ ಅದು ವ್ಯರ್ಥವಿದೆ. ಸ್ವಾಧ್ಯಾಯವಿಲ್ಲದೆ ಶುಭ ಧ್ಯಾನವಾಗುವುದಿಲ್ಲ, ಶಾಸ್ತ್ರದ ಅಭ್ಯಾಸವಿಲ್ಲದೆ ಪಾಪದಿಂದ ಬಿಡುಗಡೆಯಿಲ್ಲ, ಕಷಾಯಗಳ ಮಂದತೆಯಾಗುವುದಿಲ್ಲ, **ಶಾಸ್ತ್ರದ ಸೇವನೆಯಿಲ್ಲದೆ ಸಂಸಾರ, ಶರೀರ, ಭೋಗಗಳಿಂದ ವೈರಾಗ್ಯವು ಉತ್ಪನ್ನವಾಗುವುದಿಲ್ಲ.** ಸಮಸ್ತ ವ್ಯವಹಾರದ ಉಜ್ವಲತೆ ಮತ್ತು ಪರಮಾರ್ಥದ ವಿಚಾರವು ಆಗಮದ ಸೇವನೆಯಿಂದಲೇ ಆಗುತ್ತದೆ. ಶ್ರುತದ ಸೇವನೆಯಿಂದ ಜಗತ್ತಿನಲ್ಲಿ ಮನ್ನಣೆ, ಉಚ್ಚತೆ, ಉಜ್ವಲ ಯಶಸ್ಸು, ಆದರ-ಸತ್ಕಾರ ಮೊದಲಾದವು ಪ್ರಾಪ್ತವಾಗುತ್ತವೆ. ಸಮ್ಯಗ್ಜ್ಞಾನವೇ ಪರಮ ಬಂಧುವಿದೆ, ಪರಮ ಮಿತ್ರವಿದೆ, ಉತ್ಕೃಷ್ಟಧನವಿದೆ. ಸಮ್ಯಗ್ಜ್ಞಾನವು ಅವಿನಾಶಿಯಾದ ಧನವಿದೆ. ಸ್ವದೇಶದಲ್ಲಿ, ಪರದೇಶದಲ್ಲಿ, ಸುಖದ ಅವಸ್ಥೆಯಲ್ಲಿ, ದುಃಖದ ಅವಸ್ಥೆಯಲ್ಲಿ, ಸಂಪತ್ತಿನಲ್ಲಿ, ವಿಪತ್ತಿನಲ್ಲಿ ಪರಮ ಶರಣಭೂತವು ಸಮ್ಯಗ್ಜ್ಞಾನವೇ ಇದೆ. ಜ್ಞಾನವೇ ಸ್ವಾಧೀನವೂ ಅವಿನಾಶಿಯೂ ಆದ ಧನವಿದೆ.

ಆದುದರಿಂದ ಶಾಸ್ತ್ರಗಳ ಅರ್ಥದ ಸೇವನೆಯನ್ನೇ ಮಾಡಬೇಕು. ತಮ್ಮ ಆತ್ಮನಿಗೆ ನಿತ್ಯ ಜ್ಞಾನದಾನವನ್ನೇ ಮಾಡಬೇಕು, ತಮ್ಮ ಮಕ್ಕಳಿಗೆ ಹಾಗೂ ಶಿಷ್ಯರಿಗೆ ಜ್ಞಾನದಾನವನ್ನೇ ಮಾಡಬೇಕು. **ಜ್ಞಾನದಾನ ಕೊಡುವುದರ ಸಮಾನ ಕೋಟ್ಯಂತರ ಧನದ ದಾನವು ಕೂಡ ಇಲ್ಲ.** ಧನವಂತೂ ಮದವನ್ನು ಉತ್ಪನ್ನ ಮಾಡುತ್ತದೆ. ವಿಷಯಗಳಲ್ಲಿ ಸಿಲುಕಿಸಿಬಿಡುತ್ತದೆ, ದುರ್ಧ್ಯಾನ ಮಾಡಿಸುತ್ತದೆ, ಸಂಸಾರರೂಪದ ಅಂಧಕೂಪದಲ್ಲಿ ಮುಳುಗಿಸುತ್ತದೆ. ಆದುದರಿಂದ ಜ್ಞಾನದಾನಕ್ಕೆ ಸಮಾನವಾಗಿ ಬೇರೆ ದಾನಗಳಿಲ್ಲ.

ಯಾರು ನಿತ್ಯ ಒಂದು ಶ್ಲೋಕ, ಅರ್ಧಶ್ಲೋಕ, ಒಂದು ಪದ ಮಾತ್ರದ ಅಭ್ಯಾಸ ಮಾಡುತ್ತಾನೆ ಅವನು ಶಾಸ್ತ್ರಗಳ ಅರ್ಥದ ಪಾರಂಗತನಾಗಿ ಹೋಗುತ್ತಾನೆ. ವಿದ್ಯೆಯೇ ಪರಮದೇವತೆಯಿದೆ. ಯಾವ ಮಾತಾ-ಪಿತರು ಜ್ಞಾನದ ಅಭ್ಯಾಸ ಮಾಡಿಸುತ್ತಾರೆ. ಅವರು ಕೋಟ್ಯಂತರ ರೂಪಾಯಿ ಕೊಟ್ಟಂತಿದೆ. ಯಾರು ಸಮ್ಯಗ್ಜ್ಞಾನ ಕೊಡುವಂಥ ಗುರುಗಳಿದ್ದಾರೆ ಅವರ ಉಪಕಾರದ ಸಮಾನವಾಗಿ ಮೂರು ಲೋಕದಲ್ಲಿ ಬೇರೆ ಯಾವ ಉಪಕಾರವಿಲ್ಲ. **ಯಾವನು ಜ್ಞಾನ ಕೊಡುವಂಥ**

**ಗುರುಗಳ ಉಪಕಾರದ ಲೋಪ ಮಾಡುತ್ತಾನೆ. ಅವನ ಸಮಾನನಾದ ಕೃತಘ್ನನು ಬೇರೆ ಯಾವನಿಲ್ಲ, ಬೇರೆ ಪಾಪಿಯಿಲ್ಲ.** ಜ್ಞಾನದ ಅಭ್ಯಾಸವಿಲ್ಲದೆ ವ್ಯವಹಾರ-ಪರಮಾರ್ಥಗಳೆರಡರಲ್ಲೂ ಮೂಢನಿದ್ದಾನೆ. ಆದುದರಿಂದ ಪ್ರವಚನ ಭಕ್ತಿಯೇ ಪರಮ ಕಲ್ಯಾಣಕಾರಿಯಿದೆ. **ಪ್ರವಚನದ ಸೇವನೆಯಿಲ್ಲದೆ ಮನುಷ್ಯನು ಪಶುವಿನ ಸಮಾನನಿದ್ದಾನೆ.** ಈ ಪ್ರವಚನ ಭಕ್ತಿಯು ಸಾವಿರಾರು ದೋಷಗಳ ನಾಶ ಮಾಡುವಂಥದ್ದಿದೆ. ಭಕ್ತಿಪೂರ್ವಕ ಈ ಭಕ್ತಿಯ ಆರತಿ ಮಾಡಬೇಕು. ಇದರಿಂದ ಸಮ್ಯಗ್ದರ್ಶನದ ಉಜ್ವಲತೆಯಾಗುತ್ತದೆ. ಈ ಪ್ರಕಾರ ಪ್ರವಚನ ಭಕ್ತಿ ಭಾವನೆಯ ವರ್ಣನೆ ಮಾಡಲಾಯಿತು.

## ಆವಶ್ಯಕ ಪರಿಹಾಣಿ ಭಾವನೆ

ಈಗ ಆವಶ್ಯಕ ಪರಿಹಾಣಿ ನಾಮದ ಹದಿನಾಲ್ಕನೆಯ ಭಾವನೆಯ ವರ್ಣನೆ ಮಾಡುತ್ತಾರೆ. ಯಾವುದು ಅವಶ್ಯವಾಗಿ ಮಾಡಲು ಯೋಗ್ಯವಿದೆ ಅದನ್ನು ಆವಶ್ಯಕವೆಂದು ಹೇಳುತ್ತಾರೆ. ಆವಶ್ಯಕಗಳ ಹಾನಿ ಮಾಡದಿರುವುದರ ಚಿಂತನೆಯು ಅದು ಆವಶ್ಯಕ ಪರಿಹಾಣಿ ನಾಮದ ಭಾವನೆಯಿದೆ. ಅಥವಾ ಯಾವನು ಇಂದ್ರಿಯಗಳ ವಶವಾಗುವುದಿಲ್ಲ ಅವನನ್ನು ಅವಶ್ಯನೆಂದು ಹೇಳುತ್ತಾರೆ. ಅವಶ್ಯ **ಯಾವ ಮುನಿಯಿದ್ದಾರೆ ಅವರ ಕ್ರಿಯೆಯನ್ನು ಆವಶ್ಯಕವೆಂದು ಹೇಳುತ್ತಾರೆ.** ಆವಶ್ಯಕಗಳ ಹಾನಿ ಮಾಡದಿರುವುದನ್ನು ಆವಶ್ಯಕ ಪರಿಹಾಣಿ ಭಾವನೆಯೆಂದು ಹೇಳುತ್ತಾರೆ.

ಆವಶ್ಯಕಗಳಲ್ಲಿ ಸಾಮಾಯಿಕ,ಸ್ತವನ, ವಂದನೆ, ಪ್ರತಿಕ್ರಮಣ, ಪ್ರತ್ಯಾಖ್ಯಾನ ಮತ್ತು ಕಾಯೋತ್ಸರ್ಗವೆಂದು ಆರು ಭೇದಗಳಿವೆ. ಇವು ಆರು ಆವಶ್ಯಕಗಳಿವೆ, ಅವುಗಳ ವರ್ಣನೆ ಮಾಡುತ್ತಾರೆ.

**ಸಾಮಾಯಿಕ :** ದೇಹದಿಂದ ಭಿನ್ನ, ಜ್ಞಾನಮಯವೇ ದೇಹವಿರುವಂಥ, ಪರಮಾತ್ಮ ಸ್ವರೂಪ,ಕರ್ಮರಹಿತ, ಚೈತನ್ಯ ಮಾತ್ರ ಶುದ್ಧ ಜೀವದ ಧ್ಯಾನವನ್ನು ಏಕಾಗ್ರತೆಯೊಡನೆ ಮಾಡುವಂಥ ಮುನಿಗಳು ಸರ್ವೋತ್ಕೃಷ್ಟ ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ. ನಿರ್ವಿಕಲ್ಪ ಶುದ್ಧ ಆತ್ಮನ ಗುಣಗಳಲ್ಲಿ ಯಾರ ಮನಸ್ಸು ಸ್ಥಿರವಾಗುವುದಿಲ್ಲ ಅಂಥ ತಪಸ್ವಿ ಮುನಿಗಳು ಷಡಾವಶ್ಯಕ ಕ್ರಿಯೆಗಳನ್ನು ಒಳ್ಳೆಯ ರೀತಿಯಿಂದ ಅಂಗೀಕಾರ ಮಾಡಬೇಕು ಮತ್ತು ಬರುತ್ತಿರುವ ಅಶುಭ ಕರ್ಮಗಳ ಆಸ್ರವವನ್ನು ತಡೆಯಬೇಕು, ನಿವಾರಿಸಬೇಕು.

**ಮೊದಲಂತೂ ಸುಂದರ-ಅಸುಂದರ ವಸ್ತುವಿನಲ್ಲಿ ಮತ್ತು ಶುಭ-ಅಶುಭ ಕರ್ಮದ ಉದಯದಲ್ಲಿ ರಾಗ-ದ್ವೇಷ ಮಾಡಬಾರದು.** ಆಹಾರ-ವಸತಿಕೆಗಳ ಲಾಭ-ಅಲಾಭದಲ್ಲಿ ಸಮಭಾವವಿಡಬೇಕು. ಸ್ತುತಿ-ನಿಂದೆಯಲ್ಲಿ, ಆದರ- ಅನಾದರದಲ್ಲಿ, ಪಾಷಾಣ-ರತ್ನದಲ್ಲಿ, ಜೀವನ-ಮರಣದಲ್ಲಿ, ಶತ್ರು-ಮಿತ್ರರಲ್ಲಿ, ಸುಖ-ದುಃಖದಲ್ಲಿ, ಸ್ಮಶಾನ-ಮನೆಯಲ್ಲಿ ರಾಗ-ದ್ವೇಷ ರಹಿತ ಪರಿಣಾಮವಿರುವುದು ಅದು ಸಮಭಾವವಿದೆ. ಸಾಮ್ಯಭಾವದ ಧಾರಕರು ಬಾಹ್ಯ ಪುದ್ಗಲಗಳನ್ನು ಅಚೇತನ ಹಾಗೂ ತಮ್ಮಿಂದ ಭಿನ್ನ ಮತ್ತು ತಮ್ಮ ಆತ್ಮ ಸ್ವಭಾವದಲ್ಲಿ ಹಾನಿ-ವೃದ್ಧಿಯ ಅಕರ್ತೃವೆಂದು ತಿಳಿದುಕೊಂಡು ರಾಗ-ದ್ವೇಷ ಮಾಡುವುದನ್ನು ಬಿಟ್ಟು ಕೊಡುತ್ತಾರೆ ಮತ್ತು ತಮ್ಮನ್ನು ಶುದ್ಧ, ಜ್ಞಾತಾ-ದೃಷ್ಟಾರೂಪದಿಂದ ಅನುಭವ ಮಾಡುತ್ತ ರಾಗ-ದ್ವೇಷ ಮೊದಲಾದ ವಿಕಾರಗಳಿಂದ ರಹಿತರಾಗಿರುತ್ತಾರೆ, ಅವರಿಗೆ ಸಾಮ್ಯಭಾವವಾಗುತ್ತದೆ, ಅದುವೇ ಸಾಮಾಯಿಕವಿದೆ.

**ಸ್ತವನ :** ಅನೇಕ ಹೆಸರುಗಳಿಂದ ಜಿನೇಂದ್ರ ಭಗವಂತರ ಸ್ತವನ ಮಾಡುವುದು ಅದು ಸ್ತವನ ನಾಮದ ಆವಶ್ಯಕವಿದೆ. ತಾವು ಕರ್ಮರೂಪದ ಶತ್ರುಗಳನ್ನು ಜಯಿಸಿರುವುದರಿಂದ ತಮ್ಮ ಹೆಸರು **ಜಿನ**ವಿದೆ. ತಮ್ಮನ್ನು ಯಾರೂ ನಿರ್ಮಾಣ ಮಾಡಿಲ್ಲ ಮತ್ತು ತಾವು ಸ್ವಯಂ ತಮ್ಮ ಸ್ವರೂಪದಲ್ಲಿ ವಾಸಿಸುತ್ತಿರುವುದರಿಂದ ತಾವು **ಸ್ವಯಂಭೂ** ಇದ್ದೀರಿ. ತಾವು ಕೇವಲಜ್ಞಾನರೂಪದ ಕಣ್ಣುಗಳಿಂದ ತ್ರಿಕಾಲವರ್ತಿ ಪದಾರ್ಥಗಳನ್ನು ತಿಳಿಯುತ್ತಿರುವುದರಿಂದ ತಾವು **ತ್ರಿಲೋಚನ**ರಿರುವಿರಿ. ತಾವು ಮೋಹರೂಪದ ಅಂಧಾಸುರನನ್ನು ಕೊಂದು ಹಾಕಿರುವುದರಿಂದ ತಾವು **ಅಂಧಕಾಂತಕ**ರಿರುವಿರಿ. ತಮ್ಮ ಎಂಟು ಕರ್ಮಗಳೊಳಗಿಂದ ನಾಲ್ಕು ಘಾತಿಕರ್ಮರೂಪ ಅರ್ಧವೈರಿಗಳ ನಾಶ ಮಾಡಿಯೇ ಅದ್ವಿತೀಯ ಈಶ್ವರತೆಯನ್ನು ಪಡೆದಿರುವುದರಿಂದ ತಾವು **ಅರ್ಧನಾರೀಶ್ವರ**ರಿದ್ದೀರಿ. ತಾವು ಶಿವಪದದಲ್ಲಿ

ಎಂದರೆ ನಿರ್ವಾಣ ಪದದಲ್ಲಿ ವಿರಾಜಮಾನರಿರುವುದರಿಂದ ತಾವು **ಶಿವ** ಇದ್ದೀರಿ. ತಾವು ಪಾಪರೂಪದ ವೈರಿಯ ಸಂಹಾರ ಮಾಡುವುದರಿಂದ ತಾವು **ಹರ**ರಿದ್ದೀರಿ. ತಾವು ಲೋಕದಲ್ಲಿ ಸುಖದ ಕರ್ತೃಗಳಿರುವುದರಿಂದ ತಾವು **ಶಂಕರ**ರಿದ್ದೀರಿ 'ಶಂ' ಎಂದರೆ ಪರಮ ಆನಂದರೂಪ ಸುಖ, ಅದರಲ್ಲಿ ತಾವು ವಾಸಿಸುತ್ತಿರುವುದರಿಂದ ತಾವು **ಶಂಭೂ** ಇದ್ದೀರಿ. ವೃಷ ಎಂದರೆ ಧರ್ಮ, ಅದರಿಂದ ತಾವು ಶೋಭಿಸುತ್ತಿರುವುದರಿಂದ ತಾವು **ವೃಷಭ**ರಿದ್ದೀರಿ. ತಾವು ಜಗತ್ತಿನ ಸಂಪೂರ್ಣ ಪ್ರಾಣಿಗಳಲ್ಲಿ ಗುಣಗಳ ಮೂಲಕ ದೊಡ್ಡವರಿರುವುದರಿಂದ ತಾವು **ಜಗಜ್ಯೇಷ್ಠ**ರಿದ್ದೀರಿ. 'ಕ' ಎಂದರೆ ಸುಖ, ಅದರ ಮೂಲಕ ತಾವು ಸಮಸ್ತ ಜೀವರುಗಳ ಪಾಲನೆ ಮಾಡುತ್ತಿರುವುದರಿಂದ ತಾವು **ಕಪಾಲೀ** ಇದ್ದೀರಿ. ತಾವು ಕೇವಲಜ್ಞಾನದ ಮೂಲಕ ಸಮಸ್ತ ಲೋಕಾಲೋಕಗಳಲ್ಲಿ ವ್ಯಾಪ್ತರಾಗುತ್ತಿರುವುದರಿಂದ ತಾವು **ವಿಷ್ಣು** ಇದ್ದೀರಿ. ತಾವು ಜನ್ಮ-ಜರೆ-ಮರಣರೂಪ ತ್ರಿಪುರಗಳ ಕೊನೆ ಮಾಡಿರುವುದರಿಂದ ತಾವು **ತ್ರಿಪುರಾಂತಕ**ರಿರುವಿರಿ. ಈ ಪ್ರಕಾರದಿಂದ ಇಂದ್ರನು ಒಂದು ಸಾವಿರದೆಂಟು ಹೆಸರುಗಳಿಂದ ತಮ್ಮ ಸ್ತವನ ಮಾಡಿದ್ದಾನೆ. ಗುಣಗಳ ಅಪೇಕ್ಷೆಯಿಂದ ತಮಗೆ ಅನಂತ ಹೆಸರುಗಳಿವೆ. ಈ ಪ್ರಕಾರ ಭಾವದಲ್ಲಿ ಇಪ್ಪತ್ತು ನಾಲ್ಕು ತೀರ್ಥಂಕರರ ಗುಣಗಳ ಚಿಂತನೆ ಮಾಡಿ ಸ್ತವನ ಮಾಡುವುದು ಅದು ಸ್ತವನ ನಾಮದ ಆವಶ್ಯಕವಿದೆ.

**ವಂದನೆ :** ಚೌವ್ವಿಸ ತೀರ್ಥಂಕರರುಗಳೊಳಗಿಂದ ಯಾರೋ ಓರ್ವ ತೀರ್ಥಂಕರರ, ಹಾಗೂ ಅರಹಂತ-ಸಿದ್ಧ - ಆಚಾರ್ಯ - ಉಪಾಧ್ಯಾಯ - ಸರ್ವಸಾಧುಗಳೊಳಗಿಂದ ಯಾರೋ ಒಬ್ಬರನ್ನು ಮುಖ್ಯ ಮಾಡಿ ಅವರ ಸ್ತುತಿ ಮಾಡುವುದು ಅದು ವಂದನಾ ಆವಶ್ಯಕವಿದೆ.

**ಪ್ರತಿಕ್ರಮಣ :** ಸಂಪೂರ್ಣ ದಿನದಲ್ಲಿ ಪ್ರಮಾದದ ವಶವಾಗಿ, ಕಷಾಯಗಳ ವಶವಾಗಿ, ವಿಷಯಗಳಲ್ಲಿ ರಾಗೀ-ದ್ವೇಷಿಯಾಗಿ ಯಾವುದೇ ಏಕೇಂದ್ರಿಯದ ಘಾತ ಮಾಡಿದ್ದರೆ, ನಿರರ್ಥಕ ಪ್ರವರ್ತನೆ ಮಾಡಿದ್ದರೆ, ಸದೋಷ ಭೋಜನ ಮಾಡಿದ್ದರೆ, ಯಾವುದೇ ಜೀವದ ಪ್ರಾಣವನ್ನು ಸಂಕಟದಲ್ಲಿ ಸಿಲುಕಿಸಿದ್ದರೆ, ಕರ್ಕಶ-ಕಠೋರ-ಮಿಥ್ಯಾವಚನಗಳನ್ನಾಡಿದ್ದರೆ, ಯಾರದಾದರೂ ನಿಂದೆ-ದೂಷಣೆ ಮಾಡಿದ್ದರೆ, ತಮ್ಮ ಪ್ರಶಂಸೆ ಮಾಡಿಕೊಂಡಿದ್ದರೆ; ಸ್ತ್ರೀಕಥೆ, ದೇಶಕಥೆ, ಭೋಜನಕಥೆ ಮತ್ತು ರಾಜ್ಯಕಥೆ ಮಾಡಿದ್ದರೆ; ಯಾರೂ ಕೊಡದ ಧನವನ್ನು ಗ್ರಹಣ ಮಾಡಿದ್ದರೆ, ಇತರರ ಧನದಲ್ಲಿ ಅಭಿಲಾಷೆ ಮಾಡಿದ್ದರೆ ಅವೆಲ್ಲವನ್ನು ವ್ಯರ್ಥ ಪಾಪ ಮಾಡಿರುವಿರಿ, ಬಂಧದ ಕಾರಣ ಮಾಡಿಕೊಂಡಿರುವಿರಿ.

ಈಗ ಇಂಥ ಪಾಪರೂಪ ಪರಿಣಾಮಗಳಿಂದ ಭಗವಾನ ಪಂಚ ಪರಮಗುರುಗಳು ನಮ್ಮ ರಕ್ಷಣೆ ಮಾಡಲಿ, ಇಂಥ ಪರಿಣಾಮಗಳು ಮಿಥ್ಯೆಯಾಗಲಿ, ಪಂಚಪರಮೇಷ್ಠಿಗಳ ಪ್ರಸಾದದಿಂದ ನಮಗೆ ಪಾಪರೂಪದ ಪರಿಣಾಮವಾಗದಿರಲಿ. ಇಂಥ ಭಾವಗಳ ಶುದ್ಧತೆಯ ಸಲುವಾಗಿ ಕಾಯೋತ್ಸರ್ಗ ಮಾಡಿ ಪಂಚಣಮೋಕಾರದ ಒಂಭತ್ತು ಜಪ ಮಾಡಬೇಕಾಗುವುದು.

ಈ ಪ್ರಕಾರ ಇಡೀ ದಿವಸದ ಪ್ರವೃತ್ತಿಯನ್ನು ಸಾಯಂಕಾಲ ಚಿಂತನೆ ಮಾಡಿ ಪಾಪ ಪರಿಣಾಮಗಳ ನಿಂದೆ ಮಾಡುವುದು ಅದು **ದೈವಸಿಕ ಪ್ರತಿಕ್ರಮಣ**ವಿದೆ.ರಾತ್ರೀ ಸಂಬಂಧದ ಪಾಪಗಳನ್ನು ದೂರ ಮಾಡುವ ಸಲುವಾಗಿ ಪ್ರಭಾತದಲ್ಲಿ ಪ್ರತಿಕ್ರಮಣ ಮಾಡುವುದು ಅದು **ರಾತ್ರಿಕಪ್ರತಿಕ್ರಮಣ**ವಿದೆ. ಮಾರ್ಗದಲ್ಲಿ ನಡೆಯುವಾಗ ದೋಷ ತಗಲಿದ್ದರೆ ಅದರ ಶುದ್ಧಿಯ ಸಲುವಾಗಿ ಯಾವ ಪ್ರತಿಕ್ರಮಣವಿದೆ ಅದು **ಐರ್ಯಾಪಥಿಕ ಪ್ರತಿಕ್ರಮಣ**ವಿದೆ. ಒಂದು ಪಕ್ಷದ ದೋಷಗಳ ನಿರಾಕರಣೆಯ ಸಲುವಾಗಿ **ಪಾಕ್ಷಿಕಪ್ರತಿಕ್ರಮಣ**ವಿದೆ. ನಾಲ್ಕು ತಿಂಗಳು ದೋಷಗಳ ನಿರಾಕರಣೆಯ ಸಲುವಾಗಿ **ಚಾತುರ್ಮಾಸಿಕ ಪ್ರತಿಕ್ರಮಣ**ವಿದೆ. ಒಂದು ವರ್ಷದ ದೋಷಗಳ ನಿರಾಕರಣೆಯ ಸಲುವಾಗಿ **ಸಾಂವತ್ಸರಿಕ ಪ್ರತಿಕ್ರಮಣ**ವಿದೆ. ಸಮಸ್ತ ಪರ್ಯಾಯ-ಇಡೀ ಜೀವನ ಸಮಯದ ದೋಷಗಳ ನಿರಾಕರಣೆಯ ಸಲುವಾಗಿ ಅಂತ್ಯ ಸನ್ಯಾಸ ಮರಣದ ಮೊದಲು ಯಾವ ಪ್ರತಿಕ್ರಮಣವಿದೆ ಅದು **ಉತ್ತಮಾರ್ಥ ಪ್ರತಿಕ್ರಮಣ**ವಿದೆ. ಹೀಗೆ ಏಳು ಪ್ರಕಾರದ ಪ್ರತಿಕ್ರಮಣವಿದೆ, ಅವುಗಳೊಳಗಿಂದ ಗೃಹಸ್ಥರಿಗೆ ಸಾಂಯಕಾಲದ ಹಾಗೂ ಪ್ರಭಾತದ ಸಮಯವಂತೂ ತಮ್ಮ ಲಾಭ-ಹಾನಿಯನ್ನು ಅವಶ್ಯವಾಗಿ ನೋಡುವುದು ಯೋಗ್ಯವಿದೆ.

ನೂರಾರು ರೂಪಾಯಿಗಳ ವ್ಯಾಪಾರ ಮಾಡುವಂಥವರು ಕೂಡ ಸಾಯಂಕಾಲ ಲಾಭ-ಹಾನಿ ನೋಡುತ್ತಾರೆಂದರೆ ಈ ಮನುಷ್ಯ ಜನ್ಮದ ಒಂದೊಂದು ಸಮಯವು ಕೋಟ್ಯಂತರ ರೂಪಾಯಿಗಿಂತಲೂ ದುರ್ಲಭವಿದೆ,

**ಒಮ್ಮೆ ಹೊರಟು ಹೋದ ನಂತರ ಪುನಃ ದೊರಕುವುದಿಲ್ಲ**ವೆಂಬುದರ ವಿಚಾರವನ್ನು ಅವಶ್ಯವಾಗಿ ಮಾಡಬೇಕು. ಇಂದು ನನ್ನದು ಪರಮೇಷ್ಠಿಯ ಪೂಜೆಯಲ್ಲಿ, ಸ್ತವನದಲ್ಲಿ ಎಷ್ಟು ಸಮಯ ಕಳೆಯಿತು, ಸ್ವಾಧ್ಯಾಯದಲ್ಲಿ, ಪರಮಗುರುಗಳ ಜಪದಲ್ಲಿ, ಶಾಸ್ತ್ರಶ್ರವಣದಲ್ಲಿ, ತತ್ತ್ವಾರ್ಥದ ಚರ್ಚೆಯಲ್ಲಿ, ಧರ್ಮಾತ್ಮರ ವೈಯಾವೃತ್ಯದಲ್ಲಿ ಎಷ್ಟು ಸಮಯ ಕಳೆಯಿತು? ಮನೆಯ ಆರಂಭದಲ್ಲಿ, ಕಷಾಯದಲ್ಲಿ ವಿಕಥೆ ಮಾಡುವಲ್ಲಿ, ವಿಸಂವಾದದಲ್ಲಿ, ಭೋಜನಾದಿಗಳಲ್ಲಿ, ಇಂದ್ರಿಯ ವಿಷಯಗಳಲ್ಲಿ, ಪ್ರಮಾದದಲ್ಲಿ, ನಿದ್ರೆಯಲ್ಲಿ, ಶರೀರದ ಸಂಸ್ಕಾರದಲ್ಲಿ, ಹಿಂಸಾದಿ ಪಂಚ ಪಾಪಗಳಲ್ಲಿ ಎಷ್ಟು ಕಾಲ ಕಳೆಯಿತು? ಈ ಪ್ರಕಾರ ವಿಚಾರ ಮಾಡಿ ಪಾಪದಲ್ಲಿ ಅಧಿಕ ಪ್ರವೃತ್ತಿಯಾಗಿದ್ದರೆ ತಮ್ಮನ್ನು ತಾವು ಧಿಕ್ಕರಿಸಿಕೊಂಡು ಪಾಪಬಂಧದ ಕಾರಣಗಳನ್ನು ಕಡಿಮೆ ಮಾಡಿ, ಧರ್ಮಕಾರ್ಯದಲ್ಲಿ ಆತ್ಮನನ್ನು ಯುಕ್ತ ಮಾಡುವುದು ಯೋಗ್ಯವಿದೆ. **ಪಂಚಮಕಾಲದಲ್ಲಿ ಪ್ರತಿಕ್ರಮಣವನ್ನೇ ಪರಮಾಗಮದಲ್ಲಿ ಧರ್ಮವೆಂದು ಹೇಳಿದೆ.** ಆತ್ಮನ ಹಿತ-ಅಹಿತದ ವಿಚಾರದಲ್ಲಿ ನಿರಂತರ ಉದ್ಯಮಶೀಲರಿರುವುದು ಯೋಗ್ಯವಿದೆ. ಈ ಪ್ರತಿಕ್ರಮಣವು ಆತ್ಮನನ್ನು ಪೂರ್ಣ ಜಾಗೃತಗೊಳಿಸುವಂಥದ್ದು ಮತ್ತು ಪೂರ್ವದಲ್ಲಿ ಮಾಡಿದ ಪಾಪಗಳ ನಿರ್ಜರೆ ಮಾಡುವಂಥದ್ದು ಇದೆ.

**ಪ್ರತ್ಯಾಖ್ಯಾನ ಃ** ಮುಂಬರುವ ಕಾಲದಲ್ಲಿ ಪಾಪದ ಆಸ್ರವವನ್ನು ತಡೆಯುವ ಸಲುವಾಗಿ ಪಾಪಗಳ ತ್ಯಾಗ ಮಾಡುವುದು. ನಾನು ಭವಿಷ್ಯದಲ್ಲಿ ಮನ-ವಚನ-ಕಾಯದಿಂದ ಇಂಥ ಪಾಪ ಮಾಡಲಾರೆನೆನ್ನುವುದು ಅದು ಪ್ರತ್ಯಾಖ್ಯಾನ ನಾಮದ ಆವಶ್ಯಕವಿದೆ, ಅದು ಸುಗತಿಯ ಕಾರಣವಿದೆ.

**ಕಾಯೋತ್ಸರ್ಗ ಃ** ನಾಲ್ಕು ಅಂಗುಲದ ಅಂತರದಿಂದ ಎರಡೂ ಕಾಲುಗಳನ್ನು ಸರಿಯಾಗಿ ಮಾಡಿ, ಎರಡೂ ಕೈಗಳನ್ನು ಕೆಳಭಾಗದ ಕಡೆಗೆ ನೀಳವಾಗಿ ನೇತಾಡಿಸಿ, ಶರೀರದ ಮಮತೆಯನ್ನು ಬಿಟ್ಟುಕೊಟ್ಟು, ನಾಸಿಕದ ಅಗ್ರಭಾಗದಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಿ, ದೇಹದಿಂದ ಭಿನ್ನವಿರುವ ಶುದ್ಧ ಆತ್ಮನ ಭಾವನೆ ಮಾಡುವುದು ಕಾಯೋತ್ಸರ್ಗವಿದೆ. ನಿಶ್ಚಲ ಪದ್ಮಾಸನದಿಂದಲೂ ಮತ್ತು ಎದ್ದು ನಿಂತುಕೊಂಡು ಕೂಡ ಕಾಯೋತ್ಸರ್ಗವನ್ನು ಮಾಡಲಾಗುವ ಸಾಧ್ಯತೆಯಿದೆ. ಎರಡೂ ಅವಸ್ಥೆಗಳಲ್ಲಿ ಶುದ್ಧಧ್ಯಾನದ ಅವಲಂಬನದಿಂದಲೇ ಸಫಲ ಕಾಯೋತ್ಸರ್ಗವಾಗುತ್ತದೆ.

ಈ ಆರು ಆವಶ್ಯಕಗಳು ಪರಮಧರ್ಮರೂಪವಿವೆ. ಇವುಗಳ ಪೂಜೆ ಮಾಡಿ ಪುಷ್ಪಾಂಜಲಿ ಕ್ಷೇಪಿಸುವುದು, ಆರತಿ ಬೆಳಗುವುದು ಯೋಗ್ಯವಿದೆ. ಪರಮಾಗಮದಲ್ಲಿ ಈ ಆರು ಆವಶ್ಯಕಗಳ ಆರಾರು ಭೇದಗಳನ್ನು ಹೇಳಿದ್ದಾರೆ. ಅವನ್ನು ನಾಮ, ಸ್ಥಾಪನೆ, ದ್ರವ್ಯ, ಕ್ಷೇತ್ರ,ಕಾಲ, ಭಾವಗಳೆಂದು ತಿಳಿದುಕೊಳ್ಳಬೇಕು.

**ಸಾಮಾಯಿಕದ ಆರು ಭೇದಗಳು ಃ-** ಶುಭ, ಅಶುಭ ನಾಮವನ್ನು ಕೇಳಿ ರಾಗ-ದ್ವೇಷ ಮಾಡದಿರುವುದು ಅದು **ನಾಮಸಾಮಾಯಿಕವಿದೆ.** ಒಂದು ಸ್ಥಾಪನೆ ಪ್ರಮಾಣಾದಿಗಳಿಂದ ಸುಂದರವಿದೆ, ಒಂದು ಪ್ರಮಾಣಾದಿಯಿಂದ ಹೀನಾಧಿಕವಿರುವ ಕಾರಣ ಅಸುಂದರವಿದೆ, ಅವುಗಳಲ್ಲಿ ರಾಗ-ದ್ವೇಷದ ಅಭಾವವು ಅದು **ಸ್ಥಾಪನಾಸಾಮಾಯಿಕವಿದೆ.** ಚಿನ್ನ, ಬೆಳ್ಳಿ, ಮತ್ತು ರತ್ನ ಇತ್ಯಾದಿ ಮತ್ತು ಕಲ್ಲು, ಮಣ್ಣು, ಮುಳ್ಳು, ಕಟ್ಟಿಗೆ, ಧೂಳು, ಬೂದಿ ಇತ್ಯಾದಿಗಳನ್ನು ರಾಗ-ದ್ವೇಷಗಳಿಂದ ರಹಿತವಾಗಿ ಸಮ್ಯಗ್ದೃಷ್ಟಿಯಿಂದ ನೋಡುವುದು ಅದು **ದ್ರವ್ಯಸಾಮಾಯಿಕ**ವಿದೆ. ಅರಮನೆ-ಉಪವನ ಮೊದಲಾದ ರಮಣೀಯ, ಸ್ಮಶಾನ ಮೊದಲಾದ ಅರಮಣೀಯ ಕ್ಷೇತ್ರದಲ್ಲಿ ರಾಗ-ದ್ವೇಷ, ಮಾಡದಿರುವುದು ಅದು **ಕ್ಷೇತ್ರಸಾಮಾಯಿಕವಿದೆ.** ವಸಂತ, ಗ್ರೀಷ್ಮ, ವರ್ಷಾ, ಶರದ, ಶಿಶಿರ, ಹೇಮಂತ ಋತುಗಳ ಮತ್ತು ರಾತ್ರಿ, ಹಗಲು, ಶುಕ್ಲಪಕ್ಷ, ಕೃಷ್ಣಪಕ್ಷ ಇತ್ಯಾದಿ ಕಾಲಗಳಲ್ಲಿ ರಾಗ-ದ್ವೇಷ ಮಾಡದಿರುವುದು ಅದು **ಕಾಲಸಾಮಾಯಿಕವಿದೆ.** ಸಮಸ್ತ ಜೀವರುಗಳಿಗೆ ದುಃಖವಾಗದಿರಲೆಂದು ಮೈತ್ರಿಯ ಭಾವ ಭಾವಿಸುತ್ತ ಅಶುಭ ಪರಿಣಾಮಗಳ ಅಭಾವ ಮಾಡುವುದು ಅದು **ಭಾವಸಾಮಾಯಿಕವಿದೆ.** ಈ ಪ್ರಕಾರ ಸಾಮಾಯಿಕದ ಆರು ಭೇದಗಳನ್ನು ಹೇಳಲಾಗಿದೆ.

**ಸ್ತವನದ ಆರು ಭೇದಗಳು ಃ** ಅರ್ಥ ಸಹಿತ ಸಾವಿರದೆಂಟು ನಾಮಗಳಿಂದ ಚೌವ್ವೀಸ ತೀರ್ಥಂಕರರ ಸ್ತವನ ಮಾಡುವುದು ಅದು **ನಾಮಸ್ತವನ**ವಿದೆ. ತೀರ್ಥಂಕರರ-ಅರಹಂತರ ಅನೇಕ ಕೃತ್ರಿಮ-ಅಕೃತ್ರಿಮ ಪ್ರತಿಬಿಂಬಗಳ ಸ್ತವನ ಮಾಡುವುದು ಅದು **ಸ್ಥಾಪನಾಸ್ತವನ**ವಿದೆ. ಸಮವಸರಣದಲ್ಲಿ ನೆಲೆಸಿದ ಅರಹಂತರ ದೇಹ, ಪ್ರಭೆ, ಪ್ರಾತಿಹಾರ್ಯ

ಮೊದಲಾದವುಗಳ ಸ್ತವನವು ಅದು **ದ್ರವ್ಯಸ್ತವನ**ವಿದೆ. ಕೈಲಾಸ, ಸಮ್ಮೇದಗಿರಿ, ಗಿರಿನಾರ, ಪಾವಾಪುರ, ಚಂಪಾಪುರ ಮೊದಲಾದ ನಿರ್ವಾಣ ಕ್ಷೇತ್ರಗಳ ಹಾಗೂ ಸಮವಸರಣದಲ್ಲಿ ಧರ್ಮೋಪದೇಶ ಕೊಡುವ ಕ್ಷೇತ್ರದ ಸ್ತವನವು ಅದು **ಕ್ಷೇತ್ರಸ್ತವನ**ವಿದೆ. ಗರ್ಭ, ಜನ್ಮ, ತಪ, ಜ್ಞಾನ, ನಿರ್ವಾಣ ಕಲ್ಯಾಣಕದ ಕಾಲದ ಸ್ತವನವು ಅದು **ಕಾಲಸ್ತವನ**ವಿದೆ. ಕೇವಲಜ್ಞಾನ ಮೊದಲಾದ ಅನಂತ ಚತುಷ್ಟಯ ಭಾವಗಳ ಸ್ತವನವು ಅದು **ಭಾವಸ್ತವನ**ವಿದೆ. ಈ ಪ್ರಕಾರ ಸ್ತವನದ ಆರು ಭೇದಗಳನ್ನು ಹೇಳಲಾಗಿದೆ.

**ವಂದನೆಯ ಆರು ಭೇದಗಳು :-** ತೀರ್ಥಂಕರ ಮತ್ತು ಸಿದ್ಧ ಹಾಗೂ ಆಚಾರ್ಯ, ಉಪಾಧ್ಯಾಯ, ಸಾಧು ಇವರಲ್ಲಿ ಒಬ್ಬೊಬ್ಬರ ನಾಮೋಚ್ಚಾರ ಮಾಡಿ ವಂದನೆ ಮಾಡುವುದು ಅದು **ನಾಮವಂದನೆ**ಯಿದೆ. ಅರಹಂತ, ಸಿದ್ಧ, ಮೊದಲಾದವರಲ್ಲಿ ಒಬ್ಬೊಬ್ಬರ ಪ್ರತಿಬಿಂಬಾದಿಗಳ ವಂದನೆ ಮಾಡುವುದು ಅದು **ಸ್ಥಾಪನಾವಂದನೆ**ಯಿದೆ. ಅರಹಂತ ಮೊದಲಾದವರ ಶರೀರದ ವಂದನೆ ಮಾಡುವುದು ಅದು **ದ್ರವ್ಯವಂದನೆ**ಯಿದೆ. ಅರಹಂತಾದಿಗಳಿಂದ ವ್ಯಾಪ್ತ ಕ್ಷೇತ್ರದ ವಂದನೆ ಮಾಡುವುದು ಅದು **ಕ್ಷೇತ್ರವಂದನೆ**ಯಿದೆ. ಅರಹಂತಾದಿಕರಲ್ಲಿ ಯಾರೋ ಓರ್ವರಿಂದ ವ್ಯಾಪ್ತಕಾಲದ ವಂದನೆ ಮಾಡುವುದು, ಅದು **ಕಾಲವಂದನೆ**ಯಿದೆ. ತೀರ್ಥಂಕರರ, ಸಿದ್ಧರ, ಆಚಾರ್ಯರ, ಉಪಾಧ್ಯಾಯರ, ಸಾಧುಗಳ ಆತ್ಮನ ಗುಣಗಳ ವಂದನೆ ಮಾಡುವುದು ಅದು **ಭಾವವಂದನೆ**ಯಿದೆ. ಈ ಪ್ರಕಾರ ವಂದನೆಯ ಆರು ಭೇದಗಳನ್ನು ಹೇಳಲಾಯಿತು.

**ಪ್ರತಿಕ್ರಮಣದ ಆರು ಭೇದಗಳು :-** ನಾಮದ ಅಯೋಗ್ಯ ಉಚ್ಚಾರದಲ್ಲಿ ಕೃತ-ಕಾರಿತ-ಅನುಮೋದನೆಯರೂಪ ಮನ-ವಚನ-ಕಾಯದಿಂದ ಉತ್ಪನ್ನವಾಗುವ ದೋಷದ ನಿವಾರಣೆಯ ಸಲುವಾಗಿ ಪ್ರತಿಕ್ರಮಣ ಮಾಡುವುದು ಅದು **ನಾಮಪ್ರತಿಕ್ರಮಣ**ವಿದೆ. ಯಾವುದೇ ಶುಭ-ಅಶುಭ ಸ್ಥಾಪನೆಯ ನಿಮಿತ್ತದಿಂದ, ಮನ-ವಚನ-ಕಾಯದಿಂದ ಉತ್ಪನ್ನವಾದ ದೋಷದಿಂದ ಆತ್ಮನ ನಿವೃತ್ತಿ ಮಾಡುವುದು ಅದು **ಸ್ಥಾಪನಾಪ್ರತಿಕ್ರಮಣ**ವಿದೆ. ಆಹಾರ, ಔಷಧ, ಪುಸ್ತಕಾದಿಗಳ ನಿಮಿತ್ತದಿಂದ ಮನ-ವಚನ-ಕಾಯದಿಂದ ಉತ್ಪನ್ನವಾದ ದೋಷದ ನಿರಾಕರಣೆಯ ಸಲುವಾಗಿ ಪ್ರತಿಕ್ರಮಣ ಮಾಡುವುದು ಅದು **ದ್ರವ್ಯಪ್ರತಿಕ್ರಮಣ**ವಿದೆ. ಯಾವುದೇ ಕ್ಷೇತ್ರದಲ್ಲಿ ಗಮನ, ಸ್ಥಾಪನಾದಿಗಳ ನಿಮಿತ್ತದಿಂದ ಉತ್ಪನ್ನವಾದ ಅಶುಭ ಪರಿಣಾಮ ಜನ್ಯದೋಷಗಳ ನಿರಾಕರಣೆಯ ಸಲುವಾಗಿ ಪ್ರತಿಕ್ರಮಣ ಮಾಡುವುದು ಅದು **ಕ್ಷೇತ್ರಪ್ರತಿಕ್ರಮಣ**ವಿದೆ. ಹಗಲು, ರಾತ್ರಿ, ಪಕ್ಷ, ಋತು, ಉಷ್ಣ, ವರ್ಷಾಕಾಲದ ನಿಮಿತ್ತದಿಂದ ಉತ್ಪನ್ನವಾದ ಅತಿಚಾರವನ್ನು ದೂರ ಮಾಡುವ ಸಲುವಾಗಿ ಪ್ರತಿಕ್ರಮಣ ಮಾಡುವುದು ಅದು **ಕಾಲಪ್ರತಿಕ್ರಮಣ**ವಿದೆ. ರಾಗ-ದ್ವೇಷ ಮೊದಲಾದ ಭಾವಗಳಿಂದ ಉತ್ಪನ್ನವಾದ ದೋಷಗಳನ್ನು ದೂರ ಮಾಡುವ ಸಲುವಾಗಿ ಪ್ರತಿಕ್ರಮಣ ಮಾಡುವುದು ಅದು **ಭಾವಪ್ರತಿಕ್ರಮಣ**ವಿದೆ. ಈ ಪ್ರಕಾರ ಪ್ರತಿಕ್ರಮಣದ ಆರು ಭೇದಗಳನ್ನು ಹೇಳಲಾಯಿತು.

**ಪ್ರತ್ಯಾಖ್ಯಾನದ ಆರು ಭೇದಗಳು :** ಅಯೋಗ್ಯ ಪಾಪದ ಕಾರಣವಿರುವ ನಾಮಗಳ ಉಚ್ಚಾರಣೆ ಮಾಡುವುದರ ತ್ಯಾಗಮಾಡಿ ಬಿಡುವುದು ಅದು **ನಾಮಪ್ರತ್ಯಾಖ್ಯಾನ**ವಿದೆ. ಅಯೋಗ್ಯ ಮಿಥ್ಯಾತ್ವಾದಿಗಳಲ್ಲಿ ಪ್ರವರ್ತನೆ ಮಾಡಿಸುವಂಥ ಸ್ಥಾಪನೆ ಮಾಡುವುದರ ತ್ಯಾಗ ಮಾಡುವುದು ಅದು **ಸ್ಥಾಪನಾಪ್ರತ್ಯಾಖ್ಯಾನ**ವಿದೆ. ಪಾಪಬಂಧದ ಕಾರಣವಿರುವ ಸದೋಷ ದ್ರವ್ಯ ಮತ್ತು ತಪದ ನಿಮಿತ್ತವಿರುವ ನಿರ್ದೋಷ ದ್ರವ್ಯದ್ದೂ ಕೂಡ ಮನ-ವಚನ-ಕಾಯದಿಂದ ತ್ಯಾಗ ಮಾಡಿಬಿಡುವುದು ಅದು **ದ್ರವ್ಯಪ್ರತ್ಯಾಖ್ಯಾನ**ವಿದೆ. ಅಸಂಯಮದ ಕಾರಣವಿರುವ ಕ್ಷೇತ್ರದ ತ್ಯಾಗ ಮಾಡಿ ಬಿಡುವುದು ಅದು **ಕ್ಷೇತ್ರಪ್ರತ್ಯಾಖ್ಯಾನ**ವಿದೆ. ಅಸಂಯಮದ ಕಾರಣವಿರುವ ಕಾಲದ ತ್ಯಾಗ ಮಾಡಿ ಬಿಡುವುದು ಅದು **ಕಾಲಪ್ರತ್ಯಾಖ್ಯಾನ**ವಿದೆ. ಮಿಥ್ಯಾತ್ವ, ಅಸಂಯಮ, ಕಷಾಯ ಮೊದಲಾದವುಗಳ ತ್ಯಾಗ ಮಾಡುವುದು ಅದು **ಭಾವ ಪ್ರತ್ಯಾಖ್ಯಾನ**ವಿದೆ. ಈ ಪ್ರಕಾರ ಪ್ರತ್ಯಾಖ್ಯಾನದ ಆರು ಭೇದಗಳನ್ನು ಹೇಳಲಾಯಿತು.

**ಕಾಯೋತ್ಸರ್ಗದ ಆರು ಭೇದಗಳು :** ಪಾಪದ ಕಾರಣ ಕಠೋರ ಕ್ರೂರ ನಾಮಾದಿಗಳಿಂದ ಉಂಟಾದ ದೋಷವನ್ನು ದೂರ ಮಾಡುವ ಸಲುವಾಗಿ ಕಾಯೋತ್ಸರ್ಗ ಮಾಡುವುದು ಅದು **ನಾಮಕಾಯೋತ್ಸರ್ಗ**ವಿದೆ. ಪಾಪರೂಪ ಸ್ಥಾಪನೆಯ ಮೂಲಕ ಬಂದ ಅತಿಚಾರವನ್ನು ದೂರ ಮಾಡುವ ಸಲುವಾಗಿ ಕಾಯೋತ್ಸರ್ಗ ಮಾಡುವುದು ಅದು **ಸ್ಥಾಪನಾ**

**ಕಾಯೋತ್ಸರ್ಗ** ವಿದೆ. ಸದೋಷ ದ್ರವ್ಯಗಳ ಸೇವನೆಯಿಂದ ಹಾಗೂ ಸದೋಷ ಕ್ಷೇತ್ರ, ಕಾಲದ ಸೇವನೆಯಿಂದ-ಸಂಯೋಗದಿಂದ ಉಂಟಾದ ದೋಷ ದೂರ ಮಾಡುವ ಸಲುವಾಗಿ ಕಾಯೋತ್ಸರ್ಗ ಮಾಡುವುದು ಅದು **ದ್ರವ್ಯ-ಕ್ಷೇತ್ರ-ಕಾಲಕಾಯೋತ್ಸರ್ಗ**ವಿದೆ. ಮಿಥ್ಯಾತ್ವ ಅಸಂಯಮ ಭಾವಗಳಿಂದ ಮಾಡಿದ ದೋಷ ದೂರ ಮಾಡುವುದಕ್ಕೆ ಕಾಯೋತ್ಸರ್ಗ ಮಾಡುವುದು ಅದು **ಭಾವಕಾಯೋತ್ಸರ್ಗ**ವಿದೆ. ಈ ಪ್ರಕಾರ ಕಾಯೋತ್ಸರ್ಗದ ಆರು ಭೇದಗಳನ್ನು ಹೇಳಲಾಯಿತು.

**ಇನ್ನೂ ಆರು ಪ್ರಕಾರದ ಆವಶ್ಯಕಗಳು ಗೃಹಸ್ಥನಿಗಿವೆ :** ನಿತ್ಯ ಜಿನೇಂದ್ರ ಭಗವಂತರ ಪೂಜೆ, ನಿರ್ಗ್ರಂಥ ಗುರುಗಳ ಸೇವೆ, ಸ್ತವನ, ಚಿಂತನ ನಿತ್ಯ ಮಾಡುವುದು, ಜಿನೇಂದ್ರರು ಹೇಳಿದ ಆಗಮಗಳ ಸ್ವಾಧ್ಯಾಯ ನಿತ್ಯ ಮಾಡುವುದು, ಇಂದ್ರಿಯಗಳನ್ನು ವಿಷಯಗಳಿಂದ ತಡೆಯುವುದು, ಷಟ್ಕಾಯ ಜೀವಗಳ ಸಂಯಮವನ್ನು ದಯಾರೂಪವಾಗಿ ಪಾಲಿಸುವುದು, ಶಕ್ತಿಯ ಪ್ರಮಾಣ ನಿತ್ಯ ತಪಸ್ಸು ಮಾಡುವುದು, ಮತ್ತು ಶಕ್ತಿಯ ಪ್ರಮಾಣ ನಿತ್ಯ ದಾನ ಕೊಡುವುದು. ಇವು ಆರು ಪ್ರಕಾರದ ಆವಶ್ಯಕಗಳನ್ನೂ ಗೃಹಸ್ಥರು ನಿತ್ಯ ನಿಯಮದಿಂದ ಅಂಗೀಕಾರ ಮಾಡುವುದು ಯೋಗ್ಯವಿದೆ.

ಈ ಪ್ರಕಾರ ಸಮಸ್ತ ಪಾಪಗಳ ನಾಶಮಾಡುವಂಥ, ಭಾವಗಳನ್ನು ಉಜ್ವಲಗೊಳಿಸುವಂಥ ಆವಶ್ಯಕಗಳ ಹಾನಿಯ ಅಭಾವರೂಪವಿರುವ ಹದಿನಾಲ್ಕನೆಯ ಭಾವನೆಯ ವರ್ಣನೆ ಮಾಡಲಾಯಿತು.

## ಸನ್ಮಾರ್ಗ ಪ್ರಭಾವನೆಯ ಭಾವನೆ

ಈಗ ಸನ್ಮಾರ್ಗ ಪ್ರಭಾವನೆಯೆಂಬ ಹೆಸರಿನ ಹದಿನೈದನೇ ಭಾವನೆಯ ವರ್ಣನೆ ಮಾಡುತ್ತಾರೆ. ಇಲ್ಲಿ ಸನ್ಮಾರ್ಗ ಎಂದರೆ ಮೋಕ್ಷದ ಸತ್ಯಾರ್ಥ ಮಾರ್ಗದ ಪ್ರಭಾವವನ್ನು ಪ್ರಕಟ ಮಾಡುವುದು ಅದು ಸನ್ಮಾರ್ಗ ಪ್ರಭಾವನೆಯಿದೆ. ಆ ಸನ್ಮಾರ್ಗವು ರತ್ನತ್ರಯವಿದೆ, **ರತ್ನತ್ರಯವು ಆತ್ಮನ ಸ್ವಭಾವವಿದೆ.** ಅದನ್ನು ಮಿಥ್ಯಾತ್ವ, ರಾಗ, ದ್ವೇಷ, ಕಾಮ, ಕ್ರೋಧ, ಮಾನ, ಮಾಯೆ, ಲೋಭಗಳು ಅನಾದಿಯಿಂದ ಮಲಿನ-ವಿಪರೀತ ಮಾಡಿ ಬಿಟ್ಟಿವೆ. ಈಗ ಪರಮಾಗಮದ ಆಶ್ರಯ ತೆಗೆದುಕೊಂಡು **ನನಗೆ ಮಿಥ್ಯಾತ್ವ ಮೊದಲಾದ ದೋಷಗಳನ್ನು ದೂರ ಮಾಡಿ ರತ್ನತ್ರಯ ಸ್ವಭಾವವನ್ನು ಉಜ್ವಲ ಮಾಡುವುದಿದೆ.**

ಈ ಮನುಷ್ಯ ಜನ್ಮ, ಇಂದ್ರಿಯಗಳ ಪೂರ್ಣತೆ, ಜ್ಞಾನಶಕ್ತಿ, ಪರಮಾಗಮದ ಆಶ್ರಯ, ಸಾಧರ್ಮಿಗಳ ಸಮಾಗಮ, ರೋಗರಹಿತ ಅವಸ್ಥೆ, ಕ್ಲೇಶರಹಿತ ಜೀವನ, ಇತ್ಯಾದಿ ಪುಣ್ಯರೂಪ ಸಾಮಗ್ರಿಗಳನ್ನು ಪ್ರಾಪ್ತ ಮಾಡಿಕೊಂಡು ಕೂಡ ತಮ್ಮ ಆತ್ಮನನ್ನು ಮಿಥ್ಯಾತ್ವ, ಕಷಾಯ, ವಿಷಯಗಳಿಂದ ಬಿಡಿಸದಿದ್ದರೆ ಅನಂತಾನಂತ ದುಃಖಗಳಿಂದ ತುಂಬಿದ ಸಂಸಾರ ಸಮುದ್ರದೊಳಗಿಂದ ನಿನ್ನ ಬಿಡುಗಡೆಯಾಗುವುದು ಅನಂತ ಕಾಲದಲ್ಲಿಯೂ ಸಾಧ್ಯವಾಗಲಾರದು. ಯಾವ ಸಾಮಗ್ರಿಗಳು ಇಂದು ದೊರಕಿವೆ, ಅವು ಅನಂತಾನಂತ ಕಾಲದಲ್ಲೂ ದೊರಕುವುದು ಅತ್ಯಂತ ದುರ್ಲಭವಿದೆ. ಅಂತರಂಗ-ಬಹಿರಂಗ ಸಮಸ್ತ ಸಾಮಗ್ರಿ ಪಡೆದು ಕೂಡ ಆತ್ಮನ ಪ್ರಭಾವ ಪ್ರಕಟಮಾಡಿಕೊಳ್ಳದಿದ್ದರೆ ಕಾಲವು ಆಕಸ್ಮಿಕವಾಗಿ ಬಂದು ಸಮಸ್ತ ಸಂಯೋಗ ನಷ್ಟಮಾಡಿ ಬಿಡುವುದು. ಆದುದರಿಂದ ಈಗ ನನಗೆ ರಾಗ-ದ್ವೇಷಗಳನ್ನು ದೂರ ಮಾಡಿ **ಹೇಗೆ ನನ್ನ ಶುದ್ಧ ವೀತರಾಗ ಸ್ವರೂಪವು ಅನುಭವ ಗೋಚರವಾಗುವುದು ಆ ಪ್ರಕಾರ ಧ್ಯಾನ-ಸ್ವಾಧ್ಯಾಯದಲ್ಲಿ ತತ್ಪರನಾಗುವುದಿದೆ.**

ನನ್ನ ಬಾಹ್ಯ ಪ್ರವೃತ್ತಿಯನ್ನು ಉಜ್ವಲ ಮಾಡಿ ಅಂತರಂಗದಲ್ಲಿ ಧರ್ಮದ ಪ್ರಭಾವ ಪ್ರಕಟಮಾಡಿ ಅದನ್ನು ನೋಡಿ ಅನೇಕ ಜೀವರುಗಳ ಹೃದಯದಲ್ಲಿ ಧರ್ಮದ ಮಹಿಮೆಯು ಪ್ರವೇಶವಾಗುವಂತೆ ಮಾರ್ಗ ಪ್ರಭಾವನೆ ಮಾಡುವುದಿದೆ. ಜಿನೇಂದ್ರರ ಅಭಿಷೇಕದ ಉತ್ಸವ ಹೇಗೆ ಮಾಡುವುದೆಂದರೆ ಅದನ್ನು ನೋಡಿ ಸಾವಿರಾರು ಜನರ ಭಾವವು ಜಿನೇಂದ್ರರ ಜನ್ಮಕಲ್ಯಾಣಕದ ಸಮಯದಲ್ಲಿ ಯಾವ ಪ್ರಕಾರ ಇಂದ್ರ ಮೊದಲಾದ ದೇವಗಳು ಅಭಿಷೇಕ ಮಾಡಿ ತಮ್ಮ ಜನ್ಮ ಸಾರ್ಥಕಪಡಿಸಿಕೊಂಡರು. ಅದೇ ಪ್ರಕಾರ ಜಯ-ಜಯಕಾರ ಶಬ್ದಗಳ ಮೂಲಕ ನಮ್ಮ ಸ್ತವನದ ಉಚ್ಚಾರಣೆಯಿಂದ ಜನರು ತಮ್ಮನ್ನು ಕೃತಾರ್ಥರೆಂದು ಮನ್ನಿಸಿಕೊಂಡು ತನು-ಮನದಿಂದ ಪ್ರಫುಲ್ಲಿತರಾಗಿ ಹೋಗಬೇಕು. ಈ ಪ್ರಕಾರದಿಂದ ಅಭಿಷೇಕದ ಮೂಲಕ ಪ್ರಭಾವನೆ ಮಾಡುವುದು.

**ಜಿನೇಂದ್ರ ಭಕ್ತಿ ಮಾಡುವುದು :** ಜಿನೇಂದ್ರರ ಅತಿಶಯ ಭಕ್ತಿ, ಅತಿಶಯ ವಿನಯ, ನಿಶ್ಚಲ ಧ್ಯಾನದಿಂದ ಎಂಥ ಪೂಜೆ ಮಾಡಬೇಕೆಂದರೆ ಅದನ್ನು ನೋಡಿ ಮತ್ತು ಭಕ್ತಿಯ ಪಾಠ ಓದುತ್ತಿರುವವರ ಹಾಗೂ ಕೇಳುತ್ತಿರುವವರ ಹೃದಯದಲ್ಲಿ ಆನಂದವು ಹಿಡಿಸಬಾರದು. ಅದು ಉಕ್ಕಿ ಹೊರ ಚೆಲ್ಲುವಂತೆ ಹರುಷದ ಅಂಕುರ ಪ್ರಕಟವಾಗಬೇಕು; ಅವರನ್ನು ನೋಡಿ ಮಿಥ್ಯಾದೃಷ್ಟಿಗಳ ಪರಿಣಾಮದಲ್ಲೂ ಪರಿವರ್ತನೆ ಬರಬೇಕು. ಓಹೋ ! ಈ ಜೈನರ ಭಕ್ತಿಯು ಆಶ್ಚರ್ಯರೂಪವಿದೆ. ಅದರಲ್ಲೂ ಈ ನಿರ್ದೋಷ ಉತ್ತಮ ಉಜ್ವಲ ಪ್ರಾಮಾಣಿಕ ಸಾಮಗ್ರಿ, ಈ ಉಜ್ವಲ ಚಿನ್ನ, ಬೆಳ್ಳಿ, ತಾಮ್ರ, ಕಂಚಿನ ಮನೋಹರ ಪೂಜೆಯ ಪಾತ್ರೆಗಳು, ಈ ಭಕ್ತಿರಸದಿಂದ ತುಂಬಿದ ಅರ್ಥ ಸಹಿತ ಕರ್ಣಗಳಿಗೆ ಅಮೃತರಸವನ್ನು ಸೇಚಿಸುತ್ತಿರುವಂಥ ಶುದ್ಧ ಅಕ್ಷರಗಳ ಉಚ್ಚಾರಣೆ, ಏಕಾಗ್ರತೆಯಿಂದ ವಿನಯಯುಕ್ತ ಶಬ್ದಗಳನ್ನು ಹೇಳಿದುದರ ಅನುಸಾರ ಉಜ್ವಲ ದ್ರವ್ಯಗಳನ್ನು ಅರ್ಪಿಸುವುದು, ಈ ಪರಮಶಾಂತಮುದ್ರಾರೂಪ ವೀತರಾಗರ ಪ್ರತಿಬಿಂಬ ಪ್ರಾತೀಹಾರ್ಯಸಹಿತ ಪೂಜೆ, ಸ್ತುತಿ ಮಾಡುವುದು, ನಮಸ್ಕಾರ ಮಾಡುವುದು ಧನ್ಯ ಪುರುಷರಿಂದಲೇ ಆಗುತ್ತದೆ. ಇವರ ಭಕ್ತಿಯು ಧನ್ಯವಿದೆ ! ಇವರ ಜನ್ಮವು ಧನ್ಯವಿದೆ ! ಇವರ ಮನ-ವಚನ- ಕಾಯ ಮತ್ತು ಧನವು ಧನ್ಯವಿದೆ ! ಇಚ್ಛಾರಹಿತರಾಗಿ ಇಂಥ ಸನ್ಮಾರ್ಗದಲ್ಲಿ ಧನ ತೊಡಗಿಸುತ್ತಾರೆ ಅದು ಧನ್ಯವಿದೆ ! ಹೀಗೆ ಪ್ರಭಾವನೆಯು ವ್ಯಾಪ್ತವಾಗುತ್ತಿರುವುದನ್ನು ನೋಡುವುದರಿಂದ-ಕೇಳುವುದರಿಂದ ನಿಕಟ ಭವ್ಯರ ಕಣ್ಣುಗಳಿಂದ ಆನಂದಾಶ್ರುಗಳು ಸುರಿಯಲಾರಂಭಿಸುವವು.

**ಸಂಸಾರ ಸಮುದ್ರದಲ್ಲಿ ಮುಳುಗುತ್ತಿರುವ ಜನರಿಗೆ ಭಕ್ತಿಯೇ ಹಸ್ತಾವಲಂಬನ ಕೊಡುವಂಥದ್ದಿದೆ. ನಮ್ಮ ಸಲುವಾಗಿ ಭವ-ಭವದಲ್ಲಿ ಜಿನೇಂದ್ರರ ಭಕ್ತಿಯೇ ಶರಣವಿರಲಿ.** ಈ ಪ್ರಕಾರ ನಿತ್ಯ ಜಿನೇಂದ್ರರ ಪೂಜೆ ಮಾಡುವುದು, ಅಷ್ಟಾಹ್ನಿಕ, ಷೋಡಶಕಾರಣ, ದಶಲಕ್ಷಣ ಮತ್ತು ರತ್ನತ್ರಯ ಪರ್ವಗಳಲ್ಲಿ ಸಮಸ್ತ ಪಾಪದ ಆರಂಭ ಬಿಟ್ಟುಕೊಟ್ಟು ಜಿನ-ಪೂಜೆ ಮಾಡುವುದು, ಆನಂದದೊಡನೆ ನೃತ್ಯ ಮಾಡುವುದು, ಕರ್ಣ ಪ್ರಿಯವಾದ್ಯ ಬಾರಿಸುವುದು; ಮತ್ತು ಸ್ವರ, ತಾಳ,ಲಯ ಸಹಿತವಾಗಿ ಜಿನೇಂದ್ರ ಭಗವಂತರ ಗುಣಗಾಣ ಮಾಡುವಲ್ಲಿ ಸಮಸ್ತ ಸನ್ಮಾರ್ಗದ ಪ್ರಭಾವನೆಯಿದೆ. ಯಾರ ಹೃದಯದಲ್ಲಿ ನಿಜವಾಗಿ ಸತ್ಯಾರ್ಥ ಧರ್ಮವು ನಿವಾಸ ಮಾಡುತ್ತದೆ ಅವರಿಂದ ಪ್ರಭಾವನೆಯು ಆಗಿಯೇ ಆಗುತ್ತದೆ.

**ಶಾಸ್ತ್ರಪ್ರವಚನದ ಪ್ರೇರಣೆ ಹಾಗೂ ವ್ಯಾಖ್ಯಾನದ ಸ್ವರೂಪ :** ಜಿನೇಂದ್ರ ಪ್ರರೂಪಿತ ನಾಲ್ಕೂ ಅನುಯೋಗಗಳ ಸಿದ್ಧಾಂತಗಳ ವ್ಯಾಖ್ಯಾನ ಮಾಡಬೇಕು. ಅದನ್ನು ಕೇಳುವುದರಿಂದ ಏಕಾಂತದ ದುರಾಗ್ರಹವು ನಷ್ಟವಾಗಿ ಹೋಗಬೇಕು, ಹೃದಯದಲ್ಲಿ ಅನೇಕಾಂತವು ನಿರ್ಮಾಣವಾಗಬೇಕು, ಪಾಪಗಳಿಂದ ಕಂಪಿಸಬೇಕು, ವ್ಯಸನಗಳು ಬಿಟ್ಟು ಹೋಗಬೇಕು, ದಯಾರೂಪದ ಧರ್ಮದಲ್ಲಿ ಪ್ರವರ್ತನೆಯಾಗಬೇಕು, ಅಭಕ್ಷ್ಯ ಭಕ್ಷಣದ ತ್ಯಾಗವಾಗಿ ಹೋಗಬೇಕು. ಆ ವ್ಯಾಖ್ಯಾನ ಕೇಳುವುದರಿಂದ ಸಾವಿರಾರು ಜನರ ಕುದೇವ, ಕುಗುರು, ಕುಧರ್ಮದ ಆರಾಧನೆಯ ತ್ಯಾಗವಾಗಿ ಹೋಗಬೇಕು, ಮತ್ತು ವೀತರಾಗದೇವ, ದಯಾರೂಪ ಧರ್ಮ, ಆರಂಭ ಪರಿಗ್ರಹರಹಿತಗುರುಗಳ ಆರಾಧನೆಯಲ್ಲಿ ದೃಢ ಶ್ರದ್ಧೆಯಾಗಿ ಹೋಗಬೇಕು. ಆ ವ್ಯಾಖ್ಯಾನ ಮಾಡುವುದನ್ನು ಕೇಳಿ ಬಹಳಷ್ಟು ಮನುಷ್ಯರು ರಾತ್ರಿ ಭೋಜನ,ಅಯೋಗ್ಯ ಭೋಜನ, ಅನ್ಯಾಯದ ವಿಷಯದಲ್ಲಿ, ಪರಧನದಲ್ಲಿ ಪ್ರೀತಿಯನ್ನು ಬಿಟ್ಟುಕೊಟ್ಟು ವ್ರತಗಳಲ್ಲಿ, ಶೀಲದಲ್ಲಿ, ಸಂಯಮ ಭಾವದಲ್ಲಿ, ಸಂತೋಷ ಭಾವದಲ್ಲಿ ಲೀನವಾಗಿ ಹೋಗಬೇಕು.

**ಉಪದೇಶ ಮಾಡುವುದರಿಂದ ದೇಹ ಮೊದಲಾದ ಪರದ್ರವ್ಯಗಳಿಂದ ಭಿನ್ನವಿರುವ ತಮ್ಮ ಆತ್ಮನ ಅನುಭವವಾಗಿ ಹೋಗಬೇಕು. ಶರೀರದಲ್ಲಿನ ಏಕತ್ವ ಬುದ್ಧಿಯು ಬಿಟ್ಟು ಹೋಗಬೇಕು. ಜೀವ-ಅಜೀವ ಮೊದಲಾದ ದ್ರವ್ಯಗಳ ನಿರ್ಣಯವು ಪ್ರಮಾಣ-ನಯ-ನಿಕ್ಷೇಪಗಳ ಮೂಲಕ ಆಗಿ ಸಂಶಯರಹಿತ ದ್ರವ್ಯ-ಗುಣ-ಪರ್ಯಾಯಗಳ ಸತ್ಯಾರ್ಥ ಸ್ವರೂಪವು ಪ್ರಕಟವಾಗಿ ಹೋಗಬೇಕು, ಮಿಥ್ಯಾ ಅಂಧಕಾರವು ದೂರವಾಗಿ ಹೋಗಬೇಕು.** ಹೀಗೆ ಆಗಮದ ವ್ಯಾಖ್ಯಾನದಿಂದ ಸನ್ಮಾರ್ಗದ ಪ್ರಭಾವನೆಯಾಗುತ್ತದೆ.

ಹೇಡಿಗಳಿಂದ ಧಾರಣ ಮಾಡುವ ಸಾಧ್ಯತೆಯಿಲ್ಲದಂಥ ಘೋರ ತಪಶ್ಚರಣ ಮಾಡಬೇಕು. ಇಂಥ ತಪಸ್ಸಿನ ಮೂಲಕ ಪ್ರಭಾವನೆಯಾಗುತ್ತದೆ. ವಿಷಯಾನುರಾಗವನ್ನು ಬಿಟ್ಟುಕೊಟ್ಟು ನಿರ್ವಾಂಛಕನಾಗುವುದರಿಂದಲೂ ಆತ್ಮನ

ಪ್ರಭಾವವು ಪ್ರಕಟವಾಗುತ್ತದೆ, ಮತ್ತು ಧರ್ಮದ ಮಾರ್ಗವು ಕೂಡ ತಪಸ್ಸಿನಿಂದಲೇ ಹೊಳೆಯುತ್ತದೆ. ಈ ತಪಸ್ಸು ದುರ್ಗತಿಯ ಮಾರ್ಗವನ್ನು ನಷ್ಟ ಮಾಡುವಂಥದ್ದಿದೆ. ತಪಸ್ಸಿಲ್ಲದೆ ಕಾಮ ಮೊದಲಾದ ವಿಷಯಗಳು ಜ್ಞಾನ-ಚಾರಿತ್ರವನ್ನು ನಷ್ಟ ಮಾಡಿ ಬಿಡುತ್ತವೆ. ತಪದ ಪ್ರಭಾವದಿಂದ ಕಾಮದ ನಾಶವಾಗುತ್ತದೆ, ರಸನೇಂದ್ರಿಯದ ಚಪಲತೆಯು ನಷ್ಟವಾಗಿ ಹೋಗುತ್ತದೆ. ಲಾಲಸೆಯ ಅಭಾವವಾಗುತ್ತದೆ. ರತ್ನತ್ರಯದ ಪ್ರಭಾವನೆಯಲ್ಲಿ ತಪಸ್ಸಿನಿಂದಲೇ ದೃಢತೆಯಾಗುತ್ತದೆ.

**ಜಿನಮಂದಿರ ಮತ್ತು ಜಿನಬಿಂಬದ ಪ್ರತಿಷ್ಠೆ ಮಾಡಿಸುವುದು :** ಜಿನೇಂದ್ರರ ಪ್ರತಿಬಿಂಬದ ಪ್ರತಿಷ್ಠೆ ಮಾಡಿಸುವುದು, ಜಿನೇಂದ್ರರ ಮಂದಿರ ಕಟ್ಟಿಸುವುದರಿಂದ ಸನ್ಮಾರ್ಗದ ಪ್ರಭಾವನೆಯಾಗುತ್ತದೆ. ಪ್ರತಿಷ್ಠೆ ಮಾಡಿಸುವುದರಿಂದ ಎಲ್ಲಿಯವರೆಗೆ ಜಿನಬಿಂಬವಿರುವುದು ಅಲ್ಲಿಯವರೆಗೆ ದರ್ಶನ, ಸ್ತುತಿ, ಪೂಜೆ ಮೊದಲಾದುವನ್ನು ಮಾಡಿ ಅನೇಕ ಭವ್ಯ ಜೀವರುಗಳು ಪುಣ್ಯದ ಉಪಾರ್ಜನೆ ಮಾಡುವರು ಮತ್ತು ಆ ಜಿನಮಂದಿರ ಕಟ್ಟಿಸಿದಂಥ ಗೃಹಸ್ಥನ ಧನ ಪ್ರಾಪ್ತ ಮಾಡಿದುದರ ಸಾರ್ಥಕತೆಯಾಗುವುದು. ಪೂಜೆ, ರಾತ್ರಿ ಜಾಗರಣೆ, ಶಾಸ್ತ್ರಗಳ ವ್ಯಾಖ್ಯಾನ, ಶ್ರವಣ, ಪಠನ, ಜಿನೇಂದ್ರರ ಸ್ತವನ, ಸಾಮಾಯಿಕ, ಪ್ರತಿಕ್ರಮಣ, ಅನಶನ ಮೊದಲಾದ ತಪ, ನೃತ್ಯ-ಗಾಯನ-ಭಜನೆ, ಉತ್ಸವಗಳೆಲ್ಲವು ಜಿನಮಂದಿರವಿದ್ದ ಮೇಲೆಯೇ ಆಗುತ್ತವೆ. **ಜಿನಮಂದಿರವಿಲ್ಲದೆ ಧರ್ಮದ ಸಮಸ್ತ ಸಮಾಗಮವಾಗುವುದೇ ಇಲ್ಲ.** ಆದುದರಿಂದ ಹೆಚ್ಚಿಗೇನು ಹೇಳುವುದು, ತಮ್ಮ ಹಾಗೂ ಇತರರ ಉಪಕಾರದ ಮೂಲವು ಪ್ರತಿಷ್ಠೆ ಮಾಡಿಸುವುದು ಮತ್ತು ಜಿನಮಂದಿರ ಕಟ್ಟಿಸುವುದಿದೆ.

**ಧನದಲ್ಲಿ ಆಸಕ್ತಿ ಕಡಿಮೆ ಮಾಡುವುದರ ಪ್ರೇರಣೆ :-** ಧರ್ಮದ ಉತ್ಕೃಷ್ಟ ಮಾರ್ಗವಂತೂ ಸಮಸ್ತಪರಿಗ್ರಹ ಬಿಟುಕೊಟ್ಟು ವೀತರಾಗತೆಯನ್ನು ಅಂಗೀಕಾರ ಮಾಡುವುದಿದೆ; ಆದರೆ ಯಾರಿಗೆ ಪ್ರತ್ಯಾಖ್ಯಾನ ಮತ್ತು ಅಪ್ರತ್ಯಾಖ್ಯಾನ ಕಷಾಯಗಳ ಉಪಶಮವಾಗಿಲ್ಲ ಅವರಿಗೆ ಗೃಹಸಂಪದವನ್ನು ಬಿಟ್ಟುಕೊಡುವುದಾಗುವುದಿಲ್ಲ.

ಧನ ಸಂಪತ್ತು ಅಧಿಕವಿದ್ದರೆ ಮೊದಲು ಅನ್ಯಾಯದಿಂದ ಯಾರ ಧನ ತೆಗೆದುಕೊಂಡಿದೆ ಅವರ ಹತ್ತಿರ ಹೋಗಿ ಕ್ಷಮಾಯಾಚನೆ ಮಾಡಿ ಅವರ ಧನವನ್ನು ಮರಳಿ ಕೊಡಬೇಕು. ಒಂದು ವೇಳೆ ತಮ್ಮ ಹತ್ತಿರ ಅಧಿಕ ಧನವಿದ್ದರೆ ಧನ ಸಂಪಾದನೆ ಮಾಡುವುದನ್ನು ನಿಲ್ಲಿಸಿಬಿಡಬೇಕು. ತೀವ್ರರಾಗ ಹೆಚ್ಚಿಸುವಂಥ ಇಂದ್ರಿಯ ವಿಷಯಗಳ ಲಾಲಸೆಯನ್ನು ಬಿಟ್ಟುಕೊಟ್ಟು ಸಂವರ ರೂಪವಾಗುವುದು. ಪುನಃ ಉಳಿದ ಧನವನ್ನು ತಮ್ಮ ಮಿತ್ರ, ಹಿತಚಿಂತಕ, ಮಗಳು, ಸಹೋದರಿ, ಬಂಧುಗಳಲ್ಲಿ ಯಾರಾದರೂ ನಿರ್ಧನ, ರೋಗಿ, ದುಃಖಿಯಿದ್ದರೆ ಅವರಿಗೆ ಮತ್ತು ಅನಾಥ ವಿಧವೆಯರಿಗೆ ಯಥಾಯೋಗ್ಯ ಕೊಟ್ಟು ಸಂತುಷ್ಟ ಮಾಡುವುದು. ತಮ್ಮ ಆಶ್ರಿತ, ಸೇವಕ ಮೊದಲಾದವರನ್ನು ಮತ್ತು ಸಮೀಪದಲ್ಲಿ ಇರುವಂಥವರನ್ನು ಯಥಾಯೋಗ್ಯ ಸಂತುಷ್ಟಮಾಡಿ ನಂತರ ಮಗನಿಗೆ,ಪತ್ನಿಗೆ ಅವರವರ ಪಾಲು ಕೊಡಬೇಕು. ಅನಂತರ ಉಳಿದ ಧನವನ್ನು ಜಿನಮಂದಿರ ಕಟ್ಟಿಸುವಲ್ಲಿ, ಜಿನಬಿಂಬದ ಪ್ರತಿಷ್ಠೆ ಮಾಡಿಸುವಲ್ಲಿ ಮತ್ತು ಜಿನಧರ್ಮದ ಆಧಾರಭೂತ ಸಿದ್ಧಾಂತಗಳನ್ನು ಬರೆಸುವಲ್ಲಿ, ಮುದ್ರಿಸುವಲ್ಲಿ ಜಿಪುಣತೆಯನ್ನು ಬಿಟ್ಟು ಉದಾರಬುದ್ಧಿಯಿಂದ, ಪರೋಪಕಾರ ಬುದ್ಧಿಯಿಂದ ಧನತೊಡಗಿಸುವುದು; ಅದರ ಸಮಾನವಾಗಿ ಯಾವ ಪ್ರಭಾವನೆಯಿಲ್ಲ.

**ಬಾಹ್ಯಾಚರಣೆಯಲ್ಲಿ ಶುದ್ಧತೆ ಹೆಚ್ಚಿಸುವ ಪ್ರೇರಣೆ :-** ಮಂದಿರದ ಪ್ರತಿಷ್ಠೆಯನ್ನಂತೂ ಮಾಡಿಸುವನು, ಆದರೆ ಅನೀತಿಯಿಂದ ಇತರರ ಧನ ಇಟ್ಟುಕೊಂಡರೆ ಅನ್ಯಾಯದ ಧನ ಗ್ರಹಣ ಮಾಡಿದರೆ ಅವನ ಸಮಸ್ತ ಪ್ರಭಾವನೆಯು ನಷ್ಟವಾಗಿ ಹೋಗುವುದು. ಪ್ರತಿಷ್ಠೆ ಮಾಡಿಸುವಂಥವನು, ಮಂದಿರ ಕಟ್ಟಿಸುವಂಥವನು ದೂಷಿತ ವ್ಯಾಪಾರ ಮಾಡುತ್ತಿದ್ದರೆ, ಹಿಂಸಾದಿ ಮಹಾಪಾಪಗಳಲ್ಲಿ, ಅಯೋಗ್ಯ ನಿಂದ್ಯ ವಚನಗಳಲ್ಲಿ, ತೀವ್ರಲೋಭದಲ್ಲಿ, ಕುಶೀಲದಲ್ಲಿ ವರ್ತಿಸುತ್ತಿದ್ದರೆ ಮತ್ತು ಅತ್ಯಂತ ಕೃಪಣತೆ ಮಾಡಿ ಪರಿಣಾಮದಲ್ಲಿ ಸಂಕ್ಲೇಶ ರೂಪನಾಗಿ ಧನ ಖರ್ಚು ಮಾಡುತ್ತಿದ್ದರೆ ಅವನ ಸಮಸ್ತ ಪ್ರಭಾವನೆಯು ನಷ್ಟವಾಗಿ ಹೋಗುವುದು. ಆದುದರಿಂದ ಜಿನಬಿಂಬದ ಪ್ರತಿಷ್ಠೆ ಮಾಡಿಸುವಂಥವನ, ಜಿನಮಂದಿರ ಕಟ್ಟಿಸುವಂಥವನ ಬಾಹ್ಯ ಪ್ರವೃತ್ತಿಯು ಕೂಡ ಶುದ್ಧವಿರುತ್ತದೆ. ಅದರಿಂದ ಪ್ರಭಾವನೆಯಾಗುತ್ತದೆ. ಮಂದಿರದಲ್ಲಿ ಶಿಖರ, ಕಲಶ, ಕಿರುಗಂಟೆ-ದೊಡ್ಡ ಗಂಟೆ, ಬಟ್ಟೆಯ ಧ್ವಜ, ಸಿಂಹಾಸನ ಮೊದಲಾದ ಉತ್ತಮ ಉಪಕರಣಗಳನ್ನು ಕೊಡುವುದು ಮತ್ತು ಸ್ವಾಧ್ಯಾಯದಲ್ಲಿ ಪ್ರವೃತ್ತಿ ಮೊದಲಾದವುಗಳ ಮೂಲಕ ಆಗುವಂಥ ಪ್ರಭಾವನೆಯು ದುಃಖದ ನಾಶ ಮಾಡುವಂಥದ್ದಿರುತ್ತದೆ.

ಪ್ರಭಾವನೆಯು ಶುದ್ಧ ಆಚರಣೆಯಿಂದ ಆಗುತ್ತದೆ. ಆದುದರಿಂದ ಜಿನವಚನಗಳಲ್ಲಿ ಶ್ರದ್ಧೆಯುಳ್ಳವನೇ ಧರ್ಮದ ಪ್ರಭಾವನೆ ಮಾಡುತ್ತಾನೆ. ಜೈನರ ಗಾಢಪ್ರೀತಿ ನೋಡಿ ಅನ್ಯಮಿಥ್ಯಾದೃಷ್ಟಿಗಳ ಹೃದಯದಲ್ಲೂ ಜೈನ ಧರ್ಮದ ಮಹಿಮೆಯು ಬರುತ್ತದೆ. ಜೈನರ ಧರ್ಮನೋಡಿರಿ ! ಅವರು ಪ್ರಾಣ ಹೋದರೂ ಕೂಡ ಅಭಕ್ಷ್ಯ ಭಕ್ಷಣ ಮಾಡುವುದಿಲ್ಲ, ತೀವ್ರರೋಗದ ವೇದನೆಯಾದರೂ ಕೂಡ ರಾತ್ರಿಯಲ್ಲಿ ಔಷಧ-ನೀರುಗಳನ್ನು ಸ್ವೀಕರಿಸುವುದಿಲ್ಲ, ಧನ-ಅಭಿಮಾನಾದಿಗಳು ನಷ್ಟವಾದರೂ ಕೂಡ ಅಸತ್ಯ ವಚನ ಆಡುವುದಿಲ್ಲ, ಮಹಾವಿಪತ್ತು ಬಂದರೂ ಕೂಡ ಪರಧನದಲ್ಲಿ ಮನಸ್ಸು ಓಡಿಸುವದಿಲ್ಲ, ತಮ್ಮ ಪ್ರಾಣ ಹೋದರೂ ಕೂಡ ಅನ್ಯ ಜೀವದ ಘಾತ ಮಾಡುವುದಿಲ್ಲ, ಶೀಲದಲ್ಲಿ ದೃಢತೆ, ಪರಿಗ್ರಹದಲ್ಲಿ ಪರಿಮಾಣತೆ, ಪರಮಸಂತೋಷ ಧಾರಣ ಮಾಡಿರುವುದರಿಂದ ಆತ್ಮನ ಪ್ರಭಾವನೆಯಾಗುತ್ತದೆ ಅದರಂತೆ ಮಾರ್ಗದ ಪ್ರಭಾವನೆಯು ಕೂಡ ಆಗುತ್ತದೆ.

ಆದುದರಿಂದ ಸಮಸ್ತ ಧನವು ಹೊರಟು ಹೋದರೂ, ಪ್ರಾಣವು ಹೊರಟು ಹೋದರೂ ಕೂಡ ಯಾರು ತಮ್ಮ ನಿಮಿತ್ತದಿಂದ ಧರ್ಮದ ನಿಂದೆ-ಹಾಸ್ಯವನ್ನೆಂದೂ ಮಾಡಿಸುವುದಿಲ್ಲ ಅವರಿಗೆ ಸನ್ಮಾರ್ಗ ಪ್ರಭಾವನೆ ಅಂಗವಿರುತ್ತದೆ. ಆ ಪ್ರಭಾವನೆಯ ಮಹಿಮೆಯ ವರ್ಣನೆಯನ್ನು ಕೋಟಿ ನಾಲಿಗೆಗಳಿಂದಲೂ ಮಾಡಲು ಯಾರೂ ಸಮರ್ಥರಿಲ್ಲ. ಆದುದರಿಂದ ಎಲೈ ಭವ್ಯ ಜನಗಳೇ ! ಮೂರು ಲೋಕದಲ್ಲಿ ಪೂಜ್ಯವಾದ ಪ್ರಭಾವನೆ ಅಂಗವನ್ನು ದೃಢತೆಯಿಂದ ಧಾರಣ ಮಾಡಿ ಭಕ್ತಿಯಿಂದ ಇದರದೇ ಪೂಜೆ ಮಾಡಿರಿ, ಇದರದೇ ಆರತಿ ಬೆಳಗಿರಿ. ಯಾವನು ಪ್ರಭಾವನೆ ಅಂಗವನ್ನು ದೃಢತೆಯಿಂದ ಧಾರಣ ಮಾಡುತ್ತಾನೆ ಅವನು ಇಂದ್ರಾದಿ ದೇವಗಳಿಂದ ಪೂಜ್ಯನಾದ ತೀರ್ಥಂಕರನಾಗುತ್ತಾನೆ. ಈ ಪ್ರಕಾರ ಸನ್ಮಾರ್ಗ ಪ್ರಭಾವನೆ ನಾಮದ ಹದಿನೈದನೇ ಭಾವನೆಯ ವರ್ಣನೆ ಮಾಡಲಾಯಿತು.

## ಪ್ರವಚನ ವಾತ್ಸಲ್ಯತ್ವ ಭಾವನೆ

ಈಗ ಪ್ರವಚನ ವಾತ್ಸಲ್ಯತ್ವ ನಾಮದ ಹದಿನಾರನೆಯ ಭಾವನೆಯ ವರ್ಣನೆ ಮಾಡುತ್ತಾರೆ. **ಪ್ರವಚನ ಎಂದರೆ ದೇವ-ಗುರು-ಧರ್ಮಗಳಲ್ಲಿ ವಾತ್ಸಲ್ಯ ಎಂದರೆ ಪ್ರೀತಿಯ ಭಾವವು ಅದು ಪ್ರವಚನ ವಾತ್ಸಲ್ಯವೆಂದು ಕರೆಸಿಕೊಳ್ಳುತ್ತದೆ.** ಯಾರು ಚಾರಿತ್ರಗುಣ ಸಹಿತರಿದ್ದಾರೆ,ಶೀಲಧಾರಕರಿದ್ದಾರೆ, ಪರಮ ಸೌಮ್ಯಭಾವ ಸಹಿತರಿದ್ದಾರೆ, ಇಪ್ಪತ್ತೆರಡು ಪರೀಷಹಗಳನ್ನು ಸಹಿಸುವಂಥವರಿದ್ದಾರೆ, ದೇಹದಲ್ಲಿ ನಿರ್ಮಮತೆ, ಸಮಸ್ತ ವಿಷಯವಾಂಛೆಯಿಂದ ರಹಿತ, ಆತ್ಮಹಿತದಲ್ಲಿ ಉದ್ಯಮಶೀಲ, ಪರೋಪಕಾರದಲ್ಲಿ ಸಾವಧಾನರಿರುವಂಥ **ಸಾಧುಜನರ** ಗುಣಗಳಲ್ಲಿ ಪ್ರೀತಿರೂಪದ ಪರಿಣಾಮವು ಅದು ವಾತ್ಸಲ್ಯವಿದೆ.

ವ್ರತಗಳ ಧಾರಕ, ಪಾಪದಿಂದ ಭಯಭೀತ, ನ್ಯಾಯಮಾರ್ಗೀ, ಧರ್ಮದಲ್ಲಿ ಅನುರಾಗದ ಧಾರಕ, ಮಂದ ಕಷಾಯಿ, ಸಂತೋಷಿಯಿರುವಂಥ **ಶ್ರಾವಕ** ಹಾಗೂ **ಶ್ರಾವಿಕೆಯ** ಗುಣಗಳಲ್ಲಿ, ಅವರ ಸಹವಾಸದಲ್ಲಿ ಅನುರಾಗ ಧಾರಣ ಮಾಡುವುದು ಅದು ವಾತ್ಸಲ್ಯವಿದೆ.

ಸ್ತ್ರೀ ಪರ್ಯಾಯದಲ್ಲಿ ವ್ರತಗಳ ಗಡಿಯನ್ನು ತಲುಪಿ, ಸಮಸ್ತ ಗೃಹಾದಿ ಪರಿಗ್ರಹವನ್ನು ಬಿಟ್ಟುಕೊಟ್ಟು, ಕುಟುಂಬದ ಮಮತೆಯನ್ನು ತೊರೆದು, ದೇಹದಲ್ಲಿ ನಿರ್ಮಮತೆಯನ್ನು ಧಾರಣ ಮಾಡಿ, ಪಂಚೇಂದ್ರಿಯ ವಿಷಯಗಳನ್ನು ಬಿಟ್ಟುಕೊಟ್ಟು ಒಂದು ವಸ್ತ್ರಮಾತ್ರ ಪರಿಗ್ರಹದ ಅವಲಂಬನೆ ಪಡೆದು, ಭೂಮಿಶಯನ, ಕ್ಷುಧೆ, ತೃಷೆ, ಶೀತ, ಉಷ್ಣ ಮೊದಲಾದ ಪರೀಷಹಗಳ ಸಹನೆ ಮಾಡಿ, ಸಂಯಮ ಸಹಿತ ಧ್ಯಾನ ಸ್ವಾಧ್ಯಾಯ ಸಾಮಾಯಿಕ ಮೊದಲಾದ ಆವಶ್ಯಕ ಸಹಿತರಾಗಿ, **ಆರ್ಜಿಕೆಯ** ದೀಕ್ಷೆಯನ್ನು ಗ್ರಹಿಸಿ ಸಂಯಮಸಹಿತ ಕಾಲ ಕಳೆಯುತ್ತಾರೆ ಅವರ ಗುಣಗಳಲ್ಲಿ ಅನುರಾಗ ಮಾಡುವುದು ಅದು ವಾತ್ಸಲ್ಯಭಾವವಿದೆ.

ಮುನಿರಾಜರ ಹಾಗೆ ವನದಲ್ಲಿ ವಾಸಿಸುತ್ತ, ಇಪ್ಪತ್ತೆರಡು ಪರೀಷಹಗಳನ್ನು ಸಹಿಸುತ್ತ, ಉತ್ತಮ ಕ್ಷಮಾದಿ ಧರ್ಮಧಾರಕ, ದೇಹದಲ್ಲಿ ನಿರ್ಮಮತೆ, **ತಮ್ಮ ಸಲುವಾಗಿ ಮಾಡಿದ ಔಷಧ-ಅನ್ನ-ಪಾನಾದಿಗಳನ್ನು ಗ್ರಹಣ ಮಾಡದಂಥ,** ಒಂದುಕೌಪೀನವಲ್ಲದೆ ಸಮಸ್ತ ಪರಿಗ್ರಹದ ತ್ಯಾಗಿ **ಉತ್ತಮ ಶ್ರಾವಕರ** ಗುಣಗಳಲ್ಲಿ ಅನುರಾಗ ಮಾಡುವುದು ಅದು ವಾತ್ಸಲ್ಯವಿದೆ. ದೇವ-ಗುರು-ಧರ್ಮಗಳ ಸತ್ಯಾರ್ಥ ಸ್ವರೂಪವನ್ನು ತಿಳಿದುಕೊಂಡು ದೃಢ ಶ್ರದ್ಧೆಯುಳ್ಳ, ಧರ್ಮದಲ್ಲಿ ಅಭಿರುಚಿಯ ಧಾರಕರಾದ **ಅವಿರತ ಸಮ್ಯಗ್ದೃಷ್ಟಿಯಲ್ಲಿ** ಕೂಡ ವಾತ್ಸಲ್ಯ ಮಾಡಬೇಕಾಗುವುದು.

**ಮೋಹದ ಮಹಿಮೆ :** ಈ ಸಂಸಾರದಲ್ಲಿ ಅನಾದಿಕಾಲದಿಂದಲೇ ತಮ್ಮ ಸ್ತ್ರೀ-ಪುತ್ರ-ಕುಟುಂಬ ಮೊದಲಾದವರಲ್ಲಿ, ದೇಹದಲ್ಲಿ, ಇಂದ್ರಿಯ ವಿಷಯಗಳ ಸಾಧನಗಳಲ್ಲಿ ರಾಗಯುಕ್ತವಾಗಿ ನಡೆದು ಬರುತ್ತಿದೆ. ಕಳೆದು ಹೋದ ಅನಾದಿ ಸಂಸಾರವೂ ಹೀಗೆಯೇ ಇದೆ. ತಿರ್ಯಂಚದಲ್ಲೂ ತಮ್ಮ ಸ್ತ್ರೀ-ಪುತ್ರರಲ್ಲಿ, ವಿಷಯಗಳಲ್ಲಿ ಅತ್ಯಂತ ಅನುರಾಗಿಯಾಗಿ ಅವರ ಸಲುವಾಗಿ ನಷ್ಟವಾಗಿ ಹೋಗುತ್ತದೆ, ಸತ್ತು ಹೋಗುತ್ತದೆ, ಅನ್ಯವನ್ನು ಸಾಯಿಸಿ ಹಾಕುತ್ತದೆ. ಹೀಗೆ ಮೋಹದ ಮಹಮೆಯು ಅತ್ಯಂತ ಅದ್ಭುತವಿದೆ. ಯಾರು ಸಮ್ಯಗ್ಜ್ಞಾನದಿಂದ ಮೋಹವನ್ನು ನಷ್ಟಮಾಡಿ ಆತ್ಮನ ಗುಣಗಳಲ್ಲಿ ವಾತ್ಸಲ್ಯ ಮಾಡುತ್ತಾರೆ ಆ ಪುರುಷರು ಧನ್ಯರಿದ್ದಾರೆ !

**ಪಂಚಮಕಾಲದ ಧನಿಕ ಸಂಸಾರಿಗಳ ವಾತ್ಸಲ್ಯದ ಅಭಾವ :** ಸಂಸಾರಿಯಂತೂ ಧನದ ಲಾಲಸೆಯಿಂದ ಅತ್ಯಂತ ಆಕುಲಿತರಾಗಿ ಧರ್ಮದಲ್ಲಿ ವಾತ್ಸಲ್ಯವನ್ನು ಬಿಟ್ಟುಕೊಟ್ಟಿದ್ದಾರೆ. ಸಂಸಾರಿಗೆ ಯಾವಾಗ ಧನವು ಅಧಿಕಗೊಳ್ಳುತ್ತದೆ ಆಗ ತೃಷ್ಣೆಯು ಇನ್ನೂ ಹೆಚ್ಚುತ್ತ ಹೋಗುತ್ತದೆ, ಧರ್ಮದ ಮಾರ್ಗವನ್ನು ಸಂಪೂರ್ಣವಾಗಿ ಮರೆತು ಹೋಗುತ್ತಾನೆ, ಧರ್ಮಾತ್ಮರುಗಳ ವಾತ್ಸಲ್ಯವನ್ನು ದೂರದಿಂದಲೇ ತ್ಯಾಗ ಮಾಡಿಬಿಡುತ್ತಾನೆ. ಹಗಲಿರುಳು ಧನ-ಸಂಪತ್ತಿಯ ವೃದ್ಧಿಯಲ್ಲಿಯೇ ಅನುರಾಗ ಹೆಚ್ಚುತ್ತದೆ. ಲಕ್ಷವಿದ್ದುದು ಕೋಟಿಯಾಗುವ ಇಚ್ಛೆ ಮಾಡುತ್ತಾನೆ. ಆರಂಭ ಪರಿಗ್ರಹವನ್ನು ವೃದ್ಧಿಸುತ್ತ ಹೋಗುತ್ತಾನೆ. ಪಾಪಗಳಲ್ಲಿ ಪ್ರವೀಣತೆಯು ಬೆಳೆಯುತ್ತ ಹೋಗುತ್ತದೆ ಮತ್ತು ಧರ್ಮದಲ್ಲಿ ವಾತ್ಸಲ್ಯವು ನಿಯಮದಿಂದ ಬಿಡುತ್ತ ಹೋಗುತ್ತದೆ.

ಎಲ್ಲಿ ದಾನಾದಿಗಳಲ್ಲಿ, ಪರೋಪಕಾರದಲ್ಲಿ ಧನ ತೊಡಗಿಸುತ್ತಿರುವುದು ಕಂಡು ಬರುತ್ತದೆ ಅಲ್ಲಿ ದೂರದಿಂದಲೇ ಹೊರಟು ಹೋಗುತ್ತಾನೆ ಅಧಿಕ ಆರಂಭ, ಅಧಿಕಪರಿಗ್ರಹ, ಅತೀತೃಷ್ಣೆಯಿಂದ ತೀರ ಹತ್ತಿರ ಬಂದು ಬಿಟ್ಟ ನರಕದ ನಿವಾಸವೂ ಅವನಿಗೆ ಕಂಡು ಬರುವುದಿಲ್ಲ. **ಪಂಚಮಕಾಲದ ಧನಾಢ್ಯ ಪುರುಷರಂತೂ ಪೂರ್ವಭವದಿಂದಲೇ ಮಿಥ್ಯಾ-ಧರ್ಮ, ಕುಪಾತ್ರ-ದಾನ, ಕುದಾನ ಮೊದಲಾದವುಗಳಲ್ಲಿ ಲಿಪ್ತರಾಗಿ ಎಂಥ ಕರ್ಮ ಕಟ್ಟಿಕೊಂಡು ಬಂದಿರುತ್ತಾರೆಂದರೆ ಅವರ ನರಕ-ತಿರ್ಯಂಚಗತಿಯ ಪರಿಪಾಟಿಯು ಅಸಂಖ್ಯಾತಕಾಲದ ಅನಂತಭವದವರೆಗೆ ಬಿಟ್ಟು ಹೋಗಲಾರದು.** ಅವರ ತನು-ಮನ-ವಚನ-ಧನಗಳು ಧರ್ಮಕಾರ್ಯದಲ್ಲಿ ತೊಡಗುವುದಿಲ್ಲ ಹಗಲಿರುಳು ತೃಷ್ಣೆ ಹಾಗೂ ಆರಂಭದಿಂದಲೇ ದುಃಖಿಯಿರುತ್ತಾರೆ; ಅವರಿಗೆ ಧರ್ಮಾತ್ಮರಲ್ಲಿ ಮತ್ತು ಧರ್ಮ ಧಾರಣ ಮಾಡುವಲ್ಲಿ ಎಂದೂ ವಾತ್ಸಲ್ಯವಾಗುವುದಿಲ್ಲ. ಧನವಿಲ್ಲದ ಧರ್ಮಾತ್ಮರಿದ್ದರೆ ಅವರನ್ನೂ ಕೀಳಾಗಿ ಮನ್ನಿಸುತ್ತಾರೆ.

**ಧರ್ಮ ಹಾಗೂ ಧರ್ಮಾತ್ಮರಲ್ಲಿ ವಾತ್ಸಲ್ಯದ ಪ್ರೇರಣೆ :** ಎಲೈ ಆತ್ಮಹಿತದ ವಾಂಛಕರೇ ! ಧನ ಸಂಪತ್ತನ್ನು ಮಹಾಮದವನ್ನುಂಟು ಮಾಡುವಂಥದ್ದಿದೆಯೆಂದು ತಿಳಿದುಕೊಂಡು, ದೇಹದ ಅಸ್ಥಿರತೆಯು ದುಃಖದಾಯಕವೆಂದು ತಿಳಿದುಕೊಂಡು, ಕುಟುಂಬವನ್ನು ಮಹಾಬಂಧನವೆಂದು ಮನ್ನಿಸಿ ಅವುಗಳ ಪ್ರೀತಿಯನ್ನು ಬಿಟ್ಟುಕೊಟ್ಟು ತಮ್ಮ ಆತ್ಮನಲ್ಲಿ ವಾತ್ಸಲ್ಯಮಾಡಬೇಕು. ಧರ್ಮಾತ್ಮರಲ್ಲಿ, ವ್ರತಿಗಳಲ್ಲಿ, ಸ್ವಾಧ್ಯಾಯದಲ್ಲಿ, ಜಿನಪೂಜೆಯಲ್ಲಿ ವಾತ್ಸಲ್ಯಮಾಡಬೇಕು. ಸಮ್ಯಕ್ಚಾರಿತ್ರರೂಪದ ಆಭರಣದಿಂದ ಅಲಂಕೃತರಿರುವ ಸಾಧುಜನರ ಸ್ತವನ, ಗೌರವ ಯಾವ ಪುರುಷರು ಮಾಡುತ್ತಾರೆ ಅವರಿಗೆ ವಾತ್ಸಲ್ಯಗುಣವಿರುತ್ತದೆ, ಅವರು ಸುಗತಿಗೆ ಪ್ರಾಪ್ತರಾಗುತ್ತಾರೆ, ಕುಗತಿಯ ನಾಶ ಮಾಡುತ್ತಾರೆ. ವಾತ್ಸಲ್ಯಗುಣದ ಪ್ರಭಾವದಿಂದಲೇ ಸಮಸ್ತ ದ್ವಾದಶಾಂಗವಿದ್ಯೆಯ ಸಿದ್ಧಿಯಾಗುತ್ತದೆ. ಸಿದ್ಧಾಂತ ಗ್ರಂಥಗಳಲ್ಲಿ ಹಾಗೂ ಸಿದ್ಧಾಂತದ ಉಪದೇಶ ಮಾಡುವಂಥ ಉಪಾಧ್ಯಾಯರುಗಳಲ್ಲಿ ನಿಜವಾದ ಭಕ್ತಿಯ ಪ್ರಭಾವದಿಂದ ಶ್ರುತಜ್ಞಾನಾವರಣ ಕರ್ಮದ ರಸವು ಒಣಗಿ ಹೋಗುತ್ತದೆ ಆಗ ಸಮಸ್ತ ವಿದ್ಯೆಯ ಸಿದ್ಧಿಯಾಗುತ್ತದೆ. **ವಾತ್ಸಲ್ಯಗುಣದ ಧಾರಕರಿಗೆ ದೇವಗಳೂ ನಮಸ್ಕಾರ ಮಾಡುತ್ತಾರೆ.**

ವಾತ್ಸಲ್ಯದ ಮೂಲಕವೇ ಹದಿನೆಂಟು ಪ್ರಕಾರದ **ಬುದ್ಧಿ-ಋದ್ಧಿ**, ಒಂಭತ್ತು ಪ್ರಕಾರದ ಆಕಾಶಗಾಮಿನೀ **ಕ್ರಿಯಾಋದ್ಧಿ**, ಅನೇಕ ಪ್ರಕಾರದ **ಚಾರಣ-ಋದ್ಧಿ**, ಹನ್ನೊಂದುಪ್ರಕಾರದ **ವಿಕ್ರಿಯ-ಋದ್ಧಿ**, ಮೂರು ಪ್ರಕಾರದ **ಬಲ-ಋದ್ಧಿ**, ಏಳು ಪ್ರಕಾರದ **ತಪ-ಋದ್ಧಿ**, ಆರು ಪ್ರಕಾರದ **ರಸ-ಋದ್ಧಿ**, ಎಂಟು ಪ್ರಕಾರದ **ಔಷಧ-ಋದ್ಧಿ**, ಎರಡು ಪ್ರಕಾರದ **ಕ್ಷೇತ್ರ-ಋದ್ಧಿ** ಇವೇ ಮೊದಲಾದ ಅರವತ್ತುನಾಲ್ಕು ಋದ್ಧಿ ಮತ್ತು ಅನೇಕ ಶಕ್ತಿಗಳು ಪ್ರಕಟವಾಗುತ್ತವೆ. ಇಲ್ಲಿ ಋದ್ಧಿಗಳ ಸ್ವರೂಪವನ್ನು ತಿಳಿಸಿ ಕೊಡುವುದರಿಂದ ಕಥನವು ವೃದ್ಧಿಸುವುದೆಂದು ಬರೆಯಲಾಗಿಲ್ಲ. ಅರ್ಥ ಪ್ರಕಾಶಿಕದಲ್ಲಿ ಹೇಳಲಾಗಿದೆ ಅಲ್ಲಿಂದ ತಿಳಿದುಕೊಳ್ಳಬೇಕು.

**ವಾತ್ಸಲ್ಯದ ಮೂಲಕವೇ ಮಂದ ಬುದ್ಧಿಯುಳ್ಳವರದೂ ಮತಿಜ್ಞಾನ-ಶ್ರುತಜ್ಞಾನವು ವಿಸ್ತೀರ್ಣವಾಗಿ ಹೋಗುತ್ತದೆ.** ವಾತ್ಸಲ್ಯದ ಪ್ರಭಾವದಿಂದ ಪಾಪದ ಪ್ರವೇಶವಾಗುವುದಿಲ್ಲ. ವಾತ್ಸಲ್ಯದಿಂದಲೇ ತಪಸ್ಸಿನ ಶೋಭೆಯಾಗುತ್ತದೆ. ತಪಸ್ಸಿನಲ್ಲಿ ಉತ್ಸಾಹವಿಲ್ಲದೆ ತಪಸ್ಸು ನಿರರ್ಥಕವಿದೆ. ಈ ಜಿನೇಂದ್ರರ ಮಾರ್ಗವು ವಾತ್ಸಲ್ಯದಿಂದಲೇ ಶೋಭೆ ಪಡೆಯುತ್ತದೆ. ವಾತ್ಸಲ್ಯದಿಂದಲೇ ಶುಭಧ್ಯಾನದ ವೃದ್ಧಿಯಾಗುತ್ತದೆ. ವಾತ್ಸಲ್ಯದಿಂದಲೇ ಸಮ್ಯಗ್ಜ್ಞಾನವು ನಿರ್ದೋಷವಾಗುತ್ತದೆ. ವಾತ್ಸಲ್ಯದಿಂದಲೇ ದಾನ ಕೊಡುವುದು ಕೃತಾರ್ಥ-ಸಫಲವಾಗುತ್ತದೆ. ಪಾತ್ರದಲ್ಲಿ ಪ್ರೀತಿಯಿಲ್ಲದೆ ಮತ್ತು ಕೊಡುವಲ್ಲಿ ಪ್ರೀತಿಯಿಲ್ಲದೆ ದಾನವು ನಿಂದೆಯ ಕಾರಣವಿದೆ.

**ಜಿನವಾಣಿಯಲ್ಲಿ ವಾತ್ಸಲ್ಯವಿರುವವನಿಗೇ ಪ್ರಶಂಸಾಯೋಗ್ಯ ಜಿನವಾಣಿಯ ಅರ್ಥವು ಉದ್ಯೋತ ರೂಪವಾಗುತ್ತದೆ.** ಪ್ರಕಟವಾಗುತ್ತದೆ. ಯಾರಿಗೆ ಜಿನವಾಣಿಯಲ್ಲಿ ವಾತ್ಸಲ್ಯವಿಲ್ಲ, ವಿನಯವಿಲ್ಲ ಅವರಿಗೆ ಯಥಾವತ್ ಅರ್ಥವು ಗೋಚರಿಸಲಾಗದು. ಅವರಂತೂ ವಿಪರೀತವಾಗಿಯೇ ಗ್ರಹಣ ಮಾಡುವರು. ಈ ಮನುಷ್ಯ ಜನ್ಮದ ಭೂಷಣವು ವಾತ್ಸಲ್ಯವೇ ಇದೆ. ವಾತ್ಸಲ್ಯವಿಲ್ಲದ ಮನೋಜ್ಞ ಆಭರಣಗಳು ವಸ್ತ್ರಧಾರಣ ಮಾಡುವುದು ಕೂಡ ಹೆಜ್ಜೆ-ಹೆಜ್ಜೆಗೆ ನಿಂದ್ಯವಾಗುತ್ತವೆ. ಈ ಲೋಕದ ಕಾರ್ಯಗಳಾದ ಯಾವ ಯಶಸ್ಸಿನ ಉಪಾರ್ಜನೆ, ಧರ್ಮದ ಉಪಾರ್ಜನೆ, ಧನದ ಉಪಾರ್ಜನೆಯಿದೆ ಅವೆಲ್ಲವೂ ವಾತ್ಸಲ್ಯದಿಂದಲೇ ಆಗುತ್ತವೆ. ಪರಲೋಕದಲ್ಲಿ-ಸ್ವರ್ಗಲೋಕದಲ್ಲಿ ಮಹರ್ದ್ಧಿಕ ದೇವತನವೂ ವಾತ್ಸಲ್ಯದಿಂದಲೇ ದೊರಕುತ್ತದೆ. ವಾತ್ಸಲ್ಯವಿಲ್ಲದೆ ಈ ಲೋಕದ ಸಮಸ್ತ ಕಾರ್ಯಗಳು ನಷ್ಟವಾಗಿ ಹೋಗುತ್ತವೆ, ಪರಲೋಕದಲ್ಲಿ ಕೂಡ ದೇವ ಮೊದಲಾದ ಉಚ್ಚ ಗತಿಗಳು ಪ್ರಾಪ್ತವಾಗುವುದಿಲ್ಲ.

ಅರಹಂತದೇವ,ನಿರ್ಗ್ರಂಥಗುರು,ಸ್ಯಾದ್ವಾದರೂಪ ಪರಮಾಗಮ,ದಯಾರೂಪಧರ್ಮದಲ್ಲಿ, ವಾತ್ಸಲ್ಯವುಳ್ಳವನೇ ಸಂಸಾರಪರಿಭ್ರಮಣದ ನಾಶ ಮಾಡಿ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ, ವಾತ್ಸಲ್ಯದಿಂದಲೇ ಜಿನಮಂದಿರದ ವೈಯಾವೃತ್ಯ ಜಿನಸಿದ್ಧಾಂತಗಳ ಸೇವನೆ, ಸಾಧರ್ಮಿಗಳ ವೈಯಾವೃತ್ಯ, ಧರ್ಮದಲ್ಲಿ ಅನುರಾಗ, ದಾನ ಕೊಡುವಲ್ಲಿ ಪ್ರೀತಿಯಾಗುತ್ತದೆ. ಯಾರು ಷಟ್ಕಾಯ ಜೀವಗಳ ಮೇಲೆ ವಾತ್ಸಲ್ಯ ತೋರಿಸಿದ್ದಾರೆ, ಅವರೇ ಮೂರು ಲೋಕದಲ್ಲಿ ಅತಿಶಯರೂಪವಿರುವ ತೀರ್ಥಂಕರ ಪ್ರಕೃತಿಯ ಬಂಧ ಮಾಡಿಕೊಳ್ಳುತ್ತಾರೆ. ಆದುದರಿಂದ ಯಾರು ಕಲ್ಯಾಣದ ಇಚ್ಛೆಯುಳ್ಳವರಿದ್ದಾರೆ, ಅವರು ಜಿನೇಂದ್ರ ಭಗವಂತರ ಮೂಲಕ ಉಪದೇಶಿಸಿದ ವಾತ್ಸಲ್ಯ ಗುಣದ ಮಹಿಮೆ ತಿಳಿದುಕೊಂಡು ಹದಿನಾರನೇ ವಾತ್ಸಲ್ಯ ಭಾವನೆಯ ಸ್ತವನ ಪೂಜೆ ಮಾಡಿ ಅದರ ಮಹಾರ್ಘ್ಯ ಮಾಡುತ್ತಾರೆ. ಅವರೇ ದರ್ಶನದ ವಿಶುದ್ಧತೆ ಪಡೆದು, ತಪಸ್ಸು ರೂಪದ ಆಚರಣೆ ಮಾಡಿ ಅಹಮಿಂದ್ರ ಮೊದಲಾದ ದೇವಲೋಕಕ್ಕೆ ಪ್ರಾಪ್ತರಾಗಿ ಅನಂತರ ಜಗದೋದ್ಧಾರಕರಾದ ತೀರ್ಥಂಕರರಾಗಿ ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ. ಈ ಸೋಳಹಕಾರಣ ಧರ್ಮದ ಮಹಿಮೆಯು ಅಚಿಂತ್ಯವಿದೆ, ಅದರಿಂದ ಮೂರು ಲೋಕದಲ್ಲಿ ಆಶ್ಚರ್ಯಕಾರಿಯಾದ ಅನುಪಮ ವೈಭವದ ಧಾರಕರಾದ ತೀರ್ಥಂಕರರಾಗುತ್ತಾರೆ. ಹೀಗೆ ಸೋಳಹ ಕಾರಣ ಭಾವನೆಯ ವರ್ಣನೆಯನ್ನು ಸಂಕ್ಷೇಪ-ವಿಸ್ತಾರ ರೂಪದಿಂದ ಮಾಡಲಾಗಿದೆ.

**ಧರ್ಮದ ಹತ್ತುಲಕ್ಷಣಗಳು :** ಧರ್ಮದ ಸ್ವರೂಪವು ದಶ ಲಕ್ಷಣರೂಪವಿದೆ. ಈ ಹತ್ತು ಚಿಹ್ನಗಳ ಮೂಲಕ ಅಂತರಂಗ ಧರ್ಮವು ತಿಳಿದು ಬರುತ್ತವೆ. ಉತ್ತಮಕ್ಷಮೆ, ಉತ್ತಮಮಾರ್ದವ, ಉತ್ತಮ ಆರ್ಜವ, ಉತ್ತಮಸತ್ಯ, ಉತ್ತಮಶೌಚ ಉತ್ತಮ ಸಂಯಮ, ಉತ್ತಮತಪ, ಉತ್ತಮತ್ಯಾಗ, ಉತ್ತಮ ಆಕಿಂಚನ್ಯ, ಉತ್ತಮಬ್ರಹ್ಮಚರ್ಯವೆಂದು ಇವು ಹತ್ತು ಧರ್ಮದ ಲಕ್ಷಣಗಳಿವೆ.

ಧರ್ಮವಂತೂ ವಸ್ತುವಿನ ಸ್ವಭಾವವಿದೆ, ಸ್ವಭಾವವನ್ನೇ ಧರ್ಮವೆಂದು ಹೇಳುತ್ತಾರೆ. ಲೋಕದಲ್ಲಿ ಎಷ್ಟು ಪದಾರ್ಥಗಳಿವೆ ಅವೆಲ್ಲವೂ ತಮ್ಮ ತಮ್ಮ ಸ್ವಭಾವವನ್ನು ಎಂದೂ ಬಿಟ್ಟು ಕೊಡುವುದಿಲ್ಲ. ಒಂದು ವೇಳೆ ಸ್ವಭಾವದ ನಾಶವಾಗಿ ಹೋದರೆ ವಸ್ತುವಿನ ಅಭಾವವಾಗಿ ಹೋಗುವುದು, ಆದರೆ ಹಾಗೆಂದೂ ಆಗುವುದಿಲ್ಲ.

ಆತ್ಮನಾಮದ ವಸ್ತುವಿದೆ, ಅದರ ಸ್ವಭಾವವು ಕ್ಷಮೆ ಮೊದಲಾದ ರೂಪವಿದೆ. ಕ್ರೋಧ ಮೊದಲಾದವು ಕರ್ಮಜನ್ಯ ಉಪಾಧಿಗಳಿವೆ, ಆವರಣಗಳಿವೆ. ಕ್ರೋಧವೆಂಬ ಹೆಸರಿನ ಕರ್ಮದ ಉಪಾಧಿಯ ಅಭಾವವಾದ ಮೇಲೆ ಕ್ಷಮೆಯೆಂಬ ಹೆಸರಿನ ಆತ್ಮನ ಸ್ವಭಾವವು ತಾನಾಗಿಯೇ ಪ್ರಕಟವಾಗುತ್ತದೆ. ಇದೇ ಪ್ರಕಾರ ಮಾನದ ಅಭಾವದಿಂದ ಮಾರ್ದವ ಗುಣವು, ಮಾಯೆಯ

ಅಭಾವದಿಂದ ಆರ್ಜವ ಗುಣವು, ಲೋಭದ ಅಭಾವದಿಂದ ಶೌಚಗುಣವು ಇತ್ಯಾದಿ ಯಾವ ಆತ್ಮನ ಗುಣಗಳಿವೆ ಅವು ಕರ್ಮದ ಅಭಾವದಿಂದ ತಾವಾಗಿಯೇ ಪ್ರಕಟವಾಗುತ್ತವೆ. ಯಾವ ಈ ಉತ್ತಮ ಕ್ಷಮೆ ಮೊದಲಾದ ಆತ್ಮನ ಸ್ವಭಾವಗಳಿವೆ ಅವು ಮೋಹನೀಯಕರ್ಮದ ಭೇದಗಳಾದ ಕ್ರೋಧಾದಿ ಕಷಾಯಗಳ ಮೂಲಕ ಅನಾದಿಕಾಲದಿಂದ ಅಚ್ಛಾದಿತವಾಗುತ್ತಲಿವೆ. ಕಷಾಯಗಳ ಅಭಾವದಿಂದ ಕ್ಷಮೆ ಮೊದಲಾದ ಆತ್ಮನ ಸ್ವಾಭಾವಿಕ ಗುಣಗಳು ಪ್ರಕಟವಾಗಿ ಹೋಗುತ್ತವೆ.

## ಉತ್ತಮ ಕ್ಷಮಾ ಧರ್ಮ

ಈಗ ಉತ್ತಮ ಕ್ಷಮಾಗುಣದ ಸ್ವರೂಪದ ವರ್ಣನೆ ಮಾಡುತ್ತಾರೆ. ಕ್ರೋಧ ವೈರಿಯನ್ನು ಜಯಿಸುವುದೇ ಉತ್ತಮ ಕ್ಷಮೆಯಿದೆ. ಆ ಕ್ರೋಧ ವೈರಿಯು ಈ ಜೀವದ ನಿವಾಸ ಸ್ಥಾನವಾದಲ್ಲಿ ಯಾವ ಸಂಯಮಭಾವ, ಸಂತೋಷಭಾವ, ನಿರಾಕುಲತೆಯಭಾವ, ಸಮ್ಯಗ್ದರ್ಶನ ಮೊದಲಾದ ರತ್ನಗಳ ಭಂಡಾರವಿದೆ ಅದನ್ನು ಸುಡುವ ಸಲುವಾಗಿ ಅಗ್ನಿಯ ಸಮಾನವಿದೆ. ಯಶಸ್ಸಿನ ನಾಶ ಮಾಡಿ ಬಿಡುತ್ತದೆ, ಅಪಯಶ ರೂಪದ ಕಲಂಕವನ್ನು ವೃದ್ಧಿಸುತ್ತದೆ. ಧರ್ಮ-ಅಧರ್ಮದ ವಿಚಾರವನ್ನು ನಷ್ಟಮಾಡಿ ಬಿಡುತ್ತದೆ. ಕ್ರೋಧಿಯ ಮನ-ವಚನ-ಕಾಯಗಳು ಅವನ ವಶದಲ್ಲಿ ಉಳಿಯುವುದಿಲ್ಲ. ಅದೆಷ್ಟೋ ದಿವಸಗಳ ಪ್ರೀತಿಯನ್ನೂ ಕ್ಷಣಾರ್ಧದಲ್ಲಿ ಕೆಡಿಸಿ ಮಹಾನ ವೈರವನ್ನುತ್ಪನ್ನ ಮಾಡಿಬಿಡುತ್ತದೆ.

ಕ್ರೋಧರೂಪ ರಾಕ್ಷಸನ ವಶವರ್ತಿಯಾಗಿ ಹೋದವನು ಅಸತ್ಯವಚನ, ಲೋಕನಿಂದ್ಯಕರವಾದ ವಚನ, ಭಿಲ್ಲ, ಚಾಂಡಾಲ ಮೊದಲಾದವರು ಮಾತನಾಡಲು ಯೋಗ್ಯವಿರುವ ವಚನಗಳನ್ನು ಆಡತೊಡಗುತ್ತಾನೆ. ಕ್ರೋಧಿಯು ಸಮಸ್ತ ಧರ್ಮದ ಲೋಪಮಾಡಿ ಬಿಡುತ್ತಾನೆ. ಕ್ರೋಧಿಯಾಗಿ ತಂದೆಯನ್ನು ಕೊಂದುಹಾಕುತ್ತಾನೆ. ತಾಯಿಯನ್ನು, ಮಗನನ್ನು, ಪತ್ನಿಯನ್ನು, ಬಾಲಕನನ್ನು, ಒಡೆಯನನ್ನು ಕೂಡ ಸಾಯಿಸಿ ಬಿಡುತ್ತಾನೆ, ತೀವ್ರ ಕ್ರೋಧಿಯಂತೂ ವಿಷದಿಂದ, ಶಸ್ತ್ರದಿಂದ ತನ್ನ ಘಾತವನ್ನೇ ತಾನು ಮಾಡಿಕೊಳ್ಳುತ್ತಾನೆ, ಎತ್ತರವಾದ ಮನೆಯಿಂದ, ಪರ್ವತದಿಂದ ಉರುಳಿ, ಕಲ್ಲು ಕಟ್ಟಿಕೊಂಡು ಬಾವಿಯಲ್ಲಿ ಮುಳುಗಿ ಸತ್ತು ಹೋಗುತ್ತಾನೆ, ಯಾವ ಪ್ರಕಾರದಿಂದಲೂ ಕ್ರೋಧಿಯ ಮೇಲೆ ವಿಶ್ವಾಸವಿಡಲಾಗದು. ಕ್ರೋಧಿಯಂತೂ ಯಮರಾಜತುಲ್ಯನಿದ್ದಾನೆ. ಕ್ರೋಧಿಯು ಮೊದಲಂತೂ ತನ್ನ ಜ್ಞಾನ, ದರ್ಶನ, ಕ್ಷಮಾದಿ ಗುಣಗಳ ಘಾತ ಮಾಡಿಕೊಳ್ಳುತ್ತಾನೆ; ನಂತರ ಕರ್ಮದ ವಶದಿಂದ ಅನ್ಯರ ಘಾತವಾಗುವುದು ಅಥವಾ ಆಗುವುದಿಲ್ಲ. **ಕ್ರೋಧದ ಪ್ರಭಾವದಿಂದ ಮಹಾತಪಸ್ವಿಯಾದ ದಿಗಂಬರ ಮುನಿಯು ಧರ್ಮದಿಂದ ಭ್ರಷ್ಟನಾಗಿ ನರಕಕ್ಕೆ ಹೋಗುತ್ತಾನೆ.**

ಕ್ರೋಧವು ಉಭಯ ಲೋಕಗಳ ನಾಶ ಮಾಡುವಂಥದ್ದಿದೆ, ಮಹಾಪಾಪದ ಬಂಧ ಮಾಡಿಸಿ ನರಕಕ್ಕೆ ತಲುಪಿಸುತ್ತದೆ, ಬುದ್ಧಿಭ್ರಷ್ಟಮಾಡುತ್ತದೆ, ನಿರ್ದಯಿ ಮಾಡಿಬಿಡುತ್ತದೆ, ಇತರರ ಮೂಲಕ ಮಾಡಲಾದ ಉಪಕಾರವನ್ನು ಮರೆಯಿಸಿ ಕೃತಘ್ನನನ್ನಾಗಿ ಮಾಡಿ ಬಿಡುತ್ತದೆ. ಆದುದರಿಂದ ಕ್ರೋಧದ ಸಮಾನ ಬೇರೆ ಪಾಪವಿಲ್ಲ. ಇಹಲೋಕದಲ್ಲಿ ಕ್ರೋಧಾದಿ ಕಷಾಯಗಳಿಗೆ ಸಮಾನವಾಗಿ ತನ್ನ ಘಾತಮಾಡುವಂಥದ್ದು ಬೇರೊಂದಿಲ್ಲ. **ಯಾರು ಲೋಕದಲ್ಲಿ ಪುಣ್ಯವಂತರಿದ್ದಾರೆ, ಮಹಾಭಾಗ್ಯವಂತರಿದ್ದಾರೆ ಅವರ ಎರಡೂ ಲೋಕಗಳು ಸುಧಾರಿಸುತ್ತವೆ, ಅವರಿಗೇ ಕ್ಷಮಾಗುಣವು ಪ್ರಕಟವಾಗುತ್ತದೆ.**

ಕ್ಷಮೆ ಎಂದರೆ ಪೃಥ್ವೀ, ಅದರ ಸಮಾನ ಸಹಿಸುವ ಸ್ವಭಾವವಿರುವುದು ಅದು ಕ್ಷಮೆಯಿದೆ. ತಮ್ಮ ಸಮ್ಯಕ್ ಸ್ವರೂಪವನ್ನು, ಹಿತ-ಅಹಿತವನ್ನು ತಿಳಿದುಕೊಂಡು, ಅಸಮರ್ಥರಿಂದ ಮಾಡಲಾದ ಉಪದ್ರವಗಳನ್ನು ತಾನು ಸಮರ್ಥರಾಗಿ, ರಾಗ-ದ್ವೇಷಗಳಿಂದ ರಹಿತರಾಗಿ ಸಹನೆ ಮಾಡುವುದನ್ನು, ವಿಕಾರಿಯಾಗದಿರುವುದನ್ನು ಉತ್ತಮಕ್ಷಮೆಯೆಂದು ಹೇಳುತ್ತಾರೆ.

**ಇಲ್ಲಿ ಉತ್ತಮ ಶಬ್ದವನ್ನು ಸಮ್ಯಗ್ದರ್ಶನಸಹಿತವಿರುವ ಸಲುವಾಗಿ ಹೇಳಿದೆ.** ಉತ್ತಮಕ್ಷಮೆಯು ಮೂರು ಲೋಕದಲ್ಲಿ ಸಾರವಿದೆ. ಉತ್ತಮಕ್ಷಮೆಯು ಸಂಸಾರಸಮುದ್ರದಿಂದ ಪಾರುಮಾಡುವಂಥದ್ದಿದೆ. ರತ್ನತ್ರಯವನ್ನು ಧಾರಣ ಮಾಡಿಸುವಂಥದ್ದಿದೆ, ದುರ್ಗತಿಯ ದುಃಖವನ್ನು ದೂರಮಾಡುವಂಥದ್ದಿದೆ. ಉತ್ತಮ ಕ್ಷಮೆಯುಳ್ಳವನಿಗೆ ನರಕ- ತಿರ್ಯಂಚಗತಿಗಳಲ್ಲಿ ಗಮನವಾಗವುದಿಲ್ಲ. ಉತ್ತಮ ಕ್ಷಮೆಯ ಜತೆ ಅನೇಕ ಗುಣಗಳ ಸಮೂಹವು ಪ್ರಕಟವಾಗುತ್ತದೆ. ಮುನಿರಾಜರಿಗಂತೂ ಉತ್ತಮ

ಕ್ಷಮೆಯು ಅತ್ಯಂತ ಪ್ರಿಯವಿದೆ. ಉತ್ತಮಕ್ಷಮೆಯ ಪ್ರಾಪ್ತಿಯನ್ನು ಜ್ಞಾನೀ ಜನರು ಚಿಂತಾಮಣಿರತ್ನದ ಪ್ರಾಪ್ತಿಯ ಸಮಾನ ಲಾಭವೆಂದು ಮನ್ನಿಸುತ್ತಾರೆ. ಉತ್ತಮ ಕ್ಷಮೆಯೇ ಮನಸ್ಸಿನ ಉಜ್ವಲತೆ ಮಾಡುತ್ತದೆ. ಕ್ಷಮಾಗುಣವಿಲ್ಲದೆ ಮನಸ್ಸಿನ ಉಜ್ವಲತೆ ಹಾಗೂ ಸ್ಥಿರತೆಯೆಂದೂ ಆಗುವುದಿಲ್ಲ. ವಾಂಛಿತ ಅಭಿಪ್ರಾಯದ ಸಿದ್ಧಿ ಮಾಡುವಂಥದು ಒಂದು ಉತ್ತಮ ಕ್ಷಮೆಯೇ ಇದೆ.

**ಕ್ರೋಧವನ್ನು ಜಯಿಸುವ ಉಪಾಯ :** ಕ್ರೋಧವನ್ನು ಜಯಿಸುವ ವಿಧಿಯು ಹೀಗಿದೆ.ಯಾವನಾದರೂ ತಮಗೆ ದುರ್ವಚನಗಳನ್ನು ಆಡಿ ದುಃಖೀ ಮಾಡಿದರೆ, ಬೈದರೆ, ಚೋರನೆಂದರೆ, ಅನ್ಯಾಯಿ, ಪಾಪೀ, ದುರಾಚಾರಿ, ದುಷ್ಟ, ನೀಚ, ಜಾರ, ಚಾಂಡಾಲ, ಕೃತಘ್ನನೆಂದು ಅನೇಕ ದುರ್ವಚನಗಳನ್ನಾಡಿದರೂ ಜ್ಞಾನಿಯು ಹೀಗೆ ವಿಚಾರ ಮಾಡಬೇಕೆಂದರೆ-ನಾನು ಇವನ ಅಪರಾಧ ಮಾಡಿರುವೆನೋ ಅಥವಾ ಇಲ್ಲವೋ ? ನಾನು ಇವನ ಅಪರಾಧ ಮಾಡಿದ್ದೇನೆ ಮತ್ತು ರಾಗ-ದ್ವೇಷ- ಮೋಹದ ವಶೀಭೂತನಾಗಿ ಯಾವುದೇ ಮಾತಿನಿಂದ ಈತನ ಚಿತ್ತವು ದುಃಖಿಯಾಗಿದ್ದರೆ ನಾನು ಅಪರಾಧಿಯಿದ್ದೇನೆ, ನನಗೆ ಬೈಯುವುದು, ನೀಚ, ಚೋರ, ಕಪಟೀ, ಅಧರ್ಮಿಯೆನ್ನುವುದು ನ್ಯಾಯವಿದೆ. ನನಗೆ ಇದಕ್ಕಿಂತ ಹೆಚ್ಚಿನ ದಂಡನೆ ಕೊಡುತ್ತಿದ್ದರೂ ಒಳ್ಳೆಯದಿತ್ತು. ನಾನು ಅಪರಾಧ ಮಾಡಿದ್ದೇನೆ, ಈಗ ನಾನು ಬೈಗುಳ ಕೇಳಿ ಕ್ರೋಧ ಮಾಡದಿರುವುದೇ ಉಚಿತವಿದೆ. ಅಪರಾಧಿಗೆ ನರಕದಲ್ಲಿ ಕೂಡ ದಂಡನೆಯನ್ನು ಭೋಗಿಸಬೇಕಾಗುತ್ತದೆ. ನನ್ನ ನಿಮಿತ್ತದಿಂದ ಇವನಿಗೆ ದುಃಖವಾಗಿದೆ, ಅದಕ್ಕಾಗಿಯೇ ದುಃಖಿಯಾಗಿ ದುರ್ವಚನಗಳನ್ನು ಆಡುತ್ತಿದ್ದಾನೆಂದು ವಿಚಾರ ಮಾಡಿ ದುಃಖಿಯಾಗದೆ ಕ್ಷಮೆಯನ್ನೇ ಧಾರಣ ಮಾಡುತ್ತಾನೆ.

ದುರ್ವಚನ ಆಡುವಂಥವನು ಮಂದ ಕಷಾಯಿಯಿದ್ದರೆ ತಾನು ಹೋಗಿ ಅವನಲ್ಲಿ ಕ್ಷಮೆಯನ್ನು ಬೇಡಿ ಅವನಿಗೆ ಕ್ಷಮೆ ಧಾರಣ ಮಾಡುವುದಕ್ಕೆ ಹೇಳಬೇಕು. ಎಲೈ ಕೃಪಾಳುವೇ ! ನಾನು ಅಜ್ಞಾನಿಯಿದ್ದೇನೆ, ನಾನು ಪ್ರಮಾದ ಹಾಗೂ ಕಷಾಯವಶನಾಗಿ ತಮ್ಮ ಮನಸ್ಸನ್ನು ನೋಯಿಸಿದ್ದೇನೆ, ಆದುದರಿಂದ ಈಗ ನಾನು ನನ್ನ ಅಪರಾಧದ ಕ್ಷಮೆ ಕೇಳುತ್ತೇನೆ. ಭವಿಷ್ಯದಲ್ಲಿ ತಪ್ಪಿ ಕೂಡ ಇಂಥಕಾರ್ಯ ಮಾಡಲಾರೆನು. ಒಮ್ಮೆ ಯಾರಿಂದಾದರೂ ಅಪರಾಧವಾದರೆ ದೊಡ್ಡವರು ಅದನ್ನು ಕ್ಷಮಿಸಿ ಬಿಡುತ್ತಾರೆ. ಮತ್ತು ಎದುರಿದ್ದವನು ನ್ಯಾಯ ರಹಿತ ತೀವ್ರ ಕಷಾಯಿಯಿದ್ದರೆ ಅವನ ಹತ್ತಿರ ಅಪರಾಧದ ಕ್ಷಮೆ ಕೇಳಲು ಹೋಗಬಾರದು,ಕಾಲಾಂತರದಲ್ಲಿ ಅವನ ಕ್ರೋಧವು ಉಪಶಾಂತವಾದ ನಂತರ ಕ್ಷಮೆ ಕೇಳಬೇಕು.

ಒಂದು ವೇಳೆ ತಾನು ಅಪರಾಧ ಮಾಡಿರದಿದ್ದರೂ ಈರ್ಷೆಯ ಭಾವದಿಂದ ಮತ್ತು ಕೇವಲ ದುಷ್ಟತ್ವೆಯಿಂದ ತಮಗೆ ದುರ್ವಚನ ಆಡುತ್ತಾನೆ ಮತ್ತು ಅನೇಕ ದೋಷ ತಗಲಿಸುತ್ತಿದ್ದರೆ ಜ್ಞಾನಿಗಳು ಸ್ವಲ್ಪವೂ ಸಂಕ್ಲೇಶ ಪಡಬಾರದು. ಆದರೆ ಹೀಗೆ ವಿಚಾರ ಮಾಡಬೇಕು. ನಾನು ಈತನ ಧನ ಹರಣ ಮಾಡಿದ್ದರೆ, ಗದ್ದೆ ಕಸಿದುಕೊಂಡಿದ್ದರೆ, ಇವನ ಆಜೀವಿಕೆ ಕೆಡಿಸಿದ್ದರೆ, ಚಾಡಿ ಹೇಳಿದ್ದರೆ, ಈತನ ದೋಷಾರೋಪಣೆ ಮಾಡಿ ನಾನು ಅಪರಾಧ ಮಾಡಿದ್ದೇನೆಂದರೆ ನಾನು ಪಶ್ಚಾತ್ತಾಪ ಮಾಡಿಕೊಳ್ಳುವುದು ಉಚಿತವಿದೆ. ಆದರೆ ನಾನು ಯಾವ ಅಪರಾಧ ಮಾಡಿಲ್ಲವೆಂದ ಮೇಲೆ ನಾನು ಯಾವ ಚಿಂತೆಯನ್ನೂ ಮಾಡಬೇಕಾಗಿಲ್ಲ.

ಅವನು ದುರ್ವಚನ ಆಡುತ್ತಿರುವುದು **ನನ್ನ ಹೆಸರಿಗೆ ಮತ್ತು ನನ್ನ ಕುಲಕ್ಕೆ ಆಡುತ್ತಿದ್ದಾನೆ, ಆದರೆ ಹೆಸರು ನನ್ನ ಸ್ವರೂಪವಲ್ಲ, ಜಾತಿ-ಕುಲಗಳು ನನ್ನ ಸ್ವರೂಪವಿಲ್ಲ, ನಾನಂತೂ ಜ್ಞಾಯಕನಿದ್ದೇನೆ.** ಯಾರಿಗೆ ಅವನು ಹೇಳುತ್ತಾನೆ ಅದಂತೂ ನಾನಿಲ್ಲ, ನನ್ನವರೆಗೆ ಆ ದುರ್ವಚನಗಳು ತಲುಪುತ್ತಲೇ ಇಲ್ಲ, ಆದುದರಿಂದ ನಾನು ಕ್ಷಮೆ ಮಾಡುವುದೇ ಉಚಿತವಿದೆ. ಯಾವ ದುರ್ವಚನ ಹೇಳುತ್ತಾನೆ ಆ ಮುಖ ಅವನದು, ಆ ಅಭಿಪ್ರಾಯ ಅವನದು, ಆ ನಾಲಿಗೆ-ತುಟಿ ಅವನವು, ಭಾಷಾರೂಪ ಪುದ್ಗಲ ಶಬ್ದಗಳು ಅವನ ಭಾವದ ನಿಮಿತ್ತದಿಂದ ಉತ್ಪನ್ನವಾದವುಗಳಿವೆ, ಅವನ್ನು ಕೇಳಿ ನಾನು ಎಲ್ಲಾದರೂ ವಿಕಾರದ ವಶೀಭೂತನಾಗುತ್ತಿದ್ದರೆ ಅದು ನನ್ನದೇ ಮಹಾನ ಅಜ್ಞಾನತೆಯಿದೆ.

ಆ ಈರ್ಷೆಯುಳ್ಳ ದುಷ್ಟ ಪುರುಷನು ನನಗೆ ಬೈಯುತ್ತಿದ್ದಾನೆ, ಸ್ವಭಾವದಿಂದ ನೋಡ ಹೋದರೆ ಬೈಗುಳ ಯಾವ ವಸ್ತುವೇ ಇಲ್ಲ, ನನ್ನ ಮೈಗೆ ಎಲ್ಲಿಯೂ ಬೈಗಳು ತಗಲಿದ್ದು ಕಂಡು ಬರುವುದೇ ಇಲ್ಲ. ಆದುದರಿಂದ ಅವಸ್ತುವಿನಲ್ಲಿ ನಾನು ಜ್ಞಾನಿಯಾಗಿ ಕೊಡ-ಕೊಳ್ಳುವ ವ್ಯವಹಾರವನ್ನು ಹೇಗೆ ಸ್ವೀಕಾರ ಮಾಡುವುದು ?

ಅವನು ನನಗೆ ಚೋರ, ಅನ್ಯಾಯಿ, ಕಪಟಿ, ಅಧರ್ಮಿ ಇತ್ಯಾದಿಯಾಗಿ ಹೇಳುತ್ತಾನೆ, ಆಗ ನಾನು ಹೀಗೆ ವಿಚಾರ ಮಾಡುತ್ತೇನೆ-ಎಲೈ ಆತ್ಮನೇ ! ನೀನು ಅನೇಕ ಬಾರಿ ಚೋರನಾಗಿರುವೆ, ಅನೇಕ ಜನ್ಮಗಳಲ್ಲಿ ವ್ಯಭಿಚಾರಿ, ಜೂಜುಗಾರ, ಅಭಕ್ಷ್ಯಭಕ್ಷಕ, ಭಿಲ್ಲ, ಚಾಂಡಾಲ, ಚರ್ಮಕಾರ, ಹಂದಿ, ನಾಯಿ, ಕತ್ತೆ ಇತ್ಯಾದಿ ತಿರ್ಯಂಚ ಮತ್ತು ಅಧರ್ಮಿ, ಪಾಪೀ, ಕೃತಘ್ನನಾಗಿ ಹುಟ್ಟಿಬಂದಿರುವೆ ಮತ್ತು ಸಂಸಾರದಲ್ಲಿ ಭ್ರಮಣ ಮಾಡುತ್ತ ಭವಿಷ್ಯದಲ್ಲೂ ಅನೇಕ ಬಾರಿ ಆಗಬಹುದಾಗಿದೆ. ಈಗ ನಿನಗೆ ಯಾರೋ ಹಂದಿ, ನಾಯಿ, ಚೋರ, ಚಾಂಡಾಲನೆಂದು ಹೇಳುತ್ತಾರೆ, ಅದನ್ನು ಕೇಳಿ ನೀನು ದುಃಖಿಯಾಗುವುದು ಅನರ್ಥವಿದೆ. **ಈ ದುಷ್ಟ ಜನರು ಯಾವ ದುರ್ವಚನಗಳನ್ನಾಡುತ್ತಿದ್ದಾರೆ ಅದು ಇವರ ಅಪರಾಧವಿಲ್ಲ, ನನ್ನಿಂದ ಪೂರ್ವಜನ್ಮಗಳಲ್ಲಿ ಕಟ್ಟಿದ ಕರ್ಮಗಳ ಉದಯವಿದೆ; ಇವರ ಮೂಲಕ ದುರ್ವಚನ ಆಡುವುದರಿಂದ ನನ್ನ ಕರ್ಮದ ನಿರ್ಜರೆಯಾಗುತ್ತದೆ ಅದು ನನಗೆ ದೊಡ್ಡ ಲಾಭವೇ ಇದೆ.** ಈ ದುರ್ವಚನ ಆಡುವಂಥವರು ನನ್ನ ಸಲುವಾಗಿ ದುರ್ವಚನಗಳನ್ನಾಡಿ ತಮ್ಮ ಪುಣ್ಯ ಸಮೂಹದ್ದಂತೂ ನಾಶ ಮಾಡಿಕೊಳ್ಳುತ್ತಾರೆ, ಮತ್ತು ನನ್ನ ಪಾಪಗಳನ್ನು ದೂರ ಮಾಡಿ ಅವುಗಳ ನಿರ್ಜರೆ ಮಾಡುತ್ತಾರೆ. ಇದು ಅವರದು ಉಪಕಾರವೇ ಇದೆ. ಇಂಥ ಉಪಕಾರಿಗಳ ಮೇಲೆ ನಾನು ಒಂದು ವೇಳೆ ಕ್ರೋಧ ಮಾಡಿದೆನೆಂದರೆ ನನ್ನ ಸಮಾನ ಅಧಮರು ಯಾರೂ ಇಲ್ಲ.

**ಈತ ನನಗೆ ದುರ್ವಚನಗಳನ್ನೇ ಆಡಿದ್ದಾನೆ, ಆದರೆ ನನ್ನನ್ನು ಹೊಡೆದಿಲ್ಲ.** ಕ್ರೋಧಾದಿಕರಂತೂ ಹೊಡೆಯಲೂ ತೊಡಗುತ್ತಾರೆ, ಅವರು ತಮ್ಮ ಹೆಂಡಿರು-ಮಕ್ಕಳನ್ನು, ಬಾಲಕರನ್ನು ಕೂಡ ಹೊಡೆಯುತ್ತಾರೆ, ಆದರೆ ಅವನು ನನಗಂತೂ ಹೊಡೆಯಲೇ ಇಲ್ಲ, ಇದೇ ಲಾಭವಿದೆ. ಒಂದು ವೇಳೆ ದುಷ್ಟನು ತಮಗೆ ಹೊಡೆದರೆ ಇವನು ನನಗೆ ಹೊಡೆದಿದ್ದಾನಷ್ಟೇ ಪ್ರಾಣರಹಿತನನ್ನಾಗಿ ಮಾಡಿಲ್ಲವಲ್ಲ ! ಎಂದು ವಿಚಾರ ಮಾಡಬೇಕು. ದುಷ್ಟರಂತೂ ತಮ್ಮ ಮರಣವನ್ನೂ ಗಣನೆಗೆ ತಂದುಕೊಳ್ಳದೆ ಅನ್ಯರನ್ನು ಕೊಂದು ಹಾಕುತ್ತಾರೆ, ಆದರೆ ಇವನು ನನ್ನನ್ನು ಪ್ರಾಣ ರಹಿತನಾಗಿಯಂತೂ ಮಾಡಿಲ್ಲ, ಅದುವೇ ಲಾಭವಿದೆ. ಒಂದು ವೇಳೆ ಪ್ರಾಣರಹಿತನನ್ನಾಗಿ ಮಾಡಿ ಬಿಡುತ್ತಿದ್ದರೆ ಒಂದು ಬಾರಿ ಸಾಯುವುದಂತೂ ಇತ್ತು, ಒಳ್ಳೆಯದೇ ಆಯಿತು, ಕರ್ಮದ ಋಣವು ತೀರಿ ಹೋಯಿತೆಂದು ವಿಚಾರ ಮಾಡಬೇಕು. ನಾನು ಇಲ್ಲಿಯಂತೂ ಕರ್ಮದ ಋಣದಿಂದ ರಹಿತನಾಗಿ ಬಿಟ್ಟೆನು, ನನ್ನ ಧರ್ಮವಂತೂ ನಷ್ಟವಾಗಿಲ್ಲವಲ್ಲ, ಅದುವೇ ದೊಡ್ಡ ಲಾಭವಿದೆ. ಪ್ರಾಣಧಾರಣ ಮಾಡುವುದಂತೂ ಧರ್ಮದಿಂದಲೇ ಫಲಕಾರಿಯಿದೆ. ಈ ದ್ರವ್ಯಪ್ರಾಣಗಳಂತೂ ಪುದ್ಗಲಮಯವಿವೆ. ನನ್ನ ಜ್ಞಾನ,ದರ್ಶನ, ಕ್ಷಮೆ ಮೊದಲಾದ ಧರ್ಮಗಳು ಇವು ಭಾವ ಪ್ರಾಣಗಳಿವೆ. ನಾನು ಕ್ರೋಧ ಮಾಡಿ ಇವುಗಳ ಘಾತ ಮಾಡಿಲ್ಲ, ಇದರ ಸಮಾನವಾದ ಲಾಭವು ನನಗೆ ಬೇರೆ ಯಾವುದೂ ಇಲ್ಲ.

ಕಲ್ಯಾಣರೂಪವಿರುವ ಕಾರ್ಯಗಳಲ್ಲಿ ಅನೇಕ ವಿಘ್ನಗಳು ಬರುತ್ತವೆ. ನನಗೂ ವಿಘ್ನಗಳು ಬಂದದ್ದು ಒಳ್ಳೆಯದೇ ಇದೆ. ನಾನಂತೂ ಈಗ ಸಾಮ್ಯ ಭಾವದ ಆಶ್ರಯ ಪಡೆಯುತ್ತೇನೆ, ಉಪದ್ರವಗಳು ಬಂದ ಮೇಲೆ ನಾನು ಕ್ಷಮೆ ಬಿಟ್ಟು ಕ್ರೋಧದಿಂದ ವಿಕಾರರೂಪನಾಗಿ ಹೋದರೆ ನನ್ನನ್ನು ನೋಡಿ ಅನ್ಯ ಮಂದ ಜ್ಞಾನಿ ಹಾಗೂ ಪುಕ್ಕ ತ್ಯಾಗಿ-ತಪಸ್ವಿಗಳು ಧರ್ಮದಿಂದ ಶಿಥಿಲರಾಗಿ ಹೋಗುವರು, ಆಗ ನನ್ನ ಜನ್ಮವು ಕೇವಲ ಇತರರನ್ನು ದುಃಖೀ ಮಾಡುವ ಸಲುವಾಗಿಯೇ ಆಗಿದೆಯೆನ್ನಬಹುದು. ನಾನು ವೀತರಾಗ ಧರ್ಮವನ್ನು ಧಾರಣ ಮಾಡಿ ಕೂಡ ಕ್ರೋಧೀ, ವಿಕಾರೀ, ದುರ್ವಚನಿಯಾಗಿ ಹೋದೆನೆಂದರೆ ನನ್ನನ್ನು ನೋಡಿ ಅನ್ಯರೂ ಕ್ರೋಧಿಯಾಗಿ ಹೋಗವರು, ಆಗ ನಾನು ಧರ್ಮದ ಮರ್ಯಾದೆಯನ್ನು ಭಂಗ ಮಾಡಿ ಪಾಪದ ಪರಂಪರೆಯನ್ನು ಆರಂಭಿಸುವವರಲ್ಲಿ ನಾನೇ ಮುಖ್ಯನಾಗಿ ಹೋಗುವೆನು. ಆದುದರಿಂದ ನನ್ನ ಪ್ರಾಣ ಹೋದರೂ, ಧನ ಮತ್ತು ಅಭಿಮಾನಗಳು ನಷ್ಟವಾಗಿ ಹೋದರೂ ಕೂಡ ನಾನು ಕ್ಷಮಾ ಗುಣವನ್ನು ಬಿಟ್ಟುಕೊಡುವುದು ಉಚಿತವಾಗಿಲ್ಲ.

ಪೂರ್ವ ಭವದಲ್ಲಿ ನಾನು ಅಶುಭ ಕರ್ಮಕಟ್ಟಿಕೊಂಡಿರುವುದರ ಫಲವನ್ನು ನಾನೇ ಭೋಗಿಸಬೇಕಾಗುವುದು. ಈ ಅನ್ಯ ಜನರಂತೂ ನಿಮಿತ್ತ ಮಾತ್ರರಿದ್ದಾರೆ. ಇವರ ನಿಮಿತ್ತದಿಂದ ಪಾಪ ಕರ್ಮವು ಉದಯದಲ್ಲಿ ಬಾರದಿದ್ದರೆ ಬೇರೆ ಇನ್ನಾರದೋ ನಿಮಿತ್ತದಿಂದ ಬರುತ್ತಿತ್ತು. **ಉದಯದಲ್ಲಿ ಬಂದಿರುವ ಕರ್ಮವಂತೂ ಫಲ ಕೊಟ್ಟಲ್ಲದೆ ತೊಲಗುವುದಿಲ್ಲ.** ಈ ಲೌಕಿಕ

ಅಜ್ಞಾನಿಗಳು ನನ್ನ ಮೇಲೆ ಕ್ರೋಧಿಗಳಾಗಿ ದುರ್ವಚನಾದಿಗಳಿಂದ ಉಪದ್ರವ ಕೊಡುತ್ತಾರೆ, ನಾನು ಕೂಡ ದುರ್ವಚನಾದಿಗಳ ಮೂಲಕ ಇವರಿಗೆ ಉತ್ತರ ಕೊಟ್ಟರೆ ನಾನು ತತ್ತ್ವಜ್ಞಾನೀ ಮತ್ತು ಇವರು ಅಜ್ಞಾನೀ, ಈರ್ವರೂ ಸಮಾನರಾದೆವು. ನನ್ನ ತತ್ತ್ವಜ್ಞಾನೀತನವು ನಿರರ್ಥಕವಾಯಿತು. ನ್ಯಾಯಮಾರ್ಗದಿಂದ ನೋಡ ಹೋದರೆ ಉದಯದಲ್ಲಿ ಬಂದ ನನ್ನ ಪಾಪ ಕರ್ಮದ ನಿರ್ಜರೆಯಾಗಿ ಹೋದ ಮೇಲೆ ಯಾವ ಅವಿವೇಕಿಯು ತನ್ನ ಆತ್ಮನನ್ನು ಕ್ರೋಧಾದಿಗಳ ವಶೀಭೂತ ಮಾಡುವನು ?

ಎಲೈ ಆತ್ಮನೇ ! ಪೂರ್ವಜನ್ಮದಲ್ಲಿ ಕಟ್ಟಿದ ಅಸಾತಾ ಕರ್ಮದ ಉದಯವು ಈಗ ಬಂದಿದೆ. ಅದನ್ನು ತಡೆಯುವ ಉಪಾಯವಿಲ್ಲವೆಂದು ತಿಳಿದುಕೊಂಡು ಸಮಭಾವದಿಂದ ಸಹನೆ ಮಾಡು. ದುಃಖಿಯಾಗಿ ಭೋಗಿಸಿದರೂ ಅಸಾತಾವನ್ನಂತೂ ಭೋಗಿಸಿಯೇ ಭೋಗಿಸುವೆ, ಆದರೆ ಬಹಳಷ್ಟು ನವೀನ ಅಸಾತಾ ಕರ್ಮಗಳ ಬಂಧವನ್ನೂ ಮಾಡಿಕೊಳ್ಳುವೆ. ಆದುದರಿಂದ ಆಗುವಂಥ ದುಃಖವನ್ನು ನಿಃಶಂಕನಾಗಿ ಸಮಭಾವದಿಂದ ಸಹಿಸು. ಈ ದುಷ್ಟ ಜನರಂತೂ ಹಲವರಿದ್ದಾರೆ, ಅವರು ತಮ್ಮ ಸಾಮರ್ಥ್ಯದಿಂದ ನನ್ನಲ್ಲಿ ಕ್ರೋಧರೂಪದ ಅಗ್ನಿಯನ್ನು ಪ್ರಜ್ವಲಿತ ಮಾಡಿಸಿ ನನ್ನ ಸಮಭಾವರೂಪದ ಸಂಪತ್ತಿಯನ್ನು ಸುಟ್ಟು ಹಾಕಲಿಚ್ಛಿಸುತ್ತಾರೆ. ಈಗ ಇಲ್ಲಿ ಅಸಾವಧಾನನಾಗಿ ಕ್ಷಮೆಯನ್ನು ಬಿಟ್ಟುಕೊಟ್ಟು ಕ್ರೋಧಿಯಾಗಿ ಹೋದೆನೆಂದರೆ ನಾನು ಅವಶ್ಯವಾಗಿ ನನ್ನ ಸಾಮ್ಯಭಾವವನ್ನು ನಷ್ಟಮಾಡಿ ನನ್ನ ಧರ್ಮ ಹಾಗೂ ಯಶಸ್ಸಿನ ನಾಶ ಮಾಡಿಕೊಳ್ಳುವಂಥವನಾಗಿ ಹೋಗುವೆನು. ಆದುದರಿಂದ ದುಷ್ಟರ ಸಂಸರ್ಗವಾದ ಮೇಲೆ ಸಾವಧಾನವಾಗಿರುವುದೇ ಉಚಿತವಿದೆ.

ಜ್ಞಾನೀ ಜನರಂತೂ ಅಸಹನೀಯ ದುಃಖವುತ್ಪನ್ನವಾದರೂ ಕೂಡ ತಮ್ಮ ಪೂರ್ವಕರ್ಮದ ನಾಶವಾಗುವುದೆಂದು ತಿಳಿದುಕೊಂಡು ಹರ್ಷಿತರೇ ಆಗುತ್ತಾರೆ. ದುರ್ವಚನಗಳ ರೂಪದ ಮುಳ್ಳುಗಳಿಂದ ಪೀಡಿತನಾದ ನಾನು ಒಂದು ವೇಳೆ ಕ್ಷಮೆಯನ್ನು ಬಿಟ್ಟುಕೊಟ್ಟರೆ ಕ್ರೋಧಿ ಮತ್ತು ನಾನು ಈರ್ವರು ಸಮಾನರಾದೆವು. ವೈರಿಯು ಅನೇಕ ಪ್ರಕಾರದ ದುರ್ವಚನ, ಮಾರಣ, ಪೀಡನದಿಂದ ನನ್ನ ಮೇಲೆ ಉಪಕಾರ ಮಾಡದಿದ್ದರೆ ನಾನು ನನ್ನ ಪೂರ್ವಸಂಚಿತ ಅಶುಭಕರ್ಮಗಳಿಂದ ಹೇಗೆ ಬಿಡುಗಡೆ ಹೊಂದುವೆನು ? ಆದುದರಿಂದ ವಿರೋಧಿಯಂತೂ ನನ್ನ ಮೇಲೆ ಉಪಕಾರವನ್ನೇ ಮಾಡಿದ್ದಾನೆ, ಅವನು ನನ್ನನ್ನು ಅಶುಭಕರ್ಮಗಳಿಂದ ಬಿಡಿಸಿದ್ದಾನೆ.

ನಾನು ವಿವೇಕಿಯಾಗಿ ಆ ಜಿನಾಗಮದ ಪ್ರಸಾದದಿಂದ ಸಾಮ್ಯಭಾವದ ಅಭ್ಯಾಸ ಮಾಡಿದ್ದೇನೆ, ಅದರ ಪರೀಕ್ಷೆ ತೆಗೆದುಕೊಳ್ಳಲು ಈ ವೈರೀರೂಪದ ಪರೀಕ್ಷೆಯ ಕೇಂದ್ರವು ಪ್ರಕಟವಾಗಿದೆ, ಇಲ್ಲಿಯಂತೂ ನನ್ನ ಭಾವಗಳ ಪರೀಕ್ಷೆಯಾಗಿ ಹೋಯಿತು. ಪರೀಕ್ಷೆ ತೆಗೆದುಕೊಳ್ಳಲೆಂದೇ ಈ ಕರ್ಮಗಳು ಉದಯದಲ್ಲಿ ಬಂದಿವೆ. ಒಂದು ವೇಳೆ ನಾನು ಸಾಮ್ಯಭಾವದ ಮರ್ಯಾದೆಯನ್ನು ಮುರಿದು ವೈರಿಗಳ ಮೇಲೆ ಕ್ರೋಧ ಮಾಡಿದೆನೆಂದರೆ ನಾನು ಜ್ಞಾನನೇತ್ರಗಳ ಧಾರಕನಾಗಿ ಕೂಡ ಸಮಭಾವಕ್ಕೆ ಪ್ರಾಪ್ತನಾಗದೆ ಕ್ರೋಧರೂಪದ ಅಗ್ನಿಯಲ್ಲಿ ಸುಟ್ಟು ಭಸ್ಮನಾಗಿ ಹೋಗುವೆನು. ನಾನು ವೀತರಾಗ ಮಾರ್ಗದ ಮೇಲೆ ನಡೆಯುವಂಥವನು, ಸಂಸಾರದ ಸ್ಥಿತಿಯನ್ನು ಕತ್ತರಿಸಿ ಹಾಕುವ ಉದ್ಯಮಶೀಲನಾದಂಥವನು ಒಂದು ವೇಳೆ ನನ್ನ ಚಿತ್ತವೇ ಕ್ರೋಧರೂಪವಾಗಿ ಹೋದರೆ ಸಂಸಾರದ ಮಾರ್ಗದಲ್ಲಿ ಪ್ರವರ್ತನೆ ಮಾಡುವಂಥ ಅನ್ಯ ಮಿಥ್ಯಾದೃಷ್ಟಿಗಳ ಸಮಾನವಾಗಿಯೇ ನಾನು ಕೂಡ ಸಿದ್ಧನಾದೆನು.

ದುಷ್ಟ ಅಜ್ಞಾನಿಗಳಿಗೆ ನ್ಯಾಯರೂಪ ಧರ್ಮದ ಮಾರ್ಗವನ್ನು ತೋರಿಸಿದರೂ, ತಿಳಿಸಿದರೂ, ಕ್ಷಮಾ ಗ್ರಹಣ ಮಾಡಿಸಿದರೂ ಅವರು ತಿಳಿದುಕೊಳ್ಳದಿದ್ದರೆ, ಕ್ಷಮಾಗ್ರಹಣ ಮಾಡದಿದ್ದರೆ ಜ್ಞಾನೀಜನರು ಅವರಲ್ಲಿ ಕ್ರೋಧ ಮಾಡುವುದಿಲ್ಲ. ಯಾವ ಪ್ರಕಾರ ವಿಷ ದೂರಮಾಡುವಂಥ ವೈದ್ಯನು ಓರ್ವನ ವಿಷ ದೂರ ಮಾಡುವ ಸಲುವಾಗಿ ಅನೇಕ ಪ್ರಕಾರದ ಔಷಧ ಕೊಟ್ಟು ವಿಷ ದೂರ ಮಾಡಬಯಸುತ್ತಾನೆ, **ಆದರೆ ರೋಗಿಯ ವಿಷವು ದೂರವಾಗದಿದ್ದರೆ ವೈದ್ಯನು ಸ್ವಯಂ ವಿಷ ತಿನ್ನುವುದಿಲ್ಲ,** ಈತನ ವಿಷವು ದೂರವಾಗದಿದ್ದರೆ ನಾನೂ ವಿಷ ತಿಂದು ಸತ್ತು ಹೋಗುವೆನೆಂಬ ನ್ಯಾಯವು ಕೂಡ ಇಲ್ಲ, ಅದೇ ಪ್ರಕಾರ ಜ್ಞಾನೀ ಜನರು ಕೂಡ ಮೊದಲು ದುಷ್ಟರ ದುಷ್ಟತೆಯ ಜಾತಿಯನ್ನು ತಿಳಿದುಕೊಳ್ಳುತ್ತಾರೆ. ಈತ ದುಷ್ಟತೆಯನ್ನು ಬಿಡಬಹುದೋ ಅಥವಾ ಬಿಡಲಿಕ್ಕಿಲ್ಲವೋ ಅಥವಾ ಅಧಿಕ ದುಷ್ಟತೆಯನ್ನು ಧಾರಣ ಮಾಡಬಹುದು. ಎಂದು ವಿಚಾರ ಮಾಡಿ, ವಿಪರೀತವಾಗಿ ಪರಿಣಮಿಸುವವನಿಗಂತೂ ಉಪದೇಶವನ್ನೇ ಕೊಡಬಾರದು. ಯಾವನು ಒಂದಿಷ್ಟು ತಿಳಿದುಕೊಳ್ಳುವ ಯೋಗ್ಯತೆಯುಳ್ಳವನಾಗಿ ತೋರುತ್ತಾನೆ ಅವನಿಗೆ ಹಿತಮಿತರೂಪದ ನ್ಯಾಯದ ವಚನಗಳನ್ನು ಹೇಳುವುದು. ಒಂದು ವೇಳೆ ದುಷ್ಟತೆಯನ್ನು ಬಿಟ್ಟುಕೊಡದಿದ್ದರೆ ತಾವು ಸ್ವಯಂ ಕ್ರೋಧಿಯಾಗಬಾರದು.

ಈತ ನನ್ನನ್ನು ದುರ್ವಚನಗಳ ಉಪದ್ರವದಿಂದ ಭಯಭೀತ ಮಾಡದಿದ್ದರೆ ನಾನು ಪ್ರಶಮ ಭಾವದಿಂದ ಧರ್ಮದ ಆಶ್ರಯವನ್ನು ಹೇಗೆ ಗ್ರಹಣ ಮಾಡುತ್ತಿದ್ದೆನು ? ನನಗೆ ಉಪದ್ರವ ಕೊಡುವಂಥವನು ನನ್ನನ್ನು ಪಾಪದಿಂದ ಭಯಭೀತ ಮಾಡಿಸಿ ಧರ್ಮದೊಡನೆ ಸಂಬಂಧ ಮಾಡಿಸಿದ್ದಾನೆ. ಈ ಪ್ರಕಾರ **ಪೀಡೆ ಕೊಡುವಂಥವನು ನನ್ನ ಪ್ರಮಾದವನ್ನು ಬಿಡಿಸಿ ನನ್ನ ಮೇಲೆ ದೊಡ್ಡ ಉಪಕಾರವನ್ನೇ ಮಾಡಿದ್ದಾನೆ.**

ಜಗತ್ತಿನಲ್ಲಿ ಅದೆಷ್ಟೋ ಉಪಕಾರಿಗಳು ಇತರರನ್ನು ಸುಖೀ ಮಾಡುವ ಸಲುವಾಗಿ ತಮ್ಮ ಶರೀರ ಬಿಟ್ಟುಕೊಡುತ್ತಾರೆ, ಧನ ಭಿಟ್ಟುಕೊಡುತ್ತಾರೆಂದರೆ ದುರ್ವಚನ ಬಂಧನಾದಿಗಳನ್ನು ಸಹಿಸುವಲ್ಲಿ ನನ್ನದೇನು ಹೊರಟು ಹೋಗುವುದಿದೆ ? ನನಗೆ ದುರ್ವಚನ ಆಡುವುದರಿಂದಲೇ ಇತರರಿಗೆ ಸುಖವಾಗುತ್ತಿದ್ದರೆ ನನ್ನದೇನು ಹಾನಿಯಿದೆ ? ನನಗೆ ಪೀಡೆ ಕೊಡುವಂಥವನ ಮೇಲೆ ನಾನು ಕ್ರೋಧ ಮಾಡದಿದ್ದರೆ ವೈರಿಯ ಪುಣ್ಯದ ನಾಶವಾಗಿಹೋಗುವುದು, ಮತ್ತು ನನ್ನ ಆತ್ಮನ ಹಿತದ ಸಿದ್ಧಿಯಾಗಿ ಹೋಗುವುದು. ದುಃಖ ಕೊಡುವಂಥವನ ಮೇಲೆ ನಾನು ಕ್ರೋಧ ಮಾಡಿದರೆ ನನ್ನ ಪುಣ್ಯದ ನಾಶವಾಗಿ ಹೋಗುವುದು, ಹಿತದ ನಾಶವಾಗಿ ಹೋಗುವುದು ಮತ್ತು ದುರ್ಗತಿಯು ದೊರಕುವುದು ಪ್ರಾಣದ ನಾಶವಾಗಿ ಹೋದ ಮೇಲೂ **ದುಷ್ಟರ ಕುರಿತು ಕ್ಷಮೆ ಮಾಡುವುದೊಂದೇ ಹಿತವಿದೆ**ಯೆಂದು ಸತ್ಪುರುಷರು ಹೇಳುತ್ತಾರೆ. ಆದುದರಿಂದ ಆತ್ಮಕಲ್ಯಾಣದ ಸಿದ್ಧಿಯ ಸಲುವಾಗಿ ನಾನು ಕ್ಷಮೆಯನ್ನೇ ಗ್ರಹಣ ಮಾಡಬೇಕಾಗುವುದು.

ದುಷ್ಟರು ದುರ್ವಚನಗಳಿಂದ ಬಾಧೆ ಕೊಡುವುದರಿಂದ ನನ್ನಲ್ಲಿ ಯಾವ ಕ್ಷಮೆಯು ಪ್ರಕಟವಾಗಿದೆ ಅದು ನನ್ನ ಪುಣ್ಯದ ಉದಯದಿಂದ ಇಂಥ ಪರೀಕ್ಷೆಯ ಕೇಂದ್ರವು ಪ್ರಕಟವಾಗಿದೆ. ನಾನು ಇಷ್ಟು ಸಮಯದಿಂದ ವೀತರಾಗ ಧರ್ಮಧಾರಣ ಮಾಡಿದ್ದೇನೆ. ಇಂದು ಕ್ರೋಧಾದಿಗಳ ನಿಮಿತ್ತದಿಂದ ಸಾಮ್ಯಭಾವವು ಪ್ರಕಟವಾಗಿದೆಯೋ ಅಥವಾ ಇಲ್ಲವೋ ಎಂಬುದರ ಪರೀಕ್ಷೆ ಮಾಡುವುದಿತ್ತು. ಸಾಮ್ಯಭಾವವಂತೂ ಪ್ರಶಂಸನೀಯವಿದೆ. ಅದುವೇ ಕಲ್ಯಾಣದ ಕಾರಣವಿದೆ. ಅದನ್ನು ಹೊಡೆಯಲಿಚ್ಛಿಸುವ ನಿರ್ದಯಿಯ ಮೂಲಕ ಮಲಿನ ಮಾಡುವ ಸಾಧ್ಯತೆಯಿಲ್ಲ.

ಅಧಿಕ ಸಮಯದಿಂದ ಶಾಸ್ತ್ರದ ಅಭ್ಯಾಸ ಮಾಡಿ ಮತ್ತು ಸಾಮ್ಯಭಾವ ಮಾಡಿ ಏನು ಸಾಧ್ಯವಿದೆ, ಅದು ಪ್ರಯೋಜನದ ಸಮಯದಲ್ಲಿ ವ್ಯರ್ಥವಾಗಿ ಹೋದರೆ ? ದುಷ್ಟರ ಕುವಚನಗಳಿಂದಲೂ ಅದು ಬಿಟ್ಟು ಹೋಗದೆ ದೃಢವಾಗಿ ಉಳಿದರೇನೇ ಪ್ರಶಂಸಾಯೋಗ್ಯವಿದೆ. ಉಪದ್ರವ ಬಾರದಿದ್ದರಂತೂ ಸಮಸ್ತ ಜನರು ಸತ್ಯ, ಶೌಚ, ಕ್ಷಮೆಯ ಧಾರಕರಾಗಿ ಉಳಿಯುತ್ತಾರೆ. ಯಾವ ಪ್ರಕಾರ ಚಂದನದ ವೃಕ್ಷವನ್ನು ಕೊಡಲಿಯು ಕತ್ತರಿಸಿದರೆ ಆ ಚಂದನದ ವೃಕ್ಷವು ಕೊಡಲಿಯ ಮುಖವನ್ನು ಸುಗಂಧಿತವನ್ನಾಗಿಯೇ ಮಾಡುತ್ತದೆ, ಅದೇ ಪ್ರಕಾರ **ಯಾರ ಪ್ರವೃತ್ತಿಯು ಹೇಗೆ ಇರುತ್ತದೆ ಅವರಿಗೆ ಅಂಥದೇ ಸಿದ್ಧಿಯ ಪ್ರಾಪ್ತಿಯಾಗುತ್ತದೆ.**

ಅನ್ಯರ ಮೂಲಕ ಮಾಡಲಾದ ಉಪಸರ್ಗದಿಂದ ಹಾಗೂ ತಾನಾಗಿಯೇ ಬಂದ ಉಪಸರ್ಗದಿಂದ ಯಾರ ಚಿತ್ತವು ಕಲುಷಿತವಾಗುವುದಿಲ್ಲ ಅವರು ಅವಿನಾಶಿ ಸಂಪತ್ತಿಗೆ ಪ್ರಾಪ್ತರಾಗುತ್ತಾರೆ. ಅಜ್ಞಾನಿಗಳು ತಮ್ಮ ಭಾವದ ಮೂಲಕ ಪೂರ್ವದಲ್ಲಿ ಮಾಡಲಾದ ಪಾಪಕರ್ಮಗಳ ಮೇಲಂತೂ ಕ್ರೋಧ ಮಾಡುವುದಿಲ್ಲ, ಆದರೆ ಕರ್ಮದ ಫಲ ಕೊಡುವಲ್ಲಿ ಯಾವ ಬಾಹ್ಯನಿಮಿತ್ತಗಳಿವೆ ಅವುಗಳ ಮೇಲೆ ಕ್ರೋಧ ಮಾಡುತ್ತಾರೆ, ಯಾವ ಕರ್ಮದ ನಾಶವಾಗುವುದರಿಂದ ನನ್ನ ಸಂತಾಪವು ನಷ್ಟವಾಗಿ ಹೋಗುವುದೋ ಆ ಕರ್ಮವು ತಾನಾಗಿಯೇ ಭೋಗದಲ್ಲಿ ಬಂದರೆ ಮತ್ತು ನಷ್ಟವಾಗಿ ಹೋದರೆ ನನಗೆ ಐಚ್ಛಿಕ ಸುಖದ ಸಿದ್ಧಿಯಾಗಿ ಹೋಗುವುದು.

ಈ ಸಂಸಾರರೂಪದ ವನದಲ್ಲಿ ಅನೇಕ ಸಂಕ್ಲೇಶಗಳು ತುಂಬಿವೆ. ಅದರಲ್ಲಿ ವಾಸಿಸುವಂಥವನು ಅನೇಕ ಪ್ರಕಾರದ ದುಃಖಗಳನ್ನು ಸಹಿಸುವುದು ಯೋಗ್ಯವಿಲ್ಲವೇನು ? ಸಂಸಾರದಲ್ಲಿಯಂತೂ ದುಃಖವೇ ಇದೆ. ಈ ಸಂಸಾರದಲ್ಲಿ ಸಮ್ಯಗ್ಜ್ಞಾನ ವಿವೇಕದಿಂದರಹಿತ, ಜಿನಸಿದ್ಧಾಂತಗಳಲ್ಲಿ ದ್ವೇಷ ಮಾಡುವಂಥ, ಮಹಾನಿರ್ದಯೀ, ಪರಲೋಕದಲ್ಲಿನ ಹಿತದ ವಿಚಾರ ಮಾಡುವಂಥ ವಿವೇಕದಿಂದ ಶೂನ್ಯ, ಕ್ರೋಧರೂಪದ ಅಗ್ನಿಯಿಂದ ಪ್ರಜ್ವಲಿತ, ದುಷ್ಟತೆಯಿಂದ ಯುಕ್ತ, ವಿಷಯಗಳ

ಲೋಲುಪತೆಯಿಂದ ಅಂಧ, ಹಟಾಗ್ರಹೀ, ಮಹಾ ಅಭಿಮಾನೀ, ಕೃತಘ್ನರಾದಂಥ ಅದೆಷ್ಟೋ ದುಷ್ಟ ಜನರಿಲ್ಲದಿರುತ್ತಿದ್ದರೆ ಉಜ್ವಲ ಬುದ್ಧಿಯ ಧಾರಕರಾದ ಸತ್ಪುರುಷರು ವ್ರತ-ತಪಶ್ಚರಣ ಮಾಡಿ ಮೋಕ್ಷದ ಸಲುವಾಗಿ ಹೇಗೆ ಉದ್ಯಮ ಮಾಡುತ್ತಾರೆ ? ಇಂಥ ಕ್ರೋಧೀ, ದುರ್ವಚನಗಳನ್ನಾಡುವಂಥ, ಹಟಾಗ್ರಹೀ, ಅನ್ಯಾಯ ಮಾರ್ಗಿಗಳ ಅಧಿಕತೆಯನ್ನು ನೋಡುವುದರಿಂದಲೇ ಸತ್ಪುರುಷರು ವೀತರಾಗಿಗಳಾಗಿದ್ದಾರೆ.

ನಾನು ಮಹಾನ ಪುಣ್ಯದ ಪ್ರಭಾವದಿಂದ ಪರಮಾತ್ಮ ಸ್ವರೂಪದ ಜ್ಞಾತಾನಾದೆನು ಮತ್ತು ಸರ್ವಜ್ಞರ ಮೂಲಕ ಉಪದೇಶಿಸಿದ ಪದಾರ್ಥಗಳದ್ದೂ ನಿರ್ಣಯರೂಪದ ಜ್ಞಾನ ಪಡೆದೆನು. ಸಂಸಾರ ಪರಿಭ್ರಮಣದ ದುಃಖಗಳಿಂದ ಭಯಭೀತನಾಗಿ ವೀತರಾಗ ಮಾರ್ಗದಲ್ಲಿ ಕೂಡ ಪ್ರವರ್ತನೆ ಮಾಡಿದೆನು; ಈಗ ನಾನು ಕೂಡ ಕ್ರೋಧದ ವಶೀಭೂತನಾದರೆ ನನ್ನ ಜ್ಞಾನ-ಚಾರಿತ್ರಗಳೆಲ್ಲವೂ ನಿಷ್ಫಲವಾಗಿ ಹೋಗುವವು, ಮತ್ತು ಧರ್ಮದ ಅಪಮಾನ ಮಾಡುವಂಥವನಾಗಿ ದುರ್ಗತಿಗೆ ಪಾತ್ರನಾಗಿಹೋಗುವೆನು.

ಮೂರ್ಖ ಜನರಿಂದ ಬಾಧೆ,ಪೀಡೆ, ಕ್ರೋಧದ ವಚನ, ಹಾಸ್ಯ, ಅಪಮಾನ ಮೊದಲಾದವುಗಳಾದರೂ ಯಾವ ಉತ್ತಮ ಪುರುಷರ ಮನಸ್ಸು ವಿಕಾರದ ವಶೀಭೂತವಾಗುವುದಿಲ್ಲ ಅದನ್ನು ಉತ್ತಮ ಕ್ಷಮೆಯೆಂದು ಹೇಳುತ್ತಾರೆಂದು ಆಚಾರ್ಯ ಪದ್ಮನಂದಿಗಳು ಹೇಳುತ್ತಾರೆ. ಆ ಕ್ಷಮೆಯು ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವ ಪುರುಷನಿಗೆ ಪರಮಸಹಾಯಕ ವಾಗುತ್ತದೆ. ವಿವೇಕಿಗಳು ಹೀಗೆ ಚಿಂತನೆ ಮಾಡುತ್ತಾರೆ - **ನಾವಂತೂ ರಾಗ-ದ್ವೇಷ ಮೊದಲಾದ ಮಲರಹಿತ ಉಜ್ವಲ ಮನಸ್ಸಿನಿಂದ ಕುಳಿತಿದ್ದೇವೆ, ಅನ್ಯ ಜನರು ನಮಗೆ ಕೆಟ್ಟವರೆನ್ನಲಿ ಅಥವಾ ಒಳ್ಳೆಯವರೆನ್ನಲಿ, ನಮಗೆ ಅದರಿಂದೇನು ಪ್ರಯೋಜನವಿದೆ ? ಧರ್ಮದ ಧಾರಕರಿಗಂತೂ ತಮ್ಮ ಆತ್ಮನ ಶುದ್ಧತೆಯನ್ನು ಸಾಧಿಸಿಕೊಳ್ಳುವುದೇ ಯೋಗ್ಯವಿದೆ.**

ನಮ್ಮ ಪರಿಣಾಮಗಳು ದೋಷಯುಕ್ತವಿವೆ, ಮತ್ತು ಯಾರಾದರೂ ಹಿತೈಷಿಗಳು ನಮಗೆ ಒಳ್ಳೆಯದನ್ನು ಹೇಳಿದರೆ ನಾವು ಒಳ್ಳೆಯವರಾಗಲಾರೆವು. ನಮ್ಮ ಪರಿಣಾಮಗಳು ದೋಷರಹಿತವಿವೆ, ಮತ್ತು ಯಾವನೋ ವೈರಬುದ್ಧಿಯಿಂದ ನಮ್ಮ ಕೆಡಕು ಹೇಳಿದರೆ ನಮ್ಮದು ಕೆಡಕಾಗಲಾರದು. **ಫಲವಂತೂ ಹೇಗೆ ನಮ್ಮ ಪ್ರಯತ್ನ, ಪರಿಣಾಮ, ಆಚರಣೆಯಿರುವುದು ಹಾಗೆಯೇ ಪ್ರಾಪ್ತವಾಗುವುದು.** ಹೇಗೆಂದರೆ ಓರ್ವನು ಗಾಜನ್ನು ರತ್ನವೆಂದು ಹೇಳಿದರೆ ಮತ್ತು ರತ್ನವನ್ನು ಗಾಜೆಂದು ಹೇಳಿದರೆ ಬೆಲೆಯಂತೂ ರತ್ನದ್ದೇ ಆಗುವುದು, ಗಾಜಿನ ತುಂಡನ್ನು ಅಧಿಕ ಬೆಲೆ ಕೊಟ್ಟು ಯಾರು ಕೊಳ್ಳುವರು.

**ದುಷ್ಟ ಜನರ ಸ್ವಭಾವವಂತೂ ಇತರರದೋಷ ಹೇಳುವುದಿದೆ.** ಇತರರಲ್ಲಿ ಸ್ವಲ್ಪ ಕೂಡ ದೋಷವಿಲ್ಲದಿದ್ದರೂ ಕೂಡ ಇತರರ ದೋಷ ಹೇಳಿದಲ್ಲದೆ ಸುಖ ದೊರಕುವುದಿಲ್ಲ. ಆದುದರಿಂದ ದುಷ್ಟ ಜನರೇ ! ನನ್ನಲ್ಲಿ ಯಾವ ದೋಷವೇ ಇಲ್ಲ, ಅವನ್ನು ಜನರ ಮನೆ-ಮನೆಗೆ ಹೋಗಿ ಎಲ್ಲ ಮನುಷ್ಯರಿಗೆ ಹೇಳಿ ಸುಖಿಯಾಗಿರಿ; ಯಾರು ಧನವನ್ನಪೇಕ್ಷಿಸುತ್ತೀರಿ ಅವರು ನನ್ನ ಏನೆಲ್ಲವನ್ನು ಗ್ರಹಣ ಮಾಡಿ ಸುಖಿಯಾಗಿ ಹೋಗಿರಿ; ಯಾವ ವೈರಿಗಳು ನನ್ನ ಪ್ರಾಣ ಹರಣ ಮಾಡಲಿಚ್ಛಿಸುತ್ತಾರೆ ಅವರು ಕೂಡಲೆ ನನ್ನ ಪ್ರಾಣಹರಣ ಮಾಡಿಕೊಳ್ಳಿರಿ; ನನ್ನ ಸ್ಥಾನ ಬಯಸುವವರು ಅದನ್ನು ಕಿತ್ತುಕೊಳ್ಳಿರಿ; ನಾನಂತೂ ಮಧ್ಯಸ್ಥನಿರುವೆ, ರಾಗ-ದ್ವೇಷರಹಿತನಿದ್ದೇನೆ. ಸಮಸ್ತ ಸಂಸಾರದ ಪ್ರಾಣಿಗಳು ನನ್ನ ನಿಮಿತ್ತದಿಂದ ಸುಖರೂಪವಿರಲಿ, ನನ್ನ ನಿಮಿತ್ತದಿಂದ ಯಾವ ಪ್ರಾಣಿಗೆ ಯಾವುದೇ ಪ್ರಕಾರದ ದುಃಖವಾಗದಿರಲಿ, ನಾನು ಘೋಷಣೆ ಮಾಡುವುದೇನೆಂದರೆ-**ನನ್ನ ಜೀವನವಂತೂ ಆಯುಕರ್ಮದ ಆಧೀನವಿದೆ, ಧನ ಹಾಗೂ ಸ್ಥಾನಗಳು ಹೊರಟು ಹೋಗುವುದು ಅಥವಾ ಇರುವುದು ಅದು ಪಾಪ-ಪುಣ್ಯದ ಆಧೀನವಿದೆ; ಯಾವ ಅನ್ಯ ಜೀವದೊಡನೆ ನಮ್ಮದು ವೈರ-ವಿರೋಧವಿಲ್ಲ; ಎಲ್ಲರ ಕುರಿತು ಕ್ಷಮೆಯಿದೆ.**

**ಎಲೈ ಆತ್ಮನೇ !** ಮಿಥ್ಯಾದೃಷ್ಟಿ, ದುಷ್ಟತೆಯುಕ್ತ, ಹಿತಾಹಿತದ ವಿವೇಕವಿಲ್ಲದ, ಮೂಢ ಮನುಷ್ಯರಿಂದ ಮಾಡಲಾದ ದುರ್ವಚನಗಳ ಉಪದ್ರವದಿಂದ ಅಸ್ಥಿರ ಚಿತ್ತನಾಗಿ, ಬಾಧೆಯೆಂದು ಮನ್ನಿಸಿ ಅದೇಕೆ ದುಃಖಿಯಾಗುತ್ತಿರುವೆ ? ನೀನು ಮೂರು ಲೋಕದ ಚೂಡಾಮಣಿಯಾದ ವೀತರಾಗ ಭಗವಂತರನ್ನು ತಿಳಿಯುವುದಿಲ್ಲವೇನು ? **ಮೋಹೀ, ಮಿಥ್ಯಾದೃಷ್ಟಿ, ಮೂಢರ ಜ್ಞಾನವಂತೂ ವಿಪರೀತವೇ ಇರುತ್ತದೆ.** ಅವರೆಲ್ಲರಂತೂ ಕರ್ಮದ ವಶದಲ್ಲಿದ್ದಾರೆ. ಆದ್ದರಿಂದ ಅವರಲ್ಲಿ ಕ್ಷಮಾ ಗ್ರಹಣ ಮಾಡುವುದೇ ಯೋಗ್ಯವಿದೆ.

ಇಹಲೋಕದಲ್ಲಿ ಕ್ಷಮೆಯೇ ಶರಣಭೂತವಿದೆ, ತಾಯಿಯಂತೆ ರಕ್ಷಣೆ ಮಾಡುವಂಥದ್ದಿದೆ. ಹೆಚ್ಚೇನು ಹೇಳುವುದು? ಜಿನಧರ್ಮದ ಮೂಲವು ಕ್ಷಮೆಯಿದೆ, ಇದರ ಆಧಾರದಿಂದಲೇ ಸಮಸ್ತ ಗುಣಗಳಿವೆ, ಕರ್ಮನಿರ್ಜರೆಗೆ ಕಾರಣವಿದೆ, ಸಾವಿರಾರು ಉಪದ್ರವಗಳನ್ನು ದೂರ ಮಾಡುವಂಥದ್ದಿದೆ. ಆದ್ದರಿಂದ ಧನ ಮತ್ತು ಜೀವನ ಹೊರಟು ಹೋದರೂ ಕ್ಷಮೆಯನ್ನು ಬಿಡುವುದು ಯೋಗ್ಯವಿಲ್ಲ.

ಓರ್ವನು ದುಷ್ಟತೆಯಿಂದ ತಮ್ಮನ್ನು ಪ್ರಾಣರಹಿತ ಮಾಡುತ್ತಿದ್ದರೆ ಆ ಸಮಯದಲ್ಲೂ ಕಟುವಚನ ಆಡದಿರಿ. ಹೊಡೆಯುವಂಥವನಿಗೂ ನಿರ್ಮಲ ಹೃದಯದಿಂದ ಹೀಗೆ ಹೇಳಬೇಕು. ತಾವಂತೂ ನಮ್ಮ ರಕ್ಷಕರಿರುವಿರಿ, ಆದರೆ ನಮ್ಮ ಮರಣವೇ ಬಂದು ಬಿಟ್ಟಿರುವಾಗ ತಾವೇನು ಮಾಡುವ ಸಾಧ್ಯತೆಯಿದೆ ? ನಮ್ಮ ಪಾಪ ಕರ್ಮದ ಉದಯವು ಬಂದು ಬಿಟ್ಟಿದೆ, ಆದಾಗ್ಯೂ ನಮ್ಮ ಮಹಾಭಾಗ್ಯದಿಂದ ತಮ್ಮಂಥ ಮಹಾ ಪುರುಷರ ಹಸ್ತ ಮೊದಲಾದವುಗಳಿಂದ ನಮ್ಮ ಮರಣವಾಗಲಿದೆ. ನಮ್ಮಂಥ ಅಪರಾಧಿಗೆ ತಾವು ದಂಡನೆ ಮಾಡದಿದ್ದರೆ ನ್ಯಾಯದ ಮಾರ್ಗವೇ ಕಲಂಕಿತವಾಗಿ ಹೋಗುವುದು. ನಾವು ನಮ್ಮ ಅಪರಾಧದ ಫಲವನ್ನು ಮುಂದೆ ನರಕ-ತಿರ್ಯಂಚ ಗತಿಯಲ್ಲಿ ಭೋಗಿಸುತ್ತಿದ್ದೆವು, ಆದರೆ ತಾವು ನಮ್ಮನ್ನು ಇಲ್ಲಿಯೇ ಕರ್ಮದ ಋಣದಿಂದ ಮುಕ್ತಮಾಡಿಬಿಟ್ಟಿರಿ. ನಾನು ಮನ-ವಚನ-ಕಾಯದಿಂದ ತಮ್ಮಲ್ಲಿ ವೈರ ವಿರೋಧ ಬಿಟ್ಟು ಕ್ಷಮೆ ಬೇಡುತ್ತೇನೆ. ತಾವು ಕೂಡ ನನ್ನ ಅಪರಾಧದ ಶಿಕ್ಷೆಯಿತ್ತು ಕ್ಷಮಾಧಾರಣ ಮಾಡಿರಿ, ನಾನೂ ಕ್ಷಮೆ ಮಾಡುತ್ತೇನೆ. ನಾನು ರೋಗ ಮೊದಲಾದ ಕಷ್ಟಗಳನ್ನು ಭೋಗಿಸಿ ಅತ್ಯಂತ ದುಃಖದಿಂದ ಸಾಯುತ್ತಿದ್ದೆನು, ಆದರೆ ಈಗ ಧರ್ಮದ ಆಶ್ರಯ ಪಡೆದು, ಕರ್ಮದ ಋಣದಿಂದ ರಹಿತನಾಗಿ ತಮ್ಮಂಥ ಸಜ್ಜನರ ಕೃಪೆಯಿಂದ ಸಾಯುವೆನು. ಈ ಪ್ರಕಾರ ಹೊಡೆಯುವಂಥವರಲ್ಲಿಯೂ ವೈರವನ್ನು ಬಿಟ್ಟುಕೊಟ್ಟು ಸಮಭಾವ ಧಾರಣ ಮಾಡುವುದು ಅದು ಉತ್ತಮ ಕ್ಷಮೆಯಿದೆ. ಈ ಪ್ರಕಾರ ಕ್ಷಮಾಧರ್ಮವನ್ನು ಹೇಳಲಾಯಿತು.

## ಉತ್ತಮ ಮಾರ್ದವ ಧರ್ಮ

ಈಗ ಉತ್ತಮ ಮಾರ್ದವ ಗುಣದ ಸ್ವರೂಪ ಹೇಳುತ್ತಾರೆ. ಮಾರ್ದವದ ಸ್ವರೂಪವು ಹೇಗಿದೆಯೆಂದರೆ ಮಾನಕಷಾಯದಿಂದ ಆತ್ಮನಲ್ಲಿ ಯಾವ ಕಠೋರತೆಯಾಗುತ್ತದೆ, ಆ ಕಠೋರತೆಯ ಅಭಾವವಾದ ಮೇಲೆ ಯಾವ ಪರಿಣಾಮವಾಗುತ್ತದೆ ಅದು ಮಾರ್ದವ ನಾಮದ ಆತ್ಮನ ಗುಣವಿದೆ. **ಆತ್ಮ ಮತ್ತು ಮಾನ ಕಷಾಯದ ಭೇದವನ್ನು ಅನುಭವ ಮಾಡಿ ಮಾನವನ್ನು ಬಿಟ್ಟು ಕೊಡುವುದರ ಹೆಸರು ಮಾರ್ದವ ಗುಣವಿದೆ.** ಮಾನ ಕಷಾಯವಂತೂ ಸಂಸಾರವನ್ನು ಹೆಚ್ಚಿಸುವಂಥದ್ದಿದೆ, ಆದರೆ ಮಾರ್ದವವು ಸಂಸಾರದ ಪರಿಭ್ರಮಣವನ್ನು ನಾಶ ಮಾಡುವಂಥದ್ದಿದೆ. ಈ ಮಾರ್ದವ ಗುಣವು ದಯಾಧರ್ಮದ ಕಾರಣವಿದೆ.

ಅಭಿಮಾನಿಯಲ್ಲಿ ಮೂಲದಿಂದಲೇ ದಶಧರ್ಮದ ಅಭಾವವಿದೆಯೆಂದು ತಿಳಿಯುವುದು. ಕಠೋರ ಪರಿಣಾಮಿಯಂತೂ ನಿರ್ದಯಿಯಿರುತ್ತಾನೆ. ಮಾರ್ದವ ಗುಣವು ಎಲ್ಲರ ಹಿತ ಮಾಡುವಂಥದ್ದಿದೆ. ಮಾರ್ದವ ಗುಣವಿದ್ದವರೇ ವ್ರತ ಪಾಲಿಸುವುದು, ಸಂಯಮ ಧಾರಣ ಮಾಡುವುದು ಜ್ಞಾನದ ಅಭ್ಯಾಸ ಮಾಡುವುದು ಸಫಲವಿದೆ, ಅಭಿಮಾನಿಯದೆಲ್ಲವು ನಿಷ್ಫಲವಿದೆ. ಮಾರ್ದವ ನಾಮದ ಗುಣವು ಮಾನಕಷಾಯದ ನಾಶ ಮಾಡುವಂಥದ್ದಿದೆ, ಮತ್ತು ಪಂಚೇಂದ್ರಿಯ ಹಾಗೂ ಮನಸ್ಸನ್ನು ದಂಡಿಸುವಂಥದ್ದಿದೆ.

ಮಾರ್ದವ ಧರ್ಮದ ಪ್ರಸಾದದಿಂದ ಚಿತ್ತರೂಪದ ಭೂಮಿಯಲ್ಲಿ ಕಾರುಣ್ಯರೂಪದ ನವೀನ ಬಳ್ಳಿಯು ಪಸರಿಸುತ್ತದೆ. ಮಾರ್ದವದ ಮೂಲಕವೇ ಜಿನೇಂದ್ರ ಭಗವಂತರಲ್ಲಿ ಮತ್ತು ಶಾಸ್ತ್ರಗಳಲ್ಲಿ ಭಕ್ತಿಯ ಪ್ರಕಾಶವಾಗುತ್ತದೆ. ಮದಯುಕ್ತತೆಯಿಂದ ಜಿನೇಂದ್ರರ ಗುಣಗಳಲ್ಲಿ ಅನುರಾಗವಾಗುವುದಿಲ್ಲ, ಮಾರ್ದವ ಗುಣದಿಂದ ಕುಮತಿ ಜ್ಞಾನದ ಪ್ರಸಾರದ ನಾಶವಾಗುತ್ತದೆ. ಕುಮತಿಯು ಹರಡುವುದಿಲ್ಲ. ಅಭಿಮಾನಿಯಲ್ಲಿ ಅನೇಕ ಪ್ರಕಾರದ ಕುಬುದ್ಧಿಗಳು ಉತ್ಪನ್ನವಾಗುತ್ತವೆ. ಮಾರ್ದವ ಗುಣದಿಂದ ಬಹಳಷ್ಟು ವಿನಯವು ಪ್ರವರ್ತಿಸುತ್ತದೆ. ಮಾರ್ದವ ಗುಣದಿಂದ ಅಧಿಕ ಸಮಯದಿಂದ ಬಂದ ಹಳೆಯ ವೈರಿಯು ಕೂಡ ತನ್ನ ವೈರವನ್ನು ಬಿಟ್ಟುಕೊಡುತ್ತಾನೆ. ಮಾನವು ಕಡಿಮೆಯಾದ ಮೇಲೆ ಪರಿಣಾಮದಲ್ಲಿ ಉಜ್ವಲತೆಯಾಗುತ್ತದೆ.

ಕೋಮಲ ಪರಿಣಾಮದಿಂದ ಉಭಯಲೋಕಗಳ ಸಿದ್ಧಿಯಾಗುತ್ತದೆ. ಕೋಮಲ ಪರಿಣಾಮಿಗೆ ಇಹಲೋಕದಲ್ಲಿ ಸುಯಶವಾಗುತ್ತದೆ, ಪರಲೋಕದಲ್ಲಿ ದೇವಗತಿಯ ಪ್ರಾಪ್ತಿಯಾಗುತ್ತದೆ. ಕೋಮಲ ಪರಿಣಾಮಗಳಿಂದಲೇ ಅಂತರಂಗ-ಬಹಿರಂಗ ತಪಸ್ಸು ಶೋಭಿಸುತ್ತದೆ. ಅಭಿಮಾನಿಯ ತಪಸ್ಸೂ ನಿಂದಾಯೋಗ್ಯವಿದೆ. ಕೋಮಲ ಪರಿಣಾಮಿಯಿಂದ ಮೂರೂ ಲೋಕದ ಜೀವರುಗಳ ಮನಸ್ಸು ಪ್ರಸನ್ನವಿರುತ್ತದೆ. ಮಾರ್ದವದಿಂದಲೇ ಜಿನೇಂದ್ರರ ಶಾಸನವು ತಿಳಿದು ಬರುತ್ತದೆ. ಮಾರ್ದವದಿಂದಲೇ ತಮ್ಮ ಹಾಗೂ ಇತರರ ಸ್ವರೂಪದ ಅನುಭವ ಮಾಡುತ್ತಾರೆ. ಕಠೋರ ಪರಿಣಾಮಿಯಲ್ಲಿ ಸ್ವ-ಪರ ವಿವೇಕವಿರುವುದಿಲ್ಲ. ಮಾರ್ದವದಿಂದಲೇ ಸಮಸ್ತ ದೋಷಗಳ ನಾಶವಾಗುತ್ತದೆ. ಮಾರ್ದವ ಪರಿಣಾಮವು ಸಂಸಾರ ಸಮುದ್ರದಿಂದ ಪಾರುಮಾಡಿ ಬಿಡುತ್ತದೆ. ಆದುದರಿಂದ ಮಾರ್ದವ ಪರಿಣಾಮವನ್ನು ಸಮ್ಯಗ್ದರ್ಶನದ ಅಂಗವೆಂದು ತಿಳಿದುಕೊಂಡು ನಿರ್ಮಲ ಮಾರ್ದವ ಧರ್ಮದ ಸ್ತುತಿ ಮಾಡಬೇಕು.

ಸಂಸಾರೀ ಜೀವಗಳಿಗೆ ಅನಾದಿ ಕಾಲದಿಂದ ಮಿಥ್ಯಾದರ್ಶನದ ಉದಯವಾಗುತ್ತಲಿದೆ. ಅದರ ಉದಯದಿಂದ ಪರ್ಯಾಯ ಬುದ್ಧಿಯಾಗಿ ಜಾತಿ, ಕುಲ, ವಿದ್ಯೆ, ಐಶ್ವರ್ಯ, ತಪಸ್ಸು, ರೂಪು, ಧನ, ಶರೀರ, ಬಲ ಮೊದಲಾದುವನ್ನು ತನ್ನ ಸ್ವರೂಪವೆಂದು ಮನ್ನಿಸಿ ಅವುಗಳ ಕುರಿತು ಗರ್ವರೂಪನಾಗುತ್ತಿದ್ದಾನೆ. ಅವನಿಗೇ ಈ ಜಾತಿ, ಕುಲ, ಮೊದಲಾದುವೆಲ್ಲವು ಕರ್ಮದ ಉದಯದ ಆಧೀನವಿರುವ ಪುದ್ಗಲದ ವಿಕಾರವಿವೆ, ವಿನಾಶಶೀಲವಿವೆಯೆಂಬ ಜ್ಞಾನವಿಲ್ಲ. ನಾನು ಅವಿನಾಶೀ ಜ್ಞಾನ ಸ್ವಭಾವಿ ಅಮೂರ್ತಿಕನಿದ್ದೇನೆಂಬುದನ್ನೂ ತಿಳಿಯುವುದಿಲ್ಲ.

ನಾನು ಅನಾದಿಕಾಲದಿಂದ ಅನೇಕ ಜಾತಿ, ಕುಲ, ಬಲ, ಐಶ್ವರ್ಯ ಮೊದಲಾದುವನ್ನು ಪ್ರಾಪ್ತಮಾಡಿ-ಮಾಡಿಕೊಂಡು ಬಿಟ್ಟಿದೆ. ನಾನು ಈಗ ಯಾವುದರಲ್ಲಿ ನನ್ನತನ ಮಾಡಲಿ ? ಸಮಸ್ತ ಧನ, ಯೌವ್ವನ, ಇಂದ್ರಿಯಜನಿತ ಜ್ಞಾನ ಮೊದಲಾದವು ವಿನಾಶಶೀಲವಿವೆ, ಕ್ಷಣಭಂಗುರವಾಗಿವೆ. ಇವುಗಳ ಗರ್ವ ಮಾಡುವುದು ಸಂಸಾರದಲ್ಲಿ ಪರಿಭ್ರಮಣ ಮಾಡುವುದರ ಕಾರಣವಿದೆ.

ಈ ಸಂಸಾರದಲ್ಲಿ ಸ್ವರ್ಗಲೋಕದ ಮಹಾಋದ್ಧಿಧಾರೀ ದೇವನು ಸತ್ತು ಒಂದು ಸಮಯದೊಳಗೆ ಏಕೇಂದ್ರಿಯದಲ್ಲಿ ಬಂದು ಉತ್ಪನ್ನವಾಗುತ್ತಾನೆ, ಮತ್ತು ನಾಯಿ, ಹಂದಿ, ಚಾಂಡಾಲ ಮೊದಲಾದ ಪರ್ಯಾಯಗಳಿಗೆ ಪ್ರಾಪ್ತನಾಗಿ ಹೋಗುತ್ತಾನೆ. ನವನಿಧಿಗಳಲ್ಲದೆ ಹದಿನಾಲ್ಕುರತ್ನಗಳ ಧಾರಕನಾದ ಚಕ್ರವರ್ತಿಯು ಒಂದು ಸಮಯದಲ್ಲಿ ಸತ್ತು ಏಳನೆಯ ನರಕದ ನಾರಕಿಯಾಗಿ ಹೋಗುತ್ತಾನೆ. ಬಲಭದ್ರ, ನಾರಾಯಣರ ಐಶ್ವರ್ಯವೂ ನಷ್ಟವಾಗಿ ಹೋಗಿದೆಯೆಂದ ಮೇಲೆ ಅನ್ಯರ ಮಾತೇನು ಹೇಳುವುದು ? ಸಾವಿರಾರು ದೇವಗಳು ಯಾರ ಸೇವೆ ಮಾಡುತ್ತಿದ್ದರು ಅವರ ಪುಣ್ಯವು ಕ್ಷಯವಾದ ಮೇಲೆ ಯಾವ ಓರ್ವ ಮನುಷ್ಯನು ಕೂಡ ನೀರು ಕೊಡುವಂಥವನು ಉಳಿಯಲಿಲ್ಲ, ಅನ್ಯಪುಣ್ಯಹೀನ ಜೀವರುಗಳು ಅದೇಕೆ ಮದೋನ್ಮತ್ತರಾಗುತ್ತಿದ್ದಾರೋ ಏನೋ ?

**ಯಾರು ಉತ್ತಮ ಜ್ಞಾನದಿಂದ ಜಗತ್ತಿನಲ್ಲಿ ಪ್ರಮುಖರಿದ್ದಾರೆ, ಉತ್ತಮ ತಪಶ್ಚರಣ ಮಾಡುವಲ್ಲಿ ತತ್ಪರಿದ್ದಾರೆ, ಉತ್ತಮ ದಾನಿಯಿದ್ದಾರೆ. ಅವರು ಕೂಡ ತಮ್ಮ ಆತ್ಮನನ್ನು ತೀರ ಚಿಕ್ಕವನೆಂದು ಮನ್ನಿಸುತ್ತಾರೆ ಅವರಿಗೆ ಮಾರ್ದವ ಧರ್ಮವಿರುತ್ತದೆ.**

ಈ ವಿನಯವಂತತೆ ಮದರಹಿತತೆಯು ಸಮಸ್ತ ಧರ್ಮದ ಮೂಲವಿದೆ, ಸಮಸ್ತ ಸಮ್ಯಗ್ಜ್ಞಾನ ಮೊದಲಾದ ಗುಣಗಳ ಆಧಾರವಿದೆ. ಸಮ್ಯಗ್ದರ್ಶನಾದಿ ಗುಣಗಳ ಲಾಭವನ್ನಪೇಕ್ಷಿಸುತ್ತಿದ್ದರೆ, ತಮ್ಮ ಉಜ್ವಲಯಶಸ್ಸನ್ನಪೇಕ್ಷಿಸುತ್ತಿದ್ದರೆ, ವೈರದ ಅಭಾವವನ್ನಪೇಕ್ಷಿಸುತ್ತಿದ್ದರೆ ಮದವನ್ನು ತ್ಯಾಗಮಾಡಿ ಕೋಮಲತೆಯ ಗ್ರಹಣಮಾಡಬೇಕು. ಮದವು ನಷ್ಟವಾದಲ್ಲದೆ ವಿನಯ ಮೊದಲಾದ ಗುಣಗಳು, ವಚನದಲ್ಲಿ ಮಿಷ್ಟತೆ, ಪೂಜ್ಯ ಪುರುಷರ ಸತ್ಕಾರ, ದಾನ, ಸನ್ಮಾನ ಮೊದಲಾದ ಒಂದೂ ಗುಣದ ಪ್ರಾಪ್ತಿಯಾಗಲಾರದು.

**ಅಪರಾಧವಿಲ್ಲದೆಯೇ ಸಮಸ್ತ ಜನರು ಅಭಿಮಾನಿಯ ವೈರಿಯಾಗುತ್ತಾರೆ. ಎಲ್ಲ ಜನರು ಅಭಿಮಾನಿಯ ನಿಂದೆ ಮಾಡುತ್ತಾರೆ. ಎಲ್ಲ ಜನರು ಅಭಿಮಾನಿಯ ಪತನ ನೋಡಲಪೇಕ್ಷಿಸುತ್ತಾರೆ.** ಯಜಮಾನನೂ ಅಭಿಮಾನಿಯಾದ ಸೇವಕನನ್ನು ಬಿಟ್ಟು ಬಿಡುತ್ತಾನೆ. ಗುರು ಜನರು ಕೂಡ ಅಭಿಮಾನಿಗೆ ವಿದ್ಯೆ ಕೊಡುವಲ್ಲಿ ಉತ್ಸಾಹ ರಹಿತರಾಗಿ ಹೋಗುತ್ತಾರೆ. ಅಭಿಮಾನಿಯ ತನ್ನ ಸೇವಕನೂ ಪರಾಙ್ಮುಖನಾಗಿ ಹೋಗುತ್ತಾನೆ; ಮಿತ್ರ, ಬಂಧು, ಹಿತಚಿಂತಕರೂ ಕೂಡ ಈತನ ಪತನವನ್ನು ಬಯಸುತ್ತಾರೆ. ತಂದೆ, ಗುರು, ಉಪಾಧ್ಯಾಯರಂತೂ ಮಗನನ್ನು, ಶಿಷ್ಯನನ್ನು ವಿನಯವಂತರಿರುವುದನ್ನು ನೋಡಿ

ಆನಂದಿತರಾಗುತ್ತಾರೆ. ಅವಿನಯ-ಅಭಿಮಾನೀ ಪುತ್ರ ಹಾಗೂ ಶಿಷ್ಯನು ಮಹಾಪುರುಷರ ಮನಸ್ಸನ್ನೂ ದುಃಖಿಯನ್ನಾಗಿ ಮಾಡುತ್ತಾನೆ. ಪುತ್ರ, ಶಿಷ್ಯ ಹಾಗೂ ಸೇವಕರುಗಳಂತೂ ನವೀನ ಕಾರ್ಯ ಮಾಡುವುದಿದ್ದರೆ ಅವರು ತಂದೆ, ಗುರು, ಯಜಮಾನರಿಗೆ ತಿಳಿಸಿಯೇ ಮಾಡುವುದು, ಅವರ ಆಜ್ಞೆ ಪಡೆದುಕೊಂಡೇ ಮಾಡುವುದು ಧರ್ಮವಿದೆ. ಒಂದು ವೇಳೆ ಆಜ್ಞೆ ಪಡೆಯಲು ಸಮಯವು ದೊರಕದಿದ್ದರೆ ಸಮಯ ಕಾದು ಆದಷ್ಟು ಶೀಘ್ರವಾಗಿಯೇ ತಿಳಿಸಿಕೊಡಬೇಕು. ಇದು ಕೂಡ ವಿನಯವಿದೆ, ಇದು ಕೂಡ ಭಕ್ತಿಯಿದೆ.

ಯಾರ ಮಸ್ತಕದ ಮೇಲೆ ಗುರುಗಳು ವಿರಾಜಮಾನರಿದ್ದಾರೆ, ಅವರು ಧನ್ಯಭಾಗ್ಯರಿದ್ದಾರೆ. ವಿನಯವಂತ ಮದರಹಿತರಾದ ಪುರುಷರು ತಮ್ಮ ಎಲ್ಲ ಕಾರ್ಯಗಳನ್ನು ಗುರುಗಳಿಗೆ ತಿಳಿಸಿಕೊಡುತ್ತಾರೆ. ಯಾರು ಈ ಕಲಿಕಾಲದಲ್ಲಿ ಮದರಹಿತ ಕೋಮಲ ಪರಿಣಾಮದಿಂದ ಸಮಸ್ತ ಲೋಕದಲ್ಲಿ ಪ್ರವರ್ತಿಸುತ್ತಾರೆ ಅವರು ಧನ್ಯರಿದ್ದಾರೆ. ಉತ್ತಮ ಪುರುಷರು ಬಾಲಕರಲ್ಲಿ, ವೃದ್ಧರಲ್ಲಿ, ನಿರ್ಧನರಲ್ಲಿ, ರೋಗಿಗಳಲ್ಲಿ, ಬುದ್ಧಿ ರಹಿತ ಮೂರ್ಖರಲ್ಲಿ ಮತ್ತು ಜಾತಿ-ಕುಲಹೀನರಲ್ಲಿ ಕೂಡ ಯಥಾಯೋಗ್ಯ ಪ್ರಿಯವಚನ, ಆದರ, ಸತ್ಕಾರ, ಸ್ಥಾನದ ದಾನ ಮೊದಲಾದುವನ್ನು ಕೊಡುವುದರಲ್ಲಿ ಎಂದೂ ತಪ್ಪುವುದಿಲ್ಲ, ಪ್ರಿಯ ವಚನಗಳನ್ನೇ ಆಡುತ್ತಾರೆ.

ಉತ್ತಮ ಪುರುಷರು ಉದ್ಧತೆಯ ವಸ್ತ್ರಾಭರಣಗಳನ್ನು ಧರಿಸುವುದಿಲ್ಲ, ಉದ್ಧಟತನದ, ಇತರರ ಅಪಮಾನದ ಕಾರಣವಾದ ಕೊಡಕೊಳ್ಳುವ ವಿವಾಹಕಾರ್ಯ ಮೊದಲಾದ ವ್ಯವಹಾರ ಕಾರ್ಯಮಾಡುವುದಿಲ್ಲ ; ಉದ್ಧಟರಾಗಿ, ಅಭಿಮಾನದಿಂದ ನಡೆಯುವುದು, ಕೂಡ್ರುವುದು, ನೋಡುವುದು, ಮಾತನಾಡುವುದನ್ನು ದೂರದಿಂದಲೇ ಬಿಟ್ಟುಕೊಡುತ್ತಾರೆ. ಅವರಿಗೆ ಲೋಕದಲ್ಲಿ ಪೂಜ್ಯಮಾರ್ದವಗುಣವಿರುತ್ತದೆ. ಧನ-ರೂಪು-ಜ್ಞಾನ ಪಡೆಯುವುದು, ವಿದ್ಯೆ-ಕಲೆ-ಚತುರತೆ ಪಡೆಯುವುದು, ಐಶ್ವರ್ಯಬಲ ಪಡೆಯುವುದು, ಜಾತಿ-ಕುಲಾದಿ ಉತ್ತಮ ಗುಣ, ಜಗತ್ತಿನ ಮನ್ನಣೆ ಇತ್ಯಾದಿ ಪಡೆಯುವುದು ಯಾರು ಉದ್ಧತರಹಿತ, ಅಭಿಮಾನ ರಹಿತ, ನಮ್ರತೆ ಸಹಿತ, ವಿನಯ ಸಹಿತರಾಗಿ ಪ್ರವರ್ತಿಸುತ್ತಾರೆ ಅವರಿಗೆ ಸಫಲವಿವೆ. ಯಾರು ತಮ್ಮ ಮನಸ್ಸಿನಲ್ಲಿ ತಮ್ಮನ್ನು ಎಲ್ಲರಿಗಿಂತ ಚಿಕ್ಕವರೆಂದು ಮನ್ನಿಸುತ್ತ ಕರ್ಮದಪರವಶತೆ ತಿಳಿಯುತ್ತಾರೆ ಅವರು ಹೇಗೆ ಗರ್ವ ಮಾಡುವರು ? ಮಾಡುವುದಿಲ್ಲ. ಅಯ್ಯಾ ಭವ್ಯಜನರೇ ! ಸಮ್ಯಗ್ದರ್ಶನದ ಅಂಗವಾದ ಈ ಮಾರ್ದವ ಅಂಗವನ್ನು ತಿಳಿದುಕೊಂಡು ಚಿತ್ತದಲ್ಲಿ ಧ್ಯಾನಿಸಿರಿ ! ಸ್ತುತಿಸಿರಿ ! ಈ ಪ್ರಕಾರ ಮಾರ್ದವ ಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ಆರ್ಜವ ಧರ್ಮ

ಈಗ ಉತ್ತಮ ಆರ್ಜವ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. ಧರ್ಮದ ಶ್ರೇಷ್ಠ ಲಕ್ಷಣವು ಆರ್ಜವವಿದೆ. ಆರ್ಜವದ ಅರ್ಥವು ಸರಳತೆಯಿದೆ. ಮನ-ವಚನ-ಕಾಯದ ಕುಟಿಲತೆಯ ಅಭಾವವು ಅದು ಆರ್ಜವವಿದೆ. ಆರ್ಜವ ಧರ್ಮವು ಪಾಪದ ಖಂಡನೆ ಮಾಡುವಂಥದ್ದಿದೆ ಮತ್ತು ಸುಖವನ್ನುಂಟು ಮಾಡುವಂಥದ್ದಿದೆ. ಆದುದರಿಂದ ಕರ್ಮದ ಕ್ಷಯ ಮಾಡುವಂಥವರು ಕುಟಿಲತೆಯನ್ನು ಬಿಟ್ಟುಕೊಟ್ಟು ಆರ್ಜವಧರ್ಮ ಧಾರಣ ಮಾಡಬೇಕು. ಕುಟಿಲತೆಯು ಅಶುಭಕರ್ಮದ ಬಂಧಮಾಡುವಂಥದ್ದಿದೆ, ಜಗತ್ತಿನಲ್ಲಿ ಅತ್ಯಂತ ನಿಂದ್ಯವಿದೆ. ಆತ್ಮನ ಹಿತ ಬಯಸುವಂಥವರು ಆರ್ಜವ ಧರ್ಮದ ಅವಲಂಬನೆ ಪಡೆಯುವುದು ಉಚಿತವಿದೆ. ಹೇಗೆ ಮನಸ್ಸಿನಲ್ಲಿ ವಿಚಾರ ಮಾಡುತ್ತೇವೆ ಹಾಗೆಯೇ ಶಬ್ದಗಳ ಮೂಲಕ ಅನ್ಯರಿಗೆ ಹೇಳಬೇಕು ಮತ್ತು ಹಾಗೆಯೇ ಬಾಹ್ಯದಲ್ಲಿ ಶರೀರದ ಮೂಲಕ ಪ್ರವರ್ತನೆ ಮಾಡುವುದನ್ನು ಸುಖದ ಸಂಚಯ ಮಾಡುವಂಥವರು ಆರ್ಜವ ಧರ್ಮವೆಂದು ಹೇಳುತ್ತಾರೆ.

ಮನಸ್ಸಿನಿಂದ ಮಾಯಾಚಾರರೂಪದ ಶಲ್ಯವನ್ನು ತೆಗೆದು ಉಜ್ವಲ ಪವಿತ್ರ ಆರ್ಜವ ಧರ್ಮದ ವಿಚಾರ ಮಾಡಬೇಕು. ಮಾಯಾಚಾರಿಯ ವ್ರತ,ತಪ, ಸಂಯಮಗಳೆಲ್ಲವು ನಿರರ್ಥಕವಿವೆ. ಆರ್ಜವ ಧರ್ಮವು ನಿರ್ವಾಣ ಮಾರ್ಗದ ಸಹಾಯವಿದೆ.ಕುಟಿಲವಚನವಾಡದಿರುವಲ್ಲಿ ಆರ್ಜವ ಧರ್ಮವಿರುತ್ತದೆ. ಈ ಆರ್ಜವ ಧರ್ಮವು ಸಮ್ಯಗ್ದರ್ಶನ-ಜ್ಞಾನ- ಚಾರಿತ್ರದ ಅಖಂಡ ಸ್ವರೂಪವಿದೆ ಮತ್ತು ಅತೀಂದ್ರಿಯ ಸುಖದ ಖಜಾನೆಯಿದೆ. ಆರ್ಜವ ಧರ್ಮದ ಪ್ರಭಾವದಿಂದ ಅತೀಂದ್ರಿಯ ಅವಿನಾಶೀ ಸುಖದ ಪ್ರಾಪ್ತಿಯಾಗುತ್ತದೆ. ಸಂಸಾರರೂಪದ ಸಮುದ್ರದೊಳಗಿಂದ ಪಾರಾಗುವ ಸಲುವಾಗಿ ಆರ್ಜವ ಧರ್ಮವು ಜಹಜದರೂಪದಲ್ಲಿದೆ.

ಯಾವ ಸಮಯದಲ್ಲಿ ಮಾಯಾಚಾರವನ್ನು ತಿಳಿದುಕೊಳ್ಳಲಾಗುತ್ತದೆ. ಅದೇ ಸಮಯದಲ್ಲಿ ಪ್ರೀತಿಯ ಭಂಗವಾಗುತ್ತದೆ. ಹುಳಿ ಹಿಂಡಿದೊಡನೆ ಹಾಲು ಒಡೆದು ಹೋದಂತೆ ಆಗುತ್ತದೆ. ಮಾಯಾಚಾರಿಯು ತನ್ನ ಕಪಟವನ್ನು ಅತಿಯಾಗಿ ಬಚ್ಚಿಡುತ್ತಾನೆ, ಆದರೆ ಅದು ಪ್ರಕಟವಾದಲ್ಲದೆ ಇರುವುದಿಲ್ಲ, ಅನ್ಯ ಜೀವರುಗಳ ಚಾಡಿ ಹೇಳುವುದು, ದೋಷ ಎತ್ತಿ ಹಿಡಿಯುವುದು ಅದು ಒಳ್ಳೆಯದಲ್ಲ, ಅದು ಸ್ವಯಂ ಪ್ರಕಟವಾಗುತ್ತದೆ. ಮಾಯಾಚಾರ ಮಾಡುವುದೆಂದರೆ ತಮ್ಮ ಪ್ರತೀತಿಯನ್ನು ಕೆಡಿಸಿಕೊಳ್ಳುವುದಿದೆ, ಧರ್ಮ ಕೆಡಿಸುವುದಿದೆ. ಮಾಯಾಚಾರಿಯ ಹಿತೈಷಿಗಳೆಲ್ಲರೂ ತಾವಾಗಿಯೇ ವೈರಿಗಳಾಗಿ ಹೋಗುತ್ತಾರೆ.

ವ್ರತಿಯಿರಲಿ, ತ್ಯಾಗಿಯಿರಲಿ, ತಪಸ್ವಿಯಿರಲಿ, ಆದರೆ ಅವರ ಕಪಟವು ಒಂದು ಬಾರಿ ಪ್ರಕಟವಾಗಿ ಹೋದರೆ ಎಲ್ಲರೂ ಅವನನ್ನು ಅಧರ್ಮಿಯೆಂದು ಮನ್ನಿಸಿ ಯಾರೂ ಅವನ ಪ್ರತೀತಿ ಮಾಡುವುದಿಲ್ಲ, ತಾಯಿಯು ಕೂಡ ಕಪಟಿಯ ಪ್ರತೀತಿ ಮಾಡುವುದಿಲ್ಲ, ಕಪಟಿಯಂತೂ ಮಿತ್ರದ್ರೋಹಿ, ಸ್ವಾಮಿದ್ರೋಹಿಯಾದ ಕೃತಘ್ನನಿದ್ದಾನೆ ಮತ್ತು ಈ ಜಿನೇಂದ್ರರ ಧರ್ಮವಂತೂ ಛಲ, ಕಪಟ ರಹಿತವಿದೆ. **ಯಾವ ಪ್ರಕಾರ ವಕ್ರಖಡ್ಗಕೋಶದಲ್ಲಿ ನೇರವಾದ ಕತ್ತಿಯು ಪ್ರವೇಶ ಮಾಡುವುದಿಲ್ಲ, ಅದೇ ಪ್ರಕಾರ ಕಪಟದಿಂದ ವಕ್ರ ಪರಿಣಾಮಿಯಿರುವವನ ಹೃದಯದಲ್ಲಿ ಜಿನೇಂದ್ರರ ಆರ್ಜವ ರೂಪದ ಸರಳ ಧರ್ಮವು ಪ್ರವೇಶ ಮಾಡುವುದಿಲ್ಲ,**

ಕಪಟಿಯ ಉಭಯ ಲೋಕಗಳು ನಷ್ಟವಾಗಿ ಹೋಗುತ್ತವೆ. ಯಶಸ್ಸನ್ನಪೇಕ್ಷಿಸುತ್ತಿದ್ದರೆ, ಧರ್ಮವನ್ನಪೇಕ್ಷಿಸುತ್ತಿದ್ದರೆ, ಪ್ರತೀತಿಯನ್ನಪೇಕ್ಷಿಸುತ್ತಿದ್ದರೆ ಮಾಯಾಚಾರದ ತ್ಯಾಗ ಮಾಡಿ ಧರ್ಮಧಾರಣ ಮಾಡಬೇಕು. ವೈರಿಯೂ ಕಪಟರಹಿತನ ಪ್ರಶಂಸೆ ಮಾಡುತ್ತಾನೆ, ಕಪಟ ರಹಿತ ಸರಳ ಚಿತ್ತವುಳ್ಳವನು ಯಾವುದಾದರೂ ಅಪರಾಧ ಮಾಡಿದ್ದರೂ ಕೂಡ ಅವನು ದಂಡನೆಗೆ ಯೋಗ್ಯನಿಲ್ಲ-ಆರ್ಜವ ಧರ್ಮದ ಧಾರಕನಂತೂ ಪರಮಾತ್ಮನ ಅನುಭವ ಮಾಡುವ ಸಂಕಲ್ಪ ಮಾಡುತ್ತಾನೆ, ಕಷಾಯಗಳನ್ನು ಜಯಿಸುವ, ಸಂತೋಷಧಾರಣ ಮಾಡುವ ಸಂಕಲ್ಪ ಮಾಡುತ್ತಾನೆ. ಜಗತ್ತಿನ ಛಲ-ಕಪಟಗಳನ್ನು ದೂರದಿಂದಲೇ ಪರಿಹಾರ ಮಾಡುತ್ತಾನೆ. ಆತ್ಮನನ್ನು ಅಸಹಾಯ ಚೈತನ್ಯ ಮಾತ್ರನೆಂದು ತಿಳಿಯುತ್ತಾನೆ.

ಯಾವನು ಧನ, ಸಂಪತ್ತು, ಕುಟುಂಬ ಮೊದಲಾದುವನ್ನು ಸ್ವೀಕರಿಸುತ್ತಾನೆ ಅವನೇ ಛಲ, ಕಪಟ, ಮೋಸ ಮಾಡುತ್ತಾನೆ. ಯಾವನು ಆತ್ಮನನ್ನು ಸಂಸಾರ ಪರಿಭ್ರಮಣದಿಂದ ಬಿಡಿಸಿ, ಪರದ್ರವ್ಯಗಳಿಂದ ತನ್ನನ್ನು ಭಿನ್ನ ಅಸಹಾಯನೆಂದು ತಿಳಿಯುತ್ತಾನೆ ಅವನು ಧನ, ಜೀವನದ ಸಲುವಾಗಿ ಎಂದೂ ಕಪಟ ಮಾಡುವುದಿಲ್ಲ, ಆದುದರಿಂದ ತಮ್ಮ ಆತ್ಮನನ್ನು ಸಂಸಾರ ಪರಿಭ್ರಮಣದಿಂದ ಬಿಡಿಸಲು ಬಯಸುತ್ತಿದ್ದರೆ ಮಾಯಾಚಾರದ ಪರಿಹಾರ ಮಾಡಿ ಆರ್ಜವಧರ್ಮ ಧಾರಣ ಮಾಡಬೇಕು. ಈ ಪ್ರಕಾರ ಆರ್ಜವ ಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ಸತ್ಯ ಧರ್ಮ

ಈಗ ಉತ್ತಮ ಸತ್ಯ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. ಯಾವುದು ಸತ್ಯ ವಚನವಿದೆ ಅದುವೇ ಧರ್ಮವಿದೆ. ಈ ಸತ್ಯ ವಚನವು ದಯಾ ಧರ್ಮದ ಮೂಲಕಾರಣವಿದೆ, ಅನೇಕ ದೋಷಗಳ ನಿರಾಕರಣ ಮಾಡುವಂಥದ್ದಿದೆ. ಈ ಭವದಲ್ಲಿ ಮತ್ತು ಪರಭವದಲ್ಲಿ ಸುಖವನ್ನುಂಟು ಮಾಡುವಂಥದ್ದಿದೆ. ಎಲ್ಲರೂ ವಿಶ್ವಾಸ ಮಾಡುವುದರ ಕಾರಣವಿದೆ. ಸಮಸ್ತ ಧರ್ಮಗಳ ಮಧ್ಯದಲ್ಲಿ ಸತ್ಯ-ಸತ್ಯ ವಚನವು ಪ್ರಮುಖವಿದೆ. ಸತ್ಯವಿದೆ ಅದು ಸಂಸಾರ ಸಮುದ್ರದಿಂದ ದಡ ತಲುಪಿಸುವ ಜಹಜು ಇದೆ. ಸಮಸ್ತ ವಿಧಾನಗಳಲ್ಲಿ ಸತ್ಯವು ದೊಡ್ಡ ವಿಧಾನವಿದೆ. ಸಮಸ್ತ ಸುಖದ ಕಾರಣವು ಸತ್ಯವೇ ಇದೆ. ಸತ್ಯದಿಂದಲೇ ಮನುಷ್ಯ ಜನ್ಮದ ಶೋಭೆಯಿದೆ. ಸತ್ಯದಿಂದಲೇ ಸಮಸ್ತ ಪುಣ್ಯಕರ್ಮಗಳು ಉಜ್ವಲವಾಗುತ್ತವೆ. ಪುಣ್ಯದ ಉಚ್ಚ ಕಾರ್ಯ ಮಾಡುವವರ ಉಜ್ವಲತೆಯು ಸತ್ಯವಿಲ್ಲದೆ ಆಗುವುದಿಲ್ಲ, ಸತ್ಯದಿಂದಲೇ ಸಮಸ್ತ ಗುಣಗಳ ಸಮೂಹವು ಮಹಿಮೆಗೆ ಪ್ರಾಪ್ತವಾಗುತ್ತದೆ.

ಸತ್ಯದ ಪ್ರಭಾವದಿಂದ ದೇವಗಳೂ ಸೇವೆ ಮಾಡುತ್ತಾರೆ. ಸತ್ಯ ಸಹಿತವಾಗಿಯೇ ಅಣುವ್ರತ-ಮಹಾ ವ್ರತಗಳಾಗುತ್ತವೆ. ಸತ್ಯವಿಲ್ಲದೆ ಸಮಸ್ತ ವ್ರತ, ಸಂಯಮಗಳು ನಷ್ಟವಾಗಿ ಹೋಗುತ್ತವೆ. ಸತ್ಯದಿಂದ ಸಮಸ್ತ ಆಪತ್ತಿಗಳು

ನಾಶ ಹೊಂದುತ್ತವೆ. ಆದುದರಿಂದ ಯಾವ ವಚನ ಆಡಿದರೂ ಅದು ತಮಗೆ ಮತ್ತು ಇತರರಿಗೆ ಹಿತರೂಪವಿರಬೇಕು, ಪ್ರಾಮಾಣಿಕವಿರಬೇಕು, ಯಾರಿಗೂ ದುಃಖವನ್ನುತ್ಪನ್ನ ಮಾಡುವಂಥ ವಚನ ಆಡಬಾರದು. ಇತರರಿಗೆ ಬಾಧೆ ತಲುಪಿಸುವಂಥ ಸತ್ಯವನ್ನು ಆಡಬೇಡಿರಿ. ಗರ್ವರಹಿತರಾಗಿ ಆಡಬೇಕು. ಪರಮಾತ್ಮನ ಅಸ್ತಿತ್ವ ತಿಳಿಸಿಕೊಡುವಂಥ ವಚನ ಆಡಬೇಕು. ನಾಸ್ತಿಕರ ವಚನ, ಪುಣ್ಯ-ಪಾಪದ ಅಭಾವ, ಸ್ವರ್ಗ-ನರಕದ ಅಭಾವವನ್ನು ತಿಳಿಸಿಕೊಡುವಂಥ ವಚನಗಳನ್ನು ಆಡಬಾರದು.

ಈ ಜೀವನು ಅನಂತಾನಂತ ಕಾಲವಂತೂ ನಿಗೋದದಲ್ಲಿಯೇ ಉಳಿದನು. ಅಲ್ಲಿಯಂತೂ ವಚನರೂಪದ ವರ್ಗಣಾವನ್ನೇ ಗ್ರಹಣ ಮಾಡಲಿಲ್ಲ. ಪೃಥ್ವೀಕಾಯ, ಜಲಕಾಯ, ಅಗ್ನಿಕಾಯ, ವಾಯುಕಾಯ, ವನಸ್ಪತಿಕಾಯಗಳಲ್ಲಿಯೂ ಅನಂತಕಾಲ ಉಳಿದನು. ಅಲ್ಲಿಯಂತೂ ಜಿಹ್ವೇಂದ್ರಿಯವನ್ನೂ ಪಡೆಯಲಿಲ್ಲ, ಮಾತನಾಡುವ ಶಕ್ತಿಯನ್ನೇ ಪಡೆಯಲಿಲ್ಲ. ಯಾವಾಗ ವಿಕಲ ಚತುಷ್ಕದಲ್ಲಿ ಉತ್ಪನ್ನನಾದನು, ಪಂಚೇಂದ್ರಿಯ ತಿರ್ಯಂಚದಲ್ಲಿ ಉತ್ಪನ್ನನಾದನು ಅಲ್ಲಿ ಜಿಹ್ವೇಂದ್ರಿಯವನ್ನು ಪಡೆದರೂ ಅಕ್ಷರ ಸ್ವರೂಪಶಬ್ದಗಳ ಉಚ್ಚಾರಣೆ ಮಾಡುವ ಸಾಮರ್ಥ್ಯವು ದೊರಕಲಿಲ್ಲವೆಂಬ ಪರಮಾಗಮದ ಉಪದೇಶ ತಿಳಿದುಕೊಳ್ಳಬೇಕು.

ಒಂದು ಮನುಷ್ಯತನದಲ್ಲಿಯೇ ವಚನ ಆಡುವ ಶಕ್ತಿಯು ಪ್ರಕಟವಾಗುತ್ತದೆ. ಇಂಥ ದುರ್ಲಭ ವಚನಗಳನ್ನಾಡುವ ಸಾಮರ್ಥ್ಯವನ್ನು ಪಡೆದು ಅದನ್ನು ಅಸತ್ಯ ವಚನ ಆಡಿ ಕೆಡಿಸಿಬಿಡುವುದು ಅದು ಮಹಾ ಅನರ್ಥವಿದೆ. ಒಂದು ವಚನ ಶಕ್ತಿಯಿಂದಲೇ ಮನುಷ್ಯ ಜನ್ಮದ ಮಹಿಮೆಯಿದೆ. ಕಣ್ಣು, ಕಿವಿ, ಮೂಗು, ನಾಲಿಗೆಗಳಂತೂ ತಿರ್ಯಂಚಗಳಿಗೂ ಇರುತ್ತವೆ. ತಿನ್ನುವ, ಕುಡಿಯುವ, ಕಾಮ-ಭೋಗಾದಿಗಳ, ಪುಣ್ಯ-ಪಾಪದ ಅನುಕೂಲತೆಯು ದನಕರುಗಳಿಗೂ ಪ್ರಾಪ್ತವಾಗಿ ಹೋಗುತ್ತವೆ. ವಸ್ತ್ರ-ಆಭರಣಗಳು ನಾಯಿ, ಕೋತಿ,ಕತ್ತೆ, ಕುದುರೆ, ಆನೆ, ಒಂಟೆ, ಎತ್ತು ಇತ್ಯಾದಿಗಳಿಗೂ ದೊರಕಿಬಿಡುತ್ತವೆ; ಆದರೆ ವಚನಗಳನ್ನಾಡುವ ಶಕ್ತಿ, ಕೇಳುವ ಶಕ್ತಿ, ಉತ್ತರಕೊಡುವ ಶಕ್ತಿ, ಓದುವ-ಕಲಿಸುವುದಕ್ಕೆ ಕಾರಣವಾದ ವಚನವಂತೂ ಮನುಷ್ಯ ಜನ್ಮದಲ್ಲಿಯೇ ಪ್ರಾಪ್ತವಾಗುತ್ತದೆ. ಯಾವನು ಮನುಷ್ಯ-ಜನ್ಮವನ್ನು ಪಡೆದು ವಚನ ಕೆಡಿಸಿಕೊಂಡಿದ್ದಾನೆ. ಅವನು ತನ್ನ ಸಮಸ್ತ ಜನ್ಮವನ್ನು ಕೆಡಿಸಿಕೊಂಡನು. ಮನುಷ್ಯ ಜನ್ಮದಲ್ಲಿ ಕೂಡ ಕೊಡ-ಕೊಳ್ಳುವ, ಕೇಳುವ-ಹೇಳುವ, ಧೈರ್ಯ-ಪ್ರತೀತಿ, ಧರ್ಮ-ಕರ್ಮ, ಪ್ರೀತಿ-ವೈರ ಇವೇ ಮೊದಲಾಗಿ ಎಷ್ಟು ಪ್ರವೃತ್ತಿರೂಪ ಹಾಗೂ ನಿವೃತ್ತಿರೂಪದ ಕಾರ್ಯಗಳಿವೆ. ಅವೆಲ್ಲವೂ ವಚನಗಳ ಆಧೀನದಲ್ಲಿವೆ. ಯಾವನು ವಚನವನ್ನೇ ಕಲಂಕಿತ ಮಾಡಿ ಬಿಟ್ಟಿದ್ದಾನೆ ಅವನು ಸಮಸ್ತ ಮನುಷ್ಯ ಜನ್ಮದ ವ್ಯವಹಾರವನ್ನು ಕೆಡಿಸಿ ದೂಷಿತ ಮಾಡಿ ಬಿಟ್ಟಿದ್ದಾನೆ. ಆದುದರಿಂದ ಪ್ರಾಣ ಹೋದರೂ ಕೂಡ ತಮ್ಮ ವಚನವನ್ನು ಕಲಂಕಿತ ಮಾಡಬಾರದು; ದೂಷಿತಗೊಳಿಸಬಾರದು.

ಪರಮಾಗಮದಲ್ಲಿ ಹೇಳಿದ ನಾಲ್ಕು ಪ್ರಕಾರದ ಅಸತ್ಯ ವಚನಗಳನ್ನು ತ್ಯಾಗ ಮಾಡಬೇಕು.

**ಕರಣಾನುಯೋಗದ ಕಥನ (೧) :** ವಿದ್ಯಮಾನ ಅರ್ಥದ ನಿಷೇಧ ಮಾಡುವುದು ಅದು ಪ್ರಥಮ ಅಸತ್ಯವಚನವಿದೆ. ಹೇಗೆಂದರೆ-ಕರ್ಮಭೂಮಿಯ ಮನುಷ್ಯ-ತಿರ್ಯಂಚಗಳಿಗೆ ಅಕಾಲ ಮರಣವಾಗುವುದಿಲ್ಲವೆಂಬ ಕಥನವು ಅಸತ್ಯವಿದೆ. ದೇವ-ನಾರಕೀ ಹಾಗೂ ಭೋಗಭೂಮಿಯ ಮನುಷ್ಯಮತ್ತು ತಿರ್ಯಂಚಗಳಿಗಂತೂ ಆಯುಕರ್ಮದ ಸ್ಥಿತಿಯು ಪೂರ್ಣವಾಗಿ ಹೋದ ನಂತರವೇ ಮರಣವಾಗುತ್ತದೆ. ಮಧ್ಯದಲ್ಲಿ ಆಯುವು ಛೇದವಾಗಿ ಹೋಗುವ ಸಾಧ್ಯತೆಯಿಲ್ಲ, ಎಷ್ಟು ಸ್ಥಿತಿಯು ಕಟ್ಟಿರುತ್ತದೆ ಅಷ್ಟನ್ನು ಭೋಗ ಮಾಡಿಯೇ ಮರಣವಾಗುತ್ತದೆ.

**ಬಾಹ್ಯ ನಿಮಿತ್ತದ ಮುಖ್ಯತೆಯಿಂದ ಕಥನ :-** ಕರ್ಮ ಭೂಮಿಯ ಮನುಷ್ಯ-ತಿರ್ಯಂಚಗಳ ಆಯುವಿನ ನಾಶವು ವಿಷ ತಿನ್ನುವುದರಿಂದ, ಹೊಡೆಯುವುದರಿಂದ, ಕೊಲ್ಲುವುದರಿಂದ, ಛೇಡಿಸುವುದರಿಂದ, ಬಂಧನಾದಿಗಳ ವೇದನೆಯಿಂದ, ರೋಗದ ತೀವ್ರ ವೇದನೆಯಿಂದ, ಶರೀರದಿಂದ ರಕ್ತ ಹೋಗುವುದರಿಂದ ಮತ್ತು ದುಷ್ಟ ಮನುಷ್ಯ, ದುಷ್ಟ ತಿರ್ಯಂಚ, ಭಯಂಕರ ದೇವಗಳ ಮೂಲಕ ಉತ್ಪನ್ನ ಮಾಡಲಾದ ಭಯದಿಂದ, ವಜ್ರಪಾತದಿಂದ, ಸ್ವಚಕ್ರ-ಪರಚಕ್ರಗಳ ಭಯದಿಂದ, ಶಸ್ತ್ರದ ಘಾತದಿಂದ, ಪರ್ವತ ಮೊದಲಾದವುಗಳ ಮೇಲಿಂದ ಉರುಳುವುದರಿಂದ, ಅಗ್ನಿ-ವಾಯು-ಜಲ-ಕಲಹ-ವಿಸಂವಾದ ಮೊದಲಾದುವಿಂದ ಉತ್ಪನ್ನವಾದ ಕ್ಲೇಶದಿಂದ, ಧೂಮ್ರಾದಿಗಳಿಂದ ಶ್ವಾಸೋಚ್ಛ್ವಾಸವು ನಿಂತು

ಹೋಗುವುದರಿಂದ, ಆಹಾರ-ಪಾನೀಯಗಳ ನಿರೋಧವಾಗುವುದರಿಂದ ಆಯುವಿನ ನಾಶವಾಗಿ ಹೋಗುತ್ತದೆ. ದೀರ್ಘವಾಗಿ ಕಂಡು ಬರುವಂಥ ಆಯುವಿನ ಸ್ಥಿತಿಯು ಕೂಡ ವಿಷಭಕ್ಷಣ, ರಕ್ತಕ್ಷಯ, ಭಯ, ಶಸ್ತ್ರಘಾತ, ಸಂಕ್ಲೇಶ, ಶ್ವಾಸೋಚ್ಛ್ವಾಸನಿರೋಧ, ಅನ್ನ-ಪಾನೀಯಗಳ ಅಭಾವ ಮೊದಲಾದವುಗಳಿಂದ ಕೂಡಲೆ ನಾಶಕ್ಕೆ ಪ್ರಾಪ್ತವಾಗಿ ಹೋಗುತ್ತದೆ.

**ಪ್ರಶ್ನೆ :- ಆಯು ಪೂರ್ಣವಾದಲ್ಲದೆ ಮರಣವಾಗುವುದಿಲ್ಲವೆಂದು ಅದೆಷ್ಟೋ ಜನರು ಹೇಳುತ್ತಾರಲ್ಲ ?**

**ಉತ್ತರ :-** ಬಾಹ್ಯ ನಿಮಿತ್ತದಿಂದ ಆಯುವು ಕ್ಷಯಿಸದಿದ್ದರೆ ವಿಷ ಭಕ್ಷಣದಿಂದ ಯಾರು ಹಿಂದೆ ಸರಿಯುತ್ತಾರೆ ? ವಿಷ ತಿಂದವರಿಗೆ ವಮನದ ಔಷಧವನ್ನೇಕೆ ಕೊಡಲಾಗುತ್ತದೆ ? ಶಸ್ತ್ರಘಾತ ಮಾಡುವಂಥವರಿಂದೇಕೆ ಹೆದರಿ ಓಡಿ ಹೋಗುತ್ತಾರೆ ? ಸರ್ಪ, ಸಿಂಹ, ಹುಲಿ, ದುಷ್ಟ ಮನುಷ್ಯ, ದುಷ್ಟ ತಿರ್ಯಂಚಗಳಿಂದೇಕೆ ದೂರ ಹೋಗುತ್ತಾರೆ ? ನದೀ, ಸಮುದ್ರ, ಕೊಳ, ಸರೋವರಗಳಲ್ಲಿ, ಅಗ್ನಿಯ ಕುಂಡದಲ್ಲಿ ಉರುಳುವುದಕ್ಕೇಕೆ ಭಯಪಡುತ್ತಾರೆ ? ರೋಗದ ಚಿಕಿತ್ಸೆಯನ್ನೇಕೆ ಮಾಡುತ್ತಾರೆ ? ಹೆಚ್ಚೇನು ಹೇಳುವುದು ? **ಆಯುಘಾತವಾಗುವ ಬಹಿರಂಗ ಕಾರಣವು ದೊರಕುತ್ತಿದ್ದರೆ ಅವನ ಆಯುವಿನ ಘಾತವಾಗಿಯೇ ಆಗುತ್ತದೆ, ಅವನ ಆಯುವಿನ ಘಾತವಾಗಿಯೇ ಆಗುತ್ತದೆಯಂಬುದು ನಿಶ್ಚಯವಿದೆ.**

ಆಯು ಕರ್ಮದ ಸಮಾನವೇ ಅನ್ಯಕರ್ಮಗಳೂ ಬಹಿರಂಗ ಕಾರಣ ದೊರೆತ ಮೇಲೆ ಉದಯದಲ್ಲಿ ಬಂದೇ ಬರುತ್ತವೆ. ಎಲ್ಲ ಜೀವಗಳ ಸತ್ತಾದಲ್ಲಿ ಪಾಪ ಕರ್ಮ-ಪುಣ್ಯಕರ್ಮಗಳು ವಿದ್ಯಮಾನವಿವೆ,ಬಾಹ್ಯ ದ್ರವ್ಯ-ಕ್ಷೇತ್ರ-ಕಾಲ-ಭಾವ ಮೊದಲಾದ ಪರಿಪೂರ್ಣ ಸಾಮಗ್ರಿಯು ದೊರೆತ ಮೇಲೆ ತಮ್ಮ ರಸಕೊಟ್ಟೇ ಕೊಡುತ್ತವೆ. ಒಂದು ವೇಳೆ ಬಾಹ್ಯ ನಿಮಿತ್ತಗಳು ದೊರಕದಿದ್ದರೆ ಉದಯದಲ್ಲಿ ಬರುವುದಿಲ್ಲ, ರಸ ಕೊಡದೆಯೇ ನಿರ್ಜರಿಸಿ ಹೋಗುತ್ತವೆ.

**ಕರುಣಾನುಯೋಗದ ಕಥನ (೨)** ಅಸದ್ಭೂತವನ್ನು (ಅವಿದ್ಯಮಾನ ಅರ್ಥವನ್ನು) ಪ್ರಕಟ ಮಾಡುವುದು ಅದು ಎರಡನೇ ಅಸತ್ಯವಚನವಿದೆ. ಹೇಗೆಂದರೆ-ದೇವಗಳಿಗೆ ಅಕಾಲ ಮೃತ್ಯು ಹೇಳುವುದು, ದೇವಗಳನ್ನು ಗ್ರಾಸದ ಮೂಲಕ ಭೋಜನ ಮಾಡುವಂಥವರೆಂದು ಹೇಳುವುದು, ದೇವಗಳನ್ನು ಮಾಂಸಭಕ್ಷಕರೆಂದು ಹೇಳುವುದು, ಮನುಷ್ಯರನ್ನು ದೇವನ ಜತೆ ಕಾಮ ಸೇವನೆ ಮಾತ್ತು ದೇವಾಂಗನೆಯನ್ನು ಮನುಷ್ಯನ ಜತೆ ಕಾಮ ಸೇವನೆ ಇತ್ಯಾದಿಗಳನ್ನು ಹೇಳುವುದು ಎರಡನೇ ಅಸತ್ಯವಚನವಿದೆ.

**ದ್ರವ್ಯಾನುಯೋಗದ ಕಥನ (೩)** ವಸ್ತುಸ್ವರೂಪವನ್ನು ಅನ್ಯ ವಿಪರೀತ ಸ್ವರೂಪದಿಂದ ಹೇಳುವುದು ಅದು ಮೂರನೆಯ ಅಸತ್ಯ ವಚನವಿದೆ.

**ಚರಣಾನುಯೋಗದ ಕಥನ (೪)** ಗರ್ಹಾಯುಕ್ತ ವಚನ ಹೇಳುವುದು ಅದು ನಾಲ್ಕನೇ ಅಸತ್ಯ ವಚನವಿದೆ. ಗರ್ಹಿತ ವಚನದಲ್ಲಿ ಗರ್ಹಿತ, ಸಾವದ್ಯ, ಅಪ್ರಿಯವೆಂದು ಮೂರು ಭೇದಗಳಿವೆ.

**ಗರ್ಹಿತ ವಚನ ತ್ಯಾಗ - ೧ :** ಪೈಶೂನ್ಯ, ಹಾಸ್ಯ, ಕರ್ಕಶ, ಅಸಮಂಜಸ, ಪ್ರಲಪಿತ ಇವೇ ಮೊದಲಾದ ಇನ್ನೂ ಅನೇಕ **ಆಗಮವಿರುದ್ಧ** ವಚನಗಳನ್ನು ಹೇಳುವುದು ಅದು **ಗರ್ಹಿತ** ವಚನವಿದೆ. ಇತರರ ವಿದ್ಯಮಾನ ಮತ್ತು ಅವಿದ್ಯಮಾನ ದೋಷಗಳನ್ನು ಹಿಂದೆ ಹೇಳುವುದು, ಯಾವ ವಚನದಿಂದ ಇತರರ ಧನದವಿನಾಶ, ಆಜೀವಿಕೆಯವಿನಾಶ, ಪ್ರಾಣದ ವಿನಾಶವಾಗಿ ಹೋಗುವುದು, ಜಗತ್ತಿನಲ್ಲಿ ನಿಂದೆಯಾಗುವುದು, ಅಪವಾದ ಬರುವುದು ಅಂಥ ವಚನಗಳನ್ನು ಹೇಳುವುದು ಅದು **ಪೈಶೂನ್ಯ**ನಾಮದ ಗರ್ಹಿತ ಅಸತ್ಯವಚನವಿದೆ. ಹಾಸ್ಯ, ವಿನೋದ, ಅಶ್ಲೀಲ ವಚನ ಕೇಳುವವರಿಗೆ ಅಶುಭರಾಗವನ್ನುತ್ಪನ್ನ ಮಾಡುವಂಥ ವಚನ ಹೇಳುವುದು ಅದು **ಹಾಸ್ಯ**ನಾಮದ ಗರ್ಹಿತವಚನವಿದೆ. ಅನ್ಯರಿಗೆ ನೀನು ಮೂರ್ಖನಿರುವೆ, ಅಜ್ಞಾನಿಯಿರುವೆ, ಕತ್ತೆಯಿರುವೆಯೆಂದು ಮೊದಲಾಗಿ ಹೇಳುವುದು ಅದು **ಕರ್ಕಶ**ನಾಮದ ಗರ್ಹಿತ ವಚನವಿದೆ. ತನಗೆ ಹಾಗೂ ಇತರರಿಗೆ ಅತ್ಯಂತ ದುಃಖವುತ್ಪನ್ನವಾಗುವಂಥ ದೇಶ-ಕಾಲದ ವಿರುದ್ಧ ವಚನಗಳನ್ನು ಹೇಳುವುದು ಅದು **ಅಸಮಂಜಸ**ನಾಮದ ಗರ್ಹಿತವಚನವಿದೆ. ದಿಟ್ಟತನದಿಂದ ಪ್ರಯೋಜನವಿಲ್ಲದೆ ಬಡ-ಬಡಿಸುವುದು ಅದು **ಪ್ರಲಪಿತ**ನಾಮದ ಗರ್ಹಿತ ವಚನವಿದೆ.

**ಸಾವದ್ಯ ವಚನ ತ್ಯಾಗ-೨ :** ಯಾವ ವಚನಗಳಿಂದ ಪ್ರಾಣಿಗಳ ಘಾತವಾಗುವುದು, ದೇಶದಲ್ಲಿ ಉಪಟಳವಾಗುವುದು, ದೇಶವು ಲೂಟಿಯಾಗಿ ಹೋಗುವುದು, ದೇಶದೊಡೆಯನಲ್ಲಿ ವಿರೋಧವಾಗಿ ಹೋಗುವುದು, ಊರಿಗೆ ಬೆಂಕಿ ಹೊತ್ತುವುದು, ಮನೆ ಸುಟ್ಟು ಹೋಗುವುದು, ಕಾಡಿನಲ್ಲಿ ಬೆಂಕಿ ಬೀಳುವುದು, ಕಲಹ-ವಿಸಂವಾದ-ಯುದ್ಧವಾಗತೊಡಗುವುದು, ದುಃಖದಿಂದ ಸತ್ತು ಹೋಗುವುದು, ವೈರಕಟ್ಟಿಕೊಳ್ಳುವುದು, ಷಟ್ಕಾಯಜೀವಗಳ ಘಾತವಾರಂಭವಾಗುವುದು, ಮಹಾಹಿಂಸೆಯಲ್ಲಿ ಪ್ರವೃತ್ತಿಯಾಗತೊಡಗುವುದು ಅದು ಸಾವದ್ಯ ವಚನವಿದೆ; ಇತರರನ್ನು ಕಳ್ಳನೆಂದು ಹೇಳುವುದು, ವ್ಯಭಿಚಾರಿಯೆಂದು ಹೇಳುವುದು ಈ ಎಲ್ಲ ಸಾವದ್ಯ ವಚನಗಳು ದುರ್ಗತಿಯ ಕಾರಣವಿವೆ, ಆದ್ದರಿಂದ ತ್ಯಾಗ ಮಾಡಲು ಯೋಗ್ಯವಿವೆ.

**ಅಪ್ರಿಯ ವಚನ ತ್ಯಾಗ-೩ :** ತ್ಯಾಗ ಯೋಗ್ಯವಾದ ಅಪ್ರಿಯ ವಚನಗಳನ್ನು ಪ್ರಾಣ ಹೋಗುತ್ತಿದ್ದರೂ ಹೇಳಬಾರದು. ಅಪ್ರಿಯ ವಚನದಲ್ಲಿ ಕರ್ಕಶ, ಕಟುಕ, ಪರುಷ, ನಿಷ್ಠುರ, ಪರಕೋಪನೀ, ಮಧ್ಯಕೃಷ, ಅಭಿಮಾನನಿ, ಅನಯಂಕರೀ, ಛೇದಂಕರೀ ಭೂತವಧಕರಿಯೆಂದು ಹತ್ತು ಭೇದಗಳಿವೆ. ಸತ್ಯವಾದಿಯು ಈ ಮಹಾಪಾಪರೂಪ, ನಿಂದ್ಯಕರವಾದ ವಚನಗಳನ್ನು ಆಡುವುದರ ತ್ಯಾಗ ಮಾಡುತ್ತಾನೆ.

ನೀನು ಮೂರ್ಖನಿರುವೆ, ಕತ್ತೆಯಿರುವೆ, ಎಲೈ ಮೂಢನೆ ! ನೀನೇನು ತಿಳಿಯುವೆ ಇತ್ಯಾದಿ **ಕರ್ಕಶ** ಭಾಷೆಯಿದೆ. ನೀನು ಕುಜಾತಿಯವನಿರುವೆ, ನೀಚ ಜಾತಿಯವನಿರುವೆ, ಅಧರ್ಮಿಯಿರುವೆ, ಮಹಾಪಾಪಿಯಿರುವೆ, ನೀನು ಸ್ಪರ್ಶ ಮಾಡಲು ಯೋಗ್ಯನಿಲ್ಲ, ನಿನ್ನ ಮುಖ ನೋಡಿದರೆ ಅನರ್ಥವಾಗುವುದು. ಇತ್ಯಾದಿ ಉದ್ವೇಗಗೊಳಿಸುವಂಥದು **ಕಟುಕ** ಭಾಷೆಯಿದೆ. ನೀನು ಆಚಾರ ಭ್ರಷ್ಟನಿರುವೆ, ದುಷ್ಟನಿರುವೆ ಇತ್ಯಾದಿ ಮರ್ಮಭೇದಿಸುವಂಥದು **ಪರುಷ** ಭಾಷೆಯಿದೆ. ನಾನು ನಿನ್ನನ್ನು ಕೊಂದು ಹಾಕುವೆನು, ನಿನ್ನ ಮೂಗು ಕತ್ತರಿಸುವೆನು, ನಿನ್ನ ರುಂಡ ಹಾರಿಸುವೆನು. ನಿನ್ನನ್ನು ತಿಂದು ಹಾಕುವೆನು, ನಿನ್ನನ್ನು ಅಗ್ನಿಕುಂಡದಲ್ಲಿ ಎಸೆಯುವೆನು ಇತ್ಯಾದಿ **ನಿಷ್ಠುರ** ಭಾಷೆಯಿದೆ. ಎಲೈ ನಿರ್ಲಜ್ಜನೇ, ಜಾತಿ ಕೆಟ್ಟವನೇ, ನಿನ್ನ ಕುಲಾಚಾರದ ಪತ್ತೆಯೆಲ್ಲಿದೆ, ನಿನ್ನದೆಂಥ ತಪಸ್ಸು, ನೀನು ಕುಶೀಲನಿರುವೆ, ನೀನು ಹಾಸ್ಯಯೋಗ್ಯನಿರುವೆ, ನೀನು ಮಹಾನಿಂದ್ಯನಿರುವೆ, ನಿನ್ನ ಹೆಸರು ಹೇಳಲು ಲಜ್ಜೆಯಾಗುತ್ತದೆ ಇತ್ಯಾದಿ **ಪರಕೋಪನೀ** ಭಾಷೆಯಿದೆ.

ಯಾವ ವಚನಗಳನ್ನು ಕೇಳುವುದರಿಂದ ಮೂಳೆಯ ಬಂಧನವು ಸಡಿಲುಗೊಳ್ಳುತ್ತದೆ, ಸಾಮರ್ಥ್ಯವು ನಷ್ಟವಾಗುತ್ತದೆ ಅದು **ಮಧ್ಯಕೃಷ** ಭಾಷೆಯಿದೆ. ಜನರಲ್ಲಿ ತಮ್ಮ ಗುಣ ಪ್ರಕಟ ಮಾಡುವುದು, ಇತರರ ದೋಷ ಹೇಳುವುದು, ತಮ್ಮ ಜಾತಿ, ಕುಲ, ರೂಪು, ವೈಭವ ಇತ್ಯಾದಿಗಳ ಮದಯುಕ್ತ ವಚನ ಹೇಳುವುದು ಅದು **ಅಭಿಮಾನನೀ** ಭಾಷೆಯಿದೆ. ಶೀಲದ ಖಂಡನೆ ಮಾಡುವಂಥ ಹಾಗೂ ವಿದ್ವೇಷ ಮಾಡುವಂಥದು **ಅನಯಂಕರೀ** ಭಾಷೆಯಿದೆ. ವೀರ್ಯ, ಶೀಲ, ಗುಣಾದಿಗಳನ್ನು ನಿರ್ಮೂಲ ಮಾಡುವಂಥ, ಅಸತ್ಯದೋಷ ಪ್ರಕಟ ಮಾಡುವಂಥ, ಜಗತ್ತಿನಲ್ಲಿ ಸುಳ್ಳು ಕಲಂಕ ಹರಡುವಂಥದು **ಛೇದಂಕರೀ** ಭಾಷೆಯಿದೆ. ಯಾವ ವಚನದಿಂದ ಅಶುಭ ವೇದನೆಯು ಪ್ರಕಟವಾಗುವುದು, ಪ್ರಾಣಗಳ ಘಾತ ಮಾಡುವಂಥದು **ಭೂತವಧಕರೀ** ಭಾಷೆಯಿದೆ ಈ ಹತ್ತು ಪ್ರಕಾರದ ನಿಂದ್ಯ ಅಪ್ರಿಯ ವಚನಗಳು ತ್ಯಾಗಯೋಗ್ಯವಿವೆ.

ಸ್ತ್ರೀಯರ ಹಾವಭಾವ, ವಿಲಾಸ-ವಿಭ್ರಮ, ಕ್ರೀಡೆ-ವ್ಯಭಿಚಾರ ಮೊದಲಾದವುಗಳ ಕಥೆ, ಕಾಮೋದ್ದೀಪನ ಮಾಡುವಂಥ, ಬ್ರಹ್ಮಚರ್ಯದ ನಾಶ ಮಾಡುವಂಥ **ಸ್ತ್ರೀಯರ ಕಥೆ;** ಭೋಜನಪಾನದಲ್ಲಿ ರಾಗವನ್ನುಂಟು ಮಾಡುವಂಥ **ಭೋಜನದ ಕಥೆ;** ರೌದ್ರಭಾವವನ್ನುಂಟು ಮಾಡುವಂಥ **ರಾಜಕಥೆ; ಚೋರರಕಥೆ;** ಮಿಥ್ಯಾದೃಷ್ಟಿ **ಕುಲಿಂಗಿಗಳ ಕಥೆ; ಧನೋಪಾರ್ಜನೆ ಮಾಡುವುದರ ಕಥೆ;** ದುಷ್ಟವೈರಿಗಳ ತಿರಸ್ಕಾರ ಮಾಡುವುದರ ಕಥೆ, ಮತ್ತು **ಹಿಂಸೆಯನ್ನು ಪುಷ್ಟೀಕರಿಸುವಂಥ** ವೇದ, ಸ್ಮೃತಿ, ಪುರಾಣ ಮೊದಲಾದ ಕುಶಾಸ್ತ್ರಗಳ ಕಥೆಯನ್ನು ಹೇಳುವುದು ಯೋಗ್ಯವಿಲ್ಲ ಮತ್ತು ಕೇಳುವುದು ಕೂಡ ಯೋಗ್ಯವಿಲ್ಲ, ಅವು ಪಾಪದ ಆಸ್ರವಕ್ಕೆ ಕಾರಣಗಳಿರುವುದರಿಂದ ವಿಕಥೆರೂಪದ ಅಪ್ರಿಯ ಭಾಷೆಯನ್ನು ತ್ಯಾಗ ಮಾಡುವುದು ಯೋಗ್ಯವಿದೆ.

ಎಲೈ ಜ್ಞಾನಿಗಳೇ ! ನಾಲ್ಕು ಪ್ರಕಾರದ ಅಸತ್ಯವಚನರೂಪದ ನಿಂದ್ಯ ಭಾಷೆಯನ್ನು ಹಾಸ್ಯದಲ್ಲಿ, ಕ್ರೋಧದಲ್ಲಿ, ಮದದಲ್ಲಿ, ಛಲದಿಂದ, ಲೋಭದಿಂದ, ಭಯದಿಂದ, ದ್ವೇಷದಿಂದ ಎಂದೂ ಆಡಬೇಡಿರಿ. ತಮಗೆ ಹಾಗೂ ಇತರರಿಗೆ

ಹಿತರೂಪವಾಗಿಯೇ ವಚನ ಆಡಿರಿ. ಯಾವ ಪ್ರಕಾರ ಈ ಜೀವನಿಗೆ ಹಿತರೂಪ ಅರ್ಥಸಹಿತ ಮಿಷ್ಟವಚನಗಳು ಸುಖ ಮಾಡುತ್ತವೆ. ನಿರಾಕುಲ ಮಾಡುತ್ತವೆ, ಆತಪ ಹರಣ ಮಾಡುತ್ತವೆ. ಅದೇ ಪ್ರಕಾರ ಆತಪವನ್ನು ಹರಣ ಮಾಡುವಂಥ ಚಂದ್ರ, ಚಂದ್ರಕಾಂತಮಣಿ, ಜಲ, ಚಂದನ, ಮುತ್ತು ಮೊದಲಾದ ಯಾವ ಪದಾರ್ಥಗಳೂ ಸುಖಕಾರಕಗಳಾಗಿಲ್ಲ.

ಎಲ್ಲಿ ತಮ್ಮ ಮಾತಿನಿಂದ ಧರ್ಮದ ರಕ್ಷಣೆಯಾಗುತ್ತದೆ, ಪ್ರಾಣಿಗಳಿಗೆ ಉಪಕಾರವಾಗುತ್ತದೆ. ಅಲ್ಲಿ ಕೇಳದೆಯೇ ಮಾತನಾಡಬೇಕು, ಮತ್ತು ಎಲ್ಲಿ ತಮ್ಮ ಹಾಗೂ ಅನ್ಯರ ಹಿತವಾಗುವುದಿಲ್ಲ ಅಲ್ಲಿ ಮೌನವಾಗಿರುವುದೇ ಉಚಿತವಿದೆ. ಸತ್ಯಮಾತನಾಡುವುದರಿಂದ ಸಮಸ್ತ ವಿದ್ಯೆಯ ಸಿದ್ಧಿಯಾಗುತ್ತದೆ. ವಿದ್ಯೆ ಕೊಡುವಂಥವನು ಸತ್ಯವಾದಿಯಿರಬೇಕು ಮತ್ತು ಕಲಿಯುವಂಥವನೂ ಸತ್ಯವಾದಿಯಿದ್ದರೆ ಅವನಿಗೆ ಸಮಸ್ತ ವಿದ್ಯೆಗಳ ಸಿದ್ಧಿಯಾಗುತ್ತದೆ, ಕರ್ಮಗಳ ನಿರ್ಜರೆಯೂ ಆಗುತ್ತದೆ. ಸತ್ಯದ ಪ್ರಭಾವದಿಂದ ಅಗ್ನಿ, ಜಲ, ವಿಷ, ಸಿಂಹ, ಸರ್ಪ, ದುಷ್ಟದೇವ, ದುಷ್ಟಮನುಷ್ಯ ಮೊದಲಾದವರಾರೂ ಬಾಧೆ ಮಾಡುವ ಸಾಧ್ಯತೆಯಿಲ್ಲ.

ಸತ್ಯದ ಪ್ರಭಾವದಿಂದ ದೇವತೆಗಳು ವಶರಾಗುತ್ತಾರೆ; ಪ್ರೀತಿ-ಪ್ರತೀತಿಗಳು ದೃಢವಾಗುತ್ತವೆ. ಸತ್ಯವಾದಿಯು ತಾಯಿಯ ಸಮಾನ ವಿಶ್ವಾಸಯೋಗ್ಯನಿದ್ದಾನೆ, ಗುರುಗಳ ಸಮಾನ ಪೂಜ್ಯನಿರುತ್ತಾನೆ, ಮಿತ್ರರ ಸಮಾನ ಪ್ರಿಯನಿರುತ್ತಾನೆ. ಉಜ್ವಲ ಯಶಸ್ಸಿಗೆ ಪ್ರಾಪ್ತನಾಗುತ್ತಾನೆ. ತಪ, ಸಂಯಮ ಮೊದಲಾದುವೆಲ್ಲವೂ ಸತ್ಯವಚನದಿಂದ ಶೋಭಿಸುತ್ತವೆ. ಯಾವ ಪ್ರಕಾರ ವಿಷದ ಬೆರಕೆಯಿಂದ ಮಿಷ್ಟಭೋಜನವು ನಾಶವಾಗುತ್ತದೆ, ಅನ್ಯಾಯದಿಂದ ಧರ್ಮ ಹಾಗೂ ಯಶಸ್ಸಿನ ನಾಶವಾಗಿ ಹೋಗುತ್ತದೆ, ಅದೇ ಪ್ರಕಾರ ಅಸತ್ಯ ವಚನದಿಂದ ಅಹಿಂಸೆ ಮೊದಲಾಗಿ ಸಮಸ್ತ ಗುಣಗಳು ನಾಶವಾಗಿ ಹೋಗುತ್ತವೆ.

ಅಸತ್ಯ ವಚನದಿಂದ ಅಪ್ರತೀತಿ, ಅಪಕೀರ್ತಿ, ಅಪವಾದ, ತಮಗೆ ಹಾಗೂ ಅನ್ಯರಿಗೆ ಸಂಕ್ಲೇಶ, ಅರತಿ, ಕಲಹ, ವೈರ, ಭಯ, ಶೋಕ, ವಧೆ, ಬಂಧನ, ಮರಣ, ಜಿಹ್ವಾಚ್ಛೇದ, ಸರ್ವಸ್ವಹರಣ, ಕಾರಾಗೃಹದಲ್ಲಿ ಪ್ರವೇಶ, ದುರ್ಧ್ಯಾನ ಅಪಮೃತ್ಯು, ವ್ರತ-ತಪ-ಶೀಲ-ಸಂಯಮದ ನಾಶ, ನರಕ ಮೊದಲಾದ ದುರ್ಗತಿಗಳಲ್ಲಿ ಗಮನ, ಭಗವಂತರ ಆಜ್ಞೆಯ ಭಂಗ, ಪರಮಾಗಮದಿಂದ ಪರಾಙ್ಮುಖತೆ, ಘೋರ ಪಾಪದ ಆಸ್ರವ ಇವೇ ಮೊದಲಾದ ಸಾವಿರಾರು ದೋಷಗಳು ಪ್ರಕಟವಾಗುತ್ತವೆ. ಆದುದರಿಂದ ಎಲೈ ಜ್ಞಾನೀ ಜನರುಗಳೇ ! ಜಗತ್ತಿನಲ್ಲಿ ಪ್ರಿಯವೂ, ಹಿತವೂ, ಮಧುರವೂ ಆದ ವಚನಗಳು ಬಹಳಷ್ಟು ತುಂಬಿಕೊಂಡಿವೆ, ಸುಂದರ ಶಬ್ದಗಳ ಕೊರತೆಯಿಲ್ಲ, ಆದಾಗ್ಯೂ ನಿಂದ್ಯ, ಅಸತ್ಯ ವಚನಗಳನ್ನು ಅದೇಕೆ ಆಡುತ್ತೀರಿ?

'ಎಲವೋ ನೀನು' ಇತ್ಯಾದಿ ನೀಚ ಪುರುಷರು ಆಡುವ ವಚನಗಳನ್ನು ಪ್ರಾಣ ಹೋದರೂ ಆಡಬೇಡ. ಅಧಮತೆ ಮತ್ತು ಉತ್ತಮತೆಯಂತೂ ವಚನಗಳಿಂದಲೇ ತಿಳಿದು ಬರುತ್ತವೆ. ನೀಚರು ಆಡುವ ನಿಂದ್ಯ ವಚನಗಳನ್ನು ಬಿಟ್ಟುಕೊಟ್ಟು ಪ್ರಿಯ, ಹಿತ, ಮಧುರ, ಧರ್ಮಯುಕ್ತ ವಚನಗಳನ್ನು ಆಡಬೇಕು. ಯಾರು ಇತರರಿಗೆ ದುಃಖಕೊಡುವಂಥ ವಚನಗಳನ್ನಾಡುತ್ತಾರೆ ಮತ್ತು ಸುಳ್ಳು ಕಲಂಕ ತಗಲಿಸುತ್ತಾರೆ ಅವರ ಬುದ್ಧಿಯು ಇಲ್ಲಿಯೇ ಪಾಪದಿಂದ ಭ್ರಷ್ಟವಾಗಿ ಹೋಗುತ್ತದೆ, ನಾಲಗೆ ಕಳಚಿ ಬೀಳುತ್ತದೆ, ಕುರುಡರಾಗುತ್ತಾರೆ, ಕಾಲು ಮುರಿದು ಹೋಗುತ್ತವೆ, ದುರ್ಧ್ಯಾನದಿಂದ ಸತ್ತು ನರಕ-ತಿರ್ಯಂಚ ಮೊದಲಾದ ಕುಗತಿಗಳಿಗೆ ಪಾತ್ರರಾಗುತ್ತಾರೆ. ಸತ್ಯದ ಪ್ರಭಾವದಿಂದ ಇಲ್ಲಿ ಉಜ್ವಲ ಯಶಸ್ಸು, ವಚನದ ಸಿದ್ಧಿ, ದ್ವಾದಶಾಂಗ ಮೊದಲಾದ ಶ್ರುತದ ಜ್ಞಾನ ಪಡೆದು, ಪುನಃ ಇಂದ್ರ ಮೊದಲಾದ ಮಹರ್ದ್ಧಿಕ ದೇವರಾಗಿ, ತೀರ್ಥಂಕರ ಮೊದಲಾದ ಉತ್ತಮ ಪದ ಪಡೆದು ಮೋಕ್ಷಕ್ಕೆ ಹೊರಟು ಹೋಗುತ್ತಾರೆ. ಆದುದರಿಂದ ಉತ್ತಮ ಸತ್ಯ ಧರ್ಮವನ್ನೇ ಧಾರಣ ಮಾಡಬೇಕು. ಈ ಪ್ರಕಾರ ಸತ್ಯಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ಶೌಚ ಧರ್ಮ

ಈಗ ಉತ್ತಮ ಶೌಚ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. ಶೌಚದ ಅರ್ಥವು ಪವಿತ್ರತೆಯಿದೆ. ಉಜ್ವಲತೆಯಿದೆ. ಬಹಿರಾತ್ಮರುಗಳಂತೂ ದೇಹದ ಉಜ್ವಲತೆ, ಸ್ನಾನಾದಿಗಳನ್ನು ಮಾಡುವುದಕ್ಕೆ ಶೌಚವೆಂದು ಹೇಳುತ್ತಾರೆ, ಆದರೆ ದೇಹವಂತೂ ಸಪ್ತಧಾತುಮಯ, ಮಲ-ಮೂತ್ರಗಳಿಂದ ತುಂಬಿಕೊಂಡಿದ್ದು ಅದು ನೀರಿನಿಂದ ತೊಳೆಯುವುದರಿಂದ

ಶುಚೀತನಕ್ಕೆ ಪ್ರಾಪ್ತವಾಗುವುದಿಲ್ಲ, ಹೇಗೆ ಮಲದಿಂದ ಮಾಡಿದ, ಮಲದಿಂದ ತುಂಬಿದ ಕೊಡವು ನೀರಿನಿಂದ ತೊಳೆದರೆ ಶುದ್ಧವಾಗುವುದಿಲ್ಲ, ಹಾಗೆಯೇ ಶರೀರವು ಕೂಡ ಶುದ್ಧ ಉಜ್ವಲ ಜಲದಿಂದ ತೊಳೆಯುವುದರಿಂದ ಶುದ್ಧವಾಗುವುದಿಲ್ಲ, ಶರೀರವನ್ನು ಶುದ್ಧವೆಂದು ಮನ್ನಿಸುವುದು ವ್ಯರ್ಥವಿದೆ.

**ಆತ್ಮನನ್ನು ಉಜ್ವಲ ಮಾಡುವುದರಿಂದ ಶೌಚಧರ್ಮವಾಗುತ್ತದೆ.** ಆತ್ಮನು ಲೋಭದಿಂದ, ಹಿಂಸೆಯಿಂದ ಅತ್ಯಂತ ಮಲಿನನಾಗುತ್ತಿದ್ದಾನೆ, ಆದುದರಿಂದ ಆತ್ಮನ ಲೋಭ ಮಲವು ಹೊರಟು ಹೋಗುವುದರಿಂದ ಶುಚಿತ್ವವಾಗುವುದು. ಯಾರು ತಮ್ಮ ಆತ್ಮನನ್ನು ದೇಹದಿಂದ ಭಿನ್ನ, ಜ್ಞಾನೋಪಯೋಗ-ದರ್ಶನೋಪಯೋಗಮಯ, ಅಖಂಡ, ಅವಿನಾಶೀ, ಜನ್ಮ-ಜರೆ-ಮರಣ ರಹಿತ, ತ್ರಿಲೋಕವರ್ತಿ ಸಮಸ್ತ ಪದಾರ್ಥಗಳ ಪ್ರಕಾಶಕವೆಂದು ಸದಾಕಾಲ ಅನುಭವ ಮಾಡುತ್ತಾರೆ, ಧ್ಯಾನಿಸುತ್ತಾರೆ ಅವರಿಗೆ ಶೌಚಧರ್ಮವಿರುತ್ತದೆ. **ಮನಸ್ಸನ್ನು ಮಾಯಾಚಾರ, ಲೋಭಾದಿಗಳಿಂದ ರಹಿತ ಉಜ್ವಲ ಮಾಡುವುದರಿಂದ ಶೌಚ ಧರ್ಮವಾಗುತ್ತದೆ.** ಯಾರ ಮನಸ್ಸು ಕಾಮ-ಕ್ರೋಧಾದಿಗಳಿಂದ ಮಲಿನವಾಗುತ್ತಿದೆ ಅವರಿಗೆ ಶೌಚಧರ್ಮವಾಗುವುದಿಲ್ಲ, ಧನದ ಲುಬ್ಧತೆ ಮತ್ತು ಅತ್ಯಾಸಕ್ತಿಯ ತ್ಯಾಗ ಮಾಡುವುದರಿಂದ ಶೌಚ ಧರ್ಮವಾಗುತ್ತದೆ.

ಪರಿಗ್ರಹದ ಮಮತೆಯನ್ನು ಬಿಟ್ಟುಕೊಟ್ಟು, ಇಂದ್ರಿಯ ವಿಷಯಗಳ ತ್ಯಾಗ ಮಾಡಿ, ತಪಶ್ಚರಣದ ಮಾರ್ಗದಲ್ಲಿ ಪ್ರವರ್ತನೆ ಮಾಡುವುದು ಅದು ಶೌಚಧರ್ಮವಿದೆ. ಬ್ರಹ್ಮಚರ್ಯಧರಿಸುವುದು ಅದು ಶೌಚಧರ್ಮವಿದೆ. ಎಂಟು ಮದಗಳಿಂದ ರಹಿತವಾದ ವಿನಯವಂತತೆಯೂ ಶೌಚಧರ್ಮವಿದೆ. ಅಭಿಮಾನಿಯು ಮದಯುಕ್ತನಿರುವುದರಿಂದ ಮಹಾಮಲಿನನಿದ್ದಾನೆ. ಅವನಿಗೆ ಶೌಚ ಧರ್ಮ ಹೇಗಿರುವುದು ? **ವೀತರಾಗ ಸರ್ವಜ್ಞರ ಪರಮಾಗಮದ ಅನುಭವ ಮಾಡಿ ಅಂತರಂಗದ ಮಿಥ್ಯಾತ್ವ ಕಷಾಯಾದಿಗಳ ಮಲವನ್ನು ತೊಳೆಯುವುದು ಅದು ಶೌಚಧರ್ಮವಿದೆ.** ಉತ್ತಮ ಗುಣಗಳ ಅನುಮೋದನೆ ಮಾಡುವುದರಿಂದ ಶೌಚ ಧರ್ಮವಾಗುತ್ತದೆ. ಪರಿಣಾಮದಲ್ಲಿ ಉತ್ತಮ ಪುರುಷರ ಗುಣಗಳ ಚಿಂತನೆ ಮಾಡುವುದರಿಂದ ಆತ್ಮನು ಉಜ್ವಲನಾಗುತ್ತಾನೆ. ಕಷಾಯ ಮಲದ ಅಭಾವ ಮಾಡುವುದರಿಂದ ಉತ್ತಮ ಶೌಚ ಧರ್ಮವಾಗುತ್ತದೆ. ಆತ್ಮನನ್ನು ಪಾಪದಿಂದ ಲಿಪ್ತನಾಗಗೊಡದಿರುವುದು ಅದು ಶೌಚಧರ್ಮವಿದೆ.

ಯಾರು ಸಮಭಾವ-ಸಂತೋಷ ಭಾವರೂಪದ ಜಲದಿಂದ ತೀವ್ರಲೋಭರೂಪದ ಮಲದ ಪುಂಜವನ್ನು ತೊಳೆಯುತ್ತಾರೆ, ಭೋಜನದಲ್ಲಿ ಅತಿಲಂಪಟತೆಯಿಂದ ರಹಿತರಿದ್ದಾರೆ ಅವರಿಗೆ ನಿರ್ಮಲ ಶೌಚಧರ್ಮವಿರುತ್ತದೆ. ಭೋಜನದ ಲಂಪಟನು ಅತ್ಯಂತ ಅಧಮನಿದ್ದಾನೆ, ಅವನು ತಿನ್ನಲಾಗದ ವಸ್ತುವನ್ನೂ ತಿಂದು ಬಿಡುತ್ತಾನೆ. ಹೀನಾಚಾರನಿರುತ್ತಾನೆ, ಅವನ ಲಜ್ಜೆಯು ನಷ್ಟವಾಗಿರುತ್ತದೆ. ಜಗತ್ತಿನಲ್ಲಿ ಜಿಹ್ವೇಂದ್ರಿಯ ಮತ್ತು ಉಪಸ್ಥ ಇಂದ್ರಿಯದ ವಶೀಭೂತನಾದ ಜೀವನು ತನ್ನ ಸ್ವರೂಪವನ್ನು ಮರೆತು, ನರಕ, ತಿರ್ಯಂಚಗತಿಗಳಿಗೆ ಕಾರಣವಿರುವ ಮಹಾನಿಂದ್ಯ ಪರಿಣಾಮಕ್ಕೆ ಪ್ರಾಪ್ತನಾಗಿ ಹೋಗುತ್ತಾನೆ.

ಸಂಸಾರದಲ್ಲಿ ಪರಧನದ ಇಚ್ಛೆ, ಪರಸ್ತ್ರೀಯ ಇಚ್ಛೆ, ಭೋಜನದ ಅತ್ಯಾಸಕ್ತಿಯೇ ಪರಿಣಾಮವನ್ನು ಮಲಿನ ಮಾಡುವಂಥವಿವೆ. ಇವುಗಳ ಇಚ್ಛೆಯಿಂದ ರಹಿತರಾಗಿ, ಸಂಸಾರದಲ್ಲಿ ತಮ್ಮ ಆತ್ಮನ ಪತನವಾಗುತ್ತಿರುವುದನ್ನು ತಪ್ಪಿಸಬೇಕು. **ಆತ್ಮನ ಮಲಿನತೆಯಂತೂ ಜೀವಹಿಂಸೆಯಿಂದ ಮತ್ತು ಪರಧನ, ಪರಸ್ತ್ರೀಯ ವಾಂಛೆಯಿಂದ ಇದೆ.** ಯಾರು ಪರಸ್ತ್ರೀ, ಪರಧನದ ಇಚ್ಛುಕರಿದ್ದಾರೆ, ಮತ್ತು ಜೀವಘಾತ ಮಾಡುವಂಥವರಿದ್ದಾರೆ ಅವರು ಕೋಟ್ಯಂತರ ತೀರ್ಥಗಳಲ್ಲಿ ಸ್ನಾನ ಮಾಡಿದರೆ, ಸಮಸ್ತ ತೀರ್ಥಗಳ ವಂದನೆ ಮಾಡಿದರೆ, ಕೋಟ್ಯಂತರ ದಾನ ಮಾಡಿದರೆ, ಕೋಟ್ಯಂತರ ವರ್ಷಗಳವರೆಗೆ ತಪಸ್ಸು ಮಾಡಿದರೆ, ಸಮಸ್ತ ಶಾಸ್ತ್ರಗಳ ಪಠಣ-ಪಾಠನ ಮಾಡಿದರೂ ಕೂಡ ಅವರಲ್ಲಿ ಶುಚಿತೆಯೆಂದೂ ಆಗುವುದಿಲ್ಲ.

**ಅನ್ಯಾಯ, ಅನೀತಿ ಮತ್ತು ಅಭಕ್ಷ್ಯ ಭಕ್ಷಣದ ಫಲ :** ಅಭಕ್ಷ್ಯ ಭಕ್ಷಣ ಮಾಡುವಂಥವರ ಮತ್ತು ಅನ್ಯಾಯದ ವಿಷಯ ಹಾಗೂ ಧನ ಭೋಗಿಸುವಂಥವರ ಪರಿಣಾಮವು ಎಷ್ಟು ಮಲಿನವಿರುತ್ತದೆಯೆಂದರೆ ಕೋಟ್ಯಂತರ ಬಾರಿ ಧರ್ಮದ ಉಪದೇಶ ಮತ್ತು ಸಮಸ್ತ ಸಿದ್ಧಾಂತ ಶಾಸ್ತ್ರಗಳ ಶಿಕ್ಷಣವನ್ನು ಅದೆಷ್ಟೋ ವರುಷ ಪಡೆಯುತ್ತಿದ್ದರೂ ಕೂಡ ಅದೆಂದೂ ಅವರ ಹೃದಯದಲ್ಲಿ ಪ್ರವೇಶ ಮಾಡುವುದಿಲ್ಲವೆಂಬುದನ್ನು ಪ್ರತ್ಯಕ್ಷ ಕಾಣುತ್ತೇವೆ. **ಕೆಲವರು ಐವತ್ತು ವರುಷಗಳಿಂದ ಶಾಸ್ತ್ರ**

**ಕೇಳುತ್ತಿದ್ದರೂ ಅವರಿಗೆ ಇನ್ನೂ ಧರ್ಮದ ಸ್ವರೂಪದ ಜ್ಞಾನವೇ ಆಗಿಲ್ಲ, ಅದೆಲ್ಲವೂ ಅನ್ಯಾಯದ ಧನ ಮತ್ತು ಅಭಕ್ಷ್ಯ ಭಕ್ಷಣದ ಫಲವಿದೆ.**

ಆದುದರಿಂದ ತಮ್ಮ ಆತ್ಮನ ಪವಿತ್ರತೆಯನ್ನು ಅಪೇಕ್ಷಿಸುತ್ತಿರುವವರು ಅನ್ಯಾಯದ ಧನವನ್ನು ಗ್ರಹಣ ಮಾಡಬಾರದು, ಅಭಕ್ಷ್ಯ ಭಕ್ಷಣ ಮಾಡಬಾರದು, ಪರಸ್ತ್ರೀಯ ಇಚ್ಛೆ ಮಾಡಬಾರದು ಶೌಚ ಧರ್ಮವಂತೂ ಪರಮಾತ್ಮನ ಧ್ಯಾನದಿಂದ ಆಗುತ್ತದೆ. ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹದಿಂದ ಶೌಚಧರ್ಮವಾಗುತ್ತದೆ.

ಪಂಚ ಪಾಪಗಳಲ್ಲಿ ಪ್ರವರ್ತಿಸುವಂಥವರು ಯಾವಾಗಲೂ ಮಲಿನರಿರುತ್ತಾರೆ.ಪರೋಪಕಾರವನ್ನು ಲೋಪ ಮಾಡುವಂಥ ಕೃತಘ್ನರು ಯಾವಾಗಲೂ ಮಲಿನರಿರುತ್ತಾರೆ. ಮಿತ್ರದ್ರೋಹಿ, ಗುರುದ್ರೋಹಿ, ಸ್ವಾಮಿದ್ರೋಹಿ, ಪರೋಪಕಾರವನ್ನು ಮರೆ ಮಾಡುವಂಥವರ ಪಾಪದ ಪರಂಪರೆಯು ಅಸಂಖ್ಯಾತ ಭವಗಳವರೆಗೆ ಕೋಟ್ಯಂತರ ತೀರ್ಥಗಳಲ್ಲಿ ಸ್ನಾನ ಮಾಡುವುದರಿಂದ ದಾನ ಕೊಡುವುದರಿಂದ ದೂರವಾಗುವುದಿಲ್ಲ, ವಿಶ್ವಾಸ ಘಾತಕರು ಯಾವಾಗಲೂ ಮಲಿನರಿರುತ್ತಾರೆ.

ಆದುದರಿಂದ ಭಗವಂತರ ಪರಮಾಗಮದ ಆಜ್ಞೆಯ ಅನುಸಾರ ಶುದ್ಧ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಮೂಲಕ ಆತ್ಮನನ್ನು ಪವಿತ್ರ ಮಾಡಬೇಕು. ಕ್ರೋಧಾದಿ ಕಷಾಯಗಳ ನಿಗ್ರಹ ಮಾಡಿ, ಉತ್ತಮ ಕ್ಷಮೆ ಮೊದಲಾದ ಗುಣಗಳ ಧಾರಣ ಮಾಡಿ ಆತ್ಮನನ್ನು ಉಜ್ವಲ ಮಾಡಬೇಕು. ಸಮಸ್ತ ವ್ಯವಹಾರವು ಕಪಟವಿಲ್ಲದೆ ಉಜ್ವಲವಾಗಲಿ. ಇತರರ ವೈಭವ, ಐಶ್ವರ್ಯ ಉಜ್ವಲಯಶಸ್ಸು, ಉತ್ತಮವಿದ್ಯೆ ಮೊದಲಾದವುಗಳ ಪ್ರಭಾವ ನೋಡಿ, ನೋಡಲಾಗದ ಮಲಿನ ಭಾವವನ್ನು ಬಿಟ್ಟುಕೊಟ್ಟು ಶೌಚಧರ್ಮದ ಅಂಗೀಕಾರ ಮಾಡಬೇಕು. ಇತರರ ಪುಣ್ಯದ ಉದಯ ನೋಡಿ ದುಃಖಿಯಾಗಬಾರದು. ಈ ಮನುಷ್ಯ ಪರ್ಯಾಯವನ್ನು ಮತ್ತು ಇಂದ್ರಿಯ ಜ್ಞಾನ, ಬಲ, ಆಯು, ಸಂಪತ್ತುಗಳನ್ನು ಅನಿತ್ಯ, ಕ್ಷಣಭಂಗುರವೆಂದು ತಿಳಿದು ಏಕಾಗ್ರಚಿತ್ತದಿಂದ ತಮ್ಮ ಸ್ವರೂಪದಲ್ಲಿ ದೃಷ್ಟಿಯಿಟ್ಟು, ಅಶುಭಭಾವಗಳ ಅಭಾವ ಮಾಡಿ ಆತ್ಮನನ್ನು ಶುಚಿಗೊಳಿಸಬೇಕು. ಶೌಚವೇ ಮೋಕ್ಷದ ಮಾರ್ಗವಿದೆ. ಶೌಚವೇ ಮೋಕ್ಷದ ದಾತೃಇದೆ. ಈ ಪ್ರಕಾರ ಶೌಚ ಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ಸಂಯಮ ಧರ್ಮ

ಈಗ ಉತ್ತಮ ಸಂಯಮ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. ಸಂಯಮದ ಲಕ್ಷಣವು ಹೀಗಿದೆ - ಅಹಿಂಸೆ ಎಂದರೆ ಹಿಂಸೆಯ ತ್ಯಾಗ ಮಾಡಿ ದಯಾರೂಪವಿರುವುದು, ಹಿತ ಮಿತ ಪ್ರಿಯ ಸತ್ಯವಚನ ಆಡುವುದು, ಪರಧನದಲ್ಲಿ ಇಚ್ಛೆಯ ಅಭಾವ ಮಾಡುವುದು, ಕುಶೀಲ ಬಿಡುವುದು, ಪರಿಗ್ರಹದ ತ್ಯಾಗ ಮಾಡುವುದು ಇವು ಐದು ವ್ರತಗಳಿವೆ. ಪಂಚ ಪಾಪಗಳ ಏಕದೇಶ ತ್ಯಾಗ ಮಾಡುವುದು ಅದು **ಅಣುವ್ರತ**ವಿದೆ, ಸಂಪೂರ್ಣ ತ್ಯಾಗ ಮಾಡುವುದು ಅದು **ಮಹಾವ್ರತ**ವಿದೆ. ಈ ಐದು ವ್ರತಗಳನ್ನು ದೃಢವಾಗಿ ಧಾರಣ ಮಾಡುವುದು, ಐದು ಸಮಿತಿ ಪಾಲಿಸುವುದು. ಅವುಗಳಲ್ಲಿ ಗಮನದ ಶುದ್ಧತೆಯು **ಈರ್ಯಾಸಮಿತಿ**ಯಿದೆ. ವಚನದ ಶುದ್ಧತೆಯು **ಭಾಷಾಸಮಿತಿ**ಯಿದೆ, ನಿರ್ದೋಷ ಶುದ್ಧ ಭೋಜನ ಮಾಡುವುದು **ಏಷಣಾ ಸಮಿತಿ**ಯಿದೆ. ಶರೀರ ಹಾಗೂ ಉಪಕರಣಗಳನ್ನು ಕಣ್ಣುಗಳಿಂದ ನೋಡಿ-ಶೋಧಿಸಿ ಇಡುವುದು-ಕೊಳ್ಳುವುದು ಅದು **ಆದಾನನಿಕ್ಷೇಪಣಸಮಿತಿಯಿದೆ,** ಮಲ-ಮೂತ್ರ-ಕಫ ಮೊದಲಾದ ಮಲಗಳನ್ನು ಎಲ್ಲಿ ಅನ್ಯ ಜೀವಗಳಿಗೆ ಗ್ಲಾನಿ, ದುಃಖ, ಬಾಧೆ ಮೊದಲಾದವು ಉತ್ಪನ್ನವಾಗುವುದಿಲ್ಲ ಅಂಥ ಸ್ಥಾನಗಳಲ್ಲಿ ಬಿಡುವುದು-ಎಸೆಯುವುದು ಅದು **ಪ್ರತಿಷ್ಠಾಪನ ಸಮಿತಿ**ಯಿದೆ.

ಈ ಐದು ಸಮಿತಿಗಳನ್ನು ಪಾಲಿಸುವುದು, ಕ್ರೋಧ-ಮಾನ-ಮಾಯೆ-ಲೋಭ ಈ ನಾಲ್ಕು ಕಷಾಯಗಳನ್ನು ನಿಗ್ರಹಿಸುವುದು, ಮನ-ವಚನ-ಕಾಯದ ಅಶುಭ ಪ್ರವೃತ್ತಿ-ಇವು ಮೂರು ದಂಡನೆಗಳಿದ್ದು ಈ ದಂಡನೆಗಳ ತ್ಯಾಗ ಮಾಡುವುದು, ಮತ್ತು ವಿಷಯಗಳಲ್ಲಿ ಧಾವಿಸುವಂಥ ಪಂಚೇಂದ್ರಿಯಗಳನ್ನು ಜಯಿಸುವುದು ಅದು ಸಂಯಮವಿದೆ.

**ಐದು ವ್ರತಗಳಧಾರಣ, ಐದು ಸಮಿತಿಗಳ ಪಾಲನೆ, ನಾಲ್ಕು ಕಷಾಯಗಳ ನಿಗ್ರಹ, ಮೂರು ದಂಡನೆಗಳ ತ್ಯಾಗ ಐದು ಇಂದ್ರಿಯಗಳ ವಿಜಯವನ್ನು ಜಿನೇಂದ್ರರ ಪರಮಾಗಮದಲ್ಲಿ ಸಂಯಮವೆಂದು ಹೇಳಿದೆ.** ಈ ಸಂಯಮ ಪ್ರಾಪ್ತ

ಮಾಡಿಕೊಳ್ಳುವುದು ತುಂಬ ದುರ್ಲಭವಿದೆ. ಪೂರ್ವದಲ್ಲಿ ಕಟ್ಟಿದ ಅಶುಭ ಕರ್ಮಗಳ ಅತ್ಯಂತ ಮಂದ ಉದಯವಿರುವುದರಿಂದ ಮನುಷ್ಯಜನ್ಮ, ಉತ್ತಮದೇಶ, ಉತ್ತಮಕುಲ, ಉತ್ತಮಜಾತಿ, ಇಂದ್ರಿಯಗಳ ಪರಿಪೂರ್ಣತೆ, ನಿರೋಗತೆ, ಕಷಾಯಗಳ ಮಂದತೆ, ಉತ್ತಮ ಸಂಗತಿ, ಜಿನೇಂದ್ರರ ಆಗಮದ ಸೇವನೆ, ನಿಜವಾದ ಗುರುಗಳ ಸಂಯೋಗ, ಸಮ್ಯಗ್ದರ್ಶನ ಮೊದಲಾದ ಅನೇಕ ದುರ್ಲಭ ಸಾಮಗ್ರಿಗಳ ಸಂಯೋಗವಾದ ಮೇಲೆ ಸಂಸಾರ, ದೇಹ, ಭೋಗಗಳಿಂದ ಅತ್ಯಂತ ವಿರಕ್ತತೆಯ ಧಾರಕನಾದ ಮನುಷ್ಯನಿಗೆ ಅಪ್ರತ್ಯಾಖ್ಯಾನಾವರಣ ಕಷಾಯದ ಕ್ಷಯೋಪಶಮದಿಂದ ಅವನಿಗೆ ದೇಶ ಸಂಯಮವಾಗುತ್ತದೆ. ಮತ್ತು ಅಪ್ರತ್ಯಾಖ್ಯಾನಾವರಣ ಹಾಗೂ ಪ್ರತ್ಯಾಖ್ಯಾನಾವರಣ ಇವೆರಡೂ ಕಷಾಯಗಳ ಕ್ಷಯೋಪಶಮದಿಂದ ಅವನಿಗೆ ಸಕಲ ಸಂಯಮವಾಗುತ್ತದೆ. ಆದುದರಿಂದ ಸಂಯಮ ಪ್ರಾಪ್ತ ಮಾಡಿಕೊಳ್ಳುವುದು ಮಹಾದುರ್ಲಭವಿದೆ.

ನರಕಗತಿಯಲ್ಲಿ, ತಿರ್ಯಂಚಗತಿಯಲ್ಲಿ ಮತ್ತು ದೇವಗತಿಯಲ್ಲಂತೂ ಸಂಯಮವಾಗುವುದೇ ಇಲ್ಲ. ಯಾವುದೇ ತಿರ್ಯಂಚಕ್ಕೆ ತನ್ನ ಪರ್ಯಾಯದ ಯೋಗ್ಯತೆಗೆ ಅನುಸರಿಸಿ ಎಂದೋ ದೇಶವ್ರತವಾಗುತ್ತದೆ. ಮನುಷ್ಯ ಪರ್ಯಾಯದಲ್ಲೂ ನೀಚಕುಲಾದಿಗಳಲ್ಲಿ, ಅಧಮದೇಶಗಳಲ್ಲಿ, ಇಂದ್ರಿಯಗಳಿಂದ ಪೀಡಿತ, ಅಜ್ಞಾನೀ, ರೋಗೀ, ದರಿದ್ರೀ, ಅನ್ಯಾಯಮಾರ್ಗೀ, ವಿಷಯಾನುರಾಗೀ, ತೀವ್ರ ಕಷಾಯೀ, ನಿಂದ್ಯಕರ್ಮೀ, ಮಿಥ್ಯಾದೃಷ್ಟಿಗಳಿಗೆ ಸಂಯಮವೆಂದೂ ಆಗುವುದಿಲ್ಲ. ಆದುದರಿಂದ ಸಂಯಮ ಪ್ರಾಪ್ತ ಮಾಡಿಕೊಳ್ಳುವುದು ಪರಮ ದುರ್ಲಭವಿದೆ. ಇಂಥ ದುರ್ಲಭ ಸಂಯಮವನ್ನು ಪಡೆದು ಕೂಡ ಯಾವನೋ ಮೂಢ ಬುದ್ಧಿಯು ವಿಷಯಗಳ ಲೋಲುಪತೆಯಿಂದ ಬಿಟ್ಟು ಕೊಡುತ್ತಿದ್ದರೆ, ಯಾವುದೇ ಪ್ರಕಾರದಿಂದ ನಷ್ಟ ಮಾಡಿಬಿಡುತ್ತಿದ್ದರೆ ಅವನು ಅನಂತಕಾಲದವರೆಗೆ ಜನ್ಮ-ಮರಣ ಮಾಡುತ್ತ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾನೆ.

ಯಾವನು ಸಂಯಮವನ್ನು ಪ್ರಾಪ್ತ ಮಾಡಿಕೊಂಡು ನಂತರ ಅದನ್ನು ಬಿಟ್ಟು ಕೊಡುತ್ತಾನೆ, ಕೆಡಿಸಿ ಬಿಡುತ್ತಾನೆ ಅವನಿಗೆ ಅನಂತ ಕಾಲದವರೆಗೆ ನಿಗೋದದಲ್ಲಿ ಪರಿಭ್ರಮಣ, ತ್ರಸ-ಸ್ಥಾವರಗಳಲ್ಲಿ ಪರಿಭ್ರಮಣ ಮಾಡಬೇಕಾಗುತ್ತದೆ. ಸುಗತಿಯು ದೊರಕುವುದಿಲ್ಲ. **ಸಂಯಮ ಪ್ರಾಪ್ತ ಮಾಡಿಕೊಂಡು ಅದನ್ನು ಕೆಡಿಸುವುದರ ಸಮಾನವಾದ ದೊಡ್ಡ ಅನರ್ಥವು ಬೇರೊಂದಿಲ್ಲ.** ಯಾವನು ವಿಷಯಗಳ ಲೋಭಿಯಾಗಿ ಸಂಯಮವನ್ನು ಕೆಡಿಸಿಕೊಳ್ಳುತ್ತಾನೆ. ಅವನು ಒಂದು ಕವಡೆಗೆ ಚಿಂತಾಮಣಿ ರತ್ನವನ್ನು ಮಾರಿಬಿಡುವಂತೆ, ಸೌದೆಯ ಸಲುವಾಗಿ ಕಲ್ಪವೃಕ್ಷವನ್ನು ಕತ್ತರಿಸಿ ಹಾಕುವಂಥವರ ಸಮಾನನಿದ್ದಾನೆ.

ವಿಷಯಗಳ ಸುಖವಂತೂ ಸುಖವೇ ಇಲ್ಲ, ಅದಂತೂ ಸುಖಾಭಾಸವಿದೆ, ಕ್ಷಣಭಂಗುರವಿದೆ, ನರಕದ ಘೋರ ದುಃಖವನ್ನು ಉಂಟುಮಾಡುವುದರ ಕಾರಣವಿದೆ. ಕಿಂಪಾಕ ಫಲದಂತೆ ನಾಲಿಗೆಗೆ ಸ್ಪರ್ಶ ಮಾತ್ರವೇ ಸಿಹಿಯೆನಿಸುತ್ತದೆ, ಅನಂತರ ಘೋರ ದುಃಖ, ಮಹಾದಾಹ, ಸಂತಾಪವನ್ನಿತ್ತು ಮರಣವನ್ನು ಪ್ರಾಪ್ತ ಮಾಡಿಸುತ್ತದೆ; ಅದೇ ಪ್ರಕಾರ ಭೋಗಗಳು ಕೂಡ ಸ್ವಲ್ಪಕಾಲ ಮಾತ್ರ ಅಜ್ಞಾನೀ ಜೀವರುಗಳಿಗೆ ಭ್ರಾಂತಿಯಿಂದ ಸುಖದಂತೆ ಎನಿಸುತ್ತವೆ, ಅನಂತರವಂತೂ ಅನಂತಕಾಲದವರೆಗೆ ಅನಂತ ಭವಗಳಲ್ಲಿ ಘೋರದುಃಖವನ್ನೇ ಭೋಗಿಸಬೇಕಾಗುತ್ತದೆ. ಆದುದರಿಂದ ಪ್ರಯತ್ನಪೂರ್ವಕವಾಗಿ ಸಂಯಮದ ರಕ್ಷಣೆ ಮಾಡಬೇಕು.

**ಪಂಚೇಂದ್ರಿಯ ವಿಷಯಗಳ ಭೋಗವನ್ನು ಬಿಡುವುದರಿಂದ ಸಂಯಮವಾಗುತ್ತದೆ, ಕಷಾಯಗಳ ನಾಶ ಮಾಡುವುದರಿಂದ ಸಂಯಮವಾಗುತ್ತದೆ, ದುರ್ಧರ ತಪಸ್ಸು ಧಾರಣ ಮಾಡುವುದರಿಂದ ಸಂಯಮವಾಗುತ್ತದೆ, ರಸಗಳ ತ್ಯಾಗ ಮಾಡುವುದರಿಂದ ಸಂಯಮವಾಗುತ್ತದೆ, ಮನಸ್ಸಿನ ವಿಕಲ್ಪಜಾಲದ ಪ್ರಸಾರವನ್ನು ತಡೆಯುವುದರಿಂದ ಸಂಯಮವಾಗುತ್ತದೆ.** ಮನಸ್ಸಿನಲ್ಲಿ ಪರಿಗ್ರಹದ ಲಾಲಸೆಯ ತ್ಯಾಗ ಮಾಡುವುದರಿಂದ ಸಂಯಮವಾಗುತ್ತದೆ, ಮಹಾನ ಕಾಯಕ್ಲೇಶಗಳನ್ನು ಸಹನೆ ಮಾಡುವುದರಿಂದ ಸಂಯಮವಾಗುತ್ತದೆ, ಉಪವಾಸ ಮೊದಲಾದ ಅನಶನ, ತಪಸ್ಸು ಮಾಡುವುದರಿಂದ ಸಂಯಮವಾಗುತ್ತದೆ, ತ್ರಸ-ಸ್ಥಾವರ ಜೀವಗಳ ರಕ್ಷಣೆ ಮಾಡುವುದೇ ಸಂಯಮವಿದೆ.

ಮನಸ್ಸಿನ ವಿಕಲ್ಪಗಳನ್ನು ತಡೆಯುವುದರಿಂದ ಮತ್ತು ಪ್ರಮಾದದಿಂದ ಆಗುವಂಥ ವಚನಗಳ ಪ್ರವೃತ್ತಿಯನ್ನು ತಡೆಯುವುದರಿಂದ ಸಂಯಮವಾಗುತ್ತದೆ, ಶರೀರದ ಅಂಗ-ಉಪಾಂಗಗಳ ಪ್ರಮಾದಯುಕ್ತ ಪ್ರವರ್ತನೆಯನ್ನು ತಡೆಯುವುದರಿಂದ ಸಂಯಮವಾಗುತ್ತದೆ, ಅಧಿಕ ಗಮನವನ್ನು ತಡೆಯುವುದರಿಂದ ಸಂಯಮವಾಗುತ್ತದೆ. ದಯಾರೂಪ

ಪರಿಣಾಮದಿಂದ ಸಂಯಮವಾಗುತ್ತದೆ. ಪರಮಾರ್ಥದ ವಿಚಾರ ಮಾಡುವುದರಿಂದ ಸಂಯಮವಾಗುತ್ತದೆ, ಪರಮಾತ್ಮನ ಧ್ಯಾನ ಮಾಡುವುದರಿಂದ ಸಂಯಮವಾಗುತ್ತದೆ.

**ಸಂಯಮದಿಂದಲೇ ಸಮ್ಯಗ್ದರ್ಶನವು ಪುಷ್ಟವಾಗುತ್ತದೆ. ಸಂಯಮವೇ ಮೋಕ್ಷದ ಮಾರ್ಗವಿದೆ.** ಸಂಯಮವಿಲ್ಲದೆ ಮನುಷ್ಯಭವವು ಶೂನ್ಯವಿದೆ, ಗುಣರಹಿತವಿದೆ.ಸಂಯಮವಿಲ್ಲದೆಯೇ ಈ ಜೀವವು ದುರ್ಗತಿಗಳಿಗೆ ಹೋಗಿದೆ, ಸಂಯಮವಿಲ್ಲದೆ ದೇಹದ ಧಾರಣ ಮಾಡುವುದು, ಬುದ್ಧಿ ಪಡೆಯುವುದು, ಜ್ಞಾನದ ಆರಾಧನೆ ಮಾಡುವುದೆಲ್ಲವು ವ್ಯರ್ಥವಿದೆ. **ಸಂಯಮವಿಲ್ಲದೆ ದೀಕ್ಷೆಯ ಧಾರಣ, ವ್ರತಗಳ ಧಾರಣ, ತಲೆ ಬೋಳಿಸುವುದು, ನಗ್ನವಿರುವುದು, ವೇಷಧಾರಣ ಮಾಡುವುದೆಲ್ಲವೂ ವ್ಯರ್ಥವಿದೆ.**

ಇಂದ್ರಿಯಸಂಯಮ ಮತ್ತುಪ್ರಾಣಿಸಂಯಮವೆಂದು ಸಂಯಮವು ಎರಡು ಪ್ರಕಾರವಿದೆ, ಯಾವನ ಇಂದ್ರಿಯಗಳು ವಿಷಯಗಳಿಂದ ನಿಂತುಹೋಗಿಲ್ಲ, ಷಟ್ಕಾಯ ಜೀವಗಳ ವಿರಾಧನೆಯು ದೂರವಾಗಿಲ್ಲ ಅವನ ಬಾಹ್ಯ ಪರೀಷಹಗಳ ಸಹನೆ, ತಪಶ್ಚರಣ ಮಾಡುವುದು, ದೀಕ್ಷೆ ತೆಗೆದುಕೊಳ್ಳುವುದೆಲ್ಲವೂ ವ್ಯರ್ಥವಿದೆ. ಸಂಸಾರದಲ್ಲಿದುಃಖೀ ಜೀವರುಗಳಿಗೆ ಸಂಯಮವಲ್ಲದೆ ಬೇರೆ ಯಾವುದೂ ಶರಣಿಲ್ಲ. **ಸಂಯಮವಿಲ್ಲದೆ ನಮ್ಮ ಮನುಷ್ಯ ಭವದ ಒಂದು ಸಮಯವೂ ವ್ಯತೀತವಾಗದಿರಲೆಂದು ಜ್ಞಾನೀ ಜನರು ಭಾವನೆ ಭಾವಿಸುತ್ತಾರೆ.** ಸಂಯಮವಿಲ್ಲದೆ ಆಯುಷ್ಯವು ನಿಷ್ಫಲವಿದೆ. ಈ ಭವದಲ್ಲಿ ಹಾಗೂ ಪರಭವದಲ್ಲಿ ಸಂಯಮವೇ ಶರಣಿದೆ, ಸಂಯಮವು ದುರ್ಗತಿರೂಪದ ಸರೋವರವನ್ನು ಒಣಗಿಸುವ ಸಲುವಾಗಿ ಸೂರ್ಯನ ಸಮಾನವಿದೆ. ಸಂಯಮದಿಂದಲೇ ಸಂಸಾರರೂಪದ ವಿಷಮ ವೈರಿಯ ನಾಶವಾಗುತ್ತದೆ. ಸಂಸಾರ ಪರಿಭ್ರಮಣದ ನಾಶವು ಸಂಯಮವಿಲ್ಲದೆ ಆಗುವುದಿಲ್ಲವೆಂಬ ನಿಯಮವಿದೆ. ಯಾರು ಅಂತರಂಗದಲ್ಲಿ ಆತ್ಮನನ್ನು ಕಷಾಯಗಳಿಂದ ಮಲಿನವಾಗಗೊಡುವುದಿಲ್ಲ ಮತ್ತು ಬಾಹ್ಯದಲ್ಲಿ ಪ್ರಯತ್ನಪೂರ್ವಕ ಪ್ರಮಾದರಹಿತ ವರ್ತನೆ ಮಾಡುತ್ತಾರೆ ಅವರಿಗೆ ಸಂಯಮವಾಗುತ್ತದೆ. ಈ ಪ್ರಕಾರ ಸಂಯಮ ಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ತಪ ಧರ್ಮ

ಈಗ ಉತ್ತಮ ತಪ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. **ಇಚ್ಛೆಯ ನಿರೋಧ ಮಾಡುವುದು ಅದು ತಪಸ್ಸು ಇದೆ.** ತಪಸ್ಸು ನಾಲ್ಕು ಆರಾಧನೆಗಳಲ್ಲಿ ಮುಖ್ಯವಿದೆ. ಯಾವ ಪ್ರಕಾರ ಚಿನ್ನವನ್ನು ಕಾಯಿಸುವುದರಿಂದ-ಹದಿನಾರು ಬಾರಿ ಪೂರ್ಣ ಉಷ್ಣತೆ ಕೊಡುವುದರಿಂದ ಅದು ಸಮಸ್ತ ಕಿಲ್ಬಿಷವನ್ನು ಬಿಟ್ಟುಕೊಟ್ಟು ಶುದ್ಧವಾಗುತ್ತದೆ, ಅದೇ ಪ್ರಕಾರ ಆತ್ಮನು ಕೂಡ ಹನ್ನೆರಡು ಪ್ರಕಾರದ ತಪಸ್ಸುಗಳ ಪ್ರಭಾವದಿಂದ ಕರ್ಮಮಲದಿಂದ ರಹಿತನಾಗಿ ಶುದ್ಧನಾಗಿ ಹೋಗುತ್ತಾನೆ.

ಅಜ್ಞಾನೀ ಮಿಥ್ಯಾದೃಷ್ಟಿಯಂತೂ ಶರೀರವನ್ನು ಪಂಚಾಗ್ನಿಯಿಂದ ಕಾಯಿಸುವಲ್ಲಿ, ಮತ್ತು ಅನೇಕ ಪ್ರಕಾರದ ಕಾಯಕ್ಲೇಶಗಳ ಸಹನೆಯನ್ನು ತಪವೆಂದು ಹೇಳುತ್ತಾನೆ; ಆದರೆ ಅದು ತಪವಿಲ್ಲ. ಶರೀರವನ್ನು ಸುಡುವುದರಿಂದ, ಒಣಗಿಸಿ ಕೃಶ ಮಾಡುವುದರಿಂದ ಏನಾಗುತ್ತದೆ ? **ಮಿಥ್ಯಾದೃಷ್ಟಿಯು ಜ್ಞಾನಪೂರ್ವಕ ಆತ್ಮನನ್ನು ಕರ್ಮಗಳಬಂಧನದಿಂದ ಬಿಡಿಸುವುದನ್ನು ತಿಳಿಯುವುದಿಲ್ಲ.** ಆತ್ಮನು ಕರ್ಮಕಲಂಕದಿಂದ ರಹಿತನಂತೂ ಭೇದ-ವಿಜ್ಞಾನಪೂರ್ವಕ ತನ್ನ ಆತ್ಮನ ಸ್ವಭಾವವನ್ನು ಹಾಗೂ ರಾಗ-ದ್ವೇಷ-ಮೋಹ ಮೊದಲಾದ ಭಾವಕರ್ಮರೂಪದ ಮಲವನ್ನು ಭಿನ್ನ-ಭಿನ್ನವಾಗಿ ನೋಡಿ, **ಯಾವ ಪ್ರಕಾರದಿಂದ ರಾಗ-ದ್ವೇಷ-ಮೋಹರೂಪದ ಮಲವು ಭಿನ್ನವಾಗಿ ಹೋಗುವುದು ಮತ್ತು ಶುದ್ಧ ಜ್ಞಾನ-ದರ್ಶನಮಯನಾದ ಆತ್ಮನು ಭಿನ್ನನಾಗಿ ಹೋಗುವನು ಅದು ತಪವಿದೆ, ಕರ್ಮಕಲಂಕದಿಂದ ರಹಿತತೆಯಿದೆ.**

ಆದುದರಿಂದ ಈ ಮನುಷ್ಯ ಭವ ಪಡೆದು ಸ್ವ-ಪರತತ್ತ್ವದ ಜ್ಞಾನ ಮಾಡಿಕೊಂಡಿದ್ದರೆ ಮನಸ್ಸು ಸಹಿತ ಪಂಚೇಂದ್ರಿಯಗಳನ್ನು ತಡೆದು, ವಿಷಯಗಳಿಂದ ವಿರಕ್ತನಾಗಿ, ಸಮಸ್ತ ಪರಿಗ್ರಹಗಳನ್ನು ಬಿಟ್ಟುಕೊಟ್ಟು, ಬಂಧ ಮಾಡುವಂಥ ರಾಗ-ದ್ವೇಷಮಯ ಪ್ರವೃತ್ತಿಯನ್ನು ಬಿಟ್ಟುಕೊಟ್ಟು, ಪಾಪದ ಅವಲಂಬನದಿಂದ ಬಿಡುಗಡೆ ಹೊಂದುವ ಸಲುವಾಗಿ, ಮಮತೆಯನ್ನು ನಷ್ಟಮಾಡುವ ಸಲುವಾಗಿ ವನದಲ್ಲಿ ಹೋಗಿ ತಪಸ್ಸು ಮಾಡಬೇಕಾಗುವುದು. ಇಂಥ ತಪಸ್ಸು ಧನ್ಯ ಪುರುಷರಿಂದಲೇ ಆಗುತ್ತದೆ.

**ಸಂಸಾರೀ ಜೀವಕ್ಕೆ ಮಮತೆಯರೂಪದ ದೊಡ್ಡ ಶೂಲವಿದೆ.** ಅದು ಮಮತೆಯರೂಪದ ಜಾಲದಲ್ಲಿ ಮೋಸ ಹೋಗಿದೆ. ಘೋರ ಕರ್ಮ ಮಾಡುತ್ತ, ಮಹಾಪಾಪದ ಬಂಧಮಾಡಿಕೊಂಡು, ರೋಗಾದಿಗಳ ತೀವ್ರವೇದನೆಯಿಂದ ಮತ್ತು ಸ್ತ್ರೀ-ಪುತ್ರ ಮೊದಲಾದ ಸಮಸ್ತ ಕುಟುಂಬ ಮತ್ತು ಪರಿಗ್ರಹದ ವಿಯೋಗ ಮೊದಲಾದವುಗಳಿಂದ ಉತ್ಪನ್ನವಾದ ತೀವ್ರ ಆರ್ತಧ್ಯಾನದಿಂದ ಮರಣ ಹೊಂದಿ ದುರ್ಗತಿಗಳಲ್ಲಿ ಘೋರ ದುಃಖಗಳಿಗೆ ಪ್ರಾಪ್ತವಾಗುತ್ತದೆ.

ತಪೋವನಕ್ಕೆ ಪ್ರಾಪ್ತವಾಗುವುದು ದುರ್ಲಭವಿದೆ. ತಪವಂತೂ ಯಾವನೋ ಭಾಗ್ಯವಂತ ಪುರುಷನು ಪಾಪಗಳಿಂದ ವಿರಕ್ತನಾಗಿ ಸಮಸ್ತ-ಸ್ತ್ರೀ-ಕುಟುಂಬ-ಧನ ಮೊದಲಾದ ಪರಿಗ್ರಹದಿಂದ ಮಮತ್ವ ಬಿಟ್ಟು, ಪರಮ ಧರ್ಮದ ಧಾರಕರಾದ ವೀತರಾಗ ನಿರ್ಗ್ರಂಥ ಗುರುಗಳ ಚರಣಗಳ ಆಶ್ರಯ ಪಡೆಯುತ್ತಾನೆ. ಗುರುಗಳನ್ನು ಪಡೆದುಕೊಂಡು ಯಾವನ ಅಶುಭ ಕರ್ಮದ ಉದಯವು ಅತ್ಯಂತ ಮಂದವಾಗಿ ಹೋಗಿದೆ, ಸಮ್ಯಕ್ತ್ವರೂಪದ ಸೂರ್ಯನ ಉದಯವು ಪ್ರಕಟವಾಗಿದೆ, ಸಂಸಾರ-ವಿಷಯ-ಭೋಗಗಳಿಂದ ವಿರಕ್ತತೆಯು ಉತ್ಪನ್ನವಾಗಿ ಹೋಗಿದೆ ಅವನೇ ತಪಸ್ಸು-ಸಂಯಮ ಗ್ರಹಣ ಮಾಡುತ್ತಾನೆ.

ಇಂಥ ದುರ್ಧರ ತಪಸ್ಸನ್ನು ಧಾರಣ ಮಾಡಿ ಕೂಡ ಯಾವನೋ ಪಾಪಿಯು ವಿಷಯಗಳ ಇಚ್ಛೆಯಿಂದ ಕೆಡಿಸುತ್ತಾನೆ, ಅವನಿಗೆ ಅನಂತಾನಂತ ಕಾಲದವರೆಗೆ ಪುನಃ ತಪಸ್ಸು ಪ್ರಾಪ್ತವಾಗುವುದಿಲ್ಲ. ಆದುದರಿಂದ ಮನುಷ್ಯಭವ ಪಡೆದು, ತತ್ತ್ವಗಳ ಸ್ವರೂಪವನ್ನು ತಿಳಿದುಕೊಂಡು, ಮನಸ್ಸು ಸಹಿತ ಪಂಚೇಂದ್ರಿಯಗಳನ್ನು ತಡೆದು, ವೈರಾಗ್ಯರೂಪನಾಗಿ, ಸಮಸ್ತ ಪರಿಗ್ರಹವನ್ನು ಬಿಟ್ಟುಕೊಟ್ಟು, ವನದೊಳಗೆ ಏಕಾಕಿಯಾಗಿ ಧ್ಯಾನದಲ್ಲಿ ಲೀನವಾಗಿ ಹೋಗಿ ಬಿಡುವುದು ಅದು ತಪಸ್ಸು ಇದೆ.

ಪರಿಗ್ರಹದಲ್ಲಿ ಮಮತೆಯು ನಷ್ಟವಾಗಿ ಇಚ್ಛಾರಹಿತನಾಗಿ ಹೋಗುವುದು ಮತ್ತು ಪ್ರಚಂಡ ಕಾಮದ ಖಂಡನೆ ಮಾಡುವುದು ಅದು ದೊಡ್ಡ ತಪವಿದೆ. ನಗ್ನ ದಿಗಂಬರರೂಪ ಧಾರಣ ಮಾಡಿ ಬಿಸಿಲು, ಮಳೆ, ಗಾಳಿ, ಚಳಿ, ಸೊಳ್ಳೆ, ನೊಣ, ಕಾಡು ನೊಣ, ಜೇನು ನೊಣ, ಹಾವು, ಚೇಳು ಇತ್ಯಾದಿಗಳಿಂದ ಉತ್ಪನ್ನವಾದ ಘೋರ ವೇದನೆಯನ್ನು ಬರಿದಾದ-ನಗ್ನ ಶರೀರದಿಂದ ಸಹಿಸುವುದು ಅದು ತಪಸ್ಸು ಇದೆ. ನಿರ್ಜನ ಪರ್ವತಗಳ ನಿರ್ಜನ ಗುಹೆಗಳಲ್ಲಿ, ಭಯಂಕರ ಪರ್ವತಗಳ ಕಂದರಗಳಲ್ಲಿ ಮತ್ತು ಸಿಂಹ, ಹುಲಿ, ಚಿರತೆ, ಕರಡಿ, ಕಾಡುಹಂದಿ ಮೊದಲಾದ ಕ್ರೂರ ಪ್ರಾಣಿಗಳಿಂದ ತುಂಬಿದ ಘೋರವನದಲ್ಲಿ ನಿವಾಸ ಮಾಡುವುದು ಅದು ತಪಸ್ಸು ಇದೆ. ದುಷ್ಟ, ವೈರೀ, ಮ್ಲೇಚ್ಛ, ಚೋರ, ಭಿಲ್ಲ, ಮನುಷ್ಯ ಹಾಗೂ ದುಷ್ಟವ್ಯಂತರ ಮೊದಲಾದವರಿಂದ ಮಾಡಲಾಗುವ ಘೋರ ಉಪಸರ್ಗಗಳಿಂದ ಚಂಚಲರಾಗದಿರುವುದು, ಧೈರ್ಯದಿಂದ ಭೀರುತನವನ್ನು ಬಿಟ್ಟುಕೊಟ್ಟು, ವೈರ-ವಿರೋಧ ತ್ಯಜಿಸಿ, ಸಮತೆಯ ಭಾವದಿಂದ ಪರಮಾತ್ಮನ ಧ್ಯಾನದಲ್ಲಿ ಲೀನವಾಗಿ ಸಹನೆ ಮಾಡುವುದು ಅದು ತಪಸ್ಸು ಇದೆ. ಸಮಸ್ತ ಜೀವಗಳನ್ನು ಸಂಕಟದಲ್ಲಿ ಸಿಕ್ಕಿಸುವಂಥ ರಾಗ-ದ್ವೇಷ ಮೊದಲಾದುವನ್ನು ಜಯಿಸುವುದು, ನಷ್ಟಗೊಳಿಸುವುದು ಅದು ತಪಸ್ಸು ಇದೆ.

ಯಾಚನಾರಹಿತ, ಭೋಜನದ ಸಮಯದಲ್ಲಿ, ಶ್ರಾವಕರ ಮನೆಯೊಳಗೆ, ನವದಾ ಭಕ್ತಿಯಿಂದ ಕೈಯಲ್ಲಿರಿಸಿದ ಸಿಹಿ, ಕಹಿ, ಉಪ್ಪು, ಕಾರ, ಹುಳಿ, ಒಗರು, ಸ್ನಿಗ್ಧ, ರೂಕ್ಷ, ರಸ-ನೀರಸ, ನಿರ್ದೋಷ, ಪ್ರಾಸುಕ ಆಹಾರವನ್ನು ಲೋಲುಪತೆಯಿಲ್ಲದೆ, ಸಂಕ್ಲೇಶವಿಲ್ಲದೆ ಒಂದು ಬಾರಿ ತಿನ್ನುವುದು ಅದು ತಪವಿದೆ. ಐದು ಸಮಿತಿಗಳನ್ನು ಪಾಲಿಸುವುದು, ಮನ-ವಚನ-ಕಾಯಗಳನ್ನು ಚಂಚಲ ಮಾಡದಿರುವದು, ರಾಗ-ದ್ವೇಷಗಳಿಲ್ಲದ ತನ್ನ ಆತ್ಮನ ಅನುಭವ ಮಾಡುವುದು ಅದು ತಪವಿದೆ. ಸ್ವ-ಪರ ತತ್ತ್ವಗಳ ಕಥನದ ನಿರ್ಣಯ ಮಾಡುವುದು, ನಾಲ್ಕೂ ಅನುಯೋಗಗಳ ಅಭ್ಯಾಸ ಮಾಡುತ್ತ ಧರ್ಮ ಸಹಿತ ಕಾಲ ಕಳೆಯುವುದು ಅದು ತಪವಿದೆ. ಅಭಿಮಾನ ಬಿಟ್ಟು ವಿನಯ ರೂಪವಾಗಿ ವರ್ತಿಸುವುದು, ಕಪಟ ಬಿಟ್ಟು ಸರಳ ಪರಿಣಾಮವಿಡುವುದು, ಕ್ರೋಧ ಬಿಟ್ಟು ಕ್ಷಮಾಧಾರಣ ಮಾಡುವುದು, ಲೋಭ ತ್ಯಜಿಸಿ ಇಚ್ಛಾರಹಿತವಾಗುವುದು ಅದು ತಪವಿದೆ. ಯಾವುದರಿಂದ ಕರ್ಮ ಸಮೂಹದ ನಾಶ ಮಾಡಿ ಆತ್ಮನು ಸ್ವಾಧೀನನಾಗಿ ಹೋಗುವನು ಅದು ತಪಸ್ಸು ಇದೆ.

**ಶ್ರುತದ ಅರ್ಥವನ್ನು ಪ್ರಕಾಶಪಡಿಸುವುದು, ವ್ಯಾಖ್ಯಾನ ಮಾಡುವುದು, ಸ್ವಯಂ ನಿರಂತರ ಅಭ್ಯಾಸ ಮಾಡುವುದು. ಇತರರಿಗೆ ಅಭ್ಯಾಸ ಮಾಡಿಸುವುದು ಅದು ತಪವಿದೆ.** ತಪಸ್ವಿಗಳ ಭಕ್ತಿ-ಸ್ತುತಿಯನ್ನು ದೇವಗಳ ಇಂದ್ರನು ಕೂಡ ಮಾಡುತ್ತಾನೆ. ತಪಸ್ಸಿನಿಂದ ಕೇವಲಜ್ಞಾನವು ಉತ್ಪನ್ನವಾಗುತ್ತದೆ. ತಪದ ಪ್ರಭಾವವು ಅಚಿಂತ್ಯವಿದೆ. ತಪಸ್ಸು ಮಾಡುವ

ಪರಿಣಾಮವಾಗುವುದು ಅತ್ಯಂತ ದುರ್ಲಭವಿದೆ. ನಾರಕೀ, ತಿರ್ಯಂಚ, ದೇವಗಳಲ್ಲಿ ತಪಸ್ಸು ಮಾಡುವ ಯೋಗ್ಯತೆಯೇ ಇಲ್ಲ, ಒಂದು ಮನುಷ್ಯ ಗತಿಯಲ್ಲಿಯೇ ತಪವಾಗುತ್ತದೆ. ಮನುಷ್ಯರಲ್ಲಿ ಕೂಡ ಉತ್ತಮಕುಲ, ಜಾತಿ, ಬಲ, ಬುದ್ಧಿ, ಇಂದ್ರಿಯಗಳ ಪೂರ್ಣತೆ, ರಾಗಾದಿಗಳ ಮಂದತೆಯು ಯಾರಿಗಿರುತ್ತದೆ, ಮತ್ತು ಯಾರಿಗೆ ವಿಷಯಗಳ ಲಾಲಸೆಯು ನಷ್ಟವಾಗಿ ಹೋಗಿರುತ್ತದೆ ಅವರಿಗೇ ತಪಸ್ಸು ಆಗುತ್ತದೆ.

**ತಪಸ್ಸು ಹನ್ನೆರಡು ಪ್ರಕಾರದ್ದಿದೆ.** ಯಾರಿಗೆ ಎಂಥ ಶಕ್ತಿಯಿದೆ ಅದರ ಅನುಸಾರ ತಪಸ್ಸು ಧಾರಣ ಮಾಡಬೇಕಾಗುವುದು. ಬಾಲಕ, ತರುಣ, ವೃದ್ಧ, ಧನವಂತ, ನಿರ್ಧನ, ಬಲವಂತ, ನಿರ್ಬಲ, ಸಹಾಯ ಸಹಿತನಿದ್ದವನು, ಸಹಾಯ ರಹಿತನಿದ್ದವನು, ಹೀಗೆ ಎಲ್ಲರೂ ಮಾಡಬಹುದಾಗಿದೆ. ಭಗವಂತರು ಹೇಳಿರುವ ತಪಸ್ಸು ಯಾರಿಗೂ ಮಾಡುವುದಕ್ಕೆ ಅಶಕ್ಯವಿಲ್ಲ. ಯಾವ ಪ್ರಕಾರ ವಾತ, ಪಿತ್ತ, ಕಫ ಮೊದಲಾದವುಗಳ ಪ್ರಕೋಪವಿಲ್ಲ, ರೋಗದ ವೃದ್ಧಿಯಿಲ್ಲ, ಶರೀರವು ರತ್ನತ್ರಯದ ಸಹಕಾರಿಯಾಗಿರುವದು, ಆ ಪ್ರಕಾರ ತಮ್ಮ ಸಂಹನನ, ಬಲ, ವೀರ್ಯಗಳನ್ನು ನೋಡಿಕೊಂಡು ತಪಸ್ಸು ಮಾಡಬೇಕಾಗುವುದು. **ದೇಶ, ಕಾಲ, ಆಹಾರದ ಯೋಗ್ಯತೆ ನೋಡಿಕೊಂಡು ತಪಸ್ಸು ಮಾಡಬೇಕಾಗುವುದು.** ಹೇಗೆ ತಪದಲ್ಲಿ ಉತ್ಸಾಹವು ಬೆಳೆಯುತ್ತದೆ, ಪರಿಣಾಮದಲ್ಲಿ ಉಜ್ವಲತೆಯು ಹೆಚ್ಚುತ್ತದೆ ಹಾಗೆ ತಪಸ್ಸು ಮಾಡಬೇಕು. ಇಚ್ಛೆಯ ನಿರೋಧ ಮಾಡಿ, ವಿಷಯಗಳಲ್ಲಿ ರಾಗ ಕಡಿಮೆ ಮಾಡುವುದು ಅದು ತಪವಿದೆ. ತಪಸ್ಸೇ ಜೀವದ ಕಲ್ಯಾಣವಿದೆ. ತಪಸ್ಸೇ ಕಾಮವನ್ನು, ನಿದ್ರೆಯನ್ನು, ಪ್ರಮಾದವನ್ನು ನಷ್ಟ ಮಾಡುವಂಥದ್ದಿದೆ. ಆದುದರಿಂದ ಗರ್ವಬಿಟ್ಟು ಹನ್ನೆರಡು ಪ್ರಕಾರದ ತಪದಲ್ಲಿ ಎಂಥ ತಪ ಮಾಡುವ ಸಾಮರ್ಥ್ಯವು ತಮ್ಮಲ್ಲಿ ಇದೆ ಅಂಥದೇ ತಪಸ್ಸು ಮಾಡಬೇಕು. ಹನ್ನೆರಡು ಪ್ರಕಾರದ ತಪದ ವರ್ಣನೆಯನ್ನು ಮುಂದೆ ತಪ ಭಾವನೆಯಲ್ಲಿ ಮಾಡಲಾಗುವುದು. ಈ ಪ್ರಕಾರ ಉತ್ತಮ ತಪ ಧರ್ಮದ ವರ್ಣನೆಯನ್ನು ಮಾಡಲಾಯಿತು.

## ಉತ್ತಮ ತ್ಯಾಗ ಧರ್ಮ

ಈಗ ಉತ್ತಮ ತ್ಯಾಗಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. ತ್ಯಾಗವು ಹೇಗಿದೆಯೆಂದರೆ-ಯಾರು ಧನ, ಸಂಪತ್ತು ಮೊದಲಾದ ಪರಿಗ್ರಹವನ್ನು ಕರ್ಮದ ಉದಯಜನ್ಯ, ಪರಾಧೀನ, ವಿನಾಶಶೀಲ, ಅಭಿಮಾನವನ್ನು ಉತ್ಪನ್ನ ಮಾಡುವಂಥ, ತೃಷ್ಣೆಯನ್ನು ಹೆಚ್ಚಿಸುವಂಥ, ರಾಗ-ದ್ವೇಷದ ತೀವ್ರತೆ ಮಾಡುವಂಥ, ಆರಂಭದ ತೀವ್ರತೆ ಮಾಡುವಂಥ, ಹಿಂಸೆ ಮೊದಲಾದ ಪಂಚ ಪಾಪಗಳ ಮೂಲ ತಿಳಿದುಕೊಂಡು ಅವುಗಳ ಅಂಗೀಕಾರವನ್ನೇ ಮಾಡಿರದಂಥ ಉತ್ತಮ ಪುರುಷರು ಧನ್ಯರಿದ್ದಾರೆ. ಯಾರು ಅವನ್ನು ಸ್ವೀಕಾರ ಮಾಡಿ ಪುನಃ ಅವನ್ನು ಹಾಲಾಹಲ ವಿಷವೆಂದು ತಿಳಿದುಕೊಂಡು ಜೀರ್ಣತೃಣದಂತೆ ತ್ಯಾಗ ಮಾಡಿದವರದೂ ಅಚಿಂತ್ಯ ಮಹಿಮೆಯಿದೆ.

ಅದೆಷ್ಟೋ ಜೀವರುಗಳ ತೀವ್ರರಾಗ ಭಾವವು ಮಂದವಾಗದಿರುವುದರಿಂದ ಸಮಸ್ತ ಪರಿಗ್ರಹವನ್ನು ತ್ಯಾಗ ಮಾಡಲು ಸಮರ್ಥರಿಲ್ಲ ಅವರು ಸರಾಗ ಧರ್ಮದಲ್ಲಿ ರುಚಿಯಿಡುತ್ತಾರೆ, ಪಾಪಗಳಿಂದ ಭಯಭೀತರಿದ್ದಾರೆ. ಅವರು ಈ ಧನವನ್ನು ಉತ್ತಮ ಪಾತ್ರರುಗಳ ಉಪಕಾರದ ಸಲುವಾಗಿ ದಾನದಲ್ಲಿ ತೊಡಗಿಸುತ್ತಾರೆ. ಧರ್ಮದ ಸೇವನೆ ಮಾಡುವಂಥ ಧನವಂತರು ಅನ್ನ-ವಸ್ತ್ರ ಮೊದಲಾದವುಗಳಿಂದ ನಿರ್ಧನ ಜನರಿಗೆ ಉಪಕಾರ ಮಾಡುವಲ್ಲಿ ಧನ ತೊಡಗಿಸುತ್ತಾರೆ, ಧರ್ಮದ ಆಯತನ ಜಿನಮಂದಿರ ಮೊದಲಾದುವನ್ನು ನಿರ್ಮಿಸುವಲ್ಲಿ, ಜಿನಸಿದ್ಧಾಂತ (ಶಾಸ್ತ್ರ)ಗಳನ್ನು ಬರೆಯಿಸಿಕೊಡುವಲ್ಲಿ, ಉಪಕರಣದಲ್ಲಿ, ಪೂಜಾದಿಗಳ ಪ್ರಭಾವನೆಯಲ್ಲಿ ಧನತೊಡಗಿಸುತ್ತಾರೆ; ದುಃಖೀ-ದರಿದ್ರೀ-ರೋಗಿಗಳ ಉಪಕಾರದಲ್ಲಿ ತನು-ಮನದಿಂದ ಕರುಣಾಮಯರಾಗಿ ಧನತೊಡಗಿಸುತ್ತಾರೆ. ಅವರು ತಮ್ಮ ಧನ ಹಾಗೂ ಜೀವನ ಎರಡನ್ನೂ ಸಾರ್ಥಕಪಡಿಸಿಕೊಳ್ಳುತ್ತಾರೆ.

**ದಾನವು ಅದು ಧರ್ಮದ ಅಂಗವಿದೆ.** ತಮ್ಮ ಶಕ್ತಿಯ ಪ್ರಮಾಣ, ಭಕ್ತಿಪೂರ್ವಕ, ಗುಣಧಾರಕರಾದ ಉಜ್ವಲ ಪಾತ್ರರುಗಳಿಗೆ ಯಾರು ದಾನಕೊಡುತ್ತಾರೆ ಅವರು ಜೀವದ ಮಹಾನ ಸುಖ ಸಾಮಗ್ರಿಯನ್ನು ಪರಲೋಕಕ್ಕೆ ಕೊಂಡೊಯ್ಯುವಂಥವರಿದ್ದಾರೆ, ಮತ್ತು ನಿರ್ವಿಘ್ನ, ಸ್ವರ್ಗವನ್ನು ಹಾಗೂ ಭೋಗಭೂಮಿಯನ್ನು ಪ್ರಾಪ್ತ ಮಾಡಿಕೊಳ್ಳುವಂಥವರಿದ್ದಾರೆಂದು ತಿಳಿಯುವುದು.

ದಾನದ ಮಹಿಮೆಯನ್ನು ಅಜ್ಞಾನೀ ಬಾಲಗೋಪಾಲರೂ ಮಾಡುತ್ತಾರೆ. ಅವರು ಹೇಳುವುದೇನೆಂದರೆ ಯಾರು ಪೂರ್ವ ಭವಗಳಲ್ಲಿ ದಾನ ಕೊಟ್ಟಿದ್ದಾರೆ ಅವರೇ ಅನೇಕ ಪ್ರಕಾರದ ಸುಖ ಸಾಮಗ್ರಿಗಳನ್ನು ಪಡೆದಿದ್ದಾರೆ, ಮತ್ತು ಈಗ ಕೊಡುವವರು ಮುಂದೆ ಪಡೆಯುವರು. ಆದುದರಿಂದ ಸುಖ-ಸಂಪತ್ತುಗಳ ಇಚ್ಛೆಯುಳ್ಳವರು ಅವರು ದಾನ ಕೊಡುವುದರಲ್ಲಿಯೇ ಅನುರಾಗ ಮಾಡಬೇಕು. ದಾನ ಕೊಡುವಲ್ಲಿ ಉದ್ಯಮಶೀಲರಿಲ್ಲದವರು ಕೇವಲ ಮರಣ ಪರ್ಯಂತದ ಸಲುವಾಗಿ ಧನ ಸಂಚಯ ಮಾಡುವುದರಲ್ಲಿಯೇ ಉದ್ಯಮಶೀಲರಿರುತ್ತಾರೆ, ಅವರು ಇಲ್ಲಿಕೂಡ ತೀವ್ರ ಆರ್ತಪರಿಣಾಮದಿಂದ ಮರಣ ಹೊಂದಿ ಸರ್ಪ ಮೊದಲಾದ ದುಷ್ಟ ತಿರ್ಯಂಚ ಗತಿ ಪಡೆದು, ನರಕ-ನಿಗೋದಗಳಿಗೆ ಪ್ರಾಪ್ತರಾಗಿ ಹೋಗುತ್ತಾರೆ. ಧನವೇನು ಜತೆಯಲ್ಲಿ ಹೋಗುವುದೇನು ?

**ಧನ ಪಡೆಯುವುದಂತೂ ದಾನದಿಂದಲೇ ಸಫಲವಿದೆ.** ದಾನವಿಲ್ಲದ ಧನವು ಘೋರ ದುಃಖ ಪರಂಪರೆಗೆ ಕಾರಣವಿದೆ. ಇಲ್ಲಿ ಕೂಡ ಕೃಪಣರ ಘೋರ ನಿಂದೆಯಾಗುತ್ತದೆ, ಜನರು ಕೃಪಣನ ಹೆಸರು ಕೂಡ ಎತ್ತ ಬಯಸುವುದಿಲ್ಲ, ಜನರು ಲೋಭೀ ಜಿಪುಣನ ಹೆಸರು ಹೇಳುವುದನ್ನೂ ಅಮಂಗಲವೆಂದು ಮನ್ನಿಸುತ್ತಾರೆ. ದಾನಿಗಳಲ್ಲಿ ಯಾವುದಾದರೂ ದುರ್ಗುಣ ಅಥವಾ ದೋಷವಿದ್ದರೆ ಆ ದೋಷವೂ ದಾನದಲ್ಲಿ ಮುಚ್ಚಿ ಹೋಗುತ್ತದೆ, ದಾನಿಯ ದೋಷಗಳು ದೂರ ಓಡಿ ಹೋಗುತ್ತವೆ. ದಾನದಿಂದ ಜಗತ್ತಿನಲ್ಲಿ ನಿರ್ಮಲ ಕೀರ್ತಿಯು ಹರಡುತ್ತದೆ. ದಾನ ಕೊಡುವುದರಿಂದ ವೈರಿಗಳು ಕೂಡ ವೈರ ಬಿಟ್ಟು ಬಿಡುತ್ತಾರೆ. ಚರಣಗಳಲ್ಲಿ ಮಣಿಯುತ್ತಾರೆ, ತಮ್ಮ ಅಹಿತ ಮಾಡುವಂಥವರೂ ಮಿತ್ರರಾಗಿ ಹೋಗುತ್ತಾರೆ. **ಜಗತ್ತಿನಲ್ಲಿ ದಾನವು ದೊಡ್ಡದಿದೆ.** ಸತ್ಯ-ಯಥಾರ್ಥ ಭಕ್ತಿಯಿಂದ ಸ್ವಲ್ಪ ದಾನ ಕೊಡುವಂಥವನೂ ಭೋಗಭೂಮಿಯ ಭೋಗಗಳನ್ನು ಮೂರು ಪಲ್ಯದವರೆಗೆ ಭೋಗಿಸಿ ದೇವಲೋಕಕ್ಕೆ ಹೊರಟು ಹೋಗುತ್ತಾನೆ.

**ಜಗತ್ತಿನಲ್ಲಿ ಕೊಡುವುದೇ ಉಚ್ಚವಿದೆ.** ವಿನಯ ಸಹಿತ ಮತ್ತು ಸ್ನೇಹದ ವಚನ ಸಹಿತನಾಗಿ ದಾನ ಕೊಡಬೇಕು. ನಾನು ಇವನಿಗೆ ಉಪಕಾರ ಮಾಡುತ್ತಿದ್ದೇನೆಂದು ದಾನಿಯು ಅಭಿಮಾನ ಪಟ್ಟುಕ್ಕೊಳ್ಳಬಾರದು. ದಾನಿಯಂತೂ ಪಾತ್ರನನ್ನು ತನಗೆ ಉಪಕಾರ ಮಾಡುವಂಥವನೆಂದು ಮನ್ನಿಸುತ್ತಾನೆ. **ಲೋಭರೂಪದ ಹಾಳು ಬಾವಿಯಲ್ಲಿ ಬಿದ್ದವನನ್ನು ಅಲ್ಲಿಂದ ತೆಗೆಯುವ ಉಪಕಾರವನ್ನು ಪಾತ್ರರಲ್ಲದೆ ಯಾರು ಮಾಡುವರು ?** ಪಾತ್ರರಿಲ್ಲದೆ ಲೋಭಿಗಳ ಲೋಭವು ಬಿಟ್ಟು ಹೋಗುವುದಿಲ್ಲ. ಪಾತ್ರರಿಲ್ಲದೆ ಸಂಸಾರದಿಂದ ಉದ್ಧಾರ ಮಾಡುವಂಥ ದಾನವು ಹೇಗೆ ಸಂಭವಿಸುವುದು ? ಧರ್ಮಾತ್ಮ ಜನರಿಗಂತೂ ಪಾತ್ರರು ದೊರಕುವುದರ ಸಮಾನ ಮತ್ತು ದಾನ ಕೊಡುವುದರ ಸಮಾನ ಬೇರೆ ಯಾವ ಆನಂದವಿಲ್ಲ.

ಜ್ಞಾನ, ಧನ, ದೊಡ್ಡಸ್ತಿಕೆಗಳನ್ನು ಪಡೆದಿದ್ದರೆ ದಾನದಲ್ಲಿಯೇ ಪ್ರಯತ್ನಶೀಲರಿರಬೇಕು. ಷಟ್ಕಾಯ ಜೀವಗಳನ್ನು ರಕ್ಷಿಸಬೇಕು. ಅಭಕ್ಷ್ಯದ ತ್ಯಾಗ ಮಾಡಬೇಕು, ಅಧಿಕಾರಂಭವನ್ನು ಕಡಿಮೆ ಮಾಡಬೇಕು. ನೋಡಿ-ಶೋಧಿಸಿ ವಸ್ತು ಇಡಬೇಕು-ತೆಗೆದುಕೊಳ್ಳಬೇಕು. ಯತ್ನಾಚಾರವಿಲ್ಲದೆ ತಿರ್ಯಂಚಗಳಂತೆ ವರ್ತಿಸಬಾರದು. ಮನ-ವಚನ-ಕಾಯದಿಂದ ಯಾವ ಪ್ರಾಣಿಯನ್ನೂ ನೋಯಿಸಬಾರದು. ದುಃಖಿಗಳ ಮೇಲೆ ಕರುಣೆ ತೋರಬೇಕು. ಇದುವೇ ಗೃಹಸ್ಥರ ಅಭಯದಾನವಿದೆ. ಇದರಿಂದ ಸಂಸಾರದಲ್ಲಿ ಜನ್ಮ, ಮರಣ, ರೋಗ, ಶೋಕ, ದರಿದ್ರ, ವಿಯೋಗ ಮೊದಲಾದವುಗಳ ದುಃಖಕ್ಕೆ ಪಾತ್ರರಾಗಲಾರಿರಿ.

ವೀತರಾಗ ಸರ್ವಜ್ಞ ಭಗವಂತರು ಹೇಳಿದ ದಯಾಧರ್ಮದ ಪ್ರರೂಪಣೆ ಮಾಡುವಂಥ,ಸ್ಯಾದ್ವಾದರೂಪ **ಅನೇಕಾಂತದ ಪ್ರಕಾಶ ಮಾಡುವಂಥ, ನಯ-ಪ್ರಮಾಣದಿಂದ ತತ್ತ್ವಾರ್ಥಗಳ ಪ್ರರೂಪಣೆ ಮಾಡುವಂಥ ಶಾಸ್ತ್ರಗಳನ್ನು ತಮ್ಮ ಆತ್ಮನಿಗೆ ಓದುವ ಓದಿಸುವ ಮೂಲಕ ಆತ್ಮನ ಉದ್ಧಾರದ ಸಲುವಾಗಿ ಅನ್ಯರಿಗೆ ಮತ್ತು ತಮ್ಮ ಸಲುವಾಗಿ ದಾನ ಮಾಡಬೇಕು.** ತಮ್ಮ ಮಕ್ಕಳಿಗೆ ಜ್ಞಾನದಾನ ಮಾಡಬೇಕು, ಮತ್ತು ಅನ್ಯ ಧರ್ಮಬುದ್ಧಿಯುಳ್ಳ ಧರ್ಮದ ರುಚಿಯುಳ್ಳ ಇಚ್ಛುಕರಿಗೆ ಶಾಸ್ತ್ರದಾನ ಮಾಡಬೇಕು. ಯಾರು ಜ್ಞಾನದ ಇಚ್ಛುಕರಿದ್ದಾರೆ ಅವರು ಜ್ಞಾನದಾನದ ಸಲುವಾಗಿ ಪಾಠಶಾಲೆಯ ಸ್ಥಾಪನೆ ಮಾಡುತ್ತಾರೆ. ಏಕೆಂದರೆ **ಧರ್ಮದ ಸ್ತಂಭವು ಜ್ಞಾನವೇ ಇದೆ. ಎಲ್ಲಿ ಜ್ಞಾನದಾನವಾಗುವುದು ಅಲ್ಲಿ ಧರ್ಮ ಉಳಿಯುವುದು.** ಆದುದರಿಂದ ಜ್ಞಾನ ದಾನದಲ್ಲಿ ಪ್ರವರ್ತನೆ ಮಾಡಬೇಕು. ಜ್ಞಾನದಾನದ ಪ್ರಭಾವದಿಂದ ನಿರ್ಮಲ ಕೇವಲಜ್ಞಾನವು ಪ್ರಾಪ್ತವಾಗುತ್ತದೆ.

ಸಂಸಾರವನ್ನು ವೃದ್ಧಿಸುವಂಥ, ಹಿಂಸೆಯನ್ನು ಪುಷ್ಟ ಮಾಡುವಂಥ, ಮಿಥ್ಯಾ ಧರ್ಮದ ಪ್ರರೂಪಣೆ ಮಾಡುವಂಥ, ಯುದ್ಧಶಾಸ್ತ್ರ ಶೃಂಗಾರಶಾಸ್ತ್ರ ಮಾಯಾಚಾರದ ಶಾಸ್ತ್ರ ವೈದ್ಯಕೀಯ ಶಾಸ್ತ್ರ ರಸ-ರಸಾಯನ, ಮಂತ್ರ-ತಂತ್ರ, ಮಾರಣ-ವಶೀಕರಣ ಶಾಸ್ತ್ರಗಳು ಮಹಾಪಾಪದ ಪ್ರರೂಪಕವಿವೆ, ಅವನ್ನು ದೂರದಿಂದಲೇ ತ್ಯಾಗ ಮಾಡಿ ಬಿಡಬೇಕಾಗುವುದು.

**ರೋಗದ ನಾಶ ಮಾಡುವಂಥ ಪ್ರಾಸುಕ ಔಷಧದ ದಾನ ಮಾಡಬೇಕು. ಔಷಧ ದಾನವು ಅತ್ಯಂತ ಉಪಕಾರಕವಿದೆ.** ರೋಗಿಗಳಿಗೆ ಕೂಡಲೆ ಔಷಧವು ದೊರಕಿದರೆ ಅವರಿಗೆ ಮಹದಾನಂದವಿದೆ. ಸೇವೆ ಮಾಡಲು ಯಾರೂ ಇಲ್ಲದ ನಿರ್ಧನನಿಗೆ ಒಂದು ವೇಳೆ ಸಿದ್ಧ ಮಾಡಿದ ಔಷಧವು ದೊರೆತರೆ ಅವನು ತನಗೆ ನಿಧಿಯ ಲಾಭವಾದಂತೆ ಮನ್ನಿಸುತ್ತಾನೆ. ಔಷಧ ಸ್ವೀಕರಿಸಿ ಆರೋಗ್ಯವಂತನಾಗಿ ಹೋಗುತ್ತಾನೆ ಅವನು ಸಮಸ್ತ ವ್ರತ-ತಪ-ಸಂಯಮಗಳನ್ನು ಪಾಲಿಸುತ್ತಾನೆ, ಜ್ಞಾನದ ಅಭ್ಯಾಸ ಮಾಡುತ್ತಾನೆ, ಔಷಧ ದಾನದ ಮೂಲಕ ವಾತ್ಸಲ್ಯ, ಸ್ಥಿತಿಕರಣ, ನಿರ್ವಿಚಿಕಿತ್ಸೆ ಇತ್ಯಾದಿ ಅನೇಕ ಗುಣಗಳು ಪುಷ್ಟವಾಗಿ ಪ್ರಕಟವಾಗುತ್ತವೆ. ಔಷಧ ದಾನದ ಪ್ರಭಾವದಿಂದ ರೋಗರಹಿತ ದೇವಗಳ ವೈಕ್ರಿಯಿಕ ದೇಹದ ಪ್ರಾಪ್ತಿಯಾಗುತ್ತದೆ.

**ಸಮಸ್ತ ದಾನಗಳಲ್ಲಿ ಆಹಾರದಾನವು ಮುಖ್ಯವಿದೆ.** ಪ್ರಾಣಿಯ ಜೀವನ, ಶಕ್ತಿ, ಬಲ, ಬುದ್ಧಿ ಇತ್ಯಾದಿ ಗುಣಗಳೆಲ್ಲವು ಆಹಾರವಿಲ್ಲದೆ ನಷ್ಟವಾಗಿ ಹೋಗುತ್ತವೆ. ಯಾವನು ಆಹಾರದಾನ ಕೊಡುತ್ತಾನೆ ಅವನು ಪ್ರಾಣಿಗಳಿಗೆ ಜೀವನ, ಶಕ್ತಿ, ಬಲ, ಬುದ್ಧಿಗಳೆಲ್ಲವನ್ನು ಕೊಡುವನು. ಆಹಾರದಿಂದಲೇ ಮುನಿ ಹಾಗೂ ಶ್ರಾವಕನ ಧರ್ಮಗಳೆಲ್ಲವು ನಡೆಯುತ್ತವೆ. ಆಹಾರವಿಲ್ಲದೆ ಅವರು ಮಾರ್ಗಭ್ರಷ್ಟರಾಗುವರು. ಆಹಾರವೇ ಸಮಸ್ತ ರೋಗಗಳನ್ನು ನಾಶ ಮಾಡುವಂಥದ್ದಿದೆ. ಆಹಾರದಾನ ಕೊಡುವಂಥ ಮಿಥ್ಯಾದೃಷ್ಟಿಯೂ ಭೋಗಭೂಮಿಯಲ್ಲಿ ಕಲ್ಪವೃಕ್ಷಗಳಿಂದ ಪ್ರದತ್ತ ಹತ್ತು ಪ್ರಕಾರದ ಭೋಗಗಳನ್ನು ಅಸಂಖ್ಯಾತ ಕಾಲದವರೆಗೆ ಭೋಗಿಸುತ್ತಾನೆ, ಕ್ಷುಧೆ-ತೃಷೆಗಳ ಬಾಧೆಯಿಂದ ರಹಿತನಾಗಿ ಮೂರು ದಿನಕ್ಕೊಮ್ಮೆ ನೆಲ್ಲೀಕಾಯಿಯಷ್ಟು ಭೋಜನ ಮಾಡುತ್ತಾನೆ. ಎಲ್ಲ ಪ್ರಕಾರದ ದುಃಖ, ಕ್ಲೇಶಗಳಿಂದ ರಹಿತನಾಗಿ ಅಸಂಖ್ಯಾತ ವರ್ಷಗಳವರೆಗೆ ಸುಖ ಭೋಗಿಸಿ ದೇವಲೋಕದಲ್ಲಿ ಹೋಗಿ ಉತ್ಪನ್ನನಾಗುತ್ತಾನೆ. ಆದುದರಿಂದ ಧನ ಪಡೆದ ನಂತರ ನಾಲ್ಕು ಪ್ರಕಾರದ ದಾನದಲ್ಲಿ ಪ್ರವರ್ತನೆ ಮಾಡಬೇಕು. ನಿರ್ಧನರಿದ್ದವರು ಕೂಡ ತಮ್ಮ ಭೋಜನದೊಳಗಿಂದ ಎಷ್ಟು ಸಾಧ್ಯವಿದೆ ಅಷ್ಟು ದಾನ ಮಾಡಬೇಕು. ತಮಗೆ ಅರ್ಧಭೋಜನ ದೊರಕಿದರೂ ಅದರೊಳಗಿಂದ ಕೂಡ ಒಂದೆರಡು ತುತ್ತನ್ನು ಹಸಿದ ದುಃಖೀ ದೀನ ದರಿದ್ರರಿಗೆ ಕೊಡಬೇಕು.

**ಸಿಹಿ ನುಡಿಗಳನ್ನಾಡುವುದೂ ದೊಡ್ಡ ದಾನವಿದೆ.** ಆದರ, ಸತ್ಕಾರ, ವಿನಯ ಮಾಡುವದು, ಸ್ಥಾನ ಕೊಡುವುದು, ಕ್ಷೇಮ ವಿಚಾರಿಸುವುದೆಲ್ಲವು ಮಹಾದಾನವಿದೆ.ದುಷ್ಟ ವಿಕಲ್ಪಗಳ ತ್ಯಾಗ ಮಾಡಬೇಕು, ಪಾಪದಲ್ಲಿ ಪ್ರವೃತ್ತರಾಗಬಾರದು, ನಾಲ್ಕು ಕಷಾಯಗಳ ತ್ಯಾಗ ಮಾಡುವುದು, ವಿಕಥೆ ಮಾಡುವುದನ್ನು ನಿಲ್ಲಿಸಬೇಕು, ಇತರರ ಸತ್ಯ ಹಾಗೂ ಅಸತ್ಯ ದೋಷಗಳನ್ನೆಂದೂ ಹೇಳಬಾರದು. ಅನ್ಯಾಯದ ಧನ ಗ್ರಹಣ ಮಾಡುವುದನ್ನು ದೂರದಿಂದಲೇ ತ್ಯಜಿಸಬೇಕು.

**ಎಲೈ ಜ್ಞಾನಿ ಜನರೇ !** ತಮ್ಮ ಹಿತ ಬಯಸುತ್ತಿದ್ದರೆ ದುಃಖೀ ಜೀವರುಗಳಿಗೆ ದಾನ ಕೊಡಿರಿ, ಮತ್ತು ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮೊದಲಾದ ಗುಣಗಳ ಧಾರಕರಿಗೆ ಅತ್ಯಂತ ವಿನಯದಿಂದ ಸನ್ಮಾನ ಮಾಡಿರಿ. ಸಮಸ್ತ ಜೀವಗಳಕುರಿತು ಕರುಣೆ ಮಾಡಿರಿ. ಮಿಥ್ಯಾದರ್ಶನದ ತ್ಯಾಗ ಮಾಡಿರಿ. ರಾಗ-ದ್ವೇಷ-ಮೋಹ ಧಾರಕ ಕುದೇವ, ಆರಂಭ ಪರಿಗ್ರಹಧಾರಕ ವೇಷಧಾರೀ, ಕುಗುರು, ಹಿಂಸೆಯ ಪೋಷಕ ರಾಗ-ದ್ವೇಷಗಳನ್ನು ಪುಷ್ಟೀಕರಿಸುವಂಥ ಮಿಥ್ಯಾದೃಷ್ಟಿಗಳ ಶಾಸ್ತ್ರ-ಇವುಗಳ ವಂದನೆ, ಸ್ತುತಿ, ಪ್ರಶಂಸೆ ಮಾಡುವುದರ ತ್ಯಾಗ ಮಾಡಿರಿ. ಕ್ರೋಧ, ಮಾನ, ಮಾಯೆ, ಲೋಭಗಳ ನಿಗ್ರಹ ಮಾಡುವಲ್ಲಿ ತುಂಬ ಪ್ರಯತ್ನ ಮಾಡಿರಿ. ಕ್ಲೇಶದಾಯಕವಾದ ಅಪ್ರಿಯ ವಚನ, ಬೈಗುಳ ವಚನ, ಅವಮಾನದ ವಚನ, ಗರ್ವಯುಕ್ತ ವಚನಗಳನ್ನೆಂದೂ ಆಡಬೇಡಿರಿ. ಈ ಪ್ರಕಾರ ಇತರರಿಗೆ ದುಃಖದ ಕಾರಣ, ತಮ್ಮ ಯಶಸ್ಸನ್ನು ನಷ್ಟಮಾಡುವಂಥ ಪ್ರವರ್ತನೆಯನ್ನು ಮನ-ವಚನ-ಕಾಯದಿಂದ ತ್ಯಾಗಮಾಡಿರಿ. ಈ ಪ್ರಕಾರ ಸಂಕ್ಷೇಪದಲ್ಲಿ ತ್ಯಾಗ ಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ಆಕಿಂಚನ್ಯ ಧರ್ಮ

ಈಗ ಉತ್ತಮ ಆಕಿಂಚನ್ಯ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. ತನ್ನ **ಜ್ಞಾನ-ದರ್ಶನಮಯ ಸ್ವರೂಪದ ಹೊರತಾಗಿ ಅನ್ಯ ಕಿಂಚಿತ್ ಮಾತ್ರವೂ ನನ್ನದಿಲ್ಲ, ನಾನು ಬೇರೆ ಯಾವುದೇ ದ್ರವ್ಯದವನಿಲ್ಲವೆಂಬ ಅನುಭವವನ್ನು**

**ಆಕಿಂಚನ್ಯ ಧರ್ಮವೆಂದು ಹೇಳುತ್ತಾರೆ,** ಎಲೈ ಆತ್ಮನೇ ! ನಿನ್ನ ಆತ್ಮನನ್ನು ದೇಹದಿಂದ ಭಿನ್ನ, ಜ್ಞಾನಮಯ, ಅನುಪಮ, ಸ್ಪರ್ಶ, ರಸ, ಗಂಧ, ವರ್ಣರಹಿತ, ತನ್ನ ಸ್ವಾಧೀನ ಜ್ಞಾನಾನಂದ ಸುಖದಿಂದ ಪರಿಪೂರ್ಣ, ಪರಮ ಅತೀಂದ್ರಿಯ, ಭಯ ರಹಿತನೆಂದು ಅನುಭವ ಮಾಡುವುದು.

ಈ ದೇಹವಿದೆ ಅದು ನಾನಿಲ್ಲ, ದೇಹವಂತೂ ರಕ್ತ, ಮಾಂಸ, ಮೂಳೆ, ಚರ್ಮಮಯ, ಜಡ, ಅಚೇತನವಿದೆ. **ನಾನು ಈ ದೇಹದಿಂದ** ಅತ್ಯಂತ ಭಿನ್ನನಿದ್ದೇನೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದ ಜಾತಿ-ಕುಲಗಳು ದೇಹದ್ದಿವೆ, ಇವು ನನ್ನವುಗಳಲ್ಲ. ಸ್ತ್ರೀ-ಪುರುಷ-ನಪುಂಸಕಲಿಂಗಗಳು ದೇಹದ್ದಿವೆ, ನನ್ನವುಗಳಲ್ಲ. ಈ ಬಿಳಿತನ, ಕಪ್ಪುತನ, ದೊರೆತನ, ದರಿದ್ರತನ, ಸ್ವಾಮೀತನ, ಸೇವಕತನ, ಪಂಡಿತತನ, ಮೂರ್ಖತನ ಇತ್ಯಾದಿ ಸಮಸ್ತ ರಚನೆಯು ಕರ್ಮದ ಉದಯ ಜನಿತ ದೇಹದ್ದಿದೆ, **ನಾನಂತೂ ಜ್ಞಾಯಕನಿದ್ದೇನೆ. ಈ ದೇಹದ ಸಂಬಂಧವು ಅದು ನನ್ನ ಸ್ವರೂಪವಲ್ಲ,** ನನ್ನ ಸ್ವರೂಪವಂತೂ ಅನ್ಯ ದ್ರವ್ಯಗಳಿಂದ ಉಪಮಾತೀತವಾಗಿ ಅನುಪಮವಿದೆ.

ಶೀತ, ಉಷ್ಣ, ಮೃದು, ಕಠೋರ, ಸ್ನಿಗ್ಧ, ರೂಕ್ಷ, ಹಗುರು, ಭಾರವೆಂದು ಇವು ಎಂಟು ಪ್ರಕಾರದ ಸ್ಪರ್ಶಗಳಿದ್ದು ಅದು ನನ್ನ ರೂಪವಲ್ಲ, ಅದು ಪುದ್ಗಲದ ರೂಪವಿದೆ. ಈ ಸಿಹಿ, ಕಹಿ, ಹುಳಿ, ಉಪ್ಪು, ಒಗರು ಮೊದಲಾಗಿ ಐದು ಪ್ರಕಾರದ ರಸಗಳು, ಸುಗಂಧ-ದುರ್ಗಂಧವೆಂದು ಎರಡು ಪ್ರಕಾರದ ಗಂಧಗಳು ಮತ್ತು ಕಪ್ಪು, ಹಸಿರು, ಹಳದಿ, ಕೆಂಪು, ಬಿಳಿದು-ಎಂದು ಐದು ಪ್ರಕಾರದ ವರ್ಣಗಳು ನನ್ನ ಸ್ವರೂಪವಲ್ಲ, ಅದು ಪುದ್ಗಲದ ಸ್ವರೂಪವಿದೆ.

**ನನ್ನ ಸ್ವರೂಪವಂತೂ ಸುಖದಿಂದ ಪರಿಪೂರ್ಣವಿದೆ,** ಆದರೆ ಇಲ್ಲಿಕರ್ಮದ ಆಧೀನವಾದ ದುಃಖಗಳಿಂದ ವ್ಯಾಪ್ತನಾಗುತ್ತಿದ್ದೇನೆ. ನನ್ನ ಸ್ವರೂಪವು ಇಂದ್ರಿಯ ರಹಿತ ಅತೀಂದ್ರಿಯವಿದೆ. ಇಂದ್ರಿಯಗಳು ಪುದ್ಗಲಮಯ ಕರ್ಮದಿಂದ ಮಾಡಲ್ಪಟ್ಟಿವೆ. ನಾನು ಸಮಸ್ತ ಭಯರಹಿತ, ಅವಿನಾಶೀ, ಅಖಂಡ ಮೊದಲಾದ ಕೊನೆಯಿಲ್ಲದ, ಶುದ್ಧ ಜ್ಞಾನಸ್ವಭಾವನಿದ್ದೇನೆ; ಆದರೆ ಅನಾದಿಕಾಲದಿಂದ ಹೇಗೆ ಚಿನ್ನ ಮತ್ತು ಮಣ್ಣು ಬೆರೆತು ಹೋಗಿವೆ. ಹಾಗೆ ಕ್ಷೀರ-ನೀರದ ತೆರ ಅನಾದಿ ಕಾಲದಿಂದ ಕರ್ಮಗಳಿಂದ ಒಂದಾಗಿ ಬರುತ್ತಲಿದ್ದೇನೆ. **ಮಿಥ್ಯಾತ್ವನಾಮದ ಕರ್ಮದ ಉದಯದಿಂದ ತನ್ನ ಸ್ವರೂಪದ ಜ್ಞಾನದಿಂದ ರಹಿತನಾಗಿ ದೇಹ ಮೊದಲಾದ ಪರದ್ರವ್ಯಗಳನ್ನು ತನ್ನ ಸ್ವರೂಪವೆಂದು ತಿಳಿದುಕೊಂಡು ನಾನು ಅನಂತ ಕಾಲದಿಂದಪರಿಭ್ರಮಣ ಮಾಡಿದ್ದೇನೆ. ಈಗ ಯಾವುದೇ ಆವರಣ ಮೊದಲಾದವು ಒಂದಿಷ್ಟು ದೂರವಾಗುವುದರಿಂದ ಶ್ರೀ ಗುರುಗಳ ಮೂಲಕ ಉಪದೇಶಿಸಲ್ಪಟ್ಟ ಪರಮಾಗಮದ ಪ್ರಸಾದದಿಂದ ನನ್ನ ಹಾಗೂ ಪರದ ಸ್ವರೂಪದ ಜ್ಞಾನವಾಗಿದೆ.**

ಯಾವ ಪ್ರಕಾರ ವ್ಯಾಪಾರಿಯು ಪಂಚವರ್ಣದ ರತ್ನಗಳಿಂದ ಕಟ್ಟಿದ ಆಭರಣದಲ್ಲಿ ಗುರುಗಳ ಕೃಪೆಯಿಂದ ಮತ್ತು ನಿರಂತರ ಅಭ್ಯಾಸದಿಂದ ದೊರಕಿದ ಟಂಕದವರ್ಣವನ್ನು ಮತ್ತು ರತ್ನದ ವರ್ಣವನ್ನು, ತೂಕವನ್ನು ಹಾಗೂ ಬೆಲೆಯನ್ನು ಬೇರೆ-ಬೇರೆಯಾಗಿ ತಿಳಿದುಕೊಳ್ಳುತ್ತಾನೆ; ಅದೇ ಪ್ರಕಾರ ನಿರಂತರ ಪರಮಾಗಮದ ಅಭ್ಯಾಸದಿಂದ ನನ್ನ ಜ್ಞಾನಸ್ವಭಾವದಲ್ಲಿ ಬೆರೆತ ರಾಗ, ದ್ವೇಷ, ಮೋಹ, ಕಾಮ ಮೊದಲಾದ ಮಲವನ್ನು ಭಿನ್ನವಾಗಿ ತಿಳಿದಿದ್ದೇನೆ; ಮತ್ತು ನನ್ನ ಜ್ಞಾಯಕ ಸ್ವಭಾವವನ್ನು ಭಿನ್ನವಾಗಿ ತಿಳಿದಿದ್ದೇನೆ. ಆದುದರಿಂದ ಈಗ ಯಾವ ಪ್ರಕಾರದಿಂದಲೂ ರಾಗ-ದ್ವೇಷ-ಮೋಹ ಮೊದಲಾದ ಭಾವ ಕರ್ಮಗಳಲ್ಲಿ ಹಾಗೂ ಕರ್ಮಗಳ ಉದಯದಿಂದ ಉತ್ಪನ್ನವಾದ ನಶ್ವರ ಶರೀರ, ಪರಿವಾರ, ಧನ, ಸಂಪತ್ತು ಮೊದಲಾದ ಪರಿಗ್ರಹದಲ್ಲಿ ನನಗೆ ಮಮತ್ವ ಬುದ್ಧಿಯು ಪುನಃ ಅನ್ಯ ಜನ್ಮದಲ್ಲಿ ಕೂಡ ಉತ್ಪನ್ನವಾಗದಿರಲೆಂಬ ರೀತಿಯಿಂದ ಆಕಿಂಚನ್ಯ ಭಾವನೆಯನ್ನು ಭಾವಿಸುತ್ತೇನೆ.

ಈ ಆಕಿಂಚನ್ಯ ಭಾವನೆಯು ಅನಾದಿಕಾಲದಿಂದ ನನಗೆ ಉತ್ಪನ್ನವಾಗಿಲ್ಲ. ಸಮಸ್ತ ಪರ್ಯಾಯಗಳನ್ನು ನನ್ನ ರೂಪವೆಂದು ಮನ್ನಿಸುತ್ತಿದ್ದೆನು, ಮತ್ತು ರಾಗ-ದ್ವೇಷ-ಮೋಹ-ಕಾಮ-ಕ್ರೋಧ ಮೊದಲಾದ ಭಾವಗಳು ಕರ್ಮಕೃತ ವಿಕಾರವಿದ್ದು ಅವನ್ನು ನನ್ನ ರೂಪವೆಂದು ಅನುಭವ ಮಾಡಿ ವಿಪರೀತ ಭಾವ ಮಾಡುತ್ತ ಅವುಗಳಿಂದ ಘೋರ ಕರ್ಮವನ್ನೂ ಕಟ್ಟಿಕೊಂಡೆನು. ಈಗ ನಾನು ಆಕಿಂಚನ್ಯ ಭಾವನೆಯಲ್ಲಿ ವಿಘ್ನಗಳ ನಾಶ ಮಾಡುವಂಥ ಪಂಚ ಪರಮಗುರುಗಳ ಆಶ್ರಯದಿಂದ ನಿರ್ವಿಘ್ನ ಆಕಿಂಚನತೆಯನ್ನೇ ಬಯಸುತ್ತೇನೆ, ಮೂರು ಲೋಕದಲ್ಲಿ ಯಾವ ಅನ್ಯ ವಸ್ತುವನ್ನು ಬಯಸುವುದಿಲ್ಲ. ಈ

ಆಕಿಂಚನತೆಯೇ ಸಂಸಾರ ಸಮುದ್ರದಿಂದ ದಡತಲುಪಿಸುವ ಜಹಜಾಗಿ ಹೋಗುವುದು. ಪರಿಗ್ರಹವನ್ನು ಮಹಾ ದುಃಖರೂಪಿ ಹಾಗೂ ಬಂಧದ ಕಾರಣವೆಂದು ತಿಳಿದುಕೊಂಡು ಬಿಟ್ಟು ಕೊಡುವುದು ಅದು ಆಕಿಂಚನ್ಯ ಧರ್ಮವಿದೆ.

ಆಕಿಂಚನತೆಯಿರುವವರಿಗೆ ಪರಿಗ್ರಹದಲ್ಲಿ ಇಚ್ಛೆಯುಳಿಯುವುದಿಲ್ಲ, ಅವರಿಗೆ ಆತ್ಮಧ್ಯಾನದಲ್ಲಿ ಲೀನತೆಯಾಗುತ್ತದೆ. ದೇಹಾದಿಗಳಲ್ಲಿ ಹಾಗೂ ಬಾಹ್ಯ ವೇಷದಲ್ಲಿ ತಮ್ಮತನ ಉಳಿಯುವುದಿಲ್ಲ, ಮತ್ತು ತಮ್ಮ ಸ್ವರೂಪವಾದ ರತ್ನತ್ರಯದಲ್ಲಿಯೇ ಪ್ರವೃತ್ತಿಯಾಗುತ್ತದೆ. ಇಂದ್ರಿಯ ವಿಷಯಗಳಲ್ಲಿ ಧಾವಿಸುತ್ತಿರುವ ಮನಸ್ಸು ನಿಂತು ಬಿಡುತ್ತದೆ, ದೇಹದ ಸ್ನೇಹವು ಹೊರಟು ಹೋಗುತ್ತದೆ. ಸಾಂಸಾರಿಕ ದೇವಗಳ ಸುಖ, ಇಂದ್ರ-ಅಹಮಿಂದ್ರ-ಚಕ್ರವರ್ತಿಯ ಸುಖಗಳೂ ದುಃಖರೂಪವಾಗಿ ತೋರುತ್ತವೆ; ಅವುಗಳ ಇಚ್ಛೆ ಹೇಗೆ ಮಾಡುವರು ? ಯಾವ ಪ್ರಕಾರ ಮಮತ್ವ ರಹಿತರಾಗಿ ಜೀರ್ಣ ತೃಣವನ್ನು ಬಿಟ್ಟು ಕೊಡುವಲ್ಲಿ ವಿಚಾರ ಮಾಡಬೇಕಾಗುವುದಿಲ್ಲ, ಅದೇ ಪ್ರಕಾರ ಪರಿಗ್ರಹ, ಚಿನ್ನ, ರತ್ನ, ರಾಜ್ಯ, ಐಶ್ವರ್ಯ, ಸ್ತ್ರೀ-ಪುತ್ರಾದಿಕರನ್ನು ಬಿಟ್ಟು ಬಿಡುತ್ತಾರೆ. ಆಕಿಂಚನ್ಯವಂತೂ ಪರಮ ವೀತರಾಗತೆಯಿದೆ. ಯಾರಿಗೆ ಸಂಸಾರದ ದಡವು ಹತ್ತಿರ ಬಂದಿದೆ. ಅವರಿಗೇನೇ ಈ ಆಕಿಂಚನ್ಯ ಧರ್ಮವಾಗುತ್ತದೆ.

**ಯಾರಿಗೆ ಆಕಿಂಚನತೆಯಾಗುತ್ತದೆ ಅವರಿಗೆ ಪರಮಾರ್ಥವಾದ ಆ ಶುದ್ಧ ಆತ್ಮನ ವಿಚಾರಮಾಡುವ ಶಕ್ತಿಯು ಪ್ರಕಟವಾಗುತ್ತದೆ.** ಪಂಚ ಪರಮೇಷ್ಠಿಗಳಲ್ಲಿ ಭಕ್ತಿಯಾಗುತ್ತದೆ, ದುಷ್ಟವಿಕಲ್ಪಗಳ ನಾಶವಾಗುತ್ತದೆ, ಇಷ್ಟ-ಅನಿಷ್ಟ ಭೋಜನದಲ್ಲಿ ರಾಗ-ದ್ವೇಷಗಳು ನಷ್ಟವಾಗಿ ಹೋಗುತ್ತವೆ,ಕೇವಲ ಉದರರೂಪದ ಹೊಂಡವನ್ನು ತುಂಬುವುದಿರುತ್ತದೆ, ಇತರ ಸರಸ-ನೀರಸ ಭೋಜನದ ವಿಚಾರವು ಹೊರಟು ಹೋಗುತ್ತದೆ.

ಸಮಸ್ತ ಧರ್ಮಗಳಲ್ಲಿ ಮುಖ್ಯವಾದ ಆಕಿಂಚನ್ಯವೇ ಮೋಕ್ಷದ ನಿಕಟ ಸಮಾಗಮ ಮಾಡಿಸುವಂಥದ್ದಿದೆ. ಅನಾದಿ ಕಾಲದಿಂದ ಎಷ್ಟು ಸಿದ್ಧರಾಗಿದ್ದಾರೆ. ಅವರೆಲ್ಲರು ಅಕಿಂಚನ್ಯ ಧರ್ಮದಿಂದಲೇ ಆಗಿದ್ದಾರೆ, ಮತ್ತು ಮುಂದೆಯೂ ಕೂಡ ಯಾವ ತೀರ್ಥಂಕರ ಮೊದಲಾದ ಸಿದ್ಧರಾಗುತ್ತಾರೆ ಅವರೆಲ್ಲರು ಆಕಿಂಚನ್ಯ ಧರ್ಮದಿಂದಲೇ ಆಗುವರು. ಆಕಿಂಚನ್ಯ ಧರ್ಮವು ಮುಖ್ಯರೂಪದಿಂದ ಸಾಧುಗಳಿಗೇ ಆಗುತ್ತಿದ್ದರೂ ಏಕದೇಶ ಧರ್ಮದ ಧಾರಕರಾದ ಗೃಹಸ್ಥರಿಗೂ ಆ ಆಕಿಂಚನ್ಯ ಧರ್ಮವನ್ನು ಗ್ರಹಣ ಮಾಡುವ ಇಚ್ಛೆಯಿರುತ್ತದೆ. ಯಾವನು ಗೃಹಾಚಾರದಲ್ಲಿ ಮಂದರಾಗಿಯಾಗಿ ಅತ್ಯಂತ ವಿರಕ್ತನಿರುತ್ತಾನೆ, ಪ್ರಮಾಣರೂಪ ಪರಿಗ್ರಹವಿಡುತ್ತಾನೆ, ಭವಿಷ್ಯದ ಇಚ್ಛಾರಹಿತನಿದ್ದಾನೆ, ಅನ್ಯಾಯದ ಧನ ಪರಿಗ್ರಹವನ್ನೆಂದೂ ಗ್ರಹಣ ಮಾಡುವುದಿಲ್ಲ, ಅಲ್ಪ ಪರಿಗ್ರಹದಲ್ಲಿ ಅತ್ಯಂತ ಸಂತುಷ್ಟನಾಗಿರುತ್ತಾನೆ, ಪರಿಗ್ರಹವನ್ನು ದುಃಖ ಕೊಡುವಂಥದು ಮತ್ತು ಅತ್ಯಂತ ಅಸ್ಥಿರವೆಂದು ಮನ್ನಿಸುತ್ತಾನೆ ಅವನಿಗೆ ಆಕಿಂಚನ್ಯ ಭಾವನೆಯಿರುತ್ತದೆ. ಈ ಪ್ರಕಾರ ಆಕಿಂಚನ್ಯ ಧರ್ಮದ ವರ್ಣನೆ ಮಾಡಲಾಯಿತು.

## ಉತ್ತಮ ಬ್ರಹ್ಮಚರ್ಯ ಧರ್ಮ

ಈಗ ಉತ್ತಮ ಬ್ರಹ್ಮಚರ್ಯ ಧರ್ಮದ ಸ್ವರೂಪದ ವರ್ಣನೆ ಮಾಡುತ್ತಾರೆ. **ಸಮಸ್ತ ವಿಷಯಗಳಲ್ಲಿನ ಅನುರಾಗವನ್ನು ಬಿಟ್ಟುಕೊಟ್ಟು ಬ್ರಹ್ಮ ಎಂದರೆ ಜ್ಞಾಯಕ ಸ್ವಭಾವದ ಆತ್ಮನಲ್ಲಿ ಚರ್ಯೆ ಎಂದರೆ ಪ್ರವೃತ್ತಿ ಮಾಡುವುದು ಅದು ಬ್ರಹ್ಮಚರ್ಯವಿದೆ.**

ಎಲೈ ಜ್ಞಾನೀಜನಗಳೇ ! ಈ ಬ್ರಹ್ಮಚರ್ಯನಾಮದ ವ್ರತವು ಅತ್ಯಂತ ದುರ್ಧರವಿದೆ. ಪಾಪ ಎಲ್ಲರೂ ವಿಷಯಗಳ ವಶರಾಗುವುದರಿಂದ ಆತ್ಮಜ್ಞಾನದಿಂದ ರಹಿತರಿದ್ದಾರೆ, ಅವರು ಅದನ್ನು ಧಾರಣ ಮಾಡುವಲ್ಲಿ ಸಮರ್ಥರಿಲ್ಲ. ಯಾರು ಮನುಷ್ಯರಲ್ಲಿ ದೇವ ಸಮಾನರಿದ್ದಾರೆ ಅವರು ಬ್ರಹ್ಮಚರ್ಯವನ್ನು ಧಾರಣ ಮಾಡುವಲ್ಲಿ ಸಮರ್ಥರಿದ್ದಾರೆ. ಅನ್ಯ ಹೀನರು ವಿಷಯಗಳಲ್ಲಿ ಲಾಲಸೆಯುಳ್ಳವರು ಬ್ರಹ್ಮಚರ್ಯ ಧಾರಣ ಮಾಡುವಲ್ಲಿ ಸಮರ್ಥರಿಲ್ಲ. ಈ ಬ್ರಹ್ಮಚರ್ಯವ್ರತವು ಮಹಾದುರ್ಧರವಿದೆ. ಯಾರಿಗೆ ಬ್ರಹ್ಮಚರ್ಯವಿರುತ್ತದೆ ಅವರಿಗೆ ಸಮಸ್ತ ಇಂದ್ರಿಯಗಳನ್ನು ಹಾಗೂ ಕಷಾಯಗಳನ್ನು ಜಯಿಸುವುದು ಸುಲಭವಿದೆ.

ಎಲೈ ಭವ್ಯರೇ ! ಸ್ತ್ರೀಯರ ಮುಖದಲ್ಲಿ ಅನುರಾಗವುಳ್ಳ ಆ ಮನರೂಪದ ಮದೋನ್ಮತ್ತ ಆನೆಯನ್ನು ವೈರಾಗ್ಯ ಭಾವನೆಯಲ್ಲಿ ಕಟ್ಟಿಹಾಕಿ, ಮತ್ತು ವಿಷಯಗಳ ಇಚ್ಛೆಯ ಅಭಾವ ಮಾಡಿ ದುರ್ಧರ ಬ್ರಹ್ಮಚರ್ಯ ಧಾರಣ ಮಾಡಿರಿ. ಆ

ಕಾಮಭಾವವು ಚಿತ್ತರೂಪದ ಭೂಮಿಯಲ್ಲಿ ಉತ್ಪನ್ನವಾಗುತ್ತದೆ. ಕಾಮದಿಂದ ಪೀಡಿತನಾದ ಮೇಲೆ ಆ ಜೀವನು ಮಾಡಲು ಯೋಗ್ಯವಿಲ್ಲದಂಥ ಪಾಪವನ್ನೂ ಮಾಡಿ ಬಿಡುತ್ತಾನೆ. ಆ ಕಾಮವು ಮನಸ್ಸಿನ ಮಂಥನ ಮಾಡುತ್ತದೆ, ಮನದ ಜ್ಞಾನವನ್ನು ನಷ್ಟಮಾಡಿ ಬಿಡುತ್ತದೆ, ಇದೇ ಕಾರಣದಿಂದ ಅದನ್ನು **ಮನಮಥ**ವೆಂದು ಹೇಳುತ್ತಾರೆ. ಜ್ಞಾನವು ನಷ್ಟವಾಗಿ ಹೋದ ನಂತರವೇ ಸ್ತ್ರೀಯರ ಮಹಾನ ದುರ್ಗಂಧಯುಕ್ತ ನಿಂದ್ಯ ಶರೀರವನ್ನು ರಾಗಿಯಾಗಿ ಸೇವನೆ ಮಾಡುತ್ತಾನೆ.

ಕಾಮಭಾವದಿಂದ ಕುರುಡನಾಗಿ ಹೋದ ಮೇಲೆ ಮಹಾ ಅನೀತಿಗೆ ಪ್ರಾಪ್ತನಾಗಿ ತನ್ನ ಹಾಗೂ ಪರರ ನಾರಿಯರ ವಿಚಾರವನ್ನೇ ಮಾಡುವುದಿಲ್ಲ. ಈ ಅನ್ಯಾಯದಿಂದ ನಾನು ಇಲ್ಲಿಯೇ ಸತ್ತು ಹೋಗಬಹುದು, ದೊರೆಯ ತೀವ್ರ ದಂಡನೆಗೆ ಗುರಿಯಾಗಬೇಕಾಗುವುದು, ಯಶಸ್ಸು ಮಲಿನವಾಗಿ ಹೋಗುವುದು, ಧರ್ಮದಿಂದ ಭ್ರಷ್ಟನಾಗಿ ಹೋಗುವೆನು, ಸತ್ಯಾರ್ಥ ಬುದ್ಧಿಯು ನಷ್ಟವಾಗಿ ಹೋಗುವುದು, ಸತ್ತು ನರಕದಲ್ಲಿ ಅಸಂಖ್ಯಾತ ಕಾಲದವರೆಗೆ ಘೋರ ದುಃಖ ಭೋಗಿಸಬೇಕಾಗುವುದು, ಪುನಃ ಅಸಂಖ್ಯಾತ ಕಾಲದವರೆಗೆ ತಿರ್ಯಂಚ ಗತಿಗಳಲ್ಲಿ ಅನೇಕ ಪ್ರಕಾರದ ದುಃಖ ಸಹಿಸಬೇಕಾಗುವದು- ಪುನಃ ಕುಮನುಷ್ಯರಲ್ಲಿ ಕುರುಡ, ಕುಂಟ, ದರಿದ್ರ, ಇಂದ್ರಿಯವಿಕಲ, ಕಿವುಡ, ಮೂಗ, ಚಾಂಡಾಲ, ಭಿಲ್ಲ, ಚರ್ಮಕಾರರ ನೀಚ ಕುಲಗಳಲ್ಲಿ ಉತ್ಪನ್ನವಾಗಿ, ಪುನಃ ತ್ರಸ, ಸ್ಥಾವರಗಳಲ್ಲಿ ಅನಂತಕಾಲ ಪರಿಭ್ರಮಣ ಮಾಡಬೇಕಾಗುವುದೆಂಬ ಸತ್ಯ ವಿಚಾರವು ಕಾಮಿಗಳ ಮನಸ್ಸಿನಲ್ಲಿ ಉತ್ಪನ್ನವಾಗುವುದಿಲ್ಲ.

**'ಕಾಮ'** ನಾಮದ ಅರ್ಥವನ್ನು ಜಗತ್ತಿನ ಜನರಿಗೆ ಸ್ಪಷ್ಟವಾಗಿ ಹೇಳುತ್ತಾರೆ. 'ಕಂ' ಎಂದರೆ ಸುಳ್ಳು 'ದರ್ಪ' ಎಂದರೆ ಗರ್ವವನ್ನುತ್ಪನ್ನ ಮಾಡುತ್ತದೆ, ಅದರಿಂದ **ಕಂದರ್ಪ**ವೆಂದು ಹೇಳುತ್ತಾರೆ. ಅತಿ ಕಾಮನೆ ಎಂದರೆ ಇಚ್ಛೆಯನ್ನುತ್ಪನ್ನ ಮಾಡಿ ದುಃಖ ಮಾಡುತ್ತದೆ ಅದರಿಂದ ಅದನ್ನು **ಕಾಮ**ವೆಂದು ಹೇಳುತ್ತಾರೆ. ಅದರ ಕಾರಣ ಅನೇಕ ಜೀವಗಳು ತಿರ್ಯಂಚ ಹಾಗೂ ಮನುಷ್ಯ ಗತಿಗಳಲ್ಲಿ ಹೊಡೆದಾಡಿ ಸತ್ತು ಹೋಗುತ್ತವೆ, ಅದರಿಂದ ಅದನ್ನು **ಮಾರ**ವೆಂದು ಹೇಳುತ್ತಾರೆ. ಅದು ಸಂವರದ ವೈರಿಯಿರುವುದರಿಂದ ಅದನ್ನು **ಸಂವರಾರಿ**ಯೆಂದು ಹೇಳುತ್ತಾರೆ. ಬ್ರಹ್ಮ ಎಂದರೆ ತಪ-ಸಂಯಮಗಳಿಂದ ಅದು ಸೂ ಎಂದರೆ ಚಂಚಲಗೊಳಿಸುತ್ತದೆ ಅದರಿಂದ **ಬ್ರಹ್ಮಸೂ**ವೆಂದು ಹೇಳುತ್ತಾರೆ. ಈ ಪ್ರಕಾರ ಅನೇಕ ದೋಷಗಳ ಹೆಸರೆಂದೂ ಹೇಳುತ್ತಾರೆ. ಹೀಗೆ ತಿಳಿದುಕೊಂಡು ಮನ-ವಚನ-ಕಾಯದಿಂದ ಅನುರಾಗಪೂರ್ವಕವಾಗಿ ಬ್ರಹ್ಮಚರ್ಯವ್ರತವನ್ನು ಪಾಲಿಸಬೇಕು. ಬ್ರಹ್ಮಚರ್ಯ ಸಹಿತವಿದ್ದ ನಂತರವೇ ಸಂಸಾರದಿಂದ ಪಾರಾಗಿ ಹೋಗಬಹುದಾಗಿದೆ.

**ಬ್ರಹ್ಮಚರ್ಯವಿಲ್ಲದೆ ಸಮಸ್ತ ವ್ರತ -ತಪಗಳು ನಿಸ್ಸಾರವಿವೆ.** ಬ್ರಹ್ಮಚರ್ಯವಿಲ್ಲದ ಸಮಸ್ತ ಕಾಯಕ್ಲೇಶವು ನಿಷ್ಫಲವಿವೆ. ಬಾಹ್ಯ ಸ್ಪರ್ಶನೇಂದ್ರಿಯದ ಸುಖದಿಂದ ವಿರಕ್ತರಾಗಿ, ತಮ್ಮ ಅಂತರಂಗ ಪರಮಾತ್ಮ ಸ್ವರೂಪನಾದ ಯಾವ ಆತ್ಮನಿದ್ದಾನೆ ಅವನ ಉಜ್ವಲತೆಯನ್ನು ನೋಡಬೇಕು. ತಮ್ಮ ಆತ್ಮನು ಕಾಮದ ರಾಗದಿಂದ ಮಲಿನನಾಗಿ ಹೋಗದ ಹಾಗೆಯೇ ಯತ್ನ ಮಾಡಬೇಕು. ಬ್ರಹ್ಮಚರ್ಯದಿಂದ ಉಭಯಲೋಕಗಳು ಶೋಭಾಯಮಾನವಾಗುತ್ತವೆ.

ಶೀಲದ ರಕ್ಷಣೆ ಬಯಸುತ್ತಿದ್ದರೆ, ಉಜ್ವಲ ಯಶಸ್ಸು ಬಯಸುತ್ತಿದ್ದರೆ, ಧರ್ಮ ಬಯಸುತ್ತಿದ್ದರೆ, ತಮ್ಮ ಪ್ರತಿಷ್ಠೆ ಬಯಸುತ್ತಿದ್ದರೆ, ಚಿತ್ತದಲ್ಲಿ ಸ್ತ್ರೀಯರ ಕಥೆ ಕೇಳಬೇಡಿರಿ, ಹೇಳಬೇಡಿರಿ, ಸ್ತ್ರೀಯರ ಹಾವ-ಭಾವ, ನಾಟ್ಯ-ದೃಶ್ಯಗಳನ್ನು ನೋಡಬೇಡಿರೆಂಬ ಪರಮಾಗಮದ ಬೋಧವನ್ನು ಚಿತ್ತದಲ್ಲಿ ಧಾರಣ ಮಾಡಬೇಕು. ಚಲನಚಿತ್ರ ನೋಡಿದರೆ ಪರಿಣಾಮ ಕೆಡುತ್ತದೆ. ವ್ಯಭಿಚಾರಿ ಪುರುಷರ ಸಂಗತಿಯ ತ್ಯಾಗ ಮಾಡುವುದು. ಗಾಂಜ, ತಂಬಾಕು ಮೊದಲಾದ ಮಾದಕ ವಸ್ತುಗಳ ಭಕ್ಷಣ ಮಾಡಬಾರದು. ಸುಗಂಧದೆಣ್ಣೆ ಪುಷ್ಪಮಾಲೆ ಮೊದಲಾದ ಶೀಲಭಂಗ, ವ್ರತಭಂಗದ ಕಾರಣಗಳನ್ನು ದೂರದಿಂದಲೇ ತ್ಯಾಗ ಮಾಡಬೇಕು.

ಗೀತ, ನೃತ್ಯ ಮೊದಲಾದ ಕಾಮೋದ್ದೀಪಕ ಕಾರಣಗಳ ಪರಿಹಾರ ಮಾಡುವುದು, ರಾತ್ರಿ ಭೋಜನ ಬಿಡಬೇಕು, ವಿಕಾರವನ್ನುಂಟು ಮಾಡುವಂಥ ಲೋಕವಿರುದ್ಧವಾದ ವಸ್ತ್ರಾಭರಣಗಳನ್ನು ಧರಿಸಬಾರದು. ಏಕಾಂತದಲ್ಲಿ ಯಾವುದೇ ಸ್ತ್ರೀಯ ಸಂಪರ್ಕದಲ್ಲಿ ಬರಬಾರದು. ರಸನೇಂದ್ರಿಯದ ಲೋಲುಪತೆಯನ್ನು ತ್ಯಜಿಸಬೇಕು, ಜಿಹ್ವೇಂದ್ರಿಯದ ಲಂಪಟತೆಯ ಜತೆ ಸಾವಿರಾರು ದೋಷಗಳು ಬರುತ್ತವೆ; ಅದರಿಂದಲೇ ಸಂಪೂರ್ಣ ಉಚ್ಚತೆ, ಯಶಸ್ಸು, ಧರ್ಮ ನಷ್ಟವಾಗಿ ಹೋಗುತ್ತವೆ; ಸಮತಾಭಾವನೆಯನ್ನಂತೂ ಅದು ಸ್ವಪ್ನದಲ್ಲೂ ಸ್ಮರಿಸುವುದಿಲ್ಲ, ಲೋಕವ್ಯವಹಾರವು ಭ್ರಷ್ಟವಾಗಿ ಹೋಗುತ್ತದೆ,

ಬ್ರಹ್ಮ ಚರ್ಯವು ಭಂಗವಾಗಿ ಹೋಗುತ್ತದೆ. ಆದುದರಿಂದ ಆತ್ಮನ ಹಿತದ ಇಚ್ಛೆಯುಳ್ಳವರು ಒಂದು ಬ್ರಹ್ಮಚರ್ಯದ ರಕ್ಷಣೆ ಮಾಡಬೇಕು. ಈ ಪ್ರಕಾರ ಬ್ರಹ್ಮಚರ್ಯ ಧರ್ಮದ ವರ್ಣನೆ ಮಾಡಲಾಯಿತು.

ಈ ಪ್ರಕಾರ ಇವು ಹತ್ತು ಧರ್ಮದ ಲಕ್ಷಣಗಳನ್ನು ಸರ್ವಜ್ಞ ಭಗವಂತರು ಹೇಳಿದ್ದಾರೆ. ಯಾರಲ್ಲಿ ಈ ಹತ್ತು ಚಿಹ್ನೆಗಳು ಪ್ರಕಟವಾಗುತ್ತವೆ ಅವರಲ್ಲಿ ಧರ್ಮವಿದೆಯೆಂದು ತಿಳಿಯುವುದು. ಉತ್ತಮ ಕ್ಷಮೆ ಮೊದಲಾದ ಧರ್ಮಗಳನ್ನು ಘಾತ ಮಾಡುವಂಥ ವೈರಿಗಳು ಕ್ರೋಧಾದಿಗಳಿವೆ. ಅವುಗಳಿಂದ ಅನೇಕ ದೋಷಗಳು ಉತ್ಪನ್ನವಾಗುತ್ತಿರುವುದರಿಂದ ಅವುಗಳನ್ನು ದೂರ ಮಾಡಬೇಕು ಮತ್ತು ಕ್ಷಮೆ ಮೊದಲಾದುವಲ್ಲಿ ಅನೇಕ ಗುಣಗಳಿರುವುದರಿಂದ ಪುನಃಪುನಃ ಅವುಗಳ ಭಾವನೆ ಭಾವಿಸಬೇಕು.

**ಕ್ಷಮಾ ಧರ್ಮ :** ಕ್ಷಮೆಯು ಅದು ತಮ್ಮ ಪ್ರಾಣಗಳ ರಕ್ಷಕವಿದೆ, ಯಶದ ರಕ್ಷಕವಿದೆ, ಧನದ ರಕ್ಷಕವಿದೆ, ಧರ್ಮದ ರಕ್ಷಕವಿದೆ. ವ್ರತ, ಶೀಲ, ಸಂಯಮ, ಸತ್ಯದ ರಕ್ಷಣೆಯು ಒಂದು ಕ್ಷಮೆಯಿಂದಲೇ ಆಗುತ್ತದೆ. ಕಲಹದ ಘೋರ ದುಃಖಗಳಿಂದ ತಮ್ಮ ರಕ್ಷಣೆಯನ್ನು ಒಂದು ಕ್ಷಮೆಯೇ ಮಾಡುತ್ತದೆ. ಸಮಸ್ತ ಉಪದ್ರವ ಹಾಗೂ ವೈರದಿಂದ ಕ್ಷಮಯೇ ರಕ್ಷಣೆ ಮಾಡುತ್ತದೆ.

ಕ್ರೋಧವು ಅದು ಮೂಲಸಹಿತ ಧರ್ಮ, ಅರ್ಥ, ಕಾಮ, ಮೋಕ್ಷದ ನಾಶಮಾಡುವಂಥದ್ದಿದೆ. ಕ್ರೋಧಿಯು ತನ್ನ ಪ್ರಾಣಗಳ ನಾಶವನ್ನೇ ಮಾಡಿಕೊಳ್ಳುತ್ತಾನೆ. ಕ್ರೋಧದಿಂದ ಪ್ರಚಂಡ ರೌದ್ರ ಧ್ಯಾನವು ಪ್ರಕಟವಾಗುತ್ತದೆ. ಕ್ರೋಧಿಯು ಒಂದು ಕ್ಷಣ ಮಾತ್ರದಲ್ಲಿ ಆತ್ಮಘಾತ ಮಾಡಿಕೊಂಡು ಸತ್ತು ಹೋಗುತ್ತಾನೆ. ಕೆರೆ, ಬಾವಿ, ನದೀ, ಸಮುದ್ರಗಳಲ್ಲಿ ಮುಳುಗಿ ಸತ್ತು ಹೋಗುತ್ತಾನೆ. ಶಸ್ತ್ರಘಾತ, ವಿಷಭಕ್ಷಣ, ನೇಣುಹಾಕಿಕೊಳ್ಳುವುದು ಮೊದಲಾದ ಅನೇಕ ಕುಕರ್ಮ ಮಾಡಿ ಆತ್ಮಘಾತ ಮಾಡಿಕೊಳ್ಳುತ್ತಾನೆ. ಕ್ರೋಧಿಯಲ್ಲಿ ಅನ್ಯರನ್ನು ಕೊಲ್ಲಬಾರದೆಂಬ ದಯೆಯಿರುವುದಿಲ್ಲ. ಅವನು ತನ್ನ ತಂದೆಯನ್ನು, ಮಗನನ್ನು, ತಮ್ಮನನ್ನು, ಮಿತ್ರನನ್ನು, ಒಡೆಯನನ್ನು, ಸೇವಕನನ್ನು, ಗುರುವನ್ನು ಒಂದು ಕ್ಷಣಮಾತ್ರದಲ್ಲಿಕೊಂದು ಹಾಕುತ್ತಾನೆ. **ಕ್ರೋಧಿಯು ಘೋರ ನರಕದ ಪಾತ್ರನಿದ್ದಾನೆ.**

ಕ್ರೋಧಿಯು ಮಹಾಭಯಂಕರನಿದ್ದಾನೆ, ಸಮಸ್ತ ಧರ್ಮವನ್ನು ನಾಶಮಾಡುವಂಥವನಿದ್ದಾನೆ, ಕ್ರೋಧಿಯಲ್ಲಿ ಸತ್ಯವಚನವಿರುವುದಿಲ್ಲ; ಅವನಂತೂ ತನ್ನನ್ನು ಪರರನ್ನು, ಸಮಭಾವವನ್ನು, ಧರ್ಮವನ್ನು ನಾಶಮಾಡುವಂಥವನಿದ್ದಾನೆ. ಕುವಚನರೂಪದ ಅಗ್ನಿಯನ್ನೇ ಕಾರುತ್ತಾನೆ. ಕ್ರೋಧಿಯು ಧರ್ಮಾತ್ಮ, ಸಂಯಮಿ, ಶೀಲವಂತ, ಮುನಿ ಹಾಗೂ ಶ್ರಾವಕರಿಗೆ ಕಳವಿನ ಅನ್ಯಾಯದ ಸುಳ್ಳು ದೋಷ-ಕಲಂಕ ತಗಲಿಸಿ ದೂಷಿತ ಮಾಡುತ್ತಾನೆ. ಕ್ರೋಧದ ಪ್ರಭಾವದಿಂದ ಜ್ಞಾನವು ಕುಜ್ಞಾನವಾಗುತ್ತದೆ, ಆಚರಣೆಯು ವಿಪರೀತವಾಗುತ್ತದೆ, ಶ್ರದ್ಧೆಯು ಭ್ರಷ್ಟವಾಗುತ್ತದೆ, ಅನ್ಯಾಯದಲ್ಲಿ ಪ್ರವೃತ್ತಿಯಾಗುತ್ತದೆ, ನೀತಿಯು ನಾಶವಾಗಿ ಹೋಗುತ್ತದೆ, ಅತ್ಯಂತ ದುರಾಗ್ರಹಿಯಾಗಿ ವಿಪರೀತ ಮಾರ್ಗದ ಅವಲಂಬನೆಯಾಗುತ್ತದೆ, ಧರ್ಮ, ಅಧರ್ಮ, ಉಪಕಾರ-ಅಪಕಾರದ ವಿಚಾರದಿಂದ ರಹಿತನಾಗಿ ಕೃತಘ್ನನಾಗಿ ಬಿಡುತ್ತಾನೆ. ಆದುದರಿಂದ ವೀತರಾಗ ಧರ್ಮವನ್ನು ಬಯಸುವವರೆಂದೂ ಕ್ರೋಧ ಭಾವಕ್ಕೆ ಪ್ರಾಪ್ತರಾಗಿ ಹೋಗಬಾರದು.

**ಮಾರ್ದವ ಧರ್ಮ :** ಮಾರ್ದವ ಎಂದರೆ ಕಠೋರತೆಯಿಲ್ಲದ ಕೋಮಲ ಪರಿಣಾಮವುಳ್ಳ ಜೀವದಲ್ಲಿ ಗುರುಗಳ ಕೃಪೆಯಿರುತ್ತದೆ. **ಮಾರ್ದವ ಪರಿಣಾಮಿಯನ್ನು ಸಾಧುಪುರುಷರೂ ಸಾಧುವೆಂದು ಮನ್ನಿಸುತ್ತಾರೆ.** ಕಠೋರತೆಯಿಲ್ಲದ ಪುರುಷನೇ ಜ್ಞಾನಕ್ಕೆ ಪಾತ್ರನಾಗುತ್ತಾನೆ. ಮಾನರಹಿತ ಕೋಮಲ ಪರಿಣಾಮವುಳ್ಳವನಿಗೆ ಎಂಥ ಗುಣಗಳನ್ನು ಗ್ರಹಣ ಮಾಡಿಸಲಪೇಕ್ಷಿಸುವುದು ಮತ್ತು ಎಂಥ ಕಲೆಯನ್ನು ಕಲಿಸಲಪೇಕ್ಷಿಸುವುದು ಅವನು ಅಂಥದೇ ಕಲೆ ಮತ್ತು ಗುಣವನ್ನು ಕಲಿತುಕೊಳ್ಳುತ್ತಾನೆ, ಸಮಸ್ತ ಧರ್ಮದ ಮೂಲ ಸಮಸ್ತ ವಿದ್ಯೆಗಳ ಮೂಲವು ವಿನಯವಿದೆ. ವಿನಯವಂತನು ಎಲ್ಲರಿಗೂ ಪ್ರಿಯನಿರುತ್ತಾನೆ. ಅನ್ಯ ಗುಣಗಳಿಲ್ಲದಂಥ ಪುರುಷನೂ ವಿನಯಗುಣದಿಂದ ಮಾನ್ಯನಾಗಿ ಹೋಗುತ್ತಾನೆ. ವಿನಯವು ಶ್ರೇಷ್ಠ ಆಭೂಷಣವಿದೆ. ಕೋಮಲ ಪರಿಣಾಮಿಗಳಲ್ಲಿಯೇ ದಯಾಭಾವವಿರುತ್ತದೆ. ಮಾರ್ದವದಿಂದ ಸ್ವರ್ಗ ಲೋಕದ ಅಭ್ಯುದಯ ಸಂಪತ್ತು ಮತ್ತು ನಿರ್ವಾಣದ ಅವಿನಾಶೀ ಸಂಪತ್ತು ಪ್ರಾಪ್ತವಾಗಿ ಬಿಡುತ್ತದೆ.

**ಕಠೋರ ಪರಿಣಾಮಿಗೆ ಉಪದೇಶವು ನಾಟುವುದಿಲ್ಲ,** ಸಾಧುಪುರುಷರು ಕೂಡ ಅವಿನಯಿ ಕಠೋರ ಪರಿಣಾಮಿಯನ್ನು ದೂರದಿಂದಲೇ ಬಿಡುವ ಪರಿಣಾಮ ಮಾಡುತ್ತಾರೆ. **ಯಾವ ಪ್ರಕಾರ ಪಾಷಾಣದಲ್ಲಿ ನೀರು ಪ್ರವೇಶ**

**ಮಾಡುವುದಿಲ್ಲ ಅದೇ ಪ್ರಕಾರ ಸದ್ಗುರುಗಳ ಉಪದೇಶವು ಕಠೋರ ಪುರುಷರ ಹೃದಯದಲ್ಲಿ ಪ್ರವೇಶ ಮಾಡುವುದಿಲ್ಲ.** ಯಾವ ಪಾಷಾಣ-ಕಾಷ್ಠ ಮೊದಲಾದವು ಮೃದುವಾಗಿರುತ್ತವೆ ಅವುಗಳಲ್ಲಿಯಂತೂ ಆಕೃತಿಗಳು ಸರಿಯಾಗಿಯೇ ಎಲ್ಲಿ ಹೇಗೆ ನಿರ್ಮಿಸ ಬಯಸುವುದು, ಕೆತ್ತ ಬಯಸುವುದು ಅಲ್ಲಿ ಅಷ್ಟೇ ಸುಂದರವಾಗಿ ಸರಿಯಾಗಿ ಇಳಿದು ಬರುತ್ತವೆ, ಕೆತ್ತಲಾಗುತ್ತದೆ ಮತ್ತು ಎಂಥ ಆಕಾರದ ಮೂರ್ತಿ ನಿರ್ಮಿಸಬಯಸುತ್ತದೆ ಅಂಥದೇ ಆಗಿ ಬಿಡುತ್ತದೆ; ಆದರೆ ಮೃದುತ್ವವಿಲ್ಲದುದದರಲ್ಲಿ ಚೇಣ ತಗಲಿಸುತ್ತಿರುವಂತಯೇ ಚೂರು-ಚೂರಾಗಿ ಸಿಡಿದು ಬೀಳುತ್ತದೆ. ಶಿಲ್ಪಿಯ ಅಭಿಪ್ರಾಯದ ಅನುಸಾರ ನಿರ್ಮಿಸುವಲ್ಲಿ ಬರುವುದಿಲ್ಲ, ಅದೇ ಪ್ರಕಾರ ಕಠೋರ ಪರಿಣಾಮಿಗೆ ಯಥಾವತ್ ಉಪದೇಶ ತಗಲುವುದಿಲ್ಲ.

ಇಡೀ ಜಗತ್ತು ಅಭಿಮಾನಿಯ ವೈರಿಯಾಗಿ ಹೋಗುತ್ತದೆ, ಪರಲೋಕದಲ್ಲಿ ತಿರ್ಯಂಚ ಮತ್ತು ಅತ್ಯಂತ ನೀಚ ಮನುಷ್ಯರಲ್ಲಿ ಅಸಂಖ್ಯಾತಕಾಲದವರೆಗೆ ಅನೇಕ ಪ್ರಕಾರದಿಂದ ತಿರಸ್ಕಾರಕ್ಕೆ ಪಾತ್ರನಾಗುತ್ತಾನೆ. ಅಭಿಮಾನಿಯು ಯಾರಿಗೂ ಪ್ರಿಯನೆನಿಸುವುದಿಲ್ಲ. ಆದುದರಿಂದ ಕಠೋರತೆಯನ್ನು ಬಿಟ್ಟುಕೊಟ್ಟು ನಿರಂತರ ಮಾರ್ದವಭಾವನೆಯನ್ನೇ ಧಾರಣ ಮಾಡಬೇಕು.

**ಆರ್ಜವ ಧರ್ಮ :** ಕಪಟವು ಸಮಸ್ತ ಅನರ್ಥಗಳ ಮೂಲವಿದೆ; ಪ್ರೀತಿ ಹಾಗೂ ಪ್ರತೀತಿಯ ನಾಶ ಮಾಡುವಂಥದ್ದಿದೆ. ಕಪಟಿಯಲ್ಲಿ ಅಸತ್ಯ, ಛಲ, ನಿರ್ದಯತೆ, ವಿಶ್ವಾಸಘಾತ ಮೊದಲಾದ ಸಮಸ್ತ ದೋಷಗಳಿರುತ್ತವೆ. ಕಪಟಿಯಲ್ಲಿ ಗುಣವಿಲ್ಲ, ಆದರೆ ಸಮಸ್ತ ದೋಷಗಳೇ ಇರುತ್ತವೆ. ಮಾಯಾಚಾರಿಯು ಇಲ್ಲಿ ಅಪಯಶ ಪಡೆದು ಪುನಃ ನರಕ, ತಿರ್ಯಂಚ ಮೊದಲಾದ ಗತಿಗಳಲ್ಲಿ ಅಸಂಖ್ಯಾತಕಾಲದವರೆಗೆ ಪರಿಭ್ರಮಣ ಮಾಡುತ್ತಾನೆ. ಮಾಯಾಚಾರವಿಲ್ಲದ ಆರ್ಜವ ಧರ್ಮದ ಧಾರಕನಲ್ಲಿ ಸಮಸ್ತ ಗುಣಗಳಿರುತ್ತವೆ; ಸಮಸ್ತ ಲೋಕದ ಪ್ರೀತಿ ಹಾಗೂ ಪ್ರತೀತಿಗೆ ಪಾತ್ರನಾಗುತ್ತಾನೆ, ಪರಲೋಕದಲ್ಲಿ ದೇವಗಳಿಂದ ಪೂಜ್ಯನಾದ ಇಂದ್ರ-ಪ್ರತೀಂದ್ರ ಮೊದಲಾಗಿ ಆಗುತ್ತಾನೆ. ಆದುದರಿಂದ ಸರಳ ಪರಿಣಾಮದಿಂದಲೇ ಆತ್ಮನ ಹಿತವಿದೆ.

**ಸತ್ಯಧರ್ಮ :** ಸತ್ಯವಾದಿಯಲ್ಲಿ ಸಮಸ್ತ ಗುಣಗಳಿರುತ್ತವೆ. ಸತ್ಯವಾದಿಯು ಯಾವಾಗಲೂ ಕಪಟ ಮೊದಲಾದ ದೋಷಗಳಿಂದ ರಹಿತನಾಗಿ ಜಗತ್ತಿನಲ್ಲೂ ಮನ್ನಣೆಗೆ ಪ್ರಾಪ್ತನಾಗುತ್ತಾನೆ, ಮತ್ತು ಪರಲೋಕದಲ್ಲಿ ಅನೇಕ ದೇವ, ಮನುಷ್ಯ ಮೊದಲಾದವರು ಅವನ ಆಜ್ಞೆಯನ್ನು ತಮ್ಮ ಮಸ್ತಕದ ಮೇಲೆ ಧಾರಣ ಮಾಡುತ್ತಾರೆ. ಅಸತ್ಯವಾದಿಯು ಇಲ್ಲಿ ಕೂಡ ಅಪವಾದ, ನಿಂದೆಗಳಿಗೆ ಪಾತ್ರನಾಗುತ್ತಾನೆ, ಎಲ್ಲರ ಅಪ್ರತೀತಿಯ ಕಾರಣನಿದ್ದಾನೆ, ಬಂಧು-ಮಿತ್ರರುಗಳೂ ಅವಜ್ಞೆ ಮಾಡಿ ಬಿಟ್ಟು ಹೋಗುತ್ತಾರೆ, ದೊರೆಯಿಂದ ಜಿಹ್ವಾಚ್ಛೇದ ಸರ್ವಸ್ವಹರಣ ಮೊದಲಾದ ದಂಡನೆಗೆ ಗುರಿಯಾಗುತ್ತಾನೆ. ಪರಲೋಕದಲ್ಲಿ ವಚನ ರಹಿತ ತಿರ್ಯಂಚ, ಏಕೇಂದ್ರಿಯ, ವಿಕಲತ್ರಯ ಮೊದಲಾದ ಗತಿಗಳಲ್ಲಿ ಅಸಂಖ್ಯಾತ ಭವ ಧಾರಣ ಮಾಡುತ್ತಾನೆ. ಆದುದರಿಂದ ಸತ್ಯ ಧರ್ಮವನ್ನು ಧಾರಣ ಮಾಡುವುದೇ ಶ್ರೇಷ್ಠವಿದೆ.

**ಶೌಚಧರ್ಮ :** ಜಗತ್ತಿನಲ್ಲಿ ಪವಿತ್ರ ಆಚರಣೆಯುಳ್ಳವನೇ ಪೂಜ್ಯನಾಗುತ್ತಾನೆ. ಶುಚಿಯ ಅರ್ಥವು ಪವಿತ್ರತೆಯ ಉಜ್ವಲತೆಯಿದೆ. ಯಾರ ಆಹಾರ-ವಿಹಾರ ಮೊದಲಾದ ಸಮಸ್ತ ಪ್ರವೃತ್ತಿಯು ಹಿಂಸಾರಹಿತವಿದೆ, ಹಿಂಸೆಯ ಭಯದಿಂದ ಯತ್ನಾಚಾರ ಸಹಿತವಿದೆ, ಅನ್ಯರ ಧನದಲ್ಲಿ ಇಚ್ಛಾರಹಿತನಿದ್ದಾನೆ, ಅನ್ಯರ ಸ್ತ್ರೀಯರಲ್ಲಿ ಇಚ್ಛೆಯನ್ನೆಂದೂ ಸ್ವಪ್ನದಲ್ಲಿ ಕೂಡ ಮಾಡುವುದಿಲ್ಲ, ಅವನೇ ಉಜ್ವಲ ಆಚರಣೆಯ ಧಾರಕನಿದ್ದಾನೆ, ಅವನನ್ನೇ ಜಗತ್ತು ಪೂಜ್ಯನೆಂದು ಮನ್ನಿಸುತ್ತದೆ, ಎಲ್ಲ ಜನರು ನಿರ್ಲೋಭಿಯ ಮೇಲೆ ವಿಶ್ವಾಸ ಮಾಡುತ್ತಾರೆ, ಅವನೇ ಲೋಕದಲ್ಲಿ ಉತ್ತಮನಿದ್ದಾನೆ, ಊರ್ಧ್ವಲೋಕದಲ್ಲಿ ಉತ್ತಮ ಗತಿಗೆ ಪ್ರಾಪ್ತನಾಗುತ್ತಾನೆ. ಲೋಭರಹಿತನ ಯಶಸ್ಸು ಅತ್ಯಂತ ಉಜ್ವಲ ತರವಾಗಿ ಪ್ರಕಟವಾಗುತ್ತದೆ.

**ಲೋಭಿಯು ಮಹಾಮಲಿನವಿರುವ ಸಮಸ್ತ ದೋಷಗಳ ಸ್ಥಾನನಿದ್ದಾನೆ.** ಲೋಭಿಗೆ ನಿಂದ್ಯ ಕರ್ಮಗಳಲ್ಲಿ ಪ್ರೀತಿಯಿರುತ್ತದೆ. ಲೋಭಿಗೆ ಗ್ರಾಹ್ಯ-ಅಗ್ರಾಹ್ಯ, ಖಾದ್ಯ-ಅಖಾದ್ಯ, ಕೃತ್ಯ-ಅಕೃತ್ಯದ ವಿಚಾರವೇ ಇರುವುದಿಲ್ಲ. ಇಲ್ಲಿ ಈ ಲೋಕದಲ್ಲೂ ಅವನ ನಿಂದೆ, ಧರ್ಮದಿಂದ ಪರಾಙ್ಮುಖತೆ, ನಿರ್ದಯತೆಗಳನ್ನು ಸ್ಪಷ್ಟವಾಗಿ ಕಾಣುತ್ತೇವೆ. ಲೋಭಿಯು ಧರ್ಮ, ಅರ್ಥ, ಕಾಮವನ್ನು ನಷ್ಟಮಾಡಿ, ಕುಮರಣದಿಂದ ಸತ್ತು ದುರ್ಗತಿಯಲ್ಲಿ ಹೊರಟು ಹೋಗುತ್ತಾನೆ. **ಲೋಭಿಯ ಹೃದಯದಲ್ಲಿ**

**ಸದ್ಗುಣಗಳಿಗೆ ಯಾವ ಸ್ಥಾನವೇ ಇರುವುದಿಲ್ಲ.** ಲೋಭಿಗೆ ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಅತಿಶಯ ಕ್ಲೇಶ ಮತ್ತು ದುಃಖವು ಪ್ರಾಪ್ತವಾಗುತ್ತದೆ. ಆದುದರಿಂದ ಶೌಚ ಧರ್ಮದ ಧಾರಣ ಮಾಡುವುದೇ ಶ್ರೇಷ್ಠವಿದೆ, ಉತ್ತಮವಿದೆ.

**ಸಂಯಮಧರ್ಮ :** ಸಂಯಮವೇ ಆತ್ಮನ ಹಿತವಿದೆ. ಈ ಲೋಕದಲ್ಲಿ ಸಂಯಮದ ಧಾರಕರು ಎಲ್ಲ ಜನರಿಂದ ವಂದಿಸಲು ಯೋಗ್ಯರಿದ್ದಾರೆ, ಯಾವುದೇ ಪಾಪದಿಂದ ಲಿಪ್ತರಾಗುವುದಿಲ್ಲ, ಇವರದು ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಅಚಿಂತ್ಯಮಹಿಮೆಯಿದೆ. ಅಸಂಯಮಿಯು ಪ್ರಾಣಗಳ ಘಾತಮಾಡಿ ಹಾಗೂ ವಿಷಯಗಳಲ್ಲಿ ಅನುರಾಗ ಮಾಡಿ ಅಶುಭ ಕರ್ಮಗಳ ಬಂಧ ಮಾಡಿಕೊಂಡು ದುಃಖಭೋಗಿಸುತ್ತಾನೆ. ಆದುದರಿಂದ ಸಂಯಮ ಧರ್ಮದಿಂದಲೇ ಜೀವದ ಹಿತವಿದೆ.

**ತಪಧರ್ಮ :** ಕರ್ಮಗಳ ಸಂವರ ಹಾಗೂ ನಿರ್ಜರೆ ಮಾಡುವ ಮುಖ್ಯಕಾರಣವು ತಪವಿದೆ. ತಪಸ್ಸೇ ಆತ್ಮನನ್ನು ಕರ್ಮಮಲದಿಂದ ರಹಿತಮಾಡುತ್ತದೆ. ತಪಸ್ಸಿನ ಪ್ರಭಾವದಿಂದ ಇಲ್ಲಿ ಕೂಡ ಅನೇಕ ಋದ್ಧಿಗಳು ಪ್ರಕಟವಾಗುತ್ತವೆ. ತಪಸ್ಸಿನ ಪ್ರಭಾವವು ಅಚಿಂತ್ಯವಿದೆ. ತಪಸ್ಸಿಲ್ಲದೆ ಕಾಮವನ್ನು ನಿದ್ರೆಯನ್ನು ಯಾರು ಗೆಲ್ಲುವರು ? ತಪಸ್ಸಿಲ್ಲದೆ ಇಚ್ಛೆಗಳನ್ನು ಯಾರು ಕೊಲ್ಲುವರು ? **ಇಂದ್ರಿಯ ವಿಷಯಗಳನ್ನು ಸಾಯಿಸುವಲ್ಲಿ ತಪಸ್ಸೇ ಸಮರ್ಥವಿದೆ, ಆಶಾರೂಪದ ಪಿಶಾಚಿಯು ತಪಸ್ಸಿನಿಂದಲೇ ಸತ್ತು ಹೋಗುತ್ತದೆ.** ತಪಸ್ಸಿನಿಂದಲೇ ಕಾಮದ ಮೇಲೆ ವಿಜಯವಾಗುತ್ತದೆ. ತಪಸ್ಸಿನ ಸಾಧನೆ ಮಾಡುವಂಥವನು ಪರೀಷಹ-ಉಪಸರ್ಗಗಳು ಬಂದರೂ ಕೂಡ ರತ್ನತ್ರಯ ಧರ್ಮದಿಂದ ಚ್ಯುತನಾಗುವುದಿಲ್ಲ. ಆದುದರಿಂದ ತಪಧರ್ಮವನ್ನು ಧಾರಣ ಮಾಡುವುದೇ ಉಚಿತವಿದೆ. ತಪಸ್ಸು ಮಾಡಿದಲ್ಲದೆ ಸಂಸಾರದಿಂದ ಬಿಡುಗಡೆಯಾಗುವುದಿಲ್ಲ. ಚಕ್ರವರ್ತಿಯು ಕೂಡ ರಾಜ್ಯಭಾರ ಬಿಟ್ಟು ತಪಧಾರಣ ಮಾಡಿ ಮೂರು ಲೋಕದಲ್ಲಿ ವಂದನೆ ಯೋಗ್ಯ ಪೂಜ್ಯರಾಗಿ ಹೋಗುತ್ತಾರೆ. ಯಾರು ತಪಸ್ಸು ಬಿಟ್ಟು ರಾಜ್ಯಗ್ರಹಣ ಮಾಡುತ್ತಾರೆ ಅವರು ಅತ್ಯಂತ ನಿಂದ್ಯ ಧಿಃಕ್ಕಾರ ಮಾಡಲು ಯೋಗ್ಯರಿದ್ದಾರೆ, ಹುಲ್ಲು ಕಡ್ಡಿಗಿಂತಲೂ ಕ್ಷುಲ್ಲಕರಾಗಿ ಹೋಗುತ್ತಾರೆ. ಆದುದರಿಂದ ಮೂರು ಲೋಕದಲ್ಲಿ ತಪದ ಸಮಾನ ಬೇರೆ ಯಾವುದೇ ಮಹಾನವಾಗಿಲ್ಲ.

**ತ್ಯಾಗ ಧರ್ಮ** - ಪರಿಗ್ರಹದ ಸಮಾನ ಭಾರವು ಬೇರೆಯಿಲ್ಲ. ಅದೆಷ್ಟೋ ದುಃಖ, ದುರ್ಧ್ಯಾನ, ಕ್ಲೇಶ, ವೈರ, ವಿಯೋಗ, ಶೋಕ, ಭಯ ಅಪಮಾನಗಳಿವೆ ಅವೆಲ್ಲವೂ ಪರಿಗ್ರಹದ ಇಚ್ಛೆಯುಳ್ಳವರಿಗೆ ಇರುತ್ತವೆ. ಹೇಗೆ-ಹೇಗೆ ಪರಿಗ್ರಹದಿಂದ ಪರಿಣಾಮವು ಭಿನ್ನವಾಗತೊಡಗುತ್ತದೆ, ಪರಿಗ್ರಹದಲ್ಲಿ ಆಸಕ್ತಿಯು ಕಡಿಮೆಯಾಗತೊಡಗುತ್ತದೆ, ಹಾಗೆ-ಹಾಗೆಯೇ ದುಃಖವು ಕಡಿಮೆಯಾಗತೊಡಗುತ್ತದೆ. ಹೇಗೆ ದೊಡ್ಡ ಭಾರದಿಂದ ರಹಿತನಾದ ಮೇಲೆ ದುಃಖೀ ಪುರುಷನು ಸುಖಿಯಾಗುತ್ತಾನೆ, ಹಾಗೆಯೇ ಪರಿಗ್ರಹದ ವಾಸನೆಯು ಹೊರಟು ಹೋಗುವುದರಿಂದ ಸುಖಿಯಾಗುತ್ತಾನೆ. **ಸಮಸ್ತ ದುಃಖ ಹಾಗೂ ಸಮಸ್ತ ಪಾಪಗಳ ಉತ್ಪತ್ತಿಯ ಸ್ಥಾನವು ಈ ಪರಿಗ್ರಹವಿದೆ.**

ಯಾವ ಪ್ರಕಾರ ನದಿಗಳಿಂದ ಸಮುದ್ರವು ತೃಪ್ತವಾಗುವುದಿಲ್ಲ, ಸೌದೆಯಿಂದ ಅಗ್ನಿಯು ತೃಪ್ತವಾಗುವುದಿಲ್ಲ, ಅದೇ ಪ್ರಕಾರ ಪರಿಗ್ರಹದಿಂದ ಆಸೆಯ ಪಿಪಾಸೆಯು ಆರುವುದಿಲ್ಲ. ಆಸೆಯ ಹೊಂಡವು ಅಗಾಧ ಆಳವಿದೆ, ಅದರ ತಳದ ಸ್ಪರ್ಶವಿಲ್ಲ. ಹೇಗೆ-ಹೇಗೆ ಅದರಲ್ಲಿ ಧನ ಹಾಕುತ್ತ ಹೋಗುತ್ತದೆ ಹಾಗೆ-ಹಾಗೆ ಆಳವು ಹೆಚ್ಚುತ್ತ ಹೋಗುತ್ತದೆ. ಆ ಆಶಾರೂಪದ ಗುಂಡಿಯು ನಿಧಿಗಳಿಂದ ತುಂಬುವ ಸಾಧ್ಯತೆಯಿಲ್ಲ ಅದು ಅನ್ಯ ಸಂಪತ್ತಿನಿಂದ ಹೇಗೆ ತುಂಬುವ ಸಾಧ್ಯತೆಯಿದೆ ? ಆದರೆ ಹೇಗೆ-ಹೇಗೆ ಪರಿಗ್ರಹದ ಆಶೆಯ ತ್ಯಾಗವಾಗುವುದು ಅದುಹಾಗೆ-ಹಾಗೆ ತುಂಬುತ್ತ ಹೋಗುತ್ತದೆ. ಆದುದರಿಂದ ಸಮಸ್ತ ದುಃಖವನ್ನು ದೂರ ಮಾಡುವಲ್ಲಿ ಒಂದು ತ್ಯಾಗ ಧರ್ಮವೇ ಸಮರ್ಥವಿದೆ. ತ್ಯಾಗದಿಂದಲೇ ಅಂತರಂಗ-ಬಹಿರಂಗ ಬಂಧನವಿಲ್ಲದೆ ಅನಂತ ಸುಖಿಯಾಗಿ ಹೋಗುವೆ. ಪರಿಗ್ರಹದ ಬಂಧನದಿಂದ ಬಂಧಿಸಲ್ಪಟ್ಟ ಜೀವವು ಪರಿಗ್ರಹದ ತ್ಯಾಗದಿಂದಲೇ ಮುಕ್ತವಾಗುವುದು. ಆದುದರಿಂದ ತ್ಯಾಗ ಧರ್ಮವನ್ನು ಧಾರಣ ಮಾಡುವುದೇ ಶ್ರೇಷ್ಠವಿದೆ.

**ಆಕಿಂಚನ್ಯ ಧರ್ಮ :** ಎಲೈ ಆತ್ಮನೇ ! ಈ ದೇಹ, ಸ್ತ್ರೀ, ಪುತ್ರ, ಧನ, ಧಾನ್ಯ, ರಾಜ್ಯ, ಐಶ್ವರ್ಯ ಮೊದಲಾದುವಲ್ಲಿ ಒಂದು ಪರಮಾಣು ಮಾತ್ರವೂ ನಿನ್ನದಿಲ್ಲ. ಅವೆಲ್ಲವು ಪುದ್ಗಲದ್ರವ್ಯದ ಅವಸ್ಥೆಗಳಿವೆ, ಜಡವಿವೆ, ವಿನಾಶಶೀಲವಿವೆ,

ಅಚೇತನವಿವೆ. **ಈ ಪರದ್ರವ್ಯಗಳಲ್ಲಿ 'ಅಹಂ' ಎಂಬ ಸಂಕಲ್ಪವನ್ನು ತೀವ್ರ ದರ್ಶನಮೋಹಕರ್ಮದ ಉದಯವಿಲ್ಲದೆ ಯಾರು ಮಾಡುವ ಸಾಧ್ಯತೆಯಿದೆ ?** ಈ ಪರದ್ರವ್ಯಗಳಲ್ಲಿ 'ಅಹಂ' ಎಂಬ ಆತ್ಮತನದ ಮಿಥ್ಯಾಮನ್ನಣೆಯ ರೂಪದ ಸಂಕಲ್ಪವು ನನಗೆಂದೂ ಆಗದಿರಲಿ, ನಾನಂತೂ ಆಕಿಂಚನನಿದ್ದೇನೆ. ಈ ಪ್ರಕಾರದ ಆಕಿಂಚನ್ಯ ಭಾವನೆಯ ಪ್ರಭಾವದಿಂದ ಇಲ್ಲಿಯೇ ಕರ್ಮದ ಲೇಪದಿಂದ ರಹಿತ ಸಮಸ್ತ ಬಂಧದಿಂದ ರಹಿತನಾಗಿ ಹೋಗುತ್ತಾನೆ. ಆದುದರಿಂದ ಪ್ರತ್ಯಕ್ಷ ನಿರ್ವಾಣಕ್ಕೆ ಕಾರಣಭೂತವಾದ ಆಕಿಂಚನ್ಯ ಧರ್ಮವನ್ನೇ ಧಾರಣ ಮಾಡುವುದು.

**ಬ್ರಹ್ಮಚರ್ಯ ಧರ್ಮ :** ಕುಶೀಲವು ಮಹಾಪಾಪವಿದೆ, ಸಂಸಾರ ಪರಿಭ್ರಮಣದ ಬೀಜವಿದೆ. ಬ್ರಹ್ಮಚರ್ಯವನ್ನು ಪಾಲಿಸುವಂಥವರಿಂದ ಹಿಂಸೆ ಮೊದಲಾದ ಪಾಪಗಳ ಪ್ರಚಾರವು ದೂರ ಓಡುತ್ತದೆ. ಬ್ರಹ್ಮಚರ್ಯದಲ್ಲಿ ಸಮಸ್ತ ಗುಣಗಳ ಸಂಪತ್ತು ನಿವಾಸ ಮಾಡುತ್ತದೆ. ಅದರಿಂದ ಜಿನೇಂದ್ರಿಯತೆಯು ಪ್ರಕಟವಾಗುತ್ತದೆ, ಪರಲೋಕದಲ್ಲಿ ಅನೇಕ ಋದ್ಧಿಗಳ ಧಾರಕನಾದ ದೇವನಾಗುತ್ತಾನೆ.

**ಧರ್ಮದ ಪ್ರಕಟತೆ :** ದೇವಾಧಿದೇವ ಅರಹಂತ ಭಗವಂತರ ಮುಖಾರವಿಂದದಿಂದ ಪ್ರಕಟವಾದ ದಶಲಕ್ಷಣ ಧರ್ಮವು ಆತ್ಮನ ಸ್ವಭಾವವಿದೆ, ಪರವಸ್ತುವಿಲ್ಲ, ಕ್ರೋಧ ಮೊದಲಾದ ಕರ್ಮಜನಿತ ಉಪಾಧಿಯು ದೂರವಾದ ಮೇಲೆ ಆತ್ಮನ ಸ್ವಭಾವವು ತಾನಾಗಿಯೇ ಪ್ರಕಟವಾಗುತ್ತದೆ. ಕ್ರೋಧದ ಅಭಾವದಿಂದ ಕ್ಷಮಾಗುಣವು ಪ್ರಕಟವಾಗುತ್ತದೆ, ಮಾನದ ಅಭಾವದಿಂದ ಮಾರ್ದವ ಗುಣವು ಪ್ರಕಟವಾಗುತ್ತದೆ, ಮಾಯೆಯ ಅಭಾವದಿಂದ ಆರ್ಜವ ಗುಣವು ಪ್ರಕಟವಾಗುತ್ತದೆ, ಲೋಭದ ಅಭಾವದಿಂದ ಶೌಚ ಗುಣವು ಪ್ರಕಟವಾಗುತ್ತದೆ, ಅಸತ್ಯದ ಅಭಾವದಿಂದ ಸತ್ಯಗುಣವು ಪ್ರಕಟವಾಗುತ್ತದೆ, ಕಷಾಯಗಳ ಅಭಾವದಿಂದ ಸಂಯಮ ಗುಣವು ಪ್ರಕಟವಾಗುತ್ತದೆ, ಇಚ್ಛೆಯ ಅಭಾವದಿಂದ ತಪಗುಣವು ಪ್ರಕಟವಾಗುತ್ತದೆ, ಪರದಲ್ಲಿ ಮಮತೆಯ ಅಭಾವದಿಂದ ತ್ಯಾಗ ಗುಣವು ಪ್ರಕಟವಾಗುತ್ತದೆ, **ಪರದ್ರವ್ಯಗಳಿಂದ ಭಿನ್ನವಿರುವ ತನ್ನ ಆತ್ಮನ ಅನುಭವವಾಗುವುದರಿಂದ ಆಕಿಂಚನ್ಯ ಗುಣವು ಪ್ರಕಟವಾಗುತ್ತದೆ,** ವೇದದ ಅಭಾವದಿಂದ ಆತ್ಮ ಸ್ವರೂಪದಲ್ಲಿ ಪ್ರವೃತ್ತಿ ಮಾಡುವುದರಿಂದ ಬ್ರಹ್ಮಚರ್ಯ ಗುಣವು ಪ್ರಕಟವಾಗುತ್ತದೆ.

**ಧರ್ಮದ ಸ್ವರೂಪ :** ಈ ಹತ್ತು ಪ್ರಕಾರದ ಧರ್ಮವು ಆತ್ಮನ ಸ್ವಭಾವವಿದೆ. ಈ ಧರ್ಮವು ಯಾವನೋ ಕದಿಯುವಂಥವನಿಂದ ಕದಿಯಲಾಗುವುದಿಲ್ಲ, ದೋಚಿಕೊಳ್ಳುವಂಥವನಿಂದ ದೋಚಿಕೊಳ್ಳಲಾಗುವುದಿಲ್ಲ, ಕಳ್ಳನಿಂದ ಅಪಹರಿಸಿಕೊಂಡು ಹೋಗಲಾಗುವುದಿಲ್ಲ, ದೊರೆಯಿಂದ ಲೂಟಿ ಮಾಡಲಾಗುವುದಿಲ್ಲ, ಸ್ವದೇಶ-ಪರದೇಶದಲ್ಲಿ ಇದರ ಸ್ವರೂಪವೆಂದೂ ಬದಲಾಗುವುದಿಲ್ಲ, ಯಾರಾದರೂ ಕೆಡಸುವುದರಿಂದ ಕೆಟ್ಟು ಹೋಗುವುದಿಲ್ಲ, ಧನದಿಂದ ಕೊಂಡುಕೊಳ್ಳಲಾಗುವುದಿಲ್ಲ, ಆಕಾಶದಲ್ಲಿ, ಪಾತಾಳದಲ್ಲಿ, ಜಲದಲ್ಲಿ, ನೆಲದಲ್ಲಿ, ಪರ್ವತದಲ್ಲಿ, ತೀರ್ಥದಲ್ಲಿ, ಮಂದಿರದಲ್ಲಿ ಎಲ್ಲಿಯೂ ಧರ್ಮವನ್ನು ಇಡಲಾಗಿಲ್ಲ, ಧರ್ಮವಂತೂ ಆತ್ಮನ ನಿಜ ಸ್ವಭಾವವಿದೆ. **ಧರ್ಮದ ಲಾಭವು-ಪ್ರಾಪ್ತಿಯು ಸಮ್ಯಕ್ ಜ್ಞಾನ-ಸಮ್ಯಕ್ ಶ್ರದ್ಧೆಯಿಂದ ಆಗುತ್ತದೆ.**

**ಧರ್ಮ ಮಾಡುವುದು ಎಷ್ಟು ಸುಲಭವಿದೆಯೆಂದರೆ** ಬಾಲಕ-ಯುವಕ-ವೃದ್ಧ, ಧನವಂತ-ನಿರ್ಧನ, ಬಲಶಾಲಿ-ನಿರ್ಬಲ, ಸಹಾಯಸಹಿತ-ಸಹಾಯರಹಿತ, ರೋಗೀ-ನಿರೋಗಿ ಎಲ್ಲರಿಂದಲೂ ಧಾರಣ ಮಾಡಲಾಗುತ್ತದೆ, ಸ್ವಾಧೀನವಿದೆ. ಧರ್ಮವನ್ನು ಧಾರಣ ಮಾಡುವಲ್ಲಿ ಯಾವುದೇ ಖೇದ, ಕ್ಲೇಶ, ಅಪಮಾನ, ಭಯ, ವಿಷಾದ, ಕಲಹ, ಶೋಕ, ದುಃಖಗಳೆಂದೂ ಆಗುವುದಿಲ್ಲ, ಧರ್ಮಧಾರಣ ಮಾಡುವುದು ದುರ್ಲಭವಲ್ಲ, ಅದರಲ್ಲಿ ಯಾವ ಭಾರವನ್ನೂ ಹೊರಬೇಕಾಗಿಲ್ಲ, ದೂರ ದೇಶದಲ್ಲಿ ಹೋಗಬೇಕಿಲ್ಲ ಕ್ಷುಧೆ, ತೃಷೆ, ಶೀತ, ಉಷ್ಣತೆಯ ವೇದನೆಯನ್ನು ಸಹಿಸುವುದಿಲ್ಲ, ಯಾರೊಡನೆ ವಿಸಂವಾದ-ಕಲಹವಿಲ್ಲ, **ಅತ್ಯಂತ ಸುಲಭ, ಸಮಸ್ತ ದುಃಖ, ಕ್ಲೇಶಗಳಿಂದ ರಹಿತ ಸ್ವಾಧೀನ ಆತ್ಮನ ನಿಜ ಪರಿಣಮನವೇ ಇದೆ.** ಆದುದರಿಂದ ಸಮಸ್ತ ಸಂಸಾರದ ಪರಿಭ್ರಮಣದಿಂದ ಬಿಡುಗಡೆಯಾಗಿ ಅನಂತ ದರ್ಶನ, ಜ್ಞಾನ, ಸುಖ, ವೀರ್ಯ ಧಾರಕವಾದ ಸಿದ್ಧದಶೆಯು ಈ ಧರ್ಮವನ್ನು ಧಾರಣ ಮಾಡುವುದರ ಫಲವಿದೆ. ಈ ಪ್ರಕಾರ ಸಂಕ್ಷೇಪದಲ್ಲಿ ದಶಲಕ್ಷಣ ಧರ್ಮದ ವರ್ಣನೆ ಮಾಡಲಾಯಿತು.

**ವ್ರತಿಯ ಸ್ವರೂಪ :** ಯಾವನಿಗೆ ಶಲ್ಯಗಳ ಅಭಾವವಾಗಿ ಹೋಗುತ್ತವೆ ಅವನು ವ್ರತಿಯಿದ್ದಾನೆ. ಶಲ್ಯ ಸಹಿತನಿಗೆಂದೂ ವ್ರತಗಳಾಗುವುದಿಲ್ಲ. ಆದುದರಿಂದ ಶ್ರಾವಕರು ಮೂರು ಶಲ್ಯಗಳ ಸ್ವರೂಪವನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. ನಿದಾನ ಶಲ್ಯ, ಮಾಯಾಶಲ್ಯ, ಮಿಥ್ಯಾದರ್ಶನಶಲ್ಯವೆಂದು ಈ ಮೂರು ಶಲ್ಯಗಳು ವ್ರತಗಳ ಘಾತ ಮಾಡುವಂಥವುಗಳಿವೆ.

**ನಿದಾನ ಶಲ್ಯ :** ನಿದಾನ ಶಲ್ಯದಲ್ಲಿ ಪ್ರಶಸ್ತನಿದಾನ, ಅಪ್ರಶಸ್ತನಿದಾನ, ಭೋಗಾರ್ಥನಿದಾನವೆಂದು ಮೂರು ಭೇದಗಳಿದ್ದು ಇವು ಮೂರು ಪ್ರಕಾರದ ನಿದಾನಗಳು ಸಂಸಾರದ ಕಾರಣವಿವೆ. ಇಲ್ಲಿ ನಿದಾನದ ಅರ್ಥವು ಭವಿಷ್ಯಕಾಲದ ಇಚ್ಛೆಯಿದೆ. ಸಂಯಮ ಧಾರಣ ಮಾಡುವ ಸಲುವಾಗಿ ಉತ್ತಮ ಕುಲ, ಉತ್ತಮ ಸಂಹನನ, ಉತ್ತಮ ಬಲ, ಉತ್ತಮ ವೀರ್ಯ, ಶುಭ ಸಂಗತಿ ಮತ್ತು ಧರ್ಮದಲ್ಲಿ ಬಂಧು ಜನರ ಸಹಾಯತೆ, ಉಜ್ವಲ ಬುದ್ಧಿ ಮೊದಲಾದವುಗಳ ಅಪೇಕ್ಷೆಯು ಅದು **ಪ್ರಶಸ್ತನಿದಾನ**ವಿದೆ.

ಅಭಿಮಾನದ ಸಲುವಾಗಿ ತನ್ನ ಆಜ್ಞೆ, ಆದರ ಹಾಗೂ ಉಚ್ಚತೆ ತೋರಿಸುವ ಸಲುವಾಗಿ ಉತ್ತಮಕುಲ, ಜಾತಿ, ಒಳ್ಳೆಯ ಬುದ್ಧಿ,ಪ್ರಬಲ ಶಕ್ತಿ ಮತ್ತು ಆಚಾರ್ಯತನ, ಗಣಧರತನ, ತೀರ್ಥಂಕರತನ ಇತ್ಯಾದಿಗಳ ಅಪೇಕ್ಷೆ ಮಾಡುವುದು ಅದು ಅಪ್ರಶಸ್ತ ನಿದಾನವಿದೆ.ಕ್ರೋಧಿಯಾಗಿ ಇತರರನ್ನು ಕೊಲ್ಲುವ ಇಚ್ಛೆ ಮಾಡುವುದು, ಇತರರ ಸ್ತ್ರೀ, ಪುತ್ರ, ರಾಜ್ಯ, ಐಶ್ವರ್ಯಗಳ ನಾಶದ ಇಚ್ಛೆ ಮಾಡುವುದು ಅದು ಕೂಡ **ಅಪ್ರಶಸ್ತನಿದಾನ**ವಿದೆ.

ಸಂಯಮ ಧಾರಣ ಮಾಡಿ ಮತ್ತು ಘೋರತರವಾದ ತಪಶ್ಚರ್ಯ ಮಾಡಿ ಅದರ ಫಲದಲ್ಲಿ ಇಂದ್ರಿಯಗಳ ವಿಷಯ, ರಾಜ್ಯ, ಐಶ್ವರ್ಯ, ಸ್ವರ್ಗದಲ್ಲಿಯ ದೇವತನ, ಅನೇಕ ಅಪ್ಸರೆಯರ ಸ್ವಾಮೀತನ, ಜಾತಿ-ಕುಲದಲ್ಲಿ, ಉಚ್ಚತನ, ಚಕ್ರವರ್ತಿತ್ವ ಮೊದಲಾದವುಗಳ ಅಪೇಕ್ಷೆ ಮಾಡುವುದು ಅದು **ಭೋಗಾರ್ಥನಿದಾನ**ವಿದೆ. ಈ ನಿದಾನವು ದೀರ್ಘಕಾಲದವರೆಗೆ ಸಂಸಾರದಲ್ಲಿ ಪರಿಭ್ರಮಣ ಮಾಡಿಸುವಂಥದ್ದಿದೆಯೆಂದು ತಿಳಿಯುವುದು.

ಸಂಯಮದ ಪ್ರಭಾವದಿಂದ ಸಮಸ್ತ ಕರ್ಮಗಳ ನಾಶವಾಗಿ ಅತೀಂದ್ರಿಯ ಅವಿನಾಶೀ ನಿರ್ವಾಣದ ಅನಂತ ಸುಖವು ಪ್ರಾಪ್ತವಾಗುತ್ತದೆ. ಆ ಸಂಯಮದ ಪಾಲನೆ ಮಾಡಿ ಭೋಗಗಳ ಇಚ್ಛೆ ಮಾಡುವುದೆಂದರೆ ಯಾವ ಪ್ರಕಾರ ಓರ್ವನು ಚಿಂತಾಮಣಿ ರತ್ನವನ್ನು ಒಂದು ಕವಡೆಗೆ ಮಾರಿ ಬಿಡುತ್ತಾನೆ, ತನ್ನ ರತ್ನಗಳಿಂದ ತುಂಬಿ ಸಮುದ್ರದಲ್ಲಿ ಹೋಗುತ್ತಿರುವ ನೌಕೆಯನ್ನು ಸೌದೆಯ ಸಲುವಾಗಿ ಒಡೆಯುತ್ತಾನೆ, ದಾರದ ಸಲುವಾಗಿ ರತ್ನಗಳ ಮಾಲೆಯನ್ನು ಕತ್ತರಿಸುತ್ತಾನೆ, ಬೂದಿಯ ಸಲುವಾಗಿ ಗೋಶೀರ್ಷ ಚಂದನವನ್ನು ಸುಟ್ಟು ಹಾಕುತ್ತಾನೆ, ಅದೇ ಪ್ರಕಾರದ ಮೂರ್ಖತೆಯಿದೆ. **ಭೋಗಗಳ ಇಚ್ಛೆ ಮಾಡುವಂಥವನ ಪುಣ್ಯವು ಕೂಡ ನಷ್ಟವಾಗಿ ಹೋಗುತ್ತದೆ.** ಮತ್ತು ಪಾಪದ ಬಂಧವಾಗುತ್ತದೆ. ಪುಣ್ಯದ ಬಂಧವಂತೂ ಇಚ್ಛಾರಹಿತ ಭಾವದಿಂದ ಆಗುತ್ತದೆ.

ಸಮ್ಯಗ್ದೃಷ್ಟಿಯಂತೂ ಭೋಗಗಳ ಇಚ್ಛೆಯಿಂದ ರಹಿತನಿರುತ್ತಾನೆ. ಅವನಿಗಂತೂ ಇಂದ್ರ-ಅಹಮಿಂದ್ರ ಲೋಕದ ಸುಖವು ಕೂಡ ಸುಖಾಭಾಸ, ವಿನಾಶಶೀಲ, ಪರಾಧೀನ, ದುಃಖರೂಪವಾಗಿ ಕಂಡು ಬರುತ್ತದೆ. ಸಮ್ಯಗ್ದೃಷ್ಟಿಗಂತೂ ಆತ್ಮಿಕ, ಸ್ವಾಧೀನ, ಅತೀಂದ್ರಿಯ ಸುಖದ ಅನುಭವವಾಗಿರುವುದರಿಂದ ಅವನು ಇಂದ್ರಿಯಜನಿತ ಬೇಗೆಯಿಂದ, ಮಹಾಕ್ಲೇಶದಿಂದ ತುಂಬಿದ ತೃಷ್ಣೆಯ ರೂಪದ ಬೇಗೆಯನ್ನು ವೃದ್ಧಿಸುವಂಥ ವಿಷಯಾಧೀನ ಸುಖವನ್ನು ಸುಖವೆಂದು ಹೇಗೆ ಮನ್ನಿಸುವನು? **ಅಮೃತದ ಸ್ವಾದ ಸವಿದವನು ಕಟುಕ ಮಹಾದುರ್ಗಂಧಿತ ಬೇಗೆಯನ್ನುತ್ಪನ್ನ ಮಾಡುವಂಥ ಕಹಿ ಹಿಂಡಿಯ ಇಚ್ಛೆಯನ್ನು ಹೇಗೆ ಮಾಡುವನು ?**

ಸಮ್ಯಗ್ದೃಷ್ಟಿಗಂತೂ ಎಂಥ ಇಚ್ಛೆಯಿರುತ್ತದೆಯೆಂಬುದನ್ನು ಭಗವತೀ ಆರಾಧನೆಯಲ್ಲಿ ಹೇಳುತ್ತಾರೆ, -

**ದುಕ್ಖಕ್ಖಯ ಕಮ್ಮಕ್ಖಯ ಸಮಾಹಿಮರಣಂ ಚ ಬೋಹಿಲಾಹೋ ಯ ।**
**ಏಯಂ ಪತ್ಥೇಯವ್ವಂ ಣ ಪತ್ಥಣೀಯಂ ತಓ ಅಣ್ಣಂ ॥೧೨೭೯॥**

**ಅರ್ಥ :-** ನಮ್ಮ ಶರೀರಧಾರಣ ಮೊದಲಾದ, ಜನ್ಮ-ಮರಣ-ಕ್ಷುಧೆ-ತೃಷೆ ಮೊದಲಾದ ದುಃಖಗಳ ಕ್ಷಯವಾಗಲಿ, ನಮ್ಮ ಆತ್ಮನ ಗುಣಗಳನ್ನು ನಷ್ಟ ಮಾಡುವಂಥ ಮೋಹನೀಯ, ಜ್ಞಾನಾವರಣ, ದರ್ಶನಾವರಣ, ಅಂತರಾಯ ಕರ್ಮಗಳ

ಕ್ಷಯವಾಗಲಿ, ಈ ಪರ್ಯಾಯದಲ್ಲಿ ನಾಲ್ಕು ಆರಾಧನೆಗಳನ್ನು ಧಾರಣ ಮಾಡಿ, ಸಮಾಧಿಪೂರ್ವಕ ಮರಣವಾಗಲಿ, ಬೋಧಿ ಎಂದರೆ ರತ್ನತ್ರಯದ ಪ್ರಾಪ್ತಿಯಾಗಲೆಂದು ಸಮ್ಯಗ್ದೃಷ್ಟಿಯು ಯೋಗ್ಯ ಪ್ರಾರ್ಥನೆ ಮಾಡುತ್ತಾನೆ. ಇದರಿಂದ ಭಿನ್ನ ಅನ್ಯ ಪ್ರಕಾರದ ಪ್ರಾರ್ಥನೆಯನ್ನು ಈ ಭವದ ಸಲುವಾಗಿ ಅಥವಾ ಪರಭವದ ಸಲುವಾಗಿ ಮಾಡುವುದು ಯೋಗ್ಯವಿಲ್ಲ.

ಜೀವನು ಸಂಸಾರದಲ್ಲಿ ಪರಿಭ್ರಮಣ ಮಾಡುತ್ತ ಉಚ್ಚಕುಲ-ನೀಚಕುಲ, ರಾಜ್ಯ-ಐಶ್ವರ್ಯ, ಧನಾಢ್ಯತೆ-ನಿರ್ಧನತೆ, ದೀನತೆ, ರೋಗೀ-ನಿರೋಗೀತನ, ಸುರೂಪತೆ-ವಿರೂಪತೆ, ನಿರ್ಬಲತೆ-ಬಲವಂತತೆ, ಪಾಂಡಿತ್ಯತನ-ಮೂರ್ಖತನ, ಯಜಮಾನತೆ-ಸೇವಕತನ, ದೊರೆತನ-ದರಿದ್ರತನ, ಗುಣವಂತತೆ-ನಿರ್ಗುಣತೆಗಳನ್ನು ಅನಂತಾನಂತ ಬಾರಿ ಪಡೆದಿದ್ದಾನೆ ಮತ್ತು ಬಿಟ್ಟುಕೊಟ್ಟಿದ್ದಾನೆ. ಆದ್ದರಿಂದ ಸಮ್ಯಗ್ದೃಷ್ಟಿಯು ಇಂಥ ಕ್ಲೇಶರೂಪ ಸಂಯೋಗ-ವಿಯೋಗರೂಪ ಸಂಸಾರದ ನಿದಾನವನ್ನು ಹೇಗೆ ಮಾಡುವನು ?

ಈ ಸಂಸಾರದಲ್ಲಿ ಯಾವಾಗ ದುಃಖದ ಅನಂತ ಪರ್ಯಾಯಗಳು ಪ್ರಾಪ್ತವಾಗುತ್ತವೆ ಆಗ ಇಂದ್ರಿಯಜನ್ಯ ಸುಖದ ಒಂದು ಪರ್ಯಾಯವು ಪ್ರಾಪ್ತವಾಗುತ್ತದೆ, ಪುನಃ ಅನಂತ ಬಾರಿ ದುಃಖದ ಪರ್ಯಾಯಗಳು ಪ್ರಾಪ್ತವಾಗುತ್ತವೆ. ಈ ಪ್ರಕಾರ ಪರಿವರ್ತನ ಮಾಡುತ್ತ ಇಂದ್ರಿಯಜನಿತ ಸುಖವನ್ನೂ ಅನಂತಬಾರಿ ಪಡೆಯಲಾಗಿದೆ. ಈಗ ಸಮ್ಯಗ್ದೃಷ್ಟಿಯಾಗಿ ಇಂದ್ರಿಯಗಳ ಸುಖದ ಇಚ್ಛೆಯನ್ನು ಹೇಗೆ ಮಾಡುವುದು ?

**ಈ ಸಂಸಾರದಲ್ಲಿ ಸ್ವಯಂಭೂರಮಣಸಮುದ್ರದ ಸಮಸ್ತ ಜಲದ ಬರಾಬರಿಯಾಗಿ ದುಃಖವಿದೆ, ಮತ್ತು ಒಂದು ಕೂದಲೆಳೆಯ ತುದಿಯ ಮೇಲೆ ಎಷ್ಟು ಜಲ ನಿಲ್ಲುತ್ತದೆ ಅದರ ಅನಂತ ಭಾಗ ಮಾಡಿದ ಮೇಲೆ ಅದರೊಳಗಿಂದ ಒಂದು ಭಾಗದ ಬರಾಬರಿಯಾಗಿ ಇಂದ್ರಿಯ ಜನ್ಯ ಸುಖವಿದೆ.** ಅದರಿಂದ ತೃಪ್ತಿ ಹೇಗಾಗುವುದು ? ಭೋಗಗಳ ಸಂಯೋಗ ಹಾಗೂ ಸಂಪತ್ತದ ಸಂಯೋಗದ ಸುಖವೆಷ್ಟಾಗುತ್ತದೆ ಅದರಿಂದ ಅಸಂಖ್ಯಾತಗುಣಿತ ದುಃಖವು ಅದರ ವಿಯೋಗದ ಸಮಯದಲ್ಲಿ ಆಗುತ್ತದೆ. ಯಾವುದರ **ಸಂಯೋಗವಾಗುತ್ತದೆ ನಿಯಮದಿಂದ ಅದರ ವಿಯೋಗವು ಆಗಿಯೇ ಆಗುತ್ತದೆ.**

ಯಾವ ಪ್ರಕಾರ ಜೇನುತುಪ್ಪದಿಂದ ಲೇಪಿಸಿದ ಕರವಾಳದ ಧಾರೆಯನ್ನು ಯಾವನು ನಾಲಿಗೆಯಿಂದ ನೆಕ್ಕುತ್ತಾನೆ ಅವನಿಗೆ ಎಷ್ಟು ಸಮಯದ ಸ್ಪರ್ಶವಿದೆ ಅಷ್ಟು ಸಮಯ ಸಿಹಿಯ ಸುಖವಾಗುತ್ತದೆ, ಆದರೆ ನಾಲಿಗೆ ಕತ್ತರಿಸಿ ಬೀಳುವುದರಿಂದ ಅದರ ಮಹಾದುಃಖವು ಅಧಿಕ ಸಮಯದವರೆಗೆ ಆಗುತ್ತದೆ; ಅದೇ ಪ್ರಕಾರ ವಿಷಯಗಳ ಸಂಯೋಗದ ಸುಖವನ್ನು ತಿಳಿಯುವುದು. ಯಾವ ಪ್ರಕಾರ ಕಿಂಪಾಕಫಲವು ನೋಡಲು ಸುಂದರವಿದೆ, ತಿನ್ನುವಲ್ಲಿ ಸಿಹಿಯಿದೆ, ಆದರೆ ನಂತರ ಪ್ರಾಣದ ನಾಶ ಮಾಡಿಬಿಡುತ್ತದೆ, ವಿಷಮಿಶ್ರಿತ ಲಡ್ಡು ತಿನ್ನುವುದರಲ್ಲಂತೂ ಸಿಹಿಯಿದೆ, ಆದರೆ ನಂತರ ಪಚನವಾದ ಮೇಲೆ ಮಹಾದುಃಖವಿತ್ತು ಪ್ರಾಣದ ನಾಶ ಮಾಡುತ್ತದೆ. ಅದೇ ಪ್ರಕಾರ ಭೋಗಜನಿತ ಸುಖವನ್ನು ತಿಳಿಯುವುದು.

ಯಾವ ಪ್ರಕಾರ ಒಬ್ಬ ಮನುಷ್ಯನ ಹತ್ತಿರ ಅಧಿಕ ಧನವಿದ್ದು, ಅವನು ಆ ಅಧಿಕ ಧನಕ್ಕೆ ಪ್ರತಿಯಾಗಿ ಅಲ್ಪ ಧನ ಪಡೆಯಲಿಚ್ಛಿಸಿದರೆ ಸ್ವಲ್ಪ ಧನ ಸಿಕ್ಕು ಬಿಡುತ್ತದೆ. ಆದರೆ ಅವನ ಹತ್ತಿರ ಸ್ವಲ್ಪ ಧನವಿದ್ದು, ಅದಕ್ಕೆ ಪ್ರತಿಯಾಗಿ ಅವನು ಅಧಿಕ ಧನ ಪಡೆಯಲಪೇಕ್ಷಿಸಿದರೆ ದೊರಕುವುದಿಲ್ಲ. ಅದೇ ಪ್ರಕಾರ ಒಬ್ಬನು ಸ್ವರ್ಗದ ಅಧಿಕ ಸಂಪತ್ತು ಪ್ರಾಪ್ತವಾಗಲು ಯೋಗ್ಯವಾದ ಪುಣ್ಯ ಕಟ್ಟಿಕೊಳ್ಳುತ್ತಾನೆ, ನಂತರ ನಿದಾನದಿಂದ (ಸ್ವಲ್ಪಸಂಪತ್ತನ್ನು) ಬೇಡಿಕೊಂಡರೆ ಅವನಿಗೆ ಈ ಲೋಕದಲ್ಲಿ ರಾಜ್ಯ ಸಂಪತ್ತು ದೊರಕುತ್ತದೆ, ವ್ಯಂತರ ಮೊದಲಾದ ದೇವಗಳಲ್ಲಿ ಉತ್ಪನ್ನನಾಗುತ್ತಾನೆ.

**ನಿದಾನ ಶಲ್ಯ :** ಒಂದು ವೇಳೆ ತಮ್ಮದು ಅಧಿಕ ಪುಣ್ಯವಿದ್ದರೆ ನಿದಾನ ಮಾಡುವುದರಿಂದ ಅದರ ಘಾತವಾಗಿ ತುಚ್ಛ ಸಂಪತ್ತು ಪ್ರಾಪ್ತವಾಗಿ ಬಿಡುತ್ತದೆ, ಅನಂತರ ಸಂಸಾರದಲ್ಲಿ ಪರಿಭ್ರಮಣ ಮಾಡುವುದೇ ನಿದಾನದ ಫಲವಿದೆ. ಯಾವ ಪ್ರಕಾರ ಉದ್ದವಾದ ದಾರದಿಂದ ಕಟ್ಟಿಬಿಟ್ಟ ಪಕ್ಷಿಯು ದೂರದವರೆಗೆ ಹಾರಿ ಹೋದರೂ ಕೂಡ ಮರಳಿ ಅದೇ ಸ್ಥಾನದಲ್ಲಿ ಬಂದುಬಿಡುತ್ತದೆ, ಅದು ದೂರದವರೆಗೆ ಹಾರಿ ಹೋಗುವುದರಿಂದ ಲಾಭವೇನಾಯಿತು. ? ಕಾಲುಗಳನ್ನಂತೂ ದಾರದಿಂದ ಕಟ್ಟಿ ಬಿಡಲಾಗಿದೆ.

ಬೇರೆಡೆ ಹೋಗುವ ಸಾಧ್ಯತೆಯಿಲ್ಲ, ಅದೇ ಪ್ರಕಾರ ನಿದಾನ ಮಾಡುವಂಥವನು ಹೆಚ್ಚುದೂರ ಸ್ವರ್ಗ ಮೊದಲಾದುವಲ್ಲಿ ಮಹರ್ದಿಕ ದೇವನಾಗಿ ಹೋದರೂ ಕೂಡ ಸಂಸಾರದಲ್ಲಿಯೇ ಪರಿಭ್ರಮಣ ಮಾಡುವನು. ದೇವಲೋಕದಲ್ಲಿ ಹೋದರೂ ಕೂಡ ನಿದಾನದ ಪ್ರಭಾವದಿಂದ ಏಕೇಂದ್ರಿಯ ತಿರ್ಯಂಚಗಳಲ್ಲಿ ಪಂಚೇಂದ್ರಿಯ ತಿರ್ಯಂಚಗಳಲ್ಲಿ ಮತ್ತು ಮನುಷ್ಯರಲ್ಲಿ ಜನ್ಮ ತಾಳಿ ಪಾಪದ ಸಂಚಯ ಮಾಡಿ ಬಹಳಷ್ಟು ಕಾಲದವರೆಗೆ ಪರಿಭ್ರಮಣ ಮಾಡುತ್ತಾನೆ.

ಯಾವ ಪ್ರಕಾರ ಋಣಿಯಿರುವ ಕೈದಿಯು ಜೈಲರನಿಂದ ಅವಧಿ ಪಡೆದು ಕೆಲ ಸಮಯದ ಸಲುವಾಗಿ ಜೈಲಿನಿಂದ ಬಿಡುಗಡೆಯಾಗಿ ತನ್ನ ಮನೆಯಲ್ಲಿ ಬಂದು ಸುಖದಿಂದ ಇರುತ್ತಾನೆ, ಆದಾಗ್ಯೂ ಅವಧಿಯ ಸಮಯವು ಪೂರ್ಣವಾದ ಮೇಲೆ ಮರಳಿ ಜೈಲಿನಲ್ಲಿ ಹೋಗಿ ಇರಬೇಕಾಗುತ್ತದೆ; ಅದೇ ಪ್ರಕಾರ ನಿದಾನ ಸಹಿತನಾದ ಪುರುಷನೂ ತಪ-ಸಂಯಮದಿಂದ ಪುಣ್ಯಕಟ್ಟಿಕೊಂಡು ಸ್ವರ್ಗಲೋಕದಲ್ಲಿ ಹೊರಟು ಹೋಗುತ್ತಾನೆ, ಅಲ್ಲಿಯ ಆಯುಷ್ಯಪೂರ್ಣಮಾಡಿ ಸ್ವರ್ಗದಿಂದ ಚ್ಯುತನಾಗಿ ಪುನಃ ಸಂಸಾರದಲ್ಲಿಯೇ ಪರಿಭ್ರಮಣ ಮಾಡುತ್ತಾನೆ.

ಯಾವನು ಮುನಿತನದಲ್ಲಿ, ಶ್ರಾವಕತನದಲ್ಲಿ ಮಂದಕಷಾಯದ ಪ್ರಭಾವದಿಂದ ಮತ್ತು ತಪಶ್ಚರಣದ ಪ್ರಭಾವದಿಂದ ಅಹಮಿಂದ್ರದಲ್ಲಿ ಹಾಗೂ ಸ್ವರ್ಗದಲ್ಲಿ ಉತ್ಪನ್ನವಾಗುವ ಪುಣ್ಯ ಸಂಚಯ ಮಾಡಿರುತ್ತಾನೆ, ಅನಂತರ ಅವನು ಭೋಗದ ಇಚ್ಛಾರೂಪದ ನಿದಾನ ಮಾಡಿದರೆ ಭವನತ್ರಿಕ ಮೊದಲಾದ ಅಶುಭ ದೇವಗಳಲ್ಲಿ ಉತ್ಪನ್ನನಾಗಿ ಹೋಗುತ್ತಾನೆ. ಒಬ್ಬನಿಗೆ ಅಧಿಕ ಪುಣ್ಯವಿದ್ದು, ಅವನು ಅಲ್ಪ ಪುಣ್ಯದ ಫಲಕ್ಕೆ ಯೋಗ್ಯವಾದ ನಿದಾನ ಮಾಡುತ್ತಿದ್ದರೆ ಅಲ್ಪ ಪುಣ್ಯವುಳ್ಳ ದೇವ-ಮನುಷ್ಯದಲ್ಲಿ ಉತ್ಪನ್ನನಾಗಿ ಬಿಡುತ್ತಾನೆ, ಅಧಿಕ ಪುಣ್ಯವುಳ್ಳ ದೇವ-ಮನುಷ್ಯರಲ್ಲಿ ಉತ್ಪನ್ನನಾಗುವುದಿಲ್ಲ, ಯಾವನು ನಿರ್ವಾಣ ಸುಖವನ್ನು ಹಾಗೂ ಸ್ವರ್ಗಾದಿಗಳ ಸುಖವನ್ನು ಕೊಡುವಂಥ ಮುನಿ-ಶ್ರಾವಕರ ಉತ್ತಮ ಧರ್ಮವನ್ನು ಧಾರಣ ಮಾಡಿ ಅದನ್ನು ನಿದಾನ ಮಾಡಿ ಕೆಡಿಸುತ್ತಾನೆ. ಅವನು ಸೌದೆಯ ಸಲುವಾಗಿ ಕಲ್ಪವೃಕ್ಷವನ್ನು ಕತ್ತರಿಸಿ ಹಾಕಿದಂತೆಯೇ ಇದೆ. ಈ ಪ್ರಕಾರ ನಿದಾನ ಶಲ್ಯದ ದೋಷಗಳ ವರ್ಣನೆ ಮಾಡಲಾಯಿತು.

**ಮಾಯಾಶಲ್ಯ :** ಮಾಯಾಶಲ್ಯದ ದೋಷಗಳ ವರ್ಣನೆಯನ್ನು ಯಾರು ಮಾಡುವ ಸಾಧ್ಯತೆಯಿದೆ ? ಮಾಯಾಚಾರದ ದೋಷವನ್ನು ಈ ಮೊದಲು ಹೇಳಲಾಗಿದೆ. ಮಾಯಾಚಾರಿಯ ವ್ರತ, ಶೀಲ, ಸಂಯಮಗಳೆಲ್ಲವು ಭ್ರಷ್ಟವಿವೆ. ಯಾರು ಜಿನೇಂದ್ರ ಭಗವಂತರು ಹೇಳಿದ ಧರ್ಮದ ಧಾರಣ ಮಾಡಿ ತಮ್ಮ ಆತ್ಮನನ್ನು ದುರ್ಗತಿಗಳ ದುಃಖಗಳಿಂದ ರಕ್ಷಿಸ ಬಯಸುತ್ತಿದ್ದರೆ ಅವರು ಮಾಯಾ ಶಲ್ಯವನ್ನು ತಮ್ಮ ಹೃದಯದಿಂದ ತೆಗೆದು ಹಾಕುವುದೇ ಕೋಟ್ಯಂತರ ಉಪದೇಶಗಳ ಸಾರವಿದೆ ; ಯಶಸ್ಸು ಮತ್ತು ಧರ್ಮ ಇವೆರಡರ ನಾಶ ಮಾಡುವಂಥ ಮಾಯಾಚಾರದ ತ್ಯಾಗ ಮಾಡಿ, ಸರಳತೆಯನ್ನು ಅಂಗೀಕಾರ ಮಾಡಬೇಕಾಗುವುದು.

**ಮಿಥ್ಯಾದರ್ಶನ ಶಲ್ಯ :** ಮಿಥ್ಯಾತ್ವದ ವರ್ಣನೆ ಮೊದಲು ಮಾಡಲಾಗಿದೆ, **ಅದುವೇ ಸಮಸ್ತ ಸಂಸಾರದ ಬೀಜವಿದೆ. ಮಿಥ್ಯಾತ್ವದ ಪ್ರಭಾವದಿಂದ ಅನಂತಾನಂತ ಪರಿವರ್ತನೆ ಮಾಡಲಾಗಿದೆ. ಮಿಥ್ಯಾತ್ವದ ವಿಷವನ್ನು ವಮನ ಮಾಡಿದಲ್ಲದೆ ಸತ್ಯ ಧರ್ಮದಲ್ಲಿ ಪ್ರವೇಶವೇ ಆಗುವುದಿಲ್ಲ.** ಆದ್ದರಿಂದ ಮಿಥ್ಯಾತ್ವದ ಶಲ್ಯವನ್ನು ಕೂಡಲೇ ತ್ಯಜಿಸಬೇಕು. ಮಾಯೆ, ಮಿಥ್ಯಾತ್ವ, ನಿದಾನ-ಈ ಮೂರು ಶಲ್ಯಗಳ ಅಭಾವವಾದಲ್ಲದೆ ಮುನಿ-ಶ್ರಾವಕ ಧರ್ಮವೆಂದೂ ಆಗುವುದಿಲ್ಲ, **ನಿಃಶಲ್ಯನೇ ವ್ರತಿಯಾಗುತ್ತಾನೆ.**

**ಕುಸಂಗತಿ ತ್ಯಾಗದ ಪ್ರೇರಣೆ :-** ದುಷ್ಟ ಜನರ ಸಂಗತಿ ಮಾಡಬೇಡಿರಿ. ಯಾರ ಸಂಗತಿಯಿಂದ ಪಾಪದಲ್ಲಿ ಗ್ಲಾನಿಯೆನಿಸುವುದಿಲ್ಲ, ಪಾಪದಲ್ಲಿ ಪ್ರವೃತ್ತಿಯಾಗುತ್ತದೆ ಅಂಥವರಸಂಗತಿಯನ್ನೆಂದೂ ಮಾಡಬಾರದು. ಜೂಜುಗಾರ, ಕಳ್ಳ, ಕಪಟಿ, ಪರಸ್ತ್ರೀ ಲಂಪಟ, ಜಿಹ್ವೇಂದ್ರಿಯದ ಲೋಲುಪಿ, ಕುಲಾಚಾರದಿಂದ ಭ್ರಷ್ಟ, ವಿಶ್ವಾಸಘಾತಕ, ಮಿತ್ರದ್ರೋಹಿ, ಗುರುದ್ರೋಹಿ, ಧರ್ಮದ್ರೋಹಿ, ಅಪಯಶದ ಭಯದಿಂದ ರಹಿತ, ನಿರ್ಲಜ್ಜ, ಪಾಪಕ್ರಿಯೆಯಲ್ಲಿ ನಿಪುಣ, ವ್ಯಸನೀ,

ಅಸತ್ಯವಾದಿ, ಅಸಂತೋಷಿ, ಅತಿಲೋಭೀ, ಅತಿನಿರ್ದಯೀ, ಕರ್ಕಶ ಪರಿಣಾಮಿ, ಕಲಹಪ್ರಿಯ, ವಿಸಂವಾದೀ, ದುರಾಚಾರೀ, ಪ್ರಚಂಡ ಪರಿಣಾಮಿ, ಅತಿಕ್ರೋಧೀ, ಪರಲೋಕದ ಅಭಾವ ಹೇಳುವಂಥ ನಾಸ್ತಿಕ, ಪಾಪದ ಭಯವಿಲ್ಲದವ, ತೀವ್ರ ಆಸಕ್ತಿಯ ಧಾರಕ, ಅಭಕ್ಷ್ಯದ ಭಕ್ಷಕ, ವೇಶ್ಯಾಸಕ್ತ, ಸೆರೆಗುಡುಕ, ನೀಚಕರ್ಮ ಮಾಡುವಂಥವ ಇವರೇ ಮೊದಲಾದವರ ಸಂಗತಿಯನ್ನು ಮಾಡಬಾರದು.

ಶ್ರಾವಕಧರ್ಮದ ರಕ್ಷಣೆ ಮಾಡಬಯಸುತ್ತಿದ್ದರೆ, ತಮ್ಮ ಹಿತ ಮಾಡಿಕೊಳ್ಳಬಯಸುತ್ತಿದ್ದರೆ ಕುಸಂಗತಿಯನ್ನು ಅಗ್ನಿಯ ಸಮಾನ ವಿಷದ ಸಮಾನ ದುಃಖಕರವೆಂದು ತಿಳಿದುಕೊಂಡು ದೂರದಿಂದಲೇ ಬಿಟ್ಟುಬಿಡಬೇಕು. **ಎಂಥವರ ಸಹವಾಸ ಮಾಡುವಿರಿ, ಅವರಲ್ಲಿಯೇ ಪ್ರೀತಿಯಾಗುವುದು; ಯಾರಲ್ಲಿ ಪ್ರೀತಿಯಾಗುವುದು, ಅವರದೇ ವಿಶ್ವಾಸವಾಗುವುದು; ವಿಶ್ವಾಸವಾಗುವುದರಿಂದ ಅವರಂತೇಯೇ ಆಗುವ ಭಾವವಾಗುತ್ತದೆ, ಆದುದರಿಂದ ಎಂಥವರ ಸಂಗತಿ ಮಾಡುವಿರಿ ಅಂಥವರೇ ಆಗುವಿರಿ.** ಅಚೇತನವಿರುವ ಮಣ್ಣು ಕೂಡ ಸಂಸರ್ಗದಿಂದ ಸುಗಂಧಮಯ ಅಥವಾ ದುರ್ಗಂಧಮಯವಾಗಿ ಹೋಗುತ್ತದೆಯೆಂದ ಮೇಲೆ ಚೇತನಮನುಷ್ಯನು ಸಂಗತಿಯಿಂದ ಇತರರ ಗುಣರೂಪ ಅಥವಾ ದುರ್ಗುಣ ರೂಪವಾಗಿ ಹೇಗೆ ಪರಿಣಮಿಸಲಾರನು ?

**ಯಾವನು ಎಂಥವರ ಮಿತ್ರತೆ ಮಾಡುತ್ತಾನೆ ಅವನು ಅವರಂತಯೇ ಆಗಿ ಹೋಗುತ್ತಾನೆ.** ದುರ್ಜನರ ಸಂಗತಿ ಮಾಡುವುದರಿಂದ ಸಜ್ಜನನೂ ತನ್ನ ಸಜ್ಜನತೆಯನ್ನು ಬಿಟ್ಟುಕೊಟ್ಟು ದುರ್ಜನನಾಗಿ ಹೋಗುತ್ತಾನೆ. ಶೀತಲ ಜಲವು ಕೂಡ ಅಗ್ನಿಯ ಸಂಪರ್ಕ ಮಾಡುವುದರಿಂದ ತನ್ನ ಶೀತಲ ಸ್ವಭಾವವನ್ನು ಬಿಟ್ಟುಕೊಟ್ಟು ತಪ್ತತೆಗೆ ಪ್ರಾಪ್ತವಾಗುತ್ತದೆ. ಹಾಗೆ ಉತ್ತಮ ಪುರುಷನೂ ಅಧಮ ಪುರುಷನ ಸಂಗತಿ ಪಡೆದು ಅಧಮತೆಗೆ ಪ್ರಾಪ್ತನಾಗಿ ಹೋಗುತ್ತಾನೆ. ಹೇಗೆ ದೇವತೆಯ ಮಸ್ತಕದ ಮೇಲಿರುವಂಥ ಸುಗಂಧಿತ ಪುಷ್ಪಗಳಮಾಲೆಯೂ ಶವದ ಶರೀರದ ಸಂಸರ್ಗ ಮಾಡಿ ಸ್ಪರ್ಶ ಮಾಡಲೂ ಯೋಗ್ಯ ಉಳಿಯುವುದಿಲ್ಲ, ಹಾಗೆ ದುಷ್ಟರ ಸಂಗತಿಯಿಂದ ತ್ಯಾಗೀ ಸಂಯಮಿ ಪುರುಷರಲ್ಲಿ ಕೂಡ ದೋಷವಿರುವ ಸಂದೇಹ ಮಾಡಲಾಗುತ್ತದೆ. ಕಲಾಲನ (ಮದ್ಯ ಮಾರುವವನ) ಕೈಯಲ್ಲಿ ಹಾಲು ತುಂಬಿದ ಕೊಡವಿದ್ದರೂ ಕೂಡ ಅದರಲ್ಲಿ ಮದ್ಯವಿರುವುದರ ಸಂದೇಹ ಉತ್ಪನ್ನವಾಗುತ್ತದೆ; ಮತ್ತುಕಲಾಲನ ಮನೆಯಲ್ಲಿ ಹಾಲು ಕುಡಿಯುತ್ತಿರುವ ಬ್ರಾಹ್ಮಣನೂ ಜನರಿಗೆ ಮದ್ಯಪಾನ ಮಾಡುತ್ತಿರುವುದರ ಶಂಕೆಯನ್ನುತ್ಪನ್ನ ಮಾಡಿಸುತ್ತಾನೆ.

**ಜನರಂತೂ ಇತರರ ಛಿದ್ರ ನೋಡುವಂಥವರಿದ್ದಾರೆ, ಇತರರ ದೋಷ ಹೇಳುವಲ್ಲಿ ಆಸಕ್ತರಿದ್ದಾರೆ,** ನೀವು ದುಷ್ಟರ, ದುರಾಚಾರಿಗಳ ಸಂಗತಿ ಮಾಡಿದರೆ ತಾವು ಕೂಡ ಜನರಲ್ಲಿ ನಿಂದೆಗೆ ಪ್ರಾಪ್ತರಾಗಿ ಧರ್ಮದ ಅವಮಾನ (ನಿಂದೆ) ಮಾಡುವಿರಿ,ಆದುದರಿಂದ ಕುಸಂಗತಿಯನ್ನು ಮಾಡಬೇಡಿರಿ. ದುಷ್ಟ ಮನುಷ್ಯರ ಸಂಗತಿಯಿಂದ ನಿರ್ದೋಷ ಮನುಷ್ಯರು ಕೂಡ ಶೀಘ್ರವಾಗಿ ದೋಷಯುಕ್ತ ಮಿಥ್ಯಾಮಾರ್ಗಿಯಾಗಿ ಬಿಡುತ್ತಾರೆ. **ಮಿಥ್ಯಾತ್ವ ಮತ್ತು ಕಷಾಯಗಳ ಪರಿಚಯವಂತೂ ಅನಾದಿಕಾಲದ್ದಿದೆ; ಆದರೆ ವೀತರಾಗ ಭಾವವಂತೂ ಈಗ ಮಹಾಕಷ್ಟದಿಂದ ಉತ್ಪನ್ನವಾಗಿದೆ, ಕುಸಂಗತಿಯನ್ನು ಪಡೆದು ಕ್ಷಣ ಮಾತ್ರದಲ್ಲಿ ಹೊರಟು ಹೋಗುವುದು.**

ಅನಾದಿಕಾಲದ ಮೋಹ ಕರ್ಮವು ಅತ್ಯಂತ ಪ್ರಬಲವಿದೆ. ಅದರ ಉದಯದಿಂದ ಜೀವನು ಯಾವ ಶಿಕ್ಷಣವಿಲ್ಲದೆ ತಾನಾಗಿಯೇ ವಿಷಯ ಕಷಾಯಗಳಲ್ಲಿ ಪ್ರವರ್ತಿಸುತ್ತಾನೆ, ಪುನಃಕುಸಂಗತಿಯಿಂದಂತೂ ಹವೆಯ ಸಂಗತಿಯಿಂದ ಅಗ್ನಿಯ ಸಮಾನ ಅತ್ಯಂತ ಉಜ್ವಲಿತನಾಗಿ ಹೋಗುತ್ತಾನೆ. ಆದುದರಿಂದ ಕುಸಂಗತಿಯನ್ನು ಬಿಟ್ಟುಕೊಟ್ಟು ಶುಭ ಸಂಗತಿ ಮಾಡಬೇಕಾಗುವುದು. ಸಜ್ಜನರುಗಳ ಸಂಗತಿಯಿಂದ ದುಷ್ಟರು ಕೂಡ ತಮ್ಮ ದೋಷಗಳನ್ನು ಬಿಟ್ಟುಕೊಡುತ್ತಾರೆ.

**ಸತ್ಸಂಗತಿ ಮಾಡುವ ಪ್ರೇರಣೆ : ಸತ್ಸಂಗತಿಯಿಂದ ನಿರ್ಗುಣ ಪುರುಷರೂ ಜಗತ್ತಿನಲ್ಲಿ ಮಾನ್ಯರಾಗಿ ಬಿಡುತ್ತಾರೆ.** ನಿರ್ಗಂಧ ಪುಷ್ಪವನ್ನೂ ದೇವತೆಯ ಸಂಗತಿಯಾಗುವುದರಿಂದ ಜನರು ತಮ್ಮ ಮಸ್ತಕದ ಮೇಲೆ ಧರಿಸುತ್ತಾರೆ. ಯಾವೊಬ್ಬ ಪುರುಷನಿಗೂ ಧರ್ಮದಲ್ಲಿ ಪ್ರೀತಿಯಿಲ್ಲದಿದ್ದರೆ, ಪರೀಷಹ ಸಹನೆ ಮಾಡುವಲ್ಲಿ ಮತ್ತು ಇಂದ್ರಿಯ ವಿಷಯಗಳನ್ನು ತ್ಯಾಗ

ಮಾಡುವಲ್ಲಿ ಅತ್ಯಂತ ಪರಾಙ್ಮುಖತೆಯಿದ್ದರೂ ಕೂಡ ಸಂಯಮಿ-ವ್ರತಿ-ತ್ಯಾಗಿ ಪುರುಷರ ಸಂಗತಿಯಲ್ಲಿ ಇರುವುದರ ಪ್ರಭಾವದಿಂದ ಲಜ್ಜೆಯಿಂದ, ಭಯದಿಂದ, ಅಭಿಮಾನದಿಂದ ಅನ್ಯಾಯದ ವಿಷಯ-ಕಷಾಯಗಳಿಂದ ವಿರಕ್ತನಾಗಿ ಹೋಗುತ್ತಾನೆ. ಯಾವನು ಪ್ರಕೃತಿಯಿಂದ ಮಂದ ಕಷಾಯಿ, ಧರ್ಮಾನುರಾಗಿ, ಪಾಪದಿಂದ ಭಯ ಭೀತನಿರುತ್ತಾನೆ ಅವನಿಗೆ ಒಂದು ವೇಳೆ ಉತ್ತಮ ಸಂಗತಿ ದೊರಕಿದರೆ ಪರಮ ಧರ್ಮದ ಗ್ರಹಣವಾಗಿ ಹೋಗುತ್ತದೆ, ಮತ್ತು ಅವನು ಸಂಸಾರದ ದಡವನ್ನೂ ಪ್ರಾಪ್ತಮಾಡಿಕೊಳ್ಳುತ್ತಾನೆ.

ಯಾರಿಂದ ಸಮ್ಯಕ್ ಧರ್ಮದ ಪ್ರವರ್ತನೆಯಾಗುವುದು, ಯಾರ ಸಂಗತಿಯಿಂದ ಅನೇಕ ಜನರು ವಿಷಯ ಕಷಾಯಗಳಿಂದ ವಿರಕ್ತರಾಗಿ ಬಿಡುವರು, ತ್ಯಾಗ-ಸಂಯಮ-ತಪದಲ್ಲಿ ಲೀನರಾಗುವರು, ಅಂಥ ನ್ಯಾಯಮಾರ್ಗಿ ಧರ್ಮಾಚರಣೆಯ ಧಾರಕ ಓರ್ವ ಧರ್ಮಾತ್ಮ ಪುರುಷನಿಂದಲೇ ಜಗತ್ತು ಶೋಭಿಸುತ್ತದೆ, ಕೃತಾರ್ಥವಾಗಿ ಹೋಗುತ್ತದೆ. ಧರ್ಮ ರಹಿತ ವಿಷಯ ಕಷಾಯೀ ಪುರುಷರು ಹೆಚ್ಚಿರುವುದರಿಂದ ಏನು ಸಾಧ್ಯವಿದೆ ? - ಒಂದೇ ಕಲ್ಪವೃಕ್ಷವು ಸಮಸ್ತ ವೇದನೆಯ ನಾಶ ಮಾಡುತ್ತದೆ, ವಾಂಛಿತ ಸುಖವನ್ನು ಕೊಡುತ್ತದೆ; ಆದರೆ ಅಧಿಕ ವಿಷ ವೃಕ್ಷಗಳು ಕೇವಲ ಆಸಕ್ತಿ, ಸಂತಾಪ, ಮರಣದ ಕಾರಣವಿರುವುದರಿಂದ ಅವುಗಳಿಂದೇನು ಸಾಧ್ಯವಿದೆ ?

**ಈ ಜಗತ್ತಿನಲ್ಲಿ ಎಷ್ಟು ಅನರ್ಥಗಳು ಜನ್ಮ ತಾಳುತ್ತವೆ. ಅವೆಲ್ಲವು ಕುಸಂಗದಿಂದ ಆಗುತ್ತವೆ.** ಕುಸಂಗತಿಯಿಲ್ಲದೆ ಯಾವನೂ ಜೂಜುಗಾರ, ಕಳ್ಳ, ಪರಸ್ತ್ರೀ ಲಂಪಟ, ವೇಶ್ಯಾಸಕ್ತ, ಅಭಕ್ಷ್ಯ-ಭಕ್ಷಕ, ಮದ್ಯ ಕುಡುಕನಾಗುವುದಿಲ್ಲ. ದೊಡ್ಡ-ದೊಡ್ಡ ಅನರ್ಥಗಳು-ದೋಷಗಳು ಕುಸಂಗತಿದಿಂದಲೇ ಆಗುತ್ತವೆ. ಆದುದರಿಂದ ಉಭಯಲೋಕಗಳಲ್ಲಿ ತಮ್ಮ ಹಿತ ಬಯಸುತ್ತಿದ್ದರೆ ಕುಸಂಗತಿ ಮಾಡಬಾರದು. ಯಾರು ಉತ್ತಮ ಕುಲ ಉತ್ತಮ ಧರ್ಮ ಪಡೆದರೂ ಕೂಡ ಕುದೇವ-ಕುಧರ್ಮ-ಪಾಖಂಡಿಗಳ ಉಪಾಸನೆ ಮಾಡುತ್ತಾರೆ, ಗಾಂಜ ಸೇದುತ್ತಾರೆ, ಗುಡಗುಡಿ ಸೇದುತ್ತಾರೆ, ತಂಬಾಕು ತಿನ್ನುತ್ತಾರೆ, ರಾತ್ರೀ ಭಕ್ಷಣ ಮಾಡುತ್ತಾರೆ, ವೇಶ್ಯೆಯ ಎಂಜಲು ತಿನ್ನುತ್ತಾರೆ, ಜೂಜು ಆಡುತ್ತಾರೆ, ಕಳವು ಮಾಡುತ್ತಾರೆ, ನಿಂದೆ ಮಾಡುತ್ತಾರೆ, ಪರಧನ-ಪರಸ್ತ್ರೀಯರ ಕಡೆಗೆ ಆಸೆಯಿಂದ ನೋಡುತ್ತಾರೆ, ರಸನೇಂದ್ರಿಯದ ಲೋಲುಪಿಯಿದ್ದಾರೆ, ನಿರ್ದಯ ಪರಿಣಾಮಿ, ಕುವಚನವಾಡುವಲ್ಲಿ ಪ್ರವೃತ್ತ, ಪರವಿಘ್ನ ಸಂತೋಷಿ - ಇವೆಲ್ಲ ದೋಷಗಳು ಸತ್ಸಂಗತಿಯಿಲ್ಲದೆ ಕುಸಂಗತಿಯಿಂದಲೇ ಆಗುತ್ತವೆಯೆಂಬುದನ್ನು ಪ್ರತ್ಯಕ್ಷ ಕಾಣುತ್ತೇವೆ. ಈ ವಿಷಮ ಕಲಿಕಾಲದಲ್ಲಿ ಯಾವನು ಕುಸಂಗತಿಯನ್ನು ಬಿಟ್ಟುಕೊಟ್ಟು ಶುಭ ಸಂಗತಿ ಪಡೆಯುತ್ತಾನೆ ಅವನು ಮಹಾಪುಣ್ಯಾಧಿಕಾರಿಯಾದ ಮನುಷ್ಯನಿದ್ದಾನೆ.

**ಸ್ವಪ್ರಶಂಸೆಯ ತ್ಯಾಗ :** ಜಿನಧರ್ಮವನ್ನು ಧಾರಣ ಮಾಡಿದ್ದರೆ ತಮ್ಮ ಪ್ರಶಂಸೆ ಮತ್ತು ಪರನಿಂದೆಯನ್ನು ಮಾಡಬಾರದು. ಯಾರು ತಮ್ಮ ಮುಖದಿಂದ ತಮ್ಮ ಪ್ರಶಂಸೆ ಮಾಡುತ್ತಾರೆ ಅವರು ತಮ್ಮ ಯಶದ ನಾಶ ಮಾಡಿಕೊಳ್ಳುತ್ತಾರೆ. ಅಭಿಮಾನಿಯ ಹೊರತಾಗಿ ಬೇರೆ ಯಾರೂ ತಮ್ಮ ಪ್ರಶಂಸೆ ಮಾಡಿಕೊಳ್ಳುವುದಿಲ್ಲ, ತನ್ನ ಪ್ರಶಂಸೆ ಮಾಡಿಕೊಳ್ಳುವಂಥ ಪುರುಷನು ಹುಲ್ಲು ಕಡ್ಡಿಯಷ್ಟು ಚಿಕ್ಕವನಾಗುತ್ತಾನೆ, ಅವಜ್ಞೆಗೆ ಪಾತ್ರನಾಗುತ್ತಾನೆ, ಗುಣಗಳು ವಿದ್ಯಮಾನವಿದ್ದರೂ ತನ್ನ ಮುಖದಿಂದ ಹೇಳಿದ ಮೇಲೆ ಅವನು ಗುಣ ರಹಿತನಾಗಿ ದೋಷಗಳಿಗೆ ಪಾತ್ರನಾಗಿ ಹೋಗುತ್ತಾನೆ. ಅವನಲ್ಲಿ ಬೇರೆ ಯಾವ ದೋಷವೇ ಇಲ್ಲ, ಆದರೆ ತನ್ನ ಪ್ರಶಂಸೆಯನ್ನು ತಾನು ಮಾಡಿಕೊಳ್ಳುವುದು ಅದು ಅತ್ಯಂತ ದೊಡ್ಡ ದೋಷವಿದೆ. **ತನ್ನ ಮುಖದಿಂದ ತನ್ನ ಪ್ರಶಂಸೆ ಮಾಡಿಕೊಳ್ಳದಿರುವುದು ಅದು ದೊಡ್ಡ ಗುಣವಿದೆ.**

ತನ್ನ ಗುಣಗಳ ಪ್ರಶಂಸೆ ಮಾಡಿಕೊಳ್ಳದಂಥ ಪುರುಷನ ವಿದ್ಯಮಾನ ಗುಣಗಳು ನಷ್ಟವಾಗಿ ಹೋಗುವುದಿಲ್ಲ, ಹೇಗೆಂದರೆ ತನ್ನ ತೇಜಸ್ಸಿನ ಪ್ರಶಂಸೆ ಮಾಡಿಕೊಳ್ಳದಂಥ ಸೂರ್ಯನ ತೇಜಸ್ಸು ಜಗತ್ತಿನಲ್ಲಿ ವಿಖ್ಯಾತವೇ ಆಗಿರುತ್ತದೆ. ಒಂದು ವೇಳೆ ತನ್ನಲ್ಲಿ ಗುಣಗಳಿಲ್ಲದೆ ತನ್ನ ಪ್ರಶಂಸೆ ಮಾಡಿಕೊಳ್ಳುವುದರಿಂದ ಅವರಲ್ಲಿ ಗುಣವಂತತೆಯು ಪ್ರಕಟವಾಗುವ ಸಾಧ್ಯತೆಯಿಲ್ಲ; ಹೇಗೆಂದರೆ ಸ್ತ್ರೀಯ ಸಮಾನ ಹಾವಭಾವ, ವಿಲಾಸ, ವಿಭ್ರಮ, ಶೃಂಗಾರ, ಬಟ್ಟೆ ಮೊದಲಾದುವನ್ನು ಧಾರಣ ಮಾಡಿ ಸ್ತ್ರೀಯ ಹಾಗೆಯೇ ಆಚರಣೆ ಮಾಡುವಂಥ ನಪುಂಸಕನು ಸ್ತ್ರೀಯಾಗಿ ಹೋಗಲಾರನು, ಅವನು ನಪುಂಸಕನಾಗಿಯೇ ಉಳಿಯುವನು.

ತಮ್ಮಲ್ಲಿ ಗುಣಗಳು ವಿದ್ಯಮಾನವಿದ್ದರೂ ಮತ್ತು ಯಾರಾದರೂ ಅವನ ಕೀರ್ತಿಯ ಸ್ತುತಿ-ಪ್ರಶಂಸೆ ಮಾಡುತ್ತಿದ್ದರೆ ಉತ್ತಮ ಪುರುಷರಂತೂ ತಮ್ಮ ಕೀರ್ತಿ ಕೇಳಿ ಲೋಕದಲ್ಲಿ ಲಜ್ಜೆಯ ಅನುಭವ ಮಾಡುತ್ತಾರೆ. **ಸತ್ಪುರುಷರಿಗೆ ತಮ್ಮ ಕೀರ್ತಿಯು ಒಳ್ಳೆಯದೆನಿಸುವುದಿಲ್ಲ.** ಅವರಂತೂ ತಮ್ಮ ಕೀರ್ತಿ ಕೇಳಿ ಅತ್ಯಂತ ಲಜ್ಜಿತರಾಗಿ ಆತ್ಮನಿಂದೆಯನ್ನೇ ಮಾಡಿಕೊಳ್ಳುತ್ತಾರೆ. ''ನಾನು ಅನೇಕ ದೋಷಗಳಿಂದ ತುಂಬಿದ ಸಂಸಾರಿಯಿದ್ದೇನೆ, ಜನರು ನನ್ನ ಪ್ರಶಂಸೆ ಮಾಡಿ ನನ್ನ ಮೇಲೆ ದೊಡ್ಡ ಭಾರ ಹೊರಿಸುತ್ತಿದ್ದಾರೆ. ಯಾರು ಆತ್ಮನ ಪರಮವಿಶುದ್ಧತೆಯ ಇಚ್ಛುಕರಾಗಿ ಮೋಹ, ಕಾಮ, ಕ್ರೋಧಾದಿಗಳ ಮೇಲೆ ವಿಜಯ ಪ್ರಾಪ್ತ ಮಾಡಿಕೊಂಡಿದ್ದಾರೆ. ಅವರು ಪ್ರಶಂಸಾ ಯೋಗ್ಯರಿದ್ದಾರೆ. ಸಂಸಾರಿಯಾದ ನಾವು ರಾಗ-ದ್ವೇಷಗಳಿಂದ ವ್ಯಾಪ್ತ, ಇಂದ್ರಿಯ ವಿಷಯಗಳ ದಾಸ, ಪರಿಗ್ರಹದಲ್ಲಿ ಆಸಕ್ತ ಅತ್ಯಂತ ನಿಂದಾಯೋಗ್ಯರಿದ್ದೇವೆ. ಯಾರದು ಒಂದು ಗಳಿಗೆಯಾದರೂ ಪ್ರಮಾದದಿಂದ ಯುಕ್ತ ಧರ್ಮದಿಂದ ರಹಿತವಾಗಿ ವ್ಯತೀತವಾಗುತ್ತದೆ ಅವರು ಜಗತ್ತಿನಲ್ಲಿ ಮಹಾಮೂಢರಿದ್ದಾರೆ, ಅತ್ಯಂತ ನಿಂದ್ಯರಿದ್ದಾರೆ.''

**ಈ ಮನುಷ್ಯ ಜನ್ಮವು ಅತ್ಯಂತ ದುರ್ಲಭವಿದೆ, ಪುನಃ ಇದರಲ್ಲಿ ಜಿನಧರ್ಮದ ಪ್ರಾಪ್ತಿಯಾಗುವುದು ಅತಿ ದುರ್ಲಭತರವಿದೆ.** ಇಂಥ ಸಮಯದಲ್ಲಿ ಕೂಡ ಯಾರು ಧರ್ಮ ಬಿಟ್ಟು ವಿಷಯಗಳಲ್ಲಿ ಲೀನರಾಗುತ್ತಾರೆ. ಅವರು ತಮ್ಮ ಮನೆಯಲ್ಲಿ ಉತ್ಪನ್ನವಾದ ಕಲ್ಪವೃಕ್ಷವನ್ನು ಕತ್ತರಿಸಿ ವಿಷವೃಕ್ಷವನ್ನು ನೆಡುತ್ತಾರೆ, ಚಿಂತಾಮಣಿ ರತ್ನವನ್ನು ಕಾಗೆಯನ್ನು ಹಾರಿಸಲು ಎಸೆದು ಬಿಡುತ್ತಾರೆ, ಚಿಂತಾಮಣಿರತ್ನವನ್ನು ಗಾಜಿನ ತುಂಡಿನಲ್ಲಿ ಸೇರಿಸಿ ಮಾರಿ ಬಿಡುತ್ತಾರೆ. **ಕೋಟ್ಯಂತರ ಧನದಲ್ಲೂ ಪ್ರಾಪ್ತವಾಗುವದು ದುರ್ಲಭವಿರುವಂಥ ಈ ಮನುಷ್ಯ ಜನ್ಮದ ಒಂದೊಂದು ಗಳಿಗೆಯೂ ವ್ಯರ್ಥವಾಗಿ ಹೋಗುತ್ತಿದೆ.** ''ನಾನು ಕೂಡ ಅನ್ಯ ಜನರ ಕಥೆಯಲ್ಲಿ ಹಾಗೂ ಅವರ ರಾಗ-ದ್ವೇಷರೂಪದ ಪರಿಣತಿಯನ್ನು ನೋಡಿ ಕಷಾಯಯುಕ್ತನಾಗಿ ದುರ್ಧ್ಯಾನದಿಂದ ಮನುಷ್ಯ ಜನ್ಮವನ್ನು ಕಳೆಯುತ್ತಿದ್ದೇನೆ. ಆದುದರಿಂದ ನನ್ನಂಥ ನಿಂದಾಯೋಗ್ಯರು ಬೇರಾರೂ ಇಲ್ಲ.'' ಈ ಪ್ರಕಾರ ತಮ್ಮ ನಿಂದೆ, ಗರ್ಹೆ ಮಾಡಿಕೊಳ್ಳುತ್ತಿರುವ ಉತ್ತಮ ಪುರುಷರಿಗೆ ತಮ್ಮ ಪ್ರಶಂಸೆಯು ಹೇಗೆ ರುಚಿಸುವುದು ? ರುಚಿಸುವುದಿಲ್ಲ, ಅವರಂತೂ ತಮ್ಮನ್ನು ಕೀಳಾಗಿಯೇ ಕಾಣುತ್ತಾರೆ. **ವಚನಗಳಿಂದ ತನ್ನ ಪ್ರಶಂಸೆ ಮಾಡಿಕೊಳ್ಳುವವನು ನೀಚಗೋತ್ರ ಕರ್ಮದ ಬಂಧ ಮಾಡಿಕೊಳ್ಳುತ್ತಾನೆ.** ಇಲ್ಲಿ ಕೂಡ ಜನರಲ್ಲಿ ಮಹಾನಿಂದ್ಯನಾಗುತ್ತಾನೆ. ಸತ್ಪುರುಷರು ತಮ್ಮ ಗುಣಗಳನ್ನು ತಾವು ಪ್ರಕಟ ಮಾಡುವುದಿಲ್ಲ. ಆದಾಗ್ಯೂ ಅವರ ಉಜ್ವಲ ಆಚರಣೆಯಿಂದ ಜಗತ್ತಿನಲ್ಲಿ ಅವರ ಗುಣಗಳು ವಿಖ್ಯಾತವಾಗಿ ಹೋಗುತ್ತವೆ. ಹೇಗೆಂದರೆ ಚಂದ್ರನ ಪ್ರಕಾಶ, ಶೀತಲತೆ ಹಾಗೂ ಆಹ್ಲಾದಕತೆಯು ಹೇಳದೆಯೇ ಜಗತ್ತಿನಲ್ಲಿ ಹರಡಿಹೋಗುತ್ತದೆ.

**ಪರನಿಂದೆಯ ತ್ಯಾಗ :** ಪರರ ನಿಂದೆಯನ್ನೆಂದೂ ಮಾಡಬಾರದು. ಪರನಿಂದೆ ಮಾಡುವುದರ ಸಮಾನ ಬೇರೊಂದು ದೋಷವಿಲ್ಲ. ಪರದ ನಿಂದೆಯು ಮಹಾವೈರದ ಕಾರಣವಿದೆ, ದುರ್ಧ್ಯಾನದ ಕಾರಣವಿದೆ, ಭಯದ ಕಾರಣವಿದೆ, ದುಃಖ-ಶೋಕ-ಪಶ್ಚಾತ್ತಾಪ-ವಿಸಂವಾದ-ಅಪ್ರೀತಿಯ ಕಾರಣವಿದೆ, ನಿಂದೆಯಕಾರಣವಿದೆ. ಇತರರ ನಿಂದೆ ಮಾಡುವಂಥವನು ತನ್ನ ಧರ್ಮ, ಯಶಸ್ಸು, ದೊಡ್ಡಸ್ತನದ ನಾಶ ಮಾಡಿಕೊಳ್ಳುತ್ತಾನೆ. ಯಾರು ಇತರರ ದೋಷ ಪ್ರಕಟ ಮಾಡಿ ಸ್ವಯಂ ನಿರ್ದೋಷರಾಗಲು ಬಯಸುತ್ತಾರೆ, ಅವರು ಇತರರ ಮೂಲಕ ಔಷಧ ಸೇವನೆ ಮಾಡುವುದರಿಂದ ತಮ್ಮ ನಿರೋಗತೆಯನ್ನು ಬಯಸುವಂಥವರ ಸಮಾನರಿದ್ದಾರೆ.

**ಅನ್ಯರ ನಿಂದೆ ಮಾಡುವುದು ಅದು ಕೋಟಿ ದೋಷಗಳ ಶಿರೋಮಣಿಯಿದೆ. ಜಿನಧರ್ಮವನ್ನು ಧಾರಣ ಮಾಡಿದ್ದರೆ ಇನ್ನೊಬ್ಬರ ದೋಷ ಹೇಳಬಾರದು.** ಸತ್ಪುರುಷರುಗಳಂತೂ ಇತರರ ದೋಷ ನೋಡಿ ಸ್ವಯಂ ಲಜ್ಜಿತರಾಗಿ ಹೋಗುತ್ತಾರೆ, ಮತ್ತು ತಮ್ಮ ಸಾಮರ್ಥ್ಯದ ಅನುಸಾರ ಇತರರ ದೋಷ ಮರೆ ಮಾಡುತ್ತಾರೆ; ಅವರಂತೂ ಯಾವ ಪ್ರಕಾರ ತಮ್ಮ ಅಪವಾದದಿಂದ ಹೆದರುತ್ತಾರೆ. ಅದೇ ಪ್ರಕಾರ ಇತರರ ಅಪವಾದವಾಗುವುದರ ಕುರಿತು ಅತ್ಯಂತ ಭಯಭೀತರಿರುತ್ತಾರೆ.

ಸಂಸಾರೀ ಜೀವರುಗಳಿಗೆ ಜ್ಞಾನಾವರಣ-ದರ್ಶನಾವರಣ ಕರ್ಮದ ಉದಯವು ಪ್ರಬಲವಿದ್ದು ಅದರ ಕಾರಣ ಜೀವರುಗಳು ಅಜ್ಞಾನಕ್ಕೆ ಪ್ರಾಪ್ತರಾಗುತ್ತಿದ್ದಾರೆ. ಮೋಹನೀಯ ಕರ್ಮದ ಉದಯದಿಂದ ರಾಗೀ, ದ್ವೇಷೀ, ಕಾಮೀ, ಕ್ರೋಧೀ, ಲೋಭೀ, ಮಾನೀ, ಕಪಟಿಗಳಾಗುತ್ತಿದ್ದಾರೆ. ಭಯವಂತ, ಶೋಕವಂತ, ಗ್ಲಾನಿವಂತ, ರತಿಯ ವಶೀಭೂತ, ಅರತಿಯ ವಶೀಭೂತರಾಗಿ ಅನೇಕ ವಿಕಾರರೂಪದ ಕುಚೇಷ್ಟೆಗಳನ್ನು ಮಾಡುತ್ತಲಿದ್ದಾರೆ.

ಯಾವ ಪ್ರಕಾರ ಒಬ್ಬನು ಮದ್ಯ ಕುಡಿದು ಪರವಶನಾಗಿ ತನ್ನನ್ನು ಮರೆತು ಬಿಡುತ್ತಾನೆ; ಮದ್ದಗುಣಿಕೆ ತಿಂದು ಉನ್ಮತ್ತತೆಯಿಂದ ಪರವಶನಾಗಿ ತನ್ನನ್ನು ಮರೆತು ನಿಂದ್ಯ ಚೇಷ್ಟೆ ಮಾಡತೊಡಗುತ್ತಾನೆ; ಅದೇ ಪ್ರಕಾರ ಸಂಸಾರೀ ಜೀವನು ವಿಷಯ ಕಷಾಯಗಳ ವಶನಾಗಿ ನಿಂದ್ಯ ಚೇಷ್ಟೆ ಮಾಡುತ್ತಾನೆ. ಅವನ ಮೇಲಂತೂ ಕರುಣೆ ಮಾಡಬೇಕು, ದೋಷಗಳಿಂದ ಬಿಡಿಸಬೇಕು; ನಿಂದೆ, ದೂಷಣೆ ಹೇಗೆ ಮಾಡುವುದು ? ಇತರರ ದೋಷಾರೋಪಣೆ ಮಾಡಿ ಅನೇಕ ನಿಂದ್ಯ ಪರ್ಯಾಯಗಳಲ್ಲಿ ದುರ್ಗತಿಗಳಲ್ಲಿ ತಿರಸ್ಕಾರವನ್ನೇ ಪಡೆಯಲಾಗಿದೆ.

ಸಮ್ಯಗ್ದೃಷ್ಟಿಯಂತೂ ನಿತ್ಯ ಪ್ರಾರ್ಥಿಸುವುದೇನೆಂದರೆ ಇತರರ ದೋಷ ಹೇಳುವಲ್ಲಿ ನನಗೆ ಗಾಢ ಮೌನವಿರಲಿ, ಸಮಸ್ತ ಜೀವರುಗಳ ಕುರಿತು ನನ್ನಿಂದ ಪ್ರಿಯ ಹಿತರೂಪ ವಚನಗಳೇ ಹೊರಡಲಿ, **ಜಿನಧರ್ಮಿಗಳು ಗುಣಗ್ರಾಹಿಗಳೇ ಇರುತ್ತಾರೆ.** ಅವರು ಮಿಥ್ಯಾ ದೃಷ್ಟಿಗಳ, ತೀವ್ರ ಕಷಾಯೀ ಜೀವರುಗಳ ಮಿಥ್ಯಾ ಆಚರಣೆಯನ್ನು ನೋಡಿ ವೈರ ಬುದ್ಧಿಯಿಂದ ನಿಂದೆ ಮಾಡುವುದಿಲ್ಲ, ಇವರ ನಿಂದೆಯಾದರೆ ಒಳ್ಳೆಯದಿದೆಯೆಂದು ಅವರ ಅಭಿಪ್ರಾಯವಿರುವುದಿಲ್ಲ, ಅವರಂತೂ ದೋಷಗಳನ್ನು **ಮಿಥ್ಯಾತ್ವವನ್ನು ಅನಂತಕಾಲದವರೆಗೆ ದುಃಖ ಕೊಡುವಂಥವುಗಳೆಂದು ತಿಳಿದುಕೊಂಡು** ಕರುಣೆಯ ಬುದ್ಧಿಯಿಂದ ಮಂದಕಷಾಯವುಳ್ಳ ಜೀವರುಗಳಿಗೆ ಗುಣ-ದೋಷಗಳ ಹಾನಿ-ವೃದ್ಧಿಯ ಸ್ವರೂಪವನ್ನು ತೋರಿಸಿಕೊಡುತ್ತಾರೆ.

**ನಿದ್ರೆಯ ತ್ಯಾಗ :** ನಿದ್ರೆ, ಆಲಸ್ಯ, ಪ್ರಮಾದಗಳ ಮೇಲೆ ವಿಜಯ ಸಾಧಿಸಬೇಕು. ನಿದ್ರೆಯು ಸಮಸ್ತ ಧರ್ಮದ ಅಭಾವ ಮಾಡುತ್ತದೆ. ಯಾರು ನಿದ್ರೆಯನ್ನು ಜಯಿಸಿಲ್ಲ ಅವರ ಆರು ಅವಶ್ಯಕ, ಸ್ವಾಧ್ಯಾಯ, ಧ್ಯಾನ, ಜಪ ಮೊದಲಾದ ಸಮಸ್ತ ಉತ್ತಮ ಕಾರ್ಯಗಳು ನಷ್ಟವಾಗಿ ಹೋಗುತ್ತವೆ. ಮುನಿಗಳಿಗಂತೂ ನಿದ್ರೆಯನ್ನು ಜಯಿಸುವ ಸಲುವಾಗಿಯೇ ತಪಸ್ಸು ಇದೆ. ದರ್ಶನಾವರಣಕರ್ಮದ ಉದಯಜನಿತ ನಿದ್ರೆಯು ಸರ್ವಘಾತಿ ಪ್ರಕೃತಿಯಿದೆ. ಆತ್ಮನನ್ನು ಅಚೇತನದ ಹಾಗೆಯೇ ಮಾಡಿ ಬಿಡುತ್ತದೆ. ಯಾರು ನಿದ್ರೆಯನ್ನು ಜಯಿಸುವುದಿಲ್ಲ ಅವರ ಸಮಸ್ತ ಹಿತರೂಪದ ಕಾರ್ಯಗಳು ನಷ್ಟವಾಗಿ ಹೋಗುವವು.

ಶಾಸ್ತ್ರ ಓದುವ ಸಮಯ ಅಥವಾ ಕೇಳುವ ಸಮಯದಲ್ಲಿ ನಿದ್ರೆಯು ಬಂದು ಬಿಟ್ಟರೆ, ತೂಕಡಿಕೆಯು ಬಂದು ಬಿಟ್ಟರೆ ಶಾಸ್ತ್ರ ಓದುವುದು-ಕೇಳುವುದು ಆಗುವುದಿಲ್ಲ, ಆದರೆ ಶಾಸ್ತ್ರ ಓದುವಲ್ಲಿ-ಕೇಳುವಲ್ಲಿ ಅರುಚಿಯಾಗುವುದು. ಧ್ಯಾನ, ಸಾಮಾಯಿಕ ಮಾಡುವ ಸಮಯದಲ್ಲಿ ನಿದ್ರೆಯು ಬಂದು ಬಿಟ್ಟರೆ ಧ್ಯಾನ, ಜಪ, ಸಾಮಾಯಿಕ, ಆತ್ಮಧ್ಯಾನ, ಭಾವನೆಗಳೆಲ್ಲವೂ ನಷ್ಟವಾಗಿ ಹೋಗುವವು. ನಿದ್ರೆಯಲ್ಲಿ ಜೀವವು ಏಕೇಂದ್ರಿಯದ ಸಮಾನವಾಗಿ ಹೋಗುತ್ತದೆ. ನಿದ್ರೆಯು ಸಮಸ್ತ ಜ್ಞಾನವನ್ನು ನಷ್ಟಮಾಡಿ ಬಿಡುತ್ತದೆ. **ನಿದ್ರೆಯ ಸಮಯದೊಳಗೆ ಆತ್ಮನಲ್ಲಿ ಬುದ್ಧಿಪೂರ್ವಕ ಅನೇಕ ವಿಕಲ್ಪಗಳು ಉತ್ಪನ್ನವಾಗುತ್ತವೆ.** ಬುದ್ಧಿ ಪೂರ್ವಕವಾಗಿ ಆತ್ಮನ ಹಿತ ಮಾಡುವ ಭಾವನೆಯ ಅಭಾವವಾಗಿ ಹೋಗುತ್ತದೆ.

**ಹಗಲು ಹೊತ್ತಿನಲ್ಲಿ ನಿದ್ರೆ ಮಾಡುವುದರಿಂದ ದರ್ಶನಾವರಣ ಕರ್ಮದ ಆಸ್ರವವಾಗುತ್ತದೆ.** ಮುನಿರಾಜರಂತೂ ಒಂದು ಪ್ರಹರ ರಾತ್ರಿಯು ಕಳೆದು ಹೋದ ನಂತರ ಖೇದ-ಪ್ರಮಾದಗಳ ನಿವಾರಣೆಯ ಸಲುವಾಗಿ ಮಧ್ಯರಾತ್ರಿಯಲ್ಲಿ ಎರಡು ಪ್ರಹರ ಶಯನ ಮಾಡುತ್ತಾರೆ. ಸ್ವಲ್ಪ ನಿದ್ರೆ ಮಾಡಿ ಪುನಃ ಜಾಗೃತರಾಗಿ ಹನ್ನೆರಡು ಭಾವನೆಗಳ ಚಿಂತನೆ ಮಾಡುತ್ತಾರೆ, ಪುನಃ ಕ್ಷಣ ಮಾತ್ರ ನಿದ್ರೆ ಬಂದು ಹೋಗುತ್ತದೆ, ಪುನಃ ಜಾಗೃತರಾಗಿ ಧರ್ಮಧ್ಯಾನದಲ್ಲಿ ಲೀನರಾಗಿ ಹೋಗುತ್ತಾರೆ. ಈ ಪ್ರಕಾರ ಮಧ್ಯದ ಎರಡು ಪ್ರಹರಗಳಲ್ಲಿ ಕೂಡ ಅನೇಕ ಬಾರಿ ಜಾಗೃತರಾಗಿ ಧರ್ಮಧ್ಯಾನ ಮಾಡುತ್ತಿರುತ್ತಾರೆ. **ಎಂದಾದರೊಮ್ಮೆ ಮುಹೂರ್ತ ಮಾತ್ರದ ನಿದ್ರೆಯಲ್ಲೂ ಅಚೇತರಾಗಿ ಹೋಗುತ್ತಿದ್ದರೆ ನಿದ್ರೆಯನ್ನು ಜಯಿಸುವ ಸಲುವಾಗಿ ಒಂದು ಉಪವಾಸ, ಎರಡು ಉಪವಾಸ, ಮೂರು ಉಪವಾಸ, ನಾಲ್ಕು, ಐದು ಇತ್ಯಾದಿ ಉಪವಾಸ ಮತ್ತು ರಸಪರಿತ್ಯಾಗ ಮೊದಲಾದ ಮಹಾನ ಅನಶನ ಮೊದಲಾದ ತಪಗಳ ಮೂಲಕ ನಿದ್ರೆಯ ಅಭಾವ ಮಾಡುತ್ತಾರೆ.** ನಿದ್ರೆಯನ್ನು ಜಯಿಸುವ ಸಲುವಾಗಿ ಮತ್ತು ಕಾಮವನ್ನು ಜಯಿಸುವ ಸಾವಧಾನತೆಯ ಸಲುವಾಗಿ ಯಾವಾಗಲೂ ಅನಶನ ಮೊದಲಾದ ತಪಸ್ಸು ಮಾಡುತ್ತಿರುತ್ತಾರೆ.

ನಿದ್ರೆಯಲ್ಲಿಯಂತೂ ಸಮಸ್ತಪರಿಣಾಮಗಳ ಸಾವಧಾನತೆಯ ಹಾಗೂ ವಚನ-ಕಾಯದ ಸಾವಧಾನತೆಯ ಅಭಾವವಾಗಿ ಹೋಗುತ್ತದೆ, ಯಾರಿಗೆ ಉತ್ತಮ ಮನುಷ್ಯ ಜನ್ಮ ಮತ್ತು ಉತ್ತಮ ಧರ್ಮದ ನಾಶ ಮಾಡಿ ಏಕೇಂದ್ರಿಯ ಸಮಾನವಾಗಿ ಮನುಷ್ಯ ಆಯುವನ್ನು ಪೂರ್ಣ ಮಾಡುವುದಿದೆ ಅವನು ಹೆಚ್ಚು ನಿದ್ರೆ ಮಾಡುತ್ತಾನೆ. **ಹಗಲು ಹೊತ್ತಿನಲ್ಲಿ ನಿದ್ರೆ ಮಾಡುವವನ ವ್ರತ-ಸಂಯಮಗಳೇ ಹೊರಟು ಹೋಗುತ್ತವೆ.** ಖೇದ, ಆಲಸ್ಯ ಮೊದಲಾದುವನ್ನು ದೂರ ಮಾಡುವ ಸಲುವಾಗಿ ರಾತ್ರಿಯಲ್ಲಿ ಅಲ್ಪ ನಿದ್ರೆ ಮಾಡುತ್ತಾರೆ.

**ನಿದ್ರೆ-ಆಲಸ್ಯ ಮೊದಲಾದುವಂತೂ ಜೀವದ ಅಂತರಂಗ ಮಹಾವೈರಿಗಳಿವೆ.** ನಿದ್ರೆಯಲ್ಲಿ ಹೇಯ-ಉಪಾದೇಯ ಕಾರ್ಯ-ಅಕಾರ್ಯ, ಹಿತ-ಅಹಿತ, ಯೋಗ್ಯ-ಅಯೋಗ್ಯದ ವಿಚಾರ ರಹಿತನಾಗುತ್ತಾನೆ. ನಿದ್ರೆಯನ್ನು ಜಯಿಸಿದಲ್ಲದೆ ಈ ಲೋಕದ ಸಮಸ್ತ ಕಾರ್ಯಗಳು ನಷ್ಟವಾಗಿ ಹೋಗುತ್ತವೆಂದ ಮೇಲೆ ಪರಮಾರ್ಥರೂಪದ ಕಾರ್ಯ ಹೇಗಾಗುವವು. ಆದುದರಿಂದ ವಿದ್ಯೆ, ವಿನಯ, ಸಂಯಮ, ತಪ, ಸ್ವಾಧ್ಯಾಯ, ಧ್ಯಾನ, ಜಪದ ಸಿದ್ಧಿಯನ್ನು ಬಯಸುತ್ತಿದ್ದರೆ ನಿದ್ರೆಯನ್ನು ಜಯಿಸಿ, ಖೇದ-ಗ್ಲಾನಿ-ಆಲಸ್ಯಗಳನ್ನು ದೂರ ಮಾಡುವ ಸಲುವಾಗಿ ಅಲ್ಪ ನಿದ್ರೆ ಮಾಡಬೇಕಾಗುವುದು.

**ಎಂಟು ಶುದ್ಧಿಗಳು :** ಈಗ ಎಂಟು ಪ್ರಕಾರದ ಶುದ್ಧಿಯ ವರ್ಣನೆ ಮಾಡುತ್ತಾರೆ. ಈ ಎಂಟು ಶುದ್ಧಿಗಳಂತೂ ಪರಮವೀತರಾಗ ಸಾಧು ಮುನಿಗಳಿಗೇ ಆಗುತ್ತಿದ್ದರೂ ಯಾರು ಸಾಧುತ್ವದ ಧಾರಣ ಮಾಡುವ ಇಚ್ಛೆಯುಳ್ಳವರಿದ್ದಾರೆ ಮತ್ತು ಸಾಧು ಧರ್ಮದ ಭಾವನೆ ಭಾವಿಸುವ ಇಚ್ಛೆಯುಳ್ಳ ಗೃಹಸ್ಥರಿದ್ದಾರೆ. ಅವರು ಈ ಎಂಟು ಶುದ್ಧಿಗಳನ್ನು ತಿಳಿದುಕೊಳ್ಳುವುದು ಯೋಗ್ಯವಿದೆ. ಭಾವಶುದ್ಧಿ, ಕಾಯಶುದ್ಧಿ, ವಿನಯಶುದ್ಧಿ, ಈರ್ಯಾಪಥಶುದ್ಧಿ, ಭಿಕ್ಷಾಶುದ್ಧಿ, ಪ್ರತಿಷ್ಠಾಪನಶುದ್ಧಿ, ಶಯನಾಸನಶುದ್ಧಿ, ಮತ್ತು ವಾಕ್ಯಶುದ್ಧಿಯೆಂದು ಇವು ಎಂಟು ಪ್ರಕಾರದ ಶುದ್ಧಿಗಳಿವೆ.

**ಭಾವಶುದ್ಧಿ :** ಮೋಹನೀಯ ಕರ್ಮದ ಕ್ಷಯೋಪಶಮದಿಂದ ಉತ್ಪನ್ನವಾದ ಮೋಕ್ಷಮಾರ್ಗದಲ್ಲಿನ ರುಚಿಯಿಂದ ಪರಿಣಾಮದಲ್ಲಿ ಎಂಥ ಉಜ್ವಲತೆಯಾಗುತ್ತದೆಯೆಂದರೆ ಕೇವಲ ಒಂದು ರತ್ನತ್ರಯವೇ ಮೋಕ್ಷಮಾರ್ಗವಿದೆ, ಅನ್ಯವೆಲ್ಲವು ಸಂಸಾರದಲ್ಲಿ ಸಿಕ್ಕಿಸುವಂಥ ಕುಮಾರ್ಗಗಳಿವೆಯೆಂಬ ದೃಢ ಶ್ರದ್ಧೆಯು ಉತ್ಪನ್ನವಾಗುತ್ತದೆ. ಆತ್ಮನ ಹಿತವು ಮೋಕ್ಷವಿದೆ, ಈ ಮೋಕ್ಷವು ಕರ್ಮಬಂಧನವಿಲ್ಲದ ಅವಸ್ಥೆಯಿದೆ, ಮತ್ತು ಕರ್ಮಬಂಧನದ ಬಿಡುಗಡೆಯು ರತ್ನತ್ರಯದಿಂದಲೇ ಆಗುತ್ತದೆ. ಇಂಥ ದೃಢ ಶ್ರದ್ಧೆ-ಜ್ಞಾನದಿಂದ ಉತ್ಪನ್ನವಾದ ಸಂಸಾರ-ಶರೀರ-ಭೋಗಗಳಿಂದ ವಿರಕ್ತತೆಯ ರೂಪದ ಸಮಸ್ತ ರಾಗ-ದ್ವೇಷ ಮೊದಲಾದ ಮಲರಹಿತವಾದ ಉಜ್ವಲತೆಯು ಅದು ಭಾವಶುದ್ಧಿಯಿದೆ.

**ಭಾವದೊಳಗಿಂದ ವಿಷಯಗಳ ಇಚ್ಛೆ, ರಾಗ-ದ್ವೇಷಾದಿಗಳ ಉಪದ್ರವ, ಮಿಥ್ಯಾತ್ವರೂಪದ ಮಹಾಮಲವು ದೂರವಾದಲ್ಲದೆ ಮುನಿಯ ಆಚಾರ ಹಾಗೂ ಶ್ರಾವಕನ ಆಚಾರವು ಉಜ್ವಲತೆಗೆ ಪ್ರಾಪ್ತವಾಗುವುದಿಲ್ಲ,** ಯಾವ ಪ್ರಕಾರ ಅತ್ಯಂತ ಸ್ವಚ್ಛವಿರುವ ಗೋಡೆಯ ಮೇಲೆ ಚಿತ್ರವು ಚೆನ್ನಾಗಿ ಮೂಡುತ್ತದೆ, ಅದೇ ಮಲಿನವಾದ ಗೋಡೆಯ ಮೇಲೆ ಚಿತ್ರಕಾರನು ಎಷ್ಟೇ ಜಾಗರೂಕತೆಯಿಂದ ಚಿತ್ರ ಬರೆದರೂ ಅದು ಸರಿಯಾಗಿ ಬರುವುದಿಲ್ಲ; ಅದೇ ಪ್ರಕಾರ **ಮಿಥ್ಯಾತ್ವ ಹಾಗೂ ಕಷಾಯಗಳಿಂದ ಲಿಪ್ತನಿರುವ ಪುರುಷನಿಗೆ ಕೂಡ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರಗಳಾಗುವುದಿಲ್ಲ,** ಈ ಪ್ರಕಾರ ಈ ಭಾವಶುದ್ಧಿಯನ್ನು ಹೇಳಲಾಯಿತು.

**ಕಾಯಶುದ್ಧಿ :-** ಸಾಧುಗಳ ಕಾಯಶುದ್ಧಿಯು ಹೇಗಿರುತ್ತದೆಂಬುದನ್ನು ಹೇಳುತ್ತಾರೆ. ಅದು ಆವರಣರಹಿತ, ಆಭರಣ ರಹಿತ, ಸಂಸ್ಕಾರ ರಹಿತ, ವಿಕಾರ ರಹಿತ ಮತ್ತು ಯತ್ನಾಚಾರ ಸಹಿತವಿದ್ದು ಅವರ ಆ ಶುದ್ಧಿಯ ಹೆಸರು ಕಾಯಶುದ್ಧಿಯಿದೆ. ಅವರು ನೂಲಿನ, ರೇಶ್ಮೆಯ, ಸಣಬಿನ, ಹುಲ್ಲಿನ, ರೋಮದ, ಚರ್ಮದ, ವೃಕ್ಷದ ಎಲೆಯ-ಸಿಪ್ಪೆಯ ವಸ್ತ್ರಗಳ ಆವರಣದಿಂದ ರಹಿತ ಮತ್ತು ಭಸ್ಮ ಬಳೆಯುವುದರಿಂದ ರಹಿತ ಹಾಗೂ ಆವರಣರಹಿತವಿರುವುದು ಅದು ಅವರ ಕಾಯಶುದ್ಧಿಯಿದೆ. ಅದು ಸಮಸ್ತ ಆಭರಣಗಳಿಂದ ರಹಿತವಿದೆ, **ಅದು ಸ್ನಾನ, ಗಂಧ, ಲೇಪನ ಮೊದಲಾದ ಸಂಸ್ಕಾರದಿಂದ ರಹಿತವಿದೆ.** ಶರೀರದ ಮೇಲೆ ಮಣ್ಣು, ಧೂಳು, ತೃಣ, ಬೆವರು ಮೊದಲಾದವು ಮೆತ್ತಿಕೊಂಡರೂ ಅದನ್ನು ದೂರ

ಮಾಡದಿರುವುದು ಅದು ಸಂಸ್ಕಾರರಹಿತವಿದೆ. ಕಣ್ಣು, ಮೂಗು, ಮಸ್ತಕ, ಲಲಾಟ, ಓಷ್ಠ, ಸ್ಕಂಧ, ಕೈ, ಬೆರಳು ಇತ್ಯಾದಿಗಳನ್ನು ಅಲ್ಲಾಡಿಸಿ ಸಂಕೇತ ಮಾಡುವ ರೂಪದ ವಿಕಾರದಿಂದ ರಹಿತವಿದೆ.

ಸರ್ವತ್ರ ಕ್ರಿಯೆಯಲ್ಲಿ ಯತ್ನಾಚಾರದೊಡನೆ ಪ್ರಶಮ ಸುಖದ ಮೂರ್ತಿಯ ಸಮಾನವೇ ಕಂಡು ಬರುತ್ತಾರೆ. ಅದೇನು ಶರೀರವಿದ್ದರೂ ಅವರಿಗೆ ಬೇರೆ ಯಾವುದರಿಂದಲೂ ಭಯವಿಲ್ಲ, ಮತ್ತು ಬೇರೆ ಯಾವುದಕ್ಕೂ ಅವರಿಂದ ಭಯವಿಲ್ಲದಂಥ ಕಾರ್ಯದ ವಿಶುದ್ಧಿಯು ಸಾಧುಗಳಿಗೇ ಇರುತ್ತದೆ. ಏಕದೇಶ ಶುದ್ಧಿಯ ಧಾರಕರಾದ ಶ್ರಾವಕರು ಕೂಡ ಅವುಗಳಿಂದ ತಮಗೆ ಹಾಗೂ ಇತರರಿಗೆ ಕಾಮಭಾವ ಉತ್ಪನ್ನವಾಗದಂಥ ಅಭಿಮಾನವುತ್ಪನ್ನವಾದಂಥ, ಭಯವು ಉತ್ಪನ್ನವಾಗದಂಥ ವಸ್ತ್ರಾಭರಣಗಳನ್ನು ಧರಿಸುತ್ತಾರೆ. ಜನರಲ್ಲಿ ಮಾನ್ಯ ತಮ್ಮ ಪದವಿಗೆ ಅನುಕೂಲ, ಅವಸ್ಥೆಗೆ ಯೋಗ್ಯವಿರುವ ಬಟ್ಟೆಗಳನ್ನು ತೊಡುವುದು ಮತ್ತು ಅಂಗಗಳ ಚೇಷ್ಟೆ ಕಣ್ಣುಗಳಿಂದ ನೋಡುವುದು, ವಚನಗಳನ್ನಾಡುವುದು, ಕೂಡ್ರುವುದು, ಮಲಗುವುದು, ನಡೆಯುವುದು, ರಾಗ, ಅಭಿಮಾನ ಮೊದಲಾದ ದೋಷಗಳಿಂದ ರಹಿತವಾದ ಪ್ರವರ್ತನೆ ಮಾಡುವುದು ಅದು ಕಾಯಶುದ್ಧಿಯಿದೆ.

**ವಿನಯಶುದ್ಧಿ :** ಅರಹಂತ ಮೊದಲಾದ ಪರಮಗುರುಗಳ ಪೂಜೆಯಲ್ಲಿ ಯಥಾಯೋಗ್ಯ ಲೀನತೆ ಮತ್ತು ಸಮ್ಯಗ್ಜ್ಞಾನಾದಿಗಳಲ್ಲಿ ಯಥಾವಿಧಿ ಭಕ್ತಿ ಸಹಿತವಾಗಿರುವುದು ಅದು ವಿನಯಶುದ್ಧಿಯಿದೆ. ಯಾವಾಗಲೂ ಗುರುಗಳಿಗೆ ಅನುಕೂಲವಾಗಿ ಪ್ರವರ್ತಿಸುವುದು, ಪ್ರಶ್ನೆ ಮಾಡುವಲ್ಲಿ, ಸ್ವಾಧ್ಯಾಯದಲ್ಲಿ, ವಾಚನದಲ್ಲಿ, ಕಥನದಲ್ಲಿ, ವಿನಂತಿಯಲ್ಲಿ ನಿಪುಣತೆ ಮತ್ತು ದೇಶ, ಕಾಲ, ಭಾವಗಳನ್ನು ತಿಳಿದುಕೊಂಡು ದಕ್ಷತೆಯೊಡನೆ ಆಚಾರ್ಯರಿಗೆ ಅನುಕೂಲವಾಗಿ ಪ್ರವರ್ತಿಸುವುದು-ಆಚರಣೆ ಮಾಡುವುದು ಅದು ವಿನಯಶುದ್ಧಿಯಿದೆ. ವಿನಯವೇ ಸಮಸ್ತ ಚಾರಿತ್ರಸಂಪದದ ಮೂಲವಿದೆ, ವಿನಯವೇ ಪುರುಷನ ಆಭೂಷಣವಿದೆ, ವಿನಯವೇ ಸಂಸಾರ ಸಾಗರದಿಂದ ದಾಟುವ ಸಲುವಾಗಿ ನೌಕೆಯಿದೆ. ಆದುದರಿಂದ ಗೃಹಸ್ಥರು ಕೂಡ ಮನ-ವಚನ-ಕಾಯದಿಂದ ಪ್ರತ್ಯಕ್ಷ-ಪರೋಕ್ಷ ವಿನಯವನ್ನು ಧಾರಣ ಮಾಡಬೇಕು. ಇದರ ವಿಶೇಷ ವರ್ಣನೆಯನ್ನು ಮುಂದೆ ತಪದ ಪ್ರಕರಣದಲ್ಲಿ ಮಾಡಲಾಗುವುದು.

**ಈರ್ಯಾಪಥಶುದ್ಧಿ :** ಸಾಧುಗಳ ಈರ್ಯಾಪಥ ಶುದ್ಧಿಯು ಹೀಗಿರುತ್ತದೆ. ಅನೇಕ ಪ್ರಕಾರದ ಜೀವಗಳ ಸ್ಥಾನ, ಜೀವಗಳ ಉತ್ಪತ್ತಿರೂಪ ಯೋನಿ ಹಾಗೂ ಜೀವವಿರುವಂಥ ಯಾವ-ಯಾವ ಆಶ್ರಯ ಸ್ಥಾನಗಳಿವೆ ಅವನ್ನು ತಿಳಿದುಕೊಂಡು ಯತ್ನಾಚಾರಪೂರ್ವಕ ಆ ಜೀವಗಳಿಗೆ ಕಷ್ಟವಾಗುವುದನ್ನು ದೂರದಿಂದಲೇ ತ್ಯಾಗ ಮಾಡಿ ಗಮನ ಮಾಡುತ್ತಾರೆ. ತಮ್ಮ ಜ್ಞಾನದಿಂದ ಸೂರ್ಯಪ್ರಕಾಶದಲ್ಲಿ ನೇತ್ರೇಂದ್ರಿಯದ ಮೂಲಕ ಬೆಳಕಿನಲ್ಲಿ ನೋಡುತ್ತ ಗಮನ ಮಾಡುತ್ತಾರೆ. ಮಾರ್ಗದಲ್ಲಿ ಅವಸರದೊಡನೆ ಶೀಘ್ರತೆಯಿಂದ ಗಮನ, ವಿಲಂಬತೆಯೊಡನೆ ಗಮನ, ಸಂಭ್ರಮಪೂರ್ವಕ (ಮರೆತು) ಗಮನ, ವಿಸ್ಮಯ ರೂಪದ ಆಶ್ರಯ ಮಾಡುತ್ತ ಗಮನ, ಕ್ರೀಡೆ ಮಾಡುತ್ತ ಗಮನ, ಶರೀರವನ್ನು ವಿಕಾರಯುಕ್ತವಾಗಿ ಮಾಡುತ್ತ ಗಮನ, ದಿಸೆಗಳ ಕಡೆಗೆ ನೋಡುತ್ತ ಗಮನ ಮಾಡುವುದು-ಇವು ಗಮನದ ದೋಷಗಳಿವೆ. ಈ ದೋಷಗಳಿಂದ ರಹಿತ ಮುಂದೆ ಮುಂದೆ ನಾಲ್ಕು ಮೊಳ ನೆಲವನ್ನು ನೋಡುತ್ತ, ಯಾವ ಮಾರ್ಗದ ಮೇಲೆ ಅನೇಕ ಮನುಷ್ಯರು, ಚಕ್ಕಡಿ, ಎತ್ತು, ಕುದುರೆ ಮೊದಲಾದವು ನಡೆದು ಹೋಗಿವೆ, ಯಾವ ಮಾರ್ಗದಲ್ಲಿ ಪ್ರಾತಃಕಾಲದ ವಾಯುವಿನ ಸ್ಪರ್ಶವಾಗಿ ಹೋಗಿದೆ, ಯಾವ ಮಾರ್ಗದಲ್ಲಿ ಸೂರ್ಯನ ಕಿರಣಗಳ ಸಂಚಾರವಾಗಿ ಹೋಗಿದೆ ಆ ಮಾರ್ಗದ ಮೇಲೆ ಹಗಲುಹೊತ್ತಿನಲ್ಲಿ ಗಮನ ಮಾಡುವಂಥ ಸಾಧುಗಳಿಗೆ ಈರ್ಯಾಸಮಿತಿಯಿರುತ್ತದೆ.

**ಈರ್ಯಾಸಮಿತಿಯಿದ್ದ ಮೇಲೆಯೇ ಸಂಯಮವು ಪ್ರತಿಷ್ಠಿತ** (ಆದರಯೋಗ್ಯ)**ವಾಗುತ್ತದೆ, ಸುನೀತಿಯು ಇದ್ದ ಮೇಲೆಯೇ ವೈಭವವು ಪ್ರತಿಷ್ಠಿತವಾಗುತ್ತದೆ.** ಇದರದೇ ಏಕದೇಶ ಧರ್ಮವನ್ನು ಅಂಗೀಕಾರ ಮಾಡುವಂಥ ಗೃಹಸ್ಥರು ಕೂಡ ಈರ್ಯಾಪಥದ ಶುದ್ಧಿರೂಪ ಗಮನ ಮಾಡುವ ಭಾವನೆಯನ್ನಿಡಬೇಕು, ಮತ್ತು ಶಕ್ತಿಗನುಸರಿಸಿ ಮಾರ್ಗದಲ್ಲಿ, ಕ್ರಿಮಿ-ಕೀಟಕ, ಹಸಿರು ಹುಲ್ಲು, ಗರಿಕೆ, ಕೊಳಚೆ ಇವೇ ಮೊದಲಾದುವನ್ನು ಉಲ್ಲಂಘಿಸಿ ದಯೆಯ ಪರಿಣಾಮದಿಂದ ಗಮನ ಮಾಡುವುದು ಉಚಿತವಿದೆ. ನೋಡಿ-ಶೋಧಿಸಿ ಗಮನ ಮಾಡುವಂಥ ಗೃಹಸ್ಥರಿಗೆ ಇಹಲೋಕದಲ್ಲಿ ಕೂಡ

ಹೊಂಡದಲ್ಲಿ ಹೊರಳಿ ಬೀಳುವ, ಎಡವುವ, ಚೇಳು-ಸರ್ಪ ಮೊದಲಾದ ದುಷ್ಟ ಜೀವಗಳ ಬಾಧೆಯಾಗುವುದಿಲ್ಲ, ಜಿನದೇವರ ಆಜ್ಞೆಯ ಪಾಲನೆಯೂ ಆಗಿ ಹೋಗುತ್ತದೆ.

**ಭಿಕ್ಷಾಶುದ್ಧಿ:** ಆಹಾರದ ಶುದ್ಧಿ; ಈಗ ಮುನೀಶ್ವರರ ಭಿಕ್ಷಾಶುದ್ಧಿಯ ವರ್ಣನೆ ಮಾಡುತ್ತಾರೆ. ಸಾಧುಗಳು ಯಾವಾಗ ಭಿಕ್ಷೆಯ ಸಲುವಾಗಿ ವನದಿಂದ ನಗರಗಳಿಗೆ ಬರುತ್ತಾರೆ ಆಗ ದೇಶದ ರೀತಿಯನ್ನು ಕಾಲವನ್ನು ತಿಳಿದುಕೊಂಡು ಮತ್ತು ನಗರ-ಗ್ರಾಮಗಳನ್ನು ಉಪದ್ರವ ರಹಿತವೆಂದು ತಿಳಿದುಕೊಂಡು ಹೋಗುತ್ತಾರೆ. ಅಗ್ನಿಯ ಉಪದ್ರವ, ಪರಚಕ್ರದ (ಅನ್ಯ ಧರ್ಮದ ಪ್ರಚಾರ-ಉತ್ಸವದ) ಉಪದ್ರವ, ದೊರೆ ಮೊದಲಾದ ಮಹಂತ ಪುರುಷರ ಮರಣದ ವಿಘ್ನ ಮತ್ತು ತಮ್ಮ ಧರ್ಮದಲ್ಲಿ ವಿಘ್ನವಿರುವುದನ್ನು ತಿಳಿದು ಭಿಕ್ಷೆಗೆ ಹೋಗುವುದಿಲ್ಲ, ಮಹಾ ಹಿಂಸೆಯಾಗುವುದನ್ನು ತಿಳಿದರೂ ಹೋಗುವುದಿಲ್ಲ.

ಯಾವ ಕಾಲದಲ್ಲಿ ಯಂತ್ರಗಳ, ಆಯುಧಗಳ ಅತ್ಯಂತ ಉಗ್ರ ಶಬ್ದವಾಗುತ್ತ ಒಮ್ಮೆಲೆ ಮಂದವಾದರೆ ಮತ್ತು ಅನೇಕ ವೇಷಧಾರಿಗಳು ಭಿಕ್ಷೆಗೆ ಬರುತ್ತಿದ್ದರೆ, ಆ ಕಾಲದಲ್ಲಿ ಮಲಮೂತ್ರದ ಬಾಧೆಯಿದ್ದರೆ ಆ ಬಾಧೆಯನ್ನು ನಿವಾರಿಸಿ ನಂತರ ಪಿಂಛದಿಂದ ತಮ್ಮ ಶರೀರದ ಮುಂದಿನ-ಹಿಂದಿನ ಭಾಗವನ್ನು ಶೋಧಿಸಿ, ಕಮಂಡಲು-ಪಿಂಛಿ ತೆಗೆದುಕೊಂಡು ಗಮನ ಮಾಡುತ್ತಾರೆ. ಮಾರ್ಗದಲ್ಲಿ ಹೆಚ್ಚು ಶೀಘ್ರವಾಗಿ ಗಮನ ಮಾಡುವುದಿಲ್ಲ, ವಿಲಂಬ ಮಾಡುತ್ತ ಗಮನ ಮಾಡುವುದಿಲ್ಲ, ಮಾರ್ಗದಲ್ಲಿ ಯಾರೊಡನೆಯೂ ಮಾತುಕತೆ ಮಾಡುವುದಿಲ್ಲ, ಮಾರ್ಗದಲ್ಲಿ ವನಪ್ರದೇಶದ, ನಗರದ, ಗ್ರಾಮದ ಶೋಭೆಯನ್ನು ನೋಡುವುದಿಲ್ಲ, ಎಲ್ಲಿ ಕಲಹ, ವಿಸಂವಾದ, ಕೌತುಕ, ನೃತ್ಯ, ಗೀತ ಮೊದಲಾದವು ನಡೆಯುತ್ತಿದ್ದರೆ ಅವನ್ನು ದೂರದಿಂದಲೇ ಬಿಟ್ಟುಕೊಟ್ಟು ಗಮನ ಮಾಡುತ್ತಾರೆ. ಮಾರ್ಗದಲ್ಲಿ ದುಷ್ಟ ತಿರ್ಯಂಚ, ದುಷ್ಟ ಮನುಷ್ಯ, ಹೆಚ್ಚು ಮನುಷ್ಯ, ಸ್ತ್ರೀ ಮತ್ತು ಪತ್ರ, ಫಲ, ಪುಷ್ಪ, ಬೀಜ, ಜಲ, ಕೊಳೆ ಮೊದಲಾದವು ಬಿದ್ದುಕೊಂಡಿರುವ ಭೂಮಿಯನ್ನು ಬಿಟ್ಟು ದೂರದಿಂದ ಗಮನ ಮಾಡುತ್ತಾರೆ.

ಆಚಾರಾಂಗ ಶಾಸ್ತ್ರದಲ್ಲಿ ಹೇಳಿದ ದೇಶ-ಕಾಲವನ್ನು ತಿಳಿದುಕೊಳ್ಳುವಲ್ಲಿ ನಿಪುಣ ಮತ್ತು ಮಾರ್ಗದಲ್ಲಿ ಗಮನ ಮಾಡುತ್ತಿರುವ ಸಾಧುವು ದಾತಾರನ ಹಾಗೂ ಭೋಜನದ ಚಿಂತನೆ ಮಾಡುವುದಿಲ್ಲ, ಇಂದು ನನಗೆ ಯಾವ ದಾತಾರನು ಭೋಜನ ಕೊಡುವನು, ನನಗೆ ಭೋಜನವು ಬೇಗ ದೊರೆತರೆ ಒಳ್ಳೆಯದು; ಸಿಹಿ ಉಪ್ಪುಗೂಡಿದ, ಬಿಸಿಯಾದ, ಆರಿದ, ಸ್ವಾದಿಷ್ಟವಾದ ಅಥವಾ ಸ್ವಾದವಿಲ್ಲದ ಭೋಜನವು ದೊರೆತರೆ ಒಳ್ಳೆಯದಿದೆಯೆನ್ನುವುದಿಲ್ಲ. ಅವರಂತೂ ಅಂತರಾಯ ಕರ್ಮದ ಕ್ಷಯೋಪಶಮದ ಅನುಸಾರ ಲಾಭ-ಅಲಾಭ ತಿಳಿದುಕೊಂಡು ಭೋಜನದ ಲಾಭ-ಅಲಾಭದಲ್ಲಿ, ಮಾನ-ಅಪಮಾನದಲ್ಲಿ, ಮನದ ವೃತ್ತಿಯನ್ನು ಸಮಾನವಿಡುತ್ತ, ಧರ್ಮಧ್ಯಾನ ರೂಪದ ಚಿಂತನೆ ಮಾಡುತ್ತ, ನಾಲ್ಕು ಆರಾಧನೆಗಳ ಆಶ್ರಯ ಸಹಿತ, ಕ್ಷುಧೆ-ತೃಷೆ ಮೊದಲಾದವುಗಳ ವೇದನೆಯ ಚಿಂತನೆಯನ್ನೂ ಮಾಡದೆ ಭಿಕ್ಷೆಯ ಸಲುವಾಗಿ ಗಮನ ಮಾಡುತ್ತಾರೆ.

**ಲೋಕನಿಂದ್ಯ ಕುಲದಲ್ಲಿ ಗಮನ ಮಾಡುವುದಿಲ್ಲ,** ಉತ್ತಮ ಕುಲದವರಿದ್ದರೂ ಎಲ್ಲಿ ದಾನ ಶಾಲೆಯಿದೆ, ಮದುವೆ ಮೊದಲಾದವು ನಡೆಯುತ್ತಿವೆ, ಮರಣದ ಸೂತಕವಿದೆ, ಗೀತ-ನೃತ್ಯಗಳು ನಡೆಯುತ್ತಿವೆ, ವಾದ್ಯ-ವಾದಿತ್ರ ಬಾರಿಸುವ ಉತ್ಸವ ನಡೆಯುತ್ತಿದೆ, ರೋದನವಾಗುತ್ತಲಿದೆ, ಭಿಕ್ಷೆ-ಭೋಜನದ ಸಲುವಾಗಿ ಬಹಳಷ್ಟು ಜನರು ಏಕತ್ರವಾಗುತ್ತಿದ್ದಾರೆ, ಕಲಹ-ವಿಸಂವಾದ-ಜೂಜು ಕ್ರೀಡೆಗಳು ನಡೆಯುತ್ತಿವೆ; ಬಾಗಿಲು ಹಾಕಲ್ಪಟ್ಟಿದೆ, ಹೋಗುವವರನ್ನು ಯಾರಾದರೂ ತಡೆಯುತ್ತಿದ್ದಾರೆ, ಆನೆ-ಕುದುರೆ-ಒಂಟೆ-ಎತ್ತು ಮೊದಲಾದವು ದಾರಿಯಲ್ಲಿ ನಿಂತುಕೊಂಡಿವೆ ಅಥವಾ ಕಟ್ಟಿ ಹಾಕಲಾಗಿವೆ, ಅದೆಷ್ಟೋ ಮನುಷ್ಯರ ಸಂದಣಿಯಾಗುತ್ತಲಿದೆ, ಇಕ್ಕಟ್ಟಾದ ಮಾರ್ಗದಲ್ಲಿ ಜನರ ದಟ್ಟಣೆಯಿಂದ ಬರ-ಹೋಗುವುದಾಗುತ್ತಲಿದೆ, ನಾಭಿಗಿಂತ ಅಧಿಕ ಕೆಳಗಿರುವ ಬಾಗಿಲದೊಳಗಿಂದ ಹೋಗಬೇಕಾಗುತ್ತಿದ್ದರೆ, ಹೆಚ್ಚು ಎತ್ತರವಾದ ಮೆಟ್ಟಲುಗಳ ಮೇಲೆ ಹತ್ತಬೇಕಾಗುತ್ತಿದ್ದರೆ, ಅಂಥ ಮನೆಗಳಲ್ಲಂತೂ ಸಾಧುಗಳು ಆಹಾರದ ಸಲುವಾಗಿ ಪ್ರವೇಶವನ್ನೇ ಮಾಡುವುದಿಲ್ಲ.

**ಚಂದ್ರನ ಚಂದ್ರಿಕೆಯ ಹಾಗೆ ಬಡವ-ಬಲ್ಲಿದರೆಲ್ಲರ ಮನೆಗಳಲ್ಲಿ ಹೋಗುತ್ತಾರೆ.** ದೀನ, ಅನಾಥ, ನಿಂದ್ಯ ಕರ್ಮದಿಂದ ಆಜೀವಿಕೆ ಮಾಡುವಂಥ, ಗೀತ-ನೃತ್ಯ-ವಾದ್ಯದಿಂದ ಜೀವನ ಸಾಗಿಸುವಂಥ ಇತ್ಯಾದಿ ಅಯೋಗ್ಯ ಮನೆಗಳಲ್ಲಿ ಭಿಕ್ಷೆಯ ಸಲುವಾಗಿ ಹೋಗುವುದಿಲ್ಲ. ಭಿಕ್ಷೆಯ ಸಲುವಾಗಿ ಮನೆಗಳಲ್ಲಿ ಹೋಗುತ್ತಿದ್ದರೆ ಎಲ್ಲಿಯವರೆಗೆ ಅನ್ಯ ಭಿಕ್ಷುಗಳಿಗೆ ಹಾಗೂ

ಎಲ್ಲ ಜನರಿಗೆ ಬರುವುದರ ನಿರ್ಬಂಧವಿಲ್ಲ, ಅಲ್ಲಿಯವರೆಗೇ ಹೋಗುತ್ತಾರೆ. **ಆಶೀರ್ವಾದ, ಧರ್ಮಲಾಭ ಮೊದಲಾದುವನ್ನು ಮುಖದಿಂದ ಹೇಳುವುದಿಲ್ಲ, ಹುಂಕೃತಿ-ಹುಬ್ಬುಗಳಿಂದ ಸೂಚನೆ ಮೊದಲಾದುವನ್ನು ಮಾಡುವುದಿಲ್ಲ,** ಹೊಟ್ಟೆಯ ಕೃಶತೆಯನ್ನು ತೋರಿಸುವುದಿಲ್ಲ, ಕೈಗಳಿಂದ ಬೇಡುವ ಸೂಚನೆ ಮಾಡುವುದಿಲ್ಲ; ದಾತಾರರನ್ನು ನೋಡುವ ಸಲುವಾಗಿ, ಭೋಜನವನ್ನು ನೋಡುವ ಸಲುವಾಗಿ, ಮೇಲ್ಭಾಗ ಅಥವಾ ದಿಶೆ-ವಿದಿಶೆಗಳಲ್ಲಿ ನೋಡುವುದಿಲ್ಲ, ಹೆಚ್ಚು ಸಮಯದವರೆಗೆ ಎದ್ದು ನಿಂತುಕೊಳ್ಳುವುದಿಲ್ಲ, ಮಿಂಚಿನ ಹೊಳಪಿನಂತೆ ಅರ್ಧ ಅಂಗಳದವರೆಗೆ ಹೋಗಿ ನಿಂತುಕೊಳ್ಳುತ್ತಾರೆ; ತಿಷ್ಠ, ತಿಷ್ಠ-ಎಂದು ಮೂರು ಸಾರಿ ಆದರಪೂರ್ವಕ ಹೇಳಿ ನಿಲ್ಲಿಸಿಕೊಂಡರೆ ನಿಂತುಕೊಳ್ಳುತ್ತಾರೆ, ಒಂದು ಸಾರಿ ಹೊರಟು ಬಂದರೆಂದರೆ ಪುನಃ ಅದೇ ಮನೆಯಲ್ಲಿ ಹೋಗುವುದಿಲ್ಲ, ಮತ್ತೆ ಬೇರೆ ಮನೆಯಲ್ಲಿ ಪ್ರವೇಶ ಮಾಡುತ್ತಾರೆ, ಅಂತರಾಯವಾಗಿ ಹೋದರೆ ಪುನಃ ಬೇರೆ ಯಾವ ಮನೆಯಲ್ಲಿಯೂ ಹೋಗುವುದಿಲ್ಲ, ಮರಳಿ ನೇರವಾಗಿ ವನದ ಕಡೆಗೇನೇ ಹೊರಟು ಹೋಗುತ್ತಾರೆ.

ದೀನತೆಯಿಲ್ಲದೆ, ಯಾಚನೆಯಿಲ್ಲದೆ, ಪ್ರಾಸುಕ ಆಹಾರವನ್ನು ಆಚಾರಾಂಗ ಶಾಸ್ತ್ರದಲ್ಲಿ ಹೇಳಿದುದರ ಅನುಸಾರ ನಲವತ್ತಾರು ದೋಷ, ಹದಿನಾಲ್ಕು ಮಲ, ಮೂವತ್ತೆರಡು ಅಂತರಾಯರಹಿತ ಭೋಜನವನ್ನು ಕೇವಲ ಪ್ರಾಣ ರಕ್ಷಣೆಯ ಕಾರಣದಿಂದ ಅಂಗೀಕಾರ ಮಾಡುತ್ತಾರೆ. ಸುಂದರ ರಸ-ನೀರಸದಲ್ಲಿ, ಲಾಭ-ಅಲಾಭದಲ್ಲಿ ಸಂತೋಷಿಯಾಗಿರುವುದು ಅದು ಸಾಧುವಿನ ಭಿಕ್ಷೆಯಿದೆ. ಈ ಭಿಕ್ಷೆಯ ಶುದ್ಧತೆಯಿಂದ ಯಾವ ಪ್ರಕಾರ ಸಾಧು ಪುರುಷರ ಸೇವೆಯಿಂದ ಗುಣಗಳ ಸಂಪತ್ತು ಪ್ರಾಪ್ತವಾಗಿ ಹೋಗುತ್ತದೆ ಅದೇ ಪ್ರಕಾರ ಚಾರಿತ್ರದ ಉಜ್ವಲ ಸಂಪತ್ತು ಪ್ರಾಪ್ತವಾಗುತ್ತದೆ.

**ಮುನಿವರರ ಭಿಕ್ಷೆಯು ಐದು ಪ್ರಕಾರದಿಂದ ಆಗುತ್ತದೆ.** ಗೋಚರೀ ವೃತ್ತಿ, ಅಕ್ಷಮ್ರಕ್ಷಣವೃತ್ತಿ, ಉದರಾಗ್ನಿ ಪ್ರಶಮನ ವೃತ್ತಿ, ಭ್ರಾಮರೀವೃತ್ತಿ, ಗರ್ತಪೂರಣವೃತ್ತಿಯೆಂದು ಐದು ಪ್ರಕಾರದಿಂದ ಆಹಾರದಲ್ಲಿ ಸಾಧುಗಳ ಪ್ರವೃತ್ತಿಯಾಗುತ್ತದೆಯೆಂದು ತಿಳಿಯುವುದು.

**ಗೋಚರೀವೃತ್ತಿ ಭಿಕ್ಷೆ :-** ಯಾವ ಪ್ರಕಾರ ಆಕರ್ಷಕವಾದ ವಸ್ತ್ರಾಭರಣಗಳನ್ನು ಧರಿಸಿ, ರೂಪು-ಯೌವನದಿಂದ ಯುಕ್ತಳಾದ ಸುಂದರ ಸ್ತ್ರೀಯ ಮೂಲಕ ಹಾಕಲ್ಪಟ್ಟ ಹುಲ್ಲನ್ನು ಗೋವು ತಿನ್ನುತ್ತದೆ, ಆದರೆ ಆ ಸ್ತ್ರೀಯ ಅಂಗಾಂಗಳ ಸೌಂದರ್ಯ, ಆಭರಣ, ವಸ್ತ್ರಗಳನ್ನು ನೋಡುವುದಿಲ್ಲ, ಕೇವಲ ಹುಲ್ಲು ತಿನ್ನುವುದೇ ಅದರ ಪ್ರಯೋಜನವಿದೆ; ಅದೇ ಪ್ರಕಾರ ಸಾಧುಗಳು ಕೂಡ ದಾತಾರನ ರೂಪು, ಆಭರಣ, ಸೌಂದರ್ಯವನ್ನು ನೋಡುವುದಿಲ್ಲ, ನವಧಾ ಭಕ್ತಿಯಿಂದ ಬಲಗೊಂಡು ಕರೆದೊಯ್ದ ನಂತರ ಕೈಯ್ಯಲ್ಲಿ ಹಾಕಿದ ಭೋಜನದ ತುತ್ತನ್ನು ಭಕ್ಷಣ ಮಾಡುತ್ತಾರೆ ಅದು ಗೋಚರೀ ವೃತ್ತಿಯಿದೆ.

ಯಾವ ಪ್ರಕಾರ ಗೋವು ವನದಲ್ಲಿ ಅನೇಕ ಸ್ಥಾನಗಳಲ್ಲಿ ನಿಂತುಕೊಳ್ಳುತ್ತ ಹೇಗೆ ಹುಲ್ಲು ದೊರಕುತ್ತದೆ ಹಾಗೆ ಭಕ್ಷಣ ಮಾಡುತ್ತದೆ, ವನದ ಶೋಭೆ, ವೃಕ್ಷಗಳ ಶೋಭೆಯನ್ನು ನೋಡುವಲ್ಲಿ ಪರಿಣಾಮ ತೊಡಗಿಸುವುದಿಲ್ಲ, ಅದೇ ಪ್ರಕಾರ ಸಾಧುಗಳು ಕೂಡ ಗೃಹಸ್ಥರ ಮನೆಯಲ್ಲಿ ಹೋಗಿ ಕೇವಲ ತಮ್ಮ ಕೈಯಲ್ಲಿಟ್ಟಿರುವ ಭೋಜನದ ತುತ್ತನ್ನು ತಿನ್ನುವಲ್ಲಿ ದೃಷ್ಟಿಯಿಡುತ್ತಾರೆ. ಗೃಹಸ್ಥನ ವಿಶಾಲ ಮನೆ, ಶಯ್ಯೆ, ಆಸನ ಮೊದಲಾದುವನ್ನು ನೋಡುವಲ್ಲಿ; ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚಿನ ಪಾತ್ರೆ ಮೊದಲಾದುವನ್ನು ನೋಡುವಲ್ಲಿ; ಅನೇಕ ಭೋಜನ ಹಾಗೂ ಪರಿವಾರ ಜನರನ್ನು ನೋಡುವಲ್ಲಿ ಪರಿಣಾಮ ತೊಡಗಿಸುವುದಿಲ್ಲ; ಪರಿವಾರ ಜನರ ಕೋಮಲ, ಲಲಿತರೂಪು-ವೇಷ ವಿಲಾಸಗಳನ್ನು ನೋಡುವಲ್ಲಿ ಇಚ್ಛಾರಹಿತರಾಗಿ ರೂಕ್ಷ-ಆರ್ದ್ರ ಆಹಾರವನ್ನು ನೋಡದೆ ಗೋವಿನ ಸಮಾನ ಭೋಜನ ಮಾಡುತ್ತಾರೆ, ಅದು ಗೋಚರೀವೃತ್ತಿ ಅಥವಾ ಗವೇಷಣವೆಂದು ಕರೆಸಿಕೊಳ್ಳುತ್ತದೆ.

**ಅಕ್ಷಮ್ರಕ್ಷಣವೃತ್ತಿ ಭಿಕ್ಷೆ :** ಯಾವ ಪ್ರಕಾರ ವ್ಯಾಪಾರಸ್ಥನು ರತ್ನಗಳಿಂದ ತುಂಬಿದ ಗಾಡಿಯ ಗಾಲಿಯಲ್ಲಿ ಎಣ್ಣೆ ಮೊದಲಾದ ಸ್ನಿಗ್ಧ ಪದಾರ್ಥದ ಹೆರೆ ಹಾಕಿ ತನ್ನ ಇಚ್ಛಿತ ಸ್ಥಾನಕ್ಕೆ-ದೇಶಾಂತರಕ್ಕೆ ತೆಗೆದುಕೊಂಡು ಹೋಗುತ್ತಾನೆ; ಅದೇ ಪ್ರಕಾರ ಸಾಧುಗಳು ಕೂಡ ಗುಣರೂಪದ ರತ್ನಗಳಿಂದ ತುಂಬಿದ ತನ್ನ ದೇಹರೂಪದ ಗಾಡಿಗೆ ನಿರ್ದೋಷ ಭೋಜನರೂಪದ ಹೆರೆ ಹಾಕಿ ತನ್ನ ಇಚ್ಛಿತ ಸಮಾಧಿರೂಪದ ನಗರಕ್ಕೆ ತೆಗೆದುಕೊಂಡು ಹೋಗುತ್ತಾರೆ, ಅದನ್ನು ಅಕ್ಷಮ್ರಕ್ಷಣ ವೃತ್ತಿಯೆಂದು ಹೇಳುತ್ತಾರೆ.

**ಉದರಾಗ್ನಿ ಪ್ರಶಮನವೃತ್ತಿ ಭಿಕ್ಷೆ :** ಯಾವ ಪ್ರಕಾರ ಅನೇಕ ವಸ್ತ್ರ, ಆಭರಣ ಮೊದಲಾದವುಗಳಿಂದ ತುಂಬಿದ ಬೊಕ್ಕಸ ಮನೆಗೆ ತಗಲಿದ ಬೆಂಕಿಯನ್ನು ಗೃಹಸ್ಥನು ಶುದ್ಧ ಅಥವಾ ಅಶುದ್ಧ ಜಲದಿಂದ ಆರಿಸಿ ತನ್ನ ವಸ್ತುಗಳ ರಕ್ಷಣೆ ಮಾಡುತ್ತಾನೆ ಅದೇ ಪ್ರಕಾರ ಸಾಧುಗಳು ಕೂಡ ತಮ್ಮ ಉದರರೂಪದ ಬೊಕ್ಕಸದಲ್ಲಿ ಉತ್ಪನ್ನವಾದ ಕ್ಷುಧೆ-ತೃಷೆರೂಪದ ಅಗ್ನಿಯನ್ನು ಸುಂದರ-ಅಸುಂದರ (ಸರಸ-ನೀರಸ) ಭೋಜನದಿಂದ ಆರಿಸುತ್ತಾರೆ. ಅದು ಉದರಾಗ್ನಿ ಪ್ರಶಮನವೃತ್ತಿಯಿದೆ.

**ಭ್ರಮರಾಹಾರ ವೃತ್ತಿ ಭಿಕ್ಷೆ :** ಯಾವ ಪ್ರಕಾರ ದುಂಬಿಯು ಹೂವಿಗೆ ಸ್ವಲ್ಪ ಕೂಡ ಕಷ್ಟ-ಬಾಧೆಯನ್ನು ತಗಲಿಸದೆ ಹೂವಿನ ಗಂಧವನ್ನು ತೆಗೆದುಕೊಳ್ಳುತ್ತದೆ, ಅದೇ ಪ್ರಕಾರ ಸಾಧುಗಳು ಕೂಡ ದಾತಾರನಿಗೆ ಸ್ವಲ್ಪ ಕೂಡ ಬಾಧೆಯಾಗದ ರೀತಿಯಿಂದ ಭೋಜನ ಮಾಡುತ್ತಾರೆ, ಅದು ಭ್ರಮರಾಹಾರ ವೃತ್ತಿಯಿದೆ.

**ಗರ್ತಪೂರಣವೃತ್ತಿ ಭಿಕ್ಷೆ :** ಯಾವ ಪ್ರಕಾರ ಗೃಹಸ್ಥನ ಮನೆಯ ಅಂಗಳದಲ್ಲಿ ಒಂದಿಷ್ಟು ತಗ್ಗು ಬಿದ್ದು ಬಿಟ್ಟಿದ್ದರೆ ಅವನು ಆ ತಗ್ಗನ್ನು ಮಣ್ಣು, ಕಲ್ಲು ಮೊದಲಾದವುಗಳಿಂದ ತುಂಬಿ ಬಿಡುತ್ತಾನೆ, ಅದೇ ಪ್ರಕಾರ ಸಾಧುಗಳು ಕೂಡ ಉದರರೂಪದ ತಗ್ಗನ್ನು ಸರಸ-ನೀರಸ ಭೋಜನದಿಂದ ತುಂಬುತ್ತಾರೆ, ಅದನ್ನು ಗರ್ತಪೂರಣ ವೃತ್ತಿಯೆಂದು ಹೇಳುತ್ತಾರೆ. ಈ ಪ್ರಕಾರ ಐದು ಪ್ರಕಾರದಿಂದ ಭೋಜನ ಮಾಡುವಂಥ ಸಾಧುಗಳ ಭಿಕ್ಷಾಶುದ್ಧಿಯಿರುತ್ತದೆ.

ಶ್ರಾವಕನೂ ಅನ್ಯಾಯ ಬಿಟ್ಟುಕೊಟ್ಟು, ಹೆಚ್ಚು ಹಿಂಸೆಯ ಕಾರಣವಿರುವ ವ್ಯವಹಾರ ಆರಂಭವನ್ನು ಬಿಟ್ಟುಕೊಟ್ಟು ಕರ್ಮದ ಉದಯದಿಂದ ಪ್ರಾಪ್ತವಾದ ಧನದಲ್ಲಿ ಸಂತೋಷಧಾರಣ ಮಾಡಿ, ಇತರರಿಗೆ ಕಷ್ಟಕೊಡದೆ, ನ್ಯಾಯದಿಂದ ಸಂಪಾದಿಸಿದ ಧನವನ್ನು, ಮದ-ವಿಷಾದ-ದೀನತೆಯಿಂದ ರಹಿತನಾಗಿ ದಾನದ ವಿಭಾಗ ಮಾಡಿ ಭೋಗಿಸುತ್ತಾನೆ. ಅಭಕ್ಷ್ಯ ಮೊದಲಾದ ಸದೋಷ ಭೋಜನದ ತ್ಯಾಗ ಮಾಡಿ ಹಗಲಿನಲ್ಲಿ ಭೋಗಾಂತರಾಯ-ಲಾಭಾಂತರಾಯಕರ್ಮದ ಕ್ಷಯೋಪಶಮದ ಪ್ರಮಾಣ, ದೊರೆತ ಸರಸ-ನೀರಸದಲ್ಲಿ ಕುಟುಂಬದ ವಿಭಾಗ ಮತ್ತು ದಾನದ ವಿಭಾಗ ಮಾಡಿ ಭೋಜನಾದಿಗಳನ್ನು ಮಾಡುತ್ತಾನೆ. **ಗೃಹಸ್ಥನ ಭೋಜನದ ಶುದ್ಧತೆಯು ಲಾಲಸಾರಹಿತ, ಗೃದ್ಧಾತಾರಹಿತವಾಗಿಯೇ ಇರುತ್ತದೆ.**

**ಪ್ರತಿಷ್ಠಾಪನ ಶುದ್ಧಿ :** ಸಂಯಮೀ ಪುರುಷರು ತಮ್ಮ ಶರೀರದ ಉಗುರು, ಕೂದಲು, ಕಫ, ಮೂಗಿನ ಮಲ, ಮೂತ್ರ, ಮಲ ಮೊದಲಾದುವನ್ನು ದೇಶ-ಕಾಲ ತಿಳಿದುಕೊಂಡು, ವಿರೋಧರಹಿತ, ಎಲ್ಲ ಜೀವಗಳಿಗೆ ಬಾಧೆಯಾಗುವುದಿಲ್ಲ, ಇತರರ ಪರಿಣಾಮ ಮಲಿನವಾಗುವುದಿಲ್ಲ-ಅಂಥ ಕ್ಷೇತ್ರದಲ್ಲಿ ಕ್ಷೇಪಿಸುತ್ತಾರೆ ಅವರಿಗೆ ಪ್ರತಿಷ್ಠಾಪನ ಶುದ್ಧಿಯಿರುತ್ತದೆ. ಗೃಹಸ್ಥನೂ ತನ್ನ ಶರೀರದ ಮಲ ಹಾಗೂ ಜಲ,ಕಸ-ಕಡ್ಡಿ, ಬೂದಿ, ಮಣ್ಣು, ಕಲ್ಲು, ಕಟ್ಟಿಗೆಗಳನ್ನು ಯತ್ನಪೂರ್ವಕ ಎಸೆಯುತ್ತಾನೆ. ಯಾವ ಚಿಕ್ಕ-ಪುಟ್ಟ ಜೀವಗಳ ವಿರಾಧನೆಯಾಗಬಾರದು, ಯಾರ ಜತೆ ಕಲಹ-ವಿಸಂವಾದವಾಗಬಾರದು, ತಮ್ಮ ಶರೀರಕ್ಕೆ ಬಾಧೆಯಾಗಬಾರದು, ಅನ್ಯ ಜನರಿಗೆ ಗ್ಲಾನಿಯುತ್ಪನ್ನವಾಗಬಾರದು ಆ ಪ್ರಕಾರ ಕ್ಷೇಪಣೆ ಮಾಡಬೇಕಾಗುವುದು.

**ಶಯನಾಸನಶುದ್ಧಿ :** ಶಯನಾಸನ ಶುದ್ಧಿಯು ಸಾಧುಗಳ ಮುಖ್ಯ ಆಚರಣೆಯಿದೆ. ಎಲ್ಲಿ ಸ್ತ್ರೀಯರು, ನಪುಂಸಕ, ಮದ್ಯಗುಡುಕ, ಬೇಟೆಗಾರ ಇತ್ಯಾದಿ ಪಾಪೀ ಜನರ ಬರ-ಹೋಗುವಿಕೆಯಲ್ಲಿ; ಎಲ್ಲಿ ಶೃಂಗಾರ, ಶರೀರ, ವಿಕಾರ, ಮೋಹಕ ಆಭರಣ ಧರಿಸಿದ ಸ್ತ್ರೀಯರು ಸಂಚರಿಸುವರು, ವೇಶ್ಯೆಯರ ಕ್ರೀಡೆಯ ವನ, ಉಪವನ, ಗೀತ-ನೃತ್ಯ-ವಾದ್ಯಗಳಿಂದ ವ್ಯಾಪ್ತವಾದ ಸ್ಥಾನಗಳನ್ನಂತೂ ದೂರದಿಂದಲೇ ತ್ಯಾಗ ಮಾಡಿರುತ್ತಾರೆ. ಪರ್ವತಗಳ ಅಕೃತ್ರಿಮ ಗುಹೆ, ವೃಕ್ಷಗಳ ಪೊಟರೆ, ಶೂನ್ಯಗೃಹ, ತಮ್ಮ ಸಲುವಾಗಿ ಮಾಡದಿರುವ, ಆರಂಭ ರಹಿತವಾದ ಸ್ಥಾನಗಳಲ್ಲಿ ಮತ್ತು ಶುದ್ಧ ಭೂಮಿಯಲ್ಲಿ ಶಯನ ಆಸನ ಮಾಡುತ್ತಾರೆ.

ಗೃಹಸ್ಥರೂ ವಿಷಯಗಳ ವಿಕಾರ ರಹಿತ, ಸ್ತ್ರೀ, ನಪುಂಸಕ, ದುಷ್ಟ, ಕಲಹ, ವಿಸಂವಾದ, ವಿಕಥೆ ಮೊದಲಾದುವಿಂದ ರಹಿತ, ಪರಿಣಾಮದ ಉಜ್ವಲತೆಯು ಕೆಟ್ಟು ಹೋಗದಂಥ ಸ್ಥಾನಗಳಲ್ಲಿ ಶಯನ ಆಸನ ಮಾಡುತ್ತಾರೆ. **ಸ್ಥಾನದ ದೋಷದಿಂದ ಪರಿಣಾಮದಲ್ಲಿ ದುರ್ಧ್ಯಾನವಿರುತ್ತದೆ, ದುಷ್ಟ ಚಿಂತನೆಯಾಗುತ್ತದೆ.** ಆದುದರಿಂದ ತಮ್ಮ ಆಜೀವಿಕೆ ಮೊದಲಾದವುಗಳ ಸಾಧನೆಯನ್ನು ನ್ಯಾಯಮಾರ್ಗದಿಂದ ಮಾಡಿ, ನಿರಾಕುಲ ಸ್ಥಾನದಲ್ಲಿಯೇ ಶಯನ ಆಸನ ಮಾಡಬೇಕಾಗುವುದು.

**ವಾಕ್ಯಶುದ್ಧಿ :** ಸಾಧುಗಳು ಪೃಥ್ವೀಕಾಯ ಮೊದಲಾದ ಜೀವಗಳ ವಿರಾಧನೆಯ ಪ್ರೇರಣೆಯಿಂದ ರಹಿತ, ಕಠೋರ, ಕಟುಕ ಮೊದಲಾದ ಪರಪೀಡೆಗೆ ಕಾರಣವಾದ ವಚನಗಳಿಂದ ರಹಿತ, ವ್ರತ-ಶೀಲ-ಸಂಯಮದ ಉಪದೇಶರೂಪ ವಚನಗಳನ್ನು ಹೇಳುತ್ತಾರೆ, ಹಿತ-ಮಿತ-ಮಧುರ-ಮನೋಹರ ವಚನಗಳನ್ನು ಹೇಳುತ್ತಾರೆ ಅದು ವಾಕ್ಯಶುದ್ಧಿಯಿದೆ. ಗೃಹಸ್ಥನೂ ಎಷ್ಟು ವಚನ ಹೇಳುತ್ತಾನೆ ಅವನು ವಿವೇಕಪೂರ್ವಕವಾಗಿಯೇ ಹೇಳುತ್ತಾನೆ. **ಲೋಕವಿರುದ್ಧ, ಧರ್ಮವಿರುದ್ಧ, ಹಿಂಸೆಯ ಪ್ರೇರಕ, ಅಸತ್ಯ, ಕಟುಕ, ಕರ್ಕಶ ಮೊದಲಾದ ವಚನಗಳನ್ನೆಂದೂ ಹೇಳುವುದಿಲ್ಲ,** ಹೀಗೆ ಎಂಟು ಪ್ರಕಾರದ ಸಂಯಮಿಗಳ ಶುದ್ಧಿಯ ವಿಚಾರ ಮಾಡುತ್ತಾನೆ, ಭಾವನೆ ಭಾವಿಸುತ್ತಿದ್ದರೆ ಅವನು ಹೆಚ್ಚು ಪಾಪಗಳಿಂದ ಲಿಪ್ತನಾಗುವುದಿಲ್ಲ, ಧರ್ಮ ಭಾವನೆಯ ವೃದ್ಧಿ ಮಾಡುತ್ತಾನೆ.

## ತಪ ಭಾವನೆ

ಗೃಹಸ್ಥರೂ ತಪ ಭಾವನೆ ಭಾವಿಸುವುದು ಯೋಗ್ಯವಿದೆ. ತಪದ ಮುಖ್ಯತೆಯಂತೂ ಮುನೀಶ್ವರರಿಗೇ ಇರುತ್ತದೆ, ಆದಾಗ್ಯೂ ಗೃಹಸ್ಥನು ಕೂಡ ತಪದ ಭಾವನೆಯನ್ನು ಭಾವಿಸುತ್ತಿದ್ದರೆ ರೋಗಾದಿಗಳ ಕಷ್ಟ ಬಂದ ಮೇಲೆ ಚಂಚಲನಾಗುವುದಿಲ್ಲ, ಇಂದ್ರಿಯಗಳ ವಿಕಲತೆಯನ್ನು ಜಯಿಸುತ್ತಾನೆ, ವೃದ್ಧಾವಸ್ಥೆಯಲ್ಲಿ ವೃದ್ಧಾಪ್ಯದಿಂದ ಬುದ್ಧಿಯು ಚಲಿತವಾಗುವುದಿಲ್ಲ, ಊಟ-ತಿಂಡಿಯಲ್ಲಿ ವಿಕಲತೆಯ ಅಭಾವವಾಗುತ್ತದೆ, ಸಂತೋಷವೃತ್ತಿಯು ಪ್ರಕಟವಾಗುತ್ತದೆ, ದೀನತೆಯ ಅಭಾವವಾಗಿ ಹೋಗುತ್ತದೆ, ಲೋಕದಲ್ಲಿ ಯಶಸ್ಸು ಉಜ್ವಲವಾಗುತ್ತದೆ, ಪರಲೋಕದಲ್ಲಿ ಸ್ವರ್ಗದ ಪ್ರಾಪ್ತಿಯಾಗುತ್ತದೆ. ಆದ್ದರಿಂದ ತಪಸ್ಸು ಮಾಡುವುದು ಯೋಗ್ಯವಿದೆ.

**ಬಾಹ್ಯತಪ :** ಬಾಹ್ಯ ಮತ್ತು ಅಭ್ಯಂತರವೆಂದು ತಪಸ್ಸು ಎರಡು ಪ್ರಕಾರದ್ದಿದೆ. ಬಾಹ್ಯತಪದಲ್ಲಿ ಅನಶನ, ಅವಮೌದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಶಯ್ಯಾಸನ ಮತ್ತು ಕಾಯಕ್ಲೇಶವೆಂದು ಆರು ಭೇದಗಳಿವೆ. ಈ ಆರು ಪ್ರಕಾರದ ಬಾಹ್ಯ ತಪಗಳ ವರ್ಣನೆ ಮಾಡುತ್ತಾರೆ.

**ಅನಶನ ತಪ :** ಈಗ ಅನಶನ ತಪದ ಸ್ವರೂಪ ಹೇಳುತ್ತಾರೆ. ಅನಶನ ಎಂದರೆ ಭೋಜನದ ತ್ಯಾಗ ಮಾಡುವುದು ಅದು ಅನಶನ ತಪವಿದೆ. ಇಷ್ಟಫಲದ ಅಪೇಕ್ಷೆಯಿಂದ ರಹಿತವಾಗಿ ಭೋಜನದ ತ್ಯಾಗ ಮಾಡುವುದು ಅದು ಅನಶನ ತಪವಿದೆ. ಯಾರು ಯಶಸ್ಸಿನ ಸಲುವಾಗಿ, ಖ್ಯಾತಿಯ ಸಲುವಾಗಿ, ಜಗತ್ತಿನ ಜನರಿಂದ ಪೂಜೆ-ನಮಸ್ಕಾರಾದಿಗಳನ್ನು ಮಾಡಿಸಿಕೊಳ್ಳುವ ಸಲುವಾಗಿ, ಮಂತ್ರ ಸಾಧನೆಯ ಸಲುವಾಗಿ, ಧನದ ಸಲುವಾಗಿ, ಋದ್ಧಿ ಪ್ರಾಪ್ತಿಯ ಸಲುವಾಗಿ, ವೈರಿಗಳ ಘಾತದ ಸಲುವಾಗಿ, ಪರಲೋಕದಲ್ಲಿ ರಾಜ್ಯಪ್ರಾಪ್ತಿಯ ಸಲುವಾಗಿ, ಕಷಾಯದಿಂದ ವೈರದಿಂದ ದುಃಖಿಯಾಗಿ ತನ್ನ ಪ್ರಾಣಘಾತದ ಸಲುವಾಗಿ ಯಾರು ಅನಶನ ಮಾಡುತ್ತಾರೆ ಅವರ ಅನಶನವು ಸಮ್ಯಕ್‌ತಪವಲ್ಲ, ಅದು ಕೇವಲ ಸಂಸಾರ ಪರಿಭ್ರಮಣದ ಕಾರಣವಿದೆ.

ಯಾರು ಇಂದ್ರಿಯ ವಿಷಯಗಳ ಲಾಲಸೆಯನ್ನು ಕಡಿಮೆ ಮಾಡುವ ಸಲುವಾಗಿ, ಷಟ್ಕಾಯ ಜೀವಗಳ ದಯೆಯ ಸಲುವಾಗಿ, ರಾಗಭಾವ ಕುಂದಿಸುವ ಸಲುವಾಗಿ, ನಿದ್ರೆಯನ್ನು ಜಯಿಸುವ ಸಲುವಾಗಿ, ಕರ್ಮಗಳ ನಿರ್ಜರೆಯ ಸಲುವಾಗಿ, ಧ್ಯಾನದ ಸಿದ್ಧಿಯ ಸಲುವಾಗಿ, ದೇಹದ ಸುಖೀತನವನ್ನು ನಾಶ ಮಾಡುವ ಸಲುವಾಗಿ ಉಪವಾಸ ಮೊದಲಾದುವನ್ನು ಮಾಡುತ್ತಾರೆ ಅದು ಅನಶನ ತಪವಿದೆ. ಅನಶನ ತಪವನ್ನು ಕಾಲದ ಮರ್ಯಾದೆಯಿಂದ, ಹಾಗೂ ಆಜೀವನದ ಸಲುವಾಗಿಯೆಂದು ಹೀಗೆ ಎರಡು ಪ್ರಕಾರದಿಂದ ಮಾಡಲಾಗುತ್ತದೆ.

ಸಮಸ್ತ ಜನರು ಒಂದು ದಿವಸದಲ್ಲಿ ಎರಡು ಸಾರೆ ಭೋಜನ ಮಾಡುತ್ತಾರೆ. ಅದರಲ್ಲಿ ಪ್ರಾತಃಕಾಲದ ಒಂದು ಬಾರಿ ಭೋಜನ ಮಾಡುವುದು, ಸಂಧ್ಯಾಕಾಲದ ಎರಡನೇ ಬಾರಿ ಭೋಜನದ ತ್ಯಾಗ ಮಾಡುವುದು ಅದು ಕೂಡ ಅನಶನವಿದೆ. ಮೊದಲನೇ ದಿವಸ ಒಂದು ಬಾರಿ ಭೋಜನ ಮಾಡಿ ಎರಡನೇ ಬಾರಿಯ ಭೋಜನದ ತ್ಯಾಗ, ಎರಡನೇ ದಿವಸ ಎರಡೂ ಬಾರಿಯ ಭೋಜನದ ತ್ಯಾಗ ಮತ್ತು ಮುಂದಿನ ಪಾರಣೆಯ ದಿವಸ ಒಂದು ಭೋಜನದ ತ್ಯಾಗ ಮಾಡಿ ಒಂದ ಬಾರಿ ಉಣ್ಣುವುದು, ಅದು ನಾಲ್ಕು ಭೋಜನದ ತ್ಯಾಗರೂಪ ಚತುರ್ಥವಿದೆ, ಇದಕ್ಕೆ ಉಪವಾಸವೆಂದು ಹೇಳುತ್ತಾರೆ.

ಆರು ಭೋಜನಗಳ ತ್ಯಾಗವನ್ನು ಎರಡು ಉಪವಾಸವೆಂದು ಹೇಳುತ್ತಾರೆ, ಎಂಟು ಭೋಜನದ ತ್ಯಾಗವನ್ನು 'ತೇಲಾ'ವೆಂದು ಹೇಳುತ್ತಾರೆ, ಹತ್ತು ಭೋಜನದ ತ್ಯಾಗವನ್ನು 'ಚೋಲಾ'ವೆಂದು ಹೇಳುತ್ತಾರೆ. ಈ ಪ್ರಕಾರದ ಕಾಲದ ಮರ್ಯಾದೆಯ ರೂಪವಾಗಿರುವ ಅನಶನ ತಪವನ್ನು ತಿಳಿಯುವುದು ಆಯುವಿನ ಕೊನೆಯಲ್ಲಿ ಯಾವಜ್ಜೀವನ ಭೋಜನದ ತ್ಯಾಗ ಮಾಡುವುದು ಅದು ಯಾವಜ್ಜೀವನ ಅನಶನವಿದೆ.

**ಇಂದ್ರಿಯಗಳ ಉಪಶಮನದ ಸಲುವಾಗಿ ಭಗವಂತರು ಉಪವಾಸ ಮಾಡಲು ಹೇಳಿದ್ದಾರೆ.** ಆದ್ದರಿಂದ ಇಂದ್ರಿಯಗಳನ್ನು ಜಯಿಸುವಂಥ ಮುನಿಗಳನ್ನು ಭೋಜನ ಮಾಡುತ್ತಿದ್ದರೂ ಉಪವಾಸ ಮಾಡುವಂಥವರೆಂದು ತಿಳಿಯುವುದು. **ಯಾರು ಉಪವಾಸ ಮಾಡುತ್ತಿದ್ದರೂ ಇಂದ್ರಿಯಗಳನ್ನು ವಿಷಯಗಳಿಂದ ತಡೆಯುವುದಿಲ್ಲ, ಆರಂಭ ಮಾಡುತ್ತಾರೆ, ಕಷಾಯರೂಪವಾಗಿ ಪ್ರವರ್ತಿಸುತ್ತಾರೆ ಅವರ ಅನಶನ ತಪವು ನಿಷ್ಫಲವಾಗುತ್ತದೆ,** ಅದು ಕರ್ಮಗಳ ನಿರ್ಜರೆ ಮಾಡುವುದಿಲ್ಲ. ಈ ಪ್ರಕಾರ ಅನಶನ ತಪದ ಸ್ವರೂಪವನ್ನು ಹೇಳಲಾಗಿದೆ.

ಯಾವ ಪ್ರಕಾರ ವಾತ-ಪಿತ್ತ-ಕಫಾದಿಗಳು ವಿಕಾರಕ್ಕೆ ಪ್ರಾಪ್ತವಾಗಲಾರವು, ರೋಗ ಶಾಂತವಾಗುವುದು, ಧರ್ಮದಲ್ಲಿ ಉತ್ಸಾಹವು ಹೆಚ್ಚುವುದು ಆ ಪ್ರಕಾರ ತಮ್ಮ ಪರಿಣಾಮಗಳ ವಿಶುದ್ಧಿಯ ವೃದ್ಧಿ ಬಯಸುತ್ತ ದೇಶದ ಅನುಕೂಲ, ಕಾಲದ ಅನುಕೂಲ, ಆಹಾರ-ಪಾನೀಯದ ಯೋಗ್ಯತೆಯ ಅನುಕೂಲ, ಕುಟುಂಬ ಮೊದಲಾದವರ ಸಹಾಯತೆಯ ಅನುಕೂಲ, ಸಂಹನನದ ಅನುಸಾರ ಹೇಗೆ ಶರೀರವು ವಿಕಾರಕ್ಕೆಪ್ರಾಪ್ತವಾಗುವುದಿಲ್ಲ ಹಾಗೆ ಶ್ರಾವಕರು ಕೂಡ ತಮ್ಮ ಶಕ್ತಿಯ ಅನುಸಾರವಾಗಿ ಅನಶನ ತಪವನ್ನು ಅಂಗೀಕಾರ ಮಾಡುವುದು ಶ್ರೇಷ್ಠವಿದೆ.

**ಅವಮೌದರ್ಯ ತಪ :** ಅವಮೌದರ್ಯ ತಪದ ಸ್ವರೂಪವನ್ನು ಹೀಗೆ ತಿಳಿಯುವುದು. ಅವಮ್ ಎಂದರೆ ನ್ಯೂನ ಎಂದರೆ ಸ್ವಲ್ಪ ಕಡಿಮೆ, ಉದರದಲ್ಲಿ ಎಂದರೆ ಪೂರ್ಣ ಉದರದಿಂದ ಸ್ವಲ್ಪ ಕಡಿಮೆ ಭೋಜನ ಮಾಡಲಾಗುತ್ತದೆ, ಅದನ್ನು ಅವಮೌದರ್ಯ ತಪವೆಂದು ಹೇಳುತ್ತಾರೆ. ಎಷ್ಟು ಆಹಾರದಿಂದ ಉದರವು ಪೂರ್ಣ ತುಂಬುತ್ತದೆ ಅದಕ್ಕಿಂತ ನ್ಯೂನ ಎಂದರೆ ಸ್ವಲ್ಪ ಕಡಿಮೆ ಭೋಜನ ಮಾಡುವುದು ಅದು ಊನೋದರ ಅಥವಾ ಅವಮೌದರ್ಯ ತಪವಿದೆ. ಅವಮೌದರ್ಯ ತಪದಿಂದ ಇಂದ್ರಿಯಗಳ ಸಂಯಮವಾಗುತ್ತದೆ, ಭೋಜನದ ಗೃದ್ಧತೆಯ ಅಭಾವವಾಗುತ್ತದೆ. ಅಲ್ಪಾಹಾರ ಮಾಡುವುದರಿಂದ ವಾತ-ಪಿತ್ತ-ಕಫ ಮೊದಲಾದವು ಪ್ರಕೋಪಕ್ಕೆ ಪ್ರಾಪ್ತವಾಗುವುದಿಲ್ಲ; ರೋಗಗಳ ಉಪಶಮವಾಗುತ್ತದೆ, ನಿದ್ರೆ-ಆಲಸ್ಯಗಳ ಮೇಲೆ ವಿಜಯವಾಗುತ್ತದೆ; ಸ್ವಾಧ್ಯಾಯದಲ್ಲಿ, ಸಾಮಾಯಿಕದಲ್ಲಿ, ಕಾಯೋತ್ಸರ್ಗದಲ್ಲಿ, ಧ್ಯಾನದಲ್ಲಿ ಖೇದವಾಗುವುದಿಲ್ಲ; ಧ್ಯಾನ, ಸ್ವಾಧ್ಯಾಯ ಮೊದಲಾದ ಆವಶ್ಯಕಗಳು ಸುಖದಿಂದ ಆಗುತ್ತವೆ. ಅವಮೌದರ್ಯ ತಪ ಮಾಡುವುದರಿಂದ ಉಪವಾಸದ ಖೇದ, ಉಷ್ಣ ಮೊದಲಾದವು ವ್ಯಾಪಿಸುವುದಿಲ್ಲ, ಉಪವಾಸವು ಸುಖದಿಂದ ಆಗುತ್ತದೆ. ಹೆಚ್ಚು ಭೋಜನ ಮಾಡಿದರೆ ಧ್ಯಾನ, ಕಾಯೋತ್ಸರ್ಗ ಮೊದಲಾದ ಆವಶ್ಯಕಗಳು ಸುಖದಿಂದ ಆಗುವುದಿಲ್ಲ, ಆಲಸ್ಯ, ನಿದ್ರೆಗಳು ಪ್ರಬಲವಾಗಿ ಬಿಡುತ್ತವೆ, ಹೆಚ್ಚು ಬಾಯಾರಿಕೆಯಾಗುತ್ತದೆ, ಉಷ್ಣದ ಬಾಧೆಯು ಹೆಚ್ಚು ತೊಂದರೆಪಡಿಸುತ್ತದೆ.

ಆದುದರಿಂದ ಇಂದ್ರಿಯಗಳ ಲಾಲಸೆಯನ್ನು ಕಡಿಮೆ ಮಾಡುವ ಸಲುವಾಗಿ, ಮನಸ್ಸನ್ನು ತಡೆಯುವ ಸಲುವಾಗಿ ಜ್ಞಾನೀ ಮುನಿಗಳಂತೂ ಅರ್ಧ ಭೋಜನ, ಕಾಲು ಭಾಗ ಭೋಜನ ಕ್ರಮದಿಂದ ಒಂದೊಂದು ಎರಡೆರಡು ತುತ್ತು ಕಡಿಮೆ ಮಾಡುತ್ತ ಒಂದು ತುತ್ತಿನವರೆಗೆ ಅವಮೌದರ್ಯದ ಭೇದ ಮಾಡುತ್ತಾರೆ; ಆದರೆ ಯಾರು ಸಿಹಿ ಭೋಜನದ ಲಾಭದ ಸಲುವಾಗಿ, ಕೀರ್ತಿ-ಪ್ರಶಂಸೆ ಪಡೆಯುವ ಸಲುವಾಗಿ ಅಲ್ಪ ಭೋಜನ ಮಾಡುತ್ತಾರೆ ಅದು ಅವಮೌದರ್ಯತಪವಲ್ಲ, ಆಹಾರದಲ್ಲಿನ ಲಾಲಸೆಯನ್ನು ಕಡಿಮೆ ಮಾಡುವ ಸಲುವಾಗಿ, ಅವಮೌದರ್ಯ ಮಾಡಲಾಗುತ್ತದೆ. ಗೃಹಸ್ಥ ಶ್ರಾವಕರ ಸಲುವಾಗಿ ಕೂಡ ಅಂತರಾಯಕರ್ಮದ ಕ್ಷಯೋಪಶಮದ ಅನುಸಾರ ಪ್ರಾಪ್ತವಾದ ಭೋಜನದಲ್ಲಿ ಸಂತೋಷ ಮಾಡಿ, ಭೋಜನದ ಲಾಲಸೆಯನ್ನು ಬಿಟ್ಟುಕೊಟ್ಟು, ಇಚ್ಛೆಯ ನಿರೋಧದ ಸಲುವಾಗಿ ಅವಮೌದರ್ಯ ತಪ ಮಾಡುವುದು ಉಚಿತವಿದೆ, ಶ್ರೇಷ್ಠವಿದೆ.

**ವೃತ್ತಿಪರಿಸಂಖ್ಯಾನ ತಪ :** ವೃತ್ತಿ ಪರಿಸಂಖ್ಯಾನ ತಪವು ಮುನಿರಾಜರಿಗೆ ಆಗುತ್ತದೆ; ಅದರ ಸ್ವರೂಪ ಹೇಳುತ್ತಾರೆ. ಮುನಿರಾಜರು ಆಹಾರಕ್ಕೆ ಹೋಗುವ ಸಮಯದಲ್ಲಿ ಹೀಗೆ ಪ್ರತಿಜ್ಞೆ ಮಾಡುತ್ತಾರೆ. ಇಂದು ಒಂದೇ ಮನೆಗೆ ಹೋಗುವೆನು, ಅಥವಾ ಎರಡು, ಮೂರು, ಐದು, ಏಳು ಮನೆಗಳ ನಿಯಮ ಮಾಡಿ ಹೋಗುತ್ತಾರೆ; ಇಂದು ನೇರವಾದ ಮಾರ್ಗದಲ್ಲಿಯೇ ದೊರೆತರೆ, ವಕ್ರ ಮಾರ್ಗದಲ್ಲಿ ದೊರೆತರೆ, ಇಂಥ ದಾತಾರನಿದ್ದರೆ, ಇಂಥ ಭೋಜನವಿದ್ದರೆ ಇಂಥ ಪಾತ್ರೆಯಲ್ಲಿ ಇದ್ದರೆ, ಇಂಥ ವಿಧಿಯಿಂದ ದೊರೆತರೆ ಆಹಾರ ಗ್ರಹಣ ಮಾಡುವೆನು, ಅನ್ಯ ಪ್ರಕಾರದಿಂದ ಮಾಡಲಾರೆನು. ಇಂಥ ಕಠಿಣ-ಕಠಿಣತರವಾದ ಪ್ರತಿಜ್ಞೆ ಮಾಡಿಕೊಂಡು ಆಹಾರದ ಸಲುವಾಗಿ ಗಮನ ಮಾಡುತ್ತಾರೆ, ಅವರಿಗೆ ವೃತ್ತಿಪರಿಸಂಖ್ಯಾನ ತಪವಾಗುತ್ತದೆ. ಈ ದುರ್ಧರತರ ತಪವು ಮುನಿರಾಜರುಗಳಿಂದಲೇ ಆಗುತ್ತದೆ. ಅನ್ಯ ಗೃಹಸ್ಥರು ಇದನ್ನು ಧಾರಣ ಮಾಡುವಲ್ಲಿ ಸಮರ್ಥರಾಗುವುದಿಲ್ಲ.

**ಗೃಹಸ್ಥರೂ ವೀತರಾಗ ಗುರುಗಳ ಪ್ರಸಾದದಿಂದ ಈ ಪ್ರಕಾರದ ಪ್ರತಿಜ್ಞೆ ಮಾಡುತ್ತಾರೆ.** ನಾನು ಜಿನಧರ್ಮ ಪಡೆದಿರುವುದರಿಂದ ಈ ಉಜ್ವಲ ಧರ್ಮದ ಘಾತವಾಗದ ರೀತಿಯಿಂದಲೇ ಆಜೀವಿಕೆ ಮಾಡುವೆನು; ಯಾವುದರಲ್ಲಿ ಶ್ರದ್ಧೆ, ಜ್ಞಾನ, ವ್ರತಗಳು ನಷ್ಟವಾಗಿ ಹೋಗುತ್ತವೆ ಅಂಥ ಆಜೀವಿಕೆ ಮಾಡಲಾರೆನು. ಯಾವುದರಲ್ಲಿ ಅಧಿಕ ಹಿಂಸೆ, ಅಸತ್ಯ, ಮಾಯಾಚಾರ ಮಾಡಬೇಕಾಗುತ್ತದೆ ಅಂಥ ನೌಕರಿಯನ್ನೂ ಮಾಡಲಾರೆನು; ದುಷ್ಟ ಪಾಪದ ವಾಣಿಜ್ಯ ವ್ಯವಹಾರ ಮಾಡಲಾರೆನು; ಉಜ್ವಲ ವಾಣಿಜ್ಯ ಅಧಿಕ ಆರಂಭವಿಲ್ಲದ, ಕಪಟವಿಲ್ಲದ, ಅಸತ್ಯವಿಲ್ಲದ ಯಾವ ಆಜೀವಿಕೆಯಿದೆ ಅದನ್ನೇ ನನಗೆ ಮಾಡುವುದಿದೆ, ಬೇರೆ ಮಾಡುವುದಿಲ್ಲ, ಇವೇ ಮೊದಲಾದ ಆಜೀವಿಕೆಯ ನಿಯಮ ಮಾಡುತ್ತಾನೆ.

ಇಷ್ಟು ಪರಿಗ್ರಹ, ಇಷ್ಟು ಧನ, ಇಷ್ಟೇ ವಸ್ತ್ರಗಳಿಂದ ಭೋಗೋಪಭೋಗ ಮಾಡುವುದು, ರೋಗವಾದರೆ ಇಂತಿಷ್ಟೆ ಔಷಧ ಸ್ವೀಕರಿಸುವೆನು, ಈ ಔಷಧಗಳ ಹೊರತಾಗಿ ಅನ್ಯ ಔಷಧಗಳನ್ನು ಸ್ವೀಕರಿಸಲಾರೆನು, ಇಂದು ನನ್ನ ಮನೆಯಲ್ಲಿ ಸಿದ್ಧವಾಗಿರುವಂಥ ಆಹಾರವನ್ನೇ ಸ್ವೀಕರಿಸುವೆನು, ನಾನು ಮುಖದಿಂದ ಹೇಳಿ ಮಾಡಿಸಿಕೊಳ್ಳುವುದಿಲ್ಲ, ಬೇಡಿ ತಿನ್ನುವುದಿಲ್ಲ, ಇಂದು ನಾನು ನಮ್ಮ ಮನೆಯಲ್ಲಿ, ನಮ್ಮ ಮನೆಯವರೇ ಮಾಡಿದ,ತಟ್ಟೆಯಲ್ಲಿ ಮೊದಲು ಬಾರಿ ಎಷ್ಟು ಆಹಾರ ಬಡಿಸಲಾಗುತ್ತದೆ ಅಷ್ಟೇ ಭೋಜನ ಮಾಡುವೆನು, ಪುನಃ ಮತ್ತೊಮ್ಮೆ ಬೇಡಲಾರೆನು. ಇತ್ಯಾದಿ ಪ್ರಕಾರದಿಂದ ಇಚ್ಛೆಗಳನ್ನು ನಿರೋಧಿಸುವ ಸಲುವಾಗಿ ಗೃಹಸ್ಥರು ಕೂಡ ತಮ್ಮ ಮನಸ್ಸಿನಲ್ಲಿ ಪ್ರತಿಜ್ಞೆ ಮಾಡುತ್ತಾರೆ.

**ರಸಪರಿತ್ಯಾಗ ತಪ :** ಈಗ ರಸ ಪರಿತ್ಯಾಗ ತಪದ ಸ್ವರೂಪ ಹೇಳುತ್ತಾರೆ, ಹಾಲು, ಮೊಸರು, ತುಪ್ಪ, ಲವಣ, ಬೆಲ್ಲ, ಎಣ್ಣೆ ಇವು ಆರು ಪ್ರಕಾರದ ರಸಗಳಿವೆ. ಇವುಗಳೊಳಗಿಂದ ಜಿಹ್ವೆ ಮೊದಲಾದ ಇಂದ್ರಿಯಗಳ ನಿಗ್ರಹದ ಸಲುವಾಗಿ, ಮನದ ಲೋಲುಪತೆಯನ್ನು ನಾಶಿಸುವ ಸಲುವಾಗಿ ಕಾಮವನ್ನು ಜಯಿಸುವ ಸಲುವಾಗಿ, ನಿದ್ರೆಯನ್ನು ಕುಂದಿಸುವ ಸಲುವಾಗಿ, ಸಂಯಮ ಸಾಧಿಸುವ ಸಲುವಾಗಿ, ರಸಗಳ ತ್ಯಾಗ ಮಾಡುವುದು, ಒಮ್ಮೆ ಒಂದು ರಸದ ತ್ಯಾಗ, ಒಮ್ಮೆ ಎರಡು ರಸದ ತ್ಯಾಗ, ಒಮ್ಮೆ ಮೂರು ರಸದ ತ್ಯಾಗ, ಒಮ್ಮೆ ಆರೂ ರಸಗಳ ತ್ಯಾಗ ಮಾಡುವುದು ಅದು ರಸಪರಿತ್ಯಾಗ ತಪವಿದೆ.

ಸಂಸಾರೀ ಜೀವನು ಸಿಹಿ ರಸ ಮೊದಲಾದುವನ್ನು ತಿನ್ನುವ ಲೋಲುಪಿಯಾಗಿ ಅಭಕ್ಷ್ಯ ಭಕ್ಷಣ ಮಾಡುತ್ತಾನೆ, ಲಜ್ಜೆ ಬಿಟ್ಟು ಕೊಡುತ್ತಾನೆ, ವ್ರತ-ತಪ ಕೆಡಿಸಿ ಬಿಡುತ್ತಾನೆ, ಭೋಜನದ ಲೋಲುಪತೆಯಿಂದ ಶೂದ್ರ, ಮೊದಲಾದ ಅಯೋಗ್ಯಕುಲದವರಲ್ಲಿ ಭೋಜನ ಮಾಡುತ್ತಾನೆ, ದೈನ್ಯತೆಯಿಂದ ಅಂಗಲಾಚುತ್ತಾನೆ, ಸಿಹಿ ತಿನ್ನುವ ಸಲುವಾಗಿ ಕಾದಾಡುತ್ತಾನೆ, ಸಾಯುತ್ತಾನೆ, ಬೀಳುತ್ತಾನೆ, ಪ್ರಾಯಶಃ ರಸಗಳ ಲೋಭಿಯಾಗಿ ಭ್ರಷ್ಟನಾಗಿ ಹೋಗುತ್ತಾನೆ.

**ಯಾರೋ ಧನ್ಯ ಪುರುಷರಿಗೆ ರಸರೂಪದ ಭೋಜನ ಮಾಡುವಲಾಲಸೆಯಿರುವುದಿಲ್ಲ.** ಉತ್ತಮ ಗೃಹಸ್ಥರಂತೂ ಮೊದಲಿನಿಂದಲೇ ಅನೇಕ ಪ್ರಕಾರದ ತುಪ್ಪ, ಸಿಹಿ ರಸಗಳಲ್ಲಿನ ಲಾಲಸೆಯನ್ನು ಬಿಟ್ಟುಕೊಟ್ಟು ತಮ್ಮ ಮನೆಯಲ್ಲಿಯೇ ಸ್ನಿಗ್ಧ, ರೂಕ್ಷ, ಇತ್ಯಾದಿ ವಿಧಿಯು ಸಹಜವಾಗಿ ದೊರಕಿಸಿಕೊಟ್ಟಂಥ ಭೋಜನವನ್ನು ಸಂತೋಷದಿಂದ ಮಾಡುತ್ತಾರೆ. ರಸರೂಪ ಭೋಜನದ ಚರ್ಚೆಯನ್ನು ಸ್ವಪ್ನದಲ್ಲಿಯೂ ಮಾಡುವುದಿಲ್ಲ. **ರಸಗಳ ಲಂಪಟತೆಯು ಉಭಯಲೋಕಗಳಲ್ಲಿ ಭ್ರಷ್ಟಮಾಡುವಂಥದ್ದಿದೆ.** ಆದುದರಿಂದ ಲಾಲಸೆಯನ್ನು ಬಿಡುವ ಸಲುವಾಗಿ, ಇಂದ್ರಿಯಗಳನ್ನು

ವಶದಲ್ಲಿಟ್ಟುಕೊಳ್ಳುವ ಸಲುವಾಗಿ, ಪರಮ ಸಂವರ-ನಿರ್ಜರೆ ಮಾಡುವ ಸಲುವಾಗಿ, ದೀನತೆಯ ಅಭಾವ ಮಾಡುವ ಸಲುವಾಗಿ,ಸಂತೋಷ ಧಾರಣ ಮಾಡುವ ಸಲುವಾಗಿ ರಸಪರಿತ್ಯಾಗ ತಪ ಮಾಡುವುದೇ ಶ್ರೇಷ್ಠವಿದೆ.

**ವಿವಿಕ್ತಶಯನಾಸನ ತಪ :** ಈಗ ವಿವಿಕ್ತಶಯನಾಸನ ತಪದ ಸ್ವರೂಪ ಹೇಳುತ್ತಾರೆ. ಶೂನ್ಯಗೃಹ, ಏಕಾಂತಸ್ಥಾನ, ವಿಕಲತ್ರಯ ಜೀವಗಳ ಬಾಧೆಯಿಂದ ರಹಿತ, ಸ್ತ್ರೀ-ನಪುಂಸಕ-ಅಸಂಯಮಿ ಪುರುಷರ ಬರ-ಹೋಗುವಿಕೆಯಿಲ್ಲದ ಸ್ಥಾನದಲ್ಲಿ ಪರ್ವತಗಳ ಗುಹೆ, ವನಖಂಡದಲ್ಲಿ ಧ್ಯಾನ-ಅಧ್ಯಯನ ಮಾಡುವುದು, ಶಯನ-ಆಸನ ಮಾಡುವುದು ಅದು ವಿವಿಕ್ತಶಯನಾಸನ ತಪವಿದೆ. ಅದರಿಂದ ಏಕಾಂತದಲ್ಲಿ ವಾಸಿಸುವಂಥ ಸಾಧುಗಳಿಗೆ ಹಿಂಸೆಯ ಅಭಾವ, ಮಮತೆಯ ಅಭಾವ, ವಿಕಥೆಯ ಅಭಾವ, ಕಾಮದ ಅಭಾವವಾಗುತ್ತದೆ, ಮತ್ತು ಧ್ಯಾನ-ಅಧ್ಯಯನದ ಸಿದ್ಧಿಯೂ ಆಗುತ್ತದೆ. ಇನ್ನೊಬ್ಬರು ಜತೆಯಲ್ಲಿ ಇದ್ದರೆ ಮಾತುಕತೆಗಳಾಗುತ್ತವೆ, ಅದರಿಂದ ಧ್ಯಾನವು ಚಂಚಲವಾಗಿ ಹೋಗುತ್ತದೆ, ರಾಗಭಾವವು ವೃದ್ಧಿಸಿ ಹೋಗುತ್ತದೆ. ಆದುದರಿಂದ ಸಂಯಮಶೀಲರು ಏಕಾಂತದಲ್ಲಿಯೇ ಶಯನ ಆಸನ ಮಾಡುತ್ತಾರೆ.

ಧರ್ಮಾತ್ಮ ಗೃಹಸ್ಥರೂ ಪಾಪದಿಂದ ಭಯಭೀತರಾಗಿ,ತಮ್ಮ ಗೃಹಾಚಾರದ ಆಜೀವಿಕೆ ಮೊದಲಾದ ಕಾರ್ಯಗಳನ್ನು ನ್ಯಾಯ ಮಾರ್ಗದಿಂದ, ಅಲ್ಪ ಆರಂಭಗಳ ರೂಪದ ಪಾಪಕಾರ್ಯಗಳಿಂದಲೂ ಭಯಭೀತರಾಗಿ, ಶರೀರದ ಸ್ನಾನ, ಭೋಜನ ಮೊದಲಾದ ಕಾರ್ಯಮಾಡಿ ಏಕಾಂತ ಮನೆಯಲ್ಲಿ, ತಮ್ಮ ಮನೆಯಲ್ಲಿ, ಜಿನಮಂದಿರದಲ್ಲಿ, ಧರ್ಮಶಾಲೆಯಲ್ಲಿ, ವನದ ಚೈತ್ಯಾಲಯಾದಿಗಳಲ್ಲಿ, ಸಾಧರ್ಮಿಜನರ ಸಂಗತಿಯಲ್ಲಿ ಧರ್ಮಚರ್ಚೆ ಮಾಡುತ್ತ,ಸ್ವಾಧ್ಯಾಯ, ಜಿನಾಗಮದ ಪಠಣ, ಪಾಠಣ, ಪ್ರವಚನ, ಜಿನಾಗಮದ ಶ್ರವಣ, ಪಂಚ ಣಮೋಕಾರದ ಸ್ಮರಣೆ ಮಾಡುತ್ತ ಹಗಲು-ರಾತ್ರಿಗಳನ್ನು ವ್ಯತೀತ ಮಾಡುತ್ತಾರೆ, ಸ್ತ್ರೀಕಥೆ, ರಾಜಕಥೆ, ಭೋಜನಕಥೆ, ದೇಶಕಥೆಗಳನ್ನೆಂದೂ ಮಾಡುತ್ತಿರದೆ ಸಮಯ ವ್ಯತೀತ ಮಾಡುತ್ತಾರೆ. ಕಾಮವಿಕಾರವನ್ನು ಹೆಚ್ಚಿಸುವಂಥ, ರಾಗವನ್ನುತ್ಪನ್ನ ಮಾಡುವಂಥ ಶಯನ-ಆಸನಗಳ ತ್ಯಾಗ ಮಾಡುತ್ತಾರೆ. ಗೃಹಸ್ಥರಿಗೆ ಕೂಡ ವಿವಿಕ್ತ ಶಯನಾಸನ ತಪವು ನಿರ್ಜರೆಯ ಕಾರಣವಿದೆ.

**ಕಾಯಕ್ಲೇಶ ತಪ :** ಮುನಿರಾಜರುಗಳಿಗೆ ಕಾಯಕ್ಲೇಶ ನಾಮದ ದೊಡ್ಡ ತಪವಾಗುತ್ತದೆ. ಏಕಾಸನದಿಂದ ಕುಳಿತು ಕೊಳ್ಳುವುದು, ಒಂದೇ ಮಗ್ಗುಲದಿಂದ ಮಲಗುವುದು, ಮೌನವಿರುವುದು, ಗ್ರೀಷ್ಮ ಋತುವಿನಲ್ಲಿ ಪರ್ವತದ ಶಿಖರದ ಮೇಲೆ, ಪಾಷಾಣದ ಶಿಲೆಯ ಮೇಲೆ, ಸೂರ್ಯನ ಎದುರಿಗೆ,ಕಾಯೋತ್ಸರ್ಗಧಾರಣ ಮಾಡಿ, ಪ್ರಖರ ಬಿಸಿಲು, ಉಷ್ಣ ಹವೆ ಮೊದಲಾದವುಗಳ ಘೋರ ವೇದನೆಯಾದರೂ ಕೂಡ ಧರ್ಮಧ್ಯಾನದಲ್ಲಿ, ಹನ್ನೆರಡು ಭಾವನೆಗಳ ಚಿಂತನೆಯಲ್ಲಿ ಪರಿಣಾಮವನ್ನು ಸ್ಥಿರಗೊಳಿಸಿ ಕಷ್ಟರೂಪದ ಅನುಭವ ಮಾಡದಿರುವುದು ಅದು ಕಾಯಕ್ಲೇಶ ತಪವಿದೆ.

**ವರ್ಷಾಋತು**ವಿನಲ್ಲಿ ವೃಕ್ಷದ ಕೆಳಗೆ ಯೋಗಧಾರಣ ಮಾಡುತ್ತ, ಘೋರ ಅಂಧಕಾರದಿಂದ ತುಂಬಿದ ರಾತ್ರಿಯಲ್ಲಿ ಅಖಂಡ ಧಾರಾರೂಪವಾಗಿ ಸುರಿಯುತ್ತಿರುವ ಮೇಘದಿಂದ ಭೂಮ್ಯಾಕಾಶಗಳು ಜಲಮಯವಾಗುತ್ತಿದ್ದು, ವೃಕ್ಷದಲ್ಲಿ ಏಕತ್ರವಾದ ಜಲದ ಮಹಾಧಾರೆ ಬೀಳುತ್ತಿದ್ದು, ಮಿಂಚು ಹೊಳೆಯುತ್ತಿದ್ದು, ಮೋಡಗಳು ಗರ್ಜಿಸುತ್ತಿದ್ದು, ಸಿಡಿಲು ಹೊಡೆಯುತ್ತಿರುವ ಸಮಯದಲ್ಲಿ ಧನ್ಯ ಮುನಿಗಳು ಯಾವ ವಸ್ತುವಿನ ಆವರಣವಿಲ್ಲದ ನಗ್ನಶರೀರದ ಮೇಲೆ ಘೋರ ವೇದನೆಯನ್ನು ಭೋಗಿಸುತ್ತಲೂ ಸಂಕ್ಲೇಶವಿಲ್ಲದ ಧರ್ಮಧ್ಯಾನ ಶುಕ್ಲಧ್ಯಾನದಲ್ಲಿ ಒಂದಾಗಿರುತ್ತಾರೆ. ಇದೆಲ್ಲವೂ ವೀತರಾಗತೆಯ ಮಹಿಮೆಯಿದೆ.

**ಶೀತಋತು**ವಿನಲ್ಲಿ ನದಿಯ ದಡದಲ್ಲಿ, ಚೌಕದಲ್ಲಿ ನಗ್ನ ಶರೀರದ ಮೇಲೆ ಹಿಮ ಬೀಳುತ್ತಿರುವುದು, ಶೀತಲವಾದ ಬಿರುಗಾಳಿಯು ಬೀಸುತ್ತಿರುವ ಸಮಯದಲ್ಲಿ ದುಃಖರಹಿತ ಧರ್ಮಧ್ಯಾನದಲ್ಲಿ ಶೀತಕಾಲದ ರಾತ್ರಿಯನ್ನು ಕಳೆಯುವುದು ಮತ್ತು ದುಷ್ಟ ಜೀವಗಳಿಂದ ಮಾಡಲಾಗುವ ಘೋರ ಉಪದ್ರವವನ್ನು ಸಹಿಸುತ್ತ ಸಮತೆಯ ಭಾವವಿಡುವುದು ಅದು ಕಾಯಕ್ಲೇಶ ತಪವಿದೆ. ಈ ಪ್ರಕಾರ ಪರವಶತೆಯ ದುಃಖವು ಬಂದ ಮೇಲೆ ಚಂಚಲವಾಗದಿರುವುದರ ಸಲುವಾಗಿ, ದೇಹಜನ್ಯ ಸುಖದ ಅಭಿಲಾಷೆಯ ಅಭಾವ ಮಾಡುವ ಸಲುವಾಗಿ, ರೋಗಗಳಿಂದ ಚಂಚಲತೆಯಾಗದಿರುವುದರ ಸಲುವಾಗಿ, ಭಯವನ್ನು ಜಯಿಸುವ ಸಲುವಾಗಿ, ಪರೀಷಹ ಸಹಿಸುವ ಸಲುವಾಗಿ, ಕರ್ಮಗಳ ನಿರ್ಜರೆಯ ಸಲುವಾಗಿ ಕಾಯಕ್ಲೇಶ ತಪವನ್ನು ಧಾರಣ ಮಾಡುತ್ತಾರೆ.

ಗೃಹಸ್ಥರಿಗೆ ಆತಾಪನಯೋಗಾದಿಗಳಾಗುವುದಿಲ್ಲ, ಆ ತಪಗಳಂತೂ ದಿಗಂಬರ ಸಾಧುಗಳಿಂದಲೇ ಆಗುತ್ತವೆ. ಗೃಹಸ್ಥನಂತೂ ಸ್ವಯಂ ಚಲಿಸಿ ಕಾಯಕ್ಲೇಶ ತಪ ಮಾಡುವುದಿಲ್ಲ-ಸಾಮಾಯಿಕದ ಸಮಯದಲ್ಲಿಯೇ ಯಾವುದಾದರೂ ಕ್ಲೇಶವು ಬಂದು ಬಿಟ್ಟರೆ ಚಂಚಲನಾಗುವುದಿಲ್ಲ, ಕರ್ಮದ ಉದಯದಿಂದ ತನ್ನ ರಕ್ಷಣೆ ಮಾಡುತ್ತಿದ್ದರೂ ಶೀತಜ್ವರ, ದಾಹಜ್ವರ, ವಾತಶೂಲ ಮೊದಲಾದುವಾದರೆ ಮತ್ತು ದುಷ್ಟ ವೈರೀ, ಧರ್ಮದ್ರೋಹಿಗಳು ಬಂದು ಉಪದ್ರವ ಮಾಡತೊಡಗಿದರೆ, ಜೈಲಿನಲ್ಲಿ ಹಾಕಿದರೆ, ಹೊಡೆಯತೊಡಗಿದರೆ ಗೃಹಸ್ಥರೂ ಮುನಿಗಳ ಕಾಯಕ್ಲೇಶ ತಪದ ಭಾವನೆ ಮಾಡುತ್ತ ಸಮತೆಯ ಭಾವದಿಂದ ಸಹಿಸುತ್ತಾರೆ, ಅಧೀರತೆಯನ್ನು ತೋರಿಸುವುದಿಲ್ಲ, ನಿರ್ಧನತೆಯಿಂದ ಉತ್ಪನ್ನವಾದ ಕ್ಷುಧೆ-ತೃಷೆ, ಶೀತ-ಉಷ್ಣ ಮೊದಲಾದವುಗಳ ದುಃಖದ ವೇದನೆಯು ಕರ್ಮದ ಉದಯದಿಂದ ಬಂದು ಬಿಟ್ಟರೆ ಅಲ್ಲಿ ಅಧೀರರಾಗದಿರುವುದು, ಧರ್ಮದ ಆಶ್ರಯದಿಂದ ಸಹನೆ ಮಾಡುವುದೇ ಕಾಯಕ್ಲೇಶ ತಪವಿದೆ.

ಮುನೀಶ್ವರರಂತೂ ಈ ಪ್ರಕಾರದ ಕಾಯಕ್ಲೇಶ ತಪವನ್ನು ಉತ್ಸಾಹದೊಡನೆ ಧಾರಣ ಮಾಡುತ್ತಾರೆ. ನಾವು ಗೃಹಸ್ಥರು ಕಾಯಕ್ಲೇಶದಿಂದ ಹೆಚ್ಚು ದೂರವಿರುತ್ತೇವೆ. ಆದಾಗ್ಯೂ ಅಸಾತಾ ಕರ್ಮದ ಉದಯದಿಂದ ದುಖವು ಬಂದು ಬಿಟ್ಟರೆ ಭಯಭೀತರಾಗಿ ಹೋದರೆ ಅದು ಬಿಡುವುದಿಲ್ಲ, ಧೈರ್ಯಧಾರಣ ಮಾಡಿ ಸಹಿಸಿದರೆ ಕರ್ಮವು ರಸವಿತ್ತು ಅವಶ್ಯವಾಗಿ ನಿರ್ಜರಿತವಾಗಿ ಹೋಗುವುದು; ಆದರೆ ಹೆದರಿಕೊಂಡರೆ ಕ್ಲೇಶಪಟ್ಟುಕೊಂಡರೆ ಸಹನೆಯನ್ನಂತೂ ಮಾಡಬೇಕಾಗುವುದು, ಭೋಗಿಸಲೇಬೇಕಾಗುವುದು, ಕರ್ಮದ ಉದಯಕ್ಕೆ ದಯೆಯಿಲ್ಲ, ಅಧೀರನಾಗಿ ದುಃಖಿಯಾಗುತ್ತ, ಉದಯದಲ್ಲಿ ಬಂದಿದೆಯೆಂದ ಮೇಲೆ ನಾನೇ ಭೋಗಿಸಬೇಕಾಗುವುದು. ಮತ್ತು ಹೀಗೆ ಭೋಗಿಸುವುದರಿಂದ ಭವಿಷ್ಯದ ಸಲುವಾಗಿ ಅಧಿಕಪಟ್ಟು ಬಂಧ ಮಾಡಿಕೊಳ್ಳುವೆನು. ಆದುದರಿಂದ **ಜಿನೇಂದ್ರರ ವಚನಗಳ ಆಶ್ರಯ ಪಡೆದು ಕರ್ಮದ ಉದಯದಲ್ಲಿ ಧೈರ್ಯ ಧಾರಣ ಮಾಡುವುದೇ ಶ್ರೇಷ್ಠವಿದೆ.**

ಗೃಹಸ್ಥರಿಗೆ ಯಾವಾಗ ಅಂತರಾಯ ಕರ್ಮದ ಉದಯ ಬರುತ್ತದೆ ಆಗ ಹೊಟ್ಟೆ ತುಂಬಿಕೊಳ್ಳುವ ಸಲುವಾಗಿ ಪೂರ್ಣ ಆಹಾರವೂ ದೊರಕುವುದಿಲ್ಲ, ತುಪ್ಪ ಮೊದಲಾದ ರಸ ಪದಾರ್ಥ ಸ್ವಲ್ಪ ಸಿಗುತ್ತವೆ ಅಥವಾ ಸಿಗುವುದಿಲ್ಲ; ಆಗ ಅವನು ಸ್ವಲ್ಪದರಲ್ಲಿಯೇ ಸಂತುಷ್ಟನಿರಬೇಕು, ಇತರರ ವೈಭವ ನೋಡಿ ಇಚ್ಛೆ ಮಾಡಬಾರದು, ಸಮತೆಯ ಭಾವರೂಪನಾಗಿ ಉಳಿದರೆ ಸ್ವಾಭಾವಿಕವಾಗಿಯೇ ಕಾಯಕ್ಲೇಶ ತಪವಾಗುತ್ತದೆ, ಅಧಿಕ ನಿರ್ಜರೆಯಾಗುತ್ತದೆ.

ಹೀಗೆ ಆರು ಪ್ರಕಾರದ ಬಾಹ್ಯ ತಪದ ವರ್ಣನೆ ಮಾಡಲಾಯಿತು. ಬಾಹ್ಯ ಎಂದರೆ ಇತರರಿಗೆ ಪ್ರತ್ಯಕ್ಷವಾಗಿ ತಿಳಿದು ಬರುತ್ತವೆ, ಮತ್ತು ಬಾಹ್ಯ ಭೋಜನಾದಿಗಳ ತ್ಯಾಗದಿಂದ ಆಗುತ್ತವೆ, ಮತ್ತು ಅನ್ಯ ಗೃಹಸ್ಥ ಹಾಗೂ ಅನ್ಯ ಮತಿಗಳೂ ಧಾರಣ ಮಾಡುತ್ತಾರೆ, ಅದರಿಂದ ಅವನ್ನು ಬಾಹ್ಯತಪವೆಂದು ಹೇಳಲಾಗಿದೆ. ಹೇಗೆ ದೊಡ್ಡ ಹುಲ್ಲಿನ ಬಣವೆಯನ್ನು ಅಗ್ನಿಯು ಸುಟ್ಟು ಹಾಕುತ್ತದೆ, ಹಾಗೆಯೇ ಪೂರ್ವ ಸಂಚಿತ ಕರ್ಮರಾಶಿಯನ್ನು ಸುಟ್ಟು ಹಾಕುವುದರಿಂದ ಇದನ್ನು ತಪವೆಂದು ಹೇಳಿದೆ. ಶರೀರ ಹಾಗೂ ಇಂದ್ರಿಯಗಳನ್ನು ಪೀಡಿಸಿ ವಿಷಯಗಳಲ್ಲಿ ಮುಗ್ನವಾಗಗೊಡದಿರುವುದರಿಂದ ಇದನ್ನು ತಪವೆಂದು ಹೇಳುತ್ತಾರೆ. ಯಾವ ಪ್ರಕಾರ ಕಾಯಿಸಿದ ಸ್ವರ್ಣಯುಕ್ತ ಪಾಷಾಣವು ಕಾಳಿಕೆಯನ್ನು ಬಿಟ್ಟುಕೊಟ್ಟು ಶುದ್ಧ ಚಿನ್ನವಾಗಿ ಹೋಗುತ್ತದೆ, ಅದೇ ಪ್ರಕಾರ ಆತ್ಮನು ಕೂಡ ಇದರ ಪ್ರಭಾವದಿಂದ ಕರ್ಮಮಲ ರಹಿತನಾಗಿ ಹೋಗುತ್ತಾನೆ; ಅದಕ್ಕಾಗಿಯೇ ಭಗವಂತರು ಇದನ್ನು ತಪವೆಂದು ಹೇಳಿದ್ದಾರೆ.

**ಅಂತರಂಗ ತಪ :** ಈಗ ಆರು ಪ್ರಕಾರದ ಅಂತರಂಗ ತಪದ ವರ್ಣನೆ ಮಾಡುತ್ತಾರೆ. ಅಂತರಂಗ ತಪದಲ್ಲಿ ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ ಮತ್ತು ಧ್ಯಾನವೆಂದು ಆರು ಭೇದಗಳಿವೆ. ಪ್ರಾಯಶ್ಚಿತ್ತ ತಪದಲ್ಲಿ ಒಂಭತ್ತು ಭೇದ, ಸಂಖ್ಯಾತ ಮತ್ತು ಅಸಂಖ್ಯಾತ ಭೇದಗಳಿವೆ. ಇಲ್ಲಿ ಆಲೋಚನ ಮೊದಲಾದವುಗಳ ಕಥನ ಮಾಡುವುದರಿಂದ ಕಥನವು ಹೆಚ್ಚು ವಿಸ್ತಾರವಾಗಿ ಹೋಗುವುದರಿಂದ ಸಂಕ್ಷೇಪದಲ್ಲಿ ಹೇಳುತ್ತಾರೆ.

**ಪ್ರಾಯಶ್ಚಿತ್ತ ತಪ :** ಧರ್ಮಾತ್ಮನು ತನ್ನ ವ್ರತ-ಧರ್ಮದಲ್ಲಿ ಎಂದೂ ದೋಷರೂಪದ ಆಚರಣೆ ಮಾಡುವುದಿಲ್ಲ, ಅನ್ಯರಿಗೂ ಸದೋಷ ಆಚರಣೆ ಮಾಡಿಸುವುದಿಲ್ಲ, ದೋಷರೂಪದ ಆಚರಣೆ ಮಾಡುವವರಿಗೆ ಮನ-ವಚನ-ಕಾಯ ದಿಂದ ಒಳ್ಳೆಯದೆಂದು ಹೇಳುವುದಿಲ್ಲ. ಎಂದಾದರೊಮ್ಮೆ ಪ್ರಮಾದದಿಂದ, ಮರವೆಯಿಂದ ದೋಷ ತಗಲಿದರೆ ನಿರ್ದೋಷ ಸಾಧುಗಳ ಹತ್ತಿರದಲ್ಲಿ ಹೋಗಿ, ಸರಳ ಪರಿಣಾಮದಿಂದ, ಹತ್ತು ಪ್ರಕಾರದ ದೋಷವಿಲ್ಲದೆ ಆಲೋಚನೆ ಮಾಡಿ, ಗುರುಗಳ ಮೂಲಕ ಕೊಡಲಾದ ಪ್ರಾಯಶ್ಚಿತ್ತವನ್ನು ಪರಮ ಶ್ರದ್ಧೆಯಿಂದ ಆದರಪೂರ್ವಕ ಗ್ರಹಣ ಮಾಡುತ್ತಾನೆ. ನನಗೆ ಹೆಚ್ಚು ಪ್ರಾಯಶ್ಚಿತ್ತ ಕೊಟ್ಟಿದ್ದಾರೆ ಅಥವಾ ಕಡಿಮೆ ಪ್ರಾಯಶ್ಚಿತ್ತ ಕೊಟ್ಟಿದ್ದಾರೆಂದು ಹೃದಯದಲ್ಲಿ ಸಂದೇಹ ಮಾಡುವುದಿಲ್ಲ ಪ್ರಮಾದದಿಂದ ಒಂದು ಸಾರೆ ದೋಷ ತಗಲಿದ್ದರೆ ಅದನ್ನು ಪ್ರಾಯಶ್ಚಿತ್ತ ತೆಗೆದುಕೊಂಡು ದೂರ ಮಾಡಿ ಬಿಡುತ್ತಾನೆ. ನಂತರ ಎಷ್ಟು ಸಾವಧಾನನಿರುತ್ತಾನೆಂದರೆ ತನ್ನಲ್ಲಿ ನೂರು ತುಂಡುಗಳಾಗಿ ಹೋದರೂ ಕೂಡ ಪುನಃ ದೋಷ ತಗಲಗೊಡದಿರುವವನ ಪ್ರಾಯಶ್ಚಿತ್ತ ತೆಗೆದುಕೊಳ್ಳುವುದು ಸಾರ್ಥಕವಿದೆ.

ಅನೇಕ ಗುಣಗಳ ಧಾರಕ, ಸಿದ್ಧಾಂತ ರಹಸ್ಯದ ಪಾರಂಗತ, ಪ್ರಶಾಂತ ಮನಸ್ಸುಳ್ಳ, ಅಪರಿಸ್ರಾವೀ ಗುಣಗಳ ಧಾರಕರಾದಂಥವರು ಹೇಗೆ ಕಾಯ್ದ ಲೋಹದ ಗುಂಡು ನೀರನ್ನು ಕುಡಿದು ಅದನ್ನು ಹೊರಗೆ ಬರಗೊಡುವುದಿಲ್ಲ, ಅದೇ ಪ್ರಕಾರ ಅವರು ಶಿಷ್ಯರ ಮೂಲಕ ಆಲೋಚನೆ ಮಾಡಿದ ದೋಷವನ್ನು ಬಾಹ್ಯದಲ್ಲೆಂದೂ ಪ್ರಕಟ ಮಾಡಿ ಹೇಳುವುದಿಲ್ಲ. ದೇಶ-ಕಾಲದ ಜ್ಞಾತಾ, ಏಕಾಂತದಲ್ಲಿ ವಾಸಿಸುವಂಥ, ಆಚಾರ್ಯರುಗಳು ಮೊದಲು ಹೇಳಿದ ಅನೇಕ ಗುಣಗಳ ಧಾರಕರ ಹತ್ತಿರ ಪ್ರಾಯಶ್ಚಿತ್ತ ತೆಗೆದುಕೊಳ್ಳುವಂಥವನು ಕೈ ಮುಗಿದು ಅತ್ಯಂತ ವಿನಯದೊಡನೆ, ಬಾಲಕನ ಹಾಗೆ ಸರಳ ಚಿತ್ತನಾಗಿ ಆತ್ಮನಿಂದೆ ಮಾಡಿಕೊಳ್ಳುತ್ತ ಆಲೋಚನೆ ಮಾಡುತ್ತಾನೆ.

ಯಾವ ಪ್ರಕಾರ ರಕ್ತ ತಗಲಿದ ವಸ್ತ್ರವನ್ನು ರಕ್ತದಿಂದ ತೊಳೆಯಲಾಗುವುದಿಲ್ಲ, ಕೊಳೆಯಿಂದ ಕೊಳೆಯನ್ನು ತೊಳೆಯಲಾಗುವುದಿಲ್ಲ, ಅದೇ ಪ್ರಕಾರ ದೋಷಯುಕ್ತನಾದ ಸಾಧುವೂ ಶಿಷ್ಯನನ್ನು ನಿರ್ದೋಷ ಮಾಡುವ ಸಾಧ್ಯತೆಯಿಲ್ಲ. **ಯಾವ ಪ್ರಕಾರ ಮೂಢ ವೈದ್ಯನು ವಿರುದ್ಧ ಚಿಕಿತ್ಸೆ ಮಾಡಿ ರೋಗಿಯನ್ನು ಸಾಯಿಸಿ ಬಿಡುತ್ತಾನೆ, ಅದೇ ಪ್ರಕಾರ ಅಜ್ಞಾನೀ ಗುರು ಕೂಡ ಶಿಷ್ಯನನ್ನು ಸಂಸಾರ ಸಮುದ್ರದಲ್ಲಿ ಮುಳುಗಿಸಿ ಬಿಡುತ್ತಾನೆ** – ನಿರ್ದೋಷ ಗುರುಗಳೇ ಪ್ರಾಯಶ್ಚಿತ್ತ ಕೊಟ್ಟು ಶುದ್ಧ ಮಾಡುತ್ತಾರೆ.

ಸಂಯಮೀ ಪುರುಷರಂತೂ ಓರ್ವಗುರು, ಓರ್ವ ಶಿಷ್ಯ, ಈರ್ವರೇ ಏಕಾಂತದಲ್ಲಿ ಆಲೋಚನೆ ಮಾಡುತ್ತಾರೆ. ಆರ್ಯಿಕೆಯರು ಬಯಲಿನಲ್ಲಿ ಓರ್ವ ಗುರು, ಓರ್ವ ಗಣಿನೀ ಆರ್ಯಿಕೆ, ಓರ್ವ ದೋಷ ತಗಲಿದವರು ಹೀಗೆ ಮೂವರಿರುತ್ತಾರೆ. ಯಾರು ಲಜ್ಜೆಯಿಂದ, ತಿರಸ್ಕಾರದ ಭಯದಿಂದ, ಪ್ರಾಯಶ್ಚಿತ್ತದ ಭಯದಿಂದ ಅಥವಾ ಅಭಿಮಾನದಿಂದ ದೋಷವನ್ನು ಶುದ್ಧ ಮಾಡಿಕೊಳ್ಳುವುದಿಲ್ಲ. ಅವರು ಲಾಭ-ಹಾನಿಯ ಜ್ಞಾನವಿಲ್ಲದ ವ್ಯಾಪಾರಿಯ ಹಾಗೆ ಕರ್ಮರೂಪದ ಸಾಲಗಾರರಾಗಿ ಭ್ರಷ್ಟನಾಗಿ ಹೋಗುತ್ತಾರೆ.

ಆಲೋಚನೆಯಿಲ್ಲದೆ ಮಹಾನ ತಪ ಧಾರಣ ಮಾಡುವುದರಿಂದಲೂ ಐಚ್ಛಿಕ ಫಲವು ದೊರಕುವುದಿಲ್ಲ, ಆಲೋಚನೆ ಮಾಡಿಯೂ ಗುರುಗಳ ಮೂಲಕ ಕೊಡಲಾದ ಪ್ರಾಯಶ್ಚಿತ್ತ ತೆಗೆದುಕೊಳ್ಳದಿದ್ದರೆ ವೈದ್ಯನು ತಿಳಿಸಿದ ಔಷಧವನ್ನು ತಿನ್ನದಂಥ ರೋಗಿಯ ಹಾಗೆ ಶುದ್ಧನಾಗುವುದಿಲ್ಲ, ಮತ್ತು ಭೂಮಿಯನ್ನು ಹರಗಿ ಹದ ಮಾಡದೆ ಭೂಮಿಯಲ್ಲಿ ಬೀಜ ಬಿತ್ತುವುದರಿಂದ ಅಧಿಕ ಇಳುವರಿ ಬರುವುದಿಲ್ಲ, ಅಥವಾ ಸ್ವಚ್ಛ ಮಾಡದ ಕನ್ನಡಿಯಲ್ಲಿ ಸ್ಪಷ್ಟವಾಗಿ ರೂಪ್ಪ ಕಂಡು ಬರುವುದಿಲ್ಲ.

**ಈಗ ಈ ಕಲಿಕಾಲದ ಪ್ರಭಾವದಿಂದ ಪ್ರಾಯಶ್ಚಿತ್ತ ಕೊಡುವಂಥ ನಿರ್ದೋಷ ಗುರುಗಳೂ ಕಂಡು ಬರುವುದಿಲ್ಲ.** ಯಾರು ತಾವೇ ಅನೇಕ ದೋಷಗಳಿಂದ ಯುಕ್ತರಿದ್ದಾರೆ ಅವರು ಇತರರನ್ನು ಹೇಗೆ ಶುದ್ಧ ಮಾಡುವ ಸಾಧ್ಯತೆಯಿದೆ ? **ರಕ್ತದಿಂದ ರಕ್ತವನ್ನು ಹೇಗೆ ತೊಳೆಯಲಾಗುವುದು ?** ಆತ್ಮಾನುಶಾಸನದಲ್ಲಿ ಹೀಗೆ ಹೇಳುತ್ತಾರೆ –

**ಕಲೌ ದಂಡೋ ನೀತಿಃ ಸ ಚ ನೃಪತಿಭಿಸ್ತೇ ನೃಪತಯೋ**
**ನಯಂತ್ಯರ್ಥಾರ್ಥಂ ತಂ ನ ಚ ಧನಮದೋऽಸ್ತ್ಯಾಶ್ರಮವತಾಮ್ ।**
**ನತಾನಾಮಾಚಾರ್ಯಾ ನ ಹೀ ನತಿರತಾಃ ಸಾಧು ಚರಿತಾ**
**ಸ್ತಪಸ್ಥೇಷು ಶ್ರೀಮನ್ಮಣಯ ಇವ ಜಾತಾಃ ಪ್ರವಿರಲಾಃ ॥೧೪೯॥**

**ಅರ್ಥ ಃ-** ಓರ್ವ ಶಿಷ್ಯನು ಗುಣಭದ್ರ ಸ್ವಾಮಿಗೆ ಕೇಳುತ್ತಾನೆ. ಓ ಸ್ವಾಮಿ ! ಈ ಕಾಲದಲ್ಲಿ ತಪಸ್ವಿ ಮುನಿಗಳಲ್ಲಿ ಕೂಡ ಯಥಾರ್ಥ ಆಚರಣೆ ಮಾಡುವಂಥವರು ಅತ್ಯಂತ ವಿರಳರಾಗಿಯೇ ಇದ್ದಾರೆ ಇದರ ಕಾರಣವೇನು ? ಇದರ ಉತ್ತರ ಕೊಡುವ ಸಲುವಾಗಿ ಈ ಶ್ಲೋಕ ಹೇಳಿದ್ದಾರೆ. ಶ್ಲೋಕದ ಅರ್ಥ : **ಈ ಕಲಿಕಾಲದಲ್ಲಿ ನೀತಿಯಿಂದ ನಡೆಸುವುದರ ಉಪಾಯವು ಶಿಕ್ಷೆ ಕೊಡುವುದಿದೆ. ಶಿಕ್ಷೆಯ ಭಯವಿಲ್ಲದೆ ಯಾರೂ ನ್ಯಾಯಮಾರ್ಗದ ಮೇಲೆ ಸ್ವಯಂ ಸ್ವೇಚ್ಛೆಯಿಂದ ನಡೆಯುವುದಿಲ್ಲ,** ಶಿಕ್ಷೆಯನ್ನು ದೊರೆಗಳ ಮೂಲಕವೇ ಕೊಡಲಾಗುತ್ತದೆ. ಏಕೆಂದರೆ ಕಲಿಕಾಲದಲ್ಲಿ ಬಲವಂತರ ಹೊರತಾಗಿ ಅನ್ಯ ಸಾಧರ್ಮಿಗಳ ಮೂಲಕ, ವೃದ್ಧ ಪುರುಷರ ಮೂಲಕ, ಸಮಾಜದ ಮೂಲಕ ಕೊಡಲಾದ ಶಿಕ್ಷೆಯನ್ನು ಯಾರೂ ಗ್ರಹಣ ಮಾಡುವುದಿಲ್ಲ, ಅವರ ಹೇಳಿಕೆಯನ್ನು ಯಾರೂ ಮನ್ನಿಸುವುದಿಲ್ಲ. ಬಲಶಾಲಿ ದೊರೆಗಳಿಂದ ಕೊಡಲಾದ ಶಿಕ್ಷೆಯನ್ನೇ ಗ್ರಹಣ ಮಾಡುತ್ತಾರೆ.

ಈ ಕಲಿಕಾಲದಲ್ಲಿ ದೊರೆಗಳು ಕೂಡ ಯಾರಿಂದ ತಮಗೆ ಧನದ ಪ್ರಾಪ್ತಿಯಾಗುವುದು ಕಂಡು ಬರುತ್ತದೆ ಅವರಿಗೇ ಶಿಕ್ಷೆ ಕೊಡುತ್ತಾರೆ. ಒಂದು ವೇಳೆ ಅವನು ದೊರೆಗೆ ಧನ ಕೊಟ್ಟನೆಂದರೆ ಅವನಿಗೆ ಶಿಕ್ಷೆ ಕೊಡುವುದಿಲ್ಲ-ನಿರ್ಧನರಿಗೆ ಶಿಕ್ಷೆ ಕೊಡುವುದಿಲ್ಲ. ಯಾವ ಶ್ರಮವನ್ನೂ ಮಾಡದಂಥ ಆಶ್ರಮವಾಸಿಯಾದ ಸಂಯಮಿಗಳ ಹತ್ತಿರ ಸ್ವಲ್ಪವೂ ಧನವಿರುವುದಿಲ್ಲ, ಅದಕ್ಕಾಗಿಯೇ ಅವರು ಸಂಯಮ ಸ್ವೀಕರಿಸಿಯೂ ಕುಮಾರ್ಗದ ಮೇಲೆ ನಡೆಯುತ್ತಾರೆ; ಏಕೆಂದರೆ ಅವರಿಗೆ ದೊರೆಯ ಶಿಕ್ಷೆಯ ಭಯವಂತೂ ಇಲ್ಲ, ಅವರು ಯಾವುದರಿಂದ ಕುಮಾರ್ಗವನ್ನು ಬಿಟ್ಟುಕೊಡುವರು.

**ಆಚಾರ್ಯರಿಗೂ ಶಿಕ್ಷೆಯಾಗಬೇಕು, ಏಕೆಂದರೆ ಕಲಿಕಾಲದಲ್ಲಿ ಶಿಷ್ಯರುಗಳ ಮೇಲೆ ಆಚಾರ್ಯರ ಅನುರಾಗವಾಗತೊಡಗಿದೆ.** ಅವರು ತಮಗೆ ನಮಸ್ಕಾರ ಮಾಡುವವರಿಗೆ ಶಿಕ್ಷೆ ಕೊಡುವುದಿಲ್ಲ, ತಮ್ಮ ಸಂಘ-ಸಂಪ್ರದಾಯವನ್ನು ಹೆಚ್ಚಿಸುವ ಸಲುವಾಗಿ ಯಾರು ತಮಗೆ ನಮಸ್ಕಾರ ಮಾಡುತ್ತಾರೆ ಅವರನ್ನು ತಮ್ಮವರೆಂದು ತಿಳಿದುಕೊಂಡು ಶಿಕ್ಷೆ ಕೊಡುವುದಿಲ್ಲ, ಆಗ ಅವರು ಶಿಕ್ಷೆಯ ಭಯದಿಂದ ರಹಿತರಾಗಿ ಶಾಸ್ತ್ರವಿರುದ್ಧ ಆಚರಣೆ ಮಾಡತೊಡಗುತ್ತಾರೆ. ಆದುದರಿಂದ ಕಲಿಕಾಲದಲ್ಲಿ ತಪಸ್ವಿಗಳಲ್ಲಿ ಕೂಡ ಸತ್ಯ ಆಚರಣೆ ಮಾಡುವಂಥವರು ಅತ್ಯಂತ ವಿರಳರಾಗಿಯೇ ಕಂಡು ಬರುತ್ತಾರೆ. ಕೇವಲ ವೇಷಧಾರಿಗಳು ಮಾತ್ರ ಬಹಳಷ್ಟು ಕಂಡು ಬರುತ್ತಾರೆ.

ಆದುದರಿಂದ ಪ್ರಾಯಶ್ಚಿತ್ತವೇ ಕಲ್ಯಾಣದ ಕಾರಣವಿದೆ, ಆದರೆ ಗೃಹಸ್ಥರಲ್ಲಿ ಪ್ರಾಯಶ್ಚಿತ್ತದ ಪ್ರವೃತ್ತಿಯು ಹೇಗಿರುವುದು ? ಪರಮೇಷ್ಠಿಯ ಪ್ರತಿಬಿಂಬದ ಎದುರಿಗೆ ಹೋಗಿಯೇ ತಮ್ಮ ಅಪರಾಧದ ಆಲೋಚನೆ ಮಾಡಿ, ಅದರಿಂದ ಅಪರಾಧವು ಪುನಃ ಸ್ವಪ್ನದಲ್ಲಿ ಕೂಡ ಸಂಭವಿಸದ ರೀತಿಯಲ್ಲಿ ಪ್ರಯತ್ನ ಮಾಡಬೇಕಾಗುವುದು.

**ವಿನಯತಪ :** ವಿನಯ ತಪವು ಅಂತರಂಗ ತಪದ ಎರಡನೇ ಭೇದವಿದೆ. ಅದರಲ್ಲಿ ಕೂಡ ದರ್ಶನವಿನಯ, ಜ್ಞಾನವಿನಯ, ಚಾರಿತ್ರವಿನಯ, ತಪವಿನಯ ಮತ್ತು ಉಪಚಾರವಿನಯವೆಂದು ಐದು ಭೇದಗಳಿವೆ.

**ದರ್ಶನವಿನಯ :** ಪದಾರ್ಥಗಳ ಶ್ರದ್ಧೆಯಲ್ಲಿ ಶಂಕಾದಿ ದೋಷಗಳಿಲ್ಲದೆ ನಿಃಶಂಕವಾಗಿರುವುದು ಅದು ದರ್ಶನ ವಿನಯವಿದೆ. ಸಮ್ಯಗ್ದರ್ಶನದ ಪರಿಣಾಮವಾಗುವಲ್ಲಿ ಹರ್ಷ ಹಾಗೂ ಸಮ್ಯಕ್ತ್ವದ ವಿಶುದ್ಧತೆಯಲ್ಲಿ ತತ್ಪರನಿರುವುದು, ಸಮ್ಯಗ್ದೃಷ್ಟಿಗಳ ಸಹವಾಸ ಬಯಸುವುದು, ಸಮ್ಯಕ್ತ್ವದ ಪರಿಣಾಮದ ಭಾವನೆ ಭಾವಿಸುವುದು, ಮಿಥ್ಯಾಧರ್ಮದ ಪ್ರಶಂಸೆ ಮಾಡದಿರುವುದು, ಏಕೆಂದರೆ **ಮಿಥ್ಯಾದೃಷ್ಟಿಯ ಆಚರಣೆಯೆಲ್ಲವು ಇಹಲೋಕ-ಪರಲೋಕದಲ್ಲಿ ಯಶಸ್ಸು, ಪ್ರಸಿದ್ಧಿ,**

**ವಿಷಯಸುಖ, ಧನ, ಸಂಪತ್ತಿಯ ಅಪೇಕ್ಷೆಯೊಡನೆ ಆತ್ಮಜ್ಞಾನದಿಂದ ರಹಿತವಿದೆ. ಅದು ಬಂಧದ ಕಾರಣ ವಾಗಿರುವುದರಿಂದ ಪ್ರಮಾಣ (ಸತ್ಯ)ವಿಲ್ಲ.** ವೀತರಾಗ ಸರ್ವಜ್ಞದೇವರು ಯಾವ ಪದಾರ್ಥಗಳ ಸ್ವರೂಪ ಹೇಳಿದ್ದಾರೆ ಅದು ಪ್ರಮಾಣವಿದೆ ಇದು ದರ್ಶನವಿನಯವಿದೆ.

**ಜ್ಞಾನವಿನಯ :** ಜ್ಞಾನ ವಿನಯವು ಆಲಸ್ಯರಹಿತ, ಖೇದರಹಿತ, ವಿಷಯ-ಕಷಾಯಗಳ ಮಲರಹಿತ, ಶುದ್ಧಮನಸಹಿತ, ದೇಶ-ಕಾಲದ ವಿಶುದ್ಧಿಯ ವಿಧಾನದಲ್ಲಿ ನಿಪುಣ ಪುರುಷನು ಅತ್ಯಂತ ಆದರದೊಡನೆ ಯಥಾಶಕ್ತಿ ಮೋಕ್ಷದ ಬಯಕೆಯುಳ್ಳವನಾಗಿ, ವೀತರಾಗ ಸರ್ವಜ್ಞರ ಮೂಲಕ ಹೇಳಲಾದ ಪರಮಾಗಮದ ಜ್ಞಾನ ಗ್ರಹಣ ಮಾಡುವುದು, ಅಭ್ಯಾಸ ಮಾಡುವುದು, ಸ್ಮರಣೆ ಮಾಡುವುದು ಅದು ಜ್ಞಾನವಿನಯವಿದೆಯೆಂದು ತಿಳಿಯುವುದು. ಜ್ಞಾನದ ಅಭ್ಯಾಸದಿಂದಲೇ ಜೀವದ ಹಿತವಿದೆ, ಜ್ಞಾನವಿಲ್ಲದ ಮನುಷ್ಯನು ಪಶುವಿನ ಸಮಾನನಿದ್ದಾನೆ. ಜ್ಞಾನದ ಸೇವನೆಯಿಂದಲೇ ಮನುಷ್ಯಾಚಾರವಾಗುತ್ತದೆ. ಕಾಮ ಸೇವನೆ, ಭೋಜನ, ಇಂದ್ರಿಯ ವಿಷಯಗಳಂತೂ ತಿರ್ಯಂಚಗಳಿಗೂ ಇರುತ್ತವೆ. ಜ್ಞಾನವಿನಯದ ಧಾರಕನು ನಿರಂತರ ಸಮ್ಯಗ್ಜ್ಞಾನದ ವಾಂಛೆಯನ್ನೇ ಮಾಡುತ್ತಾನೆ. ಜ್ಞಾನದ ಲಾಭಕ್ಕೇನೇ ಪರಮ ನಿಧಾನದ ಲಾಭವೆಂದು ಮನ್ನಿಸುತ್ತಾನೆ. ಈ ಜ್ಞಾನ ವಿನಯವು ಮಹಾನ ನಿರ್ಜರೆಗೆ ಕಾರಣವಿದೆ. ಜ್ಞಾನವಿನಯವಿದ್ದವನಿಗೆ ಜ್ಞಾನ ಧಾರಕರ ಕುರಿತು ವಿಶೇಷ ವಿನಯವಿರುತ್ತದೆ.

**ಚಾರಿತ್ರವಿನಯ :** ಚಾರಿತ್ರ ವಿನಯವು ಜ್ಞಾನ-ದರ್ಶನವುಳ್ಳ ಪುರುಷರ ಪಂಚಾಚಾರದ ಶ್ರವಣ ಮಾಡುತ್ತಿರುವಂತೆಯೇ ಸಮಸ್ತ ಶರೀರದಲ್ಲಿ ರೋಮಾಂಚವು ಪ್ರಕಟವಾಗಿ ಹೋಗುತ್ತದೆ, ಅಂತರಂಗದಲ್ಲಿ ಭಕ್ತಿಯು ಉತ್ಪನ್ನವಾಗಿ ಹೋಗುತ್ತದೆ, ಮತ್ತು ವಿಷಯ ಕಷಾಯಗಳ ನಿಗ್ರಹರೂಪವಿರುವ ಪರಮ ಶಾಂತಭಾವದ ಪ್ರಸಾದದಿಂದ ಮಸ್ತಕದ ಮೇಲೆ ಕೈ ಮುಗಿದು ಭಾವದಲ್ಲಿ ಸ್ವಯಂ ಚಾರಿತ್ರರೂಪವಾಗಿ ಹೋಗುವುದು ಅದು ಚಾರಿತ್ರ ವಿನಯವಿದೆ.

**ತಪವಿನಯ :** ತಪವಿನಯವು ಯಾರ ಭಾವಗಳಲ್ಲಿ ಸಂಸಾರದ ದುಃಖಗಳನ್ನು ಕತ್ತರಿಸುವಂಥ, ಆತ್ಮನಿಗೆ ಬಾಧೆಯಿಲ್ಲದ ಸುಖವನ್ನು ಪ್ರಾಪ್ತ ಮಾಡಿಸುವಂಥ, ವಿಷಯ-ಕಷಾಯಗಳ ರೋಗದ ಉಪದ್ರವವನ್ನು ಜಯಿಸುವಂಥ, ಒಂದುತಪವೇ ಯಾರಿಗೆ ಪರಮ ಶರಣಾಗಿ ಕಂಡು ಬರುತ್ತದೆ ಅವರಿಗೆ ತಪ ಭಾವನೆಯಿರುತ್ತದೆ, ಅವರಿಗೇ ತಪದ ವಿನಯವಿರುತ್ತದೆ, ಅವರಿಗೇ ವಿನಯತಪವಾಗುತ್ತದೆ. ತಪಸ್ವಿಗಳನ್ನು ಉಚ್ಚ ಸರ್ವೋತ್ಕೃಷ್ಟರೆಂದು ತಿಳಿಯುವುದು, ತಪಸ್ವಿಗಳ ಸೇವೆ, ಭಕ್ತಿ, ವೈಯ್ಯಾವೃತ್ಯ, ಸ್ತುತಿ ಮಾಡುವುದು ಅದು ತಪವಿನಯವಿದೆ. ಶಕ್ತಿಗೆ ಅನುಸರಿಸಿ ಇಂದ್ರಿಯಗಳ ನಿಗ್ರಹ ಮಾಡಿ, ದೇಶ-ಕಾಲದ ಯೋಗ್ಯತೆಯ ಅನುಸಾರ ಅನಶನ ಮೊದಲಾದ ತಪವನ್ನು ಉದ್ಯಮಶೀಲರಾಗಿ ಧಾರಣ ಮಾಡುವುದು ಅದೆಲ್ಲವು ತಪವಿನಯವಿದೆ.

**ಉಪಚಾರ ವಿನಯ :-** ಉಪಚಾರ ವಿನಯವು ಆಚಾರ್ಯ ಮೊದಲಾದ ಪೂಜ್ಯ ಪುರುಷರನ್ನು ನೋಡುತ್ತಿರುವಂತೆಯೇ ಎದ್ದು ನಿಲ್ಲುವುದು, ಏಳು ಹೆಜ್ಜೆ ಮುಂದೆ ಹೋಗುವುದು, ಕೈ ಮುಗಿದು ಮಸ್ತಕಕ್ಕೆ ತಗಲಿಸುವುದು, ಅವರನ್ನು ಮುಂದೆ ಮಾಡಿ ತಾವು ಹಿಂದೆ ಹಿಂದೆ ನಡೆಯುವುದು, ಪಠಣ-ಪಾಠಣ, ತಪಶ್ಚರಣ, ಆತಾಪನಯೋಗ ಮೊದಲಾದ ನವೀನ ಶಾಸ್ತ್ರದ ಅಭ್ಯಾಸ ಪ್ರಾರಂಭ, ವಿಹಾರ, ವಂದನೆ ಮೊದಲಾದ ಎಲ್ಲ ಕಾರ್ಯಗಳನ್ನು ಗುರುಗಳಿಗೆ ತಿಳಿಸಿ ಮಾಡುವುದು, ಗುರುಗಳ ಉಪಸ್ಥಿತಿಯಲ್ಲಿ ಉಚ್ಚಾಸನದ ಮೇಲೆ ಕೂಡ್ರದಿರುವುದೆಲ್ಲವು ಉಪಚಾರವಿನಯವಿದೆ. ಒಂದು ವೇಳೆ ಆಚಾರ್ಯರು ಪರೋಕ್ಷವಿದ್ದರೆ ಮನ-ವಚನ-ಕಾಯದ ಶುದ್ಧಿಪೂರ್ವಕ ಅವರಿಗೆ ನಮಸ್ಕಾರ ಮಾಡುವುದು, ಕೈ ಮುಗಿದು ಗುಣಗಳ ಸ್ಮರಣೆ ಮಾಡುವುದು, ಗುಣಗಳ ಪ್ರಶಂಸೆ ಮಾಡುವುದು, ಅವರಿಂದ ತೆಗೆದುಕೊಂಡ ಪ್ರತಿಜ್ಞೆಯ ಪಾಲನೆ ಮಾಡುತ್ತಿರುವುದೆಲ್ಲವು ಉಪಚಾರ ವಿನಯವಿದೆ. ವಿನಯದ ಪ್ರಭಾವದಿಂದ ಸಮ್ಯಗ್ಜ್ಞಾನದ ಪ್ರಾಪ್ತಿಯಾಗುತ್ತದೆ, ಅನೇಕ ವಿದ್ಯೆಗಳ ಸಿದ್ಧಿಯಾಗುತ್ತದೆ, ಮದದ ಅಭಾವವಾಗುತ್ತದೆ, ಆಚಾರದ ಉಜ್ವಲತೆಯಾಗುತ್ತದೆ, ಸಮ್ಯಕ್ ಆರಾಧನೆಯಾಗುತ್ತದೆ, ಯಶಸ್ಸದ ಉಜ್ವಲತೆಯಾಗುತ್ತದೆ. ಮತ್ತು ಕರ್ಮದ ನಿರ್ಜರೆಯಾಗುತ್ತದೆ.

**ವ್ಯವಹಾರ ವಿನಯ :** ಅನ್ಯ ಸಾಧರ್ಮಿಗಳ, ಶಿಷ್ಯರುಗಳ, ಭೇದಜ್ಞಾನವುಳ್ಳವರದು ಕೂಡ ಯಥಾಯೋಗ್ಯ ವಿನಯ ಮಾಡುವುದು, ಮಿಥ್ಯಾದೃಷ್ಟಿಗಳದೂ ತಿರಸ್ಕಾರ ಮಾಡದಿರುವುದು, ಸವಿನುಡಿಗಳಿಂದ ಆದರಪೂರ್ವಕ ಮಾತನಾಡುವುದು,

ಸಂತೋಷ ಪಡಿಸುವಂಥ, ದುಃಖದೂರ ಮಾಡುವಂಥ ವಚನ ಹೇಳುವುದೇ ವಿನಯವಿದೆ. ಉದ್ಧತ ಚೇಷ್ಟೆಯು ಈರ್ವರನ್ನು ನಷ್ಟ ಮಾಡಿಬಿಡುತ್ತದೆ. ಉಪಚಾರ ವಿನಯವು ಮನ-ವಚನ-ಕಾಯದಿಂದ ಅನೇಕ ಪ್ರಕಾರದ್ದಿರುತ್ತದೆ. ಗುರುಗಳ ಹಾಗೂ ಸಮ್ಯಗ್ದರ್ಶನ ಮೊದಲಾದ ಗುಣಗಳ ಧಾರಕರ ಮಲಗುವ ಸ್ಥಾನ, ಕೂಡ್ರುವ ಸ್ಥಾನ ಸ್ವಚ್ಛ ಮಾಡುವುದು, ಅವರ ಆಸನಕ್ಕಿಂತ ಕೆಳಗೆ ಕುಳಿತುಕೊಳ್ಳುವುದು ಕೆಳಗಿನ ಸ್ಥಾನದಲ್ಲಿ ಮಲಗಿಕೊಳ್ಳುವುದು, ಯೋಗ್ಯತೆಗೆ ಅನುಸರಿಸಿ ಪಾದಸ್ಪರ್ಶ ಮಾಡುವುದು, ದುಃಖ-ರೋಗಗಳು ಬಂದು ಬಿಟ್ಟರೆ ಶರೀರದ ಶುಶ್ರೂಷೆ ಮಾಡಿ ತಮ್ಮ ಜನ್ಮ ಸಾರ್ಥಕವಾಯಿತೆಂದು ಮನ್ನಿಸುವುದೇ ವಿನಯವಿದೆ.

ಪೂಜ್ಯ ಪುರುಷರ ನಿಕಟ ಉಗುಳಬಾರದು, ಆಲಸ್ಯ ತೋರಿಸಬಾರದು, ಆಕಳಿಕೆ ತೆಗೆಯಬಾರದು, ಬೆರಳು ಮೊಲಾದುವನ್ನು ಮುರಿಯಬಾರದು, ಹಾಸ್ಯ ಮಾಡಬಾರದು, ಕಾಲುಗಳನ್ನು ವಿಸ್ತರಿಸಬಾರದು, ಕೈಗಳಿಂದ ಚಪ್ಪಾಳೆ ತಟ್ಟಬಾರದು, ಅಂಗವಿಕಾರ, ಭ್ರಕುಟಿಯ ವಿಕಾರ, ಅಂಗಗಳ ಸಂಸ್ಕಾರ ಮೊದಲಾದುವನ್ನು ಮಾಡಬಾರದು.

**ವಿನಯವಂತರು ಸ್ವಯಂ ಉಚ್ಚಾಸನದಲ್ಲಿದ್ದುಕೊಂಡು ವಂದನೆ ಮಾಡಬಾರದು.** ಎಲ್ಲೆಲ್ಲಿ ಸಂಯಮಿಗಳು ಕುಳಿತಿರುವರು ಅಲ್ಲಲ್ಲಿಗೆ ಹೋಗಿ ವಂದನೆ ಮಾಡಬೇಕು. ಸಂಯಮಿಗಳು ಬರುತ್ತಿರುವುದನ್ನು ನೋಡಿ ಯಾರು ಎದ್ದು ನಿಲ್ಲುತ್ತಾರೆ, ಆಸನ ಬಿಟ್ಟುಕೊಡುತ್ತಾರೆ, ವಂದನೆ ಮಾಡುತ್ತಾರೆ ಅವರಿಗೇ ವಿನಯವಿದೆ. ನಮ್ಮ ಸಲುವಾಗಿ ಗುರುಗಳ ಆಜ್ಞೆಯು ಯಾವ ಪ್ರಕಾರವಿದೆ ಅದೇ ಪ್ರಕಾರ ಅಂಗೀಕಾರ ಮಾಡಿದರೆ ನಮ್ಮ ಸಮಾನರಾದ ಪುಣ್ಯವಂತರು ವಿರಳರಾಗಿಯೇ ಇರುವರು.

**ವಿನಯರಹಿತನ ವ್ರತ, ಶೀಲ, ಸಂಯಮ, ವಿದ್ಯೆಗಳೆಲ್ಲವೂ ನಿಷ್ಫಲವಿವೆ.** ವಿನಯದ ಪ್ರಭಾವದಿಂದ ಕ್ರೋಧ, ಮಾನ, ವೈರ ಮೊದಲಾದ ಸಮಸ್ತ ದೋಷಗಳ ಅಭಾವವಾಗುತ್ತವೆ, ವಿನಯವಿಲ್ಲದೆ ಸಂಸಾರ ಸಂಬಂಧದ ಧನ, ಸೌಭಾಗ್ಯ, ಯಶಸ್ಸು, ಮಿತ್ರತೆ ಗುಣಗ್ರಾಹಕತೆ, ಸರಳತೆ, ಮಾನ್ಯತೆ, ಕೃತಜ್ಞತೆಗಳೆಲ್ಲವೂ ನಷ್ಟವಾಗಿ ಹೋಗುತ್ತವೆ. ಆದುದರಿಂದ ಸಾಧುಗಳಿಗೆ ಮತ್ತು ಗೃಹಸ್ಥರಿಗೆ ಸಮಸ್ತ ಧರ್ಮದ ಮೂಲವಾದ ವಿನಯವನ್ನೇ ಧಾರಣ ಮಾಡುವುದು ಶ್ರೇಷ್ಠವಿದೆ.

**ವೈಯಾವೃತ್ಯ ತಪ :** ಯಾರಿಗೆ ಗುಣಗಳಲ್ಲಿ ಪ್ರೀತಿ, ಧರ್ಮದಲ್ಲಿ ಶ್ರದ್ಧೆ, ಧರ್ಮಾತ್ಮರಲ್ಲಿ ವಾತ್ಸಲ್ಯ, ನಿರ್ವಿಚಿಕಿತ್ಸೆ ಮೊದಲಾದ ಗುಣಗಳಿರುತ್ತವೆ ಅವರಿಗೆ ವೈಯಾವೃತ್ಯ ತಪವು ಕೂಡ ಆಗುತ್ತದೆ. ಕೃತಘ್ನರಲ್ಲಿ ಆಚಾರ್ಯರುಗಳ ವೈಯಾವೃತ್ಯದ ಪರಿಣಾಮವಿರುವುದಿಲ್ಲ. ಆಗಮದಲ್ಲಿ ಹತ್ತು ಪ್ರಕಾರದ ವೈಯಾವೃತ್ಯ ಹೇಳಿದೆ. ಆಚಾರ್ಯ, ಉಪಾಧ್ಯಾಯ, ತಪಸ್ವೀ, ಶೈಕ್ಷ್ಯ, ಗ್ಲಾನ, ಗುಣ, ಕುಲ, ಸಂಘ, ಸಾಧು, ಮನೋಜ್ಞವೆಂದು ಹತ್ತು ಪ್ರಕಾರದ ಸಾಧುಗಳ ವೈಯಾವೃತ್ಯ ಹೇಳಿದೆ.

ಯಾರು ಸಮ್ಯಗ್ಜ್ಞಾನ ಮೊದಲಾದ ಗುಣಗಳನ್ನು ಹಾಗೂ ಸ್ವರ್ಗ-ಮೋಕ್ಷದ ಸುಖರೂಪ ಅಮೃತದ ಬೀಜವಾದ ವ್ರತ-ಸಂಯಮಗಳನ್ನು ತಮ್ಮ ಹಿತದ ಸಲುವಾಗಿ ಆಚರಣೆ ಮಾಡುತ್ತಾರೆ ಅವರು ಸಾಧು **ಆಚಾರ್ಯ**ರಿದ್ದಾರೆ. ತಮ್ಮ ಶರೀರದಿಂದ ಹಾಗೂ ಅನ್ಯ ಕ್ಷೇತ್ರ, ಶಯ್ಯೆ, ಆಸನ ಮೊದಲಾದವುಗಳ ಮೂಲಕ ಸೇವೆ ಮಾಡುವುದು ಅದು ಆಚಾರ್ಯ ವೈಯಾವೃತ್ಯವಿದೆ. ಆಚಾರ್ಯರ ವೈಯಾವೃತ್ಯವೇ ಸಮಸ್ತ ಸಂಘದ ವೈಯಾವೃತ್ಯವಿದೆ. ಏಕೆಂದರೆ ಸಮಸ್ತ ಸಂಘ, ಸಮಸ್ತ ಧರ್ಮವು ಆಚಾರ್ಯರ ಪ್ರಭಾವದಿಂದಲೇ ಪ್ರವರ್ತಿಸುತ್ತದೆ.

ಯಾವ ವ್ರತ-ಶೀಲ ಧಾರಕರ ಸಾಮೀಪ್ಯತೆಯು ಪ್ರಾಪ್ತವಾದ ಮೇಲೆ ಪರಮಾಗಮದ ಅಧ್ಯಯನ ಪಠಣ ಮಾಡುತ್ತಾರೆ ಅವರು ಸಾಧು **ಉಪಾಧ್ಯಾಯ**ರಿದ್ದಾರೆ. ಯಾರು ಮಹಾನ ಅನಶನ ಮೊದಲಾದ ತಪಗಳಲ್ಲಿ ಪ್ರವರ್ತನ ಮಾಡುತ್ತಾರೆ ಅವರು ಸಾಧು **ತಪಸ್ವಿ**ಗಳಿದ್ದಾರೆ. ಶ್ರುತಜ್ಞಾನದ ಶಿಕ್ಷಣದಲ್ಲಿ ಹಾಗೂ ವ್ರತ ಶೀಲದ ಭಾವನೆಯಲ್ಲಿ ಯಾರು ನಿರಂತರ ತತ್ಪರರಿರುತ್ತಾರೆ ಅವರು ಸಾಧು **ಶೈಕ್ಷ್ಯ**ರಿದ್ದಾರೆ. ಯಾರ ಶರೀರವು ರೋಗಾದಿಗಳಿಂದ ಕ್ಲೇಶಿತವಿದೆ. ಅವರು ಸಾಧು **ಗ್ಲಾನ**ರಿದ್ದಾರೆ. ಯಾರು ವೃದ್ಧ ಮುನಿಗಳ ಪರಂಪರೆಯ ಸಾಧುಗಳಿದ್ದಾರೆ ಅವರು **ಗಣ**ರಿದ್ದಾರೆ. ಯಾರು ತಮಗೆ ದೀಕ್ಷೆ ಕೊಡುವಂಥ ಆಚಾರ್ಯರ ಶಿಷ್ಯ ಸಾಧುಗಳಿದ್ದಾರೆ ಅವರು **ಕುಲ**ರಿದ್ದಾರೆ. ನಾಲ್ಕು ಪ್ರಕಾರದ ಮುನಿಗಳ ಎಂದರೆ ಋಷಿ, ಮುನಿ, ಯತಿ, ಅನಗಾರರ ಸಮುದಾಯವು ಅದು **ಸಂಘ**ವಿದೆ. ಹೆಚ್ಚು ಕಾಲದಿಂದ ದೀಕ್ಷಿತರಿದ್ದವರು ಅವರು **ಸಾಧು**ಗಳಿದ್ದಾರೆ.

ಲೋಕದಲ್ಲಿ ಪಾಂಡಿತ್ಯದಿಂದ ಮಾನ್ಯರಿದ್ದಾರೆ, ವಕ್ತೃತ್ವ ಗುಣದಿಂದ ಮಾನ್ಯರಿದ್ದಾರೆ, ಮಹಾಕುಲೀನತೆಯಿಂದ ಜನರಲ್ಲಿ ಮಾನ್ಯರಿದ್ದಾರೆ ಅವರು **ಮನೋಜ್ಞರಿದ್ದಾರೆ**. ಇವರಿಂದ ಪ್ರವಚನದ, ಧರ್ಮದ, ಗೌರವತನವು ಪ್ರಕಟವಾಗುತ್ತದೆ.

ಈ ಹತ್ತು ಪ್ರಕಾರದ ಮುನಿಗಳಿಗೆ ಎಂದಾದರೂ ಶರೀರದಲ್ಲಿ ವ್ಯಾಧಿಯು ಪ್ರಕಟವಾದರೆ, ಪರೀಷಹಗಳುಂಟಾದರೆ, ಭಾವಗಳಲ್ಲಿ ಮಿಥ್ಯಾತ್ವಾದಿಗಳ ಉದಯವಾದರೆ ಪ್ರಾಸುಕ ಔಷಧ, ಭೋಜನ, ನೀರು, ವಸತಿಕೆ ಸಂಸ್ತರಣ ಮೊದಲಾದವುಗಳ ಮೂಲಕ, ಧರ್ಮೋಪದೇಶದ ಮೂಲಕ ಶ್ರದ್ಧೆಯ ದೃಢತೆ ಮಾಡಿಸುವುದು, ಪುಸ್ತಕ-ಪಿಂಛಿ-ಕಮಂಡಲು ಮೊದಲಾದ ಧರ್ಮದ ಉಪಕರಣಗಳನ್ನಿತ್ತು ಇಲಾಜು ಮಾಡುವುದು, ಧರ್ಮದಲ್ಲಿ ದೃಢತೆ ಮಾಡಿಸುವುದು, ಸಂತೋಷ, ಧೈರ್ಯ ಮೊದಲಾದುವನ್ನು ಧಾರಣ ಮಾಡಿಸುವುದು, ವೀತರಾಗತೆಯನ್ನು ಹೆಚ್ಚಿಸುವುದು ಅದು ವೈಯಾವೃತ್ಯವಿದೆ. ಬಾಹ್ಯ ಔಷಧ, ಭೋಜನ, ನೀರು ಮೊದಲಾದುವನ್ನು ಕೊಡುವುದು ಅಸಂಭವವಾದ ಮೇಲೆ ತಮ್ಮ ಶರೀರದ ಮೂಲಕ ಕಫ, ನಾಸಿಕದ ಕೊಳೆ, ಮಲ-ಮೂತ್ರ, ಪುರೀಷ ಮೊದಲಾದುವನ್ನು ದೂರ ಮಾಡುವುದು, ರಾತ್ರಿ ಜಾಗರಣೆ ಮಾಡುವುದು - ಇಂಥ ವೈಯಾವೃತ್ಯವು ಪರಮ ನಿರ್ಜರೆಯ ಕಾರಣವಿದೆ.

**ಆದರಲ್ಲಿ ಮುನಿಗಳ ಆದೇಷ್ಟೋ ಉಪಕಾರವನ್ನು ಮುನಿಗಳೇ ಮಾಡುತ್ತಾರೆ.** ಏಳಿಸುವುದು, ಕೂಡ್ರಿಸುವುದು, ಮಲಗಿಸುವುದು, ಕೈ-ಕಾಲು ಪಸರಿಸುವುದು, ಮುದುಡಿಸುವುದು, ಉಪದೇಶ ಕೊಡುವುದು, ಕಫ-ಮಲಾದಿಗಳನ್ನು ದೂರ ಮಾಡುವುದು, ಧೈರ್ಯ ಧಾರಣ ಮಾಡಿಸುವುದೆಲ್ಲವನ್ನು ಮುನಿಗಳಿಗೆ ಮುನಿಗಳೇ ಮಾಡುತ್ತಾರೆ. ಅದೆಷ್ಟೋ ಉಪಕಾರಗಳು ಪ್ರಾಸುಕ ಔಷಧ, ಆಹಾರ, ನೀರು ಉಪಕರಣ ಮೊದಲಾದವು ಗೃಹಸ್ಥ ಧರ್ಮಾತ್ಮರಾದ ಶ್ರಾವಕರಿಂದಲೇ ಸಂಭವಿಸುತ್ತವೆ. ಗೃಹಸ್ಥರು ಸಾಧುಗಳ ವೈಯಾವೃತ್ಯ ಮಾಡುತ್ತಾರೆ ಮತ್ತು ಶ್ರಾವಿಕೆಯರು ಆರ್ಜಿಕೆಯ ವೈಯಾವೃತ್ಯ ಮಾಡುತ್ತಾರೆ.

ದುಃಖಿ, ರೋಗೀ, ನಿರ್ಗತಿಕ, ಬಾಲಕ, ವೃದ್ಧ, ಪರಾಧೀನ, ಜೈಲಿನಲ್ಲಿರುವ ಜನರಿಗೆ ಕಾರುಣ್ಯ ಬುದ್ಧಿಯಿಂದ ಉಪಕಾರ ಮಾಡಬೇಕು. ತಾಯಿ-ತಂದೆ, ವಿದ್ಯಾಗುರು, ಮಿತ್ರ, ಒಡೆಯ ಮೊದಲಾದವರ ಉಪಕಾರ ಸ್ಮರಣೆ ಮಾಡಿ, ಕೃತಘ್ನತೆಯನ್ನು ತ್ಯಜಿಸಿ ಸೇವೆ, ಸನ್ಮಾನ, ದಾನ, ಪ್ರಶಂಸೆ ಮೊದಲಾದವುಗಳ ಮೂಲಕ ಆದರ-ಸತ್ಕಾರ ಮಾಡಿ ಸುಖೀ ಮಾಡಬೇಕು. ದುಃಖಿಯಾಗಿದ್ದರೆ ಅವರ ದುಃಖ ದೂರ ಮಾಡಬೇಕು. ತಮ್ಮ ಶಕ್ತಿಯ ಅನುಸಾರ ದಾನ ಸನ್ಮಾನ ಮಾಡಿ ವೈಯಾವೃತ್ಯ ಮಾಡಬೇಕು, ಅವನಿಗೆ ವೈಯಾವೃತ್ಯ ತಪದಿಂದ ಅಧಿಕ ನಿರ್ಜರೆಯಾಗುತ್ತದೆ. ವೈಯಾವೃತ್ಯದಿಂದ ಗ್ಲಾನಿಯ ಅಭಾವವಾಗಿ ಹೋಗುತ್ತದೆ, ಪ್ರವಚನದಲ್ಲಿ ವಾತ್ಸಲ್ಯತೆಯಾಗುತ್ತದೆ. ಆಚಾರ್ಯ ಮೊದಲಾಗಿ ಅನೇಕರು ವಾತ್ಸಲ್ಯದ ಸ್ಥಾನರಿದ್ದಾರೆ. ಅವರುಗಳಲ್ಲಿ ಯಾರದಾದರೂ ವೈಯಾವೃತ್ಯವು ಸಂಭವಿಸುವುದು ಅವರದೇ ವೈಯಾವೃತ್ಯ ಮಾಡಿ, ಎಲ್ಲ ಪ್ರಕಾರದಿಂದ  ಕಲ್ಯಾಣಕ್ಕೆ ಪ್ರಾಪ್ತನಾಗಿ ಹೋಗುತ್ತಾನೆ.

**ಸ್ವಾಧ್ಯಾಯ ತಪ :** ಈಗ ಸ್ವಾಧ್ಯಾಯ ತಪದ ವರ್ಣನೆ ಮಾಡುತ್ತಾರೆ. ಸ್ವಾಧ್ಯಾಯದಲ್ಲಿ ವಾಚನಾ, ಪೃಚ್ಛನಾ, ಅನುಪ್ರೇಕ್ಷೆ, ಆಮ್ನಾಯ ಮತ್ತು ಧರ್ಮೋಪದೇಶವೆಂದು ಐದು ಭೇದಗಳಿವೆ.

**ವಾಚನಾ ಸ್ವಾಧ್ಯಾಯ :** ನಿರ್ದೋಷ ಗ್ರಂಥಗಳ ಪಾಠ, ಅರ್ಥ ಮತ್ತು ಪಾಠ ಹಾಗೂ ಅರ್ಥ ಎರಡನ್ನೂ ಪಾತ್ರ ಜನರಿಗೆ ಓದಿಸುವುದು, ಹೇಳುವುದು, ತಿಳಿಸುವುದು ಅದು ವಾಚನಾ ಸ್ವಾಧ್ಯಾಯವಿದೆ. ಪರಮಾಗಮದ ಶಬ್ದಗಳನ್ನು ಓದಿಸುವುದರ ಸಮಾನ, ಅರ್ಥ ತಿಳಿಸುವುದರ ಸಮಾನ ಯಾವುದೂ ತಮ್ಮ ಹಾಗೂ ಪರರ ಉಪಕಾರವಿಲ್ಲ. ಪರಮಾಗಮವನ್ನು ಓದಿಸಿ ಯೋಗ್ಯ ಶಿಷ್ಯನನ್ನು ಪ್ರವೀಣ ಮಾಡುವುದು ಅದು ಧರ್ಮದ ಸ್ತಂಭ ನಿಲ್ಲಿಸಿದುದರ ಸಮಾನವಿದೆ. ಜೈನ ಧರ್ಮವಂತೂ ಶಾಸ್ತ್ರಜ್ಞಾನದ ಮೇಲೆಯೇ ಅವಲಂಬಿಸಿದೆ. ಮಂದಿರ ಹಾಗೂ ಪ್ರತಿಮೆಗಳಂತೂ ಮುಖದಿಂದ ಮಾತನಾಡುವುದಿಲ್ಲ, ಪ್ರತ್ಯಕ್ಷ ಮಾತನಾಡುವ ದೇವನ ಸಮಾನ ಹಿತದಲ್ಲಿ ಪ್ರೇರಣೆ ಕೊಡುವಂಥ ಮತ್ತು ಅಹಿತದಿಂದ ರಕ್ಷಣೆ ಮಾಡುವಂಥದ್ದೆಂದರೆ ಒಂದು ಸರ್ವಜ್ಞ ಭಗವಂತರ ಪರಮಾಗಮವೇ ಇದೆ. ಆದುದರಿಂದ ಶಾಸ್ತ್ರ ಓದಿಸುವಲ್ಲಿ ಮತ್ತು ಓದುವಲ್ಲಿ ಸತತ ಉದ್ಯಮಶೀಲರಾಗಿರಬೇಕು.

**ಪೃಚ್ಛನಾ ಸ್ವಾಧ್ಯಾಯ :** ತಮ್ಮ ಸಂಶಯ ದೂರ ಮಾಡುವ ಸಲುವಾಗಿ ಬಹು ಜ್ಞಾನಿಗಳಲ್ಲಿ ವಿನಯದಿಂದ ಪ್ರಶ್ನೆ ಮಾಡಬೇಕು, ಏಕೆಂದರೆ ಪ್ರಶ್ನದಿಂದ ಸಂಶಯವನ್ನು ದೂರ ಮಾಡಿದಲ್ಲದೆ ಸಮ್ಯಕ್ ಜ್ಞಾನವು ಪ್ರಕಟವಾಗುವುದಿಲ್ಲ ಅಥವಾ ತಾವು ಆಗಮದ ಶಬ್ದದ ಯಾವ ಅರ್ಥವನ್ನು ತಿಳಿದುಕೊಂಡಿದೆ ಅದನ್ನು ಬಹುಜ್ಞಾನಿಗಳ ಮುಖದಿಂದ ಕೇಳಿಕೊಂಡರೆ ಜ್ಞಾನವು ಅಧಿಕ ದೃಢವಾಗಿ ಹೋಗುತ್ತದೆ, ಜ್ಞಾನದ ಶಿಥಿಲತೆಯು ದೂರವಾಗುತ್ತದೆ. ಆದುದರಿಂದ ಬಹು ಜ್ಞಾನಿಗಳಲ್ಲಿ ಪ್ರಶ್ನೆ ಮಾಡಬೇಕು ಅಥವಾ ತಾವು ಸಂಕ್ಷೇಪದಲ್ಲಿ ತಿಳಿದುಕೊಂಡಿದ್ದರೆ ಅದನ್ನು ವಿಸ್ತಾರದಿಂದ ತಿಳಿದುಕೊಳ್ಳುವ ಸಲುವಾಗಿ ಅತ್ಯಂತ ವಿನಯದಿಂದ ಸಮ್ಯಗ್ಜ್ಞಾನಿಗಳಲ್ಲಿ ಪ್ರಶ್ನೆ ಮಾಡಬೇಕು. **ತಮ್ಮ ಉಚ್ಚತೆ ಅಥವಾ ಪಾಂಡಿತ್ಯವನ್ನು ತೋರಿಸಿಕೊಡುವ ಸಲುವಾಗಿ ಅಥವಾ ಇತರರ ತಿರಸ್ಕಾರ ಮಾಡುವ ಸಲುವಾಗಿ ಮತ್ತು ಪರಿಹಾಸ ಮಾಡುವ ಸಲುವಾಗಿ ಸಮ್ಯಗ್ದೃಷ್ಟಿಯು ಪ್ರಶ್ನೆ ಮಾಡುವುದಿಲ್ಲ,** ಶಬ್ದದ ಸಂಬಂಧದಲ್ಲಿ ಪ್ರಶ್ನೆ ಮಾಡುತ್ತಾನೆ, ಅರ್ಥದ ಸಂಬಂಧವಾಗಿ ಪ್ರಶ್ನೆ ಮಾಡುತ್ತಾನೆ, ಮತ್ತು ಶಬ್ದ ಹಾಗೂ ಅರ್ಥ ಇವೆರಡರ ಸಂಬಂಧದಲ್ಲಿ ಪ್ರಶ್ನೆ ಮಾಡುತ್ತಾನೆ ಅನಂತರ ನಿರ್ಣಯ ಮಾಡುತ್ತಾನೆ, ಇದು ಪೃಚ್ಛನಾ ಸ್ವಾಧ್ಯಾಯವಿದೆ.

**ಅನುಪ್ರೇಕ್ಷಾಸ್ವಾಧ್ಯಾಯ :** ಪರಮಾಗಮದಲ್ಲಿ ತಿಳಿದ ಶಬ್ದ ಮತ್ತು ಅರ್ಥವನ್ನು ತಮ್ಮ ಹೃದಯದಲ್ಲಿ ಧಾರಣ ಮಾಡಿ ಮತ್ತೆ ಮತ್ತೆ ಮನಸ್ಸಿನಿಂದ ಅಭ್ಯಾಸ ಮಾಡುವುದು, ಚಿಂತನ ಮಾಡುವುದು, ಆಗಮದಲ್ಲಿ ಇಂದು ನಾನು ಓದಿದುದರಲ್ಲಿ-ಕೇಳಿದುದರಲ್ಲಿ ಈ ದೋಷಗಳು ತ್ಯಾಗ ಯೋಗ್ಯವಿವೆ, ಈ ಗುಣಗಳು ಗ್ರಹಣ ಮಾಡಲು ಯೋಗ್ಯವಿವೆ, ಇವು ನನ್ನ ಸ್ವರೂಪದಿಂದ ಭಿನ್ನವಾದ ದ್ರವ್ಯ, ಕ್ಷೇತ್ರ ಮೊದಲಾದವು ತ್ಯಾಗ ಯೋಗ್ಯವೇ ಇವೆ. ಈ ಪ್ರಕಾರ ಮನಸ್ಸಿನಲ್ಲಿ ಪುನಃ ಪುನಃ ಚಿಂತನ ಮಾಡುವುದು ಅದು ಅನುಪ್ರೇಕ್ಷಾ ಸ್ವಾಧ್ಯಾಯವಿದೆ. ಇದರಿಂದ ಅಶುಭ ಭಾವಗಳ ನಾಶವಾಗುತ್ತದೆ, ಶುಭ ಧರ್ಮಧ್ಯಾನವು ಪ್ರಕಟವಾಗುತ್ತದೆ.

**ಆಮ್ನಾಯ ಸ್ವಾಧ್ಯಾಯ :-** ಅತಿ ಶೀಘ್ರತೆಯಿಂದ ಓದುವುದು, ಅತಿವಿಲಂಬದಿಂದ ಓದುವುದು ಇತ್ಯಾದಿ ವಚನ ದೋಷವನ್ನು ನಿವಾರಿಸಿ ಧೈರ್ಯದಿಂದ ಒಂದೊಂದು ಅಕ್ಷರದ ಸ್ಪಷ್ಟತೆಯೊಡನೆ ಅರ್ಥದ ಪ್ರಕಟತೆ (ಭಾವ ಭಾಸನ) ಸಹಿತ ಓದುವುದು, ಪಾಠ ಮಾಡುವುದು, ಮಧುರ ಸ್ವರದಿಂದ ಉಚ್ಚರಣೆ ಮಾಡುವುದು, ಮತ್ತು ಸಿದ್ಧಾಂತದ ಪ್ರಣಾಲಿಯಿಂದ ಹಾಗೂ ಆಗಮದ ವಿರೋಧದಿಂದ ರಹಿತ, ಲೋಕವಿರುದ್ಧತೆಯಿಲ್ಲದೆ ಓದುವುದು ಅದು ಆಮ್ನಾಯ ಸ್ವಾಧ್ಯಾಯವಿದೆ.

**ಧರ್ಮೋಪದೇಶ ಸ್ವಾಧ್ಯಾಯ :** ಲೌಕಿಕ ಪ್ರಯೋಜನದ ಲಾಭ, ಪೂಜೆ, ಅಭಿಮಾನ, ಮದ ಮೊದಲಾದುವನ್ನು ಬಿಟ್ಟುಕೊಟ್ಟು ಉನ್ಮಾರ್ಗವನ್ನು ದೂರ ಮಾಡುವ ಸಲುವಾಗಿ, ಸನ್ಮಾರ್ಗವನ್ನು ದರ್ಶಿಸುವ ಸಲುವಾಗಿ, ಸಂಶಯ ಕಳೆಯುವ ಸಲುವಾಗಿ, ಅಪೂರ್ವ ಪದಾರ್ಥ ಪ್ರಕಟ ಮಾಡುವ ಸಲುವಾಗಿ, ಧರ್ಮದ ಪ್ರಭೆಯನ್ನು ಹರಡುವ ಸಲುವಾಗಿ, ಮೋಹಾಂಧಕಾರವನ್ನು ದೂರ ಮಾಡುವ ಸಲುವಾಗಿ, ಜನರನ್ನು ಸಂಸಾರ-ಶರೀರ-ಭೋಗಗಳಿಂದ ವಿರಕ್ತ ಮಾಡುವ ಸಲುವಾಗಿ, ವಿಷಯಾನುರಾಗ ಹಾಗೂ ಕಷಾಯ ಕಡಿಮೆ ಮಾಡುವ ಸಲುವಾಗಿ, ಅಜ್ಞಾನ ನಾಶಿಸುವ ಸಲುವಾಗಿ, ಭೇದವಿಜ್ಞಾನ ಪ್ರಕಟ ಮಾಡುವ ಸಲುವಾಗಿ, ಪಾಪ ಕ್ರಿಯೆಯಿಂದ ಭಯಭೀತವಾಗುವ ಸಲುವಾಗಿ ಭವ್ಯರಿಗೆ ಧರ್ಮಕಥನದ ಉಪದೇಶ ಮಾಡುವುದು ಅದು ಧರ್ಮೋಪದೇಶ ನಾಮದ ಸ್ವಾಧ್ಯಾಯವಿದೆ. **ಎಲ್ಲಿ ಅನೇಕ ಭವ್ಯ ಜೀವರುಗಳಿಗೆ ಧರ್ಮದ ಉಪದೇಶ ಕೊಡಲಾಗುತ್ತದೆ ಅಲ್ಲಿ ಮನ-ವಚನ-ಕಾಯಗಳೆಲ್ಲವೂ ಧರ್ಮದ ಸ್ವರೂಪದಲ್ಲಿ ಲೀನವಾಗಿ ಹೋಗುತ್ತವೆ.**

**ವಕ್ತಾರನ ಸ್ವರೂಪ :** ಯಾವುದೇ ಪ್ರಕಾರದಿಂದ ಅನೇಕಾಂತ ಧರ್ಮದ ಯಥಾವತ್ ಸ್ವರೂಪವು ಶ್ರೋತೃಗಳ ಹೃದಯದಲ್ಲಿ ಪ್ರವೇಶ ಮಾಡಲಿ, ಪ್ರಕಟವಾಗಲೆಂಬುದೇ ಉಪದೇಶದಾತೃವಿನ ಅಭಿಪ್ರಾಯವಿರುತ್ತದೆ. ಯಾವ ವಕ್ತಾರನ ಅಭಿಪ್ರಾಯವು ಹೀಗಿರುತ್ತದೆ ಅವನೇ ಸತ್ಯಾರ್ಥ ಧರ್ಮದ ಉಪದೇಶ ಮಾಡುತ್ತಾನೆ. ಯಾರ ಆತ್ಮನು ಧರ್ಮದಲ್ಲಿ ರಂಜಿತನಾಗುವನು ಅವನೇ ಶ್ರೋತೃಗಳನ್ನು ಧರ್ಮದಲ್ಲಿ ರಂಜಿಸಬಹುದಾಗಿದೆ. ಧರ್ಮೋಪದೇಶ ಕೊಡುವವನಲ್ಲಿ ಆತ್ಮಾನುಶಾಸನದೊಳಗೆ ಹೇಳಿದ ಗುಣಗಳು ಇರಬೇಕು.

**ಯಾವನ ಬುದ್ಧಿಯು ತ್ರಿಕಾಲ ವಿಷಯಿಯಿದೆ** ಎಂದರೆ ಯಾವನು ಕಳೆದ ಅನೇಕ ಪರಂಪರೆಯನ್ನು ಪರಮಾಗಮದಿಂದ ತಿಳಿಯುವುದಿಲ್ಲ, ಅವನು ಯಥಾವತ್ ವಸ್ತುಸ್ವರೂಪ ಹೇಳುವ ಸಾಧ್ಯತೆಯಿಲ್ಲ, ವಸ್ತುವಿನ ವರ್ತಮಾನ ಸ್ವರೂಪದ ಜ್ಞಾನವಿಲ್ಲದವನು ವಿರುದ್ಧ ಕಥನ ಮಾಡುವನು, ಭವಿಷ್ಯ ಪರಿಪಾಕದ ಜ್ಞಾನವಿಲ್ಲದವನು ಅಯೋಗ್ಯವನ್ನೇ ಹೇಳಿ ಬಿಡುವನು. ಆದುದರಿಂದ ಯಾವನು ವಕ್ತಾನಿದ್ದಾನೆ ಅವನು ತನ್ನ ಬುದ್ಧಿಯ ಬಲದಿಂದ, ಆಗಮದ ಬಲದಿಂದ, ಲೌಕಿಕ ರೀತಿಯನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ತ್ರಿಕಾಲದ ರೀತಿಯನ್ನು ತಿಳಿದುಕೊಳ್ಳುವಂಥವನಿರಬೇಕಾಗುವುದು.

**ನಾಲ್ಕೂ ಅನುಯೋಗಗಳ ಸಮಸ್ತ ಶಾಸ್ತ್ರಗಳ ರಹಸ್ಯವನ್ನು ತಿಳಿದುಕೊಂಡವನಿರಬೇಕಾಗುವುದು.** ನಾಲ್ಕೂ ಅನುಯೋಗಗಳ ರಹಸ್ಯವನ್ನು ತಿಳಿಯದವನು ವಕ್ತಾರನಾಗಿ ಹೋದರೆ ಶ್ರೋತೃಗಳಿಗೆ ಯಥಾವತ್ ತಿಳಿಸಿಕೊಡಲಾರನು. ಏಕೆಂದರೆ ಒಂದು ವೇಳೆ ಪ್ರಮಾಣದ ಕಥನ ಬಂದರೆ, ನಯಗಳ ಕಥನ ಬಂದರೆ, ಕರ್ಮ ಪ್ರಕೃತಿಗಳ ಕಥನವು ಬಂದು ಬಿಟ್ಟರೆ, ಆಚಾರದ ಕಥನವು ಬಂದು ಬಿಟ್ಟರೆ ಸ್ವಯಂ ತಿಳಿದುಕೊಂಡಲ್ಲದೆ ಯಥಾವತ್, ನಿಃಶಂಕ-ಸಂದೇಹರಹಿತವಾಗಿ ವ್ಯಾಖ್ಯಾನ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ವಕ್ತಾರನು ಎಲ್ಲ ಅನುಯೋಗಗಳ, ಎಲ್ಲ ಶಾಸ್ತ್ರಗಳ ರಹಸ್ಯವನ್ನು ತಿಳಿದುಕೊಂಡವನಿರಬೇಕಾಗುವದು.

ವಕ್ತಾರನಿಗೆ ಭೋಜನ, ವಸ್ತ್ರ ಸ್ಥಾನ, ಧನ, ಯಶಸ್ಸು, ಅಭಿಮಾನದ ಅಪೇಕ್ಷೆಯಿದ್ದರೆ ಅವನು ಯಥಾರ್ಥ ವ್ಯಾಖ್ಯಾನ ಮಾಡುವ ಸಾಧ್ಯತೆಯಿಲ್ಲ, ಜನರನ್ನು ಪ್ರಸನ್ನ ಮಾಡಬಯಸುವನು. **ಲೋಭಿಗೆ ಯಥಾರ್ಥ ಸತ್ಯಾರ್ಥ ವಕ್ತಾತನವಿರುವುದಿಲ್ಲ,**

**ಲೋಕರೀತಿಯನ್ನು ತಿಳಿದುಕೊಂಡವನಿರಬೇಕಾಗುವುದು.** ಒಂದು ವೇಳೆ ಲೌಕಿಕ ರಚನೆಯಲ್ಲಿ ಮೂಢನಾಗಿದ್ದರೆ ಅವನು ಲೋಕವಿರುದ್ಧವಾಗಿಯೇ ವ್ಯಾಖ್ಯಾನ ಮಾಡುವನು.

**ವಕ್ತಾರನ ಬುದ್ಧಿಯು ಕೂಡಲೆ ಉತ್ತರ ಕೊಡುವಂಥದ್ದಿರಬೇಕು.** ವಕ್ತಾರನು ಕೂಡಲೆ ಉತ್ತರ ಕೊಡಲು ಅಸಮರ್ಥನಾಗಿ ಹೋದರೆ ಸಭೆಯಲ್ಲಿ ಕ್ಷೋಭೆಯಾಗುತ್ತದೆ. ಸಭೆಯಲ್ಲಿ ಉಪಸ್ಥಿತವಿರುವ ಶ್ರೋತೃಗಳ ದೃಢ ಪ್ರತೀತಿಯು ವಕ್ತಾನಲ್ಲಿ ಉಳಿಯುವುದಿಲ್ಲ-

ವಕ್ತಾರನು ಮಂದ ಕಷಾಯಿಯಿರಬೇಕಾಗುವುದು. ಮಂದ ಕಷಾಯಿಯಾದಲ್ಲದೆ ಲೋಭಿ, ಕಪಟೀ, ಕ್ರೋಧೀ ಅಭಿಮಾನಿಯ ಮೂಲಕ ಕೊಡಲಾದ ಉಪದೇಶವನ್ನು ಯಾರೂ ಅಂಗೀಕಾರ ಮಾಡುವುದಿಲ್ಲ.

**ವಕ್ತಾರನು ಶ್ರೋತೃಗಳು ಪ್ರಶ್ನೆ ಮಾಡುವ ಮೊದಲೇ ಉತ್ತರವನ್ನು ತಿಳಿದುಕೊಂಡವನಾಗಿರಬೇಕು.** ತಾವು ಹೀಗೆ ಹೇಳುತ್ತಿದ್ದರೆ ಹೀಗೆ ಇದೆ ಮತ್ತು ಹೀಗೆ ಹೇಳುತ್ತಿದ್ದರೆ ಹೀಗೆ ಇದೆಯೆಂಬುದಾಗಿ ಶ್ರೋತೃಗಳಿಗೆ ಪ್ರಶ್ನೆಯೇ ಉತ್ಪನ್ನವಾಗದ ರೀತಿಯಲ್ಲಿ ವ್ಯಾಖ್ಯಾನ ಮಾಡಬೇಕಾಗುವುದು. ಮೊದಲಿನಿಂದಲೇ ಪ್ರಶ್ನೆಗಳ ದಾರಿಯನ್ನು ಬಂಧಿಸಿಡುತ್ತಲೇ ಪ್ರವಚನ ಮಾಡುತ್ತಾನೆ. ಏಕೆಂದರೆ ಬಹಳಷ್ಟು ಪ್ರಶ್ನೆಗಳಾಗತೊಡಗಿದರೆ ಸಭೆಯಲ್ಲಿ ಗೊಂದಲಮಯವು ಆವರಿಸಿಕೊಳ್ಳುವುದು.

**ವಕ್ತಾರನಿಗೆ ಸಹನ ಶೀಲತೆಯು ಇರಬೇಕಾಗುವುದು.** ಯಾರಾದರೂ ಬಂದು ಕಠಿಣ ಪ್ರಶ್ನೆ ಮಾಡಿದರೆ ಕ್ರೋಧವನ್ನು ಮಾಡಬಾರದು. ಒಂದು ವೇಳೆ ಪ್ರಶ್ನೆ ಕೇಳಿ ವಕ್ತಾರನು ಕ್ರೋಧಿಯಾಗಿ ಹೋದರೆ ಮತ್ತೆ ಯಾರೂ ಪ್ರಶ್ನೆ ಮಾಡುವ ಸಾಧ್ಯತೆಯಿಲ್ಲ, ಅದರಿಂದ ಶ್ರೋತೃಗಳ ಸಂದೇಹವು ಹಾಗೇ ಉಳಿದುಕೊಳ್ಳುವುದು.

**ವಕ್ತಾರನಲ್ಲಿ ಪ್ರಭುತ್ವಗುಣವಿರಬೇಕಾಗುವುದು.** ಶ್ರೋತೃಗಳು ಅವನನ್ನು ತಮಗಿಂತ ಉಚ್ಚನೆಂದು ತಿಳಿಯುತ್ತಾರೆ, ಅವನ ಉಪದೇಶವನ್ನೇ ಗ್ರಹಣ ಮಾಡುತ್ತಾರೆ. ದೀನನ, ನೀಚನ ಉಪದೇಶವನ್ನು ಯಾರು ಗ್ರಹಣ ಮಾಡುತ್ತಾರೆ ? ಆದುದರಿಂದ ವಕ್ತಾರನಿಗೆ ಜಗತ್ತಿನಲ್ಲಿ ಮನ್ನಣೆ-ಪ್ರಭುತೆಯಿರಬೇಕಾಗುವುದು.

**ವಕ್ತಾರನು ಇತರರ ಮನಸ್ಸನ್ನು ಹರಣ ಮಾಡುವಂಥವನಿರಬೇಕು.** ಅವನು ಎಲ್ಲರಿಗೆ ಪ್ರಿಯನಿರಬೇಕು. ಶ್ರೋತೃಗಳಿಗೆ ಅಪ್ರಿಯನಿರುವವನ ಉಪದೇಶವು ಗ್ರಹಣವಾಗುವುದಿಲ್ಲ.

ವಕ್ತಾರನು ತಾನು ಯಾವ ವಿಷಯವನ್ನು ಒಳ್ಳೆಯ ರೀತಿಯಿಂದ, ಆಗಮದಿಂದ ಹಾಗೂ ಗುರುಪರಂಪರೆಯಿಂದ ಸರಿಯಾಗಿ ತಿಳಿದುಕೊಂಡಿದ್ದಾನೆ ಅದರದೇ ಕಥನ ಮಾಡಬೇಕು. ಒಂದು ವೇಳೆ ತಾನೇ ಸರಿಯಾದ ರೀತಿಯಿಂದ ಪೂರ್ಣ ತಿಳಿದುಕೊಂಡಿರದಿದ್ದರೆ ಅವನು ಇತರರಿಗೆ ಹೇಗೆ ತಿಳಿಸಿಕೊಡುವ ಸಾಧ್ಯತೆಯಿದೆ ?ಯಾವ ದೀವಿಗೆಯು ಸ್ವಯಂ ಪ್ರಕಾಶಮಾನವಿದೆ. ಅದುವೇ ಘಟ-ಪಟ ಮೊದಲಾದ ಪದಾರ್ಥಗಳನ್ನು ಪ್ರಕಾಶಿತಗೊಳಿಸುತ್ತದೆ.

ಯಾರ ಪ್ರವೃತ್ತಿಯು ವ್ಯವಹಾರದಲ್ಲಿ, ಪರಮಾರ್ಥದಲ್ಲಿ, ಧರ್ಮದಲ್ಲಿ, ಕೊಡ-ಕೊಳ್ಳುವಲ್ಲಿ , ವ್ಯಾಪಾರ ಮೊದಲಾದ ಆಜೀವಿಕೆಯಲ್ಲಿ, ಭೋಜನ-ವಸ್ತ್ರಾದಿಗಳಲ್ಲಿ ಉಜ್ವಲ ಯಶಯುಕ್ತವಿದೆ ಅವನೇ ವಕ್ತಾನಿದ್ದಾನೆ. ಯಾವನ ಪ್ರವೃತ್ತಿಯು ಮಲಿನವಿದೆ ಅವನಿಗೆ ವಕ್ತಾತನವು ಶೋಭಿಸುವುದಿಲ್ಲ. ಪ್ರವೃತ್ತಿಯು ಮಲಿನವಾಗಿದ್ದರೆ ಅವನು ಜಗತ್ತಿನಲ್ಲಿ ಮನ್ನಣೆಗೆ ಪಾತ್ರನಾಗಿ ಉಳಿಯುವುದಿಲ್ಲ.

ಯಾರಲ್ಲಿ ಅನ್ಯ ಜನರಿಗೆ ಜ್ಞಾನ ಉತ್ಪನ್ನ ಮಾಡಿಸುವ ಭಾವನೆಯಿದೆ ಅವನೇ ವಕ್ತಾತನವನ್ನು ಸ್ವೀಕಾರ ಮಾಡುವನು. ಅನ್ಯರಿಗೆ ತಿಳಿಸಿಕೊಡುವ ಭಾವನೆಯಿಲ್ಲದವನು ಅವನೇಕೆ ವ್ಯಾಖ್ಯಾನ ಮಾಡುವನು ?

ರತ್ನತ್ರಯ ಮಾರ್ಗವನ್ನು ನಡೆಸುವಲ್ಲಿ ಮತ್ತು ಸ್ವಯಂ ರತ್ನತ್ರಯ ಮಾರ್ಗದ ಮೇಲೆ ನಡೆಯುವಲ್ಲಿ ಉದ್ಯಮ ಶೀಲನಿದ್ದವನೇ ಧರ್ಮ ಕಥೆ ಹೇಳುವಂಥ ವಕ್ತಾನಾಗುವನು. ವಕ್ತಾನಲ್ಲಿ ಬೇರಾವ ಲೌಕಿಕ ಪ್ರಯೋಜನವು ಇರಲೇಬಾರದು.

ದೊಡ್ಡ ಜ್ಞಾನೀ ಜನರಿಂದಲೂ ಪ್ರಶಂಸೆ ಮಾಡಿಸಿಕೊಳ್ಳುವಂಥ ವಕ್ತಾರನಿರಬೇಕು, ಏಕೆಂದರೆ ದೊಡ್ಡ-ದೊಡ್ಡ ಜ್ಞಾನಿಗಳು ಯಾರ ಪ್ರಶಂಸೆ ಮಾಡುತ್ತಾರೆ ಅವರ ವಚನಗಳ ಮೇಲೆ ಜಗತ್ತು ಗಾಢ ಶ್ರದ್ಧೆ ಮಾಡುತ್ತದೆ.

ವಕ್ತಾರನು ಉದ್ಧತೆಯಿಂದ ರಹಿತನಾಗಿರಬೇಕಾಗುವುದು. ಒಂದು ವೇಳೆ ವಕ್ತಾರನು ಉದ್ಧತನಿದ್ದರೆ ಅವನು ಎಲ್ಲರಿಗೂ ಅಪ್ರಿಯನಾಗಿ ಹೋಗುವನು.

ವಕ್ತಾರನು ಲೋಕರೀತಿ, ದೇಶ, ಕಾಲ, ಶ್ರೋತೃಗಳ ಸದ್ಭಾವನೆ-ದುಷ್ಟತೆ, ಪ್ರವೀಣತೆ-ಮೂಢತೆ, ಸಶಕ್ತತೆ-ಅಶಕ್ತತೆ ಮೊದಲಾಗಿ ಎಲ್ಲವನ್ನೂ ತಿಳಿದುಕೊಂಡು ಎಲ್ಲ ಜನರು ಅತ್ಯಂತ ಆದರದಿಂದ ಗ್ರಹಣ ಮಾಡುವಂಥ ಉಪದೇಶ ಮಾಡಬೇಕು. ಲೋಕ ಜ್ಞಾತಾನಾದಲ್ಲದೆ ಯಥಾಯೋಗ್ಯ ಉಪದೇಶವಾಗುವುದಿಲ್ಲ.

ವಕ್ತಾರನಲ್ಲಿ ಕೋಮಲತೆಯ ಗುಣವು ಇರಬೇಕಾಗುವದು, ಕಠೋರ ಪರಿಣಾಮಿಯ ಕಠೋರ ವಚನಗಳು ಆದರ ಮಾಡಲು ಯೋಗ್ಯವಾಗಿರುವುದಿಲ್ಲ. ಅವನ್ನು ಶ್ರೋತೃಗಳು ಆಲಿಸಲು ಇಷ್ಟ ಪಡುವುದಿಲ್ಲ.

ವಕ್ತಾರನಿಗೆ ವಕ್ತೃತ್ವದ ಮೂಲಕ ಧನ, ಭೋಗ ಮೊದಲಾದವುಗಳ ಇಚ್ಛೆಯು ಇರಲೇಬಾರದು.

ವಕ್ತಾರನ ಮುಖದಿಂದ ಅಕ್ಷರಗಳ ಉಚ್ಚಾರವು ಸ್ಪಷ್ಟವಾಗಿ ಆಗಬೇಕಾಗುವುದು. ಅಕ್ಷರಗಳನ್ನು ಸ್ಪಷ್ಟವಾಗಿ ಮಾತನಾಡಿದಲ್ಲದೆ ಭಾವವು ತಿಳಿದು ಬರುವುದಿಲ್ಲ.

ವಕ್ತಾರನ ಅಕ್ಷರಗಳು ಎಷ್ಟು ಮಧುರವಾಗಿರಬೇಕೆಂದರೆ ಅವನು ಶ್ರೋತೃಗಳಿಗೆ ಕರ್ಣಗಳ ಮೂಲಕ ಸರ್ವಾಂಗಗಳಲ್ಲಿ ಅಮೃತದ ಸೇಚನೆಯನ್ನೇ ಮಾಡುತ್ತಿದ್ದಾನೋ ಏನೋ ಎನ್ನುವಂತಿರಬೇಕು.

ವಕ್ತಾರನು ಹೇಗಿರಬೇಕೆಂದರೆ ಅವನ ಪ್ರಭುತ್ವವನ್ನು ಶ್ರೋತೃಗಳು ತಿಳಿಯುತ್ತಿರಬೇಕು-ಮನ್ನಿಸುತ್ತಿರಬೇಕು.

ವಕ್ತಾರನು ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ, ವಾತ್ಸಲ್ಯ ಮೊದಲಾದ ಗುಣಗಳ ನಿಧಾನನಾಗಿರಬೇಕು.

ಹೀಗೆ ವಕ್ತೃತ್ವದ ಅನೇಕ ಗುಣಗಳಿಂದ ಯುಕ್ತನಿದ್ದವನೇ, ಧರ್ಮಕಥೆಯ ವಕ್ತಾರನಾಗುತ್ತಾನೆ. ಇಂಥ ಗುಣಗಳ ಧಾರಕನಾದ ವಕ್ತಾರನ ಉಪದೇಶವು ಯಾರೋ ಮಹಾಭಾಗ್ಯವಂತ-ಪುಣ್ಯವಂತರಾದ ಜನರಿಗೇ ದೊರಕುತ್ತದೆ. **ಸಮ್ಯಗ್ದೇಶನಾಲಬ್ಧಿಯ ಪ್ರಾಪ್ತಿಯಾಗುವುದು ಅನಂತ ಕಾಲದಲ್ಲಿಯೂ ದುರ್ಲಭವಿದೆ.**

**ಶ್ರೋತೃವಿನ ಸ್ವರೂಪ :** ಧರ್ಮೋಪದೇಶವೂ ದೊರಕಬಹುದು, ಆದರೆ ಯೋಗ್ಯ ಶ್ರೋತೃತ್ವವಿಲ್ಲದೆ ಧರ್ಮವು ಗ್ರಹಣವಾಗುವುದಿಲ್ಲ. ಯಾವ ಪ್ರಕಾರ ಯೋಗ್ಯ ಪಾತ್ರೆಯಿಲ್ಲದೆ ವಸ್ತುವು ನಿಲ್ಲುವುದಿಲ್ಲ, ಅಯೋಗ್ಯ ಪಾತ್ರೆಯಲ್ಲಿಡುವುದರಿಂದ ಪಾತ್ರೆಹಾಗೂ ವಸ್ತು ಎರಡೂ ನಾಶವಾಗಿ ಹೋಗುತ್ತವೆ, ಅದೇ ಪ್ರಕಾರ ಯೋಗ್ಯ ಶ್ರೋತೃತ್ವವಿಲ್ಲದೆಯೂ ಧರ್ಮದ ಉಪದೇಶವು ನಿಲ್ಲುವುದಿಲ್ಲ. ಆದುದರಿಂದ ಸಂಕ್ಷೇಪದಲ್ಲಿ ಶ್ರೋತೃವಿನ ಲಕ್ಷಣವು ಈ ಕೆಳಗಿನಂತಿದೆಯೆಂದು ತಿಳಿಯುವದು.

**ಮೊದಲಂತೂ ಭವ್ಯನಿರಬೇಕು.** ಉಪದೇಶ ಕೊಟ್ಟ ಮೇಲೆ ಕೂಡ ಸಮ್ಯಕ್ ಶ್ರದ್ಧೆ ಮೊದಲಾದ ಗುಣಗಳನ್ನು ಗ್ರಹಣ ಮಾಡುವ ಯೋಗ್ಯತೆಯಿಲ್ಲದವನಿಗೆ ಉಪದೇಶ ಕೊಡುವುದು ವ್ಯರ್ಥವಿದೆ. ನನ್ನ ಕಲ್ಯಾಣ ಹೇಗಾಗುವುದು, ನನ್ನ ಹಿತ ಹೇಗಾಗುವುದೆಂದು ಯಾರಿಗೆ ಯಾವಾಗಲೂ ವಿಚಾರವಿರುತ್ತದೆ, ಯಾರಿಗೆ ತಮ್ಮ ಹಿತದ ಅಪೇಕ್ಷೆಯಿರುವುದಿಲ್ಲ ಅವರು ಯಾವ ಪ್ರಯೋಜನವಿಲ್ಲದೆ ಧರ್ಮ ಕಥೆಯನ್ನೇಕೆ ಕೇಳುವರು ? ಅವರಂತೂ ವಿಷಯ ಕಷಾಯದ ಲಾಭ, ಧನದ ಲಾಭವು ಯಾವುದರಿಂದ ಸಾಧಿಸುತ್ತದೆ ಅದರ ಇಚ್ಛೆ ಮಾಡುತ್ತಾರೆ.

**ದುಃಖದಿಂದ ಅತ್ಯಂತ ಭಯಭೀತನಿರಬೇಕು.** ಇನ್ನು ಮೇಲೆ ನರಕ-ತಿರ್ಯಂಚ ಮೊದಲಾದ ಪರ್ಯಾಯಗಳ ದುಃಖವಾಗದಿರಲೆಂಬ ಭಯವು ಯಾರಿಗೆ ಇರುವುದಿಲ್ಲ ಅವರು ಪಾಪ ಬಿಡುವುದಕ್ಕೆ, ವಿಷಯ ಕಷಾಯ ಬಿಡುವುದಕ್ಕೆ ಶಾಸ್ತ್ರ ಶ್ರವಣವನ್ನೇಕೆ ಮಾಡುವರು ? ಆದುದರಿಂದ ಮೊದಲು ದುಃಖದಿಂದ ಭಯಭೀತವಾಗಬೇಕಾಗುವುದು.

**ಸುಖದ ಇಚ್ಛುಕನಿರಬೇಕು.** ಸುಖದ ಇಚ್ಛೆಯಿಲ್ಲದವನು ಧರ್ಮದ ಕಥೆಯನ್ನು ಕೇಳಲಾರನು. ಯಾರಿಗೆ ಕರ್ಣೇಂದ್ರಿಯವಿಲ್ಲ ಅಥವಾ ಕಿವಿಗಳು ಕೆಟ್ಟು ಹೋಗಿದ್ದರೆ ಅವನು ಯಾವುದರಿಂದ ಆಲಿಸುವನು ?

**ಧರ್ಮ ಕಥೆ ಕೇಳುವ ಇಚ್ಛೆಯಿರಬೇಕು.** ಇಚ್ಛೆಯಿಲ್ಲದೆ ಪರಿಪೂರ್ಣ ಶ್ರವಣವಾಗುವುದಿಲ್ಲ. ಇಚ್ಛೆಯಿದ್ದರೂ ಕೂಡ ಪ್ರಮಾದ, ಆಲಸ್ಯ, ಕುಸಂಗತಿಯಿಂದ ಶ್ರವಣ ಮಾಡದಿದ್ದರೆ ಇಚ್ಛೆಯೂ ವ್ಯರ್ಥವಿದೆ. **ಅವನು ಶ್ರವಣವನ್ನೇನೋ ಮಾಡುತ್ತಾನೆ, ಆದರೆ ಗುರುಗಳು ಈ ಪ್ರಕಾರ ಈ ಅಪೇಕ್ಷೆಯಿಂದ ಹೇಳುತ್ತಾರೆಂಬ ಸಾವಧಾನತೆಯಿಲ್ಲದೆ ಶ್ರವಣ ಮಾಡುವುದು ವ್ಯರ್ಥವಿದೆ.** ಶ್ರವಣ ಮಾಡುವುದರಿಂದ ಗ್ರಹಣವೂ ಆಗುವುದು, ಆದರೆ ಧಾರಣವಾಗದಿದ್ದರೆ, ಸ್ಮರಣೆಯುಳಿಯದಿದ್ದರೆ, ಶ್ರವಣ ಮಾಡುತ್ತಿರುವಂತೆಯೇ ವಿಸ್ಮರಣವಾಗಿ ಹೋದರೆ ಶ್ರವಣ ಮಾಡುವದು, ಗ್ರಹಣ ಮಾಡುವದು ಕೂಡ ವ್ಯರ್ಥವಿದೆ.

ವಿಚಾರಪೂರ್ವಕ ಪ್ರಶ್ನೋತ್ತರದ ಮೂಲಕ ನಿರ್ಣಯ ಮಾಡದಿದ್ದರೆ ಶ್ರವಣದಲ್ಲಿ ಸಂದೇಹ ಮೊದಲಾದವು ಉಳಿಯುವವು. ಆಗ ಆತ್ಮಹಿತದ ಸನ್ಮುಖ ಹೇಗಾಗುವುದು ?

ಶ್ರೋತೃಗಳು ಎಂಥ ಧರ್ಮ ಕೇಳಬೇಕೆಂದರೆ ಅದು ದಯಾಮಯವಿರಬೇಕು, ಸುಖ ಕೊಡುವಂಥದ್ದಿರಬೇಕು, ಯುಕ್ತಿ ಪ್ರಮಾಣ ನಯದಿಂದ ಅದರಲ್ಲಿ ಬಾಧೆ ಬರಬಾರದು, ವೀತರಾಗ ಸರ್ವಜ್ಞ ಭಗವಂತರ ಆಗಮದಿಂದ ಹೊರಟಿರಬೇಕು, ಇಂಥ ಧರ್ಮವನ್ನು ಶ್ರವಣ ಮಾಡಿ ಪುನಃ ಪುನಃ ವಿಚಾರ ಮಾಡಿ ಗ್ರಹಣ ಮಾಡಬೇಕು. **ವಿಚಾರದಿಂದ ರಹಿತರಾಗಿ ಮಿಥ್ಯಾತ್ವರೂಪ, ಹಿಂಸೆಯ ಕಾರಣವಾದ ಧರ್ಮವನ್ನು ಗ್ರಹಣ ಮಾಡಿಕೊಂಡರೆ ನರಕ ಮೊದಲಾದ ಗತಿಗಳಿಗೆ ಪ್ರಾಪ್ತನಾಗಿ ದುಃಖಿಯಾಗಬಹುದು.**

ಯುಕ್ತಿಯಿಂದ ಹಾಗೂ ವೀತರಾಗ ಭಗವಂತರ ಆಗಮದಿಂದ ಯಾವುದರಲ್ಲಿ ಬಾಧೆಯು ಬರುತ್ತದೆ ಅದು ಧರ್ಮವಲ್ಲ, ಆದರೆ ಅಧರ್ಮವಿದೆ. ಆದುದರಿಂದ ಅದು ಶ್ರವಣ ಮಾಡಲು ಯೋಗ್ಯವಿಲ್ಲ.

ಹಟಾಗ್ರಹ ಮೊದಲಾದ ದೋಷಗಳಿಂದ ರಹಿತನಿರಬೇಕು. ದುರಾಗ್ರಹಿಗೆ ಉಪದೇಶವು ಅನ್ವಯಿಸುವುದಿಲ್ಲ.

ಈ ಪ್ರಕಾರ ಶ್ರೋತೃವು ಅನೇಕ ಗುಣಗಳ ಧಾರಕನಾಗಿದ್ದರೆ ಅವನು ಧರ್ಮದ ಉಪದೇಶವನ್ನು ಆಲಿಸಿ ತನ್ನ ಆತ್ಮನ ಕಲ್ಯಾಣ ಮಾಡಿಕೊಳ್ಳುತ್ತಾನೆ.

**ಶ್ರೋತಾರನ ಭೇದ :** ಈಗ ಇಲ್ಲಿ ಪ್ರಕರಣವಶದಿಂದ ಶ್ರೋತಾರರ ಕೆಲವೊಂದು ಭೇದಗಳನ್ನು ದೃಷ್ಟಾಂತದ ಮೂಲಕ ಹೇಳುತ್ತಾರೆ. ಅದೆಷ್ಟೋ ಶ್ರೋತಾರರು **ಮಣ್ಣಿನ** ಸ್ವಭಾವದ ಸಮಾನರಿರುತ್ತಾರೆ. ಯಾವ ಪ್ರಕಾರ ಮಣ್ಣಿನ ಮೇಲೆ ನೀರು ಹಾಕಿದಾಗ ಅದು ಮೃದುವಾಗಿ ಹೋಗುತ್ತದೆ, ಅನಂತರ ಒಣಗಿದ ಮೇಲೆ ಕಠೋರವಾಗಿ ಬಿಡುತ್ತದೆ, ಅದೇ ಪ್ರಕಾರ ಈ ಶ್ರೋತೃಗಳಂತೂ ಧರ್ಮಕೇಳುವ ಸಮಯದಲ್ಲಂತೂ ಭಾವಗಳಲ್ಲಿ ನೆನೆದು ಹೋಗಿ ಕೋಮಲರಾಗುತ್ತಾರೆ, ಅನಂತರ ಕಠೋರರಾಗಿ ಹೋಗುತ್ತಾರೆ.

ಅದೆಷ್ಟೋ ಶ್ರೋತಾರರು **ಸಾರಣಿಗೆಯ** ಸಮಾನರಿರುತ್ತಾರೆ, ಅದು ಧಾನ್ಯದ ಕಾಳನ್ನು ಬಿಟ್ಟುಕೊಟ್ಟು ಕೇವಲ ಸಿಪ್ಪೆಯನ್ನೇ ಗ್ರಹಣ ಮಾಡುತ್ತದೆ, ಅದೇ ಪ್ರಕಾರ ಇವರು ಕೂಡ ಧರ್ಮಕಥೆಯಲ್ಲಿ ಸಾರಯುಕ್ತ ಗುಣವನ್ನಂತೂ ಬಿಟ್ಟು ಕೊಡುತ್ತಾರೆ ಮತ್ತು ದುರ್ಗುಣಗಳನ್ನು ಮಾತ್ರ ಗ್ರಹಣ ಮಾಡುತ್ತಾರೆ.

ಅದೆಷ್ಟೋ ಶ್ರೋತಾರರು **ಎಮ್ಮೆಯ** ಸಮಾನರಿರುತ್ತಾರೆ. ಯಾವ ಪ್ರಕಾರ ಎಮ್ಮೆಯು ಸ್ವಚ್ಛವಾದ ನೀರಿನಿಂದ ತುಂಬಿರುವ ಸರೋವರದಲ್ಲಿ ಪ್ರವೇಶ ಮಾಡಿ ಸಂಪೂರ್ಣ ಸರೋವರವನ್ನೇ ಕೊಳಚೆಮಯ ಮಾಡಿ ಬಿಡುತ್ತದೆ, ಅದೇ ಪ್ರಕಾರ ಇವರುಕೂಡ ಸಭೆಯಲ್ಲಿನ ಜನರ ಪರಿಣಾಮವನ್ನು ಮಲಿನ ಮಾಡಿ ಬಿಡುತ್ತಾರೆ.

ಅದೆಷ್ಟೋ ಶ್ರೋತಾರರು **ಹಂಸದ** ಸಮಾನರಿರುತ್ತಾರೆ. ಯಾವ ಪ್ರಕಾರ ಹಂಸ ಪಕ್ಷಿಯು ನೀರು ಮತ್ತು ಹಾಲಿನ ಭೇದ ಮಾಡಿ ಹಾಲನ್ನೇ ಗ್ರಹಣ ಮಾಡುತ್ತದೆ, ಅದೇ ಪ್ರಕಾರ ಇವರು ಕೂಡ ನಿಃಸಾರವನ್ನು ತ್ಯಜಿಸಿ ಆತ್ಮ ಹಿತದ ಮಾತನ್ನು ಮಾತ್ರ ಗ್ರಹಣ ಮಾಡುತ್ತಾರೆ.

ಅದೆಷ್ಟೋ ಶ್ರೋತಾರರು **ಗಿಳಿಯ** ಸಮಾನರಿರುತ್ತಾರೆ. ಅದಕ್ಕೆ ರಾಮನೆಂದು ಕಲಿಸಿದರೆ ರಾಮನೆಂದು ಉಲಿಯುತ್ತದೆ, ರಹೀಮನೆಂದು ಕಲಿಸಿದರೆ ರಹೀಮನೆಂದು ಉಲಿಯುತ್ತದೆ, ಬೇರೇನೋ ಕಲಿಸಿದರೆ ಬೇರೇನೋ ಉಲಿಯುತ್ತದೆ; ಅದಕ್ಕೆ ರಾಮನದೂ ಜ್ಞಾನವಿಲ್ಲ, ರಹೀಮನದೂ ಜ್ಞಾನವಿಲ್ಲ. ಅದೇ ಪ್ರಕಾರ ಇವರು ಕೂಡ ಪಾಪ-ಪುಣ್ಯದ ವಿಚಾರವಿಲ್ಲದೆ ಏನನ್ನು ಕಲಿಸುತ್ತಿರೋ ಅದನ್ನು ಕಲಿತುಕೊಳ್ಳುತ್ತಾರೆ, ಗ್ರಹಣ ಮಾಡಿಕೊಳ್ಳುತ್ತಾರೆ, ಆದರೆ ವಿಚಾರದಿಂದ ರಹಿತರಾಗುತ್ತ ತಮ್ಮ ಸ್ವರೂಪ ಹಾಗೂ ಪರರ ಸ್ವರೂಪದ ಜ್ಞಾನದಿಂದ ರಹಿತರಾಗಿಯೇ ಉಳಿಯುತ್ತಾರೆ.

ಅದೆಷ್ಟೋ ಶ್ರೋತಾರರು **ಬೆಕ್ಕಿನ** ಸಮಾನರಿರುತ್ತಾರೆ. ಯಾವ ಪ್ರಕಾರ ಬೆಕ್ಕು ಮಲಗಿಕೊಂಡಿದ್ದರೂ ತನ್ನ ಬೇಟೆಯ ಕಡೆಗೆ ಜಾಗೃತವಾಗಿಯೇ ಇರುತ್ತದೆ, ಅದೇ ಪ್ರಕಾರ ಈ ಶ್ರೋತಾರರು ಕೂಡ ವಕ್ತಾರನ ವಾಣಿಯೊಳಗಿಂದ ವಿಷಯ, ಕಷಾಯ, ಛಲವನ್ನೇ ಗ್ರಹಣ ಮಾಡುತ್ತಿರುತ್ತಾರೆ.

ಅದೆಷ್ಟೋ ಶ್ರೋತಾರರು **ಬಕಪಕ್ಷಿಯ** ಸಮಾನರಿರುತ್ತಾರೆ. ಯಾವ ಪ್ರಕಾರ ಬಕಪಕ್ಷಿಯು ಬೇಟೆ ಹಿಡಿದುಕೊಳ್ಳುವ ಸಲುವಾಗಿ ಧ್ಯಾನ ಧಾರಣ ಮಾಡಿದವರಂತೆ ಕುಳಿತುಕೊಂಡಿರುತ್ತದೆ;ಅದೇ ಪ್ರಕಾರ ಇವರು ಕೂಡ ತಮ್ಮ ವಿಷಯ-ಕಷಾಯಗಳನ್ನೇ ಗ್ರಹಣ ಮಾಡುತ್ತಿರುತ್ತಾರೆ.

ಅದೆಷ್ಟೋ ಶ್ರೋತಾರರು **ಸೊಳ್ಳೆಯ** ಸಮಾನರಿರುತ್ತಾರೆ. ಅವರು ವಕ್ತಾರನಿಗೆ ಪುನಃ ಪುನಃ ಬಾಧೆಯನ್ನೇ ಉತ್ಪನ್ನ ಮಾಡುತ್ತಿರುತ್ತಾರೆ.

ಅದೆಷ್ಟೋ ಶ್ರೋತಾರರು **ಹೋತದ** ಸಮಾನರಿರುತ್ತಾರೆ. ಯಾವ ಪ್ರಕಾರ ಹೋತಕ್ಕೆ ಎಷ್ಟೇ ಸುಗಂಧದ ಎಣ್ಣೆ ಬಳಿದರೂ, ಸುಗಂಧಿತವಿರುವ ನೀರು ಕುಡಿಸಿದರೂ ಕೂಡ ಅದು ದುರ್ಗಂಧವನ್ನೇ ಪ್ರಕಟ ಮಾಡುತ್ತದೆ, ಅದೇ ಪ್ರಕಾರ ಇವರು ಕೂಡ ಉಜ್ವಲವಿರುವ ಧರ್ಮವನ್ನು ಆಲಿಸುತ್ತಿದ್ದರೂ ಕೂಡ ಪಾಪವನ್ನೇ ಕಾರುತ್ತಾರೆ.

ಅದೆಷ್ಟೋ ಶ್ರೋತಾರರು **ಜಿಗಳೆ (ಉಣ್ಣೆ)**ಯ ಸಮಾನರಿರುತ್ತಾರೆ. ಯಾವ ಪ್ರಕಾರ ಉಣ್ಣೆಯು ಕೆಚ್ಚಲದ ಮೇಲಿದ್ದರೂ ಅದರ ಸಂಪರ್ಕವಂತೂ ಆ ಹೊಲಸು ವಸ್ತುವಾದ ರಕ್ತವನ್ನೇ ಗ್ರಹಣ ಮಾಡುತ್ತದೆ, ಅದೇ ಪ್ರಕಾರ ಇವರು ಕೂಡ ವಿಷಯ-ಕಷಾಯಗಳನ್ನೇ ಗ್ರಹಣ ಮಾಡುತ್ತಾರೆ.

ಅದೆಷ್ಟೋ ಶ್ರೋತಾರರು **ಒಡಕು ಕೊಡದ** ಸಮಾನರಿರುತ್ತಾರೆ. ಅವರು ಧರ್ಮವನ್ನು ಕೇಳುತ್ತಿದ್ದರೂ ಕೂಡ ಚಿತ್ತದಲ್ಲಿ ಸ್ವಲ್ಪ(ಅಂಶ) ಮಾತ್ರವೂ ಗ್ರಹಣ ಮಾಡುವುದಿಲ್ಲ.

ಅದೆಷ್ಟೋ ಶ್ರೋತಾರರು **ಸರ್ಪದ** ಸಮಾನ ಸ್ವಭಾವವುಳ್ಳವರಿರುತ್ತಾರೆ. ಅವರು ಕಲ್ಲು ಸಕ್ಕರೆ ಮಿಶ್ರಿತ ಹಾಲನ್ನು ಕುಡಿದರೂ ಕೂಡ ಪ್ರಬಲ ವಿಷವನ್ನೇ ಹೆಚ್ಚಿಸುತ್ತಾರೆ.

ಅದೆಷ್ಟೋ ಶ್ರೋತಾರರು **ಗೋವುಗಳ** ಸಮಾನ ಉತ್ತಮ ಸ್ವಭಾವವುಳ್ಳವರಿರುತ್ತಾರೆ. ಗೋವುಗಳು ಒಣ ಹುಲ್ಲು-ಹೊಟ್ಟು ತಿಂದು ಕೂಡ ಹಾಲನ್ನು ಕೊಡುತ್ತವೆ.

ಅದೆಷ್ಟೋ ಶ್ರೋತಾರರು **ಪಾಷಾಣದ** ಶಿಲೆಯ ಸಮಾನರಿರುತ್ತಾರೆ. ಅವರಿಗೆ ಎಷ್ಟೋ ಸಾರಿ ಧರ್ಮೋಪದೇಶ ಕೊಟ್ಟರೂ ಕೂಡ ಹೃದಯದಲ್ಲಿ ಪ್ರವೇಶ ಮಾಡುವುದಿಲ್ಲ.

ಅದೆಷ್ಟೋ ಶ್ರೋತಾರರು **ಒರೆಗಲ್ಲಿನ** ಸಮಾನ ಪರೀಕ್ಷಾ ಪ್ರಧಾನರಾಗಿರುತ್ತಾರೆ.

ಅದೆಷ್ಟೋ ಶ್ರೋತಾರರು **ತಕ್ಕಡಿಯ** ದಂಡಿಗೆಯ ಸಮಾನರಿರುತ್ತಾರೆ. ಅವರು ಹಾನಿ-ವೃದ್ಧಿ, ಹೇಯ-ಉಪಾದೇಯಗಳನ್ನು ಒಳ್ಳೆಯ ರೀತಿಯಿಂದ ತಿಳಿದುಕೊಂಡಿರುತ್ತಾರೆ.

ಈ ಪ್ರಕಾರ ಶ್ರೋತಾರರಲ್ಲಿ ಉತ್ತಮ, ಮಧ್ಯಮ, ಜಘನ್ಯವೆಂದು ಅನೇಕ ಭೇದಗಳಿವೆ. ಯಾರ ಸ್ವಭಾವವು ಹೇಗಿರುತ್ತದೆ ಅವರಿಗೆ ಧರ್ಮದ ಉಪದೇಶವು ಹಾಗೆಯೇ ಪರಿಣಮಿಸುತ್ತದೆ. ಈ ಧರ್ಮೋಪದೇಶನಾಮದ ಸ್ವಾಧ್ಯಾಯ ತಪದ ಪ್ರಕರಣದಲ್ಲಿ ವಕ್ತಾ-ಶ್ರೋತಾರರ ಲಕ್ಷಣ ಹೇಳಿದೆ. ಈ ರೀತಿಯಿಂದ ಐದು ಪ್ರಕಾರದ ಸ್ವಾಧ್ಯಾಯದ ವರ್ಣನೆ ಮಾಡಲಾಯಿತು.

**ಸ್ವಾಧ್ಯಾಯ ಮಾಡುವುದರಿಂದ ಲಾಭ :** ಸ್ವಾಧ್ಯಾಯ ಮಾಡುವುದರಿಂದ ಬುದ್ಧಿಯು ಅತಿಶಯವುಳ್ಳದ್ದಾಗಿರುತ್ತದೆ, ಅಭಿಪ್ರಾಯವು ಉಜ್ವಲವಾಗುತ್ತದೆ, ಜಿನಧರ್ಮದಲ್ಲಿ ಶ್ರದ್ಧೆಯು ದೃಢವಾಗುತ್ತದೆ, ಸಂಶಯದ ಅಭಾವವಾಗುತ್ತದೆ, ಪರವಾದಿಯ-ಅನ್ಯಮತಿಯ ಶಂಕೆಯ ಅಭಾವವಾಗುತ್ತದೆ, ಪರಮ ಧರ್ಮಾನುರಾಗವಾಗುತ್ತದೆ, ತಪದ ವೃದ್ಧಿಯಾಗುತ್ತದೆ, ಆಚಾರದ ಉಜ್ವಲತೆಯಾಗುತ್ತದೆ, ಅತಿಚಾರ(ದೋಷ)ದ ಅಭಾವವಾಗುತ್ತದೆ, ಪಾಪಕ್ರಿಯೆಯ ತ್ಯಾಗವಾಗುತ್ತದೆ, ಕುಧರ್ಮದಲ್ಲಿ ರಾಗದ ಅಭಾವವಾಗುತ್ತದೆ, ಹೇಯ-ಉಪಾದೇಯದ ಪರಿಚಯವಾಗುತ್ತದೆ, ಪರಮೇಷ್ಠಿಗಳಲ್ಲಿ ಸಾತಿಶಯ ಭಕ್ತಿಯಾಗುತ್ತದೆ, ಸಮ್ಯಗ್ದರ್ಶನವು ಪ್ರಕಟವಾಗುತ್ತದೆ, ಸಂಸಾರ-ಶರೀರ-ಭೋಗಗಳಿಂದ ವಿರಕ್ತತೆಯಾಗುತ್ತದೆ, ಕಷಾಯಗಳ ಮಂದತೆಯಾಗುತ್ತದೆ, ದಯಾಭಾವದ ವೃದ್ಧಿಯಾಗುತ್ತದೆ, ಶುಭಧ್ಯಾನವಾಗುತ್ತದೆ, ಆರ್ತ-ರೌದ್ರ ಧ್ಯಾನದ ಅಭಾವವಾಗುತ್ತದೆ, ಜಗತ್ತಿನಲ್ಲಿ ಮನ್ನಣೆಯಾಗುತ್ತದೆ, ಉಜ್ವಲ ಯಶಸ್ಸು ಪ್ರಕಟವಾಗುತ್ತದೆ, ದುರ್ಗತಿಯ ಅಭಾವವಾಗುತ್ತದೆ, ಸ್ವರ್ಗದ ಉತ್ತಮ ಸುಖ ಮತ್ತು ನಿರ್ವಾಣದ ಅತೀಂದ್ರಿಯ ಸುಖದ ಪ್ರಾಪ್ತಿಯಾಗುತ್ತದೆ. ಇವೇ ಮೊದಲಾದ ಅನೇಕ ಗುಣಗಳನ್ನು ಉತ್ಪನ್ನ ಮಾಡುವಂಥದ್ದೆಂದು ತಿಳಿದುಕೊಂಡು ವೀತರಾಗ ಸರ್ವಜ್ಞರ ಮೂಲಕ ಹೇಳಲಾದ ಆಗಮದ ಅಭ್ಯಾಸವಿಲ್ಲದೆ ಮನುಷ್ಯ ಜನ್ಮವನ್ನು ವ್ಯತೀತ ಮಾಡಬಾರದು. ಈ ಪ್ರಕಾರ ಸ್ವಾಧ್ಯಾಯ ನಾಮದ ನಾಲ್ಕನೆಯ ಅಂತರಂಗ ತಪದಲ್ಲಿನ ಐದು ಪ್ರಕಾರದ ಸ್ವರೂಪವನ್ನು ಹೇಳಲಾಯಿತು.

**ಕಾಯೋತ್ಸರ್ಗ ತಪ :** ಈಗ ಕಾಯೋತ್ಸರ್ಗವೆಂಬ ಹೆಸರಿನ ತಪದ ಸ್ವರೂಪ ಹೇಳುತ್ತಾರೆ, ಬಾಹ್ಯ ಹಾಗೂ ಅಭ್ಯಂತರ ಉಪಾಧಿಗಳ ತ್ಯಾಗ ಮಾಡುವುದು ಅದು ಕಾಯೋತ್ಸರ್ಗವಿದೆ. ಬಾಹ್ಯ ಎಂದರೆ ಶರೀರ, ಧನ, ಧಾನ್ಯ ಮೊದಲಾದವುಗಳ ತ್ಯಾಗ ಮಾಡುವುದು ಅದು ಬಾಹ್ಯ ಉಪಾಧಿಯ ತ್ಯಾಗವಿದೆ. ಅಭ್ಯಂತರ ಎಂದರೆ ಮಿಥ್ಯಾತ್ವ, ಕ್ರೋಧ, ಮಾನ, ಮಾಯೆ,

ಲೋಭ, ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ವೇದ ಪರಿಣಾಮಗಳ ಅಭಾವ ಮಾಡುವುದು ಅದು ಅಭ್ಯಂತರ ಉಪಾಧಿಯ ತ್ಯಾಗವಿದೆ. ಬಾಹ್ಯ ತ್ಯಾಗದಲ್ಲಿ ಆಹಾರ ಮೊದಲಾದವುಗಳದೂ ತ್ಯಾಗವಾಗುತ್ತದೆ. ಸನ್ಯಾಸದ ಸಮಯದಲ್ಲಿ ಆಯುವಿನ ಪೂರ್ಣತೆಯಾದ ಮೇಲೆ ಯಾವಜ್ಜೀವನ ತ್ಯಾಗವಾಗುತ್ತದೆ, ಅದರ ವರ್ಣನೆಯನ್ನು ಮುಂದೆ ಕ್ರಮದಿಂದ ಸಲ್ಲೇಖನದ ಪ್ರಕರಣದಲ್ಲಿ ಮಾಡಲಾಗುವುದು. ಆದುದರಿಂದ ಇಲ್ಲಿ ಅದರ ಸಂಬಂಧದಲ್ಲಿ ವಿಶೇಷವಾಗಿ ಹೇಳಲಾಗಿಲ್ಲ.

**ಧ್ಯಾನ ತಪ :** ಈಗ ಧ್ಯಾನ ನಾಮದ ತಪದ ವರ್ಣನೆ ಮಾಡುತ್ತಾರೆ. ಒಂದು ಪದಾರ್ಥವನ್ನು ತಿಳಿದುಕೊಳ್ಳುತ್ತ ಅದರ ಚಿಂತನೆಯಲ್ಲಿಯೇ ನಿಂತುಕೊಳ್ಳುವುದು ಅದು ಧ್ಯಾನವಿದೆ. ಆ ಧ್ಯಾನವು ಉತ್ತಮ ಸಂಹನನವುಳ್ಳವನಿಗೆ ಅಂತರ್ಮುಹೂರ್ತವಿರುತ್ತದೆ. ಏಕಾಗ್ರ ಚಿಂತನದ ಸುಖವು ಅಂತರ್ಮುಹೂರ್ತಕ್ಕಿಂತ ಅಧಿಕ ಕಾಲವು ಉತ್ತಮ ಸಂಹನನವುಳ್ಳವನಿಗೂ ಇರುವುದಿಲ್ಲ. ವಜ್ರವೃಷಭನಾರಾಚ ಸಂಹನನ, ವಜ್ರನಾರಾಚ ಸಂಹನನ, ನಾರಾಚ ಸಂಹನನ ಇವು ಮೂರು ಉತ್ತಮ ಸಂಹನನಗಳಿವೆ. ಉತ್ತಮ ಸಂಹನನವುಳ್ಳವನಿಗೆ ಮನುಷ್ಯತನದಲ್ಲಿ ಚಿತ್ತದ ತಡೆಯುವಿಕೆಯಾಗುತ್ತದೆ. **ಸಂಸಾರದಲ್ಲಿ ಗಮನ, ಭೋಜನ, ಶಯನ, ಅಧ್ಯಯನ ಮೊದಲಾದ ಅನೇಕ ಕ್ರಿಯೆಗಳಿದ್ದು ಅವುಗಳಲ್ಲಿ ಯಾವನು ನಿಯಮ ರಹಿತನಾಗಿ ವರ್ತಿಸುತ್ತಾನೆ ಅವನಿಗೆ ಧ್ಯಾನವಾಗುವುದಿಲ್ಲ.** ಎಲ್ಲಿ ಓರ್ವ ಶುದ್ಧಾತ್ಮನ ಸನ್ಮುಖವಾಗಿ ಚಿತ್ತವು ತಡೆಯುತ್ತವೆ ಅಲ್ಲಿ ಧ್ಯಾನವಿದೆ. ಎಲ್ಲಿ ಏಕಾಗ್ರತೆಯಿಲ್ಲ ಅಲ್ಲಿ ಭಾವನೆಯಿದೆ.

ಪ್ರಶಸ್ತ ಭಾವಗಳಿಂದ ಶುಭಧ್ಯಾನವಾಗುತ್ತದೆ, ಅಪ್ರಶಸ್ತ ಭಾವಗಳಿಂದ ಅಶುಭಧ್ಯಾನವಾಗುತ್ತದೆ. ಶುಭಧ್ಯಾನವು ಧರ್ಮಧ್ಯಾನ ಮತ್ತು ಶುಕ್ಲಧ್ಯಾನವೆಂದು ಎರಡು ಪ್ರಕಾರದ್ದಿದೆ. ಅಶುಭ ಧ್ಯಾನವು ಕೂಡ ಆರ್ತಧ್ಯಾನ ಮತ್ತು ರೌದ್ರಧ್ಯಾನವೆಂದು ಎರಡು ಪ್ರಕಾರದ್ದಿದೆ. ಈ ಪ್ರಕಾರ ಧ್ಯಾನದಲ್ಲಿ ನಾಲ್ಕು ಭೇದಗಳಿವೆ. ಅವುಗಳಲ್ಲಿ ಅಶುಭ ಧ್ಯಾನಗಳಂತೂ ಜೀವಗಳಿಗೆ ಯತ್ನವಿಲ್ಲದೆಯೇ ಆಗುತ್ತವೆ. ಏಕೆಂದರೆ ಅಶುಭಧ್ಯಾನದ ಸಂಸ್ಕಾರವಂತೂ ಜೀವಗಳಿಗೆ ಅನಾದಿಕಾಲದಿಂದ ನಡೆಯುತ್ತ ಬರುತ್ತಲಿದೆ. ಅಶುಭ ಧ್ಯಾನ ಕಲಿಸುವ ಸಲುವಾಗಿ ಯಾವ ಶಾಸ್ತ್ರಗಳೂ ಇಲ್ಲ, ಇದಂತೂ ಯಾವ ಬೋಧವಿಲ್ಲದೆಯೇ ಜೀವಗಳಿಗೆ ಆಗುತ್ತದೆ. ಅಶುಭ ಧ್ಯಾನದ ಅಭಾವವಾದ ಮೇಲೆ ಶುಭ ಧ್ಯಾನವಾಗುತ್ತದೆ.

**ಆರ್ತ ಧ್ಯಾನ ಮತ್ತು ಅದರ ಭೇದ :** ಅಶುಭ ಧ್ಯಾನದ ಅಭಾವ ಮಾಡುವ ಸಲುವಾಗಿ ಮೊದಲು ನಾಲ್ಕು ಪ್ರಕಾರದ ಆರ್ತಧ್ಯಾನದ ಕಥನ ಮಾಡುತ್ತಾರೆ. ಅನಿಷ್ಟಸಂಯೋಗಜ, ಇಷ್ಟಸಂಯೋಗಜ, ರೋಗಜನಿತ, ನಿದಾನ ಜನಿತವೆಂದು ಇವು ನಾಲ್ಕು ಪ್ರಕಾರದ ಆರ್ತಧ್ಯಾನಗಳಿವೆ. ಋತ ಎಂದರೆ ದುಃಖ, ಅದರಿಂದ ಉತ್ಪನ್ನವಾಗುವಂಥದು ಅದು ಆರ್ತಧ್ಯಾನವಿದೆ.

**ಅನಿಷ್ಟ ಸಂಯೋಗಜ ಆರ್ತಧ್ಯಾನ :** ಅನಿಷ್ಟ ವಸ್ತುವಿನ ಸಂಯೋಗದಿಂದ ಯಾವಾಗ ಬಹಳಷ್ಟು ದುಃಖವು ಉತ್ಪನ್ನವಾಗುತ್ತದೆ ಆ ಸಮಯದಲ್ಲಿ ಯಾವ ಚಿಂತನೆಯಾಗುತ್ತದೆ ಅದು ಅನಿಷ್ಟ ಸಂಯೋಗಜ ಆರ್ತಧ್ಯಾನವಿದೆ. ತಮ್ಮ ಶರೀರದ ನಾಶ ಮಾಡುವಂಥ, ಧನದ ನಾಶ ಮಾಡುವಂಥ, ಆಜೀವಿಕೆಯನ್ನು ಕೆಡಿಸುವಂಥ, ತಮ್ಮ ಸ್ವಜನ-ಮಿತ್ರ ಮೊದಲಾದವರ ನಾಶ ಮಾಡುವಂಥ ದುಷ್ಟ ವೈರೀ, ದುಷ್ಟ ದೊರೆ, ದೊರೆಯ ದುಷ್ಟ ಅಧಿಕಾರೀ, ತಮಗೆ ದುಷ್ಟ ನೆರೆಮನೆಯವರ ಸಂಯೋಗ ದೊರಕುವುದು, ರೋಗಮಯ ಶರೀರ, ಘೋರ ದರಿದ್ರತೆ, ನೀಚ ಜಾತಿ-ನೀಚಕುಲದಲ್ಲಿ ಜನ್ಮ, ನಿರ್ಬಲತೆ, ಅಸಮರ್ಥತೆ, ಅಂಗಹೀನತೆ ಇತ್ಯಾದಿಗಳನ್ನು ಪಡೆಯುವುದು; ಸಿಂಹ, ಹುಲಿ, ಸರ್ಪ, ಇಲಿ, ನಾಯಿ, ಅಗ್ನಿ, ಜಲ,ದುಷ್ಟರಾಕ್ಷಸ ಮೊದಲಾದವುಗಳ ಸಂಯೋಗ ದೊರಕುವುದು; ದುಷ್ಟ ಬಂಧುಗಳು, ದುಷ್ಟ ಪತ್ನಿ, ಪುತ್ರ ಮೊದಲಾದವರ ಸಂಯೋಗವು ಅತ್ಯಂತ ಅನಿಷ್ಟವಾಗುತ್ತದೆ. ಇವರುಗಳ ಸಂಯೋಗದ ದುಃಖದಲ್ಲಿ ಯಾವ ಸಂಕ್ಲೇಶರೂಪದ ಪರಿಣಾಮಗಳಾಗುತ್ತವೆ ಆ ಸಂಯೋಗಗಳ ವಿಯೋಗ ಮಾಡುವ ಸಲುವಾಗಿ ಯಾವ ಚಿಂತನೆಯಾಗುತ್ತದೆ ಅದು ಅನಿಷ್ಟಸಂಯೋಗಜ ಆರ್ತಧ್ಯಾನವಿದೆ.

ಅತ್ಯಂತ ಶೀತ, ಅತ್ಯಂತ ಉಷ್ಣ, ಅತಿಶಯ ಮಳೆ,ಅತಿಶಯ ಗಾಳಿ, ಸೊಳ್ಳೆ, ತಿಗಣೆ, ಇರುವೆ, ಕಟ್ಟಿರುವೆ ಮೊದಲಾದ ಮತ್ತು ದುಷ್ಟರ ದುರ್ವಚನ ಕೇಳಿ, ಚಿಂತನೆ ಮಾಡಿ, ಸ್ಮರಣೆ ಮಾಡಿ ಪರಿಣಾಮದಲ್ಲಿಹೆಚ್ಚು ಕಷ್ಟವುತ್ಪನ್ನವಾಗುತ್ತದೆ. ಅನಿಷ್ಟಗಳ

ಸಂಯೋಗದಿಂದ ರಾತ್ರಿ-ಹಗಲುಗಳಲ್ಲಿ, ಮನೆ-ಹೊರಗೆ ಯಾವುದೇ ಸ್ಥಾನದಲ್ಲಿ, ಯಾವುದೇಸಮಯದಲ್ಲಿ ಕ್ಲೇಶವು ದೂರವಾಗುವುದಿಲ್ಲ, ಇಂಥ ಆರ್ತಪರಿಣಾಮಗಳಿಂದ ಘೋರ ಕರ್ಮದ ಬಂಧವಾಗುತ್ತದೆ. ಇವೆಲ್ಲವು ಅನಿಷ್ಟಸಂಯೋಗಜ ಆರ್ತಧ್ಯಾನದ ಪ್ರಥಮ ಭೇದಗಳಿವೆ. ಯಾರು ಇವನ್ನು ಪರಿಣಾಮದಲ್ಲಿ ಆಗಗೊಡುವುದಿಲ್ಲ ಅಂಥ ಸಮ್ಯಗ್ದೃಷ್ಟಿಗಳಿಗೆ ಕರ್ಮದ ಅಧಿಕ ನಿರ್ಜರೆಯಾಗುತ್ತದೆ.

ಜ್ಞಾನೀ ಮಹಾನ ಸತ್ಪುರುಷರಿದ್ದವರು ಅವರು ಅನಿಷ್ಟದ ಸಂಯೋಗದಲ್ಲಿ ಆರ್ತಧ್ಯಾನ ಮಾಡುವುದಿಲ್ಲ. ಅವರಂತೂ ಹೀಗೆ ವಿಚಾರ ಮಾಡುತ್ತಾರೆ-ಎಲೈ ಆತ್ಮನೇ ! ನಿನಗೆ ಅನಿಷ್ಟ ದುಃಖ ಕೊಡುವಂಥ ಯಾವ ಸಾಮಗ್ರಿಗಳು ಪ್ರಾಪ್ತವಾಗಿವೆ. ಅವೆಲ್ಲವು ನೀನೇ ಸಂಪಾದನೆ ಮಾಡಿದ ಪಾಪಕರ್ಮದ ಫಲವಿದೆ, ಅದರಲ್ಲಿ ಬೇರೆ ಯಾರದೂ ದೋಷವಿಲ್ಲ, ಅನ್ಯರನ್ನು ತಮ್ಮ ಘಾತ ಮಾಡುವಂಥವರೆಂದು ತಿಳಿಯಬೇಡ. ಪೂರ್ವದಲ್ಲಿ ನೀನು ಯಾವ ಇತರರ ಧನ ಅಪಹರಿಸಿರುವೆ; ಅನ್ಯಾಯ ಮಾಡಿರುವೆ, ಅನ್ಯ ನಿರ್ಬಲರಿಗೆ ಸಂತಾಪವನ್ನುತ್ಪನ್ನ ಮಾಡಿರುವೆ, ಅನ್ಯರಿಗೆ ಕಲಂಕ ತಗಲಿಸಿರುವೆ, ಮಿಥ್ಯಾಧರ್ಮದ ಬೋಧ ಮಾಡಿರುವೆ, ಶೀಲವಂತ ತ್ಯಾಗೀ ತಪಸ್ವಿಗಳಿಗೆ ದೋಷ ತಗಲಿಸಿರುವೆ, ಅಸತ್ಯ ಮಾರ್ಗ ನಡೆಸಿರುವೆ, ವಿಕಥೆಯಲ್ಲಿ ಲೀನನಾಗಿರುವೆ, ಅನ್ಯಾಯದ ವಿಷಯಗಳ ಸೇವನೆ ಮಾಡಿರುವೆ, ನಿರ್ಮಾಲ್ಯ ದೇವದ್ರವ್ಯವನ್ನು ತಿಂದಿರುವೆ ಅವುಗಳಿಂದ ಕಟ್ಟಲ್ಪಟ್ಟ ಕರ್ಮವು ಈಗ ಅವಸರ ಪಡೆದು ಉದಯದಲ್ಲಿ ಬಂದು ಬಿಟ್ಟಿದೆ.

ಈಗ ಆ ಕರ್ಮಗಳ ಉದಯದಲ್ಲಿ ದುಃಖಿಯಾಗಿ ಕ್ಲೇಶ ಭೋಗಿಸಿದರೆ ಇನ್ನೂ ಹೆಚ್ಚು ನವೀನ ಕರ್ಮದ ಬಂಧ ಮಾಡಿಕೊಳ್ಳುವೆ; ದುಃಖಿಯಾಗುವುದರಿಂದ ಕರ್ಮವು ಬಿಟ್ಟು ಕೊಡುವುದಿಲ್ಲ, ಆದರೆ ಇನ್ನೂ ಹೆಚ್ಚಾಗುತ್ತದೆ, ಬುದ್ಧಿಯು ನಷ್ಟವಾಗಿ ಹೋಗುವುದು, ಧರ್ಮವು ಸ್ವಲ್ಪವೂ ಉಳಿಯಲಾರದು. ಪಾಪದ ಬಂಧನವು ದೃಢವಾಗುವುದು. ಆದ್ದರಿಂದ ಈಗ ಧೈರ್ಯಧಾರಣ ಮಾಡಿ ಸಮಭಾವದಿಂದ ಸಹಿಸು. ಸಂಕ್ಲೇಶವಿಲ್ಲದೆ ಸಮಭಾವದಿಂದ ಸಹಿಸಿದರೆ ಶೀಘ್ರವೇ ಪಾಪ ಕರ್ಮದ ನಾಶವಾಗಿ ಹೋಗುವುದು.

**ಪರಿಣಾಮದಲ್ಲಿ ಹೀಗೆ ವಿಚಾರ ಮಾಡಬೇಕು.** ಕರ್ಮವು ಈ ಸಮಯದಲ್ಲಿ ಉದಯದೊಳಗೆ ಬಂದು ರಸವಿತ್ತು ನಿರ್ಜರಿಸಿ ಹೋಗುತ್ತಿದೆ ಇದು ನನಗೆ ದೊಡ್ಡ ಲಾಭವಿದೆ. ನನಗೆ ಇನ್ನೊಂದು ದೊಡ್ಡ ಲಾಭವೆಂದರೆ ನನಗೆ ಜಿನಧರ್ಮದ ಧಾರಣವಾಗುತ್ತಿದೆ, ಈ ಸಮಯದಲ್ಲಿ ಅತ್ಯಂತ ಸಮತೆಯಿಂದ ಕರ್ಮದ ಪ್ರಹಾರವನ್ನು ಸಹನೆ ಮಾಡಿ ಕರ್ಮದ ಋಣದಿಂದ ರಹಿತನಾಗಿ ಹೋಗುವೆನು. ಒಂದು ವೇಳೆ ಇದೇ ಕರ್ಮವು ಬೇರೆ ಯಾವುದೇ ಸಮಯದಲ್ಲಿ ಉದಯದೊಳಗೆ ಬರುತ್ತಿದ್ದರೆ ಅದರಿಂದ ಇನ್ನೂ ಹೆಚ್ಚು ಕರ್ಮ ಕಟ್ಟಿಕೊಂಡು ಅಸಂಖ್ಯಾತ ಭವಗಳಲ್ಲಿ ಅದರ ಹಿಡಿತದಿಂದ ಬಿಡುಗಡೆ ಹೊಂದುತ್ತಿರಲಿಲ್ಲ.

**ಹೀಗೂ ವಿಚಾರ ಮಾಡಬೇಕು.** ಈ ಅನಿಷ್ಟ ಸಂಯೋಗಗಳು ಹೇಗೆ ನನಗೆ ಅನಿಷ್ಟವೆನಿಸುತ್ತವೆ ಹಾಗೆಯೇ ಅನ್ಯ ಜೀವರುಗಳಿಗೆ ಕೂಡ ಕಷ್ಟ ಕೊಡುವಂಥವಿವೆ. ಆದುದರಿಂದ ಈಗ ನಾನು ಯಾವ ಇತರ ಜೀವನಿಗೆ ಅಯೋಗ್ಯ ವಚನಗಳಿಂದ, ಕಾಯದಿಂದ ಯತ್ನಾಚಾರವಿಲ್ಲದೆ ಮತ್ತು ಮನಸ್ಸಿನಿಂದ ಅನ್ಯ ಜೀವಗಳಿಗೆ ದುಃಖ ಹಾನಿಯ ಚಿಂತನದ ಮೂಲಕ ಎಂದೂ ದುಃಖೀ ಮಾಡುವ ಇಚ್ಛೆ ಮಾಡಲಾರೆನು. ಈ ಸಮಯದಲ್ಲಿ ನನಗೆ ಯಾವ ಈ ಅನಿಷ್ಟಸಂಯೋಗಗಳು ದೊರಕಿವೆ ಅವುಗಳಿಂದ ಸಂಖ್ಯಾತ ಗುಣಿತ ಹೆಚ್ಚು ಅನಿಷ್ಟ ಸಂಯೋಗಗಳು ನರಕ-ತಿರ್ಯಂಚ ಪರ್ಯಾಯದಲ್ಲಿ ಮತ್ತು ಮನುಷ್ಯ ಪರ್ಯಾಯದಲ್ಲಿ ಅನೇಕ ಬಾರಿ ಭೋಗಿಸಿರುವೆನು, ಅನೇಕ ದುರ್ವಚನ ಸಹಿಸಿರುವೆನು, ಅನೇಕ ಪ್ರಕಾರದ ಹೊಡೆತದಿಂದ ನಿತ್ಯ ದುಃಖ ಭೋಗಿಸಿರುವೆನು, ಅನೇಕ ಜನ್ಮಗಳಲ್ಲಿ ದಾರಿದ್ರ್ಯ ಭೋಗಿಸಿರುವೆನು.

ಭಾರ ಹೊರುವ ದುಃಖ, ಮರ್ಮಸ್ಥಾನದಲ್ಲಿ ಹೊಡೆತದ ದುಃಖ, ಕೈ-ಕಾಲು-ಮೂಗು ಛೇದಿಸುವ ದುಃಖ, ಕಣ್ಣು ತೆಗೆಯುವುದರ ದುಃಖ, ಹಸಿವೆಯ, ಬಾಯಾರಿಕೆಯ, ಶೀತದ, ಉಷ್ಣದ, ಬಿಸಿಲಿನಲ್ಲಿ ಬಿದ್ದುಕೊಂಡಿರುವುದರ, ಪ್ರಚಂಡ ಪವನದ, ದುಷ್ಟ ಜೀವಗಳಿಂದ ತಿಂದು ಬಿಡುವುದರ, ಹೆಚ್ಚು ಕಾಲದವರೆಗೆ ಜೈಲಿನಲ್ಲಿ ಪರಾಧೀನವಾಗಿರುವುದರ ಮತ್ತು ಬಂಧನದ ಅನೇಕ ದುಃಖಗಳನ್ನು ಭೋಗಿಸಿದ್ದೇನೆ. ಅನೇಕ ಬಾರಿ ಅಗ್ನಿಯಲ್ಲಿ ಸುಟ್ಟು ಹೋಗಿದ್ದೇನೆ, ಅನೇಕ ಬಾರಿ

ಸತ್ತಿದ್ದೇನೆ. ಅನೇಕ ಬಾರಿ ನೀರಿನಲ್ಲಿ ಮುಳುಗಿದ್ದೇನೆ, ಕೆಸರಿನಲ್ಲಿ ಮೋಸ ಹೋಗಿ ಸತ್ತಿದ್ದೇನೆ, ಈ ಪ್ರಕಾರ ತಿರ್ಯಂಚಗಳಲ್ಲಿ, ಮನುಷ್ಯರುಗಳಲ್ಲಿ ಉತ್ಪನ್ನನಾಗಿ ಅನಿಷ್ಟದ ಸಂಯೋಗವನ್ನು ಅನಂತ ಬಾರಿ ಭೋಗಿಸಿದ್ದೇನೆ. ನರಕಗತಿಯ ದುಃಖವನ್ನಂತೂ ಪ್ರತ್ಯಕ್ಷ ಜ್ಞಾನಿಗಳೇ ತಿಳಿಯುವಲ್ಲಿ ಸಮರ್ಥರಿದ್ದಾರೆ, ಬೇರಾರೂ ಇಲ್ಲ. ಈ ಸಂಸಾರದಲ್ಲಿ ಇರುವವರೆಗಂತೂ ಈ ಅನಿಷ್ಟ ಸಂಯೋಗಗಳು ಅವಶ್ಯವಾಗಿ ಇರುವವು.

ನಾನು ಪಾಪಕರ್ಮ ಮಾಡಿ ಪಂಚಮ ಕಾಲದ ಮನುಷ್ಯನಾಗಿದ್ದೇನೆ. ಇದರಲ್ಲಿ ಅನಿಷ್ಟ ಸಂಯೋಗಗಳು ಬರುವುದರಿಂದ ಭಯವನ್ನೇನು ಮಾಡುವುದು ? ಇದರಲ್ಲಿಯಂತೂ ಅನಂತ ಕಾಲದಲ್ಲಿ ಕೂಡ ಪ್ರಾಪ್ತವಾಗುವುದು ದುರ್ಲಭವಿರುವಂಥ ಜಿನಧರ್ಮರೂಪದ ಪರಮನಿಧಾನವು ದೊರಕಿಕೊಂಡಿದೆ. **ಇದರ ಲಾಭದಿಂದ ನಾನು ಆನಂದದೊಡನೆ ಅನಿಷ್ಟ ಸಂಯೋಗದಿಂದಾಗುವ ದುಃಖಗಳನ್ನು ಮರೆತು ಸಮತೆಯ ಭಾವದಿಂದ ಕರ್ಮದ ಉದಯವನ್ನು ಜಯಿಸುವುದು ಯೋಗ್ಯವಿದೆ.** ಈ ಪ್ರಕಾರ ಅನಿಷ್ಟ ಸಂಯೋಗ ಜನ್ಯ ಆರ್ತಧ್ಯಾನದ ಅಭಾವ ಮಾಡುವುದು.

**ಇಷ್ಟ ವಿಯೋಗಜ ಆರ್ತಧ್ಯಾನ :** ಆರ್ತಧ್ಯಾನದ ಎರಡನೇ ಭೇದವು ಇಷ್ಟು ವಿಯೋಗಜವಿದೆ. ಇಷ್ಟದ ವಿಯೋಗದಿಂದ ಅಧಿಕ ದುಃಖವು ಉತ್ಪನ್ನವಾಗುತ್ತದೆ. ತನ್ನ ಚಿತ್ತಕ್ಕೆ ಆನಂದ ಕೊಡುವಂಥ-ಅನೇಕ ಸುಖಗಳನ್ನು ಉತ್ಪನ್ನ ಮಾಡುವಂಥ ಪುತ್ರನ ಮರಣವಾಗಿ ಹೋದರೆ, ಆಜ್ಞಾಧಾರಕಳಾದ ಪತ್ನಿಯ ವಿಯೋಗವಾಗಿ ಹೋದರೆ, ಪ್ರಾಣಪ್ರಿಯನಾದ ಮಿತ್ರನ ವಿಯೋಗವಾಗಿ ಹೋದರೆ, ಅಧಿಕ ಸಂಪತ್ತು ರಾಜ್ಯ ಐಶ್ವರ್ಯದ ಭೋಗಗಳನ್ನು ಕೊಡುವಂಥ ಪ್ರಭುವಿನ ವಿಯೋಗವಾಗಿ ಹೋದರೆ, ಸುಖದಿಂದ ಜೀವನ ಸಾಗಿಸಬಹುದಾದಂಥ ಆಜೀವಿಕೆಯ ನಷ್ಟವಾಗಿ ಹೋದರೆ, ರಾಜ್ಯದಿಂದ ಚ್ಯುತವಾದರೆ, ಅಧಿಕಾರ ಹೊರಟು ಹೋದರೆ, ಸಂಪತ್ತು ನಷ್ಟವಾದರೆ, ಸುಖದಿಂದ ವಾಸಿಸುವ ಸ್ಥಾನ, ಭೂಮಿ, ಮನೆ ನಷ್ಟವಾಗಿ ಹೋದರೆ, ಸೌಭಾಗ್ಯ ಯಶಸ್ಸು ನಷ್ಟವಾಗಿ ಹೋದರೆ, ಪ್ರೀತಿ ಮಾಡುವಂಥ ಭೋಗವು ನಷ್ಟವಾಗಿ ಹೋಗುವುದೆಲ್ಲವೂ ಇಷ್ಟ ವಿಯೋಗವಿದೆ. ಇಂಥ ಇಷ್ಟಗಳ ವಿಯೋಗವಾಗಿ ಹೋದ ಮೇಲೆ ಶೋಕ, ಭಯ, ಭ್ರಮೆ, ಮೂರ್ಛೆ ಮೊದಲಾದುವಾಗುವುದು, ಪುನಃ ಅವುಗಳ ಸಂಯೋಗವಾಗುವ ಸಲುವಾಗಿ ಚಿಂತನೆ ಮಾಡುವುದು, ರೋದಿಸುವುದು, ದುಃಖದಲ್ಲಿ ಅಚೇತರಾಗಿ ವಿಲಾಪ ಮಾಡುವುದು, ಪುನಃ ಪುನಃ ದುಃಖಿಯಾಗುವುದು, ಹಾಹಾಕಾರ ಮಾಡುವುದು, ಇದು ತಿರ್ಯಂಚಗತಿಯ ಗಮನದ ಕಾರಣವಾದ ಇಷ್ಟ ವಿಯೋಗಜ ಆರ್ತಧ್ಯಾನವಿದೆ.

ಇಷ್ಟ ವಿಯೋಗದಿಂದ ದೊಡ್ಡ-ದೊಡ್ಡ ಶೂರವೀರರ ಧೈರ್ಯವು ಮುರಿದು ಬೀಳುತ್ತದೆ, ಮಹಾನ ಪುರುಷರೂ ದೀನರ ಸಮಾನವಾಗಿ ಹೋಗುತ್ತಾರೆ, ಹೃದಯವು ಒಡೆದು ಹೋಗುತ್ತದೆ, ಮರಣವಾಗಿ ಬಿಡುತ್ತದೆ, ಉನ್ಮತ್ತ-ಮರುಳನಾಗಿ ಹೋಗುತ್ತಾನೆ, ಬಾವಿಯೊಳಗೆ ಹಾರಿ ಸತ್ತು ಹೋಗುತ್ತಾನೆ, ಎತ್ತರವಾದ ಮನೆ-ಪರ್ವತಗಳ ಮೇಲಿಂದ ಉರುಳಿ ಸತ್ತು ಹೋಗುತ್ತಾನೆ, ವಿಷ ಭಕ್ಷಣ ಮಾಡುತ್ತಾನೆ, ಆಯುಧಗಳಿಂದ ಆತ್ಮಘಾತ ಮಾಡಿಕೊಳ್ಳುತ್ತಾನೆ. ಇಷ್ಟ ವಿಯೋಗದ ದುಃಖದ ಸಮಾನವಾದ ದುಃಖವು ಬೇರೆ ಯಾವುದೂ ಇಲ್ಲ. ಇಂಥ ಇಷ್ಟ ವಿಯೋಗದ ದುಃಖದಿಂದ ಉಭಯ ಲೋಕಗಳು ನಷ್ಟವಾಗಿ ಹೋಗುತ್ತವೆ.

**ಯಾರೋ ಉತ್ತಮ ಪುರುಷರು, ಸಂಸಾರ-ಶರೀರ-ಭೋಗಗಳಿಂದ ವಿರಕ್ತರು, ಸಮ್ಯಕ್ ಶ್ರದ್ಧೆಯುಳ್ಳವರು, ಸಮ್ಯಕ್‌ಜ್ಞಾನಿಗಳು, ವೀತರಾಗ ಸರ್ವಜ್ಞರ ವಚನಗಳ ಅವಲಂಬನ ಪಡೆದವರು, ವಸ್ತುವಿನ ಯಥಾರ್ಥ ಸ್ವರೂಪವನ್ನು ತಿಳಿದಿರುವಂಥ ಪುರುಷರೇ ಇಷ್ಟ ವಿಯೋಗಜನಿತ ದುಃಖವನ್ನು ಜಯಿಸುತ್ತಾರೆ.** ಅವರು ಎಲೈ ಆತ್ಮನೇ ! ನಿನಗೆ ಈ ಸಂಸಾರದಲ್ಲಿ ಎಷ್ಟು ಸಂಯೋಗಗಳು ದೊರಕಿವೆ ಅವುಗಳ ವಿಯೋಗವು ನಿಯಮದಿಂದ ಆಗುವುದು. ವಿಯೋಗವನ್ನು ತಡೆಯುವುದಕ್ಕೆ ಯಾವ ದೇವತೆ, ಇಂದ್ರ, ಮಂತ್ರ, ತಂತ್ರ, ಔಷಧ, ಬಲ, ಸೇನೆ, ಕುಟುಂಬ, ಬುದ್ಧಿ, ಮಿತ್ರ, ಧನ, ಸಂಪತ್ತುಗಳಾವವೂ ಸಮರ್ಥವಿಲ್ಲವೆಂಬ ಭಾವನೆಯನ್ನು ಭಾವಿಸುತ್ತಾರೆ.

ತಮ್ಮ ಶರೀರದ ವಿಯೋಗವೇ ಅವಶ್ಯವಾಗಿ ಆಗುವುದೆಂದ ಮೇಲೆ ಶರೀರಕ್ಕೆ ಸಂಬಂಧಿಸಿದವರ ಕಥೆಯನ್ನೇನು ಹೇಳುವುದು ? ಯಾವ ಪತ್ನಿ, ಪುತ್ರ, ತಾಯಿ, ತಂದೆ ಮೊದಲಾದವರನ್ನು ನನ್ನವರೆಂದು ನಂಬಿ ಪ್ರೀತಿ ಮಾಡುತ್ತಿರುವೆ, ಆದರೆ ನಿನ್ನ ಸಂಬಂಧವು ಅವರ ಆತ್ಮನೊಡನೆ ಇಲ್ಲ, ಅವರ ಶರೀರದೊಡನೆ ಇದೆ. ಈ ಮುಖದ ಚರ್ಮ, ದುರ್ಗಂಧಿತ ನಾಸಿಕ, ಚರ್ಮದ ನೇತ್ರಗಳಲ್ಲಿ ಮೋಹ ಬುದ್ಧಿಯಿಂದ ಪರಸ್ಪರ ತಮ್ಮ ಸಮಾನ ರಾಗ ಮಾಡುತ್ತಿರುತ್ತಾನೆ, ಆದರೆ ಅವೆಲ್ಲವಂತೂ ಒಂದು ದಿವಸ ಅಗ್ನಿಯಲ್ಲಿ ಸುಟ್ಟು ಭಸ್ಮವಾಗಿ ಹೋಗುವವಿವೆ. ನಿಮ್ಮ ಚರ್ಮದ ಜತೆಯಲ್ಲಿ ಅವರ ಚರ್ಮದ ಸಂಬಂಧವು ಅನಂತ ಕಾಲದಲ್ಲಿ ಕೂಡ ಹೇಗೆ ದೊರಕುವುದು ? **ಯಾರ ಸಂಯೋಗವಾಗಿದೆ ಅವರ ವಿಯೋಗವು ನಿಯಮದಿಂದ ಆಗುವುದು.** ತಾಯಿಯ, ತಂದೆಯ, ಪ್ರೀತಿಯ ಪತ್ನಿಯ, ನೆಚ್ಚಿನ ಪುತ್ರನ, ಬಂಧುವಿನ, ರಾಜ್ಯದ, ಐಶ್ವರ್ಯದ, ಧನ, ಸಂಪತ್ತಿಯ, ಮನೆಯ, ದೇಶ-ನಗರ-ಗ್ರಾಮದ, ಮಿತ್ರರ, ಒಡೆಯರ, ಸೇವಕನ, ವಿಯೋಗವು ಅವಶ್ಯವಾಗಿ ಆಗುವುದು. ಆದ್ದರಿಂದ ಇಷ್ಟ ವಿಯೋಗದ ದುಃಖ ಮಾಡಿ ಅಶುಭದ ಬಂಧ ಮಾಡಿಕೊಳ್ಳಬಾರದು.

ಅವರು ನಿಮ್ಮ ಇಷ್ಟರಿದ್ದರೆ ನಿಮ್ಮ ಸಲುವಾಗಿ ದುಃಖವನ್ನುತ್ಪನ್ನ ಮಾಡಿಸುವ ಪ್ರಯತ್ನ ಹೇಗೆ ಮಾಡುವರು ? ಆದುದರಿಂದ ಸಮ್ಯಗ್ಜ್ಞಾನಿಯಿದ್ದರೆ ಪರಮ ಧರ್ಮರೂಪ ಭಾವವನ್ನು ಇಷ್ಟವೆಂದು ಮನ್ನಿಸು, ಅದರಿಂದ ಸಂಸಾರದ ದುಃಖಗಳಿಂದ ಬಿಡಗಡೆಯಾಗಬಹುದಾಗಿದೆ. ಈ ಸ್ತ್ರೀ, ಕುಟುಂಬ, ಧನ, ಪರಿಗ್ರಹಗಳಾವವೂ ಇಷ್ಟವಿಲ್ಲ, ಯಾವವು ಮಮತೆಯನ್ನುತ್ಪನ್ನ ಮಾಡಿಸಿ ಪಾಪಕರ್ಮದಲ್ಲಿ ಇಂದ್ರಿಯ ವಿಷಯಗಳಲ್ಲಿ ಪ್ರವೃತ್ತಿ ಮಾಡಿಸಿ, ಅನೀತಿಯಲ್ಲಿ ತೊಡಗಿಸಿ ದುರ್ಗತಿಯಲ್ಲಿ ತಲುಪಿಸುವಂಥವು ಯಾರಿಗೆ ಇಷ್ಟವಿವೆ ? **ಇಷ್ಟರಂತೂ ಪರಮಹಿತರೂಪ ಧರ್ಮದಲ್ಲಿ ಪ್ರವರ್ತನೆ ಮಾಡಿಸುವಂಥವರು ಧರ್ಮಾತ್ಮ ಗುರುಜನರಿದ್ದಾರೆ. ಸಾಧರ್ಮಿಗಳಿದ್ದಾರೆ, ಅನ್ಯರಿಲ್ಲ.**

ಈ ಕುಟುಂಬದ ಜನರಂತೂ ನಿಮ್ಮ ಹತ್ತಿರ ಪುಣ್ಯದ ಉದಯದಿಂದ ಎಲ್ಲಿಯವರೆಗೆ ಧನ-ಸಂಪತ್ತು ಇದೆ ಅಲ್ಲಿಯವರೆಗೆ ಎಲ್ಲರೂ ತಮ್ಮ ಇಷ್ಟರಾಗಿ ಕಾಣುತ್ತಾರೆ, ಧನವಿಲ್ಲದೆ ಯಾರೂ ತಮ್ಮನ್ನು ಇಷ್ಟರನ್ನಾಗಿ ಮನ್ನಿಸುವುದಿಲ್ಲ. ಧನವಂತೂ ಪುಣ್ಯದ ಆಧೀನವಿರುವುದರಿಂದ ಪುಣ್ಯದ ಭಾವವನ್ನೇ ಇಷ್ಟವೆಂದು ಮನ್ನಿಸಿರಿ. ಯಾವಾಗ ಪುಣ್ಯದ ಉದಯ ಬರುತ್ತದೆ ಆಗ ಸ್ವರ್ಗ ಲೋಕದ ಮಹಾನ ಇಷ್ಟ ಸಾಮಗ್ರೀ, ಅಸಂಖ್ಯಾತ ದೇವರುಗಳಿಂದ ವಂದನೀಯ ಇಂದ್ರಪದ, ಅಧಿಕ ಪ್ರೀತಿಯಿಂದ ತುಂಬಿರುವ ಸಾವಿರಾರು ದೇವಾಂಗನೆಯರು, ಅತಿಶಯ ಭೋಗ ಸಾಮಗ್ರಿಗಳು ದೊರಕುತ್ತವೆ. ಯಾವಾಗ ಪಾಪದ ಉದಯವಾಗುವುದು ಆಗ ತಮ್ಮ ಅತ್ಯಂತ ಪ್ರೀತಿಯ ಪುತ್ರ, ಪ್ರಯತ್ನಪೂರ್ವಕವಾಗಿ ಪಾಲಿಸಿದ ಶರೀರವೇ ಘೋರ ದುಃಖವನ್ನು ಕೊಡುವಂಥ ಬದ್ಧ ವೈರಿಯಾಗಿ ಹೋಗುತ್ತದೆ.

ಸಂಸಾರದಲ್ಲಿ ಅಜ್ಞಾನ ಭಾವದಿಂದ ಸ್ತ್ರೀ-ಪುತ್ರಾದಿಕರನ್ನು ಇಷ್ಟರೆಂದು ಮನ್ನಿಸುತ್ತಿದ್ದರೆ ಸಂಸಾರದಲ್ಲಿ ಅನಂತ ಜೀವಗಳೊಡನೆ ಅನೇಕ ಸಂಬಂಧವಾಗಿದೆ. **ಎಷ್ಟು ಮಾತೆಯ ಹಾಲು ಕುಡಿದಿದೆಯೆಂದರೆ ಪ್ರತಿಯೊಬ್ಬರ ಒಂದೊಂದು ಬಿಂದು ಏಕತ್ರ ಮಾಡಿದರೆ ಅನಂತ ಸಮುದ್ರ ತುಂಬಿ ಹೋಗುವವು. ಎಷ್ಟು ಶರೀರ ಧಾರಣ ಮಾಡಿ ಬಿಟ್ಟಿದೆಯೆಂದರೆ ಒಂದೊಂದು ಶರೀರದ ಒಂದೊಂದು ರೋಮ ಏಕತ್ರ ಮಾಡಿದರೆ ಸುಮೇರು ಸಮಾನ ಅನಂತ ರಾಶಿ ಏಕತ್ರವಾಗುವುದು.** ಎಷ್ಟು ಕುಟುಂಬದ ಜನರು ನಿನ್ನ ಸಲುವಾಗಿ ರೋದಿಸಿದ್ದಾರೆ ಮತ್ತು ನೀನು ಆ ಕುಟುಂಬದವರ ಸಲುವಾಗಿ ಕಣ್ಣೀರು ಹಾಕಿರುವೆಯೆಂದರೆ ಆ ಅಶ್ರುಪಾತವನ್ನೆಲ್ಲ ಒಂದು ಸ್ಥಾನದಲ್ಲಿ ಕೂಡ ಹಾಕಿದರೆ ಅನಂತ ಸಮುದ್ರಗಳು ತುಂಬಿ ಹೋಗುವವು.

**ಸತ್ಯಾರ್ಥ ವಿಚಾರ ಮಾಡಬೇಕು** ಯಾರ-ಯಾರ ಇಷ್ಟವಿಯೋಗವನ್ನು ಎಣಿಸುವೆ ? ಅನೇಕ ಇಷ್ಟ ಗ್ರಹಣ ಮಾಡಿ ಬಿಟ್ಟಿರುವೆ, ಈಗ ಯಾವ ಇಷ್ಟ ವಿದ್ಯಮಾನವಿದೆ. ಅವನ್ನು ಬಿಡುವುದರ ಸಮಯವೂ ಅವಶ್ಯವಾಗಿ ಬರುವುದು. ಮರಣವು ಯಾವ ಸ್ಥಾನದಲ್ಲಿ ಯಾವ ಸಮಯದಲ್ಲಿ ಬಂದು ಬಿಡುವುದೆಂಬುದರ ಕುರಿತು ಯಾವುದೇ ನಿಶ್ಚಿತ ನಿಯಮವಿಲ್ಲ, ಆದರೆ ಮರಣವು ಪ್ರಾಪ್ತವಾದಲ್ಲದೆ ಯಾರೂ ಉಳಿಯುವುದಿಲ್ಲ. ಸಮಸ್ತ ಇಷ್ಟ ಸಾಮಗ್ರಿಗಳು ತಮಗೆ ಕಂಡು ಬರುತ್ತಲಿವೆ

ಅವುಗಳಲ್ಲಿ ತಾವು ಪ್ರೀತಿ ಮಾಡುತ್ತಿರುವಿರಿ, ಆದರೆ ಅವುಗಳ ವಿಯೋಗವಾಗುವ ಸಮಯವು ಆಕಸ್ಮಿಕವಾಗಿ ಬಂದೇ ಬರುವುದೆಂದು ತಿಳಿಯಬೇಕು. ಯಾವವುಗಳಲ್ಲಿ ಮಮತೆ ಮಾಡಿ ಮೋಸ ಹೋಗುತ್ತಿರುವಿರಿ. ಯಾವವುಗಳ ಸಲುವಾಗಿ ಐದೂ ಪ್ರಕಾರದ ಪಾಪ ಮಾಡುತ್ತಿರುವಿರಿ ಅವೆಲ್ಲವೂ ಅವಶ್ಯವಾಗಿ ಬಿಟ್ಟು ಹೋಗುವವು. ಸಮಸ್ತ ಸಾಮಗ್ರಿಯ ವಿಯೋಗದ ದಿವಸದಂದು ಯಾರೂ ಏನನ್ನೂ ಮಾಡುವಲ್ಲಿ ಸಮರ್ಥರಾಗುವುದಿಲ್ಲ. ಆದುದರಿಂದ ತಿರ್ಯಂಚಗತಿಗೆ ಕಾರಣವಿರುವ ಇಷ್ಟವಿಯೋಗದಲ್ಲಿ ಕ್ಲೇಶಪಟ್ಟುಕೊಳ್ಳಬಾರದು.

ಹೀಗೆ ಭಾವನೆ ಭಾವಿಸಬೇಕು. ಈ ಶರೀರವು ನೀರ ಮೇಲಿನ ಗುಳ್ಳೆಯಂತೆ ಇದೆ. ಕ್ಷಣಾರ್ಧದಲ್ಲಿ ನಷ್ಟವಾಗಿ ಹೋಗುತ್ತದೆ. ಈ ಧನ ಸಂಪತ್ತುಗಳೆಲ್ಲವು ಇಂದ್ರಜಾಲದ ರಚನೆಯಂತಿದೆ. ನೋಡು-ನೋಡುತ್ತಿರುವಂತೆಯೇ ಅದೃಶ್ಯವಾಗಿ ಹೋಗುತ್ತವೆ. ಈ ಪತ್ನೀ-ಪುತ್ರ-ಕುಟುಂಬ ಮೊದಲಾದವರು ಪ್ರಚಂಡ ಪವನಾಹತಿಯಿಂದ ಎದ್ದು ಬೀಳುವ ಸಮುದ್ರದ ಅಲೆಗಳ ಸಮಾನ ಚಂಚಲರಿದ್ದಾರೆ. ವಿಷಯಗಳ ಸುಖವು ಸಾಯಂಕಾಲದ ಕಿಸುಸಂಜೆಯ ರಂಜನೆಯಂತೆ ವಿನಾಶಶೀಲವಿವೆ. ಆದುದರಿಂದ ಅವುಗಳ ವಿಯೋಗದಲ್ಲಿ ಶೋಕ ಮಾಡುವುದು ವ್ಯರ್ಥವಿದೆ. ಶರೀರ ಧಾರಣ ಮಾಡಿದವರಿಗೆ ದುಃಖ ಮತ್ತು ಮರಣವಂತೂ ಅವಶ್ಯವಾಗಿ ಪ್ರಾಪ್ತವಾಗಿಯೇ ಆಗುವುದು. ಆದುದರಿಂದ ದುಃಖದ ಹಾಗೂ ಮರಣದ ಭಯವನ್ನು ಬಿಟ್ಟುಕೊಟ್ಟು ಯಾವುದರಿಂದ ಶರೀರ ಧಾರಣ ಮಾಡುವುದರದೇ ಅಭಾವವಾಗಿ ಹೋಗುವುದು ಅಂಥ ಉಪಾಯದ ವಿಚಾರ ಮಾಡಬೇಕು.

ಎಲೈ ಆತ್ಮನೇ ! ಯಾವ ಕರ್ಮವನ್ನು ಯಾವನೋ ದೇವ, ದಾನವ, ಮಂತ್ರ, ತಂತ್ರ, ಔಷಧ ಮೊದಲಾದವುಗಳ ಮೂಲಕ ತಡೆಯುವ ಸಾಧ್ಯತೆಯಿಲ್ಲ ; ಆದುದರಿಂದ ತಮ್ಮ ಇಷ್ಟದ (ತಮಗೆ ಬೇಕಾದವರ) ಮರಣವಾದ ಮೇಲೆ ಶೋಕದಿಂದ ದುರ್ಧ್ಯಾನ ಮಾಡುವುದೆಂದರೆ ಹುಚ್ಚರ ಹಾಗೆ ಆಚರಣೆ ಮಾಡಿದಂತಿದೆ, ಶೋಕ ಮಾಡುವುದರಿಂದ, ವಿಲಾಪ ಮಾಡುವುದರಿಂದ ಯಾರಾದರೂ ದಯೆ ಮಾಡಿ ಸತ್ತವರನ್ನು ಜೀವಂತ ಮಾಡುವರೇನು ? ಶೋಕ ಮಾಡುವುದರಿಂದ ಯಾವ ಸಿದ್ಧಿಯಾಗುವುದಿಲ್ಲ, ಧರ್ಮ, ಅರ್ಥ, ಕಾಮ, ಮೋಕ್ಷಗಳೆಲ್ಲವು ನಷ್ಟವಾಗುತ್ತವೆ.

**ಉತ್ಪನ್ನರಾದವರೆಲ್ಲರೂ ಮರಣದ ಸಲುವಾಗಿಯೇ ಉತ್ಪನ್ನರಾಗಿದ್ದಾರೆ.** ಎಷ್ಟೆಷ್ಟು ಸಮಯವು ವ್ಯತೀತವಾಗುತ್ತ ಹೋಗುತ್ತದೆ, ಅಷ್ಟಷ್ಟು ಮರಣದ ದಿವಸವು ಹತ್ತಿರ ಬರುತ್ತ ಹೋಗುತ್ತದೆ. ಯಾವ ಪ್ರಕಾರ ವೃಕ್ಷಕ್ಕೆ ಫಲ, ಪುಷ್ಪ, ಪತ್ರಗಳುತ್ಪನ್ನವಾಗುತ್ತವೆ ಅವೆಲ್ಲವೂ ಕಳಚಿ ಬಿದ್ದೇ ಬೀಳುತ್ತವೆ; ಅದೇ ಪ್ರಕಾರ ಕುಲರೂಪದ ವೃಕ್ಷದಲ್ಲಿ ತಾಯಿ, ತಂದೆ, ಪುತ್ರ, ಪೌತ್ರ ಮೊದಲಾಗಿ ಉತ್ಪನ್ನರಾದವರೆಲ್ಲರು ಒಂದು ದಿವಸ ಅವಶ್ಯ ನಷ್ಟವಾಗಿ ಹೋಗಿಯೇ ಹೋಗುತ್ತಾರೆ. ಅದರಲ್ಲಿ ಶೋಕ ಮಾಡುವುದು ವ್ಯರ್ಥವಿದೆ.

**ಭವಿತವ್ಯತೆಯು ದುರ್ಲಂಘ್ಯವಿದೆ.** ಪೂರ್ವದಲ್ಲಿ ಕಟ್ಟಿದ ಕರ್ಮಗಳ ಆಧೀನವಿದೆ. ಕರ್ಮದ ಉದಯವಾದ ಮೇಲೆ ಅದರ ಫಲವು ಬಂದೇ ಬರುತ್ತದೆ, ಅದನ್ನು ತಡೆಯಲಾಗುವುದಿಲ್ಲ. ಉದಯದ ಆಧೀನವಾಗಿ ಇಷ್ಟ ವಸ್ತುವಿನ ನಾಶವಾದಾಗ ಅದರ ಸಲುವಾಗಿ ವಿಲಾಪ ಮಾಡಿ ಶೋಕ ಮಾಡುವುದೆಂದರೆ ಅಂಧಕಾರದಲ್ಲಿ ನರ್ತಿಸಿದ ಹಾಗೆ ಇದೆ, ಇದನ್ನು ಯಾರು ನೋಡವರು ? ಪೂರ್ವದಲ್ಲಿ ಕಟ್ಟಿದ ಕರ್ಮದ ಉದಯದ ಸಮಯದಲ್ಲಿ ಯಾವನ ಆಯುವಿನ ಕೊನೆ ಬರುವುದು, ವಿಯೋಗದ ಸಮಯ ಬರುವುದು ಆಗ ಅದನ್ನು ಯಾರು ತಡೆಯುವ ಸಾಧ್ಯತೆಯಿದೆ ? ಆದುದರಿಂದ ದುಃಖ ಬಿಟ್ಟು ಪರಮ ಧರ್ಮದಲ್ಲಿ ಪ್ರಯತ್ನ ಮಾಡಬೇಕಾಗುವುದು.

ಧನೋಪಾರ್ಜನೆಯ ಸಲುವಾಗಿ, ಪರಿಗ್ರಹದ ವೃದ್ಧಿಯ ಸಲುವಾಗಿ, ಹೆಚ್ಚುಕಾಲದವರೆಗೆ ಜೀವಂತವಿರುವ ಸಲುವಾಗಿ ಮಹಾ ಸಂಕ್ಲೇಶಪೂರ್ವಕ ದುರ್ಧ್ಯಾನ ಮಾಡುವವರೆಲ್ಲರು ಮಹಾ ಮೂಢರಿದ್ದಾರೆ. ಪುಣ್ಯದ ಉದಯವಿಲ್ಲದೆ ದುಃಖಿಯಾಗಿ ಇಚ್ಛೆ ಮಾಡುವುದರಿಂದ ಹೋದ ವಸ್ತುವು ಹೇಗೆ ಪ್ರಾಪ್ತವಾಗುವುದು ? ತಮ್ಮ ಇಷ್ಟನು ಸತ್ತು ಹೋಗಿದ್ದಾನೆ, ಅವನನ್ನು ಸುಟ್ಟು

ಹಾಕಿದ್ದಾರೆ. ಒಮ್ಮೆ ಪರಮಾಣುವು ಧೂಮ್ರ, ಭಸ್ಮ ಮೊದಲಾದುವಾಗಿ ಹಾರಿ ಹೋಗಿವೆ, ಅವನ್ನು ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ಯಾರು ಶೋಕ ಮಾಡುತ್ತಾರೆ ಅವರ ಸಮಾನರಾದ ಮೂರ್ಖರು ಮತ್ತೆ ಯಾರು ಕಂಡು ಬರುತ್ತಾರೆ ?

ಈ ಜಗತ್ತನ್ನು ಪ್ರತ್ಯಕ್ಷ ಇಂದ್ರಜಾಲದ ಸಮಾನವಿರುವುದೆಂದು ನೋಡಿದರೂ ಶೋಕ ಹೇಗೆ ಮಾಡುವುದು ? **ಒಂದು ವೇಳೆ ಮರಣದ, ವಿಯೋಗದ, ಹಾನಿಯ ದಿನವು ಬಂದು ಬಿಟ್ಟರೆ ಅದನ್ನು ಒಂದು ಕ್ಷಣವಾದರೂ ನಿವಾರಿಸುವಲ್ಲಿ ಯಾವ ಇಂದ್ರ, ಜಿನೇಂದ್ರ, ನರೇಂದ್ರರೂ ಸಮರ್ಥರಿಲ್ಲ**ವೆಂಬುದನ್ನು ತಿಳಿಯುತ್ತಿದ್ದರೂ ವಿಲಾಪ ಮಾಡುವಂಥವರು ನಿರ್ಜನ ವನದಲ್ಲಿ ಕೂಗಿ-ಕೂಗಿ ಅಳುವವರ ಸಮಾನರಿದ್ದಾರೆ, ಅವರ ಮೇಲೆ ಯಾರು ದಯೆ ಮಾಡುವರು ? ಪೂರ್ವೋಪಾರ್ಜಿತ ಕರ್ಮವಂತೂ ಅಚೇತನವಿದೆ, ಅದರಲ್ಲಿಯಂತೂ ದಯೆಯಿಲ್ಲವೇ ಇಲ್ಲ, ಒಂದು ವೇಳೆ ತಮ್ಮ ಇಷ್ಟ ವಸ್ತುವಿನ ನಾಶವಾಗಿ ಹೋದರೆ ಎಲ್ಲಿ ಅದರ ಸಲುವಾಗಿ ಶೋಕ ಮಾಡುವುದರಿಂದ ವಸ್ತುವಿನ ಪ್ರಾಪ್ತಿಯಾಗುವುದು, ತಮಗೆ ಸುಖವಾಗುವುದು, ಜಗತ್ತಿನಲ್ಲಿ ಯಶಸ್ಸು-ಕೀರ್ತಿಯಾಗುವುದು, ಧರ್ಮದ ಪ್ರಾಪ್ತಿಯಾಗುವುದು ಅಲ್ಲಿಯಂತೂ ಇಷ್ಟ ವಿಯೋಗದ ಸಲುವಾಗಿ ಶೋಕ ಮಾಡುವುದು ಕೂಡ ಒಳ್ಳೆಯದಿದೆ.

**ಶೋಕ ಮಾಡುವುದರಿಂದ ಯಾವುದರದೂ ಪ್ರಾಪ್ತಿಯಾಗುವುದಿಲ್ಲ,** ಧರ್ಮದ ನಾಶ, ಬುದ್ಧಿಯ ನಾಶ, ಶರೀರದ ನಾಶ, ಇಂದ್ರಿಯಗಳ ನಾಶ, ಕಣ್ಣುಗಳ ಜ್ಯೋತಿಯ ನಾಶವಾಗಿ ಹೋಗುತ್ತದೆ. ಸ್ಪಷ್ಟವಾಗಿ ಘೋರ ದುಃಖ, ಪರಲೋಕದಲ್ಲಿ ದುರ್ಗತಿ, ಇತರರು ಕೇಳುವಂಥವರಲ್ಲಿ ಕ್ಲೇಶ, ತಮಗೆ ರೋಗದ ಉತ್ಪತ್ತಿ, ಬಲ-ವೀರ್ಯಗಳ ನಾಶ, ವ್ಯವಹಾರ ಮತ್ತು ಪರಮಾರ್ಥ ಇವೆರಡರ ನಾಶ, ಧೈರ್ಯ ಮತ್ತು ಜ್ಞಾನದ ನಾಶವಾಗುವಿಕೆ ಇವೇ ಮೊದಲಾದ ಅನೇಕ ದುಃಖಗಳ ಕಾರಣವು ಒಂದು ಶೋಕವಿದೆ, ಇಂಥ ಶೋಕವನ್ನು ಎಂದೂ ಮಾಡಬಾರದು. ಆದುದರಿಂದ ಇದು ತಿರ್ಯಂಚ ಗತಿಯಲ್ಲಿ ಅನೇಕ ಜನ್ಮಗಳನ್ನು ಉಪಾರ್ಜನೆ ಮಾಡಿಸುವಂಥ ಇಷ್ಟವಿಯೋಗಜನಾಮದ ಆರ್ತಧ್ಯಾನವನ್ನು ಮಾಡುವುದು ಸ್ವಲ್ಪವೂ ಉಚಿತವಿಲ್ಲ.

**ಇಷ್ಟದ ವಿಯೋಗವಂತೂ ಪಾಪದ ಫಲವಿದೆ.** ಅದರ ಶೋಕ ಮಾಡುವುದರಿಂದ ಏನಾಗುವುದು ? ಒಂದು ವೇಳೆ ಪಾಪ ಕರ್ಮದ ನಾಶ ಮಾಡುವ ಪ್ರಯತ್ನ ಮಾಡಿದರೆ ಪುನಃ ಇಷ್ಟ ವಿಯೋಗ ಮೊದಲಾದ ದುಃಖಕ್ಕೆ ಪಾತ್ರನಾಗಲಾರೆ. ಯಾರು ಇಷ್ಟ ವಿಯೋಗದಿಂದ ದುಃಖರೂಪದಿಂದ ಪೀಡಿತರಾಗುತ್ತಿದ್ದಾರೆ, ಅವರು ಎಂಥ ಅಸಾತಾ ಕರ್ಮದ ಬಂಧ ಮಾಡಿಕೊಳ್ಳುತ್ತಾರೆಂದರೆ ಭವಿಷ್ಯದಲ್ಲಿ ಅಸಂಖ್ಯಾತ ಭವಗಳವರೆಗೆ ದುಃಖದ ಪರಂಪರೆಯಿಂದ ಬಿಡುಗಡೆಯನ್ನೇ ಹೊಂದುವುದಿಲ್ಲ.

**ಕ್ಷಣಕ್ಷಣದಲ್ಲಿ ಆಯುವು ನಷ್ಟವಾಗುತ್ತಿರುವುದು ಅದು ಕಾಲದ ಮುಖದಲ್ಲಿ ಪ್ರವೇಶವಿದೆ.** ದೇಹಧಾರಣ ಮಾಡಿ ಮರಣಕ್ಕೆ ಪ್ರಾಪ್ತವಾಗದಂಥವರು ಕಳೆದ ಅನಂತ ಕಾಲದಲ್ಲಿ ಯಾರೂ ಆಗಿಲ್ಲ, ಭವಿಷ್ಯದಲ್ಲಿ ಯಾರೂ ಆಗುವುದಿಲ್ಲ, ಸೂರ್ಯ, ಚಂದ್ರ ಮೊದಲಾದ ದೇವ ಹಾಗೂ ಪಕ್ಷಿಗಳಂತೂ ಆಕಾಶದಲ್ಲಿ ವಿಹರಿಸುತ್ತಾರೆ; ಮನುಷ್ಯ ತಿರ್ಯಂಚ ಮೊದಲಾದವರು ಭೂಮಿಯ ಮೇಲೆಯೇ ವಿಹರಿಸುತ್ತಾರೆ; ಮೀನು, ಮೊಸಳೆ ಮೊದಲಾದವು ನೀರಿನಲ್ಲಿಯೇ ವಿಹರಿಸುತ್ತವೆ; ಆದರೆ ಮರಣವಂತೂ ಸ್ವರ್ಗ, ನರಕ, ಆಕಾಶ, ಪಾತಾಳ, ಜಲ, ಸ್ಥಲಗಳೆಲ್ಲೆಲ್ಲೂ ವಿಹಾರ ಮಾಡುತ್ತದೆ. ಅದರಿಂದ ಯಾರೂ ಉಳಿದುಕೊಳ್ಳುವ ಸಾಧ್ಯತೆಯಿಲ್ಲ.

**ದಿವಸಗಳು ನಿರಂತರವಾಗಿ ಕಳೆದುಹೋಗುತ್ತಿವೆ ಅವು ಆಯುವಿನ ದೊಡ್ಡ-ದೊಡ್ಡ ಭಾಗವನ್ನು ಪ್ರತ್ಯಕ್ಷ ಉರುಳಿಸುತ್ತ ಹೋಗುತ್ತಲಿವೆ.** ಸಾಗರಗಳ ಸಂಖ್ಯೆಯ ಆಯು, ಅಣಿಮಾ ಮೊದಲಾದ ಸಹಸ್ರಾರು ಋದ್ಧಿಗಳ ಧಾರಕ, ಅಸಂಖ್ಯಾತ ದೇವಗಳಿಂದ ಸೇವೆ ಮಾಡಿಸಿಕೊಳ್ಳುತ್ತಿರುವಂಥವರದೂ ವಿನಾಶವಾಗಿ ಹೋಗುತ್ತಿದ್ದರೆ ಕ್ರಿಮಿಯಂತಿರುವ ಮನುಷ್ಯ ಹೇಗೆ ಸ್ಥಿರವಿರುವನು ? ಯಾವ ಪವನದಿಂದ ಪರ್ವತವೇ ಹಾರಿ ಹೋಗುತ್ತದೆ ಅದರಲ್ಲಿ ಒಣ ಹುಲ್ಲು ಕಡ್ಡಿಯ ಸಮೂಹವು ಹೇಗೆ ನಿಲ್ಲುವುದು ? - ಎಂದು ಚಿಂತನೆ ಮಾಡಿ ಇಷ್ಟ ವಿಯೋಗವಾದ ಮೇಲೆ ಆರ್ತ ಧ್ಯಾನವನ್ನೆಂದೂ ಮಾಡಬಾರದು. ಈ ಪ್ರಕಾರ ಇಷ್ಟವಿಯೋಗಜ ಆರ್ತಧ್ಯಾನದ ಮತ್ತು ಅದನ್ನು ಜಯಿಸುವ ಭಾವನೆಯ ವರ್ಣನೆ ಮಾಡಲಾಯಿತು.

**ರೋಗಜನಿತ ಆರ್ತಧ್ಯಾನ :** ಈಗ ಮೂರನೆಯ ರೋಗಜನಿತ ಆರ್ತ ಧ್ಯಾನದ ಸ್ವರೂಪ ಹೇಳುತ್ತಾರೆ. ಈ ಶರೀರದಲ್ಲಿ ರೋಗಗಳು ಉತ್ಪನ್ನವಾಗುತ್ತವೆ, ಆಗ ರೋಗವು ನಾಶವಾಗುವ ಸಲುವಾಗಿ ಪುನಃ ಪುನಃ ಸಂಕ್ಲೇಶರೂಪದ ಪರಿಣಾಮವಾಗುವುದು ಅದು ರೋಗಜನಿತ ಆರ್ತಧ್ಯಾನವಿದೆ. ದಮ್ಮು, ಕೆಮ್ಮು, ಜ್ವರ, ವಾತ, ಪಿತ್ತ, ಕಫ, ಹೊಟ್ಟೆನೋವು, ತಲೆ ನೋವು, ನೇತ್ರ ನೋವು, ಕರ್ಣಶೂಲಿ, ದಂತಶೂಲಿ, ಜಲೋದರ, ಕಠೋದರ, ಸರ್ಪೋದರ, ಕುಷ್ಟ, ಹುರುಕು, ಕಜ್ಜಿ, ಸಂಗ್ರಹಣಿ ಇತ್ಯಾದಿಗಳು ಪ್ರಾಣ ನಾಶ ಮಾಡುವಂಥ, ಘೋರ ವೇದನೆ ಕೊಡುವಂಥ ರೋಗಗಳಾದ ಮೇಲೆ ಘೋರ ದುಃಖವುತ್ಪನ್ನವಾಗುತ್ತದೆ. ರೋಗಗಳ ಸಂಕಟದಿಂದ ಶ್ವಾಸ ತೆಗೆದುಕೊಳ್ಳುವುದೂ ಕಠಿಣವಾಗುತ್ತದೆ, ನಿರಂತರ-ಕುಳಿತರೆ-ಮಲಗಿದರೆ ಯಾವುದರಲ್ಲಿಯೂ ಪರಿಣಾಮದಲ್ಲಿ ಸ್ಥಿರತೆಯಾಗಗೊಡುವುದಿಲ್ಲ. ಇಂಥ ಸಮಯದೊಳಗೆ ಪರಿಣಾಮದಲ್ಲಿ ಅತ್ಯಂತ ದುಃಖದಿಂದ ಉತ್ಪನ್ನವಾದ ಪೀಡೆಯ ಚಿಂತನವೆಂಬ ಹೆಸರಿನ ಆರ್ತಧ್ಯಾನವಾಗುತ್ತದೆ.

ಆ ರೋಗ ಜನಿತ ವೇದನೆಯಿಂದ ದೊಡ್ಡ-ದೊಡ್ಡ ಕೋಟಿ ಭಟರು, ಮಹಾಶೂರವೀರರು, ಅನೇಕ ಶಸ್ತ್ರಗಳ ಎದುರಿನಲ್ಲಿ ಕೂಡ ಪ್ರತಿಭಟಿಸಿ ನಿಂತುಕೊಳ್ಳುವಂಥ ಶೂರವೀರರುಗಳ ಧೈರ್ಯವು ಕೂಡ ಚಂಚಲವಾಗಿ ಹೋಗುತ್ತದೆ, ದೊಡ್ಡ-ದೊಡ್ಡ ತಪಸ್ವಿಗಳ ಪರೀಷಹ ಸಹನೆ ಮಾಡುವಂಥವರ ಧೈರ್ಯವು ಕೂಡ ಚಂಚಲವಾಗಿ ಹೋಗುತ್ತದೆ. ಇಂಥ ರೋಗ ವೇದನಾಜನ್ಯ ಆರ್ತಧ್ಯಾನವನ್ನು ಜಯಿಸುವ ಸಾಮರ್ಥ್ಯವು ಮಹಾದುರ್ಧರವಿದೆ.

ರೋಗಜನಿತ ವೇದನೆಯಲ್ಲಿ ಆರ್ತಪರಿಣಾಗಳನ್ನು ಜಯಿಸುವುದು ಜಿನೇಂದ್ರ ಭಗವಂತರ ಆಶ್ರಯದಿಂದಲೇ ಆಗುತ್ತದೆ. ದೊಡ್ಡವರ ಆಶ್ರಯವಿಲ್ಲದೆ ಇಂಥ ದುರ್ಧರ ವೇದನೆಯಲ್ಲಿ ಧೈರ್ಯವುಳಿಯುವುದಿಲ್ಲ. ಆದುದರಿಂದ ಜ್ಞಾನೀ ಪುರುಷರು ಸರ್ವಜ್ಞರ ಆಶ್ರಯ ಗ್ರಹಣ ಮಾಡಿ ವಿಚಾರ ಮಾಡುತ್ತಾರೆ. ಎಲೈ ಆತ್ಮನೇ ! ಈ ಘೋರ ಭಯಾನಕ ಅಸಾತಾಕರ್ಮದ ಉದಯದಲ್ಲಿ ವಿಲಾಪ ಮಾಡಿದರೆ ನಿನ್ನ ದುಃಖ ಯಾರು ದೂರ ಮಾಡುವರು ? ತಳಮಳ ಮಾಡಿದರೂ, ಒದ್ದಾಡಿದರೂ ಈ ವೇದನೆಯು ಬಿಟ್ಟು ಹೋಗುವಂಥದ್ದಿಲ್ಲ, ಧೈರ್ಯ ತಾಳಿ ಭೋಗಿಸಿದರೂ ಭೋಗಿಸಬೇಕಾಗುವುದು, ಅಧೀರನಾಗಿ ಭೋಗಿಸಿದರೂ ಭೋಗಿಸಬೇಕಾಗುವುದು. **ರೋಗವಂತೂ ದೇಹದಲ್ಲಿ ಬಂದಿಗೆ ಅದು ದೇಹವನ್ನು ಕೊಲ್ಲಬಹುದು, ನಿಮ್ಮ ಆತ್ಮನನ್ನು ಕೊಲ್ಲುವ ಸಾಧ್ಯತೆಯಿಲ್ಲ. ನಿಮ್ಮ ಆತ್ಮನಂತೂ ಜ್ಞಾಯಕ ಸ್ವಭಾವನಿದ್ದು ಅವಿನಾಶಿಯಿದ್ದಾನೆ.** ಆದರೆ ಈ ದೇಹದ ಬಂಧನದಲ್ಲಿ ಬಿದ್ದು ಮೋಸ ಹೋಗಿದ್ದಾನೆ. ಆದುದರಿಂದ ಈಗ ಅಧೀರತೆಯನ್ನು ಬಿಟ್ಟುಕೊಟ್ಟು ಧೈರ್ಯಧಾರಣ ಮಾಡು.

ಈ ಸಂಸಾರದಲ್ಲಿ ಕೋಟ್ಯಂತರ ರೋಗಗಳ ಉದಯ ಮತ್ತು ಛೇದನ-ಭೇದನ ಮೊದಲಾದ ದುಃಖವನ್ನು ನರಕದಲ್ಲಿ ಭೋಗಿಸಿದೆ. ತಿರ್ಯಂಚಗತಿಯಲ್ಲಿ ಪ್ರತ್ಯಕ್ಷ ರೋಗಗಳಿಂದ ಉತ್ಪನ್ನವಾದ ಘೋರ ದುಃಖವನ್ನು ನೋಡುತ್ತೇವೆ. ಇತರರಿಂದ ಬಿಡಿಸಿಕೊಂಡು ಓಡಿಹೋಗಬಹುದು. ಆದರೆ ಕರ್ಮದಿಂದ ಓಡಿ ಹೋಗುವ ಸಾಧ್ಯತೆಯಿಲ್ಲ, ಈ ಕರ್ಮಮಯ ಶರೀರವು ನಿಮ್ಮ ಒಂದೊಂದು ಪ್ರದೇಶವನ್ನು ಅನಂತ ಕರ್ಮಪರಮಾಣುಗಳಿಂದ ಬಂಧಿಸಿ ತನ್ನ ಆಧೀನ ಮಾಡಿಕೊಂಡಿದೆ, ಅದು ಹೇಗೆ ಓಡಗೊಡುವುದು ? ಈ ಕರ್ಮವಂತೂ ಮರಣವಾದ ಮೇಲೆ ಕೂಡ ಬಿಡಲಾರದು. ಮರಣವಾದ ಮೇಲೆ ಶರೀರವು ಬಿಡುವುದು ಎಲ್ಲಿ ಅನ್ಯ ಶರೀರವನ್ನು ಧಾರಣ ಮಾಡುವೆ ಅಲ್ಲಿಯೂ ಕೂಡ ಈ ಕರ್ಮವಂತೂ ಜತೆಯಲ್ಲಿಯೇ ಬರುವುದು. ರೋಗದ ವೇದನೆಯಲ್ಲಿ ಯಾರು ಧೈರ್ಯಧಾರಣ ಮಾಡುತ್ತಾರೆ ಅವರಿಗೆ ಬಹಳಷ್ಟು ಕರ್ಮಗಳ ನಿರ್ಜರೆಯಾಗುತ್ತದೆ.

**ಹೀಗೂ ವಿಚಾರ ಮಾಡಬೇಕು.** ಮುನಿರಾಜರಂತೂ ಗ್ರೀಷ್ಮದಲ್ಲಿ ಆತಪದ ವೇದನೆ ಮತ್ತು ಶೀತಋತುವಿನಲ್ಲಿ ಶೀತದ ವೇದನೆ ಕರ್ಮಗಳನ್ನು ಜಯಿಸುವ ಸಲುವಾಗಿ ಅತ್ಯಂತ ಉತ್ಸಾಹದಿಂದ ಸಹಿಸುತ್ತಾರೆ. ಇಲ್ಲಿಯಂತೂ ನಿಮ್ಮ ಕರ್ಮವು ತಾನೇ ಉದಯದಲ್ಲಿ ಬಂದಿದೆ ಅದನ್ನು ಶೂರತನದಿಂದ ಜಯಿಸಬೇಕು. ಅದೆಷ್ಟೋ ಮನುಷ್ಯರು ನಿರ್ಧನರಿದ್ದಾರೆ, ಏಕಾಕಿಯಿದ್ದಾರೆ, ವಾಸದ ಸ್ಥಾನವಿಲ್ಲ, ತಿನ್ನುಣ್ಣಲು ದೊರಕುವುದಿಲ್ಲ, ಯಾರೂ ಕೇಳುವಂಥವರಿಲ್ಲ, ಯಾರೂ ಸಹಾಯ ಮಾಡುವಂಥವರಿಲ್ಲ, ಶರೀರದಲ್ಲಿ ಒಂದರ ನಂತರ ಒಂದು ರೋಗದ ಕ್ಲೇಶವು ಬರುತ್ತಿರುತ್ತದೆ, ಯಾರೂ ನೀರು

ಕುಡಿಸುವಂಥವರೂ ಇಲ್ಲ, ಅವರ ವಿಲಾಪವನ್ನು ಯಾರು ಕೇಳುತ್ತಾರೆ ? ಇಂಥ ದುಃಖೀ ಅಜ್ಞಾನಿಗಳೂ ಕೂಡ ತಮ್ಮನ್ನು ಅಸಹಾಯ, ಏಕಾಕೀ, ನಿರ್ಧನರೆಂದು ತಿಳಿದುಕೊಂಡು ತಮ್ಮಷ್ಟಕ್ಕೇ ತಾವೇ ಭೋಗಿಸುತ್ತಾರೆಂಬುದನ್ನು ನೋಡಬೇಕು.

ನಿಮ್ಮ ಹತ್ತಿರವಂತೂ ಮಲಗಿಕೊಳ್ಳುವುದಕ್ಕೆ ಸ್ಥಾನವಿದೆ, ತಿನ್ನುವುದಕ್ಕೆ ಆಹಾರವಿದೆ, ರೋಗದ ಔಷಧವಿದೆ, ಶೀತ-ಉಷ್ಣದ ಸಾಮಗ್ರಿಗಳಿವೆ, ಸೇವೆ ಮಾಡುವಂಥ ಸೇವಕರಿದ್ದಾರೆ, ಪತ್ನೀ-ಪುತ್ರ-ಮಿತ್ರರುಗಳಿದ್ದಾರೆ, ಮಲ-ಮೂತ್ರಗಳನ್ನು ತೆಗೆಯುವಂಥವರಿದ್ದಾರೆ, ಈಗ ನೀವು ಸಮತೆಯ ಭಾವದಿಂದ ವೇದನೆಯನ್ನು ಸಹನೆ ಮಾಡಬೇಕು, ಅಧೀರತೆಯನ್ನು ಬಿಟ್ಟುಕೊಟ್ಟು ಧೈರ್ಯಧಾರಣ ಮಾಡಿ ರೋಗಜನಿತ ಆರ್ತಧ್ಯಾನವನ್ನು ಬಿಟ್ಟುಕೊಡುವುದೇ ಯೋಗ್ಯವಿದೆ. ಧರ್ಮಧಾರಣ ಮಾಡುವುದರ ಫಲವು ಇದೇ ಇದೆ.

ಯಾರಿಗೆ ಯಾರೂ ಸಹಾಯ ಮಾಡುವಂಥವರಿಲ್ಲ, ಅವರು ಕೂಡ ಧೈರ್ಯಧಾರಣ ಮಾಡುತ್ತಾರೆ. ಎಲೈ ಆತ್ಮನೇ! ಜಿನಧರ್ಮವನ್ನು ಧಾರಣ ಮಾಡಿಯೂ ಮತ್ತು ಕರ್ಮದ ಉದಯವನ್ನು ಯಾರಿಂದಲೂ ತಡೆಯುವ ಸಾಧ್ಯತೆಯಿಲ್ಲವೆಂಬುದನ್ನು ತಿಳಿದುಕೊಂಡು ಕೂಡ ಅಧೀರತೆಯನ್ನೇಕೆ ಧಾರಣ ಮಾಡುತ್ತಿರುವೆ ? ಜೈಲಿನಲ್ಲಿ ಕೂಡ ಕೆಲವರು ಅದೆಷ್ಟೋ ರೋಗದ ವೇದನೆ ಭೋಗಿಸುತ್ತ ಸತ್ತು ಹೋಗುತ್ತಾರೆ. ತಿರ್ಯಂಚದಲ್ಲಿ ಘೋರ ರೋಗದ ವೇದನೆ, ರೋಗಿಯಾಗಿ ನಿರ್ಜನವನದಲ್ಲಿ ಹೊರಳಿ ಬೀಳುವುದು, ಕೆಸರಿನಲ್ಲಿ ಮೋಸ ಹೋಗುವುದು, ಶಿತೋಷ್ಣಗಳಲ್ಲಿ ಬಿದ್ದುಕೊಂಡಿರುವುದು, ಬಿದ್ದುಕೊಂಡಿರುವುದನ್ನು ಅನೇಕ ಜೀವಗಳು ಹರಿದು ತಿನ್ನುವುದು ಇವೇ ಮೊದಲಾದ ಘೋರ ವೇದನೆಯನ್ನು ಸಂಸಾರದಲ್ಲಿ ಜೀವಗಳು ಭೋಗಿಸುತ್ತವೆ.

**ಸಂಸಾರವಂತೂ ದುಃಖಗಳಿಂದಲೇ ತುಂಬಿಕೊಂಡಿದೆ** ನೀವು ಸಂಸಾರದಲ್ಲಿ ಅನೇಕ ಬಾರಿ ಭೋಗಿಸದಂಥ ರೋಗವು ಯಾವುದಿದೆ. ಆದುದರಿಂದ ರೋಗದಲ್ಲಿ ಜಿನಧರ್ಮವೇ ಆಶ್ರಯವಿದೆ, ಜಿನೇಂದ್ರರ ವಚನಗಳನ್ನೇ ಜನ್ಮ-ಜರೆ-ಮರಣ-ರೋಗಗಳನ್ನು ನಾಶ ಮಾಡುವಂಥವೆಂದು ತಿಳಿ, ಅನ್ಯ ಔಷಧ, **ಉಪಾಯಗಳಂತೂ ಸಾತಾಕರ್ಮದ ಸಹಾಯತೆಯಿಂದ ಅಸಾತಾಕರ್ಮದ ಉದಯವು ಮಂದವಾದ ಮೇಲೆ ಉಪಕಾರ ಮಾಡುತ್ತವೆ.** ಅಸಾತಾದ ಪ್ರಬಲ ಉದಯದಲ್ಲಿ ಸಮಸ್ತ ಉಪಾಯಗಳನ್ನು ನಿಷ್ಫಲವೆಂದು ತಿಳಿದುಕೊಂಡು, ಅಶುಭಕರ್ಮದ ನಾಶದ ಕಾರಣವಿರುವ ಪರಮ ಸಮತಾಭಾವವನ್ನು ಧಾರಣ ಮಾಡುವುದೇ ಶ್ರೇಷ್ಠವಿದೆ. ಈ ಪ್ರಕಾರ ರೋಗಜನಿತ ಆರ್ತಧ್ಯಾನವನ್ನು ಜಯಿಸುವ ಭಾವನೆ ಹೇಳಲಾಯಿತು.

**ನಿದಾನಜನಿತ ಆರ್ತಧ್ಯಾನ :** ಈಗ ನಾಲ್ಕನೆಯ ನಿದಾನಜನಿತ ಆರ್ತಧ್ಯಾನದ ಸ್ವರೂಪದ ವರ್ಣನೆ ಮಾಡುತ್ತಾರೆ. ಸ್ವರ್ಗದ ಭೋಗಗಳ ಇಚ್ಛೆ ಮಾಡುವುದು, ಅಪ್ಸರೆಯರ ನೃತ್ಯ ಮೊದಲಾದುವನ್ನು ನೋಡುವ ಇಚ್ಛೆ ಮಾಡುವುದು, ತಮ್ಮ ಸೌಭಾಗ್ಯ ಬಯಸುವುದು, ಅತಿಶಯ ಸುಂದರರೂಪ ಬಯಸುವುದು, ಅಖಂಡ ಐಶ್ವರ್ಯದೊಡನೆ ರಾಜ್ಯವಿಭೂತಿಯ ಇಚ್ಛೆ ಮಾಡುವುದು, ವಾಸಿಸಲು ಸುಂದರ ಮನೆ ಬಯಸುವುದು, ರೂಪವತಿ ಸ್ತ್ರೀಯ ಕೋಮಲ ಸುಕುಮಾರ ಅಂಗದ ಸ್ಪರ್ಶ ಬಯಸುವುದು, ಶಯ್ಯೆ, ಆಸನ, ಆಭರಣ, ವಸ್ತ್ರ ಸುಗಂಧ, ಮಿಷ್ಟಾನ್ನದ ಭೋಜನ ಬಯಸುವುದು, ಅನೇಕ ರಸಯುಕ್ತ ಕ್ರೀಡೆ ವಿಹಾರ ಬಯಸುವುದು, ವೈರಿಗಳ ತಿರಸ್ಕಾರ-ಮರಣ ಬಯಸುವುದು, ತಮ್ಮ ಹತ್ತಿರ ವಿಪುಲ ವೈಭವ ಬಯಸುವುದು, ಸಮಸ್ತ ಜಗತ್ತಿನ ಮಧ್ಯದಲ್ಲಿ ತಮ್ಮ ಉಚ್ಚತೆ ಬಯಸುವುದು, ತಮ್ಮ ಆಜ್ಞೆ ಮನ್ನಿಸುವವರ ವಿಜಯ ಬಯಸುವುದು, ಇತರರ ತಿರಸ್ಕಾರ ಬಯಸುವುದು, ಮದವನ್ನು ಪುಷ್ಟಗೊಳಿಸುವಂಥ ಸಮಸ್ತ ಪಂಡಿತರ ತಿರಸ್ಕಾರ ಮಾಡುವಂಥ ವಿದ್ಯೆ ಬಯಸುವುದು, ರಾಜನೀತಿಯನ್ನು ತನ್ನ ಆಧೀನ ಬಯಸುವುದು, ಆಜೀವಿಕೆಯ ವೃದ್ಧಿಯನ್ನಪೇಕ್ಷಿಸುವುದು, ಪರರ ಕುಟುಂಬ ಸಂಪತ್ತಿಯ ನಾಶ ಬಯಸುವುದು, ತನ್ನ ಕುಟುಂಬದ ವೃದ್ಧಿ ಬಯಸುವುದು, ಧನದ ಲಾಭ ಬಯಸುವುದು, ತಾನು ದೀರ್ಘಕಾಲ ಬದುಕಿರಲೆಂದು ಅಪೇಕ್ಷಿಸುವುದು, ತಮ್ಮ ವಚನದ ಸಿದ್ಧಿ ಬಯಸುವುದು, ತಮ್ಮ ಕಪಟ-ವಂಚನೆಗಳ ಗೌಪ್ಯತೆ ಬಯಸುವುದು, ತಮಗಿಂತ ಅನ್ಯ ಜೀವರುಗಳ ನ್ಯೂನತೆ ಬಯಸುವುದು, ಎಲ್ಲರ ಮಧ್ಯದಲ್ಲಿತಮ್ಮ ಉಚ್ಚತೆ ಬಯಸುವುದು, ಸಮಸ್ತ ಭೋಗಗಳ

ಅಭಿಲಾಷೆ ಬಯಸುವುದು, ತಮ್ಮ ನಿರೋಗತೆಯನ್ನು ಬಯಸುವುದು, ತಮ್ಮ ಸುಂದರ ರೂಪು, ಸಂಪತ್ತು, ಆಜ್ಞಾಧಾರಕ ಪುತ್ರ, ಚತುರ ಸೇವಕ ಇತ್ಯಾದಿಗಳು ಭವಿಷ್ಯ ಕಾಲದಲ್ಲಿ ದೊರಕಲೆಂದು ಇಚ್ಛೆ ಮಾಡುವುದು ಅದು ನಿದಾನ ಆರ್ತಧ್ಯಾನವಿದೆ.

ಸಂಸಾರ ಪರಿಭ್ರಮಣದ ಕಾರಣ, ಪುಣ್ಯದ ನಾಶ ಮಾಡುವಂಥದ್ದೆಂದು ತಿಳಿದುಕೊಂಡು ಎಂದೂ ನಿದಾನ ಮಾಡಬಾರದು. ಇಚ್ಛೆಯಿಂದಂತೂ ಪಾಪದ ಬಂಧವಾಗುತ್ತದೆ. ಭೋಗಗಳ ಅಭಿಲಾಷೆ ಹಾಗೂ ತಮ್ಮ ಅಭಿಲಾಷೆಯ ಪುಷ್ಟಿ ಬಯಸುವುದೆಂದರೆ ತಾವು ಏಕತ್ರ ಮಾಡಿದ ಪುಣ್ಯದ ನಾಶ ಮಾಡುವುದಿದೆ. ನಿರಪೇಕ್ಷ ಪರಿಣಾಮದಿಂದಲೇ ಪುಣ್ಯದ ಬಂಧವಾಗುತ್ತದೆ. ತಮ್ಮ ಉಚ್ಚತೆಯ ಇಚ್ಛೆ ಮತ್ತು ವಿಷಯಗಳ ಲೋಭವನ್ನು ತೀವ್ರ ಕಷಾಯವುಳ್ಳ-ಪರ್ಯಾಯ ಬುದ್ಧಿಯುಳ್ಳವರ ಹೊರತಾಗಿ ಯಾರು ಮಾಡುತ್ತಾರೆ ? ಈ ವಿಷಯಗಳು ಮತ್ತು ಈ ಅಭಿಮಾನವು ಅದೆಷ್ಟು ದಿವಸಗಳವರೆಗೆ ಉಳಿಯುವುದು ?

ಅನಂತಾನಂತ ಪುರುಷರು ಈ ಭೂಮಿಯ ಮೇಲೆ ಸಂಪತ್ತುಳ್ಳ, ಬಲವುಳ್ಳ, ರೂಪವುಳ್ಳ, ವಿದ್ಯೆಯುಳ್ಳವರಾಗಿ ಮರಣಕ್ಕೆ ಪ್ರಾಪ್ತರಾಗಿ ಹೋಗಿದ್ದಾರೆ, ಇಲ್ಲಿಯಂತೂ ಮರಣವು ಆಕಸ್ಮಿಕವಾಗಿ ಬಂದು ಹಿಡಿದುಕೊಳ್ಳುವುದು. ಇದುವರೆಗೆ ಭೋಗಗಳು ಏನು ಮಾಡಿದವು ? ಭೋಗಗಳು ಅತೃಪ್ತಿಯನ್ನುಂಟು ಮಾಡುವಂಥವಿವೆ, ದುರ್ಗತಿಗೆ ಕೊಂಡೊಯ್ಯುವಂತಿವೆ, ಬಯಸುವುದರಿಂದೆಂದೂ ಪ್ರಾಪ್ತವಾಗುವುದಿಲ್ಲ. ಅಸಂಖ್ಯಾತ **ಜೀವಗಳು ಇಚ್ಛೆಯ ದಾಹದ ಕಾರಣ ಸುಡುತ್ತಿರುತ್ತವೆ.** ಮರಣವು ನಿಕಟ ಬಂದಾಗಲೂ ಕೂಡ ಇಚ್ಛೆಯನ್ನೇ ಮಾಡುತ್ತಿರುತ್ತವೆ. **ಇಚ್ಛೆಯಿಂದ ಸಂಪೂರ್ಣ ಜಗತ್ತು ಸುಡುತ್ತಲಿದೆ.** ಜಗತ್ತಿನ ಜೀವರುಗಳಿಗೆ ಮೂರು ಲೋಕದ ರಾಜ್ಯ ವೈಭವದಿಂದಲೂ ಕೂಡ ತೃಪ್ತಿಯಾಗದಂಥ ತೃಷ್ಣೆಯಿದೆ ಎಂದ ಮೇಲೆ ಯಾರು-ಯಾರಿಗೆ ಸಮಸ್ತ ಲೋಕದ ರಾಜ್ಯವು ದೊರಕುವುದು ? ಈ ಅಚೇತನ ಸಂಪತ್ತು ಧೂಳಿನ ಸಮಾನವಿದೆ, ಇದರಿಂದ ಆತ್ಮನಿಗೇನು ಸಾಧಿಸುವುದಿದೆ ? ಏನು ಲಾಭವಾಗುವುದಿದೆ ?

**ಲೋಕದಲ್ಲಿ ಸಂಪತ್ತು, ಅಭಿಮಾನ, ಪರಿಗ್ರಹಗಳು ಮಹಾದುಃಖದಾಯಕವಿವೆ.** ತಮ್ಮ ಅವಿನಾಶೀ ಜ್ಞಾನದ ಸಂಪತ್ತು, ಸುಖದಸಂಪತ್ತು, ಸ್ವಾಧೀನತೆಯನ್ನು ಪಡೆದು ಸುಖಿಯಾಗುವ ಪ್ರಯತ್ನ ಮಾಡಬೇಕು. ಸಂತೋಷದ ಸಮಾನ ಸುಖವಿಲ್ಲ, ಸಂತೋಷದ ಸಮಾನ ತಪವಿಲ್ಲ. ಪ್ರಾಪ್ತವಾದ ವಿಷಯಗಳಲ್ಲಿ ಸಂತೋಷಪಟ್ಟು ಯಾರು ಇಚ್ಛಾರಹಿತರಾಗಿರುತ್ತಾರೆ. ಅವರಿಗೆ ದೊಡ್ಡ ತಪವಿದೆ. ಅವರು ಕರ್ಮದ ನಿರ್ಜರೆ ಮಾಡುತ್ತಾರೆ. ಇಚ್ಛೆ ಮಾಡುತ್ತಿರುವವರಿಗೆ ಏನು ದೊರಕುವುದು ? ವಿಷಯ ಕಷಾಯಗಳ ಪ್ರಾಪ್ತಿಯ ಸಲುವಾಗಿ ಅನಂತಾನಂತ ಜೀವಗಳು ತಳಮಳಿಸಿ ತಳಮಳಿಸಿ ಸತ್ತು ದುರ್ಗತಿಯಲ್ಲಿ ಹೊರಟು ಹೋಗುತ್ತವೆ.

ಆದುದರಿಂದ ನಿಮ್ಮ ಹೃದಯದಲ್ಲಿ ಜಿನೇಂದ್ರ ಧರ್ಮದ ಅಭಿರುಚಿಯಾಗಿದ್ದರೆ ಕಳೆದು ಹೋದ ವಸ್ತುವಿನ ಚಿಂತನೆ ಮಾಡಬೇಡಿರಿ, ಭವಿಷ್ಯದ ಇಚ್ಛೆ ಮಾಡಬೇಡಿರಿ ಮತ್ತು ವರ್ತಮಾನ ಕಾಲದಲ್ಲಿ ಯಾವ ಕರ್ಮದ ಶುಭ-ಅಶುಭ ರಸವು ಉದಯದಲ್ಲಿ ಬಂದಿದೆ, ಅದನ್ನು ರಾಗ-ದ್ವೇಷಗಳಿಂದ ರಹಿತರಾಗಿ ಭೋಗಿಸಿರಿ. ಈ ಯಾವ ಶುಭ-ಅಶುಭದ ಸಂಯೋಗವಿದೆ ಅದು ನಮ್ಮ ಸ್ವಭಾವವಲ್ಲ, ಅದಂತೂ ಕರ್ಮದ ಉದಯವಿದೆ. ಈ ಪ್ರಕಾರ ನಿಶ್ಚಯ ಮಾಡಿ, ಭವಿಷ್ಯದ ಇಚ್ಛೆಯ ಅಭಾವ ಮಾಡಿ ನಿದಾನ ನಾಮದ ಆರ್ತಧ್ಯಾನವನ್ನು ಜಯಿಸಬೇಕಾಗುವುದು.

ಈ ರೀತಿಯಿಂದ ನಾಲ್ಕು ಪ್ರಕಾರದ ಆರ್ತಧ್ಯಾನದ ಸ್ವರೂಪ ಹೇಳಿದೆ. ಇವು ಆರನೆಯ ಗುಣಸ್ಥಾನದವರೆಗೆ ಉತ್ಪನ್ನವಾಗುತ್ತವೆ. ನಿದಾನ ಆರ್ತಧ್ಯಾನವು ಐದನೇ ಗುಣಸ್ಥಾನದವರೆಗೇ ಇರುತ್ತದೆ, ಆರನೆಯ ಗುಣಸ್ಥಾನದಲ್ಲಿ ನಿದಾನವಿರುವುದಿಲ್ಲ. ಈ ಆರ್ತಧ್ಯಾನವು ಕೃಷ್ಣ, ನೀಲ, ಕಾಪೋತ ಈ ಮೂರು ಅಶುಭ ಲೇಶ್ಯೆಗಳ ಬಲದಿಂದ ಉತ್ಪನ್ನವಾಗುತ್ತದೆ. ಪಾಪರೂಪದ ಅಗ್ನಿಯನ್ನು ಹೆಚ್ಚಿಸುವ ಸಲುವಾಗಿ ಸೌದೆಯ ಸಮಾನವಿದೆ. ಈ ಆರ್ತಧ್ಯಾನವು ಅನಾದಿಕಾಲದ ಅಶುಭ ಸಂಸ್ಕಾರದಿಂದ ಯಾವ ಪ್ರಯತ್ನ ಮಾಡದೆಯೇ ಉತ್ಪನ್ನವಾಗಿ ಬಿಡುತ್ತದೆ. ಇದರ ಫಲವು ಅನಂತ ದುಃಖಗಳಿಂದ ವ್ಯಾಪ್ತವಾದ ತಿರ್ಯಂಚಗತಿಯಲ್ಲಿ ಪರಿಭ್ರಮಣ ಮಾಡುವುದಿದೆ. ಇದು ಕ್ಷಾಯೋಪಶಮಿಕ ಭಾವವಿದೆ, ಇದರ ಕಾಲವು ಅಂತರ್ಮುಹೂರ್ತವೇ ಇದೆ.

ಯಾರ ಹೃದಯದಲ್ಲಿ ಆರ್ತಧ್ಯಾನವಿರುತ್ತದೆ ಅವರ ಬಾಹ್ಯ ಶರೀರದ ಮೇಲೆ ಶೋಕ, ಸಂಶಯ, ಭಯ, ಪ್ರಮಾದ, ಕಲಹ, ಚಿಂತೆ, ಭ್ರಮೆ, ಭ್ರಾಂತಿ, ಉನ್ಮಾದ, ಪುನಃ ಪುನಃ ನಿದ್ರೆ, ಅಂಗಾಂಗಗಳಲ್ಲಿ ಜಡತ್ವ, ಶ್ರಮ, ಮೂರ್ಛೆ ಇವೇ ಮೊದಲಾದ ಚಿಹ್ನಗಳು ಪ್ರಕಟವಾಗುತ್ತವೆ. ಈ ಪ್ರಕಾರ ಆರ್ತಧ್ಯಾನದ ಸ್ವರೂಪ ಹೇಳಲಾಯಿತು.

**ರೌದ್ರಧ್ಯಾನ ಮತ್ತು ಅದರ ಭೇದ :** ರೌದ್ರಧ್ಯಾನದಲ್ಲಿ ಹಿಂಸಾನಂದ, ಮೃಷಾನಂದ, ಸ್ತೇಯಾನಂದ, ಪರಿಗ್ರಹಾನಂದವೆಂದು ನಾಲ್ಕು ಪ್ರಕಾರಗಳಿದ್ದು ಅವೆಲ್ಲವೂ ತ್ಯಾಗಯೋಗ್ಯವಿವೆ. ಈಗ ಅವುಗಳ ಸ್ವರೂಪ ಹೇಳುತ್ತಾರೆ.

**ಹಿಂಸಾನಂದ ರೌದ್ರಧ್ಯಾನ :** ಮೊದಲನೆಯ ಹಿಂಸಾನಂದ ರೌದ್ರಧ್ಯಾನದ ಸ್ವರೂಪವನ್ನು ಹೀಗೆ ತಿಳಿಯುವುದು. ತಮ್ಮ ಮೂಲಕ ಪ್ರಾಣಿ ಸಮೂಹದ ಹಿಂಸೆಯಾದ ಮೇಲೆ ಯಾವ ಆನಂದವು ಉತ್ಪನ್ನವಾಗುತ್ತದೆ ಅದು ಹಿಂಸಾನಂದ ರೌದ್ರಧ್ಯಾನವಿದೆ. ಹಿಂಸೆಯ ಕಾರಣವಿರುವ ವಿಷಯಗಳಲ್ಲಿ ಅನುರಾಗವಿರುವುದು; ಒಡ್ಡು ಹಾಕುವಲ್ಲಿ, ಕೆರೆ, ಬಾವಿ, ಕೊಳ, ನದೀ, ನಾಲೆ, ಕಾಲುವೆ ಅಗೆಸುವಲ್ಲಿ ಅನುರಾಗವಿರುವುದು; ವನ ಕತ್ತರಿಸುವಲ್ಲಿ, ಉಪವನ ನಿರ್ಮಿಸುವಲ್ಲಿ, ನೆಲ ಅಗೆದು ಮಾರ್ಗ ಮಾಡಿಸುವಲ್ಲಿ ಅನುರಾಗವಿರುವುದು, ಗ್ರಾಮಸುಡುವಲ್ಲಿ, ಮನೆಸುಡುವಲ್ಲಿ, ಮರಗಳನ್ನು ಕತ್ತರಿಸುವಲ್ಲಿ ಅನುರಾಗವಿರುವುದು; ಯುದ್ಧವಾಗುವಲ್ಲಿ, ಪರಧನ ವಿಧ್ವಂಸವಾಗುವಲ್ಲಿ, ಸಿಡಿಮದ್ದಿನ ಪಟಾಕ್ಷಿ ಹಾರಿಸುವಲ್ಲಿ, ದರೋಡೆ ಹಾಕುವಲ್ಲಿ, ಸುಲಿಗೆ ಮಾಡುವಲ್ಲಿ ಅನುರಾಗವಿರುವುದು ; ಜಲಚರ, ಸ್ಥಲಚರ, ನಭಚರ, ಜೀವಗಳ ಬೇಟೆ ಮಾಡುವಲ್ಲಿ, ಜೀವಗಳನ್ನು ಸಾಯಿಸುವಲ್ಲಿ, ಹಿಡಿಯುವಲ್ಲಿ, ಬಂದೀಗೃಹದಲ್ಲಿ ಬಂಧಿಸಿ ಇಡುವಲ್ಲಿ ಅನುರಾಗವಿರುವುದೆಲ್ಲವೂ ಹಿಂಸಾನಂದ ರೌದ್ರಧ್ಯಾನವಿದೆ.

**ರೌದ್ರ ಧ್ಯಾನಿಯ ಸ್ವಭಾವವು ನಿರಂತರ ನಿರ್ದಯವಿರುತ್ತದೆ, ಸ್ವಭಾವದಿಂದ ಕ್ರೋಧವು ಪ್ರಜ್ವಲಿತವಿರುತ್ತದೆ.** ಮದದಿಂದ ಉದ್ಧತ ಪಾಪಬುದ್ಧಿರೂಪನಿರುತ್ತಾನೆ, ಪಾಪದಲ್ಲಿ ಪ್ರವೀಣತಾಯುಕ್ತನಿರುವನು, ಪರಲೋಕದ ನಾಸ್ತಿ, ಧರ್ಮ-ಅಧರ್ಮದ ನಾಸ್ತಿ ಮನ್ನಿಸುವಂಥವನಿದ್ದಾನೆ. ರೌದ್ರ ಧ್ಯಾನಿಯ ಪಾಪಕರ್ಮದೊಳಗೆ ಮಹಾನಿಪುಣತೆಯಿಂದ ಅನೇಕ ಕುಬುದ್ಧಿಗಳು ಮೊದಲಿನಿಂದಲೇ ಸಿದ್ಧವಾಗಿ ನಿಂತುಕೊಂಡಿರುತ್ತವೆ. ಪಾಪದ ಉಪದೇಶ ಕೊಡುವಲ್ಲಿ ಅತ್ಯಂತ ನಿಪುಣತೆಯಿರುವುದು, ನಾಸ್ತಿಕ ಮತದ ಸ್ಥಾಪನೆಯಲ್ಲಿ ಮಹಾನಿಪುಣತೆಯಿದೆ, ಹಿಂಸೆಯ ಕಾರ್ಯಗಳಲ್ಲಿ ರಾಗದ ಅಧಿಕತೆಯಿದೆ, ನಿರ್ದಯಿಗಳ ಸಂಗತಿಯಲ್ಲಿ ನಿರಂತರವಿರುವುದು ಅದು ಎಲ್ಲವು ಹಿಂಸಾನಂದ ರೌದ್ರಧ್ಯಾನವಿದೆ.

ಯಾರಿಂದ ತಮ್ಮ ವಿಷಯ ಕಷಾಯಗಳು ಪುಷ್ಟವಾಗುವುದಿಲ್ಲ ಅವರ ಸಂಬಂಧದಲ್ಲಿ ಹೀಗೆ ವಿಚಾರ ಮಾಡುತ್ತಾನೆ, ಇವರುಗಳ ಘಾತವು ಯಾವ ಉಪಾಯದಿಂದ ಆಗುವುದು, ಇವರನ್ನು ಕೊಲ್ಲುವಲ್ಲಿ ಯಾರಿಗೆ ರುಚಿಯಿದೆ, ಇವರನ್ನು ಮೂಲದಿಂದಲೇ ವಿಧ್ವಂಸ ಮಾಡಿ ಬಿಡುವಲ್ಲಿ ಯಾರು ನಿಪುಣರಿದ್ದಾರೆ, ಇವರು ಎಷ್ಟು ದಿವಸಗಳಲ್ಲಿ ಹೇಗೆ ಸಾಯುವರು ? ಯಾವಾಗ ಇವರು ಸತ್ತು ಹೋಗುವರು ಆಗ ಬ್ರಾಹ್ಮಣರಿಗೆ ಐಚ್ಛಿಕ ಭೋಜನ ಮಾಡಿಸುವೆನು, ದೇವತೆಗಳ ಪೂಜೆ ಆರಾಧನೆ ಮಾಡುವೆನು, ವೈರಿಗಳ ನಾಶದ ಸಲುವಾಗಿ ಅನ್ಯರಿಗೆ ಧನವಿತ್ತು ಜಪ ಮಾಡಿಸುವುದು, ದುರ್ಗಾಪಾಠ ಮಾಡಿಸುವುದು, ತಮ್ಮ ತಲೆಗೂದಲು-ದಾಡಿ ತೆಗೆಯದಿರುವುದು, ಕೂದಲು ಬೆಳೆಸುವುದು ಇತ್ಯಾದಿಗಳ ಮೂಲಕ ಪರಿಣಾಮದಲ್ಲಿ ಸಂಕ್ಲೇಶವಿಡುವುದು ಅದೆಲ್ಲವೂ ಹಿಂಸಾನಂದವಿದೆ.

ಜಲಚರ, ಸ್ಥಲಚರದ ವಿಕಲತ್ರಯ, ನಭಚರ ಜೀವಗಳನ್ನು ಹೊಡೆಯುವಲ್ಲಿ, ಬಲಿ ಕೊಡುವಲ್ಲಿ, ಬಂಧಿಸುವಲ್ಲಿ, ಛೇದಿಸುವಲ್ಲಿ ಯಾವನಿಗೆ ಯತ್ನವಿದೆ ಮತ್ತು ಜೀವಗಳ ನಖ, ನೇತ್ರ, ಚರ್ಮ ಕಿತ್ತುವಲ್ಲಿ, ಜೀವಗಳನ್ನು ಕಾದಾಡಿಸುವಲ್ಲಿ ಯಾವನಿಗೆ ಅತಿ ಅನುರಾಗವಿದೆ ಅವನಿಗೆ ಹಿಂಸಾನಂದವಿದೆ. ಈತನ ವಿಜಯ, ಈತನ ಪರಾಜಯ, ಈತನ ತಿರಸ್ಕಾರ, ಈತನ ಮರಣ, ಈತನ ಧನದ ಹಾನಿ, ಈತನಿಗೆ ಸ್ತ್ರೀ-ಪುತ್ರರ ಮರಣ-ವಿಯೋಗವಾಗಲೆಂದು ಚಿಂತನೆ ಮಾಡುವುದು ಮತ್ತು ಈ ಪ್ರಕಾರವಾಗುವುದನ್ನು ಕೇಳುವಲ್ಲಿ, ನೋಡುವಲ್ಲಿ, ಸ್ಮರಣೆ ಮಾಡುವಲ್ಲಿ ಅನುರಾಗವಿರುವುದು ಅದು ಹಿಂಸಾನಂದವಿದೆ.

ಏನು ಮಾಡಲಿ, ನನಗೆ ಶಕ್ತಿಯಿಲ್ಲ, ಶಕ್ತಿಯಿದ್ದವರು ನನಗೆ ಸಹಾಯ ಮಾಡುವಂಥವರಿಲ್ಲ; ನಾನು ನನ್ನ ಹಳೆಯ ಶತ್ರುಗಳನ್ನು ಅನೇಕ ರೀತಿಯಿಂದ ಕಷ್ಟವಿತ್ತು ಸಾಯಿಸುವಂಥ ಭಾಗ್ಯಶಾಲಿ ದಿವಸವು ಯಾವಾಗ ಬರುವುದು ? ನನ್ನಲ್ಲಿ ಈಗ ಸಾಮರ್ಥ್ಯವಿಲ್ಲದಿದ್ದರೂ ಪರಲೋಕದಲ್ಲಿ ಕೊಲ್ಲುವೆನೆಂದು ನಿರಂತರ ಇತರರ ಅಪಕಾರವನ್ನೇ ಬಯಸುತ್ತಾನೆ. ಇತರರಿಗೆ ವಿಘ್ನಗಳು ಬಂದು ಬಿಟ್ಟರೆ, ಹಾನಿ-ವಿಯೋಗ-ಅಪಮಾನಗಳಾಗಿ ಹೋದರೆ ಅತ್ಯಂತ ಹರುಷ ಮನ್ನಿಸುತ್ತಾನೆ. ಇದೆಲ್ಲವೂ ಹಿಂಸಾನಂದ ರೌದ್ರಧ್ಯಾನವಿದೆ. ಈ ಪ್ರಕಾರ ಹಲವು ವಿಧದ ಹಿಂಸೆಯ ವಿಕಲ್ಪ ಮಾಡುವುದು ಅದು ಹಿಂಸಾನಂದವಿದೆ.

**ಹಿಂಸಾನಂದದ ಬಾಹ್ಯ ಚಿಹ್ನಗಳು :** ಹಿಂಸೆಯ ಉಪಕರಣಗಳಾಗದ ಕರವಾಳ, ಕಿರುಗತ್ತಿ, ಚೂರಿ ಇತ್ಯಾದಿ ಶಸ್ತ್ರಗಳನ್ನು ಗ್ರಹಣ ಮಾಡುವುದು, ಶಸ್ತ್ರದಿಂದ ಹೊಡೆಯುವುದರ, ವಿದಾರಿಸುವುದರ, ಪೆಟ್ಟು ಹಾಕುವುದರ ಚಿಂತನೆ ಮಾಡುವುದು ; ಹೊಡೆಯುವ ಕಲೆಯಲ್ಲಿ ನೈಪುಣ್ಯತೆಗಳಿಸುವುದು, ಕ್ರೂರ ಹಿಂಸ್ರ ಜೀವಗಳನ್ನು ಸಾಕಿ ಸಲಹುವುದು, ಹಿಂಸ್ರ ಚಿರ್ಚು, ನಾಯಿ, ಗಿಡಗ ಮೊದಲಾದ ಜೀವಗಳನ್ನು ಹತ್ತಿರವಿಟ್ಟುಕೊಳ್ಳುವುದು ಇವೆಲ್ಲವು ಹಿಂಸಾನಂದದ ಬಾಹ್ಯ ಚಿಹ್ನಗಳಿವೆ.

**ಮೃಷಾನಂದ ರೌದ್ರಧ್ಯಾನ :** ರೌದ್ರಧ್ಯಾನದ ಎರಡನೇ ಭೇದವಾದ ಮೃಷಾನಂದದ ಸ್ವರೂಪ ಹೇಳುತ್ತಾರೆ. ಅಸತ್ಯದ ಕಲ್ಪನೆ ಮಾಡುವಲ್ಲಿ ನಿಪುಣರಾಗಿರುವಂಥವರು ಮನಸ್ಸಿನಲ್ಲಿ ವಿಚಾರ ಮಾಡುವುದೇನೆಂದರೆ ಎಂಥ ಬಲೆ ಬೀಸುವುದರಿಂದ ಜನರನ್ನು ವಶಪಡಿಸಿಕೊಂಡು ಧನ ಸಂಗ್ರಹಿಸುವೆನು, ಎಂಥ ರಸಾಯನ ವಿದ್ಯೆಯ ಲೋಭ ತೋರಿಸುವುದು, ಎಂಥ ಮಂತ್ರದ, ತಂತ್ರದ ವ್ಯಂತರ ಇಂದ್ರಜಾಲ ವಿದ್ಯೆಯ ಚಮತ್ಕಾರ ತೋರಿಸುವುದು, ಯಾವುದರಿಂದ ಈ ಜನರು ನನ್ನ ಆಧೀನರಾಗಿ ಹೋಗುವರು, ಯಾವಾಗ ಈ ಜನರು ತಮ್ಮನ್ನು ತಾವೇ ಮರೆತು ತನ್ನ ಆಧೀನರಾಗಿ ಹೋಗುತ್ತಾರೆ ಆಗಲೇ ನನ್ನ ವಚನ ಕಲೆಯು ಸಾರ್ಥಕವಿದೆ.

ಪಾಪಿಗಳು ಪರಲೋಕದ ಭಯದಿಂದ ರಹಿತರಾಗಿ ತಮ್ಮ ಪಾಂಡಿತ್ಯದ ಬಲದಿಂದ ಕಾಲ್ಪನಿಕ ಶಾಸ್ತ್ರಗಳ ರಚನೆ ಮಾಡಿ ಜಗತ್ತಿಗೆ ವಿಪರೀತ ಧರ್ಮ ತಿಳಿಸುವುದು, ಹಿಂಸೆ ಮೊದಲಾದ ಆರಂಭದಲ್ಲಿ ಯಜ್ಞಾದಿಗಳಿಂದ ಧರ್ಮ ತಿಳಿಸುವುದು, ರಾಗ-ದ್ವೇಷಿ ದೇವತೆಗಳಿಂದ ಐಚ್ಛಿಕಕಾರ್ಯದ ಸಿದ್ಧಿ ತಿಳಿಸುವುದು, ದೇವತೆಗಳನ್ನು ಮಾಂಸಭಕ್ಷಕ, ಮದ್ಯಗುಡುಕರೆಂದು ತಿಳಿಸುವುದು, ದೇವತೆಗಳಿಗೆ ಕುರಿ, ಕೋಳಿ, ಕೋಣ ಮೊದಲಾದ ಜೀವಗಳನ್ನು ಕೊಂದು ಅರ್ಪಿಸುವುದರಿಂದ ಐಚ್ಛಿಕ ಕಾರ್ಯದ ಸಿದ್ಧಿಯಾಗುತ್ತದೆ, ವೈರಿಗಳು ವಿಧ್ವಂಸರಾಗುತ್ತಾರೆ, ರಾಜ್ಯಲಕ್ಷ್ಮಿ-ಧನಲಕ್ಷ್ಮಿ ಮೊದಲಾದವು ದೃಢವಾಗುತ್ತವೆ ಇವೇ ಮೊದಲಾದ ಅಸತ್ಯ ವಚನಗಳನ್ನು ಶಾಸ್ತ್ರದಲ್ಲಿ ಬರೆದಿಡುವುದು, ಆರಂಭ-ಪರಿಗ್ರಹವುಳ್ಳವರನ್ನು ಪಾಪದಲ್ಲಿ ಪ್ರವರ್ತನೆ ಮಾಡಿಸುವುದು; ದೇವತೆಗಳನ್ನು ಪ್ರಸನ್ನ ಮಾಡುವಂಥವರನ್ನು ಮೋಕ್ಷಮಾರ್ಗಿಗಳೆಂದು ತಿಳಿಸುವುದು, ಇವೇ ಮೊದಲಾಗಿ ಅತ್ಯಂತ ಅಸತ್ಯ ಧರ್ಮ ಶಾಸ್ತ್ರಗಳ ರಚನೆ ಮಾಡುವುದು, ರಾಗವನ್ನು ಹೆಚ್ಚಿಸುವಂಥ ಕಾಮವನ್ನು ಪುಷ್ಟಗೊಳಿಸುವಂಥ ರಾಜಕಥೆ, ಭೋಜನ ಕಥೆ, ಸ್ತ್ರೀಕಥೆ, ದೇಶಕಥೆಗಳನ್ನು ಹೇಳುವಲ್ಲಿ-ಕೇಳುವಲ್ಲಿ ಆನಂದ ಮನ್ನಿಸುವುದು; ಇತರರ ಸತ್ಯ-ಅಸತ್ಯ ದೋಷಗಳನ್ನು ಹೇಳುವಲ್ಲಿ, ತನ್ನ ದೊಡ್ಡಸ್ತಿಕೆ ಮಾಡಿಕೊಳ್ಳುವಲ್ಲಿ ಆನಂದ ಮನ್ನಿಸುವುದು ಅದು ಮೃಷಾನಂದವಿದೆ.

ಅಸತ್ಯದ ಬಲದಿಂದ ಅಸತ್ಯವಂತರನ್ನು ಸತ್ಯವಂತರನ್ನಾಗಿ, ಸತ್ಯವಂತರನ್ನು ಅಸತ್ಯವಂತರನ್ನಾಗಿ ಮಾಡಿ ತೋರಿಸುವದು, ದೋಷಯುಕ್ತರನ್ನು ನಿರ್ದೋಷರೆಂದು ಹೇಳುವುದು, ನಿರ್ದೋಷರನ್ನು ದೋಷಯುಕ್ತರೆಂದು ಹೇಳುವುದು, ಮತ್ತು ಈ ಜನರಂತೂ ಮೂರ್ಖರಿದ್ದಾರೆ, ಜ್ಞಾನ ವಿಚಾರದಿಂದ ರಹಿತರಿದ್ದಾರೆಂದು ವಿಚಾರ ಮಾಡಿ, ಇವರನ್ನು ತಮ್ಮ ವಚನಗಳ ಪ್ರಾವೀಣ್ಯತೆಯಿಂದ ಅನರ್ಥಕಾರ್ಯಗಳಲ್ಲಿ ಪ್ರವರ್ತನೆ ಮಾಡಿಸಿ, ಭ್ರಷ್ಟಗೊಳಿಸಿ ಅವರ ಧನ ಸಂಪತ್ತುಗಳನ್ನು ಕಸಿದು ಕೊಳ್ಳುವೆನು ಇದರಲ್ಲಿ ಒಂದಿಷ್ಟೂ ಸಂಶಯವಿಲ್ಲ ಇವೇ ಮೊದಲಾಗಿ ಅನೇಕ ಅಸತ್ಯ ಸಂಕಲ್ಪ-ವಿಕಲ್ಪ ಮಾಡುತ್ತಿರುವುದು ಅದು ನರಕಗತಿಗೆ ಕಾರಣಭೂತವಾದ ಮೃಷಾನಂದ ನಾಮದ ಎರಡನೆಯ ರೌದ್ರಧ್ಯಾನವಿದೆ.

**ಚೌರ್ಯಾನಂದ ರೌದ್ರಧ್ಯಾನ :** ಈಗ ಮೂರನೆಯ ಚೌರ್ಯಾನಂದ ನಾಮದ ರೌದ್ರಧ್ಯಾನದ ಸ್ವರೂಪ ಹೇಳುತ್ತಾರೆ. ಚೋರಿಯ ಉಪದೇಶದಲ್ಲಿ ಬುದ್ಧಿವಂತಿಕೆ ತೋರಿಸುವುದು. ಕಳವು ಮಾಡುವ ಕಲೆಯಲ್ಲಿ ನೈಪುಣ್ಯತೆಯು

ಅದು ಚೌರ್ಯಾನಂದವಿದೆ. ಇತರರ ಧನ ಹರಣ ಮಾಡುವ ಸಲುವಾಗಿ ಹಗಲಿರುಳು ಚಿಂತನೆ ಮಾಡುವುದು, ಕಳವು ಮಾಡಿ ಹಣ ತರುವಲ್ಲಿ ಅತ್ಯಂತ ಹರುಷ ಮನ್ನಿಸುವುದು ಅದು ಚೌರ್ಯಾನಂದವಿದೆ. ಬೇರೆ ಯಾವನಾದರೂ ಕಳವಿನಿಂದ ಹಣ ಸಂಪಾದನೆ ಮಾಡಿದ್ದರೆ ಅವನನ್ನು ನೋಡಿ, ನೋಡು ! ಇವನಿಗೆ ಅದೆಷ್ಟು ಧನವು ಕೈಗೆ ಬಂದು ಬಿಟ್ಟಿದೆ, ನನಗೆ ಇತರರ ಧನವು ಕೈಗೆ ಹೇಗೆ ಬರುವುದು, ಯಾವ ಉಪಾಯ ಮಾಡಲಿ, ಯಾರ ಸಹಾಯ ತೆಗೆದುಕೊಳ್ಳಲಿ, ಹೇಗೆ ಅಪಹರಿಸಿಕೊಳ್ಳಲಿ ? ನನ್ನ ಅಂಥ ಪುಣ್ಯದ ಉದಯವು ಯಾವಾಗ ಬರುವುದು, ಯಾವಾಗ ಇನ್ನೊಬ್ಬರದು ಜಾರಿದ, ಬಿದ್ದ, ಮರೆತು ಹೋದ ಧನವು ನಮ್ಮ ಕೈಗೆ ಬಂದು ಬಿಡುವುದು ? ಬೇರೆ ಯಾವನಾದರೂ ಕದ್ದು ತಂದು ನನಗೆ ಒಪ್ಪಿಸುವನು, ಕಳವಿನ ವಸ್ತುವು ನಮ್ಮ ಹತ್ತಿರ ಅಲ್ಪ ಬೆಲೆಯಲ್ಲಿ ಬಂದು ಬಿಡುವುದು, ಮತ್ತು ಅತ್ಯಂತ ಬೆಲೆ ಬಾಳುವ ರತ್ನ ಚಿನ್ನ ಮೊದಲಾದುವನ್ನು ನನಗೆ ಯಾರಾದರೂ ಮರೆತು ತಪ್ಪಿ ಅಲ್ಪ ಬೆಲೆಯಲ್ಲಿ ಮಾರಿ ಬಿಟ್ಟರೆಂದರೆ ಅಧಿಕ ಲಾಭವಾಗಿ ಹೋಗುವುದೆಂದು ವಿಚಾರ ಮಾಡುವುದು ಅದೆಲ್ಲವು ಚೌರ್ಯಾನಂದವಿದೆಯೆಂದು ತಿಳಿದುಕೊಳ್ಳಬೇಕು.

ಯಾವನೋ ಅಜ್ಞಾನಿ ಅಥವಾ ಬಾಲಕನು ನನಗೆ ಅಧಿಕ ಬೆಲೆಯುಳ್ಳ ವಸ್ತುವನ್ನು ಅಲ್ಪ ಬೆಲೆಯಲ್ಲಿ ಕೊಡಬೇಕೆಂದು ಚಿಂತಿಸುವುದು ಅದು ಚೌರ್ಯಾನಂದವಿದೆ. ಈ ರಕ್ಷಕನು ಸತ್ತು ಹೋದರೆ, ಧನದ ಯಜಮಾನನು ಸತ್ತು ಹೋದರೆ ಧನವು ನನ್ನ ಹತ್ತಿರವೇ ಉಳಿಯುವುದೆಂದು ಚಿಂತಿಸುವುದು ಅದು ಚೌರ್ಯಾನಂದವಿದೆ. ಯಾವನೋ ಬಲಶಾಲಿಯ, ಸೇನಾನಿಯ ಸಹಾಯ ಪಡೆದು ಮತ್ತು ಅಧಿಕ ಪ್ರಕಾರದಿಂದ ಉಪಾಯ ಮಾಡಿ ಇಲ್ಲಿ ಹೆಚ್ಚು ಕಾಲದಿಂದ ಸಂಗ್ರಹಿಸಿರುವ ಧನವನ್ನು ಇಡಲಾಗಿದೆ. ಅದನ್ನು ಗ್ರಹಣ ಮಾಡುವೆನು ಯಾವುದಾದರೂ ಕಪಟದಿಂದ, ವಚನ ಚಾತುರ್ಯದಿಂದ, ಪುರುಷಾರ್ಥದಿಂದ ಪ್ರಾಣವನ್ನು ಪಣಕ್ಕೊಡ್ಡಿ ಅಥವಾ ಅವರುಗಳನ್ನು ಕೊಂದು ಹಾಕಿ ಅವರ ಧನವನ್ನು ಗ್ರಹಣ ಮಾಡಿದಾಗಲೇ ನನ್ನ ಪುರುಷಾರ್ಥವು ಸಾರ್ಥಕವಿದೆಯೆಂದು ಮೊದಲಾಗಿ ಚಿಂತಿಸುವುದೆಲ್ಲವೂ ಚೌರ್ಯಾನಂದ ರೌದ್ರಧ್ಯಾನವಿದೆ. ಅದು ನರಕಗತಿಗೆ ಕಾರಣವಿದೆ.

**ಪರಿಗ್ರಹಾನಂದ ರೌದ್ರಧ್ಯಾನ :** ಈಗ ನಾಲ್ಕನೆಯ ಪರಿಗ್ರಹಾನಂದ ರೌದ್ರಧ್ಯಾನದ ಸ್ವರೂಪ ಹೇಳುತ್ತಾರೆ. ಹೆಚ್ಚು ಪರಿಗ್ರಹ ಬೆಳೆಸುವ ಸಲುವಾಗಿ, ಹೆಚ್ಚು ಆರಂಭ ಮಾಡುವ ಸಲುವಾಗಿ ಚಿಂತನ ಮಾಡುವುದು ಅದು ಪರಿಗ್ರಹಾನಂದ ರೌದ್ಯಧ್ಯಾನವಿದೆ. **ವಿಷಯಗಳಲ್ಲಿ ರಾಗ ಹಾಗೂ ಅಭಿಮಾನದ ವಶನಾಗಿ ಹೋದವನು ವಿಚಾರಿಸುವುದೇನೆಂದರೆ –** ನಮ್ಮ ಭಾಗ್ಯವು ಪಕ್ವವಾದರೆ ನಾವು ವಾಸಿಸಲು ಒಂದು ಸುಂದರವೂ ಭವ್ಯವೂ ಆದ ಮನೆಯ ನಿರ್ಮಾಣವಾಗುವುದು. ಅದರಲ್ಲಿ ಅನೇಕ ಚಿತ್ರಶಾಲೆಗಳು, ಚಿನ್ನದ ಕಂಭಗಳು, ಚಿನ್ನದ ಸರಪಳಿಯಿಂದ ತೂಗುತ್ತಿರುವ ತೂಗು ಮಂಚಗಳು, ಅನೇಕ ಋತುಗಳ ಅನೇಕ ಮಹಲುಗಳು, ಕೋಟೆ, ಕೊತ್ತಳ, ಗೋಪುರ, ದೊಡ್ಡದಾದ ಪ್ರವೇಶದ್ವಾರ ಒಟ್ಟಿನಲ್ಲಿ ಆ ನನ್ನ ಮನೆಯ ಅಂತರ್ಬಾಹ್ಯ ವಿಭೂತಿಯನ್ನು ನೋಡಿ ಜನರಿಗೆ ಆಶ್ಚರ್ಯವನ್ನುಂಟು ಮಾಡುವಂತೆ ನಿರ್ಮಿಸುವೆನು. ಅನೇಕ ಉಪವನಗಳು, ಉಪವನದಲ್ಲಿ ಅನೇಕ ಪ್ರಾಸಾದಗಳು, ಜಲಯಂತ್ರ, ವಿವಿಧ ವರ್ಣದ ಕಾರಂಜಿಗಳು, ಜಲ ಪ್ರಪಾತ, ಜಲಕುಂಡ, ಸರೋವರ, ಕೂಪ, ಅನೇಕ ಸ್ನಾನಗೃಹಗಳು, ಜಲಕ್ರೀಡೆಯ, ಕಾಮಕ್ರೀಡೆಯ, ವನಭೋಜನದ ಸ್ಥಾನಗಳು, ನಾಟ್ಯಶಾಲೆಗಳು, ಸಂಗೀತ ಶಾಲೆಗಳು, ವಿವಿಧ ವರ್ಣ, ವಿವಿಧ ಭಂಗಿಗಳಲ್ಲಿ ಚಿತ್ರಬಿಡಿಸಿದ ಚಿತ್ರಶಾಲೆಗಳು ಹೀಗೆ ಹತ್ತು ಹಲವು ಬಗೆಯಾಗಿ ನನ್ನ ಮನೆಯು ನಿರ್ಮಾಣವಾದಾಗಲೇ ನನಗೆ ನಿಜವಾದ ಶಾಂತಿಯಾಗುವುದು. ಅನೇಕ ಋತುಗಳ ಫಲ-ಪುಷ್ಪಗಳನ್ನು ನಮ್ಮ ಎದುರಿಗೆ ಇರಿಸಿದರೆ ಮತ್ತು ನಮ್ಮ ಮನೆಯಲ್ಲಿ ಚಿನ್ನಮಯ, ರತ್ನಮಯ, ವಸ್ತ್ರಮಯದಂಥ **ವಿವಿಧ ಸಾಮಗ್ರಿಗಳು ಅವು ಅನ್ಯರಲ್ಲಿ ನೋಡಲಿಕ್ಕೂ ದೊರಕದಂಥವು ನಮ್ಮಲ್ಲಿ ಬಂದು ಬಿಟ್ಟರೆ ನಾನು ಧನ್ಯನಾಗಿ ಹೋಗುವೆನೆಂದು ಅಂದುಕೊಳ್ಳುವುದು ಚಿಂತಿಸುವುದು ಅದು ಪರಿಗ್ರಹಾನಂದವಿದೆ.**

ನನ್ನ ಶರೀರದ ಅದ್ಭುತ ರೂಪು-ಸೌಂದರ್ಯವನ್ನು ನೋಡುವುದಕ್ಕೆ ಸಾವಿರಾರು ಸ್ತ್ರೀ-ಪುರುಷರು ಅತ್ಯಂತ ಅಭಿಲಾಷೆ ಪಡುತ್ತಿರಬೇಕು. ಪಾದದಿಂದ ಮಸ್ತಕದವರೆಗೆ ರತ್ನಾಭರಣಗಳಿರಬೇಕು, ಪಚ್ಚರತ್ನ-ಮಾಣಿಕರತ್ನ-ಇಂದ್ರನೀಲ ರತ್ನಗಳಿಂದ ಹಾಗೂ ಮಣಿ ಮುತ್ತುಗಳಿಂದ ನಿರ್ಮಿಸಿದ ವಿವಿಧಾಭರಣಗಳಿರಬೇಕು. ಇವೆಲ್ಲವುಗಳ ಶೋಭೆಯನ್ನು ಇನ್ನಷ್ಟು ಹೆಚ್ಚಿಸುವಂಥ ನಯವಾದ ಕೋಮಲವಾದ ವಸ್ತ್ರಗಳಿರಬೇಕು; ಅನೇಕ ಪ್ರಕಾರದ ಚಿನ್ನಮಯ, ರತ್ನಮಯವಾದ

ಉಪಕರಣಗಳಿರಬೇಕು ; ಕೋಮಲ ಸುಕುಮಾರ ಶರೀರವುಳ್ಳ ಮುಟ್ಟಿದರೆ ಮಾಸಿ ಹೋಗುವಂಥ, ತಮ್ಮ ಲಾವಣ್ಯದಿಂದ ದೇವಾಂಗನೆಯರನ್ನು ಹೀಯಾಳಿಸುವಂಥ ಶೀಲ, ಸಂಯಮ, ಹಿತ-ಮಿತ ಮೃದುವಚನ ಸಹಿತ ಯೌವ್ವನದ ಭಾರದಿಂದ ತುಂಬಿ ತುಳುಕುತ್ತಿರುವ ಪತ್ನಿಯರು ಜತೆಯಲ್ಲಿರುವುದು ; ಆಜ್ಞಾಧಾರಕ, ಶೂರವೀರ, ಧೈರ್ಯಶಾಲಿ, ವಿದ್ಯಾವಂತ ವಿನಯವಂತರಾದ ಪುತ್ರರಿರುವುದು ; ನಮ್ಮ ಮನದಿಚ್ಛೆಯನ್ನು ತಿಳಿದು ಆಜ್ಞಾಪಿಸುವ ಮೊದಲೇ ಕಾರ್ಯ ಮಾಡುವಂಥ ಮಹಾ ಚತುರರೂ ಪ್ರವೀಣರೂ ಸ್ವಾಮಿ ಭಕ್ತರೂ ಆದ ಸೇವಕರಿರುವುದು ಹೀಗೆ ಸಮಸ್ತ ಜನರಿಂದ ಅಧಿಕವಾದ ಐಶ್ವರ್ಯ ಪರಿವಾರ ವಿಭೂತಿಯಿರುವುದರ ಚಿಂತನೆ ಮಾಡುವುದು ಆನಂದ ಮನ್ನಿಸುವುದು ಮತ್ತು ತಮ್ಮ ಧನ ಸಂಪತ್ತು ಹೆಚ್ಚುತ್ತ ಹೋಗುವುದರ ಆನಂದ ಮನ್ನಿಸುವುದು ಅದು ಪರಿಗ್ರಹಾನಂದವಿದೆ.

ತಮ್ಮ ಮನೆಯಲ್ಲಿ ಚಿನ್ನದ, ಬೆಳ್ಳಿಯ, ತಾಮ್ರದ, ಹಿತ್ತಾಳೆಯ, ಕಂಚಿನ, ಲೋಹದ, ಪಾಷಾಣದ, ಕಟ್ಟಿಗೆಯ, ಮಣ್ಣಿನ, ಗಾಜಿನ, ಕಾಗದದ, ಬಟ್ಟೆಯ ಯಾವುದರದೇ ಪರಿಗ್ರಹವು ಹೆಚ್ಚಿದರೆ, ಯಾರಾದರೂ ಕೊಟ್ಟರೆ, ಯಾರದಾದರೂ ಉಳಿದರೆ, ಬೆಲೆ ಕೊಟ್ಟು ಕೊಂಡುಕೊಂಡರೆ ಆ ಎಲ್ಲ ಪರಿಗ್ರಹವನ್ನು ನೋಡಿ ವಿಚಾರ ಮಾಡಿ ಸಂತೋಷಪಡುವುದು ಆನಂದ ಮನ್ನಿಸುವುದು, ಪರಿಗ್ರಹದಿಂದ ತಮ್ಮನ್ನು ಉಚ್ಚನೆಂದು ಮನ್ನಿಸುವುದು ಅದೆಲ್ಲವೂ ಪರಿಗ್ರಹಾನಂದ ರೌದ್ರಧ್ಯಾನವಿದೆ.

**ಹೀಗೂ ಚಿಂತನೆ ಮಾಡುತ್ತಾರೆ -** ಯಾರದೇ ಭೂಮಿ-ನೆಲ ನನಗೆ ದೊರಕಲಿ, ಆತನ ಆಜೀವಿಕೆಯು ನನಗೆ ಬಂದು ಬಿಡಲಿ, ಇಂಥವನು ಭವಿಷ್ಯದಲ್ಲಿ ಯಾವುದೇ ಕಾರ್ಯ ಮಾಡಲು ಯೋಗ್ಯನಿಲ್ಲ ಒಂದು ವೇಳೆ ಅವನು ಸತ್ತು ಹೋದರೆ ಅವನ ಆಸ್ತಿ-ಸಂಪತ್ತಿನ ಮೇಲೆ ನನಗೆ ಅಧಿಕಾರವಾಗಲಿ. ಆತನ ಚಿಕ್ಕ ಬಾಲಕ, ಅಸಮರ್ಥಪತ್ನಿಯನ್ನು ತಿರಸ್ಕರಿಸಿ ದೂರ ತಳ್ಳಿ ನಾನೊಬ್ಬನೇ ನಿಷ್ಕಂಟಕನಾಗಿ ಸಂಪತ್ತನ್ನು ಭೋಗಿಸುವೆನೆಂದು ಅಭಿಲಾಷೆ ಪಡುವುದು ಅದು ಪರಿಗ್ರಹಾನಂದವಿದೆ. ಇತರರ ರಾಜ್ಯ ಸಂಪತ್ತು ಧನ, ಭೂಮಿ, ಮನೆ, ಆಜೀವಿಕೆ, ಸುಂದರ ಸ್ತ್ರೀ, ಆಭರಣ, ಆನೆ, ಕುದುರೆ, ಮೊದಲಾದುವನ್ನು ಬಲವಂತದಿಂದ ಕಿತ್ತುಕೊಳ್ಳುವ ಬುದ್ಧಿಯ, ಶರೀರದ, ಸಹಾಯಕರ, ಕಪಟರೂಪದ ಅಸತ್ಯ ಉಪಾಯ, ಪುರುಷಾರ್ಥ ಇತ್ಯಾದಿಗಳ ಬಲ ಪಡೆಯುವ ತನ್ನನ್ನು ಮಹಾನ ಆನಂದಮಯನೆಂದು ಮನ್ನಿಸುವುದೆಲ್ಲವು ಪರಿಗ್ರಹಾನಂದ ರೌದ್ರಧ್ಯಾನವಿದೆ.

ಈ ರೌದ್ರಧ್ಯಾನವು ಅನೇಕ ಬಾರಿ ನರಕಪ್ರಾಪ್ತ ಮಾಡಿಸುವಂಥದ್ದು, ಅನೇಕ ಬಾರಿ ತಿರ್ಯಂಚಗಳ ಘೋರ ದುಃಖದ, ಅನೇಕ ಭವಗಳಲ್ಲಿ ಕುಮನುಷ್ಯ, ಘೋರ ದರಿದ್ರ, ಘೋರ ರೋಗಗಳನ್ನುತ್ಪನ್ನ ಮಾಡುವಂಥದ್ದೆಂದು ತಿಳಿದುಕೊಂಡು ದೂರದಿಂದಲೇ ಇದರ ತ್ಯಾಗ ಮಾಡಬೇಕು. ಈ ರೌದ್ರಧ್ಯಾನವು ಕೃಷ್ಣಲೇಶ್ಯೆಯ ಬಲ ಸಹಿತವಿದ್ದು ಐದನೇ ಗುಣಸ್ಥಾನದವರೆಗೆ ಇರುತ್ತದೆ, ಆದರೆ ಸಮ್ಯಗ್ದೃಷ್ಟಿ-ಅವ್ರತಿ ಗೃಹಸ್ಥರಿಗೆ ಮತ್ತು ವ್ರತಧಾರಕ - ಶ್ರಾವಕರಿಗೆ ರೌದ್ರಧ್ಯಾನವು ನರಕ ಮೊದಲಾದವುಗಳಿಗೆ ಕಾರಣವಾಗುವುದಿಲ್ಲ.

ಯಾವುದೇ ಸಮಯದಲ್ಲಿ ಎಂದರೆ ತಮ್ಮ ಮಕ್ಕಳ ಮದುವೆ ಮಾಡುವಲ್ಲಿ, ತಮ್ಮ ವಾಸದ ಸಲುವಾಗಿ ಮನೆ ಕಟ್ಟಿಸುವಲ್ಲಿ, ನ್ಯಾಯ ಮಾರ್ಗದಿಂದ ಆಜೀವಿಕೆಯಲ್ಲಿ, ಲಾಭವಾಗುವ ಕಾರ್ಯಗಳ ಚಿಂತನದಲ್ಲಿ ಕೂಡ ಹಿಂಸೆಯಾಗುತ್ತದೆ. ಅವನ್ನು ಪಾಪದ ಕಾರಣ ಅಸತ್ಯ ಕಾರ್ಯವೆಂದು ತಿಳಿದುಕೊಂಡು ಆತ್ಮನಿಂದೆಯನ್ನು ಮಾಡಿಕೊಳ್ಳುತ್ತಾನೆ, ಆದಾಗ್ಯೂ ತನ್ನ ಆರಂಭದ ಕಾರ್ಯಗಳಲ್ಲಿ ಸ್ವಲ್ಪ ಹರ್ಷವೂ ಆಗುತ್ತದೆ. ತಮ್ಮ ನ್ಯಾಯಮಾರ್ಗದಿಂದ ಪ್ರಾಮಾಣಿಕ ಪರಿಗ್ರಹವು ಪ್ರಾಪ್ತವಾದ ಮೇಲೆ ಹರ್ಷವು ಆಗಿಯೇ ಆಗುತ್ತದೆ. ತಮ್ಮ ಧನವನ್ನು ಚೋರ ಮೊದಲಾದವರು ಹರಣ ಮಾಡುವ ಸಾಧ್ಯತೆಯಿಲ್ಲದಿರು-ವುದರಿಂದ ತಮ್ಮ ಸಂಪತ್ತಿಯ ರಕ್ಷಣೆಯ ಸಲುವಾಗಿ ಸುಳ್ಳು-ಕಪಟ ಮಾಡುತ್ತಿದ್ದರೂ ಕೂಡ ಅನ್ಯ ಜೀವಗಳ ಪ್ರಾಣ, ಧನ ಮೊದಲಾದುವನ್ನು ಹರಣ ಮಾಡುವ ಪ್ರವೃತ್ತಿ ಮಾಡುವುದಿಲ್ಲ. ತಮ್ಮ ರಕ್ಷಣೆಯ ಸಲುವಾಗಿ ಕಪಟದ ಗುರಾಣಿ ಹಿಡಿಯುತ್ತಾನೆ, ಆದರೆ ಇತರರ ಪ್ರಾಣಘಾತದ ಸಲುವಾಗಿ ಕಪಟದ ಗುರಾಣಿ-ಕರವಾಳ ಹಿಡಿಯುವುದಿಲ್ಲ. ಆದುದರಿಂದ ಶ್ರಾವಕರಿಗೆ ಆ ನರಕ ಮೊದಲಾದ ಕುಗತಿಯ ಕಾರಣವಿರುವಂಥ ರೌದ್ರಧ್ಯಾನದ ಭಾವವು ಆಗುವುದಿಲ್ಲ.

**ರೌದ್ರಧ್ಯಾನಿಯ ಬಾಹ್ಯ ಲಕ್ಷಣಗಳು :** ಸ್ವಭಾವದಿಂದಲೇ ಕ್ರೂರತೆ, ಇತರರಿಗೆ ಕಠೋರ ಶಿಕ್ಷೆ ಕೊಡುವುದು, ನಿರ್ದಯತನ, ಅತಿಶಯ ಕಪಟತನ, ಎಲ್ಲರ ದೋಷ ಗ್ರಹಣ ಮಾಡುವುದು ಇತ್ಯಾದಿ ಭಾವಗಳಿರುತ್ತವೆ. ಬಾಹ್ಯದಲ್ಲಿ

ಕಣ್ಣುಗಳನ್ನು ಕೆಂಪು ಮಾಡುವುದು, ಹುಬ್ಬು ಗಂಟಿಕ್ಕುವುದು, ಭಯಾನಕ ಆಕೃತಿ, ವಚನದಲ್ಲಿ ದುಷ್ಟತೆ ಇತ್ಯಾದಿ ಬಾಹ್ಯ ಚಿಹ್ನೆಗಳಿವೆ. ಕ್ಷಯೋಪಶಮಭಾವವಿದೆ, ಅದು ಅಂತರ್ಮುಹೂರ್ತಕಾಲವಿದೆ, ಅನಂತರ ಬೇರೆ ಬೇರೆಯಾಗಿ ಹೋಗುತ್ತದೆ.

ಈ ರೀತಿಯಿಂದ ನಾಲ್ಕು ಪ್ರಕಾರದ ಆರ್ತಧ್ಯಾನ ಮತ್ತು ನಾಲ್ಕು ಪ್ರಕಾರದ ರೌದ್ರಧ್ಯಾನದ ತ್ಯಾಗ ಮಾಡಿದ ಮೇಲೆ ಧರ್ಮಧ್ಯಾನವಾಗುತ್ತದೆ. ಅವನ್ನು ತ್ಯಾಗ ಮಾಡಿದಲ್ಲದೆ ಧರ್ಮಧ್ಯಾನದ ಭಾವನೆಯು ಅನಾದಿಯಿಂದ ಆಗಿಯೇ ಇಲ್ಲ. ಆದುದರಿಂದ ಧರ್ಮದ ಇಚ್ಛೆಯುಳ್ಳವರು ಎರಡೂ ದುರ್ಧ್ಯಾನಗಳ ಸ್ವರೂಪವನ್ನು ತಿಳಿದುಕೊಂಡು ತಮ್ಮ ಆತ್ಮನಲ್ಲಿ ಅಂಥ ಆರ್ತಧ್ಯಾನ ರೌದ್ರಧ್ಯಾನದ ಭಾವಗಳನ್ನೆಂದೂ ಆಗಗೊಡಬಾರದು.

**ಧರ್ಮಧ್ಯಾನ ಮತ್ತು ಅದರ ಭೇದ :** ಈಗ ಧರ್ಮಧ್ಯಾನದ ಸ್ವರೂಪದ ವರ್ಣನೆ ಮಾಡುತ್ತಾರೆ. ಈ ಧರ್ಮಧ್ಯಾನವು ಸಮ್ಯಗ್ದೃಷ್ಟಿಗಳಿಗೇ ಆಗುತ್ತದೆ. ಯಾವನೋ ಮಹಾಪುರುಷನು ರಾಗ-ದ್ವೇಷ-ಮೋಹರೂಪದ ಬಂಧನವನ್ನು ಕತ್ತರಿಸಿ ಪರಮ ಉದ್ಯಮಿಯಾಗಿ ಮಹಾಪುರುಷಾರ್ಥದಿಂದ ಒಮ್ಮೆ ಧರ್ಮಧ್ಯಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಯಾವ ಪ್ರಕಾರ ಕುಳಿತಾಗ, ನಿಂತಾಗ, ನಡೆವಾಗ, ನುಡಿವಾಗ, ಉಣ್ಣುವಾಗ, ವಿಷಯಗಳನ್ನು ಭೋಗಿಸುವಾಗ, ಕಷಾಯಗಳಲ್ಲಿ ಪ್ರವರ್ತಿಸುವಾಗ ಕೂಡ ಯತ್ನವಿಲ್ಲದೆಯೇ ಆರ್ತ-ರೌದ್ರ ಧ್ಯಾನಗಳಾಗಿ ಹೋಗುತ್ತವೆ, ಅದೇ ಪ್ರಕಾರ ಧರ್ಮಧ್ಯಾನವಾಗುವುದಿಲ್ಲ. ಸ್ಥಾನದ ನಿಮಿತ್ತದಿಂದ ಪರಿಣಾಮಗಳೂ ಶುಭ-ಅಶುಭವಾಗುತ್ತವೆ ; ಆದುದರಿಂದ ಧರ್ಮಧ್ಯಾನದ ಇಚ್ಛೆಯುಳ್ಳವರು ಪರಿಣಾಮಗಳನ್ನು ಕೆಡಿಸುವಂಥ ಅದೆಷ್ಟೋ ಸ್ಥಾನಗಳನ್ನು ದೂರದಿಂದಲೇ ತ್ಯಾಗ ಮಾಡಬೇಕಾಗುವುದು.

**ದೂಷಿತ ಸ್ಥಾನದಲ್ಲಿ ಪರಿಣಾಮವು ದೂಷಿತವೇ ಆಗುತ್ತದೆ.** ದುಷ್ಟ, ಹಿಂಸಕ, ಪಾಪಕರ್ಮ ಮಾಡುವಂಥ, ಪಾಪಕರ್ಮದಿಂದ ಆಜೀವಿಕೆ ಮಾಡುವಂಥ, ತೀವ್ರಕಷಾಯೀ, ನಾಸ್ತಿಕಮತೀ, ಧರ್ಮದ ದ್ರೋಹಿಗಳು ಎಲ್ಲಿ ಇರುತ್ತಾರೆ ಅಲ್ಲಿಯಂತೂ ಪರಿಣಾಮವು ಕ್ಲೇಶಪೂರ್ಣವಾಗುತ್ತದೆ. ದುಷ್ಟ ರಾಜನಿರುವಲ್ಲಿ, ರಾಜನ ದುಷ್ಟ ಮಂತ್ರಿಯಿರುವಲ್ಲಿ, ಪಾಖಂಡೀ-ಮಿಥ್ಯಾದೃಷ್ಟಿ-ವೇಷಧಾರಿಗಳ ಅಧಿಕಾರವಿರುವಲ್ಲಿ ಪರಿಣಾಮವು ಧರ್ಮಧ್ಯಾನದಲ್ಲಿ ತೊಡಗುವುದಿಲ್ಲ.

ಎಲ್ಲಿ ಪ್ರಜೆಗಳ ಮೇಲೆ ಪರಚಕ್ರ ಮೊದಲಾದವರ ಉಪದ್ರವವಾಗುತ್ತಿರುವುದು, ಪ್ರಜೆಗಳು ದುರ್ಭಿಕ್ಷ- ಮಹಾಮಾರಿ ಮೊದಲಾದ ಉಪದ್ರವ ಸಹಿತರಿರುವುದು, ವೇಶ್ಯೆಯರ ಸಂಚಾರವಿರುವುದು; ವ್ಯಭಿಚಾರಿಣಿಯರ ಸಂಕೇತ ಸ್ಥಾನವಿರುವುದು; ಆಚಾರ ಭ್ರಷ್ಟ ವೇಷಧಾರಿಗಳ ಸ್ಥಾನವಿರುವುದು, ಎಲ್ಲಿ ರಸಕರ್ಮ-ರಸಾಯನ ಕರ್ಮವಾಗುತ್ತಿರುವುದು; ಮಾರಣ-ತಾಡನ-ಉಚ್ಚಾಟನ ವಿದ್ಯೆಯ ಸಾಧಕರಿರುವುದು, ಎಲ್ಲಿ ಹಿಂಸೆ ಮೊದಲಾದ ಪಾಪ ಕರ್ಮದ ಉಪದೇಶಕ ಕಾಮಶಾಸ್ತ್ರ-ಯುದ್ಧಶಾಸ್ತ್ರ ಕಪಟೀ ಧೂರ್ತರು ನಿರ್ಮಿಸಿದ ಅಸತ್ಯ ಕಥೆಯ ಶಾಸ್ತ್ರಗಳ ಪ್ರರೂಪಣೆ ಮಾಡುತ್ತಿರುವುದು, ಎಲ್ಲಿ ಜೂಜು ಆಡುವವರು, ಮದ್ಯಪಾನ ಮಾಡುವವರಿರುವರು, ವ್ಯಭಿಚಾರೀ ನಿರ್ಲಜ್ಜ ದುಷ್ಟಾಚಾರಯುಕ್ತರಿರುವರು, ಎಲ್ಲಿ ಚಾಂಡಾಲ, ಭಿಲ್ಲ, ಧೀವರರ ಸಂಚಾರವಿರುವುದು; ದುಷ್ಟತಪಸ್ವಿಗಳು, ಸ್ತ್ರೀ ಪರಿಚಾರಕರು, ನಪುಂಸಕರ ಸಮಾಗಮವಿರುವುದು; ಎಲ್ಲಿ ದೀನ, ಯಾಚಕ, ರೋಗೀ, ವಿಕಲಾಂಗ, ಕುರುಡ, ಕುಂಟ, ಕಿವುಡರ ದುಃಖದ ಶಬ್ದಗಳಾಗುತ್ತಿವೆ; ಎಲ್ಲಿ ಬೇಟೆ ಮಾಡುವಂಥ ಹಿಂಸಕ ಜೀವ, ಕಲಹ, ಕಾಮಧಾರಕ ಪಶು-ಮನುಷ್ಯರಿರುವುದು; ಎಲ್ಲಿ ಜೀವಗಳ ಬಿಲ, ತೃಣ, ವಿಷಮ ಪಾಷಾಣ, ಮೂಳೆ, ಮಾಂಸ, ರಕ್ತ, ಮಲ, ಮೂತ್ರ, ಪಂಚೇಂದ್ರಿಯ ಜೀವಗಳ ಕಳೇವರ, ಕೆಸರು ಮೊದಲಾದವುಗಳಿಂದ ದೂಷಿತವಾದ ಸ್ಥಾನವಿರುವುದು; ಎಲ್ಲಿ ದುರ್ಗಂಧ ಬರುತ್ತಿರುವುದು; ನಾಯಿ, ನರಿ, ಬೆಕ್ಕು ಇತ್ಯಾದಿ ದುಷ್ಟ ಜೀವಗಳಿರುವವು; ಮತ್ತು ಶುಭ ಪರಿಣಾಮವನ್ನು ಕೆಡಿಸುವಂಥ, ಧ್ಯಾನವನ್ನು ನಾಶ ಮಾಡುವಂಥ ಸ್ಥಾನವನ್ನು ದೂರದಿಂದಲೇ ತ್ಯಾಗ ಮಾಡುವುದು ಯೋಗ್ಯವಿದೆ. ಏಕೆಂದರೆ ದೂಷಿತ ಸ್ಥಾನದ ಯೋಗದಿಂದ ಪರಿಣಾಮವು ಅವಶ್ಯವಾಗಿ ಕೆಟ್ಟು ಹೋಗುತ್ತದೆ. ಆದುದರಿಂದ **ಯಾರು ಶುಭ ಧ್ಯಾನದ ಇಚ್ಛೆಯುಳ್ಳವರಿದ್ದಾರೆ ಅವರು ಸ್ವಪ್ನದೊಳಗೆ ಕೂಡ ದೂಷಿತ ಸ್ಥಾನಗಳಲ್ಲಿ ನಿವಾಸ ಮಾಡಬಾರದು.**

ಧರ್ಮಧ್ಯಾನದ ಸಲುವಾಗಿ ಸುಂದರ, ಮನಸ್ಸಿಗೆ ಪ್ರಿಯ, ಶೀತ-ಉಷ್ಣ-ಆತಪ-ವರ್ಷಾ ಅತಿಶಯ ಪವನದ ಬಾಧೆಯಿಂದ ರಹಿತ, ಸೊಳ್ಳೆ, ನೊಣ, ಅನ್ಯ ವಿಕಲತ್ರಯ ಜೀವಗಳ ಬಾಧೆಯಿಂದ ರಹಿತ, ಶುದ್ಧ ಭೂಮಿ, ಶಿಲಾತಲ,

ಕಾಷ್ಠಾಸನವಿದ್ದರೆ ಅದರ ಮೇಲೆ ಕುಳಿತುಕೊಂಡು, ಶೂನ್ಯಗ್ರಹ, ಪುರಾತನ ಉಪವನ, ವನದ ಜಿನಮಂದಿರ, ಮನೆಯಲ್ಲಿ ನಿರಾಕುಲ ಏಕಾಂತ ಸ್ಥಾನವು ಬಾಧಾರಹಿತವಿರಬೇಕು, ರಾಗ-ದ್ವೇಷಗಳನ್ನುತ್ಪನ್ನ ಮಾಡುವಂಥದಿರಕೂಡದು, ಕೋಲಾಹಲರಹಿತವಿರಬೇಕು, ನೃತ್ಯ-ಗೀತ-ವಾದ್ಯಗಳಿಂದ ರಹಿತವಿರಬೇಕು, ಕಲಹ ವಿಸಂವಾದದಿಂದ ರಹಿತ, ಹಿಂಸೆಯಿಂದ ರಹಿತವಿದ್ದರೆ ಅಲ್ಲಿ ಧರ್ಮ ಧ್ಯಾನದ ಇಚ್ಛೆಯುಳ್ಳವರಾಗಿ ನಿಶ್ಚಲತೆಯಿಂದ ಕುಳಿತುಕೊಳ್ಳಬೇಕು. **ಧರ್ಮ ಧ್ಯಾನದಲ್ಲಿ ಸ್ಥಾನದ ಶುದ್ಧತೆ, ಆಸನದ ಶುದ್ಧತೆಯು ಮುಖ್ಯಕಾರಣವಿದೆ.** ಯಾರ ಆಸನವು ಎರಡು ಪ್ರಹರದವರೆಗೆ ಕೂಡ ದೃಢವಿರುವುದಿಲ್ಲ ಅವರ ಸೇವೆ-ಕೃಷಿ-ವಾಣಿಜ್ಯ ಮೊದಲಾದವುಗಳೂ ಕೆಟ್ಟು ಹೋಗುವುವೆಂದ ಮೇಲೆ ಧರ್ಮಧ್ಯಾನವು ಆಸನದ ದೃಢತೆಯಿಲ್ಲದೆ ಹೇಗೆ ಸಂಭವಿಸುವುದು ?

**ಮೂರು ಪ್ರಕಾರದ ಉತ್ತಮ ಸಂಹನನದ ಧಾರಕರಿಂದಲೇ ಧ್ಯಾನದಲ್ಲಿ ದೃಢತೆಯಾಗುತ್ತದೆ.** ಯಾರದು ವಜ್ರಮಯ ಸಂಹನನವಿದೆ. ಮಹಾನ ಬಲ-ಪರಾಕ್ರಮದ ಧಾರಕರಿದ್ದಾರೆ, ದೇವ-ಮನುಷ್ಯರ ಘೋರ ಉಪದ್ರವದಿಂದ-ಉಪಸರ್ಗದಿಂದ ಚಂಚಲರಾಗುವುದಿಲ್ಲ, ಯಾರ ಆಸನ ಹಾಗೂ ಮನಸ್ಸು ದೃಢವಿರುತ್ತದೆ, ಅವರಂತೂ ಎಂಥದೇ ಸ್ಥಾನ ಮತ್ತು ಕುಳಿತುಕೊಳ್ಳುವ ಆಸನವಿರಲಿ ಅದರ ಮೇಲಿಂದಲೇ ಧ್ಯಾನ ಮಾಡುತ್ತಾರೆ. ಯಾರು ಹೀನ ಸಂಹನನದ ಧಾರಕರಿದ್ದಾರೆ ಅವರಂತೂ ಸ್ಥಾನದ ಶುದ್ಧತೆ ಮತ್ತು ಆಸನದ ಶುದ್ಧತೆಯನ್ನು ಅವಶ್ಯವಾಗಿ ನೋಡಿಯೇ ಧರ್ಮಧ್ಯಾನದಲ್ಲಿ ಪ್ರವರ್ತನೆ ಮಾಡುವುದು ಶ್ರೇಷ್ಠವಿದೆ. ಯಾರ ಚಿತ್ತವು ಸಂಸಾರ-ಶರೀರ-ಭೋಗಗಳಿಂದ ವಿರಕ್ತವಾಗಿ ಹೋಗಿದೆ, ಚಿತ್ತದಲ್ಲಿ ವಿಕ್ಷಿಪ್ತತೆಯಿರುವುದಿಲ್ಲ, ಸಂಶಯರಹಿತ ಆತ್ಮಜ್ಞಾನೀ ಅಧ್ಯಾತ್ಮರಸದಲ್ಲಿ ನೆನೆದು ನಿಶ್ಚಲರಾಗಿದ್ದಾರೆ ಅವರಿಗೆ ಸ್ಥಾನದ ಮತ್ತು ಆಸನದ್ದೂ ನಿಯಮವಿಲ್ಲ, ಯಾರು ದರ್ಶನ, ಜ್ಞಾನ, ಚಾರಿತ್ರದಿಂದ ಯುಕ್ತರಿದ್ದಾರೆ ಜಿತೇಂದ್ರಿಯರಿದ್ದಾರೆ ಅವರು ಅನೇಕ ಅವಸ್ಥೆಗಳಿಂದ ಧ್ಯಾನದ ಸಿದ್ಧಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

**ಧರ್ಮಧ್ಯಾನಿಯು ಹೀಗೆ ಚಿಂತನೆ ಮಾಡುತ್ತಾನೆ.** ಓಹೋ ! ಮಹಾನ ಅನರ್ಥವಿದೆ, ನಾನು ಅನಂತ ಗುಣಗಳ ಧಾರಕನಾಗಿಯೂ ಕೂಡ ಸಂಸಾರರೂಪದ ವನದಲ್ಲಿ ಅನಾದಿಕಾಲದ ಕರ್ಮರೂಪದ ವೈರಿಯಿಂದ ಪೂರ್ಣರೂಪವಾಗಿ ಮೋಸ ಹೋಗಿದ್ದೇನೆ. ಓಹೋ ! ನಾನು ಅಜ್ಞಾನ ಭಾವದಿಂದ ಕರ್ಮರೂಪದ ಉದಯದಿಂದಾದ ರಾಗ-ದ್ವೇಷ-ಮೋಹ ವನ್ನು ನನ್ನ ಸ್ವರೂಪವೆಂದು ತಿಳಿದುಕೊಂಡು ಘೋರ ದುಃಖರೂಪದ ಸಂಸಾರದಲ್ಲಿ ಪರಿಭ್ರಮಣ ಮಾಡಿದ್ದೇನೆ. ಈಗ ನನಗೆ ಯಾವುದೇ ಕರ್ಮದ ಉಪಶಮದಿಂದ ಪರಮ ಉಪಕಾರಿಯಾದ ಜಿನೇಂದ್ರರ ಪರಮಾಗಮದ ಉಪದೇಶದ ಪ್ರಾಪ್ತಿಯಾಗುವುದರಿಂದ ರಾಗರೂಪದ ಜ್ವರವು ನಾಶವಾಗಿ ಹೋಗಿದೆ, ಮತ್ತು **ಮೋಹನಿದ್ರೆಯು ದೂರವಾಗುವುದರಿಂದ ಸ್ವಭಾವ ಮತ್ತು ಪರಭಾವದ ಜ್ಞಾನವು ಪ್ರಾಪ್ತವಾಗಿದೆ.** ಈಗ ಈ ಕಾಲದಲ್ಲಿ ಶುದ್ಧಧ್ಯಾನರೂಪದ ಕರವಾಳದಿಂದ ಕರ್ಮಗಳ ನಾಶ ಮಾಡಿದೆನೆಂದರೆ ಸ್ವಾಧೀನತೆಯನ್ನು ಪ್ರಾಪ್ತ ಮಾಡಿಕೊಂಡು ಪುನಃ ಎಂದೂ ದುಃಖಗಳಿಗೆ ಪಾತ್ರನಾಗಲಾರೆನು. ನಾನು ಅಜ್ಞಾನ ರೂಪದ ಅಂಧಕಾರವನ್ನು ಆತ್ಮಜ್ಞಾನರೂಪ ಸೂರ್ಯನ ಪ್ರಕಾಶದ ಮೂಲಕ ಈಗ ಕೂಡ ದೂರ ಮಾಡದಿದ್ದರೆ ಬೇರೆ ಯಾವ ಪರ್ಯಾಯದಲ್ಲಿ ದೂರ ಮಾಡುವೆನು ?

**ಸಮಸ್ತ ಜಗತ್ತನ್ನು ನೋಡುವ ಒಂದು ಅದ್ವಿತೀಯ ನೇತ್ರವೆಂದರೆ ನನ್ನ ಆತ್ಮನಿದ್ದಾನೆ.** ಅವನನ್ನು ಈಗ ಅವಿದ್ಯೆಯ ರೂಪದ ಪಿಶಾಚದಿಂದ ಪ್ರೇರಿತವಾದ ವಿಷಯ-ಕಷಾಯಗಳು ಆವರಿಸಿಕೊಂಡಿವೆ. ಈ ಇಂದ್ರಿಯ ವಿಷಯ ಮತ್ತು ಕಷಾಯಗಳು ನನ್ನನ್ನು ಹಿತ-ಅಹಿತದ ಜ್ಞಾನದಿಂದ ರಹಿತ ಮಾಡಿವೆ. ನಾನು ಈ ಠಕ್ಕರ ವಶೀಭೂತನಾಗಿ ನನ್ನ ಹಿತಾಹಿತಗಳನ್ನು ಮರೆತು ಬಿಟ್ಟಿದ್ದೇನೆ. ಅಯ್ಯಾ ! ಇವು ಪ್ರಾಪ್ತವಾಗುವ ಸಮಯದಲ್ಲಂತೂ ರಮಣೀಯವೆನಿಸುತ್ತಿದ್ದವು, ಆದರೆ ಕೊನೆಯಲ್ಲಿ ನೀರಸವೆನಿಸುತ್ತವೆ. ಇಂಥ ಪಂಚೇಂದ್ರಿಯ ವಿಷಯಗಳಿಂದ ಪರಮಜ್ಯೋತಿ ಸ್ವರೂಪ ಜಗತ್ತಿನಲ್ಲಿ ಮಹಾನ ಪರಮಾತ್ಮ ಸ್ವರೂಪನಾದ ನನ್ನ ಆತ್ಮನೇ ಮೋಸ ಹೋಗಿದ್ದಾನೆ. ನಾನು ಮತ್ತು ಪರಮಾತ್ಮರೀರ್ವರೂ ಜ್ಞಾನನೇತ್ರವುಳ್ಳವರಿದ್ದೇವೆ. ಪರಮಾತ್ಮ ಸ್ವರೂಪದ ಪ್ರಾಪ್ತಿಯ ಸಲುವಾಗಿ ನಾನು ನನ್ನ ಸ್ವರೂಪವನ್ನು ತಿಳಿದುಕೊಳ್ಳುವ ಇಚ್ಛೆ ಮಾಡುತ್ತೇನೆ. ಪರಮಾತ್ಮನಿಗಂತೂ ಆತ್ಮ ಗುಣಗಳು ಪ್ರಕಟವವಿವೆ, ಆದರೆ ನನ್ನ ಗುಣಗಳು ಕರ್ಮಗಳಿಂದ ಮುಚ್ಚಿಕೊಳ್ಳಿತ್ತಿವೆ. **ನನ್ನಲ್ಲಿ**

**ಮತ್ತು ಪರಮಾತ್ಮನಲ್ಲಿ ಗುಣಗಳ ಅಪೇಕ್ಷೆಯಿಂದ ಯಾವ ಭೇದವಿಲ್ಲ, ಶಕ್ತಿಯ ವ್ಯಕ್ತತೆಯದೇ ಭೇದವಿದೆ.** ಈ ಕರ್ಮಜನ್ಯ ದುಃಖಗಳು ನಾನು ಎಲ್ಲಿಯವರೆಗೆ ಜ್ಞಾನ ಸಮುದ್ರದಲ್ಲಿ ಮುಳುಗುವುದಿಲ್ಲ ಅಲ್ಲಿಯವರೆಗೆ ನನ್ನನ್ನು ದುಃಖೀ ಮಾಡುವವು.

ಕರ್ಮದ ಉದಯಜನ್ಯ ಪರ್ಯಾಯಗಳಾದ ನಾರಕ, ತಿರ್ಯಂಚ, ಮನುಷ್ಯ, ದೇವಗಳು ನನ್ನ ಸ್ವರೂಪವಲ್ಲ, **ನಾನು ಸಿದ್ಧ ಸಮಾನ, ನಿರ್ವಿಕಾರ, ಸ್ವಾಧೀನ, ಸುಖಸ್ವರೂಪನಿದ್ದೇನೆ, ನಾನು ಅನಂತಜ್ಞಾನ, ಅನಂತದರ್ಶನ, ಅನಂತ ವೀರ್ಯ, ಅನಂತಸುಖಸ್ವರೂಪನಿದ್ದೇನೆ.** ಈಗ ಮೋಹರೂಪದ ವಿಷವೃಕ್ಷವನ್ನು ಕಿತ್ತೆಸೆಯಲಾರೆನೇನು ? ಈಗ ನಾನು ನನ್ನ ಸಾಮರ್ಥ್ಯವನ್ನು ತಿಳಿದುಕೊಂಡು, ನನ್ನ ಸ್ವರೂಪದಲ್ಲಿ ಅಚಲನಾಗಿ, ಸಮಸ್ತ ಇಚ್ಛೆಗಳಿಂದ ರಹಿತನಾಗಿ, ಮೋಹರೂಪದ ವಿಷದ ವೃಕ್ಷ್ಯವನ್ನು ಕಿತ್ತು ಎಸೆಯುವೆನು ? ಈಗ ನನಗೆ ನನ್ನ ಸ್ವರೂಪವನ್ನೇ ನಿಶ್ಚಯ ಮಾಡುವುದಿದೆ ಅದರಿಂದ ನನ್ನಲ್ಲಿ ಅನಾದಿಯಿಂದ ಮೋಸ ಹೋಗಿರುವ ಯಾವ ಮೋಹದ ಬಂಧನವಿದೆ ಅದನ್ನು ಕತ್ತರಿಸಿ ಹಾಕುವ ಉಪಾಯ ಮಾಡುತ್ತೇನೆ.

**ಯಾವನು ತನ್ನ ಸ್ವರೂಪವನ್ನೇ ತಿಳಿಯುವುದಿಲ್ಲ, ಅವನು ಪರಮಾತ್ಮನ ಸ್ವರೂಪವನ್ನು ಹೇಗೆ ತಿಳಿಯುವನು ?** ಆದುದರಿಂದ ಜ್ಞಾನಿಗಳು ಮೊದಲು ತಮ್ಮ ಸ್ವರೂಪದ ನಿಶ್ಚಯವನ್ನೇ ಮಾಡುವುದು ಯೋಗ್ಯವಿದೆ. ಯಾರು ತಮ್ಮ ಸ್ವರೂಪವನ್ನೇ ತಿಳಿಯುವುದಿಲ್ಲ ಅವರು ತಮ್ಮ ಸ್ವರೂಪದಲ್ಲಿ ಹೇಗೆ ಸ್ಥಿರಗೊಳ್ಳುವರು ? ಅನಾದಿಯಿಂದ ಪುದ್ಗಲದೊಡನೆ ಕೂಡಿಕೊಂಡು ಒಂದಾಗುತ್ತಿರುವ ಆತ್ಮನನ್ನು ಹೇಗೆ ಭಿನ್ನ ಮಾಡುವೆನು ? **ದೇಹದಿಂದ ಆತ್ಮನ ಭೇದವಿಜ್ಞಾನವಾದಲ್ಲದೆ ಆತ್ಮನ ಪ್ರಾಪ್ತಿ ಹೇಗಾಗುವುದು ?** ಆತ್ಮನ ಪ್ರಾಪ್ತಿಯಾದಲ್ಲದೆ ಅನಂತಜ್ಞಾನ ಮೊದಲಾದ ಆತ್ಮನ ಗುಣಗಳ ಜ್ಞಾನವಾಗುವುದಿಲ್ಲ ಮತ್ತು ಆಗುವುದಿಲ್ಲವೆಂದ ಮೇಲೆ ಆತ್ಮನ ಕಲ್ಯಾಣದ ಮಾತನ್ನೇನು ಹೇಳುವುದು ? ಆದುದರಿಂದ ಮೋಕ್ಷದ ಅಭಿಲಾಷೆಯುಳ್ಳವರು ಸಮಸ್ತ ಪುದ್ಗಲದ ಪರ್ಯಾಯ (ಶರೀರ)ಗಳಿಂದ ಭಿನ್ನನಿರುವ ಓರ್ವ ಆತ್ಮಸ್ವರೂಪದ ನಿರ್ಣಯವನ್ನೇ ಮಾಡುವುದು ಶ್ರೇಷ್ಠವಿದೆ.

ಆತ್ಮನು ಬಹಿರಾತ್ಮ, ಅಂತರಾತ್ಮ ಮತ್ತು ಪರಮಾತ್ಮನೆಂದು ಮೂರು ಪ್ರಕಾರವಾಗಿದ್ದಾನೆ.

**ಬಹಿರಾತ್ಮನ ಸ್ವರೂಪ :** ಯಾರದು ಬಾಹ್ಯ ಶರೀರ ಮೊದಲಾದ ಪುದ್ಗಲದ ಪರ್ಯಾಯಗಳಲ್ಲಿ ಆತ್ಮಬುದ್ಧಿಯಿದೆ ಅವರು ಬಹಿರಾತ್ಮರಿದ್ದಾರೆ. ಅವರ ಚೇತನವು ಮೋಹನಿದ್ರೆಯಿಂದ ಅಸ್ತವಾಗಿ ಹೋಗಿದೆ, ಪರ್ಯಾಯವನ್ನೇ ತಮ್ಮ ಸ್ವರೂಪವೆಂದು ತಿಳಿಯುತ್ತಾರೆ, ನಿರಂತರ ಇಂದ್ರಿಯಗಳ ಮೂಲಕವೇ ಪ್ರವರ್ತನೆ ಮಾಡುತ್ತಾರೆ, ಅವರಿಗೆ ತಮ್ಮ ಸ್ವರೂಪದ ನಿಜವಾದ ಪರಿಚಯವಿಲ್ಲ, ದೇಹವನ್ನೇ ಆತ್ಮನೆಂದು ಮನ್ನಿಸುತ್ತಾರೆ, ದೇವ ಪರ್ಯಾಯದಲ್ಲಿ ತಮ್ಮ ಸಲುವಾಗಿ ದೇವ, ನರಕ ಪರ್ಯಾಯದಲ್ಲಿ ತಮ್ಮ ಸಲುವಾಗಿ ನಾರಕಿ,ತಿರ್ಯಂಚ ಪರ್ಯಾಯದಲ್ಲಿ ತಮ್ಮ ಸಲುವಾಗಿ ತಿರ್ಯಂಚ ಮತ್ತು ಮನುಷ್ಯ ಪರ್ಯಾಯದಲ್ಲಿ ತಮ್ಮ ಸಲುವಾಗಿ ಮನುಷ್ಯರೆಂದು ತಿಳಿದುಕೊಳ್ಳುತ್ತ ಪರ್ಯಾಯದ ವ್ಯವಹಾರದಲ್ಲಿ ತನ್ಮಯರಾಗಿ ಹೋಗುತ್ತಿದ್ದಾರೆ.

ಪರ್ಯಾಯವಂತೂ ಕರ್ಮಕೃತ ಪುದ್ಗಲಮಯವಿದ್ದು ಅದು ಜ್ಞಾನರೂಪ ಆತ್ಮನಿಂದ, ಪ್ರತ್ಯಕ್ಷ ಭಿನ್ನವೇ ಕಂಡು ಬರುತ್ತದೆ. ಆದಾಗ್ಯೂ ಕರ್ಮಜನಿತ ಪರ್ಯಾಯದಲ್ಲಿ ತನ್ನತನವನ್ನು ಮನ್ನಿಸಿ ಪರ್ಯಾಯದಲ್ಲಿಯೇ ತನ್ಮಯನಾಗುತ್ತಿದ್ದಾನೆ. ನಾನು ಗೌರನಿದ್ದೇನೆ, ನಾನು ಕಪ್ಪು ಇದ್ದೇನೆ, ನಾನು ಅನ್ಯ ವರ್ಣನಿದ್ದೇನೆ, ನಾನು ದೊರೆಯಿದ್ದೇನೆ, ನಾನು ದರಿದ್ರನಿದ್ದೇನೆ, ನಾನು ಒಡೆಯನಿದ್ದೇನೆ, ನಾನು ಸೇವಕನಿದ್ದೇನೆ, ನಾನು ಬಲಶಾಲಿಯಿದ್ದೇನೆ, ನಾನು ನಿರ್ಬಲನಿದ್ದೇನೆ, ನಾನು ಬ್ರಾಹ್ಮಣನಿದ್ದೇನೆ, ನಾನು ಕ್ಷತ್ರಿಯನಿದ್ದೇನೆ, ನಾನು ವೈಶ್ಯನಿದ್ದೇನೆ, ನಾನು ಶೂದ್ರನಿದ್ದೇನೆ, ನಾನು ಹಿಂಸಕನಿದ್ದೇನೆ, ನಾನು ರಕ್ಷಕನಿದ್ದೇನೆ, ನಾನು ಧನವಂತನಿದ್ದೇನೆ, ನಾನು ದಾತಾರನಿದ್ದೇನೆ, ನಾನು ತ್ಯಾಗಿಯಿದ್ದೇನೆ, ನಾನು ಗೃಹಸ್ಥನಿದ್ದೇನೆ, ನಾನು ಮುನಿಯಿದ್ದೇನೆ, ನಾನು ತಪಸ್ವಿಯಿದ್ದೇನೆ, ನಾನು ದೀನನಿದ್ದೇನೆ, ನಾನು ಅನಾಥನಿದ್ದೇನೆ, ನಾನು ಸಮರ್ಥನಿದ್ದೇನೆ, ನಾನು ಅಸಮರ್ಥನಿದ್ದೇನೆ, ನಾನು ಕರ್ತಾ ಇದ್ದೇನೆ, ನಾನು ಅಕರ್ತಾ ಇದ್ದೇನೆ, ನಾನು ರೂಪವಂತನಿದ್ದೇನೆ, ನಾನು ಕುರೂಪನಿದ್ದೇನೆ, ನಾನು ಪಂಡಿತನಿದ್ದೇನೆ, ನಾನು ಮೂರ್ಖನಿದ್ದೇನೆ, ನಾನು ಸ್ತ್ರೀಯಿದ್ದೇನೆ, ನಾನು ಪುರುಷನಿದ್ದೇನೆ,

ನಾನು ನಪುಂಸಕನಿದ್ದೇನೆ, ಇತ್ಯಾದಿ **ಕರ್ಮದ ಉದಯಜನಿತ ಪರಪುದ್ಗಲಗಳ ವಿನಾಶಶೀಲವಾದ ಪರ್ಯಾಯಗಳಲ್ಲಿ ಯಾರದು ಆತ್ಮಬುದ್ಧಿಯಿದೆ ಅವರು ಬಹಿರಾತ್ಮರಾದ ಮಿಥ್ಯಾದೃಷ್ಟಿಗಳಿದ್ದಾರೆ.**

ಈ ಶರೀರದಲ್ಲಿ ಯಾವ ಆತ್ಮಬುದ್ಧಿಯಿದೆ ಅದು ಇಲ್ಲಿಯೇ ಶರೀರ ಸಂಬಂಧಿಗಳಾದ ಯಾವ ಸ್ತ್ರೀ, ಪುತ್ರ, ಮಿತ್ರ, ಶತ್ರುಗಳಿದ್ದಾರೆ, ಅವರಲ್ಲಿ ರಾಗ-ದ್ವೇಷ-ಮೋಹ-ಕ್ಲೇಶಾದಿಗಳನ್ನುತ್ಪನ್ನ ಮಾಡಿಸಿ, ಆರ್ತ-ರೌದ್ರ ಪರಿಣಾಮಗಳಿಂದ ಮರಣ ಮಾಡಿಸಿ, ಸಂಸಾರದಲ್ಲಿ ಅನಂತಕಾಲದವರೆಗೆ ಜನ್ಮ-ಮರಣ ಮಾಡಿಸುತ್ತದೆ. ಪುದ್ಗಲದ ಪರ್ಯಾಯದಲ್ಲಿ ಯಾವ ಆತ್ಮಬುದ್ಧಿಯಿದೆ ಅದು ಪುದ್ಗಲಮಯ ಜಡರೂಪ ಏಕೇಂದ್ರಿಯಗಳಲ್ಲಿ ಅನಂತಕಾಲದವರೆಗೆ ಭ್ರಮಣ ಮಾಡಿಸುತ್ತದೆ. ಆದುದರಿಂದ **ಈಗ ಬಹಿರಾತ್ಮ ಬುದ್ಧಿಯನ್ನು ಬಿಟ್ಟುಕೊಟ್ಟು ಅಂತರಾತ್ಮನ ಅವಲಂಬನೆ ಪಡೆದು ಪರಮಾತ್ಮತೆಯನ್ನು ಪಡೆಯುವ ಪ್ರಯತ್ನ ಮಾಡಬೇಕಾಗುವುದು.**

**ಅಂತರಾತ್ಮನ ಸ್ವರೂಪ :** ಈ ಜಗತ್ತಿನಲ್ಲಿ ಯಾವ-ಯಾವ ರೂಪುಗಳು ಕಂಡು ಬರುತ್ತವೆ. ಅವೆಲ್ಲವೂ ತಮ್ಮ ಆತ್ಮನ ಸ್ವಭಾವದಿಂದ ಭಿನ್ನವಿವೆ, ಪರದ್ರವ್ಯವಿವೆ, ಜಡವಿವೆ, ಅಚೇತನವಿವೆ, ನಾನು ಜ್ಞಾನ ಸ್ವರೂಪನಿದ್ದೇನೆ, ಇಂದ್ರಿಯಗಳ ಮೂಲಕ ತಿಳಿದು ಬರುವುದಿಲ್ಲ, ನಾನು ನನ್ನ ಅನುಭವದಿಂದ ಪ್ರತ್ಯಕ್ಷನಿದ್ದೇನೆ, ಅನ್ಯ ಜನರಿಗೆ ನಾನು ಸಂಬೋಧನೆ ಮಾಡುವೆನೆಂಬ ವಿಕಲ್ಪವೂ ಭ್ರಮೆಯಿದೆ, ಏಕೆಂದರೆ ನನ್ನ ಹಾಗೂ ಪರರ ಆತ್ಮನನ್ನು ತಿಳಿದುಕೊಂಡಲ್ಲದೆ ಯಾರಿಗೆ ತಿಳಿಸಿಕೊಡಲಿ ಮತ್ತು ಯಾರು ತಿಳಿದುಕೊಳ್ಳುವರು ? **ನಾನಂತೂ ಸಮಸ್ತ ವಿಕಲ್ಪರಹಿತ ಜ್ಞಾತಾನಿದ್ದೇನೆ. ನಾನು ನನ್ನ ಸ್ವರೂಪವನ್ನೇ ನನ್ನ ರೂಪವಾಗಿ ತಿಳಿಯುತ್ತೇನೆ, ನನ್ನಿಂದ ಭಿನ್ನವಿರುವ ಅನ್ಯವನ್ನು ಆತ್ಮರೂಪವಾಗಿ ತಿಳಿದುಕೊಳ್ಳದಂಥ ನಿರ್ವಿಕಲ್ಪ ವಿಜ್ಞಾನಮಯ ಕೇವಲ ಸ್ವಸಂವೇದನ ಗೋಚರನಿದ್ದೇನೆ.**

**ಅಂತರಾತ್ಮನು ವಿಚಾರ ಮಾಡುತ್ತಾನೆ.** ಯಾವ ಪ್ರಕಾರ ಹಗ್ಗದಲ್ಲಿ ಹಾವಿನ ಬುದ್ಧಿಯಾಗಿ ಹೋದಾಗ-ಭಯಭೀತನಾಗಿ ಮರಣ ಮೊದಲಾದವುಗಳ ಭಯದಿಂದ ಓಡುತ್ತಾನೆ, ಹೊರಳುತ್ತಾನೆ ಇತ್ಯಾದಿ ಕ್ರಿಯೆಗಳಿಂದಲೇ ಭ್ರಷ್ಟನಾಗಿ ಹೋಗುತ್ತಾನೆ (ಓಡಲಾಗುವುದಿಲ್ಲ) ಅದೇ ಪ್ರಕಾರ ಪೂರ್ವಕಾಲದಲ್ಲಿ ನಾನು ಶರೀರ ಮೊದಲಾದುವಲ್ಲಿ ಅಹಂಬುದ್ಧಿ ಮಾಡಿ, ಶರೀರಾದಿಗಳ ನಾಶದಲ್ಲಿ ನನ್ನ ನಾಶವೆಂದು ತಿಳಿದುಕೊಂಡು, ಅತ್ಯಂತ ವಿಪರೀತ ಕ್ರಿಯೆಗಳಲ್ಲಿ ಪ್ರವರ್ತನೆ ಮಾಡಿದ್ದೇನೆ. ಯಾವ ಪ್ರಕಾರ ಹಗ್ಗದಲ್ಲಿ ಹಾವಿನ ಭ್ರಮೆಯು ನಾಶವಾಗಿ ಹೋದ ಮೇಲೆ ಹಗ್ಗವನ್ನು ಹಗ್ಗವೆಂದು ತಿಳಿಯುತ್ತಾನೆ ಆಗ ಭ್ರಮರೂಪ ಕ್ರಿಯೆಯ ಅಭಾವವಾಗಿ ಹೋಗುತ್ತದೆ, ಅದೇ ಪ್ರಕಾರ ನನ್ನ ಶರೀರದಲ್ಲಿ ಆತ್ಮನ ಭ್ರಮೆಯು - ಆತ್ಮಬುದ್ಧಿಯು ನಷ್ಟವಾಗಿ ಹೋದ ಮೇಲೆ ಈಗ ಆಚರಣೆಯಲ್ಲಿ ಕೂಡ ಭ್ರಮೆಯ ಅಭಾವವಾಗಿ ಹೋಗಿದೆ. ಯಾವನ ಜ್ಞಾನ ಮಾಡಿಕೊಂಡಲ್ಲದೆ ನಾನು ನಿದ್ರೆ ಹೋದವರ ಸಮಾನನಿದ್ದೆನು, ಈಗ ಅವನ ಜ್ಞಾನ ಮಾಡಿಕೊಂಡ ಮೇಲೆ ನಾನು ಜಾಗೃತನಿದ್ದೇನೆ, ನಾನು ಚೈತನ್ಯಮಯನಿದ್ದೇನೆ.

**ಈ ಜ್ಞಾನ ಜ್ಯೋತಿಮಯನಾದ ನನ್ನ ಆತ್ಮ ಸ್ವರೂಪವನ್ನು ನೋಡುವುದರಿಂದ ನನ್ನ ರಾಗ-ದ್ವೇಷಗಳು ನಷ್ಟವಾಗಿ ಹೋಗಿವೆ, ಆದುದರಿಂದ ಈಗ ನನಗೆ ಯಾರೂ ವೈರಿಗಳಿಲ್ಲ, ಯಾರೂ ಮಿತ್ರರಿಲ್ಲ, ವೈರೀ-ಮಿತ್ರರಂತೂ ಜ್ಞಾನದಲ್ಲಿನ ರಾಗ-ದ್ವೇಷದ ವಿಕಾರದಿಂದ ಕಂಡು ಬರುತ್ತಾರೆ.** ಯಾರು ನನ್ನ ಜ್ಞಾಯಕ ಆತ್ಮ ಸ್ವರೂಪವನ್ನು ತಿಳಿಯುವುದಿಲ್ಲ ಅವರು ನನ್ನ ವೈರಿ ಅಥವಾ ಮಿತ್ರರಾಗುವ ಸಾಧ್ಯತೆಯಿಲ್ಲ, ಮತ್ತು ಯಾವನು ನನ್ನ ಸ್ವರೂಪವನ್ನು ಪ್ರತ್ಯಕ್ಷ ನೋಡಿದ್ದಾನೆ ಅವನು ಕೂಡ ನನ್ನ ವೈರಿ ಅಥವಾ ಮಿತ್ರನಾಗುವ ಸಾಧ್ಯತೆಯಿಲ್ಲ. ಈಗ ನಾನು ನನ್ನ ಸ್ವರೂಪದ ಜ್ಞಾತಾನಿದ್ದೇನೆ, ನನಗೆ ನನ್ನ ಹಿಂದಿನ ಸಮಸ್ತ ಆಚರಣೆಯು ಸ್ವಪ್ನದಂತೆ ಇಂದ್ರಜಾಲದ ಸಮಾನವಾಗಿ ಕಂಡು ಬರುತ್ತದೆ.

ಓಹೋ ! ಜ್ಞಾನೀ ಪುರುಷರ ಅಲೌಕಿಕ ವೃತ್ತಾಂತದ ವರ್ಣನೆಯನ್ನು ಯಾರು ಮಾಡುವ ಸಾಧ್ಯತೆಯಿದೆ ? ಅಜ್ಞಾನಿಯು ತನ್ನ ಪ್ರವರ್ತನೆಯ ಮೂಲಕ ಕರ್ಮದ ಬಂಧ ಮಾಡಿಕೊಳ್ಳುತ್ತಾನೆ, ಅಲ್ಲಿಯೇ ಜ್ಞಾನಿಯು ತನ್ನ ಪ್ರವರ್ತನೆಯ

ಮೂಲಕ ಕರ್ಮಬಂಧದಿಂದ ಬಿಡುಗಡೆಯಾಗುತ್ತಾನೆ. ಜಗತ್ತಿನ ಪದಾರ್ಥಗಳಂತೂ ಎಲ್ಲವೂ ಹೇಗಿವೆ ಹಾಗೇ ಇರುತ್ತವೆ, ಬೇರೆ ಪ್ರಕಾರವಾಗಿ ಹೋಗುವುದಿಲ್ಲ ; ಆದರೆ ಅಜ್ಞಾನಿಯು ತನ್ನ ವಿಪರೀತ ಸಂಕಲ್ಪಗಳಿಂದ ರಾಗೀ-ದ್ವೇಷಿ-ಮೋಹಿಯಾಗಿ ಘೋರ ಬಂಧಕ್ಕೆ ಪ್ರಾಪ್ತನಾಗುತ್ತಾನೆ. ಜ್ಞಾನಿಯು ಪದಾರ್ಥಗಳ ಸತ್ಯಸ್ವರೂಪವನ್ನು ತಿಳಿದುಕೊಂಡು ಪರಮ ಸೌಖ್ಯ ವೀತರಾಗಿಯಾಗಿ ಪ್ರವರ್ತನೆ ಮಾಡುತ್ತ ಕರ್ಮದ ನಿರ್ಜರೆ ಮಾಡುತ್ತಾನೆ.

ನಾನು ಪೂರ್ವಕಾಲದಲ್ಲಿ ದುಃಖಗಳಿಂದ ಪ್ರಾಪ್ತವಾದ ಸಂಸಾರ ವನದಲ್ಲಿ ಚಿರಕಾಲದಿಂದ ದುಃಖಿಯೇ ಆಗಿದ್ದೇನೆ, ಅದು ಕೇವಲ ನನ್ನ ಹಾಗೂ ಪರದ ಭೇದವಿಜ್ಞಾನವಿಲ್ಲದೆಯೇ ಆಗಿದ್ದೇನೆ. ಸಮಸ್ತ ಪದಾರ್ಥಗಳನ್ನು ಪ್ರಕಾಶಿತ ಮಾಡುವಂಥ ಭೇದವಿಜ್ಞಾನರೂಪದ ದೀವಿಗೆಯು ಪ್ರಜ್ವಲಿತವಿರುತ್ತಿದ್ದರೂ ಕೂಡ ಈ ಮೂರ್ಖಜನರು ಸಂಸಾರರೂಪದ ಕೊಳಚೆಯಲ್ಲಿ ಅದೇಕೆ ಮುಳುಗುತ್ತಿದ್ದಾರೆ ? **ಈ ತಮ್ಮ ಸ್ವರೂಪವು ತಮ್ಮ ಅಂತರ್ಯದಲ್ಲಿಯೇ ತಮ್ಮ ಮೂಲಕ ತಮ್ಮ ಸಲುವಾಗಿ ಪ್ರಕಟ ಅನುಭವದಲ್ಲಿ ಬರುತ್ತಲಿದೆ.** ಇದನ್ನು ಬಿಟ್ಟು ಕೊಟ್ಟು ಇವನು ಪರದಲ್ಲಿ ತನ್ನನ್ನು ತಿಳಿದುಕೊಳ್ಳುವ ವ್ಯರ್ಥ ಪ್ರಯತ್ನ ಮಾಡಿ ದುಃಖಿಯಾಗುತ್ತಾನೆ.

ಅಜ್ಞಾನಿಗೆ ಪರವಸ್ತುವಿನ ಕುರಿತು ಯಾವ ರಾಗವಿದೆ ಆ ರಾಗವು ಸಮಸ್ತ ವಿಪತ್ತುಗಳ ಕಾರಣವಿದೆ, ಯಾವುದು ಆನಂದದ ಸ್ಥಾನವಿದೆ ಅದರಿಂದ ಅಜ್ಞಾನಿಯು ಭಯಪಡುತ್ತಾನೆ, ಅಜ್ಞಾನ ಭಾವದ ಪ್ರಭಾವವೇ ಹೀಗಿದೆ. ಬಂಧದ ಕಾರಣವಂತೂ ಪದಾರ್ಥಗಳ ವಿಷಯವಾಗಿ ಜ್ಞಾನದಲ್ಲಿ ಭ್ರಮೆಯಿದೆ. ಭ್ರಮೆಯಿಲ್ಲದ ಭಾವವು ಮೋಕ್ಷದ ಕಾರಣವಿದೆ. ಎಷ್ಟು ಬಂಧವಿದೆ ಅದು ಪರದ ಸಂಬಂಧದಿಂದ ಇದೆ ಮತ್ತು ಪರದ್ರವ್ಯದೊಡನೆ ಭೇದದ ಅಭ್ಯಾಸ ಮಾಡುವುದರಿಂದ ಮೋಕ್ಷವಿದೆ. ಯಾವನು ಇಂದ್ರಿಯ ವಿಷಯಗಳಿಂದ ತಡೆದು ಕ್ಷಣಮಾತ್ರವಾದರೂ ತನ್ನ ಆತ್ಮನಲ್ಲಿ ನಿಲ್ಲುತ್ತಾನೆ ಅವನು ಪರಮೇಷ್ಠಿಯ ಸ್ವರೂಪದ ಸ್ಮರಣೆ ಮಾಡುತ್ತಾನೆ.

**ಯಾವನು ಸಿದ್ಧಾತ್ಮನಿದ್ದಾನೆ ಅವನು ನಾನಿದ್ದೇನೆ ಯಾವನು ನಾನಿದ್ದೇನೆ ಅವನು ಪರಮೇಶ್ವರನಿದ್ದಾನೆ. ಆದುದರಿಂದ ನನಗೆ ನನ್ನ ಸ್ವರೂಪ ಬಿಟ್ಟು ಬೇರಾವುದೂ ಉಪಾಸನೆ ಮಾಡಲು ಯೋಗ್ಯವಿಲ್ಲ,** ಮತ್ತು ನಾನು ಬೇರೆ ಯಾವುದರ ಮೂಲಕ ಉಪಾಸನೆ ಮಾಡಲು ಯೋಗ್ಯನಿಲ್ಲ. ಯಾವನು ಭ್ರಾಂತಿ ರಹಿತನಾಗಿ ದೇಹದಿಂದ ಭಿನ್ನನಿರುವ ಆತ್ಮನನ್ನು ತಿಳಿಯುವುದಿಲ್ಲ, ಅವನು ತೀವ್ರ ತಪಸ್ಸು ಮಾಡುತ್ತಿದ್ದರೂ ಕೂಡ ಕರ್ಮದ ಬಂಧನದಿಂದ ಬಿಡುಗಡೆಯಾಗುವುದಿಲ್ಲ. ಯಾವನು ಭೇದವಿಜ್ಞಾನರೂಪದ ಅಮೃತದಿಂದ ಆನಂದಿತನಿದ್ದಾನೆ ಅವನು ಹೆಚ್ಚು ತಪಸ್ಸು ಮಾಡುತ್ತಿದ್ದರೂ ಕೂಡ ಶರೀರದಿಂದ ಉತ್ಪನ್ನವಾದ ಕ್ಲೇಶದಿಂದ ಖೇದಕ್ಕೆ ಪ್ರಾಪ್ತನಾಗುವುದಿಲ್ಲ. ಯಾವನ ಚಿತ್ತವು ರಾಗ-ದ್ವೇಷ ಮೊದಲಾದ ಮಲದಿಂದ ರಹಿತವಾಗಿ ನಿರ್ಮಲವಿದೆ ಅವನೇ ತನ್ನ ಸ್ವರೂಪವನ್ನು ಸಮ್ಯಕ್ತ್ವರೂಪದಿಂದ ತಿಳಿಯುತ್ತಾನೆ, ಬೇರೆ ಯಾವುದೇ ಹೇತುವಿನಿಂದ ತಿಳಿಯುವ ಸಾಧ್ಯತೆಯಿಲ್ಲ.

**ತಮ್ಮ ಚಿತ್ತವನ್ನು ವಿಕಲ್ಪರಹಿತವಾಗಿ ಮಾಡುವುದೇ ಪರಮತತ್ತ್ವವಿದೆ.** ಮತ್ತು ಅನೇಕ ವಿಕಲ್ಪಗಳಿಂದ ಉಪದ್ರವಿತ ಮಾಡುವುದೇ ಅನರ್ಥವಿದೆ. ಆದುದರಿಂದ ಸಮ್ಯಕ್ ತತ್ತ್ವವೇ ಸಿದ್ಧಿಯ ಸಲುವಾಗಿ ಚಿತ್ತವನ್ನು ವಿಕಲ್ಪರಹಿತ ಮಾಡುವುದು, ಯಾರು ಅಜ್ಞಾನದಿಂದ ಉಪದ್ರವಿತಚಿತ್ತರಿದ್ದಾರೆ ಅವರು ತಮ್ಮ ಸ್ವರೂಪದಿಂದ ಬೇರೆಯಿದ್ದಾರೆ, ಯಾರ ಚಿತ್ತದಲ್ಲಿ ಭೇದ ವಿಜ್ಞಾನವು ನಿಂತುಕೊಂಡಿದೆ ಅವರು ಪರಮಾತ್ಮ ತತ್ತ್ವವನ್ನು ಪ್ರತ್ಯಕ್ಷ ನೋಡುತ್ತಾರೆ ಒಂದು ವೇಳೆ ಉತ್ತಮ ಪುರುಷರ ಮನಸ್ಸು ಮೋಹಕರ್ಮದ ವಶದಿಂದ ಎಂದಾದರೂ ರಾಗಾದಿಗಳಿಂದ ತಿರಸ್ಕೃತವಾಗಿ ಹೋದರೆ ಅವರು ತಮ್ಮ ಚಿತ್ತವನ್ನು ಆತ್ಮತತ್ತ್ವದ ಚಿಂತನದಲ್ಲಿ ತೊಡಗಿಸಿ ರಾಗಾದಿಗಳ ತಿರಸ್ಕಾರ ಮಾಡಿ ಬಿಡಬೇಕಾಗುವುದು.

ಅಜ್ಞಾನೀ ಆತ್ಮನು ಯಾವ ಶರೀರದಲ್ಲಿ ರಾಗಿಯಾಗುತ್ತಿದ್ದಾನೆ, ಆ ಶರೀರದಿಂದ ತನ್ನ ಬುದ್ಧಿಯನ್ನು ಬಲವಂತವಾಗಿ ಮರಳಿ ತಿರುಗಿಸಿ ಚಿದಾನಂದಮಯ ನಿಜ ಸ್ವರೂಪದಲ್ಲಿ ಯುಕ್ತಮಾಡಿಬಿಡುವುದರಿಂದ ಶರೀರದ ಪ್ರೀತಿಯು ಬಿಟ್ಟು

ಹೋಗುತ್ತದೆ. ತಮ್ಮ ಆತ್ಮಜ್ಞಾನದ ಭ್ರಮೆಯಿಂದ ಉತ್ಪನ್ನವಾದ ದುಃಖವು ಆತ್ಮನ ಜ್ಞಾನ ಮಾಡುವುದರಿಂದಲೇ ನಷ್ಟವಾಗುತ್ತದೆ. ಆತ್ಮಜ್ಞಾನ ರಹಿತ ಜೀವದ ಸಂಸಾರ ಪರಿಭ್ರಮಣವು ಅಧಿಕ ತಪಸ್ಸಿನಿಂದಲೂ ಕೂಡ ಭೇದಿಸಲ್ಪಡುವುದಿಲ್ಲ.

**ಬಹಿರಾತ್ಮ ಹಾಗೂ ಅಂತರಾತ್ಮನಲ್ಲಿ ಅಂತರ :** ಬಹಿರಾತ್ಮನು ತನ್ನ ಸಲುವಾಗಿ ರೂಪು, ಆಯುಷ್ಯ, ಬಲ, ಧನ ಮೊದಲಾದ ಸಂಪತ್ತನ್ನು ಅಪೇಕ್ಷಿಸುತ್ತಾನೆ; ಅಂತರಾತ್ಮನು ಆಯು, ಬಲ, ಧನ ಮೊದಲಾದವುಗಳಿಂದ ತನ್ನನ್ನು ಬಿಡಿಸಿಕೊಳ್ಳಲು ಬಯಸುತ್ತಾನೆ.

ಅಜ್ಞಾನಿಯು ಧನ, ಶರೀರ ಮೊದಲಾದ ಪುದ್ಗಲದಲ್ಲಿ ಆತ್ಮಬುದ್ಧಿ ಮಾಡಿ ತನ್ನನ್ನು ಕಟ್ಟಿಕೊಳ್ಳುತ್ತಾನೆ; ಅಂತರಾತ್ಮನು ತನ್ನ ಸ್ವರೂಪದಲ್ಲಿ ಆತ್ಮಬುದ್ಧಿ ಮಾಡಿ ಬಂಧನದಿಂದ ಬಿಡುಗಡೆ ಹೊಂದುತ್ತಾನೆ.

ಅಜ್ಞಾನಿಯು ಸ್ತ್ರೀ, ಪುರುಷ, ನಪುಂಸಕವೆಂಬ ಮೂರು ಲಿಂಗರೂಪದ ಶರೀರವನ್ನು ಆತ್ಮನೆಂದು ತಿಳಿಯುತ್ತಾನೆ; ಸಮ್ಯಗ್ಜ್ಞಾನಿಯು ತನ್ನನ್ನು ಮೂರು ಲಿಂಗದ ಸಂಗದಿಂದ ರಹಿತನೆಂದು ತಿಳಿಯುತ್ತಾನೆ.

ಹೆಚ್ಚು ಕಾಲದವರೆಗೆ ಅಭ್ಯಾಸ ಮಾಡಿದ ಮೇಲೆ ಮತ್ತು ಒಳ್ಳೆಯ ರೀತಿಯಿಂದ ನಿರ್ಣಯ ಮಾಡಿದ ಮೇಲೆ ಕೂಡ ಭೇದವಿಜ್ಞಾನವು ಅನಾದಿಕಾಲದ ವಿಭ್ರಮದಿಂದ ಕೂಡಲೇ ಬಿಟ್ಟು ಹೋಗುತ್ತದೆ; ನನಗೆ ಕಂಡು ಬರುತ್ತಿರುವ ಈ ರೂಪು ಅಚೇತನವಿದೆ ; ಆದರೆ ಯಾವ ಚೇತನವಿದೆ ಅದು ನನಗೆ ಕಂಡು ಬರುವುದಿಲ್ಲ. ಆದುದರಿಂದ ಅಚೇತನ ಪದಾರ್ಥಗಳಲ್ಲಿ ರಾಗಭಾವ ಮಾಡುವುದು ವ್ಯರ್ಥವಿದೆ. **ನನಗಂತೂ ಸ್ವಾನುಭವ ಪ್ರತ್ಯಕ್ಷ ಆತ್ಮನದೇ ಆಶ್ರಯ ಮಾಡುವುದಿದೆ.**

ಅಜ್ಞಾನಿಯು ಬಾಹ್ಯ ಪದಾರ್ಥಗಳಲ್ಲಿಯೇ ತ್ಯಾಗ-ಗ್ರಹಣ ಮಾಡುತ್ತಾನೆ; ಜ್ಞಾನಿಯು ಅಂತರಂಗದ ರಾಗ ಮೊದಲಾದ ಪರಭಾವಗಳನ್ನು ತ್ಯಾಗ ಮಾಡಿ ಆತ್ಮಭಾವವನ್ನು ಗ್ರಹಣ ಮಾಡುತ್ತಾನೆ.

ಜ್ಞಾನಿಯು ಆತ್ಮನ ಅಭ್ಯಾಸವನ್ನು ವಚನದಿಂದ ಹಾಗೂ ಕಾಯದಿಂದ ಭಿನ್ನ ಮಾಡಿ, ಮನಸ್ಸಿನ ಮೂಲಕ ಮಾಡುತ್ತಾನೆ. ಅನ್ಯ ವಿಷಯ ಭೋಗಗಳ ಕೆಲವು ಕಾರ್ಯಗಳನ್ನು ವಚನದಿಂದ ಮಾಡುತ್ತಾನೆ, ಕೆಲವು ಕಾರ್ಯಗಳನ್ನು ಕಾಯದಿಂದ ಮಾಡುತ್ತಾನೆ, ಆದರೆ ಸಾಂಸಾರಿಕ ಕಾರ್ಯಗಳಲ್ಲಿ ಮನಸ್ಸನ್ನು ತೊಡಗಿಸುವುದಿಲ್ಲ.

ಅಜ್ಞಾನಿಯದಂತೂ ವಿಶ್ವಾಸದ ಮತ್ತು ಆನಂದದ ಸ್ಥಾನವು ಈ ಜಗತ್ತು ಇದೆ. ಜ್ಞಾನಿಗೆ ಈ ಜಗತ್ತಿನಲ್ಲಿ ಎಲ್ಲಿ ವಿಶ್ವಾಸ, ಎಲ್ಲಿ ಆನಂದವಿದೆ ? ಅವನಿಗಂತೂ ತನ್ನ ಸ್ವಭಾವದಲ್ಲಿಯೇ ಆನಂದ ಹಾಗೂ ವಿಶ್ವಾಸವಿದೆ.

ಜ್ಞಾನಿಯು ಆತ್ಮಜ್ಞಾನದ ಹೊರತಾಗಿ ಅನ್ಯ ಕಾರ್ಯಗಳಿಗೆ ತನ್ನ ಹೃದಯದಲ್ಲಿ ಸ್ಥಾನ ಕೊಡುವುದಿಲ್ಲ. ಲೌಕಿಕ ಕಾರ್ಯಗಳ ವಶನಾಗಿ ಒಂದಿಷ್ಟನ್ನು ಮಾಡುತ್ತಾನೆ ಅವನ್ನು ಅನಾದರರೂಪನಾಗಿ ವಚನದಿಂದ ಮತ್ತು ಕಾಯದಿಂದ ಮಾಡುತ್ತಾನೆ, ಮನಸ್ಸು ತೊಡಗಿಸುವುದಿಲ್ಲ. ಈ ಇಂದ್ರಿಯ ವಿಷಯಗಳ ಯಾವ ರೂಪವಿದೆ ಅದು ನನ್ನ ರೂಪದಿಂದ ವಿಲಕ್ಷಣ (ಭಿನ್ನ ಜಾತಿಯದು) ಇದೆ. ನನ್ನ ರೂಪವಂತೂ ಆನಂದದಿಂದ ಪರಿಪೂರ್ಣ ಜ್ಞಾನಜ್ಯೋತಿಮಯವಿದೆ.

ಜ್ಞಾನಿಗಂತೂ ಯಾವುದರಿಂದ ಭ್ರಾಂತಿಯು ದೂರವಾಗಿ ತನ್ನ ಆತ್ಮರೂಪದಲ್ಲಿ ಸ್ಥಿರತೆಯಾಗುವುದು ಅದುವೇ ತಿಳಿದುಕೊಳ್ಳಲು ಯೋಗ್ಯವಿದೆ. ಅದುವೇ ಹೇಳಲು ಯೋಗ್ಯವಿದೆ, ಅದುವೇ ಕೇಳಲು ಯೋಗ್ಯವಿದೆ, ಅದುವೇ ಚಿಂತನೆ ಮಾಡಲು ಯೋಗ್ಯವಿದೆ.

ಈ ಇಂದ್ರಿಯ ವಿಷಯಗಳಲ್ಲಿ ಈ ಆತ್ಮನ ಹಿತವು ಯಾವ ಪ್ರಕಾರದಿಂದಲೂ ಇಲ್ಲ; ಆದಾಗ್ಯೂ ಬಹಿರಾತ್ಮನಾದ ಅಜ್ಞಾನಿಯು ಈ ವಿಷಯಗಳಲ್ಲಿಯೇ ಪ್ರೀತಿ ಮಾಡುತ್ತಾನೆ. **ಆ ಹೇಳಲಾದ ಆತ್ಮತತ್ತ್ವವನ್ನು ಹೇಳಲಾಗದ ಸಮಾನವಾಗಿ ಅಂಗೀಕಾರ ಮಾಡುತ್ತಾನೆ, ಆ ಅಜ್ಞಾನಿಯ ಕುರಿತು ಹೇಳುವ ಉದ್ಯಮವು ವ್ಯರ್ಥವಿದೆ.**

ಅಜ್ಞಾನಿಗೆ ಆತ್ಮನ ಪ್ರಕಾಶ (ಜ್ಞಾನ)ವಿಲ್ಲದಿರುವುದರಿಂದ ಅವನು ಪರದ್ರವ್ಯಗಳಲ್ಲಿಯೇ ಸಂತುಷ್ಟನಾಗುತ್ತಿದ್ದಾನೆ, ಜ್ಞಾನಿಯು ಬಾಹ್ಯದ ವಸ್ತುಗಳಲ್ಲಿ ಭ್ರಾಂತಿಯಿಂದರಹಿತನಾಗಿ ತನ್ನ ಸ್ವರೂಪದಲ್ಲಿಯೇ ಸಂತುಷ್ಟನಿದ್ದಾನೆ.

ಎಲ್ಲಿಯವರೆಗೆ ಮನ-ವಚನ-ಕಾಯಗಳನ್ನು ತನ್ನ ಸ್ವರೂಪವೆಂದು ಮನ್ನಿಸುತ್ತಾನೆ, ಅಲ್ಲಿಯವರೆಗೆ ಸಂಸಾರ ಪರಿಭ್ರಮಣವೇ ಇದೆ. ದೇಹ ಮೊದಲಾದವುಗಳಿಂದ ಭೇದಜ್ಞಾನವಾದ ಮೇಲೆ ಸಂಸಾರದ ಅಭಾವವಾಗುತ್ತದೆ.

ವಸ್ತ್ರವು ಜೀರ್ಣವಿರಲಿ ಅಥವಾ ದೃಢವಿರಲಿ, ಕೆಂಪು ಇರಲಿ ಅಥವಾ ಬಿಳಿದು ಇರಲಿ ಶರೀರವು ಜೀರ್ಣ-ಕೆಂಪುಗಳ ರೂಪವಾಗುವುದಿಲ್ಲ; ಅದೇ ಪ್ರಕಾರ ಶರೀರವು ಜೀರ್ಣಾದಿಗಳಾದ ಮೇಲೆ ಆತ್ಮನು ಜೀರ್ಣಾದಿಗಳ ರೂಪನಾಗಿ ಹೋಗುವುದಿಲ್ಲ.

ಅಜ್ಞಾನಿಯು ಈ ಶರೀರದ ಅಗಲುವ-ಕೂಡುವ ಪರಮಾಣುಗಳ ಸಮೂಹರೂಪದ ರಚನೆಯನ್ನು ಪ್ರತ್ಯಕ್ಷ ನೋಡುತ್ತಿದ್ದರೂ ಇದನ್ನೇ ಆತ್ಮನೆಂದು ತಿಳಿಯುತ್ತಾನೆ, ಅನಾದಿಯಿಂದ ಇಂಥದೇ ಭ್ರಮೆಯಿದೆ. ಈ ದೃಢ-ಸ್ಥೂಲ, ಸ್ಥಿರ-ಅಸ್ಥಿರ, ಲಘು-ದೀರ್ಘ, ಜೀರ್ಣ-ಶೀರ್ಣ, ಹಗುರು-ಭಾರ, ಸ್ನಿಗ್ಧ-ರೂಕ್ಷ, ಮೃದು-ಕಠೋರ, ಶೀತ-ಉಷ್ಣ ಮೊದಲಾದವು ಪುದ್ಗಲದ ಧರ್ಮ (ಗುಣ)ಗಳಿವೆ. ಈ ಪುದ್ಗಲದ ಧರ್ಮಗಳೊಡನೆ ಆತ್ಮನ ಯಾವ ಸಂಬಂಧವಿಲ್ಲ, ಆತ್ಮನಂತೂ ಕೇವಲ ಜ್ಞಾನಸ್ವರೂಪನಿದ್ದಾನೆ.

ಈ ಸಂಸಾರದಲ್ಲಿ ಮನುಷ್ಯರ ಸಂಪರ್ಕವಾಗುವುದರಿಂದ ವಚನಗಳ ಪ್ರವೃತ್ತಿಯಾಗುತ್ತದೆ. ವಚನ ಪ್ರವೃತ್ತಿಯಾಗುವುದರಿಂದ ಮನಸ್ಸು ಚಂಚಲವಾಗುತ್ತದೆ, ಮನಸ್ಸು ಚಂಚಲವಾಗುವುದರಿಂದ ಭ್ರಮೆಯಾಗುತ್ತದೆ. ಇವು ಕ್ರಮದಿಂದ ಉತ್ತರೋತ್ತರ ಕಾರಣಗಳಿವೆ. ಆದುದರಿಂದ ಜ್ಞಾನಿಗಳು ಜನರ ಸಂಪರ್ಕವನ್ನೇ ಬಿಟ್ಟುಕೊಡುತ್ತಾರೆ.

ಅಜ್ಞಾನೀ ಬಹಿರಾತ್ಮನು ತನ್ನ ನಿವಾಸವನ್ನು ನಗರದಲ್ಲಿ, ಗ್ರಾಮದಲ್ಲಿ, ಪರ್ವತದಲ್ಲಿ, ವನದಲ್ಲೆಂದು ತಿಳಿಯುತ್ತಾನೆ; ಆದರೆ ಜ್ಞಾನೀ ಅಂತರಾತ್ಮನಂತೂ ತನ್ನ ನಿವಾಸವನ್ನು ಭ್ರಾಂತಿಯಿಲ್ಲದೆ ಆಂತರ್ಯದಲ್ಲೆಂದೇ ಮನ್ನಿಸುತ್ತಾನೆ.

**ಶರೀರವನ್ನು ಆತ್ಮನೆಂದು ತಿಳಿಯುವುದು ಅದು ದೇಹಧಾರಣ ಮಾಡುವ ಪರಿಪಾಟಿಯ ಕಾರಣವಿದೆ, ಮತ್ತು ತನ್ನ ಸ್ವರೂಪವನ್ನು ಆತ್ಮನೆಂದು ತಿಳಿಯುವುದು ಅದು ಅನ್ಯ ಶರೀರಧಾರಣ ಮಾಡುವುದರಿಂದ ಬಿಡುವುದರ ಕಾರಣವಿದೆ.** ಈ ಆತ್ಮನು ತಾನೇ ತನ್ನ ಮೋಕ್ಷ ಮಾಡಿಕೊಳ್ಳುತ್ತಾನೆ, ಮತ್ತು ತಾನೇ ವಿಪರೀತ ಆಚರಣೆ ಮಾಡಿ ತನ್ನ ಸಂಸಾರ ಬೆಳೆಸುತ್ತಾನೆ. ಆದುದರಿಂದ ತನ್ನ ಗುರು ಕೂಡ ತಾನೇ ಇದ್ದಾನೆ ಮತ್ತು ತನ್ನ ವೈರಿಯು ಕೂಡ ತಾನೇ ಇದ್ದಾನೆ; ಅನ್ಯರಂತೂ ಬಾಹ್ಯ ನಿಮಿತ್ತ ಮಾತ್ರರಿದ್ದಾರೆ.

ಅಂತರಾತ್ಮನು ಆತ್ಮನನ್ನು ಶರೀರದಿಂದ ಭಿನ್ನ ತಿಳಿಯುತ್ತಾನೆ, ಶರೀರವನ್ನು ಆತ್ಮನಿಂದ ಭಿನ್ನ ತಿಳಿಯುತ್ತಾನೆ, ಆತ್ಮನಿಂದ ಸಮಸ್ತ ಪರದ್ರವ್ಯಗಳನ್ನು ಭಿನ್ನವಾಗಿ ತಿಳಿಯುತ್ತಾನೆ. ಈ ಶರೀರವನ್ನು ಮಲಿನ ವಸ್ತ್ರದ ಸಮಾನ ನಿಃಶಂಕತೆಯಿಂದ ಬಿಟ್ಟು ಕೊಡುತ್ತಾನೆ. ಶರೀರದಿಂದ ಭಿನ್ನನಾದ ಆತ್ಮನನ್ನು ತಿಳಿಯುತ್ತಾನೆ, ಶ್ರವಣ ಮಾಡುತ್ತಾನೆ, ಮುಖದಿಂದ ಮಾತನಾಡುತ್ತಾನೆ, ಆದರೂ ಕೂಡ ಎಲ್ಲಿಯವರೆಗೆ ಭೇದ-ವಿಜ್ಞಾನದ ಅಭ್ಯಾಸದಿಂದ ಆತ್ಮನಲ್ಲಿ ಲೀನವಾಗುವುದಿಲ್ಲ ಅಲ್ಲಿಯವರೆಗೆ ಅವನು ಶರೀರದ ಮಮತೆಯಿಂದ ಬಿಡುಗಡೆ ಹೊಂದುವುದಿಲ್ಲ, ತಮ್ಮ ಆತ್ಮನನ್ನು ಶರೀರದಿಂದ ಭಿನ್ನವಾಗಿ ಹೇಗೆ ಭಾವಿಸಬೇಕೆಂದರೆ ಅದರಿಂದ ಪುನಃ ಶರೀರದ ಸಂಬಂಧವು ಸ್ವಪ್ನದಲ್ಲಿ ಕೂಡ ಬರಬಾರದು, ಸ್ವಪ್ನದಲ್ಲಿ ಕೂಡ ದೇಹದಿಂದ ಭಿನ್ನವಾಗಿಯೇ ಆತ್ಮನ ಅನುಭವವಾಗಬೇಕು.

**ಮನುಷ್ಯರಲ್ಲಿ ಯಾವ ವ್ರತದ ಹಾಗೂ ಅವ್ರತದ ವ್ಯವಹಾರವಿದೆ ಅದು ಶುಭ-ಅಶುಭ ಬಂಧದ ಕಾರಣವಿದೆ. ಮೋಕ್ಷವು ಅದು ಬಂಧದ ಅಭಾವರೂಪವಿದೆ.** ಆದುದರಿಂದ ಯಾವ ವ್ರತಗಳ ಕ್ರಿಯೆಗಳಿವೆ ಅವು ಕೂಡ ಪೂರ್ವ ಅವಸ್ಥೆಯಲ್ಲಿ ಇವೆ. ಮೊದಲು ಅಸಂಯಮ ಭಾವವನ್ನು ಬಿಟ್ಟುಕೊಟ್ಟು ಸಂಯಮಭಾವ ಗ್ರಹಣ ಮಾಡುವುದು; ಯಾವಾಗ ಶುದ್ಧಾತ್ಮ ಭಾವವು ಪರಮ ವೀತರಾಗರೂಪದಲ್ಲಿ ಅವಸ್ಥಿತವಾಗಿ ಹೋಗುವುದು ಆಗ ಸಂಯಮಭಾವವೂ ಎಲ್ಲಿ ಉಳಿಯುವುದು ?

**ಈ ಜಾತಿ ಮತ್ತು ಮುನಿ-ಶ್ರಾವಕನ ಲಿಂಗ (ವೇಷ) ಇವೆರಡೂ ಶರೀರದ ಆಶ್ರಯದಿಂದ ವರ್ತಿಸುತ್ತವೆ. ಮತ್ತು ಸಂಸಾರವು ಶರೀರಾತ್ಮಕವೇ ಇದೆ, ಆದುದರಿಂದ ಜ್ಞಾನೀ ಜನರು ಜಾತಿ ಮತ್ತು ಲಿಂಗದಲ್ಲಿ ಕೂಡ ತಮ್ಮತನವನ್ನು ಬಿಟ್ಟುಕೊಡುತ್ತಾರೆ.** ಯಾವನದು ದೇಹದಲ್ಲಿ ಆತ್ಮಬುದ್ಧಿಯಿದೆ ಆ ಪುರುಷನು ಜಾಗರೂಕನಿದ್ದು ಮತ್ತು ಓದುತ್ತಿದ್ದು ಕೂಡ ಸಂಸಾರದಿಂದ ಬಿಡುಗಡೆ ಹೊಂದುವುದಿಲ್ಲ. ಯಾವನದು ತನ್ನ ಆತ್ಮನಲ್ಲಿ ತನ್ನತನದ ನಿಶ್ಚಯವಿದೆ ಅವನು ಶಯನ ಮಾಡುತ್ತಿದ್ದು ಮತ್ತು ಅಜಾಗರೂಕನಾಗಿರುತ್ತಿದ್ದು ಕೂಡ ಸಂಸಾರದಿಂದ ಬಿಡುಗಡೆ ಹೊಂದುತ್ತಾನೆ.

**ಜ್ಞಾನಿಯು ತನ್ನ ಸಿದ್ಧ ಸಮಾನ ಶುದ್ಧ ಸ್ವರೂಪದ ಆರಾಧನೆ ಮಾಡಿ ಸಿದ್ಧತ್ವಕ್ಕೆ ಪ್ರಾಪ್ತನಾಗಿ ಹೋಗುತ್ತಾನೆ.** ಯಾವ ಪ್ರಕಾರ ಬತ್ತಿಯು ದೀವಿಗೆಯಿಂದ ಯುಕ್ತವಾಗಿ ಸ್ವಯಂ ದೀವಿಗೆಯಾಗಿ ಹೋಗುತ್ತದೆ, ಅದೇ ಪ್ರಕಾರ ಈ ಆತ್ಮನು ಕೂಡ ತನ್ನ ಆತ್ಮನ ಆರಾಧನೆ, ಮಾಡಿ ಪರಮಾತ್ಮನಾಗಿ ಹೋಗುತ್ತಾನೆ. ಹೇಗೆ ವೃಕ್ಷವು ತಾನೇ ಘರ್ಷಣೆ ಮಾಡಿ ಅಗ್ನಿಯಾಗಿ ಹೋಗುತ್ತದೆ ಹಾಗೆಯೇ ಆತ್ಮನು ಕೂಡ ಪರಮಾತ್ಮ ಭಾವದಿಂದ ಒಂದಾಗಿ ಹೋಗಿ ಸ್ವಯಂ ಸಿದ್ಧನಾಗಿ ಹೋಗುತ್ತಾನೆ.

ಹೇಗೆ ಓರ್ವನು ಸ್ವಪ್ನದಲ್ಲಿ ತನ್ನ ನಾಶವಾದುದನ್ನು ನೋಡುವನು, ಆದರೆ ಜಾಗೃತನಾದ ಮೇಲೆ ಅವನ ನಾಶವಾಗಿರುವುದಿಲ್ಲ, ಅದೇ ಪ್ರಕಾರ ಜಾಗೃತನಾಗಿದ್ದೂ ಯಾವನು ಭ್ರಾಂತಿಯಿಂದ ತನ್ನ ನಾಶ ಮನ್ನಿಸುತ್ತಾನೆ ಅವನದಂತೂ ವಾಸ್ತವದಲ್ಲಿ ನಾಶವಾಗುವುದಿಲ್ಲ; ಆದರೆ ಯಾವ ಪರ್ಯಾಯವು ಉತ್ಪನ್ನವಾಗಿದೆ ಅದಂತೂ ನಷ್ಟವಾದಲ್ಲದೆ ಇರುವುದಿಲ್ಲ.

ಆತ್ಮಸ್ವರೂಪದ ಅನುಭವ ಮಾಡಿಕೊಂಡಲ್ಲದೆ, ಶರೀರವನ್ನೇ ಆತ್ಮರೂಪವಾಗಿ ಅನುಭವ ಮಾಡುವಂಥವನು ಅನೇಕ ಶಾಸ್ತ್ರಗಳನ್ನೋದುತ್ತಿದ್ದರೂ ಕೂಡ ಸಂಸಾರದಿಂದ ಬಿಡುಗಡೆ ಹೊಂದಲಾರನು. ಆದರೆ ತನ್ನ ಸ್ವರೂಪದಲ್ಲಿ ತನ್ನ ಅನುಭವ ಮಾಡುವಂಥವನು ಶಾಸ್ತ್ರಾಭ್ಯಾಸದಿಂದ ರಹಿತನಿದ್ದರೂ ಸಂಸಾರದಿಂದ ಬಿಡುಗಡೆ ಹೊಂದುವನು.

ಎಲೈ ಜ್ಞಾನಿಗಳೇ ! ಈ ಸುಖದ ಅವಸ್ಥೆಯಲ್ಲಿ ಆದ ಯಾವ ಜ್ಞಾನವಿದೆ, ಅದು ದುಃಖದ ಅವಸ್ಥೆಯು ಬಂದ ಮೇಲೆ ಬಿಟ್ಟು ಹೋಗುವುದು. ಆದುದರಿಂದ ದುಃಖದ ಅವಸ್ಥೆಯಲ್ಲಿ, ರೋಗ-ಪರೀಷಹ ಮೊದಲಾದವುಗಳ ಅವಸ್ಥೆಯಲ್ಲಿ ಕೂಡ ಆತ್ಮಜ್ಞಾನದ ದೃಢ ಅಭ್ಯಾಸ ಮಾಡಬೇಕು. ಈ ಪ್ರಕಾರ ಚಿಂತನದ ಪ್ರಭಾವದಿಂದ ಬಾಹ್ಯ ಶರೀರ ಮೊದಲಾದುವಲ್ಲಿ ಆತ್ಮಬುದ್ಧಿರೂಪದ ಯಾವ ಬಹಿರಾತ್ಮ ಬುದ್ಧಿಯಿದೆ ಅದನ್ನು ಬಿಟ್ಟುಕೊಟ್ಟು **ತಮ್ಮ ಆಂತರ್ಯದ ಆತ್ಮರೂಪದಲ್ಲಿ ತಮ್ಮ ರೂಪದ ಅಂತರಾತ್ಮನಾಗಿ ಪರಮಾತ್ಮ ರೂಪವಾಗುವ ಪ್ರಯತ್ನ ಮಾಡಬೇಕು.**

**ಪರಮಾತ್ಮನ ಸ್ವರೂಪ :** ಪರಮಾತ್ಮನಲ್ಲಿ ಸಕಲ ಪರಮಾತ್ಮ ಮತ್ತು ನಿಕಲ ಪರಮಾತ್ಮನೆಂದು ಎರಡು ಭೇದಗಳಿವೆ. ಯಾರು ಘಾತಿಕರ್ಮಗಳನ್ನು ನಾಶ ಮಾಡಿ ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖರೂಪ ಸ್ವಾಧೀನ, ಹದಿನೆಂಟು ದೋಷಗಳಿಂದ ರಹಿತ, ಇಂದ್ರ-ನರೇಂದ್ರ-ಧರಣೇಂದ್ರರುಗಳಿಂದ ವಂದನೀಯ, ಅನೇಕ ಅತಿಶಯಸಹಿತ, ಸಮಸ್ತ ಜೀವರುಗಳಿಗೆ ಹಿತಕಾರಕ, ದಿವ್ಯಧ್ವನಿ ಸಹಿತ, ದೇವಾಧಿದೇವ, ಪರಮ ಔದಾರಿಕ ದೇಹದಲ್ಲಿ ವಿರಾಜಮಾನರಾದ ಅರಹಂತ ದೇವರಿದ್ದಾರೆ ಅವರು ಸಕಲ ಪರಮಾತ್ಮರಿದ್ದಾರೆ. ಕಲ ಎಂದರೆ ಶರೀರ ಯಾರು ದೇಹ ಸಹಿತ ಆಯುವಿನ ಕೊನೆಯವರೆಗೆ ಪರಮೋಪದೇಶ ಕೊಡುವಂಥ ಅರಹಂತ ದೇವರಿದ್ದಾರೆ ಅವರು ಸಕಲ ಪರಮಾತ್ಮರಿದ್ದಾರೆ.

ಯಾರು ಎಂಟು ಕರ್ಮಗಳಿಂದ ರಹಿತರಾಗಿ ಸಿದ್ಧ ಪರಮೇಷ್ಠಿಯಾಗಿ ಹೋಗಿದ್ದಾರೆ, ಅವರ ಕಲ ಎಂದರೆ ಶರೀರವು ನಷ್ಟವಾಗಿ ಹೋಗಿರುವುದರಿಂದ ಸಿದ್ಧ ಭಗವಂತರು ನಿಕಲ ಪರಮಾತ್ಮರಿದ್ದಾರೆ.

ಈ ಪರಮಾತ್ಮ ಪದವು ಈ ಮನುಷ್ಯ ಪರ್ಯಾಯದಲ್ಲಿ ರತ್ನತ್ರಯದ ಆರಾಧನೆ ಮಾಡುವಂಥವರಿಗೇ ಪ್ರಾಪ್ತವಾಗುತ್ತದೆ. ಇದರ ಬೀಜವೆಂದರೆ ಬಹಿರಾತ್ಮತೆಯನ್ನು ಬಿಟ್ಟುಕೊಟ್ಟು ಅಂತರಾತ್ಮತೆಯಲ್ಲಿ ಲೀನವಾಗುವುದಿದೆ. ಬಹಿರಾತ್ಮನಿಗೆ ಮಿಥ್ಯಾತ್ವ ಗುಣಸ್ಥಾನವೇ ಇರುತ್ತದೆ. ನಾಲ್ಕನೇ ಗುಣಸ್ಥಾನದಿಂದ ಹಿಡಿದು ಹನ್ನೆರಡನೇ ಗುಣಸ್ಥಾನದವರೆಗೆ ಅಂತರಾತ್ಮರಿದ್ದಾರೆ. ದೇಹಸಹಿತ

ಹದಿಮೂರನೇ-ಹದಿನಾಲ್ಕನೇ ಗುಣಸ್ಥಾನದಲ್ಲಿ ಇರುವವರನ್ನು ಪರಮಾತ್ಮರೆಂದು ತಿಳಿಯುವುದು. ದೇಹರಹಿತ, ಗುಣಸ್ಥಾನ ರಹಿತ ಯಾವ ಸಿದ್ಧಭಗವಂತರಿದ್ದಾರೆ ಅವರು ಕೂಡ ಪರಮಾತ್ಮರಿದ್ದಾರೆ. **ಗುಣಸ್ಥಾನವಂತೂ ಮೋಹ ಮತ್ತು ಯೋಗದ ಅಪೇಕ್ಷೆಯಿಂದ ಆಗುತ್ತದೆ.** ಸಿದ್ಧ ಭಗವಂತರಿಗೆ ಮೋಹಕರ್ಮವು ಕೂಡ ಇಲ್ಲ, ಮತ್ತು ಯೋಗಗಳದ್ದು ಕೂಡ ಅಭಾವವಾಗಿ ಹೋಗಿದೆ, ಆದುದರಿಂದ ಅವರು ಗುಣಸ್ಥಾನದ ಸಂಜ್ಞೆಯಿಂದ ರಹಿತರಿದ್ದಾರೆ.

ಇನ್ನಷ್ಟು ಧರ್ಮಧ್ಯಾನದ ವರ್ಣನೆ ಮಾಡುತ್ತಾರೆ. ಈ ಧರ್ಮಧ್ಯಾನವು ಸಮ್ಯಗ್ದೃಷ್ಟಿಗಳಿಗೇನೆ ಆಗುತ್ತದೆ, ಮಿಥ್ಯಾದೃಷ್ಟಿಗಳಿಗೆ ಆಗುವುದಿಲ್ಲವೆಂಬ ನಿಯಮವಿದೆ. ನಾಲ್ಕನೆಯ ಗುಣಸ್ಥಾನದಿಂದ ಪ್ರಾರಂಭವಾಗಿ ಏಳನೆಯ ಗುಣಸ್ಥಾನದವರೆಗೆ ಧರ್ಮಧ್ಯಾನವಾಗುತ್ತದೆ. ಪರಮಾಗಮದಲ್ಲಿ ಧರ್ಮಧ್ಯಾನವನ್ನು ಆಜ್ಞಾವಿಚಯ, ಅಪಾಯವಿಚಯ, ವಿಪಾಕವಿಚಯ ಮತ್ತು ಸಂಸ್ಥಾನವಿಚಯವೆಂದು ನಾಲ್ಕು ಪ್ರಕಾರದಿಂದ ಹೇಳಲಾಗಿದೆ.

**ಆಜ್ಞಾವಿಚಯ ಧರ್ಮಧ್ಯಾನ :** ಆಜ್ಞಾವಿಚಯ ಧರ್ಮಧ್ಯಾನದ ಸ್ವರೂಪವನ್ನು ಸಂಕ್ಷೇಪದಲ್ಲಿ ಹೇಳುತ್ತಾರೆ. **ವೀತರಾಗ ಸರ್ವಜ್ಞ ಭಗವಂತರು ಹೇಳಿದ ಆಗಮದ ಪ್ರಮಾಣತೆಯಿಂದ ಪದಾರ್ಥಗಳ ನಿರ್ಣಯ ಮಾಡುವುದು ಅದು ಆಜ್ಞಾವಿಚಯ ಧರ್ಮಧ್ಯಾನವಿದೆ.** ಎಲ್ಲಿ ಉಪದೇಶ ಕೊಡುವವರ ಅಭಾವವಿದೆ, ಕರ್ಮದ ಉದಯದಿಂದ ತಮ್ಮ ಬುದ್ಧಿಯು ಮಂದವಿದೆ, ಪದಾರ್ಥಗಳಲ್ಲಿ ಸೂಕ್ಷ್ಮತೆಯಿದೆ, ಹೇತುದೃಷ್ಟಾಂತದ ಅಭಾವವಿದೆ, ಅಲ್ಲಿ ಸರ್ವಜ್ಞರ ಮೂಲಕ ಹೇಳಿದ ಆಗಮವನ್ನು ಪ್ರಮಾಣ ಮನ್ನಿಸಿ, ತಮ್ಮ ಮನಸ್ಸಿನಲ್ಲಿ ಇದುವೇ ತತ್ತ್ವವಿದೆ, ಈ ಪ್ರಕಾರವೇ ಈ ತತ್ತ್ವವಿದೆ. ಬೇರೆಯಿಲ್ಲ, ಬೇರೆ ಪ್ರಕಾರದಿಂದ ಇಲ್ಲ, ವೀತರಾಗ ಸರ್ವಜ್ಞ ಜಿನಭಗವಂತರು ಅನ್ಯಥಾ ಹೇಳುವಂಥವರಿಲ್ಲ. ಈ ಪ್ರಕಾರ ಗಹನ ಪದಾರ್ಥಗಳ ಶ್ರದ್ಧೆಯಲ್ಲಿ ಅರ್ಥದ ನಿರ್ಣಯ ಮಾಡುವುದು ಅದು ಆಜ್ಞಾವಿಚಯವಿದೆ.

ಸಮ್ಯಗ್ದರ್ಶನದಿಂದ ಪರಿಣಾಮಗಳ ವಿಶುದ್ಧತೆಯಧಾರಕ, ತಮ್ಮ ಹಾಗೂ ಪರಮತದ ಪದಾರ್ಥಗಳ ನಿರ್ಣಯವನ್ನು ತಿಳಿದುಕೊಳ್ಳುವಂಥ ಸಮ್ಯಗ್ಜ್ಞಾನಿಯು ಸರ್ವಜ್ಞರ ಮೂಲಕ ಹೇಳಿದ ಸೂಕ್ಷ್ಮ ಪದಾರ್ಥಗಳನ್ನು ತಿಳಿದುಕೊಂಡು, ಐದು ಅಸ್ತಿಕಾಯ ಮೊದಲಾದ ಪದಾರ್ಥಗಳ ನಿಶ್ಚಯ ಮಾಡಿ ಅನ್ಯ ಭವ್ಯ ಜೀವರುಗಳಿಗೆ ಕಲಿಸುತ್ತಾನೆ; ಕಥನದ ವ್ಯಾಖ್ಯಾನದ ಮಾರ್ಗದಲ್ಲಿ ಶ್ರುತಜ್ಞಾನದ ಸಾಮರ್ಥ್ಯದಿಂದ ಹೇಗೆ ತಮ್ಮ ಸಿದ್ಧಾಂತಗಳಲ್ಲಿ ವಿರೋಧ ಬರುವುದಿಲ್ಲ ಆ ಪ್ರಕಾರ ಮತ್ತು ಅನ್ಯ ಏಕಾಂತಿಗಳ ಮೂಲಕ ಹೇಳಿದ ಮಿಥ್ಯಾಪ್ರಮಾಣ, ಹೇತು, ನಯದ ಖಂಡನೆ ಮಾಡುವಲ್ಲಿ ಸಮರ್ಥವಿರುವ ಅನೇಕಾಂತವನ್ನು ಗ್ರಹಣ ಮಾಡುವಲ್ಲಿ ಸಮರ್ಥರಾಗಿ, ಶ್ರೋತೃಗಳಿಗೆ ಪದಾರ್ಥಗಳ ಸ್ವರೂಪವನ್ನು ಗ್ರಹಣ ಮಾಡಿಸುವಲ್ಲಿ ಸಮರ್ಥರಾಗಿ ಶ್ರುತದ ವ್ಯಾಖ್ಯಾನ ಮಾಡುತ್ತಾರೆ. ಅವುಗಳ ಸಮರ್ಥನದ ಸಲುವಾಗಿ ತರ್ಕ, ನಯ, ಪ್ರಮಾಣವನ್ನು ಯುಕ್ತ ಮಾಡುವಲ್ಲಿ ತತ್ಪರ, ಈ ಪ್ರಕಾರ ಚಿಂತನೆ ಮಾಡುವಲ್ಲಿ ಏಕಾಗ್ರತೆಯು, ಅದು ಸರ್ವಜ್ಞರ ಆಜ್ಞೆಯನ್ನು ತಿಳಿಸಿಕೊಡುವುದರ ಪ್ರಯೋಜನದಿಂದ ಆಜ್ಞಾವಿಚಯ ಧರ್ಮಧ್ಯಾನವಿದೆ.

**ಜಿನ ಸಿದ್ಧಾಂತದಲ್ಲಿ ಪ್ರಸಿದ್ಧ ಸರ್ವಜ್ಞರ ಆಜ್ಞೆಯ ಅನುಸಾರ ವಸ್ತು ಸ್ವರೂಪದ ಚಿಂತನ ಮಾಡುವುದು ಅದು ಆಜ್ಞಾವಿಚಯವಿದೆ.** ಜಗತ್ತಿನಲ್ಲಿ ಯಾವ ವಸ್ತುವಿದೆ ಅದು ಅನಂತ ಗುಣ ಅನಂತ ಪರ್ಯಾಯಸ್ವರೂಪವಿದೆ, ಆದುದರಿಂದ ಉತ್ಪಾದ-ವ್ಯಯ-ಧ್ರೌವ್ಯ ಸ್ವರೂಪವಿದೆ; ತ್ರಿಕಾಲವರ್ತಿಯಿರುವುದರಿಂದ ನಿತ್ಯವಿದೆ. ಇಂಥ ವಸ್ತುವನ್ನು ಹೇಳುವಂಥ ಆಗಮದ ಯಾವುದೇ ಸೂಕ್ಷ್ಮ ವಚನವು ತಮ್ಮ ಸ್ಥೂಲಬುದ್ಧಿಯಿಂದ ತಿಳಿದು ಬಾರದಿರುತ್ತಿದ್ದರೆ ಮತ್ತು ಯಾವ ಹೇತುವಿನಿಂದ ಬಾಧೆಗೂ ಕೂಡ ಪ್ರಾಪ್ತವಾಗದಿರುತ್ತಿದ್ದರೆ ಅಲ್ಲಿ **'ಸರ್ವಜ್ಞರ ಆಜ್ಞೆಯು ಹೀಗೆ ಇದೆ', 'ವೀತರಾಗ ಸರ್ವಜ್ಞ ಭಗವಂತರು ಅನ್ಯಥಾ ಹೇಳುವುದಿಲ್ಲ'**ವೆಂಬ ಪ್ರಮಾಣರೂಪದ ಚಿಂತನವು ಅದು ಆಜ್ಞಾವಿಚಯ ಧರ್ಮಧ್ಯಾನವಿದೆ.

ಜಿನೇಂದ್ರರ ಪರಮಾಗಮದ ಪಠಣ, ಪಾಠಣ, ಚಿಂತನ, ಅನುಭವನಗಳೆಲ್ಲವು ಆಜ್ಞಾವಿಚಯವಿದೆ. ಯಾವ ಶ್ರುತವು ವೀತರಾಗ ಸರ್ವಜ್ಞರ ಮೂಲಕ ಹೇಳಲಾಗಿದೆ ಅದನ್ನು ಕೇಳುವುದರಿಂದ ರಾಗೀ, ದ್ವೇಷೀ, ಶಸ್ತ್ರಧಾರಿ ದೇವಗಳ ಉಪಾಸನೆಯಿಂದ ಪರಾಙ್ಮುಖವಾಗಿ ಹೋಗುವುದು, ಪರಿಗ್ರಹಧಾರಕ, ವಿಷಯ ಕಷಾಯಗಳ ಧಾರಕರಾದ ಅನೇಕ

ವೇಷಧಾರಕರಲ್ಲಿ ಗುರು ಬುದ್ಧಿ ಪೂಜ್ಯತೆಯ ಬುದ್ಧಿಯು ಉತ್ಪನ್ನವಾಗುವುದಿಲ್ಲ, ಹಿಂಸೆಯ ಪ್ರವೃತ್ತಿಯೆಂದೂ ಧರ್ಮರೂಪವಾಗಿ ಕಂಡು ಬರುವುದಿಲ್ಲ, ಅದರ ಶ್ರವಣ, ಪಠಣ, ಚಿಂತನದಿಂದ ವಿಷಯ, ಕಷಾಯ, ದೇಹ, ಪರಿಗ್ರಹ ಮೊದಲಾದವುಗಳಿಂದ ಪರಾಙ್ಮುಖತೆಯು ಉತ್ಪನ್ನವಾಗಿ ಹೋಗುವುದು, ದಯಾಧರ್ಮದ ವೃದ್ಧಿಯಾಗಿ ಹೋಗುವುದು ಅಂಥ ಆ ಆಗಮದ ಶಬ್ದ ಮತ್ತು ಅರ್ಥದ ಚಿಂತನ ಮಾಡುವುದು ಅದು ಆಜ್ಞಾವಿಚಯ ಧರ್ಮಧ್ಯಾನವಿದೆ.

ಆಗಮವು ವೀತರಾಗ ಸರ್ವಜ್ಞರು ಉಪದೇಶಿಸಿದ್ದಿದೆ, ರತ್ನತ್ರಯ ಸ್ವರೂಪವನ್ನು ಪುಷ್ಟ ಮಾಡುವಂಥದ್ದಿದೆ, ಅನಾದಿ ನಿಧನವಿದೆ, ಸಮಸ್ತ ಜೀವರುಗಳಿಗೆ ಆಶ್ರಯಭೂತವಿದೆ, ಅನಂತ ಧರ್ಮಧಾರಕ ಪದಾರ್ಥಗಳನ್ನು ಪ್ರಕಾಶ ಮಾಡುವಂಥದ್ದಿದೆ, ಪ್ರಮಾಣ, ನಯ, ನಿಕ್ಷೇಪಗಳ ಮೂಲಕ ಪದಾರ್ಥಗಳನ್ನು ಸ್ಪಷ್ಟವಾಗಿ ಉದ್ಯೋತಗೊಳಿಸುವಂಥದ್ದಿದೆ ಅದರ ಬೀಜವು ಸ್ಯಾದ್ವಾದವಿದೆ. ಇದರ ಆಶ್ರಯ ಪಡೆಯಲಾರದೆಯೇ ಜೀವನು ಅನಾದಿಕಾಲದಿಂದ ಚತುರ್ಗತಿಗಳಲ್ಲಿ ಭ್ರಮಣ ಮಾಡಿದ್ದಾನೆ.

ಏಳು ತತ್ತ್ವ, ಒಂಭತ್ತು ಪದಾರ್ಥ, ಆರು ದ್ರವ್ಯ, ಐದು ಅಸ್ತಿಕಾಯಗಳ ಸ್ವರೂಪವನ್ನು ಪ್ರಕಾಶಪಡಿಸುವಂಥದ್ದಿದೆ, ದ್ರವ್ಯ-ಗುಣ-ಪರ್ಯಾಯಗಳ ಸ್ವರೂಪವನ್ನು ತೋರಿಸಿಕೊಡುವಂಥದ್ದಿದೆ. ಗುಣಸ್ಥಾನ-ಮಾರ್ಗಣಾಸ್ಥಾನ-ಯೋನಿ ಕುಲ ಕೋಟಿಯ ಮೂಲಕ ಜೀವದಪ್ರರೂಪಣೆ ಮಾಡುವಂಥದ್ದಿದೆ, ಆಸ್ರವ-ಬಂಧ-ಉದಯ-ಉದೀರಣ-ಸತ್ತಾದ ಪ್ರರೂಪಣೆ ಮಾಡುವಂಥದ್ದಿದೆ, ಸಮಸ್ತಲೋಕ-ಅಲೋಕದ ಪ್ರಕಾಶಕವಿದೆ. ಅನೇಕ ಶಬ್ದಗಳ ರಚನೆಯ ರೂಪದ ಅಂಗ, ಪೂರ್ವ, ಪ್ರಕೀರ್ಣಕ ಮೊದಲಾದ ರತ್ನಗಳಿಂದ ತುಂಬಿಕೊಂಡು ಗಂಭೀರ ರತ್ನಾಕರದ ಸಮಾನವಾಗಿ ಆಗಮವಿದೆ.

ಏಕಾಂತ ವಿದ್ಯೆಯ ಮದದಿಂದ ಉನ್ಮತ್ತರಾದ ಮಿಥ್ಯಾದೃಷ್ಟಿಗಳ ಮದವನ್ನು ನಷ್ಟ ಮಾಡುವಂಥದ್ದಿದೆ, ಮಿಥ್ಯಾತ್ವ ರೂಪದ ಅಂಧಕಾರವನ್ನು ದೂರ ಮಾಡುವಲ್ಲಿ ಸೂರ್ಯ ಸಮಾನವಿದೆ, ರಾಗರೂಪ ಸರ್ಪದ ವಿಷವನ್ನು ನಿವಾರಿಸುವಲ್ಲಿ ಗಾರುಡಿ ವಿದ್ಯೆಯಿದೆ, ಸಮಸ್ತ ಅಂತರಂಗ ಪಾಪಮಲವನ್ನು ತೊಳೆಯುವ ಸಲುವಾಗಿ ಪವಿತ್ರ ತೀರ್ಥವಿದೆ, ಸಮಸ್ತ ವಸ್ತುಗಳ ಪರೀಕ್ಷೆ ಮಾಡುವಲ್ಲಿ ಸಮರ್ಥವಿದೆ, ಯೋಗೀಶ್ವರರಿಗೆ ಮೂರನೆಯ ನೇತ್ರವಿದೆ, ಸಂತಾಪರೂಪ ಜ್ವರದ ಘಾತಕವಿದೆ, ಇಂದ್ರ, ಅಹಮಿಂದ್ರ, ಗಣಧರ ಮುನೀಂದ್ರರುಗಳಿಂದ ಸೇವಿತ, ಜ್ಞಾನಿಗಳ ಪರಮ ಅಕ್ಷಯನಿಧಾನ, ಆಸೆ-ಇಚ್ಛೆ-ಭಯಗಳ ನಾಶ ಮಾಡುವಂಥದ್ದು ಆಗಮವಿದೆ.

ಆತ್ಮಿಕ ಸುಖರೂಪದ ಅಮೃತವನ್ನು ಪ್ರಕಟಪಡಿಸುವ ಸಲುವಾಗಿ ಚಂದಿರನ ಉದಯವಿದೆ, ಅಕ್ಷಯ, ಅವಿನಾಶೀ ಜೀವರುಗಳ ನಿಜಧನವಿದೆ, ಮುಕ್ತಿಯ ಕಡೆಗೆ ಪ್ರಯಾಣ ಮಾಡುವಂಥ ಜೀವರುಗಳಿಗೆ ಪ್ರಮುಖ ಮಿತ್ರವಿದೆ, ಗಮನದ ಭೇರಿಯಿದೆ, ವಿನಯ-ನ್ಯಾಯ-ಇಂದ್ರಿಯದಮನ-ಶೀಲ-ಸಂಯಮ-ಸಂತೋಷ ಮೊದಲಾದ ಗುಣಗಳನ್ನು ಉತ್ಪನ್ನ ಮಾಡುವಂಥದ್ದಿದೆ. ಇಂಥ ಪರಮಾಗಮದ ಚಿಂತನೆ-ಧ್ಯಾನ-ಅನುಭವವು ಅದು ಆಜ್ಞಾವಿಚಯ ಧರ್ಮಧ್ಯಾನವಿದೆ. ಈ ಪ್ರಕಾರ ಆಜ್ಞಾವಿಚಯ ಧರ್ಮಧ್ಯಾನದ ವರ್ಣನೆ ಮಾಡಲಾಯಿತು.

**ಅಪಾಯ ವಿಚಯ ಧರ್ಮಧ್ಯಾನ :** ಈಗ ಅಪಾಯ ವಿಚಯಧರ್ಮಧ್ಯಾನದ ಸ್ವರೂಪ ಹೇಳುತ್ತಾರೆ. ಮಿಥ್ಯಾತ್ವದ ಸಂಯೋಗದಿಂದ ಸನ್ಮಾರ್ಗದ ಅಪಾಯ(ನಾಶ)ದ ಜ್ಞಾನ ಮಾಡಿಕೊಳ್ಳುವುದು, ಸನ್ಮಾರ್ಗ ಎಂದರೆ **ಮೋಕ್ಷಮಾರ್ಗದ ಅಭಾವ ಮಾಡುವಂಥದು ಮಿಥ್ಯಾತ್ವವೇ ಇದೆಯೆಂದು** ಚಿಂತನೆ ಮಾಡುವುದು ಅದು ಅಪಾಯ ವಿಚಯವಿದೆ.

ಮಿಥ್ಯಾದರ್ಶನದಿಂದ ಯಾರ ಜ್ಞಾನ-ನೇತ್ರಗಳು ಮುಚ್ಚಿ ಹೋಗುತ್ತಿವೆ ಅವರ ಆಚಾರ ವಿನಯ ಮೊದಲಾದ ಸಮಸ್ತ ಕಾರ್ಯಗಳು ಸಂಸಾರವೃದ್ಧಿಯ ಸಲುವಾಗಿ ಇವೆ, ಏಕೆಂದರೆ **ಮಿಥ್ಯಾದೃಷ್ಟಿಗೆ ಕುರುಡನ ಸಮಾನ ವಿಪರೀತ ಜ್ಞಾನದ ಬಾಹುಳ್ಯತೆಯಿದೆ.** ಯಾವ ಪ್ರಕಾರ ಓರ್ವ ಜನ್ಮಾಂಧ ಬಲವಂತ ಪುರುಷನು ಕೂಡ ಒಳ್ಳೆಯ ಮಾರ್ಗದಿಂದ ದೂರ ಬಿಟ್ಟು ಹೋದ, ಅಸತ್ಯ ಮಾರ್ಗದ ಉಪದೇಶ ಕೊಡುವಂಥವನಿಂದ ನಡೆಸಿದ, ಉಚ್ಚ-ನೀಚ ಪರ್ವತದಲ್ಲಿ, ವಿಷಮ ಪಾಷಾಣ, ಕಠೋರ ಮೋಟುಮರ, ವೃಕ್ಷ, ಕಂದಕ, ಚರಂಡಿ, ಮುಳ್ಳುಗಳಿಂದ ತುಂಬಿದ, ವಿಷಮ ನೆಲದ ಮೇಲೆ

ಬಿದ್ದುಕೊಂಡು, ಚಲನ-ವಲನ ಕ್ರಿಯೆ ಮಾಡುತ್ತಿದ್ದರೂ ಉಪದೇಶ ಕೊಡುವವನಿಲ್ಲದೆ ಮಾರ್ಗದಲ್ಲಿ ಗಮನ ಮಾಡುವಲ್ಲಿ ಸಮರ್ಥನಾಗುವುದಿಲ್ಲ; ಅದೇ ಪ್ರಕಾರ ಸರ್ವಜ್ಞರು ಹೇಳಿದ ಮಾರ್ಗದಿಂದ ಪರಾಙ್ಮುಖನಾದ ಜೀವನು ಮೋಕ್ಷದ ಇಚ್ಛುಕನಿದ್ದರೂ ಕೂಡ ಸನ್ಮಾರ್ಗದ ಜ್ಞಾನವಿಲ್ಲದೆ ಸಂಸಾರದಲ್ಲಿ ಅತ್ಯಂತ ದೂರವೇ ಪರಿಭ್ರಮಣ ಮಾಡುತ್ತಾನೆ. ಈ ಪ್ರಕಾರ ಸನ್ಮಾರ್ಗದ ಪ್ರಕಾಶದ ಅಭಾವವಾಗಿದೆಯೆಂದು ಚಿಂತನ ಮಾಡುವುದು ಅದು ಅಪಾಯ ವಿಚಯ ಧರ್ಮಧ್ಯಾನವಿದೆ. ಕುಮಾರ್ಗದ ಪ್ರವರ್ತನೆಯ ಅಭಾವ ಮತ್ತು ನಾಶದ ಚಿಂತನೆ ಮಾಡುವುದು ಕೂಡ ಅಪಾಯ ವಿಚಯವಿದೆ.

ಅಯ್ಯೋ ! ವಿಪರೀತ ಜ್ಞಾನ-ಶ್ರದ್ಧೆಯ ಧಾರಕರಾದ ಮಿಥ್ಯಾದೃಷ್ಟಿ ಕುವಾದಿಗಳ ಮೂಲಕ ಉಪದೇಶಿಸಲ್ಪಟ್ಟ ಕುಮಾರ್ಗದಿಂದ ಆ ಪ್ರಾಣಿಗಳು ಹೇಗೆ ಉಳಿಯುವರು ? ಈ ಪ್ರಾಣಿಗಳು ಕುದೇವ, ಕುಧರ್ಮ, ಕುಗುರುಗಳ ಸೇವನೆಯಿಂದ ಹೇಗೆ ದೂರರಾಗುವರು ? - ಎಂಬುದಾಗಿ ವಿಚಾರ ಮಾಡುವುದು ಅದು ಅಪಾಯ ವಿಚಯವಿದೆ.

ಸರ್ವಜ್ಞ ಭಗವಂತರ ಮೂಲಕ ಹೇಳಲಾದ ಯಾವ ರತ್ನತ್ರಯರೂಪದ ಮೋಕ್ಷಮಾರ್ಗವಿದೆ ಅದನ್ನು ಪ್ರಾಪ್ತ ಮಾಡಿಕೊಳ್ಳದೆ ಪ್ರಾಣಿಗಳು ಸಂಸಾರರೂಪದ ವನದಲ್ಲಿ ಚಿರಕಾಲದಿಂದ ನಷ್ಟವಾಗುತ್ತಲಿವೆ, ಜಿನೇಶ್ವರ ಉಪದೇಶರೂಪದ ಜಹಜನ್ನು ಪ್ರಾಪ್ತ ಮಾಡಿಕೊಳ್ಳದೆ ದೀನ ಪ್ರಾಣಿಗಳು ಸಂಸಾರ ಸಮುದ್ರದಲ್ಲಿ ನಿರಂತರ ಮುಳುಗೇಳುತ್ತ ದುಃಖಗಳನ್ನು ಭೋಗಿಸುತ್ತಿವೆ. ಮಹಾನ ಕಷ್ಟರೂಪದ ಅಗ್ನಿಯಲ್ಲಿ ಸುಡುತ್ತ ಸಂಸಾರರೂಪದ ವನದಲ್ಲಿ ಭ್ರಮಣ ಮಾಡುತ್ತಿದ್ದರೂ ಕೂಡ ನಾನು ಸಮ್ಯಗ್ಜ್ಞಾನರೂಪ ಸಮುದ್ರದ ದಡವನ್ನು ಪ್ರಾಪ್ತ ಮಾಡಿಕೊಂಡಿದ್ದೇನೆ, ಈಗ ಸಮ್ಯಗ್ಜ್ಞಾನದ ಶಿಖರವನ್ನು ಪ್ರಾಪ್ತ ಮಾಡಿಕೊಂಡು ಅದರಿಂದ ದೂರನಾದೆನೆಂದರೆ ಸಂಸಾರರೂಪದ ಹಾಳು ಬಾವಿಯಲ್ಲಿ ಉರುಳುವುದರಿಂದ ನನ್ನನ್ನು ಯಾರು ತಡೆಯಬಹುದಾಗಿದೆ ?

**ಅನಾದಿಯ ಭ್ರಮೆಯಿಂದ ಉತ್ಪನ್ನವಾದ ಮಿಥ್ಯಾತ್ವ, ಅವಿರತಿ,ಕಷಾಯ ಮೊದಲಾದ ಕರ್ಮಬಂಧದ ಕಾರಣಗಳು ನನಗೆ ದುರ್ನಿವಾರವಿವೆ. ನಾನಂತೂ ಶುದ್ಧನಿದ್ದೇನೆ, ದರ್ಶನ-ಜ್ಞಾನಮಯ ನಿರ್ಮಲ ನೇತ್ರದ ಧಾರಕ ಸಿದ್ಧಸ್ವರೂಪನಿದ್ದೇನೆ, ಆದಾಗ್ಯೂ ಆ ಕರ್ಮಗಳ ಮೂಲಕ ಖಂಡಿತನಾಗಿ ಹೋದ ನಾನು ಚಿರಕಾಲದಿಂದ ಸಂಸಾರ ರೂಪದ ಕೊಳಚೆಯಲ್ಲಿ ಖೇದ ಖಿನ್ನನಾಗುತ್ತಲೇ ಬಂದಿದ್ದೇನೆ.** ಒಂದು ಕಡೆಗಂತೂ ಅನೇಕ ಪ್ರಕಾರದ ಕರ್ಮಗಳ ಸೇನೆಯಿದೆ, ಮತ್ತು ಇನ್ನೊಂದು ಕಡೆಗೆ ನಾನು ಏಕಾಕಿ ಆತ್ಮನಿದ್ದೇನೆ. ಈ ಪ್ರಕಾರ ವೈರಿಗಳ ಸಂಕಟದಲ್ಲಿ ಸಿಲುಕಿದ ನಾನು ಸಾವಧಾನವಾಗಿ ಪ್ರಮಾದರಹಿತನಾಗಿರುವುದೇ ಉಚಿತವಿದೆ.

ಈಗ ನಾನು ಪ್ರಮಾದಿಯಾಗಿ ಉಳಿದರೆ ಕರ್ಮವು ನನ್ನ ಜ್ಞಾನ ದರ್ಶನ ಸ್ವರೂಪದ ಘಾತ ಮಾಡಿ ಏಕೇಂದ್ರಿಯಾದಿ ರೂಪದ ಪರ್ಯಾಯದಲ್ಲಿ ಜಡ ಅಚೇತನದಂತೆ ಮಾಡಿಬಿಡುವುದು. ಪ್ರಬಲ ಧ್ಯಾನರೂಪದ ಅಗ್ನಿಯಿಂದ ನಾನು ನನ್ನ ಆತ್ಮನನ್ನು, ಕರ್ಮಮಲದಿಂದ ನಷ್ಟ ಮಾಡಿ ಪಾಷಾಣದೊಳಗಿಂದ ತೆಗೆವ ಸುವರ್ಣದ ಸಮಾನ ಶುದ್ಧ ಯಾವಾಗ ಮಾಡುವೆನು? ನನಗೆ ಪ್ರಾಪ್ತ ಮಾಡಿಕೊಳ್ಳಲು ಯೋಗ್ಯವಿರುವ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪವು ನನ್ನ ಸ್ವಭಾವವೇ ಇದೆ; ಉಳಿದ ಸಮಸ್ತ ಪರಭಾವಗಳಂತೂ ಪರ ಭಾವಗಳೇ ಇವೆ, ಅವು ಸ್ವಯಂ ತಾವೇ ನನ್ನಿಂದ ಭಿನ್ನವಿವೆ.

**ನನ್ನ ಸ್ವರೂಪವೇನಿದೆ ?** ನನಗೆ ಯಾವ ಕಾರಣದಿಂದ ಕರ್ಮಗಳ ಆಸ್ರವವಾಗುತ್ತಿದೆ ? ಕರ್ಮಗಳು ಹೇಗೆ ಕಟ್ಟುತ್ತವೆ ? ಕರ್ಮವು ಹೇಗೆ ನಿರ್ಜರೆಯಾಗುವುದು ? ಮುಕ್ತಿಯೇನಿದೆ ? ಮುಕ್ತಿಯ ಸ್ವರೂಪವೇನಿದೆ ? ಮುಕ್ತಿಯ-ಬಾಧೆಯಿಲ್ಲದ ನಿರಾಕುಲತೆಯ ಲಕ್ಷಣವಿರುವಂಥ, ಸ್ವಭಾವದಿಂದ ಉತ್ಪನ್ನವಾದ ಸುಖವು ನನಗೆ ಯಾವ ಉಪಾಯದಿಂದ ಪ್ರಾಪ್ತವಾಗುವುದು ?

ತನ್ನ ಸ್ವರೂಪದ ಜ್ಞಾನವಾದ ಮೇಲೆ ಸಮಸ್ತ ಮೂರು ಲೋಕದ ಜ್ಞಾನವಾಗಿ ಹೋಗುತ್ತದೆ. ಕರ್ಮಮಲವು ದೂರವಾಗಿಹೋದ ಮೇಲೆ ನನ್ನ ಸರ್ವಜ್ಞ-ಸರ್ವದರ್ಶೀ ಸ್ವಭಾವವು ನನ್ನಿಂದಲೇ ಪ್ರಕಟವಾಗಿ ಹೋಗುವುದು. **ಎಷ್ಟು ಸಮಯದವರೆಗೆ ನನಗೆ ಬಾಹ್ಯ ಪದಾರ್ಥಗಳ ಸಂಬಂಧವಿದೆ ಅಷ್ಟು ಸಮಯದವರೆಗೆ ನನ್ನ ಸ್ಥಿರತೆಯು ನನ್ನ ಸ್ವಭಾವದಲ್ಲಿ**

**ಸ್ವಪ್ನದೊಳಗೆ ಕೂಡ ಆಗುವುದು ಕಠಿಣವಿದೆ.** ಆದುದರಿಂದ ನಾನು ಭೇದವಿಜ್ಞಾನದ ಮೂಲಕ ಬಾಹ್ಯ ಪದಾರ್ಥಗಳಿಂದ ಭಿನ್ನವಾಗುವ ಉಪಾಯವನ್ನೇ ಮಾಡಬೇಕಾಗುವುದು. ಈ ಪ್ರಕಾರ ಅಪಾಯ ವಿಚಯವೆಂಬ ಹೆಸರಿನ ಧರ್ಮಧ್ಯಾನದ ಎರಡನೇ ಭೇದದ ವರ್ಣನೆ ಮಾಡಲಾಯಿತು.

**ವಿಪಾಕ ವಿಚಯ ಧರ್ಮಧ್ಯಾನ :** ಈಗ ವಿಪಾಕ ವಿಚಯ ಧರ್ಮಧ್ಯಾನದ ಸ್ವರೂಪದ ವರ್ಣನೆ ಮಾಡುತ್ತಾರೆ. ಜ್ಞಾನಾವರಣ ಮೊದಲಾದ ಕರ್ಮಗಳ ಉದಯವನ್ನು ತಮ್ಮ ಆತ್ಮನಿಂದ ಭಿನ್ನವೆಂದು ಚಿಂತನೆ ಮಾಡುವುದು ಅದು ವಿಪಾಕ ವಿಚಯವಿದೆ. ಅನಾದಿ ಕಾಲದಿಂದ ನರಕ ಮೊದಲಾದ ಗತಿಗಳಲ್ಲಿ ಉತ್ಪನ್ನನಾಗಿ ನಾರಕೀ, ತಿರ್ಯಂಚ, ದೇವ, ಮನುಷ್ಯ ಮೊದಲಾದ ಪರ್ಯಾಯಗಳನ್ನು ಧಾರಣ ಮಾಡುವುದು, ಇಂದ್ರಿಯಗಳನ್ನು ಪಡೆಯುವದು, ಶರೀರಗಳನ್ನು ಧಾರಣ ಮಾಡುವುದು, ರೂಪ-ರಸ-ಗಂಧ, ಸ್ಪರ್ಶಗಳನ್ನು ಪಡೆಯುವುದು, ಸಂಹನನ, ಬಲ, ಪರಾಕ್ರಮ, ರಾಜ್ಯ ಸಂಪತ್ತು, ವೈಭವ, ಪರಿವಾರಗಳೆಲ್ಲವೂ ಕರ್ಮದ ಉದಯಜನಿತವಿವೆ, ನನ್ನ ಸ್ವರೂಪದಿಂದ ಭಿನ್ನವಿವೆ. **ನನ್ನ ಸ್ವರೂಪವು ಜ್ಞಾತಾ-ದೃಷ್ಟಾ, ಅವಿನಾಶಿ, ಅಂಖಡವಿದೆ, ಕರ್ಮದ ಉದಯಜನ್ಯ ಪರಿಣತಿಯಿಂದ ಭಿನ್ನವಿದೆ.** ಎಷ್ಟು ಸಂಯೋಗಗಳಿವೆ ಅವೆಲ್ಲವು ಕರ್ಮಜನಿತವಿವೆ. ಆದುದರಿಂದ ಕರ್ಮದ ಉದಯ ಜನ್ಯ ಪರಿಣತಿಯಿಂದ ತಮ್ಮನ್ನು ಭಿನ್ನವಾಗಿ ಅವಲೋಕನ ಮಾಡಿ, ಕರ್ಮದ ಉದಯಜನಿತ ರಾಗ-ದ್ವೇಷ, ಜೀವನ-ಮರಣ ಮೊದಲಾದವುಗಳಿಂದಲೂ ತಮ್ಮನ್ನು ಭಿನ್ನವಾಗಿಯೇ ಅವಲೋಕನ ಮಾಡುವುದು ಅದು ವಿಪಾಕ ವಿಚಯ ಧರ್ಮಧ್ಯಾನವಿದೆ.

ಪೂರ್ವಕಾಲದಲ್ಲಿ ಕಟ್ಟಿದ ಕರ್ಮವು, ದ್ರವ್ಯ, ಕ್ಷೇತ್ರ, ಕಾಲ, ಭಾವದ ಸಂಯೋಗ ಪಡೆದು ಅನೇಕ ಪ್ರಕಾರದ ರಸ ಕೊಡುತ್ತದೆ. ಕರ್ಮದ ಮೂಲ ಪ್ರಕೃತಿಗಳು ಎಂಟು ಇವೆ, ಎಂಟರಲ್ಲಿಯೇ ಒಂದು ನೂರಾ ನಲವತ್ತೆಂಟು ಭೇದಗಳಿವೆ ಮತ್ತು ಒಂದೊಂದರಲ್ಲಿ ಅಸಂಖ್ಯಾತ ಲೋಕ ಮಾತ್ರ ಭೇದಗಳಿವೆ. ಅವೆಲ್ಲವು ಏಕೇಂದ್ರಿಯ ಮೊದಲಾದ ಜೀವಗಳ ಭಿನ್ನ-ಭಿನ್ನ ಉದಯ ನೋಡುವುದರಿಂದ ತಿಳಿದು ಬರುತ್ತವೆ.

ಸಾಮಾನ್ಯದಿಂದ ಜೀವವು ಜ್ಞಾನಸ್ವಭಾವಿಯಿದ್ದು, ಸ್ವ-ಪರಗಳನ್ನು ತಿಳಿಯುವಂಥದ್ದಿದೆ, ಅಸಂಖ್ಯಾತ ಪ್ರದೇಶಿಯಿದೆ, ಕರ್ಮಜನ್ಯ ದೇಹ ಪ್ರಮಾಣವಿದೆ, ಸುಖ-ದುಃಖದ ಭೋಕ್ತಾ ಇದೆ; ಆದಾಗ್ಯೂ ಜೀವವು ತನ್ನ ಭಿನ್ನ-ಭಿನ್ನ ಪರಿಣಾಮಗಳಿಂದ ಅನೇಕ ಪ್ರಕಾರದ ಕರ್ಮಗಳನ್ನು ಕಟ್ಟಿಕೊಂಡಿದೆ, ಆ ಕರ್ಮಗಳ ರಸವು ಕೂಡ ಉದಯಕಾಲದಲ್ಲಿ ಭಿನ್ನ-ಭಿನ್ನವಾಗಿಯೇ ಕಂಡು ಬರುತ್ತದೆ. ಸಮಸ್ತ ಜೀವಗಳಿಗೆ ಪ್ರಕೃತಿರೂಪ ಲಾಭ-ಅಲಾಭ, ಸುಖ-ದುಃಖ, ರಾಗ-ದ್ವೇಷ, ಪುಣ್ಯ-ಪಾಪ, ಸಂಯೋಗ-ವಿಯೋಗ, ಆಯು, ಕಾಯ, ಬುದ್ಧಿ, ಬಲ, ಪರಾಕ್ರಮ, ಇಚ್ಛೆ ಇತ್ಯಾದಿಗಳು ಒಂದೊಂದು ಜೀವಕ್ಕೆ ಕರ್ಮದ ಉದಯದ ಅನುಸಾರ ಭಿನ್ನ-ಭಿನ್ನವಾಗಿ ಕಂಡು ಬರುತ್ತವೆ. ಒಂದರದು ಇನ್ನೊಂದರೊಡನೆ ಹೊಂದುವುದಿಲ್ಲ, ಆದುದರಿಂದ ಅನೇಕ ಜೀವಗಳ ಅನೇಕ ಪ್ರಕಾರದ ಉದಯದ ಜಾತಿಯನ್ನು ನೋಡಿಕೊಂಡು ರಾಗ-ದ್ವೇಷಗಳ ವಶವರ್ತಿಯಾಗಿ ಹೋಗಬಾರದು.

ಹೇಗೆ ವನದಲ್ಲಿ ವಿಹಾರ ಮಾಡುತ್ತಿರುವ ಪುರುಷನು ವನದಲ್ಲಿ ಕೋಟ್ಯಂತರ ವೃಕ್ಷ, ಲತೆ, ಚಿಕ್ಕ, ದೊಡ್ಡ ಅನೇಕ ಪ್ರಕಾರವಿರುವುದನ್ನು ನೋಡುತ್ತಾನೆ, ಯಾವ-ಯಾವುದರಲ್ಲಿ ರಾಗ-ದ್ವೇಷ ಮಾಡುವುದು ? ಕೆಲವು ವೃಕ್ಷಗಳು ಎತ್ತರವಿದ್ದರೆ ಕೆಲವು ಕುಳ್ಳಾಗಿವೆ, ಕೆಲವು ಹೆಚ್ಚು ಛಾಯೆಯುಳ್ಳವಿವೆ, ಕೆಲವು ಕಡಿಮೆ ಛಾಯೆಯುಳ್ಳವಿವೆ, ಕೆಲವು ಫಲ-ಪುಷ್ಪಗಳಿಂದ ಯುಕ್ತವಿವೆ, ಕೆಲವು ನಿಷ್ಫಲವಿವೆ, ಕೆಲವು ಕಹಿಯಿವೆ, ಕೆಲವು ಸಿಹಿಯಿವೆ,ಕೆಲವು ಒಗರು ಇವೆ, ಕೆಲವು ವಿಷ ಭರಿತವಿವೆ, ಕೆಲವು ಅಮೃತ ಭರಿತವಿವೆ, ಕೆಲವು ಮುಳ್ಳು ಸಹಿತವಿವೆ, ಕೆಲವು ಮುಳ್ಳು ರಹಿತವಿವೆ, ಕೆಲವು ವಕ್ರವಿವೆ, ಕೆಲವು ಸರಳವಿವೆ, ಕೆಲವು ಜೀರ್ಣವಿವೆ, ಕೆಲವು ನವೀನವಿವೆ, ಕೆಲವು ಸುಗಂಧಯುಕ್ತವಿವೆ,ಕೆಲವು ದುರ್ಗಂಧಯುಕ್ತವಿವೆ ಇತ್ಯಾದಿ ಸಮಸ್ತ ರಚನೆಯು ಪೂರ್ವಕರ್ಮದ ಸಂಸ್ಕಾರದಿಂದ ಏಕೇಂದ್ರಿಯ ಜೀವಗಳಲ್ಲಿಯೂ ಕಂಡು ಬರುತ್ತದೆ. ಕೆಲವನ್ನು ಕತ್ತರಿಸುತ್ತಾರೆ, ಹರಿಯುತ್ತಾರೆ, ಕೆತ್ತುತ್ತಾರೆ, ಕುದಿಸುತ್ತಾರೆ, ಸುಡುತ್ತಾರೆ, ಜಗಿಯುತ್ತಾರೆ, ಉಜ್ಜುತ್ತಾರೆ, ಕೀಳುತ್ತಾರೆ, ಕೊರೆಯುತ್ತಾರೆ,

ತುಂಡರಿಸುತ್ತಾರೆ, ಒಣಗಿಸುತ್ತಾರೆ, ಕುಟ್ಟುತ್ತಾರೆ, ಬೀಸುತ್ತಾರೆ, ಮುರಿಯುತ್ತಾರೆ, ಕಟ್ಟುತ್ತಾರೆ, ಬಾಗಿಸುತ್ತಾರೆ ಇತ್ಯಾದಿ ಏಕೇಂದ್ರಿಯ ವನಸ್ಪತಿಯಲ್ಲಿ ಕೂಡ ಕರ್ಮದ ಉದಯದ ಅನೇಕ ಜಾತಿಗಳನ್ನು ನೋಡಿ, ತಮ್ಮ ಹಾಗೂ ಇತರರ ಪುಣ್ಯ-ಪಾಪದ ಉದಯದ ಅನೇಕ ತರಂಗಗಳನ್ನು ನೋಡಿಕೊಂಡು ತಾವು ಕೂಡ ಸಾಮ್ಯಭಾವವನ್ನು ಧಾರಣ ಮಾಡಬೇಕು, ಹರ್ಷ-ವಿಷಾದಗಳನ್ನು ಮಾಡಬಾರದು.

ಕರ್ಮದ ಉದಯದ ಅಲೆಯು ಸಮಯ-ಸಮಯದಲ್ಲಿ ಭಿನ್ನ-ಭಿನ್ನವಿದೆ. ವೀತರಾಗ ಸರ್ವಜ್ಞ ಭಗವಂತರು ಯಾವ ಕ್ಷೇತ್ರದಲ್ಲಿ, ಯಾವ ಕಾಲದಲ್ಲಿ, ಯಾವ ಪ್ರಕಾರವಾಗುವುದನ್ನು ನೋಡಿದ್ದಾರೆ, ಅದೇ ಪ್ರಮಾಣವಿದೆ, ಅದೇ ಪ್ರಕಾರವಾಗುವುದು. ಕರ್ಮದ ಉದಯವನ್ನು ತಮ್ಮ ಸ್ವಭಾವದಿಂದ ಭಿನ್ನವಾಗಿ ತಿಳಿಯುವುದು. ಅನೇಕ ಜೀವ-ಪುದ್ಗಲಗಳ ರಚನೆ ಮತ್ತು ಸಂಯೋಗ-ವಿಯೋಗ ಮೊದಲಾದುವನ್ನು ನೋಡಿ, ರಾಗ-ದ್ವೇಷ ರಹಿತರಾಗಿ ಪರಮ ಸಾಮ್ಯಭಾವವನ್ನು ಧಾರಣ ಮಾಡಬೇಕು. ಅದರಿಂದ ಪೂರ್ವದಲ್ಲಿ ಕಟ್ಟಿದ ಕರ್ಮದ ನಿರ್ಜರೆಯಾಗಿ ಹೋಗುವುದು ಮತ್ತು ನವೀನ ಬಂಧವಾಗಲಾರದು. ಈ ಪ್ರಕಾರ ತಪದ ಪ್ರಕರಣದಲ್ಲಿ ವಿಪಾಕವಿಚಯ ನಾಮದ ಧರ್ಮಧ್ಯಾನದ ವರ್ಣನೆ ಮಾಡಲಾಯಿತು.

## ಈಶ್ವರ ಕರ್ತೃತ್ವದ ನಿಷೇಧ

**ಸಂಸ್ಥಾನ ವಿಚಯ ಧರ್ಮಧ್ಯಾನ :** ಈಗ ಸಂಸ್ಥಾನ ವಿಚಯವೆಂಬ ಹೆಸರಿನ ನಾಲ್ಕನೇ ಧರ್ಮಧ್ಯಾನದ ಸ್ವರೂಪದ ವರ್ಣನೆ ಮಾಡುತ್ತಾರೆ. ಈ ಯಾವ ಎಲ್ಲ ಕಡೆಗೆ ಅನಂತಾನಂತ ಆಕಾಶವಿದೆ ಅದು ಸ್ವಯಂ ತನ್ನ ಆಧಾರದಿಂದ ಇದೆ. ಅದರ ತೀರ ಮಧ್ಯದಲ್ಲಿ ಜೀವ,ಪುದ್ಗಲ, ಧರ್ಮ, ಅಧರ್ಮ, ಕಾಲ ಮೊದಲಾದವು ಎಷ್ಟು ಆಕಾಶದ ಕ್ಷೇತ್ರಗಳಲ್ಲಿ ಇವೆ ಅದು **ಲೋಕ**ವಿದೆ. ಆ ಲೋಕವು ಯಾರಿಂದಲೂ ನಿರ್ಮಿಸಲ್ಪಟ್ಟದ್ದು ಇಲ್ಲ, ಅದು ಅನಾದಿ ನಿಧನವಿದೆ.

**ಇಲ್ಲಿ ಓರ್ವ ಅನ್ಯವಾದಿಯು ಹೇಳುತ್ತಾನೆ –** ಈ ಜಗತ್ತಿನ ಕರ್ತೃವು ಓರ್ವ ಈಶ್ವರನಿದ್ದಾನೆ. ಏಕೆಂದರೆ ಕರ್ತೃವು ಮಾಡಿದಲ್ಲದೆ ಯಾವುದೂ ಸತ್‌ರೂಪ ವಸ್ತುವು ಇರುವುದಿಲ್ಲ.

**ಅವನಿಗೆ ಕೇಳುತ್ತೇವೆ –** ಮಾಡಿದಲ್ಲದೆ ಯಾವುದೂ ಸತ್‌ರೂಪ ವಸ್ತುವು ಇಲ್ಲದಿರುತ್ತಿದ್ದರೆ ಈಶ್ವರನನ್ನು ಯಾರು ಮಾಡಿದರು ? ಈಶ್ವರನೂ ಸತ್‌ವಸ್ತುವಿದ್ದಾನೆ, ಈಶ್ವರನನ್ನು ಮಾಡುವಂಥವರ ಹೆಸರನ್ನು ಹೇಳಬೇಕಾಗುವುದು.

**ಅವನು ಹೇಳಬಹುದು –** ಈ ಈಶ್ವರನ ಕರ್ತೃವೂ ಬೇರೊಬ್ಬನಿದ್ದಾನೆ. ಹಾಗಾದರೆ ಆ ಇನ್ನೊಬ್ಬನನ್ನು ಯಾರು ಮಾಡಿದರು ? ಆ ಇನ್ನೊಬ್ಬನ ಕರ್ತೃವು ಬೇರೊಬ್ಬನೆಂದು ಹೇಳಿದರೆ ಆ ಬೇರೊಬ್ಬನನ್ನು ಯಾರು ಮಾಡಿದರು ? ಇದೇ ಪ್ರಕಾರ ಹೇಳುತ್ತಿರುವುದರಲ್ಲಿ ಅನವಸ್ಥೆಯೆಂಬ ಹೆಸರಿನ ದೋಷವು ಬರುವುದು.

**ಮತ್ತೆ ಕೇಳುತ್ತೇವೆ –** ಮೊದಲು ಸೃಷ್ಟಿಯ ರಚನೆಯಾಗಿರದಿದ್ದರೆ ಸೃಷ್ಟಿಯ ಹೊರಗೆ ಈಶ್ವರನು ಎಲ್ಲಿದ್ದನು ? ಮತ್ತು ಯಾವ ಸ್ಥಾನದಲ್ಲಿ ಕುಳಿತುಕೊಂಡು ಈಶ್ವರನು ಜಗತ್ತನ್ನು ನಿರ್ಮಿಸಿದ್ದಾನೆ ? ಈಶ್ವರನು ಅವನು ಜಗತ್ತಿಲ್ಲದೆ ನಿರಾಧಾರನಾಗಿ ಹೆಚ್ಚು ಕಾಲದಿಂದ ವಿದ್ಯಮಾನನಿದ್ದರೆ ಅವನು ಎಲ್ಲಿರುತ್ತಿದ್ದನು ? ಈ ಜಗತ್ತನ್ನು ನಿರ್ಮಿಸಿ ಎಲ್ಲಿ ಸ್ಥಾಪನೆ ಮಾಡಿದನು ? ಈ ಜಗತ್ತನ್ನು ಯಾವುದರ ಆಧಾರದಿಂದ ಇದೆಯೆಂದು ಹೇಳುವೆ **ಅದು ಯಾವುದರ ಆಧಾರದಿಂದ ಇದೆ ?**

**ನೀನು ಹೇಳಬಹುದು –** ಅದರ ಆಧಾರವು ಬೇರೆಯಿದೆ. ಅದರದು ಅನ್ಯ ಆಧಾರವೆಂದು ಹೇಳಿದರೆ ಆ ಅನ್ಯ ಆಧಾರದ ಆಧಾರ ಯಾವುದಿದೆ ? ಈ ಪ್ರಕಾರ ಕೂಡ ಅನವಸ್ಥದೋಷವು ಬಂದು ಬಿಡುವುದು.

**ಹೀಗೂ ಹೇಳಬಹುದು –** ನಿರಾಧಾರದಲ್ಲಿ, ಅನಾದಿ ನಿಧನದಿಂದ ತರ್ಕವು ನಡೆಯುವುದಿಲ್ಲ, ಹಾಗೆಂದರೆ ಸೃಷ್ಟಿಯ ಕರ್ತೃವೆಂದು ಹೇಳುವುದೂ ಸಂಭವಿಸುವುದಿಲ್ಲ, ಏಕೆಂದರೆ ಸೃಷ್ಟಿಯೂ ನಿರಾಧಾರ, ಅನಾದಿ ನಿಧನವಿದೆ. ಹಾಗಂತೂ ಸಮಸ್ತ ಪದಾರ್ಥಗಳನ್ನೇ ಅನಾದಿ ನಿಧನವೆಂದು ಹೇಳುತ್ತಾರೆ. ಯಾರ ಮತದಲ್ಲಿ ಸೃಷ್ಟಿಕರ್ತನನ್ನು ಮನ್ನಿಸುತ್ತಾರೆ ಅವರಿಗೇ ದೋಷ ಬರುವುದು.

**ಮತ್ತೆ ಕೇಳುತ್ತೇವೆ –** ಜಗತ್ತಂತೂ ಅನೇಕರೂಪವಿದೆ ಅದನ್ನು ಏಕರೂಪ ಈಶ್ವರನು ಮಾಡುವಲ್ಲಿ – ನಿರ್ಮಿಸುವಲ್ಲಿ ಹೇಗೆ ಸಮರ್ಥನಾದನು ? ಈಶ್ವರನಂತೂ ಶರೀರ ರಹಿತ ಅಮೂರ್ತಿಕನಿದ್ದಾನೆ. ಅಮೂರ್ತಿಕನಿಂದ ಶರೀರ ಮೊದಲಾದ ಮೂರ್ತಿಕ ಪದಾರ್ಥಗಳನ್ನು ಹೇಗೆ ಉತ್ಪನ್ನ ಮಾಡಲಾಗುತ್ತದೆ ? ಅಮೂರ್ತಿಕನಿಂದ ಮೂರ್ತಿಕವನ್ನು ಹೇಗೆ ನಿರ್ಮಿಸುವ ಸಾಧ್ಯತೆಯಿದೆ ? ಉಪಕರಣ ಹಾಗೂ ಸಾಮಗ್ರಿಗಳಿಲ್ಲದೆ ಲೋಕವನ್ನು ಯಾವ ಸಾಧನದಿಂದ ಮಾಡಲಾಗಿದೆ ? ಏಕೆಂದರೆ ಉಪಾದಾನ ಕಾರಣವಿಲ್ಲದೆ ಯಾವುದೇ ವಸ್ತುವಿನ ರಚನೆಯಾಗುತ್ತಿರುವುದು ಕಂಡು ಬರುವುದಿಲ್ಲ. ಹೇಗೆಂದರೆ ಮಣ್ಣಿನ ಮುದ್ದೆಯಿಲ್ಲದೆ ಸಮರ್ಥ ಕುಂಭಕಾರನು ಕೂಡ ಕೊಡದ ರಚನೆ ಮಾಡುವಲ್ಲಿ ಅಸಮರ್ಥನಾಗಿ ಹೋಗುತ್ತಾನೆ.

**ಹೀಗೆ ಹೇಳಬಹುದು –** ಈಶ್ವರನು ಮೊದಲು ಸಾಮಗ್ರಿ ರಚಿಸಿದನು ಅನಂತರ ಜಗತ್ತನ್ನು ನಿರ್ಮಿಸಿದನು. **ಹಾಗೆಂದರೆ ಪುನಃ ಕೇಳುತ್ತೇವೆ.** ಆ ಸಾಮಗ್ರಿಯನ್ನು ಯಾವುದರಿಂದ ಮಾಡಿದನು ? ಈ ಪ್ರಕಾರ ಕೂಡ ಅನವಸ್ಥಾ ದೋಷವು ಬರುವುದು.

**ಹೀಗೆ ಹೇಳಬಹುದು –** ಜಗತ್ತು ನಿರ್ಮಾಣ ಯೋಗ್ಯ **ಸಾಮಗ್ರಿ**ಗಳಂತೂ ಸ್ವಭಾವದಿಂದಲೇ ಮಾಡದೆಯೇ ಸಿದ್ಧವಿರುತ್ತದೆ. ಹಾಗೆಂದರೆ ಲೋಕವನ್ನು ಕೂಡ **ಸ್ವಯಂಸಿದ್ಧ**ವೆಂದು ಮನ್ನಿಸುವ ಪ್ರಸಂಗವು ಬಂದು ಬಿಡುವುದು. ಯಾವ ಪ್ರಕಾರ ಲೋಕದ ಕರ್ತೃವನ್ನು ಸ್ವಯಂ ಸಿದ್ಧವೆಂದು ಮನ್ನಿಸುವುದು ಅದೇ ಪ್ರಕಾರ ಲೋಕವನ್ನು ಕೂಡ ಸ್ವಯಂ ಸಿದ್ಧವೆಂದು ಮನ್ನಿಸುವ ಪ್ರಸಂಗವು ಅನಿವಾರ್ಯವಾಗಿ ಬಂದು ಬಿಡುವುದು.

**ಹೀಗೆ ಹೇಳಬಹುದು –** ಈಶ್ವರನು ಸಮರ್ಥನಿದ್ದಾನೆ. ಅವನು ಸಾಮಗ್ರಿಯಿಲ್ಲದೆಯೇ ಇಚ್ಛಾಮಾತ್ರದಿಂದ ಲೋಕವನ್ನು ಮಾಡಿಬಿಟ್ಟನು. ಹಾಗೆಂದರೆ ಇಂಥ **'ಇಚ್ಛಾಮಾತ್ರ'** ಯುಕ್ತಿಯಿಂದ ರಹಿತ ನಿಮ್ಮ ಕಥನವು ಯಾರಿಗೆ ಶ್ರದ್ಧೆ ಮಾಡಲು ಯೋಗ್ಯವಾಗುವುದು? ಇಚ್ಛಾಮಾತ್ರದಿಂದ ಮಾಡುವ ಇನ್ನೂ ಅನೇಕ ಕಲ್ಪನೆಗಳನ್ನು ಮಾಡಿದರೆ ನಿಮ್ಮನ್ನು ಯಾರು ತಡೆಯುತ್ತಾರೆ? ಎಲ್ಲಿ 'ಇಚ್ಛಾಮಾತ್ರ'ವೆಂದು ಹೇಳಿದಿರಿ ಅಲ್ಲಿ ವಿಚಾರ (ವಿವೇಕ, ತರ್ಕ, ನ್ಯಾಯ) ಯಾರದು ಎಲ್ಲಿ ಉಳಿಯಿತು ?

**ನಾವು ಕೇಳುತ್ತೇವೆ –** ಈಶ್ವರನು ಕೃತಾರ್ಥನಿದ್ದಾನೆಯೋ ಅಥವಾ ಅಕೃತಾರ್ಥನಿದ್ದಾನೆಯೋ ? ಕೃತಕೃತ್ಯ ನಿದ್ದಾನೆಯೋ ಅಥವಾ ಅಕೃತಕೃತ್ಯನಿದ್ದಾನೆಯೋ ? ಕೃತಾರ್ಥನಿದ್ದವನಿಗೆ ಮಾಡುವುದೇನೂ ಬಾಕಿ ಉಳಿಯಲಿಲ್ಲವೆಂದ ಮೇಲೆ ಆ ಈಶ್ವರನಿಗೆ ಜಗತ್ತಿನ ರಚನೆ ಮಾಡುವ ಇಚ್ಛೆಯು ಹೇಗೆ ಉತ್ಪನ್ನವಾಯಿತು ?

**ಅಕೃತಾರ್ಥನೆಂದು ಹೇಳಿದರೆ** ಯಾವನು ಅಕೃತಾರ್ಥನಿರುವನು ಅವನು ಸಮಸ್ತ ಜಗತ್ತನ್ನು ರಚಿಸುವ ಸಲುವಾಗಿ ಕುಂಭಕಾರನ ಹಾಗೆ ಸಮರ್ಥನಾಗಲಾರನು. ಅಕೃತಾರ್ಥ ಕುಂಭಕಾರನು ಕೂಡ ಒಂದು ಕೊಡವನ್ನು ಮಾಡಿ ತನ್ನನ್ನು ಕೃತಾರ್ಥನೆಂದು ಮನ್ನಿಸುತ್ತಾನೆ, ಸಮಸ್ತ ಜಗತ್ತಿನ ರಚನೆ ಮಾಡುವುದಂತೂ ಅಕೃತಾರ್ಥನಿಂದ ಆಗುವುದಿಲ್ಲ, ಅದೇ ಪ್ರಕಾರ ಈಶ್ವರನನ್ನು ಅಕೃತಾರ್ಥನೆಂದು ಮನ್ನಿಸಿದರೆ ಅವನು ಒಂದೊಂದು ವಸ್ತುವನ್ನು ನಿರ್ಮಿಸಿ ದುಃಖಿಯಾಗುತ್ತ ಅನಂತ ಪದಾರ್ಥಗಳನ್ನು ನಿರ್ಮಿಸಿ ಹೇಗೆ ಪೂರ್ಣ ಮಾಡುವನು ? ಆದುದರಿಂದ ಈ ಪ್ರಕಾರವಾಗಿ ಕೂಡ ಜಗತ್ತಿನ ಕರ್ತಾತನವು ಈಶ್ವರನಿಗೆ ಸಂಭವಿಸುವುದಿಲ್ಲ.

**ಈಶ್ವರನನ್ನು ಅಮೂರ್ತಿಕ, ನಿಷ್ಕ್ರಿಯ, ಸರ್ವವ್ಯಾಪಿ, ನಿರ್ವಿಕಾರನೆಂದು** ಹೇಳುತ್ತಿದ್ದರೆ ಇಂಥ ಈಶ್ವರನು ಜಗತ್ತನ್ನು ಹೇಗೆ ಮತ್ತು ಏಕೆ ಮಾಡುವನು ? **ಅಮೂರ್ತಿಕ**ದಿಂದಂತೂ ಮೂರ್ತಿಕ ಸಮಸ್ತ ಜಗತ್ತಿನಲ್ಲಿ **ವ್ಯಾಪಿಸು**ವಂಥದ್ದು ಉತ್ಪನ್ನವಾಗುವುದಿಲ್ಲ.

ಯಾವನು **ನಿಷ್ಕ್ರಿಯ** ಎಂದರೆ (ಕ್ರಿಯೆ ಮಾಡುವಲ್ಲಿ ಅಸಮರ್ಥ) ಕ್ರಿಯಾ ರಹಿತನಿರುವನು ಅವನಿಂದ ರಚನೆಯ ಕ್ರಿಯೆಯು ಹೇಗೆ ಆಗುವ ಸಾಧ್ಯತೆಯಿದೆ ?

ಯಾವನು **ವ್ಯಾಪಕ**ನಾಗಿ ಸಮಸ್ತ ಜಗತ್ತಿನಲ್ಲಿ ವ್ಯಾಪಿಸುತ್ತಿದ್ದಾನೆ ಅವನಿಂದ ಲೋಕದ ರಚನೆಯು ಹೇಗೆ ಆಗುವ ಸಾಧ್ಯತೆಯಿದೆ ? ಅವನಂತೂ ಅನಾದಿಯಿಂದಲೇ ಸಮಸ್ತ ಲೋಕದಲ್ಲಿ ವ್ಯಾಪ್ತನಾಗುತ್ತಿದ್ದಾನೆ. ಈಶ್ವರನನ್ನು ವಿಕ್ರಿಯಾರಹಿತ ನಿರ್ವಿಕಾರನೆಂದು ಹೇಳುತ್ತಾರೆ. ಅವನು ರಚನೆ ಮಾಡುವ ಸಲುವಾಗಿ ವಿಕಾರಿಯಾಗಿ ಹೋಗುವುದು ಸಂಭವವಿಲ್ಲ.

**ಈಶ್ವರನು ಸೃಷ್ಟಿಯ ರಚನೆ ಮಾಡಿದನು ಅದನ್ನು ಯಾವ ಫಲಾಪೇಕ್ಷೆಯಿಂದ ಮಾಡಿದನು ?** ಈಶ್ವರನಂತೂ ಕೃತಾರ್ಥನಿದ್ದಾನೆ, ಅವನಿಗೆ ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕು ಪುರುಷಾರ್ಥಗಳಲ್ಲಿ ಯಾವುದು ಮಾಡುವುದು ಬಾಕಿ ಉಳಿದಿಲ್ಲವೆಂದ ಮೇಲೆ ಸೃಷ್ಟಿಯ ರಚನೆ ಮಾಡಿ ಯಾವ ಫಲ ಬಯಸುವನು ? **ಪ್ರಯೋಜನವಿಲ್ಲದೆ ಮೂರ್ಖನು ಕೂಡ ಯಾವ ಕಾರ್ಯ ಮಾಡುವುದಿಲ್ಲ.**

**ಹೀಗೆ ಹೇಳಬಹುದು -** ಈಶ್ವರನಿಗೆ ಸೃಷ್ಟಿಯ ರಚನೆಯಲ್ಲಿ ಅವನಿಗೆ ಯಾವ ಪ್ರಯೋಜನವಿರಲಿಲ್ಲ, ಪ್ರಯೋಜನವಿಲ್ಲದೆಯೇ ಮಾಡಿದ್ದಾನೆಂದರೆ ಅವನಿಗೆ ಈ **ಅನರ್ಥರೂಪ ಕಾರ್ಯ** ಮಾಡುವ ಪ್ರಸಂಗವು ಬಂತು.

**ಮತ್ತೆ ಹೇಳಬಹುದು - ಇದು ಈಶ್ವರನ ಕ್ರೀಡೆಯಿದೆ, ಹಾಗಾದರೆ ಅದು ಮೋಹದ ಸಂತಾನ- ಕ್ರಮವಾಯಿತು.** ಕ್ರೀಡೆಯನ್ನಂತೂ ಅಜ್ಞಾನೀ ಮೋಹೀ ಬಾಲಕನು ಮಾಡುತ್ತಾನೆ, ಅಥವಾ ಯಾವನು ದುಃಖಿಯಿದ್ದಾನೆ ಅವನು ಕ್ರೀಡೆ ಮಾಡಿ ಕಾಲಹರಣ ಮಾಡುತ್ತಾನೆ, ತನ್ನ ದುಃಖವನ್ನು ಮರೆಯುವ ಸಲುವಾಗಿ ಕ್ರೀಡೆ ಮಾಡುತ್ತಾನೆ.

**ಒಂದು ವೇಳೆ ಈಶ್ವರನು ಜಗತ್ತನ್ನು ನಿರ್ಮಿಸಿದ್ದರೆ ಸಮಸ್ತ ಪದಾರ್ಥಗಳನ್ನು ಉಜ್ವಲ, ಸುಖಕಾರಕ, ಮನೋಹರ, ರೂಪುವುಳ್ಳವುಗಳನ್ನೇ ಏಕೆ ನಿರ್ಮಿಸಲಿಲ್ಲ ?** ಜಗತ್ತಿನಲ್ಲಿ ಅದೆಷ್ಟೋ ದರಿದ್ರಿ, ಅದೆಷ್ಟೋ ರೋಗೀ, ಅದೆಷ್ಟೋ ಕುರೂಪಿ, ಅದೆಷ್ಟೋ ಕುಬುದ್ಧಿ, ಅದೆಷ್ಟೋ ನೀಚ ಜಾತಿಯವರನ್ನೇಕೆ ನಿರ್ಮಿಸಿದನು ? ವಿಷ, ಮುಳ್ಳು, ಮಲ, ಮೂತ್ರ, ದುರ್ಗಂಧ ಮೊದಲಾದುವನ್ನೇಕೆ ನಿರ್ಮಿಸಿದ್ದಾನೆ ? ದುಷ್ಟ, ಮ್ಲೇಚ್ಛ, ಭಿಲ್ಲ, ಚಾಂಡಾಲ ಮೊದಲಾದವರನ್ನೇಕೆ ಮಾಡಿದ್ದಾನೆ ?

**ಜಗತ್ತಿನಲ್ಲೂ ಕಾಣುತ್ತೇವೆ -** ಯಾವನು ಅಧಿಕ ಬುದ್ಧಿವಂತ, ಚತುರನಿರುತ್ತಾನೆ ಅವನು ತನ್ನ ಕಾರ್ಯವನ್ನು ಹೆಚ್ಚು ಸುಂದರವನ್ನಾಗಿಯೇ ಮಾಡಲಪೇಕ್ಷಿಸುತ್ತಾನೆ, ತಾವು ಮಾಡಿದ ಕಾರ್ಯವನ್ನು ಯಾರೂ ಕೆಡಿಸಲು ಅಪೇಕ್ಷಿಸುವುದಿಲ್ಲ.

**ನಾವು ಕೇಳುತ್ತೇವೆ -** ಈಶ್ವರನು ಬುದ್ಧಿವಂತ, ಸಮರ್ಥ ಮತ್ತು ಸ್ವಾಧೀನನಾಗಿ ಗ್ಲಾನಿರೂಪ, ಭಯಾನಕ, ದುಃಖದಾಯಕ, ವಿದ್ರೂಪ ರಚನೆಯನ್ನೇಕೆ ಮಾಡಿದನು ?

**ಹೀಗೆ ಹೇಳಬಹುದು -** ಜೀವನು ಯಾವ ಪ್ರಕಾರ ಕರ್ಮೋಪಾರ್ಜನೆ ಮಾಡಿದನು ಅದೇ ಪ್ರಕಾರ ಅವನಿಗೆ ಶರೀರ ಮೊದಲಾದ ಸಮಸ್ತ ಸಾಮಗ್ರಿ ಮಾಡಿದನು. **ಹಾಗೆಂದರೆ ಅವನ ಈಶ್ವರತನವೇನು ಉಳಿಯಿತು ?** ಯಾವ ಪ್ರಕಾರ ನೇಕಾರನಿಗೆ ಜಿನುಗಾದ ನೂಲು ಕೊಟ್ಟರೆ ಅವನು ಜಿನುಗು ಬಟ್ಟೆ ನೇಯ್ದು ಕೊಡುವನು, ದಪ್ಪ ನೂಲು ಕೊಟ್ಟರೆ ದಪ್ಪ ಬಟ್ಟೆ ನೇಯ್ದು ಕೊಡುವನು, ಅದರಲ್ಲಿ ಈಶ್ವರನ ಈಶ್ವರತನವು ಉಳಿಯಲಿಲ್ಲ.

**ಇನ್ನೂ ಕೇಳುತ್ತೇವೆ -** ಸಂಸಾರದಲ್ಲಿ ಪ್ರಾಣಿಗಳು ಒಳ್ಳೆಯ ಮತ್ತು ಕೆಟ್ಟ ಕಾರ್ಯ ಮಾಡುತ್ತಿದ್ದರೆ ಅವರು ಈಶ್ವರನ ಅಭಿಪ್ರಾಯದಿಂದ ಈಶ್ವರನು ಮಾಡಿಸಿದಂತೆ ಮಾಡುತ್ತಾರೆಯೋ ಅಥವಾ ಈಶ್ವರನ ಅಭಿಪ್ರಾಯವಿಲ್ಲದೆ ತಮ್ಮ ಬಲವಂತತೆಯಿಂದ ಮಾಡುತ್ತಾರೆಯೋ ?

**ಹೀಗೆ ಹೇಳಬಹುದು -** ಈಶ್ವರನ ಇಚ್ಛೆಯಿಂದ ಮಾಡುತ್ತಾರೆಂದರೆ ಅವನು ಈಶ್ವರನಾಗಿಯೂ ತನ್ನ ಪ್ರಜೆಗಳಿಂದ ಅನಿಷ್ಟ ಕಾರ್ಯವನ್ನೇಕೆ ಮಾಡಿಸುತ್ತಾನೆ ? ತಮ್ಮ ಮಕ್ಕಳು ದುರಾಚಾರಿಯಾಗಬೇಕೆಂದು ಯಾರೂ ಬಯಸುವುದಿಲ್ಲ.

**ಹೀಗೂ ಹೇಳಬಹುದು -** ಈಶ್ವರನ ಇಚ್ಛೆಯಿಲ್ಲದೆಯೇ ಮಾಡುತ್ತಾರೆಂದರೆ ಈಶ್ವರನ ಈಶ್ವರತನ ಮತ್ತು ಕರ್ತಾತನವು ಎಲ್ಲಿ ಉಳಿಯಿತು ? ಜಗತ್ತಿನ ಪ್ರಾಣಿಗಳು ತಾವೇ ತಮ್ಮ ಕರ್ಮ ಮೊದಲಾದ ಕಾರ್ಯಗಳ ಕರ್ತೃಗಳಾದರು.

**ಇನ್ನೂ ಹೇಳಬಹುದು -** ಕಾರ್ಯವಾಗುತ್ತದೆ ಅದು ಹೇಗೆ ಕರ್ಮ ಮಾಡಿದೆ ಹಾಗೆಯೇ ಆಗುತ್ತದೆ, ಆದರೆ ಈಶ್ವರನ ನಿಮಿತ್ತದಿಂದ ಆಗುತ್ತದೆಯೆಂದರೆ ಇಂಥ ಸ್ವಯಂ ಸಿದ್ಧ ವಸ್ತುವನ್ನು - ಜಗತ್ತನ್ನು ಕಾರಣವಿಲ್ಲದೆಯೇ ಈಶ್ವರನು ಮಾಡಿದುದೆಂದು ವ್ಯರ್ಥವೇಕೆ ಹೇಳುವಿರಿ ? ಅಸತ್ಯವನ್ನು ಪುಷ್ಟ ಮಾಡುವುದು ಅದು ಮಹಾ ಅನರ್ಥದ ಕಾರ್ಯವಿದೆ.

**ಮತ್ತೆ ಕೇಳುತ್ತೇವೆ –** ಈಶ್ವರನು ಸಮಸ್ತ ಪ್ರಾಣಿಗಳಲ್ಲಿ ವಾತ್ಸಲ್ಯವಿಡುತ್ತಾನೆ ಮತ್ತು ಜಗತ್ತಿನ ಮೇಲೆ ಅನುಗ್ರಹ ತೋರಿಸುವ ಸಲುವಾಗಿ ಜಗತ್ತಿನ ರಚನೆ ಮಾಡಿದ್ದಾನೆಂದರೆ ಸಮಸ್ತ ಸೃಷ್ಟಿಯನ್ನು ಸುಖಮಯ, ಉಪದ್ರವ ರಹಿತವನ್ನಾಗಿ ಮಾಡಬೇಕಿತ್ತು, ಆದರೆ ದುಃಖಮಯ, ದರಿದ್ರಮಯ, ವಿಯೋಗಮಯವನ್ನೇಕೆ ಮಾಡಿದನು ? ಈ ಪ್ರಕಾರ ಈಶ್ವರತನವಂತೂ ಉಳಿಯಲಿಲ್ಲ !

**ಹೀಗೆ ಹೇಳಬಹುದು –** ಈಶ್ವರನು ಭಕ್ತರನ್ನು ಸುಖಿ ಮಾಡಿದನು ಮತ್ತು ದುಷ್ಟರನ್ನು ದುಃಖಿ ಮಾಡಿದನು.

**ಹೀಗೆ ಕೇಳುತ್ತೇವೆ –** ಈಶ್ವರನಾಗಿಯೂ ಅವನು ದುಷ್ಟರನ್ನೇಕೆ ನಿರ್ಮಿಸಿದನು ? ಎಲ್ಲರನ್ನು ತನ್ನ ಭಕ್ತರನ್ನಾಗಿ ಮಾಡಬೇಕಾಗಿತ್ತು. ಮ್ಲೇಚ್ಛ ಮೊದಲಾಗಿ ತನ್ನ ದ್ರೋಹಿಗಳನ್ನೇಕೆ ನಿರ್ಮಿಸಿದನು ?

**ಹೀಗೆ ಹೇಳಬಹುದು –** ಈಶ್ವರನಿಗೆ ಮೊದಲು ಸರಿಯಾದ ಜ್ಞಾನವಿರಲಿಲ್ಲ, ನಂತರ ದುಷ್ಟರಾಗಿ ಕಂಡವರಿಗೆ ದಂಡನೆ ಮಾಡಿದನು. ಇದರಿಂದಂತೂ ಈಶ್ವರನ ಅಜ್ಞಾನವಶತೆಯು ಪ್ರಕಟವಾಯಿತು. ಈ ಸೃಷ್ಟಿಯು ಓರ್ವ ಅಜ್ಞಾನಿಯ ರಚನೆಯಿದೆಯೆಂದಾಯಿತು.

**ಮತ್ತೆ ಕೇಳುತ್ತೇವೆ –** ಈಶ್ವರನು ಜಗತ್ತನ್ನು ನಿರ್ಮಿಸಿದ್ದರೆ ಜಗತ್ತು ಮೊದಲಿನಿಂದಲೂ ವಿದ್ಯಮಾನವಿತ್ತು ಅದನ್ನು ನಿರ್ಮಿಸಿದ್ದಾನೆಯೋ ಅಥವಾ ಅತ್ಯಂತ ಅಸತ್ (ಮೊದಲು ಏನೂ ಇರಲಿಲ್ಲ). ಅದನ್ನು ನಿರ್ಮಿಸಿದ್ದಾನೆಯೋ ? ವಿದ್ಯಮಾನವಿರುವುದನ್ನೇ ನಿರ್ಮಿಸಿದ್ದರೆ ಯಾವುದು ಮೊದಲಿನಿಂದಲೂ ಸತ್ ರೂಪವಾಗಿ ವಿದ್ಯಮಾನವಿತ್ತು ಅದನ್ನು ಯಾರೇನು ಮಾಡುವರು ? ಅತ್ಯಂತ ಅಸತ್‌ವನ್ನು ನಿರ್ಮಿಸಿದ್ದರೆ ಅದಂತೂ ಆಕಾಶ ಪುಷ್ಪವನ್ನು ನಿರ್ಮಿಸಿದ ಸಮಾನ ಅವಸ್ತುವೆಂದು ನಿರ್ಣಯವಾಗುವುದು.

**ಈಶ್ವರನನ್ನು ಮುಕ್ತನೆಂದು ಹೇಳುತ್ತಿದ್ದರೆ** ಯಾವುದೇ ಕಾರ್ಯವನ್ನು ಮಾಡುವಲ್ಲಿ - ಮಾಡಿಸುವಲ್ಲಿ ಉದಾಸೀನನಿರುತ್ತಾನೆ, ಅವನಿಗೆ ಸೃಷ್ಟಿಯನ್ನು ರಚಿಸುವ ಇಚ್ಛೆ ಹೇಗಾಗುವುದು ? ಮಾಡುವ - ಮಾಡಿಸುವ ಚಿಂತೆಯು ಮುಕ್ತನಿಗಿರುವ ಸಂಭವವಿಲ್ಲ. ಈಶ್ವರನು ಮುಕ್ತನಿಲ್ಲ ಸಂಸಾರಿಯಿದ್ದರೆ ಅವನು ನಮ್ಮ ಸಮಾನನೇ ಇದ್ದಾನೆ, ಸಮಸ್ತ ಜಗತ್ತು ಅವನು ಮಾಡುವುದರಿಂದ ಹೇಗೆ ಉತ್ಪನ್ನವಾಗುವುದು ? **ಆದುದರಿಂದ ನೀವು ಈ ಸೃಷ್ಟಿಯನ್ನು ಈಶ್ವರ ಕೃತವೆಂದು ಹೇಳುವುದು ಸ್ವಲ್ಪವೂ ಸಾರ್ಥಕವಾಗಿಲ್ಲ.** ಮೊದಲಂತೂ ಜಗತ್ತನ್ನು ತಾವೇ ನಿರ್ಮಿಸುವುದು ನಂತರ ತಾವೇ ಅದರ ಸಂಹಾರ ಮಾಡಿದರೆ ಇದು ಅವನದು ಮಹಾನ ಅಧರ್ಮವಾಯಿತು.

**ಹೀಗೆ ಹೇಳಬಹುದು –** ದೈತ್ಯ ಮೊದಲಾದ ದುಷ್ಟರು ಬಹಳಷ್ಟು ಏಕತ್ರಿಕರಾಗಿ ಹೋದರೆ ಅವರನ್ನು ಹೊಡೆಯುವ ಸಲುವಾಗಿ ಪ್ರಲಯ ಕಾಲದಲ್ಲಿ ಸಂಹಾರ ಮಾಡುತ್ತಾನೆ.

**ಹಾಗೆಂದರೆ ದೈತ್ಯ ಮೊದಲಾದ ದುಷ್ಟರನ್ನು ಮೊದಲು ನಿರ್ಮಿಸಬೇಕೇಕೆ ?** ಅವರು ದುಷ್ಟರಾಗಿ ಹೋಗಬಹುದುದೆಂದು ಈಶ್ವರನಿಗೆ ಮೊದಲಿನಿಂದ ಜ್ಞಾನವಿರದಿದ್ದರೆ ಈಶ್ವರನು ಮಹಾ ಅಜ್ಞಾನಿಯೆಂದು ಸಿದ್ಧನಾಗುವನು. ಅವನು ತಾನು ಮಾಡಿದ ಫಲವನ್ನು ಮೊದಲೇ ತಿಳಿಯದಿದ್ದರೆ ಈಶ್ವರನು ಮಹಾದುಃಖಿಯೆಂದೂ ಸಿದ್ಧನಾಗುವನು. ಅವನು ಹೊಸ-ಹೊಸ ರಚನೆ ಮಾಡುತ್ತಿರುತ್ತಾನೆ, ಆದರೆ ಅದರಲ್ಲಿ ಎಲ್ಲಿಯಾದರೂ ದೋಷವಾಗುತ್ತಿದ್ದರೆ ಹೊಡೆಯುತ್ತ ತಿರುಗುತ್ತಾನೆ, ಹುಡುಕುತ್ತ ತಿರುಗುತ್ತಾನೆ, ದುಃಖದ ಮಾಲೆಯನ್ನು ಸ್ವಯಂ ಬಚ್ಚಿಡುತ್ತ ತಿರುಗುತ್ತಾನೆ, ದುಷ್ಟರನ್ನು ಹೊಡೆಯುವ ಸಲುವಾಗಿ ಸಾವಿರಾರು ಉಪಾಯ, ಸಹಾಯ, ವೇಷ, ಶಸ್ತ್ರ ಮೊದಲಾದ ಸಾಮಗ್ರಿಯ ಚಿಂತನೆ ಮಾಡುತ್ತಾನೆ. ಮಹಾಕ್ಲೇಶದಿಂದ ಜನ್ಮ ಪೂರ್ಣ ಮಾಡುತ್ತಾನೆ.

ಈ ಪ್ರಕಾರ ಈಶ್ವರನಲ್ಲಿಯಂತೂ ಅಜ್ಞಾನ, ರಾಗ, ದ್ವೇಷ, ಮೋಹ ಮೊದಲಾದ (ಮೂರ್ತಿಕ, ಸಕ್ರಿಯ, ಅವ್ಯಾಪಿ, ವಿಕಾರೀ, ನಿಷ್ಪ್ರಯೋಜನ, ಕ್ರೀಡೆ, ದುಷ್ಟತೆ, ಸಂಹಾರೀ, ಅಧರ್ಮಿ, ದುಃಖೀ, ಭಯಭೀತ, ಅಲ್ಪಶಕ್ತಿವಂತ,

ಅಲ್ಪಜ್ಞ,ಚಿಂತಾಯುಕ್ತ, ಅಕರ್ತೃ ಮೊದಲಾದ) **ಅನೇಕ ದೋಷಗಳು ಕಂಡು ಬರುತ್ತವೆ.** (ಆ ಈಶ್ವರನು ಪೂರ್ಣ, ಸುಖೀ, ಸರ್ವಜ್ಞ, ಸರ್ವಶಕ್ತಿಯುಕ್ತ, ಮುಕ್ತ, ವೀತರಾಗಿಯಾಗಿ ಸಿದ್ಧವಾಗುವುದಿಲ್ಲ.)

ಆದುದರಿಂದ ಮಿಥ್ಯಾದೃಷ್ಟಿಗಳ ಮೂಲಕ ರಚಿಸಲಾದ ಅಸತ್ಯ ಶಾಸ್ತ್ರಗಳಿಂದ ಉತ್ಪನ್ನವಾದ ಕ್ಲೇಶವನ್ನು ಬಿಟ್ಟುಕೊಟ್ಟು ವೀತರಾಗ ಸರ್ವಜ್ಞರು ಹೇಳಿದ ಅನಾದಿ ನಿಧನ ಸ್ವಯಂಸಿದ್ಧ ಲೋಕದ ಸ್ವರೂಪ ತಿಳಿದುಕೊಂಡು ಶ್ರದ್ಧೆ ಮಾಡಬೇಕು. ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲವೆಂಬ ಈ ಆರು ದ್ರವ್ಯಗಳು ಅನಾದಿ ನಿಧನವಿವೆ. ಅಸತ್‌ವನ್ನು ಸತ್ ಮಾಡುವಲ್ಲಿ ಯಾರೂ ಸಮರ್ಥರಿಲ್ಲ. **ಯಾವುದು ಸತ್‌ವಸ್ತುವಿದೆ ಅದರ ನಾಶವೆಂದೂ ಆಗುವುದಿಲ್ಲ, ಮತ್ತು ಅಸತ್‌ದ ಉತ್ಪಾದವೆಂದೂ ಆಗುವುದಿಲ್ಲ. ಈ ಉತ್ಪಾದ ವ್ಯಯಗಳನ್ನಂತೂ ಪರ್ಯಾಯಾರ್ಥಿಕನಯದಿಂದ ಹೇಳಲಾಗುತ್ತದೆ.**

ಎಷ್ಟು ಚೇತನ-ಅಚೇತನ ಪದಾರ್ಥಗಳಿವೆ ಅವು ದ್ರವ್ಯತನದಿಂದ ಎಂದೂ ಉತ್ಪನ್ನವೂ ಆಗುವುದಿಲ್ಲ, ಮತ್ತು ನಷ್ಟವೂ ಆಗುವುದಿಲ್ಲ. ಸಮಯ-ಸಮಯಕ್ಕೆ ಪೂರ್ವಪರ್ಯಾಯದ ನಾಶ ಹಾಗೂ ಉತ್ತರ ಪರ್ಯಾಯದ ಉತ್ಪಾದವಾಗುತ್ತಲಿದೆ. ದ್ರವ್ಯವು ಧ್ರೌವ್ಯವಿದೆ, ಅದು ಉತ್ಪನ್ನವಾಗುವುದಿಲ್ಲ, ನಷ್ಟವಾಗುವುದಿಲ್ಲ. ಉತ್ಪನ್ನವಾಗುವುದು, ವಿನಾಶವಾಗುವುದು ಪರ್ಯಾಯದ್ದಾಗುತ್ತದೆ, ಪರ್ಯಾಯವು ಏಕರೂಪವಿರುವುದಿಲ್ಲ. ದ್ರವ್ಯಗಳ ನಾಶವೆಂದೂ ಆಗುವುದಿಲ್ಲ. ಆರು ದ್ರವ್ಯಗಳ ಸಮುದಾಯವೇ ಲೋಕವಿದೆ, ಅನ್ಯವಸ್ತುರೂಪವಾಗಿ ಲೋಕವಿಲ್ಲ.

**ದ್ವಾದಶ ಭಾವನೆ :** ಈ ಸಂಸ್ಥಾನವಿಚಯ ಧರ್ಮಧ್ಯಾನದಲ್ಲಿ ನಿರಂತರ ಹನ್ನೆರಡು ಭಾವನೆಗಳ ಚಿಂತನೆ ಮಾಡುವುದು ಯೋಗ್ಯವಿದೆ. ಅನಿತ್ಯ, ಅಶರಣ, ಸಂಸಾರ, ಏಕತ್ವ, ಅನ್ಯತ್ವ, ಅಶುಚಿ, ಆಸ್ರವ, ಸಂವರ, ನಿರ್ಜರೆ, ಲೋಕ, ಬೋಧಿದುರ್ಲಭ ಮತ್ತು ಧರ್ಮವೆಂದು ಇವು ಹನ್ನೆರಡು ಭಾವನೆಗಳ ಹೆಸರುಗಳಿವೆ. ತೀರ್ಥಂಕರ ಭಗವಂತರು ಕೂಡ ಇವುಗಳ ಸ್ವಭಾವದ ವಿಚಾರ ಮಾಡಿ ಸಂಸಾರ-ಶರೀರ-ಭೋಗಗಳಿಂದ ವಿರಕ್ತರಾಗಿದ್ದಾರೆ. ಆದ್ದರಿಂದ ಆ ಭಾವನೆಗಳು ವೈರಾಗ್ಯದ ಮಾತೆಯಿವೆ, ಸಮಸ್ತ ಜೀವಗಳ ಹಿತ ಮಾಡುವಂಥವಿವೆ, ಅನೇಕ ದುಃಖಗಳಿಂದ ಆವರಿಸಿದ ಸಂಸಾರೀ ಜೀವಗಳಿಗೆ ಈ ಭಾವನೆಗಳು ಒಳ್ಳೆಯ ಮತ್ತು ಉತ್ತಮ ಆಶ್ರಯರೂಪವಿವೆ.

ದುಃಖರೂಪದ ಅಗ್ನಿಯಿಂದ ಸುಡುತ್ತಿರುವ ಜೀವಗಳಿಗೆ ಶೀತಲ ಕಮಲವನದ ಮಧ್ಯದಲ್ಲಿ ನಿವಾಸದ ಸಮಾನವಿವೆ, ಪರಮಾರ್ಥಮಾರ್ಗವನ್ನು ತೋರಿಸಿಕೊಡುವಂಥವಿವೆ, ತತ್ತ್ವದ ನಿರ್ಣಯ ಮಾಡಿಸುವಂಥವಿವೆ, ಸಮ್ಯಕ್ತ್ವವನ್ನು ಉತ್ಪನ್ನ ಮಾಡಿಸುವಂಥವಿವೆ, ಅಶುಭ ಧ್ಯಾನವನ್ನು ನಷ್ಟ ಮಾಡುವಂಥವಿವೆ. ಈ ಹನ್ನೆರಡು ಭಾವನೆಗಳ ಸಮಾನವಾಗಿ ಈ ಜೀವನಿಗೆ ಬೇರೆ ಯಾವುದೂ ಹಿತಕಾರಕವಿಲ್ಲ, ಇವು ದ್ವಾದಶಾಂಗದ ಸಾರವಿವೆ. ಆದುದರಿಂದ ಈ ಸಂಸ್ಥಾನ ವಿಚಯ ಧರ್ಮಧ್ಯಾನದಲ್ಲಿ ಭಾವಸಹಿತ ಹನ್ನೆರಡು ಭಾವನೆಗಳ ಚಿಂತನೆ ಮಾಡಬೇಕು.

**ಅನಿತ್ಯ ಭಾವನೆ :** ಈ ಪ್ರಕಾರ ಅನಿತ್ಯ ಭಾವನೆಯ ಸ್ವರೂಪದ ವಿಚಾರ ಮಾಡಬೇಕು. ದೇವ, ಮನುಷ್ಯ, ತಿರ್ಯಂಚ ಇವೆಲ್ಲವು ನೀರ ಬೊಬ್ಬುಳಿಕೆಯ ಸಮಾನ, ಅರಳೆಯ ಕಿಚ್ಚಿನ ಸಮಾನ ವಿನಾಶಶೀಲವಿವೆ, ನೋಡು-ನೋಡುತ್ತಿರುವಂತೆಯೇ ವಿಲಯವಾಗಿ ಹೊರಟು ಹೋಗುತ್ತವೆ. ಈ ಎಲ್ಲ ಋದ್ಧಿ, ಸಂಪತ್ತು, ಪರಿಕರಗಳು ಸ್ವಪ್ನದ ಸಮಾನವಿವೆ. ಯಾವ ಪ್ರಕಾರ ಸ್ವಪ್ನದಲ್ಲಿ ನೋಡಿದ ವಸ್ತುವು ಪುನಃ ಕಂಡು ಬರುವುದಿಲ್ಲ ಆ ಪ್ರಕಾರ ವಿನಷ್ಟವಾಗುತ್ತವೆ, ಈ ಜಗತ್ತಿನಲ್ಲಿ ಧನ, ಯೌವ್ವನ, ಜೀವನ, ಪರಿವಾರಗಳೆಲ್ಲವು ಕ್ಷಣಭಂಗುರವಿವೆ. ಸಂಸಾರೀ ಜೀವರುಗಳು ಅವನ್ನೇ ತಮ್ಮ ಸ್ವರೂಪ ತಮ್ಮ ಹಿತವೆಂದು ತಿಳಿದುಕೊಳ್ಳುತ್ತಿದ್ದಾರೆ. ತಮ್ಮ ಸ್ವರೂಪದ ಪರಿಚಯವಾಯಿತೆಂದರೆ ಪರವನ್ನು ತಮ್ಮದೆಂದು ಹೇಗೆ ಮನ್ನಿಸುವರು ?

ಸಮಸ್ತ ಇಂದ್ರಿಯಜನ್ಯ ಸುಖಗಳು ದೃಷ್ಟಿಗೋಚರವಿವೆ, ಅವು ಕಾಮನ ಬಿಲ್ಲಿನ ವರ್ಣದ ಸಮಾನ ನೋಡು-ನೋಡುತ್ತ ವಿಲೀನವಾಗಿ ಹೋಗುತ್ತವೆ, ಯೌವನದ ಆವೇಶವು ಕಿಸುಸಂಜೆಯ ರಂಜನೆಯ ಸಮಾನ ಕ್ಷಣ-ಕ್ಷಣದಲ್ಲಿ ನಷ್ಟವಾಗುತ್ತ ಹೋಗುತ್ತದೆ. **ಆದುದರಿಂದ ಈ ನನ್ನ ಗ್ರಾಮ, ನನ್ನ ರಾಜ್ಯ, ನನ್ನ ಮನೆ, ನನ್ನ ಧನ, ನನ್ನ**

**ಕುಟುಂಬವೆಂದು ವಿಕಲ್ಪ ಮಾಡುವುದು ಮಹಾ ಮೋಹದ ಪ್ರಭಾವವಿದೆ.** ಕಣ್ಣುಗಳಿಂದ ಕಂಡು ಬರುತ್ತಿರುವ ಪದಾರ್ಥಗಳೆಲ್ಲವೂ ವಿಲಯವಾಗಿ ಹೋಗುವವು. ಅವನ್ನು ನೋಡುವ ತಿಳಿದುಕೊಳ್ಳುವಂಥ ಇಂದ್ರಿಯಗಳೂ ಅವಶ್ಯವಾಗಿ ನಷ್ಟವಾಗುವವು ಆದುದರಿಂದ ಶೀಘ್ರವಾಗಿಯೇ ಹಿತದ ಕಾರ್ಯದಲ್ಲಿ ತೊಡಗಬೇಕು.

ಹೇಗೆ ಒಂದು ನೌಕೆಯಲ್ಲಿ ಅನೇಕ ದೇಶಗಳ ಅನೇಕ ಜಾತಿಯ ಮನುಷ್ಯರು ಒಟ್ಟಿಗೆ ಕುಳಿತುಕೊಳ್ಳುತ್ತಾರೆ. ಅನಂತರ ದಡ ತಲುಪಿದ ಮೇಲೆ ಅನೇಕ ದೇಶಗಳಿಗೆ ಹೊರಟು ಹೋಗುತ್ತಾರೆ; ಅದೇ ಪ್ರಕಾರ ಕುಲರೂಪದ ನೌಕೆಯಲ್ಲಿ ಅನೇಕ ಗತಿಗಳಿಂದ ಬಂದ ಪ್ರಾಣಿಗಳು ಒಟ್ಟಿಗೆ ಸೇರಿ ಇರತೊಡಗುತ್ತಾರೆ. ಅನಂತರ ಆಯು ಪೂರ್ಣವಾದ ಮೇಲೆ ತಮ್ಮ-ತಮ್ಮ ಕರ್ಮಗಳ ಅನುಸಾರ ನಾಲ್ಕೂ ಗತಿಗಳಲ್ಲಿ ಹೊರಟು ಹೋಗುತ್ತಾರೆ. ಯಾವ ದೇಹದ ಸಂಬಂಧದಿಂದ ಸ್ತ್ರೀ, ಪುತ್ರ, ಮಿತ್ರ, ಬಂಧು ಮೊದಲಾದವರನ್ನು ತನ್ನವರೆಂದು ಮನ್ನಿಸಿ ರಾಗಿಯಾಗುತ್ತಿರುವೆ, ಆ ದೇಹವು ಅಗ್ನಿಯಲ್ಲಿ ಭಸ್ಮವಾಗಿ ಹೋಗುವುದು. ಮಣ್ಣಿನಲ್ಲಿ ಮಣ್ಣಾಗಿ ಹೋಗುವುದು ಮತ್ತು ಯಾವುದೇ, ಜೀವವು ತಿಂದು ಹಾಕಿದರೆ ಮಲ, ಕ್ರಿಮಿ ಕಳೇವರರೂಪವಾಗಿ ಒಂದೊಂದು ಪರಮಾಣುವು ನೆಲ ಮತ್ತು ಆಕಾಶದಲ್ಲಿ ಅನಂತವಿಭಾಗರೂಪವಾಗಿ ಹರಡಿ ಹೋಗುವವು, ಪುನಃ ಎಲ್ಲಿ ಸೇರುವುದು ?

ಅವರ ಸಂಬಂಧವು ಪುನಃ ಪ್ರಾಪ್ತವಾಗಲಾರದೆಂದು ನಿಶ್ಚಯವಾಗಿ ತಿಳಿದುಕೊಂಡು, ಸ್ತ್ರೀ, ಪುತ್ರ, ಮಿತ್ರ, ಕುಟುಂಬ ಮೊದಲಾದವರಲ್ಲಿ ಮಮತೆ ಮಾಡಿ ಧರ್ಮವನ್ನು ಕೆಡಿಸುವುದು ಮಹಾ ಅನರ್ಥವಿದೆ. ಯಾವ ಪುತ್ರ, ಸ್ತ್ರೀ, ಬಂಧು, ಮಿತ್ರ, ಯಜಮಾನ, ಸೇವಕ ಮೊದಲಾದವರೊಡನೆ ಕೂಡಿಕೊಂಡು ಸುಖದಿಂದ ಜೀವಿಸಬಯಸುವಿಯೋ, ಆ ಎಲ್ಲ ಕುಟುಂಬ ಮೊದಲಾದ ಜನರು ಶರದಕಾಲದ ಮೇಘ ಮಾಲೆಯ ಸಮಾನ ಚದುರಿ ಹೋಗುವರು. ಇಂದು ಕಂಡು ಬರುತ್ತಿರುವ ಯಾವ ಸಂಬಂಧವಿದೆ ಅದು ಹಾಗೇ ಉಳಿಯುವುದಿಲ್ಲ, ಶೀಘ್ರದಲ್ಲಿಯೇ ಚದುರಿ ಹೋಗುವುದೆಂದು ನಿಶ್ಚಯವಾಗಿ ತಿಳಿದುಕೊಳ್ಳು !

ಯಾವ ರಾಜ್ಯದ ಸಲುವಾಗಿ, ಭೂಮಿಯ ಸಲುವಾಗಿ; ಅಂಗಡಿ, ಮನೆ, ಆಜೀವಿಕೆಯ ಸಲುವಾಗಿ ಹಿಂಸೆ, ಅಸತ್ಯ, ಛಲ, ಕಪಟದ ಪ್ರವೃತ್ತಿ ಮಾಡುತ್ತಿರುವೆ; ಸಾತ್ವಿಕ ಜನರನ್ನು ವಂಚಿಸುತ್ತಿರುವೆ; ಬಲಿಷ್ಠನಾಗಿ ನಿರ್ಬಲರ ಧನ ಕಿತ್ತುಕೊಳ್ಳುತ್ತಿರುವೆ; ಆ ಎಲ್ಲ ಪರಿಗ್ರಹದ ಸಂಬಂಧವು ನಿಮ್ಮಿಂದ ಶೀಘ್ರವಾಗಿಯೇ ನಷ್ಟವಾಗಿ ಹೋಗುವುದು. ಅಲ್ಪ ಜೀವನದ ಸಲುವಾಗಿ ನರಕ-ತಿರ್ಯಂಚ ಗತಿಯ ಅನಂತಕಾಲವರೆಗಿನ ಸಲುವಾಗಿ ಅನಂತ ದುಃಖಗಳ ಪರಂಪರೆಯನ್ನು ಗ್ರಹಣ ಮಾಡಬೇಡ. ಅವುಗಳ ಸ್ವಾಮಿತ್ವದ ಅಭಿಮಾನ ಮಾಡಿ ಅನೇಕ ಜೀವರುಗಳು ನಷ್ಟವಾಗಿ ಹೋಗಿದ್ದಾರೆ. ಮತ್ತು ಅನೇಕರು ನಷ್ಟವಾಗುತ್ತಿರುವುದನ್ನು ಪ್ರತ್ಯಕ್ಷ ನೋಡುತ್ತಿರುವೆ. ಆದುದರಿಂದ ಈಗಲಾದರೂ ಮಮತೆಯನ್ನು ಬಿಟ್ಟುಕೊಟ್ಟು ಅನ್ಯಾಯದ ಪರಿಹಾರ ಮಾಡಿ ತಮ್ಮ ಆತ್ಮನ ಕಲ್ಯಾಣವಾಗುವ ಕಾರ್ಯದಲ್ಲಿ ಪ್ರವರ್ತನೆ ಮಾಡಬೇಕು.

ಬಂಧು, ಪುತ್ರ, ಮಿತ್ರ, ಕುಟುಂಬ ಮೊದಲಾದವರೊಡನೆ ವಾಸಿಸುವುದು ಹೇಗಿದೆಯೆಂದರೆ ಗ್ರೀಷ್ಮ ಋತುವಿನಲ್ಲಿ ನಾಲ್ಕು ಮಾರ್ಗಗಳ ಮಧ್ಯದಲ್ಲಿರುವ ವೃಕ್ಷದ ಛಾಯೆಯಲ್ಲಿ ಅನೇಕ ದೇಶಗಳ ಪಥಿಕರು ವಿಶ್ರಾಂತಿ ಮಾಡಿ ತಮ್ಮ-ತಮ್ಮ ಸ್ಥಾನಗಳಿಗೆ ಹೊರಟು ಹೋಗುತ್ತಾರೆ; ಅದೇ ಪ್ರಕಾರ ಇವರು ಕೂಡ ಕುಲರೂಪ ವೃಕ್ಷದ ಛಾಯೆಯಲ್ಲಿ ನಿಂತುಕೊಂಡು ಕರ್ಮದ ಅನುಸಾರ ಅನೇಕಗತಿಗಳಲ್ಲಿ ಹೊರಟು ಹೋಗುತ್ತಾರೆ. ಯಾರಲ್ಲಿ ನಿನ್ನ ಪ್ರೀತಿ ಮನ್ನಿಸುತ್ತಿರುವೆ ಅವರಲ್ಲಿ ಒಬ್ಬರು ಕೂಡ ನಮ್ಮ ಹಿತ ಬಯಸುವುದಿಲ್ಲ, ಎಲ್ಲರೂ ತಮ್ಮ-ತಮ್ಮ ಸ್ವಾರ್ಥಸಾಧಕರಿದ್ದಾರೆ, ದೃಷ್ಟಿಗೋಚರ ಸುಖದ ಸಮಾನ (ನೋಡುವುದಕ್ಕೆ ಮಾತ್ರ ಸುಖ) ಕ್ಷಣಾರ್ಧದಲ್ಲಿ ಪ್ರೀತಿಯ ರಾಗವು ನಷ್ಟವಾಗಿ ಹೋಗುತ್ತದೆ. ಹೇಗೆ ಒಂದು ಪಕ್ಷಿಯು ಯಾವ ಪೂರ್ವ ಸಂಕೇತವಿಲ್ಲದೆಯೇ ರಾತ್ರಿಯಲ್ಲಿ ಬಂದು ಕುಳಿತುಕೊಳ್ಳುತ್ತದೆ, ಪ್ರಾತಃಕಾಲವಾದ ನಂತರ ಹಾರಿ ಹೋಗುತ್ತದೆ ಹಾಗೆಯೇ ಕುಟುಂಬದ ಜನರು ಯಾವ ಸಂಕೇತವಿಲ್ಲದೆಯೇ ಕರ್ಮದ ವಶರಾಗಿ ಏಕತ್ರರಾಗುತ್ತಾರೆ ಮತ್ತು ಪುನಃ ಚದುರಿ ಹೋಗುತ್ತಾರೆ.

**ಈ ಸಮಸ್ತ ಧನ, ಸಂಪತ್ತು, ಆಜ್ಞೆ, ಐಶ್ವರ್ಯ, ರಾಜ್ಯ, ಇಂದ್ರಿಯ ವಿಷಯಗಳ ಸಾಮಗ್ರಿಗಳು ನೋಡು-ನೋಡುತ್ತಿರುವಂತೆ ಅವಶ್ಯವಾಗಿ ವಿಯೋಗಕ್ಕೆ ಪ್ರಾಪ್ತವಾಗುತ್ತವೆ.** ಯೌವ್ವನವಂತೂ ಮಧ್ಯಾಹ್ನದ ಬಿಸಿಲಿನಂತೆ ಹೊರಟು

ಹೋಗುವುದು. ಸ್ಥಿರವಾಗಿ ಉಳಿಯುವುದಿಲ್ಲ, ಸೂರ್ಯ, ಚಂದ್ರ, ಗ್ರಹ, ನಕ್ಷತ್ರಗಳಂತೂ ಅಸ್ತವಾಗಿ ಹೋಗುತ್ತವೆ, ಪುನಃ ಉದಯವಾಗುತ್ತವೆ, ವಸಂತ-ಗ್ರೀಷ್ಮ ಮೊದಲಾದ ಋತುಗಳು ಕೂಡ ಪುನಃ-ಪುನಃ ಬಂದು ಹೋಗುತ್ತಿರುತ್ತವೆ, ಆದರೆ ನಷ್ಟವಾದ ಇಂದ್ರಿಯ. ಯೌವ್ವನ, ಆಯು, ಕಾಯಗಳು ಪುನಃ ಮರಳಿ ಬರುವುದಿಲ್ಲ, ಯಾವ ಪ್ರಕಾರ ಪರ್ವತದಿಂದ ಉರುಳುವ ನದಿಯ ತರಂಗಗಳು ನಿಂತುಕೊಳ್ಳದೆಯೇ ಹೊರಟು ಹೋಗುತ್ತವೆ, ಅದೇ ಪ್ರಕಾರ ಆಯುವು ಕೂಡ ಕ್ಷಣ-ಕ್ಷಣದಲ್ಲಿ ನಿಂತುಕೊಳ್ಳದೆಯೇ ಹೊರಟು ಹೋಗುತ್ತದೆ.

ಜೀವನವು ಯಾವ ದೇಹದ ಆಧೀನವಿದೆ ಆ ದೇಹವನ್ನು ಜರ್ಜರಿತ ಮಾಡುತ್ತ ಜರೆಯು ಸಮಯ-ಸಮಯಕ್ಕೆ ಬಂದು ಬಿಡುತ್ತಿದೆ. ಆ ಜರೆಯು ಯೌವನರೂಪದ ವೃಕ್ಷವನ್ನು ಸುಡುವ ಸಲುವಾಗಿ ದಾವಾಗ್ನಿಯ ಸಮಾನವಿದೆ. ಸೌಭಾಗ್ಯರೂಪದ ಪುಷ್ಪಗಳಿಗೆ ಆಣೆಕಲ್ಲಿನ ಮಳೆಯ ಸಮಾನವಿದೆ, ಸ್ತ್ರೀಯರ ಪ್ರೀತಿರೂಪದ ಜಿಂಕೆಗೆ ವ್ಯಾಘ್ರದ ಸಮಾನವಿದೆ, ಜ್ಞಾನನೇತ್ರವನ್ನು ಮರೆ ಮಾಡಲು ಧೂಳದ ವೃಷ್ಟಿಯ ಸಮಾನವಿದೆ, ತಪರೂಪದ ಕಮಲವನಕ್ಕೆ ಹಿಮಯುಕ್ತ ಹವೆಯ ಸಮಾನವಿದೆ, ದೀನತೆಯನ್ನುತ್ಪನ್ನ ಮಾಡುವ ಮಾತೆಯಿದೆ, ತಿರಸ್ಕಾರವನ್ನು ವೃದ್ಧಿಸುವಲ್ಲಿ ದಾದಿಯ ಸಮಾನವಿದೆ, ಉತ್ಸಾಹವನ್ನು ಕಡಿಮೆ ಮಾಡುವಲ್ಲಿ ತಿರಸ್ಕಾರವಿದೆ, ರೂಪ ಧನವನ್ನು ಹರಣ ಮಾಡುವಂಥದ್ದಿದೆ, ಬಲವನ್ನು ನಷ್ಟಗೊಳಿಸುವಂಥದ್ದಿದೆ, ಜಂಘಾಬಲವನ್ನು ಕೆಡಿಸುವಂಥದ್ದಿದೆ, ಆಲಸ್ಯವನ್ನು ಹೆಚ್ಚಿಸುವಂಥದ್ದಿದೆ, ಸ್ಮರಣ ಶಕ್ತಿಯನ್ನು ನಷ್ಟ ಮಾಡುವಂಥದ್ದಿದೆ ಈ ಜರೆಯು ವೃದ್ಧಾವಸ್ಥೆಯೇ ಇದೆ. ಮರಣದಲ್ಲಿ ಸೇರಿಸುವಂಥ ದೂತಿಯ ಸಮಾನವಿರುವ ಜರೆಯು ವೃದ್ಧಾವಸ್ಥೆಯೇ ಇದೆ. ಮರಣದಲ್ಲಿ ಸೇರಿಸುವಂಥ ದೂತಿಯ ಸಮಾನವಿರುವ ಜರೆಯು ಬಂದ ಮೇಲೆ ಕೂಡ ತಮ್ಮ ಆತ್ಮಹಿತವನ್ನು ವಿಸ್ಮರಣೆ ಮಾಡಿ ನಿಷ್ಠುರವಾಗುವುದು ಇದು ಮಹಾ ಅನರ್ಥವಿದೆ. **ಪುನಃ ಪುನಃ ಮನುಷ್ಯ ಜನ್ಮ ಮೊದಲಾದ ಸಾಮಗ್ರಿಗಳು ದೊರಕುವುದಿಲ್ಲ.**

ಎಷ್ಟು ನೇತ್ರೇಂದ್ರಿಯಗಳ ತೇಜವಿದೆ ಅದು ಕ್ಷಣ ಕ್ಷಣಕ್ಕೂ ನಷ್ಟವಾಗುತ್ತಲಿದೆ. ಸಮಸ್ತ ಸಂಯೋಗಗಳನ್ನು ವಿಯೋಗರೂಪವೆಂದು ತಿಳಿಯುವುದು. ಈ ಇಂದ್ರಿಯ ವಿಷಯಗಳಲ್ಲಿ ಪ್ರೀತಿ ಮಾಡಿ ಯಾರು-ಯಾರು ನಷ್ಟರಾಗಿ ಹೋಗಿಲ್ಲ ? ಆ ಸಮಸ್ತ ವಿಷಯಗಳೂ ವಿಲಯವಾಗಿ ಹೋಗುವವು ಮತ್ತು ಇಂದ್ರಿಯಗಳೂ ನಷ್ಟವಾಗಿ ಹೋಗುವವು. ಯಾವುದರ ಸಲುವಾಗಿ ಆತ್ಮಹಿತವನ್ನು ಬಿಟ್ಟುಕೊಟ್ಟು ಘೋರ ಪಾಪರೂಪದ ದುರ್ಧ್ಯಾನ ಮಾಡುತ್ತಿರುವೆ ? ಯಾವ ವಿಷಯಗಳಲ್ಲಿ ರಾಗ ಮಾಡಿ ಹೆಚ್ಚು-ಹೆಚ್ಚು ಲೀನನಾಗಿ ಹೋಗುತ್ತಿರುವೆ, ಆ ಎಲ್ಲ ವಿಷಯಗಳು ನಿಮ್ಮ ಹೃದಯದಲ್ಲಿ ತೀವ್ರ ದಾಹವನ್ನುತ್ಪನ್ನ ಮಾಡಿಸಿ ವಿನಾಶ ಮಾಡುವವು. ಶರೀರವನ್ನು ನಿರಂತರ ರೋಗಗಳಿಂದ ವ್ಯಾಪ್ತವೆಂದು ತಿಳಿಯುವುದು, ಸಮಸ್ತ ಜೀವಗಳನ್ನು ಮರಣದಿಂದ ವ್ಯಾಪ್ತವಿವೆಯೆಂದು ತಿಳಿಯುವುದು, ಐಶ್ವರ್ಯವನ್ನು ವಿನಾಶದ ಸನ್ಮುಖವೆಂದು ತಿಳಿಯುವುದು. ಎಷ್ಟು ಸಂಯೋಗಗಳಿವೆ ಅವುಗಳ ವಿಯೋಗವು ನಿಯಮದಿಂದ ಆಗುವುದು.

ಈ ಸಮಸ್ತ ವಿಷಯಗಳು ಆತ್ಮನ ಸ್ವರೂಪವನ್ನು ಮರೆಸುವಂಥವಿವೆ. ಇವುಗಳಲ್ಲಿ ಲೀನವಾಗಿ ಮೂರು ಲೋಕವು ನಷ್ಟವಾಗಿ ಹೋಗಿದೆ. ವಿಷಯಗಳ ಸೇವನೆಯಿಂದ ಸುಖ ಬಯಸುವುದೆಂದರೆ ಜೀವಿತವಿರುವ ಸಲುವಾಗಿ ವಿಷಪ್ರಾಶನ ಮಾಡುವುದು, ಶೀತಲತೆ ಪಡೆಯುವ ಸಲುವಾಗಿ ಅಗ್ನಿಯಲ್ಲಿ ಪ್ರವೇಶ ಮಾಡುವುದು, ಮಿಷ್ಠ ಭೋಜನದ ಸಲುವಾಗಿ ವಿಷದ ವೃಕ್ಷವನ್ನು ಪ್ರೋಕ್ಷಿಸಿದ ಸಮಾನವಿದೆ. ಈ ವಿಷಯಗಳು ಮಹಾಮೋಹಮದವನ್ನು ಉತ್ಪನ್ನ ಮಾಡುವಂಥವುಗಳಿವೆ ಇವುಗಳ ಪ್ರೀತಿಯನ್ನು ಬಿಟ್ಟುಕೊಟ್ಟು ಆತ್ಮನ ಕಲ್ಯಾಣ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕು.

**ಮರಣವು ಆಕಸ್ಮಿಕವಾಗಿ ಬರುವುದು.** ಈ ಮನುಷ್ಯ ಜನ್ಮ, ಈ ಜಿನೇಂದ್ರರ ಧರ್ಮವು ಬಿಟ್ಟು ಹೋದ ನಂತರ ದೊರಕುವುದು ಅನಂತಕಾಲದಲ್ಲಿ ದುರ್ಲಭವಿದೆ. ಯಾವ ಪ್ರಕಾರ ನದಿಯ ತರಂಗಗಳು ನಿರಂತರ ತಡೆಯಿಲ್ಲದೆ ಹೋಗುತ್ತಲೇ ಇರುತ್ತವೆ, ಮರಳಿ ಎಂದೂ ಬರುವುದೇ ಇಲ್ಲ, ಅದೇ ಪ್ರಕಾರ ಆಯು, ಕಾಯ, ರೂಪು, ಬಲ, ಲಾವಣ್ಯ, ಇಂದ್ರಿಯಗಳ ಶಕ್ತಿಯು ಒಮ್ಮೆ ಹೊರಟು ಹೋದ ಮೇಲೆ ತಿರುಗಿ ಬರುವುದಿಲ್ಲ.

ಈ ಪ್ರೀತಿಯ ಸ್ತ್ರೀ-ಪುತ್ರರುಗಳು ಎದುರಿಗೆ ಕಂಡು ಬರುತ್ತಿದ್ದಾರೆ ಅವರ ಸಂಯೋಗವು ನಿರಂತರ ಉಳಿಯುವುದಿಲ್ಲ, ಸ್ವಪ್ನದ ಸಂಯೋಗದ ಸಮಾನವಿದೆ. ಅವರ ಸಲುವಾಗಿ ಅನೀತಿ-ಪಾಪ ಮಾಡುವುದನ್ನು ಬಿಟ್ಟುಕೊಟ್ಟು ಶೀಘ್ರ ವ್ರತ-ಸಂಯಮಗಳ ಧಾರಣ ಮಾಡು. ಈ ಜಗತ್ತು ಜನರಿಗೆ ಇಂದ್ರಜಾಲದ ಸಮಾನ ಭ್ರಾಂತಿಯನ್ನುತ್ಪನ್ನ ಮಾಡುವಂಥದ್ದಿದೆ. ಈ ಸಂಸಾರದಲ್ಲಿ ಧನ, ಯೌವ್ವನ, ಜೀವನ, ಸ್ವಜನ, ಪರಜನರ ಸಮಾಗಮದಲ್ಲಿ ಜೀವನು ಅಂಧನಾಗುತ್ತಿದ್ದಾನೆ. ಚಕ್ರವರ್ತಿಗಳ ಧನ-ಸಂಪತ್ತು ಕೂಡ ಸ್ಥಿರವುಳಿಯಲಿಲ್ಲವೆಂದ ಮೇಲೆ ಅನ್ಯ ಪುಣ್ಯಹೀನರದು ಹೇಗೆ ಉಳಿಯುವುದು ? ಯೌವನವಂತೂ ಜರೆಯ ಮೂಲಕ ನಷ್ಟವಾಗುವುದು. ಜೀವನವಂತೂ ಮರಣಸಹಿತವೇ ಇದೆ. ಸ್ವಜನ-ಪರಜನರು ವಿಯೋಗದ ಸನ್ಮುಖರೇ ಇದ್ದಾರೆ. ಯಾರಲ್ಲಿ ಸ್ಥಿರಬುದ್ಧಿ ಮಾಡುವುದು ?

ಈ ದೇಹವನ್ನು ನಿತ್ಯ ಸ್ನಾನ ಮಾಡಿಸುವಿರಿ, ಸುಗಂಧ ಬಳೆಯುವಿರಿ, ವಸ್ತ್ರಾಭರಣಗಳಿಂದ ಅಲಂಕರಿಸುವಿರಿ, ಅನೇಕ ಪ್ರಕಾರದ ಆಹಾರ-ಪಾನೀಯ ಮಾಡಿಸುವಿರಿ, ಪುನಃ ಪುನಃ ಅದರ ಸೇವೆಯಲ್ಲಿಯೇ ಸಮಯ ವ್ಯತೀತ ಮಾಡುವಿರಿ; ಶಯ್ಯೆ, ಆಸನ, ಕಾಮ, ಭೋಗ, ನಿದ್ರೆ, ಶೀತ, ಉಷ್ಣ ಅನೇಕ ಪ್ರಕಾರದಿಂದ ಸುಖವಿತ್ತು ಅದನ್ನು ಪುಷ್ಟ ಮಾಡುತ್ತಿರುವಿರಿ; ಅದರ ಪ್ರೀತಿಯಲ್ಲಿ ಎಷ್ಟು ಅಂಧರಾಗಿ ಹೋಗಿದ್ದೀರೆಂದರೆ ಭಕ್ಷ್ಯ-ಅಭಕ್ಷ್ಯ ಯೋಗ್ಯ-ಅಯೋಗ್ಯ, ನ್ಯಾಯ-ಅನ್ಯಾಯದ ವಿಚಾರದಿಂದ ರಹಿತರಾಗಿ ತಮ್ಮ ಧರ್ಮ ಕೆಡಿಸಿಕೊಳ್ಳುವುದು, ಯಶಸ್ಸು ನಾಶವಾಗುವುದು, ಮರಣವಾಗುವುದು, ನರಕಕ್ಕೆ ಹೋಗುವುದು, ನಿಗೋದದಲ್ಲಿ ವಾಸ ಮಾಡುವುದು ಮೊದಲಾದವುಗಳನ್ನಂತೂ ಎಣಿಕೆಗೆ ತಂದುಕೊಳ್ಳುತ್ತಿಲ್ಲ.

**ಈ ಶರೀರವಂತೂ ನೀರಿನಿಂದ ತುಂಬಿದ ಹಸಿಕೊಡದ ಸಮಾನ ಶೀಘ್ರವಾಗಿಯೇ ನಷ್ಟವಾಗಿ ಹೋಗುವಂಥದ್ದಿದೆ.** ಈ ದೇಹದ ಮೇಲೆ ಉಪಕಾರ ಮಾಡುವುದೆಂದರೆ ಕೃತಘ್ನರಿಗೆ ಉಪಕಾರ ಮಾಡಿದಂತೆ ವಿಪರೀತ ಫಲ ಕೊಡುವಂಥದ್ದಿದೆ, ಸರ್ಪಕ್ಕೆ ಸಕ್ಕರೆ ಮಿಶ್ರಿತ ಹಾಲು ಕುಡಿಸಿದ ಸಮಾನ ತಮ್ಮ ಸಲುವಾಗಿ ಮಹಾದುಃಖ, ರೋಗ, ಕ್ಲೇಶ, ದುರ್ಧ್ಯಾನ, ಅಸಂಯಮ, ಕುಮರಣ ನಿಶ್ಚಯದಿಂದ ನರಕದಲ್ಲಿ ಪತನದ ಕಾರಣವಿದೆಯೆಂದು ತಿಳಿಯಬೇಕು. ಈ ಶರೀರವನ್ನು ವಿಷಯ ಮೊದಲಾದುವಿಂದ ಎಷ್ಟೆಷ್ಟು ಪುಷ್ಟ ಮಾಡುವಿರಿ ಅಷ್ಟಷ್ಟು ಆತ್ಮನ ಅಹಿತ ಮಾಡುವಲ್ಲಿ ಅಧಿಕ ಸಮರ್ಥರಾಗುವಿರಿ. ಒಂದೇ ದಿವಸ ಆಹಾರ ಕೊಡಿದಿದ್ದರೆ ಅತಿಶಯದುಃಖ ಕೊಡುವುದು. ಯಾರು-ಯಾರು ಈ ಶರೀರದಲ್ಲಿ ಪ್ರೀತಿ ಮಾಡಿದ್ದಾರೆ ಅವರೆಲ್ಲರು ಸಂಸಾರದಲ್ಲಿ ನಷ್ಟರಾಗಿ ಆತ್ಮ ಕಾರ್ಯವನ್ನು ಕೆಡಿಸಿಕೊಂಡು ಅನಂತಾನಂತ ಕಾಲದವರೆಗೆ ನರಕ-ನಿಗೋದಗಳಲ್ಲಿ ತಿರುಗಿದ್ದಾರೆ. ಯಾರು ಈ ಶರೀರವನ್ನು ತಪ-ಸಂಯಮದಲ್ಲಿ ತೊಡಗಿಸಿ ಕೃಶ ಮಾಡಿದ್ದಾರೆ ಅವರೇ ತಮ್ಮ ಹಿತ ಮಾಡಿಕೊಂಡಿದ್ದಾರೆ.

**ಈ ಇಂದ್ರಿಯಗಳು ಎಷ್ಟೆಷ್ಟು ವಿಷಯಗಳನ್ನು ಭೋಗಿಸುತ್ತವೆ ಅಷ್ಟಷ್ಟು ತೃಷ್ಣೆಯು ಹೆಚ್ಚುತ್ತದೆ.** ಹೇಗೆ ಅಗ್ನಿಯು ಸೌದೆಯಿಂದ ತೃಪ್ತವಾಗುವುದಿಲ್ಲ, ಹಾಗೆಯೇ ಇಂದ್ರಿಯಗಳೂ ವಿಷಯಗಳಿಂದ ತೃಪ್ತವಾಗುವುದಿಲ್ಲ. ಒಂದೊಂದು ಇಂದ್ರಿಯದ ವಿಷಯದ ಅಪೇಕ್ಷೆಯಿಂದ ದೊಡ್ಡ-ದೊಡ್ಡ ಚಕ್ರವರ್ತಿ ದೊರೆಗಳೂ ಭ್ರಷ್ಟರಾಗಿ ನರಕದಲ್ಲಿ ಹೋಗಿದ್ದಾರೆ, ಉಳಿದವರದೇನು ಹೇಳುವುದು ? ಈ ಇಂದ್ರಿಯಗಳನ್ನು ದುಃಖದಾಯಕ, ಪರಾಧೀನಗೊಳಿಸುವಂಥ, ನರಕಕ್ಕೆ ತಲುಪಿಸುವಂಥವೆಂದು ತಿಳಿದುಕೊಂಡು ಇಂದ್ರಿಯಗಳ ಪ್ರೀತಿ ತೊರೆದು ಅವನ್ನು ವಶದಲ್ಲಿಟ್ಟುಕೊಳ್ಳಬೇಕು. ಸಂಸಾರದಲ್ಲಿ ಜನರು ಎಷ್ಟು ನಿಂದ್ಯ ಕರ್ಮ ಮಾಡುತ್ತಾರೆ ಅವರೆಲ್ಲರು ಇಂದ್ರಿಯಗಳ ಆಧೀನರಾಗಿಯೇ ಮಾಡುತ್ತಾರೆ. ಆದುದರಿಂದ ಇಂದ್ರಿಯಗಳ ರೂಪದ ಸರ್ಪಗಳ ವಿಷದಿಂದ ಆತ್ಮನ ರಕ್ಷಣೆ ಮಾಡಬೇಕು.

**ಈ ಲಕ್ಷ್ಮಿಯು ಕ್ಷಣಭಂಗುರವಿದೆ. ಈ ಲಕ್ಷ್ಮಿಯು ಕುಲೀನರಲ್ಲಿ ರಮಿಸುವುದಿಲ್ಲ.** ಧೀರರಲ್ಲಿ, ಶೂರರಲ್ಲಿ, ಪಂಡಿತರಲ್ಲಿ, ಮೂರ್ಖರಲ್ಲಿ, ರೂಪವಂತರಲ್ಲಿ, ಕುರೂಪರಲ್ಲಿ, ಪರಾಕ್ರಮಿಗಳಲ್ಲಿ, ಹೇಡಿಗಳಲ್ಲಿ, ಧರ್ಮಾತ್ಮರಲ್ಲಿ, ಅಧರ್ಮಿಗಳಲ್ಲಿ, ಪಾಪಿಗಳಲ್ಲಿ, ಕೃಪಣರಲ್ಲಿ ಎಲ್ಲಿಯೂ ರಮಿಸುವುದಿಲ್ಲ. ಲಕ್ಷ್ಮಿಯಂತೂ ಯಾವನು ಪೂರ್ವಜನ್ಮದಲ್ಲಿ ಪುಣ್ಯ ಮಾಡಿದ್ದಾನೆ ಅವನ ದಾಸಿಯಾಗುತ್ತದೆ. ಕುಪಾತ್ರ ದಾನಗಳಿಂದ, ಕುತಪಗಳಿಂದ ಉತ್ಪನ್ನವಾಗಿ ಜೀವರುಗಳನ್ನು ದುಷ್ಟ ಕುಭೋಗಗಳಲ್ಲಿ, ಕುಮಾರ್ಗದಲ್ಲಿ, ಮದಗಳಲ್ಲಿ ತೊಡಗಿಸಿ ದುರ್ಗತಿಗಳಲ್ಲಿ ತಲುಪಿಸುವಂಥದ್ದಿದೆ.

**ಈ ಪಂಚಮಕಾಲದಲ್ಲಂತೂ ಕುಪಾತ್ರರಿಗೆ ದಾನ ಕೊಡುವುದರಿಂದ, ಕುತಪ ಮಾಡುವುದರಿಂದಲೇ ಲಕ್ಷ್ಮಿಯು ಉತ್ಪನ್ನವಾಗುತ್ತದೆ.** ಈ ಲಕ್ಷ್ಮಿಯು ಬುದ್ಧಿಯನ್ನು ಕೆಡಸಿ, ಮಹಾದುಃಖದಿಂದ ಉತ್ಪನ್ನವಾಗಿ, ಮಹಾದುಃಖದಿಂದ ಭೋಗಿಸಿ, ಪಾಪಗಳಲ್ಲಿ ತೊಡಗಿಸಿ, ದಾನ-ಭೋಗವಿಲ್ಲದೆಯೇ ಬಿಟ್ಟುಕೊಟ್ಟು ಆರ್ತಧ್ಯಾನದೊಡನೆ ಮರಣ ಮಾಡಿಸಿ ತಿರ್ಯಂಚಗತಿಯಲ್ಲಿ ಉತ್ಪನ್ನ ಮಾಡಿಸಿ ಬಿಡುತ್ತದೆ. ಆದುದರಿಂದ ಈ ಲಕ್ಷ್ಮಿಯನ್ನು ತೃಷ್ಣೆ ಹೆಚ್ಚಿಸುವಂಥ, ಮದವನ್ನುತ್ಪನ್ನ ಮಾಡುವಂಥದ್ದೆಂದು ತಿಳಿದುಕೊಂಡು ದುಃಖೀ-ದರಿದ್ರರಿಗೆ ಉಪಕಾರ ಮಾಡುವಲ್ಲಿ, ಧರ್ಮದ ವೃದ್ಧಿಯಲ್ಲಿ, ಧರ್ಮದ ಆಯತನಗಳಲ್ಲಿ, ವಿದ್ಯೆಯನ್ನೋದಿಸುವಲ್ಲಿ, ವೀತರಾಗ ಸಿದ್ಧಾಂತ ಗ್ರಂಥಗಳನ್ನು ಬರೆಸುವಲ್ಲಿ, ಶಾಸ್ತ್ರಗಳನ್ನು ಮುದ್ರಿಸುವಲ್ಲಿ ತೊಡಗಿಸಿ ಸದುಪಯೋಗ ಮಾಡಬೇಕು. ನ್ಯಾಯದ ಪ್ರಾಮಾಣಿಕ ಭೋಗಗಳಲ್ಲಿ ಧರ್ಮವು ಕೆಟ್ಟು ಹೋಗದ ರೀತಿಯಲ್ಲಿ ತೊಡಗಿಸಬೇಕು. ಈ ಲಕ್ಷ್ಮಿಯು ಜಲತರಂಗಗಳಂತೆ ಅಸ್ಥಿರವಿರುವುದರಿಂದ ಬೇಗನೆ ದಾನ ಉಪಕಾರ ಮಾಡು. ಪರಲೋಕದಲ್ಲಿ ಜತೆಯಲ್ಲಿ ಬರುವುದಿಲ್ಲ, ಅಕಸ್ಮಾತ್ತಾಗಿ ಬಿಟ್ಟುಕೊಟ್ಟು ಸತ್ತು ಹೋಗುವೆ. **ಯಾರು ನಿರಂತರವಾಗಿ ಈ ಲಕ್ಷ್ಮಿಯ ಸಂಗ್ರಹವನ್ನೇ ಮಾಡುತ್ತಿರುತ್ತಾರೆ, ದಾನ-ಭೋಗಗಳಲ್ಲಿ ತೊಡಗಿಸುವುದಿಲ್ಲ ಅವರು ತಮ್ಮನ್ನು ತಾವೇ ಮೋಸ ಮಾಡಿಕೊಳ್ಳುತ್ತಾರೆ.**

ಯಾರು ಪಾಪದ ಆರಂಭ ಮಾಡಿ ಲಕ್ಷ್ಮಿಯನ್ನು ಕೂಡಿಸಿದ್ದಾರೆ, ಮಹಾ ಮೂರ್ಚ್ಛೆಯಿಂದ ಸಂಪಾದಿಸಿದ್ದಾರೆ ಮತ್ತು ಅವರು ಅದನ್ನು ಇತರರ ಕೈಯಲ್ಲಿ ಕೊಟ್ಟು ಬಿಟ್ಟಿದ್ದಾರೆ, ಪರದೇಶದಲ್ಲಿ ವ್ಯಾಪಾರ ಮೊದಲಾದವುಗಳ ಮೂಲಕ ಹೆಚ್ಚಿಸುವ ಸಲುವಾಗಿ ಇಟ್ಟಿದ್ದಾರೆ, ನೆಲದಲ್ಲಿ ಬಹಳಷ್ಟು ಆಳದಲ್ಲಿ ಹೂಳಿ ಇಟ್ಟಿದ್ದಾರೆ ಅವರು ಹಗಲಿರುಳೂ ಅದರದೇ ಚಿಂತನೆ ಮಾಡುತ್ತ ದುರ್ಧ್ಯಾನದಿಂದ ಸತ್ತು ದುರ್ಗತಿಯಲ್ಲಿ ಹೋಗಿ ಬೀಳುತ್ತಾರೆ. **ಕೃಪಣನನ್ನು ಲಕ್ಷ್ಮಿಯ ಕಾವಲುಗಾರ ಮತ್ತು ದಾಸನೆಂದೇ ತಿಳಿಯುವುದು.**

ಆಳವಾಗಿ ಭೂಮಿಯಲ್ಲಿ ಹೂಳಿ ಇಡುವಂಥವನಂತೂ ಲಕ್ಷ್ಮಿಯನ್ನು ಪಾಷಾಣದ ಸಮಾನ ಮಾಡಿ ಬಿಟ್ಟಿದ್ದಾನೆ ಹೇಗೆ ನೆಲದೊಳಗೆ ಅನ್ಯ ಪಾಷಾಣಗಳಿರುತ್ತವೆ ಹಾಗೆಯೇ ಈ ಲಕ್ಷ್ಮಿಯನ್ನು ತಿಳಿಯುವುದು. ಅವನು ದೊರೆಗಳ, ಪಾಲುದಾರರ, ಕುಟುಂಬದವರ ಕಾರ್ಯ ಸಾಧಿಸಿದ್ದಾನೆ. ತಮ್ಮ ಶರೀರವಂತೂ ಬೂದಿಯಾಗಿ ಹಾರಿ ಹೋಗುವುದೆಂಬುದನ್ನು ಪ್ರತ್ಯಕ್ಷವಾಗಿ ನೋಡುತ್ತೇವೆಯಲ್ಲವೇನು ? **ಈ ಲಕ್ಷ್ಮಿಯ ಸಮಾನ ಆತ್ಮನನ್ನು ಮೋಸ ಮಾಡುವಂಥವರು ಬೇರೆ ಯಾರೂ ಇಲ್ಲ.**

ಲಕ್ಷ್ಮಿಯ ಮೋಹದ ಹೊಡೆತದಿಂದ ತಮ್ಮ ಪರಮಾರ್ಥವನ್ನೆಲ್ಲ ಮರೆತು ಹಗಲಿರುಳು ಘೋರ ಆರಂಭ ಮಾಡುತ್ತಾನೆ. ವೇಳೆಗೆ ಸರಿಯಾಗಿ ಭೋಜನ ಮಾಡುವುದಿಲ್ಲ, ಶೀತೋಷ್ಣಗಳ ವೇದನೆ ಸಹಿಸುತ್ತಾನೆ, ರೋಗಾದಿಗಳ ಕಷ್ಟವನ್ನು ಗಣನೆಗೆ ತಂದುಕೊಳ್ಳುವುದಿಲ್ಲ. ಚಿಂತಾವಶನಾಗಿ ರಾತ್ರಿಯಲ್ಲಿ ನಿದ್ರೆಯನ್ನೂ ಮಾಡುವುದಿಲ್ಲ. ಧನದ ಲೋಭಿಯು ತನ್ನ ಮರಣವಾಗುವುದನ್ನೂ ಗಣಿಸುವುದಿಲ್ಲ, ಯುದ್ಧದ ಘೋರ ಸಂಕಟದಲ್ಲೂ ಹೊರಟು ಹೋಗುತ್ತಾನೆ, ಸಮುದ್ರದಲ್ಲಿಯೂ ಪ್ರವೇಶ ಮಾಡುತ್ತಾನೆ, ಘೋರ ಭಯಾನಕ ವನ-ಪರ್ವತಗಳಲ್ಲೂ ಹೋಗುತ್ತಾನೆ, ಧರ್ಮರಹಿತ ದೇಶಗಳಲ್ಲಿಯೂ ಹೋಗುತ್ತಾನೆ, ಎಲ್ಲಿ ತಮ್ಮ ಕುಲದವರು, ಜಾತಿಯವರು, ಮನೆಯವರು ಯಾರೂ ಕಂಡು ಬರುವುದಿಲ್ಲ ಅಂಥ ಸ್ಥಾನಗಳಲ್ಲಿ-ವಿದೇಶಗಳಲ್ಲಿ ಕೂಡ ಕೇವಲ ಧನದ ಲೋಭದಲ್ಲಿ ಭ್ರಮಣ-ಮಾಡುತ್ತ-ಮಾಡುತ್ತ ಮರಣಹೊಂದಿ ದುರ್ಗತಿಗೆ ಹೊರಟು ಹೋಗುತ್ತಾನೆ. ಲೋಭಿಯು ಮಾಡಲು ಯೋಗ್ಯವಿಲ್ಲದಂಥ ಮತ್ತು ನೀಚ ಭಿಲ್ಲ-ಚಾಂಡಾಲರು ಮಾಡಲು ಯೋಗ್ಯವಿರುವಂಥ ಕಾರ್ಯಗಳನ್ನು ಕೂಡ ಮಾಡುತ್ತಾನೆ.

ಆದುದರಿಂದ ಈ ಜಿನೇಂದ್ರರ ಧರ್ಮವನ್ನು ಪಡೆದುಕೊಂಡು ಸಂತೋಷಧಾರಣ ಮಾಡು, ತಮ್ಮ ಪುಣ್ಯದ ಅನುಸಾರ ನ್ಯಾಯಮಾರ್ಗದಿಂದ ಪ್ರಾಪ್ತವಾದ ಧನದಲ್ಲಿ ಸಂತುಷ್ಟನಾಗಿ, ತೀವ್ರರಾಗ ತೊರೆದು ನ್ಯಾಯದ ವಿಷಯಗಳನ್ನು ಭೋಗಿಸು. ದುಃಖಿತ, ದೀನ, ಅನಾಥರಿಗೆ ಉಪಕಾರ ಮಾಡುವ ಸಲುವಾಗಿ ದಾನ-ಸನ್ಮಾನಗಳಲ್ಲಿ ಧನ ತೊಡಗಿಸು.

ಈ ಲಕ್ಷ್ಮಿಯು ಅನೇಕರನ್ನು ವಂಚಿಸಿ ದುರ್ಗತಿಗೆ ಕಳಿಸಿದೆ. ಲಕ್ಷ್ಮಿಯ ಸಂಗತಿ ಮಾಡಿ ಜಗತ್ತಿನ ಜನರು ಅಚೇತರಾಗಿ ಹೋಗುತ್ತಿದ್ದಾರೆ. ಪುಣ್ಯದ ಅಸ್ತವಾದೊಡನೆಯೇ ಈ ಲಕ್ಷ್ಮಿಯ ಅಸ್ತವಾಗಿ ಹೋಗುವುದು. ಕೇವಲ ಧನವನ್ನು ಕೂಡಿಸಿ ಸಂಗ್ರಹ ಮಾಡಿ ಸತ್ತು ಹೋಗುವುದು, ಅದು ಧನ ಪಡೆದುದರ ಫಲವಲ್ಲ, ಅದರ ಫಲವಂತೂ ಕೇವಲ ಉಪಕಾರ

ಮಾಡುವದು, ಧರ್ಮದ ಮಾರ್ಗ ನಡೆಸುವುದಿದೆ. ಈ ಪಾಪರೂಪದ ಧನವನ್ನು ಯಾರು ಗ್ರಹಣ ಮಾಡಲಿಲ್ಲ, ಅಥವಾ ಗ್ರಹಣ ಮಾಡಿಯೂ ಕೂಡ ಮಮತೆ ಬಿಟ್ಟು ಕ್ಷಣ ಮಾತ್ರದಲ್ಲಿಯೇ ತ್ಯಾಗ ಮಾಡಿದ್ದಾರೆ ಅವರೇ ಧನ್ಯರಿದ್ದಾರೆ. ಈ ಪ್ರಕಾರ ಹೆಚ್ಚೇನು ಹೇಳುವುದು ?

ಈ ಧನ, ಯೌವ್ವನ, ಜೀವನ, ಕುಟುಂಬದ ಸಂಗತಿಗಳೆಲ್ಲವನ್ನು ನೀರ ಬೊಬ್ಬುಳಿಕೆಯಂತೆ ಅನಿತ್ಯವೆಂದು ತಿಳಿದುಕೊಂಡು ಆತ್ಮನ ಹಿತರೂಪವಾದ ಕಾರ್ಯದಲ್ಲಿ ಪ್ರವರ್ತನೆ ಮಾಡಬೇಕು. ಸಂಸಾರದಲ್ಲಿ ಎಷ್ಟು ಸಂಯೋಗಗಳಿವೆ ಅವೆಲ್ಲವು ವಿನಾಶಶೀಲವಿವೆ. ಈ ಪ್ರಕಾರ ಅನಿತ್ಯ ಭಾವನೆಯನ್ನು ಭಾವಿಸಬೇಕು. ಸ್ತ್ರೀ, ಪುತ್ರ, ಪೌತ್ರ, ಕುಟುಂಬ ಮೊದಲಾದವರಾರೂ ಯಾರ ಜತೆಯೂ ಪರಲೋಕದಲ್ಲಿ ಹೋಗಲಿಲ್ಲ ಮತ್ತು ಹೋಗುವುದಿಲ್ಲ. ತಮ್ಮ ಮೂಲಕ ಸಂಪಾದಿಸಿದ ಪುಣ್ಯ-ಪಾಪ ಮೊದಲಾದ ಕರ್ಮವೇ ಜತೆಯಲ್ಲಿ ಉಳಿಯುವುದು, ಈ ಜಾತಿ, ಕುಲ, ರೂಪ ಮೊದಲಾದವು ಮತ್ತು ದೇಶ-ನಗರಗಳ ಸಮಾಗಮವು ದೇಹದ ಜತೆಯಲ್ಲೇ ನಾಶವಾಗುವವು. ಆದುದರಿಂದ ಅನಿತ್ಯ ಭಾವನೆಯನ್ನು ಕ್ಷಣ ಮಾತ್ರವೂ ಮರೆಯಬಾರದು. ಅದರಿಂದ ಪರದೊಡನಿರುವ ಮಮತೆಯು ಬಿಟ್ಟು ಹೋಗಿ ಆತ್ಮಕಾರ್ಯದಲ್ಲಿ ಪ್ರವೃತ್ತಿಯಾಗುವುದು ಈ ಪ್ರಕಾರ ಅನಿತ್ಯ ಭಾವನೆಯ ವರ್ಣನೆ ಮಾಡಲಾಯಿತು.

**ಅಶರಣ ಭಾವನೆ :** ಈಗ ಅಶರಣ ಭಾವನೆಯ ಸ್ವರೂಪವನ್ನು ಹೀಗೆ ಭಾವಿಸಬೇಕು. ಈ ಸಂಸಾರದಲ್ಲಿ ಮರಣಕ್ಕೆ ಗುರಿಯಾಗದಂಥ ಯಾವ ದೇವ, ದಾನವ, ಇಂದ್ರ, ಮನುಷ್ಯರುಗಳಿಲ್ಲ, ಮರಣ ಸಮಯವು ಬಂದ ನಂತರ ಯಾರು ಆಶ್ರಯ ಕೊಡುವಂಥವರಿಲ್ಲ, ಆಯುಪೂರ್ಣವಾದ ನಂತರ ಇಂದ್ರನ ಪತನವು ಕೂಡ ಕ್ಷಣ ಮಾತ್ರದಲ್ಲಿ ಆಗಿ ಹೋಗುತ್ತದೆ. ಯಾರಿಗೆ ಅಸಂಖ್ಯಾತ ದೇವಗಳ ಆಜ್ಞಾಧಾರಕ ಸೇವಕರು, ಸಾವಿರಾರು ಋದ್ಧಿಯುಕ್ತರು, ಸ್ವರ್ಗದಲ್ಲಿ ಅಸಂಖ್ಯಾತ ಕಾಲದ ನಿವಾಸ, ರೋಗ-ಕ್ಷುಧೆ-ತೃಷೆ ಮೊದಲಾದವುಗಳ ಉಪದ್ರವ ರಹಿತ ಶರೀರ, ಅಸಂಖ್ಯಾತ ಬಲ ಪರಾಕ್ರಮದ ಧಾರಕನಾದ ಇಂದ್ರನದೂ ಕೂಡ ಪತನವಾಗಿ ಹೋಗುತ್ತದೆಯೆಂದ ಮೇಲೆ ಬೇರೆ ಯಾರೂ ಆಶ್ರಯದಾತರಿಲ್ಲ, ಯಾವ ಪ್ರಕಾರ ನಿರ್ಜನ ವನದಲ್ಲಿ ಹುಲಿಯ ಬಾಯೊಳಗೆ ಬಿದ್ದುಕೊಂಡ ಜಿಂಕೆಯ ಮರಿಯನ್ನು ಉಳಿಸಿಕೊಳ್ಳುವಲ್ಲಿ ಯಾರೂ ಸಮರ್ಥರಿಲ್ಲ; ಅದೇ ಪ್ರಕಾರ ಮರಣದ ಮುಖದಲ್ಲಿ ಬಿದ್ದುಕೊಂಡ ಪ್ರಾಣಿಯ ರಕ್ಷಣೆ ಮಾಡುವಲ್ಲಿ ಯಾರೂ ಸಮರ್ಥರಿಲ್ಲ.

ಈ ಸಂಸಾರದಲ್ಲಿ ಪೂರ್ವಕಾಲದೊಳಗೆ ಅನಂತಾನಂತ ಪುರುಷರು ನಾಶಕ್ಕೆ ಪ್ರಾಪ್ತರಾಗಿ ಹೋಗಿದ್ದಾರೆ, ಇಲ್ಲಿ ಯಾರು ಶರಣರಿದ್ದಾರೆ ? ಒಂದು ಕ್ಷಣ ಮಾತ್ರದ ಸಲುವಾಗಿಯಾದರೂ ಕಾಲನಿಂದ ಬಿಡಿಸಿಕೊಳ್ಳುವಂಥ ಯಾವುದೇ ಮಂತ್ರ, ತಂತ್ರ, ಯಂತ್ರ, ಕ್ರಿಯೆ, ದೇವ, ದಾನವ ಮೊದಲಾದವರಾರೂ ಇಲ್ಲ, ಒಂದು ವೇಳೆ ಯಾವುದೇ ದೇವಿ, ದೇವ, ವೈದ್ಯ, ಔಷಧ ಮೊದಲಾದವು ಮನುಷ್ಯನನ್ನು ಮರಣದಿಂದ ರಕ್ಷಿಸಿಕೊಳ್ಳುವಂತಿದ್ದರೆ ಮನುಷ್ಯನು ಅಕ್ಷಯನಾಗಿ ಹೋಗುವನು. ಆದುದರಿಂದ ಇಂಥ ಮಿಥ್ಯಾ ಬುದ್ಧಿಯನ್ನು ಬಿಟ್ಟುಕೊಟ್ಟು ಅಶರಣ ಭಾವನೆ ಭಾವಿಸು.

**ಮೂಢ ಜನರು ಹೀಗೆ ವಿಚಾರ ಮಾಡುತ್ತಾರೆ :** ನನ್ನ ಹಿತೈಷಿಯ ಚಿಕಿತ್ಸೆ ಸರಿಯಾಗಿ ಆಗಲಿಲ್ಲ, ಔಷಧ ಕೊಡಲಿಲ್ಲ, ಯಾವ ದೇವತೆಯ ಆಶ್ರಯ ಪಡೆಯಲಿಲ್ಲ, ಉಳಿಸುವ ಉಪಾಯ ಮಾಡದೆಯೇ ಸತ್ತು ಹೋದನು. ಈ ಪ್ರಕಾರ ತಮ್ಮ ಸ್ವಜನರ ಕುರಿತು ವಿಚಾರ ಮಾಡುತ್ತಾರೆ. ನಾನು ಕೂಡ ಮರಣದ ಮುಖದಲ್ಲಿ ಬಿದ್ದುಕೊಂಡಿದ್ದೇನೆಂದು ತಮ್ಮ ವಿಚಾರವನ್ನೇ ಮಾಡುವುದಿಲ್ಲ, ಯಾವ ಮರಣವನ್ನು ಕೋಟ್ಯಂತರ ಉಪಾಯ ಮಾಡುವುದರಿಂದ ಇಂದ್ರನ ಮೂಲಕವೂ ತಡೆಯುವ ಸಾಧ್ಯತೆಯಾಗಲಿಲ್ಲ ಅದನ್ನು ಮನುಷ್ಯರೂಪದ ಕ್ರಿಮಿಯು ಹೇಗೆ ತಡೆಯುವ ಸಾಧ್ಯತೆಯಿದೆ ? ಯಾವ ಪ್ರಕಾರ ಅನ್ಯ ಜೀವಗಳು ಸಾಯುತ್ತಿರುವುದನ್ನು ನೋಡುತ್ತೇವೆ, ಅದೇ ಪ್ರಕಾರ ನಾನು ಕೂಡ ಮರಣಕ್ಕೆ ಪ್ರಾಪ್ತನಾಗುವೆನು, ಯಾವ ಪ್ರಕಾರ ಅನ್ಯ ಜೀವರುಗಳ ಸ್ತ್ರೀ-ಪುತ್ರಾದಿಗಳ ವಿಯೋಗವನ್ನು ಕಾಣುತ್ತೇವೆ, ಅದೇ ಪ್ರಕಾರ ನನ್ನ ವಿಯೋಗವೂ ಆಗುವುದು, ಯಾರೂ ನನ್ನ ಆಶ್ರಯದಾತರಿಲ್ಲ.

ಅಶುಭ ಕರ್ಮದ ಉದೀರಣವಾದ ಮೇಲೆ ಬುದ್ಧಿಯು ನಷ್ಟವಾಗಿ ಹೋಗುತ್ತದೆ. ಪ್ರಬಲ ಕರ್ಮದ ಉದಯವಾದ ಮೇಲೆ ಒಂದು ಕೂಡ ಉಪಾಯವು ನಡೆಯುವುದಿಲ್ಲ, ಅಮೃತವು ವಿಷವಾಗಿ ಹೋಗುತ್ತದೆ,ಕಡ್ಡಿಯೂ ಶಸ್ತ್ರವಾಗಿ ಬಿಡುತ್ತದೆ,

ತನ್ನ ನಿಷ್ಠ ಮಿತ್ರನೂ ಶತ್ರುವಾಗಿ ಹೋಗುತ್ತಾನೆ ಅಶುಭ ಕರ್ಮದ ಪ್ರಬಲ ಉದಯದ ವಶವಾಗಿ ಬುದ್ಧಿಯು ವಿಪರೀತವಾಗಿ ಹೋಗುವುದರಿಂದ ತಾನೇ ತನ್ನ ಘಾತ ಮಾಡಿಕೊಳ್ಳುತ್ತಾನೆ. ಶುಭ ಕರ್ಮದ ಉದಯವಾದ ಮೇಲೆ ಮೂರ್ಖನಿಗೆ ಕೂಡ ಪ್ರಬಲ ಬುದ್ಧಿಯು ಪ್ರಕಟವಾಗುತ್ತದೆ, ಮಾಡದೆಯೇ ತನ್ನಿಂದ ತಾನೇ ಅನೇಕ ಸುಖದ ಉಪಾಯಗಳು ಪ್ರಕಟವಾಗಿ ಹೋಗುತ್ತವೆ. ವೈರಿಯು ಕೂಡ ಮಿತ್ರನಾಗಿ ಬಿಡುತ್ತಾನೆ, ವಿಷವು ಕೂಡ ಅಮೃತಮಯವಾಗಿ ಪರಿಣಮಿಸುತ್ತದೆ.

**ಯಾವಾಗ ಪುಣ್ಯದ ಉದಯವಾಗುತ್ತದೆ ಆಗ ಸಮಸ್ತ ಉಪದ್ರವಕರ ವಸ್ತುಗಳು ಕೂಡ ಅನೇಕ ಪ್ರಕಾರದ ಸುಖ ಕೊಡುವಂಥವುಗಳಾಗುತ್ತವೆ.** ಆದ್ದರಿಂದ ಸಂಸಾರದಲ್ಲಿ ಪುಣ್ಯ ಕರ್ಮವೇ ಆಶ್ರಯಭೂತವಿದೆ. ಪಾಪದ ಉದಯದಿಂದ ಕೈಯಲ್ಲಿಟ್ಟುಕೊಂಡ ಧನವೂ ಕ್ಷಣಾರ್ಧದಲ್ಲಿ ನಷ್ಟವಾಗಿ ಹೋಗುತ್ತದೆ, ಪುಣ್ಯದ ಉದಯದಿಂದ ದೂರದಲ್ಲಿಟ್ಟಿರುವ ವಸ್ತುವೂ ಪ್ರಾಪ್ತವಾಗಿ ಹೋಗುತ್ತದೆ. ಲಾಭಾಂತರಾಯದ ಕ್ಷಯೋಪಶಮವಿದ್ದರೆ ಯಾವ ಪ್ರಯತ್ನವಿಲ್ಲದೆಯೇ ನಿಧಿರತ್ನಗಳು ಕೈಯಲ್ಲಿ ಬಂದು ಬಿಡುತ್ತವೆ.

**ಪಾಪದ ಉದಯವಾದ ಮೇಲೆ ಒಳ್ಳೆಯ ಆಚರಣೆ ಮಾಡುತ್ತಿದ್ದರೂ ಅವನಿಗೆ ದೋಷ-ಕಲಂಕಗಳು ತಗಲುತ್ತವೆ, ಅಪವಾದ ಅಪಯಶಗಳಾಗುತ್ತವೆ.** ಯಶೋನಾಮ ಕರ್ಮದ ಉದಯದಿಂದ ಸಮಸ್ತ ಅಪವಾದಗಳು ದೂರವಾಗಿ ದೋಷಗಳೂ ಗುಣರೂಪವಾಗಿ ಪರಿಣಮಿಸುತ್ತವೆ. ಸಂಸಾರವಂತೂ ಪುಣ್ಯ-ಪಾಪದ ಉದಯರೂಪವಿದೆ. ಪರಮಾರ್ಥದಿಂದಂತೂ ಎರಡರ ಉದಯವನ್ನು ಕರ್ಮ ಮಾಡಿದ್ದಿದೆ ಅದು ತನ್ನ ಆತ್ಮನಿಂದ ಭಿನ್ನವಿದೆಯೆಂದು ತಿಳಿದುಕೊಂಡು ಜ್ಞಾಯಕನಾಗಿರಬೇಕು, ಹರುಷ-ವಿಷಾದ ಮಾಡಬಾರದು. ಪೂರ್ವದಲ್ಲಿ ಯಾವ ಕರ್ಮದ ಬಂಧವಾಗಿತ್ತು ಅದು ಈಗ ಉದಯದಲ್ಲಿ ಬಂದಿದೆ, ಅದನ್ನು ತಾನು ದೂರ ಮಾಡುವುದರಿಂದ ದೂರವಾಗುವುದಿಲ್ಲ, ಉದಯ ಬಂದ ಮೇಲೆ ಯಾವ ಉಪಾಯ ನಡೆಯುವುದಿಲ್ಲ. ಕರ್ಮದ ಫಲವಾಗಿ ಜನ್ಮ, ಜರೆ, ಮರಣ, ರೋಗ, ಚಿಂತೆ, ಭಯ, ವೇದನೆ, ದುಃಖ ಮೊದಲಾದವು ಬಂದ ಮೇಲೆ ರಕ್ಷಣೆ ಮಾಡಲು ಯಾವ ಮಂತ್ರ, ತಂತ್ರ, ದೇವ, ದಾನವ, ಔಷಧ ಮೊದಲಾದವು ಸಮರ್ಥವಿಲ್ಲ.

**ಕರ್ಮದ ಉದಯವು ಆಕಾಶ-ಪಾತಾಳದಲ್ಲಿ ಎಲ್ಲಿಯೂ ಬಿಡುವುದಿಲ್ಲ.** ಔಷಧ ಮೊದಲಾದ ಬಾಹ್ಯ ನಿಮಿತ್ತಗಳೂ ಅಶುಭ ಕರ್ಮದ ಉದಯವು ಮಂದವಾದ ಮೇಲೆ ಉಪಕಾರ ಮಾಡುತ್ತವೆ. ದುಷ್ಟ, ಚೋರ, ಭಿಲ್ಲ, ವೈರೀ, ಸಿಂಹ, ಹುಲಿ, ಸರ್ಪ ಮೊದಲಾದುವಂತೂ ನಗರದಲ್ಲಿ-ವನದಲ್ಲಿ ಕೊಲ್ಲುತ್ತವೆ, ಜಲಚರಗಳು ನೀರಿನಲ್ಲಿ ಕೊಲ್ಲುತ್ತವೆ, ಆದರೆ ಅಶುಭ ಕರ್ಮದ ಉದಯವು ನೆಲದಲ್ಲಿ, ಜಲದಲ್ಲಿ, ನಭದಲ್ಲಿ, ವನದಲ್ಲಿ, ಸಮುದ್ರದಲ್ಲಿ, ಬೆಟ್ಟದಲ್ಲಿ, ಕೋಟೆಯಲ್ಲಿ, ಮನೆಯಲ್ಲಿ, ಶಯ್ಯೆಯಲ್ಲಿ, ಕುಟುಂಬದಲ್ಲಿ, ದೊರೆ ಸಾಮಂತರ ಮಧ್ಯದಲ್ಲಿ ಶಸ್ತ್ರಗಳಿಂದ ರಕ್ಷಣೆ ಮಾಡುತ್ತಿದ್ದರೂ ಕೂಡ ಎಲ್ಲಿಯೂ ಬಿಡುವುದಿಲ್ಲ.

**ಈ ಲೋಕದಲ್ಲಿ ಸೂರ್ಯ-ಚಂದ್ರರ ಪ್ರಕಾಶ, ಪವನ ಮತ್ತು ವೈಕ್ರಿಯಿಕ ಋದ್ಧಿಧಾರಿಗಳೂ ಗಮನ ಮಾಡದಂಥ ಸ್ಥಾನಗಳಿವೆ, ಆದರೆ ಕರ್ಮದ ಉದಯವಂತೂ ಸರ್ವತ್ರ ಗಮನ ಮಾಡುತ್ತದೆ.** ಪ್ರಬಲ ಕರ್ಮದ ಉದಯವಾದ ಮೇಲೆ ವಿದ್ಯೆ, ಮಂತ್ರ, ಬಲ, ಔಷಧ, ಪರಾಕ್ರಮ, ಮಿತ್ರ, ಸಾಮಂತ, ಆನೆ, ಕುದುರೆ, ರಥ, ಕಾಲಾಳು, ಕೋಟೆ, ಶಸ್ತ್ರ ಉಪಾಯ, ಸಾಮ, ದಾಮ, ದಂಡ, ಭೇದ ಮೊದಲಾದ ಸಮಸ್ತ ಉಪಾಯಗಳಾವವೂ ಶರಣೆಲ್ಲ, ಹೇಗೆ ಉದಯವಾಗುತ್ತಿರುವ ಸೂರ್ಯನನ್ನು ಯಾರೂ ತಡೆಯುವ ಸಾಧ್ಯತೆಯಿಲ್ಲ, ಅದೇ ಪ್ರಕಾರ ಕರ್ಮದ ಉದಯವನ್ನು ಕೂಡ ತಡೆಯಲಸಾಧ್ಯವೆಂದು ತಿಳಿದುಕೊಂಡು ಸಾಮ್ಯಭಾವದ ಆಶ್ರಯ ತೆಗೆದುಕೊಂಡರೆ ಅಶುಭ ಕರ್ಮಗಳ ನಿರ್ಜರೆಯಾಗಿ, ಮುಂದೆ ನವೀನ ಬಂಧವಾಗುವುದಿಲ್ಲ. ವಿಯೋಗ, ರೋಗ, ದಾರಿದ್ರ್ಯ, ಮರಣ ಮೊದಲಾದವುಗಳ ಭಯವನ್ನು ಬಿಟ್ಟುಕೊಟ್ಟು ಪರಮಧೈರ್ಯಧಾರಣ ಮಾಡಬೇಕು.

**ತಮ್ಮ ಪರಮ ವೀತರಾಗ ಸಂತೋಷಭಾವ-ಸಮತಾಭಾವವೇ ಶರಣವಿದೆ, ಅನ್ಯವಿಲ್ಲ.** ಈ ಜೀವದ ಉತ್ತಮ ಕ್ಷಮೆ ಮೊದಲಾದ ಭಾವಗಳೇ ತಮ್ಮ ಸಲುವಾಗಿ ಆಶ್ರಯಭೂತವಿವೆ. ಕ್ರೋಧ ಮೊದಲಾದ ಭಾವಗಳು ಈ ಜೀವನಿಗೆ

ಇಹಲೋಕ ಹಾಗೂ ಪರಲೋಕದಲ್ಲಿ ಘಾತಕವಿವೆ. ಈ ಜೀವನಿಗೆ ಕಷಾಯಗಳ ಮಂದತೆಯು ಇಹಲೋಕದಲ್ಲಿ ಸಾವಿರಾರು ವಿಘ್ನಗಳ ನಾಶ ಮಾಡುವಂಥ ಪರಮ ಶರಣವಿದೆ ಮತ್ತು ಪರಲೋಕದಲ್ಲಿ ನರಕ-ತಿರ್ಯಂಚಗತಿಗಳಿಂದ ರಕ್ಷಣೆ ಮಾಡುವಂಥದ್ದಿದೆ. ಮಂದ ಕಷಾಯಿಯು ದೇವಲೋಕದಲ್ಲಿ ಹಾಗೂ ಉತ್ತಮ ಮನುಷ್ಯರಲ್ಲಿ ಜನ್ಮ ತಾಳುತ್ತಾನೆ.

ಒಂದು ವೇಳೆ ಪೂರ್ವ ಕರ್ಮದ ಉದಯದಿಂದ ಆರ್ತ-ರೌದ್ರ ಪರಿಣಾಮ ಮಾಡಿದರೆ ಉದೀರಣಾಕ್ಕೆ ಪ್ರಾಪ್ತವಾದ ಕರ್ಮವನ್ನು ತಡೆಯುವಲ್ಲಿಯಂತೂ ಯಾರೂ ಸಮರ್ಥರಿಲ್ಲ, ಕೇವಲ ದುರ್ಗತಿಯ ಕಾರಣವಾದ ನವೀನ ಕರ್ಮವು ಹೆಚ್ಚು ಕಟ್ಟುವುದು. ಕರ್ಮದ ಉದಯ ಬರುವುದರ ಬಾಹ್ಯ ಸಹಕಾರೀ ಕಾರಣಗಳಾದ ದ್ರವ್ಯ, ಕ್ಷೇತ್ರ, ಕಾಲ, ಭಾವಗಳು ದೊರಕಿದ ನಂತರ ಕರ್ಮದ ಉದಯವನ್ನು ಇಂದ್ರ, ಜಿನೇಂದ್ರ, ಮಣಿ, ಮಂತ್ರ, ಔಷಧಗಳಾವವೂ ತಡೆಯುವುದಕ್ಕೆ ಸಮರ್ಥವಾಗುವುದಿಲ್ಲ. ರೋಗದ ಚಿಕಿತ್ಸೆಗಂತೂ ಜಗತ್ತಿನಲ್ಲಿ ಔಷಧ ಮೊದಲಾದವು ಕಂಡು ಬರುತ್ತವೆ, ಆದರೆ ಪ್ರಬಲ ಕರ್ಮದ ಉದಯವನ್ನು ತಡೆಯುವುದಕ್ಕೆ ಔಷಧ ಮೊದಲಾದವು ಸಮರ್ಥವಾಗುವುದಿಲ್ಲ, ವಿಪರೀತವಾಗಿ ಪರಿಣಮಿಸಿ ಬಿಡುತ್ತವೆ.

ಈ ಜೀವಕ್ಕೆ ಅಸಾತಾವೇದನೀಯ ಕರ್ಮದ ಪ್ರಬಲ ಉದಯವಿದ್ದರೆ ಔಷಧ ಮೊದಲಾದವು ವಿಪರೀತವಾಗಿ ಪರಿಣಮಿಸಿ ಬಿಡುತ್ತವೆ. ಅಸಾತಾದ ಮಂದ-ಉದಯವಿದ್ದರೆ ಅಥವಾ ಉಪಶಮವಿದ್ದರೆ ಔಷಧ ಮೊದಲಾದವು ಉಪಕಾರ ಮಾಡುತ್ತವೆ. ಏಕೆಂದರೆ ಮಂದ ಉದಯವನ್ನು ತಡೆಯುವಲ್ಲಿಯಂತೂ ಅಲ್ಪ ಶಕ್ತಿಯ ಧಾರಕನು ಕೂಡ ಸಮರ್ಥನಿರುತ್ತಾನೆ. ಪ್ರಬಲ ಬಲದ ಧಾರಕನನ್ನು ತಡೆಯುವಲ್ಲಿ ಅಲ್ಪ ಶಕ್ತಿಯ ಧಾರಕನು ಸಮರ್ಥನಾಗುವುದಿಲ್ಲ.

ಈ ಪಂಚಮಕಾಲದಲ್ಲಿ ಬಾಹ್ಯ ದ್ರವ್ಯ-ಕ್ಷೇತ್ರಾದಿಗಳ ಸಾಮಗ್ರಿಯು ಅಲ್ಪವೇ ಇದೆ, ಜ್ಞಾನಾದಿಗಳೂ ಅಲ್ಪವೇ ಇವೆ, ಪುರುಷಾರ್ಥವೂ ಅಲ್ಪವೇ ಇದೆ, ಆದರೆ ಅಶುಭದ ಉದಯ ಬರುವುದರ ಬಾಹ್ಯ ಸಾಮಗ್ರಿಗಳ ಸಹಾಯತೆಯಂತೂ ಪ್ರಬಲವಿದೆ; ಆದುದರಿಂದ ಅಲ್ಪ ಸಾಮಗ್ರಿ ಅಲ್ಪ ಪುರುಷಾರ್ಥದಿಂದ ಪ್ರಬಲವಿರುವ ಅಸಾತಾದ ಉದಯವನ್ನು ಹೇಗೆ ಜಯಿಸುವುದು ? ಹೇಗೆ ಪ್ರಬಲವಿರುವ ನದಿಯ ಪ್ರವಾಹವು ದಡದಲ್ಲಿರುವ ತರುಲತೆಗಳನ್ನು ಕಿತ್ತೆಸೆಯುತ್ತ ಬರುತ್ತಿದ್ದರೆ ಅದನ್ನು ಈಜುವ ವಿದ್ಯೆಯಲ್ಲಿ ನಿಪುಣನಿರುವಂಥ ಪುರುಷನು ಕೂಡ ಈಜಿ ಪಾರಾಗಿ ಹೋಗುವ ಸಾಧ್ಯತೆಯಿಲ್ಲ. ನದಿಯ ಪ್ರವಾಹದ ವೇಗವು ಮಂದವಾಗಿದ್ದರೆ ಈಜುವ ಕಲೆಯನ್ನು ತಿಳಿದುಕೊಂಡಿರುವಂಥವನು ಈಜಿ ಪಾರಾಗಿ ಹೋಗುತ್ತಾನೆ.

ಆದುದರಿಂದ ಪ್ರಬಲ ಕರ್ಮದ ಉದಯದಲ್ಲಿ ತಮಗೆ ಅಶರಣ ಭಾವನೆಯ ಚಿಂತನೆ ಮಾಡಬೇಕಾಗುವುದು. ಇಲ್ಲಿ ಪೃಥ್ವೀ ಮತ್ತು ಸಮುದ್ರ ಎರಡು ವಸ್ತುಗಳು ದೊಡ್ಡವಿವೆ. ಪೃಥ್ವಿಯನ್ನು ದಾಟುವುದಕ್ಕೆ ಮತ್ತು ಸಮುದ್ರವನ್ನು ಈಜುವುದಕ್ಕೆ ಸಮರ್ಥರಿದ್ದವರು ಅನೇಕರು ಕಂಡು ಬರುತ್ತಾರೆ, ಆದರೆ ಕರ್ಮದ ಉದಯವನ್ನು ತಡೆಯುವಲ್ಲಿ ಸಮರ್ಥರು ಯಾರೂ ಕಂಡು ಬರುವುದಿಲ್ಲ.

**ಈ ಸಂಸಾರದಲ್ಲಿ ಸಮ್ಯಗ್ದರ್ಶನವು ರಕ್ಷಕವಿದೆ, ಸಮ್ಯಗ್ಜ್ಞಾನವು ರಕ್ಷಕವಿದೆ, ಸಮ್ಯಕ್ಚಾರಿತ್ರವು ರಕ್ಷಕವಿದೆ, ಸಮ್ಯಕ್ ತಪ-ಸಂಯಮವು ರಕ್ಷಕವಿದೆ.** ಈ ನಾಲ್ಕು ಆರಾಧನೆಗಳ ಹೊರತಾಗಿ ಅನಂತಾನಂತ ಕಾಲದಲ್ಲಿ ಯಾವುದೂ ರಕ್ಷಕವಿಲ್ಲ. ಉತ್ತಮ ಕ್ಷಮೆ ಮೊದಲಾದ ದಶಧರ್ಮಗಳು ಈ ಲೋಕದಲ್ಲಿ ಪ್ರತ್ಯಕ್ಷ ಸಮಸ್ತ ಕ್ಲೇಶ, ದುಃಖ, ಮರಣ, ಅಪಮಾನ, ಹಾನಿ ಮೊದಲಾದವುಗಳಿಂದ ರಕ್ಷಣೆ ಮಾಡುವಂಥವುಗಳಿವೆ. ಈ ಮಂದಕಷಾಯಜನಿತ ಧರ್ಮದ ಆರಾಧನೆಯ ಫಲವಂತೂ ಸ್ವಾಧೀನ ಸುಖ, ಆತ್ಮರಕ್ಷಣೆ, ಉಜ್ವಲ ಯಶಸ್ಸು, ಕ್ಲೇಶರಹಿತತೆ, ಉಚ್ಚತೆಗಳನ್ನು ಈ ಲೋಕದಲ್ಲಿ ಪ್ರತ್ಯಕ್ಷವಾಗಿ ನೋಡಿ ಇದರ ಆಶ್ರಯ ಪಡೆಯಬೇಕು. ಪರಲೋಕದಲ್ಲಿ ಇದರ ಫಲವು ಸ್ವರ್ಗಲೋಕದ ಪ್ರಾಪ್ತಿಯಿದೆ. ವ್ಯವಹಾರದಲ್ಲಿ ಕೂಡ ಅರಹಂತ, ಸಿದ್ಧ, ಸಾಧು ಮತ್ತು ಕೇವಲಿಯ ಮೂಲಕ ಪ್ರಕಾಶಿತವಾದ ಧರ್ಮ ಇವು ನಾಲ್ಕು ಶರಣವಿವೆ. ಇವನ್ನೇ ಶರಣವೆಂದು ತಿಳಿಯುವುದು, ಏಕೆಂದರೆ ಇವುಗಳ ಆಶ್ರಯವಿಲ್ಲದೆ ಆತ್ಮನು ಉಜ್ವಲತೆಗೆ ಪ್ರಾಪ್ತನಾಗುವುದಿಲ್ಲ. ಈ ಪ್ರಕಾರ ಅಶರಣ ಭಾವನೆಯ ವರ್ಣನೆ ಮಾಡಲಾಯಿತು.

**ಸಂಸಾರ ಭಾವನೆ :** ಈಗ ಸಂಸಾರ ಭಾವನೆಯ ಸ್ವರೂಪದ ವರ್ಣನೆ ಮಾಡುತ್ತಾರೆ. ಈ ಸಂಸಾರದಲ್ಲಿ ಅನಾದಿ ಕಾಲದಿಂದ ಮಿಥ್ಯಾತ್ವದ ಉದಯದಿಂದ ಅಚೇತವಾದ ಜೀವನು ವೀತರಾಗ ಸರ್ವಜ್ಞ ಭಗವಂತರು ಹೇಳಿದ ಸತ್ಯಾರ್ಥ ಧರ್ಮವನ್ನು ಪ್ರಾಪ್ತ ಮಾಡಿಕೊಳ್ಳಲಾರದೆ ಚತುರ್ಗತಿಗಳಲ್ಲಿ ಭ್ರಮಣ ಮಾಡುತ್ತಾನೆ. ಸಂಸಾರದಲ್ಲಿ ಕರ್ಮರೂಪದ ದೃಢ ಬಂಧನದಿಂದ ಕಟ್ಟಲ್ಪಟ್ಟು ಪರಾಧೀನನಾಗಿ ತ್ರಸ ಸ್ಥಾವರಗಳಲ್ಲಿ ನಿರಂತರ ಘೋರ ದುಃಖ ಭೋಗಿಸುತ್ತ ಪುನಃ ಪುನಃ ಜನ್ಮ-ಮರಣ ಮಾಡುತ್ತಾನೆ.

ಯಾವ-ಯಾವ ಕರ್ಮದ ಉದಯ ಬಂದು ರಸ ಕೊಡುತ್ತವೆ ಅವುಗಳ ಉದಯದಲ್ಲಿ ಪ್ರಾಪ್ತವಾದ ಸಾಮಗ್ರಿಗಳಲ್ಲಿ ತನ್ನತನ ಧಾರಣ ಮಾಡಿ ಅಜ್ಞಾನೀ ಜೀವನು ತನ್ನ ಸ್ವರೂಪವನ್ನು ತಿಳಿದುಕೊಳ್ಳಲಾರದೆ ಹೊಸ-ಹೊಸ ಕರ್ಮಗಳನ್ನು ಕಟ್ಟಿಕೊಳ್ಳುತ್ತಾನೆ ಮತ್ತು ಕರ್ಮಗಳ ಬಂಧದ ಆಧೀನವಾದ ಪ್ರಾಣಿಗೆ ಮೊದಲು ಭೋಗಿಸದಂಥ ಯಾವ ದುಃಖದ ಜಾತಿಯು ಬಾಕಿ ಉಳಿಯುವುದಿಲ್ಲ. ಹೀಗೆ ಸಮಸ್ತ ದುಃಖಗಳನ್ನು ಅನಂತ-ಅನಂತಬಾರಿ ಭೋಗಿಸುತ್ತ ಅನಂತಾನಂತ ಕಾಲವು ವ್ಯತೀತವಾಗಿ ಹೋಗಿದೆ.

**ಪಂಚಪರಾವರ್ತನದ ಸ್ವರೂಪ :** ಈ ಪ್ರಕಾರ ಸಂಸಾರದಲ್ಲಿ ಈ ಜೀವನಿಗೆ ಅನಂತ ಪರಾವರ್ತನಗಳು ವ್ಯತೀತವಾಗಿ ಹೋಗಿವೆ. ಸಂಸಾರದಲ್ಲಿ ಈ ಜೀವನು ಶರೀರರೂಪದಿಂದ ಮತ್ತು ಆಹಾರರೂಪದಿಂದ ಅದನ್ನು ಗ್ರಹಣ ಮಾಡಿರದಂಥ ಯಾವ **ಪುದ್ಗಲ**ವೂ ಬಾಕಿ ಉಳಿದಿಲ್ಲ. ಅನಂತ ಜಾತಿಯ ಅನಂತ ಪುದ್ಗಲಗಳನ್ನು ಶರೀರರೂಪದಿಂದ ಧಾರಣ ಮಾಡಿದ್ದಾನೆ, ಆಹಾರ ರೂಪದಿಂದ ಭೋಜನ-ಪಾನೀಯಗಳ ರೂಪವಾಗಿಯೂ ಗ್ರಹಣ ಮಾಡಿದ್ದಾನೆ.

ಮುನ್ನೂರಾ ನಲವತ್ತು ಮೂರು ಘನ ರಜ್ಜು ಪ್ರಮಾಣವಿರುವ ಈ ಲೋಕದಲ್ಲಿ ಆಕಾಶದ ಕ್ಷೇತ್ರದಲ್ಲಿ ಈ ಜೀವನು ಅನಂತಾನಂತ ಜನ್ಮ-ಮರಣಗಳನ್ನು ಮಾಡಿರದಂಥ ಯಾವುದೇ ಒಂದು **ಪ್ರದೇಶ**ವು ಕೂಡ ಬಾಕಿ ಉಳಿದಿಲ್ಲ.

ಉತ್ಸರ್ಪಿಣೀ-ಅವಸರ್ಪಿಣೀ **ಕಾಲ**ದ ಯಾವುದೇ ಒಂದು ಸಮಯವೂ ಆ ಸಮಯದಲ್ಲಿ ಈ ಜೀವನು ಅನಂತ ಬಾರಿ ಜನ್ಮ ಮತ್ತು ಅನಂತ ಬಾರಿ ಮರಣ ಮಾಡಿರದಂಥದು ಬಾಕಿ ಉಳಿದಿಲ್ಲ.

ನರಕ, ತಿರ್ಯಂಚ, ಮನುಷ್ಯ, ದೇವವೆಂಬ ಈ ನಾಲ್ಕು ಪರ್ಯಾಯಗಳಲ್ಲಿ ಈ ಜೀವನು ಜಘನ್ಯ ಆಯುವಿನಿಂದ ಹಿಡಿದು ಉತ್ಕೃಷ್ಟ ಆಯುವಿನವರೆಗೆ ಎಲ್ಲ ಸಮಯಗಳ ಆಯುವಿನ ಬರಾಬರಿ ಆಯು ಧಾರಣ ಮಾಡಿ ಅನಂತಬಾರಿ **ಜನ್ಮ**ಧಾರಣ ಮಾಡಿದ್ದಾನೆ. ಕೇವಲ ಒಂಭತ್ತು ಅನುದಿಶೆ ಹಾಗೂ ಐದು ಅನುತ್ತರ ವಿಮಾನಗಳಲ್ಲಿ ಉತ್ಪನ್ನನಾಗಿಲ್ಲ; ಏಕೆಂದರೆ ಅವು ಹದಿನಾಲ್ಕು (ಒಂಭತ್ತು ಮತ್ತು ಐದು) ವಿಮಾನಗಳಲ್ಲಿ ಸಮ್ಯಗ್ದೃಷ್ಟಿಯನ್ನು ಹೊರತು ಪಡಿಸಿ ಇತರರ ಉತ್ಪತ್ತಿಯಾಗುವುದಿಲ್ಲ, ಸಮ್ಯಗ್ದೃಷ್ಟಿಗಳಿಗೆ ಮುಂದೆ ಸಂಸಾರದ ಪರಿಭ್ರಮಣವಿರುವುದಿಲ್ಲ.

ಕರ್ಮದ ಸ್ಥಿತಿ ಬಂಧದ ಸ್ಥಾನ, ಸ್ಥಿತಿಬಂಧಕ್ಕೆ ಕಾರಣವಿರುವ ಅಸಂಖ್ಯಾತ ಲೋಕ ಪ್ರಮಾಣ ಕಷಾಯ ಅಧ್ಯವಸಾಯ ಸ್ಥಾನ, ಅವುಗಳಿಗೆ ಕಾರಣವಿರುವ ಅಸಂಖ್ಯಾತ ಲೋಕ ಪ್ರಮಾಣ ಅನುಭಾಗಬಂಧ ಅಧ್ಯವಸಾಯ ಸ್ಥಾನ, ಮತ್ತು ಜಗತ್ ಶ್ರೇಣಿಯ ಅಸಂಖ್ಯಾತದ ಭಾಗ ಯೋಗ ಸ್ಥಾನಗಳಲ್ಲಿ ಈ ಸಂಸಾರೀ ಜೀವನು ಮಾಡಿರದಂಥ ಯಾವೊಂದು **ಭಾವ**ವೂ ಬಾಕಿ ಉಳಿದಿಲ್ಲ. ಆದರೆ ಒಂದು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳಿಗೆ ಯೋಗ್ಯವಾದ ಭಾವವನ್ನಂತೂ ಮಾಡಿಲ್ಲ. ಅನ್ಯ ಸಮಸ್ತ ಭಾವಗಳನ್ನು ಈ ಸಂಸಾರದಲ್ಲಿ ಅನಂತಬಾರಿ ಮಾಡಿದ್ದಾನೆ.

**ನಿಗೋದ ಅವಸ್ಥೆಯ ದುಃಖ :** ಜಿನೇಂದ್ರರ ವಚನಗಳ ಅವಲಂಬನೆಯಿಂದ ರಹಿತರಾದ ಪುರುಷರ ಬುದ್ಧಿಯು ಮಿಥ್ಯಾಜ್ಞಾನದ ಪ್ರಭಾವದಿಂದ ಅನಾದಿಯಿಂದಲೇ ವಿಪರೀತವಾಗಿ ಆಗುತ್ತಲಿದೆ, ಆದುದರಿಂದ ಸಮ್ಯಕ್ ಮಾರ್ಗವನ್ನು ಗ್ರಹಣ ಮಾಡಲಾರದೆ ಸಂಸಾರರೂಪದ ವನದಲ್ಲಿ ಭ್ರಮಣ ಮಾಡುತ್ತ ನಿಗೋದಕ್ಕೆ ತಲುಪುತ್ತಾನೆ. ಆ ನಿಗೋದದೊಳಗಿಂದ ಹೊರಗೆ ಬರುವುದು ಅನಂತಾನಂತ ಕಾಲದಲ್ಲಿ ಕೂಡ ಕಠಿಣವಿದೆ. ಒಮ್ಮೆ ಪೃಥ್ವೀಕಾಯದಲ್ಲಿ, ಜಲಕಾಯದಲ್ಲಿ,

ಅಗ್ನಿಕಾಯದಲ್ಲಿ, ವಾಯುಕಾಯದಲ್ಲಿ, ಪ್ರತ್ಯೇಕ-ಸಾಧಾರಣ ವನಸ್ಪತಿ ಕಾಯದಲ್ಲಿ ಸಮಸ್ತ ಜ್ಞಾನದ ವ್ಯಕ್ತತೆಯ ಅಭಾವದಿಂದ, ಜಡದ ಸಮಾನವಾಗಿ, ಕೇವಲ ಒಂದು ಸ್ಪರ್ಶನೇಂದ್ರಿಯದ ಮೂಲಕ, ಕರ್ಮದ ಉದಯದ ಆಧೀನವಾಗಿ, ಆತ್ಮಶಕ್ತಿಯಿಂದ ರಹಿತ, ಜಿಹ್ವೆ, ಘ್ರಾಣ, ನೇತ್ರ, ಕರ್ಣ ಮೊದಲಾದ ಇಂದ್ರಿಯಗಳಿಂದ ರಹಿತವಾಗಿ ದುಃಖಮಯವಾದ ದೀರ್ಘ ಕಾಲವನ್ನು ವ್ಯತೀತ ಮಾಡುತ್ತಾನೆ.

ದ್ವೀಂದ್ರಿಯ, ತ್ರೀಂದ್ರಿಯ, ಚತುರೇಂದ್ರಿಯರೂಪದ ವಿಕಲತ್ರಯ ಜೀವವು ಆತ್ಮಜ್ಞಾನದಿಂದ ರಹಿತ, ಕೇವಲ ರಸನೇಂದ್ರಿಯಗಳ ವಿಷಯಗಳ ಅತಿಶಯ ತೃಷ್ಣೆಯ ಕಾರಣದಿಂದ ಉತ್ಸಾಹಿತವಾಗಿ ವಿಷಯಗಳ ಸಲುವಾಗಿ ಹೊರ-ಹೊರಳಿ ಬಿದ್ದು ಸಾಯುತ್ತವೆ. ಅಸಂಖ್ಯಾತ ಕಾಲ ವಿಕಲತ್ರಯದಲ್ಲಿ, ಪುನಃ ಏಕೇಂದ್ರಿಯಗಳಲ್ಲಿ ಪುನಃ ಪುನಃ ಮತ್ತೆ ಮತ್ತೆ ರಾಟ ಗಡಿಗೆಯ ಸಮಾನವಾಗಿ ಹೊಸ ಹೊಸ ದೇಹಗಳನ್ನು ಧಾರಣ ಮಾಡುತ್ತ ನಾಲ್ಕೂ ಗತಿಗಳಲ್ಲಿ ನಿರಂತರವಾಗಿ ಜನ್ಮ-ಮರಣ, ಕ್ಷುಧೆ-ತೃಷೆ, ರೋಗ-ವಿಯೋಗಗಳ ಸಂತಾಪವನ್ನು ಭೋಗಿಸುತ್ತ ಅನಂತ ಕಾಲದಿಂದ ಪರಿಭ್ರಮಣ ಮಾಡುತ್ತಲಿದೆ. ಇದರದೇ ಹೆಸರು ಸಂಸಾರವಿದೆ.

**ಯಾವ ಪ್ರಕಾರ ಕುದಿಯುವ ನೀರಿನಲ್ಲಿ ಅಕ್ಕಿಯ ಕಾಳು ನಾಲ್ಕೂ ಕಡೆಗೆ ಸುತ್ತಾಡಿ ಬೇಯುತ್ತವೆ, ಅದೇ ಪ್ರಕಾರ ಸಂಸಾರೀ ಜೀವನು ಕರ್ಮಗಳಿಂದ ಕಾಯ್ದಿರುವ ನಾಲ್ಕೂ ಗತಿಗಳಲ್ಲಿ ಪರಿಭ್ರಮಣ ಮಾಡುತ್ತಾನೆ.** ಆಕಾಶದಲ್ಲಿ ಹಾರುತ್ತಿರುವ ಪಕ್ಷಿಗಳನ್ನು ಇತರ ಬಲಿಷ್ಠ ಪಕ್ಷಿಗಳು ಕೊಂದು ಹಾಕುತ್ತವೆ, ನೀರಿನಲ್ಲಿ ವಿಹಾರ ಮಾಡುವಂಥ ಮೀನು ಮೊದಲಾದುವನ್ನು ಇತರ ದೊಡ್ಡ ಮೀನುಗಳು ಕೊಂದು ಹಾಕುತ್ತವೆ, ನೆಲದ ಮೇಲೆ ಸಂಚಾರ ಮಾಡುವ ಮನುಷ್ಯ, ಪಶು ಮೊದಲಾದುವನ್ನು ಸಿಂಹ, ಹುಲಿ, ಸರ್ಪ ಮೊದಲಾದ ದುಷ್ಟ ತಿರ್ಯಂಚಗಳು ಹಾಗೂ ಭಿಲ್ಲ, ಮ್ಲೇಚ್ಛ, ಚೋರ ಮೊದಲಾದ ಮಹಾ ನಿರ್ದಯ ಮನುಷ್ಯರು ಕೊಂದು ಹಾಕುತ್ತಾರೆ. ಈ ಪ್ರಕಾರ ಈ ಸಂಸಾರದಲ್ಲಿ ಸಮಸ್ತ ಸ್ಥಾನಗಳಲ್ಲಿ ನಿರಂತರ ಭಯಭೀತನಾಗಿ, ನಿರಂತರ ದುಃಖಮಯನಾಗಿ ಪರಿಭ್ರಮಣ ಮಾಡುತ್ತಾನೆ.

ಯಾವ ಪ್ರಕಾರ ಬೇಟೆಗಾರನ ಉಪದ್ರವದಿಂದ ಭಯಭೀತವಾಗಿ ಓಡುತ್ತಿರುವ ಮೊಲವು ಮಾರುದ್ದ ತೆರೆದ ಅಜಗರದ ಬಾಯೊಳಗೆ ಬಿಲವೆಂದು ತಿಳಿದು ಪ್ರವೇಶ ಮಾಡುತ್ತದೆ, ಅದೇ ಪ್ರಕಾರ ಅಜ್ಞಾನೀ ಜೀವನು ಕ್ಷುಧೆ, ತೃಷೆ, ಕಾಮ, ಕ್ರೋಧ ಮೊದಲಾದ ಹಾಗೂ ಇಂದ್ರಿಯ ವಿಷಯಗಳ ತೃಷೆಯ ಆತಪದಿಂದ ಸಂತಾಪಿತನಾಗಿ ವಿಷಯಗಳ ರೂಪದ ಅಜಗರದ ಬಾಯೊಳಗೆ ಪ್ರವೇಶ ಮಾಡುತ್ತಾನೆ. ವಿಷಯ-ಕಷಾಯಗಳಲ್ಲಿ ಪ್ರವೇಶ ಮಾಡುವುದು ಅದೇ ಸಂಸಾರರೂಪ ಅಜಗರದ ಮುಖವಿದೆ. ಅದರಲ್ಲಿ ಪ್ರವೇಶ ಮಾಡಿ, ತನ್ನ ಜ್ಞಾನ, ದರ್ಶನ, ಸುಖ, ಸತ್ತಾ ಮೊದಲಾದ ಭಾವ ಪ್ರಾಣಗಳ ನಾಶ ಮಾಡಿಕೊಂಡು ನಿಗೋದದಲ್ಲಿ ಅಚೇತನದ ಸಮನಾಗಿ ಅನಂತ ಬಾರಿ ಜನ್ಮ-ಮರಣ ಮಾಡುತ್ತ ಅನಂತಕಾಲ ವ್ಯತೀತ ಮಾಡುತ್ತಾನೆ, ಅಲ್ಲಿ (ನಿಗೋದದಲ್ಲಿ) ಆತ್ಮನು ಅಭಾವ ತುಲ್ಯನೇ ಇದ್ದಾನೆ. ಜ್ಞಾನ ಮೊದಲಾದವುಗಳ ಅಭಾವವಾದ ಮೇಲಂತೂ ನಷ್ಟವೇ ಆಗಿ ಹೋದನೆಂದು ತಿಳಿದುಕೊಳ್ಳಬೇಕಾಗುವುದು.

**ನಿಗೋದದಲ್ಲಿ ಅಕ್ಷರದ ಅನಂತದ ಭಾಗದಷ್ಟು ಜ್ಞಾನವಿರುತ್ತದೆ, ಅದನ್ನು ಸರ್ವಜ್ಞರು ನೋಡಿದ್ದಾರೆ.** ತ್ರಸ ಪರ್ಯಾಯದಲ್ಲಿ ಕೂಡ ಎಷ್ಟು ದುಃಖದ ಪ್ರಕಾರಗಳಿವೆ ಅವೆಲ್ಲ ದುಃಖವನ್ನು ಅನಂತಬಾರಿ ಭೋಗಿಸಿದ್ದಾನೆ. ಈ ಜೀವನು ಸಂಸಾರದಲ್ಲಿ ಕಂಡಿರದಂಥ ದುಃಖದ ಯಾವೊಂದು ಜಾತಿಯೂ ಬಾಕಿ ಉಳಿದಿಲ್ಲ. ಈ ಸಂಸಾರದಲ್ಲಿ ಈ ಜೀವನು ಯಾವಾಗ ಅನಂತ ಬಾರಿ ದುಃಖಮಯ ಪರ್ಯಾಯ ಪಡೆಯುತ್ತಾನೆ ಆಗ ಒಂದು ಬಾರಿ ಯಾವುದೋ ಇಂದ್ರಿಯಜನಿತ ಸುಖದ ಪರ್ಯಾಯ ಪಡೆಯುತ್ತಾನೆ; ಅದು ಕೂಡ ವಿಷಯಗಳ ಆತಪ ಸಹಿತ, ಭಯ-ಶಂಕೆ ಸಹಿತ ಅಲ್ಪ ಕಾಲದ ಸಲುವಾಗಿಯೇ ಪಡೆಯುತ್ತಾನೆ. ಪುನಃ ದುಃಖದ ಅನಂತ ಪರ್ಯಾಯ ಪಡೆಯುತ್ತಾನೆ, ಆಗ ಪುನಃ ಇಂದ್ರಿಯಜನಿತ ಸುಖದ ಒಂದು ಪರ್ಯಾಯವು ಎಂದಾದರೊಮ್ಮೆ ಪ್ರಾಪ್ತವಾಗಿ ಬಿಡುತ್ತದೆ.

**ನರಕಗತಿಯ ದುಃಖ :** ಈಗ ಪರಮಾಗಮದ ಅನುಸಾರ ನಾಲ್ಕೂ ಗತಿಗಳ ಸ್ವರೂಪದ ವಿಚಾರ ಮಾಡುತ್ತಾರೆ. ನರಕದ ಏಳು ಪೃಥ್ವಿಗಳಿದ್ದು, ಅವುಗಳ ಪಟಲಗಳು ನಲವತ್ತೊಂಭತ್ತು ಇವೆ. ಆ ಪಟಲಗಳಲ್ಲಿ ಎಂಭತ್ತು ನಾಲ್ಕು ಲಕ್ಷ ಬಿಲಗಳಿವೆ.

ಆ ಬಿಲಗಳನ್ನೇ ನರಕವೆಂದು ಹೇಳುತ್ತಾರೆ. ಅವುಗಳ ಭೂಮಿ, ಗೋಡೆ, ಮಾಳಿಗೆಗಳು ವಜ್ರಮಯವಿವೆ. ಕೆಲವು ಬಿಲಗಳು ಸಂಖ್ಯಾತಯೋಜನ ಉದ್ದ-ಅಗಲವಿವೆ, ಕೆಲವು ಅಸಂಖ್ಯಾತ ಯೋಜನ ಉದ್ದ-ಅಗಲವಿವೆ. ಅವೆಲ್ಲ ಬಿಲಗಳ ಮಾಳಿಗೆಗಳು ನಾರಕಿಗಳ ಉತ್ಪತ್ತಿಯ ಸ್ಥಾನಗಳಿವೆ. ಅವು ಚಿಕ್ಕ ಮುಖದ ಒಂಟೆಯ ಮುಖದ ಆಕಾರ ಮೊದಲಾದುವನ್ನು ಧರಿಸಿ ಕೆಳ ಮುಖವಿವೆ. ಅವುಗಳಲ್ಲಿ ನಾರಕೀ ಜೀವಗಳು ಉತ್ಪನ್ನವಾಗುತ್ತವೆ ಅವು ಕೆಳ ಭಾಗದ ಕಡೆಗೆ ತಲೆ ಮತ್ತು ಮೇಲ್ಭಾಗದ ಕಡೆಗೆ ಕಾಲು ಮಾಡಿ ಉರುಳಿ ವಜ್ರಾಗ್ನಿಮಯವಾದ ನೆಲದ ಮೇಲೆ ಅಪ್ಪಳಿಸಿ ಹೇಗೆ ವೇಗದಿಂದ ಎಸೆದ ಚಂಡು ಮೇಲೆ ಪುಟಿಯುತ್ತದೆ ಹಾಗೆ ನೆಗೆಯುತ್ತವೆ, ಪುನಃ ನೆಲದ ಮೇಲೆ ಹೊರಳಿ ಬೀಳುತ್ತವೆ ಮತ್ತೆ ಮೇಲೆ ನೆಗೆಯುತ್ತವೆ ಹೀಗೆ ಅನೇಕ ಬಾರಿ ಆಗುತ್ತದೆ.

ನರಕದ ಭೂಮಿಯು ಅಸಂಖ್ಯಾತ ಚೇಳುಗಳು ಕಚ್ಚುವುದರಿಂದ ಆಗುವಂಥ ದುಃಖಕ್ಕಿಂತ ಅಸಂಖ್ಯಾತ ಗುಣಿತ ದುಃಖ ಮಾಡುವಂಥದ್ದಿದೆ. ಆ ನರಕದ ಬಿಲಗಳಲ್ಲಿ ಮೇಲಿನ ನಾಲ್ಕು ಪೃಥ್ವಿಯಲ್ಲಿ ಮತ್ತು ಐದನೆಯ ಪೃಥ್ವಿಯ ಎರಡು ಲಕ್ಷ ಬಿಲ, ಈ ಪ್ರಕಾರ ಎಂಭತ್ತೆರಡು ಲಕ್ಷ ಬಿಲಗಳಲ್ಲಂತೂ ಕೇವಲ ಆತಪದ ವೇದನೆಯಿದೆ. ಆ ನರಕದ ಉಷ್ಣತೆಯನ್ನು ತಿಳಿಸಿಕೊಡುವ ಸಲುವಾಗಿ ಅದರ ಸದೃಶ್ಯತೆಯನ್ನು ಹೇಳಬೇಕೆಂದರೆ ಇಲ್ಲಿ ಅಂಥ ಯಾವುದೇ ಪದಾರ್ಥವು ನೋಡಲು ತಿಳಿದುಕೊಳ್ಳಲು ಕಂಡು ಬರುವುದಿಲ್ಲ. ಆದಾಗ್ಯೂ ಭಗವಂತರು ಹೇಳಿದ ಆಗಮದಲ್ಲಿ ಆ **ಉಷ್ಣತೆ**ಯ ಊಹೆಯನ್ನು ಹೀಗೆ ಮಾಡಿದ್ದಾರೆ-ಒಂದು ಲಕ್ಷ ಯೋಜನ ವಿಶಾಲವಾದ ಲೋಹದ ಗುಂಡನ್ನು ಇಲ್ಲಿಂದ ಬಿಟ್ಟರೆ ಅದು ನರಕದ ಭೂಮಿಯನ್ನು ಸ್ಪರ್ಶ ಮಾಡುವ ಮೊದಲೇ ನರಕದ ಕ್ಷೇತ್ರದ ವಾತಾವರಣದ ಉಷ್ಣತೆಯಿಂದ ಆ ಗುಂಡು ಕರಗಿ ರಸರೂಪವಾಗಿ ಹರಿದು ಹೋಗುತ್ತದೆ.

ಐದನೇ ಪೃಥ್ವಿಯ ಮೂರನೇ ಭಾಗ ಮತ್ತು ಆರು-ಏಳನೆಯ ಪೃಥ್ವಿಯ **ಶೀತ** ಬಿಲಗಳಲ್ಲಿ ಶೀತದ ಎಂಥ ತೀವ್ರ ವೇದನೆಯಿದೆಯೆಂದರೆ ಅಲ್ಲಿ ಒಂದು ಲಕ್ಷ ಯೋಜನ ವಿಶಾಲವಾದ ಲೋಹದ ಗುಂಡನ್ನಿಟ್ಟರೆ ಒಂದು ಕ್ಷಣದಲ್ಲಿ ಅದು ತುಂಡು-ತುಂಡಾಗಿ ಚದುರಿ ಹೋಗುತ್ತದೆ. ಇಂಥ ಉಷ್ಣ ವೇದನೆ ಮತ್ತು ಶೀತವೇದನೆಯಿಂದ ತುಂಬಿದ ನರಕಗಳಲ್ಲಿ ಕರ್ಮದ ವಶವಾಗಿ ಜೀವವು ಅಸಂಖ್ಯಾತ ಕಾಲದವರೆಗೆ ಘೋರ ದುಃಖ ಭೋಗಿಸುತ್ತದೆ. ಅಲ್ಲಿ ಆಯುವು ಪೂರ್ಣವಾದಲ್ಲದೆ ಮರಣವು ಪ್ರಾಪ್ತವಾಗುವುದಿಲ್ಲ. ಈ ಪ್ರಕಾರವಾಗಿಯಂತೂ ನರಕದಲ್ಲಿ ಘೋರತರವಾಗಿ ಶೀತ-ಉಷ್ಣಗಳ ವೇದನೆಯಿದೆ.

ನರಕದಲ್ಲಿ **ಕ್ಷುಧೆಯ** ವೇದನೆ ಎಷ್ಟಿದೆಯೆಂದರೆ ಜಗತ್ತಿನ ಕಲ್ಲು-ಮಣ್ಣುಗಳೆಲ್ಲವನ್ನು ತಿಂದು ಹಾಕಿದರೂ ಕೂಡ ಕ್ಷುಧೆಯ ವೇದನೆಯು ಕಡಿಮೆಯಾಗುವುದಿಲ್ಲ, ಆದರೆ ತಿನ್ನುವ ಸಲುವಾಗಿ ಒಂದು ಕಣವೂ ದೊರಕುವುದಿಲ್ಲ. ಅಲ್ಲಿಯ **ತೃಷೆಯ** ವೇದನೆಯೆಷ್ಟಿದೆಯೆಂದರೆ ಸಮಸ್ತ ಸಮುದ್ರಗಳ ನೀರನೆಲ್ಲ ಕುಡಿದು ಬಿಟ್ಟರು ಕೂಡ ತೃಷೆಯ ವೇದನೆಯು ದೂರವಾಗುವುದಿಲ್ಲ, ಆದರೆ ಕುಡಿಯುವ ಸಲುವಾಗಿ ಒಂದು ಬಿಂದು ಕೂಡ ನೀರು ದೊರಕುವುದಿಲ್ಲ.

ಅಲ್ಲಿ ಕೋಟ್ಯಂತರ **ರೋಗಗಳ** ಉತ್ಪತ್ತಿಯ ಘೋರ ವೇದನೆಯು ಏಕಕಾಲದಲ್ಲಿ ಆಗುತ್ತದೆ. ಅಲ್ಲಿ ನವೀನ ನಾರಕಿಯನ್ನು ನೋಡಿ ಸಾವಿರಾರು ನಾರಕಿಗಳು ಮಹಾ ಭಯಂಕರ ರೂಪು ಹಾಗೂ ಅನೇಕ ಶಸ್ತ್ರಗಳನ್ನು ಧರಿಸಿ ಕೊಂದು ಹಾಕಿರಿ, ಸೀಳಿಬಿಡಿರಿ, ಹರಿದು ಹಾಕಿರಿ ಎಂದು ಮೊದಲಾಗಿ ಭಯಂಕರ ಶಬ್ದಗಳನ್ನು ಮಾಡುತ್ತ ನಾಲ್ಕೂ ನಿಟ್ಟಿನಿಂದ ಕೊಂದು ಹಾಕುವುದಕ್ಕೆ ಬಂದು ಬಿಡುತ್ತಾರೆ.

ನಾರಕಿಗಳು ನಗ್ನರೂಪ, ಅತ್ಯಂತ ಶುಷ್ಕ ಭಯಂಕರ ಕಪ್ಪು ರೂಪ, ಕೆಂಪು ಹಳದೀ ಕುಟಿಲ ನೇತ್ರಗಳಿಂದ ಕ್ರೂರವಾಗಿ ನೋಡುತ್ತ, ಹರಕು ಬಾಯಿ, ನೇತಾಡುತ್ತಿರುವ ಕ್ರೂರತರವಾದ ಜಿಹ್ವೆ ಸಹಿತ, ಅವರ ಹಲ್ಲುಗಳು ಕರಗಸದ ಸಮಾನ ತೀಕ್ಷ್ಣವಿವೆ ಮತ್ತು ವಕ್ರವಿವೆ. ಮೇಲಕ್ಕೆ ಎದ್ದು ನಿಂತ ಕೆಂಪು, ಹಳದಿ ಚೂಪಾದ ಕೂದಲುಗಳುಳ್ಳವರಿದ್ದಾರೆ, ಭಯಾನಕ ತೀಕ್ಷ್ಣ ಉಗುರುಗಳಿವೆ, ಮಹಾನಿರ್ದಯಿ, ಹುಂಡಕ ಸಂಸ್ಥಾನವುಳ್ಳವರು ಬಂದು ಮೇಲೆ ಬಿದ್ದು ಗದೆ ಮೊದಲಾದವುಗಳಿಂದ ಮಸ್ತಕವನ್ನು ಒಡೆದು ಪುಡಿ ಮಾಡುತ್ತಾರೆ, ನಾರಕಿಗಳ ಶರೀರವು ಹೇಗೆ ನೀರಿನಿಂದ ತುಂಬಿದ ಸರೋವರದಲ್ಲಿ ನೀರನ್ನು ಒನಕೆಯಿಂದ ಕುಟ್ಟಿದರೆ ನೀರು ಮೇಲೆದ್ದು ಅದೇ ಸರೋವರದಲ್ಲಿ ಹೊರಳಿ ಬೀಳುತ್ತದೆ, ಅದೇ ಪ್ರಕಾರ ನಾರಕಿಗಳ ಶರೀರವು ಕೂಡ ಖಂಡ-ಖಂಡರೂಪವಾಗಿ ಎದ್ದುಪುಟಿದು ಮರಳಿ ಅದೇ ಶರೀರದಲ್ಲಿ ಬಂದು ಸೇರಿ ಹೋಗುತ್ತದೆ. **ಆಯುವು ಪೂರ್ಣವಾದಲ್ಲದೆ ಮರಣವಾಗುವುದಿಲ್ಲ.**

ನಾರಕಿಗಳು ಪರಸ್ಪರರಲ್ಲಿ ಕರವಾಳಗಳಿಂದ ತುಂಡು-ತುಂಡಾಗಿ ಮಾಡುತ್ತಾರೆ, ಕರಗಸಗಳಿಂದ ಕೊರೆಯುತ್ತಾರೆ. ಕೊಡಲಿಗಳಿಂದ ಕತ್ತರಿಸುತ್ತಾರೆ, ಬಾಚಿಗಳಿಂದ ಕೆತ್ತುತ್ತಾರೆ, ಭಲ್ಲೆಗಳಿಂದ ತಿವಿಯುತ್ತಾರೆ, ಗಲ್ಲಿಗೇರಿಸುತ್ತಾರೆ, ಹೊಟ್ಟೆ ಮೊದಲಾದ ಮರ್ಮಸ್ಥಾನಗಳಲ್ಲಿ ಚುಚ್ಚುತ್ತಾರೆ, ಹರಿಯುತ್ತಾರೆ, ನೇತ್ರಗಳನ್ನು ಕೀಳುತ್ತಾರೆ, ಬೆಂಕಿಯಲ್ಲಿ ಬೇಯಿಸುತ್ತಾರೆ, ಎಣ್ಣೆಯಲ್ಲಿ ತಾಳಿಸುತ್ತಾರೆ, ಗಾಣದ ದಿಂಡಿನಲ್ಲಿ ಹಾಕಿ ಹಿಂಡುತ್ತಾರೆ. ಈ ಪ್ರಕಾರ ನಾರಕಿಗಳು ಪರಸ್ಪರರಲ್ಲಿ ಹೊಡೆಯುವುದು-ಬಡಿಯುವುದರ ಮೂಲಕ ನರಕದಲ್ಲಿ ಯಾವ ದುಃಖವನ್ನು ಭೋಗಿಸುತ್ತಾರೆ ಅದನ್ನು ಕೋಟಿ ನಾಲಿಗೆಗಳಿಂದ ಕೋಟಿ ವರುಷಗಳವರೆಗೆ ಒಂದು ಕ್ಷಣದ ದುಃಖವನ್ನು ಹೇಳುವಲ್ಲಿ ಯಾರೂ ಸಮರ್ಥರಿಲ್ಲ.

**ನರಕದಲ್ಲಿ ಯಾವ ದುಃಖಕರವಾದ ಸಾಮಗ್ರಿಗಳಿವೆ ಅವುಗಳ ಒಂದು ಕಣದ ಬರಾಬರಿಯಾಗಿಯೂ ಈ ಲೋಕದಲ್ಲಿ ಇಲ್ಲ.** ಆ ನರಕದ ಭೂಮಿಯ ಸಾಮಗ್ರಿ ಮತ್ತು ನಾರಕಿಗಳ ಭಯಂಕರರೂಪವು ಯಾರಿಗಾದರೂ ಒಂದು ಕ್ಷಣದ ಸ್ವಪ್ನದಲ್ಲಿಯಾದರೂ ಕಂಡು ಬಂದರೆ ಅವನು ಭಯದಿಂದ ಕೂಡಲೆ ಸತ್ತು ಹೋಗುತ್ತಾನೆ. ನರಕದಲ್ಲಿನ ರಸ ಸಾಮಗ್ರಿಗಳು ಹೇಗಿವೆಯೆಂದರೆ ಇಲ್ಲಿನ ಕಾಲಕೂಟ ವಿಷ, ಹಾಲಾಹಲ ವಿಷಗಳೂ ಅದರ ಸಮಾನವಿಲ್ಲ.

ನಾರಕಿಗಳ ಶರೀರದ ಒಂದು ಕಣವಾದರೂ ಇಲ್ಲಿ ಬಂದು ಬಿಟ್ಟರೆ ಅದರ ಕಹಿ ಗಂಧದಿಂದ ಇಲ್ಲಿಯ ಪಂಚೇಂದ್ರಿಯಗಳುಳ್ಳ ಜೀವಗಳು ಮರಣಕ್ಕೆ ಪ್ರಾಪ್ತವಾಗಿ ಹೋಗುತ್ತವೆ. ನರಕದ ಮಣ್ಣಿನ ದುರ್ಗಂಧವು ಹೇಗಿದೆಯೆಂದರೆ ಅಲ್ಲಿನ ಏಳನೆಯ ನರಕದ **ಮಣ್ಣಿನ** ಒಂದು ಕಣವಾದರೂ ಇಲ್ಲಿ ಬಂದು ಬಿಟ್ಟರೆ ನಾಲ್ಕು ನಿಟ್ಟಿಗೆ ಇಪ್ಪತ್ತು ನಾಲ್ಕೂವರೆ ಹರದಾರಿಯವರೆಗಿನ ಪಂಚೇಂದ್ರಿಯ ಜೀವಗಳೆಲ್ಲವೂ ಅದರ ದುರ್ಗಂಧದಿಂದ ಸತ್ತು ಹೋಗುತ್ತವೆ. ಮೊದಲನೇ ನರಕದ ಮೊದಲನೇ ಪಟಲದ **ಮಣ್ಣಿನ** ಗಂಧದಿಂದ ಅರ್ಧ ಹರದಾರಿಯವರೆಗಿನ ಜೀವಗಳು ಸತ್ತು ಹೋಗುತ್ತವೆ, ಅಷ್ಟು ದುರ್ಗಂಧಿತವಾಗಿರುತ್ತದೆ. ಮುಂದೆ ಕ್ರಮದಿಂದ ಒಂದೊಂದು ನರಕದ ಪಟಲದ ಮಣ್ಣಿನ ದುರ್ಗಂಧದಲ್ಲಿ ಅರ್ಧ-ಅರ್ಧ ಹರದಾರಿಯ ಅಧಿಕ-ಅಧಿಕ ಜೀವಗಳನ್ನು ಕೊಲ್ಲುವ ಶಕ್ತಿಯಿದೆ. ಈ ಪ್ರಕಾರ ನಲವತ್ತೊಂಭತ್ತನೆಯ ಪಟಲದ ಮಣ್ಣಿನ ದುರ್ಗಂಧದಲ್ಲಿ ಇಪ್ಪತ್ತು ನಾಲ್ಕೂವರೆ ಹರದಾರಿಯವರೆಗಿನ ಜೀವಗಳನ್ನು ಕೊಲ್ಲುವ ಶಕ್ತಿಯಿದೆಯೆಂದು ಹೇಳಲಾಗಿದೆ.

ನರಕದಲ್ಲಿನ ವೈತರಣೀ ನದಿಯ ಜಲದ ಸ್ಪರ್ಶ ಮಾತ್ರದಿಂದ ನಾರಕಿಗಳ ಶರೀರವು ಕತ್ತರಿಸಿ ಹೋಗುತ್ತದೆ. ಆ ಜಲದ ಕ್ಷಾರ ವಿಷವಂತೂ ಅಗ್ನಿಯಿಂದ ಕಾಯಿಸಿದ ಎಣ್ಣೆಯ ಸೇಚನೆಗಿಂತಲೂ ಹೆಚ್ಚು ಅಪರಿಮಿತವಾದ ದುಃಖವನ್ನು ಉತ್ಪನ್ನ ಮಾಡುವಂಥದ್ದಿದೆ. ಅಲ್ಲಿನ **ಹವೆಯು** ಹೇಗಿದೆಯೆಂದರೆ ಇಲ್ಲಿನ ಪರ್ವತಗಳು ಅದರ ಸ್ಪರ್ಶ ಮಾತ್ರದಿಂದ ಭಸ್ಮವಾಗಿ ಎದ್ದು ಹಾರಿ ಜಗತ್ತಿನಲ್ಲೆಲ್ಲ ಹರಡುತ್ತವೆ. ನರಕದ **ವಜ್ರಾಗ್ನಿಯನ್ನು** ಧಾರಣ ಮಾಡುವುದಕ್ಕೆ ಇಲ್ಲಿಯ ಪೃಥ್ವೀ, ಪರ್ವತ, ಸಮುದ್ರಗಳಾವವೂ ಸಮರ್ಥವಿಲ್ಲ. ಸ್ವರೂಪದ ವರ್ಣನೆಯನ್ನೇನು ಮಾಡುವುದು ? ನಾರಕಿಗಳ **ಶಬ್ದಗಳು** ಎಷ್ಟು ಭಯಂಕರ ಕ್ರೂರವಾಗಿರುತ್ತವೆಂದರೆ ಇಲ್ಲಿಯ ಆನೆ, ಸಿಂಹಗಳೂ ಅದನ್ನು ಕೇಳಿದರೆ ಎದೆ ಒಡೆದು ಸತ್ತು ಹೋಗುತ್ತವೆ.

**ಅಲ್ಲಿ ಕರ್ಮರೂಪದ ರಕ್ಷಕರು ನಾರಕಿಗಳನ್ನು ಸಾಗರಗಳವರೆಗೆ ಹೊರಗೆ ಬರಗೊಡುವುದಿಲ್ಲ.** ಅಲ್ಲಿ ನಿರಂತರ ಹೊಡೆ-ಬಡೆಗಳೇ ಕೇಳಿ ಬರುತ್ತವೆ, ಅವರು ಅಳುತ್ತಾರೆ, ಹಿಡಿದುಕೊಳ್ಳುತ್ತಾರೆ, ಓಡುತ್ತಾರೆ, ಬೀಳುತ್ತಾರೆ, ಅವರ ಶರೀರವನ್ನು ಪುಡಿ-ಪುಡಿ ಮಾಡಿ ಬಿಡುತ್ತಾರೆ, ಆದರೂ ಅವರ ಶರೀರವು ಪುನಃ ಪಾರಜದ ಹಾಗೆ ಒಂದಾಗಿ ಹೋಗುತ್ತದೆ. ಅಲ್ಲಿ ಯಾರೂ ರಕ್ಷಕರಿಲ್ಲ, ಯಾರೂ ದಯಾಶೀಲರಿಲ್ಲ, ಯಾವ ದೊರೆಯಿಲ್ಲ, ಮಿತ್ರನಿಲ್ಲ, ತಾಯಿಯಿಲ್ಲ, ತಂದೆಯಿಲ್ಲ, ಪುತ್ರನಿಲ್ಲ, ಪತ್ನಿಯಿಲ್ಲ, ಕುಟುಂಬ ವರ್ಗವಿಲ್ಲ, ಕೇವಲ ಪಾಪದ ಭೋಗವಿದೆ. ಅಡಗಿಕೊಳ್ಳಲು ಯಾವ ಸ್ಥಾನವಿಲ್ಲ, ಯಾರಿಗೂ ತಮ್ಮ ದುಃಖ, ವೇದನೆಗಳನ್ನು ಹೇಳಬೇಕೆಂದರೆ ಅಂಥವರಾರೂ ಇಲ್ಲ, ಕೇವಲ ಕ್ರೂರ ಪರಿಣಾಮವುಳ್ಳ ಮಹಾಪಾಪಿಗಳೇ ಇರುತ್ತಾರೆ.

ಯಾವ ಪ್ರಕಾರ ಇಲ್ಲಿ ಶ್ವಾನ ಮೊದಲಾದ ತಿರ್ಯಂಚಗಳಲ್ಲಿ ನೋಡುತ್ತಿರುವಂತೆ ವೈರವುತ್ಪನ್ನವಾಗುತ್ತದೆ.ಅದೇ ಪ್ರಕಾರ ನಾರಕಿಗಳಲ್ಲಿ ಯಾವ ಕಾರಣವಿಲ್ಲದೆಯೇ ಪರಸ್ಪರರಲ್ಲಿ ವೈರವಿದೆ. ದುಃಖದಿಂದ ಹೆದರಿ ವನದಲ್ಲಿ ಓಡಿ ಹೋಗುತ್ತಾರೆ, ಆದರೆ ಅಲ್ಲಿ ಶಾಲ್ಮಲಿ ವೃಕ್ಷದ ಎಲೆಗಳು ಕರವಾಳದ ಸಮಾನ ಕತ್ತರಿಸುವಂಥವುಗಳಿದ್ದು ಅವು ಉರುಳಿ

ಮೈಮೇಲೆ ಬೀಳುತ್ತವೆ, ಅದರಿಂದ ಶರೀರವು ಕತ್ತರಿಸಿ ಹೋಗುತ್ತದೆ. ಭೇದಿಸಿ ಹೋಗುತ್ತದೆ. ವನದಲ್ಲಿರುವ ಗುಹೆಗಳೊಳಗಿಂದ ಸಿಂಹ, ಹುಲಿಗಳು ಎದ್ದು ಬಂದು ಶರೀರವನ್ನು ಹರಿದು ಹಾಕುತ್ತವೆ. ಅಲ್ಲಿಯೇ ವಜ್ರಮಯ ಚುಂಚುಗಳಿರುವ ಗೃದ್ಧ, ಕಾಗೆ ಮೊದಲಾದ ಪಕ್ಷಿಗಳು ಬಂದು ಆ ನಾರಕಿಗಳ ಶರೀರವನ್ನು ಹರಿಯುತ್ತವೆ, ಕಣ್ಣುಗಳನ್ನು ಕೀಳುತ್ತವೆ. ಹೊಟ್ಟೆಯನ್ನು ಹರಿದು ಕರುಳ ಮಾಲೆಯನ್ನು ಹೊರ ತೆಗೆಯುತ್ತವೆ. ನರಕದಲ್ಲಿ ತಿರ್ಯಂಚಗಳಿಲ್ಲದಿದ್ದರೂ ನಾರಕಿಗಳೇ ವಿಕ್ರಿಯೆಯ ಮೂಲಕ ತಿರ್ಯಂಚರೂಪ ಧಾರಣ ಮಾಡುತ್ತವೆ. ನಾರಕಿಗಳಲ್ಲಿ ಪೃಥಕ್ ಶರೀರ ಮಾಡಿಕೊಳ್ಳುವ ವಿಕ್ರಿಯೆಯಿಲ್ಲ, ಒಂದು ಶರೀರವೇ ಸಿಂಹ, ಹುಲಿ, ನಾಯಿ,ಗೂಗೆ, ಕಾಗೆ ಮೊದಲಾದ ದೇಹ ಧಾರಣ ಮಾಡುತ್ತದೆ.

ನಾರಕಿಗಳು ಶುಭ ಮಾಡಲಪೇಕ್ಷಿಸಿದರೂ ಶುಭವಾಗುವುದಿಲ್ಲ, ತಮಗೆ ಮತ್ತು ಅನ್ಯರಿಗೆ ದುಃಖದಾಯಕವೇ ಪರಿಣಾಮ, ದೇಹ, ವೇದನೆ, ವಿಕ್ರಿಯೆ ಮಾಡುವಲ್ಲಿ ಸಮರ್ಥರಿದ್ದಾರೆ, ಸುಖ ಮಾಡುವಂಥ ವಿಕ್ರಿಯೆಯಿರುವುದಿಲ್ಲ, ಪರಿಣಾಮವಿರುವುದಿಲ್ಲ, ದೇಹವಿರುವುದಿಲ್ಲ, ವೇದನವಿರುವುದಿಲ್ಲ, ಜೀವಗಳಿಗೆ ಅಂಥ ಕ್ಷೇತ್ರ ಜನ್ಯ ಪಾಪಕರ್ಮದ ಉದಯವಿದೆ.

ನರಕದಲ್ಲಿ ನಾರಕಿಗಳನ್ನು ಹೊಡೆಯುವ ಸಲುವಾಗಿ ಅನೇಕ ಆಯುಧಗಳು, ಶೂಲ, ಗಾಣ, ಯಂತ್ರ, ಲೋಹದ ಸುಡುವ, ಬೇಯಿಸುವ, ಕುದಿಸುವ, ತಾಳಿಸುವ ಅನೇಕ ದುಃಖದಾಯಕವಾದ ಪಾತ್ರೆಗಳು ಕ್ಷೇತ್ರದ ಸ್ವಭಾವದಿಂದಲೇ ಇರುತ್ತವೆ. ಅಲ್ಲಿಯಂತೂ ಸುಖಕಾರಕ ಸಾಮುಗ್ರಿಗಳು ಸ್ವಪ್ನದಲ್ಲಿ ಕೂಡ ದೊರಕುವುದಿಲ್ಲ. ಅಲ್ಲಿ ಅಗ್ನಿ ಜ್ವಾಲೆಯನ್ನು ಉಗುಳುವಂಥ ಶರೀರಕ್ಕೆ ಮಹಾವೇದನೆಯನ್ನುತ್ಪನ್ನ ಮಾಡುವಂಥ **ಲೋಹದ ಪುತ್ಥಳಿ**ಗಳು ತಾವಾಗಿಯೇ ಎದ್ದು ಬಂದು ನಾರಕಿಗಳನ್ನು ಹಿಡಿದುಕೊಳ್ಳುತ್ತವೆ, ಸ್ಪರ್ಶ ಮಾಡುತ್ತವೆ. ಅವುಗಳ ಸ್ಪರ್ಶದಿಂದ-ಕೋಟ್ಯಂತರ ಚೇಳುಗಳು ಏಕಕಾಲದಲ್ಲಿ ಕಚ್ಚಿದ ಸಮಾನ, ವಜ್ರಾಗ್ನಿಯ ಸಮಾನ ಮತ್ತು ವಿಷಮಯವಾದ ತೀಕ್ಷ್ಣ ಶಸ್ತ್ರಗಳ ಆಘಾತಕ್ಕಿಂತಲೂ ಅನಂತಗುಣಿತ ವೇದನೆಯಾಗುತ್ತದೆ. ನರಕದಲ್ಲಿ ಯಾವ ದುಃಖಕರವಾದ ಸಾಮುಗ್ರಿಗಳಿವೆ ಅವುಗಳ ಸ್ವಭಾವ ಮೊದಲಾದುವನ್ನು ತೋರಿಸಿಕೊಡುವ ಸಲುವಾಗಿ ಅನುಭವ ಮಾಡಿಸುವ ಸಲುವಾಗಿ ತೋರಿಸಿಕೊಡಬೇಕೆಂದರೆ ಇಡೀ ಮಧ್ಯಲೋಕದಲ್ಲಿ ಯಾವ ವಸ್ತುವೂ ಕಂಡು ಬರುವುದಿಲ್ಲ; ಆದಾಗ್ಯೂ ಅವುಗಳ ಅಧಿಕ ದುಃಖದಾಯಕತೆಯನ್ನು ತಿಳಿಸಿಕೊಡುವ ಸಲುವಾಗಿ ಅದೆಷ್ಟೋ ವಸ್ತುಗಳ ವರ್ಣನೆ ಮಾಡಲಾಗಿದೆ.

**ನಾರಕಿಗಳ ದುಃಖವನ್ನಂತೂ ಸಾಕ್ಷಾತ್ ಕೇವಲೀ ಭಗವಂತರೇ ತಿಳಿಯುತ್ತಾರೆ ಮತ್ತು ಯಾವನು ನಾರಕಿಯಾಗಿ ಭೋಗಿಸುತ್ತಾನೆ, ಅವನೇ ತಿಳಿಯುತ್ತಾನೆ.** ನಾರಕಿಗಳ ಶರೀರವು ಮೂಳೆ, ಮಾಂಸ, ರಕ್ತ, ಚರ್ಮ ಮೊದಲಾದ ಸಪ್ತ ಧಾತುಮಯವಿರುವುದಿಲ್ಲ, ಆದರೆ ಅವರ ಶರೀರದ ಪುದ್ಗಲವು ಬೆಕ್ಕು, ನಾಯಿ, ಹಂದಿ ಮೊದಲಾದವುಗಳ ಕೊಳೆತ ಕಳೇವರಕ್ಕಿಂತಲೂ ಅಸಂಖ್ಯಾತ ಗುಣಿತ ದುರ್ಗಂಧಯುಕ್ತವಿದೆ ಮತ್ತು ಅಸಂಖ್ಯಾತ ಗುಣಿತ ದುರ್ನಿರೀಕ್ಷ್ಯ ಜುಗುಪ್ಸೆಯನ್ನುಂಟು ಮಾಡುವಂಥದ್ದಿದೆ, ಅದರ ಸ್ವರೂಪ ನೋಡುವುದಾಗುವುದಿಲ್ಲ, ಕೇಳುವುದಾಗುವುದಿಲ್ಲ, ಗಂಧ ಗ್ರಹಣ ಮಾಡುವುದಾಗುವುದಿಲ್ಲ. ಮನುಷ್ಯರಂತೂ ಅವರನ್ನು ನೋಡುತ್ತಿರುವಂತೆ, ದುರ್ಗಂಧ ಗ್ರಹಣ ಮಾಡುತ್ತಿರುವಂತೆಯೇ ಪ್ರಾಣ ರಹಿತರಾಗಿ ಹೋಗುತ್ತಾರೆ.

ಯಾರು ಪೂರ್ವ ಜನ್ಮದಲ್ಲಿ ಅನೇಕ ಪ್ರಕಾರದ ಅನಿಷ್ಟ ಪರಿಣಾಮ ಮಾಡಿ ನರಕಾಯುವಿನ ಬಂಧ ಮಾಡಿಕೊಳ್ಳುತ್ತಾರೆ ಅವರು ನರಕದಲ್ಲಿ ಉತ್ಪನ್ನರಾಗುತ್ತಾರೆ, ಅವರು ಅಲ್ಲಿ ಅಸಂಖ್ಯಾತ ಕಾಲದವರೆಗೆ ದುಃಖ ಭೋಗಿಸುತ್ತಾರೆ. ಅಧಿಕ ಆರಂಭ ಮಾಡುವಂಥ, ಅಧಿಕ ಪರಿಗ್ರಹದಲ್ಲಿ ಆಸಕ್ತ, ಘೋರ ಹಿಂಸಕ ಪರಿಣಾಮವುಳ್ಳವರು ನರಕಾಯುವಿನ ಬಂಧ ಮಾಡಿಕೊಳ್ಳುತ್ತಾರೆ.

ವಿಶ್ವಾಸಘಾತಕೀ, ಧರ್ಮದ್ರೋಹಿ, ಗುರುದ್ರೋಹಿ, ಸ್ವಾಮಿದ್ರೋಹಿ, ಕೃತಘ್ನ, ಪರಧನ-ಪರಸ್ತ್ರೀಯ ಲೋಲುಪಿ, ಅನ್ಯಾಯಮಾರ್ಗೀ, ಧರ್ಮಾತ್ಮ-ತ್ಯಾಗಿಗಳಿಗೆ ಕಲಂಕ ತಗಲಿಸುವಂಥ, ಯತಿಗಳ ಘಾತ ಮಾಡುವಂಥ, ಗ್ರಾಮಗಳಿಗೆ-ಹುಲ್ಲು ಬಣವೆಗಳಿಗೆ ಬೆಂಕಿ ಹಚ್ಚುವಂಥ, ದೇವದ್ರವ್ಯಕದಿಯುವಂಥ, ತೀವ್ರ ಕಷಾಯೀ, ಅನಂತಾನುಬಂಧೀ ಕಷಾಯಗಳ ಧಾರಕ, ಕೃಷ್ಣಲೇಶ್ಯೆಯ ಧಾರಕ, ಸುಂದರ ಆಹಾರಾದಿಗಳು ದೊರಕಿದ ನಂತರವೂ ರಸನೇಂದ್ರಿಯದ ಲೋಲುಪತೆಯಿಂದ ಮಾಂಸ ಭಕ್ಷಣ ಮಾಡುವಂಥ, ಮದ್ಯಕುಡುಕ, ವೇಶ್ಯಾನುರಾಗಿ, ಪರವಿಘ್ನ ಸಂತೋಷಿ, ಲಂಪಟ, ತೀವ್ರಲೋಭೀ,

ದುರಾಚಾರ ಧಾರಕ, **ಮಿಥ್ಯಾತ್ವ, ಅನ್ಯಾಯ ಮತ್ತು ಅಭಕ್ಷ್ಯದ ಪ್ರಶಂಸೆ ಮಾಡುವಂಥವರದು ನರಕದಲ್ಲಿ ಗಮನವಾಗುತ್ತದೆ.** ವಿಷ ಮೊದಲಾದುವನ್ನು ಬೆರೆಸುವ ಕಾರ್ಯ ಮಾಡುವಂಥ, ವಿಷವನ್ನುತ್ಪನ್ನ ಮಾಡುವಂಥ, ವನ ಕತ್ತರಿಸುವಂಥ, ವನದಲ್ಲಿ ದಾವಾಗ್ನಿ ಹೊತ್ತಿಸುವಂಥ, ಜೀವಗಳನ್ನು ಬಲೆಯಲ್ಲಿ ಕಟ್ಟಿ ಹಾಕಿ ಸುಟ್ಟು ಬಿಡುವಂಥ, ಹಿಂಸೆಯ ತೀವ್ರ ಕರ್ಮದ ಪರಿಪಾಟಿ ನಡೆಸುವಂಥವರದು ನರಕದಲ್ಲಿ ಗಮನವಾಗುತ್ತದೆ.

**ನರಕದಲ್ಲಿ ಅಂಬ-ಅಂಬರೀಷ ಮೊದಲಾದ ದುಷ್ಟ ಅಸುರಕುಮಾರ ದೇವಗಳು ಮೂರನೆಯ ಪೃಥ್ವಿಯವರೆಗೆ ಹೋಗಿ ನಾರಕಿಗಳನ್ನು ತಮ್ಮ-ತಮ್ಮಲ್ಲಿ ಹೊಡೆದಾಡಿಸುತ್ತಾರೆ.** ಕೆಲವೊಂದು ನಾರಕಿಗಳಿಗೆ ಮೂರನೇ ಪೃಥ್ವಿಯವರೆಗೆ ಪೂರ್ವಜನ್ಮದ ಸಂಬಂಧವುಳ್ಳ ದೇವನು ಬಂದು ಧರ್ಮದ ಉಪದೇಶವನ್ನೂ ಕೊಡುತ್ತಾರೆ. ಕೆಲ-ಕೆಲವರು ತಮ್ಮ ಪೂರ್ವಜನ್ಮದ ಪಾಪಗಳ ನಿಂದೆಯನ್ನೂ ಮಾಡಿಕೊಳ್ಳುತ್ತಾರೆ, ಅಧಿಕ ಪಶ್ಚಾತ್ತಾಪವನ್ನೂ ಮಾಡಿಕೊಳ್ಳುತ್ತಾರೆ. ನನಗೆ ಪೂರ್ವಜನ್ಮದಲ್ಲಿ ಸತ್ಪುರುಷರು ಬಹಳಷ್ಟು ಬೋಧಿಸಿದರು ಅಯ್ಯಾ ! ಅನೀತಿಯ ಮಾರ್ಗದ ಮೇಲೆ ನಡೆಯಬೇಡವೆಂದು ಬಹಳಷ್ಟು ಉಪದೇಶವನ್ನು ಕೊಟ್ಟರು, ಆದರೆ ಪಾಪಿಯಾದ ನಾನು ಕಷಾಯಗಳ ಮದದಿಂದ ವಿಷಯಗಳಲ್ಲಿ ಅಂಧನಾಗಿ ಅವರ ಬೋಧನೆಯನ್ನು ಗ್ರಹಣ ಮಾಡಲಿಲ್ಲ. ಈಗ ನಾನು ದೈವಬಲದಿಂದ, ಪೌರುಷ ಬಲದಿಂದ ರಹಿತನಾಗಿ ಏನು ಮಾಡಲಿ ? ಆ ಪಾಪಿಗಳು, ದುರಾಚಾರಿಗಳು, ಪಾಪದಲ್ಲಿ ಪ್ರೇರಣೆ ಮಾಡುವಂಥವರು, ವ್ಯಸನಿಗಳು, ಅನೀತಿಯ ಪೋಷಣೆ ಮಾಡುವಂಥವರು ನನಗೆ ನರಕದ ಪ್ರಾಪ್ತಿ ಮಾಡಿಸಿದರು. ಆ ಪಾಪಿಗಳು ಶರೀರ ತ್ಯಾಗ ಮಾಡಿ ಎಲ್ಲಿಗೆ ಹೋಗುವರೆಂಬುದು ಯಾರಿಗೆ ಗೊತ್ತು ? ನಮ್ಮ ಜತೆಯಂತೂ ಯಾರೂ ಕಂಡು ಬರುವುದಿಲ್ಲ. ನಮ್ಮ ಧನ ಭೋಗಿಸುವಲ್ಲಿ, ವಿಷಯ ಸೇವನೆಯಲ್ಲಿ ಸಹಾಯಕರು, ಪಾಪದ ಪ್ರೇರಕರಾದ ಪುತ್ರ, ಮಿತ್ರ, ಬಂಧು, ಪತ್ನಿ ಮೊದಲಾದವರೆಲ್ಲರು ಸಹಾಯಕರಿದ್ದರು, ಅವರನ್ನು ಈಗ ಎಲ್ಲಿ ನೋಡುವೆನು ? ಈ ಪ್ರಕಾರ ಅವಧಿಜ್ಞಾನದಿಂದ ಪೂರ್ವಜನ್ಮದಲ್ಲಿ ಯಾವ ದುರಾಚಾರ ಮಾಡಲಾಗಿತ್ತು ಅವುಗಳ ಕುರಿತು ಪಶ್ಚಾತ್ತಾಪ ಮಾಡಿಕೊಳ್ಳುತ್ತ ಘೋರತರವಾದ ಮಾನಸಿಕ ದುಃಖಕ್ಕೆ ಪ್ರಾಪ್ತರಾಗುತ್ತಾರೆ.

**ಯಾವನೋ ಮಹಾ ಭಾಗ್ಯವಂತನಿಗೆ ಸಮ್ಯಗ್ದರ್ಶನವು ಕೂಡ ಉತ್ಪನ್ನವಾಗುತ್ತದೆ.** ಆದರೆ ಪರ್ಯಾಯ ಸಂಬಂಧದ ದುಃಖ-ಕಷಾಯಗಳು ಸ್ವಯಮೇವ ಉತ್ಪನ್ನವಾಗುತ್ತವೆ. ತಾನು ಸ್ವಯಂ ಯಾರಿಗೂ ಹೊಡೆಯಲ-ಪೇಕ್ಷಿಸದಿದ್ದರೂ ಕೂಡ ಕಷಾಯಗಳ ಪ್ರಬಲತೆಯು ಕರ್ಮದ ಉದಯದಿಂದ ತಡೆಯುವುದಿಲ್ಲ. ಕೈಗಳು ತಾವಾಗಿಯೇ ಶಸ್ತ್ರಾದಿಗಳ ರೂಪವಾಗಿ ಪರಿಣಮಿಸುತ್ತವೆ.

**ನಾರಕಿಗಳಿಗೆ ಕ್ಷಣಮಾತ್ರವೂ ವಿಶ್ರಾಂತಿಯಿಲ್ಲ, ನಿದ್ರೆಯಿಲ್ಲ,** ಭೂಮಿಯ ಸ್ಪರ್ಶದ ದುಃಖವೇ ಕೇವಲೀ ಗಮ್ಯವಿದೆ. ಅತ್ಯಂತ ತೀವ್ರ ಕರ್ಮದ ಉದಯದಲ್ಲಿ ಯಾರೂ ಶರಣಿಲ್ಲ, ಆಶ್ರಯದ ಇಚ್ಛೆಯಿಂದ ಅಲ್ಲಿ ನೋಡುತ್ತಾನೆ, ಆದರೆ ಯಾರೂ ದಯಾವಂತರಿಲ್ಲ, ಎಲ್ಲರೂ ಕ್ರೂರ, ನಿರ್ದಯಿ, ಭಯಾನಕ, ಉಗ್ರದೇಹದ ಧಾರಕ, ಅಗ್ನಿಯ ಸಮಾನ ಪ್ರಜ್ವಲಿತವಿರುವ ನೇತ್ರಗಳು, ಯಾವಾಗಲೂ ಪ್ರಚಂಡ ಅಶುಭ ಧ್ಯಾನವನ್ನೇ ಮಾಡಿಸುವಂಥ, ಕ್ರೋಧವನ್ನೇ ಉತ್ಪನ್ನ ಮಾಡಿಸುವಂಥವರು ಘೋರ ನಾರಕಿಗಳಿರುತ್ತಾರೆ.

ಆ ನಾರಕಿಗಳ ಮಹಾನ ವಿಲಾಪ ಮತ್ತು ರೋದನ, ಮಾರಣ-ತಾಡನಗಳ ಘೋರ ಶಬ್ದಗಳು ಕೇಳಿ ಬರುತ್ತವೆ. ಅಯ್ಯಾ ! ನಾನು ಯಾವಾಗ ಮನುಷ್ಯ ಪರ್ಯಾಯದಲ್ಲಿದ್ದೆನು ಆಗ ಸ್ವಾಧೀನನಾಗಿ ಆತ್ಮಹಿತವನ್ನು ಮಾಡಿಕೊಳ್ಳಲಿಲ್ಲ, ಈಗ ದೈವ ಮತ್ತು ಪುರುಷಾರ್ಥಗಳೆರಡರ ಬಲದಿಂದ ರಹಿತನಾಗಿ ಏನು ಮಾಡುವೆನು ? ನಾನು ಪೂರ್ವದಲ್ಲಿ ಯಾವ-ಯಾವ ನಿಂದ್ಯ ಕರ್ಮ ಮಾಡಿದ್ದೇನೆ ಈಗ ಅವುಗಳ ಸ್ಮರಣೆಯಾಗುತ್ತಿರುವಂತೆಯೇ ನನಗೆ ಮರ್ಮಭೇದಕ ಯಾತನೆಯಾಗುತ್ತದೆ. ಒಂದು ಕ್ಷಣ ಕೂಡ ಸಹಿಸಲಾಗದಂಥ ದುಃಖವನ್ನು ಇಲ್ಲಿ ಸಾಗರಗಳವರೆಗೆ ಹೇಗೆ ಸಹನೆ ಮಾಡುವುದು, ಹೇಗೆ ಪೂರ್ಣ ಮಾಡುವುದು ?

ಯಾರ ಸಲುವಾಗಿ ಪಾಪಕಾರ್ಯ ಮಾಡಿದೆನು ಆ ಸೇವಕ, ಸ್ತ್ರೀ, ಪುತ್ರ, ಬಂಧುಗಳನ್ನು ಇಲ್ಲಿ ಎಲ್ಲಿ ನೋಡುವೆನು? ಅವರಂತೂ ಧನದ ವಿಷಯಗಳನ್ನು ಭೋಗಿಸುವಲ್ಲಿ ಸಮ್ಮಿಲಿತರಿದ್ದರು, ಈಗ ಈ ದುಃಖಗಳಲ್ಲಿ ಅವರನ್ನು ಎಲ್ಲಿ ಕಾಣುವುದು?

**ಇಂಥ ದುಃಖಗಳಿಂದ ರಕ್ಷಣೆ ಮಾಡುವಂಥದು ಒಂದು ದಯಾ ಧರ್ಮವೇ ಇದೆ, ಆ ಧರ್ಮವನ್ನು ಪಾಪಿಯಾದ ನಾನು ಉಪಾರ್ಜನೆಯನ್ನೇ ಮಾಡಲಿಲ್ಲ, ಪರಿಗ್ರಹರೂಪದ ಮಹಾಪಿಶಾಚದಿಂದ ಅಚೇತನನಾದ ನಾನು ಯಮರಾಜರೂಪದ ಸಿಂಹದ ಆಘಾತದಿಂದ ಒಂದು ಕ್ಷಣದಲ್ಲಿ ಸತ್ತು ನರಕದ ನಾರಕಿಯ ರೂಪದಲ್ಲಿ ಜನ್ಮ ತಾಳುವೆನೆಂಬುದನ್ನು ತಿಳಿಯಲಿಲ್ಲ, ಇವೇ ಮೊದಲಾದ ಮನಸ್ಸಿನ ಸಂತಾಪಜನಿತ ಘೋರ ದುಃಖಕ್ಕೆ ಪ್ರಾಪ್ತನಾಗುತ್ತಾನೆ.**

ಪೂರ್ವ ಜನ್ಮದಲ್ಲಿ ನಾನು ಅನ್ಯ ಪ್ರಾಣಿಗಳ ಮಾಂಸವನ್ನು ಕತ್ತರಿಸಿ ತಿಂದಿದ್ದೇನೆ, ಅದರಿಂದಲೇ ಇಲ್ಲಿ ನನ್ನ ಮಾಂಸವನ್ನು ಕತ್ತರಿಸಿ-ಕತ್ತರಿಸಿ ನನಗೆ ತಿನ್ನಿಸುತ್ತಿದ್ದಾರೆ. ಪೂರ್ವದಲ್ಲಿ ನಾನು ಬಹಳಷ್ಟು ಮದ್ಯ ಕುಡಿದಿದ್ದೇನೆ, ಅಭಕ್ಷ್ಯ ತಿಂದಿದ್ದೇನೆ, ಆದುದರಿಂದ ಇಲ್ಲಿ ಅನೇಕ ನಾರಕಿಗಳು ಕರಗಿಸಿದ ತಾಮ್ರಲೋಹಮಯ ರಸವನ್ನು ಇಕ್ಕುಳದಿಂದ ನನ್ನ ಬಾಯಿ ತೆರೆಯಿಸಿ ಕುಡಿಸುತ್ತಾರೆ. ಯಾರು ಪೂರ್ವದಲ್ಲಿ ಪರಸ್ತ್ರೀ ಲಂಪಟರಿದ್ದರು ಅವರಿಗೆ ಇಲ್ಲಿ ವಜ್ರಾಗ್ನಿಮಯವಾದ ಪುತ್ಥಳಿಯನ್ನು ಬಲವಂತದಿಂದ ಹಿಡಿದು ಅಧಿಕ ಸಮಯದವರೆಗೆ ಆಲಿಂಗನ ಮಾಡಿಸುತ್ತಾರೆ. **ನರಕದಲ್ಲಿ ಕಣ್ಣು ರೆಪ್ಪೆ ಹೊಡೆಯುವಷ್ಟು ಕಾಲ ಮಾತ್ರವೂ ಸುಖವಿಲ್ಲ.** ಎಂದಾದರೊಮ್ಮೆ ಕ್ಷಣ ಮಾತ್ರವಾದರೂ ಮರೆತು ಹೋದರೆ ದುಷ್ಟ ಅಥವ ಅಸುರಕುಮಾರರು ಪ್ರೇರಣೆ ಕೊಡುತ್ತಾರೆ ಮತ್ತು ನಾರಕಿಗಳು ಕೂಡ ಪರಸ್ಪರದಲ್ಲಿ ಪ್ರೇರಣೆ ಕೊಟ್ಟು ಹೊಡೆದಾಡಿಸುತ್ತಾರೆ.

**ಹೆಚ್ಚೇನು ಹೇಳುವುದು ?** ಅಸಂಖ್ಯಾತ ಪ್ರಕಾರದ ದುಃಖವನ್ನು ಅಸಂಖ್ಯಾತ ಕಾಲದವರೆಗೆ ನರಕದಲ್ಲಿ ನಾರಕಿಗಳು ಭೋಗಿಸುತ್ತಾರೆ. **ಸಂಸಾರದಲ್ಲಿ ಈ ಜೀವದ ಉದ್ಧಾರ ಮಾಡುವಂಥದು ಒಂದು ಧರ್ಮವೇ ಇದೆ.** ಆ ಧರ್ಮದ ಸಂಪಾದನೆ ಮಾಡದಿದ್ದರೆ ನರಕದಲ್ಲಿ ಯಾರು ರಕ್ಷಣೆ ಮಾಡುವರು ? **ಯಾವ ಧನ-ಕುಟುಂಬ ಮೊದಲಾದವು ಜೀವದ ಜತೆಯಲ್ಲಿ ಹೋಗುವುದಿಲ್ಲ, ತಮ್ಮ ಭಾವಗಳಿಂದ ಗಳಿಸಿದ ಪುಣ್ಯ-ಪಾಪ ಕರ್ಮಗಳೇ ಜತೆಯಲ್ಲಿ ಹೋಗುತ್ತವೆ.** ಈ ಸಂಸಾರಿಗಳು ಉಪಸ್ಥ (ಕಾಮ) ಇಂದ್ರಿಯ ಹಾಗೂ ರಸನೇಂದ್ರಿಯದ ವಿಷಯಗಳ ಲೋಲುಪಿಯಾಗಿ ನರಕ ಮೊದಲಾದವುಗಳ ವಿಚಿತ್ರ ದುಃಖಕ್ಕೆ ಪಾತ್ರರಾಗಿ ಬಿಡುತ್ತಾರೆ. ಈ ಪ್ರಕಾರ ಅನೇಕ ಬಾರಿ ನರಕದಲ್ಲಿ ಹೋಗಿ ಘೋರ ದುಃಖ ಭೋಗಿಸುತ್ತಾರೆ.

**ತಿರ್ಯಂಚಗತಿಯ ದುಃಖ :** ತಿರ್ಯಂಚ ಗತಿಯಲ್ಲಿ ಹೋದ ನಂತರ ಯಾವ ಗೊತ್ತು ಗುರಿಯಿಲ್ಲದೆ ಭ್ರಮಣ ಮಾಡುತ್ತದೆ, ಅಲ್ಲಿ ದುಃಖದ ಕೊನೆಯೇ ಇರುವುದಿಲ್ಲ, ಕೇವಲ ದುಃಖವೇ ದುಃಖವಿರುತ್ತದೆ.

**ಪೃಥ್ವಿಕಾಯದಲ್ಲಿ** ಅಗೆಯುವುದು, ಕುಟ್ಟುವುದು, ಅರೆಯುವುದು, ಸೀಳುವುದು, ಭೇದಿಸುವುದು, ಸುಡುವುದು ಮೊದಲಾದ ಕ್ರಿಯೆಗಳಿಂದ ಯಾರು ರಕ್ಷಣೆ ಮಾಡುತ್ತಾರೆ ?

**ಜಲ ಕಾಯದಲ್ಲಿ** ಕುಡಿದು ಹೋದ, ಸುಟ್ಟುಹೋದ, ಒಣಗಿ ಹೋದ, ಇಂಗಿ ಹೋದ, ಹಾರಿ ಹೋದ, ವಿಷದಲ್ಲಿ, ಕ್ಷಾರದಲ್ಲಿ, ಕಹಿ ಪದಾರ್ಥಗಳಲ್ಲಿ ಬೆರೆಸಿ ಹೋದ,ಕಾಯ್ದ ಲೋಹ ಮೊದಲಾದ ಧಾತುಗಳಲ್ಲಿ ಪಾಷಾಣಗಳಲ್ಲಿ ಅಡಗಿ ಹೋದ, ಘೋರ ಶಬ್ದ ಮಾಡುತ್ತ ಕುದಿಯುತ್ತದೆ, ಸುಡುತ್ತದೆ, ಪರ್ವತಗಳ ಮೇಲಿಂದ ಉರುಳಿ ಶಿಲೆಗಳ ಮೇಲೆ ಘೋರ ಶಬ್ದ ಮಾಡುತ್ತ ಕೆಳಕ್ಕೆ ಅಪ್ಪಳಿಸುತ್ತದೆ ಏಟು ತಿನ್ನುತ್ತದೆ, ಬಟ್ಟೆಗಳಲ್ಲಿ ತುಂಬಿಕೊಂಡು ಪಾಷಾಣದ ಮೇಲೆ ಪೆಟ್ಟು ತಿನ್ನುತ್ತದೆ, ದೊಣ್ಣೆಗಳಿಂದ ಕುಟ್ಟಿಸಿಕೊಳ್ಳುತ್ತದೆ. ಆ ಜಲಕಾಯದ ಜೀವಗಳ ಮೇಲೆ ಯಾರು ದಯೆ ಮಾಡುವರು ? ಅಗ್ನಿಯ ಮೇಲೆ ಸುರಿದು ಬಿಡುತ್ತಾರೆ, ಗ್ರೀಷ್ಮ ಋತುವಿನಲ್ಲಿ ಕಾಯ್ದನೆಲದ ಮೇಲೆ ಧೂಳದ ಮೇಲೆ ಸಿಂಪಡಿಸುತ್ತಾರೆ. ಯಾರೂ ದಯೆ ಮಾಡುವುದಿಲ್ಲ, ಏಕೆಂದರೆ ಪೂರ್ವ ಜನ್ಮದಲ್ಲಿ ನಾವು ದಯಾ ಧರ್ಮವನ್ನು ಅಂಗೀಕಾರ ಮಾಡಲಿಲ್ಲ, ಈಗ ನಮ್ಮ ಮೇಲೆ ಯಾರು ದಯೆ ಮಾಡುವರು ?

**ಅಗ್ನಿಕಾಯ**ದಲ್ಲಿ ದಬ್ಬುವುದು, ಆರಿಸುವುದು, ಕುಟ್ಟುವುದು, ಭೇದಿಸುವುದು ಇತ್ಯಾದಿ ಘೋರ ದುಃಖ ಭೋಗಿಸುತ್ತದೆ, ಯಾರು ರಕ್ಷಣೆ ಮಾಡುವರು ?

**ಪವನಕಾಯ**ದಲ್ಲಿ ನಿರಂತರ ಪರ್ವತಗಳ ಕಠೋರ ಗೋಡೆಗಳ ಆಘಾತ ಏಟು ಸಹಿಸುತ್ತದೆ, ಚರ್ಮದಲ್ಲಿ ತುಂಬಿ ಅಗ್ನಿಯಲ್ಲಿ ಎಸೆಯಲಾಗುತ್ತದೆ, ತಿದಿಯಿಂದ ಒತ್ತಲಾಗುತ್ತದೆ, ಪಂಖಾ, ಬಟ್ಟೆ ಮೊದಲಾದವುಗಳಿಂದ ಹೊಡೆತ ತಿನ್ನುತ್ತದೆ, ವೃಕ್ಷಗಳ ರೆಂಬೆ ಮೊದಲಾದವುಗಳಿಂದ ಪವನಕಾಯದಲ್ಲಿ ಘೋರ ದುಃಖ ಭೋಗಿಸುತ್ತದೆ.

**ವನಸ್ಪತಿಕಾಯ**ದಲ್ಲಿ ಸಾಧಾರಣ ವನಸ್ಪತಿಯಲ್ಲಂತೂ ಒಂದರ ಘಾತದಲ್ಲಿ ಅನಂತಗಳ ಘಾತದ ದುಃಖವನ್ನಂತೂ ಕೇವಲಜ್ಞಾನಿಗಳೇ ತಿಳಿಯುತ್ತಾರೆ. ಆದರೆ ಪ್ರತ್ಯೇಕ ವನಸ್ಪತಿಯ ದುಃಖವು ಕತ್ತರಿಸುವುದು, ಸೀಳುವುದು,ಕೊಯ್ಯುವುದು, ಕೊರೆಯುವುದು, ಉಜ್ಜುವುದು, ಜಗಿಯುವುದು, ತುಪ್ಪ-ಎಣ್ಣೆಗಳಲ್ಲಿ ಅದ್ದಿ ಸುಡುವುದು, ಬೆಂಕಿಯಲ್ಲಿ ತಿವಿಯುವುದು, ಸೀಳುವುದು, ಕಟ್ಟುವುದು, ನೀರಿನಲ್ಲಿ ನೆನೆಸುವುದು, ಬಾಗಿಸುವುದು, ಮುರಿಯುವುದು, ಇತ್ಯಾದಿ ಘೋರ ದುಃಖವನ್ನು ವನಸ್ಪತಿ ಕಾಯದಲ್ಲಿ ಈ ಜೀವವು ಭೋಗಿಸುತ್ತದೆ.

**ಏಕೇಂದ್ರಿಯಪರ್ಯಾಯ**ದಲ್ಲಿ ಮಾತನಾಡಲು ನಾಲಿಗೆಯಿಲ್ಲ, ನೋಡುವುದಕ್ಕೆ ಕಣ್ಣುಗಳಿಲ್ಲ, ಆಲಿಸಲು ಕಿವಿಗಳಿಲ್ಲ, ಕೈಕಾಲು ಮೊದಲಾದ ಅಂಗ-ಉಪಾಂಗಗಳಿಲ್ಲ, ಯಾರೂ ರಕ್ಷಕರಿಲ್ಲ, ಅಸಂಖ್ಯಾತ ಅನಂತಕಾಲದವರೆಗೆ ಘೋರ ದುಃಖಮಯ ಏಕೇಂದ್ರಿಯ ಪರ್ಯಾಯದೊಳಗಿಂದ ಹೊರಗೆ ಬರುವುದಾಗುವುದಿಲ್ಲ. **ಮಿಥ್ಯಾತ್ವ, ಅನ್ಯಾಯ, ಅಭಕ್ಷ್ಯಾದಿಗಳ ಪ್ರಭಾವದಿಂದ ಜೀವದ ಸಮಸ್ತ ಜ್ಞಾನ ಮೊದಲಾದ ಗುಣಗಳು ನಷ್ಟವಾಗಿ ಹೋಗುತ್ತವೆ.** ಏಕೇಂದ್ರಿಯದಲ್ಲಿ ಸ್ವಲ್ಪ ಮಾತ್ರ ಪರ್ಯಾಯ ಜ್ಞಾನವಿರುತ್ತದೆ. ಆತ್ಮನ ಸಮಸ್ತ ಪ್ರಭಾವ, ಶಕ್ತಿ, ಸುಖಗಳು ನಷ್ಟವಾಗಿ ಹೋಗುತ್ತವೆ, ಜಡ ಅಚೇತನದ ಸಮಾನವಾಗಿ ಹೋಗುತ್ತದೆ, ಕಿಂಚಿತ್ ಮಾತ್ರ ಜ್ಞಾನದ ಸತ್ತಾ ಒಂದು ಸ್ಪರ್ಶನೇಂದ್ರಿಯದ ಮೂಲಕ ಜ್ಞಾನಿಗಳಿಗೆ ತಿಳಿಯುವುದರಲ್ಲಿ ಬರುತ್ತದೆ. ಸಮಸ್ತ ಶಕ್ತಿರಹಿತ ಕೇವಲ ದುಃಖಮಯವಾದ ಏಕೇಂದ್ರಿಯ ಪರ್ಯಾಯದಲ್ಲಿ ಜನ್ಮ-ಮರಣ-ವೇದನೆಯ ದುಃಖವನ್ನು ಭೋಗಿಸುತ್ತದೆ. ಆ ದುಃಖವನ್ನು ಆ ಜೀವವೇ ತಿಳಿಯುವ ಸಾಧ್ಯತೆಯಿದೆ.

**ವಿಕಲತ್ರಯ ಜೀವಗಳ ದುಃಖ :** ಎಂದಾದರೊಮ್ಮೆ ಜೀವವು ತ್ರಸ ಪರ್ಯಾಯ ಪಡೆದರೆ ವಿಕಲ ಚತುಷ್ಕದಲ್ಲಿ ಘೋರ ದುಃಖ ಭೋಗಿಸುತ್ತದೆ. ಝಳಪಿಸುವ ಜಿಹ್ವೇಂದ್ರಿಯದ ಪೀಡೆಯಿಂದ ತೀವ್ರ-ಕ್ಷುಧೆ-ತೃಷೆಮಯ ವೇದನೆಯ ಹೊಡೆತದಿಂದ ನಿರಂತರ ಆಹಾರವನ್ನೇ ಅರಸುತ್ತ ತಿರುಗುತ್ತದೆ, ಕ್ರಿಮಿ ಕೀಟಗಳು ತಮ್ಮ ಬಾಯನ್ನು ಅಗಲವಾಗಿ ತೆರೆದು ಆಹಾರದ ಸಲುವಾಗಿ ಚಂಚಲವಾಗಿ ತಿರುಗುತ್ತವೆ. ನೊಣ, ಜೇನುನೊಣ, ಸೊಳ್ಳೆಗಳು ಹಸಿವೆಯಿಂದ ಪೀಡಿತವಾಗಿ ನಿರಂತರ ಆಹಾರ ಹುಡುಕುತ್ತ ಸಂಚರಿಸುತ್ತವೆ, ರಸಗಳಲ್ಲಿ ಹೊರಳಿ ಬೀಳುತ್ತವೆ, ಜಲದಲ್ಲಿ-ಅಗ್ನಿಯಲ್ಲಿ ಉರುಳಿ ಬೀಳುತ್ತವೆ, ಹವೆಯ-ವಸ್ತ್ರಗಳ ಏಟಿನಿಂದ ಸತ್ತು ಹೋಗುತ್ತವೆ; ಪಶುಗಳ ಪುಚ್ಛದಿಂದ-ಗೊರಸುಗಳಿಂದ ಸತ್ತು ಹೋಗುತ್ತವೆ; ಮನುಷ್ಯರ ಉಗುರುಗಳಿಂದ, ಕೈ-ಕಾಲು ಮೊದಲಾದವುಗಳಿಂದ ಜಜ್ಜಿ ಹೋಗುತ್ತವೆ, ದಬ್ಬಿ ಹೋಗುತ್ತವೆ, ಮಲ-ಕಫಾದಿಗಳಲ್ಲಿ ಮೋಸಹೋಗಿ ಸತ್ತು ಹೋಗುತ್ತವೆ.

**ವಿಕಲತ್ರಯ ಜೀವಗಳ ಮೇಲೆ ಯಾರೂ ದಯೆ ಮಾಡುವುದಿಲ್ಲ,** ಗುಬ್ಬಿ-ಕಾಗೆಗಳು ಹಿಡಿದು ತಿಂದು ಬಿಡುತ್ತವೆ. ಹಲ್ಲಿ, ಜಿರಳೆ, ಸರ್ಪ ಮೊದಲಾದವು ಹುಡುಕಿ-ಹುಡುಕಿ ತಿಂದು ಹಾಕುತ್ತವೆ, ಪಕ್ಷಿಗಳ ಅತ್ಯಂತ ಗಟ್ಟಿಮುಟ್ಟಾದ ವಜ್ರದಂತಿರುವ ಚುಂಚುಗಳಿಂದ ಹಿಡಿದು ತಿಂದು ಬಿಡುತ್ತವೆ. ಕೆಲವು ಬೆಂಕಿಯಲ್ಲಿ ಬಿದ್ದು ಸುಟ್ಟು ಹೋಗುತ್ತವೆ. ನುಸಿ, ಕುಟ್ಟೆ ಹುಳ ಇತ್ಯಾದಿ ಕ್ರಿಮಿಗಳಿಂದ ತುಂಬಿ ಹೋದ ಧಾನ್ಯವನ್ನು ಒಡೆಯುತ್ತಾರೆ, ಬೀಸುತ್ತಾರೆ, ಒರಳಲ್ಲಿ ಹಾಕಿ ಕುಟ್ಟುತ್ತಾರೆ, ತುಂಡು-ತುಂಡು ಮಾಡುತ್ತಾರೆ, ಪಾತ್ರೆಯಲ್ಲಿ ಹಾಕಿ ಹುರಿಯುತ್ತಾರೆ, ಕುದಿಸುತ್ತಾರೆ, ತರಕಾರಿ ಪಲ್ಯ ಮೊದಲಾದವುಗಳಲ್ಲಿ ಹಾಕಿ ಕುಟ್ಟುತ್ತಾರೆ, ಹುರಿಯುತ್ತಾರೆ, ಕುದಿಸುತ್ತಾರೆ, ತಾಳಿಸುತ್ತಾರೆ, ಆದರೆ ಯಾರೂ ದಯೆ ಮಾಡುವುದಿಲ್ಲ,

ಫಲಗಳಲ್ಲಿ, ಹಣ್ಣುಗಳಲ್ಲಿ, ಔಷಧಗಳಲ್ಲಿ, ಪುಷ್ಪ-ಪಲ್ಲವ-ವಲ್ಕಲಗಳಲ್ಲಿ; ಮರ್ಯಾದೆಯಿಂದ ಹೆಚ್ಚು ಕಾಲದ ಎಲ್ಲ ಆಹಾರ, ಹಾಲು, ಮೊಸರು, ರಸಗಳಲ್ಲಿ ಅಧಿಕ ವಿಕಲತ್ರಯ ಮತ್ತು ಪಂಚೇಂದ್ರಿಯ ಜೀವಗಳು ಉತ್ಪನ್ನವಾಗುತ್ತವೆ; ಅವೆಲ್ಲವನ್ನು ತಿಂದು ಬಿಡಲಾಗುತ್ತದೆ, ಜೀವ ಜಂತುಗಳು ಸತ್ತು ಹೋಗುತ್ತವೆ, ಅಗ್ನಿಯಲ್ಲಿ ಸುಟ್ಟು ಹೋಗುತ್ತವೆ, ಅವುಗಳ ಮೇಲೆ ಯಾರು ದಯೆ ಮಾಡುತ್ತಾರೆ ?

ವಿಕಲತ್ರಯ ಜೀವಗಳ ಉತ್ಪತ್ತಿಯಿಂದ ವರ್ಷಾಋತುವಿನಲ್ಲಿ ಭೂಮಿಯು ಮುಚ್ಚಿ ಹೋಗುತ್ತದೆ ಮತ್ತು ಅವು ಪಶುಗಳ ಕಾಲುಗಳಿಂದ, ಮನುಷ್ಯರ ಕಾಲುಗಳಿಂದ, ಕುದುರೆಗಳ ಗೊರಸುಗಳಿಂದ, ರಥ, ಚಕ್ಕಡಿಗಾಡಿ ಮೊದಲಾದವುಗಳಿಂದ ದಬ್ಬಿ ಹೋಗುತ್ತವೆ, ಕತ್ತರಿಸಿ ಹೋಗುತ್ತವೆ, ಕಾಲುಗಳು ಮುರಿದು ಬೀಳುತ್ತವೆ, ತಲೆ ಒಡೆದು ಹೋಗುತ್ತದೆ, ಹೊಟ್ಟೆ ಹರಿದು ಹೋಗುತ್ತದೆ, ಆದರೆ ಯಾರು ದಯೆ ಮಾಡುತ್ತಾರೆ ? ಯಾರೂ ಅವುಗಳ ಕಡೆಗೆ ನೋಡುವುದು ಕೂಡ ಇಲ್ಲ. ಈ ಪ್ರಕಾರ ವಿಕಲತ್ರಯರೂಪ ತಿರ್ಯಂಚಗಳ ಮರಣವು ಅನೇಕ ದುಃಖ ಸಹಿತವಾಗುತ್ತದೆ.

ವಿಕಲತ್ರಯ ಜೀವಗಳು ಕ್ಷುಧೆ-ತೃಷೆಯಿಂದ, ಶೀತ-ಉಷ್ಣದ ವೇದನೆಯಿಂದ, ಮಳೆ, ಗಾಳಿ, ವಾಹನಗಳ ಬಾಧೆಯಿಂದ ಸತ್ತು ಹೋಗುತ್ತವೆ. ಕಲ್ಲು, ಕಟ್ಟಿಗೆ, ಮಣ್ಣಿನ ರಾಶಿ, ಮಲ, ಮೂತ್ರ, ಬಿಸಿ ನೀರು, ಅಗ್ನಿ, ಮೊದಲಾದವು ಬೀಳುವುದರಿಂದ ದಬ್ಬಿ ಸತ್ತು ಹೋಗುತ್ತವೆ. **ವಿಕಲತ್ರಯ ಜೀವಗಳ ಕಡೆಗೆ ಯಾರೂ ನೋಡುವುದಿಲ್ಲ, ಕೆಲ-ಕೆಲವರಂತೂ ಅವನ್ನು ಜೀವವೆಂದು ಮನ್ನಿಸುವುದೇ ಇಲ್ಲ, ಯಾರೂ ಅವುಗಳ ಮೇಲೆ ದಯೆ ಮಾಡುವುದಿಲ್ಲ,** ಎಣ್ಣೆಯಲ್ಲಿ-ತುಪ್ಪದಲ್ಲಿ ಬಿದ್ದು ದೀವಿಗೆಯಲ್ಲಿ, ಅಗ್ನಿಯಲ್ಲಿ ಉರುಳಿ ಸತ್ತು ಘೋರ ದುಃಖ ಭೋಗಿಸುತ್ತವೆ ; ಉತ್ಪನ್ನವಾಗುತ್ತವೆ, ಮತ್ತೆ ಸಾಯುತ್ತವೆ. ಈ ಪ್ರಕಾರ ಅಸಂಖ್ಯಾತ ಕಾಲದವರೆಗೆ ದುಃಖ ಭೋಗಿಸುತ್ತಿರುತ್ತವೆ.

**ಜಲಚರ ತಿರ್ಯಂಚಗಳ ದುಃಖ :** ಒಮ್ಮೊಮ್ಮೆ ಪಂಚೇಂದ್ರಿಯ ಜಲಚರ ತಿರ್ಯಂಚವಾಗುತ್ತದೆ. ಅವುಗಳಲ್ಲಿ ನಿರ್ಬಲವನ್ನು ಸಬಲವು ತಿಂದು ಬಿಡುತ್ತದೆ. ಧೀವರರ ಬಲೆಯಲ್ಲಿ ಮತ್ತು ಮುಳ್ಳುಗಳಲ್ಲಿ ಮೋಸ ಹೋಗಿ ಸತ್ತು ಹೋಗುತ್ತವೆ. ಮತ್ತು ಜೀವಂತವಿರುವಂಥವುಗಳನ್ನು ಸುಟ್ಟು ತಿಂದು ಬಿಡುತ್ತಾರೆ.

**ಕಾಡು ಸ್ಥಲಚರ ತಿರ್ಯಂಚಗಳ ದುಃಖ :** ಕಾಡಿನ ಜೀವಗಳು ಯಾವಾಗಲೂ ಭಯಭೀತ, ಕ್ಷುಧೆ, ತೃಷೆ, ಶೀತ, ಉಷ್ಣ, ಮಳೆ, ಗಾಳಿ, ಕೆಸರು ಮೊದಲಾದವುಗಳ ಘೋರ ವೇದನೆಯನ್ನು ಸಹಿಸುತ್ತವೆ. ಪ್ರಾತಃಕಾಲದಲ್ಲಿ ಹೆಚ್ಚು ಹಸಿವೆಯಾಗುತ್ತದೆ, ಆದರೆ ಆಹಾರವೆಲ್ಲಿಯದು ? ಒಮ್ಮೊಮ್ಮೆ ಆಹಾರ ದೊರಕಿದರೆ ನೀರು ದೊರಕುವುದಿಲ್ಲ, ತೀವ್ರತರವಾದ ತೃಷೆಯ ವೇದನೆಯನ್ನು ಭೋಗಿಸುತ್ತವೆ. ಭಿಲ್ಲ, ಬೇಟೆಗಾರರು ಹೋಗಿ ಕೊಂದು ತರುತ್ತಾರೆ; ಸಬಲವಿದ್ದರೆ ನಿರ್ಬಲಗಳನ್ನು ಸಾಯಿಸಿ ತಿಂದು ಬಿಡುತ್ತವೆ. ಭಿಲ್ಲರು ಬೇಟೆಗಾರರು ಹೋಗಿ ಕೊಂದು ತರುತ್ತಾರೆ ; ಸಬಲವಿದ್ದರೆ ನಿರ್ಬಲಗಳನ್ನು ಸಾಯಿಸಿ ತಿಂದು ಬಿಡುತ್ತವೆ. ಭಿಲ್ಲರು ಹೋಗಿ ಬಿಲಗಳೊಳಗಿಂದ ಹುಡುಕಿ ತೆಗೆದು ಕೊಂದು ಹಾಕುತ್ತಾರೆ. ಬಲಿಷ್ಠ ತಿರ್ಯಂಚಗಳು ನಿರ್ಬಲಗಳನ್ನು ಗುಹೆಗಳಲ್ಲಿ, ಪರ್ವತಗಳಲ್ಲಿ, ವೃಕ್ಷಗಳಲ್ಲಿ, ಕಂದರಗಳಲ್ಲಿ ಅಡಗಿಕೊಂಡವುಗಳನ್ನು ಮಹಾ ಮೋಸದಿಂದ ಹಿಡಿದುಕೊಂಡು ಕೊಂದು ಹಾಕುತ್ತವೆ.

ಸಿಂಹ, ಹುಲಿ ಮೊದಲಾದವು ಕೂಡ ಯಾವಾಗಲೂ ಭಯಭೀತವಿರುತ್ತವೆ, ಆಹಾರ ದೊರಕುವ ನಿಯಮವಿರುವುದಿಲ್ಲ, ಹಸಿವೆ-ಬಾಯಾರಿಕೆಯಿಂದ ಬಿದ್ದುಕೊಂಡಿರುತ್ತವೆ. ಯಾವಾಗ ಒಂದಿಷ್ಟು ಆಹಾರವು ದೊರಕುತ್ತದೆ; ಒಮ್ಮೆ ಎರಡು ದಿವಸದಲ್ಲಿ, ಒಮ್ಮೆ ಮೂರು ದಿವಸದಲ್ಲಿ ದೊರಕುತ್ತದೆ; ಒಮ್ಮೆ ದೊರಕದಿದ್ದರೆ ಘೋರ ವೇದನೆ ಭೋಗಿಸುತ್ತ ಸತ್ತು ಹೋಗುತ್ತವೆ. ಕ್ರೂರ ಮನುಷ್ಯರು ಯಂತ್ರಗಳಿಂದ ಬಲೆಗಳ ಉಪಾಯಗಳಿಂದ ಹಿಡಿದುಕೊಂಡು ಹೊಡೆ-ಹೊಡೆದು ಮಾರುತ್ತಾರೆ, ತಿಂದು ಬಿಡುತ್ತಾರೆ; ಜೀವಿತದ ಕಾಲು ಕತ್ತರಿಸಿ ಮಾರುತ್ತಾರೆ; ನಾಲಿಗೆ ಕತ್ತರಿಸಿ ಮಾರಿ ಬಿಡುತ್ತಾರೆ; ಇಂದ್ರಿಯಗಳನ್ನು ಕತ್ತರಿಸಿ ಮಾರುತ್ತಾರೆ; ಪುಚ್ಚ ಕತ್ತರಿಸಿ ಮಾರಿ ಬಿಡುತ್ತಾರೆ; ಮರ್ಮಸ್ಥಾನಗಳನ್ನು ಕತ್ತರಿಸುತ್ತಾರೆ; ಛೇದಿಸುತ್ತಾರೆ; ತುಂಡು ಮಾಡಿ ಸುಡುತ್ತಾರೆ; ಕುದಿಸುತ್ತಾರೆ; ಚರ್ಮ ಸುಲಿಯುತ್ತಾರೆ ಆ ತಿರ್ಯಂಚ ಗತಿಯಲ್ಲಿ ಯಾರೂ ಶರಣಿಲ್ಲ, ಯಾರೂ ರಕ್ಷಕರಿಲ್ಲ, ಯಾವ ಉಪಾಯವೂ ಇರುವುದಿಲ್ಲ, **ತಿರ್ಯಂಚಗಳಲ್ಲಿಯಂತೂ ತಾಯಿಯೂ ತನ್ನ ಮರಿಗಳನ್ನು ತಿಂದು ಬಿಡುತ್ತದೆ,** ಆಗ ಅಲ್ಲಿ ಬೇರೆ ಯಾರು ರಕ್ಷಣೆ ಮಾಡುವರು ?

**ನಭಚರ ತಿರ್ಯಂಚಗಳ ದುಃಖ :** ನಭಚರ ಪಕ್ಷಿಗಳಿಗೆ ಕೂಡ ನಿರಂತರ ದುಃಖಗಳ ಸಮಾಗಮವಿದೆ. ನಿರ್ಬಲ ಪಕ್ಷಿಗಳನ್ನು ಸಬಲ ಪಕ್ಷಿಗಳು ಹಿಡಿದು ಕೊಂದು ಹಾಕುತ್ತವೆ. ಗಿಡುಗ ಮೊದಲಾದವು ಆಕಾಶದಲ್ಲಿಯೇ ಕೊಂದು ತಿಂದು ಬಿಡುತ್ತವೆ. ಕೊಕ್ಕರೆ, ಗೂಬೆ ಇತ್ಯಾದಿಗಳು ರಾತ್ರಿಯಲ್ಲಿ ಸಂಚರಿಸುವಂಥ ದುಷ್ಟ ಪಕ್ಷಿಗಳು ಹೋಗಿ ಕತ್ತು ಮುರಿದು ಕೊಂದು

ಹಾಕುತ್ತವೆ. ಬೆಕ್ಕು, ನಾಯಿಗಳು ಕೂಡ ಮಹಾ ಮೋಸದಿಂದ ಪಕ್ಷಿಗಳನ್ನು ಹಿಡಿದು ಕೊಲ್ಲುತ್ತವೆ. ಪಕ್ಷಿಗಳು ಭಯಭೀತವಾಗಿ ವೃಕ್ಷಗಳ ಚಿಕ್ಕ ರೆಂಬೆಗಳನ್ನು ಹಿಡಿದುಕೊಂಡು ಕುಳಿತುಕೊಳ್ಳುತ್ತವೆ. ಅವಕ್ಕೆ ಮಲಗಲು, ಹಾಯಾಗಿ ಕುಳಿತುಕೊಳ್ಳಲು ಸಿಗುವುದಿಲ್ಲ; ಅವು ಗಾಳಿಯ, ಮಳೆಯ, ಶೀತದ, ಉಷ್ಣದ ವೇದನೆಯನ್ನು ಭೋಗಿಸುತ್ತ ಸತ್ತು ಹೋಗುತ್ತವೆ. ದುಷ್ಟ ಮನುಷ್ಯರು ಹಿಡಿದು ಪಂಖ ಕಿತ್ತು ಬಿಡುತ್ತಾರೆ, ಸೀಳುತ್ತಾರೆ, ಕಾಯ್ದ ಎಣ್ಣೆಯಲ್ಲಿ ಜೀವಂತವಾಗಿಯೇ ತಾಳಿಸುತ್ತಾರೆ ತಿಂದು ಬಿಡುತ್ತಾರೆ. **ಎಲ್ಲಿ ನೋಡಿದರಲ್ಲಿ ತಿರ್ಯಂಚಗಳಿಗೆ ಘೋರ ದುಃಖವೇ ಇದೆ, ಅದೆಲ್ಲವೂ ಹಿಂಸೆಯ ಫಲವಿದೆ.**

**ಸಾಕಿದ ಸ್ಥಲಚರ ತಿರ್ಯಂಚಗಳ ದುಃಖ :** ಆನೆ, ಒಂಟೆ, ಕುದುರೆ, ಎತ್ತು, ಕತ್ತೆ, ಎಮ್ಮೆ ಇವುಗಳ ಪರಾಧೀನತೆಯ ದುಃಖವನ್ನು ಯಾರು ಹೇಳುವ ಸಾಧ್ಯತೆಯಿದೆ ? ಮೂಗು ಚುಚ್ಚಿದಾರ ಸೇರಿಸುವುದು, ಪರಾಧೀನವಾಗಿ ಬಂಧಿಸಿರುವುದು, ಅವುಗಳಿಗೆ ಸ್ವಚ್ಛಂದವಾಗಿ ತಿರುಗುವುದಿಲ್ಲ - ತಿನ್ನುವುದಿಲ್ಲ; ಚಳಿ-ಮಳೆ-ಬಿಸಿಲುಗಳಲ್ಲಿ ಬಂಧಿಸಿರುವುದು, ಪರಾಧೀನವಾಗಿ ಏನು ಮಾಡುವವು ? ಅವುಗಳ ಮೇಲೆ ಹೆಚ್ಚು ಭಾರ ಹೊರಿಸುತ್ತಾರೆ, ಹೊಡೆಯುತ್ತಾರೆ, ತೀಕ್ಷ್ಣ ಲೋಹದ ಸಲಾಕೆಯಿಂದ ಇರಿಯುತ್ತಾರೆ, ಚರ್ಮದ ಚಾಟಿಯಿಂದ ದಾರಿಯಲ್ಲಿ ಮತ್ತೆ ಮತ್ತೆ ಹೊಡೆಯುತ್ತಾರೆ, ಬೆತ್ತದ ಕೋಲಿನಿಂದ ಮರ್ಮಸ್ಥಾನಗಳಲ್ಲಿ ಹೊಡೆಯುತ್ತಾರೆ.

ಬೆನ್ನು ಬತ್ತಿ ಹೋಗುತ್ತದೆ, ಮಾಂಸವು ಕರಗಿ ಹೋಗುವುದರಿಂದ ಗುಳಿಯಾಗುತ್ತದೆ, ಹೆಗಲು ಸೋರಿ ಹೋಗುತ್ತದೆ, ಮೂಗು ಬತ್ತಿ ಹೋಗುತ್ತದೆ; ಅಲ್ಲಿ ಹುಳು ಬಿದ್ದರೂ ಕೂಡ ಕಲ್ಲು, ಕಟ್ಟಿಗೆ, ಧಾತುಗಳ ಕಠೋರ ಭಾರ ಹೊರಿಸುತ್ತಾರೆ, ಅದರಿಂದ ಮೂಳೆಗಳು ಮುರಿದು ಹೋಗುತ್ತವೆ, ಕಾಲು ಕತ್ತರಿಸಿ ಬೀಳುತ್ತವೆ, ಬಹಳಷ್ಟು ರೋಗಗಳಾಗುತ್ತವೆ, ಎದ್ದು ನಿಲ್ಲುವುದಾಗುವುದಿಲ್ಲ, ಜರೆಯಿಂದ ಜರ್ಜರಿತವಾಗಿ ಹೋಗುತ್ತದೆ ; ಆದಾಗ್ಯೂ ಬಹಳಷ್ಟು ಭಾರ ಹೊರಿಸಿ ಬಹು ದೂರ ತೆಗೆದುಕೊಂಡು ಹೋಗುತ್ತಾರೆ. ಹಸಿವೆ-ಬಾಯಾರಿಕೆ-ರೋಗ-ಬಿಸಿಲುಗಳ ವೇದನೆಯನ್ನು ಗಣನೆಗೆ ತರುವುದಿಲ್ಲ, ಅರ್ಧ ರಾತ್ರಿಯಾದರೂ ಕೂಡ ಹೆಚ್ಚು ಭಾರ ಹೊರಿಸುತ್ತಾರೆ ಮತ್ತು ಮರುದಿವಸ ಸಂಜೆಗೆ ಭಾರ ಇಳಿಸುತ್ತಾರೆ. ಒಂದಿಷ್ಟು ಒಣಹುಲ್ಲು, ಕಣರಹಿತ ಹೊಟ್ಟು ಮೊದಲಾಗಿ ಅತ್ಯಂತ ನೀರಸ ಆಹಾರ ಸ್ವಲ್ಪ ಮಾತ್ರ ದೊರಕುತ್ತದೆ. ಅದು ಕೂಡ ಹೊಟ್ಟೆತುಂಬ ದೊರಕುವುದಿಲ್ಲ - **ಪರಾಧೀನತೆಯ ದುಃಖವು ತಿರ್ಯಂಚ ಗತಿಯ ಸಮಾನ ಬೇರೊಂದಿಲ್ಲ.**

ನಿರಂತರ ಬಂಧನದಲ್ಲಿ ಪಂಜರದಲ್ಲಿ ಘೋರ ದುಃಖ ಭೋಗಿಸುತ್ತವೆ. ಚಾಂಡಾಲರ ಬಾಗಿಲಲ್ಲಿ ಬಂಧಿಸಿರುವುದು, ಕಟುಕರ ಬಾಗಿಲಲ್ಲಿ ಬಂಧಿಸಿರುವುದು, ತಿನ್ನುವುದಕ್ಕೆ ದೊರಕುವುದಿಲ್ಲ. ಅನ್ಯ ಪುಣ್ಯವಂತರ ಬಾಗಿಲಲ್ಲಿ ಕಟ್ಟಿರುವ ತಿರ್ಯಂಚಗಳು ತಿನ್ನುತ್ತಿರುವುದನ್ನು ನೋಡಿ ಮಾನಸಿಕ ದುಃಖವಾಗುತ್ತದೆ. ಇನ್ನೊಂದರ ಆಹಾರದಲ್ಲಿ ಬಾಯಿ ಹಾಕುತ್ತಿದ್ದರೆ ಪಕ್ಕೆಯೆಲುವಿನ ಮೇಲೆ ದೊಡ್ಡ ದೊಣ್ಣೆಯಿಂದ ಹೊಡೆಯುತ್ತಾರೆ. ಅತ್ಯಂತ ಘೋರ ಹಸಿವೆಯ ದುಃಖವನ್ನು ಭೋಗಿಸುತ್ತವೆ. ದಾರಿ ನಡೆಯುವ, ಭಾರ ಹೊರುವ, ರೋಗಗಳ ಘೋರ ದುಃಖವನ್ನು ಭೋಗಿಸುತ್ತವೆ. ತಿರ್ಯಂಚ ಎತ್ತು, ನಾಯಿ ಮೊದಲಾದವುಗಳ ಕಣ್ಣುಗಳಲ್ಲಿ, ಕಿವಿಗಳಲ್ಲಿ, ಇಂದ್ರಿಯಗಳಲ್ಲಿ ಘೋರ ವೇದನೆಯನ್ನುಂಟು ಮಾಡುವಂಥ ರೋಗವು ಉತ್ಪನ್ನವಾಗಿ ಅದರಿಂದ ಮಾಂಸ-ಕರುಳುಗಳು ಹೊರಗೆ ಬರುತ್ತವೆ ಅಂಥ ರೋಗದ ಘೋರತರವಾದ ವೇದನೆಯನ್ನು ಮೌನದಿಂದ ಭೋಗಿಸುತ್ತವೆ.

ಕೆಲವಕ್ಕೆ ತಿನ್ನಲು ಹೊಟ್ಟು ಮತ್ತು ಕುಡಿಯಲು ನೀರು ದೊರಕದಿದ್ದರೂ ಕೂಡ ಘೋರ ವೇದನೆಯನ್ನು ಭೋಗಿಸುತ್ತ ಗ್ರೀಷ್ಮ ಋತುವನ್ನು ಪೂರ್ಣಗೊಳಿಸುತ್ತವೆ. ಶ್ರಾವಣ ಮಾಸವುಬಂದ ನಂತರ ಬಹಳಷ್ಟು ಹುಲ್ಲು ಉತ್ಪನ್ನವಾಗುತ್ತದೆ ಅಲ್ಲಿ ಕೂಡ ಪಾಪದ ಉದಯದಿಂದ ಕೋಟ್ಯಂತರ ನೊಣ-ಸೊಳ್ಳೆಗಳು ಉತ್ಪನ್ನವಾಗುತ್ತವೆ, ಎಲ್ಲಿ ಮೇಯಲು ಹೋಗುತ್ತದೆ ಅಲ್ಲಿ ನೊಣ-ಸೊಳ್ಳೆಗಳು ಬಾಯಿ-ಮೂಗುಗಳಿಗೆ ತೀವ್ರವಾಗಿ ಕಚ್ಚುವುದರಿಂದ ಹುಲ್ಲಿನ ಕಡೆಗೆ ಮುಖ ಮಾಡುವ ಸಾಧ್ಯತೆಯಿರುವುದಿಲ್ಲ, ಕುಳಿತು ಅಥವಾ ಮಲಗಿಕೊಂಡು ಇರಬೇಕೆಂದರೂ ಅಲ್ಲಿ ಕೂಡ ಹೇನುಗಳ ಘೋರ ವೇದನೆಯನ್ನು ಭೋಗಿಸುತ್ತವೆ.

ಒಂಟೆ, ಎತ್ತು, ಕುದುರೆ ಇತ್ಯಾದಿಗಳು ದಾರಿಯಲ್ಲಿ ಭಾರದ ದುಃಖದಿಂದ, ವೃದ್ಧಾವಸ್ಥೆಯಿಂದ, ರೋಗದಿಂದ ಯಾವಾಗ ಸೋತು ಹೋಗುತ್ತವೆ, ನಡೆಯಲಿಕ್ಕೆ ಆಗುವುದಿಲ್ಲ, ಕಾಲುಗಳು ಎತ್ತುವುದಿಲ್ಲ, ಎಷ್ಟು ಹೊಡೆದರೂ ನಡೆಯಲಿಕ್ಕಾಗುವುದಿಲ್ಲ ಆಗ ಅಲ್ಲಿಯೇ ವನದಲ್ಲಿ, ನೀರಿನಲ್ಲಿ, ಪರ್ವತದಲ್ಲಿಯೇ ಬಿಟ್ಟು ಯಜಮಾನನು ಹೊರಟು ಹೋಗುತ್ತಾನೆ. ಅಲ್ಲಿ ನಿರ್ಜನ ಸ್ಥಾನದಲ್ಲಿ, ಕೆಸರಿನಲ್ಲಿ ಏಕಾಕಿಯಾಗಿ ಬಿದ್ದುಕೊಂಡಿರುತ್ತದೆ ; ಯಾರೂ ಶರಣಿಲ್ಲ, ಯಾರಿಗೆ ಹೇಳುವುದು, ಯಾರು ನೀರು ಕುಡಿಸುವರು, ಹುಲ್ಲು ಎಲ್ಲಿಂದ ಬರುವುದು ? ಕೆಸರಿನಲ್ಲಿ ತೀಕ್ಷ್ಣ ಚಳಿಯಲ್ಲಿ, ಮಳೆಯಲ್ಲಿ, ಬಿಸಿಲಲ್ಲಿ ಬಿದ್ದುಕೊಂಡು ಹಸಿವೆ-ಬಾಯಾರಿಕೆಯ ಘೋರ ವೇದನೆಯನ್ನು ಭೋಗಿಸುತ್ತವೆ. ಅಸಮರ್ಥತೆಯನ್ನು ತಿಳಿದುಕೊಂಡು ದುಷ್ಟ ಪಕ್ಷಿಗಳು ತಮ್ಮ ಸೂಜಿಯಂಥ ಚುಂಚುಗಳಿಂದ ಕಣ್ಣುಗಳನ್ನು ಕೀಳಿಕೊಳ್ಳುತ್ತವೆ, ಅನೇಕ ಜೀವಗಳು ಮರ್ಮಸ್ಥಾನಗಳಿಂದ ಮಾಂಸವನ್ನು ಕಿತ್ತುಕೊಂಡು ತಿನ್ನುತ್ತವೆ. ಆಗ ನರಕದ ಸಮಾನವಿರುವ ಘೋರ ವೇದನೆಯನ್ನು ಭೋಗಿಸುತ್ತವೆ, ಅದೆಷ್ಟೋ ದಿವಸಗಳವರೆಗೆ ಚಡಪಡಿಸುತ್ತ ಅತ್ಯಂತ ಕಠಿಣತೆಯಿಂದ ದುಃಖ ಭೋಗಿಸುತ್ತ ಸತ್ತು ಹೋಗುತ್ತವೆ.

**ಈ ಎಲ್ಲ ದುಃಖಗಳು ಅನ್ಯಾಯದಿಂದ ಇತರರ ಧನ ಕಸಿದುಕೊಳ್ಳುವುದರ, ಛಲ ಕಪಟದಿಂದ ದಾನ ತೆಗೆದುಕೊಳ್ಳುವುದರ, ವಿಶ್ವಾಸಘಾತ ಮಾಡುವುದರ, ಅಭಕ್ಷ್ಯ ಭಕ್ಷಣ ಮಾಡುವುದರ, ರಾತ್ರಿಯಲ್ಲಿ ಭೋಜನ ಮಾಡುವುದರ, ನಿರ್ಮಾಲ್ಯ ದೇವದ್ರವ್ಯ ಭಕ್ಷಣ ಮಾಡುವುದರ ಫಲವನ್ನು ತಿರ್ಯಂಚಗತಿಯಲ್ಲಿ ಭೋಗಿಸುತ್ತಾರೆ.** ಇತರರಿಗೆ ಕಲಂಕ ತಗಲಿಸುವುದರ, ತನ್ನ ಪ್ರಶಂಸೆ ಮಾಡಿಕೊಳ್ಳುವುದರ, ಇತರರ ನಿಂದೆ ಮಾಡುವುದರ, ಇತರರ ದೋಷ ಹುಡುಕುವುದರ, ಇತರರ ಮಿಷ್ಟ ಭೋಜನದ ಲಾಲಸೆಯ, ಅತ್ಯಂತ ಮಾಯಾಚಾರ ಮಾಡುವುದರ ಫಲವನ್ನು ತಿರ್ಯಂಚಗತಿಯಲ್ಲಿ ಭೋಗಿಸುತ್ತಾರೆ. ಇಲ್ಲಿ ಅಸಂಖ್ಯಾತ ಅನಂತ ಭವಗಳನ್ನು ತಿರ್ಯಂಚಗತಿಗಳಲ್ಲಿ ಪುನಃ ಪುನಃ ಧಾರಣ ಮಾಡುತ್ತ, ಮಾಯಾಚಾರ ಮೊದಲಾದ ಮತ್ತು ತೀವ್ರರಾಗದ ಪರಿಣಾಮಗಳಿಂದ ತಿರ್ಯಂಚಗತಿಗೆ ಕಾರಣ-ನರಕಗತಿಗೆ ಕಾರಣವಾದ ನವೀನ ಕರ್ಮಗಳನ್ನು ಕಟ್ಟಿಕೊಳ್ಳುತ್ತಾ ಅನಂತಕಾಲ ಕಳೆಯುತ್ತಾನೆ. **ಇವೆಲ್ಲವು ಮಿಥ್ಯಾಶ್ರದ್ಧೆ, ಮಿಥ್ಯಾಜ್ಞಾನ, ಮಿಥ್ಯಾ ಆಚರಣೆಯ ಫಲಗಳಿವೆ.**

**ಮನುಷ್ಯ ಗತಿಯ ದುಃಖ : ಈ ಮನುಷ್ಯ ಗತಿಯಲ್ಲಿ ಕೆಲವರಂತೂ ತಿರ್ಯಂಚಗಳ ಸಮಾನ ಜ್ಞಾನರಹಿತರಿದ್ದಾರೆ.** ಕೆಲವರಿಗಂತೂ ಗರ್ಭದಲ್ಲಿ ಬರುತ್ತಿರುವಂತೆ ತಂದೆ ಸತ್ತು ಹೋಗುತ್ತಾನೆ. ಆಗ ಇತರರ ಆಹಾರ ತಿಂದು, ಹಸಿವೆ-ಬಾಯಾರಿಕೆಗಳನ್ನು ಸಹಿಸುತ್ತ, ಇತರರಿಂದ ತಿರಸ್ಕಾರ ಮಾಡುವುದನ್ನು ಸಹಿಸುತ್ತ ಬೆಳೆಯುತ್ತಾನೆ - ಇತರರ ಸೇವೆ ಮಾಡುತ್ತಾನೆ, ಬಾಲ್ಯಾವಸ್ಥೆಯಿಂದಲೇ ತಿರ್ಯಂಚಗಳ ಸಮಾನ ಭಾರ ಹೊರುತ್ತಾನೆ ; ಅರ್ಧ ಕೆ.ಜಿ. ಧಾನ್ಯದಿಂದ ಹೊಟ್ಟೆ ತುಂಬಿಕೊಳ್ಳುವ ಸಲುವಾಗಿ ಒಂದು ಭಾರ ತಲೆಯ ಮೇಲೆ, ಒಂದು ಭಾರ ಹೆಗಲ ಮೇಲೆ ಒಂದು ಭಾರ ಕೈಯಲ್ಲಿ ತೆಗೆದುಕೊಂಡು ಹನ್ನೆರಡು ಹರದಾರಿಗಳವರೆಗೆ ಬರಿಗಾಲಿನಿಂದ ನಡೆದು ಹೋಗುತ್ತಾನೆ. ಧಾನ್ಯದ, ತುಪ್ಪದ, ಎಣ್ಣೆಯ, ಧಾತುವಿನ ಕಠೋರ ಭಾರ ಹೊರುತ್ತಾನೆ.

ಕೆಲವರು ಇಡೀ ದಿವಸ ನೀರಿನ ಭಾರ ಹೊರುತ್ತಿರುತ್ತಾರೆ ; ಕೆಲವರು ವಿದೇಶಗಳಲ್ಲಿ ಹಗಲಿರುಳು ಗಮನ ಮಾಡುತ್ತಾರೆ; ಗಮನದ ಸಮಾನವಾದ ದುಃಖವು ಬೇರೊಂದಿಲ್ಲ. ಇಪ್ಪತ್ತು-ಮೂವತ್ತು ಮೈಲು ಹೊಟ್ಟೆ ತುಂಬಿಕೊಳ್ಳುವ ಸಲುವಾಗಿ ದಿನ ನಿತ್ಯವೂ ಹೋಗಬೇಕಾಗುತ್ತದೆ. ಕೆಲವರು ಕಲ್ಲು-ಮಣ್ಣುಗಳ ಭಾರವನ್ನು ನಿರಂತರ ಹೊರುತ್ತಿರುತ್ತಾರೆ. **ಕೆಲವರು ಇತರರ ಸೇವೆ ಮಾಡುತ್ತ ಪರಾಧೀನತೆಯಿಂದ ಮನುಷ್ಯ ಜನ್ಮವನ್ನು ವ್ಯತೀತ ಮಾಡುತ್ತಾರೆ.**

ಕೆಲವರು ಕಮ್ಮಾರರಾಗಿ ಲೋಹದ ವಸ್ತು ನಿರ್ಮಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ, ಕೆಲವರು ಕಟ್ಟಿಗೆ ಸೀಳುತ್ತಾರೆ, ಕತ್ತರಿಸುತ್ತಾರೆ-ಕೆತ್ತುತ್ತಾರೆ. ಆಗ ಆಹಾರ ದೊರಕುತ್ತದೆ ಕೆಲವರು ಮಲಿನ ಬಟ್ಟೆ ತೊಳೆಯುತ್ತಾರೆ, ಕೆಲವರು ಬಟ್ಟೆಗೆ ಬಣ್ಣ ಹಾಕುತ್ತಾರೆ, ಕೆಲವರು ಮುದ್ರೆ ಹಾಕುತ್ತಾರೆ, ಕೆಲವರು ಬಟ್ಟೆ ಹೊಲಿಯುತ್ತಾರೆ, ಕೆಲವರು ನೇಯುತ್ತಾರೆ, ಕೆಲವರು ತಿರ್ಯಂಚಗಳ ಸೇವೆ ಮಾಡುತ್ತಾರೆ, ಆದಾಗ್ಯೂ ಹೊಟ್ಟೆ ತುಂಬುವುದಿಲ್ಲ. ಕೆಲವರು ಬೀಸುತ್ತಾರೆ, ಕೆಲವರು ಹುಲ್ಲಿನ ಭಾರ

ಹೊರುತ್ತಾರೆ. ಕೆಲವರು ಕಟ್ಟಿಗೆಯ ಭಾರ ಹೊರುತ್ತಾರೆ, ಕೆಲವರು ಚರ್ಮದ ವಸ್ತು ನಿರ್ಮಿಸುವ ಕೆಲಸ ಮಾಡುತ್ತಾರೆ, ಕೆಲವರು ಬೇಳೆ ಮಾಡುತ್ತಾರೆ, ಕೆಲವರು ಅಡಿಗೆ ಮಾಡುತ್ತಾರೆ, ಕೆಲವರು ಅಗ್ನಿಸಂಸ್ಕಾರದ ಕಾರ್ಯ ಮಾಡುತ್ತಾರೆ, ಕೆಲವರು ಭಟ್ಟಿ ನಡೆಸುತ್ತಾರೆ, ಕೆಲವರು ಎಣ್ಣೆ, ತುಪ್ಪ, ಕ್ಷಾರ ಮೊದಲಾದವುಗಳಿಂದ ಆಜೀವಿಕೆ ಮಾಡುತ್ತಾರೆ.

ಕೆಲವರು ದೈನ್ಯತೆಯನ್ನು ತೋರಿ ಮನೆ-ಮನೆ ಬೇಡುತ್ತಾರೆ, ಕೆಲವರು ಭಿಕ್ಷುಕರಾಗಿ ತಿರುಗುತ್ತಾರೆ, ಕೆಲವರು ರೋದಿಸುತ್ತಾರೆ, ಕೆಲವರು ಕರ್ಮದ ಆಧೀನರಾಗಿ **ತಮ್ಮನ್ನು ಮರೆತು ವ್ಯರ್ಥವಾಗಿ ಮನುಷ್ಯ ಜನ್ಮ ವ್ಯತೀತ ಮಾಡುತ್ತಾರೆ.** ಕೆಲವರು ಕಳವು ಮಾಡುತ್ತಾರೆ. ಮೋಸ ಮಾಡುತ್ತಾರೆ, ಅಸತ್ಯ ಆಡುತ್ತಾರೆ, ವ್ಯಭಿಚಾರ ಮಾಡುತ್ತಾರೆ. ಕೆಲವರು ಚಾಡಿ ಹೇಳುತ್ತಾರೆ, ಕೆಲವರು ಓಣಿಯಲ್ಲಿ ಲೂಟಿ ಮಾಡುತ್ತಾರೆ, ಕೆಲವರು ಮಾರ್ಗದ ಮೇಲೆ ಲೂಟಿ ಮಾಡುತ್ತಾರೆ. ಕೆಲವರು ಸೈನ್ಯದಲ್ಲಿ ಸೇರುತ್ತಾರೆ, ಕೆಲವರು ಸಮುದ್ರದಲ್ಲಿ - ವಿಷಮವನಗಳಲ್ಲಿ ಪ್ರವೇಶ ಮಾಡುತ್ತಾರೆ, ಕೆಲವರು ನದಿಯಲ್ಲಿ ಇಳಿಯುತ್ತಾರೆ, ಕೆಲವರು ಬಾವಿ ತೋಡುತ್ತಾರೆ, ಒಕ್ಕಲುತನ ಮಾಡುತ್ತಾರೆ, ನೌಕೆ ನಡೆಸುತ್ತಾರೆ, ಕೆಲವರು ಅಲಂಕಾರ ವಸ್ತುಗಳನ್ನು ನಿರ್ಮಿಸುತ್ತಾರೆ. ಕೆಲವರು ಮಣ್ಣಿನ ಪಾತ್ರೆ ಮಾಡುತ್ತಾರೆ, ಕೆಲವರು ಆಭೂಷಣ ಮೊದಲಾದುವನ್ನು ಮಾಡುತ್ತಾರೆ. ಕೆಲವರು ಮಲ-ಮೂತ್ರದ ಸ್ಥಾನಗಳನ್ನು ತೊಳೆಯುತ್ತಾರೆ. ಕೆಲವರು ಮಲ-ಮೂತ್ರದ ಭಾರ ಹೊರುತ್ತಾರೆ, ಕೆಲವರು ಪಾತ್ರೆ ತಿಕ್ಕುತ್ತಾರೆ ಮತ್ತು ಜನ್ಮಪೂರ್ಣ ಮಾಡುತ್ತಾರೆ.

ಕೆಲವರು ಹಿಂಸೆಯ ಅನೇಕ ಆರಂಭ, ಹಿಂಸೆಯ ವ್ಯಾಪಾರವನ್ನು ತುಂಬ ಅಭಿಮಾನಿ ಲೋಭಿಯಾಗಿ ಮಾಡುತ್ತಾರೆ. ಕೆಲವರು ಜಮಾ-ಖರ್ಚು ಬರೆಯುವ ಕೆಲಸ ಮಾಡುತ್ತಾರೆ, ಕೆಲವರು ಅನೇಕ ಚಿತ್ರ ಬಿಡಿಸುತ್ತಾರೆ, ಕೆಲವರು ಇಟ್ಟಿಗೆ ತಯಾರಿಸುತ್ತಾರೆ. ಕೆಲವರು ಮನೆಗಳನ್ನು ಕಟ್ಟುತ್ತಾರೆ. ಕೆಲವರು ಜೂಜು ಆಡುತ್ತಾರೆ, ಕೆಲವರು ವೇಶ್ಯಾವೃತ್ತಿ ಮಾಡಿಸುತ್ತಾರೆ, ಕೆಲವರು ಮದ್ಯ ಕುಡಿಯುವ-ಕುಡಿಸುವ ಕಾರ್ಯ ಮಾಡುತ್ತಾರೆ, ಕೆಲವರು ದೊರೆಗಳ ಸೇವೆ ಮಾಡುತ್ತಾರೆ; ಕೆಲವರು ನೀಚರ ಸೇವೆ ಮಾಡುತ್ತಾರೆ, ಕೆಲವರು ಗಾನ ವಿದ್ಯೆಯಿಂದ ಆಜೀವಿಕೆ ಮಾಡುತ್ತಾರೆ, ಕೆಲವರು ವಾದ್ಯ ನುಡಿಸುತ್ತಾರೆ; ಕೆಲವರು ನೃತ್ಯ ಮಾಡುತ್ತಾರೆ. ಕರ್ಮದ ವಶವರ್ತಿಯಾಗಿ ಅನೇಕ ಪ್ರಕಾರದ ಕಷ್ಟಗಳಲ್ಲಿ ಮನುಷ್ಯ ಪರ್ಯಾಯ ವ್ಯತೀತ ಮಾಡುತ್ತಾರೆ. **ಪುಣ್ಯ-ಪಾಪಗಳ ಆಧೀನರಾಗಿ ಅನೇಕ ಮನುಷ್ಯರು ಅನೇಕ ಪ್ರಕಾರದ ಕರ್ಮ ಮಾಡುತ್ತ ಅನೇಕ ಪ್ರಕಾರ ಫಲಗಳನ್ನು ಭೋಗಿಸುತ್ತಿರುವುದು ಪ್ರತ್ಯಕ್ಷವಾಗಿಯೇ ಕಂಡು ಬರುತ್ತಿದೆ.**

ಕೆಲವರು ಧಾನ್ಯ ಮಾರಿ ಆಜೀವಿಕೆ ಮಾಡುತ್ತಾರೆ; ಕೆಲವರು ಸಕ್ಕರೆ,ಬೆಲ್ಲ, ತುಪ್ಪ, ಎಣ್ಣೆ ಮೊದಲಾದುವನ್ನು ಮಾರಿ ಆಜೀವಿಕೆ ಮಾಡುತ್ತಾರೆ. ಕೆಲವರು ಬಟ್ಟೆಯ, ಕೆಲವರು ಚಿನ್ನ-ಬೆಳ್ಳಿಯ, ಕೆಲವರು ಮುತ್ತು-ರತ್ನ ಮೊದಲಾದವುಗಳ ವ್ಯಾಪಾರದಿಂದ ಆಜೀವಿಕೆ ಮಾಡುತ್ತಾರೆ. ಕೆಲವರು ತಾಮ್ರ-ಹಿತ್ತಾಳೆ ಇತ್ಯಾದಿ ಧಾತುಗಳ, ಕೆಲವರು ಲೋಹದ, ಕೆಲವರು ಕಲ್ಲು-ಇಟ್ಟಿಗೆಯ, ಕೆಲವರು ಮಿಠಾಯಿ-ಮೋದಕ ಇತ್ಯಾದಿಗಳ, ಕೆಲವರು ಅನೇಕ ವ್ಯಂಜನಗಳ-ಅನೇಕ ಔಷಧಗಳ ಇವೇ ಮೊದಲಾದವುಗಳನ್ನು ಕರ್ಮದ ಆಧೀನರಾಗಿ ಅನೇಕ ಪ್ರಕಾರದ ಆಜೀವಿಕೆ ಮಾಡುತ್ತಾರೆ.

ಕೆಲವರು ವ್ಯಾಪಾರಿಯಿದ್ದಾರೆ, ಕೆಲವರು ನೌಕರರಿದ್ದಾರೆ, ಕೆಲವರು ಉದ್ಯಮಿಗಳಿದ್ದಾರೆ, ಕೆಲವರು ನಿರುದ್ಯೋಗಿಗಳಿದ್ದಾರೆ, ಕೆಲವರು ಆಲಸಿಗಳಿದ್ದಾರೆ, ಕೆಲವರು ಮನಸೋಕ್ತ ವಸ್ತ್ರಾಭರಣಗಳನ್ನು ಧರಿಸುತ್ತಾರೆ, ಕೆಲವರು ಅತ್ಯಂತ ಕಷ್ಟದಿಂದ ಹೊಟ್ಟೆ ತುಂಬಿಕೊಳ್ಳುತ್ತಾರೆ, ಕೆಲವರು ಯಾವುದೇ ಕಷ್ಟವಿಲ್ಲದೆ ತುಂಬ ಸಂತೋಷದಿಂದ ಭೋಜನ ಮಾಡುತ್ತಾರೆ, ಕೆಲವರು ಇತರರ ಮನೆ ಬಾಗಿಲಿಗೆ ಹೋಗಿ ಯಾಚಕ ವೃತ್ತಿಯಿಂದ ಭೋಜನ ಮಾಡುತ್ತಾರೆ, ಕೆಲವರು ಪೂಜ್ಯ ಗುರುಗಳಾಗಿ ಭೋಜನ ಮಾಡುತ್ತಾರೆ, ಕೆಲವರು ದೀನ-ದರಿದ್ರರಾಗಿ ಭೋಜನ ಮಾಡುತ್ತಾರೆ, ಕೆಲವರು ನೀರಸ ಭೋಜನ ಮಾಡುತ್ತಾರೆ, ಕೆಲವರು ಹೊಟ್ಟೆತುಂಬ ಅನೇಕ ಬಾರಿ ಭೋಜನ ಮಾಡುತ್ತಾರೆ, ಕೆಲವರು ಸಾಧಾರಣ ನೀರಸ ಭೋಜನದಿಂದ ಅರ್ಧ ಹೊಟ್ಟೆಯನ್ನೇ ತುಂಬಿಕೊಳ್ಳುತ್ತಾರೆ, ಕೆಲವರಿಗೆ ಒಂದು ದಿನದ ಅಂತರದಿಂದ ಅತ್ಯಂತ ಕಷ್ಟದಿಂದ ದೊರಕುತ್ತದೆ, ಕೆಲವರಿಗೆ ಭೋಜನ ದೊರಕದಿರುವುದರಿಂದ ಹಸಿವೆ-ಬಾಯಾರಿಕೆಯ ವೇದನೆಯಿಂದ ಮರಣವಾಗಿ ಬಿಡುತ್ತದೆ.

ಕೆಲವರು ಜೈಲಿನಲ್ಲಿಪರಾಧೀನರಾಗಿ ಬಿದ್ದುಕೊಂಡು ಘೋರ ವೇದನೆ ಸಹಿಸುತ್ತಾರೆ, ಕೆಲವರು ತಮ್ಮ ಹಿತ ಚಿಂತಕರ ವಿಯೋಗದಿಂದ ದುಃಖಿಯಿದ್ದಾರೆ, ಕೆಲವರು ಇಡೀ ಜೀವನದ ತುಂಬೆಲ್ಲ ರೋಗಜನಿತ ಘೋರ ವೇದನೆಯನ್ನು ಭೋಗಿಸುತ್ತ ತುಂಬ ದುಃಖಿಯಾಗಿ ಸತ್ತು ಹೋಗುತ್ತಾರೆ. ಕೆಲವರು ಜ್ವರ-ದಮ್ಮು-ಕೆಮ್ಮು, ಅತಿಸಾರದ ವೇದನೆ ಭೋಗಿಸುತ್ತಾರೆ. ಕೆಲವರು ಅನೇಕ ಪ್ರಕಾರದ ವಾತ, ಪಿತ್ತ, ಉದರ ವಿಕಾರ, ಜಲೋದರ ಮೊದಲಾದವುಗಳ ಘೋರ ವೇದನೆ ಭೋಗಿಸುತ್ತಾರೆ. ಕೆಲವರು ಕರ್ಣಶೂಲ, ದಂತಶೂಲ, ನೇತ್ರಶೂಲ, ಮಸ್ತಕಶೂಲ, ಉದರಶೂಲದ ಘೋರ ವೇದನೆ ಭೋಗಿಸುತ್ತ ಸತ್ತು ಹೋಗುತ್ತಾರೆ.

ಕೆಲವರು ಜನ್ಮದಿಂದ ಕುರುಡ, ಕಿವುಡ, ಮೂಗರಿರುತ್ತಾರೆ ಮತ್ತು ಕೆಲವರು ಕೈ-ಕಾಲು ಮೊದಲಾದ ಅಂಗಗಳಿಂದ ವಿಕಲರಾಗಿ ಆಯುಷ್ಯ ಪೂರ್ಣ ಮಾಡುತ್ತಾರೆ. ಕೆಲವರು ಅದೆಷ್ಟೋ ಆಯು ಕಳೆದು ಹೋದ ಮೇಲೆ ಅಂಧರಾಗಿ, ಕಿವುಡರಾಗಿ, ಕೈಯಿಲ್ಲದವರಾಗಿ ಕಾಲಿಲ್ಲದವರಾಗಿ, ಹುಚ್ಚರಾಗಿ, ಪರಾಧೀನರಾಗಿ ಮಾನಸಿಕ ಮತ್ತು ಶಾರೀರಿಕ ಘೋರ ದುಃಖ ಭೋಗಿಸುತ್ತಾರೆ. ಕೆಲವರಿಗಂತೂ ರುಧಿರವಿಕಾರದಿಂದ ಕುಷ್ಟ, ಹುರುಕು, ಕಾಲಿಗೆ ಗಜಕರ್ಣ ಮೊದಲಾದವುಗಳಿಂದ ಬೆರಳುಗಳು ಕರಗಿ ಹೋಗುತ್ತವೆ, ಕೈಗಳು ಕರಗಿ ಹೋಗುತ್ತವೆ, ಮೂಗು, ಕಾಲು ಮೊದಲಾದವು ಕರಗಿ ಹೋಗುತ್ತವೆ ಮತ್ತು ದುಃಖ ಭೋಗಿಸುತ್ತಿರುತ್ತಾರೆ.

**ಕರ್ಮೋದಯದ ಗತಿಯು ಗಹನವಿದೆ.** ಕೆಲವರು ಅಂತರಾಯದ ಉದಯದಿಂದ ನಿರ್ಧನರಾಗಿ ಅನೇಕ ದುಃಖ ಭೋಗಿಸುತ್ತಾರೆ; ಒಮ್ಮೆ ಹೊಟ್ಟೆ ತುಂಬುತ್ತದೆ ಒಮ್ಮೆ ತುಂಬುವುದಿಲ್ಲ, ಒಮ್ಮೆ ನೀರಸ ಭೋಜನವು ಹಳಸಿ ಹೋದದ್ದು-ಕೆಟ್ಟು ಹೋದದ್ದು ತುಂಬಕಷ್ಟದಿಂದ ದೊರಕುತ್ತದೆ; ಅನೇಕ ಪ್ರಕಾರದ ತಿರಸ್ಕಾರ ಭೋಗಿಸುತ್ತಾರೆ. ವಾಸ ಮಾಡುವುದಕ್ಕೆ ಅತ್ಯಂತ ಜೀರ್ಣವಾದ ಮನೆ ಅದರ ಮೇಲೆ ಹುಲ್ಲಿನ ಆಚ್ಛಾದನೆಯು ಕೂಡ ಪೂರ್ಣವಿರುವುದಿಲ್ಲ; ಅಲ್ಲಲ್ಲಿ ನೇತಾಡುತ್ತಿರುತ್ತದೆ. ಅದರಲ್ಲಿ ಕೂಡ ಹಾವು, ಚೇಳು, ಇಲಿ ಮೊದಲಾದವುಗಳ ಬಿಲಗಳು ನಾಲ್ಕೂ ಕಡೆಗೆ ಇರುತ್ತವೆ ; ಅತ್ಯಂತ ದುರ್ಗಂಧ ಮತ್ತು ಚಾಂಡಾಲ ಮೊದಲಾದ ದುಷ್ಕರ್ಮಿಗಳಮನೆಗಳ ಹತ್ತಿರ ಇರಬೇಕಾಗುತ್ತದೆ. ತಿನ್ನುವುದಕ್ಕೆ ಒಂದುಹಿಡಿ ಅನ್ನವೂ ದೊರಕುವುದಿಲ್ಲ, ಕಲಹಕಾರಿಣೀ, ಕಟೂಕ್ತಿಗಳಿಂದ ಯುಕ್ತ, ಮಹಾಭಯಂಕರ, ಕ್ರೂರ, ಭಯಕಾರಿಣಿ ಮತ್ತು ಪಾಪೀ ಸ್ತ್ರೀಯ ಸಮಾಗಮ, ರೋಗೀ, ದರಿದ್ರೀ, ಕುರೂಪಿ, ಸದಾ ವಿಲಾಪ ಮಾಡುತ್ತಿರುವಂಥ ಮಕ್ಕಳ ಸಮಾಗಮವು ಅತ್ಯಂತ ತೀವ್ರ ಪಾಪದ ಉದಯದಿಂದ ಪ್ರಾಪ್ತವಾಗುತ್ತದೆ.

ವ್ಯಸನೀ ದುಷ್ಟ ಮಹಾಪಾಪೀ ಪುತ್ರನ ಜತೆ ; ವೈರಿಗಳಿಗಿಂತಲೂ ಮಹಾ ವೈರಿ ಕ್ರೂರ ದುಷ್ಟ ಸಹೋದರನ ಜತೆ; ಮಹಾದುಷ್ಟ ಅನ್ಯಾಯಮಾರ್ಗೀ, ಪಾಪೀ, ದುರಾಚಾರೀ ಬಲಿಷ್ಠ, ನೆರೆ-ಹೊರೆಯವರ ಜತೆ;ದುಷ್ಟ, ಅವಗುಣಗ್ರಾಹೀ, ಕೃಪಣ, ಕ್ರೋಧೀ, ಮೂರ್ಖ ಒಡೆಯನ ಕ್ಲೇಶಕಾರಕ ಸೇವೆಯು ಪಾಪದ ಉದಯದಿಂದ ದೊರಕುತ್ತದೆ. ದುಷ್ಟ, ಕೃತಘ್ನ ಮನೆ ಮುರುಕ ಸೇವಕನು ದೊರಕುವುದು-ಇವೆಲ್ಲವು ಸಂಸಾರದಲ್ಲಿ ಪಾಪದ ಉದಯದಿಂದ ಕಂಡು ಬರುತ್ತವೆ.

ಧರ್ಮರಹಿತ ಅನ್ಯಾಯ ಮಾರ್ಗದ ಕ್ರೂರ ದೊರೆಯ ರಾಜ್ಯದಲ್ಲಿರುವುದು; ದುಷ್ಟಮಂತ್ರಿ, ಪ್ರಧಾನಿ, ಕೋತವಾಲರ ಜತೆ ದೊರಕುವುದು; ಕಲಂಕ ತಗಲುವುದು, ಅಪಯಶವಾಗುವುದು, ಧನವು ನಷ್ಟವಾಗಿ ಹೋಗುವುದು - ಇವೆಲ್ಲವು ಪಂಚಮ ಕಾಲದ ಮನುಷ್ಯರಲ್ಲಿ ಹಲವು ವಿಧದಿಂದ ಕಂಡು ಬರುತ್ತವೆ.

**ಈ ದುಷಮಕಾಲದಲ್ಲಿ ಎಷ್ಟು ಮನುಷ್ಯರು ಉತ್ಪನ್ನರಾಗುತ್ತಾರೆ ಅವರು ಪೂರ್ವಜನ್ಮದಲ್ಲಿ ವ್ರತ-ಸಂಯಮಗಳಿಂದ ರಹಿತರಾದ ಮಿಥ್ಯಾದೃಷ್ಟಿಗಳಿರುತ್ತಾರೆ, ಅವರೇ ಭರತ ಕ್ಷೇತ್ರದಲ್ಲಿ ಪಂಚಮ ಕಾಲದ ಮನುಷ್ಯರಾಗುತ್ತಾರೆ.** ಯಾರೋ ಮಿಥ್ಯಾಧರ್ಮಿಗಳು ಕುದಾನ, ಕುತಪ, ಮಂದಕಷಾಯದ ಪ್ರಭಾವದಿಂದ ಇಲ್ಲಿ ಮನುಷ್ಯರಾಗಿ ಉತ್ಪನ್ನರಾಗುತ್ತಾರೆ. ಅವರು ರಾಜ್ಯ, ಐಶ್ವರ್ಯ, ಧನ, ಭೋಗ, ಸಂಪತ್ತು, ನಿರೋಗತೆಯನ್ನು ಪಡೆದು ಅಲ್ಪವಾದ ಆಯುಷ್ಯದಲ್ಲಿಯೇ ಅವೆಲ್ಲವುಗಳನ್ನು ಭೋಗಿಸಿ, ಪಾಪದ ಉಪಾರ್ಜನೆ ಮಾಡುವಂಥ ಅನ್ಯಾಯ-ಅಭಕ್ಷ್ಯಗಳ ಮಿಥ್ಯಾಮಾರ್ಗದಲ್ಲಿ ಪ್ರವರ್ತನೆ ಮಾಡಿ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾರೆ.

ಯಾರೋ ವಿರಳ ಪುರುಷರೇ ಇಲ್ಲಿ ಸಮ್ಯಗ್ದರ್ಶನಯುಕ್ತರಾಗಿ ವ್ರತ-ಸಂಯಮಗಳನ್ನು ಧಾರಣ ಮಾಡುತ್ತಾರೆ. ಮಂದ ಕಷಾಯಿ ಆತ್ಮನಿಂದೆ-ಗರ್ಹೆಯಿಂದ ಯುಕ್ತರಾದ ಮನುಷ್ಯರು ತಮ್ಮ ಮನುಷ್ಯ ಜನ್ಮವನ್ನು ಸಾರ್ಥಕಪಡಿಸಿಕೊಂಡು ಸ್ವರ್ಗದಲ್ಲಿ ಮಹರ್ದಿಕ ದೇವರಾಗುತ್ತಾರೆ. ಇಲ್ಲಿ ಯಾವನೋ ಪೂರ್ವಜನ್ಮದಲ್ಲಿ ಮಂದ ಕಷಾಯೀ ಉಜ್ವಲ ದಾನಾದಿಗಳನ್ನು ಮಾಡುವಂಥ ಪುಣ್ಯ ಸಂಯುಕ್ತನೂ ಬಂದು ಬಿಟ್ಟರೆ ಅವನಿಗೆ ಕೂಡ ಇಷ್ಟವಿಯೋಗ ಮತ್ತು ಅನಿಷ್ಟ ಸಂಯೋಗವಾಗೇ ಆಗುತ್ತದೆ.

**ಸಂಸಾರದಲ್ಲಿ ದುಃಖದ ಸ್ವಭಾವ :** ಭರತ ಚಕ್ರವರ್ತಿಯ ಸಹೋದರನು ಬಲಮದದಿಂದ ಚಕ್ರವರ್ತಿಯ ಮಾನಭಂಗ ಮಾಡಿದನು. ನ್ಯಾಯಮಾರ್ಗದಿಂದ ನೋಡಿದರೆ ಭರತನು ದೊಡ್ಡವನು ಪದವಿಯಲ್ಲಿ ತಂದೆಯ ಸಮಾನನಿರುವಂಥವನು, ವಂದನೆಯೋಗ್ಯನಿದ್ದನು. ಅಲ್ಲದೆ ಅವನು ಚಕ್ರವರ್ತಿ ಕುಲದಲ್ಲೂ ದೊಡ್ಡವನಿದ್ದನು ಅವನ ಉಚ್ಚತೆಯನ್ನು ಬಾಹುಬಲಿಗೆ ನೋಡುವುದಾಗಲಿಲ್ಲ. ಭರತನು ಸತ್ಯ ನಿಷ್ಠೆ ಮಮತೆಯಿಂದ ಸೇರಿ ರಾಜ್ಯ ಸುಖ ಭೋಗಿಸುವ ಸಲುವಾಗಿ ಕರೆದನು. ಆದರೆ ಅಣ್ಣನೊಡನೆ ಈರ್ಷೆ ಸಾಧಿಸಿ ಅವಮಾನ ಮಾಡಿದನೆಂದರೆ ಅನ್ಯರ ಕಥೆಯೇನು ಹೇಳುವುದು?

ಒಬ್ಬನಿಗೆ ಪತ್ನಿಯಿಲ್ಲದಿದ್ದರೆ ಅವಳ ತೃಷ್ಣೆಯಿಂದ ಪತ್ನಿಯಿಲ್ಲದೆ ತನ್ನ ಜೀವನವು ವ್ಯರ್ಥವಿದೆಯೆಂದು ಮನ್ನಿಸಿ ದುಃಖಿಯಾಗುತ್ತಿದ್ದಾನೆ. ಒಬ್ಬನಿಗೆ ಸ್ತ್ರೀಯಿದ್ದು ಅವಳು ದುಷ್ಟಳಿದ್ದಾರೆ, ವ್ಯಭಿಚಾರಿಣಿಯಿದ್ದಾಳೆ, ಕಲಹಕಾರಿಣಿಯಿದ್ದಾಳೆ ಮತ್ತು ರೋಗದಿಂದ ನಿರಂತರ ಸಂತಾಪವನ್ನುಂಟು ಮಾಡುವಂಥವಳಿದ್ದಾಳೆ ಅದರಿಂದ ಹೆಚ್ಚುದುಃಖಿಯಾಗುತ್ತಿದ್ದಾನೆ. ಒಬ್ಬನಿಗೆ ಆಜ್ಞಾಧಾರಕ ಮತ್ತು ಪತಿಯ ಇಚ್ಚೆಗೆ ಅನುಸರಿಸಿ ನಡೆಯುವಂಥ ಪತ್ನಿಯು ಸತ್ತು ಹೋದರೆ ಅವಳ ವಿಯೋಗದಿಂದ ಮಹಾದುಃಖಿಯಾಗುತ್ತಾನೆ. ಒಬ್ಬನಿಗೆ ವೃದ್ಧಾವಸ್ಥೆಯಲ್ಲಿ ನಿರ್ಧನತೆಯಲ್ಲಿ ಪತ್ನಿಯ ಮರಣವಾಗಿ ಹೋದರೆ ಆಗ ಚಿಕ್ಕಮಕ್ಕಳು ತಾಯಿಯ ವಿಯೋಗದಿಂದ ಉದಾಸೀನರಾಗಿ ಹೋಗುತ್ತಾರೆ ಅವರನ್ನು ನೋಡಿ ಮಹಾದುಃಖಿಯಾಗುತ್ತಾನೆ.

ಕೆಲವರಂತೂ ವೃದ್ಧಾವಸ್ಥೆಯಲ್ಲಿ ತಮ್ಮ ಮದುವೆಯ ಇಚ್ಛೆ ಮಾಡುತ್ತಾರೆ, ಆದರೆ ಮದುವೆಯಾಗುವುದಿಲ್ಲ, ಅದರಿಂದ ದುಃಖಿಯಿರುತ್ತಾರೆ. ಕೆಲವರು ಪುತ್ರನಿಲ್ಲದಿದ್ದರೆ ದುಃಖಿಯಿದ್ದಾರೆ, ಕೆಲವರು ದುಷ್ಟ ಪುತ್ರರುಗಳಿಂದ ದುಃಖಿಯಿರುತ್ತಾರೆ; ಒಬ್ಬನಿಗೆ ಯಶೋವಂತ ಸುಪುತ್ರನ ಮರಣವಾಗಿ ಹೋದರೆ ಅವನು ಮಗನ ವಿಯೋಗದಿಂದ ದುಃಖಿಯಾಗುತ್ತಾನೆ. ಒಬ್ಬನಿಗೆ ವೈರಿಯ ಸಮಾನ ಹೊಡೆಯುವಂಥ ಕುವಚನಗಳನ್ನಾಡುವಂಥ ಸಹೋದರನ ಸಮಾಗಮದಿಂದ ಮಹಾನ ದುಃಖವಾಗುತ್ತದೆ.

ಕೆಲವರು ಮಹಾರೋಗ ಮತ್ತು ನಿರ್ಧನತೆಯ ದುಃಖದಿಂದ ದುಃಖಿಯಾಗಿರುತ್ತಾರೆ ; ಕೆಲವರಿಗೆ ಹೆಣ್ಣು ಮಕ್ಕಳು ಅಧಿಕವಾಗಿದ್ದರೆ ಅವರ ಮದುವೆ ಮೊದಲಾದವುಗಳ ಸಲುವಾಗಿ ಅವಶ್ಯಕ ಧನವಿಲ್ಲದಿರುವುದರಿಂದ ದುಃಖಿಯಾಗಿರುತ್ತಾರೆ; ಕೆಲವರಿಗೆ ಮಗಳು ಪ್ರಾಪ್ತವಯಸ್ಕಳಾಗಿ ಹೋಗಿದ್ದರೂ ವರನ ಸಂಯೋಗವು ಕೂಡಿಬಾರದಿರುವುದರಿಂದ ಅತ್ಯಧಿಕ ದುಃಖಿಯಾಗಿರುತ್ತಾರೆ. ಒಬ್ಬನಿಗೆ ತನ್ನ ಮಗಳು ಕುರುಡಿ, ಕಿವುಡಿ, ಪೆದ್ದ, ಅಂಗಹೀನ, ಕುರೂಪಿಯಾಗಿದ್ದರೆ ಅವನಿಗೆ ಅವಳ ಸಲುವಾಗಿ ಅತ್ಯಂತ ದುಃಖವಾಗುತ್ತಿರುತ್ತದೆ.

ಒಬ್ಬನ ಮಗಳಿಗೆ ದುರ್ಬುದ್ಧೀ, ವ್ಯಸನೀ, ನಿರ್ಧನ, ರೋಗೀ, ಪಾಪೀ ವರನ ಸಂಯೋಗವಾಗಿ ಹೋಗಿದ್ದರೆ ಘೋರ ದುಃಖವಾಗುತ್ತದೆ. ಒಬ್ಬನ ಮಗಳು ಬಾಲ್ಯಾವಸ್ಥೆಯಲ್ಲಿಯೇ ವಿಧವೆಯಾಗಿ ಹೋಗಿದ್ದರೆ ಮಹಾದುಃಖವಾಗುತ್ತದೆ; ಮಗಳು ನಿರ್ಧನಳಾಗಿದ್ದರೆ ಇನ್ನೂ ದುಃಖವಾಗುತ್ತದೆ; ಮಗಳು ವ್ಯಭಿಚಾರಿಣಿಯಾಗಿ ಹೋದರೆ ಮರಣಕ್ಕಿಂತಲೂ ಅಧಿಕ ದುಃಖವಾಗುತ್ತದೆ ಮತ್ತು ಮದುವೆಯಾದ ಮಗಳ ಮರಣವಾದರೆ ಮಹಾದುಃಖಿಯಾಗುತ್ತಾನೆ.

ತಾಯಿ-ತಂದೆಗಳ ವಿಯೋಗದ ದುಃಖವಾಗುತ್ತದೆ. ತಂದೆಯು ಯಾವನೋ ಬಲಿಷ್ಠ ನಿರ್ದಯಿಯ ಸಾಲ ತೀರಿಸದೇ ಹೋಗಿದ್ದರೆ ಅದರ ದುಃಖವಾಗುತ್ತದೆ, ಏಕೆಂದರೆ ಸಾಲದ ಸಮಾನ ದುಃಖವಿಲ್ಲ. ತಾಯಿ-ತಂಗಿ ವ್ಯಭಿಚಾರಿಣಿಯಿದ್ದರೆ ದುಷ್ಟರಿದ್ದರೆ ಮಹಾದುಃಖ; ಯಾರಾದರೂ ಅವರನ್ನು ಬಲವಂತದಿಂದ ಅಪಹರಿಸಿಕೊಂಡು ಹೋದರೆ, ಓಡಿಸಿಕೊಂಡು ಹೋದರೆ ಮಹಾದುಃಖವಾಗುತ್ತದೆ, ಮತ್ತು ತಮ್ಮ ಮಕ್ಕಳನ್ನು ಯಾರಾದರೂ ಕದ್ದುಕೊಂಡು

ಹೋದರೆ, ಹೊಡೆ-ಬಡೆ ಮಾಡಿದರೆ ಅದರದೂ ಘೋರ ದುಃಖವಾಗುತ್ತದೆ. ದುಷ್ಟರ ಸಮಾಗಮದ ದುಃಖ, ದುಷ್ಟ, ಅಧರ್ಮಿ, ಅನ್ಯಾಯವಂತರ ಜತೆ ಆಜೀವಿಕೆಯು ಕೂಡಿಕೊಂಡಿದ್ದರೆ ಮಹಾ ದುಃಖವಾಗುತ್ತದೆ; ದುಷ್ಟ ಅನ್ಯಾಯವಂತರ ಆಧೀನದಲ್ಲಿ ಕೆಲಸ ಮಾಡುವಂತಿದ್ದರೆ ಘೋರ ದುಃಖವಾಗುತ್ತದೆ.

**ಮನುಷ್ಯ ಜನ್ಮದಲ್ಲಿ ಮೊದಲು ಧನಿಕನಿದ್ದು ನಂತರ ನಿರ್ಧನನಾದರೆ ದುಃಖ, ಮತ್ತು ಮಾನಭಂಗವಾದರೆ ಮಹಾದುಃಖವಾಗುತ್ತದೆ.** ಮೊದಲು ತನ್ನ ಮಿತ್ರನಿದ್ದು ನಂತರ ದೋಷ ನೋಡತೊಡಗಿದರೆ, ದೋಷ ಹೇಳತೊಡಗಿದರೆ, ಅಸತ್ಯ ಆಡತೊಡಗಿದರೆ ತಪ್ಪುಹೊರಿಸತೊಡಗಿದರೆ ಅದರ ಕುರಿತು ತುಂಬ ದುಃಖವಾಗುತ್ತದೆ. **ಈ ಸಂಸಾರವು ಎಲ್ಲ ಪ್ರಕಾರದಿಂದ ದುಃಖರೂಪವೇ ಇದೆ. ಇಲ್ಲಿ ದೊರೆಯಿದ್ದು ದರಿದ್ರನಾಗುತ್ತಾನೆ. ದರಿದ್ರನಿಂದ ದೊರೆಯಾಗುತ್ತಾನೆ ; ಇತ್ಯಾದಿಗಳಿಂದ ಮನುಷ್ಯ ಪರ್ಯಾಯದಲ್ಲಿ ಘೋರದುಃಖವೇ ತುಂಬಿಕೊಂಡಿದೆ.**

**ದೇವಗತಿಯ ದುಃಖ :** ಎಂದಾದರೂ ದೇವ ಪರ್ಯಾಯ ಪಡೆದರೆ ಅಲ್ಲಿ ಕೂಡ ಮಾನಸಿಕ ದುಃಖವಾಗುತ್ತದೆ. ದೇವಗಳಲ್ಲಿ ನಿರ್ಧನತೆಯಿಲ್ಲ, ವೃದ್ಧತ್ವವಿಲ್ಲ, ರೋಗವಿಲ್ಲ, ಕ್ಷುಧೆ-ತೃಷೆ-ಮಾರಣ-ತಾಡನಗಳ ವೇದನೆಯಿಲ್ಲ; ಆದರೂ ಮಹಾ ಋದ್ಧಿಧಾರಕರನ್ನು ನೋಡಿ ತಮ್ಮನ್ನು ಕೀಳೆಂದು ಮನ್ನಿಸಿಕೊಂಡು ಮಾನಸಿಕ ದುಃಖಕ್ಕೆ ಪ್ರಾಪ್ತನಾಗುತ್ತಾನೆ. ಒಮ್ಮೆ ಇಷ್ಟ ದೇವಾಂಗನೆಯ ವಿಯೋಗವಾಗುವುದರಿಂದ ದುಃಖಕ್ಕೆ ಪ್ರಾಪ್ತನಾಗುತ್ತಾನೆ. ಯಾವಾಗ ಓರ್ವ ದೇವಾಂಗನೆಯು ಸತ್ತು ಹೋಗುತ್ತಾಳೆ ಆಗ ಅವಳ ಸ್ಥಾನದಲ್ಲಿ ಶರೀರ, ರೂಪು, ಋದ್ಧಿ ಮೊದಲಾದವುಗಳೊಡನೆ ಅಂಥವಳೇ ಇನ್ನೋರ್ವಳು ಉತ್ಪನ್ನಳಾಗಿ ಬಿಡುತ್ತಾಳೆ, ಆದಾಗ್ಯೂ ಆ ಜೀವದ ವಿಯೋಗದ ದುಃಖವಂತೂ ಉತ್ಪನ್ನವಾಗಿಯೇ ಆಗುತ್ತದೆ.

ಪುಣ್ಯಹೀನ ದೇವರಿದ್ದವರು ಇಂದ್ರ ಮೊದಲಾದ ಮಹರ್ದಿಕ ದೇವರ ಸಭೆಯಲ್ಲಿ ಪ್ರವೇಶ ಮಾಡುವುದಿಲ್ಲ, ಅದರ ಕುರಿತು ಬಹಳಷ್ಟು ಮಾನಸಿಕ ದುಃಖವಾಗುತ್ತದೆ. **ಆಯುಷ್ಪೂರ್ಣವಾದ ಮೇಲೆ ದೇವಲೋಕದಿಂದ ತಮ್ಮ ಪತನವಾಗುವುದನ್ನು ತಿಳಿದು ನಂತರ ಅವರ ದುಃಖವನ್ನು ಅವರೇ ತಿಳಿಯುತ್ತಾರೆ ಅಥವಾ ಅವರ ದುಃಖವನ್ನು ಕೇವಲೀ ಭಗವಂತರೇ ತಿಳಿಯುತ್ತಾರೆ.**

ಈ ಸಂಸಾರದಲ್ಲಿ ಸ್ವರ್ಗದ ಮಹರ್ದ್ಧಿಕ ದೇವನು ಸತ್ತು ಏಕೇಂದ್ರಿಯದಲ್ಲಿ ಬಂದು ಜನ್ಮ ತಾಳುತ್ತಾನೆ. ಮಲ-ಮೂತ್ರದಿಂದ ತುಂಬಿದ ರುಧಿರ-ಮಾಂಸದ ಗರ್ಭದಲ್ಲಿ ಬಂದು ಜನ್ಮ ತಾಳುತ್ತಾನೆ. ಈ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತ ಪುಣ್ಯ-ಪಾಪದ ಪ್ರಭಾವದಿಂದ ನಾಯಿಯಂಥ ತಿರ್ಯಂಚವೂ ಸ್ವರ್ಗದಲ್ಲಿ ಉತ್ಪನ್ನವಾಗಿ ದೇವವಾಗುತ್ತದೆ; ಮತ್ತು ದೇವನು ಸತ್ತು ಬ್ರಾಹ್ಮಣ, ಚಾಂಡಾಲ, ತಿರ್ಯಂಚನಾಗುತ್ತಾನೆ. ಜೀವವು ಕರ್ಮದ ಆಧೀನವಾಗಿ ಚತುರ್ಗತಿಗಳಲ್ಲಿ ಪರಿಭ್ರಮಣ ಮಾಡುತ್ತದೆ.

ಸಂಸಾರದಲ್ಲಿ ದೊರೆಯಿದ್ದವನು ದರಿದ್ರನಾಗುತ್ತಾನೆ, ಒಡೆಯನಿಂದ ಸೇವಕನಾಗುತ್ತಾನೆ, ಸೇವಕನಿಂದ ಒಡೆಯನಾಗುತ್ತಾನೆ. ತಂದೆಯಿದ್ದವನೇ ಮಗನಾಗುತ್ತಾನೆ, ಮಗನಿದ್ದವನೇ ತಂದೆಯಾಗುತ್ತಾನೆ, ತಾಯಿಯಾಗುತ್ತಾನೆ, ಪತ್ನಿಯಿದ್ದವಳು ತಂಗಿಯಾಗುತ್ತಾಳೆ, ದಾಸಿಯಾಗಿದ್ದವಳು ತಾಯಿಯಾಗುತ್ತಾಳೆ, ಸೇವಕನು ತಂದೆಯಾಗುತ್ತಾನೆ, ತಂದೆಯು ಸೇವಕನಾಗುತ್ತಾನೆ. ತಾನೇ ತನ್ನ ಪುತ್ರನಾಗುತ್ತಾನೆ, ದೇವನಾಗುತ್ತಾನೆ,ತಿರ್ಯಂಚನಾಗುತ್ತಾನೆ. ಧನವಂತನಿಂದ ನಿರ್ಧನ ಮತ್ತು ನಿರ್ಧನನಿಂದ ಧನವಂತನಾಗುತ್ತಾನೆ. ರೋಗೀ-ದರಿದ್ರಿಯಿಂದ ದಿವ್ಯಕಾಯ ಮತ್ತು ದಿವ್ಯಕಾಯದಿಂದ ಮಹಾವಿದ್ರೂಪನಾಗುತ್ತಾನೆ.

**ಶರೀರಧಾರಣ ಮಾಡುವುದೇ ದೊಡ್ಡ ಭಾರವಿದೆ.** ಅನ್ಯ ಭಾರವನ್ನು ಹೊತ್ತುಕೊಂಡು ಪುರುಷನಂತೂ ಒಂದು ಸ್ಥಾನದಲ್ಲಿ ಭಾರವನ್ನು ಇಳಿಸಿ ವಿಶ್ರಾಂತಿ ಪಡೆಯುತ್ತಾನೆ; ಆದರೆ ದೇಹದ ಭಾರವನ್ನು ಹೊರುವಂಥ ಪುರುಷನಿಗೆ ಎಲ್ಲಿಯೂ ವಿಶ್ರಾಂತಿಯು ಪ್ರಾಪ್ತವಾಗುವುದಿಲ್ಲ, ಎಲ್ಲಿ ಔದಾರಿಕ ವೈಕ್ರಿಯಿಕ ದೇಹದ ಭಾರವನ್ನು ಕ್ಷಣ ಮಾತ್ರ ಇಳಿಸುತ್ತಾನೆ ಅಲ್ಲಿ ಆತ್ಮನು ಅವುಗಳಿಂದ ಅನಂತ ಗುಣಿತವಾದ ತೈಜಸ ಕಾರ್ಮಾಣ ಶರೀರದ ಭಾರವನ್ನು ಧಾರಣ ಮಾಡಿರುತ್ತಾನೆ.

ತೈಜಸ, ಕಾರ್ಮಾಣ ಶರೀರಗಳು ಆತ್ಮನ ಅನಂತಜ್ಞಾನ, ದರ್ಶನ, ವೀರ್ಯ, ಸುಖಗಳನ್ನು ದಬ್ಬಿ ಇಟ್ಟಿವೆ. ಅವುಗಳ ಕಾರಣದಿಂದ ಕೇವಲಜ್ಞಾನ ಮತ್ತು ಅನಂತಸುಖ ಶಕ್ತಿಗಳು ಅಭಾವಸಮಾನವಾಗಿ ಹೋಗಿವೆ. ಯಾವ ಪ್ರಕಾರ ವನದಲ್ಲಿಕುರುಡ ಮನುಷ್ಯನು ತಿರುಗುತ್ತಾನೆ, ಅದೇ ಪ್ರಕಾರ ಮೋಹದಿಂದ ಕುರುಡನಾದ ಜೀವನು ಚತುರ್ಗತಿಗಳಲ್ಲಿ ಭ್ರಮಣ ಮಾಡುತ್ತಾನೆ.

**ಸಂಸಾರೀ ಜೀವನು ರೋಗ, ದಾರಿದ್ರ್ಯ, ವಿಯೋಗ ಮೊದಲಾದವುಗಳ ದುಃಖದಿಂದ ದುಃಖಿಯಾಗಿ ಧನ ಸಂಪಾದಿಸಿ ದುಃಖ ದೂರ ಮಾಡುವ ಸಲುವಾಗಿ ಮೋಹದಿಂದ ಕುರುಡನಾಗಿ ವಿಪರೀತ ಉಪಾಯ ಮಾಡುತ್ತಾನೆ,** ಸುಖಿಯಾಗಲು ಅಭಕ್ಷ್ಯಭಕ್ಷಣ ಮಾಡುತ್ತಾನೆ, ಮೋಸ-ವಂಚನೆ ಮಾಡುತ್ತಾನೆ, ಹಿಂಸೆ ಮಾಡುತ್ತಾನೆ, ಧನದ ಸಲುವಾಗಿ ಕಳವು ಮಾಡುತ್ತಾನೆ, ಮಾರ್ಗದಲ್ಲಿ ಲೂಟಿ ಮಾಡುತ್ತಾನೆ, ಆದರೆ ಧನವು ಕೂಡ ಪುಣ್ಯಹೀನನ ಕೈಗೆ ಬರುವುದಿಲ್ಲ, **ಸುಖವಂತೂ ಪಂಚಪಾಪಗಳ ತ್ಯಾಗದಿಂದ ಆಗುತ್ತದೆ. ಮಿಥ್ಯಾದೃಷ್ಟಿಯು ಐದೂ ಪಾಪಗಳನ್ನು ಮಾಡಿ ತನ್ನ ಧನದ ವೃದ್ಧಿ, ಕುಟುಂಬದ ವೃದ್ಧಿ, ಸುಖದ ವೃದ್ಧಿಯನ್ನು ಬಯಸುತ್ತಾನೆ. ಇಂದ್ರಿಯ ವಿಷಯಗಳ ಪ್ರಾಪ್ತಿಯಾಗುವಲ್ಲಿ ಸುಖವೆಂದು ತಿಳಿಯುತ್ತಾನೆ. ಇದುವೇ ಮೋಹದ ಅಂಧತೆಯಿದೆ.**

ಇಲ್ಲಿ ನಾವು ಯಾವ ಸಂಸಾರೀ ಜೀವಗಳನ್ನು ದುಃಖಿಯಾಗಿ ಕಾಣುತ್ತೇವೆ ಅವರು ಇತರ ಜೀವಗಳನ್ನು ಹೊಡೆಯುವುದರಿಂದ, ಅಸತ್ಯದಿಂದ, ಕಳವಿನಿಂದ, ಕುಶೀಲದಿಂದ, ಪರಿಗ್ರಹದ ಲಾಲಸೆಯಿಂದ, ಕ್ರೋಧದಿಂದ, ಅಭಿಮಾನದಿಂದ, ಲೋಭದಿಂದ, ಅನ್ಯಾಯದಿಂದ, ಮೋಸದಿಂದಲೇ ದುಃಖಿಯಾಗಿ ಕಾಣುತ್ತವೆ. **ಬೇರೆ ಯಾವುದೂ ದುಃಖಿಯಾಗುವ ಮಾರ್ಗವಿಲ್ಲವೆಂಬುದನ್ನು** ಪ್ರತ್ಯಕ್ಷ ನೋಡುತ್ತಿದ್ದರೂ ಪಾಪಗಳಲ್ಲಿಯೇ ಪ್ರವೃತ್ತಿ ಮಾಡುತ್ತಾನೆ. **ಈ ವಿಪರೀತ ಮಾರ್ಗವೇ ಸಂಸಾರದ ಅನಂತ ದುಃಖಗಳಿಗೆ ಕಾರಣವಿದೆ.** ದುಃಖದಿಂದಲೇ ದುಃಖವು ಉತ್ಪನ್ನವಾಗುತ್ತದೆ. ಅಗ್ನಿಯಿಂದಲೇ ಅಗ್ನಿಯು ಉತ್ಪನ್ನವಾಗುತ್ತದೆಯಲ್ಲವೇನು ?

ಯಾವನು ಈ ಪ್ರಕಾರ ಪುನಃ ಪುನಃ ಸತ್ಯಾರ್ಥಸ್ವರೂಪದ ಚಿಂತನೆ, ಅನುಭವ ಮಾಡುತ್ತಾನೆ ಅವನಿಗೆ ಸಂಸಾರದಿಂದ ವೈರಾಗ್ಯವಾಗುತ್ತದೆ. **ಯಾವನು ವಿರಕ್ತನಾಗುತ್ತಾನೆ ಅವನು ಸಂಸಾರ ಪರಿಭ್ರಮಣವನ್ನು ದೂರ ಮಾಡುವ ಉದ್ಯಮದಲ್ಲಿ ಸಾವಧಾನನಾಗುತ್ತಾನೆ.** ಈ ಪ್ರಕಾರ ಮೂರನೆಯದಾದ ಸಂಸಾರ ಭಾವನೆಯ ವರ್ಣನೆ ಮಾಡಲಾಯಿತು.

**ಏಕತ್ವ ಭಾವನೆ :** ಈಗ ಏಕತ್ವ ಭಾವನೆಯ ಸ್ವರೂಪದ ವರ್ಣನೆ ಮಾಡುತ್ತಾರೆ. ತಮ್ಮ ಸ್ವರೂಪದ ಪ್ರಾಪ್ತಿಯ ಸಲುವಾಗಿ ಅದರ ಚಿಂತನೆ ಮಾಡಬೇಕಾಗುವುದು. ಈ ಜೀವನು ಕುಟುಂಬ, ಪತ್ನೀ, ಪುತ್ರರ ಸಲುವಾಗಿ ಮತ್ತು ತನ್ನ ಶರೀರದ ಪೋಷಣೆಯ ಸಲುವಾಗಿ ಬಹಳಷ್ಟು ಆರಂಭ, ಬಹಳಷ್ಟು ಪರಿಗ್ರಹ, ಅನ್ಯಾಯ, ಅಭಕ್ಷ್ಯ ಮೊದಲಾದುವನ್ನು ಮಾಡುತ್ತಾನೆ ಅದರ ಫಲವನ್ನು ನರಕ ಮೊದಲಾದ ಪರ್ಯಾಯಗಳಲ್ಲಿ ಏಕಾಕಿಯಾಗಿಯೇ ಘೋರ ದುಃಖ ಭೋಗಿಸುತ್ತಾನೆ.

**ಯಾವ ಕುಟುಂಬದ ಸಲುವಾಗಿ ಮತ್ತು ದೇಹದ ಸಲುವಾಗಿ ಪಾಪ ಮಾಡುತ್ತಾನೆ, ಆ ದೇಹವಂತೂ ಅಗ್ನಿಯಲ್ಲಿ ಭಸ್ಮವಾಗಿ ಹಾರಿ ಹೋಗುವುದು, ಕುಟುಂಬವೂ ಪುನಃ ಎಲ್ಲಿ ದೊರಕುವುದು ?** ತಮ್ಮ ಮೂಲಕವಾಗಿಯೇ ಕಟ್ಟಲ್ಪಟ್ಟ ಕರ್ಮಗಳ ಉದಯದಿಂದ ಉಂಟಾದ ರೋಗ, ದುಃಖ, ವಿಯೋಗ ಮೊದಲಾದುವನ್ನು ಭೋಗಿಸುತ್ತಿರುವುದನ್ನು ಪ್ರತ್ಯಕ್ಷ ನೋಡುತ್ತಿದ್ದರೂ ಜೀವದ ಸಮಸ್ತ ಮಿತ್ರ, ಕುಟುಂಬ ಮೊದಲಾದವರು ಸ್ವಲ್ಪಕೂಡ ದುಃಖವನ್ನು ದೂರ ಮಾಡುವ ಸಾಧ್ಯತೆಯಿಲ್ಲವೆಂದ ಮೇಲೆ ನರಕ ಮೊದಲಾದ ಗತಿಗಳಲ್ಲಿ ಯಾರು ಸಹಾಯಕರಾಗುವರು ? ಏಕಾಕಿಯೇ ಭೋಗಿಸುವನು. ಆಯುವಿನ ಕೊನೆ ಬಂದ ನಂತರ ಒಬ್ಬನೇ ಸಾಯುತ್ತಾನೆ. ಮರಣದಿಂದ ಉಳಿಸಿಕೊಳ್ಳಲು ಬೇರಾರೂ ಸಹಾಯಕರಿಲ್ಲ, ಅಶುಭದ ಫಲ ಭೋಗಿಸುವಲ್ಲಿ ತಮಗೆ ಯಾರೂ ಸಹಾಯಕರಾಗುವುದಿಲ್ಲ, ಪರಲೋಕದ ಕಡೆಗೆ ಗಮನ ಮಾಡುವಂಥ ಆತ್ಮನಿಗೆ ಸ್ತ್ರೀ, ಪುತ್ರ, ಮಿತ್ರ, ಧನ, ದೇಹ ಪರಿಗ್ರಹ ಮೊದಲಾದವು ಸಹಾಯ ಮಾಡುವುದಿಲ್ಲ, ಕರ್ಮವು ಜೀವವನ್ನು ಏಕಾಕಿಯಾಗಿಯೇ ತೆಗೆದುಕೊಂಡು ಹೋಗುತ್ತದೆ.

ಈ ಲೋಕದಲ್ಲಿ ಯಾವ ಬಂಧು, ಮಿತ್ರರುಗಳಿದ್ದಾರೆ ಅವರು ಪರಲೋಕದಲ್ಲಿ ಬಂಧು-ಮಿತ್ರರುಗಳಾಗುವುದಿಲ್ಲ, ಇಲ್ಲಿ ಯಾವ ಧನ, ಶರೀರ, ಪರಿಗ್ರಹ, ರಾಜ್ಯ, ನಗರ, ಮನೆ, ಆಭೂಷಣ, ಸೇವಕ ಮೊದಲಾದ ಪರಿಕರವಿದೆ ಅದು ಪರಲೋಕದಲ್ಲಿ ಸಂಗಡ ಬರುವುದಿಲ್ಲ. ಈ ದೇಹದ ಸಂಬಂಧಿಕರು ದೇಹದ ನಾಶವಾಗುತ್ತಿರುವಂತೆಯೇ ಸಂಬಂಧವನ್ನು ಬಿಟ್ಟುಬಿಡುವರು. ತಮ್ಮ ಕರ್ಮಗಳ ಆಧೀನವಾಗಿ ತಮ್ಮ ಸುಖ-ದುಃಖಗಳನ್ನು ತಾವೇ ಭೋಗಿಸಬೇಕಾಗುವುದು. ಜೀವವು ಒಂಟಿಯಾಗಿ ಹೋಗುವುದು. ಆದುದರಿಂದ **ಸಂಬಂಧಿಕರಲ್ಲಿಮಮತೆ ಮಾಡಿ ಪರಲೋಕವನ್ನು ಕೆಡಿಸಿಕೊಳ್ಳುವುದು ಮಹಾ ಅನರ್ಥವಿದೆ.**

**ಯಾವನು ಇಲ್ಲಿ ಸಮ್ಯಕ್ತ್ವ, ವ್ರತ, ಸಂಯಮ, ದಾನ, ಭಾವನೆ ಮೊದಲಾದುವನ್ನು ಮಾಡಿ ಧರ್ಮದ ಸಂಪಾದನೆ ಮಾಡಿದ್ದಾನೆ. ಅದು ಈ ಜೀವನಿಗೆ ಸಹಾಯಕವಾಗುತ್ತದೆ. ಒಂದು ಧರ್ಮದ ಹೊರತಾಗಿ ಯಾರೂ ಸಹಾಯಕರಿಲ್ಲ, ಏಕಾಕಿಯೇ ಇದ್ದಾನೆ.** ಧರ್ಮದ ಪ್ರಸಾದದಿಂದ ಸ್ವರ್ಗ ಲೋಕದಲ್ಲಿ ಇಂದ್ರಪದವಿ, ಮಹರ್ದಿಕ ದೇವನಾಗಿ ತೀರ್ಥಂಕರ, ಚಕ್ರವರ್ತಿ, ಮಂಡಲೇಶ್ವರ, ಉತ್ತಮ ರೂಪು, ಬಲ, ವಿದ್ಯೆ, ಸಂಹನನ, ಉತ್ತಮ ಜಾತಿ, ಉತ್ತಮ ಕುಲ, ತ್ರಿಲೋಕ ಪೂಜ್ಯತೆಯನ್ನು ಪಡೆದು ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ.

**ಯಾವ ಪ್ರಕಾರ ಜೈಲಿನಲ್ಲಿ ಬಂಧನದಿಂದ ಬಂಧಿತನಾದ ಪುರುಷನಿಗೆ ಜೈಲಿನಲ್ಲಿ ರಾಗವಿರುವುದಿಲ್ಲ, ಅದೇ ಪ್ರಕಾರ ಸಮ್ಯಗ್ಜ್ಞಾನೀ ಪುರುಷನಿಗೆ ದೇಹರೂಪದ ಜೈಲಿನಲ್ಲಿ ಅನುರಾಗವಿರುವುದಿಲ್ಲ.** ಏಕೆಂದರೆ ಧನ, ಕುಟುಂಬ ಮೊದಲಾದವುಗಳ ಅಭಿಮಾನಿಯು ಘೋರ ಬಂಧನದಲ್ಲಿ ಪರಾಧೀನನಾಗಿ ದುಃಖ ಭೋಗಿಸುತ್ತಾನೆಂದು ಅವನು ತಿಳಿಯುತ್ತಾನೆ. ಏಕಾಕಿಯಾಗಿ ತನ್ನ ಸ್ವರೂಪವನ್ನು ತಿಳಿದುಕೊಳ್ಳಲಾರದೇ ಪರದ್ರವ್ಯ, ದೇಹ,ಪರಿಗ್ರಹ ಮೊದಲಾದುವನ್ನು ತನ್ನವೆಂದುತಿಳಿದುಕೊಂಡು ಅನಂತಕಾಲದಿಂದ ಭ್ರಮಣ ಮಾಡುತ್ತಲಿದ್ದಾನೆ. ಒಬ್ಬನೇ ಅನ್ಯ ಗತಿಯಿಂದ ಬಂದು ಜನ್ಮಧಾರಣ ಮಾಡುತ್ತಾನೆ; ಕರ್ಮದ ಹೊರತಾಗಿ ಬೇರೆ ಯಾವುದೂ ಜತೆಯಲ್ಲಿ ಬರುವುದಿಲ್ಲ. ಪುಣ್ಯ-ಪಾಪದ ಕರ್ಮವೇ ದೊರೆ, ದರಿದ್ರ, ನೀಚ, ಉಚ್ಚಗಳ ಗರ್ಭ ಮೊದಲಾದ ಯೋನಿ ಸ್ಥಾನಗಳಲ್ಲಿ ಕೊಂಡೊಯ್ಯುತ್ತದೆ. ಉತ್ಪನ್ನ ಮಾಡಿಸುತ್ತದೆ. ಒಬ್ಬನೇ ಆಯುಪೂರ್ಣವಾದ ಮೇಲೆ ಸಮಸ್ತ ಕುಟುಂಬ ಮೊದಲಾದವರನ್ನು ಬಿಟ್ಟುಕೊಟ್ಟು ಪರಲೋಕಕ್ಕೆ ಹೊರಟು ಹೋಗುತ್ತಾನೆ, ಪುನಃ ಮರಳಿ ಬರುವುದಿಲ್ಲ.

ಗರ್ಭದಲ್ಲಿ ವಾಸ ಮಾಡುವ ದುಃಖ, ಯೋನೀ ಸಂಕಟದ ದುಃಖ, ರೋಗ ಸಹಿತ ಶರೀರದ ದುಃಖ, ದರಿದ್ರತೆಯ ಘೋರ ದುಃಖ, ವಿಯೋಗದ ಮಹಾದುಃಖ, ಕ್ಷುಧೆ-ತೃಷೆ ಮೊದಲಾದವುಗಳ ವೇದನೆಯ ದುಃಖ, ಅನಿಷ್ಟ -ದುಷ್ಟರ ಸಂಯೋಗದ ದುಃಖವನ್ನು ಈ ಜೀವನು ಏಕಾಕಿಯಾಗಿ ಭೋಗಿಸುತ್ತಾನೆ.

ಸ್ವರ್ಗಗಳ ಅಸಂಖ್ಯಾತ ಕಾಲದವರೆಗಿನ ಮಹಾನ ಸುಖ, ಅಪ್ಸರೆಯರ ಜತೆ, ಅಸಂಖ್ಯಾತ ದೇವಗಳ ಪ್ರಭುತೆ, ಸಾವಿರಾರು ಋದ್ಧಿ ಮೊದಲಾದವುಗಳ ಸಾಮರ್ಥ್ಯವನ್ನು ಜೀವನು ಪುಣ್ಯದ ಉದಯದಿಂದ ಏಕಾಕಿಯಾಗಿಯೇ ಭೋಗಿಸುತ್ತಾನೆ.

ಪಾಪದ ಉದಯದಿಂದ ನರಕದಲ್ಲಿ ಛೇದನ, ಭೇದನ, ಮಾರಣ, ತಾಡನ, ಶೂಲಾರೋಹಣ, ವೈತರಣೀ ಮಜ್ಜನ ಮೊದಲಾದ ಕ್ಷೇತ್ರಜನ್ಯ, ಶರೀರಜನ್ಯ, ಮನಜನ್ಯ ಮತ್ತು ಪರಸ್ಪರ ಕೃತ ಘೋರ ದುಃಖವನ್ನು ಏಕಾಕಿಯಾಗಿ ಭೋಗಿಸುತ್ತಾನೆ.

ತಿರ್ಯಂಚಗಳ ಪರಾಧೀನ ಬಂಧನ, ಭಾರ ಹೊರುವುದು, ದುರ್ವಚನ ಆಲಿಸುವುದು, ಮರ್ಮಸ್ಥಾನಗಳಲ್ಲಿ ಅನೇಕ ಪ್ರಕಾರದಿಂದ ಪೆಟ್ಟು ಸಹಿಸುವುದು; ದೀರ್ಘಕಾಲದವರೆಗೆ ಹೆಚ್ಚು ಭಾರ ಹೊತ್ತುಕೊಂಡು ಬಹುದೂರದವರೆಗೆ ಹೋಗುವುದು, ಕ್ಷುಧೆ-ತೃಷೆಗಳನ್ನು ಸಹಿಸುವುದು; ರೋಗಗಳ ಅನೇಕ ವೇದನೆಯನ್ನು ಭೋಗಿಸುವುದು; ಶೀತ, ಉಷ್ಣ, ಮಳೆ, ಗಾಳಿ ಇತ್ಯಾದಿಗಳ ಘೋರ ವೇದನೆಯನ್ನು ಭೋಗಿಸುವುದು; ನಾಸಿಕ ಮೊದಲಾದುವಲ್ಲಿ ದಾರ ಹಾಕಿ ಗಟ್ಟಿಯಾಗಿ ಕಟ್ಟುವುದು, ಎಳೆಯುವುದು, ಮೇಲೆ ಹತ್ತುವುದು ಇವೆಲ್ಲ ದುಃಖಗಳನ್ನು ಜೀವವು ಪಾಪದ ಉದಯದಿಂದ ಏಕಾಕಿಯಾಗಿಯೇ ಭೋಗಿಸುತ್ತದೆ. **ಯಾವ ಮಿತ್ರ-ಪುತ್ರ ಮೊದಲಾದವರು ಜತೆಯಲ್ಲಿ ಸಹಾಯಕರಾಗಿ ಇರುವುದಿಲ್ಲ, ಧರ್ಮವೊಂದೇ ನಿಜವಾಗಿ ಸಹಾಯಕವಿದೆ.**

ಈ ಪ್ರಕಾರ ಏಕತ್ವ ಭಾವನೆ ಭಾವಿಸುವುದರಿಂದ ಸ್ವಜನರಲ್ಲಿ ಪ್ರೀತಿಯು ಹೆಚ್ಚುವುದಿಲ್ಲ, ಅನ್ಯ ಪರಿಜನರಲ್ಲಿ ದ್ವೇಷದ ಅಭಾವವಾಗುತ್ತದೆ; ಆಗ ತನ್ನ ಆತ್ಮನ ಶುದ್ಧತೆಯಲ್ಲಿಯೇ ಪ್ರಯತ್ನ ಮಾಡುತ್ತಾನೆ. ಈ ಪ್ರಕಾರದಿಂದ ಏಕತ್ವ ಭಾವನೆಯ ವರ್ಣನೆ ಮಾಡಲಾಯಿತು.

**ಅನ್ಯತ್ವ ಭಾವನೆ :** ಈಗ ಅನ್ಯತ್ವ ಭಾವನೆಯ ಸ್ವರೂಪದ ಚಿಂತನೆ ಮಾಡುವುದು ಯೋಗ್ಯವಿದೆ. ಎಲೈ ಆತ್ಮನೇ ! ಈ ಸಂಸಾರದಲ್ಲಿ ಯಾವ ಪತ್ನೀ, ಪುತ್ರ, ಶರೀರ, ಧನ, ರಾಜ್ಯ, ಭೋಗ ಮೊದಲಾದವುಗಳ ಸಂಬಂಧವು ನಿನ್ನೊಡನೆ ಇದೆ, ಅವೆಲ್ಲವು ನಿನ್ನ ಸ್ವರೂಪದಿಂದ ಬೇರೆಯಿವೆ, ಭಿನ್ನವಿವೆ, ನೀನು ಯಾರ ಸಲುವಾಗಿ ಯೋಚಿಸುತ್ತಿರುವೆ ? ನಿನ್ನೊಡನೆ ಅನಂತಾನಂತ ಜೀವಗಳ ಹಾಗೂ ಅನಂತ ಪುದ್ಗಲಗಳ ಸಂಬಂಧವು ಅನಂತ ಬಾರಿ ಆಗಿ ಬಿಟ್ಟು ಹೋಗಿದೆ. ಅಜ್ಞಾನಿಯಾದ ಸಂಸಾರಿಯು ತನ್ನಿಂದ ಭಿನ್ನವಿರುವ ಪತ್ನೀ, ಪುತ್ರ, ಮಿತ್ರ, ಶತ್ರು, ಕುಟುಂಬ ಮೊದಲಾದವುಗಳ ಸಂಯೋಗ, ವಿಯೋಗ, ಸುಖ, ದುಃಖಗಳಿವೆ ಅವುಗಳ ಚಿಂತನೆ ಮಾಡಿ ಸಮಯ ವ್ಯತೀತ ಮಾಡುತ್ತಾನೆ ; ಆದರೆ ತನಗೆ ಸಮೀಪ ಬಂದಿರುವ ಮರಣ ಮತ್ತು ನರಕ-ತಿರ್ಯಂಚ ಮೊದಲಾದ ಗತಿಗಳಲ್ಲಿ ಹೋಗುವುದರ ಚಿಂತನೆಯನ್ನಾಗಲಿ ವಿಚಾರವನ್ನಾಗಲಿ ಮಾಡುವುದಿಲ್ಲ.

ಈ ಮನುಷ್ಯ ಆಯುವು ಸಮಯ-ಸಮಯಕ್ಕೆ ಹೊರಟು ಹೋಗುತ್ತದೆ, ಇದರಲ್ಲೂ ತನ್ನ ಹಿತ ಮಾಡಿಕೊಳ್ಳದಿದ್ದರೆ, ಪಾಪದಿಂದ ಪರಾಙ್ಮುಖನಾಗದಿದ್ದರೆ, ಕುಗತಿಯ ಕಾರಣವಾದ ರಾಗ, ದ್ವೇಷ ಮೋಹ, ಕಾಮ, ಕ್ರೋಧ, ಲೋಭ ಮೊದಲಾದುವಿಂದ ಆತ್ಮನನ್ನು ಬಿಡಿಸಿಕೊಳ್ಳದಿದ್ದರೆ, ತಿರ್ಯಂಚಗತಿಯಲ್ಲಿ-ನರಕಗತಿಯಲ್ಲಿ ಅಜ್ಞಾನಿಯು ಪರಾಧೀನನಾಗಿ ಆಸಕ್ತನಾಗಿರುತ್ತ ತಾನೇ ಏನು ಮಾಡುವನು ?

ಈ ಪಂಚ ಪರಾವರ್ತನರೂಪದ ಸಂಸಾರದಲ್ಲಿ ಅನಂತಾನಂತ ಕಾಲದಿಂದ ಪರಿಭ್ರಮಣ ಮಾಡುತ್ತಿರುವ ಜೀವನಿಗೆ ತನ್ನವರಾರೂ ಸ್ವಜನರಿಲ್ಲ. **ಆ ಒಡೆಯ -ಸೇವಕ, ಪುತ್ರ, ಮಿತ್ರ, ಬಂಧುಗಳನ್ನು ತನ್ನವರೆಂದು ಮನ್ನಿಸುತ್ತಿರುವುದು ಅದು ಮಿಥ್ಯಾ ಮೋಹದ ಮಹಿಮೆಯಿದೆ, ಅದನ್ನೇ ಮಿಥ್ಯಾತ್ವವೆಂದು ಹೇಳುತ್ತಾರೆ.** ಈ ಕರ್ಮಜನಿತ ಸಂಬಂಧಗಳೆಲ್ಲವು ಅಲ್ಪಕಾಲದ್ದಿವೆ, ಆಕಸ್ಮಿಕವಾಗಿ ಅವುಗಳ ವಿಯೋಗವಾಗಿ ಹೋಗುವುದು. ಈ ಸಮಸ್ತ ಸಂಬಂಧಗಳು ವಿಷಯ-ಕಷಾಯಗಳನ್ನು ಪುಷ್ಟ ಮಾಡುವ ಸಲುವಾಗಿ ಮತ್ತು ತಮ್ಮ ಸ್ವರೂಪವನ್ನು ಮರೆಸುವ ಸಲುವಾಗಿ ಇವೆ.

ಸಂಸಾರದಲ್ಲಿ ಸಮಸ್ತ ಜೀವಗಳೊಡನೆ ತಮ್ಮ-ಶತ್ರು-ಮಿತ್ರತೆಯು ಅನೇಕ ಬಾರಿ ಆಗಿದೆ; ಮುಂದೆ ಕೂಡ ಈ ಪರದ್ರವ್ಯಗಳಲ್ಲಿ ಆತ್ಮಬುದ್ಧಿ ಮಾಡಿ ಅನಂತ ಕಾಲದವರೆಗೆ ಭ್ರಮಣ ಮಾಡಬಹುದು. ಆ ಪರದ್ರವ್ಯಗಳ ಸಂಬಂಧದಲ್ಲಿ ರಾಗ-ದ್ವೇಷ ರೂಪದ ಬುದ್ಧಿ ಮಾಡಿ ಶತ್ರು-ಮಿತ್ರತೆಯ ಬುದ್ಧಿಯಿಂದಲೇ ಏಕೇಂದ್ರಿಯತನ ಮತ್ತು ಜ್ಞಾನ ಪರಿಚಯದ ವಿಚಾರವಿಲ್ಲದೆ ಅಜ್ಞಾನಿಯಾಗಿ ಅನಂತ ಕಾಲದವರೆಗೆ ಭ್ರಮಣ ಮಾಡುವೆ. ಯಾವ ಪ್ರಕಾರ ಅನೇಕ ದೇಶಗಳಿಂದ ಬಂದ ಭಿನ್ನ-ಭಿನ್ನ ಅನೇಕ ಪಥಿಕರು ರಾತ್ರಿ ಒಂದೇ ಸ್ಥಾನದಲ್ಲಿ ಉಳಿದುಕೊಳ್ಳುತ್ತಾರೆ ಅಥವಾ ಒಂದು ವೃಕ್ಷದ ಮೇಲೆ ಅನೇಕ ದಿಶೆಗಳಿಂದ ಬಂದ ಭಿನ್ನ ಭಿನ್ನ ಅನೇಕ ಪಕ್ಷಿಗಳು ರಾತ್ರಿಯಲ್ಲಿ ಬಂದು ವಾಸ ಮಾಡುತ್ತವೆ; ಪ್ರಾತಃಕಾಲವಾದ ಮೇಲೆ ಅವೆಲ್ಲವು ಅನೇಕ ಮಾರ್ಗಗಳಿಂದ ಅನೇಕ ದೇಶಗಳಿಗೆ ಹೊರಟು ಹೋಗುತ್ತವೆ; ಅದೇ ಪ್ರಕಾರ ಪತ್ನಿ, ಪುತ್ರ, ಮಿತ್ರ, ಬಂಧು ಮೊದಲಾದವರು ಅನೇಕಗತಿಗಳೊಳಗಿಂದ ಪುಣ್ಯ-ಪಾಪ ಕಟ್ಟಿಕೊಂಡು ಕುಲರೂಪದ ಸ್ಥಾನದಲ್ಲಿ ಬಂದು ಏಕತ್ರಿತರಾಗಿ ಹೋಗುತ್ತಾರೆ; ತಮ್ಮ-ತಮ್ಮ ಆಯುಷ್ಯವು ಪೂರ್ಣವಾಗಿ ಹೋದ ಮೇಲೆ ಪುಣ್ಯ-ಪಾಪದ ಅನುಸಾರ ನರಕ, ತಿರ್ಯಂಚ, ಮನುಷ್ಯ ಮೊದಲಾದ ಅನೇಕ ಭೇದರೂಪದ ಗತಿಗಳಿಗೆ ಹೊರಟು ಹೋಗುತ್ತಾರೆ.

**ಯಾರೂ ಯಾರವರಿಲ್ಲ.** ಪುಣ್ಯ-ಪಾಪದ ಅನುಸಾರ ಎರಡು ದಿವಸ ತಮಗೆ ಉಪಕಾರ-ಅಪಕಾರ ಮಾಡಿ ಸಂಸಾರದಲ್ಲಿ ಬಂದು ತಿರುಗುತ್ತಿರುತ್ತಾರೆ. **ಈ ಸಂಸಾರದಲ್ಲಿ ಸಮಸ್ತ ಜೀವಗಳ ಪ್ರಕೃತಿಗಳು ಭಿನ್ನ ಭಿನ್ನವಿವೆ, ಯಾರ ಸ್ವಭಾವವು ಬೇರೆ ಯಾರೊಡನೆ ಹೊಂದಿಕೆಯಾಗುವುದಿಲ್ಲ.** ಸ್ವಭಾವದ ಹೊಂದಿಕೆಯಾಗದ ಪ್ರೀತಿಯೆಂಥದು ?

ಪರಸ್ಪರರಲ್ಲಿ ಎಲ್ಲರೂ ತಮ್ಮ-ತಮ್ಮ ವಿಷಯ-ಕಷಾಯರೂಪದ ಪ್ರಯೋಜನ ಸಾಧಿಸುತ್ತಿರುವುದು ಕಂಡು ಬರುತ್ತದೆಯೆಂದ ಮೇಲೆ ಅವರಲ್ಲಿ ಪ್ರೀತಿಯಾಗುತ್ತದೆ, ಪ್ರಯೋಜನವಿಲ್ಲದೆ ಪ್ರೀತಿಯಾಗುವುದಿಲ್ಲ.

**ಈ ಸಂಪೂರ್ಣ ಲೋಕದಲ್ಲಿ ಮಳಲಿನ ಕಣದ ಸಮಾನ ಯಾರದೂ ಯಾರೊಡನೆ ಸಂಬಂಧವಿಲ್ಲ.** ಯಾವ ಪ್ರಕಾರ ಮಳಲಿನ ಭಿನ್ನ ಭಿನ್ನ ಕಣಗಳು ಯಾವುದೇ ನೀರು ಮೊದಲಾದ ಸ್ನಿಗ್ಧ ಪದಾರ್ಥದ ಜತೆಯಲ್ಲಿ ಬರುವುದರಿಂದ ಮುಷ್ಟಿಯಲ್ಲಿ ಬಂಧಿತವಾಗುತ್ತವೆ, ಮೆತ್ತಿಕೊಳ್ಳುತ್ತವೆ; ಸ್ನಿಗ್ಧತೆ ದೂರವಾದ ಮೇಲೆ ಕಣ-ಕಣಗಳು ಭಿನ್ನ-ಭಿನ್ನವಾಗಿ ಹೋಗುತ್ತವೆ; ಅದೇ ಪ್ರಕಾರಸಮಸ್ತ ಪತ್ನೀ, ಪುತ್ರ, ಮಿತ್ರ, ಬಂಧು, ಒಡೆಯ, ಸೇವಕರ ಸಂಬಂಧವಿದೆ. ಎಲ್ಲಿಯವರೆಗೆತಮ್ಮ ಯಾವುದೇ ವಿಷಯ, ಅಭಿಮಾನ, ಲೋಭ ಮೊದಲಾದ ಕಷಾಯಗಳು ಸಾಧಿಸುತ್ತಿರುವುದು ಕಂಡು ಬರುತ್ತದೆ ಅಲ್ಲಿಯವರೆಗೆ ಪ್ರೀತಿಯಿರುತ್ತದೆಯೆಂದು ತಿಳಿಯುವುದು. ಯಾರಿಂದ ತಮ್ಮ ಇಂದ್ರಿಯ ವಿಷಯಗಳು ಸಾಧಿಸುವುದಿಲ್ಲ, ಅಭಿಮಾನ ಮೊದಲಾದ ಕಷಾಯಗಳು ಪುಷ್ಟವಾಗುವುದಿಲ್ಲ, ಅವರ ರೂಕ್ಷ ಪರಿಣಾಮಗಳಿಂದ ಪ್ರೀತಿಯಾಗುವುದಿಲ್ಲ.

ಯಾವ ಪ್ರಯೋಜನವಿಲ್ಲದೆಯೂ ಜಗತ್ತಿನಲ್ಲಿ ಎಲ್ಲಿ ಪ್ರೀತಿಯು ಕಂಡು ಬರುತ್ತದೆ ಅದು ಲೋಕಲಜ್ಜೆಯ ಅಭಿಮಾನದಿಂದ, ಭವಿಷ್ಯದ ಒಂದಿಷ್ಟು ಪ್ರಯೋಜನದ ಆಶೆಯಿಂದ, ಮತ್ತು ಪೂರ್ವಕಾಲದ ಉಪಕಾರವನ್ನು ಲೋಪ ಮಾಡಿದೆನೆಂದರೆ ಲೋಕದಲ್ಲಿ ನನ್ನ ಕೃತಘ್ನತೆಯು ಕಂಡು ಬರಬಹುದೆಂಬ ಭಯದಿಂದ ಸಿಹಿ ವಚನಾದಿಗಳ ರೂಪದ ಪ್ರೀತಿ ಮಾಡುತ್ತಾನೆ.

**ಕಷಾಯ ವಿಷಯಗಳ ಸಂಬಂಧವಿಲ್ಲದೆ ಪ್ರೀತಿಯಾಗುವುದೇ ಇಲ್ಲ.** ಯಾರಿಂದ ತಮ್ಮ ಅಭಿಮಾನವು ಸಾಧಿಸುವಂತೆ ತೋರುತ್ತದೆ, ಧನದ ಲಾಭ, ವಿಷಯ ಭೋಗಗಳ ಲಾಭ, ಆದರ, ದೊಡ್ಡಸ್ತನ ತನ್ನ ಪೂಜ್ಯತೆಯ ಲಾಭ, ಯಶಸ್ಸಿನ ಸಲುವಾಗಿ ಅಥವಾ ಯಾವುದೇ ಪ್ರಕಾರದ ಆಪತ್ತಿಯ ಭಯದಿಂದ ಪ್ರೀತಿ ಮಾಡುತ್ತಾನೆ. **ವಿಷಯ-ಕಷಾಯಗಳ ಸ್ನಿಗ್ಧತೆಯಿಲ್ಲದೆ ಪ್ರೀತಿಯಾಗುವುದೇ ಇಲ್ಲ.** ಎಲ್ಲರೂ ಅನ್ಯರಿದ್ದಾರೆ, ಯಾರೂ ತಮ್ಮವರಿಲ್ಲ.

ತಾಯಿಯು ಕೂಡ ಮಗನ ಪೋಷಣೆ ಮಾಡುತ್ತಾಳೆ ಅವಳು ಕೂಡ ದುಃಖದಲ್ಲಿ - ವೃದ್ಧಾವಸ್ಥೆಯಲ್ಲಿ ತನಗೆ ಆಧಾರವಾಗಬಹುದೆಂದು ಪೋಷಣೆ ಮಾಡುತ್ತಾಳೆ. ಮಗನು ಕೂಡ ತಾಯಿಯ ಪೋಷಣೆ ಮಾಡುತ್ತಾನೆ ಅವನು ಕೂಡ ನಾನು ತಾಯಿಯ ಸೇವೆ ಮಾಡದಿದ್ದರೆ ಜಗತ್ತಿನಲ್ಲಿ ನನಗೆ ಕೃತಘ್ನತನದ ಅಪವಾದ ಬರುವುದು ಮತ್ತು ಪ್ರತಿಷ್ಠಿತ ಜನರಲ್ಲಿ ನನ್ನ ಉಚ್ಚತೆಯು ಉಳಿಯಲಾರದೆಂಬ ಅಭಿಮಾನದಿಂದ ಪ್ರೀತಿ ಮಾಡುತ್ತಾನೆ, ಪೋಷಣೆ ಮಾಡುತ್ತಾನೆ.

**ವೈರಿಯು ಕೂಡ ಉಪಕಾರ, ದಾನ, ಸನ್ಮಾನ ಮಾಡುವುದರಿಂದ ತಮ್ಮ ಮಿತ್ರನಾಗಿ ಹೋಗುತ್ತಾನೆ,** ಮತ್ತು ತಮ್ಮ ಪ್ರೀತಿಯ ಮಗನು ಕೂಡ ವಿಷಯಗಳನ್ನು ತಡೆಯುವುದರಿಂದ, ಅವಮಾನ-ತಿರಸ್ಕಾರ ಮೊದಲಾದುವನ್ನು ಮಾಡುವುದರಿಂದ ಒಂದು ಕ್ಷಣದಲ್ಲಿಯೇ ತಮ್ಮ ವೈರಿಯಾಗಿ ಹೋಗುತ್ತಾನೆ. ಆದುದರಿಂದ ಯಾರಿಗೆ ಯಾರೂ ಮಿತ್ರರೂ ಇಲ್ಲ, ಮತ್ತು ಶತ್ರುಗಳೂ ಇಲ್ಲ. ಉಪಕಾರ-ಅಪಕಾರದ ಅಪೇಕ್ಷೆಯಿಂದಲೇ ಮಿತ್ರತ್ವ-ಶತ್ರುತ್ವವಿದೆ. **ಸಂಸಾರಿಗಳಿಗೆ ಯಾರು ತಮ್ಮ ವಿಷಯ-ಅಭಿಮಾನಗಳನ್ನು ಪುಷ್ಟ ಮಾಡುತ್ತಾರೆ ಅವರು ಮಿತ್ರರಿದ್ದಾರೆ, ಯಾರು ಅವನ್ನು ತಡೆಯುತ್ತಾರೆ ಅವರು ಶತ್ರುಗಳಿದ್ದಾರೆ.**

ಈ ಪ್ರಕಾರ ಜಗತ್ತಿನ ಸ್ವಭಾವ ತಿಳಿದುಕೊಂಡು ಅನ್ಯರಲ್ಲಿ ರಾಗ-ದ್ವೇಷ ಮಾಡುವುದರ ತ್ಯಾಗ ಮಾಡಬೇಕು. ಇಲ್ಲಿ ತಮಗೆ ಯಾರು ಅತ್ಯಂತ ಪ್ರೀತಿ ಪಾತ್ರರಾದ ಪತ್ನೀ, ಪುತ್ರ, ಮಿತ್ರ, ಬಂಧುಗಳಿದ್ದಾರೆ ಅವರೆಲ್ಲರು ಸ್ವರ್ಗ-ಮೋಕ್ಷದ ಕಾರಣಗಳಾದ ಧರ್ಮ, ಸಂಯಮ, ವೀತರಾಗತೆಗಳಲ್ಲಿ ಅತ್ಯಂತ ವಿಘ್ನ ಮಾಡುವಂಥವರಿದ್ದಾರೆ; ಅವರು ಹಿಂಸೆ, ಅಸತ್ಯ, ಕಳವು, ಕುಶೀಲ, ಪರಿಗ್ರಹ ಮೊದಲಾದ ಮಹಾ ಅನೀತಿರೂಪದ ಪರಿಣಾಮ ಮಾಡಿಸಿ ನರಕ ಮೊದಲಾದದುರ್ಗತಿಯ ಬಂಧ ಮಾಡಿಸುತ್ತಾರೆ, ಅವರೇ ಮಹಾನ ವೈರಿಗಳಿದ್ದಾರೆ. **ಈ ಜೀವನನ್ನು ಯಾರು ಮಿಥ್ಯಾತ್ವ, ವಿಷಯ-ಕಷಾಯ ಮೊದಲಾದವುಗಳಿಂದ ತಡೆದು, ಸಂಯಮದಲ್ಲಿ-ದಶಲಕ್ಷಣ ಧರ್ಮದಲ್ಲಿ ಪ್ರವೃತ್ತಿ ಮಾಡಿಸುತ್ತಾರೆ ಅವರೇ ಮಿತ್ರರಿದ್ದಾರೆ, ಅವರು ನಿರ್ಗ್ರಂಥ ಗುರುಗಳೇ ಇದ್ದಾರೆ.**

**ಈ ಆತ್ಮನು ಸ್ವಭಾವದಿಂದಲೇ ಶರೀರ ಮೊದಲಾದವುಗಳಿಂದ ಭಿನ್ನ ಲಕ್ಷಣವುಳ್ಳ ಚೈತನ್ಯಮಯನಿದ್ದಾನೆ; ದೇಹವು ಪುದ್ಗಲಮಯ ಅಚೇತನ ಜಡವಿದೆ.** ಯಾವಾಗ ದೇಹವೇ ಭಿನ್ನವಿದೆ, ಅನ್ಯವಿದೆ, ವಿನಾಶಶೀಲವಿದೆಯೆಂದ ಮೇಲೆ ದೇಹದ ಸಂಬಂಧಿಗಳಾದ ಪತ್ನೀ, ಪುತ್ರ, ಮಿತ್ರ, ಕುಟುಂಬ, ಧನ, ಧಾನ್ಯ, ಮನೆ ಮೊದಲಾದವು ಭಿನ್ನ ಹೇಗಾಗುವುದಿಲ್ಲ? ಈ ಶರೀರವಂತೂ ಅನೇಕ ಪುದ್ಗಲ ಪರಮಾಣುಗಳ ಸಮೂಹದಿಂದ ಕೂಡಿ ಆಗಿದೆ ; ಆ ಶರೀರದ ಪರಮಾಣುಗಳು ಭಿನ್ನ ಭಿನ್ನವಾಗಿ ಚದುರಿ ಹೋಗುವವು ಮತ್ತು ಅಖಂಡ, ಅವಿನಾಶೀ, ಚೈತನ್ಯ ಸ್ವಭಾವದ ಆತ್ಮನು ಸ್ಥಿರವಾಗಿ ಉಳಿಯುವನು. ಆದುದರಿಂದ ಸಮಸ್ತ ಸಂಬಂಧಗಳಲ್ಲಿ ಅನ್ಯತೆಯ ದೃಢ ನಿರ್ಣಯ ಮಾಡಬೇಕು.

**ಕರ್ಮದ ಉದಯಜನಿತ ರಾಗ,ದ್ವೇಷ, ಮೋಹ, ಕಾಮ,ಕ್ರೋಧ ಮೊದಲಾದವೂ ಭಿನ್ನವಿವೆ, ವಿನಾಶ ಶೀಲವಿವೆಯೆಂದ ಮೇಲೆ ಅನ್ಯ ಶರೀರದ ಸಂಬಂಧಿಗಳು ಅನ್ಯರು ಹೇಗೆ ಆಗುವುದಿಲ್ಲ ?** ಆದುದರಿಂದ ತಮ್ಮ ಜ್ಞಾನ-ದರ್ಶನ ಸ್ವಭಾವದ ಹೊರತಾಗಿ ಅನ್ಯವಾದ ಆ ಜ್ಞಾನಾವರಣ ಮೊದಲಾದ ದ್ರವ್ಯ ಕರ್ಮ, ರಾಗ-ದ್ವೇಷ ಮೊದಲಾದ ಭಾವ ಕರ್ಮ, ಶರೀರ ಪರಿಗ್ರಹ ಮೊದಲಾದ ನೋಕರ್ಮಗಳೆಲ್ಲವೂ ಆತ್ಮನಿಂದ ಭಿನ್ನವಿವೆ. ಆ ಪುತ್ರಾದಿಕರಂತೂ ಅನ್ಯ ಗತಿಯಿಂದ ಬಂದ ಪಾಪ, ಪುಣ್ಯ, ಸ್ವಭಾವ, ಕಷಾಯ, ಆಯು, ದೇಹ ಮೊದಲಾದುವಕ್ಕೆ ಸಂಬಂಧರೂಪವಾಗಿ ಕಾಣುತ್ತಾರೆ. ನಿಮ್ಮ ಸ್ವಭಾವವು ಪಾಪ, ಪುಣ್ಯ ಮತ್ತು ಅವೆಲ್ಲವುಗಳಿಂದ ಬೇರೆಯಿದೆ. ಆದುದರಿಂದ ಅನ್ಯತ್ವ ಭಾವನೆ ಭಾವಿಸಿರಿ, ಅದರಿಂದ ಇವುಗಳ ಮಮತಾಜನ್ಯ ಘೋರ ಬಂಧದ ಅಭಾವವಾಗಿ ಹೋಗುವುದು. ಈ ಪ್ರಕಾರ ಅನ್ಯತ್ವ ಭಾವನೆಯ ವರ್ಣನೆ ಮಾಡಲಾಯಿತು.

**ಅಶುಚಿ ಭಾವನೆ :** ಈಗ ಅಶುಚಿ ಭಾವನೆಯ ಸ್ವರೂಪದ ವರ್ಣನೆ ಮಾಡುತ್ತಾರೆ. ಎಲೈ ಆತ್ಮನೇ ! ಈ ದೇಹದ ಸ್ವರೂಪದ ಚಿಂತನೆ ಮಾಡು. ಮಾತೆಯ ಮಹಾಮಲಿನ ರುಧಿರ ಮತ್ತು ಪಿತನ ವೀರ್ಯದಿಂದ ಉತ್ಪನ್ನವಾಗಿದೆ. ಅತ್ಯಂತ ದುರ್ಗಂಧಯುಕ್ತ ಮಲಿನ ಗರ್ಭದಲ್ಲಿ ರುಧಿರ-ಮಾಂಸದಿಂದ ತುಂಬಿದ ಗರ್ಭಕೋಶದಲ್ಲಿ ಒಂಭತ್ತು ತಿಂಗಳು ಪೂರ್ಣ ಮಾಡಿ ಮಹಾ ದುರ್ಗಂಧಿತವಾದ ಮಲಿನ ಯೋನಿಯೊಳಗಿಂದ ಹೊರ ಬರುವ ಘೋರ ಸಂಕಟ ಸಹಿಸುತ್ತಾನೆ. ಸಪ್ತಧಾತುಮಯ ಎಂದರೆ ದೇಹದ ರಸ, ರಕ್ತ, ಮಾಂಸ, ಮಜ್ಜ, ಮೇದಸ್ಸು, ಅಸ್ತಿ, ಶುಕ್ಲ, ಚರ್ಮ ಮತ್ತು ನಾಡಿಯ ಜಾಲಮಯವಾದ ದೇಹ ಧಾರಣ ಮಾಡಿದೆ, ಅದು ಮಲ-ಮೂತ್ರ-ಕ್ರಿಮಿಗಳಿಂದ ತುಂಬಿಕೊಂಡು ಮಹಾ ಅಶುಚಿಯಿದೆ. ನವದ್ವಾರಗಳಿಂದ ನಿರಂತರ ದುರ್ಗಂಧಿತ ಮಲವನ್ನು ಉಗುಳುತ್ತಿರುತ್ತದೆ. **ಮಲದಿಂದಲೇ ನಿರ್ಮಿತವಾದ ಕೊಡವು ಮಲದಿಂದಲೇ ತುಂಬಿಕೊಂಡು, ಅದು ಒಡೆದು ಹೋಗಿ ನಾಲ್ಕೂ ಕಡೆಗೆ ಮಲವನ್ನೇ ತೂರುತ್ತಿರುತ್ತದೆ; ಅದನ್ನು ನೀರಿನಿಂದ ತೊಳೆದ ಮೇಲೆ ಹೇಗೆ ಪವಿತ್ರವಾಗುವ ಸಾಧ್ಯತೆಯಿದೆ ?**

ಜಗತ್ತಿನಲ್ಲಿ ಕರ್ಪೂರ, ಚಂದನ, ಪುಷ್ಪ, ತೀರ್ಥಜಲ ಮೊದಲಾದವು ಯಾವ ಶರೀರದ ಸ್ಪರ್ಶ ಮಾತ್ರದಿಂದ ಮಲಿನ-ದುರ್ಗಂಧಿತವಾಗಿ ಹೋಗುತ್ತವೆ ಆ ಶರೀರವು ಹೇಗೆ ಪವಿತ್ರವಾಗುವ ಸಾಧ್ಯತೆಯಿದೆ ? **ಜಗತ್ತಿನಲ್ಲಿ ಎಷ್ಟು ಪವಿತ್ರ ವಸ್ತುಗಳಿವೆ ಅವು ದೇಹದ ಒಂದೊಂದು ಅವಯವದ ಸ್ಪರ್ಶದಿಂದ ಅಪವಿತ್ರವಾಗಿ ಹೋಗುತ್ತವೆ.** ಮಲ, ಮೂತ್ರ, ಚರ್ಮ, ಮೂಳೆ, ರಸ, ರುಧಿರ, ಮಾಂಸ, ವೀರ್ಯ, ಕೇಶ, ಕಫ, ಉಗುರು, ಜೊಲ್ಲು, ನಾಸಿಕಮಲ, ದಂತಮಲ, ನೇತ್ರಮಲ, ಕರ್ಣಮಲದ ಸ್ಪರ್ಶ ಮಾತ್ರದಿಂದ ಅಪವಿತ್ರವಾಗಿ ಹೋಗುತ್ತವೆ. ದ್ವೀಂದ್ರಿಯ ಮೊದಲಾದ ಪ್ರಾಣಿಗಳ ದೇಹದ ಹೊರತಾಗಿ ಯಾವ ಅಪವಿತ್ರ ವಸ್ತುವೇ ಲೋಕದಲ್ಲಿ ಇಲ್ಲ. **ದೇಹದಸಂಬಂಧವಿಲ್ಲದೆ ಲೋಕದಲ್ಲಿ ಅಪವಿತ್ರತೆಯು ಎಲ್ಲಿಂದ ಆಗುವುದು?**

**ದೇಹವನ್ನು ಪವಿತ್ರ ಮಾಡುವ ಸಲುವಾಗಿ ಮೂರು ಲೋಕದಲ್ಲಿ ಯಾವ ಪದಾರ್ಥವಿಲ್ಲ.** ನೀರಿನಿಂದ ಕೋಟ್ಯಂತರ ಬಾರಿ ತೊಳೆದರೂ ಜಲವೇ ಅಪವಿತ್ರವಾಗಿ ಹೋಗುತ್ತದೆ, ಆದರೆ ದೇಹವು ಪವಿತ್ರವಾಗುವುದಿಲ್ಲ. **ಯಾವ ಪ್ರಕಾರ ಇದ್ದಲಿಯನ್ನು ಎಷ್ಟೆಷ್ಟು ತೊಳೆಯುತ್ತದೆ ಅಷ್ಟಷ್ಟು ಅದರೊಳಗಿಂದಕಪ್ಪು ಮಸಿಯೇ ಹೊರಡುತ್ತದೆ, ಅದು ಉಜ್ವಲ ವಾಗುವುದಿಲ್ಲ, ಅದೇ ಪ್ರಕಾರ ದೇಹದ ಸ್ವಭಾವವಿದೆಯೆಂದು ತಿಳಿಯುವುದು. ದೇಹವನ್ನು ಪವಿತ್ರವೆಂದು ಮನ್ನಿಸುವುದು ಮಿಥ್ಯಾದರ್ಶನವಿದೆ. ಈ ದೇಹವಂತೂ ಒಂದು ರತ್ನತ್ರಯ, ಉತ್ತಮ ಕ್ಷಮೆ ಮೊದಲಾದ ಧರ್ಮವನ್ನು ಧಾರಣ ಮಾಡಿದ ಮೇಲೆ ಆತ್ಮನ ಸಂಬಂಧದಿಂದ ದೇವಗಳ ಮೂಲಕ ವಂದನೆ ಯೋಗ್ಯ ಪವಿತ್ರವಾಗಿ ಹೋಗುತ್ತದೆ.**

**ಧನ ಮೊದಲಾದ ಪರಿಗ್ರಹ, ಪಂಚೇಂದ್ರಿಯ ವಿಷಯಗಳು, ಮಿಥ್ಯಾತ್ವ, ಕ್ರೋಧ, ಮಾನ, ಮಾಯೆ, ಲೋಭ ಇವು ಅಮೂರ್ತಿಕ ಆತ್ಮನ ಸ್ವಭಾವ (ಪರ್ಯಾಯ)ವನ್ನು ಮಹಾಮಲಿನ ಮಾಡುತ್ತವೆ, ಅಧರ್ಮ ಮಾಡುತ್ತವೆ, ನಿಂದ್ಯ ಮಾಡುತ್ತವೆ, ದುರ್ಗತಿಗೆ ಪ್ರಾಪ್ತ ಮಾಡಿಸುತ್ತವೆ.** ಆದ್ದರಿಂದ ಕಾಮ, ಕ್ರೋಧ, ರಾಗಾದಿಗಳನ್ನು ಬಿಟ್ಟುಕೊಟ್ಟು ಆತ್ಮನನ್ನು ಪವಿತ್ರ ಮಾಡಬೇಕು, ದೇಹವು ಪವಿತ್ರವಾಗಲಾರದು - ಆಗುವುದಿಲ್ಲ.

ಈ ಪ್ರಕಾರ ದೇಹದ ಸ್ವರೂಪ ತಿಳಿದುಕೊಂಡು ದೇಹದ ಕುರಿತು ರಾಗವನ್ನು ಬಿಟ್ಟುಕೊಟ್ಟು ಯಾವವು ಆತ್ಮನೊಡನೆ ಅನಾದಿಯಿಂದ ಸಂಬಂಧರೂಪವಿವೆ, (ಆತ್ಮನಿಗೆ ತಗಲುತ್ತಲಿವೆ) ಆ ರಾಗ ಮೊದಲಾದ ಕರ್ಮ ಮಲವನ್ನು (ದೋಷಗಳನ್ನು ) ದೂರ ಮಾಡುವ ಸಲುವಾಗಿ ಸತತ ಪ್ರಯತ್ನ ಮಾಡಬೇಕು.

ಧನ ಸಂಪತ್ತು ಮೊದಲಾದ ಪರಿಗ್ರಹ, ಪಂಚೇಂದ್ರಿಯಗಳ ಭೋಗ, ದೇಹದಲ್ಲಿ ಸ್ನೇಹ ಇವು ಆತ್ಮನನ್ನು ಮಲಿನ ಮಾಡುವಂಥವುಗಳಿವೆ, ಆದುದರಿಂದ ಇವುಗಳ ಅಭಾವದ ಉದ್ಯಮ ಮಾಡಬೇಕು. **ಧನವಂತೂ ಆತ್ಮನಲ್ಲಿ ಕಾಮ, ಕ್ರೋಧ, ಲೋಭ, ಮದ, ಕಪಟ, ಮಮತೆ, ವೈರ, ಕಲಹ, ಮಹಾಆರಂಭ, ಮೂರ್ಛೆ, ಈರ್ಷೆ, ಅತೃಪ್ತಿ ಮೊದಲಾದ ಸಾವಿರಾರು ದೋಷಗಳನ್ನು ಉತ್ಪನ್ನಮಾಡುವಂಥವುಗಳಿವೆ. ಈ ಲೋಕ ಸಂಬಂಧದ ಸಮಸ್ತ ದೋಷ, ಅತ್ಯಂತ ಚಿಂತೆ, ದುರ್ಧ್ಯಾನ, ಮಹಾಭಯವನ್ನುತ್ಪನ್ನ ಮಾಡುವಂಥದು ಒಂದು ಧನವಿದ್ದು ಅದರ ಸಲುವಾಗಿ ನಿರ್ಣಯ ಮಾಡಿ ವಿಚಾರ ಮಾಡಬೇಕು.**

ಪಂಚೇಂದ್ರಿಯ ವಿಷಯಗಳು ಆತ್ಮನಿಗೆ ಸ್ವರೂಪವನ್ನು ಮರೆಸಿ ಮಹಾನಿಂದ್ಯ ಕಾರ್ಯ ಮಾಡಿಸುತ್ತವೆ. ಜಗತ್ತಿನಲ್ಲಿ ಮಾಡಲು ಯೋಗ್ಯವಿಲ್ಲದಂಥ ನಿಂದ್ಯ ಕಾರ್ಯಗಳನ್ನು ಇಂದ್ರಿಯ ವಿಷಯಗಳ ಇಚ್ಛೆಯು ಮಾಡಿಸುತ್ತದೆ. ದೇಹದಲ್ಲಿ ಸ್ನೇಹ ಮಾಡುವುದೆಂದರೆ ಮೂಳೆ, ಮಾಂಸ, ರುಧಿರಮಯ, ಮಹಾದುರ್ಗಂಧಿತ, ಕೊಳೆತ ಕಳೇವರದ ಮೇಲೆ ರಾಗ ಮಾಡಿದಂತಿದೆ, ಅದು ಮಹಾ ಮಲಿನ ಭಾವದ ಕಾರಣವಿದೆ. ಇಂಥ ಶರೀರವನ್ನು ಪವಿತ್ರ ಮಾಡುವಂಥದು ದಶಲಕ್ಷಣ ಧರ್ಮವೇ ಇದೆ.

**ಲೋಕೋತ್ತರ ಮತ್ತು ಲೌಕಿಕವೆಂದು ಶುಚಿತ್ವವು ಎರಡು ಪ್ರಕಾರದ್ದಿದೆ. ಕರ್ಮ ಮಲವನ್ನು ತೊಳೆದು ಶುದ್ಧ ಆತ್ಮ ಸ್ವರೂಪದಲ್ಲಿ ಸ್ಥಿರವಾಗುವುದು ಅದು ಲೋಕೋತ್ತರ ಶೌಚವಿದೆ, ಅದರ ಕಾರಣವು ರತ್ನತ್ರಯ ಭಾವವಿದೆ. ರತ್ನತ್ರಯದ ಧಾರಕ ಪರಮ ಸಾಮ್ಯಭಾವದಿಂದ ಇರುವಂಥ ಸಾಧುಗಳು ಕೂಡ ಲೋಕೋತ್ತರ ಶುಚಿತ್ವದ ಕಾರಣರಿದ್ದಾರೆ, ಅವರ ಸಹವಾಸ ಮಾಡಿ ಶುದ್ಧಾತ್ಮನನ್ನು ಪ್ರಾಪ್ತ ಮಾಡಿಕೊಳ್ಳಬೇಕಾಗುವುದು.**

**ಲೌಕಿಕ ಶೌಚವು ಎಂಟು ಪ್ರಕಾರದ್ದಿದೆ.** ಕೆಲವರು ಕಾಲಶೌಚ ಆ ಪ್ರಾಮಾಣಿಕ ಕಾಲವು ಕಳೆದು ಹೋದ ಮೇಲೆ ಲೋಕದಲ್ಲಿ ಶುಚಿ ಮನ್ನಿಸುತ್ತಾರೆ; ಕೆಲವರು ಅಗ್ನಿಸಂಸ್ಕಾರ-ಅಗ್ನಿಯಲ್ಲಿ ಸುಡುವುದರಿಂದ ಶುಚಿತೆ ಮನ್ನಿಸುತ್ತಾರೆ; ಕೆಲವರು **ಪವನ**ದಿಂದ, ಕೆಲವರು **ಭಸ್ಮ**ದಿಂದ ಉಜ್ಜುವುದರಿಂದ, ಕೆಲವರು **ಮಣ್ಣಿ**ನಿಂದ, ಕೆಲವರು ಜಲದಿಂದ, ಕೆಲವರು **ಗೋಮಯ** ಬಳೆಯುವುದರಿಂದ, ಕೆಲವರು **ಜ್ಞಾನ**ದಿಂದ ಗ್ಲಾನಿ ಕಳೆಯುವುದರಿಂದ ಲೌಕಿಕ ಜನರು ಮನಸ್ಸಿನಿಂದ ಶುಚಿತ್ವ ಮನ್ನಿಸುತ್ತಾರೆ; ಆದರೆ ಶರೀರವನ್ನು ಪವಿತ್ರ ಮಾಡುವಲ್ಲಿ ಯಾರೂ ಸಮರ್ಥರಿಲ್ಲ, ಶರೀರದ ಸಂಸರ್ಗದಿಂದಂತೂ ನೀರು, ಭಸ್ಮ ಮೊದಲಾದುವೇ ಅಶುಚಿಯಾಗಿ ಹೋಗುತ್ತವೆ.

**ಈ ಶರೀರವು ಆದಿಯಲ್ಲಿ, ಮಧ್ಯದಲ್ಲಿ, ಕೊನೆಯಲ್ಲಿ ಎಲ್ಲಿಯೂ ಶುಚಿಯಿಲ್ಲ,** ಅದರ ಉಪಾದಾನ ಕಾರಣವಾದ ರಕ್ತ-ಮಾಂಸಗಳು ಶುಚಿಯಿಲ್ಲ; ಸ್ವಯಂ ಶರೀರವು ಶುಚಿಯಿಲ್ಲ; ಅದರ ಒಳಗೆ ದುರ್ಗಂಧಿತವಾದ ಮಲ-ಮೂತ್ರಾದಿಗಳು, ಹೊರಗೆ ಚರ್ಮ-ಮೂಳೆ-ರುಧಿರ ಮೊದಲಾಗಿ ಯಾವವೂ ಶುಚಿಯಿಲ್ಲ, ಅದನ್ನು ಸಮಸ್ತ ತೀರ್ಥ, ಸಮಸ್ತ ಸಮುದ್ರಗಳ ಜಲದಿಂದ ತೊಳೆದರೂ ಕೂಡ ಅದು ಸಮಸ್ತ ಜಲವನ್ನೇ ಅಶುಚಿಯಮ ಮಾಡಿ ಬಿಡುತ್ತದೆ, ಅದು ಶುದ್ಧವಾಗುವುದಿಲ್ಲ.

ಈ ಶರೀರವು  ಯಾವಾಗಲೂ ರೋಗಗಳಿಂದ ತುಂಬಿದೆ, ಯಾವಾಗಲೂ ಅಶುಚಿಯಿದೆ, ಸರ್ವಥಾ ವಿನಾಶಶೀಲವಿದೆ; ದುಃಖವನ್ನುತ್ಪನ್ನ ಮಾಡುವಂಥದ್ದಿದೆ. ಅದರ ಶುಚಿತ್ವದ ಉಪಾಯ ಹಾಗೂ ಅಶುಚಿತ್ವದ ಪ್ರತಿಕಾರವು

ಧೂಪ, ಗಂಧ, ವಿಲೇಪನ, ಪುಷ್ಪ, ಸ್ನಾನ, ಜಲ, ಚಂದನ,ಕರ್ಪೂರಗಳಾವವೂ ಇಲ್ಲ. **ಹೇಗೆ ಬೆಂಕಿಯ ಸ್ಪರ್ಶ ಮಾಡುವುದರಿಂದ ಅನ್ಯ ಪದಾರ್ಥಗಳೂ ಬೆಂಕಿಯಾಗಿ ಹೋಗುತ್ತವೆ, ಹಾಗೆಯೇ ಶರೀರದ ಸ್ಪರ್ಶ ಮಾಡುವ ಮಾತ್ರದಿಂದ ಪವಿತ್ರ ವಸ್ತುಗಳು ಕೂಡ ಅಪವಿತ್ರವಾಗಿ ಹೋಗುತ್ತವೆ.**

ಈ ಪ್ರಕಾರ ಶರೀರದ ಅಶುಚಿಯ ಚಿಂತನ ಮಾಡುವುದರಿಂದ ಶರೀರವನ್ನು ಅಲಂಕರಿಸುವುದರಲ್ಲಿನ ಅನುರಾಗದ ಅಭಾವವಾಗಿ ಹೋಗುವುದರಿಂದ ವೀತರಾಗತೆಯಲ್ಲಿ ಯತ್ನವಾಗಲಾರಂಭಿಸುವುದು. ಈ ಪ್ರಕಾರ ಅಶುಚಿ ಭಾವನೆಯ ವರ್ಣನೆ ಮಾಡಲಾಯಿತು.

**ಆಸ್ರವ ಭಾವನೆ :** ಈಗ ಆಸ್ರವ ಭಾವನೆಯ ಸ್ವರೂಪದ ವರ್ಣನೆ ಮಾಡುತ್ತಾರೆ. ಕರ್ಮಗಳು ಬರುವುದರ ಯಾವ ಕಾರಣವಿದೆ ಅದು ಆಸ್ರವವಿದೆ ಯಾವ ಪ್ರಕಾರ ಸಮುದ್ರದ ಮಧ್ಯದಲ್ಲಿರುವ ಜಹಜದ ಛಿದ್ರಗಳಿಂದ ನೀರು ಪ್ರವೇಶ ಮಾಡುತ್ತದೆ, ಅದೇ ಪ್ರಕಾರ ಐದು **ಮಿಥ್ಯಾತ್ವಭಾವ,** ಐದು ಇಂದ್ರಿಯ ಹಾಗೂ ಆರನೆಯ ಮನದ ವಿಷಯಗಳಲ್ಲಿ ಪ್ರವರ್ತನೆ ಮಾಡುವ ಭಾವ, ಷಟ್ಕಾಯ ಜೀವಗಳ ಹಿಂಸೆಯ ತ್ಯಾಗ ಮಾಡದಿರುವುದರ ಭಾವ, ಅನಂತಾನುಬಂಧಿಯಿಂದ ಹಿಡಿದು ಇಪ್ಪತ್ತೈದು ಕಷಾಯಗಳ ಭಾವ ಮತ್ತು ಮನ-ವಚನ-ಕಾಯದ ಭೇದದಿಂದ ಹದಿನೈದು ಪ್ರಕಾರದ ಯೋಗ-ಈ ಪ್ರಕಾರ ಇವು **ಐವತ್ತೇಳು ಕರ್ಮಗಳು ಬರುವುದರ ದ್ವಾರಗಳಿವೆ.**

ಇವುಗಳಿಂದ ಮಿಥ್ಯಾತ್ವ, ಕಷಾಯ, ಅವಿರತಿ ಮೊದಲಾದವುಗಳ ಅನುಸಾರ ಮನ-ವಚನ-ಕಾಯದಿಂದ ಶುಭ-ಅಶುಭ ಕರ್ಮಗಳ ಆಸ್ರವವಾಗುತ್ತದೆ. ಅಲ್ಲಿ ಪುಣ್ಯ-ಪಾಪದ ಸಂಯೋಗದಿಂದ ದೊರೆತ ವಿಷಯಗಳಲ್ಲಿ ಸಂತೋಷ ಪಡುವುದು, ವಿಷಯಗಳಿಂದ ವಿರಕ್ತವಾಗುವುದು, ಪರೋಪಕಾರದ ಪರಿಣಾಮ, ದುಃಖಿಗಳ ಮೇಲೆ ದಯೆ, ತತ್ತ್ವಗಳ ಚಿಂತನೆ, ಎಲ್ಲ ಜೀವಗಳಲ್ಲಿ ಮೈತ್ರೀಭಾವ ಇತ್ಯಾದಿ ಭಾವನೆ, ಪರಮೇಷ್ಠಿಗಳಲ್ಲಿ ಭಕ್ತಿ, ಧರ್ಮಾತ್ಮರಲ್ಲಿ ಅನುರಾಗ, ತಪ-ವ್ರತ-ಶೀಲ-ಸಂಯಮದ ಪರಿಣಾಮ ಇತ್ಯಾದಿ ರೂಪದ ಮನಸ್ಸಿನ ಪ್ರವೃತ್ತಿಯಿಂದ ಪುಣ್ಯದ ಶುಭಾಸ್ರವವಾಗುತ್ತದೆ.

ಪರಿಗ್ರಹದಲ್ಲಿ ಅಭಿಲಾಷೆ, ಇಂದ್ರಿಯ ವಿಷಯಗಳಲ್ಲಿ ಅತಿಲೋಲುಪತೆ, ಪರಧನ ಹರಣ ಮಾಡುವ ಪರಿಣಾಮ, ಅನ್ಯಾಯ ರೂಪದ ಪ್ರವರ್ತನೆಯಲ್ಲಿ, ಅಭಕ್ಷ್ಯಭಕ್ಷಣದಲ್ಲಿ, ಸಪ್ತ ವ್ಯಸನದ ಸೇವನೆಯಲ್ಲಿ, ಇತರರ ಅವಮಾನವಾಗುವಲ್ಲಿ ಅನುರಾಗವಿಡುವುದು, ಇತರರ ಪತ್ನಿ-ಪುತ್ರ-ಧನ-ಆಜೀವಿಕೆಯ ನಾಶ ಬಯಸುವದು, ಇತರರ ಮಾನಹಾನಿ ಬಯಸುವುದು, ತಮ್ಮ ಉಚ್ಚತೆ ಬಯಸುವುದು ಇತ್ಯಾದಿ ಮನಸ್ಸಿನ ಭಾವಗಳಿಂದ ಪಾಪದ ಅಶುಭ ಆಸ್ರವವಾಗುತ್ತದೆ.

ಸತ್ಯ, ಹಿತ, ಮಿತ, ಮಧುರ ವಚನಗಳಿಂದ, ಪರಮಾಗಮದ ವಚನಗಳಿಂದ, ಪರಮೇಷ್ಠಿಗಳ ಸ್ತವನದಿಂದ, ಸಿದ್ಧಾಂತಗಳನ್ನು ಓದುವುದರಿಂದ ಮತ್ತು ವ್ಯಾಖ್ಯಾನಪೂರ್ಣ ನ್ಯಾಯರೂಪದ ವಚನಗಳಿಂದ ಪುಣ್ಯದ ಆಸ್ರವವಾಗುತ್ತದೆ.

ಪರರನಿಂದೆ, ತನ್ನ ಪ್ರಶಂಸೆ, ಅನ್ಯಾಯದಲ್ಲಿ ಪ್ರವರ್ತನೆ ಮಾಡಿಸುವಂಥ ವಚನ, ಹಿಂಸೆಯ ಆರಂಭ ಮಾಡಿಸುವಂಥ, ವಿಷಯಾನುರಾಗ ಹೆಚ್ಚಿಸುವಂಥ, ಕಷಾಯರೂಪದ ಅಗ್ನಿಯನ್ನು ಪ್ರಜ್ವಲಿತ ಮಾಡುವಂಥ, ಕಲಹ-ವಿಸಂವಾದ ಶೋಕ-ಭಯಗಳನ್ನು ಹೆಚ್ಚಿಸುವಂಥ, ಧರ್ಮವಿರುದ್ಧ, ಮಿಥ್ಯಾತ್ವ-ಅಸಂಯಮವನ್ನು ಪುಷ್ಟ ಮಾಡುವಂಥ, ಅನ್ಯ ಜೀವರುಗಳಿಗೆ ದುಃಖ-ಅಪಮಾನ-ಧನ-ಆಜೀವಿಕೆಯ ಹಾನಿ ಮಾಡುವಂಥ ವಚನಗಳಿಂದ ಪಾಪದ ಆಸ್ರವವಾಗುತ್ತದೆ.

ಪರಮೇಷ್ಠಿಗಳ ಪೂಜೆ, ವಂದನೆ, ಜಿನಾಯತನದ ಸೇವೆ, ಧರ್ಮಾತ್ಮ ಪುರುಷರ ವೈಯಾವೃತ್ಯ, ಯತ್ನಾಚಾರಪೂರ್ವಕ ಜೀವಗಳ ಮೇಲೆ ದಯಾರೂಪವಾಗಿ ಏಳುವುದು, ಕೂಡ್ರುವುದು, ಮಲಗುವುದು, ಇಡುವುದು, ತೆಗೆದುಕೊಳ್ಳುವುದು, ತಿನ್ನುವುದು, ಕುಡಿಯುವುದು, ನಡೆಯುವುದು ಇತ್ಯಾದಿ ಕಾರ್ಯದ ಯೋಗವು ಶುಭ ಆಸ್ರವದ ಕಾರಣವಿದೆ.

ಯತ್ನಾಚಾರ ರಹಿತ-ಕರುಣಾರಹಿತ ಸ್ವಚ್ಛಂದ ದೇಹದ ಪ್ರವರ್ತನೆ, ಮಹಾ ಆರಂಭದಲ್ಲಿ ಪ್ರವರ್ತನೆ, ದೇಹವನ್ನು ಅಲಂಕರಿಸುವುದರಲ್ಲಿಯೇ ತೊಡಗಿರುವುದು. ಈ ಎಲ್ಲ ಕಾರ್ಯಗಳಿಂದ ಅಶುಭದ ಆಸ್ರವವಾಗುತ್ತದೆ.

ಈ ಮನ-ವಚನ-ಕಾಯದ ಶುಭ-ಅಶುಭ ಪ್ರವೃತ್ತಿಯಿಂದ ತೀವ್ರ-ಮಂದ-ಕಷಾಯದ ಯೋಗದಿಂದ ತೀವ್ರ ಮಂದ ಅನೇಕ ಪ್ರಕಾರದ ಕರ್ಮಗಳ ಬಂಧದ ನಿಮಿತ್ತವಾಗುತ್ತದೆ. ಅವುಗಳ ವಿಚಾರ ಮಾಡಿದ ಮೇಲೆ ಆತ್ಮನು ಅಶುಭ ಪ್ರವೃತ್ತಿಯಂದ ತಡೆದು ಶುಭ ಪ್ರವೃತ್ತಿಯಲ್ಲಿ ಸಾವಧಾನನಾಗಿ ಪ್ರವರ್ತನೆ ಮಾಡುತ್ತಾನೆ.

**ಕಷಾಯಗಳು ಆತ್ಮನ ಸಮಸ್ತ ಗುಣಗಳನ್ನು ಘಾತ ಮಾಡುವಂಥವುಗಳಿವೆ. ಕ್ರೋಧವು** ಇತರ ಜೀವಗಳನ್ನು ಹೊಡೆಯುವಲ್ಲಿ, ಘಾತ ಮಾಡುವಲ್ಲಿ, ಬಂಧನ ಮಾಡುವಲ್ಲಿ ಚಿತ್ತವನ್ನು ಓಡಿಸುತ್ತದೆ. **ಮಾನ**ವು ಈ ಜೀವವನ್ನು ಅಭಿಮಾನದಿಂದ ಎಷ್ಟು ಉದ್ಧತ ಮಾಡುತ್ತದೆಯೆಂದರೆ ಅದು ತಂದೆ, ಗುರು, ಪ್ರಭುವಿನದು ತಿರಸ್ಕಾರ ಮಾಡಬಯಸುತ್ತದೆ, ವಿನಯವನ್ನು ನಷ್ಟ ಮಾಡಿ ಬಿಡುತ್ತದೆ. **ಮಾಯಾ** ಕಷಾಯವು ಅನೇಕ ಛಲ, ಅನೇಕ ಕಪಟ, ಇತರರನ್ನು ಮರುಳು ಮಾಡುವುದು ಇತ್ಯಾದಿ ಅನೇಕ ಕಪಟದ ವಿಚಾರ ಮಾಡಿಸುತ್ತದೆ, ಪರಿಣಾಮದ ಸರಳತೆಯ ಅಭಾವ ಮಾಡಿ ಬಿಡುತ್ತದೆ. **ಲೋಭ** ಕಷಾಯವು ಸುಖದ ಕಾರಣವಾದ ಯಾವ ಸಂತೋಷವಿದೆ ಅದರ ನಾಶ ಮಾಡಿ ಬಿಡುತ್ತದೆ, ಯೋಗ್ಯ-ಅಯೋಗ್ಯದ ವಿಚಾರವನ್ನೇ ನಷ್ಟ ಮಾಡಿ ಬಿಡುತ್ತದೆ.

**ಕಾಮ**ವು ಮರ್ಯಾದೆಯನ್ನು ಭಂಗ ಮಾಡಿ ಬಿಡುತ್ತದೆ, ಲಜ್ಜೆಯನ್ನು ಭಂಗ ಮಾಡಿ ಬಿಡುತ್ತದೆ, ಹಿತ-ಅಹಿತದ ನೀಚ ಕರ್ಮ-ಉಚ್ಚ ಕರ್ಮದ ವಿಚಾರ ರಹಿತ ಮಾಡುತ್ತದೆ. **ಮೋಹ**ವು ಮದ್ಯದ ಸಮಾನ ಸ್ವರೂಪವನ್ನು ಮರೆಸಿ ಬಿಡುತ್ತದೆ. **ಶೋಕ**ವು ಅತ್ಯಂತ ದುಃಖಪೂರ್ವಕ ಹಾಹಾಕಾರ ಮಾಡಿಸುತ್ತದೆ. **ರೋದನ**ವು ಆತ್ಮಘಾತ ಮೊದಲಾದುವಲ್ಲಿ ಪ್ರವೃತ್ತಿ ಮಾಡಿಸುತ್ತದೆ. **ಹಾಸ್ಯ**ವು ಇತರರ ಗೇಲಿ ಮಾಡಿಸುತ್ತದೆ. **ಅಜ್ಞಾನತೆ** ಪ್ರಕಟ ಮಾಡಿಸಬಯಸುತ್ತದೆ. **ಸ್ನೇಹ**ವು ಮದ್ಯ ಕುಡಿಯದೆಯೇ ಅಚೇತ ಮಾಡಿ ಬಿಡುತ್ತದೆ. ಮಹಾ ಬಂಧನ ರೂಪವಿದೆ, ಆತ್ಮನನ್ನು ಹಿತರೂಪ ಪ್ರವೃತ್ತಿಯಿಂದ ತಡೆಯುವಂಥದ್ದಿದೆ, ಅನರ್ಥದ ಸ್ಥಾನವಿದೆ. **ನಿದ್ರೆ**ಯು ಆತ್ಮನ ಚೈತನ್ಯದ ಘಾತ ಮಾಡಿ ಜಡದ ಸಮಾನ ಮಾಡಿ ಬಿಡುತ್ತದೆ. ತೃಷೆಯು ಕುಡಿಯಲು ಯೋಗ್ಯವಿಲ್ಲದ ಜಲವನ್ನು ಕೂಡ ಕುಡಿಸಬಯಸುತ್ತದೆ. **ಕ್ಷುಧೆ**ಯು ಚಾಂಡಾಲರ ಮನೆಯಲ್ಲಿ ಕೂಡ ಪ್ರವೇಶ ಮಾಡಿಸಿ ಯಾಚನೆ ಮಾಡಿಸುತ್ತದೆ, ಕುಲ ಮರ್ಯಾದೆಯನ್ನು ನಷ್ಟ ಮಾಡಿ ಘೋರ ಕಷ್ಟ ಕೊಡುತ್ತದೆ.

ನೇತ್ರವು ಸುಂದರ ರೂಪುಗಳನ್ನು ನೋಡುವುದರಲ್ಲಿ ಉತ್ಸುಕತೆ ತೋರುತ್ತದೆ. **ಜಿಹ್ವೇಂದ್ರಿಯವು** ಮಿಷ್ಟ ಭೋಜನ ಮಾಡುವುದರಲ್ಲಿ ಅತ್ಯಂತ ಚಂಚಲವಾಗಿ ಲಜ್ಜೆ, ಶ್ರೇಷ್ಠತೆ, ಸಂಯಮಗಳನ್ನು ನಷ್ಟ ಮಾಡಿ ನೀಚ ಪ್ರವೃತ್ತಿ ಮಾಡಿಸುತ್ತದೆ. **ಘ್ರಾಣೇಂ**ದ್ರಿಯವು ಸುಗಂಧಿತ ಪದಾರ್ಥಗಳ ಮೇಲೆ ಅಚೇತವಾಗಿ ಮುರಿದು ಬೀಳುತ್ತದೆ. **ಸ್ಪರ್ಶ**ನೇಂದ್ರಿಯವು ಸ್ತ್ರೀಯರ ಕೋಮಲ ಅಂಗಗಳ, ಮೃದು ಶಯ್ಯೆ ಮೊದಲಾದವುಗಳ ತೃಷ್ಣೆಯನ್ನು ವೃದ್ಧಿಸುತ್ತದೆ. **ಕರ್ಣೇಂ**ದ್ರಿಯವು ಅನೇಕ ಮಧುರ ರಾಗಗಳಲ್ಲಿ ಸಂತುಷ್ಟವಾಗಿ ತನ್ನನ್ನು ಮರೆಸಿ ಪರಾಧೀನ ಮಾಡಿ ಬಿಡುತ್ತದೆ. **ಮನಸ್ಸು** ಚಂಚಲ ಮರ್ಕಟದ ಸಮಾನ ಸ್ವಚ್ಛಂದವಾಗಿ ಅನೇಕ ವಿಕಲ್ಪಗಳ ಮೂಲಕ ಶುಭಧ್ಯಾನ-ಶುಭಪ್ರವೃತ್ತಿಯಲ್ಲೂ ನಿಂತುಕೊಳ್ಳುವುದಿಲ್ಲ, ವಿಷಯ-ಕಷಾಯಗಳಲ್ಲಿ ಸುತ್ತುತ್ತದೆ. ಅಸತ್ಯ **ವಾಣಿ**ಯು ಮುಖದಿಂದ ಅತ್ಯಂತ ಪ್ರೀತಿಪೂರ್ವಕವಾಗಿ ಹೊರಟು ತನ್ನ ಚತುರತೆಯನ್ನು ಪ್ರಕಟ ಮಾಡುತ್ತದೆ. **ಕೈ**ಗಳಂತೂ ಹಿಂಸೆಯ ಆರಂಭ ಮಾಡುವುದರ ಮುಖ್ಯ ಉಪಕರಣಗಳಿವೆ. **ಕಾಲು**ಗಳೂ ಪಾಪ ಮಾಡುವ ಮಾರ್ಗದಲ್ಲಿ ತುಂಬ ವೇಗದಿಂದ ಧಾವಿಸುತ್ತವೆ.

**ಕವಿತ್ವ**ವು ಅಧಿಕ ರಾಗ ವೃದ್ಧಿಸುವಂಥ ರಚನೆ ಬಯಸುತ್ತದೆ. **ಪಾಂಡಿತ್ಯ**ವು ಕುತರ್ಕ ಮತ್ತು ಅಸತ್ಯ ಪ್ರಳಾಪತೆಯಿಂದ ತನ್ನ ವಿಖ್ಯಾತಿಯನ್ನು ಬಯಸುತ್ತದೆ. **ಸುಭಟ**ತ್ವವು ಘೋರ ಹಿಂಸೆಯನ್ನು ಬಯಸುತ್ತದೆ. **ಬಾಲ್ಯತ್ವ**ವು ಅಜ್ಞಾನರೂಪವಿದೆ. **ಯೌವ್ವನ**ವು ಇಚ್ಛಿಕ ವಿಷಯಗಳ ಸಲುವಾಗಿ ವಿಷಮ ಸ್ಥಾನಗಳಲ್ಲಿಯೇ ಧಾವಿಸುತ್ತದೆ. **ವೃದ್ಧತ್ವ**ವು ಭೀಷಣ ಕಾಲದ ನಿಕಟದಲ್ಲಿ

ಬರುತ್ತದೆ. **ಉಚ್ಛ್ವಾಸನಿಶ್ವಾಸ**ಗಳು ನಿರಂತರ ಶರೀರದಿಂದ ಹೊರಟು ಓಡಿಹೋಗುವ ಅಭ್ಯಾಸ ಮಾಡುತ್ತಿವೆ. ಜರೆಯು ಕಾಮ, ಭೋಗ, ರೂಪು, ಸೌಂದರ್ಯ, ತೇಜಸ್ಸು, ಉದ್ಯಮ, ಬಲ, **ಬುದ್ಧಿ** ಮೊದಲಾದುವನ್ನು ಹರಣ ಮಾಡುವಂಥ ತಸ್ಕರವಿದೆ. **ರೋಗವು** ಮೃತ್ಯುವಿನ ಪ್ರಮುಖ ದೂತವಿದೆ. ಈ ಪ್ರಕಾರದ ಸಾಮಗ್ರಿಗಳು ಈ ಆತ್ಮನಿಗೆ ತನ್ನ ಸ್ವರೂಪವನ್ನು ಮರೆಸುವಂಥವುಗಳಿವೆ, ಅದರಿಂದ ಅಧಿಕ ಅಶುಭ ಕರ್ಮಗಳ ಆಸ್ರವವಾಗುತ್ತದೆ. ಈ ಇಂದ್ರಿಯ ವಿಷಯಗಳ ಹಾಗೂ ಕಷಾಯಗಳ ಸಂಯೋಗದಿಂದ ಮನ-ವಚನ-ಕಾಯದ ಮೂಲಕ ಆಸ್ರವಾಗುತ್ತದೆ. ಈ ಪ್ರಕಾರ ಆಸ್ರವ ಭಾವದ ವರ್ಣನೆ ಮಾಡಲಾಯಿತು.

**ಸಂವರ ಭಾವನೆ :** ಈಗ ಸಂವರ ಭಾವನೆಯ ಸ್ವರೂಪದ ವರ್ಣನೆ ಮಾಡುತ್ತಾರೆ. ಯಾವ ಪ್ರಕಾರ ಸಮುದ್ರದ ಮದ್ಯದೊಳಗೆ ನೌಕೆಯಲ್ಲಿ ಜಲ ಬರುವುದರ ಛಿದ್ರವನ್ನು ಮುಚ್ಚಿದರೆ ನೌಕೆಯಲ್ಲಿ ಜಲ ತುಂಬುವುದಿಲ್ಲ ಮತ್ತು ನೌಕೆ ಮುಳುಗುವುದಿಲ್ಲ; ಅದೇ ಪ್ರಕಾರ ಕರ್ಮಗಳು ಬರುವ ದ್ವಾರವನ್ನು ಮುಚ್ಚಿದವನಿಗೆ ಪರಮ ಸಂವರವಾಗುತ್ತದೆ. **ಸಮ್ಯಗ್ದರ್ಶನದಿಂದಂತೂ ಮಿಥ್ಯಾತ್ವನಾಮದ ಆಸ್ರವದ ದ್ವಾರವು ನಿಂತು ಹೋಗುತ್ತದೆ.** ಇಂದ್ರಿಯ ಹಾಗೂ ಮನಸ್ಸನ್ನು ಸಂಯಮ ರೂಪವಾಗಿ ಪ್ರವರ್ತಿಸುವುದರಿಂದ ಇಂದ್ರಿಯಗಳಿಂದಾಗುವಂಥ ಆಸ್ರವವು ತಡೆದು ಸಂವರವಾಗುತ್ತದೆ. ಷಟ್ಕಾಯ ಜೀವಗಳ ಘಾತ ಮಾಡುವಂಥ ಆರಂಭದ ತ್ಯಾಗ ಮಾಡುವುದರಿಂದ ಪ್ರಾಣಿ ಸಂಯಮವಾಗಿ ಅವಿರತಿಯ ಮೂಲಕ ಆಗುವ ಆಸ್ರವವು ನಿಂತು ಹೋಗಿ ಸಂವರವಾಗುತ್ತದೆ.

**ಕಷಾಯಗಳನ್ನು ಜಯಿಸಿ ದಶಲಕ್ಷಣರೂಪದ ಧರ್ಮವನ್ನು ಧಾರಣ ಮಾಡುವುದರಿಂದ ಚಾರಿತ್ರವು ಪ್ರಕಟವಾಗಿ ಕಷಾಯಗಳ ಅಭಾವದಿಂದ ಸಂವರವಾಗುತ್ತದೆ.** ಧ್ಯಾನರೂಪದ ತಪದಿಂದ, ಸ್ವಾಧ್ಯಾಯ ತಪದಿಂದ, ಯೋಗಗಳ ಮೂಲಕ ಬರುವಂಥ ಕರ್ಮಗಳು ನಿಂತುಕೊಳ್ಳುವುದರಿಂದ ಸಂವರವಾಗುತ್ತದೆ. ಮೂರು ಗುಪ್ತಿ, ಐದು ಸಮಿತಿ, ದಶಲಕ್ಷಣ ಧರ್ಮ, ಹನ್ನೆರಡು ಭಾವನೆ, ಇಪ್ಪತ್ತೆರಡು ಪರೀಷಹಗಳನ್ನು ಸಹಿಸುವುದರಿಂದ, ಐದು ಪ್ರಕಾರದ ಚಾರಿತ್ರ ಪಾಲಿಸುವುದರಿಂದ ಕರ್ಮಗಳು ಬರುವುದಿಲ್ಲ.

ಮನ-ವಚನ-ಕಾಯದ ಯೋಗಗಳನ್ನು ತಡೆಯುವುದು **ಗುಪ್ತಿ**ಯಿದೆ. ಪ್ರಮಾದ ತೊರೆದು ಯತ್ನದಿಂದ ಪ್ರವರ್ತಿಸುವುದು **ಸಮಿತಿ**ಯಿದೆ. ದಯಾ ಪ್ರಧಾನವಿದ್ದುದು **ಧರ್ಮ**ವಿದೆ. ಸ್ವತತ್ತ್ವದ ಚಿಂತನೆ ಮಾಡುವುದು **ಭಾವನೆ**ಯಿದೆ. ಕರ್ಮದ ಉದಯದಿಂದ ಬಂದಂಥ ಕ್ಷುಧೆ, ತೃಷೆ ಮೊದಲಾದ ಪರೀಷಹಗಳನ್ನು ಧೈರ್ಯದಿಂದ ಸಮಭಾವದಿಂದ ಸಹಿಸುವುದು **ಪರೀಷಹ ಜಯ**ವಿದೆ. ರಾಗಾದಿಗಳ ದೋಷವಿಲ್ಲದ ತನ್ನ ಜ್ಞಾನ ಸ್ವಭಾವೀ ಆತ್ಮನಲ್ಲಿ ಪ್ರವೃತ್ತಿ ಮಾಡುವುದು ಅದು **ಚಾರಿತ್ರ**ವಿದೆ.

ಈ ಪ್ರಕಾರ ಯಾರು ವಿಷಯಗಳಿಂದ ಪರಾಙ್ಮುಖರಾಗಿ ಸರ್ವಕ್ಷೇತ್ರ ಸರ್ವಕಾಲದಲ್ಲಿ ಪ್ರವರ್ತಿಸುತ್ತಾರೆ ಅವರಿಗೆ ಗುಪ್ತಿ, ಸಮಿತಿ, ಧರ್ಮ, ಅನುಪ್ರೇಕ್ಷೆ, ಪರಿಷಹ ಜಯ, ಚಾರಿತ್ರ ಇವುಗಳಿಂದ ನವೀನ ಕರ್ಮಗಳ ಬರುವಿಕೆಯು ನಿಂತು ಹೋಗುತ್ತದೆ, ನವೀನ ಕರ್ಮ ಬಾರದಿರುವುದೇ ಸಂವರವಿದೆ. ಯಾರು ಈ ಸಂವರದ ಕಾರಣಗಳ ಚಿಂತನೆ ಮಾಡುತ್ತಾರೆ ಅವರಿಗೆ ಹೊಸ-ಹೊಸ ಆಸ್ರವ- ಬಂಧಗಳಾಗುವುದಿಲ್ಲ. ಈ ಪ್ರಕಾರ ಸಂವರ ಭಾವನೆಯ ವರ್ಣನೆ ಮಾಡಲಾಯಿತು.

**ನಿರ್ಜರ ಭಾವನೆ :** ಈಗ ನಿರ್ಜರ ಭಾವನೆಯ ಸ್ವರೂಪದ ವರ್ಣನೆ ಮಾಡುತ್ತಾರೆ. ಯಾವನು ಜ್ಞಾನೀ ವೀತರಾಗಿಯಾಗಿ ಮದರಹಿತ-ನಿದಾನರಹಿತನಾಗಿ ಹನ್ನೆರಡು ಪ್ರಕಾರದ ತಪಸ್ಸು ಮಾಡುತ್ತಾನೆ ಅವನಿಗೆ ಬಹಳಷ್ಟು ನಿರ್ಜರೆಯಾಗುತ್ತದೆ. ಸಮಸ್ತ ಕರ್ಮಗಳ ಉದಯರೂಪ ರಸವನ್ನು ಪ್ರಕಟ ಮಾಡಿ ಉದುರಿ ಹೋಗುವುದು ಅದು ನಿರ್ಜರೆಯಿದೆ. ನಿರ್ಜರೆಯಲ್ಲಿ ಸವಿಪಾಕ ನಿರ್ಜರೆ ಮತ್ತು ಅವಿಪಾಕ ನಿರ್ಜರೆಯೆಂದು ಎರಡು ಭೇದಗಳಿವೆ.

ತಮ್ಮ ಉದಯಕಾಲದಲ್ಲಿ ಕರ್ಮಗಳು ರಸವಿತ್ತು ಉದುರಿ ಹೋಗುವುದು ಅದು ಸವಿಪಾಕ ನಿರ್ಜರೆಯಿದೆ. ನಾಲ್ಕೂ ಗತಿಗಳಲ್ಲಿ ಯಾವ ಕರ್ಮವು ತನ್ನ ರಸರೂಪ ಫಲವಿತ್ತು ನಿರ್ಜರಿತವಾಗಿ ಹೋಗುತ್ತದೆ ಅದು ಸವಿಪಾಕ

ನಿರ್ಜರೆಯಿದೆ. ವ್ರತ, ಸಂಯಮ, ತಪಸ್ಸು ಧಾರಣ ಮಾಡಿ ಉದಯಕಾಲವು ಬಾರದೆಯೇ ಕರ್ಮಗಳು ನಿರ್ಜರಿತವಾಗಿ ಹೋಗುವುದು ಅದು ಅವಿಪಾಕ ನಿರ್ಜರೆಯಿದೆ. ಮಂದ ಕಷಾಯದ ಭಾವದೊಡನೆ ಹೇಗೆ-ಹೇಗೆ ತಪವು ವೃದ್ಧಿಸುತ್ತದೆ ಹಾಗೆ-ಹಾಗೆ ನಿರ್ಜರೆಯ ವೃದ್ಧಿಯಾಗುತ್ತದೆ. ಯಾವ ಪುರುಷರು ಕಷಾಯ ವೈರಿಯನ್ನು ಜಯಿಸಿ ದುಷ್ಟ ಜನರ ದುರ್ವಚನ, ಉಪದ್ರವ, ಉಪಸರ್ಗ, ಅನಾದರ ಮೊದಲಾದುವನ್ನು ಕಲುಷಿತ ಭಾವದಿಂದ ರಹಿತರಾಗಿ ಸಹಿಸುತ್ತಾರೆ ಅವರಿಗೆ ಮಹಾನಿರ್ಜರೆಯಾಗುತ್ತದೆ.

ದುಷ್ಟರ ಮೂಲಕ ಉಪದ್ರವ ಮಾಡಿದ ಮೇಲೆ, ಕರ್ಮಕೃತ ಪರೀಷಹ, ದಾರಿದ್ರ್ಯ, ರೋಗ, ದುಷ್ಟರ ಸಮಾಗಮ ಮೊದಲಾದುವಾದ ಮೇಲೆ ವಿಚಾರ ಮಾಡುವುದೇನೆಂದರೆ ನಾನು ಪೂರ್ವಕಾಲದಲ್ಲಿ ಯಾವ ಪಾಪ ಕಟ್ಟಿಕೊಂಡಿದ್ದೆನೊ ಇದು ಅದರ ಫಲವಿದೆ. ಈಗ ಸಮಭಾವದಿಂದ ಭೋಗಿಸಬೇಕು. ಕರ್ಮರೂಪದ ಋಣವು ಬಿಡುವುದಿಲ್ಲ, ವಿಷಾದ ಮಾಡಿಕೊಂಡರೆ ಕರ್ಮವು ಬಿಡಲಾರದು; ಸಂಕ್ಲೇಶ ಪರಿಣಾಮ ಮಾಡುವುದರಿಂದ ಸಂಖ್ಯಾತ-ಅಸಂಖ್ಯಾತ ಗುಣಿತ ನವೀನ ಕರ್ಮವು ಕಟ್ಟುವುದು.

ಉತ್ತಮ ಪುರುಷರು ಶರೀರವನ್ನು ಕೇವಲ ಮಮತೆಯನ್ನುತ್ಪನ್ನ ಮಾಡುವಂಥ, ವಿನಾಶಶೀಲ, ಅಶುಚಿ, ದುಃಖ ಕೊಡುವಂಥದ್ದೆಂದು ತಿಳಿಯುತ್ತಾರೆ; ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರವನ್ನು ಸುಖ ಉತ್ಪನ್ನ ಮಾಡುವಂಥ ನಿರ್ಮಲ, ನಿತ್ಯ, ಅವಿನಾಶಿಯೆಂದು ತಿಳಿಯುತ್ತಾರೆ; ತಮ್ಮ ನಿಂದೆ ಮಾಡಿಕೊಳ್ಳುತ್ತಾರೆ, ಗುಣವಂತರ ಆದರ ಸತ್ಕಾರ ಮಾಡಿ ಅವರನ್ನು ಉಚ್ಚರೆಂದು ಮನ್ನಿಸುತ್ತಾರೆ; ಮನಸ್ಸು ಮತ್ತು ಇಂದ್ರಿಯಗಳನ್ನು ಜಯಿಸಿ ತಮ್ಮ ಜ್ಞಾನ ಸ್ವರೂಪದಲ್ಲಿ - ಸ್ವಭಾವದಲ್ಲಿ ಲೀನರಿರುತ್ತಾರೆ. ಅವರು ಮನುಷ್ಯ ಜನ್ಮ ಪ್ರಾಪ್ತ ಮಾಡಿಕೊಂಡಿರುವುದು ಸಾರ್ಥಕವಾಗುತ್ತದೆ; ಅವರಿಗೆ ಬಹಳಷ್ಟು ಕರ್ಮಗಳ ನಿರ್ಜರೆಯಾಗುತ್ತದೆ, ಸಂಸಾರವನ್ನು ಛೇದಿಸುವಂಥ ಸಾತಿಶಯ ಪುಣ್ಯದ ಬಂಧವಾಗುತ್ತದೆ, ಮತ್ತು ಅವರಿಗೇನೇ ಪರಮ ಅತೀಂದ್ರಿಯ, ಅವಿನಾಶೀ, ಅನಂತ ಸುಖವಾಗುತ್ತದೆ.

ಯಾರು ಸಮಭಾವರೂಪದ ಸುಖದಲ್ಲಿ ಲೀನರಾಗಿ ಪುನಃ ಪುನಃ ತಮ್ಮ ಸ್ವರೂಪದ ಉಜ್ವಲತೆಯ ಸ್ಮರಣೆ ಮಾಡುತ್ತಾರೆ, ಇಂದ್ರಿಯಗಳನ್ನು ಹಾಗೂ ಕಷಾಯಗಳನ್ನು ಮಹಾದುಃಖರೂಪವೆಂದು ತಿಳಿದುಕೊಂಡು ಜಯಿಸುತ್ತಾರೆ ಆ ಪುರುಷರಿಗೆ ಬಹಳಷ್ಟು ನಿರ್ಜರೆಯಾಗುತ್ತದೆ. ಈ ಪ್ರಕಾರ ನಿರ್ಜರೆ ಭಾವನೆಯ ವರ್ಣನೆ ಮಾಡಲಾಯಿತು.

**ಲೋಕ ಭಾವನೆ :** ಈಗ ಲೋಕ ಭಾವನೆಯ ಸ್ವರೂಪದ ವರ್ಣನೆ ಮಾಡುತ್ತಾರೆ. ಎಲ್ಲ ಕಡೆಗೆ ಅನಂತಾನಂತ ಆಕಾಶವಿದೆ, ಅದರ ತೀರ ಮಧ್ಯದಲ್ಲಿ ಲೋಕವಿದೆ. ಜೀವ, ಪುದ್ಗಲ, ಧರ್ಮ, ಅಧರ್ಮ, ಕಾಲ-ಇವುಗಳ ಸಮುದಾಯವು ಎಷ್ಟು ಆಕಾಶದಲ್ಲಿ ಇರುತ್ತಿರುವುದು ಕಂಡು ಬರುತ್ತದೆ ಅದು **ಲೋಕ**ವಿದೆ., ಅದು ಮುನ್ನೂರಾ ನಲವತ್ತು ಮೂರು ಘನರಜ್ಜು ಪ್ರಮಾಣ ಕ್ಷೇತ್ರವಿದೆ. ಅದರ ಹೊರಗೆ ಅನಂತಾನಂತ ಆಕಾಶವಿದೆ, ಅದನ್ನು **ಅಲೋಕ**ವೆಂದು ಹೇಳುತ್ತಾರೆ.

ಈ ಲೋಕದಲ್ಲಿ ಅನಂತಾನಂತ ಜೀವಗಳಿವೆ, ಜೀವಗಳಿಂದ ಅನಂತಗುಣಿತ ಪುದ್ಗಲಗಳಿವೆ, ಒಂದು ಧರ್ಮ ನಾಮದ ದ್ರವ್ಯವಿದೆ, ಒಂದು ಅಧರ್ಮನಾಮದ ದ್ರವ್ಯವಿದೆ, ಒಂದು ಆಕಾಶ ದ್ರವ್ಯವಿದೆ, ಕಾಲ ದ್ರವ್ಯಗಳು ಅಸಂಖ್ಯಾತವಿವೆ. ಈ ದ್ರವ್ಯಗಳ ಸ್ವರೂಪ, ಲೋಕದ ಸಂಸ್ಥಾನ ಮೊದಲಾದವುಗಳ ಸ್ವರೂಪ, ಅವಗಾಹನ ಮೊದಲಾದವುಗಳ ವರ್ಣನೆ ಮಾಡ ಹೋದರೆ ಹೆಚ್ಚು ವಿಸ್ತಾರವಾಗಬಹುದು. ಗ್ರಂಥದ ವಿಸ್ತಾರ ಕಡಿಮೆ ಮಾಡಬೇಕೆಂದರೂ ಅಧಿಕಗೊಳ್ಳುತ್ತ ಹೋಗುತ್ತಿದೆ, ಮತ್ತು ಈಗ ನಮ್ಮ ಆಯು ಕೂಡ ರೋಗದ ಅಧಿಕತೆಯಿಂದ-ಶರೀರದ ಬಲವು ಕುಂದುತ್ತ ಹೋಗುವುದರಿಂದ ಸ್ವಲ್ಪ ಸಮಯವೇ ಬಾಕಿ ಉಳಿದಿರುವಂತೆ ಕಂಡು ಬರುತ್ತಿದೆ. ಆದುದರಿಂದ ಗ್ರಂಥ ಸಂಕ್ಷಿಪ್ತ ಮಾಡಿದರೆ ಅದರ ಪೂರ್ಣತೆಯ ರೂಪ ಫಲದ ಆವಶ್ಯಕತೆಯಿದೆ. ಆದುದರಿಂದ ಈ ಆರು ದ್ರವ್ಯಗಳ ವಿಸ್ತಾರರೂಪದ ವರ್ಣನೆಯನ್ನು ಅನ್ಯ ಗ್ರಂಥಗಳಿಂದ ತಿಳಿದುಕೊಳ್ಳುವುದು.

**ಬೋಧಿ ದುರ್ಲಭ ಭಾವನೆ :** ಈಗ ಬೋಧಿ ದುರ್ಲಭ ಭಾವನೆಯ ಸ್ವರೂಪವನ್ನು ಸಂಕ್ಷೇಪದಲ್ಲಿ ಹೇಳುತ್ತಾರೆ. ಈ ಜೀವವು ಅನಾದಿ ಕಾಲದಿಂದ ನಿಗೋದದಲ್ಲಿ ಉಳಿದಿದೆ. ಒಂದು ನಿಗೋದದ ಶರೀರದಲ್ಲಿ ಅತೀತ ಕಾಲದಲ್ಲಿ ಆದ ಸಿದ್ಧರಿಗಿಂತ ಅನಂತ ಗುಣಿತ ಜೀವಗಳಿವೆ ;ಅವೆಲ್ಲವು ತಮ್ಮ ತಮ್ಮ ಕಾರ್ಮಾಣ ಶರೀರ ಸಹಿತ ಒಂದು ನಿಗೋದದ ಶರೀರದ

ಅವಗಾಹನದಲ್ಲಿ ವಾಸಿಸುತ್ತವೆ. ಈ ಪ್ರಕಾರದ ಬಾದರ-ಸೂಕ್ಷ್ಮ ನಿಗೋದಿ ಜೀವಗಳ ಶರೀರಗಳಿಂದ ಸಂಪೂರ್ಣ ಲೋಕವು ಮೇಲೆ-ಕೆಳಗೆ, ಒಳಗೆ-ಹೊರಗೆ ಅಂತರವಿಲ್ಲದೆ ಒತ್ತೊತ್ತಾಗಿ ತುಂಬಿಕೊಂಡಿದೆ. ಪೃಥ್ವೀಕಾಯ ಮೊದಲಾದ ಅನ್ಯ ಐದು ಸ್ಥಾವರಗಳಿಂದಲೂ ಈ ಲೋಕವು ನಿರಂತರ ತುಂಬಿಕೊಂಡಿದೆ. **ಇದರಲ್ಲಿ ತ್ರಸತನ ಪ್ರಾಪ್ತ ಮಾಡಿಕೊಳ್ಳುವುದೆಂದರೆ ಮಧ್ಯ ಸಮುದ್ರದಲ್ಲಿ ಕೈ ತಪ್ಪಿ ಬಿದ್ದ ರತ್ನದ ಮಣಿಯನ್ನು ಪ್ರಾಪ್ತ ಮಾಡಿಕೊಳ್ಳುವುದರ ಸಮಾನ ಅತ್ಯಂತ ದುರ್ಲಭವಿದೆ.**

ಒಂದು ವೇಳೆ ತ್ರಸತನವು ಪ್ರಾಪ್ತವಾದರೂ ತ್ರಸಗಳಲ್ಲಿ ವಿಕಲೇಂದ್ರಿಯಗಳ ಪ್ರಚುರತೆಯಿದೆ; ಅವುಗಳಲ್ಲಿ ಪಂಚೇಂದ್ರಿಯತನವು ಅಸಂಖ್ಯಾತ ಕಾಲದವರೆಗೆ ಪರಿಭ್ರಮಣ ಮಾಡುತ್ತಿದ್ದರೂ ಕೂಡ ಪ್ರಾಪ್ತವಾಗುವುದಿಲ್ಲ. ಪುನಃ ವಿಕಲತ್ರಯದಲ್ಲಿ ಮರಣ ಹೊಂದಿ ನಿಗೋದದಲ್ಲಿ ಅನಂತಕಾಲ ಕಳೆಯುತ್ತದೆ. ಪುನಃ ಪಂಚ ಸ್ಥಾವರಗಳಲ್ಲಿ ಅಸಂಖ್ಯಾತ ಕಾಲ ಕಳೆಯುತ್ತದೆ. ಅನಂತರ ನಿಗೋದದಲ್ಲಿ ಹೊರಟು ಹೋಗುತ್ತದೆ. ಈ ಪ್ರಕಾರ ಪರಿಭ್ರಮಣ ಮಾಡುತ್ತ ಅನಂತ ಪರಿವರ್ತನಗಳು ಪೂರ್ಣವಾಗಿ ಹೋಗುತ್ತವೆ, ಆದರೆ ಪಂಚೇಂದ್ರಿಯತನವು ಪ್ರಾಪ್ತವಾಗುವುದು ದುರ್ಲಭವಿದೆ. ಪಂಚೇಂದ್ರಿಯಗಳಲ್ಲಿ ಕೂಡ ಮನಸಹಿತವಾಗುವುದು ಇನ್ನೂ ದುರ್ಲಭವಿದೆ. ಅಸಂಜ್ಞಿಯಾಗಿರುತ್ತ ಹಿತ-ಅಹಿತದ ಜ್ಞಾನರಹಿತ, ಶಿಕ್ಷೆ-ಕ್ರಿಯೆ-ಉಪದೇಶ-ಮಾತು ಮೊದಲಾದವುಗಳಿಂದ ರಹಿತ, ಅಜ್ಞಾನಭಾವದಿಂದ ನರಕ-ನಿಗೋದ ಮೊದಲಾದ ತಿರ್ಯಂಚ ಗತಿಯಲ್ಲಿ ದೀರ್ಘಕಾಲದವರೆಗೆ ಪರಿಭ್ರಮಣ ಮಾಡುತ್ತದೆ.

ಒಮ್ಮೆ ಮನಸಹಿತವೂ ಆಗುತ್ತದೆ, ಆದರೆ ಕ್ರೂರ ತಿರ್ಯಂಚಗಳಲ್ಲಿ ರೌದ್ರ ಪರಿಣಾಮಿ, ತೀವ್ರ ಅಶುಭ ಲೇಶ್ಯೆಯ ಧಾರಕವಾಗಿ ನರಕದಲ್ಲಿ ಅಸಂಖ್ಯಾತ ಕಾಲದವರೆಗೆ ಅನೇಕ ಪ್ರಕಾರದ ದುಃಖ ಭೋಗಿಸುತ್ತದೆ. ಅಸಂಖ್ಯಾತ ಕಾಲ ನರಕದ ದುಃಖ ಭೋಗಿಸಿ ಪುನಃ ಪಾಪಿ ತಿರ್ಯಂಚವಾಗುತ್ತದೆ. ಪುನಃ ನರಕದಲ್ಲಿ ಹಾಗೂ ತಿರ್ಯಂಚಗಳಲ್ಲಿ ಅನೇಕ ಪ್ರಕಾರದ ಘೋರ ದುಃಖ ಭೋಗಿಸುತ್ತ ತಿರ್ಯಂಚದ ಮತ್ತು ನರಕದ ಅಸಂಖ್ಯಾತ ಪರ್ಯಾಯಗಳನ್ನು ಭೋಗಿಸುತ್ತ ಪುನಃ ಸ್ಥಾವರಗಳಲ್ಲಿ ಪರಿಭ್ರಮಣ ಮಾಡುತ್ತ ಅನಂತ ಜನ್ಮ, ಮರಣ, ಕ್ಷುಧೆ, ತೃಷೆ, ಶೀತ, ಉಷ್ಣ, ಮಾರಣ ತಾಡನಗಳನ್ನು ಸಹನೆ ಮಾಡುತ್ತ ಅನಂತ ಕಾಲಗಳನ್ನು ವ್ಯತೀತ ಮಾಡುತ್ತದೆ.

**ಯಾವ ಪ್ರಕಾರ ಒಮ್ಮೆ ಜನನಿಬಿಡವಿರುವ ಚೌಕದಲ್ಲಿ ರತ್ನರಾಶಿಯು ದೊರಕುತ್ತದೆ, ಅದೇ ಪ್ರಕಾರ ದುರ್ಲಭವಿರುವ ಮನುಷ್ಯತೆಯನ್ನು ಪ್ರಾಪ್ತ ಮಾಡಿಕೊಂಡು ಮ್ಲೇಚ್ಛ ಮನುಷ್ಯನಾಗಿ ಹೋದರೆ ಅಲ್ಲಿಯೂ ಕೂಡ ಘೋರ ಪಾಪದ ಸಂಗ್ರಹ ಮಾಡಿ, ನರಕ ಮೊದಲಾದ ಚತುರ್ಗತಿಗಳಲ್ಲಿ ಪರಿಭ್ರಮಣ ಮಾಡುವಂಥವನಿಗೆ ಪುನಃ ಮನುಷ್ಯ ಜನ್ಮ ಪಡೆಯುವುದು ಅತ್ಯಂತ ದುರ್ಲಭವಿದೆ.** ಅದರಲ್ಲೂ ಆರ್ಯಖಂಡದಲ್ಲಿ ಜನ್ಮವಾಗುವುದು ಅತ್ಯಂತ ದುರ್ಲಭವಿದೆ. ಆರ್ಯಖಂಡದಲ್ಲೂ ಉತ್ತಮ ಜಾತಿ, ಉತ್ತಮ ಕುಲ ಪ್ರಾಪ್ತವಾಗುವುದು ಇನ್ನೂ ದುರ್ಲಭವಿದೆ. ಭಿಲ್ಲ, ಚಾಂಡಾಲ, ಚರ್ಮಕಾರ, ಕಮ್ಮಾರ, ಮಡಿವಾಳ, ಕಟುಕ, ನಾಪಿತ ಮೊದಲಾದ ನೀಚ ಕುಲಗಳು ಬಹಳಷ್ಟು ಇವೆ. ಉಚ್ಚ ಕುಲದ ಪ್ರಾಪ್ತಿಯಾಗುವುದು ದುರ್ಲಭವಿದೆ.

ಎಂದಾದರೊಮ್ಮೆ ಉಚ್ಚ ಕುಲವನ್ನು ಪ್ರಾಪ್ತ ಮಾಡಿಕೊಂಡರೂ ಧನ ರಹಿತವಾದರೆ ತಿರ್ಯಂಚಗಳ ಸಮಾನ ಭಾರ ಹೊರುವುದು, ನೀಚ ಕುಲದವರ ಸೇವೆ ಮಾಡುವಲ್ಲಿ ತತ್ಪರರಾಗಿರುವುದು, ಇಪ್ಪತ್ತು ನಾಲ್ಕು ಗಂಟೆ ಅಧರ್ಮ ಕಾರ್ಯ ಮಾಡಿ ಪರಾಧೀನ ವೃತ್ತಿಯ ಮೂಲಕ ಹೊಟ್ಟೆ ತುಂಬಿಕೊಳ್ಳುವಂಥವನ ಉಚ್ಚ ಕುಲದ ಪ್ರಾಪ್ತಿಯು ವ್ಯರ್ಥವಿದೆ.

ಒಮ್ಮೆ ಧನ ಸಹಿತನಾದರೂ ಕಿವಿ, ಕಣ್ಣು ಮೊದಲಾದ ಇಂದ್ರಿಯಗಳಿಂದ ವಿಕಲನಾದರೆ ಅವನ ಧನ ಪ್ರಾಪ್ತ ಮಾಡಿಕೊಂಡುದೂ ವ್ಯರ್ಥವಿದೆ. ಇಂದ್ರಿಯಗಳು ಪ್ರಾಪ್ತವಾದರೂ ರೋಗರಹಿತ ಶರೀರದ ಪ್ರಾಪ್ತಿಯಾಗುವುದು ದುರ್ಲಭವಿದೆ. ರೋಗರಹಿತವಾದರೂ ದೀರ್ಘಾಯುವು ಪ್ರಾಪ್ತವಾಗುವುದು ದುರ್ಲಭವಿದೆ. ದೀರ್ಘಾಯುವು ಪ್ರಾಪ್ತವಾದರೂ ಶೀಲರೂಪ ಎಂದರೆ ಸಮ್ಯಕ್ ಮನ-ವಚನ-ಕಾಯದ ಪ್ರವರ್ತನೆಯು ನ್ಯಾಯರೂಪವಿರುವುದು ದುರ್ಲಭವಿದೆ. ನ್ಯಾಯರೂಪವಾದ ಪ್ರವರ್ತನೆಯು ಇದ್ದರೂ ಕೂಡ ಸತ್ಪುರುಷರ ಸಹವಾಸವು ಪ್ರಾಪ್ತವಾಗುವುದು ಇನ್ನೂ ದುರ್ಲಭವಿದೆ.

**ಸತ್ಸಂಗತಿಯು ದೊರೆತ ನಂತರ ಕೂಡ ಸಮ್ಯಗ್ದರ್ಶನದ ಪ್ರಾಪ್ತಿಯಾಗುವುದು ದುರ್ಲಭವಿದೆ.** ಸಮ್ಯಗ್ದರ್ಶನವು ಪ್ರಾಪ್ತವಾದ ನಂತರ ಕೂಡ ಸಮ್ಯಕ್ಚಾರಿತ್ರದ ಪ್ರಾಪ್ತಿಯಾಗುವುದು ದುರ್ಲಭವಿದೆ. ಸಮ್ಯಕ್ಚಾರಿತ್ರದ ಪ್ರಾಪ್ತಿಯಾದ ಮೇಲೆ ಕೂಡ ಆಯುವಿನ ಪೂರ್ಣತೆಯವರೆಗೆ ಅದರ ಪಾಲನೆ ಮಾಡುತ್ತ ಸಮಾಧಿ ಮರಣದವರೆಗೆ ಪರಿಪಾಲನೆಯಾಗುವುದು ದುರ್ಲಭವಿದೆ. **ರತ್ನತ್ರಯ ಪ್ರಾಪ್ತ ಮಾಡಿಕೊಂಡು ಕೂಡ ತೀವ್ರ ಕಷಾಯಗಳಿಂದ ಪ್ರಾಪ್ತವಾಗಿ ಹೋದರೆ ಸಂಸಾರ ಸಮುದ್ರದಲ್ಲಿಯೇ ನಷ್ಟವಾಗಿ ಹೋಗುತ್ತಾನೆ ಮತ್ತು ಸಮುದ್ರದಲ್ಲಿ ಜಾರಿ ಬಿದ್ದರತ್ನದ ಸಮಾನ ಪುನಃ ರತ್ನತ್ರಯದ ಪ್ರಾಪ್ತಿ ಮಾಡಿಕೊಳ್ಳುವುದು ಪರಮ ದುರ್ಲಭವಾಗಿ ಹೋಗುತ್ತದೆ.**

ರತ್ನತ್ರಯದ ಪ್ರಾಪ್ತಿಯು ಮನುಷ್ಯ ಗತಿಯಲ್ಲಿಯೇ ಆಗುವುದು. ಮನುಷ್ಯ ಗತಿಯಲ್ಲಿಯೇ ವ್ರತ, ತಪ, ಸಂಯಮದಿಂದ ನಿರ್ವಾಣದ ಪ್ರಾಪ್ತಿಯಾಗುತ್ತದೆ. **ಇಂಥ ದುರ್ಲಭವಾದ ಮನುಷ್ಯ ಜನ್ಮ ಪ್ರಾಪ್ತ ಮಾಡಿಕೊಂಡು ಕೂಡ ಯಾರು ವಿಷಯಗಳಲ್ಲಿ ರಮಿಸುತ್ತಾರೆ. ಅವರು ಭಸ್ಮದ ಸಲುವಾಗಿ ದಿವ್ಯ ರತ್ನವನ್ನು ಸುಟ್ಟು ಬಿಡುತ್ತಾರೆ,** ಈ ಪ್ರಕಾರ ಬೋಧಿ ದುರ್ಲಭ ಭಾವನೆಯ ವರ್ಣನೆ ಮಾಡಲಾಯಿತು.

**ಧರ್ಮಭಾವನೆ :** ಈಗ ಧರ್ಮಭಾವನೆಯ ಸ್ವರೂಪವನ್ನು ಸಂಕ್ಷೇಪದಲ್ಲಿ ಹೇಳುತ್ತಾರೆ. ಧರ್ಮದ ಸ್ವರೂಪವನ್ನು ದಶಲಕ್ಷಣ ಭಾವನೆಯಲ್ಲಿ ಹೇಳಿಯೇ ಇದೆ. **ಧರ್ಮವಂತೂ ಆತ್ಮನ ಸ್ವಭಾವವಿದೆ.** ಆ ಧರ್ಮವು ವೀತರಾಗ ಸರ್ವಜ್ಞ ಭಗವಂತರಿಂದ ಪ್ರಕಾಶಿತ ದಶಲಕ್ಷಣ, ರತ್ನತ್ರಯ ಮತ್ತು ಜೀವದಯಾ ರೂಪವಿದೆ. ಅದರ ವರ್ಣನೆಯನ್ನು ಆಯಾ ಸಂದರ್ಭದಲ್ಲಿ ಸಂಕ್ಷೇಪವಾಗಿ ಈ ಗ್ರಂಥದಲ್ಲಿ ಹೇಳಲಾಗಿದೆ. ಈ ಸಂಸಾರದಲ್ಲಿ ಧರ್ಮವನ್ನು ತಿಳಿದುಕೊಳ್ಳುವ ಸಾಮಗ್ರಿಯೇ ಅತ್ಯಂತ ದುರ್ಲಭವಿದೆ.

**ಧರ್ಮಶ್ರವಣ ಮಾಡುವುದು ದುರ್ಲಭವಿದೆ, ಧರ್ಮಾತ್ಮರ ಸಂಗತಿಯು ದುರ್ಲಭವಿದೆ. ಧರ್ಮದಲ್ಲಿ ಶ್ರದ್ಧೆ ಜ್ಞಾನ, ಆಚರಣೆಯು ಯಾರೋ ವಿರಳ ಪುರುಷರ ಮೋಹದ ಮಂದತೆಯಿಂದ, ಕರ್ಮದ ಉಪಶಮತೆಯಿಂದ ಆಗುತ್ತದೆ, ಇಲ್ಲದಿದ್ದರೆ ಸಾಧ್ಯವಿಲ್ಲ.**

ಈ ಸಂಸಾರೀ ಜೀವನು ಯಾವ ಪ್ರಕಾರ ಇಂದ್ರಿಯ ವಿಷಯಗಳಲ್ಲಿ ; ಸ್ತ್ರೀ-ಪುತ್ರ-ಧನ ಮೊದಲಾದುವಲ್ಲಿ ಪ್ರೀತಿ ಮಾಡುತ್ತಾನೆ. ಈ ಪ್ರಕಾರ ಒಂದು ಜನ್ಮದಲ್ಲಾದರೂ ಧರ್ಮದಲ್ಲಿ ಪ್ರೀತಿ ಮಾಡಿದರೆ ಸಂಸಾರದ ದುಃಖಗಳ ಅಭಾವವಾಗಿ ಹೋಗುತ್ತದೆ. ಈ ಸಂಸಾರಿಯು ತನ್ನ ಸಲುವಾಗಿ ನಿರಂತರ ಸುಖವನ್ನು ಬಯಸುತ್ತಾನೆ, ಆದರೆ ಸುಖದ ಕಾರಣವಿರುವ ಧರ್ಮದಲ್ಲಿ ಆದರ ಮಾಡುವುದಿಲ್ಲ; ಅವನಿಗೆ ಸುಖದ ಪ್ರಾಪ್ತಿಯು ಹೇಗಾಗುವುದು ? **ಬೀಜವನ್ನೇ ಬಿತ್ತದೆ ಧಾನ್ಯದ ಪ್ರಾಪ್ತಿಯು ಹೇಗಾಗುವುದು ?** ಈ ಸಂಸಾರದಲ್ಲಿ ಕೂಡ ಯಾವ ಇಂದ್ರ, ಅಹಮಿಂದ್ರ, ತೀರ್ಥಂಕರ, ಚಕ್ರವರ್ತಿ, ಬಲಭದ್ರ, ನಾರಾಯಣತನಗಳೆಲ್ಲವೂ ಒಂದು ಧರ್ಮದ ಪ್ರಭಾವದಿಂದಲೇ ದೊರಕುತ್ತವೆ.

ಇಲ್ಲಿ ಕೂಡ ಉತ್ತಮ ಕುಲ, ರೂಪು, ಬಲ, ಐಶ್ವರ್ಯ, ರಾಜ್ಯ, ಸಂಪತ್ತು, ಆಜ್ಞೆ, ಒಳ್ಳೆಯ ಪುತ್ರ, ಸೌಭಾಗ್ಯವತಿ ಪತ್ನಿ, ಹಿತಕಾರಕ ಮಿತ್ರ, ಐಚ್ಛಿಕ ಕಾರ್ಯ ಸಾಧಿಸುವಂಥ ಸೇವಕ, ನಿರೋಗತೆ, ಉತ್ತಮ ಭೋಗ-ಉಪಭೋಗ, ವಾಸಿಸಲು ಇಂದ್ರನ ಭವನದಂತಿರುವ ಮನೆ, ಸುಂದರ ಸಂಗತಿಯಲ್ಲಿ ಪ್ರವೃತ್ತಿ, ಕ್ಷಮೆ, ವಿನಯ, ಮಂದಕಷಾಯ, ಪಾಂಡಿತ್ಯ, ಕವಿತ್ವ, ಚತುರತೆ, ಪೂಜ್ಯತೆ, ಲೋಕ ಮನ್ನಣೆ, ವಿಖ್ಯಾತಿ, ದಾನರೂಪತೆ, ಉದಾರತೆ, ಶೂರತನ ಮೊದಲಾದ ಉತ್ತಮ ಗುಣ, ಉತ್ತಮ ಸಂಗತಿ, ಉತ್ತಮಬುದ್ಧಿ, ಉತ್ತಮ ಪ್ರವೃತ್ತಿ ಮೊದಲಾದವು ಕೇಳಲು-ನೋಡಲು ಸಿಗುವುದೆಲ್ಲವೂ ಧರ್ಮದ ಪ್ರಭಾವದಿಂದಲೇ ಇದೆ.

ಧರ್ಮದ ಪ್ರಸಾದದಿಂದ ವಿಷಮವೂ ಸುಗಮವಾಗಿ ಹೋಗುತ್ತದೆ, ಮಹಾ ಸಂಕಟಗಳೂ ದೂರವಾಗಿ ಬಿಡುತ್ತವೆ, ಉದ್ಯಮರಹಿತನಿಗೂ ಸಂಪತ್ತಿಯ ಸಮಾಗಮವಾಗುತ್ತದೆ. ಧರ್ಮದ ಪ್ರಭಾವದಿಂದ ಅಗ್ನಿ, ಜಲ, ಪವನ, ರೋಗ, ಮಹಾಮಾಯೆ, ಸಿಂಹ-ಸರ್ಪ-ಹುಲಿ ಮೊದಲಾದ ಕ್ರೂರ ಜೀವಗಳ, ನದೀ, ಸಮುದ್ರ, ವಿಷ, ಪರಚಕ್ರ,

ದುಷ್ಟದೊರೆ, ದುಷ್ಟ ವೈರೀ, ದುಷ್ಟ ಚೋರ ಮೊದಲಾದವರ ಸಮಸ್ತ ಉಪದ್ರವಗಳು ದೂರವಾಗಿ ಆತ್ಮನಿಗೆ ಅನೇಕ ಸುಖರೂಪ ವೈಭವಗಳ ಪ್ರಾಪ್ತಿಯಾಗುತ್ತದೆ. **ಆದುದರಿಂದ ಸರ್ವಜ್ಞರ ಪರಮಾಗಮದ ಶ್ರದ್ಧೆ-ಜ್ಞಾನವುಳ್ಳವರಿದ್ದರೆ ಕೇವಲ ಧರ್ಮದ ಆಶ್ರಯವನ್ನೇ ಗ್ರಹಣ ಮಾಡಬೇಕು.** ಈ ಪ್ರಕಾರ ಸಂಸ್ಥಾನ ವಿಚಯ ಧರ್ಮಧ್ಯಾನದಲ್ಲಿ ಹನ್ನೆರಡು ಭಾವನೆಗಳ ವರ್ಣನೆಯನ್ನು ಸಂಕ್ಷೇಪದಲ್ಲಿ ಮಾಡಲಾಯಿತು.

**ಧರ್ಮಧ್ಯಾನದಲ್ಲಿ ಅನ್ಯ ಪ್ರಕಾರದ ನಾಲ್ಕು ಭೇದಗಳು :** ಧ್ಯಾನ ನಾಮದ ತಪದಲ್ಲಿ ಧರ್ಮಧ್ಯಾನದ ಕಥನದ ವರ್ಣನೆ ಮಾಡಿದೆ. ಈಗ ಧರ್ಮಧ್ಯಾನದ ವರ್ಣನೆಯಲ್ಲಿ ಜ್ಞಾನಾರ್ಣವ ಮೊದಲಾದ ಗ್ರಂಥಗಳಲ್ಲಿ ಪಿಂಡಸ್ಥ, ಪದಸ್ಥ, ರೂಪಸ್ಥ, ಮತ್ತು ರೂಪಾತೀತ ಧ್ಯಾನವೆಂದು ನಾಲ್ಕು ಪ್ರಕಾರ ಹೇಳಲಾಗಿದೆ. ಅವುಗಳ ಸಂಕ್ಷೇಪ ವರ್ಣನೆಯನ್ನು ಈ ಗ್ರಂಥದಲ್ಲಿ ಮಾಡಲಾಗುವುದು.

**ಪಿಂಡಸ್ಥ ಧರ್ಮಧ್ಯಾನ :** ಪಿಂಡಸ್ಥ ಧ್ಯಾನದಲ್ಲಿ ಭಗವಂತರು ಐದು ಧಾರಣಾಗಳ ವರ್ಣನೆ ಮಾಡಿದ್ದಾರೆ, ಅವನ್ನು ಸಮ್ಯಕ್ ರೂಪವಾಗಿ ತಿಳಿಯುವಂಥ ಸಂಯಮಿಯು ಸಂಸಾರರೂಪ ಬಂಧನದ ಭೇದ ಮಾಡುತ್ತಾರೆ. ಪಾರ್ಥಿವೀ ಧಾರಣಾ, ಆಗ್ನೇಯೀ ಧಾರಣಾ, ಪವನ ಧಾರಣಾ, ವಾರುಣೀ ಧಾರಣಾ, ತತ್ತ್ವರೂಪವತೀಧಾರಣಾ ಈ ಐದು ಧಾರಣಾಗಳು ತಿಳಿದುಕೊಳ್ಳಲು ಯೋಗ್ಯವಿವೆ.

**ಪಾರ್ಥಿವೀ ಧಾರಣಾ :** ಪೃಥ್ವೀ ಸಂಬಂಧದ ಪಾರ್ಥಿವೀಧಾರಣಾ ಸ್ವರೂಪದ ವರ್ಣನೆ ಮಾಡುತ್ತಾರೆ. ಈ ಮಧ್ಯ ಲೋಕದ ಸಮಾನ ವೃತ್ತಾಕಾರದ ಒಂದು ರಜ್ಜು ವಿಸ್ತಾರವುಳ್ಳ ಕ್ಷೀರ ಸಮುದ್ರದ ವಿಚಾರ ಮಾಡುವುದು. ಕ್ಷೀರ ಸಮುದ್ರದ ವಿಚಾರ ಹೇಗೆ ಮಾಡುವುದೆಂದರೆ ಶಬ್ದರಹಿತ, ಅಲೆಗಳಿಲ್ಲದ (ಪೂರ್ಣಶಾಂತ ನಿಶಬ್ದ) ಶುಭ್ರ ತುಷಾರ ಅಥವಾ ಮಂಜುಗಡ್ಡೆಯ ಸಮಾನ ಉಜ್ವಲವಿರುವ ಕ್ಷೀರ ಸಮುದ್ರದ ವಿಚಾರ ಮಾಡುವುದು. ಆ ಕ್ಷೀರ ಸಮುದ್ರದ ಮಧ್ಯದಲ್ಲಿ ಕಾಯಿಸಿದ ಚಿನ್ನದ ಸಮಾನ ಅಪರಿಮಿತ ಪ್ರಭೆಯ ಧಾರಕ, ಒಂದು ಸಾವಿರ ದಳಗಳುಳ್ಳ ಪದ್ಮರಾಗ ಮಣಿಮಯ ಉದಯರೂಪ ಕೇಶರಾವಳಿಯುಳ್ಳ ಒಂದು ಕಮಲದ ವಿಚಾರ ಮಾಡುವುದು.

ಕಮಲವು ಹೇಗಿರುತ್ತದೆಯೆಂದರೆ ಜಂಬೂದ್ವೀಪದ ಸಮಾನ ಒಂದು ಲಕ್ಷ ಯೋಜನ ವಿಸ್ತಾರವಾದ ಕಮಲದ ವಿಚಾರ ಮಾಡುವುದು. ಅದರ ಮಧ್ಯದಲ್ಲಿ ಚಿತ್ತರೂಪದ ದುಂಬಿಯನ್ನು ಪ್ರಸನ್ನಗೊಳಿಸುವಂಥ, ಮೇರುವಿನ ಸಮಾನವಿರುವ ಕರ್ಣಿಕೆಯು ತನ್ನ ಕಾಂತಿಯಿಂದ ಹತ್ತು ದಿಕ್ಕುಗಳನ್ನು ಹಳದೀ ವರ್ಣ ಮಾಡುತ್ತ ಶೋಭಾಯಮಾನವಿದೆ. ಆ ಕರ್ಣಿಕೆಯ ಮಧ್ಯದಲ್ಲಿ ಶರದ ಋತುವಿನ ಚಂದ್ರನ ಕಾಂತಿಯ ಸಮಾನ ಉಜ್ವಲವಾದ ಒಂದು ಉಚ್ಚ ಸಿಂಹಾಸನದ ಮೇಲೆ ತಾವು ಸುಖರೂಪ, ರಾಗ-ದ್ವೇಷ ರಹಿತ, ಸಂಸಾರದಲ್ಲಿ ಉತ್ಪನ್ನವಾದ ಕರ್ಮ ಸಮೂಹವನ್ನು ನಷ್ಟ ಮಾಡುವಲ್ಲಿ ಉದ್ಯಮಶೀಲರಾಗಿ ಕುಳಿತುಕೊಂಡಿದ್ದೇವೆಂದು ವಿಚಾರ ಮಾಡುವುದು.

ಅಲ್ಲಿ ಹೇಗೆ ವಿಚಾರ ಮಾಡುವುದೆಂದರೆ ಒಂದು ಉಜ್ವಲವಾದ ಕ್ಷೋಭೆಯಿಲ್ಲದ, ಶಬ್ದವಿಲ್ಲದ ಮಧ್ಯಲೋಕದ ಬರಾಬರಿ ವಿಸ್ತಾರವುಳ್ಳ ಕ್ಷೀರ ಸಮುದ್ರದ ಮಧ್ಯದಲ್ಲಿ ಜಂಬೂ ದ್ವೀಪದ ಬರಾಬರಿ ಕಾಯಿಸಿದ ಚಿನ್ನದ ಸಮಾನ ಕಾಂತಿಯ ಪುಂಜ, ಪದ್ಮಾರಾಗ ಮಣಿಮಯ ಕೇಶರ ವರ್ಣದ, ಒಂದು ಸಹಸ್ರ ದಳಗಳ ಒಂದು ಕಮಲವಿದೆ. ಆ ಕಮಲದ ಮಧ್ಯದಲ್ಲಿ ಮೇರುವಿನ ಸಮಾನ ಮಹಾಕಾಂತಿಯ ಪುಂಜವಾದ ಕರ್ಣಿಕೆಯಿದೆ. ಆ ಕರ್ಣಿಕೆಯ ಮಧ್ಯದಲ್ಲಿ ಶರದದ ಚಂದ್ರನ ಸಮಾನ ಕಾಂತಿಯಪುಂಜವಿರುವ ಉನ್ನತವಾದ ಒಂದು ಸಿಂಹಾಸನ ಅದರ ಮೇಲೆ ಮಧ್ಯದಲ್ಲಿ ಕ್ಷೋಭೆಯಿಲ್ಲದ, ರಾಗ-ದ್ವೇಷವಿಲ್ಲದ, ಕರ್ಮದ ನಾಶ ಮಾಡುವಲ್ಲಿ ಉದ್ಯಮಶೀಲನಾಗಿ ನಿಶ್ಚಲನಾಗಿ ಕುಳಿತುಕೊಂಡು ತನ್ನ ಆತ್ಮನ ವಿಚಾರ ಮಾಡುವುದು ಅದು ಪಾರ್ಥಿವೀಧಾರಣಾ ಇದೆ.

**ಆಗ್ನೇಯಿ ಧಾರಣಾ :** ಯಾವಾಗ ಪಾರ್ಥಿವೀ ಧಾರಣಾದ ದೃಢ ಅಭ್ಯಾಸವಾಗುವುದು ಆಗ ಆ ಸ್ಫಟಿಕಮಣಿಮಯ ಸಿಂಹಾಸನದಲ್ಲಿ ಕುಳಿತುಕೊಂಡು ತನ್ನ ನಾಭಿಮಂಡಲದಲ್ಲಿ ಮನೋಹರವಾದ ಹದಿನಾರು ಉನ್ನತ ದಳಗಳುಳ್ಳ ಒಂದು

ಕಮಲದ ವಿಚಾರ ಮಾಡುವುದು. ಆ ಕಮಲದ ಒಂದೊಂದು ದಳದ ಮೇಲೆ ಕುಳಿತ ಹದಿನಾರು ಸ್ವರಗಳ ಪಂಕ್ತಿ- ಅ ಆ ಇ ಈ ಉ ಊ ಋ ೠ ಲು ಲೂ ಏ ಐ ಓ ಔ ಅಂ ಅಃ ಈ ಕ್ರಮದಿಂದ ಸ್ಥಾಪಿಸಿ ವಿಚಾರ ಮಾಡುವುದು. ಆ ಕಮಲದ ಕರ್ಣಿಕೆಯಲ್ಲಿ ಕುಳಿತ ಒಂದು ಶೂನ್ಯ ಅಕ್ಷರ ರೇಫ ಬಿಂದು ಅರ್ಧ ಚಂದ್ರಾಕಾರ ಕಲಾಯುಕ್ತ, ಬಿಂದುವಿನೊಳಗಿಂದ ಕೋಟಿ ಕಾಂತಿಯುಕ್ತ ದಶದಿಶೆಗಳನ್ನು ವ್ಯಾಪಿಸುತ್ತ ರ್ಹಂ ಎಂಬ ಮಂತ್ರದ ವಿಚಾರ ಮಾಡುವುದು. ಪುನಃ ಆ ಮಂತ್ರದ ರೇಫದಿಂದ ಮಂದ ಮಂದವಾಗಿ ಹೊರಡುತ್ತ ಧೂಮದ ವಿಚಾರ ಮಾಡುವುದು. ಅನಂತರ ಅಗ್ನಿಯ ಕಿಡಿಗಳ ಪಂಕ್ತಿಯ ವಿಚಾರ ಮಾಡುವುದು.

ಅದರ ನಂತರ ಮಹಾಮಂತ್ರದ ಧ್ಯಾನದಿಂದ ಉತ್ಪನ್ನವಾದ ಅಗ್ನಿಯ ಜ್ವಾಲೆಯ ಸಮೂಹವು ಮೇಲೇಳುತ್ತಿರುವುದನ್ನು ತಿಳಿದುಕೊಂಡು ತಮ್ಮ ಹೃದಯಸ್ಥಾನದಲ್ಲಿ ಅಧೋಮುಖವಾಗಿ ಕುಳಿತ ಎಂಟು ಕರ್ಮಮಯ ಎಂಟು ದಳಗಳುಳ್ಳ ಕಮಲವನ್ನು ಸುಟ್ಟು ಬಿಡಬೇಕು. ಅದರ ನಂತರ ಹೊರಗೆ ಬಂದು ತ್ರಿಕೋಣ ಅಗ್ನಿಮಂಡಲವನ್ನು ಅಗ್ನಿಯ ಬೀಜಾಕ್ಷರ 'ರ' ಕಾರ ಸಹಿತ ಸ್ವಸ್ತಿಕ ಚಿಹ್ನದೊಡನೆ ಜ್ವಾಲೆಯ ಸಮೂಹದಿಂದ -ಅಗ್ನಿಯಿಂದ ಶರೀರವನ್ನು ಸುಟ್ಟು ಬಿಡಬೇಕು. ಅದರ ನಂತರ ನಿರ್ಧೂಮ ಅಗ್ನಿಯು ಸ್ವರ್ಣಸಮಾನ ಪ್ರಭೆಯಿಂದ ಧಗಧಗಿಸುತ್ತ-ಅಂತರ್ಯದಲ್ಲಿಯಂತೂ ಮಂತ್ರದ ಅಗ್ನಿಯಿಂದ ಕರ್ಮಗಳನ್ನು ಸುಟ್ಟು ಹಾಕಿದೆ ಮತ್ತು ಬಾಹ್ಯದಲ್ಲಿ ಶರೀರವನ್ನು ಅಗ್ನಿಮಯ ಮಾಡಿ ಸುಟ್ಟು ಹಾಕಿದೆ. ಅನಂತರ ಸುಡಲು ಯೋಗ್ಯವಾದುದು ಯಾವುದೂ ಉಳಿಯಲಿಲ್ಲ, ಆಗ ಅಗ್ನಿಯು ಕ್ರಮದಿಂದ ತಾನಾಗಿಯೇ ಶಾಂತವಾಗಿ ಶೀತಲವಾಗಿ ಹೋಗುತ್ತದೆ, ಇಲ್ಲಿಯವರೆಗೆ ಇದು ಅಗ್ನಿಧಾರಣಾದ ವರ್ಣನೆ ಮಾಡಲಾಯಿತು.

**ಪವನ ಧಾರಣಾ :** ಈಗ ಪವನ ಧಾರಣಾದ ವರ್ಣನೆ ಮಾಡುತ್ತಾರೆ. ಮಹಾ ವೇಗಯುಕ್ತ, ಮತ್ತು ಮಹಾ ಬಲವಂತ, ದೇವಗಳ ಸಮೂಹವನ್ನು ಕೂಡ ಚಂಚಲಗೊಳಿಸುತ್ತ, ಮೇರುವನ್ನು ಕಂಪಾಯಮಾನ ಮಾಡುತ್ತ, ಮೇಘಗಳ ಸಮೂಹವನ್ನು ವಿದೀರ್ಣಗೊಳಿಸುತ್ತ, ಮಹಾ ಸಮುದ್ರವನ್ನು ಕ್ಷೋಭಾಯಮಾನ ಮಾಡುತ್ತ, ದೊಡ್ಡ ಭವನಗಳ ಒಳಗಡೆಯಿಂದ ಗಮನ ಮಾಡುತ್ತ, ದಿಶೆಗಳ ಮುಖದಲ್ಲಿ ಚಲಿಸುತ್ತ, ಜಗತ್ತಿನ ಮಧ್ಯದಲ್ಲಿ ವಿಸ್ತರಿಸುತ್ತ, ಪೃಥ್ವೀ ತಲದಲ್ಲಿ ಪ್ರವೇಶ ಮಾಡುತ್ತಿರುವಂಥ ಪವನವು ಸಂಪೂರ್ಣ ಆಕಾಶ ಪ್ರದೇಶದಲ್ಲೆಲ್ಲ ವಿಹಾರ ಮಾಡುತ್ತಿರುವುದನ್ನು ಸ್ಮರಣೆ ಮಾಡುವುದು. ಆ ಪ್ರಬಲ ಪವನದಿಂದ ಆ ಸುಟ್ಟು ಹೋದ ಕರ್ಮರಜ ಮತ್ತು ಶರೀರದ ರಜವು ಹಾರಿ ಹೋಗುತ್ತದೆ, ಅನಂತರ ಕ್ರಮದಿಂದ ಪವನವು ಶಾಂತವಾಗಿ ಹೋಗುತ್ತದೆ. ಈ ಪ್ರಕಾರ ಪವನ ಧಾರಣಾದ ವರ್ಣನೆ ಮಾಡಲಾಯಿತು.

**ವಾರುಣೀಧಾರಣಾ :** ವಾರುಣೀಧಾರಣಾದಲ್ಲಿ ಮೇಘ ಸಮೂಹದಿಂದ ವ್ಯಾಪ್ತವಾದ ಆಕಾಶದ ವಿಚಾರ ಮಾಡುವುದು. ಇಂದ್ರಧನುಷ್ಯ ಹಾಗೂ ಮಿಂಚಿನ ಹೊಳಪು ಮತ್ತು ಮಹಾಗರ್ಜನೆ ಸಹಿತ ಸ್ಮರಣೆ ಮಾಡುವುದು. ಅಮೃತದಿಂದ ಉತ್ಪನ್ನವಾದ ದೊಡ್ಡ ಮುತ್ತಿನ ಸಮಾನ ಉಜ್ವಲವಿರುವ ದೊಡ್ಡ ಧಾರೆಯಾಗಿ ನಿರಂತರ ಸುರಿಯುತ್ತಿರುವುದನ್ನು ಸ್ಮರಣೆ ಮಾಡುವುದು. ಅದರ ನಂತರ ವರುಣ ಬೀಜಾಕ್ಷರದಿಂದ ಅಂಕಿತ ಹಾಗೂ ಅಮೃತಮಯ ಜಲದಿಂದ ತುಂಬಿರುವ ಆಕಾಶದಲ್ಲಿ ವ್ಯಾಪ್ತವಾಗುವ - ಅರ್ಧ ಚಂದ್ರಾಕಾರದ ವರುಣಾಪುರದ ವಿಚಾರ ಮಾಡುವುದು. ಆ ಅಚಿಂತ್ಯ ಪ್ರಭಾವರೂಪ ದಿವ್ಯ ಧ್ವನಿರೂಪವಾದ ಜಲದ ಮೂಲಕ, ಶರೀರ ಮತ್ತು ಕರ್ಮಗಳನ್ನು ಸುಡುವುದರಿಂದ ಉತ್ಪನ್ನವಾದ, ಪವನದ ಹಾರಿಸುವಿಕೆಯಿಂದ ಶೇಷ ಉಳಿದ, ಸಮಸ್ತ ರಜವನ್ನು ಪ್ರಕ್ಷಾಲಿತ ಮಾಡುತ್ತಿರುವುದನ್ನು ಸ್ಮರಣೆ ಮಾಡುವುದು, ಈ ಪ್ರಕಾರ ವಾರುಣೀಧಾರಣಾದ ವರ್ಣನೆ ಮಾಡಲಾಯಿತು.

**ತತ್ತ್ವರೂಪವತೀಧಾರಣಾ :** ಅದರ ನಂತರ ಸಿಂಹಾಸನದ ಮೇಲೆ ಕುಳಿತುಕೊಂಡ, ದಿವ್ಯ ಅತಿಶಯಗಳಿಂದ ಯುಕ್ತ, ಕಲ್ಯಾಣಕಗಳ ಮಹಿಮೆಯಿಂದ ಯುಕ್ತ, ನಾಲ್ಕು ಪ್ರಕಾರದ ದೇವಗಳಿಂದ ಪೂಜಿತ, ಸಮಸ್ತ ಕರ್ಮರಹಿತ, ಅತ್ಯಂತ ನಿರ್ಮಲ, ಪ್ರಕಟ, ಪುರುಷಾಕಾರ, ತಮ್ಮ ಶರೀರದ ಒಳಗೆ ಸಪ್ತಧಾತುಗಳಿಂದ ರಹಿತ, ಪೂರ್ಣಚಂದ್ರನ ಸಮಾನ ಕಾಂತಿಯ ಪುಂಜ, **ಸರ್ವಜ್ಞನ ಸಮಾನವಿರುವ ತನ್ನ ಆತ್ಮನ ಸ್ಮರಣೆ-ವಿಚಾರ ಮಾಡುವುದು.** ಈ ಪ್ರಕಾರ ತತ್ತ್ವರೂಪವತೀಧಾರಣಾದ ವರ್ಣನೆ ಮಾಡಲಾಯಿತು.

ಈ ಪ್ರಕಾರ ಐದು ಧಾರಣಾರೂಪವಾದ ಪಿಂಡಸ್ಥ ಧರ್ಮಧ್ಯಾನದ ಚಿಂತನದಲ್ಲಿ ನಿಶ್ಚಲತೆಯಿಂದ ಅಭ್ಯಾಸ ಮಾಡುವ ಯೋಗಿಗಳು ಅಲ್ಪಕಾಲದಲ್ಲಿ ಸಂಸಾರದ ಅಭಾವ ಮಾಡಿ ಬಿಡುತ್ತಾರೆ. ಹೀಗೆ ಈ ಪಿಂಡಸ್ಥ ಧರ್ಮಧ್ಯಾನದಲ್ಲಿ ಮಹಾಕಾಂತಿಯುಕ್ತ ಜಗತ್ತನ್ನು ಆನಂದಿತ ಮಾಡುತ್ತ ಸರ್ವಜ್ಞರ ಸಮಾನ ಮೇರುವಿನ ಶಿಖರದ ಮೇಲೆ ಸಿಂಹಾಸನದಲ್ಲಿ ವಿರಾಜಮಾನ ಸಮಸ್ತ ದೇವಗಳಿಂದ ವಂದನೀಯವಿರುವ ಆತ್ಮನ ನಿಶ್ಚಲ ಚಿಂತನ ಮಾಡುತ್ತ ಜಿನಾಗಮರೂಪ ಮಹಾಸಮುದ್ರದ ಪಾರಗಾಮಿಯಾಗಿ ಹೋಗುತ್ತಾನೆ.

ಈ ಧ್ಯಾನದ ಪ್ರಭಾವದಿಂದಲೇ ದುಷ್ಟರಿಂದ ಮಾಡಲಾದ ವಿದ್ಯೆ, ಮಂಡಲ, ಯಂತ್ರ, ಮಂತ್ರ ಮೊದಲಾದ ಕ್ರೂರಕ್ರಿಯೆಯ ನಾಶವಾಗಿ ಹೋಗುತ್ತದೆ. ಸಿಂಹ,ಶಾರ್ದೂಲ, ಸರ್ಪ, ಖಡ್ಗ ಮೃಗ ಮೊದಲಾದ ಕ್ರೂರ ಜೀವಗಳು ಶಾಂತವಾಗಿ ನಿಃಸಾರವಾಗಿ ಹೋಗುತ್ತವೆ. ಭೂತ, ರಾಕ್ಷಸ, ಪಿಶಾಚ, ಶಾಕಿನಿ ಮೊದಲಾದ ದುಷ್ಟ ದೇವಗಳ ಕ್ರೂರ ವಾಸನೆಯ ಅಭಾವವಾಗಿ ಹೋಗುತ್ತದೆ. ಈ ಪ್ರಕಾರ ಪಿಂಡಸ್ಥ ಧರ್ಮಧ್ಯಾನದ ಸ್ವರೂಪದ ವರ್ಣನೆ ಮಾಡಲಾಯಿತು.

**ಪದಸ್ಥ ಧರ್ಮಧ್ಯಾನ :** ಈಗ ಪದಸ್ಥ ಧರ್ಮಧ್ಯಾನದ ಸ್ವರೂಪದ ವರ್ಣನೆ ಮಾಡುತ್ತಾರೆ. ಪೂರ್ವಾಚಾರ್ಯರುಗಳಿಂದ ಪ್ರಸಿದ್ಧವಾದ ಸಿದ್ಧಾಂತಗಳಲ್ಲಿ ಮಂತ್ರಪದಗಳಿದ್ದು ಅವುಗಳ ಧ್ಯಾನ ಮಾಡುವುದು ಅದು ಪದಸ್ಥ ಧ್ಯಾನವಿದೆ. ಅನಾದಿ ಸಿದ್ಧಾಂತದಲ್ಲಿ ಪ್ರಸಿದ್ಧವಾದ ಸಮಸ್ತ ಶಬ್ದ ರಚನೆಯ ಜನ್ಮಭೂಮಿ, ಜಗತ್ತು ವಂದನಾಯೋಗ್ಯವಾದ **ವರ್ಣಮಾತೃಕದ** ಧ್ಯಾನ ಮಾಡುವುದು. **ನಾಭಿಯಲ್ಲಿ ಒಂದು ಹದಿನಾರು ದಳಗಳುಳ್ಳ ಕಮಲದ ವಿಚಾರ ಮಾಡುವುದು.** ಅದರ ಪ್ರತಿಯೊಂದು ಪತ್ರದ ಮೇಲೆ ಹದಿನಾರು ಸ್ವರಗಳ ಪಂಕ್ತಿಯು ಭ್ರಮಣ ಮಾಡುತ್ತಿರುವುದರ ವಿಚಾರ ಮಾಡುವುದು. ಅ ಆ ಇ ಈ ಉ ಊ ಋ ೠ ಲು ಲೂ ಏ ಐ ಓ ಔ ಅಂ ಅಃ ಈ ಹದಿನಾರು ಸ್ವರಗಳ ಪಂಕ್ತಿಯ ವಿಚಾರ ಮಾಡುವುದು.

**ತಮ್ಮ ಹೃದಯಸ್ಥಾನದಲ್ಲಿ ಇಪ್ಪತ್ತು ನಾಲ್ಕು ದಳಗಳಿರುವಂಥ ಕಮಲದ ವಿಚಾರ ಮಾಡುವುದು. ಅದರ ಕರ್ಣಿಕೆ** ಸಹಿತ ಇಪ್ಪತ್ತೈದು ಸ್ಥಾನಗಳಲ್ಲಿ ಐದು ವರ್ಗದ ಇಪ್ಪತ್ತೈದು ಅಕ್ಷರ - ಕ ಖ ಗ ಘ ಙ, ಚ ಛ ಜ ಝ ಞ, ಟ ಠ ಡ ಢ ಣ, ತ ಥ ದ ಧ ನ, ಪ ಫ ಬ ಭ ಮ ಇವುಗಳ ವಿಚಾರ ಮಾಡುವುದು. **ಮುಖದಲ್ಲಿ ಎಂಟು ದಳಗಳಿರುವಂಥ ಕಮಲದ ವಿಚಾರ ಮಾಡುವುದು.** ಅದರಲ್ಲಿ ಯ ರ ಲ ವ, ಶ ಷ ಸ ಹ ಈ ಎಂಟು ಅಕ್ಷರಗಳು ಪ್ರದಕ್ಷಿಣೆ ರೂಪವಾಗಿ ಪರಿಭ್ರಮಣ ಮಾಡುತ್ತಿರುವುದರ ವಿಚಾರ ಮಾಡುವುದು. ಈ ಪ್ರಕಾರ ಅನಾದಿ ಪ್ರಸಿದ್ಧ ವರ್ಣ ಮಾತೃಕದ ಸ್ಮರಣೆ ಮಾಡುತ್ತ ಜ್ಞಾನಿಗಳು ಶ್ರುತಜ್ಞಾನ ಸಮುದ್ರದ ಪಾರಗಾಮಿಯಾಗಿ ಹೋಗುತ್ತಾರೆ. ಈ ವರ್ಣ ಮಾತೃಕದ ಧ್ಯಾನದಿಂದ ನಷ್ಟವಾದ ವಸ್ತುವಿನ ಜ್ಞಾನವಾಗಿ ಹೋಗುತ್ತದೆ, ಕ್ಷಯರೋಗ, ಅರುಚಿರೋಗ, ಮಂದಾಗ್ನಿ, ಕುಷ್ಟ, ಉದರರೋಗ, ಶ್ವಾಸ ಮೊದಲಾದ ರೋಗಗಳನ್ನು ಜಯಿಸಲಾಗುತ್ತದೆ ; ಮತ್ತು ಅಸದೃಶ ವಚನಕಲೆ ಹಾಗೂ ಮಹಾಪುರುಷರುಗಳಿಂದ ಪೂಜ್ಯತೆ ಪಡೆದು ಉತ್ತಮ ಗತಿಗೆ ಪ್ರಾಪ್ತನಾಗುತ್ತಾನೆ.

ಪರಮಾಗಮದಲ್ಲಿ ಹೇಳಿದ ಮೂವತ್ತೈದು ಅಕ್ಷರಗಳ ಮಂತ್ರ ಜಪಿಸುವುದು. **ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಇರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಏ ಸವ್ವಸಾಹೂಣಂ. ''ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯಸರ್ವಸಾಧುಭ್ಯೋ ನಮಃ''** ಈ ಪ್ರಕಾರ ಹದಿನಾರು ಅಕ್ಷರಗಳಿರುವಂಥ ಮಂತ್ರ ಪದದ ಧ್ಯಾನ ಮಾಡುವುದು, **''ಣಮೋ ಅರಹಂತಾಣಂ''** ಹೀಗೆ ಏಳು ಅಕ್ಷರಗಳ ಮಂತ್ರದ ಜಪ ಮಾಡುವುದು; **''ಅರಹಂತಸಿದ್ಧ''** ಹೀಗೆ ಆರು ಅಕ್ಷರಗಳ ಮಂತ್ರದ; **''ಅಸಿಆಉಸಾ''** ಹೀಗೆ ಐದು ಅಕ್ಷರಗಳ ಮಂತ್ರದ; **''ಅರಹಂತ''** ಹೀಗೆ ನಾಲ್ಕು ಅಕ್ಷರಗಳ ಮಂತ್ರದ; **''ಸಿದ್ಧ'** ಹೀಗೆ ಎರಡು ಅಕ್ಷರಗಳ ಮಂತ್ರದ; **''ಓಂ''** ಈ ಒಂದು ಅಕ್ಷರದ ಮಂತ್ರದ; **''ಅಂ''** ಒಂದು ಅಕ್ಷರದ ಮಂತ್ರದ ಧ್ಯಾನ ಮಾಡುವುದು; ಪರಮೇಷ್ಠಿವಾಚಕ ಅನೇಕ ಮಂತ್ರಗಳ ಧ್ಯಾನವನ್ನು ಪರಮಗುರುಗಳ ಉಪದೇಶದಿಂದ ಮಾಡುವುದು.

ಚತ್ತಾರಿ ಮಂಗಲಂ, ಅರಹಂತಾಮಂಗಲಂ, ಸಿದ್ಧಾಮಂಗಲಂ, ಸಾಹೂ ಮಂಗಲಂ, ಕೇವಲಿ ಪಣ್ಣತ್ತೋ ಧಮ್ಮೋ ಮಂಗಲಂ ಇವು ನಾಲ್ಕು ಮಂಗಲ ಪದ; ಚತ್ತಾರಿ ಲೋಗುತ್ತಮಾ, ಅರಹಂತಾ ಲೋಗುತ್ತಮಾ, ಸಿದ್ಧಾಲೋಗುತ್ತಮಾ, ಸಾಹೂ ಲೋಗುತ್ತಮಾ, ಕೇವಲಿ ಪಣ್ಣತ್ತೋ ಧಮ್ಮೋ ಲೋಗುತ್ತಮೋ ಇವು ನಾಲ್ಕು ಉತ್ತಮ ಪದ; ಮತ್ತು ಚತ್ತಾರಿ ಸರಣಂ ಪವ್ವಜ್ಜಾಮಿ, ಅರಹಂತೇ ಸರಣಂ ಪವ್ವಜ್ಜಾಮಿ, ಸಿದ್ಧೇ ಸರಣಂ ಪವ್ವಜ್ಜಾಮಿ, ಸಾಹೂ ಸರಣಂ ಪವ್ವಜ್ಜಾಮಿ, ಕೇವಲಿ ಪಣ್ಣತ್ತಂ ಧಮ್ಮಂ ಸರಣಂ ಪವಜ್ಜಾಮಿ ಇವು ನಾಲ್ಕು ಶರಣ ಪದಗಳಿವೆ. ಕರ್ಮಪಟಲದ ನಾಶ ಮಾಡುವ ಸಲುವಾಗಿ ನಿತ್ಯವೂ ಇವುಗಳ ಧ್ಯಾನ ಮಾಡುವುದು.

ಮೂರು ಲೋಕದಲ್ಲಿ ಇವು ನಾಲ್ಕೇ ಮಂಗಲವಿವೆ, ನಾಲ್ಕೇ ಉತ್ತಮವಿವೆ, ನಾಲ್ಕೇ ಶರಣವಿವೆ. ಧ್ಯಾನದಲ್ಲಿ ನಿರಂತರ ಇವುಗಳ ಸ್ಮರಣೆ ಮಾಡುವುದು. ಇವುಗಳ ಹೊರತಾಗಿ ಇನ್ನೂ ಅನೇಕ ಮಂತ್ರಗಳು ಈ ಜೀವದ ರಾಗ-ದ್ವೇಷ-ಮೋಹ-ಮೂರ್ಛೆಯ ನಾಶ ಮಾಡುವ ಸಲುವಾಗಿ; ವೈರ-ವಿರೋಧ ದೂರ ಮಾಡುವ ಸಲುವಾಗಿ; ದುರ್ಧ್ಯಾನದ ನಾಶ ಮಾಡುವ ಸಲುವಾಗಿ; ಪರಮ ಶಾಂತಭಾವ ಉತ್ಪನ್ನ ಮಾಡುವ ಸಲುವಾಗಿ, ವಿಷಯಗಳಲ್ಲಿನ ಪ್ರೀತಿ ನಷ್ಟಮಾಡುವ ಸಲುವಾಗಿ; ಪಂಚೇಂದ್ರಿಯಗಳನ್ನು ಜಯಿಸುವ ಸಲುವಾಗಿ; ವೀತರಾಗತೆಯನ್ನು ವೃದ್ಧಿಸುವ ಸಲುವಾಗಿ; ಸಮಸ್ತ ಪರವಸ್ತುಗಳಲ್ಲಿನ ಇಚ್ಛೆ-ಮಮತೆಯಿಂದ ರಹಿತರಾಗಿ ಗುರುಗಳ ಉಪದೇಶದಿಂದ ಧ್ಯಾನಮಾಡಲು ಯೋಗ್ಯವಿವೆ; ಜಪ ಮಾಡಲು ಯೋಗ್ಯವಿವೆ; ಅವುಗಳಿಂದ ಬಹಳಷ್ಟು ಕರ್ಮಗಳ ನಿರ್ಜರೆಯಾಗುತ್ತದೆ; ಕ್ರಮದಿಂದ ಸಂಸಾರ ಪರಿಭ್ರಮಣದ ಅಭಾವವಾಗಿ ಹೋಗುತ್ತದೆ.

**ದುರ್ಧ್ಯಾನ, ದುರ್ಧ್ಯಾನೀ ಮತ್ತು ದುರ್ಧ್ಯಾನದ ಫಲ :** ಯಾರು ರಾಗೀ-ದ್ವೇಷಿ-ಮೋಹಿಯಾಗಿ ಇತರರ ನಾಶ, ಉಚ್ಚಾಟನೆ, ವಶೀಕರಣ ಇತ್ಯಾದಿಗಳ ಸಲುವಾಗಿ; ವಿಷಯಭೋಗಗಳ ಸಲುವಾಗಿ; ವೈರಿಗಳ ನಾಶದ ಸಲುವಾಗಿ; ರಾಜ್ಯ ಸಂಪತ್ತು ಗ್ರಹಣ ಮಾಡುವ ಸಲುವಾಗಿ ಮಂತ್ರಗಳ ಜಪ ಮಾಡುತ್ತಾರೆ, ಧ್ಯಾನ-ತಪ ಇತ್ಯಾದಿಗಳನ್ನು ದೃಢವಾಗಿ ಮಾಡುತ್ತಾರೆ **ಅವರು ಘೋರ ಸಂಸಾರ ಪರಿಭ್ರಮಣದ ಕಾರಣವಿರುವ ಮಿಥ್ಯಾದರ್ಶನ ಮೊದಲಾದ ಅಶುಭ ಕರ್ಮಗಳ ಬಂಧ ಮಾಡಿಕೊಳ್ಳುತ್ತಾರೆ.** ದುಷ್ಟ ವಾಸನೆ, ದುಷ್ಟಧ್ಯಾನ ಮತ್ತು ವ್ಯಂತರ, ದೇವ, ದೇವೀ, ಯಕ್ಷಿಣೀ ಕುದೇವಗಳ ಧ್ಯಾನ ಮಾಡುವುದರಿಂದ ತಮ್ಮ ಪರಿಣಾಮವನ್ನು ಶ್ರದ್ಧೆ-ಜ್ಞಾನಗಳಿಂದ ಭ್ರಷ್ಟ ಮಾಡಿಕೊಂಡು ಘೋರ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾರೆ.

ಎಂದಾದರೂ ಯಾರದೋ ಚಿತ್ತದ ಏಕಾಗ್ರತೆಯ ರೂಪದ ತಪದ ಪ್ರಭಾವದಿಂದ, ಮಂದ ಕಷಾಯದ ಪ್ರಭಾವದಿಂದ ಮತ್ತು ಶುಭ ಕರ್ಮದ ಉದಯದಿಂದ ದುಷ್ಟ ವಿದ್ಯೆಯ ಸಿದ್ಧಿಯಾಗಿ ಹೋದರೆ ಅವನು ವಿಷಯ, ಕಷಾಯ, ಅಭಿಮಾನವನ್ನು ಹೆಚ್ಚಿಸಿಕೊಂಡು, ಸಮ್ಯಕ್ ಶ್ರದ್ಧೆ-ಜ್ಞಾನ-ಆಚರಣೆಯ ಘಾತ ಮಾಡಿ, ಪಾಪದಲ್ಲಿ ಪ್ರವರ್ತನೆ ಮಾಡಿ ದುರ್ಗತಿಗೆ ಪಾತ್ರನಾಗಿ ಹೋಗುತ್ತಾನೆಂದು ತಿಳಿದುಕೊಂಡು ವೀತರಾಗತೆಯನ್ನು ನಷ್ಟಮಾಡುವಂಥ ದುಷ್ಟ ಮಂತ್ರ, ಯಂತ್ರ, ಮಂಡಲ ಮೊದಲಾದವುಗಳ ತ್ಯಾಗ ಮಾಡಬೇಕು.

**ಧ್ಯಾನದ ಸಲುವಾಗಿ ಗೃಹಸ್ಥಾಶ್ರಮದ ಅಯೋಗ್ಯತೆ : ಮಹಾಮೋಹರೂಪದ ಅಗ್ನಿಯಿಂದ ಸುಡುತ್ತಿರುವ ಈ ಜಗತ್ತಿನಲ್ಲಿ ಕಷಾಯಗಳನ್ನು ತೊರೆದು ಓರ್ವ ಪರಮ ಯೋಗೀಶ್ವರರೇ ಪಾರಾಗಿ ಹೋಗುತ್ತಾರೆ.** ಇಲ್ಲಿ ಸಾವಿರಾರು ಕಷ್ಟ, ಆಧಿ,ವ್ಯಾಧಿಯಿಂದ ವ್ಯಾಪ್ತವಾದ ಸಂಸಾರದಲ್ಲಿ ಮಹಾಪರಾಧೀನ ರಾಗ-ದ್ವೇಷ-ಮೋಹರೂಪದ ವಿಷದಿಂದ ವ್ಯಾಪ್ತವಾದ ಅತ್ಯಂತ ನಿಂದ್ಯ ಗೃಹವಾಸದಲ್ಲಿ ದೊಡ್ಡ-ದೊಡ್ಡ ಬುದ್ಧಿವಂತರು ಕೂಡ ಪ್ರಮಾದ ಮೊದಲಾದುವನ್ನು ಜಯಿಸಿ ಚಂಚಲ ಮನಸ್ಸನ್ನು ವಶಪಡಿಸಿಕೊಳ್ಳುವಲ್ಲಿ ಸಮರ್ಥರಾಗುವುದಿಲ್ಲ. ಈ ಗೃಹಸ್ಥಾಶ್ರಮದಲ್ಲಿ ಅನೇಕ ಧನ-ಪರಿಗ್ರಹ ಮೊದಲಾದವುಗಳ ಸಂಯೋಗದಲ್ಲಿ ಒಂದೊಂದು ವಸ್ತುವಿನ ಮಮತೆಯ ರೂಪದ ಜಾಲ ಮತ್ತು **ಆಶಾರೂಪದ ಪಿಶಾಚಿಯಿಂದ ಹಿಡಿಯಲ್ಪಟ್ಟ ಹಾಗೂ ಸ್ತ್ರೀಯರ ಪ್ರೀತಿಯಲ್ಲಿ ಅಂಧರಾದ ಈ ಜೀವರುಗಳು ಆತ್ಮನ ಹಿತವನ್ನು ತಿಳಿದುಕೊಳ್ಳುವಲ್ಲಿ ಅಸಮರ್ಥರಿದ್ದಾರೆ.**

ಈ ಗೃಹಸ್ಥಾಶ್ರಮದಲ್ಲಿ ನಿರಂತರ ಆರ್ತಧ್ಯಾನ ರೂಪದ ಅಗ್ನಿಯೊಳಗೆ ಸುಡುತ್ತಿರುವ, ದುಷ್ಟ ವಾಸನಾರೂಪದ ಧೂಮ್ರದಿಂದ ಯಾರ ಜ್ಞಾನರೂಪದ ನೇತ್ರಗಳು ಮುಚ್ಚಿ ಹೋಗಿವೆ ಹಾಗೂ ಅನೇಕ ಚಿಂತೆಯ ರೂಪದ ಜ್ವರದಿಂದ ಯಾರ ಆತ್ಮನು ಅಚೇತನಾಗುತ್ತಿದ್ದಾನೆ. ಅವರಿಗೆ ಸ್ವಪ್ನದಲ್ಲಿ ಕೂಡ ಧ್ಯಾನದ ಸಿದ್ಧಿಯಾಗುವುದಿಲ್ಲ. ವಿಪತ್ತುರೂಪದ ಮಹಾ ಕೊಳಚೆಯಲ್ಲಿ ಮೋಸ ಹೋದ, ಪ್ರಬಲರಾಗರೂಪದ ಪಂಜರದಲ್ಲಿ ಬಾಧೆಗೊಳ್ಳುತ್ತಿರುವ, ಮತ್ತು ಪರಿಗ್ರಹರೂಪದ ವಿಷದಿಂದ ಮೂರ್ಛಿತರಾದ ಗೃಹಸ್ಥರು ಆತ್ಮನ ಹಿತರೂಪವಾದ ಧ್ಯಾನ ಮಾಡುವಲ್ಲಿ ಅಸಮರ್ಥರಿದ್ದಾರೆ. ಅವರು ತಮ್ಮ ಆರಂಭ ಪರಿಗ್ರಹದಲ್ಲಿ ಮಮತೆಯ ರೂಪದ ಬುದ್ಧಿಯಿಂದ ತಾವೇ ತಮ್ಮನ್ನು ಕಟ್ಟಿ ಹಾಕಿಕೊಂಡು ಪರಾಧೀನರಾಗುತ್ತಿದ್ದಾರೆ. ಗೃಹ ತ್ಯಜಿಸಿ ಸಂಯಮಿಯಾದಲ್ಲದೆ ರಾಗಾದಿರೂಪದ ವೈರಿಗಳನ್ನು ಜಯಿಸಲಾಗುವುದಿಲ್ಲ.

**ವೇಷಧಾರೀ ಮಿಥ್ಯಾದೃಷ್ಟಿಗಳೂ ಧ್ಯಾನಯೋಗ್ಯರಿಲ್ಲ :** ಗೃಹತ್ಯಾಗಿಯಾಗಿ ಕೂಡ ವಿಪರೀತ ತತ್ತ್ವವನ್ನು ಗ್ರಹಣ ಮಾಡುವಂಥ ಮಿಥ್ಯಾದೃಷ್ಟಿಗಳಿಗೆ ಸ್ವಪ್ನದಲ್ಲಿ ಕೂಡ ಧ್ಯಾನದ ಸಿದ್ಧಿಯಾಗುವುದಿಲ್ಲ. ಯತಿತನದಲ್ಲಿ ಕೂಡ ಪೂರ್ವಾಪರ ವಿರುದ್ಧ ಅರ್ಥದ ಸತ್ತಾದ ಆಶ್ರಯ ಮಾಡುವಂಥ ಪಾಖಂಡಿಗಳಿಗೂ ಧ್ಯಾನವಾಗುವ ಸಂಭವವಿಲ್ಲ. **ಸರ್ವಥಾ ಏಕಾಂತ ಗ್ರಹಣ ಮಾಡುವಂಥ ಪಾಖಂಡಿಗಳು ಅನೇಕಾಂತ ಸ್ವರೂಪ ವಸ್ತುವನ್ನು ತಿಳಿದುಕೊಳ್ಳುವಲ್ಲಿ ಕೂಡ ಸಮರ್ಥರಿಲ್ಲ, ಅವರಿಗೆ ಧ್ಯಾನದ ಸಿದ್ಧಿಯು ಹೇಗೆ ಆಗುವುದು. ?**

ಜಿನೇಂದ್ರರ ಆಜ್ಞೆಯ ಪ್ರತಿಕೂಲವಾಗಿ ವರ್ತಿಸುವಂಥ, ಮುನಿಲಿಂಗ ಧಾರಣ ಮಾಡಿದ ನಂತರವೂ ಮನ-ವಚನ-ಕಾಯದ ಕುಟಿಲತೆಯುಳ್ಳ, ಶಿಷ್ಯ ಮೊದಲಾದ ಪರಿಗ್ರಹದಿಂದ ತನ್ನ ಉಚ್ಚತೆ ಮನ್ನಿಸುವಂಥ, ತನ್ನ ಕೀರ್ತಿ ಅಭಿಮಾನ ಪೂಜೆ ಸತ್ಕಾರ ವಂದನೆಯ ಇಚ್ಛೆಯುಳ್ಳ, ಜನರನ್ನು ಪ್ರಸನ್ನ ಮಾಡುವಲ್ಲಿ ಚತುರ, ಜ್ಞಾನನೇತ್ರದಿಂದ ಕುರುಡ, ಮದದಿಂದ ಉದ್ಧತ, ಮಿಷ್ಠ ಭೋಜನದ ಲೋಲುಪಿ, ಪಕ್ಷಪಾತೀ, ತುಚ್ಛ ಶೀಲವುಳ್ಳವರು ಮುನಿವೇಷ ಧಾರಣ ಮಾಡಿದರೂ ಕೂಡ ಅವರಿಗೆ ಎಂದೂ ಧರ್ಮಧ್ಯಾನವಾಗುವುದಿಲ್ಲ. **ಇಂಥ ವೇಷಧಾರಿ ಪಾಖಂಡಿಗಳು ಇಂದು ಪಂಚಮಕಾಲವಿದ್ದು ಇದರಲ್ಲಿ ಧ್ಯಾನದ ಸಿದ್ಧಿಯಾಗುವುದಿಲ್ಲವೆಂದು ಇತರ ಸರಳ ಸ್ವಭಾವದ ಜನರಿಗೆ ಹೇಳುತ್ತಾರೆ.** ಹೀಗೆ ಹೇಳಿ ಅವರು ತಮ್ಮ ಹಾಗೂ ಇತರರಿಗೆ ಧ್ಯಾನವಾಗುವುದರ ನಿಷೇಧ ಮಾಡುತ್ತಾರೆ. ಕಾಮ, ಭೋಗ, ಧನದ ಲೋಲುಪಿ ಮಿಥ್ಯಾಶಾಸ್ತ್ರಗಳ ಸೇವಕರಾದಂಥವರಿಗೆ ಧ್ಯಾನವಾದರೂ ಹೇಗೆ ಆಗುವುದು ?

**ರಾಗಭಾವದಿಂದ ಯುಕ್ತ, ಇಂದ್ರಿಯ ವಿಷಯಗಳಲ್ಲಿ ಲೀನ, ಕರುಣೆಯಿಂದ ರಹಿತ, ಹಾಸ್ಯ, ಕೌತೂಹಲ, ಮಾಯಾಚಾರ, ಯುದ್ಧ, ಕಾಮಶಾಸ್ತ್ರ ಮೊದಲಾದವುಗಳ ವ್ಯಾಖ್ಯಾನ ಮಾಡುವಂಥವರಿಗೆ ಸ್ವಪ್ನದಲ್ಲಿ ಕೂಡ ಧ್ಯಾನ ವಾಗುವುದಿಲ್ಲ.** ಯಾರು ಜೈನೇಶ್ವರಿ ದೀಕ್ಷೆಯನ್ನು ಧಾರಣ ಮಾಡಿಯೂ ಕೂಡ ತಮ್ಮ ಗೌರವದ ಸಲುವಾಗಿ ವಶೀಕರಣ, ಆಕರ್ಷಣ, ಮಾರಣ, ಉಚ್ಚಾಟನ, ಜಲಸ್ತಂಭನ, ಅಗ್ನಿಸ್ತಂಭನ, ರಸಕರ್ಮ, ರಸಾಯನ, ಪಾದುಕಾವಿದ್ಯೆ, ಅಂಜನವಿದ್ಯೆ, ವಿಷಸ್ತಂಭನ, ಪುರಕ್ಷೋಭ, ಇಂದ್ರಜಾಲ, ಬಲಸ್ತಂಭನ, ಜಯಾಪಜಯ, ವಿದ್ಯಾಛೇದ, ವಿದ್ಯಾಭೇದ, ವೈದ್ಯಕೀಯ ವಿದ್ಯೆ, ಜ್ಯೋತಿಷ ವಿದ್ಯೆ, ಯಕ್ಷಿಣಿ ಸಿದ್ಧಿ, ಪಾತಾಳಸಿದ್ಧಿ, ಕಾಲವಂಚನೆ, ಸರ್ಪವಿದ್ಯೆ, ಸರ್ಪಮಂತ್ರ, ಭೂತ-ಪಿಶಾಚ-ಕ್ಷೇತ್ರಪಾಲ ಮೊದಲಾದವರ ಸಾಧನೆ, ಜಲಮಂತ್ರ, ಸೂತ್ರಬಂಧನ ಇವೇ ಮೊದಲಾದ ಕಾರ್ಯಗಳ ಸಲುವಾಗಿ ಧ್ಯಾನ ಮಾಡುತ್ತಾರೆ, ಮಂತ್ರಸಾಧನೆ ಮಾಡುತ್ತಾರೆ, ಘೋರ ತಪಸ್ಸು ಮಾಡುತ್ತಾರೆ ಅವರಿಗೆ ತೀವ್ರ ಮಿಥ್ಯಾತ್ವ ಮತ್ತು ಕಷಾಯದ ವಶದಿಂದ ಘೋರ ಪಾಪ ಕರ್ಮದ ಬಂಧದ ಕಾರಣವು ದುರ್ಧ್ಯಾನವಿದೆಯೆಂದು ತಿಳಿಯುವುದು. ಅದರ ಪ್ರಭಾವದಿಂದ ನರಕ-ತಿರ್ಯಂಚ ಮೊದಲಾದ ಕುಗತಿಗಳಲ್ಲಿ ಅನಂತ ಕಾಲದವರೆಗೆ ಪರಿಭ್ರಮಣವಾಗುತ್ತದೆ. **ಇಂಥ ಪಾಖಂಡಿಗಳ ಉಪಾಸನೆ ಮಾಡುವಂಥವರು, ಅನುಮೋದನೆ ಕೊಡುವಂಥವರು ಕೂಡ ದುರ್ಗತಿಯಲ್ಲಿ ಪರಿಭ್ರಮಣ ಮಾಡುತ್ತಾರೆಂದು** ದೃಢವಾಗಿ ಶ್ರದ್ಧೆ ಮಾಡಿ ದುಷ್ಟಮಂತ್ರ, ಯಂತ್ರಗಳ ತ್ಯಾಗವನ್ನು ದೂರದಿಂದಲೇ ಮಾಡಬೇಕಾಗುವುದು.

**ಪ್ರಶ್ನೆ :** ದೂಷಿತ ಮಾರಣ, ಉಚ್ಚಾಟನೆ ಮೊದಲಾದ ಅನೇಕ ವಿದ್ಯೆ, ಮಂತ್ರ-ತಂತ್ರ ಮೊದಲಾದುವನ್ನು ದ್ವಾದಶಾಂಗದಲ್ಲಿ ಹೇಳಿದ್ದಾರೆಯೋ ಅಥವಾ ಇಲ್ಲವೋ ?

**ಉತ್ತರ :** ದ್ವಾದಶಾಂಗದಲ್ಲಂತೂ ಮೂರು ಲೋಕದಲ್ಲಿ ವರ್ತಿಸುತ್ತಿರುವ ಸಮಸ್ತ ದ್ರವ್ಯ, ಕ್ಷೇತ್ರ, ಕಾಲ, ಭಾವ, ವಿಷ, ಅಮೃತಗಳೆಲ್ಲವನ್ನು ಹೇಳಿದ್ದಾರೆ; ಆದರೆ ವಿಷ ಮೊದಲಾದುವನ್ನು ತ್ಯಾಗ ಯೋಗ್ಯವೆಂದು ಹೇಳಿದ್ದಾರೆ, ಅಮೃತವನ್ನು ಗ್ರಹಣ ಯೋಗ್ಯವೆಂದು ಹೇಳಿದ್ದಾರೆ. ಅದೇ ಪ್ರಕಾರ ಅಸತ್ಯಮಂತ್ರ, ಅಸತ್ಯ ವಿದ್ಯೆಯನ್ನು ತ್ಯಾಗಯೋಗ್ಯವೆಂದು ಹೇಳಿದೆ. ಆದುದರಿಂದ ಅಯೋಗ್ಯ ವಿದ್ಯೆಯ, ದುರ್ಧ್ಯಾನ ಮೊದಲಾದವುಗಳ ತ್ಯಾಗ ಮಾಡಿ,ಕರ್ಮದ ನಿರ್ಜರೆ ಮಾಡುವಂಥ ವೀತರಾಗತೆಗೆ ಕಾರಣವಿರುವ ಪಂಚ ಪರಮೇಷ್ಠಿಯ ವಾಚಕವಿರುವಂಥ ಮಂತ್ರ ಪದಗಳ ಧ್ಯಾನವನ್ನೇ ಮಾಡಬೇಕು. ಈ ಪ್ರಕಾರ ಧರ್ಮ ಧ್ಯಾನದ ಭೇದಗಳಲ್ಲಿ ಪದಸ್ಥ ಧ್ಯಾನದ ವರ್ಣನೆ ಮಾಡಲಾಯಿತು.

**ರೂಪಸ್ಥ ಧರ್ಮಧ್ಯಾನ :** ಈಗ ರೂಪಸ್ಥಧರ್ಮಧ್ಯಾನದಲ್ಲಿ ಭಗವಾನ ಅರಹಂತ ಪರಮೇಷ್ಠಿಗಳು ಸಮವಸರಣದೊಳಗೆ ವಿರಾಜಮಾನವಿರುವ ಅಸಂಖ್ಯಾತ ಇಂದ್ರ ಮೊದಲಾದ ದೇವಗಳಿಂದ ವಂದನೀಯ ದ್ವಾದಶ ಸಭೆಯ ಜೀವರುಗಳಿಗೆ ಪರಮ ಧರ್ಮದ ಉಪದೇಶ ಕೊಡುತ್ತಿರುವುದರ ಧ್ಯಾನ ಮಾಡುವ ಉಪದೇಶ ಕೊಡುತ್ತಾರೆ.

## ಸಮವಸರಣದ ವರ್ಣನೆ

ಅರಹಂತ ಭಗವಂತರು ಧರ್ಮೋಪದೇಶ ಕೊಡುವ ಯಾವ ಸಭೆಯ ಸ್ಥಾನವಿದೆ ಅದು ಸಮವಸರಣವಿದೆ. ಅದು ಭೂಮಿಯಿಂದ ಐದು ಸಾವಿರ ಧನುಷ್ಯ ಎತ್ತರವಾದ ಆಕಾಶದಲ್ಲಿ ಇಪ್ಪತ್ತು ಸಾವಿರ ಮೆಟ್ಟಿಲುಗಳಿಂದ ಯುಕ್ತವಾಗಿರುತ್ತದೆ. ಅದರ ಭೂಮಿಯು ಇಂದ್ರ ನೀಲಮಣಿಮಯವಿದ್ದು, ಸಮವೃತ್ತ ಝುಲ್ಲರಿಯ ಆಕಾರದ ವೃತ್ತಾಕಾರವಾಗಿರುತ್ತದೆ. ಅದು ಮೂರು ಲೋಕದ ಲಕ್ಷ್ಮಿಯ ಮುಖಮಂಡಲವನ್ನು ಅವಲೋಕನೆ ಮಾಡುವ ಕನ್ನಡಿಯಿದೆಯೋ ಏನೋ ಎನ್ನುವಂತೆ ಕಂಡು ಬರುತ್ತದೆ.

**ಆ ಸಭೆಯ ಸ್ಥಾನದ ವರ್ಣನೆ ಮಾಡುವುದಕ್ಕೆ ಯಾರು ಸಮರ್ಥರಿದ್ದಾರೆ ?** ಅದರ ಸೂತ್ರಧಾರನು ಸೌಧರ್ಮ ಇಂದ್ರನಿದ್ದಾನೆ, ಅವನು ಅನೇಕ ಪ್ರಕಾರದ ರಚನೆ ಮಾಡುವಲ್ಲಿ ಸಮರ್ಥನಿದ್ದಾನೆ, ಅದರ ವರ್ಣನೆಯನ್ನು ನಮ್ಮಂಥ ಮಂದ ಬುದ್ಧಿಗಳು ಹೇಗೆ ಮಾಡುವ ಸಾಧ್ಯತೆಯಿದೆ ? ಆದಾಗ್ಯೂ ಶುಭ ಧ್ಯಾನವಾಗುವ ಸಲುವಾಗಿ, ಮತ್ತು ಶ್ರವಣ ಚಿಂತನ ಮಾಡಿ ಭವ್ಯ ಜೀವರುಗಳಿಗೆ ಪರಮಾನಂದವಾಗುವ ಸಲುವಾಗಿ ಒಂದಿಷ್ಟು ವರ್ಣನೆ ಮಾಡುತ್ತಾರೆ.

**ಹನ್ನೆರಡು ಯೋಜನ ಪ್ರಮಾಣ ಇಂದ್ರನೀಲ ಮಣಿಮಯ ಸಮವೃತ್ತ ಭೂಮಿಕೆಯವರೆಗೆ ಅನೇಕ ವರ್ಣದ ರತ್ನಗಳ ಧೂಳಿನಿಂದ ನಿರ್ಮಿಸಿದ ಧೂಳೀಶಾಲೆ ಕೋಟೆಯಿದೆ.** ಕೆಲವೆಡೆಯಂತೂ ಹರಿತ ಮಣಿಗಳ ಕಾಂತಿಯಿಂದ ಆಕಾಶವು ಹರಿತ ಕಿರಣಮಯವಾಗಿ ಶೋಭಿಸುತ್ತಿದೆ; ಕೆಲವೆಡೆ ಪದ್ಮರಾಗ ಮಣಿಗಳ ಪ್ರಭೆಯಿಂದ ವ್ಯಾಪ್ತವಿದೆ; ಕೆಲವೆಡೆ ಮೇಚಕ ಮಣಿಗಳ ಪ್ರಭೆಯಿಂದ ವ್ಯಾಪ್ತವಿದೆ; ಕೆಲವೆಡೆ ಚಂದ್ರಕಾಂತ ಮಣಿಗಳಿಂದ ವ್ಯಾಪ್ತವಾಗಿ ಚಂದ್ರನ ಜ್ಯೋತ್ಸ್ನೆಯನ್ನು ಬೆಳದಿಂಗಳನ್ನು ಧಾರಣ ಮಾಡಿದೆ; ಕೆಲವೆಡೆ ಸ್ವರ್ಣಮಯ ಧೂಳದ ಕಾಂತಿಯಿಂದ ದೈದೀಪ್ಯಮಾನವಿದೆ.

ಅನೇಕ ಕಾಂತಿಯುಕ್ತ ರತ್ನಗಳ ಮಹಾಪ್ರಭೆಯಿಂದ ಆ **ಧೂಳೀಶಾಲ** ಕೋಟೆಯು ಆಕಾಶದಲ್ಲಿ ವಲಯಾಕಾರ ಇಂದ್ರ ಧನುಷ್ಯದ ಸಮಾನ ಶೋಭಾಯಮಾನವಾಗುತ್ತಿದೆ. ಅನೇಕ ರತ್ನಗಳ ಪ್ರಭೆಯ ಪುಂಜದಿಂದ **ಧೂಳೀಶಾಳ ಕೋಟೆಯ ನಾಲ್ಕೂ ದಿಶೆಗಳಲ್ಲಿ ಸ್ವರ್ಣಮಯವಾದ ಎರಡೆರಡು ಸ್ತಂಭಗಳಿವೆ.** ಆ ಸ್ತಂಭಗಳ ಅಗ್ರಭಾಗದಲ್ಲಿ ತೂಗುತ್ತಿರುವ ಮಕರಾಕೃತಿಯ ತೋರಣಗಳಿದ್ದು ಅವುಗಳಲ್ಲಿ ರತ್ನಗಳ ಮಾಲೆಗಳು ಸುಶೋಭಿತವಿವೆ.

**ಆ ಧೂಳೀಶಾಲ ಕೋಟೆಯ ನಾಲ್ಕೂ ಕಡೆಗೆ ಒಳಗೆ ಪ್ರವೇಶ ಮಾಡುವ ಸಲುವಾಗಿ ಎರಡು ಮೈಲು ಅಗಲವಾದ ಒಂದು ಮಹಾಬೀದಿಯಿದೆ.** ಆ ಮಹಾ ಬೀದಿಯಲ್ಲಿ ಎಷ್ಟೋ ದೂರ ಹೋದ ಮೇಲೆ ಬೀದಿಯ ಮಧ್ಯದಲ್ಲಿ ಬಹಳಷ್ಟು ಎತ್ತರವಾದ ಸ್ವರ್ಣದ ಮಾನಸ್ತಂಭಗಳಿವೆ. ಆ ಮಾನಸ್ತಂಭಗಳ ನಾಲ್ಕೂ ಕಡೆಗೆ ನಾಲ್ಕು-ನಾಲ್ಕು ದ್ವಾರ ಸಹಿತ ಮೂರು ಕೋಟೆಗಳಿವೆ. ಆ ಮೂರೂ ಕೋಟೆಗಳ ಮಧ್ಯದಲ್ಲಿ ಹದಿನಾರು ಮೆಟ್ಟಿಲುಯುಕ್ತ ಪೀಠಗಳಿವೆ. ಆ ಪೀಠಗಳ ಮಧ್ಯದಲ್ಲಿ ತುಂಬ ಎತ್ತರವಾದ ಮಾನಸ್ತಂಭಗಳಿವೆ. ಆ ಪೀಠಗಳೆಲ್ಲವೂ ಸುರ, ಅಸುರ, ಮನುಷ್ಯರುಗಳ ಮೂಲಕ ಪೂಜ್ಯವಿವೆ. **ಆ ಮಾನಸ್ತಂಭಗಳನ್ನು ದೂರದಿಂದಲೇ ನೋಡುತ್ತಿರುವಂತೆ ಮಿಥ್ಯಾದೃಷ್ಟಿಗಳ ಮಾನವು ಹೊರಟು ಹೋಗುತ್ತದೆ.**

**ಆ ಮಾನಸ್ತಂಭಗಳ ಮೂಲದಲ್ಲಿ ಪೀಠದ ಮೇಲೆ ಸ್ವರ್ಣಮಯವಾದ ಜಿನೇಂದ್ರರ ಪ್ರತಿಮೆಗಳು ವಿರಾಜಮಾನವಿವೆ, ಇಂದ್ರ ಮೊದಲಾದ ದೇವಗಳು ಕ್ಷೀರಸಮುದ್ರದ ಜಲದಿಂದ ಅವುಗಳ ಅಭಿಷೇಕ ಮಾಡುತ್ತಾರೆ.** ಆ ಜಲದಿಂದ ಆ ಪೀಠವು ಪವಿತ್ರವಾಗುತ್ತಿರುತ್ತದೆ. ಅಲ್ಲಿ ಯಾವಾಗಲೂ ದೇವ, ಮನುಷ್ಯರುಗಳಿಂದ ಮಾಡುವ ವಾದ್ಯ, ನೃತ್ಯ, ಜಿನೇಂದ್ರರುಗಳ ಮಂಗಲರೂಪದ ಗಾಯನಗಳಾಗುತ್ತಿರುತ್ತವೆ. ನೆಲದ ಮೇಲೆ ಮಧ್ಯದಲ್ಲಿ ಪೀಠವಿದೆ. ಅದರ ಮೇಲೆ ಪೀಠಗಳ ಮೂರು ಕಟಕಟೆ, ಆ ಮೂರು ಪೀಠಗಳ ಮೇಲೆ ಸ್ವರ್ಣಮಯ ಮಾನಸ್ತಂಭ, ಅವುಗಳ ಮಸ್ತಕದ ಮೇಲೆ ಮೂರು ಕೊಡೆಗಳಿವೆ. ಮಿಥ್ಯಾದೃಷ್ಟಿಗಳ ಮಾನದ ಸ್ತಂಭನ ಮಾಡುವುದರಿಂದ ಮತ್ತು ತ್ರಿಲೋಕವರ್ತಿ ಸುರ, ಅಸುರ, ಮನುಷ್ಯರುಗಳ ಮೂಲಕ ಮನ್ನಿಸುವುದರಿಂದ ಪೂಜಿಸುವುದರಿಂದ ಇವಕ್ಕೆ ಮಾನಸ್ತಂಭವೆಂದು ಹೆಸರು ಸಾರ್ಥಕವಿದೆ.

**ಆ ಮಾನಸ್ತಂಭಗಳ ನಾಲ್ಕೂ ಕಡೆಗೆ ನಾಲ್ಕು-ನಾಲ್ಕು ಕೊಳಗಳಿವೆ.** ಆ ಕೊಳಗಳಲ್ಲಿ ನಿರ್ಮಲ ಜಲವು ತುಂಬಿ ಕೊಂಡಿದೆ, ಅನೇಕ ಪ್ರಕಾರದ ಕಮಲಗಳು ಅರುಳುತ್ತಿವೆ. ಅವಕ್ಕೆ ಸ್ಫಟಕಮಣಿಮಯ ತಟಗಳಿವೆ. ಆ ತಟಗಳ ಮೇಲೆ ಅನೇಕ ಪ್ರಕಾರದ ಪಕ್ಷಿಗಳ ಶಬ್ದವಾಗುತ್ತಿದೆ. ಆ ಪಕ್ಷಿಗಳ ಶಬ್ದದಿಂದ ಮತ್ತು ದುಃಬಿಗಳ ಗುಂಜಾರವದಿಂದ ಅವೇನು ಜಿನೇಂದ್ರರ ಗುಣಗಳ ಸ್ತವನವನ್ನೇ ಮಾಡುತ್ತಿವೆಯೋ ಏನೋ ಎನ್ನುವಂತಿದೆ.

ಪೂರ್ವ ದಿಕ್ಕಿನ ಮಾನಸ್ತಂಭದ ನಾಲ್ಕೂ ಕಡೆಗಿರುವ ನಾಲ್ಕು ಕೊಳಗಳ ಹೆಸರುಗಳು ನಂದಾ,ನಂದೋತ್ತರಾ, ನಂದವತೀ, ನಂದಘೋಷವಿವೆ. ದಕ್ಷಿಣ ದಿಶೆಯ ಮಾನಸ್ತಂಭದ ನಾಲ್ಕೂ ಕಡೆಗಿರುವ ನಾಲ್ಕು ಕೊಳಗಳ ಹೆಸರುಗಳು ವಿಜಯ, ವೈಜಯಂತಿ, ಜಯಂತೀ, ಅಪರಾಜಿತವಿವೆ. ಪಶ್ಚಿಮ ದಿಕ್ಕಿನ ಮಾನಸ್ತಂಭದ ನಾಲ್ಕೂ ಕಡೆಗಿರುವ ನಾಲ್ಕು ಕೊಳಗಳ ಹೆಸರುಗಳು ಅಶೋಕ, ಸುಪ್ರಸಿದ್ಧ, ಕುಮುದ, ಪುಂಡರೀಕವಿವೆ. ಉತ್ತರ ದಿಶೆಯ ಮಾನಸ್ತಂಭದ ನಾಲ್ಕೂ ಕಡೆಗಿರುವ ನಾಲ್ಕು ಕೊಳಗಳ ಹೆಸರುಗಳು ನಂದಾ, ಮಹಾನಂದಾ,ಸುಪ್ರಬುದ್ಧಾ,ಪ್ರಭಂಕರಿಯಿವೆ. ಇವೆಲ್ಲ ಹೆಸರುಗಳನ್ನು ಪ್ರದಕ್ಷಿಣೆ ರೂಪದ ಕ್ರಮದಿಂದ ತಿಳಿಯುವುದು. ಈ ಪ್ರಕಾರ **ನಾಲ್ಕು ದಿಶೆಗಳ ನಾಲ್ಕು ಮಾನಸ್ತಂಭಗಳ ನಾಲ್ಕೂ ಕಡೆಗೆ ಹದಿನಾರು ಕೊಳಗಳಿವೆ. ಒಂದೊಂದು ಕೊಳದ ಎರಡೂ ತಟಗಳ ಹತ್ತಿರ ಕಾಲು ತೊಳೆದುಕೊಳ್ಳುವ ಸಲುವಾಗಿ ಎರಡೆರಡು ಕುಂಡಗಳಿವೆ.** ಆ ಕುಂಡಗಳ ಜಲದಿಂದ ಕಾಲುಗಳನ್ನು ತೊಳೆದುಕೊಂಡು ಮಾನಸ್ತಂಭದ ಪೂಜೆ ಮಾಡುವ ಸಲುವಾಗಿ ಮನುಷ್ಯ ಮೊದಲಾದವರು ಹೋಗುತ್ತಾರೆ.

ಅಲ್ಲಿಂದ ಸ್ವಲ್ಪ ಮುಂದೆ ಹೋದ ಮೇಲೆ ಮಹಾಬೀದಿಯ ಮಾರ್ಗವನ್ನು ಬಿಟ್ಟುಕೊಟ್ಟ ನಂತರ **ನಾಲ್ಕೂ ಕಡೆಯಿಂದ ಸುತ್ತುವರೆದ ಜಲದಿಂದ ತುಂಬಿದ ಕಮಲಗಳಿಂದ ವ್ಯಾಪ್ತವಾದ ಕಂದಕವಿದೆ.** ಅದೇನು ಪ್ರಭುಗಳ ಸೇವೆಯ ಸಲುವಾಗಿ ಗಂಗಾನದಿಯೇ ನಾಲ್ಕು ಕಡೆಯಿಂದ ಬರುತ್ತಿದೆಯೋ ಏನೋ ಎನಿಸುತ್ತದೆ. ಆ ಕಂದಕರೂಪದ ಆಕಾಶದಲ್ಲಿ ನಕ್ಷತ್ರಗಳ ಪ್ರತಿಬಿಂಬ ಸಮಾನ ಪುಷ್ಪಗಳು ಶೋಭಿಸುತ್ತಿವೆ. ಆ ಕಂದಕದ ರತ್ನಮಯ ತಟಗಳ ಮೇಲೆ ಅನೇಕ ಪ್ರಕಾರದ ಪಕ್ಷಿಗಳ ಸಮೂಹವು ಅನೇಕ ಪ್ರಕಾರದ ಶಬ್ದೋಚ್ಚಾರ ಮಾಡುತ್ತಿವೆ, ಕಂದಕದಲ್ಲಿ ಅದ್ಭುತ ಅಲೆಗಳೇಳುತ್ತಿವೆ. ಆ ಕಂದಕದವರೆಗೆ ಎರಡು ಮೈಲು ಅಗಲ ವೃತ್ತಾಕಾರ ವಿಸ್ತಾರವಿದೆ. **ಆ ಕಂದಕದ ಭೂಮಿಯ ಆಂತರ್ಯದ ಭಾಗದಲ್ಲಿ ನಾಲ್ಕೂ ಕಡೆಗೆ (ಸುತ್ತೆಲ್ಲ) ಲತೆಗಳ ವನವಿದೆ.**

ಆ ಲತಾ ವನದಲ್ಲಿ ಅನೇಕ ಪ್ರಕಾರದ ಲತೆಗಳು, ಚಿಕ್ಕ ಗುಲ್ಮ ವೃಕ್ಷಗಳು ಸಮಸ್ತ ಋತುಗಳ ಪುಷ್ಪಗಳಿಂದ ವ್ಯಾಪ್ತವಾಗಿವೆ. ಅವುಗಳಲ್ಲಿ ಅನೇಕ ಪ್ರಕಾರದ ಪುಷ್ಪ ಲತೆಗಳ ಉಜ್ವಲ ಪುಷ್ಪಗಳಿಂದ ಅದೇನು ದೇವಾಂಗನೆಯರ ಮಂದಹಾಸ್ಯದ ಲೀಲೆಯನ್ನು ಧಾರಣ ಮಾಡಿವೆಯೋ ಏನೋ ಎನಿಸುತ್ತದೆ. ಅವುಗಳ ಮೇಲೆ ದುಂಬಿಗಳು ಝೇಂಕರಿಸುತ್ತಿವೆ ಮತ್ತು ಮಂದ ಸುಗಂಧ ಪವನದಿಂದ ತರು-ಲತೆಗಳು ತೂಗುತ್ತಿವೆ. ಆ ಲತೆಗಳ ವನದಲ್ಲಿ ಕ್ರೀಡೆ ಮಾಡುವಂಥ ಅನೇಕ ಚಿಕ್ಕ-ಚಿಕ್ಕ ಪರ್ವತಗಳಿವೆ, ರಮಣೀಯ ಶಯ್ಯೆಗಳೊಡನೆ ಸ್ಥಾನ-ಸ್ಥಾನದಲ್ಲಿ ಲತೆಗಳ ಮಂಟಪಗಳನ್ನು ಮಾಡಲಾಗಿದೆ. ಅವುಗಳಲ್ಲಿ ಅನೇಕ ದೇವ-ದೇವಾಂಗನೆಯರು ಜಿನೇಂದ್ರರ ಯಶೋಗಾನ ಮಾಡುತ್ತಾರೆ. ಅನೇಕ ಲತಾ-ಭವನಗಳಲ್ಲಿ ಹಿಮಾಲಯದ ಸಮಾನ ಶೀತಲ ಚಂದ್ರಕಾಂತ ಮಣಿಮಯ ಶಿಲೆಗಳನ್ನು ದೇವಗಳ ವಿಶ್ರಾಂತಿಯ ಸಲುವಾಗಿ ಇಡಲಾಗಿದೆ.

**ಧೂಳೀಶಾಲ ಕೋಟೆಯಿಂದ ಹಿಡಿದು ಪುಷ್ಪವಾಟಿಯವರೆಗೆ ಎರಡು ಯೋಜನ ವೃತ್ತಾಕಾರದ ವಿಸ್ತಾರವಿದೆ.** (ಧೂಳೀಶಾಲ ಕೋಟೆಯಿಂದ ಮಾನಸ್ತಂಭದವರೆಗೆ ಒಂದು ಯೋಜನ ಮತ್ತು ಮುಂದೆ ಕಂದಕದ ವಿಸ್ತಾರ ಒಂದು ಯೋಜನ) ಎರಡೂ ಕಡೆಯ ಕ್ಷೇತ್ರವು ನಾಲ್ಕು ಯೋಜನವಾಯಿತು. ಅಲ್ಲಿಂದ ಮಹಾವೀಥಿಯ ಮಧ್ಯದಲ್ಲಿ ಎಷ್ಟು ದೂರ ಹೋದರೂ ಅಲ್ಲಿ ನಾಲ್ಕೂ ಕಡೆಗೆ ಕಾಯಿಸಿದ ಸ್ವರ್ಣದ ಸಮಾನ ಸ್ವರ್ಣಮಯ ಪ್ರಥಮ ಕೋಟೆಯು ಆ ಭೂಮಿಯನ್ನು ಆವರಿಸಿಕೊಂಡಿದೆ. ಆ ಚಿನ್ನಮಯ ಪ್ರಥಮ ಕೋಟೆಯು ಅನೇಕ ಚಿತ್ರ-ವಿಚಿತ್ರ ರತ್ನಸಹಿತವಿದೆ. ಎಲ್ಲಿ ಆನೆಗಳ ಯುಗಲ, ಎಲ್ಲಿ ಸಿಂಹ-ವ್ಯಾಘ್ರಗಳ, ಎಲ್ಲಿ ಮನುಷ್ಯರ, ಎಲ್ಲಿ ಹಂಸ-ಮಯೂರ ಇತ್ಯಾದಿಗಳ ಯುಗಲ ರೂಪಗಳು ಅನೇಕ ಪ್ರಕಾರದ ರತ್ನಗಳಿಂದ ಜಡಿತವಾದವು ವ್ಯಾಪ್ತವಿವೆ. ಕೆಲವೆಡೆ ರತ್ನಮಯ ಲತೆ-ಪುಷ್ಪ ಪಲ್ಲವ-ವೃಕ್ಷಗಳ ಸುಂದರರೂಪಗಳನ್ನು ನಿರ್ಮಿಸಲಾಗಿದೆ, ಮತ್ತು ಮೇಲೆ ಕೆಳಗೆ ಗೋಪುರಗಳಲ್ಲಿ ಮುತ್ತುಗಳ ಹಾಗೂ ಪಂಚವರ್ಣಮಯ ರತ್ನಗಳ ಮಾಲೆಗಳು ಮತ್ತು ಜಾಲರಿಯ ಸಮೂಹವು ವ್ಯಾಪ್ತವಿದೆ. ಆ ಕೋಟೆಯ ಅಪ್ರಮಾಣ ಕಾಂತಿಯಿಂದ ಆಕಾಶವು ಇಂದ್ರ ಧನುಷ್ಯವಾಗುತ್ತಲಿದೆ.

ಆ ಸ್ವರ್ಣಮಯ ಪ್ರಥಮ ಕೋಟೆಯ ನಾಲ್ಕೂ ದಿಶೆಗಳಲ್ಲಿ ತುಂಬ ಎತ್ತರ ರೂಪ್ಯಮಯ ಉಜ್ವಲ ನಾಲ್ಕು ಗೋಪುರ ಎಂದರೆ ದ್ವಾರಗಳಿವೆ. ಆ ಗೋಪುರಗಳು ವಿಜಯಾರ್ಧ ಪರ್ವತದ ಶಿಖರದ ಸಮಾನ ಉನ್ನತ ಮೂರು-ಮೂರು ಖಂಡದ ಜ್ಯೋತಿಯ ಪುಂಜವು ಅದೇನು ಮೂರು ಲೋಕದ ಸಂಪತ್ತನ್ನು ನೋಡಿ ನಗುತ್ತಿದೆಯೋ ಏನೋ ಎನ್ನುವಂತಿದೆ. ಆ ರೂಪ್ಯಮಯ ಮೂರು ಮೂರು ಖಂಡದ ಗೋಪುರಗಳ ಮೇಲೆ ಪದ್ಮರಾಗ ಮಣಿಮಯ ಕಾಂತಿಯಿಂದ ದಿಶೆಗಳನ್ನು ಹಾಗೂ ಆಕಾಶವನ್ನು ಸ್ಪರ್ಶಿಸುತ್ತಿರುವ ಉನ್ನತ ಶಿಖರಗಳು ಆಕಾಶದಲ್ಲಿ ಹರಡುತ್ತಿವೆ. ಆ ಗೋಪುರಗಳಲ್ಲಿ ಗಾಯನ ಮಾಡುವಂಥ ಅದೆಷ್ಟೋ ದೇವಗಳು ಜಗತ್ತಿನ ಗುರುವಾದ ಆ ಜಿನೇಂದ್ರ ದೇವರ ಗುಣಗಳನ್ನು ಹಾಡುತ್ತಿರುತ್ತಾರೆ, ಕೆಲವರು ಜಿನೇಂದ್ರರ ಗುಣಗಳನ್ನು ಶ್ರವಣ ಮಾಡುತ್ತಿದ್ದಾರೆ, ಮತ್ತೆ ಕೆಲವರು ಜಿನೇಂದ್ರರ ಗುಣಗಳಿಂದ ಆನಂದಿತರಾಗಿ ನೃತ್ಯ ಮಾಡುತ್ತಿದ್ದಾರೆ.

ಒಂದೊಂದು ಮಹಾದ್ವಾರದ ಮೇಲೆ ಒಂದು ನೂರಾ ಎಂಟು-ಒಂದು ನೂರಾ ಎಂಟು ಗಿಂಡಿ, ಕಲಶ, ಕನ್ನಡಿ, ಸ್ಥಾಪನೆ, ಚಾಮರ, ಛತ್ರ, ಧ್ವಜ, ಪಂಖ- ಈ ರತ್ನಮಯ ಅಷ್ಟ ಮಂಗಲ ದ್ರವ್ಯಗಳು ಶೋಭಾಯಮಾನವಾಗುತ್ತಿವೆ. ಒಂದೊಂದು ಗೋಪುರದ ಮೇಲೆ ರತ್ನಗಳ ಆಭರಣದ ಕಾಂತಿಯಿಂದ ಆಕಾಶವನ್ನೇ ವ್ಯಾಪಿಸಿ ಬಿಟ್ಟಿರುವಂಥ ನೂರು-ನೂರು ತೋರಣಗಳನ್ನು ಅಂಲಕರಿಸಲಾಗಿದೆ. ಹೇಗೆಂದರೆ ಸ್ವಭಾವದಿಂದಲೇ ಅತ್ಯಂತ ಕಾಂತಿಮಯವಾದ ಜಿನೇಂದ್ರರ ದೇಹದಲ್ಲಿ ತಮಗೆ ಸ್ಥಾನವಿಲ್ಲವೆಂದು ತಿಳಿದುಕೊಂಡ ಆ ಆಭಾರಣಗಳು ಗೋಪುರಗಳ ತೋರಣ-ತೋರಣದ ಮೇಲೆ ನೇತಾಡುತ್ತಿವೆಯೋ, ಏನೋ ಎನ್ನುವಂತಿದ್ದವು. ಒಂದೊಂದು ದ್ವಾರದ ಹೊರಗಿನ ಭೂಮಿಯಲ್ಲಿ ಒಂಭತ್ತು ನಿಧಿಗಳು ಮೂರು ಲೋಕವನ್ನುಲ್ಲಂಘಿಸುವಂಥ ಜಿನೇಂದ್ರರ ಪ್ರಭಾವದ ಪ್ರಶಂಸೆ ಮಾಡುತ್ತಿದ್ದವು. ಅದೇನು ವೀತರಾಗ ಭಗವಂತರಿಂದ ತಿರಸ್ಕೃತವಾಗಿ ಈ ನವನಿಧಿಗಳು ದ್ವಾರದ ಹೊರಗೆ ಬಿದ್ದುಕೊಂಡಿವೆಯೋ ಏನೋ ಎನ್ನುವಂತಿದ್ದವು.

ದ್ವಾರದ ಒಳಗೆ ಎರಡು ಮೈಲು ಅಗಲವಾದ ಮಹಾವೀಥಿಯಿದ್ದು ಅದರ ಎರಡೂ ಕಡೆಗೆ ನಾಟ್ಯ ಶಾಲೆಗಳಿವೆ. ಈ ಪ್ರಕಾರ ನಾಲ್ಕೂ ದಿಶೆಗಳ ದ್ವಾರಗಳಲ್ಲಿ ಪ್ರತಿಯೊಂದರಲ್ಲಿ ಎರಡೆರಡು ನಾಟ್ಯ ಶಾಲೆಗಳಿವೆ. ಆ ನಾಟ್ಯ ಶಾಲೆಗಳು ಮೂರು-ಮೂರು ವಿಭಾಗಗಳಾಗಿ ಅವೇನು ಜೀವರುಗಳಿಗೆ ರತ್ನತ್ರಯಾತ್ಮಕವಾದ ಮೋಕ್ಷಮಾರ್ಗವನ್ನು ತಿಳಿಸಿಕೊಡುವ ಸಲುವಾಗಿ ಸಿದ್ಧವಾಗಿವೆಯೋ ಏನೋ ಎನ್ನುವಂತಿದ್ದವು. ಆ ನಾಟ್ಯ ಶಾಲೆಗಳಿಗೆ ಉಜ್ವಲವಾದ ಸ್ಫಟಿಕ ಮಣಿಮಯ ಗೋಡೆಗಳಿವೆ. ಸ್ವರ್ಣಮಯ ಸ್ತಂಭಗಳಿವೆ, ಸ್ಫಟಿಕಮಣಿಮಯ ನೆಲಗಟ್ಟು ಇದೆ ಮತ್ತು ಅನೇಕ ರತ್ನಮಯ ಶಿಖರಗಳಿಂದ ಆಕಾಶವನ್ನು ತಡೆಯುತ್ತಿರುವಂತೆ ಶೋಭಾಯಮಾನವಾಗಿದ್ದವು.

ಆ ನಾಟ್ಯ ಶಾಲೆಗಳಲ್ಲಿ ಮಿಂಚಿನ ಪ್ರಭೆಯ ಸಮಾನ ನೃತ್ಯಗಾನ ಮಾಡುತ್ತಿರುವ ಅದೆಷ್ಟೋ ದೇವಾಂಗನೆಯರು ಯಾರು ಮೋಹಕರ್ಮವನ್ನು ಜಯಿಸಿ 'ಜಿನ' ನಾಮವನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ ಅಂಥ ಜಿನೇಂದ್ರ ಭಗವಂತರ ಯಶೋಗಾನ ಮಾಡುತ್ತ ಅಂಜಲಿಗಳಿಂದ ಪುಷ್ಪಗಳನ್ನು ಅರ್ಪಿಸುತ್ತಿದ್ದರು, ಅದೆಷ್ಟೋ ದೇವಾಂಗನೆಯರು ವೀಣೆ

ನುಡಿಸುತ್ತಿದ್ದರು, ಮತ್ತು ಮೃದಂಗ ಮೊದಲಾದ ಅನೇಕ ವಾದ್ಯಗಳ ಧ್ವನಿಯ ಜತೆಯಲ್ಲಿ ಅನೇಕ ಪ್ರಕಾರದಿಂದ ಜಿನೇಂದ್ರರ ಸ್ತವನ ಮಾಡುತ್ತಿದ್ದರು, ನಾಟ್ಯರಸದಲ್ಲಿ ಮಿಂದು ಜಿನೇಂದ್ರರ ಗುಣಗಳಲ್ಲಿ ತನ್ಮಯರಾಗಿ ನೃತ್ಯ ಮಾಡುತ್ತಿದ್ದರು. ವೀಣೆಯ ನಾದದಂತೆ ಸುಂದರ ಸ್ವರದಿಂದ ಹಾಡುತ್ತಿರುವ ಕಿನ್ನರ ದೇವಗಳು ಬರ-ಹೋಗುವ ದೇವಗಳ ಮನಸ್ಸನ್ನು ಪ್ರಸನ್ನ ಮಾಡುತ್ತಿದ್ದರು.

ನಾಟ್ಯಶಾಲೆಗಳಿಂದ ಮುಂದೆ ಮಹಾವೀಥಿಯ ಎರಡೂ ಕಡೆಗೆ ಎರಡೆರಡು ಧೂಪ ಘಟಗಳನ್ನು ಇಟ್ಟಿದ್ದರು, ಅವುಗಳಿಂದ ಹೊರಡುತ್ತಿರುವ ಧೂಪದ ಹೊಗೆಯು ಆಕಾಶದ ಅಂಗಳದಲ್ಲೆಲ್ಲ ಹರಡುತ್ತ ದಿಶೆಗಳನ್ನು ಸುಗಂಧಿತ ಮಾಡುತ್ತಿತ್ತು. ಅದು ಆಕಾಶದಿಂದ ಇಳಿದು ಬರುತ್ತಿರುವ ದೇವಗಳಿಗೆ ಮೋಡದ ಸಂದೇಹವನ್ನುಂಟು ಮಾಡುತ್ತಿತ್ತು. ಆ ಮಹಾವೀಥಿಯ ಎರಡೂ ಕಡೆಯ ಅಂತರಾಳದಲ್ಲಿ ನಾಲ್ಕೂ ಕಡೆಗೆ ವನವೀಥಿಯಿದ್ದು ಅದು ಒಂದು ಯೋಜನ ಅಗಲ ವೃತ್ತಾಕಾರದ ವಿಸ್ತಾರವಿದೆ. ಅದರಲ್ಲಿ ಒಂದು ಪಂಕ್ತಿ ಅಶೋಕ ವೃಕ್ಷ, ಎರಡನೆಯ ಪಂಕ್ತಿ ಸಪ್ತವರ್ಣ ವೃಕ್ಷ, ಮೂರನೆಯ ಪಂಕ್ತಿ ಚಂಪಕವೃಕ್ಷ, ನಾಲ್ಕನೆಯ ಪಂಕ್ತಿ ಆಮ್ರವೃಕ್ಷಗಳದ್ದಿದೆ. ಈ ಸಾಲು ವೃಕ್ಷಗಳ ವನಗಳು ಪತ್ರ-ಫಲ-ಪುಷ್ಪಗಳಿಂದ ಶೋಭಿಸುತ್ತಿರುವುದನ್ನು ನೋಡಿದರೆ ಅದೇನು ಜಿನೇಂದ್ರರಿಗೆ ಅರ್ಘ್ಯ ಕೊಡುತ್ತಿವೆಯೋ ಏನೋ ಎನ್ನುವಂತಿವೆ.

ಆ ವನ ಪಂಕ್ತಿಗಳು ಎರಡೂ ಕಡೆಗೆ ಎರಡು ಯೋಜನದಲ್ಲಿವೆ. ಅದರಲ್ಲಿ ರತ್ನಮಯ ಅನೇಕ ಪಕ್ಷಿಗಳು ಶಬ್ದ ಮಾಡುತ್ತಿರುತ್ತವೆ, ದುಃಬಿಗಳ ಗುಂಜಾರವವಾಗುತ್ತಿರುತ್ತದೆ, ನಂದನವನದ ಸಮಾನ ಕೋಟ್ಯಂತರ ದೇವ-ದೇವಾಂಗನೆಯರು ಅನೇಕ ಆಭರಣಗಳನ್ನು ಧರಿಸಿ ಪ್ರಕಾಶದ ಪುಂಜದಂತೆ ವಿಹರಿಸುತ್ತಿರುತ್ತಾರೆ. ಆ ವನಗಳಲ್ಲಿ ಕೆಲವೆಡೆಯಂತೂ ಅದೇನು ಜಿನೇಂದ್ರರ ಸೇವೆ ಮಾಡುವ ಸಲುವಾಗಿ ದೇವೇಂದ್ರನನ್ನು ಕರೆಯುತ್ತಿವೆಯೋ ಏನೋ ಎನ್ನುವಂತೆ ಕೋಗಿಲೆಗಳ ಕೂಹೂರವವು ಕೇಳಿ ಬರುತ್ತಿರುತ್ತದೆ, ಮತ್ತು ಅಲ್ಲಿ ಸುರಭಿ ಶೀತಲ ಸುಗಂಧ ವಾಯುವಿನಿಂದ ವೃಕ್ಷಗಳ ಶಾಖೆಗಳು ನೃತ್ಯ ಮಾಡುತ್ತಿರುತ್ತವೆ. ಆ ವನದ ಭೂಮಿಯು ಸ್ವರ್ಣಮಯ ರಜದಿಂದ ವ್ಯಾಪ್ತವಿದೆ.

**ಆ ವನದಲ್ಲಿರತ್ನಮಯ ವೃಕ್ಷಗಳ ಜ್ಯೋತಿಯಿಂದ ಹಗಲಿರುಳಿನ ಭೇದವಿಲ್ಲ, ನಿರಂತರ ಉದ್ಯೋತ ರೂಪವಿದೆ.** ವೃಕ್ಷಗಳ ಶೀತಲತೆಯ ಪ್ರಭಾವದಿಂದ ಸೂರ್ಯನ ಕಿರಣಗಳು ಆತಪವನ್ನುತ್ಪನ್ನ ಮಾಡುತ್ತಿರಲಿಲ್ಲ. ಆ ವನಗಳಲ್ಲಿ ಎಲ್ಲಿ ತ್ರಿಕೋಣ, ಎಲ್ಲಿ ಚತುಷ್ಕೋಣದ ನಿರ್ಮಲ ನಿರ್ಜಂತುಕ ಜಲದಿಂದ ತುಂಬಿದ ಬಾವಿಗಳಿವೆ. ಆ ಬಾವಿಗಳಿಗೆ ರತ್ನದ ಮೆಟ್ಟಿಲು ಮತ್ತು ಚಿನ್ನದ ತಟಗಳಿವೆ. ಎಲ್ಲಿ ರತ್ನಮಯ ಅನೇಕ ಕ್ರೀಡಾಪರ್ವತಗಳಿವೆ, ಎಲ್ಲಿ ರಮಣೀಯ ಅನೇಕ ರತ್ನಮಯ ಪ್ರಾಸಾದಗಳಿವೆ, ಎಲ್ಲಿ ಅನೇಕ ಪ್ರಕಾರದ ಕ್ರೀಡಾ ಮಂಟಪಗಳಿವೆ, ಎಲ್ಲಿ ಪ್ರೇಕ್ಷಾಗೃಹಗಳಿವೆ; ಎಲ್ಲಿ ಒಂದು ಅಂತಸ್ತು, ಎಲ್ಲಿ ಎರಡು ಅಂತಸ್ತು, ಎಲ್ಲಿ ಮೂರು ಅಂತಸ್ತು ಹೀಗೆ ಅನೇಕ ಪ್ರಾಸಾದಗಳ ರಚನೆಯಿದೆ. ಎಲ್ಲಿ ಹರಿತ ಭೂಮಿಯು ಇಂದ್ರ ನೀಲ ರತ್ನಗಳಿಂದ ವ್ಯಾಪ್ತವಿದೆ. ಎಲ್ಲಿ ಮಹಾನಿರ್ಮಲ ಸರೋವರವಿದೆ; ಎಲ್ಲಿ ಮನೋಜ್ಞ ನದಿಯಿದೆ.

**ಪ್ರಾಣಿಗಳ ಶೋಕವನ್ನು ದೂರ ಮಾಡುವಂಥ ಅಶೋಕ ವೃಕ್ಷಗಳ ವನವು ಅದೇನು ಜಿನೇಂದ್ರರ ಸೇವೆಯಿಂದ ತಮ್ಮ ಕೆಂಪು ಫಲ, ಪುಷ್ಪ ಮತ್ತು ಪತ್ರಗಳ ಮೂಲಕ ರೋಗವನ್ನೇ ವಮನ ಮಾಡುತ್ತಿರುವಂತೆ ಎನಿಸುತ್ತದೆ.** ಸಪ್ತಚ್ಛದ ನಾಮದ ವನವು ಅದು ತನ್ನ ಸಪ್ತ ಪತ್ರಗಳ ಮೂಲಕ ಭಗವಂತರ ಸಪ್ತ ಪರಮ ಸ್ಥಾನಗಳನ್ನೇ ತೋರಿಸಿಕೊಡುತ್ತಿದೆ. ಚಂಪಕವನವು ತನ್ನ ದೀವಿಗೆಯ ಸಮಾನ ಪುಷ್ಪಗಳಿಂದ ಅದು ದೀಪಾಂಗಜಾತಿಯ ಕಲ್ಪವೃಕ್ಷದವನವೇ ಪ್ರಭುಗಳ ಸೇವೆ ಮಾಡುವಂತೆ ಇದೆ. ಸುಂದರವಾದ ಆಮ್ರವನವು ಕೋಗಿಲೆಗಳ ಕುಹೂರವದಿಂದ ಜಿನೇಂದ್ರರ ಸ್ತವನ ಮಾಡುವಂತಿದೆ.

**ಅಶೋಕ ವನದ ಮಧ್ಯದಲ್ಲಿ ಒಂದು ಅಶೋಕ ನಾಮದ ಚೈತ್ಯ ವೃಕ್ಷವಿದೆ ಅದು ಮೂರು ಸ್ವರ್ಣಮಯ ಪೀಠಗಳ ಮೇಲೆ ಇದೆ.** ಆ ಪೀಠಗಳ ನಾಲ್ಕೂ ಕಡೆಗೆ ಮೂರು ಕೋಟೆಗಳಿವೆ. ಒಂದೊಂದು ಕೋಟೆಗೆ ನಾಲ್ಕು-ನಾಲ್ಕು ದ್ವಾರಗಳಿವೆ. ಆ ದ್ವಾರಗಳು ಛತ್ರ, ಚಾಮರ, ಗಿಂಡಿ,ಕಲಶ, ಕನ್ನಡಿ, ಸ್ಥಾಪನೆ, ಪಂಖ, ಧ್ವಜ ಈ ಪ್ರಕಾರ ಎಂಟು ಮಂಗಲ ದ್ರವ್ಯಗಳು ಮಕರಾಕೃತಿಯ ತೋರಣ, ಮುತ್ತುಗಳ ಮಾಲೆ ಮೊದಲಾದವುಗಳಿಂದ ಶೋಭಾಯಮಾನವಿವೆ. ಹೇಗೆ ಜಂಬೂದ್ವೀಪದ ಸ್ಥಾನಮಧ್ಯದಲ್ಲಿ ಜಂಬೂ ವೃಕ್ಷವು ಸುಶೋಭಿತವಿದೆ, ಹಾಗೆಯೇ ಅಶೋಕವನಸ್ಥಳದ ಮಧ್ಯದಲ್ಲಿ ಮೂರು ಪೀಠಗಳ ಮೇಲೆ ಅಶೋಕ ನಾಮದ ಚೈತ್ಯ ವೃಕ್ಷವು ಸುಶೋಭಿತವಿದೆ.

ಅಶೋಕ ಚೈತ್ಯ ವೃಕ್ಷದ ಶಾಖೆಗಳ ಅಗ್ರಭಾಗಗಳು ದಶದಿಶೆಗಳಲ್ಲಿ ಹರಡಿಕೊಂಡಿವೆ. ಅವನ್ನು ನೋಡುತ್ತಿರುವಂತೆ ಶೋಕವು ನಷ್ಟವಾಗಿ ಹೋಗುತ್ತದೆ, ತನ್ನ ಪುಷ್ಪಗಳ ಸುಗಂಧದಿಂದ ಸಮಸ್ತ ಆಕಾಶವನ್ನು ವ್ಯಾಪಿಸುತ್ತಿದೆ, ತನ್ನ ವಿಸ್ತಾರದಿಂದ ಆಕಾಶವನ್ನು ವಶಪಡಿಸಿಕೊಳ್ಳುತ್ತಿದೆ, ಮರಕತಮಣಿಮಯ ಹರಿತಕಾಂತಿ ಸಂಯುಕ್ತ ಪತ್ರಗಳಿಂದ ತುಂಬಿಕೊಂಡಿದೆ, ಪದ್ಮರಾಗ ಮಣಿಮಯ ಪುಷ್ಪಗಳ ಗುಚ್ಛಗಳಿಂದ ವೇಷ್ಠಿತವಿದೆ, ಉನ್ನತ ಸ್ವರ್ಣಮಯ ಶಾಖೆಗಳಿವೆ. ವಜ್ರಗಳಿಂದ ರಚಿಸಲ್ಪಟ್ಟ ವೃಕ್ಷವಿದೆ ಅದು ತನ್ನ ಪ್ರಭಾಮಂಡಲದಿಂದ ಸಮಸ್ತ ದಿಶೆಗಳನ್ನು ಪ್ರಕಾಶಮಾನಗೊಳಿಸುತ್ತಲಿದೆ.

ಝುಣತ್ಕಾರ ಮಾಡುತ್ತ ಗಂಟೆಗಳ ನಾದದಿಂದ ಭಗವಂತರ ವಿಜಯ ಘೋಷಣೆಯು ಮೂರು ಲೋಕದಲ್ಲಿ ವ್ಯಾಪ್ತವಾಗುತ್ತಲಿದೆ. ಹಾರಾಡುತ್ತಿರುವ ಧ್ವಜಗಳ ವಸ್ತ್ರದ ದರ್ಶನ ಮಾಡುವುದರಿಂದ ಜನರ ಅಪರಾಧಗಳ ಪಾಪರೂಪದ ರಜವು ದೂರವಾಗುತ್ತಲಿದೆ. ಮಸ್ತಕದ ಮೇಲೆ ತೂಗುತ್ತಿರುವ ಮುತ್ತುಗಳ ಝುಲ್ಲರಿಯುಕ್ತ ಮುಕ್ಕೊಡೆಯು ಜಿನೇಂದ್ರರ ಮೂರು ಲೋಕದ ಈಶ್ವರತೆಯನ್ನು ವಚನವಿಲ್ಲದೆಯೇ ಹೇಳುತ್ತಿದೆ. ಆ ಅಶೋಕ ಚೈತ್ಯವೃಕ್ಷದ ಮೂಲಭಾಗವು ನಾಲ್ಕು ದಿಶೆಗಳಲ್ಲಿ ನಾಲ್ಕು ಜಿನೇಂದ್ರರ ಪ್ರತಿಮೆಗಳಿಂದ ಯುಕ್ತವಿವೆ. ಆ ಜಿನೇಂದ್ರರ ಪ್ರತಿಬಿಂಬಗಳ ಅಭಿಷೇಕವನ್ನು ಇಂದ್ರಾದಿಕರು ಮಾಡುತ್ತಾರೆ ಮತ್ತು ಗಂಧ, ಮಾಲೆ, ಧೂಪ, ದೀಪ, ನೈವೇದ್ಯ, ಫಲ, ಅಕ್ಷತೆ ಮೊದಲಾದವುಗಳಿಂದ ದೇವಗಳು ಪೂಜೆ ಮಾಡುತ್ತಾರೆ.

ಆ ಅರಹಂತರ ಬಿಂಬಗಳು ಕ್ಷೀರ ಸಮುದ್ರದ ಜಲದಿಂದ ಪ್ರಕ್ಷಾಲಿತವಿವೆ, ಸ್ವರ್ಣಮಯವಿವೆ, ನಿತ್ಯ ಸುರ-ಅಸುರ-ಇಂದ್ರಾದಿಕರು ದೇವಲೋಕದ ಉತ್ತಮ ದ್ರವ್ಯಗಳಿಂದ ಪೂಜಿಸುತ್ತಾರೆ, ವಂದನೆ-ನಮಸ್ಕಾರ ಮಾಡುತ್ತಾರೆ. ಅದೆಷ್ಟೋ ದೇವಗಳು ಅರಹಂತರ ಗುಣಗಳ ಸ್ಮರಣೆ ಮಾಡಿ ನಿಶ್ಚಯಪೂರ್ವಕ ಆನಂದದಿಂದ ಗಾಯನ ಮಾಡುತ್ತಾರೆ.

**ಹೇಗೆ ಅಶೋಕವನದಲ್ಲಿ ಅಶೋಕ ನಾಮದ ಒಂದು ಚೈತ್ಯವೃಕ್ಷವಿದೆ ಹಾಗೆಯೇ ಸ್ವಚ್ಛಂದ, ಚಂಪಕ ಮತ್ತು ಆಮ್ರ ನಾಮದ ವನಗಳಲ್ಲಿ ಕೂಡ ಒಂದೊಂದು ಚೈತ್ಯ ಮೊದಲಾದ ನಾಮದ ಚೈತ್ಯ ವೃಕ್ಷಗಳಿರುವವು.** ಚೈತ್ಯ ಎಂದರೆ ಜಿನೇಂದ್ರರ ಪ್ರತಿಮೆ ಸಹಿತ ಈ ವೃಕ್ಷಗಳ ಮೂಲಭಾಗವಿರುವುದರಿಂದ ಇವು ಚೈತ್ಯ ವೃಕ್ಷವೆಂದು ನಾಮ ಧರಿಸಿದ್ದು ಸಾರ್ಥಕವೇ ಇದೆ. ಆ ವನಗಳ ಕೊನೆಯ ಭಾಗದ ನಾಲ್ಕೂ ಕಡೆಗೆ ವೇದಿಗಳಿವೆ. ಅವು ಗೋಪುರ ಸಹಿತವಿರುತ್ತವೆ ಅದನ್ನು **ಕೋಟೆ**ಯೆಂದು ಹೇಳುತ್ತಾರೆ. ನಾಲ್ಕೂ ಕಡೆಗೆ ಗೋಪುರಗಳಿಲ್ಲದೆ ಬರೇ ಗೋಡೆಯಿರುವುದನ್ನು ವೇದಿಯೆಂದು ಹೇಳುತ್ತಾರೆ.

**ಆ ವನಗಳ ಕೊನೆಯಲ್ಲಿ ಸ್ವರ್ಣವೇದಿಯಿದೆ.** ಅದರ ನಾಲ್ಕೂ ಕಡೆಗೆ ನಾಲ್ಕು ಅತ್ಯಂತ ಉನ್ನತವಾದ ರೂಪ್ಯಮಯ ದ್ವಾರಗಳಿವೆ. ಆ ವೇದಿ ಮತ್ತು ದ್ವಾರಗಳು ಅನೇಕ ರತ್ನಗಳಿಂದ ವ್ಯಾಪ್ತವಿವೆ. ಆ ದ್ವಾರಗಳ ಮೇಲೆ ಗಂಟೆಗಳ ಸಮೂಹವು ತೂಗುತ್ತಿವೆ, ಮುತ್ತಿನ ಮಾಲೆಗಳು, ಝುಲ್ಲರಿ, ಪುಷ್ಪಮಾಲೆಗಳು ನೀಳವಾಗಿ ತೂಗುತ್ತಿವೆ. ಆ ದ್ವಾರಗಳು ಒಂದು ನೂರಾ ಎಂಟು ಅಷ್ಟಮಂಗಲ ದ್ರವ್ಯ ಮತ್ತು ರತ್ನಗಳ ಆಭರಣ ಸಹಿತ ರತ್ನಮಯ ತೋರಣಗಳಿಂದ ಶೋಭಿಸುತ್ತಿವೆ. ಆ ಮೂರು ಭಾಗಗಳ ದ್ವಾರಗಳಲ್ಲಿ ಅನೇಕ ದೇವಗಳು ಗೀತ, ವಾದ್ಯ, ನೃತ್ಯಗಳಿಂದ ಜಿನೇಂದ್ರರ ಯಶಸ್ಸಿನಲ್ಲಿ ಲೀನರಾಗುತ್ತಲಿದ್ದಾರೆ.

ಆ ದ್ವಾರಗಳ ಮುಂದೆ ವೇದಿಯ ಹತ್ತಿರದಲ್ಲಿಯೇ ರತ್ನಮಯ ಪೀಠಗಳ ಮೇಲೆ ಸ್ವರ್ಣಮಯ ಸ್ತಂಭಗಳ ಅಗ್ರಭಾಗದಲ್ಲಿ ಅನೇಕ ಪ್ರಕಾರದ **ಧ್ವಜಗಳ ಪಂಕ್ತಿಗಳಿವೆ.** ಆ ಸ್ತಂಭಗಳ ಮಣಿಮಯ ಪೀಠಗಳ ಮೇಲೆ ಸ್ವರ್ಣಮಯ ಅನುಪಮ ಕಾಂತಿಯನ್ನು ಧರಿಸಿಕೊಂಡಿವೆ; ಅವು ಎಂಭತ್ತೆಂಟು ಅಂಗುಲ ದಪ್ಪವಿವೆ-ಸ್ಥೂಲವಿವೆ, ಇಪ್ಪತ್ತೈದು-ಇಪ್ಪತ್ತೈದು ಧನುಷ್ಯದ ಅಂತರಾಳದಲ್ಲಿ ನಿಂತುಕೊಂಡಿವೆ.

ಸಮವಸರಣದಲ್ಲಿ ನಿಂತಿರುವ ಸಿದ್ಧಾರ್ಥವೃಕ್ಷ, ಚೈತ್ಯವೃಕ್ಷ, ಕೋಟೆ, ವನ, ವೇದಿ, ಸ್ತೂಪ, ತೋರಣ, ಮಾನಸ್ತಂಭ, ಧ್ವಜ, ವನದ ವೃಕ್ಷ, ಪ್ರಾಸಾದ, ಪರ್ವತ ಮೊದಲಾದವುಗಳ ಎತ್ತರವು **ತೀರ್ಥಂಕರರ ದೇಹದ ಎತ್ತರಕ್ಕಿಂತ ಹನ್ನೆರಡು ಗುಣಿತವಾಗಿರುತ್ತವೆ.** ಪರ್ವತಗಳ ಉನ್ನತಿಗಿಂತ ಅವುಗಳ ಅಗಲವು ಎಂಟು ಗುಣಿತವಿದೆ. ಸ್ತೂಪಗಳ ಅಗಲವು ಉನ್ನತಿಗಿಂತ ಸ್ವಲ್ಪ ಅಧಿಕವಿದೆ. ಕೋಟೆ ವೇದಿ ಮೊದಲಾದವುಗಳ ಅಗಲವು ಅವುಗಳ ಎತ್ತರದಿಂದ ಕಾಲು ಭಾಗವೆಂದು ತಿಳಿಯುವುದು.

**ಹತ್ತು ಪ್ರಕಾರದ ಧ್ವಜ : ಮಾಲೆ, ವಸ್ತ್ರ ಮಯೂರ, ಕಮಲ, ಹಂಸ, ಗರುಡ, ಸಿಂಹ, ಎತ್ತು, ಆನೆ, ಚಕ್ರಗಳ ಚಿಹ್ನದ ಧ್ವಜಗಳು ಹತ್ತು ಪ್ರಕಾರದ್ದಿವೆ.** ಆ ಧ್ವಜಗಳು ಪ್ರತಿಯೊಂದು ಒಂದೊಂದು ಪ್ರಕಾರದವು ನೂರೆಂಟು ಒಂದು ದಿಶೆಯಲ್ಲಿ ಇವೆ. ಎಲ್ಲ ಹತ್ತು ಪ್ರಕಾರದ ಧ್ವಜಗಳು ಒಂದು ಸಾವಿರದಾ ಎಂಭತ್ತು ಒಂದು ದಿಶೆಯಲ್ಲಿ ಇವೆ, ನಾಲ್ಕೂ ಕಡೆಯ ನಾಲ್ಕು ದಿಶೆಗಳಲ್ಲಿ ಒಟ್ಟು ನಾಲ್ಕು ಸಾವಿರದಾ ಮುನ್ನೂರು ಇಪ್ಪತ್ತು ಇವೆ. ಸಮುದ್ರದ ಅಲೆಗಳ ಸಮಾನ ಅವುಗಳ ವಸ್ತ್ರಗಳು ಗಾಳಿಯಿಂದ ಹಾರಾಡುತ್ತಿರುತ್ತವೆ.

ಮಾಲೆಯ ಧ್ವಜದಲ್ಲಿ ಮಾಲೆಯ ಆಕಾರದ ವಸ್ತ್ರಗಳು ತೂಗುತ್ತ ಹಾರಾಡುತ್ತಿವೆ. ಹೀಗೆಯೇ ವಸ್ತ್ರದ ಧ್ವಜಗಳು, ಮಯೂರಾಕಾರದ ಮಯೂರ ಧ್ವಜಗಳು, ಸಹಸ್ರದಳಗಳ ಕಮಲದ ಆಕಾರದ ಕಮಲ ಧ್ವಜಗಳು, ಹಂಸ ಧ್ವಜಗಳು,ಗರುಡ ಧ್ವಜಗಳು, ಸಿಂಹ ಧ್ವಜಗಳು, ವೃಷಭ ಧ್ವಜಗಳು, ಗಜ ಧ್ವಜಗಳು, ಚಕ್ರಧ್ವಜಗಳು ಈ ಹತ್ತು ಪ್ರಕಾರದವು ಪ್ರತಿಯೊಂದು ದಿಶೆಯಲ್ಲಿ ನೂರೆಂಟು-ನೂರೆಂಟು ಇವೆ ; ಈ ಪ್ರಕಾರ ನಾಲ್ಕೂ ದಿಶೆಗಳಲ್ಲಿ ನಾಲ್ಕು ಸಾವಿರದಾ ಮುನ್ನೂರಿಪ್ಪತ್ತು ಇವೆ. ಈ ಧ್ವಜಗಳು ಮೋಹ ಕರ್ಮವನ್ನು ಜಯಿಸಿ ತ್ರಿಭುವನೇಶತೆಯನ್ನು ಪಡೆದ ಜಿನೇಂದ್ರರ ಪ್ರಶಂಸೆ ಮಾಡುತ್ತಿವೆಯೋ ಏನೋ ಎನಿಸುವಂತೆ ತೋರುತ್ತವೆ.

ಈ ಧ್ವಜ ಭೂಮಿಯ ಪರೀಘದ ವಿಸ್ತಾರವು ಒಂದು ಯೋಜನ ಅಗಲವಿದೆ - ಎರಡೂ ಕಡೆಯ ಅಗಲವು ಎರಡು ಯೋಜನವಿದೆ. ಅದರ ಮುಂದೆ ಹೋದ ಮೇಲೆ **ಎರಡನೇ ಸ್ವರ್ಣದ ಎಂದರೆ ಅರ್ಜುನ ಕೋಟೆಯಿದೆ.** ಈ ಎರಡನೇ ಕೋಟೆಗೂ ಮೊದಲ ಕೋಟೆಯ ಸಮಾನ ನಾಲ್ಕೂ ಕಡೆಗೆ ನಾಲ್ಕು ರೂಪ್ಯಮಯ ಮಹಾದ್ವಾರಗಳಿವೆ. ಈ ದ್ವಾರಗಳೂ ಪ್ರಥಮ ಕೋಟೆಯ ದ್ವಾರದ ಸಮಾನ ಮಂಗಲ ದ್ರವ್ಯ, ತೋರಣ, ರತ್ನಗಳ ಆಭರಣಗಳ ಸಂಪತ್ತನ್ನು ಧಾರಣ ಮಾಡಿವೆ. ಈ ದ್ವಾರಗಳಲ್ಲೂ ಮೂರು-ಮೂರು ಕುಂಡಗಳಿವೆ ಮತ್ತು ಒಳಗೆ ಎರಡೂ ಕಡೆಗೆ ನಾಟ್ಯ ಶಾಲೆಗಳಿವೆ, ಧೂಪಘಟ ಯುಗ್ಮಗಳು ಮಹಾವೀಥಿಯ ಎರಡೂ ಕಡೆಗಳಲ್ಲಿ ಸ್ಥಿರವಿವೆ.

ಮುಂದೆ ಮಹಾವೀಥಿಯ ಎರಡೂ ಕಡೆಗೆ ಒಂದು ಯೋಜನ ಅಗಲ ವೃತ್ತಾಕಾರದ ವಿಸ್ತಾರದಲ್ಲಿ ನಾಲ್ಕೂ ಕಡೆಗೆ ಅನೇಕ ರತ್ನಮಯ **ಕಲ್ಪವೃಕ್ಷದ ವನವಿದೆ.** ಆ ಎಲ್ಲ ಕಲ್ಪವೃಕ್ಷಗಳು ಉನ್ನತ, ಛಾಯೆಯುಳ್ಳ, ಫಲ ಮತ್ತು ಪುಷ್ಪಗಳಿಂದ ಯುಕ್ತವಿವೆ. ಹತ್ತು ಪ್ರಕಾರದ ಕಲ್ಪವೃಕ್ಷಗಳ ವನದ ರೂಪ ಧಾರಣ ಮಾಡಿ, ಆ ದೇವಕುರು ಉತ್ತರಕುರುವಿನ ಭೋಗ ಭೂಮಿಯೇ ಜಿನೇಂದ್ರರ ಸೇವೆ ಮಾಡಲು ಬಂದಂತಿದೆ. ಆ ಕಲ್ಪವೃಕ್ಷಗಳ ಆಭರಣ, ವಸ್ತ್ರ, ಫಲ, ಪುಷ್ಪ ಮೊದಲಾದವುಗಳ ಮಹಾನ ಮಹಿಮೆಯಿದೆ. ವೃಕ್ಷಗಳ ಕೆಳಗೆ ಕುಳಿತುಕೊಂಡ ದೇವಗಳು ತಮ್ಮ ಸ್ವರ್ಗಗಳ ಸ್ಥಾನವನ್ನು ಮರೆತು ಚಿರಕಾಲದವರೆಗೆ ಅಲ್ಲಿಯೇ ಇರಲು ಬಯಸುತ್ತಿದ್ದರು. ಜ್ಯೋತಿರಾಂಗ ಜಾತಿಯ ಕಲ್ಪ ವೃಕ್ಷಗಳಲ್ಲಿ ಜ್ಯೋತಿಷಿ ದೇವಗಳು, ದೀಪಾಂಗ ಜಾತಿಯ ಕಲ್ಪವೃಕ್ಷಗಳಲ್ಲಿ ಕಲ್ಪವಾಸೀ ದೇವಗಳು, ಗೃಹಾಂಗ ಜಾತಿಯ ಕಲ್ಪವೃಕ್ಷಗಳಲ್ಲಿ ಭವನೇಂದ್ರ (ಭವನವಾಸೀ)ಗಳು ಯಥಾಯೋಗ್ಯ ಸುಖಪೂರ್ವಕ ಕುಳಿತುಕೊಳ್ಳುತ್ತಾರೆ.

ಆ ವನದೊಳಗೆ ನಾಲ್ಕೂ ದಿಶೆಗಳಲ್ಲಿ ಒಂದೊಂದು ಸಿದ್ಧಾರ್ಥ ವೃಕ್ಷವು ಮಧ್ಯದಲ್ಲಿದೆ, ಅದರ ಮೂಲದಲ್ಲಿ ಸಿದ್ಧ ಪ್ರತಿಮೆಯು ವಿರಾಜಮಾನವಿದೆ. ಮೊದಲು ಹೇಗೆ ಚೈತ್ಯ ವೃಕ್ಷಗಳ ವರ್ಣನೆ ಮಾಡಿದೆ ಅದೇ ಪ್ರಕಾರ ಇವುಗಳ ವರ್ಣನೆ ತಿಳಿಯುವುದು. ವಿಶೇಷತೆಯೇನೆಂದರೆ ಈ ಕಲ್ಪವೃಕ್ಷಗಳು ಇಚ್ಛೆ ಮಾಡಿದ ಅನುಸಾರ ಫಲವನ್ನು ಕೊಡುವಂಥವಿವೆ. ಕಲ್ಪವೃಕ್ಷಗಳ ವನದಲ್ಲಿ ಕೂಡ ಎಲ್ಲಿ ಬಾವಿಗಳಿವೆ, ಎಲ್ಲಿ ನದಿಗಳಿವೆ, ಎಲ್ಲಿ ಮಳಲಿನ ಸಮೂಹದ ಸಮಾನ ರತ್ನಮಯ ಧೂಳದ ಪುಂಜಗಳಿವೆ, ಎಲ್ಲಿ ಸಭಾಗೃಹ, ಪ್ರಾಸಾದ ಇತ್ಯಾದಿ ಅನೇಕ ಸುಖರೂಪ ಸ್ಥಾನಗಳನ್ನು ಒಳಗೊಂಡಿದೆ.

**ಆ ವನವೀಥಿಯ ಒಳಗೆ ರೂಪ್ಯಮಯ ವನವೇದಿಯಿದೆ.** ಅದು ಮೂರು-ಮೂರು ಭಾಗದ ಉನ್ನತ ನಾಲ್ಕು ದ್ವಾರ ಸಹಿತವಿದೆ ಮತ್ತು ಮೊದಲು ವರ್ಣಿಸಿದ ವೇದಿಯ ಸಮಾನ ತೋರಣ, ಆಭರಣ, ಮಂಗಲ ದ್ರವ್ಯಗಳಿಂದ ಯುಕ್ತವಿದೆ.

**ಆ ದ್ವಾರಗಳ ಒಳಗೆ ಹೋದ ಮೇಲೆ ನಾಲ್ಕೂ ಕಡೆಗೆ ಪ್ರಾಸಾದಗಳ ಪಂಕ್ತಿಗಳಿವೆ.** ಆ ಪ್ರಾಸಾದಗಳು ದೇವ ಶಿಲ್ಪಿಗಳಿಂದ ಮಾಡಲಾಗಿದ್ದು ನಾಲ್ಕೂ ಕಡೆಗೆ ಅನೇಕ ಪ್ರಕಾರದ್ದಿವೆ. ಆ ಪ್ರಾಸಾದಗಳಿಗೆ ಸ್ವರ್ಣಮಯ ಸ್ತಂಭಗಳಿವೆ, ವಜ್ರಮಣಿ ಎಂದರೆ ಹೀರ, ರತ್ನದಿಂದ ನಿರ್ಮಿಸಿದ ನೆಲಗಟ್ಟು ಇದೆ, ಚಂದ್ರಕಾಂತ ಮಣಿಮಯವಾದ ಗೋಡೆಗಳಿವೆ, ಅನೇಕ ಪ್ರಕಾರದ ರತ್ನಗಳಿಂದ ಚಿತ್ರಗಳನ್ನು ಬಿಡಿಸಲಾಗಿದೆ. ಅದೆಷ್ಟೋ ಎರಡು ಭಾಗದವು ಇವೆ. ಅದೆಷ್ಟೋ ಮೂರು ಭಾಗದವು ಇವೆ, ಅದೆಷ್ಟೋ ನಾಲ್ಕು ಭಾಗದವು ಇವೆ. ಕೆಲವು ಪ್ರಾಸಾದಗಳು ಚಂದ್ರಶಾಲೆಯಿಂದ ಯುಕ್ತವಿವೆ. ಮೇಲಿನ ಉನ್ನತ ಬರಿದಾದ ಮಾಳಿಗೆಯನ್ನು ಚಂದ್ರಶಾಲೆಯೆಂದು ಹೇಳುತ್ತಾರೆ. ಅದೆಷ್ಟೋ **'ವಲಭೀಛದ'** ಯುಕ್ತವಿವೆ. ಎಂದರೆ ಮೇಲಿನ ಬರಿದಾದ ಮಾಳಿಗೆಯ ಮೇಲೆ ನಾಲ್ಕೂ ಕಡೆಗೆ ಉನ್ನತ ಗೋಡೆಗಳಿವೆ.

ಆ ಪ್ರಾಸಾದಗಳು ತಮ್ಮ ಉಜ್ವಲ ಪ್ರಭೆಯಲ್ಲಿ ಮುಳುಗುತ್ತಿವೆ. ಕೆಲವು ತಮ್ಮ ಉಜ್ವಲ ಶಿಖರಗಳಿಂದ ಚಂದ್ರನ ಚಂದ್ರಿಕೆಯಿಂದಲೇ ನಿರ್ಮಿಸಿರುವಂತೆ ಕಂಡು ಬರುತ್ತಿವೆ. ಎಲ್ಲಿ ಅಧಿಕ ಶಿಖರಗಳುಳ್ಳ ಪ್ರಾಸಾದಗಳಿವೆ, ಎಲ್ಲಿ ಸಭಾಗೃಹಗಳಿವೆ, ಎಲ್ಲಿ ನಾಟ್ಯ ಶಾಲೆಗಳಿವೆ, ಎಲ್ಲಿ ಶೈಯ್ಯಾಗೃಹಗಳಿವೆ. ಅದಕ್ಕೆ ಚಂದ್ರಕಾಂತ ಮಣಿಮಯ ಉನ್ನತ ಮೆಟ್ಟಲುಗಳಿವೆ. ಅವುಗಳಲ್ಲಿ ದೇವ, ವಿದ್ಯಾಧರ ಜಾತಿಯ ದೇವ, ಸಿದ್ಧ ಜಾತಿಯ ದೇವ, ಗಂಧರ್ವ ದೇವ, ಪನ್ನಗದೇವ, ಕಿನ್ನರ ದೇವಗಳು ಹೆಚ್ಚು ಆದರದೊಡನೆ ಜಿನೇಂದ್ರರ ಗುಣಗಾನ ಮಾಡುತ್ತಾರೆ; ಕೆಲವರು ಬಾರಿಸುತ್ತಾರೆ; ಅನೇಕ ಜಾತಿಯ ವಾದ್ಯಗಳಿಂದ ಶಬ್ದ ಮಾಡುತ್ತಾರೆ; ಕೆಲವರು ಸಂಗೀತ ನೃತ್ಯ ಮಾಡುತ್ತಾರೆ; ಕೆಲವರು ಜಯ ಜಯಕಾರ ಶಬ್ದ ಮಾಡುತ್ತಾರೆ; ಕೆಲವರು ಜಿನ ಭಗವಂತರ ಗುಣಗಳ ಸ್ತವನ ಮಾಡುತ್ತಾರೆ.

ಆ ರಮಣೀಯ ಭೂಮಿಯ ಮಧ್ಯಭಾಗದಲ್ಲಿ ಒಂಭತ್ತು **ಸ್ತೂಪ**ಗಳಿವೆ. ಆ ಸ್ತೂಪಗಳು ಪದ್ಮರಾಗ ಮಣಿಮಯ ಪುಂಜದ ಆಕಾರದಿಂದ ಉತ್ತುಂಗ ಆಕಾಶದ ಅಗ್ರಭಾಗವನ್ನು ಉಲ್ಲಂಘಿಸುವಂತಿವೆ. ಅವು ಸಮಸ್ತ ದೇವ-ಮನುಷ್ಯರ ಚಿತ್ತದ ಅನುರಾಗವೇ ಸ್ತೂಪದ ಆಕಾರವಾಗಿರುವಂತೆ ತೋರುತ್ತವೆ. ಆ ಸ್ತೂಪಗಳು ಸಿದ್ಧರ ಹಾಗೂ ಅರಹಂತರ ಪ್ರತಿಬಿಂಬಗಳ ಸಮೂಹದಿಂದ ಎಲ್ಲ ಕಡೆಗೆ ವ್ಯಾಪ್ತವಾಗುತ್ತಲಿವೆ, ತಮ್ಮ ಔನ್ನತ್ಯದಿಂದ ಹೇಗೆ ಆಕಾಶವನ್ನು ವಶದಲ್ಲಿ ತೆಗೆದುಕೊಂಡಿವೆ. ಆ ಸ್ತೂಪಗಳು ದೇವ ವಿದ್ಯಾಧರರ ಮೂಲಕ ಸುಮೇರುವಿನ ಸಮಾನ ಪೂಜ್ಯವಿವೆ. ಉಚ್ಚ ದೇವಗಳಿಂದ ಹಾಗೂ ಚಾರಣ ಋದ್ಧಿಧಾರಕರಿಂದ ಆರಾಧ್ಯವಿವೆ.

ಆ ಒಂಭತ್ತು ಸ್ತೂಪಗಳು ಜಿನೇಂದ್ರರ ನವ ಕೇವಲ ಲಬ್ಧಿಯೇ ಸ್ತೂಪಗಳ ಆಕಾರವಾಗಿ ಹೋಗಿರುವಂತಿವೆ. ಆ ಸ್ತೂಪಗಳ ಅಂತರಾಳದಲ್ಲಿ ರತ್ನ ತೋರಣಗಳ ಪಂಕ್ತಿಗಳು ಅವು ಇಂದ್ರ ಧನುಷ್ಯಮಯವಾಗಿರುವಂತೆಯೇ ಶೋಭಿಸುತ್ತಿವೆ, ಮತ್ತು ತಮ್ಮ ಜ್ಯೋತಿಯಿಂದ ಆಕಾಶರೂಪದ ಅಂಗಳವನ್ನು ಚಿತ್ರರೂಪವಾಗಿ ಮಾಡುತ್ತಲಿವೆ. ಆ ಸ್ತೂಪಗಳು ಕೊಡೆ ಸಹಿತವಿವೆ, ಧ್ವಜಪತಾಕೆ ಸಹಿತವಿವೆ, ಸಮಸ್ತ ಮಂಗಲ ದ್ರವ್ಯಗಳಿಂದ ತುಂಬಿವೆ. ಆ ಸ್ತೂಪಗಳಲ್ಲಿ ಜಿನ ಪ್ರತಿಮೆಗಳ ಅಭಿಷೇಕ ಮಾಡಿ, ಮತ್ತು ಪೂಜೆ ಹಾಗೂ ಸ್ತವನ ಮಾಡಿ ಅನಂತರ ಪ್ರದಕ್ಷಿಣೆ ಹಾಕಿ ಭವ್ಯ ಜೀವರುಗಳು ಹರುಷಕ್ಕೆ ಪ್ರಾಪ್ತರಾಗುತ್ತಾರೆ.

ಈ ಪ್ರಕಾರ ಅರ್ಧ ಯೋಜನ ಅಗಲ ಗೋಲ ವಿಸ್ತಾರರೂಪದ ಪ್ರಾಸಾದ ಮತ್ತು ಸ್ತೂಪಗಳ ಭೂಮಿಯ ಮುಂದೆ ಹೋದರೆ **ಆಕಾಶದ ಸಮಾನ ಸ್ಫಟಿಕ ಮಣಿಮಯದ ಮೂರನೇ ಕೋಟೆಯಿದೆ.** ಆ ಆಕಾಶ ಸ್ಫಟಿಕ ಮಣಿಮಯ ಕೋಟೆಯು ಆಕಾಶದ ಸಮಾನವೇ ನಿರ್ಮಲವಿದೆ, ಮತ್ತು **ಜಿನೇಂದ್ರರ ಸಾಮೀಪ್ಯತೆಯ ಸೇವನೆಯಿಂದ ನಿಕಟ ಭವ್ಯರ ಆತ್ಮನ ಸಮಾನ ಉಜ್ವಲ ಉತ್ತುಂಗ ಸದ್‌ವೃತ್ತತೆ ಮತ್ತು ಸಮೃದ್ಧತೆಯಿಂದ ಯುಕ್ತವಿದೆ.** ಆ ಸ್ಫಟಿಕ ಮಣಿಮಯ ಕೋಟೆಯ ನಾಲ್ಕೂ ದಿಶೆಗಳಲ್ಲಿ ಪದ್ಮರಾಗ ಮಣಿಮಯವಾದ ನಾಲ್ಕು ಉತ್ತುಂಗ ಮಹಾದ್ವಾರಗಳು ಭವ್ಯ ಜೀವರುಗಳ ರಾಗಪುಂಜವು ಹೊರ ಹೊರಟು ಈ ದ್ವಾರಗಳ ಪರಿಣತಿಯು ಹೊಂಬಣ್ಣ ರೂಪವಾಗಿ ಹೋಗುತ್ತಿವೆಯೋ ಏನೋ ಎನ್ನುವಂತಿವೆ. ಆ ದ್ವಾರಗಳ ಮೇಲೆ ಕೂಡ ಮೊದಲಿನ ಹಾಗೆಯೇ ಮಂಗಲದ್ರವ್ಯ, ತೋರಣ, ಮಾಲೆಗಳು ಮೊದಲಾಗಿ ಸಮಸ್ತ ಸಂಪತ್ತುಗಳಿವೆ. ಅದರಂತೆ ದ್ವಾರಗಳ ಸಮೀಪದಲ್ಲಿಯೇ ದೈದೀಪ್ಯಮಾನವಾದ ಗಂಭೀರ ನವನಿಧಿಗಳು ಇವೆ.

ಮೂರೂ ಕೋಟೆಗಳ ಎಲ್ಲ ನಾಲ್ಕು-ನಾಲ್ಕು ದ್ವಾರಗಳಲ್ಲಿ ಕೈಯೊಳಗೆ ಗದೆ ಮೊದಲಾದುವನ್ನು ಧಾರಣ ಮಾಡಿರುವ ದೇವಗಳು ನಿಂತುಕೊಂಡಿದ್ದಾರೆ. ಮೊದಲಿನ ಕೋಟೆಯ ದ್ವಾರಪಾಲರು ವ್ಯಂತರದೇವರಿದ್ದಾರೆ, ಎರಡನೇ ಕೋಟೆಯ ದ್ವಾರಪಾಲರು ಭವನವಾಸೀ ದೇವರಿದ್ದಾರೆ, ಮೂರನೇ ಸ್ಫಟಿಕ ಮಣಿಮಯ ಕೋಟೆಯ ದ್ವಾರಪಾಲರು ಕಲ್ಪವಾಸೀ ದೇವಗಳಿದ್ದಾರೆ.

ಆ ಸ್ಫಟಿಕ ಮಣಿಮಯ ಕೋಟೆಯಿಂದ ಗಂಧಕುಟಿಯ ಕೆಳಗಿನ ಪ್ರಥಮ ಪೀಠದವರೆಗೆ ನೀಳವಾದ ಹದಿನಾರು ಗೋಡೆಗಳನ್ನು ಆಕಾಶ ಸ್ಫಟಿಕ ಮಣಿಯಿಂದ ನಿರ್ಮಿಸಲಾಗಿವೆ. ಅವುಗಳ ಕಾಂತಿಯು ಅತ್ಯಂತ ನಿರ್ಮಲವಿದೆ. ಪ್ರಥಮ ಪೀಠ ತಳದಿಂದ ಹಿಡಿದು ಸ್ಫಟಿಕ ಕೋಟೆಯವರೆಗೆ ನಿರ್ಮಿಸಿದ ಹದಿನಾರು ಗೋಡೆಗಳಿವೆ ಅವು ತಮ್ಮ ಸ್ವಚ್ಛತೆಯ ಕಾರಣ ಕಣ್ಣುಗಳಿಗೆ ಕಂಡು ಬರುವುದಿಲ್ಲ, ಕೇವಲ ಆಕಾಶವೇ ಕಂಡು ಬರುತ್ತದೆ; ಕೈಯು ಮೊದಲಾದ ಶರೀರದ ಸ್ಪರ್ಶದಿಂದಲೇ ಗೋಡೆಗಳು ತಿಳಿದು ಬರುತ್ತವೆ. ಅವು ತಮ್ಮ ಸ್ವಚ್ಛತೆಯ ಪ್ರಭಾವದಿಂದ ಗೋಚರಿಸುವುದೇ ಇಲ್ಲ, **ನಿರ್ಮಲ ಮತ್ತು ಸಮಸ್ತ ವಸ್ತುಗಳ ಬಿಂಬಗಳನ್ನು ತೋರಿಸುವಂಥ ಅಲ್ಲಿಯ ಭೂಮಿಯು ಜಿನೇಂದ್ರರ ಜ್ಞಾನ ಕ್ರಿಯೆಯ ಸಮಾನ ಶೋಭಾಯಮಾನವಾಗುತ್ತಲಿದೆ.** ಈ ಹದಿನಾರು ಗೋಡೆಗಳ ಮಧ್ಯದಲ್ಲಿ ಹದಿನಾರೇ ದ್ವಾರಗಳಿವೆ, ಅವುಗಳಲ್ಲಿ ನಾಲ್ಕು ಮಹಾವೀಥಿಗಳಿವೆ ಮತ್ತು ಮಹಾವೀಥಿಗಳ ಮಧ್ಯದಲ್ಲಿ ಹನ್ನೆರಡು ಸಭಾಸ್ಥಾನಗಳಿವೆ. ಅವು ಗೋಡೆಗಳ ಆಕಾಶ ಸಮಾನ ಸ್ವಚ್ಛತೆಯ ಕಾರಣ ಬೇರೆ-ಬೇರೆಯಾಗಿ ಕಂಡು ಬರುವುದಿಲ್ಲ, ಎಲ್ಲವೂ ಒಂದಾಗಿಯೇ ಕಂಡು ಬರುತ್ತವೆ.

ಆ ಹದಿನಾರು ಗೋಡೆಗಳ ಮೇಲೆ ರತ್ನಮಯ ಹದಿನಾರು ಸ್ತಂಭಗಳಿಂದ ಧಾರಣ ಮಾಡಿದ ಆಕಾಶ ಸ್ಫಟಿಕಮಣಿಮಯವಾದ ಅತ್ಯಂತ ಉನ್ನತ **ಶ್ರೀಮಂಟಪವಿದೆ.** ಅದು ಒಂದು ಯೋಜನ ಉದ್ದಗಲದ ವೃತ್ತಾಕಾರವಿದೆ, ಮಹಾನ ಶೋಭಾಯುಕ್ತವಿದೆ. ಅದರಲ್ಲಿ ಸಮಸ್ತ ಸುರಾಸುರರಿಂದ ವಂದನೀಯ ಸ್ಯಾದ್ವಾದ ವಿದ್ಯೆಯ ಭಗವಾನ ಪರಮೇಶ್ವರರು ವಿರಾಜಮಾನರಿದ್ದಾರೆ. ಆದುದರಿಂದ ಇದು ನಿಜವಾಗಿಯೇ ಶ್ರೀಮಂಟಪವಿದೆ. ಈ ಶ್ರೀಮಂಟಪವು ಆಕಾಶ ಸ್ಫಟಿಕಮಣಿಮಯವಿದೆ. ಅದರೊಳಗಿಂದ ಆಕಾಶವು ಕಂಡು ಬರುತ್ತದೆ. ಮೂರು ಲೋಕದ ಜನಸಮೂಹಕ್ಕೆ ನಿರ್ಬಾಧ ಸ್ಥಳ ಕೊಡುವುದರಿಂದ ಮಹಾ ವೈಭವಕ್ಕೆ ಪ್ರಾಪ್ತವಿದೆ. ಆ ಶ್ರೀಮಂಟಪದ ಮೇಲೆ ಗುಹಯಕ ದೇವಗಳ ಮೂಲಕ ಬಿಡಲಾದ ಪುಷ್ಪಗಳ ಸಮೂಹವಿದ್ದು ಅದು ಶ್ರೀ ಮಂಟಪದ ಕೆಳಗೆ ಕುಳಿತ ದೇವ-ಮನುಷ್ಯರಿಗೆ ತಾರಾಗಣಗಳ ಶಂಕೆಯನ್ನು ಉತ್ಪನ್ನ ಮಾಡಿಸುತ್ತದೆ.

ಒಂದು ಯೋಜನ ವಿಸ್ತಾರವುಳ್ಳ ಆ ಶ್ರೀಮಂಟಪದಲ್ಲಿ ಸಮಸ್ತ ದೇವ-ಮನುಷ್ಯರು ಪರಸ್ಪರ ಬಾಧೆಯಿಲ್ಲದೆ ಸುಖ ರೂಪವಾಗಿ ಕುಳಿತುಕೊಳ್ಳುತ್ತಾರೆ, ಅದು ಜಿನೇಂದ್ರರ ಮಾಹಾತ್ಮ್ಯವಿದೆ. ಅದರ ಮಧ್ಯಭಾಗದಲ್ಲಿ ಪ್ರಥಮ ಪೀಠವು ಸ್ಥಿರವಿದೆ ಅದು ವೈಡೂರ್ಯಮಣಿಯ ನವಿಲಿನ ಕಂಠದಂತೆ ಹರಿತ ವರ್ಣದ್ದು ಎಂಟು ಬಿಲ್ಲು ಎತ್ತರವಿದೆ. ಆ ಪೀಠಕ್ಕೆ ಹದಿನಾರು ಕೋನಗಳಿವೆ. ಆ ಹದಿನಾರು ಕೋನಗಳಿಗೆ ಹದಿನಾರು-ಹದಿನಾರು ಹೆಜ್ಜೆ ಹತ್ತುವ-ಇಳಿಯುವ ಸಲುವಾಗಿ ಮೆಟ್ಟಿಲುಗಳಿವೆ.

ಪ್ರಥಮ ಪೀಠದ ನಾಲ್ಕೂ ಕಡೆಗಂತೂ ನಾಲ್ಕು ಮಹಾವೀಥಿಗಳಿವೆ, ಅವು ಒಂದು ಹರದಾರಿ ಅಗಲ ಮತ್ತು ಧೂಳೀಶಾಳ ಕೋಟೆಯಿಂದ ಪ್ರಥಮ ಪೀಠದವರೆಗೆ ನೇರವಾಗಿವೆ. ಆ ಪೀಠದ ಹದಿನಾರು ಮೆಟ್ಟಿಲುಗಳನ್ನು ಹತ್ತಿ ಪ್ರಥಮ ಪೀಠದ ಮೇಲೆ ಹೋಗಿ ತಮ್ಮ ತಮ್ಮ ಸಭಾ ಸ್ಥಾನಗಳಿಗೆ ದೇವ-ಮನುಷ್ಯ ಮೊದಲಾದವರು ಹೋಗಿ ತಮ್ಮ-ತಮ್ಮ ಸಭೆಯಲ್ಲಿ ಕುಳಿತುಕೊಳ್ಳುತ್ತಾರೆ. ಆ ಪ್ರಥಮ ಪೀಠವನ್ನು ನಾಲ್ಕೂ ಕಡೆಯಿಂದ ಅಷ್ಟಮಂಗಲ ದ್ರವ್ಯಗಳು ಅಲಂಕರಿಸಿವೆ, ಮತ್ತು ನಾಲ್ಕೂ ಕಡೆಗೆ ಅದರ ಮೇಲೆ ಎತ್ತರವಿರುವ ಯಕ್ಷರ ಮಸ್ತಕದ ಮೇಲೆ ಧರ್ಮ ಚಕ್ರಗಳು ಸ್ಥಿರವಿವೆ. ಆ ಧರ್ಮಚಕ್ರಗಳು ಒಂದು ಸಾವಿರ ರತ್ನಮಯ ಕಿರಣಗಳ ಸಮೂಹದಿಂದ ಶೋಭಿಸುತ್ತ ಅವು ಆ ಪ್ರಥಮ ಪೀಠದ ರೂಪವು ಉದಯಾಚಲ ಪರ್ವತದ ಮೇಲೆ ಸೂರ್ಯನ ಬಿಂಬವೇ ಉದಯವಾಗುತ್ತಿದೆಯೋ ಏನೋ ಎನ್ನುವಂತೆ ಕಂಡು ಬರುತ್ತಿದ್ದವು. ಆ ಮೊದಲನೆಯ ಪೀಠದ ಮೇಲೆ ಸ್ವರ್ಣಮಯವಾದ ಎರಡನೆಯ ಪೀಠವಿದೆ.

**ಎರಡನೇ ಪೀಠವು** ಸ್ವರ್ಣಮಯವಿದೆ, ಅದು ಆ ಮೊದಲನೇ ಪೀಠದ ಮೇಲೆ ನಾಲ್ಕು ಬಿಲ್ಲು ಎತ್ತರವಿದೆ. ಆ ಪೀಠವು ಸೂರ್ಯನ ಕಿರಣಗಳ ಹಾಗೆ ತನ್ನ ಕಾಂತಿಯಿಂದ ಆಕಾಶವನ್ನು ಉದ್ಯೋತರೂಪ ಮಾಡುತ್ತಿದೆ. ಆ ಎರಡನೇ ಪೀಠದ ಮೇಲೆ ಎಂಟು ಪ್ರಕಾರದ ಧ್ವಜಗಳಿವೆ. ಆ ಧ್ವಜಗಳು ಚಕ್ರ, ಆನೆ, ವೃಷಭ, ಕಮಲ, ವಸ್ತ್ರ ಸಿಂಹ, ಗರುಡ, ಮಾಲೆಗಳ ಧ್ವಜಗಳಿವೆ. ಅವು ಹೇಗೆ ವಸ್ತ್ರಗಳಿಂದ ಪಾಪರೂಪದ ಧೂಳನ್ನು ಹಾರಿಸುತ್ತವೆಯೋ ಹಾಗೆ ಹವೆಯಿಂದ ಅಲ್ಲಾಡುತ್ತಿವೆಯೇನು ? ಆ ಎರಡನೇ ಪೀಠದ ಮೇಲೆ ತನ್ನ ಅನೇಕ ರತ್ನಗಳ ಕಾಂತಿಯಿಂದ ಅಂಧಕಾರವನ್ನು ದೂರ ಮಾಡುತ್ತ ಸರ್ವರತ್ನಮಯವಾದ ಮೂರನೇ ಪೀಠವು ನಾಲ್ಕು ಬಿಲ್ಲು ಎತ್ತರವಿದೆ. ಈ ಪ್ರಕಾರ ಮೂರು ಮೇಖಲೆಯುಕ್ತ ಪೀಠವು ಅದೇನು ಭಗವಂತರ ಉಪಾಸನೆಯ ಸಲುವಾಗಿ ಸಮಸ್ತ ರತ್ನಮಯವಾದ ಸುಮೇರು ಪರ್ವತವೇ ಬಂದಿರುವಂತೆ ಕಂಡು ಬರುತ್ತದೆ.

## ಸಮವಸರಣದ ವಿಸ್ತಾರ

ಧೂಳೀಶಾಳದ ಕೋಟೆಯಿಂದ ಕಂದಕದವರೆಗೆ ವರ್ತುಲಾಕಾರದ ವ್ಯಾಸವು ಒಂದು ಯೋಜನವಿದೆ, ಕಂದಕದಿಂದ ಪುಷ್ಪವಾಟಿಯ ವೇದಿಯವರೆಗೆ ವಳಯ ವ್ಯಾಸವು ಒಂದು ಯೋಜನವಿದೆ; ಅದರ ಮುಂದೆ ಅಶೋಕ ಮೊದಲಾದ ವನಭೂಮಿಯ ವೃತ್ತ ವ್ಯಾಸವು ಒಂದು ಯೋಜನವಿದೆ; ಅದರ ಮುಂದೆ ಧ್ವಜ ಭೂಮಿಯ ವೃತ್ತ ವ್ಯಾಸವು ಒಂದು ಯೋಜನವಿದೆ; ಅದರ ಮುಂದೆ ಕಲ್ಪವೃಕ್ಷಗಳ ವನದ ವಲಯ ವ್ಯಾಸವು ಒಂದು ಯೋಜನವಿದೆ; ಅದರ ಮುಂದೆ ಪ್ರಾಸಾದ ಪಂಕ್ತಿಯ ವಲಯ ವ್ಯಾಸವು ಅರ್ಧ ಯೋಜನವಿದೆ. ಈ ಪ್ರಕಾರ ಒಂದು ದಿಶೆಯ ವಲಯ ವ್ಯಾಸವು ಐದೂವರೆ ಯೋಜನವಾಯಿತು. ಎರಡೂ (ಎದುರು ಬದುರಿನ) ದಿಶೆಗಳ ವಲಯ ವ್ಯಾಸವು ಒಟ್ಟು ಹನ್ನೊಂದು ಯೋಜನವಾಯಿತು. ಮಧ್ಯದಲ್ಲಿ ಮತ್ತು ಆಕಾಶ ಸ್ಫಟಿಕ ಕೋಟೆಯ ಕೆಳಗೆ ಶ್ರೀ ಮಂಟಪದ ವಿಸ್ತಾರವು ಒಂದು ಯೋಜನದ್ದಿದೆ. ಈ ಪ್ರಕಾರ ಒಟ್ಟಿಗೆ ಹನ್ನೆರಡು ಯೋಜನದ ವಿಸ್ತಾರವು ಸಮವಸರಣ ಭೂಮಿಯದಿದೆ.

ಶ್ರೀಮಂಟಪದಲ್ಲಿ ಸ್ಫಟಿಕಮಯ ಕೋಟೆಯಿಂದ ಗಂಧಕುಟಿಯ ಕೆಳಗಿನ ಪೀಠದವರೆಗೆ ಸಭೆಯ ಭೂಮಿಯು ಒಂದು ಕಡೆಯದು ಒಂದು ಹರದಾರಿ ಎರಡೂ ಕಡೆಯದು ಎರಡು ಹರದಾರಿಯಿದೆ. ಮಧ್ಯದಲ್ಲಿ ಮೂರು ಕಟ್ಟೆಯ ಪೀಠವು ಎರಡೂ ಕಡೆಗೆ ಎರಡು ಹರದಾರಿ ವಿಸ್ತಾರವಿದೆ. ಅದರಲ್ಲಿ ಮೇಲಿನ ಮೂರನೇ ಪೀಠದ ವಿಸ್ತಾರವು ಒಂದು ಸಾವಿರ ಬಿಲ್ಲು ಇದೆ, ಎರಡನೇ ಪೀಠದ ವಿಸ್ತಾರವು ಒಂದುಕಡೆಗೆ ಏಳು ನೂರಾ ಐವತ್ತು ಬಿಲ್ಲು ಎರಡೂ ಕಡೆಗೆ ಒಂದೂವರೆ ಸಾವಿರ ಬಿಲ್ಲು ಇದೆ. ಮೂರನೇ ಕೆಳಗಿನ ಪೀಠದ ಒಂದೊಂದು ಕಡೆಯ ವಿಸ್ತಾರವು ಏಳುನೂರಾ ಐವತ್ತು ಬಿಲ್ಲು ಎರಡೂ ಕಡೆಯದು ಒಂದೂವರೆ ಸಾವಿರ ಬಿಲ್ಲು ಇದೆ. ಈ ಪ್ರಕಾರ ಮೂರೂ ಪೀಠಗಳ ವಿಸ್ತಾರವು ನಾಲ್ಕು ಸಾವಿರ ಬಿಲ್ಲು ಎಂದರೆ ಎರಡು ಹರದಾರಿಯಿದೆ. **ಈ ಪ್ರಕಾರ ಮಧ್ಯದ ವಿಸ್ತಾರವು ನಾಲ್ಕು ಹರದಾರಿ ಅಥವಾ ಒಂದು ಯೋಜನವೆಂದು ತಿಳಿಯುವುದು.**

ಪ್ರಥಮ ಪೀಠವು ಭೂಮಿಯಿಂದ ಎಂಟು ಬಿಲ್ಲು ಎತ್ತರವಿದೆ; ಅದರ ಮೇಲೆ ನಾಲ್ಕು ಬಿಲ್ಲು ಎತ್ತರ ಎರಡನೇ ಪೀಠವಿದೆ. ಅದರ ಮೇಲೆ ನಾಲ್ಕು ಬಿಲ್ಲು ಎತ್ತರ ಮೂರನೇ ಪೀಠವಿದೆ. ನಾಲ್ಕೂ ಕಡೆಗೆ ಒಂದು ಹರದಾರಿ ಅಗಲವಿರುವ ನಾಲ್ಕು ಮಹಾವೀಥಿಗಳಿವೆ. ಅವುಗಳ ಎರಡೂ ಮಗ್ಗಲು ಮೊದಲನೇ ಪೀಠದ ಎಂದರೆ ಎಂಟೆಂಟು ಬಿಲ್ಲು ಎತ್ತರದ ಎಂಟು ಗೋಡೆಗಳಿವೆ; ಮತ್ತು ಗೋಡೆಗಳ ದಪ್ಪವು ಎತ್ತರದ ಒಂದು ಎಂಟನೆಯ ಭಾಗ ಎಂದರೆ ಒಂದು ಬಿಲ್ಲು ದಪ್ಪವಾಗಿವೆ. ಹನ್ನೆರಡು ಸಭೆಗಳ ಉಳಿದ ಎಂಟು ಗೋಡೆಗಳ ಎತ್ತರವು ಕೂಡ ಎಂಟು ಬಿಲ್ಲು ಮತ್ತು ಅಗಲವು ಒಂದು ಬಿಲ್ಲು ಇರುತ್ತದೆ.

ಮೂರನೆಯ ಕೊನೆಯ ಪೀಠದ ಮೇಲೆ ಸಮವಸರಣದ ಮಧ್ಯದಲ್ಲಿ ಅನೇಕ ರತ್ನಗಳ ಸಮೂಹಗಳಿಂದ ಇಂದ್ರ ಧನುಷ್ಯಗಳಾಗುತ್ತಿವೆ. ಅಲ್ಲಿ ಇಂದ್ರನ ಹಸ್ತಗಳಿಂದ ಕ್ಷೇಪಿಸಿದ ಅನೇಕ ಪ್ರಕಾರದ ಪುಷ್ಪಗಳು ಶೋಭಿಸುತ್ತಿವೆ. ಆ ಒಂದು ಸಾವಿರ ಬಿಲ್ಲು ಅಗಲ ವೃತ್ತಾಕಾರದ ಮೂರನೇ ಪೀಠದ ಮಧ್ಯದಲ್ಲಿ ಆರುನೂರು ಬಿಲ್ಲು ಉದ್ದಗಲದ ಚೌಕೋನಾಕಾರದ ಅನೇಕ ರತ್ನಮಯವಾದ ಗಂಧಕುಟಿಯ ರಚನೆಯನ್ನು ಕುಬೇರನು ಮಾಡಿರುತ್ತಾನೆ ಅದರ ಅಗಲಳತೆಗಿಂತ ಎತ್ತರವು ಅಧಿಕವಿದ್ದು ಪ್ರಮಾಣಬದ್ಧವಾಗಿರುತ್ತದೆ, ಅದು ಸುತ್ತಲೂ ಕೋಟೆಯಿಂದ ಭೂಷಿತವಿದೆ, ಅನೇಕ ರತ್ನಗಳ ಪ್ರಭೆಯಿಂದ

ಯುಕ್ತವಾದ ಶಿಖರಗಳು ಆಕಾಶದಲ್ಲಿ ವ್ಯಾಪಿಸಿಕೊಂಡಿವೆ ಮತ್ತು ಎತ್ತರವಾದ ಶಿಖರಗಳಿಗೆ ಕಟ್ಟಿರುವ ಯಾವ ವಿಜಯ ರೂಪದ ಧ್ವಜಗಳಿವೆ ಅವು ದೇವಗಳನ್ನು ಕೂಗಿ ಕರೆಯುತ್ತಿವೆಯೋ ಏನೋ ಎನ್ನುವಂತಿದ್ದವು.

ದೊಡ್ಡ-ದೊಡ್ಡ ಮುತ್ತಿನ ಝುಲ್ಲರಿಗಳು ನಾಲ್ಕೂ ಕಡೆಗೆ ತೂಗುತ್ತಿವೆ; ಒಂದೆಡೆ ಚಿನ್ನದ, ಒಂದೆಡೆ ರತ್ನಗಳ ಝುಲ್ಲರಿಗಳು ಶೋಭಿಸುತ್ತಿವೆ; ನಾಲ್ಕೂ ಕಡೆಗೆ ಅನೇಕ ರತ್ನಮಯ ಆಭರಣಗಳು ಹಾಗೂ ತುಂಬ ಸುಗಂಧಿತ ಕಲ್ಪವೃಕ್ಷಗಳ ಪುಷ್ಪ ಮಾಲೆಗಳು ಶೋಭಿಸುತ್ತಿವೆ; ಅನೇಕ ಸುಗಂಧಿತ ಪುಷ್ಪಗಳ ಮತ್ತು ಮಹಾ ಸುಗಂಧಯುಕ್ತ ಧೂಪದ ಗಂಧವು ಹರಡುತ್ತಿದೆ; ಆದರೆ ಅವೆಲ್ಲವುಗಳಿಂದ ಅಧಿಕವಾಗಿ **ಜಿನೇಂದ್ರರ ಶರೀರದ ಸುಗಂಧದಿಂದ ಸಮಸ್ತ ದಿಶೆಗಳು ಸುಗಂಧಿತವಾಗುತ್ತಲಿವೆ, ಆದುದರಿಂದ ಅದನ್ನು ಗಂಧಕುಟಿಯೆಂದು ಹೇಳುತ್ತಾರೆ. ಸುಗಂಧದ, ಕಾಂತಿಯ ಮತ್ತು ಶೋಭೆಯ ಸಲುವಾಗಿ ಇದು ಮೂರು ಲೋಕದಲ್ಲಿ ಚರಮ ಸೀಮೆಯಿದೆ.**

**ಆರು ನೂರು ಬಿಲ್ಲು ಚೌಕೋನಾಕಾರದ ಗಂಧಕುಟಿಯ ಮಧ್ಯದಲ್ಲಿ ಒಂದು ಯೋಜನ ಎತ್ತರ ಸಿಂಹಾಸನವಿದೆ.** ಆ ಸಿಂಹಾಸನದ ಕಾಂತಿ, ಕಿರಣ ಸಮೂಹ ಮತ್ತು ಸೌಂದರ್ಯದ ವರ್ಣನೆ ಮಾಡುವಲ್ಲಿ ಯಾರೂ ಸಮರ್ಥರಿಲ್ಲ. ಆ ಸಿಂಹಾಸನದ ಮೇಲೆ ನಾಲ್ಕು ಅಂಗುಲದ ಅಂತರ ಬಿಟ್ಟು, ತಮ್ಮ ಮಹಿಮೆಯ ಅನುಸಾರವೇ ಸಿಂಹಾಸನವನ್ನು ಸ್ಪರ್ಶ ಮಾಡದೆಯೇ ಜಿನೇಂದ್ರರು ವಿರಾಜಮಾನರಿದ್ದಾರೆ. **ಅಲ್ಲಿ ವಿರಾಜಮಾನವಿರುವ ಜಿನೇಂದ್ರರ ಪೂಜೆ, ಸ್ತವನ, ವಂದನೆಗಳನ್ನು ಇಂದ್ರ ಮೊದಲಾದ ದೇವಗಳು ಅತ್ಯಂತ ಭಕ್ತಿಪೂರ್ವಕವಾಗಿ ಮಾಡುತ್ತಿರುತ್ತಾರೆ.**

ದೇವರೂಪದ ಮೇಘಗಳ ಮೂಲಕ ಕಲ್ಪವೃಕ್ಷಗಳ ಅತ್ಯಂತ ಸುಗಂಧಿತ ಪುಷ್ಪಗಳ ವೃಷ್ಟಿಯು ಹನ್ನೆರಡು ಯೋಜನದ ಸಂಪೂರ್ಣ ಸಮವಸರಣದಲ್ಲಿ ಆಗುತ್ತಲಿದೆ. ಒಂದು ಯೋಜನದ ಶ್ರೀಮಂಟಪದ ಮೇಲೆ ರತ್ನಮಯ ಅಶೋಕ ವೃಕ್ಷಗಳು ಎಲ್ಲ ಕಡೆಗೆ ಶೋಭಾಯಮಾನವಾಗುತ್ತಲಿವೆ. ಅವುಗಳಿಗೆ ಮರಕತ ಮಣಿಮಯ ಹರಿತ ಪತ್ರಗಳಿವೆ, ಅನೇಕ ಪ್ರಕಾರದ ಮಣಿಮಯ ಪುಷ್ಪಗಳಿಂದ ಭೂಷಿತವಿವೆ; ಮಂದಾನಿಲದಿಂದ ಮಂದ-ಮಂದವಾಗಿ ಚಲಿಸುತ್ತಿರುವ ಶಾಖೆಗಳು ನೃತ್ಯ ಮಾಡುತ್ತಿರುವಂತಿವೆ, ಮದೋನ್ಮತ್ತ ಕೋಗಿಲೆ ಮತ್ತು ದುಂಬಿಗಳು ತಮ್ಮ ಮಧುರ ಸ್ವರದಿಂದ ಜಿನೇಂದ್ರರ ಗುಣಗಳ ಸ್ತವನ ಮಾಡುತ್ತಲಿವೆ. ಒಂದು ಯೋಜನ ನೀಳವಾದ ತಮ್ಮ ಶಾಖೆಗಳಿಂದ ಸಮಸ್ತ ಜೀವಗಳ ಶೋಕವನ್ನು ಅಶೋಕಗಳು ದೂರ ಮಾಡುತ್ತಲಿವೆ, ಸಮಸ್ತ ದಿಶೆಗಳನ್ನು ತಮ್ಮ ರೆಂಬೆಗಳಿಂದ ಮುಚ್ಚಿಬಿಡುತ್ತಲಿವೆ. ರತ್ನಮಯ ವೃಕ್ಷಗಳಿಂದ ಜಪಾಪುಷ್ಪದ ಸಮಾನ ರತ್ನಗಳ ಪುಷ್ಪಗಳು ಸುರಿಯುತ್ತಿವೆ.

ಮುಕ್ಕೊಡೆಗಳು ತಮ್ಮ ಕಾಂತಿಯ ಉಜ್ವಲತೆಯಿಂದ ಸೂರ್ಯ-ಚಂದ್ರರುಗಳೀರ್ವರ ಪ್ರಭೆಯನ್ನು ತಿರಸ್ಕರಿಸುತ್ತ, ಅದ್ಭುತ ತ್ರೈಲೋಕ್ಯದ ಪದಾರ್ಥಗಳ ಪ್ರಭೆಯನ್ನು ಜಯಿಸುತ್ತ, ಮುತ್ತಿನ ಝುಲ್ಲರಿಗಳು ಯುಕ್ತವಿವೆ. ಅವು ಮೂರು ಲೋಕದ ಲಕ್ಷ್ಮಿಯ ಹಾಸ್ಯದ ಪುಂಜಗಳಿವೆ; ಅಥವಾ ಧರ್ಮರೂಪದ ದೊರೆಯನ್ನು-ಮೂರು ಲೋಕಗಳನ್ನು ಆನಂದಿತಗೊಳಿಸುವ ಹರುಷವಿದೆ. ಅಥವಾ ಮೋಹವನ್ನು ಜಯಿಸುವುದರಿಂದ ಉತ್ಪನ್ನವಾದ ಇದು ಪ್ರಭುಗಳ ಯಶಸ್ಸಿನ ಪುಂಜವಿದೆ. ಈ ಪ್ರಕಾರದ ತರ್ಕವನ್ನು ಉತ್ಪನ್ನ ಮಾಡುತ್ತಿರುವಂಥ ಮೂರು ಛತ್ರಗಳು-ಮುಕ್ಕೊಡೆಗಳು ಶೋಭಾಯಮಾನವಿವೆ.

ಎಲ್ಲಿಯವರೆಗೆ ಜಿನೇಂದ್ರ ದೇವರು ವಿರಾಜಮಾನರಿರುವರು ಅಲ್ಲಿಯವರೆಗೆ ಸೇವೆ ಮಾಡುವಂಥ ಯಕ್ಷ ದೇವಗಳ ಕೈಗಳ ಸಮೂಹದಿಂದ ಚಲಿಸುತ್ತಿರುವ ಅರವತ್ತಾ್ನಲ್ಕು ಚಾಮರಗಳು ಪ್ರಕಟ ಶೋಭಾಯಮಾನವಿವೆ. ಆ ಚಾಮರಗಳು ಕ್ಷೀರ ಸಮುದ್ರದ ಅಲೆಗಳ ಪಂಕ್ತಿಗಳಿವೆಯೋ, ಅಮೃತದ ತುಂಡುಗಳಿಂದಲೇ ಮಾಡಿವೆಯೋ, ಚಂದ್ರನ ಕಿರಣಗಳ ಸಮೂಹವೇ ಇವೆಯೋ, ಜಿನೇಂದ್ರರ ಸೇವೆಯ ಸಲುವಾಗಿ ಚಾಮರಗಳ ರೂಪದಲ್ಲಿ ಗಂಗೆಯೇ ಬಂದಿದೆಯೋ, ಜಿನೇಂದ್ರರ ಅಂಗಕಾಂತಿಯಿದೆಯೋ, ಕ್ಷೀರ ಸಮುದ್ರದ ನೊರೆಗಳ ಪಂಕ್ತಿಯೇ ಹವೆಯಿಂದ ಚಲಿಸುತ್ತಿದೆಯೋ, ಆಕಾಶದಿಂದ ಇಳಿಯುತ್ತಿರುವ ಹಂಸಗಳ ಪಂಕ್ತಿಗಳಿವೆಯೋ, ಅಥವಾ ಭಗವಂತರ ಉಜ್ವಲವಾದ ಯಶಸ್ಸೇ ನಾಲ್ಕೂ ಕಡೆಗೆ ಹರಡುತ್ತಿದೆಯೋ ಏನೋ ಎನ್ನುವಂತೆ ತೋರುತ್ತವೆ. ಹೀಗೆ ಶೋಭಾಯಮಾನವಾದ ಅರವತ್ತು ನಾಲ್ಕು ಚಾಮರಗಳು ಚಲಿಸುತ್ತಲಿವೆ.

ಅಲ್ಲಿ ದೇವದುಂದುಭಿಯು ಆಕಾಶದಲ್ಲಿ ಮೇಘಗಳ ಆಗಮನದ ಸಂದೇಹವನ್ನುತ್ಪನ್ನ ಮಾಡುತ್ತ ಕರ್ಣಗಳಿಗೆ ಅಮೃತದ ಸೇಚನೆ ಮಾಡುತ್ತ ಮಧುರ ಶಬ್ದ ಮಾಡುತ್ತಲಿದೆ. ದೇವಲೋಕದ ಅನೇಕ ಜಾತಿಯ ವಾದ್ಯಗಳು ಅನೇಕ ಪ್ರಕಾರದ ಧ್ವನಿಗಳ ಮೂಲಕ ಸಮಸ್ತ ದಿಶೆಗಳನ್ನು ತಲುಪುತ್ತ, ಮೇಘ ಗರ್ಜನೆಯ ಸಮಾನ ಸಮಸ್ತ ಲೋಕದಲ್ಲಿ ವ್ಯಾಪ್ತವಾಗುತ್ತ ಭಗವಂತರು ಮೋಹವನ್ನು ಜಯಿಸಿರುವುದರಿಂದ **ಅದರ ಆನಂದದ ಶಬ್ದಗಳು ಜನರ ಹೃದಯಗಳಲ್ಲಿ ಪ್ರಕಟವಾಗುತ್ತಲಿವೆ.**

**ಜಿನೇಂದ್ರರ ದೇಹದ ಅದ್ಭುತ ಪ್ರಭೆಯು ಸಮಸ್ತ ಸಮವಸರಣದಲ್ಲಿ ಹರಡುತ್ತಲಿದೆ.** ಆ ಪ್ರಭೆಯಿಂದ ಸಮಸ್ತ ಸುರ, ಅಸುರ, ಮನುಷ್ಯರುಗಳಿಗೆ ಮಹದಾಶ್ಚರ್ಯವಾಗುತ್ತಿದೆ. ಆ ಪ್ರಭೆಯು ಸೂರ್ಯನ ತೇಜಸ್ಸನ್ನು ಮರೆ ಮಾಡುತ್ತಲಿದೆ, ಕೋಟ್ಯಂತರ ಕಲ್ಪವಾಸೀ ದೇವಗಳ ದ್ಯುತಿಯನ್ನು ಆಚ್ಛಾದಿತ ಮಾಡುತ್ತ ಜಗತ್ತಿನಲ್ಲಿ ಒಂದು ಅದ್ಭುತ ಮಹಾನ ಉದಯವನ್ನು ಪ್ರಕಟ ಮಾಡುತ್ತ ಹರಡುತ್ತಲಿದೆ. **ಜಿನೇಂದ್ರರ ದೇಹರೂಪ ಅಮೃತದ ಸಮುದ್ರದಲ್ಲಿ ದೇವ, ದಾನವ, ಮನುಷ್ಯರು ತಮ್ಮ-ತಮ್ಮ ಏಳು ಭವಗಳನ್ನು ನೋಡುತ್ತಲಿದ್ದಾರೆ.** ಚಂದ್ರನ ಕಾಂತಿಯಂತೂ ಜಡತ್ವ ಮಾಡುತ್ತದೆ, ಸೂರ್ಯನ ಪ್ರಭೆಯು ಉಷ್ಣತೆಯನ್ನುಂಟು ಮಾಡುತ್ತದೆ, ಆದರೆ ಜಿನೇಂದ್ರರ ದೇಹದ ಪ್ರಭೆಯು ಜಡತೆಯನ್ನು ದೂರ ಮಾಡುತ್ತದೆ, ಜ್ಞಾನದ ಪ್ರಕಾಶ ಮಾಡುತ್ತದೆ ಮತ್ತು ಸಮಸ್ತ ಸಂತಾಪವನ್ನು ದೂರ ಮಾಡಿ ಸುಖಿಯನ್ನಾಗಿ ಮಾಡುತ್ತದೆ.

ಜಿನೇಂದ್ರರ ಮುಖ ಕಮಲದಿಂದ ಮೇಘದ ಗರ್ಜನೆಯ ಸಮಾನ ದಿವ್ಯ ಧ್ವನಿಯು ಪ್ರಕಟವಾಗುತ್ತದೆ, ಅದು ಭವ್ಯ ಜೀವರುಗಳ ಮನಸ್ಸಿನೊಳಗಿನ ಮೋಹಾಂಧಕಾರವನ್ನು ದೂರ ಮಾಡುತ್ತ ಸೂರ್ಯನ ಸಮಾನ ಅನೇಕಾಂತ ಸ್ವರೂಪದ ವಸ್ತುವನ್ನು ಉದ್ಯೋತಗೊಳಿಸುತ್ತದೆ. ಜಿನೇಂದ್ರರ ಧ್ವನಿಯು ಏಕರೂಪವಾಗಿದ್ದರೂ ಕೂಡ ಸಮಸ್ತ ಮನುಷ್ಯರುಗಳ ಭಾಷಾರೂಪವಾಗಿ ಕಿವಿಗಳೊಳಗೆ ಪ್ರವೇಶ ಮಾಡುತ್ತ ಹೋಗುತ್ತದೆ, ತಿರ್ಯಂಚಗಳ ಹೃದಯದಲ್ಲಿ ಕೂಡ ಪ್ರವೇಶ ಮಾಡಿ ಬಿಡುತ್ತದೆ, ಮತ್ತು ವಿಪರೀತ ಜ್ಞಾನವನ್ನು ದೂರ ಮಾಡಿ, ಸಮ್ಯಕ್‌ರೂಪ ತತ್ತ್ವಗಳ ಜ್ಞಾನವನ್ನು ಪ್ರಕಟ ಮಾಡುತ್ತದೆ. ಯಾವ ಪ್ರಕಾರ ಏಕರೂಪವಿರುವ ಜಲದ ಸಮೂಹವು ಕೂಡ ಅನೇಕ ಪ್ರಕಾರದ ವೃಕ್ಷಗಳಲ್ಲಿ ಅನೇಕ ರೂಪವಾಗಿ ಪರಿಣಮಿಸಿ ಹೋಗುತ್ತದೆ; ಅದೇ ಪ್ರಕಾರ ಸರ್ವಜ್ಞರ ಏಕ ಪ್ರಕಾರದ ಧ್ವನಿಯು ಕೂಡ ಅನೇಕ ಪ್ರಕಾರದ ಶ್ರೋತೃಗಳ ರೂಪದ ಪಾತ್ರರುಗಳ ವಿಶೇಷತೆಯಿಂದ ಅನೇಕ ರೂಪದಲ್ಲಿ ಪ್ರಾಪ್ತವಾಗಿ ಹೋಗುತ್ತದೆ. ಯಾವ ಪ್ರಕಾರ ಏಕರೂಪದ ಸ್ಫಟಿಕ ಮಣಿಯು ಕೂಡ ಅನೇಕ ಪ್ರಕಾರದ ಪತ್ರಗಳ ಸಂಯೋಗದಿಂದ ಅನೇಕ ರೂಪವಾಗಿ ಪರಿಣಮಿಸುತ್ತದೆ; ಅದೇ ಪ್ರಕಾರ ಸರ್ವಜ್ಞರ ಏಕ ಪ್ರಕಾರದ ಧ್ವನಿಯು ಕೂಡ ಸ್ವಚ್ಛತೆಯ ಪ್ರಭಾವದಿಂದ ಪಾತ್ರತೆಯ ಪ್ರಭಾವದಿಂದ ಅನೇಕ ರೂಪವಾಗಿ ಪರಿಣಮಿಸುತ್ತದೆ. ಕೆಲವರು ದಿವ್ಯ ಧ್ವನಿಯ ಅನೇಕ ಭಾಷಾ ಸ್ವಭಾವರೂಪದ ಪರಿಣಮನವನ್ನು ದೇವಕೃತ ವಿಶೇಷತೆಯೆಂದು ಹೇಳುತ್ತಾರೆ, ಆದರೆ ಇದರಲ್ಲಿ ದೇವಕೃತತತ್ವವು ಸಂಭವಿಸುವುದಿಲ್ಲ, ದಿವ್ಯಧ್ವನಿಯು ಅಕ್ಷರ ಸಹಿತವೇ ಇದೆ. ಅಕ್ಷರದ ಸಮೂಹವಿಲ್ಲದೆ ಅರ್ಥದ ಜ್ಞಾನವು ಹೇಗಾಗುವುದು.

ಈ ಪ್ರಕಾರ ಅಷ್ಟಪ್ರಾತಿಹಾರ್ಯಗಳ ವಿಭೂತಿಸಹಿತ ಗಂಧಕುಟಿಯಲ್ಲಿ ಅನಂತಜ್ಞಾನ, ಅನಂತದರ್ಶನ, ಅನಂತ ವೀರ್ಯ, ಅನಂತ ಸುಖದ ಧಾರಕರಾದ ಜಿನೇಂದ್ರರು ಗಂಧಕುಟಿಯಲ್ಲಿ ಪೂರ್ವ ದಿಶೆಯ ಸನ್ಮುಖ ಅಥವಾ ಉತ್ತರ ದಿಶೆಯ ಸನ್ಮುಖರಾಗಿ ವಿರಾಜಮಾನರಿರುತ್ತಾರೆ. ಗಂಧಕುಟಿಯ ಪ್ರದಕ್ಷಿಣೆಯರೂಪ (ನಾಲ್ಕು ಕಡೆಗೆ) ಎದುರಿಗಿನ ಕಡೆಗೆ ನೋಡುತ್ತಿರುವ **ಮೊದಲ** ಸಭೆಯಲ್ಲಿ ಗಣಧರ ಮೊದಲಾದ ಮುನಿರಾಜರುಗಳಿರುತ್ತಾರೆ. **ಎರಡನೇ** ಸಭೆಯಲ್ಲಿ ಕಲ್ಪವಾಸೀ ದೇವಗಳ ಸ್ತ್ರೀಯರು, **ಮೂರನೇ** ಸಭೆಯಲ್ಲಿ ಗಣನೀ ಸಹಿತ ಆರ್ಯಿಕೆಯರು ಮತ್ತು ಮನುಷ್ಯ ಸ್ತ್ರೀಯರು, **ನಾಲ್ಕನೇ** ಸಭೆಯಲ್ಲಿ ಚಕ್ರವರ್ತಿ ಮೊದಲಾದ ಮನುಷ್ಯರು, **ಐದನೇ** ಸಭೆಯಲ್ಲಿ ಜ್ಯೋತಿಷೀ ದೇವಗಳ ಸ್ತ್ರೀಯರು, **ಆರನೇ** ಸಭೆಯಲ್ಲಿ ವ್ಯಂತರ ದೇವಗಳ ಸ್ತ್ರೀಯರು, **ಏಳನೇ** ಸಭೆಯಲ್ಲಿ ಭವನವಾಸೀ ದೇವಗಳ ಸ್ತ್ರೀಯರು, **ಎಂಟನೇ** ಸಭೆಯಲ್ಲಿ ಭವನವಾಸೀ ದೇವಗಳು, **ಒಂಭತ್ತನೇ** ಸಭೆಯಲ್ಲಿ ವ್ಯಂತರ ದೇವಗಳು, **ಹತ್ತನೇ** ಸಭೆಯಲ್ಲಿ ಜ್ಯೋತಿಷೀ ದೇವಗಳು, **ಹನ್ನೊಂದನೇ** ಸಭೆಯಲ್ಲಿ ಕಲ್ಪವಾಸೀ ದೇವಗಳು ಮತ್ತು **ಹನ್ನೆರಡನೇ** ಸಭೆಯಲ್ಲಿ ಸಮಸ್ತ ತಿರ್ಯಂಚಗಳು ಕುಳಿತುಕೊಳ್ಳುತ್ತವೆ. ಈ ಪ್ರಕಾರ

ಹನ್ನೆರಡು ಸಭೆಗಳ ಜೀವರುಗಳು ಜಿನೇಂದ್ರರ ಚರಣಗಳ ಭಕ್ತಿ ಮಾಡಿ ನಮ್ರೀಭೂತರಾಗಿ ಜಿನೇಂದ್ರ ಭಗವಂತರ ಮೂಲಕ ಉಪದೇಶಿಸಲ್ಪಡುವ ಧರ್ಮರೂಪ ಅಮೃತದ ಪಾನ ಮಾಡುತ್ತಾರೆ.

ಘಾತಿ ಕರ್ಮಗಳು ನಾಶವಾಗುವುದರಿಂದ ಭಗವಂತರಿಗೆ ಹದಿನೆಂಟು ದೋಷಗಳ ಅಭಾವವಾಗಿ ಹೋಗುತ್ತದೆ. ಕ್ಷುಧೆ, ತೃಷೆ, ಜನ್ಮ, ಮರಣ, ರೋಗ, ಶೋಕ, ಭಯ, ವಿಸ್ಮಯ, ರತಿ, ಅರತಿ, ಚಿಂತೆ, ಸ್ವೇದ, ಖೇದ, ಮದ, ಮೋಹ, ನಿದ್ರೆ, ರಾಗ ಮತ್ತು ದ್ವೇಷಗಳೆಂಬ ಈ ಹದಿನೆಂಟು ದೋಷಗಳು ಸಮಸ್ತ ಸಂಸಾರೀ (ಮಿಥ್ಯಾದೃಷ್ಟಿ) ಜೀವಗಳಲ್ಲಿ ವ್ಯಾಪ್ತವಾಗುತ್ತಲಿವೆ. ಅರಹಂತ ಭಗವಂತರಿಗೆ ಘಾತಿ ಕರ್ಮಗಳ ಅಭಾವದಿಂದ ಈ ಸಮಸ್ತ ದೋಷಗಳು ನಷ್ಟವಾಗಿ ಹೋಗಿರುತ್ತವೆ. ಆದುದರಿಂದ ಅನಂತ ಸುಖರೂಪ ಪರಮಾತ್ಮರು ಪರಮಪೂಜ್ಯ ಪರಮೇಶ್ವರರು ಅನಂತ ಗುಣಗಳಿಂದ ಭೂಷಿತ, ಕೋಟಿ ಸೂರ್ಯರ ಸಮಾನ ಉದ್ಯೋತದ ಧಾರಕ, ಅನೇಕ ಅತಿಶಯಗಳಿಂದ ಯುಕ್ತ, ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತ ಸುಖರೂಪದಿಂದ ವಿರಾಜಮಾನರಿದ್ದಾರೆ. ಈ ಪ್ರಕಾರ ಅರಹಂತರ ಸ್ವರೂಪದ ಧ್ಯಾನ ಮಾಡುವುದು ಅದು **ರೂಪಸ್ಥ ಧರ್ಮಧ್ಯಾನವಿದೆ.**

ಯಾವ ಪುರುಷನು ವೀತರಾಗನಾಗಿ (ನಾಲ್ಕನೇ ಗುಣಸ್ಥಾನದಿಂದ ಆರನೇ ಗುಣಸ್ಥಾನದವರೆಗೆ) ವೀತರಾಗವನ್ನು (ಹದಿಮೂರನೇ ಗುಣಸ್ಥಾನವುಳ್ಳವರನ್ನು) ಸ್ಮರಣೆ ಮಾಡುತ್ತ ಅವನು ಕರ್ಮಬಂಧನದಿಂದ ಬಿಡುಗಡೆಯಾಗುತ್ತಾನೆ. ಯಾವನು ಸ್ವಯಂ ರಾಗಿ (ಮೊದಲ ಗುಣಸ್ಥಾನವುಳ್ಳವನಿದ್ದು)ಯಿದ್ದು ಸರಾಗಿಯ (ಪ್ರಥಮ ಗುಣಸ್ಥಾನವುಳ್ಳ ಮಿಥ್ಯಾದೃಷ್ಟಿಯ) ಅವಲಂಬನೆ ಮಾಡುತ್ತಾನೆ. ಅವನು ದುಷ್ಟ ಕರ್ಮಗಳನ್ನು ಕಟ್ಟಿಕೊಳ್ಳುತ್ತಾನೆ. ಕ್ರೋಧಿಯಾಗಿ ಧ್ಯಾನ ಮಾಡುವಂಥವನು ಕೂಡ ಅನೇಕ ಪ್ರಕಾರ ವಿಕಾರೀಭಾವ ಮಾಡುತ್ತ ಸಾರರಹಿತ ಧ್ಯಾನ ಮಾರ್ಗದ ಅವಲಂಬನೆ ಮಾಡುತ್ತಾನೆ.

ಯಾರು ಮಂತ್ರ, ಮಂಡಲ, ಮುದ್ರೆ ಮೊದಲಾದ ಅನೇಕ ಉಪಾಯಗಳಿಂದ ಧ್ಯಾನ ಮಾಡುವಲ್ಲಿ ನಿರತರಿದ್ದಾರೆ. ಅವರಿಗೆ ಆತ್ಮನಲ್ಲಿ ಏಕಾಗ್ರರಾಗಿ ಹೋಗುವುದರಿಂದ ಎಂಥ ಸಾಮರ್ಥ್ಯವು ಪ್ರಕಟವಾಗುತ್ತದೆಯೆಂದರೆ ಅವರು ಕ್ಷಣ ಮಾತ್ರದಲ್ಲಿ ಸುರ, ಅಸುರ, ಮನುಷ್ಯರ ಸಮೂಹವನ್ನು ಕ್ಷೋಭೆಗೆ ಗುರಿಪಡಿಸುತ್ತಾರೆ. ವಿದ್ಯಾನುವಾದ ಪೂರ್ವದಲ್ಲಿ ಅನೇಕ ವಿದ್ಯೆ, ಮಂಡಲ, ಮಂತ್ರ, ಅಕ್ಷರ ಮೊದಲಾದವುಗಳ ಸಾಮರ್ಥ್ಯವು ಆತ್ಮನ ಭಾವ ಸೇರಿಸುವುದರಿಂದ ಪ್ರಕಟವಾಗುವ ವರ್ಣನೆ ಮಾಡಿದೆ, ಏಕೆಂದರೆ **ಅನಾದಿನಿಧನ ವಸ್ತುಗಳ ಸ್ವಭಾವವು ಯಾರ ಮೂಲಕ ದೂರಮಾಡುವುದರಿಂದ ದೂರವಾಗುವುದಿಲ್ಲ,** ಹೇಗೆಂದರೆ ಅದೆಷ್ಟೋ ಪುದ್ಗಲಗಳ ಸಂಯೋಗವಾಗುವುದರಿಂದ ವಿಷವಾಗಿ ಹೋಗುತ್ತದೆ. ಅದೆಷ್ಟೋ ಅಮೃತವಾಗಿ ಹೋಗುತ್ತವೆ, ಅದೆಷ್ಟನ್ನೋ ಶರೀರದ ಮೇಲೆ ಹಚ್ಚುವುದರಿಂದ ವಿಕಾರಗಳು ದೂರವಾಗಿ ಹೋಗುತ್ತವೆ, ಅದೆಷ್ಟನ್ನೋ ತಿನ್ನುವುದರಿಂದ ಸತ್ತು ಹೋಗುತ್ತಾರೆ.

ವಚನದ ಪುದ್ಗಲಗಳಲ್ಲಿ ಕೂಡ ಅಚಿಂತ್ಯ ಸಾಮರ್ಥ್ಯವಿದೆ, ಅವುಗಳಿಂದ ಆತ್ಮನಲ್ಲಿ ಕ್ರೋಧಾದಿ ವಿಕಾರಗಳು ಪ್ರಕಟವಾಗಿ ಹೋಗುತ್ತವೆ, ಆಜನ್ಮದ ಕಷಾಯಗಳು ದೂರವಾಗಿ ಬಿಡುತ್ತವೆ, ಮಂತ್ರಾದಿಗಳಿಂದ ವಿಷವು ಇಳಿದು ಹೋಗುತ್ತದೆ, ವಿಷವು ಹರಡಿ ಹೋಗುತ್ತದೆ. ಇದೇ ಪ್ರಕಾರ ಮನಸ್ಸಿನ ಏಕಾಗ್ರತೆಯಾಗಿ ಒಂದುಗೂಡುವಲ್ಲಿ ಧ್ಯಾನದ ಅಚಿಂತ್ಯ ಸಾಮರ್ಥ್ಯವಿದೆ.

**ನರಕ, ಸ್ವರ್ಗ, ಮೋಕ್ಷವಾಗುವ ಕಾರಣವು ಧ್ಯಾನವೇ ಇದೆ.** ಅದೆಷ್ಟೋ ಅಸಂಖ್ಯಾತ ಧ್ಯಾನಗಳಂತೂ ಕೌತೂಹಲದ ಸಲುವಾಗಿ ಕುಮಾರ್ಗದಲ್ಲಿ ಪ್ರವರ್ತನೆ ಮಾಡಿಸುವಂಥ ಕುಗತಿಯ ಕಾರಣವಾದ ಕುಧ್ಯಾನಗಳಿವೆ. **ಆತ್ಮನಲ್ಲಿ ಅನಂತ ಸಾಮರ್ಥ್ಯವು ಸ್ವಭಾವದಿಂದಲೇ ಇದೆ.** ಎಂಥ ಬಾಹ್ಯ ನಿಮಿತ್ತಗಳು ದೊರಕುತ್ತವೆ ಅಂಥ ಪರಿಣಾಮಗಳಾಗಿ ಹೋಗುತ್ತವೆ. ಆದುದರಿಂದ ಜಿನೇಂದ್ರರ ಧರ್ಮದ ಧಾರಣೆ ಮಾಡಿದಂಥವರು ದುಷ್ಟ ಧ್ಯಾನ, ಕುಮಂತ್ರ, ಮಂಡಲ ಮೊದಲಾದ ಸಾಧನಗಳನ್ನು ಕೌತುಕದಿಂದ ಸ್ವಪ್ನದಲ್ಲಿ ಕೂಡ ಎಂದೂ ಸೇವನೆ ಮಾಡಬಾರದು. ಕುಧ್ಯಾನ ಮೊದಲಾದವುಗಳ ಪ್ರಭಾವದಿಂದ ಸನ್ಮಾರ್ಗದಿಂದ ಭ್ರಷ್ಟರಾಗಿ ಹೋಗುತ್ತಾರೆ, ನಿಜವಾದ ಉಜ್ವಲ ಬುದ್ಧಿಯು ನಷ್ಟವಾಗಿ ಹೋಗುತ್ತದೆ. ಪುನಃ ಅನೇಕ ಭವಗಳಲ್ಲಿ ಬುದ್ಧಿಯೊಳಗೆ ಶುದ್ಧತೆಯು ಬರುವುದಿಲ್ಲ, ಮಿಥ್ಯಾಮಾರ್ಗವು ಬಿಟ್ಟು ಹೋಗುವುದಿಲ್ಲ.

**ಸನ್ಮಾರ್ಗವು ಬಿಟ್ಟು ಹೋದ ಮೇಲೆ ಅಸಂಖ್ಯಾತ ಭವಗಳವರೆಗೆ ಸಮ್ಯಕ್ ಬುದ್ಧಿಯು ಪ್ರಕಟವಾಗುವುದಿಲ್ಲ, ಜಿನ ಸಿದ್ಧಾಂತಗಳ ಸತ್ಯ ಉಪದೇಶವು ಹೃದಯದಲ್ಲಿ ಪ್ರವೇಶ ಮಾಡುವುದಿಲ್ಲ, ಬುದ್ಧಿಯು ವಿಪರೀತವಾಗಿ ಹೋಗುತ್ತದೆ. ಆದುದರಿಂದ ಅಸತ್ ಧ್ಯಾನ, ಅಸತ್ಯ ಮಂತ್ರ ಮೊದಲಾದವು ಕೇವಲ ಆತ್ಮನ ನಾಶದ ಸಲುವಾಗಿ ಇವೆ. ರಾಗಾದಿಗಳನ್ನು ಹೆಚ್ಚಿಸುವಂಥವುಗಳಿವೆ ; ಗೃಹೀತ ಮಿಥ್ಯಾತ್ವವಿದೆ.**

ಯಾರು ನಿಮ್ನಕೋಟಿಯ ಧ್ಯಾನ, ದೂಷಿತಮಂತ್ರ, ಮುದ್ರೆ, ಮಂಡಲ, ಯಂತ್ರ ಪ್ರಯೋಗ ಮೊದಲಾದವುಗಳಿಂದ ರಾಗೀ, ದ್ವೇಷಿ, ಕಾಮೀ, ಕ್ರೋಧೀ, ನೀಚ ವ್ಯಂತರ ದೇವ, ಭವನವಾಸೀ ದೇವ, ಜ್ಯೋತಿಷೀ ದೇವ, ದೇವಿಯರು, ಯಕ್ಷ, ಯಕ್ಷಿಣಿಯ ಆರಾಧನೆ ಮಾಡುತ್ತಾರೆ, ಅವರು ಸಂಸಾರದ ವಿಷಯ, ಧನ ಹಾಗೂ ಕಷಾಯಗಳ ದುಷ್ಟ ಆಸೆಯನ್ನಪೇಕ್ಷಿಸುವಂಥವರಾಗಿ ಭೋಗಗಳ ದುಃಖ ಭೋಗಿಸಿ ತಮ್ಮ ಪೂರ್ವ ಪುಣ್ಯದ ಘಾತ ಮಾಡಿ ನರಕಕ್ಕೆ ಪ್ರಾಪ್ತರಾಗಿ ಹೋಗುತ್ತಾರೆ.

**ಯಾವಾಗ ಈ ವಿಷಯ ಕಷಾಯಗಳ ಇಚ್ಛೆಯೇ ದುರ್ಗತಿ ಮಾಡಿಸಿ ಬಿಡುತ್ತದೆಯೆಂದ ಮೇಲೆ ಪುನಃ ಅವುಗಳ ಸಲುವಾಗಿ ದುಷ್ಟ ವಿದ್ಯೆ, ದೂಷಿತ ಮಂತ್ರಾದಿಗಳಿಂದ ಧ್ಯಾನ ಮಾಡುವುದೆಂದರೆ ಅದು ಆತ್ಮನಲ್ಲಿ ಮಿಥ್ಯಾತ್ವ ಮತ್ತು ಕಷಾಯಗಳ ದೃಢ ಆರೋಪಣೆ ಮಾಡುವುದಿದೆ; ಅದು ನಿಗೋದ ಮೊದಲಾದುವಲ್ಲಿ ಅನಂತಕಾಲದವರೆಗೆ ಪರಿಭ್ರಮಣ ಮಾಡಿಸಿಯೇ ಮಾಡಿಸುತ್ತದೆ.**

ಬುದ್ಧಿವಂತರಂತೂ ಯಾವುದರಿಂದ ಜೀವದ ಕರ್ಮಬಂಧದ ವಿಧ್ವಂಸವಾಗಿ ಹೋಗುವುದು ಅಂಥ ಧ್ಯಾನ ಮಾಡಬೇಕು, ಅಂಥ ಚಿಂತನೆ ಮಾಡಬೇಕು, ಮತ್ತು ಅಂಥ ಆಚರಣೆಯನ್ನೇ ಮಾಡಬೇಕಾಗುವುದು. ಯಾರು ಶಾಂತ ಚಿತ್ತರಿದ್ದಾರೆ, ಮಂದಕಷಾಯಿಯಿದ್ದಾರೆ, ನಿರ್ವಾಂಛಕರಿದ್ದಾರೆ, ಸಂತೋಷಿಯಿದ್ದಾರೆ, ಮೋಕ್ಷ ಮಾರ್ಗಾವಲಂಬಿಗಳಿದ್ದಾರೆ ಅವರಿಗೆ ವಿದ್ಯೆಯ ಸಾಧನೆ ಮತ್ತು ದೇವರ ಆರಾಧನೆಯಿಲ್ಲದೆಯೇ ತಾವಾಗಿಯೇ ಅನೇಕ ಸಿದ್ಧಿಗಳು, ಅನೇಕ ಋದ್ಧಿಗಳು ಪ್ರಾಪ್ತವಾಗಿ ಹೋಗುತ್ತವೆ. ಯಾರು ನೀಚ ಇಚ್ಛೆಯ ಧಾರಕರಿದ್ದಾರೆ, ಹೀನ ಪುಣ್ಯದ ಧಾರಕರಿದ್ದಾರೆ ಅವರಿಗೆ ಇಚ್ಛೆಯ ಅನುಸಾರ ಯಾವುದೂ ಆಗುವುದಿಲ್ಲ, ಆದರೆ ಅನೇಕ ಮಂತ್ರಾದಿಗಳ ಸಾಧನೆ ಮಾಡುತ್ತಿದ್ದರೂ ಅನೇಕ ವಿಪತ್ತಿಗಳೇ ಪ್ರಾಪ್ತವಾಗುತ್ತವೆ. **ಆದುದರಿಂದ ವೀತರಾಗ ಧರ್ಮದ ಶ್ರದ್ಧೆಯುಳ್ಳವರು ಸ್ವಪ್ನದಲ್ಲಿ ಕೂಡ ನೀಚ ಧ್ಯಾನ, ಮಂತ್ರ ಮೊದಲಾದವುಗಳ ಪ್ರಶಂಸೆಯನ್ನು ಮಾಡಬಾರದು.**

**ರೂಪಾತೀತ ಧರ್ಮಧ್ಯಾನ :** ಶರೀರ ಮೊದಲಾದ ನೋಕರ್ಮ ಮತ್ತು ಜ್ಞಾನಾವರಣ ಮೊದಲಾದ ದ್ರವ್ಯಕರ್ಮ ರಹಿತ, ಚೈತನ್ಯಸ್ವರೂಪ ನಿಜಾನಂದಮಯ, ಶುದ್ಧ, ಅಮೂರ್ತ, ಅವಿನಾಶೀ, ಅಜನ್ಮ, ಸ್ಪರ್ಶ-ರಸ-ಗಂಧ-ವರ್ಣ ಮೊದಲಾದ ಪುದ್ಗಲ ವಿಕಾರರಹಿತ, ಅನಂತಜ್ಞಾನ, ಅನಂತದರ್ಶನ, ಅನಂತಶಕ್ತಿ, ಅನಂತಸುಖ ಸ್ವಭಾವೀ, ಸ್ವಾಧೀನ, ನಿರಾಕುಲ, ಅತೀಂದ್ರಿಯ, ಸಿದ್ಧ, ಕೃತಕೃತ್ಯನಾದಂಥ ಶುದ್ಧ ಆತ್ಮನ ಸ್ವಭಾವದ ಚಿಂತನ ಮಾಡುವುದು ಅದು ರೂಪಾತೀತ ಧ್ಯಾನವಿದೆ. ಚಿತ್ತದ ಏಕಾಗ್ರತೆಯು ಧ್ಯಾನವಿದ್ದರೂ ಸಿದ್ಧ ಪರಮೇಷ್ಠಿಗಳ ಗುಣ ಸಮೂಹ ಮತ್ತು ಧ್ಯಾನದಲ್ಲಿ ಅವರ ಸ್ವರೂಪದ ಅವಲೋಕನೆ ಮಾಡಿ ಉಳಿದೆಲ್ಲವುಗಳ ಆಶ್ರಯ ಬಿಟ್ಟುಕೊಟ್ಟು **ನಿಜಸ್ವರೂಪದಲ್ಲಿ ಲೀನವಾಗಿ ಹೋಗುವುದು ಅದುವೇ ಧರ್ಮದ್ಯಾನವಿದೆ.**

**ಸಿದ್ಧ ಪರಮೇಷ್ಠಿಗಳ ಗುಣಸಮೂಹದ ಸ್ವಭಾವರೂಪವಾಗಿ ತಮ್ಮ ಸ್ವರೂಪದ ಅನುಭವ ಮಾಡುವುದೆಂದರೇನೇ ಪರಮಾತ್ಮನಲ್ಲಿಯುಕ್ತವಾಗುವುದಿದೆ.** ಪರಮಾತ್ಮನಲ್ಲಿ ಮತ್ತು ನಮ್ಮಲ್ಲಿ ಗುಣಗಳ ಅಪೇಕ್ಷೆಯಿಂದಂತೂ ಸಮಾನತೆಯಿದೆ; ಆದರೆ ನಮ್ಮ ಗುಣಗಳು ಕರ್ಮಗಳಿಂದ ಆಚ್ಛಾದಿತವಿವೆ, ಸಿದ್ಧ ಪರಮೇಷ್ಠಿಗಳ ಸಮಸ್ತ ಗುಣಗಳು ಕರ್ಮಗಳ ಅಭಾವವಾಗಿ ಹೋಗಿರುವುದರಿಂದ ಪ್ರಕಟವಾಗಿ ಹೋಗಿವೆ. ನಿರಂತರ ಈ ಪ್ರಕಾರ ಅಭ್ಯಾಸ ಮಾಡುವುದರಿಂದ ಆತ್ಮನಿಗೆ ಎಂಥ ದೃಢ ಶ್ರದ್ಧೆಯಾಗುತ್ತದೆಯೆಂದರೆ ಸ್ವಪ್ನದಲ್ಲಿ ಕೂಡ ಸಿದ್ಧರ ಸ್ವಭಾವವು ಪ್ರತ್ಯಕ್ಷ ಕಂಡು

ಬರುತ್ತದೆ ಅವನಿಗೆ ರೂಪಾತೀತ ಧ್ಯಾನವಾಗುತ್ತದೆ. ಈ ಪ್ರಕಾರ ರೂಪಾತೀತ ಧ್ಯಾನದ ವರ್ಣನೆ ಮಾಡಿ ಧರ್ಮಧ್ಯಾನದ ವರ್ಣನೆ ಸಮಾಪ್ತ ಮಾಡಲಾಗಿದೆ.

**ಶುಕ್ಲಧ್ಯಾನ :** ಈಗ ಶುಕ್ಲಧ್ಯಾನದ ವರ್ಣನೆ ಮಾಡುವ ಅವಸರವು ಪ್ರಾಪ್ತವಾಗಿದೆ. ಶುಕ್ಲಧ್ಯಾನದ ಪರಿಣಾಮವು ಏಕದೇಶ ಮಾತ್ರ ಕೂಡ ನನ್ನ ಸಲುವಾಗಿ ಪ್ರತ್ಯಕ್ಷ ಪ್ರಾಪ್ತವಾಗಲಿಲ್ಲ; ಆದರೂ ಕೂಡ ಆಗಮದ ಆಜ್ಞೆಗೆ ಅನುಸರಿಸಿ ಇಲ್ಲಿ ಸ್ವಲ್ಪ ಮಾತ್ರ ಬರೆಯುತ್ತೇವೆ.

ಶುಕ್ಲಧ್ಯಾನದಲ್ಲಿ ಪ್ರಥಕ್ತ್ವ ವೀತರ್ಕವೀಚಾರ, ಏಕತ್ವ ವಿತರ್ಕ ಅವೀಚಾರ, ಸೂಕ್ಷ್ಮ ಕ್ರಿಯಾ ಪ್ರತಿಪಾತಿ ಮತ್ತು ವ್ಯುಪರತ ಕ್ರಿಯಾನಿವರ್ತಿಯೆಂದು ನಾಲ್ಕು ಭೇದಗಳಿವೆ. ಇವುಗಳಲ್ಲಿ ಮೊದಲಿನ ಎರಡು ಶುಕ್ಲಧ್ಯಾನಗಳಂತೂ ಪೂರ್ವಗಳ ಜ್ಞಾತಾ ದ್ವಾದಶಾಂಗದ ಧಾರಕರಾದ ಮುನಿಗಳಿಗೆ ಆಗುತ್ತದೆ, ಮತ್ತು ಉಳಿದ ಎರಡು ಶುಕ್ಲಧ್ಯಾನಗಳು ಕೇವಲೀ ಭಗವಂತರಿಗೆ ಆಗುತ್ತವೆ. ಇವುಗಳಲ್ಲಿ ಪ್ರಥಮ ಶುಕ್ಲ ಧ್ಯಾನವಂತೂ ಮನ-ವಚನ-ಕಾಯದ ಮೂರು ಯೋಗಗಳಲ್ಲಿ ಆಗುತ್ತದೆ. ಎರಡನೆಯ ಶುಕ್ಲ ಧ್ಯಾನವು ಯಾವುದಾದರೊಂದು ಯೋಗದಲ್ಲಿಯೇ ಆಗುತ್ತದೆ. ಮೂರನೇ ಶುಕ್ಲ ಧ್ಯಾನವು ಕೇವಲ ಒಂದು ಕಾಯಯೋಗದಲ್ಲಿಯೇ ಆಗುತ್ತದೆ. ನಾಲ್ಕನೇ ಶುಕ್ಲ ಧ್ಯಾನವು ಅಯೋಗಿಗೇನೇ ಆಗುತ್ತದೆ.

**ಪ್ರಥಕ್ತ್ವ ವಿತರ್ಕವೀಚಾರ ಶುಕ್ಲಧ್ಯಾನ :** ಮೊದಲನೇ ಶುಕ್ಲಧ್ಯಾನವಂತೂ ಸವಿತರ್ಕ, ಸವೀಚಾರವಿರುತ್ತದೆ. ಸವಿತರ್ಕ ಶಬ್ದದ ಅರ್ಥವು ಶ್ರುತಜ್ಞಾನದ ಮತ್ತು ಅರ್ಥದ ಅವಲಂಬನ ಸಹಿತವಿರುವುದಿದೆ. ಸವೀಚಾರ ಶಬ್ದದ ಅರ್ಥವು ಬದಲಾಗುವುದಿದೆ. ಅರ್ಥದ ಬದಲಾವಣೆ, ಶಬ್ದದ ಬದಲಾವಣೆ, ಯೋಗದ ಬದಲಾವಣೆ ಸಹಿತ ಯಾವ ಧ್ಯಾನವಿದೆ ಅದು ಪೃಥಕ್ತ್ವ ವಿತರ್ಕ ವೀಚಾರಧ್ಯಾನವಿದೆ. ಅನೇಕ ಶಬ್ದ, ಪದಾರ್ಥ ಮತ್ತು ಯೋಗಗಳ ಬದಲಾಗುವಿಕೆಯು ಈ ಧ್ಯಾನದಲ್ಲಿ ಆಗುತ್ತದೆ. (ಆದರೆ ಈ ಧ್ಯಾನವು ನಿರ್ವಿಕಲ್ಪ ದಶೆಯಲ್ಲಿ ಆಗುವುದರಿಂದ ಆ ಧ್ಯಾನ ಕರ್ತೃಗಳಿಗೆ ತನ್ನ ಅರ್ಥ, ಶಬ್ದ, ಯೋಗಗಳು ಬದಲಾಗುತ್ತಿವೆಯೆಂಬುದರ ಪ್ರಜ್ಞೆಯಿರುವುದಿಲ್ಲ, ಇದರ ಜ್ಞಾನವಂತೂ ಕೇವಲಜ್ಞಾನಿಗಳಿಗೇ ಇರುತ್ತದೆ.)

ಎರಡನೇ ಶುಕ್ಲಧ್ಯಾನವು ಶ್ರುತದ ಒಂದು ಶಬ್ದ, ಒಂದು ಅರ್ಥ (ಪದಾರ್ಥ) ಒಂದು ಯೋಗದ ಅವಲಂಬನದಿಂದ ಆಗುತ್ತದೆ. ಯಾವುದರ ಅವಲಂಬನೆ ಮಾಡಿದೆ ಅದರಿಂದ ಪರಿಣಾಮಗಳು ಬದಲಾಗದಿರುವುದರಿಂದ ಇದು ಏಕತ್ವ ವಿತರ್ಕ ಅವೀಚಾರ ನಾಮದ ಎರಡನೆಯ ಶುಕ್ಲಧ್ಯಾನವಿದೆ.

ಇಲ್ಲಿ ಶ್ರುತ ಜ್ಞಾನದ ಹೆಸರು **ವಿತರ್ಕ**ವಿದೆ, ಮತ್ತು ಅರ್ಥ (ಪದಾರ್ಥ) ವ್ಯಂಜನ ಹಾಗೂ ಯೋಗದ ಸಂಕ್ರಾಂತಿ ಎಂದರೆ ಬದಲಾಗಿ ಹೋಗುವುದರ ಹೆಸರು **ವೀಚಾರ**ವಿದೆ. 'ಅರ್ಥ'ವೆಂಬ ಹೆಸರಂತೂ ಧ್ಯಾನ ಮಾಡಲು ಯೋಗ್ಯ ಧ್ಯೇಯದ್ದಿದೆ; ಆ ಧ್ಯೇಯವು ದ್ರವ್ಯ ಮತ್ತು ಪರ್ಯಾಯವಿರುತ್ತದೆ. **ವ್ಯಂಜನ** ನಾಮವು ವಚನದ್ದಿದೆ. **ಯೋಗ** ನಾಮವು ಮನ-ವಚನ-ಕಾಯದ ಚಲನವಲನರೂಪ ಕ್ರಿಯೆಯದ್ದಿದೆ. **ಸಂಕ್ರಾತಿ** ನಾಮವು ಪರಿವರ್ತನದ್ದಿದೆ. ದ್ರವ್ಯವನ್ನು ಬಿಟ್ಟು ಕೊಟ್ಟು ಪರ್ಯಾಯಕ್ಕೆ ಪ್ರಾಪ್ತವಾಗಿ ಹೋಗುವುದು, ಪರ್ಯಾಯವನ್ನು ಬಿಟ್ಟುಕೊಟ್ಟು ದ್ರವ್ಯಕ್ಕೆ ಪ್ರಾಪ್ತವಾಗಿ ಹೋಗುವುದು ಅದು ಸಂಕ್ರಾತಿಯ ಅರ್ಥವಿದೆ.

ಒಂದು ಶ್ರುತದ ಶಬ್ದವನ್ನು ಗ್ರಹಣ ಮಾಡಿ ಅನ್ಯ ಶ್ರುತದ ವಚನವನ್ನು ಗ್ರಹಣ ಮಾಡುವುದು, ಅದರ ವಚನವನ್ನು ಬಿಟ್ಟುಕೊಟ್ಟು ಅನ್ಯಶ್ರುತದ ವಚನಗಳ ಅವಲಂಬನೆ ಮಾಡುವುದು ಅದು ವ್ಯಂಜನ ಸಂಕ್ರಾಂತಿಯಿದೆ. ಕಾಯಯೋಗವನ್ನು ಬಿಟ್ಟುಕೊಟ್ಟು ಅನ್ಯ ಯೋಗವನ್ನು ಗ್ರಹಣ ಮಾಡುವುದು ಅದು ಯೋಗ ಸಂಕ್ರಾಂತಿಯಿದೆ. ಇಂಥ ಪರಿವರ್ತನವನ್ನು ವೀಚಾರವೆಂದು ಹೇಳುತ್ತಾರೆ.

ಈ ಪ್ರಕಾರ ಸಾಮಾನ್ಯ ಮತ್ತು ವಿಶೇಷದಿಂದ ಯಾವ ನಾಲ್ಕು ಧರ್ಮಧ್ಯಾನ ಮತ್ತು ನಾಲ್ಕು ಶುಕ್ಲಧ್ಯಾನಗಳನ್ನು ಹೇಳಿದೆ ಅದರಂತೆ ಮೊದಲು ಅನೇಕ ಪ್ರಕಾರದಿಂದ ಗುಪ್ತಿ ಮೊದಲಾದ ಸಂಸಾರ ಅಭಾವ ಮಾಡುವುದರ ಉಪಾಯಗಳನ್ನು ಹೇಳಿವೆ ಅವೆಲ್ಲವು ಮಹಾಮುನಿಗಳು ಧಾರಣ ಮಾಡಲು ಯೋಗ್ಯವಾಗಿವೆ.

**ಧ್ಯಾನದ ಸಾಮಗ್ರಿ ಮತ್ತು ಧ್ಯಾನದ ವಿಧಿ :** ಇಲ್ಲಿ ಧ್ಯಾನದ ಆರಂಭ ಮಾಡುವ ಸಮಯದಲ್ಲಿ ಇಷ್ಟು ಪರಿಕರಗಳು (ಸಾಮಗ್ರಿಗಳು) ಅವಶ್ಯವಾಗಿರುತ್ತವೆ.

**ಯಾವ ಕಾಲದಲ್ಲಿ ಶರೀರದೊಳಗೆ ಮೂರು ಉತ್ತಮ ಸಂಹನನ ಸಹಿತ ಪರೀಷಹಗಳ ಬಾಧೆಯನ್ನು ಸಹನೆ ಮಾಡುವುದರ ಶಕ್ತಿಯು ಆತ್ಮನಿಗೆ ಪ್ರಾಪ್ತವಾಗುತ್ತದೆ. ಆ ಕಾಲದಲ್ಲಿ ಧ್ಯಾನದ ಸಂಯೋಗದ ಪರಿಚಯ ಮಾಡಿ ಕೊಳ್ಳುವುದರ ಸಲುವಾಗಿ ಪ್ರಾರಂಭ ಮಾಡಬೇಕು.** ಹೇಗೆ ಮಾಡಬೇಕೆಂಬುದನ್ನು ಹೇಳುತ್ತಾರೆ. ಪರ್ವತ, ಗುಹೆ, ಕಂದರ, ನದಿಯದಡ, ಕೊಳ್ಳ, ವೃಕ್ಷಗಳ ಪೊಟರೆ, ಸ್ಮಶಾನ, ಜೀರ್ಣ ಉದ್ಯಾನ, ಶೂನ್ಯಗೃಹ ಮೊದಲಾದವುಗಳಲ್ಲಿ ಯಾವುದಾದರೊಂದಲ್ಲಿ ಬರಿದಾದ ಸ್ಥಾನವಿರಬೇಕು. ಆ ಸ್ಥಾನವು ಕೂಡ ಸರ್ಪ, ಮೃಗ, ಪಶು, ಪಕ್ಷೀ, ಮನುಷ್ಯರುಗಳ ಬರ-ಹೋಗುವಿಕೆಯಿಂದ ರಹಿತವಾಗಿರಬೇಕು; ಆಕಸ್ಮಿಕ ಕ್ರಿಮಿ, ಕೀಟಕ, ಚೇಳು, ಸೊಳ್ಳೆ, ನೊಣ, ಜೇನುನೊಣ, ಚಿಕ್ಕಾಡು ಮೊದಲಾದ ಜೀವಗಳಿಂದ ರಹಿತವಾಗಿರಬೇಕು. ಅಲ್ಲಿ ಅತಿಶಯ ಶೀತ, ಉಷ್ಣ, ಗಾಳಿ, ಬಿಸಿಲು, ಮಳೆ, ಮೈಕೊರೆಯುವ ಚಳಿಗಳ ಬಾಧೆಯಿರಬಾರದು; ಒಳಗೆ ಎಲ್ಲ ಪ್ರಕಾರದಿಂದ ಮನಸ್ಸಿಗೆ ಮತ್ತು ಬಾಹ್ಯದಲ್ಲಿ ಶರೀರಕ್ಕೆ ಬಾಧೆಯನ್ನುಂಟು ಮಾಡುವಂಥ ಕಾರಣಗಳ ಅಭಾವವಿರಬೇಕು.

ಇಂಥ ಪವಿತ್ರ, ಅನುಕೂಲ, ಸ್ಪರ್ಶ ಯೋಗ್ಯವಾದ ನೆಲದ ಮೇಲೆ ಸುಖದಿಂದ ಕುಳಿತುಕೊಂಡು ಪದ್ಮಾಸನ ಹಾಕಿ ಸಮ, ಸರಳ, ಕಠೋರತೆಯಿಲ್ಲದೆ, ಶರೀರವನ್ನು ನಿಶ್ಚಲ ಮಾಡಿ, ತಮ್ಮ ತೊಡೆಯ ಮೇಲೆ ಎಡಗೈಯ ಹಸ್ತವನ್ನಿಟ್ಟು ಅದರ ಮೇಲೆ ಬಲಗೈಯ ಹಸ್ತವನ್ನು ಸರಿಯಾಗಿ ಇಟ್ಟುಕೊಂಡು, ಕಣ್ಣುಗಳನ್ನು ಮುಚ್ಚಿಕೊಳ್ಳದೆ ಮತ್ತು ಹೆಚ್ಚಾಗಿ ತೆರೆಯದೆ ಅರ್ಧೋನ್ಮೀಲಿತ ನೇತ್ರರಾಗಿ, ಹಲ್ಲುಗಳನ್ನು ಸ್ಪರ್ಶ ಮಾಡಿಸದೇ ಸ್ವಲ್ಪವಾಗಿ ಮುಖವನ್ನು ಮೇಲಕ್ಕಿಡಬೇಕು. ಮಧ್ಯ ಹೃದಯ, ಉದರ ಮೊದಲಾದುವನ್ನು ನೇರವಾಗಿಡಬೇಕು. ಶರೀರದ ಜಂಭವನ್ನು ಬಿಟ್ಟುಕೊಟ್ಟು ಪರಿಣಾಮಗಳಲ್ಲಿ, ಮಸ್ತಕ, ಅಧರಗಳ ಗಂಭೀರತೆ ಸರಳತೆಗಳ ಧಾರಣ ಮಾಡಿ ಪ್ರಸನ್ನವದನವಿರಬೇಕು.

ನಿಮೇಷರಹಿತ ಸ್ಥಿರ ಸೌಮ್ಯ ದೃಷ್ಟಿ ಸಹಿತರಾಗಿ, ನಿದ್ರೆ, ಆಲಸ್ಯ, ಕಾಮ,ರಾಗ, ರತಿ, ಅರತಿ, ಶೋಕ, ಹಾಸ್ಯ, ಭಯ, ದ್ವೇಷ, ಗ್ಲಾನಿಗಳನ್ನು ನಷ್ಟಮಾಡಿ, ಶ್ವಾಸೋಚ್ಛ್ವಾಸವು ಮಂದ-ಮಂದವಾಗಿರಬೇಕು. ಇಷ್ಟು ಸಾಮಗ್ರಿಗಳೊಡನೆ ಸಾಧುಗಳು ನಾಭಿಯ ಮೇಲೆ ಅಥವಾ ಹೃದಯದಲ್ಲಿ ಅಥವಾ ಮಸ್ತಕದಲ್ಲಿ ಅಥವಾ ಅವುಗಳ ಮಧ್ಯ ಬೇರೆ ಯಾವುದೇ ಸ್ಥಾನದಲ್ಲಿ ಮನಸ್ಸಿನ ಪ್ರವೃತ್ತಿಯನ್ನು (ನಿರೋಧಿಸಿ) ಹೇಗೆ ಆಗುವುದು ಹಾಗೆ ನಿಶ್ಚಲ ಮಾಡಿ ಮೋಕ್ಷ ಎಂದರೆ ಕರ್ಮಬಂಧನದಿಂದ ಬಿಡುಗಡೆಯಾಗುವ ಅಭಿಲಾಷೆಯುಳ್ಳವರಾಗಿ ಪ್ರಶಸ್ತ ಧ್ಯಾನ ಮಾಡಬೇಕು.

ಆ ಧ್ಯಾನದಲ್ಲಿ ಏಕಾಗ್ರ ಮನಸ್ಸಾಗಿ, ರಾಗ-ದ್ವೇಷ-ಮೋಹದ ಉಪಶಮತೆಗೆ ಪ್ರಾಪ್ತರಾಗಿ, ಸಾವಧಾನಪೂರ್ವಕ ಶರೀರದ ಚಲನ-ವಲನ ಕ್ರಿಯೆಯನ್ನು ತಡೆಯುತ್ತ, ಮಂದ-ಮಂದ ಉಶ್ವಾಸ-ನಿಶ್ವಾಸರೂಪದ ಸಮ್ಯಕ್ ನಿಶ್ಚಲ ಅಭಿಪ್ರಾಯ ಮಾಡಿ, ಕ್ಷಮಾಶೀಲರಾಗಿ; ಬಾಹ್ಯ-ಅಭ್ಯಂತರ ದ್ರವ್ಯ-ಪರ್ಯಾಯಗಳಲ್ಲಿ ವ್ಯಾಪಿಸುತ್ತ; ಶ್ರುತದ ಸಾಮರ್ಥ್ಯವನ್ನು ಅಂಗೀಕಾರ ಮಾಡುವಂಥ ಸಾಧುಗಳು ಅರ್ಥ, ವ್ಯಂಜನ, ಕಾಯ, ವಚನಗಳಿಂದ ಭಿನ್ನತೆ ಸಾಧಿಸುತ್ತ ಉಪಯೋಗವನ್ನು ಪರಿವರ್ತಿತ ಮಾಡುತ್ತ ಮನಸ್ಸಿನಿಂದ ಯಾವ ಪ್ರಕಾರ ಓರ್ವ ಪುರುಷನು ಪರಿಪೂರ್ಣ ಬಲದ ಉತ್ಸಾಹದಿಂದ ರಹಿತ, ನಿಶ್ಚಲತೆಯಿಂದ ರಹಿತನಾಗಿ, ಹರಿತತನವಿಲ್ಲದ ಮೊಂಡ ಶಸ್ತ್ರದಿಂದ ಬಹಳಷ್ಟು ಸಮಯದಲ್ಲಿ ಗಟ್ಟಿ ಮುಟ್ಟಾದ ನುಣುಪಾದ ಕಟ್ಟಿಗೆಯನ್ನು ಕತ್ತರಿಸುತ್ತಾನೆ; ಅದೇ ಪ್ರಕಾರ, ಎಂಟನೇ, ಒಂಭತ್ತನೇ, ಹತ್ತನೆಯ ಗುಣಸ್ಥಾನಗಳ ಭಾವವುಳ್ಳ ಸಾಧುಗಳು ಕೂಡ ಸಂಜ್ವಲನ ಕಷಾಯದ ಉದಯದಿಂದ ಪರಿಪೂರ್ಣ, ಪರಿಣಾಮಗಳ ಬಲದ ಉತ್ಸಾಹಕ್ಕೆ ಪ್ರಾಪ್ತವಾಗದೆ, ಭಾವಗಳಲ್ಲಿ ಕಷಾಯದ ಉದಯದ ಆಘಾತದಿಂದ ದೃಢ ನಿಶ್ಚಲತೆಗೆ ಪ್ರಾಪ್ತವಾಗದಿರುವುದರಿಂದ, ಮೋಹನೀಯ ಕರ್ಮದ ಸಮಸ್ತ ಉದಯದ ನಾಶವಾಗದಿರುವುದರಿಂದ, ನಿದಾನವಾಗಿ ಕರುಣಾರೂಪ ಪರಿಣಾಮಗಳ ಸಾಮರ್ಥ್ಯದಿಂದ ಮೋಹನೀಯ ಕರ್ಮದ ಪ್ರಕೃತಿಗಳ ಉಪಶಮ ಮತ್ತು ಕ್ಷಯ ಮಾಡುತ್ತ ಪೃಥಕ್ತ್ವ ವಿತರ್ಕ ವೀಚಾರ ಧ್ಯಾನದ ಧಾರಕನಾಗುತ್ತಾನೆ.

**ಏಕತ್ವವೀತರ್ಕ ಅವೀಚಾರ ಶುಕ್ಲಧ್ಯಾನ :** ಉಪರೋಕ್ತ ವಿಧಿಯ ಅನುಸಾರವಾಗಿಯೇ ಸಮಸ್ತ ಮೋಹನೀಯ ಕರ್ಮವನ್ನು ಉರಿಸಿ ನಾಶ ಮಾಡುವ ಇಚ್ಛೆಯುಳ್ಳವನು ಅನಂತ ಗುಣಿತ ವಿಶುದ್ಧತೆಯೊಡನೆ ಯೋಗ ವಿಶೇಷದ ಆಶ್ರಯ ಮಾಡಿ, ಮತ್ತು ಜ್ಞಾನಾವರಣದ ಸಹಾಯಕವಾದ ಪ್ರಕೃತಿಗಳ ಬಂಧವನ್ನು ತಡೆಯುತ್ತ ಹಾಗೂ ಅವುಗಳ ಸ್ಥಿತಿಯನ್ನೇ ಕುಗ್ಗಿಸುತ್ತ-ಕುಗ್ಗಿಸುತ್ತ ಜತೆಗೆ ಕ್ಷಯಮಾಡುತ್ತ, ಶ್ರುತಜ್ಞಾನದ ಉಪಯೋಗ ಮಾಡುತ್ತ, ಅರ್ಥ ವ್ಯಂಜನ ಯೋಗದ ಬದಲಾಗುವಿಕೆಯು ದೂರವಾಗಿ, ಮನಸ್ಸನ್ನು ಅವಿಚಲಿತ ಮಾಡಿ, ಕಷಾಯಗಳನ್ನು ಕ್ಷೀಣ ಮಾಡಿ, ವೈಢೂರ್ಯ ಮಣಿಯ ಸಮಾನ ನಿರ್ಲೇಪವಾಗಿ ಧ್ಯಾನದಿಂದ ಪುನಃ ಹೊರಗೆ ಬರುವುದಿಲ್ಲ. ಈ ಪ್ರಕಾರ ಏಕತ್ವ ವಿತರ್ಕಧ್ಯಾನದ ಸ್ವರೂಪ ಹೇಳಲಾಯಿತು.

**ಸೂಕ್ಷ್ಮಕ್ರಿಯಾ ಪ್ರತಿಪಾತಿ ಶುಕ್ಲಧ್ಯಾನ :** ಈ ಪ್ರಕಾರ ಏಕತ್ವ ವಿತರ್ಕ ಧ್ಯಾನರೂಪ ಅಗ್ನಿಯ ಮೂಲಕ ಯಾರು ಘಾತಿಕರ್ಮಗಳ ರೂಪದ ಸೌದೆಯನ್ನು ಸುಟ್ಟು ಹಾಕಿದ್ದಾರೆ, ಮತ್ತು ಕೇವಲಜ್ಞಾನರೂಪದ ಸೂರ್ಯ-ಚಂದ್ರ ಮಂಡಲಗಳು ಪೂರ್ಣ ಪ್ರಕಾಶಿತವಾಗಿ ಹೋಗಿವೆ, ಮೇಘ ಸಮೂಹವು ದೂರವಾದ ಮೇಲೆ ಹೊರಟ ಸೂರ್ಯನ ಸಮಾನ ಕಾಂತಿಯಿಂದ ದೈದೀಪ್ಯಮಾನ ಭಗವಾನ ತೀರ್ಥಂಕರ ಹಾಗೂ ಅನ್ಯ ಕೇವಲೀ ಮೂರು ಲೋಕದ ಈಶ್ವರ, ಇಂದ್ರ-ಧರಣೇಂದ್ರರುಗಳಿಂದ ವಂದನೀಯ ಪೂಜನೀಯರಾಗಿ ಉತ್ಕೃಷ್ಟತೆಯಿಂದ ದೇಶೋನಕೋಟಿ ಪೂರ್ವ ವರ್ಷಗಳವರೆಗೆ ವಿಹಾರ ಮಾಡುತ್ತಾರೆ.

ಯಾವಾಗ ಆಯುವು ಅಂತರ್ಮುಹೂರ್ತ ಬಾಕಿ ಉಳಿಯುತ್ತದೆ ಆಗ ಕೇವಲೀ ಭಗವಂತರು ವೇದನೀಯ, ನಾಮ, ಗೋತ್ರ ಕರ್ಮದ ಸ್ಥಿತಿಯು ಕೂಡ ಆಯುಕರ್ಮದ ಸ್ಥಿತಿಯ ಬರಾಬರಿಯಾಗಿಯೇ ಇದ್ದಾಗಲಂತೂ ಸಮಸ್ತ ಮನೋಯೋಗ ವಚನಯೋಗವನ್ನು ಬಿಟ್ಟುಕೊಟ್ಟು **ಬಾದರ ಕಾಯಯೋಗವನ್ನು ಕೂಡ ಬಿಟ್ಟುಕೊಟ್ಟು, ಸೂಕ್ಷ್ಮ ಕಾಯಯೋಗದ ಅವಲಂಬನೆ ಪಡೆದು ಸೂಕ್ಷ್ಮ ಕ್ರಿಯಾ ಪ್ರತಿಪಾತಿ ಧ್ಯಾನವನ್ನು ಪ್ರಾಪ್ತಮಾಡಿಕೊಳ್ಳಲು ಯೋಗ್ಯರಾಗಿ ಹೋಗುತ್ತಾರೆ.** ಆದರೆ ಆಯುವು ಅಂತರ್ಮುಹೂರ್ತ ಮಾತ್ರ ಶೇಷ ಉಳಿದುಕೊಂಡಿದ್ದರೆ ಮತ್ತು ವೇದನೀಯ, ನಾಮ, ಗೋತ್ರ ಕರ್ಮಗಳ ಸ್ಥಿತಿಯು ಅಧಿಕವಾಗಿದ್ದರೆ ಸಯೋಗ ಕೇವಲಿಗಳು ಸಮಸ್ತ ಕರ್ಮಗಳ ರಜವನ್ನು ನಾಶಮಾಡುವ ಶಕ್ತಿಯುಳ್ಳ ಸ್ವಭಾವದವರಿರುವುದರಿಂದ **ದಂಡ,ಕಪಾಟ, ಪ್ರತರ, ಲೋಕಪೂರಣ ಸಮುದ್ಘಾತದ ಮೂಲಕ** ತಮ್ಮ ಆತ್ಮ ಪ್ರದೇಶಗಳನ್ನು ನಾಲ್ಕು ಸಮಯದಲ್ಲಿ ಪ್ರಸಾರ ಮಾಡಿ, ಮತ್ತು ನಾಲ್ಕು ಸಮಯಗಳಲ್ಲಿಆತ್ಮ ಪ್ರದೇಶಗಳನ್ನು ಪ್ರಸಾರದಿಂದ ಸಂಕೋಚ ಮಾಡಿ ಸಮಸ್ತ ಕರ್ಮಗಳ ಸ್ಥಿತಿಯನ್ನು ಸಮಾನ ಮಾಡಿ ಪೂರ್ವಶರೀರ ಪ್ರಮಾಣರಾಗಿ ಸೂಕ್ಷ್ಮ ಕಾಯಯೋಗ ಮಾಡಿ ಸೂಕ್ಷ್ಮಕ್ರಿಯಾ ಪ್ರತಿಪಾತಿ ಧ್ಯಾನಕ್ಕೆ ಪ್ರಾಪ್ತರಾಗಿ ಹೋಗುತ್ತಾರೆ.

**ಸಮುಚ್ಛಿನ್ನ (ವ್ಯುಪರತ) ಕ್ರಿಯಾ ನಿವೃತ್ತಿ ಶುಕ್ಲಧ್ಯಾನ :** ಅದರ ನಂತರ ಸಮುಚ್ಛಿನ್ನ ಕ್ರಿಯಾ ನಿವೃತ್ತಿಧ್ಯಾನ ಪ್ರಾರಂಭ ಮಾಡುತ್ತಾರೆ. ಸಮುಚ್ಛಿನ್ನ ಎಂದರೆ ನಷ್ಟವಾಗಿ ಹೋದುದು, ಅದರಲ್ಲಿ ಶಾಸೋಚ್ಛ್ವಾಸದ ಬರ-ಹೋಗುವಿಕೆ ಮತ್ತು ಸಮಸ್ತ ಕಾಯ-ವಚನ-ಮನದ ಯೋಗರೂಪ ಸಮಸ್ತ ಪ್ರದೇಶಗಳ ಚಲನ-ವಲನರೂಪ ಕ್ರಿಯೆಯ ವ್ಯಾಪಾರವು ನಷ್ಟವಾಗಿ ಹೋಗಿರುವದರಿಂದ ಅದನ್ನು ಸಮುಚ್ಛಿನ್ನ ಕ್ರಿಯಾ ನಿವೃತ್ತಿ ಧ್ಯಾನವೆಂದು ಹೇಳುತ್ತಾರೆ. ಆ ಸಮುಚ್ಛಿನ್ನ ಕ್ರಿಯಾ ನಿವೃತ್ತಿ ಧ್ಯಾನವಾದ ಮೇಲೆ ಸಮಸ್ತ ಬಂಧದ ಕಾರಣವಾದ ಸಮಸ್ತ ಆಸ್ರವದ ನಿರೋಧವಾಗಿ ಹೋಗುತ್ತದೆ ; ಮತ್ತು ಸಮಸ್ತ ಕರ್ಮಗಳನ್ನು ನಾಶ ಮಾಡುವ ಸಾಮರ್ಥ್ಯವು ಉತ್ಪನ್ನವಾಗಿ ಹೋಗುವುದರಿಂದ ಅಯೋಗ ಕೇವಲೀ ಭಗವಂತರಿಗೆ ಸಂಪೂರ್ಣ ಸಂಸಾರದ ದುಃಖಗಳ ಸಂಯೋಗವನ್ನು ನಷ್ಟ ಮಾಡುವ ಪ್ರತ್ಯಕ್ಷ ಮೋಕ್ಷದ ಸಾಧನವಾದ ಸಂಪೂರ್ಣ ಯಥಾಖ್ಯಾತ ಚಾರಿತ್ರ, ಜ್ಞಾನ, ದರ್ಶನಗಳು ಉತ್ಪನ್ನವಾಗಿ ಹೋಗುತ್ತವೆ. ಯಾರು ಧ್ಯಾನ ರೂಪದ ಅಗ್ನಿಯಿಂದ ಕರ್ಮಮಲಕಲಂಕ ಬಂಧವನ್ನು ಸುಟ್ಟು ಹಾಕಿದ್ದಾರೆ, ಕಾಳಿಕೆಯನ್ನು ಕಳೆದುಕೊಂಡ ಸುವರ್ಣದ ಸಮಾನ ಆ ಅಯೋಗ ಕೇವಲೀ ಭಗವಂತರು ತಮ್ಮ ಆತ್ಮನ ಶುದ್ಧತೆಯನ್ನು ಪಡೆದುಕೊಂಡು ನಿರ್ವಾಣಕ್ಕೆ ಪ್ರಾಪ್ತರಾಗಿ ಹೋಗುತ್ತಾರೆ.

ಈ ಪ್ರಕಾರ ಸಂಕ್ಷೇಪದಲ್ಲಿ ಶುಕ್ಲಧ್ಯಾನದ ವರ್ಣನೆ ಮಾಡಿ, ಧ್ಯಾನವೆಂಬ ಹೆಸರಿನ ತಪದ ವರ್ಣನೆಯನ್ನು ಸಮಾಪ್ತ ಮಾಡಿದೆ. ಈ ಪ್ರಕಾರ ಇದು ತಪ ಭಾವನೆಯ ವರ್ಣನೆಯಾಯಿತು.

ಈಗ ಇಲ್ಲಿ ಅನೇಕಾಂತ ಭಾವನೆಯ ಹಾಗೂ ಸಮಯಸಾರ ಭಾವನೆಯ ವರ್ಣನೆ ಮಾಡಲು ಅಪೇಕ್ಷಿಸುತ್ತೇವೆ, ಆದರೆ ಈಗ ಆಯು-ಕಾಯದ ಶಿಥಿಲತೆಯಾಗಿರುವುದರಿಂದ ಯಾವ ಗೊತ್ತು ಗುರಿಯಿಲ್ಲ, ಆದುದರಿಂದ ಮೂಲ ಗ್ರಂಥ ಕರ್ತೃಗಳ ಕಥನವನ್ನು ಮುಗಿಸಿ ಬಿಡುವುದು ಉಚಿತವೆಂದು ಮೂಲ ಗ್ರಂಥದ ವ್ಯಾಖ್ಯಾನ ಮಾಡುತ್ತೇವೆ.

ಇಲ್ಲಿಯವರೆಗೆ ಶ್ರಾವಕರ ಹನ್ನೆರಡು ವ್ರತಗಳ ವರ್ಣನೆಯನ್ನಂತೂ ಮಾಡಿಯಾಯಿತು. ಅಂತಿಮ ಸಮಯದಲ್ಲಿ ಸಲ್ಲೇಖದ ಹೊರತಾಗಿ ವ್ರತಗಳು ಸಫಲವಾಗುವುದಿಲ್ಲ, ಹನ್ನೆರಡು ವ್ರತಗಳ ರೂಪದ ಸ್ವರ್ಣ ಮಂದಿರವನ್ನಂತೂ ನಿಲ್ಲಿಸಿಯಾಯಿತು, ಈಗ ಅದರ ಮೇಲೆ ಸಲ್ಲೇಖನ ರೂಪದ ರತ್ನಮಯವಾದ ಕಳಸವನ್ನು ಏರಿಸುವುದಿದೆ, ಆದುದರಿಂದ ಈಗ ಸಲ್ಲೇಖನದ ಸ್ವರೂಪವನ್ನು ಹೇಳಲಾಗುತ್ತದೆ.

ಈ ಪ್ರಕಾರ ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡ ಶ್ರಾವಕಾಚಾರದ
ಪಂ. ಸದಾಸುಖಜೀಯವರು ಬರೆದ ಭಾಷಾ ಟೀಕೆಯಲ್ಲಿ ಆರನೆಯ
ಭಾವನಾ ಅಧಿಕಾರವು ಸಮಾಪ್ತವಾಯಿತು.

೭

# ಸಲ್ಲೇಖನ ಅಧಿಕಾರ

ಮೊದಲು ಸಲ್ಲೇಖನದ ಸಮಯದ ವರ್ಣನೆ ಮಾಡುವಂಥ ಸೂತ್ರ ಹೇಳುತ್ತಾರೆ,-

**ಉಪಸರ್ಗೇ ದುರ್ಭಿಕ್ಷೇ ಜರಸಿ ರುಜಾಯಾಂ ಚ ನಿಃಪ್ರತೀಕಾರೇ ।**
**ಧರ್ಮಾಯ ತನುವಿಮೋಚನಮಾಹುಃ ಸಲ್ಲೇಖನಾಮಾರ್ಯಾಃ ॥೧೨೨॥**

**ಅರ್ಥ :** ಪರಿಹಾರವು ಕಂಡು ಬಾರದಂಥ ನಾಶದ ಉಪಾಯವು ಕಂಡು ಬಾರದಂಥ ಉಪಸರ್ಗವಾದ ಮೇಲೆ, ದುರ್ಭಿಕ್ಷವು ಬಂದ ಮೇಲೆ, ವೃದ್ಧಾವಸ್ಥೆಯು ಬಂದ ಮೇಲೆ, ರೋಗವಾಗಿ ಹೋದ ಮೇಲೆ, ಧರ್ಮದ ರಕ್ಷಣೆಯ ಸಲುವಾಗಿ ಯಾವ ಶರೀರದ ತ್ಯಾಗ ಮಾಡಲಾಗುತ್ತದೆ ಅದನ್ನು ಗಣಧರ ದೇವರು ಸಲ್ಲೇಖನವೆಂದು ಹೇಳುತ್ತಾರೆ.

**ಭಾವಾರ್ಥ :** ದೇಹದಲ್ಲಿರುವುದು, ಮತ್ತು ದೇಹದ ರಕ್ಷಣೆ ಮಾಡುವುದಂತೂ ಧರ್ಮವನ್ನು ಧಾರಣ ಮಾಡುವುದರ ಸಲುವಾಗಿ ಇದೆ; ಮನುಷ್ಯತನ, ಇಂದ್ರಿಯಗಳು ಮತ್ತು ಮನಸ್ಸು ಇತ್ಯಾದಿಗಳನ್ನು ಪ್ರಾಪ್ತ ಮಾಡಿಕೊಳ್ಳುವುದೆಲ್ಲವೂ ಧರ್ಮದ ಪಾಲನೆ ಮಾಡುವುದರಿಂದಲೇ ಸಾರ್ಥಕವಿವೆ. ಎಲ್ಲಿ ಧರ್ಮದ ನಾಶವಾಗುತ್ತಿರುವುದೇ ಕಂಡು ಬರುತ್ತದೆ, ಈಗ ಧರ್ಮವು ಉಳಿಯಲಾರದೆಂದು ನಿಶ್ಚಯವಾಗಿ ಹೋಗುತ್ತದೆ, ಶ್ರದ್ಧೆ-ಜ್ಞಾನ-ಚಾರಿತ್ರಗಳು ನಷ್ಟವಾಗಿ ಹೋಗಬಹುದೆಂದು ಎನಿಸುತ್ತದೆ ಅಲ್ಲಿ ಧರ್ಮದ ರಕ್ಷಣೆಯ ಸಲುವಾಗಿ ದೇಹದ ತ್ಯಾಗ ಮಾಡುವುದು ಅದು ಸಲ್ಲೇಖನವಿದೆ.

ಯಾವನೋ ಪೂರ್ವಜನ್ಮದ ವೈರಿ, ಅಸುರ-ಪಿಶಾಚ ಮೊದಲಾದ ದೇವಗಳು ಬಂದು ಉಪಸರ್ಗ ಮಾಡಿದರೆ; ದುಷ್ಟ ವೈರಿ, ಭಿಲ್ಲ, ಮ್ಲೇಚ್ಛ, ಸಿಂಹ, ವ್ಯಾಘ್ರ, ಗಜ, ಸರ್ಪ ಮೊದಲಾದ ದುಷ್ಟ ತಿರ್ಯಂಚ ಕೃತ ಉಪಸರ್ಗವು ಬಂದು ಬಿಟ್ಟರೆ; ಪ್ರಾಣಗಳ ನಾಶ ಮಾಡುವಂಥ ಭೂಕಂಪ, ಬಿರುಬಿಸಿಲು, ಬಿರುಗಾಳಿ, ಬಿರುಮಳೆ, ಶೀತ, ಉಷ್ಣ, ಅಗ್ನಿ, ಪಾಷಾಣ, ಜಲ ಮೊದಲಾದುವಿಂದಾದ ಉಪಸರ್ಗವು ಬಂದು ಬಿಟ್ಟರೆ, ದುಷ್ಟ ಕುಟುಂಬದ ಬಂಧು ಮೊದಲಾದವರ ಸ್ನೇಹದಿಂದ ಅಥವಾ ಮಿಥ್ಯಾತ್ವದ ಪ್ರಬಲತೆಯಿಂದ, ತಮ್ಮ ಉದರ ಪೋಷಣೆಯ ಲೋಭದಿಂದ ಚಾರಿತ್ರ (ಧರ್ಮ)ದ ನಾಶ ಮಾಡುವುದಕ್ಕೆ ಉದ್ಯಮಶೀಲನಾಗಿದ್ದರೆ, ಮತ್ತು ದುಷ್ಟ ದೊರೆ, ದೊರೆಯ ಮಂತ್ರಿ ಇವರುಗಳಿಂದಾದ ಉಪಸರ್ಗವು ಬಂದು ಬಿಟ್ಟಿದ್ದರೆ ಅಲ್ಲಿ ಸಲ್ಲೇಖನ ಸ್ವೀಕಾರ ಮಾಡಬೇಕಾಗುವುದು.

ನಿರ್ಜನವಾದ ವನದಲ್ಲಿ ದಿಕ್ಕು ತೋರದಿದ್ದರೆ, ಮಾರ್ಗವು ದೊರಕದಿದ್ದರೆ, ಅಲ್ಲಿ ಆಹಾರ-ಪಾನೀಯಗಳು ದೊರಕುವುದು ನಿಂತು ಹೋಗುವಂಥ ದುರ್ಭಿಕ್ಷವು ಬಂದು ಬಿಟ್ಟರೆ; ಸಮಸ್ತ ದೇಹವನ್ನು ಜೀರ್ಣ ಮಾಡಿ ಬಿಡುವಂಥ, ಕಣ್ಣು-ಕಿವಿ ಮೊದಲಾದ ಇಂದ್ರಿಯಗಳ ಕಾರ್ಯವನ್ನು ನಷ್ಟ ಮಾಡಿ ಬಿಡುವಂಥ, ಜಂಘಾಬಲವೇ ಉಡುಗಿ ಹೋಗುವಂಥ, ಕೈ-ಕಾಲುಗಳನ್ನು ಶಿಥಿಲಗೊಳಿಸಿ ಅಸಮರ್ಥ ಮಾಡಿ ಬಿಡುವಂಥ ಜರೆ (ವೃದ್ಧಾವಸ್ಥೆ)ಯು ಬಂದು ಬಿಟ್ಟರೆ ಆ ಸಮಯದಲ್ಲಿ ಸಲ್ಲೇಖನ ಧಾರಣ ಮಾಡುವುದು ಉಚಿತವಿದೆ.

ಅಸಾಧ್ಯ ರೋಗವು ಬಂದು ಬಿಟ್ಟರೆ, ಪ್ರಬಲ ಜ್ವರ, ಭೇದಿ, ಶ್ವಾಸ, ದಮ್ಮು, ಕಫದ ವೃದ್ಧಿಯಾಗುವುದು, ವಾತ-ಪಿತ್ತಗಳ ಪ್ರಬಲತೆಯಾಗುವುದು, ಅಗ್ನಿಯ ಮಂದತೆಯಿಂದ ಕ್ಷುಧೆಯು ಕುಗ್ಗುವುದು, ಶರೀರದಲ್ಲಿ ರಕ್ತದ ಅಭಾವವಾಗಿ ಹೋಗುವುದು, ಜಲೋದರ ಇತ್ಯಾದಿ ವಿಕಾರದ ಪ್ರಬಲತೆಯಾಗಿ ಹೋಗುವುದು, ಮತ್ತು ದಿವಸ-ದಿವಸವೂ ರೋಗಗಳ

ವೃದ್ಧಿಯಾಗುತ್ತ ಹೋಗುವುದು, ಇಂಥ ಸಮಯದಲ್ಲಿ ಶೀಘ್ರವಾಗಿಯೇ ಧೈರ್ಯಧಾರಣ ಮಾಡಿ ಅತ್ಯಂತ ಉತ್ಸಾಹದೊಡನೆ ಸಲ್ಲೇಖನ ಧಾರಣ ಮಾಡುವುದೇ ಉಚಿತವಿದೆ.

ಇವು ಅವಶ್ಯವಾಗಿ ಮರಣದ ಕಾರಣವೆಂದು ತಿಳಿದುಕೊಂಡು ನಾಲ್ಕು ಆರಾಧನೆಗಳ ಆಶ್ರಯ ತೆಗೆದುಕೊಂಡು ಸಮಸ್ತ ದೇಹ, ಗೃಹ, ಕುಟುಂಬ ಮೊದಲಾದವುಗಳ ಮಮತೆಯನ್ನು ಬಿಟ್ಟುಕೊಟ್ಟು ಅನುಕ್ರಮದಿಂದ ಆಹಾರ ಮೊದಲಾದವುಗಳ ತ್ಯಾಗ ಮಾಡಿ ದೇಹವನ್ನು ತ್ಯಾಗ ಮಾಡಿಬಿಡಬೇಕಾಗುವುದು. ದೇಹವು ನಷ್ಟವಾಗಿ ಹೋಗುವುದು, ಆದರೆ ದರ್ಶನ-ಜ್ಞಾನ-ಚಾರಿತ್ರಗಳು ಆತ್ಮನ ಸ್ವಭಾವವಿದ್ದು ಅವು ನಷ್ಟವಾಗದ ಹಾಗೆ ಪ್ರಯತ್ನ ಮಾಡಬೇಕಾಗುವುದು. ಈ ದೇಹವಂತೂ ವಿನಾಶಶೀಲವಿದೆ. ಅವಶ್ಯವಾಗಿಯೇ ನಷ್ಟವಾಗಿ ಹೋಗುವುದು. ಕೋಟ್ಯಂತರ ಉಪಾಯಗಳಿಂದ ದೇವ, ದಾನವ, ಮಣಿ, ಮಂತ್ರ-ತಂತ್ರ, ಔಷಧ ಮೊದಲಾದವುಗಳಾವವೂ ರಕ್ಷಣೆ ಮಾಡುವಂಥವುಗಳಿಲ್ಲ.

ದೇಹವನ್ನಂತೂ ಅನಂತ ಭವಗಳಲ್ಲಿ ಧಾರಣ ಮಾಡಿಬಿಟ್ಟಿದೆ, ಆದರೆ ಈ ರತ್ನತ್ರಯ ಧರ್ಮವು ಅನಂತ ಭವಗಳಲ್ಲಿ ಪ್ರಾಪ್ತವಾಗಲಿಲ್ಲ, ಆದುದರಿಂದ ದುರ್ಲಭವಿದೆ. ಸಂಸಾರ ಪರಿಭ್ರಮಣದಿಂದ ರಕ್ಷಣೆ ಮಾಡುವಂಥ ಈ ನನ್ನ ಧರ್ಮವು ಪರಲೋಕದವರೆಗೆ ಮಲಿನವಾಗದಿರಲೆಂದು ನಿಶ್ಚಯ ಮಾಡಿ, ದೇಹದ ಮಮತೆಯನ್ನು ಬಿಟ್ಟುಕೊಟ್ಟು ಪಂಡಿತ ಮರಣದ ಸಲುವಾಗಿ ಪ್ರಯತ್ನ ಮಾಡಬೇಕಾಗುವುದು.

ಈಗ ಸಮಾಧಿ ಮರಣದ ಮಹಿಮೆಯನ್ನು ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ಅಂತಃಕ್ರಿಯಾಧಿಕರಣಂ ತಪಃ ಫಲಂ ಸಕಲದರ್ಶಿನಃ ಸ್ತುವತೇ ।**
**ತಸ್ಮಾದ್ಯಾವದ್ವಿಭವಂ ಸಮಾಧಿಮರಣೇ ಪ್ರಯತಿತವ್ಯಮ್ ॥೧೨೩॥**

**ಅರ್ಥ ಃ-** ಅಂತಃಕ್ರಿಯೆ ಎಂದರೆ ಸನ್ಯಾಸಮರಣ, ಅದೇ ಯಾವ ತಪದ ಆಧಾರವಿದೆ, ಆ ತಪಸ್ಸಿನ ಫಲದ ಸ್ತುವತೇ ಎಂದರೆ ಪ್ರಶಂಸೆಯನ್ನು ಸಕಲದರ್ಶಿಯಾದ ಭಗವಾನ ಸರ್ವಜ್ಞದೇವರು ಮಾಡುತ್ತಾರೆ. **ತಪಸ್ಸು ಮಾಡುವಂಥವರಿಗೆ ಆ ತಪಸ್ಸಿನ ಫಲದಿಂದ ಕೊನೆಯಲ್ಲಿ ಸನ್ಯಾಸ ಮರಣವಾಗದಿದ್ದರೆ ಆ ತಪಸ್ಸು ನಿಷ್ಫಲವಿದೆ.** ಆದುದರಿಂದ ಎಷ್ಟು ತಮ್ಮ ಸಾಮರ್ಥ್ಯವಿದೆ ಅಷ್ಟು ಸಮಾಧಿಮರಣ ಮಾಡುವಲ್ಲಿ ಪ್ರಕೃಷ್ಟಯತ್ನ ಮಾಡುವುದು ಯೋಗ್ಯವಿದೆ.

**ಭಾವಾರ್ಥ ಃ-** ಲೋಕದಲ್ಲಿ ವ್ರತ, ತಪ, ಸಂಯಮ ಮಾಡುವುದರ ಫಲಗಳು ಅನೇಕವಿವೆ. ತಪ ಮಾಡುವುದರ ಫಲವು ದೇವಲೋಕವಿದೆ. ಮಿಥ್ಯಾದೃಷ್ಟಿಯು ತಪದ ಫಲದಿಂದ -ಪ್ರಭಾವದಿಂದ ಒಂಭತ್ತನೇ ಗ್ರೈವೇಯಕದಲ್ಲಿ ಅಹಮಿಂದ್ರನಾಗುತ್ತಾನೆ. ಮಹಾನ ಋದ್ಧಿ ಸಂಪತ್ತು ಪ್ರಾಪ್ತವಾಗುತ್ತದೆ. ತಪದ ಫಲಗಳು ಚಕ್ರವರ್ತಿ, ನಾರಾಯಣ, ಬಲಭದ್ರ, ರಾಜ್ಯಪದವಿ, ವಿಭವ, ಸಂಪತ್ತು, ರೂಪು, ನಿರೋಗತೆ, ಬಲಾಢ್ಯತೆ ಮೊದಲಾಗಿ ಅನೇಕ ಪ್ರಕಾರದ್ದಿವೆ. ಅಖಂಡ ಆಜ್ಞೆ, ಐಶ್ವರ್ಯ, ಋದ್ಧಿ, ವಿಭವ,ಪರಿವಾರ ಇವೆಲ್ಲವುಗಳು ತಪದ ಫಲವಿವೆ.

ಕೊನೆಯಲ್ಲಿ ಸಮಾಧಿಮರಣ ಮಾಡಿದಲ್ಲದೆ ಅನೇಕ ಬಾರಿ ದೇವಾದಿಗಳ ಸಂಪತ್ತನ್ನು ಭೋಗಿಸಿ ಸಂಸಾರದಲ್ಲಿಯೇ ಪರಿಭ್ರಮಣ ಮಾಡಿದೆ, ಆದರೆ ತಪಸ್ಸು ಮಾಡಿ ಕೊನೆಯಲ್ಲಿ ಯಾರು ಸಮಾಧಿ ಮರಣದ ವಿಧಿಯಿಂದ ಆರಾಧನೆಗಳ ಆಶ್ರಯದೊಡನೆ ಭಯರಹಿತರಾಗಿ ಮರಣ ಹೊಂದಿದ್ದಾರೆ ಅವರ ತಪಸ್ಸಿನ ಫಲದ ಪ್ರಶಂಸೆಯನ್ನು ಸರ್ವದರ್ಶಿಯಾದ ಭಗವಂತರು ಮಾಡುತ್ತಾರೆ.

ಓರ್ವನು ಕೋಟಿಪೂರ್ವ ವರ್ಷಗಳವರೆಗೆ ತಪಸ್ಸು ಮಾಡಿದ್ದರೂ ಕೊನೆಯ ಸಮಯದಲ್ಲಿ ಅವನ ಮರಣವು ಕೆಟ್ಟು ಹೋದರೆ ಅವನ ತಪಸ್ಸು ಪ್ರಶಂಸೆಗೆ ಯೋಗ್ಯವಿಲ್ಲ. ತಪಸ್ಸು ಮಾಡುವುದರಿಂದ ದೇವಲೋಕದ-ಮನುಷ್ಯ ಲೋಕದ

ಸಂಪತ್ತು ಪಡೆಯಬಹುದಾಗಿದೆ. ಆದರೆ ಮರಣ ಸಮಯದಲ್ಲಿ ಆರಾಧನೆಗಳು ನಷ್ಟವಾಗಿ ಹೋಗುವುದರಿಂದ ಸಂಸಾರ ಪರಿಭ್ರಮಣವನ್ನೇ ಮಾಡಬೇಕಾಗುವುದು. ಯಾವ ಪ್ರಕಾರ ಓರ್ವನು ಅನೇಕ ದೂರ ದೇಶಗಳಲ್ಲಿ ಭ್ರಮಣ ಮಾಡಿ ಬಹಳಷ್ಟು ಧನ ಸಂಪಾದನೆ ಮಾಡಿಕೊಂಡು ಬರುತ್ತಿರುವಾಗ ತನ್ನ ನಗರದ ಸಮೀಪದಲ್ಲಿ ಬಂದು ಸಮಸ್ತ ಧನವನ್ನು ಕೊಳ್ಳೆ ಹೊಡಿಸಿಕೊಂಡು ದರಿದ್ರನಾಗಿ ಹೋಗುತ್ತಾನೆ, ಅದೇ ಪ್ರಕಾರ ಸಂಪೂರ್ಣ ಜೀವನದ ತುಂಬೆಲ್ಲ ಪರ್ಯಾಯದಲ್ಲಿ ತಪ, ವ್ರತ, ಸಂಯಮಗಳನ್ನು ಧಾರಣ ಮಾಡಿಕೊಂಡಿದ್ದರೂ ಕೂಡ ಕೊನೆಯಲ್ಲಿ ಆರಾಧನೆಗಳನ್ನು ನಷ್ಟಮಾಡಿ ಬಿಟ್ಟರೆ ಅವನು ಅನೇಕ ಭವಗಳಲ್ಲಿ ಜನ್ಮ-ಮರಣಗಳನ್ನು ಮಾಡುತ್ತಿರುವುದರ ಪಾತ್ರನಾಗುತ್ತಾನೆ.

ಈಗ ಸಲ್ಲೇಖನ ಗ್ರಹಣ ಮಾಡುವ ಪ್ರಾರಂಭದಲ್ಲಿ ಏನು ಮಾಡಬೇಕೆಂಬುದನ್ನು ಸೂತ್ರದ ಮೂಲಕ ಹೇಳುತ್ತಾರೆ,-

**ಸ್ನೇಹಂ ವೈರಂ ಸಂಗಂ ಪರಿಗ್ರಹಂ ಚಾಪಹಾಯ ಶುದ್ಧಮನಾಃ ।**
**ಸ್ವಜನಂ ಪರಿಜನಮಪಿ ಚ ಕ್ಷಾಂತ್ವಾಕ್ಷಮಯೇತ್ಪ್ರಿಯೈರ್ವಚನೈಃ ।।೧೨೪।।**

**ಅರ್ಥ :** ಸ್ನೇಹ, ವೈರ, ಸಂಗ, ಪರಿಗ್ರಹಗಳ ತ್ಯಾಗ ಮಾಡಿ ಶುದ್ಧ ಮನಸ್ಸುಳ್ಳವನಾಗಿ ಸ್ವಜನ ಹಾಗೂ ಪರಿವಾರದ ಜನರ ಕುರಿತು ಕ್ಷಮಾಭಾವವನ್ನು ಗ್ರಹಣ ಮಾಡಿ, ಮತ್ತು ತಾನು ಕೂಡ ಸಮಸ್ತ ಪರಿಜನರಿಂದ ಪ್ರಿಯ ಹಿತರೂಪ ವಚನಗಳ ಮೂಲಕ ಕ್ಷಮಾ ಯಾಚನೆ ಮಾಡಿ ಕ್ಷಮೆಯನ್ನು ಗ್ರಹಣ ಮಾಡಬೇಕು.

**ಭಾವಾರ್ಥ :** ಸಮ್ಯಗ್ದೃಷ್ಟಿಯಲ್ಲಿ ಸ್ನೇಹ ಮತ್ತು ವೈರಗಳೆರಡರ ಅಭಾವವಿರುತ್ತದೆ. ಸಮ್ಯಗ್ಜ್ಞಾನಿಯು ವಿಚಾರ ಮಾಡುವುದೇನೆಂದರೆ ನಾನಂತೂ ಕರ್ಮದ ವಶನಾಗಿ ಇಲ್ಲಿ ಈ ಪರ್ಯಾಯದಲ್ಲಿ ಬಂದು ಉತ್ಪನ್ನನಾಗಿದ್ದೇನೆ. ಪುಣ್ಯ-ಪಾಪ ಕರ್ಮದ ಉದಯದ ಆಧೀನವಾಗಿ ಯಾವ ಬಾಹ್ಯ ಸ್ತ್ರೀ-ಪುತ್ರಾದಿಕರು ಈ ಪರ್ಯಾಯದಲ್ಲಿ ಉಪಕಾರಕ ಹಾಗೂ ಅಪಕಾರಕ ದ್ರವ್ಯಗಳು ಪ್ರಾಪ್ತವಾಗಿವೆ, ಅವುಗಳಲ್ಲಿ ಕೆಲವರನ್ನು ಈ ಪರ್ಯಾಯದ ಉಪಕಾರಕರೆಂದು ತಿಳಿದು ಅವರಲ್ಲಿ ದಾನ-ಸನ್ಮಾನ ಮೊದಲಾದವುಗಳಿಂದ ಸ್ನೇಹ ಮಾಡಿದೆ ಮತ್ತು ಈ ಪರ್ಯಾಯದಲ್ಲಿ ಉಪಕಾರಕ ದ್ರವ್ಯಗಳನ್ನು ನಷ್ಟ ಮಾಡುವಂಥವುಗಳಿದ್ದವು ಅವನ್ನು ಚಾರಿತ್ರ ಮೋಹದ ಉದಯದಿಂದ ವೈರಿಗಳೆಂದು ಮನ್ನಿಸಿ ಅವರಿಂದ ಪರಾಙ್ಮುಖವಾಗಿ ಉಳಿದೆನು. ಈಗ ಈ ಪರ್ಯಾಯವು ವಿನಾಶವಾಗುವ ಸಮಯವು ಬಂದು ಬಿಟ್ಟಿದೆ, ಈಗ ನಾನು ಯಾರೊಡನೆ ಸ್ನೇಹ ಮಾಡಲಿ, ಮತ್ತು ಯಾರೊಡನೆ ವೈರ ಮಾಡಲಿ ?

ನನಗೆ ಈ ಎಲ್ಲ ಆತ್ಮರುಗಳ ಜತೆ ಸಂಬಂಧವಂತೂ ಇಲ್ಲವೇ ಇಲ್ಲ. ನಾನು ಇವರ ಆತ್ಮನನ್ನು ತಿಳಿಯುವುದಿಲ್ಲ. ಈ ಜನರು ನನ್ನ ಆತ್ಮನನ್ನು ತಿಳಿಯುವುದಿಲ್ಲ. ಕೇವಲ ನನ್ನ ಮತ್ತು ಇವರುಗಳ ಶರೀರದ ಚರ್ಮವು ಮಾತ್ರ ಕಂಡು ಬರುತ್ತದೆ. ಈ ಕಂಡು ಬರುವಂಥ ಚರ್ಮದಿಂದಲೇ ಶತ್ರು-ಮಿತ್ರತೆಯ ಸಂಬಂಧವಿದೆ, ಆದರೆ ಈ ಚರ್ಮವಂತೂ ಅಗ್ನಿಯಲ್ಲಿ ಭಸ್ಮವಾಗಿ ಹೋಗುವುದು ಮತ್ತು ಒಂದೊಂದು ಪರಮಾಣುವು ಹಾರಿ ಹೋಗುವುದು. ಈಗ ಯಾರೊಡನೆ ಸ್ನೇಹ-ವೈರಭಾವವಿಡುವುದು ?

ಯಾರು ತಮ್ಮೊಡನೆ ಯಾವ ಕಾರಣವಿಲ್ಲದೆ ಅಭಿಮಾನವಶವಾಗಿಯೇ ವೈರ ಮಾಡುವಂಥವರಿದ್ದಾರೆ ಅವರಲ್ಲಿ ನಮ್ರತೆಯಿಂದ ನನ್ನದು ತಪ್ಪಾಗಿದ್ದರೆ ಕ್ಷಮೆ ಮಾಡಿರೆಂದು ಕೇಳಬೇಕು, ನಾನು ತಮ್ಮಂಥ ಜನರಿಂದ ಅಪರಿಚಿತನಾಗಿ ಉಳಿದಿದ್ದರೆ ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ತಮ್ಮಂಥ ಸಜ್ಜನರಲ್ಲದೆ ಬೇರೆ ಯಾರು ಕ್ಷಮಿಸುವರು ?

ಒಂದು ವೇಳೆ ತಾವು ಯಾರದಾದರೂ ಧನ, ಭೂಮಿಯನ್ನು ಕಸಿದುಕೊಂಡಿದ್ದರೆ ಅದನ್ನು ಅವರಿಗೆ ಮರಳಿ ಕೊಟ್ಟು ನಾನು ದುಷ್ಟತೆಯಿಂದ ತಮ್ಮ ಧನವನ್ನು ಇಟ್ಟುಕೊಂಡಿದ್ದೆನು, ಭೂ ಸಂಪತ್ತನ್ನು ಕಿತ್ತುಕೊಂಡಿದ್ದೆನು ಅದನ್ನು ಈಗ ತಾವು ಮರಳಿ ತೆಗೆದುಕೊಳ್ಳಿರಿ; ನಾನು ಪಾಪಿಯಿದ್ದೇನೆ, ದುಷ್ಟತೆಯಿಂದ ಮೋಸ ವಂಚನೆಯಿಂದ, ಲೋಭದಿಂದ ಕುರುಡನಾಗಿ ನಾನು ದುರಾಚಾರ ಮಾಡಿದ್ದೇನೆ; ಈಗ ನಾನು ಅಂತರಂಗದಲ್ಲಿ ಪಶ್ಚಾತ್ತಾಪಪಟ್ಟುಕೊಳ್ಳುತ್ತಿದ್ದೇನೆ; ನಾನು ತಮಗೆ ಬಹಳಷ್ಟು

ದುಃಖ ಕೊಟ್ಟಿದ್ದೇನೆ, ನಾನು ಯಾವ ಅಪರಾಧ ಮಾಡಿದ್ದೇನೆ ಅದಂತೂ ಈಗ ಯಾವುದೇ ಪ್ರಕಾರದಿಂದ ಮರಳಿ ಬರುವುದಿಲ್ಲ. ಈಗ ನಾನು ಏನು ಮಾಡಲಿ, ತಾವು ನನ್ನನ್ನು ಕ್ಷಮಿಸಿ ಬಿಡಿರಿ. ಇತ್ಯಾದಿ ಸರಳ ಭಾವದಿಂದ ಕ್ಷಮೆ ಬೇಡಬೇಕು ಮತ್ತು ಕ್ಷಮೆ ಮಾಡಿ ಅವರನ್ನು ಪ್ರಸನ್ನ ಮಾಡಬೇಕು.

ತಮ್ಮ ಕುಟುಂಬದವರಿಗೆ, ಸ್ನೇಹಿತರಿಗೆ, ಮಿತ್ರರುಗಳಿಗೆ ಹೇಳುವುದೇನೆಂದರೆ ತಾವು ನಮ್ಮ ಸ್ನೇಹಿತರು ಸಂಬಂಧಿಗಳು ಇರುವಿರಿ, ಆದರೆ ನಮ್ಮ-ನಿಮ್ಮ ಸಂಬಂಧವಂತೂ ಇದೇ ಪರ್ಯಾಯದ್ದಿದೆ; ತಾವುಗಳು ಈ ದೇಹವನ್ನು ಉತ್ಪನ್ನ ಮಾಡುವಂಥ ಮಾತಾ-ಪಿತರಿರುವಿರಿ, ಈ ದೇಹದಿಂದ ಉತ್ಪನ್ನರಾದ ಮಕ್ಕಳಿರುವಿರಿ; ಈ ದೇಹವನ್ನು ರಮಿಸುವಂಥ ಪತ್ನಿಯಿರುವಿರಿ, ಈ ದೇಹದ ಕುಲಕ್ಕೆ ಸಂಬಂಧಿಸಿದ ಬಂಧು ಜನರಿರುವಿರಿ; ನಮ್ಮ-ನಿಮ್ಮ ಈ ವಿನಾಶಶೀಲವಾದ ಪರ್ಯಾಯದ ಸಂಬಂಧವು ಇಷ್ಟು ಸಮಯದವರೆಗೆ ಮಾತ್ರ ಉಳಿದಿದೆ ; ಈ ಪರ್ಯಾಯವಂತೂ ಆಯುಕರ್ಮದ ಆಧೀನವಿದೆ, ಈಗ ಅವಶ್ಯವಾಗಿ ನಷ್ಟವಾಗುವುದು, ಈ ವಿನಾಶಶೀಲದೊಡನೆ ಸ್ನೇಹ ಮಾಡುವುದು ವ್ಯರ್ಥವಿದೆ. ಈ ದೇಹದೊಡನೆ ಸ್ನೇಹ ಮಾಡಿದರೂ ಕೂಡ ಇದು ಉಳಿಯುವಂಥದ್ದಿಲ್ಲ ; ಇದಂತೂ ಅಗ್ನಿಯಿಂದ ಭಸ್ಮವಾಗಿ ಹರಡಿ ಹಾರಿ ಹೋಗುವುದು.

**ನನ್ನ ಆತ್ಮನು ಜ್ಞಾನಸ್ವರೂಪನಿದ್ದಾನೆ, ಅವಿನಾಶಿಯಿದ್ದಾನೆ, ಅಖಂಡನಿದ್ದಾನೆ, ನನ್ನದು ನಿಜರೂಪವಿದೆ, ನಿಜ ಸ್ವಭಾವದ ವಿನಾಶವಾಗುವುದಿಲ್ಲ, ಯಾವುದರ ಸಂಯೋಗವಾಗಿದೆ ಅದರ ವಿಯೋಗವು ಅವಶ್ಯವಾಗಿ ಆಗುವುದು.** ಯಾವುದು ಅನೇಕ ಪುದ್ಗಲ ಪರಮಾಣುಗಳಿಂದ ಕೂಡಿಕೊಂಡು ಆಗಿದೆ ಅದರ ವಿನಾಶವು ಅವಶ್ಯವಾಗಿಯೇ ಆಗುವುದು. ಆದುದರಿಂದ ಈ ವಿನಾಶಶೀಲ ಅಜ್ಞಾನ, ಜಡಸ್ವರೂಪವಾದ ನನ್ನ ಪುದ್ಗಲ ದೇಹದ ಸ್ನೇಹವನ್ನು ಬಿಟ್ಟುಕೊಟ್ಟು ತಮ್ಮ ಅವಿನಾಶಿಯಾದ ಜ್ಞಾಯಕ ಆತ್ಮನಿಗೆ ಉಪಕಾರ ಮಾಡುವಲ್ಲಿ ಉದ್ಯಮಶೀಲರಾಗುವುದು ಯೋಗ್ಯವಿದೆ. ಯಾವ ಪ್ರಕಾರದಿಂದ ನನ್ನ ಜ್ಞಾನ-ದರ್ಶನ ಸ್ವಭಾವಿಯಾದ ಆತ್ಮನ ಘಾತವು ರಾಗ-ದ್ವೇಷ-ಮೋಹಗಳಿಂದ ಆಗುವುದಿಲ್ಲ ಮತ್ತು ಜ್ಞಾನ ಮೊದಲಾದವುಗಳ ಉಜ್ವಲತೆಯು ಪ್ರಕಟವಾಗುವುದು, ವೀತರಾಗ ನಿಜಸ್ವಭಾವದ ಪ್ರಾಪ್ತಿಯಾಗುವುದು ಆ ಪ್ರಕಾರದ ಪ್ರಯತ್ನ ಮಾಡಬೇಕಾಗುವುದು.

ಈ ಪರ್ಯಾಯ (ಶರೀರ)ವನ್ನಂತೂ ಅನಂತಾನಂತ ಬಾರಿ ಧಾರಣ ಮಾಡಿ ಬಿಟ್ಟುಕ್ಕೊಟ್ಟಿದೆ. **ನಾನು ದರ್ಶನ-ಜ್ಞಾನ-ಚಾರಿತ್ರದ ವಿಪರೀತತೆಯಿಂದ ವಿಷಯಗಳ ಆಧೀನನಾಗಿ ವಿಪರೀತಶ್ರದ್ಧೆ, ವಿಪರೀತಜ್ಞಾನ, ವಿಪರೀತ ಆಚರಣೆ ಮಾಡಿ ಚತುರ್ಗತಿಗಳಲ್ಲಿ ಪರಿಭ್ರಮಣ ಮಾಡಿದ್ದೇನೆ.** ಎಲ್ಲಿ ನನ್ನ ಸಮಸ್ತದ ಜ್ಞಾತಾ ಸರ್ವಜ್ಞ ಸ್ವರೂಪ, ಮತ್ತು ಎಲ್ಲಿ ಏಕೇಂದ್ರಿಯ ಪರ್ಯಾಯದೊಳಗೆ ಅಕ್ಷರದ ಅನಂತದಭಾಗ ಜ್ಞಾನವುಳ್ಳವನಾಗಿರುವುದು ? ಅನಂತ ಶಕ್ತಿಯು ಅಂತರಾಯ ಕರ್ಮದ ಉದಯದಿಂದ ನಷ್ಟವಾಗಿ ಪೃಥ್ವೀ-ಪಾಷಾಣ, ಜಲ, ಅಗ್ನಿ, ಪವನ, ವನಸ್ಪತಿರೂಪದ ಪಂಚ ಸ್ಥಾವರಗಳಲ್ಲಿ ಜನ್ಮ ಪಡೆಯುವುದು, ವಿಕಲತ್ರಯವಾಗುವುದು ಇದೆಲ್ಲವು **ಮಿಥ್ಯಾಶ್ರದ್ಧೆ, ಮಿಥ್ಯಾಜ್ಞಾನ, ಮಿಥ್ಯಾ ಆಚರಣೆಯ ಪ್ರಭಾವವಿದೆ.**

ಈಗ ಅನಂತಾನಂತ ಕಾಲದಲ್ಲಿ ಬಹಳಷ್ಟು ಕರ್ಮದ ಕ್ಷಯೋಪಶಮದಿಂದ ವೀತರಾಗಿಗಳ ಸ್ಯಾದ್ವಾದರೂಪದ ಉಪದೇಶದಿಂದ ನನಗೆ ಒಂದಿಷ್ಟು ಸ್ವರೂಪ, ಪರ-ರೂಪದ ಜ್ಞಾನವಾಗಿದೆ. ಆದುದರಿಂದ ಎಲೈ ಸಜ್ಜನನೇ ! ಈಗ ಯಾವುದರಿಂದ ನನ್ನ ಆತ್ಮನು ರಾಗ-ದ್ವೇಷ-ಮೋಹಗಳಿಂದ ರಹಿತನಾಗಿ, ನಿರ್ಭಯನಾಗಿ ಆರಾಧನೆಗಳ ಆಶ್ರಯದೊಡನೆ ಈ ದೇಹದ ತ್ಯಾಗ ಮಾಡುವನು ಅಂಥ ಯತ್ನ ಮಾಡಬೇಕು. **ಅನಾದಿಕಾಲದಿಂದ ಮಿಥ್ಯಾತ್ವಸಹಿತ ಅನಂತಾನಂತ ಬಾರಿ ಬಾಲ ಮರಣ ಮಾಡಿಯಾಗಿದೆ. ಒಂದು ಬಾರಿಯಾದರೂ ಪಂಡಿತಮರಣ ಮಾಡಿದರೆ ಪುನಃ ಮರಣಕ್ಕೆ ಪಾತ್ರನಾಗುವುದಿಲ್ಲ.**

ಆದುದರಿಂದ ಈಗ ದೇಹದಲ್ಲಿನ ಸ್ನೇಹವನ್ನು ಬಿಟ್ಟುಕೊಟ್ಟು, ಯಾವ ಪ್ರಕಾರ ನನ್ನ ಆತ್ಮನು ರಾಗಾದಿಗಳ ವಶನಾಗಿ ಸಂಸಾರ ಸಮುದ್ರದಲ್ಲಿ ಮುಳುಗುವುದಿಲ್ಲ ಆ ಪ್ರಕಾರ ಯತ್ನ ಮಾಡುವುದು ಉಚಿತವಿದೆ. ಈ ಪ್ರಕಾರ ಸ್ನೇಹ ವೈರ

ಮೊದಲಾದುವನ್ನು ಬಿಟ್ಟುಕೊಟ್ಟು, ಹಾಗೂ ದೇಹ, ಪರಿಗ್ರಹ ಮೊದಲಾದವುಗಳ ರಾಗವನ್ನು ಬಿಟ್ಟುಕೊಟ್ಟು ಮನಸ್ಸನ್ನು ಶುದ್ಧ ಮಾಡಬೇಕಾಗುವುದು.

ಸಮಾಧಿ ಮರಣದ ಇಚ್ಛೆಯುಳ್ಳವರು ಏನು ಮಾಡಬೇಕೆಂಬುದನ್ನು ಈಗ ಸೂತ್ರದ ಮೂಲಕ ಹೇಳುತ್ತಾರೆ,-

**ಆಲೋಚ್ಯ ಸರ್ವಮೇನಃ ಕೃತಕಾರಿತಮನುಮತಂ ಚ ನಿರ್ವ್ಯಾಜಮ್ ।**
**ಆರೋಪಯೇನ್ಮಹಾವ್ರತ-ಮಾಮರಣಸ್ಥಾಯಿ ನಿಃಶೇಷಮ್ ॥೧೨೫॥**

**ಅರ್ಥ :** ತಾವು ಯಾವುದಾದರೂ ಪಾಪ ಅಪರಾಧ ಮಾಡಿದ್ದರೆ, ಅನ್ಯರಿಂದ ಮಾಡಿಸಿದ್ದರೆ, ಮಾಡುವಂಥವರನ್ನು ಒಳ್ಳೆಯವರೆಂದು ತಿಳಿದುಕೊಂಡಿದ್ದರೆ, ಆ ಅಪರಾಧವನ್ನು ಏಕಾಂತದಲ್ಲಿ ಕಪಟರಹಿತರಾಗಿ ನಿರ್ದೋಷ ವೀತರಾಗೀ ಜ್ಞಾನೀ ಗುರುಗಳಲ್ಲಿ ಆಲೋಚನೆ ಮಾಡುವುದು, ಮತ್ತೆ ಮರಣದವರೆಗೆ ಪೂರ್ಣ ಮಹಾವ್ರತಗಳ ಆರೋಪಣ ಮಾಡುವುದು, ಎಂದರೆ ಗ್ರಹಣ ಮಾಡುವುದು.

ಭಾವಾರ್ಥ :- **ವೀತರಾಗೀ ನಿರ್ದೋಷ ಗುರುಗಳ ಸಂಯೋಗವು ಪ್ರಾಪ್ತವಾಗಿ ಹೋದರೆ, ತಮ್ಮ ರಾಗ ಮೊದಲಾದ ಕಷಾಯಗಳುಕಡಿಮೆಯಾಗಿದ್ದರೆ, ಪರೀಷಹ ಮೊದಲಾದುವನ್ನು ಸಹಿಸುವಲ್ಲಿ ತಮ್ಮ ಶರೀರ ಮತ್ತು ಮನಸ್ಸು ಸಮರ್ಥವಿದ್ದರೆ, ಧೈರ್ಯ ಮೊದಲಾದ ಗುಣಗಳ ಧಾರಕರಿದ್ದರೆ, ನಿರ್ಗ್ರಂಥ ವೀತರಾಗೀ ಗುರುಗಳ ನಿರ್ವಾಹ ಮಾಡುವುದಕ್ಕೆ ಸಮರ್ಥ (ಸಿದ್ಧ) ರಿದ್ದರೆ, ದೇಶ-ಕಾಲ-ಸಹಾಯಕರ ಶುದ್ಧ ಸಂಯೋಗವು ಪ್ರಾಪ್ತವಾಗಿ ಹೋಗಿದ್ದರೆ ಮಹಾವ್ರತಗಳ ಅಂಗೀಕಾರ ಮಾಡಬೇಕು.** ಒಂದು ವೇಳೆ ಉಕ್ತ ಬಾಹ್ಯ-ಅಂತರಂಗ ಸಾಮಗ್ರಿಗಳು ಪ್ರಾಪ್ತವಾಗಿರದಿದ್ದರೆ ತಮ್ಮ ಪರಿಣಾಮದಲ್ಲಿಯೇ ಭಗವಾನ ಪಂಚ ಪರಮೇಷ್ಠಿಗಳ ಧ್ಯಾನ ಮಾಡಿ ಅರಹಂತ ಮೊದಲಾದವರಿಂದಲೇ ಆಲೋಚನೆ ಮಾಡುವುದು.

ತಮ್ಮ ಯೋಗ್ಯತೆಗೆ ಅನುಸರಿಸಿ ಸಮಸ್ತ ಪಂಚ ಪಾಪಗಳ ತ್ಯಾಗ ಮಾಡಿ, ಮನೆಯಲ್ಲಿರುತ್ತಿದ್ದರೂ, ಮಹಾವ್ರತಿಗಳ ಸಮಾನರಾಗಿ, ರೋಗಾದಿಗಳ ವೇದನೆಯನ್ನು ಭಯ ರಹಿತರಾಗಿ ಅತ್ಯಂತ ಧೈರ್ಯಪೂರ್ವಕ ಸಹನೆ ಮಾಡುತ್ತ, ದುಃಖರೂಪ ವೇದನೆಯನ್ನು ಬಾಹ್ಯದಲ್ಲಿ ಪ್ರಕಟಪಡಿಸದೆಯೇ ಸಹಿಸಬೇಕು. ಕರ್ಮದ ಉದಯವನ್ನು ತಮ್ಮ ಸ್ವಭಾವದಿಂದ ಭಿನ್ನವಾಗಿ ತಿಳಿದುಕೊಂಡು ಸಮಸ್ತ ಶತ್ರು-ಮಿತ್ರ, ಸಂಯೋಗ-ವಿಯೋಗದಲ್ಲಿ ಸಾಮ್ಯ ಭಾವವನ್ನು ಧಾರಣ ಮಾಡುತ್ತ ಪರಿಗ್ರಹ ಮೊದಲಾದವುಗಳ ಉಪಾಧಿಯನ್ನು ತ್ಯಾಗ ಮಾಡಿ ವಿಕಲ್ಪರಹಿತರಾಗಿ ಹೋಗಬೇಕು.

ಸನ್ಯಾಸದ ಸಮಯವನ್ನು ತಿಳಿದುಕೊಂಡು ಪರಿಗ್ರಹದ ತ್ಯಾಗ ಮಾಡಿ ಬಿಡಬೇಕಾಗುವುದು. ಮೊದಲಂತೂ ಯಾರದಾದರೂ ಸಾಲ ಕೊಡುವುದಿದ್ದರೆ ಅದನ್ನು ಕೊಟ್ಟು ಋಣಮುಕ್ತರಾಗಬೇಕು. ಯಾರಾದಾದರೂ ಧನ, ಭೂಮಿ ಮೊದಲಾದುವನ್ನು ತಮ್ಮ ಅನೀತಿಯಿಂದ ತೆಗೆದುಕೊಂಡಿದ್ದರೆ ಅದನ್ನು ಅವರಿಗೆ ಮರಳಿ ಕೊಡಬೇಕು, ಅವರನ್ನು ಸಂತುಷ್ಟ ಮಾಡಿ, ತಮ್ಮ ಅಪರಾಧದ ಕ್ಷಮೆ ಯಾಚಿಸಿ, ತಮ್ಮ ನಿಂದೆ ಗರ್ಹೆ ಮಾಡಿಕೊಳ್ಳಬೇಕು.

ಉಳಿದ ಧನ, ಪರಿಗ್ರಹದ ಯೋಗ್ಯ ವಿತರಣೆ ಮಾಡಿ, ಕೊಟ್ಟು ನಿರಾಕುಲರಾಗಿ ಬಿಡಬೇಕು. ಪತ್ನಿಯ ಭಾಗವನ್ನು ಪತ್ನಿಗೆ ಕೊಟ್ಟು, ಗಂಡು ಮಕ್ಕಳ ಪಾಲನ್ನು ಗಂಡು ಮಕ್ಕಳಿಗೆ ಕೊಟ್ಟು, ಹೆಣ್ಣು ಮಕ್ಕಳ ಪಾಲನ್ನು ಹೆಣ್ಣು ಮಕ್ಕಳಿಗೆ ಕೊಡಬೇಕು. ದುಃಖೀ, ದೀನ, ಅನಾಥರ, ವಿಧವೆಯಾಗಿ ತಮ್ಮ ಆಶ್ರಯದಲ್ಲಿರುವ ಸಹೋದರಿ, ಸೇವಕಿ ಮತ್ತು ಬಂಧು ಮೊದಲಾದವರಿದ್ದರೆ ಅವರಿಗೂ ಧನವಿತ್ತು ಸಮಸ್ತ ಪರಿಗ್ರಹದ ತ್ಯಾಗ ಮಾಡಿ ಮಮತೆಯಿಂದ ರಹಿತರಾಗಿ, ಶರೀರ ಅಲಂಕರಿಸಿಕೊಳ್ಳುವುದು ಮೊದಲಾದವುಗಳ ತ್ಯಾಗ ಮಾಡಬೇಕು. ಪತ್ನೀ, ಪುತ್ರ, ಗೃಹ ಮೊದಲಾದವರಲ್ಲಿ, ಸಮಸ್ತ ಕುಟುಂಬದಲ್ಲಿ, ಶಯ್ಯೆ, ಆಸನ, ವಸ್ತ್ರಾದಿಗಳಲ್ಲಿನ ಮಮತೆಯನ್ನು ಬಿಟ್ಟು ಕೊಡಬೇಕು. ಈಗ ಇವರ ಹಾಗೂ ನಮ್ಮ

ಸಂಬಂಧವು ಅದೆಷ್ಟು ಸಮಯದ್ದಿದೆ ? ಯಾವ ದೇಹದ ಸಂಬಂಧದಿಂದ ಇವರೆಲ್ಲರ ಸಂಬಂಧವಿತ್ತು, ಆ ದೇಹವನ್ನೇ ನಾವು ಬಿಟ್ಟುಕೊಡುತ್ತಿದ್ದೇವೆಂದ ಮೇಲೆ ದೇಹದ ಸಂಬಂಧಿಕರೊಡನೆ ನಮ್ಮದೆಂತಹ ಮಮತೆಯಿರುವುದು ?

**ಈಗ ನಮ್ಮ ಆತ್ಮನ ಸಂಬಂಧವಂತೂ ನಮ್ಮ ಸ್ವಭಾವರೂಪ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರದೊಡನೆ ಇದೆ, ಇದು ನಮ್ಮ ನಿಜಸ್ವಭಾವವಿದೆ.** ದೇಹವಂತೂ ಚರ್ಮ, ಮೂಳೆ, ಮಾಂಸ, ರುಧಿರಮಯವಿದೆ, ಕೃತಘ್ನವಿದೆ, ಜಡವಿದೆ. ಅವು ನಮ್ಮವುಗಳಿಲ್ಲ, ನಾವು ಅವುಗಳವರಿಲ್ಲ, ದೇಹವು ವಿನಾಶಶೀಲವಿದೆ, ನಮ್ಮ ರೂಪು ಅವಿನಾಶಿಯಿದೆ. ನಮಗಂತೂ ಅಜ್ಞಾನ ಭಾವದ ಕಾರಣ ಈ ದೇಹದಲ್ಲಿ ಮಮತೆಯಿತ್ತು, ಅದರಿಂದ ಅಶುಭ ಕರ್ಮಗಳ ಬಂಧವೇ ಆಗಿದೆ.

ಈಗ ಈ ದೇಹದ ಸಂಬಂಧವನ್ನೇ ನಾಶ ಮಾಡಬಯಸುತ್ತೇನೆ. **ದೇಹದ ಮಮತೆಯಿಂದಲೇ ಅನಂತ ಜನ್ಮ-ಮರಣಗಳಾಗಿವೆ, ಮತ್ತು ಸಂಸಾರದಲ್ಲಿ ಎಷ್ಟು ದುಃಖದ ಪ್ರಕಾರಗಳಿವೆ ಅವೆಲ್ಲವು ನನಗೆ ದೇಹದ ಸಂಯೋಗದಿಂದಲೇ ಆಗಿವೆ. ರಾಗ, ದ್ವೇಷ, ಮೋಹ, ಕಾಮ, ಕ್ರೋಧ ಮೊದಲಾದವುಗಳ ಉತ್ಪತ್ತಿಯ ಕಾರಣವು ಕೂಡ ಈ ಒಂದು ದೇಹದ ಸಂಬಂಧವೇ ಇದೆ.** ಈ ಪ್ರಕಾರ ದೇಹದಿಂದ ವಿರಕ್ತತೆಗೆ ಪ್ರಾಪ್ತರಾಗಿ ದೃಢತೆಯೊಡನೆ ಸಮಸ್ತ ವ್ರತಗಳನ್ನು ಧಾರಣ ಮಾಡಬೇಕು.

ಈಗ ಮುಂದೆ ಏನು ಮಾಡಬೇಕೆಂಬುದನ್ನು ಸೂತ್ರದ ಮೂಲಕ ಹೇಳುತ್ತಾರೆ, -

**ಶೋಕಂ ಭಯಮವಸಾದಂ ಕ್ಲೇದಂಕಾಲುಷ್ಯಮರತಿಮಪಿ ಹಿತ್ವಾ।**
**ಸತ್ವೋತ್ಸಾಹ ಮುದೀರ್ಯಂ ಚ ಮನಃ ಪ್ರಸಾದ್ಯಂ ಶ್ರುತೈರಮೃತೈಃ ॥೧೨೬॥**

**ಅರ್ಥ :-** ಸನ್ಯಾಸದ ಸಮಯದಲ್ಲಿ ಶೋಕ, ಭಯ, ವಿಷಾದ, ಕ್ಲೇದ, ಕಲುಷತೆ, ಅರತಿ ಮೊದಲಾದ ಭಾವಗಳನ್ನು ಬಿಟ್ಟುಕೊಟ್ಟು ಅಧೀರತೆಯ ಅಭಾವ ಮಾಡಬೇಕು ; ತಮ್ಮ ಆತ್ಮ ಸತ್ವದ ಪ್ರಕಾರ (ಅನುಭವ, ಜ್ಞಾನ) ಮಾಡಿ ಶಾಸ್ತ್ರಜ್ಞಾನ ರೂಪ ಅಮೃತದ ಮೂಲಕ ಮನಸ್ಸನ್ನು ಪ್ರಸನ್ನವಾಗಿ ಇಟ್ಟುಕೊಳ್ಳಬೇಕಾಗುವುದು.

**ಭಾವಾರ್ಥ :- ಅನಾದೀ ಕಾಲದಿಂದಲೇ ಈ ಸಂಸಾರದ ಪರ್ಯಾಯದಲ್ಲಿ ಆತ್ಮಬುದ್ಧಿಯಾಗುತ್ತಲಿದೆ, ಮತ್ತು ಪರ್ಯಾಯದ ನಾಶವನ್ನೇ ತನ್ನ ನಾಶವೆಂದು ಮನ್ನಿಸುತ್ತಿದ್ದಾನೆ.** ಯಾವಾಗ ಪರ್ಯಾಯದ ನಾಶವಾಗುವುದು, ಮತ್ತು ಧನ, ಪರಿಗ್ರಹ, ಪತ್ನೀ, ಪುತ್ರ, ಮಿತ್ರ, ಬಾಂಧವ ಮೊದಲಾದವರೆಲ್ಲರ ವಿಯೋಗವಾಗುವುದು ಕಂಡು ಬರುತ್ತದೆ, ಆಗ ಮಿಥ್ಯಾದೃಷ್ಟಿಗಳಿಗೆ ಮಹಾನ ಶೋಕವು ಉತ್ಪನ್ನವಾಗುತ್ತದೆ.

**ಸಮ್ಯಗ್ದೃಷ್ಟಿಗೆ ಶೋಕವು ಉತ್ಪನ್ನವಾಗುವುದಿಲ್ಲ.** ಅವನು ವಿಚಾರಿಸುವುದೇನೆಂದರೆ ಎಲೈ ಆತ್ಮನೇ ! ಪರ್ಯಾಯಗಳಂತೂ ಅನಂತಾನಂತವಾಗಿ ಪ್ರಾಪ್ತವಾಗಿ ಬಿಟ್ಟು ಹೋಗಿವೆ. ಈ ಶರೀರವಂತೂ ರೋಗಗಳ ಉತ್ಪತ್ತಿಯ ಸ್ಥಾನವಿದೆ; ನಿತ್ಯವೂ ಕ್ಷುಧೆ, ತೃಷೆ, ಶೀತ, ಉಷ್ಣ, ಭಯ ಮೊದಲಾದುವನ್ನು ಉತ್ಪನ್ನ ಮಾಡುವಂಥದ್ದಿದೆ; ಮಹಾ ಕೃತಘ್ನವಿದೆ, ಅವಶ್ಯವಾಗಿ ವಿನಾಶಶೀಲವಿದೆ; ಆತ್ಮನಿಗೆ ಎಲ್ಲ ಪ್ರಕಾರದ ದುಃಖ ಕ್ಲೇಶಾದಿಗಳನ್ನು ಉತ್ಪನ್ನ ಮಾಡುವಂಥದ್ದಿದೆ; ದುಷ್ಟರ ಸಂಗತಿಯ ಹಾಗೆ ಅದು ತ್ಯಾಗ ಯೋಗ್ಯವಿದೆ; ಸಮಸ್ತ ದುಃಖಗಳ ಬೀಜವಿದೆ; ಮಹಾನ ಸಂತಾಪ ಉದ್ವೇಗವನ್ನು ಉತ್ಪನ್ನ ಮಾಡುವಂಥದ್ದಿದೆ; ನಿರಂತರ ಭಯವನ್ನುತ್ಪನ್ನ ಮಾಡುವಂಥದ್ದಿದೆ; ಬಂದೀಗೃಹದ ಸಮಾನ ಪರಾಧೀನ ಮಾಡುವಂಥದ್ದಿದೆ, ಸಮಸ್ತ ಜಾತಿಯ ದುಃಖಗಳೆಲ್ಲವು ಇದರ ಜತೆಯಿರುವುದರಿಂದ ಭೋಗಿಸಬೇಕಾಗುತ್ತದೆ.

ಆತ್ಮನ ಸ್ವರೂಪವನ್ನು ಮರೆಸಿ ಬಿಡುವಂಥ, ಇಚ್ಛೆಯ ದಾಹವನ್ನು ಉತ್ಪನ್ನ ಮಾಡುವಂಥ, ಮಹಾಮಲಿನ, ಕೃಮಿಗಳ ಸಮೂಹದಿಂದ ತುಂಬಿ ಹೋದ, ಮಹಾದುರ್ಗಂಧಮಯ; ದುಷ್ಟ ಸಹೋದರನ ಸಮಾನ ನಿತ್ಯಕ್ಲೇಶಗಳನ್ನು ಉತ್ಪನ್ನ

ಮಾಡುವಲ್ಲಿ ಸಮರ್ಥ; ಸಾಯದಿರುವ ಶತ್ರುವಿನಂತಿರುವ ದೇಹದ ವಿಯೋಗದ ಶೋಕವನ್ನೇನು ಮಾಡುವುದು ? ಆದುದರಿಂದ ಜ್ಞಾನಿಗಳು ಶೋಕವನ್ನು ಬಿಟ್ಟು ಕೊಡುತ್ತಾರೆ, ಮರಣದ ಕುರಿತು ಭಯ ಪಡುವುದಿಲ್ಲ ; ವಿಷಾದ, ಸ್ನೇಹ, ಕಲುಷತೆ ಮತ್ತು ಅರತಿ ಭಾವವನ್ನು ಬಿಟ್ಟುಕೊಟ್ಟು ಉತ್ಸಾಹ ಹಾಗೂ ಧೈರ್ಯವನ್ನು ಪ್ರಕಟಪಡಿಸಿಕೊಂಡು ಶ್ರುತಜ್ಞಾನ ರೂಪದ ಅಮೃತವನ್ನು ಪಾನ ಮಾಡಿ ಮನಸ್ಸನ್ನು ತೃಪ್ತ ಮಾಡಿಕೊಳ್ಳುತ್ತಾರೆ.

ಈಗ ಇನ್ನಷ್ಟು ಇದೇ ಸೂತ್ರದ ಅರ್ಥವನ್ನು ಪುಷ್ಟಿಗೊಳಿಸುವ ಸಲುವಾಗಿ ಮೃತ್ಯು ಮಹೋತ್ಸವದ ಪಾಠವನ್ನು ಇಲ್ಲಿ ಉಪಕಾರಕವೆಂದು ತಿಳಿದುಕೊಂಡು ಹದಿನೆಂಟು ಶ್ಲೋಕಗಳನ್ನು ಅರ್ಥ ಸಹಿತವಾಗಿ ಕೊಡಲಾಗುತ್ತದೆ.

## ಮೃತ್ಯುಮಹೋತ್ಸವ ಪಾಠ

**ಮೃತ್ಯುಮಾರ್ಗೇ ಪ್ರವೃತಸ್ಯ ವೀತರಾಗೋ ದದಾತು ಮೇ ।**
**ಸಮಾಧಿಬೋಧೌ ಪಾಥೇಯಂ ಯಾವನ್ಮುಕ್ತಿ ಪುರೌ ಪುರಃ ॥೧॥**

**ಅರ್ಥ ಃ-** ಓ ವೀತರಾಗ ಭಗವನ್ ! ನಾನು ಮೃತ್ಯುವಿನ ಮಾರ್ಗದಲ್ಲಿದ್ದೇನೆ. ನನಗೆ ತಾವು ಸಮಾಧಿ ಎಂದರೆ ಸ್ವರೂಪದ ಸಾವಧಾನತೆ, ಮತ್ತು ಬೋಧಿ ಎಂದರೆ ರತ್ನತ್ರಯರೂಪದ ಪಾಥೇಯ ಎಂದರೆ ಪರಲೋಕದ ಮಾರ್ಗದಲ್ಲಿ ಉಪಕಾರಕವಾದ ಭೋಜನರೂಪದ ವಸ್ತುವನ್ನು ಪ್ರದಾನ ಮಾಡಬೇಕು ; ಅದರಿಂದ ನಾನು ಮುಕ್ತಿ ಪುರಿಯವರೆಗೆ ತಲುಪುತ್ತೇನೆಂಬ ಪ್ರಾರ್ಥನೆಯನ್ನು ಮಾಡುತ್ತೇನೆ.

**ಭಾವಾರ್ಥ ಃ-** ನಾನು ಅನಾದಿ ಕಾಲದಿಂದ ಅನಂತ ಕುಮರಣ ಮಾಡಿದ್ದೇನೆ, ಅವನ್ನು ವೀತರಾಗ ಸರ್ವಜ್ಞ ದೇವರೇ ತಿಳಿಯುತ್ತಾರೆ. ನಾನು ಒಂದು ಬಾರಿಯೂ ಸಮ್ಯಕ್ ಮರಣ ಮಾಡಲಿಲ್ಲ, ಒಂದು ವೇಳೆ ಸಮ್ಯಕ್ ಮರಣ ಮಾಡಿದ್ದರೆ ಪುನಃ ಸಂಸಾರದಲ್ಲಿ ಮರಣಕ್ಕೆ ಪ್ರಾಪ್ತನಾಗುತ್ತಿರಲಿಲ್ಲ.

ದೇಹವಂತೂ ಸತ್ತು ಹೋಗುವುದು, ಆದರೆ ಆತ್ಮನ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಸ್ವಭಾವವು ವಿಷಯ-ಕಷಾಯಗಳಿಂದ ಘಾತವಾಗದಿರುವುದು ಅದು ಸಮ್ಯಕ್ ಮರಣವಿದೆ. ಮಿಥ್ಯಾ ಶ್ರದ್ಧೆಯುಳ್ಳವನಾಗಿ ದೇಹದ ನಾಶವನ್ನೇ ತನ್ನ ಆತ್ಮನ ನಾಶವೆಂದು ತಿಳಿದುಕೊಂಡು ಸಂಕ್ಲೇಶಪೂರ್ವಕ ಮರಣ ಮಾಡುವುದು ಅದು ಕುಮರಣವಿದೆ.

**ನಾನು ಮಿಥ್ಯಾದರ್ಶನದ ಪ್ರಭಾವದಿಂದ ದೇಹವನ್ನೇ ಆತ್ಮನೆಂದು ಮನ್ನಿಸಿ, ನನ್ನ ಜ್ಞಾನ-ದರ್ಶನ ಸ್ವಭಾವದ ಘಾತ ಮಾಡಿಕೊಂಡು ಅನಂತ ಪರಿವರ್ತನ ಮಾಡಿದ್ದೇನೆ.** ಈಗ ವೀತರಾಗ ಭಗವಂತರಾದ ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ನನ್ನ ಮರಣದ ಸಮಯದಲ್ಲಿ ವೇದನೆಯುಕ್ತ ಮರಣ ಮತ್ತು ಆತ್ಮಜ್ಞಾನರಹಿತ ಕುಮರಣವು ಆಗದಿರಲಿ. ಸರ್ವಜ್ಞ ವೀತರಾಗರ ಆಶ್ರಯ ಸಹಿತ ಸಂಕ್ಲೇಶರಹಿತ ಧರ್ಮಧ್ಯಾನಪೂರ್ವಕ ಸಮ್ಯಕ್ ಮರಣವನ್ನು ಬಯಸುತ್ತೇನೆ. ಆದುದರಿಂದ ವೀತರಾಗರ ಆಶ್ರಯವನ್ನೇ ಗ್ರಹಣ ಮಾಡುತ್ತೇನೆ.

ಆತ್ಮನು ಜ್ಞಾನ ಶರೀರನಿದ್ದಾನೆಂದು ಈಗ ನಾನು ನನ್ನ ಆತ್ಮನನ್ನು ತಿಳಿದುಕೊಳ್ಳುತ್ತೇನೆ, -

**ಕೃಮಿಜಾಲಶತಾಕೀರ್ಣೇ ಜರ್ಜರೇ ದೇಹಪಿಂಜರೇ ।**
**ಭಜ್ಯಮಾನೇ ನ ಭೇತವ್ಯಂ ಯತಸ್ತ್ವಂ ಜ್ಞಾನವಿಗ್ರಹಃ ॥೨॥**

**ಅರ್ಥ ಃ-** ಎಲೈ ಆತ್ಮನೇ ! ಕೃಮಿಸಮೂಹದ ನೂರಾರು ಜಾಲಗಳಿಂದ ತುಂಬಿದ, ನಿತ್ಯ ಜರ್ಜಿತವಾಗಿ ಹೋಗುತ್ತಿರುವ ಈ ದೇಹರೂಪದ ಪಂಜರವು ನಷ್ಟವಾಗುವುದರ ಕುರಿತು ಭಯ ಪಡಬೇಡ, ಏಕೆಂದರೆ ನೀನಂತೂ ಜ್ಞಾನಶರೀರಿಯಿರುವೆ.

**ಭಾವಾರ್ಥ :-** ನಿಮ್ಮ ರೂಪವಂತೂ ಜ್ಞಾನವಿದೆ ಅದರಲ್ಲಿ ಸಮಸ್ತ ಪದಾರ್ಥಗಳು ಪ್ರಕಾಶಿತವಾಗುತ್ತಲಿವೆ, ಮತ್ತು ಅಮೂರ್ತಿಕ, ಜ್ಞಾನ ಜ್ಯೋತಿಸ್ವರೂಪ, ಅಖಂಡ, ಅವಿನಾಶೀ, ಜ್ಞಾತಾ, ದೃಷ್ಟಾಯಿದೆ. ಯಾವ ಮಾಂಸ, ಮೂಳೆ, ಚರ್ಮಮಯ, ಮಹಾದುರ್ಗಂಧಯುಕ್ತ, ವಿನಾಶಶೀಲವಾದ ದೇಹವಿದೆ. ಅದು ನಿಮ್ಮ ರೂಪದಿಂದ ಅತ್ಯಂತ ಭಿನ್ನವಿದೆ; ಕರ್ಮದ ವಶದಿಂದ ಏಕ ಕ್ಷೇತ್ರದಲ್ಲಿ ಅವಗಾಹನ ಮಾಡಿ ಏಕರೂಪವಾಗಿ ವಾಸಿಸುತ್ತಿದೆ, ಆದಾಗ್ಯೂ ನಿಮ್ಮಲ್ಲಿ ಮತ್ತು ಅದರಲ್ಲಿ ಅತ್ಯಂತ ಭೇದವಿದೆ. ಈ ದೇಹವಂತೂ ಪೃಥ್ವೀ, ಜಲ, ಅಗ್ನಿ, ಪವನದ ಪರಮಾಣುಗಳ ಪಿಂಡವಿದೆ, ಅದು ಸಮಯ ಬಂದ ಮೇಲೆ ಹರಡಿ ಹೋಗುವವು, ಆದರೆ ನೀನು ಅವಿನಾಶೀ, ಅಖಂಡ ಜ್ಞಾಯಕರೂಪನಿರುವೆ. ಈ ದೇಹದ ನಾಶವಾಗುವುದರಿಂದ ಅದೇಕೆ ಭಯಭೀತನಾಗುತ್ತಿರುವೆ ?

ಈಗ ಮತ್ತೆ ದೇಹಾಂತರದಲ್ಲಿ ಗಮನ ಮಾಡುವುದರಿಂದ ಭಯಪಡಬಾರದೆಂದು ಹೇಳುತ್ತಾರೆ,-

**ಜ್ಞಾನಿನ್ ಭಯಂ ಭವೇತ್ ಕಸ್ಮಾತ್ ಪ್ರಾಪ್ತೇ ಮೃತ್ಯುಮಹೋತ್ಸವೇ ।**
**ಸ್ವರೂಪಸ್ಥಃ ಪುರಂ ಯಾತಿ ದೇಹೀ ದೇಹಾಂತರ ಸ್ಥಿತಿಃ ।।೩।।**

**ಅರ್ಥ :-** ಎಲೈ ಜ್ಞಾನಿಗಳೇ ! ತಮಗೆ ವೀತರಾಗೀ ಸಮ್ಯಗ್ಜ್ಞಾನಿಗಳು ಉಪದೇಶ ಕೊಡುವುದೇನೆಂದರೆ ಮೃತ್ಯುರೂಪದ ಮಹಾನ ಉತ್ಸವವು ಪ್ರಾಪ್ತವಾದ ಮೇಲೆ ಕೂಡ ಅದೇಕೆ ಭಯಪಡುವಿರಿ ? ಈ ದೇಹದಲ್ಲಿ ವಾಸಿಸುವಂಥ ಆತ್ಮನು ತನ್ನ ಸ್ವರೂಪದಲ್ಲಿರುತ್ತ ಅನ್ಯ ದೇಹರೂಪದ ನಗರಕ್ಕೆ ಹೊರಟು ಹೋಗುತ್ತಾನೆ. ಇದರಲ್ಲಿ ಭಯ ಪಡುವುದರ ಕಾರಣವಾದರೂ ಏನಿದೆಯೆಂಬುದನ್ನು ಯೋಚಿಸಿರಿ ?

**ಭಾವಾರ್ಥ :-** ಯಾವ ಪ್ರಕಾರ ಓರ್ವ ಮನುಷ್ಯನು ತನ್ನ ಜೀರ್ಣವಾದ ಕುಟೀರದೊಳಗಿಂದ ಹೊರ ಹೊರಟು ಬೇರೊಂದು ನವೀನ ಮಹಡಿಯ ಮನೆಯಲ್ಲಿ ಹೋಗಿ ಇರತೊಡಗಿದರೆ ಅದು ಅವನಿಗೆ ಅತ್ಯಂತ ಉತ್ಸಾಹದ ಅವಸರವಿದೆ. ಅದೇ ಪ್ರಕಾರ ಒಂದು ವೇಳೆ ಈ ಆತ್ಮನು ತನ್ನ ಸ್ವರೂಪದಲ್ಲಿ ಇರುತ್ತಿದ್ದರೂ ಕೂಡ ಈ ಜೀರ್ಣವಾದ ದೇಹರೂಪದ ಕುಟೀರವನ್ನು ಬಿಟ್ಟುಕೊಟ್ಟು ನವೀನ ದೇಹರೂಪದ ಮಹಲನ್ನು ಪ್ರಾಪ್ತ ಮಾಡಿಕೊಂಡರೆ ಇದು ಮಹಾನ ಉತ್ಸವದ ಅವಸರವಿದೆ. ಇದರಲ್ಲಿ ಭಯ ಪಡುವಂಥ ಹಾನಿಯೇನೂ ಇಲ್ಲ.

ಒಂದು ವೇಳೆ ತಮ್ಮ ಜ್ಞಾಯಕ ಸ್ವರೂಪದಲ್ಲಿ ವಾಸಿಸುತ್ತ, ಪರವನ್ನು ತನ್ನದೆಂದು ಮನ್ನಿಸುವುದರ ತ್ಯಾಗ ಮಾಡಿ, ಪರಲೋಕಕ್ಕೆ ಹೋದರೆ ಅಲ್ಲಿ ತುಂಬ ಆದರದೊಡನೆ ದಿವ್ಯ, ಧಾತು-ಉಪಧಾತು ರಹಿತ ವೈಕ್ರಿಯಿಕ ದೇಹದಲ್ಲಿ ದೇವನಾಗಿ ಅನೇಕ ಮಹರ್ದ್ಧಿಕ ದೇವಗಳಲ್ಲಿ ಪೂಜ್ಯ ಮಹಾನ ದೇವನಾಗುವೆ; ಮತ್ತು ಇಲ್ಲಿ ಭಯಪಟ್ಟು ತನ್ನ ಜ್ಞಾಯಕ ಸ್ವಭಾವವನ್ನು ಕೆಡಿಸಿಕೊಂಡು ಪರದಲ್ಲಿ ಮಮತೆಯನ್ನು ಮಾಡುತ್ತ ಮರಣ ಹೊಂದಿದರೆ ಏಕೇಂದ್ರಿಯ ಮೊದಲಾದವುಗಳ ದೇಹದಲ್ಲಿ ತನ್ನ ಜ್ಞಾನವನ್ನು ಕಳೆದುಕೊಂಡು ಜಡದ ಸಮಾನವಾಗಿ ಹೋಗಬಹುದಾಗಿದೆ.

ಆದುದರಿಂದ ಮಲಿನವೂ ಕ್ಲೇಶಕರವೂ ಆದ ದೇಹವನ್ನು ಬಿಟ್ಟುಕೊಟ್ಟು ಕ್ಲೇಶರಹಿತ ಉಜ್ವಲ ದೇಹದಲ್ಲಿ ಹೋಗುವುದಂತೂ ಮಹಾನ ಉತ್ಸವದ ಕಾರಣವಿದೆ. **ಸಮಾಧಿಮರಣವು** ಉಪಕಾರಕವಿದೆ.

**ಸುದತ್ತಂ ಪ್ರಾಪ್ಯತೇ ಯಸ್ಮಾತ್ ದೃಶ್ಯತೇ ಪೂರ್ವಸತ್ತಮೈಃ ।**
**ಭುಜ್ಯತೇ ಸ್ವರ್ಭವಂ ಸೌಖ್ಯಂ ಮೃತ್ಯು ಭೀತಿಃ ಕುತಃ ಸತಾಮ್ ।।೪।।**

**ಅರ್ಥ :-** ಪೂರ್ವಕಾಲದಲ್ಲಿ ಆಗಿ ಹೋದ ಗಣಧರ ಮೊದಲಾದ ಸತ್ಪುರುಷರು ತಿಳಿಸಿಕೊಡುವುದೇನೆಂದರೆ ಯಾವ ಮರಣದ ಮೂಲಕ ಒಳ್ಳೆಯ ರೀತಿಯಿಂದ ಕೊಡಲಾದ ಫಲವು ಪ್ರಾಪ್ತವಾಗುತ್ತದೆ, ಸ್ವರ್ಗಲೋಕದ ಸುಖವನ್ನು ಭೋಗಿಸಲಾಗುತ್ತದೆ, ಆ ಮರಣದಿಂದ ಸತ್ಪುರುಷರಿಗೆ ಭಯವು ಹೇಗಾಗುವುದು ?

**ಭಾವಾರ್ಥ :-** ತಮ್ಮ ಕರ್ತವ್ಯದ ಫಲವಂತೂ ಮರಣವಾದ ನಂತರವೇ ದೊರಕುತ್ತದೆ. ತಾವು ಯಾವ ಷಟ್ಕಾಯ ಜೀವಗಳಿಗೆ ಅಭಯದಾನ ಕೊಟ್ಟಿರಿ, ಮತ್ತು ರಾಗ-ದ್ವೇಷ, ಕಾಮ-ಕ್ರೋಧ ಮೊದಲಾದವುಗಳ ನಾಶ ಮಾಡಿ, ಅಸತ್ಯ-ಅನ್ಯಾಯ-ಕುಶೀಲ-ಪರಧನ ಹರಣದ ತ್ಯಾಗ ಮಾಡಿ, ಪರಮ ಸಂತೋಷ ಧಾರಣ ಮಾಡಿ ನಿಮ್ಮ ಆತ್ಮನಿಗೆ ಅಭಯದಾನ ಕೊಟ್ಟಿರಿ ಅದರ ಫಲವನ್ನು ಸ್ವರ್ಗಲೋಕದ ಹೊರತು ಎಲ್ಲಿ ಭೋಗಿಸುವುದು ? ಆ ಸ್ವರ್ಗಲೋಕದ ಸುಖವಂತೂ ಮೃತ್ಯುನಾಮದ ಮಿತ್ರನ ಕೃಪೆಯಿಂದಲೇ ಪ್ರಾಪ್ತವಾಗುತ್ತದೆ. ಆದುದರಿಂದ ಮರಣದ ಸಮಾನ ಈ ಜೀವನಿಗೆ ಬೇರೆ ಯಾರೂ ಉಪಕಾರ ಮಾಡುವಂಥವರಿಲ್ಲ.

ಇಲ್ಲಿ ಈ ಮನುಷ್ಯ ಪರ್ಯಾಯದಲ್ಲಿ ಜೀರ್ಣವಾದ ಶರೀರದಲ್ಲಿ ಯಾವ-ಯಾವ ದುಃಖವನ್ನು ಭೋಗಿಸ ಬೇಕಾಗುತ್ತದೆ, ಇನ್ನೂ ಅದೆಷ್ಟು ಸಮಯದವರೆಗೆ ಇರಬೇಕಾಗುತ್ತದೆ, ಆರ್ತಧ್ಯಾನ-ರೌದ್ರಧ್ಯಾನ ಮಾಡಿ ತಿರ್ಯಂಚ-ನರಕಗತಿಯಲ್ಲಿ ಹೋಗಬೇಕಾಗುತ್ತದೆ; ಆದುದರಿಂದ ಈಗ ಮರಣದ ಕುರಿತು ಭಯಪಟ್ಟುಕೊಂಡು ಮತ್ತು ದೇಹ, ಕುಟುಂಬ, ಪರಿಗ್ರಹಗಳ ಮೇಲೆ ಮಮತೆ ಮಾಡಿ ಚಿಂತಾಮಣಿ-ಕಲ್ಪವೃಕ್ಷದ ಸಮಾನವಿರುವ ಸಮಾಧಿ ಮರಣವನ್ನು ಕೆಡಿಸಿಕೊಂಡು ಭಯಭೀತ ಮತ್ತು ಮಮತೆಯುಳ್ಳವನಾಗಿ ಕುಮರಣ ಮಾಡಿಕೊಂಡು ದುರ್ಗತಿಗೆ ಹೋಗುವುದು ಉಚಿತವಿಲ್ಲ.

**ಸಮಾಧಿ ಮರಣವು ಬಂದೀಗೃಹದಿಂದ ಮುಕ್ತ ಮಾಡಿಸುತ್ತದೆ.**

**ಆಗರ್ಭಾದ್ ದುಃಖಸಂತಪ್ತಃ ಪ್ರಕ್ಷಿಪ್ತೋ ದೇಹಪಿಂಜರೇ ।**
**ನಾತ್ಮಾ ವಿಮುಚ್ಯತೇಽನ್ಯೇನ ಮೃತ್ಯು ಭೂಮಿಪತಿಂ ಬಿನಾ ॥೫॥**

**ಅರ್ಥ :-** ಈ ಕರ್ಮನಾಮದ ನನ್ನ ವೈರಿಯು ನನ್ನ ಆತ್ಮನನ್ನು ನಾನು ಯಾವ ಕ್ಷಣದಿಂದ ಗರ್ಭದಲ್ಲಿ ಬಂದಿರುವೆನು ಆಗಿನಿಂದಲೇ ದೇಹರೂಪದ ಪಂಜರದಲ್ಲಿ ಹಾಕಿ ಬಿಟ್ಟಿದೆ ಮತ್ತು ನಿರಂತರವಾಗಿಯೇ ಕ್ಷುಧೆ, ತೃಷೆ, ರೋಗ, ವಿಯೋಗ ಮೊದಲಾದ ಅನೇಕ ದುಃಖಗಳಿಂದ ಸಂತಪ್ತನಾಗಿ ಬಿದ್ದುಕೊಂಡಿರುವೆನು. ಈಗ ಇಂಥ ಅನೇಕ ದುಃಖಗಳಿಂದ ವ್ಯಾಪ್ತವಾದ ಈ ದೇಹರೂಪದ ಪಂಜರದಿಂದ ನನ್ನನ್ನು ಮರಣನಾಮದ ದೊರೆಯ ಹೊರತಾಗಿ ಯಾರು ಬಿಡಿಸುವರು ?

**ಭಾವಾರ್ಥ :-** ನಾನು ಈ ದೇಹರೂಪದ ಪಂಜರದಲ್ಲಿ ಕರ್ಮರೂಪದ ಶತ್ರುವಿನಿಂದ ಹಿಡಿಯಲ್ಪಟ್ಟು ಇಂದ್ರಿಯಗಳ ಆಧೀನನಾಗಿ ಅನೇಕ ಕಷ್ಟಗಳನ್ನು ಸಹಿಸುತ್ತಿದ್ದೇನೆ. ಯಾವಾಗಲೂ ಕ್ಷುಧೆ, ತೃಷೆಯ ವೇದನೆಯು ದುಃಖವನ್ನೀಯುತ್ತದೆ, ನಿರಂತರ ಶ್ವಾಸ-ಉಚ್ಛ್ವಾಸದ ಮೂಲಕ ವಾಯುವನ್ನು ಎಳೆದುಕೊಳ್ಳುವುದು ಮತ್ತು ಬಿಡುವುದು, ಅನೇಕ ಪ್ರಕಾರದ ರೋಗಗಳ ದುಃಖ ಭೋಗಿಸುವುದು. ಹೊಟ್ಟೆ ತುಂಬಿಕೊಳ್ಳುವ ಸಲುವಾಗಿ ಅನೇಕ ಪ್ರಕಾರದ ಪರಾಧೀನತೆ; ಸೇವೆ, ಕೃಷೀ, ವಾಣಿಜ್ಯ ಮೊದಲಾದವುಗಳ ಮೂಲಕ ಮಹಾದುಃಖಿಯಾಗಿರುವುದು; ಶೀತ-ಉಷ್ಣಗಳನ್ನು ಸಹಿಸುವುದು; ದುಷ್ಟರ ಮೂಲಕ ಹೊಡೆ-ಬಡೆ, ಕುವಚನ, ಅಪಮಾನ ಮೊದಲಾದುವನ್ನು ಸಹಿಸುವುದು, ಕುಟುಂಬದ ಆಧೀನವಿರುವುದು ; ಒಡೆಯನ, ರಾಜನ, ಹೆಂಡಿರು-ಮಕ್ಕಳ ಆಧೀನವಾಗಿರುವುದು ಇಂಥ ಮಹಾನ ಬಂದೀಗೃಹದ ಸಮಾನವಿರುವ ದೇಹದೊಳಗಿಂದ ಮೃತ್ಯುನಾಮದ ಬಲಶಾಲಿಯಾದ ರಾಜನ ಹೊರತಾಗಿ ಬೇರೆ ಯಾರು ಬಿಡಿಸುವರು?

ಈ ದೇಹವನ್ನು ಎಲ್ಲಿಯವರೆಗೆ ಹೊರುವುದು ? ನಿತ್ಯ ಏಳಿಸುವುದು, ನೀರು ಕುಡಿಸುವುದು, ಸ್ನಾನ ಮಾಡಿಸುವುದು, ನಿದ್ರೆ ಮಾಡಿಸುವುದು, ಕಾಮ ಮೊದಲಾದ ವಿಷಯ ಸಾಧನಗಳನ್ನು ಒದಗಿಸುವುದು, ಅನೇಕ ವಸ್ತ್ರಾಭರಣಗಳಿಂದ ಅಲಂಕರಿಸುವುದು, ಹಗಲಿರುಳು ಈ ದೇಹದ ಸೇವೆಯನ್ನೇ ಮಾಡುತ್ತಿದ್ದರೂ ಕೂಡ ಈ ಶರೀರವು ಆತ್ಮನಿಗೆ ಅನೇಕ ಕಷ್ಟ ಕೊಡುತ್ತದೆ, ಭಯಭೀತಗೊಳಿಸುತ್ತದೆ, ಆತ್ಮನ ಸ್ವರೂಪವನ್ನು ಮರೆಸಿ ಬಿಡುತ್ತದೆ. ಇಂಥ ಕೃತಘ್ನವಾದ ದೇಹದಿಂದ ಹೊರಗೆ ಹೊರಡುವುದು ಮರಣ ನಾಮದ ದೊರೆಯ ಹೊರತಾಗಿ ಸಾಧ್ಯವಾಗುವುದಿಲ್ಲ.

ಒಂದು ವೇಳೆ ಜ್ಞಾನಸಹಿತ, ದೇಹದ ಮಮತೆ ಬಿಟ್ಟು, ಸಾವಧಾನಪೂರ್ವಕ, ಧರ್ಮಧ್ಯಾನ ಸಹಿತ, ಸಂಕ್ಲೇಶ ರಹಿತ, ವೀತರಾಗತೆಯೊಡನೆ ನಾನು ಸಮಾಧಿ ಮರಣ ನಾಮದ ದೊರೆಯ ಸಹಾಯ ತೆಗೆದುಕೊಂಡರೆ ನನ್ನ ಆತ್ಮನು ಪುನಃ ದೇಹಧಾರಣವನ್ನೇ ಮಾಡಲಾರನು. ದುಃಖಗಳಿಗೆ ಪಾತ್ರನಾಗಲಾರನು **ಸಮಾಧಿ ಮರಣನಾಮದ ದೊರೆಯು ಅತ್ಯಂತ ನ್ಯಾಯಮಾರ್ಗಿಯಿದ್ದಾನೆ, ನನಗೆ ಅವನ ಆಶ್ರಯವೇ ಪ್ರಾಪ್ತವಾಗಲಿ. ನನಗೆ ಕುಮರಣವಾಗದಿರಲಿ.**

**ಸುಖ ಕೊಡುವಂಥ ಮಿತ್ರನೆಂದರೆ ಸಮಾಧಿ ಮರಣವಿದೆಯೆಂದು** ಈಗ ಹೇಳುತ್ತಾರೆ, -

**ಸರ್ವದುಃಖಪ್ರದಂ ಪಿಂಡಂ ದೂರೀಕೃತ್ಯಾತ್ಮದರ್ಶಿಭಿಃ ।**
**ಮೃತ್ಯುಮಿತ್ರಪ್ರಸಾದೇನ ಪ್ರಾಪ್ಯಂತೇ ಸೌಖ್ಯ ಸಂಪದಃ ॥೬॥**

**ಅರ್ಥ :-** ಯಾರು ಆತ್ಮದರ್ಶಿ ಆತ್ಮಜ್ಞಾನಿಯಿದ್ದಾರೆ ಅವರು ಮೃತ್ಯುನಾಮದ ಮಿತ್ರನ ಕೃಪೆಯಿಂದ ಸಂಪೂರ್ಣ ದುಃಖದಾಯಕವಾದ ದೇಹಪಿಂಡವನ್ನು ದೂರ ಬಿಟ್ಟುಕೊಟ್ಟು ಸುಖದ ಸಂಪತ್ತನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

**ಭಾವಾರ್ಥ :-** ಯಾರು ಈ ಸಪ್ತಧಾತುಮಯ ಮಹಾ ಅಶುಚಿ ವಿನಾಶಶೀಲವಾದ ದೇಹವನ್ನು ಬಿಟ್ಟುಕೊಟ್ಟು ದಿವ್ಯ ವೈಕ್ರಿಯಿಕ ದೇಹದಲ್ಲಿ ಪ್ರಾಪ್ತವಾಗುವಂಥ ಅನೇಕ ಸುಖ ಸಂಪತ್ತನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ, ಅದೆಲ್ಲವು ಆತ್ಮಜ್ಞಾನಿಗಳ ಸಮಾಧಿ ಮರಣದ ಪ್ರಭಾವವಿದೆ. **ಸಮಾಧಿ ಮರಣದ ಸಮಾನ ಈ ಜೀವನಿಗೆ ಉಪಕಾರ ಮಾಡುವಂಥವರು ಬೇರೆ ಯಾರೂ ಇಲ್ಲ.**

ಈ ದೇಹದಲ್ಲಿ ಅನೇಕ ಪ್ರಕಾರದ ದುಃಖ ಭೋಗಿಸುವುದು, ಮಹಾನ ರೋಗಾದಿಗಳ ದುಃಖವನ್ನು ಭೋಗಿಸಿ-ಭೋಗಿಸಿ ಸಾಯವುದು, ಪುನಃ ತಿರ್ಯಂಚ ದೇಹದಲ್ಲಿ ಮತ್ತು ನರಕದಲ್ಲಿ ಅಸಂಖ್ಯಾತಕಾಲದವರೆಗೆ ಅಸಂಖ್ಯ ಪ್ರಕಾರದ ದುಃಖ ಭೋಗಿಸುವುದು, ಜನ್ಮ-ಮರಣಗಳ ರೂಪದ ಅನಂತ ಪರಿವರ್ತನ ಮಾಡುವುದು, ಯಾರೂ ಶರಣೆಲ್ಲದಂಥ ಈ ಸಂಸಾರದಲ್ಲಿನ ಅಲೆದಾಟದಿಂದ ರಕ್ಷಣೆ ಮಾಡುವಲ್ಲಿ ಯಾರೂ ಸಮರ್ಥರಿಲ್ಲ.

ಒಂದಿಷ್ಟು ಅಶುಭ ಕರ್ಮದ ಮಂದ ಉದಯದಿಂದ ಮನುಷ್ಯಗತಿ, ಉಚ್ಚಕುಲ, ಇಂದ್ರಿಯಗಳ ಪೂರ್ಣತೆ, ಸತ್ಪುರುಷರ ಸಂಗತಿ ಮತ್ತು ಜಿನೇಂದ್ರ ಭಗವಂತರ ಪರಮಾಗಮದ ಉಪದೇಶವು ಪ್ರಾಪ್ತವಾಗಿದೆ. ಈಗ ಸಮ್ಯಕ್‌ಶ್ರದ್ಧೆ-ಜ್ಞಾನ-ತ್ಯಾಗ-ಸಂಯಮ ಸಹಿತ ಸಮಸ್ತ ಕುಟುಂಬ ಪರಿವಾರದಲ್ಲಿ ಮಮತೆಯಿಂದ ರಹಿತನಾಗಿ, ದೇಹದಿಂದ ಭಿನ್ನ ಜ್ಞಾನ ಸ್ವಭಾವರೂಪನಾದ ಆತ್ಮನ ಅನುಭವ ಮಾಡಿಕೊಂಡು, ಭಯರಹಿತ, ನಾಲ್ಕು ಆರಾಧನೆಗಳ ಆಶ್ರಯ ಸಹಿತ ಮರಣವಾಗಿ ಹೋದರೆ ಇದರ ಸಮಾನವಾಗಿ ಮೂರು ಲೋಕದಲ್ಲಿ ಮೂರು ಕಾಲದಲ್ಲಿ ಈ ಜೀವನಿಗೆ ಹಿತಕರವಾದುದು ಬೇರಾವುದೂ ಇಲ್ಲ. ಸಂಸಾರ ಪರಿಭ್ರಮಣದಿಂದ ಬಿಡುಗಡೆಯಾಗಿ ಹೋಗುವುದೇ ಈ ಸಮಾಧಿ ಮರಣ ನಾಮದ ಮಿತ್ರನ ಕೃಪೆಯ ಫಲವಿದೆ.

**ಸಮಾಧಿ ಮರಣವು ಕಲ್ಪವೃಕ್ಷವಿದೆ.**

**ಮೃತ್ಯುಕಲ್ಪದ್ರುಮೇ ಪ್ರಾಪ್ತೇ ಯೇನಾತ್ಮಾರ್ಥೋ ನ ಸಾಧಿತಃ ।**
**ನಿಮಗ್ನೋ ಜನ್ಮಜಂಬಾಲೇ ಸ ಪಶ್ಚಾತ್ ಕ ಕರಿಷ್ಯತಿ ॥೭॥**

**ಅರ್ಥ :-** ಯಾವ ಜೀವನು ಮೃತ್ಯುನಾಮದ ಕಲ್ಪವೃಕ್ಷವು ಪ್ರಾಪ್ತವಾದ ಮೇಲೆ ಕೂಡ ತನ್ನ ಕಲ್ಯಾಣ ಸಿದ್ಧ ಮಾಡಿಕೊಳ್ಳಲಿಲ್ಲ, ಆ ಜೀವನು ಸಂಸಾರರೂಪದ ಕೊಳಚೆಯಲ್ಲಿ ಮುಳುಗಿ ಹೋಗಿ ನಂತರ ಏನು ಮಾಡುವನು ?

**ಭಾವಾರ್ಥ :- ಈ ಮನುಷ್ಯ ಜನ್ಮದಲ್ಲಿ ಮರಣದ ಸಂಯೋಗವಿದೆ ಅದು ಪ್ರತ್ಯಕ್ಷ ಕಲ್ಪವೃಕ್ಷವಿದೆ, ಯಾರಿಗೆ ಐಚ್ಛಿಕ ಪಡೆದುಕೊಳ್ಳುವುದಿದೆ ಅವರು ಪಡೆದುಕೊಳ್ಳಬೇಕು.** ಜ್ಞಾನ ಸಹಿತ ತಮ್ಮ ನಿಜಸ್ವಭಾವವನ್ನು ಗ್ರಹಣ ಮಾಡಿ

ಆರಾಧನೆಯೊಡನೆ ಮರಣ ಹೊಂದಿದರೆ ಸ್ವರ್ಗದ ಮಹರ್ದ್ಧಿಕ ದೇವತನ, ಇಂದ್ರತನ, ಅಹಮಿಂದ್ರತನಗಳನ್ನು ಪಡೆದು ನಂತರ ಚಕ್ರವರ್ತಿ, ತೀರ್ಥಂಕರತೆಯನ್ನು ಪಡೆದು ನಿರ್ವಾಣಕ್ಕೆ ಪ್ರಾಪ್ತನಾಗಿ ಹೋಗಬಹುದು. **ಮರಣ ಸಮಾನ ದಾತಾರನು ಮೂರು ಲೋಕದಲ್ಲಿ ಬೇರೆ ಯಾರೂ ಇಲ್ಲ.** ಇಂಥ ದಾತಾರನನ್ನು ಪಡೆದು ಕೂಡ ವಿಷಯ ಕಷಾಯಗಳ ಇಚ್ಛಾಸಹಿತವಾಗಿಯೇ ಉಳಿದುಕೊಂಡರೆ **ವಿಷಯ ವಾಂಛೆಯ ಫಲವಂತೂ ನರಕ-ನಿಗೋದವಿದೆ.** ಮರಣ ನಾಮದ ಕಲ್ಪವೃಕ್ಷವನ್ನು ಕೆಡಿಸಿಕೊಂಡೆಯಾದರೆ ಜ್ಞಾನಾದಿಗಳ ಅಕ್ಷಯ ನಿಧಾನದಿಂದ ರಹಿತನಾಗಿ ಸಂಸಾರರೂಪದ ಕೊಳಚೆಯಲ್ಲಿ ಮುಳುಗಿ ಹೋಗಬಹುದಾಗಿದೆ.

ಎಲೈ ಭವ್ಯನೇ ! ನೀನು ಇಚ್ಛೆಯಕಾರಣದಿಂದ ದುಷ್ಟ ನೀಚ ಪುರುಷರ ಸೇವನೆ ಮಾಡುತ್ತಿದ್ದರೆ, ಅತಿಲೋಭಿಯಾಗಿ ವಿಷಯಗಳನ್ನು ಭೋಗಿಸುವ ಸಲುವಾಗಿ ಧನದ ಪ್ರಾಪ್ತಿಯ ಉದ್ದೇಶದಿಂದ ಹಿಂಸೆ, ಅಸತ್ಯ, ಕಳವು, ಕುಶೀಲ, ಪರಿಗ್ರಹದಲ್ಲಿ ಆಸಕ್ತನಾಗಿ ನಿಂದ್ಯ ಕಾರ್ಯ ಮಾಡುತ್ತಿದ್ದರೂ ಕೂಡ ಇಚ್ಛೆಯ ಪೂರ್ಣತೆಯಾಗುವುದಿಲ್ಲ; ಆದರೆ ದುಃಖದ ಕಾರಣದಿಂದ ಮರಣವನ್ನೇ ಹೊಂದುವೆ, ಕುಟುಂಬದವರನ್ನು ಬಿಟ್ಟುಕೊಟ್ಟು ವಿದೇಶಗಳಲ್ಲಿ ಪರಿಭ್ರಮಣ ಮಾಡುತ್ತಿದ್ದರೆ, ನಿಂದ್ಯ ಆಚರಣೆ ಮಾಡುತ್ತಿದ್ದರೆ, ನಿಂದ್ಯಕಾರ್ಯ ಮಾಡುತ್ತಿದ್ದರೂ ಕೂಡ ಮರಣವನ್ನಂತೂ ಅವಶ್ಯವಾಗಿಯೇ ಹೊಂದುವೆ.

ಒಂದು ಬಾರಿಯಾದರೂ ಸಮತೆಯನ್ನು ಧಾರಣ ಮಾಡಿ ತ್ಯಾಗ ವ್ರತ ಸಹಿತ ಮರಣ ಹೊಂದಿದರೆ ಪುನಃ ಸಂಸಾರ ಪರಿಭ್ರಮಣದ ಅಭಾವ ಮಾಡಿ ಅವಿನಾಶೀ ಸುಖಕ್ಕೆ ಪ್ರಾಪ್ತನಾಗಿ ಹೋಗಬಹುದಾಗಿದೆ. ಆದುದರಿಂದ ಜ್ಞಾನ ಸಹಿತ ಪಂಡಿತ ಮರಣ ಮಾಡುವುದೇ ಉಚಿತವಿದೆ.

**ಸಮಾಧಿಮರಣವು ಉತ್ತಮ ದಾತಾರವಿದೆ.**

**ಜೀರ್ಣ ದೇಹಾದಿಕಂ ಸರ್ವಂ ನೂತನಂ ಜಾಯತೇ ಯತಃ**
**ಸ ಮೃತ್ಯು ಕಿಂ ನ ಮೋದಾಯ ಸತಾಂ ಸಾತೋತ್ಥಿತಿರ್ಯಥಾ ।।೮।।**

**ಅರ್ಥ :-** ಯಾವ ಮೃತ್ಯುವಿನಿಂದ ಜೀರ್ಣ ದೇಹ ಮೊದಲಾದುವೆಲ್ಲವು ಬಿಟ್ಟು ಹೋಗಿ ನವೀನವಾದವು ದೊರಕುತ್ತವೆ ಆ ಮೃತ್ಯುವು ಸತ್ಪುರುಷರ ಸಲುವಾಗಿ ಸಾತಾದ ಉದಯದ ಸಮಾನ ಹರುಷದ ಕಾರಣವಾಗಿಲ್ಲವೇನು ? ಜ್ಞಾನಿಗಳ ಮರಣವಂತೂ ಅವರಿಗೆ ಹರುಷದ ಕಾರಣವೇ ಆಗುತ್ತದೆ.

**ಭಾವಾರ್ಥ :-** ಈ ಮನುಷ್ಯನ ಶರೀರವು ಭೋಜನ ಮಾಡಿಸುತ್ತಿದ್ದರೂ ಕೂಡ ನಿರಂತರ ಸಮಯ-ಸಮಯಕ್ಕೆ ಜೀರ್ಣವಾಗುತ್ತ ಹೋಗುತ್ತದೆ ; ದೇವಗಳ ಶರೀರದ ಹಾಗೆ ವೃದ್ಧಾವಸ್ಥೆಯಿಂದ ರಹಿತವಿಲ್ಲ, ದಿನ-ದಿನವೂ ಬಲವು ಕಡಿಮೆಯಾಗುತ್ತ ಹೋಗುತ್ತದೆ; ರೂಪು ಮತ್ತು ಕಾಂತಿಯು ಮಲಿನವಾಗುತ್ತ ಹೋಗುತ್ತದೆ,ಕೋಮಲದಿಂದ ಕಠೋರವಾಗುತ್ತ ಹೋಗುತ್ತದೆ; ಸಮಸ್ತ ನರ-ನಾಡಿ-ಮೂಳೆಗಳ ಬಂಧನವು ಸಡಿಲುಗೊಳ್ಳುತ್ತ ಹೋಗುತ್ತವೆ; ಚರ್ಮವೂ ಸಡಿಲಾಗುತ್ತ ಹೋಗುತ್ತದೆ; ಕೆನ್ನೆಗಳು ಗುಳಿ ಬೀಳುತ್ತ ಹೋಗುತ್ತವೆ; ಕಣ್ಣುಗಳ ಸುಂದರತೆಯು ಕೆಟ್ಟು ಹೋಗುತ್ತದೆ; ಶ್ರವಣ ಮಾಡುವ ಕರ್ಣಗಳ ಶಕ್ತಿಯು ಕುಂದುತ್ತ ಹೋಗುತ್ತದೆ; ಕೈ-ಕಾಲುಗಳು ದಿನ-ದಿನವೂ ನಿರ್ಬಲವಾಗುತ್ತ ಹೋಗುತ್ತವೆ; ನಡೆಯುವ ಶಕ್ತಿಯು ಮಂದವಾಗುತ್ತದೆ; ಏಳಲು, ಕೂಡ್ರಲು, ನಡೆಯಲು ಶ್ವಾಸವು ಹೆಚ್ಚುತ್ತದೆ,ಕಫವು ವೃದ್ಧಿಸಲಾಗುತ್ತದೆ; ಅನೇಕ ರೋಗಗಳು ಹೆಚ್ಚುತ್ತ ಹೋಗುತ್ತವೆ; ಇಂಥ ಜೀರ್ಣ ದೇಹದ ದುಃಖವನ್ನು ಎಲ್ಲಿಯವರೆಗೆ ಭೋಗಿಸುವುದು ಮತ್ತು ಇಂಥ ದೇಹವನ್ನು ಎಲ್ಲಿಯವರೆಗೆ ಎಳೆದೊಯ್ಯುವುದು ?

ಮರಣನಾಮದ ದಾತಾರನಿಲ್ಲದೆ ಇಂಥ ನಿಂದ್ಯ ದೇಹದಿಂದ ಬಿಡಿಸಿ ನವೀನ ದೇಹದಲ್ಲಿ ಯಾರು ನಿವಾಸ ಮಾಡಿಸುವರು ? ಜೀರ್ಣ ಶರೀರದಲ್ಲಿ ಅಸಾತಾದ ಮಹಾನ ಉದಯವನ್ನು ಭೋಗಿಸಬೇಕಾಗುತ್ತದೆ. ಮರಣ ನಾಮದ

ಉಪಕಾರಿ ದಾತೃವಿನ ಹೊರತಾಗಿ ಇಂಥ ಅಸಾತಾವನ್ನು ಯಾರು ದೂರ ಮಾಡುವರು ? ಸಮ್ಯಗ್ಜ್ಞಾನಿಗಳಂತೂ ಮರಣವು ಬಂದ ಮೇಲೆ ಅತ್ಯಂತ ಹರುಷ ಮನ್ನಿಸುತ್ತಾರೆ ಮತ್ತು ವ್ರತ, ಸಂಯಮ, ತ್ಯಾಗ, ಶೀಲದಲ್ಲಿ ಸಾವಧಾನರಾಗಿ ಪುನಃ ಇಂಥ ದುಃಖದಿಂದ ತುಂಬಿದ ದೇಹವನ್ನು ಧಾರಣ ಮಾಡುವ ಪ್ರಸಂಗವೇ ಬರಬಾರದಂಥ ಪ್ರಯತ್ನ ಮಾಡುತ್ತಾರೆ. ಸಮ್ಯಗ್ಜ್ಞಾನಿಗಳಂತೂ ಇದನ್ನೇ ಮಹಾ ಸಾತಾದ ಉದಯವೆಂದು ಮನ್ನಿಸುತ್ತಾರೆ.

**ಜ್ಞಾನಿಗಳು ಭಯರಹಿತರಾಗುತ್ತಾರೆ.**

**ಸುಖಂ ದುಃಖಂ ಸದಾ ವೇತ್ತಿ ದೇಹಸ್ಥಶ್ಚ ಸ್ವಯಂ ವ್ರಜೇತ್ ।**
**ಮೃತ್ಯುಭೀತಿಸ್ತದಾ ಕಸ್ಯ ಜಾಯತೇ ಪರಮಾರ್ಥತಃ ॥೯॥**

**ಅರ್ಥ :-** ಈ ಆತ್ಮನು ದೇಹದಲ್ಲಿ ವಾಸಿಸುತ್ತಿದ್ದರೂ ಯಾವಾಗಲೂ ಸುಖ ಮತ್ತು ದುಃಖವನ್ನು ತಿಳಿಯುತ್ತಾನೆ. ಪರಲೋಕದ ಕಡೆಗೆ ಸ್ವಯಂ ಗಮನ ಮಾಡುತ್ತಾನೆ; ಆದರೆ ಪರಮಾರ್ಥದಿಂದ ಮರಣದ ಭಯವು ಯಾರಿಗೆ ಆಗುವುದು?

**ಭಾವಾರ್ಥ :-** ಅಜ್ಞಾನಿಯು ಬಹಿರಾತ್ಮನಿರುವುದರಿಂದ ದೇಹದಲ್ಲಿ ವಾಸಿಸುತ್ತಿದ್ದರೂ ನಾನು ಸುಖಿ, ನಾನು ದುಃಖಿ, ನಾನು ಸಾಯುತ್ತೇನೆ, ನಾನು ಹಸಿದಿದ್ದೇನೆ, ನಾನು ಬಾಯಾರಿದ್ದೇನೆ, ನನ್ನದು ನಾಶವಾಯಿತೆಂದು ಮನ್ನಿಸುತ್ತಾನೆ. ಸಮ್ಯಗ್ದೃಷ್ಟಿಯಾದ ಅಂತರಾತ್ಮನು ಉತ್ಪನ್ನನಾದವನು ಸಾಯಲೇಬೇಕೆಂದು ಮನ್ನಿಸುತ್ತಾನೆ. ಪೃಥ್ವೀ, ಜಲ, ಅಗ್ನಿ, ಪವನಮಯ ಪುದ್ಗಲ ಪರಮಾಣುಗಳ ಪಿಂಡರೂಪವಾಗಿ ಈ ದೇಹವು ಉತ್ಪನ್ನವಾಗಿದೆ ಅದು ವಿನಾಶಶೀಲವಿದೆ. ನಾನು ಜ್ಞಾನಮಯನಾದ ಅಮೂರ್ತಿಕ ಆತ್ಮನಿದ್ದೇನೆ, ನನ್ನ ನಾಶವೆಂದೂ ಆಗುವುದಿಲ್ಲ. ಈ ಹಸಿವು, ಬಾಯಾರಿಕೆ, ವಾತ, ಪಿತ್ತ,ಕಫ, ರೋಗ, ಭಯ, ವೇದನೆಗಳು ಪುದ್ಗಲದ್ದಿವೆ, ನಾನು ಅವುಗಳ ಜ್ಞಾತಾನಿದ್ದೇನೆ. ನಾನು ವ್ಯರ್ಥವಾಗಿಯೇ ಇವುಗಳಲ್ಲಿ ಅಹಂಕಾರ ಮಾಡುತ್ತಿದ್ದೇನೆ.

ಈ ಶರೀರದ ಮತ್ತು ನನ್ನ ಸಂಬಂಧವು ಏಕಕ್ಷೇತ್ರದಲ್ಲಿರುವ ರೂಪವಿದೆ, ಆದರೆ ನನ್ನ ರೂಪವು ಜ್ಞಾತಾ ಇದೆ, ಶರೀರವು ಜಡವಿದೆ ; ನಾನು ಅಮೂರ್ತಿಕನಿದ್ದೇನೆ, ದೇಹವು ಮೂರ್ತಿಕವಿದೆ; ನಾನು ಅಖಂಡ ಏಕನಿದ್ದೇನೆ, ಶರೀರವು ಅನೇಕ ಪರಮಾಣುಗಳ ಪಿಂಡವಿದೆ; ನಾನು ಅವಿನಾಶಿಯಿದ್ದೇನೆ, ದೇಹವು ವಿನಾಶಶೀಲವಿದೆ. ಈಗ ಈ ದೇಹದಲ್ಲಿ ಯಾವ ರೋಗ ಕ್ಷುಧೆಗಳು ಉತ್ಪನ್ನವಾಗುತ್ತವೆ ನಾನು ಅವುಗಳ ಜ್ಞಾತಾನಾಗಿಯೇ ಉಳಿಯುವೆನು, ಏಕೆಂದರೆ ನನ್ನದಂತೂ ಒಂದು ಜ್ಞಾಯಕ ಸ್ವಭಾವವಿದೆ.

**ಪರದಲ್ಲಿ ಮಮತೆ ಮಾಡುವುದೇ ಅಜ್ಞಾನವಿದೆ, ಅದುವೇ ಮಿಥ್ಯಾತ್ವವಿದೆ.** ಯಾವ ಪ್ರಕಾರ ಒಂದು ಮನೆಯನ್ನು ಬಿಟ್ಟು ಇನ್ನೊಂದು ಮನೆಯಲ್ಲಿ ಇರಲಾರಂಭಿಸುತ್ತೇವೆ, ಅದೇ ಪ್ರಕಾರ ನನ್ನ ಶುಭ-ಅಶುಭ ಭಾವಗಳಿಂದ ಕಟ್ಟಿದ ಕರ್ಮಗಳಿಂದ ಆದಂಥ ಇನ್ನೊಂದು ಶರೀರದಲ್ಲಿ ನನಗೆ ಹೋಗುವುದಿದೆ. ಇದರಲ್ಲಿ ನನ್ನ ಸ್ವರೂಪದ ನಾಶವಾಗುವುದಿಲ್ಲ, ಈಗ ನಿಶ್ಚಯದಿಂದ ವಿಚಾರ ಮಾಡಿದ ಮೇಲೆ ಮರಣದ ಭಯವು ಯಾರಿಗೆ ಆಗುವುದು ?

ಸಮಾಧಿ ಮರಣವು ಆನಂದ ಕೊಡುವಂಥದ್ದಿದೆ.

**ಸಂಸಾರಾಸಕ್ತ ಚಿತ್ತಾನಾಂ ಮೃತ್ಯುರ್ಭೀತ್ಯೈಃ ಭವೇನ್ನೃಣಾಮ್ ।**
**ಮೋದಾಯತೇ ಪುನಃ ಸೋऽಪಿ ಜ್ಞಾನವೈರಾಗ್ಯವಾಸಿನಾಮ್ ॥೧೦॥**

**ಅರ್ಥ :-** ಯಾರ ಚಿತ್ತವು ಸಂಸಾರದಲ್ಲಿ ಆಸಕ್ತವಿದೆ, ಯಾರು ತಮ್ಮ ಸ್ವರೂಪವನ್ನು ತಿಳಿಯುವುದಿಲ್ಲ, ಅವರ ಸಲುವಾಗಿ ಮರಣವು ಭಯವನ್ನುಂಟು ಮಾಡುತ್ತದೆ; ಆದರೆ ಯಾರು ತಮ್ಮ ಸ್ವರೂಪದ ಜ್ಞಾತಾರಿದ್ದಾರೆ, ಸಂಸಾರದಿಂದ ವಿರಕ್ತರಿದ್ದಾರೆ ಅವರ ಸಲುವಾಗಿಯಂತೂ ಮರಣವು ಆನಂದದಾಯಕವೇ ಇದೆ.

**ಭಾವಾರ್ಥ :-** ಯಾರು ಮಿಥ್ಯಾದರ್ಶನದ ಉದಯದಿಂದ ಆತ್ಮಜ್ಞಾನ ರಹಿತರಿದ್ದಾರೆ, ದೇಹವನ್ನೇ ಆತ್ಮನೆಂದು ಮನ್ನಿಸುತ್ತಾರೆ, ತಿನ್ನುವುದು-ಕುಡಿಯುವುದು, ಕಾಮಭೋಗ ಮೊದಲಾದ ಇಂದ್ರಿಯ ವಿಷಯಗಳನ್ನೇ ಸುಖವೆಂದು ಮನ್ನಿಸುತ್ತಾರೆ. ಅಂಥ ಬಹಿರಾತ್ಮರುಗಳಿಗಂತೂ ಅವರ ಮರಣವು ಅತಿಶಯ ಭಯವನ್ನುತ್ಪನ್ನ ಮಾಡುವಂಥದ್ದಿದೆ. ಅವರುಗಳಂತೂ ಅಯ್ಯೋ ! ನನ್ನ ನಾಶವಾಯಿತು, ನನಗೆ ಪುನಃ ಆಹಾರ-ಪಾನೀಯಗಳು ಯಾವಾಗ ದೊರಕುತ್ತವೆ ಯಾರಿಗೆ ಗೊತ್ತು ? ನನ್ನ ನಂತರ ಏನಾಗುವುದು, ಹೇಗೆ ಸಾಯುವೆನು, ಈ ಕುಟುಂಬ ಪರಿವಾರದವರೆಲ್ಲರ ಸಮಾಗಮವು ಹೊರಟು ಹೋಗುವುದು, ಈಗ ಯಾರ ಆಶ್ರಯ ಪಡೆಯಲಿ, ಹೇಗೆ ಜೀವಂತವಿರುವೆನು ? ಈ ಪ್ರಕಾರ ಅತ್ಯಂತ ಸಂಕಟಪಡುತ್ತ ಸಾಯುತ್ತಾರೆ.

**ಆತ್ಮಜ್ಞಾನಿಗಳಿಗೆ ಮರಣ ಸಮಯದಲ್ಲಿ ಬರುವ ವಿಚಾರವೇನೆಂದರೆ**, ನಾನಂತೂ ದೇಹರೂಪದ ಕಾರಾಗೃಹದಲ್ಲಿ ಪರಾಧೀನನಾಗಿರುತ್ತ ಇಂದ್ರಿಯ ವಿಷಯಗಳ ಇಚ್ಛೆಯ ದಾಹದಿಂದ ದೊರೆತ ವಿಷಯಗಳ ಅತೃಪ್ತಿಯಿಂದ, ನಿತ್ಯಕ್ಷುಧೆ, ತೃಷೆ, ಶೀತ, ಉಷ್ಣ, ರೋಗಗಳಿಂದ ಉತ್ಪನ್ನವಾದ ಮಹಾವೇದನೆಯಿಂದ ಒಂದು ಕ್ಷಣ ಮಾತ್ರವೂ ಸುಖ ಪಡೆಯಲಿಲ್ಲ, ಮಹಾನ ದುಃಖ, ಪರಾಧೀನತೆ, ಅಪಮಾನ, ಘೋರ ವೇದನೆ, ಅನಿಷ್ಟಸಂಯೋಗ, ಇಷ್ಟವಿಯೋಗಗಳನ್ನು ಭೋಗಿಸುತ್ತ ಮಹಾ ಸಂಕ್ಲೇಶದಿಂದಲೇ ಕಾಲಹರಣ ಮಾಡಿದ್ದೇನೆ. ಈಗ ಇಂಥ ಕಷ್ಟಗಳಿಂದ ಬಿಡಿಸಿ, ಪರಾಧೀನತೆಯಿಲ್ಲದ, ನನ್ನ ಅನಂತ ಸುಖ ಸ್ವರೂಪ, ಜನ್ಮ-ಮರಣರಹಿತ, ಅವಿನಾಶಿಯಾದ ಸ್ಥಾನವನ್ನು ದೊರಕಿಸಿಕೊಡುವಂಥ ಈ ಮರಣದ ಅವಸರವು ಪ್ರಾಪ್ತವಾಗಿದೆ. **ಈ ಮರಣವು ಮಹಾಸುಖ ಕೊಡುವಂಥದ್ದಿದೆ ಅತ್ಯಂತ ಉಪಕಾರಕವಿದೆ.** ಈ ಸಂಸಾರದ ವಾಸವು ಕೇವಲ ದುಃಖರೂಪವಿದೆ. ಇದರಲ್ಲಿ ಒಂದು ಸಮಾಧಿ ಮರಣವೇ ಆಶ್ರಯಭೂತವಿದೆ, ಬೇರಾವ ಸ್ಥಾನವಿಲ್ಲ ; ಇದರ ಹೊರತಾಗಿ ನಾಲ್ಕೂ ಗತಿಗಳಲ್ಲಿ ಮಹಾನ ಕಷ್ಟವನ್ನೇ ಭೋಗಿಸಿದ್ದೇನೆ. ಈಗ ಸಂಸಾರದಿಂದ ಅತ್ಯಂತ ವಿರಕ್ತನಾದ ನಾನು ಸಮಾಧಿ ಮರಣದ ಆಶ್ರಯವನ್ನೇ ಗ್ರಹಣ ಮಾಡುತ್ತೇನೆ.

ಆತ್ಮನನ್ನು ಪರಲೋಕಕ್ಕೆ ಹೋಗುವುದರಿಂದ ಯಾರೂ ತಡೆಯುವ ಸಾಧ್ಯತೆಯಿಲ್ಲ.

**ಪುರಾಧೀಶೋ ಯದಾ ಯಾತಿ ಸ್ವಕೃತಸ್ಯ ಬುಭುತ್ಸಯಾ ।**
**ತದಾಸೌ ವಾರ್ಯತೇ ಕೇನ ಪ್ರಪಂಚೈಃ ಪಂಚಭೌತಿಕೈಃ ॥೧೧॥**

**ಅರ್ಥ :-** ಯಾವ ಸಮಯದಲ್ಲಿ ಈ ಆತ್ಮನು ತಾನು ಮಾಡಿರುವ ಕರ್ಮಗಳ ಫಲವನ್ನು ಭೋಗಿಸುವ ಇಚ್ಛೆಯಿಂದ ಪರಲೋಕಕ್ಕೆ ಹೋಗುತ್ತಾನೆ ಆ ಸಮಯದಲ್ಲಿ ಇವನನ್ನು ಪಂಚಭೂತ (ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ) ಸಂಬಂಧದ ಶರೀರ ಮೊದಲಾದವುಗಳ ಜಂಜಾಟದಿಂದ ಯಾರು ತಡೆಯುವ ಸಾಧ್ಯತೆಯಿದೆ ?

**ಭಾವಾರ್ಥ :-** ಯಾವಾಗ ಈ ಜೀವದ ವರ್ತಮಾನ ಆಯುವು ಪೂರ್ಣವಾಗುತ್ತದೆ, ಮತ್ತು ಅನ್ಯ ಪರಲೋಕ ಸಂಬಂಧದ ಆಯು, ಕಾಯ ಮೊದಲಾದವುಗಳ ಉದಯವು ಬರುತ್ತದೆ ಆಗ ಪರಲೋಕಕ್ಕೆ ಗಮನ ಮಾಡುವಂಥ ಆತ್ಮನನ್ನು ಶರೀರ ಮೊದಲಾದ ಪಂಚಭೂತಗಳಾವವೂ ತಡೆಯುವಲ್ಲಿ ಸಮರ್ಥವಾಗುವುದಿಲ್ಲ, ಆದುದರಿಂದ ನಾಲ್ಕು ಆರಾಧನೆಗಳ ಆಶ್ರಯವನ್ನು ಅತ್ಯಂತ ಉತ್ಸಾಹದೊಡನೆ ಗ್ರಹಣ ಮಾಡಿ ಮರಣ ಹೊಂದುವುದು ಶ್ರೇಷ್ಠವಿದೆ.

**ಸಮಾಧಿ ಮರಣವು ನಿರ್ವಾಣ ಕೊಡುವಂಥದ್ದಿದೆ.**

**ಮೃತ್ಯುಕಾಲೇ ಸತಾಂ ದುಃಖಂ ಯದ್ಭವೇದ್ ವ್ಯಾಧಿಸಂಭವಮ್ ।**
**ದೇಹಮೋಹವಿನಾಶಾಯ ಮನ್ಯೇ ಶಿವಸುಖಾಯ ಚ ॥೧೨॥**

**ಅರ್ಥ :-** ಮರಣದ ಸಮಯದಲ್ಲಿ ಪೂರ್ವ ಕರ್ಮದ ಉದಯದಿಂದ ರೋಗ ಮೊದಲಾದ ವ್ಯಾಧಿಗಳಿಂದ ಯಾವ ದುಃಖವು ಉತ್ಪನ್ನವಾಗುತ್ತದೆ ಅದು ಸತ್ಪುರುಷರಿಗೆ ದೇಹದ ಮಮತೆಯನ್ನು ಬಿಡಿಸುವ ಸಲುವಾಗಿ ಮತ್ತು ನಿರ್ವಾಣದ ಸುಖವನ್ನು ಪ್ರಾಪ್ತ ಮಾಡಿಸುವ ಸಲುವಾಗಿ ಆಗುತ್ತದೆ.

**ಭಾವಾರ್ಥ :-** ಯಾವ ದಿವಸದಿಂದ ಈ ಜೀವನು ಜನ್ಮ ಪಡೆದಿದ್ದಾನೆ ಆ ದಿವಸದಿಂದ ದೇಹದಲ್ಲಿ ತನ್ಮಯನಾಗಿ ಅದರಲ್ಲಿಯೇ ಇರುವುದಕ್ಕೆ ಸುಖವೆಂದು ಮನ್ನಿಸುತ್ತಾನೆ. ಈ ದೇಹವನ್ನು ತನ್ನ ನಿವಾಸ ಸ್ಥಾನವೆಂದು ತಿಳಿಯುತ್ತಾನೆ, ದೇಹದಲ್ಲಿಯೇ ಮಮತೆ ಮಾಡುತ್ತಿದ್ದಾನೆ, ದೇಹದಲ್ಲಿರುವುದರ ಹೊರತು ಬೇರಾವುದೂ ತನ್ನ ಸ್ಥಾನವು ಕಂಡು ಬರುವುದಿಲ್ಲ, ಯಾವಾಗ ಈ ದೇಹದಲ್ಲಿ ರೋಗಾದಿಗಳ ಮೂಲಕ ದುಃಖವು ಉತ್ಪನ್ನವಾಗುತ್ತದೆ ಆಗ ದೇಹದಲ್ಲಿ ಸತ್ಪುರುಷರ ಮೋಹವು ನಷ್ಟವಾಗಿ ಹೋಗುತ್ತದೆ, ಮತ್ತು ಅದು ಪ್ರತ್ಯಕ್ಷ ದುಃಖದಾಯಕ, ಅಸ್ಥಿರ, ವಿನಾಶಶೀಲವಾಗಿ ಕಂಡು ಬರುತ್ತದೆ. ಯಾವಾಗ ದೇಹದ ಕೃತಘ್ನತೆಯು ಪ್ರತ್ಯಕ್ಷವಾಗಿ ಕಂಡು ಬರುತ್ತದೆ ಆಗ ಈ ಆತ್ಮನು ಅವಿನಾಶೀ ಪದದ ಪ್ರಾಪ್ತಿಯ ಸಲುವಾಗಿ ಉದ್ಯಮಶೀಲನಾಗುತ್ತಾನೆ, ವೀತರಾಗತೆಯು ಪ್ರಕಟವಾಗಿ ಬಿಡುತ್ತದೆ.

**ರೋಗವು ಉಪಕಾರಕವಿದೆ. ನಾನು ಈ ದೇಹದಲ್ಲಿ ಮಮತೆ ಮಾಡಿ ಅನಂತಕಾಲ ಜನ್ಮ-ಮರಣ, ಅನೇಕ ವಿಯೋಗ, ರೋಗ, ಸಂತಾಪ ಮತ್ತು ನರಕ ಮೊದಲಾದ ಗತಿಗಳಲ್ಲಿ ಬಹಳಷ್ಟು ದುಃಖ ಭೋಗಿಸಿದ್ದೇನೆ.** ಪುನಃ ಇಂಥ ದುಃಖದಾಯಕ ದೇಹದಲ್ಲಿ ಮಮತೆ ಮಾಡಿ, ಈಗ ಕೂಡ ನನ್ನನ್ನು ಮರೆತು ಏಕೇಂದ್ರಿಯ ಮೊದಲಾದ ಅನೇಕ ಕುಯೋನಿಗಳಲ್ಲಿ ಭ್ರಮಣದ ಕಾರಣವಾದ ಕರ್ಮವನ್ನು ಕಟ್ಟಿಕೊಳ್ಳುವ ಸಲುವಾಗಿ ಮಮತೆ ಮಾಡಲೇನು ? ಈ ಶರೀರದಲ್ಲಿ ಈಗ ಯಾವ ಜ್ವರ, ಶ್ವಾಸ, ಪಿತ್ತ, ವಾತ, ಅತಿಸಾರ, ಮಂದಾಗ್ನಿ ಮೊದಲಾದ ರೋಗಗಳು ಉತ್ಪನ್ನವಾಗುತ್ತವೆ ಅವು ಈ ದೇಹದಲ್ಲಿನ ಮಮತೆಯನ್ನು ಕಡಿಮೆ ಮಾಡುವ ಸಲುವಾಗಿ ನನ್ನ ಮೇಲೆ ಮಹೋಪಕಾರ ಮಾಡುತ್ತಿವೆ, ಧರ್ಮದಲ್ಲಿ ಸಾವಧಾನತೆಯನ್ನು ಉಂಟು ಮಾಡಿಸುತ್ತಿವೆಯೆಂಬ ವಿಚಾರವು ಉತ್ಪನ್ನವಾಗುತ್ತದೆ.

ರೋಗಾದಿಗಳು ಉತ್ಪನ್ನವಾಗದಿದ್ದರೆ ದೇಹದಲ್ಲಿರುವ ನನ್ನ ಮಮತೆಯೂ ಕಡಿಮೆಯಾಗುವುದಿಲ್ಲ ಮತ್ತು ಅಭಿಮಾನವೂ ಕಡಿಮೆಯಾಗುವುದಿಲ್ಲ, **ನಾನಂತೂ ಮೋಹದ ಅಂಧಕಾರದಲ್ಲಿ ಅಂಧನಾಗಿ ದೇಹವನ್ನು ಅಜರ-ಅಮರವೆಂದು ಮನ್ನಿಸುತ್ತಿದ್ದೆನು.** ಈಗ ಈ ರೋಗಗಳ ಉತ್ಪತ್ತಿಯು ನನ್ನನ್ನು ಸಚೇತಗೊಳಿಸಿದೆ. ಈಗ ಈ ದೇಹವನ್ನು ಅನಿತ್ಯ-ಅಶರಣವೆಂದು ತಿಳಿದುಕೊಂಡು, ಜ್ಞಾನ-ದರ್ಶನ-ಚಾರಿತ್ರ-ತಪಗಳನ್ನೇ ಒಂದು ನಿಶ್ಚಯ ಶರಣವೆಂದು ಮನ್ನಿಸಿ, ಆರಾಧನೆಗಳ ಧಾರಕರಾದ ಪಂಚ ಪರಮೇಷ್ಠೀ ಭಗವಂತರುಗಳನ್ನು ಚಿತ್ತದಲ್ಲಿ ಧಾರಣ ಮಾಡುತ್ತೇನೆ.

**ಈಗ ಈ ಸಮಯದಲ್ಲಿ ನಮ್ಮ ಸಲುವಾಗಿ ಒಂದು ಜಿನೇಂದ್ರರ ವಚನರೂಪವಿರುವ ಅಮೃತವೇ ಪರಮ ಔಷಧವಿದೆ. ಜಿನೇಂದ್ರರ ವಚನಾಮೃತವನ್ನು ಹೊರತು ಪಡಿಸಿ ವಿಷಯ-ಕಷಾಯರೂಪ ರೋಗಜನಿತ ದಾಹವನ್ನು ನಷ್ಟ ಮಾಡುವಲ್ಲಿ ಯಾರೂ ಸಮರ್ಥರಿಲ್ಲ,** ಬಾಹ್ಯ ಔಷಧ ಮೊದಲಾದುವಂತೂ ಅಸಾತಾ ಕರ್ಮದ ಮಂದ ಉದಯವಾದ ಮೇಲೆ ಸ್ವಲ್ಪ ಸಮಯದ ಸಲುವಾಗಿ ಯಾವುದಾದರೊಂದು ರೋಗವನ್ನು ಶಾಂತ ಮಾಡಿ ಬಿಡುತ್ತದೆ; ಆದರೆ ಈ ದೇಹವಂತೂ ಅನೇಕ ರೋಗಗಳಿಂದ ತುಂಬಿಕೊಂಡಿದೆ, ಒಂದು ರೋಗವು ನಾಶವಾದರೆ ಅನ್ಯ ರೋಗಗಳಿಂದ ಆಗುವಂಥ ವೇದನೆಯನ್ನು ಭೋಗಿಸಿಯೂ ಕೂಡ ಮತ್ತೆ ಮರಣವನ್ನಂತೂ ಹೊಂದಲೇ ಬೇಕಾಗುವುದು. ಆದುದರಿಂದ ಜನ್ಮ-ಜರೆ-ಮರಣಗಳರೂಪದ ರೋಗವನ್ನುದೂರ ಮಾಡುವಂಥ ಭಗವಂತರ ಉಪದೇಶರೂಪದ ಅಮೃತವನ್ನೇ ಪಾನ ಮಾಡುತ್ತಾನೆ.

ಔಷಧ ಮೊದಲಾದ ಸಾವಿರಾರು ಉಪಾಯ ಮಾಡಿದರೂ ಕೂಡ ವಿನಾಶಶೀಲವಾದ ದೇಹದ ರೋಗಗಳು ನಾಶವಾಗಲಾರವು. ಅದಕ್ಕಾಗಿ ರೋಗದಿಂದ ದುಃಖಿಯಾಗಿ ಕುಗತಿಯ ಕಾರಣವಾದ ದುರ್ಧ್ಯಾನ ಮಾಡುವುದು ಉಚಿತವಿಲ್ಲ.

ರೋಗವು ಬಂದ ಮೇಲೆ ಕೂಡ ಅದನ್ನು ಹಿತವೆಂದು ಮನ್ನಿಸಬೇಕು. ಏಕೆಂದರೆ ರೋಗದ ಪ್ರಭಾವದಿಂದಲೇ ಇಂಥ ಜೀರ್ಣ ಕೊಳೆತ ಶರೀರದೊಳಗಿಂದ ನಾನು ಬಿಡುಗಡೆ ಹೊಂದುವೆನು. ರೋಗವು ಬಾರದಿರುತ್ತಿದ್ದರೆ ನನ್ನ ಪೂರ್ವಕೃತ

ಕರ್ಮದ ನಿರ್ಜರೆಯಾಗುತ್ತಿರಲಿಲ್ಲ, ಮತ್ತು ದೇಹರೂಪದ ಮಹಾದುರ್ಗಂಧಿತ ದುಃಖದಾಯಕವಾದ ಕಾರಾಗೃಹದಿಂದ ನನ್ನ ಶೀಘ್ರ ಬಿಡುಗಡೆಯಾಗುತ್ತಿರಲಿಲ್ಲ. **ಈ ರೋಗರೂಪದ ಮಿತ್ರನ ಸಹಾಯವು ಹೇಗೆ ಹೇಗೆ ದೇಹದಲ್ಲಿ ವೃದ್ಧಿಸುತ್ತ ಹೋಗುತ್ತದೆ ಹಾಗೆ-ಹಾಗೆಯೇ ನನಗೆ ರಾಗಬಂಧನದಿಂದ, ಕರ್ಮಬಂಧನದಿಂದ ಶರೀರ ಬಂಧನದಿಂದ ಬಿಡುಗಡೆಯಾಗುವಲ್ಲಿ ಶೀಘ್ರತೆಯಾಗುತ್ತದೆ.**

ಈ ರೋಗವಂತೂ ದೇಹದಲ್ಲಿದೆ, ಅದು ದೇಹವನ್ನೇ ನಷ್ಟ ಮಾಡುವುದು. ಆತ್ಮನಾದ ನಾನಂತೂ ಅಮೂರ್ತಿಕ ಚೈತನ್ಯಸ್ವಭಾವೀ ಅವಿನಾಶಿಯಿದ್ದೇನೆ, ಜ್ಞಾತಾನಿದ್ದೇನೆ. ಈ ರೋಗಜನಿತ ದುಃಖವು ನನಗೆ ತಿಳಿಯುವುದರಲ್ಲಿ ಬರುತ್ತದೆ ನಾನಂತೂ ಕೇವಲ ತಿಳಿದುಕೊಳ್ಳುವವನೇ ಇದ್ದೇನೆ, ಇದರ ಜತೆಯಲ್ಲಿ ನನ್ನ ನಾಶವಾಗಲಾರದು. ಯಾವ ಪ್ರಕಾರ ಲೋಹದ ಸಂಗತಿಯಲ್ಲಿ ಅಗ್ನಿಯೂ ಸುತ್ತಿಗೆಯ ಆಘಾತವನ್ನು ಸಹಿಸುತ್ತದೆ. ಅದೇ ಪ್ರಕಾರ ಶರೀರದ ಸಂಗತಿಯಿಂದ ವೇದನೆಯ ಜ್ಞಾನವು ನನಗೂ ಆಗುತ್ತದೆ. **ಹೇಗೆ ಅಗ್ನಿಯಿಂದ ಗುಡಿಸಿಲು ಸುಡುತ್ತದೆ, ಆದರೆ ಗುಡಿಸಿಲಿನ ಒಳಗಿನ ಆಕಾಶವು ಸುಡುವುದಿಲ್ಲ; ಹಾಗೆಯೇ ಅವಿನಾಶೀ ಅಮೂರ್ತಿಕ ಚೈತನ್ಯಧಾತುಮಯನಾದ ಆತ್ಮನು ರೋಗರೂಪದ ಅಗ್ನಿಯಿಂದ ನಾಶ ಹೊಂದುವುದಿಲ್ಲ.**

ತನ್ನ ಮೂಲಕ ಕಟ್ಟಲ್ಪಟ್ಟ ಕರ್ಮವು ಉದಯದಲ್ಲಿ ಬಂದ ಮೇಲೆ ತನಗೆ ಭೋಗಿಸಲೇಬೇಕಾಗುವುದು. ಅಧೀರನಾಗಿ ಭೋಗಿಸಿದರೆ ಕರ್ಮವು ಬಿಡಲಾರದು ಮತ್ತು ಧೈರ್ಯಧಾರಣ ಮಾಡಿ ಭೋಗಿಸಿದರೂ ಕರ್ಮವು ಬಿಡಲಾರದು ಆದುದರಿಂದ ಉಭಯ ಲೋಕಗಳನ್ನು ಕೆಡಿಸುವಂಥ ಅಧೀರತೆಗೆ ಧಿಕ್ಕಾರವಿರಲಿ. ಕರ್ಮದ ನಾಶ ಮಾಡುವಂಥ ಧೈರ್ಯ ಧಾರಣ ಮಾಡುವುದೇ ಶ್ರೇಷ್ಠವಿದೆ.

**ಎಲೈ ಆತ್ಮನೇ ! ನೀನು ರೋಗವು ಬಂದ ಮೇಲೆ ಎಷ್ಟು ಅಧೀರನಾಗುತ್ತಿರುವೆ ಒಂದಿಷ್ಟು ವಿಚಾರ ಮಾಡು.** ನರಕದಲ್ಲಿ ಈ ಜೀವನು ಯಾವ-ಯಾವ ಕಷ್ಟ ಭೋಗಿಸಿಲ್ಲ ! ಅಲ್ಲಿಯಂತೂ ಅಸಂಖ್ಯಾತ ಬಾರಿ ಅನಂತ ಬಾರಿ ಹೊಡೆಸಿಕೊಂಡಿರುವೆ, ಸುಡಿಸಿಕೊಂಡಿರುವೆ ; ಇಲ್ಲಿ ನಿನ್ನ ಸಲುವಾಗಿ ಅದೆಷ್ಟು ದುಃಖವಿದೆ ? ತಿರ್ಯಂಚ ಗತಿಯ ಘೋರ ದುಃಖವನ್ನು ಕೇವಲಿ ಭಗವಂತರು ಕೂಡ ವಚನದ ಮೂಲಕ ಹೇಳುವಲ್ಲಿ ಸಮರ್ಥರಿಲ್ಲ. ನಾನು ಈ ಮೊದಲು ತಿರ್ಯಂಚ ಪರ್ಯಾಯದಲ್ಲಿ ಅನಂತ ಬಾರಿ ಅಗ್ನಿಯಲ್ಲಿ ಸುಟ್ಟು ಸತ್ತು ಹೋಗಿದ್ದೇನೆ; ಅನಂತಬಾರಿ ನೀರಿನಲ್ಲಿ ಮುಳುಗಿ ಸತ್ತಿದ್ದೇನೆ; ಅನಂತ ಬಾರಿ ವಿಷ ಭಕ್ಷಣ ಮಾಡಿ ಸತ್ತಿದ್ದೇನೆ; ಅನಂತ ಬಾರಿ ಸಿಂಹ ಹುಲಿಗಳಿಂದ ವಿದಾರಿಸಿ ಹೋಗಿದ್ದೇನೆ ; ಶಸ್ತ್ರಗಳಿಂದ ಛೇದಿಸಿ ಹೋಗಿದ್ದೇನೆ ; ಅನಂತ ಬಾರಿ ಶೀತ ವೇದನೆಯಿಂದ, ಉಷ್ಣತೆಯ ವೇದನೆಯಿಂದ, ಕ್ಷುಧೆಯ ವೇದನೆಯಿಂದ, ತೃಷೆಯ ವೇದನೆಯಿಂದ ಸತ್ತಿದ್ದೇನೆ, ಈಗ ಈ ರೋಗಜನಿತ ವೇದನೆಯು ಅದೆಷ್ಟು ಇದೆ ?

ರೋಗವಂತೂ ನನಗೆ ಉಪಕಾರವನ್ನೇ ಮಾಡುತ್ತಿದೆ. ರೋಗವು ಉತ್ಪನ್ನವಾಗದಿದ್ದರೆ ದೇಹದಲ್ಲಿನ ನನ್ನ ಸ್ನೇಹವು ಕಡಿಮೆಯಾಗುವುದಿಲ್ಲ ; ಎಲ್ಲರಿಂದ ಬಿಡುಗಡೆ ಹೊಂದಿ ಪರಮಾತ್ಮನ ಆಶ್ರಯ ಪಡೆಯುತ್ತಿರಲಿಲ್ಲ. ಆದುದರಿಂದ ಈ ಸಮಯದಲ್ಲಿ ಯಾವ ರೋಗವಾಗಿದೆ ಅದು ಕೂಡ ನನ್ನ ಆರಾಧನೆಯ ಮರಣದಲ್ಲಿ ಪ್ರೇರಣೆ ನೀಡುವಂಥ ಮಿತ್ರವೇ ಇದೆ. ಈ ಪ್ರಕಾರ ವಿಚಾರ ಮಾಡುವಂಥ ಜ್ಞಾನಿಗಳು ರೋಗ ಬಂದ ಮೇಲೆ ಕೂಡ ಕ್ಲೇಶ ಪಡುವುದಿಲ್ಲ. ಅವರಂತೂ ಮೋಹದ ನಾಶ ಮಾಡುವ ಉತ್ಸವವೆಂದೇ ಮನ್ನಿಸುತ್ತಾರೆ.

**ಸಮಾಧಿ ಮರಣವಂತೂ ಅಮೃತವನ್ನೇ ಕೊಡುವಂಥದ್ದಿದೆ.**

**ಜ್ಞಾನಿನೋಽಮೃತಸಂಗಾಯ ಮೃತ್ಯುಸ್ತಾಪ ಕರೋಽಪಿ ಸನ್ ।**
**ಆಮಕುಂಭಸ್ಯ ಲೋಕೇಽಸ್ಮಿನ್ ಭವೇತ್ಪಾಕ ವಿಧಿರ್ಯಥಾ ॥೧೩॥**

**ಅರ್ಥ :-** ಈ ಲೋಕದಲ್ಲಿ ಮರಣವಂತೂ ಸಮಸ್ತ ಪ್ರಾಣಿಕೋಟಿಯನ್ನು ತಲ್ಲಣಗೊಳಿಸುವಂಥದ್ದಿದೆ ; ಆದರೆ ಸಮ್ಯಗ್ಜ್ಞಾನೀ ಜೀವರುಗಳ ಸಲುವಾಗಿಯಂತೂ ಅದು ಅಮೃತದ ಸಂಗತಿ ಎಂದರೆ ಮೋಕ್ಷ ಪ್ರಾಪ್ತ ಮಾಡಿಸುವಂಥದ್ದಿದೆ. ಯಾವ ಪ್ರಕಾರ ಅಮೃತ ರೂಪದ ಜಲವನ್ನು ತುಂಬುವ ಸಲುವಾಗಿ ಮಣ್ಣಿನ ಹಸಿಕೊಡವನ್ನು ಬೆಂಕಿಯಲ್ಲಿ ಸುಡಲಾಗುತ್ತದೆ, ಒಂದು ವೇಳೆ ಹಸಿ ಕೊಡವನ್ನು ವಿಧಿಪೂರ್ವಕ ಅಗ್ನಿಯಲ್ಲಿ ಸುಡದೆ ಹೋದರೆ ಆ ಕೊಡದಲ್ಲಿ ನೀರನ್ನು ಹಾಕಲಾಗುವುದಿಲ್ಲ; ಒಂದು ಬಾರಿ ಅಗ್ನಿಯಲ್ಲಿ ಸುಟ್ಟ ನಂತರ ಆ ಕೊಡದಲ್ಲಿ ಅಧಿಕ ಸಮಯದವರೆಗೆ ನೀರು ತುಂಬಿ ಇಡಬಹುದಾಗಿದೆ. ಅದೇ ಪ್ರಕಾರ ಮರಣದ ಸಮಯದಲ್ಲಿ ಒಂದು ಬಾರಿ ಸಮಭಾವದಿಂದ ದುಃಖ ಸಹನೆ ಮಾಡಿದರೆ ಈ ಜೀವನು ನಿರ್ವಾಣಕ್ಕೆ ಪಾತ್ರನಾಗಿ ಹೋಗುತ್ತಾನೆ.

**ಭಾವಾರ್ಥ :-** ಅಜ್ಞಾನಿಗಂತೂ ಮರಣದ ಹೆಸರಿನಿಂದಲೇ ಪರಿಣಾಮದಲ್ಲಿ ಕಷ್ಟವಾಗಲಾರಂಭಿಸುತ್ತದೆ. ಈಗ ನಾನು ಹೊರಟೆನು, ಈಗ ಹೇಗೆ ಜೀವಿಸಲಿ, ಏನು ಮಾಡಲಿ, ಯಾರು ರಕ್ಷಣೆ ಮಾಡುವವರು ? ಈ ಪ್ರಕಾರ ದುಃಖಿಯಾಗತೊಡಗುತ್ತಾನೆ, ಏಕೆಂದರೆ ಅವನಂತೂ ಬಹಿರಾತ್ಮನಿದ್ದಾನೆ. ದೇಹ ಮೊದಲಾದ ಬಾಹ್ಯ ವಸ್ತುವನ್ನೇ ಆತ್ಮನೆಂದು ಮನ್ನಿಸುತ್ತಾನೆ. ಆದರೆ ಜ್ಞಾನೀ ಸಮ್ಯಗ್ದೃಷ್ಟಿಯಂತೂ ಆಯುಕರ್ಮ ಮೊದಲಾದವುಗಳ ನಿಮಿತ್ತದಿಂದಲೇ ದೇಹದ ಧಾರಣವಿದೆ. ಅದು ತನ್ನ ಸ್ಥಿತಿಯು ಪೂರ್ಣವಾದ ಮೇಲೆ ಅವಶ್ಯವಾಗಿ ನಾಶ ಹೊಂದುವುದೆಂದು ಮನ್ನಿಸುತ್ತಾನೆ. **ಆತ್ಮನಾದ ನಾನು ಅವಿನಾಶೀ ಜ್ಞಾನಸ್ವರೂಪನಿದ್ದೇನೆ, ಜೀರ್ಣವಾದ ದೇಹವನ್ನು ಬಿಟ್ಟುಕೊಟ್ಟು ನವೀನ ಶರೀರದಲ್ಲಿ ಪ್ರವೇಶ ಮಾಡುವಲ್ಲಿ ನನ್ನದು ಸ್ವಲ್ಪ ಕೂಡ ಹಾನಿಯಿಲ್ಲ.**

**ಸಮಾಧಿ ಮರಣವು ಮಹಾನ ತಪವಿದ್ದು ಅದು ಮುಕ್ತಿಯ ಸರಳ ಉಪಾಯವಿದೆ.**

**ಯತ್ಫಲಂ ಪ್ರಾಪ್ಯತೇ ಸದಭಿರ್ವ್ರತಾಯಾ ಸವಿಡಂಬನಾತ್ ।**
**ತತ್ಫಲಂ ಸುಖಸಾಧ್ಯಂ ಸ್ಯಾನ್ಮೃತ್ಯುಕಾಲೇ ಸಮಾಧಿನಾ ॥೧೪॥**

**ಅರ್ಥ :-** ಸತ್ಪುರುಷರು ಯಾವ ಫಲವನ್ನು ಅತ್ಯಂತ ಖೇದಪೂರ್ವಕ ವ್ರತಗಳನ್ನು ಪಾಲಿಸುವುದರಿಂದ ಪ್ರಾಪ್ತ ಮಾಡಿಕೊಳ್ಳುತ್ತಾರೆ ಆ ಫಲವನ್ನು ಮರಣದ ಸಮಯದಲ್ಲಿ ಸ್ವಲ್ಪ ಸಮಯ ಮಾತ್ರ ಸುಖಪೂರ್ವಕ ಶುಭಧ್ಯಾನರೂಪ ಸಮಾಧಿ ಮರಣದ ಸಾಧನೆ ಮಾಡುವುದರಿಂದ ಪ್ರಾಪ್ತವಾಗಿ ಬಿಡುತ್ತದೆ.

**ಭಾವಾರ್ಥ :-** ಸ್ವರ್ಗದಲ್ಲಿ ಇಂದ್ರ ಪದ ಮತ್ತು ಪರಂಪರೆಯಿಂದ ನಿರ್ವಾಣ ಪದವು ಐದು ಮಹಾ ವ್ರತಗಳನ್ನು ಧಾರಣ ಮಾಡುವುದರಿಂದ ಮತ್ತು ಘೋರ ತಪಸ್ಸು ಮಾಡುವುದರಿಂದ ಪ್ರಾಪ್ತವಾಗುತ್ತದೆ, ಆ ಪದವು ಮರಣದ ಸಮಯದಲ್ಲಿ ದೇಹ-ಕುಟುಂಬದ ಮೇಲಿನ ಮಮತೆಯನ್ನು ಬಿಟ್ಟುಕೊಟ್ಟು, ಭಯರಹಿತನಾಗಿ, **ವೀತರಾಗತೆಯೊಡನೆ ನಾಲ್ಕು ಆರಾಧನೆಗಳ ಗ್ರಹಣ ಮಾಡಿ, ಅಧೀರತೆಯನ್ನು ಬಿಟ್ಟುಕೊಟ್ಟು, ತಮ್ಮ ಜ್ಞಾಯಕ ಸ್ವಭಾವದ ಅವಲಂಬನೆ ಪಡೆದು ಮರಣ ಹೊಂದಿದರೆ ಸಹಜದಲ್ಲಿ ಸಿದ್ಧವಾಗುತ್ತದೆ ;** ಮತ್ತು ಸ್ವರ್ಗ ಲೋಕದಲ್ಲಿ ಮಹರ್ದ್ಧಿಕ ದೇವನಾಗುತ್ತಾನೆ. ಅಲ್ಲಿಂದ ಚ್ಯುತನಾಗಿ ಬಂದು ಉತ್ತಮ ಕುಲದಲ್ಲಿ ಉತ್ಪನ್ನನಾಗಿ, ಉತ್ತಮ ಸಂಹನನ ಮೊದಲಾದ ಸಾಮಗ್ರಿಗಳನ್ನು ಪಡೆದು, ದೀಕ್ಷೆ ಧಾರಣ ಮಾಡಿ, ರತ್ನತ್ರಯದ ಪೂರ್ಣತೆಗೆ ಪ್ರಾಪ್ತನಾಗಿ, ನಿರ್ವಾಣಕ್ಕೆ ಹೊರಟು ಹೋಗುತ್ತಾನೆ.

**ಸಮಾಧಿ ಧಾರಕನು ಉತ್ತಮ ಗತಿಯಲ್ಲಿಯೇ ಹೋಗುತ್ತಾನೆ.**

**ಅನಾರ್ತಃ ಶಾಂತಿಮಾನ್ಮರ್ತ್ಯೋ ನ ತಿರ್ಯಕ್ ನಾಪಿ ನಾರಕಃ ।**
**ಧರ್ಮಧ್ಯಾನೀ ಪುರೋ ಮರ್ತ್ಯೋಽನಶನೀತ್ವಮರೇಶ್ವರಃ ॥೧೫॥**

**ಅರ್ಥ ፡-** ಯಾವನು ಮರಣದ ಸಮಯದಲ್ಲಿ ಆರ್ತ ಎಂದರೆ ದುಃಖರೂಪದ ಪರಿಣಾಮ ಮಾಡುವುದಿಲ್ಲ, ಮತ್ತು ಶಾಂತಿವಂತ ಎಂದರೆ ರಾಗ-ದ್ವೇಷರಹಿತನಾಗಿ ಸಮಭಾವರೂಪದ ಪರಿಣಾಮವಿಡುತ್ತಾನೆ, ಆ ಪುರುಷನು ತಿರ್ಯಂಚ ಮತ್ತು ನಾರಕಿಯಾಗುವುದಿಲ್ಲ. ಯಾವನು ಧರ್ಮಧ್ಯಾನದೊಡನೆ ಅನಶನ ವ್ರತ ಧಾರಣ ಮಾಡಿ ಮರಣ ಹೊಂದುತ್ತಾನೆ ಅವನು ಸ್ವರ್ಗಲೋಕದಲ್ಲಿ ಇಂದ್ರನಾಗುತ್ತಾನೆ ಮತ್ತು ಮಹರ್ದ್ಧಿಕ ದೇವನಾಗುತ್ತಾನೆ. ಇತರ **ಹೀನ ಪರ್ಯಾಯಗಳನ್ನು ಪಡೆಯುವುದಿಲ್ಲವೆಂಬುದು ನಿಯಮವಿದೆ.**

**ಭಾವಾರ್ಥ ፡-** ಈ ಉತ್ತಮ ಮರಣದ ಅವಸರ ಪಡೆದು ಆರಾಧನೆ ಸಹಿತ ಮರಣ ಹೊಂದುವ ಯತ್ನ ಮಾಡಬೇಕು. ಮರಣವು ಬಂದ ಮೇಲೆ ಭಯಭೀತನಾಗಿ ಪರಿಗ್ರಹದಲ್ಲಿ ಮಮತೆ ಮಾಡಿ ಆರ್ತ ಪರಿಣಾಮದಿಂದ ಮರಣ ಹೊಂದಿ ಕುಗತಿಗಳಲ್ಲಿ ಹೋಗಬೇಡಿರಿ. ಇಂಥ ಅವಸರವು ಅನಂತ ಭವಗಳಲ್ಲಿ ದೊರಕುವುದಿಲ್ಲ, ಮತ್ತು ಮರಣವು ಬಿಡುವುದಿಲ್ಲ, ಆದುದರಿಂದ ಸಾವಧಾನರಾಗಿ ಧರ್ಮಧ್ಯಾನದೊಡನೆ ಧೈರ್ಯ ಧಾರಣ ಮಾಡಿ ದೇಹದ ತ್ಯಾಗ ಮಾಡಬೇಕಾಗುವುದು.

**ಸಮಸ್ತ ತಪಸ್ಸು ಒಂದು ಸಮಾಧಿಯ ಸಲುವಾಗಿ ಇದೆ.**

**ತಪ್ತಸ್ಯ ತಪಸಶ್ಚಾಪಿ ಪಾಲಿತಸ್ಯ ವ್ರತಸ್ಯ ಚ ।**
**ಪಠಿತಸ್ಯ ಶ್ರುತಸ್ಯಾಪಿ ಫಲಂ ಮೃತ್ಯುಃ ಸಮಾಧಿನಾ ।।೧೬।।**

**ಅರ್ಥ ፡-** ತಪಗಳ ಮೂಲಕ ತಪಸ್ಸು ಮಾಡುವ, ವ್ರತಗಳನ್ನು ಪಾಲಿಸುವ, ಮತ್ತು ಶ್ರುತಗಳನ್ನು ಪಠಿಸುವ ಫಲವಂತೂ ಸಮಾಧಿ ಎಂದರೆ ತಮ್ಮ ಆತ್ಮನ ಸಾವಧಾನತೆಯೊಡನೆ ಮರಣ ಹೊಂದುವುದೇ ಇದೆ.

**ಭಾವಾರ್ಥ ፡-** ಎಲೈ ಆತ್ಮನೇ ! ನೀನು ಜೀವನದಲ್ಲಿ ಅಧಿಕ ಸಮಯದವರೆಗೆ ಇಂದ್ರಿಯ ವಿಷಯಗಳ ಇಚ್ಛೆಯಿಂದ ರಹಿತನಾಗಿ ಅನಶನ ಮೊದಲಾದ **ತಪಸ್ಸು** ಮಾಡಿರುವೆ, ಅದು ಕೊನೆಯ ಸಮಯದಲ್ಲಿ ಆಹಾರಾದಿಗಳ ತ್ಯಾಗದೊಡನೆ, ಸಂಯಮಸಹಿತ, ದೇಹದ ಮಮತೆಯಿಂದ ರಹಿತನಾಗಿ ಸಮಾಧಿ ಮರಣ ಮಾಡುವ ಸಲುವಾಗಿ ಮಾಡಿದೆ. ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಪರಿಗ್ರಹದ ತ್ಯಾಗ ಮೊದಲಾದ **ವ್ರತ**ಧಾರಣ ಮಾಡಿರುವೆ, ಅವೆಲ್ಲವು ದೇಹ ಮೊದಲಾದ ಪರಿಗ್ರಹದಲ್ಲಿನ ಮಮತೆಯನ್ನು ತ್ಯಾಗ ಮಾಡಿ, ಮನ-ವಚನ-ಕಾಯದಿಂದ ಸಮಸ್ತ ಆರಂಭಾದಿಗಳ ತ್ಯಾಗ ಮಾಡಿ, ಶತ್ರು-ಮಿತ್ರರುಗಳಲ್ಲಿ ಸಮಸ್ತ ವೈರ-ರಾಗವನ್ನು ಬಿಟ್ಟುಕೊಟ್ಟು, ಉಪಸರ್ಗದಲ್ಲಿ ಧೈರ್ಯ ಧಾರಣ ಮಾಡಿ, ತನ್ನ ಒಂದು ಜ್ಞಾಯಕ ಸ್ವಭಾವದ ಅವಲಂಬನೆ ಪಡೆದು ಸಮಾಧಿ ಮರಣ ಮಾಡುವ ಸಲುವಾಗಿ ಮಾಡಲಾಗಿದೆ ಮತ್ತು ಸಮಸ್ತ **ಶ್ರುತ ಜ್ಞಾನ**ದ ಪಠನ ಮಾಡಿರುವುದೂ ಕೂಡ ಸಂಕ್ಲೇಶ ರಹಿತ ಧರ್ಮಧ್ಯಾನ ಸಹಿತರಾಗಿ, ದೇಹಾದಿಗಳಿಂದ ಭಿನ್ನವಾದ ತನ್ನ ಸ್ವರೂಪವನ್ನು ತಿಳಿದುಕೊಂಡು, ಭಯರಹಿತ, **ಸಮಾಧಿ ಮರಣದ ಸಲುವಾಗಿಯೇ ವಿದ್ಯೆಯ ಆರಾಧನೆಯಲ್ಲಿ ಕಾಲ ವ್ಯತೀತ ಮಾಡಲಾಗಿದೆ.**

ಮರಣದ ಸಮಯದಲ್ಲಿ ಕೂಡ ಮಮತೆ, ಭಯ, ದ್ವೇಷ, ಅಧೀರತೆ, ದೀನತೆಗಳನ್ನು ಬಿಟ್ಟುಕೊಡದಿದ್ದರೆ ಇಷ್ಟು ಸಮಯದವರೆಗೆ ತಪ ಮಾಡಿದೆ. ವ್ರತ ಪಾಲಿಸಿದೆ, ಶ್ರುತದ ಅಧ್ಯಯನ ಮಾಡಿದೆ ಅವೆಲ್ಲವೂ ನಿರರ್ಥಕವಾಗಿ ಹೋಗುವವು. ಆದುದರಿಂದ ಈ ಮರಣದ ಸಮಯದಲ್ಲಿ ಸಾವಧಾನತೆಯನ್ನು ಬಿಟ್ಟು ಕೊಡಬೇಡ.

**ಜೀರ್ಣವಾದ ಶರೀರದಲ್ಲಿ ಪ್ರೀತಿ ಮಾಡುವುದು ಒಳ್ಳೆಯದಲ್ಲ,**

**ಅತಿಪರಿಚಿತೇಷ್ವವಜ್ಞಾನವೇ ಭವೇತ್ಪ್ರೀತಿರಿತಿ ಹಿ ಜನವಾದಃ ।**
**ಚಿರತರ ಶರೀರ ನಾಶೇ ನವತರ ಲಾಭೇ ಚ ಕಿಂ ಭೀರುಃ ।।೧೭।।**

**ಅರ್ಥ ፡-** ಯಾವ ವಸ್ತುವಿನ ವಿಶೇಷ ಸೇವನೆ - ವಿಶೇಷ ಪರಿಚಯವಾಗುತ್ತದೆ ಅದರಲ್ಲಿ ಅವಜ್ಞೆ-ಅನಾದರವಾಗಲಾರಂಭಿಸುತ್ತದೆ, ರುಚಿ ಕಡಿಮೆಯಾಗುತ್ತದೆ; ಯಾವುದರ ಪರಿಚಯವು ನವೀನವಾಗುತ್ತದೆ ಅದರಲ್ಲಿ ಅಧಿಕ ಪ್ರೀತಿಯಾಗುತ್ತದೆಯೆಂಬ ಮಾತು ಪ್ರಸಿದ್ಧವಿದೆ; ಆದರೆ ಎಲೈ ಜೀವನೇ ! ನೀನು ಈ ಶರೀರದ ಸೇವನೆಯನ್ನು ಅಧಿಕ ಸಮಯದಿಂದ ಮಾಡಿರುವೆ, ಈಗ ಇದರ ನಾಶವಾದ ಮೇಲೆ ನವೀನ ಶರೀರದ ಪ್ರಾಪ್ತಿಯಾಗುವುದರಿಂದೇಕೆ ಹೆದರುತ್ತಿರುವೆ ? ಭಯಪಡುವುದು ಉಚಿತವಾಗಿಲ್ಲ.

**ಭಾವಾರ್ಥ ፡-** ಯಾವ ಶರೀರವನ್ನು ಅಧಿಕ ಕಾಲದವರೆಗೆ ಭೋಗಿಸಿ ಜೀರ್ಣ ಮಾಡಿರುವೆ, ಸಾರರಹಿತ-ಬಲರಹಿತ ಮಾಡಿರುವೆ, ಮತ್ತು ನವೀನ ಉಜ್ವಲ ದೇಹಧಾರಣ ಮಾಡುವ ಅವಸರವು ಬಂದಿರುವಾಗ ಈಗ ಭಯಪಡುವುದೇಕೆ ? ಈ ಜೀರ್ಣವಾದ ದೇಹವಂತೂ ನಷ್ಟವಾಗಿಯೇ ಹೋಗುವುದು. ಇದರಲ್ಲಿ ಮಮತೆಯ ಧಾರಣ ಮಾಡಿ ಮರಣ ಕೆಡಿಸಿಕೊಂಡು ದುರ್ಗತಿಗೆ ಕಾರಣವಾಗುವ ಕರ್ಮವನ್ನು ಕಟ್ಟಿಕೊಳ್ಳುವುದು ಯೋಗ್ಯವಲ್ಲ.

**ಸಮಾಧಿ ಮರಣದಿಂದ ಉತ್ತಮಗತಿಯ ಪ್ರಾಪ್ತಿಯಾಗುತ್ತದೆ.**

**ಸ್ವರ್ಗಾದಿತ್ಯ ಪವಿತ್ರನಿರ್ಮಲಕುಲೇ ಸಂಸ್ಮರ್ಯಮಾಣಾ ಜನೈಃ**
**ದತ್ವಾ ಭಕ್ತಿವಿಧಾಯಿನಾಂ ಬಹುವಿಧಂ ವಾಂಛಾನುರೂಪಂ ಧನಮ್ ।**
**ಭುಕ್ತ್ವಾ ಭೋಗಮಹರ್ನಿಶಂ ಪರಕೃತಂ ಸ್ಥಿತ್ವಾಕ್ಷಣಂ ಮಂಡಲೇ**
**ಪಾತ್ರಾವೇಶ ವಿಸರ್ಜನಾಮಿವ ಮತಿಂ ಸಂತೋ ಲಭಂತೇ ಸ್ವತಃ ॥೧೮॥**

**ಅರ್ಥ ፡-** ಈ ಪ್ರಕಾರ ಯಾವನು ಭಯರಹಿತನಾಗಿ ಸಮಾಧಿ ಮರಣದಲ್ಲಿ ಉತ್ಸಾಹ ಸಹಿತ ನಾಲ್ಕು ಆರಾಧನೆಗಳ ಆರಾಧನೆ ಮಾಡಿ ಮರಣ ಹೊಂದುತ್ತಾನೆ ಅವನಿಗೆ ಸ್ವರ್ಗಲೋಕವಲ್ಲದೆ ಅನ್ಯ ಗತಿಯ ಪ್ರಾಪ್ತಿಯಾಗುವುದಿಲ್ಲ, ಸ್ವರ್ಗದಲ್ಲಿ **ಮಹರ್ದ್ಧಿಕ** ದೇವನೇ ಆಗುತ್ತಾ**ನೆಂಬ ನಿಯಮವಿದೆ.** ಸ್ವರ್ಗದ ಆಯುವಿನ ಕೊನೆಯವರೆಗೆ ಮಹಾ ಸುಖ ಭೋಗಿಸಿ, ಈ ಮನುಷ್ಯ ಲೋಕದಲ್ಲಿ ಪುಣ್ಯವಂತ ನಿರ್ಮಲ ಕುಲದಲ್ಲಿ ಅನೇಕ ಜನರು ದಾರಿ ಕಾಯುತ್ತಿರುವಂತೆ ಜನ್ಮ ಪಡೆದು, ತಮ್ಮ ಸೇವಕ ಜನರಿಗೆ ಹಾಗೂ ಕುಟುಂಬ ಪರಿವಾರ ಪುತ್ರ-ಮಿತ್ರಾದಿಗಳಿಗೆ ಅನೇಕ ಪ್ರಕಾರದ ಐಚ್ಛಿಕ ಧನ ಭೋಗಾದಿಗಳರೂಪಗಳ ಫಲವಿತ್ತು, ಪುಣ್ಯದಿಂದ ಪ್ರಾಪ್ತವಾದ ಭೋಗಗಳನ್ನು ನಿರಂತರ ಭೋಗಿಸಿ ಆಯುಪೂರ್ಣವಾಗುವವರೆಗೆ ಸ್ವಲ್ಪ ಸಮಯವನ್ನು ಭೂಮಂಡಲದ ಮೇಲೆ ಸಂಯಮಸಹಿತ ವೀತರಾಗ ರೂಪರಾಗಿ ವಿಹಾರ ಮಾಡಿ ಯಾವ ಪ್ರಕಾರ ನೃತ್ಯ ರಂಗದಲ್ಲಿ ನೃತ್ಯ ಮಾಡುವಂಥ ಪುರುಷನು ಜನರಿಗೆ ಆನಂದವನ್ನುಂಟು ಮಾಡಿ ಹೊರಟು ಹೋಗುತ್ತಾನೆ ; ಅದೇ ಪ್ರಕಾರ ಆ ಸತ್ಪುರುಷನು ಕೂಡ ಸಮಸ್ತ ಜನರಿಗೆ ಆನಂದವನ್ನುತ್ಪನ್ನ ಮಾಡಿ ಸ್ವಯಂ ದೇಹ ತ್ಯಾಗ ಮಾಡಿ ನಿರ್ವಾಣಕ್ಕೆ ಪ್ರಾಪ್ತನಾಗಿ ಹೋಗುತ್ತಾನೆ.

**ಮೃತ್ಯುಮಹೋತ್ಸವ ವಚನಿಕಾ, ಲಿಖೀ ಸದಾಸುಖ ಕಾಮ ।**
**ಶುಭ ಆರಾಧನ ಮರಣಕರಿ, ಪಾಊ ನಿಜಸುಖಧಾಮ ॥೧॥**
**ಉಗಣೀಸ್ಸೈ ಠಾರಾ ಶುಕಲ, ಪಂಚಮಿ ಮಾಸ ಅಸಾಢ ।**
**ಪೂರನ ಲಿಖೀ ವಾಂಚೋ ಸದಾ, ಮನ ಧರಿ ಸಮ್ಯಕ್‌ಗಾಢ ॥೨॥**

ಈ ಪ್ರಕಾರ ಸಲ್ಲೇಖನದ ವರ್ಣನೆಯಲ್ಲಿ ಉಪಕಾರಿಯೆಂದು ತಿಳಿದು ಇದರಲ್ಲಿ ಮೃತ್ಯು ಮಹೋತ್ಸವ ಹೇಳಿದೆ. ಇದರ ವಚನಿಕೆಯನ್ನು ಸಂವತ ಸಾವಿರದೊಂಭೈನೂರಾ ಹದಿನೆಂಟರಲ್ಲಿ (೧೯೧೮) ಬರೆದಿದೆ, ಅದನ್ನೇ ಇಲ್ಲಿ ಸಲ್ಲೇಖನದ ಕಥನದಲ್ಲಿ ಸೇರಿಸಲಾಗಿದೆ.

ಸಲ್ಲೇಖನದಲ್ಲಿ ಕಾಯ ಸಲ್ಲೇಖನ ಮತ್ತು ಕಷಾಯ ಸಲ್ಲೇಖನವೆಂದು ಎರಡು ಭೇದಗಳಿವೆ. ಸಲ್ಲೇಖನವೆಂದರೆ ಸಮ್ಯಕ್ ಪ್ರಕಾರದಿಂದ ಕೃಶ ಮಾಡುವುದಿದೆ. ದೇಹವನ್ನು ಕೃಶ ಮಾಡುವುದು ಅದು ಕಾಯಸಲ್ಲೇಖನವಿದೆ. ಈ ಕಾಯವನ್ನು

ಎಷ್ಟು ಪುಷ್ಟ ಮಾಡುವಿರಿ, ಸುಖಿಯಿಡುವಿರಿ, ಅಷ್ಟೇ ಇಂದ್ರಿಯ ವಿಷಯಗಳತೀವ್ರ ಲಾಲಸೆಯನ್ನು ಉತ್ಪನ್ನ ಮಾಡಿಸುತ್ತದೆ, ಆತ್ಮವಿಶುದ್ಧತೆಯನ್ನು ನಷ್ಟ ಮಾಡುತ್ತದೆ, ಕಾಮ-ಲೋಭ ಮೊದಲಾದವುಗಳ ಬುದ್ಧಿ ಮಾಡಿಸುತ್ತದೆ, ನಿದ್ರೆ-ಪ್ರಮಾದ-ಆಲಸ್ಯ ಗಳನ್ನು ಹೆಚ್ಚಿಸುತ್ತದೆ, ಪರೀಷಹಗಳನ್ನು ಸಹಿಸುವಲ್ಲಿ ಅಸಮರ್ಥವಾಗುತ್ತ ಹೋಗುತ್ತದೆ, ತ್ಯಾಗ-ಸಂಯಮದ ಸನ್ಮುಖವಾಗುವುದಿಲ್ಲ, ಆತ್ಮನನ್ನು ದುರ್ಗತಿಯಲ್ಲಿ ಗಮನ ಮಾಡಿಸುತ್ತದೆ, ವಾತ-ಪಿತ್ತ-ಕಫ ಮೊದಲಾದ ರೋಗಗಳನ್ನು ಉತ್ಪನ್ನ ಮಾಡಿಸಿ ಮಹಾದುರ್ಧ್ಯಾನ ಮಾಡಿಸಿ ಸಂಸಾರದ ಪರಿಭ್ರಮಣ ಮಾಡಿಸುತ್ತದೆ.

ಆದುದರಿಂದ ಅನಶನ ಮೊದಲಾದ ತಪಸ್ಸು ಮಾಡಿ ಈ ಶರೀರವನ್ನು ಕೃಶಗೊಳಿಸಬೇಕು. ರೋಗಾದಿಗಳ ವೇದನೆಯು ಉತ್ಪನ್ನವಾಗದಿರಲಿ, ಪರಿಣಾಮವು ಅಚೇತವಾಗದಿರಲೆಂದು ಮೊದಲು **ಕಾಯಸಲ್ಲೇಖ**ನದ ವರ್ಣನೆ ಮಾಡುವಂಥ ಸೂತ್ರ ಹೇಳುತ್ತಾರೆ, -

**ಆಹಾರಂ ಪರಿಹಾಪ್ಯ ಕ್ರಮಶಃ ಸ್ನಿಗ್ಧಂ ವಿವರ್ದ್ಧಯೇತ್ಪಾನಮ್ ।**
**ಸ್ನಿಗ್ಧಂ ಚ ಹಾಪಯಿತ್ವಾ ಖರಪಾನಂ ಪೂರಯೇತ್ಕ್ರಮಶಃ ॥೧೨೭॥**
**ಖರಪಾನಹಾಪನಾಮಪಿ ಕೃತ್ವಾ ಕೃತ್ವೋಪವಾಸಮಪಿ ಶಕ್ತ್ಯಾ ।**
**ಪಂಚನಮಸ್ಕಾರಮನಾಸ್ತನುಂ ತ್ಯಜೇತ್-ಸರ್ವಯತ್ನೇನ ॥೧೨೮॥**

**ಅರ್ಥ :-** ಅನುಕ್ರಮದಿಂದ ಕಾಯಸಲ್ಲೇಖನ ಮಾಡಬೇಕು. ಕ್ರಮದಿಂದ ಆಹಾರವನ್ನು ಬಿಟ್ಟುಕೊಟ್ಟು ಸ್ನಿಗ್ಧ ಹಾಲು ಮೊದಲಾದುವನ್ನು ಹೆಚ್ಚಾಗಿ ಗ್ರಹಣ ಮಾಡಬೇಕು, ನಂತರ ಹಾಲು ಮೊದಲಾದುವನ್ನು ತ್ಯಜಿಸಿ ಮಜ್ಜಿಗೆಯನ್ನು ಹೆಚ್ಚಿಸಬೇಕು, ಅನಂತರ ಮಜ್ಜಿಗೆಯನ್ನು ಬಿಟ್ಟುಕೊಟ್ಟು ಕಾಯಿಸಿದ ಜಲವನ್ನು ಹೆಚ್ಚಿಸಬೇಕು, ಅನಂತರ ಕಾಯಿಸಿದ ಜಲವನ್ನೂ ಬಿಟ್ಟುಕೊಟ್ಟು ಶಕ್ತಿಯ ಅನುಸಾರ ಒಂದೆರಡು ಉಪವಾಸ ಮಾಡುತ್ತ ಸರ್ವಪ್ರಯತ್ನದಿಂದ ಮನಸ್ಸಿನಲ್ಲಿ ಪಂಚ ಣಮೋಕಾರ ಮಂತ್ರದ ಸ್ಮರಣೆ ಮಾಡುತ್ತ ಶರೀರದ ತ್ಯಾಗ ಮಾಡಬೇಕು.

**ಭಾವಾರ್ಥ :-** ತಮ್ಮ ಆಯುವಿನ ಶೇಷ ಸಮಯ ನೋಡಿ ಅದರ ಅನುಸಾರ ಶರೀರ-ಇಂದ್ರಿಯಗಳ ಮಮತೆಯಿಂದ ರಹಿತರಾಗಿ ಆಹಾರದ ಸ್ವಾದದಿಂದ ವಿರಕ್ತರಾಗಿ ಕ್ರಮದಿಂದ ಕಾಯಸಲ್ಲೇಖನ ಮಾಡುತ್ತ ವಿಚಾರ ಮಾಡಬೇಕು.

**ಎಲೈ ಆತ್ಮನೇ ! ನೀನು ಸಂಸಾರ ಪರಿಭ್ರಮಣ ಮಾಡುತ್ತ ಎಷ್ಟು ಆಹಾರ ಮಾಡಿರುವೆಯೆಂದರೆ ಒಂದೊಂದು ಜನ್ಮದ ಒಂದೊಂದು ಕಣವನ್ನು ಏಕತ್ರ ಮಾಡಿದರೆ ಅನಂತ ಸುಮೇರುವಿನ ಬರಾಬರಿಯಾಗಿ ಹೋಗುವುದು.** ಮತ್ತು ಅನಂತ ಜನ್ಮಗಳಲ್ಲಿ ಎಷ್ಟು ನೀರು ಕುಡಿದಿರುವೆಯೆಂದರೆ ಒಂದೊಂದು ಜನ್ಮದ ಒಂದೊಂದು ಬಿಂದುವನ್ನು ಏಕತ್ರ ಮಾಡಿದರೆ ಅನಂತ ಸಮುದ್ರಗಳಷ್ಟಾಗುವವು. ಇಷ್ಟು ಆಹಾರ ಮತ್ತು ಇಷ್ಟು ಜಲದಿಂದ ಕೂಡ ನೀನು ತೃಪ್ತನಾಗದಿದ್ದರೆ ಈಗ ರೋಗ-ಜರೆಗಳಿಂದ ಮರಣವು ಪ್ರತ್ಯಕ್ಷ ಸಮೀಪದಲ್ಲಿ ಬಂದಿದೆ,ಈಗ ಈ ಸಮಯದಲ್ಲಿ ಸ್ವಲ್ಪ ಮಾತ್ರ ಆಹಾರ-ಜಲದಿಂದ ತೃಪ್ತಿಯು ಹೇಗಾಗುವುದು ?

ಈ ಪರ್ಯಾಯದಲ್ಲಿ ಕೂಡ ಜನ್ಮ ಪಡೆದಂದಿನಿಂದ ದಿನ ನಿತ್ಯವೂ ಆಹಾರ ಗ್ರಹಣ ಮಾಡುತ್ತ ಬಂದಿರುವೆ, ಆಹಾರದ ಲೋಭಿಯಾಗಿ ಘೋರ ಆರಂಭ ಮಾಡಿರುವೆ, ಆಹಾರದ ಲೋಭದಿಂದಲೇ ಹಿಂಸೆ, ಅಸತ್ಯ, ಪರಧನದ ಲಾಲಸೆ, ಅಬ್ರಹ್ಮ ಬಹಳಷ್ಟು ಪರಿಗ್ರಹದ ಸಂಗ್ರಹ ಮತ್ತು ದುರ್ಧ್ಯಾನ ಮೊದಲಾದವುಗಳಿಂದ ಅನೇಕ ಕುಕರ್ಮದ ಉಪಾರ್ಜನೆ ಮಾಡಿರುವೆ.

ಆಹಾರದ ಗೃದ್ಧತೆಯಿಂದಲೇ ದೀನ ವೃತ್ತಿಯಿಂದ ಪರಾಧೀನನಾದೆ. ಆಹಾರದ ಲೋಭಿಯಾಗಿ ಭಕ್ಷ-ಅಭಕ್ಷ್ಯದ ವಿಚಾರ ಮಾಡಲಿಲ್ಲ, ರಾತ್ರಿ-ಹಗಲಿನ ವಿಚಾರ ಮಾಡಲಿಲ್ಲ, ಯೋಗ್ಯ-ಅಯೋಗ್ಯದ ವಿಚಾರ ಮಾಡಲಿಲ್ಲ, ಆಹಾರದ ಲೋಭಿಯಾಗಿ ಕ್ರೋಧ, ಅಭಿಮಾನ, ಮಾಯಾಚಾರ, ಲೋಭ, ಯಾಚನೆಯನ್ನೂ ಮಾಡಿದೆ. ಆಹಾರದ ಇಚ್ಛೆ ಮಾಡಿ

ತನ್ನ ದೊಡ್ಡಸ್ತಿಕೆ, ಸ್ವಾಭಿಮಾನಗಳನ್ನು ನಷ್ಟ ಮಾಡಿದೆ. ಆಹಾರದ ಲೋಭಿಯಾಗಿ ಅನೇಕ ರೋಗಗಳ ಘೋರ ದುಃಖವನ್ನು ಸಹಿಸಿದೆ, ನೀಚ ಜಾತಿ-ನೀಚ ಕುಲದವರ ಸೇವೆ ಮಾಡಿದೆ. ಆಹಾರದ ಲೋಭಿಯಾಗಿ ಸ್ತ್ರೀಯ ಆಧೀನ ಉಳಿದೆ, ಪುತ್ರನ ಆಧೀನವಾಗಿ ಉಳಿದೆ.

**ಆಹಾರದ ಲಂಪಟಿಯು ನಿರ್ಲಜ್ಜನಿರುತ್ತಾನೆ, ಆಚಾರ-ವಿಚಾರದಿಂದ ರಹಿತನಿರುತ್ತಾನೆ.** ತನ್ನಲ್ಲಿಯೇ ಮರುಗಿ ಸತ್ತು ಹೋಗುತ್ತಾನೆ, ದುರ್ವಚನ ಸಹಿಸುತ್ತಾನೆ ಆಹಾರದ ಸಲುವಾಗಿಯೇ ತಿರ್ಯಂಚಗತಿಯಲ್ಲಿ ಪರಸ್ಪರ ಹೊಡೆದಾಡುತ್ತವೆ. ಭಕ್ಷಣ ಮಾಡಿ ಬಿಡುತ್ತವೆ.

**ಹೆಚ್ಚು ಹೇಳುವುದರಿಂದೇನು ?** ಈಗ ಈ ಪರ್ಯಾಯದಲ್ಲಿ ನನಗೆ ಅಲ್ಪ ಸಮಯವೇ ಇರುವುದಿದೆ. ಆಯು ಸಮಾಪ್ತವಾಗಲಿರುವುದರಿಂದ ರಸಗಳಲ್ಲಿನ ಆಸಕ್ತಿಯನ್ನು ಬಿಟ್ಟುಕೊಟ್ಟು, ರಸನೇಂದ್ರಿಯದ ಲಾಲಸೆಯನ್ನು ಬಿಟ್ಟುಕೊಟ್ಟು ಆಹಾರದ ತ್ಯಾಗ ಮಾಡುವಲ್ಲಿ ಉದ್ಯಮಶೀಲನಾಗದಿದ್ದರೆ ವ್ರತ, ಸಂಯಮ, ಧರ್ಮ, ಯಶಸ್ಸು, ಪರಲೋಕಗಳನ್ನು ಕೆಡಿಸಿಕೊಂಡು ಕುಮರಣ ಮಾಡಿ ಸಂಸಾರದಲ್ಲಿಯೇ ಪರಿಭ್ರಮಣ ಮಾಡುವೆನು.

ಹೀಗೆ ನಿಶ್ಚಯ ಮಾಡಿಕೊಂಡೇ ಅತೃಪ್ತಿ ಮಾಡುವಂಥ ಆಹಾರದ ತ್ಯಾಗ ಮಾಡುವ ಸಲುವಾಗಿ ಒಮ್ಮೆ ಒಂದು ಉಪವಾಸ, ಒಮ್ಮೆ ಎರಡು, ಒಮ್ಮೆ ಮೂರು, ಒಮ್ಮೆ ಒಂದು ಬಾರಿ ಆಹಾರ ಮಾಡುವುದು, ಒಮ್ಮೆ ನೀರಸ ಆಹಾರ, ಒಮ್ಮೆ ಅಲ್ಪ ಆಹಾರ ಇತ್ಯಾದಿ ಕ್ರಮದಿಂದ ತಮ್ಮ ಶಕ್ತಿಗೆ ಅನುಸರಿಸಿ, ಮತ್ತು ಆಯುವು ಶೇಷ ಉಳಿದ ಸ್ಥಿತಿಯ ಪ್ರಮಾಣ ಆಹಾರವನ್ನು ಕಡಿಮೆ ಮಾಡಿ ಹಾಲು ಮೊದಲಾದುವನ್ನೇ ಕುಡಿಯಬೇಕು. ಪುನಃ ಕ್ರಮದಿಂದ ಹಾಲು ಮೊದಲಾದ ಸ್ನಿಗ್ಧ ಪದಾರ್ಥಗಳನ್ನೂ ತ್ಯಾಗ ಮಾಡಿ ಮಜ್ಜಿಗೆ ಕಾಯಿಸಿದ ನೀರು ಮೊದಲಾದುವನ್ನೇ ಗ್ರಹಣ ಮಾಡಬೇಕು. ಪುನಃ ಕ್ರಮದಿಂದ ನೀರು ಮೊದಲಾದ ಸಮಸ್ತ ಆಹಾರದ ತ್ಯಾಗ ಮಾಡಿ ತಮ್ಮ ಶಕ್ತಿಯ ಪ್ರಮಾಣ ಉಪವಾಸ ಮಾಡುತ್ತ, ಪಂಚ ಪರಮೇಷ್ಠಿಗಳಲ್ಲಿ ಮನಸ್ಸನ್ನು ಲೀನ ಮಾಡುತ್ತ ಧರ್ಮಧ್ಯಾನರೂಪರಾಗಿ ಮಹಾಯತ್ನದಿಂದ ದೇಹ ತ್ಯಾಗ ಮಾಡುವುದನ್ನು ಸಲ್ಲೇಖನವೆಂದು ತಿಳಿಯುವುದು. ಈ ಪ್ರಕಾರ ಕಾಯಸಲ್ಲೇಖನದ ವರ್ಣನೆ ಮಾಡಲಾಯಿತು.

**ಸಮಾಧಿ ಮರಣದಲ್ಲಿ ಆತ್ಮಘಾತದ ಅಭಾವವಿದೆ :**

**ಪ್ರಶ್ನೆ :-** ಆಹಾರಾದಿಗಳ ತ್ಯಾಗ ಮಾಡಿ ಮರಣ ಹೊಂದುವುದಂತೂ ಆತ್ಮಘಾತವಿದೆ, ಮತ್ತು ಆತ್ಮಘಾತ ಮಾಡಿಕೊಳ್ಳುವುದನ್ನು ಅನುಚಿತವೆಂದು ಹೇಳಿದೆಯಲ್ಲವೇನು ?

**ಉತ್ತರ :-** ಯಾವುದರಿಂದ ಅಧಿಕ ಸಮಯದವರೆಗೆ ಒಳ್ಳೆಯ ರೀತಿಯಿಂದ ಮುನಿತನ, ಶ್ರಾವಕತನ ಮತ್ತು ಮಹಾವ್ರತ, ಅಣುವ್ರತಗಳನ್ನು ಪಾಲಿಸುತ್ತಿರುವುದು ಕಂಡು ಬರುತ್ತದೆ; ಸ್ವಾಧ್ಯಾಯ, ಧ್ಯಾನ, ಶೀಲ, ತಪ, ವ್ರತ, ಉಪವಾಸ ಮೊದಲಾದುವನ್ನು ಮಾಡುತ್ತಿರುವರು; ಜಿನ ಪೂಜೆ, ಸ್ವಾಧ್ಯಾಯ, ಧರ್ಮೋಪದೇಶ, ಧರ್ಮಶ್ರವಣ, ನಾಲ್ಕು ಆರಾಧನೆಗಳ ಸೇವನೆಯನ್ನು ಒಳ್ಳೆಯ ರೀತಿಯಿಂದ ನಿರ್ವಿಘ್ನವಾಗಿ ಸಾಧಿಸುತ್ತಿರುವರು; ದುರ್ಭಿಕ್ಷ ಮೊದಲಾದವುಗಳ ಭಯವುಂಟಾಗಿಲ್ಲ, ಶರೀರದಲ್ಲಿ ಅಸಾಧ್ಯ ರೋಗವುಂಟಾಗಿಲ್ಲ, ಸ್ಮರಣಶಕ್ತಿ ಮತ್ತು ಜ್ಞಾನವನ್ನು ನಷ್ಟ ಮಾಡುವಂಥ ವೃದ್ಧಾವಸ್ಥೆಯೂ ಪ್ರಾಪ್ತವಾಗಿಲ್ಲ; ದಶಲಕ್ಷಣ ಧರ್ಮ ಮತ್ತು ರತ್ನತ್ರಯ ಧರ್ಮವನ್ನು ದೇಹದಿಂದ ಪಾಲಿಸುತ್ತಿದ್ದಾರೆ ಅಂಥವರು ಆಹಾರವನ್ನು ತ್ಯಾಗ ಮಾಡಿ ಸಮಾಧಿ ಮರಣ ಮಾಡುವುದು ಯೋಗ್ಯವಿಲ್ಲ.

ಧರ್ಮದ ಸಾಧನೆಯಾಗುತ್ತಿದ್ದರೂ ಕೂಡ ಅವನು ಆಹಾರದ ತ್ಯಾಗ ಮಾಡಿ ಮರಣ ಹೊಂದುತ್ತಿದ್ದರೆ ಅವನು ಧರ್ಮದಿಂದ ಪರಾಙ್ಮುಖನಾಗಿ ತ್ಯಾಗ, ವ್ರತ, ಶೀಲ, ಸಂಯಮ ಮೊದಲಾದವುಗಳಿಂದ ಮೋಕ್ಷದ ಸಾಧಕನು ಉತ್ತಮ ಮನುಷ್ಯ ಪರ್ಯಾಯದಿಂದ ವಿರಕ್ತನಾಗಿ ತನಗೆ ದೀರ್ಘಾಯುಷ್ಯವಿದ್ದರೂ ಕೂಡ ಮತ್ತುಧರ್ಮದ ಸೇವನೆಯಾಗುತ್ತಿದ್ದರೂ ಕೂಡ ಆಹಾರಾದಿಗಳ ತ್ಯಾಗ ಮಾಡುವಂಥವನು ಆತ್ಮಘಾತಕನಾಗುತ್ತಾನೆ.

**ಧರ್ಮಸಂಯುಕ್ತ ಶರೀರದ ರಕ್ಷಣೆಯನ್ನು ತುಂಬ ಯತ್ನದಿಂದ ಮಾಡಬೇಕೆಂದು ಭಗವಂತರ ಆಜ್ಞೆಯಿದೆ. ಧರ್ಮ ಸೇವನೆಯಲ್ಲಿ ಸಹಕಾರಿಯಾದ ಈ ದೇಹವನ್ನು ಆಹಾರ ತ್ಯಾಗ ಮಾಡಿ ಬಿಟ್ಟುಕೊಟ್ಟರೆ ನಾರಕಿ, ತಿರ್ಯಂಚಗಳ ಸಂಯಮರಹಿತ ದೇಹದಿಂದ ತಪ-ವ್ರತ-ಸಂಯಮಗಳು ಸಾಧಿಸುವವೇನು ? ರತ್ನತ್ರಯದ ಸಾಧಕವಂತೂ ಈ ಮನುಷ್ಯ ದೇಹವೇ ಇದೆ.** ಧರ್ಮದ ಸಾಧಕನು ಆಹಾರಾದಿಗಳ ತ್ಯಾಗ ಮಾಡಿ ಮನುಷ್ಯ ದೇಹವನ್ನು ಬಿಟ್ಟುಕೊಟ್ಟರೆ ಅವನ ಯಾವ ಕಾರ್ಯಸಿದ್ಧವಾಗುವುದು ? ಈ ದೇಹವನ್ನು ತ್ಯಾಗ ಮಾಡುವುದರಿಂದ ನಮ್ಮ ಯಾವ ಪ್ರಯೋಜನವು ಸಾಧಿಸುವುದು ? ವ್ರತ-ಧರ್ಮದಿಂದ ರಹಿತವಾದ ಇನ್ನೊಂದು ನವೀನ ಶರೀರವನ್ನು ಧಾರಣ ಮಾಡಬಹುದಾಗಿದೆ.

**ಅನಂತಾನಂತ ದೇಹಗಳನ್ನು ಧಾರಣ ಮಾಡಿಸುವ ಬೀಜವಂತೂ ಕರ್ಮಮಯ ಕಾರ್ಮಾಣ ದೇಹವಿದೆ. ಅದನ್ನು ಮಿಥ್ಯಾತ್ವ, ಅಸಂಯಮ, ಕಷಾಯ ಮೊದಲಾದವುಗಳ ತ್ಯಾಗ ಮಾಡಿ ನಷ್ಟ ಮಾಡಬೇಕು.** ಆಹಾರ ಮೊದಲಾದವುಗಳ ತ್ಯಾಗ ಮಾಡುವುದರಿಂದಂತೂ ಮೂಳೆ-ಮಾಂಸಮಯವಾದ ಔದಾರಿಕ ಶರೀರವು ಸಾಯುವುದು, ಆದರೆ ಕೂಡಲೆ ಇನ್ನೊಂದು ನವೀನ ಪ್ರಾಪ್ತವಾಗುವುದು. **ಯಾವಾಗ ಅಷ್ಟಕರ್ಮಮಯವಾದ ಕಾರ್ಮಾಣ ದೇಹವು ಸಾಯುವುದು ಆಗ ಜನ್ಮ-ಮರಣಗಳಿಂದ ಬಿಡುಗಡೆಯಾಗುವುದು.** ಆದುದರಿಂದ ಕರ್ಮಮಯ ದೇಹವನ್ನು ಸಾಯಿಸುವ ಸಲುವಾಗಿ ಈ ಮನುಷ್ಯ ಶರೀರದಿಂದ ತ್ಯಾಗ, ವ್ರತ, ಸಂಯಮದಲ್ಲಿ ದೃಢತೆ ಧಾರಣ ಮಾಡಿ ಆತ್ಮನ ಕಲ್ಯಾಣ ಮಾಡಿಕೊಳ್ಳಬೇಕು. **ಅದರಿಂದ ಯಾವಾಗ ಧರ್ಮದ ಸಾಧನೆಯಾಗುವುದಿಲ್ಲ, ಆಗ ಮಮತೆ ಬಿಟ್ಟು ಅವಶ್ಯವಾಗಿ ನಾಶವಾಗುವಂಥ ದೇಹವನ್ನು ತ್ಯಾಗ ಮಾಡುವಲ್ಲಿ ಮಮತೆ ಮಾಡಬಾರದು.**

**ಕಷಾಯಸಲ್ಲೇಖನ :** ಯಾವ ಪ್ರಕಾರ ತಪಸ್ಸಿನಿಂದ ಕಾಯವನ್ನು ಕೃಶಗೊಳಿಸಲಾಗುತ್ತದೆ, ಅದೇ ಪ್ರಕಾರ ರಾಗ-ದ್ವೇಷ-ಮೋಹ ಮೊದಲಾದ ಕಷಾಯಗಳನ್ನು ಕೂಡ ಜತೆ-ಜತೆಯಲ್ಲೇ ಕೃಶ ಮಾಡುವುದು ಅದು ಕಷಾಯ ಸಲ್ಲೇಖನವಿದೆ. **ಕಷಾಯಗಳ ಸಲ್ಲೇಖನವಿಲ್ಲದ ಕಾಯಸಲ್ಲೇಖನವು ವ್ಯರ್ಥವಿದೆ.** ಕಾಯದ ಕೃಶತೆಯಂತೂ ರೋಗಿ, ದರಿದ್ರಿ, ಪರಾಧೀನತೆಯಿಂದ ಮಿಥ್ಯಾದೃಷ್ಟಿಗೆ ಕೂಡ ಆಗುತ್ತದೆ. ದೇಹವನ್ನು ಕೃಶ ಮಾಡುವುದರ ಜತೆಯಲ್ಲಿಯೇ ರಾಗ-ದ್ವೇಷ-ಮೋಹಾದಿಗಳನ್ನು ಕೃಶ ಮಾಡಿ, ಇಹಲೋಕ-ಪರಲೋಕ ಸಂಬಂಧದ ಸಮಸ್ತ ಇಚ್ಛೆಯ ಅಭಾವ ಮಾಡಿ, ದೇಹದ ಮರಣದಲ್ಲಿ ಕುಟುಂಬ,ಪರಿಗ್ರಹ ಮೊದಲಾದ ಸಮಸ್ತ ಪರದ್ರವ್ಯಗಳಲ್ಲಿನ ಮಮತೆಯನ್ನು ಬಿಟ್ಟುಕೊಟ್ಟು, ಪರಮ ವೀತರಾಗತೆಯಿಂದ ಸಂಯಮ ಸಹಿತವಾಗಿ ಮರಣ ಹೊಂದುವುದು ಅದು ಕಷಾಯ ಸಲ್ಲೇಖನವಿದೆ.

**ವಿಷಯ-ಕಷಾಯಗಳನ್ನು ಜಯಿಸುವಂಥವನಲ್ಲಿಯೇ ಸಮಾಧಿ ಮರಣ ಮಾಡುವ ಯೋಗ್ಯತೆಯಿದೆ. ವಿಷಯಗಳ ಆಧೀನ ಹಾಗೂ ಕಷಾಯಯುಕ್ತನಿಗೆ ಸಮಾಧಿ ಮರಣವಾಗುವುದಿಲ್ಲವೆಂಬ ವಿಶೇಷತೆಯನ್ನು ತಿಳಿಯುವುದು.** ಸಂಸಾರೀ ಜೀವರುಗಳಲ್ಲಿ ವಿಷಯ-ಕಷಾಯಗಳು ಅತ್ಯಂತ ಪ್ರಬಲವಿವೆ, ಮಹಾನ ಸಮರ್ಥಶಾಲಿಗಳಿಂದಲೂ ಜಯಿಸಲಾಗುವುದಿಲ್ಲ. ಅವು ಅತ್ಯಂತ ಪ್ರಬಲ ಬಲಶಾಲಿಗಳಾದಂಥ ಚಕ್ರವರ್ತಿ, ನಾರಾಯಣ, ಬಲಭದ್ರ ಮೊದಲಾದವರನ್ನೂ ಭ್ರಷ್ಟ ಮಾಡಿ ತಮ್ಮ ಆಧೀನ ಮಾಡಿಕೊಂಡಿವೆ ; ಆದುದರಿಂದ ಅತ್ಯಂತ ಪ್ರಬಲವಿವೆ.

**ಸಂಸಾರದಲ್ಲಿ ಎಷ್ಟು ದುಃಖಗಳಿವೆ ಅವೆಲ್ಲವೂ ವಿಷಯಾಸಕ್ತ, ಅಭಿಮಾನಿ ಮತ್ತು ಲೋಭಿಗಳಿಗೆ ಇರುತ್ತವೆ. ಅದೆಷ್ಟೋ ಜೀವರುಗಳು ಜಿನದೀಕ್ಷೆ ಧಾರಣ ಮಾಡಿ ಕೂಡ ವಿಷಯಗಳ ಬೇಗೆಯಿಂದ ಭ್ರಷ್ಟರಾಗಿ ಹೋಗುತ್ತಾರೆ, ಅಭಿಮಾನ ಮತ್ತು ಲೋಭವನ್ನು ಬಿಟ್ಟುಕೊಡುವುದಿಲ್ಲ, ಅನಾದಿ ಕಾಲದಿಂದ ವಿಷಯಗಳ ಲಾಲಸೆಯಿಂದ ಲಿಪ್ತ ಮತ್ತು ಕಷಾಯಗಳಿಂದ ಪ್ರಜ್ವಲಿತವಿರುವ ಸಂಸಾರೀ ಜೀವರುಗಳು ತಮ್ಮನ್ನು ತಾವು ಮರೆತು ಸ್ವರೂಪದಿಂದ ಭ್ರಷ್ಟರಾಗುತ್ತಿದ್ದಾರೆ.**

ವಿಷಯ-ಕಷಾಯಗಳಿಂದ ಬಿಡುಗಡೆ ಹೊಂದಿ ವೀತರಾಗತೆ ಮಾಡಿಸುವ ಸಲುವಾಗಿ ಶ್ರೀ ಭಗವತೀ ಆರಾಧನೆಯಲ್ಲಿ ಶ್ರೀ ಶಿವಕೋಟಿ ಆಚಾರ್ಯರು ವಿಷಯ - ಕಷಾಯಗಳ ಸ್ವರೂಪವನ್ನು ವಿಸ್ತಾರದಿಂದ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾರೆ. ವೀತರಾಗತೆಯ ಇಚ್ಛೆಯುಳ್ಳ ಪುರುಷರು ಪರಮೋಪಕಾರಿಯಾದ ಆ ಗ್ರಂಥದ ಅಭ್ಯಾಸವನ್ನು ನಿರಂತರ ಮಾಡಬೇಕು.

ಸಮಾಧಿ ಮರಣದ ಸಮಯದಲ್ಲಿ ಜೀವದ ಕಲ್ಯಾಣ ಮಾಡುವಂಥ ಉಪದೇಶರೂಪದ ಅಮೃತವನ್ನು ಧಾರಾಕಾರರೂಪದಿಂದ ವರ್ಷಿಸುವಂಥ ಭಗವತೀ ಆರಾಧನೆಯೆಂಬ ಗ್ರಂಥದ ಆಶ್ರಯವನ್ನು ಅವಶ್ಯವಾಗಿ ಪಡೆದುಕೊಳ್ಳಬೇಕು. ಆದುದರಿಂದ ಇಲ್ಲಿ ಸಮಾಧಿ ಮರಣದ ಕಥನ ಮಾಡುವ ಅವಸರ ಪಡೆದು ಭಗವತೀ ಆರಾಧನೆಯ ಅರ್ಥದ ಅಂಶವನ್ನು ಸ್ವೀಕರಿಸಿ ಇಲ್ಲಿ ಒಂದಿಷ್ಟು ಹೇಳಲಾಗುತ್ತದೆ.

ಸಾಧು (ಮುನಿ) ಪುರುಷರಿಗಂತೂ ರತ್ನತ್ರಯ ಧರ್ಮದ ರಕ್ಷಣೆ ಮಾಡುವಲ್ಲಿ ಸಹಾಯಕರಾಗುವ ಆಚಾರ್ಯ ಮೊದಲಾದವರ ಸಂಘ ಮತ್ತು ವೈಯಾವೃತ್ಯ ಮಾಡುವಂಥ ಧರ್ಮದ ಉಪದೇಶ ಕೊಡುವಂಥ ನಿರ್ಯಾಪಕರ ಮಹಾನ ಸಹಾಯವು ಪ್ರಾಪ್ತವಾಗುತ್ತದೆ. ಆದುದರಿಂದ **ಗೃಹಸ್ಥರಿಗೂ ಕೂಡ ಧರ್ಮವೃದ್ಧ ಶ್ರದ್ಧೆಯುಳ್ಳ, ಜ್ಞಾನೀ ಸಾಧರ್ಮಿಗಳ ಸಮಾಗಮವು ಅವಶ್ಯವಾಗಿ ಸಂಭವಿಸುವಂತಿರಬೇಕು. ಆದರೆ ಈ ಪಂಚಮ ಕಾಲವು ಅತ್ಯಂತ ವಿಷಮವಿದೆ. ಇದರಲ್ಲಂತೂ ವಿಷಯಾನುರಾಗಿಗಳ ಹಾಗೂ ಕಷಾಯಧಾರಕ ಜೀವರುಗಳ ಜತೆ ದೊರಕುವುದು ಸುಲಭವಿದೆ. ರಾಗ, ದ್ವೇಷ, ಶೋಕ, ಭಯಗಳನ್ನುತ್ಪನ್ನ ಮಾಡುವಂಥ, ಆರ್ತಧ್ಯಾನ ವೃದ್ಧಿಸುವಂಥ, ಅಸಂಯಮದಲ್ಲಿ ಪ್ರವೃತ್ತಿ ಮಾಡಿಸುವಂಥವರ ಜತೆಯು ಅಖಂಡವಾಗಿ ಇದೆ. ಸ್ತ್ರೀ, ಪುತ್ರ, ಮಿತ್ರ, ಬಂಧು ಮೊದಲಾದವರೆಲ್ಲರು ತಮ್ಮ ರಾಗ-ದ್ವೇಷ ವಿಷಯ-ಕಷಾಯಗಳಲ್ಲಿ ತೊಡಗಿಸಿ ಆತ್ಮನನ್ನು ಮರೆಸಿಬಿಡುವಂಥವರಿದ್ದಾರೆ. ಎಲ್ಲರೂ ತಮ್ಮ ವಿಷಯ-ಕಷಾಯಗಳನ್ನು ಪುಷ್ಟಿ ಮಾಡಿಕೊಳ್ಳುವ ಇಚ್ಛೆಯುಳ್ಳವರಿದ್ದಾರೆ.**

**ಧರ್ಮಾನುರಾಗಿ, ಧರ್ಮಾತ್ಮಾ, ಪರೋಪಕಾರೀ,ವಾತ್ಸಲ್ಯತೆಯ ಧಾರಕ, ಕರುಣಾರಸದಿಂದ ತೊಯ್ದು ಪುರುಷರ ಸಂಯೋಗವು ಮಹಾನ ಉಜ್ವಲ ಪುಣ್ಯದ ಉದಯದಿಂದ ದೊರಕುತ್ತದೆ ;** ಆದಾಗ್ಯೂ ತಮ್ಮ ಪುರುಷಾರ್ಥ ದಿಂದ ಉತ್ತಮ ಪುರುಷರ ಉಪದೇಶದ ಸಂಯೋಗ ದೊರಕಿಸಿಕೊಳ್ಳಬೇಕಾಗುವುದು. ಸ್ನೇಹ ಮತ್ತು ಮೋಹದ ಜಾಲದಲ್ಲಿ ಸಿಕ್ಕಿಸಿ ಬಿಡುವಂಥ ಧರ್ಮರಹಿತ ಸ್ತ್ರೀ-ಪುರುಷರ ಸಂಗತಿಯನ್ನು ದೂರದಿಂದಲೇ ಬಿಟ್ಟು ಕೊಡಬೇಕಾಗುವುದು.

ಪರವಶತೆಯಿಂದ ಯಾವನಾದರೂ ದುಷ್ಟನು ಬಂದರೆ ಅವನೊಡನೆ ಮಾತನಾಡುವುದನ್ನು ಬಿಟ್ಟು ಮೌನವಾಗಿರಬೇಕು. ತಮ್ಮ ಕರ್ಮೋದಯದ ಆಧೀನ ದೇಶ ಕಾಲಯೋಗ್ಯವಾದ ಯಾವ ಸ್ಥಾನವು ಪ್ರಾಪ್ತವಾಗಿದೆ. ಅದರಲ್ಲಿಯೇ ಇದ್ದುಕೊಂಡು ಆಸನ, ಶಯನ, ಅಶನ ಮಾಡುವುದು. **ಜಿನಶಾಸ್ತ್ರಗಳ ಆಶ್ರಯ ಪಡೆಯುವುದು, ಧರ್ಮಾತ್ಮರುಗಳಿಂದ ಜಿನ ಸಿದ್ಧಾಂತಗಳ ಉಪದೇಶ ಕೇಳುವುದು.** ತ್ಯಾಗ, ಸಂಯಮ, ಶುಭಧ್ಯಾನ, ಭಾವನೆಗಳನ್ನು ವಿಸ್ಮರಣೆ ಮಾಡಬಾರದು. ಏಕೆಂದರೆ ಧರ್ಮಾತ್ಮರಾದ ಸಾಧರ್ಮಿಗಳು ತಮ್ಮ ಹಾಗೂ ಇತರರ ಧರ್ಮದ ಪುಷ್ಟಿಯನ್ನೇ ಬಯಸುತ್ತಾರೆ; ಧರ್ಮದ ಪ್ರಭಾವನೆಯನ್ನು ಬಯಸುತ್ತ ಧರ್ಮೋಪದೇಶ ಮೊದಲಾದ ರೂಪದ ವೈಯಾವೃತ್ಯದಲ್ಲಿ ಆಲಸಿಗಳಾಗಬಾರದು ; ತ್ಯಾಗ, ವ್ರತ, ಸಂಯಮ, ಶುಭಧ್ಯಾನ, ಶುಭಭಾವನೆಯಲ್ಲಿಯೇ ಆರಾಧಕರಾದ ಸಾಧರ್ಮಿಗಳನ್ನು ಲೀನ ಮಾಡಬೇಕಾಗುವುದು.

ಯಾವನಾದರೂ ಆರಾಧಕನು ಜ್ಞಾನ ಸಹಿತನಾಗಿದ್ದು ಕೂಡ ಕರ್ಮದ ತೀವ್ರ ಉದಯದಿಂದ ತೀವ್ರರೋಗ, ಕ್ಷುಧೆ, ತೃಷೆಗಳ ಪರೀಷಹ ಸಹನೆ ಮಾಡುವಲ್ಲಿ ಅಸಮರ್ಥನಾಗಿ ಪ್ರತಿಜ್ಞೆಯನ್ನು ಮುರಿಯತೊಡಗಿದರೆ, ಅಯೋಗ್ಯ ವಚನಗಳನ್ನೂ ಆಡತೊಡಗಿದರೆ, ರೋದನ-ವಿಲಾಪರೂಪದ ಆರ್ತ ಪರಿಣಾಮವಾದರೆ ಸಾಧರ್ಮಿಗಳಾದ ಬುದ್ಧಿವಂತ ಪುರುಷರು ಅವನ ತಿರಸ್ಕಾರ ಮಾಡಬಾರದು, ಕಠೋರ ವಚನಗಳನ್ನು ಆಡಬಾರದು; ಏಕೆಂದರೆ ಅವನು ವೇದನೆಯಿಂದಂತೂ ದುಃಖಿಯೇ ಇದ್ದಾನೆ, ಅದರಲ್ಲಿ ತಿರಸ್ಕಾರದ ಮತ್ತು ಅವಜ್ಞೆಯ ವಚನಗಳನ್ನು ಕೇಳಿ ಮನಸ್ಸಿನಲ್ಲಿ ದುಃಖಿಯಾಗಿ ದುರ್ಧ್ಯಾನ ಮಾಡಿ ಧರ್ಮದಿಂದ ವಿಚಲಿತನಾಗಿ ಹೋಗುವನು, ವಿಪರೀತ ಆಚರಣೆ ಮಾಡತೊಡಗುವನು, ಆತ್ಮಘಾತ ಮಾಡಿಕೊಳ್ಳುವನು. ಆದುದರಿಂದ ಆರಾಧಕರ ತಿರಸ್ಕಾರ ಮಾಡುವುದು ಯೋಗ್ಯವಿಲ್ಲ.

ಉಪದೇಶ ಕೊಡುವಂಥವರು ತುಂಬ ಧೈರ್ಯಧಾರಣ ಮಾಡಿ ಆರಾಧಕನಿಗೆ ಸ್ನೇಹ ತುಂಬಿದ ವಚನಗಳನ್ನು ಆಡಬೇಕು. ಅವನ್ನು ಕೇಳುತ್ತಿರುವಂತೆ ಸಮಸ್ತ ದುಃಖವು ದೂರವಾಗುವಂಥ ಮಧುರ ವಚನಗಳನ್ನು ಆಡಬೇಕು. ಕರುಣಾರಸದಿಂದ ತುಂಬಿದ ಉಪಕಾರ ಬುದ್ಧಿಯಿಂದ ತುಂಬಿದ ವಚನಗಳನ್ನು ಆಡಬೇಕಾಗುವುದು.

## ಸಮಾಧಿ ಧಾರಕನಿಗೆ ಸಂಬೋಧನೆ

**ಎಲೈ ಧರ್ಮದ ಇಚ್ಛುಕನೇ !** ಈಗ ಸಾವಧಾನನಾಗು. ಪೂರ್ವಕರ್ಮದ ಉದಯದಿಂದ ರೋಗ, ವೇದನೆ, ಮಹಾವ್ಯಾಧಿಗಳು ಉತ್ಪನ್ನವಾಗಿವೆ, ಪರೀಷಹಗಳ ಕಷ್ಟವು ಉಂಟಾಗಿದೆ, ಶರೀರವು ನಿರ್ಬಲವಾಗಿದೆ, ಆಯು ಪೂರ್ಣವಾಗುವ ಅವಸರವು ಬಂದಿದೆ. ಆದುದರಿಂದ ಈಗ ದೀನನಾಗಬೇಡ, ಅಧೀರತೆಯನ್ನು ತೊರೆದು ಶೂರತನ ಗ್ರಹಣ ಮಾಡು. ಅಧೀರ ಮತ್ತು ದೀನನಾದರೂ ಕೂಡ ಅಸಾತಾ ಕರ್ಮದ ಉದಯವು ಬಿಡಲಾರದು. ದುಃಖವನ್ನು ದೂರ ಮಾಡುವಲ್ಲಿ ಯಾರೂ ಸಮರ್ಥರಿಲ್ಲ.

**ಅಸಾತಾವನ್ನು ದೂರಮಾಡಿ ಸಾತಾ ಕರ್ಮ ಕೊಡುವಲ್ಲಿ ಯಾವ ಇಂದ್ರ, ಧರಣೇಂದ್ರ, ಜಿನೇಂದ್ರರು ಕೂಡ ಸಮರ್ಥರಿಲ್ಲ.** ಅಧೀರತೆಯು ಉಭಯ ಲೋಕಗಳನ್ನು ನಷ್ಟ ಮಾಡುವಂಥದ್ದಿದೆ, ಧರ್ಮದಿಂದ ಪರಾಙ್ಮುಖತೆ ಮಾಡಿಸುವಂಥದ್ದಿದೆ. ಆದುದರಿಂದ ಧೈರ್ಯ ಧಾರಣ ಮಾಡಿ, ಕ್ಲೇಶ ರಹಿತನಾಗಿ ಭೋಗಿಸಿದರೆ ಪೂರ್ವಕರ್ಮದ ನಿರ್ಜರೆಯಾಗುವುದು ಮತ್ತು ನವೀನ ಕರ್ಮ ಬಂಧನದ ಅಭಾವವಾಗಿ ಹೋಗುವುದು. **ನೀವು ಜಿನ ಧರ್ಮದ ಧಾರಕರಾದ ಧರ್ಮಾತ್ಮರೆಂದು ಕರೆಸಿಕೊಳ್ಳುವಿರಿ, ಎಲ್ಲ ಜನರು ತಮ್ಮನ್ನು ಜ್ಞಾನವಂತನೆಂದು ಹೇಳುತ್ತಾರೆ.** ಧರ್ಮಧಾರಕರಲ್ಲಿ ವಿಖ್ಯಾತರಿರುವಿರಿ, ವ್ರತೀ ಇರುವಿರಿ, ಯಥಾಶಕ್ತಿ ವ್ರತ ಸಂಯಮದ ಪ್ರತಿಜ್ಞೆಯನ್ನು ಗ್ರಹಣ ಮಾಡಿರುವಿರಿ, ಈಗ ನೀವು ತ್ಯಾಗ-ಸಂಯಮದಲ್ಲಿ ಶಿಥಿಲತೆಯನ್ನು ತೋರಿಸಿದಿರೆಂದರೆ ತಮ್ಮ ಯಶಸ್ಸು ಮತ್ತು ಪರಲೋಕವಂತೂ ಕೆಡುವುದಲ್ಲದೆ ಅನ್ಯ ಧರ್ಮಾತ್ಮರುಗಳ ಮತ್ತು ಧರ್ಮದ ನಿಂದೆಯು ಕೂಡ ಬಹಳಷ್ಟು ಆಗುವುದು. ಅನೇಕ ಸರಳ ಸ್ವಭಾವದ ಜನರು ಧರ್ಮ ಮಾರ್ಗದಲ್ಲಿ ಶಿಥಿಲರಾಗಿ ಹೋಗುವರು.

ಯಾವ ಪ್ರಕಾರ ಓರ್ವ ಕುಲವಂತ ಮಹಾನ್ ಸುಭಟನು ಜನರ ಮಧ್ಯದಲ್ಲಿ ಸಾಮರ್ಥ್ಯದಿಂದ ಭುಜಗಳನ್ನು ತೋರಿಸಿ ತೂಗುತ್ತಿರುವಂಥವನು ನಂತರ ಎದುರಿಗೆ ಶತ್ರುಗಳು ಬರುತ್ತಿರುವುದನ್ನು ನೋಡುತ್ತಿರುವಂತೆಯೇ ಭಯಭೀತನಾಗಿ ಓಡಿ ಹೋದರೆ ಇತರ ಸಾಮಾನ್ಯ ಕಿಂಕರರು ಹೇಗೆ ಸ್ಥಿರತೆಯನ್ನು ಧಾರಣ ಮಾಡುವರು ? ಮತ್ತು ಅವನು ಎರಡು ದಿವಸ ಹೆಚ್ಚು ಬದುಕಿದರೂ ಕೂಡ ಅವನ ಜೀವನವೇ ಧಿಕ್ಕರಿಸಲು ಯೋಗ್ಯವಾಗುತ್ತದೆ. ಅದೇ ಪ್ರಕಾರ ನೀನು ಕೂಡ ತ್ಯಾಗ, ವ್ರತ, ಸಂಯಮದ ಪ್ರತಿಜ್ಞೆ ತೆಗೆದುಕೊಂಡು ಈಗ ಶಿಥಿಲವಾದರೆ ನಿಂದೆಗೆ ಪಾತ್ರನಾಗಿ ಹೋಗುವೆ; ಅಶುಭ ಕರ್ಮವೂ ಬಿಡಲಾರದು ಮತ್ತು ಭವಿಷ್ಯದ ಸಲುವಾಗಿ ಅಧಿಕ ದುಃಖ ಕೊಡುವಲ್ಲಿ ಕಾರಣರೂಪವಾದ ನವೀನ ಕರ್ಮಗಳ ತೀವ್ರ ದೃಢ ಬಂಧವನ್ನೂ ಮಾಡಿಕೊಳ್ಳುವೆ, ಅವು ಅಸಂಖ್ಯಾತ ವರ್ಷಗಳವರೆಗೆ ತೀವ್ರ ಫಲವನ್ನು ಕೊಡುತ್ತಲೇ ಉಳಿಯುವವು.

**ನಾನಂತೂ ಜಿನೇಂದ್ರರ ಭಕ್ತನಿದ್ದೇನೆ, ಅವರ ಆಜ್ಞೆಯ ಪ್ರತಿಪಾದಕನಿದ್ದೇನೆಂದು ಮೊದಲು ನಿಮಗೆ ಅಭಿಮಾನವಿತ್ತು.** ಜಿನೇಂದ್ರರು ಹೇಳಿದ ವ್ರತ, ಶೀಲ, ಸಂಯಮಗಳ ಧಾರಕನಿದ್ದೇನೆ, ಆ ಶ್ರದ್ಧೆ, ಜ್ಞಾನ, ಆಚರಣೆಗಳು ಅನಂತ ಭವಗಳಲ್ಲಿ ದುರ್ಲಭವಿದ್ದು ಅವು ವೀತರಾಗ ಗುರುಗಳ ಕೃಪೆಯಿಂದ ಪ್ರಾಪ್ತವಾಗಿವೆಯೆಂದು ನಿಶ್ಚಯ ಮಾಡಿ ಕೂಡ ಈಗ ಕರ್ಮದ ಉದಯದಿಂದ ಸ್ವಲ್ಪ ರೋಗ ಜನಿತ ವೇದನೆ ಮತ್ತು ಪರೀಷಹ ಬರುವುದರಿಂದ ಅಧೀರನಾಗಿ ವಿಚಲಿತನಾಗುವುದು ಅತ್ಯಂತ ಲಜ್ಜೆಯ ಕಾರಣವಿದೆ. ವೇದನೆಯಿಂದ ಇಷ್ಟೇಕೆ ಭಯಪಡುವುದು ? ವೇದನೆಯಿಂದ ಮರಣಾವಾದರೂ ಆಗುವುದು. ಮರಣವಂತೂ ಅವಶ್ಯವಾಗಿ ಒಂದುಬಾರಿ ಆಗುವುದೇ ಇದೆ, ದೇಹ ಧಾರಣ ಮಾಡಿದವರೆಲ್ಲರೂ ಅವಶ್ಯವಾಗಿ ಮರಣ ಹೊಂದೇ ಹೊಂದುವರು.

**ವೀತರಾಗ ಗುರುಗಳಿಂದ ಉಪದೇಶಿಸಲ್ಪಟ್ಟ ವ್ರತ-ಸಂಯಮಸಹಿತ, ಅಧೀರತೆ ರಹಿತ, ಉತ್ಸಾಹದಿಂದ ನಾಲ್ಕು ಆರಾಧನೆಗಳ ಆಶ್ರಯದೊಡನೆ ಮರಣವಾದರೆ ಅದರ ಸಮಾನವಾದ ಲಾಭವು ಮೂರು ಲೋಕದಲ್ಲಿ ಬೇರೊಂದಿಲ್ಲ.** ಮೂರು ಲೋಕದ ರಾಜ್ಯಸಂಪತ್ತಂತೂ ವಿನಾಶಶೀಲವಿದೆ, ಪರಾಧೀನವಿದೆ, ಆದರೆ ಆರಾಧನೆಯ ಸಂಪತ್ತು ಅನಂತ ಸುಖ ಕೊಡುವಂಥದ್ದಿದೆ, ಅವಿನಾಶಿಯಿದೆ. ಭಯರಹಿತ-ಧೈರ್ಯ ಸಹಿತವಾದ ಯಾವ ಮರಣವನ್ನು ಮುನೀಶ್ವರರು -

ಆಚಾರ್ಯ - ಉಪಾಧ್ಯಾಯರುಗಳು ಬಯಸುತ್ತಾರೆ, ಸಮಸ್ತ ವ್ರತೀ, ಸಂಯಮೀ, ಸಮ್ಯಗ್ದೃಷ್ಟಿಗಳು ಬಯಸುತ್ತಾರೆ ಮತ್ತು ನೀವು ಕೂಡ ನಿರಂತರ ಬಯಸುತ್ತಿದ್ದೀರಿ, ಆ ಮನೋವಾಂಛಿತ ಸಮಾಧಿ ಮರಣದ ಹತ್ತಿರ ಬಂದಿರುವಿರಿ, ಇದರ ಸಮಾನ ಆನಂದ ಕೊಡುವಂಥದು ಬೇರೆ ಯಾವುದೂ ಇಲ್ಲ.

ವೇದನೆಯು ಹೆಚ್ಚಾಗಿ ಅದು ನಿಮ್ಮ ಮೇಲೆ ದೊಡ್ಡ ಉಪಕಾರವನ್ನೇ ಮಾಡುತ್ತದೆ. **ವೇದನೆಯಿಂದ ದೇಹದಲ್ಲಿನ ಪ್ರೀತಿಯು ನಷ್ಟವಾಗಿ ಹೋಗುವುದು.** ಪೂರ್ವದಲ್ಲಿ ಕಟ್ಟಿದ ಅಸಾತಾ ಮೊದಲಾದ ಕರ್ಮಗಳ ನಿರ್ಜರೆಯು ಅಲ್ಪ ಕಾಲದಲ್ಲಿಯೇ ಆಗಿ ಹೋಗುವುದು. ದುಃಖ-ರೋಗಗಳಿಂದ ತುಂಬಿದ ದೇಹರೂಪದ ಕಾರಾಗೃಹದಿಂದ ಅವಶ್ಯವಾಗಿ ಬಿಡುಗಡೆಯಾಗುವುದು ; ವಿಷಯ ಭೋಗಗಳಿಂದ ವಿರಕ್ತಿಯಾಗಿ ಹೋಗುವುದು, ಪರದ್ರವ್ಯಗಳಲ್ಲಿನ ಮಮತೆಯು ಕಡಿಮೆಯಾಗುವುದು, ಮರಣದ ಭಯವು ಉಳಿಯಲಾರದು; ಪತ್ನಿ, ಪುತ್ರ, ಮಿತ್ರ ಮೊದಲಾದವರಲ್ಲಿನ ಮಮತೆಯು ನಷ್ಟವಾಗಿ ಹೋಗುವುದು, ಇವೇ ಮೊದಲಾದ ಅನೇಕ ಉಪಕಾರಗಳು ವೇದನೆಯಿಂದ ಆಗುತ್ತವೆಂದು ತಿಳಿಯುವುದು. ಅಧೀರನಾದರೆ ವೇದನೆಯು ಹೆಚ್ಚುವುದು, ಸಂಕ್ಲೇಶವು ಹೆಚ್ಚುವುದು. ಕರ್ಮದ ಉದಯ ಬಂದಿದೆ ಅದು ತೊಲಗಲಾರದು. ಆದುದರಿಂದ ಈಗ ದೃಢತೆಯನ್ನೇ ಧಾರಣ ಮಾಡುವ ಸಮಯವಿದೆ. ಶೂರತೆಯನ್ನು ಧಾರಣ ಮಾಡಿಯೇ ಕರ್ಮವನ್ನು ಜಯಿಸಬಹುದಾಗಿದೆ. ಅಧೀರನಾಗಿ ರೋದನೆ ಮಾಡಿದರೆ, ಗಾಬರಿಗೊಂಡರೆ ಕರ್ಮವು ನಿಮ್ಮನ್ನು ಸಾಯಿಸಿ ತಿರ್ಯಂಚ ಮೊದಲಾದ ಕುಗತಿಗಳಲ್ಲಿ ಕಳಿಸಬಹುದು ಅಲ್ಲಿಯಂತೂ ಅನೇಕ ದುಃಖ ಭೋಗಿಸಬೇಕಾಗುವುದು.

ಯಾವ ಪ್ರಕಾರ ಕುಲದ, ಸಾಧರ್ಮಿಗಳ, ಧರ್ಮದ ಯಶಸ್ಸು ಹೆಚ್ಚುವುದು, ಮತ್ತು ನೀವು ದುಃಖಕ್ಕೆ ಪಾತ್ರರಾಗಲಾರಿರಿ ಅಂಥ ಪ್ರಯತ್ನ ಮಾಡಬೇಕು. ಹೇಗೆ ಕ್ಷತ್ರಿಯ ಕುಲದಲ್ಲಿ ಉತ್ಪನ್ನರಾದ ಶೂರವೀರರು ಸಂಗ್ರಾಮದಲ್ಲಿ ಶಸ್ತ್ರಗಳಿಂದ ಬಹಳಷ್ಟು ಕಷ್ಟ ಸಹಿಸಬೇಕಾದರೂ ವಕ್ರ ದೃಷ್ಟಿಯಿಂದಲೇ ಮರಣ ಹೊಂದುತ್ತಾರೆ, ಆದರೆ ಶತ್ರುಗಳ ಕಡೆಗಿರುವ ಮುಖವನ್ನು ತಿರುಗಿಸುವುದಿಲ್ಲ. ಅದೇ ಪ್ರಕಾರ ಪರಮ ವೀತರಾಗಿ ಪುರುಷರ ಆಶ್ರಯ ಗ್ರಹಣ ಮಾಡುವಂಥ ಪುರುಷನು ಕೂಡ ಅಶುಭ ಕರ್ಮಗಳ ತೀವ್ರ ಪ್ರಹಾರದಿಂದ ದೇಹದ ತ್ಯಾಗ ಮಾಡಿ ಬಿಡುತ್ತಾನೆ; ಆದರೆ ದೀನತೆ ಅಧೀರತೆಯನ್ನು ವ್ಯಕ್ತಪಡಿಸುವುದಿಲ್ಲ.

**ಜಿನಲಿಂಗ ಧರಿಸಿದ ಅದೆಷ್ಟೋ ಉತ್ತಮ ಪುರುಷರಿಗೆ ದುಷ್ಟವೈರಿಗಳು ನಾಲ್ಕೂ ಕಡೆಯಿಂದ ಅಗ್ನಿಯನ್ನು ಹೊತ್ತಿಸುತ್ತಾರೆ,ಅದರ ಘೋರ ವೇದನೆಯು ಅದು ವಚನಗಳಿಗೆ ಅಗೋಚರವಿದೆ, ಆ ಅಗ್ನಿಯಲ್ಲಿ ಎಲ್ಲ ಕಡೆಯಿಂದ ಸುಟ್ಟು ಹೋಗುತ್ತಿದ್ದರೂ ಅದನ್ನು ತಮ್ಮ ಋಣ ತೀರಿ ಹೋಗುವುದರ ಸಮಾನ ತಿಳಿದುಕೊಂಡು, ಪಂಚ ಪರಮಗುರುಗಳ ಆಶ್ರಯ ದೊಡನೆ ಧೈರ್ಯವನ್ನು ಧಾರಣ ಮಾಡುತ್ತ ಸುಟ್ಟು ಹೋಗಿದ್ದಾರೆ; ಆದರೆ ಅಧೀರತೆಯನ್ನು ವ್ಯಕ್ತಪಡಿಸಿಲ್ಲ. ಆತ್ಮಜ್ಞಾನದ ಪ್ರಭಾವನೆಯು ಹೀಗಿರುತ್ತದೆ. ಯಾರು ಈ ಶರೀರದಿಂದ ಭಿನ್ನ, ಅವಿನಾಶೀ, ಅಖಂಡ, ಜ್ಞಾನ ಸ್ವಭಾವದ ಅನುಭವ ಮಾಡಿಕೊಂಡಿದ್ದಾರೆ ಆ ಅನುಭವ ಮಾಡಿಕೊಂಡಿರುವುದರ ಫಲವು ಅಕಂಪತೆಯಿದೆ, ಭಯರಹಿತತೆಯೇ ಇದೆ.**

ಮಿಥ್ಯಾದೃಷ್ಟಿ ಅಜ್ಞಾನಿಯೂ ಕೂಡ ಪರಲೋಕದಲ್ಲಿ ಸುಖದ ಅಪೇಕ್ಷೆಯುಳ್ಳವನಾಗಿ ಧೈರ್ಯ ಧಾರಣ ಮಾಡುತ್ತಾನೆ. ವೇದನೆಯಲ್ಲಿ ಅಧೀರನಾಗುವುದಿಲ್ಲವೆಂದ ಮೇಲೆ ಸಂಸಾರದ ಸಮಸ್ತ ದುಃಖಗಳನ್ನು ನಾಶ ಮಾಡುವ ಇಚ್ಛೆಯುಳ್ಳ ಜಿನಧರ್ಮದ ಧಾರಕರಾದ ತಾವೇಕೆ ಅಧೀರರಾಗಿ ಆತ್ಮನ ಹಿತವನ್ನು ಕೆಡಿಸಿಕೊಳ್ಳುತ್ತಿರುವಿರಿ ? ಮತ್ತು ಉಜ್ವಲವಾದ ಯಶಸ್ಸನ್ನು ಮಲಿನ ಮಾಡಿಕೊಂಡು ಅದೇಕೆ ದುರ್ಗತಿಗೆ ಪಾತ್ರರಾಗಿ ಹೋಗುತ್ತಿರುವಿರಿ ?

ಆದುದರಿಂದ ಈಗ ಸಾವಧಾನರಾಗಿ ಧರ್ಮದ ಆಶ್ರಯ ಪಡೆದು ಕರ್ಮಜನಿತ ವೇದನೆಯ ಮೇಲೆ ವಿಜಯ ಪ್ರಾಪ್ತ ಮಾಡಿಕೊಳ್ಳಿರಿ. ಇಂಥ ಅವಸರವು ಅನಂತ ಭವಗಳಲ್ಲೂ ದೊರಕಿಲ್ಲ, **ಇದು ದಡ ತಲುಪಲಿರುವ ನೌಕೆಯಿದೆ, ಈಗ ಪ್ರಮಾದಿಯಾದರೆ ನೌಕೆಯು ಮುಳುಗಿ ಹೋಗುವುದು. ಸಮಸ್ತ ಪರ್ಯಾಯದಲ್ಲಿ (ಜೀವನದ ತುಂಬೆಲ್ಲ) ಜ್ಞಾನದ ಅಭ್ಯಾಸ ಮಾಡಿರುವೆ, ಶ್ರದ್ಧೆಯ ಉಜ್ವಲತೆ ಮಾಡಿರುವೆ, ತಪ-ತ್ಯಾಗ-ನಿಯಮಧಾರಣ ಮಾಡಿರುವೆ,**

**ಅವೆಲ್ಲವನ್ನೂ ಇದೇ ಅವಸರದ ಸಲುವಾಗಿಯೇ ಧಾರಣ ಮಾಡಲಾಗಿತ್ತು.** ಈಗ ಅವಸರವು ಬಂದ ಮೇಲೆ ಕೂಡ ಶಿಥಿಲರಾಗಿ ಭ್ರಷ್ಟರಾಗಿ ಹೋದರೆ ಭ್ರಷ್ಟರೇ ಆದಿರಿ. ಸಮತಾಭಾವ ಬಿಟ್ಟುಕೊಡುವುದರಿಂದ ರೋಗ, ವೇದನೆ ಹಾಗೂ ಮರಣವಂತೂ ಬಿಟ್ಟು ಹೋಗಲಾರದು, ಆದರೆ ನಿಮ್ಮ ಆತ್ಮನನ್ನು ಕೇವಲ ದುರ್ಗತಿ ರೂಪದ ಘೋರ ಭೀಕರ ಕೊಳಚೆಯಲ್ಲಿ ಮುಳುಗಿಸಿ ಬಿಡುವಿರಿ.

ಯಾವ ಪ್ರಕಾರ ಲೋಕದಲ್ಲಿ ಕಾಲರಾ ರೋಗ ಬಂದು ಬಿಟ್ಟರೆ, ಕ್ಷಾಮವು ತಲೆದೋರಿದರೆ, ಭಯಂಕರವಾದ ಗಹನ ವನದಲ್ಲಿ ಪ್ರವೇಶವಾಗಿ ಹೋದರೆ, ಶಾಶ್ವತ ಭಯವು ಬಂದು ಬಿಟ್ಟರೆ, ತೀವ್ರರೋಗದ ವೇದನೆಯು ಬಂದುಬಿಟ್ಟರೆ ಉತ್ತಮ ಕುಲದಲ್ಲಿ ಉತ್ಪನ್ನರಾದ ಪುರುಷರು ಸನ್ಯಾಸ ಮರಣದ ಅಂಗೀಕಾರ ಮಾಡಿ ಬಿಡುತ್ತಾರೆ ; ಆದರೆ ನೀಚ ಪುರುಷರ ಹಾಗೆ ನಿಂದ್ಯ ಆಚರಣೆಯನ್ನೆಂದೂ ಮಾಡುವುದಿಲ್ಲ. ಕಾಲರಾದ ಭಯದಿಂದ ಮದ್ಯ ಕುಡಿಯುವುದಿಲ್ಲ, ಕ್ಷಾಮವು ಬಂದು ಬಿಟ್ಟರೆ ಮಾಂಸ ಭಕ್ಷಣ ಮಾಡುವುದಿಲ್ಲ, ಕಂದಮೂಲ (ಗಡ್ಡೆ, ಗೆಣಸು ಮೊದಲಾದುವನ್ನು) ತಿನ್ನುವುದಿಲ್ಲ; ನೀಚ, ಚಾಂಡಾಲ ಮೊದಲಾದವರ ಎಂಜಲು ತಿನ್ನುವುದಿಲ್ಲ. ಭಯ ತೋರಿಸಿದರೆ ಮ್ಲೇಚ್ಛ-ಭಿಲ್ಲರಾಗಿ ಹೋಗುವುದಿಲ್ಲ ; ಹಿಂಸೆ ಮೊದಲಾದ ಕುಕರ್ಮ ಮಾಡತೊಡಗುವುದಿಲ್ಲ, ಅದೇ ಪ್ರಕಾರ ರೋಗ ಮೊದಲಾದವುಗಳ ಪ್ರಬಲ ಕಷ್ಟ ಬಂದ ಮೇಲೆ ಕೂಡ ಶ್ರಾವಕ ಧರ್ಮ ಧರಿಸಿದ **ಜಿನಧರ್ಮಿಗಳೆಂದೂ ತಮ್ಮ ಭಾವಗಳನ್ನು ವಿಕಾರರೂಪವಾಗಿ ಮಾಡುವುದಿಲ್ಲ.** ಧರ್ಮದ, ತ್ಯಾಗದ, ವ್ರತದ, ಸಾಧರ್ಮಿಗಳ ಪ್ರಭಾವನೆಯ ಇಚ್ಛುಕರಾಗಿ ಯಾರು ಕೊನೆಯ ಸಮಯದಲ್ಲಿ ತಮ್ಮ ಶ್ರದ್ಧೆ, ಜ್ಞಾನ, ಆಚರಣೆಯ ಉಜ್ವಲತೆಯನ್ನು ಕಾಯ್ದುಕೊಳ್ಳುತ್ತಾರೆ ಅವರ ಜನ್ಮವೇ ಸಾರ್ಥಕವಾಗುತ್ತದೆ; ವ್ರತ, ತಪ, ಧರ್ಮಗಳು ಸಫಲವಾಗುತ್ತವೆ, ಜಗತ್ತಿನಲ್ಲಿ ಪ್ರಂಶಸೆಯಾಗುತ್ತದೆ, ಮರಣ ಹೊಂದಿ ಉತ್ತಮ ದೇವಗಳಲ್ಲಿ ಉತ್ಪನ್ನರಾಗುತ್ತಾರೆ.

**ಮನುಷ್ಯ ಪರ್ಯಾಯದಲ್ಲಿ ಉತ್ತಮತೆಯು ಕೂಡ ಇದುವೇ ಇದೆ. ಘೋರ ವಿಪತ್ತು ವೇದನೆಯುಂಟಾದ ಮೇಲೆ ಕೂಡ ಸುಮೇರು ಪರ್ವತದ ಸಮಾನ ಅಚಲರಾಗಿರುತ್ತಾರೆ, ಸಮುದ್ರದ ಸಮಾನ ಗಂಭೀರರಾಗಿರುತ್ತಾರೆ. ಎಲೈ ಧರ್ಮದ ಆರಾಧಕರೇ ! ನೀವು ಅತ್ಯಂತ ಘೋರ ವೇದನೆಯುಂಟಾದ ಮೇಲೆ ಕೂಡ ಆಕುಲಗೊಳ್ಳಬಾರದು, ಈ ಕಳೇವರ (ಶರೀರ)ದಿಂದ ಭಿನ್ನವಾದ ತಮ್ಮ ಜ್ಞಾಯಕ ಭಾವದ ಅನುಭವ ಮಾಡಬೇಕು.**

ತೀವ್ರ ವೇದನೆಯುಂಟಾದ ಮೇಲೆ ಕೂಡ ಪೂರ್ವದಲ್ಲಿ ವೇದನೆಯನ್ನು ಜಯಿಸಿ ಹೋದಂಥ ಉತ್ತಮ ಪುರುಷರ ಧ್ಯಾನ ಮಾಡಬೇಕು. ಎಲೈ ಆತ್ಮನೇ ! ಪೂರ್ವದಲ್ಲಿ ಸಾಧು ಪುರುಷರು ಸಿಂಹ-ಹುಲಿ ಮೊದಲಾದ ದುಷ್ಟ ಪ್ರಾಣಿಗಳು ಹರಿದು ತಿಂದರೂ ಕೂಡ ಅವರು ಆರಾಧನೆಯಲ್ಲಿಯೇ ಲೀನರಾದರು, ಈಗ ನಿಮಗೆ ಅಂಥ ವೇದನೆಯಿದೆಯೇನು ?

**ಮುನಿಗಳ ಮೇಲೆ ಉಂಟಾದ ಉಪಸರ್ಗಗಳ ಉದಾಹರಣೆ :**

**ಸುಕುಮಾರ ಸ್ವಾಮಿ**ಯು ಅತ್ಯಂತ ಕೋಮಲ ಶರೀರದವರಿದ್ದು ಅವರು ದೀಕ್ಷೆ ಸ್ವೀಕಸಿದ ಕೂಡಲೆ ಒಂದು ನರಿಯು ತನ್ನ ಎರಡು ಮರಿಗಳೊಡನೆ ಆ ಮುನಿಯ ಶರೀರವನ್ನು ಮೂರು ಹಗಲು-ರಾತ್ರಿಗಳವರೆಗೆ ಕಾಲುಗಳಿಂದ ಹಿಡಿದು ತಿನ್ನಲಾರಂಭಿಸಿದವು. ಯಾವಾಗ ಹೊಟ್ಟೆ ಹರಿಯುತ್ತವೆ ಆಗ ಮರಣವಾಗುತ್ತದೆ. ಇಂಥ ಘೋರ ಉಪಸರ್ಗವನ್ನು ಅತ್ಯಂತ ಧೈರ್ಯದೊಡನೆ ಸಹಿಸಿ ಉತ್ತಮ ಪ್ರಯೋಜನ (ಸಮಾಧಿಮರಣ) ಸಿದ್ಧ ಮಾಡಿದರು. ಈಗ ನಿಮಗೆ ಅದೆಷ್ಟು ವೇದನೆಯಿದೆ?

**ಸುಕೌಶಲ ಸ್ವಾಮಿ**ಯ ತಾಯಿಯ ಜೀವವು ಹುಲಿಯಾಗಿ ಅವರನ್ನು ತಿಂದು ಹಾಕುತ್ತದೆ, ಆದಾಗ್ಯೂ ಅವರು ಉತ್ತಮಾರ್ಥ (ಸಮಾಧಿಮರಣ) ದಿಂದ ಚ್ಯುತರಾಗಲಿಲ್ಲ. ಈಗ ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ ?

**ಗಜಕುಮಾರ ಮುನಿ**ಯ ಮಸ್ತಕದ ಮೇಲೆ ಅಗ್ನಿಷ್ಟಿಕೆಯನ್ನೇ ಹೊತ್ತಿಸಿ ಇಟ್ಟರು, ಆದಾಗ್ಯೂ ಅವರು ಉತ್ತಮಾರ್ಥ ಸಾಧಿಸಿದರು. ನಿಮ್ಮ ಸಲುವಾಗಿ ಈಗ ಅದೆಷ್ಟು ವೇದನೆಯಿದೆ ?

**ಸನತ್ಕುಮಾರ** ನಾಮದ ಮಹಾಮುನಿಯ ಶರೀರದಲ್ಲಿ ಕುಷ್ಟ, ಜ್ವರ, ವಾತ, ಪಿತ್ತ, ತೀವ್ರಕ್ಷುಧೆ ವಮನ, ನೇತ್ರಶೂಲ, ಉದರಶೂಲ ಮೊದಲಾದ ಅನೇಕ ರೋಗಗಳುತ್ಪನ್ನವಾಗಿ ಅವುಗಳ ಘೋರ ವೇದನೆಯನ್ನು ಏಳು ನೂರು ವರುಷಗಳ ವರೆಗೆ ಸಾಮ್ಯ ಭಾವದಿಂದ ಭೋಗಿಸಿದರು, ಧೈರ್ಯ ಬಿಡಲಿಲ್ಲ. ನಿಮ್ಮ ಸಲುವಾಗಿ ಎಷ್ಟು ವೇದನೆಯಿದೆ ?

**ಶ್ರೇಣಿಕ ಪುತ್ರ**ನು ಗಂಗಾನದಿಯಲ್ಲಿ ನೌಕೆಯೊಡನೆ ಮುಳುಗಿ ಹೋದನು. ಆದರೆ ಆರಾಧನೆಯಿಂದ ಚ್ಯುತನಾಗಲಿಲ್ಲ. ನಿಮ್ಮ ಸಲುವಾಗಿ ಇರುವ ವೇದನೆಯಾದರೂ ಎಷ್ಟಿದೆ ?

**ಭದ್ರಬಾಹು** ನಾಮದ ಮುನಿಗೆ ತೀವ್ರ ಕ್ಷುಧೆಯೆಂಬ ರೋಗವು ಉತ್ಪನ್ನವಾಯಿತು, ಆದರೂ ಅವಮೌದರ್ಯ (ಊನೋದರ)ನಾಮದ ತಪದ ಪ್ರತಿಜ್ಞೆಯ ಆರಾಧನೆಯಿಂದ ಚ್ಯುತನಾಗಲಿಲ್ಲ, ಆದರೆ ಈಗ ನಿಮಗೆಷ್ಟು ವೇದನೆಯಿದೆ?

**ಲಲಿತ ಘಟ** ಮೊದಲಾದ ನಾಮದ ಪ್ರಸಿದ್ಧ ಮೂವತ್ತೆರಡು ಮುನಿಗಳು ಕೌಸಾಂಬೀ ನದಿಯ ಪ್ರವಾಹದಲ್ಲಿ ಹರಿದು ಹೋದರು, ಆದರೂ ಸಮಾಧಿ ಮರಣ ಮಾಡಿದರು, ಚ್ಯುತರಾಗಲಿಲ್ಲ. ಈಗ ನಿಮಗಿರುವ ವೇದನೆಯಾದರೂ ಎಷ್ಟಿದೆ ?

**ಧರ್ಮಘೋಷ** ನಾಮದ ಮುನಿಯು ಚಂಪಾ ನಗರದ ಹೊರಗೆ ಗಂಗಾನದಿಯ ದಡದಲ್ಲಿ ಒಂದು ತಿಂಗಳು ಉಪವಾಸದ ಪ್ರತಿಜ್ಞೆ ಮಾಡಿ ತೀವ್ರ ತೃಷೆಯ ವೇದನೆಯಿಂದ ಪ್ರಾಣ ತ್ಯಾಗ ಮಾಡಿದರು ; ಆದರೆ ಆರಾಧನೆಯಿಂದ ಚ್ಯುತರಾಗಲಿಲ್ಲ, ನಿಮ್ಮ ಸಲುವಾಗಿ ಈಗ ಎಷ್ಟು ವೇದನೆಯಿದೆ ?

**ಶ್ರೀದತ್ತ** ನಾಮದ ಮುನಿಗೆ ಪೂರ್ವ ಜನ್ಮದ ವೈರಿ ದೇವನು ತನ್ನ ವಿಕ್ರಿಯೆಯಿಂದ ಘೋರ ಶೀತದ ವೇದನೆಯನ್ನುಂಟು ಮಾಡಿದರೂ ಅವರು ಕ್ಲೇಶರಹಿತರಾಗಿ ಉತ್ತಮಾರ್ಥವನ್ನು ಸಿದ್ಧ ಮಾಡಿದರು; ನಿಮಗೆಷ್ಟು ವೇದನೆಯಿದೆ?

**ವೃಷಭಸೇನ** ಮುನಿಯು ಉಷ್ಣಶಿಲಾತಲದ ಮೇಲೆ ಉಷ್ಣ ಪವನ ಹಾಗೂ ಉಷ್ಣ ಸೂರ್ಯನ ಘೋರ ಆತಪ ವೇದನೆಯನ್ನು ಸಹಿಸುತ್ತಿದ್ದರೂ ಆರಾಧನೆಯನ್ನು ಧಾರಣ ಮಾಡಿದ್ದರು, ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ ?

**ಅಗ್ನಿ** ನಾಮದ ರಾಜಪುತ್ರನು ಮುನಿ ಅವಸ್ಥೆಯಲ್ಲಿ ರೋಹೋಡವೆಂಬ ಊರೊಳಗೆ ಕ್ರೌಂಚ ನಾಮದ ವೈರಿಯು ಶಕ್ತ್ಯಾಯುಧದಿಂದ ಇರಿದುಕೊಂದರೂ ಆರಾಧನೆಯ ಧಾರಣ ಮಾಡಿದ್ದರು, ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ?

**ಅಭಯ ಘೋಷ** ನಾಮದ ಮುನಿಯ ಅಂಗಾಗಗಳನ್ನು ಕಾಕಂದೀ ನಗರದಲ್ಲಿ ಚಂಡವೇಗನೆಂಬ ವೈರಿಯು ಕತ್ತರಿಸಿ ಹಾಕಿದರೂ ಘೋರ ವೇದನೆಯನ್ನು ಸಹಿಸುತ್ತ ಉತ್ತಮಾರ್ಥ ಸಾಧಿಸಿದರು, ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ ?

**ವಿದ್ಯುಚ್ಚರ** ನಾಮದ ಮುನಿಯು ಅನೇಕ ಸೊಳ್ಳೆ, ಜೇಣ್ಣೊಣಗಳು ತಿಂದು ಹಾಕಿದರೂ ಸಂಕ್ಲೇಶ ರಹಿತರಾಗಿ ಮರಣ ಹೊಂದಿ ಉತ್ತಮಾರ್ಥ ಸಾಧಿಸಿದರು, ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ.

**ಚಿಲಾತೀಪುತ್ರ** ನಾಮದ ಮುನಿಯನ್ನುಪೂರ್ವ ಭವದ ವೈರಿಯು ಶಸ್ತ್ರದಿಂದ ಗಾಯಗೊಳಿಸಿದನು, ಪುನಃ ಆ ಗಾಯಗಳಲ್ಲಿ ಕ್ರಿಮಿಗಳುತ್ಪನ್ನವಾದವು. ಆ ವೈರಿಯು ಪೂರ್ಣ ಶರೀರವನ್ನು ಜರಡಿಯ ಸಮಾನ ಛಿದ್ರ ಮಾಡಿದ್ದರೂ ಸಮತಾ ಭಾವದಿಂದ ಪ್ರಚುರ ವೇದನೆಯನ್ನು ಸಹಿಸುತ್ತ ಉತ್ತಮಾರ್ಥ ಸಾಧಿಸಿದರು. ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ ?

**ದಂಡಕ** ನಾಮದ ಮುನಿಯನ್ನು ಯಮುನಾಚಕ್ರವೆಂಬ ಪೂರ್ವಭವದ ವೈರಿಯು ಬಾಣಗಳಿಂದ ಹೊಡೆದನು, ಅದರ ಘೋರವೇದನೆಯನ್ನು ಸಮತಾ ಭಾವದಿಂದ ಸಹಿಸಿ ಆರಾಧನೆಯನ್ನು ಪ್ರಾಪ್ತ ಮಾಡಿಕೊಂಡರು, ಆದರೆ ಈಗ ನಿಮಗೆಷ್ಟು ವೇದನೆಯಿದೆ ?

**ಅಭಿನಂದನ** ಮೊದಲಾದ ಐನೂರು ಮುನಿಗಳು ಕುಂಭಕಾರಕಟ ನಗರದೊಳಗೆ ಗಾಣದ ದಿಂಡಿನಲ್ಲಿ ಹಿಂಡಿದರೂ ಕೂಡ ಆ ಮುನಿಗಳು ಸಾಮ್ಯಭಾವದಿಂದ ವಿಚಲಿತರಾಗಲಿಲ್ಲ, ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ ?

**ಚಾಣಕ್ಯ** ನಾಮದ ಮುನಿಯನ್ನು ಸುಬಂಧನೆಂಬ ವೈರಿಯು ದನದ ಕೊಟ್ಟಿಗೆಯಲ್ಲಿ ಬೆಂಕಿ ಹಚ್ಚಿ ಸುಟ್ಟು ಹಾಕಿದನು, ಆದರೆ ಆ ಮುನಿಯು ಪ್ರಾಯೋಪಗಮನ ಸನ್ಯಾಸದಿಂದ ವಿಚಲಿತರಾಗಲಿಲ್ಲ. ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ ?

**ವೃಷಭಸೇನ** ನಾಮದ ಮುನಿಯನ್ನು ಸಂಘ ಸಹಿತವಾಗಿ ಕುಲಾಲ ಗ್ರಾಮದ ಹೊರ ವಲಯದಲ್ಲಿ ರಿಷ್ಟಾಭನೆಂಬ ವೈರಿಯು ಬೆಂಕಿಯಿಟ್ಟು ಸುಟ್ಟು ಹಾಕಿದನು. ಅವರೆಲ್ಲರೂ ಪರಮ ವೀತರಾಗತೆಯೊಡನೆ ಆರಾಧನೆಗೆ ಪ್ರಾಪ್ತರಾದರು. ಆದರೆ ಈಗ ನಿಮ್ಮ ಸಲುವಾಗಿ ಅದೆಷ್ಟು ವೇದನೆಯಿದೆ ?

ಎಲೈ ಆರಾಧನೆಯ ಆರಾಧಕರೇ ! ಮನಸ್ಸಿನಲ್ಲಿ ಒಂದಿಷ್ಟು ವಿಚಾರವನ್ನಾದರೂ ಮಾಡಿರಿ ! ಇಷ್ಟು ಮುನಿಗಳು ಅಸಹಾಯ, ಏಕಾಕೀ, ಉಪಾಯ, ಪ್ರತಿಕಾರ ರಹಿತ, ವೈಯಾವೃತ್ಯ ರಹಿತರಾಗಿದ್ದರೂ, ಪರಮ ಧೈರ್ಯಧಾರಣ ಮಾಡಿ,ಅಧೀರರಾಗದೆ ಸಮಭಾವದಿಂದ ಘೋರೋಪಸರ್ಗಸಹಿಸಿ ಆರಾಧನೆ ಸಾಧಿಸಿದರು. ಈಗ ನಿಮ್ಮ ಮೇಲೆ ಯಾವ ಉಪಸರ್ಗವಿದೆ ? ಸಮಸ್ತ ಸಾಧರ್ಮಿ ಜನರು ವೈಯಾವೃತ್ಯದಲ್ಲಿ ತತ್ಪರರಿದ್ದಾರೆ, ಆದಾಗ್ಯೂ ನೀವು ಅದೇಕೆ ದುಃಖಿಯಾಗುತ್ತಿರುವಿರಿ ? ಯಾವ ದೊಡ್ಡ-ದೊಡ್ಡ ಪುರುಷರಾಗಿ ಹೋಗಿದ್ದಾರೆ ಅವರಿಗೆ ಯಾರೂ ಸಹಾಯಕರಿರಲಿಲ್ಲ, ಯಾರೂ ವೈಯಾವೃತ್ಯ ಮಾಡುವವರಿರಲಿಲ್ಲ, ಎಲ್ಲರೂ ಅಸಹಾಯರಿದ್ದರು. ಅವರ ಮೇಲೆ ದುಷ್ಟ ವೈರಿಗಳು ಉಪಸರ್ಗ ಮಾಡಿದರು, ಅಗ್ನಿಯಲ್ಲಿ ಸುಟ್ಟರು, ಪರ್ವತದಿಂದ ಉರುಳಿಸಿದರು, ಶಸ್ತ್ರಗಳಿಂದ ಇರಿದರು, ದುಷ್ಟ ತಿರ್ಯಂಚಗಳು ತಿಂದು ಹಾಕಿದವು, ನೀರಿನಲ್ಲಿ ಮುಳುಗಿಸಿದರು ಎಂಥ ಘೋರ ಉಪದ್ರವವಾದರೂ ಅವರು ಸಾಮ್ಯಭಾವ ಬಿಡಲಿಲ್ಲ. ನಿಮ್ಮ ಮೇಲೆಯಂತೂ ಯಾವ ಉಪಸರ್ಗ ಬಂದಿಲ್ಲ, ಧರ್ಮಧಾರಕ,ಕರುಣಾವಂತ, ಧೈರ್ಯಧಾರಕ, ಪರಮಹಿತೋಪದೇಶದಲ್ಲಿ ಉದ್ಯಮಶೀಲ, ವೈಯಾವೃತ್ಯದಲ್ಲಿ ತತ್ಪರರಿರುವಂಥ ಸಮಸ್ತ ಪರಿವಾರವು ಉಪಸ್ಥಿತವಿದೆ. ಈಗ ಆಕುಲತೆಗೆ ಯಾವ ಕಾರಣವೂ ಇಲ್ಲ, ಮತ್ತು ಶೀತ, ಉಷ್ಣ, ಮಳೆ, ಗಾಳಿಗಳ ಉಪದ್ರವವೂ ಇಲ್ಲ; ಇಂಥ ಅವಸರದಲ್ಲಿ ಕೂಡ ಅದೇಕೆ ಶಿಥಿಲರಾಗಿ ಹೋಗುತ್ತಿರುವಿರಿ ?

ನಿಮ್ಮ ಸಲುವಾಗಿ ಈ ರೋಗ ಜನಿತ, ಅಶಕ್ತತೆ-ಜನಿತ, ಕ್ಷುಧೆ-ತೃಷೆಗಳ ವೇದನೆಯಾಗುತ್ತಿದೆ ಅದರಲ್ಲಿ ಪರಿಣಾಮ ತೊಡಗಿಸಬೇಡಿರಿ. **ಸಾಧರ್ಮಿ ಜನರ ಮುಖದಿಂದ ಉಚ್ಚರಿಸಲಾದ ಜಿನೇಂದ್ರರ ವಚನರೂಪ ಅಮೃತದ ಪಾನ ಮಾಡಿರಿ.** ಅದರಿಂದ ಸಮಸ್ತ ವೇದನೆಯ ರೂಪ ವಿಷದ ಅಭಾವವಾಗುವುದು, ಪರಿಣಾಮವು ಉಜ್ವಲವಾಗುವುದು, ಪರಮ ಧರ್ಮದಲ್ಲಿ ಉತ್ಸಾಹವು ಉತ್ಪನ್ನವಾಗುವುದು, ಪಾಪದ ನಿರ್ಜರೆಯಾಗುವುದು, ಅಧೀರತೆಯ ಅಭಾವವಾಗಿ ಹೋಗುವುದು.

**ಚತುರ್ಗತಿಗಳ ದುಃಖದ ವರ್ಣನೆ :** ಈಗ ವೇದನೆಯಾದ ಮೇಲೆ ನಾಲ್ಕೂ ಗತಿಗಳಲ್ಲಿ ಭೋಗಿಸಿದ ದುಃಖದ ವಿಚಾರ ಮಾಡಬೇಕು. ಈ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತ ಈ ಜೀವವು ಯಾವ ವೇದನೆಯನ್ನು ಭೋಗಿಸಿಲ್ಲ ? ಅನೇಕ ಬಾರಿ ಕ್ಷುಧೆಯ ವೇದನೆಯಿಂದ, ತೃಷೆಯ ವೇದನೆಯಿಂದ ಸತ್ತಿದೆ, ಅನೇಕ ಬಾರಿ ಅಗ್ನಿಯಲ್ಲಿ ಸುಟ್ಟು ಸತ್ತಿದೆ, ಅನೇಕ ಬಾರಿ ನೀರಿನಲ್ಲಿ ಮುಳುಗಿ ಸತ್ತಿದೆ, ವಿಷ ಭಕ್ಷಣೆ ಮಾಡಿ ಸತ್ತಿದೆ, ಅನೇಕ ಬಾರಿ ಸಿಂಹ-ಹುಲಿಗಳಿಂದ ಸತ್ತು ಹೋಗಿದೆ, ಪರ್ವತದ ತುದಿಯಿಂದ ಉರುಳಿ ಸತ್ತಿರುವುದು, ಶಸ್ತ್ರಗಳ ಘಾತದಿಂದ ಸತ್ತಿರುವುದು. ಈಗ ನಿಮಗೆ ಅದೆಷ್ಟು ದುಃಖವಿದೆ ?

**ಯಾವ ದುಃಖವನ್ನು ನರಕ ಹಾಗೂ ತಿರ್ಯಂಚ ಗತಿಯಲ್ಲಿ ದೀರ್ಘಕಾಲದವರೆಗೆ ಭೋಗಿಸಿದೆ ಅದನ್ನಂತೂ ಕೇವಲಜ್ಞಾನಿಗಳೇ ತಿಳಿಯುತ್ತಾರೆ.** ಇಲ್ಲಿ ಈ ವೇದನೆಯು ಸ್ವಲ್ಪ ಸಮಯದ ಸಲುವಾಗಿ ಬಂದಿದೆ, ಆದುದರಿಂದ ಧೈರ್ಯ ಬಿಡಬೇಡಿರಿ. ಯಾವ ಘೋರ ವೇದನೆಯನ್ನು ಕರ್ಮದ ವಶವಾಗಿ ಚತುರ್ಗತಿಗಳಲ್ಲಿ ಭೋಗಿಸಲಾಗಿದೆ,ಅದನ್ನು ಕೋಟ್ಯಂತರ ನಾಲಿಗೆಗಳಿಂದ ಅಸಂಖ್ಯಾತ ವರುಷಗಳವರೆಗೆ ಹೇಳುವುದರಲ್ಲೂ ಯಾರೂ ಸಮರ್ಥರಿಲ್ಲ.

**ನರಕಗತಿಯ ದುಃಖ :** ನರಕದಲ್ಲಿ ಯಾವ ದುಃಖದ ಸಾಮಗ್ರಿಗಳಿವೆ ಆ ಜಾತಿಯವು ಈ ಲೋಕದಲ್ಲಿ ಇಲ್ಲ, ಹೇಗೆ ತೋರಿಸಿಕೊಡುವುದು ? ಕೇವಲಜ್ಞಾನಿ ಭಗವಂತರೇ ತಿಳಿಯುತ್ತಾರೆ. ಅಲ್ಲಿ ಐದನೆಯ ನರಕದವರೆಗಿನ ಉಷ್ಣ ಬಿಲಗಳಲ್ಲಿ ಉಷ್ಣತೆಯು ಎಷ್ಟಿರುತ್ತದೆಯೆಂದರೆ ಸುಮೇರು ಪರ್ವತದ ಬರಾಬರಿಯಾದ ಲೋಹದ ಗುಂಡನ್ನು ಬಿಟ್ಟರೆ

ಅದು ಭೂಮಿಯವರೆಗೆ ತಲುಪುತ್ತಿರುವಂತೆಯೇ ನೀರಾಗಿ ಹೋಗುತ್ತದೆ. ಇಲ್ಲಿ ನಿಮ್ಮ ಸಲುವಾಗಿ ರೋಗ ಜನಿತ ದುಃಖವು ಅದೆಷ್ಟು ಇದೆ ? ಐದನೇ ನರಕದ ಮೂರನೇ ಭಾಗದಲ್ಲಿ ಮತ್ತು ಆರನೇ-ಏಳನೇ ನರಕದ ಬಿಲಗಳಲ್ಲಿ ಎಷ್ಟು ಶೀತವಿರುತ್ತದೆಯೆಂದರೆ ಸುಮೇರು ಪರ್ವತದ ಬರಾಬರಿಯಾದ ಲೋಹದ ಗುಂಡು ಶೀತದಿಂದ ಚೂರು-ಚೂರು ಆಗಿ ಹರಡಿ ಹೋಗುವುದು. ಇಂಥ ಶೀತೋಷ್ಣಗಳ ವೇದನೆಯನ್ನು ಈ ಜೀವನು ಚಿರಕಾಲದವರೆಗೆ ಭೋಗಿಸಿದ್ದಾನೆ.

ಈ ಮನುಷ್ಯ ಜನ್ಮದಲ್ಲಿ ಜ್ವರ ಮೊದಲಾದ ರೋಗ ಜನಿತ, ತೃಷೆಯಿಂದ ಉತ್ಪನ್ನ, ಗ್ರೀಷ್ಮ ಕಾಲದಿಂದ ಉತ್ಪನ್ನವಾದ ಉಷ್ಣವೇದನೆ ಹಾಗೂ ಶೀತಜ್ವರದಿಂದ ಉತ್ಪನ್ನ, ಶೀತ ಕಾಲದಿಂದ ಉತ್ಪನ್ನವಾದ ಶೀತದ ವೇದನೆಯು ಅದೆಷ್ಟು ಇದೆ ? ಸ್ವಲ್ಪ ಸಮಯದವರೆಗೆ ಇರುವುದು. ಆದುದರಿಂದ ಧರ್ಮದ ಧಾರಕರು, ಮಮತೆಯ ತ್ಯಾಗಿಗಳು ಈ ವೇದನೆಯನ್ನು ಸಮಭಾವದಿಂದ ಭೋಗಿಸಬೇಕಾಗಿಲ್ಲವೇನು ? ಈ ಅವಸರವಂತೂ ಸಮಭಾವದಿಂದ ಪರೀಷಹಗಳನ್ನು ಸಹಿಸುವುದೇ ಇದೆ. ಒಂದು ವೇಳೆ ಕ್ಲೇಶ ಭಾವ ಮಾಡಿದರೆ ಕರ್ಮದ ಉದಯವು ಬಿಟ್ಟುಕೊಡುವುದಿಲ್ಲ, ಓಡಿಯಾದರೂ ಎಲ್ಲಿಗೆ ಹೋಗುವೆ ?

ಒಂದು ವೇಳೆ ಅಪಘಾತ ಮೊದಲಾದವುಗಳಿಂದ ಸತ್ತರೆ ನರಕಗಳಲ್ಲಿ ಅನಂತಗುಣಿತ ವೇದನೆಯನ್ನು ಅಸಂಖ್ಯಾತ ಕಾಲದವರೆಗೆ ಭೋಗಿಸುವೆ. ಅಲ್ಲಿಯಂತೂ ಪಾಪದ ಉದಯದಿಂದ ನಾರಕಿಗಳ ಶರೀರದಲ್ಲಿ ಸ್ವಭಾವದಿಂದಲೇ ಕೋಟ್ಯಂತರ ರೋಗಗಳು ನಿರಂತರವಿರುತ್ತವೆ.

**ನರಕದ ಭೂಮಿಯ ಸ್ಪರ್ಶವೇ ಕೋಟ್ಯಂತರ ಚೇಳು ಕಚ್ಚುವುದಕ್ಕಿಂತ ಅಧಿಕ ವೇದನೆಯನ್ನುಂಟು ಮಾಡುವಂಥದ್ದಿದೆ.** ನಾರಕಿಗಳಿಗೆ ಮೂರು ಲೋಕದ ಧಾನ್ಯವನ್ನೆಲ್ಲ ತಿಂದರೂ ಶಾಂತವಾಗದಷ್ಟು **ಕ್ಷುಧೆ**ಯ ವೇದನೆಯಿರುತ್ತದೆ, ಆದರೆ ತಿನ್ನುವ ಸಲುವಾಗಿ ಒಂದು ಕಾಳು ಕೂಡ ಸಿಗುವುದಿಲ್ಲ. ಸಂಪೂರ್ಣ ಸಮುದ್ರಗಳ ಜಲವನ್ನೆಲ್ಲ ಕುಡಿದರೂ ತೃಪ್ತಿಯಾಗದಷ್ಟು **ತೃಷೆ**ಯ ವೇದನೆಯಿರುತ್ತದೆ. ಆದರೆ ಕುಡಿಯುವ ಸಲುವಾಗಿ ಒಂದು ಬಿಂದು ಸಹ ನೀರು ದೊರಕುವುದಿಲ್ಲ.

ನರಕದ ಪೃಥ್ವಿಯ ಮೊದಲ ಪಟಲದ ಮಣ್ಣು ಅತ್ಯಂತ ದುರ್ಗಂಧಮಯವಿರುತ್ತದೆ. ಅದರ ಒಂದು ಕಣವು ಈ ಮನುಷ್ಯ ಲೋಕದಲ್ಲಿ ಬಂದು ಬಿದ್ದರೆ ಒಂದು ಮೈಲಿನವರೆಗೆ ಪಂಚೇಂದ್ರಿಯ ಮನುಷ್ಯ-ತಿರ್ಯಂಚಗಳು ದುರ್ಗಂಧದಿಂದ ಸತ್ತು ಹೋಗುತ್ತವೆ. ಇದೇ ಪ್ರಕಾರ ಒಂದೊಂದು ಪಟಲದಿಂದ ಒಂದೊಂದು ಮೈಲು ಹೆಚ್ಚುತ್ತ, **ಏಳನೇ ಪೃಥ್ವಿಯ ನಲವತ್ತೊಂಭತ್ತನೇ ಪಟಲದ ಮಣ್ಣು ಎಷ್ಟು ದುರ್ಗಂಧಯುಕ್ತವಿರುತ್ತದೆಯೆಂದರೆ ಅದರ ಒಂದು ಕಣವು ಇಲ್ಲಿ ಬಂದು ಬಿಟ್ಟರೆ ನಲವತ್ತೊಂಭತ್ತು ಮೈಲದವರೆಗೆ ಪಂಚೇಂದ್ರಿಯ ಮನುಷ್ಯ-ತಿರ್ಯಂಚಗಳು ಆ ದುರ್ಗಂಧದಿಂದ ಸತ್ತು ಹೋಗುವವು.** ಇದೇ ಪ್ರಕಾರದ ಸ್ವರೂಪವು ಶಬ್ದದ ಅನುಭವದ ದುಃಖವು ವಚನಗಳಿಗೆ ಅಗೋಚರವಿದೆ, ಅದನ್ನು ಕೇವಲಿಗಳೇ ತಿಳಿಯುತ್ತಾರೆ.

ಅಧಿಕ ಆರಂಭ-ಅಧಿಕ ಪರಿಗ್ರಹದ ಭಾವದಿಂದ, ಸಪ್ತ ವ್ಯಸನಗಳ ಸೇವನೆಯಿಂದ, ಅಭಕ್ಷ್ಯ ಭಕ್ಷಣದಿಂದ, ಹಿಂಸೆ ಮೊದಲಾದ ಪಂಚ ಪಾಪಗಳಲ್ಲಿ ತೀವ್ರ ರಾಗದಿಂದ, ನಿರ್ಮಾಲ್ಯ ಭಕ್ಷಣದಿಂದ ಇಂಥ ಘೋರ ದುಃಖ ಭೋಗಿಸಲು ಪಾತ್ರನಾದ ನಾರಕಿಯಾಗುತ್ತಾನೆ. ನಾರಕಿಗಳಿಗೆ ಅಪಾರ ಮಾನಸಿಕ ದುಃಖವಾಗುತ್ತದೆ. ನಾರಕಿಗಳ ಶಾರೀರಿಕ ದುಃಖ, ಕ್ಷೇತ್ರ ಜನಿತ ದುಃಖ, ಪರಸ್ಪರರಲ್ಲಿ ಮಾಡಲಾಗುವ ದುಃಖ, ಅಸುರ ಕುಮಾರರಿಂದ ಉತ್ಪನ್ನ ಮಾಡಿಸಿದ ದುಃಖವನ್ನು ವಚನದ ಮೂಲಕ ಹೇಳುವ ಸಾಧ್ಯತೆಯಿಲ್ಲ, ಅದರ ವಿಚಾರ ಮಾಡಬೇಕು. ನರಕದಲ್ಲಿ ಆಯು ಪೂರ್ಣವಾದಲ್ಲದೆ ಮರಣವಾಗುವುದಿಲ್ಲ.

**ತಿರ್ಯಂಚ ಗತಿಯ ದುಃಖ :** ತಿರ್ಯಂಚಗಳಿಗೆ ಪಾಪದ ಉದಯದಿಂದ ತೀವ್ರ ದುಃಖವಾಗುವುದನ್ನು ಪ್ರತ್ಯಕ್ಷ ಕಾಣುತ್ತೇವೆ, ಅದರ ವರ್ಣನೆಯನ್ನೇನು ಮಾಡುವುದು ? ತಿರ್ಯಂಚಗತಿಯಲ್ಲಿ ಪರಾಧೀನತೆಯ ದುಃಖ, ವಚನ ರಹಿತತೆ, ಕ್ಷುಧೆ, ತೃಷೆ, ಶೀತ, ಉಷ್ಣತೆಯ ದುಃಖ, ಹೊಡೆಯುವ, ಅತಿಭಾರ ಹೊರುವ, ನಾಸಿಕ ಭೇದದ, ಹಗ್ಗಗಳಿಂದ ಬಂಧಿಸುವ ಘೋರ ದುಃಖವಿದೆ. ತಿನ್ನುವ, ಕುಡಿಯುವ, ಏಳುವ, ಕೂಡ್ರುವುದೂ ಅವುಗಳ ಸ್ವಾಧೀನವಿಲ್ಲ,ಅವು ಯಾರಿಗೆ ತಮ್ಮ

ಸುಖ-ದುಃಖದ ಅಭಿಪ್ರಾಯ ತಿಳಿಸಿ ಯಾವ ಉಪಾಯ ಉದ್ಯಮ ಮಾಡುವ ಸಾಧ್ಯತೆಯಿಲ್ಲ, ಯಾರ ಮನೆಯಲ್ಲಿರುವುದು, ಯಾರ ಮನೆಯಲ್ಲಿ ಇಲ್ಲದಿರುವುದೆಲ್ಲವು ಅವುಗಳ ಆಧೀನವಾಗಿಲ್ಲ. ಚಾಂಡಾಲ, ಮ್ಲೇಚ್ಛ, ನಿರ್ದಯಿಗಳ ಮನೆಗಳಲ್ಲೂ ಇರಬೇಕಾಗುವುದು ಮತ್ತು ಬ್ರಾಹ್ಮಣ ಮೊದಲಾದವರ ಮನೆಗಳಲ್ಲಿಯೂ ಇರಬೇಕಾಗುವುದು.

ಕೆಲವರು ಅನೇಕ ಪ್ರಕಾರದಿಂದ ದಂಡಿಸುತ್ತಾರೆ, ತೊಂದರೆ ಕೊಡುತ್ತಾರೆ, ಕೆಲವರು ಆಹಾರ ಪಾನೀಯ ಕೊಡುವುದಿಲ್ಲ, ಸ್ವಲ್ಪ ಕೊಡುತ್ತಾರೆ ಮತ್ತು ಹೆಚ್ಚುಭಾರ ಹೊರಿಸುತ್ತಾರೆ, ಯಾವ ದೊರೆಗಳ ಹತ್ತಿರ ಹೋಗಿ ದೂರು ಕೊಡುವ ಸಾಮರ್ಥ್ಯವಿಲ್ಲ, ಯಾರೂ ದಯೆ ಮಾಡಿ ರಕ್ಷಣೆ ಮಾಡುವುದಿಲ್ಲ. ಮೂಗು ಹರಿದು ಹೋಗುತ್ತದೆ, ಹೆಗಲು ಕರಗಿ ಹೋಗುತ್ತದೆ, ಬೆನ್ನು ಮುರಿದು ಹೋಗುತ್ತದೆ, ಸಾವಿರಾರು ಕ್ರಿಮಿಗಳು ಬೀಳುತ್ತವೆ, ಆದಾಗ್ಯೂ ಪಾಷಾಣ ಮೊದಲಾದ ಅಧಿಕ ಭಾರ ಹೊರುವುದು; ಇಂಥ ಸ್ಥಿತಿಯಲ್ಲಿ ನಡೆಯಲಾಗುವುದಿಲ್ಲ, ಭಾರ ಹೊರುವುದಾಗುವುದಿಲ್ಲ, ಆಗ ಮರ್ಮಸ್ಥಾನದಲ್ಲಿ ಚರ್ಮದ ಹಾಗೂ ಲೋಹದ ತೀಕ್ಷ್ಣ ಆಯುಧಗಳಿಂದ ಕೋಲುಗಳಿಂದ ಹೊಡೆಯುವುದು ಮತ್ತು ಕಠೋರ ವಚನಗಳನ್ನಾಡಿ ದುಃಖಿ ಮಾಡಿ ಬಲವಂತದಿಂದ ನಡೆಸುವುದು, ನಾಸಿಕ ಮೊದಲಾದ ಮರ್ಮಸ್ಥಾನಗಳಲ್ಲಿ ಹೊಡೆಯುವುದು, ಇರಿಯುವುದು, ಅಲ್ಲಾಡಲು ಬಾರದಂತೆ ಹಗ್ಗ, ಸರಪಳಿಗಳಿಂದ ಬಂಧಿಸುವಂಥ ತಿರ್ಯಂಚಗಳ ದುಃಖವನ್ನು ಪ್ರತ್ಯಕ್ಷವಾಗಿಯೇ ಕಾಣುತ್ತಿದ್ದೇವೆ. ನಿಮ್ಮ ಸಲುವಾಗಿ ಈಗ ಅದೆಷ್ಟು ದುಃಖವಿದೆ ?

ಜಲಚರ, ನಭಚರ, ವನಚರ, ಜೀವಗಳು ಪರಸ್ಪರ ಭಕ್ಷಣ ಮಾಡುತ್ತವೆ, ಅಡಗಿ ಕುಳಿತಿದ್ದರೆ ಹುಡುಕಿ ತೆಗೆದು ಕೊಲ್ಲುತ್ತವೆ, ನಿರ್ಬಲವನ್ನು ಸಬಲವು ತಿಂದು ಹಾಕುತ್ತದೆ. ಭಿಲ್ಲ, ಧೀವರ ಮೊದಲಾದವರು ಪ್ರಾಣಿಗಳನ್ನು ನೋಡುತ್ತಿರುವಂತೆಯೇ ಧಾವಿಸಿ ಹೋಗುತ್ತಾರೆ, ಹಿಡಿದು ತರುತ್ತಾರೆ, ಸಾಯಿಸುತ್ತಾರೆ, ಸೀಳುತ್ತಾರೆ, ತುಂಡು ಮಾಡುತ್ತಾರೆ, ಬೇಯಿಸಿ ತಿಂದು ಬಿಡುತ್ತಾರೆ, ಅವುಗಳ ಮೇಲೆ ಯಾರು ದಯೆ ಮಾಡುವರು ? ಯಾರು ಪೂರ್ವಜನ್ಮದಲ್ಲಿ ದಯಾಧರ್ಮಧಾರಣ ಮಾಡಲಿಲ್ಲ ಧನದ ಲೋಭಿಯಾಗಿ ಅನೇಕ ಕಪಟ, ಮಾಯಾಚಾರ ಮಾಡಿದುದರ ಫಲವು ತಿರ್ಯಂಚಗತಿಯೊಳಗೆ ಉದಯದಲ್ಲಿ ಬಂದು ದುಃಖ ಕೊಡುತ್ತದೆ.

**ಮನುಷ್ಯ ಗತಿಯ ದುಃಖ :** ಮನುಷ್ಯರಲ್ಲಿ ಇಷ್ಟವಿಯೋಗದ ಘೋರ ದುಃಖವಿದೆ, ದುಷ್ಟ-ಅನಿಷ್ಟದ ಸಂಯೋಗ ವಾಗುವ ದುಃಖ, ನಿರ್ಧನವಾಗುವ, ಪರಾಧೀನವಾಗುವ, ಬಂದೀಗೃಹದಲ್ಲಿ ಬೀಳುವ, ಅಪಮಾನವಾಗುವ, ಹೊಡೆತದ ತ್ರಾಸವಾಗುವ,ಕುರುಡ, ಕಿವುಡ, ಕುಂಟವಾಗುವ,ಹಸಿವೆ-ಬಾಯಾರಿಕೆ ಭೋಗಿಸುವ, ಶೀತ-ಉಷ್ಣ-ಆತಪಗಳನ್ನು ಭೋಗಿಸುವ, ನೀಚಕುಲ ನೀಚ ಕ್ಷೇತ್ರದಲ್ಲಿ ಉತ್ಪನ್ನವಾಗುವ, ಅಂಗ-ಉಪಾಂಗಗಳು ಕತ್ತರಿಸಿ-ಕರಗಿ ಹೋಗುವ, ಐಚ್ಛಿಕ ಆಹಾರವು ದೊರಕದಿರುವ ಇವೇ ಮೊದಲಾದ ಅನೇಕ ಘೋರ ದುಃಖವನ್ನು ಭೋಗಿಸಿದೆ ಅವುಗಳ ವಿಚಾರ ಮಾಡಬೇಕು. ಇಲ್ಲಿ ನಿಮ್ಮ ಸಲುವಾಗಿ ಅದೆಷ್ಟು ದುಃಖವಿದೆ ?

ನರಕ-ತಿರ್ಯಂಚಗಳ ದುಃಖವಂತೂ ಅಪಾರವಿದೆ, ಆದರೆ ಪಾಪದ ಉದಯದಿಂದ ಅಜ್ಞಾನ ಭಾವದಿಂದ ಕಷಾಯದ ವಶವರ್ತಿಯಾದ ಜೀವನಿಗೆ ಮನುಷ್ಯ ಗತಿಯಲ್ಲಿ ಕೂಡ ಮಾನಸಿಕ ದುಃಖವು ಅಪಾರವಿದೆ. **ಕರ್ಮವು ಅತ್ಯಂತ ಬಲಿಷ್ಠವಿದೆ.** ಯಾರ ವಚನವೇ ಮಸ್ತಕದಲ್ಲಿ ತೀಕ್ಷ್ಣ ಶೂಲದ ಸಮಾನ ತಿವಿಯುವಂಥ-ಕಷ್ಟ ಕೊಡುವಂಥ ಮಹಾದುಷ್ಟ, ನಿರ್ದಯಿ, ಮಹಾವಕ್ರ, ಅನ್ಯಾಯ ಮಾರ್ಗಿಯ ಜತೆಯಲ್ಲಿ ಕೂಡಿರುವುದಕ್ಕೆ ಕರ್ಮವು ಉತ್ಪನ್ನ ಮಾಡಿದೆ, ಅವರ ತೊಂದರೆಯನ್ನು ಹಗಲಿರುಳು ಭೋಗಿಸಬೇಕಾಗುತ್ತದೆ, ಯಾವಾಗಲೂ ಭಯಭೀತವಾಗಿರಬೇಕಾಗುತ್ತದೆ.

ಯಾರು ಉಪಕಾರಿಯಿದ್ದಾರೆ, ಪ್ರಾಣದ ಸಮಾನ ಪ್ರಿಯರಿದ್ದಾರೆ, ಅವರ ಜತೆಯಲ್ಲಿರುವುದರಿಂದ ತಮ್ಮ ಜೀವನವು ಸಾರ್ಥಕವಿದೆಯೆಂದು ಮನ್ನಿಸುತ್ತಿರುವಂಥ ಪತ್ನಿ-ಪುತ್ರ-ಮಿತ್ರ-ಒಡೆಯ-ಸೇವಕ ಮೊದಲಾದವರ ವಿಯೋಗವಾಗಿ ಹೋಗುವ ದುಃಖ, ಬಾಲ್ಯಾವಸ್ಥೆಯಲ್ಲಿ ಮಗಳು ವಿಧವೆಯಾಗುವ ದುಃಖ, ಆಜೀವಿಕೆಯು ನಷ್ಟವಾಗಿ ಹೋಗುವ, ಧನವು ಕಳವಾಗಿ ಹೋಗುವ,ತುಂಬ ನಿರ್ಧನನಾಗುವ, ಹೊಟ್ಟೆ ತುಂಬ ಆಹಾರ ಸಿಗದಿರುವ, ದುಷ್ಟ ಪತ್ನಿ-ಕುಪುತ್ರ ದೊರಕುವ,

ಬಂಧುಗಳಲ್ಲಿ ಅಪಮಾನವಾಗುವ, ಗುಣವಂತ ಒಡೆಯನ ವಿಯೋಗವಾಗುವ ಮತ್ತು ತನ್ನ ನಿಂದೆಯಾಗುವ ಕಲಂಕ ತಗಲುವ ಮಹಾದುಃಖ ಭೋಗಿಸುತ್ತಾನೆ. ಆದುದರಿಂದ ಎಲೈ ಧೀರನೇ ! ಇಲ್ಲಿ ಸಮಾಧಿ ಮರಣದ ಸಮಯದಲ್ಲಿ ಸ್ವಲ್ಪ ವೇದನೆಯಾದರೇನಿದೆ ? ಅದು ಏನೂ ಇಲ್ಲ.

**ಕರ್ಮೋದಯದ ಬಲಿಷ್ಠತೆ :** ಕರ್ಮದ ಉದಯದಿಂದ ಮನುಷ್ಯ ಜನ್ಮದಲ್ಲಿ ಅಗ್ನಿಯೊಳಗೆ ಸುಟ್ಟು ಹೋಗುತ್ತಾನೆ; ಸಿಂಹ, ಹುಲಿ, ಸರ್ಪ, ದುಷ್ಟ ಆನೆ, ಮೊದಲಾದುವಿಂದ ಸತ್ತು ಹೋಗುತ್ತಾನೆ; ಕೈ, ಕಾಲು, ಕಿವಿ, ಮೂಗುಗಳನ್ನು ಕತ್ತರಿಸಿ ಹಾಕುತ್ತಾರೆ, ಶೂಲಕ್ಕೇರಿಸುತ್ತಾರೆ, ಕಣ್ಣು ಕೀಳುತ್ತಾರೆ, ನಾಲಿಗೆ ಕತ್ತರಿಸಿ ಹಾಕುತ್ತಾರೆ, ಪಾಪಕರ್ಮದ ಉದಯದಿಂದ ಮನುಷ್ಯ ಜನ್ಮದಲ್ಲಿ ಕೂಡ ಘೋರ ದುಃಖ ಭೋಗಿಸುತ್ತಾನೆ; ದುಷ್ಟ ವೈರಿಗಳಿಂದ ಕೋಲಿನಿಂದ, ಬೆತ್ತದಿಂದ, ಒನಕೆಯಿಂದ, ಗದೆಯಿಂದ, ಚಪ್ಪಲಿಯಿಂದ, ಸರಪಳಿಯಿಂದ ಹೊಡೆಯುತ್ತಾರೆ, ದಂಡಿಸುತ್ತಾರೆ, ಶಸ್ತ್ರಗಳಿಂದ ಸೀಳಿ ಹಾಕುತ್ತಾರೆ, ಒದೆಯುತ್ತಾರೆ, ಗುದ್ದುತ್ತಾರೆ, ನೂಕುತ್ತಾರೆ, ಕೆಡವುತ್ತಾರೆ, ಸುಟ್ಟು ಹಾಕುತ್ತಾರೆ ಇವೇ ಮೊದಲಾದುವನ್ನು ಪರಾಧೀನವಾಗಿ ಭೋಗಿಸಬೇಕಾಗುತ್ತದೆ.

**ಕರ್ಮದ ಉದಯಜನಿತ ಶತ್ರುವನ್ನು ಒಂದು ಬಾರಿ ಸ್ವಾಧೀನತೆಯಿಂದ ಸಾಮ್ಯಭಾವದಿಂದ ಭೋಗಿಸಿದರೆ ಪುನಃ ದುಃಖಕ್ಕೆ ಪಾತ್ರನಾಗಲಾರೆ.** ಸಮಸ್ತ ರೋಗ ಮತ್ತು ಕಷ್ಟಗಳನ್ನು ಅನೇಕ ಬಾರಿ ಭೋಗಿಸಿದೆ. ಈಗ ನಿಮ್ಮ ರೋಗವು ಶೀಘ್ರವಾಗಿ ನಿರ್ಜರಿಸಿ ಹೋಗುವುದು. ರೋಗವಾದಲ್ಲದೆ ಇಂಥ ದುಷ್ಟ ಜೀರ್ಣ ಶರೀರದಿಂದ ಬಿಡುಗಡೆಯಾಗುವುದಿಲ್ಲ, ದೇಹದ ಮಮತೆಯು ಕಡಿಮೆಯಾಗುವುದಿಲ್ಲ, ಧರ್ಮದಲ್ಲಿ ಪ್ರೀತಿಯು ಹೆಚ್ಚುವುದಿಲ್ಲ. ಆದುದರಿಂದ ರೋಗ ಜನಿತ ವೇದನೆಯನ್ನು ಉಪಕಾರ ಮಾಡುವಂಥದ್ದೆಂದು ತಿಳಿದುಕೊಂಡು ಹರುಷವನ್ನೇ ಪಡಬೇಕು.

ಎಲೈ ಧೀರನೇ ! ನೀನು ಸಂಸಾರದಲ್ಲಿ ಎಷ್ಟು ದುಃಖ ಭೋಗಿಸುವೆ, ಅದರ ಅನಂತದ ಒಂದು ಭಾಗದಷ್ಟು ಕೂಡ ಈ ನಿಮ್ಮ ದುಃಖವಿಲ್ಲ, ಈಗ ಈ ಸಮಯದಲ್ಲಿ ಅಧೀರರಾಗಿ ನೀವು ಧರ್ಮವನ್ನೇಕೆ ಮಲಿನ ಮಾಡುತ್ತಿರುವಿರಿ ? ನೀನು ಕರ್ಮದ ವಶವಾಗಿ ಚತುರ್ಗತಿಗಳಲ್ಲಿ ಘೋರವೇದನೆ ಭೋಗಿಸಿರುವೆ, ಈಗ ಇಲ್ಲಿ ಧರ್ಮರೂಪ ವ್ರತ-ತಪ-ಸಂಯಮ ಧಾರಣ ಮಾಡಿದ ಮೇಲೆ ವೇದನೆ ಭೋಗಿಸಲು ಭಯವೇಕೆ ಪಡುವದು ? ಕರ್ಮದ ವಶವಾಗಿ ಅನಂತ ಬಾರಿ ಎಂಥ ವೇದನೆ ಭೋಗಿಸಿದೆ ಅಂಥ ವೇದನೆ ಧರ್ಮದ ರಕ್ಷಣೆಯ ಸಲುವಾಗಿ ಒಂದು ಬಾರಿ ಸಮಭಾವದಿಂದ ಸಹನೆ ಮಾಡಿದರೆ ಬಹಳಷ್ಟು ನಿರ್ಜರೆಯಾಗಿ ಹೋಗುವುದು.

**ಎಲೈ ಧೀರನೆ ! ನೀನು ಭಯಪಡು ಅಥವಾ ಭಯಪಡದಿರು, ಉಪಚಾರ ಮಾಡು ಅಥವಾ ಮಾಡದಿರು, ಪ್ರಬಲ ಕರ್ಮದ ಉದಯ ಬರುವುದಂತೂ ನಿಲ್ಲಲಾರದು. ಕರ್ಮದ ಉದಯವು ಮಂದವಾದ ಮೇಲೆಯೇ ಉಪಚಾರವು ಕಾರ್ಯ ಮಾಡುತ್ತದೆ. ಪಾಪದ ಪ್ರಬಲ ಉದಯವಿದ್ದ ಮೇಲೆ ಅತ್ಯಂತ ಶಕ್ತಿಯುಕ್ತ ಔಷಧವು ಕೂಡ ತುಂಬ ಎಚ್ಚರಿಕೆಯಿಂದ ಉಪಯೋಗದಲ್ಲಿ ತಂದರೂ ಕೂಡ ವೇದನೆಯನ್ನು ನಾಶ ಮಾಡುವ ಸಾಧ್ಯತೆಯಿಲ್ಲ.**

ಅಸಂಯಮಿಗಳು ಯೋಗ್ಯ-ಅಯೋಗ್ಯವೆಲ್ಲವನ್ನು ತಿನ್ನುವಂಥವರಿದ್ದಾರೆ, ತ್ಯಾಗ-ವ್ರತ ರಹಿತರಿದ್ದಾರೆ, ಹಗಲಿರುಳು ಎಲ್ಲ ಪ್ರಕಾರದಿಂದ ರೋಗದೂರ ಮಾಡುವ ಉಪಚಾರ ಮಾಡುತ್ತಾರೆ. ಆದಾಗ್ಯೂ ಅವರು ಕರ್ಮದ ಪ್ರಬಲ ಉದಯವಿದ್ದ ಮೇಲೆ ರೋಗ ರಹಿತರಾಗುವುದಿಲ್ಲ. ಎಂದ ಮೇಲೆ ನೀವು ಸಂಯಮ-ವ್ರತ ಸಹಿತ, ಅಯೋಗ್ಯ ಭಕ್ಷಣದ ತ್ಯಾಗಿಯಿದ್ದು ಆಕುಲಿತರಾಗಿ ರೋಗ ರಹಿತರಾಗುವ ಕಲ್ಪನೆಯನ್ನು ಹೇಗೆ ಮಾಡುತ್ತಿರುವಿರಿ ?

ಇಲ್ಲಿ ದೊರೆಯ ಸಮಾನ ಸಮಸ್ತ ಸಾಮಗ್ರಿಗಳು ಬೇರೆ ಯಾರ ಹತ್ತಿರ ಇರುತ್ತವೆ ? ಯಾರಿಗೆ ಭಕ್ಷ್ಯ-ಅಭಕ್ಷ್ಯದ ಯೋಗ್ಯ-ಅಯೋಗ್ಯದ ವಿಚಾರವಿಲ್ಲ ; ಯಾರಿಗೆ ಹಿಂಸೆಯ ಕಾರಣವಾದ ಮಹಾನ ಆರಂಭ ಮಾಡುವುದರ ಕುರಿತು ಸ್ವಲ್ಪವೂ ಭಯವಿಲ್ಲ, ದಯೆಯಿಲ್ಲ ; ದೊಡ್ಡ-ದೊಡ್ಡ ಧನ್ವಂತರಿಯಂಥ ಅನೇಕ ವೈದ್ಯರು ಮತ್ತು ಅನೇಕ ಔಷಧಗಳಿದ್ದರೂ

ಕೂಡ ಅವರು ಕರ್ಮದ ಉದಯಜನಿತ ವೇದನೆಯನ್ನು ಶಾಂತ ಮಾಡುವ ಸಾಧ್ಯತೆಯಿಲ್ಲ; ಎಂದ ಮೇಲೆ ನೀವು ತ್ಯಾಗಿ-ವ್ರತಿ ಮತ್ತು ನಿಮ್ಮ ವೈಯಾವೃತ್ಯ ಮಾಡುವಂಥವರು ಕೂಡ ದಯಾಶೀಲ ವ್ರತಿಗಳಿರುತ್ತಾರೆ, - ಅವರು ಹೇಗೆ ನಿಮ್ಮ ರೋಗವನ್ನು ದೂರ ಮಾಡುವರು ?

**ಸಮಸ್ತ ವೇದನೆಯನ್ನು ಶಾಂತ ಮಾಡುವಂಥ ಜಿನೇಂದ್ರರ ವಚನ ರೂಪದ ಔಷಧವನ್ನು ಗ್ರಹಣ ಮಾಡಿ ಪರಮ ಸಾಮ್ಯ ಭಾವ ರೂಪದ ಅಭೇದ್ಯ ಚಕ್ರವನ್ನು ಧಾರಣ ಮಾಡಿರಿ.** ಪೂರ್ವಕರ್ಮದ ಉದಯರೂಪ ರಸವನ್ನು ಸಮಭಾವದಿಂದ ಭೋಗಿಸಿರಿ, ಅದರಿಂದ ಅಶುಭ ಕರ್ಮದ ನಿರ್ಜರೆಯಾಗುವುದು ಮತ್ತು ನವೀನ ಕರ್ಮದ ಬಂಧವಾಗಲಾರದು. ಮರಣವಂತೂ ಒಂದು ಪರ್ಯಾಯದಲ್ಲಿ ಒಂದು ಸಾರಿ ಆಗುವುದೇ ಇದೆ, ಆದರೆ ಸಂಯಮ ಸಹಿತ ಮರಣದ ಅವಸರವು ಇಲ್ಲಿ ಪ್ರಾಪ್ತವಾಗಿದೆ ; ಆದುದರಿಂದ ತುಂಬ ಹರ್ಷದಿಂದ ಮರಣ ಹೊಂದಿರಿ. ಅದರಿಂದ ಅನೇಕ ಜನ್ಮ ಧಾರಣ ಮಾಡಿ ಅನೇಕ ಮರಣ ಮಾಡಬೇಕಾಗುವುದಿಲ್ಲ.

**ಈ ತೀರ ಅತ್ಯಲ್ಪ ಜೀವನದಲ್ಲಿ ಧರ್ಮಬಿಟ್ಟು ಆರ್ತ ಪರಿಣಾಮ ಮಾಡಬೇಡಿರಿ. ಅಶುಭ ಕರ್ಮದ ಉದಯವನ್ನು ತಡೆಯುವಲ್ಲಿ ಇಂದ್ರ ಸಹಿತ ಸಮಸ್ತ ದೇವಗಳು ಸಮರ್ಥರಿಲ್ಲ, ಅದನ್ನು ಅಲ್ಪ ಶಕ್ತಿವಂತರು ಹೇಗೆ ತಡೆಯಬಲ್ಲರು ?** ಯಾವ ವೃಕ್ಷವನ್ನು ನಾಶ ಮಾಡುವ ಸಲುವಾಗಿ ಗಜೇಂದ್ರವು ಸಮರ್ಥವಿಲ್ಲ, ಆ ವೃಕ್ಷವನ್ನು ದೀನ ನಿರ್ಬಲ ಮೊಲವು ಹೇಗೆ ನಾಶ ಮಾಡುವುದು ? ಯಾವ ನದಿಯ ಪ್ರಬಲ ಪ್ರವಾಹದಲ್ಲಿ ಮಹಾನ ಬಲಶಾಲಿಯಾದ ಆನೆಯು ಕೂಡ ಹರಿದು ಹೋಗುತ್ತದೆಯೆಂದ ಮೇಲೆ ಆ ಪ್ರವಾಹದಲ್ಲಿ ಮೊಲವು ಹರಿದು ಹೋಗುವುದರಲ್ಲಿ ಏನು ಆಶ್ಚರ್ಯಪಡುವುದು ? ಯಾವ ಕರ್ಮದ ಉದಯವನ್ನು ತೀರ್ಥಂಕರ, ಚಕ್ರವರ್ತಿ, ನಾರಾಯಣ, ಬಲಭದ್ರ ಮತ್ತು ಸಮಸ್ತ ದೇವಗಳೊಡನೆ ಇಂದ್ರನು ಕೂಡ ತಡೆಯುವಲ್ಲಿ ಸಮರ್ಥನಿಲ್ಲವೆಂದ ಮೇಲೆ ಆ ಕರ್ಮವನ್ನು ತಡೆಯುವಲ್ಲಿ ಬೇರೆ ಯಾರು ಸಮರ್ಥರಿದ್ದಾರೇನು ?

ಕರ್ಮದ ಉದಯವನ್ನು ತಡೆಯುವ ಸಾಧ್ಯತೆಯಿಲ್ಲವೆಂದು ತಿಳಿದುಕೊಂಡು ಅಸಾತಾದ ಉದಯದಲ್ಲಿ ದುಃಖಿಯಾಗಬಾರದು, ಶೂರತೆಯನ್ನು ತೋರಬೇಕು, ಸಾಮ್ಯಭಾವದಿಂದ ಕರ್ಮದ ನಿರ್ಜರೆ ಮಾಡಬೇಕು. ಕರ್ಮದ ಉದಯದಲ್ಲಿ ದುಃಖಿಯಾದರೆ, ದೀನತೆ ತೋರಿದರೆ, ರೋದಿಸಿದರೆ, ಆಕ್ರೋಶ ಮಾಡಿದರೆ ವೇದನೆಯು ಕಡಿಮೆಯಾಗಲಾರದು, ವೇದನೆಯಂತೂ ಹೆಚ್ಚುವುದು ; ಆದರೆ ಧರ್ಮ, ವ್ರತ, ಸಂಯಮ, ಯಶಸ್ಸುಗಳು ನಷ್ಟವಾಗಿ ಹೋಗುವವು ಮತ್ತು ನೀವು ಆರ್ತಧ್ಯಾನದಿಂದ ಮರಣ ಹೊಂದಿ ಘೋರ ದುಃಖ ಭೋಗಿಸುವಂಥ ತಿರ್ಯಂಚದಲ್ಲಿ ಉತ್ಪನ್ನರಾಗಿ ಹೋಗುವಿರಿ ; ಇದರಲ್ಲಿ ಯಾವ ಸಂಶಯವೇ ಇಲ್ಲ.

ಅಸಾತಾದ ಉದಯದಲ್ಲಿ ಸುಖದ ಸಲುವಾಗಿ ಅಳುವುದು, ವಿಲಾಪ ಮಾಡುವುದು, ದೀನತೆಯ ವಚನ ಆಡುವುದೆಲ್ಲವು ಎಣ್ಣೆಯ ಸಲುವಾಗಿ ಮಳಲನ್ನು ಹಿಂಡಿದಂತಿದೆ; ತುಪ್ಪದ ಸಲುವಾಗಿ ನೀರನ್ನು ಮಥಿಸಿದಂತಿದೆ; ಅಕ್ಕಿಯ ಸಲುವಾಗಿ ಹೊಟ್ಟನ್ನು ತೂರಿದಂತಿದೆ; ಅವೆಲ್ಲವು ಕೇವಲ ಖೇದದ ಸಲುವಾಗಿ ಇವೆ; ಭವಿಷ್ಯದ ಸಲುವಾಗಿ ತೀವ್ರ ಬಂಧದ ಕಾರಣವಿವೆ.

ಯಾವ ಪ್ರಕಾರ ಓರ್ವ ಪುರುಷನು ಅಜ್ಞಾನ ಭಾವದ ಕಾರಣ ಒಬ್ಬರಿಂದ ಧನ ಸಾಲ ಪಡೆದು ಖರ್ಚು ಮಾಡಿ ಬಿಡುತ್ತಾನೆ; ಈಗ ಅವಧಿಯು ಮುಗಿದ ಮೇಲೆ ಅವನು ಸಾಲದ ಹಣ ಮರಳಿ ಬೇಡುತ್ತಾನೆ; **ನ್ಯಾಯ ಮಾರ್ಗಿಯಂತೂ ಹರುಷ ಮನ್ನಿಸಿ ಸಾಲ ತೀರಿಸಿ ತನ್ನ ಭಾರ ಇಳಿಸಿ ಹೇಗೆ ಸುಖಿಯಾಗುತ್ತಾನೆ ; ಅದೇ ಪ್ರಕಾರ ಧರ್ಮಧಾರಕ ಪುರುಷನಂತೂ ಕರ್ಮದ ಉದಯದಲ್ಲಿ ಬಂದ ರೋಗ, ದರಿದ್ರತೆ, ಉಪಸರ್ಗ, ಪರೀಷಹಗಳನ್ನು ಭೋಗಿಸುವಲ್ಲಿ ಸಾಲ ತೀರಿಸುವ - ದೂರವಾಗುವುದರ ಸಮಾನ ಮನ್ನಿಸಿ ಸುಖಿಯಾಗುತ್ತಾನೆ.** ಅವನು ವಿಚಾರ ಮಾಡುವುದೇನೆಂದರೆ ಇಂದು ನಮ್ಮ ಪೂರ್ವಕೃತ ಕರ್ಮದ ಉದಯವು ಬಂದಿದೆ ಅದು ಒಳ್ಳೆಯ ಸಮಯದಲ್ಲಿ ಬಂದಿದೆ. ಈಗ ನಮ್ಮ ಹತ್ತಿರ ಪ್ರಚುರ ಜ್ಞಾನರೂಪದ ಧನವಿದೆ, ಪಂಚ ಪರಮೇಷ್ಠಿ ಭಗವಂತರ ಆಶ್ರಯವಿದೆ, ಸಾಧರ್ಮಿಗಳ ಮಹಾನ ಸಹಾಯವಿದೆ, ಆದುದರಿಂದ ಸ್ವಾಭಾವಿಕವಾಗಿಯೇ ಋಣದ ಭಾರವನ್ನು ಇಳಿಸಿ, ನಿರಾಕುಲ ಸುಖವನ್ನು ಪ್ರಾಪ್ತ ಮಾಡಿಕೊಳ್ಳುವೆನು.

ತಮ್ಮ ಕಷಾಯ ಮೊದಲಾದ ಭಾವಗಳಿಂದ ಉತ್ಪನ್ನವಾದ ಕರ್ಮವು ಎಷ್ಟು ಬಲಿಷ್ಠವಿದೆಯೆಂದರೆ ಅದು ಋದ್ಧಿಯ, ವಿದ್ಯೆಯ, ಬಂಧು ಜನರ, ಧನ ಸಂಪತ್ತಿನ, ಶರೀರದ, ಮಿತ್ರರ, ದೇವ-ದಾನವರ ಸಹಾಯತೆಯ ಬಲವನ್ನು **ಕ್ಷಣಾರ್ಧದಲ್ಲಿ ನಷ್ಟಮಾಡಿ ಬಿಡುತ್ತದೆ. ಕರ್ಮರೂಪದ ಋಣವನ್ನು ತೀರಿಸಿದಲ್ಲದೆ ಬಿಡುವುದಿಲ್ಲ.**

ರೋಗ, ಶೋಕ, ಜೀವನ, ಮರಣಗಳು ಬೇರೆ ಯಾರ ಉದಯದಲ್ಲಿಯೂ ಬಂದಿರದಿದ್ದರೆ ಕೇವಲ ನಿಮ್ಮ ಉದಯದಲ್ಲಿಯೇ ಬಂದಿದ್ದರೆ ಆಗ ದುಃಖ ಮಾಡುವುದು ಉಚಿತವಿದೆ. ಕ್ಷುಧೆ, ತೃಷೆ, ರೋಗ, ವಿಯೋಗ, ಜನ್ಮ, ಜರೆ, ಮರಣಗಳ ಉದಯದ ಸಮಯದಲ್ಲಿ ಯಾರಿಗೆ ದುಃಖ ಕೊಡುವುದಿಲ್ಲ? **ಸಮಸ್ತ ಸಂಸಾರೀ ಜೀವರುಗಳಿಗೆ ಕರ್ಮದ ಉದಯವು ಬರುತ್ತದೆ, ಎಲ್ಲರೂ ಮರಣಕ್ಕೆ ಪ್ರಾಪ್ತರಾಗುತ್ತಾರೆ. ನಾಲ್ಕೂ ಗತಿಗಳಲ್ಲಿ ಕರ್ಮದ ಉದಯವು ಬರುತ್ತದೆ.** ಆದುದರಿಂದ ಪೂರ್ವಾವಸ್ಥೆಯಲ್ಲಿ ಕಟ್ಟಿದ ಕರ್ಮದ ಉದಯವು ಬಂದ ಮೇಲೆ ಆಕುಲತೆಯನ್ನು ಬಿಟ್ಟು, ಪರಮ ಧೈರ್ಯಧಾರಣ ಮಾಡಿ, ಸಮತೆಯ ಭಾವದಿಂದ ಕರ್ಮದ ಮೇಲೆ ವಿಜಯ ಪ್ರಾಪ್ತ ಮಾಡಿಕೊಳ್ಳಬೇಕು. ಸಮಸ್ತ ದುಃಖಗಳನ್ನು ಜಯಿಸುವ ಸಮಯದಲ್ಲಿ ಈಗ ಯಾವುದರ ವಿಷಾದ ಪಡುತ್ತಿರುವಿರಿ ?

ಸಮ್ಯಗ್ದೃಷ್ಟಿಯಂತೂ ಜನ್ಮದಿಂದಲೇ ಸಮಾಧಿ ಮರಣದ ಇಚ್ಛೆಮಾಡುತ್ತಾರೆ. ಈ ಅವಸರವು ಅತ್ಯಂತ ಕಠಿಣತೆಯಿಂದ ಪ್ರಾಪ್ತವಾಗಿದೆ. ಸಮಸ್ತ ದುಃಖಗಳ ನಾಶದ ಅವಸರವು ಕಠಿಣತೆಯಿಂದ ಪ್ರಾಪ್ತವಾಗಿದೆ. ಈ ಉತ್ಸಾಹದ ಸಮಯದಲ್ಲಿ ವಿಷಾದ ಪಡುವುದು ಉಚಿತವಿಲ್ಲ. ಇಂಥ ಅವಸರವು ಕಳೆದು ಹೋದರೆ ಪುನಃ ಅನಂತ ಕಾಲದಲ್ಲಿ ಇಂಥ ಅವಸರವು ದೊರಕಲಾರದು.

**ಸಂಯಮ ಭಂಗ ಮಾಡುವುದು ಮಹಾಪರಾಧವಿದೆ : ಅರಹಂತ, ಸಿದ್ಧ, ಆಚಾರ್ಯ ಮೊದಲಾದ ಪರಮೇಷ್ಠಿ ಭಗವಂತರ ಮತ್ತು ಸಮಸ್ತ ಸಾಧರ್ಮಿಗಳ ಸಾಕ್ಷ್ಯದಲ್ಲಿ ಯಾವ ತ್ಯಾಗ, ವ್ರತ, ಸಂಯಮಗಳ ಗ್ರಹಣ ಮಾಡಿತ್ತು ಆ ತ್ಯಾಗವನ್ನು ಭಂಗ ಪಡಿಸುವಲ್ಲಿ ಪಂಚ ಪರಮೇಷ್ಠಿಗಳ ವಿರುದ್ಧ (ಅನಾದರ) ವಾಯಿತು, ಸಮಸ್ತ ಧರ್ಮದ ಲೋಪವಾಯಿತು, ಧರ್ಮಕ್ಕೆ ಕಲಂಕ ತಗಲಿಸಿತು, ಧರ್ಮ ಮಾರ್ಗದ ವಿರಾಧನೆ ಮಾಡಿತು. ತಮ್ಮ ಉಭಯ ಲೋಕ ನಷ್ಟಮಾಡಿಕೊಂಡಿತು.** ಮರಣವಂತೂ ಅವಶ್ಯವಾಗಿ ಆಗುವುದು. ಮರಣ ಮತ್ತು ದುಃಖಗಳಂತೂ ವ್ರತ ಸಂಯಮಗಳನ್ನು ಭಂಗ ಮಾಡಿ ಬಿಟ್ಟರೂ ದೂರವಾಗುವ ಸಾಧ್ಯತೆಯಿಲ್ಲ.

ಯಾವ ಕಾರ್ಯವನ್ನು ದೊರೆ ಮತ್ತು ಪಂಚರ ಸಮಕ್ಷಮದಲ್ಲಿ ಮಾಡಲಾಗುತ್ತದೆ ಆ ಕಾರ್ಯವನ್ನು ನಂತರ ಕೆಡಿಸಿ ಬಿಟ್ಟರೆ ಅವನು ಮಹಾಪರಾಧದ ತೀವ್ರ ದಂಡನೆಗೆ ಪ್ರಾಪ್ತನಾಗಲು ಯೋಗ್ಯನಿದ್ದಾನೆ, ಸಮಸ್ತ ಲೋಕದಲ್ಲಿ ಧಿಕ್ಕಾರ ಮತ್ತು ತಿರಸ್ಕಾರಕ್ಕೆ ಪ್ರಾಪ್ತನಾಗುತ್ತಾನೆ ; ಪರಲೋಕದಲ್ಲಿ ಅನಂತ ಕಾಲದವರೆಗೆ ಅನಂತ ಜನ್ಮ, ಮರಣ, ರೋಗ, ವಿಯೋಗವಾಗುವುದಕ್ಕೆ ಪಾತ್ರನಾಗುತ್ತಾನೆ. ತ್ಯಾಗ ಮೊದಲಾದುವನ್ನು ಮಾಡದವನಂತೂ ಅನಾದಿ ಸಂಸಾರಿಯೇ ಇದ್ದಾನೆ; ಅವನಂತೂ ತ್ಯಾಗ ಸಂಯಮ, ವ್ರತಗಳನ್ನು ಪಡೆದೇ ಇಲ್ಲ. ಆದರೆ ಯಾರು ತ್ಯಾಗ, ವ್ರತ, ಸಂಯಮ, ಸಮಾಧಿ ಮರಣ, ಸನ್ಯಾಸ ತೆಗೆದುಕೊಂಡು ಪುನಃ ಕೆಡಿಸುತ್ತಾರೆ ಅವರಿಗೆ ಧರ್ಮದ ಗಂಧವು ಪ್ರಾಪ್ತವಾಗುವುದು ಅನಂತಾನಂತ ಕಾಲದಲ್ಲಿ ದುರ್ಲಭವಿದೆ. **ವ್ರತಭಂಗ ಮಾಡುವುದು ಮಹಾಪರಾಧವಿದೆ.**

**ಆಹಾರದ ಗೃದ್ಧತೆ : ಆಹಾರದ ಗೃದ್ಧತೆಯು ಅತ್ಯಂತ ನಿಂದನೀಯವಿದೆ.** ಉತ್ತಮ ಪುರುಷರುಗಳಂತೂ ಕ್ಷುಧೆಯ ವೇದನೆಯನ್ನು ಪ್ರಾಣಾಪಹರಣ ಮಾಡುವಂಥದ್ದೆಂದು ತಿಳಿದುಕೊಂಡು ಅದರ ಉಪಚಾರ ಮಾತ್ರವೆಂದು ಆಹಾರ ಮಾಡುತ್ತಾರೆ. ಅದರದೂ ಅವರಿಗೆ ಲಜ್ಜೆಯಾಗುತ್ತದೆ. ಆಹಾರದ ಕಥನವನ್ನೂ ದುರ್ಧ್ಯಾನ ಮಾಡುವಂಥದ್ದೆಂದು ತಿಳಿದುಕೊಂಡು ತ್ಯಾಗ ಮಾಡುತ್ತಾರೆ.

ಈ ಮೂಳೆ-ಮಾಂಸಮಯ ದೇಹವು ಆಹಾರವಿಲ್ಲದೆ ಇರುವ ಸಾಧ್ಯತೆಯಿಲ್ಲ ಮತ್ತು ದೇಹವಿಲ್ಲದೆ ವ್ರತ, ತಪ, ಸಂಯಮ ರೂಪ ರತ್ನತ್ರಯ ಧರ್ಮವು ಪೋಷಿಸಲ್ಪಡುವುದಿಲ್ಲ ; ಆದುದರಿಂದ ರತ್ನತ್ರಯ ಧರ್ಮವನ್ನು ಪಾಲಿಸುವ

ಸಲುವಾಗಿ ಸರಸ-ನೀರಸ ಭೋಜನದ ವಿಧಿಯನ್ನು ಕರ್ಮವು ದೊರಕಿಸಿಕೊಟ್ಟಂತೆ ಉಜ್ವಲ ಆಹಾರದಿಂದ ಉದರ ತುಂಬಿಕೊಳ್ಳುತ್ತಾರೆ. ರಸನೇಂದ್ರಿಯದ ಲಂಪಟತೆಗೆ ಎಂದೂ ಪ್ರಾಪ್ತರಾಗುವುದಿಲ್ಲ.

**ಆಹಾರದ ಆಸಕ್ತಿಯನ್ನು ಜಯಿಸುವುದರಲ್ಲಿಯೇ ಮನುಷ್ಯ ಜನ್ಮದ ಸಾರ್ಥಕತೆಯಿದೆ.** ತಿರ್ಯಂಚ ಗತಿಯಲ್ಲಿಯಂತೂ ಆಹಾರದ ಲಂಪಟತೆಯಿಂದ ಬಲಿಷ್ಠವಾಗಿ ಅವು ನಿರ್ಬಲ ಹಾಗೂ ಪರಸ್ಪರದಲ್ಲಿ ಭಕ್ಷಣೆ ಮಾಡಿ ಬಿಡುತ್ತವೆ. ಆಹಾರದ ಗೃದ್ಧತೆಯಿಂದ ತಾಯಿಯು ತನ್ನ ಮರಿಗಳನ್ನು ತಿಂದು ಬಿಡುತ್ತದೆ.

**ಮನುಷ್ಯಗತಿಯಲ್ಲಿ ಕೂಡ ಉಚ್ಚ-ನೀಚದ ಭೇದ, ಸಮಸ್ತ ಆಚಾರದ ಭೇದಗಳು ಭೋಜನದ ನಿಮಿತ್ತದಿಂದಲೇ ಇವೆ. ಈಲೋಕದಲ್ಲಿ ಎಷ್ಟು ನಿಂದ್ಯ ಆಚರಣೆಯಿದೆ ಅದೆಲ್ಲವು ಭೋಜನದ ವಿಚಾರ ರಹಿತತೆಯಿಂದಲೇ ಆಗುತ್ತದೆ.** ಭೋಜನದಲ್ಲಿ ಯಾರದು ಲಂಪಟತೆಯಿಲ್ಲ ಅವರು ಉಜ್ವಲ (ಶುದ್ಧ)ರಿದ್ದಾರೆ, ಅವರು ಇಚ್ಛಾರಹಿತರಿದ್ದಾರೆ, ಅವರು ಉತ್ತಮರಿದ್ದಾರೆ. ಉಚ್ಚ-ನೀಚ, ಜಾತಿ-ಕುಲಗಳ ಭೇದವು ಕೂಡ ಭೋಜನದ ನಿಮಿತ್ತದಿಂದಲೇ ಇದೆ.

**ಆಹಾರದ ಆಸಕ್ತಿಯುಳ್ಳವನು ಘೋರ ಆರಂಭ ಮಾಡುತ್ತಾನೆ.** ಉಪವನದಲ್ಲಿ ತನ್ನ ಭೋಜನದ - ತಿನ್ನುವ ಸ್ವಾದದ ಸಲುವಾಗಿ ಕೋಟ್ಯಂತರತ್ರಸ ಜೀವಗಳನ್ನು ಕೊಲ್ಲುತ್ತಾನೆ, ಮಹಾ ಪಾಪದ ಅನುಮೋದನೆ ಮಾಡುತ್ತಾನೆ, ಅಭಕ್ಷ್ಯ ಭಕ್ಷಣ ಮಾಡುತ್ತಾನೆ, ಅಸತ್ಯ ವಚನ, ಹಿಂಸೆ ಮೊದಲಾದ ಮಹಾಪಾಪದ ವಚನಗಳನ್ನು ಆಹಾರದ ಆಸಕ್ತಿಯುಳ್ಳವನು ಆಡುತ್ತಾನೆ. ಮಿಷ್ಠ ಭೋಜನದ ಸಲುವಾಗಿ ಕ್ರೋಧ ಮಾಡುತ್ತಾನೆ. ಮಾನ ಮಾಡುತ್ತಾನೆ, ಛಲ-ಕಪಟ ಮಾಡುತ್ತಾನೆ, ಕಳವು ಮಾಡುತ್ತಾನೆ, ಕುಲದ ಮರ್ಯಾದೆ ಮುರಿಯುತ್ತಾನೆ, ಕುಶೀಲ ಸೇವನೆ ಮಾಡುತ್ತಾನೆ, ಧನ-ಪರಿಗ್ರಹದಲ್ಲಿ ಆಸಕ್ತಿಯುಳ್ಳವನಾಗುತ್ತಾನೆ, ಅನ್ಯ ಜನರನ್ನು ಹೊಡೆಯುತ್ತಾನೆ, ಅಸತ್ಯ ನುಡಿಯುತ್ತಾನೆ, ಕಳವು ಮಾಡಿ ಕೂಡ ಮಿಷ್ಠ ಭೋಜನದ ಸಲುವಾಗಿ ಧನ ಸಂಗ್ರಹ ಮಾಡುತ್ತಾನೆ.

**ಭೋಜನದ ಲಂಪಟಿಯು ನಿರ್ಲಜ್ಜನಾಗುತ್ತಾನೆ :** ನೀಚ ಜಾತಿಯವರ ಜತೆ ಕೂಡಿಕೊಂಡು ತಿನ್ನುತ್ತಾನೆ, ನೀಚ ಕುಲದವರ ಮದ್ಯ-ಮಾಂಸ ತಿನ್ನುವಂಥವರ ಸೇವೆ-ನೌಕರಿಯನ್ನು ಮಾಡತೊಡಗುತ್ತಾನೆ, ತನ್ನ ಪದಯೋಗ್ಯ ಉಚ್ಚತೆ, ಜಾತಿ-ಕುಲದ ಆಚಾರವನ್ನು ನೋಡುವುದಿಲ್ಲ, ಸ್ವಾದಿಷ್ಟ ಭೋಜನ ನೋಡಿ ಮನಸ್ಸು ಕೆಡಿಸಿಕೊಳ್ಳುತ್ತಾನೆ, ಬಹಳಷ್ಟು ಧನದ ಅಧಿಪತಿ ಮತ್ತು ತನ್ನ ಮನೆಯಲ್ಲಿ ನಿತ್ಯ ಮಧುರ ಭೋಜನ ದೊರಕುತ್ತಿದ್ದರೂ ಕೂಡ ನೀಚರ, ದರಿದ್ರರ, ಶೂದ್ರರ, ಮ್ಲೇಚ್ಛರ, ಮುಸಲ್ಮಾನರ ಮನೆಯಲ್ಲಿ ಹೋಗಿ ಕೂಡ ಭೋಜನ ಮಾಡಿ ಬಿಡುತ್ತಾನೆ.

ಭೋಜನದ ಲೋಲುಪಿಯು ಗ್ರಾಮ ನಗರಗಳಲ್ಲಿ ಮಾರುವಂಥವರ, ನೀಚ ಆಚರಣೆ ಮಾಡುವಂಥವರ ಮೂಲಕ ಮಾಡಲಾದ, ಮತ್ತು ಸಮಸ್ತ ಮುಸಲ್ಮಾನ ಮೊದಲಾದವರು ಅದನ್ನು ಸ್ಪರ್ಶಿಸುತ್ತಾರೆ, ಮಾರುತ್ತಾರೆ ಅಂಥ ಕೀಳು ಭೋಜನವನ್ನು ಕೂಡ ಕೊಂಡುಕೊಳ್ಳುತ್ತಾನೆ, ತಿಂದು ಬಿಡುತ್ತಾನೆ.

ಭೋಜನದ ಲಂಪಟಿಯು ತಪಶ್ಚರ್ಯ, ಜ್ಞಾನಾಭ್ಯಾಸ, ಶ್ರದ್ಧೆ, ಆಚರಣ, ಸಮಸ್ತ ಶೀಲ-ಸಂಯಮಗಳನ್ನು ದೂರದಿಂದಲೇ ಬಿಡುತ್ತಾನೆ ; ತನ್ನ ಅಪಮಾನವನ್ನು ನೋಡುವುದಿಲ್ಲ, ಅಭಕ್ಷ್ಯದಲ್ಲಿ, ಎಂಜಲು ವಸ್ತುವಿನಲ್ಲಿ, ಮಾಂಸಾದಿಗಳಲ್ಲಿ ಆಸಕ್ತನಾಗಿ ಹೋಗುತ್ತಾನೆ. ಅಯೋಗ್ಯ ಸಂಗತಿ, ಅಯೋಗ್ಯ ಆಚರಣೆಯಿಂದ ತನ್ನ ಕುಲಕ್ರಮವನ್ನು ನಷ್ಟ ಮಾಡಿ ಬಿಡುತ್ತಾನೆ, ಮಲಿನ ಮಾಡಿ ಬಿಡುತ್ತಾನೆ. ರಸನೇಂದ್ರಿಯದ ಲಂಪಟತೆಯು ಯಾವ-ಯಾವ ಅನರ್ಥ ಮಾಡಿಸುವುದಿಲ್ಲ ? ಆಹಾರದ ಆಸಕ್ತಿಯುಳ್ಳವನಿಗಂತೂ ಶೋಧಿಸುವುದು, ನೋಡುವುದು ಇರುವುದೇ ಇಲ್ಲ. ಈ ಆಹಾರವು ಎಂಥದ್ದಿದೆ, ಎಲ್ಲಿಂದ ತಂದಿದೆಯೆಂಬ ವಿಚಾರವಂತೂ ಆಹಾರದ ಲಂಪಟತೆಯುಳ್ಳವನಿಗೆ ಇರುವುದೇ ಇಲ್ಲ.

**ಆಹಾರದ ಆಸಕ್ತಿಯುಳ್ಳವನ ತೀಕ್ಷ್ಣಬುದ್ಧಿಯು ಕೂಡ ಮಂದವಾಗಿ ಹೋಗುತ್ತದೆ, ಬುದ್ಧಿಯು ವಿಪರೀತವಾಗಿ ಬಿಡುತ್ತದೆ, ಸುಮಾರ್ಗ ಬಿಟ್ಟು ಕುಮಾರ್ಗದಲ್ಲಿ ಪ್ರವೀಣವಾಗುತ್ತದೆ, ಧರ್ಮದಿಂದ ಪರಾಙ್ಮುಖವಾಗಿ ಹೋಗುತ್ತದೆ.**

**ಅದೆಷ್ಟೋ ಪುರುಷರು ಅನೇಕ ಶಾಸ್ತ್ರಗಳನ್ನೋದುತ್ತಾರೆ, ವಚನಗಳಿಂದ ಅನೇಕ ಜೀವರುಗಳಿಗೆ ಶುಭ ಮಾರ್ಗದ ಉಪದೇಶ ಕೊಡುತ್ತಾರೆ, ಬಹಳಷ್ಟು ಸಮಯದಿಂದ ಸಿದ್ಧಾಂತ ಗ್ರಂಥ ಕೇಳುತ್ತಾರೆ, ಆದರೂ ಅವರಿಗೆ ಸತ್ಯಾರ್ಥ ಶ್ರದ್ಧೆ-ಜ್ಞಾನ- ಆಚರಣೆಯಾಗುವುದಿಲ್ಲ, ವಿಪರೀತ ಮಾರ್ಗದಿಂದ ಬಿಡುಗಡೆಯಾಗದಿರುವುದನ್ನು ಪ್ರತ್ಯಕ್ಷ ಕಾಣುತ್ತೇವೆ. ಇದೆಲ್ಲವು ಅನ್ಯಾಯದ ಮತ್ತು ಅಭಕ್ಷ್ಯ ಭೋಜನ ಮಾಡುವುದರ ಫಲವಿದೆ.**

ಮುನೀಶ್ವರರಿಗಂತೂ ಆಹಾರದ ಶುದ್ಧತೆಯದೇ ಮುಖ್ಯತೆಯಿದೆ, ಮತ್ತು ಶ್ರಾವಕರಿಗೆ ಕೂಡ ಸಮಸ್ತ ಬುದ್ಧಿಯ ಶುದ್ಧತೆಯ ಕಾರಣವಾದ ಒಂದು ಭೋಜನದ ಶುದ್ಧತೆಯನ್ನೇ ತಿಳಿಯಬೇಕು.

ಆಹಾರದ ಲಂಪಟಿಗೆ ಯೋಗ್ಯ-ಅಯೋಗ್ಯದ, ಶೋಧನೆಯ, ಕಣ್ಣುಗಳಿಂದ ನೋಡುವ ಸ್ಥಿರತೆಯೇ ಇರುವುದಿಲ್ಲ. ಅವನು ಧೈರ್ಯ ರಹಿತನಾಗಿ ಶೀಘ್ರತೆಯಿಂದಲೇ ಭೋಜನ ಮಾಡುತ್ತಾನೆ. ಜಿಹ್ವೆಯ ಲಂಪಟಿಯು ಮಾನ, ಸನ್ಮಾನ, ಸತ್ಕಾರ, ತನ್ನ ಪದದ ಯೋಗ್ಯತೆ, ಉಚ್ಚತೆ ಮೊದಲಾದುವನ್ನು ನೋಡುವುದಿಲ್ಲ. ಸ್ವಾದಿಷ್ಟ ಭೋಜನ ದೊರಕುವುದರಲ್ಲಿಯೇ ನಿಧಿಯ ಲಾಭವಾದಂತೆ ಗಣಿಸುತ್ತಾನೆ. ಆಹಾರದ ಲಂಪಟಿಯು ಸ್ವಾದಿಷ್ಟ ಭೋಜನ ಕೊಡುವವರ ಆಧೀನನಾಗಿ ತಾಯಿ-ತಂದೆ, ಗುರು-ಹಿರಿಯರ ಉಪಕಾರವನ್ನು ಮರೆತು ಹೋಗುತ್ತಾನೆ ಮತ್ತು ಅವರ ಉಪಕಾರ ಮಾಡತೊಡಗುತ್ತಾನೆ. ಆಹಾರದ ಲಂಪಟಿಯ ವಿನಯವನ್ನು ಅವನ ಪತ್ನಿ-ಪುತ್ರರೂ ಮಾಡುವುದಿಲ್ಲ. ಆಹಾರದ ಲಂಪಟತೆಯುಳ್ಳವನಿಗೆ ಧರ್ಮದ ಶ್ರದ್ಧೆಯು ಕೂಡ ಇರುವುದಿಲ್ಲ.

**ಸಮ್ಯಗ್ದೃಷ್ಟಿಗಳಂತೂ ಆತ್ಮಿಕ ಸುಖವನ್ನೇ ಸುಖವೆಂದು ತಿಳಿಯುತ್ತಾರೆ, ಅವರಿಗಂತೂ ಇಂದ್ರಿಯಗಳ ವಿಷಯ ಜನಿತ ಸುಖದಲ್ಲಿ ಅತ್ಯಂತ ಅರುಚಿಯಿರುತ್ತದೆ.**

ಯಾವನಿಗೆ ಮಧುರ ಭೋಜನದಲ್ಲಿಯೇ ಸುಖವೆನಿಸುತ್ತದೆ ಅವನಂತೂ ವಿಪರೀತ ಜ್ಞಾನಿ ಮಿಥ್ಯಾದೃಷ್ಟಿಯಿದ್ದಾನೆ. ಜಿಹ್ವೆಯ ಲಂಪಟಿಯು ಮಹಾ ಅಭಿಮಾನೀ ಉಚ್ಚ ಕುಲೀನನಿದ್ದರೂ ನೀಚರ ಪ್ರಶಂಸೆ ಮಾಡುತ್ತಾನೆ. ಆಹಾರದ ಲಂಪಟತೆಯುಳ್ಳವನು ದೀನನಾಗಿ ಇತರರ ಮುಖ ನೋಡುತ್ತ ತಿರುಗುತ್ತಾನೆ, ಯಾಚನೆ ಮಾಡುತ್ತಾನೆ, ಮಾಡಬಾರದ ಕಾರ್ಯವನ್ನೂ ಮಾಡುತ್ತಾನೆ. ಒಂದು ಭೋಜನದ ಇಚ್ಛೆ ಮಾಡಿ ತಂದುಲಮಚ್ಛವು ಏಳನೇ ನರಕಕ್ಕೆ ಹೋಗುತ್ತದೆ, ಮತ್ತು ಅನೇಕ ಪ್ರಾಣಿಗಳನ್ನು ಭಕ್ಷಣೆ ಮಾಡುವ ಮಹಾಮತ್ಸ್ಯವೂ ಏಳನೇ ನರಕದಲ್ಲಿ ಹೋಗುತ್ತದೆ. ಸುಭೌಮನಾಮದ ಚಕ್ರವರ್ತಿಯು ಕೂಡ ದೇವೋಪುನೀತ ದಶಾಂಗ ಭೋಗಗಳಿಂದ ತೃಪ್ತನಾಗಲಿಲ್ಲ, ಯಾವುದೇ ವಿದೇಶದಿಂದ ತಂದ ಫಲದ ರಸದ ಗೃದ್ಧತೆಯಿಂದ ಕುಟುಂಬ ಸಹಿತ ಸಮುದ್ರದಲ್ಲಿ ಮುಳುಗಿ ಏಳನೆಯ ನರಕಕ್ಕೆ ಹೋಗುತ್ತಾನೆಂದ ಮೇಲೆ ಉಳಿದವರ ಕುರಿತೇನು ಹೇಳುವುದು ?

**ಇಂಥ ಜಿನೇಂದ್ರರ ವಚನರೂಪ ಅಮೃತದ ಪಾನ ಮಾಡುವುದರಿಂದ ಕೂಡ ನಿಮಗೆ ಆಹಾರದಲ್ಲಿ ರಸಯುಕ್ತ ಭೋಜನದ ಗೃದ್ಧತೆಯು ನಷ್ಟವಾಗಿಲ್ಲವೆಂದ ಮೇಲೆ, ಇನ್ನೂ ನಿಮಗೆ ಅಸಂಖ್ಯಾತ ಕಾಲ ಅನಂತಕಾಲ ಸಂಸಾರದಲ್ಲಿಯೇ ಪರಿಭ್ರಮಣ ಮಾಡುವುದಿದೆಯೆಂಬುದು ತಿಳಿದು ಬರುತ್ತದೆ, ಮತ್ತು ಕ್ಷುಧೆ,ತೃಷೆ, ರೋಗ, ವಿಯೋಗ, ಜನ್ಮ, ಮರಣಗಳನ್ನು ಅನಂತಬಾರಿ ಭೋಗಿಸುವುದಿದೆಯೆಂದೂ ತಿಳಿದುಬರುತ್ತದೆ.**

ನಾನಂತೂ ಭೋಜನ ಪಾನ ಮಾಡಿ ಕ್ಷುಧೆ-ತೃಷೆಯನ್ನು ನಿವಾರಿಸಿ ತೃಪ್ತನಾಗಿ ಹೋಗುವೆನೆಂದು ನೀವು ಯೋಚಿಸುತ್ತಿರಬಹುದು, ಆದರೆ ಆಹಾರದಿಂದ ಎಂದೂ ತೃಪ್ತಿಯಾಗುವುದಿಲ್ಲ. ಕ್ಷುಧೆ-ತೃಷೆಯ ವೇದನೆಯಂತೂ ಅಸಾತಾ ಕರ್ಮದ ನಾಶವಾದ ಮೇಲೆ ದೂರವಾಗುವುದು, ಆಹಾರ ಮಾಡುವುದರಿಂದ ದೂರವಾಗಲಾರದು, ಆಹಾರ ಮಾಡುವುದರಿಂದಂತೂ ಗೃದ್ಧತೆಯು ಇನ್ನೂ ಹೆಚ್ಚುವುದು. ಯಾವ ಪ್ರಕಾರ ಅಗ್ನಿಯು ಸೌದೆ ಹಾಕುವುದರಿಂದ ತೃಪ್ತವಾಗುವುದಿಲ್ಲ, ಸಮುದ್ರವು ಅನೇಕ ನದಿಗಳಿಂದ ತೃಪ್ತವಾಗುವುದಿಲ್ಲ. ಅದೇ ಪ್ರಕಾರ ಆಹಾರದಿಂದ ಕೂಡ ತೃಪ್ತಿಯಾಗುವುದಿಲ್ಲ, ಲಾಲಸೆಯು ಇನ್ನೂ ಹೆಚ್ಚುತ್ತದೆ.

ಲಾಭಾಂತರಾಯದ ವಿಶೇಷ ಕ್ಷಯೋಪಶಮದಿಂದ ಉತ್ಪನ್ನವಾದ ಅತಿಶಯ ಬಲ ವೀರ್ಯಕಾಂತಿಯನ್ನುಂಟು ಮಾಡುವಂಥ ಮಾನಸಿಕ ಆಹಾರವು ಅಸಂಖ್ಯಾತ ಕಾಲದವರೆಗೆ ಸ್ವರ್ಗದಲ್ಲಿ ಇಂದ್ರ-ಅಹಮಿಂದ್ರರ ಸುಖ ಭೋಗಿಸಿದರೂ ಕೂಡ ಕ್ಷುಧಾ ವೇದನೆಯ ಅಭಾವರೂಪ ತೃಪ್ತಿಯಾಗಲಿಲ್ಲ. ಚಕ್ರವರ್ತಿ, ನಾರಾಯಣ, ಬಲಭದ್ರ, ಪ್ರತಿನಾರಾಯಣ, ಭೋಗಭೂಮಿಯ ಮನುಷ್ಯ ಮೊದಲಾದವರಿಗೆ ಲಾಭಾಂತರಾಯ, ಭೋಗಾಂತರಾಯದ ವಿಶೇಷ ಕ್ಷಯೋಪಶಮದಿಂದ ಪ್ರಾಪ್ತವಾದ ದಿವ್ಯ ಆಹಾರವನ್ನು ಅಧಿಕ ಸಮಯದವರೆಗೆ ಭೋಗ ಮಾಡಿಯೂ ಕೂಡ ಕ್ಷುಧೆಯ ವೇದನೆಯು ದೂರವಾಗಲಿಲ್ಲವೆಂದ ಮೇಲೆ ನಿಮ್ಮ ಮೂಲಕ ಒಂದಿಷ್ಟು ಆಹಾರವನ್ನು ತಿನ್ನುವುದರಿಂದ ಅದು ಹೇಗೆ ತೃಪ್ತವಾಗುವುದು?

ಆದುದರಿಂದ ಧೈರ್ಯ ಧಾರಣ ಮಾಡಿ ಆಹಾರದ ಇಚ್ಛೆಯನ್ನು ಜಯಿಸುವ ಪ್ರಯತ್ನ ಮಾಡಬೇಕು. ಆಹಾರವನ್ನೆಷ್ಟು ಭಕ್ಷಣೆ ಮಾಡುವಿರಿ, ಮತ್ತು ಅದರ ಸ್ವಾದವು ಎಷ್ಟು ಸಮಯದವರೆಗಿದೆ ? ನಾಲಿಗೆಯ ಸ್ಪರ್ಶ ಮಾತ್ರದವರೆಗೆ ಸ್ವಾದವಿದೆ, ಗಿಳಂಕೃತ ಮಾಡಿದ ಮೇಲೆ ಸ್ವಾದವಿಲ್ಲ, ಮೊದಲು ಸ್ವಾದವಿಲ್ಲ, ಕೇವಲ ಅಧಿಕ ತೃಷ್ಣೆ ಹೆಚ್ಚಿಸುತ್ತದೆ. ನೀವು ಅನಾದಿ ಕಾಲದಿಂದ ಸಮಸ್ತ ಪ್ರಕಾರದ ಆಹಾರದ ಭಕ್ಷಣೆ ಮಾಡಿದರೂ ತೃಪ್ತಿಯಾಗಲಿಲ್ಲವೆಂದ ಮೇಲೆ ಈಗ ಕೊನೆಯ ಸಮಯದಲ್ಲಿ ಪ್ರಾಣವು ಕಂಠಗತವಾಗಿರುವಾಗ ಸ್ವಲ್ಪ ಆಹಾರದಿಂದ ಹೇಗೆ ತೃಪ್ತಿಯಾಗುವುದು ? ಆದುದರಿಂದ ಧೈರ್ಯ ತಂದುಕೊಂಡು ತಮ್ಮ ಆತ್ಮನ ಹಿತ ಮಾಡಿಕೊಳ್ಳಬೇಕು.

**ಲೋಕದಲ್ಲಿ ನೀವು ಭೋಗಿಸದಂಥ ಯಾವ ಅಪೂರ್ವ ಆಹಾರವೇ ಇಲ್ಲ.** ಸಮಸ್ತ ಸಮುದ್ರದ ನೀರು ಕುಡಿದರೂ ಕೂಡ ತೃಪ್ತಿಯಾಗಲಿಲ್ಲವೆಂದ ಮೇಲೆ ಮಂಜಿನ ಹನಿಯನ್ನು ನೆಕ್ಕುವುದರಿಂದ ಹೇಗೆ ತೃಪ್ತಿಯಾಗುವುದು. ಪೂರ್ವಸಮಯದಲ್ಲಿ ಕೂಡ ಹಗಲು-ರಾತ್ರಿ ಆಹಾರದ ಸಲುವಾಗಿಯೇ ದುಃಖಿಯಾಗಿ ಜೀವನ ಕಳೆದಿರುವೆ. ನೋಡಿರಿ, ಅಧಿಕ ಸಮಯದವರೆಗಂತೂ ಆಹಾರದ ಸ್ವಾದ ತೆಗೆದುಕೊಳ್ಳುವ ಇಚ್ಛೆಯಿರುತ್ತದೆ. ಅದು ದುಃಖವಿದೆ, ಪುನಃ ಆಹಾರದ ವಿಧಿ ಕೂಡಿಸುವುದರ ಸೇವೆ, ವ್ಯಾಪಾರ ಮೊದಲಾದುವನ್ನು ಮಾಡಿ ಧನ ಸಂಪಾದಿಸುವಲ್ಲಿ ದುಃಖ, ದೀನತೆ ತೋರಿಸುತ್ತ ಪರಾಧೀನವಿರುವುದರಲ್ಲೂ ದುಃಖ, ಧನ ಖರ್ಚು ಮಾಡುವಲ್ಲಿ ದುಃಖ, ಪತ್ನಿ-ಪುತ್ರ ಮೊದಲಾದವರು ಆಹಾರದ ವಿಧಿ ಕೂಡಿಸಿಕೊಡುತ್ತಾರೆ ಅವರ ಆಧೀನವಾಗಿರುವುದೂ ದುಃಖವಿದೆ.

ಅಧಿಕ ಸಮಯದವರೆಗೆ ತಾವು ಭೋಜನ ತಯಾರಿಸುವ ಆರಂಭ ಮಾಡುವಿರಿ, ಆದರೆ ಎಲ್ಲಿಯವರೆಗೆ ಆಹಾರವು ಸಿದ್ಧವಾಗುವುದಿಲ್ಲ ಅಲ್ಲಿಯವರೆಗೆ ಅದರ ಇಚ್ಛೆ ಮಾಡುತ್ತಿರುವುದು ಅದು ದುಃಖವಿದೆ ; ಯಾವುದೇ ರಸ ಸಾಮಗ್ರಿಯನ್ನು ತಂದಿರದಿದ್ದರೆ ಅದನ್ನು ತರುವುದಕ್ಕೆ ಹೋಗುವ ದುಃಖ ; ತಮ್ಮ ಇಚ್ಛೆಯ ಅನುಸಾರ ದೊರಕದಿದ್ದರೆ ದುಃಖ ; ಮಿಷ್ಟ ಆಹಾರ ತಿನ್ನುವಾಗ ಹುಳಿಯ ಇಚ್ಛೆ, ಪುನಃ ಕಾರದ ಇಚ್ಛೆ, ಪುನಃ ಸಿಹಿಯ ಇಚ್ಛೆ ಇವೇ ಮೊದಲಾದ ಅನೇಕ ಇಚ್ಛೆಗಳು ಎಲ್ಲಿಯವರೆಗೆ ದೂರವಾಗುವುದಿಲ್ಲ ಅಲ್ಲಿಯವರೆಗೆ ಸುಖವೆಲ್ಲಿದೆ ? ದುಃಖವೇ ಇದೆ. ನಾಲಿಗೆಯ ಸ್ಪರ್ಶವಾದೊಡನೆ ನುಂಗಿ ಬಿಡುತ್ತದೆ. ಶ್ರೇಷ್ಠ ಮನೋವಾಂಛಿತ ಆಹಾರವು ಕೂಡ ಒಂದು ಕ್ಷಣದಲ್ಲಿ ನಾಲಿಗೆಯ ಮೂಲದ ಕೆಳಗೆ ಇಳಿದು ಹೋಗುತ್ತದೆ. ಭೋಜನದ ಸ್ವಾದವನ್ನಂತೂ ನಾಲಿಗೆಯ ಅಗ್ರಭಾಗವೇ ತಿಳಿಯುತ್ತದೆ. ಎಲ್ಲಿಯವರೆಗೆ ನಾಲಿಗೆಯು ಸ್ಪರ್ಶ ಮಾಡುವುದಿಲ್ಲ ಅಲ್ಲಿಯವರೆಗೆ ಸ್ವಾದ ಬರುವುದಿಲ್ಲ; ನಾಲಿಗೆಯ ಕೆಳಗೆ ಇಳಿದು ಹೋದರೆ ಸ್ವಾದವಿಲ್ಲ. ಒಂದು ಕ್ಷಣ ಮಾತ್ರ ಆಹಾರದ ಸ್ಪರ್ಶದ ಸ್ವಾದವಿದೆ, ಅದನ್ನು ಪಡೆಯುವ ಸಲುವಾಗಿ ಘೋರ ದುರ್ಧ್ಯಾನ ಮಾಡುತ್ತಾನೆ, ಮಹಾ ಸಂಕಟ ಭೋಗಿಸುತ್ತಾನೆ, ಆದರೆ ಭೋಜನ ಮಾಡಿಯೂ ಕೂಡ ಇಚ್ಛೆಯಿಂದ ರಹಿತನಾಗುವುದಿಲ್ಲ.

**ಆದುದರಿಂದ ಇಂಥ ದುಃಖ ಕೊಡುವಂಥ ಆಹಾರದ ತ್ಯಾಗದ ಸಮಯ ಬಂದಿದೆ, ಈ ಸಮಯವನ್ನು ಮಹಾದುರ್ಲಭ, ಅಕ್ಷಯ ನಿಧಾನದ ಲಾಭದ ಸಮಾನ ತಿಳಿಯುವುದು.** ಆಹಾರದ ಸ್ವಾದದಿಂದ ಅತ್ಯಂತ ವಿರಕ್ತರಾಗಿರಿ. ಇಲ್ಲಿ ದೃಢ ಪರಿಣಾಮದಿಂದ ಆಹಾರದಿಂದ ವಿರಕ್ತರಾದರೆ ಸ್ವರ್ಗ ಲೋಕದಲ್ಲಿ ಹೋಗಿ ಉತ್ಪನ್ನರಾಗುವಿರಿ, ಅಲ್ಲಿ ಸಾವಿರಾರು ವರುಷಗಳವರೆಗೆ ಕ್ಷುಧೆಯ ವೇದನೆಯು ಉತ್ಪನ್ನವಾಗಲಾರದು. **ಅಲ್ಲಿ ಎಷ್ಟು ಸಾಗರದ ಆಯುವಿದೆ ಅಷ್ಟು ಸಾವಿರವರ್ಷಗಳ**

**ವರೆಗಂತೂ ಭೋಜನದ ಇಚ್ಛೆಯೇ ಉತ್ಪನ್ನವಾಗುವುದಿಲ್ಲ.** ಅನಂತರ ಒಂದಿಷ್ಟು ಇಚ್ಛೆಯು ಉತ್ಪನ್ನವಾಗುತ್ತದೆ. ಆಗ ಕಂಠದೊಳಗಿಂದ ಅಮೃತದ ಪರಮಾಣುವು ಸ್ರವಿಸುತ್ತದೆ ಅದರಿಂದ ಒಂದು ಕ್ಷಣ ಮಾತ್ರದಲ್ಲಿ ಇಚ್ಛೆಯ ಅಭಾವವಾಗಿ ಹೋಗುತ್ತದೆ. ಅಸಂಖ್ಯಾತ ವರ್ಷಗಳವರೆಗೆ ಕ್ಷುಧೆಯ ವೇದನೆಯಾಗದಿರುವುದರ ಪ್ರಭಾವವೆಲ್ಲವು ಪೂರ್ವ ಜನ್ಮದಲ್ಲಿ ಆಹಾರದ ಲಾಲಸೆ ತೊರೆದು ಅನಶನ, ಅವಮೌದರ್ಯ ರಸ ಪರಿತ್ಯಾಗ ತಪ ಮಾಡಿದುದರ ಫಲವಿದೆ.

ಈ ತಿರ್ಯಂಚಗತಿ-ಮನುಷ್ಯಗತಿಯಲ್ಲಿ ಯಾವ ಕ್ಷುಧೆ, ತೃಷೆ, ರೋಗಾದಿಗಳ ಘೋರ ದುಃಖವನ್ನು ಅನಂತ ಕಾಲದಿಂದ ಭೋಗಿಸಲಾಗುತ್ತಿದೆ ಅದೆಲ್ಲವು ಆಹಾರದ ಲಂಪಟತೆಯ ಪ್ರಭಾವವಿದೆ. ಯಾರು-ಯಾರು ಆಹಾರದ ಲಂಪಟತೆಯನ್ನು ಬಿಟ್ಟಿದ್ದಾರೆ ಅವರು ಕ್ಷುಧೆ ಮೊದಲಾದ ವೇದನೆಯಿಲ್ಲದ-ಕವಲಾಹಾರವಿಲ್ಲದ ದಿವ್ಯ ದೇವರಾಗಿದ್ದಾರೆ. ಇನ್ನೂ ಈ ವೇದನೆಯಿಂದ ದುಃಖಿಯಾಗುತ್ತಿದ್ದರೆ ಆಹಾರದ ತ್ಯಾಗ ಮಾಡುವುದರಲ್ಲಿಯೇ ದೃಢತೆ ಧಾರಣ ಮಾಡಬೇಕು. ಅತ್ಯಲ್ಪ ಸಮಯದಲ್ಲಿಯೇ ವೇದನೆಯಿಂದ ರಹಿತರಾಗಿ  ಕಲ್ಪವಾಸೀ ದೇವಗಳಲ್ಲಿ ಹೋಗಿ ಉತ್ಪನ್ನರಾಗುವಿರಿ ; ಆದರೆ ಆಹಾರ ಭಕ್ಷಣ ಮಾಡಿಯಂತೂ ವೇದನೆಯಿಂದ ರಹಿತರಾಗಲಾರಿರಿ.

**ಈ ಜೀವನಿಗೆ ಸಮಸ್ತ ದುಃಖದ ಮೂಲ ಕಾರಣವು ಒಂದು ಶರೀರದ ಮಮತೆಯಿದೆ.** ಅದರ ಮಮತೆಯಿಂದ ಅದರ ರಕ್ಷಣೆಯ ಕಾರಣದಿಂದಲೇ ಅನಂತಾನಂತ ಕಾಲದವರೆಗೆ ದುಃಖ ಭೋಗಿಸಿದ್ದಾನೆ. ಎಷ್ಟು ಕ್ಷುಧೆ, ತೃಷೆ, ರೋಗಾದಿಗಳ ಪರೀಷಹಗಳ ದುಃಖವಿದೆ, ಅದೆಲ್ಲವು ಒಂದು ದೇಹದ ಮಮತೆಯ ಕಾರಣದಿಂದ ಇದೆ. ಯಾವ ಮಹಾಪುರುಷರು ದೇಹದಲ್ಲಿನ ಮಮತೆಯನ್ನು ಬಿಟ್ಟು ಕೊಟ್ಟಿದ್ದಾರೆ ಅವರಿಗೆ ಮೂಳೆ-ಮಾಂಸ-ಚರ್ಮಮಯ ಮಹಾದುರ್ಗಂಧಯುಕ್ತ ರೋಗಗಳಿಂದ ತುಂಬಿದ ದೇಹವನ್ನು ಧಾರಣ ಮಾಡಬೇಕಾಗುವುದಿಲ್ಲ. ಎಲ್ಲಿಯವರೆಗೆ ಸಂಸಾರದ ಅಭಾವವಾಗುವುದಿಲ್ಲ ಅಲ್ಲಿಯವರೆಗೆ ಇಂದ್ರಾದಿ ದೇವಗಳ ದಿವ್ಯ ದೇಹದ ಪ್ರಾಪ್ತಿಯಾಗುತ್ತದೆ, ಅನಂತರ ಶೀಲ-ಸಂಯಮ ಮೊದಲಾದ ಸಾಮಗ್ರಿ ಪಡೆದು ನಿರ್ವಾಣಕ್ಕೆ ಪ್ರಾಪ್ತರಾಗಿ ಹೋಗುತ್ತಾರೆ.

ದೇಹದ ವೇದನೆಯಿಂದ ದುಃಖಿಯಾಗುತ್ತಿದ್ದರೆ ಕೂಡಲೆ ದೇಹದ ಮಮತೆ-ಲಾಲಸೆಯನ್ನು ಬಿಟ್ಟುಕೊಡು, ಅದರಿಂದ ದೇಹಧಾರಣ ಮಾಡಬೇಕಾಗುವುದಿಲ್ಲ. ಆಹಾರದ  ಅಪೇಕ್ಷೆಯಿಂದ ದುಃಖಿಯಾಗುತ್ತಿದ್ದರೆ ಆಹಾರದ ತ್ಯಾಗ ಮಾಡಿ ಬಿಡು ; ಅದರಿಂದ ಪುನಃ ಕ್ಷುಧೆ-ತೃಷೆಗಳ ವೇದನೆಯಿಂದ ಆಹಾರ ಗ್ರಹಣ ಮಾಡಬೇಕಾಗುವುದಿಲ್ಲ. ಕ್ರಮದಿಂದ ಈ ಪ್ರಕಾರ ದೇಹವನ್ನು ಕೃಶ ಮಾಡು ಅದರಿಂದ ವಾತ, ಪಿತ್ತ, ಕಫದ ವಿಕಾರವು ಮಂದವಾಗಿ ಹೋಗುವುದು, ಪರಿಣಾಮದ ವಿಶುದ್ಧತೆಯು ಹೆಚ್ಚುತ್ತ ಹೋಗುವುದು. ಈ ಪ್ರಕಾರ ಆಹಾರ ತ್ಯಾಗದ ಕ್ರಮವನ್ನು ಮೊದಲು ಹೇಳಿಯೇ ಇದೆ. ಅನಂತರ ಕೊನೆಯ ಸಮಯದಲ್ಲಿ ಎಷ್ಟು ಶಕ್ತಿಯಿದೆ. ಅದಕ್ಕೆ ಅನುಸರಿಸಿ ಜಲದ ತ್ಯಾಗವನ್ನು ಕೂಡ ಮಾಡುವುದು.

**ಅಂತಿಮ ಸಮಯದಲ್ಲಿ ಶಕ್ತಿ ಇರುವವರೆಗೆ ಪಂಚಣಮೋಕಾರ ಮಂತ್ರದ ಹಾಗೂ ಹನ್ನೆರಡು ಭಾವನೆಗಳ ಸ್ಮರಣೆ ಮಾಡುವುದು. ಶಕ್ತಿಯು ಕಡಿಮೆಯಾಗತೊಡಗಿದರೆ ಅರಹಂತ ನಾಮದ, ಕೇವಲ ಸಿದ್ಧನಾಮದ ಧ್ಯಾನವನ್ನೇ ಮಾಡುವುದು.**

ಶಕ್ತಿಯಿಲ್ಲದಾಗ ಧರ್ಮಾತ್ಮರು, ವಾತ್ಸಲ್ಯ ಅಂಗದ ಧಾರಕರು, ಸ್ಥಿತಿಕರಣ ಮಾಡಿಸುವಲ್ಲಿ ಬುದ್ಧಿವಂತರಾದ ಸಾಧರ್ಮಿಗಳು ನಿರಂತರ ನಾಲ್ಕು ಆರಾಧನೆ ಮತ್ತು ಪಂಚಣಮೋಕಾರದ ಶ್ರವಣವನ್ನು ಮಧುರ ಸ್ವರದಿಂದ ತುಂಬ ಧೈರ್ಯದಿಂದ ಮಾಡಿಸಬೇಕು. ಹೇಗೆಂದರೆ ಆರಾಧಕನ ನಿರ್ಮಲ ಶರೀರದಲ್ಲಿ ಮತ್ತು ಮಸ್ತಕದಲ್ಲಿ ವಚನಗಳಿಂದ ಖೇದ ಅಥವಾ ದುಃಖವು ಉತ್ಪನ್ನವಾಗಬಾರದು ಮತ್ತು ಕೇಳುವುದರಲ್ಲಿ ಚಿತ್ತವು ತೊಡಗುವಂತೆ ಶ್ರವಣ ಮಾಡಿಸಬೇಕು. ಬಹಳಷ್ಟು ಜನರು ಸೇರಿಕೊಂಡು ಗದ್ದಲವನ್ನುಂಟು ಮಾಡಬಾರದು, ಒಬ್ಬೊಬ್ಬ ಸಾಧರ್ಮಿಯು ಅನುಕ್ರಮದಿಂದ ಧರ್ಮಶ್ರವಣ ಮತ್ತು ಜಿನೇಂದ್ರನಾಮದ ಸ್ಮರಣೆ ಮಾಡಿಸಬೇಕು. ಆರಾಧಕರ ಹತ್ತಿರ ಬಹಳಷ್ಟು ಜನರ ಮತ್ತು ಸಾಂಸಾರಿಕ ಮೋಹ ಮಮತೆಯ ಕಥೆ ಮಾಡುವಂಥವರ ಆಗಮನುನ್ನು ತಡೆಯಬೇಕು. ಪಂಚಣಮೋಕಾರ ಅಥವಾ ನಾಲ್ಕು ಶರಣ ಇತ್ಯಾದಿ

ವೀತರಾಗ ಕಥೆಯ ಹೊರತಾಗಿ ಸಮೀಪದಲ್ಲಿ ಬೇರೆ ಯಾವ ಚರ್ಚೆ ಮಾಡಬಾರದು, ನಾಲ್ಕಾರು ಧರ್ಮಧಾರಕರ ಹೊರತಾಗಿ ಅಲ್ಲಿ ಅನ್ಯರ ಸಮಾಗಮವಿರಬಾರದು.

ಆರಾಧಕನು ಕೂಡ **ಸಲ್ಲೇಖನದ ಐದು ಅತಿಚಾರ**ಗಳನ್ನು ದೂರದಿಂದಲೇ ತ್ಯಾಗ ಮಾಡಬೇಕು. ಆ ಐದು ಅತಿಚಾರಗಳನ್ನು ತಿಳಿಸಿಕೊಡುವಂಥ ಸೂತ್ರವನ್ನು ಈಗ ಹೇಳುತ್ತಾರೆ, -

**ಜೀವಿತ ಮರಣಾಶಂಸೇ ಭಯಮಿತ್ರಸ್ಮೃತಿನಿದಾನ ನಾಮಾನಃ।**
**ಸಲ್ಲೇಖನಾತಿಚಾರಾಃ ಪಂಚ ಜಿನೇಂದ್ರೈಃ ಸಮಾದಿಷ್ಟಾಃ ॥೧೨೯॥**

**ಅರ್ಥ :** ಸಲ್ಲೇಖನ ಧಾರಣ ಮಾಡಿ ಇನ್ನೂ ಎರಡು ದಿವಸ ಹೆಚ್ಚು ಬದುಕುವ ಇಚ್ಛೆ ಮಾಡುವುದು ಅದು **ಜೀವಿತಾಶಂಸೆ** ನಾಮದ ಅತಿಚಾರವಿದೆ ; ಈಗ ಮರಣವಾದರೆ ಒಳ್ಳೆಯದಿದೆಯೆಂದು ಮರಣದ ಇಚ್ಛೆ ಮಾಡುವುದು ಅದು **ಮರಣಾಶಂಸೆ** ನಾಮದ ಅತಿಚಾರವಿದೆ ; ಮರಣದಲ್ಲಿ ಎಂಥ ದುಃಖವಾಗುವುದು, ಹೇಗೆ ಸಹಿಸುವುದೆಂದು ಭಯಪಡುವುದು ಅದು **ಭಯ**ನಾಮದ ಅತಿಚಾರವಿದೆ ; ತಮ್ಮ ಸ್ವಜನರ ಪತ್ನೀ-ಪುತ್ರ-ಮಿತ್ರ ಮೊದಲಾದವರ ಸ್ಮರಣೆ ಮಾಡುವುದು ಅದು **ಮಿತ್ರಸ್ಮೃತಿ**ನಾಮದ ಅತಿಚಾರವಿದೆ ; ಭವಿಷ್ಯ ಪರ್ಯಾಯದಲ್ಲಿ ವಿಷಯಭೋಗ ಸ್ವರ್ಗ ಮೊದಲಾದವುಗಳ ಇಚ್ಛೆ ಮಾಡುವುದು ಅದು **ನಿದಾನ** ನಾಮದ ಅತಿಚಾರವಿದೆ. ಈ ಪ್ರಕಾರ ಜಿನೇಂದ್ರದೇವರು ಸಲ್ಲೇಖನದ ಐದು ಅತಿಚಾರಗಳನ್ನು ಹೇಳಿದ್ದಾರೆ.

**ಭಾವಾರ್ಥ :- ಸಲ್ಲೇಖನ ಮರಣದಲ್ಲಿ ಸಮಸ್ತ ಪ್ರಕಾರದ ತ್ಯಾಗ ಮಾಡಿ, ಕೇವಲ ತನ್ನ ಶುದ್ಧ ಜ್ಞಾಯಕ ಭಾವದ ಅವಲಂಬನೆ ಪಡೆದು ಸಮಸ್ತ ದೇಹಾದಿಗಳಲ್ಲಿನ ಮಮತೆಯನ್ನು ಬಿಟ್ಟುಕೊಟ್ಟು ಸನ್ಯಸನ ಗ್ರಹಣ ಮಾಡಿದರೂ** ಕೂಡ ಬದುಕುವ ಇಚ್ಛೆ ಮಾಡುವುದು, ಮರಣದ ಇಚ್ಛೆ ಮಾಡುವುದು, ಭಯ ಪಡುವುದು, ಮಿತ್ರರಲ್ಲಿ ಅನುರಾಗ ಮಾಡಿ ಸ್ಮರಣೆ ಮಾಡುವುದು, ಮುಂದಿನ ಸುಖದ ಇಚ್ಛೆ ಮಾಡುವುದು. ಇವೆಲ್ಲವು ಪರಿಣಾಮದ ಉಜ್ವಲತೆಯನ್ನು ನಷ್ಟ ಮಾಡಿ, ರಾಗ-ದ್ವೇಷ-ಮೋಹಗಳನ್ನು ಹೆಚ್ಚಿಸುವಂಥ ಪರಿಣಾಮಗಳಿವೆ. ಆದ್ದರಿಂದ ಅವೆಲ್ಲವು ಸಲ್ಲೇಖನವನ್ನು ಮಲಿನ ಮಾಡುವಂಥ ಅತಿಚಾರಗಳಿವೆಯೆಂದು ಹೇಳಲಾಗಿದೆ.

ಆರಾಧನೆಯನ್ನು ನಿರ್ವಿಘ್ನವಾಗಿ ಧಾರಣ ಮಾಡುವುದರಿಂದ ಗೃಹಸ್ಥನು ಸ್ವರ್ಗ ಲೋಕದಲ್ಲಿ ಮಹರ್ದ್ಧಿಕ ದೇವನಾಗುವುದನ್ನು ಮೊದಲು ವರ್ಣನೆ ಮಾಡಿದೆ, ಅನಂತರ ಸಂಯಮ ಧಾರಣ ಮಾಡಿ ನಿಃಶ್ರೇಯಸ ಎಂದರೆ ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ.

ಈಗ ನಿಃಶ್ರೇಯಸದ ಸ್ವರೂಪ ತಿಳಿಸಿಕೊಡುವಂಥ ಸೂತ್ರ ಹೇಳುತ್ತಾರೆ, -

**ನಿಃಶ್ರೇಯಸಮಭ್ಯುದಯಂ ನಿಸ್ತೀರಂ ದುಸ್ತರಂ ಸುಖಾಂಬುನಿಧಿಮ್ ।**
**ನಿಃಪಿಬತಿ ಪೀತಧರ್ಮಾ ಸರ್ವೈರ್ದುಃಖೈರನಾಲೀಢಃ ॥೧೩೦॥**

**ಅರ್ಥ :-** ಈ ಪ್ರಕಾರ ಸಮಾಧಿ ಮರಣ ಧಾರಣ ಮಾಡುವಂಥ ಸಮ್ಯಗ್ದೃಷ್ಟಿಯು ಕೊನೆಯ ಸಮಯದಲ್ಲಿ ಸಲ್ಲೇಖನ ಸಹಿತ ಹನ್ನೆರಡು ವ್ರತಗಳನ್ನು ಧಾರಣ ಮಾಡುತ್ತಾನೆ ; ಅವನು ಜಿನೇಂದ್ರರ ಧರ್ಮರೂಪ ಅಮೃತ ಕುಡಿದು ತೃಪ್ತನಾಗಿ ಹೋಗುತ್ತಾನೆ. ಪೀತಧರ್ಮ ಎಂದರೆ ಧರ್ಮದ ಆಚರಣೆ ಮಾಡಿರುವಂಥ ಧರ್ಮಾತ್ಮ ಶ್ರಾವಕನು ಅಭ್ಯುದಯ ಎಂದರೆ ಸ್ವರ್ಗದ ಮಹರ್ದ್ಧಿಕ ದೇವತನವನ್ನು ಅಸಂಖ್ಯಾತಕಾಲದವರೆಗೆ ಭೋಗಿಸಿ, ಪುನಃ ಮನುಷ್ಯರಲ್ಲಿ ಉತ್ತಮ ರಾಜ್ಯ ವೈಭವ ಪಡೆದು, ಪುನಃ ಸಂಸಾರ-ಶರೀರ-ಭೋಗಗಳಿಂದ ವಿರಕ್ತನಾಗಿ, ಶುದ್ಧ ಸಂಯಮ ಅಂಗೀಕಾರ ಮಾಡಿ ನಿಃಶ್ರೇಯಸ ಯಾವ ನಿರ್ವಾಣವಿದೆ. ಅದನ್ನು ನಿಃಪಿಬತಿ ಎಂದರೆ ಆಸ್ವಾದನೆ ಮಾಡುತ್ತಾನೆ, ಅನುಭವ ಮಾಡುತ್ತಾನೆ. ಆ ನಿಃಶ್ರೇಯಸವು

ನಿಸ್ತೀರ ಎಂದರೆ ತೀರದ ಕೊನೆಯೇ ಇಲ್ಲ ಮತ್ತು ದುಸ್ತರವಿದೆ ಎಂದರೆ ಅದರ ಅಂತವಿಲ್ಲ, ಮತ್ತು ಸುಖ ಜಲದ ಸಮುದ್ರವಿರುವಂಥ ನಿರ್ವಾಣವನ್ನು ಸಮಸ್ತ ದುಃಖಗಳಿಂದ ಅಸ್ಪೃಷ್ಟವಾಗಿರುತ್ತ ಭೋಗಿಸುತ್ತಾನೆ.

ಈಗ ಇನ್ನೂ ನಿಃಶ್ರೇಯಸದ ಸ್ವರೂಪವನ್ನೇ ಹೇಳುತ್ತಾರೆ, -

**ಜನ್ಮಜರಾಮಯಮರಣೈಃ ಶೋಕೈಃ ದುಃಖೈರ್ಭಯೈಶ್ಚ ಪರಿಮುಕ್ತಮ್ ।**
**ನಿರ್ವಾಣಂ ಶುದ್ಧಸುಖಂ ನಿಃಶ್ರೇಯಸಮಿಷ್ಯತೇ ನಿತ್ಯಮ್ ॥೧೩೧॥**

**ಅರ್ಥ :-** ಜನ್ಮ, ಜರೆ,ರೋಗ, ಮರಣದಿಂದ ರಹಿತ; ಶೋಕ,ದುಃಖ, ಭಯದಿಂದ ರಹಿತ; ನಿತ್ಯ, ಅವಿನಾಶೀ, ಸಮಸ್ತ ಪರದ ಸಂಯೋಗ ರಹಿತ, ಕೇವಲ ಶುದ್ಧ, ಸುಖಸ್ವರೂಪವಾದ ಯಾವ ನಿರ್ವಾಣವಿದೆ ಅದನ್ನು ನಿಃಶ್ರೇಯಸವೆಂದು ಹೇಳುತ್ತಾರೆ.

ಈಗ ಮತ್ತೆ ನಿಃಶ್ರೇಯಸದ ಸ್ವರೂಪ ಹೇಳುತ್ತಾರೆ, -

**ವಿದ್ಯಾದರ್ಶನ ಶಕ್ತಿಸ್ವಾಸ್ಥ್ಯ ಪ್ರಹ್ಲಾದ ತೃಪ್ತಿಶುದ್ಧಿಯುಜಃ ।**
**ನಿರತಿಶಯಾ ನಿರವಧಯೋ ನಿಃಶ್ರೇಯಸಮಾವಸಂತಿ ಸುಖಮ್ ॥೧೩೨॥**

**ಅರ್ಥ :-** ವಿದ್ಯೆ ಎಂದರೆ ಕೇವಲಜ್ಞಾನ, ಅನಂತದರ್ಶನ ಹಾಗೂ ಅನಂತವೀರ್ಯ, ಸ್ವಾಸ್ಥ್ಯ ಎಂದರೆ ಪರಮ ವೀತರಾಗತೆ, ಪ್ರಹ್ಲಾದ ಎಂದರೆ ಅನಂತಸುಖ, ತೃಪ್ತಿ ಎಂದರೆ ವಿಷಯಗಳ ನಿರಿಚ್ಛತೆ, ಶುದ್ಧ ಎಂದರೆ ದ್ರವ್ಯಕರ್ಮ, ಭಾವಕರ್ಮದ ರಹಿತತೆಯಿಂದ ಆತ್ಮಸ್ವರೂಪಕ್ಕೆ ಪ್ರಾಪ್ತವಾದ, ನಿರತಿಶಯ ಎಂದರೆ ಪೂರ್ವೋಕ್ತ ಜ್ಞಾನ ಮೊದಲಾದ ಗುಣಗಳ ಹೀನತೆ -ಅಧಿಕತೆಯಿಂದ ರಹಿತ, ನಿರವಧಯಃ ಎಂದರೆ ಕಾಲದ ಮರ್ಯಾದೆಯಿಂದ ರಹಿತವಾಗಿರುವಂಥ ಯಾವ ನಿರ್ವಾಣವಿದೆ ಅದರಲ್ಲಿ ನಿಃಶ್ರೇಯಸ ಎಂದರೆ ಹೇಗೆ ಸುಖರೂಪರಿರುತ್ತಾರೆ ಹಾಗೆ ಉಳಿಯುತ್ತಾರೆ.

**ಭಾವಾರ್ಥ :-** ಧರ್ಮದ ಪ್ರಭಾವದಿಂದ ಆತ್ಮನು ನಿಃಶ್ರೇಯಸದಲ್ಲಿ ಇರುತ್ತಾನೆ. ಕೇವಲಜ್ಞಾನ, ಕೇವಲದರ್ಶನ, ಅನಂತಶಕ್ತಿ, ಪರಮ ವೀತರಾಗರೂಪ ನಿರಾಕುಲತೆ, ಅನಂತಸುಖ, ವಿಷಯಗಳ ನಿರಿಚ್ಛತೆ,ಕರ್ಮಮಲ ರಹಿತತೆ ಇತ್ಯಾದಿ ಗುಣರೂಪವಾಗಿ ಗುಣಗಳ ಹೀನಾಧಿಕತೆಯಿಲ್ಲದೆ, ಕಾಲದ ಮರ್ಯಾದೆಯಿಲ್ಲದೆ ಸುಖರೂಪವಾಗಿ ಅನಂತಾನಂತ ಕಾಲದವರೆಗೆ ಉಳಿಯುತ್ತಾರೆ.

ಈಗ ಇನ್ನೂ ನಿಃಶ್ರೇಯಸದ ಸ್ವರೂಪ ಹೇಳುತ್ತಾರೆ, -

**ಕಾಲೇ ಕಲ್ಪಶತೇಽಪಿ ಚ ಗತೇ ಶಿವಾನಾಂ ನ ವಿಕ್ರಿಯಾ ಲಕ್ಷ್ಯಾ ।**
**ಉತ್ಪಾತೋಽಪಿ ಯದಿ ಸ್ಯಾತ್ ತ್ರಿಲೋಕಸಂಭ್ರಾಂತಿಕರಣಪಟುಃ ॥೧೩೩॥**

**ಅರ್ಥ :-** ಅನಂತಾನಂತ ಕಲ್ಪಕಾಲ ಕಳೆದು ಹೋದರೂಕೂಡ ಮುಕ್ತ ಜೀವರುಗಳಿಗೆ ವಿಕಾರ ಎಂದರೆ ಸ್ವರೂಪದ ಸಂಬಂಧದಲ್ಲಿ ಅನ್ಯಥಾ ಭಾವವು ಕಂಡು ಬರುವುದಿಲ್ಲ, ಪ್ರಮಾಣದಿಂದಲೂ ತಿಳಿದು ಬರುವುದಿಲ್ಲ. ಮೂರೂ ಲೋಕಗಳನ್ನು ಸಂಭ್ರಮಣ (ಮಾರ್ಪಾಟು) ಮಾಡುವಲ್ಲಿ ಸಮರ್ಥವಾದಂಥ ಯಾವ ಉತ್ಪಾತವಾದರೂ ಕೂಡ ಸಿದ್ಧರಿಗೆ ವಿಕಾರವಾಗುವುದಿಲ್ಲ.

ಈಗ ಸಿದ್ಧರ ಸ್ವರೂಪ ಹೇಳುತ್ತಾರೆ, -

**ನಿಃಶ್ರೇಯಸಮಧಿಪನ್ನಾಸ್ತ್ರೈಲೋಕ್ಯ ಶಿಖಾಮಣಿಶ್ರಿಯಂ ದಧತೇ ।**
**ನಿಃಕಿಟ್ಟಿಕಾಲಿಕಾಚ್ಛವಿ - ಚಾಮೀಕರಭಾಸುರಾತ್ಮಾನಃ ।।೧೩೪।।**

**ಅರ್ಥ ಃ-** ನಿರ್ವಾಣಕ್ಕೆ ಪ್ರಾಪ್ತರಾದ ಮುಕ್ತ ಜೀವರುಗಳಿದ್ದಾರೆ ಅವರು ಕಿಟ್ಟ ಕಾಳಿಕೆರಹಿತ, ಕಾಂತಿಯುಕ್ತ ಶೋಭೆಯನ್ನು ಧಾರಣ ಮಾಡುವಂಥ ಸ್ವರ್ಣದ ಸಮಾನ, ದ್ರವ್ಯಕರ್ಮ, ಭಾವಕರ್ಮ, ನೋಕರ್ಮರೂಪ ಮಲರಹಿತ, ದೈದೀಪ್ಯಮಾನರಾಗಿರುತ್ತ ಮೂರು ಲೋಕದ ಮಕುಟಮಣಿರೂಪದ ಲಕ್ಷ್ಮಿಯನ್ನು (ಶೋಭೆಯನ್ನು) ಧಾರಣ ಮಾಡುತ್ತಾರೆ.

ಈಗ ಸಮಾಧಿ ಧಾರಣ ಮಾಡಿದ ಪುರುಷರು ಸ್ವರ್ಗಕ್ಕೆ ಹೋಗುತ್ತಾರೆಂದು ಸೂತ್ರದ ಮೂಲಕ ಹೇಳುತ್ತಾರೆ,-

**ಪೂಜಾರ್ಥಾಜ್ಞೈಶ್ವರ್ಯೈರ್ಬಲ ಪರಿಜನ ಕಾಮಭೋಗಭೂಯಿಷ್ಠೈಃ ।**
**ಅತಿಶಯಿತ ಭುವನಮದ್ಭುತಮಭ್ಯುದಯಂ ಫಲತಿ ಸದ್ಧರ್ಮಃ ।।೧೩೫।।**

**ಅರ್ಥ ಃ-** ಸಮಾಧಿಯಿಂದ ಉಪಾರ್ಜಿತವಾದ ಸಮ್ಯಕ್‌ಧರ್ಮವು ಅಭ್ಯುದಯ ಎಂದರೆ ಇಂದ್ರ ಮೊದಲಾದ ಪದವಿಯ ರೂಪದಲ್ಲಿ ಫಲಿಸುತ್ತದೆ. ಅದು ಪೂಜೆ (ಪ್ರತಿಷ್ಠೆ), ಧನ, ಆಜ್ಞೆ, ಐಶ್ವರ್ಯದಿಂದ ಮತ್ತು ಬಲ, ಪರಿಕರದ ಜನರು, ಕಾಮಭೋಗದ ಸಾಮಗ್ರಿಯ ಪ್ರಚುರತೆಯು ಮೂರು ಲೋಕದಲ್ಲಿ ಹಿಡಿಯುವುದಿಲ್ಲ; ಮೂರು ಲೋಕದಲ್ಲಿ ಆಶ್ಚರ್ಯಕರವಾದ ಅಭ್ಯುದಯವು ಅದು ಈ ಸಮ್ಯಕ್ ಧರ್ಮದ ಫಲವೇ ಇದೆ.

**ಭಾವಾರ್ಥ ಃ-** ಮೂರು ಲೋಕದಲ್ಲಿ ನೋಡಲು, ಕೇಳಲು, ವಿಚಾರಿಸಲು ಬಾರದಂಥ ಅದ್ಭುತ ಅಭ್ಯುದಯವು ಅದು ಸಮ್ಯಕ್ ಧರ್ಮದ ಫಲವೇ ಇದೆ. ಧರ್ಮದ ಪ್ರಭಾವದಿಂದಲೇ ಇಂದ್ರ-ಅಹಮಿಂದ್ರತನಗಳು ಪ್ರಾಪ್ತವಾಗುತ್ತವೆ.

ಈ ಪ್ರಕಾರ ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡ ಶ್ರಾವಕಾಚಾರದ
ಪಂ. ಸದಾಸುಖಜಿಯವರು ಬರೆದ ಭಾಷಾ ವಚನಿಕೆಯಲ್ಲಿ ಏಳನೆಯ
ಸಲ್ಲೇಖನ ಅಧಿಕಾರವು ಸಮಾಪ್ತವಾಯಿತು.

೮

# ಪ್ರತಿಮಾ ಅಧಿಕಾರ

ಈಗ ಶ್ರಾವಕ ಧರ್ಮದ ಹನ್ನೊಂದು ಪದಗಳಿದ್ದು, ಯಾರ ಸಾಮರ್ಥ್ಯವು ಹೇಗೆ ಇದೆ ಹಾಗೆಯೇ ಪದಗಳನ್ನು ಗ್ರಹಣ ಮಾಡಬೇಕೆಂದು ಹೇಳುತ್ತಾರೆ, -

**ಶ್ರಾವಕಪದಾನಿ ದೇವೈರೇಕಾದಶ ದೇಶಿತಾನಿ ಯೇಷು ಖಲು ।**
**ಸ್ವಗುಣಾಃ ಪೂರ್ವಗುಣೈಃ ಸಹ ಸಂತಿಷ್ಠಂತೇ ಕ್ರಮ ವಿವೃದ್ಧಾಃ ॥೧೩೬॥**

**ಅರ್ಥ :- ಭಗವಾನ ಸರ್ವಜ್ಞದೇವರು ಶ್ರಾವಕ ಧರ್ಮದಲ್ಲಿ ಹನ್ನೊಂದು ಸ್ಥಾನಗಳನ್ನು ಹೇಳಿದ್ದಾರೆ. ಆ ಸ್ಥಾನಗಳು ಮೊದಲಿನ ಸ್ಥಾನಗಳ ಗುಣಗಳೊಡನೆ ಕ್ರಮದಿಂದ ಹೆಚ್ಚುತ್ತಿರುತ್ತವೆ.** ಶ್ರಾವಕನಲ್ಲಿ ದರ್ಶನ , ವ್ರತ, ಸಾಮಾಯಿಕ, ಪ್ರೋಷಧೋಪವಾಸ, ಸಚಿತ್ತತ್ಯಾಗ,ರಾತ್ರಿ ಭೋಜನ ತ್ಯಾಗ, ಬ್ರಹ್ಮಚರ್ಯ, ಆರಂಭತ್ಯಾಗ, ಪರಿಗ್ರಹ ತ್ಯಾಗ, ಅನುಮತಿ ತ್ಯಾಗ ಮತ್ತು ಉದ್ದಿಷ್ಟ ತ್ಯಾಗವೆಂದು ಹನ್ನೊಂದು ಪದಗಳಿವೆ.

**ಯಾವನು ಮೇಲಿನ ಪದದ ಆಚರಣೆ ಮಾಡುವನು, ಅವನಿಗೆ ಮೊದಲಿನ ಪದದ ಸಮಸ್ತ ವ್ರತ-ನಿಯಮ ಮೊದಲಾದವುಗಳ ಆಚರಣೆಯು ಧಾರಣವಾಗಿರುವುದು.** ಮೇಲಿನ ಪದದ ವ್ರತ-ನಿಯಮಗಳನ್ನಂತೂ ಧಾರಣ ಮಾಡಿದನು, ಆದರೆ ಕೆಳಗಿನ ಪದಗಳ-ವ್ರತ-ನಿಯಮಗಳನ್ನು ಬಿಟ್ಟುಕೊಡುವಂತಿಲ್ಲ. ಈ ಪ್ರಕಾರ ಬ್ರಹ್ಮಚರ್ಯಪದ ಧಾರಣ ಮಾಡಿದವನಿಗೆ ದರ್ಶನ ಮೊದಲಾದ ಆರು ಸ್ಥಾನಗಳ ಆಚರಣೆಯು ನಿಯಮದಿಂದ ಆಗುತ್ತದೆ, ಎಂಟನೇ ಪದದಲ್ಲಿ ಕೆಳಗಿನ ಏಳೂ ಸ್ಥಾನಗಳ ಆಚರಣೆಯು ಇದ್ದೇ ಇರುತ್ತದೆ.

ಈಗ **ಪ್ರಥಮ ದರ್ಶನ ಪದದ** ಧಾರಕನ ಲಕ್ಷಣ ಹೇಳುತ್ತಾರೆ, -

**ಸಮ್ಯಗ್ದರ್ಶನಶುದ್ಧಃ ಸಂಸಾರ ಶರೀರ ಭೋಗ ನಿರ್ವಿಣ್ಣಃ ।**
**ಪಂಚಗುರುಚರಣಶರಣೋ ದರ್ಶನಿಕಸ್ತತ್ವಪಥಗೃಹ್ಯಃ ॥೧೩೭॥**

**ಅರ್ಥ :-** ಯಾವನು ಸಮ್ಯಗ್ದರ್ಶನದ ಇಪ್ಪತ್ತೈದು ಮಲ-ದೋಷಗಳಿಂದ ರಹಿತನಿರುವನು ; ನಿರಂತರ ಸಂಸಾರ-ವಾಸದಿಂದ, ಶರೀರದ ಜತೆಯಿಂದ, ಇಂದ್ರಿಯ ಭೋಗಗಳಿಂದ ವಿರಕ್ತನಿರುವನು ; ಅವನಿಗೆ ಪಂಚಪರಮೇಷ್ಠಿಗಳೇ ಶರಣಭೂತರಿರುವರು; ಸರ್ವಜ್ಞ ಭಾಷಿತ ಜೀವಾದಿತತ್ತ್ವಗಳ ಶ್ರದ್ಧೆಯುಳ್ಳವನಿರುವನು ಅವನು ಸತ್ಯಾರ್ಥ ಮಾರ್ಗದಲ್ಲಿ ಗ್ರಹಣ ಮಾಡಲು ಯೋಗ್ಯವಾದ ದಾರ್ಶನಿಕ ಶ್ರಾವಕನ ಪ್ರಥಮ ಪದದ ಧಾರಕನಾಗುತ್ತಾನೆ.

**ಭಾವಾರ್ಥ :-** ಅವನು ಸ್ಯಾದ್ವಾದರೂಪ ಪರಮಾಗಮದ ಪ್ರಸಾದದಿಂದ ನಿಶ್ಚಯ-ವ್ಯವಹಾರರೂಪ ಎರಡೂ ನಯಗಳಿಂದ ನಿರ್ಣಯಪೂರ್ವಕ ಸ್ವತತ್ತ್ವ-ಪರತತ್ತ್ವವನ್ನು ತಿಳಿದುಕೊಂಡು ದೃಢ ಶ್ರದ್ಧೆಯುಳ್ಳವನಿರುವನು ; ಜಾತಿ,ಕುಲ ಮೊದಲಾದ ಎಂಟು ಮದಗಳಿಂದ ರಹಿತನಿರುವನು ; ಅಭಿಮಾನದ ಮಂದತೆಯಿಂದ ತಾನೇ ಸಮಸ್ತ ಗುಣೀ ಜನರ ಗುಣಗಳ ವಿಚಾರ ಮಾಡಿ ತನ್ನನ್ನು ತೃಣ ಸಮಾನ ಚಿಕ್ಕವನೆಂದು ಮನ್ನಿಸುತ್ತಿರುವನು.

ಅಪ್ರತ್ಯಾಖ್ಯಾನಾವರಣ ಕಷಾಯದ ಉದಯದ ಬಲದಿಂದ ವಿಷಯಗಳಲ್ಲಿ ರಾಗವು ಕಡಿಮೆಯಾಗಿಲ್ಲ, ಗೃಹಸ್ಥರ ಸಮಸ್ತ ಆರಂಭದಲ್ಲಿ ಪ್ರವರ್ತಿಸುತ್ತಿದ್ದರೂ ಇವೆಲ್ಲವು ನಮ್ಮ ಮೋಹದ ಪ್ರಭಾವದಿಂದಾದ ಅಜ್ಞಾನ ಭಾವಗಳಿವೆ, ಇವು ತ್ಯಾಗ ಯೋಗ್ಯವಿವೆಯೆಂದು ತಿಳಿಯುತ್ತಾನೆ; ಇವುಗಳಿಂದ ಯಾವಾಗ ದೂರವಾಗುವೆನು ? ಇನ್ನೂ ನನ್ನ ತೀವ್ರ ರಾಗಭಾವವು ಪರಿಣಾಮಗಳನ್ನು ಚಂಚಲಗೊಳಿಸುತ್ತಲಿದೆ.

ಅವನಿಗೆ ಧರ್ಮಾತ್ಮ ಜನರ ಗುಣಗಳನ್ನು ಗ್ರಹಣ ಮಾಡುವಲ್ಲಿ ಅನುರಾಗವಿರುವುದು, ರತ್ನತ್ರಯದ ಧಾರಕರಲ್ಲಿ ಅತ್ಯಂತ ವಿನಯವಿರುವುದು, ಧರ್ಮದ ಧಾರಕರಲ್ಲಿ ಅತಿಶಯ ಅನುರಾಗವಿಡುವವನೇ ಸಮ್ಯಗ್ದೃಷ್ಟಿಯಿರುತ್ತಾನೆ. **ಅವನು ದೇಹ ಮೊದಲಾದುವಿಂದ ಮತ್ತು ರಾಗ-ದ್ವೇಷ-ಮೋಹಾದಿಗಳಿಂದ ಅನಾದಿಯಿಂದ ಕೂಡಿಕೊಂಡಿದ್ದರೂ ಕೂಡ ತನ್ನ ಜ್ಞಾಯಕ ಸ್ವಭಾವವನ್ನು ಭೇದವಿಜ್ಞಾನದ ಬಲದಿಂದ ಭಿನ್ನವಾಗಿ ಅನುಭವ ಮಾಡುತ್ತಾನೆ; ಜೀವದಿಂದ ಕೂಡಿಕೊಂಡ ದೇಹವನ್ನು ಕೂಡ ಬಟ್ಟೆಯ ಸಮಾನ ಬೇರೆಯೆಂದು ತಿಳಿಯುತ್ತಾನೆ.**

ಹದಿನೆಂಟು ದೋಷಗಳಿಂದ ರಹಿತರಾದ ವೀತರಾಗ ಸರ್ವಜ್ಞರಲ್ಲಿಯೇ ದೇವಬುದ್ಧಿಯಿಂದ ಅವರ ಆರಾಧನೆ ಮಾಡುತ್ತಾನೆ, ದೋಷ ಸಹಿತರಲ್ಲಿ ದೇವಬುದ್ಧಿ ಮಾಡುವುದಿಲ್ಲ. ಧರ್ಮವನ್ನು ದಯಾರೂಪವಾಗಿಯೇ ಮನ್ನಿಸುತ್ತಾನೆ. ಹಿಂಸೆಯಲ್ಲಿ ಎಂದೂ ಮೂರು ಕಾಲದಲ್ಲಿಯೂ ಧರ್ಮ ಮನ್ನಿಸುವುದಿಲ್ಲ. ಆರಂಭ ಪರಿಗ್ರಹಗಳಿಂದ ರಹಿತರಿರುವವರೇ ಗುರುಗಳಿದ್ದಾರೆ, ಬೇರೆ ಯಾರೂ ಗುರುಗಳಿಲ್ಲವೆಂದು ದೃಢ ಶ್ರದ್ಧೆಯಿರುತ್ತದೆ.

ಕೆಲವು ಜೀವರುಗಳು ಯಾವ ಜೀವವನ್ನು ಕೊಲ್ಲುವುದಿಲ್ಲ, ಬದುಕಿಸುವುದಿಲ್ಲ, ಸುಖಿ ಮಾಡುವುದಿಲ್ಲ, ದುಃಖಿ ಮಾಡುವುದಿಲ್ಲ, ಉಪಕಾರ-ಅಪಕಾರ ಮಾಡುವುದಿಲ್ಲ, ದರಿದ್ರ-ಧನಾಢ್ಯ ಮಾಡುವುದಿಲ್ಲ, ಕೇವಲ ತಮ್ಮ ಭಾವಗಳಿಂದ ಕಟ್ಟಿದ ಕರ್ಮಗಳ ಉದಯದಿಂದ ಜೀವಿಸುತ್ತಾರೆ, ಸಾಯುತ್ತಾರೆ, ಸುಖಿ-ದುಃಖಿಯಾಗುತ್ತಾರೆ, ದರಿದ್ರ-ಧನಾಢ್ಯರಾಗುತ್ತಾರೆ, ತಮ್ಮ ಕರ್ಮಗಳ ಉದಯದಿಂದ ಪ್ರಾಪ್ತವಾದ ಸಂಸಾರದ ಭೋಗಗಳನ್ನು ಭೋಗಿಸುತ್ತಾರೆ.

ಭಕ್ತಿಯಿಂದ ಪೂಜಿಸಿದ ವ್ಯಂತರ ಮೊದಲಾದ ದೇವಗಳು, ಮಂತ್ರ-ಯಂತ್ರ ಮೊದಲಾದುವೆಲ್ಲವೂ ಪುಣ್ಯಹೀನನಿಗೆ ಯಾವ ಉಪಕಾರ ಮಾಡುವಲ್ಲಿ ಸಮರ್ಥವಿಲ್ಲ. ಪುಣ್ಯವು ನಷ್ಟವಾಗಿ ಹೋದ ಮೇಲೆ ಮಿತ್ರ ಮೊದಲಾದವರೆಲ್ಲರೂ ಶತ್ರುಗಳಾಗಿ ಹೋಗುತ್ತಾರೆ. ಪುಣ್ಯ-ಪಾಪದ ಪ್ರಬಲ ಉದಯದಿಂದ ಕಲ್ಲು, ಮಣ್ಣು, ಧೂಳು, ಭಸ್ಮ ಮೊದಲಾದುವೆಲ್ಲವು ದೇವತೆಯ ರೂಪದಲ್ಲಿ ಕಾಣಿಸಿಕೊಂಡು ಉಪಕಾರ-ಅಪಕಾರ ಮಾಡುತ್ತವೆ.

**ಸಮ್ಯಗ್ದೃಷ್ಟಿಗಂತೂ ಹೀಗೆ ನಿಶ್ಚಯವಿದೆ : ಯಾವ ಜೀವನಿಗೆ, ಯಾವ ದೇಶದಲ್ಲಿ, ಯಾವ ಕಾಲದಲ್ಲಿ, ಯಾವ ಪ್ರಕಾರದಿಂದ ಜನ್ಮ-ಮರಣ, ಲಾಭ-ಹಾನಿ, ಸುಖ-ದುಃಖಗಳಾಗುವುದನ್ನು ಜಿನೇಂದ್ರ ಭಗವಂತರು ದಿವ್ಯ ಜ್ಞಾನದಿಂದ ತಿಳಿದಿದ್ದಾರೆ ಆ ಜೀವನಿಗೆ ಆ ದೇಶದಲ್ಲಿ, ಆ ಕಾಲದಲ್ಲಿ, ಅದೇ ಪ್ರಕಾರದಿಂದ ಜನ್ಮ-ಮರಣ, ಲಾಭ-ಹಾನಿ, ಸುಖ-ದುಃಖಗಳು ನಿಯಮದಿಂದ ಆಗುತ್ತವೆ, ಅವನ್ನು ದೂರ ಮಾಡುವಲ್ಲಿ ಯಾವ ಇಂದ್ರ, ಅಹಮಿಂದ್ರ, ಜಿನೇಂದ್ರರೂ ಸಮರ್ಥರಿಲ್ಲ,** ಯಾವನು ಹೀಗೆ ಸಮಸ್ತ ದ್ರವ್ಯಗಳ ಸಮಸ್ತ ಪರ್ಯಾಯಗಳನ್ನು ತಿಳಿಯುತ್ತಾನೆ, ಶ್ರದ್ಧೆ ಮಾಡುತ್ತಾನೆ ಆ ಸಮ್ಯಗ್ದೃಷ್ಟಿಯನ್ನು ಪ್ರಥಮ ಪದಧರಿಸಿದ ದಾರ್ಶನಿಕ ಶ್ರಾವಕನೆಂದು ತಿಳಿಯುವುದು.

ಈಗ **ಎರಡನೇ ವ್ರತ ಪದದ** ಲಕ್ಷಣ ಹೇಳುತ್ತಾರೆ,-

**ನಿರತಿಕ್ರಮಣಮಣುವ್ರತ ಪಂಚಕಮಪಿ ಶೀಲಸಪ್ತಕಂ ಚಾಪಿ ।**
**ಧಾರಯತೇ ನಿಃಶಲ್ಯೋ ಯೋಽಸೌ ವ್ರತಿನಾಂ ಮತೋ ವ್ರತಿಕಃ ।।೧೩೮।।**

**ಅರ್ಥ** :-ಯಾವನು ಅತಿಚಾರವಿಲ್ಲದೆ ಐದು ಅಣುವ್ರತ ಮತ್ತು ಸಪ್ತ ಶೀಲ (ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತ) ಈ ಹನ್ನೆರಡು ವ್ರತಗಳನ್ನು ಮಾಯೆ-ಮಿಥ್ಯೆ-ನಿದಾನ ಶಲ್ಯಗಳಿಂದ ರಹಿತನಾಗಿ ಧಾರಣ ಮಾಡುತ್ತಾನೆ, ಅವನು ವ್ರತಿಗಳ ಮಧ್ಯದಲ್ಲಿ ವ್ರತೀ ಶ್ರಾವಕನೆಂದು ಮನ್ನಿಸಲ್ಪಡುತ್ತಾನೆ.

ಈಗ **ಮೂರನೇ ಸಾಮಾಯಿಕ ಪದದ** ಲಕ್ಷಣ ಹೇಳುತ್ತಾರೆ, -

**ಚತುರಾವರ್ತತ್ರಿತಯಶ್ಚತುಃ ಪ್ರಣಾಮಃ ಸ್ಥಿತೋ ಯಥಾಜಾತಃ ।**
**ಸಾಮಾಯಿಕೋ ದ್ವಿನಿಷದ್ಯಸ್ತ್ರಿಯೋಗ ಶುದ್ಧಸ್ತ್ರಿಸಂಧ್ಯಮಭಿವಂದೀ ॥೧೩೯॥**

**ಅರ್ಥ** :- ಸಾಮಾಯಿಕದಲ್ಲಿ ಪಂಚಣಮೋಕಾರದ ಮೊದಲು ಹಾಗೂ ಕೊನೆಯಲ್ಲಿ ಮತ್ತು ಥೋಸ್ಸಾಮಿಯ ಮೊದಲು ನಾಲ್ಕೂ ದಿಶೆಗಳಲ್ಲಿ ಒಂದೊಂದು ಪ್ರಣಾಮ, ಮೂರು-ಮೂರು ಆವರ್ತ ಮಾಡುತ್ತಾನೆ, ಕಾಯೋತ್ಸರ್ಗದಲ್ಲಿ ಸ್ಥಿರ, ಬಾಹ್ಯಾಭ್ಯಂತರ ಪರಿಗ್ರಹದಿಂದ ರಹಿತ, ಎರಡು ಆಸನಗಳೊಳಗೆ ಯಾವುದಾದರೊಂದು ಆಸನದಲ್ಲಿ, ದೇವ ವಂದನೆಯ ಮೊದಲು ಮತ್ತು ನಂತರ ಎರಡು ಬಾರಿ ಮಣಿದು, ದಿವಸದಲ್ಲಿ ಮೂರು ಬಾರಿ ವಂದನೆಯೊಡನೆ ಸಾಮಾಯಿಕ ಮಾಡುವಂಥವನನ್ನು ಸಾಮಾಯಿಕ ನಾಮದ ಮೂರನೇ ಪದವಿದೆಯೆಂದು ತಿಳಿಯುವುದು. ಇದರ ವಿಶೇಷ ವಿಧಿಯು ಬಹುಜ್ಞಾನೀ ಗುರುಗಳ ಪರಿಪಾಟಿಯಿಂದ ಅವರು ಹೇಳುವುದರ ಅನುಸಾರ ಪ್ರಮಾಣವಿದೆ.

ಈಗ **ನಾಲ್ಕನೇ ಪ್ರೋಷಧ ಪದದ** ಲಕ್ಷಣ ಹೇಳುತ್ತಾರೆ, -

**ಪರ್ವದಿನೇಷು ಚತುರ್ಷ್ವಪಿ ಮಾಸೇ ಮಾಸೇ ಸ್ವಶಕ್ತಿಮನಿಗುಹ್ಯ ।**
**ಪ್ರೋಷಧನಿಯಮವಿಧಾಯೀ ಪ್ರಣಧಿಪರಃ ಪ್ರೋಷಧಾನಶನಃ ॥೧೪೦॥**

**ಅರ್ಥ** :- ಒಂದೊಂದು ತಿಂಗಳಲ್ಲಿ ಎರಡು ಅಷ್ಟಮಿ, ಎರಡು ಚತುರ್ದಶೀ ಈ ಪ್ರಕಾರ ನಾಲ್ಕು ಪರ್ವದ ದಿವಸಗಳಲ್ಲಿ ತಮ್ಮ ಶಕ್ತಿಯನ್ನು ಬಚ್ಚಿಡದೆ, ಆಹಾರ-ಪಾನೀಯ ಮೊದಲಾದವುಗಳ ತ್ಯಾಗ ಮಾಡಿ ಅಥವಾ ನೀರಸ ಆಹಾರ ಅಥವಾ ಅಲ್ಪ ಆಹಾರ ಅಥವಾ ಕೇವಲ ಮಜ್ಜಿಗೆ ಮೊದಲಾದುವನ್ನೇ ಸ್ವೀಕರಿಸಿ, ಶುಭ ಧ್ಯಾನದಲ್ಲಿ ಲೀನರಾಗಿ ಪ್ರೋಷಧಪೂರ್ವಕ ನಿಯಮದಿಂದ ಉಪವಾಸ ಮಾಡುವಂಥವರನ್ನು, ಆ ನಾಲ್ಕೂ ಪರ್ವಗಳಲ್ಲಿ ಇದೇ ಪ್ರಕಾರದಿಂದ ಇರುವಂಥವರನ್ನು ಆ ಪ್ರೋಷಧ ನಾಮದ ನಾಲ್ಕನೇ ಪದದಲ್ಲಿ ಇರುವರೆಂದು ತಿಳಿಯುವುದು.

ಈಗ **ಸಚಿತ್ತ ತ್ಯಾಗ ನಾಮದ ಐದನೇ ಪದದ** ಲಕ್ಷಣ ಹೇಳುತ್ತಾರೆ, -

**ಮೂಲಫಲ ಶಾಕಶಾಖಾ-ಕರೀರ ಕಂದಪ್ರಸೂನ ಬೀಜಾನಿ ।**
**ನಾಮಾನಿ ಯೋಽತ್ತಿ ಸೋಽಯಂ ಸಚಿತ್ತವಿರತೋ ದಯಾಮೂರ್ತಿಃ ॥೧೪೧॥**

**ಅರ್ಥ** :- ಯಾವ ಶ್ರಾವಕನು ಮೂಲ, ಫಲ, ಪತ್ರ, ಶಾಖೆ, ಕರೀರ (ಚಿಗುರೆಲೆ, ಮೊಳಕೆ) ಕಂದ, ಫಲ ಮತ್ತು ಬೀಜವಿಲ್ಲದ, ಅಗ್ನಿಯಿಂದ ಪಕ್ವ ಮಾಡಿದ, ಅಪಕ್ವವಾದವುಗಳನ್ನು ನಿರರ್ಗಲವಾಗಿ ಭಕ್ಷಣ ಮಾಡುವುದಿಲ್ಲ ಆ ದಯಾಮೂರ್ತಿಯೇ ಸಚಿತ್ತವಿರತ ನಾಮದ ಐದನೇ ಪದದಲ್ಲಿ ಸ್ಥಿರನಿದ್ದಾನೆಂದು ತಿಳಿಯುವುದು.

ಈಗ **ರಾತ್ರಿ ಭುಕ್ತಿ ವಿರತ ನಾಮದ ಆರನೇ ಪದದ** ಲಕ್ಷಣ ಹೇಳುತ್ತಾರೆ, -

**ಅನ್ನಂ ಪಾನಂ ಖಾದ್ಯಂ ಲೇಹ್ಯಂ ನಾಶ್ನಾತಿ ಯೋ ವಿಭಾವರ್ಯಾಮ್ ।**
**ಸ ಚ ರಾತ್ರಿ ಭುಕ್ತಿ ವಿರತಃ ಸತ್ವೇಷ್ವನುಕಂಪಮಾನಮನಾಃ ।।೧೪೨।।**

**ಅರ್ಥ :-** ಪ್ರಾಣಿಗಳ ಮೇಲೆ ಅನುಕಂಪೆ-ದಯೆಯ ರೂಪದ ಪರಿಣಾಮವನ್ನು ಮನಸ್ಸಿನಲ್ಲಿ ಧಾರಣ ಮಾಡುವಂಥ ಪುರುಷನು ರಾತ್ರಿಯಲ್ಲಿ ಧಾನ್ಯದಿಂದ ನಿರ್ಮಿಸಿದ ಭೋಜನ; ಪಾನ ಎಂದರೆ ನೀರು, ಹಾಲು, ಪಾನಕ ಇತ್ಯಾದಿ ಕುಡಿಯಲು ಯೋಗ್ಯ; ಖಾದ್ಯ ಎಂದರೆ ಪೇಡ, ಲಡ್ಡು, ಲಡ್ಡುಗೆ ಇತ್ಯಾದಿ; ಲೇಹ್ಯ ಎಂದರೆ ಕೇವಲ ಸ್ವಾದ ಪಡೆಯಲು ಯೋಗ್ಯ ಏಲಕ್ಕಿ, ಲವಂಗ, ಅಡಿಕೆ, ಔಷಧ ಮೊದಲಾದವು ಈ ಪ್ರಕಾರ ನಾಲ್ಕು ಬಗೆಯಾಗಿ ಹೇಳುವುದರಿಂದ ಸಮಸ್ತ ತಿನ್ನಲು ಯೋಗ್ಯ, ಕುಡಿಯಲು ಯೋಗ್ಯವಾದ ಸಾಮಗ್ರಿಗಳನ್ನು ರಾತ್ರಿಯಲ್ಲಿ ತಿನ್ನುವುದಿಲ್ಲ - ಕುಡಿಯುವುದಿಲ್ಲ ಅವನು ರಾತ್ರಿ ಭುಕ್ತಿ ವಿರತ ನಾಮದ ಆರನೇ ಪದದ ಧಾರಕನಾದ ಶ್ರಾವಕನಿದ್ದಾನೆ.

ಈಗ **ಬ್ರಹ್ಮಚರ್ಯ ನಾಮದ ಏಳನೇ ಪದದ** ಲಕ್ಷಣ ಹೇಳುತ್ತಾರೆ, -

**ಮಲಬೀಜಂ ಮಲಯೋನಿಂ ಗಲನ್ಮಲಂ ಪೂತಗಂಧಿ ಬೀಭತ್ಸಂ ।**
**ಪಶ್ಯನ್ನಂಗಮನಂಗಾದ್ವಿರಮತಿ ಯೋ ಬ್ರಹ್ಮಚಾರೀ ಸಃ ।।೧೪೩।।**

**ಅರ್ಥ :-** ಈ ಶರೀರವು ತಾಯಿಯ ರಕ್ತ ಮತ್ತು ತಂದೆಯ ವೀರ್ಯರೂಪದ ಮಲದಿಂದ ಉತ್ಪನ್ನವಾಗಿದೆ, ಆದುದರಿಂದ ಇದರ ಬೀಜವು ಮಲವೇ ಇದೆ. ಈ ಶರೀರವು ಮಲವನ್ನೇ ಉತ್ಪನ್ನ ಮಾಡುತ್ತದೆ, ಆದುದರಿಂದ ಇದು ಮಲದ ಯೋನಿಯಿದೆ. ಇದು ನಿರಂತರ ನವದ್ವಾರಗಳಿಂದ ಮಲವನ್ನೇ ಉಗುಳುತ್ತಿರುತ್ತದೆ, ಆದುದರಿಂದ ಗಲನ್ಮಲವಿದೆ. ಮಹಾದುರ್ಗಂಧಯುಕ್ತ ಮತ್ತು ಜುಗುಪ್ಸೆಯ ಸ್ಥಾನವಿದೆ. ಇಂಥ ಶರೀರವನ್ನು ನೋಡುತ್ತಿರುವಂತೆ ಯಾವನು ಕಾಮಭಾವದಿಂದ ವಿರಕ್ತನಾಗಿ ಹೋಗುತ್ತಾನೆ ಅವನು ಬ್ರಹ್ಮಚಾರೀ ನಾಮದ ಏಳನೇ ಪದವುಳ್ಳವನಿದ್ದಾನೆ.

ಈ ಬ್ರಹ್ಮಚಾರಿಯು ತನ್ನ ವಿವಾಹಿತ ಸ್ತ್ರೀಯ ಜತೆ, ಹತ್ತಿರ ಏಕಾಸನದಲ್ಲಿ ಶಯನ ಮಾಡುವುದಿಲ್ಲ; ಪೂರ್ವದಲ್ಲಿ ಭೋಗಿಸಿದ ಭೋಗಗಳ ಕಥೆ-ವಾರ್ತೆ-ವಿಚಾರ ಮಾಡುವುದಿಲ್ಲ ; ಕಾಮೋದ್ದೀಪನ ಮಾಡುವಂಥ ಪುಷ್ಟ ಆಹಾರದ ತ್ಯಾಗ ಮಾಡುತ್ತಾನೆ ; ರಾಗವನ್ನುತ್ಪನ್ನ ಮಾಡುವಂಥ ವಸ್ತ್ರಾಭರಣಗಳನ್ನು ಧರಿಸುವುದಿಲ್ಲ ; ಗೀತೆ, ವಾದ್ಯ, ನೃತ್ಯ ಮೊದಲಾದುವನ್ನು ಕೇಳುವ-ನೋಡುವುದರ ತ್ಯಾಗ ಮಾಡುತ್ತಾನೆ ; ಪುಷ್ಪ, ಮಾಲೆ, ಸುಗಂಧ ದ್ರವ್ಯ, ವಿಲೇಪನ ಮೊದಲಾದವುಗಳ ತ್ಯಾಗ ಮಾಡುತ್ತಾನೆ ; ಶೃಂಗಾರ ಕಥೆ, ಹಾಸ್ಯ ಕಥಾ ರೂಪದ ಕಾವ್ಯ, ನಾಟಕ ಮೊದಲಾದವುಗಳನ್ನು ಓದುವ-ಕೇಳುವುದರ ತ್ಯಾಗ ಮಾಡುತ್ತಾನೆ. ತಾಂಬೂಲ ಮೊದಲಾದ ರಾಗ ವೃದ್ಧಿಸುವಂಥ ವಸ್ತುಗಳನ್ನು ದೂರದಿಂದಲೇ ತ್ಯಾಗ ಮಾಡುತ್ತಾನೆ; ಅವನಿಗೇ ಬ್ರಹ್ಮಚರ್ಯನಾಮದ ಏಳನೇ ಶ್ರಾವಕ ಪದವಿರುತ್ತದೆ.

ಈಗ ಪರಿಣಾಮವು ವೃದ್ಧಿಸಿದರೆ **ಎಂಟನೇ ಆರಂಭ ತ್ಯಾಗ ಪದದ** ಲಕ್ಷಣ ಹೇಳುತ್ತಾರೆ, -

**ಸೇವಾ ಕೃಷಿ ವಾಣಿಜ್ಯ ಪ್ರಮುಖಾದಾರಂಭತೋ ವ್ಯುಪಾರಮತಿ ।**
**ಪ್ರಾಣಾತಿಪಾತ ಹೇತೋರ್ಯೋऽಸಾವಾರಂಭ ವಿನಿವೃತ್ತಃ ।।೧೪೪।।**

**ಅರ್ಥ :-** ಯಾವ ಜೀವನು ಹಿಂಸೆಯ ಕಾರಣಗಳಿರುವಂಥ ನೌಕರಿ, ಕೃಷಿ, ವ್ಯಾಪಾರ ಮೊದಲಾದುವನ್ನು ಮುಖ್ಯತೆಯಿಂದ ಮತ್ತು ಅಸಿಕರ್ಮ, ಲೇಖನ ಕರ್ಮ, ಶಿಲ್ಪಕರ್ಮದಿಂದ ಕೂಡ ಹಾಗೂ ಹಿಂಸೆಯಾಗುವಂಥ ಆರಂಭದಿಂದ ವಿರಕ್ತನಾಗುತ್ತಾನೆ ಅವನು ಆರಂಭನಿವೃತ್ತ ನಾಮದ ಎಂಟನೇ ಪದದ ಧಾರಕನಾದ ಶ್ರಾವಕನಿದ್ದಾನೆ.

**ಭಾವಾರ್ಥ :-** ಅವನು ಧನ ಉತ್ಪನ್ನ ಮಾಡುವ ಕಾರಣವಾದ ಸಮಸ್ತ ವ್ಯಾಪಾರ ಮೊದಲಾದ ಪಾಪದ ಆರಂಭ ತ್ಯಾಗ ಮಾಡುತ್ತಾನೆ. ಪತ್ನಿ-ಪುತ್ರರುಗಳಿಗೆ ಸಮಸ್ತ ಪರಿಗ್ರಹ ಹಂಚಿಕೊಡುತ್ತಾನೆ, ಸ್ವಲ್ಪ ಧನ ತನ್ನ ಹತ್ತಿರ ಇಟ್ಟುಕೊಳ್ಳುತ್ತಾನೆ, ನವೀನ ಧನ ಸಂಪಾದಿಸುವುದಿಲ್ಲ. ತನ್ನ ಹತ್ತಿರ ಇಟ್ಟುಕೊಂಡ ಸ್ವಲ್ಪ ಧನದಲ್ಲಿ ದೀನ-ದುಃಖಿಗಳಿಗೆ ಉಪಕಾರ ಮಾಡುವುದು, ತನ್ನ ಶರೀರದ ಸಾಧನಗಳಾದ ಔಷಧ, ಆಹಾರ, ವಸ್ತ್ರ ಮೊದಲಾದುವಲ್ಲಿ ತೊಡಗಿಸುವುದು, ಮತ್ತು ತಮ್ಮ ಹಿತ ಬಯಸುವಂಥವರ, ತಮ್ಮಲ್ಲಿ ಮಮತೆಯನ್ನಿಡುವಂಥವರ ಸಲುವಾಗಿ ಮತ್ತು ಸಾಧರ್ಮಿಗಳ ದುಃಖ ನಿವಾರಣೆಯ ಸಲುವಾಗಿ ಕೊಡುತ್ತಾನೆ, ಇತರ ಪಾಪದ ಆರಂಭದಲ್ಲಿ ತೊಡಗಿಸುವುದಿಲ್ಲ.

ಮರ್ಯಾದೆಯ ರೂಪವಾಗಿ ತನ್ನ ಹತ್ತಿರ ಇಟ್ಟುಕೊಂಡ ಸ್ವಲ್ಪ ಧನವನ್ನು ಯಾರೋ ಕಳ್ಳರು, ಪಾಲುಗಾರರು, ದುಷ್ಟರು ಕಿತ್ತುಕೊಂಡರೆ ದುಃಖ ಪಡುವುದಿಲ್ಲ; ಪುನಃ ಸಂಪಾದಿಸುವ ಯತ್ನ ಮಾಡುವುದಿಲ್ಲ; ತ್ಯಾಗ ಮಾಡಿ ಮೇಲೆಯೇ ಹತ್ತುತ್ತಾನೆ. ಓಹೋ ನಾನು ರಾಗೀ ಮೋಹಿಯಾಗಿ ಇಷ್ಟು ಪರಿಗ್ರಹ ಇಟ್ಟುಕೊಂಡಿದ್ದೆ ಅದು ಹೊರಟು ಹೋಯಿತು, ಕರ್ಮೋದಯವು ನನ್ನ ಮೇಲೆ ಉಪಕಾರ ಮಾಡಿತು. ಮಮತೆ, ಆರಂಭ, ರಕ್ಷಣೆ, ಭಯ ಮೊದಲಾದ ಸಮಸ್ತ ಕ್ಲೇಶದಿಂದ ಬಿಟ್ಟು ಹೋದೆನು, ಅದರಿಂದ ಮಹಾ ದುರ್ಧ್ಯಾನವಿತ್ತು, ಅದು ತಾನಾಗಿಯೇ ಬಿಟ್ಟು ಹೋಯಿತೆಂಬ ಭಾವವಿರುವವನಿಗೆ ಆರಂಭ ನಿವೃತ್ತಿ ನಾಮದ ಎಂಟನೇ ಪದವಿದೆ.

ಈಗ **ಪರಿಗ್ರಹತ್ಯಾಗ ನಾಮದ ಒಂಭತ್ತನೇ ಪದದ** ಲಕ್ಷಣ ಹೇಳುತ್ತಾರೆ, -

**ಬಾಹ್ಯೇಷು ದಶಸು ವಸ್ತುಷು ಮಮತ್ವಮುತ್ಸೃಜ್ಯ ನಿರ್ಮಮತ್ವರತಃ ।**
**ಸ್ವಸ್ಥಃ ಸಂತೋಷಪರಃ ಪರಿಚಿತ ಪರಿಗ್ರಹಾದ್ವಿರತಃ ॥೧೪೫॥**

**ಅರ್ಥ :-** ಹತ್ತು ಪ್ರಕಾರದ ಬಾಹ್ಯ ಪರಿಗ್ರಹದಲ್ಲಿನ ಮಮತೆಯನ್ನು ಬಿಟ್ಟುಕೊಟ್ಟು, ನಮ್ಮದು ಸ್ವಲ್ಪವೂ ಯಾವುದೂ ಇಲ್ಲವೆಂದು ನಿರ್ಮಮತೆಯಲ್ಲಿ ಲೀನನಿರುತ್ತಾನೆ; ದೇಹ, ರಾಗ ಮೊದಲಾದ ಸಮಸ್ತ ಪರದ್ರವ್ಯ-ಪರಪರ್ಯಾಯಗಳಲ್ಲಿ ಆತ್ಮಬುದ್ಧಿಯಿಂದ ರಹಿತನಾಗಿ, ತನ್ನ ಅವಿನಾಶೀ ಜ್ಞಾಯಕ ಭಾವದಲ್ಲಿ ಸ್ಥಿರನಿರುತ್ತಾನೆ; ಕರ್ಮೋದಯದಿಂದ ಯಾವ ಭೋಜನ, ಸ್ಥಾನ, ವಸ್ತ್ರಾದಿಗಳು ದೊರಕಿವೆ, ಅವಕ್ಕಿಂತ ಅಧಿಕ ಅಪೇಕ್ಷಿಸುವುದಿಲ್ಲ; ಸಂತೋಷರೂಪನಾಗಿ, ಸಮಸ್ತ ಇಚ್ಛೆ-ದೀನತೆಗಳಿಂದ ರಹಿತನಾಗಿ ಹೋಗುತ್ತಾನೆ; ಜತೆಯಲ್ಲಿ ಯಾವ ಪರಿಚಿತ ಪರಿಗ್ರಹವಿದೆ ಅದರಿಂದ ಕೂಡ ಅತ್ಯಂತ ವಿರಕ್ತನಿರುತ್ತಾನೆ. ಆ ಪರಿಗ್ರಹ ತ್ಯಾಗಿಯಾದ ಶ್ರಾವಕನು ಒಂಭತ್ತನೇ ಪದವುಳ್ಳವನಾಗುತ್ತಾನೆ.

**ಭಾವಾರ್ಥ :-** ಒಂಭತ್ತನೇ ಪದವುಳ್ಳ ಶ್ರಾವಕನಿಗೆ ರೂಪಾಯಿ, ಮೊಹರು, ಚಿನ್ನ, ಬೆಳ್ಳಿ, ಒಡವೆ ಮೊದಲಾದ ಸಕಲ ಪರಿಗ್ರಹದಿಂದ ತ್ಯಾಗವಿದೆ. ಅವನ ಹತ್ತಿರ ಶೀತೋಷ್ಣಗಳ ವೇದನೆಯನ್ನು ದೂರ ಮಾಡುವ ಸಲುವಾಗಿ ಒಂದು ಅಲ್ಪ ಬೆಲೆಯ ಆವಶ್ಯಕ ಪ್ರಾಮಾಣಿಕ ವಸ್ತ್ರವಿರುತ್ತದೆ; ಮತ್ತು ಕೈ-ಕಾಲು ತೊಳೆದುಕೊಳ್ಳುವ ಸಲುವಾಗಿ, ನೀರು ಕುಡಿಯುವ ಪಾತ್ರೆಯು ಮಾತ್ರ ಪರಿಗ್ರಹವಿರುತ್ತದೆ. ಅವನು ಒಂಭತ್ತನೇ ಪರಿಗ್ರಹ ತ್ಯಾಗ ಪದವುಳ್ಳವನಿದ್ದಾನೆ.

ಅವನು ಮನೆಯಲ್ಲಿ ಅಥವಾ ಬೇರೆ ಏಕಾಂತ ಸ್ಥಾನದಲ್ಲಿ ಶಯನ-ಆಸನ ಮಾಡುತ್ತಾನೆ; ಭೋಜನ, ವಸ್ತ್ರ ಮೊದಲಾದುವನ್ನು ಮನೆಯ ಜನರು ಕೊಟ್ಟರೆ ತೆಗೆದುಕೊಳ್ಳುತ್ತಾನೆ ; ಔಷಧ-ಆಹಾರ-ಪಾನೀಯ, ವಸ್ತ್ರಾದಿಗಳ ಹಾಗೂ ಶರೀರದ ಸೇವೆ ಮಾಡಿಸಿಕೊಳ್ಳುವ ಇಚ್ಛೆಯಾದರೆ ಪತ್ನಿ-ಪುತ್ರರಿಗೆ ಹೇಳುತ್ತಾನೆ : ಮನೆಯ ಪತ್ನಿ-ಪುತ್ರರು ಮಾಡಿದರೆ ಮಾಡಿಸಿಕೊಳ್ಳುವನು, ಮಾಡದಿದ್ದರೆ ಇದು ನಮ್ಮ ಮನೆಯಿದೆ, ಧನವಿದೆ, ಆಜೀವಿಕೆಯಿದೆ, ನಾವು ಹೇಳಿದುದನ್ನು ಅದೇಕೆ ಮಾಡುವುದಿಲ್ಲವೆಂದು ಅವರನ್ನು ದೂರುವುದಿಲ್ಲ ಅಥವಾ ಪರಿಣಾಮದಲ್ಲಿ ಸಂಕ್ಲೇಶದ ವಿಚಾರ ಮಾಡುವುದಿಲ್ಲ ಅದು ಪರಿಗ್ರಹ ತ್ಯಾಗ ನಾಮದ ಒಂಭತ್ತನೇ ಪದವಿದೆ.

ಈಗ **ಅನುಮತಿ ತ್ಯಾಗ ನಾಮದ ಹತ್ತನೇ ಪದದ** ಲಕ್ಷಣ ಹೇಳುತ್ತಾರೆ, -

**ಅನುಮತಿರಾರಂಭೇ ವಾ ಪರಿಗ್ರಹೇ ಐಹಿಕೇಷು ಕರ್ಮಸು ವಾ ।**
**ನಾಸ್ತಿಖಲುಯಸ್ಯ ಸಮಧೀರನುಮತಿ ವಿರತಃ ಸ ಮಂತವ್ಯಃ ।।೧೪೬।।**

**ಅರ್ಥ :-** ಅವನು ಆರಂಭದಲ್ಲಿ, ಪರಿಗ್ರಹದಲ್ಲಿ, ಇಹಲೋಕ ಸಂಬಂಧದ ಕಾರ್ಯವಾದ ಮದುವೆ, ಮನೆ ಕಟ್ಟಿಸುವುದು, ಸೇವೆ, ವಾಣಿಜ್ಯ ಇತ್ಯಾದಿ ಕ್ರಿಯೆಗಳಲ್ಲಿ, ಕುಟುಂಬದ ಜನರು ಕೇಳಿದರೂ ಕೂಡ ಅನುಮತಿ ಕೊಡುವುದಿಲ್ಲ, ನೀವು ಒಳ್ಳೆಯದು ಮಾಡಿದಿರೆಂದು ಮನ-ವಚನ-ಕಾಯದಿಂದ ಪ್ರಕಟಪಡಿಸುವುದಿಲ್ಲ ; ರಾಗಾದಿಗಳಿಂದರಹಿತನಾದ ಸಮಬುದ್ಧಿಯುಳ್ಳವನಿದ್ದಾನೆ. ಆ ಶ್ರಾವಕನು ಅನುಮತಿ ವಿರತನಿದ್ದಾನೆ.

**ಭಾವಾರ್ಥ :-** ಅವನು ಕ್ಷಾರ, ಕಾರ, ಸಿಹಿ, ಕಹಿ, ಸ್ವಾದಿಷ್ಟ ಭೋಜನದಲ್ಲಿ ರಾಗ-ದ್ವೇಷ ರಹಿತನಾಗಿ ಒಳ್ಳೆಯದು-ಕೆಡಕೆಂದು ಹೇಳುವುದಿಲ್ಲ ಮತ್ತು ಪುತ್ರ-ಪುತ್ರಿಯ, ಲಾಭ-ಅಲಾಭದ, ಹಾನಿ-ವೃದ್ಧಿಯ, ಸುಖ-ದುಃಖದ ಎಲ್ಲ ಕಾರ್ಯಗಳಲ್ಲಿ ಹರ್ಷ-ವಿಷಾದದಿಂದ ರಹಿತನಾಗಿ ಅನುಮೋದನೆ ಕೊಡುವುದಿಲ್ಲ, ಅವನಿಗೆ ಅನುಮತಿವಿರತನಾಮದ ಹತ್ತನೇ ಪದವಿರುತ್ತದೆ.

ಈಗ **ಹನ್ನೊಂದನೇ ಉದ್ದಿಷ್ಟ ತ್ಯಾಗ ಪದದ** ಲಕ್ಷಣ ಹೇಳುತ್ತಾರೆ, -

**ಗೃಹತೋ ಮುನಿವನಮಿತ್ವಾ ಗುರೂಪಕಂಠೇ ವ್ರತಾನಿ ಪರಿಗೃಹ್ಯ ।**
**ಭೈಕ್ಷಾ ್ಯಶನಸ್ತಪಸ್ಯನ್ನುತ್ಕೃಷ್ಟಶ್ಚೇಲ ಖಂಡಧರಃ ।।೧೪೭।।**

**ಅರ್ಥ :-** ಯಾವನು ಸಮಸ್ತ ಪರಿಗ್ರಹದ ತ್ಯಾಗಮಾಡಿ, ತಮ್ಮ ಮನೆಯಿಂದ ಹೊರಟು ಮುನಿಗಳು ಇರುವ ವನದಲ್ಲಿ ಹೋಗಿ, ಗುರುಗಳ ಸಮೀಪ ವ್ರತಗಳನ್ನು ಗ್ರಹಣ ಮಾಡಿ, ತುಂಡು ವಸ್ತ್ರವನ್ನು ಧಾರಣ ಮಾಡಿ ಭಿಕ್ಷೆಯ ಮೂಲಕ ಭೋಜನ ಮಾಡುತ್ತ ತಪಶ್ಚರಣ ಮಾಡುತ್ತಾನೆ, ಅವನು ಉತ್ಕೃಷ್ಟ ಶ್ರಾವಕನಿದ್ದಾನೆ.

**ಭಾವಾರ್ಥ :-** ಅವನು ಸಮಸ್ತ ಗೃಹ, ಕುಟುಂಬದಿಂದ ವಿರಕ್ತನಾಗಿ, ವನದಲ್ಲಿ ಹೋಗಿ, ಮುನಿಗಳ ಹತ್ತಿರ ದೀಕ್ಷೆ ಸ್ವೀಕರಿಸಿ, ಒಂದು ಕೌಪೀನ ಮಾತ್ರ ಅಥವಾ ಕೌಪೀನ ಮತ್ತು ತುಂಡು ವಸ್ತ್ರ ಅದರಿಂದ ಪೂರ್ಣ ಶರೀರ ಮುಚ್ಚದ ಎಂದರೆ ತಲೆ ಮುಚ್ಚಿದರೆ ಕಾಲು ಮುಚ್ಚುವುದಿಲ್ಲ, ಕಾಲು ಮುಚ್ಚಿದರೆ ತಲೆ ಮುಚ್ಚುವುದಿಲ್ಲ, ಕೇವಲ ಸೊಳ್ಳೆ, ನೊಣ, ಶೀತ, ಉಷ್ಣ, ಮಳೆ, ಗಾಳಿಯ ಪರೀಷಹದಲ್ಲಿ ಆಸರೆ ಇರುವಂತೆ ಮತ್ತು ಭಿಕ್ಷಾ ಭೋಜನ ಅಯಾಚಿತ ವೃತ್ತಿಯಿಂದ ಮೌನ ಸಹಿತ ಗ್ರಹಣ ಮಾಡುತ್ತಾನೆ.

**ತನ್ನ ಸಲುವಾಗಿ ಮಾಡಲಾದ ಭೋಜನವನ್ನು ಗ್ರಹಣ ಮಾಡುವುದಿಲ್ಲ; ನಿಮಂತ್ರಣವಿತ್ತ ಮೇಲೆ ಕರೆದ ನಂತರ ಹೋಗುವುದಿಲ್ಲ; ತನ್ನ ಸಲುವಾಗಿ ಸ್ವಲ್ಪವಾದರೂ ಆರಂಭ ಮಾಡಿರುವುದು ತಿಳಿದು ಬಂದರೆ ಭೋಜನದ ತ್ಯಾಗ ಮಾಡಿ ಬಿಡುತ್ತಾನೆ;** ವನದಲ್ಲಿ ಅಥವಾ ಗ್ರಾಮದ ಹೊರಗೆ ವಸತಿಕೆಯಲ್ಲಿ ಇರುತ್ತಾನೆ ; ಉಪಸರ್ಗ-ಪರೀಷಹಗಳು ಬಂದರೆ ನಿರ್ಭಯತೆಯಿಂದ ಸಹಿಸುತ್ತಾನೆ ; ಅಧೀರತೆ ಅಥವಾ ದೀನತೆಯನ್ನು ತೋರುವುದಿಲ್ಲ ; ಯಾವಾಗಲೂ ಧ್ಯಾನ ಸ್ವಾಧ್ಯಾಯದಲ್ಲಿಯೇ ಲೀನನಿರುತ್ತಾನೆ.

ಗೃಹಸ್ಥರ ಮನೆಗೆ ಕರೆಯದೆಯೇ ಹೋಗುತ್ತಾನೆ, ಗೃಹಸ್ಥನು ತನ್ನ ಸಲುವಾಗಿ ಮಾಡಿದ ಭೋಜನವಿದ್ದರೆ ಅದರೊಳಗಿಂದ ಭಕ್ತಿಪೂರ್ವಕ ಕೊಟ್ಟುದನ್ನು ಗ್ರಹಣ ಮಾಡುತ್ತಾನೆ. ರಸ ಸಹಿತವಿರಲಿ ಅಥವಾ ರಸರಹಿತವಿರಲಿ, ಕಹಿ, ಸಿಹಿ, ಕ್ಷಾರ ಯಾವುದನ್ನು ಗೃಹಸ್ಥನು ಕೊಡುತ್ತಾನೆ ಅದನ್ನು ಸಮಭಾವದಿಂದ ಆಹಾರ ಗ್ರಹಣ ಮಾಡುತ್ತಾನೆ ; ದಿವಸದಲ್ಲಿ

ಒಂದು ಬಾರಿ ಆಹಾರ-ಪಾನ ಗ್ರಹಣ ಮಾಡುತ್ತಾನೆ; ಅಂತರಾಯವಾದರೆ ಉಪವಾಸ ಮಾಡುತ್ತಾನೆ. ಅನಶನ ತಪದಲ್ಲಿ ಶಕ್ತಿಗೆ ಅನುಸರಿಸಿ ಉದ್ಯಮ ಶೀಲನಿರುತ್ತಾನೆ. ಈ ಪ್ರಕಾರ ಉದ್ದಿಷ್ಟ ಆಹಾರ ತ್ಯಾಗ ನಾಮದ ಹನ್ನೊಂದನೇ ಉತ್ಕೃಷ್ಟ ಶ್ರಾವಕನ ಸ್ಥಾನವಿದೆ. ಈ ಪ್ರಕಾರ ಶ್ರಾವಕ ಧರ್ಮದ ಹನ್ನೊಂದು ಪದಗಳನ್ನು ಹೇಳಿದೆ ; ಅವನ್ನು ತಮ್ಮ ಶಕ್ತಿಯ ಪ್ರಮಾಣ ಅಂಗೀಕಾರ ಮಾಡಬೇಕಾಗುವುದು.

ಈಗ **ಶ್ರೇಷ್ಠ ಜ್ಞಾತಾನ ಸ್ವರೂಪ** ಹೇಳುತ್ತಾರೆ, -

**ಪಾಪಮರಾತಿಧರ್ಮೋ ಬಂಧುರ್ಜೀವಸ್ಯ ಚೇತಿ ನಿಶ್ಚಿನ್ವನ್ ।**
**ಸಮಯಂ ಯದಿ ಜಾನೀತೇ ಶ್ರೇಯೋ ಜ್ಞಾತಾ ಧ್ರುವಂ ಭವತಿ ॥೧೪೮॥**

**ಅರ್ಥ :-** ಪಾಪವು ಈ ಜೀವದ ವೈರಿಯಿದೆ, ಧರ್ಮವು ಬಂಧುವಿದೆಯೆಂದು ದೃಢ ನಿಶ್ಚಯ ಮಾಡುತ್ತ ಯಾವನು ತನ್ನನ್ನು ಸಮಯ ಎಂದರೆ ಶುದ್ಧ ಆತ್ಮ ಸ್ವರೂಪವನ್ನು ತಿಳಿಯುತ್ತಾನೆ, ಅವನೇ ತನ್ನ ಕಲ್ಯಾಣವನ್ನು ತಿಳಿದುಕೊಳ್ಳುವಂಥವನಿರುತ್ತಾನೆ.

**ಭಾವಾರ್ಥ :- ಈ ಜೀವನಿಗೆ ಸಂಸಾರದಲ್ಲಿ ದುಃಖ ಕೊಡುವಂಥ ಯಾವ ವೈರಿಯೇ ಇಲ್ಲ, ಒಂದು ತನ್ನ ವಿಷಯ ಕಷಾಯಗಳ ಮಿಥ್ಯಾ (ವಿಪರೀತ) ಅನುರಾಗದಿಂದ ಉತ್ಪನ್ನ ಮಾಡಿದ ಪಾಪಕರ್ಮವೇ ವೈರಿಯಿದೆ, ಉಳಿದವುಗಳಂತೂ ಬಾಹ್ಯ ನಿಮಿತ್ತ ಮಾತ್ರವಿವೆ.** ಇತರ ದುರ್ವಚನ ಆಡುವಂಥ, ದೋಷಗಳನ್ನು ಹೇಳುವಂಥ, ಧನ-ಆಜೀವಿಕೆಯ ಸ್ಥಾನವನ್ನು ಬಲವಂತದಿಂದ ಕಸಿದುಕೊಳ್ಳುವಂಥ ತಾಡನ-ಮಾರಣ-ಬಂಧನ-ಛೇದನ ಮಾಡುವಂಥವರಿದ್ದಾರೆ ಅವರು ನಾನು ಉತ್ಪನ್ನ ಮಾಡಿದ ಪಾಪ ಕರ್ಮದ ಉದಯಕ್ಕೆ ಸಂಬಂಧಿಸಿದವರಿದ್ದಾರೆ. ಯಾವನು **ತನ್ನ ಪಾಪಕರ್ಮದ ಹೊರತಾಗಿ ಅನ್ಯ ಪುರುಷನನ್ನು ವೈರಿಯೆಂದು ಮನ್ನಿಸುತ್ತಾನೆ ಅವನು ಮಿಥ್ಯಾಜ್ಞಾನಿಯಿದ್ದಾನೆ. ಅವನು ಜಿನೇಂದ್ರರ ಆಗಮವನ್ನು ತಿಳಿದೇ ಇಲ್ಲ, ಅದೇ ಪ್ರಕಾರ ಈ ಜೀವನಿಗೆ ಯಾರಾದರೂ ಉಪಕಾರಕ ಬಂಧುವಿದ್ದರೆ ಅದು ಪುಣ್ಯ ಕರ್ಮವೇ ಇದೆ. ಯಾವನು ತನ್ನ ಪುಣ್ಯ ಕರ್ಮದ ಉದಯದ ಹೊರತಾಗಿ ಅನ್ಯರನ್ನು ಉಪಕಾರಕರೆಂದು ತಿಳಿಯುತ್ತಾನೆ ಅವನು ಭಗವಂತರ ಆಗಮದ ಜ್ಞಾನಿಯಿಲ್ಲ, ಆದರೆ ಮಿಥ್ಯಾ ಜ್ಞಾನಿಯಿದ್ದಾನೆ.**

ಈಗ ಶ್ರಾವಕಾಚಾರದ ಉಪದೇಶವನ್ನು ಸಮಾಪ್ತಗೊಳಿಸುತ್ತ ಶ್ರೀ ಸ್ವಾಮಿ ಸಮಂತಭದ್ರಾಚಾರ್ಯದೇವರು ಫಲ ಪ್ರತಿಪಾದನೆ ಮಾಡುವಂಥ ಸೂತ್ರ ಹೇಳುತ್ತಾರೆ, -

**ಯೇನ ಸ್ವಯಂ ವೀತಕಲಂಕವಿದ್ಯಾ ದೃಷ್ಟಿಕ್ರಿಯಾ ರತ್ನಕರಂಡ ಭಾವಮ್ ।**
**ನೀತಸ್ತಮಾಯಾತಿ ಪತೀಚ್ಛಯೇವ ಸರ್ವಾರ್ಥಸಿದ್ಧಿಸ್ತ್ರಿಷು ವಿಷ್ಟಪೇಷು ॥೧೪೯॥**

**ಅರ್ಥ:-** ಯಾವ ಪುರುಷನು ತನ್ನ ಆತ್ಮನನ್ನು ಕಲಂಕ ಹಾಗೂ ಅತಿಚಾರಗಳಿಂದ ರಹಿತ, ನಿರ್ದೋಷ ಜ್ಞಾನ-ದರ್ಶನ-ಚಾರಿತ್ರರೂಪ ರತ್ನಗಳ ಕರಂಡಕ ಎಂದರೆ ಪೆಟ್ಟಿಗೆಯ ಪಾತ್ರತೆಗೆ ಪ್ರಾಪ್ತಮಾಡಿಕೊಳ್ಳುತ್ತಾನೆ. ಆ ಪುರುಷನಿಗೆ ಯಾವ ಪ್ರಕಾರ ತನ್ನ ಪತಿಯನ್ನು ಪ್ರಾಪ್ತ ಮಾಡಿಕೊಂಡ ಸ್ತ್ರೀಗೆ ಸರ್ವ ಅರ್ಥದ ಸಿದ್ಧಿಯಾಗಿ ಹೋಗುತ್ತದೆ ಅದೇ ಪ್ರಕಾರ ಮೂರು ಲೋಕದಲ್ಲಿ ಸರ್ವ ಐಚ್ಛಿಕ ಅರ್ಥದ ಸಿದ್ಧಿಯಾಗಿ ಹೋಗುತ್ತದೆ.

**ಭಾವಾರ್ಥ :-** ಯಾವ ಪುರುಷನು ತನ್ನ ಆತ್ಮನನ್ನು ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರರೂಪ ರತ್ನಗಳ ಪಾತ್ರ ಆಧಾರವನ್ನಾಗಿ ಮಾಡಿಕೊಂಡಿದ್ದಾನೆ ಅವನಿಗೆ ಮೂರು ಲೋಕದ ಸರ್ವೋತ್ಕೃಷ್ಟ ಅರ್ಥದ ಸಿದ್ಧಿಯು ತಾನಾಗಿಯೇ ಪ್ರಾಪ್ತವಾಗಿ ಬಿಡುತ್ತದೆಯೆಂಬುದು ನಿಯಮವಿದೆ.

ಈಗ ಸೂತ್ರದ ಮೂಲಕ ಅಂತಿಮ ಪ್ರಾರ್ಥನೆ ಮಾಡುತ್ತಾರೆ, -

**ಸುಖಯತು ಸುಖಭೂಮಿಃ ಕಾಮಿನಂ ಕಾಮಿನೀವ**
**ಸುತಮಿವ ಜನನೀ ಮಾಂ ಶುದ್ಧಶೀಲಾ ಭುನಕ್ತು ।**
**ಕುಲಮಿವ ಗುಣಭೂಷಾ ಕನ್ಯಕಾ ಸಂಪುನೀತಾತ್**
**ಜಿನಪತಿಪದಪದ್ಮ ಪ್ರೇಕ್ಷಿಣೀ ದೃಷ್ಟಿಲಕ್ಷ್ಮೀಃ ॥೧೫೦॥**

**ಅರ್ಥ :-** ಜಿನೇಂದ್ರ ಭಗವಂತರ ಚರಣ ಕಮಲಗಳ ಅವಲೋಕನ ಮಾಡುವಂಥ ಸಮ್ಯಗ್ದರ್ಶನ ರೂಪದ ಲಕ್ಷ್ಮಿಯು ನನಗೆ ಯಾವ ಪ್ರಕಾರ ಕಾಮಿನಿಯು ಕಾಮೀ ಪುರುಷನಿಗೆ ಸುಖ ಕೊಡುತ್ತಾಳೆ ಅದೇ ಪ್ರಕಾರ ಸುಖ ಕೊಡಲಿ; ಯಾವ ಪ್ರಕಾರ ಶುದ್ಧಶೀಲಾ ಎಂದರೆ ಶುದ್ಧ ಸ್ವಭಾವ ಧಾರಣ ಮಾಡಿದ ತಾಯಿಯು ತನ್ನ ಮಗುವಿನ ಪಾಲನೆ ಮಾಡುತ್ತಾಳೆ ಅದೇ ಪ್ರಕಾರ ನನ್ನ ಪಾಲನೆ ಮಾಡಲಿ; ಮತ್ತು ಯಾವ ಪ್ರಕಾರ ಶೀಲ ಮೊದಲಾದ ಗುಣಗಳೇ ತನ್ನ ಆಭೂಷಣವಿರುವಂಥ ಕನ್ಯೆಯು ಕುಲವನ್ನು ಪವಿತ್ರ ಮಾಡುತ್ತಾಳೆ ಅದೇ ಪ್ರಕಾರ ಎಲೈ ಸಮ್ಯಗ್ದರ್ಶನವೇ ! ನನ್ನನ್ನೂ ಪವಿತ್ರ ಮಾಡು ; ಉಜ್ವಲ ಮಾಡು.

**ಭಾವಾರ್ಥ :-** ಯಾವ ಪ್ರಕಾರ ಕಾಮದ ಆತಪದಿಂದ ದುಃಖಿಯಾದ ಪುರುಷನನ್ನು ಕಾಮಿನಿಯು ಸುಖಿ ಮಾಡಿ ಬಿಡುತ್ತಾಳೆ, ಯಾವ ಪ್ರಕಾರ ಶುದ್ಧ ಸ್ವಭಾವ ಧರಿಸಿದ ತಾಯಿಯು ತನ್ನ ಮಗುವಿನ ಪಾಲನೆ ಮಾಡುತ್ತಾಳೆ, ಮತ್ತು ಯಾವ ಪ್ರಕಾರ ಗುಣವಂತ ಕನ್ಯೆಯು ಕುಲವನ್ನು ಪವಿತ್ರ ಮಾಡುತ್ತಾಳೆ, ಅದೇ ಪ್ರಕಾರ **ಜಿನಪತಿ ಎಂದರೆ ಶುದ್ಧಾತ್ಮನನ್ನು** ಭಾವದಲ್ಲಿ ಪ್ರತ್ಯಕ್ಷ ಅವಲೋಕನ ಮಾಡುವಂಥ ಸಮ್ಯಗ್ದರ್ಶನ ರೂಪದ ಲಕ್ಷ್ಮಿಯು ನನ್ನ ಮಿಥ್ಯಾಜ್ಞಾನ ಜನಿತ ಆತಪವನ್ನು ದೂರ ಮಾಡಿ, ನನಗೆ ನಿತ್ಯ ಜ್ಞಾನಾದಿಗಳ ರೂಪದ ಆತ್ಮಿಕ ಸುಖವನ್ನು ಪ್ರಾಪ್ತ ಮಾಡಿಸಲಿ; ಸಂಸಾರದ ಜನ್ಮ-ಮರಣಗಳ ದುಃಖವನ್ನು ನಿವಾರಣೆ ಮಾಡಿ ನನ್ನ ಅನಂತ ಚತುಷ್ಟಯಗಳ ಸ್ವರೂಪವನ್ನು ಪುಷ್ಟೀಕರಿಸಲಿ ; ಮತ್ತು ರಾಗ-ದ್ವೇಷ-ಮೋಹರೂಪದ ಮಲವನ್ನು ದೂರ ಮಾಡಿ ನನ್ನ ಆತ್ಮಸ್ವರೂಪವನ್ನು ಉಜ್ವಲಗೊಳಿಸಲಿ !

ಈ ಪ್ರಕಾರ ಸ್ವಾಮಿ ಸಮಂತಭದ್ರಾಚಾರ್ಯದೇವ ವಿರಚಿತ ರತ್ನಕರಂಡ ಶ್ರಾವಕಾಚಾರದ
ಪಂ. ಸದಾಸುಖಜಿಯವರು ಬರೆದ ಭಾಷಾ ಟೀಕೆಯಲ್ಲಿ ಎಂಟನೆಯ ಸಲ್ಲೇಖನ
ಅಧಿಕಾರ ಸಹಿತ ಸಂಪೂರ್ಣ ಗ್ರಂಥವು ಸಮಾಪ್ತವಾಯಿತು.

# ವಚನಿಕಾಕಾರನ ಪ್ರಶಸ್ತಿ

ಮಂಗಲ ಶ್ರೀ ಅರಹಂತ ಜಿನ ಮಂಗಲ ಶ್ರೀ ಜಿನವಾಣಿ ।
ಸಿದ್ಧ ಸಾಧು ಜಿನ ಧರ್ಮಸದಾ ಮಾಡಲಿ ವಿಘ್ನದ ಹಾನಿ ॥೧॥
ದೇಶ ಧರ್ಮಧಾರಣಕಾಧಾರ ರತ್ನಕರಂಡ ಶ್ರಾವಕಾಚಾರ ।
ರಚಿಸಿ ಮುನಿ ಸಮಂತಭದ್ರರು ಗೆಯ್ದರು ಭವ್ಯರಿಗುಪಕಾರ ॥೨॥
ಇದರ ಮಹಿಮೆಯ ಹೇಳಲಾಗದು ಓದಿರಿ ಕೇಳಿರಿ ಭವ್ಯರು ಇದನು ।
ಮನದಲಿ ಧರಿಸಿ ಚರಣದಿ ತಂದು ಮಾಳ್ಪುದು ಕರ್ಮದ ನಾಶವನು ॥೩॥
ದೇಶ ಭಾಷೆಯಲಿ ಮಾಡಿದರಿದನು ಆಗುವುದೆಲ್ಲರಿಗೊಳಿತೆಂದು ।
ಯೋಚಿಸಿ ಉದ್ಯಮ ಮಾಡಿದೆ ನಾನು ಮಂದ ಬುದ್ಧಿ ತೆರದಲಿಂದು ॥೪॥
ದೋಷಗಳಿದ್ದರೆ ಹಾಸ್ಯವ ಮಾಡದಿರಿ ದೋಷವ ತಿದ್ದಿ ಗುಣವಧರಿಸಿರಿ ।
ಜ್ಞಾನಿ ಜನಗಳು ಎನ್ನಯ ಮೇಲೆ ನಿರ್ಮಲ ದಯೆಯ ತೋರುವಿರಿ ॥೫॥
ಸಂವತ ಹತ್ತೊಂಭತ್ತೂ ರಿಪ್ಪತ್ತು ಚೈತ್ರ ಕೃಷ್ಣ ಕುಜವಾರ ।
ಬರೆದು ಮುಗಿಯಿತೀ ಗ್ರಂಥ ಮಾಡಲಿ ನಮ್ಮನು ಮಂಗಲಕರ ॥೬॥

ಜಗತ್ತಿನಲ್ಲಿ ಅತ್ಯಂತ ಮನೋಜ್ಞವಿರುವ ಜಯಪುರ ಮಹಾನಗರದಲ್ಲಿ ರಾಮಸಿಂಹ ನರೇಶನು ಕ್ರೋಧ-ಮದ-ಲೋಭಗಳಿಂದ ರಹಿತನಾಗಿ ರಾಜ್ಯಭಾರ ಮಾಡುತ್ತಿರುವನು. ಇಲ್ಲಿದಯಾಧರ್ಮಧಾರಕರಾದ ಜೈನ ಜನರು ಅಧಿಕ ಸಂಖ್ಯೆಯಲ್ಲಿ ವಾಸ ಮಾಡುತ್ತಿರುವರು. ಅವರಲ್ಲಿ ಕಾಸಲೀವಾಲ ಗೋತ್ರದ ಸದಾ ಸುಖನೆಂಬ ಹೆಸರಿನ ನಾನು ಜಿನಾಗಮಗಳ ಅಧ್ಯಯನದಲ್ಲಿ ಅತಿಶಯ ಅಭಿರುಚಿಯಿರುವುದರಿಂದ ಎಲ್ಲರ ಪ್ರೀತಿ-ವಾತ್ಸಲ್ಯಗಳಿಗೆ ಪಾತ್ರನಾಗಿರುವೆನು. ನಾನು ಆ ಸಿದ್ಧಾಂತ ಗ್ರಂಥಗಳ ಪ್ರಸಾದದಿಂದ,ಸಾಧರ್ಮಿಗಳ ಅನುರಾಗ ಪೂರ್ಣ ಪ್ರೇರಣೆಯಿಂದ, ಪ್ರೋತ್ಸಾಹಿತನಾಗಿ ಈ ವಚನಿಕೆಯನ್ನು ಬರೆಯುವ ಸಾಹಸ ಮಾಡಿರುವೆನು. ಎಂದರೆ ಅತ್ಯಂತ ಭಕ್ತಿಯಿಂದ ಮುಕ್ತಿ ಕೊಡುವಂಥ ಜಿನವಾಣಿ ಮಾತೆಯ ಸೇವೆಯನ್ನು ನಿರ್ಮಲ ಭಾವದಿಂದ ಮಾಡಿರುವೆನು. ಇದರ ಪರಿಣಾಮವಾಗಿ ನಾನು ಈ ನನ್ನ ಅರವತ್ತೆಂಟನೆಯ ವರುಷದ ಇಳಿ ವಯಸ್ಸಿನಲ್ಲಿ ದೇಹದೊಳಗೆ ತಲೆದೋರಿರುವ ಅನೇಕ ರೋಗಗಳ ದುಃಖ-ದುಮ್ಮಾನಗಳನ್ನೆಲ್ಲ ಮರೆತು, ಗ್ರಂಥದ ಭಾವದೊಡನೆ ಒಂದಾಗಿ ಅತ್ಯಂತ ಸುಖಮಯನಾಗಿ ದಿವಸಗಳನ್ನು ಕಳೆದಿದ್ದೇನೆ. ಜೈನ ಧರ್ಮವು ಅತ್ಯಂತ ನಿರ್ಮಲ-ಸುಖಮಯವಿದ್ದು ಇದರ ಧಾರಣದಿಂದ ರೋಗದ ಸಮಯದಲ್ಲಿ ಅದರಂತೆ ಮರಣದ ಸಮಯದಲ್ಲಿ ಕೂಡ ಶುಭ ಭಾವವನ್ನು ಕಾಯ್ದುಕೊಳ್ಳಬಹುದಾಗಿದೆಯೆಂಬುದನ್ನು ನಾನು ಇಲ್ಲಿ ನನ್ನ ಅನುಭವದಿಂದ ಹೇಳಬಯಸುತ್ತೇನೆ. ಆದುದರಿಂದ ಸುಖಾಪೇಕ್ಷೆಯುಳ್ಳವರು ಜಿನಧರ್ಮದ ಮೇಲೆ ಶ್ರದ್ಧೆಯಿಟ್ಟು ತಮ್ಮ ಜೀವನವನ್ನು ಜಿನಧರ್ಮಮಯ ಮಾಡಿಕೊಂಡು ಕೃತಾರ್ಥರಾಗಬೇಕೆಂದು ಕೇಳಿಕೊಳ್ಳುತ್ತೇನೆ.